ಈ ತಿಂಗಳು [illegible] ನೆಯ ತಾರೀಖಿನ ದಿವಸ ಕಲ[illegible]ಕತ್ತಾ ಪಟ್ಟಣದಲ್ಲಿ [illegible] [illegible] ಸ್ಥಾನವನ್ನು ಹೊಂದಿದರು. [illegible] ನರಹಿಂಸೆ [illegible] [illegible] ಪಂಡಿತರು [illegible] ಬಾಂಬುಗಳು ಇರುವುದನ್ನು [illegible] ಹೋಗಿ ಕಳೆದ [illegible]. ಒಟ್ಟಿಗೆ ತುಂಬಾ [illegible]ವೆಂದು ತಿಳಿದು ಬರುತ್ತದೆ.

ಪಾರ್ಲಿಮೆಂಟಿನಲ್ಲಿ ಕಾಮನ್ಸ್ ಸಭೆಯ ಇಂಡಿಯಾ ಬಿಲ್ ಎಂಬುವದು ಎರಡನೆಯ ಸಾರಿ ಒಪ್ಪಿತ[illegible] [illegible], ಸರ್ಕಾರದ ಪಕ್ಷದವರು [illegible] ಸ್ವೀಕೃತವಾಗದಂತೆ ಮಾಡಲು ಪ್ರಯತ್ನ [illegible] ಇಂಡಿಯಾ ದೇಶದ ಜನರ [illegible] ದೇಶಾಭಿಮಾನದಿಂದ ಅಭಿಪ್ರಾಯಗಳನ್ನು ತಿಳಿದು ಬಂದಾಗಲೆಂದು ರಾ|| ಅಸಿವೆಯಂಬವ್ಮ[illegible] ಎ|| [illegible] [illegible] ಹಿಡಿದಿದ್ದಾರೆ.

[illegible] ಸಂಸ್ಥಾನಕ್ಕೆ ಸೇರಿದ [illegible] ಎಂಬ ಗ್ರಾಮದಲ್ಲಿ [illegible] [illegible] ಪ್ರಸಿದ್ಧವಾದ ಜೈನಮಂದಿರವಿರುವುದು. ಈ ಮಂದಿರದ ಒಳಿಯಲ್ಲಿ ವೈದಿಕಧರ್ಮಾವಲಂಬಿಗಳಾದ [illegible] ಮಂದಿರಗಳು [illegible] ಮಂದಿರಗಳಿಗೂ [illegible] ವಿಷಯದಲ್ಲಿ ಹೋರಾಟ [illegible] ಪ್ರಾರಂಭವಾಗಿ [illegible] ಜನರು ಉತ್ಸವಗಳಲ್ಲಿ [illegible] ಜನರು ಗಾಯಪಟ್ಟಿರುವರು.

ತಿರುವಾಂಕೂರು ಸಂಸ್ಥಾನದಲ್ಲಿ ನೂತನವಾಗಿ ಮಂತ್ರಿಪದವಿಯನ್ನು ವಹಿಸಿರುವ [illegible] ಎಂಬವರು [illegible] ಟೀ ಕಂಪನಿಯವರಿಗೆ ಟೀ ಬೆಳೆಸುವುದ[illegible]ಕ್ಕಾಗಿ [illegible] ಲಕ್ಷ ಎಕರೆ ಜಮೀನನ್ನು ಕೊಡಬೇಕೆಂದು ನಿಶ್ಚಯಮಾಡಿದ್ದರಿಂದ ಸಂಸ್ಥಾನದ ಪ್ರಜೆಗ[illegible]ಲ್ಲಿ [illegible]ವುಂಟಾಗಿ ಬಂದು. [illegible] ಕಂಪನಿಯವರಿಗೆ ಜಮೀನನ್ನು ಕೊಡಬಾರದೆಂದು [illegible] ಎಕರೆ [illegible] ಕೊಡಲು ನಿಶ್ಚಯಿಸಿದರಂತೆ!

ಕಲ್ಕತ್ತಾ [illegible] ಪಟ್ಟಣದ [illegible] ಗಾಂಧಿ [illegible] ವಿಶೇಷವಾಗಿ [illegible] [illegible] ಕರ್ಮ [illegible] [illegible] [illegible] ಸಮಿತಿಯನ್ನು [illegible]ರ್ಮಿಸಿದ್ದಾರೆ. ಈ ಕಮಿಟಿಗೆ ಶ್ರೀಯುತ [illegible] ರಾಯರು, ಎಸ್. [illegible] ಮತ್ತು [illegible] ಪರಿಶೋಧನಕ್ಕೆ [illegible] ಸದಸ್ಯರನ್ನಾಗಿ ನಿಯಮಿಸಲ್ಪಟ್ಟಿರುತ್ತಾರೆ.

[illegible] ಪರೀಕ್ಷೆಯು [illegible] ನೇ ತಾರೀಖಿನ ದಿವಸ ದಿಲ್ಲಿಯಲ್ಲಿ ಆಗುವುದು. ಈ ಪರೀಕ್ಷೆಗೆ [illegible] ವರ್ಷಕ್ಕೆ ಮೇಲ್ಪಟ್ಟವ[illegible] [illegible] ವರ್ಷಗಳೊಳಗಿರುವ [illegible] ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನುಕೂಲವಾದ ಮೋಕ್ಷವನ್ನು [illegible] [illegible] ತಾರೀಖಿನ ಒಳಗಾಗಿ [illegible] ರೂಪಾಯಿ [illegible] [illegible] ಹಾಗೂ ಸಕ್ರಟರಿ [illegible] ಸರಕಾರ ಇವರಿಗೆ ಅಪ್ಲಿಕೇಶನ್ ಕಳುಹಿಸತಕ್ಕದ್ದು. ಅಪ್ಲಿಕೇಷನ್ನಿನ ಫ್ರಂ[illegible] [illegible] ಸಕ್ರೆಟರಿ [illegible] ಸರಕಾರ [illegible] ಇವರಲ್ಲಿ ದೊರೆಯುತ್ತವೆ.

[illegible] ಪಟ್ಟಣದಲ್ಲಿ ಇದೇ ತಿಂಗಳು [illegible] ನೇ ತಾರೀಖಿನ ದಿವಸ ನಡೆದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಶ್ರೀಮಾನ್ ಶ್ರೀನಿವಾಸಯ್ಯಂಗಾರರವರ ಅಧ್ಯಕ್ಷತೆಯಲ್ಲಿ ಅತ್ಯಂತ [illegible] [illegible] ನಡೆಸಿತು. [illegible] [illegible] ಪಂಡಿತ ಮೋತಿಲಾಲ್ ನೆಹರು, ಶ್ರೀ[illegible] ನಾಯುಡು, [illegible], [illegible] ರಂಗಸ್ವಾಮಿ ಅಯ್ಯಂಗಾರ, [illegible] ಶೌಕತಲ್ಲಿ [illegible] ಅಮ್ಮದ, ಡಾಕ್ಟರ ಮುಂಜೆ, ಟಿ. ಪ್ರಕಾಶಂ, ಕೆ ಸಂತಾನಂ ರಾಜೇಂದ್ರ ಪ್ರಸಾದ, ಕೆ. ಸಿ. ಗೋಸ್ವಾಮಿ ಸೇನಗುಪ್ತ, ಜಾರ್ಜ್ ಜೋಸಫ, ಗೌರೀಶಂಕರ[illegible], [illegible], [illegible] ಹಾಷಿಮ್ ಪುರುಷೋತ್ತಮದಾಸ, [illegible] ಗೋವಿಂದದಾಸ, [illegible], ಶಿವಪ್ರಸಾದಗುಪ್ತ, [illegible] ಆಚಾರ್ಯ ಮೊದಲಾದ ಪ್ರಮುಖರು ಈ ಸಭೆಗೆ ಆಗಮಿಸಿದ್ದರು.

[illegible] ನೇ ತಾರೀಖಿನ ದಿವಸ ಜಿ. ಐ. ಪಿ. [illegible] [illegible] ಅಧಿಕಾರಿಯು ತನ್ನ ಬಂಗಲೆಯ ಕಂಪೌಂಡಿನಲ್ಲಿ [illegible] [illegible] ಮೋಹದಿಂದ [illegible] ತನ್ನ [illegible] ಎಳೆದುಕೊಂಡು ಹೋಗಿ ಅವಳ ಮಾನಭಂಗವನ್ನು ಮಾಡಲು ಪ್ರಯತ್ನಿಸಿದನು. ಅದಕ್ಕೆ [illegible] ಭಯದಿಂದ [illegible] [illegible] ಆ ಕಾಮಾಂಧ[illegible] [illegible], [illegible] ಈ [illegible] [illegible] [illegible] [illegible] ಕಾಲದಲ್ಲಿ [illegible] ನ್ಯಾಯ [illegible] [illegible] ಎಂದು [illegible] [illegible] ಫಲದಾಯಕವನ್ನು [illegible]

ನಗಳೆರಡನ್ನೂ ಸಮನಿಸಬೇಕಾಗುವುದು. ಈ ವಿಷಯದಲ್ಲಿ **(ವಿದ್ಯಾಂಚಾವಿದ್ಯಾಂಚ ಯಸ್ತದ್ವೇದೋಭಯಗ್ಂ ಸಹ | ಅವಿದ್ಯಯಾಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ)** ಎಂಬ ಶ್ರುತಿಯು ಸಾರುತ್ತದೆ. ಇದೇ ತತ್ವವನ್ನು ಅವಲಂಬಿಸಿ ಲಿಂಗಾಂಗಿಗಳು ತಮ್ಮ ಲೌಕಿಕಗಳಾದ ಜ್ಞಾನಕ್ರಿಯೆಗಳೆರಡನ್ನು ತಪ್ಪದೆ ನಡೆಯಿಸುತ್ತ, ಪರಬ್ರಹ್ಮ ಸದೃಶವಾದ ಶಿವಲಿಂಗದಲ್ಲಿ ಸ್ವಕೀಯಾತ್ಮಬುದ್ಧಿಯನ್ನಿಟ್ಟು ಪರಶಿವಸ್ವರೂಪವನ್ನು ಪಡೆದು ಸಾಯುಜ್ಯಪದಭಾಗಿಗಳಾಗುತ್ತಾರೆ. ಸದಾ ಭ್ರಮರಚಿಂತನೆಯಲ್ಲಿರುವ ಕೀಟವು ಕೆಲವು ಕಾಲದಲ್ಲಿ ತನ್ನ ಕೀಟಾಕೃತಿಯನ್ನು ಬಿಟ್ಟು ಭ್ರಮರಾಕೃತಿಯನ್ನು ಹೊಂದುವಂತೆ ಮಾನವನು ನಿರಂತರವಾದ ಶಿವೋಪಾಸನೆಯಿಂದ ಶಿವಸ್ವರೂಪಿಯಾಗುವನು. ಈ ವಿಧವಾದ ಉಪಾಸನೆಯಿಂದ ಅಂಗ (ಜೀವ) ನಿಷ್ಠಗಳಾದ ಅಲ್ಪಜ್ಞತ್ವಾದಿ ಗುಣಗಳು ನಷ್ಟವಾಗಿ ಲಿಂಗ (ಬ್ರಹ್ಮ) ಸಂಬಂಧಗಳಾದ ಸರ್ವಜ್ಞತ್ವಾದಿ ಗುಣಗಳು ಉದಯಿಸುವವು. ದೀಪವು ಸ್ವಯಂಪ್ರಕಾಶಗುಣವುಳ್ಳದಾದರೂ ಆ ದೀಪದಮೇಲೆ ಒಂದು ಬುಟ್ಟಿಯನ್ನು ಮುಚ್ಚಿದರೆ ತನ್ನ ಪ್ರಕಾಶಗುಣವು ತೋರಬಾರದೆ ಕತ್ತಲೂ ಕತ್ತಲೆಯೋ ಎನ್ನುವಂತೆ ದೇಹದೊಳಗಿನ ಆತ್ಮಾಂಶವು ಸ್ವಭಾವತಃ ಸರ್ವಜ್ಞತ್ವಾದಿ ಗುಣಗಳಿಂದ ಕೂಡಿದುದಾದರೂ ಮಾಯಾಸಂಬಂಧಗಳಾದ ಮಲಗಳಿಂದ ಆಚ್ಛಾದಿತವಾಗಿ ಸ್ವಶಕ್ತಿಯ ಪ್ರಭಾವವನ್ನು ಕಳೆದುಕೊಂಡು ವಿರುದ್ಧಗಳಾದ ಕಿಂಚಿಜ್ಞತ್ವಾದಿ ಹೇಯಗುಣಗಳನ್ನು ಆಶ್ರಯಿಸಿ ಪಾಪಪುಣ್ಯಗಳಿಂದ ಬಂಧಿಸಲ್ಪಟ್ಟು ನಾನಾಯೋನಿಗಳಲ್ಲಿ ಉತ್ಪತ್ತಿ ಮರಣಗಳನ್ನು ಅನುಭವಿಸಬೇಕಾಗುವದು. ಈ ದುಃಖವೆಲ್ಲ ನಿವೃತ್ತಿಯಾಗಿ ಪರಮಾನಂದವು ಲಭಿಸುವುದಕ್ಕಾಗಿ ಜಗದ್ಗುರು ಪಂಚಾಚಾರ್ಯರು ಶಿವಾಜ್ಞಾನುಸಾರವಾಗಿ ಲಿಂಗಮುಖದಿಂದವತರಿಸಿ ಶಿವಾಗಮಗಳಲ್ಲಿ ಪ್ರಸಿದ್ಧವಾದ ವೀರಶೈವ ಸಿದ್ಧಾಂತವನ್ನು ನೆಲೆಗೊಳಿಸಿದರು.

ಈ ಆಚಾರ್ಯರು ಬೇರೆ ಆಚಾರ್ಯರಂತೆ ಗರ್ಭವಾಸನಾದಿಗಳವರಲ್ಲವು. ಇವರು ಕೈಲಾಸದಲ್ಲಿ ಉತ್ತರ ಸದ್ಯೋಜಾತಾದಿ ಪಂಚಮುಖಗಳಿಂದುದ್ಭವಿಸಿ ಪರಮೇಶ್ವರನ ಅಜ್ಞೆಯಿಂದ ಭೂಲೋಕದಲ್ಲಿ ಲಿಂಗಮುಖದಿಂದ ಅವತರಿಸಿದರೆಂದು ಶಿವಾಗಮಗಳು ಪಂಚಘೋಷವಾಗಿ ಸಾರುತ್ತವೆ. ಈ ಐದು ಜನ ಆಚಾರ್ಯರು ಪರಮಪವಿತ್ರಗಳಾದ ಕ್ಷೇತ್ರಗಳಲ್ಲಿರತಕ್ಕ ಲಿಂಗಗಳಿಂದ ಉದ್ಭವಿಸಿದರು. ತ್ರಿಲಿಂಗದೇಶದಲ್ಲಿರುವ ಕೊಲ್ಲಿಪಾಕಿ ಎಂಬ ಸುಕ್ಷೇತ್ರದ ಸೋಮೇಶ್ವರಲಿಂಗದಿಂದ ಶ್ರೀ ರೇಣುಕಾಚಾರ್ಯರೂ, ಉಜ್ಜಯಿನೀ ಕ್ಷೇತ್ರದಲ್ಲಿರುವ ಸಿದ್ಧೇಶ್ವರಲಿಂಗದಿಂದ ಶ್ರೀ ದಾರುಕಾಚಾರ್ಯರೂ, ಹಿಮವತ್ಕೇದಾರದಲ್ಲಿರುವ ರಾಮನಾಥಲಿಂಗದಿಂದ ಏಕೋರಾಮಾರಾಧ್ಯರೂ, ಶ್ರೀಶೈಲಕ್ಷೇತ್ರದಲ್ಲಿ ವಿರಾಜಿಸುವ ಮಲ್ಲಿಕಾರ್ಜುನಲಿಂಗದಿಂದ ಶ್ರೀ ಪಂಡಿತಾರಾಧ್ಯರೂ, ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ವಿಶ್ವೇಶ್ವರಲಿಂಗದಿಂದ ಶ್ರೀ ವಿಶ್ವಾರಾಧ್ಯರೂ ಅವತರಿಸಿದರು. ಹೀಗೆ ಪ್ರತಿಯೊಂದು ಯುಗದ ಆದಿಯಲ್ಲಿಯೂ ಶಿವಾಸ್ತಿತ್ವವುಳ್ಳರುವ ಈ ಐದು ಜನ ಆಚಾರ್ಯರು ಒಂದೊಂದು ನಾಮದಿಂದ ಅವತರಿಸಿ ಶೈವಸಿದ್ಧಾಂತವನ್ನು ಪ್ರತಿಯುಗದಲ್ಲಿಯೂ ಪ್ರತಿಷ್ಠೆಗೊಳಿಸಿದರೆಂದು ಶಿವಾಗಮಗಳಲ್ಲಿ ಸ್ಪಷ್ಟವಾಗಿ ಒರೆಯಲ್ಪಟ್ಟಿರುವದು. (ಮಂತ್ರವ್ಯಾಖ್ಯಾಕೃದಾಚಾರ್ಯಃ) ಅಪೌರುಷೇಯಗಳೆನಿಸಿದ ವೇದಮಂತ್ರಗಳಿಗೆ ವ್ಯಾಖ್ಯಾನವನ್ನು ಬರೆದು ಆಚಾರ್ಯನೆನಿಸುವರಾಗಿರುವ ಶ್ರೀ ರೇಣುಕಾದಿ ಪಂಚಾಚಾರ್ಯರು ಈಶಕೇನಾದಿದಶೋಪನಿಷತ್ತುಗಳಿಗೂ ಉತ್ತರಮೀಮಾಂಸೆಗೂ ಶಿವಸೂತ್ರಗಳಿಗೂ ಭಾಷ್ಯವನ್ನು ರಚಿಸಿದರು. ಹಾಗೂ ತಮ್ಮ ಅನನ್ಯವಾದ ಮಹಿಮೆಗಳಿಂದ ಭೂಲೋಕದಲ್ಲಿ ವೀರಶೈವ ಮತವನ್ನು ಸ್ಥಾಪಿಸಿದರು. ಆದುದರಿಂದಲೇ ಈ ಮಹಾಪುರುಷರಿಗೆ ವೀರಶೈವ ಮತಸ್ಥಾಪನಾಚಾರ್ಯರೆಂದು ಕರೆಯುತ್ತಾರೆ. ಲೋಕದಲ್ಲಿ ಅದ್ವೈತಾದಿ ಮತಗಳನ್ನು ಅವಲಂಬಿಸಿದ ಬ್ರಾಹ್ಮಣಾದಿಯಾಗಿ ಅಂತ್ಯಜಪರ್ಯಂತವೂ ಇರುವ ಅಖಿಲಮಾನವರು ತಮ್ಮ ತಮ್ಮ ಮತಸ್ಥಾಪಕರಾದ ಆಚಾರ್ಯರಲ್ಲಿ ಪರಮ ಗುರುಭಾವವನ್ನಿಟ್ಟು ವರ್ತಿಸುತ್ತಾರೆ. ಇದರಂತೆ ಮಹೇಶ್ವರರಾದಿಯಾಗಿ ಅಂತ್ಯಜಪರ್ಯಂತವಾಗಿ ಇರುವ ವೀರಶೈವಮತದ ಸಕಲಾಶ್ರಮಧಾರಿಗಳು ಪಂಚಾಚಾರ್ಯರಲ್ಲಿ ನಿರತಿಶಯವಾದ ಗುರುತ್ವಬುದ್ಧಿಯನ್ನಿಟ್ಟು ವರ್ತಿಸತಕ್ಕದ್ದು ಅವರ ಮುಖ್ಯಧರ್ಮವಾಗಿದೆ. ದೀಕ್ಷಿತನಾದ ಪ್ರತಿಯೊಬ್ಬ ಲಿಂಗಾಂಗಿಯು ಗೋತ್ರಪುರುಷರೆಂದೆನಿಸಿದ ವೀರ, ನಂದಿ ಮುಂತಾದ ಪಂಚಗೋತ್ರಾಧಿಪತಿಗಳ ವಂಶವನ್ನು ತಮ್ಮ ತಮ್ಮ ಮನೆಗುರುಗಳ ಮುಖದಿಂದ ತಿಳಿದು ಅವರ ಗೋತ್ರಗಳನ್ನೇ ಹೇಳಬೇಕು. ಯಾವ ಲಿಂಗಾಂಗಿಯು ಆಚಾರ್ಯಗೋತ್ರಪುರುಷರ ಹೆಸರನ್ನು ಬಿಟ್ಟು ಅಜ್ಞಾನದಿಂದ ಅನ್ಯರ ಹೆಸರನ್ನು ಹೇಳುವನೋ ಅವನು ಲಿಂಗಾಂಗಿಧರ್ಮವನ್ನು ಅವಲಂಬಿಸಿದವನಲ್ಲವು. ಮುಕ್ತಿಸಾಧಕವಾದ ಲಿಂಗಮೂರ್ತಿಯನ್ನು ದಯಪಾಲಿಸಿದ ಆಚಾರ್ಯರನ್ನು ಅನವರತವೂ ಯಾವನು ಧ್ಯಾನಿಸುವುದಿಲ್ಲವೋ ಅತನು ಹುಟ್ಟಿಸಿದ ತಂದೆಯನ್ನು ಮರೆತ ಕುಪುತ್ರನಂತೆ ಕೃತಘ್ನಯೆಂದೆನಿಸುವನು. ಅಸ್ತು! ಲಿಂಗಾಂಗಿಗಳು ಮುಕ್ತಿರೂಪವಾದ ಮಹಡಿಯನ್ನು ಸೇರುವುದಕ್ಕೆ ಅಷ್ಟಾವರಣಗಳು ಸೋಪಾನಗಳಂತಿರುವವು. ಪಂಚಾಚಾರ, ಶಿವಕ್ರಿಯೆಯೆಂಬುವು ಸೋಪಾನಗಳ ಉಭಯಪಕ್ಕಗಳಲ್ಲಿರುವ ಕಟಾಂಜನಗಳಂತಿರುವವು. ಇವುಗಳೆಲ್ಲವೂ ಮುಮುಕ್ಷುಜನರ ಸೌಕರ್ಯಕ್ಕಾಗಿ ನಿಗಮಾಗಮಾಧಾರಗಳ ಮೇಲೆ ಶ್ರೀ ಪಂಚಾಚಾರ್ಯರಿಂದಲೇ ರಚಿಸಲ್ಪಟ್ಟಿರುವವು. ಇದರಿಂದ ಅಷ್ಟಾವರಣಗಳೂ, ಪಂಚಾಚಾರಗಳೂ, ಶಿವಕ್ರಿಯೂ, ಲಿಂಗಾಂಗಸಾಮರಸ್ಯವೂ ಯಾವನಿಂದ ಅಪೇಕ್ಷಿಸಲ್ಪಡುತ್ತವೆಯೋ ಅವನು ಈ ವೀರಶೈವಸಿದ್ಧಾಂತಸ್ಥಾಪಕರಾದ ಪಂಚಾಚಾರ್ಯರನ್ನು ತನ್ನ ಪಂಚಪ್ರಾಣಗಳಂತೆ ತಿಳಿದಿರಬೇಕು. ವೀರಶೈವಮತೀಯರಿಗೆ ಜನನಕಾಲದಲ್ಲಿಯೂ ಈ ಪಂಚಾಚಾರ್ಯರ ಕಲಶಸ್ಥಾಪನ, ದೀಕ್ಷೆಯಲ್ಲಿಯೂ ಪಂಚಕಲಶಸ್ಥಾಪನ, ಮಧ್ಯಕಾಲದಲ್ಲಿ ನಡೆಯುವ ಶುಭಶೋಭನಾದಿಗಳಲ್ಲಿಯೂ ಸಹ ಶ್ರೀ ಪಂಚಾಚಾರ್ಯರ ಕಲಶಸ್ಥಾಪನೆಯು ಅವಶ್ಯಕವಾಯಿರುತ್ತದೆ. ಪಂಚಾಚಾರ್ಯರನ್ನು ಬಿಟ್ಟು ವೀರಶೈವನಾದವನು ಯಾವುದನ್ನೂ ಮಾಡುವುದಕ್ಕೆ ಬರುವದಿಲ್ಲ. ವೀರಶೈವರಿಗೆ ಪಂಚಾಚಾರ್ಯರಿಂದ ಕೊಡಲ್ಪಟ್ಟ ಶಿವಲಿಂಗದಿಂದಲೇ ಮುಕ್ತಿಯು! ಪಂಚಾಚಾರ್ಯರ ಅನುಯಾಯಿಗಳಿಂದಲೇ ಇವರಿಗೆ ಮೋಕ್ಷದಾಯಕವಾದ ಶಿವದೀಕ್ಷೆ, ಈ ಆಚಾರ್ಯರಿಂದ ಉಪದೇಶಿಸಲ್ಪಟ್ಟ ಪಂಚಾಕ್ಷರಿಯೇ ಜೀವಮಂತ್ರವು! ಇನ್ನೇನು? ಇದು ಅಂತ್ಯ ಸಮಯಗಳಲ್ಲಿಯೂ ಪಂಚಾಚಾರ್ಯ ಸಿಂಹಾಸನಗಳೇ ಈ ಮತದಲ್ಲಿ ಮಿಂಚುತ್ತಿವೆ. ಹೀಗಿದ್ದರೂ ಇಂದು ಕಲಿಕಾಲಮಹಿಮೆಯಿಂದ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದ ಈ ಮೂಲಗುರುಗಳನ್ನೇ ಮರೆತು
ತಮ್ಮ ತಮ್ಮ ಇಷ್ಟಾನುಸಾರವಾಗಿ ಅನ್ಯಮಾರ್ಗದ
ನುಗ್ಗಿ ಮತಕ್ಕೆ ಭಾರಭೂತರಾಗಿರುವುದರಿಂದ ಗು
ಶಿಷ್ಯರಿಗೂ ಅಂಗಲಿಂಗಗಳಿಗೂ ಇರುವ ಸತೀ
ಬಂಧವು ನಷ್ಟವಾಗಿ ಅನಂತ ಅಭಿಚಾರಿಕದೋಷಗ
ಸಮಾಜದಲ್ಲಿ ತಲೆದೋರುವುದಕ್ಕೆ ಪ್ರಾರಂಭಿಸಿರುವು
ಇದಕ್ಕೆಲ್ಲ ಗುರುಪೀಠದವರು ತಮ್ಮ ಕರ್ತವ್ಯಕರ್ಮ
ವನ್ನು ಬಿಟ್ಟು ಸ್ವಸಿದ್ಧಾಂತದ ಗೋಜಿಗೆ ಹೋಗ
ಕೇವಲ ಸ್ವಾರ್ಥಪರಾಯಣರಾದುದೇ ಕಾರಣ
ಗಿದೆಯೆಂದು ಹೇಳಬಹುದು! ಇನ್ನಾದರೂ ಗುರುಪ
ದವರು ತಮ್ಮ ಜೀವನಕ್ಕೆ ಜೀವಾತುವೆನಿಸಿದ ವ
ಶೈವಸಿದ್ಧಾಂತವನ್ನು ಅಭ್ಯಾಸಮಾಡಿ ತಾವು ಅದ
ಹೇಳಿದಂತೆ ನಡೆಯುತ್ತ ಶಿಷ್ಯರಿಗೂ ಸಹ ಬೋಧಿಸು
ಈ ಮತವನ್ನು ಉದ್ಧರಿಸಿ ಪೂರ್ವದಂತೆ ತೇಜೋ
ಮಯವನ್ನಾಗಿ ಮಾಡುವರೆಂದು ಬೇಡಿಕೊಳ್ಳುತ್ತೇವೆ.

ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತಿಮಹೋತ್ಸವವು.

ಬಳ್ಳಾರಿ ಜಿ|| ಹರಪನಹಳ್ಳಿ ಪಟ್ಟಣದಲ್ಲಿ ಇ
ವೈಶಾಖ ಶು|| ೫ ಶುಕ್ರವಾರ ದಿವಸ ಜಗದಾ
ರ್ಯರ ಮಹೋತ್ಸವವು ಅತಿ ವಿಜೃಂಭಣೆಯಿಂದ
ನೇರಿತು. ಪಟ್ಟಣವು ತಳಿರು-ತೋರಣಗಳಿಂದ,
ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದರಿಂದ
ದೃಶ ಪಟ್ಟಣವಾದ ದ್ವಿತೀಯ ಅಮರಾವತಿಯ
ವನೋ ಎನ್ನುವಂತೆ ಭಾಸವಾಗುತ್ತಿತ್ತು. ಜಗ
ಚಾರ್ಯರ ಭಾವಪಟವು ಸರ್ವಾಲಂಕಾರಗಳಿಂದ
ಕ್ಯವಾದ ಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಲ್ಪಟ್ಟು
ಯಂಕಾಲ ೭ ಗಂಟೆಯ ಸಮಯಕ್ಕೆ ಉತ್ಸವವು
ಗುರುಪಾದದೇವರ ಮಠದಿಂದ ಹೊರಟಿತು.
ಪಾಠಕರ ಸ್ತುತಿಗಳಿಂದಲೂ, ಭಜನಾಸಂಘದವರ
ನಗಳಿಂದಲೂ, ನಾನಾತರದ ವಾದ್ಯಘೋಷ
ದಲೂ, ಮದ್ದು ಗುಂಡು ಬಿರುಸು ಬಾಣಗಳ ಶ
ದಲೂ ಪ್ರೇಕ್ಷಕರ ಮನಸ್ಸಲ್ಲಿ ಆನಂದಾಂಬುಧಿ
ಲೀನವಾಗಿತ್ತು. ನೇತ್ರಾನಂದಕರವಾದ ಈ ಅಂದ
ಲಿಕೋತ್ಸವವು ಹೊರಟ ಕಾಲದಲ್ಲಿ ರಾಜಬೀದಿ
ಯೂ ಮಹಡಿಗಳಲ್ಲಿಯೂ ಜನರು ಕಿಕ್ಕಿರಿದು
ನೋಡುತ್ತ ತಮ್ಮ ನೇತ್ರಗಳನ್ನು ಪವಿತ್ರಮಾಡಿಕೆ
ದರು. ಅಲ್ಲಲ್ಲಿಗೆ ಜನರು ಭಕ್ತಿಯಿಂದ ಕಾ
ಕರ್ಪೂರ ಮಂಗಳಗಳನ್ನು ನಡೆಸಿ ಅಶೀರ್ವಾ
ವನ್ನು ಪಡೆಯುತ್ತಿದ್ದರು. ಈ ಪ್ರಕಾರವಾಗಿ
ಮದಿಂದ ಹೊರಟ ಉತ್ಸವವು ಪೇಟೆಯ ವೃಷಭೇ
ದೇವಾಲಯಕ್ಕೆ ರಾತ್ರಿ ೧೨|| ಗಂಟೆಗೆ ಬಂ
ಲ್ಪಿತು. ಜಗದ್ಗುರುಗಳವರ ಭಾವಚಿತ್ರವು ದೇ
ಯದಲ್ಲಿ ರಚಿಸಲ್ಪಟ್ಟಿದ್ದ ಭದ್ರಪೀಠದಲ್ಲಿ ಮೂರ್ತಿ
ಸಲ್ಪಟ್ಟಿತು. ಬಳಿಕ ಮ|| ರಾ|| ಕಂಚಿಕೆರೆ
ಭೋಗ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ
ಸೇರಿತು. ತಿ|| ಗುರುಪಾದದೇವರ ಮಠದ ಶಾಂತ
ಶಾಸ್ತ್ರಿಗಳೇ ಮೊದಲಾದವರು ಈ ಆಚಾರ್ಯರ
ತ್ರದ ಬಗ್ಗೆ ಭಾಷಣಗಳನ್ನು ಮಾಡಿದರು. ಅನ
ಸಭಿಕರಿಗೆ ತಾಂಬೂಲವು ಕೊಡಲ್ಪಟ್ಟು ಶ್ರೀ
ದ್ಗುರು ಪಂಚಾಚಾರ್ಯರ ಜಯಘೋಷದೊಡನೆ
ಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಪಿ. ಕರಿಬಸ

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಮಂಡಳಿ, ತುಮಕೂರು.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ದಾರುಕಶಿವಾಚಾರ್ಯರವರ ಜಯಂತಿಮಹೋತ್ಸವವನ್ನು ತುಮಕೂರಿನಲ್ಲಿ ಮೇಲ್ಕಂಡ ಸಮಿತಿಯವರು ಇದೇ ವೈಶಾಖ ಶು||೫ ದಿವಸ ಬಹು ಭಕ್ತಿಯಿಂದ ಆಚರಿಸಿದರು.

ಸಮಸ್ತ ವೀರಶೈವ ಮತೀಯರೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಮಹೋತ್ಸವಗಳನ್ನು ಕ್ರಮವಾಗಿ ಆಚರಿಸಿ ನಮ್ಮ ಮತದ ಸನಾತನತ್ವವನ್ನೂ ಪಾವಿತ್ರ್ಯವನ್ನೂ ಕಾಪಾಡಿಕೊಳ್ಳಬೇಕಾಗಿ ವಿನಯದಿಂದ ವಿಜ್ಞಾಪಿಸುತ್ತೇವೆ.

ತಾ|| 20—5—27. ಕಾರ್ಯದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯ
ಸೇವಾಸಮಿತಿ.

ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮಹೋತ್ಸವವು.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು ಇದೇ ಪ್ರಭವ ಸಂವತ್ಸರದ ಚೈತ್ರಮಾಸದಲ್ಲಿ ಮರುಳಸಗೌಡ್ರ ಸಿದ್ಧನಗೌಡ್ರು, ಮರುಳಸಗೌಡ್ರ ಬಸವನಗೌಡ್ರು, ಹೊನ್ನನಗೌಡ್ರ ಮರುಳಸಗೌಡ್ರು ಮುಂತಾದ ಗ್ರಾಮಸ್ಥ ಮುಖರ ಆಮಂತ್ರಣವನ್ನು ಸ್ವೀಕರಿಸಿ ಹರಪನಹಳ್ಳಿ ತಾಲೂಕು ಅರಸೀಕೆರೆಯಿಂದ ಉಚ್ಚಂಗಿದುರ್ಗಕ್ಕೆ ದಯಮಾಡಿಸಿದರು. ಉಚ್ಚಂಗೀದುರ್ಗದ ವೀರಶೈವ ಮಹಾಜನಗಳೂ, ಇತರ ಎಲ್ಲಾ ಕೋಮಿನವರೂ ಮತ್ತು ಆಜುಬಾಜು ಗ್ರಾಮದವರೂ, ಭಯಭಕ್ತಿ ಪುರಸ್ಸರವಾಗಿ ಶಿಷ್ಟಕಪಾಲಕಸಮೇತ ಮಹಾಸ್ವಾಮಿಗಳವರ ದರ್ಶನವನ್ನು ಮಾಡಿ ಸಕಲ ಬಿರುದಾವಳಿಗಳೊಡನೆ ಮಹಾಸ್ವಾಮಿಗಳನ್ನು ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಗ್ರಾಮವನ್ನು ಪ್ರವೇಶ ಮಾಡಿಸಿದರು. ಮರುದಿವಸ ಮರುಳಸಗೌಡ್ರ ಸಿದ್ಧನಗೌಡ್ರು ತಮ್ಮ ಅರವತ್ತನೆಯ ವಯಸ್ಸಿನ ಉಗ್ರಶಾಂತಿ ನಿಮಿತ್ತಕ್ಕಾಗಿ ಮಹಾಸ್ವಾಮಿಗಳನ್ನು ಪ್ರಸ್ಥಾನೋತ್ಸವದಲ್ಲಿ ತಮ್ಮ ಮನೆಗೆ ಬಿಜಯಂಗೈಸಿಕೊಂಡು ಕಾಣಿಕೆಯನ್ನೊಪ್ಪಿಸಿದರು. ಪುನಃ ಎರಡುಮೂರು ದಿವಸಗಳಲ್ಲಿ ಮರುಳಸಗೌಡ್ರ ಬಸವನಗೌಡ್ರು, ಹೊನ್ನನಗೌಡ್ರು ಮತ್ತು ಮರುಳಸಗೌಡ್ರು ಮಹಾಸ್ವಾಮಿಗಳನ್ನು ಅತಿ ವಿಜೃಂಭಣೆಯಿಂದ ತಮ್ಮ ತಮ್ಮ ಮನೆಗಳಿಗೆ ಬರಮಾಡಿಕೊಂಡು ಪಾದಪೂಜಾ ಗಣಾರಾಧನಾದಿಗಳನ್ನೆಲ್ಲಾ ಸಮರ್ಪಕವಾಗಿ ಮಾಡಿ ಯಥಾಶಕ್ತಿ ಕಾಣಿಕೆಯನ್ನೊಪ್ಪಿಸಿದರು. ಮಹಾಸ್ವಾಮಿಯು ಅಲ್ಲಿಯ ಭಕ್ತರ ಭಕ್ತಿಯನ್ನು ನೋಡಿ ಸಂತುಷ್ಟಚಿತ್ತದಿಂದ 20-25 ದಿವಸಗಳ ವರೆಗೆ ಸದರಿ ಉಚ್ಚಂಗಿದುರ್ಗದಲ್ಲಿಯೇ ಇದ್ದು ಪ್ರತಿನಿತ್ಯವೂ ಸಾಯಂಕಾಲದಲ್ಲಿ ಮಹಾಸ್ವಾಮಿಗಳವರ ಪ್ರಸಾದವಾಕ್ಯವನ್ನು ಕೇಳಿ ಧನ್ಯರಾಗಬೇಕೆಂಬಭಿಲಾಷೆಯಿಂದ ಬಂದ ಗೃಹಸ್ಥರಿಗೆಲ್ಲ ವೀರಶೈವರ ಧರ್ಮವಾವುದು? ಅವರ ಕರ್ತವ್ಯವೇನು? ಅಷ್ಟಾವರಣಗಳು ನಿತ್ಯಕ್ಕೆ ಎಷ್ಟಿವೆ? ಇತ್ಯಾದಿ ವಿಷಯಗಳನ್ನು ಉಪದೇಶ ಮಾಡುತ್ತಿದ್ದರು. ಭಕ್ತಾದಿಗಳು ಮಹಾಸ್ವಾಮಿಗಳವರ ಉಪದೇಶಾಮೃತವನ್ನು ಪಾನಮಾಡಿ ಧನ್ಯಜೀವಿಗಳಾಗುತ್ತಿದ್ದರು, ಮತ್ತು ಪಾಲುಮತ, ಗಂಗಾಮತ, ಪಟವಾಳ ಮೊದಲಾದ ಅಲಿಂಗಿಭಕ್ತರೆಲ್ಲ ಹಿಂಸೆ, ಮದ್ಯಪಾನ, ಮಾಂಸಭಕ್ಷಣ ಮೊದಲಾದ ದುರಾಚಾರಗಳಿಂದುಂಟಾಗುವ ಮಹಾನರ್ಥವನ್ನೂ ಇವುಗಳನ್ನು ಬಿಡುವುದರಿಂದುಂಟಾಗುವ ಲಾಭವನ್ನೂ ಯುಕ್ತಿಯುಕ್ತವಾಗಿ, ಶಾಸ್ತ್ರದ ಕಟ್ಟಳೆಗನುಸರಿಸಿ ಬೋಧಿಸುವದರಿಂದ ಪಂಡಿತಪಾಮರರೆಲ್ಲರಿಗೂ ಸುಬೋಧೆಯಾಗುವಂತೆ ಉಪದೇಶಮಾಡುತ್ತಲಿದ್ದರು. ಮಹಾಸ್ವಾಮಿಯವರ ಬೋಧಾಮೃತವನ್ನು ಪಾನಮಾಡಿದ ಅಲಿಂಗಿಗಳೆಲ್ಲರೂ ಅಪೇಯಪಾನಾದಿಕಾರ್ಯಗಳು ಅಜ್ಞಾನದಿಂದ ಮಾಡಲ್ಪಡುತ್ತಿದ್ದವೇ ಹೊರತು ಅನ್ಯಥಾ ಅಲ್ಲವೆಂದು ಮಹಾಸ್ವಾಮಿಯಲ್ಲಿ ಒಪ್ಪಿಕೊಂಡು ಇನ್ನು ಮುಂದೆ ಧರ್ಮವಿರುದ್ಧವಾದೀ ಕಾರ್ಯಗಳನ್ನು ಮಾಡುವುದಿಲ್ಲವೆಂದು ಶ್ಯಬೋಧಿಸಿಕೊಂಡು ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದರು. ಹೀಗೆ ಮಹಾಸ್ವಾಮಿಯವರು ಇಲ್ಲಿಯ ಜನಾಂಗಕ್ಕೆ ಧರ್ಮಮಾರ್ಗವನ್ನು ಬೋಧಿಸುತ್ತ ಪುನೀತರನ್ನಾಗಿ ಮಾಡಿ ಯಥಾಪ್ರಕಾರ ಸಂಸ್ಥಾನದಲ್ಲಿ ನಡೆಯುವ ಶ್ರೀ ಮರುಳಸಿದ್ಧೇಶ್ವರಸ್ವಾಮಿಯ ರಥೋತ್ಸವಕ್ಕಾಗಿ ಇದೇ ವೈಶಾಖಶುದ್ಧ ತದಿಗೆ ದಿವಸ ಲವಾಜಮಾಸಮೇತ ಶ್ರೀ ಉಜ್ಜಯಿನೀಕ್ಷೇತ್ರಕ್ಕೆ ದಯಮಾಡಿಸಿತು.

ಒಬ್ಬ ಗುರುಭಕ್ತ.

ದುಃಖವಾರ್ತೆಯು.

ಮೈಸೂರು ಆಸ್ಥಾನ ಸಂಗೀತವಿದ್ವಾನ್ ಮ|| ಬಿ. ರಾಚಪ್ಪನವರು ಇದೇ ತಿಂಗಳು ತಾ|| 17ರಲ್ಲಿ ವಿಧಿವಶರಾದರೆಂಬ ವಿಷಯವನ್ನು ತಿಳಿಸಲು ವಿಷಾದಿಸುತ್ತೇವೆ. ಇವರು ಚಿಕ್ಕವಯಸ್ಸಿನಿಂದಲೂ ಶ್ರಮವಹಿಸಿ ಸಂಗೀತ ಶಾಸ್ತ್ರದಲ್ಲಿ ನಿಷ್ಣಾತರಾಗಿದ್ದುದರಿಂದ ನಮ್ಮ ಮಹಾಪ್ರಭುಗಳು ಇವರನ್ನು ವಿದ್ವತ್ಪಂಕ್ತಿಗೆ ಸೇರಿಸಿದುದಲ್ಲದೆ ಇವರಲ್ಲಿ ಪೂರ್ಣಕೃಪಾಕಟಾಕ್ಷವನ್ನಿರಿಸಿದ್ದರು. ಇವರು ನಿರರ್ಗಳವಾದ ಗಾನವುಳ್ಳವರೂ, ಮಧುರತರವಾದ ಧ್ವನಿಯುಳ್ಳವರೂ, ನಾಗರೀಕರೂ, ಸದ್ಗುಣಿಗಳೂ ಆಗಿದ್ದುದರಿಂದ ಎಲ್ಲಾ ಕಡೆಯಲ್ಲಿಯೂ ಇವರ ಸಂಗೀತಶ್ರವಣವನ್ನೇ ಅಪೇಕ್ಷಿಸುತ್ತಿದ್ದರು. ತಮ್ಮ ಶ್ರಾವ್ಯವಾದ ಗಾನರಸದ ಮಾಧುರ್ಯದಿಂದ ಅನೇಕ ಕಡೆಗಳಲ್ಲಿ ಅನೇಕ ವಿಧವಾದ ಪ್ರಶಸ್ತಿಗಳನ್ನು ಪಡೆದಿದ್ದರು. ಮತ್ತು ಇವರು ಬಾಲ್ಯಾದಾರಭ್ಯ ಅರಮನೆ ನಾಟಕಕಂಪನಿಯಲ್ಲಿದ್ದು ಪ್ರಸಿದ್ಧರಾದರು. ಇತ್ತೀಚೆಗೆ ಶ್ರೀ ಚಾಮುಂಡೇಶ್ವರೀ ನಾಟಕಕಂಪನಿಯಲ್ಲಿ ಪ್ರಧಾನಪಾತ್ರವನ್ನು ವಹಿಸುತ್ತ ಪ್ರೇಕ್ಷಕರ ಮನಸ್ಸನ್ನು ಸಂತೋಷಪಡಿಸುತ್ತಿದ್ದರು. ಇವರು ಮರಣವನ್ನು ಹೊಂದುವುದಕ್ಕಿಂತ ಮೂರುನಾಲ್ಕು ದಿವಸಗಳ ಹಿಂದೆ ಕಂಬಾಪುರ ಪ್ರಾಂತದಲ್ಲಿರುವ ಒಬ್ಬ ಶ್ರೀಮಂತರ ಆಮಂತ್ರಣವನ್ನು ಸ್ವೀಕರಿಸಿ ಸಂಗೀತಕಚೇರಿಗೆ ಹೋಗಿದ್ದರು. ದೈವಗತಿಯನ್ನು ಯಾರು ಬಲ್ಲರು? ಇವರಿಗೆ ಕಾಲರಾರೋಗದಿಂದ ಸ್ವಸ್ಥ್ಯವಿಲ್ಲದೆ ತೊಂದರೆಯಾಯಿತು. ಅಲ್ಲಿಂದ ಬೇಗನೆ ಶೀಘ್ರದಲ್ಲಿಯೇ ಮೋಟಾರಿನಲ್ಲಿ ರಾಜಧಾನಿಗೆ ಕರೆತರಲ್ಪಟ್ಟರು. ಈ ದುಃಖಕರವಾದ ಸಂಗತಿಯನ್ನು ಕೇಳಿ ರಾಜಧಾನಿಯಲ್ಲಿರುವ ದೊಡ್ಡದೊಡ್ಡ ವಿದ್ವಾಂಸರೂ, ಅಧಿಕಾರಿಗಳೂ, ಪಂಡಿತರೂ, ಶ್ರೀಮಂತರೂ ತಂಡೋಪತಂಡವಾಗಿ ಇವರ ಮನೆಗೆ ಬಂದು ಮ|| ರಾ|| ಬಿ. ರಾಚಪ್ಪನವರ ಕಳೇಬರವನ್ನು ನೋಡಿ ಇವರ ಅಪ್ರಿಯವಿಯೋಗದಿಂದುಂಟಾದ ದುಃಖವನ್ನು ಸಹಿಸಲಾರದೆ ಕಣ್ಣೀರನ್ನು ಸುರಿಸುತ್ತಿದ್ದರು. ಇವರ ರುದ್ರಭೂಮಿಗೆ ಸಾಗಿಸುವ ವೇಳೆಗೆ ಮನೆಯ ಮುಂದಣ ರೋಡು ಸ್ತ್ರೀಪುರುಷರಿಂದ ನಿಬಿಡೀಕೃತವಾಗಿದ್ದಿತು. ಚಾಮುಂಡೇಶ್ವರೀ ಕಂಪನಿಯ ನಾಟಕಮಂಡಲಿಯವರೆಲ್ಲರೂ ಮತ್ತು ನಾಟಕದ ಪ್ರಧಾನನಾಯಕನೂ ಆದ ಈ ಮಹಾಶಯನ ವಿಯೋಗದುಃಖವನ್ನು ಸಹಿಸಲಾರದೆ ನಮ್ಮ ಕಂಪನಿಯ ಕೀರ್ತಿ ಎದ್ದುಹೋಯಿತೆಂದು ದಾರಿಯುದ್ದಕ್ಕೂ ಶೋಕಿಸುತ್ತ ಹಾಹಾಕಾರಪಡುತ್ತಿದ್ದರು. ಆದರೆ ಲೋಕದಲ್ಲಿ ಅನೇಕರು ಸಂಗೀತವಿದ್ವಾಂಸರುಂಟು; ತಮ್ಮ ಸುಂದರವಾದ ಗಾನರಸದಿಂದ ಶ್ರೋತೃಗಳಾದಿಯಾಗಿ ಭಗವಂತನಿಗೂ ಚಿತ್ತಾಹ್ಲಾದಕತೆಯನ್ನುಂಟು ಮಾಡುವವರು ಮಾತ್ರ ದುರ್ಲಭವೇ ಸರಿ! ಈ ಮಹಾಶಯರಲ್ಲಿ ಮಾತ್ರ ವೈದುಷ್ಯವು ಇದ್ದುದಲ್ಲದೆ ಸರ್ವಜನ ಚಿತ್ತಾಕರ್ಷಣಕರವಾದ ಧರ್ಮವೂ ಸಂಪೂರ್ಣವಾಗಿತ್ತು. ಸಾಧಾರಣ ಒಂದು ದೇವರನಾಮವನ್ನು ಹಾಡಿದರೂ ಸಭಿಕರೆಲ್ಲರೂ ತಲೆದೂಗುತ್ತಿದ್ದರು. ಈ ವಿಧವಾದ ಶಕ್ತಿಯು ಕೇವಲ ವಿದ್ವತ್ತಿನಿಂದ ಬರಲಾರದು. ಪೂರ್ವಾರ್ಜಿತ ಪುಣ್ಯವಿಶೇಷವಿದ್ದವರಿಗೆ ಮಾತ್ರ ಸಿದ್ಧಿಸುವುದು. ಈ ಮಹಾಶಯರ ಕಂಠಮಾಧುರ್ಯವನ್ನೂ, ಹಾಡುವ ವೈಖರಿಯನ್ನೂ ನೋಡಿದರೆ ಇವರು ಕೇವಲ ಗಂಧರ್ವಾಂಶೀಭೂತರಾಗಿದ್ದರೆಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಒಂದು ಸಮಾಜದಲ್ಲಿ ಸಮರ್ಥರುಗಳು ಇದ್ದರೆ ಆ ಸಮಾಜವು ಶೋಭಾಯಮಾನವಾಗುವುದು. ನಮ್ಮ ವೀರಶೈವಸಮಾಜದಲ್ಲಿ ಸಕಲವಿದ್ಯೆಗಳೂ ಯತ್ಕಿಂಚಿತ್ ಇದ್ದರೂ ಸಂಗೀತಕಲೆಯಲ್ಲಿ ಮಾತ್ರ ಇವರೇ ಪ್ರಧಾನಪಟ್ಟವನ್ನು ವಹಿಸಿದ್ದರು. ಎಲ್ಲಿ ಸಭೆಗಳು ನಡೆದರೂ ಅರಮನೆ ಸಂಗೀತವಿದ್ವಾನ್ ಬಿ. ರಾಚಪ್ಪನವರನ್ನು ಕರೆಸಬೇಕೆಂದು ಅಪೇಕ್ಷಿಸುತ್ತಿದ್ದರು. ಈ ಸಮಾಜದಲ್ಲಿ ಇಷ್ಟು ಗೌರವವನ್ನು ಪಡೆದುದಲ್ಲದೆ ಅನ್ಯಸಮಾಜದಲ್ಲಿಯೂ ಬಹು ವಿಶೇಷವಾದ ಗೌರವವನ್ನು ಪಡೆದಿದ್ದರು. ಪ್ರಕೃತದಲ್ಲಿ ವೀರಶೈವಸಮಾಜದ ದುರದೃಷ್ಟತೆಯನ್ನು ಏನೆಂದು ವರ್ಣಿಸೋಣ! ಈ ಸಮಾಜದಲ್ಲಿ ಸಂಗೀತವಿದ್ವಾಂಸರೆಂದು ಕೀರ್ತಿವಡೆದ ಈ ಮಹಾಶಯರ ಅಭ್ಯುದಯವನ್ನು ನೋಡಿ ಸಹಿಸಲಾರದೆ ದುರ್ವಿಧಿಯು ಮತ್ಸರಿಯಾಗಿದ್ದು ಯಾರೊಬ್ಬರ ಸಹಾಯವೂ ಇಲ್ಲದೆ ಏಕಾಂಗಿಯಾಗಿ ಪರಲೋಕಕ್ಕೆ ಕರೆದುಕೊಂಡುಹೋಗಿ ಘಾತುಕನಾದ ಮೃತ್ಯುದೇವತೆಯು ಇವರನ್ನು ನುಂಗಿ ಸಮಾಜಕ್ಕೆ ಬಹುದುಃಖವನ್ನುಂಟುಮಾಡಿದರೂ ಉಪಾಯವಿಲ್ಲ. (ನರಃ ಸತತಕಾಲಮುಪೈಷ್ಯತಿ ಕಾಲೋ ನಪೇಕ್ಷತೇ) ಗುಣಾಢ್ಯರಾದ ಪುರುಷರು ಈ ಅನಿತ್ಯವಾದ ಸ್ಥೂಲಶರೀರವನ್ನು ಬಿಟ್ಟರೂ ಕೀರ್ತಿರೂಪವಾದ ಶರೀರದಿಂದ ಶಾಶ್ವತವಾಗಿ ಜೀವಿಸುವರು ಎಂಬ ನೀತಿಗನುಗುಣವಾಗಿ ನಮ್ಮ ಆಸ್ಥಾನ ಸಂಗೀತವಿದ್ವಾನ್ ಬಿ. ರಾಚಪ್ಪನವರು ಎಂದಾದರೂ ಬಿದ್ದುಹೋಗುವ ಅಸ್ಥಿರವಾದ ಶರೀರವನ್ನು ಬಿಟ್ಟರೂ ಬಿಡಲಾರದ ಯಾವುದೋ ಒಂದು ಶಾಶ್ವತವಾದ ಯಶಸ್ಸನ್ನು ಪಡೆದಿರುವುದರಿಂದ ಮುಕ್ತಿಯನ್ನು ಪಡೆದುಕೊಂಡಿದ್ದಾರೆ. ಇವರು ತಮ್ಮ [illegible]ನೆಯ ವರ್ಷದಲ್ಲಿ ದೇಹವನ್ನು ತ್ಯಜಿಸಿದರು. ಈ ಮಹಾಶಯರ ಆತ್ಮಕ್ಕೆ ಗಾನಲೋಲನಾದ ಶ್ರೀ ಸದಾಶಿವನು ಶಾಂತಿಯನ್ನುಂಟುಮಾಡಲೆಂದು ಹೇಳುತ್ತೇವಲ್ಲದೆ ಸದ್ಗುಣಾವಳಿಯಿಂದ ಪರಿಪೂರ್ಣವಾದ ಮ|| ರಾಚಪ್ಪನವರ ಅಕಾಲಿಕವಾದ ವಿಯೋಗದಿಂದ ಅಪಾರವಾದ ದುಃಖಸಾಗರದಲ್ಲಿ ಮುಳುಗಿದ ಇವರ ಧರ್ಮಪತ್ನಿಗೂ ಕರುಣಾಮೂರ್ತಿಯಾದ ಚಾಮುಂಡಾಂಬಿಕೆಯು ಸಹನಶಕ್ತಿಯನ್ನು ಕರುಣಿಸಿ, ಶೀಘ್ರವಾಗಿ ಮನಶ್ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ

ಪಂಚಾಚಾರ್ಯ ಪ್ರಿಂಟಿಂಗ ಪ್ರೆಸ್ಸಿಗೆ ನಗದು ಕೊಟ್ಟ ಮಹಾಶಯರು.

೧೫ ಸುಬ್ಬಂಬಲಿ ಲಿಂಗಪ್ಪನವರು ಹೊಳಗುಂದಿ.
೧೫ ಡಿ ಸಣ್ಣಲಿಂಗಪ್ಪನವರು ಡಿ
೧೫ ಒಡ್ಡಿನ ಸಿದ್ಧಪ್ಪನವರು ಡಿ
೧೫ ಎಲಿಗಾರ ಸಿದ್ಧಲಿಂಗಪ್ಪನವರು ಡಿ
೧೦ ಹಲಗಪ್ಪನ ವೀರಪ್ಪನವರು ಡಿ
೧೦ ಪಾಟೀಲ ತಿರುಕನಗೌಡರು. ಡಿ
೧೨ ಶಾನಭೋಗರ ಗುರುಶಾಂತಪ್ಪನವರು ಡಿ
೧೦ ವೀರಾಪುರದ ಸಣ್ಣ ಅಡಿವಪ್ಪನವರು ಡಿ
೧೦ ಅನ್ನದಾನಗೌತ್ರ ಸಿದ್ದಪ್ಪನವರು ಡಿ
೧೦ ಕಪ್ಪಿಣಕಂಥಿಮಠದ ಗುರುಲಿಂಗಯ್ಯನವರು ಡಿ
೧೦ ಡಿ ಸಿದ್ಧಾಂತಿ ಶಿವಲಿಂಗಯ್ಯನವರು ಡಿ
೧೦ ಹಿರೇಮಠದ ಕೊಟ್ರಯ್ಯನವರು ಡಿ
೧೨ ಗೋನಾಳ ಸಿದ್ಧಪ್ಪನವರು ಡಿ
೧೨ ಕಂಪಾಳಿಮಠದ ಮರಿಮಲ್ಲಯ್ಯನವರು. ಡಿ
೧೦ ಹಾವನೂರು ಲಕ್ಷ್ಮಪ್ಪನವರು ಡಿ
೧೨ ಶಾನಭೋಗರ ಸಿದ್ಧಲಿಂಗಪ್ಪನವರು. ಡಿ
೧೨ ಅವರಲೆಮಠದ ಗುರುಸಿದ್ಧಯ್ಯನವರು ಹಂಪಸಾಗರ.
೧೦ ಬೂದಿ ಸಿದ್ಧಯ್ಯನವರು ಡಿ
೧೨ ಹಸಿಹಿಟ್ಟಿನಮಠದ ವೀರಯ್ಯನವರು ಡಿ
೧೨ ಶೀಲವಂತರ ರೇವಣಸಿದ್ಧಪ್ಪನವರು ಡಿ
೧೦ ಹೊಸ್ಮಠದ ಚನ್ನಪ್ಪನವರು ಡಿ
೧೦ ಹತ್ತಿ ರುದ್ರಪ್ಪನವರು ಡಿ
೧೨ ಲಿಂಗದಹಳ್ಳಿ ಪರಪ್ಪನವರು ಡಿ
೧೦ ಸಾರಂಗಮಠದ ಮಡಿವಾಳಯ್ಯನವರು. ಮುದ್ದಬಸಪ್ಪನ ಅಯ್ಯನಹಳ್ಳಿ.
೧೦ ಗೊಂಗಡಿಮಹಾದೇವಪ್ಪನವರು. ಹರಪನಹಳ್ಳಿ,
೧೦ ಕೊಟ್ಟಿ ಸೋಮಪ್ಪನವರು ಗದಗ.
೧೦ ಹಿರೇಮನಿ ನೀಲಪ್ಪಗೌಡರು ಗದಗಬೆಟಗೇರಿ.
೧೦ ಹಸಗೋಡಿಮಠದ ಗುರುಶಾಂತಯ್ಯನವರು ದಾವಣಗೆರೆ.
೧೦ ಮಳೆಪಿಸ್ಕಾಮಠದ ಹಾಲಸಿದ್ಧಯ್ಯನವರು ಡಿ
೧೦ ನಂದಗಾವಿ ಬೆಳತಿನಕೊಂಡಮಠದ ಹಾಲಯ್ಯನವರು ಡಿ
೧೨ ಚಿಪ್ಪಿಗರ ಚನ್ನಬಸಪ್ಪನವರು ನಿಟ್ಟೂರು.
೧೦ ಮಠದ ಕಳಗೋಟಯ್ಯನವರು. ಹಂಬಗೋಳ.
೧೨ ಮಠದ ರಾಚೋಟಯ್ಯನವರು. ಹೊಸಹಳ್ಳಿ ಸಿದ್ದಾಪುರ.
೧೨ ಕುಡುಪರ ಗುಂಡಪ್ಪನವರು. ಮೆಟ್ರಿ.
೧೦ ನೀಲನಗೌಡರು ಪಾಟೀಲ ಲಕಮಾಪುರ ಮಾಸ್ತರ ಆಳವಂಡಿ.
೧೨ ಶೆಟ್ರ ಪುಟ್ಟಪ್ಪನವರು ಜಿಗಟೇರಿ.
೫ ಘೂಸದ ಫಕೀರಪ್ಪನವರು. ಹರಪನಹಳ್ಳಿ.
೫ ಮೊರಬಗಿ ಮರಿಗಪ್ಪನವರು. ಡಿ
೫ ಬಸಯ್ಯನವರು. ಗರ್ಲಸ್ಕೂಲನಮಾಸ್ತರ ಕೋಣಗಿ.
೫ ಮುದಿಕೆಂಚಪ್ಪನವರ ಕೊಟ್ರಬಸಪ್ಪನವರು. ಡಿ
೫ ಒಡೆಪಲಿ ಕೊಟ್ರಬಸಪ್ಪನವರು. ಕೊಟ್ಟೂರು.
೫ ಬಣೆನವರ ನಾಗೀರಪ್ಪನವರು ನಂದಿಬೇವೂರು.
೫ ಕವಿಮಹಾಲಿಂಗಪ್ಪ ಶಿವಲಿಂಗಪ್ಪನವರು ನ್ಯಾಮತಿ.
೫ ನೀರಲಕೋಟೆ ಗುರುಸಿದ್ದಪ್ಪನವರು. ಅಪ್ಪಿಗೇರಿ
೫ ಹೊಂಬಳಗಟ್ಟಿಮಠದ ಕೊಟ್ರಯ್ಯನವರು ಕಿತ್ತೂರು.
೫ ಹುಲ್ಲಳ್ಳಿ ಶಿವಲಿಂಗಪ್ಪನವರು. ಅಣ್ಣೀಗೆರಿ.
೫ ಸೂಗಟನಾಳ ರುದ್ರಪ್ಪನವರು. ಡಿ
೫ ಬನ್ನಾಳ ವೀರಬಸಪ್ಪನವರು. ಡಿ
೫ ಗಾಣಿಗರ ಸಿದ್ದಲಿಂಗಪ್ಪನವರು. ಡಿ
೫ ಅಂಗಡಿ ಮದ್ದನಾಗಪ್ಪನವರು. ಹೋಲೂರು.
೫ ಪೋಲೀಸ ಪಾಟೀಲ ಒಡ್ಡನಗೌಡರು ಕನಕೇರಿ.
೫ ಶೆಟ್ರ ರುದ್ರಪ್ಪನವರು ಡಿ
೫ ಕಲ್ಮಲೆಮಠದ ಶರಣಯ್ಯನವರು ಶಿರಿಗೇರಿ.
೫ ಮಾಮಡೂರುಮಠದ ಸಿದ್ದಯ್ಯನವರು.
೫ ಮಠದ ತೋಟಯ್ಯನವರು. ಚಿತ್ರವಾಡಗಿ.
೫ ಮಠದ ಹಾಲಸ್ವಾಮಿ ಗುರುನಂಜಪ್ಪಯ್ಯನವರು. ಹಲ್ಲಾಗಟ್ಟಿ.
೫ ಭದ್ರಶೆಟ್ಟಿ ನಂದಪ್ಪನವರು. ನಂದ್ಯಾಲ
೫ ಘೂಮಳ್ಳಿ ಬಸಪ್ಪನವರು. ಜಿಗಟೇರಿ.
೫ ಹೋಳಬಸಪ್ಪನವರ ಹೋಳಬಸಪ್ಪನವರು. ಡಿ
೫ ದಾವಣಗೆರೆ ಮಹಾದೇವಪ್ಪನವರು. ಡಿ
೫ ಬಸಳಿ ಅಯ್ಯಪ್ಪನವರು. ಡಿ
೫ ಮಠದ ಕಾಡಪ್ಪನವರ ಸಿದ್ದಯ್ಯನವರು. ಉತ್ತಂಗಿ.

ಪಂಚಾಚಾರ್ಯ ಪ್ರಿಂಟಿಂಗ' ಪ್ರೆಸ್ಸಿಗೆ ವಾಗ್ದಾನಮಾಡಿದ ಮಹಾಶಯರು.

೨೫ ಮಠದ ರುದ್ರಯ್ಯನವರು, ತಗ್ಗಳ್ಳಿ.
೨೫ ಇನಾಮದಾರ ಅಡಿವಯ್ಯನವರು, ಅಬಲೂರು. ೫ ರೂ. ಬಂದಿವೆ.
೨೦ ಸಾರಂಗಮಠದ ಮಡಿವಾಳಪ್ಪನವರು, ಮುದ್ದಬಸಪ್ಪನ ಅಯ್ಯನಹಳ್ಳಿ, ೧೦ರೂ. ಬಂದಿವೆ.
೨೫ ಹೊನ್ನಾಳಿ ಸಣ್ಣಬಸಪ್ಪನವರು, ದೊಡ್ಡಘಟ್ಟ
೨೫ ಶ್ರೀ|| ಕಲ್ಲುಮಠದ ಪರಯ್ಯನವರು, ಬಳ್ಳಾರಿ
೨೫ ಗದ್ದಿಗಿಮಠದ ಪುಟ್ಟಪ್ಪನವರು, ಹರಿಹರ.
೨೫ ಭಿಕ್ಷಾವರ್ತಿಮಠದ ರುದ್ರಮುನಿಯಯ್ಯನವರು, ಶಾವಿ.
೨೫ ಹಿರೇಮಠದ ಅಮರನಾಥಶಾಸ್ತ್ರಿಗಳು, ಬನ್ನಿಕೊಪ್ಪ ೫ ರೂ. ಬಂದಿವೆ,
೫ ಜಿಗಟೇರಿ ಮಲ್ಲಪ್ಪನವರು, ಕೊಟ್ಟೂರು.
೧೫ ಅಣಜೂರುಮಠದ ವೀರಭದ್ರಯ್ಯನವರು, ದಾವಣಗೆರೆ.
೨೫ ಕೊಟ್ರಬಸಪ್ಪನವರು, ಚಿನ್ನಕೊಪ್ಪ ಸೋಮಪುರ.
೧೦ ಮಠದ ಕುಮಾರಯ್ಯನವರು, ಗೋಂಡಬಾಳ,
೫ ಪತ್ರಿವ ಸಿದ್ದಯ್ಯನವರು. ಡಿ
೨೫ ಜಿಗಟೇರಿ ಶೆಟ್ರರೇವಪ್ಪನವರು, ಗುಡಾಳ.
೫ ಹಿರೇಮಠದ ನೀಲಕಂಠಯ್ಯನವರು, ನಾಗನೂರು.
೨೫ ಶಾನಭೋಗರ ಚನ್ನಬಸಪ್ಪನವರು, ಕಂಚಿಕೆರೆ.
೨೦ ಶಾನಭೋಗರ ಕೊಟ್ರಪ್ಪನವರು, ತೌಡೂರು.
೨೦ ಕರಣಂ ವೀರಪ್ಪನವರು, ತೌಡೂರು.
೫ ಕಶೆಟ್ಟಿ ವೀರಪ್ಪನವರು, ದಸಮಾಪುರ,
೧೦ ರಾಯಚೂರು ಚನ್ನವೀರಪ್ಪನವರು, ಮಾಸ್ತರ ಮಸಲವಾಡ.
೧೦ ಗಡಗಿನ ರಂಭುಲಿಂಗಪ್ಪನವರು ಡಿ
೧೦ ಕೊಪ್ಪಳದ ಬುದ್ಧಪ್ಪನವರು. ಡಿ
೫ ಸಿದ್ಧಮಲ್ಲಪ್ಪನವರ ಶರಣಯ್ಯನವರು, ಉತ್ತಂಗಿ.
೫ ಮಠದ ಪಂಚಾಕ್ಷರಯ್ಯನವರು, ಹಿರೇಸರ್ತಿ.
೮ ಮಠದ ಬಸಯ್ಯನವರು, ಪೋಲೂರು.
೫ ಹರಿಯಮ್ಮನಹಳ್ಳಿಮಠದ ಹಾಲಯ್ಯನವರು, ಹರಪನಹಳ್ಳಿ.
೫ ಮಠದ ವೀರರುದ್ರಯ್ಯನವರು, ಹೇರೂರು.
೫ ಬಾವಿ ದೊಡ್ಡಬಸಪ್ಪನವರು, ಹಸವಾಳ.
೧೦ ಮಠದ ಅಮರಯ್ಯನವರು, ಮೆಟ್ರಿ.
೧೦ ಮಠದ ಗುರುಸಿದ್ದಯ್ಯನವರು ಡಿ
೧೦ ಶಂಕಣಕಲ್ಲು ಸಣ್ಣದೊಡ್ಡಪ್ಪನವರು, ಮೆಟ್ರಿ.
೧೦ ಸಿದಗೊಳ್ಳಿ ಹಿರೇತಮ್ಮಪ್ಪನವರು ಡಿ
೧೦ ಪಾಟೀಲ ನಾಗನಗೌಡರು. ಡಿ
೨೫ ಕುರುಬರ ಬಡಪ್ಪನವರು. ಡಿ

ನಿವೇದನವು.

ವೀರಶೈವಮತದ ನಿಜತತ್ವಗಳನ್ನು ವೃತ್ತ ಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶ ಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮ ಪರಮತದವರಿಗೆ ಈ ಮತದ ಉದಾತ್ತತತ್ವ ಗಳನ್ನು ತೋರ್ಪಡಿಸಬೇಕೆಂಬ ಉದ್ದೇ ದಿಂದಲೂ ನಾಗನೂರು ಬೃಹನ್ಮಠಾಧ್ಯ ರಾದ ಪಂಡಿತ ಶ್ರೀ-ಕಾಶೀನಾಥಶಾಸ್ತ್ರಿಗ ವರು ಅತ್ಯಂತ ಶ್ರಮವಹಿಸಿ ರಾಜಧಾ ಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯ ಹೊರಡುವದಕ್ಕೆ ಸಕಲ ಏರ್ಪಾಟುಗಳನ ಮಾಡಿರುವದು ಸರ್ವರಿಗೂ ವೇದ್ಯವೇ ಅದೆ. ಈ ಪತ್ರಿಕೆಯನ್ನು ಅತ್ಯಂತ ಕೋರ್ಜಿತಾವಸ್ಥೆ ``ರಬೇಕೆಂದು ಸದರಿ ಪಂಡಿತರು ಸಕ್ಕಂಕ ವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ ಭಿಮಾನಿಗಳಾದ ಪ್ರತಿಯೊಬ್ಬರು ತಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ ಲಿಂಗಧಾರಣ, ವಿವಾಹಾದಿಶುಭಕಾರ್ಯಗಳ ಅವರವರ ಶಕ್ತ್ಯನುಸಾರವಾಗಿ ಈ ಪ ಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಂ ವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿ ಕಳಿಸಬೇಕೆಂದೂ ಈ ಕಾರ್ಯದಕಡೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಹಾರೈಸುತ್ತೇವೆ.

ಸಂಪಾದಕರು.

☞ ಮೈಸೂರು ವಾಣೀವಿಲಾಸ ರೋಡಿನಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಅಸ ಎಡಿಟರ್ ವೇ|| ಬ್ರಂ|| ಪಂಡಿತ ಶಿವ ಗುರು ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಸತತಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಸುಖಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮಗುರುಃ ಸಂರಕ್ಷತು ಶ್ರೀಲೋಕಕಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಮೇ ೧೯೨೭ ಇಸವಿ [ಸಂಚಿಕೆ ೩.

~~ಶ್ರೀ ಜಗದ್ಗುರು ಪಂಚಾಚಾರ್ಯಾಃ~~
~~ಪ್ರಸೀದಂತು.~~

ಶ್ರೀ ಜಗದ್ಗುರು ರೇವಣಸಿದ್ಧೇಶ್ವರಾಷ್ಟಕಂ.

ಭಗವಚ್ಛೀರ್ಷದಿ ಗಂಗೆ ತಾನೆಸೆವವೊಲ್ ಸ್ವಾಮಿಸ್ಥ ಗಂ
ರತೀ| ಭೃಗಳು ಶ್ರೀ ಗುರುಪಾದದೊಳ್ ಮೆರೆವವಾ
ಕ್ತೀತುವಿಂದೇಗಳುಂ || ಜನಗುರೋರುನ್ನತವೆಂದು
ದಗಳು ಘಂಟಾಘೋಷಮಂ ಮಾಳ್ಪವೀ| ಜಗದು
ದ್ಧರನಾಗಿಪ್ಪ ರೇವಣಸಿದ್ಧೇಂ ಸದ್ಭಕ್ತರಂ ಪಾಲಿಸೈ||೧||

ಗಜಚರ್ಮಂ ಗಣನಾಯಕಂಗಿರೆ ಭವಾನೀವಾಹನಂ
ಕೇಗಾಮುದಾ| ಭುಜಗಂ ಕಂಧರಜಟಾಗ್ರದಲ್ಲಿರೆ ಮಹಾ
ಸಪ್ರಯಾಣಂಸವಾ || ವಿಜಯೈರಕ್ತವ ದೂರಗಿಪ್ಪು
ದಂತೊಪ್ಪಿರ್ದ ರಂಭಾಪುರೀ| ಸುಜನಸ್ವಾಧ್ಯಸವಾಸ
ನಗುರುಸೇ ಸದ್ಭಕ್ತರಂ ಪಾಲಿಸೈ ||೨||

ಮುಕುಟತ್ರಂ ಮೃಗಪಾಣಿಪುಸ್ತಕಮೊಳ್ಪರ್ಷಂ ಪ್ರ
ಮಾದೇವಿತಾಂ| ಕಮಲಾಕ್ಷ ಪ್ರಿಯೆಯಾಗಿ ರಾಜಿಸು
ಳ್ ಕುಂದಿಲ್ಲಮಿಂತೆಂದುಸಂ || ಪ್ರಮದಿಂದಿರ್ಪ
ೀದಿಯಂ ಕುಡಿದಗಸ್ತ್ಯಂಗುರ್ವಿಯೊಳ್ ಷಟ್
ಲ| ಕ್ರಮಮಂ ಬೋಧಿಸಿದಾರ್ಯ ರೇಣುಕನೆನೀಂ
ಕ್ತರಂ ಪಾಲಿಸೈ ||೩||

ತಿಪಂಪಾಕ್ಷೇಪುರಾಳಿಯಿಂ ಸಟಿನಮಂಪಾಳ್ವಸ್ಥ
ಶ್ರೀಯುವಿಂ | ನತಿಯಂಪಾಳ್ವರುಣಾದಿ ಸದ್ಗ್ರಹಗ
ದಿಕ್ಪಾಲರಿಂ ಶೀಲರಿಂ || ಹಿತಮಿಂದಿರ್ದಳಿದಾ ದಶಾಸ್ಯ
ದೋಳ್ ಶಾಸಲಿಂಗಂಗಳಂ | ರತಿಯಿಂ ಸ್ಥಾಪಿಸಿದಾ
ರೇಣುಕನೆನೀಂ ಸದ್ಭಕ್ತರಂ ಪಾಲಿಸೈ ||೪||

ಶ್ರೀಮನ್ಮಂಡನಮಿತ್ರ ಮುಖ್ಯಪರವಾದಿಸ್ತೋಮ
ಗೆಲ್ದುಮಾ| ಶಾಮಾಧೀಶನಪೂಜೆಯಂ ಮಡಗಿಗ
ಭಾರತೀ ಪೀಠಮಂ || ಶ್ರಾಮೋಚ್ಚೃಂಗಮಹೀಧ್ರ
ಮದಿಪಗಿಪ್ಪಾ ಶಂಕರಾಚಾರ್ಯಗೆ| ಸೋ
ಂಕಾಭಿಧಲಿಂಗಮಿತ್ತ ಗುರುವೇ ಸದ್ಭಕ್ತರಂ ಪಾ
ಸೈ ||೫||

ಶತಮನ್ಯೂ ಪ್ರಮುಖಾದಿಕೇಯರನು ದೇವಾಚಾರ್ಯ
ಕಾಡಿದು| ಸ್ವತತೇಜೋನಿಧಿಯಾದ ಪೂರ್ವತನಯಂ
ಂಕಾಪಲಂದುಂಬದೆ || ವಿತತಖ್ಯಾತಿಯುನಾಂತ ವಿ
ನು ಮಹೀಪಾಲಗೆ ಶಾಪಾಸಿಯು| ತ್ರೈತಿಥಿಕ್ಪ್ರಾಣ
ಣ ರೇಣುಕನೆನೀಂ ಸದ್ಭಕ್ತರಂ ಪಾಲಿಸೈ ||೬||

ರಪೈತೇಯಪರೋಧಿ ಕಂಜಭವದೇವೇಶಾದಿ
ನ್ನಕಂ ' ಕರಬಾರ್ಯೋರಥದಂತೆ ಸುಧ್ಯಾಯೊತ
ರಾತ್ಪೀಯರಾಸುಧ್ಯಮೊಳ್ || ಸಿರಿ ಶಂ ಭೂಪಿ
ಸುತಿರ್ಪ ವಸ್ತುವಿನಪರ್ಯಾಯಾಸ್ಯೆಯಿಂದೊಪ್ಪುವಾ|
ಪುರದೊಳ್ ಶ್ರೀಶನ ಶೀರ್ಷವಂ ಪೊರೆದನೀಂ ಸದ್ಭಕ್ತ
ರಂ ಪಾಲಿಸೈ ||೭||

ಮುನಿಯಿಂ ಶಾಪಿಸವಪ್ಪೊಂದಿ ಯಕ್ಷಮಿಥುನಂ ತಾಂ
ಮಾನಸೂರಲ್ಲಿ ಮ| ತ್ಕುಣರೂಪಾಪರಭರ್ಮದಿಂ ಪಟ
ಮಹೀಜದ್ವಂದ್ವದಲ್ಲಿರ್ದಿರಯಾ || ವಿಪಿನಿಯೊಳ್ ಕಟ್ಟಿ
ಜನಾಪುಷೀರುತಿರೆ ನಿನ್ನಂ ಕಷ್ಟಕೈತಂದ ತ| ದ್ವನಜ
ದ್ವಂದ್ವವ ಮುಟ್ಟಿ ಲೋಕಗುರುವೇ ಸದ್ಭಕ್ತರಂ ಪಾ
ಲಿಸೈ ||೮||

ಇತಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರಾಷ್ಟಕಂ
ಸಂಪೂರ್ಣಂ

ಲೇಖಕ—
ಪನ್ನಿಕೊಪ್ಪ ಬ್ರಹ್ಮರಾಧ್ಯಕ್ಷ
ಅಮರನಾಥಶರ್ಮಾ.

ಪಂಚಾಚಾರ್ಯ ಪ್ರಭೋದಯವು

ಶ್ರೀ ಸಚ್ಚಿತ್ಸ್ವರೂಪನಾದ ಪರಶಿವಮೂರ್ತಿಯ ಕೃಪಾಕಟಾಕ್ಷದಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದಬಲದಿಂದಲೂ ನೂತನವರ್ಷವಾದ ಈ ಪ್ರಭವನಾಮಸಂವತ್ಸರದ ಆದಿಯಲ್ಲಿಯೇ ಜನ್ಮವೆತ್ತಿರುವ "ಪಂಚಾಚಾರ್ಯಪ್ರಭಾ" ಎಂಬ ಶಿವತತ್ವಪ್ರಸಾರಕ ಪತ್ರಿಕೆಯ ಸುಜನಾಗಮನವನ್ನು ಬಯಸುವುದರಲ್ಲಿ ಅತಿಶಯವಾದ ಆನಂದವನ್ನು ಹೊಂದುತ್ತೇನೆ. ಈ ಪತ್ರಿಕೆಯು ಸದ್ಯಃ ಬಾಲ್ಯಾವಸ್ಥೆಯಲ್ಲಿದ್ದರೂ ಜ್ಞಾನವೃದ್ಧಿಯಾಗಿ ಅನೇಕಸುಗುಣಗಳಿಂದ ಕೂಡಿ ಮೆರೆಯುತ್ತಲಿರುವದು. ಈ ಪತ್ರಿಕೆಯು ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ವೃದ್ಧಿಯನ್ನು ಹೊಂದುತ್ತ ಕೃಷ್ಣಪಕ್ಷದ ಚಂದ್ರನಂತೆ ಕ್ಷಯರೋಗಗ್ರಸ್ತವಾಗದೆ ಧ್ರುವನಕ್ಷತ್ರದಂತೆ ಸ್ಥಿರವಾಗಿರಲೆಂದು ನನ್ನ ಆತುರವಾದ ಕೋರಿಕೆಯಾಗಿರುತ್ತದೆ. ಹಡಗದ ನಾವಿಕರಿಗೆ ಧ್ರುವನಕ್ಷತ್ರವು ಹೇಗೆ ಮಾರ್ಗದರ್ಶಿಯಾಗಿರುವುದೋ ಹಾಗೆಯೇ "ಪಂಚಾಚಾರ್ಯಪ್ರಭಾ" ಎಂಬೀ ಪತ್ರಿಕೆಯು ಜೀವವೆಂಬ ಹಡಗದಲ್ಲಿ ಸದಾ ಪ್ರಯಾಣಮಾಡುತ್ತಿರುವ ಮಾನವಕೋಟಿಗೆ ಮೋಕ್ಷಮಾರ್ಗವನ್ನು ತೋರಿಸುತ್ತಿರಲೆಂದು ನಾನು ಬಯಸುತ್ತೇನೆ. ಪಾಂಡಿತ್ಯ, ವ್ಯಾಕರಣವಿವೇಕ, ಮಧುರವಾದ ಭಾಷಾ, ಮನೋಹರವಾದ ವಾಕ್ಯರಚನಾ, ಇವೇ ಮೊದಲಾದ ಸದ್ಗುಣಗಳಿಂದ ಕೂಡಿರುವ ಈ ಪತ್ರಿಕೆಯು ಸರ್ವರ ಪ್ರೀತಿಗೂ ಒಳಗಾಗುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳುವಲ್ಲಿ ಸ್ವಲ್ಪವೂ ಅತಿಶಯೋಕ್ತಿಯಾಗಲಾರದು. 'ಅವಿದ್ಯೆ, ಅಜ್ಞಾನ, ಅನೈಕಮತ್ಯ' ವೆಂಬ ಅಂಧಕಾರದಿಂದ ಆಚ್ಛಾದಿಸಲ್ಪಟ್ಟಿರುವ ವೀರಶೈವರನ್ನು ಮೇಲಕ್ಕೆತ್ತಿ ಅವರನ್ನು ಪುನೀತರನ್ನಾಗಿ ಮಾಡಲೆಂದು ನಾನು ಸದಾ ಪ್ರಾರ್ಥಿಸುತ್ತೇನೆ. ಹೀಗೆ ಮಾಡುವಲ್ಲಿ ಇತರ ಮತಾವಲಂಬಿಗಳಿಗೆ ವ್ಯಥೆಯನ್ನುಂಟುಮಾಡದೆ ಸರ್ವರಪ್ರೀತಿಗೂ ಒಳಗಾಗಬೇಕು. ಒಂದು ಪಟ್ಟಣಕ್ಕೆ ಹೋಗಬೇಕಾದರೆ ಹೇಗೆ ಅನೇಕಮಾರ್ಗಗಳಿರುತ್ತವೆಯೋ ಹಾಗೆಯೇ ಪರಮಾತ್ಮನ ಸಾಯುಜ್ಯವನ್ನು ಹೊಂದಬೇಕಾದರೆ ಅನೇಕಮಾರ್ಗಗಳಿರುತ್ತವೆ. ಒಂದೊಂದು ಮತದವರು ಒಂದೊಂದು ದಾರಿಯಲ್ಲಿ ಪ್ರಯಾಣವನ್ನು ಮಾಡುತ್ತಲಿದ್ದಾರೆ. ಅವರು ಹಿಡಿದಿರುವ ದಾರಿಯೇ ಅವರಿಗೆ ಹಿತವಾಗಿಯೂ ಸಮೀಪವಾಗಿಯೂ ಕಷ್ಟವಿಲ್ಲದುದಾಗಿಯೂ ಕಂಡುಬರುತ್ತದೆ. ಅಂದಮೇಲೆ ಅವರು ಹಿಡಿದಿರುವ ಮಾರ್ಗವೇ ಅವರಿಗೆ ಉತ್ತಮವೆನ್ನುವುದರಲ್ಲೇನಾಶ್ಚರ್ಯವು? 'ಹಿಂದು'ವೇ ಆಗಲಿ, 'ಮಹಮ್ಮದೀಯ'ನೇ ಆಗಲಿ ಅಥವಾ 'ಕ್ರೈಸ್ತಮತೀಯ'ನೇ ಆಗಲಿ ಎಲ್ಲರೂ ಒಂದೇ ಎನ್ನುವ 'ಸಮಾನಬುದ್ಧಿ'ಯಿರಬೇಕು. ಈ ಪ್ರಪಂಚದಲ್ಲಿರುವ ಮತಗಳೆಲ್ಲವೂ ಉದ್ದಿಷ್ಟ ಮಹನೀಯರಿಂದ ಸ್ಥಾಪಿಸಲ್ಪಟ್ಟಿವೆ. ಒಂದು ನಾಟಕದಲ್ಲಿ ಅನೇಕರು ಬೇರೆಬೇರೆ ಪಾತ್ರಗಳನ್ನು ಧರಿಸಿ ನಾಟಕವು ಮುಗಿದನಂತರ ತಮ್ಮ ಪೂರ್ವಸ್ಥಿತಿಗೆ ಹೇಗೆ ಬರುತ್ತಾರೆಯೋ ಹಾಗೆಯೇ ಈ ಲೋಕನಾಟಕದಲ್ಲಿ ಪ್ರತಿಯೊಬ್ಬ ಮನುಷ್ಯಪ್ರಾಣಿಯೂ ಅವನವನ ಮತವೆಂಬ ಪಾತ್ರವನ್ನು ಧರಿಸಿಕೊಂಡಿರುತ್ತಾನೆ. ಅಂತ್ಯದಲ್ಲಿ ಅಂದರೆ ಪರಮಾತ್ಮನ ಸಾಯುಜ್ಯವನ್ನು ಹೊಂದುವ ಕಾಲದಲ್ಲಿ ಆ ಪಾತ್ರವನ್ನು ತ್ಯಜಿಸಿ ಪುನಃ ಪೂರ್ವಾವಸ್ಥೆಯನ್ನು ಹೊಂದುತ್ತಾನೆ. ಪರಮಾತ್ಮನ ಮುಂದೆ ಎಲ್ಲರೂ ಒಂದೇ; ಅಲ್ಲಿ ಪಕ್ಷಪಾತವಿಲ್ಲ! ಎಂಬ ವಿಷಯವು ಪ್ರತಿಯೊಬ್ಬ ಸಾಮಾನ್ಯಮಾನವಪ್ರಾಣಿಗೂ ಸಹ ತಿಳಿದುದಾಗಿದೆ. ಹೀಗೆಂದಮೇಲೆ ಮಧ್ಯಕಾಲದಲ್ಲಿ ದ್ವೇಷಾಸೂಯೆಗಳಿಂದ ತುಂಬಿ ನಾವು ಹೆಚ್ಚು ಅವನು ಕಡಿಮೆ ಎಂದು ವಾದಿಸುವದೇತಕ್ಕೆ? ಇಂಥ ದೋಷಾಂಧಕಾರವನ್ನು ಹೋಗಲಾಡಿಸುವದರಲ್ಲಿ ನಮ್ಮ ಪಂಚಾಚಾರ್ಯಪ್ರಭೆಯು ಸಹಾಯಕವಾಗಬೇಕು. ಎಲ್ಲರಿಗೂ ಮೋಕ್ಷಮಾರ್ಗದರ್ಶಿಯಾಗಿರಬೇಕು. ಕೇವಲ ವೀರಶೈವಮತತತ್ವಗಳನ್ನೇ ಪ್ರಸಾರಮಾಡುವದು

ತನ್ನ ಕರ್ತವ್ಯವೆಂದು ಭಾವಿಸಬೇಕು. ಇತರ ಮತ ತತ್ವಗಳನ್ನು ಸಹ ಓದಿ ಆಯಾ ಮತಾವಲಂಬಿಗಳಿಗೆ ತಿಳಿಯುವಂತೆ ಆಗಾಗ್ಗೆ ಬೋಧಿಸುತ್ತ ಲೋಕೋಪಕಾರಿಯಾಗಬೇಕು ಅಷ್ಟೇ, ಆಚಾರ ಮುಖ್ಯವಾಗಿ ಅಸ್ಪೃಶ್ಯತ್ವವೆಂಬುವ ಶತ್ರುಗಳನ್ನು ದೂರವಾಗಿ ಓಡಿಸಲು ಸ್ವಧರ್ಮವನ್ನು ಸಾಧಿಸಬೇಕಾಗಿ ಬೇಡುತ್ತೇನೆ. ಜಗದುದ್ಧಾರಕ್ಕಾಗಿ ಅವತಾರವೆತ್ತಿರುವ ಈ ಪತ್ರಿಕೆಯು ಲೋಕದಲ್ಲಿ ಆಚಂದ್ರಾರ್ಕವಾಗಿ ಮೆರೆಯಲೆಂದೂ ಪರಮಾತ್ಮನು ಇದಕ್ಕೆ ಪೂರ್ಣಾಯುಷ್ಯವನ್ನು ಕೊಟ್ಟು ಸಂರಕ್ಷಿಸಲೆಂದೂ ಆತನನ್ನು ಪ್ರಾರ್ಥಿಸಿ ನನ್ನೀ ಲೇಖನವನ್ನು ಮುಗಿಸುತ್ತೇನೆ.

ಕೆ. ಪ್ರಸಾದ, ಬಿ.ಎ., ಬಿ.ಎಲ್.,
ಅನಲೂರ

ಪಂಚಾಚಾರ್ಯಪ್ರಭಾ

೧೯೨೭ನೇ ಮೇ ತಾ|| ೩೦ ನೇ ಸೋಮವಾರ

ಅಖಿಲಕರ್ನಾಟಕ ಪ್ರಥಮ ಹಿಂದೀ ಪ್ರಚಾರಕ ಸಮ್ಮೇಲನವು.

ಈ ಸಮ್ಮೇಲನವು ಮುಂದಿನ ಜೂನ್ ತಿಂಗಳ ಕಡೆಯಲ್ಲಿ ಬೆಂಗಳೂರು ಪಟ್ಟಣದಲ್ಲಿ ನಡೆಯುವದೆಂದೂ, ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಮಹಾತ್ಮಾ ಗಾಂಧಿಯವರು ವಹಿಸತಕ್ಕವರಿರುವರೆಂದೂ ಈ ಸಮ್ಮೇಲನಕ್ಕೆ ಜಗತ್ಪ್ರಸಿದ್ಧರಾದ ಪಂಡಿತ ಮದನಮೋಹನ ಮಾಳವೀಯ, ಶ್ರೀಮತಿ ಸರೋಜಿನೀದೇವಿ ನಾಯಿಡು, ಬಾಬು ಭಗವಾನ್‌ದಾಸ ಹಾಗೂ ಮೊದಲಾದ ಭಾರತಪ್ರಮುಖರು ಆಗಮಿಸುವವರಿದ್ದಾರೆಂದೂ ಈ ಸಮ್ಮೇಲನದ ಕಾಲಕ್ಕೆ ಹಿಂದೀಪುಸ್ತಕ ಮತ್ತು ಪತ್ರಿಕೆಗಳ ಪ್ರದರ್ಶನವಾಗುವದೆಂದೂ ಎಂದೂ ಮೊದಲಾದ ವಿಷಯಗಳಿಂದ ಕೂಡಿದ ಒಂದು ಪ್ರಕಟನಪತ್ರಿಕೆಯು ಈ ಪತ್ರಿಕೆಯ ಅಂಕದಲ್ಲಿ ಪ್ರಕಟಿಸಲ್ಪಟ್ಟಿದೆ. ಕರ್ನಾಟಕವಾಸಿಗಳಾದ ಹಿಂದೀಭಾಷಾಪ್ರೇಮಿಗಳು ಕೃತಜ್ಞರಾಗುವ ಅತ್ಯಂತ ಸಂತೋಷವಾದ ಈ ಕಾರ್ಯವು ಯಾರ ಮನಸ್ಸನ್ನು ಆನಂದಗೊಳಿಸದಿರಲಾರದು? ಮಹಾತ್ಮಾ ಗಾಂಧಿಯವರೇ ಮೊದಲಾದ ಹಿಂದೂದೇಶದ ನಾಯಕರುಗಳು ಹಿಂದೀ ಭಾಷೆಯನ್ನೇ ಹಿಂದೂದೇಶದ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಹಗಲಿರುಳು ಪ್ರಯತ್ನಪಡುತ್ತಿರುವ ವಿಷಯವು ಸರ್ವರಿಗೂ ಗೊತ್ತಿರುವದೇ ಇದೆ. ಆದಾಗ್ಯೂ ಜನರು ಅತ್ತಕಡೆಗೆ ಗಮನ ಕೊಡದೆ ಇರುವರು. ಈ ವಿಷಯವು ದುರ್ಭಾಗ್ಯದಿಂದ ಹೇಳಬೇಕಾಗಿದೆ. ಭರತಖಂಡದ ನಾನಾಪ್ರಾಂತವಾಸಿಗಳಾದ ನಮ್ಮೆಲ್ಲರಿಗೂ ಹಿಂದುಗಳೆಂದೇ ಕರೆಯುತ್ತಿರುವ ಹೊರತು ಬೇರೆ ನಾಮದಿಂದ ಯಾರೂ ಕರೆಯುವದಿಲ್ಲ. ಅಂದ ಮೇಲೆ ಹಿಂದೂ ಎಂಬ ನಾಮವನ್ನು ಧರಿಸಿಕೊಂಡ ನಾವುಗಳು ಹಿಂದೀಭಾಷೆಯನ್ನು ಉಪಯೋಗಿಸದೆ ಇರುವದು ಅನ್ಯಾಯವಲ್ಲವೇ? ಪೂರ್ವಕಾಲದ ಚರಿತ್ರೆಯನ್ನು ವಿಮರ್ಶನಮಾಡಿ ನೋಡಿದ್ದಾದರೆ ಭರತಖಂಡದ ಎಲ್ಲೆಲ್ಲಿ ಆ ಕಾಲದಲ್ಲಿ ಹಿಂದೀಪ್ರಚಾರವೇ ವಿಶೇಷವಾಗಿತ್ತೆಂದು ಕಂಡುಬರುತ್ತದೆ. ಈಗಲೂ ನಾವು ಮಾತಾಡತಕ್ಕ ಕನ್ನಡಭಾಷೆಯಲ್ಲಿ ಎಷ್ಟೋ ಹಿಂದೀಶಬ್ದಗಳು ಉಪಯೋಗವಾಗುತ್ತಿರುವದೇ ದೃಷ್ಟಾಂತವಾಗಿದೆ. ಹಿಂದೀಭಾಷೆಯಲ್ಲಿರತಕ್ಕ ಮಾಧುರ್ಯ, ಗಾಂಭೀರ್ಯ, ಲಾಲಿತ್ಯ, ಸುಗಮತ್ವ ಮೊದಲಾದ ಗುಣಗಳು ಇನ್ನಾವ ಭಾಷೆಯಲ್ಲಿಯೂ ಕಂಡುಬರುವದಿಲ್ಲವೆಂದರೆ ಅತಿಶಯೋಕ್ತಿಯೆನಿಸಲಾರದು. ಇಂಥ ಲೋಕವಂದ್ಯವಾದ ಭಾಷೆಯನ್ನು ಕರ್ನಾಟಕದೇಶದಲ್ಲಿ ಪ್ರಚಾರಮಾಡಬೇಕೆಂಬ ಸಂಕಲ್ಪವನ್ನು ಮಾಡಿ ಅದರಂತೆ ಕಾರ್ಯವನ್ನು ನಡೆಸಲು ಏರ್ಪಾಟುಮಾಡಿರುವ ಮಹಾಶಯರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಅಲ್ಪವೇಸರಿ! ಈ ಸಮ್ಮೇಲನಕ್ಕೆ ಲೋಕಪ್ರಸಿದ್ಧರಾದ ಸತ್ಪುರುಷರು ಆಗಮಿಸುವದರಿಂದ ನಮ್ಮ ಕರ್ನಾಟಕ ದೇಶಕ್ಕೆ ಅಮಿತಪೂರ್ಣವಾದ ಶೋಭೆಯುಂಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ! ಈ ಸಮ್ಮೇಲನವು ತನ್ನ ನಾಮಕ್ಕೆ ತಕ್ಕಂತೆ ಕೇವಲ ಹಿಂದೀಭಾಷೆಯಿಂದಲೇ ಸಮಸ್ತಕಾರ್ಯಗಳನ್ನು ಪೂರೈಸಿಕೊಳ್ಳಬೇಕಲ್ಲದೆ ಅನ್ಯಭಾಷೆಯ ಸಮಾವೇಶವನ್ನು ಮಾಡಿಕೊಂಡು ತನ್ನ ನಾಮಕ್ಕೆ ಅಪವಾದಕತೆಯನ್ನುಂಟುಮಾಡಿಕೊಳ್ಳಬಾರದೆನ್ನುವದೇ ನಮ್ಮ ಮುಖ್ಯಕೋರಿಕೆಯಾಗಿದೆ. ಸಮ್ಮೇಲನದಲ್ಲಿ ಭಾಷಣಮಾಡತಕ್ಕ ಮಹಾಶಯರೆಲ್ಲರೂ ಕೇವಲ ಹಿಂದೀಭಾಷೆಯನ್ನೇ ಉಪಯೋಗಿಸಬೇಕೆಂಬ ನಿಬಂಧನವನ್ನು ಮಾಡಬೇಕು. ೧೯೨೪ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ಸಿನ ಸಮಯದಲ್ಲಿ 'ಅಖಿಲಭಾರತೀಯ ಹಿಂದೂಕಾನ್ಫರೆನ್ಸ್' ನಡೆಯಿತಷ್ಟೆ! ಆ ಕಾನ್ಫರೆನ್ಸಿನಲ್ಲಿ ಮ|| ಪಂಡಿತ ಮದನ ಮೋಹನ ಮಾಳವೀಯರವರು ತಮ್ಮ ಅಮೋಘವಾಣಿಯಿಂದ ಹಿಂದೀಭಾಷೆಯಲ್ಲಿ ಭಾಷಣವನ್ನು ಮಾಡಲಿಕ್ಕೆ ಉಪಕ್ರಮಿಸಿದರು. ಮದ್ರಾಸ್ ಮತ್ತು ಮೈಸೂರ ಪ್ರಾಂತಗಳ ಜನರು ಹಿಂದೀಭಾಷೆಯು ನಮಗೆ ತಿಳಿಯುವದಿಲ್ಲ ಇಂಗ್ಲೀಷ್ ಭಾಷೆಯಿಂದ ಹೇಳಬೇಕೆಂದು ಸಭೆಯಲ್ಲಿ ಏಕೀಭಾವವಾಗಿ ಕೂಗಾಡಲಿಕ್ಕೆ ಹತ್ತಿದರು. ಆಗ್ಗ ಪಂಡಿತಜಿಯವರು ನಾನು ಇಂಗ್ಲೀಷ್ ಭಾಷೆಯಿಂದ ಎಂದಿಗೂ ಹೇಳುವದಿಲ್ಲ. ಈ ಕಾನ್ಫರೆನ್ಸಿನ ಹೆಸರಿಗೆ ತಕ್ಕಂತೆ ಹಿಂದೀಭಾಷೆಯಿಂದಲೇ ಹೇಳುತ್ತೇನೆ ನೀವು ಶಾಂತಮನಸ್ಕರಾಗಿ ಕೇಳಬೇಕೆಂದು ಅರ್ಧಘಂಟೆಯವರೆಗೆ ಉಪದೇಶಮಾಡಿದರೂ ಯಾವ ಪ್ರಯೋಜನವೂ ದೊರೆಯದೆ ಅಂತ್ಯದಲ್ಲಿ ಇಂಗ್ಲೀಷ್‌ಭಾಷೆಯಿಂದಲೇ ಹೇಳತಕ್ಕ ಪ್ರಸಂಗವು ಬಂದಿತು. ಇದನ್ನು ನಾವು ಪ್ರತ್ಯಕ್ಷವಾಗಿ ನೋಡಿದ್ದರಿಂದ ಅಂಥ ಪ್ರಸಂಗವು ಇಲ್ಲಿ ಪ್ರಾಪ್ತವಾಗಬಾರದೆಂದು ಈ ವಿಷಯವನ್ನು ಮೊದಲೇ ನಾವು ಈ ಸಮ್ಮೇಲನದ ಕಾರ್ಯಕಾರಿಗಳಿಗೆ ಸೂಚಿಸುತ್ತೇವೆ. ಅತ್ಯಂತ ವೈಭವದಿಂದ ನಡೆಯುವ ಈ ಸಮ್ಮೇಲನಕ್ಕೆ ಪ್ರತಿಯೊಬ್ಬ ಭಾರತಪುತ್ರರು ಅವಶ್ಯವಾಗಿ ಬಂದು ಮಹಾತ್ಮರ ದರ್ಶನದಿಂದ ತಮ್ಮನ್ನು ಪಾವನಮಾಡಿ ಹಿಂದೀಭಾಷೆಯ ಪ್ರಚಾರಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡು ಭಾರತಮಾತೆಯ ಪ್ರೀತಿಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರುಸಿಟಿ ಮ್ಯುನಿಸಿಪಾಲಿಟಿಗೆ ವಿ. ಎನ್. ಸಂಗಪ್ಪನವರು ಹಾಗೂ ಬಿ. ಶೆಟ್ಟಪ್ಪನವರು ಕೌನ್ಸಿಲರ್ ಮೆಂಬರಾಗಿ ನಿಯಮಿಸಲ್ಪಟ್ಟಿರುವರು.

ಮ|| ಡಿ. ವೆಂಕಟರಾಮಯ್ಯನವರು ಮದ್ಯಪಾನದಿಂದಾಗುವ ಅನರ್ಥಗಳ ವಿಷಯದಲ್ಲಿ ಯುಕ್ತಿಯುಕ್ತವಾಗಿ ಜನರ ಮನಸ್ಸನ್ನು ಆಕರ್ಷಿಸುವಂತೆ ಬೆಂಗಳೂರು ಅರಳೇಪೇಟೆ ಪ್ರೈಮರಿ ಸ್ಕೂಲಿನಲ್ಲಿ ದೀರ್ಘವಾದ ಉಪನ್ಯಾಸವನ್ನು ಮಾಡಿದರು.

ಈಗ್ಗೆ ೮-೧೦ ದಿವಸಗಳ ಪೂರ್ವದಲ್ಲಿ ಬೆಂಗಳೂರು ಸಂಪಂಗಿಕೆರೆಯ ಸಮೀಪದಲ್ಲಿ ಮಳೆ ಗಾಳಿಯ ಏಟಿನಿಂದ ಒಂದು ದೊಡ್ಡ ಮರ ದಾರಿಗೆ ಅಡ್ಡವಾಗಿ ಬಿದ್ದಿರಲು ಅದೇ ದಾರಿಯಲ್ಲಿ ರಾತ್ರಿಸಮಯದಲ್ಲಿ ಬಹಳ ವೇಗದಿಂದ ಬರುತ್ತಿರುವ ಮೋಟಾರುಗಾಡಿಯು ಆ ಮರಕ್ಕೆ ತಾಕಿ ಚೂರುಚೂರಾಯಿತು.

ಮೈಸೂರು ರಾಜಧಾನಿಯ ಸುತ್ತುಮುತ್ತಲು ಮಳೆಯಿಲ್ಲದೆ ಕೆರೆಕಟ್ಟೆಗಳೆಲ್ಲವೂ ಬತ್ತಿ ದನಗಳಿಗೂ ಮನುಷ್ಯರಿಗೂ ಉಂಟಾಗಿರುವ ಕಷ್ಟವನ್ನು ಹೇಳಲು ಸಾಧ್ಯವಿದ್ದಿಲ್ಲ. ಈಶ್ವರಕೃಪೆಯಿಂದ ಇಷ್ಟರಲ್ಲಿಯೇ ಎಲ್ಲಾ ಕಡೆಗಳಲ್ಲಿಯೂ ಸುವೃಷ್ಟಿಯುಂಟಾಗಿರುವದರಿಂದ ಜನಗಳ ಹಾಹಾಕಾರವು ಶಾಂತವಾಗಿ ತಕ್ಕಮಟ್ಟಿಗೆ ಸಂತೋಷದಿಂದ ಇರುವರು.

ಈ ವರ್ಷ ನಡೆದ ಪ್ರಜಾಪ್ರತಿನಿಧಿಸಭಾ ಮೆಂಬರರ ಚುನಾವಣೆಯಲ್ಲಿ ಒಟ್ಟು 209 ಜನಗಳು ಮೆಂಬರಾಗಿ ಬಂದಿರುವರು. ಲಿಂಗಾಂಗಿಗಳಲ್ಲಿ 62, ಬ್ರಾಹ್ಮಣರಲ್ಲಿ 44, ಒಕ್ಕಲಿಗರಲ್ಲಿ 58, ಮೊದಲಿಯಾರರಲ್ಲಿ 1 ಮಹಮ್ಮದೀಯರಲ್ಲಿ 10, ವೈಶ್ಯರಲ್ಲಿ 12, ಜೈನರಲ್ಲಿ ಕುರುಬರಲ್ಲಿ 1, ಬೆಸ್ತರಲ್ಲಿ 1 ಸಾದರಲ್ಲಿ 1, ಅರಸರಲ್ಲಿ ದೇವಾಂಗದವರಲ್ಲಿ 2, ಗೊಲ್ಲರಲ್ಲಿ 2, ಈಡಿಗರಲ್ಲಿ ಯೂರೋಪಿಯನ್ನರಲ್ಲಿ 1 ಪಾಳಯಗಾರರಲ್ಲಿ 1, ನ ತ್ರರಲ್ಲಿ 1 ಜ್ಯೋತಿನಗರದವರಲ್ಲಿ 1, ಬಣಜಿಗರಲ್ಲಿ ರಂತೆ ಮೆಂಬರರಾಗಿರುವರೆಂದು ಸರಕಾರದವರು ತಿಳಿಸುತ್ತಾರೆ.

ಮಹಾತ್ಮಾ ಗಾಂಧಿಯವರ ಆರೋಗ್ಯವು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಲಿದೆ. ಅವರ ಸಂದರ್ಶನಸಂಭಾಷಣೆಗಳಿಗಾಗಿ ಪ್ರತಿದಿನವೂ ಪ್ರಮುಖಜನಗಳು ತಂಡೋಪತಂಡವಾಗಿ ಬರುತ್ತಿರುವರು. ಈಗ ೮-೧೦ ದಿನಗಳ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರೂ, ಮೈಸೂರು ದಿವಾನರಾದ ಮಿರ್ಜಾ ಇಸ್ಮಾಯಿಲ್‌ರವರೂ, ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿರವರೂ, ಬೆಂಗಳೂರು ಗಾಂಧಿಸ್ವಾಗತಕಮಿಟಿಯ ಪ್ರೆಸಿಡೆಂಟರಾದ ಮ|| ಪಂಚಾಕ್ಷರಯ್ಯನವರೂ ನಂದಿಬೆಟ್ಟಕ್ಕೆ ಹೋಗಿ ಮಹಾತ್ಮರ ಸಂದರ್ಶನವನ್ನು ಮಾಡಿ ಅವರೊಡನೆ ಒಂದು ತಾಸಿನವರೆಗೆ ಸಂಭಾಷಿಸಿ ಬಂದರೆಂದು ಕೇಳುತ್ತೇವೆ. ಗಾಂಧಿಯವರು ಜೂನ್ ತಿಂಗಳ ಮೇಲೆ ನಂದಿಬೆಟ್ಟದಿಂದ ಬೆಂಗಳೂರಿಗೆ ಬರುವರೆಂಬ ವರ್ತಮಾನವಿದೆ.

ನಮ್ಮ ಶ್ರೀಮನ್ಮಹಾರಾಜರವರ ರಜತೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ಕಾರ್ಯದ ಪಂಥವನ್ನು ಹೇಳಿಸುವದಕ್ಕಾಗಿ ಕಳೆದ ತಾ|| ೨೧ರಲ್ಲಿ ಮೈಸೂರು ಟೌನ್‌ಹಾಲಿನಲ್ಲಿ ಪ್ರಮುಖರ ಸಭೆ ರಿಟೈರ್ಡ್ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಮ|| ರಾ|| ಎ. ಸುಬ್ರಹ್ಮಣ್ಯಅಯ್ಯರವರ ಅಧ್ಯಕ್ಷತೆಯಲ್ಲಿ ಸೇರಿದ್ದರು. ಇದಕ್ಕಾಗಿ ಸಿಟಿ ಮ್ಯುನಿಸಿಪಾಲ್‌ಕೌನ್ಸಿಲ್ ಮೆಂಬರುಗಳನ್ನು ಸೇರಿಸಿ ಜನಗಳನ್ನೊಳಗೊಂಡ ಕಮಿಟಿಯೊಂದನ್ನೇರ್ಪಡಿಸಲು ತೀರ್ಮಾನಿಸಿದರು. ನಮ್ಮ ಶ್ರೀಮನ್ಮಹಾರಾಜರವರು ದೇಶದಲ್ಲಿ ನಿಸರ್ಗವಾಗಿ ವಿರಾಜಿಸುವ ರಾಜ ಇಂದ್ರಿಯನಿಗ್ರಹ, ನಿರಭಿಮಾನ, ನಿಷ್ಕಪಟತೆ, ಜನಾನುರಾಗ ಮತ್ತು ಪ್ರಯತ್ನಶೀಲತ್ವ ಮುಂತಾದ ಅನಿತರಸಾಧಾರಣವಾದ ಗುಣಗಳಿಂದ ರಾಜರ್ಷಿಪುಂಗವರೆನಿಸಿಕೊಂಡಿರುವದು ಸುವಿದಿತವೇ ಇದೆ. ಇಂತಹ ರಾಜರ್ಷಿಗಳ ಮಹ ಅವರ ರಾಜ್ಯಪಾಲನದ ಫಲವನ್ನು ಪ್ರತ್ಯ ಅನುಭವಿಸುತ್ತಲಿರುವ ರಾಜಧಾನಿಯ ನಿವಾಸಿಗಳ ಭಕ್ತಿಗೂ ಗೌರವಕ್ಕೂ ತಕ್ಕಂತೆ ಬಹುಕಾಲದ ಶ್ರೀಮನ್ಮಹಾರಾಜರವರ ಸದ್ಗುಣ ಮತ್ತು ಸತ್ಕಾರ್ಯಗಳ ಜ್ಞಾಪಕಕ್ಕಾಗಿ ಈ ರಜತೋತ್ಸವದ ಕಮಿಟಿಯವರುಗಳು ಶ್ರದ್ಧೆಯಿಂದಲೂ ಅತ್ಯುತ್ಸಾಹದಿಂದಲೂ ಒಂದು ಮಹಾಫಂಡನ್ನು ಸೇರಿಸಿ ತಮ್ಮ ಭಕ್ತಿ ವ್ಯಕ್ತಪಡಿಸಲೆಂದು ಆಶಿಸುತ್ತೇವೆ.

ವರ್ತಮಾನಸಂಗ್ರಹ.

ಭರತಪುರ ಮಹಾರಾಜರವರು ರಾಜಸನ್ಯಾಸವನ್ನು ಸ್ವೀಕರಿಸುವವರಿರುತ್ತಾರೆಂದು ಕೇಳುತ್ತೇವೆ.

ಮದ್ರಾಸ ಲೆಜಿಸ್ಲೆಟಿವ ಕೌನ್ಸಿಲ್ಲಿನ ಅಧಿವೇಶನವು ಆಗಸ್ಟ್ 23ನೇ ತಾರೀಖಿನಲ್ಲಿ ಪ್ರಾರಂಭವಾಗುವುದು.

ರಂಗೂನ ವಿಶ್ವವಿದ್ಯಾಲಯದ ಫಂಡಿಗೆ ಈವರೆಗೆ ಎಂಟು ಲಕ್ಷ ರೂಪಾಯಿಗಳು ಕೂಡಿವೆ.

ಬಂಗಾಲದ ನ್ಯಾಯವಿಧಾಯಕ ಸಭೆಯ ಮೆಂಬರುಗಳಲ್ಲಿ ಒಬ್ಬರಾಗಿದ್ದ ಮಿ|| ಅಂಬಿಕಾಪ್ರಸಾದ ಸಿಂಹರವರು ಈ ತಿಂಗಳು 20 ರ ಬೆಳಿಗ್ಗೆ ಸ್ವರ್ಗಸ್ಥರಾದರು.

ಈಗ 1900 ವರ್ಷಗಳ ಪೂರ್ವದಲ್ಲಿ ಇದ್ದ ರೋಮನ್ ದೇಶದ ಚಕ್ರವರ್ತಿಯಾದ ಕ್ಲಾಡಿಯಸ್ಸನವರ ನಾಣ್ಯಗಳು ತ್ರಾವಣಕೋರ ಸಂಸ್ಥಾನದಲ್ಲಿ ದೊರಕಿರುತ್ತವೆ.

ನಡಿಯಾದದಲ್ಲಿರುವ ಹಿಂದೂ ಅನಾಥಾಶ್ರಮಕ್ಕೆ ಜಾಂ ಸಾಹೇಬರವರು ಪ್ರತಿ ವರ್ಷವೂ ಒಂದೊಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧರಿಸುತ್ತಾರೆ.

ಜೋಧಪುರದ ಸಂಸ್ಥಾನದ ಮಹಾರಾಜರಿಗೆ ತಮ್ಮ ರಾಜ್ಯದ ರೈಲ್ವೆಮಾರ್ಗವನ್ನು ಇನ್ನು 33 ಮೈಲುಗಳು ವಿಸ್ತರಿಸಲು ಇಂಡಿಯಾ ಸರಕಾರದವರು ಅಪ್ಪಣೆಯನ್ನು ಕೊಟ್ಟಿರುತ್ತಾರೆ.

ಮಿ|| ಆದಮಜಿ ಹಾಜಿದಾವೂದರವರು ಜೇತಪುರದಲ್ಲಿ ತಮ್ಮ ಜ್ಞಾಪಕಾರ್ಥವಾಗಿ ಒಂದು ಔಷಧಾಲಯವನ್ನು ಕಟ್ಟುವುದಕ್ಕೋಸ್ಕರ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಹೌರಾದಲ್ಲಿ ಎರಡು ದೋಣಿಗಳು ಒಂದಕ್ಕೊಂದು ತಗಲಿ ಅಂದಾಜು 50 ಜನಗಳು ನೀರಲ್ಲಿ ಮುಳುಗಿದರು. ನಾವಿಕರು ಎಲ್ಲರನ್ನೂ ಸಾಹಸದಿಂದ ಬದುಕಿಸಿದರು. ಮೂರು ಜನಗಳು ಮಾತ್ರ ಪತ್ತೆಯಾಗಲಿಲ್ಲವು.

ಜಕಾರಿಯಾವಾದದ ಲೆಫ್ಟಿನಂಟರಾದ ಫೋರಾನರವರು ಕರಾಚಿಯಿಂದ ಮುಂಬಾಯಿಗೆ ಹೊರಡಸಿದ್ಧವಾಗಿದ್ದ "ವರಾಸವ" ಎಂಬ ಹಡಗಿನಲ್ಲಿ ಹತ್ಯಮಾಡಿಕೊಂಡರೆಂದು ತಿಳಿಯಬರುತ್ತದೆ.

ಹೈದರಾಬಾದ ಸಂಸ್ಥಾನದ ರೆಸಿಡೆಂಟರಾದ ಆನರ ಸರ್ ವಿಲಿಯಂ ಬಾರ್ಟನ್ನರವರು ಇಂಗ್ಲೆಂಡಿಗೆ ಹೋಗುವ ಉದ್ದೇಶದಿಂದ ಮುಂಬಾಯಿಗೆ ಈ ತಿಂಗಳು ನಯ ತಾರೀಖಿನ ದಿವಸ ಪ್ರಯಾಣಮಾಡಿದರು.

ಬರೋಡಾ ಸರಕಾರದವರು ಅಮರೇಲಿ ಜಿಲ್ಲೆಯೊಳಗಿರತಕ್ಕ ಹೆಂಡದ ಅಂಗಡಿಗಳನ್ನೆಲ್ಲ ಮುಚ್ಚಿಬಿಡಬೇಕೆಂದು ಹುಕುಂ ಮಾಡಿದ್ದಾರೆ. ಸರಕಾರದವರು ಇದರ ಪ್ರವರ್ತಿಸಿರುವುದು ಸ್ತುತ್ಯವಾದ ಕಾರ್ಯವಾಗಿದೆ.

ಮದ್ರಾಸ ಪಟ್ಟಣದಲ್ಲಿ ಮೋಟಾರು ಕಾರುಗಳನ್ನು ಸ್ವೇಚ್ಛೆಯಾಗಿ ನಡೆಯಿಸಿದ್ದಕ್ಕಾಗಿ ಒಂದೇ ದಿವಸ 65 ಜನ ಡ್ರೈವರರ ಮೇಲೆ ಕೇಸು ಆಗಿ ಪ್ರತಿ ಒಬ್ಬರಿಗೆ ೨ ರೂಪಾಯಿಗಳಿಂದ 15 ರೂಪಾಯಿ ವರೆಗೂ ದಂಡವು ವಿಧಿಸಲ್ಪಟ್ಟಿತು.

ಸ್ಕಾಟಲಂಡ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಲಿರುವ 300 ಜನ ಹಿಂದೂ ವಿದ್ಯಾರ್ಥಿಗಳ ನಡತೆಯು ಸರ್ವಪ್ರಕಾರದಿಂದಾಗಿ ಸಮ್ಮತವಾಗಿದೆಯೆಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಸರ್ ಅಕಬರ ಹೈದರಿಯವರಿಗೆ ತಿಳುಹಿಸಿರುತ್ತಾರೆ.

ದ ಮಿಸಂಬಾ ಇಂಗ್ಲಂಡಿನ ಗಣೇಶಪೆಟ್ಟಿಯಲ್ಲಿ ನಡೆದ ಕುಸ್ತಿಗೆ 20 ಸಾವಿರ ರೂಪಾಯಿಗಳ ಹೆಚ್ಚು ವೆಚ್ಚದಿಂದ ಸ್ವಾಗತಮಂಡಳಿಯು ಪ್ರತಿಯೊಬ್ಬ ಸಭಿಕರು 15 ರೂಪಾಯಿಗಳಂತೆ ಕೊಡಬೇಕೆಂದೂ ಮಿಕ್ಕ ಹಣದ ದಳಿಯಿಂದ ಚಂದಾ ಕೂಡಿಸಬೇಕೆಂದೂ ನಿರ್ಣಯಿಸಿದ್ದಾರೆ.

ಸ್ವಾಮಿ ಶ್ರದ್ಧಾನಂದರನ್ನು ಕೊಲೆಮಾಡಿದ ಅಬ್ದುಲ್ ರಶೀದ ಎನ್ನುವವನಿಗೆ ಫಾಶೀ ಶಿಕ್ಷೆಯನ್ನು ವಿಧಿಸಿದುದರ ಮೇಲೆ ಲಾಹೋರ್ ಹೈಕೋರ್ಟಿನಲ್ಲಿ ಅಪೀಲು ಮಾಡಲಾಗಿ ಅಲ್ಲಿಯೂ ಪ್ರಯೋಜನವಾಗದೆ ಇದೇ ತಿಂಗಳು 19 ನೇ ತಾರೀಖಿನ ದಿವಸ ಫಾಶೀ ಶಿಕ್ಷೆಯೇ ನಿಶ್ಚಯವಾಯಿತು.

ಮುಂಬಾಯಿಯಲ್ಲಿ ಮುಹಮ್ಮದೀಯರ ಒಂದು ದೊಡ್ಡ ಸಭೆಯು ಸೇರಿ "ಹೈದರಾಬಾದ ನಿಜಾಮರವರು ನಿರಾತಂಕವಾಗಿ ರಾಜ್ಯಭಾರಮಾಡಿಕೊಂಡು ಹೋಗುವವಿಷಯದಲ್ಲಿ ಮಧ್ಯಮಧ್ಯೆ ಇಂಡಿಯಾ ಸರಕಾರದವರು ಪ್ರವೇಶಿಸಬಾರದೆಂದೂ, ನೈಜಾಮರ ಸಂಸ್ಥಾನದ ಒಳ ಆಡಳಿತೆಗಳ ವಿಷಯದಲ್ಲಿ ಇನ್ನು ಮುಂದೆ ತಟಸ್ಥವೃತ್ತಿಯನ್ನು ವಹಿಸಬೇಕೆಂದೂ ನಿರ್ಧರಿಸಿದರು.

ಟ್ರಾವಣಕೋರ ಸಂಸ್ಥಾನದ ದಕ್ಷಿಣ ಪ್ರಾಂತದ ಒಬ್ಬ ದೊಡ್ಡಮನುಷ್ಯರಿಗೆ ಈ ತಿಂಗಳು 17 ನೆಯ ತಾರೀಖಿನ ದಿವಸ ಪೋಸ್ಟ್ ಮೂಲಕ ಒಂದು ಪಾರ್ಸಲ್ ಬಂದಿತೆಂದೂ, ಇದನ್ನು ಬಿಚ್ಚಿ ನೋಡಲು ಅದರೊಳಗ ಸಜೀವವಾಗಿದ್ದ ಒಂದು ಸರ್ಪವಿತ್ತೆಂದೂ, ಈ ಅಕೃತ್ಯವನ್ನು ಯಾರೋ ದ್ವೇಷಿಗಳು ಮಾಡಿರುವರೆಂದಾಲೋಚಿಸಿ, ಆ ದ್ವೇಷಿಗಳು ಮಾಡಿರುವರೆಂದು ಊಹಿಸಿ ಹೇಳಿದ್ದರ ಮೇಲೆ ಪೋಲೀಸರು ಅವರನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುತ್ತಾರೆಂದೂ ತಿಳಿಯಬರುತ್ತದೆ.

ಪುರುಷೋತ್ತಮ ಲಕ್ಷ್ಮಣರು, ಗುಲಾಬಜಿ ಸುತ್ತು ರಣಛೋಡಸಿಂಗ ಎಂಬವರು ಲೈಸನ್ಸ್ ಇಲ್ಲದೆ ಬಂದೂಕುಗಳನ್ನು ಇಟ್ಟುಕೊಂಡತಪ್ಪಿಗಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರ ಮೇಲೆ ನ್ಯಾಯಾಧೀಶರು 10 ರೂ ಅರ್ಥದಂಡವನ್ನು ಕೊಡಬೇಕೆಂದೂ ಇಲ್ಲವಾದರೆ 15 ದಿವಸಗಳ ವರೆಗೆ ಸಾಮಾನ್ಯಕಾರಾಗೃಹವಾಸವನ್ನು ಅನುಭವಿಸಬೇಕೆಂದೂ ತೀರ್ಪುಮಾಡಿದರು. ಆದಕ್ಕೆ ಅಪರಾಧಿಗಳು ತಾವು ತಪ್ಪಿತಸ್ಥರಲ್ಲವೆಂದೂ ದಂಡವನ್ನು ಕೊಡುವುದಿಲ್ಲವೆಂದೂ ಹೇಳಿದುದರ ಮೇಲೆ ಇವರು ಕಾರಾಗೃಹಕ್ಕೆ ಕಳುಹಿಸಲ್ಪಟ್ಟರು.

ಪುದುಕೋಟೆಯ ರಾಜರು ಆಸ್ಟ್ರೇಲಿಯಾ ದೇಶಸ್ಥಳಾದ ರಾಣಿಯ ಗರ್ಭದಲ್ಲಿ ಜನಿಸಿದ ತಮ್ಮ ಪುತ್ರರಿಗೆ ತಮ್ಮ ನಂತರ ಪಟ್ಟಾಭಿಷೇಕವನ್ನು ಮಾಡಿಸಿಕೊಡಬೇಕೆಂದು ಇಂಡಿಯಾ ಸರಕಾರದವರ ಕೂಡ ಪುನಃ ಪತ್ರವ್ಯವಹಾರಗಳನ್ನು ನಡೆಯಿಸುತ್ತಿರುವುದನ್ನು ನೋಡಿ ಆ ದೇಶದ ಜನರು ಇದನ್ನು ನಿರೋಧಿಸುವುದಕ್ಕೋಸ್ಕರ ಒಂದು ದೊಡ್ಡ ಸಭೆಯನ್ನು ಕೂಡಿಸಿ, ಅನ್ಯದೇಶದ ಪತ್ನಿಯ ಮಕ್ಕಳಾಗಿಯೂ, ಅನ್ಯಮತದವರಾಗಿಯೂ ಇರುವ ಈ ರಾಜಪುತ್ರರಿಗೆ ರಾಜ್ಯಾಭಿಷೇಕವಾಗಬಾರದೆಂದು ನಿರ್ಧರಿಸಿ, ಇಂಡಿಯಾಸರಕಾರಕ್ಕೆ ತಿಳುಹಿಸಿದ್ದಾರೆಂದು ತಿಳಿದುಬರುತ್ತದೆ.

ಮದ್ರಾಸ ವೀರಶೈವ ವಿದ್ಯಾವರ್ಧಕಫಂಡಿನ ಸೆಕ್ರೆಟರಿಗಳವರ ಪ್ರಕಟನವನ್ನು ಈ ಪತ್ರಿಕೆಯ ಕೊನೆಯಲ್ಲಿ ಮುದ್ರಿಸಿದ್ದಾಗಿದೆ. ಮೇಲ್ಕಂಡ ಫಂಡಿನ ಉದ್ಧಾರಕ್ಕಾಗಿ ಬಳ್ಳಾರಿಪ್ರಾಂತದ ಪ್ರಮುಖರು ಸರಕಾರದವರೊಡನೆ ಬಹುದಿವಸಗಳಿಂದ ಚರ್ಚಿಸಿ ಲ್ಯಾಟರಿ ಚೀಟಿಯ ವಿಷಯದಲ್ಲಿ ಹುಕುಮನ್ನು ತೆಗೆದುಕೊಂಡು ದೇಶದಲ್ಲೆಲ್ಲಾ ಸಂಚರಿಸಿ ಚೀಟಿಗಳನ್ನೆಲ್ಲ ವಿಕ್ರಯ ಮಾಡಿದರಾಗ್ಯೂ ಇದುವರೆಗೆ ಅನೇಕರು ಹಣವನ್ನು ಕಳುಹಿಸದೆ ಇರುವವರನ್ನು ನೋಡಿದರೆ ವ್ಯಸನವೆನಿಸುತ್ತದೆ. ವಿದ್ಯಾರ್ಥಿಗಳ ವಿದ್ಯೋಪಾರ್ಜನಕ್ಕಾಗಿ ಸನ್ನದ್ಧವಾಗಿರುವ ಈ ಮಹತ್ಕಾರ್ಯದವರಿಗೆ ಸರ್ವರು ಲಕ್ಷ್ಯಗೊಟ್ಟು ಬೇಗನೆ ಹಣವನ್ನು ಕಳುಹಿಸಿಕೊಡಬೇಕಾಗಿ ಕೋರುತ್ತೇವೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯವರು ಮಾಡಿರುವ ನಿರ್ಧಾರಗಳನ್ನು ಶ್ರೀಯುತ ಎಸ್. ಶ್ರೀನಿವಾಸಯ್ಯಂಗಾರ್‌ರವರು ಮಹಾತ್ಮಾ ಗಾಂಧಿಯವರಿಗೆ ತಂತಿಮೂಲಕ ತಿಳಿಸಲು ಗಾಂಧಿಯವರು ಇದಕ್ಕೆ ಪ್ರತ್ಯುತ್ತರವಾಗಿ "ದೇಶದ ಪ್ರಜೆಗಳೆಲ್ಲರೂ ನಮ್ಮ ಉದ್ದೇಶಾನುಸಾರವಾಗಿ ನಡೆಯುವಂತೆ ಮಾಡುವ ಶಕ್ತಿಯನ್ನು ನಾವು ಕಳೆದುಕೊಂಡಿರುವಂತೆ ತೋರುತ್ತದೆ. ಪ್ರಜೆಗಳು ಕಾಡುಮೃಗಗಳಂತೆ ವರ್ತಿಸಿ ಒಬ್ಬರ ತಲೆಯನ್ನು ಮತ್ತೊಬ್ಬರು ಕತ್ತರಿಸಿ ಹಾಕುವುದನ್ನು ನಿಲ್ಲಿಸದಿದ್ದರೆ ನಮ್ಮ ನಿರ್ಧಾರಗಳಿಂದ ಏನು ಪ್ರಯೋಜನವಾಗುತ್ತದೆ? ಇದಕೆ ಮುಂದಾದರೂ ಸರಿಹೋಗಬಹುದೆಂಬ ತಮ್ಮ ದೃಢಸಂಕಲ್ಪವು ನೆರವೇರಲೆಂದು ನಾನು ಪ್ರಾರ್ಥಿಸುತ್ತೇನೆ" ಎಂದು ತಿಳಿಸಿರುತ್ತಾರೆ.

ವೀರಸ್ವರ್ಗವನ್ನು ಹೊಂದಿದ ಸ್ವಾಮಿ ಶ್ರೀ ಶ್ರದ್ಧಾನಂದರವರ ಹೆಸರಿನಿಂದ ಒಂದು ಸ್ಮಾರಕಫಂಡನ್ನು ಕೂಡಿಸಬೇಕೆಂಬ ಹೇತುವಿನಿಂದ ಹಿಂದುಸ್ಥಾನದೊಳಗಿನ ೩೫ ಜನ ದೊಡ್ಡಮನುಷ್ಯರದೊಂದು ಟ್ರಸ್ಟಿ ಸಂಘವು ನಿಯಮಿಸಲ್ಪಟ್ಟಿದೆ. ಈ ಸ್ಮಾರಕನಿಧಿಗೆ ಹತ್ತು ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದೂ, ಇದರಲ್ಲಿ ೫ ಲಕ್ಷ ರೂಪಾಯಿಗಳನ್ನು ಕಾಯಂ ಇಡಬೇಕೆಂದೂ, ಉಳಿದ ೫ ಲಕ್ಷದೊಳಗೆ ೩|| ಲಕ್ಷ ರೂಪಾಯಿಗಳನ್ನು ಅಸ್ಪೃಶ್ಯೋದ್ಧಾರಕ್ಕಾಗಿಯೂ ೧| ಲಕ್ಷ ರೂಗಳನ್ನು ಶುದ್ಧಿವಿಷಯವಾಗಿಯೂ ೧| ಲಕ್ಷ ರೂಗಳನ್ನು ಹಿಂದೂ ಸಂಘಟನವಿಷಯವಾಗಿಯೂ ವೆಚ್ಚಮಾಡಬೇಕೆಂದೂ ನಿರ್ಧರಿಸಿರುವುದಲ್ಲದೆ ಸ್ವಾಮಿಗಳವರ ಮರಣವು ಯಾವಮನೆಯಲ್ಲಿ ಆಯಿತೋ ಆ ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಅದನ್ನು ಅವರ ಸ್ಮಾರಕಮಂದಿರವನ್ನಾಗಿ ಮಾಡಬೇಕೆಂದು ಟ್ರಸ್ಟಿಗಳು ಸಂಕಲ್ಪಮಾಡಿದ್ದಾರೆ. ಈ ಹತ್ತುಲಕ್ಷ ರೂಪಾಯಿಗಳು ೧೯೨೭ನೆಯ ಇಸವಿ ಎಪ್ರಿಲ ತಿಂಗಳೊಳಗಾಗಿ ಕೂಡಬೇಕಾಗಿರುವದರಿಂದ ಎಲ್ಲಾ ಪ್ರಾಂತದವರು ಈ ಕಾರ್ಯಕ್ಕೆ ಸಹಾಯಮಾಡಬೇಕೆಂದು ಪಂಡಿತ ಮದನಮೋಹನ ಮಾಲವೀಯರಾಜಿಯವರೂ ಹಾಗೂ ಮಿ|| ಲಾಲಾ ಲಜಪತರಾಯರವರೂ ವಿನಂತಿಮಾಡಿಕೊಂಡಿದ್ದಾರೆ.

ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತಿ ಮಹೋತ್ಸವವು.

ಮುಳಗುಂದ.

ಧಾರವಾಡ ಜಿಲ್ಹಾ, ಗದಗ ತಾಲೂಕು ಮುಳಗುಂದ ಗ್ರಾಮದಲ್ಲಿ ವೈಶಾಖ ಶು|| ೫ ದಿವಸ ಶ್ರೀ ದಾರುಕಾಚಾರ್ಯರ ಜಯಂತಿ ಮಹೋತ್ಸವವು ಅತಿ ವೈಭವದಿಂದ ನೆರವೇರಿತು. ಮೂಲಾಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಗ್ರಾಮದ ದೊಡ್ಡದೊಡ್ಡ ಬೀದಿಗಳಲ್ಲಿ ಉತ್ಸವವನ್ನು ನಡೆಯಿಸಿದರು. ನಾನಾ ತರಹದ ವಾದ್ಯಗಳಿಂದಲೂ, ಸಂಗೀತದಿಂದಲೂ, ಆಚಾರ್ಯರ ವಚನಗಳಿಂದಲೂ ಈ ಉತ್ಸವಕ್ಕೆ ಅನುಪಮವಾದ ಶೋಭೆಯುಂಟಾಗಿತ್ತು. ಈ ಪ್ರಕಾರವಾದ ವೈಭವದಿಂದ ಹೊರಟ ಮಹೋತ್ಸವವು ಪ್ರಾಚೀನ ಮೈಲಸಿದ್ಧೇಶ್ವರನ ದೇವಾಲಯಕ್ಕೆ ಬಂದು ತಲ್ಪಿತು. ಆಮೇಲೆ ಸಭೆಗೂಡಿ ಆಚಾರ್ಯರ ಲೀಲೆಗಳ ಬಗ್ಗೆ ಉಪನ್ಯಾಸಗಳು ಜರುಗಿದವು. ಸರ್ವರು ಭಗವತ್ಪಾದರ ಚರಿತ್ರವನ್ನು ಕೇಳಿ ಆನಂದಹೊಂದಿದ ಮನಸ್ಕರಾಗಿ ಆಚಾರ್ಯರ ಜಯನಾಮಘೋಷವನ್ನು ಮಾಡುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಓರ್ವ ವೀರಶೈವ

ವೀರಶೈವ.

ನಮ್ಮ ಭರತಖಂಡವಾಸಿಗಳಾದ ಹಿಂದುಗಳಲ್ಲಿ ಶೈವ ವೈಷ್ಣವ ಸೌರ ಶಾಕ್ತ, ಗಾಣಪತ ಕಾಪಾಲಿಕ ಎಂದು ಆರು ಮತಗಳುಂಟು. ಶಿವನನ್ನು ಉಪಾಸನೆ ಮಾಡುವುದರಿಂದ ಶೈವರೆಂದೂ ವಿಷ್ಣುವನ್ನು ಉಪಾಸನೆ ಮಾಡುವುದರಿಂದ ವೈಷ್ಣವರೆಂದೂ, ಸೂರ್ಯನನ್ನು ಉಪಾಸನೆ ಮಾಡುವುದರಿಂದ ಸೌರರೆಂದೂ, ಶಕ್ತಿಯನ್ನು ಉಪಾಸನೆ ಮಾಡುವುದರಿಂದ ಶಾಕ್ತರೆಂದೂ ಗಣಪತಿಯನ್ನು ಉಪಾಸನೆ ಮಾಡುವುದರಿಂದ ಗಾಣಪತರೆಂದೂ ಕರೆಯುತ್ತಾರೆ. ಲೋಕದಲ್ಲಿ ವ್ಯಾಪಾರ ಮಾಡುವವನಿಗೆ ವ್ಯಾಪಾರಿಯೆಂದೂ, ಒಕ್ಕಲತನವನ್ನು ಮಾಡುವವನಿಗೆ ಒಕ್ಕಲಿಗನೆಂದೂ ಹೇಳುವಂತೆ ಯಾವನು ಯಾವ ದೇವರ ಉಪಾಸನೆಯನ್ನು ವಿಶೇಷವಾಗಿ ಮಾಡುತ್ತಿರುವನೋ ಅವನಿಗೆ ಆಯಾಯ ನಾಮವು ರೂಢಿಯಲ್ಲಿ ಬರುವುದು ಸ್ವಾಭಾವಿಕವಾಗಿದೆ. ಶೈವ ವೈಷ್ಣವ ಸೌರ ಮೊದಲಾದ ಈ ಆರು ಮತಗಳು ಶಾಸ್ತ್ರಸಿದ್ಧಗಳಾದರೂ ಪ್ರಕೃತದಲ್ಲಿ ಶೈವ ವೈಷ್ಣವಗಳೆಂಬ ಎರಡು ಮತಗಳು ಮಾತ್ರ ಪ್ರಚಾರದಲ್ಲಿರುವುವು. ಉಳಿದ ಮತಗಳು ನಾಮಾವಶೇಷಗಳಾಗಿವೆ. ಈ ಷಣ್ಮತಗಳೊಳಗೆ ಮೊದಲನೆಯದಾದ ಶೈವ ಮತದಲ್ಲಿ ವೀರಶೈವ ಮತದ ಸಮಾವೇಶವಾಗಿರುವುದು. ಶಿವೋಪಾಸಕರಾದ ಶೈವರಲ್ಲಿ ಆಚಾರಭೇದದಿಂದ ಸಾಮಾನ್ಯ ಶೈವರೆಂತಲೂ, ಮಿಶ್ರ ಶೈವರೆಂತಲೂ, ಶುದ್ಧ ಶೈವರೆಂತಲೂ, ವೀರಶೈವರೆಂತಲೂ ನಾಲ್ಕು ಭೇದಗಳುಂಟಾಗಿವೆ. ಶಿವನನ್ನು ಕಂಡ ಕಾಲದಲ್ಲಿ ಆರಾಧಿಸುವವರು ಸಾಮಾನ್ಯಶೈವರೆನಿಸುವರು. ಶಿವ ವಿಷ್ಣು, ಗಣಪತಿ, ಸೂರ್ಯ, ಶಕ್ತಿಯರನ್ನು ಒಟ್ಟುಗೂಡಿಸಿ ಉಪಾಸನೆ ಮಾಡುವವರು ಮಿಶ್ರಶೈವರೆನಿಸುವರು. ಶಿವನೊಬ್ಬನನ್ನೇ ತಮ್ಮ ಪ್ರಾಣವೆಂತೆ ತಿಳಿದು ಸದಾ ಶಿವನ ಉಪಾಸನೆಯನ್ನು ಮಾಡುವವರು ಶುದ್ಧಶೈವರೆನಿಸುವರು. ಸ್ಥೂಲ ಶರೀರದಲ್ಲಿ ಶಿವನ (ಲಿಂಗ) ಸಂಬಂಧವೂ ವಾಕ್ಕಿನಲ್ಲಿ ಶಿವನ (ಲಿಂಗ) ಸ್ತೋತ್ರವೂ, ಮನಸ್ಸಿನಲ್ಲಿ ಶಿವನ (ಲಿಂಗ) ಧ್ಯಾನವೂ ಯಾರಿಗೆ ಇರುವುದೋ ಅವರು ವೀರಶೈವರೆನಿಸುವರು. ಅಂದರೆ ತ್ರಿಕರಣದಲ್ಲಿಯೂ ಎಡೆಬಿಡದೆ ಶಿವಸದಾಖ್ಯವಾದ ಶಿವಲಿಂಗವನ್ನು ಸ್ಥೂಲ ಶರೀರದಲ್ಲಿಯೂ ಪ್ರಾಣಲಿಂಗವನ್ನು ಸೂಕ್ಷ್ಮ ಶರೀರದಲ್ಲಿಯೂ ಭಾವಲಿಂಗವನ್ನು ಕಾರಣ ಶರೀರದಲ್ಲಿಯೂ ಆರಾಧಿಸುತ್ತ ಶಿವಧ್ಯಾನಪರನಾಗಿ ಸದಾ ಶಿವನ ಶಿವಕರ್ಮ, ಶಿವನ ತಪಸ್ಸು, ಶಿವಧ್ಯಾನ, ಶಿವಜ್ಞಾನಗಳುಳ್ಳವನಾಗಿ ಸರ್ವವೂ ಶಿವಸ್ವರೂಪವೇ ಆಗಿದೆಯೆಂದು ದೃಢತರವಾದ ಭಾವನೆಯು ಹುಟ್ಟಿಗೊಂಡು ಪ್ರಾಪಂಚಿಕ ವ್ಯವಹಾರವನ್ನೆಲ್ಲ ತ್ಯಜಿಸಿರುವವನಿಗೆ ವೀರಶೈವನೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದು.

ಸಾಮಾನ್ಯವಾಗಿ ಶಿವನನ್ನಾರಾಧಿಸುವುದರಿಂದ ಶೈವರೆನಿಸುವರು. 'ಯದಿದೇವಾತ್ಮತಃ ಲಿಂಗೇ ಪತ್ರೇ ಪ್ರಾಣಂ ಪ್ರಯೋಜಯೇತ್' ಎಂಬ ಶಿವಾಗಮವಚನಾನುಸಾರವಾಗಿ ಗುರುವಿನಿಂದ ಕೊಡಲ್ಪಟ್ಟ ಲಿಂಗವನ್ನು ಕಂಠ ಶಿರಸ್ಸು ಮೊದಲಾದ ಉತ್ತಮಾಂಗಗಳಲ್ಲಿ ಧರಿಸುತ್ತ ಲಿಂಗಲೋಪವಾದಲ್ಲಿ ಪುನಃ ಪ್ರಾಯಶ್ಚಿತ್ತವಿಲ್ಲದೆ ಪ್ರಾಣವನ್ನಾದರೂ ಬಿಡಲು ಸಿದ್ಧನಾಗಿರುವನಾದುದರಿಂದ ಶೈವನಿಗೆ "ವೀರ" ಎಂಬ ವಿಶೇಷಣವು ಬಂದಿರುವುದು [illegible]. ಯುದ್ಧಭೂಮಿಯಲ್ಲಿ ಪ್ರಾಣ ಹಾನಿ ಪ್ರಾಣದಮೇಲೂ ಆಶೆಯಿಲ್ಲದ ಶತ್ರುಗಳ ಸೈನ್ಯ ಬಲವನ್ನು ಮುರಿದು ಜಯವನ್ನು ಪಡೆದವನಿಗೆ ವೀರನೆಂದು ಪ್ರಶಸ್ತಿಯು ಬರುವಂತೆ ದೃಢತರವಾದ ಶಿವಭಕ್ತಿಯಿಂದ ಹಿತಕರವಾದ ಆಯುಧವನ್ನು ಧಾರಣಮಾಡಿ ಮಾಯಾರಾಜ್ಯದಲ್ಲಿರುವ ಕಾಮಕ್ರೋಧಗಳೆಂಬ ಅಂತಶ್ಶತ್ರುಗಳನ್ನು ಜಯಿಸಿ ಅಷ್ಟೈಶ್ವರ್ಯಯುಕ್ತನಾಗಿ ಸದ್ಗುಣಸಂಪನ್ನನೂ ವೀರಾದ್ವೈತಿಯೂ ಶಾಂತನೂ, ಆನಂದಘನನೂ ಮುಕ್ತಿಕಾಂತನೂ, ನಿರವದ್ಯನೂ, ಕರುಣಾಸಮುದ್ರನೂ, ಪಕ್ಷಾತೀತನೂ ಆದ ಶಿವನ ರಾಜ್ಯದಲ್ಲಿ ಆನಂದದಿಂದಿರುವುದರಿಂದ ವೀರಶೈವನೆಂಬ ಹೆಸರು ಇವನಿಗೆ ಅನ್ವರ್ಥಕವಾಗಿ ಬಂದಿರುವುದು. ಅಂದರೆ ಸಕಲ ಇಂದ್ರಿಯಗಳಲ್ಲಿಯೂ ಶಿವತತ್ವಸಂಬಂಧವಾದ ವ್ಯವಹಾರವಲ್ಲದೆ ಇತರ ವ್ಯವಹಾರಗಳಿಗೆ ಎಡೆಕೊಡದೆ ನೋಡಿದ್ದೆಲ್ಲವೂ ಶಿವದರ್ಶನವೆಂದೂ, ಕೇಳಿದ್ದೆಲ್ಲವೂ ಶಿವನಸ್ತೋತ್ರವೆಂದೂ ಭಾವಿಸುತ್ತ ಸರ್ವೋವೈರುದ್ರಃ ಎಂಬ ಶ್ರುತ್ಯನುಸಾರವಾಗಿ ಸದಾ ಶಿವಚಿಂತನೆಯಲ್ಲಿರುವುದರಿಂದ ವೀರಶೈವ ಎಂಬ ನಾಮವು ಬಂದಿರುವುದೇ ಹೊರತು ಇತರ ಜನಾಂಗದ ಮೇಲಿನ ವೈರದಿಂದಾಗಲಿ, ಐಶ್ವರ್ಯದಿಂದಾಗಲಿ ಶಕ್ತಿಯಿಂದಾಗಲಿ ಇನ್ನಾವ ಕಾರಣದಿಂದಾಗಲಿ ವೀರ ಎಂಬ ನಾಮವು ಬಂದಿರುವುದಿಲ್ಲ. ಇದೇ ಅರ್ಥವು 'ಯದಾ ವೀರೋ ರಣೇ ಶೂರೋ ವೀರಶೈವಸ್ತಥೋದಿತಾ ಭಕ್ತ್ಯುಪಾಸನೇ ನಿತ್ಯಂ ಸಂಕೀರ್ತನಕಾರಕಃ' ಎಂದು ಪಾರಮೇಶ್ವರಾಗಮದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. (ಸಶೇಷ)

ಆಲ್ ಇಂಡಿಯಾ ಮ್ಯೂಚ್ಯುಯಲ್ ಏಡ್ ಅಂಡ್ ಪೂರ್ ಹೌಸಸ್ ಅಸೋಸಿಯೇಷನ್, ಲಿಮಿಟೆಡ್.

ಹೆಡ್ ಆಫೀಸ್ ಮೈಸೂರು (ದ ಇಂಡಿಯ)

ಇದೇ ತಿಂಗಳು 18 ನೆಯ ತಾರೀಖಿನ ದಿವಸ ಸಾಯಂಕಾಲ 5-30 ಗಂಟೆಗೆ ಸರಿಯಾಗಿ ಮಹಾರಾಜರವರ ಛತ್ರದಲ್ಲಿರುವ ಓಂಕಾರೇಶ್ವರಸ್ವಾಮಿ ದೇವಸ್ಥಾನದ ಕಲ್ಯಾಣ ಹಾಲಿನಲ್ಲಿ ಮೇಲ್ಕಂಡ ಸಂಘದ ವಿಷಯವಾಗಿ ಮಾತನಾಡುವುದಕ್ಕೋಸ್ಕರ ನಮ್ಮ ಸಂಘದ ಹೆಡ್ ಆರ್ಗನೈಜರ್ ಮ|| ಟಿ. ಕೃಷ್ಣಸ್ವಾಮಿ ಶೆಟ್ಟಿಯವರ ಆಹ್ವಾನದ (invitation) ಪ್ರಕಾರ ಮೈಸೂರು ನಗರದಲ್ಲಿರುವ ಮಹಾಜನಗಳ ಸಭೆಯು ಹೈಕೋರ್ಟ್ ವಕೀಲ್ ರಾವ್ ಸಾಹೇಬ್ ಕೆ. ಸುಬ್ರಹ್ಮಣ್ಯನವರ ಅಧ್ಯಕ್ಷತೆಯಲ್ಲಿ ನೆರೆಯಿತು. ಈ ಸಭೆಗೆ ರಾವ್ ಸಾಹೇಬ್ ಪಿ. ಚೆನ್ನಯ್ಯನವರ, ಕ್ಯಾಪ್ಟನ್ ಮ|| ಎ. ಚೆನ್ನಯ್ಯನವರು, ಹೈಕೋರ್ಟ್ ವಕೀಲ್ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಮ|| ರಾಮಯ್ಯನವರು, ಕೂಡಗ ಪತ್ರಿಕಾ ಎಡಿಟರ್ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಮ|| ಪಿ. ವೆಂಕಟಯ್ಯನವರು, ಸಬ್ ಜಡ್ಜಿ ಸ್ವಾಮಿ ಮ|| ಜಂಗಮ್ಮನವರು, ರಿಟೈರ್ಡ್ ಎಕ್ಸೈಸ್ ಕಮಿಷನರ್ ಮ|| ಮಾದಪ್ಪನವರು, ಲೋಕಪಾವನ ಪತ್ರಿಕಾ ಎಡಿಟರವರು, ಸ್ಟಾರ್ ಕಂಪೆನಿ ಮ್ಯಾನೇಜರ್ ಮ|| ಎಸ್ ಪ್ಪನವರು, ಮಹಾತ್ಮಾ ಕಂಪೆನಿ ಮ್ಯಾನೇಜರ್ ಮ|| ಮಂದಪ್ಪನವರು, ಇವರೇ ಮೊದಲಾದ ಅನೇಕ ಸರ್ಕಾರಿ ಅಧಿಕಾರಿಗಳು ಮತ್ತು ದೊಡ್ಡ ದೊಡ್ಡ ಶಾಹುಕಾರ್ ಮಂಡಿದಾರರು ಬಂದಿದ್ದರು. ಸಭಾಪತಿಯವರ ಅಪ್ಪಣೆಯ ಮೇರೆಗೆ ಮೇಲ್ಕಂಡ ಸಂಘದ ಹೆಡ್ ಆರ್ಗನೈಜರ್ ಮ|| ಎಂ. ಎಸ್. ನಾಗಣ್ಣನವರು ಮೇಲ್ಕಂಡ ಸಂಘದ ಉದ್ದೇಶಗಳು ಮತ್ತು ಆ ಉದ್ದೇಶಗಳ ನೆರವೇರುವುದಕ್ಕಾಗಿ ಮಾಡಿರುವ ಏರ್ಪಾಡಿನ ವಿಷಯವಾಗಿ ಒಂದು ವರೆಗಂಟೆ ಕಾಲ ಸಭಿಕರ ಮನಸ್ಸಿಗೆ ತೃಪ್ತಿಕರವಾಗುವಂತೆ ಇಂಗ್ಲೀಷಿನಲ್ಲಿ ಉಪನ್ಯಾಸವನ್ನು ಮಾಡಿ ಅನಂತರ ಅರ್ಧ ಘಂಟೆ ಕಾಲ ತಾವು ಈ ವಿಧವಾದ ಉದ್ಯೋಗಕ್ಕೆ ಸೇರಿದ ರಾಗಾಯಿತು ಇದುವರೆಗಿನ ತಮ್ಮ ಜೀವನ ಚರಿತ್ರೆಯನ್ನು ಓದಿ ಹೇಳಿದರು.

ಆ ಮೇಲೆ ಹೆಡ್ ಆರ್ಗನೈಜರರು ಸಭಿಕರ ಪ್ರ... ಕೆಲವರ ಕೇಳಿದ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರವನ್ನು ಕೊಟ್ಟು ಇಂಡಿಯಾ, ಬರ್ಮಾ ಮತ್ತು ಸಿಲೋನ್ ದೇಶಗಳ ಪ್ರತಿ ಒಂದು ಪಟ್ಟಣದಲ್ಲಿಯ ಅನಾಥರು ಮತ್ತು ಬಡವರು ಆದ ಅಂಗಹೀನರಿಗೆ ಅ... ಹಾಕುವುದಕ್ಕೂ ಮತ್ತು ರೋಗಿಗಳನ್ನು ಉಪಚರಿಸುವುದಕ್ಕೂ ಒಂದೊಂದು ಧರ್ಮಶಾಲೆಯನ್ನೂ ಒಂದೊಂದು ರಕ್ಷಣಾಲಯವನ್ನೂ ಸ್ಥಾಪಿಸುವುದಕ್ಕಾಗಿ ಈ ಸಂಘವು ಏರ್ಪಡಿಸಲ್ಪಟ್ಟಿದೆ ಎಂದೂ ಈ ವಿಧವಾದ ಧರ್ಮಶಾಲೆಗಳನ್ನು ನಡೆಸುವುದಕ್ಕಾಗಿ ಪ್ರತಿಯೊಬ್ಬರು ತಿಂಗಳು ಒಂದಕ್ಕೆ ಒಂದು ರೂಪಾಯಿ ಪ್ರಕಾರ 50 ತಿಂಗಳು 50 ರೂಪಾಯಿಗಳನ್ನು ಕೊಡತಕ್ಕದ್ದೆಂದೂ, ಹೀಗೆ ವಸೂಲಾಗುವ ಮೊಬಲಗು ಗೌರ್ನಮೆಂಟ್ ಸೆಕ್ಯೂರಿಟಿಗಳಲ್ಲಾಗಲಿ ಅಥವ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕುಗಳಲ್ಲಾಗಲಿ ಹೂಡಲ್ಪಡುವುದೆಂದೂ ಇದಲ್ಲದೆ ಗೌರ್ನಮೆಂಟಿನಿಂದ ಸದರಿ ಮೊಬಲಗಿಗೆ ಬರತಕ್ಕ ಬಡ್ಡಿಯಲ್ಲಿ ಅರ್ಧ ಮೊಬಲಗು ಧರ್ಮಶಾಲೆಗಳಿಗೋಸ್ಕರ ಉಪಯೋಗಿಸಲ್ಪಡುವುದೆಂದೂ ಉಳಿದ ಅರ್ಧ ಬಡ್ಡಿ ಮೊಬಲಗಿನಲ್ಲಿ 30 ರೂಪಾಯಿ ಕೊಡತಕ್ಕ ಚಂದಾದಾರರುಗಳಿಗೆ ಬಡ್ಡಿಯು ಮತ್ತು ಆಧಾರವುಳ್ಳ ಸಾಲಗಳು ಕೊಡಲ್ಪಟ್ಟು ಅದರಿಂದ ಸಾಲದ ಮೊಬಲಗುಗಳು ನ ಬವ ಕಂತು ಪ್ರಕಾರ ವಸೂಲ್ಮಾಡಲ್ಪಡುವವೆಂದೂ, ಸಂಘದಲ್ಲಿ ಬರ್ಥನಯು ಸದರಿ ಚಂದಾದಾರರುಗಳ ಸಂಪಾದನೆಯಿಂದಲೂ, ಈಶ್ವರಸಹಾಯವನ್ನು ಸಂಪಾದಿಸುವುದಕ್ಕೆ ಈ ವಿಧವಾದ ಧರ್ಮಕಾರ್ಯಕ್ಕಿಂತ ಬೇರೆ ಯಾವುದಾದ ಉತ್ತಮತರವಾದ ಸಾಧನವು ಇಲ್ಲವೆಂದೂ, ಈಗಾಗಲೆ ಕೂಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ರಾವ್‌ಬಹದ್ದೂರ್ ಜಂಗಮ್ಮನವರು, ರಿಟೈರ್ಡ್ ಪೋಲೀಸ್ ಸೂಪರಿಂಟೆಂಡೆಂಟ್ ರಾವ್ ಸಾಹೇಬ್ ಪಿ. ಚೆನ್ನಯ್ಯನವರು, ಅಸಿಸ್ಟೆಂಟ್ ಸರ್ಜನ್ ಡಾಕ್ಟರ್ ಮಂದಣ್ಣನವರು, ಸ್ಟಾರ್ ಕಂಪೆನಿ ಮ್ಯಾನೇಜರ್ ಮ|| ಎಸ್ ... ಮಹಾತ್ಮಾ ಕಂಪೆನಿ ಮ್ಯಾನೇಜರ್ ಮ|| ... ಪ್ಪನವರು, ಕೋಮಾರ್ಕಾಟಿ ಕಾಂಟ್ರಾಕ್ಟರ್ ... ಅಪ್ಪಯ್ಯನವರು ಇವರೇ ಮೊದಲಾದ ... ದೊಡ್ಡಮನುಷ್ಯರುಗಳು ಸಂಘದ ಮೆಂಬರುಗಳಾಗಿದ್ದಾರೆಂತಲೂ ಮತ್ತು ಈ ಸಂಘಕ್ಕೆ ಪ್ರತಿ ... ಬ್ಬರೂ ಸೇರಿ ಮೇಲ್ಕಂಡ ಲೌಕಿಕ ಪಾರಮಾರ್ಥಿಕ ಪ್ರಯೋಜನಗಳನ್ನು ಹೊಂದಬೇಕಾದದ್ದು ಅ... ಮೊಬಲಗನ್ನು ಕೊಟ್ಟು ಹೊಂದತಕ್ಕದ್ದು ಅವಶ್ಯಕ ವೆಂದೂ ಹೇಳಿದರು, ಈ ವಿಷಯಗಳನ್ನು ... ನಂತರ ಅನೇಕರು ಸಂಘದ ಷೇರುಗಳನ್ನು ... ಪಾಂಡುಗಳನ್ನು ತೆಗೆದುಕೊಳ್ಳುತ್ತಾ ... ಮಾಡಿದರು. ಮ|| ನಾಗಣ್ಣನವರ ಭಾಷಣಾ ನಂತರ ಅಧ್ಯಕ್ಷರು ಸಮಯೋಚಿತವಾಗಿ ಭಾಷಣವನ್ನು ಮಾಡಿದರು. ಕಡೆಯಲ್ಲಿ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷ

ಸಮುದ್ರವೂ ಖನಿಜಪದಾರ್ಥಗಳೂ.

ದವನಾತ್ಮನಿಂದ ನಿರ್ಮಿತವಾದ ಈ ಪೃಥಿವಿಯು ಭಾಗ ನೀರಿನಿಂದಲೂ ೧ ಭಾಗ ಮಣ್ಣಿನಿಂದಲೂ ಕೂಡಿರುವುದು ಈ ಕಾಲದಲ್ಲಿ ಪ್ರಾಯಶಃ ಎಲ್ಲರಿಗೂ ಪಾಶ್ಚಾತ್ಯ ಪಂಡಿತರು ಬಹುಮಟ್ಟಿಗೆ ಶೋಧಿಸಿದ್ದಾರೆ ಆದರೆ ಭೂಭಾಗದಲ್ಲಿ ಎಷ್ಟೋ ವಸ್ತುಗಳು ಈ ವರೆಗೂ ಗೋಚರವಾಗಿಲ್ಲ ಇದಕ್ಕೋಸ್ಕರ ಶೋಧನಮಾಡುವ ಪ್ರಯತ್ನವನ್ನು ಸದಾ ಮಾಡುತ್ತಲಿದ್ದಾರೆ ಆದರೆ ಈಗೀಗ ಅಮೇರಿಕಾ ಮೊದಲಾದ ದೇಶಗಳ ವಿಜ್ಞಾನಶಾಸ್ತ್ರವಿಶಾರದರು ಸಮುದ್ರಶೋಧನೆಯ ವಿಷಯದಲ್ಲಿ ತಮ್ಮ ಅಮೂಲ್ಯವಾದ ಬುದ್ಧಿಪ್ರಭಾವವನ್ನು ತೋರಿಸುತ್ತಿದ್ದಾರೆ ವಿದ್ಯಾಲಯದ ಪ್ರೊಫೆಸರ್ ಸಮುದ್ರದಲ್ಲಿ ಬಂಗಾರ ಬೆಳ್ಳಿ ಮತ್ತು ಬಹುಮೌಲ್ಯ ಪದಾರ್ಥಗಳ ತರಗಳು ಅಸಂಖ್ಯಾತಗಳಾಗಿ ರಿಯುತ್ತವೆಂದೂ ಅಟ್ಲಾಂಟಿಕಾಮಹಾಸಾಗರದಲ್ಲಿ ರ್ಣವು ಗಣನಾತೀತವಾಗಿ ದೊರೆಯುವದೆಂದೂ ಪ್ರಾಯಪಟ್ಟಿದ್ದಾರೆ ಹಾಗೂ ಎಂ|| ಎಫಾ ಚಾರಕರು ಸಮುದ್ರದಲ್ಲಿ ಸಾವಿರಾರುಕೋಟಿ ಟನ್ ರವು ದೊರೆಯುವದೆಂದೂ ಒಂದು ಟನ್ ನೀರಿನ ಅರ್ಧಗ್ರೇನಿನಿಂದ ಒಂದು ಗ್ರೇನಿನವರೆಗೆ ಬಂಗಾರ ದೊರೆಯುವದೆಂದೂ ಸಮುದ್ರದಿಂದ ಸುವರ್ಣ ವು ತೆಗೆಯುವ ಕಾಲವು ಸಮೀಪಕ್ಕೆ ಬಂದಿರುವದೆಂದೂ ಅತಿ ತೋರಿ ಮತ್ತಾರೆ ಸಮುದ್ರದಲ್ಲಿ ಬೆಳ್ಳಿ ಗಾರಗಳು ವಿಶೇಷವಾಗಿ ದೊರೆಯುವವಲ್ಲದೆ ನಾನಾ ತರದ ರತ್ನಗಳು ಹಾಗೂ ಮೋಟಾರ ದಲಾದವುಗಳ ಉಪಯೋಗಕ್ಕೆ ಬೇಕಾಗಿರುವ ಯುವಾವಿಗಳೂ ವಿಶೇಷವಾಗಿ ದೊರೆಯುವವಾದ್ದರಿಂದ ಅಮೇರಿಕಾದೇಶದವರು ಈ ಪದಾರ್ಥಗಳನ್ನು ಹೊರಗತೆಗೆದು ಲೋಕಕ್ಕೆ ಮಹೋಪಕಾರವನ್ನು ಮಾಡಬೇಕೆಂಬ ಸದುದ್ದೇಶದಿಂದ ಅಸಾಧ್ಯವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ ಸಮುದ್ರದೊಳಗೆ ಆಧಾರದವರೆಗೆ ಹೋಗುವದಕ್ಕಾಗಿ ಒಂದು ತರದ ಶಾಕವನ್ನು ರಚಿಸಿದ್ದಾರೆ ಮನುಷ್ಯನು ಆ ಶಾಕವನ್ನು ಧರಿಸಿಕೊಂಡು ೭೦೦ ಫೂಟುಗಳ ನಿರಾತಂಕವಾಗಿ ಹೋಗಬಹುದಂತೆ! ಆಗ ಸಮುದ್ರದಾಳದಲ್ಲಿಕ್ಕೆ ಸಮಸ್ತ ಪದಾರ್ಥಗಳನ್ನು ಅಲ್ಲಿಂದಲೇ ನೋಡ ದೊಡ್ಡ ಸೂಕ್ಷ್ಮವಾಗಿ ಯಂತ್ರವನ್ನು ರಚಿಸಿದ್ದು ಅದರ ಸಹಾಯದಿಂದ ಸಮಸ್ತವಸ್ತುಗಳ ಶೋಧವನ್ನು ಮಾಡುವ ಇನ್ನು ಪಟ್ಟುವರ್ಷಗಳಲ್ಲಿ ಸಮುದ್ರದಾಳ ಪದಾರ್ಥಗಳನ್ನೆಲ್ಲ ಹೊರಗೆ ತೆಗೆದು ಈ ಪ್ರಪಂಚಕ್ಕೆ ಒಪ್ಪಿಸುವೆವೆಂದೂ ಸಮುದ್ರಗಳಲ್ಲಿ ಬಹುಕಾಲದ ಮುಂಗಾರಕ್ಕೆ ಮುತ್ತು ರತ್ನ ಬಂಗಾರಗಳನ್ನು ೧೦ ವರ್ಷಗಳಲ್ಲಿಯೇ ಹೊರತೆಗೆಯುವೆವೆಂದೂ ಸಂಕಲ್ಪವನ್ನು ಮಾಡಿದ್ದಾರಂತೆ! ಈ ತರದ ಮಹಾಸಂಪತ್ತಿಗಳನ್ನು ಸಂಪಾದಿಸುವಕ್ಕೆ ಬೇಕಾಗುವ ವಿಜ್ಞಾನಸಂಪದರ ಬುದ್ಧಿಗೆ ಪಡಿಯುಂಟೆ ಕಟ್ಟುವ ನು? ಸಮುದ್ರದ ನೀರಿನಿಂದ ಉಪ್ಪನ್ನು ಸಹ ತೆಗೆಯಲು ಸಮರ್ಥರಾಗದ ಹಿಂದಿನಿಂದಲೂ ಅನೇಕಕಾಲಕ್ಕೆ ಎಂಥ ಅದ್ಭುತಶಕ್ತಿಯನ್ನು ಕಳದು ರತನಮಾಡುವನ್ನು ಪ್ರಯತ್ನ ಮಾಡಲಾಗಿದ ಮಹಾತ್ಮನು ಭಾರತೀಯರುಗಳು ಈವರೆಗೆ ಆದು ಶಕ್ತಿ ಸಿಗ್ರಹಿಸಿ ಈ ಐಶ್ವರ್ಯವನ್ನು ಉದ್ಧರಿಸಲೊಪ್ಪನೆ ತ್ತೇವ

THE DUTY OF THE WIFE

(೧) ಸತಿಯ ಕರ್ತವ್ಯ

ವಿಧಿವಿಹಿತದಿಂ ಕರ್ಮವನೆಸಗುತೆ |
ಸದಯನಾಗಿಹ ಪತಿಯನೊಲಿಸುತೆ |
ಮದವಿಹೀನತೆಯಾಗಿ ದೇವನ ಪದವ ಪೂಜಿಸುತ ||
ಮುದದಿ ಭಕ್ತಿಯನಾರ್ಜಿಸುತೆ ಘನ |
ಸದಮಲ ಸಂಸ್ಕೃತಿಯನು ಪಾಲಿಸ |
ವಿಧವಸುಮಾಸತಿಯು ಮನ್ನಣೆಯನಾಂತು ಮೆರೆಯುವಳು

ತಾ|| ವಿಧಿಸಲ್ಪಟ್ಟ ಕರ್ಮಗಳನ್ನು ಮಾಡುತ್ತಾ ದಯಾನ್ವಿತನಾದ ಪತಿಯನ್ನು ಪ್ರೀತಿಸಿ ಅಹಂಕಾರವನ್ನು ದೂರಮಾಡಿ, ಭಗವಂತನ ಪೂಜೆಯನ್ನು ಮಾಡುತ್ತಾ, ಭಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಸಂಸಾರಧರ್ಮಗಳನ್ನು ಪಾಲಿಸಿಕೊಂಡುಬರುವ ಮಾರ್ಗವನ್ನು ಅರಿದ ಪತ್ನಿಯು ಜನರಿಂದ ಮರ್ಯಾದೆಯನ್ನು ಹೊಂದಿ ರಾಜಿಸುತ್ತಿರುವಳು.

ಅಪ್ಪದಂಪತಿಕೆಪುದುಮೊದಲೋ |
ಗಾವುದರೊಳಂ ಮನವನಿಡುವುದ |
ಪಾವುದದು ಮನಂಬಿನ ಪಿನ್ನ ವೃದ್ಧಿಗೆ ಹೇತುವೆಂದೆಂತೆ ||
ಬಾವಿಸುತೆ ನಮ್ಮ ನಡೆಸೇನುವ |
ಸೇವಿಸುವ ವರ ರೀತಿಯದನ |
ಭಾವದರ್ಮನಸ್ತ್ವದು ಕೀರ್ತಿಯನಾಂತು ಮಾನ್ಯದು ||

ತಾ|| ಎಲೌ ಸ್ತ್ರೀಯೆ! ನಾನು ಏನಾವುದನ್ನು ಮಾಡಲು ಮನಸಬೇಕು? ಯಾವುದರಲ್ಲಿ ಮನಸ್ಸನ್ನು ಕಾಡಲು ಇಡಬೇಕು? ಯಾವುವು ನನ್ನ ಪುರೋಭಿವೃದ್ಧಿಗೆ ಕಾರಣವು? ಎಂಬುವುಗಳನ್ನು ಯೋಚಿಸಿಕೊಂಡು ನಡೆಸುತ್ತಾ ಸೇವಿಸುತ್ತಾ ಅವರ ಆಜ್ಞೆಯನ್ನು ಮನಸ್ಸಿನಲ್ಲಿ ಮನನಮಾಡಿಕೊಳ್ಳುತ್ತಾ ಕೀರ್ತಿವಂತಳಾಗಿರ

ಉಡುಗೆತೊಡಿಗೆಗಳಲ್ಲಿ ಕಾಲವ |
ಒಡೆದ ಕಳೆಯುತೆ ತನ್ನ ರೂಪವ |
ನಡಿಗಡಿಗೆ ನೋಡಿಕೊಳುತಲಿ ಗರ್ವ ನಿಸುತಾಂತಲೆ ||
ಬಡಿವಾರಂ ಪತಿಯ ಸ್ವರ್ಗ್ಯ ಸಮಂ |
ಒಡೆಂತು ವಶನನಿಂಯಮೆಸುವದ |
ಗೆಲುವ ಸೌಖ್ಯ ಪಡೆವ ನಡೆದು ಹೋಗುವಳು ||

ತಾ|| ನಿನ್ನ ಉಡಿಗೆತೊಡಿಗೆಗಳನ್ನು ಸಿಂಗರಿಸಿಕೊಳ್ಳುವದರಲ್ಲಿಯೇ ಕಾಲವನ್ನು ವ್ಯರ್ಥವಾಗಿ ಕಳೆಯುತ್ತ ಅಡಿಗಡಿಗೂ ನಿನ್ನ ಸೌಂದರ್ಯವನ್ನು ನೀನೇ ನೋಡಿಕೊಂಡು ಹಿಗ್ಗುತ್ತಾ ಗರ್ವವನ್ನು ತಾಳಿ ಪತಿಯು ಕಷ್ಟದಲ್ಲಿದ್ದಾಗ್ಯೂ ತಂದೆಯ ಮನೆಗೆ ಹೋಗಿ ಸೌಖ್ಯದಲ್ಲಿ ಮ್ಮಣ್ಣ ಒಡು ಸರವು ಬಿಡದಲ್ಲಿ ಒದಗುವೋಗಿಸುತ್ತಾ

ಧನಿಜಯಿಪರಿಷ್ಕ್ರುಯಾನುತ |
ಒನಪನುಸೆರ್ವಪತಿ ವಾಗೆಂ |
ದೆಸಿ ಕೇಳ್ವತೆ ಮೆರೆಯುಂತಲೇಂಯಾರ್ಗೆಸ್ಯಾನೀ ಹೆ ||
ಇನಿಯನಾರಯಿಕ್ದುಮಾತಿಗೆ |
ಮನವಕೆರವಾತಿದ ತರ್ಮವಕೆ |
ಘನತೆಯಿಂತಾನೀಗಿಕೇಳ್ವಾಧನೆ ಕೇಯುಳ ||೩||

ಅರುವ ಸ್ತ್ರೀಯು ಅತೀತಿಯಾಗಿ ನಡೆಯುತ್ತಾ, ರೂಪವಂತಳಿನಿ ಕೊಂದಿದ್ದರೇನು? ಯೋಗ್ಯಳೆಂದೆನಿಕೊಳ್ಳಲಾರಳು ಎಂಬುದಾಗಿ ಬಂದಿದೇನೆ ಆದರೆ ಗತಪಡುಗ ಸ್ವಾಮಿಯ ಮಸ್ಸಿಗ ತಂದುಕೊಳ್ಳದೆ ಸ್ವಾಮಿಯ ಹಕ್ಕನ್ನು ಅವರ ತನ್ನ ಪತಿಯನ್ನು ಕಂಡರ ಅವನು ಸಾಧ್ಯಯನಿಗೆ ತೋರುವನು?

ಕರುಣೆಯಿಂದನ್ನದತೆಯಿಂದಾ |
ಆದರದಿಂ ಸುಖವಾಂತುದಾಸನ |
ದರದೆನ್ನನೆಕರೆಸಿ ಮನ ತಾ ಪುಟ್ಟಿಸುವನೆ ದಿನ ರಾತ ||
ಅಂದಿಗೆಡೆಮಹಕಾರ್ಯಗಳನಾ |
ಪರಿಗುಡುಪಿಯರೊಳು ಬಿತುತಿವ |
ಸಿರಿಸಿ ಜೀವಿತವಾಕ್ರೈಗ್ಯವಳು ಸಾಧ್ವಿಯನಿ ಹಂ ||

ತಾ|| ಹಾಗಾದವಳು ತನ್ನ ಕಾರುಣ್ಯದಿಂದಲೂ, ಸವಿನಾಚೀನಗತೆಯಿಂದಲೂ ಪ್ರಸಂಗವಶವಾದವಗಳನ್ನು ತಾಳಿ ಕುಶಲಿಯಾಗಿದ್ದಾಗ್ಯೂ ಪತಿಯನುಸಸ್ಸಿಗೆ ಪ್ರೀತಿವಟ್ಟಿಸುವ ರೀತಿಯಲ್ಲಿರುತ್ತಾ ತನ್ನಾಸಕ್ತಿಯಿಂದ ಕೈಕೊಂಡ ಕಾರ್ಯವನ್ನು ಕೀರ್ತಿಸುತ್ತಾ ಗುರುವಿಯಲ್ಲಿ ಭಕ್ತಿಯನ್ನಿಟ್ಟಿಸಿ ಜೀವಿತವಾಕ್ಯೆಯನ್ನು ಗೈಯುತ್ತಲೇ ಸಾಧ್ವಿಯೆನಿಸಿಕೊಂಡಿರುವಳು.

ಅನೆಗಂತಾಳಿಂತಿರುವವ |
ನೋವದಲನಲಂ ದೊರಕಿದ |
ದೇವನೆಂದತಿಶಯದ ಮೋದದೊಳವಪ್ರೋಹಿಸುತೆ ||
ಡಾವುತಂಮ್ರೋಪವನಮಗೊಳಿಸಿ |
ವಾಸತಿಯುವರಾಗಿಸಿದ ಮನೋ |
ವಾಸಗಳಲ್ಲಿಸುವುದನಿಯನ ಸೌಖ್ಯವೃದ್ಧಿಗಳ ||೭||

ತಾ|| ಕುಲೀನಳಾಗಿ ತಕ್ಕುವ ಸತಿಯನ್ನು ದೇವನು ತನಗಾಗಿ ಪ್ರೀತಿಯಿಂದ ಒದಗಿ ಕೊಟ್ಟಿರುವ ಗಂಡು ಮೊನ್ನಲ್ಲ ಪಾಪಿ ಸಂತೋಷವಟ್ಟುಕೊಂಡು ಪಾಲಿಸಿಕೊಂಡುಬಂದು ವಿಶ್ವಾಸವನ್ನು ಹೆಚ್ಚಿಸಿ ಅಕಯಿಂ ಒಡು ದ ವಸ್ತುಗಳನ್ನು ತಂದುಕೊಡುವುದೇ ಪತಿಯು ಮುಂದಿನ ಅಭಿವೃದ್ಧಿಗೆ ಕಾರಣನಾಗಿರವುದಾದು ತಿಳಿಯಬೇಕು.

ಲೇಖಕ—**ಆನವಟ್ಟಿ ರಾಮರಾಯರು,**
(ವಕೀಲ) ಮೈಸೂರು

ಗದಗ.

ಮೈಸೂರುಪ್ರಾಂತಕ್ಕೆ ಸೇರಿದ ಮಣಸಗಟ್ಟೆ ಅರಾಧ್ಯಮಠದ ಶಿವಕಥಾಧುರೀಣ ವೇ|| ಗಂಗಾಧರಾರಾಧ್ಯರು ಧಾರವಾಡ ಜಿಲ್ಲಾ ಗದಗ ಪಟ್ಟಣಕ್ಕೆ ಬಂದು ಕೀರ್ತನೆಗಳನ್ನು ಮಾಡಿದರು, ತಾ|| ೧೭—೫—೩೮ ನೆಯ ದಿವಸ ರಾಚೋಟಿ ವೀರಭದ್ರದೇವಸ್ಥಾನದಲ್ಲಿ "ಭದ್ರಾಯು ಚರಿತ್ರೆ" ಎಂಬ ಕಥೆಯನ್ನು ತಾ|| ೧೮ ನೆಯ ದಿವಸ "ಮಣ್ಣುಮೋಕ್ಷಮೂರ್ತಿ" ಎಂಬ ಚರಿತ್ರೆಯನ್ನು ಹೇಳಿದರು. ಇವರ ಕೀರ್ತನಶ್ರವಣಕ್ಕಾಗಿ ಬಹುಜನರು ಆಗಮಿಸಿದ್ದರು ಇವರಲ್ಲಿ ಕೀರ್ತನಮಾಡುವ ಪದ್ಧತಿಯೂ ವಾಕ್ಚಾತುರ್ಯವೂ ಈ ಕಾಲಕ್ಕನುಸಾರವಾದ ವಿಷಯಯೋಜನೆಯೂ ಅಸದೃಶವಾಗಿದ್ದು ಜನಮನೋರಂಜಕವಾಗಿತ್ತು ಇವರು ವಯಸ್ಸಿನಲ್ಲಿ ಚಿಕ್ಕವರು ಸತತ ಅತ್ಯಂತ ಉದಾರಶೀಲರಾಗಿದ್ದು ಅವರಂತೆ ವೀರಶೈವರಿಗೆ ಕೀರ್ತನಕಾರರು ದೊರೆಯುವುದರಿಂದ ಜನರ ಮನಸ್ಸಿನ ಮೇಲೆ ಒಳ್ಳೆ ಪರಿಣಾಮ ಮಾಡುತ್ತದೆ ಇಂಥವರು ಒಂದೊಂದು ಪ್ರಾಂತದಲ್ಲಿ ನಾಲ್ಕು ಐದು ವರ್ಷಗಳನ್ನು ಕೀರ್ತನ ಪ್ರಚಾರಕರಾಗಿ ಹೋಗಿದ್ದಾದರೆ ಸಮಾಜವು ಶೀಘ್ರವಾಗಿ ಉನ್ನತಿಯನ್ನು ಹೊಂದುವದರಲ್ಲಿ ಯಾವ ಸಂದೇಹವೂ ಇಲ್ಲ! ಈ ಪಟ್ಟಣದಲ್ಲಿ ಇವರ ಕೀರ್ತನಗಳು ಇನ್ನೂ ಅನೇಕವಾಗಿ ಆಗುತ್ತಿದ್ದವು ಆದರೆ ಇವರು ಕೆಲ ದಿವಸ ಬೇರೆಯಲ್ಲಿ ಆರೋಗ್ಯವಿಲ್ಲದ್ದರಿಂದ ಊರಿಗೆ ಪ್ರಯಾಣ ಮಾಡಿದರು. ಮತ್ತೊಮ್ಮೆ ಇವರು ಈ ಪ್ರಾಂತಕ್ಕೆ ಆಗಮಿಸಿ ಪ್ರತಿಗ್ರಾಮಗಳಲ್ಲಿಯೂ ಸಂಚರಿಸಿ ತಮ್ಮ ದಿವ್ಯ ಕೀರ್ತನಗಳಿಂದ ಜನರನ್ನು ಎಚ್ಚರಗೊಳಿಸಬೇಕೆಂದು ಇಚ್ಛಿಸುತ್ತೇವೆ.

ತಾ|| ೨೩—೫—೧೯೩೮
ಓರ್ವ
ಪ್ರತ್ಯಕ್ಷದರ್ಶಿ

೨೦೦ ರೂಪಾಯಿಗಳ ಬಹುಮಾನ.

ಈ ನೋಟೀಸಿನ ಮೂಲಕ ಸಕಲ ಜನಗಳಿಗೆ ತಿಳಿಸಪಡಿಸುವುದೇನೆಂದರೆ, ಕಾಶೀಕ್ಷೇತ್ರದಲ್ಲಿರತಕ್ಕ ಶ್ರೀ ಜಗದ್ಗುರು ವಿಶ್ವಾರಾಧ್ಯಮಹಾಸಂಸ್ಥಾನ ಜಂಗಮವಾಡಿ ಮಠದಲ್ಲಿ ತಾ|| 1—5—1927 [illegible] ವಾರ ರಾತ್ರಿಯಲ್ಲಿ ಕೆಳಗೆ ನಮೂದಿಸಿದ ಸಾಮಾನುಗಳು ಕಳುವಾಗಿ ಹೋಗಿರುತ್ತವೆ. ಈ ಸಾಮಾನುಗಳನ್ನು ಹುಡುಕಿಕೊಟ್ಟವರಿಗೆ ಎರಡು ನೂರು ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವವು.

೧ ಆಸನವನ್ನು ಹಾಕಿ ಪುಸ್ತಕದಲ್ಲಿ [illegible] ಬರೆಸಿರುವ, ಮೇಲ್ಭಾಗ ಬೆಳ್ಳಿಯಿಂದ ಕೂಡಿದ ಒಳಗೈಯಿಂದಲೂ ಪುಸ್ತಕದಿಂದ ಕೂಡಿದ ಬಟ್ಟೆಯಿಂದಲೂ ಯುಕ್ತವಾಗಿರುವ ೧|| ಫೂಟು ಎತ್ತರವೂ ೧ ಫೂಟು ಅಗಲವೂ ಆಗಿರುವ ಅಂದಾಜು ಎರಡು ಸಾವಿರ ತೊಲೆ ತೂಕವುಳ್ಳ ಚಿತ್ರಕಲಶವನ್ನು ಹಾಕಿರುವ ಬೆಳ್ಳಿಯ ವಿಶ್ವಾರಾಧ್ಯರ ಮೂರ್ತಿ ೧

೨ ಅಂದಾಜು ನಾಲ್ಕು ನೂರು ತೊಲೆ ತೂಕವುಳ್ಳ ಒಂದು ಜೊತೆ ಬೆಳ್ಳಿಯ ಪಾದುಕ

೩ ಅಂದಾಜು ಐವತ್ತು ತೊಲೆ ತೂಕವುಳ್ಳ ಬೆಳ್ಳಿಯ ಪಾದಸಾಕ್ಷಿ ಈ ಪಾದಸಾಕ್ಷಿಯ ಮೇಲೆ ಕೇದಾರನಾಥ [illegible] ಎಂಬ ಅಕ್ಷರಗಳು ಕೆತ್ತಲ್ಪಟ್ಟಿರುತ್ತವೆ ೧ ಸೇರ [illegible] ಹಿಡಿಯುವ ದೊಡ್ಡದಿದೆ

೪ ಚಿತ್ರಕಲಶವನ್ನು ಮಾಡಿದ ಅಂದಾಜು ನಾಲ್ಕು ತೊಲೆ ತೂಕವುಳ್ಳ ಬೆಳ್ಳಿಯ ಛತ್ರ ೧

೫ ಹಿತ್ತಾಳೆಯ ಪಾದುಕ ಜೋಡು ೧

ಅಂದಾಜು ಐವತ್ತು ತೊಲೆ ತೂಕವುಳ್ಳ ಗೌರೀಗಣೇಶಮೂರ್ತಿ ೨

ಶ್ರೀಕ್ಷೇತ್ರ ಕಾಶಿ ಜಂಗಮವಾಡಿಮಠದ ಏಜಂಟ್.

ಅಖಿಲ ಕರ್ನಾಟಕ

ಪ್ರಥಮ ಹಿಂದೀಪ್ರಚಾರ ಸಮ್ಮೇಳನ

ಪ್ರಕಟಣ ಪತ್ರ ೧

೧ ಸಮ್ಮೇಳನವು ಇದೇ ಬರುವ ಜೂನ್ [illegible] ಮೊದಲಿಗೆ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರುಗುವುದು. ಸರಿಯಾದ ತಾರೀಖು ಮುಂದಿನ ಪ್ರಕಟಣೆಯಲ್ಲಿ ತಿಳಿಸಲಾಗುತ್ತದೆ. ಸ್ವಾಗತಸಮಿತಿಯು [illegible] ಉತ್ಸಾಹದಿಂದ ನಡೆಯುತ್ತಿದೆ

೨ ಕರ್ನಾಟಕದೇಶದ [illegible] ಮಾನ್ಯರಾದ ಪಂಡಿತ [illegible] ಪುರುಷೋತ್ತಮದಾಸ ಟಂಡನ್ ಕಾಶೀಕ್ಷೇತ್ರದ [illegible] ಜಗನ್ನಾಥದಾಸರು, [illegible] ಶ್ರೀ [illegible], ರಾಷ್ಟ್ರಪತಿ ಶ್ರೀನಿವಾಸ ಅಯ್ಯಂಗಾರ, ಕೊಂಡಾ ವೆಂಕಟಪ್ಪಯ್ಯ, [illegible] ಮದರಾಸ ಮಂತ್ರಿಗಳಾದ ಡಾ|| ಸುಬ್ಬರಾಯನ್ [illegible] ರಂಗನಾಥಮೊದಲಿಯಾರ್ [illegible] ಮುಂತಾದ ಮಹನೀಯರು ದಯಮಾಡಿಸುವವರಿದ್ದಾರೆ

೩ ಸಮ್ಮೇಳನದ ಸಂಗಡ [illegible] ಪುಸ್ತಕ ಪತ್ರಿಕೆಗಳ ಪ್ರದರ್ಶನ (Exhibition) ವೂ ([illegible] ವಾರದ ಹಿಂದೀ ಸಂಗೀತ[illegible]) ವ್ಯವಸ್ಥೆ [illegible] ಹಿಂದೀಪಾಠ [illegible] ನಡೆಯುವ ಹಿಂದೀ ನಾಟಕವೂ [illegible] [illegible] ಹಿಂದೀ [illegible] ೨೦ ಸಾವಿರ ಜನ ಪ್ರತಿನಿಧಿಗಳು [illegible] ಗಳಾದ ದಕ್ಷಿಣಾ [illegible] ಮಹಾಸಭೆ, ರಾಜಪ್ರತಿನಿಧಿ [illegible] ವ್ಯಕ್ತಿಗಳು [illegible] ಮಹಾಸಭೆಗೆ ಸಂಬಂಧಿಸಿದ [illegible] ಸಂಪೂರ್ಣ ಸಹಾಯವನ್ನು ಮಾಡಲಿಚ್ಛಿಸಿದ್ದಾರೆ

೪ ಸಂಯುಕ್ತ ಪ್ರಾಂತಗಳಲ್ಲಿ ಹಿಂದೀ ಭಾಷಾ [illegible] "ಏಕಲಿಪಿ ವಿಸ್ತಾರ [illegible]" [illegible] ಸಂಸ್ಕೃತ [illegible] ಎಂದು [illegible]

೫ ಕರ್ನಾಟಕದಲ್ಲಿ [illegible] ಕರ್ನಾಟಕದೇಶದ [illegible] ಸ್ವಾಗತಸಮಿತಿ (೫೦೦) [illegible] ಪ್ರತಿನಿಧಿ [illegible] (೧೦೦) [illegible]

[illegible] ಕಾರ್ಯದರ್ಶಿಗಳು [illegible] ಸ್ವಾಗತಮಂತ್ರಿ.

ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ, ಬಳ್ಳಾರಿ.

ಮಹಾಶಯರೇ!

ಈ ಸಂಘದ [illegible] ವಿದ್ಯಾರ್ಥಿಗಳ [illegible] ಪ್ರತಿವರ್ಷ [illegible] ಸ್ಕಾಲರ್‌ಶಿಪ್ [illegible] ಸಂಘದ [illegible] ಕಾಲೇಜು [illegible] ವಿದ್ಯಾರ್ಥಿಗಳು [illegible] ದ್ವಾರಾ [illegible] ಅಧ್ಯಕ್ಷರು [illegible] ಅರ್ಜಿಗಳನ್ನು [illegible] ಕಳುಹಿಸಬೇಕು [illegible] ಅರ್ಜಿಯನ್ನು ಆಗಸ್ಟ [illegible]

[illegible] ವಿದ್ಯಾರ್ಥಿಗಳು [illegible] ವಿದ್ಯಾಭ್ಯಾಸ [illegible] ಸಂಘಕ್ಕೆ [illegible] ಆಗಸ್ಟ [illegible] ಕಳುಹಿಸಬೇಕೆಂದು [illegible]

H Kenbasappa
ಸೆಕ್ರೆಟರಿ.

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾ ಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂ ಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂ ಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆ ಹೊರಡಿಸುವದಕ್ಕೆ ಸಕಲ ಏರ್ಪಾಟುಗಳ ಮಾಡಿರುವದು ಸರ್ವರಿಗೂ ವೇದ್ಯವೇ ಆ ಈ ಪತ್ರಿಕೆಯನ್ನು ಅತ್ಯಂತ ತೋರ್ಜಿತಾವಸ್ಥೆ ತರಬೇಕೆಂದು ಸದರಿ ಪಂಡಿತರು ಸತ್ಸಂಕ ವನ್ನು ಮಾಡಿದ್ದಾರೆ. ಆದ್ದರಿಂದ ಆಚಾ ಭಿಮಾನಿಗಳಾದ ಪ್ರತಿಯೊಬ್ಬರು ತನ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷೆ ಲಿಂಗಧಾರಣ, ವಿವಾಹಾದಿಶುಭಕಾರ್ಯಗಳ ಅವರವರ ಶಕ್ತ್ಯನುಸಾರವಾಗಿ ಈ ಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾ ವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲ ಕಳುಹಿಸಬೇಕೆಂದೂ ಈ ಕಾರ್ಯದಲ ಪ್ರತಿಯೊಬ್ಬರೂ ಪೂರ್ಣ ಗಮನಕೊಡ ಕೆಂದೂ ಹಾರೈಸುತ್ತೇವೆ.

ಸಂಪಾದಕರು.

ಡಾಕ್ಟರ್ ಜೇ ಬಿ ಯವರ

ಸುಗಂಧ ನಸ್ಯದಪುಡಿ

ದಕ್ಷಿಣ ಅಮೇರಿಕೆಯಲ್ಲಿ ಒಬ್ಬ ಕೋಟ್ಯಧೀಶ್ವರನ ಮಗಳು ಒಬ್ಬ ಗ್ರಾಮ್ಯನಾದ ತರುಣನು ಹಾಡುತ್ತ ಮನೆಯ ಬಾಗಿಲಿಗೆ ಬಂದು ಭಿಕ್ಷೆಯನ್ನು ಬೇಡಲು ಆತನ ರೂಪವನ್ನು ನೋಡಿ ಮೋಹಗೊಂಡು ಈ ಯುವಕನಿಗೇ ನನ್ನನ್ನು ಮದುವೆಮಾಡಿಕೊಡಬೇಕೆಂದು ತಂದೆಯನ್ನು ಕೇಳಿಕೊಳ್ಳಲು ತಂದೆಯು ಅದಕ್ಕೆ ಒಪ್ಪದೆ ಇನ್ನು ಮುಂದೆ ಮಗಳು ಹಟಹಿಡಿಯಲು ತಂದೆಯು ಆ ಭಿಕ್ಷುಕನನ್ನು ಊರಬಿಟ್ಟು ಓಡಿಸಲು ಪ್ರಯತ್ನಿಸಿದ್ದಲ್ಲದೆ ಕೊನೆಗೆ ಕೊಲ್ಲುವುದಕ್ಕೂ ಸಹ ಪ್ರಯತ್ನ ಮಾಡಿದನು. ಒಂದೂ ಪ್ರಯತ್ನವು ಕೈಗೂಡದೆ ಇರುವುದರಿಂದ ತಾನೇ ಮಗಳೊಂದಿಗೆ ಊರಬಿಟ್ಟು ಹೋಗುವುದಕ್ಕೆ ಯತ್ನ ಮಾಡಿದನು. ಆಗ್ಗೆ ಮಗಳು ಚಿಂತಾಕ್ರಾಂತಳಾಗಿ "ನನ್ನ ಪ್ರೇಮಕ್ಕೆ ಅನುಗುಣವಾದ ಪತಿಯು ದೊರೆಯದೆ ಇದ್ದಲ್ಲಿ ಈ ಐಶ್ವರ್ಯಾದಿಗಳಿಂದ ಪ್ರಯೋಜನವೇನು? ನಾನೇ ವಿಷಪಾನಮಾಡಿ ಮೃತಳಾಗುವ" ನೆಂಬ ಅಭಿಪ್ರಾಯದಿಂದೊಡಗೂಡಿದ ಒಂದು ಲೇಖನವನ್ನು ಬರೆದಿಟ್ಟು ವಿಷವನ್ನು ಕುಡಿದು ಮೃತಳಾದಳಂತೆ!

ರ್ಯ ಸಾಂಪ್ರದಾಯಿಕಗಳಾದ ಸದ್ಯಃ ಸಮುಪಸ್ಥಿತ ಶ್ರೀಪತಿ ಪಂಡಿತಾರಾಧ್ಯರಿಂದ ವಿರಚಿಸಲ್ಪಟ್ಟ ಶ್ರೀಕರ ಭಾಷ್ಯಾದಿ ಗ್ರಂಥಗಳ ಅಧ್ಯಯನ ಅಧ್ಯಾಪಕತ್ವಾದಿಗಳನ್ನು ಪ್ರಚಾರಗೊಳಿಸುವುದು ಅತಿ ಪ್ರಥಮಕೃತಿಯಾಗಿದೆ. ಆದ್ದರಿಂದ ಪ್ರಸ್ಥಾನತ್ರಯ ಭಾಷ್ಯದ ಸಮುದ್ಧರಣ ಪ್ರಯತ್ನಕ್ಕಾಗಿ ಪಂಚಾಚಾರ್ಯಪ್ರಿಂಟಿಂಗ ಪ್ರೆಸ್ ಸಂಚಾಲಕ ಸಂಪೋಷಕ ಮಹಾತ್ಮರು ಲಕ್ಷ್ಯ ಕೊಡಬೇಕು. ಹಾಗೂ ಸರ್ ದಿವಾನ್ ಬಹಾದ್ದೂರ ಕೆ. ಪಿ. ಪುಟ್ಟಣ್ಣಶೆಟ್ಟಿ ಮಹೋದಯರ ಪ್ರಯತ್ನದಿಂದ ಬೆಂಗಳೂರಲ್ಲಿ ಶ್ರೀಕರಭಾಷ್ಯವು ಮುದ್ರಣವಾಗುತ್ತದೆಂದು ಕೇಳುತ್ತೇವೆ. ಪೀಠಾಚಾರ್ಯರ ಸನ್ನಿಧಿಯಲ್ಲಿ ಶೋಧಿಸಲ್ಪಟ್ಟು ಮುದ್ರಿತವಾದರೆ ಸರ್ವೋತ್ತಮವಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಈ ವಿಷಯವನ್ನು ಸರ್. ಶೆಟ್ಟರವರು ಚಿತ್ತಕ್ಕೆ ತಂದುಕೊಳ್ಳಬೇಕು. ಅಸ್ತು! ಇನ್ನು ಪ್ರಭೆಯು ಹ್ಯಾಗೆ ಧಾರ್ಮಿಕಸಂಪದಭ್ಯುದಯದ ಸಲುವಾಗಿ ಎಷ್ಟರಮಟ್ಟಿಗೆ ಉಚ್ಚಧ್ಯೇಯವನ್ನು ತೋರಿಸಿ ಯತ್ನಿಸುವುದೋ ಹಾಗೆಯೇ ರಾಜಕೀಯ ಸುಖಾಭಿವೃದ್ಧಿಗೋಸ್ಕರ ಪರ್ಯಾಪ್ತವು. ಧರ್ಮಗಳಿಗೆ ಅವಿರೋಧವಾಗಿ ಬ್ರಿಟಿಷರ ಹಾಗೂ ಕರ್ನಾಟಕಾಧಿಪತಿ ಧರ್ಮಪ್ರಭುಗಳ ಕೃಪಾಪಾತ್ರವಾಗಿ ಪ್ರಯತ್ನಿಸಬೇಕು. ಮಹಾತ್ಮಾ ಗಾಂಧೀ ಪಂಡಿತ ಮದನಮೋಹನ ಮಾಲವೀಯ ಮೊದಲಾದ ಮಹಾಪುರುಷರು ಕೈಕೊಂಡಿರುವ ಭಾರತೀಯರ ಸುಖಕ್ಕೆ ಮೂಲಭೂತವಾದ, ನಮ್ಮ ಶಿವಭಕ್ತರಿಗೆ ಸುಲಭವೂ ಶಿವಾಚಾರಕ್ಕೆ ಅನುಕೂಲವೂ ಶಿಷ್ಟಾಚಾರಸರಣಿಗಳವೂ ಆದ ನಮ್ಮ ನಮ್ಮ ಮನೆಗಳಲ್ಲಿ ಬೆಳೆದ ಹತ್ತಿಯಿಂದ ಅರಳೆಯನ್ನು ತೆಗೆದು ಪವಿತ್ರ ಭಾಗಿಯಿಂದ ನೂತು ಹಸನಾದ ತಂತುಗಳಿಂದ ತಯಾರಿಸಲ್ಪಡುವ ಶುದ್ಧ ನೂಲಿನ ನಮ್ಮ ಭಾರತೀಯ ವಸ್ತ್ರಗಳ (ಬಟ್ಟೆಗಳ) ಧಾರಣವು ಅತ್ಯವಶ್ಯಕವಾದ್ದರಿಂದ ಪ್ರಭೆಯು ತನ್ನ ವಾಚಕರಿಗೆ ಜಾಗ್ರತೆಗೊಳಿಸಬೇಕು. ಇನ್ನು ಸಾಮಾಜಿಕ ಒಕ್ಕಲತನ ವ್ಯಾಪಾರಾದಿ ಉದ್ಯೋಗಗಳ ಅಭಿವೃದ್ಧಿಗಾಗಿ ಪ್ರಭೆಯು ಲೇಖಗಳದ್ವಾರಾ ತನ್ನ ಸಿದ್ಧ್ಯೇಯವನ್ನು ಸಫಲಗೊಳಿಸುತ್ತಿರಬೇಕು. ಇನ್ನು ಹಳ್ಳಿ ಪ್ಯಾಟೆ ಸಂತೆಗಳಲ್ಲಿಯೂ ಶ್ರೀಮಂತರೂ ಬಡವರೂ ವಿದ್ವಾಂಸರೂ ಲೌಕಿಕರೂ ಅಲೌಕಿಕರೂ ಸಹ ತೆಗೆದುಕೊಂಡು ಓದುವ ಹಾಗೆ ಪ್ರಯತ್ನಿಸಬೇಕು. ಪ್ರಸ್ತುತ ಯಾವತ್ತು ಖರ್ಚನ್ನು ತೆಗೆದು ಲುಕ್ಸಾನವಾಗದ ಹಾಗೆ ಮುಖ್ಯವಾಗಿ ಮುಗ್ಧರಾದ ಜೀವನವೃತ್ತಿಗಳ ಕರದಲ್ಲಿ ಪ್ರಭೆಯು ಬೀಳುವ ಸುಲಭಸಂಗತಿಯನ್ನು ಚಾಲಕರು ತೀವ್ರ ಯೋಚಿಸಬೇಕು.

" ಪಂಚಾಚಾರ್ಯಪ್ರಭಾ ಪ್ರಕಾಶತೇತರಾಂ "

ಶ್ರೀ ಜಗದ್ಗುರು ಪಂಚಾಚಾರ್ಯಾಃಪ್ರಸೀದಂತು.

ವೀರಶೈವಮತದ ಸದ್ಯದ ಧಾರ್ಮಿಕ ಪರಿಸ್ಥಿತಿಯೂ, ಭಾವೀ ಸುಧಾರಣೆಯೂ.

ಒಂದಾನೊಂದು ಕಾಲದಲ್ಲಿ ವೀರಶೈವಮತವು ಧಾರ್ಮಿಕ ಸುಧಾರಣೆಯಿಂದ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿತ್ತೆಂಬುದು, ಈ ಮತದ ಧರ್ಮಗ್ರಂಥಗಳಿಂದಲೂ, ಪ್ರಾಚೀನ ಚರಿತ್ರೇತಿಹಾಸಗಳಿಂದಲೂ, ವಿಚಾರಶೀಲರಿಗೆ ತಿಳಿದ ಸಂಗತಿಯಾಗಿರುವುದು. ಅಂತಹ ಕಾಲವು ವೀರಶೈವಮತಸ್ಥಾಪಕರಾದ ಪಂಚಾಚಾರ್ಯರ ಅವತಾರಕಾಲವೆಂದೂ, ಮತ್ತು ತತ್ಸಮೀಪಕಾಲವಾಗಿರುವುದೆಂದೂ ನಮಗೆ ಊಹೆಯಾಗುತ್ತದೆ. ಏಕೆಂದರೆ ಜಗತ್ತಿನಲ್ಲಿ ಯಾವುದೊಂದು ಸುಧಾರಣೆಯು ಅಥವಾ ಚಳವಳಿಯು ಸತ್ಪುರುಷರ ಸಮಯದಲ್ಲಿಯೇ ಆದರೆ, ಆ ಸುಧಾರಣೆಯು ಅಥವಾ ಚಳವಳಿಯು ಉತ್ಪಾದಕರ ಕಾಲವನ್ನು ಸಮಾನವ್ಯಾಪ್ತಿಯುಳ್ಳದೆಂಬುವನ್ನು ನಾವು ಪುರಾಣೇತಿಹಾಸಗಳಿಂದಲೂ, ಅರ್ವಾಚೀನಕಾಲದ ಹಲಕೆಲವು ಸಂಗತಿಗಳಿಂದಲೂ ತಿಳಿಯಬಹುದಾಗಿದೆ. ಉದಾ:— ಬ್ರಹ್ಮಸಮಾಜ ಸಂಸ್ಥೆಯ ಸ್ವಭಾವದ ಧರಧರಾಟಿಯುಕಾಲವು, ತತ್ಸಮಾಜಸಂಘಟಕನ ಕಾಲದಲ್ಲಿಯೂ ತದನಂತರದ ಸಮೀಪ ಕಾಲದಲ್ಲಿಯೂ, ಬಹಳ ಪೂರ್ಣಾವಸ್ಥೆಯಲ್ಲಿತ್ತೆಂಬುದು ತತ್ಕಾಲಸೂಚಕ ಚರಿತ್ರಗ್ರಂಥಗಳಿಂದ ತಿಳಿಯುತ್ತದೆ. ಮತ್ತು ವೈಷ್ಣವಾದ್ವೈತಮತಗಳ ಹಾಗೆಯೂ. ಸುಧಾರಣೆಯೂ ಹೀಗೆಯೇ ಆಗಿರುವದು. ಅದರಂತೆ ಮತಸ್ಥಾಪಕಾಚಾರ್ಯರ ಸಮಕಾಲದಲ್ಲಿಯೂ, ತದನಂತರ ಕೆಲವು ಕಾಲದವರೆಗೂ ನಮ್ಮ ವೀರಶೈವಮತವು ಧಾರ್ಮಿಕಸ್ಥಿತಿಯನ್ನು ಏಕರೂಪದಲ್ಲಿಟ್ಟಿದ್ದನ್ನು ನಾವು ವೀರಶೈವಧರ್ಮಪ್ರತಿಪಾದಕಗ್ರಂಥಗಳಿಂದಲೂ, ಮತಸ್ಥಾಪನಾಚಾರ್ಯರ ಅವತಾರದ ಪೂರ್ಣತೆಯನ್ನು ಬೋಧಿಸುವ ಪುರಾಣಪ್ರವಚನಗಳಿಂದಲೂ ತಿಳಿಯಬಹುದಾಗಿದೆ. ಪಂಚಾಚಾರ್ಯರಿಂದ ವೀರಶೈವಮತದ ಧರ್ಮರಕ್ಷಣೆಗಾಗಿ ಧರ್ಮದ ತಳಹದಿಯು ನೀಟು ಮಾಡಿದ ಧರ್ಮವ್ಯವಸ್ಥಾಕ್ರಮವು ವೀರಶೈವಮತದಲ್ಲಿರುವಂತೆ ಅನ್ಯಾನ್ಯ ಮತದಲ್ಲಿಯೂ ಇಲ್ಲವೆಂದು ಕೈಯೆತ್ತಿ ಹೇಳಬಹುದು. ಮೋಕ್ಷಪ್ರಾಪ್ತಿಯ ಸಾಧಕಗಳಾದ ಲಿಂಗಧಾರಣಾದಿ ಕ್ರಿಯೆಗಳೂ ಅಖಿಲ ವೀರಶೈವರ ನಿತ್ಯನೈಮಿತ್ತಿಕಕರ್ಮಗಳೂ ಧರ್ಮಾಂಗವಾಗಿ ನಡೆಯಬೇಕೆಂಬ ಉದ್ದೇಶದಿಂದ ನಮ್ಮ ಆಚಾರ್ಯರು ಪ್ರತ್ಯೇಕ ಗ್ರಾಮಗಳಲ್ಲಿ ಮಠಗಳನ್ನು, ಮಠಾಧಿಕಾರಿಗಳನ್ನೂ ನಿಯಮಿಸಿರುವರು. ಮತ್ತು ಸದಾಚಾರಬೋಧೆ, ಧರ್ಮಜಾಗೃತಿ, ಶಿಷ್ಟಕಾರ್ಯನಿರ್ವಹಣ ಮೊದಲಾದ ಕಾರ್ಯಗಳಿಗಾಗಿ ಅಲ್ಲಲ್ಲಿ ಪಟ್ಟಚರಾಧಿಕಾರಿಗಳನ್ನಿಟ್ಟು ತದ್ದ್ವಾರಾ ಧರ್ಮರಕ್ಷಣೆಯಾಗುವ ವ್ಯವಸ್ಥೆಯನ್ನು ಮಾಡಿರುವರು. ಈ ಪ್ರಕಾರ ವ್ಯವಸ್ಥಿತವಾದ ವೀರಶೈವಮತವು ಈ ಕಾಲದಲ್ಲಿ ದುರ್ದಶೆಯನ್ನು ಹೊಂದುತ್ತ ಅನಾಚಾರ ದುರಾಚಾರಗಳ ಬೀಡಾಗಿ, ಅನಿರ್ವಾಚ್ಯವಾದ ದುಸ್ಥಿತಿಗೀಡಾಗಿರುವುದನ್ನು ಸಮಾಲೋಚಿಸಿದರೆ ಬಹು ವಿಷಾದವಾಗುವುದು. ವೀರಶೈವಧರ್ಮವು ಪಂಚಾಚಾರ್ಯರಿಂದ ಸ್ಥಾಪಿತವಾಗಿದ್ದು, ಈಗಿನ ಕಾಲದಲ್ಲಿ ಈ ಪೀಠಧರ್ಮಾವಲಂಬಿಗಳಾದ ಎಷ್ಟೋ ಜನರನ್ನು—ನಿಮ್ಮ ಮತವಾವುದು? ನಿಮ್ಮ ಮತಸ್ಥಾಪಕರಾರು? ನಿಮ್ಮ ಗೋತ್ರಸೂತ್ರಗಳಾವವು? ಮೋಕ್ಷಮಾರ್ಗದರ್ಶಕಗುರುಗಳಾರು? ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಮಾಡಿದರೆ ಅದಕ್ಕೆ ಮೂಕರಿವರು:—

ಅಹಾ! ಎಲ್ಲಕಷ್ಟು ಆ ಅಜ್ಞಾನ ನೋಡಿರಿ! ಅಜ್ಞಾನಾಂಧಕಾರಾವೃತರಾಗಿರುತ್ತಾರು. ಎಷ್ಟೋ ಉದ್ಧಾರಾಗ ಮತ್ತೆ ಒಂದೈತಿ, ಈ ಮಣ್ಣಿನಕಾಯ ಯಾತಕಬರಿ ಬರಿ! ನಾನು ನೀನು ಕುಲ ಗೋತ್ರ ಗುರು ಶಿಷ್ಯ ಪಂಥದ ಮತ್ಲಬ ಹೋಗಾ ಮಸೀ ಇವೆಲ್ಲಾ ನೀರ್ಗೆಸುಕ್ ನೋಡ್ರಿ. ಗಂಡು ಹೆಣ್ಣು ಅನ್ನುದುಕೂ ತಾ ಬರಾ ಭ್ರಾಂತೀನ ಐತ್ರಿ. ಹಗ್ಗದನ್ನ ಹಾವಂತ ಹೇಳೋ ಪ್ಹಾರ! ಎಲ್ಲಾನೂ ಚಿತ್ತರೂಪದ ಏಕಾಂತ ಧ್ಯಾನ ಮಾಡಬೇಕಂತ, " ತತ್ವಮಸಿ " ವಾಕ್ಯ ಐತಿ. ಎಲ್ಲೀ ಮಠ! ಎಲ್ಲೀ ಗುರು! ಎಲ್ಲೀ ಹಾಳಕಥೀ ಎಪ್ಪಾ!

ಈ ಪ್ರಕಾರವಾದ ದುರುಳವೇದಾಂತದಿಂದ ಮತವನ್ನು ನಾಶಮಾಡುತ್ತಿದ್ದಾರೆ. ಇಂಥ ದುರ್ಮಾರ್ಗಪ್ರವೃತ್ತರಾದ ಜನರಿಂದ ಸದ್ಯದ ವೀರಶೈವಮತದ ಸ್ಥಿತಿಯು ಅತ್ಯಂತ ಹೀನವಾಗಿರುವುದು. ಮತ್ತು ಪೀಠಾಚಾರ್ಯರ ಕೆಲಕಾಲದ ಕರ್ತವ್ಯ ವಿಮುಖತೆಯಿಂದ, ಆಚಾರ್ಯರಿಂದ ಸ್ಥಾಪಿತವಾದ ವೀರಶೈವಮತವು ಆಚಾರ್ಯರಲ್ಲಿ ಸರ್ವೋತ್ತಮ ಗುರುತ್ವವನ್ನು ಒಪ್ಪಿಕೊಳ್ಳುವುದಕ್ಕೆ ಬುತ್ತಿರುವದು. ಅಲ್ಲದೆ ಆಚಾರ್ಯರ ವಿಪ್ರಲಾಪಗಳ ಪಾಲಿ ಪಾಪಭಾಗಿಯಾಗುತ್ತಿರುವದು. ಈ ಪ್ರಕಾ ವಾಗಿ ಪ್ರಾಚೀನ ವೀರಶೈವಧರ್ಮಸಂಸ್ಕೃತಿಯು ಕೆ ಹೋಗಿ ಅವನತಿಯು ಪ್ರಾಪ್ತವಾಗಿರುವುದು. ಇದ ಅವಿಚಾರ ಮೂಲಕವಾಗಿ ವೀರಶೈವಸಮಾಜದಲ್ಲುಂ ದ ಅಸ್ಪೃಶ್ಯತೆಯು ರಾಜಕಾರಣಗಳಲ್ಲಿ ಪ್ರವೇಶಿಸಿ, ಸ ಜದ ಅಧಃಪಾತಮಾಡುತ್ತಿರುವದು. ಹೀಗೆ ತಾನು ಸ್ವಸ್ವೀ ನಾಶಮಾಡಿಕೊಳ್ಳುವಂತೆ ವೀರಶೈವಸಮಾ ತನ್ನ ಕೊಲೆಯನ್ನು ತಾನೇ ಬಯಸುತ್ತಿರುವುದ ನೋಡಿದರೆ, ಈ ಸಮಾಜದ ಸ್ವಕೃತ್ಯಕ್ಕೆ ಸಮ ವಾದ ಸ್ವಕೃತ್ಯವನ್ನು ಬೇರೊಂದು ಸಮಾಜದಲ್ಲಿ ಣವುದು. "ಗಗನಂ ಗಗನಾಕಾರಂ ಸಾಗರಃ ಸಾ ರೋಪಮಃ" ಎಂಬ ದೃಷ್ಟಾಂತದಿಂದಲೇ ಹೇಳಬೇ ಗಿದೆ. ಆದುದರಿಂದ ಪ್ರತಿಯೊಬ್ಬರು ವಿಶ್ವಾಸ್ಯತರ ಭಾವೀ ಸುಧಾರಣೆಯದ್ವಾರಾ ಸಮಾಜದ ಅಭ್ಯುದ ವನ್ನು ಬಯಸಬೇಕು.

ಭಾವೀಸುಧಾರಣೆ

1 ನಮ್ಮ ಸಮಾಜವು, ಇನ್ನುದಿವಸಗಳ ವರೆ ಚಾತುರ್ಯದಿಂದಲೋ ದುರ್ದೈವದಿಂದಲೋ ನಿಜಗ ಸ್ವರೂಪವನ್ನು ತಿಳಿಯದೆ ಈಗೀಗ ಪಂಚಾಚಾ ರೇ ವೀರಶೈವಮತದ ಜಗದ್ಗುರೂತ್ತಮರೆಂದೂ ಸ್ಥಾಪನಾಚಾರ್ಯರೆಂದೂ ಅಖಿಲ ವೀರಶೈವರಿಗೆ ಕ್ಷಾ ಶಿಕ್ಷಾ ಮೂಲಕವಾಗಿ ಮೋಕ್ಷಮಾರ್ಗದ ರೆಂದೂ, ಯಥಾರ್ಥಶಾಸ್ತ್ರವನ್ನು ಅರಿತುಕೊಂ ವುದು. ಇನ್ನು ಮೇಲೆ ಆ ಆಚಾರ್ಯರಲ್ಲಿ ನಿರತಿ ವಾದ ಭಕ್ತಿಯನ್ನು ವಹಿಸಿ, ವರ್ತಿಸುವುದು ಭಾ ರ್ಮಸುಧಾರಣೆಯಾಗಿರುವುದು.

2. ಪಂಚಾಚಾರ್ಯರು ಭೂಮಿಯಲ್ಲಿ ಅವತ ವೀರಶೈವಮತವನ್ನು ಸ್ಥಾಪಿಸಿ, ಆ ಮತವನ್ನು ಪ್ರಚಾರಮಾಡಿದರೆಂಬುದು ಸರ್ವಶ್ರುತವಾಗಿರುವುದು. ದರಮೇಲಿಂದ ಆ ಆಚಾರ್ಯರ ಮತೋದ್ಧಾರದ ತ್ರವಾದ ಉದ್ದೇಶದಂತೆ ಈ ಪಂಚಾಚಾರ್ಯಪ್ರಭೆ ತನ್ನ ಸದುದ್ದೇಶವನ್ನು ಸಂಕಲ್ಪಿಸಿ, ವೀರಶೈವಧರ್ಮ ಉಜ್ವಲತ್ವವನ್ನು ಪ್ರಕಾಶಮಾಡುವುದರ ಸಲು ಯೇ ಜನ್ಮಸಿರುವುದೆಂಬುದನ್ನು ಸಮಸ್ತರೂ ಭಾವಿ ವರು. ಅಂದಮೇಲೆ ವೀರಶೈವಮತದ ಸದ್ಯದ ವಿ ಸ್ಥಿತಿಯು ನಶಿಸಿಹೋಗಿ, ಭಾವೀಸುಧಾರಣೆಯು ಕಾವರೆ ಶಾಸ್ತ್ರಸಮ್ಮತವಾದ ಸಿದ್ಧಾಂತಬೀಜ ವೀರಶೈವಸಮಾಜವೆಂಬ ಪುಣ್ಯಕ್ಷೇತ್ರದಲ್ಲಿ ಬಿತ್ತಿ ರುಭಕ್ತಿಯೆಂಬ ನೀರನ್ನು ಹೊಯ್ದು, ಗುರುಧರ್ಮ ಯೆಂಬ ಗೊಬ್ಬರವನ್ನು ಚೆಲ್ಲಿ, ಅಷ್ಟಾವರಣ ಪಂ ಚಾರಗಳೆಂಬ ಹೂಗಳನ್ನಾಗಗೊಳಿಸಿ, ಶಿವಸಾ ಎಂಬ ಮೋಕ್ಷಫಲವನ್ನು ಬೆಳೆದುಕೊಡುವುದೇ ಸ್ಥಿತಾ ಸುಧಾರಣೆಯಾಗಿರುವುದು.

3. ಧರ್ಮಶಾಸ್ತ್ರನಿಬಂಧನಗಳನ್ನತಿಕ್ರಮಿಸಿ, ಅಭಿಘಾತಕಕಾರ್ಯವನ್ನು ನಡೆಯದೆ, ವೀರಶೈವರೆ ಒಂದೇಮನೆಯವರೆಂದೂ ಯಾವದ್ವೀರಶೈವರ ಸ ಸಂಸ್ಕಾರಗಳೂ, ಧರ್ಮಕರ್ಮಗಳೂ ದೀಕ್ಷೆ ಶಿಕ್ಷೆ ಮೋಕ್ಷಗುರುಗಳೂ ಒಂದೇಯಾಗಿರುವವೆಂದೂ ರುವ ಧರ್ಮಶಾಸ್ತ್ರವನ್ನು ಪರಿಶೀಲಿಸಿ, ಯಾವತ್ ಸನ್ಮಾರ್ಗವನ್ನು ಹಿಡಿಯುವುದೇ ಮುಂದಿನ ಸುಧಾ ಯಾಗಿರುವುದು.

4. ವೀರಶೈವ ಧಾರ್ಮಿಕಸುಧಾರಣೆಯು ಮತಸ್ಥಾಪಕರಾದ ಪೀಠಾಚಾರ್ಯರಿಂದಲೇ ಆಗ ಗಿದ್ದು ಪ್ರತಿಷ್ಠಾಸಮಯದಲ್ಲಿ ಧರ್ಮಗುರುಗಳು ಬಹ ಗಿ ತಮ್ಮ ಕರ್ತವ್ಯವನ್ನು ಕೈಕೊಳ್ಳುವುದು ವೀರ ರ್ಮದ ಭಾವೀ ಅಭ್ಯುದಯವಾಗಿರುವುದು.

೫. ಧರ್ಮೋದ್ಧಾರದ ವಿಷಯದಲ್ಲಿ ಆಚಾರ್ಯರಿಗೆ ಸಹಾಯಕರಾಗಿದ್ದ ಪಟ್ಟದಚರಮೂರ್ತಿಸ್ವಾಮಿಗಳು ತಮ್ಮ ಮಠಗಳಲ್ಲಿ ತಮಗೆ ಹತ್ತಿಕೊಂಡಿರುವ ವರ ಪೋಷಣಾದಿ ಕುಟುಂಬಭಾರವನ್ನು ವಹಿಸಿ, ತಲೆಯೆತ್ತಲೂ ಮೇಲಕ್ಕೇಳಲಿಕ್ಕೆ ಬಾರದಂಥ ಬಂಧನವನ್ನು ಮಾಡಿಕೊಂಡಿರುವದು ಅವರ ಸ್ವಾರ್ಥೈಕಪರಾಯಣತೆಯನ್ನು ವ್ಯಕ್ತಮಾಡುತ್ತದೆ. ಈ ವಿಧವಾದ ಅಪವಾದವನ್ನು ಬಿಟ್ಟು, ನಿಸ್ವಾರ್ಥಬುದ್ಧಿಯಿಂದ ಸಮಾಜೋದ್ಧಾರವನ್ನು ಮಾಡಲು ಬದ್ಧರಾಗುವದು ಜಗದ್ವಂದ್ಯವಾದ ಅವರ ಪಟ್ಟದಸ್ಥಾನಕ್ಕೆ ಭೂಷಣಾವಹವು.

೬. ನಮ್ಮ ಮತದಲ್ಲಿ ಇನ್ನೂ ಹೆಚ್ಚಾಗಿ ವೃತ್ತಪತ್ರಿಕೆಗಳನ್ನು ಹುಟ್ಟುಮಾಡುವುದೂ, ಪ್ರಾಚೀನ ಧರ್ಮಗ್ರಂಥಗಳನ್ನು ಮುದ್ರಣಗೊಳಿಸುವುದೂ, ಆಗಿಂದಾಗ್ಗೆ ಧರ್ಮಪರೀಕ್ಷಾಸಭೆಗಳನ್ನು ಮಾಡಿ ತದ್ವಾರಾ ಧರ್ಮಜಾಗೃತಿಯನ್ನು ಮಾಡುವುದೂ ಗುರುವರ್ಗವು ವೈದಿಕ ದೀಕ್ಷೆಯಿಂದ ವಿಭೂಷಿತವಾಗುವಂತೆ ಮಾಡುವುದೂ, ಇವು ಭಾವೀ ವೀರಶೈವಧರ್ಮಸುಧಾರಣೆಯ ಕರ್ತವ್ಯಗಳಾಗಿರುವವು.

ಆದ್ದರಿಂದ ಯಾವತ್ತರೂ ಮತಧರ್ಮಗಳನ್ನರಿತು “ಆಚಾರ್ಯವಾನ್ ಪುರುಷೋ ವೇದ” “ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್” ಎಂಬ ವೇದವಚನಗಳಂತೆ ಗುರುಭಕ್ತಿಯುತರಾಗಿ, ಗುರುಸಿದ್ಧಾಂತಾಗಮೋಕ್ತ ಧರ್ಮಗಳನ್ನು ಬಿಡದಾಚರಿಸಿ, ಸರ್ವರೂ ವೀರಶೈವಧರ್ಮಸುಧಾರಣೆಯನ್ನು ಮಾಡಿಕೊಂಡು ಪುನೀತರಾಗಬೇಕೆಂದು ಪ್ರಾರ್ಥಿಸುವೆನು.

ಸಂ|| ಶ್ರೀಕಂಠಶಾಸ್ತ್ರೀ ಬೃಹನ್ಮಠಾಧ್ಯಕ್ಷ,
“ಕರ್ನಾಟಕಕವಿಚಂದ್ರ” ಸವಸಟಿ,

ಸೂಡಿ
ಆರೋಗ್ಯಸಪ್ತಾಹವೂ ಶಿಶುಪ್ರದರ್ಶನವೂ.

ತಾ|| ೨೮-೫-೨೭ ನೇ ದಿನ ಧಾರವಾಡಜಿಲ್ಹಾ ರೋಣತಾಲೂಕ ಸೂಡಿಗ್ರಾಮದಲ್ಲಿ ಆರೋಗ್ಯಸಪ್ತಾಹ ಹಾಗೂ ಶಿಶುಪ್ರದರ್ಶನದ ಕೆಲಸಗಳು ಮಿ|| ಮುದಿ ಸಾಹೇಬರವರ ಅಧ್ಯಕ್ಷತೆಯಲ್ಲಿ ಬಹು ಉತ್ಸಾಹದಿಂದ ಜರುಗಿದವು. ಮೂರುದಿವಸಗಳಿಂದ ಓಣಿಗೊಂದಿಗಳನ್ನು ಜಡದೆ ಊರೆಲ್ಲ ಬಹಳ ಸ್ವಚ್ಛವಾಗಿತ್ತು. ಗಂಡುಮಕ್ಕಳ ಶಾಲೆಯಲ್ಲಿಯೇ ಸಭೆ ನಡೆಯುವದು ನಿರ್ಣಯಿಸಲ್ಪಟ್ಟದ್ದರಿಂದ ಆ ಶಾಲೆಯೂ ಬಾಳೆಯ ಹಸಿರು ತಳಿರು ತೋರಣಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದವು. ತಾ|| ೩೧ನೇ ದಿನ ಮುಂಜಾನೆ ೭|| ಗಂಟೆಗೆ ಸಾರ್ವಭೌಮರವರ ಭಾವಚಿತ್ರವು ಪಲ್ಲಕ್ಕಿಯಲ್ಲಿಟ್ಟು ಬ್ಯಾಂಡಿನ ಮಂಗಲವಾದ್ಯದೊಡನೆ ಊರತುಂಬ ಮೆರವಣಿಗೆಯನ್ನು ಮಾಡಿತು. ಕೊನೆಗೆ ಮಿ|| ಮುದಿಮಲ್ಲರಸಾಹೇಬ ಡಿ.ಡಿ.ಸಿ. ಯವರು, ಮಿ|| ನಾಗನಗೌಡ ಮಾಮಲೇದಾರಸಾಹೇಬರು ಮುಂತಾದ ಅಧಿಕಾರಿವರ್ಗವೂ, ಶೆಟ್ಟರೂ, ಸಾವಕಾರರೂ, ಬಡವರೂ ಬಲ್ಲಿದರೂ ತಾ|| ನಾ|| ಮೊದಲಾದ ಸಮಸ್ತರೂ ಎಲ್ಲರೂ ಹೊರಬಿದ್ದದರಿಂದ ಅಪೂರ್ವ ದೃಶ್ಯವು ಕಾಣಿಸುತ್ತಿತ್ತು. ೮|| ಗಂಟೆಗೆ ಮೆರವಣಿಗೆಯು ಮುಗಿದು ಸಾರ್ವಭೌಮರ ಭಾವಚಿತ್ರವನ್ನು ಶಾಲೆಯೊಳಗೆ ಶೃಂಗರಿಸಿದ ಉಚ್ಚಾಸನದಲ್ಲಿ ಮಂಡಿಸಿದಮೇಲೆ ಸಭೆಯ ಕಾರ್ಯಕ್ಕೆ ಪ್ರಾರಂಭವಾಯಿತು. ಆಮಂತ್ರಣ ಕೊಟ್ಟಮೇರೆಗೆ ಬಂದಿದ್ದ ತಾಲೂಕಿಯೊಳಗಿನ ಎಲ್ಲ ಸಭ್ಯಗೃಹಸ್ಥರೂ, ಆಗಮಿಸಿದ ಮಹಿಳೆಯರೂ ಮಕ್ಕಳೂ ಓದಿದವರೂ ಕುಳಿತ ಬಳಿಕ ಕರ್ನಾಟಕಧುರೀಣರು ಸ್ವಾಗತಪದ್ಯವನ್ನು ಹಾಡಿದರು. ಬಳಿಕ ಸ್ವಾಗತಕಮಿಟಿಯ ಚೇರ್ಮನ್ನರಾದ ಮಿ|| ಕವಲಿಯವರು ಬಂದ ಎಲ್ಲಸಭ್ಯರ ಸ್ವಾಗತವನ್ನು ಮಾಡಿ ಸ್ವಲ್ಪದರಲ್ಲಿಯೇ ಸಭೆಯ ಉದ್ದೇಶಮುಖ್ಯತತ್ವಗಳನ್ನು ಕುರಿತು ಭಾಷಣಮಾಡಿದರು. ಆಮೇಲೆ ಅಧ್ಯಕ್ಷರ ಚುನಾವಣೆಯಾಯಿತು. ಇಷ್ಟರಲ್ಲಿಯೇ ಊರೊಳಗಿನ ಮೂರುವರ್ಷದೊಳಗಿನ ಶಿಶುಗಳೆಲ್ಲ ಮೊದಲೇ ಗೊತ್ತುಮಾಡಿದ ಶಾಲೆಯಕೋಣೆಗಳಲ್ಲಿ ಬಂದು ಸೇರಿದ್ದವು. ಮಿ|| ರೋಣದ ಡಾಕ್ಟರರೂ, ಶಿಶುಪ್ರದರ್ಶನ ಕಮಿಟಿಯ ಚೇರ್ಮನ್ನರಾದ ಮಿ|| ಮಹದೇವಪ್ಪ ನೂಲ್ವಿಯವರೂ ಕೂಡಿ ಸಶಕ್ತ ಹಾಗು ಸುಂದರಶಿಶುಗಳನ್ನು ಇನಾಮಿಗಾಗಿ ಆರಿಸಿದರು. ಆರಿಸಲ್ಪಟ್ಟ ಶಿಶುಗಳಿಗೆ ಅಧ್ಯಕ್ಷಸಾಹೇಬರವರ ಹಸ್ತದಿಂದ ಪದಕಗಳೂ ಉಳಿದಶಿಶುಗಳಿಗೆ ಆಟದಸಾಮಾನುಗಳೂ ಕೊಡಲ್ಪಟ್ಟವು. ಬಳಿಕ ನೆರೆದ ಎಲ್ಲ ಹುಡುಗಹುಡುಗಿಯರಿಗೆ ಮಿಠಾಯಿಹಂಚಲ್ಪಟ್ಟು, ಕರ್ನಾಟಕ ರಾಷ್ಟ್ರೀಯ ಗೀತವು ಹಾಡಲ್ಪಟ್ಟು ಮುಂಜಾವಿನ ಸಭೆಯಕಾರ್ಯವು ಮುಗಿಯಿತು. ಮಧ್ಯಾಹ್ನ ೩|| ಗಂಟೆಗೆ ಪುನಃ ಸಭೆಗೂಡಿತು. ಆರೋಗ್ಯ, ಗರ್ಭಿಣಿಶಿಶುಸಂಗೋಪನ, ರೋಗಪ್ರತಿಬಂಧ, ರೋಗನಿವಾರಣೆ ಈ ವಿಷಯಗಳ ಮೇಲೆ ಸುಶ್ರಾವ್ಯವಾಗಿ ವ್ಯಾಖ್ಯಾನಗಳಾದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ ಒಂದುವಿಷಯವನ್ನು ಎಲ್ಲರೂ ಹೃದಯದಲ್ಲಿ ಬರೆದಿಟ್ಟುಕೊಳ್ಳುವಂತೆ ಇದೆ. “ಮೊದಲಿನ ಆರೋಗ್ಯವು ಕೆಟ್ಟು ಅನಾರೋಗ್ಯವು ನಮ್ಮ ದೇಶದಲ್ಲಿ ಪ್ರಸಾರವಾಗಲಿಕ್ಕೆ ಬೇರೆಬೇರೆ ಜನರು ಬೇರೆಬೇರೆ ಕಾರಣಗಳನ್ನು ಹೇಳಿದರೂ ಅವಕ್ಕೆಲ್ಲ ನಾನು ಒಂದೇ ಕಾರಣವನ್ನು ಹೇಳುತ್ತೇನೆ. ಅದು ಯಾವುದೆಂದರೆ.—ನಾವು ನಮ್ಮ ಪೂರ್ವಜರ ಸಂಸ್ಕೃತಿಗಳನ್ನು ಮರೆತು ಅನ್ಯರ ಸಂಸ್ಕೃತಿಯ ಅನುಕರಣಮಾಡುತ್ತಿರುವದರಿಂದಲೇ ನಾವು ರೋಗಿಗಳು ಅಶಕ್ತರೂ ಆಗಿದ್ದೇವೆ. ನಾವು ಎಷ್ಟುತೀವ್ರ ನಮ್ಮ ಆರ್ಯರ ಸಂಸ್ಕೃತಿಧರ್ಮಗಳನ್ನು ಕೈಕೊಳ್ಳುವೆವೋ ಅಷ್ಟು ತೀವ್ರ ನಿರೋಗಿಗಳೂ ಸಶಕ್ತರೂ ದೀರ್ಘಾಯುಷಿಗಳೂ ಆಗುತ್ತೇವೆ.” ಈಮೇರೆಗೆ ಹೇಳಿ ನಾವು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಆಚರಿಸಿದರೆ, ಹೆಂಡ, ಸರೆ, ಬ್ರಾಂಡಿ, ಚಹಾಕಾಫಿ, ಹೋಟೆಲ ನಾಟಕಶಾಳೆ, ಆಟಗಳನಾಶ ಇವೇ ಮೊದಲಾದವುಗಳು ತಮ್ಮಿಂದ ತಾವೇ ಇಲ್ಲದಂತಾಗುವವೆಂಬುದನ್ನು ಸಪ್ರಮಾಣಪೂರ್ವಕವಾಗಿ ಸಿದ್ಧಮಾಡಿ ತೋರಿಸಿದರು.

ಆಮೇಲೆ ೫ ಗಂಟೆಗೆ ಗಂಡುಮಕ್ಕಳಶಾಲೆಯ ಹಾಗೂ ಉರ್ದುಶಾಲೆಯ ಮಕ್ಕಳ ಕುಸ್ತಿಗಳಾದುವು. ಬಳಿಕ ಗರ್ಲ್ಸ್‌ಸ್ಕೂಲ ವಿದ್ಯಾರ್ಥಿನಿಯರ ಕಲಾಕೌಶಲ್ಯಗಳನ್ನು ನೋಡುವದಾಯಿತು. ಆಮೇಲೆ ಕುಸ್ತಿಯಲ್ಲಿ ಗೆದ್ದ ಮಕ್ಕಳಿಗೂ ಉತ್ತಮವಾಗಿ ಕಸೂದಿ ಹಾಕಿದ ಹೆಣ್ಣುಮಕ್ಕಳಿಗೂ ಇನಾಮುಗಳು ಕೊಡಲ್ಪಟ್ಟವು. ಆಮೇಲೆ ಸಭಿಕರಿಗೆ ಹಾರತುರಾಯಿ ತಾಂಬೂಲಗಳು ಸಮರ್ಪಿಸಲ್ಪಟ್ಟು ಸಾರ್ವಭೌಮರವರ ಶ್ರೀನಾಮ ಜಯಘೋಷದೊಡನೆ ಸಭೆಯು ವಿಸರ್ಜನವಾಯಿತು.

ಕಮಿಟಿಯಸಂಬಂಧ,
ವೀರಭದ್ರಪ್ಪ ಅಂದಾನಪ್ಪ ಕಂಬಳಿಹಾಳ, ಸೂಡಿ

ಭಾರತಮಾತೆಯ ದುರದೃಷ್ಟ

(ಲೇಖಕ—ಕೆ. ಪ್ರಸಾದ, ಬಿ.ಎ., ಎಂ.ಎಲ್.,
ತಿಪಟೂರು)

ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಈ ಪ್ರಪಂಚದಲ್ಲಿಯ ಅನೇಕ ಜನಾಂಗದವರು ಒಂದೊಂದುಕಾಲದಲ್ಲಿ ನಾಗರೀಕತೆಯ ಉನ್ನತಶಿಖರವನ್ನು ಏರಿ ಕಡೆಗೆ ಕಾಲಕಾಲಾಂತರಗಳಿಂದ ಕೆಳಗುರುಳಿ ಅಜ್ಞಾನ, ಅನೈಕಮತ್ಯ, ಇವೇ ಮೊದಲಾದ ಅಂಧಕಾರವೆಂಬ ಸಾಗರದಲ್ಲಿ ಮುಳುಗಿಹೋಗುತ್ತಲಿರುವರು. ಪೂರ್ವದಲ್ಲಿ ‘ಬೇಬಿಲೋನಿಯ’ ಎಂಬ ದೇಶವು ನಾಗರೀಕತೆಯಿಂದ ಕೂಡಿ ಇತರರಿಗೆ ಆದರ್ಶಪ್ರಾಯವಾಗಿತ್ತು; ಹಾಗೆಯೇ ಈಜಿಪ್ಟದೇಶವೂ, ಭರತಖಂಡವೂ ಮತ್ತು ಚೈನಾದೇಶವೂ ನಾಗರೀಕತೆಯೆಂಬ ಅಲಂಕಾರದಿಂದ ಕೂಡಿ ಮೆರೆಯುತ್ತಲಿದ್ದವು. ಆದರೆ ಇತರ ಜನಾಂಗದವರಿಗೆ ಉದಾಹರಣೆಯಾಗಿದ್ದ ಈ ನಮ್ಮ ಭರತಖಂಡವು ಈಗ ಯಾವ ಸ್ಥಿತಿಯಲ್ಲಿದೆ? ಅವಿಚಾರ, ಸಂಕುಚಿತಬುದ್ಧಿ, ಅನೈಕಮತ್ಯಗಳೆಂಬ ಶತ್ರುಗಳು ಪ್ರಾಬಲ್ಯವನ್ನು ಹೊಂದಿ ನಮ್ಮನ್ನು ಸೆರೆಹಿಡಿದುಕೊಂಡಿರುತ್ತವೆ. ಇವುಗಳಿಂದ ನಾವು ಪಾರಾಗುವ ಆಶೆಯೂ ಸ್ವಲ್ಪವೂ ಇಲ್ಲವು. ಲಾರ್ಡ ಟೆನ್ನಿಸನ್ ಎಂಬ ಒಬ್ಬಾನೊಬ್ಬ ಇಂಗ್ಲಿಷ ಮಹಾಕವಿಯು ಒಂದು ನದಿಯವಿಷಯವಾಗಿ ಹೀಗೆಂದು ಬರೆಯುತ್ತಾನೆ: “Men may come and men may go, but I go on for ever” ಅಂದರೆ ಮನುಷ್ಯರು ಹುಟ್ಟುತ್ತಾರೆ; ಅವರು ಸಾಯುತ್ತಾರೆ; ನಾನಾದರೋ ಯಾವಾಗಲೂ ಇರುತ್ತೇನೆಂದು ಅರ್ಥ. ಈ ವಾಕ್ಯಕ್ಕೆ ಸರಿಯಾಗಿ ನಮ್ಮ ಸುತ್ತುಮುತ್ತಿನ ಜನಾಂಗದವರು ತಮ್ಮ ಮತ, ನೀತಿ, ರಾಜ್ಯಪರಾಕ್ರಮಗಳಲ್ಲಿ ಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳನ್ನು ಮಾಡಿಕೊಂಡು ಕೆಲವರು ಅಭಿವೃದ್ಧಿಯೆಂಬ ಕಲ್ಪವೃಕ್ಷದ ತುದಿಯಲ್ಲಿರುವರು; ಮತ್ತೆ ಕೆಲವರು ಅದರ ಸಮೀಪಕ್ಕೆ ಹೋಗುತ್ತಲಿರುವರು; ನಾವಾದರೋ ಅನೈಕಮತ್ಯವೆಂಬ ಅಂಧಕಾರಕೂಪದಲ್ಲಿ ಸದಾ ಮುಳುಗಿರುತ್ತೇವೆ. ನಮ್ಮ ಪೂರ್ವಿಕರು ನಾಗರೀಕತೆಯ ಉನ್ನತಸ್ಥಿತಿಯಲ್ಲಿದ್ದರು; ಅವರಿಗೆ ತಿಳಿಯದ ವಿಷಯಗಳೇ ಇರಲಿಲ್ಲವೆಂದು ಮೊದಲಾಗಿ ನಾವು ಹೇಳಿಕೊಳ್ಳುತ್ತಾ ಅನೇಕ ವಿಷಯಗಳಲ್ಲಿ ಅನುಕರಣೀಯರಾದ ಪಾಶ್ಚಿಮಾತ್ಯರನ್ನು ಅಲ್ಲಗಳೆಯುತ್ತ ಕಾಲಹರಣಮಾಡುತ್ತಲಿದ್ದೇವೆ. ಪಾಶ್ಚಿಮಾತ್ಯರಿಂದ ನಿರ್ಮಿಸಲ್ಪಟ್ಟಿರುವ ಆಕಾಶವಿಮಾನ, ವಿಷದಗಾಳಿ ಮೊದಲಾದವುಗಳನ್ನು ಕಾಣದ ನಾವು ನಮ್ಮ ಹಿಂದಿನವರಿಗೆ ಇವೆಲ್ಲಾ ಗೊತ್ತಿತ್ತು, ಅವರು ರಥಗಳನ್ನು ಆಕಾಶದಲ್ಲಿ ನಡಿಸುತ್ತಿದ್ದರು; ಅತಿರಥರಿದ್ದರು, ಮಹಾರಥರಿದ್ದರು; ಸರ್ವಾಸ್ತ್ರ ಮೊದಲಾದುವುಗಳನ್ನು ಉಪಯೋಗಿಸುತ್ತಿದ್ದರು; ನಮ್ಮ ಆಗಮಪುರಾಣಗಳು ಇವೇ ಮೊದಲಾದ ವಿಷಯಗಳಿಂದ ನಿಬಿಡವಾಗಿವೆ, ಎಂದು ಹೇಳುತ್ತಲಿದ್ದೇವೆಯೇ ಹೊರತು ಅವರಂತೆ ನಾವು ಮುಂದುವರಿಯಲು ಯತ್ನವನ್ನು ಮಾಡುವದಿಲ್ಲ. ನಮ್ಮ ತಾತಂದಿರು ಹಾಗಿದ್ದರು ಎಂದು ಹೇಳುವಲ್ಲಿ ನಮ್ಮ ದುಃಸ್ಥಿತಿಯನ್ನು ಬಿಚ್ಚಿ ತೋರಿಸಿದಂತಾಯಿತು. ಇದರಿಂದ ನಮಗೆ ನಾಚಿಕೆಯಾಗಬಾರದೇ? ಕಳೆದುಹೋದುದನ್ನು ಹೇಳಿಕೊಂಡರೆ ಪ್ರಯೋಜನವೇನು? ನಮ್ಮ ಅಧೋಗತಿಗೆ ಕಾರಣವೇನೆಂಬುದನ್ನು ಪಕ್ಷಪಾತವಿಲ್ಲದೆ ಯೋಚಿಸಿನೋಡಿದರೆ ಅದಕ್ಕೆ ಒಂದೇ ಒಂದು ಕಾರಣವುಂಟು. ಅದೇನೆಂದರೆ ಅನೈಕಮತ್ಯವೆಂಬ ಅಗ್ನಿಜ್ವಾಲೆಯು ನಮ್ಮನ್ನು ಆವರಿಸಿಕೊಂಡಿರುವದೇ ಕಾರಣ. ಆದರೆ ಇದು ಈಗತಾನೆ ತಲೆದೋರಿರುವುದಿಲ್ಲ; ಬಹುದಿನದಿಂದಲೂ ತನ್ನ ಪರಾಕ್ರಮವನ್ನು ತೋರಿಸಿಕೊಂಡು ಪ್ರಬಲವಾಗಿ ತನ್ನ ಬಾಯಿಗೆ ನಿಂತವರನ್ನು ಹಿಮ್ಮೆಟ್ಟಿಸುತ್ತಾ ಈಗ ರಾಕ್ಷಸರೂಪವಾಗಿ ಮೆರೆಯುತ್ತಿದೆ. ನಮ್ಮ ಪೂರ್ವಿಕರು ಏಕಮನಸ್ಕರಾಗಿ ತಾನು ಹೆಚ್ಚು ಅವನು ಕಡಿಮೆ ಎಂಬ ಹೇಯವಾದ ಭೇದವಿಲ್ಲದೆ ಸಹೋದರರಂತೆ ಒಗ್ಗಟ್ಟಿನಲ್ಲಿದ್ದುಕೊಂಡಿದ್ದರೆ ನಮ್ಮ ಜನರನ್ನು ಮಹಮ್ಮದೀಯರಿಂದ ಅತ್ಯಾಚಾರವಾಗುತ್ತಿದ್ದಿತೇ? ಹಾಗೆ ಅವರು ಬಂದು ಇಲ್ಲೇ ನೆಲೆಯಾಗಿ ನಿಂತನಂತರ ಹಿಂದೂಗಳೂ ಮಹಮ್ಮದೀಯರೂ ಒಂದಾಗಿಸೇರಿದ್ದರೆ ಪಾಶ್ಚಿಮಾತ್ಯರಿಗೆ ಇಲ್ಲಿ ಅವಕಾಶದೊರೆಯುತ್ತಿದ್ದಿತೇ? ಅಥವಾ ಪಾಶ್ಚಿಮಾತ್ಯರು ಇಲ್ಲಿಗೆ ಬಂದ

ನಂತರ ಸೋದರ ಸಹೋದರರಾದವರಿಂದ ಕೂಡಿ ಕೆಲಸ ಮಾಡಿಕೊಂಡು ಬಂದಿದ್ದರೆ ಸ್ವರಾಜ್ಯವು ನಮ್ಮ ಸ್ವಸ್ವಾಧ್ಯಾಯವಾಗುತ್ತಿದ್ದಿತೋ? ಅಂತಹ ನೀಲ ಈ ನಮ್ಮ ಶೋಚನೀಯಸ್ಥಿತಿಗೆ ಅನೈಕಮತ್ಯವೇ ಕಾರಣವಲ್ಲವೇ? ಮತವನ್ನು ಬೀಯದನ್ನು ಒಗ್ಗಟ್ಟನ್ನು [illegible] ಪ್ರತ್ಯೇಕತೆಯನ್ನು ಎಂದಿಗೂ ಬಿಡದಿರುವುದು ಆದರೆ ಹಿಂದುಗಳನ್ನು ಎಂದಿಗೂ ಬಿಡಿಸುವುದು ಪರಮೇಶ್ವರನಿಗೂ ಸಹ ಸಾಧ್ಯವಲ್ಲವು. ಇದಕ್ಕೆ ಕಾರಣವೇನು? ಮಹರ್ಷಿಯರಿಂದ ಸ್ಥಾಪಿಸಲ್ಪಟ್ಟಿರುವ ಮತಮತಾಂತರಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ಆ ಮತದವರು ಹಾಗೂ ಈ ಮತದವರು ಕಡಿಮೆ ಎಂಬ ಸಂಕುಚಿತಬುದ್ಧಿಯಿಂದ ಕೂಡಿರುವುದೇ ಕಾರಣ! ಈಗ ಹೇಳುವುದರಿಂದ ನನ್ನನ್ನು ಮತವಿರೋಧಿಯೆಂದು ಭಾವಿಸಬೇಡಿ. ಅವರವರ ಧರ್ಮಗಳು ಅವರವರಿಗೆ ಹೆಚ್ಚು! ತಮ್ಮ ತಮ್ಮ ಧರ್ಮಗಳಲ್ಲಿ ಪ್ರತಿಯೊಬ್ಬರೂ ನಿರತರಾಗಿರಲಿ. ಆದರೆ ರಾಷ್ಟ್ರೀಯ ಕಾರ್ಯಗಳಲ್ಲಿ ಎಲ್ಲರೂ ಒಗ್ಗಟ್ಟಾಗಿರಲೆಂಬುದೇ ನನ್ನ ಅಭಿಪ್ರಾಯವು. ಅದರ ಈಗಿನ ಸ್ಥಿತಿಯನ್ನು ನೋಡಿದರೆ ಯಾರಿಗೆ ತಾನೇ ವ್ಯಸನವಾಗಲಿಕ್ಕಿಲ್ಲ? ಒಂದು ಕಡೆ ಹಿಂದೂ ಮುಸಲ್ಮಾನರ ಜಗಳ, ಇನ್ನೊಂದು ಕಡೆ ಸಹಕಾರ ಅಸಹಕಾರರ ಜಗಳ, ಮತ್ತೊಂದು ಕಡೆ ಸ್ವರಾಜ್ಯಪಕ್ಷದವರಿಗೂ ರಾಷ್ಟ್ರೀಯ ಸಹಕಾರರಿಗೂ ಜಗಳ, ಇದಲ್ಲದೆ ಈಗ ಹೊಸದಾಗಿ ತಲೆದೋರಿರುವ ಎಸ್. ಶ್ರೀನಿವಾಸಯ್ಯಂಗಾರ್ ಅವರ ಪಕ್ಷದವರಿಗೂ ಟಿ. ಪ್ರಕಾಶಂ ಪಕ್ಷದವರಿಗೂ [illegible] ನಮ್ಮ ಭಾರತಮಾತೆಯ ಸುಪುತ್ರರೆಂದು ಕರೆಯಿಸಿಕೊಳ್ಳುತ್ತಿರುವವರೇ ಈ ರೀತಿ ಕಚ್ಚಾಡುತ್ತಿದ್ದರೆ ಅವರ ಅನುಯಾಯಿಗಳು ಇನ್ನಾವರೀತಿ ವರ್ತಿಸಬೇಕು! ಇಂದು [illegible] ಮಹಾತ್ಮಾ ಗಾಂಧಿಯವರ [illegible] ದವನ್ನು ತಿಳಿದುಕೊಳ್ಳದೆ [illegible] ಬಂಧು ದಾಸರವರ ಉಪದೇಶದ ಅರ್ಥವನ್ನು ವಿಪರೀತವಾಗಿ ತಿಳಿದುಕೊಂಡು ಅವರವರ ಮನಬಂದಂತೆ ನಡೆಯುತ್ತಿರುವುದನ್ನು ನೋಡಿದರೆ ಯಾರಿಗೆ ತಾನೇ ವ್ಯಸನವಾಗುವುದಿಲ್ಲ? ಕರುಣಾಮಯನಾದ ಪರಮೇಶ್ವರನು ಸರ್ವರಲ್ಲಿಯೂ ಸಹೋದರಭಾವನೆಯನ್ನಿತ್ತು ಭಾರತಮಾತೆಯನ್ನು ಸಂಕೋಲೆಗಳಿಂದ ಬಿಡಿಸುವ ಪ್ರಯತ್ನಗಳನ್ನು ಪ್ರತಿಯೊಬ್ಬರಿಗೂ ದಯಪಾಲಿಸಲಿ.

ಸ್ವೀಕಾರ

[illegible] ಬಿ|| [illegible] ತಾಲ್ಲೂಕು [illegible] ಗಂಡಿಗ್ರಾಮದ ರಾ|| [illegible] ಮಹಾದೇವಪ್ಪಗೌಡರವರು ಧಾರವಾಡ ಜಿಲ್ಲಾ ಗದಗ ತಾಲ್ಲೂಕು ಹಿರೇವಡ್ಡಟ್ಟಿ [illegible] ಕಪ್ಪಣ್ಣನವರ ಪುತ್ರಿ [illegible] ನಡೆದ ವಿವಾಹದ [illegible] ೫ ರೂಪಾಯಿಗಳನ್ನು [illegible] ಪಾಯಿಗಳನ್ನು ಶ್ರೀ [illegible] ಪ್ರಿಂಟಿಂಗ್ ಪ್ರೆಸ್ಸಿಗೆ [illegible] ಕಾರ

ರಾ|| ರಾ|| [illegible] ಗುರುಲಿಂಗಾರಾಧ್ಯರು [illegible] ತುಮಕೂರು [illegible] ಪ್ರಿಂಟಿಂಗ್ ಪ್ರೆಸ್ಸಿಗೆ [illegible] ಸ್ವೀಕರಿಸಿದ್ದಾರೆ

ವೇ|| ವಿ — [illegible] ಅಧ್ಯಾಪಕರು [illegible] ಬೆಂಗಳೂರು [illegible] ಕೆಳುಹಿದ್ದಾರೆ

ಉತ್ತಮವಾದ ವಿದ್ಯಾಸಂಪನ್ನರು [illegible] ಪ್ರಿಂಟಿಂಗ್ [illegible] ಕೆಂದು ಪ್ರಾರ್ಥಿಸುತ್ತೇವೆ ಸಂ —

ಶ್ರೀ ಜಗದ್ಗುರು [illegible]

ಮದ್ರಾಸ ವೀರಶೈವ ವಿದ್ಯಾ[illegible]

ಸಂಘ [illegible]

[illegible]

ವಿಷಯಗಳು

೧ [illegible]
೨ [illegible]
೩ [illegible]
೪ [illegible]
೫ [illegible]
೬ [illegible]
೭ [illegible]
೮ [illegible]

H. I. [illegible]

ನಿವೇದನವು

ವೀರಶೈವಮತದ [illegible] ತತ್ವಗಳನ್ನು ಪತ್ರಿಕೆಯ ದ್ವಾರಾ [illegible] ಪ್ರಚಾರಪಡಿಸಬೇಕೆಂಬ ಉದ್ದೇಶದಿಂದ [illegible] ಪ್ರಾಚೀನಗ್ರಂಥಗಳ [illegible] ಪರಮಗುರುಗಳಾದ [illegible] ಬೆಂಗಳೂರು [illegible] ಶ್ರೀ [illegible] ತಮ್ಮ [illegible] "ಪಂಚಾಚಾರ್ಯಪ್ರಭಾ" ಎಂಬ ಪತ್ರಿಕೆಯನ್ನು ಹೊರಡಿಸುವ [illegible] ಈ ಪತ್ರಿಕೆಯನ್ನು [illegible] ಸಹಾಯ ಮಾಡಿದ್ದಾರೆ. ಎಲ್ಲ ಆಚಾರ್ಯ [illegible] ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ [illegible] ಲಿಂಗಾಯತರು, ವಿದ್ಯಾಭಿಮಾನಿಗಳು [illegible] ಈ ಪತ್ರಿಕೆಯ [illegible] ಪ್ರತಿಯೊಬ್ಬರೂ [illegible] ಬೇಕೆಂದು ಹಾರೈಸುತ್ತೇವೆ.

ಸಂಪಾದಕರು.

ASIATIC GOVERNMENT SECURITY LIFE ASSURANCE CO. LTD. MYSORE
ಏಷಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಇನ್ಸೂರೆನ್ಸ್ ಕಂಪನಿ, ಮೈಸೂರು

ಮುಖ್ಯ ಕಾರ್ಯಾಲಯ
ಬೆಂಗಳೂರು.

[illegible]

[illegible] 1927 [illegible]

[illegible] ಮುಖ್ಯ ಏಜೆಂಟ್,
[11] ಮೈಸೂರು. Asiatic Building

ಡಾಕ್ಟರ್ [illegible] ಯವರ
ಸುಗಂಧ ನಸ್ಯದಪುಡಿ

[illegible]

[illegible]

ಗುರುಬಸವ ಲಿಂಗ [illegible] ಲಿಮಿಟೆಡ್
[1] [illegible]

ಈ ಪತ್ರಿಕೆಯು [illegible] ಪ್ರಿಂಟಿಂಗ ಪ್ರೆಸ್ಸಿನಲ್ಲಿ [illegible] ಪ್ರಕಟಿಸಲ್ಪಟ್ಟಿತು.

ದೇಶದ ವೃತ್ತಾಂತಗಳು.

ದಕ್ಷಿಣ ಹಿಂದುಸ್ಥಾನದಲ್ಲಿಯು [illegible] ಪ್ರದರ್ಶನವು [illegible] ಪಟ್ಟಣದಲ್ಲಿ ಜುಲೈ ೩ ನೇ ತಾರೀಖಿನಿಂದ [illegible] ತಾರೀಖಿನ ವರೆಗ ಆಗತಕ್ಕದ್ದಿದೆ.

ವರ್ಧಂತ್ಯುತ್ಸವವು ಸಮಾಪ್ತಿಯಾದನಂತರ [illegible] ಯವರು ಆರೋಗ್ಯ[illegible]ರವಾಗಿ [illegible] ಪ್ರಯಾಣ ಮಾಡುತ್ತಾರೆಂದು ಕೇಳುತ್ತೇವೆ

[illegible] ಕೋ ಆಪರೇಟಿವ್ ಟ್ರೇನಿಂಗ್ ತರಗತಿ [illegible] ದಿವಸ [illegible] ಘಂಟೆಗೆ [illegible] ಹಾರಾವಾ ಲೇಜಿನಲ್ಲಿ ಮ॥ [illegible]ಲಸುಂದರಂ ಅಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಡುವುದು.

[illegible]ವು ದಿವಸಗಳ ಹಿಂದೆ ಕೋಲಾರ [illegible] ಎಂದು ಗಣಿಯಲ್ಲಿ ಸಿಡಿಮದ್ದು ಸಿಡಿದು [illegible] ಗೃಹಸ್ಥ ಅತಿಥಿಗಳಾದರ [illegible]ರು [illegible] ವೈದ್ಯಶಾಲೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಾರೆ.

ಇದೇ ತಿಂಗಳು ೧೭ ನೆಯ ತಾರೀಖು ಸಾಯಂ[illegible] ೭ ಘಂಟೆ ಸಮಯದಲ್ಲಿ ಅರಮನೆಯ [illegible]ಟದಲ್ಲಿ ದರ್ಬಾರು ನಡೆಯಿತು ಪುರಪ್ರಮುಖರು [illegible]ಬಂಧುಗಳು ಮುಂತಾದ ಮಹೋದಯರಿಂದ [illegible] ಒಪ್ಪಿಸಲ್ಪಟ್ಟಿತು

ಇದೇ ತಿಂಗಳು ೧೪ನೆ ತಾರೀಖಿನದಿವಸ ಪಂಡಿತ [illegible]ನಮೋಹನ ಮಾಲವೀಯರು ಟೌನ್‌ಹಾಲಿನಲ್ಲಿ [illegible] ಕೆ ಪಿ ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಮಾಡಿದರು ಇವರ ಉಪನ್ಯಾಸದ ಸಾರಾಂಶ[illegible] ಮುಂದಿನವಾರದಲ್ಲಿ ಪ್ರಕಟಪಡಿಸುತ್ತೇವೆ

[illegible] ನರಸೀಪುರದಲ್ಲಿ ಹರಿದಿರುವ [illegible] ನದಿಗಳಿಗೆ ಸೇತುವೆಯನ್ನು ಕಟ್ಟುವುದ[illegible] ೮ ಲಕ್ಷ ೭೫ ಸಾವಿರ ರೂಪಾಯಿಗಳು ಬೇಕಾ[illegible]ವೆಂದೂ ಈ ದ್ರವ್ಯದಲ್ಲಿ ಅರ್ಧಭಾಗವನ್ನು ಸರ[illegible]ದವರು ಕೊಡಲೊಪ್ಪಿರುವರೆಂದೂ ಕೇಳುತ್ತೇವೆ

[illegible]ಪ್ರತಿನಿಧಿಸಭೆಯಿಂದ ನ್ಯಾಯ ವಿಧಾಯಕ [illegible] ಮ॥ ಜಿ ಪರಮಶಿವಯ್ಯ ಎಸ್ ಮಲ್ಲಾರಿ [illegible] ಮಹಮ್ಮದ [illegible] ಎಚ್ ಸಿ [illegible] ಎಸ್ ಎಸ್ [illegible] ಜಿ [illegible] ದೇವೇಗೌಡ ಎ ವಂಕಪ್ಪ ಈ ೮ ಜನರು ಚುನಾಯಿಸಲ್ಪಟ್ಟರು

[illegible]ಸೂರು ರಾಜಧಾನಿಗೆ [illegible] ಮುಂ[illegible] ತಿಂಗಳಲ್ಲಿ ಆಗಮಿಸುವುದರಿಂದ [illegible] ಪಟ್ಟಣದ ರಾಜಬೀದಿಗಳನ್ನು ಮ್ಯುನಿಸಿಪಾಲಿ[illegible] ಶಾಭಿಪಡಿಸುವದಕ್ಕಾಗಿ ಆಯಾ ಮುಖ್ಯ ರಾಜಾಧಿಕಾರಿಗಳನ್ನು ನಿಯಾಮಕ ಮಾಡಿ[illegible]ದರಿಂದ ಪಟ್ಟಣದ ಕಾರ್ಯಗಳು [illegible] ನಡೆಯುತ್ತಲಿವೆ

[illegible] ವರ್ಧಂತಿ ಪ್ರಯುಕ್ತವಾಗಿ ನಡದ [illegible] ಗಳಲ್ಲಿ ಪ್ರಸಂಗಿಸಿದ ವೇ॥ ಕರವಸ್ತ್ರೂರು ವೆಂಕ[illegible] ಶಾಸ್ತ್ರಿಗಳಿಗೆ ಮಹಾವಿದ್ವಾನ್ ಪದವಿಯೂ [illegible] ವಿದ್ವಾನ್ ಪದವಿಯೂ [illegible] [illegible]ವೃದ್ದಲ್ಲದೆ ರಾಜಧಾನಿಯಲ್ಲಿರುವ ಮ॥ [illegible] ಶೆಟ್ಟರಿಗೂ ಮ॥ [illegible] ಶೀಟರ [illegible] ಮರ್ಯಾದೆಯೂ ಮಾಡಲ್ಪ[illegible] ದಕ್ಕಾಗಿ ಸಂತೋಷಿಸುತ್ತೇವೆ

[illegible]ಧಾನಿಯಲ್ಲಿ ಪ್ರಜಾಪ್ರತಿನಿಧಿಸಭೆಯ [illegible] ೧೪ನೆ ತಾರೀಖಿನದಿವಸ ೧೪ ಪಂಚಿಗೆ [illegible]ವಾಯಿತು ಮಂತ್ರಿಗಳ ಉಪಮಂತ್ರಿ [illegible] ಇತರ ಅನೇಕ [illegible] ಪ್ರತಿನಿಧಿಗಳೂ ದಯಮಾಡಿಸಿದ್ದರು ಮಂತ್ರಿ [illegible] ಪ್ರಭುವಿನ [illegible] ಓದಿ [illegible] ಮಿ॥ [illegible] ಈ ಭಾಷಣವು [illegible]

ವರ್ತಮಾನಸಂಗ್ರಹ.

[illegible] ದೇಶದ ರಾಜಕು[illegible] [illegible] ವರ್ತಮಾನವಿದೆ

[illegible]ಸಂಸ್ಥಾನದವರು ತಮ್ಮ ರಾಜ್ಯದಲ್ಲಿ ತಯಾರಾದ [illegible] ಸ್ವದೇಶಿಯರು ಉಪಯೋಗಿಸಬೇಕೆಂದು ನಿರ್ಧರಿಸಿ[illegible]ದ್ದಾರೆ.

ಸರ್ವಶಾಸ್ತ್ರಿಯ [illegible] ಹಿಂದುಸ್ಥಾನದ ಪರವಾಗಿ [illegible] ಎಂಬುವರನ್ನು ಪ್ರತಿನಿಧಿಗಳನ್ನಾಗಿ [illegible] ಹೊಂದಿದ್ದಾರೆ.

[illegible]ವಾರ [illegible] ಪಟ್ಟಣದಲ್ಲಿ ಬೆಂಕಿಯ ಅನಾಹುತದಿಂದ ಆರು ಕಟ್ಟಡಗಳು ನಾಶವಾದವು ಇದರಿಂದ [illegible] ಲಕ್ಷ ರೂಪಾಯಿಗಳ ವರೆಗ ನಷ್ಟವಾಗಿರುವುದೆಂದು ತಿಳಿಯಬರುತ್ತದೆ

[illegible] ಸೆಂಟ್ರಲ್ ಜೈಲಿನಿಂದ ೫ನೆಯ ತಾರೀಖಿನ ದಿವಸ [illegible] ಕೈದಿಗ[illegible] ಓಡಿಹೋಗಿದ್ದಾರೆ. ಪೋಲೀಸರು ಅವರನ್ನು ಹಿಡಿಯಲು ಬಹಳ ಸಾಹಸ ಪಡುತ್ತಿರುವರೆಂದು ತಿಳಿಯಬರುತ್ತದೆ.

ಹೋದ ವಾರ ಬಂಗಾಲ ಪ್ರಾಂತದಲ್ಲಿ [illegible] ವೃತ್ತಪತ್ರಕಾರರ ಮೇಲೆ ೧೨೪ ನೇ ಕಲಮಿನ ಪ್ರಕಾರ [illegible] ೭೦ ಜನರಿಗೆ 1 ತಿಂಗಳಿಂದ ೬ ತಿಂಗಳವರೆಗೆ ಶಿಕ್ಷೆಯಾಯಿತು. [illegible] ಜನರು ನಿರ್ದೋಷಿಗಳೆಂದು [illegible]ಲ್ಪಟ್ಟರು

ನಾಗೇಂದ್ರನಾಥಸೇನಗುಪ್ತನೆಂಬ [illegible] ದಸು [illegible] ನೆಯ [illegible]ಯಲ್ಲಿ ಮೆಟ್ರಿಕ್ಯುಲೇಷನ್ನಲ್ಲಿ [illegible] ೧೯೨೫ ರಲ್ಲಿ ಎಂ ಎ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ತೇರ್ಗಡೆಹೊಂದಿದ್ದು ಈಗ [illegible] ಕಾಲೇಜಿನಲ್ಲಿ ತತ್ವಶಾಸ್ತ್ರದ ಪ್ರೊಫೆಸರನಾಗಿರುತ್ತಾನೆ

ಶ್ರೀಮತಿ ಸರೋಜಿನೀದೇವಿಯವರು [illegible] ನ್ಯ [illegible] ಜ್ಞಾಪಕವು [illegible] ಒಂದು [illegible] ಕಟ್ಟಬೇಕೆಂದು ಸಂಕಲ್ಪಿಸಿ ಉದಾರಬುದ್ಧಿಯಿಂದ ಧನಸಹಾಯ [illegible] ಎಸಯುವರು [illegible] ಒಂದು ಉಪನ್ಯಾಸವನ್ನು ಮಾಡಿದರು.

[illegible]ಪ್ರಾಂತದ [illegible]ಪಾಲಸಮುದ್ರದಿಂದ [illegible] ಜನ [illegible]ವು ಪಂಡತಿಯೊಡನೆ [illegible] [illegible]ದಿಯಲ್ಲಿ [illegible] ಗುಂತಕಲ್ಲು [illegible] ಸುಮಾರು ೧೦ ಜನಗಳು ಸುಟ್ಟುಹೋದವು

ಈ [illegible] ನೇ ತಾರೀಖಿನ ದಿವಸ ಕಲ್ಕತ್ತಾ ಪಟ್ಟಣದಲ್ಲಿ [illegible] ದೇಶಸ್ಥನಾದ [illegible] ಎಂಬ [illegible] ನಾರಾಯಣ [illegible] ಬಂದ [illegible] ಧರ್ಮಶಾಸ್ತ್ರಪ್ರಕಾರವಾಗಿ ವಿವಾಹ ವಾಯಿತು. ವಿವಾಹ ಸಮಯದಲ್ಲಿ ವಧುವಿಗೆ [illegible] ಕುಮಾರೀ [illegible] ನಾಮಕರಣವು ಮಾಡಲ್ಪಟ್ಟಿತು.

ಪಂಡಿತ ಮದನಮೋಹನ ಮಾಲವೀಯ [illegible] ಮುಂಜೆ [illegible] ಸ್ವಾಮಿ[illegible]ನಂದ [illegible] ಹಿಂದೂ [illegible] ಪ್ರಾಣ [illegible] ತಿಯಿರುವುದರಿಂದ [illegible] ಹಿಂದೆ [illegible] ಯೋಗ್ಯ [illegible] ನಿರ್ಲಿಪ್ತ [illegible] ಪ್ರತಿನಿಧಿಗಳ [illegible] ಮಾಡಿಕೊಂಡಿದ್ದಾರೆ

[illegible] ಲಾರ್ಡ್ ಇರ್ವಿನ್ [illegible] ಬಂದಿದ್ದವೆಂದು [illegible] ಗದಲ್ಲಿ [illegible] ಉಪಯೋಗಿಸುವರೆಂದೂ [illegible]

[illegible] ನವಂಬರ್ ತಿಂಗಳಲ್ಲಿ [illegible] ಎಂಬ ಸ್ಥಳದಲ್ಲಿ ಸಮುದ್ರದಿಂದ ಮುತ್ತುಗಳನ್ನು ತೆಗೆಯುವುದಕ್ಕೋಸ್ಕರ [illegible] ಉಪಯೋಗಿಸುವರೆಂದೂ ತಿಳಿದುಬರುತ್ತದೆ.

[illegible] ನಲ್ಲಿ [illegible] ತಂದೆಮಕ್ಕಳಿಬ್ಬರು ರಾತ್ರಿ ಕಾಲದಲ್ಲಿ ಮಲಗಿದ್ದಾಗ [illegible] ಕೂಗಾಡುತ್ತಿದ್ದ ಮಹಮ್ಮದೀಯ ಹೆಂಗಸೊಬ್ಬಳನ್ನು [illegible] ಕೊಂದುಹಾಕಿ [illegible] ಎಂದು ಆರೋಪಿಸಿ [illegible] ಕೊಂದುಹಾಕಿದೆವೆಂದು ಹೇಳಿದರು. ವಿಚಾರಿಸಿದಲ್ಲಿ ಆಕೆಯು ಸ್ತ್ರೀಯೆಂದು ಗೊತ್ತಾದ್ದರಿಂದ ತಂದೆಮಕ್ಕಳಿಬ್ಬರೂ [illegible] ಮಾಡಲ್ಪಟ್ಟಿದ್ದಾರೆ

[illegible] ಒಂದು ಗ್ರಾಮದಲ್ಲಿ [illegible] ಹೆಂಡತಿಯನ್ನು [illegible] ಒಂದು ಭೂಮಿಗೆ ಹಾಕಿ ಓಡಿಹೋಗಿದ್ದನು ಅವನು [illegible] ಈತನಮೇಲೆ [illegible] ಅದ್ದರಿಂದ ಹೀಗೆ ಮಾಡಿ ದನೆಂದು ತಿಳಿದುಬಂದಿದೆ. ಸದ್ಯ ಅವನು ಪೋಲೀಸಿನವರ ವಿಚಾರಣೆಯಲ್ಲಿರುತ್ತಾನೆ.

[illegible]ಪುರ(ಬಂಗಾಳ) ಎಂಬ ಸ್ಥಳದಲ್ಲಿ ಮಹಮ್ಮದೀಯರು [illegible] ದಿವಸ ತಮ್ಮ ತಮ್ಮ ಮನೆಗಳಲ್ಲಿಯೂ [illegible] ಗೋವಧೆಯನ್ನು ಮಾಡಕೂಡದೆಂದು ಹಿಂದ[illegible] ವಾದಿಸಿದ ಕಾರಣ ಹಿಂದೂ ಮಹಮ್ಮದೀಯರಿಗೆ ಭಯಂಕರವಾದ ಕಲಹವುಂಟಾಗಿ ಒಬ್ಬ ಮಹಮ್ಮದೀಯ ಸ್ತ್ರೀಯಳು ಕೊಲೆ [illegible] ಹಿಂದೂ ಜನ ಮಹಮ್ಮದೀಯರಿಗೆ [illegible] ತಿಳಿದುಬರುತ್ತದೆ.

[illegible]ವಾರ [illegible] ಪಟ್ಟಣದಲ್ಲಿ ಶೈಲೇಂದ್ರನಾಥ [illegible] ಎಂಬ [illegible] ಗೃಹಸ್ಥನ ಮನೆಯನ್ನು [illegible] ಲೂಟಿಮಾಡುತ್ತಿದ್ದಾಗ [illegible] ಕಾವಲಿನವರು [illegible] ಶೈಲೇಂದ್ರನ [illegible] ಬಾಲಕನು ತಿತ್ತು [illegible] ಸಮಯದಲ್ಲಿಯೇ [illegible]ಯವರು ಬಂದು ಶೈಲೇಂದ್ರನನ್ನು ಹಿಡಿದು ಪೋಲೀಸರ ಸ್ವಾಧೀನಪಡಿಸಿದರು

[illegible] ನೋಡಿದ [illegible] ಸಂಸ್ಥಾನದಲ್ಲಿ ಹೋದ [illegible] ಈ ಸಂಸ್ಥಾನದ ಮಹಾರಾಜರವರ ಅಧ್ಯಕ್ಷತೆಯಲ್ಲಿ ಹಿಂದುಸ್ಥಾನದ ಸನಾತನಧರ್ಮ [illegible] ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ [illegible] ವಿದ್ವಾಂಸರು ಆಗಮಿಸಿದ್ದರು [illegible] ವಿಚಾರ [illegible] ದ್ಧರಿಸಿ ಬಂದಂತಹ [illegible] ಈ ಸಭೆ [illegible] ಅಭಿಪ್ರಾಯವನ್ನು ಕೇಳಿದ [illegible] ತೀರ್ಮಾನ [illegible] ಈ ಸಭೆಗಾಗಿ [illegible] ಸುಮಾರು ೬೦೦೦೦ ರೂಪಾಯಿಗಳನ್ನು [illegible] ವಿದ್ವಾಂಸರನ್ನು [illegible] ಕೇಳುತ್ತೇವೆ

ಕೆಲವು ದಿವಸಗಳ ಹಿಂದೆ ಕಲ್ಕತ್ತಾಪಟ್ಟಣದಲ್ಲಿ [illegible] ಎಂಬುವರು ತಮ್ಮ ಹೆಂಡತಿಯನ್ನು [illegible] ಎಂಬುವರು ತಪ್ಪಿಸಿಕೊಂಡು ಹೋದರೆಂದು ಅವರ [illegible] ಪ್ರೆಸಿಡೆನ್ಸಿ ಪೋಲೀಸ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು ಪ್ರೆಸಿಡೆನ್ಸಿ [illegible] ಸಂಪೂರ್ಣವಾಗಿ ವಿಚಾರಮಾಡಿ [illegible] ವಿರುದ್ಧವಾಗಿ ತೀರ್ಪು [illegible] ಕೋರ್ಟಿನಿಂದ [illegible] ತಮ್ಮ ಹೆಂಡತಿಯನ್ನು [illegible] ಪ್ರಯತ್ನಪಟ್ಟರು [illegible] ಸಂರಕ್ಷಣೆ [illegible] ಪೊಲೀಸರಿಂದ [illegible] ಪ್ರೆಸಿಡೆನ್ಸಿ [illegible] ಚಾರಣೆ [illegible] ಇಟ್ಟುಕೊಂಡಿರುತ್ತಾರೆ.

ಶ್ರೀ ಕೇದಾರ ಕ್ಷೇತ್ರಯಾತ್ರೆಯು.

ಈ ವರ್ಷ ಚೈತ್ರಮಾಸದಲ್ಲಿ ಶ್ರೀ ಕ್ಷೇತ್ರ ಹರದ್ವಾರದಲ್ಲಿ ನಡೆದ ಕುಂಭೋತ್ಸವಕ್ಕೆ ಹೋಗಿದ್ದೆನು. ಅಲ್ಲಿ ಗುಬ್ಬಿಯ ವೀರಯ್ಯ ಉರ್ಫ್ ಸಚ್ಚಿದಾನಂದಯ್ಯನೆಂಬಾತನೊಬ್ಬನು ಭೆಟ್ಟಿಯಾದನು. ಆತನು— ನಾನು ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳ ಶಿಷ್ಯನಿರುತ್ತೇನೆ. ಈ ಹರದ್ವಾರದಲ್ಲಿ ಯಾತ್ರೆಗಾಗಿ ಬಂದ ವೀರಶೈವರಿಗೆ ಇಳಿದುಕೊಳ್ಳುವದಕ್ಕೆ ಸ್ಥಳವಿಲ್ಲದ್ದರಿಂದ ಒಂದು ಧರ್ಮಶಾಲೆಯನ್ನು ಕಟ್ಟಿಸಬೇಕಾಗಿದೆ, ಅದಕ್ಕಾಗಿ ನೀವುಗಳು ಧನಸಹಾಯ ಮಾಡಬೇಕೆಂದು ಅನೇಕ ರೀತಿಯಾಗಿ ಚತುರತೆಯಿಂದ ಮಾತನಾಡಿದನು. ಆದರೆ ನನಗೆ ಆತನ ಮಾತಿನಲ್ಲಿ ವಿಶ್ವಾಸವುಂಟಾಗದೆ ಇದ್ದುದರಿಂದ ನಾನು ಆತನಿಗೆ ಉತ್ತರ ಕೊಟ್ಟದ್ದೇನೆಂದರೆ :— ಆಗಲಿ; ಆದರೆ ನಾನು ಕೇದಾರೇಶ್ವರನ ದರ್ಶನಮಾಡಿಕೊಂಡು ಶ್ರೀ ಜಗದ್ಗುರು ಸನ್ನಿಧಿಯಲ್ಲಿ ಹಾಜರಾಗಿ ನನ್ನ ಶಕ್ತ್ಯನುಸಾರ ಭಕ್ತಿಯನ್ನು ಸಮರ್ಪಿಸಿ ನಿಮ್ಮಲ್ಲಿಗೆ ಕಳುಹಿಸುವಂತೆ ಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳುವೆನೆಂದು ಹೇಳಿ ಕುಂಭೋತ್ಸವವಾದ ನಂತರ ಹರದ್ವಾರದಿಂದ ಹೃಷೀಕೇಶಕ್ಕೆ ರೇಲ್ವೆಮಾರ್ಗದಿಂದ ಬಂದು ಅಲ್ಲಿಂದ ಕಾಲುಮಾರ್ಗವಾಗಿ ೧೫ ದಿವಸಗಳಲ್ಲಿ ಕೇದಾರೇಶ್ವರನ ಸ್ಥಾನವನ್ನು ತಲುಪಿದೆನು. ಯಾತ್ರಾಸೌಕರ್ಯವು ಚನ್ನಾಗಿದೆ, ಮಾರ್ಗದಲ್ಲಿ ಒಂದು ಎರಡು ಅಥವಾ ಮೂರು ಮೈಲುಗಳಿಗೊಂದಾಗಿ ಸಣ್ಣಸಣ್ಣ ಹಳ್ಳಿಗಳು ಸಿಗುತ್ತವೆ. ಪ್ರತಿಹಳ್ಳಿಯಲ್ಲಿಯೂ ಅಂಗಡಿಗಳು ಇರುತ್ತವೆ. ಯಾರು ಯಾವ ಅಂಗಡಿಯಲ್ಲಿ ಸಾಮಾನುಗಳನ್ನು ತೆಗೆದುಕೊಳ್ಳುತ್ತಾರೆಯೋ ಅದೇ ಅಂಗಡಿಯವನು ಅವರಿಗೆ ಅಡಿಗೆಗೆ ಬೇಕಾದ ಪಾತ್ರೆ ಮೊದಲಾದವುಗಳನ್ನೂ ಇಳಿದುಕೊಳ್ಳುವುದಕ್ಕೆ ಯೋಗ್ಯವಾದ ಸ್ವಚ್ಛಸ್ಥಳವನ್ನೂ ಸಹ ಕೊಡುವನು. ಯಾತ್ರಿಕರು ಅಡಿಗೆಯ ಸಾಮಾನುಗಳನ್ನೂ ಪಾತ್ರೆಗಳನ್ನೂ ಕಟ್ಟಿಕೊಂಡು ಹೋಗಲು ಕೆಲಸವಿಲ್ಲ. ನಾನು ಇದನ್ನು ತಿಳಿಯದೆ ಪಾತ್ರೆಗಳನ್ನು ತೆಗೆದುಕೊಂಡು ಹೋಗಿದ್ದೆನು. ಆದರೆ ಈ ವಿಷಯವನ್ನು ಮುಂದೆ ಹೋಗುವವರ ಹಿತಕ್ಕಾಗಿ ಸೂಚಿಸಿರುವೆನು. ಅದೆಂತಿರಲಿ; ನಾನು ಶ್ರೀ ಕೇದಾರೇಶ್ವರನ ದರ್ಶನ ಮಾಡಿಕೊಂಡು ಅನಂತರ ೩ ದಿವಸಕ್ಕೆ ಜಗದ್ಗುರು ಪೀಠಸ್ಥಾನವಾದ ಊಖೀಮಠಕ್ಕೆ ಬಂದೆನು. ಆ ಪ್ರದೇಶವು ಅತಿ ಶೀತಯುಕ್ತವಾದ್ದರಿಂದ ಅಲ್ಲಿಯ ಜನರು ಕಂಬಳಿಯ ಕಮೀಜಿಯನ್ನೂ ಕಂಬಳಿಯ ಟೋಪಿಯನ್ನೂ ಕಂಬಳಿಯ ಕೌಪೀನವನ್ನೂ ಹಾಕಿಕೊಳ್ಳುವರು. ಸ್ತ್ರೀಯರೂ ಸಹ ಕಂಬಳಿಯನ್ನು ಉಟ್ಟುಕೊಂಡು ಕಂಬಳಿಯನ್ನೇ ಹೊದ್ದುಕೊಳ್ಳುವರು. ಅವರ ಭಾಷೆಯು ಸಂಸ್ಕೃತ, ಇಂಗ್ಲೀಷ್, ಹಿಂದೀ ಮೊದಲಾದ ಭಾಷೆಗಳಿಗಿಂತಲೂ ವಿಲಕ್ಷಣವಾಗಿರುತ್ತದೆ. ಭಾಷಣಕಾಲದಲ್ಲಿ ಮಾಡುವ ಅಂಗಚೇಷ್ಟೆಯಂತೂ ಅತಿ ವಿಕಾರವಾಗಿರುತ್ತದೆ. ಇಂಥ ವೇಷ ಭಾಷಾದಿಗಳಿಂದೊಡಗೂಡಿದ ಭಕ್ತವೃಂದದ ಮಧ್ಯದಲ್ಲಿ ಕೇವಲ ಮನುಷ್ಯರಾಗಿ ಅವರಿಗನುಸರಿಸಿಯೇ ಭಾಷಣಮಾಡುತ್ತಿದ್ದ ಶೈವಾಗ್ರಪೀಠಾಧೀಶ ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪಾದದರ್ಶನವನ್ನು ಭೂತಗಣದೊಡನೆ ಕ್ರೀಡಿಸುವ ಸಾಕ್ಷಾತ್ ಪರಮಾತ್ಮನ ದರ್ಶನವನ್ನಾಗಿಯೇ ಭಾವಿಸಿದೆನು. ಪೀಠವು ಇಂಥ ಸ್ಥಾನದಲ್ಲಿದ್ದಾಗ್ಯೂ ಈಗಿನ ಜಗದ್ಗುರುಗಳು ಅತ್ಯಂತ ವೈಭವದಲ್ಲಿಟ್ಟಿದ್ದಾರೆ. ಇದನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಅದು. ಸದ್ಯಃ ಸಂಸ್ಥಾನದಲ್ಲಿ ಒಂದು ಸಂಸ್ಕೃತ ಪಾಠಶಾಲೆಯುಂಟು. ಈ ಶಾಲೆಯಲ್ಲಿ ನ್ಯಾಯ ವ್ಯಾಕರಣಶಾಸ್ತ್ರಗಳನ್ನು ಹೇಳುವುದಕ್ಕಾಗಿ ಒಬ್ಬ ಪಂಡಿತರೂ, ಜ್ಯೋತಿಷ್ಯವನ್ನು ಹೇಳುವದಕ್ಕಾಗಿ ಒಬ್ಬ ಪಂಡಿತರೂ ಹೀಗೆ ಇಬ್ಬರು ಪಂಡಿತರಿರುವರಲ್ಲದೆ ೩೦ ಜನ ವಿದ್ಯಾರ್ಥಿಗಳಿರುವರು. ಈ ವಿದ್ಯಾರ್ಥಿಗಳು ಶ್ರೀ ಜಗದ್ಗುರುಗಳಿಂದ ಪ್ರತಿಯೊಬ್ಬರಿಗೂ ದಯಪಾಲಿಸಿರುವ ಹಳದಿಬಣ್ಣದ ಮಡಿಗಳನ್ನುಟ್ಟುಕೊಂಡು ಚಿತ್ರಾಸನಗಳನ್ನು ಹಾಕಿಕೊಂಡು ಉದಯಕಾಲ ಸಾಯಂಕಾಲಗಳಲ್ಲಿ ವೇದಘೋಷಪೂರ್ವಕವಾಗಿ ಶಿವಕರ್ಮಗಳನ್ನು ಮಾಡುವಾಗ್ಗೆ ಆ ಸ್ಥಾನದಲ್ಲುಂಟಾಗುವ ಶೋಭೆಯನ್ನು ನೋಡಿದ ಯಾವ ಮನುಷ್ಯನು ಆ ಸ್ಥಾನಕ್ಕೆ ಸಾಕ್ಷಾತ್ ಕೈಲಾಸವೆಂದು ಹೇಳನು? ಇದಲ್ಲದೆ ಮತ್ತೊಂದು ಮಿಡಲ್ ಸ್ಕೂಲು ಸಹ ಇರುತ್ತದೆ. ಅದರಲ್ಲಿ ಇಬ್ಬರು ಟೀಚರರೂ, ೫೦ ಜನ ವಿದ್ಯಾರ್ಥಿಗಳೂ ಇರುತ್ತಾರೆ. ಈ ವಿದ್ಯಾರ್ಥಿಗಳೆಲ್ಲರೂ ಶ್ರೀ ಜಗದ್ಗುರುಗಳಿಂದ ದಯಪಾಲಿಸಲ್ಪಟ್ಟಿರುವ ಕಾಕೀವರ್ಣದ ಕೋಟು, ಪಾಟ್ಲೂನ್ ಟೋಪಿಗಳನ್ನು ಹಾಕಿಕೊಂಡು ಉದಯ ಸಾಯಂಕಾಲಗಳಲ್ಲಿ ಪ್ರಾರ್ಥನಾಪದವನ್ನು ನೋಡಿದವರು ಯಾರು ತಾನೇ ಆ ಸ್ಥಾನಕ್ಕೆ ರಾಜಾಸ್ಥಾನವೆನ್ನರು? ಈ ವೈಭವವನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದಲ್ಲದೆ ಅಲ್ಲಿಯ ಕೆಲವು ಪುಢಾರಿಜನರು ನನಗೆ ತಿಳಿಸಿದ್ದೇನೆಂದರೆ ಈವರೆಗೆ ವಿದ್ಯಾವಿಹೀನರಾಗಿ ಮನುಷ್ಯದೇಹವನ್ನು ಧರಿಸಿ ಜಾಲಿಸುತ್ತಿದ್ದ ಪಶುಪ್ರಾಯರಾದ ನಮ್ಮಗಳಿಗೆ ಅನ್ನ, ವಸ್ತ್ರ, ವಿದ್ಯಾದಿಗಳನ್ನಿತ್ತು ಉದ್ಧರಿಸುವದಕ್ಕಾಗಿ ಸದಾಶಿವನೇ ಈ ವಿರಾಜಮಾನ ರಾವಲ್ ಸಾಹೇಬರ ರೂಪವನ್ನು ಧರಿಸಿ ಅವತರಿಸಿರುವಂತೆ ಭಾವಿಸುತ್ತೇವೆಂದೂ ಈ ಸದ್ಗುರುಮೂರ್ತಿಯು "[illegible]" ಎಂಬ ವಾಕ್ಯಾನುಸಾರವಾಗಿರುವದೆಂದೂ ಅತ್ಯಾಹ್ಲಾದಪೂರ್ವಕವಾಗಿ ಹೇಳಿದರು, (ಅಲ್ಲಿ ಶ್ರೀ ಜಗದ್ಗುರುಗಳಿಗೆ ರಾವಲ್ ಸಾಹೇಬರೆಂಬ ನಾಮಧೇಯವುಂಟು) ಮತ್ತು ಯಾತ್ರೆಗಾಗಿ ಹೊರಟ ಜನರು ಮಧ್ಯಮಾರ್ಗದಲ್ಲಿ ಅನೇಕವಿಧ ರೋಗಪೀಡಿತರಾಗಿ ನರಳುತ್ತಿರುವರೆಂದು ಭಾವಿಸಿ ಜಗದ್ಗುರುಗಳು ಗುಪ್ತಕಾಶೀ, ಗೌರೀಕುಂಡ, ಊಖೀಮಠವೆಂಬ ಮೂರು ಸ್ಥಾನಗಳಲ್ಲಿ ಧರ್ಮಾರ್ಥವಾಗಿ ಔಷಧಾಲಯಗಳನ್ನು ಸ್ಥಾಪಿಸಿರುವರು, ಊಖೀಮಠದಲ್ಲಿ ಪೂರ್ವೋಕ್ತ ಮಿಡಲ್ ಸ್ಕೂಲಿನ ೫೦ ಜನ ವಿದ್ಯಾರ್ಥಿಗಳಿಗೂ, ೩೦ ಜನ ಸಂಸ್ಕೃತವಿದ್ಯಾರ್ಥಿಗಳಿಗೂ ಬೇರೆಬೇರೆಯಾಗಿ ಭೋಜನದ ಏರ್ಪಾಡು ಮಾಡಿರುತ್ತಾರೆ. ಸದಾ ಅತಿಥಿಗಳಾಗಿ ಬಂದ ಸಾಧುಸತ್ಪುರುಷರಿಗೆಲ್ಲ ಅಕ್ಕಿ, ಬೇಳೆ ಹಿಟ್ಟು ಮೊದಲಾದವುಗಳನ್ನು ಕೊಡುವದಕ್ಕಾಗಿ ಸದಾವರ್ತವನ್ನಿಟ್ಟಿರುತ್ತಾರೆ. ಮುಖ್ಯವಾಗಿ ಇಂಗ್ಲೀಷ್ ಅಭ್ಯಾಸಮಾಡುವ ವೀರಶೈವವಿದ್ಯಾರ್ಥಿಗಳಿಗೂ, ಕಾಶಿಯಲ್ಲಿ ಅಭ್ಯಾಸಮಾಡುವ ಸಂಸ್ಕೃತವಿದ್ಯಾರ್ಥಿಗಳಿಗೂ ಅವರವರ ಯೋಗ್ಯತಾನುಸಾರ ಹತ್ತುಹದಿನೈದು ಇಪ್ಪತ್ತು ಇಪ್ಪತ್ತೈದು ರೂಪಾಯಿ ಉಪಕಾರ ಮಾಸಿಕದ್ರವ್ಯಸಹಾಯವು ಈ ಸಂಸ್ಥಾನದಿಂದ ಮಾಡಲ್ಪಡುವದೆಂದು ಮೊದಲೇ ತಿಳಿದಿದ್ದ ನಾನು ಶ್ರೀನಗರ, ದಿಲ್ಲಿ, ಲಾಹೋರ್ ಮೊದಲಾದ ಸ್ಥಳಗಳಲ್ಲಿ ಇಂಗ್ಲೀಷ್, ಸಂಸ್ಕೃತ, ವೈದ್ಯ ಇತ್ಯಾದಿಗಳನ್ನು ಅಭ್ಯಾಸಮಾಡುವ ಈ ಗಢವಾಲ್ ಪ್ರಾಂತದ ವಿದ್ಯಾರ್ಥಿಗಳಿಗೂ ಸಹ ಅವರವರ ಯೋಗ್ಯತಾನುಸಾರ ಹತ್ತುಹದಿನೈದು ಇಪ್ಪತ್ತು ಇಪ್ಪತ್ತೈದು ರೂಪಾಯಿ ಸ್ಕಾಲರ್‌ಷಿಪ್ ರಾವಲ್ ಸಾಹೇಬರಿಂದ ಕೊಡಲ್ಪಡುತ್ತದೆಂದು ಅಲ್ಲಿಯ ಜನರಿಂದ ಕೇಳಿದೆನು, ಆದರೆ ಇದೇ ಸಂಸ್ಥಾನಕ್ಕೆ ೮೦ ಸಾವಿರ ರೂಪಾಯಿ ಋಣಭಾರವಿರುವದೆಂದು ೧೯೨೦ ನೆಯ ಇಸ್ವಿಯಲ್ಲಿ ನೋಟೀಸ್ ದ್ವಾರಾ ಪ್ರಕಟಿಸಿದ್ದರು. ಈಗ ೭ ವರ್ಷಗಳಲ್ಲಿ ಅಷ್ಟು ಋಣಭಾರವನ್ನು ಹೋಗಲಾಡಿಸಿಕೊಂಡು ಹಿಂದೆ ಸೂಚಿ ಧರ್ಮಕಾರ್ಯಗಳಿಗೆಲ್ಲಾ ಅತ್ಯುತ್ಸುಕತೆಯಿಂದ ಧನಸ ಯಮಾಡುತ್ತಿರುವ ಈ ಪೂಜ್ಯಪಾದರ ಕೃತ್ಯಗ ಸ್ತೋತ್ರಾರ್ಹವಾದವುಗಳೆಂದು ಪ್ರತ್ಯಕ್ಷವಾಗಿ ನೋ ಡಿದ ಅಥವಾ ಅನ್ಯರಿಂದ ಕೇಳಿದ ಯಾವ ಮನುಷ್ಯ ಹೇಳದೆ ಇರನು? ಇಂಥ ಪೂಜ್ಯಗುರುಗಳ ದರ್ಶನ ಪಾತ್ರನಾದ ನಾನು ಹರದ್ವಾರದಲ್ಲಿ ಸಂಸ್ಥಾನದ ಯಿಂದ ಯಾರಾದರೂ ಇರುವರೋ ಎಂದು ಸ್ವಾ ಯವರನ್ನು ಕೇಳಲು ಯಾರೂ ಇಲ್ಲವೆಂದು ಅಪ್ಪಣೆ ಡಿಸಿದರು. ಅನಂತರ ಸಚ್ಚಿದಾನಂದಯ್ಯನೆಂಬಾತ ತನ್ನ ಶಿಷ್ಯನೆಂತಲೂ ಅಲ್ಲಿ ಧರ್ಮಶಾಲೆಯನ್ನು ಕಟ್ಟಿಸ ನೆಂತಲೂ, ನೀವುಗಳು ಧನಸಹಾಯಮಾಡಬೇಕೆಂತ ಅಲ್ಲಿಗೆ ಬಂದ ವೀರಶೈವರನ್ನು ಪೀಡಿಸುತ್ತಿರುವನೆಂ ನಾನು ಹೇಳಲು ಅದಕ್ಕೆ ಮಹಾಸ್ವಾಮಿಗಳು ಆ ಈಗ ೩ ವರ್ಷದ ಹಿಂದೆ ಮಠದಲ್ಲಿದ್ದು ಅನುಚಿತಕಾ ಗಳನ್ನು ಮಾಡಿದ್ದರಿಂದ ಮಠದಿಂದ ಬಹಿಷ್ಕರಿಸಿದ್ದೇ ಆತನು ಹೀಗೆಯೇ ನಾನಾಪ್ರಕಾರವಾಗಿ ಜನರ ಮೋಸಗೊಳಿಸಿ ಹಣವನ್ನು ಸಂಪಾದಿಸಿಕೊಂಡು ಸುತ್ತಿರುವನೆಂದು ಅಪ್ಪಣೆಕೊಡಿಸಿದರು. ಮು ಯಾತ್ರೆಗಾಗಿ ಹೋಗುವ ಮಹನೀಯರು ಇಂ ಅಸಾಧುಗಳ ದುರ್ಬೋಧೆಗೊಳಗಾಗಿ ಧನವ ಹಾಳುಮಾಡಿಕೊಳ್ಳಬಾರದೆಂದು ಈ ಮೂಲಕ ತ್ರಿಕರಿಗೆ ಸೂಚಿಸುತ್ತೇನೆ. ಭರತಖಂಡದ ಅಂತ್ಯ ಗವಾದ ಹಿಮಾಲಯದಲ್ಲಿ ವೀರಶೈವರಿಲ್ಲದ ನದಲ್ಲಿ ನಮ್ಮ ಗುರುಪೀಠವಿದ್ದಾಗ್ಯೂ ಹೀ ತಿಗೊಳಗಾಗದೆ ಅತ್ಯಂತ ಊರ್ಜಿತಸ್ಥಿತಿಯಲ್ಲಿ ದನ್ನು ನೋಡಿದರೆ ಯಾರಿಗೆ ಆನಂದವಾಗಲಿಕ್ಕಿ ನಮ್ಮ ದೇಶದಲ್ಲಿರತಕ್ಕ ಮಠಗಳಿಗೆ ಒಂದೊ ಗ್ರಾಮವು ಇನಾಮು ಇದ್ದರೆ ಅವರನ್ನು ಹಿಡಿದ ಇಲ್ಲ! ಆದರೆ ಈ ಕೇದಾರಪೀಠಕ್ಕೆ ಸದ್ಯಃ ೧೪೧ ಮಗಳು ಇನಾಮವಾಗಿರುತ್ತವೆ. ಪೂರ್ವದಲ್ಲಿ ಗ್ರಾಮಗಳು ಇನಾಮಾಗಿದ್ದವಂತೆ! ಈಗ ೫೦ ವ ಗಳ ಪೂರ್ವದಲ್ಲಿ ಸರಕಾರದವರು ಯಾವುದೋ ದ ಕಾರಣದಿಂದ ೮೫೮ ಗ್ರಾಮಗಳನ್ನು ವಶ ಮಾಡಿಕೊಂಡಿರುವರಂತೆ! ಈ ಗ್ರಾಮಗಳ ಬಗ್ಗೆ ಪಾ ರ್ಲಿಮೆಂಟಿನ ವರೆಗಾದರೂ ಹೋರಾಡಿ ಅವುಗಳನ್ನೆಲ್ಲ ತ ಬರಮಾಡಿಕೊಳ್ಳುವಂತೆ ಮಾಡಬೇಕೆಂದು ರಾ ಜಗದ್ಗುರುಗಳ, ಪ್ರಯತ್ನವನ್ನಿಟ್ಟುಕೊಂಡಿರುತ್ತಾ ಪರಮೇಶ್ವರನು ಈ ಕಾರ್ಯಕ್ಕೆ ಯಾವಾಗ್ಗೆ ಜ ನ್ನುಂಟುಮಾಡುವನೋ ನೋಡಬೇಕಾಗಿದೆ. ಪಾ ನ ದಾನಶಾಸನಗಳಂತೂ ಹೇರಳವಾಗಿವೆ. ವರ್ಣಿ ಸಾಧ್ಯವಿಲ್ಲ! ವೀರಶೈವಮತಕ್ಕೆ ಮಾತೃಸ್ಥಾನ ಪಿದ ಪಂಚಪೀಠಗಳ ಸ್ಥಿತಿಯನ್ನು ಪರಿಶೀಲಿಸಿದ ತಿಯೊಂದು ಪೀಠದಲ್ಲಿ ಮಹತ್ವದ ಸಂಗತಿಗಳು ಕವಾಗಿ ದೊರೆಯುತ್ತವೆ. ಮೇಲ್ಕಂಡ ಕೇದಾ ಠಕ್ಕೆ ಪ್ರಾಚೀನ ಮಹಾರಾಜರಲ್ಲದೆ ಈಗಿನ ಪ್ರ ಸಾರ್ವಭೌಮರೂ ಸಹ ಹಿಂದುಸ್ಥಾನದಲ್ಲಿ ಮಠಗಳಿಗೂ ಕೂಡ ಇಲ್ಲದ ಮರ್ಯಾದೆಗಳನ್ನು ಟ್ಟಿದ್ದಾರೆ. ಈ ತರದ ನಮ್ಮ ಗುರುಪೀಠವು ಅಲ್ಲಿ ರುವದರಿಂದ ವೀರಶೈವಮತಕ್ಕೇನೇ ದೊಡ್ಡ ಗೌರ ದು ಹೇಳಬಹುದು. ಲೋಕಪ್ರಸಿದ್ಧವಾದ ಶ್ರೀ ಕೇ ರೇಶ್ವರನ ದೇವಸ್ಥಾನವೂ ಕೂಡ ಇವರ ಸ್ವಾಧೀ ಲ್ಲಿರುತ್ತದೆ. ಇಂಥ ಪವಿತ್ರಕ್ಷೇತ್ರದ ಯಾತ್ರೆ ಸಾಂಗವಾಗಿ ನೆರವೇರಿಸಿ ಜಗದ್ಗುರುಗಳವರ ಪಾತ್ರರಾಗಬೇಕಾಗಿ ಹೇಳಿ ಈ ಲೇಖವನ್ನು ಮು ತ್ತೇನೆ.

ಓರ್ವ ಯಾತ್ರಿಕ

ಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ

(ವರ್ಷಂತ್ಯತ್ಸವದ ಅಧಿವೇಶನ)

13ನೆಯ ಜೂನ್ 1927.

ಜಾಪ್ರತಿನಿಧಿ ಸಭೆಯ ಸದಸ್ಯರುಗಳೇ,

ರಾಜಕೀಯ ಸುಧಾರಣೆಗಳು ಜಾರಿಗೆ ತರಲ್ಪಟ್ಟ ಲೆ ಏರ್ಪಟ್ಟ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಇದು ಎ ನೆಯ ಸಭೆಯಾಗಿದೆ. ರಾಜಕೀಯ ಸುಧಾರಣೆಗಳ ಕಾರ, ಚುನಾವಣೆಯಿಂದಲೋ, ಅಥವಾ ಸರಕಾರ ದ ನೇಮಕ ಮಾಡಲ್ಪಡುವುದರಿಂದಲೋ, ಈ ಸಭೆ ದಸ್ಯರುಗಳಾಗಿ ದಯಮಾಡಿಸಿರುವ ತಮ್ಮೆಲ್ಲರ ಆದರದಿಂದ ಬರಮಾಡಿಕೊಳ್ಳುವುದು ನನಗೆ ವಿ ಶೇ ಸಂತೋಷಕರವಾಗಿದೆ. ಇಲ್ಲಿಗೆ ಹೊಸದಾಗಿ ಯಮಾಡಿಸಿರುವವರಿಗೆ ಸ್ವಾಗತವನ್ನು ಬಯಸುವು ದು ನನಗೆ ಆನಂದದಾಯಕವಾಗಿದೆ. ನಾನು ಗೆ ಹೇಳಿದಮಾತ್ರವೇ, ಇದರ ಹಿಂದೆ ಏರ್ಪಟ್ಟಿದ್ದ ಯಲ್ಲಿ ಪ್ರಮುಖರಾಗಿದ್ದ ಅನೇಕ ಮಂದಿ ದೊಡ್ಡ ಷ್ಯರು ಮತ್ತೆ ಈ ಸಭೆಗೆ ಸದಸ್ಯರಾಗಿಲ್ಲದೆ ಹೋ ವುದಕ್ಕಾಗಿ, ನನಗೆ ವಿಷಾದವಿಲ್ಲವೆಂದು ಅರ್ಥವಲ್ಲ. ರು ನಮ್ಮೊಡನೆ ಅತ್ಯಂತ ಸ್ನೇಹಭಾವದಿಂದ ವರ್ತಿ ದ್ದರು. ಅವರು ಬೆಲೆಬಾಳುವ ಸಲಹೆಗಳನ್ನು ಕೊ ಟ್ಟವರೆಂದೂ, ಸ್ಥಿರತೆಯಿಂದ ಕೂಡಿದ ಮಾರ್ಗದ ಗಳೆಂದೂ ನಮಗೆ ಭರವಸೆಯುಂಟಾಗಿದ್ದಿತು. ಆದ ರಣ, ಅವರು ಇಲ್ಲಿಗೆ ಸದಸ್ಯರಾಗಿ ಬಾರದೆ ಹೋ ದಕ್ಕಾಗಿ ನನಗೆ ವಿಷಾದವಿದ್ದೇ ಇದೆ. ಇಷ್ಟಕ್ಕೂ ಹೊಂದು ಬದಲಾವಣೆಗಳುಂಟಾಗುವುದೇ ಪ್ರಾತಿ ದ ಅಧಿಕಾರವು ಮಹತ್ತರವಾದುದೆಂದು ಜನರು ಸಿದ್ದಾರೆಂಬುದಕ್ಕೆ ತಕ್ಕ ನಿದರ್ಶನವೆಂಬುದಾಗಿ ಸಬಹುದಾಗಿದೆ. ಹೊಸದಾಗಿ ಈ ಸಭೆಗೆ ಸದ ರಾಗಿ ಚುನಾವಣೆ ಮಾಡಲ್ಪಟ್ಟಿರುವ ಸಭಿಕರು ನ ಲ್ಲಿ ಹೊಸ ಹೊಸ ಭಾವನೆಗಳನ್ನುಂಟುಮಾಡುವ ದು ನಿರೀಕ್ಷಿಸಿದ್ದೇನೆ. ಅಲ್ಲದೆ ಹಿಂದಿನಿಂದಲೂ ನ ಯಂತೆ ನಿಂತಿರುವ ಅಂಶಗಳನ್ನು ಹೊಸರೀತಿಯ ರಿಶೀಲಿಸಿ ವ್ಯವಸ್ಥೆ ಮಾಡುವ ಮಾರ್ಗಗಳನ್ನು ರು ತೋರಿಸುವರೆಂದೂ ನಾನು, ನಿರೀಕ್ಷಿಸಿಕೊಂಡಿ ನೆ. ಹಿಂದಣ ಸಭೆಯಲ್ಲಿಯೂ ಸದಸ್ಯರಾಗಿದ್ದು, ಲೂ ಸದಸ್ಯರಾಗಿ ಈ ಹೊಸ ಸಭೆಗೆ ದಯಮಾಡಿ ರುವವರಿಂದಲೂ, ನಮಗೆ ಒಂದು ವಿಧದಲ್ಲಿ ಸಹಾಯ ಗುತ್ತದೆ. ಈ ಪ್ರಜಾಪ್ರತಿನಿಧಿ ಸಭೆಯಂಥಾ ಯಲ್ಲಿ ಅವಿಚ್ಛಿನ್ನವಾದ ಸದಸ್ಯತೆಯು ಅತ್ಯಾವ ಆದಕಾರಣ, ಹಿಂದೆ ಸಭಿಕರಾಗಿದ್ದ ಇವರು ಮತ್ತೆ ಇಲ್ಲಿಗೆ ದಯಮಾಡಿಸಿರುವುದರಿಂದ ಇದ ಸಹಾಯಕವಾಗುತ್ತದೆ. ಆದುದರಿಂದ, ನಾನು ಹ ಸದಸ್ಯರಿಗೂ, ಹೊಸ ಸದಸ್ಯರಿಗೂ, ಉಭಯತ ಒಂದೇ ಸಮನಾಗಿ ಆದರದಿಂದ ಸ್ವಾಗತವನ್ನು ಸುತ್ತೇನೆ. ಈ ಸಭೆಯಲ್ಲಿ ಕೆಲಸಮಾಡುವ ಅವ ಲ್ಲಿ ನಾವೆಲ್ಲರೂ ರಾಜ್ಯದ ಆಡಳಿತ ವ್ಯವಸ್ಥೆಯ ಭಿವೃದ್ಧಿಗೂ, ಮೈಸೂರು ದೇಶದ ಮತ್ತು ಮೈ ದೇಶೀಯರ ಏಳಿಗೆಗೂ, ಸಾಧಕವಾಗುವದಾಗಿ ನ್ನು ನಡೆಸುವುದು ಸಾಧ್ಯವಾದೀತೆಂದು ದ್ದೇನೆ.

1923 ನೆಯ ಇಸವಿಯಲ್ಲಿ ರಾಜಕೀಯ ಸುಧಾರ ಣೆ ಆಚರಣೆಗೆ ತರಲ್ಪಟ್ಟುದು ಸರಿಯಷ್ಟೆ. ಅಲ್ಲಿಂ ಗೆ ನಡೆದ ಸಾರ್ವತ್ರಿಕವಾದ ಚುನಾವಣೆಗಳಲ್ಲಿ, ವಾರಿ ನಡೆದುದೇ ಎರಡನೆಯದು. ಪ್ರಜೆಗಳು ಇ ಸಮ್ಮತಿಗಳನ್ನು (ಎಂದರೆ ವೋಟುಗಳನ್ನು) ಡುವ ತಮ್ಮ ಅಧಿಕಾರವನ್ನು ಯಾವ ರೀತಿ ಚಲಾ ದರೆಂಬುದನ್ನು ವಿಚಾರ ಮಾಡುವುದರಲ್ಲಿ ಸ್ವಾರ ಟು. ಒಟ್ಟು 1,30,000 ಮಂದಿಗಳು ಸ ನ್ನು ಕೊಡುವ ಅಧಿಕಾರವನ್ನು ಪಡೆದಿದ್ದರು. 60,000 ಕ್ಕಿಂತಲೂ ಹೆಚ್ಚು ಮಂದಿಗಳು ಸ ನ್ನು ಕೊಡುವ ಸ್ಥಾನಗಳಿಗೆ ದಯಮಾಡಿಸಿ ತಾಲ್ಲೂಕುಗಳಿಂದಲೂ, ಮುನಿಸಿಪಾಲಿಟಿಗಳಿಂದಲೂ, ಈ ಸಭೆಗೆ ಒಟ್ಟು 204 ಮಂದಿಗಳು ಸದಸ್ಯರಾಗಿ ಚುನಾಯಿಸಲ್ಪಡಬೇಕೆಂದು ಕ್ಲೃಪ್ತವಾಗಿರುವುದು ಸರಿಯಷ್ಟೆ. ಈ ೨೦೪ ಸ್ಥಾನಗಳ ಸಂಬಂಧದಲ್ಲಿ 782 ಮಂದಿಗಳು ಚುನಾವಣೆಗೆ ಉಮೇದುವಾರರಾಗಿ ನಿಂತಿದ್ದರು. ಪ್ರಜೆಗಳೆಲ್ಲರಿಗೂ ರಾಜಕೀಯ ವಿಚಾರಗಳಲ್ಲಿ ತಿಳುವಳಿಕೆಯುಂಟಾಗಿ ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆದು ಕಾಪಾಡಿಕೊಳ್ಳಬೇಕೆಂಬ ಆಸೆಯು ಹುಟ್ಟಿದೆ ಎಂಬುದಾಗಿ ಇಷ್ಟರಿಂದಲೇ ನಂಬುವುದು, ಬಹುಶಃ ಯುಕ್ತವೆನಿಸದೆ ಇರಬಹುದು. ಆದರೂ, ಇದನ್ನೆಲ್ಲಾ ಪರಿಶೀಲಿಸಿದರೆ ಒಂದು ವಿಷಯವು ಮಾತ್ರ ಸ್ಪಷ್ಟವಾಗಿ ಕಾಣುವುದು. ಈ ಸಭೆಯಲ್ಲಿ ಸದಸ್ಯರಾದರೆ, ಪ್ರಜಾಸೇವೆಗೆ ಒಳ್ಳೆಯ ಸಮಯವು ದೊರೆಯುವುದೆಂಬುದು ಜನರಿಗೆ ಚೆನ್ನಾಗಿ ಮನದಟ್ಟಾಗಿದೆ. ಈ ಅಭಿಪ್ರಾಯದ ದೆಸೆಯಿಂದ, ಜನರು ಈ ಸಭೆಯಲ್ಲಿ ಸದಸ್ಯರಾಗಲು ಹೆಚ್ಚು ಹೆಚ್ಚಾಗಿ ಕುತೂಹಲಪಟ್ಟು ಪ್ರಯತ್ನ ಮಾಡುತ್ತಿರುವರು. ಇಷ್ಟನ್ನು ಮಾತ್ರ ಧಾರಾಳವಾಗಿ ಹೇಳಬಹುದಾಗಿದೆ.

ಕಳೆದ ಅಧಿವೇಶನವು ಪೂರೈಸಿದ ಮೇಲೆ ಇದುವರೆಗೆ ನಡೆದಿರುವ ಅತಿ ಮುಖ್ಯವಾದ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಿದರೆ, ಬಹುಶಃ ಅದು ಅಪ್ರಕೃತವೆನಿಸಲಾರದೆಂದು ತೋರುತ್ತದೆ.

ಮುಖ್ಯವಾದ ಕಾರ್ಯಕಲಾಪಗಳು

ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಮಳೆಯು ಬೀಳಲಿಲ್ಲ. ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಚಾಮರಾಜನಗರ ತಾಲೂಕಿನ ಕೆಲವು ಪ್ರದೇಶಗಳಲ್ಲಿಯೂ ಕೂಡ, ಮಳೆಯು ಬೀಳಲಿಲ್ಲ. ಮಳೆಯಿಲ್ಲದೆ ದುರ್ಭಿಕ್ಷವು ಸಂಭವಿಸುವುದೋ ಏನೋ ಎಂಬುದಾಗಿ ಆತಂಕವುಂಟಾಯಿತು. ಆದಕಾರಣ, ಜನರಿಗೆ ಸಹಾಯ ಮಾಡುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಮಾಡಬೇಕಾಯಿತು. ಜನರಿಗೆ ತಕಾವಿ ಸಾಲಗಳನ್ನು ಕೊಡುವುದಕ್ಕಾಗಿಯೂ, ಹಂಗಾಮಿಯಾಗಿ ಅಲ್ಲಲ್ಲಿ ಬಾವಿಗಳನ್ನು ತೋಡಿಸುವುದಕ್ಕಾಗಿಯೂ ನ್ಯಾಯವಿಧಾಯಕ ಸಭೆಯವರ ಒಪ್ಪಿಗೆಯನ್ನು ಪಡೆದು 60,000 ರೂಪಾಯಿಗಳವರೆಗೆ ಹೆಚ್ಚಿಗೆಯ ಗ್ರಾಂಟುಗಳನ್ನು ಮಂಜೂರ್ ಮಾಡಲಾಯಿತು. ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಈಗಾಗಲೇ ಮಂಜೂರಾಗಿರುವ ಅಥವಾ ಮಂಜೂರಾತಿಗಾಗಿ, ಸಲಹೆಯಾಗಿರುವ ಕಂದಾಯ ಮಾಫಿಗಳ ಒಟ್ಟು ಮೊಬಲಗು 72,000 ರೂಪಾಯಿಗಳು. ಕೆಲಸಗಾರರಿಗೆ ಕೆಲಸಗಳನ್ನು ಒದಗಿಸುವುದಕ್ಕೋಸ್ಕರ, ಕೆರೆಯ ಕಾಮಗಾರಿಗಳನ್ನೂ ಗ್ರಾಮಾಭಿವೃದ್ಧಿಯ ಕಾಮಗಾರಿಗಳನ್ನೂ ಪ್ರಾರಂಭಿಸಲಾಯಿತು. ಅಲ್ಲದೆ, ಜನರಿಗೆ ಮತ್ತು ಕಷ್ಟವುಂಟಾಗಿ ಅನಾವೃಷ್ಟಿಯ ದೆಸೆಯಿಂದ ದುರ್ಭಿಕ್ಷವೇ ಒದಗಿಬಿಟ್ಟಲ್ಲಿ, ಅದರ ನಿವಾರಣಾರ್ಥವಾಗಿ ಹೆಚ್ಚಿನ ಸಹಾಯಮಾಡಲು ಸಕಲ ಸನ್ನಾಹಗಳನ್ನೂ ಸಿದ್ಧಪಡಿಸಿಟ್ಟುಕೊಳ್ಳಲಾಯಿತು. ಆದರೆ ಮಳೆಯಿಂದ ದುರವಸ್ಥೆಗೊಳಗಾಗಿದ್ದ ಪ್ರದೇಶಗಳಲ್ಲಿ, ಈಚೆಗೆ ದೈವಾನುಗ್ರಹದಿಂದ ಎಂದಿಗಿಂತಲೂ ಅಧಿಕವಾಗಿ ಮಳೆಯಾಯಿತು. ಆದಕಾರಣ, ನಮಗಿದ್ದ ಆತಂಕಗಳೆಲ್ಲ ಪರಿಹಾರವಾದವು.

ಗ್ರಾಮಪಂಚಾಯತಿಯ ರೆಗ್ಯುಲೇಷನು 1927 ನೆಯ ಇಸವಿ ಫೆಬ್ರುವರಿ 1 ನೆಯ ತಾರೀಖಿನಿಂದ ಆಚರಣೆಗೆ ತರಲ್ಪಟ್ಟಿತು. ಈಗಾಗಲೇ 7,000 ಕ್ಕಿಂತಲೂ ಹೆಚ್ಚಾಗಿ ಗ್ರಾಮಪಂಚಾಯತಿಗಳು ಸ್ಥಾಪಿಸಲ್ಪಟ್ಟಿವೆ. ತಾಲೂಕುಬೋರ್ಡುಗಳು ವಜಾಮಾಡಲ್ಪಟ್ಟವು. ಪೂರ್ವದಲ್ಲಿ ಹೊರತರ್ಫಾ ತೆರಿಗೆಯ ವಸೂಲಿಯನ್ನು ಡಿಸ್ಟ್ರಿಕ್ಟುಬೋರ್ಡುಗಳಿಗೆ ವಹಿಸಲಾಗಿದ್ದಿತಷ್ಟೆ. ಈಗ ಅದನ್ನು ಮತ್ತೊಂದು ವಿಧದಲ್ಲಿ ಗ್ರಾಮಪಂಚಾಯತಿಗಳಿಗೆ ವಹಿಸಲಾಗಿದೆ. ಕೆಲವು ಇನಾಂಗ್ರಾಮಗಳಲ್ಲಿಯೂ, ಜಹಗೀರುಗ್ರಾಮಗಳಲ್ಲಿಯೂ, ಮುಂದೆ ಈ ತೆರಿಗೆಯ ವಿಷಯವನ್ನು ಯಾವರೀತಿ ವ್ಯವಸ್ಥೆ ಮಾಡಬೇಕೆಂಬ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿದೆ. ಆದಕಾರಣ, ಅದಕ್ಕೆ ಸಂಬಂಧಪಟ್ಟ ವಿವರವೊಂದನ್ನು ಈ ಅಧಿವೇಶನದಲ್ಲಿ ತಮ್ಮ ಪರ್ಯಾಲೋಚನೆಗೆ ಒಪ್ಪಿಸಲಾಗುತ್ತದೆ.

ನೀರಾವರಿಯ ಕಾಮಗಾರಿಗಳು

ಮುಂದಣ ಮೂರುವರುಷಗಳಲ್ಲಿ ನೆರವೇರಿಸಬೇಕಾಗಿರುವ ನೀರಾವರಿಯ ಕಾಮಗಾರಿಗಳ ಕಾರ್ಯಕ್ರಮವೊಂದನ್ನು ಕಳೆದ ಅಧಿವೇಶನದಲ್ಲಿ ಸಂಕ್ಷೇಪವಾಗಿ ತಿಳಿಸಿದ್ದೆನು. ಈ ಸಂಬಂಧದಲ್ಲಿ ತಕ್ಕಂತೆ ಕ್ರಮಜರುಗಿಸಲ್ಪಟ್ಟಿದೆ. ಅದನ್ನು ತಮಗೆ ತಿಳಿಸಲು ಸಂತೋಷವಾಗುತ್ತದೆ. ಇವುಗಳಲ್ಲಿ ಕೆಲವು ಕಾಮಗಾರಿಗಳಿಗೋಸ್ಕರ 16 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಅಂದಾಜುಗಳನ್ನು ಆಗಲೇ ಮಂಜೂರ್ ಮಾಡಲಾಗಿದೆ. ಉಳಿದವುಗಳ ವಿಚಾರವು ತೀವ್ರವಾಗಿ ಪರಿಶೀಲಿಸಲ್ಪಡುತ್ತಾ ಇದೆ. ಕೃಷ್ಣರಾಜಸಾಗರದ ಮೇಲ್ಪಟ್ಟದ ನಾಲೆ; ಭದ್ರಾವತಿ ಆಣೆಕಟ್ಟೆಯಿಂದ ಎಡಭಾಗದಲ್ಲಿ ನಾಲೆಯನ್ನು ತೋಡಿಸಿ ಪೂರೈಸುವುದು; ಶಿಕಾರಿಪುರದ ತಾಲೂಕಿನ ಅಂಜನಾಪುರದ ಸಮೀಪದಲ್ಲಿ ಒಂದು ಹೊಸ ಜಲಾಶಯವನ್ನು ಕಟ್ಟುವುದು; ಮತ್ತು ಭದ್ರಾನದಿಗೆ ಅಡ್ಡವಾಗಿ ಲಕ್ಕವಳ್ಳಿಯ ಸಮೀಪದಲ್ಲಿ ಮತ್ತೊಂದು ಆಣೆಕಟ್ಟೆಯನ್ನು ಕಟ್ಟುವುದು; ಇವುಗಳು ಆ ಕಾಮಗಾರಿಗಳಲ್ಲಿ ಮುಖ್ಯವಾದವುಗಳಾಗಿವೆ.

ಗೋರೂರಿನ ಸಮೀಪದಲ್ಲಿ ಹೇಮಾವತೀನದಿಗೆ ಕಟ್ಟುತ್ತಿದ್ದ ಸೇತುವೆಯ ಕೆಲಸವು ಪೂರೈಸಿತು. ಆ ಸೇತುವೆಯಮೇಲೆ ಸಂಚಾರಕ್ಕೆ ಅನುಜ್ಞೆಯನ್ನು ದಯಪಾಲಿಸಿ ಶ್ರೀಮನ್ ಮಹಾರಾಜರವರು ಕಳೆದ ಜನವರಿ ತಿಂಗಳಿನಲ್ಲಿ ಅದರ ಸಮಾರಂಭೋತ್ಸವವನ್ನು ನೆರವೇರಿಸಿದರು. ತಿರುಮಕೂಡ್ಲು ನರಸೀಪುರದ ಸಮೀಪದಲ್ಲಿ ಕಾವೇರಿ ಮತ್ತು ಕಪಿಲಾ ನದಿಗಳಮೇಲೆ 8½ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಎರಡು ಸೇತುವೆಗಳನ್ನು ಕಟ್ಟುವುದಕ್ಕೆ ಮಂಜೂರಾತಿಯನ್ನು ಕೊಡಲಾಗಿದೆ. ಕಾವೇರಿ ನದಿಯ ಸೇತುವೆಯ ಕೆಲಸವನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಾಗುತ್ತದೆ. ವಿದ್ಯುಚ್ಛಕ್ತಿಯ ಹೊಸ ಸ್ಟೇಷನ್ನೊಂದನ್ನು ಕಾನಕಾನಹಳ್ಳಿಯಲ್ಲಿ ಕಟ್ಟಿಸಲಾಯಿತು. ತುಮಕೂರು, ಬೌರಿಂಗಪೇಟೆ, ಚನ್ನಪಟ್ಟಣ ಮತ್ತು ಕೋಲಾರ ಈ ನಾಲ್ಕು ಸ್ಥಳಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲು ಅಂದಾಜುಗಳನ್ನು ಮಂಜೂರ್ ಮಾಡಲಾಗಿದೆ. ಶಿವಮೊಗ್ಗ, ನಂಜನಗೂಡು ಮತ್ತು ಶ್ರೀರಂಗಪಟ್ಟಣ ಈ ಮೂರು ಸ್ಥಳಗಳಿಗೂ ಸಹ, ವಿದ್ಯುಚ್ಛಕ್ತಿಯನ್ನು ಕ್ಷಿಪ್ರದಲ್ಲಿಯೇ ಸರಬರಾಯಿ ಮಾಡಲು ಸಾಧ್ಯವಾದೀತೆಂದು ನಂಬಿದ್ದೇನೆ. ಮೈಸೂರು-ಬೆಂಗಳೂರು ಟೆಲಿಫೋನ್ ಲೈನನ್ನು ಮತ್ತಷ್ಟು ಸುಧಾರವಾಗಿ ಏರ್ಪಡಿಸುವ ಕೆಲಸವು ಇಷ್ಟರಲ್ಲಿಯೇ ನಡೆಯುವುದು. ಆ ಕೂಡಲೆ, ಆ ಟೆಲಿಫೋನಿನಲ್ಲಿ ಮಾತನಾಡುವ ಸೌಕರ್ಯವನ್ನು ಪ್ರಜೆಗಳಿಗೂ ಸಹ ಒದಗಿಸಲಾಗುವುದು. ಸಣ್ಣ ಸಣ್ಣ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡತಕ್ಕ ದರವನ್ನು ಯೂನಿಟ್ಟಿಗೆ 1½ ಆಣೆಯಂತೆ ಸ್ವಲ್ಪಕಾಲಕ್ಕೆ ಹಿಂದೆ ತಗ್ಗಿಸಲಾಯಿತಷ್ಟೆ. ಈ ದರವನ್ನು ಈಚೆಗೆ ಮತ್ತಷ್ಟು ತಗ್ಗಿಸಲಾಗಿದೆ.

ರೈಲ್ವೆಗಳು.

ಶಿವಮೊಗ್ಗ-ಆರಸಾಳು ರೈಲ್ವೆಯ ಕೆಲಸವನ್ನು ಮತ್ತೆ ಕೈಕೊಳ್ಳಲಾಯಿತು. ರಾಗಿ ಹೊಸಹಳ್ಳಿಯವರೆಗೂ ಎಂದರೆ 19 ಮೈಲಿಗಳ ದೂರದವರೆಗೆ ರೈಲುಮಾರ್ಗವನ್ನು ವಿಸ್ತರಿಸಲಾಗುತ್ತದೆ. ಈ ಕಾಮಗಾರಿಯು 1928 ನೆಯ ಇಸವಿಯಲ್ಲಿ ಪೂರೈಸುವುದೆಂಬ ನಿರೀಕ್ಷಣೆ ಇದೆ. ಬೆಂಗಳೂರಿನಿಂದ ಹೊಸೂರಿಗೆ ರೈಲು ಹಾಕುವ ಯೋಜನೆಯೂ ಇದೆ. ಯಾವ ಮಾರ್ಗವಾಗಿ ರೈಲು ರಸ್ತೆಯನ್ನು ವಿಸ್ತರಿಸಬೇಕೆಂಬ ವಿಷಯದಲ್ಲಿ ಏಕಮತವಾಗಿ ನಿರ್ಣಯ ನಡೆದಿದೆ. ಚಾಮರಾಜನಗರದಿಂದ ಆಚೆಗೆ ರೈಲುಮಾರ್ಗವನ್ನು ಮುಂದುವರಿಸಿ ಸೌತ್ ಇಂಡಿಯನ್ ರೈಲ್ವೆಯ ಮೀಟರ್ ಗೇಜು ಲೈನಿಗೆ ಸೇರಿಸುವ ವಿಷಯವು ಪರ್ಯಾಲೋಚಿಸಲ್ಪಡುತ್ತಾ ಇದೆ. ಕಡೂರಿನಿಂದ ಚಿಕ್ಕಮಗಳೂರಿಗೆ ರೈಲುಹಾಕುವ ವಿಷಯದಲ್ಲಿ ಪರಿಶೀಲನೆಗಳನ್ನು ನಡೆಸಲಾಯಿತು. ಹೀಗೆ ರೈಲುಹಾಕಿದರೆ, ಅದರಿಂದ ಸ್ವಲ್ಪವೂ ಲಾಭ ಬರಲಾರದೆಂದು ಅದರಿಂದ ಕಂಡುಬಂದಿತು. ಆದಕಾರಣ, ಅದರ ಯೋಜನೆಯನ್ನೇ ಬಿಡಬೇಕಾಗಿ ಬರುವುದಕ್ಕೋಸ್ಕರ ವಿಷಾದಿಸುತ್ತೇನೆ.

ಜುಡಿಷಿಯಲ್

“ಲಾಸ್ ಡಿಲೇಸ್ ಕಮಿಟಿ” ಎಂಬ ಸಮಿತಿಯವರ ಸಲಹೆಗಳ ಮೇರೆ ಮಹಕಮೆಗಳು [illegible] ಮತ್ತು ಕಾನೂನುಗಳಲ್ಲಿ ಅವಶ್ಯವಾದ ಬದಲಾವಣೆಗಳನ್ನು ಮಾಡುವುದಕ್ಕೆ ಕ್ರಮ ನಡೆಸುತ್ತಾ ಇದೆ. ಮತ್ತೊಂದು ಸಬ್‌ಕೋರ್ಟ್, ನಾಲ್ಕು ಮುನ್ಸೀಫ್ ಕೋರ್ಟುಗಳು, ಮತ್ತು ಎರಡು ಸ್ಮಾಲ್‌ಕಾಜ್ ಕೋರ್ಟುಗಳು, ಇವುಗಳನ್ನು ಸ್ಥಾಪಿಸಲು ಮಂಜೂರಾತಿಯನ್ನು ಕೊಡಲಾಗಿದೆ. ಸ್ಮಾಲ್‌ಕಾಜ್ ಕೋರ್ಟುಗಳಲ್ಲಿ ಒಂದು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುತ್ತದೆ. ಮತ್ತೊಂದು ಮೈಸೂರಿನಲ್ಲಿ ಸ್ಥಾಪಿಸಲ್ಪಡುತ್ತದೆ. ಮೈಸೂರಿನಲ್ಲಿ ಸ್ಥಾಪಿಸಲ್ಪಡತಕ್ಕ ಸ್ಮಾಲ್‌ಕಾಜ್ ಕೋರ್ಟು ಅಲ್ಲಿ ಹಾಲಿ ಇರುವ ಹಂಗಾಮಿ ಸಬ್‌ಕೋರ್ಟಿಗೆ ಬದಲಾಗಿ ಸ್ಥಾಪಿಸಲ್ಪಡುತ್ತದೆ. ಈ ಪ್ರಕೃತ ಕೆಲವು ಕೋರ್ಟುಗಳು ಹಂಗಾಮಿಯಾಗಿ ಸ್ವಲ್ಪಕಾಲ ನಡೆಯಲ್ಪಡತಕ್ಕವಾಗಿರುತ್ತವೆ, ಈಗಿರುವ ಇತರ ಕೋರ್ಟುಗಳಲ್ಲಿ ಬಾಕಿಯಾಗಿ ಉಳಿದಿರುವ ಕೆಲಸವೆಲ್ಲ ಮುಗಿದ, ಮುಂದೆ ಅಲ್ಲಿನ ಕೆಲಸವು ಬೇರೆ ಕೋರ್ಟುಗಳ ಸಹಾಯದಿಂದಲೇ ನಿರ್ವಹಿಸಲ್ಪಡುವಂತಾದೊಡನೆಯೇ, ಅವುಗಳನ್ನು ತೆಗೆದುಹಾಕಿಬಿಡುತ್ತೇವೆ.

ಪಬ್ಲಿಕ್ ಹೆಲ್ತ್ (ಜನಾರೋಗ್ಯ ರಕ್ಷಣೆಯ) ಇಲಾಖೆಯನ್ನು ಪುನಃ ಏರ್ಪಡಿಸಿ ಅದಕ್ಕೆ ಹೆಚ್ಚು ಸಿಬ್ಬಂದಿಯನ್ನು ಮಂಜೂರ್ ಮಾಡಲಾಗಿದೆ.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯವರ [illegible]ಯಲ್ಲಿ ಬಾವಿಗಳನ್ನು ತೋಡುವ ಒಂದು ಶಾಖೆಯನ್ನು ಏರ್ಪಡಿಸಿ, ಅದಕ್ಕೆ ಬೇಕಾದ ಸಲಕರಣೆ ಉತ್ತಮವಾದ ಯಂತ್ರಸಾಧನಗಳನ್ನೆಲ್ಲಾ ಒದಗಿಸಿಕೊಡುವುದಕ್ಕಾಗಿ ಪ್ರಯತ್ನಗಳು ನಡೆಯುತ್ತಿವೆ. [illegible] ಬೇರೆ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ, ಸಮೃದ್ಧಿಯಾಗಿ ಕುಡಿಯುವ ನೀರು ದೊರೆಯುವಂತೆ ಮಾಡಬೇಕಾದುದು ಅವಶ್ಯವಾಗಿದೆ. ಈ ಉದ್ದೇಶವು ನೆರವೇರಬೇಕಾದರೆ, ಶಾಶ್ವತವಾಗಿ ನಡೆಯತಕ್ಕ ಸುವ್ಯವಸ್ಥೆಯನ್ನಿಟ್ಟು ಕೆಲಸ ನಡೆಯಿಸಬೇಕಾದುದು ಆವಶ್ಯಕವಾಗಿದೆ. ಈಗ ಏರ್ಪಡಿಸಬೇಕೆಂದಿರುವ ಶಾಖೆಯವರು ಈ ಭಾಗದಲ್ಲಿ ಹಿತಕರರೀತಿಯಲ್ಲಿ ಕೆಲಸವನ್ನು ಪ್ರಾರಂಭಮಾಡಿ ನಡೆಸುವರೆಂದು ನಂಬಿದ್ದೇವೆ.

ಆಯವ್ಯಯಗಳ ವಿಚಾರ

ಮುಂದಣವರ್ಷದ ಆಯವ್ಯಯದ ಅಂದಾಜುಗಳನ್ನು (ಬಜೆಟ್ ಅಂದಾಜುಗಳನ್ನು) ಪರ್ಯಾಲೋಚಿಸುವುದು, ಈ ಅಧಿವೇಶನದಲ್ಲಿ ನಾವು ನಡೆಸಬೇಕಾದ ಮುಖ್ಯ ಕೆಲಸವಾಗಿದೆ. ಮುಂದಣ ಸಾಲಿನ ಆಯವ್ಯಯದ ಅಂದಾಜನ್ನು ತಮ್ಮ ಗಮನಕ್ಕೆ ತರುವುದಕ್ಕೆ ಮೊದಲು, ಚಾಲ್ತಿಸಾಲಿನ ವಿಷಯದಲ್ಲಿ ಸಿಕ್ಕಿರುವ ಫಲಿತಾಂಶಗಳನ್ನು ಸಂಕ್ಷೇಪವಾಗಿ ವಿಮರ್ಶೆಮಾಡಿ ತಿಳಿಸುವೆನು. ಚಾಲ್ತಿಸಾಲಿನ ಬಜೆಟ್ಟಿನ ಪ್ರಕಾರ 341.71 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂಬುದಾಗಿ ನಿರೀಕ್ಷಿಸಲಾಗಿತ್ತು. ಹುಟ್ಟುವಳಿಯ ಮೊಬಲಗಿನಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳಿಗಾಗಿ 341.25 ಲಕ್ಷ ರೂಪಾಯಿಗಳು ವೆಚ್ಚವಾಗುವುವೆಂದೂ, ಆ ಬಳಿಕ 46,000 ರೂಪಾಯಿಗಳು ಉಳಿಯುವುವೆಂದೂ ಸಹ ನಿರೀಕ್ಷಿಸಲಾಗಿತ್ತು. ಆಯವ್ಯಯಗಳ ವಿಷಯದಲ್ಲಿ ಇದುವರೆಗೂ ದೊರೆತಿರುವ ಸಂಗತಿಗಳ ಆಧಾರದ ಮೇಲೆ, ಚಾಲ್ತಿ ಸಾಲಿಗಾಗಿ ತಿದ್ದುಪಾಟಾದ ಅಂದಾಜುಗಳನ್ನು ಸಿದ್ಧಗೊಳಿಸಲಾಗಿದೆ. ಇದರ ಪ್ರಕಾರ ನೋಡಿದರೆ, ಚಾಲ್ತಿ ಸಾಲಿನಲ್ಲಿ ನಾವು ನಿರೀಕ್ಷಿಸಿದ್ದುದಕ್ಕಿಂತಲೂ 6½ ಲಕ್ಷ ರೂಪಾಯಿಗಳ ಹುಟ್ಟುವಳಿಯು ಕಡಮೆಯಾಗುವುದಾಗಿಯೂ, ಮತ್ತು ವೆಚ್ಚವು 1½ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗುವುದಾಗಿಯೂ ತೋರಿಬಂದಿದೆ. ವಿದ್ಯುಚ್ಛಕ್ತಿಯ ಬಾಬಿನಲ್ಲಿಯೂ ಮತ್ತು ವರಮಾನದ ತೆರಿಗೆಯ ಬಾಬಿನಲ್ಲಿಯೂ ಆದಾಯವು ಕಡಮೆಯಾದುದೇ, ಒಟ್ಟಿನಲ್ಲಿ ಹುಟ್ಟುವಳಿಯು ಖೋತಿ ಕಡಮೆಯಾಗುವುದಕ್ಕೆ ಮುಖ್ಯಕಾರಣವಾಗಿದೆ. ಕೋಲಾರದ ಚಿನ್ನದಗಣಿಗಳ ಕಂಪೆನಿಗಳವರು ಉಪಯೋಗಿಸಿದ ವಿದ್ಯುಚ್ಛಕ್ತಿಯ ಪರಿಮಾಣವು ಕಡಮೆಯಾಯಿತು. ಈ ಕಂಪೆನಿಗಳ ಲಾಭದಲ್ಲಿ ವರಮಾನದ ತೆರಿಗೆಗೆ ಗುರಿಯಾಗಬೇಕಾದ ಮೊಬಲಗೂ ಕೂಡ ಕಡಮೆಯಾಯಿತು. ಹತ್ತಿಯ ಗಿರಣಿಗಳಲ್ಲಿ ತಯಾರಾದ ಸರಕುಗಳ ವ್ಯಾಪಾರವೂ ಕುಂದಿತ್ತು. ಇದಕಾರಣ, ವರಮಾನದ ತೆರಿಗೆಯ ಬಾಬಿನಲ್ಲಿ ಸು. ಮಾ. 1 ಲಕ್ಷ ರೂಪಾಯಿಗಳ ಹುಟ್ಟುವಳಿಯು ಕಡಮೆಯಾಯಿತು. ಸೆಂಟ್ರಲ್ ಇಂಡಸ್ಟ್ರಿ[illegible] ವರ್ಕ್‌ಶಾಪು ಮತ್ತು ಸರ್ಕಾರದ [illegible] ಕಾರ್ಖಾನೆ, ಇವುಗಳಲ್ಲಿಯೂ ದಾಸ್ತಾನಿನ ಮಾಲಿನ ಸ್ಥಿತಿಗತಿಗಳಿಗನುಸಾರವಾಗಿ ಮತ್ತು ಬೆಲೆ [illegible] ಅದರ ಫಲಿತಾಂಶವಾಗಿ 1 ಲಕ್ಷ ರೂಪಾಯಿಗಳ ಮೊತ್ತವನ್ನು ಲೆಕ್ಕಗಳಿಂದ ವಜಾಕೊಡಬೇಕಾಯಿತು. ಇದಕಾರಣ, ಕೈಗಾರಿಕೆಗಳ ಬಾಬಿನಿಂದ ಹುಟ್ಟುವಳಿಯು ೧ ಲಕ್ಷ ರೂಪಾಯಿಗಳು ಕಡಮೆಯಾದಂತಾಯಿತು.

ಖೋತಿ ಮೊಬಲಗುಗಳು ಕಡಮೆಯಾದುದಕ್ಕೆ ಪ್ರತಿಯಾಗಿ ಕೆಲವು ಬಾಬುಗಳಲ್ಲಿಯ ಹುಟ್ಟುವಳಿಯು ಹೆಚ್ಚಿ ಅದರಿಂದ ಸ್ವಲ್ಪಮಟ್ಟಿಗೆ ಅನುಕೂಲವಾಯಿತು. ಹೀಗೆ ಹುಟ್ಟುವಳಿಯು ಹೆಚ್ಚಿದುದು ಅಬಕಾರಿಕಂದಾಯ, ಫಾರೆಸ್ಟು ಮತ್ತು ರೈಲ್ವೆಗಳು ಈ ಮೂರು ಬಾಬುಗಳಲ್ಲಿ. ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದು ಲಕ್ಷ ರೂಪಾಯಿಗಳಷ್ಟು ಹೆಚ್ಚು ವರಮಾನವು ಬಂದಿತು. ಗಂಧದ ಎಣ್ಣೆಯ ವ್ಯಾಪಾರವು ತೃಪ್ತಿಕರವಾಗಿ ನಡೆಯಿತು. ಫಾರೆಸ್ಟು ಬಾಬಿನಲ್ಲಿ ಹುಟ್ಟುವಳಿಯು ಹೆಚ್ಚಿದುದಕ್ಕೆ ಇದೇ ಕಾರಣ. ರೈಲ್ವೆ ಬಾಬಿನಲ್ಲಿ ಹುಟ್ಟುವಳಿಯು ಹೆಚ್ಚಿದುದಕ್ಕೆ ಎರಡು ಕಾರಣಗಳಿದ್ದುವು; ಮೊದಲನೆಯದು, ರೈಲ್ವೆಗಳ ವರಮಾನವು ಹೆಚ್ಚಿದುದು, ಎರಡನೆಯದು, ರೈಲ್ವೆಗಳಲ್ಲಿ [illegible] ವೆಚ್ಚವು ಕಡಮೆಯಾದುದು. ಈ ಎರಡು ಕಾರಣಗಳಿಂದ ಒಟ್ಟಿನಲ್ಲಿ ಈ ಬಾಬಿನಿಂದ ಬಂದ ಹುಟ್ಟುವಳಿಯು ಹೆಚ್ಚಿತು.

(ಸಶೇಷ)

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಶ್ರೀಮನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ “ಪಂಚಾಚಾರ್ಯಪ್ರಭಾ” ಎಂಬೀ ವೃತ್ತಪತ್ರಿಕೆಯನ್ನು ಹೊರಡಿಸುವುದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವುದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂಬ ಸದರಿ ಪಂಡಿತರು ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಬಿನ್ನೈಸುತ್ತೇವೆ.

ಸಂಪಾದಕರು.

ASIATIC GOVERNMENT SECURIT
LIFE ASSURANCE CO. LTD., MYSO

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರು

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮಾ ಸಂಘಗಳ ಮುಂದಾಳಾದುದು.

ಆದ್ದರಿಂದ ಯಾವಾಗಲೂ “ಏಷ್ಯಾಟಿಕ್” ಒಂದರಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಅ ವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂ ನಿವಾಸಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಯಂಗಾ 31 ನೆಯ ಜುಲೈ 1927 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿ ಬಗ ಬರೆಯಬಹುದು.

ಸಯ್ಯಾಜಿರಾವ್ ರೋಡ್, ಮುಖ್ಯ ಏಜಂಟ
[2] ಮೈಸೂರು. *Asiatic Build*

ಡಾಕ್ಟರ್ ಜೀ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯ ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಜನ ಇದನ್ನು ಉಪಯೋಗಿಸಿ, ಸಾವಿರಾರು ಯೋಗ್ಯತಾ ಗಳನ್ನು ಕೊಟ್ಟಿ ರು. ಪ್ರಸಿದ್ಧ ಈ ನಶ್ಯದಿಂದ ಸ್ವಸ್ಥ ವ ವ್ಯಾಧಿಗಳು ಯಾವುವೆಂದರೆ:— ಒಂಟಿತಲೆನೋ ತಲೆಯಲ್ಲಿನ ರು ವು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ ಬುದ್ಧಿಹೀನ ಮುಂತಾದ ವ್ಯಾಧಿಗಳು ಪರಿಹಾರ ವನ್ನಲ್ಲದೆ ಕಂಠಕ್ಕೆ ಮೇಲ್ಪಟ್ಟ ೭೦ ವ್ಯಾಧಿಗಳ ನ್ನ ನಷ್ಟಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚಿ ಸುತ್ತದೆ. ಮಾರುಕಟ್ಟೆಯ ಸಾಧಾರಣ ನಶ್ಯದ ಸ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ನ್ನು ಅನೇಕ ವೈದ್ಯರುಗಳು ತಮ್ಮ ಗೃಹದಲ್ಲಿ ಕು ಔಷಧವಾಗಿ ಉಪಯೋಗಿಸುತ್ತಾರೆ. ಮಾದ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೯-೦. ವಿ.ಪಿ. ೦
ಡಜನ್ ಒಂದಕ್ಕೆ ಕ್ರಯ ರೂ. ೬-೮-೦.

ವಿ.ಪಿ. ಚಾರ್ಜ ಬ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಚನ್ನಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—

ಗುರುಬಸವ ಅಂಡ್ ಕಂಪನಿ ಲಿಮಿಟೆ
[1] ಪೋ. ಬಾ. ೨೧೭೦, ಮದರಾಸು.

ಶ್ರೀ ಮೈಸೂರು [illegible] ರೋಡಿನ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅ
ವ್ಯಾ. ವೇ|| ಬ್ರ|| ಪಂಡಿತ [illegible] ಗು
ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಶ್ರೀ ಜಗದ್ಗುರು ಪಂಚಾಚಾರ್ಯಾನುಪ್ರಸೀದಂತು

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀನಂದಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಸ್ಸಂರಕ್ಷಿತ್ವರೀಲೋಕಕಂ ॥

ಸಂಪಾದಕರು— ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಜೂನ್ ೧೯೨೭ ಇಸವಿ [ಸಂಚಿಕೆ ೭.

ಶ್ರೀ ಜಗದ್ಗುರು ಪಂಚಾಚಾರ್ಯ ಸ್ತುತಿತ್ರಯಂ.

(ಕಂದಪದ್ಯ)

ರುಗಳ್ **ಪಂಚಾಚಾರ್ಯರ್** |
ವರರ್ **ಚಾರುಸಿಂಹಪೀಠಾಧೀಶರ್** ||
ಗಿಪರಾ **ಚಾರಪರರ್** |
ಗ ಶಿಷ್ಯ **ರ್ಯರ್ಗಳ್** ವಿಶೇಷಶೌರ್ಯಸಮೇತರ್ ||

ಮೊಳು **ಪ್ರ**ತಿಯುಗಗಳೊಳು |
ತ ಚಿತ್ರ **ಭೆ**ಯಿಂದಪುಟ್ಟಿಲಿಂಗಗಳೊಳು ದು ||
ತ ಗ ಳ **ಗೆ**ಲ್ದಿಂ ಶಾಸನ |
ದ ವಿ **ಜ**ಯಕೇತುವಾಗಿಮೆರೆದಮಹಾತ್ಮರ್ ||

ಬೆ ಧಿ **ಯ**ಜ್ಞೇಶ್ವರನಿ |
ಮು ನಿ **ವಾ**ರಕ್ಕೆಂಬುಲಿಂಗದೊಳುಂ ||
ದಿ ತ್ತಾ **ಗ**ಣನಾಥರ್ |
ನೀ ಯ **ಲಿ** ಶ್ರೀ ಸೌಖ್ಯಸುಂದರೇಶ್ವರವಿನುತರ್ ||

ಈ ಕಂದಪದ್ಯಗಳಲ್ಲಿ ಮೊದಲಿನ ನಾಲ್ಕು ಅಕ್ಷರಗ ಬಿಟ್ಟು ಐದನೆಯ ಅಕ್ಷರಗಳನ್ನು ಹೊಂದಿಸಿ ಳು "ಪಂಚಾಚಾರ್ಯಪ್ರಭೆಗೆ ಜಯವಾಗಲಿ" ು ಹೊರಡುವವು.

15-6-1927, ಲೇಖಕ— ಬೃಹನ್ಮಠಾಧ್ಯಕ್ಷ
ಕೊಪ್ಪ. ಅಮರನಾಗರಪುರ.

ಓಂ

ವೀರಶೈವ ಮತಸ್ಥಾಪನಾಚಾರ್ಯ ಶ್ರೀಮ ಭಾಪುರೀ ವೀರಸಿಂಹಾಸನಾಧೀಶ ವ್ಯಾಕರಣ ರ್ಥ ವಿದ್ಯಾಭೂಷಣಾದ್ಯನೇಕ ಬಿರುದಾಂಕಿತ ಗುರು ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಹಾಸ್ವಾಮಿ ದಿವ್ಯಪಾದಾರವಿಂದ ಸನ್ನಿಧಿಯಲ್ಲಿ ಅತ್ಯಂತ ಭಯಭಕ್ತಿಯಿಂದರ್ಪಿಸಿದ

ರತ್ನಮಂಜರಿ

ಕಂದ.

ಸಿದ್ಧಗಿ ಮನೆಮಾಡಂ
ಶಾಂತಕನಪಿತಾಮಹ ವಂದಿತಸುಪದಂ ।
ತಫಲ ಪ್ರದಾತಂ ।
ಲ ಶ್ರೀ ರೇಣುಕಾಚಾರ್ಯನೀವ್ಗೆ ಫಲಿಯಂ॥೧॥

ಭಾಮಿನೀ ಷಟ್ಪದಿ

ವಾಕೀ ಪುರದೊಳಿರುವ ।
ನ ಸೋಮೇಶಲಿಂಗವ [ದೋ॥
ರಂ ಬಯಸಿದಾನವನಿಗೆ ಪುಟ್ಟಿದನೆಯುಮ
ಲ ಬಿಪ್ಪ ನಮನನಾದನ
ಧರ್ಮಗಳಿತಿರ್ಪರೊ
ಗಿಣಿ ಧವಳರೇಣುಕ ಸೋಮೇಶಗಣಂ ॥೨॥

ರಾವಣಾಸುಬಗೋಳಿದುಲಿಂಗದ |
ಭಾವಜಾರಿಗೆ ನಪ್ಪಕನಾದನು |
ಕೋವಿದರ್ನೋಡಿ ಪೊಗಳ್ವವೋಲ್ಕೆ ಲೆಗೊಳಿಸಿ ಲಂಕೆಯಲಿ||
ಭೂವಿನುತನೆನಿಸಿರ್ಪಗಸ್ತ್ಯನ |
ದಾವಸಿಕ್ತಯ ಕೇಳ್ದು ಜನಿಸ್ಯತಿ |
ಸೇವನಲ್ಲದೆ ಸುಖವನಾಂತಿರುತಿರ್ದನವನೊ ಸತತಂ ||

ಶಂಕರಾಚಾರ್ಯನಿದಾವೆಗುರುವಂ |
ಶಂಕಿಸದೆ ನಿಜಪೂಜೆಗೆಯ್ದು ಕ |
ಲಂಕನಾಶಕ ಲಿಂಗವಾಂತಿಳೆಯಲ್ಲಿ ಮೆರೆದಿಪನೋ ||
ಸಂಕಟದ ಪರಿಹರಿಸಿ ತನ್ನಯ |
ಕಿಂಕರರನರಿ ಪೊರೆದ ಘನಮಹಿ ।
ಮಾಂಕ ರೇವಣಸಿದ್ಧಸಂಜ್ಞಗ ನಮಿಸುವೆನುಮುದದಿ ||

ಪರಮಪಾವನ ಚರಿತರೆನಿಸಿದ |
ವರವಸಿಷ್ಠ ದಧೀಚಿ ಭೃಗುಕ |
ಣ್ವರುಗಳೆಂದೆನಿಸಿಕೊಳ್ಳುವರು ತಪಸಿನೊಳುಬೆರೆದಿರ್ಪ ||
ಸಿರಿಪದವನಾನಮೆನಿಪ್ಪಷ್ಟ್ಯಮೆಯ |
ಧರೆಗೆ ತೋರಿಸಿದರ್ಪಗುರುವರ |
ದುರಿತಹರ ಗುರುಸಿದ್ಧಲಿಂಗಾಚಾರ್ಯಗೆರಗುವೆನು||[illegible]||

ಪುಲಿಗಳುಂ ಪಾವುಗಳುಮಾದವ ,
ಬಳಿಮಾಕಿರ್ಪವೊ ಸೌಮ್ಯಭಾವದೆ
ಸಲೆದುರ್ವಾಸರ ಸಿದ್ಧಲಿಂಗಯತೀಂದ್ರನಾಗುರುವು ||
ಒಲಿದಸಾಹಸದಿಂದೆವಿಶ್ವನ ।
ನೆಲೆಗೊಳಿಸಿ ರೇಣುಕರ ಪೀಠದಿ [ಸನು||
ನೆಲದೊಳಗೆರಾಂ ವಿಪುಲಕೀರ್ತಿಯನಾಂತು ಶೋಭಿ

ಆತನೇಂ ಬಾಲಕನ ಬಗೆವೊಡೆ ।
ನೀತಿಶಾಸ್ತ್ರ ವಿಶಾರದನುನಿ । [ವಂ||
ಘಾತಿಯಿಂದ ರಸಿಗೆಯ್ದು ಬಿಕ್ಕಾಂಬುಧಿಯೊಳಗೆ ತನ
ಖ್ಯಾತನದರಿಂ ನಿನ್ನೀ
ವ್ಯಾತಿಪೀಠದೊಳಿರ್ಪ ಪಟ್ಟದ |
ನೋತು ಕಟ್ಟಿದನಿಗೆ ಮಂಗಳವಾಗಲೋಸುಗವೆ ||

ನಿಮಗೆ ಲಭಿಸಿತುಲೀ ಮಹತ್ವವು ।
ಶಮದಮಾದಿನಿಸತ್ಕ್ರತಕೆ ನೀವೆ
ಪ್ರಮದದಿಂದಾಲಿಪುದೆನ್ನ ವಿನಯವನೊಲಿದು ಬಿಗನಿಲಿದು
ಅನುಪಮ ಪೇಳುವುದೇನು ಸಮ್ಯಾ
ಕ್ರಮವನೀಧರೆಯಲ್ಲಿಸತ್ತ್ರರ
ಮಮತೆಯಿಂದೀಕ್ಷಿಸುವೆ ದುಃಖದ ದುಸ್ತರತೆಯಿರಲಂ ||

ಜನರು ಕಾರ್ಯ ಶ್ರೀಪ್ರಕೆನ್ನ ಕ
ಮನದೊಳಗೆ ಸಂಶಯ ಕೆಡುವರು
ಮನಸಿನಿಂ ಪಾದನಮತಾನ್ನ ನಮಿಸುತಿಹರು ||
ವಸಿತೆಯುರು ಕೆಬರಕಕೆಟ್ಟರು
ಕನರುರಸಿಸರು ಮರುಳಾದರು ।
ಶ್ರೀ ಶಿವಾನಂದಾಚಾರ್ಯದೇಶಿಕ ಸೇಲಲೇಶಿಸು [೯||

ಕನ್ನಡಿಯು ಶ್ರೀ ಎಮೆದಿಸ ಸುಲಲಿತ
ಕನ್ನಡವನೋಲ್ದನರೆ ಇಲ್ಲಿಪ ।
ಕನ್ನಡ [illegible] ತಹಪಕ್ಕಡಮರೆದು ಪೋಗುವುದು ।
ಮುನ್ನಿನಸುಷ್ಕೃತ ಕವಿಕೃತಿಗಳುಂ |
ಬನ್ನ ಕೆಳೆಗಾಗಿ ಪ್ರಾಕಟಾ |
ಸನ್ನುತನೆ ಸಾಹಿತ್ಯಮೆಮ್ಮದು ಲಯವನೊಂದಿಯುದು ||

ವೀರಶೈವಮತಾಬ್ಧಿ ಬತ್ತಿತು |
ವೀರಶೈವನಭೂಮಿಮೊಣಗಿತು |
ವೀರಶೈವಮಹಾದ್ರಿ ಪುಡಿಪುಡಿಯಾಗುತಿಹುದೀಗ ||
ನಾರದರ ಶಿವರಾಜ ದೇಶಿಕ |
ತೋರಿಕರುಣವನೆಮ್ಮ ಮತವನು | [ಮಹೋ||
ಧಾರಣೆಯುಳಭಿವೃದ್ಧಿಯೊಂದುವ್ವೋಲೆಸಗುವುದುಗು

ದನಗಳಿಹರು ಕೆಲರು ಗುರುಗಳ |
ಮನಸಿಜಗೆ ತುತ್ತಾಗುತಿರ್ಪರು |
ಜನದೊಳಗೆ ಕಲಹವನು ಪೆರ್ಚಿಸುತಿರ್ಪರುಕೆಲರು ||
ಇಸಿತು ತಿಳಿವಿಲ್ಲದೊಡಮುರುಜಿನ್ನ |
ಯನತನ್ನವ ಬೋಧಿಸರು ಕೆಲ |
ರನಿಬರನು ಕಿವಿಸುತ್ತಸುಮ್ಮನೆ ಪೊಟ್ಟೆಕಳೆಯುವರು ||

ಕೆಟ್ಟುಪೋದುದು ನಮ್ಮ ದೇಶವು |
ಕೆಟ್ಟುಪೋದುದು ನಮ್ಮ ಮತಮುರಿ |
ಕೆಟ್ಟುಪೋದುದು ನಮ್ಮ ಭಾಷೆಯು ಕೇಳ್ವರಿಲ್ಲದಲೇ ||
ಸಿಟ್ಟಿಸಿದನಡಿಗಡಿಗೆಮ್ಮಯ |
ಮೊಟ್ಟೆಯುರುಯುಕ್ತಿ ಮಹಾ ಗುರುವರ |
ಕೊಟ್ಟುರಕ್ಷಿಪುದಭಯವನು ಭಕ್ತರನು ನಿಮ್ಮಯಯಿಂ ||

ನೋಡಿನೀಂದಯೆಗೂಡಿ ಮರಿತಪ ,
ಗಾಡಿಯನು ಮಾಣಾಪ ರೂಪವನು ,
ಮಾಡಿ ಭಕ್ತರ ಬೇಡಿದಿಷ್ಟವ ನೀಡಿಪೊರೆಯುವುದು ||
ರೂಢಿಗೆರವನ ಚಂದ್ರಚೂಡನ |
ಗಾಢದಿಂದೀ ಕೇಡನೆಲ್ಲವ |
ಕಾಡಿಗಟ್ಟುತ್ತ ಮೂಢಜನರನು ನೋಡಿಪೊರೆಯುವುದು ||

ಮಾದರನ್ನಯ ವಾರ್ಧಿವರ್ಧಕ
ನಾದಪಸಕ್ತದ್ಧೈಂದ್ರನೊಲವಿಂ ||
ಮೇದಿನಿಯೊಳಗಿಮರೆವ ನಿಮ್ಮಯ ಧರ್ಮಸೀರಕ್ಷೆ |
ಸಾದರಂ ನೆರವಾಗುತಿರ್ಪುದು |
ಮೋದಭಕ್ತರ ಪುಣ್ಯಫಲವೋ |
ವೇದಸಮ್ಮತ ರೇಣುಕಾಚಾರ್ಯರ ಮಹಿಮೆಯೋಜಗದು ||

ಚಿಕ್ಕತನದಿಂ ಸಲಹಿ ನಿಮ್ಮನು
ಚಕ್ಕ ನಡೆನುಡಿಗಳನೆ ತಿಳಿಪ್ಪಿ
ತ್ರ್ಯಕ್ಷರಂಗದಿರವೆ ಕಲಿಸುತೆ ಪೊರೆದ ಘನಮಹಿಮಂ ||
ಸಕ್ಕದತ ತೌರುರವೆನಿಸುತೆ
ಟಕ್ಕಟಿಕ್ಕಿಗೆ ಮಹಿಮೆಯಿರದ
ಮಿಕ್ಕ ಶಿಷ್ಯರುಬಯಸಿದ ಶಾರದಿ ಗುರುವಿಗೆರಗುವೆನು ||

ಶಿವಮೂರ್ತಿಶಾಸ್ತ್ರಿನಾಮಕ
ಕವಿಮಾಡಿದಿಂ ವಚಿಸಿ ರತ್ನ ಮಂಜರಿಯನಿದಂ ||
ಭವಹರರೇಣುಕಸಂಘಗ
ತವಕದಿ ತಾನಿತ್ತು ಸುಕೃತಭಾಜನನಾದಂ ||೧೭||

ಸಂಪೂರ್ಣ.

ಪಂಚಾಚಾರ್ಯಪ್ರಭಾ

೧೯೨೭ನೇ ಜೂನ್ ತಾ|| ೨೭ನೇ ಸೋಮವಾರ

ಪಂಡಿತ ಮಾಲವೀಯರವರ ಸಮಾಗಮನವು.

ಪಂಡಿತ ಮದನಮೋಹನಮಾಲವೀಯರವರು ಮೈ ರಿಗೆ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕಾ ದಲ್ಲಿ ಸರ್ಕಾರದ ಅತಿಥಿಗಳಾಗಿ ದಯಮಾಡಿಸಿದ್ದು ದ ಂದ ಮೈಸೂರು ನಿವಾಸಿಗಳು ಇವರ ಸಮಾಗಮನವ ಬಯಸಿ ಇವರ ಆಗಮನದಿಂದ ಮೈಸೂರಿನ ಜನರಿಗೆ ದ ಸಂತೋಷವನ್ನು ಪ್ರದರ್ಶಿಸಲು ಟೌನ್ ಹಾಲಿನಲ್ಲಿ ಂದು ಸಭೆಯನ್ನು ನಡೆಯಿಸಿದರು. ಈ ಸಭೆಗೆ ವಾನರೇ ಆದಿಯಾಗಿ ಅನೇಕಮಂದಿ ಸರ್ಕಾರಿ ಉದ್ಯೋಗಸ್ಥರೂ, ಇತರ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು.

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಸರ್ವಾನುಮತ ಂದ ಆಗ್ರಾಸನವನ್ನು ಸ್ವೀಕರಿಸಿ ಪಂಡಿತರ ಗುಣಕ ನವನ್ನು ಮಾಡಿ ಸಭಿಕರಿಗೆ ಇವರ ಪರಿಚಯವನ್ನುಂ ಟುಮಾಡಿಸಿ ಇಂಡಿಯಾದೇಶದಲ್ಲಿ ಹಿಂದುಗಳ ಮತ್ತು ಮಸಲ್ಮಾನರ ಮಧ್ಯದಲ್ಲಿ ಹುಟ್ಟಿರುವ ಕಲಹವೂ, ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಮಧ್ಯದಲ್ಲಿರುವ ರಸ್ಪರವೈಮನಸ್ಯವೂ ನಿವಾರಣೆಯಾಗಿ ದೇಶದಲ್ಲೆಲ್ಲಾ ಶಾಂತಿಯು ನೆಲೆಗೊಂಡು ಪ್ರಜೆಗಳಿಗೆ ಸೌಖ್ಯವುಂಟಾಗುವ ವಿಷಯದಲ್ಲಿ ಪಂಡಿತರ ನುಡಿಯಿಂದ ಸಲಹೆ ಳನ್ನು ಮತ್ತು ಬುದ್ಧಿವಾದವನ್ನೂ ಕೇಳಬೇಕೆಂದ ಂಡಿತರನ್ನು ಪ್ರಾರ್ಥಿಸಿದರು.

ಪಂಡಿತಮಾಲವೀಯರವರು ಸುಮಾರು ಒಂದುವರೆಗಂಟೆಯ ವರೆಗೆ ತಮ್ಮ ಮಧುರವಾಣಿಯಿಂದ ಸರಸವಾಗಿ ಭಾಷ ಣಮಾಡಿದರು. ಮೈಸೂರಿನ ಜನರು ಪಂಡಿತರಿಗೆ ತೋರಿದ ಪ್ರೀತಿವಿಶ್ವಾಸಗಳಿಗಾಗಿ ವಂದಿಸಿ ಇಂಡಿಯಾದೇಶೀಯರ ಪ್ರತಿಯೊಂದು ಪಂಗಡದವರು ಮತ್ತು ಪ್ರತಿಯೊಂದು ಜಾತಿಯವರು ಪರಸ್ಪರಪ್ರೀತಿವಿಶ್ವಾಸಗಳಿಂದ ಕೂಡಿರುವವರಾಗಿ ದೇಶದ ಮೇಲ್ಮೆಯನ್ನು ಮುಂದಾಗಿ ಟ್ಟುಕೊಂಡು ಕಾರ್ಯಭಾಗವನ್ನು ಮಾಡಬೇಕೆಂಬುವುದೇ ತಮ್ಮ ಅಭಿಪ್ರಾಯವೆಂದೂ, ದಾದಾಭಾಯಿನವರೋಜಿ, ತ್ಯಾಬ್ಜಿ, ಬಾನರ್ಜಿಯೂ ಮುಂತಾದವರು ರಾಷ್ಟ್ರೀಯಮಹಾಸಭಾಧ್ಯಕ್ಷತೆಯನ್ನು ವಹಿಸಲು ಇ ನ್ವಾಸಕ್ತ ವರು. ಆದ್ದರಿಂದ ದೇಶೀಯರೆಲ್ಲರೂ ಭಾವಿಸಿದ್ದೇ ಕಾರಣವೆಂದೂ ಇಂಡಿಯಾದೇಶದ ಮೇಲ್ಮೆಯುಂಟಾಗಬೇಕಾದರೆ ಮತ ಮತ್ತು ಜಾತಿಸಂಬಂಧವಾದ ವಿಷಯಗಳಲ್ಲಿ ಸಂಕುಚಿತಬುದ್ಧಿಯನ್ನು ಬಿಟ್ಟು ಪರಸ್ಪರ ಪ್ರೇಮಭಾವದಿಂದ ವರ್ತಿಸಬೇಕೆಂದೂ, ಇಂಡಿಯಾದೇಶದಲ್ಲಿ ವಾಸಮಾಡುವವರೆಲ್ಲರೂ ಇಂಡಿಯಾದೇಶೀಯ ರೆಂಬ ಭಾವನೆಯನ್ನು ಮುಂದಾಗಿಟ್ಟುಕೊಂಡಿರಬೇಕೆಂದೂ, ಜಪಾನದೇಶೀಯರು ಮುಂದುವರಿಯಲು ಮತಸಂಬಂಧವಾದ ವಿಷಯಗಳಲ್ಲಿ ಪರಸ್ಪರವಾಗಿದ್ದ ವಿರೋಧಭಾವವನ್ನು ತೊರೆದುದೇ ಕಾರಣವೆಂದೂ ಹೇಳಿದರು.

ನಮ್ಮ ದೇಶದ ಸ್ಕೂಲುಗಳಲ್ಲಿ ದೇಶಾಭಿಮಾನವನ್ನುಂಟುಮಾಡುವ ವಿದ್ಯಾಭ್ಯಾಸವನ್ನು ಮಾಡಿಸದಿರುವುದೊಂದು ದೊಡ್ಡ ಕೊರತೆಯೆಂದೂ, ಈ ಕಾರಣದಿಂದಲೇ ನಾವುಗಳು ಮತ ಮತ್ತು ಜಾತಿಸಂಬಂಧವಾದ ವಿಷಯಗಳಲ್ಲಿ ಸಂಕುಚಿತಭಾವವುಳ್ಳವರಾಗಿ, ದೇಶದ ಮೇಲ್ಮೆಗಾಗಿ ಕೆಲಸಮಾಡುವುದು ವಿರಳವಾಗಿರುವದೆಂದೂ, ದೇಶಾಭಿವೃದ್ಧಿಗಾಗಿ ಸರ್ವ ಮತಸ್ಥರೂ, ಸರ್ವ ಜಾತಿಯವರೂ ಏಕಮನಸ್ಕರಾಗಿ, ಏಕಮತ್ಯದಿಂದ ವರ್ತಿಸಬೇಕೆಂದೂ ಇಂಗ್ಲೀಷ್ ಜನರ ಮಹೋನ್ನತಿಗೆ ಅವರಲ್ಲಿರತಕ್ಕ ದೇಶಾಭಿಮಾನ ಮತ್ತು ಐಕಮತ್ಯ, ದೃಢಮನಸ್ಸು, ಸತತಪ್ರಯತ್ನ, ಇವೇ ಮುಖ್ಯ ಕಾರಣವಾಗಿರುವವೆಂದೂ ಅಪ್ಪಣೆಕೊಡಿಸಿದರು.

ಮೈಸೂರಿನಲ್ಲಿ ಬ್ರಾಹ್ಮಣರಿಗೂ, ಬ್ರಾಹ್ಮಣೇತರರಿಗೂ ವೈಮನಸ್ಯವಿರುವುದನ್ನು ಕೇಳಿ ಬಹಳ ವ್ಯಸನವಾಗುತ್ತದೆಂದೂ ಪ್ರಪಂಚದಲ್ಲಿ ಜೀವಿಸುವ ಪ್ರತಿಯೊಬ್ಬರಿಗೂ ದೇವರಿಂದ ಸ್ವಕಪಡುವುದೆಂದೂ, ದೇಶಾಭಿವೃದ್ಧಿಗೆ ಬ್ರಾಹ್ಮಣರು ಹೇಗೋ ಹಾಗೆಯೇ ಬ್ರಾಹ್ಮಣೇತರರೂ ಆವಶ್ಯಕವೆಂದೂ, ಪ್ರತಿಯೊಂದು ಜಾತಿಯವರು ವಿದ್ಯಾಭ್ಯಾಸ ಮುಂತಾದ ಪ್ರತಿಯೊಂದು ವಿಷಯದಲ್ಲಿಯೂ ಮುಂದುವರಿಯಲು ಸಾಕಷ್ಟು ಅನುಕೂಲಗಳನ್ನು ಕಲ್ಪಿಸಬೇಕೆಂದೂ, ಮಿ. ಜಿ. ಪಿ. ಜೋನ್ನಾರವರು ಬ್ರಾಹ್ಮಣರಲ್ಲದಿದ್ದರೂ ಅವರ ವಿಜ್ಞಾನಶಾಸ್ತ್ರದ ಉಪನ್ಯಾಸವನ್ನು ಕೇಳಿ ಯಾರು ತಾನೆ ಸಂತೋಷಪಡುವುದಿಲ್ಲವೆಂದೂ. ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳಲ್ಲಿ ಪರಾಕಾಷ್ಠತೆಯನ್ನು ಹೊಂದಿದ್ದ ಬ್ರಾಹ್ಮಣೇತರರು ಹಿಂದೆ ಗಣನಾತೀತರಾಗಿದ್ದರೆಂದೂ, ಶ್ರೀರಾಮ, ಶ್ರೀಕೃಷ್ಣ, ಮತ್ತು ಬುದ್ಧ ಇವರು ಬ್ರಾಹ್ಮಣರಾಗಿರದಿದ್ದರೂ ಇವರ ವಿಗ್ರಹಗಳಿಗೆ ಬ್ರಾಹ್ಮಣರೂ ಸಹ ಸಾಷ್ಟಾಂಗಪ್ರಣಾಮವನ್ನು ಮಾಡುತ್ತಿರುವುದರಿಂದ ಎಲ್ಲಿ ಗುಣವಿದೆಯೋ ಅದು ಸರ್ವರಿಂದಲೂ ಗ್ರಾಹ್ಯವಾಗತಕ್ಕದ್ದೆಂದೂ, ಬ್ರಾಹ್ಮಣರ ವಿಷಯದಲ್ಲಿ ಬ್ರಾಹ್ಮಣೇತರರು ಸಂಕುಚಿತಭಾವವನ್ನು ಬಿಡಬೇಕೆಂದೂ ಬಹು ಮನೋಹರವಾಗಿ ಹೇಳಿದರು.

ಬ್ರಾಹ್ಮಣರು ತಮ್ಮ ಪೂರ್ವಿಕರ ಮಾರ್ಗವನ್ನು ಅನುಸರಿಸಿ ಪೂರ್ವಿಕರ ಯಶಃಕಾಯವೇ ಬೆಳಗುವಂತೆ ಮಾಡಬೇಕೆಂದೂ ಇದೆಯೂ, ಪಾರಮಾರ್ಥಿಕ ಜ್ಞಾನವೂ, ವೈದ್ಯವಾಗಿ ಬ್ರಾಹ್ಮಣರು ಮಾಡಿದ ಸಾಹಸವೇ ಪ್ರಶಂಸನೀಯವಾದದ್ದೆಂತಲೂ ಇವರು ಸ್ವಾರ್ಥಪರರಾಗದೆ ಪ್ರತಿಯೊಬ್ಬ ದೇಶೀಯನ ಮೇಲ್ಮೆಯನ್ನು ತಮ್ಮ ದೃಷ್ಟಿಪಥದಲ್ಲಿಡಬೇಕೆಂತಲೂ ಇವೇ ಮೊದಲಾದ ವಿಷಯಗಳನ್ನು ಅಪ್ಪಣೆಕೊಡಿಸಿದರು.

ನೂಲುವುದೂ, ನೇಯುವುದೂ ಮುಂತಾದ ಮನೆಯಲ್ಲೇ ಮಾಡಬಹುದಾದ ಉದ್ಯೋಗಗಳು ಉಪಯುಕ್ತವಾದವುಗಳೆಂತಲೂ ಮೈಸೂರಿನ ಶ್ರೀಮನ್ಮಹಾರಾಜರವರು ನೂಲುವುದನ್ನು ಅಭ್ಯಾಸ ಮಾಡುತ್ತಿರುವರೆಂತಲೂ, ಆದುದರಿಂದ ನೂಲುವುದು ಗೌರವದ ಉದ್ಯೋಗವಲ್ಲವೆಂದು ಯಾರೂ ಭಾವಿಸಬಾರದೆಂತಲೂ, ಮೈಸೂರಿನಲ್ಲಿ ೩೦೦೦೦ ಕೆರೆಗಳು ಇರುತ್ತವೆಂದು ತಿಳಿಯುತ್ತದೆಂತಲೂ, ಇವುಗಳ ಕಾಮಗಾರಿಯನ್ನು ಮಾಡಿಸಿ ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿದ್ದರೆ ವ್ಯವಸಾಯಗಾರರಿಗೆ ಮಳೆ ಹೋದಕಾಲದಲ್ಲಿ ಬಹಳ ಸಹಾಯವಾಗುತ್ತದೆಂತಲೂ. ಜನರು ಪ್ರತಿಯೊಂದಕ್ಕೂ ಸರಕಾರದವರ ಸಹಾಯವನ್ನು ನಿರೀಕ್ಷಿಸಿ ಸುಮ್ಮನಿರುವುದು ಸರಿಯಲ್ಲವೆಂತಲೂ ಜನರೆಲ್ಲರೂ ತಮ್ಮ ಕೈಲಾದಮಟ್ಟಿಗೆ ಕೆಲಸಮಾಡಲು ಸಿದ್ಧರಾಗಿರಬೇಕೆಂತಲೂ, ಅಸ್ಪೃಶ್ಯರೆಂದಲ್ಲಿರುವ ಕೆರೆಯನ್ನು ಕಾಮಗಾರಿಮಾಡಲು ಪ್ರಯತ್ನಪಟ್ಟಾಗ ಪಟಿಯಾಲಾ ಮಹಾರಾಜರು ಮೊದಲುಗೊಂಡು ಅನೇಕ ಸೀಕಾಜನರೂ ಮತ್ತು ಪಂಡಿತರೂ ಮಣ್ಣನ್ನು ಹೊತ್ತುಹಾಕಿದರೆಂತಲೂ. ಕೆಲಸವನ್ನು ಸರಿಯಾಗಿ ಮಾಡದಿರುವುದು ಅವಮಾನವೇ ಹೊರತು ಅಗೌರವವಾಗಲಿ ಗೌರವವಾಗಲಿ ಕೆಲಸಗಳಿಗೆ ಸಂಬಂಧಪಡುವುದಿಲ್ಲವೆಂತಲೂ ವಿದ್ಯಾಭ್ಯಾಸದ ವಿಷಯದಲ್ಲಿ ಪ್ರಾಥಮಿಕವಿದ್ಯೆಯನ್ನು ಸಾರ್ವತ್ರಿಕವಾಗಿ ಪ್ರತಿಯೊಬ್ಬ ಬಾಲಕ ಮತ್ತು ಬಾಲಿಕೆಯೂ ಅಭ್ಯಾಸಮಾಡಲು ಅನುಕೂಲವನ್ನು ಕಲ್ಪಿಸಬೇಕೆಂತಲೂ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಸರಿಯಾದ ದೇಹದಾರ್ಢ್ಯವುಳ್ಳವರಾಗಿರಬೇಕೆಂತಲೂ ಸಂಸ್ಕೃತವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವನ್ನು ಕೊಡಬೇಕೆಂತಲೂ ಇವೇ ಮೊದಲಾದ ವಿಷಯಗಳನ್ನು ಪಂಡಿತಜೀಯವರು ಜನರ ಮನಸ್ಸಿನಲ್ಲಿ ನಾಟುವಂತೆ ಹೇಳಿ ಈ ದೇಶೀಯರನ್ನು ಅತ್ಯಂತ ಸಂತೋಷಗೊಳಿಸಿದರು.

ಮಾರನೆಯ ದಿವಸ ಪಂಡಿತಜೀಯವರು ಪರಕಾಲ ಮಠದ ಶ್ರೀಗಳವರ ದರ್ಶನಕ್ಕೆ ಆಗಮಿಸಿ ವಿದ್ವಾಂಸರೊಡನೆಯೂ ಸ್ವಾಮಿಗಳೊಡನೆಯೂ ಧರ್ಮವಿಚಾರದಲ್ಲಿ ಲೌಕಿಕರಿಗೂ ವೈದಿಕರಿಗೂ ಉಂಟಾಗಿರುವ ವೈಷಮ್ಯಗಳನ್ನು ಕುರಿತು ಪ್ರಸ್ತಾಪಿಸಿದರು. ನಮ್ಮ ಭಾರತೀಯರಲ್ಲಿ ಅನೇಕ ಉತ್ಕೃಷ್ಟ ಅಭಿಪ್ರಾಯಭಾವಗಳು ಬಹುಕಾಲದಿಂದ ನಶಿಸಿರುವುವು. ಈ ನವನಾಗರೀಕ ಕಾಲದಲ್ಲಿ ಹಿಂದಣ ಸಂಕೋಚ ಸ್ವಭಾವಗಳು ವಿ ಧವನ್ನುಂಟುಮಾಡುವುದಕ್ಕೆ ಪ್ರಾರಂಭಿಸಿವೆ. ಯೊಂದು ಜನಾಂಗವು ಬುದ್ಧಿಯಲ್ಲಿಯೂ, ವಿದ್ಯೆ ಯೂ, ಮೇಲ್ಮೆಯಲ್ಲಿಯೂ ಮುಂದುವರಿಯುತ್ತ ಮುಖ್ಯವಾಗಿ ಆತ್ಮರು ಪರಿಶುದ್ಧರಾಗಿ ಭಗ ನುಗ್ರಹಕ್ಕೆ ಪಾತ್ರರಾಗುವುದೇ ಜನ್ಮಧಾರಣದ ವಾಗಿದೆ. ಹಿಂದಣ ಕಟ್ಟುಗಳನ್ನೇ ಬಲಪಡಿಸುತ್ತ ದ್ದರೆ ನಮ್ಮ ಭಾರತೀಯರಲ್ಲಿ ಪರಸ್ಪರ ಪ್ರೀತಿವಿಶ್ವಾ ಗಳಂಕುರಿಸುವುದಿಲ್ಲವು. ಕಾಲೋಚಿತವಾಗಿ ಭಾ ಯರ ಧರ್ಮಶಾಸ್ತ್ರವನ್ನು ಅತಿಕ್ರಮಿಸದಂತೆ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳದಿದ್ದರೆ ಭಾರತಭೂಮಿ ಉದ್ಧಾರವಾಗುವುದಿಲ್ಲವು. ದ್ವೇಷಾಸೂಯೆಗಳು ಮ ಹೆಚ್ಚುವವು. ಯಾವ ಜನಾಂಗದವರಾದರೂ ಪರಮ ನನ್ನು ಭಜಿಸಿ, ಮುಕ್ತಿಯನ್ನು ಹೊಂದುವುದಕ್ಕೆ ಅರ್ಹ ಗಿದ್ದಾರೆ. ಪ್ರತಿಯೊಬ್ಬನು ಆಚಾರವ್ಯವಹಾರಗಳಲ್ಲಿ ತ್ರಮುಕ್ತಿತಗೆಬರಲೆಂಬುವುದೇ ಮಹಾತ್ಮರ ಧ್ಯೇಯವಾ ದೆ. ಇದಕ್ಕೆ ತಮ್ಮಂಥ ಮಹಾಸ್ವಾಮಿಗಳೂ, ವಿದ್ವಾ ರೂ, ಒಟ್ಟುಗೂಡಿ ಕಡಿಮೆಪ್ರಭೇದವಿರುವವರಿಗೆಲ್ಲ ಒಂದು ಯನುಮವನ್ನು ಮಾಡಿ ಎಲ್ಲರನ್ನು ಉದ್ಧರಿಸಿ, ಭಾರತಭ ಯಲ್ಲಿ ಜನ್ಮಧಾರಣಮಾಡಿದವರೆಲ್ಲರು ಏಕಮತ್ಯ ಇರುವುದಕ್ಕೆ ಪ್ರಯತ್ನಿಸಬೇಕೆಂದು ಪಂಡಿತಜೀಯ ತಮ್ಮ ಘನವಾದಸದ್ಭಾವವನ್ನು ಪ್ರದರ್ಶಿಸಿದರು. ಇ ಶ್ರೀ ಸ್ವಾಮಿಗಳವರೂ, ವಿದ್ವಾಂಸರೂ, ಪಂಡಿತ ಮ ವೀಯರವರ ಹೇಳಿಕೆಯು ಸಾಧುವಾಗಿದ್ದು ಕಾ ಮೇಣ ಅವರ ಅಭಿಪ್ರಾಯದಂತೆಯೇ ಆಗುತ್ತದೆ ತಮ್ಮ ಸಮಾನುಭೂತಿಯನ್ನು ತೋರಿಸಿದರು

ಒಳದೇಶದ ವೃತ್ತಾಂತಗಳು

ಪ್ರಜಾಪ್ರತಿನಿಧಿ ಸಭೆಯು ೧೯ ನೆಯ ತಾರೀ ದಿವಸ ಸಮಾಪ್ತಿಯನ್ನು ಹೊಂದಿತು. ನ್ಯಾಯ ಯಕಸಭೆಯು ೨೧ ನೆಯ ತಾರೀಖಿನಿಂದ ಪ್ರಾ ವಾಗಿದೆ.

ಮಿ|| ಸಿ. ಎಸ್. ಬಾಲಸುಂದರಂಅಯ್ಯರವರು ರಜವನ್ನು ಪೂರೈಸಿಕೊಂಡು ತಮ್ಮ ೧ನೆಯ ಕೌ ಸ್ಥಾನಕ್ಕೆ ಜೂನ್ ೪ ನೆಯ ತಾರೀಖಿನದಿವಸ ಹ ರಾದರು.

ಈ ತಿಂಗಳ ೨೦ ನೆಯ ತಾರೀಖಿನದಿವಸ ಮೈಸೂ ಜೈಲುಖಾನೆಯಲ್ಲಿರುವ ಒಬ್ಬ ಖೈದಿಯು ಗಲ್ಲಿಗೆ ಸ್ಥಳದಲ್ಲಿ ತನ್ನ ಬಟ್ಟೆಯಿಂದ ನೇಣುಹಾಕಿಕೊಂಡು ನೆಂದು ಕೇಳುತ್ತೇವೆ.

ಬೆಂಗಳೂರು ಕುಮಾರಪಾರ್ಕಿನಲ್ಲಿ ವಾಸಮಾ ಮಹಾತ್ಮಾಗಾಂಧಿಯವರು ದಿನೇದಿನೇ ಆರೋ ನ್ನು ಹೊಂದುತ್ತಿರುವರೆಂದೂ. ಪ್ರತಿದಿನವೂ ರಾರುಜನರು ತಂಡೋಪತಂಡವಾಗಿ ಮಹಾತ್ಮರ ನಕ್ಕೆ ಹೋಗುತ್ತಿರುವರೆಂದೂ ಕೇಳಿ ಸಂತೋ ತ್ತೇವೆ.

ಗುಂಡ್ಲುಪೇಟೆ ತಾಲೂಕಿಗೆ ಒಳಪಟ್ಟ ಕ ಪುಟ್ಟಮಾದನೆಂಬುವನು ದನಕರುಗಳನ್ನು ಮೇಯಿ ತ್ತಿದ್ದ ೧೩ ವರ್ಷದ ಹುಡುಗಿಯನ್ನು ಬಲಾತ್ಕಾ ದಿಂದ ಹಿಡಿದು ಮಾನಭಂಗಮಾಡಿದನೆಂದು ಮೈಸೂ ಸೆಷನ್ಸ್ ಜಡ್ಜರವರಲ್ಲಿ ವಿಚಾರಣೆನಡೆದು ಅಪರಾಧಿಗೆ ವರ್ಷ ಕಠಿಣಶಿಕ್ಷೆಯು ವಿಧಿಸಲ್ಪಟ್ಟಿತು.

ಶ್ರೀ ರಂಭಾಪುರೀಪೀಠದ ಜಗದ್ಗುರುಗಳು ಸ ತಾಲೂಕು ತೊಗರಿಗ್ರಾಮದಲ್ಲಿ ಮುಕ್ಕಾಂ ಮಾ ವರೆಂದೂ, ಉಜ್ಜಯಿನೀಪೀಠದ ಜಗದ್ಗುರುಗಳು ಶಾಲೆಯ ಪ್ರತಿಷ್ಠೆಗಾಗಿ ಕೊಟ್ಟೂರಲ್ಲಿ ಮು ಮಾಡಿರುವರೆಂದೂ, ಜಗದ್ಗುರು ಕೇದಾರನ ಚಿಕ್ಕ ಶ್ರೀಗಳವರು ಮಾನ್ವಿಯಲ್ಲಿ ಮುಕ್ಕಾಂ ರುವರೆಂದೂ ತಿಳಿಯಬರುತ್ತದೆ.

ನೂಂಬರವಿಬಾಬಾಲೂಕಿಗೆ ಸೇರಿದ ಹಿರೇಮಠದ ವಾಸಿಯಾದ ಮಲ್ಲೇಗೌಡನೆಂಬುವನು ತನ್ನ ಹೆಂಡತಿಯ ಊರಿಗೆ ಹೋಗಿ ಅವಳನ್ನು ತನ್ನ ಊರಿಗೆ ಕರೆಯಲು ಅವಳು ಬರಲಿಕ್ಕೆ ಒಪ್ಪಿಗೆಯನ್ನು ಕೊಡದೆ ಇದ್ದುದರಿಂದ ಕೋಪಗೊಂಡು ಅವಳನ್ನು ಕೊಂದುಹಾಕಿದನು. ಈ ವಿಷಯದಲ್ಲಿ ಮೈಸೂರು ಸರ್ಕಾರದ ಜಡ್ಜರ ಕೋರ್ಟಿನಲ್ಲಿ ವಿಚಾರವಾಗಿ ಅಪರಾಧಿಗೆ ಫಾಶೀ ಶಿಕ್ಷೆಯು ವಿಧಿಸಲ್ಪಟ್ಟಿತು.

ಈಸಾರೆ ನಡೆದ ಪ್ರಜಾಪ್ರತಿನಿಧಿಸಭೆಯಲ್ಲಿ ಮಿಲ್ಲರ್ ಕಮಿಟಿ ರಿಪೋರ್ಟನ್ನು ಅನುಸರಿಸಿ ಮಾಡಿರುವ ಗವರ್ನಮೆಂಟಿನ ಹುಕುಮಿನಪ್ರಕಾರ ಬ್ರಾಹ್ಮಣೇತರರಿಗೆ ಸರ್ಕಾರಿಯುದ್ಯೋಗಗಳನ್ನು ಕೊಡಲಿಲ್ಲವೆಂತಲೂ, ಬ್ರಾಹ್ಮಣರಿಗೇನೇ ವಿಶೇಷವಾಗಿ ಕೊಟ್ಟಿರುತ್ತಾರೆಂತ ಮುಂತಾದವಿಷಯದಲ್ಲಿ ಮಿ|| ಮಹಮ್ಮದ್ ಅಬ್ಬಾಸ್ ಖಾನರವರು ಮೈಸೂರುಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಶನರ್ ಸಾಹೇಬರವರಿಗೂ ಹಾಗೂ ಕನ್ನಡಿಗರ ಡೈರೆಕ್ಟರವರಿಗೂ ಇನ್ಸ್ಪೆಕ್ಟರ್‌ಗಳಿಗೂ ವಿರೋಧವೆಂತಲೂ ಸಭೆಯ ಕೊನೆಯದಿನದ ಮಿ|| ಅಬ್ಬಾಸ್‌ಖಾನರವರು ನಾನು ಆದಿನದಿವಸದಲ್ಲಿ ಆಡಿದ ಮಾತುಗಳನ್ನು ಡೆಪ್ಯುಟಿ ಕಮಿಶನರ್ ಸಾಹೇಬರವರಾಗಲಿ ಡೈರೆಕ್ಟರವರಾಗಲಿ ಮನಸ್ಸಿಗೆ ಹಚ್ಚಿಕೊಳ್ಳಬಾರದೆಂತಲೂ ದಿವಾನರನ್ನು ಪ್ರಾರ್ಥಿಸಿದರು.

ವರ್ತಮಾನಸಂಗ್ರಹ.

ಮುಂಬೈ ಹೈಕೋರ್ಟಿನಲ್ಲಿ ಕೆಲಸವು ವಿಶೇಷವಾಗಿ ಇರುವದರಿಂದ ನ್ಯಾಯಾಧಿಪತಿಗಳನ್ನು ಹೆಚ್ಚಿಸಬೇಕೆಂದು ಸರ್ಕಾರದವರು ಆಲೋಚಿಸುತ್ತಿರುವರು.

ಮುಂಬಯಿಪಟ್ಟಣದಲ್ಲಿ ಬೇರೆಬೇರೆಜಾತಿಯ ೧೪ ಸ್ತ್ರೀಯರಿಗೆ ಆನರರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರ ಅಧಿಕಾರವು ಕೊಡಲ್ಪಟ್ಟಿದೆ

ಮುಂಬಯಿಪಟ್ಟಣದಲ್ಲಿ ೧೧೪೦೦ ಮೋಟಾರಗಾಡಿಗಳಿದ್ದು ಹೋದವರ್ಷ ಈ ಮೋಟಾರುಗಳಿಂದ ೬೭ ಜನರಿಗೆ ಅಪಘಾತವಾಗಿರುವದಂತೆ!

ಕೇಂಬ್ರಿಜ್ ಯುನಿವರ್ಸಿಟಿಯಲ್ಲಿ ಆರ್. ಎ. ಗೋ[illegible], ಡಿ. ಸಿ. ಪಾವಟೆ ಎಂಬ ಹಿಂದೂ ವಿದ್ಯಾರ್ಥಿಗಳು ಗಣಿತಶಾಸ್ತ್ರದಲ್ಲಿ ಪ್ರಾಥಮಿಕ ತರಗತಿಯಲ್ಲಿ ಉತ್ತೀರ್ಣರಾಗಿರುವದನ್ನು ಕೇಳಿ ಸಂತೋಷಿಸುತ್ತೇವೆ.

ಕಲ್ಕತ್ತಾ ಬರ್ಮಾ ಆಯಿಲ್ ಕಂಪನಿಯ ನೌಕರನೆಂಬುವವನಿಗೆ ಮತ್ತೊಬ್ಬ ಮನುಷ್ಯನಿಗೂ ಜಗಳವುಂಟಾಗಿ ಮತ್ತೊಬ್ಬ ಮನುಷ್ಯನು ಕಮೆರಾಯವನ ಹೊಟ್ಟೆಯನ್ನು ಬಗೆದುಬಿಟ್ಟ ಚೂರಿಯಿಂದ ಇರಿದನು.

ಮಾಲಿನೀಬಾಯಿ ಬಿ. ಎ. ಬಿ.ಟಿ. ಎಂಬ ಬ್ರಾಹ್ಮಣ ಕನ್ಯೆಯು ಗುಲಾಮಖಾನ ಬಿ. ಎ. ಬಿ.ಟಿ. ಎಂಬ ಮಹಮ್ಮದೀಯ ತರುಣನನ್ನು ಮೋಹಿಸಿ ಅವನನ್ನು ವಿವಾಹವಾಗಲು ಉದ್ಯುಕ್ತಳಾಗಿರುವಳಂತೆ! ಇದು ಸ್ತ್ರೀಸ್ವಾತಂತ್ರ್ಯದ ಪ್ರಭಾವವಾಗಿದೆ.

ಕಾನ್ಪುರದಲ್ಲಿ ಹಾಸಿಗೆಯಿಟ್ಟುಕೊಂಡು ಜೀವಿಸುತ್ತಿದ್ದ ಕಾಶಿಯೆಂಬುವಳನ್ನು ಯಾರೋ ದುಷ್ಟರು ರಾತ್ರಿಸಮಯದಲ್ಲಿ ಅವಳ ಮನೆಯನ್ನು ಹೊಕ್ಕು ಕೈಕಾಲುಗಳನ್ನು ಸವರಿಸಿದಲ್ಲದೆ ಅವಳ ಅಂಗಾಂಗಗಳನ್ನು ಕಡಿದು ಚೂರುಚೂರುಮಾಡಿದ್ದಾರಂತೆ!

ಬಿಜಾಪುರಜಿಲ್ಲೆಗೆ ಸೇರಿದ ಜಂಬಗಿ ಎಂಬ ಗ್ರಾಮದಲ್ಲಿ ಆಸ್ತಿಯ ವಿಷಯದಲ್ಲಿ ವಿವಾದವುಂಟಾಗಿ ಒಂದು ಕುಟುಂಬಕ್ಕೆ ಸೇರಿದ ಗಂಡಹೆಂಡರುಗಳನ್ನೂ ಇಬ್ಬರು ಮಕ್ಕಳನ್ನೂ ಕೊಂದಿರುತ್ತಾರೆ. ಈ ಆಪಾದಿತರು ಪೋಲೀಸರವರಿಂದ ಹಿಡಿಯಲ್ಪಟ್ಟಿರುವರು.

ಧಾರವಾಡದಲ್ಲಿ ಬಹುಕಾಲದಿಂದ ಕರ್ನಾಟಕ ಟ್ರೇನಿಂಗ್ ಕಾಲೇಜು ನಡೆಯುತ್ತಲಿದ್ದು, ಇದನ್ನು ಮುಂಬೈ ಸರ್ಕಾರದವರು ತೆಗೆದುಹಾಕಬೇಕೆಂದು ಆಲೋಚಿಸುತ್ತಲಿರುವರಂತೆ! ಈ ಕಾರ್ಯದಲ್ಲಿ ಸರ್ಕಾರದವರು ತೊಡಗಿದ್ದು ನಿಜವಾದರೆ ಇದು ಕೇವಲ ಅನ್ಯಾಯವಾದದ್ದು.

ಇದೇತಿಂಗಳಲ್ಲಿ ತಿರುಪ್ಪೂರಿಗೆ ಸಮೀಪದಲ್ಲಿರುವ ದಕ್ಷಿಣಹಿಂದೂಸ್ತಾನದ ಪೋಲೀಸ್ ಸ್ಕ್ವಾಡಿನಲ್ಲಿರುವ ಮೋತಿಲಾಲಗೌಂಡರ್ ಎಂಬುವರನ್ನು ಯಾರೋ ದುಷ್ಟರು ಕೊಲೆಮಾಡಿ ಶವವನ್ನು ಪತ್ತೆಯಿಲ್ಲದಂತೆ ಮಾಡಿದ್ದಾರೆ. ಪೋಲೀಸರು ಕೊಲೆಗಾರರನ್ನು ಹುಡುಕುತ್ತಲಿರುವರು.

ಹೋದವಾರ ಮುಂಬೈಪಟ್ಟಣದಲ್ಲಿ ವಿಶೇಷವಾದ ಮಳೆಯಾಗಿ ರಸ್ತೆಗಳೆಲ್ಲಾ ಜಲಮಯವಾಗಿದ್ದವು. ನೂರುವರ್ಷದ ಒಂದು ಮುದುಕಿಯು ಮಳೆಯನೀರಿನಲ್ಲಿ ಸಿಕ್ಕು ಮೃತಿಯನ್ನು ಹೊಂದಿತು. ಟ್ರಾಂವೇಗಾಡಿಗಳ ಮತ್ತು ಜಿ.ಐ.ಪಿ. ರೇಲ್ವೆಯ ಲೋಕಲ್ ಗಾಡಿಗಳ ಸಂಚಾರವು ನಿಂತುಹೋಗಿತ್ತು.

ಬರೋಡಾ ಮಹಮ್ಮದೀಯರ ದಂಗೆಯಸಂಬಂಧವಾದ ಕೇಸನ್ನು ನಡೆಯಿಸುತ್ತಿರುವ ಹೈಕೋರ್ಟ ವಕೀಲ ಮ|| ತಾಂಬೆಯವರಿಗೂ, ಸಾಕ್ಷಿದಾರರಾದ ಪ್ರೊಫೆಸರ್ ಮಾಣಿಕರಾವ್‌ರವರಿಗೂ ನಿಮ್ಮನ್ನು ಕೊಲೆಮಾಡುತ್ತೇವೆಂಬ ಅಭಿಪ್ರಾಯವುಳ್ಳ ಪತ್ರವನ್ನು ಯಾರೋ ಬರೆದಿರುವುದರಿಂದ ಪೋಲೀಸರು ಇವರ ತಪಾಸಿನಲ್ಲಿರುತ್ತಾರೆ.

ಉತ್ತರಕಾನಡಾಜಿಲ್ಲೆಗೆ ಸೇರಿದ ಹೆಗಡೆಯೆಂಬ ಗ್ರಾಮದಲ್ಲಿರುವ ಮಂಜಪ್ಪಕೃಷ್ಣ ಹೆಗ್ಗಡೆಯವರ ಮನೆಯಲ್ಲಿ ಒಂದುಸರ್ಪವು ಇತ್ತು. ಶರ್ಕರಿಪರಮಯ್ಯ ಹೆಗ್ಗಡೆ ಎಂಬುವರು ಆ ಸರ್ಪದಸಂಗಡ ಮನುಷ್ಯರಂತೆ ಮಾತನಾಡುತ್ತಲಿದ್ದು ದಿಗ್ಬಂಧನಮಾಡಿ ಎಲ್ಲರ ಸಮಕ್ಷಮದಲ್ಲಿಯೇ ಸರ್ಪವನ್ನು ಹಿಡಿದು ಪುಟ್ಟಿಯೊಳಗೆ ಹಾಕಿಕೊಂಡುಹೋದರಂತೆ!

ಸಿಮ್ಲಾಪ್ರಾಂತದಲ್ಲಿರುವ ಪ್ರಸಿದ್ಧವಾದ ಒಂದು ಅಂಜನೇಯದೇವಸ್ಥಾನದ ಅಧಿಕಾರಿಗಳಾದ ಹಿಂದುಮತದ ಮಹಾಂತರು ವೃದ್ಧರಾದುದರಿಂದ ಹಿಂದೂಧರ್ಮವನ್ನು ಸ್ವೀಕರಿಸಿದ ಡಿ. ರಸೇಟ್ ಎಂಬ ಫ್ರೆಂಚ ದೇಶದ ಒಬ್ಬ ವೃದ್ಧನನ್ನು ಆ ಸ್ಥಾನಕ್ಕೆ ಮಹಾಂತರನ್ನಾಗಿ ನೇಮಿಸಿ ಅವನಿಗೆ ಬಾಬಾಮಸ್ತರಾಮ ಎಂದು ನಾಮಕರಣವನ್ನು ಮಾಡಿರುವರಂತೆ!

ಪಂಡಿತ ಶ್ಯಾಮಲಾಲನೆಹರು ಇವರ ಮಗಳಾದ ಶ್ಯಾಮಕುಮಾರಿಯವರು ಈವರ್ಷ ಅಲಹಾಬಾದ ವಿಶ್ವವಿದ್ಯಾಲಯದ ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಮೊದಲ ನಂಬರದಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳಲ್ಲಿಯೂ ಸಹ ಇದೇರೀತಿ ಪ್ರಥಮರಾಗಿ ಉತ್ತೀರ್ಣರಾಗಿದ್ದರು. ಇವರಿಗೆ ಸಾಕ್ಷಾತ್ ಸರಸ್ವತಿಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಪಶ್ಚಿಮಖಾನದೇಶ ಜಿಲ್ಲೆಗೆ ಸೇರಿದ ಸಾಕರತಾಲೂಕಿನ ಮಾಮಲೇದಾರರು ಲಂಚವನ್ನು ತೆಗೆದುಕೊಂಡರೆಂಬ ಆರೋಪದಮೇಲೆ ಒಳಪಟ್ಟಿದ್ದು ವಿಚಾರಾಂತ್ಯದಲ್ಲಿ ಧುಳೆಯ ಸೆಷನ್‌ಜಡ್ಜರವರು ಸದರಿ ಮಾಮಲೇದಾರರಿಗೆ ೧೮ ತಿಂಗಳ ಕಠಿಣಶಿಕ್ಷೆಯನ್ನೂ ೩ ಸಾವಿರ ರೂಪಾಯಿಗಳ ದಂಡವನ್ನೂ ವಿಧಿಸಿದರು. ಲಂಚದಲ್ಲಿ ಮನಸ್ಸನ್ನಿಟ್ಟವರ ಅವಸ್ಥೆಯು ಎಂದಾದರೂ ಒಮ್ಮೆ ಹೀಗೆ ಆಗುವದೇ ಸರಿ!

ಈತಿಂಗಳು ೯-೧೦ ತಾರೀಖುಗಳಲ್ಲಿ ಮುಂಬಯಿಪ್ರಾಂತಿಕ ಪ್ರೋಗ್ರೆಸಿವ್ ಸಭೆಯು ಬೆಳಗಾಂವಿಯಲ್ಲಿ ಮಿ|| ಜಯಕರ ಬ್ಯಾರಿಸ್ಟರರವರ ಅಧ್ಯಕ್ಷತೆಯಕೆಳಗೆ ಕೂಡಿತ್ತು. ಪ್ರೋಗ್ರೆಸಿವ್ ಪಕ್ಷದ ಪ್ರಯತ್ನವೂ ಚಟುವಟಿಕೆಯೂ ವಿಶೇಷವಾಗಿದ್ದರೂ ಇವರ ಪ್ರಯತ್ನಕ್ಕೆತಕ್ಕಂತೆ ಪ್ರತಿಫಲವು ದೊರೆಯದೆ ಇರುವುದರಿಂದ ಇವರಿಗೆ ಹೆಚ್ಚು ಸೀಟುಗಳನ್ನು ಕೊಡಬೇಕೆಂದು ತೀರ್ಮಾನಿಸಿ ಸರಕಾರದವರನ್ನು ಪ್ರಾರ್ಥಿಸಿಕೊಂಡಿರುವರಂತೆ!

ಬರ್ಮಾದೇಶದಲ್ಲಿ ಒಬ್ಬ ಹೆಂಗಸು ಒಂದು ಪುಟ್ಟಿಯಲ್ಲಿ ೧ ಬೆಕ್ಕನ್ನೂ ೧ ಮರಿಗಳನ್ನೂ ಇಟ್ಟುಕೊಂಡು ಹೋಗುತ್ತಿದ್ದ ಸಮಯದಲ್ಲಿ ಪೋಲೀಸರು ಆ ಪುಟ್ಟಿಯನ್ನು ಶೋಧಿಸಲಾಗಿ ಗಂಡುಬೆಕ್ಕಿನ ಜೋಕೆಯಲ್ಲಿ ಮರಿಗಳಿರುವವಲ್ಲ! ಎಂದು ಸಂಶಯವುಂಟಾಗಿ ಆ ಮರಿಗಳ ಹೊಟ್ಟೆ ನೋಡುವಲ್ಲಿ ಸತ್ತುಹೋದಂತೆ ಕಂಡುಬಂದವು. ಸಂಶಯದಿಂದ ಪುನಃ ಶೋಧಿಸುವಲ್ಲಿ ಚಿಕ್ಕನಹಮರದ ಚೀಲಗಳಲ್ಲಿ ಹತ್ತುಸಾವಿರರೂಪಾಯಿ ಬೆಲೆಯಾಗುವ ಅಫೀಮು ದೊರೆಯಿತಂತೆ! ಸ್ತ್ರೀಯರ ಬುದ್ಧಿಗೆ ಬೆಲೆಯನ್ನು ಕಟ್ಟುವವರಾರು?

ಸ್ವೀಕಾರ.

ಸೂಡಿಜುಗತಿ ಹಿರೇಮಠದ ಪಟ್ಟದಸ್ವಾಮಿಗಳವರು ಉಜ್ಜಯಿನೀ ಸಮ್ಮೇಲನದಲ್ಲಿ ಪ್ರಿಂಟಿಂಗ್ ಪ್ರೆಸ್ಸಿಗಾಗಿ ವಾಗ್ದಾನಮಾಡಿದ ಒಂದುನೂರು ರೂಪಾಯಿಗಳಲ್ಲಿ ೫೦ ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ದಾವಣಗೆರೆ ತಾಲೂಕು ಗುಡಾಳುಗ್ರಾಮದ ಜಿಗಳೀರ ಶೆಟ್ರು ರೇವಪ್ಪನವರು ಉಜ್ಜಯಿನೀ ಸಮ್ಮೇಲನದಲ್ಲಿ ವಾಗ್ದಾನಮಾಡಿದ ೨೫ ರೂಪಾಯಿಗಳನ್ನೂ ದಾವಣಗೆರೆ ವಾಸಿಗಳಾದ ಅಣಬೂರುಮಠದ ವೀರಭದ್ರಯ್ಯನವರು ೧೫ ರೂಪಾಯಿಗಳನ್ನೂ ಕಳುಹಿಸಿದ್ದಾರೆ.

ಕೊಪ್ಪಳತಾಲೂಕು ಗೊಂಡಬಾಳ ಸಾಲಿಮಠದ ಗುರಯ್ಯನವರು ನೆರವೇರಿಸಿದ ಮಾಹೇಶ್ವರವಟುಗಳ ದೀಕ್ಷಾಸಮಾರಂಭದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ೭ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಶಿವಮೊಗ್ಗಾ ಕೊಡಗಂಚಿ ಮುರಿಗೆಪ್ಪನವರ ಮಕ್ಕಳು ವೀರಪ್ಪನವರಿಗೆ ನ್ಯಾಮತಿ ಕೇಶವದ ಗಡ್ಡಪ್ಪನವರ ಪುತ್ರಿ ರುದ್ರಮ್ಮನನ್ನು ಕೊಟ್ಟು ನಡೆಯಿಸಿದ ನಿಶ್ಚಯ ಪ್ರಸಂಗದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ೭ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಬಂಕಾಪುರ ಅರಳೆಲೆಮಠದ ವೇ|| ಗುರುಪಾದಯ್ಯನವರ ಪುತ್ರಿ ಕುಂ|| ಸೌ|| ಗದಿಗೆಮ್ಮನಿಗೂ ಸಾಲಿ ಹಿರೇಮಠದ ಕೇದಾರಯ್ಯನವರ ಪುತ್ರ ವೇ|| ಚನ್ನವೀರಯ್ಯನವರಿಗೂ ಜ್ಯೇಷ್ಠ ಶು|| ೧೪ರಲ್ಲಿ ನಡೆದ ವಿವಾಹದಲ್ಲಿ ವಧೂವರರ ಕಡೆಯಿಂದ ೨ ರೂಪಾಯಿಗಳನ್ನು ಕಳುಹಿಸಿದ್ದಾರೆ.

ತುಮಕೂರು ನಿವಾಸಿಗಳಾದ ಮ|| ರಾ|| ಜಿ. ಚೆನ್ನಪ್ಪನವರು ಕಟ್ಟಿಸಿದ "ಜಯಲಕ್ಷ್ಮೀ ಪ್ರಾಸಾದ" ದ ಪ್ರವೇಶೋತ್ಸವದ ಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ೨ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಬಳ್ಳಾರಿ ಮಿ|| ಉಜ್ಜಯಿನೀಗ್ರಾಮವಾಸಿಗಳಾದ ಒಬ್ಬೂರು ಈರಪ್ಪನವರ ವಿವಾಹದಲ್ಲಿ ೧ ರೂಪಾಯಿಯನ್ನೂ ಸವರ ತಿಪ್ಪಯ್ಯನವರ ವಿವಾಹದಲ್ಲಿ ೧ ರೂಪಾಯಿಯನ್ನೂ ಈ ಪತ್ರಿಕೆಯ ಪೋಷಣಕ್ಕಾಗಿ ಜಗದ್ಗುರು ಉಜ್ಜಯಿನೀಸಂಸ್ಥಾನದ ಏಜಂಟ್ ಟಿ. ಎಂ. ಸಿದ್ಧಪ್ಪನವರು ಕಳುಹಿಸಿರುತ್ತಾರೆ.

ಈ ಮಹಾಶಯರುಗಳಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ಸತ್ಯಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ. ಸಂ.——

ಸೂಚನೆಯು

ಹಿಮಾಲಯಪ್ರದೇಶಾಂತರ್ಗತ ದೇವಪ್ರಯಾಗದಲ್ಲಿರತಕ್ಕ ಶ್ರೀ ರಾಮಲಕ್ಷ್ಮಣ ದೇವರ ಪೂಜೆಗಾಗಿ ಯೋಗ್ಯರಾದ ೩ ಜನ ಪಂಚದ್ರಾವಿಡ ಬ್ರಾಹ್ಮಣರು ಅವಶ್ಯವಾಗಿ ಬೇಕಾಗಿದೆ. ಇಚ್ಛೆಯುಳ್ಳವರು ಕೆಳಗಿನ ಅಡ್ರೆಸ್ಸಿಗೆ ಪತ್ರವ್ಯವಹಾರವನ್ನು ಮಾಡತಕ್ಕದ್ದು. ದೇವಪ್ರಯಾಗವು ಟಿಹರಿರಾಜ್ಯದಲ್ಲಿ ಗಂಗಾನದಿಯ ತಟದಲ್ಲಿರುತ್ತದೆ.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ಏಜಂಟ,
ಪ್ರೊ|| ಹಿರೇಮಠ, ಮಿ|| ಗಢವಾಲ.
ತಾ|| ೨೪-೬ ೧೯೨೭.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪಂಚಾಚಾರ್ಯಪ್ರಭೆಯ ಸೌಭಾಗ್ಯವು

ಲೇಖಕ—ಬಸವಲಿಂಗಸ್ವಾಮಿಗಳು ಆಲಿಕಂಥಾಮಠ,
ಮಧುವನಹಳ್ಳಿ

ಪಂಚಾಚಾರ್ಯಪ್ರಭೆಯೆಂಬೀಪತ್ರಿಕೆಯು ಜನ್ಮಧಾರಣೆಮಾಡಿದ ಸ್ವಲ್ಪಕಾಲದಲ್ಲಿಯೇ ಸಮಸ್ತಜನರ ಹೃದಯಾಕರ್ಷಣವನ್ನು ಮಾಡಿ ನಿರತಿಶಯವಾದ ಶ್ರೇಯಸ್ಸನ್ನೂ ಲೋಕಮಾನ್ಯತೆಯನ್ನೂ ಹೊಂದಿರುವುದನ್ನು ನೋಡಿದರೆ ಇದರ ಸೌಭಾಗ್ಯವನ್ನು ಎಷ್ಟುವರ್ಣಿಸಿದರೂ ತೀರದಾಗಿದೆ ಆದರೆ ಒಟ್ಟಿನಿಂದ ಹೇಳಬೇಕೆಂದರೆ ಇಷ್ಟೇ! ಪ್ರಭಾಜನನಕ್ಕೆ ಆಶ್ರಯಭೂತರಾದ ವೇ|| ಬ್ರಂ|| ಶ್ರೀ|| ಪಂ|| ಕಾಶೀನಾಥಶಾಸ್ತ್ರಿಗಳವರ, ಮತ್ತು ಇದರ ಸಂಪಾದಕತ್ವವನ್ನು ವಹಿಸಿ ಅಹರ್ನಿಶಿ ಇದರ ಅಭಿವೃದ್ಧಿಮಾರ್ಗಚಿಂತನೆಯಲ್ಲಿರುವ ಆಸ್ಥಾನವಿದ್ವಾನ್ ವೇ|| ಬ್ರಂ|| ಶ್ರೀ|| ಪಂ|| ಸಿರಸಿ ಗುರುಶಾಂತಶಾಸ್ತ್ರಿಗಳವರ ಸಾಹಸವೂ, ಅನೇಕ ವೀರಶೈವ ಮಹನೀಯರ ಔದಾರ್ಯಬುದ್ಧಿಯೂ ಅತ್ಯದ್ಭುತವಾದವುಗಳೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ! ಇದನ್ನು ಪಠಿಸುತ್ತಿರುವ ಪ್ರತಿಯೊಂದು ಸ್ಥಳವೂ ಮಠ್ಯಾರು ವೀರಶೈವ ಜನಗಳಿಂದ ಕೂಡಿದೆಯೇ ಹೊರತು, ಆಕಳಿಕೆ, ತೂಗಡಿಕೆಗಳಿಗೆ ಅವಕಾಶವೇ ಇಲ್ಲ ಆದುದರಿಂದಲೇ ಪಂಚಾಚಾರ್ಯರೆಂದರೆ ಯಾರು? ಅವರ ಉತ್ಪತ್ತಿಯು ಹೇಗೆ? ಅವರಿಂದಾಗಿರುವ ಪ್ರಯೋಜನಗಳೇನು? ಎಂಬುದರ ಸ್ವರೂಪವನ್ನೂ ತಮ್ಮ ಮತದ ನಿಜತತ್ವಗಳನ್ನೂ ತಿಳಿಯದ (ತಿಳಿಯಲಪೇಕ್ಷೆಯುಳ್ಳವರೂ ತಿಳಿಯಲು ಮಾರ್ಗವನ್ನು ಕಾಣದವರೂ ಆದ) ಅನೇಕ ವೀರಶೈವರು ಇದಕ್ಕೆ ಚಂದಾದಾರರಾಗಲು ಆತುರಪಡುತ್ತಿದ್ದಾರ ಅಹಾ! ಇಷ್ಟು ಚಿಕ್ಕವಯಸ್ಸಿನಲ್ಲಿಯೇ ನಾನಾವಿಧವಾದ ಫಲಗಳನ್ನೀಯುತ್ತಿರುವ ಈ ಕಲ್ಪವೃಕ್ಷವು ತನ್ನ ಪ್ರಾಪ್ತವಯಸ್ಸಿನಲ್ಲಿ ಫಲಗಳನ್ನಿತ್ತು ಎಂಥಾ ಮಹೋಪಕಾರಿಯಾಗುವುದೆಂಬುದನ್ನು ನಿರ್ಣಯಿಸಲಸಾಧ್ಯವಾಗಿದೆ ಮುಖ್ಯವಾಗಿ ಈ ಕಲ್ಪವೃಕ್ಷಕ್ಕೆ ಶ್ರೀಮತ್ಪಂಚಾಚಾರ್ಯರ ಕೃಪಾಶೀರ್ವಾದ ಬಲವೇ ಮೂಲಕಾರಣವೆಂದು ಹೇಳಬಹುದು! ಇದು ಕೇವಲ ಮತವಿಷಯಬೋಧಕವಾಗಿರದೆ ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯಗಳನ್ನೊಳಕೊಂಡಿರುವುದರಿಂದ ಸರ್ವೋಪಯುಕ್ತವಾಗಿದೆ ಅಸ್ತು! ಸಮಸ್ತ ಮಠಾಧಿಕಾರಿಗಳು ಮತ್ತು ಶಾಸ್ತ್ರಿಗಳವರ ಸನ್ನಿಧಿಯಲ್ಲಿ ವಿಜ್ಞಾಪನೆಯೇನೆಂದರೆ—ತಾವುಗಳು ಇದರ ಸ್ಥಿರತ್ವಕ್ಕಾಗಿ ಕೊಂಚಾ ಪ್ರಯತ್ನಮಾಡಬೇಕಾಗಿದೆ ತಾವು ಸಂಚರಿಸುವ ಸ್ಥಳಗಳಲ್ಲಿ ದೀಕ್ಷಾ ವಿವಾಹಾದಿಶುಭ ಕಾರ್ಯಗಳು ನಡೆಯುವಾಗ ನಮ್ಮ ನಮ್ಮ ಮರ್ಯಾದೆ ತಾಂಬೂಲಗಳ ವಿಷಯದಲ್ಲಿ ಎಷ್ಟು ಶ್ರದ್ಧೆಯನ್ನಿಟ್ಟಿರುವೆವೋ ಅದಕ್ಕಿಂತಲೂ ಹೆಚ್ಚಾದ ಶ್ರದ್ಧಾಭಕ್ತಿಗಳನ್ನು ವಹಿಸಿ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿಗೆ ಅಗ್ರತಾಂಬೂಲವನ್ನು ತೆಗೆಯುವುದರ ಮೂಲಕ ಯಥೋಚಿತ ದ್ರವ್ಯಸಹಾಯವನ್ನು ಮಾಡಿಸಿ ಮನಿಯಾರ್ಡರ್ ದ್ವಾರಾ ಕಳುಹಿಸಿಕೊಟ್ಟು ನಮಗೆ ಆಚಾರ್ಯರಲ್ಲಿರತಕ್ಕ ಕೃತಜ್ಞತಾಬುದ್ಧಿಯನ್ನು ಪ್ರಕಟಿಸಬೇಕೆಂದೂ ವೀರಶೈವ ಮಹನೀಯರೆಲ್ಲರೂ ಇದಕ್ಕೆ ಚಂದಾದಾರರಾಗುವಂತೆ ಪ್ರೇರಿಸಬೇಕೆಂದೂ ನನ್ನ ಸವಿನಯ ಪ್ರಾರ್ಥನೆಯು! ಇದಕ್ಕೆ ಮೊದಲೇ ಉದಾರಾಶ್ರಯದಾತರೂ, ಪೋಷಕರೂ ಆಗಿರುವ ಮಹನೀಯರ ಪೇಲ್ಪಂಕ್ತಿಯನ್ನು ಪ್ರತಿಯೊಬ್ಬರೂ ಅನುಸರಿಸಿ ನಡೆದು ಶ್ರೀಮತ್ಪಂಚಾಚಾರ್ಯರ ಕೃಪಾಶೀರ್ವಾದಕ್ಕೆ ಪಾತ್ರರಾಗಿ ಶ್ರೇಯೋಭಿಲಾಷಿಗಳಾಗಬೇಕೆಂದು ಹಾರೈಸುತ್ತೇನೆ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶಿವದೀಕ್ಷಾಸಮಾರಂಭವೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವೂ.

[illegible] ತಾ|| [illegible] ಜಿಲ್ಲೆಯ ಗುಂಡಬಾಳಗ್ರಾಮದಲ್ಲಿ ಪ್ರಭವ ಸಂವತ್ಸರದ ವೈಶಾಖ ಶು|| ೫ ಪಂಚಮೀವಾರದಿವಸ ಬ್ರಾಹ್ಮೀಮುಹೂರ್ತದಲ್ಲಿ ಇಲ್ಲಿಯ ಸಾಲಿನಮಾದ [illegible] ವೇ [illegible] ಕಲವು ಮಹೇಶ್ವರ [illegible] ಗಳ ವಿದ್ಯಾರ್ಥಿ [illegible] ಇವರ ದಿನ ಸಾಯಂಕಾಲ ವೇ [illegible] ಅವರ ನಾದಶಾಸ್ತ್ರಿಗಳು [illegible] ವೇ|| ಕಲಬಸಯ್ಯನವರು [illegible] ರಿಂದಲೂ ವಿಧ್ಯುಕ್ತವಾಗಿ ನಡೆವೇರಿದರು. ಮತ್ತು ರಂಭಾಸ್ತಂಭಗಳಿಂದಲೂ ಮಾವಿನತಳಿರುಗಳಿಂದಲೂ ಅಲಂಕೃತವಾದ ಮಂಟಪದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಭಾವಚಿತ್ರವನ್ನು ಸ್ಥಾಪಿಸಿ, ಷೋಡಶೋಪಚಾರಗಳಿಂದ ಪೂಜಿಸಿ ಮಹಾನೀರಾಜನವನ್ನು ಮಾಡಿ ಜಗದಾಚಾರ್ಯರ ಜಯಘೋಷದೊಡನೆ ಜಯಂತ್ಯುತ್ಸವವನ್ನು ನಡೆಸಿ ಬಂದಿದ್ದ ಮಾಹೇಶ್ವರರನ್ನು ಪಕ್ವಾನ್ನಭೋಜ್ಯಾದಿಗಳಿಂದ ತೃಪ್ತಿಪಡಿಸಿ ತಾಂಬೂಲಾದಿಗಳಿಂದ ಸತ್ಕರಿಸಿ ಮಾಹೇಶ್ವರರಿಗೆ ಭೂರಿದಕ್ಷಿಣೆಯನ್ನಿತ್ತರು. ಅದೇಕಾಲಕ್ಕೆ ನಮ್ಮ ಶಾಸ್ತ್ರಿಗಳವರು 'ಪಂಚಾಚಾರ್ಯಪ್ರಭಾ' ಪತ್ರಿಕೆಯು ಮೈಸೂರಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಏಕೋಪಸಹಾಯದಿಂದುದಯವಾಗಿ ಸ್ವಲ್ಪ ದಿನಗಳಲ್ಲಿಯೇ ಸಕಲರ ಕರಕಮಲದಲ್ಲಿ ನಲಿಯುತ್ತಿದೆಯೆಂದೂ ಪತ್ರಿಕೆಗೆ ಉತ್ತೇಜನವನ್ನು ಕೊಡಬೇಕೆಂದೂ ತಿಳಿಸಲು ಆ ಶಿಷ್ಯರುಗಳೆಲ್ಲ ೬ ರೂ ಗಳನ್ನು ಕೊಟ್ಟರು [illegible] ಕೂಡಿದ ವಿದ್ಯಾರ್ಥಿ ಶ್ರೀ ಪರಶಿವ [illegible] ಗಳ ಸಮ್ಮೇಳನದಲ್ಲಿ ಪತ್ರಿಕೆಯ ಸಹಾಯದ [illegible] ಯವು ಹೊರಟಾಗ ೨ ರೂ ಗಳನ್ನು ದಾನವಾಗಿ ಮಾಡಿ ಕೂಡಲೇ ಕಳುಹಿಸಿಕೊಟ್ಟಿರುವರು. ಇವರ ಪದ್ಧತಿಯನ್ನನುಸರಿಸಿ ಸಮಸ್ತವೀರಶೈವರು ಈ ಪತ್ರಿಕೆಯಲ್ಲಿ ಕೊಟ್ಟಿರತಕ್ಕ [illegible] ಯವನ್ನು ಮರೆಯದೆ ಮುಂದಾಗುತ್ತರಾಗಬೇಕೆಂದು ಹಾರೈಸುವ ಗುರುಪದಾಭಿಮಾನಿ

ಲಿಂಗಪ್ಪ ಸಜ್ಜನರ ಗುಂಡಬಾಳ

ಸೇವಾಸಂಘ ತುಮಕೂರು

ಸುಪ್ರಸಿದ್ಧವಾದ ತುಮಕೂರು ಸೇವಾಸಂಘದವರು ತಾ|| 1-6-1927ನೇ ದಿನ ತಮ್ಮ ಸಂಘದ ವಾರ್ಷಿಕೋತ್ಸವವನ್ನು ಜಯಲಕ್ಷ್ಮೀ ನಾಟಕಶಾಲೆಯಲ್ಲಿ ತುಮಕೂರು ಡಿ. ಡೆಪ್ಯುಟಿಕಮಿಷನರಾದ ಮ|| ಅನಂತರಾಮ್ ಎಂ ಎ ಯವರ ಅಧ್ಯಕ್ಷತೆಯಲ್ಲಿ ಬಹಳ ವೈಭವದಿಂದ ನಡೆಸಿದರು

ತುಮಕೂರಿನಲ್ಲಿ ಇತರ ಹಲವು ಸಂಘಗಳಿದ್ದರೂ ಸೇವಾಸಂಘದಷ್ಟು ಪ್ರಖ್ಯಾತವಾದ ಸಂಘವು ಮತ್ತೊಂದಿಲ್ಲ ಈ ಸಂಘದ ಮುಖ್ಯ ನಾಯಕರಾದ ಮ|| ಬಿ ಪಿ ಚಿಕ್ಕನಾಗರಾಜಯ್ಯ ಮುಖ್ಯ ಕಾರ್ಯದರ್ಶಿಗಳಾದ ಮ|| ಕೆ ಶ್ರೀನಿವಾಸಮೂರ್ತಿ ಬಿ ಎ ಎಲ್ ಎಲ್ ಬಿ ಯವರು ಇದರ ಏಳ್ಗೆಗಾಗಿ ಹಗಲಿರುಳು ಹಾಟುಪಡುತ್ತಿರುವರು.

ಮೇಲ್ಕಂಡ ವಾರ್ಷಿಕೋತ್ಸವದಲ್ಲಿ ಮ|| ಶೆಟ್ಟೂರ್ [illegible] ಎಂ ಎ ಎಲ್ ಎಲ್ ಬಿ ಯವರು, ಮ|| ಕೆ ರಂಗಯ್ಯಂಗಾರ್ ಬಿ ಎ ಬಿ ಎಲ್ ರವರು 'ಪ' ರಾಮಯ್ಯ ಬಿ ಎ ಎಲ್ ಟಿ ಯವರು ಮ|| ಅಸಿಸ್ಟೆಂಟ್ ಕಮೀಷನರ್ ಮಲ್ಲರಾಜಅರಸ್ ಬಿ ಎ ಯವರು ಮ|| ಪ್ರಾಣಿದಯಾಸಂಘದ ಕಾರ್ಯದರ್ಶಿ ಡಿ ಎಸ್ ನಾರಾಯಣ ರಾಜಪ್ಪನವರ ಇತ್ಯಾದಿಯಾಗಿ ಹಲವರು ಪಂಡಿತರು ಬಂದಿದ್ದು [illegible] ಬಹಳ ಪ್ರೌಢವೂ ಸ್ವಾರಸ್ಯವೂ ಆದ ಭಾಷಣಗಳನ್ನು ಮಾಡಿದರು.

ಸಭೆಯು ಮುಗಿದಮೇಲೆ [illegible] ಯವರ ಶ್ರೀಮತಿಪರಿಣಯ ನಾಟಕವು ಬಹು ಸ್ವಾರಸ್ಯವಾಗಿತ್ತು. ಈ ಸಂಘದವರು ಉಪನ್ಯಾಸ ಕೀರ್ತನೆ ಜಯಂತಿಗಳು ಉತ್ಸವ ಮೊದಲಾದುವುಗಳನ್ನು ಮಾಡುವುದರಿಂದ ಬಹಳಮಟ್ಟಿಗೆ ದೇಶಸೇವೆಮಾಡುತ್ತಿರುವರು.

ಈ ಸಂಘದ ಕೀರ್ತನಕಾರರಾದ ಕಾರ್ಯದರ್ಶಿಗಳಾದ ಜಿ. ಶಿವಮೂರ್ತಿಶಾಸ್ತ್ರಿಗಳು ಸಂಘದ ಅಭ್ಯುದಯಕ್ಕೆ ಬಹು ಸಹಾಯಕರಾಗಿರುವರು

ಸಂಘಗಳಿಂದ ಜನತೆಗೆ ಎಷ್ಟುಮಟ್ಟಿನ ಮೇಲೆಯಾಗುವುದೆಂಬುದನ್ನು ಈ ಸೇವಾಸಂಘದವರು ತೋರಿಸುತ್ತಿರುವರು.

ಪ್ರತಿನಿಧಿ

ಸಂತೋಷದ ಸುದ್ದಿ

ಕು[illegible]ರ ಬೀದಿಯಲ್ಲಿ [illegible] ನ್ಯಾಯವಾದಿ [illegible] ಅನಂತ [illegible]ಕರಾದ ಮ|| ರಾ|| ಜಿ [illegible] ವಕೀಲರು ಕುಮಾರಸ್ವಾಮಿ [illegible] ತಮ್ಮ ಅಣ್ಣಂದಿರಾದ ಮ|| ರಾ|| ಜಿ ಚನ್ನಪ್ಪನವರು ಕಟ್ಟಿಸಿದ 'ಜಯಲಕ್ಷ್ಮೀಪ್ರಾಸಾದ' ಎಂಬ ಅಂಗಡಿಯ ಪ್ರವೇಶೋತ್ಸವವನ್ನು ತಾ|| ೧೭-೬-೨೭ರಲ್ಲಿ ವಿಧ್ಯುಕ್ತವಾಗಿ ನಡೆಸಿದರು.

ಆ ದಿನ ಸಾಯಂಕಾಲ ಆ ಪ್ರಾಸಾದದಲ್ಲಿ ಸುಪ್ರಸಿದ್ಧ ಕೀರ್ತನಕಾರರಾದ ವೇ|| ಜಿ ಶಿವಮೂರ್ತಿಶಾಸ್ತ್ರಿಗಳವರ 'ವೇದಾಂತ ಶಿರಾ[illegible]' ಎಂಬ ಶಿವಕೀರ್ತನೆಯನ್ನು ಸರಸವಾಗಿ ಅನುವಾದ ಮಾಡಿದರು

ಈ ಸಮಾರಂಭಕ್ಕೆ ಸಮಸ್ತ ಪುರಪ್ರಮುಖರು [illegible] ಈ ಶುಭದಿನದಲ್ಲಿ ಮ|| ರಾ|| ಜಿ ಚನ್ನಪ್ಪನವರು ತಮ್ಮ ಗೋತ್ರಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಹೆಸರಿನಲ್ಲಿ ೨ ರೂಪಾಯಿಗಳನ್ನು ಪಂಚಾಚಾರ್ಯಪ್ರಭಾ ಪತ್ರಿಕೆಗೆ ಕಳುಹಿಸಿರುವರು ಇವರ ಸಮಸ್ತಕಾರ್ಯಗಳಿಗೆ ಭಗವಂತನು ಯಶಸ್ಸನ್ನುಂಟುಮಾಡಲೆಂದು ಹಾರೈಸುತ್ತೇನೆ

ಸಂತೋಷಭಾಗಿ

ಶಂಕರನ ಅದ್ಭುತಮಹಿಮೆ.

ಧಾರವಾಡಜಿಲ್ಲಾ ಹಿರೇಕೆರೂರು ತಾಲೂಕು ಹಿರೇಕೆರೂರಿಗೆ ಎರಡುಮೈಲು ದೂರದಲ್ಲಿ 'ಬಾಳೀಹಾಳ' ಎಂಬ ಗ್ರಾಮವುಂಟು. ಈ ಗ್ರಾಮದ ಒಂದು ಫರ್ಲಾಂಗು ದೂರದಲ್ಲಿ ಪುರಾತನದೇವಸ್ಥಾನದೊಳಗೆ 'ವಿಷಪರಿಹಾರಲಿಂಗೇಶ್ವರ' ಎಂಬ ಲಿಂಗವುಂಟು. ಹಾವು ಚೇಳು ಮೊದಲಾದ ವಿಷಜಂತುಗಳು ಕಡಿದರೆ ತತ್‌ಕ್ಷಣವೇ ಹೊರಟು ದೇವಸ್ಥಾನಕ್ಕೆ ಬಂದು ಭಕ್ತಿಪೂರ್ವಕರಾಗಿದ್ದು ಭಗವಂತನ ಸ್ತೋತ್ರಮಾಡುತ್ತಾ ಇದ್ದರೆ ಸ್ವಲ್ಪದಿವಸಗಳಲ್ಲಿ ಪ್ರಾಣಿಯು ಶರೀರದಲ್ಲಿ ಏಟ್ಟ ವಿಷವು ಪರಿಹಾರವಾಗುವುದು ದೂರದೇಶದವರು ತತ್ಕಾಲಕ್ಕೆ ಆ ಸ್ಥಳಕ್ಕೆ ಹೋಗುವುದು ಆಗದೆ ಇದ್ದಲ್ಲಿ ವಿಷಪ್ರಾಣಿಯು ಕಚ್ಚಿದ ಕ್ಷಣವೇ ಕಡಿದವರಿಗೆ ಔಷಧ ಪ್ರಯೋಗವನ್ನು [illegible] 'ಬಾಳೀಹಾಳ ವಿಷಪರಿಹಾರಲಿಂಗೇಶ್ವರ' ನ ಹೆಸರು ಹೇಳಿ ಕಚ್ಚಿದಸ್ಥಳಕ್ಕೆ [illegible] ಗ್ರಾಮದ ಎಲ್ಲೆಯನ್ನು ಬಿಟ್ಟು ಸಮೀಪದಲ್ಲಿರುವ ಗ್ರಾಮದ ಎಲ್ಲೆಯಲ್ಲಿ ಮೂರು ದಿವಸ ಅಥವಾ ಒಂಭತ್ತು ದಿವಸಗಳು ವಾಸವಿದ್ದು ನಂತರ ಸ್ವಂತಗ್ರಾಮವನ್ನು ಸೇರಬಹುದು [illegible] ನಂತರ [illegible] ಕೂಡ [illegible] ಯಿಂದಲೇ ಬರಬೇಕು. ವಿಷಪ್ರಾಣಿಯು ಕಡಿದವರ [illegible] ಗಳ ಯೋಗಕ್ಷೇಮ [illegible] ಬಂದುಹೋಳ [illegible] ಕಟ್ಟಿದ್ದರೆ ಅವರ [illegible] ಕ್ಷೇಮವನ್ನು ಪುರುಷರು ನೋಡಬಹುದು. ಅನುಕೂಲವಿಲ್ಲದ [illegible] ಇದ್ದರೂ ಸಹ ಇದೇ ರೀತಿಯಾಗಿ ಅನೇಕರಿಗೆ [illegible] ಮೊದಲಾದವುಗಳು ಪರಿಹಾರ [illegible] ತನ್ನ [illegible] ಯಥಾರ್ಥ [illegible] ಇಷ್ಟಾನುಸಾರ [illegible] ನಡೆಯುವುದು. ಈ ಆಶ್ಚರ್ಯದ ಸಂಗತಿಯನ್ನು [illegible] ದೇವತೆಗಳು ಸಮುದ್ರಮಥನ ಮಾಡಿದಕಾಲಕ್ಕೆ ಹೊರಟು ಕಾಳಕೂಟವೆಂಬ ವಿಷಜ್ವಾಲೆಯು ಪ್ರಸ[illegible] ಪರಮಾತ್ಮನು ಆ ವಿಷವ[illegible] ಕಂಠದಲ್ಲಿ ಧರಿಸಿಕೊಂಡು ನೀಲಕಂಠನೆಂಬ ನಾಮ[illegible] ಈ ಸ್ಥಳದಲ್ಲಿ 'ವಿಷಪರಿ[illegible] ಲಿಂಗೇಶ್ವರ' ನೆಂಬ ನಾಮಾಂಕಿತದಿಂದ ಲೋಕೋ[illegible] ಮಾಡುತ್ತಿರುವನೆಂಬುದು ಸರ್ವರಿಗೂ ವಿದಿತ[illegible]ವುದು.

ಶಿವ[illegible]

ತಾ|| ೧೮-೬-೨೭ [illegible] ಮಹದೇವಪ್ಪ [illegible]

ಕಣಿನಾಮನಿ [illegible]

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ

(ವರ್ಷಾಂತ್ಯುತ್ಸವದ ಅಧಿವೇಶನ)

13ನೆಯ ಜೂನ್ 1937

(ಕಳೆದವಾರದ ಶೇಷ)

ಚಾಲ್ತಿ ಸಾಲಿನಲ್ಲಿ ಎಷ್ಟು ಮೊಬಲಗು ವೆಚ್ಚವಾಗಬಹುದೆಂದು ಬಜೆಟ್ಟಿನ ಪ್ರಕಾರ ನಿರೀಕ್ಷಿಸಲಾಯಿತ್ತೋ ಅದಕ್ಕಿಂತಲೂ ಬಹಳ ಹೆಚ್ಚು ಮೊಬಲಗು ವೆಚ್ಚವಾಗುವುದಿಲ್ಲ. ಆದಕಾರಣ, ಈ ಸ್ಥಿತಿಯು ತೃಪ್ತಿಕರವಾಗಿಯೆಂದು ಹೇಳಬಹುದು. ಅದರಲ್ಲಿಯೂ ಇತರಾ ಕೆಲವು ಅನಾವೃತ್ತ ವೆಚ್ಚದ ಬಾಬುಗಳಿಗಾಗಿ ಚಾಲ್ತಿ ಸಾಲಿನಲ್ಲಿ 13 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿ ಬಂದುದನ್ನು ಮನಸ್ಸಿನಲ್ಲಿಟ್ಟುಕೊಂಡು ಪರಿಗಣಿಸಲು ಇದು ತೃಪ್ತಿಕರವಾಗಿದೆಯೆಂದೇ ಧಾರಾಳವಾಗಿ ಹೇಳಬಹುದಾಗಿದೆ. ಘನವೆತ್ತ ವೈಸ್ರಾಯರವರು ದಯಮಾಡಿಸುವುದರ ಸಂಬಂಧದಲ್ಲಿ ನಡೆಯಬೇಕಾದ ಏರ್ಪಾಡುಗಳಿಗಾಗಿ 1¾ ಲಕ್ಷ ರೂಪಾಯಿಗಳ ಗ್ರಾಂಟು, ನೀರಾವರಿ ಕಾಮಗಾರಿಗಳಿಗಾಗಿ ಲಕ್ಷ ರೂಪಾಯಿಗಳ ಗ್ರಾಂಟು, ಇಂಟರ್ಮೀಡಿಯೇಟ್ ಕಾಲೇಜು ಏರ್ಪಾಡಿನ ಸಂಬಂಧದಲ್ಲಿ ಕಟ್ಟಡಗಳನ್ನು ಕಟ್ಟಿಸಲು 1½ ಲಕ್ಷ ರೂಪಾಯಿಗಳ ಗ್ರಾಂಟು, ನಗರಗಳಿಗೆ ಸಾಂಕ್ರಾಮಿಕ ರೋಗಗಳೇ ಮುಂತಾದ ಅಂಟುಜಾಡ್ಯಗಳು ಸಂಭವಿಸುವುದನ್ನು ತಪ್ಪಿಸುವ ಏರ್ಪಾಡುಗಳಿಗಾಗಿ 1½ ಲಕ್ಷ ರೂಪಾಯಿಗಳ ಗ್ರಾಂಟು ಇವು ಸದರಿ ಅನಾವೃತ್ತ ವೆಚ್ಚದ ಬಾಬುಗಳಲ್ಲಿ ಕೆಲವಾಗಿರುತ್ತವೆ. ಬಡ್ಡಿ ಹಣಗಳು, ಮತ್ತು ಸೈನ್ಯ ಈ ಮೊದಲಾದ ಬಾಬುಗಳಲ್ಲಿಯೂ ಹಣವು ಉಳಿತಾಯವಾಗಿದೆ. ಈ ಉಳಿತಾಯದ ಮೊಬಲಗಿನಿಂದ ಹೆಚ್ಚು ವೆಚ್ಚಕ್ಕೆ ಸ್ವಲ್ಪಮಟ್ಟಿಗೆ ಮೊಬಲಗು ಒದಗಿತು. ಸೇವಿಂಗ್ಸ್ ಬ್ಯಾಂಕುಗಳಲ್ಲಿ ಠೇವಣಿಮಾಡಲ್ಪಟ್ಟ ಮೊಬಲಗುಗಳ ಮೇಲೆ ಬಡ್ಡಿಯನ್ನು ಕೊಡುವ ಪರಮಾವಧಿ ದರವನ್ನು ಶೇಕಡಾ 5 ರಿಂದ 4½ ಗೆ ಇಳಿಸಲಾಯಿತು. ಈ ಕಾರಣ, ಬಡ್ಡಿಯ ಬಾಬಿನಲ್ಲಿ ಹಣವು ಉಳಿಯಿತು. ಮೈಸೂರು ಸೈನ್ಯದಲ್ಲಿ ರಾವುತರ ದಳವನ್ನೂ, ಮತ್ತು ಟ್ರಾನ್ಸ್‌ಪೋರ್ಟ್ ಕೋರ್ ಶಾಖೆಯನ್ನೂ ಪುನರ್ವ್ಯವಸ್ಥೆ ಮಾಡಲಾಯಿತು. ಇದರ ಫಲಿತಾಂಶವಾಗಿ ಸೈನ್ಯದ ಬಾಬಿನಲ್ಲಿ ಒಟ್ಟು ವೆಚ್ಚವು ಕಡಿಮೆಯಾಯಿತು. ಈ ಕಾರಣ ಬಜೆಟ್ಟಿನಲ್ಲಿ ಈ ಮೊದಲೇ ಒದಗಿಸಲ್ಪಟ್ಟ ಮೊಬಲಗು ವೆಚ್ಚವಾಗದೆ ಹಣವು ಉಳಿಯುವ ಕಾರಣವಾಯಿತು. ಕೆಲವು ಹುದ್ದೆಗಳನ್ನು ತೆಗೆದುಹಾಕುವುದರ ಮೂಲಕವೂ ಮತ್ತು ಕೆಲವು ಹುದ್ದೆಗಳ ಸಂಬಳಗಳನ್ನು ಕಡಿಮೆ ಮಾಡುವುದರ ಮೂಲಕವೂ ಸಿಬ್ಬಂದಿಯ ವೆಚ್ಚದಲ್ಲಿ ವರುಷವೊಂದಕ್ಕೆ 2 ಲಕ್ಷ ರೂಪಾಯಿಗಳಷ್ಟು ಬಾರಿ ಮೊಬಲಗು ಕಡಿಮೆಯಾಗುವಂತೆ ಮಾಡಲಾಗಿದೆ. ಸಮಯವು ಸಿಕ್ಕಿದಾಗಲೆಲ್ಲ ಈ ವೆಚ್ಚವನ್ನು ತಗ್ಗಿಸುತ್ತಾ ಬರುವುದಕ್ಕೆ ಉದಾಹರಣವಾಗಿ ಈ ಅಂಶವನ್ನು ಇಲ್ಲಿ ತಿಳಿಸಬಹುದಾಗಿದೆ. ವಿದ್ಯುಚ್ಛಕ್ತಿಯ ಇಲಾಖೆಯವರೂ, ಕೈಗಾರಿಕೆ ಇಲಾಖೆಯವರೂ ಮತ್ತು ಸ್ಯಾಂಡಲ್ ಇಲಾಖೆಯವರೂ ಬೆಂಗಳೂರಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ವರ್ಕ್‌ಶಾಪುಗಳನ್ನು (ಎಂದರೆ, ಯಂತ್ರಶಾಲೆಗಳನ್ನು) ಇಟ್ಟುಕೊಂಡು ಕೆಲಸ ನಡೆಯಿಸುತ್ತಿದ್ದಾರೆ. ಈ ಮೂರು ಇಲಾಖೆಗಳಿಗೂ ಒಂದೇ ಒಂದು ವರ್ಕ್‌ಶಾಪು ಇರುವಂತೆ ಅವುಗಳನ್ನೆಲ್ಲ ಒಟ್ಟುಗೂಡಿಸುವುದರಿಂದ ಬಹಳ ಹಣವನ್ನು ಉಳಿಸಬಹುದಾಗುವುದೆಂದು ನಿರೀಕ್ಷಿಸಲಾಗಿದೆ. ಚಾಲ್ತಿ ಸಾಲಿನಲ್ಲಿ ರಿಸರ್ವ್ ಫಂಡುಗಳಿಂದ (ಎಂದರೆ ನಿಧಿಗಳ ರೂಪದಲ್ಲಿ ಶೇಖರವಾಗಿರುವ ಮೊಬಲಗುಗಳಿಂದ) 6.35 ಲಕ್ಷ ರೂಪಾಯಿಗಳನ್ನು ವೆಚ್ಚಕ್ಕಾಗಿ ಒದಗಿಸಲಾಗಿತ್ತಷ್ಟೆ. ಈ ಮೊಬಲಗನ್ನು ಸೇರಿಸದೆ ಚಾಲ್ತಿ ಸಾಲಿನಲ್ಲಿ ಹುಟ್ಟುವಳಿಗಿಂತ ವೆಚ್ಚವು 7½ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿರುತ್ತದೆ.

1937—38 ನೇ ಸಾಲಿನ ಆಯವ್ಯಯಗಳ ಅಂದಾಜು

1937—38 ನೇ ಸಾಲಿನಲ್ಲಿ 410.10 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರುವಂತೆ ನಿರೀಕ್ಷಿಸಲಾಗಿದೆ. ಮತ್ತು ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳಿಗಾಗಿ 379.8 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವೆಚ್ಚವು ಕಳೆದು ಬಜೆಟ್ಟಿನಲ್ಲಿ 30,000 ರೂಪಾಯಿಗಳು ಉಳಿಯಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ತಪಶೀಲು ಲೆಕ್ಕಗಳು ಫೈನಾನ್ಸ್ ಸೆಕ್ರೆಟರಿಯವರು ಸಾದರು ಮಾಡಿರುವ ಮೆಮೊರ್ಯಾಂಡಮಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿವೆ. ಮೆಮೊರ್ಯಾಂಡಮಿನ ಪ್ರತಿಗಳನ್ನು ತಮಗೆ ಈ ಮೊದಲೇ ಕಳುಹಿಸಿದ್ದೇನೆ. ಆದಕಾರಣ ಮುಂದಿನ ಸಾಲಿನ ಆಯವ್ಯಯಗಳ ಕಾರ್ಯಕ್ರಮದ ಕೆಲವು ಮುಖ್ಯ ಲಕ್ಷಣಗಳನ್ನು ಮಾತ್ರ ನಾನು ಇಲ್ಲಿ ಸೂಚಿಸುತ್ತೇನೆ.

ವರಮಾನದ ತೆರಿಗೆಯ ಬಾಬಿನಿಂದ ಚಾಲ್ತಿ ಸಾಲಿನಲ್ಲಿ ಬಂದಷ್ಟು ಕಡಿಮೆಯಾದ ಹುಟ್ಟುವಳಿಯು ಹಿಂದೆ ಯಾವಾಗಲೂ ಬಂದಿರಲಿಲ್ಲ. ಆದರೆ ಮುಂದಿನ ಸಾಲಿನಲ್ಲಿ ಈ ಬಾಬಿನ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಹೆಚ್ಚುವುದೆಂಬ ನಿರೀಕ್ಷಣೆಯು ಇದೆ. ಆದಕಾರಣ, ಚಾಲ್ತಿ ಸಾಲಿಗಿಂತಲೂ ಈ ಬಾಬಿನಲ್ಲಿ 1¾ ಲಕ್ಷ ರೂಪಾಯಿಗಳು ಹೆಚ್ಚು ವರಮಾನವು ಬರುವಂತೆ ಆಯವ್ಯಯದ ಅಂದಾಜು ಪಟ್ಟಿಯಲ್ಲಿ (ಬಜೆಟ್ಟಿನಲ್ಲಿ) ನಮೂದಿಸಲಾಗಿದೆ. ಎಕ್ಸೈಜು ಬಾಬಿನಲ್ಲಿ 3 ಲಕ್ಷ ರೂಪಾಯಿಗಳ ಹುಟ್ಟುವಳಿಯಲ್ಲಿ ಕಡಿಮೆಯಾಗಬಹುದೆಂಬುದಾಗಿ ಅಂದಾಜುಮಾಡಿದೆ. ಈಚೆಗೆ ನಡೆದ ಹರಾಜು ವಿಕ್ರಯಗಳನ್ನೂ, ಮತ್ತು ಈ ಬಾಬಿನ ಹುಟ್ಟುವಳಿಯು ಕಳೆದ ಕೆಲವು ವರ್ಷಗಳಿಂದಲೂ ಕಡಿಮೆಯಾಗುತ್ತಾ ಬರುತ್ತಿರುವುದನ್ನೂ ಪರಿಶೀಲಿಸಿ, ಈ ರೀತಿಯಾಗಿ ಅಂದಾಜುಮಾಡಿದೆ. ಬೆಂಗಳೂರು ದಂಡಿನ ಹುಟ್ಟುವಳಿಯಿಂದ ಬರತಕ್ಕ ವರಮಾನವನ್ನೂ ಸಹ ಚಾಲ್ತಿ ಸಾಲಿಗಿಂತಲೂ ಒಂದು ಲಕ್ಷ ರೂಪಾಯಿಗಳು ಕಡಿಮೆಯಾಗಿ ಕಾಣಿಸಿದೆ. ರೈಲ್ವೆ ಬಾಬಿನಲ್ಲಿ ಸ್ವಲ್ಪ ಹೆಚ್ಚು ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಲಾಗಿದೆ. ವಿದ್ಯುಚ್ಛಕ್ತಿಯ ಬಾಬಿನಲ್ಲಿ 20.81 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂದು ಅಂದಾಜು ಮಾಡಲಾಗಿದೆ. ಎಂದರೆ ಚಾಲ್ತಿ ಸಾಲಿನ ತಿದ್ದುಪಾಟಾದ ಬಜೆಟ್ಟಿನ ಅಂದಾಜಿನಲ್ಲಿ ನಮೂದಿಸಲ್ಪಟ್ಟಿರುವುದಕ್ಕಿಂತಲೂ 3.76 ಲಕ್ಷ ರೂಪಾಯಿಗಳು ಹೆಚ್ಚಾಗಿ ಬರುವಂತೆ ಇದರಿಂದ ಕಂಡುಬರುವುದು. ಮೊಬಲಗು ಈ ರೀತಿ ಹೆಚ್ಚುವುದಕ್ಕೆ ಒಟ್ಟು ಹುಟ್ಟುವಳಿಯು ಹೆಚ್ಚುವುದೇ ಕಾರಣವಲ್ಲ. ಆ ಇಲಾಖೆಯ ಹುಟ್ಟುವಳಿಯಿಂದ ಡಿಪ್ರೀಸಿಯೇಷನ್ ಮೊಬಲಗಿಗೆ ಕೊಡುತ್ತಿದ್ದ ಕಂಟ್ರಿಬ್ಯೂಷನ್ ಮೊಬಲಗು ಕಡಿಮೆಮಾಡಲ್ಪಟ್ಟುದೇ ಕಾರಣವಾಗಿದೆ. ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಸವೆದುಹೋದ ಅಥವಾ ಕೆಟ್ಟುಹೋದ ಯಂತ್ರದ ಸಾಮಾನುಗಳಿಗೆ ಬದಲಾಗಿ ಹೊಸ ಸಾಮಾನುಗಳನ್ನು ಜೋಡಿಸುವುದಕ್ಕಾಗಿ ಕಾರ್ಯಕ್ರಮವೊಂದನ್ನು ಕೈಗೊಳ್ಳಲು ಫಂಡು ಮೊಬಲಗನ್ನು ಒದಗಿಸಲಾಗಿದೆ. ಇದರ ಈಗಿನ ಡಿಪ್ರೀಸಿಯೇಷನ್ ಫಂಡಿನಲ್ಲಿ 51 ಲಕ್ಷ ರೂಪಾಯಿಗಳು ಶೇಖರವಾಗಿವೆ. ಈ ಫಂಡಿಗೆ ಸಾಲಿಯಾನಾ ಕಂಟ್ರಿಬ್ಯೂಷನ್ ಹಣವನ್ನು ಕೊಡಬೇಕಷ್ಟೆ. ಹೀಗೆ ಮಾಡುವುದರಲ್ಲಿ ಮುಂದಣ ವರ್ಷದಲ್ಲಿ 6 ಲಕ್ಷ ರೂಪಾಯಿಗಳಿಗೆ ಬದಲಾಗಿ 4 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಲಾಗುವುದು.

ಬಜೆಟ್ಟಿನಲ್ಲಿ ಒಟ್ಟು 133½ ಲಕ್ಷ ರೂಪಾಯಿಗಳ ವೆಚ್ಚಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಇವರಲ್ಲಿ 10 ಲಕ್ಷ ರೂಪಾಯಿಗಳು ನೀರಾವರಿ ಕಾಮಗಾರಿಗಳನ್ನು ಮಾಡಿಸುವುದಕ್ಕೋಸ್ಕರವೂ ಮತ್ತು ಕೆರೆಗಳು ಮುಂತಾದ (ನೀರಾವರಿಯ) ಬಾಬುಗಳನ್ನು ದುರಸ್ತುಮಾಡಿಸುವುದಕ್ಕೋಸ್ಕರವೂ ವೆಚ್ಚಮಾಡಲ್ಪಡುತ್ತವೆ. ನೀರಾವರಿಯ ಕಾಮಗಾರಿಗಳಿಗೆ ಬಂಡವಾಳಕ್ಕೋಸ್ಕರ ಶೇಖರಿಸಿರುವ ರಿಸರ್ವ್ ಫಂಡಿನ ಮೊಬಲಗು, ಕ್ಯಾಪಿಟಲ್ ಫಂಡಿನಲ್ಲಿ ಶೇಖರವಾಗಿರುವ ಮೊಬಲಗಿನ ಮೇಲಣ ಬಡ್ಡಿ ಇಟ್ಟು, ನೀರಾವರಿ ಸೆಸ್ ಫಂಡ್ ಮೊಬಲಗಿನಿಂದ ಒದಗಿಸಲ್ಪಡುವ ಮೊಬಲಗು, ಇವುಗಳಿಂದ ಈ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸಲಾಗುವುದು. ಎಕ್ಸೈಜ್ ಎಥ ದ ರಿಜರ್ವ್‌ಗಳಿಂದ ಹಣವನ್ನು ಒದಗಿಸತಕ್ಕ ಇತರ ಅನಾವೃತ್ತ (ನಾನ್ ರಿಕರಿಂಗ್) ವೆಚ್ಚದ ಬಾಬುಗಳಿಗಾಗಿ ಬಜೆಟ್ಟಿನಲ್ಲಿ 5.63 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಮೈಸೂರು ಸಿಟಿಯ ನೀರು ಸರಬರಾಯಿ ಏರ್ಪಾಡನ್ನು ಮತ್ತಷ್ಟು ಉತ್ತಮಗೊಳಿಸುವ ಕಾಮಗಾರಿಗಳಿಗಾಗಿ ಚಾಲ್ತಿ ಸಾಲಿನಲ್ಲಿ ಒದಗಿಸಿದ್ದ ಮೊಬಲಗು ಪೂರ್ತಿಯಾಗಿ ವೆಚ್ಚವಾಗಲಿಲ್ಲ. ಅದರಲ್ಲಿ ಉಳಿದುಹೋಗಿದ್ದ ಮೊಬಲಗನ್ನು ಮತ್ತೆ ಒದಗಿಸಲಾಗಿದೆ. ಈ ಮೊಬಲಗೂ ಸಹ ಮೇಲೆ ಸೂಚಿಸಿದ 5.63 ಲಕ್ಷ ರೂಪಾಯಿಗಳಲ್ಲಿ ಸೇರಿದೆ. ರಿಜರ್ವ್‌ಗಳ ಮೊಬಲಗಿನಿಂದ ಒದಗಿಸುವ ಹಣವನ್ನು ಬಿಟ್ಟು ಕೇವಲ ಹುಟ್ಟುವಳಿಯ ಮೊಬಲಗಿನಿಂದಲೇ ವೆಚ್ಚಕ್ಕೆ ಹಣವನ್ನು ಒದಗಿಸುವ ಬಾಬುಗಳಿಗಾಗಿ 339.80 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಬಜೆಟ್ಟಿನಲ್ಲಿ ಈ ವೆಚ್ಚಕ್ಕಾಗಿ ಸೇರಿರುವ ಬಾಬುಗಳಲ್ಲಿ ಪ್ರಾಮುಖ್ಯವಾದ ಕೆಲವನ್ನು ಇಲ್ಲಿ ಸೂಚಿಸಬಹುದಾಗಿದೆ. ರೈಲ್ವೆಗಳಿಗಾಗಿ ಸೌದೆಯನ್ನೂ, ಕಂಬಿಗಳ ಕೆಳಕ್ಕೆ ಹಾಕುವ 'ಸ್ಲೀಪರು" ದಿಮ್ಮಿಗಳನ್ನೂ, ಜಾರಿ ಪ್ರಮಾಣದಲ್ಲಿ ಸರಬರಾಯಿ ಮಾಡುವುದು, ಮುಂತಾದ ಕೆಲಸಗಳಿಗಾಗಿ ಫಾರೆಸ್ಟು ಇಲಾಖೆಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇವುಗಳಿಗಾಗಿ ವೆಚ್ಚಮಾಡಿದ ಹಣಕ್ಕಿಂತಲೂ ಎಷ್ಟೋ ಹೆಚ್ಚು ಮೊಬಲಗು ಮುಂದೆ ಇವುಗಳಿಂದ ಹುಟ್ಟುವಳಿಯಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. "ಲಾಸ್ ಡಿಲೇಸ್ ಕಮಿಟಿ" ಎಂಬ ಸಮಿತಿಯವರ ಸಲಹೆಗಳ ಮೇರೆ ನಾಲ್ವರಿರುವ ಸರ್ಕಾರಿ ತುಕಡಿಗಳಲ್ಲಿ ಮಂಜೂರಾಗಿರುವಂತೆ ಹೊಸದಾಗಿ ಕೋರ್ಟುಗಳನ್ನು ಸ್ಥಾಪಿಸುವುದು ಮತ್ತು ಅವರಲ್ಲಿ ನಮೂದಿಸಲ್ಪಟ್ಟಿರುವ ನಾನಾ ಸುಧಾರಣೆಗಳನ್ನು ಜಾರಿಗೆ ತರುವುದು ಈ ಎರಡು ಉದ್ದೇಶಗಳಿಗಾಗಿ ಬಜೆಟ್ಟಿನಲ್ಲಿ 90,000 ರೂಪಾಯಿಗಳನ್ನು ಒದಗಿಸಲಾಗಿದೆ. ಸಿಲ್ಕ್ ಬಗ್ಗೆ ಶೇಷ ವಸ್ತುಪ್ರದರ್ಶನವೊಂದನ್ನು ಮೈಸೂರಿನಲ್ಲಿ ನಡೆಸಲಾಗುವುದಷ್ಟೆ. ಅದರ ಸಂಬಂಧದಲ್ಲಿ ನಡೆಯುವ ವೆಚ್ಚಕ್ಕೋಸ್ಕರ ಅರ್ಧ ಲಕ್ಷ ರೂಪಾಯಿಗಳು ಒದಗಿಸಲ್ಪಟ್ಟಿವೆ. ಮಲೆನಾಡಿನಲ್ಲಿ ಒಂದು ತಾಲ್ಲೂಕನ್ನು, ಮೈದಾನದ ಪ್ರದೇಶದಲ್ಲಿ ಒಂದು ತಾಲ್ಲೂಕನ್ನು ಆರಿಸಿ ಅಲ್ಲಿ ಜಮೀನು ಹಕ್ಕುದಾರಿಕೆ (ರೆಕಾರ್ಡ್ ಆಫ್ ರೈಟ್ಸ್) ಪಟ್ಟಿಯನ್ನು ಪರೀಕ್ಷಾರ್ಥವಾಗಿ ಅವುಗಳಿಗೆ ತಯಾರಿಸಬೇಕೆಂದು ಉದ್ದೇಶಿಸಲಾಗಿದೆ. ಅದಕ್ಕೋಸ್ಕರವೂ ಸಹ ಬಜೆಟ್ಟಿನಲ್ಲಿ ಸ್ವಲ್ಪ ಮೊಬಲಗು ಒದಗಿಸಲ್ಪಟ್ಟಿದೆ.

ಸಂಪದಭಿವೃದ್ಧಿ ಸಮಾಜಕ್ಕಾಗಿ ಕೊಡುವ ಮೊಬಲಗನ್ನು 75,000 ರೂಪಾಯಿಗಳಿಗೆ ತಗ್ಗಿಸಬೇಕು. ಆದರೆ ಬಹೋಪಯುಕ್ತವಾದ ನಾನಾ ಅಭಿವೃದ್ಧಿಯ ಏರ್ಪಾಡುಗಳಿಗಾಗಿ ಚಾಲ್ತಿ ಸಾಲಿನಲ್ಲಿ ಒದಗಿಸಿದಷ್ಟು ಹಣವನ್ನೇ ಸ್ವಲ್ಪ ಹೆಚ್ಚು ಕಡಮೆ ಮುಂದಣ ಸಾಲಿನಲ್ಲಿಯೂ ಒದಗಿಸಲಾಗಿದೆ. ಎಂದರೆ ಈ ಉದ್ದೇಶಕ್ಕೋಸ್ಕರ ಮುಂದಣ ಸಾಲಿನಲ್ಲಿಯೂ 6½ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಮುಂದಣ ಸಾಲಿನಲ್ಲಿ ಮೂಲಧನದ ಕಾಮಗಾರಿಗಳಿಗಾಗಿ 44,89,000 ರೂಪಾಯಿಗಳು ಕೊಡಲ್ಪಡತಕ್ಕದೆಂಬುದಾಗಿ ಆ ಮೊಬಲಗನ್ನು ಸದ್ಯಕ್ಕೆ ಗೊತ್ತುಮಾಡಲಾಗಿದೆ. ಆ ಹಣವನ್ನು ಹಂಚತಕ್ಕ ಕ್ರಮವು ಹೇಗೆಂದರೆ—

	ರೂ
ರೈಲ್ವೆಗಳು ಮತ್ತು ಟ್ರಾಂವೇಗಳು	20,95,000
ವಿದ್ಯುಚ್ಛಕ್ತಿಯ ಬಾಬು —	
ವಿದ್ಯುಚ್ಛಕ್ತಿಯ ಇಲಾಖೆ	17,68,000
ಕೃಷ್ಣರಾಜಸಾಗರ	5,95,000
ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ	
ನೀರು ಸರಬರಾಯಿ ಕಾಮಗಾರಿಗಳು	12,000
ಗಂಧದ ಎಣ್ಣೆಯ ಕಾರ್ಖಾನೆಗಳು	19,000
ಒಟ್ಟು	44,89,000

ಕೃಷ್ಣರಾಜ ಸಾಗರದಿಂದ ಮೇಲುಮಟ್ಟದಿಂದ (ಹೈ ಲೆವಲ್) ನಾಲೆಯನ್ನು ಏರ್ಪಡಿಸುವ ವಿಚಾರವನ್ನು ಪರ್ಯಾಲೋಚಿಸುವುದಕ್ಕೋಸ್ಕರ, ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಡಿಸಿದ್ದರು. ಆ ಸಮಿತಿಯವರು ತಮ್ಮ ವರದಿಯನ್ನು ಕಳುಹಿಸಿದ್ದಾರೆ. ಅದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಸಂಬಂಧದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ನಿರ್ಧರಿಸಲಾಗುವುದೋ, ಆ ಕಾಮಗಾರಿಗಳಿಗೆಲ್ಲಾ ಹಣವನ್ನೊದಗಿಸುವ ವಿಚಾರವನ್ನು ಮುಂದಣ ಸಾಲಿನಲ್ಲಿ ವ್ಯವಸ್ಥೆಮಾಡಲಾಗುವುದು.

ಬೆಂಗಳೂರಿಗೆ ನೀರನ್ನು ಒದಗಿಸುವುದಕ್ಕಾಗಿ ಈಗಿರುವುದಕ್ಕಿಂತಲೂ ಉತ್ತಮವಾದ ಏರ್ಪಾಡನ್ನು ಮಾಡುವುದು, ಮತ್ತೊಂದು ಮುಖ್ಯವಾದ ಬಾಬು. ಇದರ ವಿಚಾರವನ್ನು ಪರ್ಯಾಲೋಚಿಸಿ ಸಲಹೆಗಳನ್ನೊಪ್ಪಿಸಲು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷವಿಧದ ಸಮಿತಿಯು ನೇಮಕಮಾಡಲ್ಪಟ್ಟಿದ್ದಿತು. ಆ ಸಮಿತಿಯವರು ಒಂದು ಏರ್ಪಾಡನ್ನು ಸೂಚಿಸಿ ಸಲಹೆಮಾಡಿದ್ದಾರೆ. ಇದರ ಸಂಬಂಧದಲ್ಲಿ ಹಣವನ್ನೊದಗಿಸುವುದೂ ಅವಶ್ಯವಾಗುತ್ತದೆ.

ಭದ್ರಾವತಿ ಕಬ್ಬಿಣದಕಾರ್ಖಾನೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಚಾಲ್ತಿ ಸಾಲಿನೊಳಗೆ ನಡೆದ ಕೆಲಸದಲ್ಲಿ, ಎಲ್ಲಾ ವಿಧದಲ್ಲಿಯೂ ಹೀಲ್ಸಾಟುಗಳು ಕಂಡುಬಂದಿವೆ. ಬಜೆಟ್ಟು ರಚಿಸಲ್ಪಟ್ಟಾಗ ಕಾರ್ಖಾನೆಯಲ್ಲಿ ನಾನಾವಸ್ತುಗಳು ಯಾವ ಪರಿಮಾಣಗಳಲ್ಲಿ ರಚಿಸಲ್ಪಡುವುವೆಂದು ನಿರೀಕ್ಷಿಸಲಾಗಿದ್ದಿತೋ ಅದೇ ಪರಿಮಾಣಗಳಲ್ಲಿಯೇ (ಒಂದು ಬಾಬನ್ನು ಬಿಟ್ಟು ಉಳಿದಬಾಬುಗಳಲ್ಲೆಲ್ಲಾ) ಅವುಗಳು ರಚಿಸಲ್ಪಡುತ್ತವೆ. ಆದರೆ ಕೊಳಾಯಿಗಳನ್ನು ಎರಕಹೊಯ್ಯುವ ಕೆಲಸದ ವಿಷಯದಲ್ಲಿ ಮಾತ್ರ ಹೀಗೆ ನಡೆಯುವುದಿಲ್ಲ. ಇದು ಚಾಲ್ತಿವರುಷದಲ್ಲಿ ಹೊಸದಾಗಿ ಆರಂಭಿಸಿದ ಕೆಲಸ; ಆದುದರಿಂದ ಹೀಗಾಗಿದೆ. ಕಾರ್ಖಾನೆಯಲ್ಲಿ ರಚಿಸಲ್ಪಟ್ಟ ಕಬ್ಬಿಣವೇ ಮುಂತಾದ ವಸ್ತುಗಳ ಮಾರಾಟವು ಹೆಚ್ಚು ಹೆಚ್ಚಾಗಿ ನಡೆಯಲು ಉಪಕ್ರಮವಾಗಿದೆ. ಈ ಸರ್ಕಾರಿ ಸಾಲಿನಲ್ಲಿ ಕಾರ್ಖಾನೆಗೋಸ್ಕರ ವೆಚ್ಚವಾದ ಮೊಬಲಗು ಅಲ್ಲಿನ ಹುಟ್ಟುವಳಿಯಿಂದಲೇ ಹೊರಡಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಚಾಲ್ತಿ ಸಾಲಿನಲ್ಲಿ ವೆಚ್ಚವು ಕಳೆದು 1,60,000 ರೂಪಾಯಿಗಳು ಉಳಿಯುವುದಾಗಿ ಅಂದಾಜು ಮಾಡಲ್ಪಟ್ಟಿದ್ದಿತು. ಆದರೆ ಆ ನಿರೀಕ್ಷಣೆಯು ನೆರವೇರದೆ ಹೋಯಿತು. ಚಾಲ್ತಿಸಾಲಿನ ಪ್ರಾರಂಭದಲ್ಲಿ ಕೆಲವುತಿಂಗಳು ಕೊಳಾಯಿಗಳನ್ನು ಎರಕಹೊಯ್ಯುವ ಕೆಲಸವು ತಕ್ಕಷ್ಟು ನಡೆಯದೆ ಹೋದುದೊಂದು; ನಮ್ಮ ದೇಶದಲ್ಲಿ ತಯಾರಾಗುವಂತೆ ಇದ್ದಿಲಿನಸಹಾಯದಿಂದ ಅದುರನ್ನು ರೂಪಾಂತರಗೊಳಿಸಿ ತಯಾರಿಸಿದ ಕಬ್ಬಿಣದ ಬೆಲೆಯು ಅಮೇರಿಕಾ ಖಂಡದಲ್ಲಿ ಆಕಸ್ಮಾತ್ತಾಗಿ ಟನ್ನು ಒಂದಕ್ಕೆ 3 ಡಾಲರುಗಳಂತೆ ಇಳಿದುಹೋಗಿ ಕಾರ್ಖಾನೆಯವರು ಮಾರಿದ ಕಬ್ಬಿಣಕ್ಕೆ ಕಡಮೆಮೊಬಲಗು ಬಂದುದೊಂದು; ಇವೆರಡು ಕಾರಣಗಳಿಂದ ಹೀಗಾಯಿತು.

ಕಾರ್ಖಾನೆಯ ಕೆಲಸದಿಂದ ಈಚೆಗೆ ಉತ್ತಮವಾದ ಫಲಿತಾಂಶಗಳುಂಟಾಗುತ್ತಾ ಇವೆ. ಇವುಗಳಿಗನುಸಾರವಾಗಿ 1927-28ನೇ ಸಾಲಿಗೆ ಕಾರ್ಖಾನೆಯ ಆಯವ್ಯಯಗಳ ಅಂದಾಜನ್ನು ಗೊತ್ತುಮಾಡಲಾಗಿದೆ. ಸ್ಥಿತಿಗತಿಗಳು ಈಗಿನಂತೆಯೇ ಇದ್ದರೆ ಮುಂದಣಸಾಲಿನಲ್ಲಿ ಕಾರ್ಖಾನೆಯ ಹುಟ್ಟುವಳಿಯಲ್ಲಿ ಅಲ್ಲಿನ ವೆಚ್ಚವು ಕಳೆದು 3½ ಲಕ್ಷ ರೂಪಾಯಿಗಳು ಉಳಿಯಬಹುದೆಂಬುದಾಗಿ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯವರು ನಿರೀಕ್ಷಿಸಿದ್ದಾರೆ. ಆ ಮೊಬಲಗನ್ನು ಡಿಪ್ರೀಸಿಯೇಷನ್ ಫಂಡನ್ನು ಏರ್ಪಡಿಸಲು ಮೊಟ್ಟಮೊದಲನೆಯ ಕಂತಾಗಿ ಉಪಯೋಗಿಸಿ ಶೇಖರಿಸಲಾಗುವುದು. ಆದಕಾರಣ, ಸಂಸ್ಥಾನದ ಬಜೆಟ್ ಅಂದಾಜಿನಲ್ಲಿ ಆ ಮೊಬಲಗನ್ನು ಹುಟ್ಟುವಳಿಯ ಬಾಬಿನಲ್ಲಿ ನಮೂದಿಸಿಲ್ಲ.

ಸರ್ ಎಂ. ವಿಶ್ವೇಶ್ವರಯ್ಯನವರು ಈಚೆಗೆ ಯುರೋಪುಖಂಡಕ್ಕೂ ಮತ್ತು ಅಮೇರಿಕಾಖಂಡಕ್ಕೂ ಪ್ರಯಾಣವನ್ನು ಬೆಳೆಸಿದ್ದರು. ಅಲ್ಲಿ, ಅವರು ಅನೇಕ ಕೈಗಾರಿಕೆಯ ಕಾರ್ಖಾನೆಗಳಿಗೆ ದಯಮಾಡಿಸಿದ್ದರು. ಮರವನ್ನು ಭಟ್ಟಿ ಇಳಿಸಿ ಇದ್ದಲು ಮುಂತಾದವುಗಳನ್ನು ತಯಾರುಮಾಡುವುದು, ಕಬ್ಬಿಣ ಮತ್ತು ಉಕ್ಕನ್ನು ರಚಿಸುವ ಕೈಗಾರಿಕೆ; ಇವೆರಡನ್ನೂ ಕೂಲಂಕಷವಾಗಿ ಪರಾಂಬರಿಸಿಕೊಂಡು ಬಂದರು. ಇದಲ್ಲದೆ, ಭದ್ರಾವತಿಯಲ್ಲಿರುವ ವಿಧವಿಧದ ಕಾರ್ಖಾನೆಗಳಲ್ಲಿ ಸಾಮಾನ್ಯವಾಗಿ ನಡೆಯುವ ಕೈಗಾರಿಕೆಗಳಲ್ಲಿ ನಿಪುಣರಾದ ಅನೇಕ ಮಂದಿ ಮೊತ್ತಮನುಷ್ಯರ ಆಲೋಚನೆಯನ್ನು ಕೇಳಿ, ಅನೇಕ ಸಂಗತಿಗಳನ್ನು ಸಂಗ್ರಹಿಸಿಕೊಂಡೂ ಬಂದಿದ್ದಾರೆ. ಭದ್ರಾವತಿಯ ಕಾರ್ಖಾನೆಯ ಸುತ್ತುಮುತ್ತಲಿನ ಪ್ರದೇಶದಲ್ಲಿ ದೊರೆಯುವ ಜಂಗಲು ಉತ್ಪನ್ನಗಳನ್ನೂ ಮತ್ತು ಇತರ ಸಂಪದಭಿವೃದ್ಧಿ ಸಾಧನಗಳನ್ನೂ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಕಾರ್ಖಾನೆಯ ಕೆಲಸದಿಂದ ವಿಶೇಷ ಹಣವನ್ನು ಗಳಿಸುವ ಉದ್ದೇಶವು ಕಾರ್ಯನಿರ್ವಾಹಕ ಮಂಡಲಿಯವರಿಗೆ ಇರುತ್ತದೆ. ಧನಾರ್ಜನೆಯ ದೃಷ್ಟಿಯಿಂದ ಕಾರ್ಖಾನೆಯಲ್ಲಿ ಈಗ ಇರತಕ್ಕ ಹೆಚ್ಚು ಕಡಿಮೆಗಳನ್ನು ಸರಿಪಡಿಸಿ, ಕಬ್ಬಿಣವನ್ನು ಭಟ್ಟಿ ಇಳಿಸುವುದರ ಸಂಬಂಧದಲ್ಲಿ ನಡೆಯುವ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸುವ ಏರ್ಪಾಡುಗಳನ್ನು ಪರ್ಯಾಲೋಚನೆಯಲ್ಲಿಟ್ಟುಕೊಂಡಿದ್ದಾರೆ. ಮುಂದಣ ಸಾಲಿನಲ್ಲಿ ಬಂಡವಾಳದ ವೆಚ್ಚಕ್ಕಾಗಿ 15 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಅವರು ಬಯಸಿರುತ್ತಾರೆ. ಆ ಕೈಗಾರಿಕೆಗಳನ್ನು ಏರಿಸಲು ತಪಶೀಲುವಾರಾಗಿ ಸ್ಕೀಮುಗಳು ರಚಿಸಲ್ಪಡುತ್ತಲಿವೆ. ಅವುಗಳು ಇನ್ನೂ ಸರಕಾರದವರಲ್ಲಿಗೆ ಬಂದಿಲ್ಲವಾದಕಾರಣ, ಬಜೆಟ್ಟಿನಲ್ಲಿ ಈಗ ಯಾವುದೊಂದು ಮೊಬಲಗನ್ನೂ ಒದಗಿಸಿಲ್ಲ.

(ಸಶೇಷ)

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಅದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಪ್ರಾರ್ಥಿಸುತ್ತೇನೆ.

ಸಂಪಾದಕರು.

ASIATIC GOVERNMENT SECURITY
LIFE ASSURANCE CO., LTD., MYSORE.
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ
ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂರು.

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಆದಕಾರಣ ಮರೆಯದೆ "ಏಶ್ಯಾಟಿಕ್" ಕಂಪನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ. ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕರವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಜಾಮೀನಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಜುಲೈ 1927 ಕ್ಕೆ ನಡೆಯುತ್ತದೆ.

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು.

ಸಯ್ಯಾಜಿರಾವ್ ರೋಡ್, ಮುಖ್ಯ ಏಜಂಟ್,
[3] ಮೈಸೂರು. *Asiatic Buildings*

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಶೀನಿ, ಬಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ನರವ್ಯಾಧಿಗಳು, ಬಲಹೀನ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಬಹಳ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ಟ.ಪೋ. ೦-೬-೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦.

ವಿ.ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ ಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[5] ಪೋ. ಬಾ. ೫೧೦, ಮದರಾಸು.

(Registered Trade Mark)

☞ ಮೈಸೂರು ಪಾಳೇಪಠಾಣ ರೋಡಿನಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥ ವಿದ್ವಾನ್ ವೇ|| ಬ್ರ|| ಪಂಡಿತ ಎಂ. ಗುರುಸ್ವಾ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಸಂಕಲ್ಪಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪಶುಪತೇಃ ಪಂಚಾಂಗಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಸ್ಸಂರಕ್ಷಿಪ್ಪುವೀಲೋಕಕಮ್ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ಜುಲೈ ೧೯೨೭ ಇಸವಿ [ಸಂಚಿಕೆ ೮.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರುಗಳವರ ಆಂದೋಲಿಕೋತ್ಸವವು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರು ತೊಗರಸಿ, ಮಳೇಮಠ ಹಾಗೂ ಜನ್ನಿಗನೂರ ಈ ಉಭಯ ಶ್ರೀ ಪಟ್ಟದಸ್ವಾಮಿಗಳಗೂ ಭಕ್ತಮಹೇಶ್ವರರ ಪ್ರಾರ್ಥನಾನುಸಾರ ತಾ|| -೬-೨೭ ಆದಿತ್ಯವಾರ ಬೆಳಗ್ಗೆ ತಾಳಗುಂದ ಮುಕ್ಕಾಮಿಂದ ಪಯಣಮಾಡಿ ಸುಸಮಯಕ್ಕಾಗಲೇ ತೊಗರಸಿಯ ಉಭಯಶ್ರೀಗಳೂ ಹಾಗೂ ಭಕ್ತವೃಂದರೂ ಇನ್ನು ಕವಾಲದೊಡನೆ ಮಹಾ || || ಯವರ ದರ್ಶನಾಶೀರ್ವಾದವಂ ಪಡೆದು ಕೆಲಕಾಲದನಂತರ ಸಿದ್ಧಗೊಳಿಸಿದ ವಿರಾಜಿಸುವ ಪಲ್ಲಕ್ಕಿಯಲ್ಲಿ ಶ್ರೀ || || ಸನ್ನಿಧಿಯವರು ಆರೋಹಣಮಾಡಿದ ಕೂಡಲೇ ಸಕಲರು ಜಯಜಯಘೋಷದೊಡನೆ ಕರತಾಡನೆಯನ್ನು ಮಾಡಿದರು. ಉತ್ಸವವು ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಶೃಂಗರಿಸಿದ ರಾಜಬೀದಿಯಲ್ಲಿ ಹೊರಟು ಮಧ್ಯಮಧ್ಯ ಸುಮಂಗಲೆಯರು ಬೆಳಗುವ ಆರತಿಯಿಂದಲೂ ಮಹೇಶ್ವರರು ಉಚ್ಚರಿಸುವ ಜಯಜಯಘೋಷದಿಂದಲೂ ಸಕಲಬಿರುದಾವಳಿಗಳೊಡನೆ ಬಹು ಶಾಂತರೀತಿ ಜರುಗಿತು. ಪರ್ವತೇಶ್ವರನ ದೇವಸ್ಥಾನದಲ್ಲಿ ಭವ್ಯವಾಗಿ ರಚಿಸಿದ ಸಿಂಹಾಸನವನ್ನು ಶ್ರೀ || ಸನ್ನಿಧಿಯವರು ಆರೋಹಣಮಾಡಿದರು. ಇಲ್ಲಿಗೆ ತಾಲೂಕು ಅಮಲ್ದಾರ್ ಸಾಹೇಬರು ಪೋಲೀಸ್ ಬಂದಿಯೊಡನೆ ಬಂದಿದ್ದರು. ಸು|| ರಾ ಭಾರಿ ಶ್ರೀ ವಣ್ಣನವರು. ಶೇಕದಾರ್ ಪಾಪಸಾಹೇಬರು ಇದ್ದರು. ಅಬಾಲಬಾಲಗ್ರಾಮದ ಜನರು ಒಟ್ಟಿಗೆ ೩೦೦೦ ವರೆಗೆ ಇದ್ದರು. ಸರ್ವರಿಗೂ ಸಂತೋಷವಾಗುವಂತೆ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಧಾರ್ಮಿಕವಿಷಯದಮೇಲೆ ಉಪದೇಶಿಸಿದರು. ಅಲ್ಲಿಗೆ ಶ್ರೀ ಜಗದ್ಗುರುಗಳವರ ಅನುಷ್ಠಾನಸಮಯವಾದಕಾರಣ ಸಮಸ್ತ ಶ್ರೀಮನ್ಮಹಾಚಾರ್ಯ ಬಸವಲಿಂಗರವರ ಹಾಗೂ ಅವರ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು. ರಾತ್ರಿಯಲ್ಲಿಯೂ ಶ್ರೀ || ಸನ್ನಿಧಿಯ ಪುರಾಣಪ್ರವಚನಗಳು ಜರುಗುತ್ತಲೇ ಇದ್ದು. ಅಬಾಲಬಾಲಗ್ರಾಮದ ಜನರು ತಂಡತಂಡವಾಗಿ ಗುರುಚಕ್ರವರ್ತಿಗಳ ದರ್ಶನಾಶೀರ್ವಾದವನ್ನು ಪಡೆಯುತ್ತಿರುವರು. ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದವನ್ನು ಪಡೆದವರ ಜನ್ಮವೇ ಧನ್ಯ'

ಓರ್ವ ಉತ್ಸವಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು,

ಕೊಟ್ಟೂರು.

ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸವಾರಿಯು ಈ ಗ್ರಾಮಕ್ಕೆ ಇಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದ್ಗುರು ಪಂಚಾಚಾರ್ಯಸಂಸ್ಕೃತಪಾಠಶಾಲೆಯ ಕೊಟ್ಟೂರೇಶ್ವರ ದಯಮಾಡಿಸಿ ೧೫ ದಿವಸಗಳಾದವು. ಪ್ರತಿದಿನ ಸಭೆಯಲ್ಲಿಯೂ ಮೈಸೂರು ಮಹಿಮಸ್ವಾಮಿಶಾಸ್ತ್ರಿಗಳವರಿಂದ ಮಹಾಸನ್ನಿಧಿಯಲ್ಲಿ ಶಿವಕೀರ್ತನೆಗಳು ಜರುಗುತ್ತಲಿವೆ. ಮಹಾಪ್ರಸಾದದ ದರ್ಶನಾಶೀರ್ವಾದಗಳಿಗೋಸ್ಕರ ಭಕ್ತಮಹೇಶ್ವರರು ನಾನಾಸ್ಥಳಗಳಿಂದ ತಂಡೋಪತಂಡವಾಗಿ ಬರುತ್ತಲಿರುವರು.

ಮತ್ತು ತಾ|| ೨೩-೬-೨೭ ನೆಯ ಗುರುವಾರ ಸಾಯಂಕಾಲ ೬ ಗಂಟೆಗೆ ಮದ್ರಾಸು ಗವರ್ನಮೆಂಟು ದೇವಸ್ಥಾನ ಮಿನಿಸ್ಟರುಗಳವರಾದ ಶ್ರೀಮಾನ್ ಎ. ರಂಗನಾಥ ಮೊದಲಿಯಾರ್ ಬಿ. ಎ. ಬಿ. ಎಲ್. ಎಂ. ಎಲ್. ಸಿ. ಇವರು ದಯಮಾಡಿಸಿದ್ದರು. ಗ್ರಾಮದ ಪ್ರಮುಖರೆಲ್ಲರು ಅಂದರೆ ವೇ|| ಬಾಗಲಗೇರಿ ಮಿರಾಶಿಪಟ್ಟದ ಮಠದ ದೊಡ್ಡವೀರಪ್ಪಯ್ಯನವರು ತಮ್ಮ ಮನೋಹರವಾದ ಥಿಯಟರಿನಲ್ಲಿಯೂ, ಮತ್ತು ಮ|| ರಾ|| ಶ್ರೀ ಕನ್ನಿಹಳ್ಳಿ ಬಸಲಿಂಗನಗೌಡರು, ಯೂನಿಯನ್ ಬೋರ್ಡ್ ಪ್ರೆಸಿಡೆಂಟರವರು ನೂತನವಾಗಿ ಕಟ್ಟಿಸಲ್ಪಟ್ಟಿರುವ ಆನಂದವಿಲಾಸವೆಂಬ ಬಂಗ್ಲೆ (ಬೋರ್ಡ್ ಮಿಡಲ್ ಸ್ಕೂಲು)ಯಲ್ಲಿ ಗ್ರಾಮದವರೆಲ್ಲರಾಗಿ ಬಹಳ ವೈಭವದಿಂದಲೂ, ಉತ್ಸಾಹದಿಂದಲೂ ಕರತಂದು ಸುಸ್ವಾಗತವನ್ನೂ ಮತ್ತು ಬಿನ್ನವತ್ತಿಕೆಗಳನ್ನೂ ಅರ್ಪಿಸಿದರು. ಮರುದಿನ ಸದರಿ ಬಂಗ್ಲೆಯಲ್ಲಿ ಫಲಾಹಾರ ಸ್ವೀಕರಿಸಿಕೊಂಡು ಉಜ್ಜನಿಗೆ ದಯಮಾಡಿಸಿದರು.

ಮತ್ತು ೨೫-೬-೨೭ ನೆಯ ಶನಿವಾರ ಸಾಯಂಕಾಲ ೫ ಘಂಟೆಗೆ ಜಿಲ್ಲಾಕಲೆಕ್ಟರ ಮಿ ಪ್ರೋಫಾಹನಾ ಐ. ಸಿ. ಎಸ್., ಇವರು ಸದರಿ ಬಂಗ್ಲೆಯಲ್ಲಿ ಬಹುಮಾನಗಳ ವಿಷಯಬಗ್ಗೆ ಮೀಟಿಂಗ ಜರುಗಿಸುವುದಕ್ಕಾಗಿ ಪ್ರೆಸಿಡೆಂಟರಾಗಿ ದಯಮಾಡಿಸಿ ಪ್ರೋತ್ಸಾಹಪಡಿಸಿ ಪುನಃ ತಮ್ಮ ಬಿಡಾರಕ್ಕೆ ದಯಮಾಡಿಸಿದರು.

ಬಿ. ಚಂದ್ರಶೇಖರಯ್ಯ, ಅಸಿಸ್ಟೆಂಟ್ ಟೀಚರ
ಬೋರ್ಡ್ ಮಿಡಲ್ ಸ್ಕೂಲು
ತಾ|| -೬-೨೭. ಕೊಟ್ಟೂರು.

ಬಳ್ಳಾರಿ ತೊಗರಿ ವೀರಪ್ಪನವರ ವೀರಶೈವ ಹಾಸ್ಟಲ

೧೯೨೭ ನೆಯ ಸಂವತ್ಸರ ಜೂನ್ ತಿಂಗಳು ೨೨ ನೆಯ ತಾರೀಖು ಬುಧವಾರ ಸಾಯಂಕಾಲ ೪ ಗಂಟೆಗೆ ವೀರಶೈವ ಹಾಸ್ಟಲಿನಲ್ಲಿ ಒಂದು ಸಭೆಯು ನೆರವೇರಿತು. ಅನೇಕ ವಿದ್ಯಾರ್ಥಿಗಳು ನೆರೆದಿದ್ದರು, ಈ ಸಭೆಯ ಉದ್ದೇಶವೇನೆಂದರೆ, ಮಿ|| ಯಂ. ಕೆ. ನಾಗಪ್ಪ ಬಿ. ಎ. ಇವರು ಆಕ್ಟಿಂಗ್ ಸಬ್‌ರಿಜಿಸ್ಟ್ರಾರ್ ಆಗಿ ಕೂಡ್ಲಿಗಿಗೆ ಹೋಗುವವರಿದ್ದುದರಿಂದ ಅವರಿಗೆ ಸ್ವಾಗತವನ್ನು ಕೊಟ್ಟು (Fare-well address) ಕಳುಹಿಸುವುದಕ್ಕೋಸ್ಕರ ಸಭೆಯು ಸೇರಿದ್ದಿತು. ಸಾಧಾರಣವಾದ ಫಲಾಹಾರಾದಿಗಳಾದಮೇಲೆ ಮಿ|| ಕಂಪ್ಲಿ ಮಠದ ದಕ್ಷಿಣಾಮೂರ್ತಿ ಬಿ.ಎ. ಅವರ್ಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಅಧ್ಯಕ್ಷರ ಪ್ರಥಮಭಾಷಣಾನಂತರ ಅನೇಕ ಸಭಿಕರು ಮಿ|| ಯಂ. ಕೆ. ನಾಗಪ್ಪ ಬಿ. ಎ. ಇವರ ಜೀವನಚರಿತ್ರೆಯನ್ನು ಈ ಕೆಳಗೆ ಹೇಳಿದ ರೀತಿಯಲ್ಲಿ ಉಪನ್ಯಾಸಮಾಡಿದರು. ಮಿ|| ಯಂ. ಕೆ. ನಾಗಪ್ಪ ಬಿ. ಎ. ಇವರು ಹೊಸಕೋಟೆಯಲ್ಲಿ ೬ನೆಯ ಫಾರಂವರೆಗೂ ಕ್ರಮವಾಗಿ ಪಾಸಾದರು. ಪ್ರತಿಯೊಂದು ತರಗತಿಯಲ್ಲಿಯೂ ಹೆಚ್ಚು ಮಾರ್ಕುಗಳನ್ನು ಪಡೆದು ಬಹಳ ಪ್ರಸಿದ್ಧಿಯಲ್ಲಿ ಪಾಸಾಗಿರುತ್ತಾರೆ. ೧೯೨೨ ನೆಯ ಇಸ್ವಿಯಲ್ಲಿ ಇವರು ಬಳ್ಳಾರಿಗೆ ಬಂದು ವೀರಶೈವ ಹಾಸ್ಟಲಿನಲ್ಲಿ ಸೇರಿದರು. ತರುವಾಯ ವೀರಶೈವ ವಿದ್ಯಾವರ್ಧಕ ಫಂಡಿನಿಂದ ಸಹಾಯಹೊಂದಿ, ಬಿ. ಎ. ಪಾಸಾದರು. ತರುವಾಯ ಉರುವಕೊಂಡೆ ಬೋರ್ಡ್ ಸೆಕೆಂಡರಿ ಸ್ಕೂಲಿನಲ್ಲಿ ಫಸ್ಟ್ ಅಸಿಸ್ಟೆಂಟರಾಗಿ ಸೇವಿಸಿದ್ದರು. ಅನಂತರ ೧೯೨೬ ನೆಯ ಇಸ್ವಿಯಲ್ಲಿ ಪ್ರೊಬೇಷನರಿ ರಿಜಿಸ್ಟ್ರಾರ್ ಆಗಿ ಸೇರಿ ಆರು ತಿಂಗಳಲ್ಲಿ ಆಕ್ಟಿಂಗ್ ರಿಜಿಸ್ಟ್ರಾರಾಗಿ ಕೂಡ್ಲಿಗಿಗೆ ಹೋಗುತ್ತಿರುವುದನ್ನು ನೋಡಿದರೆ ಗೌರ್ನಮೆಂಟಿನವರು ನಮ್ಮ ಮತಕ್ಕೆ ಬಹಳ ಉತ್ತೇಜನಕೊಡುತ್ತಾರೆಂಬುವುದು ಸ್ಪಷ್ಟವಾಗಿ ಕಾಣುತ್ತದೆ. ಮಿ|| ಯಂ. ಕೆ. ನಾಗಪ್ಪ ಬಿ. ಎ. ಇವರು ಪ್ರಸಿದ್ಧವಾದ ಉಪನ್ಯಾಸಕರು. ನಮ್ಮ ಅಧ್ಯಕ್ಷರು ಮತ್ತು ನಾಗಪ್ಪನವರು ಸಹಪಾಠಿಕರು. ನಮ್ಮ ಮತಬಾಂಧವರಲ್ಲಿ ಇವರು ಶಿರೋಮಣಿಗಳೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಧ್ಯಕ್ಷರಿಗೂ ಮತ್ತು ನಮ್ಮ ಪ್ರೀತಿಗೆ ಪಾತ್ರರಾದಂಥ ಅತಿಥಿಗಳಾದ ಮಿ ಯಂ ಕೆ. ನಾಗಪ್ಪ ಬಿ. ಎ. ಇವರಿಗೂ ಹೂವಿನಹಾರಗಳನ್ನು ಹಾಕಿ ಸರ್ವರೂ ಜಯಘೋಷಮಾಡಿದೆವು. ಅವರಿಗೆ ದೇವರು ಆಯುರಾರೋಗ್ಯಭಾಗ್ಯಗಳನ್ನು ಕೊಡಲೆಂದು ಪ್ರಾರ್ಥಿಸುತ್ತ ಸಭೆಯನ್ನು ಸಾಂಗವಾಗಿ ನೆರವೇರಿಸಿದೆವು.

ಓರ್ವ ಹಾಸ್ಟಲ ವಿದ್ಯಾರ್ಥಿ, ಬಳ್ಳಾರಿ.

ಪಂಚಾಚಾರ್ಯಪ್ರಭಾ

೧೯೨೭ನೇ ಜುಲೈ ತಾ|| ೪ನೇ ಸೋಮವಾರ

ಲಿಂಗಧಾರಣ

ವೀರಶೈವಮತವನ್ನು ಅವಲಂಬಿಸಿದವರಿಗೆಲ್ಲ ಗುರುವಿನಿಂದ ಮಾಡಲ್ಪಟ್ಟ ಲಿಂಗಧಾರಣದಿಂದಲೇ ಮುಕ್ತಿಯು. ಲಿಂಗವೆಂದರೆ ಜಗಜ್ಜನ್ಮಾದಿಗಳಿಗೆ ಕಾರಣನಾದ ಶಿವನೆಂದರ್ಥವು. ಧಾರಣವೆಂದರೆ ದೇಹದಲ್ಲಿ ಧರಿಸುವುದೆಂದರ್ಥವು. ವ್ಯಾಪಕನೂ, ನಿರಾಕಾರನೂ, ಪರಿಪೂರ್ಣನೂ, ನಿಷ್ಕಲನೂ, ಅನಂತನೂ ಆದ ಪರಶಿವನನ್ನು ಸ್ಥೂಲಶರೀರದಲ್ಲಿ ಧರಿಸಲು ಶಕ್ಯವಲ್ಲ. ಆಕಾರಗೊಂಡಿರುವ ವಸ್ತುವನ್ನು ಸ್ಥೂಲಶರೀರದಲ್ಲಿ ಧರಿಸಬಹುದೇ ಹೊರತು ಆಕಾಶದಂತೆ ನಿರವಯವನಾದ ಶಿವನನ್ನು ಧಾರಣಮಾಡಲು ಸಾಧ್ಯವೇ? ಎಂಬ ಸಂಶಯವುಂಟಾಗುವುದು. ವೀರಶೈವಸಿದ್ಧಾಂತದಲ್ಲಿ ಲಿಂಗಧಾರಣವು ಬಾಹ್ಯಾಭ್ಯಂತರಭೇದದಿಂದ ಎರಡು ಪ್ರಕಾರವಾಗಿರುವದು. ಶಿರಸ್ಸು, ಕಂಠ, ಕುಕ್ಷಿ, ಎದೆ, ಹಸ್ತ, ಈ ಐದು ಸ್ಥಳಗಳೊಳಗೆ ಯಾವುದಾದರೊಂದು ಸ್ಥಳದಲ್ಲಿ ಧರಿಸುವುದೇ ಬಾಹ್ಯಲಿಂಗಧಾರಣವೆನಿಸಿಕೊಳ್ಳುತ್ತದೆ. ಅಂತಸ್ಥಗಳಾದ ಆಧಾರಸ್ಥಾನದಲ್ಲಿಯಾಗಲಿ, ಹೃದಯಸ್ಥಾನದಲ್ಲಿಯಾಗಲಿ, ಭ್ರೂಮಧ್ಯಸ್ಥಾನದಲ್ಲಿಯಾಗಲಿ ಅನವರತವೂ ಪರಮಾತ್ಮರೂಪವಾದ ದಿವ್ಯಜ್ಯೋತಿಯನ್ನು ಧರಿಸುವುದೇ ಅಭ್ಯಂತರಲಿಂಗಧಾರಣವೆನಿಸಿಕೊಳ್ಳುತ್ತದೆ. ಈ ಎರಡುವಿಧವಾದ ಲಿಂಗಧಾರಣಗಳಲ್ಲಿ ಅಭ್ಯಂತರಲಿಂಗಧಾರಣವೆಂಬುದು ಯೋಗಿಪುರುಷರಿಗೆ ಸಾಧ್ಯವಲ್ಲದೆ ಬಹಿರ್ಮುಖರಾದ ಲೌಕಿಕಪುರುಷರಿಂದ ಸಾಧ್ಯವಲ್ಲವು. (ಲಿಂಗಧಾರಣಮಾತ್ರೇಣ [illegible] ಸರ್ವಾರ್ಥಸಾಧಕಃ) ಎಂದು ಶ್ರೀ ರೇಣುಕಭಗವತ್ಪಾದರು ಹೇಳಿರುವಂತೆ ಉಭಯಧಾರಣಗಳಲ್ಲಿ ಅಂತರ್ಲಿಂಗಧಾರಣೆಯಲ್ಲಿ ಸಾಮರ್ಥ್ಯವಿದ್ದರೂ ಇಲ್ಲದಿದ್ದರೂ (ಬಾಹ್ಯಂತು ಧಾರಯೇಲ್ಲಿಂಗಂ ತದ್ರೂಪಮಿತಿಸಿದ್ಧಯೇ) ಎಂಬ ಸಿದ್ಧಾಂತಾನುಸಾರವಾಗಿ ಬಾಹ್ಯಲಿಂಗವನ್ನು ಮಾತ್ರ ಧರಿಸತಕ್ಕದ್ದು. ಕರಗದ ತುಪ್ಪವು ಘಟ್ಟಿಗೊಳ್ಳುವಂತೆ ಶಿವನು ನಿರವಯವನಾಗಿದ್ದರೂ ಲೀಲಾಕಲ್ಪಿತವಿಗ್ರಹವುಳ್ಳವನಾದುದರಿಂದ ಭಕ್ತಕಲ್ಯಾಣಕ್ಕೋಸ್ಕರವಾಗಿ ಗುರುವಿನಿಂದ ಕೊಡಲ್ಪಟ್ಟ ಇಷ್ಟಲಿಂಗದಲ್ಲಿ ವಾಸಮಾಡಿ ಭಕ್ತರಕೈಂಕರ್ಯಾದಿಗಳನ್ನು ಸ್ವೀಕರಿಸುತ್ತ ಇಷ್ಟಲಿಂಗಾಕಾರನಾಗಿ ಪರಿಣಮಿಸಿರುವದರಿಂದ ಗುರುವಿನಿಂದ ಕೊಡಲ್ಪಟ್ಟ ಶಿವಲಿಂಗವು ಲಿಂಗಾಂಗಿಯಾದ ಮಾನವನಿಗೆ ಸಾಕ್ಷಾತ್ ಶಿವಸ್ವರೂಪವೇ ಆಗಿರುತ್ತದೆ. ಹಾಗಾದರೆ ಶಿವನು ಆಕಾಶದಂತೆ ಅಮೂರ್ತನೂ, ಸರ್ವವ್ಯಾಪಕನೂ ಆಗಿರುವುದರಿಂದ ಎಲ್ಲಾ ಕಡೆಯಲ್ಲಿಯೂ ಇರುವಹಾಗೆ ಗುರುವಿನಿಂದ ಕೊಡಲ್ಪಟ್ಟ ಶಿವಲಿಂಗದಲ್ಲಿಯೂ ಸಾಮಾನ್ಯಾಕಾರನಾಗಿ ಇರಬಹುದು. ಇಷ್ಟಲಿಂಗದಲ್ಲಿ ವಿಶೇಷಾಕಾರನಾಗಿರುತ್ತಾನೆಂದು ಹೇಳಲಾಗುವುದಿಲ್ಲವೆಂದು ಸಂಶಯವುಂಟಾಗಬಹುದು! ಪರಶಿವನು ತೃಣಕಾಷ್ಠಗಳ್ಳಾದಿಗಳಲ್ಲೆಲ್ಲ ಸಾಮಾನ್ಯವಾಗಿ ವ್ಯಾಪಿಸಿದ್ದರೂ ಕಂಠದಲ್ಲಿ ಧಾರಣಮಾಡಿದ ಇಷ್ಟಲಿಂಗದಲ್ಲಿ ವಿಶೇಷಾಕಾರನಾಗಿ ಇರುತ್ತಾನೆಂಬುವುದೇ ವೀರಶೈವಸಿದ್ಧಾಂತವು! ಜಗಚ್ಚಕ್ಷುವೆನಿಸಿದ ಸೂರ್ಯನಕಿರಣಾವಳಿಗಳೆಲ್ಲವೂ ಸರ್ವತ್ರ ಹರಡಿಕೊಂಡಿದ್ದರೂ ಆ ಸ್ಥಾನಗಳಿಂದೆಲ್ಲಾ ಬೆಂಕಿಯು ಉತ್ಪತ್ತಿಯಾಗುವುದಿಲ್ಲವು. ಅದೇ ಸೂರ್ಯಕಿರಣಗಳು ಸೂರ್ಯಕಾಂತವೆಂಬ ಕಲ್ಲಿನಮೇಲೆ ಬಿದ್ದರೆ ಆಕ್ಷಣದಲ್ಲಿಯೇ ಅಗ್ನಿಯು ಉತ್ಪತ್ತಿಯಾಗುವುದು ಸರ್ವರ ಅನುಭವದಲ್ಲಿದೆ. ಸೂರ್ಯಕಾಂತಶಿಲೆಯಲ್ಲಿ ಸೂರ್ಯನ ಸಂಪೂರ್ಣಕಳೆಯು ಸಮಾವೇಶಿತವಾಗಿರುವಂತೆ ಶ್ರೀಗುರುವು ಪೀಠ, ಲಿಂಗವೃತ್ತ, ಗೋಮುಖ, ವೃತ್ತ, [illegible]ಗಳೆಂಬ ಪಂಚಸೂತ್ರಯುಕ್ತವೂ, ಶ್ರೀಶೈಲಶಿಲಾಮಯವೂ ಆದ ಶಿವಲಿಂಗಕ್ಕೆ ಆಯಾಯ ಮಂತ್ರಗಳಿಂದ ಪವಿತ್ರಶೋಧನಾದಿ ಸಂಸ್ಕಾರಗಳನ್ನು ಮಾಡಿ ಶಿಲಾಸಂಬಂಧವಾದ ದೋಷವನ್ನು ಕಳೆದು, ಅದರಲ್ಲಿ ಶಿವಕಳೆಯನ್ನು ಆವಾಹಿಸುತ್ತಾನೆ. ಹೀಗೆ ಆವಾಹಿಸಿದ ನಂತರ ಆ ಲಿಂಗವು ರಸಸಂಪರ್ಕದಿಂದ ಲೋಹವು ಸುವರ್ಣಮಯವಾಗುವಂತೆ ಪೂರ್ವಾಕಾರವನ್ನು ಬಿಟ್ಟು ಸಾಕ್ಷಾತ್ ಶಿವಸ್ವರೂಪವೇ ಆಗುತ್ತದೆ. [illegible] ಶಕ್ತಿಯು ಅಗ್ನಿಯ ಸಂಬಂಧದಿಂದ [illegible] ಸ್ವರೂಪವನ್ನೇ ಹೊಂದುವಂತೆ ಈ ಇಷ್ಟಲಿಂಗವು ಕೇವಲ [illegible]ಮಯವಾದ ಶಿವಕಳಾಪ್ರವೇಶದಿಂದ ಶಿವಸ್ವರೂಪವೇ ಆಗುತ್ತದೆ. ಇದನ್ನೇ ಶಾಸ್ತ್ರದಲ್ಲಿ ಲಿಂಗ [illegible] ಅಂಗಗಳಿಗೆ ಅಭೇದವನ್ನು ಹೇಳುವ ಸಂಪ್ರದಾಯವಿದೆ. ಇಷ್ಟಲಿಂಗವು ಶಿಷ್ಯನಿಗೆ ಸ್ವೀಕೃತವಾದುದರಿಂದ ಅಂಗವೆನಿಸುವದು. ಇಷ್ಟಲಿಂಗದಲ್ಲಿ ಸದಾ ನೆಲೆಗೊಂಡಿರುವ ಶಿವಕಳೆಯೇ ಆರಾಧಿಸಲ್ಪಡುವುದು. ಅಂಗಿಯಾದ ಶಿಷ್ಯನಿಗೂ, ಅಂಗವಾದ ಇಷ್ಟಲಿಂಗಕ್ಕೂ ಅಭೇದವಿರುವುದರಿಂದ ಶಿಷ್ಯನ ಲಿಂಗವು ಸಾಕ್ಷಾತ್ ಶಿವಸ್ವರೂಪವೇ ಆಗುತ್ತದೆ. ಶಿವಸ್ವರೂಪವಾದ ಶಿವಲಿಂಗವನ್ನು ಶಿವದೀಕ್ಷೆಯಿಂದ ಪರಿಶುದ್ಧವಾದ ಶರೀರವೆಂಬ ದೇವಾಲಯದಲ್ಲಿ ಗುರುವು ಪ್ರತಿಷ್ಠಿಸಿರುತ್ತಾನೆ. ದೇವಾಲಯದಲ್ಲಿ ಪ್ರತಿಷ್ಠಿಸಲ್ಪಟ್ಟ ಲಿಂಗವನ್ನು ತೆಗೆಯುವುದಕ್ಕೆ ಹೇಗೆ ಆಗುವುದಿಲ್ಲವೋ ಅದರಂತೆ ಶರೀರವೆಂಬ ಕ್ಷೇತ್ರದಲ್ಲಿ ಪ್ರತಿಷ್ಠಿತವಾದ ಇಷ್ಟಲಿಂಗವನ್ನು ತೆಗೆಯಕ್ಕಾಗುವದಿಲ್ಲ. ಇದೇ ಅರ್ಥವನ್ನು "ದೇಹೋ ದೇವಾಲಯಃ ಪ್ರೋಕ್ತಃ [illegible] ವಿಯೋಜಯೇತ್" ಇತ್ಯಾದಿ ಆಗಮವಾಕ್ಯಗಳು ಸಾರುತ್ತಿರುವುದರಿಂದ ಶರೀರದಲ್ಲಿ ಧರಿಸಲ್ಪಟ್ಟ ಇಷ್ಟಲಿಂಗಕ್ಕೆ ಶಾಸ್ತ್ರಕಾರರು [illegible] ಆರೋಪಿಸಿರುವರು. ತೈತ್ತಿರೀಯದ [illegible] ನಾರಾಯಣ ಅನುವಾಕದಲ್ಲಿರುವ "[illegible] ಊರ್ಧ್ವಲಿಂಗಾಯ [illegible] ಸರ್ವಲಿಂಗಗಳ [illegible] ತಿ ಪಾಣಿಮಂತ್ರಂ ಪವಿತ್ರಂ" ಎಂಬ ಮಂತ್ರವು ಲಿಂಗಧಾರಣವನ್ನು ಅಪೂರ್ವವಿಧಿಯನ್ನಾಗಿ ಪ್ರತಿಪಾದಿಸಿರುವುದು. ಮತ್ತು ಶ್ರುತಿಗಳು [illegible] ದಂತೆ ಸಿದ್ಧಾಂತದ [illegible] ಮಾಡಿದರೂ ಅರ್ಥವನ್ನು ಕೊಡುತ್ತವೆ. ಇನ್ನು ಈ ತೈತ್ತಿರೀಯ ಶ್ರುತಿಯು ಲಿಂಗಧಾರಣವನ್ನು ಬೋಧಿಸುವುದೆಂದು ಹೇಗೆ ತಾನೆ ಹೇಳುವುದಕ್ಕೆ ಆಗುತ್ತದೆ? ಎಂಬ ಸಂಶಯವುಂಟಾಗುವುದು. ಆದರೆ "ಇತಿಹಾಸಪುರಾಣಾಭ್ಯಾಂ ವೇದಾರ್ಥಮುಪಬೃಂಹಯೇತ್" ಎಂಬ ಮಹಾಭಾರತೋಕ್ತಿಯಂತೆ ಇತಿಹಾಸ ಮತ್ತು ಪುರಾಣಗಳ ಆಧಾರಗಳಮೇಲೆ ಸಂಶಯಾಸ್ಪದವಾದ ಶ್ರುತ್ಯರ್ಥವನ್ನು ನಿಶ್ಚಯಿಸಬೇಕೆಂಬ ಪ್ರಬಲವಾದ ನಿಯಮವಿರುವುದರಿಂದ ಇದೇ ಲಿಂಗಧಾರಣಪರವಾದ ಶ್ರುತ್ಯರ್ಥವನ್ನು "ತಸ್ಮಾತ್ [illegible] ಲಿಂಗಂ ಪಾಣಿಮಂತ್ರೇತಿ ಮಂತ್ರತಃ" ಎಂಬ ಲಿಂಗಪುರಾಣವೂ ಅನುವಾದಮಾಡುವುದು. ಆದುದರಿಂದ ಈ ಶ್ರುತಿಯು ಲಿಂಗಧಾರಣವನ್ನು ಬೋಧಿಸುವುದೆಂಬುವುದಕ್ಕೆ ಯಾವ ಸಂಶಯವುಂಟಾಗುವುದಿಲ್ಲ. ಮತ್ತು ಈ ಮಂತ್ರದಲ್ಲಿ "ವ್ಯಾಪಯತಿ" ಎಂದು ವರ್ತಮಾನಕಾಲವನ್ನು ಪ್ರಯೋಗಿಸಿರುವುದರಿಂದಲೂ ವಿಧ್ಯರ್ಥಬೋಧಕಗಳಾದ ಲಿಂಗ್‌ಲೋಟ್ ಮುಂತಾದ ವಿಧಿಬೋಧಕಪ್ರತ್ಯಯಗಳನ್ನು ಪ್ರಯೋಗಿಸದಿರುವುದರಿಂದಲೂ ಲಿಂಗಧಾರಣವು ವಿಧಿಯೆನಿಸುವುದಿಲ್ಲವೆಂದು ಶಂಕೆಯುಂಟಾದರೆ "ವ್ರೀಹೀನ್‌ಪ್ರೋಕ್ಷತಿ" "ವ್ರೀಹೀನವಹಂತಿ" ಎಂಬ ಪೂರ್ವಮೀಮಾಂಸೆಯೊಳಗಣ ವಾಕ್ಯಗಳು ವರ್ತಮಾನಕಾಲೀನಗಳಾಗಿದ್ದರೂ ವಿಧಿವಾಕ್ಯಗಳನ್ನಾಗಿ ಅಂಗೀಕರಿಸಿರುವಂತೆ "ವ್ಯಾಪಯತಿ" ಎನ್ನುವದು ವಿಧಿವಾಕ್ಯವೆನಿಸಿರುವುದೆಂದು ಶಂಕಾಪರಿಹಾರಗಳೊಡನೆ ಆಚಾರ್ಯಪಾದರಿಂದ ನಿರ್ಣಯಿಸಲ್ಪಟ್ಟಿರುವುದು. ಇದರಿಂದ "ಸರ್ವಲಿಂಗಾಂ" ಎಂಬ ಶ್ರುತಿವಾಕ್ಯವು ಸಾಮಾನ್ಯವಾಗಿ ಲಿಂಗಧಾರಣವನ್ನೂ [illegible] ಬೋಧಿಸುತ್ತದೆ. ಯಾವ ಸ್ಥಾನದಲ್ಲಿ ಲಿಂಗವನ್ನು ಧರಿಸಬೇಕೆಂಬ ಸಂಶಯವನ್ನು ಪರಿಹರಿಸುವುದಕ್ಕಾಗಿ "ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ" ಎಂಬ ಶ್ವೇತಾಶ್ವತರೋಪನಿಷತ್ತಿನವಾಕ್ಯವು ಹೊರಟಿರುವುದು. ಈ ವಾಕ್ಯದಲ್ಲಿರುವ "ಸರ್ವಾನನಶಿರೋಗ್ರೀವಃ" ಎಂಬ ವಾಕ್ಯದಿಂದ ಇಷ್ಟಲಿಂಗಧಾರಣವೂ, ಸರ್ವಭೂತಗುಹಾಶಯಃ ಎಂಬ ವಾಕ್ಯದಿಂದ ಪ್ರಾಣಲಿಂಗಧಾರಣವೂ, "ಸರ್ವವ್ಯಾಪೀಸಭಗವಾನ್" ಎಂಬ ವಾಕ್ಯದಿಂದ ಭಾವಲಿಂಗಧಾರಣವೂ ಹೀಗೆ ಮೂರುಲಿಂಗಗಳ ಧಾರಣಗಳು ಸಿದ್ಧಿಸುವವು. ಗುರುವು ಶಿವದೀಕ್ಷೆಯಿಂದ ಮಾಂಸಪಿಂಡವೆನಿಸಿದ ಶರೀರವನ್ನು ಮಂತ್ರಪಿಂಡವನ್ನಾಗಿ ಮಾಡಿ ಶಿವಕಳಾಸಮಾಯುಕ್ತವಾದ ಇಷ್ಟಲಿಂಗವನ್ನು "ಪಾಣಿಮಂತ್ರಂಪವಿತ್ರಂ" ಎಂಬುವ ಮಂತ್ರದಿಂದ ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿದ ಪ್ರಕಾರ ಮಸ್ತಕ, ಕಂಠ, ಮುಂತಾದ ಉತ್ತಮಾಂಗಗಳಲ್ಲಿ ಧರಿಸಿ ಪೂಜಿಸಿ ಶಿವಸಾಯುಜ್ಯವನ್ನು ಪಡೆಯುವುದೇ ಲಿಂಗಧಾರಣದ ಫಲವಾಗಿರುತ್ತದೆ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ಸ್ವಾರಿಯು ಬೆಂಗಳ ಚಿತ್ತೈಸಿರುತ್ತದೆ.

ವೈಸ್‌ರಾಯರವರು ರಾಜಧಾನಿಗೆ ಬರುವ ಗಾಗಿ ೧ ಲಕ್ಷ ರೂಪಾಯಿಗಳನ್ನು ಸರ್ಕಾರದ ಮಂಜೂರುಮಾಡಿರುವರು.

ಕರ್ನಾಟಕ ಪ್ರಾಂತ್ಯದ ಹಿಂದೀ ಪ್ರಚಾರಕ ಯು ಬೆಂಗಳೂರಲ್ಲಿ ಈ ತಿಂಗಳು ೧ನೇ ತಾ ದಿವಸ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯ ಯುತ್ತದೆ.

ಮಹಾತ್ಮಾ ಗಾಂಧಿಯವರು ಖಾದಿಯ ವಸ್ತ್ರ ರ್ಶನದ ಕಾರ್ಯವು ಮುಗಿದ ಕೂಡಲೆ ದಕ್ಷಿಣದೇ ಸಂಚರಿಸಲು ಉದ್ಯುಕ್ತರಾಗುತ್ತಾರೆಂದು ಶ್ರೀ|| ಗೋಪಾಲಾಚಾರ್ಯರು ಪ್ರಕಟಿಸಿರುತ್ತಾರೆ.

ಈ ಸಾರೆ ಮೈಸೂರು ಇಂಗ್ಲೀಷ್ ಲೋವರ್ ಡರಿ ಪರೀಕ್ಷೆಗೆ ಕುಳಿತಿದ್ದ 5118 ವಿದ್ಯಾರ್ಥಿಗಳಲ್ಲಿ ಜನಗಳೂ, ಕನ್ನಡ ಪರೀಕ್ಷೆಗೆ ಕುಳಿತಿದ್ದ 3223 ವಿ ರ್ಥಿಗಳಲ್ಲಿ 1089 ವಿದ್ಯಾರ್ಥಿಗಳೂ ಉತ್ತೀರ್ಣ ಗಿದ್ದಾರೆ.

ಜೂ[illegible]ನೇ ತಾರೀಖಿನ ದಿವಸ ಮೈಸೂ ಅಗ್ರಹಾರದಲ್ಲಿರುವ ಪೋಸ್ಟಿನಕೊಳದ ಬೀದಿ ಗದ ಗಲ್ಲಿಯಲ್ಲಿ ಒಂದು ಶಿಶುವನ್ನು ಕತ್ತುಹಿಸು ಕಿದ್ದರು. ಈ ಘೋರಕೃತ್ಯವು ಯಾರೋ ಒಬ್ಬ ನಿಂದ ನಡೆದಿರುವುದೆಂದು ಕೇಳುತ್ತೇವೆ.

ನ್ಯಾಯವಿಧಾಯಕಸಭೆಯು ಶ್ರೀ ಜಗನ್ಮೋ ಪ್ರಾಸಾದದಲ್ಲಿ ದಿವಾನರವರ ಅಧ್ಯಕ್ಷತೆಯಲ್ಲಿ ತಾರೀಖಿನಿಂದ ಪ್ರಾರಂಭವಾಗಿ 28ನೆ ಮಂಗ ಸಾಯಂಕಾಲಕ್ಕೆ ಸಮಾಪ್ತಿಯಾಯಿತು. ದಿ ಜತೆಯಾಗಿ ದೊಡ್ಡ ಅಧಿಕಾರಿಗಳು ಆ ದಿವಸವೆ ಊರಿಗೆ ಪ್ರಯಾಣಮಾಡಿದರು

ಈ ತಿಂಗಳು ಬೀರೂರಿನಿಂದ ತರೀಕೆರೆಗೆ ಬರುತ್ತಿರಲು ಯಾವುದೋ ಒಂದು ಲೆವಲ್ ಕ್ರಾ ಒಳಿಯಲ್ಲಿ ಬಾಗಿಲನ್ನು ಹಾಕುತ್ತಿದ್ದ ಹುಡು ಪ್ರಮಾದದಿಂದ ಇಂಜಿನ್ನಿನ ಮುಂದುಗಡೆಯ ಬಾಗಿಲಕ್ಕೆ ಸಿಕ್ಕಿ ತರೀಕೆರೆಯವರಗೂ ಎಳೆಯ ಮೃತಿಹೊಂದಿದನೆಂದು ಕೇಳುತ್ತೇವೆ.

ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಕೊರಟಗೆ ಒಬ್ಬ ಬ್ರಾಹ್ಮಣ ಹೆಂಗಸು ಒಂದು ತಿಪ್ಪೆಯ ಬಳಿ ಮಗುವನ್ನು ಹೆತ್ತು ಕೊಲ್ಲದೆ ಕಸದ ಗುಡ್ಡೆಯಲ್ಲಿ ಅದನ್ನು ಮುಚ್ಚಿಸಿ ಮಗುವಿನ ಮೇಲೆ ಸೊಪ್ಪು ಮೇಲೆ ಕಲ್ಲನ್ನು ಹೇರಿದ್ದಳು. ಆದರೂ ಮಗುವು ದೃಷ್ಟಿ ಅವಳಮೇಲೆ ಬಿಟ್ಟಿ ಸಾಗಿರುವದಂತೆ!

ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರು ಕ್ಷೇತ್ರದಲ್ಲಿರುವಾಗ ಅವರಲ್ಲಿ ಸೇವಕನಾಗಿದ್ದ ರ ಯ್ಯನೆಂಬುವನು ಕಳ್ಳತನವನ್ನು ಮಾಡಿದನೆಂದು ರು ಪೋಲೀಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿರುವ ಇವನಲ್ಲಿ 3800 ರೂಪಾಯಿ ಕರೆನ್ಸಿನೋಟುಗಳೂ ಹದಿನೈದು ಉಂಗುರಗಳೂ ದೊರೆತಿವೆಯಂತೆ.

ಶ್ರೀ|| ಮದನಮೋಹನಮಾಲವೀಯರವರು ವಿಶ್ವೇಶ್ವರಯ್ಯನವರ ಆಹ್ವಾನವನ್ನು ಅಂಗೀ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ನೋ ಕ್ಕೆ ಹೋಗಿದ್ದರು. ಅಲ್ಲಿಯ ಸಕಲ ವಿವರ ನ್ನು ನೋಡಿ ಸಂತೋಷಪಟ್ಟು ಇದರಿಂದ ಮೈ ದೇಶಕ್ಕೆ ಮುಂದೆ ಬಹಳ ಲಾಭವಾಗುವುದೆಂದು ಅಭಿಪ್ರಾಯವನ್ನು ವ್ಯಕ್ತಮಾಡಿದರಂತೆ!

ವರ್ತಮಾನಸಂಗ್ರಹ.

ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಪಂಚಾಚಾರ್ಯಪ್ರಭೆಯ ಪೋಷಣಕ್ಕಾಗಿ ಹಿಸಾಲಿಪುರದಿಂದ ಒಂದುಸಾವಿರ ರೂಪಾಯಿಗಳನ್ನು ಆಶೀರ್ವಾದಪೂರ್ವಕವಾಗಿ ಕಳುಹಿಸಿದ್ದಾರೆ.

ಪಾಟಣಾಪಟ್ಟಣದಲ್ಲಿ ಬಕ್ರೀದಾ ಹಬ್ಬದದಿವಸ ಜಗಳದಾಗಿ ನಡೆದು ಪೋಲೀಸರು ೭೨ ಜನಗಳನ್ನು ಹಿಡಿದಿದ್ದಾರೆ.

ಎಕನೆರ್ ಎಂಬುವರು ೧೨ ದಿವಸಗಳಲ್ಲಿ ಭೂಲೋಕವನ್ನು ಸುತ್ತಿಕೊಂಡುಬರುವ ಒಂದು ಆಕಾಶವಿಮಾನವನ್ನು ತಯಾರಿಸಿರುವರಂತೆ!

ಜೂನ್ 20ನೆ ತಾರೀಖಿನದಿವಸ ಜನರಲ್ ವಿ|| ಸಾ ಪೇಸರವರು ಅಲಹಾಬಾದ ಹೈಕೋರ್ಟಿನ ಂಗ್ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

ಬಳ್ಳಾರಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಘದವರು ತಮ್ಮ ಸಂಘದ ವಾರ್ಷಿಕರಿಪೋರ್ಟನ್ನು ಕಡೆಗೆ ಕಳುಹಿಸಿರುತ್ತಾರೆ. ಇದನ್ನು ಮುಂದಣ ರ ಪ್ರಕಟಪಡಿಸುತ್ತೇವೆ.

ಶಾ|| ಮನೋಹರದಾಸಾಯಿ ಲೇಲೆ ಎಂಬುವರು ವಿದ್ಯಾಪೀಠಕ್ಕೆ ನಲವತ್ತುಸಾವಿರ ರೂಪಾಯಿಗಳು ಬಾಳುವ ತಮ್ಮ ಆಸ್ತಿಯನ್ನು ದಾನಮಾಡಿದ್ದಾರೆ. ಇದು ಸ್ತುತ್ಯವಾದಕಾರ್ಯವಾಗಿದೆ.

ಕರಾಚಿಪಟ್ಟಣದ ಸಮುದ್ರತೀರದಲ್ಲಿ ಒಬ್ಬ ಹಿಂದು ಹುಡುಗಿಯ ಶವವು ಸಿಕ್ಕಿರುತ್ತದೆ. ಈ ಶವವನ್ನು ಒಬ್ಬ ಯುರೋಪಿಯನ್ ಸೋಲ್ಜರನು ಮುಚ್ಚಿಡುವುದಕ್ಕೆ ಪ್ರಯತ್ನಮಾಡುತ್ತಿದ್ದುದನ್ನು ನೋಡಿ ಇವನೇ ಅವಳನ್ನು ಕೊಂದಿರಬಹುದೆಂದು ಪೋಲೀಸರು ಹಿಡಿದಿದ್ದಾರೆ.

ಸಾರ್ವನಪುರ ಎಂಬ ಊರಿನಲ್ಲಿ ಒಂದು ಕೋಳಿಯು ಯನ್ನಿಟ್ಟಿದೆಯಂತೆ! ಆ ತತ್ತಿಯಮೇಲೆ "ಮಹಮ್ಮದ ಪೈಗಂಬರ" ಎಂಬ ಹೆಸರು ಇರುವದಂತೆ! ಜನರು ಪರೀಕ್ಷೆಮಾಡಿದರೂ ಈ ಅಕ್ಷರಗಳು ಕೃತ್ರಿಮಗಳಾದ ಅಕ್ಷರಗಳಲ್ಲವೆಂದು ಹೇಳುತ್ತಾರಂತೆ!

ಓಟರರ ಪಟ್ಟಿಯನ್ನು ತಯಾರಮಾಡುವಾಗ ಜೈನರು ಹಿಂದುಗಳಲ್ಲವೆಂದು ಭಾವಿಸಕೂಡದೆಂದು ಸರ್ಕಾರದವರು ನಿಶ್ಚಯಮಾಡಿದುದರಿಂದ ಜೈನರು ತಮಗುಂಟಾದ ಅಸಮಾಧಾನವನ್ನು ಸರ್ಕಾರಕ್ಕೆ ತಿಳಿಸುವುದಕ್ಕಾಗಿ ಪೂನಾಪಟ್ಟಣದಲ್ಲಿ ಒಂದುಸಭೆಯನ್ನು ಕೂಡಿಸುವವರಾಗಿರುವರು.

ಹಿಂದುಸ್ಥಾನದೊಳಗಿನ ಸಿವಿಲ್ ಸರ್ವಿಸ್ ಪರೀಕ್ಷೆಯು ೧೯೨೮ನೇ ಜನವರಿ ೪ನೇ ತಾರೀಖಿನ ದಿವಸದಲ್ಲಿ ನಡೆಯುವುದು. ಈ ಪರೀಕ್ಷಾ ಸಂಬಂಧವಾದ ಅಪ್ಲಿಕೇಷನ್ನುಗಳನ್ನು ಅಗಸ್ಟ ೧೫ನೇ ತಾರೀಖಿನೊಳಗಾಗಿ ಹಾಕಿಕೊಳ್ಳಬೇಕೆಂದು ಮುಂಬೈ ಸರ್ಕಾರದವರು ಪ್ರಸಿದ್ಧಪಡಿಸಿರುವರು.

ತಂಜಾವೂರುಜಿಲ್ಲಾ ಬೋರ್ಡಿನವರು ಮಹಾತ್ಮಾ ಗಾಂಧಿಯವರಿಗೆ ಮಾನಪತ್ರವನ್ನು ಕೊಡುವ ಠರಾವನ್ನು ಪಾಸಮಾಡಿರುವರಲ್ಲದೆ ಬೋರ್ಡಿಗೆ ಖಾದೀಗಳನ್ನೇ ಉಪಯೋಗಿಸಬೇಕೆಂದೂ ಹೈಸ್ಕೂಲಿನಲ್ಲಿ ನೂಲುವುದನ್ನು ಐಚ್ಛಿಕವನ್ನಾಗಿ ನಿಯಮಿಸಬೇಕೆಂದೂ ತೀರ್ಮಾನಮಾಡಿದ್ದಾರೆ.

ಮುರಾದಾಬಾದ ಪೋಸ್ಟಮಾಸ್ತರ್ ಜ್ಯೋತಿಸ್ವರೂಪರೆಂಬುವರು ಸೇವಿಂಗ್ಸ್ ಬ್ಯಾಂಕಿನ ಎರಡುಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಓಡಿಹೋಗಿದ್ದಾರೆ. ಪೋಸ್ಟ್ ಖಾತೆಯ ಡೈರೆಕ್ಟರ್ ಜನರಲ್ ರವರು ಇವರ ತಪಾಸುಮಾಡಿಕೊಟ್ಟವರಿಗೆ 500 ರೂಪಾಯಿಗಳನ್ನು ಕೊಡುತ್ತೇವೆಂದು ಪ್ರಸಿದ್ಧಪಡಿಸಿರುವರು.

ಜರ್ಮನಿಯಲ್ಲಿ ಪ್ರಿನ್ಸ್ ಬಿಸ್ಮಾರ್ಕರವರಲ್ಲಿ ಒಂದು ಮಾತನಾಡುವ ಗಡಿಯಾರವಿದೆಯಂತೆ. ಅದು ಕಾಲು ಘಂಟೆಗೆ ಒಂದುಸಾರೆ ಮಾತನಾಡುವುದಂತೆ! ಇದರ ಹಾಗೆ ಯಾರಾದರೂ ಮಾತನಾಡುವುದಕ್ಕೆ ಬಂದರೆ ಗಡಿಯಾರವು ನಿರರ್ಥಕವಾದ ಮಾತುಗಳನ್ನಾಡಬೇಡಿ. ಹೋದಕಾಲವು ಸಿಗುವುದಿಲ್ಲವೆಂದು ಹೇಳುವದಂತೆ!

ಶ್ರೀರಂಗಗಬಾಜಾ ಘೋಸಲೆ ಎಂಬುವನು ತನ್ನ ಪತ್ನಿಯನ್ನು ಅವಳ ತವರುಮನೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಒಂದುಕಾಡಿಗೆ ಕರೆದೊಯ್ದು ಬಲವಾಗಿ ಹೊಡೆದು ಅವಳ ತವರುಮನೆಗೆ ತೆಗೆದುಕೊಂಡುಹೋಗಿ ಬಿಟ್ಟನು. ಸ್ವಲ್ಪಹೊತ್ತಿನಲ್ಲಿ ಅವಳು ಸತ್ತಳು. ಕೇಸು ವಿಚಾರಣೆಯಾಗಿ ಅಪರಾಧಿಯು ೫ ವರ್ಷ ಶಿಕ್ಷೆಗೆ ಗುರಿಯಾದನು.

ಶ್ರೀನಿವಾಸಅಯ್ಯಂಗಾರ್ ರವರು ಮಧುರೆಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ತೀರ್ಮಾನವಿಷಯದಲ್ಲಿ ಭಾಷಣಮಾಡುವ ಸಮಯದಲ್ಲಿ ಸಭಿಕರಲ್ಲಿ ಯಾವನೋ ಒಬ್ಬನಿಂದ ಕಲ್ಲು ಎಸೆಯಲ್ಪಟ್ಟಿತು. ಕೂಡಲೆ ಅಯ್ಯಂಗಾರ್ ರವರು ಆ ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡು ಹರಾಜಿಗೆ ಇಟ್ಟರು. ಆ ಕಲ್ಲು 5 ರೂಪಾಯಿಗಳವರಿಗೆ ಹರಾಜು ಆಯಿತಂತೆ.

ಕೊಲಂಬೋಪಟ್ಟಣದ ಬೌದ್ಧಮತಾವಲಂಬಿಯಾದ ಜಯರಾಮಸೂರಿಯಾ ಎಂಬ ಒಬ್ಬ ಗ್ರ್ಯಾಜುವೇಟನು ಇಲ್ಲಿಯ ಪೋಲೀಸಿನವರಿಂದ ಹಿಡಿಯಲ್ಪಟ್ಟಿರುತ್ತಾನೆ. ಈತನು ಶ್ರೀಮಂತನ ಮಗನಾಗಿದ್ದುದಲ್ಲದೆ ಪದವೀಧರನಾಗಿದ್ದರೂ ಕ್ರೈಸ್ತಪ್ರಯಾಣಿಕರ ಧನ ಮತ್ತು ಪ್ರಾಣಗಳನ್ನು ಕಳೆಯುವುದರಲ್ಲಿ ಪ್ರಖ್ಯಾತನಾಗಿರುವನಂತೆ! ಇವನ ಸಮಾಚಾರವನ್ನೆಲ್ಲ ತಿಳಿಯಲು ಪೋಲೀಸರು ವಿಶೇಷಪ್ರಯತ್ನ ಪಡುತ್ತಲಿರುವರು.

ಹೈದರಾಬಾದಿನಲ್ಲಿ ಒಬ್ಬ ಮನುಷ್ಯನು ಬೈಸಿಕಲ್ಲಿನ ಮೇಲೆ ಕುಳಿತುಕೊಂಡು ಮುಂದೊಬ್ಬ ೧೨ ವರುಷದ ಬಾಲಕನನ್ನು ಕೂಡ್ರಿಸಿಕೊಂಡು ಹೋಗುತ್ತಿರುವಾಗ ಅರ್ಧಮಾರ್ಗದಲ್ಲಿ ಸೈಕಲ್ಲನ್ನು ತಿರುಗಿಸುವ ಸಮಯದಲ್ಲಿ ಮಗುವು ಕೆಳಗೆ ಬಿದ್ದಿತು. ಅಷ್ಟರೊಳಗೆ ಒಂದು ಮೋಟಾರಗಾಡಿಯು ಆ ಹುಡುಗನಮೇಲೆ ಹಾಯ್ದುಹೋಗಲು ಹುಡುಗನು ಮೃತಿಯನ್ನು ಹೊಂದಿದನು. ಉಭಯ ಕಂಟಕಗಳು ಒಂದೇಸಮಯದಲ್ಲಿ ಒದಗಿದ್ದುದು ವಿಧಿ ವೈಚಿತ್ರ್ಯವೇಸರಿ.

"ರಂಗೀಲಾ ರಸೂಲ" ಎಂಬ ಪುಸ್ತಕವು ಜಾತಿ ಜಾತಿಗಳಲ್ಲಿ ವೈಮನಸ್ಯವನ್ನುಂಟುಮಾಡುವುದಿಲ್ಲವೆಂದು ಪಂಜಾಬು ಹೈಕೋರ್ಟಿನವರು ತೀರ್ಮಾನಮಾಡಿದರು. ಇದರಮೇಲೆ "ಮುಸ್ಲಿಮ್ ಔಟಲುಕ್" ಪತ್ರಿಕಾಕರ್ತರು ಹೈಕೋರ್ಟಿನವರ ತೀರ್ಮಾನವನ್ನು ಖಂಡಿಸಿದ್ದರಿಂದ ಈ ಪತ್ರಿಕರ್ತರಮೇಲೆ ಕೋರ್ಟಿನವರು ಮಾನಹಾನಿಗೋಸ್ಕರ ಕೇಸುಹಾಕಲಾಗಿ ಸಂಪಾದಕರಿಗೆ 6 ತಿಂಗಳ ಶಿಕ್ಷೆಯೂ 750 ರೂಪಾಯಿ ಅರ್ಥದಂಡವೂ ವಿಧಿಸಲ್ಪಟ್ಟಿತು.

ಬಳ್ಳಾರಿಜಿಲ್ಲೆಯಲ್ಲಿರುವ ಊರವಕೊಂಡೆಯೆಂಬ ಊರಲ್ಲಿ ಒಬ್ಬವೈಶ್ಯನು ತನ್ನ ಮಗಳಿಗೆ ಸಾವಿರರೂಪಾಯಿಗಳ ಬೆಲೆಬಾಳುವ ಒಡವೆಗಳನ್ನು ಧರಿಸಿ ಅವಳನ್ನು ತನ್ನ ಮನೆಯಲ್ಲಿ ನಡೆಯುವ ಶುಭಕಾರ್ಯಕ್ಕಾಗಿ ಅಕ್ಕಪಕ್ಕಗಳಲ್ಲಿರುವ ಜನರನ್ನು ಕರೆಯುವುದಕ್ಕೆ ಕಳುಹಿಸಿಕೊಟ್ಟಿದ್ದನು. ಸಾಯಂಕಾಲವಾದರೂ ಮಗುವು ಮನೆಗೆ ಬರದೆಹೋಗುದರಿಂದ [illegible] ಪೋಲೀಸರಿಗೆ ತಿಳಿಸಲಾಗಿ ಪೋಲೀಸಿನವರು ಮನೆಗಳನ್ನು ಶೋಧಿಸುವುದಕ್ಕೆ ಉಪಕ್ರಮಿಸಲು ಅಂಜನೇಯನೆಂಬ ಒಬ್ಬ ವೈಶ್ಯನ ಮನೆಯಲ್ಲಿ ಹುಡುಗಿಯನ್ನು ಕೊಂದು ಹೆಣವನ್ನು ಮುಚ್ಚಿಟ್ಟಿದ್ದರು. ತಪಾಸುಮಾಡಿ ಆ ಮನೆಯವರನ್ನು ಅರೆಸ್ಟುಮಾಡಿರುವರೆಂದು ಕೇಳುತ್ತೇವೆ. ಹಣವು ಮಾಡಬಾರದುದನ್ನು ಮಾಡಿಸುವುದು.

ಕುಂಭಕೋಣದಲ್ಲಿ ಒಬ್ಬ ೧೯ ವರ್ಷದ ಹುಡುಗಿಯು ಯಾವನೋ ಒಬ್ಬನನ್ನು ಮೋಹಿಸಿದ್ದುದರಿಂದ ತಂದೆತಾಯಿಗಳು ಗೊತ್ತುಮಾಡಿದ ವರನನ್ನು ಮದುವೆಯಾಗಲು ಒಪ್ಪದೆ ತಂದೆತಾಯಿಗಳು ಹೆದರಿಸುತ್ತಲಿರುವುದನ್ನು ಸಹಿಸಲಾರದೆ ಧಿಟ್ಟತನದಿಂದ ಆ ಹುಡುಗಿಯು ಮೋಹಿಸಿದವನ ಮನೆಗೆ ಹೊರಟುಹೋದಳು. ಇವರಿಬ್ಬರೂ ಸೇರಿ ರಹಸ್ಯವಾಗಿ ಮದುವೆಯನ್ನು ನಿಶ್ಚಯ ಮಾಡಿಕೊಂಡರು. ಈ ವಿಷಯವು ತಂದೆತಾಯಿಗಳಿಗೆ ಗೊತ್ತಾಗಿ ಮಗಳಮೇಲಿನಪ್ರೀತಿಯಿಂದ ಬಲಾತ್ಕಾರವಾಗಿ ತೆಗೆದುಕೊಂಡುಹೋಗುವುದಕ್ಕೆ ಅತನ ಮನೆಯನ್ನು ನುಗ್ಗಿದರು. ಉಭಯಪಕ್ಷದವರಿಗೂ ಮುಷ್ಟಾಮುಷ್ಟಿಯುದ್ಧವು ನಡೆದು ಪರಸ್ಪರ ಗಾಯಗಳುಂಟಾಗಿವೆಯೆಂದು ಕೇಳುತ್ತೇವೆ. ಇದೀಗ ಸ್ತ್ರೀಸ್ವಾತಂತ್ರ್ಯದ ಮಹಿಮೆ.

ರಾವಲಪಿಂಡಿಯ ಸವಾರ್‌ಸ್ಟ್ಸ್ಪದ ಕ್ಯಾಪ್ಟನ್ನರಾದ ಒರ್ಡಿಯೆಂಬುವರು ಒಂದುದಿವಸ ರಾತ್ರಿಸಮಯದಲ್ಲಿ ಡಾಕ್ ಬಂಗ್ಲೆಯ ಬಳಿಯಲ್ಲಿ ಕುಳಿತಿರುವಾಗ ಅಕಸ್ಮಾತ್ ಒಂದು ಹುಲಿಯು ಇವರಿದ್ದ ಕಡೆಗೆ ಬರಲು ಕ್ಯಾಪ್ಟನ್ನರವರು ತಕ್ಷಣದಲ್ಲಿಯೇ ವಿದ್ಯುಚ್ಛಕ್ತಿಯ ದೀಪವನ್ನು ಹಚ್ಚಿ ಹುಲಿಯಮೇಲೆ ಗುಂಡನ್ನು ಹಾರಿಸಿದರು. ಹುಲಿಗೆ ಏಟುಬಿದ್ದು ಅರ್ಭಟಿಸುತ್ತಲಿರುವಷ್ಟರೊಳಗೆ ವಿದ್ಯುಚ್ಛಕ್ತಿದೀಪವು ನಂದಿಹೋಗಲಾಗಿ ಹುಲಿಯು ಕ್ಯಾಪ್ಟನ್ನರವರಮೇಲೆ ಹಾರಲು ಕ್ಯಾಪ್ಟನ್ನರವರು ಹುಲಿಯೊಂದಿಗೆ ಬಹಳಹೊತ್ತು ಹೋರಾಡಿದರು. ಅಂತ್ಯದಲ್ಲಿ ಹುಲಿಯು ಹೆದರಿಕೊಂಡು ಓಡಿಹೋಯಿತು. ತಕ್ಷಣದಲ್ಲಿಯೇ ಕ್ಯಾಪ್ಟನ್ನರವರು ಒಂದು ಮರದಮೇಲೆ ಕುಳಿತುಕೊಂಡು ಆ ರಾತ್ರಿಯೆಲ್ಲಾ ಕಳೆದರೆಂದೂ ಪ್ರಾತಃಕಾಲ ಶಿಕಾರಿಯವರು ಬಂದು ಕ್ಯಾಪ್ಟನ್ನರವರನ್ನು ಕರೆದುಕೊಂಡುಹೋದರೆಂದೂ ಆ ಹುಲಿಯು 50 ಗಜಗಳದೂರದಲ್ಲಿ ಸತ್ತುಬಿದ್ದಿತ್ತೆಂದೂ ತಿಳಿಯಬರುತ್ತದೆ.

ನೀಚಲೇಖಗಳು.

ಕೆಲವು ಅಸೂಯಾಂಧರು ಇತ್ತೀಚೆಗೆ ಮಹಾಸ್ವಾಮಿ ಪಂಚಾಚಾರ್ಯರ ವಿಷಯದಲ್ಲಿ ನೀಚಬರವಣಿಗೆಗಳನ್ನು ಬರೆಯಲಿಕ್ಕೆ ಉಪಕ್ರಮಿಸಿ, ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಈಗೀಗ ಶಾಂತವಾವಸ್ಥೆಗೆ ಬಂದಿರುವ ಸಮಾಜದಲ್ಲಿ ಪುನಃ ಗೊಂದಲವನ್ನೆಬ್ಬಿಸಬೇಕೆನ್ನುವರೇ ಈ ಮಹಾತ್ಮರ ಸಂಕಲ್ಪವಿದ್ದಂತೆ ತೋರುತ್ತದೆ. ಇಂಥ ನೀಚಬರವಣಿಗೆಗಳಿಗೆ ಆಶ್ರಯಕೊಡುವವರ ಸ್ವಭಾವವು ಯಾವರೀತಿಯಿರುವುದೆನ್ನುವದನ್ನು ಬೇರೆ ವರ್ಣಿಸಬೇಕಾಗಿಲ್ಲ. ಪ್ರಭೆಯು ಇಂಥ ಬರವಣಿಗೆಗಳಿಗಾಗಲಿ ಅಥವಾ ಅವುಗಳ ಖಂಡನಕ್ಕಾಗಲಿ ಉಪಯುಕ್ತವಾಗಬಾರದೆನ್ನುವುದೇ ನಮ್ಮ ಪ್ರಾರ್ಥನೆಯು. ಖಂಡನಕ್ಕೆ ಅವಕಾಶಕೊಟ್ಟಲ್ಲಿ ಪುನಃ ಸಮಾಜವು ಮೊದಲಿನಂತೆ ಭಯಂಕರಾವಸ್ಥೆಯನ್ನು ಹೊಂದುವದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಇಂಥ ಅಮಂಗಲ ಲೇಖಗಳಿಂದ ಗುರುಸಾರ್ವಭೌಮರಿಗೆ ಯಾವ ರೀತಿಯಿಂದಲೂ ಕುಂದುಕವು ಬರಲಾರದು. ಗುರುಚಕ್ರವರ್ತಿಗಳ ವಿಷಯದಲ್ಲಿ ಈ ತರದ ಬರವಣಿಗೆಗಳನ್ನು ಬರೆಯುವವರು ತಾವು ಮಹಾಪಾಪಿಗಳೆನ್ನುವುದನ್ನು ತಾವೇ ಜಗತ್ತಿಗೆ ತೋರಿಸಿಕೊಟ್ಟಂತಾಗುತ್ತದೆ. "ತುಷ್ಯತು ದುರ್ಜನಃ" ಎಂಬ ನ್ಯಾಯದಂತೆ ಪ್ರಭೆಯು ಈ ವಿಷಯದಲ್ಲಿ ಮೌನವ್ರತವನ್ನು ಧಾರಣಮಾಡಬೇಕೆಂದೂ ಈ ತರದ ಲೇಖಕರಿಗೆ ಪರಮೇಶ್ವರನು ಸದ್ಬುದ್ಧಿಯನ್ನುಂಟುಮಾಡಲೆಂದೂ ಪ್ರಾರ್ಥಿಸುತ್ತೇನೆ.

'ಓರ್ವ ವೀರಶೈವ.

ಸ್ವೀಕಾರ.

ವೇ|| ಕಾಮಲಾಪುರದಮಠದ ಗಂಗಾಧರಯ್ಯನವರು ಹೊಸಪೇಟೆ ಇವರು ಮು|| ಕಾಮಲಾಪುರದ ಗಾಳಿ ಪರಪ್ಪನವರ ಮಗನ ಲಿಂಗಧಾರಣದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ೨ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಹೊನ್ನಾಳಿ ತಾ|| ಶಿಂಗಟಗೇರಿಮಠದ ಬಸಯ್ಯನವರಿಗೆ ಅರಬಗಟ್ಟಮಠದ ಚನ್ನಯ್ಯನವರ ಪುತ್ರಿಯನ್ನು ತಂದು ವಿವಾಹವನ್ನು ನಡೆಯಿಸಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ ೨ ರೂಪಾಯಿಗಳನ್ನು ಸ್ವಾಮಿತಿ ಕೋಡಳ್ಳಿ ಮಠದ ಸಂಗಪ್ಪಯ್ಯನವರು ಕಳುಹಿಸಿದ್ದಾರೆ.

ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸತ್ಸುಖವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಸಂ.—

ಶ್ರೀ.

| ಭ್ರಮರಾಂಬಾಸಹಾಯ.

ಮುಡುಕುತೊರೆ.

10-6-37 ನೆ ಮಿತ್ರವಾದ ಶ್ರೀಸೋಮ [illegible] ಕ್ಷೇತ್ರವಾದ ಮುಡುಕುತೊರೆಯಲ್ಲಿ ಮೈಸೂರು .. ಸಂಗಪ್ಪನವರಿಂದ ಸ್ಥಾಪಿಸಲ್ಪಟ್ಟ ಶ್ರೀಮದ್ವೀರಶೈವಮತ ಧರ್ಮೋಜ್ಜೀವಿನೀ ಸಂಸ್ಕೃತ ಅಥರ್ವ, ಜ್ಯೋತಿಷ ಕನ್ನಡ, ಇಂಗ್ಲೀಷ್, ತಮಿಳು, ವೇದಾರ್ಥಪಾಠಶಾಲಾ ವಿದ್ಯಾರ್ಥಿಗಳು ಪಂಚಾಚಾರ್ಯಪ್ರಭಾ ಯಶೋವೃದ್ಧಿಯಸರವಾಗಿ ದೇವಾಲಯದಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೂ, ಶ್ರೀ ಭ್ರಮರಾಂಬಾ ಅಮ್ಮನವರಿಗೂ ಷೋಡಶೋಪಚಾರಾದಿ ಪೂಜೆಯಂ ನಡಸೇಬಿಸಿ ಸ್ವಾಮಿಯವನ್ನು ಪಂಚಾಕ್ಷರಾಲಂಕಾರದಿಂದಲೂ, ಅಮ್ಮನವರನ್ನು ವಿದ್ಯಾ [illegible] ಲಂಕಾರದಿಂದಲೂ ಅಲಂಕರಿಸಿ ಪಂಚಾಚಾರ್ಯ ಪ್ರಭಾ ಪತ್ರಿಕೆಯು ಮೊದಲು ಅವಕಾಶವಿತ್ತ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರಿಗೂ, ಶ್ರೀಮನ್ಮಹಾರಾಣಿಯವರಿಗೂ, ಯುವರಾಜತ್ರಶ್ರೀ ವಾಣೀವಿಲಾಸವನ್ನು ಧ್ಯಾನಿಸಿದರಿಗೂ, ಶ್ರೀಮನ್ಮಹಾರಾಜಕುಮಾರರ ಸ್ವಾಮಿಪರಾಜ ಒಡೆಯರ್ ಬಹದ್ದೂರ್ [illegible] ರವರಿಗೂ [illegible] ಪುತ್ರರಾದವರಾಗಿ [illegible] ಜೇಂದ್ರ ಒಡೆಯರ್ ಬಹದ್ದೂರರವರಿಗೂ [illegible] ಮಲ್ಲಿಕಾರ್ಜುನಸ್ವಾಮಿಯೂ, ಶ್ರೀ ಭ್ರಮರಾಂಬಾದೇವಿಯೂ ಸದಾ ಆಯುರಾರೋಗ್ಯ ಭಾಗ್ಯ ನನ್ನು [illegible] ವಾಗಿ ಕೊಟ್ಟು ಕಾಪಾಡಬೇಕೆಂದು .. ಸಂಗಪ್ಪನವರಿಂದ ಪದ್ಯರೂಪವಾಗಿ ರಚಿಸಲ್ಪಟ್ಟಿದ್ದ ಸ್ತೋತ್ರಪದ್ಯಗಳನ್ನು ಹೇಳಿ ಪ್ರಾರ್ಥಿಸಿದನಂತರ ಸ ಠಾ ಸದರಿ ಪಾಠಶಾಲಾ ಸೆಕ್ರೆಟರಿಯವರಾದ ಯಜಮಾನ ಸಂಚಾಯಿತಿ ಚೇರ್ಮನ್ ಅರ್ಚಕ ದೊಡ್ಡಮಲ್ಲಪ್ಪನವರೂ ಸದರಿ ಪಾಠಶಾಲಾ ಕೋಶಾಧ್ಯಕ್ಷರಾದ ತಲಕಾಡು ಸಿ. ಮಲ್ಲಣ್ಣನವರೂ ಸದರಿ ಪಾಠಶಾಲೆಯ ಇಂಗ್ಲೀಷ್ ಉಪಾಧ್ಯಾಯರಾದ ಎಸ್. ಸಿ. ಸುಬ್ರಹ್ಮಣ್ಯಯ್ಯರ ವರಿಗ ಪ್ರತಿಪಕ್ಷವಾರದಲ್ಲಿಯೂ ಎಲ್ಲಾ ವಿದ್ಯಾರ್ಥಿಗಳನ್ನೂ ದೇವಾಲಯಕ್ಕೆ ಕರೆದುಕೊಂಡುಬಂದು ನಮ್ಮನ್ನಾಳುವ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಸತ್ತು ಅವರ ಕುಟುಂಬವರ್ಗದವರ ಶ್ರೇಯೋಭಿವೃದ್ಧಿಗಾಗಿಯೂ, ಪಂಚಾಚಾರ್ಯ ಪ್ರಭಾಪತ್ರಿಕಾ ಯಶೋಭಿವೃದ್ಧಿಗಾಗಿಯೂ, ಪಂಚಾಚಾರ್ಯಪ್ರಭಾ ಪ್ರಿಂಟಿಂಗ್ ವರ್ಕ್ಸ್ ಸ್ಥಾಪಕರಾದ ವೇ|| ಬ್ರಂ|| ಕಾವ್ಯತೀರ್ಥ ಕಾಶೀನಾಥಶಾಸ್ತ್ರಿಗಳವರ ಮತ್ತು ಸಂಪಾದಕರಾದ ವೇ|| ಬ್ರಂ|| ಆಸ್ಥಾನವಿದ್ವಾನ್ ಶಿವಾದ್ವೈತಭೂಷಣ ಸಿಂಪಿ ಗುರುಶಾಂತಶಾಸ್ತ್ರಿಗಳವರ ಶ್ರೇಯೋಭಿವೃದ್ಧಿಗಾಗಿಯೂ, ಮುಡುಕುತೊರೆ ಧರ್ಮಾರ್ಥಪಾಠಶಾಲಾ ಪೋಷಕರಾದ ಕಪ್ಪೆಗಾಲದ ಮ|| ರಾ|| ಶ್ರೀಯುತ ಡಿ. ಸಿ. ಮಲ್ಲಪ್ಪನವರು, ತಲಕಾಡು ಸಾಹುಕಾರ್ ಶ್ರೀಯುತ ಮ||ರಾ|| ಸದಾಶಿವಮೂರ್ತಿಯವರು, ಮುಡಿಗುಂಡದ ಸಾಹುಕಾರ್ ಶ್ರೀಯುತ ದೊಡ್ಡಬಸವಲಿಂಗಪ್ಪನವರು, ಸಾಹುಕಾರ್ ಮ||ರಾ|| ಶ್ರೀಯುತ ಗುರುಕಾರ್ ಜ್ಯೋತಿಪ್ಪನವರು, ಸಾಹುಕಾರ್ ಮ|| ರಾ|| ಶ್ರೀಯುತ ಗುರುಕಾರ್ ಮಾದಪ್ಪನವರು, ಮಧುವನಹಳ್ಳಿ, ಸಾಹುಕಾರ್ ಶ್ರೀಯುತ ಬಸವಲಿಂಗಪ್ಪನವರು, ಸಾಹುಕಾರ್ ತಾಳ್ವಾಡಿ ಮಾದಪ್ಪನವರು, ಮುಣಿಯಂ ಶ್ರೀಯುತ ಯಜಮಾನ್ ಬಸವಲಿಂಗಪ್ಪನವರು. ಮುಣಿಯಂ ಶ್ರೀಯುತ ಸಿದ್ಧಲಿಂಗಪ್ಪನವರು, ಕುಪೇರು ಡಿ|| ಬೋ|| ಮೆಂಬರ್ ಶ್ರೀಯುತ ವೀರಣ್ಣನವರು, ಕಬ್ಬಣಿ ಮ|| ರಾ|| ಶ್ರೀಯುತ ಡಿ|| ಬೋ|| ಮೆಂಬರ್ ಪುಟ್ಟಸ್ವಾಮಿಯವರು, ಸಾಗ್ಯದ ಮಣೀಗಾರ್ ಶ್ರೀಯುತ ಪುಟ್ಟಸ್ವಾಮಿಯವರು. ಶ್ರೀಯುತ ಚನ್ನಮಲ್ಲಪ್ಪನವರು. ಕಾವೇರಿ [illegible] ಅಧ್ಯಕ್ಷರು, ಮ|| ರಾ. ಚಿಕ್ಕಮಲ್ಲಪ್ಪನವರು. ಸಾಗ್ಯದ ಯಜಮಾನ ಶ್ರೀಯುತ ಸುಬ್ಬಣ್ಣನವರು. ಶ್ರೀಯುತ ಮಲ್ಲಿಕಾರ್ಜುನಪ್ಪನವರು, ಗುಂಡೇಗಾಲದ ಶ್ರೀಯುತ ದೊಡ್ಡ ಬಸವಣ್ಣನವರು, ಮೂಗೂರ ಶ್ರೀಯುತ ಗುರುಕಾರ್ ಪುಟ್ಟಣ್ಣನವರು, ಮಂಡ್ಯದ ಸಾಹುಕಾರ್ ಅರಳಿ ಸಂಗಪ್ಪನವರು. ತಲಕಾಡು ಶ್ರೀಯುತ ಸಿ. ನಂಜಪ್ಪನವರು. ಈ ಮೊದಲಾದವರ ದೀರ್ಘಾಯುರಾರೋಗ್ಯಾಭಿವೃದ್ಧಿಗಾಗಿಯೂ ಶ್ರೀ ಮಲ್ಲಿಕಾರ್ಜುನಸ್ವಾಮಿಯನ್ನು ಶ್ರೀ ಭ್ರಮರಾಂಬಾಅಮ್ಮನವರನ್ನು ನಾನಾ ವಿಧಾಲಂಕಾರಗಳಿಂದಲಂಕರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಕಾರ್ಯಭಾಗವಂ ನೆರವೇರಿಸಬೇಕೆಂದು ತಿಳಿಸಿದನಂತರ ಸರ್ವರೂ ಪಂಚಾಚಾರ್ಯಪ್ರಭಾ ಯಶೋಭಿವೃದ್ಧಿಗಾಗಿ ಶ್ರೀ ಭ್ರಮರಾಂಬಾಅಮ್ಮನವರನ್ನು ಭಕ್ತಿಪುರಸ್ಸರವಾಗಿ ಪ್ರಸಾದವಂ ಕೇಳಲು ಕರುಣಾನಿಧಿಯವಾದ ಜಗಜ್ಜನನಿಯು ಲೋಕೋತ್ತರವಾದ ಪ್ರಸಾದಪುಷ್ಪವಂ ಕೊಡಲು ಅನಂತರ ವಿದ್ಯಾರ್ಥಿಗಳಿಲ್ಲರೂ ಭ್ರಮರಾಂಬಾ ನವರತ್ನಮಾಲಿಕಾಸ್ತೋತ್ರವಂ ಶಾಸ್ತ್ರದಿಂದ ಬಹಳ ಭಯಭಕ್ತಿಯಿಂದ ಹಾಡಿದರು. ಸರ್ವರೂ ಜಯಜಯೆನೆ ದೇಹದೊಡನೆ ಕರತಾಡನವಂ ಗೈದು. ಕಾರ್ಯವಂ ಪೂರೈಸಿದರು.

ಶಾರ್ದೂಲ ವಿಕ್ರೀಡಿತವೃತ್ತ.

ಶ್ರೀಗಂಗಾಂಕಿತ ಮಸ್ತಕಂ ಮೃಗಧರಂ ನೇತ್ರೇಕ್ಷಣಂ ಸರ್ವಾಂಬರಂ ನಾಗೇಶಾಭರಣಂ ಸರೋಜನಯನ ಪ್ರಮೇಂದ್ರವೇದಾರ್ಚಿತಂ || ವಾಗೀಶಾತ್ತ್ರಜಸಂಸ್ತುತಂ ಪುರಹರಂ ಶ್ರೀಮಲ್ಲಿನಾಥೇಶ್ವರಂ । ಯೋಗೀಶಂ ಪೂರ್ಣಗಸಂಗಸದಂ ಶ್ರೀಕೃಷ್ಣಭೂಪಾಲಕಂ ||

ರತಿಯಂಪಾಲಿಪವರ್ಣಕೇಂದ್ರಸುತೆಯಂ ಶ್ರೀಚಾಮರಾಜೇಂದ್ರನಂ । ತತಿಯಂ ಪಾಲಿಪಶರ್ವದೇವಸತಿಯಂ ಶ್ರೀಕೃಷ್ಣರಾಜೇಂದ್ರನ ; ದ್ಯುತಿಯಂ ಪಾಲಿಸು ತಿರ್ಣಸಿದ್ಧಿಲತೆಯುಂ ಶ್ರೀಸೋಮಶೈಲಾಸ್ಥಿಪಾ । ವ್ರತಿಯಂ ಪಾಲಿಸಲೀಗಸಾರ್ಥನುತೆಯುಂ ಶ್ರೀಕೃಷ್ಣಭೂಪಾಲನಂ ||

ಶ್ರೀಸೋಮಾಂಕ ಪರೇಶ ಧೀಮವರದಂ ಭೋಗೀಂದ್ರಕಾಭಾರ್ಚಿತಂ । ಶ್ರೀಸೋಮೇಶ್ವರ ಲಿಂಗ ಕಾಮದಹನಂ ಚಾಮುಂಡ್ರಭೋಗಪ್ರದಂ || ಶ್ರೀ ಸೋಮಂ ಜಯಚಾಮರಾಜಯವಂ ಕಾಳೀಪ್ರಭಾಧೀಶ್ವರಂ . ಶ್ರೀಸೋಮಾದ್ರಿ ನಿವಾಸದೇವಪ್ರೇರಗುಂ ಶ್ರೀಮಲ್ಲಿನಾಥೇಶ್ವರಂ ||

ಕಂದಪದ್ಯ.

ಜಯರೂಪ ಮಲ್ಲಿಗೂಡುತೆ ।
ನಯಗುಣೆ ಜಯಚಾಮರಾಜನಾಕೃತಿಯೊಂದಲ್ ||
ಜಯಶಕ್ತಿಯೊಡನೆಯು ಮುದದಿಂ ।
ಭಯದೂರಂ ಪೊರೆಗೆ ಜಯಮುಜೆಯುವಾಹೇಶಂ ||

ವೃತ್ತ|| ಪರಸಂಚಾನಸಜಾತರಾದಿಗಣವರ್ ಮಾಹೇಶ್ವರಾಧಾರಿತರ್ । ಶಿವಜ್ಞಾನಂದಸುಧಾಬ್ಧಿ ಸೋಮ ಸದೃಶರ್ ಸೋಮನಾಥಲಿಂಗೋದ್ಭವರ್ || ಮಹೇಶಾದಿಕಪೀಂದ್ರಗೇಯಚರಿತರ್ ಕಾರುಣ್ಯಶೀಲರ್ ಜಗದ್ಗುರುಪಂಚಾರ್ಯರು ಭೋಗಿಕೃಷ್ಣನೃಪನಂ ಕಾಪಾಡಲೀ ಧಾತ್ರಿಯೊಳ್ ||

ಶ್ರೀ ಭ್ರಮರಾಂಬಾ ನವರತ್ನಮಾಲಿಕಾ
ರಾಗ|| ತೋಡಿ|| ರೂಪಕತಾಳ.

೧. ನಮ್ಮ ಭರತಖಂಡದಲ್ಲಿ ಬೊಂಬಾಯಿ, ಮದ್ರಾಸ, ಮೈಸೂರು, ನಿಜಾಮ ವಗೈರೆ ಇಲಾಖೆಗಳಲ್ಲಿ ವೀರಶೈವ ಜನವಸತಿಯು ಯಾವ ಯಾವ ಗ್ರಾಮದಲ್ಲಿ ಎಷ್ಟೆಷ್ಟು ಇರುತ್ತದೆಂಬುದನ್ನು ಆಯಾಯ ಇಲಾಖೆಯ ದರವಂದು ಗ್ರಾಮಗಳ ಮಠಾಧಿಕಾರಿಗಳಿಂದಲೂ ಪಟ್ಟ ಚರಾಧಿಕಾರಿಗಳಿಂದಲೂ ತರಿಸಿಕೊಳ್ಳತಕ್ಕದ್ದು.

೨. ಆಯಾಯ ಇಲಾಖೆಯ ಪ್ರಾಂತಗಳಲ್ಲಿ ಜಗದ್ಗುರುಗಳು ಸಂಚಾರಮಾಡಿ ದರವಂದು ಪ್ರಾಂತದಲ್ಲಿ ಚಂದಾ ವಸೂಲಿ ಮಾಡಿ ಫಂಡನ್ನು ಕೂಡಿಸಿ ಅಲ್ಲಲ್ಲಿ ಧರ್ಮಸಂಸ್ಥೆಗಳನ್ನು ಸ್ಥಾಪಿಸಿ ಆ ಸಂಸ್ಥೆಯ ಮತಿಯಿಂದ ದರವಂದು ತಾಲೂಕಿನಲ್ಲಿ ಒಂದು ಅಥವಾ ಎರಡು ಸಂಸ್ಕೃತ ಮತ್ತು ಕಾನಡೀಯ ಎಸ್ತೆಗಳ ಪಾಠಶಾಲೆಗಳನ್ನು ಇಡಿಸುವದು ಅದಕ್ಕೆ ತಕ್ಕ ನಿಯಮಗಳನ್ನು ಸರ್ವಾನುಮತದಿಂದ ಪಾಸ ಮಾಡಿಸಿ ಅದರಂತೆ ಪ್ರವರ್ತಿಸುವದು, ಅದರ ವ್ಯವಸ್ಥೆಯನ್ನಾದರೂ ಪಟ್ಟ ಚರಾಧಿಕಾರಿಗಳು, ಮಠಾಧಿಕಾರಿಗಳು ಮಾಡಲಿಕ್ಕೆ ಬೇಕು.

೩. ಗ್ರಂಥಾಗಾರವನ್ನು ಸ್ಥಾಪಿಸಿ, ಧರ್ಮ ಗ್ರಂಥಗಳನ್ನು ಅಂದರೆ ಶ್ರುತಿ, ಸ್ಮೃತಿ, ಉಪನಿಷತ್ತುಗಳು, ಶಿವಾಗಮಗಳು, ವ್ಯಾಸೋಕ್ತ ಶಿವಪುರಾಣಗಳು, ಮತ್ತು ಭಾಷ್ಯಗಳು ಇವುಗಳನ್ನು ಪ್ರಯತ್ನದಿಂದ ದೊರಕಿಸಿ ಗ್ರಂಥಭಾಂಡಾಗಾರದಲ್ಲಿರಿಸುವದು.

೪. ಮಠಾಧಿಕಾರಿಗಳು, ಮತ್ತು ಪಟ್ಟ ಚರಾಧಿಕಾರಿಗಳು, ಪ್ರತಿಯೊಂದು ಗ್ರಾಮದಲ್ಲಿ ಭಕ್ತರ ಮನೆಗಳ ತಪಶೀಲ ಮಾಡಿ, ಯಾವ ಭಕ್ತರ ಮನೆಯಲ್ಲಿ ಆಬಾಲ ವೃದ್ಧರು ಸಹ ಲಿಂಗಾಂಗ ಸಂಗಿಯಾಗಿರುವರೋ ಇಲ್ಲವೋ ಎಂಬುದನ್ನು ನೋಡಿ, ಅವರಿಗೆ ಧರ್ಮತತ್ವಗಳನ್ನು ಬೋಧಮಾಡಿ ಯಾವಾಗಲೂ ಲಿಂಗವನ್ನು ಅಂಗದಿಂದಗಲಿಸಬಾರದೆಂದೂ ಸ್ನಾನವಿಲ್ಲದೆ ಶಿವಾರ್ಚನಮಾಡಬಾರದೆಂದೂ, ಶಿವಾರ್ಚನೆಯಿಲ್ಲದೆ ಭೋಜನ ಮಾಡಕೂಡದೆಂದೂ, ಭವಿಗಳು ತೊಳೆದು ತಂದ ಅರಿವೆಗಳನ್ನು ಮಡಿಯಾಗಿ ತೊಡಬಾರದೆಂದೂ ಈ ಮುಂತಾದ ಧರ್ಮಾಚರಣೆಗಳನ್ನು ಹೇಳಿ, ಅವುಗಳ ರಿಪೋರ್ಟನ್ನು ಮಠದವರು ಪಟ್ಟ ಚರಾಧಿಕಾರಿಗಳ ಕಡೆಗೆ ಕಳಿಸಿ ಅವರು ಇವರ ಮೇಲ್ವಿಚಾರಣೆಯನ್ನು ಎಂಟು ದಿವಸಕ್ಕೊಮ್ಮೆ ದರವಂದು ಗ್ರಾಮಕ್ಕೆ ಬಂದು ನೋಡಲಿನಂತೆ ತಪಶೀಲ ಮಾಡಿ ಸಾಯಂಕಾಲ ವೇಳೆಯಲ್ಲಿ ಸಭೆಯನ್ನು ಕೂಡಿಸಿ ಉಪನ್ಯಾಸ ಮೂಲಕ ಭಕ್ತರಿಗೆ ಧರ್ಮ ತತ್ವಗಳನ್ನು ನೀತಿ ಆಚರಣೆ ಮುಕ್ತಿ ಮಾರ್ಗವನ್ನು ಬೋಧಿಸಿ ಅವುಗಳ ರಿಪೋರ್ಟನ್ನು ಪೀಠಾಧಿಕಾರಿಗಳ ಕಡೆಗೆ ಕಳಿಸಬೇಕೆಂತಲೂ ಪೀಠಾಧಿಕಾರಿಗಳು ಅವುಗಳಿಗೆ ತಕ್ಕ ಉತ್ತರವನ್ನು ಕೊಟ್ಟು ಅದರಂತೆ ಜಾರಿ ಮಾಡುವದಕ್ಕೆ ಆಗಾಗ್ಗೆ ಪೀಠದಿಂದ ದರವಂದು ಗ್ರಾಮಗಳಿಗೆ ಹುಕುಮನ್ನು ಕೊಡಬೇಕು. ಮತ್ತು ಅವರ ಕಡೆಯಿಂದ ವರ್ಷಾಸನ ತರಿಸಿಕೊಳ್ಳಬೇಕು. ಭಕ್ತರಿಗೆ ದೀಕ್ಷಾ ವಗೈರೆ ವೀರಶೈವ ಷೋಡಶಕರ್ಮಗಳನ್ನೆಲ್ಲಾ ವಿಧ್ಯುಕ್ತ ಪ್ರಕಾರ ಸಂಸ್ಕಾರ ಮಾಡಬೇಕೆಂತಲೂ ಹುಕುಂ ಕೊಡುವದು.

೫. ವೀರಶೈವ ಧರ್ಮ ತತ್ವಗಳನ್ನು ಭಕ್ತನಾದವ ತ್ರ ರದ ಪಟುಗಳ ಮೊದಲು ಅಭ್ಯಾಸ ಮಾಡಿದನಂತರ ಎರಡನೇ ವಿದ್ಯಾ ಉಪಯೋಗಗಳನ್ನು ಕಲಿಯಬೇಕೆಂತಲೂ ಮತ್ತು ನಮ್ಮ ವೀರಶೈವ ಸ್ತ್ರೀಪುರುಷರೆಲ್ಲರು ವಿದ್ಯಾವಂತರಾಗಿ ಶಾಸ್ತ್ರೀಯ ಪರೀಕ್ಷೆ, ಸರಕಾರಿ ಪ್ರತಿನಿಧಿಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗುವದಲ್ಲದೆ, ಎಲ್ಲಾ ಕಲಾಕೌಶಲ್ಯಗಳನ್ನು ಕಲಿಯುವುದು. ಶಾಲೆಗಳಲ್ಲಿ ವೈದಿಕಧರ್ಮ ಶಿಕ್ಷಣವನ್ನು ಕೊಡುವಂಥ ಒಬ್ಬ ಶಿಕ್ಷಕನನ್ನು ನೇಮಿಸುವದು.

೬. ಗೋ ಸಂರಕ್ಷಣೆ ಮಾಡುವದು, ತನ್ಮೂಲಕ ಪಂಚ ಗೋಮಯದಿಂದ ಪಂಚ ವಿಭೂತಿಗಳನ್ನು ತಯಾರಿಸುವದು, ಮತ್ತು ಪಂಚ ಸೂತ್ರದ ಲಿಂಗಗಳನ್ನು ತಯಾರಿಸುವ ಕಾರ್ಖಾನೆಯನ್ನೇರ್ಪಡಿಸುವದು, ನಂತರ ಈಗಲೂ ನಿತ್ಯಬಳಸುತ್ತಿರುವ ಅಶಾಸ್ತ್ರೀಯ ಭಸ್ಮ ಲಿಂಗಾದಿಗಳನ್ನು ಬಂದ ಮಾಡಿಸುವದು.

(೪ನೇ ಪುಟವನ್ನು ನೋಡಿರಿ)

ಪಂಚಾಚಾರ್ಯಪ್ರಭಾ

೧೯೩೭ನೇ ಜುಲೈ ತಾ|| ೧೮ನೇ ಸೋಮವಾರ

ಬನವಾಸಿಪ್ರಕರಣ

ಉತ್ತರಕಾನಡಾ ಜಿಲ್ಲೆಯೊಳಗೆ ಪೂರ್ವದಲ್ಲಿ ಹುಜೂರು ಡೆಪ್ಯುಟಿಕಲೆಕ್ಟರರಾಗಿದ್ದ ಜವುಡಯ್ಯ ದಾಸಪ್ಪರವರ ಶ್ರೀಶಾಂತವೀರ ಒಡೆಯರವರು ಅಂದಾಜು ಈಗ ಮೂರುವರ್ಷಗಳ ಹಿಂದೆ ಸಿರಸಿ ತಾಲೂಕು ಸ್ಥೈಕಿ ಬನವಾಸಿ ಎಂಬ ಗ್ರಾಮದಲ್ಲಿ ಸುಪ್ರಸಿದ್ಧವಾದ ಮಧುಕೇಶ್ವರನ ದರ್ಶನಾರ್ಥವಾಗಿ ಹೋಗಿದ್ದರು. ಸದರಿ ಇವರು ಗರ್ಭಗೃಹದ ಮುಂದಣ ಶುಕನಾಸಿಯ ಮುಂಭಾಗದ ಅಂಗಣದವರೆವಿಗೂ ಒಳಗೆ ಪ್ರವೇಶಿಸಿದರೆಂದೂ, ವೀರಶೈವರು ಬ್ರಾಹ್ಮಣರಲ್ಲವೆಂದೂ ದೇವಸ್ಥಾನದೊಳಗೆ ಪ್ರವೇಶಿಸುವ ಹಕ್ಕು [illegible] ಬ್ರಾಹ್ಮಣರಿಗೆ ಹೊರತು ಇತರರಿಗೆ ಇಲ್ಲವೆಂದೂ, ಇವರು ಒಳಗೆ ಪ್ರವೇಶಮಾಡಿದುದರಿಂದ ದೇವರು ಅಶುದ್ಧನಾಗಿರುವನೆಂದೂ ದೇವತಾಶುದ್ಧಿಗಾಗಿ ೩೨೫ ರೂಪಾಯಿಗಳು ಖರ್ಚಾಗಿರುವುದರಿಂದ ಸದರಿ ಹಣವನ್ನು ಕೊಡಿಸಿಕೊಡಬೇಕೆಂದೂ ಕೆಲಸ್ಮಾರ್ತರು ಸಿರಸಿ ಸಬ್ ಜಡ್ಜ ಕೋರ್ಟಿನಲ್ಲಿ ದಾವಾಮಾಡಿರುವುದು ಜಗತ್ತಿಗೆಲ್ಲ ವಿದಿತವಾಗಿದೆಯಷ್ಟೆ. ಈ ಸಂಬಂಧವಾಗಿ ಈವರೆವಿಗೂ ವೀರಶೈವರಪರವಾಗಿಯೂ, ಸ್ಮಾರ್ತರಪರವಾಗಿಯೂ ಕೊಪ್ಪಳ, ಹಾವೇರಿ, ಬಿಜಾಪುರ, ಹುಬ್ಬಳ್ಳಿ, ಹೊಸಪೇಟೆ, ಧಾರವಾಡ, ರಾಜಮಹೇಂದ್ರ ಮುಂತಾದ ಉಭಯಪಂಗಡದ ಶಾಸ್ತ್ರಿಗಳ ಮತ್ತು ಸ್ವಾಮಿಗಳ ಸಾಕ್ಷಿಗಳು ಕಮಿಷನ್ನಿನಮೂಲಕ ನಡೆಯುತ್ತ ಬಿಟ್ಟು ಕಳೆದ ಜೂನ 13 ನೇ ತಾರೀಖಿನ ದಿನದಿಂದ ಸಿರಸಿ ಕೋರ್ಟಿನಲ್ಲಿ ವಿಚಾರಣೆಯು ಪ್ರಾರಂಭವಾಗಿದೆ. ವಾದಿಗಳಪರವಾಗಿ ಕೂಡಲಿ ಮೊದಲಾದ ಸ್ಮಾರ್ತಮತದ ಆಚಾರ್ಯರುಗಳೂ, ಪ್ರತಿವಾದಿಗಳ ಪರವಾಗಿ ರಾ|| ಸಾ|| ಹಳಕಟ್ಟಿ, ರಾ|| ಸಾ|| ಎಸ್. ಎಸ್. ಪಾಟೀಲ, ರಾ|| ಸಾ|| ಸರ್ದಾರು ಸದಾಶಿವಪ್ಪನವರು, ವೇ|| ಚನ್ನವೀರಒಡೆಯರ್ ಮುಂತಾದ ವಕೀಲರವರೂ ನಿಂತುಕೊಂಡು ಕೇಸುನಡೆಸುತ್ತಲಿದ್ದಾರೆ. ಸ್ಮಾರ್ತರಕಡೆಯಿಂದ 70-80 ಸಾಕ್ಷಿಗಳೂ, ವೀರಶೈವರಕಡೆಯಿಂದ ನೂರಾರು ಸಾಕ್ಷಿಗಳು ನಡೆಯಬೇಕಾಗಿದ್ದು ಈಗ ಸ್ಮಾರ್ತರ ಸಾಕ್ಷಿವಿಚಾರಣೆಯು ಇದೇತಿಂಗಳ 15ರ ವರೆವಿಗೂ ನಡೆಯುವೆಂದೂ ಅಲ್ಲಿಂದ ವೀರಶೈವವೈದಿಕರ ಸಾಕ್ಷಿಗಳು ನಡೆಯುವವೆಂದೂ ಕೇಳುತ್ತೇವೆ. ಉಭಯಪಂಗಡಗಳಲ್ಲಿರುವ ಮುಖಂಡರುಗಳನ್ನು ಒಬ್ಬರಿಗೊಬ್ಬರು ಎತ್ತಿಹಾಕುವುದರಿಂದ ಪ್ರತಿದಿವಸವೂ ಕೋರ್ಟು ನಾನಾಜಾತಿ ಜನಗಳಿಂದ ನಿಬಿಡೀಕೃತವಾಗುತ್ತಲಿದೆಯಂತೆ. ಈ ಕೋಲಾಹಲವನ್ನು ನೋಡುವುದಕ್ಕೆ ಪರಸ್ಥಳದಿಂದಲೂ ಅನೇಕರು ಹೋಗುತ್ತಲಿದ್ದಾರೆಂದೂ ಕೇಳುತ್ತೇವೆ. ಈವರೆವಿಗೂ ಉಭಯಪಕ್ಷದವರಿಗೆ ಹತ್ತಾರುಸಾವಿರ ರೂಪಾಯಿಗಳವರೆವಿಗೂ ಖರ್ಚಾಗಿರುವುದಲ್ಲದೆ ಈಗಣ ಉಭಯರ ಆವೇಶಗಳನ್ನು ನೋಡಿದರೆ ಕೇಸು ಮುಗಿಯುವುದರೊಳಗಾಗಿ ನಲವತ್ತು ಐವತ್ತುಸಾವಿರದವರೆವಿಗೂ ವ್ಯಯವಾಗಬಹುದೆಂದು ಊಹಿಸುತ್ತೇವೆ.

ಸರ್ವರೂ ಭಾರತಮಾತೆಯ ಗರ್ಭಾಂಬುಧಿಯಲ್ಲಿ ಜನಿಸಿದುದರಿಂದ ಭಾರತೀಯರೆಲ್ಲರೂ ಪರಸ್ಪರ ಸೌಹಾರ್ದಭಾವವನ್ನು ತೋರಿಸುವುದು ಅವಶ್ಯಕವಿದ್ದರೂ ಸೌಹಾರ್ದಕ್ಕೆ ತರ್ಪಣವನ್ನು ಕೊಟ್ಟು ಒಬ್ಬರಿಗೊಬ್ಬರು ದ್ವೇಷಿಸುವುದಕ್ಕೆ ಉಪಕ್ರಮಿಸಿರುವುದನ್ನು ನೋಡಿದರೆ ನಮ್ಮ ಭಾರತಮಾತೆಯ ಪುಣ್ಯಪ್ರಭಾವವನ್ನು [illegible] ಶೂದ್ರರು ಗರ್ಭಗೃಹವನ್ನು ಪ್ರವೇಶಮಾಡಿದರೆ ದೇವರು ಅಶುದ್ಧನಾಗುವನೆಂದಿದ್ದರೂ ಗರ್ಭಗೃಹದಮುಂದಣ ಶುಕನಾಸಿಯೆಂಬ ಸ್ಥಾನವನ್ನು ಪ್ರವೇಶಮಾಡಿದರೆ ಒಳಗಿರುವ ದೇವರು ಅಶುದ್ಧನಾಗುವನೆಂಬ ಮಾತು ಕೇವಲ ನಿರಾಧಾರವಾದುದೆ ಹೊರತು ಸಯುಕ್ತಿಕವಾಗಿ ಕಾಣುವುದಿಲ್ಲವು. ಶೂದ್ರರು ದೇವರು ಇರುವ ಸ್ಥಾನವನ್ನು ಪ್ರವೇಶಿಸದಿದ್ದರೂ ಮುಂಭಾಗದಲ್ಲಿ ಪ್ರವೇಶಿಸಿದ ಮಾತ್ರದಿಂದ ದೇವರು ಅಶುದ್ಧನಾಗುವನೆಂದು ಹೇಳುವುದಕ್ಕಿಂತಲೂ ಶೂದ್ರರಿಗೆ ದೇವರದರ್ಶನವೂ ದೊರಕಬಾರದು ಇಲ್ಲವೇ ಇಲ್ಲವೆಂದು ಹೇಳುವುದು ಉತ್ತಮವಾಗಿ ಕಾಣುತ್ತದೆ. ಹಾಗಾದರೆ ದೇವರು ಬ್ರಾಹ್ಮಣರ ದರ್ಶನ ಬ್ರಾಹ್ಮಣರ [illegible]ಯನ್ನು ಮಾತ್ರ ತೆಗೆದುಕೊಳ್ಳುತ್ತಾನೆಯೇ ಹೊರತು ಇತರರನ್ನು ದೇವರು ಕಣ್ಣೆತ್ತಿಯೂ ನೋಡುವುದಿಲ್ಲವೆಂದು ಹೇಳಿದಂತೆ ಆಗುತ್ತದೆ. ಇಂಥಹ ಭಾವನೆಗಳಿಲ್ಲವೊ ನಮ್ಮ ಹಿಂದುಗಳಲ್ಲಿ ರೂಢವಾಗಿರುವುದರಿಂದಲೇ ಭರತಖಂಡವು ಇಷ್ಟು ಹೀನಸ್ಥಿತಿಯನ್ನು ಅನುಭವಿಸುತ್ತಲಿದೆ. ದಕ್ಷಿಣಕಾಶಿ ಎಂದು ಪ್ರಸಿದ್ಧವಾದ ನಂಜನಗೂಡು, ಮಧುಕೇಶ್ವರ ಮುಂತಾದ ಮಹಾ ಮಹಾಕ್ಷೇತ್ರಗಳಲ್ಲಿ ದೇವರದರ್ಶನಾರ್ಥವಾಗಿ ಶುಕನಾಸಿ ಯವರೆವಿಗೆ ಸ್ಪೃಶ್ಯರಾದ ಸಕಲವರ್ಣದವರೂ ಪ್ರವೇಶಮಾಡುತ್ತಲಿದ್ದಾರೆ. ಉತ್ತರದೇಶದ ಕಾಶಿ ಮುಂತಾದ ದಿವ್ಯಕ್ಷೇತ್ರಗಳಲ್ಲಂತೂ ಬ್ರಾಹ್ಮಣಾದಿಯಾಗಿ ಶೂದ್ರಪರ್ಯಂತವೂ ಸಕಲವರ್ಣದವರೂ ಗರ್ಭಗೃಹದ ಒಳಗೂ ಪ್ರವೇಶಮಾಡುತ್ತಾರೆ. ದೇವರಿಗೆ ತಮ್ಮ ತಮ್ಮ ಹಸ್ತಗಳಿಂದಲೇ ಅಭಿಷೇಕವನ್ನು [illegible] ಇಲ್ಲಿರುವುದಿಲ್ಲವ ದೇವರು ಪ್ರಸನ್ನನಾಗಿ [illegible] ಇಂಥಹ ಶ್ರೇಷ್ಠವಾದ ದರ್ಶನಾಪೇಕ್ಷೆಯು [illegible] ಹುಟ್ಟುತ್ತಲೇ ಹೋಗುವುದು. ದಕ್ಷಿಣದೇಶದಲ್ಲಿ ಮಾತ್ರ [illegible] ದೇವರಲ್ಲಿಯೂ [illegible] ದೇವರನ್ನು ತಮ್ಮ ಜಾತಿಯಲ್ಲಿ ಸೇರಿಸಿಕೊಂಡಿರುತ್ತಾರೆ. ಈ ಕೇಸಿನಲ್ಲಿ ವೀರಶೈವರು ಶೂದ್ರಕೋಟಿಗೆ ಸೇರಿದವರು [illegible] ಒಳಗೆ ಪ್ರವೇಶಿಸುವ ಹಕ್ಕು ಇಲ್ಲವೆಂದು ಸ್ಮಾರ್ತರು ವೀರಶೈವರ ಮೇಲೆ ತಂದಿರುವ ದಾವೆಯು ಸರ್ವಥಾ ಅಸಮಂಜಸವಾದುದು. ಅವರು [illegible] ಶಾಸ್ತ್ರಗಂಧವು ಇಲ್ಲದುದರಿಂದಲೇ ಇಂಥಹ ಅನಾಗರಿಕದಲ್ಲಿ ಕಾಲಿಟ್ಟಿರುತ್ತಾರೆ. ಇದು ಕೇವಲ ವಿಷಾದಾಸ್ಪದವಾದುದು.

ಸ್ಮಾರ್ತವೈಷ್ಣವಾದಿಮತಗಳು ವೇದಾಗಮಗಳ ಆಧಾರದ ಮೇಲೆ ಹುಟ್ಟಿರುವಂತೆ ವೀರಶೈವ ಮತವೂ ವೇದಾಗಮಗಳ ಮೂಲಕವಾಗಿಯೇ ಹುಟ್ಟಿರುವುದು. ಎಲ್ಲಾ ವೈದಿಕಮತಗಳಲ್ಲಿಯೂ ಚತುರಾಶ್ರಮಗಳೂ ಚತುರ್ವರ್ಣಗಳೂ ಇರುವಂತೆ ಈ ವೀರಶೈವ ಮತದಲ್ಲಿಯೂ ಇದ್ದೇ ಇರುವವು. ಶ್ರೀಯುತ ಜವುಡಯ್ಯ ದಾಸಪ್ಪನವರ ಶಾಂತವೀರ ಒಡೆಯರವರು "ಅನೇಕ ತತ್ತ್ವತರ್ಪಣ[illegible]ದೇ' ಎಂದು ಶಿವಾಗಮದಲ್ಲಿ [illegible] ಅಭ್ಯಾಸಮಾಡಿದ್ದರೂ ಶಿವದೀಕ್ಷೆಹೊಂದಿಲ್ಲದ ಬ್ರಾಹ್ಮಣನು ಲಿಂಗವನ್ನು ಮುಟ್ಟಲೇಕೂಡದು. ಒಳಗೆ ಪ್ರವೇಶಿಸಲೂಕೂಡದೆಂದು ಹೇಳಿದಂತೆ ವಿಶುದ್ಧಶೋಧನಾಪೂರ್ವಕ ಶಿವದೀಕ್ಷೆಯನ್ನೇ ನ್ಯಾಯಾಧಾರವನ್ನಾಗಿ ತಿಳಿದಿರುವ ಅತ್ಯಂತ ಪರಿಶುದ್ಧನಾದ ಲಿಂಗಿಬ್ರಾಹ್ಮಣವಂಶದಲ್ಲಿ ಹುಟ್ಟಿ ಗುರುಶಾಖೆಗೆ ಒಳಪಟ್ಟಿದ್ದರೂ ಕೆಲಸ್ಮಾರ್ತರು ತಲೆಗಟ್ಟೆ ಒಂದೇ ಶಾಸ್ತ್ರವೆಂಬ ಗಾದೆಗನುಸಾರವಾಗಿ ತರ್ಕಕ್ಕೆ ಹೇಳದ ವಿಧಿಯನ್ನು ಸೀಮಾಂತಕ್ಕೆ ಪ್ರಯೋಗಿಸಿದ ಮಹಾಪಂಡಿತನಂತೆ ಲಿಂಗಧಾರಿಗಳನ್ನೆಲ್ಲಾ ಶೂದ್ರಕೋಟಿಯಲ್ಲಿ ಸೇರಿಸಿ ಬೀಗಿ ಕಲಹವನ್ನೆಬ್ಬಿಸಿ ತಮ್ಮ ಸಂಕುಚಿತ ಬುದ್ಧಿಯನ್ನು ಪ್ರದರ್ಶನ ಮಾಡಿದ್ದಾರೆ

ಮತ್ಸ್ಯಪುರಾಣ ಪ್ರಸಿದ್ಧಗಳಾದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಸೇರಿದ ಹಿಮವತ್ಕೇದಾರದಲ್ಲಿ ಪ್ರಸಿದ್ಧವಾದ ಕೇದಾರೇಶ್ವರ ಲಿಂಗವು ವೀರಶೈವ ಮತಸ್ಥಾಪನಾಚಾರ್ಯರಲ್ಲಿ ಒಬ್ಬರಾದ ಏಕೋರಾಮಾರಾಧ್ಯರ ಅಧಿಪತ್ಯದಲ್ಲಿಯೇ ಇದ್ದು ಜಂಗಮರದ್ವಾರಾ ಪೂಜೆಯನ್ನು ತೆಗೆದುಕೊಳ್ಳುತ್ತಿರುವುದು. ಅದೇ ಜ್ಯೋತಿರ್ಲಿಂಗಗಳಲ್ಲಿ ಸೇರಿದ ಶ್ರೀಶೈಲದ ಮಲ್ಲಿಕಾರ್ಜುನ ಲಿಂಗವೂ ಕೂಡ ವೀರಶೈವಮತಸ್ಥಾಪನಾಚಾರ್ಯರಲ್ಲಿ ಒಬ್ಬರಾದ ಪಂಡಿತಾರಾಧ್ಯರ ಅಧಿಪತ್ಯಕ್ಕೆ ಸೇರಿರುವುದಲ್ಲದೆ ಅದ್ಯಾಪಿ ಜಂಗಮರಿಂದಲೇ ಪೂಜೆಯನ್ನು ತೆಗೆದುಕೊಳ್ಳುತ್ತಲಿದೆ. ಪೂರ್ವದಲ್ಲಿ ಕಾಶೀವಿಶ್ವನಾಥಲಿಂಗದ ಪೂಜೆಯೂ ಜಗದ್ಗುರು ವಿಶ್ವಾರಾಧ್ಯರ ಅಧಿಪತ್ಯದಲ್ಲಿದ್ದು ಕೆಲವುಕಾಲಗಳಿಂದ ಸ್ಮಾರ್ತರ ಅಧಿಪತ್ಯಕ್ಕೆ ಸೇರಿದ್ದರೂ ಅಸ್ಪೃಶ್ಯರ ವಿನಾ ಮಿಕ್ಕ ಹಿಂದುಗಳೆಲ್ಲರಿಗೂ ಸ್ಪರ್ಶಾಧಿಕಾರವು ಜಗತ್ಪ್ರಸಿದ್ಧವಾಗಿದೆ. ಈ ವಿಷಯವನ್ನು ತಿಳಿದಿದ್ದರೂ ಶ್ರೀ ಶಾಂತವೀರ ಒಡೆಯ[illegible] ಮೇಲೆ ಗಲಾಟೆಯನ್ನು ತಂದಿರುವುದು ವೀರಶೈ[illegible]ಗೆಲ್ಲ ಅತ್ಯಂತ ಖೇದಾಸ್ಪದವಾಗಿದೆ. ಆದರಲ್ಲಿ [illegible] ವಾಸಿಯಲ್ಲಿರುವ ಶ್ರೀ ಮಧುಕೈಟಭೇಶ್ವರ ಲಿಂಗ[illegible] ವೀರಶೈವಕ್ಷತ್ರಿಯರೆನಿಸಿದ ಸ್ವಾದಿರಾಜರ ಕುಲದ[illegible] ಎಂದು ಇತಿಹಾಸ ಪ್ರಸಿದ್ಧವಾಗಿರುತ್ತದೆ. ಅಂತ[illegible] ವೀರಶೈವಕ್ಷತ್ರಿಯರಾದ ಸ್ವಾದಿರಾಜರವರಿಗೆ ಗು[illegible]ಗಳೆನಿಸಿದ ವೀರಶೈವ ಮತಸ್ಥಾಪನಾಚಾರ್ಯರವಂಶ[illegible] ಕ್ರಮವಾಗಿ ಬಂದ ಶ್ರೀ ಶಾಂತವೀರ ಒಡೆಯರು [illegible] ಮಧುಕೇಶ್ವರನ ದರ್ಶನಾರ್ಥವಾಗಿ ಗರ್ಭಗೃಹಕ್ಕೆ ಪ್ರವೇಶಮಾಡುವ ಅಧಿಕಾರವು ಸಂಪೂರ್ಣವಾಗಿದ್ದ[illegible] ಲೌಕಿಕಾಧಿಕಾರಶೂನ್ಯರಾದುದರಿಂದ ದೇವರು ಇದ್ದ ಸ್ಥಾನಕ್ಕೂ ಕೂಡ ಪ್ರವೇಶಿಸದೆ ಎಲ್ಲರಂತೆ ಶುಕನಾಸಿ ಎಂಬ ಸಾರ್ವಜನಿಕಸ್ಥಾನವನ್ನು ಪ್ರವೇಶಮಾಡಿ[illegible] ಮಾತ್ರದಿಂದ ಸ್ಮಾರ್ತರು ವೀರಶೈವಮತಸಾಮಾನ್ಯ[illegible] ಬ್ರಾಹ್ಮಣತ್ವಕ್ಕೆ ಬಾಧೆಯನ್ನು ಮಾಡಿ ಈ ಸಮಾಜಕ್ಕೆ ಕಳಂಕವನ್ನು ಉಂಟುಮಾಡುವುದಕ್ಕೆ ತೊಡಗಿರುವುದು [illegible] ಅನ್ಯಾಯವಾದುದು. ಮಹಾತ್ಮಾ ಗಾಂ[illegible] ಪಂಡಿತ ಮಾಳವೀಯ ಮುಂತಾದ ಪ್ರಸಿದ್ಧರಾದ ದೇ[illegible]ಭಕ್ತರು ಹಿಂದೂದೇಶದಲ್ಲಿ ಬಹುಕಾಲದಿಂದ ಕಾಲು[illegible] ರಿತಿರುವ ಮಹಾನರ್ಥಕಾರಿಗಳಾದ ಪರಸ್ಪರದ್ವೇಷಭಾವನಗಳನ್ನೆಲ್ಲಾ ಹೋಗಲಾಡಿಸಿ ಸರ್ವರೂ ಭಾರತಮಾತೆಯ ಪುತ್ರರೆಂಬ ಅಭಿಮಾನವನ್ನು ಹುಟ್ಟಿಸುವದಕ್ಕೋ[illegible] ಸ್ಕರ ಸಮಯಗಳನ್ನೆಲ್ಲ ಹಗಲುರಾತ್ರಿಯಲ್ಲಿಯೂ ಶ್ರಮಪಡುತ್ತಿರುವುದನ್ನು ಸರ್ವರೂ ನೋಡುತ್ತಿರುವದಲ್ಲದೆ ತಾವುಕೂಡಾ ಇದೇ ಚಳವಳಿಯಲ್ಲಿ ಸೇರಿದ್ದರೂ ಇದೆಲ್ಲವನ್ನೂ ಮರೆತು ಕೆಲವರು [illegible]ಗಳಂತೆ ಪೂರ್ವದ್ವೇಷವನ್ನೇ ಸಾಧಿಸುತ್ತಿರುವುದನ್ನು ನೋಡಿದರೆ [illegible] ಮತ್ತು ಬ್ರಾಹ್ಮಣರಾದವರು ತಮ್ಮ [illegible] ಸ್ಥಾನಗಳಲ್ಲಿ ತತ್ಪರರಾಗಿ ವೇದ ವೇದಾಂಗಾದಿಗಳನ್ನು ವಿಚಾರಮಾಡುತ್ತ ದೈವೀಸಂಪತ್ತಿನಿಂದನ್ನೇ ಮುಖ್ಯವಾಗಿಟ್ಟುಕೊಂಡು ಸಕಲ ಪಂಗಡದವರಿಗೂ ಪರಮಾತ್ಮನ ತತ್ವವನ್ನು ತಿಳಿಸುವ ಸ್ವಭಾವವುಳ್ಳವರಾದುದರಿಂದಲೇ ಸಕಲ ಪಂಗಡದವರೂ ಅವರನ್ನು ಗೌರವಿಸುತ್ತಾರೆಯೇ ಹೊರತು ಈಗಿನಂತೆ ಕೇವಲ ಪಟಾಟೋಪವನ್ನು ಮಾಡುತ್ತಿದ್ದರೆ ಗೌರವವು ಎಂದಿಗೂ ಸಿಗುತ್ತಿರಲಿಲ್ಲವು. ಇತ್ತೀಚೆಗೆ ಅನೇಕರು ಇವರು ಶೂದ್ರರು, ಇವರು ಅಂತ್ಯಜರು, ಇವರು ದೇವರನ್ನು ನೋಡಕೂಡದು, ಇವರು ವೇದವನ್ನು ಕೇಳಕೂಡದು, ಅಕಸ್ಮಾತ್ ಒಂದುವೇಳೆ ಕೇಳಿದರೆ ಅವನಕಿವಿಗೆ ಸೀಸವನ್ನು ಕಾಯಿಸಿ ಹೊಯ್ಯಬೇಕು. ಮುಂತಾದ ಕೇವಲ ಬಾಹ್ಯಗಳಾದ ಶುಷ್ಕವಾದಗಳನ್ನು ಮಾತ್ರ ಜನಗಳಿಗೆ ಹೇಳುತ್ತಾ, [illegible] ಅಧಮವೃತ್ತಿಯನ್ನು ಅವಲಂಬಿಸಿದ್ದಾರೆ. ಯಾವಾಗಿರುವಾಗ ಅಂಥವರಲ್ಲಿ ಆಸ್ತಿಕ್ಯಬುದ್ಧಿಯು ಹುಟ್ಟುವುದು? ಹಿಂದೆ ಬ್ರಾಹ್ಮಣ್ಯಕ್ಕೆ ಮಹತ್ವವು ಉಂಟಾಗಬೇಕಾದರೆ ಅವರ ಶ್ರೇಷ್ಠವಾದ ಜನ್ಮವು ಕಾರಣವಲ್ಲದೆ ಅವರ ಯೋಗ್ಯತೆಯೂ ಕಾರಣವಾಗಿತ್ತು.

ಅಧಿಕಾರದಲ್ಲಿದ್ದ ಪುರುಷನಲ್ಲಿ ಸಾಮರ್ಥ್ಯವು ತೋರುವುದಲ್ಲದೆ ಅಧಿಕಾರವನ್ನು ಕಳೆದುಕೊಂಡವನಲ್ಲಿ ಯಾವ ಸಾಮರ್ಥ್ಯವೂ ತೋರುವುದಿಲ್ಲವು. ಅಂಥಹ ಸಾಮರ್ಥ್ಯವಿಲ್ಲದೆ ಆರ್ಭಟಿಸುತ್ತಿದ್ದರೆ ಅವರನ್ನು ಯಾರೂ ಲಕ್ಷ್ಯಕ್ಕೆ ತರಿಸುವುದಿಲ್ಲವು. ಆದುದರಿಂದ ಬ್ರಾಹ್ಮಣವಂಶದಲ್ಲಿ ಹುಟ್ಟಿದುದೂ ಅಲ್ಲದೆ ತನ್ನ ಬ್ರಾಹ್ಮಣ್ಯಸ್ಥಿರೀಕರಣವಾಗಬೇಕಾದರೆ ಪ್ರಥಮತಃ ಶಾಂತಿನಿಕೇತನವನ್ನು ಪ್ರವೇಶಮಾಡಿ ಜ್ಞಾನವಾಪಿಯಲ್ಲಿ ಸ್ನಾನಮಾಡಿ ಉಚ್ಚನೀಚಭಾವಗಳನ್ನು ಕಳೆಗಟ್ಟಿ ಬ್ರಾಹ್ಮೀತೇಜಸ್ಸಿನಲ್ಲಿ ಅಭಿಮುಖವಾಗಿದ್ದರೆ ಪ್ರಪಂಚವೇ ತನ್ನ ಸ್ವಾಧೀನವಾಗುವುದು. ಈಗ ಮಹಾತ್ಮಾ ಗಾಂಧಿಯವರು ಅಂಥಹ ಬ್ರಾಹ್ಮಣವಂಶದಲ್ಲಿ ಜನ್ಮವನ್ನು ಧಾರಣಮಾಡದಿದ್ದರೂ ಅವರ ಆತ್ಮವು ಅಪ್ರತಿಹತವಾದ ಶಾಂತಿರಸಕ್ಕೆ ಸಿಕ್ಕೀಪ ಸ್ಥಾನವಾಗಿರುವುದರಿಂದಲೂ, ಭಾರತಮಾತೆಯ ಗರ್ಭಾಂಬುಧಿಯಲ್ಲಿ ಜನ್ಮವೆತ್ತಿದ ಮಾನವಕೋಟಿಯಲ್ಲವೂ ಉತ್ತರೋತ್ತರ ಅಭಿವೃದ್ಧಿಯ ಗತಿಯನ್ನು ಆರೋ

ನವಾಡುವುದೇ ತಮ್ಮ ಮುಖ್ಯಧ್ಯೇಯವನ್ನಾಗಿ ಟ್ಟುಕೊಂಡು ದೃಢತರವಾದ ವೈರಾಗ್ಯವನ್ನು ಅವಲಂ ಸಿ ಸದಾಚಾರದಿಂದ ಕೂಡಿದವರಾದುದರಿಂದಲೂ ಪ್ರಪಂಚದಲ್ಲಿರುವ ರಾಜಾಧಿರಾಜರೂ ಕೂಡ ಮಹಾ ರವಿಷಯದಲ್ಲಿ ಕೈಂಕರ್ಯವನ್ನು ಅವಲಂಬಿಸುತ್ತಿದ್ದಾ ಇನ್ನು ಪರಿಶುದ್ಧವಾದ ಬ್ರಾಹ್ಮಣವಂಶದಲ್ಲಿಯೇ ಹುಟ್ಟಿ ತಮ್ಮ ಸಹಜಗುಣಗಳನ್ನು ಪಡೆದದ್ದರೆ "ವೇ ಪ್ರಶಸನಾಸ್ಪದಃ" ಎಂಬುಕ್ತಿಗನುಸಾರವಾಗಿ ನ್ನಕ್ಕೆ ಪರಿಮಳವುಂಟಾದಂತೆ ಅತ್ಯಂತಶ್ಲಾಘ್ಯವೆನಿಸು ರಲಿಲ್ಲವೆ?

ಪ್ರಕೃತದಲ್ಲಿ ಇತರ ವೈದಿಕಮತಗಳಂತೆ ಈ ವೀರ ವಮತವೂ ಅನಂತ ಶಾಖೆಗಳಿಂದೊಡಗೂಡಿರುವ ಂದು ವೈದಿಕಮತವಾಗಿದ್ದರೂ ಒಂದನ್ನು ಒಪ್ಪಿಕೊಂಡು ಹೀಗೆ ಹೋರಾಡುವುದು ಸ್ಮಾರ್ತಧರ್ಮಾನುಯಾ ಗಳಿಗುಚಿತವಲ್ಲವು. ತಮ್ಮ ಶಾಖೆಯೊಳಗೆ ಸೇರಿದ ಶೂ ನಮೇಲೂ ದ್ವೇಷಮಾಡದೆ ಪ್ರೀತಿಯನ್ನು ತೋರಿಸ ಕಿದ್ದರೂ ತಮ್ಮಂತೆ ಪ್ರಧಾನವಾದ ಬ್ರಾಹ್ಮಣ್ಯದಿಂ ಡಗೂಡಿದ ವೀರಶೈವರಮೇಲೆ ಹೀಗೆ ಕೆಲಸ್ಮಾರ್ತರು ವೇಷವನ್ನು ತೋರಿಸುವುದು ಅನುಚಿತವೇಸರಿ. ಪೂರ್ವ ಲದಲ್ಲಿ ಲಿಂಗ ಮತ್ತು ಜನಿವಾರ ಇವೆರಡೂ ಒಂದೇ ಧಿಕರಣದಲ್ಲಿದ್ದುದಲ್ಲದೆ ಪರಸ್ಪರ ಮೈತ್ರೀಭಾವವನ್ನು ತೋರಿಸುತ್ತಿದ್ದವು. ಮಧ್ಯದಲ್ಲಿ ಯಾವಮಹಾತ್ಮನಿಂದ ವೆರಡಕ್ಕೂ ಪರಸ್ಪರ ವೈಯಧಿಕರಣ್ಯವುಂಟಾಯಿತೋ ಳಿಯದಾಗಿದೆ. ಭಾರತಮಾತೆಯ ಗರ್ಭವಾಸವನ್ನು ನಾಡಿದವರೆಲ್ಲರೂ ದ್ವೇಷವನ್ನು ಮಾಡಬಾರದೆಂದು ಳುವಾಗ ಅದರಲ್ಲೂ ಒಂದೇ ಶ್ರುತಿದೇವಿಯಲ್ಲಿಯೇ ಹುಟ್ಟಿದ ವೀರಶೈವರಿಗೂ ಸ್ಮಾರ್ತಾದಿಗಳಿಗೂ ದ್ವೇಷ ಭಾವಗಳ ಸ್ಮರಣೆಯೇ ಕೂಡದು, ಹೀಗಿದ್ದರೂ ಕೆಲ ಸ್ಮಾರ್ತರು ವೀರಶೈವರಮೇಲೆ ಹೀಗೆ ದ್ವೇಷಿಸುವುದು ರ್ವಥಾ ಉಚಿತವಲ್ಲವು. ಹಿಂದೆ ಪತ್ರಿಕೆಯಲ್ಲಿಯೂ ಶೇಷವಾದ ವ್ಯಾಜ್ಯವೊಂದು ನಡೆಯಿತು, ಈಗ ಸಿರ ಯಲ್ಲಿ ನಡೆಯುತ್ತಿರುವುದು. ಹೀಗೆ ಮೇಲಿಂದಮೇಲೆ ರಶೈವರಿಗೂ ಸ್ಮಾರ್ತರಿಗೂ ಪ್ರಜ್ವಲಿಸುತ್ತಿರುವ ್ವೇಷಾಗ್ನಿಯನ್ನು ಯಾವ ಮಹಾನುಭಾವನು ಆರಿಸು ನೋ ನೋಡಬೇಕು.

ಒಳದೇಶದ ವೃತ್ತಾಂತಗಳು.

ಮಹಾತ್ಮಾ ಗಾಂಧಿಯವರು ಇದೇ ತಿಂಗಳು ತಾ|| ೯ರ ಪ್ರಾತಃಕಾಲ ಮೈಸೂರುರಾಜಧಾನಿಗೆ ಆಗಮಿ ದರು.

ಬೆಂಗಳೂರು ಶಾರದಾ ಸ್ತ್ರೀಸಮಾಜದವರು ಮಹಾ ರ ಧರ್ಮಪತ್ನಿಯವರಾದ ಶ್ರೀಮತಿ ಕಸ್ತೂರಿಬಾ ಯವರನ್ನು ಬರಮಾಡಿಕೊಂಡು ಮಹಾತ್ಮರ ಖಾದಿ ಂಡಿಗಾಗಿ ಕಾಣಿಕೆಯನ್ನೊಪ್ಪಿಸಿದರು.

ರಾಜಧಾನಿಯ ಟೌನ್ ಹಾಲಿನ ಪ್ರವಾಸದಲ್ಲಿ ಈ ಂಗಳು ತಾ|| 12 ರಲ್ಲಿ ಬೀಹಾರಿನ ಬಾಬುರಾಜೇಂದ್ರ ್ರಸಾದರವರೂ, ಅಹಮ್ಮದಾಬಾದಿನ ಶಂಕರರಾವ್ ್ಯಂಕರ್ ರವರೂ ಖಾದಿಯ ಪರವಾಗಿ ಒಂದು ಉಪ ್ಯಾಸವನ್ನು ಮಾಡಿದರು.

ಮಹಾತ್ಮಾ ಗಾಂಧಿಯವರೂ, ಪಂಡಿತ ಮದನ ೋಹನ ಮಾಲವೀಯರವರೂ ಯಲಹಂಕದಲ್ಲಿರುವ ಂಚಿನಕಾರ್ಖಾನೆಯನ್ನು ನೋಡಿ ಸಂತೋಷಪಟ್ಟರ ೆ ಅಲ್ಲಿಯವರಿಂದ ಸಮರ್ಪಿಸಲ್ಪಟ್ಟ 500 ರೂಪಾಯಿ ನ್ನು ಸಂತೋಷದಿಂದ ಸ್ವೀಕರಿಸಿದರು.

ಹಿಂದುಸ್ಥಾನದ ವೈಸ್ರಾಯರೂ ಗವರ್ನರ್ ಜನರ ರವರೂ ಆಗಿರುವ ಘನತೆಯುಳ್ಳ ಪಡೆದ ಲಾರ್ಡ್ ಇರ್ವಿ ರವರು ಪತ್ನೀ ಸಮೇತರಾಗಿ ಇದೇ ಜುಲೈ ತಾರೀಖು ನೇ ಸೋಮವಾರ ಬೆಂಗಳೂರಿಗೆ ದಯಮಾಡಿಸು ರು. ತಾ|| 28 ರ ವರಿವಿಗೂ ಅಲ್ಲಿರುವ ಪ್ರೇಕ್ಷಣೀ ಗಳಾದ ಸ್ಥಳವಿಶೇಷಗಳನ್ನೆಲ್ಲ ನೋಡಿಕೊಂಡು 29ನೇ ್ರಾತಃಕಾಲ ರಾಜಧಾನಿಗೆ ಆಗಮಿಸುವರು. ಸಕಲರಾಜ ರ್ಯಾದೆಗಳೊಡನೆ ಶ್ರೀ ಮಹಾ ಪ್ರಭುಗಳಿಂದ ಇದಿ ುಗೊಳ್ಳಲ್ಪಟ್ಟು ಪುರಪ್ರವೇಶ ಮಾಡುವರು.

ವರ್ತಮಾನಸಂಗ್ರಹ.

ಹಿಂದೂ ಜನಗಳು ಮೊಹರಂ ಹಬ್ಬದಲ್ಲಿ ಸೇರಬಾರ ದೆಂದು ದಿಲ್ಲಿಯ ಹಿಂದೂಮಹಾಸಭೆಯವರು ಪ್ರಸಿದ್ಧ ಪಡಿಸಿರುವರು.

ಕಲ್ಬುರ್ಗಿಜಿಲ್ಲೆಯೊಳಗೆ ಮಳೆಯು 8-10 ದಿವಸಗ ಳಿಂದಲೂ ಚನ್ನಾಗಿ ಆಗಿರುವುದರಿಂದ ಅಲ್ಲಿನ ಜನಗಳಿಗ ಸಂತೋಷವುಂಟಾಗಿದೆ.

ಉದ್ಯೋಗ ಶಿಕ್ಷಣಕ್ಕಾಗಿ ಹೈದರಾಬಾದ ನೈಜಾಂ ರವರು ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡಬೇ ಕೆಂದು ನಿರ್ಧರಿಸಿರುವರಂತೆ.

ನಿಗುಪ್ತದ ರಾಜರಿಂದ ಅರೇಬಿಕ್ ಭಾಷೆಯಲ್ಲಿರುವ ಅನೇಕ ಗ್ರಂಥಗಳು ರವೀಂದ್ರನಾಥರ ಶಾಂತಿನಿಕೇ ತನಕ್ಕಾಗಿ ಸಮರ್ಪಿಸಲ್ಪಟ್ಟವು.

ರಾಯಚೂರುಜಿಲ್ಲೆಯೊಳಗೆ ಹೋದವರ್ಷ ದುಷ್ಕಾ ಲವಾಗಿದ್ದು ಈವರೆಗೂ ಮಳೆಯಿಲ್ಲವೆ ಇರುವುದರಿಂದ ಅಲ್ಲಿನ ಜನಗಳು ಚಿಂತಾತುರರಾಗಿದ್ದಾರೆ.

ಹೈದರಾಬಾದ ನೈಜಾಮರವರು ರವೀಂದ್ರನಾಥ ಟಾಗೋರರವರ ವಿಶ್ವಭಾರತಿವಿದ್ಯಾಲಯ ಸ್ಥಾಪನೆಗಾಗಿ ಒಂದುಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಕಳೆದ ಮೊಹರಂ ಹಬ್ಬದ ದಿವಸ ಕೊರ್ಲಾಪುರದಲ್ಲಿ ಹಿಂದೂ ಮುಸಲ್ಮಾನರಿಗೆ ಕಲಹವುಂಟಾಗಿ 33 ಜನ ಮಹಮ್ಮದೀಯರಿಗೂ 5 ಜನ ಹಿಂದುಗಳಿಗೂ ಅಪಾ ಯವಾಗಿರುತ್ತದೆ.

ಅಲಹಾಬಾದಿನಲ್ಲಿ ಕೆಲವು ಮಹಮ್ಮದೀಯರು ರೈ ಲ್ವೆ ಟಿಕೇಟುಗಳನ್ನು ಸೃಷ್ಟಿ ಮಾಡಿ ಮಾರಾಟಮಾಡು ತ್ತಿದ್ದರು. ಇದು ಅಧಿಕಾರಿಗಳಿಗೆ ತಿಳಿದು ಅವರನ್ನೆಲ್ಲಾ ಅರೆಸ್ಟುಮಾಡಿಸಿರುವರು.

ರಾಜಪುಟಾಣದ ಕೋಟಾಸಂಸ್ಥಾನದಲ್ಲಿ ಕ್ಷಾಮ ವುಂಟಾಗಿ ಜನಗಳು ಮೊಲಮನೆಗಳನ್ನು ಬಿಟ್ಟು ಹೆಂಡತಿಮಕ್ಕಳ ಮೈಮೇಲಿರುವ ಆಭರಣಗಳನ್ನು ಸಹ ಮಾರಿ ದೇಶದೇಶಾಂತರವನ್ನು ಅಲೆಯುತ್ತಿದ್ದಾರೆ.

ಚೀಣಾ ಸಮುದ್ರದಲ್ಲಿ ಸಂಟ್ ಫ್ರಾನ್ಸಿಸ್ ಗ್ರೇವಿ ಯರ್ ಎಂಬ ಫ್ರೆಂಚರ ಹಡಗು ಮುಳುಗಿಹೋದುದ ರಿಂದ ಡೊಲಿಯಸ್ ಎಂಬ ಬ್ರಿಟಿಷ್ ಹಡಗಿನವರು ಒಳ ಗಿದ್ದ 96 ಜನಗಳನ್ನು ಬದುಕಿಸಿದರೆಂದು ಕೇಳುತ್ತೇವೆ.

ಕಲ್ಕತ್ತಾ ಪ್ರಾಂತದಲ್ಲಿರುವ ನಾರಾಯಣ ಗಂಜ ಎಂಬ ಒಂದು ಹಳ್ಳಿಯ ಉಪಾಧ್ಯಾಯನೊಬ್ಬನು ಕುದು ರೆ ಜೂಜಿಗೆ ಹಣವನ್ನು ಕಟ್ಟಿದ್ದರಿಂದ ಆತನಿಗೆ ಒಂದು ಲಕ್ಷ ರೂಪಾಯಿಗಳ ಬಹುಮಾನವು ದೊರೆತಿರುವುದು.

ಮದ್ರಾಸಿನಲ್ಲಿ ಕಸಗುಡಿಸುವವನೊಬ್ಬನು ತನ್ನ ಹೆಂಡ ತಿಯು ಮತ್ತೊಬ್ಬ ಪುರುಷನ ಸಂಗಡ ಮಾತನಾಡು ತ್ತಿರುವುದನ್ನು ನೋಡಿ ಇವಳ ವಿಷಯದಲ್ಲಿ ಸಂಶಯವುಂಟಾಗಿ ಕೋಪದಿಂದ ಅವಳನ್ನು ಯಮನಿಗೆ ಬಲಿಕೊಟ್ಟನು.

ಹೈದರಾಬಾದಿನಲ್ಲಿ ಒಬ್ಬರ ಮನೆಯ ಸೇವಕನಾ ಗಿದ್ದ ಮಹಮ್ಮದೀಯನೊಬ್ಬನು ಮನೆ ಯಜಮಾ ನನ ಮಗಳನ್ನು ಮೋಹಿಸಿದ್ದು 5000 ರೂಪಾಯಿಗಳ ಸಮೇತ ಅವಳನ್ನು ಓಡಿಸಿಕೊಂಡು ಹೋಗಿ ಮದುವೆ ಮಾಡಿಕೊಂಡನಂತೆ.

ಕಲ್ಕತ್ತಾ ನಗರದಲ್ಲಿ ಒಂದು ಹಿಂದುಗಳ ಮೆರವಣಿ ಗೆಯು ಮಸೀದಿಯ ಮುಂದೆ ಹೋಗಲಾಗಿ ಕೆಲ ಮಹ ಮ್ಮದೀಯರು ಉತ್ಸವದೊಳಕ್ಕೆ ನುಗ್ಗಿ ಮದುವೆ ಹೆಣ್ಣಿನ ಮೇಲಿದ್ದ ನಗನಾಣ್ಯಗಳನ್ನು ಕಿತ್ತುಕೊಂಡು ಮಹಾ ಉಪಸರ್ಗವನ್ನು ಎಸಗಿದರಂತೆ. ಅನೇಕರು ಪೆಟ್ಟು ತಿಂದಿದ್ದಾರೆ. ಕೆಲ ಮಹಮ್ಮದೀಯರು ಹಿಡಿಯಲ್ಪಟ್ಟಿ ದ್ದಾರೆ.

ಪ್ಯಾರಿಸ್ಸಿನಲ್ಲಿ ಭಿಕ್ಷೆ ಬೇಡುತ್ತಿದ್ದ ಒಬ್ಬನನ್ನು ಕೈದುಮಾಡಿ ಆತನನ್ನು ಶೋಧಿಸುವಲ್ಲಿ ನಡುವಿನಲ್ಲಿ ೧೪೩೦೦ ಫ್ರಾಂಕುಗಳ ನೋಟು, ೨೦೦೦ ಫ್ರಾಂಕು ಗಳ ನಾಣ್ಯಗಳೂ ಇದ್ದುದಲ್ಲದೆ ಅಂಗಿಯಲ್ಲಿಯೂ ೫೦೦೦ ಫ್ರಾಂಕುಗಳು ಸಿಕ್ಕಿದುವು. ಇಷ್ಟು ನಾಣ್ಯಗ ಳು ನಿನ್ನಲ್ಲಿ ಹೇಗೆ ಬಂದವೆಂದು ಕೇಳಿದ್ದಕ್ಕೆ ಭಿಕ್ಷುಕನು ೩೦ ವರ್ಷಗಳ ವರೆವಿಗೂ ದುಡಿದು ವ್ಯಯಮಾಡದೆ ಹಾಗೆ ಕೂಡಿಟ್ಟಿರುವೆನೆಂದು ಹೇಳಿದನಂತೆ.

ರಷ್ಯಾ ದೇಶದಲ್ಲಿ ಒಬ್ಬ ಒಕ್ಕಲಿಗನ ಹೆಂಗಸಿಗೆ ೬೯ ಮಕ್ಕಳಾಗಿರುವವಂತೆ. ಈ ಮಕ್ಕಳಲ್ಲಿ ೧೬ ಸಾರಿ ಅವಳಿಜವಳಿಮಕ್ಕಳೂ ೭ ಸಾರಿ ಮೂರುಮೂರು ಮ ಕ್ಕಳೂ, ನಾಲ್ಕು ಸಾರಿ ನಾಲ್ಕುನಾಲ್ಕು ಮಕ್ಕಳೂ, ಹುಟ್ಟಿದವು. ಇಷ್ಟು ಜನ ಮಕ್ಕಳು ಹುಟ್ಟಿದಮೇಲೆ ಆ ಹೆಂಗಸು ಮರಣವನ್ನು ಹೊಂದಿದಳು. ಗಂಡನು ಪುನಃ ಮದುವೆಯಾಗಿ ಅವಳಲ್ಲಿಯೂ ಎರಡುಸಾರಿ ಮೂರ ರಂತೆಯೂ, ಆರುಸಾರಿ ಎರಡೆರಡಂತೆಯೂ ಮಕ್ಕಳನ್ನು ಹುಟ್ಟಿಸಿ ಒಟ್ಟು ೮೭ ಮಕ್ಕಳಿಗೆ ತಂದೆಯೆನಿಸಿಕೊಂಡಿ ರುವನೆಂದು ಕೇಳುತ್ತೇವೆ.

ಅಮೇರಿಕೆಯಲ್ಲಿ ಕಾರಾಗೃಹ ವಾಸಮಾಡುವ ಒಬ್ಬನನ್ನು ನೋಡುವುದಕ್ಕಾಗಿ ಒಂದು ದಿವಸ ಆತನ ಹೆಂಡತಿಯು ಹೋಗಿದ್ದಳು. ಅವಳನ್ನು ನೋಡಿ ಗಂಡನು ಅವಳಿಗೆ ಚುಂಬನ ಮಾಡಬೇಕೆಂಬ ಆಸೆಯು ಹುಟ್ಟಿದ್ದರಿಂದ ಅಧಿಕಾರಿಗಳನ್ನು ಕೇಳಿಕೊಂಡನು. ಅವರು ಅವಕಾಶವನ್ನು ಕೊಟ್ಟರು. ಆಗ ಗಂಡನು ಹೆಂ ಡತಿಗೆ ಮುತ್ತಿಡುವಾಗ ತನ್ನ ಬಾಯಿಯಲ್ಲಿ ಒಂದು ಚೀಟಿಯನ್ನು ಇಟ್ಟುಕೊಂಡಿದ್ದು ಅವಳ ಬಾಯಿಯೊಳಗ ಆ ಚೀಟಿಯನ್ನು ಸೇರಿಸಿದನು. ಹೆಂಡತಿಯು ಹಾಗೇ ಹೊರಕ್ಕೆ ಹೋಗಿ ಚೀಟಿಯನ್ನು ಓದಿದಳು. ಇಷ್ಟು ಹೊತ್ತಿಗೆ ಮೋಟರನ್ನು ಹಿಂದುಗಡೆಯಲ್ಲಿ ನಿಲ್ಲಿಸಿದ್ದರೆ ಗೋಡೆಯನ್ನು ಹಾರಿ ಬರುತ್ತೇನೆಂದು ಇದ್ದಿತು. ಅದ ರಂತೆ ಹೆಂಡತಿಯು ಮೋಟಾರನ್ನು ತೆಗೆದುಕೊಂಡು ಬಂದು ಗೋಡೆಯನ್ನು ಹಾರಿ ಬಂದ ಗಂಡನನ್ನು ಕೂಡ್ರಿಸಿ ಕೊಂಡು ಓಡಿಹೋದಳು.

ಸ್ವೀಕಾರ.

ಪತ್ರಿಕೆಯ ಪೋಷಣಕ್ಕಾಗಿ ಒಬ್ಬಾರಿ ಡಿಸ್ಟ್ರಿಕ್ಟ್ ನೇರಣಗಲ್ಲಿನವರ ವೇ|| ಸಂಗಪ್ಪಯ್ಯನವರು ಕಳು ಹಿಸಿದ ೫ ರೂಪಾಯಿಗಳನ್ನೂ, ಗದಗ ತಾಲೂಕು ಮಲ್ಲಿಗಿ ಮಠಾಧಿಕಾರಿಗಳು ಗುರುಸಿದ್ಧೇಶ್ವರಶಾಂತಪ್ಪ ಕುಪ್ಪ ಸದ ಇವರ ಪ್ರೋತ್ಸಾಹದಿಂದ ಮಡಿವಾಳರ ಕುಲಾಚಾ ರಸಂಬಂಧವಾಗಿ ಅಪರಾಧರೂಪದಿಂದ ತೆಗೆದು ಕಳಿಸಿದ 5 ರೂಪಾಯಿಗಳನ್ನೂ ಸ್ವೀಕರಿಸಿದ್ದೇವೆ.

ಜಗದಾಚಾರ್ಯರು ಇವರಿಗೆ ಸನ್ಮಂಗಳವನ್ನುಂಟು ಮಾಡಲಿ. ಸಂ.—

ನೋಟೀಸು

ಈ ಮೂಲಕ ಸಮಸ್ತಜನರಿಗೆ ತಿಳಿಯಪಡಿಸುವ ದೇನಂದರೆ:—ಹಿಮವತ್ಕೇದಾರಸಂಸ್ಥಾನದಲ್ಲಿ ದೇವ ರಪೂಜೆಮಾಡಿಕೊಂಡು ಇದ್ದ ಸಿದ್ಧಯ್ಯಾ ಗಬ್ಬೂರ ಉರ್ಫ್ ಸಜ್ಜನರಾಂದ ಬೆಳ್ಗಾಂವಾಮಠದ ಎಂಬಾತ ನು ಕೆಲವು ಸೇವಕರ ಸಹವಾಸದಿಂದ ಪೂಜಾಕಾರ್ಯ ವನ್ನು ಬಿಟ್ಟು ಮನಬಂದಕಡೆಗೆಲ್ಲಾ ತಿರುಗುತ್ತಾ, ಸಂಸ್ಥಾನದ ಹೆಸರು ಹೇಳುತ್ತಾ ನಾನು ಸಂಸ್ಥಾನದ ಕಾರ್ಯಕ್ಕಾಗಿ ಬಂದಿರುವೆನು, ಶ್ರೀ ಸನ್ನಿಧಿಯವರ ಕಳುಹಿಸಿರುವರೆಂದು ಸುಳ್ಳುಹೇಳಿ ಮನಸ್ಸಿಗೆ ಬಂದಷ್ಟು ರೂಪಾಯಿ ಮತ್ತು ಇತರ ಪದಾರ್ಥಗಳನ್ನು ಯಾಚಿ ಸುತ್ತಿರುವನೆಂದು ಕೇಳಿರುತ್ತೇವೆ. ಕಾಶಿಯಲ್ಲಿರುವ ಬೆಂಗಳೂರು ಶಾಸ್ತ್ರಿಗಳಿಂದ ೭೦೦ ರೂಪಾಯಿಗಳ ನ್ನೂ, ಭಾಲಾಕ್ಷಶಾಸ್ತ್ರಿಗಳಿಂದ ೫೦ ರೂಪಾಯಿಗ ಳನ್ನೂ, ನಾಂದೇಡದವರಿಂದ ೫೦ ರೂಪಾಯಿಗಳನ್ನೂ ಇನ್ನೂ ಅನೇಕರಲ್ಲಿ ಈಪ್ರಕಾರ ತೆಗೆದುಕೊಂಡುಹೋ ಗಿರುವನಂತೆ. ಈ ದೇಶದಲ್ಲಿಯೂ ಅದರಂತೆ ಅನೇಕರಿಗೆ ಮೋಸಮಾಡಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾನೆ. ಇವನ ಸುಳ್ಳುಮಾತಿಗೆ ಯಾರೂ ಮೋಸಹೋಗಬಾರದು.

ಸಂಸ್ಥಾನದ ಪರವಾಗಿ,

ಪಂಡಿತ ಅಂಬಾದತ್ತ, ಉಖೀಮಠ.

೭. ಧರನಂದು ಗ್ರಾಮದಲ್ಲಿ ನಮ್ಮ ವೀರಶೈವರೊಳಗೆ ಅಸ್ಪೃಶ್ಯತೆಯಿಂದ ಎಷ್ಟೋ ಸಂಗತಿಗಳಾಗಿ ಅದರಿಂದ ದ್ವೇಷಾಸೂಯೆಗಳು ಹೆಚ್ಚಿ, ಧರ್ಮದ ಯಾವ ಕಾರ್ಯಗಳೂ ನಡೆಯದಂತಾಗಿದೆ. ಅವುಗಳನ್ನು ಸರಿಪಡಿಸಿ ಐಕ್ಯವನ್ನುಂಟುಮಾಡುವದು, ಮೊದಲಿನ ಕೆಲಸವೆಂದರೂ ಅಡ್ಡಿಯಿಲ್ಲ.

೮. ಧರ್ಮ ಸಂಬಂಧ ನ್ಯಾಯಗಳನ್ನು ಧರ್ಮಗುರುಗಳಲ್ಲಿಯೇ ಪರಿಹರಿಸಿಕೊಳ್ಳುವದು. ಮತ್ತು ಇತರ ವ್ಯವಹಾರಿಕ ನ್ಯಾಯಗಳನ್ನು ವೀರಶೈವ ಪಂಚಕಮಿಟಿಯಲ್ಲಿ ನಿರ್ಣಯಿಸಿಕೊಳ್ಳುವಂತೆ ಮಾಡುವದು.

೯. ವರುಷಕ್ಕೊಮ್ಮೆ ಸಭೆ ಸೇರಿಸಿ, ಕಲಾಕೌಶಲ್ಯೋದ್ಯೋಗಗಳಲ್ಲಿಯೂ, ವೈದಿಕಧರ್ಮ ತತ್ವಗಳಲ್ಲಿಯೂ, ಇತರ ವಿದ್ಯಾಭ್ಯಾಸಗಳಲ್ಲಿಯೂ ಪಾಸಾದವರಿಗೆ ಇನಾಂ ಕೊಡುವದು.

೧೦. ವೀರಶೈವರ ವಶಕ್ಕೆ ಇದ್ದ ಕ್ಷೇತ್ರ, ತೀರ್ಥ, ಇತರ ಶಿವಾಲಯಗಳ ಮತ್ತು ದಾಸೋಹ, ಮಠ ಮುಂತಾದವುಗಳ ಮೇಲೂ ನಿಗಾವಣೆ ಇಡುವದು, ಅವುಗಳ ಯೋಗ್ಯ ವ್ಯವಸ್ಥೆ ಮಾಡಿಸುವದು, ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸುವದು.

ಜಗದಾಚಾರ್ಯರು ಈ ಯಾವತ್ತು ವಿಷಯಗಳನ್ನು ಪರ್ಯಾಲೋಚಿಸಿ ವೀರಶೈವ ಮತದ ಉಚಿತ ಸ್ಥಿತಿಯ ಕಾರ್ಯವನ್ನು ಕೈಕೊಂಡು ಸಕಲರನ್ನು ಉದ್ಧಾರ ಮಾಡಬೇಕಾಗಿ ಪ್ರಾರ್ಥನೆಯು.

ವೀರಶೈವ ಮತದ ಉದ್ಧಾರಕ್ಕಾಗಿ ಅವತಾರವನ್ನೆತ್ತಿರುವ ಪಂಚಾಚಾರ್ಯಪ್ರಭೆಗೆ ಪರಮಾತ್ಮನು ಚಿರಾಯುವನ್ನು ಕೊಟ್ಟು ಕಾಪಾಡಲೆಂದು ಬೇಡಿಕೊಂಡು ಈ ಲೇಖವನ್ನು ಪೂರ್ತಿಗೊಳಿಸುತ್ತೇನೆ.

ಗುರುಶಾಂತಾರ್ಯ ಹಿರೇಮಠ,
ಮಸ್ಕಿ ನೀರಲಕೇರಿ.

ನಿಜಪ್ರಕಟನೆಯು

ವಾಚಕರೇ, ಲೋಕಮತ ತಾ|| ೩೦ನೇ ಜೂನ ಪತ್ರಿಕೆಯಲ್ಲಿ "ಶ್ರೀ ಕ್ಷೇತ್ರಕಾಶೀ ವೀರಶೈವವಿದ್ಯಾರ್ಥಿಗಳ ಸಮ್ಮೇಲನ" ವೆಂಬ ಅಗ್ರಲೇಖವುಳ್ಳ ವೃತ್ತಾಂತವನ್ನು ಪ್ರೇಕ್ಷಕರೋರ್ವರು ಪ್ರಸಿದ್ಧಪಡಿಸಿರುವರಷ್ಟೆ? ಆದರೆ ಆ ಸಮ್ಮೇಲನವು ಆದದ್ದು ನಿಜವು. ಆ ಸಂಗತಿಯು ಆ ಸಮ್ಮೇಲನಕ್ಕೆ ನಿಯಮಿಸಲ್ಪಟ್ಟ ಸೆಕ್ರೆಟರಿ ಅಥವಾ ಕಾರ್ಯದರ್ಶಿಮಹಾಶಯರಿಂದ ಸಭೆಯ ಯಥಾರ್ಥವಿಷಯಗಳು ಪ್ರಕಟಿಸಲ್ಪಡಬೇಕಾಗಿತ್ತು. ಇರಲಿ. ಆ ಸಮ್ಮೇಲನದ ಉದ್ದೇಶವು ಕಾಶೀ ವೀರಶೈವ ವಿದ್ಯಾರ್ಥಿಗಳ ಏಕಮತ್ಯದ ಸಲುವಾಗಿ ಇದ್ದಿತೇ ವಿನಹ ಮತ್ತಾವ ನಿಮಿತ್ತವಿರಲಿಲ್ಲ. ಹೀಗಿದ್ದು ಗುರುಲಿಂಗದೇವರು ಬೆಳಗಾಂವ ವಿರಕ್ತಮಠ ಇವರು ತಮ್ಮ ಭಾಷಣದಲ್ಲಿ ಶ್ರೀಯುತ ಪಂ|| ಕಾಶೀನಾಥಶಾಸ್ತ್ರಿಗಳು ನಾಗನೂರ ಇವರೇ ಮೊದಲಾದವರು ಬಿತ್ತಿರುವ ಅಶಾಂತತೆಯಿಂದ ವೀರಶೈವಮತವು ಒಳ್ಳೇ ಅಧಃಪತನವನ್ನೊಂದಿದೆ. ಆದ್ದರಿಂದ ಅಶಾಂತತೆಯನ್ನು ಬಗ್ಗುಬಡಿಯಬೇಕು ಇತ್ಯಾದಿ ವಿಷಯಗಳನ್ನು ಉದ್ಗಾರವಾಡಿದರೆಂತಲೂ ಮತ್ತು ಬೇರೇಸಂಗತಿಗಳನ್ನು ಸಹ ಹೆಚ್ಚಾಗಿ ಪ್ರೇಕ್ಷಕರೆಂಬವರು ಬರೆದಿದ್ದಾರೆ. ಇದು ಸುಳ್ಳುಸಂಗತಿಯಾಗಿದೆ. ಬೇಕಾದಾಗ ನಿಜವಾದ ಪ್ರೊಸಿಡಿಂಗ್ಸು ವಿಚಾರಿಸುವವರಿಗೆ ತೋರಿಸುವದಾಗುವದು. ಇರಲಿ ವೀರಶೈವರೇ ವಿದ್ವಾಂಸರೇ ಐಕ್ಯವೇ ಸಭೆಯ ಮೂಲ ಉದ್ದೇಶವಾದಬಳಿಕ ಶ್ರೀ ಕಾಶೀನಾಥಶಾಸ್ತ್ರಿಗಳೇ ಮೊದಲಾದವರ ಹೆಸರುತಕ್ಕೊಂಡರೆ ಸಭೆಗೆ ವಿನಾಶಕವಾದೀತು ಎಂಬುವದನ್ನು ವಾಚಕರಾದ ತಾವೇ ಊಹಿಸಬಹುದು. ಇನ್ನು ಆ ಬರದ ನಮ್ಮ ಅಭಿಪ್ರಾಯವನ್ನು ತಿಳಿದು ಸುತ್ತಮುತ್ತಲಿರುವರೂ ವೀರಶೈವಪ್ರಮುಖರೂ ಸಹ ಆಶ್ಚರ್ಯಭರಿತರಾಗಿರಬಹುದೆಂದು ನಮ್ಮ ನಿಜಪ್ರಕಟನೆಯು ವಾಚಕರ ಅವಗಾಹನಕ್ಕೆ ಇಡಲ್ಪಟ್ಟಿರುವದು.

ತಮ್ಮ ವೀರಶೈವಮತಾಭಿಮಾನಿ
ಶ್ರೀ ಗುರುಲಿಂಗದೇವರು,
ಬೆಳಗಾಂವ, ಬನಾರಸ್ ಸಿಟಿ

ಶ್ರೀ

ಕೀರ್ತನಾಕಾಲಕ್ಷೇಪ, ಯಲಿಯೂರು.

ತುಮಕೂರು ಸುಪ್ರಸಿದ್ಧ ಕೀರ್ತನಕಾರರಾದ ಎ. ಶಿವಮೂರ್ತಿ ಶಾಸ್ತ್ರಿಗಳವರು ಕೀರ್ತನಗಳ ನಿಮಿತ್ತ ಕುಣಿಗಲು ಪ್ರಾಂತ್ಯ ಆಗಮಿಸಿರಲು ನಮ್ಮ ಪುರವಾಸಿಗಳು ಮೇಲ್ಕಂಡ ಕೀರ್ತನಕಾರರ ಘನವಾದ ಧರ್ಮಬೋಧೆಯನ್ನು ಕೇಳಲು ಕುತೂಹಲಪಟ್ಟು ಎ. ಶಿವಮೂರ್ತಿ ಶಾಸ್ತ್ರಿಗಳನ್ನು ಈ ಗ್ರಾಮಕ್ಕೆ ಆಹ್ವಾನಿಸಿ ಇವರಿಂದ ಮ|| ನಂಜುಂಡಶೆಟ್ಟರವರ ಮನೆಯಲ್ಲಿ ರಾಜಶೇಖರವಿಳಾಸ ಸೀತಾಕಲ್ಯಾಣ, ಸುಭದ್ರಾಹರಣ ಎಂಬ ಕೀರ್ತನಗಳನ್ನು ಅನುವಾದ ಮಾಡಿಸಿ ಅತ್ಯಂತ ಆನಂದಪಟ್ಟರು.

ಈ ತರುಣ ಕೀರ್ತನಕಾರರ ಕಥಾಸಂವಿಧಾನ, ವಿಷಯಪ್ರತಿಪಾದನ ಹೃದಯಂಗಮವಾದಭಾಷಣ ಯುಕ್ತವಾದ ಉಪಕಥೆಗಳ ಜೋಡಣೆ ಮೊದಲಾದ ಸದ್ವಿಷಯಗಳಿಗೆ ಸಂತೋಷಪಟ್ಟು ಈ ಪುರವಾಸಿಗಳು ತಾ|| 3 7 1927 ನೇ ಭಾನುವಾರ ತಾಲ್ಲೋಕು ಅಮಲ್ದಾರರಾದ ಮೆ|| 'ರಾ' ರಾಮಯ್ಯನಾಯ್ಡು ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಪ್ರಖ್ಯಾತ ರಾಜಶೇಖರವಿಳಾಸವೆಂಬ ಕೀರ್ತನವನ್ನು ನಡೆಸಿ, ಕಥಾನಂತರ ಸದರಿ ಅಮಲ್ದಾರರವರ ಹಸ್ತದಿಂದ ವೇ|| ಎ. ಶಿವಮೂರ್ತಿಶಾಸ್ತ್ರಿಗಳಿಗೆ ಒಂದು ಸುವರ್ಣ ಪದಕವನ್ನು ಅಲಂಕರಿಸಿದರು.

ಕೀರ್ತನಾದಿಗಳ ಮೂಲಕ ಧರ್ಮಬೋಧೆಯ ಸೇವೆ ಮಾಡುತ್ತಿರುವ ಈ ಕೀರ್ತನಕಾರರಿಗೂ ಇವರ ಗುಣಗ್ರಹಣ ಮಾಡಿ ಇವರನ್ನು ಸನ್ಮಾನಿಸಿದ ಮೆ|| ರಾ ಶೇಕ್‌ದಾರ್ ಚನ್ನವೀರಶೆಟ್ಟರಿಗೂ ಮ|| ರಾ ಬಸವ ಅಂಗಡಿ ಮೈ. ವರ್ಮ. ಚಿಕ್ಕಶೆಟ್ಟರಿಗೂ ಕೀರ್ತನಕ್ಕೆ ದಯಮಾಡಿಸಿ, ಕಥಾನಂತರ ಕಥಿಕರ ವಿಷಯವಾಗಿ ಅಮೋಘವಾದ ಉಪನ್ಯಾಸಗಳನ್ನು ಮಾಡಿದ ಮ|| ರಾ|| ಆರ್. ಎ. ಮುಂಬಿಲ್ ವಾಳೇಗೌಡರಿಗೂ ಮತ್ತು ಕುಣಿಗಲ್ ಗ್ರಾಮದ ಮರ್ಚೆಂಟರಾದ ಶ್ರೀಯುತ ಸಿ. ರುದ್ರಪ್ಪನವರಿಗೂ ದಕ್ಷರೂ ಧರ್ಮಪರರೂ ಎಂದು ಖ್ಯಾತರಾಗಿರುವ ನಮ್ಮ ತಾಲ್ಲೋಕು ಅಮಲ್ದಾರವರಿಗೂ ಪರಮೇಶ್ವರನು ಮಂಗಳವನ್ನು ಕೊಡಲೆಂದು ಪ್ರಾರ್ಥಿಸುವೆನು.

ಇಂತು ಸಮಾಜ ಸೇವಕ,
ವೈ. ಅಡವಿಶೆಟ್ಟಿ,
ಬಳೆ ವ್ಯಾಪಾರಿ ಯಲಿಯೂರು.

ದಕ್ಷಿಣಹಿಂದುಸ್ಥಾನದ ಖಾದಿ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ನಡೆಯಿಸುವಾಗ ಮಹಾತ್ಮಾಗಾಂಧಿಯವರು ಮಾಡಿದ ಭಾಷಣವು

(ಕಳೆದವಾರದ ಶೇಷ)

ಅನೇಕ ಪ್ರಸಿದ್ಧರಾದ ವಕೀಲರು ಮತ್ತು ಕೆಲವು ಡಾಕ್ಟರುಗಳು ಕೂಡ ಇವರಲ್ಲಿ ಕೆಲವರು. ನಿಮಗೆ ತಿಳಿದೇ ಇದ್ದಾರೆ. ತಮ್ಮ ವೃತ್ತಿಯನ್ನು ಬಿಟ್ಟು ಈ ಕೆಲಸವನ್ನು ಕೈಗೊಂಡಿದ್ದಾರೆ. ವರ್ತಕಶ್ರೇಣಿಯವರಿಗೂ ಕೂಡ ಇತ್ತೀಚೆಗೆ ಖಾದಿಯ ಪ್ರಚಾರದಲ್ಲಿ ಸಹ ವ್ಯಾಪಾರಕ್ಕೆ ಬೇಕಾದ ಸಾಮರ್ಥ್ಯವು ಅವಶ್ಯಕವೆಂಬುದು ಹೊಳೆಯುತ್ತಾ ಬಂದಿದೆ. ಆಧುನಿಕಕಾಲದಲ್ಲಿ ಖಾದೀ ಪ್ರಚಾರದ ಚಳುವಳಿಯು ಸಹಕಾರ ಅಥವಾ ಪರಸ್ಪರ ಸಹಾಯದಲ್ಲಿ ಎಲ್ಲಕ್ಕಿಂತ ಅಗಾಧವಾದ ಪ್ರಯತ್ನವೆಂದು ನಾನು ಹೇಳಿರುವದೇಕೆಂದು ಈಗ ನಿಮಗೆ ಬಹುಶಃ ಅರ್ಥವಾಗಬಹುದು. ಮುಂದೆ ಆಗಬೇಕಾದ ಫಲವನ್ನು ನೋಡಿದರೆ, ಈಗ ಅಲ್ಪವಾಗಿ ತೋರಿದರೂ ಕೂಡ ಈ ಆರು ವರ್ಷಗಳ ಅಭಿವೃದ್ಧಿಯನ್ನು ಭವಿಷ್ಯತ್ತಿನ ಸೂಚನೆಯೆಂದೆಣಿಸಿದರೆ, ದೈವಸಂಕಲ್ಪವಿದ್ದ ಪಕ್ಷದಲ್ಲಿ ಈಗ ಹಾಳಾಗಿಹೋಗುತ್ತಿರುವಂತೆ ಕಾಣುವ ಹಳ್ಳಿಗಳು ಕ್ಷಿಪ್ರದಲ್ಲಿಯೇ ತಾಳ್ಮೆಯ, ನ್ಯಾಯವರ್ತನೆಯ, ಉದ್ಯೋಗತತ್ಪರತೆಯ, ನೆಲೆವೀಡುಗಳಾಗುತ್ತವೆ.

ಹತ್ತಿಯು ನಿಮ್ಮ ಕೈಗೆ ಬಟ್ಟೆಯಾಗಿ ಬರುವದಕ್ಕೆ ಮುಂಚೆ ಯಾವ ಯಾವ ಕೆಲಸಗಳಾಗಬೇಕೆನ್ನುವದು ನಿಮಗೆ ಈ ಪ್ರದರ್ಶನದಿಂದ ವಿಶದವಾಗುತ್ತದೆ. ಅಲ್ಲಿ ನೀವು ಹತ್ತಿಯಕಾಳು ಬಿಡಿಸುವದು, ಹತ್ತಿ ಹೊಡೆಯುವುದು, ಹಿಂಜಿಸಾಡುವುದು, ನೂಲುವದು, ನೆಯ್ಯುವದು ಇವೆಲ್ಲವನ್ನು ನೋಡುವಿರಿ. ಈ ಕ್ರಮಗಳಲ್ಲಿ ಉಪಯೋಗಿಸುವ ತೊಡಕಿಲ್ಲದ ಉಪಕರಣಗಳನ್ನೂ ಯಂತ್ರಗಳನ್ನೂ ನೀವು ನೋಡುವಿರಿ. ಚಿತ್ರಪಟಗಳು ಆ ಯಂತ್ರಗಳಲ್ಲಿ ಸಾಗುವ ಕೆಲಸದ ಪರಿಮಾಣವನ್ನು ತೋರಿಸುತ್ತವೆ. ಈ ಯಂತ್ರಗಳಲ್ಲಿ ಒಂದೆರಡನ್ನುಳಿದ ಎಲ್ಲವನ್ನು ನಮ್ಮ ಹಳ್ಳಿಗಳಲ್ಲಿ ತಯಾರುಮಾಡಬಹುದು.

ಅಂದವಾಗಿ ಕಸೂತಿ ಕೆಲಸಮಾಡಿದ ನಯವಾದ ಖಾದಿಯಿಂದ ತುಂಬಿರುವ ಅಂಗಡಿಯನ್ನು ನಾನು ಇಲ್ಲಿ ನೆರೆದಿರುವವರಲ್ಲಿ ಸೊಗಸುಗಾರರೂ ಅಭಿರುಚಿಯುಳ್ಳವರೂ ಆದ ಹಣವಂತರ ಗಮನಕ್ಕೆ ತರಲೇಬೇಕು. ಈ ಬಟ್ಟೆಗಳನ್ನು ತಯಾರುಮಾಡುವುದರಲ್ಲಿ ಮುಂಬಯಿಯಲ್ಲಿ ೧೨೦ ಜನ ಸ್ತ್ರೀಯರು ದಿನವೊಂದಕ್ಕೆ ೬ ಆಣೆಯಿಂದ ೧| ರೂ. ವರೆಗೆ ಸಂಪಾದನೆಯನ್ನು ಮಾಡುತ್ತಾರೆ. ಇದಕ್ಕೆಲ್ಲಾ ಮುಂಬಯಿಯ ರಾಷ್ಟ್ರೀಯ ಸ್ತ್ರೀಸಭೆಯು ವ್ಯವಸ್ಥೆಯನ್ನು ಮಾಡಿದೆ. ಈ ಸಭೆಗೆ ಸೇರಿದ ತ್ಯಾಗವೃತ್ತಿಯ ಮಹಿಳೆಯರಲ್ಲಿ ಹಿಂದೂಸ್ಥಾನದ ವೃದ್ಧಪಿತಾಮಹ ದಾದಾಭಾಯಿ ನವರೋಜಿಯವರ ಮೊಮ್ಮಕ್ಕಳೂ ಪ್ರಖ್ಯಾತ ಪೆಟಿಟ್ ವಂಶಕ್ಕೆ ಸೇರಿದ ಸಹೋದರಿಯರೊಬ್ಬರು ಇದ್ದಾರೆ.

ಮಧುಸೂದನದಾಸರು ಕಟಕಿನಲ್ಲಿ ಬಹು ಪ್ರಖ್ಯಾತರಾದ ವಕೀಲರಾಗಿದ್ದರು. ಉತ್ಕಲದ ಬಡತನವು ಅವರನ್ನು ಕನಿಕರದಿಂದ ಎಚ್ಚರಿಸಿತು. ಎಷ್ಟು ನೇಗಿಲುಗಳೊಡನೆ ನಮ್ಮ ಹೊಲಗಳಲ್ಲಿ ಕೆಲಸಮಾಡುವದು ಅವಶ್ಯಕವೆನ್ನುವುದೇನೋ ಸರಿ. ಆದರೆ ವ್ಯವಸಾಯದ ಜತೆಗೆ ಕೃಷಿಯನ್ನು ತೊಡಗಿಸುವ ಕೈಗಾರಿಕೆಯೊಂದನ್ನು ಸೇರಿಸದಿದ್ದರೆ ನಾವು ಇಷ್ಟರಲ್ಲಿಯೇ ಪಶುಸಮಾನರಾಗುವುದು ನಿಶ್ಚಿತವೆಂಬುದು ಇವರ ಗೋಚರಕ್ಕೆ ಬಂದಿತು. ಅವರು ಈಗ ತಾವೇ ಒಳ್ಳೆಯ ಹಸ್ತಕೌಶಲವುಳ್ಳ ಕೆಲಸಗಾರರಾಗಿದ್ದಾರೆ.

ಆದರೆ ವಸ್ತುಪ್ರದರ್ಶನ ಸಮಿತಿಯವರು ಸಿದ್ಧಪಡಿಸಿರುವ, ಕಣ್ಣಿಗೆ ಹಬ್ಬವೆನಿಸುವ, ಬುದ್ಧಿಯನ್ನು ಆಕರ್ಷಿಸುವ ಈ ಪ್ರದರ್ಶನವನ್ನು ನೋಡಬೇಕೆಂದು ಆತುರರಾಗಿರುವ ನಿಮ್ಮನ್ನು ನಾನು ತಡೆಯಬಾರದು. ಹಳ್ಳಿಗಳ ಪುನರುಜ್ಜೀವನ ಕಾರ್ಯಕ್ಕೆಲ್ಲಾ ಕೇಂದ್ರಸ್ಥಾನವಾದ ಖಾದಿಯು ಎಷ್ಟು ಅಮೂಲ್ಯವಾದುದೆಂಬುದನ್ನು ಈ ಪ್ರದರ್ಶನವು ನಿಮಗೆ ವಿಶದಗೊಳಿಸಲಿ! ನಿಮ್ಮಲ್ಲಿ ವಿರಾಮವೂ ಇಷ್ಟವೂ ಇರುವವರನ್ನು ಚರಕದ ಸಂದೇಶವನ್ನು ಸಾರುವುದಕ್ಕೆ ಹಳ್ಳಿಗಳಿಗೆ ಕಳುಹಿಸುವುದರಿಂದಲೂ ನಿಮ್ಮೆಲ್ಲರನ್ನೂ ನೀವು ಕಟ್ಟಕಡೆಗೆ ಖಾದಿಯನ್ನು ನಿತ್ಯಗಟ್ಟಲೆಯ ಉಡುಪನ್ನಾಗಿ ಉಪಯೋಗಿಸುವಂತೆ ಮಾಡುವುದರಿಂದಲೂ ನಿಮಗೂ ಬಡಹಳ್ಳಿಯವರಿಗೂ ಮಧ್ಯೆ ಜೀವಂತವಾದ ಬಂಧನವನ್ನು ನಿರ್ಮಿಸುವುದಕ್ಕೆ ಈ ಪ್ರದರ್ಶನವು ಪ್ರೇರಿಸಲಿ! ಈ ದೇಶಕಾರ್ಯದಲ್ಲಿ—ಇದು ದೇವಕಾರ್ಯವೆಂದು ನಾನು ಧೈರ್ಯಮಾಡಿ ಹೇಳುತ್ತೇನೆ—"ಬೆಳೆಯೇನೋ ಬೇಕಾದಷ್ಟಿದೆ. ಕುಯ್ಯುವವರು ಕಡಿಮೆ" ನಿಮ್ಮಲ್ಲಿ ಪ್ರತಿಯೊಬ್ಬರೂ ಇಷ್ಟಬಂದಷ್ಟು ಈ ಸಂಖ್ಯೆಯನ್ನು ಹೆಚ್ಚುಮಾಡಬಹುದು.

ಈ ಪ್ರದರ್ಶನವು ಪ್ರಾರಂಭವಾಯಿತೆಂದು ಹೇಳಲು ನಾನು ಬಹಳ ಸಂತೋಷಿಸುತ್ತೇನೆ. ಈಶ್ವರನ ದೃಷ್ಟಿಯಲ್ಲಿ ಈ ಕಾರ್ಯವು ಸಾಧುವಾದದ್ದೆಂದು ಕಂಡುಬಂದರೆ ಆತನ ಕಣ್ಣಿನಲ್ಲಿ ಇಲ್ಲಿ ಕೆಲಸಮಾಡುವವರು ಯೋಗ್ಯರಾಗಿ ತೋರಿದರೆ, ಆತನು ಈ ಕಾರ್ಯವನ್ನು ಸಫಲಗೊಳಿಸಲಿಯೆಂದು ಆತನನ್ನು ಪ್ರಾರ್ಥಿಸುತ್ತೇನೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವೇದಾಂತವಾಕ್ಯಜಾವಿದ್ಯಾ

ಈ ಸೂತಗೀತೋಕ್ತಿಯಂತೆ ವೇದಾಂತವಾಕ್ಯಗಳ ಪ್ರತಿಪಾದ್ಯವೂ ಯೋಗ್ಯವಾದ ಯಾವ ಶಿವಜ್ಞಾನವೆಂಬುದೋ ಅದೇ ವಿದ್ಯೆಯೆಂದು ಹೇಳಲ್ಪಡುವುದು. ಏಕೆಂದರೆ ಯಾವನಲ್ಲಿ ಬ್ರಹ್ಮಜ್ಞಾನವು ಉದಯವಾಗುವುದೋ ಅವನಲ್ಲಿ ತತ್ವಜ್ಞಾನಸಾಗರ ವಿವೇಕವೂ ಸ್ವಭಾವತಃ ಉಂಟಾಗುತ್ತದೆ. ಹೀಗಾಗಿ ಜ್ಞಾನಿಗಳ ವಿವೇಕೋದಯವಾದಮೇಲೆ ಅವರಿಗೆ ಇಹಲೋಕದ ಸೌಖ್ಯವನ್ನೂ ಪರಲೋಕದ ಸುಖವನ್ನೂ ಪಡೆಯುವ ಸಾಮರ್ಥ್ಯವುಂಟಾಗುವುದು. ಇಹಲೋಕದ ಭೋಗವು ಪರಲೋಕದ ಮೋಕ್ಷವು ಪ್ರತಿಯೊಬ್ಬ ಮಾನವಪ್ರಾಣಿಗೆ ಅತ್ಯವಶ್ಯಕವಾದುದೆಂದು ಪ್ರತ್ಯೇಕ ಹೇಳಬೇಕಾದುದಿಲ್ಲ. ಆದುದರಿಂದಲೇ ಶಿವೋಪಾಸ್ತ್ಯವು ಜಗನ್ಮಾನ್ಯವಾಗಿರುತ್ತದೆ.

ಅಂಥಾ ಸದ್ವಿದ್ಯೆಯು ಪೂರ್ವಪುಣ್ಯಪರಿಪಾಕವಿಶೇಷದಿಂದ ಶ್ರೀಗುರು ಮುಖದ್ವಾರಾ ಪ್ರಾಪ್ತವಾಗಬೇಕಲ್ಲದೆ ಅನ್ಯಥಾ ದೊರೆಯಲಾರದು. ಅಂಥಾ ಗುರುತತ್ವಕ್ಕಾಧಾರಕ್ಕ **ಮತಸ್ಥಾಪನಾಚಾರ್ಯರು** ಅವರ ಶಿಷ್ಯಾನುವರ್ತಿಗಳಾದ ಜನಾಚಾರ್ಯರು ಅರ್ಹರಾಗುತ್ತಿರುವುದು ಶಾಸ್ತ್ರಸಿದ್ಧವಾದ ಮಾತಾಗಿದೆ. ಹೀಗಿದ್ದು ಈಗಿನ ಮನ್ವಂತರದಲ್ಲಿ ಇಂಥ ಸದ್ವಿದ್ಯೆಯಕಡೆಗೂ ಹಾಗು ಇಂದ ಸದ್ವಿದ್ಯೆಯನ್ನು ಬೋಧಿಸಲಿಕ್ಕೆ ಗುರುವರರಕಡೆಗೂ ದೃಷ್ಟಿಯನ್ನಿಟ್ಟು ನೋಡಲಿಕ್ಕೆ ಜನರೇ ವಿರಳರಾಗಿದ್ದಾರೆ. ಅಂದಮೇಲೆ ಅಂತಹ ಸದ್ವಿದ್ಯೆಯುದ್ವಾರಾ ಮೋಕ್ಷಮಾರ್ಗವು ಹೇಗೆ ಲಭಿಸಬೇಕು.

ಈ 20ನೇ ಶತಮಾನದ ಸ್ಥಿತಿಯನ್ನು ನೋಡುತ್ತಿರಲಿಕ್ಕೆ ಅನೇಕರು ದುರ್ವೇದಾಂತಿಗಳ [illegible] ಕಾಡಿಯೊಳಗ ಸಿಲುಕಿ ನಿಜವಾದ ಧರ್ಮಗುರುಗಳ [illegible]ಡುವದನ್ನು ಸ್ಮೃತಿವಚನ ತರಡ ಸ್ವೇಚ್ಛಾಚಾರಿಗಳಾಗಿ ಮಾನವಜನ್ಮದ ಹಾಗು ಸ್ವಧರ್ಮದ ಸಾರ್ಥಕ್ಯವನ್ನು ಪಡೆಯದೆ ಅಧೋಗತಿಗೀಡಾಗುತ್ತಿರುವದು ಅತ್ಯಂತ ದುಃಖದಾಯಕವಾದ ಸಂಗತಿಯಾಗಿದೆ. 84 ಲಕ್ಷ ಜೀವರಾಶಿಗಳಲ್ಲಿ ಮನುಷ್ಯಜನ್ಮವೇ ಶ್ರೇಷ್ಠವೆಂತಲೂ ಮನುಷ್ಯವರ್ಗದಲ್ಲಿ ಷಟ್‌ಸ್ಥಲಜ್ಞಾನಿಯಾದ ವೀರಶೈವನೇ ಅತ್ಯಧಿಕನೆಂತಲೂ ಘಂಟಾಘೋಷವಾಗಿ ಸಾರುತ್ತಿರುವ ಗ್ರಂಥೋಕ್ತಿಗಳನ್ನು ಕಂಡು ಕಾಣದಂತೆಯೂ ಕೇಳಿ ಕೇಳದಂತೆಯೂ ಜನ್ಮಾಂಧರಂತೆ ವರ್ತಿಸುತ್ತಿರುವ ಈ ಮಾನವಜನ್ಮಕ್ಕೆ ಧಿಕ್ಕಾರ! ಧಿಕ್ಕಾರ! ಧಿಕ್ಕಾರ!

ವಾಚಕಮಹಾಶಯರೇ, ಬ್ರಾಹ್ಮಣರ ವಾರಸ್ಯಾನವ್ಯ ಹೇಳುವ ಕಾಲಕ್ಕೆ ಸ್ಕಾಂದಪುರಾಣದಲ್ಲಿ ವ್ಯಾಸಮಹರ್ಷಿಗಳು ಮತ್ತು ವಿವೇಕಚಿಂತಾಮಣಿಯಲ್ಲಿ ಶ್ರೀ ನಿಜಗುಣ ಶಿವಯೋಗಿಗಳು ವೀರಶೈವನೇ ಶ್ರೇಷ್ಠನೆಂದು ಬೋಧಿಸಿರುವರು. ಅಂದಮೇಲೆ ಈ ವೀರಶೈವ ಮತವನ್ನು ಹಾಗು ಈ ಮತಕ್ಕೆ ಮುಖ್ಯ ಅಂಗವಾದ ಷಟ್‌ಸ್ಥಲಜ್ಞಾನವರಣ ಪಂಚಾಚಾರಗಳನ್ನು ನೆಲೆಗೊಳಿಸಿ ಸರ್ವತ್ರಪ್ರಸಾರ ಸ್ಥಾಪನೆಯನ್ನು ಮಾಡಿದ [illegible]ಮತಸ್ಥಾಪಕರಾದ **ಪಂಚಾಚಾರ್ಯರ** ಅಗಾಧವಾದ ಮಹಿಮೆಯು ವರ್ಣನಾತೀತವಾದುದೆಂದು ಪ್ರತ್ಯೇಕ ಹೇಳಬೇಕಾದುದಿಲ್ಲ. ಆದುದರಿಂದಲೇ ಶ್ರೀಮತ್ಪರಮಪೂಜ್ಯರಾದ **ಪಂಚಾಚಾರ್ಯರೇ ಜಗದ್ಗುರುಗಳೆಂತಲೂ** ಇವರೇ ದೀಕ್ಷಾ, ಶಿಕ್ಷಾ, ಮೋಕ್ಷಗಳಿಗೆ ಮೂಲಕಾರಣರೆಂತಲೂ ಶಿವಾಗಮಗಳಲ್ಲಿ ಘಂಟಾಘೋಷವಾಗಿ ಸಾರುತ್ತಿರುವವು. ಇಷ್ಟೇ ಅಲ್ಲದೆ ಗ್ರಂಥಕಾರರು ಗುರುಗೌರವವನ್ನು ಅತ್ಯಂತ ಶ್ಲಾಘನೀಯವಾಗಿ ವರ್ಣಿಸಿರುವರು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ಉದಾಹರಿಸುವೆನು. [illegible] ಅವಲೋಕಿಸಬೇಕಾಗಿ ಪ್ರಾರ್ಥನೆ.—

ನಗುರೋರಧಿಕಂ . . [illegible] . . ಶಿವಶಾಸನತಃ.... ಈಪ್ರಕಾರ ಶ್ರುತಿಯು ಗುರುವಿನ ಮಹತ್ವವನ್ನು ಬೋಧಿಸುತ್ತಿದೆ. ಮತ್ತು ಸುಪ್ರಭೇದಾಗಮದಲ್ಲಿ ಗುರುಲಕ್ಷಣವನ್ನು—ಶ್ಲೋ|| ಗುರೂಣಾಂ ಲಕ್ಷಣಂಶೈವ ; ಶಿಕ್ಷಾರಕ್ಷಣಕರ್ಮಣಿ || ವ್ಯಾಖ್ಯಾನೇಚ ವಿಸರ್ಗೇಚ | ಯಸ್ಸ್ವತಂತ್ರಃ ಸವೈಗುರುಃ || ಮೋಕ್ಷಂ ಜನಯತೇ ಯಸ್ಮಾತ್ , ಕರ್ಮಣಾ ಗುರುತ್ವಮಾಃ ' ತಸ್ಮಿನ್ವ್ಯಾಖ್ಯಾನಾಚ ಸರ್ವೇಷಾಂ ; ತತ್ವಾರ್ಥಸ್ಯಾಂತರ್ಭಂ ಭವೇತಾ || ಉಪದೇಶೇ ವಿವಾಹೇಚ | ಶಿಕ್ಷಾಯಾಂ ರಕ್ಷಣೇಪಿಚ || ಕಾರಣತ್ವಾದ್ ಗುರವಃ ; ಪ್ರಧಾನಾಸ್ತೇ ಪ್ರಕೀರ್ತಿತಾಃ || ಅಂದರೆ ಯಾವನು ಶಿಕ್ಷಾ, ರಕ್ಷಣ, ವ್ಯಾಖ್ಯಾನ, ವಿಸರ್ಗ, ವಿವಾಹ, ಉಪದೇಶಮಾಡೋಣದಲ್ಲಿ ಸ್ವತಂತ್ರನೋ ಅವನೇ ಮುಖ್ಯ ಗುರುವೆನಿಸಿಕೊಳ್ಳುತ್ತಾನೆ. ಅಂಥಾ ಸದ್ಗುರೋತ್ತಮಗುರುಗಳೇ ನಮ್ಮ ಐದುಮುಖಗಳಿಂದುದಿಸಿದ **ಪಂಚಾಚಾರ್ಯರಿರುತ್ತಾರೆ.** ಅವರ ಸಾಮರ್ಥ್ಯವು ಅವರ ಶಿಷ್ಯರಾದ ಇಷ್ಟುದಿನದ ವೀರಶೈವರಿಗೆ ಹೇಗೆ ಬಂದೀತು? ಎಂದು ಸಾಕ್ಷಾತ್ಪರಶಿವನು ಪಾರ್ವತೀದೇವಿಯರ ಮುಂದೆ ಅಪ್ಪಣೆಕೊಡಿಸಿರುವನು. ಅಲ್ಲದೆ—ಶ್ಲೋಕ|| ನಗುರೋರಧಿಕಂ ತತ್ತ್ವಂ | ನಗುರೋರಧಿಕಂ ತಪಃ || ತತ್ತ್ವಜ್ಞಾನಾತ್ಪರತರಂ ನಾಸ್ತಿ , ತಸ್ಮೈಶ್ರೀಗುರವೇನಮಃ || ಧ್ಯಾನಮೂಲಂ ಗುರೋರ್ಮೂರ್ತಿಃ ; ಪೂಜಾಮೂಲಂ ಗುರೋಃಪದಂ || ಮಂತ್ರಮೂಲಂ ಗುರೋರ್ವಾಕ್ಯಂ , ಮೋಕ್ಷಮೂಲಂ ಗುರೋಃಕೃಪಾ || ಈಪ್ರಕಾರ ಬೋಧಿಸಿರುವ ಗುರುಗೀತೋಕ್ತಿಯಂತೆ ಶ್ರೀಮನ್ನಿಜಗುಣ ಶಿವಯೋಗಿಗಳಾದರೂ ತಮ್ಮ ಕೈವಲ್ಯಪದ್ಧತಿಯ ಮೊದಲನೇ ಪದದಲ್ಲಿ—ಶ್ರೀಗುರುವಚನೋಪದೇಶವನಾಲಿಸಿ ದಾಗಳುಮುನವರಿಗೆ ಮುಕ್ತಿ || ಎಂದು ಬೋಧಿಸಿರುವರು. ಯಾಕೆಂದರೆ ಜಗತ್ತೆಲ್ಲ ಶಿವವ್ಯಾಪ್ತವಾಗಿದ್ದರೂ ಅದರ ಸ್ವರೂಪವನ್ನು ಗುರುವಿನ ಹೊರತು ತಿಳಿಯಲಶಕ್ಯವಾಗಿರೋಣದರಿಂದಲೂ ಗುರುಕೃಪೆಯಾದ ಹೊರತು ಶಿವಜ್ಞಾನವಾಗುವದಸಾಧ್ಯವಾದ್ದರಿಂದಲೂ ಶಿವನಿಗಿಂತಲೂ ಗುರುವೇ ದೊಡ್ಡವನೆಂದು ಕಾಮಿಕಾಗಮದಲ್ಲಿ—ಶ್ಲೋಕ|| [illegible] | [illegible] || [illegible] | [illegible] || ಎಂದು ಹೇಳಿರುವರು. ಮತ್ತು ವ್ಯಾಸರಹಸ್ಯದಲ್ಲಿ—ಶ್ಲೋಕ|| ಅಂತಸ್ತಿಮಿರವಿಚ್ಛೇದ | ಭಾಸಕೇಶಾಮನೇ ನಮಃ || ಸದಾತೇಜಾಸಿನಾಂತಸ್ಸ್ವ ಶರಣೇಗುರವೇ ನಮಃ || ಎಂತಲೂ, ಶಿವಾದ್ವೈತದಲ್ಲಿ—ಶ್ಲೋಕ|| ಯಸ್ಯಾವಲೋಕನಮಾತ್ರೇಣ | ಯತಸ್ಸಿಷ್ಟಪ್ರವರ್ತತೇ || ದುರ್ಗಾಸಿದ್ಧಿಂ ತಮಾಶಾನಂ | ವಂದೇದೇಶಿಕಾಗ್ರಣಿಂ || ಎಂತಲೂ, ಸೂತಸಂಹಿತೆಯಲ್ಲಿ ಶ್ಲೋ|| ಅತೀಂದ್ರಿಯ [illegible] | ಆಹಾರ [illegible] ಶಿವಸಂಸಾರ | ಮೋಚಕಪ್ರದಮೂರ್ತಯೇ , ಎಂತಲೂ ಮತ್ತು ಮಹಾಭಾರತದಲ್ಲಿ—ಶ್ಲೋ|| ಬಿನಾಪ್ರಕಾಶಕಸ್ಸೂರ್ಯಃ ; ರಾತ್ರೌಚಂದ್ರಃಪ್ರಕಾಶಕಃ || ಗುರುಃಶಿಷ್ಯಸ್ಯ ಸತತ ಮಜ್ಞಾನತಿಮಿರಾಪಹಃ || ಎಂತಲೂ ಹಾಗೂ ಕ್ರಿಯಾಸಾರದಲ್ಲಿ ಶ್ಲೋ|| ಯಥಾಶಿವಸ್ತಥಾವಿದ್ಯಾ ; ಯಥಾವಿದ್ಯಾತಥಾಗುರುಃ ಶಿವವಿದ್ಯಾಗುರೂಣಾಂಚ | ಪೂಜಯಾಸದೃಶಂಫಲಂ ; ಸರ್ವದೇವಾತ್ಮಕಶ್ಚಾಸೌ ಸರ್ವಮಂತ್ರಮಯೋಗುರುಃ | ಎಂತಲೂ ಇವೇ ಮೊದಲಾದ ಅನೇಕ ಧರ್ಮಗ್ರಂಥಗಳಲ್ಲಿ ಗುರುಗೌರವವು ಕಂಠರವಮೂಲಕವಾಗಿರುವದು.

ಈಪ್ರಕಾರ ತನ್ನ ಭೋಗಮೋಕ್ಷಸಾಧನೆಗೆ ಗುರುವಿನ ಹೊರತು ಅನ್ಯಮಾರ್ಗವಿಲ್ಲವಿದ್ದಾಗ್ಯೂ ಗುರುವೇ ಪ್ರತ್ಯಕ್ಷ ದೈವವೆಂದು ನಂಬದೆ ಶಿವದ್ರೋಹಮನುಷ್ಯರಾತ ದುಷ್ಟಪಾಪಾದಿಗಳನ್ನು ನಡೆಸಿ ಯಾರು ಉಪೇಕ್ಷಿಸುವರೋ ಅಂಥವರ ಸಿರಿ, ಜ್ಞಾನ, ಆಯುಷ್ಯ, ಆಚಾರಗಳೆಲ್ಲ ಹಾಳಾಗಿಹೋಗುವವೆಂದು ಭಗವತ್ಪಾದರಾದ **ಶ್ರೀ ಜಗದ್ಗುರು ರೇಣುಕಶಿವಾಚಾರ್ಯರು** ಸಿದ್ಧಾಂತಶಿಖಾಮಣಿಯಲ್ಲಿ ಆಚಾರ್ಯನಿಂದಾ ವಚನಾತ್ ಶ್ರೇಯಸಾಂ ಪ್ರತ್ಯವಾಯಃ ಎಂತಲೂ ಮತ್ತು **ಶ್ರೀಮನ್ನೀಲಕಂಠ ಶಿವಾಚಾರ್ಯರು** ಕ್ರಿಯಾಸಾರದಲ್ಲಿ ಮಹಾಪಾತಕ [illegible] ಗುರೋಃ [illegible] '' ಎಂತಲೂ ಬೋಧಿಸಿರುವರು. ಅಂದಮೇಲೆ ಗುರುಭಕ್ತಿಯುತರಾದ ಮಾನವರು ಕಾಲಿಸಲಿಕ್ಕೆ ಸತ್ಪಥ ಹಾಗೂ ಗುರುಪಾಲಕರ ಮುಂದಾಗಲಿಕ್ಕೆ ಮತ್ತುಳಿದಾದವುಗಳು ಉತ್ಪ್ರಾಗವಾದ್ದನೇಕ ಧರ್ಮಗ್ರಂಥಗಳಲ್ಲಿ ಸ್ಪಷ್ಟೀಕರಿಸಿರುವವು.

ಹೀಗಿದ್ದು ಈಗಿನ ಜನರು ಸ್ವಪ್ರತಿಷ್ಠಾಕಾಂಕ್ಷೆಯಾದ ಪಕ್ಷಪಾತದ ಕೋಲಾಹಲದಲ್ಲಿ ಬಿದ್ದು ಸ್ವಧರ್ಮತೇಜೋಹೀನರಾಗಿ ಧರ್ಮಗುರುಗಳಲ್ಲಿ ಭಯಭಕ್ತಿಯನ್ನಿಡದೆ ಇಹಪರಲೋಕದ ಸುಖದುಃಖಗಳನ್ನು ಕಾಣದಾಗಾಚಾರ ಮನಸ್ಸಿನಲ್ಲಿಯೂ ಸ್ಥಿರವಿರದೆ ದುಃಖಭಾಗಿಗಳಾಗುತ್ತಿರುವರು. ಪತಿಪತ್ನಿಗಳಲ್ಲಿ ಪರಸ್ಪರ ಪ್ರೇಮಭಾವವಿಲ್ಲದಿರೋಣದೆ ಸಂಸಾರವು ಹೇಗೆ ಸುರಕ್ಷಿತವಾಗಿ ನಡೆಯಲಾರದೋ ತದ್ವತ್ ಗುರುವಿನಲ್ಲಿ ಸ್ನೇಹವನ್ನಿಲ್ಲದಿರೆ ಮನುಷ್ಯನಿಗೆ ಶಿವಜ್ಞಾನವು ಎಂದಿಗೂ ಲಭಿಸಲಾರದೆಂದು ಶಿವಯೋಗಿವರ್ಯರು ತ್ರಿವಿಧಿಯಲ್ಲಿ—[illegible] ಕಂಡೋಲ್ಪನುಕೊಟ್ಟ ಪರನುಳ್ಳಂಥ ಗುರುವ ನರನೆಂದು ಭಾವಿಸುವ , ನರಕಿಗಿಲ್ಲ ಮನೋವಿಯೋಗ || ಎಂದು ಹೇಳಿರುವರು.

ಕಾರಣ ಇಹಪರಲೋಕಸಾಧನೆಗೆ ಮುಖ್ಯಹೇತುವಾದ ಯಾವ ಶಿವ(ಬ್ರಹ್ಮ)ಜ್ಞಾನವೆಂಬುದೋ ಅಂಥಾ ಸದ್ವಿದ್ಯೆಯನ್ನು ಹೊಂದಬೇಕಾದರೆ **ಮತಸ್ಥಾಪನಾಚಾರ್ಯರಲ್ಲಿ**—ಯಸ್ಯದೇವೇಪರಾಭಕ್ತಿ | ರ್ಯಥಾ ದೇವೇತಥಾಗುರೌ || ಎಂಬ ಶ್ವೇತಾಶ್ವತರ ಶ್ರುತಿವಚನದಂತೆ ಸ್ವಚ್ಛವಾದ ದೃಢಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತಶೇಖರ, ಮಸ್ಕಿಗ.

ವಿಭೂತಿಪುರದ ಗುರುವರ್ಗಮಠದ
ಶ್ರೀ ಪಟ್ಟಾಧಿಕಾರಮಹೋತ್ಸವ

ಈ ಮಠವು ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನದ ಶಾಖಾಮಠವಾಗಿ ಬೆಂಗಳೂರಿಗೆ 7 ಮೈಲು ದೂರದಲ್ಲಿರುತ್ತದೆ. ಬೆಂಗಳೂರುಪೇಟೆ ಕಂಟೋನ್ಮೆಂಟು, ಶೆಟ್ಟರು, ಮಹಾಜನರು ದೈವದವರ ಸಮ್ಮತಿಯಿಂದ ಸಂಸ್ಥಾನದ ವೇ|| ಶ್ರೀ ಪಟ್ಟಾಧ್ಯಕ್ಷ ಗುರುಸಿದ್ಧ ಬಸವರಾಜೇಂದ್ರಸ್ವಾಮಿಗಳ ಶಿಷ್ಯರಾದ ಶಿವರುದ್ರಮುನಿದೇವರಿಗೆ ತಾ|| 27-6-1927 ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಸಲ್ಲುವ ಕರ್ಕಾಟಕಲಗ್ನ ಶುಭಾಂಶದಲ್ಲಿ ವಿಧ್ಯುಕ್ತಪ್ರಕಾರವಾಗಿ ಶ್ರೀ ರಂಭಾಪುರಮಠದ ಶ್ರೀ ಪಟ್ಟಾಧ್ಯಕ್ಷ ಚನ್ನಬಸವರಾಜೇಂದ್ರಸ್ವಾಮಿಗಳಿಂದ ಪಟ್ಟಾಧಿಕಾರವು ನಡೆಸಲ್ಪಟ್ಟಿತು. ಸದರಿ ಕಾರ್ಯಕ್ಕೆ ಬೆಂಗಳೂರುಪೇಟೆ ಹಲಸೂರು ಮೊದಲಾದ ಸುತ್ತುಮುತ್ತಣಪ್ರಾಂತಗಳಿಂದ ಅನೇಕರು ದಯಮಾಡಿಸಿ ಬಹಳ ವಿಜೃಂಭಣೆಯಿಂದ ನಡೆಸಿದರು. ಶಿವದೀಕ್ಷೆಯನ್ನು ಹೊಂದಲು 80 ಮಂದಿಗಳು ಬಂದಿದ್ದರು. ಈ ಕಾರ್ಯಕ್ಕೆ ದಯಮಾಡಿಸಿದ್ದ ಮಹಾಜನರಿಂದ ಶಿಫಾರಸಲ್ಪಟ್ಟ ಪಟ್ಟಾಧಿಕಾರ ಮತ್ತು ಶಿವದೀಕ್ಷೆ ಸಂಪುಟದಲ್ಲಿ ಈ ಮಠಕ್ಕೆ ಮೂಲಕರ್ತೃಗಳಾದ ಬಾಳೆಹೊನ್ನೂರಲ್ಲಿರುವ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಜಗದ್ಗುರು ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರಿಗೆ ಗುರುಕಾಣಿಕೆಯೊಂದಿಗೆ ಮುದ್ರ ಮಂಟಪ ಕಳಿಸಿಕೊಡತಕ್ಕದೆಂದು ನಿರ್ಣಯಿಸಲ್ಪಟ್ಟಿತು. ಮೈಸೂರಲ್ಲಿ ಹೊರಡುವ ವೀರಶೈವಮತೋದ್ಧಾರಕವಾದ ಪಂಚಾಚಾರ್ಯಪ್ರಭಾ ಪತ್ರಿಕೆಯ ಪ್ರೋತ್ಸಾಹನಕ್ಕೋಸ್ಕರ 5 ರೂ . ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ 5 ರೂ . ಸಹಾಯಾರ್ಥವಾಗಿ ತೆಗೆದು ಇಡಲ್ಪಟ್ಟಿತು. ಶ್ರೀ ಪಟ್ಟಾಧ್ಯಕ್ಷ ಶಿವರುದ್ರರಾಜೇಂದ್ರಸ್ವಾಮಿಗಳಿಗೆ ದೇವನಹಳ್ಳಿ ಶೆಟ್ಟರೂ, ಮಹಾಜನರೂ ಮುಂತಾದ ಭಕ್ತಮಂಡಳಿಯವರಿಂದ ಕಾಣಿಕೆಯೊಪ್ಪಿಸಲ್ಪಟ್ಟಿತು. ನಂತರ ಶ್ರೀಮನ್ಮಹಾರಾಜರವರ ಮತ್ತು ಅವರ ಕುಟುಂಬ ಪರಿವಾರದವರ ಶ್ರೇಯಃಪ್ರಾರ್ಥನೆ ನಡೆದು ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ

ಶ್ರೀ ಗುರುವರ್ಗ ಧರ್ಮಸುಧಾರಕ
ಪಾಠಶಾಲಾ, ಹಿರೇಪಡಸಗಿ

ನೀಳ ಸಂರಕ್ಷಕ ಮಹಾಶಯರಿಗೆ [illegible] ಶರಣಾರ್ಥಿ,

ಮಹಾಶಯರೇ !

ಜಗತ್ತಿನಲ್ಲಿ ನಾನಾ ಥ ಜಾತಿ [illegible] ಗಳು ಉಂಟು. ಅವುಗಳಲ್ಲಿ ಅನಾದಿ ಸಂಸ್ಥಾಪಿತವಾದ ವೀರಶೈವ ಮತವು ಕೇವಲ ಪರಮ [illegible] ಮತವಾಗಿಯೂ ಒಂದೇ ಒಸ್ಕದಲ್ಲಿ [illegible] ವಾಗಿಯೂ ಇರುವದು ವೇದಾಗಮಗಳಲ್ಲಿ [illegible] ಗಿದೆ. ಇಂಥಾ ಶ್ರೇಷ್ಠವಾದ ಮತದಲ್ಲಿ [illegible] ಸಾವ್ರಗಳು ಸುಧಾರಣೆ ಹೊಂದಲು ಅನೇಕ [illegible] ಇದ್ದು ಇದರಲ್ಲಿ [illegible] ಗುರುವರ್ಗ [illegible] ರಣೆಯಾಗುವುದು ಅತ್ಯವಶ್ಯಕವಾಗಿದೆ.

ಆದರೆ ಗುರುವರ್ಗದ (ಜಂಗಮರ) [illegible] ಪ್ರಥಮದಲ್ಲಿ ವೈದಿಕ ಶಿಕ್ಷಣವಂ ಪಡೆದು ಸದಾಚಾರ [illegible] ಮಾಡಲು [illegible] ಗುರುಗಳೆಂತೆ [illegible] ಸನ್ಮಾರ್ಗ [illegible] ಧರ್ಮವಾಗಿರುತ್ತದೆ.

ಆದರೆ ಈ (೨೦) ನೇ ಶತಮಾನದ ಕಾಲದಲ್ಲಿ [illegible] ಪ್ರತಿಯೊಂದು ಜಾತಿ ಮತದವರೂ ತಮ್ಮ ತಮ್ಮ (ಸಮಾಜ) ಮತದ ಸುಧಾರಣೆ ಸಲುವಾಗಿ ಹಗಲಿರುಳು ಸತತ ಪ್ರಯತ್ನ ನಡೆಸುತ್ತಲಿದ್ದಾರೆ. [illegible] ಗುರುವರ್ಗದವರು ಧಾರ್ಮಿಕ [illegible] ಕೇವಲ ಉದರಂಭರಣಾರ್ಥ [illegible] ವೈದಿಕ [illegible] ದ ಕಾರ್ಯಗಳನ್ನು ಮಾಡುತ್ತಿರುವರು [illegible] ವಾಗುತ್ತದೆ. ಇದರಿಂದ [illegible] ಮಾನವನು ತನ್ನ ಜೀವನವು ಪರಮಾರ್ಥ [illegible] ಭಿವೃದ್ಧಿಯನ್ನು [illegible] ಸಾರ್ಥಕಮಾಡುವದು ಮುಖ್ಯ ಕರ್ತವ್ಯವಲ್ಲವೇ? ಇತ್ಯಾದಿ ವಿಷಯಗಳನ್ನು ಪರ್ಯಾಲೋಚಿಸಿ ಸಮಾಜ ಸುಧಾರಣೆಯ ಸಲುವಾಗಿ [illegible] (ತಾ|| ೬-೧೧-೧೯೩೬ ನೇ ದಿವಸ) ವೈದಿಕ ಪಾಠಶಾಲೆಯನ್ನು ಸ್ಥಾಪಿಸಿ ಇದಕ್ಕೆ ಶ್ರೀಗುರುವರ್ಗ ಸುಧಾರಕ ಪಾಠಶಾಲಾ ಎಂಬ ನಾಮಕರಣವು ಮಾಡಲ್ಪಟ್ಟಿದೆ. ಆದಕಾರಣ ಈ ಪಾಠಶಾಲೆಯಲ್ಲಿ ಅಭ್ಯಾಸ ಮಾಡುವ ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಕೆಳಗೆ ಬರೆದ ನಿಯಮಗಳ ಮೇರೆಗೆ [illegible] ವಿದ್ಯಾಭ್ಯಾಸ ಮಾಡತಕ್ಕದ್ದು.

೧ ವಿದ್ಯಾರ್ಥಿಯು ೧೨ ವರ್ಷದ ವಯಸ್ಸಿನ ಮೇಲಿದ್ದು ಕನ್ನಡ ೪ನೇ ತರಗತಿಯವರೆಗೆ ಅಭ್ಯಾಸ ಮಾಡಿರತಕ್ಕದ್ದು.

೨ ವಿದ್ಯಾರ್ಥಿಯ ತಂದೆ ಅಥವಾ ಪಾಲಕರು ಈ ಶಾಲೆಯಲ್ಲಿ ಕನಿಷ್ಠಪಕ್ಷ ೪ ವರುಷಗಳ ವರೆಗೆ ಅಭ್ಯಾಸಕ್ಕೆ ಇಡಲು ಒಪ್ಪಿ ಕರಾರುಪತ್ರ ಬರಕೊಡತಕ್ಕದ್ದು.

೩ ವಿದ್ಯಾರ್ಥಿಗಳಿಗೆ ಇಲ್ಲಿ ಊಟದ ವ್ಯವಸ್ಥೆ ಮಾಡಲ್ಪಡುತ್ತದೆ. ಇದರ ಪುಸ್ತಕ ಬಟ್ಟೆ ಮುಂತಾದ ಖರ್ಚುಗಳನ್ನು ತಾವೇ ನೋಡಿಕೊಳ್ಳತಕ್ಕದ್ದು.

೪ ಈ ಶಾಲೆಯಲ್ಲಿ ಹೇಳತಕ್ಕ ವಿಷಯಗಳು — ಸಂಸ್ಕೃತ ವೈದಿಕ ಅಂದರೆ ಆಚಾರಕ್ರಮಗಳು ಲಿಂಗಧಾರಣ ದೀಕ್ಷಾವಿಧಾನ ಮೊದಲಾದ ಧಾರ್ಮಿಕ ಕಾರ್ಯಗಳನ್ನು ವಿದ್ಯುಕ್ತವಾಗಿ ಮಾಡಿಸತಕ್ಕ ವಿಧಿಗಳು ಮತ್ತು [illegible] ಹೇಳಲ್ಪಡುತ್ತವೆ.

ಹೆಚ್ಚಿನ ಸಂಗತಿ ಸಮಕ್ಷಮ ತಿಳಿಯುವದು

ಈ ಪ್ರಕಾರ ಇಲ್ಲಿ ಮೊದಲು ವೈದಿಕ ವಿದ್ಯಾ ಸಮಾಪ್ತಿ ಹೊಂದಿ [illegible] ಬೇಕಾದಂಥ ಪ್ರಸಂಗದಲ್ಲಿ ಅನುಕೂಲವಾದ [illegible] ಗಳಲ್ಲಿ [illegible] ಸಂಪೂರ್ಣ ಶಾಸ್ತ್ರಾಧ್ಯಯನವನ್ನಾದರೂ ಮಾಡಬಹುದು. ಇದರಿಂದ [illegible] ಹೊಂದು [illegible] ದವರೂ ತಮ್ಮಲ್ಲಿ [illegible] ಧರ್ಮಾತ್ಮರಿಂದ [illegible] ಆಹಾರದಾನ [illegible] ಆದ್ದರಿಂದ [illegible] ಪಾಠಶಾಲೆ [illegible] ವಿದ್ಯಾರ್ಥಿ [illegible] ಸಹಾಯ [illegible] ಮಾಡಬೇಕೆಂದು [illegible]

ಪಾಠಶಾಲಾ ಕಾರ್ಯದರ್ಶಿ
ಶ್ರೀ [illegible] ಪಡಸಗಿ [illegible]

ಸೂಚನೆಯು

[illegible] ಕಾರ್ತಿಕ [illegible] ನಡೆಯುವ [illegible] ಪೂಜೆಗಾಗಿ [illegible] ಅಪೇಕ್ಷಿಸುವ [illegible] ಅವರಿಗೆ [illegible] ಬರೆಯತಕ್ಕದು [illegible] ಗದಗದಲ್ಲಿ [illegible] ಕಟಿವಲ್ಲರುತ್ತದೆ

[illegible] ವೇದಾಂತ [illegible]
ಪ್ರೊ|| ಶಿವಮೂರ್ತಿ, ದಿ|| ಗದವಾಲ.
ತಾ|| [illegible]

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವಿದಿತವೇ ಇದೆ. ಈ ಪತ್ರಿಕೆಯನ್ನು ಅತ್ಯಂತ ಊರ್ಜಿತಾವಸ್ಥೆಗೆ ತರಬೇಕೆಂದು ಬಹಳ [illegible] ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಪ್ರಾರ್ಥಿಸುತ್ತೇವೆ.

ಸಂಪಾದಕರು.

ASIATIC GOVERNMENT SECURITY
LIFE ASSURANCE CO. LTD. MYSO
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಸ್ಯೂರನ್ಸ್ ಕಂಪನಿ, ಮೈಸೂರು

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮಾ ಸಂಘಗಳಲ್ಲಿ [illegible]

ಇದು [illegible] 'ಏಶ್ಯಾಟಿಕ್' [illegible] ಯಲ್ಲಿಯೇ [illegible]

[illegible] ಇದರ [illegible] ಇದರ [illegible] (ಸ್ಕೀಮು) [illegible]

[illegible] ಹಣ [illegible] ಪಾಲಿಸಿದಾರರಿಗೆ [illegible] ಸತ್ತಿನ ಮೇಲೆಯೂ [illegible] ಕೂಡುತ್ತದೆ.

[illegible] 31 ನೇ ಜುಲೈ 1937 ಕ್ಕೆ ನಡೆಯುತ್ತ [illegible] ಏಜೆಂಟರು [illegible] ಬರೆಯಬಹುದು

(1) ಸ| ಬಿ. ರಾಮರಾವ್,
ಚೀಫ್ [illegible] ಮೈಸೂರು
( ) ಮಿ|| [illegible] ಅರಸು
ಚೀಫ್ [illegible]
(3) ಹೈದರಾಬಾದ್ [illegible]
ಚೀಫ್ [illegible] ಹೈದರಾಬಾದ್ (ದಕ್ಷಿಣ [illegible]
[illegible] ಮೈಸೂರು Tata Building

[illegible] ಯವರ
ಸುಗಂಧ ನಶ್ಯದಪುಡಿ

ಶ್ರೇಷ್ಠವಾದ ಈ ಸುಗಂಧ ನಶ್ಯದಪುಡಿಯು [illegible] ನಾವರಾದ [illegible] ಉಪಯೋಗಿಸಿ [illegible] ಯೋಗ್ಯತಾಪತ್ರಗಳನ್ನು ಕೊಟ್ಟಿರುವರು [illegible] ಈ ನಶ್ಯದ ಪುಡಿಯಿಂದ [illegible] ವ್ಯಾಧಿಗಳು [illegible] ತಲೆನೋವು [illegible] ಕಣ್ಣುಗಳಲ್ಲಿ ಉಂಟಾಗತಕ್ಕ [illegible] ಮುಂತಾದ ರೋಗಗಳು ಪರಿಹಾರವಾಗುತ್ತವೆ. [illegible] ವ್ಯಾಧಿಗಳನ್ನು [illegible] ಜ್ಞಾಪಕಶಕ್ತಿಯನ್ನು [illegible] ಸಾಧಾರಣ [illegible] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಡಬ್ಬಿಯನ್ನು [illegible] ಕುಟುಂಬ [illegible]

[illegible] ಒಂದಕ್ಕೆ [illegible]
[illegible] ಒಂದಕ್ಕೆ [illegible]
[illegible] ಅಡ್ರೆಸ್ಸನ್ನು [illegible]

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[illegible]

[illegible] ಮೈಸೂರು [illegible] ಪಂಚಾಚಾರ್ಯ ಪ್ರಿಂಟಿಂಗ ಪ್ರೆಸ್ಸಿನಲ್ಲಿ [illegible] ಪಂಡಿತ [illegible] ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಗಮಸೂಕ್ತಪಾರನಿಧಿಃ ಪಂಚಾಸ್ಯವೀರಾಸನಃ | ಪಂಚಕ್ಲೇಶವಿನಾಶನಃ ಪಟುತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪಂಚತತ್ವಾರ್ಥಪ್ರಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮಗುರುಃ ಸಂರಕ್ಷತು ಪೃಥ್ವೀಲೋಕಮ್ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ವರಿಗೆ ೧ ರೂ. ೧೧ ಆಣೆ — ಬಿಡಿ ಪ್ರತಿ ೧ಕ್ಕೆ ೯ ಪೈ — ಪರಸ್ಥಳದವರಿಗೆ ೨ ರೂ. ೮ ಆಣೆ

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಜುಲೈ ೧೯೨೭ ಇಸವಿ [ಸಂಚಿಕೆ ೧೧.

ರಂಭಾಪುರೀ ವೀರಸಿಂಹಾಸನಾಧೀಶ್ವರರಾದ
ನವ ರೇಣುಕ

ಶ್ರೀ ಜಗದ್ಗುರು ಶಿವಾನಂದರಾಜೇಂದ್ರ
ಶಿವಾಚಾರ್ಯಮಹಾಸ್ವಾಮಿಗಳವರ
ದಿವ್ಯಸನ್ನಿಧಿಯಲ್ಲಿ ಭಕ್ತಿಯಿಂದೊಪ್ಪಿಸಿದ

“ಪಂಚರತ್ನಮಾಲಿಕೆ”

ಕಂ|| ಸೋಮೇಶಲಿಂಗದಿಂದಂ
ಸೋಮೇಶನರೂಪಿನಿಂದೆ ಪುಟ್ಟಿದವರಯೋಳ್ ||
ಸೋಮೇಶ ಭಕ್ತ ವೃಂದಕ,
ಪ್ರೇಮ ರೇಣುಕಾಂಕ ಲಿಂಗವಿತ್ತಪ ಪಾತ್ರ ||

ಮ|| ಮಾ||
ಮುಪನು ರೇಣುಕಾರ್ಯ ಗುರುಪುಂಗವ ಮದ್ಗುರು
ಯೋಗಿಶೇ | ಖರ ಪರಮಾಪಶಾತ ಶರಣಾಗತ
ಕುಂಭಸಂಭವಾ || ದುರುಳ ವಿಭೀಷಣಾ
ಕರ ಶಂಕರ ನಿತ್ಯಶುದ್ಧ ನಿಂ | ಪೊರೆವುದು
ನನ್ನ ಮರಬಿಕ್ಕಪೇಕ್ಷ ಕಟಾಕ್ಷದಿಂ ||೨||

ಶಾ|| ವಿ||
ಲಿಂಗಾಂಗಿ ಪೂಜ್ಯರ ನಾಮ್ಯಪೂಜ್ಯರಾ ತಾನಿ
ಲ್ಲಿಲ್ಲವು | ಲಿಂಗಾಂಗೀ ಮತವೊಂದೆ ಧರ್ಮ
ಕೇಳೆಂದುಪದೇಶಮಂ || ಪಲಾಂಗಲಾ ಕರೆಯುತ್ತ
[illegible] ಪೂರ್ವದೋಳ್ ಶ್ರೇವ ದಿಂ |
ಗಾಂಗೀ ಜನರಂತು ವರ್ತಿಸುವರೇಂ ಶ್ರೀ ರೇಣು
ಕಾರ್ಯನೇ ||

ರಕ್ಷಾ ರತ್ನ ಸುಪಕ್ಷ ಯಕ್ಷ ಜನಿತಾ ಸಾಕ್ಷಾದ್ವಿರೂ
ಪಾಕ್ಷನೇ | ಮೋಕ್ಷಾ ಧ್ಯಕ್ಷ ವಿನುತ್ಯನಿತ್ಯ ನಿಜಪದು
ಪಕ್ಷ ಸಂಪೋಷಿತಾ || ಸಾಕ್ಷಾದ್ರೇಣುಕ ಲಕ್ಷ
ಣಾಂಕಿತ ಪ್ರಖ್ಯಾಜಿತಾ | ಅಕ್ಷಯ್ಯಂ ಮನು
ಪಕ್ಷ ಸನ್ನೋಪಮ ರಕ್ಷಿಪ್ಪುದೆಸ್ಮಂ ಸದಾ ||

ಕಂ|| ಧಾರುಣಿಯೊಳು ಜನಗಳ್ |
ನಾರಾಂಗನಿಜನಿಷ್ಪದೇವನಾ ಗುರುವಂ ||
ಧೀರತೆಯೊಳು ನೀ ಸೇವಿಪ |
ನಾರಿದರ್ಯ ನಮ್ಮ ವೀರಶೈವದ ಬಲಮಂ

ಲೇಖಕ— ಶಿವಮೂರ್ತಿಶಾಸ್ತ್ರಿ, ಕೀರ್ತನಕಾರ,
ತುಮಕೂರು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಂಚಾಚಾರ್ಯಪ್ರಭೆಗೆ ಧನ್ಯವಾದ

ಲೋಕದಲ್ಲಿ ಯಾವುದಾದರೊಂದು ಪದಾರ್ಥವನ್ನು ನೋಡಬೇಕಾದರೆ ಸೂರ್ಯ ಚಂದ್ರಾದಿಗಳ ಪ್ರಭೆಯು ಅವಶ್ಯವಾಗಿರುವಂತೆಯೂ ಪ್ರಭೆಯು ಇಲ್ಲದ ಕಾರ್ಗತ್ತಲೆಯಲ್ಲಿ ಯಥಾವತ್ತಾಗಿ ನೋಡಲಾಗದಿರುವಂತೆಯೂ ಆಚಾರ್ಯರ ಪ್ರಭೆ ಇಲ್ಲದ ಅಜ್ಞಾನಾಂಧಕಾರದಲ್ಲಿದ್ದ ವೀರಶೈವರಾದ ನಾವುಗಳು ವೀರಶೈವ ಸಿದ್ಧಾಂತ ರತ್ನಗಳನ್ನು ಕಂಡುಹಿಡಿದು ಆನಂದವನ್ನು ಹೊಂದುವಾಗಲಿಲ್ಲ. ಈ ಕಾಲದಲ್ಲಂತೂ ಅಜ್ಞಾನರೂಪವಾದ ಗಾಢಾಂಧಕಾರವು ನವ ನವ ವೀರಶೈವರನ್ನು ವ್ಯಾಪಿಸಿ ಅಂಧರನ್ನಾಗಿ ಮಾಡಿಬಿಟ್ಟದೆ. ಅಂಥ ಸ್ಥಿತಿ ಸಿದ್ಧಾಂತ ರತ್ನಗಳನ್ನು ವೀರಶೈವರು ಹುಡುಕುವ ಬಗೆ ಹೇಗೆ? ವೀರಶೈವರಲ್ಲಿ ಗುರುಗಳಾದ ಆಚಾರ್ಯರೆಂಬುವ ಸಿದ್ಧಾಂತ ಜ್ಞಾನವಿಲ್ಲ. ನವ ನವ ವೀರಶೈವರಿಗೆ ಬಸವ ಯೋಗ್ಯವಾದುದೂ ಮೋಕ್ಷದಾಯಕವಾದುದೂ ಇರುವ ಸಿದ್ಧಾಂತವಾವುದೆಂಬ ಸಿದ್ಧಾಂತ ಜ್ಞಾನವಿಲ್ಲ. ವರ್ಣಾಶ್ರಮಗಳ ಜ್ಞಾನವಿಲ್ಲ. ಪಂಚಾಕ್ಷರ ಮಂತ್ರವೆಂದರೆ ಮತ್ತೆ ಕೆಲವರು [illegible] ಮಂತ್ರವನ್ನು ವರು. ಎಲ್ಲಾ ವೀರಶೈವರುಗಳು ಒಂದೇ ವರ್ಣವೆಂದು ಕೆಲವರು, ನಾಲ್ಕು ವರ್ಣಗಳೆಂದು ಕೆಲವರು, ಕೆಲವು ವಿಪ್ರರು ಆಚಾರ್ಯರಿಂದಲೇ ಮಂತ್ರೋಪದೇಶವನ್ನು ಪಡೆಯಬೇಕೆನ್ನುವರು. ಮತ್ತೆ ಕೆಲವು ವೀರಶೈವರು ಸನ್ಯಾಸಿಗಳಾದವರೂ ಶಿವದೀಕ್ಷೆ ಅಧಿಕಾರವಿಲ್ಲವೆಂದು ಒಕ್ಕಲಮಕ್ಕಳಿಗೆ ತಕ್ಕ ಶಿವದೀಕ್ಷೆಯ ಕಾಲದಲ್ಲಿ ಕಲ್ಪ ಅನಾದಿಕಾಲದಿಂದ ಮೋಕ್ಷಸಾಧನವಾಗಿರುವ ಪಂಚಾಕ್ಷರ ಮಹಾಮಂತ್ರವು ಅನುಗ್ರಹಿಸಲ್ಪಟ್ಟರೂ ಅದರ ಮೇಲೆ ಪುನಃ ಅನುಗ್ರಹವೆಂದು ಮತ್ತಾವುದೋ ಒಂದನ್ನು ಮಂತ್ರವೆಂದು ಅದನ್ನು [illegible] ಕೆಲವು ವೀರಶೈವರಲ್ಲಿ ಕಂಡುಬರುತ್ತದೆ. ಇದು ಅಲ್ಲದೆ ಕೆಲವರು ಸತ್ತ [illegible] ಕಲಶಗಳನ್ನು [illegible] ಇನ್ನು ಅನೇಕ ಪದ್ಧತಿಗಳು ಧಾರ್ಮಿಕ ವಿಷಯದಲ್ಲಿ ಕಂಡುಬರುತ್ತವೆ. ಇಂಥಾ ವ್ಯತ್ಯಾಸಗಳು ವೀರಶೈವರಾದ ನಮಗಳಿಗೆ ನಿಶ್ಚಿತಜ್ಞಾನವಿಲ್ಲದಿರುವುದರಿಂದಲೂ ಸತ್ಯಾಸತ್ಯಗಳ ವಿವೇಕವಿಲ್ಲದಿರುವುದರಿಂದಲೂ ಅನುಸರಿಸ ತಕ್ಕುದೆಂದು ಹೇಳುವಲ್ಲಿ ಯಾವ ಸಂಶಯವೂ ಇಲ್ಲ. ಹೀಗೆ ನಮ್ಮ ಧಾರ್ಮಿಕ ಕಾರ್ಯಗಳು ವ್ಯತ್ಯಾಸದಿಂದ ವೀರಶೈವ ಸಮಾಜವೇ ವಿಷಮಾವಸ್ಥೆಗೆ ಬಂದು ಕಾರ್ಯಾಕಾರ್ಯದ ಜ್ಞಾನವಿಲ್ಲದೆ ಅತ್ಯಂತ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿದೆ. ಇಂಥ ಅಂಧಕಾರವನ್ನು ನಾಶಮಾಡುವುದಕ್ಕೂ ವೈದಿಕ ಸಿದ್ಧಾಂತ ರತ್ನಗಳನ್ನು ತೋರಿಸುವುದಕ್ಕೂ ಅವುಗಳನ್ನು ನಿರ್ಣಯಿಸುವುದಕ್ಕೂ ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯ [illegible] ಪ್ರಭೆಯಿಂದಲ ಚಿತ್ಪ್ರಕಾಶವ ಪಂಚಾಚಾರ್ಯರ ಚಿತ್ಪ್ರಕಾಶರೂಪವು ಒಂದನೆ ಪುಟದಲ್ಲಿ ಯಾವಾ ತನುಸ್ವಸ್ವ ದಿವಾರಾತ್ರಿ ಎಂಬುವ ಸ್ಮೃತಿಯಲ್ಲಿ ಹೇಳಿದಂತೆ ದಿವಾರಾತ್ರಿಗಳ ಭೇದವೂ ಯಾವಾ ಕಾಲದ [illegible] ಇಲ್ಲದೆ [illegible] ಅತ್ಯಂತ ಅಜ್ಞಾನಾಂಧಕಾರವನ್ನು ಯಾವ ಪ್ರಪಂಚವೂ ಇಲ್ಲದಿರುವಾಗ ಆ ಶರಣರ [illegible] ತನ್ನ ಪ್ರಭಾ ಶಕ್ತಿಯನ್ನು [illegible] ಜಗತ್ತಿನ ವ್ಯವಸ್ಥೆಯನ್ನುಂಟುಮಾಡಿದಂತೆ ರೇಣುಕಾದಿ ಪಂಚಾಚಾರ್ಯರೂ ಕೂಡ ತಾವು ಪೂರ್ವದಲ್ಲಿ ಸ್ಥಾಪಿಸಿದ ವೀರಶೈವ ಮತದ ಮರ್ಯಾದೆಯನ್ನು ನೋಡಿ ಅಯ್ಯೋ! ನಮ್ಮ ಸಿದ್ಧಾಂತ ರತ್ನಗಳನ್ನು ಬಿಟ್ಟು ಅಜ್ಞಾನಾಂಧಕಾರದಿಂದ ಕುರುಡರಾದ ನಮ್ಮ ಶಿಷ್ಯರು ಅಸಿದ್ಧಾಂತಗಳಿಂದ ಗಾಬರಿಗೆ [illegible] ಎಂದು ಕನಿಕರದಿಂದ ತಮ್ಮ ಚಿತ್ಪ್ರಭೆಯನ್ನು ಪ್ರಕಟಗೊಳಿಸಿರುವರೆಂಬುವಲ್ಲಿ ಸಂಶಯವಿಲ್ಲ. ಆ ಪಂಚಾಚಾರ್ಯರ ಚಿತ್ಪ್ರಭೆಯೇ ಮೂರ್ತೀಭವಿಸಿ ಪಂಚಾಚಾರ್ಯಪ್ರಭಾ ಪತ್ರಿಕೆಯೆಂಬುವ ಹೆಸರಿನಿಂದ ಪ್ರಕಟವಾಗಿರುವದೆಂಬುವದು ಕಾರ್ಯಜ್ಞರೆಲ್ಲರಿಗೂ ತಿಳಿಯತಕ್ಕ ಸಂಗತಿಯಾಗಿದೆ. ಅಷ್ಟರಿಂದಲೇ [illegible] ಜನ್ಮಾಂತ ತಿಳಿದ ಈ ಪತ್ರಿಕೆಯು ಹೊರಬಂದುದರಿಂದ ಎಷ್ಟೋ ಜನರು ತಮ್ಮ ಅಜ್ಞಾನವನ್ನು ಬಿಟ್ಟು ನಿಜಲಿಂಗ ಭಕ್ತಿ ಜ್ಞಾನ. ಪಂಚಾಚಾರ್ಯಪ್ರಭೆಯೇ ನೀನು ಪ್ರಕಟವಾಗಿ ~~[illegible]~~ ದಿಗಂತಗಳನ್ನು ವ್ಯಾಪಿಸಿಬಿಟ್ಟಿರುವಿಯಲ್ಲವೇ? ನೀನೇ ಧನ್ಯಳು. ನೀನು ಇನ್ನೂ ಸಂದಿಗೊಂದಿಗಳಲ್ಲಿಯೂ ಕೂಡ ಹರಡಿಕೊಂಡು ಎಲ್ಲಾ ವೀರಶೈವರನ್ನು ಮೋಹಗೊಳಿಸುವ ಶಾಸ್ತ್ರಸಮ್ಮತವಲ್ಲದ ಅಸಿದ್ಧಾಂತಗಳಿಗೆ ಮೂಲ ಕಾರಣವಾಗಿ ನಮ್ಮ ಸಮಾಜಕ್ಕೆ ಅಂಟಿರುವ ಅಜ್ಞಾನವೆಂಬ ಕಾರ್ಗತ್ತಲೆಯನ್ನು ಧ್ವಂಸ ಮಾಡಿ ಲೋಕದಲ್ಲಿ ವಿಖ್ಯಾತಳಾಗಿ ನಿಷ್ಪಕ್ಷಪಾತದಿಂದಲೂ ನಿರ್ಭೀತಿಯಿಂದಲೂ ವೀರಶೈವ ಮತದ ವೈದಿಕ ಸಿದ್ಧಾಂತಗಳನ್ನು ಎಲ್ಲಾ ವೀರಶೈವರಿಗೆ ತೋರಿಸಿ ಅವರಿಗೆ ಸದ್ಗತಿಯನ್ನುಂಟುಮಾಡುವ ನೀನೇ ಧನ್ಯಳು. [illegible] ಮಾರ್ಗದಲ್ಲಿ ಹುಟ್ಟಿ ಹೋಗುವವರನ್ನು ಸನ್ಮಾರ್ಗಕ್ಕೆ ಹಚ್ಚಿ ನಮ್ಮವರನ್ನಾಗಿ ಮಾಡುವ ನೀನೇ ಧನ್ಯಳು. ವ್ಯವಹಾರಿಕ ನೈತಿಕ ಪಾರಮಾರ್ಥಿಕ ಜ್ಞಾನವಿಲ್ಲದೆ ಬಳಲುವ ಜನಗಳಿಗೆ ಅವುಗಳ ಜ್ಞಾನವನ್ನುಂಟು ಮಾಡಿ ಸುಖಿಗಳನ್ನಾಗಿ ಮಾಡುವ ನೀನೇ ಧನ್ಯಳು. ನೀನು ಹೊರಟು ಬಂದಾಗಿನಿಂದ ನನಗಾದ ಸಂತೋಷಕ್ಕೆ ಪ್ರತಿಫಲರೂಪವಾಗಿ ನಿನಗೆ ಎಷ್ಟು ಧನ್ಯವಾದವನ್ನರ್ಪಿಸಿದರೂ ಅಲ್ಪವೇ ಆಗಿದೆ. ಪಂಚಾಚಾರ್ಯಪ್ರಭೆಯೇ ನೀನು ಲೋಕದಲ್ಲಿ ಚಿರಕಾಲ ಬಾಳಿ ಎಂದು ನಿನ್ನ ಯೋಗಕ್ಷೇಮವನ್ನು ಶ್ರೀ ಜಗದ್ಗುರು ಪಂಚಾಚಾರ್ಯರೂ ಅವರ ಶಿಷ್ಯ ಮಂಡಲಿಯವರಾದ ಸಮಸ್ತ ವೀರಶೈವರೂ ನೋಡಿಕೊಳ್ಳುತ್ತಿರಬೇಕೆಂತಲೂ ನಿನಗೆ ಬೇಕಾದ ಸಹಾಯ ಸಂಪತ್ತನ್ನು ಒದಗಿಸಿಕೊಡುತ್ತಿರಬೇಕೆಂತಲೂ ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಪ್ರಾರ್ಥನೆ ಮಾಡಿ ಈ ಲೇಖನವನ್ನು ಮುಗಿಸುವೆನು.

[illegible] ವೀರಪ್ಪಯ್ಯ

ಪಂಚಾಚಾರ್ಯಪ್ರಭಾ

೧೯೨೭ನೇ ಜುಲೈ ತಾ|| ೨೫ನೇ ಸೋಮವಾರ

ಮೈಸೂರು ರಾಜಧಾನಿಗೆ ಮಹಾತ್ಮಾಗಾಂಧಿಯವರ ಆಗಮನ

ಮಹಾತ್ಮಾ ಗಾಂಧಿಯವರು ಇದೇ ಜುಲೈ ೧೯ನೇ ತಾ|| ಮಂಗಳವಾರ ಪ್ರಾತಃಕಾಲ ೭ ಘಂಟೆಗೆ ಸರಿಯಾಗಿ ರಾಜಧಾನಿಗೆ ದಯಮಾಡಿದರು. ಈ ಮಹಾಶಯರನ್ನು ಎದುರುಗೊಳ್ಳುವುದಕ್ಕಾಗಿ ಸ್ವಾಗತಸಭಾಧ್ಯಕ್ಷರಾದ ಧರ್ಮಪ್ರಕಾಶ ರಾ|| ಬಿ. ಪುಟ್ಟಯ್ಯನವರು ರಾ|| ಎಂ. ವೆಂಕಟಕೃಷ್ಣಯ್ಯನವರು ಮುಂತಾದ ಪುರಪ್ರಮುಖರೂ ಡೆಪ್ಯುಟಿಕಮೀಷನರವರೂ ಮ್ಯುನಿಸಿಪಲ್ ಪ್ರೆಸಿಡೆಂಟರೂ ಅರಮನೆ ಕಂಟ್ರೋಲರರೂ ಮುಂತಾದ ಸರ್ಕಾರಿ ಉದ್ಯೋಗಿಗಳೂ ಸ್ಟೇಷನ್ನಿನ ಬಳಿ ಕಾದಿದ್ದರು. ಗಾಂಧಿಯವರು ರೈಲಿನಿಂದ ಇಳಿದೊಡನೆ ಎಲ್ಲರೂ ಮಹಾಪೂರ್ವಕವಾದ ಶ್ರದ್ಧೆಯಿಂದೊಡಗೂಡಿ ಮಹಾತ್ಮರ ದರ್ಶನವ ಪಡೆದು ಇವರ ಸತ್ಸಂಕಲ್ಪದಂತೆ ಖಾದಿಯಿಂದ ರಚಿಸಿದ ಮಾಲಿಕಾದಿಗಳಿಂದಲೇ ಸತ್ಕರಿಸಿ ಸುಸ್ವಾಗತವನ್ನಿತ್ತರು. ಅನಂತರ ಗಾಂಧಿಯವರನ್ನೂ ಇವರ ಧರ್ಮಪತ್ನಿಯಾದ ಶ್ರೀಮತಿ ಕಸ್ತೂರಿ ಬಾಯಿಯವರನ್ನೂ ಒಂದೇ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಮಾರ್ದ್ರ್ಯ ಹೋಟಲಿನ ಮಾರ್ಗವಾಗಿ ಪ್ರಯಾಣ ಬೆಳೆಸಿದರು. ಉಭಯ ಪಾರ್ಶ್ವಗಳಲ್ಲಿಯೂ ಪ್ರೇಕ್ಷಕರ ಜಯಜಯಕಾರಗಳಾದ ಧ್ವನಿಗಳು ಮಹದಂತರಿಕ್ಷವನ್ನು ವ್ಯಾಪಿಸಿದ್ದುವು. ಈ ಸಮಯದಲ್ಲಿ ಉತ್ಸವನೈಮಿತ್ತಿಕವಾದ ವಾದ್ಯ ವೈಭವಾತಿಶಯಗಳು ಇರಲಿಲ್ಲವ ಮಹಾತ್ಮರ ಸಂದರ್ಶನದಿಂದುಂಟಾದ ಸಂತೋಷಸಾಗರದಿಂದ ಜನಗಳ ಮುಖಗಳಿಂದ ಹೊರಡುತ್ತಿರುವ ಜಯಜಯಶಬ್ದಗಳೇ ವಾದ್ಯಗಳನ್ನು ವಿನಾಶಿಸಿದ್ದುವು. ರಾಜಧಾನಿಗೆ ಯಾವ ದೊಡ್ಡ ಮನುಷ್ಯರು ಬಂದರೂ ಸಯ್ಯಾಜಿರಾವ್ ರೋಡಿನಿಂದಲೇ ಬರುವ ಪದ್ಧತಿಯು ಇದ್ದುದರಿಂದ ಪಟ್ಟಣದ ಹೆಂಗಸರು ಮಕ್ಕಳಾದಿಯಾಗಿ ಸಾವಿರಾರು ಜನಗಳು ಸಯ್ಯಾಜಿರಾವ್ ರೋಡಿನಲ್ಲಿಯೇ ಕಾದಿದ್ದರು. ಆ ರಸ್ತೆಯಲ್ಲಿ ಪ್ರಯಾಣ ಬೆಳೆಸದೆ ಅನ್ಯಮಾರ್ಗವಾಗಿ ಪ್ರಯಾಣ ಬೆಳೆಸಿದುದರಿಂದ ಆಕಡೆಯಲ್ಲಿ ಕಾದಿದ್ದ ಜನಗಳೆಲ್ಲರೂ ಮಹಾತ್ಮರ ದರ್ಶನಕ್ಕೆ ನಿಷ್ಫಲವುಂಟಾಯಿತೆಂದು ವಿಶೇಷವಾಗಿ ಕಳವಳಪಡುತ್ತಿದ್ದರು. ಕೆಲವರು ದರ್ಶನಕುತೂಹಲದಿಂದ ಓಡಿಹೋಗುತ್ತಿದ್ದರು. ಮಹಾತ್ಮದಂಪತಿಗಳ ಜೊತೆಯಲ್ಲಿಯೇ ಜಯ ಜಯ ಎಂದು ಜಯಶಬ್ದಗಳನ್ನೇ ಉಚ್ಚರಿಸುತ್ತ ಓಡಿಓಡಿ ಬರುತ್ತಿರುವ ರಾಜಧಾನಿಯ ಪ್ರಜೆಗಳ ಶ್ರದ್ಧಾಭಕ್ತಿಗಳನ್ನು ಇಕ್ಕಡೆಗಳಲ್ಲೂ ಮಹಾತ್ಮರು ನೋಡುತ್ತ ಪೂರ್ಣಚಂದ್ರಬಿಂಬದಿಂದ ಬೆಳ್ದಿಂಗಳು ಪ್ರಸರಿಸುವಂತೆ ಇವರ ಮುಖದಿಂದ ಮಂದಹಾಸವು ಸೂಸುತ್ತಲಿತ್ತು. ಶೇಷಾದ್ರಯ್ಯರವರ ವಸಂತಮಂದಿರವನ್ನು ಪ್ರವೇಶಮಾಡುವಷ್ಟರೊಳಗಾಗಿ ಚದುರಿಹೋದ ಜನಗಳಲ್ಲಿ ಅನೇಕರು ಓಡಿಬಂದು ಶೇಷಾದ್ರಯ್ಯರವರ ಮಂದಿರದ ಮೈದಾನದಲ್ಲಿ ತುಂಬಿದ್ದರು. ದರ್ಶನಕುತೂಹಲದಿಂದ ಆತುರಪಡುತ್ತಿರುವ ಜನಸಮೂಹದ ಅಭಿಪ್ರಾಯವು ಮ|| ಗಾಂಧಿಯವರಿಗೆ ತಿಳಿಯಿತು. ತಕ್ಷಣದಲ್ಲಿಯೇ ಮಂದಿರದ ಮೇಲ್ಭಾಗದಲ್ಲಿ ಬಂದುನಿಂತರು. ಆಗ ನೀರಡಿಸಿದ ಚಕೋರಪಕ್ಷಿಗಳಿಗೆ ಚಂದ್ರದರ್ಶನವಾದಂತೆ ಪ್ರಜೆಗಳ ಮನಸ್ಸು ಶಾಂತಿಸ್ಥಿತಿಯನ್ನು ಹೊಂದಿತು. ದರ್ಶನದಿಂದುಂಟಾದ ಸಂತೋಷಪಾರವಶ್ಯದಿಂದ ಪ್ರಸನ್ನರಾಗಿ ಜಯಧ್ವನಿಯನ್ನು ಮಾಡುವುದಕ್ಕೆ ಉಪಕ್ರಮಿಸಿದರು. ಮಹಾತ್ಮರು ಮಹಡಿಯಮೇಲೆಯೇ ನಿಂತುಕೊಂಡಿದ್ದು ಪ್ರಜೆಗಳ ಆನಂದಭರವನ್ನು ನೋಡುತ್ತ ಮಂದಹಾಸಯುಕ್ತರಾಗಿ ಸರ್ವರಿಗೂ ಪುನಃಪುನಃ ಕೈಮುಗಿಯುತ್ತಿದ್ದರು.

'ಬಾಲೋನ್ಮತ್ತಪಿಶಾಚವತ್' ಮಹಾತ್ಮರು ಬಾಲಕರಂತೆಯೂ ಪಿಶಾಚಗಳಂತೆಯೂ ಉನ್ಮತ್ತರಂತೆಯೂ ಕಾಣಿಸಿಕೊಳ್ಳುವರೆಂಬ ಆರ್ಯೋಕ್ತಿಯು ಸರ್ವರಿಗೂ ಸ್ಮೃತಿಪಥವನ್ನು ಹೊಂದುತ್ತಿತ್ತು. ಮಹಾತ್ಮಾ ಗಾಂಧಿಯವರು ಸುಂದರವಾದ ಬಟ್ಟೆಗಳನ್ನು ಧರಿಸದೆ ಮೊಳಕಾಲ್ಮೇಲೆ ಒಂದು ಲಂಗೋಟಿಯನ್ನುಟ್ಟುಕೊಂಡು ಮೈಮೇಲೆ ಒಂದು ಖಾದಿವಸ್ತ್ರವನ್ನು ಮಾತ್ರ ಧರಿಸಿದರೂ ಮುಖಮಂಡಲದಲ್ಲಿ ಮನೋಹರವಾದ ಬ್ರಹ್ಮತೇಜಸ್ಸು ಉಕ್ಕುತ್ತಲಿತ್ತು.

ಪೂರ್ವಕಾಲದಲ್ಲಿ ವೇದಾಂತ ಗಳಿಂದ ವೇದ ಧರ್ಮಗಳ ಅತಿ ಪ್ರಚಾರವಾದ ಕಾಲದಲ್ಲಿ ಋಷಿಗಳು ಪ್ರಯಾಗವನ್ನು ಮಾಡಿ ಅತಿ ದಾರಿದ್ರ್ಯ ಮೊದಲಾದ ದುಃಖಗಳಿಂದ ನರಳುತ್ತಿದ್ದ ಭಾರತದೇಶವಾಸಿ ಜನರಲ್ಲಿ ಧರ್ಮಬೋಧೆಯನ್ನು ಮಾಡಿ ಉದ್ಧರಿಸುತ್ತಿದ್ದರು. ಇಷ್ಟು ಶಕ್ತಿಯುಳ್ಳ ಮಹಾಪುರುಷರಾದ ಪೂರ್ವಕಾಲದ ಮಹಾಪುರುಷರು ತಮ್ಮ ತಮ್ಮ ಆತ್ಮೋದ್ಧಾರದೊಂದಿಗೆ ಒಂದೊಂದು ಮತವನ್ನು ಸ್ಥಾಪಿಸಿ ಕಲಿಕಾಲದ ಉಗ್ರವಾದ ತಪಸ್ಸನ್ನಾಚರಿಸುತ್ತ ತಮ್ಮ ತಮ್ಮ ಕಾಲಗಳಲ್ಲಿ ಸರ್ವರಿಗೂ ತತ್ವೋಪದೇಶವನ್ನು ಗ್ರಂಥಮೂಲಕ ಬರೆದಿಟ್ಟು ಸ್ವರ್ಗಲೋಕವನ್ನು ಸೇರಿ ಯಶಃಕಾಯವನ್ನು ಪಡೆದರು.

ಈ ಮಹಾತ್ಮಾ ಗಾಂಧಿಯವರಾದರೋ ಸರ್ವಜನಗಳ ಸತ್ತ್ವ ಆಯಾಸ ಮೊದಲಾದ ಸರ್ವ ಆಚಾರ್ಯಪುರುಷರ ಮತಗಳ ಮೂಲವಾದ ಸಾರವನ್ನೇ ಗ್ರಹಿಸಿ ಕಾಲಕ್ಕನುಗುಣವಾಗಿ ಅವಶಿಷ್ಟ ಭಾಗಗಳನ್ನು ಸಂಕ್ಷೇಪಮಾಡಿ ಆಬಾಲ ವೃದ್ಧರವರೆಗೆ ಉದ್ಧರಿಸುವಂಥ ದೃಢತರವಾದ ಶಿಕ್ಷೆಯನ್ನು ವಹಿಸಿ ಅಹರ್ನಿಶಿಯೂ ಉಗ್ರತರವಾದ ತಪಸ್ಸಿನ ಸಾಧನೆಯನ್ನು ನಡೆಸುತ್ತ ಭಾರತೀಯರ ಅಭಿವೃದ್ಧಿಯ ಕಡೆ ಮನಸ್ಸನ್ನು ಕೊಟ್ಟಿರುವುದರಿಂದ ತ್ರಿಕರಣಗಳಲ್ಲಿಯೂ ಬಾಹ್ಯಾಂತರಂಗಗಳಲ್ಲಿಯೂ ಒಳಗೂ ಹೊರಗೂ ಏಕಾಕಾರ ಭಾವನೆಯುಳ್ಳವರಾಗಿ ಮಹಾತ್ಮರು ಯಾವ ಕಾಲದಲ್ಲಿಯೂ ಆಶೆಯಿಲ್ಲದ ಭಾರತೀಯರಿಗೆ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹವನ್ನು ಮಾಡಿದ ಪರಮಸತ್ಯವನ್ನು ತಮ್ಮ ಗಿಟ್ಟಿಸಿಕೊಂಡು ಆತ್ಮೋದ್ಧಾರ ಸಾಧಕವಾದ ಭಗವದುಪಾಸನೆಯೊಂದಿಗೆ ಸತ್ಯಾಗ್ರಹಕ್ಕಾಗಿ ಲೋಕಯಾತ್ರೆಯನ್ನು ನಡೆಸುತ್ತಿರುವುದನ್ನು ಪರಿಶೀಲಿಸಿದರೆ ಜನಸ್ಸು ಕೂಡುವುದಕ್ಕಾಗಿ ಭಾರತೀಯರ ಪುಣ್ಯರಾಶಿಯೇ ಈ ಮಹನೀಯರ ಆಕೃತಿಯನ್ನು ಹೊಂದಿದೆಯೋ ಎಂಬುವಂತೆ ಜನಗಳಿಂದ ಭಾವಿಸಲ್ಪಡುವುದಕ್ಕೆ ಯೋಗ್ಯರಿದ್ದಾರೆ. ಈ ಮಹಾತ್ಮರ ವರ್ತನೆಗಳು ಒಂದೊಂದು ಮತವನ್ನು ಸ್ಥಾಪಿಸಿದ ಒಬ್ಬೊಬ್ಬ ಆಚಾರ್ಯರುಗಳೊಂದೊಂದರಿಗೆ ದಯಮಾಡಿದರು. ಆಯಾಯ ಆಚಾರ್ಯರ ಮತವನ್ನು ಅವಲಂಬಿಸಿದ ಶಿಷ್ಯರು ಮಾತ್ರ ಶ್ರದ್ಧಾಭಕ್ತಿಯಿಂದಾದರಿಸುವರು. ಧರ್ಮವು ಸ್ವಭಾವವಾಗಿ ಇರುತ್ತಿದ್ದರೂ ಇವರ ವರ್ತನೆಯು ಸಕಲ ಜಾತಿಯವರೂ ಭಕ್ತಿವಿಶೇಷದಿಂದಲೂ ಆದರದಿಂದಲೂ ಒಲುವುದನ್ನು ಪರಿಶೀಲಿಸಿದರೆ ಭಾರತಮಾತೆಯ ಉದ್ಧಾರಕ್ಕಾಗಿ ಅವತರಿಸಿದ್ದ ಹಿಂದಣ ಮಹಾತ್ಮರ ಅಂಶಗಳೆಲ್ಲವೂ ಒಟ್ಟುಗೂಡಿ ಈ ಗಾಂಧಿಯವರ ಸೃಷ್ಟಿಯಾಗಿರುವುದೆಂದು ಪ್ರತ್ಯಕ್ಷಪ್ರಮಾಣದಿಂದಲೇ ಸಿದ್ಧವಾಗುತ್ತದೆ. ಹಾಗಿರುವುದರಿಂದ ಯಾವುದಾದರೊಂದು ಪಂಗಡಗಳಲ್ಲಿ ಮಹಾತ್ಮರ ವಿಷಯವಾಗಿ ಸ್ವಲ್ಪ ಅಭಿಪ್ರಾಯಗಳು ಪರೋಕ್ಷದಲ್ಲಿಯಾದರೂ ಹೊರಡಬೇಕಾಗುತ್ತಲ್ಲವೆ?

'ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ' ನಮ್ಮ ಭಾರತಖಂಡಗಳ ಯಾವ ಕಾಲದಲ್ಲಿ ಧರ್ಮಕ್ಕೆ ಹಾನಿಯುಂಟಾಗುವುದೋ ಆಯಾಯ ಕಾಲದಲ್ಲಿ ಒಂದೊಂದು ರೂಪದಿಂದ ಭೂಲೋಕಕ್ಕೆ ಅವತರಿಸಿ ಅಧರ್ಮವನ್ನು ನಾಶಗೊಳಿಸಿ ಭಾರತ ಧರ್ಮವನ್ನು ಉದ್ಧರಿಸುತ್ತೇನೆಂಬ ಶ್ರೀಕೃಷ್ಣನ ಅಭಯದಾನದ ಪ್ರಕಾರ ಅನಂತ ವರ್ಷಗಳಿಂದಲೂ ಅಸ್ವತಂತ್ರರಾಗಿ ಪರದಾಸ್ಯಕ್ಕೆ ಕೈಗೊಟ್ಟು ಕಾರ್ಮೋನ್ಮುಖರಂತಿರುವ ನಮ್ಮ ಭಾರತ ಧರ್ಮಕ್ಕೆ ಬಹಿಷ್ಕಾರವನ್ನು ಹಾಕಿ ವೇಷಭಾಷಾದಿಗಳೆಲ್ಲ ಪರಧರ್ಮೀಯರ ತಾಬಾತನವನ್ನೇ ಹೊಂದುವಂತಾಗಿ ಭಾರತೀಯರ ಬುದ್ಧಿಯು ಕೆಟ್ಟುಹೋಗಿ ಸ್ವದೇಶಾಭಿಮಾನವು ಕೇವಲ ನಾಶವಾಗುತ್ತಿರುವಂತೆ ಕೇವಲ ಅನ್ಯದೇಶದವರ ಶರಣಾಗತರಾಗಿರುವ ಭಾರತೀಯರ ದುಸ್ಥಿತಿಯನ್ನು ಪರಮೇಶ್ವರನಾದ ಭಗವಂತನು ನೋಡಿ ಸಹಿಸದೆ ತನ್ನ ಕರುಣಾಕಟಾಕ್ಷವನ್ನು ಬೀರುತ್ತ ಭಾರತಮಾತೆಯ ಸದ್ಗತಿಯನ್ನು ಸಂಕಲ್ಪಿಸಿದನು. ಸತ್ಯಾಗ್ರಹಾವತಾರವಾದ ಮಹಾವೈರಾಗ್ಯನಿಲಯರಾದ ಗಾಂಧಿಯವರ ರೂಪದಿಂದ ಅವತರಿಸಿದ್ದಾರೆಂಬುದು ಸರ್ವರಿಗೂ ಗೋಚರವಾಗಿದೆ.

ಇವರು ಮಹಾತ್ಮರೆಂಬುದಕ್ಕೆ ಪ್ರತಿಯೊಂದು ದಿನದಲ್ಲಿಯೂ ಪ್ರತಿಯೊಂದು ಗ್ರಾಮದಲ್ಲಿಯೂ ನಡೆಯುತ್ತಿರುವ ಚರಿತೆಗಳೇ ಸಾಕ್ಷಿಯಾಗಿವೆ. ಚರಕಪ್ರಯೋಗವನ್ನು ಭಾರತಖಂಡದೊಳಗೆಲ್ಲ ಹರಡಬೇಕೆಂದು ಪ್ರತಿಪುರುಷರಲ್ಲಿಯೂ ಪ್ರಚಾರಮಾಡಬೇಕೆಂಬುದೇ ಇವರ ಪ್ರಥಮ ಉದ್ದೇಶವಾಗಿದೆ. ಚರಕಪ್ರಯೋಗದಲ್ಲಿ ಅಡಗಿರುವ ಸೂಕ್ಷ್ಮವಾದ ಗುಣಾವಳಿಗಳನ್ನು ಮಹಾತ್ಮರು ತಿಳಿಸಿದ ಪ್ರಕಾರ ಅದರ ಪ್ರಯೋಜನವು ಸರ್ವರಿಗೂ ಗೋಚರವಾಗುತ್ತದೆ. ಬಹಿರಂಗದೃಷ್ಟಿಯಿಂದ ನೋಡುವವರಿಗೆ ಚರಕ ಪ್ರಯೋಗವು ಅಲ್ಪವಾಗಿ ಕಂಡರೂ ಇದರಲ್ಲಿ ಬ್ರಹ್ಮಾಂಡಚಕ್ರದಲ್ಲಿರುವಂತೆ ಒಂದು ವಿಧವಾದ ಶಕ್ತಿಯುಂಟು. ಆದರ ಚಕ್ರದಂತೆ ಸ್ವಭಾವವನ್ನು ಮಾತ್ರ ಅವಲಂಬಿಸದೆ ಸೌಖ್ಯದಲ್ಲಿಯೇ ಕ್ರಮೇಣ ಜಗತ್ತಿಗೆ ಕಲ್ಯಾಣವನ್ನು ಮಾಡುವ ಇದೇ ವಿಷ್ಣುಚಕ್ರಕ್ಕೂ ಈ ಚಕ್ರಕ್ಕೂ ಇರುವ ಭೇದವು ನಮ್ಮ ಕಣ್ಣಿಗೆ ಕಾಣದೆ ಹೋಗಿರುವವರು ಮುಖ್ಯವಾದ ಕಾರಣವಾಗಿ ಪ್ರತಿಯೊಬ್ಬರೂ ವಿಷ್ಣುಚಕ್ರದಂತಿರುವ ಒಂದೊಂದು ಚರಕವ ಕೊಂಡು ನೂಲುತ್ತ ನೂತ ಹುಟ್ಟಿಯಿಂದ ತಯಾರಾಗಿಯೂ ತಮ್ಮ ಹುಟ್ಟಿಯನ್ನಾಗಿ ಮಾಡಿ ದೇಶಾಂತರದ ವಸ್ತ್ರಗಳ ಗೋಜಿಗೆ ಹೋಗದೆ ಶುಚಿತ್ವವಾಗಿಯೂ ಭಾರತೀಯರಿಗೆ ಕಲ್ಯಾಣವಾಗುವುದರಲ್ಲಿ ಆವ ಸಂದೇಹವೂ ಇಲ್ಲವೆಂಬುವುದೇ ಮಹಾತ್ಮರ ಮೂಲಮಂತ್ರವಾಗಿದೆ. ಈ ಮೂಲಮಂತ್ರವನ್ನು ನಿರಂತರವೂ ಜಪಿಸುತ್ತ ಬಂದರ ಮಹಾತ್ಮರಿಗೆ ಸಂತೋಷವುಂಟಾಗುವುದು. ಚರಕವಿಲ್ಲದ ಮನೆಗಳು ಚರಕವಿಲ್ಲದ ಮನೆಯಾಗಲಿ ಚರಕವಿಲ್ಲದ ಗ್ರಾಮಗಳು ಚರಕವಿಲ್ಲದ ಪಾಠಶಾಲೆಯಾಗಲಿ ಇಲ್ಲ. ಮಹಾತ್ಮರ ದೃಷ್ಟಿಗೆ ಶೂನ್ಯಗಳಾಗಿಯೇ ಕಾಣುವವು. ಮಹಾತ್ಮರಿಗೆ ಚರಕವೇ ಕುಲದೇವರಾಗಿದೆ. ಅದರಿಂದ ತಯಾರಾದ ಖಾದಿ ವಸ್ತ್ರಗಳನ್ನು ಧರಿಸಿರುವ ಪುರುಷರಾಗಲಿ ಸ್ತ್ರೀಯರಾಗಲಿ ಮಹಾತ್ಮರ ದೃಷ್ಟಿಗೆ ಯಾವ ದಿವಸ ಬೀಳುವರೋ ಆ ದಿವಸವನ್ನು ದಿನಸವೆಂದು ಭಾವಿಸುವರು. ಇಲ್ಲದದಿನಸವು ದುರ್ದಿನವಾಗಿಯೇ ಕಾಣುವುದು. ಇದರಲ್ಲೂ ತಾನೇ ನೂಲನ್ನು ತಯಾರಿಸಿ ತಾನೇ ಬಟ್ಟೆಯನ್ನು ನೂತು ಧರಿಸುವವರ ಸ್ಥಿತಿಗಳನ್ನು ನೋಡಿದರಂತೂ ಮಹಾತ್ಮರಿಗೆ ಪರಿಪೂರ್ಣ ಸಾರ್ಥಕ ಪರಮೇಶ್ವರನ್ನೇ ನೋಡಿದಂತೆಯೇ ಆಗುವುದು. ಈಗಣ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಲೋಕೋದ್ಧಾರ ಕಾರ್ಯಗಳಲ್ಲಿ ತೊಡಗಿರುವ ಮಹಾತ್ಮರ ಅಭಿಪ್ರಾಯ ಕಾರ್ಯಗಳಲ್ಲ ಸಫಲವಾಗಿ ಕ್ಷೀಣೋ ಭಾರತಾಂಬರದ ಭಾರತ ಮಾತೆಯು ಕ್ಷಿಪ್ರದಲ್ಲಿ ಸಮುದ್ಧರಿಸಲ್ಪಡುವುದಕ್ಕೆ ಮಹಾತ್ಮರ ದೃಢಕಲ್ಪವೇ ಪ್ರಧಾನಸಾಧನೆಯಾಗಿದೆ. ಇಂಥವರ ದರ್ಶನಗಳಿಗಾಗಿ ಪ್ರಮೋದದಿಂದ ಹಗಲಿರುಳು ಕುತೂಹಲದಿಂದ ಕಾಯುತ್ತಿರುವ ಮೈಸೂರು ರಾಜಧಾನಿಯ ಪ್ರಜೆಗಳ್ಳಿ ಇವರ ದರ್ಶನದಿಂದ ಪರವಶರಾಗಿ ದಿನೇದಿನೇ ಸಫಲಕವನ್ನು ಹೊಂದುತ್ತ ಖಾದಿ ಬಗ್ಗೆ ಯಥಾಶಕ್ತಿ ಕೆಲಸಮಾಡುತ್ತಿದ್ದರು. ಮಹಾತ್ಮರು ಸಂಕಲ್ಪಮಾಡಿದ ಪ್ರಕಾರವು ಭರತಖಂಡದಲ್ಲಿ ಸರ್ವರೂ ಸುಖವಾಗಿ ಬಾಳುವಂತೆ ಪರಮಾತ್ಮನು ಅನುಗ್ರಹಿಸ

ದೇಶದ ವೃತ್ತಾಂತಗಳು.

ಇದೇ ತಿಂಗಳು ೨೯ರಲ್ಲಿ ಆಗಮಿಸಿ [illegible] ಮೈಸೂರು ವಿಶ್ವವಿದ್ಯಾಲಯದವರು ಟಿ. ಪಿ. ಸಿ. ಎಂ. [illegible]ಯನ್ನು ಕೊಡುವರು.

ಪರಸ್ಪರ ಪಕ್ಷ ತಗ್ಗಿ ನಮ್ಮಿಂದ ಎಪ್ಪತ್ತಸಂವತ್ಸರದ ಸಂ[illegible]ಗ ಸ್ವಲ್ಪ ಪತ್ರಿಕೆಯನ್ನು ಇವರ ಸಂಗಡ [illegible]ಶಕರ ಅನಗಾಮಸಭಾ ಕಳುಹಿಸುತ್ತೇವೆ.

ಈ ದಿವಸ ಇಂಡಿಯಾ ಸಾರ್ವಭೌಮರವರ ಪ್ರತಿನಿಧಿಗಳಾದ ವೈಸ್ರಾಯರವರು ಬೆಂಗಳೂರಿಗೆ ದಯಮಾಡಿಸಿದುದಕ್ಕಾಗಿ ಕೋರ್ಟು ಸ್ಕೂಲುಗಳಿಗೆಲ್ಲಾ ವಿರಾಮ ಕೊಡಲ್ಪಟ್ಟಿತು.

ಇದೇ ತಿಂಗಳು ೨೯ರಲ್ಲಿ ಮಹಾಸ್ವಾಮಿಯವರ ವೈಸ್ರಾಯಿಯವರು ರಾಜಧಾನಿಗೆ ಆಗಮಿಸಿದ ಸಂತೋಷಕ್ಕಾಗಿ ಎಲ್ಲಾ ಪಬ್ಲಿಕ್ ಆಫೀಸುಗಳಿಗೂ ಎಲ್ಲಾ ಸ್ಕೂಲುಗಳಿಗೂ ರಜವು ಕೊಡಲ್ಪಡುವುದು.

ನಮ್ಮ ಮಹಾಪ್ರಭುಗಳು ಶ್ರೀ ಚಾಮುಂಡೇಶ್ವರೀ ಬೆಟ್ಟದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಸಿಹಿನೀರು ಲಕ್ಕೇರುವಂತೆ ಮಾಡಿಸಿ ಬೆಟ್ಟದಲ್ಲಿರುವ ಜನಗಳಿಗೆ ಸೌಕರ್ಯವನ್ನು ಕಲ್ಪಿಸಿರುವರು.

ಶ್ರೀ ಶೃಂಗೇರಿ ಮಹಾಸ್ವಾಮಿಗಳವರು ದಕ್ಷಿಣ ಹಿಂದುಸ್ಥಾನದ ಸಂಚಾರವನ್ನೆಲ್ಲ ಪೂರೈಸಿ ಇದೇ ತಿಂಗಳು ೧೯ರಲ್ಲಿ ನಂಜನಗೂಡಿಗೆ ದಯಮಾಡಿಸಿದ್ದಾರೆ. ಚಾತುರ್ಮಾಸ್ಯ ಮುಗಿಯುವವರಿಗೂ ಇವರ ಮುಕ್ಕಾಂ ಇಲ್ಲಿಯೇ ಇರುತ್ತದೆ.

ಚೀಫ್ ಕೋರ್ಟ್ ಜಡ್ಜರವರಾದ ಮ|| ರಾ|| [illegible]ರವರು ಮುಂದಿನ ತಿಂಗಳಿಂದ ಅಧಿಕಾರದಿಂದ ನಿವೃತ್ತರಾಗುತ್ತಾರೆಂದೂ ಅವರ ಸ್ಥಾನಕ್ಕೆ ಮೊರ[illegible]ರವರೂ ಇವರ ಸ್ಥಾನಕ್ಕೆ ಮಿ|| ಶ್ರೀನಿವಾಸ[illegible]ರವರೂ ಬರುವರೆಂದು ಕೇಳುತ್ತೇವೆ.

ಶ್ರೀಮದ್ಯುವರಾಜರಾದ ನರಸಿಂಹರಾಜಒಡೆಯರವರು ವಿದೇಶಗಳನ್ನ ಸಂಚರಿಸಿ ಶ್ರೀ ಈಶ್ವರನದಯದಿಂದ ಸುಸ್ವಸ್ಥರಾಗಿ ಸೌಖ್ಯವಾಗಿ ಇದೇ ತಿಂಗಳು [illegible]ನೇ ತಾರೀಖಿನಲ್ಲಿ ಮೈಸೂರಿಗೆ ದಯಮಾಡಿಸಿದ್ದಕ್ಕಾಗಿ ಪ್ರಜೆಗಳೆಲ್ಲರೂ ಅತ್ಯಾನಂದವನ್ನು ಹೊಂದಿದ್ದಾರೆ.

ಮಹಾತ್ಮಾ ಗಾಂಧಿಯವರು ಇದೇತಿಂಗಳು ೧೯ರಲ್ಲಿ ರಾಜಧಾನಿಗೆ ದಯಮಾಡಿಸಿ ತಾ|| ೨೦ರ ವರೆಗೆ ಶ್ರೀಮನ್ಮಹಾರಾಜರವರ ಅತಿಥಿ ದಲ್ಲಿಯೇ ಇದ್ದರು. ಈ ದಿವಸ ತಾ|| ೧೯ರ ಮಧ್ಯಾಹ್ನ ಯೂನಿವರ್ಸಿಟಿ ಯೂನಿಯನ್‌ನಿಂದ ಮಹಾರಾಜಾಕಾಲೇಜು ಹಿಂಭಾಗದ ಮೈದಾನದಲ್ಲಿ ರಾಜಧಾನಿಯ ವಿದ್ಯಾರ್ಥಿಗಳ ಮಾನಪತ್ರವನ್ನು ಸ್ವೀಕರಿಸಿ ವಿದ್ಯಾರ್ಥಿಗಳಿಗೆ ದೈವಭಕ್ತಿ, ಬ್ರಹ್ಮಚರ್ಯ ಮುಂತಾದ ವಿಷಯಗಳಮೇಲೆ ಮಹಾತ್ಮರು ಉಪನ್ಯಾಸವನ್ನು ಮಾಡಿದರು.

ಇದೇತಿಂಗಳು ೨೧ರಲ್ಲಿ ಜಗನ್ಮೋಹನಮಹಲ್ಲಿನಲ್ಲಿ ಮಹಿಳಾಸಭೆಯು ನಡೆಯಿತು. ಮಹಾತ್ಮರವರೇ ಅಧ್ಯಕ್ಷತ್ವವನ್ನು ವಹಿಸಿದ್ದರು. ಸಂಸ್ಥೆಯ ಪರವಾಗಿ ಮಾನಪತ್ರವು ಒಪ್ಪಿಸಲ್ಪಟ್ಟನಂತರ ಮಹಿಳೆಯರಿಗೆ ಬೋಧೆಯನ್ನು ಮಾಡಿದರು. ಅಲ್ಲಿ ನೆರೆದಿದ್ದ ಸಹಸ್ರಾರು ಮಹಿಳೆಯರು ಸಂತುಷ್ಟರಾಗಿ ಭಾರತಮಾತೃಚರಣಕ್ಕೆ [illegible] ವಾದಿಸಿದಾಗ ಅನೇಕ ಮಹಿಳೆಯರು ಉಂಗುರಗಳನ್ನೂ ಬಳೆಗಳನ್ನೂ ಬೈಸರುಗಳನ್ನೂ ರೂಪಾಯಿಗಳನ್ನೂ ಒಪ್ಪಿಸಿದರು. ರಾಜಧಾನಿಯಲ್ಲಿನ ಮಹಿಳೆಯರ ಸದ್ಭಾವವನ್ನು ನೋಡಿ ಮಹಾತ್ಮರು ಸಂತೋಷಪಟ್ಟರು.

ವೀರಶೈವಪೂಜ್ಯರುಗಳಾದ ಜಗದ್ಗುರುಗಳ ಸವಾರಿಯು [illegible] ಮೊಕ್ಕಾಮಿನಿಂದ [illegible] ದಿವಸ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕು ಆನವಟ್ಟಿಗೆ ದಯಮಾಡಿಸುವುದೆಂದೂ ಶ್ರೀಮದ್ದು [illegible] ಗುರುಗಳವರ ಮೊಕ್ಕಾಂ ಹೊನ್ನಾಳಿ ಪಟ್ಟಣ ತಾಲ್ಲೂಕು ಗೋರಗೇರಿ ಗ್ರಾಮದಲ್ಲಿರುವದೆಂದೂ [illegible] ಜಗದ್ಗುರುಗಳು ಶೀವಾವರಿಯಿಂದ ಚಿಕ್ಕ ಶ್ರೀಗಳವರ [illegible] ವಾಹನಗಳಿ ತಾಲ್ಲೂಕು [illegible] ಗ್ರಾಮದಲ್ಲಿರುವದೆಂದೂ ಹಾಗೆ ಇದೇ ಸ್ವಾಮಿ ದೇವರ ಸರಕಾರಗಳು ಸರ್ಕೀಟು ಕಾಗಿನೆಲೆ ತಾಲ್ಲೂಕು [illegible] ಗ್ರಾಮದಲ್ಲಿರುವದೆಂದೂ ತಿಳಿಯುತ್ತದೆ.

ಶ್ರೀ ಮನ್ಮಹಾರಾಜರವರ ೪೪ನೇ ವರ್ಷದ ವರ್ಧಂತಿಯು ಇದೇತಿಂಗಳು ೨೦ನೇ ಬುಧವಾರ ಬಹು ಅದ್ಧೂರಿಯಿಂದ ನಡೆಯಿತು. ಸಾಯಂಕಾಲ ೬ ಗಂಟೆಗೆ ಶ್ರೀ ಯುವರಾಜರವರು ಮತ್ತು ಇತರ ಸಹೋದರಿಯರಾದ ಜಯಲಕ್ಷ್ಮಮ್ಮಣ್ಣಿಯವರು ಅಲಂಕೃತಗಳಾದ ದಿವ್ಯಾಶ್ವಗಳಿಂದ ಕೂಡಿದ ರಥದಲ್ಲಿ ಕುಳಿತರಾಗಿ ರಾಜಗೃಹದಿಂದ ಹೊರಟು ಕೋಟೆಯೊಳಗಣ ಶ್ರೀಭುವನೇಶ್ವರೀದೇವಸ್ಥಾನದ ಮುಂಭಾಗದಿಂದ 7 ಗಂಟೆಗೆ ಪುನಃ ರಾಜಮಂದಿರವನ್ನು ಪ್ರವೇಶ ಮಾಡಿದರು. ಈ ಸಮಯದ ಸಮಾರಂಭ [illegible] ಸಂಭಾವಿತರಾದ ರಾಜಬಂಧುಗಳಿಂದ [illegible] ದಿಗ್ಗಜಗಳನ್ನು ನೋಡಿ ಪ್ರೇಕ್ಷಕರಾದ ಪ್ರಜೆಗಳೆಲ್ಲರೂ ಆನಂದಸಾಗರದಲ್ಲಿ ಮಗ್ನರಾಗಿದ್ದರು.

ಮಹಾತ್ಮಾ ಗಾಂಧಿಯವರು ಇದೇ ತಿಂಗಳು ೧೩ರಲ್ಲಿ ಬಂಗಳೂರಿನಲ್ಲಿರುವ [illegible] ಸಭೆಯನ್ನು ಸಂದರ್ಶಿಸಿದ್ದರು. ಮಹಾತ್ಮರ ವಾಗಮೃತವನ್ನು ಕೇಳುವದಕ್ಕಾಗಿ ಅನೇಕಾನೇಕ ದೊಡ್ಡ ಅಧಿಕಾರಿಗಳ ಸ್ತ್ರೀಯರುಗಳು ಆಗಮಿಸಿದ್ದರು. ಮಹಾತ್ಮರು ಕಾಲೋಚಿತವಾದ ಉಪದೇಶವನ್ನು ಮಾಡಿ ಭಾರತಮಾತೆಯಲ್ಲಿ ಸಂಪೂರ್ಣಭಕ್ತಿಯಿಂದ ನಡೆಯುವುದರಿಂದ ಭಾರತಮಾತೆಗೆ ಸಂತೋಷವನ್ನುಂಟುಮಾಡುವ ಖಾದಿಯನ್ನೇ ಎಲ್ಲಾ ಮಹಿಳೆಯರು ಧರಿಸುವುದರಿಂದ ನಿಮ್ಮ ನಿಮ್ಮ ಪತಿಗಳೂ ನಿಮ್ಮ ನಿಮ್ಮ ಪುತ್ರರೂ ಖಾದಿಯನ್ನೇ ಧಾರಣಮಾಡುವಂತೆ ಪ್ರೋತ್ಸಾಹಿಸುವರೆಂದೂ ನಾವು ಪೂರ್ಣವಾಗಿ ನಂಬಿದ್ದೇನೆ. ಮಹಾತ್ಮರ ಬೋಧಾಮೃತದಿಂದ ಪ್ರೇರಿತರಾಗಿ ದಾನಮಾಡಿ ಮಹಿಳಾಸಂಘದವರು ೭೦೦ ರೂಪಾಯಿಗಳನ್ನು ಖಾದಿನಿಧಿಗಾಗಿ ಸಮರ್ಪಣಮಾಡಿದರು.

ಇದೇತಿಂಗಳು ೨೦ ನೆಯ ಬುಧವಾರ ಪ್ರಾತಃಕಾಲ ಧರ್ಮಪ್ರಕಾಶ ಮ|| ಬಸವಯ್ಯನವರ ಸ್ಕೂಲಿನಲ್ಲಿ ನಡೆದ ಹಿಂದೀಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಪ್ರಧಾನಾಸನವನ್ನು ವಹಿಸಿದ್ದರು. ಅದೇ ದಿವಸ ಸಾಯಂಕಾಲ ಟೌನ್‌ಹಾಲ್ ಮೈದಾನದಲ್ಲಿ ಪ್ರಚಂಡವಾದ ಸಭೆಯು ಸೇರಿತ್ತು. ಅಗ್ರಾಸನವನ್ನು ವಹಿಸಿದ್ದ ಗಾಂಧಿಯವರಿಗೆ ಪುರಸಭಾಸದಸ್ಯರು ಮ್ಯುನಿಸಿಪಾಲಿಟಿಯವರು, ಡಿಸ್ಟ್ರಿಕ್ಟ್‌ಬೋರ್ಡು, ಕಾಂಗ್ರೆಸ್ ಕಮಿಟಿ ಮುಂತಾದ ಹದಿಯವರಿಂದ ಮಾನಪತ್ರಿಕೆಗಳು ಒಪ್ಪಿಸಲ್ಪಟ್ಟವು. ಮಹಾತ್ಮರಿಗೆ ಪ್ರಿಯವಾದ ಖಾದಿಯಿಂದಲೇ ತಯಾರಾದ ಪುಷ್ಪಮಾಲಿಕಾದಿಗಳು ಒಪ್ಪಿಸಲ್ಪಟ್ಟವು. ಅನಂತರ ಮಹಾತ್ಮರು ಭಾರತಮಾತೆಗೆ ಕಲ್ಯಾಣದಾಯಕವಾದ ಅಭಿಪ್ರಾಯದಿಂದೊಡಗೂಡಿದ ಉಪನ್ಯಾಸವನ್ನು ಮಾಡಿದರು. ಮ|| ದೇಶಪಾಂಡೆಯವರು ಮಹಾತ್ಮರ ಉಪನ್ಯಾಸದ ಸಾರಾಂಶವನ್ನು ಕನ್ನಡದಲ್ಲಿ ಸುಲಭವಾಗುವಂತೆ ಬೋಧಿಸಿದರು.

ವರ್ತಮಾನಸಂಗ್ರಹ.

ಈವರಿವಿಗೂ ಸಿನಿಮಾಗಳಲ್ಲಿ ಮಾತುಗಳಿಲ್ಲದೆ [illegible] ಭಾವವನ್ನು ತೋರಿಸುತ್ತಿದ್ದು ಈಗ ಮಾತಾಡುವ ಯಂತ್ರಗಳನ್ನೇ ತಯಾರಿಸುವರಂತೆ.

೨೫ ಲಕ್ಷ ರೂಪಾಯಿಗಳ ಆಸ್ತಿಯನ್ನು ದಾನ ಉಪಯೋಗಿಸುವವರೂ ಜಗತ್ತಿನಲ್ಲಿದ್ದರೂ ಆದ ಲಾಹೋರಿನ ಸರ್ ಲಾಲಾ ಗಂಗಾರಾಮರವರು ಅಕಸ್ಮಾತ್ ವ್ಯಾಧಿಪೀಡಿತರಾದರೆಂದು ಕೇಳಿ ವಿಷಾದಿಸುತ್ತೇವೆ.

ಅಮೇರಿಕಾದೇಶದಲ್ಲಿ ಮದ್ಯಪಾನ ನಿರೋಧದಿಂದ ದೇಶದ ಸಂಪತ್ತು ಪ್ರತಿವರ್ಷವು 1800 ಕೋಟಿ ರೂಪಾಯಿಗಳಷ್ಟು ಹೆಚ್ಚುತ್ತಿರುವುದಂತೆ. ಈ ಮದ್ಯಪಾನ ನಿರೋಧದಿಂದ ಹಿಂದಿಗಿಂತಲೂ ಮನೆಮಠ ತೋಟಗಳಿಂದ ಸಮೃದ್ಧಿಯುಳ್ಳ ಸುಖಿಗಳಾಗಿರುವರಂತೆ.

ಪರದೇಶದಿಂದ ಪ್ರತಿವರ್ಷವೂ ೬೦ ಲಕ್ಷದ ಚಹವೂ 31 ಕೋಟಿ ರೂಪಾಯಿಗಳ ಸಕ್ಕರೆಯೂ, [illegible] ಕೋಟಿ ರೂಪಾಯಿಗಳ ಮೋಟರುಗಳೂ ೩ ಕೋಟಿ ರೂಪಾಯಿಗಳ ವಿಲಾಯತಿಯ ಪಾತ್ರೆ 60 ಕೋಟಿ ರೂಪಾಯಿಗಳ ಬಟ್ಟೆಯೂ ಹಿಂದುಸ್ಥಾನಕ್ಕೆ ಬರುತ್ತಿದೆಯಂತೆ.

ಮಿ|| ಬಿ. ಎಲ್. ರೈಸರವರು ವಿಧಿವಶರಾದರೆಂದು ಕೇಳಿ ಸಂತಾಪಪಡುತ್ತೇವೆ. ಇವರು ತಮ್ಮ ದೇಹವನ್ನು ಬಿಡುವಕಾಲಕ್ಕೆ 90 ವರ್ಷಗಳಾಗಿದ್ದವು. ಇವರು ಕರ್ನಾಟಕ ಪ್ರಾಚೀನ ಶಿಲಾಶೋಧನೆಯಲ್ಲಿಯೂ, [illegible] ಇತಿಹಾಸ ಶೋಧನಾಕಾರ್ಯದಲ್ಲಿಯೂ ಸುಪ್ರಸಿದ್ಧರಾಗಿದ್ದರು.

ಗೋಂದವ್ವೋಜಾರನೆಂಬ ಕಾಡುಮನುಷ್ಯನು ತಿರುವಾಂಕೂರಿನ ಅರಣ್ಯದಲ್ಲಿದ್ದಾನಂತೆ. ಇವನ ಮೈಮೇಲೆ [illegible] ಪ್ರಾಯಸ್ಥನಾದರೆ ಚಿಂಕೆಯನ್ನು ಹಾಕಿಕೊಂಡು ಅದರ ಕೊಳ್ಳಿಯನ್ನು ತಲೆಮೇಲೆ ಇಡುವನಂತೆ [illegible] ಜಿಂಕೆಯನ್ನು ನೋಡುತ್ತಾರೂ ಅವರನ್ನು ಹರಿಸುವನಂತೆ [illegible] ಕುಣಿದಾಡಿ ದರೆ ಅವರನ್ನು ಹರಿಸುವುದಿಲ್ಲವಂತೆ.

ಹರಪನಹಳ್ಳಿಯಲ್ಲಿ ದೇವಿಯ ಪ್ರೀತ್ಯರ್ಥವಾಗಿ ನೂರಾರು ಕುರಿಗಳನ್ನ ಸಿದ್ಧಪಡಿಸಿಕೊಂಡಿದ್ದರು. ಈ ಸಮಾಚಾರವನ್ನು ಅಲ್ಲಿಯ ಪ್ರಾಣಿದಯಾಸಂಘದವರು ಕೇಳಿ ಅಲ್ಲಿಗೆಹೋಗಿ ಪ್ರಾಣಿಹಿಂಸೆಯು ಪಾಪದಾಯಕವೆಂಬ ನೀತಿಯನ್ನು ಬೋಧಿಸಿದಮೇಲೆ ದೇವೀಭಕ್ತರು ಕ್ರೂರಕರ್ಮಗಳಿಂದ ನಿವೃತ್ತರಾಗಿ ಹಣ್ಣುಹಂಪಲು ಅನ್ನಾದಿಗಳಿಂದ ದೇವಿಯನ್ನು ಆರಾಧಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಸ್ವೀಕಾರ.

ಹರಪನಹಳ್ಳಿ ತಾಲ್ಲೋಕು ಕಂಚಿಕೆರೆಗ್ರಾಮದ ಮ|| ರಾ|| ರಾಮಯೋಗಿಗರ ಚನ್ನಬಸಪ್ಪನವರು ಅಭ್ಯುದಯ ಸಮ್ಮೇಳನದಲ್ಲಿ ವಾಗ್ದಾನಮಾಡಿದ್ದ ೭ ರೂಪಾಯಿಗಳನ್ನು ಕಳುಹಿರುತ್ತಾರೆ.

ಕೊಪ್ಪಳತಾಲ್ಲೋಕು ಅರಮಾಪುರಗ್ರಾಮದ ಮ|| ರಾ|| ಪೋಲೀಸ್‌ಪಾಟೀಲ್ ನೀಲನಗೌಡರು ಪುತ್ರೋತ್ಸವದ ಸಂತೋಷಾರ್ಥವಾಗಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಕೊಪ್ಪಳತಾಲ್ಲೋಕು [illegible] ವಂದಿಗ್ರಾಮದ ಮ|| ರಾ|| ಸೋಮಾನಿದೊಡ್ಡಣ್ಣನವರು ಈ ಪತ್ರಿಕೆಯ ಪ್ರೋತ್ಸಾಹಕ್ಕಾಗಿ 1 ರೂಪಾಯಿಯನ್ನು ಕಳುಹಿರುತ್ತಾರೆ. ಈ ರೂಪಾಯಿಗಳು ಒಪ್ಪಿಕೊಂಡದ ಹೀಗೆ [illegible] ವೇ|| ಶಿವಯ್ಯನವರ ದ್ವಾರಾ ತಲಪಿರುತ್ತವೆ.

ಹಾವೇರಿ ಮ|| ರಾ|| ಯವನೀಮ ರಾಜಪ್ಪನವರು ತಮ್ಮ ಮೊಮ್ಮಗನೊಬ್ಬನ ಲಿಂಗಧಾರಣಕಾಲದಲ್ಲಿ 5 ರೂಪಾಯಿಗಳನ್ನು ಸಮರ್ಪಿಸಿದ್ದಾರೆ.

ವೇ|| ಕುಕನೂರು ಹಿರೇಮಠದ ವಿರೂಪಾಕ್ಷಯ್ಯನವರಿಗೆ ಪುತ್ರೋತ್ಸವವಾದುದರಿಂದ ಲಿಂಗಧಾರಣಸಮಯದಲ್ಲಿ 2 ರೂಪಾಯಿಗಳನ್ನು ತೆರೆದು ವೇ|| ಸಂಗಯ್ಯನವರು ಕಾಗಿನೂರು ಇವರು ಕಳುಹಿಸಿದ್ದಾರೆ.

ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಸಂ —

ಬೆಳಗಾಂವಿಜಿಲ್ಲೆಯೊಳಗೆ ಯಾರೋ ಒಬ್ಬರು ಪರ್ವತದೇಶದ ಮುಖ್ಯ ಗುರುಗಳು ನಾವೇ ಇರುತ್ತೇವೆಂದು ಸಂಚರಿಸುತ್ತಿರುವರಂತೆ! ಇವರು ನಿಜ ಗುರುಗಳು ಆಗುವರೇ? ಇನ್ನು ಇವರು ನಮ್ಮನ್ನು [illegible] ಮಾಡುತ್ತಾರೆ. ಇವರು ಯಾರೆನ್ನುವದು ನಮಗೆ ಗೊತ್ತಿಲ್ಲ. ಮೂಲಗುರುಗಳು ಗಂಡಕಲ್ಲಿನಲ್ಲಿ ವಾಸಿಸುತ್ತಾರೆ.

ಸಂ —

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶಿವಮೊಗ್ಗಾ ಜಿಲ್ಲೆಯಲ್ಲಿ ಶ್ರೀ ಜಗದ್ಗುರುಗಳವರ ಸಂಚಾರವೃತ್ತ.

ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಸ್ವಾಮಿಗಳವರು ಸಿಂಹಾಸನಾರೋಹಣ ಸಮಯದಲ್ಲಿ ಸಮಾಜದಲ್ಲಿ ಬೇರೂರಿರುವ ಅನೈಕ್ಯತಾ ಮತ್ತು ವೈದಿಕ ವಿದ್ಯಾಭಾವ ಇತ್ಯಾದಿಗಳನ್ನು ದೂರಮಾಡುವುದೇ ಮುಖ್ಯಧ್ಯೇಯವೆಂದು ಅಪ್ಪಣೆಕೊಡಿಸಿದ ಪ್ರಕಾರ ಸತ್ಸಂಕಲ್ಪವನ್ನು ನೆರವೇರಿಸುವುದಕ್ಕಾಗಿ ಪೀಠಾಧಿಕಾರವನ್ನು ಹೊಂದಿದ ೬-೭ ತಿಂಗಳಲ್ಲಿಯೇ ಸರ್ಕೀಟು ಇಟ್ಟುಕೊಂಡು ದೇಶಮಧ್ಯದಲ್ಲಿ ಸಂಚರಿಸುತ್ತ ಶಿಷ್ಯಗಣದ ಪ್ರಾರ್ಥನಾನುಸಾರವಾಗಿ ಪಟ್ಟಣಗಳಿಗೂ ಹಳ್ಳಿಗಳಿಗೂ ಸಕಲ ಬಿರುದಾವಳಿಗಳೊಡನೆ ಪರಿವಾರಸಮೇತ ಉತ್ಸವದಿಂದ ದಯಮಾಡಿಸಿ ಶಿಷ್ಯರು ಮಾಡುವ ಸೇವಾಸತ್ಕಾರಗಳನ್ನು ಅಂಗೀಕರಿಸಿ ಆಶೀರ್ವಾದವನ್ನು ಕೊಟ್ಟು ಸರ್ವರನ್ನು ಪುನೀತರನ್ನಾಗಿ ಮಾಡುತ್ತಿರುವರು. ಶ್ರೀ ಜಗದ್ಗುರುಗಳು ವಿದ್ಯಾನಿಧಿಗಳೂ, ಸುಮ್ನಗಳೂ, ಜಿತೇಂದ್ರಿಯರೂ, ತಪಸ್ವಿಗಳೂ, ಅತ್ಯಂತ ಶಾಂತಸ್ವಭಾವದವರೂ ಇರುತ್ತಾರೆ. ಯಾರ ಮನಸ್ಸಿಗೂ ತಾಪವಾಗಬಾರದೆಂಬುವದೇ ಆ ಭಗವತ್ಪಾದರ ಜನ್ಮಸಿದ್ಧ ಸ್ವಭಾವವಿರುತ್ತದೆ. ಸೂಜಿಗಲ್ಲು ತನಗೆ ಸಮಾನಧರ್ಮವುಳ್ಳ ವಸ್ತುವನ್ನೇ ಎಳೆದುಕೊಳ್ಳುವಂತೆ ತಮಗೂ ತಮ್ಮ ರಾಜ್ಯಕ್ಕೂ ಶೋಭೆಯನ್ನುಂಟುಮಾಡುವಂಥ ಜಗದ್ಗುರುಗಳನ್ನು ಧರ್ಮಪೀಠದಲ್ಲಿ ನೆಲೆಗೊಳಿಸಿದ ಮೈಸೂರು ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗಕ್ಕೂ ಆಯುರಾರೋಗ್ಯಾಭಿವೃದ್ಧಿಯು ನಿತ್ಯ ಕಾಪಾಡಲೆಂಬದಾಗಿಯೂ, ಶ್ರೀ [illegible]ವು ಆಚಂದ್ರಾರ್ಕವಾಗಿ ಪ್ರಕಾಶಿಸಲೆಂಬದಾಗಿಯೂ ಸಮಸ್ತವೀರಶೈವರು ಅನನ್ಯಭಾವದಿಂದ [illegible] ತಿಸುತ್ತಾರೆಂದು ತಿಳುಹಿಸುವದಕ್ಕೆ ಬಹಳ ಸಂತೋಷವಾಗುತ್ತದೆ. ವೀರಶೈವ ಮತೀಯರ ಸುದೈವದಿಂದ ದೊರೆತಿರತಕ್ಕ ಶ್ರೀ ಜಗದ್ಗುರುಗಳವರ ಮುಕ್ಕಾಂ ಯಾವ ಸ್ಥಳದಲ್ಲಿ ಆಗುವದೋ ಅಲ್ಲಿಗೆ ಸ್ವಮತ ಪರಮತೀಯರೆಲ್ಲರೂ ಸ್ಥಳಸ್ಥಳಗಳಿಂದ ತಂಡೋಪತಂಡವಾಗಿ ಬಂದು ಯಥಾಶಕ್ತಿ ಕಾಣಿಕೆಯನ್ನು ಅರ್ಪಿಸಿ ದರ್ಶನಾಶೀರ್ವಾದಪಡೆದು ನಮ್ಮ ಜನ್ಮವು ಇಂದಿಗೆ ಸಾರ್ಥಕವಾಯಿತು! ನಮ್ಮ ಕುಲಕೋಟಿಯು ಉದ್ಧಾರವಾಯಿತು! ವೀರಶೈವಮತದ ವೃದ್ಧಿಕಾಲವು ಸಮೀಪಿಸಿತು! ವೀರಶೈವಮತದ ವ್ಯವಸ್ಥಿತಿಯನ್ನು ಕ್ಷಿಪ್ರದಲ್ಲಿ ನೋಡುತ್ತೇವೆಂಬದಾಗಿ ಶ್ರೀ ಭಗವತ್ಪಾದರನ್ನು ಅನಂತರೀತಿಯಾಗಿ ಕೊಂಡಾಡುತ್ತಿರುವರು. ಇತರ ಮತದವರೂ ಕೂಡ ಜಾತಿದ್ವೇಷ ಮತದ್ವೇಷಗಳನ್ನೆಣಿಸದೆ ಶ್ರೀ ಜಗದ್ಗುರುಗಳಲ್ಲಿರುವ ದಯಾದಾಕ್ಷಿಣ್ಯಾದಿ ಸದ್ಗುಣಗಳನ್ನು ನೋಡಿ ಪ್ರತಿಯೊಬ್ಬರು ಜಗದ್ಗುರುಗಳವರ ಶುಭಾಗಮನವನ್ನು ಬಯಸಿ ತಮ್ಮ ತಮ್ಮ ಸೇವಾದಿಗಳನ್ನೊಪ್ಪಿಸಿ ಚಿರಸುಖವನ್ನು ಪಡೆಯುತ್ತಿರುವರು. ಮುಸಲ್ಮಾನ ಬಂಧುಗಳಂತೂ ಅಸಾಧಾರಣವಾದ ಭಕ್ತಿಯಿಂದ ಶ್ರೀ ಪೂಜ್ಯಪಾದರ ದರ್ಶನಾಶೀರ್ವಾದಕ್ಕೆ ಪಾತ್ರರಾಗುತ್ತಾರೆಂದು ತಿಳುಹಿಸುವದಕ್ಕೆ ಅತ್ಯಾನಂದವಾಗುತ್ತದೆ.

ಶ್ರೀ ಜಗದ್ಗುರುಗಳವರು ರಾಜಧಾನಿಯಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಬೇಕೆಂಬುದೇ ನಮ್ಮ ಸಂಚಾರದ ಇತಿಕರ್ತವ್ಯವೆಂದು ಪದೇ ಪದೇ ಅಪ್ಪಣೆ ಕೊಡಿಸುತ್ತಾರೆ. ಈ ಮಧ್ಯ ಕಾಶೀ, ಕಲಕತ್ತಾ, ಮೈಸೂರು, ಬೆಂಗಳೂರಲ್ಲಿ ಓದುವ ಎಷ್ಟೋ ಸಂಸ್ಕೃತ ಇಂಗ್ಲೀಷ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುತ್ತ ಸಂಸ್ಕೃತ ಇಂಗ್ಲೀಷ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುತ್ತಿರುವರು. ಪ್ರತಿಯೊಬ್ಬ ವೀರಶೈವರು ಶ್ರೀ ಜಗದ್ಗುರುಗಳವರನ್ನು ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಕಾಯವಾಙ್ಮನಸ್ಸುಗಳಿಂದ ಸೇವಿಸಿ ಶಕ್ತ್ಯನುಸಾರ ಕಾಣಿಕೆಯನ್ನು ಸಮರ್ಪಿಸಿ ಜಗದ್ಗುರುಗಳವರ ಸತ್ಸಂಕಲ್ಪವನ್ನು ನೆರವೇರಿಸಿ ಶ್ರೀ ಪೂಜ್ಯಪಾದರ ಪರಕೃಪೆಗೆ ಪಾತ್ರರಾಗತಕ್ಕದ್ದು ತಚ್ಛಿಷ್ಯರಾದ ನಮ್ಮಗಳ ಆದ್ಯ ಕರ್ತವ್ಯವೆಂದು. [illegible] ಹೇಳಬೇಕೆನಿಸಿದಕ್ಕಾಗಿಯೋ [illegible] ಕೂಡ ಗುರುಭಕ್ತಿಯಿಂದ ಶ್ರೀ ಜಗದ್ಗುರುಗಳನ್ನು ಉತ್ಸವ ಪೂರ್ವಕ ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಗುರುವರ್ಯರ ಸಂಕಲ್ಪವನ್ನು ನೆರವೇರಿಸುವದಕ್ಕಾಗಿ ಶಕ್ತಿ ಮೀರಿ ಸಹಾಯ ಮಾಡುತ್ತಿರುವರು, ಇಂಥ ಶುಭಸಂಪತ್ತಿ [illegible] ಕಾಲದಲ್ಲಿ ಸರ್ವಥಾ ಗುರುಸಂಕಲ್ಪವನ್ನು ನೆರವೇರಿಸಿ ತಮ್ಮ ಜನ್ಮವನ್ನು ಸಾರ್ಥಕ ಮಾಡಿಕೊಳ್ಳದೆ [illegible] ವೀರಶೈವರಾಗಿ ಶ್ರೀ ಜಗದ್ಗುರುಗಳ ಗೋತ್ರಸೂತ್ರಾದಿಗಳನ್ನು ಹೇಳುತ್ತಿದರೂ ಕೆಲವರು ಅಸೂಯೆಯಿಂದಲೋ ಅಥವಾ ಮತ್ಸರ ಕಾರಣದಿಂದಲೋ ಶ್ರೀ ಜಗದ್ಗುರುಗಳಿಗೆ ಕಾಣಿಕಾದಿಗಳನ್ನು ಕೊಡಬಾರದೆಂತಲೂ ಅವರನ್ನು ಮುಕ್ಕಾಂ ಮಾಡಿಸಬಾರದೆಂತಲೂ ಅವರ ದರ್ಶನಕ್ಕೆ ಹೋಗಬಾರದೆಂತಲೂ ವಿಭೂತಿ ರುದ್ರಾಕ್ಷಿಗಳನ್ನು ಮುಟ್ಟಿಸಿ ಪ್ರಮಾಣ ಮಾಡಿಸುತ್ತಾರೆಂಬದಾಗಿ ಕರ್ಣಾಕರ್ಣಿಕವಾಗಿ ಕೇಳುತ್ತೇವೆ. ಅಂಥವರ [illegible] ಅನಂತ ನಮಸ್ಕಾರಗಳು.

"ತೇಽಮೀ ಮಾನವ ರಾಕ್ಷಸಾಃ ಪರಹಿತಂ ಸ್ವಾರ್ಥಾಯ ನಿಘ್ನಂತಿಯೇ ಯೇನಿಘ್ನಂತಿ ನಿರರ್ಥಕಂ ಪರಹಿತಂ ತೇ ಕೇ ನ ಜಾನೀಮಹೇ" ಎಂಬ ಭರ್ತೃಹರಿಯ ನೀತಿ ವಾಕ್ಯವನ್ನು ಪ್ರತಿಯೊಬ್ಬರೂ ಚಿಂತಿಸತಕ್ಕದ್ದೆಂದು [illegible]. ಧರ್ಮಕಾರ್ಯಕ್ಕೆ ಅಡ್ಡಿ ಮಾಡತಕ್ಕವರು ಧರ್ಮಕಂಟಕರೆಂದು ಯಾರು ಹೇಳಲಾರರು! ಪಾಪಕಾರ್ಯ ಮಾಡಿದವರು ಪಾಪದ ಫಲವನ್ನು ಜನ್ಮಜನ್ಮವಾಗಿ ಅನುಭವಿಸುತ್ತಾರೆ. ಅಸ್ತು, ಅಂಥವರು ತಾವಾಗಲೀ ತಮ್ಮ ಮನಸ್ಸಿನಿಂದಾಗಲೀ ಕಾಣಿಕೆಗಳನ್ನು ಕೊಡಿಸುವದಕ್ಕೆ ಒದಗದೆ ಉದಾಸೀನರಾಗಿದ್ದರೆ ಆದರೂ ಸಮಾಜಕ್ಕೆ ಮಹದುಪಕಾರ ಮಾಡಿದಂತಾಗುತ್ತಿತ್ತು. [illegible] ಈ ರೀತಿ ಮಾಡದೆ ಸಮಾಜದಲ್ಲಿ ಪಾರ್ಟಿಯ ಕಲಹಾಗ್ನಿಯ [illegible] ಮಹೋಪಕಾರದ ಬದಲಾಗಿ [illegible] ಕಾರಣಗಳಾದ ಅವುಗಳ ಪಕ್ಷಗಳನ್ನು ಮಾಡಿಸುತ್ತಿರುತ್ತಾರೆ. ಪೀಠಾಧಿಕಾರಿಗಳು ಈ ಪ್ರಾಂತಕ್ಕೆ ದಯಮಾಡಿಸಿದ್ದು ಇಲ್ಲಿರುವ ನಮ್ಮಗಳಿಗೆ ಗೊತ್ತೇ ಇಲ್ಲವೆಂದು ನಮ್ಮ ಗುರುಗಳು ಹೇಳುತ್ತಿದ್ದರು. ಜಗದ್ಗುರುಗಳನ್ನು ನಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಸೇವಿಸಿ ಯಥಾಶಕ್ತಿ ಕಾಣಿಕೆಯನ್ನರ್ಪಿಸಿ ನಮ್ಮಗಳ ಪಾಪತಾಪವನ್ನು ಕಳಕೊಳ್ಳುವದು ತಪ್ಪೋ ಅಥವಾ ಜಗದ್ಗುರುಗಳಿಗೆ ಕಾಣಿಕಾದಿ ಸೇವೆಯನ್ನೊಪ್ಪಿಸದೆ ಮನಸ್ಸಿನಿಂದ ನಿಂದಿಸುವದು ತಪ್ಪೋ ಶಿಷ್ಯರ ಪ್ರಾರ್ಥನಾನುಸಾರ ಒಪ್ಪುವದನ್ನಂಗೀಕರಿಸಿ ಗ್ರಾಮಕ್ಕೆ ದಯಮಾಡಿಸುವದರಿಂದ ಜಗದ್ಗುರುಗಳು ಪಾರ್ಟಿ ಮಾಡಿ ಕಲಹಾಗ್ನಿಯನ್ನು ಬೆಳೆಸಿದಂತಾಯಿತೋ! ಅಥವಾ ಶ್ರೀ ಜಗದ್ಗುರುಗಳಿಗೆ ಮುಕ್ಕಾಂ ಮಾಡಿಸಬಾರದೆಂದು ಮೊದಲೇ ಜನರಿಗೆ ದುರುಪದೇಶಮಾಡುವರು ಸಮಾಜದಲ್ಲಿ ಪಾರ್ಟಿಯ ಕಲಹಾಗ್ನಿಯನ್ನು ಬೆಳೆಸಿದಂತಾಯಿತೋ ನ್ಯಾಯಾನ್ಯಾಯ ವಿಚಾರಶೀಲರಾದ ವಾಚಕರೇ ವಿಚಾರಿಸಲಿ. ಶ್ರೀ ಜಗದ್ಗುರುಗಳವರು ಈಗಿನ [illegible]ಗೆ ಆಸ್ಪದವನ್ನು ಕೊಡದೆ ತಾವು ಅಧಿಕಾರಸಮಯದಲ್ಲಿ ಅಪ್ಪಣೆಕೊಡಿಸಿದ ಪ್ರಕಾರ ಸತ್ಸಂಕಲ್ಪವನ್ನು ನೆರವೇರಿಸುವದಕ್ಕಾಗಿ ಪ್ರತಿಯೊಬ್ಬರಿಗೂ ಸದ್ಬೋಧಾಮೃತವನ್ನು ಪಾನಮಾಡಿಸುತ್ತ ಶಿವಯೋಗಾನಂದ ಪರಮಸಾಮ್ರಾಜ್ಯ ವೈಭವದಲ್ಲಿರುತ್ತಾರೆ. ಯಾರನ್ನೂ ನಿಂದಿಸುವದಿಲ್ಲ ನಿಂದೆಗೂ ಲಕ್ಷ್ಯಕೊಡುವದಿಲ್ಲವೆಂಬ ವಿಷಯವು ಅವರ ದರ್ಶನಾಶೀರ್ವಾದವನ್ನು ಪಡೆದ ಪ್ರತಿಯೊಬ್ಬರಿಗೂ ಗೊತ್ತಿರುವದು. ಪರೋಕ್ಷಿಗಳು ಧರ್ಮಭೀರುಗಳಾಗದೆ ಆಚಾರ್ಯರಲ್ಲಿ ಪೂಜ್ಯಬುದ್ಧಿಯಿಲ್ಲದೆ ನಾಸ್ತಿಕರಂತೆ [illegible] ಕೆಲವು ಪ್ರಶ್ನೆಗಳನ್ನು ಮಾಡಿರುತ್ತಾರೆ. ಅದರಲ್ಲಿ ಮಹಾಸಭೆಯವರು ಸ್ಥಾಪಿಸಬೇಕೆಂದಿರುವ ಸಂಸ್ಕೃತಕಾಲೇಜಿನಲ್ಲಿ ಇತರರಿಗೆ ಮತ್ತು [illegible]ಗಳಿಗೆ ವಿದ್ಯಾಭ್ಯಾಸ ಮತ್ತು ಭೋಜನಗಳಿಗೆ ಒಟ್ಟಿಗೆ ಅನುಕೂಲ ಮಾಡಿಕೊಡುವರಾ ಬೇರೆಬೇರೆ ಅನುಕೂಲಮಾಡಿಕೊಡುವರಾ ಎಂದು ಪ್ರಶ್ನೆ ಮಾಡಿರುವರು. ಈ ಪ್ರಶ್ನೆಯು ಶ್ರೀ ಜಗದ್ಗುರುಗಳವರ ಸತ್ಸಂಕಲ್ಪಕ್ಕೆ ಬಹಳ ಬಾಧಕವೆಂದು ತಿಳಿದುಬರುವದು. ಸಂಸ್ಕೃತ ಕಾಲೇಜು ಸ್ಥಾಪಿತವಾಗದೇ [illegible] ಈ ವಿಷಯವನ್ನು [illegible] ಶ್ರೀ ಜಗದ್ಗುರುಗಳ ಭಕ್ತರ ಮನಸ್ಸನ್ನು ಕಲಕಿದ್ದು ಕಾಲೇಜು ಸ್ಥಾಪನೆಯಾದನಂತರ ಭಕ್ತರಿಗೂ ಮಹಾಪೋಷಕರಿಗೂ ಪ್ರತ್ಯೇಕವಾಗಿ [illegible] ಕಾಣಿಕೆಯನ್ನು [illegible]ವೆಂದು ಅರ್ಥವಾಗುತ್ತ[illegible] 'ಕಾಪಿಕಾಸಹಿತಾ[illegible]' ಎಂಬಂತೆ ಇಂಥ ಧೂರ್ತರ ಮಾತುಗಳಿಂದಲೇ ಸಮಾಜವು ದುರವಸ್ಥೆಗೆ ಒಳಗಾಗುತ್ತದೆ. ಶ್ರೀ ಜಗದ್ಗುರು ಪಂಚಾಚಾರ್ಯರಾಗಲಿ ತತ್ಸಾಂಪ್ರದಾಯಿಕರಾಗಲೀ ಯಾರಿಗೂ ಭೇದವನ್ನು ಮಾಡಿಲ್ಲ. ವೀರಶೈವನೆನಿಸಿದ [illegible] ದಯಮಾಡಿಸಿ ವಿದ್ಯಾದಾನವನ್ನು [illegible] ಸರ್ವರಿಗೂ ತೀರ್ಥಪ್ರಸಾದವನ್ನು ಕೊಟ್ಟು ಶಕ್ತ್ಯನುಸಾರ ಕೊಟ್ಟ ಕಾಣಿಕೆಯನ್ನು ತೆಗೆದುಕೊಂಡು ಆಶೀರ್ವದಿಸಿ ದಯಮಾಡಿಸುತ್ತಿರುವದು ಗುರುವರ್ಗದವರ ಕರ್ತವ್ಯವಾಗಿದೆ. ಇದನ್ನು ಕಣ್ಣಿಂದನೋಡಿ ಕಿವಿಯಿಂದ ಕೇಳಿ ಕುಚೇಷ್ಟೆಯ ಪ್ರಶ್ನೆ ಮಾಡಿರುವದು ಹಾಗೂ ಅದಕ್ಕೆ ಅವಕಾಶಕೊಡುವದು ಸಮಾಜದ ಪಾರ್ಟಿಯ ಕಲಹಾಗ್ನಿಗೆ ಕಾರಣವೆಂದು ಯಾರಾದರೂ ಹೇಳಬಹುದು.

ಜಗದ್ಗುರುಗಳು ತಮ್ಮ ದರ್ಶನಕ್ಕೆ ಬಂದ ಪ್ರತಿಯೊಬ್ಬರಿಗೂ ಧರ್ಮತತ್ವಗಳನ್ನು ಉಪದೇಶಮಾಡಿ ಸರ್ವರನ್ನು ಎಚ್ಚರಗೊಳಿಸುತ್ತಿರುತ್ತಾರೆ. ಶ್ರೀ ಪೂಜ್ಯಪಾದರ ಉಪದೇಶದಲ್ಲಿ [illegible] ಸೂಚನೆಯಾಗಿರುತ್ತದೆ.

ಒಂದುಗಳಿಗೆ [illegible] ಉಪದ್ವ್ಯಾಪಕತನದಿಂದ ಸಮಾಜದಲ್ಲಿ ಇದ್ದ ಗೊಂದಲವನ್ನೆಬ್ಬಿಸಬೇಡಿರಿ. ಶ್ರೀ ಜಗದ್ಗುರುಗಳವರ ಅವತಾರವು ವೀರಶೈವಮತದ ಅಭ್ಯುದಯಕ್ಕಾಗಿಯೇ ಆಗಿರುವದೆಂದು ತಿಳಿದು [illegible] ಗ್ರಾಮಗಳಿಗೆ ದಯಮಾಡಿಸಿಕೊಂಡು ಶಕ್ತ್ಯನುಸಾರ ಕಾಣಿಕೆಯನ್ನು ಅರ್ಪಿಸಿ ಆಶೀರ್ವಾದ ಪಡೆದು ಗುರುಕೃಪೆಗೆ ಪಾತ್ರರಾಗಿ ಇಹಪರಗಳ ಸುಖಸಂಪತ್ತಿಗೆ ಭಾಗಿಗಳಾಗತಕ್ಕದ್ದು ನಮ್ಮಗಳ ಕರ್ತವ್ಯವಾಗಿದೆ. "ಗುರುಂನಿಂದತಿ [illegible] ದ್ರವ್ಯಂಹರತಿ ತಸ್ಯತ[illegible] ತಿಷ್ಠೇ[illegible] ಚಂಡಾಲೋ [illegible]" ಎಂದು' ಗುರುವನ್ನು ನಿಂದಿಸುವವನು, ಗುರುದ್ರವ್ಯವನ್ನು ಅಪಹರಿಸುವವನು, ಗುರುದ್ವೇಷಿಗಳೊಡನೆ ಸ್ನೇಹಮಾಡುವವನು ಚಂಡಾಲನಾಗುತ್ತಾನೆಂದು ವಿಧಿಸುವ ಧರ್ಮಗ್ರಂಥಗಳನ್ನು ಧ್ಯಾನಿಸುತ್ತ ಗುರುಗಳಲ್ಲಿ ಅತಿಭಕ್ತಿಯಿಂದ ನಡೆದುಕೊಂಡು ಮುಕ್ತರಾಗಬೇಕು. ಮನಸ್ಸಿನಿಂದಲೂ, ಕಾಯದಿಂದಲೂ ಮಾತಿನಿಂದಲೂ ಗುರುವಿಗೆ ಸಿಟ್ಟು ಬರಿಸಬಾರದು. ಅವರ ಸಿಟ್ಟಿನಿಂದ ಆಯುಷ್ಯ, ಸಂಪತ್ತು, ಜ್ಞಾನ, ಕ್ರಿಯಾದಿಗಳು [illegible] ನಷ್ಟವಾಗುತ್ತವೆ "ಅಂದೋಲಿಕಾಯಾಮಾರೋಪ್ಯ ಗಜೇ ವಾಜಿತುರಂಗಮೇ ಅನುಗಚ್ಛೇತ್ [illegible] [illegible] ಎಂಬ ಧರ್ಮಶಾಸ್ತ್ರವಚನದಂತೆ ಮತಸ್ಥಾಪನಾಚಾರ್ಯರನ್ನು ಪಲ್ಲಕ್ಕಿಯಮೇಲಾಗಲೀ ಆನೆಯಮೇಲಾಗಲೀ ಅಥವಾ ಕುದುರೆಯಮೇಲಾಗಲೀ ಕೂಡ್ರಿಸಿ ಅನೇಕ ವಾದ್ಯವೈಭವಗಳೊಡನೆ ಉತ್ಸವದಿಂದ ಸತ್ಕರಿಸತಕ್ಕದ್ದು. ಶಿಷ್ಯರ ಧರ್ಮವಾಗಿದೆ, ಈ ರೀತಿ ನಡೆದುಕೊಂಡವರ ಜನ್ಮವೇ ಸಫಲವು! ಅವರೇ ಧನ್ಯರು." ಅವರೇ ಮುಕ್ತರು!!! "ಮುಕ್ತಿಮೂಲಂ ಗುರೋಃ ಕೃಪಾ" ಗುರುಕೃಪೆಯು ಮುಕ್ತಿಗೆ ಕಾರಣವಾಗಿರುವದರಿಂದ ಅದನ್ನು ಸಂಪಾದಿಸುವದಕ್ಕಾಗಿ ಪ್ರತಿಯೊಬ್ಬ ವೀರಶೈವನು ಗುರುಸೇವೆಯಲ್ಲಿ ತತ್ಪರನಾಗಿ [illegible] ಗುರುಕೃಪೆಗೆ ಪಾತ್ರನಾಗ[illegible]ತಕ್ಕದ್ದೆಂದು ಆಗ್ರಹಪೂರ್ವಕ ಸೂಚಿಸಿ ಈ ಲೇಖನವನ್ನು ಮುಗಿಸುತ್ತೇನೆ. 'ಯತೋ ಧರ್ಮಸ್ತತೋ ಜಯಃ'.

ಶ್ರೀಗುರು ಚರಣಸೇವಕ

ಕೂರು ಪುರವಾಸಿಗಳೂ, ವಿದ್ಯಾರ್ಥಿಗಳೂ, ನಸಭೆಯವರೂ ಒಪ್ಪಿಸಿದ ಮಾನಪತ್ರಿಕೆಗಳಿಗೆ

ಹಾತ್ಮಾಗಾಂಧಿಯವರ ಉತ್ತರ

ಯರೇ ಮತ್ತು ಸಜ್ಜನರೇ!

ವುಗಳು ಕೊಟ್ಟ ಮಾನಪತ್ರಿಕೆಗಳಿಗೆ ನಾನು ಪಗೊಳ್ಳುತ್ತೇನಲ್ಲದೆ ತಮ್ಮ ಪ್ರೇಮಕ್ಕೆ ಋಣಿ ದ್ದೇನೆ. ಇದಿನ ಇಂಗ್ಲೀಷಿನಲ್ಲಿ ಉಪನ್ಯಾಸ ನಂತೆ ಈ ಸಭೆಯನ್ನಲಂಕರಿಸಿರುವ ಪಂಚಾ ಸ್ವಾಮೀಜಿರು ನನಗೆ ಅಪ್ಪಣೆಮಾಡಿದ್ದಾರೆ ನಾನು ಹಿಂದಿಯಲ್ಲಿ ಹೇಳಬೇಕೆಂದೇ ಅಪೇಕ್ಷಿಸಿ . ಒಂದುವೇಳೆ ಪುರುಷರು ಇಂಗ್ಲೀಷ್ ಜ್ಞಾನ ರೂ ನಮ್ಮ ಮಹಿಳೆಯರಿಗೆ ಇಂಗ್ಲೀಷ್ ಅಭ್ಯಾ ಆದುದರಿಂದ ಪಕ್ಷಪಾತರಹಿತವಾದ ಇಂಗ್ಲೀಷ ಟ್ಟು ಸರ್ವಸಂಸ್ಕೃತವಾದ ಹಿಂದಿಯಲ್ಲಿ ಹೇಳು . ಒಂದುವೇಳೆ ನನಗೆ ಇಂಗ್ಲೀಷ್ ಬರುತ್ತದೋ ೋ ನೋಡಬೇಕೆಂದಿದ್ದರೆ ಅದಕ್ಕಾಗಿ ತಾವು ಕಾಣಿಕೆಕೊಡಬೇಕಾಗುತ್ತದೆ. ಹುಡುಗರು ದು ಟ್ಟು ಪರೀಕ್ಷೆ ಕೊಟ್ಟರೆ ನಾನು ದುಡ್ಡು ತೆಗೆದು . ಪರೀಕ್ಷೆ ಕೊಡುತ್ತೇನೆ. ನಾನು ವಿಲಕ್ಷಣನಾ ದವನು (ಹೀಗೆ ಮಹಾತ್ಮರು ಹೇಳುವಾಗ ಎಲ್ಲ ಗುವರು) ನೀವು ಕನ್ನಡದಲ್ಲಿ ಮಾನಪತ್ರ ಕೊ ದಕ್ಕಾಗಿ ನಾನು ಹರ್ಷಿಸುತ್ತೇನೆ. ಆದರೆ ಈ ಸಭೆ ನೆರೆದಿರುವ ಬಹುಜನರು ಖಾದೀಧಾರಣೆ ಮಾಡ ವುದು ನನಗೆ ದುಃಖವನ್ನುಂಟುಮಾಡಿದೆ. ಇಲ್ಲಿ ದಿರುವ ವಿದ್ಯಾರ್ಥಿಗಳಿಗೆ ನಾಲ್ಕುಮಾತು ಹೇಳಬೇ ದಿರುವೆನು. ಏಕೆಂದರೆ ವಿದ್ಯಾರ್ಥಿಗಳೆಂದರೆ ನನಗೆ ಪ್ರಾಣ, ನಾವು ಸ್ವರಾಜ್ಯಕ್ಕಾಗಿ ಹೋರಾಡು ಇವರಿಗಾಗಿಯೇ. ಇವರಲ್ಲಿ ಬಹುಮಕ್ಕಳು ಧರಿಸದಿರುವುದು ವಿಷಾದಕರವಾಗಿದೆ. ನಾನು ಕೂಲುಹಾಸ್ಟಲಿನಲ್ಲಿಯೇ ಇದ್ದರೂ ಒಬ್ಬನಾದರೂ ನ್ನು ನೋಡಲು ಬರಲಿಲ್ಲ. ಇದು ನಮ್ಮ ಹುಡುಗರ ಗ್ಯತೆಗೆ ನಿದರ್ಶನವಾಗಿದೆ. ಮುಂದಿನಪ್ರಜೆಗಳಾದ ರು ಸನ್ಮಾರ್ಗಿಗಳೂ ಬ್ರಹ್ಮಚಾರಿಗಳೂ ಸ್ವದೇಶ ರೂ ಆಗಲೆಂಬುದೇ ನನ್ನ ಬಯಕೆ.

ತುಮಕೂರಿನಲ್ಲಿ ನಾನು ನಿರೀಕ್ಷಿಸಿದ್ದಷ್ಟು ಖಾದೀ ಯು ನೇರದಿದ್ದುದು ನನಗೆ ಅತೃಪ್ತಿಯನ್ನುಂಟು ಡಿದೆ ಇಲ್ಲಿ ದರಿದ್ರನಾರಾಯಣರನ್ನು ತೀರಿಸುವರು ಕಟವು. ಪಟ್ಟಣಿಗರು ಸುಖದಿಂದಿರುವುದು ಹಳ್ಳಿ ರ ಕಷ್ಟದಫಲವೆಂಬುದನ್ನು ಮರೆಯಲಾಗದು.

ಲ್ಲಿ ನಾವು ಒಂದು ಖಾದೀವಸ್ತ್ರಾಲಯವನ್ನು ಸಿರುವೆವು. ಈ ಪುರವಾಸಿಗಳು ಇದನ್ನು ಂದ ಹೊರಡಿಸದಂತೆ ಕಾಪಾಡುವರೆಂದು ನಾನು ರುವೆನು.

ಲ್ಲಿನ ಹೈಸ್ಕೂಲಿನಲ್ಲಿ ಬಡಹುಡುಗರಿಗೆ ಸಹಾಯ ದಲು ಒಂದು "ನಿಧಿ" ಯನ್ನು ಏರ್ಪಡಿಸಬೇ ದು ಹೆಡ್ಮಾಸ್ಟರು ನನಗೆ ತಿಳಿಸಿದರು. ಇದಕ್ಕೆ ನನ್ನ ನ್ನೂ ನನ್ನದಾಗಿ ಸ್ವಲ್ಪ ದ್ರವ್ಯವನ್ನೂ ಕೊಡು ಕೇಳಿರುವರು. ಇದಕ್ಕೆ ನನ್ನ ಹೆಸರನ್ನು ನಾನು ದಾನವಾಗಿ ಕೊಟ್ಟರೂ ಒಂದು ಕವಡೆಯನ್ನಾದರೂ ನು ಕೊಡುವುದಿಲ್ಲ. ಈ ಪುರವಾಸಿಗಳು ನನಗರ್ಪಿ ವ ೫|| ಸಾವಿರ ರೂಪಾಯಿಗಳು ಖಾದೀನಿಧಿಗೆ ರತಕ್ಕದ್ದು, ಇದು ನನ್ನ ಹಣವಲ್ಲ ನನ್ನದಾಗಿ ನನ್ನ ಒಂದುಕಾಸೂ ಇಲ್ಲ. ನಾನು ಸಂಪಾದನೆಮಾಡುವ ಲವು ಬಹುದೂರಹೋಯಿತು. ನಾನು ತಿನ್ನುವ ನ್ನೂ ಉಡುವಬಟ್ಟೆಯೂ ತಾವುಗಳು ದುಡಿದುದು. ನೇ ಇಲ್ಲದಮೇಲೆ ಕೊಡುವುದೇನು ನಾನು [illegible] ನು. ಈ ಹೈಸ್ಕೂಲಿನ ಅನಾಥಬಾಲಕನಿಧಿಗೆ ನನ್ನ ರನ್ನು ಮಾತ್ರ ಧಾರಾಳವಾಗಿ ಕೊಟ್ಟಿರುವೆನು.

ತಾವುಗಳು ನನ್ನ ಸ್ವಾಗತವನ್ನೂ ಆತಿಥ್ಯವನ್ನೂ ಯಥೋಚಿತರೀತಿಯಿಂದ ಮಾಡಿದುದಕ್ಕೆ ನಾನು ತಮ್ಮ ಉಪಕಾರ ಸ್ಮರಿಸುತ್ತೇನೆ.

ಮಹಾತ್ಮರು ತುಮಕೂರಿಗೆ ಆಗಮಿಸಿದುದು

ಶ್ರೀಬಂಧು ಮಹಾತ್ಮಾಗಾಂಧಿಯವರು ತಾ|| ೧೯-೭-೨೭ರಲ್ಲಿ ತುಮಕೂರಿಗೆ ದಯಮಾಡಿಸಿದರು. ನಗರಸಭೆಯವರು ಹರ್ಷದಿಂದ ಸ್ವಾಗತಿಸಿದರು.

ಇಲ್ಲಿನ ಪ್ರಾಣಿದಯಾ ಪ್ರಚಾರಕ ಸಂಘ, ವಿದ್ಯಾರ್ಥಿವೃಂದ, ಬೋಧಕಸಮಿತಿ ಮೊದಲಾದವರು ಮಹಾತ್ಮರಿಗೆ ಮಾನಪತ್ರಗಳನ್ನು ಭಕ್ತಿಯಿಂದೊಪ್ಪಿಸಿ ದುಡ್ಡಿದೆ ಖಾದೀನಿಧಿಗೂ ಯಥೋಚಿತ ಸಹಾಯ ಮಾಡಿ ದರ್ಶನಾಶೀರ್ವಾದಗಳನ್ನು ಪಡೆದುಕೊಂಡೆವು.

ಮಹಾತ್ಮರು ಬರುವವರೆಗೂ ಹಲಕೆಲವರು ಖಾದೀ ಧರಿಸಿ ಅವರು ದಯಮಾಡಿಸಿದ ಕೂಡಲೇ ಪಟ್ಟೆಪೀತಾಂಬರಗಳನ್ನು ಬಚ್ಚಿಟ್ಟದ್ದು ಹುಡುಕಿಕೊಂಡರು. ಮಹಾತ್ಮಜೀಯವರು ಇರುವವರೆಗೂ ತುಮಕೂರು ಸ್ವರ್ಗದಂತಿದ್ದಿತು.

ಮಹಾತ್ಮರು ಖಾದೀನಿಧಿಗೆ ಸಹಾಯವನ್ನು ಕೊಡುವಂತೆ ಸಭಿಕರನ್ನು ಯಾಚಿಸಲು ನೆರೆದಿದ್ದ ಸಭಿಕರು ಉದಾರವಾಗಿ ಸಹಾಯಮಾಡಿದರು. ಕೆಲವುಮಂದಿ ಹೆಣ್ಣುಮಕ್ಕಳು ಕೈಬಳೆಗಳನ್ನೂ ಉಂಗುರ ಮೊದಲಾದ ಆಭರಣಗಳನ್ನೂ ದಾನಮಾಡಿದರು. ಹೆಂಗಸರ ಈ ವಿಧದ ಔದಾರ್ಯಕ್ಕೆ ಮಹಾತ್ಮಜೀಯವರು ಬಹುಸಂತೋಷಪಟ್ಟರು

ಪುರವಾಸಿ.

ಮಹಾತ್ಮಾಗಾಂಧಿಯವರು ತಾ|| ೧೯ರಲ್ಲಿ ತುಮಕೂರು ಪಟ್ಟಣದಲ್ಲಿ ಮಾಡಿದ ಉಪನ್ಯಾಸದ ಸಾರಾಂಶ

"ನಗರಕಾರ್ಯನಿರ್ವಾಹಕ ಸಮಿತಿಯವರಿಗೆ"

ಅಧ್ಯಕ್ಷರೇ ? ಮತ್ತು ಸಮಿತಿಯವರೇ, ಬಂಧುಭಗಿನಿಯರೇ ತಾವು ನನಗೆ ಇಂಗ್ಲೀಷ್ ಭಾಷೆಯಲ್ಲಿ ಮಾನಪತ್ರ ಕೊಟ್ಟುದುದಕ್ಕಾಗಿ ನಾನು ವ್ಯಸನಪಡುತ್ತೇನೆ. ದೇಶಭಾಷೆಯಾದ ಕನ್ನಡದಲ್ಲಾಗಲೀ ರಾಷ್ಟ್ರಭಾಷೆಯಾದ ಹಿಂದಿಯಲ್ಲಾಗಲೀ ಕೊಟ್ಟಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು.

ತುಮಕೂರು ನಗರವು ಇತ್ತೀಚೆಗೆ ವೃದ್ಧಿಯಾಗುತ್ತಿರುವುದನ್ನೂ, ಚೊಕ್ಕಟವಾಗುತ್ತಿರುವುದನ್ನೂ ಕೇಳಿ ಹರ್ಷಿಸುವೆನು. ಇಲ್ಲಿಗೆ ೫ ಲಕ್ಷ ರೂಪಾಯಿ ಖರ್ಚಿನಿಂದ ಕೊಳಾಯಿಗಳಲ್ಲಿ ನೀರನ್ನೂ, ೩ ಲಕ್ಷ ರೂಪಾಯಿ ಖರ್ಚಿನಿಂದ ವಿದ್ಯುದ್ದೀಪವನ್ನೂ ಒದಗಿಸಲು ನೀವು ಮಾಡಿರುವ ಸಾಹಸವು ಅಭಿನಂದನೀಯವಾಗಿದೆ. ಆದರೆ ಇಲ್ಲಿ ಬಡಮಕ್ಕಳಿಗೆ ಹಾಲು ಮೊಸರನ್ನು ಉಚಿತವಾಗಿ ಕೊಡುವ ಒಂದು "ಕ್ಷೀರಶಾಲೆ" ಇಲ್ಲದುದು ವ್ಯಸನಕರ. ನೀವು ಇಂತಹ ಒಂದು ಮಂದಿರವನ್ನು ಸ್ಥಾಪಿಸ ಪ್ರಯತ್ನಮಾಡಿದರೆ ಶ್ಲಾಘಿಸುವೆನು.

ನಮ್ಮ ದೇಶದ ಜನರು ಬಹು ಸೋಮಾರಿಗಳು ಈ ವಿಷಯದಲ್ಲಿ ಪಾಶ್ಚಾತ್ಯರಲ್ಲಿ ಒಳ್ಳೆಯ ನಡೆಯಿದೆ ನಾನು ಸನಾತನ ಹಿಂದೂಧರ್ಮಾಭಿಮಾನಿಯಾದುದರಿಂದ ಐರೋಪ್ಯರ ಈ ಗುಣವನ್ನು ಸಂತೋಷದಿಂದ ಗ್ರಹಿಸುತ್ತೇನೆ. ಇಂಗ್ಲೀಷಿನಲ್ಲಿ "ಕಾಲವೇ ಹಣವೆಂದು ಒಂದು ಗಾದೆ ಇದೆ ಭಗವದ್ಗೀತೆಯಲ್ಲಿಯೂ ಭಗವಂತನು "ನಾನು ಕಾಲಸ್ವರೂಪನು" ಎಂದು ಹೇಳಿರುವನು. ಯಾವನೊಬ್ಬನ ಅಭಿವೃದ್ಧಿ ಅನಭಿವೃದ್ಧಿಗಳೂ ಅವನು ಕಾಲವನ್ನು ಹೇಗೆ ಉಪಯೋಗಿಸಿಕೊಳ್ಳುವನೆಂಬುದರಿಂದ ತಿಳಿಯಲ್ಪಡುವುವು.

ಚೊಕ್ಕಟವಾಗಿರುವ ವಿಷಯದಲ್ಲಿಯೂ ಐರೋಪ್ಯರು ತೋರಿಸುವಷ್ಟು ಶ್ರದ್ಧೆಯನ್ನು ನಾವು ತೋರಿಸುವುದಿಲ್ಲ. ತನ್ನ ಮನೆ, ಊರು, ದೇಶಗಳನ್ನು ಮಲಿನವಾಗಿಟ್ಟುಕೊಳ್ಳುವವನು ಅಥವಾ ಅದಕ್ಕೆ ಯತ್ನಪಡುವವನು ನಿಜವಾದ ಮಾನವನಲ್ಲ. ಒಬ್ಬನ ಮನೆಯು ಚೊಕ್ಕಟವಾಗಿದೆಯೆಂಬುದನ್ನು ಪರೀಕ್ಷಿಸಬೇಕಾದರೆ ಆ ಮನೆಯ 'ಕಕ್ಕಸ'ವನ್ನು ನೋಡಿದರಾಯಿತು. ನಮ್ಮ ಮನೆಗಳನ್ನು, ಕಕ್ಕಸುಗಳನ್ನೂ ನಾವು ಶುಚಿಯಾಗಿಟ್ಟುಕೊಳ್ಳಲು ಎಂದಿನವರೆಗೆ ಪ್ರಯತ್ನಿಸುವುದಿಲ್ಲವೋ ಅಂದಿನವರೆಗೆ ನಾವು ನಾಗರೀಕರಾಗಲಾರೆವು.

ಪಂಚಮೋದ್ಧರಣ ಹಿಂದೂ ಸಮಾಜ ಧರ್ಮಕ್ಕೆ ಆವಶ್ಯಕ. ಪ್ರತಿಯೊಬ್ಬ ಭಾರತೀಯನೂ ಇದಕ್ಕೆ ತ್ರಿಕರಣಪೂರ್ವಕ ಪ್ರಯತ್ನಿಸತಕ್ಕದು. ನಾನು ಪಂಚಮೋದ್ಧರಣಕ್ಕೆ ಕಂಕಣವನ್ನು ಕಟ್ಟಿಕೊಂಡಿರುವೆನು. ಮೈಸೂರು ಮಹಾರಾಜರವರೂ ಸರ್ಕಾರದವರೂ ಈ ವಿಷಯದಲ್ಲಿ ಬಹಳ ಶ್ರದ್ಧೆಯನ್ನು ವಹಿಸಿರುವುದನ್ನು ಕೇಳಿ ನಾನು ಬಹಳ ಸಂತೋಷಪಡುತ್ತೇನೆ.

ಖಾದೀ ಪ್ರಚಾರವಂತೂ ಸ್ವರಾಜ್ಯದ ತಳಹದಿಯು. ಎಂದುವರೆಗೆ ಖಾದೀಪ್ರಚಾರವಾಗಲಾರದೋ ಅದುವರೆಗೆ ನಮ್ಮ ದೇಶದಲ್ಲಿ ದರಿದ್ರನಾರಾಯಣರು ಹೊಟ್ಟೆ ತುಂಬ ಊಟಮಾಡಲಾರರು. ಇಲ್ಲಿ ನೆರೆದಿರುವ ಸಭಿಕರಲ್ಲಿ ಕೆಲವರು ಮಾತ್ರ ಖಾದೀ ಧರಿಸಿರುವಿರಿ. ಇಂದಲ್ಲ ಮುಂದಾದರೂ ತುಮಕೂರು ಖಾದೀಮಯವಾಗಬೇಕೆಂದೇ ನನ್ನ ಹಂಬಲಿಕೆ. ಹಾಗೆ ಆದೀತೆಂದು ನಾನು ಭಾವಿಸಿರುವೆನು. ಅಲ್ಲದೆ ಈಗ ಖಾದಿಯನ್ನು ಬಳಸಿರುವವರು ಇನ್ನೆಂದಿಗೂ ಇದನ್ನು ಬಿಡಬಾರದೆಂದು ನಾನು ಪ್ರಾರ್ಥಿಸುತ್ತೇನೆ. ಬಹುಮಾತಿನಿಂದೇನು, ಖಾದಿಯಿಂದಲ್ಲದೆ ಹಿಂದೂಸ್ಥಾನವು ಉಚ್ಛ್ರಾಯಾವಸ್ಥೆಗೆ ಬರಲಾರದು.

ಗೋರಕ್ಷಣೆಯ ವಿಷಯದಲ್ಲಿ ನಾಲ್ಕುಮಾತುಗಳನ್ನಾಡಬೇಕಾಗಿದೆ. ನಮ್ಮ ದೇಶದಲ್ಲಿ ಗೋವಿಗೆ ಬಹು ಮಹತ್ವವಿದೆ. ಪೂರ್ವದಲ್ಲಿ ಆರ್ಯರು ಮತ್ತೊಬ್ಬನ ಯೋಗಕ್ಷೇಮವನ್ನು ವಿಚಾರಿಸಬೇಕಾದರೆ "ನಿಮ್ಮ ಮನೆಯಲ್ಲಿ ಮಕ್ಕಳುಮರಿಗಳು ಧನಧಾನ್ಯಗಳು ಎಲ್ಲವೂ ಸಮೃದ್ಧವಾಗಿವೆಯೇ' ಎಂದು ಪ್ರಶ್ನಿಸುತ್ತಿದ್ದರು. ಇತ್ತೀಚೆಗೆ ಈ ಮಾತು ಮಾಯವಾಯಿತು. ಪೂರ್ವದಲ್ಲಿ ಗೋವುಗಳನ್ನೆಲ್ಲ "ಧನ" ವೆಂದು ಭಾವಿಸುತ್ತಿದ್ದರು. ಈಚೆನವರು ಗೋವುಗಳನ್ನಾದರೂ ಮಾರಿ ನಾಲ್ಕುರೂಪಾಯಿ ಇಟ್ಟುಕೊಂಡರೆ ಶ್ರೀಮಂತರಂತೆ ವಿಜೃಂಭಿಸುತ್ತಾರೆ.

ನಮ್ಮ ದೇಶದಲ್ಲಿ ಪಂಚಮರು ಸತ್ತ ಗೋಮಾಂಸವನ್ನು ತಿನ್ನುತ್ತಾರೆಂದು ಕೇಳಿ ನಾನು ಬಹಳ ದುಃಖಿಸುತ್ತೇನೆ. ಹಿಂದುವಾದವನಿಗೆ ಗೋವು ಮಾತೃಸ್ವರೂಪವು. ಮಹಮ್ಮದೀಯಸಹೋದರರಿಗೂ ನನ್ನ ವಿನಂತಿಯುಂಟು. ಹಿಂದೂಸ್ಥಾನದಲ್ಲಿ ಹಿಂದೂಜನರ ಮಧ್ಯದಲ್ಲಿ ವಾಸಮಾಡುವ ಇವರು ಹಿಂದುಗಳ ಮನಸ್ಸಿಗೆ ಸಂತೋಷಪಡಿಸಲಿಕ್ಕಾದರೂ ಗೋಮಾಂಸ ಭಕ್ಷಣೆ ಮಾಡಬಾರದು. ನನಗೆ ಎಷ್ಟೋಮಂದಿ ಕ್ರೈಸ್ತ ಮುಸಲ್ಮಾನ ದೊಡ್ಡಮನುಷ್ಯರು ಸ್ನೇಹಿತರಿದ್ದಾರೆ. ಅವರಾರೂ ಗೋಮಾಂಸ ತಿನ್ನುವುದಿಲ್ಲ. ಮಾಂಸಾಹಾರವೂ ಮದ್ಯಪಾನವೂ ತಮೋಗುಣಕಾರಿ. ಇವುಗಳ ಸೇವನೆಯು ಅನೀತಿಯನ್ನು ಹೆಚ್ಚಿಸುತ್ತದೆ.

ಮೈಸೂರುಸಂಸ್ಥಾನದಲ್ಲಿ "ಗೋಹತ್ಯನಿವಾರಣಾ" ಶಾಸನವನ್ನು ಮಾಡಲು ಹವಣಿಸಿರುವರು. ಇದು ಹಿಂದೂಮುಸಲ್ಮಾನರ ಐಕಮತ್ಯಕ್ಕೆ ಭಂಗವಾಗದಿದ್ದರೆ ನನಗೆ ಬಹುಸಂತೋಷ. ಇವರೆ ಈ ದೇಶದಲ್ಲಿ ಹಲವು ಮುಸಲ್ಮಾನ ಮತ್ತು ಕ್ರೈಸ್ತರಾದವರೂ ಈ ಗೋರಕ್ಷಣಾಕ್ಕೆ ಸಹಾನುಭೂತಿ ತೋರಿಸುವುದನ್ನು

ನೋಡಿ ನಾನು ಬಹಳ ತೃಪ್ತಿಗೊಂಡಿದ್ದೇನೆ. ಹಿಂದೂ ಮಹಮ್ಮದೀಯರಿಬ್ಬರೂ ಎರಡು ಕಣ್ಣುಗಳಂತಿರುವುದರಿಂದ ನಾನು ಇವರೀರ್ವರ ಐಕಮತ್ಯವನ್ನು ಯಾವಾಗಲೂ ಬಯಸುತ್ತೇನೆ.

ನಾನು ಹೇಳಿದ ವಿಷಯಗಳನ್ನೆಲ್ಲಾ ತಾವುಗಳು ನಡಿಸುವುದಾದರೆ ನಾನು ನಿಮಗಾಗಿ ನೀವು ನನಗಾಗಿ ಉಪಯೋಗಿಸಿದ ಕಾಲವು ಸಾರ್ಥಕವಾಯಿತೆಂದು ಭಾವಿಸುವೆನು. ನನಗೆ ಮಾನಪತ್ರವನ್ನು ಕೊಟ್ಟ ಪೌರ ಸದಸ್ಯರನ್ನು ವಂದಿಸಿ ಭಾಷಣವನ್ನು ಮುಗಿಸುವೆನು.

ಅನುವಾದಕ:—ಬಿ. ಶಿವಮೂರ್ತಿಶಾಸ್ತ್ರಿ,
ಕೀರ್ತನಕಾರ್,

ತುಮಕೂರು ಪ್ರಾಣಿದಯಾಪ್ರಚಾರಕಸಂಘದವರು ಒಪ್ಪಿಸಿದ ಮಾನಪತ್ರಕ್ಕೆ

ಮಹಾತ್ಮಾಜೀಯವರು ಅಪ್ಪಣೆಕೊಡಿಸಿದ ಭಾಷಣದ ಸಾರಾಂಶ

ಅಧ್ಯಕ್ಷರೇ ಮತ್ತು ಬಂಧುಭಗಿನೀಯರೇ,

ತಾವು ನನಗೆ ಮಾನಪತ್ರವನ್ನು ೭೦೦ ರೂಪಾಯಿಗಳನ್ನೂ ಒಪ್ಪಿಸಿದುದಕ್ಕೆ ನಾನು ಹರ್ಷಿತನಾಗಿರುವೆನು. ಈಗ ತಾವು ಕೊಟ್ಟಿರುವ ೭೦೦ ರೂಪಾಯಿಗಳನ್ನು ನಾನು ಸಬರಮತಿ ಆಶ್ರಮದಲ್ಲಿ ಸ್ಥಾಪಿಸಿರುವ ಅಖಿಲ ಭಾರತ ವರ್ಷೀಯ ಗೋರಕ್ಷಣಾ ಸಮಿತಿಗೆ ಉಪಯೋಗಿಸುವೆನು. ಗೋರಕ್ಷಣೆಯು ಪ್ರತಿಯೊಬ್ಬ ಹಿಂದುವಿನ ಹಾಗೂ ಭಾರತೀಯನ ಕರ್ತವ್ಯವಾಗಿದೆ. ಕೃಷಿಕರ್ಮವೇ ಪ್ರಧಾನವಾದ ಭಾರತ ವರ್ಷದಲ್ಲಿ ಪಶುಪಾಲನೆಯೂ ಗೋಹತ್ಯಾ ನಿವಾರಣೆಯೂ ಅತಿ ಅವಸರ ಹಾಗೂ ಅವಶ್ಯಕ.

ಈ ವಿಷಯದಲ್ಲಿ ಹಿಂದೂ ಮಹಮ್ಮದೀಯರಿಬ್ಬರೂ ಕ್ಷೇಮದಿಂದ ನಡೆದುಕೊಳ್ಳಬೇಕಾಗುವುದು. ನಮ್ಮ ದೇಶದಲ್ಲಿ ಪಂಚಮರಾದರೂ ಈ ವಿಷಯದಲ್ಲಿ ಹೆಚ್ಚು ಶ್ರದ್ಧೆ ವಹಿಸಬೇಕು. ಗೋರಕ್ಷಣ ಪಂಚಮೋದ್ಧರಣ ಖಾದೀ ಪ್ರಸರಣ ಇವು ಪರಸ್ಪರ ಬಂಧುಗಳು. ನಾನು ಸನಾತನ ಧರ್ಮಿಯಾದುದರಿಂದ ಇದರ ಬಗ್ಗೆ ಬಹಳ ಸಹಾನುಭೂತಿಯುಳ್ಳವನಾಗಿರುವೆನು. ಮೈಸೂರು ದೇಶದಲ್ಲಿ ಈ ತರಹ ಹಲವು ಸಂಘಗಳಿರುವುದನ್ನು ಕೇಳಿ ನಾನು ಬಹಳ ಹರ್ಷಿಸುವೆನು ಈ ಗೋರಕ್ಷಣದ ಬಗ್ಗೆ ನಾನು 'ನಗರ ಸಭೆ'' ಯವರಿಗೆ ಉತ್ತರ ರೂಪವಾಗಿ ಕೊಟ್ಟ ಭಾಷಣದಲ್ಲಿ ಈ ದಿನ ಬೆಳಿಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಿರುವುದರಿಂದ ಇಲ್ಲಿ ಹೆಚ್ಚಿಗೆ ಹೇಳಲಾರೆನು.

ಅನುವಾದಕ—ಬಿ. ಶಿವಮೂರ್ತಿಶಾಸ್ತ್ರಿ.
ಕೀರ್ತನಕಾರ, ತುಮಕೂರು.

ಸೂಚನೆಯು

ಹಿಮಾಲಯಪ್ರದೇಶಾಂತರ್ಗತ ದೇವಪ್ರಯಾಗದಲ್ಲಿರತಕ್ಕ ಶ್ರೀ ರಾಮಲಕ್ಷ್ಮಣ ದೇವರ ಪೂಜೆಗಾಗಿ ಯೋಗ್ಯರಾದ ೩ ಜನ ಪಂಚದ್ರಾವಿಡ ಬ್ರಾಹ್ಮಣರು ಅವಶ್ಯವಾಗಿ ಬೇಕಾಗಿದೆ. ಇಚ್ಛೆಯುಳ್ಳವರು ಕೆಳಗಿನ ಅಡ್ರೆಸ್ಸಿಗೆ ಪತ್ರವ್ಯವಹಾರವನ್ನು ಮಾಡತಕ್ಕದ್ದು. ದೇವಪ್ರಯಾಗವು ಟೆಹರಿರಾಜ್ಯದಲ್ಲಿ ಗಂಗಾನದಿಯ ತಟದಲ್ಲಿರುತ್ತದೆ.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ಏಜಂಟ್,
ಪೋ|| ಓಖಿಮಠ, ಡಿ|| ಗಢವಾಲ.
ತಾ|| ೨೪-೬-೧೯೨೭.

ನೋಟೀಸು

ಈ ಮೂಲಕ ಸಮಸ್ತರಿಗೆ ತಿಳಿಯಪಡಿಸುವ ದೇನಂದರೆ — ಹಿಮವತ್ಕೇದಾರಸಂಸ್ಥಾನದಲ್ಲಿ ದೇವರ ಪೂಜೆ ಮಾಡಿಕೊಂಡು ಇದ್ದ ವೀರಯ್ಯಾ ಗಜ್ಜೂರ ಉರ್ಫ್ ಸಚ್ಚಿದಾನಂದ ಜಿಲ್ಲಾ ರಾಯಚೂರು ಎಂಬಾತನು ಶ್ರೀಮದ್ ನಿಜಗುಣರ ಸಹವಾಸದಿಂದ ಪೂಜಾಕಾರ್ಯವನ್ನು ಬಿಟ್ಟು ಮುಸುಂದಕಡೆಗೆಲ್ಲಾ ತಿರುಗುತ್ತಾ ಸಂಸ್ಥಾನದ ಹೆಸರು ಹೇಳುತ್ತಾ ನಾನು ಸಂಸ್ಥಾನದ ಕಾರ್ಯಕ್ಕಾಗಿ ಬಂದಿರುವೆನು, ಶ್ರೀ ಸನ್ನಿಧಿಯವರು ಕಳುಹಿಸಿರುವರೆಂದು ಸುಳ್ಳು ಹೇಳಿ ಮನಸ್ಸಿಗೆ ಬಂದಷ್ಟು ರೂಪಾಯಿ ಮತ್ತು ಇತರ ಪದಾರ್ಥಗಳನ್ನು ಯಾಚಿಸುತ್ತಿರುವನೆಂದು ಕೇಳಿರುತ್ತೇವೆ. ಕಾಶಿಯಲ್ಲಿರುವ ಬೆಂಗಳೂರು ಶಾಸ್ತ್ರಿಗಳಿಂದ ೨೦೦ ರೂಪಾಯಿಗಳನ್ನೂ ಭಾಲಾಕ್ಷಶಾಸ್ತ್ರಿಗಳಿಂದ ೫೦ ರೂಪಾಯಿಗಳನ್ನೂ, ನಾಂದೇಡದವರಿಂದ ೫೦ ರೂಪಾಯಿಗಳನ್ನೂ ಇನ್ನೂ ಅನೇಕರಲ್ಲಿ ಈ ಪ್ರಕಾರ ತೆಗೆದುಕೊಂಡುಹೋಗಿರುವನಂತೆ. ಈ ದೇಶದಲ್ಲಿಯೂ ಅದರಂತೆ ಅನೇಕರಿಗೆ ಮೋಸಮಾಡಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾನೆ. ಇವನ ಸುಳ್ಳುಮಾತಿಗೆ ಯಾರೂ ಮೋಸಹೋಗಬಾರದು.

ಸಂಸ್ಥಾನದ ಏಜಂಟ್,
ಪಂಡಿತ ಅಂಬಾದತ್ತ, ಉಖೀಮಠ.

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್‌ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಆದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಹಾರೈಸುತ್ತೇವೆ.

ಸಂಪಾದಕರು.

ASIATIC GOVERNMENT SECU
LIFE ASSURANCE CO., LTD., MYS
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂ
ಲೈಫ್ಅಸ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಪನ ಮುಂದಾಳಾದುದು.

ಆದ್ದರಿಂದ ಯಾವಾಗಲೂ "ಏಶ್ಯಾಟಿಕ್" ನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಅ ವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂ ವಿಮಾಸಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಯಿಂಗ್ 31 ನೆಯ ಜುಲೈ 1927 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗ ನಮೂದಿಸಿ ರಿಗೆ ಬರೆಯಬಹುದು.

(1) ಮೆ|| ಟಿ. ರಾಷ್ಟರ್ಸ್,
ಚೀಫ್ ಏಜಂಟ್, ಮೈಸೂರು
(2) ಮೆ|| ವಿ. ಎಸ್. ಆರಾಧ್ಯ,
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ
(3) ಹೈದರಾಬಾದ್ ಏಶಿಯಾಟಿಕ್ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದ
ನಯ್ಯಾಪಿರಾವ್ ರೋಡ್, ಮುಖ್ಯ ಏಜಂಟ್,
[7] ಮೈಸೂರು. *Asiatic Buildin*

ಡಾಕ್ಟರ್ ಜೇ. ಪಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿ ಇದನ್ನು ಉಪಯೋಗಿಸಿ, ಸಾವಿರಾರುಗಳ ಯೋಗ್ಯತಾಪತ್ರ ಗಳನ್ನು ಕೊಟ್ಟಿ ತು. ಪ್ರಸಿದ್ಧವಾ ಈ ನಶ್ಯದ ಪು ಯಿಂದ ಸ್ವಸ್ಥವಾ ವ ವ್ಯಾಧಿಗಳು ಯ ವವೆಂದರೆ:—ಶೀ ಬಂಟಿತಲೆನೋ ತಲೆಯಲ್ಲಿನ ರೋಗ ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗ ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾ ವನಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ನವ ಹೆಚ್ಚು ಮಾ ಡುತ್ತದೆ. ಮಾರುಬಟ್ಟೆನ ಸಾಧಾರಣ ನಶ್ಯದ ನಂ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ ಬಿಸದವಾಗಿ ಉಪಯೋಗಿಸುತ್ತಾರೆ. ಮಾದರಿಗಾ ಪುಗವಟ್ಟಿ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪
ಪಟೂ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮-೮

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ
ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[9] ಪೋ. ಬಾ. ೫೧೦, ಮದರಾಸು.

ಇದು ಮೈಸೂರು, ವಾಣೀವಿಲಾಸ ರೋಡಿನಲ್ಲಿರು ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾ ವಿದ್ವಾನ್ ವೇ|| ಬ್ರಂ|| ಪಂಡಿತ ಶಿವ ಗುರು ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಟಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ರದೀಲೋಕಕಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ರುಷಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೧ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಆಗಸ್ಟ್ ೧೯೨೭ ಇಸವಿ [ಸಂಚಿಕೆ ೧೨.

ೀಮದ್ವೀರಶೈವ ಮಹಾಮಠಸ್ಥಾಪನಾಚಾರ್ಯ
ೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ
ಜಗದ್ಗುರು

ೀ ಸಿದ್ಧಲಿಂಗ ಶಿವಾಚಾರ್ಯಾಷ್ಟಕಂ

ಯೋಧರ್ಮಜ್ಞಃ ಶಿವಾರಾಮಣೇಧ್ಯೇಕರ್ತಿಧನಃ ಸದ್ಧರ್ಮ ಾಧಿಪಃ | ಸ್ವಾತ್ಮಾನಂದರಸಾನುಭೂತಿ ನಿಪುಣೋ ಷ ವಿದ್ಯಾನಿಧಿಃ || ಮಹಾತ್ಮಾತಿಶಯೋಜ್ಜ್ವಲೋ ಪೋನಸ್ಥ ಧರ್ಮಾಲು ದೀಪಪ್ರದ | ಸ್ತಂ ವಂದೇ ತಿನಂ ಜಗದ್ಗುರು ಮಹಂ ಶ್ರೀ ಸಿದ್ಧಲಿಂಗಾಧಿ ಪಂ||೧||

ಯಂ ಪ್ರಸ್ತಂ ವಿಚಿತಾತ್ಮವಾಂ ಯಮಿಮನೋಂ ಜಾತಪಂಸಂ ಭವಿ ಪಂಚಕ್ಲೇಶವಿಪೀಡಿತಾಃ ಪಾಕೂಪಾರ ಮಗ್ನಾ ಜನಾಃ || ಸದ್ಯಃ ಕತ್ರ್ಯ ಾಯುಪವಾನಸ ಧನ್ಯೈರಧ್ವಜೈರ್ಯ ಶಾಂತಿಂಗತಾ | ಂ ವಂದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧ ಗಾಧಿಪಂ||೨||

ಯೇನಾಬೋಧಿತಭಾನುನಾ ವಿಕಸಿತಾ ಸೀಕಲ್ಪ ತೈನಸಾ | ಶಿಷ್ಯಸ್ವಾಂತ ಗುಹಾಸ್ಥ ಮಂಧತಮಸಂ ಪ್ರತ್ಯ ಧರ್ಮಾತ್ಮನಾ | ಸದ್ಯೋಕಾಲಿವಿಶೇಷ ೀಧಕಿರಣಾಂಚಿತ್ ಜ್ಞಾನಪ್ರಕಾಶೋದಯ | ಸ್ತಂ ದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾ ಂ ||೩||

ಯಸ್ಮಿನ್ ಭಾಸುರ ಶಾಂತಿದಾಂತಿ ಗುಣರತ್ನಾ ಕಲ್ಪ ಿಚಿತ್ತ ವೇ | ಶಂಭುಧ್ಯಾನ ಪರಾಯಣಾಯ ಗುಣ ದ್ಧಾ ಮುಕ್ತಿ ನೀಣಮಂತಿನೀ || ಚಕ್ರೇ ಸುಪರಿಣಸ್ತಗ ಣ ಮತಿಪ್ರೇಮ್ಣಾ ಸ್ವಯಂ ಧೀಮತೀ | ತಂ ದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾ ಂ ||೪||

ಯಸ್ಮಾಚ್ಛಾಸ್ತ್ರಮಧೀಯತೇ ನಿರುಪಮಾಗಾಧ್ಯಾ ಂ ದುರ್ಗಮಂ | ತತ್ತಜ್ಞಾನಮಹೋದಧೇರ್ಬುಧ ಾ ನಿಃಶ್ರೇಯ ಸಾಕಾಂಕ್ಷಿಣಃ | ನಿತ್ಯಾನಿತ್ಯ ವಿವೇ ಸುತ್ಯ ತಿನಃ ಸೇವಾಂ ಚರಂತೋಽನ್ವಹಂ ತಂ ದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾ ಂ ||೫||

ಯಸ್ಯಾಂಘ್ರಿ ಸಿನಪತ್ಯಯೋಃ ಅನುದಿನಂ ಶ್ರೀಪಾದ ೀ ಪ್ರಾಮಿನಾತ್ ವಾಣೀಯಸ್ಯ ವಿರಾಜಿತೇಷ ವ ಶ್ರೀ ವೇದನಾಣೀಮಿಷಾತ್ || ಆಪ್ತ್ವಾ ಸಿದ್ಧಯ ಲ್ಲಸಂತಿ ಚ ಕಲೇಯಸ್ಯಾಣಿಮಾದ್ಯಾಃ ಸದಾ ತಂ ದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾ ಂ ||೬||

ಯಸ್ಮಿನ್ ಕಾರುಣಿಕೇ ಗುರಾವ ಕಲಯನ್ ಭಕ್ತ್ಯಾ ತ್ಯಂ ಕ್ಷಿತೌ ಸ್ತ್ರೀಣಾಂ ನಿತ್ಯಮುಪಾತಿಮಾತ್ರ ಯಾಧಾನಾದಧೋರಕ್ಷಣಾತ್ | ನಿಃಸಂದೇಹ ಭರ ತ್ರರಂ ನಿಚಿತ್ಯ ಸತ್ಯಾವನಾನ್ ಪೋಸಿರೇ ತಂ ಂದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾ ಧಂ ||೭||

ಧೀಃ ಸದ್ಯಃ, ಕುಪರಿತ್ಯಕ್ತಮುಕ್ತಗಜ ಪರ್ಯಕ್ಷಂ, ಶ್ರಿತೋದ್ಧಾರಕ, ದುರ್ವಾದಿದ್ವಿರದಸಜ್ಜಬರ್ಹಿಣಃ, ಸಮುಜ್ಞಾನಾಂತ ಕಾಂತಾನವ || ಸ್ವಾಮಿನ್, ಮಯ್ಯ ನಿಶಂ ನಿಧೇಹಿ ಕರುಣಾದೃಷ್ಟಿಂತವೇತ್ಯುಕ್ತರು | ಸ್ತಂ ವಂದೇ ಯತಿನಂ ಜಗದ್ಗುರುಮಹಂ ಶ್ರೀ ಸಿದ್ಧಲಿಂಗಾಧಿಪಂ ||೮||

ಸದಾಯೋ ಸ್ವತಂತ್ರೋಽನಸೂನಾರನರೂಪಂ |
ಚಿದಾನಂದ ಕಂದಂ ಮುದಾ ನಿತ್ಯಭಾಜಃ |
ಇಹಪ್ರಾಪ್ಯ ಸರ್ವೋತ್ತಮೇ ಸೌಖ್ಯಕೀರ್ತೀ
ಕದಂತೇ ಲಭಂತೇ ಪದಂ ಶಾಶ್ವತಂ ತೇ ||

ಇತಿ ಶ್ರೀ|| ವೇ|| ಪಂಡಿತ ವಿಶ್ವೇಶ್ವರಶಾಸ್ತ್ರಿಣಾ
ಶಾಸ್ತ್ರತೀರ್ಥೇನ ವಿರಚಿತಂ ಸಿದ್ಧಲಿಂಗಾಷ್ಟಕಂ
ಸಂಪೂರ್ಣಂ

ವೀರಶೈವರ ಕರ್ತವ್ಯ.

ಪರಮಪವಿತ್ರವಾದ ವೀರಶೈವಧರ್ಮವನ್ನು ಶ್ರೀ ಜಗದ್ಗುರು ಪಂಚಾಚಾರ್ಯರಿಂದುಪದೇಶಿ ಭೂಮಂಡಲದಲ್ಲಿ ನೆಲೆಗೊಳಿಸಿರುವದು ಶಾಸ್ತ್ರಪ್ರಸಿದ್ಧವೂ ಲೋಕಪ್ರಸಿದ್ಧವೂ ಆಗಿದೆ. ಹೀಗಿದ್ದರೂ ಕೆಲವುಕಾಲದಿಂದೀಚೆಗೆ ಭಗವತ್ಸ್ವರೂಪರಾದ ಶ್ರೀ ಪಂಚಾಚಾರ್ಯರ ಪಟ್ಟಶಿಷ್ಯರುಗಳೇ ಪವಿತ್ರವಾದ ನಾಮಸ್ಮರಣೆಯೂ ಮಾಡಲೋತ್ಸಾಹವಾಗಿ ನಾವು ಯಾರು? ನಮ್ಮ ಮತವಾವದು? ನಮ್ಮ ಮತಕರ್ತೃಗಳಾರು? ನಮಗೆ ಶ್ರೀಸ್ವಾಮಿ ಇಷ್ಟಲಿಂಗವನ್ನು ಯಾರು ಅನುಗ್ರಹಿಸಿರುವರು? ಮತ್ತು ನಾವು ಯಾರನ್ನು ಆಶ್ರಯಿಸಿದರೆ ಮೋಕ್ಷಮಾರ್ಗವು ಸುಗಮವಾಗುವದು? ಇವೇ ಮೊದಲಾದ ತಾತ್ವಿಕವಿಚಾರಗಳು ನಮ್ಮ ವೀರಶೈವಮಹಾಜನಗಳಲ್ಲಿ ಕ್ರಮೇಣ ಕ್ಷೀಣದಶೆಗೆ ಬರುತ್ತಿದವು. ಇದಕ್ಕೆಲ್ಲಾ ಅವಿದ್ಯೆಯ ಪ್ರಭಾವವೇ ಮೂಲಕಾರಣವೆಂದು ಖಂಡಿತವಾಗಿ ಹೇಳಬಹುದು. ಇಂತಹ ಸಂಧಿಯಲ್ಲಿ ಶಾಸ್ತ್ರಮರ್ಯಾದೆಯನ್ನು ಮೀರಿ ಬೋಧಿಸುವ ದುರುಳವೇದಾಂತಿಗಳ ನವೀನಸಿದ್ಧಾಂತ ಬಂದು ದೇವರೊಲ ಸುಕೂಲವಾಯಿತು. ಇದರಿಂದ ಶಿವಾಚಾರಗಳೆಲ್ಲ ನಾಶವಾಗುತ್ತಿದವು. ಇವಕ್ಕೆಲ್ಲ ಧರ್ಮರಕ್ಷಣಾಕರ್ತೃಗಳ ಉದಾಸೀನತೆಯೆ ಮೂಲಕಾರಣವೆಂದು ಕೈಯೆತ್ತಿ ಹೇಳಬಹುದು.

ಈ ದುರುಳವೇದಾಂತಿಗಳ ನಡೆನುಡಿಗಳು, ಆಚಾರ ವಿಚಾರಗಳು, ವೇಷಭೂಷಣಗಳು, ಆಹಾರವಿಹಾರಗಳು ಮತ್ತು ಕೃತಿಕರ್ಮಗಳು ಅತ್ಯಂತವಿಲಕ್ಷಣವಾಗಿರುವವು. ಇವರ ಮಂದಿರಗಳು ನಾನಾ ಶಿಷ್ಯಸಮುದಾಯವು ಪ್ರತಿಯೊಂದು ಹಳ್ಳಿಯಲ್ಲಿಯೂ ಕ್ರಮೇಣ ವೃದ್ಧಿಯಾಗುತ್ತಿರುವವು. ಇದರಿಂದ ನಾನಾತರದ ಕಲಹಕೋಲಾಹಲಗಳು ಬಂದು ತಪ್ಪುತ್ತಿರುವವಲ್ಲದೆ ಎಷ್ಟೋಜನ ಸ್ತ್ರೀಪುರುಷರು ಸ್ವಧರ್ಮಾಭಿಮಾನರಾಗಿ ಸ್ವೇಚ್ಛಾಚಾರದಿಂದ ವರ್ತಿಸುತ್ತಿರುವರು. ಅಯ್ಯೋ **ಗುರುವರ್ಗದವರೆ** ಇನ್ನಾದರೂ ನಿಮ್ಮ ನಿಮ್ಮ ಕರ್ತವ್ಯಕರ್ಮಗಳಲ್ಲಿ ತೊಡಗಿರಿ, ತಮ್ಮಾತ್ಮ ಭಕ್ತರನ್ನುದ್ಧರಿಸಿರಿ. ಪಾರಂಪರ್ಯವಾಗಿ ನಡೆದುಬಂದ ನಿಮ್ಮ ಗುರುತ್ವಾಧಿಕಾರದ ಗೌರವವನ್ನು ಕಾಯ್ದುಕೊಳ್ಳಿರಿ. ವಾಚಕಮಹಾಶಯರೇ "**ಶ್ರೇಯಾನ್ ಸ್ವಧರ್ಮಃ**" ಎಂಬ ಗ್ರಂಥೋಕ್ತಿಯನ್ನು ಪ್ರತಿಯೊಬ್ಬ ಮಾನವಪ್ರಾಣಿಯು ಅನುಕರಣಮಾಡತಕ್ಕದ್ದು ಸುಯುಕ್ತಿಕವಲ್ಲವೇ.

ಈರೀತಿ ನಮ್ಮ ಸಮಾಜಕ್ಕೆ ಹಿಡಿಗಿರುವ ದುರ್ದೆಶೆಯನ್ನು ಹೋಗಲಾಡಿಸಬೇಕು. ಅವಿದ್ಯಾಪ್ರಭಾವದಿಂದ ವ್ಯಾಪಕವಾಗಿರುವ ಅಜ್ಞಾನಾಂಧಕಾರವನ್ನು ಮೂಲೋತ್ಪಾಟನಮಾಡಬೇಕು. ಸಮಸ್ತ ಗುರುವರ್ಗದವರು ಕರ್ತವ್ಯಶಾಲಿಗಳಾಗಬೇಕು. ಪ್ರತಿಯೊಬ್ಬ ಲಿಂಗಧಾರಿಯ ಹೃತ್ಪೀಠದಲ್ಲಿ ಗುರುನಾಮಸ್ಮರಣೆಯು ನೆಲೆಗೊಳ್ಳಬೇಕು. ಗುರುಶಿಷ್ಯರಲ್ಲಿ ಸಮರಸಭಾವವಿರಬೇಕು ಇವೇ ಮೊದಲಾದ ಉದಾತ್ತವಿಚಾರಗಳಿಂದ ಮ್ಮ **ಪಂಚಾಚಾರ್ಯಪ್ರಭೆಯು** ಪ್ರಸರಿಸುವದು ಅತ್ಯವಶ್ಯಕವಾದುದೆಂದರಿತು ನಿಸ್ವಾರ್ಥತ್ಯಾಗಿಗಳಾದ ವೇ|| ಪಂಡಿತ **ಶ್ರೀ ಕಾಶೀನಾಥಶಾಸ್ತ್ರಿಗಳವರ** ಅತ್ಯಂತಪ್ರಯಾಸದಿಂದ ಮೈಸೂರು ರಾಜಧಾನಿಯಲ್ಲಿ ಆಸ್ಥಾನವಿದ್ವಾನ್ ವೇ|| ಶಿರಸಿ **ಗುರುಶಾಂತಶಾಸ್ತ್ರಿಗಳವರ** ಸಂಪಾದಕತ್ವದಿಂದ "**ಪಂಚಾಚಾರ್ಯಪ್ರಭಾ**" ಎಂಬ ವಾರಪತ್ರಿಕೆಯನ್ನು ಹೊರಡಿಸಲಿಕ್ಕೆ ಪ್ರಾರಂಭಿಸಿರುವದು ಕೇವಲ ಸಂತೋಷದಾಯಕವಾದ ಸಂಗತಿಯಾಗಿದೆ. ವಾಚಕಮಹಾಶಯರೆ ಪ್ರತಿಯೊಬ್ಬ ವೀರಶೈವನಲ್ಲಿ ಆಚಾರ್ಯಭಕ್ತಿಯು ನೆಲೆಗೊಳ್ಳಬೇಕು ಸಮಾಜದಲ್ಲಿರತಕ್ಕ ಅನೈಕ್ಯತೆಯು ದೂರವಾಗಬೇಕು. ವಿದ್ಯೆ, ಒಕ್ಕಲತನ, ಕೈಗಾರಿಕೆ ಇವೇ ಮೊದಲಾದ ಸಮಾಜಸುಧಾರಣೆಗಳು ಅವ್ಯಾಹತವಾಗಿ ಸಾಗಬೇಕು ಇತ್ಯಾದಿ ಉದಾತ್ತವಿಚಾರಗಳು ಉಭಯ ಪಂಡಿತವರ್ಯರಲ್ಲಿಯೂ ಖಂಡಿತವಾಗಿ ನೆಲೆಗೊಂಡಿರುವವು. ಆದ್ದರಿಂದ ಪ್ರತಿಯೊಬ್ಬ ಲಿಂಗಧಾರಿಯು ತನ್ನ ಮತಾಚಾರ್ಯರ ಪವಿತ್ರನಾಮದಿಂದ ಪ್ರಕಾಶಿಸುವ "ಪಂಚಾಚಾರ್ಯಪ್ರಭಾ" ಎಂಬೀ ವಾರಪತ್ರಿಕೆಗೆ ನಿಷ್ಕಪಟಬುದ್ಧಿಯಿಂದ ಉದಾರಾಶ್ರಯವನ್ನು ಕೊಟ್ಟು ಗುರುಭಕ್ತಿಯುತರಾಗಿ ವೀರಶೈವರೆಂಬ ಅಭಿದಾನವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಸರ್ವರಿಗೂ ಪ್ರಾರ್ಥನೆ.

ಶ್ರೀಗುರುವು ಸ್ಮರಣೆಗೈವರ್ಗೆ ಚಿಂತಾಮಣಿಯು ಶ್ರೀಗುರುವು ' ಹಣದಳವನೊಳು ಮರುಜವಣಿಯುಂ ಶ್ರೀಗುರುವು ವರರಾಗದೊಳು ಅಂಗದ ಮಲಿನ ಕಳೆಯುವ ಮಣಿ|| ಮುಕುರವು ||; ಶ್ರೀಗುರುವು ವೀರಶೈವೋತ್ತಮ|| ಕುಲಾಗ್ರಣಿಯು; ಶ್ರೀ ಗುರುವು ಸನ್ನಕ್ಷತ್ರ ಗಣಕೆ|| ಪರುಷದ ಕಣಿಯು| ಶ್ರೀಗುರುವಿ ಮಲಿ ಪಾವನ|| ಚಾರುಚರಣಾವು ನನ್ನ ಹಣೆಯೊಳೆಯು ||

ಪರಮಯ್ಯನಾಗಭೂಷಣ ಮಠ,
ಹಮ್ಮಿಗಿ.

ಸೂಚನೆಯು

ನಾವು ಪ್ರತಿವಾರವೂ ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರಿಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ತಲುಪಲಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸಿನ ಮೂಲಕ ನಮಗೆ ತಿಳಿಸಬೇಕು. ಮತ್ತೆ ಕೆಲವರು ನಾವು ವಿ. ಪಿ.ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವದಿಲ್ಲವೆಂದು ಬರೆಯುತ್ತಾರೆ. ವಿ. ಪಿ. ತೆಗೆದುಕೊಂಡವರ ಹಣವು ನಮ್ಮ ಕೈಸೇರಬೇಕಾದರೆ ೧೫ ದಿವಸಗಳು ಬೇಕಾಗುತ್ತದೆ. ಹಣವು ಕೈಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವುದಾಗುತ್ತದೆ. ಈ ವಿಷಯದಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ.

ಪಂಚಾಚಾರ್ಯಪ್ರಭಾ

೧೯೨೭ನೇ ಆಗಸ್ಟ್ ತಾ|| ೧ನೇ ಸೋಮವಾರ

ಲಿಂಗಧಾರಣೆ

'ಬ್ರಹ್ಮಾದಯಸ್ಸುರಾಸ್ಸರ್ವೇ ಮುನಯಃ [illegible] ಕಾದಯಃ ಶಿವಲಿಂಗಾರ್ಚನಾದೇವ ಸ್ವಂ ಸ್ವಂ ಪದಮವಾಪ್ನುಯುಃ' ಎಂಬ ಶಿವಾಗಮ ಪ್ರಮಾಣಾನುಸಾರವಾಗಿ ಇಂದ್ರಾದಿದೇವತೆಗಳೂ ಶೌನಕಾದಿ ಮಹರ್ಷಿಗಳೂ ವೇದೋಕ್ತವಾದ ಯಾವ ಇಷ್ಟಲಿಂಗವನ್ನು ಧರಿಸಿ ಅನವರತವೂ ಪೂಜಿಸಿದುದರಿಂದಲೇ ಅವರವರ ಪದವಿಯನ್ನು ಪಡೆದರೋ ಅಂಥ ಶಿವಲಿಂಗವನ್ನು ಶುಚಿಕಾಲದಲ್ಲೂ ಅಶುಚಿಕಾಲದಲ್ಲೂ ಧರಿಸುತ್ತಲೂ ಪೂಜಿಸುತ್ತಲೂ ಶಿವಲಿಂಗದ ತೀರ್ಥಪ್ರಸಾದವನ್ನು ಸ್ವೀಕರಿಸುತ್ತಲೂ ಇರುವವನೇ ವೀರಶೈವನೆನಿಸುವನು. ಇಲ್ಲಿ ಲೋಕದಲ್ಲಿ ಶುಚಿಯಾದ ಮಾನವನಿಗೆ ದೇವತಾರ್ಚನೆ ದೇವತಾರಾಧನೆಗಳು ಹೇಳಲ್ಪಟ್ಟಿವೆಯೇ ಹೊರತು ಅಶೌಚವುಳ್ಳವನಿಗೆ ಹೇಳಲ್ಪಟ್ಟಿಲ್ಲವು ಎಂಬ ಆಶಂಕೆಯುಂಟಾಗುವುದು. ಸ್ಥಾವರಲಿಂಗಕ್ಕೂ ಇಷ್ಟಲಿಂಗಕ್ಕೂ ಬಹಳ ಭೇದವಿರುವುದು. ಸ್ಥಾವರಲಿಂಗಪೂಜಾವಿಷಯದಲ್ಲಿ ಅಶೌಚದೋಷಗಳು ಹೇಳಲ್ಪಟ್ಟಿವೆಯೇ ಹೊರತು ಇಷ್ಟಲಿಂಗದ ವಿಷಯದಲ್ಲಿ ರಜಸ್ವಲಾದ್ಯಶೌಚದೋಷಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿಲ್ಲವು. ಗಮನ ಮಾಡುವಾಗಲೂ ಕುಳಿತಿರುವಾಗಲೂ ಮಲಗಿರುವಾಗಲೂ ಎಚ್ಚರವಿರುವಾಗಲೂ ಕಣ್ಣು ಮುಚ್ಚಿರುವಾಗಲೂ, ಕಣ್ಣು ತೆರೆದಿರುವಾಗಲೂ ಶುಚಿಯಾಗಿರುವಾಗಲೂ, ಅಶುಚಿಯಾಗಿರುವಾಗಲೂ ಗುರುವಿನಿಂದ ಕೊಡಲ್ಪಟ್ಟ ಶಿವಲಿಂಗವನ್ನು ಕಂಠದಲ್ಲಿ ಧರಿಸಬೇಕು. ಅಶೌಚಕಾಲಗಳಲ್ಲೂ ಶರೀರದಿಂದ ಲಿಂಗವಿಯೋಗವಾಗಬಾರದು. ಹಾಗೇನಾದರೂ ಲಿಂಗವಿಯೋಗವಾದರೆ ಪಾಪಿಯಾಗುವನು ನರಕಕ್ಕೂ ಈಡಾಗುವನು ಎಂದು ಸ್ಕಾಂದಾದ್ಯನಂತಪುರಾಣಗಳಲ್ಲಿಯೂ ಪಾರಮೇಶ್ವರಾದ್ಯಾಗಮಗಳಲ್ಲಿಯೂ ಸಾರುತ್ತಿರುವುದರಿಂದ ವೀರಶೈವನೆನಿಸಿರುವನು ಅಶೌಚಕಾಲಗಳು ಪ್ರಾಪ್ತವಾದ ಸಮಯದಲ್ಲೂ ಲಿಂಗಧಾರಣ ಲಿಂಗಪೂಜೆಗಳಿಗೆ ಅಶೌಚಾದಿಭಾವನೆಗಳೊಂದೂ ಇಲ್ಲದೆ ನಿತ್ಯವಿಧಿಯೆನಿಸಿದ ಲಿಂಗವನ್ನು ಧರಿಸಿ ಸ್ನಾನಾದಿಗಳಿಂದ ಪರಿಶುದ್ಧನಾಗಿ ಗಂಧಾಕ್ಷತೆಗಳಿಂದ ಪೂಜಿಸುತ್ತಿರಬೇಕು. ಹಾಗಾದರೆ ಹಿಂದುಗಳು ಪಂಚಸೂತಕಗಳನ್ನು ಮಾನಿಸುವುದರಿಂದ ಅಂಥಹ ಸೂತಕಗಳಲ್ಲಿ ಯಾವುದಾದರೊಂದು ಸೂತಕವುಂಟಾದರೆ ಆ ಸಮಯದಲ್ಲಿ ದೇವರ ಸ್ಪರ್ಶ ಪೂಜಾದಿಗಳು ಕೂಡದೆಂದು ಸಾಮಾನ್ಯವಾಗಿ ಧರ್ಮಶಾಸ್ತ್ರವಿದ್ದರೂ ವೀರಶೈವನು ಮಾತ್ರ 'ಯಾವಜ್ಜೀವವೂ ಲಿಂಗವನ್ನು ಧರಿಸಿರುತ್ತೇನೆ ಯಾವಾಗಲೂ ಪೂಜಿಸುತ್ತೇನೆ' ಎಂದು ಧೃಢಸಂಕಲ್ಪವನ್ನು ಮಾಡಿ ದೀಕ್ಷಾಬದ್ಧನಾಗಿರುವುದರಿಂದ ಮಧ್ಯದಲ್ಲಿ ಅಶೌಚಗಳುಂಟಾದರೂ ಧಾರಣದಲ್ಲಿಯೂ ಪೂಜೆಯಲ್ಲಿಯೂ ಹಾಗೆ ದೋಷವನ್ನು ಹೇಳುವುದಾದರೆ ವೀರಶೈವನಿಗೆ ಇಷ್ಟವಾದ ಲಿಂಗಾಂಗಸಾಮರಸ್ಯರೂಪವಾದ ಸಿದ್ಧಿಗೆ ಪ್ರತಿಬಂಧಕವುಂಟಾಗುವುದು. ಹೀಗೆಯೂ ಪ್ರತಿಷ್ಠಿಸಿರುವ ಲಿಂಗಕ್ಕೆ ಯಾವ ಯಾವ ಸಂಸ್ಕಾರಗಳಾಗುತ್ತವೆಯೋ ಅವೆಲ್ಲವೂ ಈ ಲಿಂಗಕ್ಕೂ ಆಗಿರುವುದರಿಂದ ಸ್ಥಾವರಲಿಂಗವು ಅಶೌಚವುಳ್ಳವರ ಸ್ಪರ್ಶವನ್ನು ಹೇಗೆ ಅಪೇಕ್ಷಿಸುವದಿಲ್ಲವೋ ಹಾಗೆ ಈ ಇಷ್ಟಲಿಂಗವೂ ಅಪೇಕ್ಷಿಸದಿರಲಿ. ಸಂಸ್ಕಾರದಲ್ಲಿಯು [illegible] ಎರಡು ಲಿಂಗಕ್ಕೂ ಒಂದೇ [illegible] ಸ್ಥಾವರಲಿಂಗವನ್ನು ಹಿಂದೆ ಯಾವನು ಪೂಜಿಸುತ್ತಿರುವನೋ ಅವನೇ ಪೂಜಿಸಬೇಕೆಂಬ ನಿಯಮವಿಲ್ಲದುದರಿಂದಲೂ ಅಶುಚಿಯಾದ ಬೇರೆ ಯಾರಿಂದಲಾದರೂ ಪೂಜಿಸಲ್ಪಡಕ್ಕೆ ಬರುವುದರಿಂದಲೂ ಒಂದೇ ಲಿಂಗವನ್ನು ಅನೇಕರು ಪೂಜಿಸುತ್ತಿರುವುದರಿಂದಲೂ [illegible], ಸ್ಥಾವರಲಿಂಗವು ಮಠದಲ್ಲಿ [illegible] ಪೂಜೆಯನ್ನು ತೆಗೆದುಕೊಳ್ಳುವ ಅಪೇಕ್ಷೆಯಿಲ್ಲವು. ಒಂದುವೇಳೆ ಸ್ಥಾವರಲಿಂಗವನ್ನು ಅಶೌಚವುಳ್ಳ ಜನಗಳು ಪೂಜಿಸಿದರೆ ಅಶುಚಿಶರೀರಸಂಬಂಧದಿಂದ ಲಿಂಗವು ಅಪವಿತ್ರವಾಗುವುದು. ಪುನಃ ಶುದ್ಧೀಕರಣಕ್ಕೆ ಅರ್ಹವಾಗುವುದು. ಈ ಇಷ್ಟಲಿಂಗವಾದರೋ 'ಯಾವ ಶರೀರದಲ್ಲಿ ಧರಿಸಲ್ಪಟ್ಟಿರುವದೋ ಅದೇ ಶರೀರದಿಂದ ಶುಚ್ಯಶುಚಿಕಾಲಗಳೂ ಧರಿಸಲ್ಪಡುವುದಲ್ಲದೆ ಪೂಜಿಸಲ್ಪಡತಕ್ಕದ್ದು. ಇನ್ನೊಬ್ಬನ ಶರೀರದಲ್ಲಿ ಧರಿಸಿದಲಿಂಗವು ಮತ್ತೊಬ್ಬನಿಂದ ಧರಿಸಲ್ಪಡಕೂಡದು ಪೂಜಿಸಲ್ಪಡಲೂ ಕೂಡದು. ಪೂಜಿಸಿದಾದರೆ ವ್ರತಭಂಗವು ಸಂಭವಿಸುವುದಲ್ಲದೆ ನಿಷ್ಠೆಯೋ [illegible] ಆಗುವುದು' ಎಂದು ವೀರಶೈವಸಿದ್ಧಾಂತಕಾರರ ಅಭಿಪ್ರಾಯವಿರುವುದರಿಂದ ಲಿಂಗಾಂಗಿಗಳಿಗೆ ಲಿಂಗಧಾರಣ ಲಿಂಗಪೂಜಾದಿಗಳ ವಿಷಯದಲ್ಲಿ ಸೂತಕಗಳಿಲ್ಲವು. ಒಂದುವೇಳೆ ಸೂತಕದಿಂದುಂಟಾದ ಅಶುಚಿತ್ವದಿಂದ ಯುಕ್ತವಾದ ಭೀತಿಯಿಂದ ಶಿವಲಿಂಗವನ್ನು ಶರೀರದಿಂದ ತೆಗೆದ [illegible] ಲಿಂಗವಿಯೋಗವುಂಟಾದರೆ ಹಿಂದೆ ಆಚರಿಸಿದ ಮುಕ್ತಿಸಾಧಕವಾದ ಲಿಂಗಾಚಾರಗಳೆಲ್ಲವೂ ಲೋಪವಾಗುವುದಲ್ಲದೆ ಮುಕ್ತಿಗೂ ಪ್ರತಿಬಂಧಕವುಂಟಾಗುವುದು. ಪುನಃ ಲಿಂಗವನ್ನು ಸ್ವೀಕರಿಸಿ ಅರ್ಚನಧ್ಯಾನಾದಿಗಳನ್ನು ಮಾಡುತ್ತಿದ್ದರೂ ಭ್ರಷ್ಟತ್ವವುಂಟಾಗುವುದಲ್ಲದೆ ಪುಣ್ಯದಾಯಕಗಳಾಗುವುದಿಲ್ಲವು. ಆದುದರಿಂದಲೇ ಲಿಂಗಾಂಗಿಯಾದ ಮಾನವನಿಗೆ ಧಾರಣಪೂಜಾವಿಷಯದಲ್ಲಿ ಪಂಚಸೂತಕಗಳಿಲ್ಲವೆಂದು ಶಿವಾಗಮಗಳು ಸಾರುತ್ತಿರುವವು. ಒಂದುವೇಳೆ ಅಶೌಚವುಳ್ಳ ಪುರುಷನಿಂದ ಮುಟ್ಟಲ್ಪಟ್ಟ ಸ್ಥಾವರಲಿಂಗವು ಅಶುಚಿಯಾಗುವಂತೆ ಸೂತಕವುಳ್ಳವನ ಸ್ಪರ್ಶದಿಂದ ಇಷ್ಟಲಿಂಗವು ಅಪವಿತ್ರವಾಗುವುದಿಲ್ಲವು. ಅಶುಚಿಯಾದ ಶರೀರದ ಸಂಬಂಧದಿಂದ ಲಿಂಗವೇ ಅಪವಿತ್ರವಾಗುವುದೋ ಅಥವಾ ಲಿಂಗದೊಳಗಿರುವ ಶಿವಕಳೆಯು ಅಪವಿತ್ರವಾಗುವುದೋ ಎಂದು ಎರಡು ಆಕ್ಷೇಪಗಳುಂಟಾಗುವವು. ಕಳೆಯು ಅಪವಿತ್ರವಾಗುವುದೆಂದರೆ ಲಿಂಗದಲ್ಲಿರುವ ಕಳೆಯು ಶುದ್ಧ [illegible] ಸ್ವಭಾವವೂ ಆಕಾಶದಂತೆ ಪರಿಪೂರ್ಣವೂ ನಿರವಯವವೂ [illegible] ಆಗಿರುವುದರಿಂದ ಅಶುಚಿಶರೀರಸಂಬಂಧದಿಂದ ಅದಕ್ಕೆ ಅಪವಿತ್ರತೆಯನ್ನು ಹೇಳಲಾಗುವುದಿಲ್ಲವು. ಅಶುಚಿಶರೀರಸಂಬಂಧದಿಂದ ಕಳೆಗೆ ಶರೀರವೆನಿಸಿದ ಲಿಂಗಕ್ಕೆ ಅಶುಚಿತ್ವವನ್ನು ಹೇಳುತ್ತೇವೆಂದು ಹೇಳಿದರೆ ಶಿವಕಳೆಯು [illegible] ಆ ಲಿಂಗಕ್ಕೆ ಮಾಡಿದ ಷೋಡಶೋಪಚಾರಾದಿ ಸಂಸ್ಕಾರಗಳೂ ನಷ್ಟವಾಗಬೇಕು. ಸಂಸ್ಕಾರವು ನಷ್ಟವಾಗದ ಹೊರತು ಶಿವಕಳೆಯು ಎಂದಿಗೂ ನಾಶವಾಗಲಾರದು. ಸಂಸ್ಕಾರಗಳೂ ನಷ್ಟಗಳಾ[illegible] ಗುರುವಿನಿಂದ ಸ್ಥಾಪಿಸಲ್ಪಟ್ಟ ಕಳೆಯು ನಷ್ಟವಾಗುವುದೆಂದು ಹೇಳುತ್ತೇವೆ ಅಂದರೆ ಸ್ವರ್ಗಕ್ಕಾಗಿ ಒಬ್ಬನು ದೀಕ್ಷಾಯಾಗವನ್ನು ಮಾಡಿ [illegible] ಕಾರ್ಯವು ಮುಗಿದೊಡನೆ [illegible] ಸ್ಪರ್ಶದಿಂದ ಹೋಗುವುದಿಲ್ಲವು. [illegible] ಎಂದು ಸಂಸ್ಕಾರವು (ಅಪೂರ್ವ) ಆತ್ಮನಲ್ಲಿ ಉಳಿಯುವುದು. [illegible] ಅನೇಕ ಕಾಲ [illegible] ಅನುಷ್ಠಾನ [illegible] ಮಾಡಿದ ಸಂಸ್ಕಾರವು ಆತ್ಮನಲ್ಲಿರುವುದರಿಂದ ಆ ಸಂಸ್ಕಾರದಿಂದ [illegible] ಆತ್ಮಕ್ಕೆ ಸ್ವರ್ಗವು ದೊರೆಯುವುದರಿಂದ [illegible] ವೇಳೆ ಯಾಗದಲ್ಲಿ ಮುಟ್ಟಿ [illegible] ಪಾದಿಸಿ [illegible] ಸೂತಕಾದಿಗಳುಂಟಾಗುತ್ತಿದ್ದರೂ ಅಶುದ್ಧವಾದ ಶರೀರದಿಂದ ಆತ್ಮನಲ್ಲಿರುವ ಸಂಸ್ಕಾರವು ನಷ್ಟವಾಗಬೇಕಾಗುವದು. [illegible] ದಲ್ಲಿ ಎಷ್ಟೋ ಸೂತಕಾದಿಗಳು ಬಂದರೂ ಯಜ್ಞವನ್ನು ಮಾಡಿದ ಸಂಸ್ಕಾರವು ನಷ್ಟವಾಗದೆ ಹೇಗೆ ಸ್ವರ್ಗಕ್ಕೆ [illegible] ಗುವುದೋ ಅದರಂತೆ ಎಷ್ಟೇ ಅವಾಂತರ ಆಶೌಚಗಳು ಪ್ರಾಪ್ತವಾದರೂ ಲಿಂಗದಲ್ಲಿರುವ ಮಹತ್ವಸಂಸ್ಕಾರವು ನಷ್ಟವಾಗದೆ ಸ್ಥಾಯಿಯಾಗಿ ಇದ್ದೇ ಇರುವದು. [illegible] ಲಿಂಗಕ್ಕೂ ಲಿಂಗದಲ್ಲಿರುವ ಶಿವಕಳೆಗೂ ಅಪವಿತ್ರತೆ ಇಲ್ಲದಿರುವುದರಿಂದ ಶಿವಕಳೆಗೆ ಯಾವ ನಿತ್ಯಶುದ್ಧ [illegible] ಗಳನ್ನು ಹೇಳುವೆವೋ ಅವೇ ಶುದ್ಧತ್ವಾದಿಗಳನ್ನು [illegible] ಗಕ್ಕೂ ಹೇಳುತ್ತೇವೆ ಮತ್ತು [illegible] ತಾದ ದೀಕ್ಷಾಯಾಗವನ್ನು ಮಾಡುವುದಕ್ಕೆ ಸತ್ರಿಗಳು ದೀಕ್ಷೆಗೊಂಡಿದ್ದ ಮಧ್ಯೆ ರಜಸ್ವಲಾದಿ ಸೂತಕಗಳುಂಟಾದರೂ ತಾವು ವಹಿಸಿದ ಯಜ್ಞಾಂಗದ ದೀಕ್ಷೆಯ ಪ್ರಭಾವದಿಂದ ಹೇಗೆ ಯಜ್ಞಕಾರ್ಯಕ್ಕೆ ಅಧಿಕಾರಿಗಳಾಗುವರೋ ಅದರಂತೆ ಯಾವಜ್ಜೀವ[illegible] ವಾದ ಶಿವಪೂಜಾ [illegible] ವಾದ ಮಹಾಯಜ್ಞ[illegible] ಅಂಗವಾದ ಶಿವದೀಕ್ಷೆಯ ಪ್ರಭಾವದಿಂದ ಅಂತರಾ[illegible] ಆಶೌಚಗಳು ಪ್ರಾಪ್ತವಾದರೂ ಯಾವಜ್ಜೀವ[illegible] ಕಲ್ಪಿತವಾದ ಲಿಂಗಧಾರಣ ಲಿಂಗಪೂಜೆಯನ್ನು [illegible] ದಿರುವುದೇ ವೀರಶೈವ ಧರ್ಮವಾಗಿದೆ

ಶ್ರೀಮನ್ಮಹಾರಾಜರವರ ಜ್ಯೂಬಿಲಿ ಮಹೋತ್ಸವವು.

ಯಾವ ಮಹಾಪ್ರಭುಗಳ ಆಶ್ರಯದಿಂದ ಕರ್ನಾಟಕಲಕ್ಷ್ಮಿಯು ವಾಣಿಜ್ಯ [illegible] ದಿನೇ ದಿನೇ ಪರಿಪುಷ್ಟಳಾಗುತ್ತಿರುವಳೋ, ಯಾವ ಪ್ರಭುಗಳ ಆಳ್ವಿಕೆಯ [illegible] ದಿಂದ ಪ್ರಜೆಗಳು ವಿದ್ಯಾಬುದ್ಧಿ ಚಾತುರ್ಯಾದಿಗಳಿಂದೊಡಗೂಡಿರುವ[illegible] ಯಾವ ಪ್ರಭುಗಳ ಸಹಾಯದಿಂದ ವೇದವೇದಾಂಗಾದಿ ವಿದ್ಯೆಗಳು ಪುನರ್ಜೀವನವನ್ನು ಹೊಂದಿ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಿರುವವೋ, ಯಾವ ಪ್ರಭುಗಳ ರಕ್ಷಣಾಪಟುತ್ವದಿಂದ ಪ್ರಜೆಗಳಲ್ಲಿ ಅನಾದಿಕಾಲದಿಂದ ಕಾಲೂರಿನಿಂತಿರುವ ಸ್ವಾರ್ಥಭಾವಗಳು ಮೆಲ್ಲಮೆಲ್ಲನೆ ಹಿಂಜರಿಯುತ್ತಿರುವವೋ, [illegible] ಯಾವ ಪ್ರಭುಗಳ ಕಟಾಕ್ಷವೀಕ್ಷಣೆ ಮಾತ್ರದಿಂದ ದುಷ್ಕರ ದೌರಾತ್ಮ್ಯವು [illegible] ನಾಗುತ್ತಿರುವುದೋ, ಯಾವ ಪ್ರಭುಗಳ ಶಾಸನ[illegible] ದಿಂದ ಚೌರ್ಯ ವಿತ್ತಾಪಹರಣಾದಿ ದುರ್ಗುಣಗಳು ಪಲಾಯನ ಮಾಡುತಿರುವವೋ, ಯಾವ ಮಹಾಪ್ರಭುಗಳ ಪೃಷ್ಠತಲದಲ್ಲಿ ಚಂದ್ರನಲ್ಲಿ ಚಂದ್ರಿಕೆಯು ಪ್ರಸ[illegible] ಸ್ವಾಭಾವಿಕವಾಗಿರುವಂತೆ ಆಸ್ತಿಕ್ಯಬುದ್ಧಿಯು ನೆಲೆಗೊಂಡಿರುವುದೋ ಯಾವ ಪ್ರಭುಗಳ ಶಾಂ[illegible] ಸಾಮ್ಯತವು ರಾಜಭಕ್ತರೆನಿಸಿದ ಪ್ರಜೆಗಳ ಮೇಲೆ [illegible] ಯಾಗಿ ಹರಿಯುತ್ತಿರುವುದೋ ಯಾವ ಪ್ರಭುಗಳ ಪ್ರಯತ್ನದಿಂದ ದೇಶದಲ್ಲಿ ಕೃಷಿವ್ಯವಸಾಯ ಕಲಾಕೌಶಲ್ಯಾದಿಗಳು ನಾನು ಮುಂದು ತಾನು ಮುಂದು ಎಂದು ತವಕಪಡುತ್ತಿರುವುವೋ ಯಾವ ಪ್ರಭುಗಳ ರಾಜ್ಯಪರಿಪಾಲನ ಚಾತುರ್ಯವು ಪ್ರಜಾಮನೋರಂಜಕವಾಗಿರುವುದೋ ಯಾವ ಪ್ರಭುಗಳ [illegible] ದಿಂದ ರಾಜ್ಯವು ಪ್ರಜಾಸತ್ತಾತ್ಮಕವಾಗಿ [illegible] ತ್ತಿರುವುದೋ ಯಾವ ಪ್ರಭುಗಳ ನವನವೋನ್ಮೇಷಶಾಲಿಯಾದ ಬುದ್ಧಿಶಕ್ತಿಯಿಂದ ರಾಜಧಾನಿಯು [illegible] ನಗರವನ್ನಾಗಿ ಮಾಡಲ್ಪಟ್ಟಿರುವುದೋ ಯಾವ [illegible] ಹಾರಾರ್ಪಣ [illegible] ನಿಲ್ಲಿಸಲ್ಪಟ್ಟಿರುವವೋ, ಯಾವ ಪ್ರಭುಗಳ ಪುಣ್ಯ ಮಹಿಮೆಯಿಂದ ಮೈಸೂರು [illegible] ಮಹೋತ್ಸವಕ್ಕೆ [illegible] ಸ್ಥಾನವಾಗಿರುವುದೋ, ಯಾವ [illegible] ದಿಂದ [illegible] ಅಂಥ ರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ರವರ [illegible] ಮಹೋತ್ಸವವು ಪ್ರಜೆಗಳ ಪುಣ್ಯ ಬಲದಿಂದ [illegible] ಸಿತು. [illegible] ೭ ದಿವಸಗಳವರೆಗೆ [illegible] ತಿಂಗಳ [illegible] ತಾರೀಖುಗಳಲ್ಲಿ ನಡೆಯುವ[illegible]

ಗಳಿಗೆಲ್ಲ ಒಡತಿ ದ್ವನ್ನವರಿಂದ ಇಂದಿನ ವಾದ ಮಹೋತ್ಸವವನ್ನು ನೋಡುವ ದಿಯುವು ಮೈಸೂರುದೇಶದ ಪ್ರಜೆಗಳಿಗೆಲ್ಲ ಅಧಿ ರಿಂದ ಈ ದೇಶೀಯರೇ ಧನ್ಯರು ಸ್ತಾ ನಾಲ್ವಡಿ ಶ್ರೀ ಕೃಷ್ಣರಾಜಒಡೆಯರವರು ರವನ್ನು ವಹಿಸಿ ಮುಂದಾ ಪೋಷಿಸುವಾರಕ್ಕ ಗೆ ಸವನಾಪ್ಯವಾಗುವುದು ಮಾತ್ರ ಎರ ದ ಶಾಸನಬದ್ಧವಾದತ್ವದಲ್ಲಿ ನಾವೆಲ್ಲ ವಾದ ನಾವುಗಳು ೨೫ ವರ್ಷಗಳನ್ನು ಎಂದು ದಂತೆ ಕಳೆದೆವು ರಕ್ಷಣೆ ಎಂಬುದಿಯನ್ನು ಬಿಟ್ಟಿಸಿದೆ ಇನ್ನು ಮುಂದೆಯ ವರ್ಷೋತ್ಸವವನ್ನು ನಡು ನೋಡಲು ಕುತೂ ತ್ತಿರುವೆವು

ಪ್ರಭುಗಳು ದೈವಭಕ್ತರು, ಆಸ್ತಿಕಪಕ್ಷ್ಯರ ತಿಕೋವಿದರು, ಪರನಾರೀಸಹೋದರರು, ದನಸದಕ್ಷರು ರಾಜರ್ಷಿಗಳು, ಪ್ರಜೆಗಳನ್ನು ಕ್ಷೇಪದಿಂದ ಕಾಣುವವರು, ಪ್ರಜಾಸೌಖ್ಯ ಸೌಖ್ಯವೆಂದು ಭಾವಿಸಿರುವವರು, ನಿರ್ವಂಚನೆ ಆಗಿರುವುದರಿಂದ ಅಸ್ಪೃಶ್ಯತಾವಿಕದ ಅಂಶಗಳ ಸೇರಿದರೆ ರಾಮರಾಜ್ಯವಾಗುವುದೆಂಬ ಕಾವ್ಯೋ ನಮ್ಮ ಮಹಾಪ್ರಭುಗಳ ಅಳ್ವಿಕೆಯಲ್ಲಿ ಉನ್ನ ವಾಯಿತ

ಜಾ ಪ್ರತ್ಯಕ್ಷ ದೇವತಾ ಎಂಬುಕ್ತಿಯಂತೆ ಕ್ಷವಾದ ದೇವರನ್ನು ನಾವುಗಳು ಹೇಗೆ ಆರಾ ವೋ ಅದಕ್ಕಿಂತಲೂ ಇಮ್ಮಡಿಯಾಗಿ ಪ್ರತ್ಯ ಕ್ಷಸ್ವರೂಪರಾದ ನಮ್ಮ ಮಹಾ ಪ್ರಭುಗಳವರ ತ್ಸವದ ದಿನವನ್ನು ಪರಿಪಾಲ್ಯರಾದ ಪ್ರಜೆಗ ಬಹು ಆಟ್ಟಹಾಸದಿಂದ ನೆರವೇರಿಸುತ್ತ ತಾವ ರಾಜಭಕ್ತಿಯನ್ನು ಪ್ರದರ್ಶನ ಮಾಡುವುದು ಸೂರು ದೇಶದವರ ಆದ್ಯಕರ್ತವ್ಯವು ಹಾಲಿದ್ದಾ ವನ್ನು ನೋಡಬೇಕೆಂಬ ಗಾದೆಯಂತೆ ನಮಗ ಯಿಂದ ಹಳ್ಳಿಹಳ್ಳಿಗಳ ಪ್ರಜೆಗಳೂ ಈ ಉತ್ಸವ ವನ್ನು ಅತಿಶಯವಾದ ನಿರೀಕ್ಷಿಸಿಕೊಂಡಿದ್ದು ಬರುವ 25 ವರ್ಷಗಳ ಅಂತ್ಯದಲ್ಲಿ ಆಗುವ ವರ್ಷೋತ್ಸವದ ವರಿವಿಗೂ ನಾವು ಇರುತ್ತೇವೋ ಎಂಬುದನ್ನು ಯಾರಿಂದಲೂ ಹೇಳಲಶಕ್ಯ ದುದರಿಂದ ನನ್ನಯಕ್ಕೆ ಪ್ರತಿಗಳ ಪುನೀತದ ದ ಒದಗಿದ ಈ ಪುಣ್ಯದಿವಸವನ್ನು ಪ್ರತಿಯೆ ಕೊಡುತ್ತಿವೆ ಅತ್ಯಂತ ಶ್ರದ್ಧೆಯಿಂದ ಆಚರಿಸ ನಮ್ಮ ಸ್ವಾಮಿಯ ಮಹಾ ಪ್ರಭುವರ್ಯರ ರಾ ದ ದಿವಸ ಹೆಂಗಸರು ಮಕ್ಕಳಾದಿಯಾಗಿ ಸಕ ಗಳೂ ತಮ್ಮ ತಮ್ಮ ಮನೆಮಠಗಳನ್ನು ಸಾರಣ ಗಳಿಂದಲಂಕರಿಸಬೇಕು. ಪ್ರತಿಯೊಬ್ಬರೂ ಸ್ನಾ ನಂದನಾದಿನಿತ್ಯಕರ್ಮಗಳನ್ನೆಲ್ಲ ಮುಗಿಸಿಕೊಂ ದೇವತಾಸನ್ನಿಧಿಯಲ್ಲಿ ಮಹಾರಾಜರವರ ಶ್ರೀ ಪ್ರಾರ್ಥನೆಯಂ ಮಾಡಬೇಕು ಒಡವರಾದಿಯಾಗಿ ನಂತರ ಪರಿವಿಗೂ ದೀಪಾವಳಿ ಮುಂತಾದ ಪಬ್ಬ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತರಾಗಬೇಕು ವಸ್ತ್ರಾಭರಣಾದಿಗಳನ್ನು ಧರಿಸಬೇಕು. ದೇವ ಮಠ ಮುಂತಾದ ಪವಿತ್ರ ಸ್ಥಾನಗಳಲ್ಲಿ ಒಟ್ಟು ಮಹಾಪ್ರಭುಗಳ ಗುಣಸಂಕೀರ್ತನೆಯನ್ನು ಮಾ ವೊಂದು ಗ್ರಾಮಗಳಲ್ಲಿರುವ ಪಾಠಶಾ ವಿದ್ಯಾರ್ಥಿನಿಯರು ಮಹಾರಾಜರವರ ವನ್ನು ಉಚ್ಚಾಸನದಲ್ಲಿರಿಸಿ ರಾಜಭಕ್ತಿಯಿಂ ಗಳನ್ನು ಹಾಡಬೇಕು. ನಾಗರಿಕ ಪ್ರಜೆಗಳು ಮಾಡಿ ಮಹಾರಾಜರಿಗೆ ಧನ್ಯವಾದವನ್ನ ಚಿರಮನಧಿಷ್ಠಾನಂ ಯದುಸಂತಾನಪ್ರಿಯ ಎಂ ವನ್ನು ಮಾಡಬೇಕು ರಾಜಭಕ್ತಿವಿಶಾ ವ ಶ್ರೀಮಂತರುಗಳು ಯಥಾಶಕ್ತಿ ದೀನರಿಗೆ ದಾನ ಡಬೇಕು. ರಜತೋತ್ಸವದ ಜ್ಞಾಪಕಾರ್ಥವಾ ವನವಾದ ವಿದ್ಯಾರ್ಥಿಗಳ ನಿವಾಸಸ್ಥಾನ ನಾರ ಅನ್ನಛತ್ರಸ್ಥಾಪನ ಕೆರೆಕೋಡಿ ನವಪ ದವುಗಳನ್ನು ಪ್ರತಿಷ್ಠಿಸಿ ನೈಜವಾದ ರಾಜಭಕ್ತಿ ನ್ನು ಪರೋಕ್ಷ ಅಪರೋಕ್ಷಗಳಲ್ಲಿಯೂ ತೋ ತೋರಿಸಬೇಕ ತವ ಶ್ರಿಯ ಪ್ರಾರ್ಥನ ಅನ ಘೋಷ ಮಾಡಬೇಕು. ಶ್ರೀಮನ್ಮಹಾ ರಾಜರವರ ಪ್ರಜಾರಂಜನೈಕಪರವಾದ ಗುಣಾವಳಿಗಳನ್ನು ಕರ್ಣಾಕರ್ಣಿಕೆಯಿಂದಕೇಳಿ ಮಹಾರಾಜರವರ ಪ್ರಭಾಕೀರ್ತಿಯಲ್ಲಿ ನೆರವೇರುವ ಮಹೋತ್ಸವ ಕಾದ ದೊಡ್ಡದೊಡ್ಡ ನಗರಗಳ್ಳೊಳಕೊಡಾ ದ್ಯಪ ತಾ ಎಲಸನಾಡಿ ಈ ಮಹೋತ್ಸವವನ್ನು ಮಾಡಬೇಕು ದ್ವಾರ ಇನ್ನು ಮಹಾಪ್ರಭುಗಳ ಪ್ರಜಾವರ್ಗದಲ್ಲಿಯೇ ನೋಡಿದರನ್ನು ಮೈಸೂರುದೇಶೀಯರು ಈ ರಜತೋತ್ಸವವನ್ನು ವಿಸ್ತರವಟ್ಟಿಗ ಆಚರಿಸಬೇಕೆಂಬುವುದು ಪದರಿಂದಲೇ ಸ್ಪಷ್ಟವಾಗುವುದು ಆದುದರಿಂದ ಹಳ್ಳಿಹಳ್ಳಿ ಕಾಸ ನಗರ ಗುಡಿಗಳಲ್ಲಿರುವ ಗ್ರಾಮ್ಯರು ಪಾಠಶಾಲೆಗಳು ಪಟ್ಟಣವಾಸಿಗಳು ಯೋಗಿಗಳು ಎಲ್ಲರೂ ತಮ್ಮ ತಮ್ಮ ಯಥಾಶಕ್ತಿ ಈ ಉತ್ಸವದಲ್ಲಿ ಬೆರೆತು ರಾಜಭಕ್ತಿಯನ್ನು ಪ್ರಕಟಿಸ ತವ್ವಾರಾ ಜಗದನುಗ್ರಹಕ್ಕೆ ಪಾತ್ರರಾಗಬೇಕ್ಕದು.

ರಾಜಧಾನಿಗೆ ವೈಸ್ರಾಯಿರವರ ಆಗಮನ

ಕಳೆದತಿಂಗಳು ೨೯ರ ಪ್ರಾತಃಕಾಲ 8 ಗಂಟೆಗೆ ಸರಿಯಾಗಿ ವೈಸ್ರಾಯಿರವರು ರಾಜಧಾನಿಯ ರೈಲ್ವೆಸ್ಟೇಷನ್ನಿಗೆ ಸ್ಪೇಷಲ್ ಗಾಡಿಯಿಂದ ಇಳಿದರು. ೨೧ ಗುಂಡುಗಳು ಹಾರಿಸಲ್ಪಟ್ಟವು ಆ ಸ್ಟೇಷನ್ನಿನಲ್ಲಿಯೇ ಶ್ರೀಮನ್ಮಹಾರಾಜರವರು ಶ್ರೀ ಯುವರಾಜರೊಂದಿಗೆ ಮಹಾಮಹಾಲ್ಯಾದಿಗಳೊಡನೆ ಸ್ಟೇಷನಿಗೆ ದಯಮಾಡಿ ಧನ ವನ್ನು ಮಾಡಿದ ವೈಸ್ರಾಯಿದಂಪತಿಗಳಿಗೆ ಸುಸ್ವಾಗತಪ್ರಶ್ನೆಗಳನ್ನು ನಡೆಸಿ ದಿವ್ಯಾಕ್ಷತೆಗಳನ್ನು ಮಾಡಿದ ಬಳಿಕ ವೈಸ್ರಾಯಿದಂಪತಿಗಳನ್ನು ಕರೆದುಕೊಂಡು ತಾನೂ ಅವರ ಪಕ್ಕದಲ್ಲಿ ಕುಳಿತುಕೊಂಡು ಧ್ವಜಪತಾಕಾದಿಗಳಿಂದ ಅಲಂಕೃತವಾಗಿರುವ ನಯನಾಭಿರಾಮವೀಧಿಯಲ್ಲಿ ಉತ್ಸವದೊಡನೆ ಪ್ರಯಾಣಬೆಳೆಸಿ ರಾಜಬೀದಿಗಳನ್ನು ಕಾಣುತ್ತ ಅರಮನೆಗೆ ಬಂದರು. ಅನೇಕ ಸಾವಿರಾರು ಜನಗಳು ಸಾಲುಸಾಲಾಗಿ ನೆರೆದಿದ್ದರು ಸಾಲಿನಲ್ಲಿ ಕುಳಿತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳು ಸಂತೋಷಸೂಚಕವಾದ ಹಸ್ತಪತಾಕೆಗಳನ್ನು ಅಲ್ಲಾಡಿಸುತ್ತಿದ್ದರು. ನಿಯಮಿತಸ್ಥಾನವನ್ನು ಸೇರುವುದರೊಳಗಾಗಿಯೇ ಪುನಃ ೨೧ ಗುಂಡುಗಳು ಹಾರಿಸಲ್ಪಟ್ಟವು ಈ ಪುರದಲ್ಲಿ ಮುನಿಸಿಪಾಲಿಟಿಯವರಿಂದ ಹಾಕಿಸಲ್ಪಟ್ಟ ಮನೋಹರವಾದ ಚಪ್ಪರದಲ್ಲಿ ವೈಸ್ರಾಯರವರಿಗೆ ಮುನಿಸಿಪಾಲಿಟಿಯವರಿಂದ ಒಂದು ಮಾನಪತ್ರವು ಒಪ್ಪಿಸಲ್ಪಟ್ಟಿತು. ವೈಸ್ರಾಯಿರವರು ಎಲ್ಲರೊಡನೆ ಸಮಯೋಚಿತವಾದ ಗಳಿಂದ ಪ್ರಜೆಗಳನ್ನು ಸಂತೋಷಪಡಿಸಿದರು. ತಾ|| 30ನೇ ಪ್ರಾತಃಕಾಲಕ್ಕೆ ಕೃಷ್ಣರಾಜಸಾಗರಕ್ಕೂ ಶ್ರೀರಂಗಪಟ್ಟಣಕ್ಕೂ ದಯಮಾಡಿಸಿದರು. ಶ್ರೀರಂಗಪಟ್ಟಣದಲ್ಲಿ ಪ್ರೇಕ್ಷಣೀಯಗಳಾದ ವಿಷಯಗಳನ್ನೆಲ್ಲ ನೋಡಿಕೊಂಡು ವಿಶ್ರಾಂತ್ಯರ್ಥ ಪುನಃ ರಾಜಧಾನಿಗೆ ಬಂದರು. ತಾ|| 31ರಲ್ಲಿ ರಾಜಧಾನಿಯಲ್ಲಿಯೇ ಇದ್ದು ಇದೇದಿವಸ ಪ್ರಾತಃಕಾಲ ಒಂಭತ್ತುಘಂಟೆಗೆ ಬೆಂಗಳೂರಿನ ಮಾರ್ಗವಾಗಿ ನೀಲಗಿರಿಗೆ ಪ್ರಯಾಣಬೆಳೆಸಿದರು

ಒಳದೇಶದ ವೃತ್ತಾಂತಗಳು.

ಪಟ್ಟವನ್ನೇರಿದ ವೃತ್ತಾಂತವು ಮೈಸೂರುದೇಶಕ್ಕೆ ಆಗಮಿಸಿ ಈ ದೇಶದ ಪ್ರಜೆಗಳ ಅಭಿವೃದ್ಧಿಯ ವಿಷಯದಲ್ಲಿ ನಡೆದಿರತಕ್ಕ ಸಕಲ ಏರ್ಪಾಟುಗಳನ್ನು ನೋಡಿ ಆನಂದತುಂದಿಲರಾದವರಾಗಿ ಮೈಸೂರು ಗವರ್ನಮೆಂಟಿನವರು ಪ್ರತಿವರ್ಷ ಬ್ರಿಟಿಷ್ ಗವರ್ನಮೆಂಟಿಗೆ ಕೊಡುತ್ತಿದ್ದ 35 ಲಕ್ಷ ರೂಪಾಯಿಗಳ ಪೋಷಣಿಯನ್ನು ೨೫ ಲಕ್ಷರೂಪಾಯಿಗಳಿಗೆ ಇಳಿಸಿರುವುದನ್ನು ಕೇಳಿ ಅತ್ಯಂತ ಸಂತೋಷಿಸುತ್ತೇವೆ. ವೈಸ್ರಾಯಿರವರ ಧರ್ಮಕ್ಕೆ ಇದು ಅತ್ಯಂತ ಪ್ರಶಂಸನೀಯವಾಗಿದೆ

ರಜತಮಹೋತ್ಸವ ನಿಮಿತ್ತವಾಗಿ ಕವಿತೆಯನ್ನು ಬರೆದ ಕಳುಹಬೇಕೆಂದೂ ಅವರಲ್ಲಿ ಉತ್ತಮವಾದ ಕವಿತೆಗೆ ಬಹುಮಾನವನ್ನು ಕೊಡುವುದೆಂದೂ ಮೈಸೂರು ಮುನಿಸಿಪಾಲಿಟಿಯವರು ಪ್ರಕಟಿಸಿರುವರು.

ಶ್ರೀಮನ್ಮಹಾರಾಜರವರ ಸಿಲ್ವರ್ ಜುಬಿಲಿ ಮಹೋತ್ಸವದ ನಿಮಿತ್ತವಾಗಿ ಬರುವ ತಿಂಗಳು ತಾ|| 8ರಲ್ಲಿ ಸರ್ಕಾರು ಕಚೇರಿಗಳಿಗೂ ವಿದ್ಯಾಶಾಲೆಗಳಿಗೂ ರಜಾ ಕೊಡತಕ್ಕದ್ದೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ

ಮ|| ರಾ|| ಪಿ ಮಹಾದೇವಯ್ಯನವರು ಬಿ.ಎ. ಎಲ್ ರವರ ಕಾರ್ಯದಕ್ಷತೆಯನ್ನೂ, ಬುದ್ಧಿಕೌಶಲ್ಯವನ್ನೂ ಗಮನಿಸಿ ಸರ್ಕಾರದವರು ಕಂದಾಯ ಇಲಾಖೆಯ ಸ್ಥಾನಕ್ಕೆ ನಿಯಮಿಸಿರುವ ವಿಷಯವನ್ನು ಕೇಳಿ ಅತ್ಯಂತ ಸಂತೋಷಿಸುತ್ತೇವೆ

ಮೈಸೂರಿನಲ್ಲಿರುವ ಮ|| ಶಿವ ಬಸಪ್ಪನವರೆಂಬ ಬಡ ವೀರಶೈವರು ನ್ಯಾಯಾಲಯದಲ್ಲಿ ಅಭಿಪ್ರಾಯ ಗರ್ಭಿತವಾದ ಒಂದು ಲೇಖನವನ್ನು ನಮ್ಮ ಕಡೆ ಕಳುಹಿಸಿದ್ದಾರೆ. ಈ ಲೇಖನವು ಕೇವಲ ವ್ಯಕ್ತಿವಿಷಯಕವಾದ ನಿಂದಯಿಂದೊಡಗೂಡಿರುವುದರಿಂದ ಪತ್ರಿಕೆಯಲ್ಲಿ ಪ್ರಕಟಿಸದ ಮಾಡಿದ್ದೇವೆ

ಮೈಸೂರು ರಾಜಧಾನಿಯಲ್ಲಿ ಮ|| ಶಿವಲಿಂಗಪ್ಪನವರು ೧೦ ದಿವಸಗಳಿಂದ ಅಸ್ವಸ್ಥರಾಗಿದ್ದು ಮೊನ್ನೆ ಶನಿವಾರರಾತ್ರಿ ಶಿವಾಧೀನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಇವರು ಸಾತ್ವಿಕಸ್ವಭಾವದವರೂ ಶಿವಾನುರಾಗಿಗಳೂ, ವೃದ್ಧರೂ ಆಗಿದ್ದರು. ಇವರ ಅಕಾಲಿಕಮರಣದಿಂದ ವೀರಶೈವರಿಗೆ ಮಾತ್ರವಲ್ಲದೆ ಸಕಲಜನಗಳಿಗೂ ಅತ್ಯಂತ ವಿಷಾದವುಂಟಾಗಿದೆ. ಈಶ್ವರನು ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡುವುದಲ್ಲದೆ ಇವರ ಅಗಲಿದ ಕುಟುಂಬದವರಿಗುಂಟಾದ ದುಃಖವನ್ನು ಶೀಘ್ರವಾಗಿ ಶಾಂತಪಡಿಸಲಿ

ಮಹಾತ್ಮಾ ಗಾಂಧಿಯವರು ಕಳೆದತಿಂಗಳು 19 ರಲ್ಲಿ ಮೈಸೂರಿಗೆ ಆಗಮಿಸಿ, ಮಹಾಪ್ರಭುಗಳ ಆತಿಥ್ಯದಲ್ಲಿ ೨ ದಿವಸಗಳ ವರೆಗೂ ಇದ್ದು ೨೧ ರ ರಾತ್ರಿ ಬೆಂಗಳೂರಿಗೆ ಪ್ರಯಾಣಮಾಡಿದರು. ಬೆಂಗಳೂರಿನಲ್ಲಿಯೂ ಮೂರುನಾಲ್ಕು ದಿವಸಗಳವರೆಗೂ ಇದ್ದು, ಅಲ್ಲಿಂದ ಕಾಡಕಾನಹಳ್ಳಿ, ಹಾಸನ ಮುಂತಾದ ಸ್ಥಳಗಳಿಗೆ ಪ್ರಯಾಣಬೆಳೆಸಿದರು. ಇದೇತಿಂಗಳು 4 ರಲ್ಲಿ ಹೊಳೆನರಸೀಪುರಕ್ಕೂ ೯ ರಲ್ಲಿ ಚಿಕ್ಕಮಗಳೂರಿಗೂ ಹೋಗುವರು. ತಾರೀಕು 10 ಕ್ಕೆ ದಾವಣಗೆರೆಗೆ ಹೋಗಿ 11ಕ್ಕೆ ಶಿವಮೊಗ್ಗೆಗೂ 13 ಕ್ಕೆ ತೀರ್ಥಹಳ್ಳಿಗೂ 14 ಕ್ಕೆ ಜೋಗ್ ಜಲಪಾತವನ್ನು ಪ್ರವೇಶಮಾಡಿ ಅಲ್ಲಿಯ ವಿದ್ಯಮಾನಗಳನ್ನು ನೋಡಿಕೊಂಡು ಪುನಃ ಬೆಂಗಳೂರಿಗೆ ಆಗಮಿಸುವರು

ಸ್ವೀಕಾರ.

ಪರಸನಹಳ್ಳಿ ತಾಲ್ಲೂಕು ಬೇಲೂರು ಒಡೆಯರ ಕಟ್ಟಿಮಠದ ಪಟ್ಟದಸ್ವಾಮಿಗಳವರ ಶಿಷ್ಯ ಗುರುಸಿದ್ದಯ್ಯನೆಂಬ ಸಣ್ಣವಯಸ್ಸಿನ ವಿದ್ಯಾರ್ಥಿಯು ತನ್ನ ಆನಂದವಾದ ಬುದ್ಧಿಯಿಂದ ಈ ಪತ್ರಿಕೆಯ ಪೋಷಣೆಗೋಸ್ಕರ ೨ ರೂಪಾಯಿಗಳನ್ನು ಅತ್ಯಾನಂದದಿಂದಲೂ ಉತ್ಸಾಹದಿಂದಲೂ ಕಳುಹಿಸಿಕೊಟ್ಟಿರುತ್ತಾನೆ. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಈ ತೆರದ ವಿವೇಕದಿಂದ ಕೂಡಿರುವ ಈ ಬಾಲಕನಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಹಾರೈಸುತ್ತೇವೆ.

ಪರಿಸರದ ಹೊಸಮನೆಯ ವೇ|| ಚನ್ನಬಸವಯ್ಯನವರ ಪುತ್ರ ಶಂಕರಲಿಂಗಾರ್ಯರಿಗೂ ದಾವಣಗೆರೆ ಹೊಳವನಹಳ್ಳಿ ವೇ|| ರಾಚಯ್ಯನವರ ಪುತ್ರಿ ಸೌ|| ಗಂಗಮ್ಮನಿಗೂ ಜ್ಯೇಷ್ಠಮಾಸದಲ್ಲಿ ನಡೆದ ಸಮಯದಲ್ಲಿ ಈ ಪತ್ರಿಕೆಯ ಪೋಷಣೆಗಾಗಿ ವರನ ಕಡೆಯಿಂದ ವಿಂಗಡಿಸಲ್ಪಟ್ಟ ೯ ರೂಪಾಯಿಗಳು ತಿಪಟೂರಲ್ಲಿರುವ ಮುದೇನೂರು ರಾಚಪ್ಪನವರು ಹೊಸಮನೆ ಶ್ರೀ ಮಲ್ಲಿಕಾರ್ಜುನಯ್ಯನವರ ದ್ವಾರಾ ನಮಗೆ ತಲ್ಪಿರುತ್ತದೆ

ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಸುಖವನ್ನುಂಟುಮಾಡಲೆಂದು ಬೇಡುತ್ತೇವೆ.

ಸಂ —

ನಿಜಾಮುಇಲಾಖಾ ಕೊಪ್ಪಳತಾಲೂಕ ಪೈಕಿ ಕಿನ್ನಾಳಲ್ಲಿ ಮೇಘರಾಜನಪ್ರಭಾವವೂ ಶ್ರೀಮಜ್ಜಗದ್ಗುರುಗಳಾದ ಕೇದಾರ ಮಹಾ ಸ್ವಾಮಿಗಳವರ ಆಗಮನವೂ.

ಈ ಗ್ರಾಮಕ್ಕೆ ಶ್ರೀ ಜಗದ್ಗುರು ಕೇದಾರ ಮಹಾಸ್ವಾಮಿಗಳವರು ಶ್ರೀ ಮೇಘರಾಜನನ್ನು ಜತೆಗೂಡಿಕೊಂಡು ನಮ್ಮ ಗ್ರಾಮಕ್ಕೆ ದಯಮಾಡಿಸಿದರು. ೨೦ ದಿನದಿಂದ ಈ ಗ್ರಾಮಕ್ಕೆ ದಿನಾಲು ಮಳೆಯು ಆಗುತ್ತಿದೆ. ಒಂದೆರಡುದಿನ ಮಾತ್ರ ಸತತ ಅತ್ಯದ್ಭುತ ಮಳೆಯಾಯಿತು. ಭೂದೇವಿಯು ಸಸ್ಯಾದಿಗಳಿಂದ ಅಲಂಕೃತಳಾಗಿ ಮಹಾನಂದವನ್ನುಂಟುಮಾಡಿದ್ದಾಳೆ. ಇದೇಪ್ರಕಾರವೇ ಶ್ರೀ ಜಗದ್ಗುರುಗಳವರ ಕೃಪಾಬಲದಿಂದ ಮೇಘರಾಜನು ನಮ್ಮ ಭರತಖಂಡಕ್ಕೆ ಕಾಲಾನುಸಾರವಾಗಿ ಆಗಮಿಸಿ ಸುಖಶಾಂತಿಯನ್ನೀಯಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಗೋವಿಂದರಾವ ಇಟ್ಗಿ, ಹೆಡ್ಮಾಸ್ಟರ
ಕಿನ್ನಾಳ.

ಪಂಚಾಚಾರ್ಯಸ್ತೋತ್ರ

~~ಶ್ರೀ ಮಲ್ಲಿಕಾರ್ಜುನ ಪಂಚರತ್ನ~~

[illegible]

ಆಶ್ರೀಶೈಲಾದಿನಿ
ವ್ಯಾಶ್ರಮನಿವಾಸ ನಗರನುತಂ ಪರಮಾನಂ ||
ವಾತ್ಸ್ಯಜನ್ಮನು ವಿಲಾಸನ
ರಾತ್ಸ್ಯಪ ಮಹಾಂವಪೊರೆಯಲೀ ಪತ್ರಿಕೆಯಂ ||೧||

ಶ್ರೀ ಜನನ ವಿಭೂರಂ ನಿರ
ಮೂಜಗದಾಧಾರ ಪೀಠಸ್ಥ ಶ್ರೀದ್ವಾರಪ ||
ರಾಜಂ ನಮ್ಮಗೆ ಪೊರೆಗನು |
ತೇಜಂ ನೀರೇರುಹಾಕ್ಷನುತ ಪತ್ರಿಕೆಯಂ ||೨||

ಶ್ರೀ ಪಂಚಬ ಸುಮಕೋಟಿನು |
ರೂಪಂ ಚಾಮುಂಡ್ರ ತನುಭವವರವಸುಗುಣಾ ||
ಬಾಪೇಶ್ನ ಭಾನುವರಣ ವಿ |
ರೂಪಂಗಾಂಭೀರ್ಯ ಪೊರೆಯಲೀ ಪತ್ರಿಕೆಯಂ ||೩||

ಶ್ರೀ ಪ್ರಮಥಾಗ್ರಣಿ ಗೌರೀ |
ಶಾಪ್ರಭಾಕರ ಸುರೇಶನುತಾಬ್ಜಪದಂ ಧೀ ||
ರಾಪ್ರಜಶಕ್ತಿರ್ಜ ಶಂಕರ ,
ನಾಪ್ರಭುವರ ಪೊರೆಯಲೀಗಳೀ ಪತ್ರಿಕೆಯಂ ||೪||

ಸುಜನೋದ್ಧಾರ ವಿಲಾಸಂ
ನಿಜಯುಸುತಂ ದೇವ ಮಲ್ಲಿಕಾರ್ಜುನಲಿಂಗಂ ||
ಭಜನ ಜನಾಶಯ ಎರದಂ ,
ಗಜವನ ಯತಿವಂದ್ಯ ಪೊರೆಯಲೀ ಪತ್ರಿಕೆಯಂ ||೫||

೧ – ~~[illegible]~~

...ಲಯನಾದ ಗುರುವರ್ಯ || ಲೋಪ ಶಿವಾನಂದ ರಾಜೇಂದ್ರ ಶಿವಾಚಾರ್ಯನೆರೆ ||೨|| ಶ್ರೀಮದ್ರಂಭಾಪುರಿಸಿಂಹ ಪೀಠಮಂಡಿತ ||೧|| ಶ್ರೀ ಸೋಮೇಶ ಲಿಂಗದೆ[illegible] ಗಂಗಳನು ಸಲಹುತಿರ್ದ | ತುಂಗ ರೇಣುಕಾರ್ಯನೊತ್ತ ಮಂಗಳಕರಸಂಗನೆಸುತ್ತ ||೩|| ಗಂಗೆ ಯಮುನೆ ಸರಸ್ವತೀ ಸಂಗಮದೊಳು ಮಿಂದುಹೊದು | ತುಂಗಮಹಾ ಲಿಂಗಪೂಜೆ , ಯಿಂಗಿತವರಿದ ಜಗದ್ಗುರು ||೪|| ಆರು ಗಿರಿಯ ನೇರಿಯುನ್ನತ | ಪೀಠ ಮೆರೆವ ಪೀಠಸ್ಥನ ಧೀರಗೆ ನಂನಮ್ಮಿಸಿ ಯನು ಕೋಟಿನೆನೆನ ಮರರ್ಜನಕ ||೫||

ಪ್ರತಿಕಂದಪದ್ಯಗಳಲ್ಲಿಯೂ 1. 2. 3. 4. ಚರಣಗಳಲ್ಲಿಯೂ 1. 2. 3. 4. ನೇ ಅಕ್ಷರಗಳನ್ನು ಬಿಟ್ಟು ಓದಲು ಶ್ರೀಮನ್ಮಹಾ ಜಗದ್ಗುರು ಪಂಚಾಚಾರ್ಯಪ್ರಭಾಕರ ಜಯಜಯ ಎಂದು ತೋರಡುವುದು.

ಭ್ರಮರಾಂಬಾಸಮೇತ ಮಲ್ಲಿಕಾರ್ಜುನ ನವರತ್ನಮಾಲಿಕಾ ಸ್ತೋತ್ರ

ರಾಗ ಹಿಂದುಸ್ತಾನಿ ತಾಳ ರೂಪಕ

ಪೊರೆವುದಕಂಕರ ದುರಿತಭಯಂಕರ ಪ, ಪಾವನ ಚರಣಾ ಭಜಕಭರಣಾಮಸು ನೋಮಶಿವಿಚಾನನಯನ ಶಾಪ ಮೆಂಹರವೃಷಭರ ^ ತ್ರಿಜಗದೊಳ್ಖ್ಯಾತನಾದ ಲಿಂಗಾದ್ರಿಯೊಳ್ ಮೆರೆಯುವ ಗಜಾರಣ್ಯಕ್ಷೇತ್ರದೊಳಿಹ ಮೋಹನಶಶಿಚಂದ್ರಗಿರಿವರ ||೧|| ಯಾತ್ರಾಗಮನಜನಕಂ ಪಾತ್ರನಾದವನನು ಕ್ಷೇತ್ರದೊಳಗೆನೆಲಸಿದಾ ಶಿವಮೂರ್ತಿಕೀರ್ತಿವಿಸ್ತಾರದ ||೨|| ಧಾರುಣಿಯೊಳ್ ಕಾವೇರಿಯುತೀರದೊಳ್ ನೇರುತ್ತರಪೊರೆಯುವ ಗಂಭೀರಶ್ರೀಶಂಕರೇಶ್ವರ ||೩|| ಪರಮಪಾವನಮಾನಸದೊಳ್ ನೆರೆದಿಹಪರಮಯೋಗ್ ಪರಿಸುಯಿಂಕ್ಷಂಗಳರಿಸಿಯುತಿಹ ಕೀರಿನೋಳ್ ಮೆರೆಯುವ ಹರ ||೪|| ಸೋಮಶೇಖರನಿಗೆ ನೀಡುತಿವ [illegible] ರೂಢಿಯೊಳ್ [illegible] ಕಾಪಾಡಿಮೆರೆಯುವ ತ್ರೀಶರ ||೬|| ಗೌರಿಯಂ ಸಂದಿಸಿಹಂಸ ವಾರಸಂ ಕೀರಿಮುಡಿಕ ಕೊರೆಯಿಂತ್ರೀಶೈಲಕೆ ನೋದ ಧೀರ ಶ್ರೀಮಲ್ಲಿಕಾರ್ಜುನ ೭ ವಸುಧೆಯೊಳಂಜಹುರಂಗ ಬಸವರಾಜಗಿವರನ ಅನುಕರುಣದಿಂದಲಿತ್ತಿಹ ವಸುಧಾದೀಶನ ಕಾರ್ಯನೆ ||೮|| ಪಂಚಾಚಾರ್ಯ ಪ್ರಭೆಯ ಪ್ರ, ಪಂಚದೊಳಂ ಪಸರಿಸಲ್ಕೆ ಪಂಚಿತಪಸುತ್ತು ಮೆರೆದ | ಪಂಚಮುಖಸ್ವರೂಪಕ ೯|

ಭ್ರಮರಾಂಬಾ ಮಹಿಮಾಪ್ರಭಾವ

೨೧-೭-27 ರಲ್ಲಿ ಮುಡುಕುದೊರೆ ಧರ್ಮಾರ್ಥಪಾಠಶಾಲಾವಿದ್ಯಾರ್ಥಿಯು ಕಾರ್ಯನಿಮಿತ್ತ ಮಲ್ಲಿಗಹಳ್ಳಿಗೆ ಹೋಗಿ ಹಿಂದಿರುಗಿಬಂದು ಕಾವೇರಿಗೆ ಹೋಗತಕ್ಕ ಹಂಗೋಲಿರುವ ಮ[illegible] ದಡದಲ್ಲಿ ಹರಿಗೋಲನ್ನು ಹತ್ತಲು ೩ ಹರಿಗೋಲಿನಲ್ಲಿ ಕಂಪನಿಯಾಗ್ಯ, ತಿಮ್ಮರಾಜೀಪುರ, ಕಾವೇರೀಪುರ ಮೊದಲಾದ ಗ್ರಾಮಗಳ ಜನಗಳು ಕುಳಿತಿದ್ದರು. ಆ ಸ್ಥಳ ಬಹಳ ಹೆಂಗಸರಲ್ಲಿ ಒಬ್ಬಳು ರಜಸ್ವಲೆಯಾಗಿ ಹರಿಗೋಲನ್ನು ಹತ್ತಿದ್ದಳು. ಹರಿಗೋಲಾದರೋ ಮಧ್ಯಹೊಳೆಯಲ್ಲಿ ಬಂದು ಅಂಬಿಗರ ಸ್ವಾಧೀನಕ್ಕೆ ಸಿಕ್ಕದೆ ಅನಾಕರ್ಷ್ಯದಿಂದ ಹೊರಟುಹೋಗುತ್ತಿರುವಾಗ ಮೇಲ್ಕಂಡ ವಿದ್ಯಾರ್ಥಿಯು ಅಲ್ಲಿ ಭಯಪಡತಕ್ಕವರಿಗೆ ಸಮಾಧಾನ ಹೇಳಿ ಶ್ರೀಮನ್ಮಹಾಜಗದ್ಗುರು ಪಂಚಾಚಾರ್ಯಪ್ರಭಾಕರ ಜಯಜಯ ಎಂದು ಕೂಗಿಕೊಳ್ಳಲು ಆ ಹರಿಗೋಲಿನಲ್ಲಿದ್ದವರಿಗೆ ಅಲ್ಲ ಲೀಕಿದವು ಮೇಲಕ್ಕೆ ಎದ್ದುನಿಂತು ಭ್ರಮರಾಂಬಾದೇವಿಯನ್ನು ಸ್ತೋತ್ರಮಾಡುತ್ತಿರಲು ಕಾವೇರೀಪುರದ ದಡದವರು ಹಿಡಿಯಲು ಎಷ್ಟು ಪ್ರಯತ್ನಪಟ್ಟರೂ ದೊರೆಯದೆ ಕೊಳ್ಳೇಗಾಲದ ಸ್ನಾನಘಟ್ಟದ ಎದುರಾಗಿಹೋಗಲು, ಅಲ್ಲಿ ಮೇಲ್ಕಂಡ ವಿದ್ಯಾರ್ಥಿಯು, ಮೇಲ್ಕಂಡ ಪಾಠಶಾಲಾ ಸೆಕ್ರೆಟರಿ ಅರ್ಚಕ ಮೊತ್ತಮಲ್ಲಪ್ಪನವರ ಪ್ರೋತ್ಸಾಹದಿಂದ ಪಾಠಶಾಲಾಧ್ಯಾಪಕರಾದ ಸಿ. ಸಂಗಪ್ಪಶಾಸ್ತ್ರಿಗಳವರಿಂದ ರಚಿಸಲ್ಪಟ್ಟಿರುವ ಭ್ರಮರಾಂಬಾ ವರಪ್ರಸಾದಾಂತರ್ಗತ ಶ್ರೀಕೃಷ್ಣರಾಜೇಂದ್ರವಿಲಾಸನೆಂಬ ಕನ್ನಡ ಚಂಪೂಕಾವ್ಯದಲ್ಲಿರುವ ಕಾವೇರೀಪ್ರಭಾವವನ್ನು ಶ್ರೀ ಮಲ್ಲಿಕಾರ್ಜುನಸ್ತೋತ್ರ, ಅಂಬಾಸ್ತೋತ್ರ, ಪಂಚಾಚಾರ್ಯಸ್ತೋತ್ರ ಇವುಗಳನ್ನು ಭಯಭಕ್ತಿಯಿಂದ ಪಠಿಸುತ್ತಿರಲು ಮೇಲಿನಯಗ್ರಾಮದ ಸಮೀಪದಲ್ಲಿ ಹರಿಗೋಲು ದೈವವಶಾತ್ ತಾನಾಗಿ ಸೇರಲು ಕಾವೇರಿಯು ಸರ್ವರನ್ನೂ ಕಾಪಾಡಿದಳು. ಅಂಬಿಗರ ಸಾಮರ್ಥ್ಯವೂ ದೈವವಶಾತ್ ಅಲ್ಲಿಗೆ ಸಫಲವಾಯಿತು. ಅನಂತರ ಆ ವಿದ್ಯಾರ್ಥಿಯು ಕಲಕಾಡಿಗೆ ಬಂದು ಈ ವಿಚಾರವನ್ನು ಪಾಠಶಾಲಾ ಕೋಶಾಧ್ಯಕ್ಷರಾದ ಸಿ. ಮಲ್ಲಣ್ಣನವರಲ್ಲಿಯೂ, ನಮ್ಮ ಪಾಠಶಾಲಾ ಉಪಾಧ್ಯಕ್ಷರಾದ ಮ್ಯುನಿಸಿಪಲ್ ಮೆಂಬರ್ ಪಿ. ಸಂಗಪ್ಪನವರಲ್ಲಿಯೂ ತಿಳಿಸಿ ಮಹಾಮಹಿಮವಾದ ಅಪಾಯವನ್ನು ಹೇಳಿ ತಿಳಿಸಿರುವನು. ಇದಲ್ಲವೇ ದೈವನ ಮಹಿಮಾಪ್ರಭಾವ! ಈ ವಿಚಾರವನ್ನು ಸರ್ವರೂ ಇದೇ ಗ್ರಾಮದವರಿಂದ ತಿಳಿದು ದೈವಭಕ್ತಿಯುಳ್ಳವರಾದರು.

ಕಾವೇರೀಪ್ರಭಾವ

ಸಿರಿಕೌರೂರಿಪ ಪತ್ತನಂ ಸುರುಚಿನಾವ್ಯಾ ಪರಾಬಿಷ್ಟದಾ ನಗಯಿಂದಂ ಮಹಾಪೂರ್ಣ ನಾನಾಮಂ ಚಿತ್ರರಂಗಂ ಶುಭಾ || ಅರವಿಂದಂ ಕೃಷ್ಣಭೂಪತಿಯದಸ್ವಾಸ್ಥ್ಯಂ ಪವಂಪಿಂ ಗುಣಾ, ನು ಸತ್ಪಲಮಿಮಾಯುಕಂ ಪೊರೆಯೆಕಾವೇರೀ ಬಂ ದರ್ಪಳ್ ||

ನೆರೆಪಂಚಾಚಾರ್ಯಪ್ರಜೆ |
ಯುರುತರದಿಂ ಸೊಂದೆ ಬಪ್ಪುದೆಂಬಾತುರದಿಂ ||
ಸುರುಚಿರಕವೇರ ಕನ್ಯಾ |
ಪರಿಪರಿಯಿಂನುತಿಸೆ ಬಂದಳೆನೆಬಂಪೊರಿಗುಂ ||

ಕಾವೇರಿಜನಂ ಮನಮೊಳ್ |
ಕಾವೇರಿರೆ ಕಣ್ಣಗೆಮ್ಮನೆಂಬಾತುರದಿಂ ||
ಕಾವೇರಿಯಳನುನಯದಿಂ |
ದೇವಾರೀಪಾರದುದಯುಕ್ತೈತಂದಿರುವಳ್ ||

ಮಹಿತಪ್ಪುಜಾಂಭತ್ತ್ವರ |
ಮಕರನೆಣಿಸಿವೆಯ ಮಕರವಿಕೃತಿಯ ಪೊರೆಯುತಾ
ಮಹತಮಮಾಸದೆ ಮುಸದಿ |
ಮಹರಾಂತಿಯೊಳಿರಲು ಲಗ್ನ ಸುಮುಕರವಿಂದಳ್ ||

ಮಂಗಳಕರೆಯ್ದಿದಳಾ !
ಗಂಗೆಯು ಹರಶಿರವಿಭೂಷೆ ಕಾಶೀವಾಸೆ ||
ತುಂಗಗುಣೋಜ್ವಲ ಕೃಷ್ಣನ್ |
ಸಂಗತಿ ಸುಖಸಾರಮಿತ್ತ ಕಪಿಲಲತಾಂಗೀ ||

ಅಪರದಿಕಾದ್ಯದೊಳುದಿಸುತೆ |
ಗುಪಿತಮೊಕುಂ ಗುಪ್ತಗಾಮಿ ಕಾಸಾರದೊಳುಂ ||
ನುಸಧಿವೆ ಕಾಮುಂದಲಿಯುತೆ |
ಕುಶಪ್ಪಿಕರಂ ವಿಸ್ತರಿಸಿಸ ತಾನೈತಂದಳ್ ||

ನಲಿನದನಿಯನುಭವಿಸ
ಲ್ಲಿಲಿಯೊಳ್ಸೆರೆ ಮಾಸರೇತು ವ್ಯೆಲಮನತಿಗಂ ||
ನಲಿಮುತ್ತಿನಹಾರಂಗಳ
ಘಳಿಲನೆ ತಾನೀವಳೆನಲು ಜಲಕಣಮೆಸಗುಂ ||

ಮರಕತಮಂಬರವ ನುಡಿಸಿ |
ಧರಣಿಯನುಂ ತೋಷಗೊಳಿಸಿ ಕೃಷ್ಣನ ನೆನಪಿಂ ||
ನೆರೆಕೃಷ್ಣರಾಜಸಾಗರ |
ದುರುತರ ಪಸರಾಂತು ಪೇರ್ಪಿನ್ನೈತರುತಿರ್ದಳ್ ||

ನರಪತಿ ಶ್ರೀಕೃಷ್ಣರಾಜ
ಸುರುತರ ಮಹಭಕ್ತಿಗೊಲಿಯುತಾತನಪ್ರಭೆಯಂ ||
ಸಿರಿಕೌರೂರಿಪ ಮಹಿಮಾ
ಪುರಿಯೊಳಗಂ ಪಸರಿಸಲ್ಕೆ ತಾನೈತಂದಳ್ ||

ಶ್ರೀಶೈಲಮಲ್ಲಿನಾಥಗೆ
ಶೀಲಂ ಗಮನಿಸಿ ಮೋಹಮೃಲದ ಮುದದಿಂ ||
ವಾಸಿಸಿಬಸಿನುತಲಿದರೆ |
ಪಾಸಿದನಿಪುಟಯುದೆಸಲು ನದಿ ಕಂಗೊಳಿಕುಂ ||

ಲೇಖಕ ಸಿ. ಸಂಗಪ್ಪಶಾಸ್ತ್ರಿ,
ಧರ್ಮಾರ್ಥಪಾಠಶಾಲಾಧ್ಯಾಪಕ, ಮುಡುಕುದೊ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದ

ನಿಜಾಮ ಇಲಾಖಾ ಕೊಪ್ಪಳ ತಾಲೂ ಪೈಕಿ ಕಿನ್ನಾಳ ಗ್ರಾಮಕ್ಕೆ ಶ್ರೀ ಜಗದ್ಗು ರುಗಳವರ ಆಗಮನವು.

[illegible] ಹಿಮವತ್ಕೇದಾರ ಪೀಠ [illegible] ಸಿಂಹಾಸನಾಧೀಶ್ವರ ಶ್ರೀ ೧೦ [illegible] ಶಿವಾಚಾರ್ಯ ಮಹಾಸ್ವಾಮಿಗಳ [illegible] ನಮ್ಮ ಗ್ರಾಮಕ್ಕೆ [illegible] ಸಲ್ಲಿಸಲ್ಪಟ್ಟ ಗುರುಕಾಣಿಕೆಯನ್ [illegible] ಸರ್ವ ಭಕ್ತಮಹಾಶಯರಂಗೆ [illegible] ಹಾಗೂ ಶ್ರೀಜಗದ್ಗುರು [illegible] ಮಹೋತ್ಸವಕ್ಕಾಗಿ ನಮ್ಮ [illegible] ದವರಿಗೆ ೧೦೦ ರೂಪಾಯಿ [illegible] ವಾದ ಪ್ರಭಾವಳಿಯನ್ನು [illegible]

—ಕೆ. ಮ. ಅಕ್ಕಿ, ಕಿನ್ನಾ

ಸುವೃಷ್ಟಿ.

ಂಸಪೇಟೆ ವರ್ತಕಮಂಡಲಿಯವರು ತಾರೀಖು 7 ರಲ್ಲಿ ಹೊಸಪೇಟೆಯಲ್ಲಿ ಮಳೆ ಬರುವದಕ್ಕಾಗಿ ಸನ್ನಿಕ್ಷಿ ವೀರಭದ್ರದೇವಸ್ಥಾನದಲ್ಲಿ ಆರಾಧನ ಸಿ ಸುಮಾರು 5-6 ಸಾವಿರ ಬಡಜನಗಳಿಗೆ ಅನ್ನ ರುತ್ತಾರೆ. ಇವರ ಪ್ರಾರ್ಥನಾಮೇರೆಗೆ ಶ್ರೀ ನಾಥನು ತಾ|| 15-7-27 ರಲ್ಲಿಯೇ ಸಂಪೂರ್ಣ ಮಳೆಯನ್ನು ದಯಪಾಲಿಸಿ ಪ್ರಜೆಗಳ ಮನಸ್ಸನ್ನು ನಗೊಳಿಸಿದನು

ನಸ್ಸಿನಂತೆ ಮಹಾದೇವನೆಂಬ ಲೋಕೋಕ್ತಿ ಎಂದಿಗೂ ಸುಳ್ಳಾಗಲಾರದು.

ಮಹಾತ್ಮರ ಸದ್ಬೋಧೆ.

ಹಾತ್ಮಾ ಗಾಂಧಿಜಿಯವರು ತಮ್ಮ ಸೋ ನ ಚರಕದಲ್ಲಿ ಸ್ವಂತವಾಗಿ ನೂಲುವದನ್ನು ಮನ ಲಕ್ಷ್ಯವು ಮೈಸೂರು ಹೋಮ್ ಇಂಡ ಸ್ ಆರ್ಗನೈಜರ್ ಆದ ಮ|| ರಾ|| ಎಂ. ವಿ. ಪ್ಪಯ್ಯನವರಿಗೆ ಮೈಸೂರಿನಲ್ಲಿ ಶೇಷಾದ್ರಿ ಅಯ್ಯ ಬಂಗಲೆಯಲ್ಲಿ ೨೩ನೇ ತಾರೀಖು ಸಾಯಂಕಾಲ ಕಿತು. ಮ|| ರಾ|| ಲಿಂಗಪ್ಪಯ್ಯನವರು ಡಾಕಾ ದಾರವನ್ನು ಎಳೆಯುತ್ತಿದ್ದ ಅಂದ್ರಪೇಟೆಯ ಹಗ ತೆಗೆಯುತ್ತಿರುವ ಮತ್ತು ಇತರರು ಮಾ ಕ್ರಮಗಳ ವಿಷಯದಲ್ಲಿಯೂ, ಅವರುಗಳು ಉಪ ಯೋಗಿಸುವ ಚರಕಗಳು ಮತ್ತು ತಕ್ಲಿಗಳ ವ್ಯತ್ಯಾ ವಿಷಯದಲ್ಲಿಯೂ ಮತ್ತು ಅವರುಗಳು ಮಾಡುವ ಯ ಹಂಜಿಗಳ (Slivers) ಕ್ರಮಗಳಿಗೂ ಮತ್ತು ಕರುಗಳು ಮಾಡುವ ಪಂಜಿ ಕ್ರಮಕ್ಕೂ ಇರುವ ವ್ಯತ್ಯಾಸಗಳನ್ನೂ 1½ ಘಂಟೆಗಳ ಕಾಲ ಸಾಂಗ ಮಹಾತ್ಮಾಜಿಯವರಿಂದ ತಿಳಿದುಕೊಂಡರು. ರಾ|| ಲಿಂಗಪ್ಪಯ್ಯನವರು ತಮ್ಮ ಸ್ವಂತ ಚರಕ ಮಹಾತ್ಮಾಜಿಯವರಿಗೆ ಒಪ್ಪಿಸಿದರು. ಅವರು ಚರಕವನ್ನು ಕೊಡಬೇಕೆಂದು ಮಹಾತ್ಮಾಜಿ ವನ್ನು ಕೇಳಿಕೊಂಡಿದ್ದ ತುಮಕೂರಿನ ಬಾಲಕಿಗೆ ಮವಾಗ ಅನೇಕ ಪ್ರಶ್ನೆಗಳನ್ನು ಹಾಕಿ ಉಪನ್ಯಾಸ ಡುವುದಕ್ಕೆ ತಕ್ಕ ಯೋಗ್ಯತೆಯು ಆ ಮಗುವಿಗೆ ವೆಂಬುದನ್ನು ತಿಳಿಸಿ ಇತರರ ಹೊಗಳಿಕೆಯಿಂದ ಉ ಕೆಟ್ಟಿರುವುದನ್ನು ಹೇಳಿ ಇನ್ನು ಮುಂದೆ ಉಪ ನ್ಯಾಸ ಮಾಡಕೂಡದೆಂದೂ, ಸ್ಕೂಲಿಗೆ ಹೋಗಿ ಓದಿ ಂದು ಹಿಂದೀ ಭಾಷೆಯನ್ನು ಕಲಿತು ಮಹಾತ್ಮಾಜಿ ಯವರಿಗೆ ಹಿಂದಿಯಲ್ಲಿಯೇ ಕಾಗದವನ್ನು ಬರೆಯಬೇ ದೂ ಈಗ ತಾವು ಕೊಡುವ ಚರಕವನ್ನು ದೇಶೋ ದ್ಧಾರಕ್ಕಾಗಿ ಉಪಯೋಗಿಸಕೂಡದೆಂದೂ. ಮನೆ ಯಲ್ಲಿ ಪ್ರತಿದಿನವೂ ಇದರಿಂದ ದಾರವನ್ನು ತೆಗೆಯಬೇ ದೂ, ಬುದ್ಧಿವಾದ ಹೇಳಿದರು. ಮ|| ದೇವ ದಾಸ್ ಗಾಂಧಿಯವರು ಇದುವರಿವಿಗೂ ಮೈಸೂರಿನಲ್ಲಿ ದಾರ ತೆಗೆಯುವ ಕ್ರಮವನ್ನು ಹೇಳಿಕೊಡುತ್ತಿದ್ದ ವನ್ನು ಇನ್ನು ಮೇಲೆ ನೀವು ಮಾಡಬೇಕೆಂದು ರಾ|| ಸಿ. ರಾಜಗೋಪಾಲಾಚಾರ್ಯರವರು ಮ|| ಲಿಂಗಪ್ಪಯ್ಯನವರಿಗೆ ಹೇಳಿದ್ದನ್ನು ಅವರು ಶಿರಸಾ ಒಪ್ಪಿಕೊಂಡರು.

ಮಹಾತ್ಮಾಗಾಂಧಿಯವರ ಆಗಮನ.

೨೨|22-7-1927ನೆಯ ಶುಕ್ರವಾರ ಬೆಳಿಗ್ಗೆ 9 ಗಂ "ಮಹಾತ್ಮಾಜಿಯವರು ಮತ್ತು ಇವರ ಸಂಗಡ ಗಂಗಾಧರ ದೇಶಪಾಂಡೆಯವರು ಮ|| ವಿನಾದ್ ಮೊಹಮ್ಮುಸೇನ್ ಸಾಹೇಬರವರು, ಮಿ|| ಟಿ. ನವರು ಸಹ ಎಡತೊರೆಗೆ ಮೋಟಾರ್ ಸ್ಕೂಲ್ ಮೈ ನಕ್ಕೆ ದಯಮಾಡಿಸಿದರು. ಆಗ್ಗೆ ಯಡತೊರೆ ಲ್ಲೂಕಿನಿಂದ ಸಾವಿರಾರು ಜನಗಳು ನೆರೆದಿದ್ದರು. ಡತೊರೆತಾಲ್ಲೂಕಿನ ಪ್ರಜೆಗಳ ಪರವಾಗಿ ಮ|| ರಾ|| ಗುಂಡೂರಾಯರು ಒಂದು ಅಡ್ರೆಸ್ಸನ್ನು ಮೇಲೆ ಮಹಾತ್ಮಾಜಿಯವರಿಗೆ ಒಪ್ಪಿಸಿದರು. ಮಹ ಮದೀಯರು ಸಹ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಮ|| ರಾ|| ಕೆ. ರಾಮಸ್ವಾಮಯ್ಯಂಗಾರ್ರವರು ಸಂಸ್ಕೃತದಲ್ಲಿ ನವರತ್ನಮಾಲಿಕೆಯನ್ನು ಹೇಳಿದರು.

ಅನಂತರ ಯಡತೊರೆಪುರವಾಸಿಗಳಿಂದಲೂ, ಆಜು ಬಾಜು ಗ್ರಾಮಗಳಿಂದಲೂ ಖಾದಿ ಪ್ರಚಾರಕ್ಕಾಗಿ ವಸೂಲುಮಾಡಿದ್ದ 620 ರೂಪಾಯಿಗಳನ್ನು ಮಹಾತ್ಮಾಜಿಯವರಿಗೆ ವಂದನಾಪೂರ್ವಕವಾಗಿ ಒಪ್ಪಿಸಿದರು.

ಮಹಾತ್ಮಾಜಿಯವರು ಖಾದಿಯ ವಿಷಯವಾಗಿಯೂ, ಗೋಸಂರಕ್ಷಣೆಯ ವಿಷಯವಾಗಿಯೂ, ಶ್ಲಾಘನೀಯವಾದ ಉಪನ್ಯಾಸವನ್ನು ಹಿಂದೀಭಾಷೆಯಲ್ಲಿ ಮಾಡಿದರು. ಅದನ್ನು ಕನ್ನಡದಲ್ಲಿ ಮಿ|| ಗಂಗಾಧರ ದೇಶಪಾಂಡೆಯವರು ಹೇಳಿದರು. ಚಂದಾಪ್ರಮಾಣವನ್ನು ವಸೂಲುಮಾಡುವುದರಲ್ಲಿಯೂ, ಮಹಾತ್ಮಾಜಿಯವರನ್ನು ಬರಮಾಡಿಕೊಳ್ಳುವುದರಲ್ಲಿಯೂ ಮ|| ರಾ|| ಎಂ. ಸಿ. ದೇವೋಜಿರಾಯರು, ಮ|| ರಾ|| ಬಿ. ಸಿದ್ದಲಿಂಗಶೆಟ್ಟರು, ಮ|| ರಾ|| ವೈ. ವಿ. ಗುಂಡೂರಾಯರು ಸಹ ಬಹು ಮುತುವರ್ಜಿ ವಹಿಸಿದರು. ಸಭೆಯು 10½ ಗಂಟೆಗೆ ಬರಖಾಸ್ತು ಆಯಿತು. ಮಹಾತ್ಮಾಜಿಯವರು ಮತ್ತು ಅವರ ಸಂಗಡ ಬಂದಿದ್ದ ದೊಡ್ಡಮನುಷ್ಯರುಗಳು ಮೋಟಾರಿನಲ್ಲಿ ಮೈಸೂರಿಗೆ ಪ್ರಯಾಣಮಾಡಿದರು.

ಪ್ರತ್ಯಕ್ಷದರ್ಶಿ.

ಮಹಾತ್ಮಾ ಗಾಂಧಿಜಿಯವರ ಸನ್ನಿಧಿಯಲ್ಲಿ

ಮೈಸೂರು ಹೋಮ್ ಇಂಡಸ್ಟ್ರೀಸ್ ಇನ್‌ಸ್ಟಿಟ್ಯೂಟಿನ ವಿದ್ಯಾರ್ಥಿನಿಯರ ವಿಜ್ಞಾಪನೆ.

ಮಹಾತ್ಮರೆ, ಲೋಕಪೂಜ್ಯರೇ,

ಪ್ರತ್ಯಕ್ಷ ಪರಮೇಶ್ವರರಾದ ತಮ್ಮ ದರ್ಶನ ಮಾತ್ರದಿಂದಲೇ ನಾವು ಪಾವನರಾದೆವು. ಪತಿತರು ಪಾವನರಾಗತಕ್ಕದು ಪರಮೇಶ್ವರನ ಕೃಪೆಯಿಂದಲ್ಲವೆ? ನಮ್ಮಗಳಿಗಿರುವ ಸಹಿಸಲಸಾಧ್ಯವಾದ ಕಷ್ಟಗಳು ತಮಗೆ ವೇದ್ಯವಾಗಿರುವಷ್ಟು ಪ್ರಪಂಚದಲ್ಲಿ ಯಾರಿಗೂ ತಿಳಿದವುಗಳಾಗಿಲ್ಲವೆಂದು ಲೋಕಪ್ರಸಿದ್ಧವಾಗಿದೆ. ಆದರೂ "ಸಮದುಃಖಸುಖಸಮ" ಎಂಬಂತೆ ತಮ್ಮಂಥ ಮಹಾತ್ಮರಲ್ಲಿ ನಾವು ಹೇಳಿಕೊಳ್ಳುವುದರಿಂದ ನಮ್ಮ ದುಃಖವು ಸ್ವಲ್ಪ ಸಮಾಧಾನವಾಗುವುದು.

ನಮ್ಮಲ್ಲಿ ಕೆಲವರು ಬಡವರ ಹೊಟ್ಟೆಯಲ್ಲಿ ಹುಟ್ಟಿ ಬಡವರ ಮನೆಯನ್ನು ಸೇರಿ ಸದಾ ತೊಂದರೆಗೆ ಸಿಕ್ಕಿ ನರಳುತ್ತಿರುವೆವು. ಮತ್ತೆ ಕೆಲವರು ಐಶ್ವರ್ಯವಂತರ ಮನೆಯನ್ನು ಸೇರಿ ಸ್ವಲ್ಪ ದಿವಸಗಳು ನೆಮ್ಮದಿಯಾಗಿದ್ದು ನಮ್ಮನ್ನು ಕಾಪಾಡತಕ್ಕವರನ್ನು ಕಳೆದುಕೊಂಡು ಸಾಲಸೋಲಗಳಿಗಾಗಿ ಆಸ್ತಿಯನ್ನೆಲ್ಲಾ ಒತ್ತೆಯಿಟ್ಟು ತಿನ್ನುವುದಕ್ಕಿಲ್ಲದೆ ಪೇಚಾಡುತ್ತಲಿದ್ದೇವೆ. ಕೆಲವರು ಮುಪ್ಪಿನಲ್ಲಿ ಮಕ್ಕಳನ್ನು ಕೂಡ ಮೃತ್ಯುವಿನ ಬಾಯಿಗೆ ತುತ್ತುಮಾಡಿ ಆಶ್ರಯವಿಲ್ಲದೆ ಸಂಕಟಪಡುತ್ತಲಿರುವೆವು. ಅಲ್ಪಸ್ವಲ್ಪ ಜಮೀನುಗಳಿರುವ ಕೆಲವರು ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದೆ ಇರುವುದರಿಂದ ವರ್ಷಕ್ಕೆ ೬-೫ ತಿಂಗಳುಗಳು ಜೀವನಕ್ಕೆ ಮಾರ್ಗವಿಲ್ಲದೆ ಪೇಚಾಡುತ್ತಲಿರುವೆವು.

ನಮ್ಮ ಈ ಕಷ್ಟಗಳನ್ನೆಲ್ಲಾ ನೋಡಿ ನಮಗೆ ಸಹಾಯ ಮಾಡಲು ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಮೈಸೂರು ಸರ್ಕಾರದವರು ಹೋಮ್ ಇಂಡಸ್ಟ್ರೀಸ್ ಸ್ಕೂಲುಗಳನ್ನು ಏರ್ಪಡಿಸಿದ್ದರು. ಅದು ನಮ್ಮ ದೌರ್ಭಾಗ್ಯದಿಂದ ನಿಂತುಹೋಗಲು ವೃದ್ಧಪಿತಾಮಹರೂ ಪೂಜ್ಯರೂ ಆದ ಮ|| ಎಂ. ವೆಂಕಟಕೃಷ್ಣಯ್ಯನವರನ್ನು ಪ್ರೆಸಿಡೆಂಟರನ್ನಾಗಿ ಮಾಡಿಕೊಂಡು, ಮ|| ಎಂ. ವಿ. ಲಿಂಗಪ್ಪಯ್ಯನವರು ಸ್ವಂತಕರ್ಚಿನಿಂದ ಒಂದು ಹೋಮ್ ಇಂಡಸ್ಟ್ರೀಸ್ ಇನ್‌ಸ್ಟಿಟ್ಯೂಟನ್ನು ಮೈಸೂರಿನಲ್ಲಿ ಏರ್ಪಡಿಸಿ ಕೆಲವು ವರ್ಷಗಳಿಂದಲೂ ನಡೆಸುತ್ತಲಿರುವರು. ನಮ್ಮ ಶ್ರೀಮನ್ ಮಹಾರಾಜರವರ ಕೃಪೆಯಿಂದಲೂ ಅವರ ಸರಕಾರದವರ ಅಂದರೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರ ಉದಾರಾಶ್ರಯದಿಂದಲೂ ಈಗ ಇದು ಅಭಿವೃದ್ಧಿಗೆ ಬರುತ್ತಲಿರುವುದು. ಮತ್ತು ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗ್ರಾಮಾಂತರಗಳಿಂದ ಬಂದಿರುವ ನಮ್ಮಗಳಿಗೆ ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ಕೈಗಾರಿಕೆಗಳನ್ನು ಕಲಿಯಲು ಬಹಳ ಸಹಾಯ ಮಾಡಿರುತ್ತಾರೆ.

ಈಗ ಈ ಇನ್‌ಸ್ಟಿಟ್ಯೂಟಿನಲ್ಲಿ ಕೈರಾಟೆಯಲ್ಲಿ ನೂಲುವ ಕೈಗಾರಿಕೆಯನ್ನು ಇಟ್ಟಿರುವುದರಿಂದ, ಇತರ ಕೆಲಸಗಳನ್ನು ಕಲಿಯಲು ಶಕ್ತರಲ್ಲದ ಅನೇಕ ಮುದುಕರುಗಳ ಜೀವನೋಪಾಯಕ್ಕೆ ಅನುಕೂಲವಾಗಿರುವುದು. ಕೈರಾಟೆಯಿಂದ ತೆಗೆದ ನೂಲಿನಿಂದಲೇ ಕಾಲುಚೀಲ, ಬನೀಯನ್ನು, ಕತ್ತಿನಪಟ್ಟಿಯೇ ಮುಂತಾದ ಸಾಮಾನುಗಳನ್ನು ತಯಾರಿಸುತ್ತಲಿರುವೆವು. ಇವುಗಳನ್ನು ತಾವು ಬೆಂಗಳೂರಿನಲ್ಲಿ ನಡೆದ ಖಾದಿವಸ್ತುಪ್ರದರ್ಶನದಲ್ಲಿ ಪರಾಂಬರಿಸಿ ಶ್ಲಾಘಿಸಿ ನಮಗೆ ಬಹಳ ಉತ್ತೇಜನವನ್ನು ಉಂಟುಮಾಡಿರುತ್ತೀರಿ.

ಹೋಮ್ ಇಂಡಸ್ಟ್ರೀಸಿನ ವಿದ್ಯಾರ್ಥಿನಿಯರು ಚರಕಗಳಲ್ಲಿ ಕೆಲಸಮಾಡಿ ತೋರಿಸಿದರು. ನಂತರ ಅಳಗಂಚಿಯಿಂದ ಬಂದು ಇನ್‌ಸ್ಟಿಟ್ಯೂಟಿಗೆ ಸೇರಿ ಚರಕದ ಕೆಲಸ ಮಾಡಿ ಅದರಿಂದ ಜೀವನಮಾಡುತ್ತಿರುವ 60 ವರುಷದ ಮುದುಕಿಯೊಬ್ಬಳು ತಾನು ಮಾಡಿದ್ದ ದಾರದ ಹಾರವನ್ನು ಮಹಾತ್ಮರ ಕೊರಳಿಗೆ ಹಾಕಿದಳು. ಮತ್ತು ಕೈರಾಟೆನೂಲಿನಿಂದಲೇ ತಯಾರಾದ ಕಾಲುಚೀಲಗಳು ಒಪ್ಪಿಸಲ್ಪಟ್ಟವು. ಮಹಾತ್ಮರು ಅವುಗಳನ್ನು ನೋಡಿ ಬಹಳಾ ಸಂತೋಷಪಟ್ಟರು.

ಬಡವರ ಜೀವನೋಪಾಯಕ್ಕೋಸ್ಕರ ಕೈರಾಟೆಯ ಕೈಗಾರಿಕೆಯನ್ನು ಖಾದೀಪ್ರಚಾರವನ್ನು ಅಭಿವೃದ್ಧಿಗೆ ತರುತ್ತಲಿರುವ ತಮಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಪರಮೇಶ್ವರನನ್ನು ನಾವು ಪ್ರಾರ್ಥಿಸುತ್ತೇವೆ.

ತಮ್ಮ ಅತ್ಯಂತವಿಧೇಯರಾದ
ಮೈಸೂರು ಕಾಟೇಜ್ ಮತ್ತು
ಹೋಮ್ ಇಂಡಸ್ಟ್ರೀಸ್ ಇನ್‌ಸ್ಟಿಟ್ಯೂಟಿನ
ವಿದ್ಯಾರ್ಥಿನಿಯರು

ಅಖಿಲ ಕರ್ನಾಟಕ

ಪ್ರಥಮ ಹಿಂದೀಪ್ರಚಾರ ಸಮ್ಮೇಲನ

ಮಹಾತ್ಮ, ಮಾಲವೀಯರ ಮುಂದಾಳ್ತನದಲ್ಲಿ ಸಂಪೂರ್ಣಸಫಲತೆ. ಮೈಸೂರು ಸರಕಾರದ ಸಮಯೋಚಿತ ಸಹಾಯ. ದ್ವಿತೀಯ ಸಮ್ಮೇಲನಕ್ಕೆ ಹುಬ್ಬಳ್ಳಿಯಿಂದ ಆಮಂತ್ರಣ.

ಸ್ವಾಗತಸಮಾರಂಭದಲ್ಲಿ ಪ್ರಮುಖ ಪ್ರತಿನಿಧಿಗಳು.

ಅಖಿಲಕರ್ನಾಟಕ ಹಿಂದೀಪ್ರಚಾರ ಸಮ್ಮೇಲನದ ಪ್ರಥಮಾಧಿವೇಶನವು ಬೆಂಗಳೂರು ಮಜೆಸ್ಟಿಕ್ ಥಿಯೇಟರಿನ ವಿಶಾಲಭವನದಲ್ಲಿ ಇದೇ ತಿಂಗಳ ೯ ಮತ್ತು ೧೦ ನೇ ತಾರೀಖುಗಳಲ್ಲಿ ಅತ್ಯಂತ ಅಪೂರ್ವಉತ್ಸಾಹದಿಂದ ನಡೆಯಿತು. ಮೈಸೂರುಸಂಸ್ಥಾನದ ಅನೇಕ ಮುಖ್ಯ ಅಧಿಕಾರಿಗಳೂ, ವಿರಾಮವೇತನಿಗಳೂ, ಮುಖಂಡರೂ ಸಭಾಸನವನ್ನು ಅಲಂಕರಿಸಿದ್ದರು. ಧಾರವಾಡ, ಹುಬ್ಬಳ್ಳಿ, ಬೆಳಗಾಂ, ಉತ್ತರಕನ್ನಡ, ಕಾರವಾರ, ಮಂಗಳೂರು, ಕೊಡಗು ಪ್ರದೇಶಗಳಿಂದ ಪ್ರತಿನಿಧಿಗಳು ಒಪ್ಪೊತ್ತಿಗೆ ಮುಂದಾಗಿ ದಯಮಾಡಿಸಿದ್ದರು. ಪರಪ್ರಾಂತಗಳಿಂದ ಬಂದ ರಾಷ್ಟ್ರೀಯಮುಖಂಡರಲ್ಲಿ ಪಂಡಿತ ಮಾಲವೀಯಾಜೀ, ಜಮ್ನಾಲಾಲ್ ಬಜಾಜ್, ಬಾಬೂ ರಾಜೇಂದ್ರಪ್ರಸಾದ್, ಶಂಕರಲಾಲ್ ಬ್ಯಾಂಕರ್, ಕೊಂಡಾ ವೆಂಕಟಪ್ಪಯ್ಯ, ಪಂಡಿತ ಹರಿಹರಶರ್ಮ (ದಕ್ಷಿಣ ಭಾರತ ಹಿಂದೀಪ್ರಚಾರ ಮುಖ್ಯಮಂತ್ರಿಗಳು) ಸಿ. ರಾಜಗೋಪಾಲಾಚಾರ್ ಮುಂತಾದವರ ಮತ್ತು ಮಹಾತ್ಮಪತ್ನೀ ಕಸ್ತೂರಿಬಾಯಿ ಗಾಂಧಿ ಅನಸೂಯಾಬಾಯಿ ಮೊದಲಾದವರ ಹೆಸರುಗಳು ಮುಖ್ಯವು. ಸಮ್ಮೇಲನವು ಪ್ರಾರಂಭಿಸುವ ಮೊದಲೇ ಸಭಾಸದನವು ಶಿಕ್ಷಿತ ಸ್ತ್ರೀಪುರುಷರಾದಿಯಾಗಿ ಆಗತ ಸ್ವಾಗತ ಜನಸಂದಣಿಯಿಂದ ಕಿಕ್ಕಿರಿದು ಟಿಕೆಟ್ ಕೊಡುವುದೇ ನಿಲ್ಲಿಸಲ್ಪಟ್ಟಿತು.

ಮೂವತ್ತು ರಾಜ್ಯಗಳ [illegible]

ತಾ|| ೯ನೇ ದಿನ ಮಧ್ಯಾಹ್ನ [illegible] ನಲ್ವತ್ತೊಂದು ಪಂಡಿತ [illegible] ನ್ನ ಸಭಾಪತಿಗಳನ್ನಾಗಿ [illegible] ಕ್ರಮದಲ್ಲಿ [illegible] ಅಧ್ಯಕ್ಷಸ್ಥಾನ [illegible] ನಾಂಗಗೊಳಿಸುವ ಒಂದು ಅಪ್ಪಣೆಕೊಡಿಸಿದರು. [illegible] ಧ್ಯಾಕ್ಷ [illegible] ಮಂಗಳವಾದ [illegible] ಸ್ವಾಗತವಾದ [illegible] ಭೂಷಣ ಕರ್ಪೂರ ಶ್ರೀನಿವಾಸರಾಯರು ತಮ್ಮ ಮುದ್ರಿತ ಹಿಂದೀಭಾಷಣವನ್ನು [illegible] ಓದಿದರು. ತದನಂತರ ಪಂಡಿತ [illegible] ರವರು "[illegible] ಪರವಾದ ಗಂಭೀರ ಹಿಂದೀಭಾಷಣವನ್ನು ಆರಂಭಿಸಿದರು. ಇದಾದಮೇಲೆ ಮುಖ್ಯ ಪ್ರಸ್ತಾವಗಳು ಮಂಡಿತವಾಗಲ್ಪಟ್ಟವು. ಪಂಡಿತ [illegible] ದೇಶಪಾಂಡೆಯವರ ಕಾಲೋಚಿತ ಭಾಷಣಗಳಾದುವು. '[illegible]' ಪರವಾದ ಶ್ರೀ [illegible] ಪ್ರಸ್ತಾವವನ್ನು [illegible] ನಾ ಎಂ. ಎಲ್. ಸಿ., ಯವರು 'ಮೈಸೂರು ವಿಶ್ವವಿದ್ಯಾಲಯದಲ್ಲಿ ಹಿಂದೀ' ಎಂಬ ಶ್ರೀ| [illegible] ಶ್ರೀನಿವಾಸರಾವ್ [illegible] ರವರ [illegible] ನನ್ನು ಶ್ರೀ|| ರಾಮಚಂದ್ರರಾವ್ [illegible] ಮತ್ತು ಇತರ ಮಹನೀಯರೂ ಸಹಾಯ [illegible] ದರ್ಶಿಸಿದರು. [illegible] ಮಹಾತ್ಮಾ ಗಾಂಧಿಯವರೇ ಅಧ್ಯಕ್ಷರಾಗಿ [illegible] ತಮ್ಮ ಸಮಯೋಚಿತ ಸುಲಲಿತ, [illegible] ನಾದೊಡನೆ ಸಮ್ಮೇಳನವನ್ನು ಸಫಲಗೊಳಿಸಿದರು.

ಧರ್ಮಾಚಾರ್ಯರ ದಿವ್ಯ ಸಂದೇಶ

ಸಮ್ಮೇಳನದ ಸಫಲತೆಯನ್ನು ಬಯಸಿ [illegible] ದೇಶಭಕ್ತರಿಂದ ಮಾತ್ರವಲ್ಲದೆ ಮೈಸೂರು ಮಹಾರಾಜರ ಗುರುಗಳಾದ ಶ್ರೀ ಪರಕಾಲ ಸ್ವಾಮಿಗಳ [illegible] ಶ್ರೀ ಶಂಕರಾಚಾರ್ಯರು, ಶೃಂಗೇರಿ [illegible] ಸ್ವಾಮಿ ಶಿವಾಚಾರ್ಯ (ಶ್ರೀ ಜಗದ್ಗುರು) ಮಹಾಸ್ವಾಮಿಗಳು [illegible] ಪಾದಂಗಳವರು ಮತ್ತು [illegible] ಗುರುವರ್ಯರೇ ಮೊದಲಾದ ಅನೇಕ ಧರ್ಮಾಚಾರ್ಯರಿಂದಲೂ ಶುಭ ಸಂದೇಶಗಳನ್ನು ಬರೆದಿತ್ತು. ಧರ್ಮಾಚಾರ್ಯರಲ್ಲಿ ಒಬ್ಬಿಬ್ಬರನ್ನು ಬಿಟ್ಟು ಉಳಿದವರು ಹಿಂದೀಭಾಷೆಯಲ್ಲೇ 'ಆಶೀರ್ವಾದರೂಪ'ಗಳನ್ನು ದಯಪಾಲಿಸಿದ್ದರು. ಶ್ರೀ [illegible] ಮಹಾಸ್ವಾಮಿಗಳು ಹಿಂದೀಪ್ರಚಾರ ಆಂದೋಲನದಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಪ್ರಕಟಿಸಿರುವರು. ಮಹಾರಾಜಗುರುಗಳಾದ ಬ್ರಹ್ಮತಂತ್ರ ಶ್ರೀ ಪರಕಾಲಸ್ವಾಮಿಯವರು ಹಿಂದೀಪತ್ರದೊಡನೆ ಒಂದು ಸ್ವರಚಿತ ಸಂಸ್ಕೃತ ಶ್ಲೋಕವನ್ನೂ ದಯಪಾಲಿಸಿರುವರು.

ಸಮ್ಮೇಳನಾಂತರ್ಗತ ಸಮ್ಮೇಳನಗಳು

ಹಿಂದೀ ಸಮ್ಮೇಳನದ ಅಭ್ಯುದಯದಲ್ಲಿ ತಾ| ೧೦ನೇ [illegible] ಕಾಲ ಹಿಂದೀ ಸಂಗೀತಸಮೇತ [illegible] ಮಹಾಸಮ್ಮೇಳನವು [illegible] ನೆರವೇರಿದುವು. ಸಂಗೀತಸಭೆಯ ಪ್ರಧಾನರಾದ ಕವಿ [illegible] ರೇಂದ್ರನಾಥ ಚಟ್ಟೋಪಾಧ್ಯಾಯರವರು ಕಬೀರ, ಮೀರಾ, ಸೂರ, ತುಳಸೀ, [illegible] ಹಿಂದೀ ಸಂತರ ಭಕ್ತಿರಸಪೂರಿತ ಗೀತೆಗಳನ್ನೂ ಸ್ವರಚಿತ [illegible] ಕವಿತೆಗಳನ್ನೂ ಹಾಡಿ [illegible] ಹಿಂದೀಸಂಗೀತದ ಪರಿಚಯವನ್ನುಂಟುಮಾಡಿದರು. ಸ್ವಾಗತಸಮಿತಿಯ ಪರವಾಗಿ ಅವರಿಗೆ ಪ್ರೇಮಪುರಸ್ಸರ ಒಂದು ಸುವರ್ಣಪದಕವು ಕೊಡಲ್ಪಟ್ಟಿತು. ಮಹಿಳಾಸಮ್ಮೇಳನವು ಮಾತೃಶ್ರೀ ಕಸ್ತೂರಿಬಾಯಿ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾನೇತೃಗಳು 'ಸ್ತ್ರೀಯರೂ ಹಿಂದೀಪ್ರಚಾರವೂ' ಎಂಬ ವಿಷಯವಾಗಿ ಆವೇಶಪೂರಿತವಾದ ಉಪನ್ಯಾಸವನ್ನು ಕೊಟ್ಟರು. [illegible] ಸಂಸ್ಥಾನದ ಬಾಲಿಕಾಪಾಠಶಾಲೆಗಳ ಪ್ರಧಾನ ಪರೀಕ್ಷಕಿಯರಾದ ಶ್ರೀ|| [illegible] ಯವರು ಅದನ್ನು ಸಮರ್ಥಿಸಿ ಪ್ರತಿಯೊಬ್ಬ ಮಹಿಳೆಯೂ ಹಿಂದೀಭಾಷಾಭ್ಯಾಸವನ್ನು ಮಾಡುವುದು ಅತ್ಯಗತ್ಯವೆಂದು ಸ್ವಾನುಭವ ಸೂಚನೆಗಳನ್ನಿತ್ತು ಮಾತನಾಡಿದರು.

[illegible] ಸಮ್ಮೇಳನಕ್ಕೆ ಆಮಂತ್ರಣ

ಸಮ್ಮೇಳನಾಂತ್ಯದಲ್ಲಿ ಬಂಗಾಳದ [illegible] ನಂದಿ [illegible] ದ್ವಿತೀಯ [illegible] ಆಮಂತ್ರಿಸಿದರು. [illegible] ಹಿಂದೀ [illegible] ಮಹಾತ್ಮರ [illegible]

[illegible] ಸರ್ಕಾರದ [illegible] ಸಹಾಯ

[illegible] ಮೈಸೂರು ಸಂಸ್ಥಾನದವರು [illegible] ಸರ್ಕಾರದ ಸಂಪೂರ್ಣ [illegible] ಹಿಂದೀಪ್ರಚಾರಕ್ಕೆ [illegible] ಸ್ವೀಕರಿಸಲ್ಪಡುವುದು [illegible]

'[illegible] ಕರ್ನಾಟಕರತ್ನ ಸಿಂಹಾಸನಾಧೀಶ್ವರರಾದ ಮೈಸೂರು ಮಹಾರಾಜರು ಶ್ರೀಕೃಷ್ಣರಾಜ ಒಡೆಯರ್ [illegible] ದೀರ್ಘಾಯುರಾರೋಗ್ಯ [illegible] ಕರುಣಿಸಲಿ!

[illegible]
ಪ್ರ. ಮಂತ್ರಿ

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣೆಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಹಾರೈಸುತ್ತೇವೆ.

ಸಂಪಾದಕರು.

ASIATIC GOVERNMENT SECU
LIFE ASSURANCE CO., LTD MYS
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂ
ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮ ಸಂಘಗ
ಮೊದಲಾದುದು

ಆದ್ದರಿಂದ ಯಾವಾಗಲೂ "ಏಶ್ಯಾಟಿಕ್" [illegible] ನಿಯಲ್ಲಿಯೇ ವಿಮೆಮಾಡಿರಿ.

ಏಕಂದರ ಇದರ ದರಗಳು ಬಹಳ ಕಡಿಮೆಯಾ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾ [illegible] ಕರವಾದುವು

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಬಾಂಡಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಪ್ರತಿನ ಮೇಲೆಯೂ ಸಾಲವನ್ನು ಕೊಡುತ್ತದೆ

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ [illegible] ಹಿಂಗ 31 ನೆಯ ಜುಲೈ 1927 ಕ್ಕೆ ನಡೆಯುತ್ತ

ವಿಶೇಷ ವಿಷಯಗಳಿಗ ಈ ಕೆಳಗೆ ನಮೂದಿಸಿದ [illegible] ಬರೆಯಬೇಕು.

(1) ಮೆ| ಬಿ ರಾಜ್ಞಪ್ಪ, ಜೀಫ್ ಏಜಂಟ್, ಮೈಸೂರು.
(2) ಮೆ|| [illegible] ಆರಾಧ್ಯ, ಜೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ [illegible]
(3) ಹೈದರಾಬಾದ್ ಏಶಿಯಾಟಿಕ್ ಹೌಸ್, ಜೀಫ್ ಏಜಂಟ್, ಹೈದರಾಬಾದ್ (ದ [illegible] ಮಯ್ಯಾಜಿರಾವ್ ರೋಡ್, ಮುಖ್ಯ ಏಜಂಟ್,
[8] ಮೈಸೂರು Asiatic Buildin

ಡಾಕ್ಟರ್ ಜೇ [illegible] ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ [illegible] ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿ [illegible] ಇದನ್ನು ಉಪಯೋಗಿಸಿ, ನಾವಿರಾರುಗಳಾ [illegible] ಯೋಗ್ಯತಾಪತ್ರ [illegible] ನ್ನು ಕೊಟ್ಟಿ [illegible] ರು ಪ್ರಸಿದ್ಧವಾ [illegible] ಈ ನಶ್ಯದ ಪ್ರ [illegible] ಯಿಂದ ಸ್ವಸ್ಥವಾ [illegible] ವ ವ್ಯಾಧಿಗಳು ಯ [illegible] ವವಂದರೆ — [illegible] ಒಂಟಿತಲೆನೋವು [illegible] ತಲೆಯಲ್ಲಿನ ರೋಗ [illegible]

(Registered Trade Mark)

[illegible] ಕಣ್ಣುಗಳಿಗೆ [illegible] ಸರ್ವವ್ಯಾಧಿಗ [illegible] [illegible] ಪರಿಹಾರವಾಗ [illegible] ವ್ಯಾಧಿಗಳನ್ನು [illegible] ನಶ್ಯದ [illegible] ಒಂದು ಚಿಟಿಕೆಯ [illegible] ಪರಿಹಾರವಾಗುವುದು. [illegible] ತಮ್ಮ ಗೃಹದಲ್ಲಿ ಕುಟುಂ [illegible] ಸ್ವೀಕಾರ ಮಾಡಬೇಕು [illegible]

[illegible] = ಮ. ರೂ. ೦ ೪ ೦ ವಿ. ಪಿ. ೦-೪-೦
[illegible] = ಮ. ರೂ. ೩-೮-೦ ವಿ. ಪಿ. [illegible]

[illegible] ಹೆಸರನ್ನೂ, ಅಡ್ರೆಸ್ಸನ್ನೂ [illegible] ಬರೆಯಿರಿ — ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[4] [illegible] ಮದರಾಸು.

[illegible] ವಾಣೀವಿಲಾಸ ರೋಡಿನಲ್ಲಿರುವ [illegible] ಪ್ರೆಸ್ಸಿನಲ್ಲಿ [illegible] ಗುರುರಾ [illegible] ರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಕ್ಷಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರಶಿವಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಆಗಸ್ಟ್ ೧೯೨೭ ಇಸವಿ [ಸಂಚಿಕೆ ೧೩.

ೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಶೈವರಲ್ಲಿ ವಿನಂತಿ.

ೀರಶೈವರೇ, ಶ್ರೀ ಜಗದ್ಗುರು ರೇಣುಕಾದಿಪಂಚಾ ರ್ಯರು ಭೂತಲದಲ್ಲಿ ಪ್ರತಿಯೊಂದು ಯುಗಗಳೊ ಸೋಮನಾಥಾದಿ ಲಿಂಗಗಳಲ್ಲುದ್ಭವಿಸಿ ಭ್ರಷ್ಟ ಪದ ತ್ಯವಾದ ಲಿಂಗವನ್ನನುಗ್ರಹಿಸಿ ಧರ್ಮಾದಿವಿಷಯ ಧಗಳನ್ನು ವಿರಚಿಸಿ ತಮ್ಮ ತಮ್ಮ ಪೀಠಗಳನ್ನು ಪುರಂ (ಬಾಳೆಹಳ್ಳಿ), ಉಜ್ಜಯಿನಿ ಶ್ರೀಶೈಲ, , ಕೇದಾರ (ಹಿಮಾಲಯ) ಗಳಲ್ಲಿ ಸ್ಥಾಪಿಸಿರುವ ಈ ಪೀಠಗಳು ಈಗ್ಯೂ ವಿರಾಜಿಸುವವಲ್ಲವೇ?

ಲಿಂಗವನ್ನು ಧಾರಣಮಾಡಿದ ವೀರಶೈವರೆಲ್ಲರೂ ಈ ರಾಧಿಪತಿಗಳಿಗೆ ಶಿಷ್ಯರಾಗಿ ಧನ್ಯರಾಗಬೇಕೆಂಬುದು ಪಕದಲ್ಲಿ ತಂದುಕೊಳ್ಳದೆ ಇದ್ದುದರಿಂದ ಸದಾಚಾರ ವರ್ತನ, ಕೃತಜ್ಞತೆ, ಸ್ವದೇಶಾಭಿಮಾನ, ಸ್ವಧರ್ಮಾ ಮಾನ ಆನಂತಹವುಗಳು ಲೋಪವಾಗಿ ಧರ್ಮದಲ್ಲಿ ಶೈಥಿಲ್ಯವು ಪ್ರಬಲಿಸಹತ್ತಿತು ಮತ್ತು ಪೀಠಗಳಿಗೆ ಸಂಸ್ಕೃತ ವಿದ್ಯಾವಿಹೀನರನ್ನು ಅಧಿಕಾರಿಗಳನ್ನಾಗಿ ಮಾಡುತ್ತ ಬಂದುದರಿಂದಲೂ ಪ್ರತಿಯೊಬ್ಬ ವೀರಶೈವ ಸಂಸ್ಕೃತವಿದ್ಯೆಯನ್ನು ಬಿಟ್ಟು ಹೊಟ್ಟೆಗಾಗಿ ಓದುವ ಭಾಷೆಯ ವಿದ್ಯೆಯನ್ನು ಕಲಿತದ್ದರಿಂದಲೂ ಅನೈಕ್ಯವು ಕ್ಕೆ ಮತ್ತಷ್ಟು ಕಾರಣವಾಯಿತು. ಈಗ ಜಗದ್ಗುರುಸ್ವಾ ಮಿಗಳು ಸಂಸ್ಕೃತವಿದ್ಯಾವಿಶಾರದರಾಗಿ ತಪೋನುಷ್ಠಾನ ಬಲಾತ್ಕಾರದಿಂದ ಐಕ್ಯಬೀಜಾಂಕುರವನ್ನು ಬೆಳೆಸುತ್ತಿ ದ್ದಾರೆ. ಇದೊಂದು ನಮ್ಮ ಭಾಗ್ಯೋದಯವೇ ಸರಿ.

ನಮ್ಮ ಲಿಂಗಾಂಗಿಧರ್ಮಕ್ಕೆ ಒಂದುಕಡೆ ಪಾಶ್ಚಾ ರ ಹಾವಳಿ, ಇನ್ನೊಂದುಕಡೆ ಮತಾನ್ಯದೀಯರ ಹಾವಳಿ, ಮತ್ತೊಂದುಕಡೆ ಬ್ರಾಹ್ಮಣೇತರರ ಸಂಘಟನೆ ಇಲ್ಲದೆ ನಮ್ಮ ವಿರಕ್ತ (ಸನ್ಯಾಸಿ) ವರ್ಗದವರ ಒಳಜ ಳ ಇವೆಲ್ಲ ಕಾರಣಗಳಿಂದ ಕ್ರಮೇಣ ಧರ್ಮವು ವನತಸ್ಥಿತಿಯೈದುವದರಲ್ಲಿ ಸಂದೇಹವಿಲ್ಲ. ಆದಪ್ರ ಕ, ಧರ್ಮೋದ್ಧಾರದಕಡೆಗೆ ಲಕ್ಷ್ಯಗೊಟ್ಟು ಪುಣ್ಯ ಗಳಾಗಬೇಕೆಂದು ಕೋರುತ್ತೇನೆ.

ಮೈಸೂರುರಾಜ್ಯದಲ್ಲಿರುವ ಪ್ರಜೆಗಳಿಗೆ ಮಹಾರಾ ಕೃಷ್ಣರಾಜಒಡೆಯರವರು ಅನೇಕ ಸವಲತ್ತುಗಳನ್ನು ಟ್ಟು ರಾಮ ಹರಿಶ್ಚಂದ್ರ, ನಳ, ಸತ್ಯೇಂದ್ರಚೋಳ ಮೊದಲಾದ ರಾಜರಂತೆ ಪ್ರಜೆಗಳನ್ನು ಪರಿಪಾಲನೆ ಮಾಡಿ ಪ್ರತಿ ಸ್ವರ್ಗಾಧಿಕಾರಿಗಳಾಗಿರುವರೆಂದು ಬರೆ ಯಲು ಅತಿಶಯೋಕ್ತಿಯೆನಿಸಲಿಕ್ಕಿಲ್ಲ. ತದ್ವತ್ ಈಗಿನ ಗುಸಾರ್ವಭೌಮರು ಧರ್ಮರಾಜ್ಯಾರೋಹಣರಾಗಿ ರಶೈವ ಭಕ್ತರುಗಳಿಗೆ ಧರ್ಮಶಾಸನಗಳನ್ನೀವ ಇಹದಲ್ಲಿ ಸುಖವನ್ನೂ ಪರದಲ್ಲಿ ಮೋಕ್ಷವನ್ನೂ ಪಾಲಿಸಿ ಧರ್ಮರಾಜ್ಯಾಧಿಪತ್ಯವನ್ನೇ ಆದರ್ಶ ಪ್ರಿಯವಾಗುವಂತೆ ಮಾಡುತ್ತಿದ್ದಾರೆ. ಈ ಗುರು ಗಳವರನ್ನು ಎಷ್ಟು ಕೊಂಡಾಡಿದರೂ ತೀರದು.

ಪ್ರಚಲಿತ ಕೆಲವು ಧರ್ಮಲಂಡರು ಸ್ವಾರ್ಥತೆಗೋಸ್ಕರ ಶ್ರೀ ಜಗದ್ಗುರು ಸಿಂಹಾಸನಾಧಿಪತಿಗಳಿಗೂ ಶ್ರೀ ಪಟ್ಟಚರಾಧಿಕಾರಿಗಳಿಗೂ ಇಲ್ಲದಸಲ್ಲದ ಮಾತುಗಳನ್ನು ಬಳಸುವದಲ್ಲದೆ ಪೂಜ್ಯರಾದರ ವಿಷಯಕ್ಕೆ ಟೀಕೆಗಳನ್ನು ಮಾಡಿ ವರ್ತಮಾನಪತ್ರಗಳಲ್ಲಿ ಪ್ರಕಟಿಸಲು ಕೂಡ ಹಿಂಜರಿಯುವದಿಲ್ಲ ಸಮಾಜಘಾತಕತನಕ್ಕೆ ಹೇಳಿ ವಿವರಿಸಿದ ಅನೇಕಕಾರಣಗಳಿಗಿಂತಲೂ ಇದು ಮೇಲಾದದ್ದೆಂದು ತೋರಿದೆ. ಈ ಕುಲಕಂಟಕರ ಮುಖ್ಯೋದ್ದೇಶವೇನಂದರೆ ವೀರಶೈವಧರ್ಮವನ್ನು ನಾಶಮಾಡುವ ಅಥವಾ ಗುರುವರ್ಗವನ್ನು ಮೂಲೆಗೊತ್ತುವ ಕಾರ್ಯದಲ್ಲಿ ತೊಡಗಿ "ಯೇನಕೇನಪ್ರಕಾರೇಣ ಪ್ರಸಿದ್ಧಪುರುಷೋಭವೇತ್ ' ಎಂಬ ವಾಕ್ಯದಂತೆ ವರ್ತಿಸಹತ್ತಿದ್ದಾರೆ. ಇಂಥ ಈ ಧರ್ಮಾಂಧರ ದೃಷ್ಟಿಗೆ

ಹರಿಯುಗೊಡದಿರು ಮನಸುವಿಷಯಕೆ |
ಹರಿಯಗೊಡದಿರು ನೇತ್ರದೃಷ್ಟಿಗೆ |
ಹರಿಯುಗೊಡದಿರು ಮೂಗುಗಂಧಕೆ ಜಿಹ್ವೆಷಡ್ರಸಕೆ ||
ಹರಿಯಗೊಡದಿರು ಶ್ರವಣಶಬ್ದಕೆ |
ಹರಿಯಗೊಡದಿರು ಚರ್ಮಸ್ಪರ್ಶಕೆ | [ಹುಡು ||
ಗುರುವಿನಂಘ್ರಿಯಕೂಡಿಹೋಗಲು ಮೋಕ್ಷವುಂಟ

ಎಂಬನೇಕ ಸದ್ವಚನಾಮೃತವು ಸದ್ಬೋಧೆಯೂ ಮೆರೆತಂತೆ ತೋರುವದಿಲ್ಲ. ಹಾ! ಕಲಿರಾಜನೇ ನಿನ್ನಾಳಿಕೆಯಕಾಲದಲ್ಲಿ ಪಾಪ, ಚೋರ, ಧರ್ಮಘಾತಕಿಗಳಿಗೆ ಮಾನಮರ್ಯಾದೆಗಳನ್ನು ಅಗ್ರಾಸನಗಳನ್ನು ದಯಪಾಲಿಸುವ ಕಲಿರಾಜನೇ ಬಹಳ ಹೇಳುವದೇನು? ನೀನೇ ಧನ್ಯನು! ಪುಣ್ಯನು? ಮಾನ್ಯನು!

ವೀರಶೈವರೇ ಇಂಥವರ ಮಾತುಗಳಿಗೆ ಕಿವಿಗೊಡದೆ ಇವರ ಲೇಖಗಳಿಗೆ ಅಗ್ರಸ್ಥಾನಕೊಡಕೂಡದೆಂದೂ ಇವರ ಬರವಣಿಗೆಯ ಖಂಡನಮಾಡುವ ಕಾರ್ಯದಲ್ಲಿ ತೊಡಗಕೂಡದೆಂದೂ ಪತ್ರಿಕಾಕರ್ತರಿಗೆ ವಿಜ್ಞಾಪಿಸುತ್ತೇನೆ ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಮುಕ್ತಿಭಾಜನರಾಗಬೇಕೆಂದು ಆಶಿಸುತ್ತೇನೆ.

S S HIREMATH,
A S. School Master.

ಕೀರ್ತನಕಾರರಿಗೆ ಮಾನಪತ್ರಸಮರ್ಪಣ

ಧಾರವಾಡದಿಂದ ಕೇವಲ ಸಾಮಾಜಿಕ ಸೇವೆಗೋಸ್ಕರವಾಗಿಯೇ ಮೈಸೂರಿಗೆ ದಯಮಾಡಿಸಿರುವ ಶ್ರೀಯುತ ಪಂಡಿತ ಶಾರದಾಮೋಹನರವರು. ಗಮಕಸಮಾಜದ ಪರವಾಗಿ ತಮ್ಮಿಂದಲೇ ರಚಿತವಾದ "ದಧೀಚಿ ಅಥವಾ ಮಾತೃಭೂಮಿಯಪ್ರೇಮ" ಎಂಬ ಪುಣ್ಯಚರಿತ್ರೆಯನ್ನು ತಾ|| 24 5-27 ದಿವಸ ರಾ|| ರಾ|| ಬಸಮಯ್ಯನವರ ಛತ್ರದಲ್ಲಿ ಕೀರ್ತನರೂಪವಾಗಿ ಮಾಡಿ ತೋರಿಸಿ ನೆರೆದ ಜನರಮನಸ್ಸಿನಲ್ಲಿ ಮಾತೃಭೂಮಿಯ ಪ್ರೇಮದ ಜಾಗರೂಕತೆಯನ್ನು ಚನ್ನಾಗಿ ಬಿಂಬಿಸಿದರು. ಪಾಶ್ಚಾತ್ಯಪದ್ಧತಿಯ ಅನುಕರಣದಿಂದ ನಮ್ಮ ಧರ್ಮಕ್ಕೆ ಬರುತ್ತಿರುವ ಹಾನಿಯನ್ನು ಹೋಗಲಾಡಿಸುವದಕ್ಕೆ ಇಂಥ ಕಥೆಗಳು ಈಗಿನಪರಿಸ್ಥಿತಿಯಲ್ಲಿ ಅವಶ್ಯವಾಗಿ ಬೇಕಾಗಿವೆ. ಇವರಿಗೆ ಜನರೆಲ್ಲರೂ ಹೆಚ್ಚಾಗಿ ಪ್ರಾಶಸ್ತ್ಯವನ್ನು ಕೊಟ್ಟು ಇವರಿಂದ ರಚಿತವಾದ ಅನೇಕ ಕಥೆಗಳನ್ನು ಕೇಳಿ ತಮ್ಮ ಧರ್ಮವನ್ನು ಕಾಪಾಡಿಕೊಳ್ಳಬೇಕೆಂದು ಸವಿನಯಪ್ರಾರ್ಥನೆಯಿದೆ. ಇವರಿಗೆ ಗಮಕಸಮಾಜದವರು ಒಂದು ಸುವರ್ಣಪದಕವನ್ನೂ ಮತ್ತು ಮಾನಪತ್ರವನ್ನೂ ಸಮರ್ಪಿಸಿದರು.

ಮಾನಪತ್ರದ ವಿಷಯ

ಮೈಸೂರು ಗಮಕಸಮಾಜದವರಿಂದ ಸಮರ್ಪಿಸಲ್ಪಟ್ಟ ಶ್ರೀಮತ್ಪಂಡಿತ ಶಾರದಾ ಮೋಹನಾಭಿನಂದನ

DR. S S. HEBSUR

ಪಂಚರತ್ನಂಗಳು

ವೃ|| ಧರ್ಮಾ ಧರ್ಮ ವಿಚಾರಹೀನ ಜನತಾ | ಪೂರ್ಣೇ ಜಗತ್ಯಾದರಾತ್ | ಪ್ರಾಚೀನಂ ಮುನಿಬೋಧಿತಂ ಪ್ರಕಟಯನ್ ಧರ್ಮಂ ಕಥಾವ್ಯಾಜತಃ || ಸಂತುಷ್ಟೈರ್ಗಮಕೀ ಸಮಾಜ ಸಭಿಕೈ ಸ್ಸಮ್ಮಾನಿತಸ್ಸಾದರಂ | ಖ್ಯಾತಿಂ ವಿಂದತು ಪಂಡಿತಃ ಕವಿವರ ಶ್ರೀ ಶಾರದಾ ಮೋಹನಃ ||

ಭಾ|| ಶಾರದೆಯು ಮೋಹಿಸುವ ಜೊನ್ನದ |
ಸಾರಮಹ ಸವಿನುಡಿಗೆ ಕಾಂತೌ |
ರೂರದಾಗಲು ಶಾರದಾ ಮೋಹನನುತಾನೆನಿಸಿ ||
ದಾರವಾಡದಿನೈದಿ ಈ ಮಹಿ |
ಶೂರ ಪುರಿಗನ್ವರ್ಥ ನಾಮಕ |
ಪಾರಲೌಕಿಕ ನೀತಿಯಿಂ ಜನರಜ್ಞತೆಯ ಸಳಿಸಿ ||

ಮನವನಿಷ್ಠ ಲಗೊಳಿಸಿ ಭಕ್ತಿಯ |
ಘನತೆಯುಂ ಬೇರಿಳಿಸಿ ಕೀರ್ತಿ ಪ |
ರನುನಯದಿ ಸತ್ಕರಿಸೆ ಗಮಕ ಸಮಾಜ ಸಮಿತಿಯಿದು ||
ಮನದಹರ್ಷದಿ ಪಾರಿತೋಷಿಕ |
ವನು ಸಮರ್ಪಿಪುದಿಂದು ಶ್ರೀ ಮೋ |
ನಿನಿ ನಿಕೇತನ ರಾಘವಾಚಾರಿಯರ ಕರದಿಂದ ||

ಕಂ|| ಸಂತತಸಂಕೀರ್ತ್ಯಾದಿಯ |
ಸುಖಸುಖುವ ನೀಗೆ ಶಾರದಾಮೋಹನಗಾ ||
ಕಂತುಹರಂ ಮೇಣ್ ಲಕ್ಷ್ಮೀ |
ಕಾಂತಂ ಸುರನಾಥವಂದ್ಯ ವಾಣೀನಾಥಂ ||

ಸಂತತ ಮಿಂತಹ ವಿದ್ಯಾ |
ವಂತರ ಸತ್ಕರಿಪ ಶೀಲಮಂ ಸಿರಿಬಲಮಂ ||
ಅಂತೀ ಗಮಕ ಸಮಾಜ ಮ |
ನಂತಂ ಬಾಳ್ವವೊಲನುಗ್ರಹಿಕ್ಕಾರಾಮುಂ ||

ಪ್ರೆಸಿಡೆಂಟ್,
ಪಿ. ಎಂ. ತಮ್ಮಯ್ಯ.

ಸೂಚನೆಯು

ನಾವು ಪ್ರತಿವಾರವು ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸಿನ ಮಾಸ್ತರರಿಗೆ ತಿಳುಹಿಸಬೇಕು. ಮತ್ತೆ ಕೆಲವರು ತಾವು ವಿ.ಪಿ. ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವದಿಲ್ಲವೆಂದು ಬರೆಯುತ್ತಾರೆ ವಿ.ಪಿ. ತೆಗೆದುಕೊಂಡವರ ಹಣವು ನಮ್ಮ ಕೈಸೇರಬೇಕಾದರೆ 20-25 ದಿವಸಗಳು ತಡವಾಗುತ್ತದೆ, ಹಣವು ಕೈಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವುದಾಗುತ್ತದೆ. ಮನಸ್ಸಿನಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ.

ಪಂಚಾಚಾರ್ಯಪ್ರಭಾ

೧೯೨೭ ನೇ ಆಗಸ್ಟ್ ತಾ|| ೮ನೇ ಸೋಮವಾರ

ಲಿಂಗಧಾರಣ.

ಶಿವಲಿಂಗಧಾರಣವೇ ವೀರಶೈವಚಿಹ್ನವೆನಿಸಿದ ವೀರಶೈವನು ಗುರುವಿನಿಂದ ಕೊಡಲ್ಪಟ್ಟ ಮುಕ್ತಿಸಾಧಕವಾದ ಶಿವಲಿಂಗವನ್ನು ಶುಚಿ ಅಶುಚಿಕಾಲಗಳಲ್ಲೂ ಧರಿಸುತ್ತ ಶರೀರವಿರುವವರೆವಿಗೂ ಗುರುವಿನ ಆಜ್ಞೆಯಂತೆ ಒಂದು ನಿಮಿಷಾರ್ಧವೂ ಅಗಲದೆ ತ್ರಿಕಾಲದಲ್ಲಿ ಆಗಲಿ, ದ್ವಿಕಾಲದಲ್ಲಿ ಆಗಲಿ, ಏಕಕಾಲದಲ್ಲಿ ಆಗಲಿ, ಶಕ್ತಿವಂಚನೆಯಿಲ್ಲದೆ ಗಂಧಪುಷ್ಪಾದಿಗಳಿಂದ ವಿಧ್ಯುಕ್ತವಾಗಿ ಅರ್ಚಿಸುತ್ತ ಇತರದೇವತೆಯ ತೀರ್ಥಪ್ರಸಾದಗಳು ಸ್ವೀಕರಿಸದೆ ಇಷ್ಟಲಿಂಗದ ತೀರ್ಥಪ್ರಸಾದಗಳನ್ನು ಮಾತ್ರ ಸ್ವೀಕರಿಸುತ್ತ ಸ್ಥೂಲಕಾಯದಲ್ಲಿ ಇಷ್ಟಲಿಂಗವನ್ನೂ, ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗವನ್ನೂ, ಕಾರಣಶರೀರದಲ್ಲಿ ಭಾವಲಿಂಗವನ್ನೂ ಧಾರಣಮಾಡುವ ಸಾಮರ್ಥ್ಯವುಳ್ಳವನಿಗೇ ವೀರಶೈವನೆಂದು ಶಾಸ್ತ್ರವು ಸಾರುವುದು. ಹೀಗೆ ತ್ರಿವಿಧಶರೀರಗಳಲ್ಲಿ ತ್ರಿವಿಧಲಿಂಗಗಳನ್ನು ಧಾರಣಮಾಡುವ ಸಾಮರ್ಥ್ಯವು ಸರ್ವರಿಗೂ ಸಾಧ್ಯವಿಲ್ಲವು. ತ್ರಿವಿಧಲಿಂಗಗಳ ಸಿದ್ಧಿಯನ್ನು ಹೊಂದಿದ ಪುರುಷನು ಕೇವಲ ಅಪ್ರಾಕೃತಪುರುಷನಂತಿರುವನು. ಒಳಗಣ ಪ್ರಾಣಲಿಂಗ, ಭಾವಲಿಂಗಗಳ ಸಾಕ್ಷಾತ್ಕಾರಕ್ಕೆ ಸಾಧಕವಾದ ಇಷ್ಟಲಿಂಗವನ್ನು ಮಾತ್ರ ಧಾರಣ ಮಾಡಲೇಬೇಕು. ಹೊರಗಿನ ಲಿಂಗಧಾರಣಪೂಜಾಧ್ಯಾನಾದಿಗಳು ಜ್ಯೋತಿರ್ಲಿಂಗದ ದರ್ಶನಕ್ಕೆ ಸಾಧಕಗಳಾಗಿವೆ. ಒಂದು ಪಾತ್ರೆಯನ್ನು ಒಲೆಯಮೇಲಿಟ್ಟು, ಬೆಂಕಿಯನ್ನು ಹಚ್ಚಿದರೆ ಧಾನ್ಯವು ಪರಿಪಕ್ವವಾಗುವಂತೆ ಹೊರಗಣ ಸ್ಥೂಲಶರೀರದಲ್ಲಿ ಧರಿಸಲ್ಪಟ್ಟ ಇಷ್ಟಲಿಂಗಾರಾಧನವೂ, ಇಷ್ಟಲಿಂಗಪೂಜೆಯೂ, ಇಷ್ಟಲಿಂಗಧ್ಯಾನವೂ ಇವುಗಳೆಲ್ಲವೂ ಅಂತರಂಗವನ್ನು ಪರಿಪಕ್ವಮಾಡಿ ಸ್ವಚ್ಛವಾದ ತಿಳಿಗೊಳದಲ್ಲಿ ಮುಖವು ಪ್ರತಿಫಲಿಸುವಂತೆ ಅಂತರ್ಲಿಂಗವು ಪ್ರತ್ಯಕ್ಷವಾಗುವುದು. ಬಹಿರ್ಧಾರಣವಾದ ಶಿವಲಿಂಗಪೂಜಾದಿಗಳನ್ನು ಮಾಡದೆ ಅಂತರ್ಲಿಂಗದ ಸಿದ್ಧಿಯಾಗುವುದಿಲ್ಲವು. ಗುರುವಿನಿಂದ ಮಾಡಲ್ಪಟ್ಟ ಶಿವಲಿಂಗಧಾರಣವೊಂದರಿಂದಲೇ ವೀರಶೈವನೆಂಬ ನಾಮವನ್ನು ಧರಿಸುವನು ಇದೊಂದಿಲ್ಲದೆ ಮಿಕ್ಕ ಆಚಾರಗಳಿದ್ದರೂ ವೀರಶೈವನೆಂಬ ನಾಮವು ಬರಲಾರದು. ಲಿಂಗಧಾರಣದಿಂದಲೇ ವೀರಶೈವನೆನಿಸುವನಲ್ಲದೆ, ಲಿಂಗದಿಂದಲೇ ಮುಕ್ತಿಯು ಸಂಭವಿಸಬೇಕಾಗಿರುವುದರಿಂದ ಗೋವಿಗೆ ಗಂಗೆದೊಗಲೇ ಮುಖ್ಯಲಕ್ಷಣವಾಗಿರುವಂತೆ ವೀರಶೈವನಿಗೆ ಲಿಂಗಧಾರಣವೇ ವಿಶೇಷಚಿಹ್ನವಾಗಿರುವುದು ಮಿಕ್ಕ ಭಸ್ಮರುದ್ರಾಕ್ಷಾದಿಗಳು ಸಾಮಾನ್ಯಚಿಹ್ನವಾಗಿವೆ. ಇಂಥಹ ಶಿವಲಿಂಗವನ್ನು ಗುರುವಿನಿಂದ ಶಾಸ್ತ್ರಾತಿಕ್ರಮಣವಿಲ್ಲದೆ ಪಡೆದು ಅನವರತವೂ ವಾಮಹಸ್ತದಲ್ಲಿಟ್ಟು ಪೂಜಿಸುತ್ತಲೂ, ಧ್ಯಾನಿಸುತ್ತಲೂ ಏಕಾಗ್ರಚಿತ್ತರಾಗಿ ಮೆಲ್ಲಮೆಲ್ಲನೆ ತಾವು ಪರಿಯನ್ನು ಬಿಟ್ಟು ಹೋಗುವಂತೆ ಕ್ರಮವಾಗಿ [illegible] ಗಳಿಂದ [illegible] ಎಂದು ಸ್ಕಾಂದಾದ್ಯನಂತ ಪುರಾಣಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದು.

ಇಲ್ಲಿ ಅಶುಚಿಯಾದ ಎಡ ಹಸ್ತದಲ್ಲಿ ಪರಿಶುದ್ಧವಾದ ಶಿವಲಿಂಗವನ್ನು ಪೂಜಿಸುವದು ವಿರೋಧವೆಂದು ತರ್ಕಿಸುವುದುಂಟಾದರೆ "ಅಂಜಲಿನಾ ನ ಪಿಬೇದಪೋ ನ [illegible]" ಎಂಬ ಸ್ಮೃತಿಯಲ್ಲಿ ಅಂಜಲಿ [illegible] ಯನ್ನು ಪ್ರಯೋಗ ಮಾಡಿದ್ದಾರೆ. ಎರಡು ಕೈಗಳ [illegible] ಅಂಜಲಿ ಎಂದು ಹೇಳುವರೇ ಹೊರತು ಒಂದೇ ಹಸ್ತಕ್ಕೆ ಅಂಜಲಿ ಎಂದು ಹೇಳುವದಿಲ್ಲ. "[illegible] ಯುತಾಂಜಲಿಃ ಪ್ರಭಾಷಾ" ಎಂದು ಅನುಶಾಸನದಲ್ಲಿಯೂ ಅಂಜಲಿ ರೂಢ ನಿರ್ದೇಶನವನ್ನು ಮಾಡಿರುತ್ತಾರೆ. ಮತ್ತು ಸ್ಮೃತಿಶಬ್ದ [illegible] ಮಹಾಪುರಾಣಗಳಲ್ಲಿಯೂ "ಅಂಜಲಿ ಪೂರ್ಣಪಾತ್ರಮಾನಯತಿ" ಎಂದು ಎರಡು ಹಸ್ತಗಳಿಂದಲೂ ಪೂರ್ಣಪಾತ್ರವನ್ನು ತೆಗೆದುಕೊಳ್ಳಬೇಕೆಂಬ ವಿಧಾನದಿಂದಲೂ ದೇವರಿಗೆ ಎರಡು ಹಸ್ತಗಳಿಂದ ಪುಷ್ಪಾಂಜಲಿಯನ್ನು ಕೊಡುವುದರಿಂದಲೂ ದೇವತಾ ನಮಸ್ಕಾರದಲ್ಲಿ ಎರಡು ಹಸ್ತಗಳು ಸೇರುವದರಿಂದಲೂ ದಕ್ಷಿಣ ಹಸ್ತದಂತೆ ವಾಮಹಸ್ತವೂ ಪರಿಶುದ್ಧವಾಗಿರುವುದರಿಂದ ಶಿವಲಿಂಗವನ್ನು ಎಡದ ವಾಮ ಹಸ್ತದಲ್ಲಿಟ್ಟು ಪೂಜಿಸುವದು ನಿರಾಕ್ಷೇಪಕರವಾದುದು. ಮತ್ತು "ಪಾಣೌಮಂತ್ರಂ ಪವಿತ್ರಂ" ಎಂಬ ಸ್ಮೃತಿಯಿಂದಲೂ "ಪಾಣೌಮಂತ್ರಂ ವಿನಿಕ್ಷಿಪ್ಯ" ಎಂಬ [illegible] ವಾಕ್ಯದಿಂದಲೂ ಗುರುವಿನಿಂದ ವಿಧಿಪೂರ್ವಕವಾಗಿ ಸಂಸ್ಕರಿಸಿ ಕೊಡಲ್ಪಟ್ಟ ಇಷ್ಟಲಿಂಗವನ್ನು ಶುಚ್ಯಶುಚಿ ಕಾಲಗಳಲ್ಲೂ ಧರಿಸುತ್ತ ಸ್ನಾನಾದಿಗಳಿಂದ ಪರಿಶುದ್ಧವಾದ ವಾಮ ಹಸ್ತವೆಂಬ ಪೀಠದಲ್ಲಿಟ್ಟು ಭಕ್ತಿಪೂರ್ವಕವಾಗಿ ಗಂಧಾದಿಗಳಿಂದರ್ಚಿಸುತ್ತಿರುವುದೇ ವೀರಶೈವಧರ್ಮದ ಮುಖ್ಯತತ್ವವಾಗಿರುತ್ತದೆ. ಇದೇ ಅರ್ಥವು "ಸಂಸ್ಕೃತ್ಯ ಗುರುಣಾದತ್ತಂ" "ವಾಮಹಸ್ತಗತಂಲಿಂಗಂ" ಎಂದು ಕಾಮಿಕಾದಿ ಆಗಮಗಳಲ್ಲಿಯೂ ಸ್ಕಾಂದಾದಿ ಪುರಾಣಗಳಲ್ಲಿಯೂ ಹೇಳಲ್ಪಟ್ಟಿರುವುದು.

ಒಳದೇಶದ ವೃತ್ತಾಂತಗಳು.

ಮುಂದೆ ಬರುವ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ 54 ಜನಗಳು ಉಮೇದುವಾರರಾಗಿ ನಿಂತಿರುವರು

ಉರಿಗಾಂ ಚಿನ್ನದಗಣಿಯ ಬೋರ್ಡಿನವರು ವೈಸ್ರಾಯಿಯವರಿಗೆ ಅಡ್ರೆಸ್ಸನ್ನು ಒಪ್ಪಿಸಿ ದೊಡ್ಡದಾದ ಔತಣವನ್ನು ಮಾಡಿದರು.

ನಮ್ಮ ಸ್ವಾಮಿಯವರಾದ ಶ್ರೀಮನ್ಮಹಾರಾಜರವರ ರಜತೋತ್ಸವಕ್ಕಾಗಿ ತ್ರಿಮತಸ್ಥರ ಸಂತರ್ಪಣೆಗೆ ೩೦೦ ರೂಪಾಯಿಗಳು ಮತ್ತು ವೀರಶೈವರಿಗೆ ೧೦೦ ರೂಪಾಯಿಗಳು ಕೊಡಲ್ಪಟ್ಟಿರುವವು

ಮ|| ರಾ|| ಎಂ. ಕೃಷ್ಣನ್ ಎಂಬುವರು ಈ ತಿಂಗ 10ನೇ ತಾರೀಖಿನಿಂದ [illegible] ಮಾಡಲ್ಪಟ್ಟಿದ್ದಾರೆ. ಇವರ ಜಾಗಕ್ಕೆ ಮ|| ಕೆ. [illegible] ಎಂಬುವರು ಬಂದಿರುತ್ತಾರೆ

ರಜತ ಮಹೋತ್ಸವದ ದಿನ ಬೆಂಗಳೂರಿನಲ್ಲಿರುವ [illegible] ಪ್ರೆಸಿಡೆಂಟ್ ಶ್ರೀ ಕೆ. ಆರ್. ರತನ್‌ಸಿಂಗ್ ಎಂಬುವರು ಬಡವರಿಗೆ ಅನ್ನವಸ್ತ್ರಾದಿಗಳನ್ನು ಹಂಚುತ್ತಾರೆಂದು ಕೇಳುತ್ತೇವೆ

ಮೈಸೂರು ಕೃಷ್ಣರಾಜ [illegible] ಮ ಎಂ. ಎಸ್. [illegible] ಅಂದಾಜು [illegible] ಮೈಸೂರಿಗೆ ಆಗಮಿಸಿದ್ದ ವೈಸ್ರಾಯಿ ದಂಪತಿಗಳ ತಸ್ವೀರುಗಳನ್ನು [illegible] ಒಂದು [illegible] ಕೊಡುತ್ತಾರೆ. ಈ ತಸ್ವೀರುಗಳು ಅತಿ ಸುಂದರವಾಗಿರುವುದರಿಂದ ಪ್ರತ್ಯಕ್ಷ ವೈಸ್ರಾಯಿ ದಂಪತಿಗಳನ್ನೇ ನೋಡಿದಂತೆ ಕಾಣುವವು. ಈ ಫೋಟೋಗಳು ವೈಸ್ರಾಯಿರವರು ರಾಜಧಾನಿಗೆ ಆಗಮಿಸಿದ ಜ್ಞಾಪಕಾರ್ಥವಾಗಿ ಪ್ರತಿಯೊಬ್ಬರೂ ಕೊಟ್ಟು ಹಾಕಿಸಿ ಮನೆಗಳಲ್ಲಿ ಕಟ್ಟಲು ಅರ್ಹವಾಗಿವೆ

ಶ್ರೀ ಮಹಾಪ್ರಭುಗಳ ರಜತಮಹೋತ್ಸವದ ಜ್ಞಾಪಕಾರ್ಥವಾಗಿ [illegible] ಸಾವಿರ ರೂಪಾಯಿಗಳವರೆವಿಗೂ ಚಂದಾ [illegible] ಶೇಖರಿಸಿ ಟೌನ್‌ಹಾಲಿನ ಮುಂದುಗಡೆಯಲ್ಲಿರುವ [illegible] ತ್ತಗಡಿಯಾರವನ್ನು 40 ಅಡಿವರೆವಿಗೂ [illegible] ಮೈಲುಗಳವರೆಗೆ ಕೇಳಿಸುವಂತೆ ಒಂದು ಘಂಟೆಯನ್ನು [illegible] ದಲ್ಲಿ ಇರಿಸಿರುತ್ತಾರೆ. ಆ ಘಂಟೆಯ [illegible] ಭಾಗದಲ್ಲಿ ನಾಲ್ಕು ಭಾಗಗಳಲ್ಲೂ ಗೂಡುಗಳನ್ನು ಮಾಡಿ [illegible] ಅವುಗಳಲ್ಲಿ ದೊಡ್ಡ ಮುಳ್ಳುಗಳುಳ್ಳ [illegible] ನ್ನು ಇಟ್ಟಿದ್ದಾರೆ. ಜನಗಳ ಸಹಾಯವಿಲ್ಲದೆ ವಿದ್ಯು [illegible] ಸಹಾಯದಿಂದಲೇ ಘಂಟೆಯು ಬಾರಿಸುತ್ತಿರುವುದು. ರಾಜಧಾನಿಯಲ್ಲಿ ಇದರ ನೋಟವು ಜನಗಳಿಗೆ ಅತ್ಯಂತ ದರ್ಶನೀಯವಾಗಿದೆ.

ಈ ತಿಂಗಳ 8ನೇ ತಾರೀಖಿನ ದಿವಸ ಪ್ರಾತಃಕಾಲ 10 ಘಂಟೆಗೆ ರಾಜಧಾನಿಯ ಅರಮನೆಯಲ್ಲಿ ರಜತೋತ್ಸವದ ಸ್ಪೆಷಲ್‌ದರ್ಬಾರ್ ನಡೆಯುವುದು. ಸಂಸ್ಥಾನದ ಪರವಾಗಿ ಪ್ರಭುಗಳಿಗೆ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿ ಪ್ರಜೆಗಳಿಗುಂಟಾದ ಆನಂದವನ್ನು ಪ್ರದರ್ಶನ ಮಾಡುತ್ತಾರೆ. ಈದಿವಸ ಎಲ್ಲಾ ದೇವಸ್ಥಾನಗಳಲ್ಲಿಯೂ ಅಭಿಷೇಕೋತ್ಸವಾದಿಗಳು ನಡೆಯುವವಲ್ಲದೆ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ನಡೆಯುವುದು. ಸಾಯಂಕಾಲ 5-30 ಗೆ ಅರಮನೆ ಅಧಿಕಾರಿಗಳೆಲ್ಲರೂ ಸೇರಿ ಉತ್ಸವದ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಹೊಸಗಡಿಯಾರವು ಪ್ರಭುಗಳಿಂದ ಪ್ರಕಾಶಿಸಲ್ಪಡುವುದು. ಇದೇದಿವಸ ಗೌರ್ನ್‌ಮೆಂಟ್‌ಹೌಸ್ ಮೈದಾನದಲ್ಲಿ ಪ್ರಜೆಗಳ ಸಂತೋಷಸಭೆಯು ಸಹ ನಡೆಯುವುದು. ಪ್ರಭುಗಳೂ ದಯಮಾಡಿಸುವರು.

ಘನವನ್ನು ಹೊಂದಿದ ವೈಸ್ರಾಯಿಯವರು ಮೈಸೂರು ರಾಜಧಾನಿಗೆ ಆಗಮಿಸಿದ ಸಮಯದಲ್ಲಿ ಹಿಂದೆ ಕೊಡುತ್ತಿದ್ದ 35 ಲಕ್ಷ ರೂಪಾಯಿಗಳ ಪೊಗದಿಯಲ್ಲಿ 10½ ಲಕ್ಷ ರೂಪಾಯಿಗಳನ್ನು ಕಡಿಮೆಮಾಡಿದ್ದರಿಂದ ಉಂಟಾದ ಸಂತೋಷಕ್ಕೋಸ್ಕರವಾಗಿ ಟೌನ್‌ಹಾಲಿನಲ್ಲಿ ಕಳೆದತಿಂಗಳು 31ನೇ ತಾರೀಖಿನಲ್ಲಿ ರಾಜಧಾನಿಯ ಮಹಾಜನಗಳ ಒಂದುಸಭೆ ಸೇರಿದ್ದಿತು. ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮುಶೀರ್-ಉಲ್-ಮುಲ್ಕ್ ಮೀರ್ ಹಂಜಾಹುಸೇನರವರು ನಮ್ಮ ಬ್ರಿಟಿಷ್ ಸಾರ್ವಭೌಮರಿಂದುಂಟಾದ ಮಹೋಪಕಾರಕ್ಕೆ ನಮ್ಮ ಸಂಸ್ಥಾನದ 60 ಲಕ್ಷ ಪ್ರಜೆಗಳೂ ಎಷ್ಟರಮಟ್ಟಿಗೆ ಕೃತಜ್ಞರಾಗಿರಬೇಕೆಂಬುವ ವಿಷಯದಲ್ಲಿಯೂ ಮತ್ತು ಈ ಮಹೋಪಕಾರಕ್ಕೆ ಮುಖ್ಯ ಸಹಾಯಕಾರಿಗಳಾದ ವೈಸ್ರಾಯರವರಿಗೆ ತೋರಿಸಬೇಕಾದ ಕೃತಜ್ಞತೆಯ ವಿಷಯದಲ್ಲಿಯೂ ಭಾಷಣವನ್ನು ಮಾಡಿದರು. ನಮ್ಮ ಬ್ರಿಟಿಷ್ ಸಾರ್ವಭೌಮರವರು ಇಂಥಹ ಸೌಕರ್ಯಗಳನ್ನು ತೋರಿಸುವುದಕ್ಕೆಲ್ಲ ನಮ್ಮ ಮಹಾಪ್ರಭುಗಳ ಪ್ರಜಾವಾತ್ಸಲ್ಯಕರಶಕ್ತಿಯೇ ಮುಖ್ಯಕಾರಣವೆಂದು ರಾಜಧಾನಿಯ ಪ್ರಮುಖರು ತಮ್ಮ ತಮ್ಮ [illegible] ರಾಜಭಕ್ತಿ [illegible] ಗಳನ್ನು ತೋರ್ಪಡಿಸಿದರು.

ವರ್ತಮಾನಸಂಗ್ರಹ.

1911 ರಲ್ಲಿ ಬ್ರಿಟಿಷರಲ್ಲಿ 82 ಯುದ್ಧ ವಿಮಾನಗ [illegible] 1927ರಲ್ಲಿ [illegible] ವಿಮಾನಗಳು ಮಾತ್ರ ಇವೆ

[illegible] ಮುನಿಸಿಪಾಲಿಟಿಯವರು ತಮ್ಮ ನೌಕರರಿಗೆ [illegible] ಉಡುಪನ್ನೇ ಕೊಡಬೇಕೆಂದು ನಿರ್ಧರಿಸಿದ್ದಾರೆ

ಕಳೆದವರ್ಷ ಹಿಂದೂಸ್ಥಾನದಿಂದ 1 ಲಕ್ಷ ರೂಪಾಯಿ [illegible] ವಿಲಾಯತಿಗೆ ಹೋಗಿರುವುದೆಂದು ಕೇಳುತ್ತೇವೆ.

[illegible] ಅಹಮದಾಬಾದಿನ [illegible] ಅತಿ [illegible] ದರಿಂದ ರೈಲುಗಳು [illegible] ಟಪ್ಪಾಲುಗಳು ಸರಿಯಾಗಿ ಬರುವದಿಲ್ಲ

[illegible] ಮಾರ್ಗದಲ್ಲಿ ಭದ್ರಕಾ [illegible] ವೈದ್ಯ [illegible] ಪ್ರಯಾಣಕ್ಕೆ ತೊಂದರೆಯುಂಟಾ [illegible]

ಪ್. ಮೆಡಿಕಲ್ ಕಾಲೇಜಿಗೆ ಸೇರಿದ ಗ್ ವ್ಯಾಖ್ಯಾನ ಮಂದಿರಕ್ಕೆ ಬೆಂಕಿ ಲಕ್ಷ ರೂಪಾಯಿ ವರೆಗೆ ನಷ್ಟವಾ ಕೇಳುತ್ತೇವೆ.

ಕರಾಚಿ ಮ್ಯುನಿಸಿಪಲ್ ಬೋರ್ಡಿನವರು ವೇಶ್ಯಾ ವೃತ್ತಿಯನ್ನು ನಿಷೇಧಿಸುವ ಮತ್ತು ಗ್ರಾಮದಿಂದ ವೇಶ್ಯಾಸ್ತ್ರೀಯರನ್ನು ಊರೊಳಗೆ ಇರಕೂಡದು ಒಂದು ಠರಾವನ್ನು ಮಾಡಿರುತ್ತಾರೆ.

ಕರ್ನಾಟದೇಶದಲ್ಲಿ ಒಬ್ಬಾನೊಬ್ಬ ಪುರುಷನು ಎದೆನೋವಿನಿಂದ ನರಳುತ್ತಿದ್ದುದರಿಂದ ವೈದ್ಯರು ಶಸ್ತ್ರಚಿಕಿತ್ಸೆ ಮಾಡಲಾಗಿ ಎದೆಯೊಳಗೆ ಒಂದು ಚಿಕ್ಕ ಹಸುವು ಇತ್ತು. ರೋಗಿಯು ಚಿಕಿತ್ಸೆಹೊಂದುತ್ತಿರುವನಂತೆ.

ನಾಡಲ್ಲಿ ಕಯಲ್ಲಿ ಎಂಬ ನದಿಯು ಹೇರಳವಾಗಿ ಹಳ್ಳಿಗಳ ವರೆಗೂ ನಷ್ಟವಾಗಿ 10 ಸಾವಿರ ಜನರಿಗೂ ನೀರಲ್ಲಿ ಕೊಚ್ಚಿಕೊಂಡುಹೋದರು. ತ್ರ ಜನಗಳವರೆಗೂ ಮನೆ ಮಠಗಳಿಲ್ಲದಂತಾ

ಇಂಗ್ಲೆಂಡಿನಲ್ಲಿ ಒಂದು ಗಿಳಿಗೆ 127 ವರ್ಷವಾಗಿದೆ. ದು, ಇದು ಆಫ್ರಿಕೆಯಲ್ಲಿ ಹುಟ್ಟಿದುದೆಂದೂ, ಈ 1801 ರಲ್ಲಿ ಹಿಂದುಸ್ಥಾನದಲ್ಲಿ ಸಿಕ್ಕಿತೆಂದೂ ಪ್ಪೂರದ ಮಹಾರಾಜರವರ ಬಳಿಯಲ್ಲೂ ಕೆಲವು ಇದ್ದಿತೆಂದೂ ಕೇಳುತ್ತೇವೆ.

ಪ್ಪೂರದ ಮಹಾರಾಜರವರು ತಮ್ಮ ರಾಜ್ಯದಲ್ಲಿ ವರೆಲ್ಲರೂ ಹಿಂದೀ ಭಾಷೆಯನ್ನು ತಿಳಿದಿರಬೇಕು. ಇದ್ದವರು ಜಾಗ್ರತೆಯಾಗಿ ಕಲಿತುಕೊಳ್ಳಬೇಕು. ಗೆ ಕಲಿಯದಿದ್ದರೆ ಅಂಥವರು ಸ್ಥಾನಚ್ಯುತರಾಗ ಬೇಕೆಂದು ಕಟ್ಟಪ್ಪಣೆ ಮಾಡಿದ್ದಾರಂತೆ.

ನ್ಯಾಸಶಾಲೆಯಲ್ಲಿ ನರಸಾಪುರದ ಟ್ರೇನಿಂಗ್ ನ ಒಬ್ಬ ವಿದ್ಯಾರ್ಥಿಯು ಅಲ್ಲಿಯ ಮುಖ್ಯೋಪಾಧ್ಯಾಯರು ತನಗೆ ಸರ್ಟಿಫಿಕೇಟ ಕೊಡಲಿಲ್ಲ ಮಾತ್ಸರ್ಯದಿಂದ ದಾರಿಯಲ್ಲಿ ಆ ಉಪಾಧ್ಯಾ ಗೆ ಬಲವಾಗಿ ಏಟನ್ನು ಹಾಕಿದ್ದಾನಂತೆ.

ದಕ್ಷಿಣಾಫ್ರಿಕದ ಹೈಡಲ್‌ಬರ್ಗ್ ಎಂಬ ಸ್ಥಳದಲ್ಲಿ ಡು ರೈಲುಗಳು ಒಂದಕ್ಕೊಂದು ತಾಕುಬಡಿದು 30 ಶೀಯಜನರೂ, ಇಬ್ಬರು ಯುರೋಪಿಯನ್ನರೂ ಹಪಟ್ಟರು. ಅನೇಕರು ಘಾಯವಡೆದಿರುವರು. ಕೆಲವರ ಶವಗಳೂ ಸಹ ಸಿಕ್ಕಿರುವುದಿಲ್ಲ.

ರ್ಮನಿಯಲ್ಲಿ 8 ಜನಗಳು 10000 ಅಡಿ ಎತ್ತರ ಇರುವ ಬೆಟ್ಟವನ್ನು ಹತ್ತಿ ಹಿಂತಿರುಗುವ ಸಮಯ ಮಿಂಚಿನೇಟಿನಿಂದ ಎಲ್ಲರೂ ಮೂರ್ಛೆಗೊಂಡರು ಹೊತ್ತಿನಲ್ಲಿ ಎಚ್ಚತ್ತು ನೋಡುವಲ್ಲಿ ಅವರಲ್ಲಿ ಬ್ಬ ಪುರುಷನು ಭಸ್ಮೀಭೂತನಾಗಿದ್ದನಂತೆ.

ಸ್ಟ್ರೇಲಿಯಲ್ಲಿ ಹೆನ್ರಿ ಓಸೆನ್ ಎಂಬುವನು ಗುಂಡಿನಿಂದ ತನ್ನ ಸಂಪತ್ತಿಯನ್ನು ಕೂಡಿದನು ಮಗಳನ್ನು ವರನೊಬ್ಬನಿಗಾಗಿ ಮಗಳು ಕೊಟ್ಟಿಕೊಂಡಳು ರಲ್ಲಿ ಪೋಲೀಸಿನವರು ಬರುವುದರೊಳಗಾಗಿ ಗುಂಡುಹೊಡೆದುಕೊಂಡು ಸತ್ತುಹೋಗಿದ್ದ ನದ ಕಾರಣವೇ ಇನ್ನೂ ಗೊತ್ತಾಗಿಲ್ಲವು.

ರಾಜಸ್ಥಾನಕದಲ್ಲಿ ಮಹಾತ್ಮರಿಂದ ಸ್ಥಾಪಿತ ವಿಶ್ವವಿದ್ಯಾನಿಲಯದಲ್ಲಿ ಇನ್ನುಮೇಲಾಗಿ ವಿದ್ಯಾರ್ಥಿಗಳು ನೂಲುವುದನ್ನು ಕಲಿಯುವುದಲ್ಲದೆ ಖಾದಿ ವಸ್ತ್ರಗಳನ್ನೇ ಧರಿಸುವುದನ್ನು ಆಚರಣೆಗೆ ತರದಾಗಿಲ್ಲದಿದ್ದರೆ ಅಂತಹ ಹುಡುಗರನ್ನು ಸೇರಿಸಲಾಗದೆಂದು ಕಟ್ಟಪ್ಪಣೆಮಾಡಲ್ಪಟ್ಟಿದೆ

ನಾಪುರಕ್ಕೆ ಸೇರಿದ ಚಪ್ರ ಎಂಬ ಊರಲ್ಲಿ ಶ್ರೀ ಸ್ವರಾಜ ಎಂಬುವರ ಪತ್ನಿಯು ತನ್ನ ಪತಿಗೆ ರೋಗವು ಬಂದಿರುವುದನ್ನು ನೋಡಿ ತನ್ನ ರಕ್ಕೆ ಸೀಮೆಎಣ್ಣೆಯನ್ನು ಹಾಕಿಕೊಂಡು ಬೆಂಕಿ ಹಚ್ಚಿಕೊಂಡು ಮೃತಿಯನ್ನು ಹೊಂದಿದಳು. ಹೊತ್ತಿನಲ್ಲಿ ಪತಿಯೂ ಮೃತಿಯನ್ನೈದಿದನಂತೆ.

ನಾಗಪುರದಲ್ಲಿ ಹಿಂದುಗಳ ಒಂದು ಭಜನಾ ಸಂಘವು ಯನ್ನು ಮಾಡುತ್ತ ಮಸೀದಿಯ ಮುಂದೆ ಬರಲು ಮಸೀದಿಯವರು ಭಜನಾ ಸಂಘದವರ ವಾದ್ಯಗೋಷ್ಠಿಯನ್ನು ನಿಲ್ಲಿಸುತ್ತಿದ್ದರು. ಹಿಂದುಗಳು ಕೋಪಗೊಂಡು ಮಹಮ್ಮದೀಯರ ಮೇಲೆ ಬೀಳುವಷ್ಟರಲ್ಲಿ ಪೋಲೀಸಿನವರು ಸಮಾಧಾನಗೊಳಿಸಿದರು.

ಪುಣೆಯಲ್ಲಿ ಮಾಲಿನೀಬಾಯಿ ಪಾಗಂಡಿಕರ್ ಎಂಬವರು ಹಿಂದೂ ಧರ್ಮದ ಉಚ್ಚವರ್ಣದಲ್ಲಿ ಹುಟ್ಟಿದ್ದರೂ ತನ್ನ ಧರ್ಮಕ್ಕೆ ಬಹಿಷ್ಕಾರವನ್ನು ಹಾಕಿ ಒಬ್ಬ ಮಹಮ್ಮದೀಯ ಮತೀಯನನ್ನು ಮದುವೆಯಾದುದರಿಂದ ಶಿವಾಜಿ ಮಂದಿರದಲ್ಲಿ ಶ್ರೀ ಮಾಜಿ ಮಾಸ್ಕರರವರ ಅಧ್ಯಕ್ಷತೆಯಲ್ಲಿ ಒಂದು ಹಿಂದೂ ತರುಣಸಭೆಗೂಡಿ ಪರಧರ್ಮೀಯ ವಿವಾಹವನ್ನು ನಿಷೇಧಿಸಿದರು.

ಸೊಡತ್ರಿನ ಸಮೀಪದಲ್ಲಿ ಕಟಗಾಂ ಎಂಬ ಹಳ್ಳಿಯಲ್ಲಿರುವ ಬ್ರಾಹ್ಮಣರ ಹುಡುಗಿಯೊಬ್ಬಳು ವಾರಿ ಕೂಸದ್ಯದಲ್ಲಿ ಒಂದು ಕಣ್ಣು ಹೋದುದರಿಂದ ಇವಳನ್ನು ಒಬ್ಬರೂ ಮದುವೆಯಾಗಲಿಲ್ಲ. ಆದ್ದರಿಂದ ಮರಕ್ಕೆ ಮದುವೆಯಾಗಿ ಮುಕ್ತಿಮಾರ್ಗವನ್ನು ಹೊಂದು ಎಂದು ತಂದೆಯು ಬೋಧಿಸಿದ್ದರಿಂದ ಆ ಹುಡುಗಿಯು ಅದೇ ಮರಕ್ಕೆ ಶಾಸ್ತ್ರ ಪ್ರಕಾರ ಮದುವೆಯಾದಳಂತೆ.

ಅನಂತಪುರ ಡಿಸ್ಟ್ರಿಕ್ಟಿನಲ್ಲಿ ಉರ್ಗಾಗ್ರಾಮದ ರಾಮಚಿಪ್ಪಪಲ್ಲಿ ಎಂಬಲ್ಲಿ ಕಳದ ತಿಂಗಳು ಅಂದರೆ ವೆಂಕಟದಾಸರಿ ಎಂಬ ಒಬ್ಬ ಪಟ್ಟೇದಾರನ ಹೆಂಡತಿಯು ಒಂದು ವಿಚಿತ್ರವಾದ ಶಿಶುವನ್ನು ಹೆತ್ತಿರುವಳು. ಶಿಶುವಿಗೆ ಸ್ತ್ರೀಪುರುಷರೀರ್ವರ ರಹಸ್ಯಾಂಗಗಳೂ ಒಂದರ ಮೇಲೊಂದು ಇರುತ್ತವೆ. ಮಲಮೂತ್ರ ವಿಸರ್ಜನವು ಗುದಭಾಗದಲ್ಲಿಯೇ ಆಗುತ್ತಿರುವುದು. ಈ ಮಗುವನ್ನು ಹೆಣ್ಣೆಂತಲೂ ಗಂಡೆಂತಲೂ ನಿಶ್ಚಯಿಸಲಾಗುವುದಿಲ್ಲ.

ಬರೋಡಾದಲ್ಲಿ ಜಲಪ್ರಳಯದಿಂದ ಬಹಳ ನಷ್ಟವಾಗಿದೆ. ಕೆರೆಕಟ್ಟೆಗಳೆಲ್ಲ ತುಂಬಿ ಹೋದದ್ದು ಹರಿಯುತ್ತಲಿವೆ. ವ್ಯಾಪಾರಕ್ಕೆ ಪ್ರತಿಬಂಧಕವಾಗಿದೆ. ಬೀದಿ ಬೀದಿಗಳಲ್ಲಿ 10-20 ಅಡಿಗಳವರೆವಿಗೂ ನೀರುನಿಂತಿವೆ, ಸಾವಿರಾರು ಮನೆಮಠಗಳು ಬಿದ್ದುಹೋದವು, ಸಾವಿರಾರು ಜನರು ಮೃತಿಯನ್ನು ಹೊಂದಿದರು, ಅಂಗಡಿ ಮುಂಗಟ್ಟುಗಳೆಲ್ಲಾ ಮುಚ್ಚಲ್ಪಟ್ಟಿವೆ. ದೋಣಿಯಮೇಲೂ, ಆನೆಗಳಮೇಲೂ ಟಪಾಲುಗಳನ್ನು ಸಾಗಿಸುತ್ತಲಿದ್ದಾರೆ. ಜನಗಳು ಹಾಹಾಕಾರಪಡುತ್ತಿರುವರು. ಈ ಅತಿವೃಷ್ಟಿಯಿಂದ ರೈಲ್ವೆಕಂಪನಿಗಳು ಸಹ ಕೆಟ್ಟುಹೋಗಿವೆ.

ಸೊಂಡೂರು ಮಹಾರಾಜರವರು ಜೂನತಿಂಗಳು ತಾ|| 21ರಲ್ಲಿ ಪೂನೆಯಲ್ಲಿ ವಿಧಿವಶರಾದರು. ಇವರ ಶವವು ಒಂದು ಪೆಟ್ಟಿಗೆಯಲ್ಲಿ ಹಾಕಿ ಸೊಂಡೂರಿಗೆ ತರಲ್ಪಟ್ಟಿತು. ಇವರಿಗೆ ಗಂಡುಮಕ್ಕಳಿಲ್ಲ, 14 ವರ್ಷದ ಒಬ್ಬ ಹೆಣ್ಣುಮಗಳುಮಾತ್ರ ಇರುವಳು. ಈ ಮಹಾರಾಜರವರು ಆಸ್ತಿಕ್ಯಪಕ್ಷರೂ ಪ್ರಜಾರಕ್ಷಣಾಧುರೀಣರೂ ಆಗಿದ್ದರು. ಉಜ್ಜಯಿನಿ ಶ್ರೀ ಜಗದ್ಗುರುಗಳವರ ದರ್ಶನಾರ್ಥವಾಗಿ ಪದೇಪದೇ ಆಗಮಿಸುತ್ತಿದ್ದರು. ಕೇದಾರ ಜಗದ್ಗುರುಗಳನ್ನು 1923ನೇ ಇಸ್ವಿಯಲ್ಲಿ ತಮ್ಮ ಸಂಸ್ಥಾನಕ್ಕೆ ಕರೆಯಿಸಿಕೊಂಡು ಏಕಾಂತವಾದ ಗುರುಭಕ್ತಿಯಿಂದ ಕಾಣಿಕಾದಿಗಳಿಂದ ಸತ್ಕರಿಸಿದರು. ಇಂಥಹ ಮಹಾರಾಜರನ್ನು ಕಳೆದುಕೊಂಡದ್ದು ಆ ರಾಜ್ಯದ ಪ್ರಜೆಗಳ ದೈವವಿಪರೀತತೆಯನ್ನು ಎಷ್ಟು ಹೇಳಿದರೂ ಕಡಿಮೆಯಾಗದೆ. ಇವರ ಆತ್ಮಕ್ಕೆ ಜಗದೀಶನು ಶಾಂತಿಯನ್ನುಂಟುಮಾಡಲಿ.

ತಿರುವಾಂಕೂರಿನಲ್ಲಿ ಒಬ್ಬ ಕ್ರೈಸ್ತನು ಎಡೂರು ಎಂಬಲ್ಲಿ ಒಂದು ಸ್ಥಳವನ್ನು ಕೊಂಡುಕೊಂಡಿದ್ದನು. ಆ ಸ್ಥಳದಲ್ಲಿ ಹಾವುಗಳು ವಿಶೇಷವಾಗಿದ್ದುವೆಂದು [illegible] ಬಂದದ್ದರಿಂದ ಆ ಕ್ರೈಸ್ತನು ಅಲ್ಲಿರುವ ಹುತ್ತಗಳನ್ನು ಕತ್ತರಿಸಿದನು, ಅಷ್ಟರಲ್ಲಿ ಒಂದು ಮರದೊಳಗೆ ಒಂದು ದೊಡ್ಡ ಸರ್ಪವು ಕಾಣಿಸಿಕೊಂಡಿತು. ಕ್ರೈಸ್ತನ ಮಗನು ಅದನ್ನು ಕೊಂದುಹಾಕಿದನು. ಆ ಮೇಲೆ ಆ ಕ್ರೈಸ್ತನ ಮನೆಯಲ್ಲಿ ಎಲ್ಲಿ ನೋಡಿದರೂ ಹಾವುಗಳೇ ಕಾಣಿಸಿಕೊಂಡವು. ಇದರಿಂದ ಮನೆಯವರೆಲ್ಲರೂ ಭೀತಿಪಟ್ಟು ಶಾಸ್ತ್ರವನ್ನು ಕೇಳಿದರಂತೆ. ಶಾಸ್ತ್ರ ಹೇಳುವವನು ನೀವು ಕೊಂದುಹಾಕಿದ ಸರ್ಪವು ಎಲ್ಲ ಸರ್ಪಗಳಿಗೆ ಒಡೆಯನಾಗಿರುವುದರಿಂದ ನೀವು ಮಾಡಿದ ಅಪರಾಧಕ್ಕೆ ಪ್ರತಿಫಲವನ್ನು ಮಾಡುವುದಕ್ಕೆ ಹೀಗೆ ಪರಿಣಮಿಸಿರುವುದೆಂದು ಹೇಳಿದನಂತೆ, ಆ ಕ್ರೈಸ್ತ ಯಜಮಾನನು ಭಯದಿಂದ ಬಾಯಿಬಾಯಿಬಿಡುವನಂತೆ.

ಸ್ವೀಕಾರ.

ಶ್ರೀ ಕ್ಷೇತ್ರ ಕಾಶಿ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳಾದ ಶ್ರೀ ಪುಟಗಿರಿ ಬೃಹನ್ಮಠದ ಚಿದ್ಘನ ಶಿವಾಚಾರ್ಯರು ಈ ಪತ್ರಿಕೆಯ ಪೋಷಣಕ್ಕಾಗಿ ಐದು ರೂಪಾಯಿಗಳನ್ನು ಕಳುಹಿಸಿದ್ದಾರೆ.

ಮ|| ರಾ|| ಹಾರೆಹಳ್ಳಿ ದುಮ್ಮಿ ಶಂಕರಪ್ಪನವರ ಮಗ ಚನ್ನಪ್ಪನಿಗೂ ಮ|| ರಾ|| ಸ್ವಾಮುತಿಹಳ್ಳಿಯ ಚನ್ನಬಸಪ್ಪನವರ ಪುತ್ರಿ ಕುಂ|| ಸೌ|| ಬಸವಮ್ಮನಿಗೂ ಮತ್ತು ಹೊನ್ನಾಳ ಕಮ್ಮಾರಗಟ್ಟೆ ಮುದಪ್ಪನವರ ಮಗ ರೇವಣಪ್ಪನಿಗೂ ಹಾರೆಹಳ್ಳಿ ದುಮ್ಮಿ ಶಿವಲಿಂಗಪ್ಪನವರ ಪುತ್ರಿ ಶಿವಮ್ಮನಿಗೂ ಹಾರೆಹಳ್ಳಿಯಲ್ಲಿ ನೆರವೇರಿದ ವಿವಾಹಮಹೋತ್ಸವದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ನಾಲ್ಕು ರೂಪಾಯಿಗಳು ಸ್ವಾಮುತಿಹಳ್ಳಿ ಮಠದ ವೇ|| ಸಂಗಪ್ಪಯ್ಯನವರಿಂದ ತಲ್ಪಿರುತ್ತವೆ.

ಮ||ರಾ|| ಕೋಟೆಗಡ್ಡಿ ನಾಗಪ್ಪನವರು ತಮ್ಮ ತಂದೆಯವರಾದ ಮ|| ರಾ|| ಶಿವಪ್ಪಗೌಡರು ಶಿವಾಧೀನವಾದ ದಿವಸದ ಶಾಂತಿನಿವೃತ್ತಿಗಾಗಿ ಗೋದಾನಾದಿಗಳನ್ನು ಮಾಡಿ ವೇ|| ಉಪಾಧ್ಯಾಯರವರಾದ ಶಿವಲಿಂಗಯ್ಯನವರ ಅಭಿಪ್ರಾಯದ ಪ್ರಕಾರ ಈ ಪತ್ರಿಕೆಗೆ 2 ರೂಪಾಯಿಗಳನ್ನು ಸಮರ್ಪಿಸಿದ್ದಾರೆ.

ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ನೋಟೀಸು.

ಕೂಡ್ಲಿಗಿ ತಾಲೂಕು ಕೊಟ್ಟೂರುಗ್ರಾಮದಲ್ಲಿ ಇಟಗಿ ರೋಡ್ಡಿನಮೇಲೆ ಮತ್ತು ರೈಲ್ವೆಸ್ಟೇಷನ್ ದಾರಿಯಲ್ಲಿರುವ ಈ ಕೆಳಗೆ ನಮೂದಿಸಿರುವ ಯೂನಿಯನ್‌ಬೋರ್ಡಿಗೆ ಸೇರಿದ ಭೂಮಿಗಳು ವಿಕ್ರಯಿಸಲ್ಪಡುತ್ತವೆ. ಕೊಟ್ಟೂರು ಯೂನಿಯನ್ ಮೇನ್ ಬಜಾರಿನಲ್ಲಿರುವ ಯೂನಿಯನ್‌ಬೋರ್ಡ್ ಪ್ರೆಸಿಡೆಂಟರು ಮ|| ರಾ|| ಕೆ. ಬಸವಲಿಂಗನಗೌಡರ ಅಂಗಡಿಯ ಹತ್ತಿರ 5-9-27. ತೇದಿ ಸೋಮವಾರ ಉದಯ 8 ಗಂಟೆಗೆ ಯಾಲಂ ಹಾಕಲ್ಪಡುತ್ತವೆ.

(1) ದರಖಾಸ್ತುಮಾಡುವವರು ರೂ.50—0—0 ದರವತ್ತು ಕಟ್ಟಬೇಕು.

(2) ಆಖೈರು ಸವಾಲುದಾರರು ಯಾಲಂ ಪೂರ್ತಿಯಾದ ತಕ್ಷಣವೇ ಸವಾಲು ಮೊತ್ತದೊಳಗೆ ನಾಲ್ಕನೆಯ ಭಾಗ ಮೊತ್ತಕಟ್ಟಬೇಕು.

(3) ಯಾಲಂ ಯೂನಿಯನ್‌ಬೋರ್ಡಿನಲ್ಲಿ ಮುಂಜೂರಾಗಿ ಮಂಜೂರು ಉತ್ತರವು ತಲಪಿದ 15 ದಿವಸದೊಳಗೆ ಉಳಿದಮೊತ್ತ ಕಟ್ಟಬೇಕು.

(4) ಈ ಷರ್ತುಗಳಿಗೆ ತಪ್ಪಿದರೆ ಆಖೈರು ಸವಾಲುದಾರನ ಜವಾಬುದಾರಿ ಮೇಲೆ ಪುನಃ ಯಾಲಂ ಹಾಕಲ್ಪಡುತ್ತದೆ.

(5) ಈ ಭೂಮಿಯನ್ನು ಯಾಲಂದಾರರ ಹೆಸರಿಗೆ ವಿಕ್ರಯಪತ್ರ ಬರೆಯಿಸಿ ರಿಜಿಸ್ಟರು ಮಾಡಿಸಬೇಕಾದರೆ ಆ ಖರ್ಚುಗಳನ್ನು ಅವನೇ ವಹಿಸಬೇಕು.

ಸರ್ವೇನಂಬರು	ಎಕರೆ	ತರಾ	
527	1—70	1—8—0	
513	1—[illegible]	1—7—0	ಖುಷ್ಕಿ
514	[illegible]—15	0—6—0	

ಅವುಗಳ [illegible] ಈ ಸ್ಥಳ ಜಿನ್ನು ಪ್ರೆಸ್ ಹಾಕೋದಕ್ಕೆ ಬಹಳ ಅನುಕೂಲವಾಗಿ ಇರುತ್ತದೆ.

ಕೊಟ್ಟೂರು, K. BASALINGANA GOWD
ತಾ|| 27-7-27. ಪ್ರೆಸಿಡೆಂಟ್.

ಸಂಸ್ಕೃತಪರೀಕ್ಷೆಯಲ್ಲುತ್ತೀರ್ಣರಾದ ವಿದ್ಯಾರ್ಥಿಗಳು.

ಕಾಶೀಪರೀಕ್ಷೆ.
ವ್ಯಾಕರಣ ಮಧ್ಯಮದಲ್ಲಿ
1. ನೀಲಕಂಠಶಾಸ್ತ್ರಿಗಳು ಕಾವ್ಯತೀರ್ಥ, ಬಾಸಾಪುರ.

ಕಲಕತ್ತಾಪರೀಕ್ಷೆ.
ವೇದಾಂತಾದ್ಯದಲ್ಲಿ
1. ಅಮರೇಶ್ವರಶಿವಾಚಾರ್ಯರು, ಅನರಾಳ.

ಸಾಹಿತ್ಯಮಧ್ಯಮದಲ್ಲಿ
2. ಮರುಳಾರಾಧ್ಯಶಾಸ್ತ್ರಿಗಳು, ಬಾಸಾದುರ್ಗ.

ಸಾಹಿತ್ಯಾದ್ಯದಲ್ಲಿ
3. ವೃಷಭಲಿಂಗಶಿವಾಚಾರ್ಯರು, ಗೂಳ್ಯೂರು.
4. ಶಿವದೇವಶಾಸ್ತ್ರಿಗಳು, ಕುಪ್ಪಿಗಿ.
5. ಕಾಶೀನಾಥಶಾಸ್ತ್ರಿಗಳು, ನರೇಗಲ್ಲು.

ಶುಕ್ಲಯಜುರ್ವೇದಾದ್ಯದಲ್ಲಿ
1) ವೇ|| ಮ|| ವೀರಭದ್ರಶರ್ಮ, ಹೈದರಾಬಾದ್ ಇವರು ಪ್ರಥಮಶ್ರೇಣಿಯಲ್ಲಿ (First Division) ಪಾಸಾಗಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಮಂಡಲಿ, ತುಮಕೂರು.

ಶ್ರೀ ಪರಶಿವನ ಪಂಚಮುಖೋದ್ಭೂತರಾದ ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಕೃಪಾಶೀರ್ವಾದಬಲದಿಂದ ಈ ಮಂಡಲಿಯು ಸ್ಥಾಪನೆಯಾಗಿರುತ್ತದೆ.

ಉದ್ದೇಶಗಳು.

1. ಗುರುವರ್ಗದ ಶ್ರೀ ಪಟ್ಟದಸ್ವಾಮಿಗಳು ಇತರ ಮಠಾಧೀಶ್ವರರು ತಮ್ಮ ಕರ್ತವ್ಯಗಳಲ್ಲಿ ಜಾಗೃತರಾಗಿ ಸಮಾಜಸುಧಾರಣೆಯಲ್ಲಿ ನೆರವಾಗಲು ಪ್ರಾರ್ಥಿಸುವುದು ಮತ್ತು ಇವರ ಸುಧಾರಣೆಗೆ ಅವಶ್ಯ ಸೇವೆ ಮಾಡುವದು.

2. ಸಾಧ್ಯವಾದಾಗೆಲ್ಲಾ ಪ್ರಾಂತಿಕ ಗುರುವರ್ಗೋತ್ತೇಜಕಸಭೆಗಳನ್ನು ಕೂಡಿಸಿ ಆ ಮೂಲಕ ಧಾರ್ಮಿಕಸುಧಾರಣೆಗೆ ಪ್ರೋತ್ಸಾಹಿಸುವುದು.

3. ಮತಸ್ಥಾಪನಾಚಾರ್ಯವರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಜಯಂತಿಮಹೋತ್ಸವಗಳನ್ನು ವಿಶೇಷಪ್ರಚಾರಕ್ಕೆ ತರುವುದು

4. ಶ್ರೀ ಭಗವತ್ಪಾದರವರ ಸಂಬಂಧವಾದ ಕೀರ್ತನೆಗಳು, ಸಹಸ್ರನಾಮ, ಅಷ್ಟೋತ್ತರ ಮೊದಲಾದ ಸ್ತೋತ್ರಗಳನ್ನು ಹೆಚ್ಚು ಪ್ರಚಾರಗೊಳಿಸುವುದು.

5. ಶ್ರೀ ಭಗವತ್ಪಾದರ ಕೀರ್ತನೆಗಳನ್ನು ಬರೆಯಿಸಿ ಮುದ್ರಿಸುವುದು.

6. ಅವಶ್ಯವಿರುವ ಪಂಚಾಚಾರ ವಿಶ್ವಸ್ತಮುಖ್ಯಕಾರ್ಯಗಳ ವಿಚಾರದಲ್ಲಿ ಕರಪತ್ರಗಳನ್ನು ಪ್ರಕಟಿಸುವುದು ಮತ್ತು ಕೀರ್ತನೆಗಳು ಉಪನ್ಯಾಸಗಳ ಮೂಲಕ ಧರ್ಮಜಾಗ್ರತೆಗೆ ಹೆಚ್ಚಾಗಿ ನೆರವಾಗುವುದು.

7. ಶ್ರೀಮಜ್ಜಗದಾಚಾರ್ಯರುಗಳ ಭಾವಚಿತ್ರಗಳನ್ನು ಹೆಚ್ಚು ಪ್ರಚಾರದಲ್ಲಿ ತರುವದು.

8. ಶ್ರೀ ಜಗದ್ಗುರು ಪಂಚಾಚಾರ್ಯಪ್ರಭಾಪತ್ರಿಕೆಗೆ ಧನಸಹಾಯಮೂಲಕವೂ ಲೇಖನಗಳಮೂಲಕವೂ ಸೇವೆಮಾಡುವುದು.

9. ಶ್ರೀಮಜ್ಜಗದಾಚಾರ್ಯರವರ ಕೃಪಾಶೀರ್ವಾದದಿಂದ ಪ್ರತಿಷ್ಠಿತವಾಗುವ ಸಂಸ್ಕೃತಕಾಲೇಜಿಗೂ ಇತರ ಧರ್ಮಸಂಸ್ಥೆಗಳಿಗೂ ಅವಶ್ಯ ಸೇವೆಮಾಡುವದು ಮತ್ತು ತುಮಕೂರು ಮೊದಲಾದ ಸ್ಥಳಗಳಲ್ಲೂ ಇವುಗಳ ಶಾಖೆಗಳು ಸ್ಥಾಪಿತವಾಗಲು ಸೇವೆಮಾಡುವುದು.

10. ಧರ್ಮಗ್ರಂಥಗಳನ್ನು ಶೇಖರಿಸಲು ಅಲ್ಲಲ್ಲಿ ವಾಚನಾಲಯಗಳನ್ನು ಮತ್ತು ಪುಸ್ತಕಭಂಡಾರಗಳನ್ನು ಸಾಧ್ಯವಾದಂತೆ ಸ್ಥಾಪಿಸುವುದು.

11. ಶಾಖಾಮಂಡಲಿಗಳನ್ನು ಸ್ಥಾಪಿಸುವದು.

12. ಸಮಾಜದಲ್ಲಿ [illegible] ಅವಕಾಶವಿಲ್ಲದಂತೆ ಏಕಮತ್ಯವನ್ನು ಸ್ಥಾಪಿಸಿ ಸಂಘಟಿಸುತ್ತಿರುವದು.

ಇವೇ ಮೊದಲಾದ ಸದುದ್ದೇಶಗಳಿಂದ ಈ ಮಂಡಲಿಯು ತುಮಕೂರಿನಲ್ಲಿ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಅನೇಕ ಗುರುವರ್ಗದವರು ಮತ್ತು ಸಮಾಜಬಾಂಧವರು ಅವರವರ ಶಕ್ತ್ಯನುಸಾರ ಧರ್ಮಜಾಗೃತಿಯನ್ನುಂಟುಮಾಡಲು [illegible] ಗುರುವರ್ಗದವರು [illegible] ಉಚಿತ ಸಹಾಯ ಪ್ರೋತ್ಸಾಹವಿತ್ತು ತನು ಮನ ಕೃಪಾಶೀರ್ವಾದದಿಂದ ಪ್ರೋತ್ಸಾಹಿಸಬೇಕಾಗಿದೆ. ಇದಕ್ಕೆ ಸದಸ್ಯರಾಗುವ ಇತರ ಸಮಾಜಬಾಂಧವರು ಮೊದಲು ಪ್ರವೇಶಧನ (೧) ಅನಂತರ ತಿಂಗಳಿಗೆ (೦-೨-೦) ಅಥವಾ ಒಂದು ವರ್ಷದ ಚಂದಾ (೧-೮-೦) ನ್ನು ಆಗಲಿ ಕಾರ್ಯದರ್ಶಿಗಳಿಗೆ ಸಲ್ಲಿಸುವರು. ಮಂಡಲಿಗೆ ಒಮ್ಮೆ ೫೦-೦ ರೂ.ಗೆ ಮೇಲ್ಪಟ್ಟು ಸಹಾಯಮಾಡುವ ಶಕ್ತರು ಹಿತಚಿಂತಕರಾಗಿ ಗಣಿಸಲ್ಪಡುವರು. ಈ ಮಂಡಲಿಗೆ ಸಮಾಜಬಾಂಧವರು ಅವರವರ ಸದಸ್ಯರಾಗಿ ಸಹಾಯಸಂಪತ್ತಿಗಳನ್ನುಂಟುಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಲು ಕೋರಿಯುವ, ಪ್ರಾರ್ಥನೆ

ಸೂಚನೆ:— ಈ ಸಂಘದಿಂದ ಪ್ರಕಾಶಪಡಿಸಲು ವಿದ್ವಾಂಸರು ಮತ್ತು ಧರ್ಮಾಭಿಮಾನಿಗಳು ಶ್ರೀ ಜಗದಾಚಾರ್ಯರ ಮತ ಧರ್ಮಸಂಬಂಧವಾದ ಕೀರ್ತನೆಗಳನ್ನು ಮತ್ತು ತತ್ವತತ್ವಗಳ ಲೇಖನಗಳನ್ನು ರಚಿಸಿ ಕಳಿಸಿಕೊಡಲು ಪ್ರಾರ್ಥನೆ. ಅಂಥವುಗಳೆಲ್ಲಾ ಸಂಘದವರು ಕೃತಜ್ಞರಾಗಿ ಪ್ರಕಾಶಪಡಿಸಲು ಮುದ್ರಿಸುವರು. ನಾನಾಭಾಗದ ಸಮಾಜಬಾಂಧವರು ಎಲ್ಲಾ ಕಡೆಗಳಲ್ಲೂ ಸೇವಾಸಂಘಗಳನ್ನೂ ಭಜನಾಮಂದಿರಗಳನ್ನೂ ಸ್ಥಾಪಿಸಲು ಬೇಡುತ್ತೇನೆ.

ಶಿವಪ್ಪ, ಚಾಯರ್ಮೆನ್ ಪ್ರೆಸಿಡೆಂಟ್
ಸಿ. ಶ. ಗುರುಸ್ವಾಮಿ, ಸೆಕ್ರೆಟರಿ

ಹಿಂದಿಯು ಹಿಂದುಳಿಯಲಿಲ್ಲವೇ?

ಕರ್ನಾಟಕಮಾತೆಯು ಕರ್ಮಯೋಗಿ ಲೋಕಾಚಾರ್ಯ ಮಹಾತ್ಮಾ ಗಾಂಧಿಯನ್ನು ತನ್ನ ಅಂಕದಲ್ಲಿಟ್ಟುಕೊಂಡು ಆನಂದದಿಂದ ಆದರಿಸಿ ಯಶೋವಂತೆಯಾದಳಲ್ಲದೆ ಪುಣ್ಯವತಿಯಾದಳು. ಮಹಾತ್ಮನು ತನ್ನ ದಿವ್ಯಸಂದೇಶಾಮೃತವನ್ನು ದಾರಿದ್ರ್ಯತಪ್ತರಿಗೆ ಪಾನಮಾಡಿಸುತ್ತಾ ಶ್ರೀಮಂತರ ಮತ್ತು ಆಗರ್ಭದರಿದ್ರರು ಇವರೆಡರ ಇರುವ ಹಿಂದೂ ಸಾಗರದ ವಿಶಾಲವಾದ ಅಂತರವನ್ನು ದೇಶಭಾಷೆಗಳಿಂದ ಸರಿಗಟ್ಟಬೇಕೆಂದು ತನ್ನ ಅಸ್ಖಲಿತವಯಸ್ಸು ಅಲಕ್ಷ್ಯಿಸಿ ಸುಜೀವನವನ್ನು ತೃಣೀಕರಿಸಿ ಹಾಟುಪಡುತ್ತಿರುವುದು ಯಾವ ಲೋಕಾಭಿಮಾನಿಯ ಅಂತಃಕರಣವನ್ನು ಕಾಣೋ ಕರಗಿಸಲಾರದು! ದೇಶೋದ್ಧಾರ ಕಂಕಣಬದ್ಧರಾದ ಮಹಾತ್ಮರು ಆಳುವ ಮಹಾಸ್ವಾಮಿಯವರಾದ ನಮ್ಮ ಪ್ರಭುವರ್ಯರ ಆಹ್ವಾನವನ್ನು ಆದರದಿಂದ ಸ್ವೀಕರಿಸಿ ಮೈಸೂರುನಾಡಿಗೆ ದಯಮಾಡಿಸಿದರು. ಸುಂದರವಾದ ಭವನಗಳಿಂದಲೂ ವಿಹಾರಗಳಿಂದಲೂ ರಾರಾಜಿಸುತ್ತಿರುವ ರಾಜಧಾನಿಯನ್ನು ನೋಡಿ ಆನಂದತುಂದಿಲಹೃದಯರಾದರೂ, ಇಷ್ಟತ್ತಿಗೂ ಅಂಬಲಿಗೆ ಗಂಜಿಯಿಲ್ಲದೆ ಅಂಗೈಯಗಲ ಬಟ್ಟೆಬರೆಯಿಲ್ಲದೆ ಅಲೆದಾಡುತ್ತಿರುವ ಅನೇಕಾನೇಕ ಬಡವರಿಗಾಗಿ ಮನನೊಂದರು. ಅಸ್ಪೃಶ್ಯರೆಂದು ಜನಾಂಗದಲ್ಲಿ ತಿರಸ್ಕರಿಸಲ್ಪಟ್ಟಿರುವವರಿಗಾಗಿ ಕಣ್ಣೀರಿಕ್ಕಿದರು. ಉಪವಸ್ತ್ರ ದಂಭಾಚಾರಗಳಿಗಾಗಿ ಬಿಸುಸುಯ್ದರು. ಒಮ್ಮೆಲೆ ಅಂತರದ ಜೀವನ್ನು ಮುಚ್ಚಲು ವೇಷ-ಖಾದಿಬಟ್ಟೆ, ಬಾಷೆ-ಹಿಂದಿ ಇವೆರಡೇ ತಕ್ಕವುಗಳೆಂದು ಹೇಳಿದರು. ಖಾದಿಗೇನೋ ತಕ್ಕಮಟ್ಟಿಗೆ ರಾಜಾಶ್ರಯವು ದೊರಕಿದೆ ನಮ್ಮ ದಿವಾನರವರು ಕನ್ನು ತಿಸಿದರು. ಇದರಂತೆಯೇ ಹಿಂದೀಭಾಷೆಗೆ ರಾಜಮುದ್ರೆ ಬೇಕು. ಈಗಿನ ನೂತನವಾರ್ತಾಟಿನಂತೆ 'ಇಂಟರ್‌ಮೀಡಿಯೇಟ್' ತರಗತಿಯಲ್ಲಿ 'ಹಿಂದಿ' ಭಾಷೆಯು ಹಿಂದೆಬಿದ್ದಿದೆ. ಆರಬಿಕ್ ಪಾರ್ಸಿ ಭಾಷೆಗಳಿಗೆ ಸ್ಥಾನದೊರಕಿದೆ. ನಮ್ಮ ಘನವಿದ್ಯಾಖಾತೆಯ ಪ್ರಧಾನಾಧಿಕಾರಿಗಳು ಈ ಹಿಂದೀಭಾಷೆಗೆ ಪ್ರಾಥಮಿಕಶಾಲೆಗಳು ಮೊದಲುಗೊಂಡು ಹೈಸ್ಕೂಲಿನವರೆಗಾದರೂ ಯೋಗ್ಯ ಗೌರವನ್ನೊದಗಿಸಿದರೆ ನಮ್ಮ ನಾಡಿನಲ್ಲಿ ಖಾದಿಗೂ ಹಿಂದಿಗೂ ಉತ್ತೇಜನವುಂಟಾಗುತ್ತದೆ. ದಿವಾನ್ ಸಾಹೇಬರು ಸರಕಾರಿ ಶಾಲೆಗಳೂ ಸಹ ಖಾದಿ ಧರಿಸಬಹುದೆಂದು ತಮ್ಮ ಅಪ್ಪಣೆಯನ್ನು ಕೊಟ್ಟಿರುವಾಗ ಶಾಲೆಗಳಲ್ಲಿ ಹಿಂದಿ ಭಾಷಾಪ್ರಚಾರಕ್ಕೆ ಹಿಂದೆಗೆಯುವರೇಕೆ? ಮಹಾತ್ಮನು ನಮ್ಮ ದೇಶಕ್ಕೆ ಬಂದ ಶಾಶ್ವತಸ್ಮಾರಕವೆಂದರೆ ಖಾದಿ ಉಡುಪು! ಹಿಂದಿಭಾಷೆ! ಇವುಗಳ ನಿರಾತಂಕ ವ್ಯಾಪ್ತಿಯು ಇದೇ ಮಹಾತ್ಮರಿಗೆ ಸೌಭಾಗ್ಯ ಅಂತಃಪ್ರಾಣ! ಹೆಚ್ಚೇನು! ಜನನಾಯಕರು ಏಕೀಭವಿಸಲಾರರೇ!

ದೇಶಸೇವಕ,
ಬಿ. ಎಚ್. ಲಿಂಗಯ್ಯ, ಮೈಸೂರು.

ಕೊಲ್ಲಿಪಾಕಿ ಮಹಾಕ್ಷೇತ್ರ

ಲೇಖಕ:— ಚಂದ್ರಶೇಖರಶಾಸ್ತ್ರೀ ವ್ಯಾಕರಣತೀರ್ಥ
ಹೊಳಲ ಹಿರೇಮಠ.

ವೀರಶೈವ ಧರ್ಮಗ್ರಂಥಗಳಲ್ಲಿ ಪರಮಗುರು ಶ್ರೀ ರೇಣುಕನ ಉತ್ಪತ್ತಿಯ ಸ್ಥಾನವಾದ ಕೊಲ್ಲಿಪಾಕಿ ಶ್ರೀ ಸೋಮೇಶ್ವರ ಲಿಂಗದ ವರ್ಣನೆಯು ಅನೇಕ ಪ್ರಕಾರವಾಗಿ ಕವಿಗಳಿಂದ ಹೃದಯಂಗಮವಾಗಿ ವಿವರಿಸಲ್ಪಟ್ಟಿರುವ ಸಂಗತಿಯು ಸರ್ವರಿಗೂ ಗೊತ್ತಿರುವದಾಗಿರುವದಷ್ಟೇ? ಆದರೆ ಪೂರ್ವಕಾಲದ ವೀರಶೈವರು ಇತಿಹಾಸಕ್ಕೆ ಪಾಶ್ಚಿಮಾತ್ಯರಷ್ಟು ಲಕ್ಷ್ಯವನ್ನು ಕೊಡುತ್ತಿರಲಿಲ್ಲ. ಆದ್ದರಿಂದಲೇ ಈಗ ಇತಿಹಾಸವಿಲ್ಲದೆ ವೀರಶೈವರು ಅಂಧಕಾರಮಯವಾದ ಸ್ಥಿತಿಯಲ್ಲಿರಬೇಕಾಗಿದೆ. ನಮ್ಮ ಭಾರತ ಭೂಮಿಯು ಮಹಾತ್ಮರ ಅದರ್ಶ ಪುರುಷರಿಗೆ ತವರುಮನೆಯಾಗಿದ್ದರಿಂದಲೇ ವೀರಶೈವ ಸಮಾಜದಲ್ಲಿ ಅನೇಕ ಮಹಾತ್ಮರು ಜನಿಸಿ ಐಕ್ಯರಾಗಿ ಹೋಗಿದ್ದುವದರಿಂದ ಅಂಥ ಪುರುಷಪುಂಗವರ ಚರಿತ್ರೆಗಳು ಸಾಮಾನ್ಯರಿಗೆ ಮಾರ್ಗದರ್ಶಕಗಳಾಗಿರುತ್ತವೆ. ಆದ್ದರಿಂದ ಆ ಮಹಾತ್ಮರ ಚರಿತ್ರೆಗಳನ್ನು ಆದಷ್ಟು ಮಟ್ಟಿಗೆ ಕೋರಿಸುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯಕರ್ಮವಾಗಿರುತ್ತದೆ. ಇಂಥ ಮಹನೀಯರಲ್ಲಿ ಶ್ರೀ ರೇಣುಕನೂ, ವೀರಶೈವ ಸಮಾಜ ಸ್ಥಾಪಕನೂ, ಅನೇಕ ಮನು, ಮುನಿ, ಸಿದ್ಧ ಋಷಿಗಳಿಗೆ ವೀರಶೈವ ಸಿದ್ಧಾಂತೋಪದೇಶವನ್ನು ಮಾಡಿ ಈ ಮತವನ್ನು ಅನೇಕ ಪ್ರಕಾರವಾಗಿ ಉದ್ಧಾರಮಾಡಿದವನೂ ಆದ ಜಗದ್ಗುರು ರೇಣುಕನ ಚರಿತ್ರೆಯನ್ನು ಇದುವರೆಗೂ ವೀರಶೈವರು ಪ್ರಸಿದ್ಧಿಪಡಿಸದಿರುವದು ಶೋಚನೀಯವೇ ಸರಿ. ಇಂಥ ಜಗದೀಶ್ವರ ಚರಿತ್ರೆಯು ಹಾಗೇ ಇಷ್ಟಾದ ಮೇಲೆ ಉಳಿದವ ಚರಿತ್ರೆಯನ್ನು ಶೋಧಿಸುವರಾರು? ಕರ್ನಾಟಕ ದೇಶದಲ್ಲಿ ಆಗಿ ಹೋದ ಮಧ್ವ, ರಾಮಾನುಜ, ಶಂಕರ ಮೊದಲಾದ ಆಚಾರ್ಯರ ಚರಿತ್ರೆಗಳು ಜನರ ನಾಲಿಗೆಯ ತುದಿಯಲ್ಲಿ ಕುಣಿಯುತ್ತಿರುವಾಗ ಅವರ ಪಂಕ್ತಿಯಲ್ಲಿಯೇ ಸೇರಿ ಶ್ರೀ ಶಂಕರಾಚಾರ್ಯರಿಗೂ ಕೂಡ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟ ಆಗಣಿತಮಹಿಮಾಶಾಲಿಯಾದ ವರಗುರು ರೇಣುಕಾಚಾರ್ಯರ ಚರಿತ್ರೆಯು ಇಲ್ಲದಿರುವದು ಆತನ ನಾಮಸ್ಮರಣೆಯನ್ನು ಮಾಡತಕ್ಕ ಶಿಷ್ಯ ಮಂಡಲಿಗೆ ಆಶ್ಚರ್ಯದಾಯಕವೇ ಸರಿ. ಹೇಗೆ ಶಂಕರ ದಿಗ್ವಿಜಯ, ಮಧ್ವವಿಜಯ, ಇವುಗಳು [illegible] ಇತ್ತೀಚಿಗೆ ಆಗಿಹೋದ ದಯಾನಂದ ದಿಗ್ವಿಜಯವೂ ಕೂಡ ಪ್ರಕಟವಾಗಿರುವದು. ಅದರಂತೆ ಅಗಸ್ತ್ಯ ಮೊದಲಾದ ಮುನಿಗಳಿಗೂ ಕೂಡ ಗುರುವಾಗಿದ್ದ ರೇಣುಕಾಚಾರ್ಯರ ದಿಗ್ವಿಜಯವು ಇಲ್ಲದಿರುವದು ವೀರಶೈವರ ಹೇಡಿತನದ ಹೆಗ್ಗುರುತನ್ನು ತೋರುವದಾಗಿ ತೋರುತ್ತದೆ ಇರಲಿ.

ನಾನು [illegible] ಪ್ರಕರಣವು ಹೈದರಾಬಾದಿನಲ್ಲಿ ನಡೆದಾಗ ಮೂರು ತಿಂಗಳುಗಳವರೆಗೆ ಅಲ್ಲಿ ಇದ್ದೆನು. ಆದರೆ ಆ ನಡುವಿನಲ್ಲಿಯೇ ಇದ್ದ ಕೊಲ್ಲಿಪಾಕಿಗೆ ಹೋಗಿ ಬರುವ ಸುಯೋಗವು ಒದಗಿ ಬರಲಿಲ್ಲ. ಒಂದೆರಡು ಸಾರೆ ಪ್ರಯತ್ನವನ್ನು ಮಾಡಿದರೂ ಸಾಧ್ಯವಾಗಲಿಲ್ಲ. [illegible] ಸಂಚಿಕೆಯಲ್ಲಿ ಪ್ರಕಟವಾ

ಸ್ಥ ಮತ್ತು ವೀರಶೈವ" ಎಂಬುವ ಲೇಖನವನ್ನು ದ ಕೂಡಲೇ ಶ್ರೀ ರೇಣುಕಾಚಾರ್ಯರ ಉತ್ಪತ್ತಿ ಯಾದ ಕೊಲ್ಲೀಪಾಕಿಯ ಸೋಮೇಶ್ವರ ಲಿಂಗ ದರ್ಶನ ಮಾಡಿಕೊಂಡು, ಬಂದರೆ ವೀರಶೈವರ ಆಸಕ್ತಿ ಅಥವಾ ರೇಣುಕಾಚಾರ್ಯರ ಚರಿತ್ರೆಗೆ ಕಾರಕಗಳಾದ ವಿಷಯಗಳ ಸಂಗ್ರಹವು ಆಗಬ ಬ ಆಕಾಂಕ್ಷೆಯು ಉತ್ಪನ್ನವಾಯಿತು. ಶ್ರೀ ರಾವಸಾಹೇಬ ಹಳಕಟ್ಟಿಯವರಿಗೊಂದು ನ್ನು ಬರೆದು ನನ್ನ ಅಭಿಪ್ರಾಯವನ್ನು ತಿಳಿಸಿ ಅವರಿಂದ ಉತ್ತರವಾದರೂ ಬಂದಿತು. ತೀವ್ರ ಯೇ ತಾ|| ೨೨-೭-೨೭ ನೇ ದಿನ ಯಾದಗಿರಿ ದ ಹೈದರಾಬಾದಿಗೆ ಹೋದೆನು. ಅಲ್ಲಿ ಕೊಲ್ಲೀಪಾ ಕೆಲವು ಮಾಹಿತಿಗಳನ್ನು ದೊರಕಿಸಿಕೊಳ್ಳಬೇ ಅಪೇಕ್ಷಿಸಿದೆನು. ಯಾಕಂದರೆ ಕೊಲ್ಲೀಪಾಕಿಯು ಶುದ್ಧ ತೆಲುಗು ದೇಶವಾದ ಕಾರಣ ಅಲ್ಲಿ ಮರಾಠೀ, ಕನ್ನಡ ಮೊದಲಾದ ಭಾಷೆಗಳ ಮಾತಾಡುವ ವಿಲ್ಲ. ನನಗಾದರೋ ಶುದ್ಧ ತೆಲುಗು ಭಾಷೆಯು ಗ ಬಾರದೆ ಇರುವ ಕಾರಣ ತೆಲುಗು ಕನ್ನಡ ಗಳನ್ನು ಬಲ್ಲವರೊಬ್ಬರನ್ನು ಆಶ್ರಯಿಸಬೇಕೆಂದು ಸೋಮೇಶ್ವರರಾವ್ ಹೈಕೋರ್ಟ ವಕೀಲ ವೀರಶೈವ ಸದ್ಗೃಹಸ್ಥರ ಭೆಟ್ಟಿಯಾದೆನು. ಅವರು ಪ್ರಾಂತವನ್ನು ಕೇಳಿ ಬಹಳ ಸಂತೋಷಪಟ್ಟು ಭಾಷಾ (ತೆಲುಗು) ಸೇವಕರಾದ ಹನುಮಂತ ಹೈಕೋರ್ಟ ವಕೀಲರೆಂಬ ದೊಡ್ಡ ಮನಸ್ಯರ ಕರೆದುಕೊಂಡು ಹೋದರು. ಅವರಿಂದ ಎಲ್ಲ ವಿಷ ನ್ನು ತಿಳಿದುಕೊಂಡೆನು.

ಕೊಲ್ಲೀಪಾಕಿಯು ಹೈದರಾಬಾದಿನಿಂದ ಓರುಗಲ್ಲ ಬೆಜ ಕ್ಕೆ ಹೋಗುವ ಮಾರ್ಗದಲ್ಲಿರುತ್ತದೆ. ಅರ್ಥಾತ್ ಸ್ಟೇಶನ್ 'ಆಲೇರು' ಎಂಬುವದಿರುವದು. ಈ ನ್ನಿಗೆ ಇಳಿದರೆ ಕೊಲ್ಲೀಪಾಕಿಯು ನಾಲ್ಕು ಮೈಲು ದಲ್ಲಿರುತ್ತದೆ. ಹೈದರಾಬಾದಿನಿಂದ ಪ್ರಾತಃಕಾಲ ಗಂಟೆಗೆ ಬಿಟ್ಟ ಗಾಡಿಯು ಸರಿಯಾಗಿ ಆಲೇರು ಶನಕ್ಕೆ ೧೧ ಗಂಟೆಗೆ ಮುಟ್ಟಿತು. ಈ ಸ್ಥಳದಲ್ಲಿಯ ದು ಆಶ್ಚರ್ಯಕರವಾದ ಸಂಗತಿಯನ್ನು ನಾನು ಹೇಳದೆ ಇರಲಾರೆನು. ಸ್ಟೇಶನದಲ್ಲಿ ಇಳಿದ ಡಲೇ ಓರ್ವ ಬಾಲಿಕೆಯು 'ಕಲ್ಲುತ್ರಾಗು ತುನ್ನಾ' (ಮದ್ಯವನ್ನು ಸೇವಿಸುವಿರಾ) ಎಂದು ಕೂಗಿ . ಅದರ ಅರ್ಥವು ಮೊದಲು ನನಗೆ ತಿಳಿಯಲಿಲ್ಲ. ತ್ರದಲ್ಲಿದ್ದ ಹೈದರಾಬಾದಿನವನನ್ನು ಕೇಳಲಾಗಿ ಸರಿ ಯಾದ ಅರ್ಥವನ್ನು ಹೇಳಿದನು. ಕೂಡಲೇ ಆಶ್ಚ ರ್ಯವೂ ವ್ಯಸನವೂ ಆಯಿತು. ಇಂಥ ಅಶಿಷ್ಟವ್ಯವಹಾ ರ ಯಾಕೆ ಇರುವದೆಂದು ಕೇಳಲಾಗಿ ಈ ಪ್ರಾಂತ ದಲ್ಲಿ [illegible] ವೈಶ್ಯರೂ ಬ್ರಾಹ್ಮಣರೂ ಮದ್ಯಪಾನವನ್ನು ಮಾಡುತ್ತಾರಾದ ಕಾರಣ ಪ್ರತಿಯೊಬ್ಬ ಗೂ ಕೇಳುವ ರೂಢಿಯು ಇರುತ್ತದೆ. ಈ ದೇಶದಲ್ಲಿ ಶೇಷವಾಗಿ ತಾಳದ ಹೆಂಡವನ್ನು ಮಾಡುತ್ತಿರುವ ರಣ ಈಚಲ ಗಿಡದ ಹೆಂಡದಂತೆ ನಿಷೇಧ ಮಾಡುವ ಲ್ಲವೆಂದು ಅಂದನು. ಇದೇ ಅಲ್ಲವೇ ಪಶುವ್ಯಕ್ತಿಯ ರಮಾವಧಿಯು ಎಂದು ನನ್ನ ಮನಸ್ಸಿಗೆ ಅನಿಸಿತು.

ಹಾಗೆಯೇ ನಾವು ಕೊಲ್ಲೀಪಾಕಿಯ ದಾರಿಯನ್ನು ಹಿಡಿದೆವು. ಗಿಡಗಳ ಗುಂಪಿನಲ್ಲಿ ಪಕ್ಷಿಗಳ ಇಂಪಾದ ಕಿಲಿಕಿಲಿ ಧ್ವನಿಯನ್ನು ಕೇಳುತ್ತ, ಪುಷ್ಪಗಳ ಕಂಪನ್ನು ಸೇವಿಸುತ್ತ ಸೊಂಪಾಗಿ ಹೋಗುತ್ತಿದ್ದ ಕಾಲದಲ್ಲಿ ಎಡ ಬಲಕ್ಕೆ ಗಗನ ಚುಂಬಿತಗಳಾದ ತಾಡವಾಲೆಯ ವೃಕ್ಷಗಳು ಮಾರ್ಗಸ್ಥರಿಗೆ ಸ್ವಾಗತವನ್ನು ಮಾಡುತ್ತವೆಯೋ ಏನೋ ಎಂಬುವಂತೆ ಮಂದಮಾರುತನಿಂದ ಕಂಪಿಸುತ್ತಿರುವದು ಕಣ್ಣಿಗೆ ಬಿದ್ದಿತು. ಮಲೆನಾಡು ಪ್ರಾಂತಗಳಾದ ಸಾಗರ, ಶಿರಸಿ ಸಿದ್ದಾಪುರ ಮೊದಲಾದ ಕಡೆಯಲ್ಲಿಯ ಜನರು ತೆಂಗಿನ ಬನಗಳನ್ನೂ, ಅಡಿಕೆಯ ತೋಟಗಳನ್ನು ಜೋಪಾನ ಮಾಡುವಂತೆ ಇಲ್ಲಿಯ ಜನರು ತಾಳೆಯ ಗಿಡಗಳನ್ನು ಜೋಪಾನ ಮಾಡುವದು ಕಂಡುಬಂದಿತಲ್ಲದೆ ಸ್ವೇಚ್ಛನ್ನಿಸಲ್ಲಾದ ಅನುಭವವು ಸ್ಥಿರವಾಯಿತು. ನಮ್ಮಲ್ಲಿ ಜಾತ್ರೆ, ಸಿಬ್ಬಣ ಮೊದಲಾದ ಸಮಯಗಳಲ್ಲಿ ಎತ್ತಿಗೆ ಕುರಿಗೆಜ್ಜೆಯ ಅಥವಾ ಗಂಟೆಯ ಸರಗಳನು ಕಟ್ಟುವಂತೆ ಒಂದೊಂದು ಗಿಡಕ್ಕೆ ಸುತ್ತಲೂ ಏಳೆಂಟು ಗಡಿಗೆಗಳನ್ನು ಕಟ್ಟಿರುವದನ್ನು ನೋಡಲಾಗಿ ಪರಮಾಶ್ಚರ್ಯವೆನಿಸಿತು. ಮತ್ತು ಮದ್ಯಪಾನದ ನಿಷೇಧವು ಈ ಪ್ರಪಂಚದಲ್ಲಿ ಪುಸ್ತಕದಲ್ಲಿ ಮಾತ್ರ ಇರುವದೆಂದು ಅನಿಸಿತು.

ನಾವು ಹನ್ನೆರಡು ಗಂಟೆಗೆ ಸರಿಯಾಗಿ ಕೊಲ್ಲೀಪಾಕಿಗೆ ಮುಟ್ಟಿದೆವು. ಅಲ್ಲಿ ವೀರಶೈವರ ಹಿರೇಮಠದಲ್ಲಿ ಉಳಿದುಕೊಂಡೆವು. ಇಲ್ಲಿ ನೋಡತಕ್ಕಂಥ ಕೆಲವು ಸ್ಥಳಗಳಿರುತ್ತವೆ. ಮೊದಲು ದೇವಾಲಯಗಳ ವಿಷಯ ನೋಡೋಣ.

೧. ಸೋಮೇಶ್ವರ ದೇವಾಲಯವು— ಇದೇ ಈ ಗ್ರಾಮದ ಮುಖ್ಯ ದೇವಾಲಯವು. ಇದೇ ನಮ್ಮ ಶ್ರೀ ಜಗದ್ಗುರು ರೇಣುಕರ ಉತ್ಪತ್ತಿ ಸ್ಥಾನವು. ಇದು ಬಹಳ ಪ್ರಾಚೀನ ಕಾಲದ್ದಿರುವದರಿಂದ ಬಹಳ ಶಿಥಿಲವಾಗಿರುತ್ತದೆ. ದೇವಾಲಯವು ಬಹಳ ವಿಸ್ತಾರವಾಗಿಯೂ ಎಲ್ಲ ಕಲ್ಲಿನಿಂದ ಕಟ್ಟಿಸಿರುವಂಥದ್ದಾಗಿಯೂ ಇರುತ್ತದೆ. ಲಿಂಗಮೂರ್ತಿಯು ಉದ್ಭವ ಮೂರ್ತಿಯಾದ ಕಾರಣ ಭೂಮಿಯ ಮೇಲ್ಭಾಗಕ್ಕೆ ಬಹಳ ಎತ್ತರವಿರುವದಿಲ್ಲ. ಇಲ್ಲಿಯ ಒಂದೆರಡು ಮೂರ್ತಿಗಳನ್ನು ನೋಡಲಾಗಿ, ಕಾಶಿಯ ಹತ್ತರವಿರುವ ಸಾರನಾಥ ಎಂಬುವ ಸ್ಥಳದಲ್ಲಿದ್ದ ಬುದ್ಧನಕಾಲದ ಸುಂದರ ಮೂರ್ತಿಗಳ ನೆನಪೇ ನನಗಾಯಿತು. ಅರ್ಥಾತ್ ಇವು ಬಹಳ ಪ್ರಾಚೀನ ಕಾಲದ ಮೂರ್ತಿಗಳೆಂದು ತಿಳಿಯುತ್ತದೆ. ಸೋಮನಾಥನ ಗುಡಿಯ ಒಳಗೆ ಭ್ರಮರಾಂಬಾ, ಅನ್ನಪೂರ್ಣಾ ಎಂಬುವ ಮೂರ್ತಿಗಳೂ, ಹೊರಭಾಗದಲ್ಲಿ ಲಿಂಗ ಮತ್ತು ವೀರಭದ್ರನ ಮೂರ್ತಿಗಳೂ ಇರುತ್ತವೆ. ಈ ಗುಡಿಯ ಕೆಲವು ಭಾಗಗಳು ಬಿದ್ದುಹೋಗಿರುತ್ತವೆ. ಹೀಗೆಯೇ ಕೆಲವು ದಿವಸಗಳು ಹೋದರೆ ಇವು ನಾಮಶೇಷವಾಗಬಹುದೆಂದು ತೋರುತ್ತದೆ. ಯಾಕಂದರೆ ಈ ಪ್ರಾಂತದಲ್ಲಿ ವೀರಶೈವರ ವಸತಿಯು ಬಹಳ ಕಡಿಮೆ ಇರುತ್ತದೆ. ಸರಕಾರದವರ ಸಹಾಯವಂತೂ ಶೂನ್ಯವು. ಅಂದಮೇಲೆ ಕೇಳುವದೇನು? ಈ ಗ್ರಾಮವು ಸರ್. ಸಾಲರ್‌ಜಂಗ್ (ಕೊಪ್ಪಳದ ಜಹಗೀರದಾರರು) ಇವರ ಆಳಿಯಂದಿರಾದ ಬಹರಾಮಜಂಗ್ ಎಂಬುವರಿಗೆ ಜಹಗೀರು ಗ್ರಾಮವಾಗಿರುತ್ತದೆ. ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಪುಣ್ಯಾತ್ಮರು ಇದು ವರೆಗೂ ಹುಟ್ಟದೆ ಇದ್ದದ್ದನ್ನು ನೋಡಿದರೆ ದುಃಖಿಸದೆ ಇರಲಾರದು. ಈ ದೇವಾಲಯಕ್ಕೆ ಇನಾಮುಗಳೇನೂ ಇರುವದಿಲ್ಲ. ಒಂದು ವರ್ಷಕ್ಕೆ ಇಪ್ಪತ್ತು ರೂಪಾಯಿಗಳನ್ನು ಜಹಗೀರದಾರರು ಕೊಡುತ್ತಾರಂತೆ! ಈ ಸಂಸ್ಥಾನದಲ್ಲಿ ಹಾಳುಬಿದ್ದ ಹಿಂದೂ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲಿಕ್ಕೆ ಸರಕಾರದವರ ಹುಕುಮು ಸಿಕ್ಕುವದೇ ಕಷ್ಟ. ಮೇಲಾಗಿ ಜಹಗೀರ ಗ್ರಾಮವು, ಅಂದಮೇಲೆ ಮಾಡುವದೇನು? ಇಂತಹ ಸ್ಥಿತಿಯಲ್ಲಿ ಸೋಮೇಶ್ವರ ದೇವಾಲಯವು, ಕೆಲವು ಶತಮಾನಗಳಲ್ಲಿಯೇ ನಾಮಶೇಷವಾಗಬಹುದೆಂದು ನಿಶ್ಚಯವಾಗಿ ಹೇಳಬಹುದಾಗಿದೆ. ಹೋಳಿಹುಣ್ಣಿವೆಗೆ ಸೋಮೇಶ್ವರನ ಜಾತ್ರೆಯು ಆಗುತ್ತದೆ. ಆ ಕಾಲಕ್ಕೆ ಬೇರೆ ಬೇರೆ ಪ್ರಾಂತಗಳಿಂದ ೧೦-೧೨ ಸಾವಿರ ಜನರು ಕೂಡುತ್ತಾರೆಂದು ತಿಳಿಯುತ್ತದೆ. ಸೋಮೇಶ್ವರನ ದೇವಾಲಯಕ್ಕೆ ರುದ್ರಾಭಿಷೇಕ ಮೊದಲಾದವುಗಳನ್ನು ಎಲ್ಲ ಜಾತಿಯವರಿಗೂ ಮಠದ ಅಯ್ಯನವರೇ ಮಾಡಿಸುತ್ತಾರೆ. ವೈಶ್ಯರು ಮಾತ್ರ ಬ್ರಾಹ್ಮಣರಿಂದ ಮಾಡಿಸುತ್ತಾರೆ. ಈ ಊರಿನಲ್ಲಿ ವೀರಶೈವರ ಹದಿನೆಂಟು ಮಠಗಳಿರುತ್ತವೆ. ಪ್ರಾಯಃ ಸರ್ವ ಅಧಿಕಾರವು ಇವರದೇ ಇರುತ್ತದೆ.

೨. ಪ್ರತಾಪರುದ್ರ ದೇವಾಲಯವು— ಇದು ಸೋಮೇಶ್ವರ ದೇವಾಲಯದ ದಕ್ಷಿಣಕ್ಕೆ ಇರುತ್ತದೆ. ಇಲ್ಲಿಯೂ ಈಶ್ವರ ಮೂರ್ತಿಯು ಇದ್ದು ಗುಡಿಯು ಓರುಗಲ್ಲಿನಲ್ಲಿ ಆಳಿದ ಪ್ರತಾಪರುದ್ರನು ಕಟ್ಟಿಸಿದನೆಂದು ಹೇಳುತ್ತಾರೆ. ಗುಡಿಯು ಶಿಲಾಮಯವಿದ್ದು ಕಟ್ಟಡವು ಗಟ್ಟಿಯಾಗಿರುತ್ತದೆ.

೩. ವೀರನಾರಾಯಣ ದೇವಾಲಯವು— ಇದರ ಪೂಜಾರಿಗಳು ಅಯ್ಯಂಗಾರರು ಇರುತ್ತಾರೆ. ಇದಕ್ಕೆ ಸರಕಾರದಿಂದ ೬೦ ರೂಪಾಯಿ ವರ್ಷಾಶನವು ಇರುತ್ತದೆ. ಗುಡಿಯು ಸಾಧಾರಣ ಚೆನ್ನಾಗಿರುತ್ತದೆ. ಯಾವ ರಾಜರ ಕಾಲದಲ್ಲಿ ಕಟ್ಟಲ್ಪಟ್ಟಿರುವದೆಂದು ತಿಳಿಯುವಂತಿರುವದಿಲ್ಲ.

೪. ಕೋಟಿಲಿಂಗೇಶ್ವರ ದೇವಾಲಯವು— ಇದು ಸೋಮನಾಥ ದೇವಾಲಯದ ಹಿಂಭಾಗದಲ್ಲಿರುತ್ತದೆ. ಈ ಲಿಂಗಮೂರ್ತಿಯ ಮೇಲ್ಭಾಗದಲ್ಲಿ ಸಣ್ಣ ಆಕಾರದ ಸಾವಿರಾರು ಲಿಂಗಗಳ ಚಿಹ್ನೆಗಳಿರುತ್ತವೆ. ಇಲ್ಲಿಯೂ ಪಂಚಕ್ರೋಶ ಉಂಟು. ಪಂಚಕ್ರೋಶದಲ್ಲಿ ಕೋಟಿ ಲಿಂಗಗಳಿದ್ದವೆಂದು ಜನರ ಹೇಳಿಕೆಯುಂಟು. ಅಲ್ಲಿ ಲಿಂಗಗಳು ಕಡಿಮೆ ಬಿದ್ದರೆ ಈ ಕೋಟಿ ಲಿಂಗೇಶ್ವರನ ದರ್ಶನ ತೆಗೆದುಕೊಳ್ಳುವ ಪದ್ಧತಿಯು ಇರುತ್ತದೆಂತಲೂ ಅದ್ದರಿಂದಲೇ ಕೋಟಿಲಿಂಗೇಶ್ವರನೆಂದು ಹೆಸರು ಬಂದಿರುವದೆಂತಲೂ ಹೇಳುತ್ತಾರೆ.

೫. ಜೈನ ದೇವಾಲಯವು— ಈ ದೇವಾಲಯವನ್ನು ಹೊಸದಾಗಿ ಸಿಕಂದರಾಬಾದು ಹೈದರಾಬಾದಿನ ದೊಡ್ಡ ದೊಡ್ಡ ಶ್ರೀಮಂತ ಜನರು ೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿರುತ್ತಾರೆ. ಗುಡಿಯ ಒಳಗೆ ಜೈನ ಧರ್ಮದ ೨೪ ಜನ ತೀರ್ಥಂಕರರ ಭವ್ಯವಾದ ಮೂರ್ತಿಗಳುಂಟು. ಈ ದೇವಾಲಯವು ಅತ್ಯಂತ ಸುಂದರವಾಗಿ ಆಧುನಿಕ ಪದ್ಧತಿಯಂತೆ ಕಟ್ಟಿಸಿರುವದರಿಂದ ನೋಡತಕ್ಕಂಥವರಿಗೆ ಬಹು ಮನೋಹರವಾಗಿ ಕಾಣಿಸುತ್ತದೆ. ದೇವಾಲಯದ ಎದುರಿಗೆ ಒಂದು ದೊಡ್ಡ ತೋಟವು ಇರುತ್ತದೆ. ಅಲ್ಲಿ ಸಾವಿರಾರು ತೆಂಗಿನ ವೃಕ್ಷಗಳೂ ಇತರ ನಾನಾ ತರದ ಗಿಡಗಳೂ ಶೋಭಾಯಮಾನವಾಗಿವೆ. ಯಾತ್ರಿಕರಿಗೆ ಇಳಿದುಕೊಳ್ಳಲಿಕ್ಕೆ ಬಹು ಪ್ರಶಸ್ತವಿರುತ್ತದೆ. ಅಲ್ಲಿ ಅನೇಕ ಜೈನ ಶಿಲಾಲಿಪಿಗಳು ಇರುವದರಿಂದ ಒಂದು ಕಾಲಕ್ಕೆ ಜೈನ ರಾಜರು ಆಳಿರುವರೆಂದು ನಿರ್ವಿವಾದವಾಗಿ ಹೇಳಬಹುದಾಗಿದೆ.

೬. ಕಾಶಿಯ ಬುಗ್ಗಾ— (ಬುಗ್ಗಾ ಅಂದರೆ ಹೊಂಡ) ಎಂಬುವದೊಂದು ತೀರ್ಥವು ಸೋಮೇಶ್ವರ ದೇವಾಲಯದ ಉತ್ತರಕ್ಕೆ ಅರ್ಧ ಮೈಲಿನ ಮೇಲಿರುತ್ತದೆ. ಇಲ್ಲಿಗೆ ಯಾತ್ರೆಗಾಗಿ ಬಂದ ಜನರೆಲ್ಲರೂ ಆ ತೀರ್ಥದಲ್ಲಿ ಸ್ನಾನಮಾಡುವ ಪದ್ಧತಿಯು ಇರುತ್ತದೆ. ಆದರೆ ಆ ತೀರ್ಥಕ್ಕೆ ಕಾಶಿಯ ಬುಗ್ಗಾ ಎಂದು ಯಾಕೆ ಹೆಸರು ಬಂದಿತೆಂದು ಕೇಳಿದರೆ ಓರ್ವ ಜಂಗಮಮೂರ್ತಿಯು ಕಾಶಿಯ ಗಂಗೆಯಲ್ಲಿ ಹಾಕಿದ ಬೆತ್ತವು ಇಲ್ಲಿಗೆ ಬಂದು ತೇಲಿತಂತೆ. ಪುನಃ ಆ ಜಂಗಮನು ಕೊಲ್ಲೀಪಾಕಿಗೆ ಬಂದು ತನ್ನ ಬೆತ್ತವನ್ನು ತೆಗೆದುಕೊಂಡನಂತೆ. ಈ ತೀರ್ಥದ ಹತ್ತರ ವಿಶ್ವನಾಥನೆಂಬುವ ದೇವಾಲಯವು ಇರುತ್ತದೆ.

ಈ ಊರಲ್ಲಿ ವೀರಶೈವರ ಹದಿನೆಂಟು ಮಠಗಳಿರುತ್ತವೆ. ಈ ಮಠಗಳು ಯಾವ ರಾಜರ ಕಾಲದಲ್ಲಿ ಕಟ್ಟಿಸಿದವುಗಳೆಂದು ಹೇಳಲಿಕ್ಕೆ ಬಲವಾದ ಆಧಾರಗಳೇನೂ ಇಲ್ಲ. ಆದರೂ ಇವು ಬಹು ಪ್ರಾಚೀನ ಕಾಲದವುಗಳೆಂದು ಹೇಳಬಹುದು. ಆದರೆ ಈ ಹದಿನೆಂಟು ಮಠಗಳಲ್ಲಿಯೂ ಹದಿನೆಂಟು ದೇವಾಲಯಗಳಿರುವವೆಂದು ಮೇಲೆ ಹೇಳಿದೆಯಷ್ಟೆ! ಆ ದೇವಾಲಯಗಳಾದರೂ ಸೋಮೇಶ್ವರನ ಸಮಾನ ಕಾಲದ ಗುಡಿಗಳೆಂದು ಧಾರಾಳವಾಗಿ ಹೇಳಬಹುದು. ಈ ಹದಿನೆಂಟು ಮಠಗಳ ರಚನೆಯನ್ನು ನೋಡಿದರೆ ವೀರಶೈವರ ಗುರುತ್ವದ ಲಕ್ಷಣವು ಮೊದಲು ಎಷ್ಟು ಬಲವತ್ತರವಾಗಿರುವದೆಂಬುವದು ಸ್ಪಷ್ಟವಾಗಿ ತೋರುತ್ತದೆ. ಈ ಹದಿನೆಂಟು ಮಠಗಳಲ್ಲಿ ೩-೪ ಮಠಗಳು ನಷ್ಟವಾಗಿರುತ್ತವೆ. ಈ ಮಠಗಳಲ್ಲಿರುವ ಜಂಗಮರ ಹೊರತು ಈ ಊರಿನಲ್ಲಿ ವೀರಶೈವರ ಮನೆಗಳೇ ಇರುವದಿಲ್ಲ. ಅವುಗಳಿಗೆ ಸರಕಾರದಿಂದ ಇನಾಮುಗಳೇನೂ ಇರುವದಿಲ್ಲ. ಮೊದಲು ಇದ್ದ ಇನಾಮುಗಳೆಲ್ಲ ನಷ್ಟವಾಗಿರುತ್ತವೆಂದು ಹೇಳುತ್ತಾರೆ. ಇವರೆಲ್ಲರೂ ಕೇವಲ ಬಿಕ್ಷಾನ್ನದಿಂದ ಉಪಜೀವನವನ್ನು ಸಾಗಿಸತಕ್ಕವರಿರುತ್ತಾರೆ. ಇವರ ಆಚರಣೆಯು ಸಾಧಾರಣ ಶುದ್ಧವಾಗಿರುತ್ತದೆಂದು ಹೇಳಬಹುದು.

ಸೋಮೇಶ್ವರ ದೇವರ ಗುಡಿಯ ಮುಂದೆ ನಾಲ್ಕು ಶಿಲಾಲಿಪಿಗಳು ಇರುತ್ತವೆ. ಅವುಗಳಲ್ಲಿ ಎರಡು ಕನ್ನಡ ಭಾಷೆಯಲ್ಲಿಯೂ ಎರಡು ಬೇರೆ ಭಾಷೆಗಳಲ್ಲಿಯೂ ಇರುತ್ತವೆ. ಎರಡು ಲಿಪಿಗಳು ಬಹಳ ಸ್ಪಷ್ಟವಾಗಿರುತ್ತವೆ. ಎರಡು ಲಿಪಿಗಳ ಅಕ್ಷರಗಳು ಅಷ್ಟು ಸ್ಪಷ್ಟವಾಗಿರುವದಿಲ್ಲ. ಲಿಪಿಗಳು ದೊಡ್ಡವಿರುತ್ತವೆ. ಅವುಗಳನ್ನು ಹೈದರಾಬಾದಿನ ಆಂಧ್ರ ಭಾಷಾ ನಿಲಯದವರು ಪ್ರಿಂಟು ಮಾಡಿಕೊಂಡು ಬಂದಿರುತ್ತಾರೆ. ಅವುಗಳಲ್ಲಿರುವ ವಿಷ

ಯವು ತಿಳಿದುಬಂದಿರುವದಿಲ್ಲ. ಈ ಪ್ರಾಂತದಲ್ಲಿ ಕನ್ನಡ ಲಿಪಿಗಳಿರುವದನ್ನು ನೋಡಿ ನನಗೆ ಕೌತುಕವೆನಿಸಿತು. ಯಾಕಂದರೆ ಇದು ಈಗ ಶುದ್ಧ ತೆಲುಗು ಪ್ರಾಂತವು. ಆದರೆ ಇಲ್ಲಿಯ ಕನ್ನಡ ಶಿಲಾಲೇಖಗಳ ನೋಟದಿಂದ ಪೂರ್ವದ ಕನ್ನಡ ನಾಡು ಕೊಲ್ಲಿಪಾಕಿಯ ವರೆಗೂ ಹಬ್ಬಿತ್ತೆಂದು ಅನುಮಾನ ಮಾಡಬಹುದಾಗಿದೆ.

ಶ್ರೀ ಸೋಮೇಶ್ವರ ಲಿಂಗದಲ್ಲಿ ಉದ್ಭವರಾದ ರೇಣುಕರ ಸ್ಥಾನಕವೇನಾದರೂ ಇರುವದೇ ಎಂದು ವಾಚಕರು ಕೇಳಬಹುದು. ಆದರೆ ಸೋಮೇಶ್ವರಲಿಂಗದ ದಕ್ಷಿಣ ದಿಕ್ಕಿಗೆ ಸುಮಾರು ೬-೭ ಮೈಲುಗಳ ದೂರದಲ್ಲಿ ರೇಣುಕಾಚಾರ್ಯರ ಗುಡ್ಡವು ಇರುತ್ತದೆ. ಆ ಗುಡ್ಡದಲ್ಲಿ ಭಗವಾನ್ ರೇಣುಕರ ಗವಿಯೂ ಒಂದು ಈಶ್ವರ ದೇವಾಲಯವೂ ಇರುತ್ತವೆ. ಪೂರ್ವ ದಿಕ್ಕಿಗೆ ಮರುಳ ಸಿದ್ಧೇಶ್ವರ ಗುಡ್ಡವೂ ಒಂದು ದೇವಾಲಯವೂ ಇರುತ್ತವೆ. ಇದರಂತೆಯೇ ಉಳಿದ ಎರಡು ದಿಕ್ಕುಗಳಲ್ಲಿ ಪಂಡಿತಾಚಾರ್ಯರ ಮತ್ತು ಏಕೋರಾಮಾಚಾರ್ಯರ ಗುಡ್ಡಗಳೂ ಗವಿಗಳೂ ದೇವಾಲಯಗಳೂ ಇರುತ್ತವೆ. ಅಂದರೆ ಚತುರಾಚಾರ್ಯರ ಗುಡ್ಡಗಳು ಆ ಭಾಗದಲ್ಲಿ ಇರುತ್ತವೆ. ರೇಣುಕರ ಗುಡ್ಡ ಒಂದನ್ನು ಬಿಟ್ಟು ಉಳಿದ ಮೂರು ಆಚಾರ್ಯರ ಹೆಸರಿನ ಗುಡ್ಡಗಳು ಕೊಲ್ಲಿಪಾಕಿಗೆ ೧೫-೧೬ ಮೈಲಿನ ಮೇಲೆ ದೂರದಲ್ಲಿರುತ್ತವೆ. ನನಗೆ ವೇಳೆಯು ಇಲ್ಲದ ಕಾರಣ ಪ್ರತಿಯೊಂದು ಗುಡ್ಡಗಳಿಗೂ ಹೋಗಿಬರುವದಾಗಲಿಲ್ಲವೆಂದು ವ್ಯಸನದಿಂದ ಹೇಳಬೇಕಾಗುತ್ತದೆ. ವಾಚಕರೇ ಚತುರಾಚಾರ್ಯರ ಹೆಸರಿನ ದೊಡ್ಡ ದೊಡ್ಡ ಗುಡ್ಡಗಳೂ ಗವಿಗಳೂ ಆ ಭಾಗದಲ್ಲಿ ಇರುತ್ತವೆಂದ ಮೇಲೆ ಈ ಸ್ಥಾನವು ಎಷ್ಟು ಮಹತ್ವದ್ದಾಗಿರುತ್ತದೆಂಬುವದನ್ನು ವಾಚಕರು ಸಹಜವಾಗಿಯೇ ಊಹಿಸಬಹುದು. ಶೈವ ಧರ್ಮದ ಮೂಲಸ್ಥಾನವು ಈ ಭಾಗವೆಂತಲೇ ತೋರಬರುವದಾಗಿದೆ. ಇಲ್ಲಿಯೇ ಪುರಾತನ ಕಾಲದಲ್ಲಿ ವೀರಶೈವ ಆಚಾರ್ಯರು ಉತ್ಪನ್ನರಾಗಿ ಆಗಮ ಧರ್ಮವನ್ನು ಪ್ರಸಿದ್ಧಿಗೊಳಿಸಿದರೆಂದು ತೋರುತ್ತದೆ.

ಈ ಕೊಲ್ಲಿಪಾಕಿಯ ಸುತ್ತಲೂ ಲಿಂಗಗಳೇ ಇರುತ್ತವೆ. ಕೋಟಿ ಲಿಂಗಗಳಿದ್ದವೆಂದು ಜನರು ಹೇಳುತ್ತಾರೆ. ಏನೇ ಇರಲಿ ಈ ಪ್ರಾಂತದಲ್ಲಿ ಆಚಾರ್ಯರ ಅವತಾರವಾದ ಕಾರಣ ಶೈವ ಮತವು ಈ ಪ್ರಾಂತದಲ್ಲಿ ಇಂದಿಗೂ ಉಳಿದ ಮತಗಳಿಗಿಂತ ಬಹಳ ಪ್ರಬಲ ಸ್ಥಿತಿಯಲ್ಲಿರುತ್ತದೆ. ಹಾಳು ಹೊಲಗಳಲ್ಲಾಗಲೀ ರಸ್ತೆಯಲ್ಲಾಗಲೀ ಲಿಂಗಗಳೇ ಕಣ್ಣಿಗೆ ಬೀಳುತ್ತವೆ. ಇನ್ನು ಸಿದ್ದಿ ಪೇಟ ಜಿಲ್ಲಾ ಜನಗಾಂವ ತಾಲೂಕು ಕೊಡವಟೂರು ಎಂಬುವ ಗ್ರಾಮದಲ್ಲಿ ರೇಣುಕರ ಗುಡಿಯು ಇರುತ್ತದೆಂದು ಇಲ್ಲಿಯ ಜನರಿಂದ ತಿಳಿಯಬಂದಿತು. ಅಲ್ಲಿಗೆ ಈಗಲೂ ಅನೇಕ ಜನರು ಯಾತ್ರಾರ್ಥಿಗಳಾಗಿ ಬರುತ್ತಿರುವರಂತೆ. ಕೊಲ್ಲೀಪಾಕಿಯ ದಕ್ಷಿಣ ದಿಕ್ಕಿಗೆ ಆ ಗ್ರಾಮವು ೧೨ ಮೈಲು ದೂರದಲ್ಲಿರುತ್ತದೆ.

ಕೊಲ್ಲಿಪಾಕಿ ಗ್ರಾಮದಲ್ಲಿ ಸುಮಾರು ೬೦೦ ಮನೆಗಳಿರುತ್ತವೆ. ಇವುಗಳಲ್ಲಿ ವೀರಶೈವರ ಮನೆಗಳೆಂದರೆ ಆ ಹದಿನೆಂಟು ಮಠಗಳೇ ಸರಿ. ಬ್ರಾಹ್ಮಣರದು ಒಂದೇ ಒಂದು ಮನೆಯು ಇರುತ್ತದೆ. ಇತರೇತರ ಮನೆಗಳು ಮಾತ್ರ ೧೦೦ ಇರುತ್ತವೆ. ಇಂಥ ಸಣ್ಣ ಗ್ರಾಮದಲ್ಲಿ ೧೦೦ ಮನೆಗಳಿರುತ್ತವೆಂದಮೇಲೆ ಮೇಲೆ ಬರೆದ ಮದ್ಯದ (ಹೆಂಡದ) ವ್ಯಾಸಂಗವು ಬಹಳ ಕಾಣುವಂತಿದೆ. ಈ ಗ್ರಾಮವು ಹಾಳು ಬೀಳುತ್ತ ನಡೆದಿರುತ್ತದೆ. ಕೊಲ್ಲೀಪಾಕಿ ಗ್ರಾಮವು ನಲಗೊಂಡ ಜಿಲ್ಲಾ ಭುವನಗಿರಿ ತಾಲೂಕಿಗೆ ಸೇರಿರುತ್ತದೆ. ಈ ಗ್ರಾಮವು ವೀರಶೈವರ ಅನೇಕ ಗ್ರಂಥಗಳಲ್ಲಿ ಬಹು ಮನೋಹರವಾಗಿ ವರ್ಣಿಸಲ್ಪಟ್ಟಿರುತ್ತದೆ. ತಿಪ್ಪೆಯು ಉಪ್ಪರಿಗೆಯಾಗಬಹುದು, ಉಪ್ಪರಿಗೆಯು ತಿಪ್ಪೆಯಾಗಬಹುದೆಂಬುವ ಗಾದೆಗೆ ಸರಿಯಾಗಿ ಈ ಗ್ರಾಮವು ಇಂಥ ದುರ್ದಶೆಯನ್ನು ಹೊಂದಿದೆ.

ಕೊಲ್ಲಿಪಾಕಿ ಗ್ರಾಮವು ವೀರಶೈವರಿಗೆ ಅತ್ಯಂತ ಮಹತ್ವವಾದ ಸ್ಥಾನವಾಗಿದೆ. ಇಂಥ ಸ್ಥಾನವು ಈಗ ಇಷ್ಟರಮಟ್ಟಿಗೆ ಹೀನಾವಸ್ಥೆಯಲ್ಲಿರುವದನ್ನು ನೋಡಿದರೆ ಪ್ರತಿಯೊಬ್ಬನಿಗೂ ವಿಷಾದವೆನಿಸದೆ ಇರದು. ಈ ಸ್ಥಾ[illegible] ಸುತ್ತಲಿನ ಭಾಗಗಳಲ್ಲಿರುವ ಪ್ರಾಚೀನ ಸ್ಥಾನಗಳನ್ನು ರಕ್ಷಿಸಬೇಕಾದದು ಅತ್ಯಂತ ಅವಶ್ಯಕವಾಗಿರುತ್ತದೆ. ವೀರಶೈವರ ಇತಿಹಾಸದಲ್ಲಿ ಈ ಸ್ಥಾನವು ಮಹತ್ವದ್ದಾಗಿದೆ. [illegible] ವೃತ್ತಾಂತವೇ ಆಗಲಿ [illegible] ಇತಿಹಾಸವೇ ಇರಲಿ, [illegible] ಒಂದೇರೀತಿ ಆಗಿರುತ್ತವೆ. [illegible] ಗತವೈಭವ [illegible].

[illegible] ಗ್ರಂಥವು [illegible] ಶೋಧಿಸುವದು ಅವಶ್ಯವಿದೆ. ಈ [illegible] ಮಠಗಳಲ್ಲಿಯೂ [illegible] ಗ್ರಂಥಗಳಾಗಲೀ ಇರುವವು. [illegible] ಹೈದರಾಬಾದ [illegible] ತಿಳಿದುಕೊಳ್ಳಬಹುದು.

[illegible] ಕೊಲ್ಲಿಪಾಕಿ ಮತ್ತು ಅದರ ಸುತ್ತಲಿನ ಪ್ರದೇಶಗಳನ್ನು [illegible] ಶೋಧಿಸುವದು [illegible] ವಾಚಕರು [illegible] ವೀರಶೈವ ಧರ್ಮದ [illegible] ಕರ್ನಾಟಕದ ಗತವೈಭವದ [illegible] ಈ ಭಾಗದಲ್ಲಿ [illegible].

[illegible]

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಡುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಪ್ರಾರ್ಥಿಸುತ್ತೇವೆ.

ಸಂಪಾದಕರು.

ASIATIC GOVERNMENT SECU
LIFE ASSURANCE CO., LTD., MYS
ಏಶಿಯಾಟಿಕ್ ಗವರ್ನಮೆಂಟು ಸೆಕ್ಯು
ರಿ. ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥೆಯಲ್ಲಿರತಕ್ಕ ಜೀವವಿಮೆ ಸಂಘ
[illegible]

ಆದ್ದರಿಂದ ಯಾವಾಗಲೂ "ಏಶ್ಯಾಟಿಕ್" ನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾ ವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಪಾಲಿಸಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಮೀಂಗ್ 31 ನೆಯ ಜುಲೈ 1927 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿ ರಿಗೆ ಬರೆಯಬಹುದು.

(1) ಮ|| ಬಿ. ರಾಜ್ಜರ್ಸ್,
ಚೀಫ್ ಏಜಂಟ್, ಮೈಸೂರು
(2) ಮ|| ಬಿ. ಎಚ್. ಆರಾಧ್ಯ,
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ
(3) ಹೈದರಾಬಾದ್ ಎಕಾನಮಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದ
ಸಯ್ಯಾಜಿರಾವ್ ರೋಡ್, ಮುಖ್ಯ ಏಜಂಟ್,
[9] ಮೈಸೂರು. *Asiatic Buildin*

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿ ಇದನ್ನು ಉಪಯೋಗಿಸಿ, ಸಾವಿರಾರುಗಳ

ಯೋಗ್ಯತಾಪತ್ರ ಗಳನ್ನು ಕೊಟ್ಟಿ ರು. ಪ್ರಸಿದ್ಧವಾ ಈ ನಶ್ಯದ ಸ ಯಿಂದ ಸ್ವಸ್ಥವಾ ವ ವ್ಯಾಧಿಗಳು ಯಾ ವವೆಂದರೆ:—ಶಿ ಒಂಟಿತಲೆನೋವು ತಲೆಯಲ್ಲಿನ ರೋಗ [illegible] ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು [illegible] ವ್ಯಾಧಿಗಳು ಪರಿಹಾರವಾ [illegible] ವ್ಯಾಧಿಗಳನ್ನು [illegible] ಜ್ಞಾಪಕಶಕ್ತಿಯನ್ನು ಸಹ ಹೆಚ್ಚು ಮಾ ಡುತ್ತದೆ. [illegible] ಸಾಧಾರಣ ನಶ್ಯದ [illegible] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು [illegible] ಪರಿಮಳವಾಗುವುದು. [illegible] ತಮ್ಮ ಗೃಹದಲ್ಲಿ ಕುಟುಂ [illegible] ಉಪಯೋಗಿಸುತ್ತಾರೆ. ಮಾದರಿಗೋ [illegible]

ಚಿಕ್ಕ ಒಂದಕ್ಕೆ [illegible] ರೂ. ೦-೪-೦. ವಿ.ಪಿ. ೦-೪-೦
ದೊಡ್ಡ ಒಂದಕ್ಕೆ [illegible] ರೂ. [illegible] ವಿ.ಪಿ. [illegible]
[illegible] ಹೆಸರನ್ನು, ಅಡ್ರೆಸ್ಸನ್ನೂ [illegible] ವಾಗಿ ತಿಳಿಸಬೇಕು. [illegible] ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[11] ಪೋ. ಬಾ. ೫೧೦, ಮದರಾಸು.

ಇದು ಮೈಸೂರು ವಾಣೀವಿಲಾಸ ರೋಡಿನಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

STERED No M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪಟುಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಆಗಸ್ಟ್ ೧೯೨೭ ಇಸವಿ [ಸಂಚಿಕೆ ೧೪.

ಮನ್ನ ಹಿಶೂರಪುರವರಾಧೀಶರಾದ ಸಾಲ್ವಡಿ
ೀ ಕೃಷ್ಣರಾಜ ಒಡೆಯರ್ ಬಹದ್ದೂರ್,
ಜಿ.ಸಿ.ಎಸ್.ಐ., ಜಿ.ಬಿ.ಇ., ಯವರ
ಮಹೋತ್ಸವದ ಸಂತೋಷಸೂಚನಾರ್ಥವಾ
ಮೈಸೂರು ವೀರಶೈವಪ್ರಜೆಗಳ ಪರವಾಗಿ
ಮೆಂಟ್ ಓರಿಯಂಟಲ್ ಲೈಬ್ರೇರಿಯಲ್ಲಿರುವ
ಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್., ಇವ
ರಿಂದ ರಚಿಸಲ್ಪಟ್ಟ

ಪದ್ಯಾವಳಿಯು

ದ್ಯಾದಪವಂಶರತ್ನಮಮಲಂ ಸನ್ಮಾರ್ಗಶೀ
ಚಾಮುಂಡಾಪದಭಕ್ತಿಕಲ್ಪಕಲತಾಸಂಲಬ್ಧ
[illegible]
ರೂಪಾಭಿರಾಮಂ ಪ್ರಜಾ ಪ್ರೇಮಂ ಪಾಲಿಕೆ ದೀ
ಲಮಿಳೆಯಂ ಶ್ರೀಕೃಷ್ಣಭೂಪೋತ್ತಮಂ ||೧||

ಭ್ಯಬ್ದಾ ವಣಪಂಚಕ |
ನದೊಳ್ ಸ್ತೋತ್ರಮಾಂಗದೊಳ್ ಮಹಿಶೂ
ಡೊಳುರೆ ಕೃಷ್ಣೇಂದ್ರ]ರೊಳ್||
ವರನಾಂತಂ ಸ್ವರಾಜ್ಯರಕ್ಷಾಭರಮಂ ||೨||

ಂದಿಂದಮಿಂದುವರಗಂ |
ಮು ತಾಂ ನೋಡೆ ಪಂಚವಿಂಶತಿವರ್ಷಂ ||
ದು ರಜತೋತ್ಸವಮಾ |
ಂಬುಧಿ ಮೇರೆವರೆಗುದೆಲ್ಲಾ ಜನರೊಳ್ ||೩||

ಸನಿಯುವ್ರೋಲ್ ರಾಜ್ಯದ ಜನ |
ಪಂ ಪೊರೆಯುತ್ತ ಭೇದವಹ ಮತಿಯಿಂದಂ ||
ತನಾದಂ ತಾನೀ |
ಂ ದಿನಪತಿ ಸಮಸ್ತರೊಳ್ ಸಮನಲ್ತೆ ||೪||

ವಿದ್ಯಾಶಾಲೆಗೇನವಧಿ |
ಕರಾಸಿಧಿಗಳಾಗಿ ಮೆರೆಯುತ್ತಿರ್ಕುಂ ||
ಬನಕುಲಮಣಿಯನ |
ಗುಣಂ ಕೃಷ್ಣರಾಜನಾಳ್ಕೆಯಿಂದಂ ||೫||

ತನನವಡಿಸಿದ ಸುಜನ |
ಟಿನಸಭೆಯಂ ಸಮಂತು ಪರ್ಚಿಸಿಯಾಳ್ವಂ ||
ಸು ನ್ಯಾಯವಿಧಾಯಕ |
ಸಭೆಯಂ ಸ್ಥಾಪಿಸುತ್ತೆ ಜನಸಮ್ಮತಿಯಿಂ ||೬||

ಆತನ ಭೋಗಂ ಭಕ್ತ್ಯನೆ |
ತಂ ಸದಯಂ ಪ್ರಭುತ್ವಮತ್ತಿಶಾಂತಿಯುತಂ ||
ತಿಶಯವಾದ ಶೌರ್ಯಮ |
ತನೆ ರಾಜರ್ಷಿಯಲ್ತೆ ತಾನದರಿಂದಂ ||೭||

ಪ್ರಜೆಗಳುಮೆಲ್ಲರುಂ ತಣಿಯೆ ಸರ್ವಸಮೃದ್ಧಿ ಸಮೇ
ತಾಗುತಂ | ನಿಜಚರಿತಂ ಸಮಂತು ತಲೆದೂಗಿಸೆ ಭೂ
ಸೀತಿವಿಘ್ನದಿಂ || ಸುಜನಮನಾವಗಂ ನಡೆದೆ ಕೀರ್ತಿ
ಸಸ್ಯಯ ಶೀಲನಗಂಮಂ | ವಿಜಯಸಮೇತನಾಗಿ
ಪಾಲಿಸೆ ರಾಜ್ಯವ ಕೃಷ್ಣಭೂಮಿಪಾ ||೮||

ಓಂ

ಜಗದ್ಗುರು ಏಕೋರಾಮಶಿವಾಚಾರ್ಯಾಃ ಪ್ರಸೀದಂತು

ಶ್ರೀ ಕೇದಾರನಾಥ ಸನಾತನಧರ್ಮ ಮಹಾ ವಿದ್ಯಾಲಯದ ದ್ವಿತೀಯ ವಾರ್ಷಿಕ ಅಧಿವೇಶನವು.

ಈ ಅಧಿವೇಶನವು ತಾ|| 25-7-27 ನೇ ಸೋಮವಾರ ದಿವಸ ಓಖೀಮಠದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಪ್ರಾತಃಕಾಲದಲ್ಲಿ ಸಮಸ್ತಬ್ರಹ್ಮಚಾರಿಗಳ ನಿತ್ಯಕರ್ಮಾನುಷ್ಠಾನವಾದ ನಂತರ ಈಶ್ವರನ ಭಜನೆಯು ಮಾಡಲ್ಪಟ್ಟಿತು. ಮಧ್ಯಾಹ್ನದಲ್ಲಿ ಈ ಮಹಾವಿದ್ಯಾಲಯದ ವಾರ್ಷಿಕರಿಪೋರ್ಟನ್ನು ಓದಲಾಯಿತು. ಅನಂತರ ಬ್ರಹ್ಮಚಾರಿಗಳ ವ್ಯಾಖ್ಯಾನಗಳಾದವು. ಕಾಶಿ ಸಂಸ್ಕೃತಪರೀಕ್ಷಾವಿದ್ಯಾಲಯದಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳು ಹಂಚಲ್ಪಟ್ಟವು. ಮುಂದಿನವರ್ಷದ ಆಯವ್ಯಯ ನಿಶ್ಚಯವಾಯಿತು. ಈ ಯಾವತ್ತೂ ಕಾರ್ಯಗಳು ಸಾಂಗವಾಗಿ ನೆರವೇರಿದಮೇಲೆ ಈ ವಿದ್ಯಾಲಯದ ವ್ಯವಸ್ಥಾಪಕನವರಿಗೆ ಧನ್ಯವಾದಗಳು ಸಮರ್ಪಿಸಲ್ಪಟ್ಟು, ಸಭೆಯು ಸಮಾಪ್ತಿಯಾಯಿತು.

ಸಂ|| ಮಹಿಮಾನಂದಶರ್ಮಾ,
ಪ್ರಧಾನಾಧ್ಯಾಪಕ,
ಓಖೀಮಠ, ಹಿಮಾಲಯ.

ಮಠಾಗ್ರಹ ಮತ್ತು ದೃಷ್ಟಾಂತವೈಷಮ್ಯ

ವಾಚಕಮಹಾಶಯರಲ್ಲಿ ವಿಜ್ಞಾಪನೆ.—

ನಾನು ಕಳೆದ ತಿಂಗಳು ೨೨ನೇ ತಾರೀಖಿನ ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ "ಬ್ರಾಹ್ಮಣ ಬ್ರಾಹ್ಮಣೇತರ" ಎಂಬ ಅಗ್ರಲೇಖವನ್ನು ಮತ್ತು ಈ ತಿಂಗಳು ೬ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಯಥಾರ್ಥವಾದಿ ಎಂಬ ಹೆಸರಿನಿಂದ ಪ್ರಕಟಿಸಲ್ಪಟ್ಟಿರುವ 'ಧರ್ಮದ್ರೋಹಿಗಳಾರು' ಎಂಬ ಲೇಖವನ್ನು ಓದಿನೋಡಿದೆನು. ಈಗ ಕೆಲವು ವರ್ಷಗಳ ಹಿಂದೆ ಸರ್ಕಾರದವರು ಈ ವೀರಶೈವರನ್ನು ಶೂದ್ರರ ಪಟ್ಟಿಗೆ ಸೇರಿಸಿದ್ದಕ್ಕಾಗಿ ಕೈ|| ವೀರಸಂಗಪ್ಪನವರು ಬಹಳ ಕಷ್ಟಪಟ್ಟು ಈ ವೀರಶೈವರು ಬ್ರಾಹ್ಮಣವರ್ಗಕ್ಕೆ ಸೇರಿದವರೆಂಬದಾಗಿ ಸಾಧಿಸಿ ಈ ಮತಕ್ಕೆ ವಿಶೇಷ ಗೌರವತಂದದ್ದನ್ನು ಮರೆತು ಈಚೆಗೆ ವೀರಶೈವರಲ್ಲಿ ಪ್ರಮುಖರಾದ ಕೆಲವರು ಈ ಮತೀಯರಿಗೆ ಸರ್ಕಾರಿ ಉದ್ಯೋಗಗಳನ್ನು ಕೊಡಿಸಿಕೊಡುವುದಕ್ಕೋಸ್ಕರ ಈ ವೀರಶೈವಮತೀಯರು ಬ್ರಾಹ್ಮಣೇತರರ ಪಂಗಡಕ್ಕೆ ಸೇರಿದವರೆಂಬದಾಗಿ ಹೊಡೆದಾಡುತ್ತಿರುವದು ಬಹಳ ವಿಷಾದಕರವೆಂದೂ, ಈ ರೀತಿಯಾಗಿ ಮಾಡದೇ ವೀರಶೈವರು ಬ್ರಾಹ್ಮಣರಾಗಿದ್ದಾಗ್ಯೂ ವಿದ್ಯೆಯಲ್ಲಿ ಹಿಂದುಳಿದಿದ್ದಾರೆ. ಅವರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದರೆ ಉತ್ತಮವಾಗಿತ್ತೆಂತಲೂ ಈ ವೀರಶೈವ ಮತವು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳಿಗೆ ಸಮಾನವಾದ ವೈದಿಕಮತವಾದಾಗ್ಯೂ ಈ ಮತೀಯರು 'ತುಪ್ಪದ ಆಶೆಗೆ ಎಂಜಲು ತಿಂದರು' ಎಂಬ ಗಾದೆಗೆ ಅನುಸಾರವಾಗಿ ಲೌಕಿಕವಾದ ಅಲ್ಪ ಪ್ರಯೋಜನಕ್ಕೋಸ್ಕರ ತಾವು ಬ್ರಾಹ್ಮಣೇತರರ ವರ್ಗಕ್ಕೆ ಸೇರಿದವರು ಎಂಬದಾಗಿ ಹೇಳಿಕೊಂಡು ಈ ವೀರಶೈವ ಮತಕ್ಕೆ ಕುಂದಕವನ್ನು ಉಂಟುಮಾಡಿರುವದರಿಂದ ಧರ್ಮದ್ರೋಹಿಗಳೆಂದೂ ಪಂಚಾಚಾರ್ಯ ಪ್ರಭೆಯ ಅಗ್ರಲೇಖದಲ್ಲಿ ಬರೆಯಲ್ಪಟ್ಟಿದೆ. ಇದಕ್ಕೆ [illegible] "ಶೇಷಂ ಕೋಪೇನ ಪೂರಯೇತ್" ಎಂಬಂತೆ ಯಥಾರ್ಥವಾದಿ ಎಂಬ ನಾಮಧೇಯದಿಂದ ಮೈಸೂರಲ್ಲಿರುವ ಮ|| ರಾ|| ಸೆಟ್ರಿ ಬಸಪ್ಪನೆಂಬುವರು 'ಧರ್ಮದ್ರೋಹಿಗಳಾರು' ಎಂಬ ಲೇಖದಲ್ಲಿ ಪಂಚಾಚಾರ್ಯ ಪ್ರಭಾ ಸಂಪಾದಕರನ್ನು ಮನಸ್ವಿಯಾಗಿ ನಿಂದಿಸಿ ಪೂರ್ವಾಪರ ಸಮಂಜಸವಲ್ಲದ ಲೇಖವನ್ನು ಬರೆದಿರುತ್ತಾರೆ. ಸದರಿ ಬಸಪ್ಪನವರು ತಮ್ಮ ಲೇಖದಲ್ಲಿ ಪಾರಮಾರ್ಥಿಕವಿದ್ಯೆಯೆಂದು ಲೌಕಿಕ ವಿದ್ಯೆಯೆಂದು ಎರಡು ಭಾಗವನ್ನು ಮಾಡಿ ಆ ಪೈಕಿ ಲೌಕಿಕ ವಿದ್ಯೆಯನ್ನು ಓದಿತಕ್ಕವರು ಸರ್ಕಾರಿ ಕೆಲಸವನ್ನು ಸಂಪಾದಿಸುವುದಕ್ಕಾಗಿ ಬ್ರಾಹ್ಮಣೇತರರೆಂದು ಹೇಳಿಕೊಳ್ಳುವದು ಧರ್ಮದ್ರೋಹವೆಂಬುವುದು ಸರಿಯಲ್ಲವೆಂಬದಾಗಿ ಬರೆದಿರುತ್ತಾರೆ. ಆದರೆ ಸಂಪಾದಕರು ಲೌಕಿಕವಿದ್ಯೆಯನ್ನು ಓದುವುದನ್ನಾಗಲೀ ಅಥವಾ ಸರ್ಕಾರಿ ಉದ್ಯೋಗವನ್ನು ಅಪೇಕ್ಷಿಸುವುದನ್ನಾಗಲೀ ಧರ್ಮದ್ರೋಹವೆಂಬದಾಗಿ ಬರೆದಿಲ್ಲ. ಆದರೆ ತಾವು ಬ್ರಾಹ್ಮಣರಾಗಿದ್ದರೂ ಸರ್ಕಾರಿ ಉದ್ಯೋಗಕ್ಕೋಸ್ಕರ ಬ್ರಾಹ್ಮಣೇತರರು ಎಂಬದಾಗಿ ಹೇಳಿಕೊಳ್ಳುವುದು ಧರ್ಮದ್ರೋಹವಾಗಿದೆ ಎಂತಲೂ, ಈ ರೀತಿಯಾಗಿ ಮಾಡದೆ ನಾವು ಬ್ರಾಹ್ಮಣರಾಗಿದ್ದರೂ ನಾವು ವಿದ್ಯೆಯಲ್ಲಿ ಹಿಂದುಳಿದಿದ್ದೇವೆ. ಆದ್ದರಿಂದ ಸರ್ಕಾರದವರು ತಮಗೆ ತಕ್ಕ ಅನುಕೂಲವನ್ನು ಮಾಡಿಕೊಡಬೇಕೆಂಬದಾಗಿ ಪ್ರಾರ್ಥಿಸಿಕೊಂಡಿದ್ದರೆ ಉತ್ತಮವಾಗಿತ್ತೆಂತಲೂ ಹೇಳಿರುತ್ತಾರೆ. ಈ ವಿಧವಾದ ಸದ್ಬೋಧೆಯನ್ನು ಮನಸ್ಸಿಗೆ ತೆಗೆದುಕೊಂಡು ಅದಕ್ಕೆ ಪಶ್ಚಾತ್ತಾಪಪಡದೆ ದುರಾಗ್ರಹದಿಂದ ಅವರನ್ನು ಮನಸ್ವಿಯಾಗಿ ನಿಂದಿಸಿರತಕ್ಕದ್ದು ಎಷ್ಟರಮಟ್ಟಿಗೆ ಯೋಗ್ಯವೋ ಅದನ್ನು ವಾಚಕರೇ ಊಹಿಸತಕ್ಕದ್ದು.

ಇದಲ್ಲದೆ ಈ ಸಂಪಾದಕರು ಅರಮನೆ ಆಸ್ಥಾನದ ವಿದ್ವಾಂಸರಾಗಿ ಸೇರಿಕೊಂಡಿರತಕ್ಕದ್ದನ್ನು ಸರ್ಕಾರಿ ಉದ್ಯೋಗಕ್ಕೋಸ್ಕರ ವೀರಶೈವರು ಬ್ರಾಹ್ಮಣೇತರ ವರ್ಗಕ್ಕೆ ಸೇರಿಕೊಂಡಿರುವುದಕ್ಕೆ ಹೋಲಿಕೆಯನ್ನು ಕೊಟ್ಟಿದ್ದಾರೆ. ಈ ಸಂಪಾದಕರು ತಾವು ವೈದಿಕರಾಗಿ

[೮ನೇ ಪುಟವನ್ನು ನೋಡಿರಿ]

ಪಂಚಾಚಾರ್ಯಪ್ರಭಾ

೧೯೨೭ನೇ ಆಗಸ್ಟು ತಾ|| ೧೫ನೇ ಸೋಮವಾರ

ಶ್ರೀಮನ್ಮಹಾರಾಜರವರ ರಜತ ಮಹೋತ್ಸವವು.

ಮೈಸೂರುಸಂಸ್ಥಾನದ ಶ್ರೀಮನ್ಮಹಾರಾಜಾಧಿರಾಜ ಕರ್ನಲ್ ಸರ್ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ರವರ ರಜತಮ [illegible] ಸಿಯಲ್ಲಿ ಅತ್ಯಂತವೈಭವದಿಂದ ಜರುಗಿತು. ಆ ದಿವಸ ಪ್ರಾತಃಕಾಲ ರಜತೋತ್ಸವ ಸೂಚಕಗಳಾದ 15 ತೋಪುಗಳು ಹಾರಿಸಲ್ಪಟ್ಟವು. ಮಹಾಪ್ರಭುಗಳು ಮಂಗಳಸ್ನಾನವನ್ನು ಮಾಡಿ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿ ವಿಧ್ಯುಕ್ತವಾಗಿ ದೇವತಾಪೂಜಾದಿಗಳು ಸಮಾಪ್ತಿಯಾದ ಬಳಿಕ ದಿವ್ಯವಸ್ತ್ರಾಭರಣಾಲಂಕೃತರಾಗಿ [illegible] ಕಲ್ಯಾಣಮಂಟಪವನ್ನು ಪ್ರವೇಶಮಾಡಿದರು. ಅನೇಕ ದ್ವಿಜರುಗಳು ದೇವತಾಪ್ರಸಾದವನ್ನು ಒಪ್ಪಿಸಿದರು. ಬಳಿಕ ಪಂಡಿತೋತ್ತಮರು ವೈದಿಕರುಗಳು, ಧರ್ಮಾಧಿಕಾರಿಗಳು ವೇದೋಕ್ತವಾದ ಶುಭಾಶೀರ್ವಾದಪೂರ್ವಕ ಫಲಮಂತ್ರಾಕ್ಷತೆಗಳನ್ನೊಪ್ಪಿಸಿದರು. ಅನಂತರ ಮಹಾಪ್ರಭುಗಳು ರಜತಮಹೋತ್ಸವನಿಮಿತ್ತವಾದ ಮುಂದಣಕಾರ್ಯಕ್ಕಾಗಿ ಗುರುಜನಗಳ ಅಪ್ಪಣೆಯನ್ನು ಪಡೆದು ಗೀರ್ವಾಣಭಾಷಾಮಯವಾದ ಒಂದು ಉಪನ್ಯಾಸವನ್ನೂ ಸಹ ಮಾಡಿ ಸಜ್ಜೆಗೆ ದಯಮಾಡಿಸಿದರು. ಸ್ತುತಿಪಾಠಕರು ಉಗ್ಘಡಿಸುತ್ತಿದ್ದರು; ಪ್ರಜೆಗಳು ಆನಂದಭರದಿಂದ ಪ್ರಭುಗಳ ನಾಮೋಚ್ಚಾರಣೆಯೊಡನೆ ಜಯಘೋಷವನ್ನು ಮಾಡುತ್ತಿದ್ದರು. ನಾನಾವಿಧಗಳಾದ ನೂತನವಾದ ಪತಾಕೆಗಳು ಹಾರಾಡುತ್ತಿದ್ದುವು. ಸಜ್ಜೆಯ ಕೆಳಗೆ ಮುಂದುಗಡೆಯಲ್ಲಿ ಅಷ್ಟಮಹಾಸ್ತ್ರಗಳು ಸಾಲ್ಗಟ್ಟಿ ನಿಂತಿದ್ದುವು. ಪಟ್ಟದ [illegible] ಮುಂತಾದ ಪಶುಗಳು ನಿಲ್ಲಿಸಲ್ಪಟ್ಟಿದ್ದುವು. ಮಹಾಪ್ರಭುಗಳು ಸುವರ್ಣಮಯವಾದ ಭದ್ರಪೀಠವನ್ನು ಅಲಂಕರಿಸಿದರು. ಶ್ರೀಮದ್ಯುವರಾಜರವರು ಭದ್ರಾಸನದ ವಾಮಪಾರ್ಶ್ವದಲ್ಲಿದ್ದ ರಜತಾಸನದಲ್ಲಿ ಕುಳಿತಿದ್ದರು. ರಾಜಸೋದರರು ಭಗವದಂಶೀಭೂತರಾದ ಶ್ರೀರಾಮಲಕ್ಷ್ಮಣರೋ ಎನ್ನುವಂತೆ ಪ್ರೇಕ್ಷಕರಿಗೆ ಭಾಸವಾಗುತ್ತಿದ್ದಿತು. [illegible]ರುಗಳೂ, ಸ್ಥಾನಾಪತಿಗಳೂ, ಇತರ ರಾಜ್ಯಾಧಿಕಾರಿಗಳೂ, ರಾಜಬಂಧುಗಳೂ, ಪೌರವೃದ್ಧರೂ, ಪಂಡಿತೋತ್ತಮರೂ, ಕವಿಗಳೂ, ವೈದಿಕರೂ, ಸಂಸ್ಥಾನದ ಮುಖ್ಯಮುಖ್ಯ ಪ್ರಜಾಪ್ರತಿನಿಧಿಗಳೂ ರಾಜಸಭಾಯೋಗ್ಯಗಳಾದ ಉಡುಪುಗಳನ್ನು ಧರಿಸಿಕೊಂಡು ನಿಯಮಿತಗಳಾದ ತಮ್ಮ ತಮ್ಮ ಉಚಿತಾಸನಗಳಲ್ಲಿ [illegible] ಭವನಗಳಿಂದ [illegible] ತುಂಬಿಕೊಂಡಿದ್ದರು.

ರಾಜದರ್ಶನಕ್ಕಾಗಿ ಬಂದಿದ್ದ [illegible] ಸ್ತ್ರೀಪುರುಷರಿಂದ ಅರಮನೆಯ ಮುಂಭಾಗದ ಮೈದಾನವು [illegible]. ಅರಮನೆಯಲ್ಲಿ ರಾಜಸಭೆಯು ದೇವತಾ [illegible] ದೇವೇಂದ್ರನ ಸ್ವರ್ಗಸಭೆಯನ್ನು [illegible] ಅತಿಶಯೋಕ್ತಿ [illegible] ರಾಜಸಭಾ [illegible] ಸ್ಥಾನದಲ್ಲಿ [illegible] ಕೆತ್ತಲ್ಪಟ್ಟ [illegible] ಪ್ರಭುಗಳು [illegible] ಕಟಾಕ್ಷವನ್ನು ಬೀರುತ್ತ ಮಂದಹಾಸವನ್ನು ಸೂಸುತ್ತ ಪ್ರಜೆಗಳ ಆನಂದವೇ ಮೂರ್ತಿಗೊಂಡಂತಿರುವ ಆ ಅಭಿನಂದನ ಪತ್ರಿಕೆಯನ್ನು ಸ್ವೀಕರಿಸಿದರು. ಆ ಬಳಿಕ ಶ್ರೀಮನ್ಮಹಾರಾಜರವರು ಕೇವಲ ಪ್ರಜಾಭ್ಯುದಯೈಕ [illegible]ವಾದ ತಿಳಿಗನ್ನಡದಲ್ಲಿ [illegible]ವಾದ ಒಂದು ಭಾಷಣವನ್ನು ಮಾಡಿದರು. ಪ್ರಜೆಗಳೆಲ್ಲರೂ [illegible] ಸಮಯಗಳಂತೆ [illegible] ಯಿಂದ [illegible]ವನ್ನು ಮಾಡಿದರು. [illegible] ಕೃಷ್ಣಸನ್ನಿಧಿ ತಮ್ಮ ಶಿಷ್ಯಮಂಡಲಿ ಸಹಿತರಾಗಿ ಒಕ್ಕಣಿಗೆ ಸೇರಿಕೊಂಡು ನಿಂತಿರಲು ಅಲಂಕಾರಗಳಿಂದೊಪ್ಪುವ ಎರಡು ಆನೆಗಳೂ [illegible]. ವಿಶಾಲವಾದ ಕಾಗದ [illegible] ಕೆಳಗೆ ಮಹಾಸನ್ನಿಧಿ [illegible] ಮಂಟಪಗಳಲ್ಲಿ [illegible] ಗಾನವನ್ನು ಮಾಡಿದರು. ಸ್ವಸ್ತಿವಾಚನ ಮಂತ್ರಘೋಷವು ನಡೆಯಿತು. ಜಯಸೂಚಕಗಳಾದ ೨೧ ತೋಪುಗಳು ಪುನಃ ಹಾರಿಸಲ್ಪಟ್ಟವು. ಸಭಾಸದರಿಗೆಲ್ಲ ಪರಿಮಳದ್ರವ್ಯಗಳು ಕೊಡಲ್ಪಟ್ಟವು. ಸೈನಿಕರ [illegible]ಗುತ್ತಿರಲು [illegible] ಸಭಾವಿಸರ್ಜನೆಯಾಯಿತು. ಅಲ್ಲಿಗೆ ಪ್ರಾತಃಕಾಲದ ಕಾರ್ಯಗಳೆಲ್ಲವೂ ಮುಗಿದವು. ಪುನಃ ಸಾಯಂಕಾಲ ೬ ಘಂಟೆಗೆ ನಾಲ್ಕು ಕುದುರೆಗಳನ್ನು ಹೂಡಿದ ಭವ್ಯವಾದ ರಥದಲ್ಲಿ [illegible] ಸಯ್ಯಾಜೀರಾವ್ ರೋಡು [illegible] ಬೀದಿಗಳಲ್ಲಿ ಹಾದು [illegible] ಇಕ್ಕೆಲಗಳಲ್ಲಿಯೂ ಕಿಕ್ಕಿರಿದು ನಿಂತಿರುವ ಪ್ರಜೆಗಳ [illegible] ನೋಡುತ್ತ ದೊಡ್ಡಕೆರೆ ಮೈದಾನದಲ್ಲಿ ಹಾಕಿರುವ ಪೆಂಡಾಲಿನಲ್ಲಿ ಪ್ರವೇಶಿಸಿ [illegible]. [illegible] ಉಚಿತಾಸನಗಳಲ್ಲಿ ಕುಳಿತರು. [illegible] ರಚಿಸಿರುವ ಪದ್ಯಾವಳಿಗಳನ್ನು ಓದಿದರು. ಅರಮನೆಯ ಅಧಿಕಾರಿಗಳ [illegible] ಮಹಾಸ್ವಾಮಿಯಿಂದ [illegible] ನಡೆಯಿತು. ಅಲ್ಲಿಂದ ಮಹಾಪ್ರಭುಗಳು [illegible] ಮೈದಾನಕ್ಕೆ ದಯಮಾಡಿಸಿದರು. ಅಲ್ಲಿ ನಡೆದ ವಿನೋದೋತ್ಸವ [illegible] ಆ ಮೈದಾನದಲ್ಲಿ [illegible] ರಂಗಗಳು ಹಾಕಿಸಲ್ಪಟ್ಟಿದ್ದುವು. ಒಂದರಲ್ಲಿ [illegible] ಚಾಮುಂಡೇಶ್ವರೀ ಕಂಪೆನಿಯವರ ನಾಟಕವು, ಒಂದರಲ್ಲಿ ಹರಿಕೀರ್ತನೆ, ಮತ್ತೊಂದರಲ್ಲಿ ಭಾಗವತರಾಟ, ಇನ್ನೊಂದರಲ್ಲಿ ಅರಮನೆ ಕರ್ನಾಟಕವಾದ್ಯ ಗಾಯನ ಸಂಗೀತ, ಕೆಲವುಗಳಲ್ಲಿ ಇಂಗ್ಲೀಷ್ ಬ್ಯಾಂಡಿನವರ ವಾದ್ಯವೈಭವ, ಬೇರೆ ಕೆಲವುಗಳಲ್ಲಿ ಹಿಂದೂಸ್ಥಾನಿ ಸಂಗೀತ, ಇನ್ನೊಂದರಲ್ಲಿ [illegible], ಮತ್ತೊಂದರಲ್ಲಿ [illegible], ಒಂದರಲ್ಲಿ ಅತ್ಯಾಶ್ಚರ್ಯಕರ ವಿಚಿತ್ರವಾದ ಸರ್ಕಸ್ ಆಟಗಳು, ಕೆಲವುಗಳಲ್ಲಿ ಕುಸ್ತಿಗಳು, ಕೆಲವುಗಳಲ್ಲಿ [illegible]. ಸುತ್ತಲೂ [illegible] ಫಲಾಹಾರ ಮಂದಿರಗಳೂ, ಪಾನಗೃಹಗಳೂ, ಅಂಗಡಿಮುಂಗಟ್ಟುಗಳೂ ಬೆಳಗಾಟಗಳೂ ನೋಡುವವರ ಕಣ್ಣುಗಳನ್ನು ಸೆಳೆಯು ದ್ದವು. ಸರ್ಕಾರಿಯುದ್ಯೋಗಿಗಳಿಗೂ ರಾಜಧಾ ವಿಶಿಷ್ಟಜನಗಳಿಗೂ ಗ್ರಾಮಾಂತರಗಳಿಂದ ಬಂದ ಸ್ತಪ್ರಜೆಗಳಿಗೂ ಮೈದಾನವು ವಿಶಾಲವಾಗಿದ್ದರೂ ಬದೆ ಇಕ್ಕಟ್ಟಾಗಿದ್ದಿತು. ರಾತ್ರಿ ಮದ್ದುಸಿಡಿತಮಾಷೆ ದರ್ಶ ಹೇಳಲಿಕ್ಕೆ ಬರುವಂತೆ ಇಲ್ಲ. ಆ ದಿವಸವೆಲ್ಲ ಒಂದು ದೊಡ್ಡ ಜಾತ್ರೆಯಂತೆಯೇ ಆಗಿತ್ತು. ರಾಜಧಾ ಮ ಪ್ರಜೆಗಳೆಲ್ಲರೂ ನಮ್ಮ ಶ್ರೀಮನ್ಮಹಾರಾಜರ ಜತಮಹೋತ್ಸವವನ್ನು ದೊಡ್ಡ ಹಬ್ಬಗಳಿಗಿಂತಲೂ ಶೇಷವಾಗಿ ಆಚರಿಸಿದರು. ಪ್ರತಿಯೊಂದು ದೇವ ಗಾರಗಳಲ್ಲಿ ವಿಶೇಷೋತ್ಸವವನ್ನು ನಡೆಸಿ ತಮ್ಮಲ್ಲಿರ ಸ್ವಾಭಾವಿಕವಾದ ರಾಜಭಕ್ತಿಯನ್ನೂ ಪ್ರದರ್ಶಿಸಿ ನ ನಾಡಿನ ಮಹಾಸ್ವಾಮಿಯವರ ೪೪ನೇ ವರ್ಷ ಮಹೋತ್ಸವವನ್ನು ನಮಗೆ ನೋಡಲು ಭಗವಂತನ ಪ್ರಾರ್ಥಿಸಿದರು.

ಸ್ಪೆಷಲ್‌ದರ್ಬಾರಿನಲ್ಲಿ ಪ್ರಜಾಮಂಡಲಿಯವರು ಒಪ್ಪಿಸಿದ ಅಭಿನ ದನ ಪತ್ರಿಕೆಗೆ ಮಹಾಪ್ರಭುಗಳು ಅಪ್ಪಣೆಕೊಡಿಸಿದ ಭಾಷಣ.

ಪ್ರಿಯತಮರಾದ ಪ್ರಜಾಮಹಾಶಯರೆ,

ನಿಮ್ಮುಗಳಿಗೆ ನಮ್ಮ ವಿಷಯದಲ್ಲಿರುವ ಪ್ರೀತಿವಿಶ್ವಾ ಸಗಳನ್ನು ಪ್ರದರ್ಶಿಸತಕ್ಕ ಈ ಅಭಿನಂದನ ಪತ್ರಿ ಯನ್ನು ಬಹು ಆದರದಿಂದ ಸ್ವೀಕರಿಸುತ್ತೇವೆ. ಇ ದಲ್ಲಿ ನೀವುಗಳು ತೋರ್ಪಡಿಸಿರುವ ಭಕ್ತಿಶ್ರದ್ಧೆಗ ನಮಗೆ ವಿಶೇಷವಾದ ಸಂತೋಷವನ್ನುಂಟುಮಾಡಿವೆ.

ಭಗವಂತನು ಮೈಸೂರು ದೇಶಕ್ಕೆ ನಾನಾವಿಧವಾ ಸಂಪತ್ತುಗಳನ್ನು ಅನುಗ್ರಹಿಸಿರುವುದಲ್ಲದೆ, ವಿನಯಸ ಪನ್ನರೂ, ಉದಾರಚಿತ್ತರೂ, ಕಾರ್ಯಾಸಕ್ತರೂ ಆ ಪ್ರಜೆಗಳನ್ನೂ ದಯಪಾಲಿಸಿರುವನು. ಮೈಸೂ ಸಂಸ್ಥಾನಕ್ಕೆ ಮಾದರಿಸಂಸ್ಥಾನವೆಂದು ಬಂದಿರು ಖ್ಯಾತಿಗೂ, ಸಾರ್ವಭೌಮ ಸರ್ಕಾರವು ಈಗಲಾ ತೋರಿಸಿರುವ ಘನವಾದ ಪುರಸ್ಕಾರಕ್ಕೂ, ನಿಮ್ಮಗ ಪ್ರೀತಿಪೂರ್ವಕವಾದ ಸಹಕಾರವೇ ಮುಖ್ಯ ಕಾರ ವಾಗಿರುವುದು.

ಇದೇ ರೀತಿಯಲ್ಲಿ ಮುಂದೆಯೂ ನಾವೆಲ್ಲರೂ ಕಲೆತು, ಸಹೋದರಭಾವದಿಂದ ಕಾರ್ಯಗಳನ್ನು ನಡೆಸಿ ಕೃಷಿ, ಕೈಗಾರಿಕೆ, ವಾಣಿಜ್ಯಗಳಿಗೆ ಹೆಚ್ಚು ಸೌಕರ್ಯವನ್ನು ಒದಗಿಸಿ, ಎಲ್ಲರ ಅಭಿವೃದ್ಧಿಗೂ ಸಮವಾದ ಅವಕಾಶವನ್ನು ಕೊಡುತ್ತ, ನವೀನ ಕಾಲದಲ್ಲಿ ಉತ್ತಮಸ್ಥಿತಿಗೆ ಬಂದಿರುವ ದೇಶಗಳ ಸಮಕ್ಕೆ ಮೈಸೂರು ದೇಶವನ್ನು ತರಲು, ನಮ್ಮ ಶಕ್ತಿಸಾಹಸಗಳನ್ನೆಲ್ಲಾ ಉಪಯೋಗಿಸಬೇಕಾಗಿರುವುದು.

ಈ ಮಹತ್ತಾದ ಕಾರ್ಯದಲ್ಲಿ, ಎಲ್ಲಾ ಪಂಗಡದವರೂ ನಮ್ಮ ಪ್ರಜೆಗಳೇ. ಒಂದು ದೇಶದಲ್ಲಿ ಜನಿಸಿದವರೇ, ಒಂದೆಂಬುದನ್ನು ಮನಸ್ಸಿನಲ್ಲಿಟ್ಟು, ಮುಂದಾದವರು ತಮ್ಮಷ್ಟು ಅಭಿವೃದ್ಧಿಸ್ಥಿತಿಗೆ ಇನ್ನೂ ಬಾರದಿರುವವರಿಗೆ ಸಹಾಯಕರಾಗಬೇಕೆಂಬುದು ನಮ್ಮ ಅಭಿಲಾಷೆಯಾಗಿರುತ್ತದೆ.

ಮುಂದೆ ವೃದ್ಧಿಗೆ ಬರುವವರಾಗಿರುವ ಯುವಕರು ಉದಾರಮನಸ್ಸನ್ನೂ, ಸಹೋದರಭಾವವನ್ನೂ, ಪ್ರಜಾಧರ್ಮವನ್ನೂ ತಮ್ಮ ದೃಷ್ಟಿಯಲ್ಲಿಟ್ಟುಕೊಂಡು, ನಮ್ಮ ರೀತಿಗೆ ಹಿತಕರವಾದ ಮಾತೃಭೂಮಿಯ ಶ್ರೇಯಸ್ಸಾಧನೆಗಾಗಿ ಪ್ರಯತ್ನಿಸಬೇಕೆಂದು ಬಯಸುತ್ತೇವೆ.

ತನ್ನ ಸಂಕಟಗಳನ್ನು ಕಂಠೋಕ್ತವಾಗಿ ಹೇಳಿಕೊಳ್ಳಲಾರದ ಬಡವರ್ಗದ ವಿಷಯದಲ್ಲಿ ಕನಿಕರವನ್ನು ತೋರಿಸಬೇಕೆಂದು ಈ ಸಂದರ್ಭದಲ್ಲಿ ಸೂಚಿಸಲಿಚ್ಛೈಸುತ್ತೇವೆ.

ಪ್ರಜೆಗಳ ಸೌಖ್ಯವೇ ನಮ್ಮ ಸೌಖ್ಯವೆಂದು ನಾವು ಸದಾ ಭಾವಿಸಿಕೊಂಡಿರುತ್ತೇವೆ. ಅಂತಹ ಸೌಖ್ಯಸಾಧನೆಗೆ ಅವಶ್ಯಕವಾದ ವಿವೇಕ, ದೃಢಸಂಕಲ್ಪ, ಸಹಾಯಸಂಪತ್ತು ಇವುಗಳನ್ನು ನಮಗೆ ಅನುಗ್ರಹಿಸಬೇಕೆಂದು ಕರುಣಾಮಯನಾದ ಭಗವಂತನನ್ನು ನಿರಂತರವೂ ಪ್ರಾರ್ಥಿಸುತ್ತಿರುವೆವು.

|| ಶ್ರೀರಸ್ತು ||

|| ಶ್ರೀಮನ್ಮಹೀಮಂಡಲ ಮಂಡನಾಯಮಾನವೆನಿಸಿರುವ ಭರತಖಂಡದಲ್ಲಿ ಅತಿಪ್ರಖ್ಯಾತಿಪಡೆದ ಕರ್ನಾಟಕ ಜನಪದಕ್ಕೆ ಆಶ್ರಯಸ್ಥಾನವಾಗಿರುವ ಶ್ರೀಮನ್ಮಹೀಶೂರ ಸಂಸ್ಥಾನದ ಮಹಾಪ್ರಭುಗಳವರಾದ ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರಾದ್ಯನೇಕ ಬಿರುದಾಲಂಕೃತರಾದ
ಮಹಾರಾಜ ಶ್ರೀಮಚ್ಚಾಮರಾಜೇಂದ್ರ ತನುಸಂಜಾತರಾದ

ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್

ಮಹಾಸ್ವಾಮಿಯವರ ದಿವ್ಯಸನ್ನಿಧಾನದಲ್ಲಿ.—

ಶ್ರೀ ಶಾಲಿವಾಹನ ಶಕ ೧೮೪೯ನೆಯ ಪ್ರಭವಸಂವತ್ಸರದ ಶ್ರಾವಣ ಶುದ್ಧ ೧೦ ಸೋಮವಾರದಂದು, ಮಹಾಸ್ವಾಮಿಯವರ ಧರ್ಮಪ್ರಭುತ್ವದ ರಜತಮಹೋತ್ಸವದ ಶುಭ ಸಮಯದಲ್ಲಿ, ಮಹಾಸ್ವಾಮಿಯವರ ಕೃಪಾಪರಿಪೋಷಣೆಯಿಂದ ಆನಂದಿಸುತ್ತಿರುವ ನಾನಾ ಜಾತಿಮತಗಳ ಪ್ರಜಾಮಂಡಲಿಯೆಲ್ಲವೂ ಸೇರಿ ಸಹಜವಾದ ರಾಜಭಕ್ತಿ ವಿನಯ ವಿಶ್ವಾಸ ಕೃತಜ್ಞತೆಗಳಿಂದ ಸಮರ್ಪಿಸುವ ಅಭಿನಂದನ ಪತ್ರಿಕೆಯ ವಿವರವೆಂತೆಂದರೆ.—

ಮಹಾಸ್ವಾಮಿಯವರು ಕುಲಪರಂಪರಾಗತವಾದ ದಿವ್ಯ ಸಿಂಹಾಸನವನ್ನಾರೋಹಿಸಿ, ಗುರುತರವಾದ ರಾಜ್ಯಭಾರವನ್ನು ಕೈಕೊಂಡು ಇಂದಿಗೆ ಇಪ್ಪತ್ತೈದು ಸಂವತ್ಸರಗಳಾದವು. ಈ ಕಾಲವಿಸ್ತರದಲ್ಲಿ ಪ್ರಭುಗಳವರ ಆಳಿಕೆಯು ಸುಸೂತ್ರವಾಗಿಯೂ ಶುಭಪರಿಪೂರ್ಣವಾಗಿಯೂ ಲೋಕರಂಜಕವಾಗಿಯೂ ನಡೆದುಕೊಂಡು ಬಂದಿರುವುದೆಂಬ ಮಹಾಸಂತೋಷವನ್ನು ಪ್ರಜೆಗಳಾದ ನಾವು ಈ ಸಂದರ್ಭದಲ್ಲಿ ಬಿನ್ನಯಿಸಲು ಉತ್ಸಾಹವುಳ್ಳವರಾಗಿದ್ದೇವೆ.

ಮಹಾಸ್ವಾಮಿಯವರು ಪ್ರಜಾಭ್ಯುದಯಕ್ಕಾಗಿ ಮಾಡಿಸಿರುವ ವಿವಿಧ ಕಾರ್ಯಕಲಾಪಗಳು ದೇಶಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಉಲ್ಲೇಖಿಸಿಕೊಳ್ಳತಕ್ಕವುಗಳಾಗಿವೆ. ಮಹಾಪ್ರಭುಗಳವರ ಚಾರಿತ್ರ್ಯವು ಭೂಪಾಲಕ ಕುಲಕ್ಕೆ ಆದರ್ಶಪ್ರಾಯವಾಗಿರುವುದೆಂದು ದೇಶವಿದೇಶಗಳಲ್ಲಿ ಸುಪ್ರಸಿದ್ಧವಾಗಿದೆ. ಇಂತಹ ಪ್ರಭುಗಳನ್ನು ಪಡೆದಿರುವುದು ಪ್ರಜೆಗಳ ಭಾಗ್ಯವಿಶೇಷವೆಂಬುದು ಸರ್ವಜನ ಸಮ್ಮತವಾಗಿದೆ.

ಮಹಾಸ್ವಾಮಿಯವರ ಆಳಿಕೆಯ ವಿಚಕ್ಷಣತೆಯನ್ನು ರಾಜನೀತಿಜ್ಞರು ಕೊಂಡಾಡುತ್ತಿರುವರು. ಮಹಾಸ್ವಾಮಿಯವರ ರಾಜ್ಯಯಂತ್ರದ ಅಂಗಾಂಗಗಳು ಪ್ರಕೃತಕಾಲಕ್ಕೆ ತಕ್ಕಂತೆ ವಿಸ್ತಾರಗೊಂಡು ಪರಿಷ್ಕಾರಹೊಂದುತ್ತ, ಶಾಸನವಿಧಾನ ಭಾಗದಲ್ಲಿಯೂ ಕಾರ್ಯಸಾಧನ ಭಾಗದಲ್ಲಿಯೂ ನ್ಯಾಯನಿರ್ಣಯ ಭಾಗದಲ್ಲಿಯೂ ಲೋಕಸಮ್ಮತವಾಗುತ್ತ ಬಂದಿವೆ. ಈ ರಾಜ್ಯಪರಿಪಾಲನಕೌಶಲದಿಂದ ರಾಷ್ಟ್ರದ ಆದಾಯವು ಮುಮ್ಮಡಿಯಾಗಿ ಬೆಳೆದು ಹೆಚ್ಚುತ್ತಲೂ ಪ್ರಜಾಸೌಖ್ಯಗಳು ಅದನ್ನನುಸರಿಸಿ ಬಹುಮುಖವಾಗಿ ಪ್ರವರ್ಧಿಸುತ್ತಲೂ ಇವೆ.

ಮಹಾಸ್ವಾಮಿಯವರ ಪ್ರಜಾವಾತ್ಸಲ್ಯಪ್ರಭಾವದಿಂದ ನಾನಾವರ್ಗಗಳ ಜನರಲ್ಲಿಯೂ ವಿದ್ಯಾಭ್ಯಾಸವು ಪ್ರಚುರವಾಗುತ್ತ, ಜ್ಞಾನಾಭಿಲಾಷೆಯು ಬೆಳೆಯುತ್ತಿದೆ, ಗೀರ್ವಾಣ ಕರ್ನಾಟಕ ಭಾಷೆಗಳು ಪುನರುಚ್ಛ್ರಾಯವನ್ನು ಪಡೆಯುತ್ತಿವೆ, ಪಾಶ್ಚಾತ್ಯ ವಿಜ್ಞಾನವು ಪ್ರಸರಿಸುತ್ತಿದೆ. ಸಂಗೀತಾದಿ ಲಲಿತ ಕಲೆಗಳು ಅಭಿವರ್ಧಿಸುತ್ತಿವೆ. ಸಾವಿರಾರು ಪಾಠಶಾಲೆಗಳೂ ಪ್ರೌಢಶಾಲೆಗಳೂ ವಿಶ್ವವಿದ್ಯಾಪೀಠವೂ ಮಹಾಸ್ವಾಮಿಯವರ ವಿದ್ಯಾಭಿಮಾನಕ್ಕೆ ಶಾಶ್ವತ ನಿದರ್ಶನಗಳಾಗಿ ರಾಜ್ಯದ ಪುರೋಭಿವೃದ್ಧಿಗೆ ಪರಮಸಾಧಕಗಳಾಗಿ ಶೋಭಿಸುತ್ತಿವೆ.

ಮಹಾಸ್ವಾಮಿಯವರು ನಿರ್ಮಾಣಮಾಡಿಸಿರುವ ಕೃಷ್ಣರಾಜಸಾಗರ ಮೊದಲಾದ ವಿಶಾಲ ಸರೋವರಗಳೂ ಭಾವಿ ಕೆರೆ ಕಾಲುವೆಗಳೂ ಸುಗಮಗಳಾದ ಮಾರ್ಗಗಳೂ ಧೂಮಶಕಟ ಸರಣಿಗಳೂ ವಿದ್ಯುಚ್ಛಕ್ತಿ ಸಂಧಾನಗಳೂ ಲೋಹಶೋಧನೋದ್ಯಮಗಳೂ ರಾಸಾಯನಿಕ ರಚನೆಗಳೂ ಇತರ ವ್ಯವಸಾಯಿಕ ಕೃತಿಗಳೂ ಭೂವ್ಯಾಪಕವಾದ ವಿಸ್ತರಣ ಯಂತ್ರಕರ್ಮಪ್ರಸರಣ ನಾನಾವಿಧೋದ್ಯೋಗಜನಗಳಿಗೆ ಅನುಕೂಲಗಳಾಗಿ, ಜನರಲ್ಲಿ ಕಾರ್ಯೋತ್ಸಾಹವನ್ನು ತುಂಬಿ, ಬುದ್ಧಿಕುಶಲತೆಯನ್ನು ಉತ್ತಮಗೊಳಿಸಿ ಅವರ ಜೀವನಯೋಗ್ಯತೆಯನ್ನು ಉನ್ನತಿಗೆ ತರುತ್ತಿವೆ.

ಮಹಾಸ್ವಾಮಿಯವರು ಸ್ಥಾಪನೆ ಮಾಡಿಸಿಕೊಟ್ಟಿರುವ ನೂತನಯಂತ್ರೋಪಕರಣ ಸಜ್ಜಿತಗಳಾದ ವೈದ್ಯಶಾಲೆಗಳು, ಪಶುಚಿಕಿತ್ಸಾಲಯಗಳು, ಪುರಾಲಂಕಾರಗಳಾದ ಸೌಧಮಂಟಪೋದ್ಯಾನಗಳು, ಪುಸ್ತಕ ಭಾಂಡಾಗಾರ ವಾಚನಮಂದಿರಗಳು, ದ್ರವ್ಯಾಗಾರ ಸಹಕಾರಸಂಘಗಳು ಇವೇ ಮೊದಲಾದ ಸಂಸ್ಥೆಗಳು ವರ್ಷೇ ವರ್ಷೇ ಅಭಿವೃದ್ಧಿ ಪಡೆದು, ಜನಜೀವನೋತ್ಕರ್ಷವನ್ನು ಸೂಚಿಸುತ್ತ ಮಹಾಪ್ರಭುಗಳವರ ಪ್ರಜೋತ್ತೇಜಕ ಶಕ್ತಿಯನ್ನು ಪ್ರಕಟಿಸುತ್ತಿರುವುವು.

ರಜತಮಹೋತ್ಸವದಲ್ಲಿ ಶ್ರೀ ಮಹಾಪ್ರಭುಗಳು ಪ್ರಜೆಗಳಿಗೆ ಅನುಗ್ರಹಿಸಿದ

ಶುಭೋದಂತ.

ನಮ್ಮ ರಾಜ್ಯಭಾರವು ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳು ಪೂರ್ಣವಾದ ಈ ದಿವಸ ನಾವು ನಮ್ಮ ಪ್ರೀತಿಗೆ ಪಾತ್ರರಾದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಸುಖವಾಗಿರಲೆಂದು ಹೃದಯದಲ್ಲಿ ಹಾರೈಸುತ್ತ ಆ ಶುಭಾಭಿಕಾಂಕ್ಷೆಯನ್ನು ಪ್ರೇಮಪುರಸ್ಸರವಾಗಿ ಪ್ರಕಾಶಗೊಳಿಸಲು ಯಾವಜ್ಜೀವವೂ ಸತತವಾದ ಪ್ರಯತ್ನವನ್ನು ಮಾಡುವೆವು.

ನಮ್ಮ ಜೀವಿತಕಾಲದಲ್ಲಿಯೂ ರಾಜ್ಯಭಾರದಲ್ಲಿಯೂ ಪರಮಧ್ಯೇಯವಾದ ಈ ಪ್ರಯತ್ನವನ್ನು ಈಡೇರಿಸಲು ತಕ್ಕ ಬುದ್ಧಿಶಕ್ತಿಯನ್ನೂ, ಕಾಯಶಕ್ತಿಯನ್ನೂ ನಮಗೆ ದಯಪಾಲಿಸಲೆಂದು ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುವೆವು.

ಶ್ರೀ ಕೃಷ್ಣ.

ಮಹಾಸ್ವಾಮಿಯವರು ಬೆಳಸಿ ಬಲಪಡಿಸಿರುವ ಪ್ರಜಾಪ್ರತಿನಿಧಿಸಭೆ ಶಾಸನಸಭೆಗಳೂ ಸಂಪದಭಿವರ್ಧಕಸಮಿತಿ ಮಂಡಲಸಮಿತಿಗಳೂ ನಗರಸಭೆ ಗ್ರಾಮ ಪಂಚಾಯಿತಿಗಳೂ ರಾಷ್ಟ್ರದಲ್ಲಿ ಪ್ರಜಾಧರ್ಮಪ್ರಕಾಶಕ್ಕೆ ಸಾಧನಗಳಾಗಿವೆ. ಈ ಸಂಸ್ಥೆಗಳ ಮೂಲಕ ಜನರು ರಾಜ್ಯವಿಚಾರದಲ್ಲಾಸಕ್ತರಾಗಿ, ಜನಪದನಿಷ್ಠೆಯನ್ನು ಬೆಳಸಿ, ದೇಶಕಾರ್ಯನಿರ್ವಾಹದಲ್ಲಿ ಭಾಗಿಗಳಾಗಲು ಅವಕಾಶವುಂಟಾಗಿರುವುದು. ಅವುಗಳ ಮಹಿಮೆಯಿಂದ ಪ್ರಜೆಗಳಲ್ಲಿ ರಾಜಕೀಯ ನ್ಯಾಯಪರಿಜ್ಞಾನವೂ ಸ್ವಕರ್ತವ್ಯವಿವೇಕವೂ ಸ್ವಪ್ರಯತ್ನಬುದ್ಧಿಯೂ ಐಕ್ಯಭಾವವೂ ದೇಶಹಿತೈಕದೃಷ್ಟಿಯೂ ಪ್ರಬಲಿಸುತ್ತಿರುವವಲ್ಲದೆ, ರಾಜ್ಯಯಂತ್ರವು ನಿರಾತಂಕವಾಗಿಯೂ ಪ್ರಜಾನುರಂಜಕವಾಗಿಯೂ ನಡೆಯುವಂತಾಗಿ, ಈಮೂಲಕ ಮಹಾಪ್ರಭುಗಳ ಯಶಸ್ಸೂ ರಾಜ್ಯದ ಶ್ರೇಯಸ್ಸೂ ಮತ್ತಷ್ಟು ಅಭಿವರ್ಧಿಸುವವೆಂದು ನಾವು ದೃಢವಾಗಿ ನಂಬಿಕೊಂಡಿರುವೆವು.

ಹೀಗಾಗಿ, ಮಹಾಸ್ವಾಮಿಯವರ ದೈವಭಕ್ತಿ, ಭೂತದಯೆ, ಗಾಂಭೀರ್ಯ, ಸದಾಚಾರವರ್ತನೆ, ಪೂರ್ವಸಂಪ್ರದಾಯವಿಶ್ವಾಸ, ಆತ್ಮಪರಿಶುದ್ಧತೆ, ಗುರುಜನನಮ್ರತೆ, ವಿದ್ವಜ್ಜನಮಮತೆ, ಸರ್ವಜನಸುಲಭತೆ, ರಾಜಧರ್ಮಪರಾಯಣತೆ, ಮಂತ್ರಾಲೋಚನಚತುರತೆ, ಲೋಕಾರಾಧನತತ್ಪರತೆ—ಈ ಸದ್ಗುಣಗಳು ಸಕಲ ದೇಶಸಂಸ್ತುತಗಳಾಗಿ, ಮಹಾಸ್ವಾಮಿಯವರನ್ನು ಜನಕ ಯುಧಿಷ್ಠಿರಾದಿ ರಾಜರ್ಷಿಗಳ ಸಾಲಿಗೆ ಸೇರಿಸತಕ್ಕವಾಗಿವೆ. ಮಹಾಸ್ವಾಮಿಯವರ ಈ ಗುಣರತ್ನರಾಶಿಯ ಸಂಕ್ರಾಂತಿಯು ಪ್ರಜೆಗಳಾದ ನಮಗೆ ಅತ್ಯಂತ ಗೌರವಾಸ್ಪದವಾಗಿ ಚಿತ್ತಸಮುನ್ನತಿಕಾರಕವಾಗಿರುವುದು, ಮಹಾಸ್ವಾಮಿ.

ಈಚೆಗೆ ಬ್ರಿಟಿಷ್ ಸಾರ್ವಭೌಮ ಸರ್ಕಾರದವರು ಸಹ ಮಹಾಸ್ವಾಮಿಯವರ ರಾಜ್ಯಭಾರಕ್ರಮದ ಉತ್ಕೃಷ್ಟತೆಯನ್ನೂ ಪ್ರಜಾನುರಾಗವನ್ನೂ ಉದಾತ್ತಸಂಕಲ್ಪಗಳನ್ನೂ ಸದ್ಗುಣಸಂಪತ್ತನ್ನೂ ಮೆಚ್ಚಿ ಮಹಾಸ್ವಾಮಿಯವರ ಘನತೆಯನ್ನು ಲೋಕಕ್ಕೆ ಪ್ರಕಾಶಪಡಿಸಿರುತ್ತಾರೆ. ಆ ಮೆಚ್ಚಿಕೆಯನ್ನು ತೋರಿಸುವುದಕ್ಕೋಸ್ಕರ ಸಾರ್ವಭೌಮ ಪ್ರತಿನಿಧಿಗಳಾದ ಲಾರ್ಡ್ ಅರ್ವಿನ್ ಶ್ರೀಮಂತರವರು ನಮ್ಮ ಸಂಸ್ಥಾನದಿಂದ ಸಲ್ಲಬೇಕಾದ ಪೊಗದಿಯಲ್ಲಿ ೧೦|| ಲಕ್ಷ ರೂಪಾಯಿಗಳಷ್ಟರ ಭಾಗವನ್ನು ಬಿಟ್ಟುಕೊಟ್ಟು, ಪರಸ್ಪರ ಮೈತ್ರಿಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿರುವುದು ನಮಗೆಲ್ಲ ಅತ್ಯಂತ ಸಂತೋಷವನ್ನೂ ಹೆಮ್ಮೆಯನ್ನೂ ಉಂಟುಮಾಡಿರುತ್ತದೆ, ಮಹಾಸ್ವಾಮಿ.

ಶ್ರೀ ಮಹಾಸ್ವಾಮಿಯವರಿಗೂ, ಶ್ರೀಮದ್ಯುವರಾಜರವರಿಗೂ, ಶ್ರೀ ಮಹಾಮಾತೃಶ್ರೀಯವರಿಗೂ, ರಾಜಕುಟುಂಬದವರಿಗೂ ಜಗದೀಶ್ವರನು ಆಯುರಾರೋಗ್ಯ ಸೌಭಾಗ್ಯಸಾಮ್ರಾಜ್ಯಗಳನ್ನು ಅಮಿತವಾಗಿ ಕರುಣಿಸಲಿ. ಮಹಾಸ್ವಾಮಿಯವರು ಸರ್ವದಾ ಸರ್ವತ್ರ ಜಯಶಾಲಿಗಳಾಗಿರಲಿ. ಮಹಾಸ್ವಾಮಿಯವರ ಕೀರ್ತಿಯು ದಶದಿಕ್ಕುಗಳಲ್ಲಿಯೂ ಹರಡಿ ಆಚಂದ್ರತಾರಕವಾಗಿ ಬೆಳಗಲಿ. ಮಹಾಸ್ವಾಮಿಯವರ ಧರ್ಮಪ್ರಭುತ್ವದ ಸುವರ್ಣಮಹೋತ್ಸವ ಸಮಯದಲ್ಲಿ ಈ ಹಿರಿಯ ಸಂಭ್ರಮದಿಂದ ಮತ್ತೊಮ್ಮೆ ಮಹಾಸ್ವಾಮಿಯವರನ್ನಭಿನಂದಿಸುವ ಸುಯೋಗವು ಪ್ರಜೆಗಳಾದ ನಮ್ಮದಾಗಿರಲಿ. ಸಮಸ್ತ ಸನ್ಮಂಗಳಗಳೂ ನಮ್ಮ ಮಹಾರಾಜರವರಿಗೆ ಲಭಿಸಲಿ—ಇಂತೆಂಬುದೇ ಮಹಾಸ್ವಾಮಿಯವರ ಪ್ರಜಾಕೋಟಿಯ ಮನಃಪೂರ್ವಕವಾದ ಸಂತತ ಪ್ರಾರ್ಥನೆ.

ಮೈಸೂರುಪಟ್ಟಣ,
ಕ್ರಿಸ್ತಶಕ ೧೯೨೭ನೆಯ ಆಗಸ್ಟು ೮ನೆಯ ದಿವಸ.

ಇಂತು ಮಹೀಶೂರ ರಾಜ್ಯದ ಪ್ರಜಾಮಂಡಲದ ವಿಜ್ಞಾಪನೆಗಳು.

ನ್ನಾಗ್ಯೂ ನಾವು ವೈದಿಕೇತರರು ನಮ್ಮನ್ನು ಆಸ್ಥಾನ ವಿದ್ವಾಂಸರ ಮಂಡಲಿಯಲ್ಲಿ ಸೇರಿಸಿಕೊಳ್ಳಬೇಕೆಂದು ಶ್ರೀಮನ್ಮಹಾರಾಜರವರನ್ನಾಗಲೀ ಅಥವ ಅದಕ್ಕೆ ಸಂಬಂಧಪಟ್ಟ ಮುಖ್ಯ ಅಧಿಕಾರಿಗಳನ್ನಾಗಲೀ ಪ್ರಾರ್ಥಿಸಿಕೊಂಡಿದ್ದರಮೇಲೆ ಇವರನ್ನು ಆಸ್ಥಾನವಿದ್ವಾಂಸರಾಗಿ ತೆಗೆದುಕೊಂಡಿದ್ದ ಪಕ್ಷದಲ್ಲಿ ಮ|| ರಾ|| ಬಸವ್ಪನವರ ಹೋಲಿಕೆಯು ಸಮಂಜಸವಾಗುತ್ತಿತ್ತು. ಹಾಗಲ್ಲದೆ ಅವರು ವೈದಿಕರಾಗಿಯೂ ವಿದ್ವಾಂಸರಾಗಿಯೂ ಇರುವದರಿಂದಲೇ ವೈದಿಕ ವಿದ್ವಾಂಸರ ಶ್ರೇಣಿಯಲ್ಲಿ ಅವರನ್ನು ಸೇರಿಸಿರುವದರಿಂದ ಮ|| ರಾ|| ಬಸವ್ಪನವರ ಹೋಲಿಕೆಯು ಅಸಮಂಜಸವಾದುದೆಂದು ಎಂಥವರಿಗಾದರೂ ತಿಳಿಯದೇ ಇರುವದಿಲ್ಲ. ಸರ್ಕಾರದವರು ಮತ್ತು ಇತರರು ವೀರಶೈವಮತದ ತತ್ತ್ವವನ್ನು ತಿಳಿಯದೆ ಒಂದುವೇಳೆ ವೀರಶೈವರು ಬ್ರಾಹ್ಮಣರಲ್ಲವೆಂಬದಾಗಿ ಹೇಳಿದರೆ ಅದನ್ನು ವೀರಶೈವರು ಅನುಮೋದಿಸತಕ್ಕದ್ದು ನ್ಯಾಯವೆಂಬದಾಗಿ ಮ||ರಾ|| ಬಸವ್ಪನವರು ತಮ್ಮ ಲೇಖದಲ್ಲಿ ಹೇಳಿರುವುದು ಎಷ್ಟರಮಟ್ಟಿಗೆ ಸಮಂಜಸವಾಗಿದೆಯೋ ಅದನ್ನು ವಾಚಕರೇ ಊಹಿಸತಕ್ಕದ್ದು. ಏತಕ್ಕೆಂದರೆ ಉತ್ತಮವಾದ ರತ್ನವನ್ನು ರತ್ನಪರೀಕ್ಷೆಯನ್ನು ತಿಳಿಯದೇ ಇರತಕ್ಕವರು ರತ್ನವಲ್ಲವೆಂದು ಒಂದುವೇಳೆ ಹೇಳಿದರೆ, ರತ್ನಪರೀಕ್ಷೆ ತಿಳಿದವರು ಅವರ ಮಾತನ್ನು ಎಂದಿಗೂ ಅನುಮೋದಿಸುವುದಿಲ್ಲ. ಮತ್ತು ರತ್ನವನ್ನು ರತ್ನವಲ್ಲವೆಂದು ಹೇಳುವುದು ರತ್ನಪರೀಕ್ಷೆಯನ್ನು ತಿಳಿಯದವರ ದೋಷವೇ ಹೊರ್ತು ರತ್ನದದೋಷವಲ್ಲವೆಂಬ ವಿಷಯವನ್ನು ಮ|| ರಾ|| ಬಸವ್ಪನವರು ತಿಳಿಯದೆಹೋದದ್ದಕ್ಕಾಗಿ ವಿಷಾದಪಡಬೇಕಾಗಿದೆ. ತ್ರಿಮತಸ್ಥರಲ್ಲಿ ಆಸ್ಥಾನವಿದ್ವಾಂಸರಾಗಿರತಕ್ಕವರಿಗೆ ಅರಮನೆಯಿಂದ ಎಷ್ಟರಮಟ್ಟಿಗೆ ಸಂಭಾವನೆ ಸಲ್ಲುತ್ತಾ ಇದೆಯೋ ಅದೇ ಸಂಭಾವನೆಯು ಈ ಸಂಪಾದಕರಿಗೂ ಸಲ್ಲುತ್ತಾ ಇದೆ. ಇಷ್ಟೇ ಅಲ್ಲದೆ ಈ ಸಂಪಾದಕರು ಅವೈದಿಕರೆಂಬದಾಗಿಯೂ ಇವರಿಂದ ಫಲಮಂತ್ರಾಕ್ಷತೆಯನ್ನು ತೆಗೆದುಕೊಳ್ಳಕೂಡದೆಂಬದಾಗಿಯೂ ಶ್ರೀಮನ್ಮಹಾರಾಜರವರು ಯಾವಾಗಲೂ ಹೇಳಿರುವುದಿಲ್ಲ. ಇದಕ್ಕೆ ಬದಲಾಗಿ ಇದೇ ಸಂಪಾದಕರು ಮತ್ತು ಇವರಂತೆ ಇರುವ ಇತರ ವೀರಶೈವವಿದ್ವಾಂಸರು ನಾವು ತಿಳಿದಹಾಗೆ ಅನೇಕವೇಳೆ ಶ್ರೀಮನ್ಮಹಾರಾಜರವರಿಗೆ ಫಲಮಂತ್ರಾಕ್ಷತೆಯನ್ನು ಒಪ್ಪಿಸಿರುತ್ತಾರೆ. ಇದೆಲ್ಲವನ್ನೂ ಮ|| ಬಸವ್ಪನವರು ತಿಳಿಯದವರಂತೆ ಅಭಿನಯಿಸಿ 4-5 ರೂಪಾಯಿಗಳ ಆಶೆಗಾಗಿ ಪೂಜಾರಿಗಿಂತಲೂ ಕನಿಷ್ಠವಾಗಿ ಪರಿಗಣಿಸಲ್ಪಡುವಂತೆ ನೀವು ಪಡೆಯಬಹುದೆಂದು ತಮ್ಮ ದುರಾಗ್ರಹದಿಂದ ಬಹಳವಾಗಿ ದುಡುಕುಮಾತಾಡಿದ್ದಾರೆ. ಸುತರಾಂ ಪತ್ರಿಕಾಸಂಪಾದಕೀಯ ಗಂಧವನ್ನೇ ಅರಿಯದಿರುವ ಮ|| ಬಸವ್ಪನವರು 11 ವಾರಗಳಿಂದಲಾದರೂ ಪತ್ರಿಕಾಸಂಪಾದಕತ್ವವನ್ನು ಮಾಡುತ್ತಿರುವ ಸಂಪಾದಕರು ರಾಜಕೀಯವಿಷಯದಲ್ಲಿ ಪ್ರವೇಶಿಸಿರುವುದನ್ನು ಖಂಡಿಸಿರತಕ್ಕದ್ದು ಆಶ್ಚರ್ಯಕರವಾಗಿದೆ.

ಈ ಸಂಪಾದಕರು ಮ|| ರಾ|| ಬಸವ್ಪನವರ ಲೇಖವನ್ನು ಪ್ರಕಟಿಸದೆ ತಿರಸ್ಕಾರಮಾಡಿರುವುದಾಗಿಯೂ ಮತ್ತು ತಮ್ಮ ಸಂಕೇತನಾಮವನ್ನು ಪ್ರಕಟಿಸದೆ ನಿಜನಾಮವನ್ನು ಒಳದೇಶದವೃತ್ತಾಂತದಲ್ಲಿ ಪ್ರಕಟಿಸಿದ್ದಾರೆಂಬದಾಗಿಯೂ ಬರೆದಿದ್ದಾರೆ. ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಡತಕ್ಕ ವಿಷಯಗಳು ವಾಚಕರಿಗೆ ಲೌಕಿಕವಾದ ಅಥವಾ ಪಾರಮಾರ್ಥಿಕವಾದ ಪ್ರಯೋಜನವನ್ನು ಉಂಟುಮಾಡತಕ್ಕವುಗಳಾಗಿರಬೇಕು. ಹಾಗಲ್ಲದೆ ದ್ವೇಷಾಸೂಯೆಗಳನ್ನು ವೃದ್ಧಿಪಡಿಸತಕ್ಕ ಲೇಖಗಳನ್ನು ಯೋಗ್ಯರಾದ ಸಂಪಾದಕರು ತಮ್ಮ ಪತ್ರಿಕೆಗಳಲ್ಲಿ ಖಂಡಿತವಾಗಿಯೂ ಪ್ರಕಟಿಸಕೂಡದು. ಆದ್ದರಿಂದ ಯುಕ್ತಿಯುಕ್ತವಲ್ಲದ ಆಗ್ರಹವನ್ನು ಮತ್ತು ನಿಂದೆಯನ್ನು ಒಳಕೊಂಡಿರುವ ಮತ್ತು ದ್ವೇಷವನ್ನು ವೃದ್ಧಿಪಡಿಸುವ ಮ|| ರಾ|| ಬಸವ್ಪನವರ ಲೇಖವನ್ನು ಪ್ರಕಟಿಸದೆ ತಿರಸ್ಕರಿಸಿದ್ದು ಯೋಗ್ಯವಾಗಿದೆ ಎಂಬುವುದು ವಾಚಕರಿಗೇ ಗೊತ್ತಾಗುತ್ತದೆ. ಆದ್ದರಿಂದ ಮ|| ರಾ|| ಬಸವ್ಪನವರು ಇನ್ನು ಮುಂದೆ ಇಂಥಾ ವಿಷಮವಾದ ಲೇಖವನ್ನು ಬರೆಯುವುದಿಲ್ಲವೆಂಬುದಾಗಿಯೂ ಮತ್ತು ಪಂಚಾಚಾರ್ಯಪ್ರಭಾ ಅಥವಾ [illegible] ಸಂಪಾದಕರ [illegible] ಆಗಲಿ ಪತ್ರಿ[illegible] [illegible] ಸಂಬಂಧ ಲೇಖಗಳನ್ನು ಪ್ರಕಟಿಸ[illegible]

ತಾ 1[illegible]

ಮೈಸೂರು [illegible] ಸಾಗರ್ಣ

[illegible]

ಧರ್ಮಶಾಸ್ತ್ರದಲೇಶವನ್ನು ಹಾಗೂ ಸಂಪಾದಕರ ಲೇಖಾಭಿಪ್ರಾಯವನ್ನೂ ಅರಿಯದವರು ಧರ್ಮದ್ರೋಹಿಗಳೋ ಅಥವಾ ಧರ್ಮಶಾಸ್ತ್ರವನ್ನರಿತವರು ಧರ್ಮದ್ರೋಹಿಗಳೋ?

ವಾಚಕರೇ, ತಾ 11-7-27ರ 'ಪಂಚಾಚಾರ್ಯಪ್ರಭಾ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಂಪಾದಕರ ಬ್ರಾಹ್ಮಣ ಬ್ರಾಹ್ಮಣೇತರ ನಾಮಕವಾದ ಅಗ್ರಲೇಖನವನ್ನು [illegible] ಓದಿನೋಡಿದೆನು. ಈ ಲೇಖನದ [illegible] ಪಂಚಾಕ್ಷರೀಮಂತ್ರದಂತೆ [illegible] [illegible]. ಈ ಲೇಖನವನ್ನು ನೋಡಿ ಭರತಖಂಡದ ಸಮಸ್ತ ವೀರಶೈವರು ಈ ಪತ್ರಿಕೆಯನ್ನು ತ್ರಿಕರಣಪೂರ್ವಕವಾಗಿ ಸ್ತುತಿಸುತ್ತಿರುವರು. ಈ ಪತ್ರಿಕೆಯು [illegible] ಮೂರು ತಿಂಗಳುಗಳಾದಾಗ್ಯೂ ತನ್ನ [illegible] ಪ್ರಭಾರೂಪವಾದ ಪ್ರಶಸ್ತಿಯಿಂದ ಸಮಸ್ತ ವೀರಶೈವರ ಮನೋಧ್ವಾಂತವನ್ನು ದೂರಮಾಡು[illegible]. ಪ್ರತಿಯೊಂದು ವಾರಪತ್ರಿಕೆಯಲ್ಲಿಯೂ [illegible] ರಹಸ್ಯಗಳನ್ನು ನೋಡಿದರೆ ಯಾವ [illegible] ಸಂತೋಷವಾಗಲಿಕ್ಕಿಲ್ಲ? ಈ ಪತ್ರಿಕೆಯ ಮಹತ್ವವನ್ನು ತಿಳಿಯದೆ ಮೈಸೂರಲ್ಲಿರುವ ಸಿಟಿ ಬಸಪ್ಪ ಎಂಬುವರು ಸಾರಾಸಾರವಿಚಾರವನ್ನು ಮಾಡದ ಕಾಲುಕೆದರಿ ಕಲಹವನ್ನು ತೆಗೆಯಬೇಕೆಂಬುದ್ದೇಶದಿಂದಲೋ ಅಥವಾ ಇತರರ ಉದ್ದೇಶದಿಂದ ಕೂಡಿರುವ ಪರಪ್ರೇರಣೆಯಿಂದಲೋ, ನಿಷ್ಕಾರಣ ನಿರರ್ಥಕವಾದ ಲೇಖವನ್ನು ಬರೆದು ಈ ತಿಂಗಳ 6ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಪಡಿಸಿರುತ್ತಾರೆ. ವೀರಶೈವ ಧರ್ಮಶಾಸ್ತ್ರದಮೇಲೆ ದೃಷ್ಟಿಯನ್ನಿಡದೆ ಈ ಮತದ ವಿಷಯದಲ್ಲಿ ಪೂರ್ವಬುದ್ಧಿಯನ್ನು ತೋರಿಸದೆ ಅವರು ಹೀಗೆನ್ನುತ್ತಾರೆ, ಅವರು ಹಾಗೆನ್ನುತ್ತಾರೆ ಎಂಬ ಅಧಿಕಪ್ರಸಂಗದ ಮಾತುಗಳನ್ನು ಬರೆದಿರುವುದನ್ನು ನೋಡಿದರೆ ಇವರು ಯಾವಮತದವರಿರಬಹುದೆನ್ನುವುದು ನಮಗೆ ಗೊತ್ತಾಗುವಂತಿಲ್ಲ. ಇರಲಿ ಈ ಯಥಾರ್ಥವಾದಿಗೆ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಲೇಖನವನ್ನು ಖಂಡಿಸುವ ಅಗತ್ಯವೇನಿತ್ತು? ಕುಚೇಷ್ಟೆಯ ವಿಷಯ ಪ್ರತಿಷ್ಠೆಯ ನಡೆಯುವದಿಲ್ಲವೆಂಬ ಗಾದಿಮಾತಿಗನುಸಾರವಾಗಿ ತನ್ನ ಹೆಸರನ್ನು ದೇಶದಲ್ಲೆಲ್ಲಾ ಪ್ರಕಟಿಸಬೇಕೆಂಬುದ್ದೇಶದಿಂದ ಪ್ರಕಟಿಸಿರುವರೋ ಏನೋ ತಿಳಿಯದಾಗಿದೆ. ತನ್ನ ಸಂಕೇತನಾಮವನ್ನು ಪತ್ರಿಕಾಕರ್ತರು ಬರೆಯದೆ ನಿಜನಾಮವನ್ನೇ ಪ್ರಕಟಮಾಡಿರುತ್ತಾರೆಂದು ಅವರ ಮೇಲೆ ಉದಮುರಿಯಂತೆ ಆರ್ಭಟವನ್ನು ಮಾಡುತ್ತಾನೆ. ಸಂಕೇತನಾಮವನ್ನಾಗಲಿ ನಿಜನಾಮವನ್ನಾಗಲಿ ಪ್ರಕಟಿಸುವುದು ಪತ್ರಿಕಾಕರ್ತರ ಸ್ವಾತಂತ್ರ್ಯಧರ್ಮವಾಗಿದೆಯೇ ಹೊರತು ಈ ಯಥಾರ್ಥವಾದಿಯ ಅಭಿಪ್ರಾಯದಂತಿರುವುದಿಲ್ಲ. ಪತ್ರಿಕಾಕರ್ತರು ಲೇಖಕರು ಕೊಟ್ಟ ಸಂಕೇತನಾಮವನ್ನು ಪ್ರಕಟಿಸಬೇಕೆಂದು ಪ್ರೆಸ್ ಆಕ್ಟೇನೂ ಇಲ್ಲ. ಈ ತತ್ತ್ವವನ್ನರಿಯದೆ ಯಥಾರ್ಥವಾದಿಯು ಗೋಣಗುಟ್ಟುವುದು ತನ್ನ ಅಜ್ಞತೆಯನ್ನು ಪ್ರಕಾಶಪಡಿಸುವಂತಿದೆ. ಈ ಯಥಾರ್ಥವಾದಿಯು "ವೀರಶೈವರು ಬ್ರಾಹ್ಮಣರಲ್ಲವೆಂದು ನಾನು ಸ್ಪಷ್ಟವಾಗಿ ಬರೆದಿಲ್ಲ"ವೆಂದು ಹಾಡಿಕೊಂಡಿರುವನು. ತಾನು ಸ್ಪಷ್ಟವಾಗಿ ಹಾಗೆ ಬರೆಯದಿದ್ದರೂ ಆ ಲೇಖದಸಾರವು ಬ್ರಾಹ್ಮಣರಲ್ಲವೆನ್ನುವುದೇ ಹೊರಹುತ್ತದೆ. ಇದು ಚಿಕ್ಕಮಕ್ಕಳಿಗೂಕೂಡ ತಿಳಿ[illegible]ವಂತಿರುತ್ತದೆ. "ನಾನು ಅಳಿಯನೆಂಗು ಅಂದಿಲ್ಲ, [illegible]ಳಗಂಡನೆಂದು ಅಂದಿರುತ್ತೇನೆ" ಎಂದು ವಾದಿ[illegible] ಮಹಾ ಪಂಡಿತನ ಅಭಿಪ್ರಾಯಕ್ಕೂ ಈ ಯಥಾರ್ಥವಾದಿಯ ಮಾತಿಗೂ ಸರಿಹೋಲುವಂತಿದೆ. ಇ[illegible] "ಪಂಚಾಚಾರ್ಯಪ್ರಭಾಸಂಪಾದಕರು ಪತ್ರಿಕಾಸಂಪಾದಕೀಯಧರ್ಮದ ಗಂಧವನ್ನೇ ಅರಿಯರು" ಎಂ[illegible] ಬರೆದಿರುತ್ತಾರೆ. ಪಾಪ! ಈ ಯಥಾರ್ಥವಾದಿಗ[illegible] ಹಿಂದೂಸ್ಥಾನದಲ್ಲಿ ಪ್ರಸಿದ್ಧವಾದ 'ಟೈಮ್ಸ್ ಆಫ್ ಇಂಡಿಯಾ', ಹಿಂದೂ, ಕ್ರಾನಿಕಲ್, ಸ್ವರಾಜ್ಯ ಮೊದಲಾದಪತ್ರಿಕೆಗಳ ಸಂಪಾದಕತ್ವವನ್ನು ಎಷ್ಟು ವ[illegible]ಗಳ ವರೆಗೆ ವಹಿಸಿ ಅನುಭವಿಸಿ ಈ ತೆರದ ಮಾತು[illegible]ನ್ನಾಡಿರುವರೋ ತಿಳಿಯದಾಗಿದೆ. ಈ ಸಂಪಾದಕ[illegible] ಬುದ್ಧಿವಂತರು, ಈ ಸಂಪಾದಕರು ಬುದ್ಧಿಶೂನ್ಯ[illegible] ಎಂದು ಸಂಪಾದಕರನ್ನು ಪರೀಕ್ಷೆಮಾಡಿ ಯೋಗ್ಯತ[illegible] ನಿರ್ಣಯಮಾಡುವ ಅಧಿಕಾರವನ್ನು ಈ ಯಥಾರ್ಥವಾದಿಗೆ ಮೈಸೂರು ಸರಕಾರದವರು ಕೊಟ್ಟಿರುವರೋ ಹೇಗೆ? ದಯವಿಟ್ಟು ತಿಳಿಸಿದರೆ ಮಹೋಪಕಾರವನ್ನು ಮಾಡಿದಂತಾಗುತ್ತದೆ. ಈ ನವೀನ ಪಂಡಿತ ಎಡಿಟ[illegible] ವಿಚಿತ್ರಬುದ್ಧಿಗೆ ತಕ್ಕ ಮರ್ಯಾದೆಯನ್ನು ಮಾಡತಕ್ಕವರು ಇಷ್ಟರಲ್ಲಿ ಹುಟ್ಟಬಹುದು" ಎಂದು ಒಳ್ಳೆ ಹೆಮ್ಮೆಯಿಂದ ಕೂಡಿದ ಮಾತನ್ನು ಬರೆದಿರುತ್ತಾರೆ. ಧರ್ಮಶಾಸ್ತ್ರದಮಾರ್ಗವನ್ನು ಅನುಸರಿಸಿ ಹೋಗುವ ಎಡಿಟರರಿಗೆ ತಕ್ಕಮರ್ಯಾದೆಯನ್ನು ಮಾಡುವುದು ಸಮಮಾತ್ರನಿಗೂ ಕಾಣದ ಸಾಧ್ಯವಿಲ್ಲ. ಉ[illegible]ಪ್ರಸ್ತುತ ಮಾತೇನು. ಈ ಯಥಾರ್ಥವಾದಿಯು ಇದ್ದಿಲ್ಲ ಹಿಂದೂ ಮುಂದೂ ಆಲೋಚನೆ ಮಾಡ[illegible] ಮನಸ್ಸಿಗೆ ಬಂದಂತೆ ಬರೆದಿರುವುದು ಅತ್ಯಂತ ಅನುಚಿತವೆಂದು ಸರ್ವರಿಗೂ ಕಾಣುವಂತಿದೆ. ಪ್ರಭಾ ಸಂಪಾದಕರು ಆಸ್ಥಾನ ವಿದ್ವಾಂಸರಾಗಿರುವುದು ಈ ಯಥಾರ್ಥವಾದಿಯ ದೃಷ್ಟಿಗೆ ಸರ್ಕಾರಿ ನೌಕರಿಯೆಂದು ತೋರಿರುವುದನ್ನು ನೋಡಿದರೆ ಪ್ರತಿಯೊಬ್ಬರೂ ನಗುವಂತಿದೆ. ಆಸ್ಥಾನವಿದ್ವಾಂಸರಾದವರು ಸರ್ಕಾರದವ[illegible] ಕೆಲಸ ಮಾಡುವವರಲ್ಲ. ಇವರು ಮಾನ್ಯರೆಂದು ತಿಳಿದು ಶ್ರೀಮನ್ ಮಹಾರಾಜರವರು ದಕ್ಷಿಣಾರೂಪವಾಗಿ ತಮ್ಮ ಭಕ್ತಿಪುರಸ್ಸರವಾಗಿ ಪ್ರತಿತಿಂಗಳಲ್ಲಿಯೂ ಇವರಿಗೆ ಸಂಭಾವನೆಯನ್ನು ಸಲ್ಲಿಸುತ್ತಿರುವರು. ಆದ[illegible] "ಆತ್ಮವತ್ಸರ್ವಭೂತಾನಿ" ಎಂಬಂತೆ ತಾವು ಅನ್ಯರಲ್ಲಿ ನೌಕರಿ ವೃತ್ತಿಯಲ್ಲಿದ್ದು ಕಾಲಕಳೆಯುವುದರಿಂದ ಸರ್ವರನ್ನೂ ತಮ್ಮಂತೆ ಭಾವಿಸಿರುತ್ತಾರೆ. ಇದು ಯಥಾ[illegible] [illegible] ಸಂಸ್ಕಾರದ ಫಲವಾಗಿದೆ. ಇಷ್ಟು ಪುರಾಣವನ್ನೆಲ್ಲಾ ಈ ಯಥಾರ್ಥವಾದಿಯು ತನ್ನಲ್ಲಿ ಮುಂಚಿಕೊಂಡು ಧರ್ಮಶಾಸ್ತ್ರದ ನಿಜಸ್ವರೂಪವನ್ನೂ ಮತದ ಗೌರವವನ್ನೂ ತಿಳಿಯದೆ ವರ್ತಿಸುವುದು ಧರ್ಮದ್ರೋಹವಲ್ಲವೇ? ಅಥವಾ ಧರ್ಮದ ನಿಜಸ್ವರೂಪವನ್ನು ಜನರ ಹೃದಯದಲ್ಲಿ ಬಿಂಬಿಸುವವರು ಧರ್ಮದ್ರೋಹಿಗಳೋ? ಎನ್ನುವುದನ್ನು ಕುಶಲಮತಿಗಳಾದ ವಾಚಕರೇ ನಿರ್ಣಯಿಸಬೇಕಾಗಿದೆ- ಪರಮಾತ್ಮನು ಯಥಾರ್ಥವಾದಿಯ ಬುದ್ಧಿಗೆ ಮಂಗಲವನ್ನೀಯಲಿ.

ಸೂಚನಾ — ಈ ಯಥಾರ್ಥವಾದಿಯು ಇಷ್ಟಕ್ಕೆ ವಿಶ್ರಾಂತಿಹೊಂದುವುದು ಲೇಸು. ಹಾಗಿಲ್ಲದೆ ಪುನಃ ಕೆಣಕಿದಾದರೆ ಮುನಿಸಿಪಾಲಿಟಿಯಲ್ಲಿಯೇ ಮೊದಲಾದ ಕಡೆಗಳಲ್ಲಿ ನಡೆದ ಇವರ ಸಂಬಂಧವಾದ ಎಲ್ಲಾ ಚರಿತ್ರವನ್ನು ಪ್ರಕಟಿಸಬೇಕಾಗುತ್ತದೆ. ತಿಳಿಯುವುದು

ಶಿವಂ ಭೂಯಾತ್ ಧರ್ಮೋರಕ್ಷತಿರಕ್ಷಿತಃ

ಗುರುಭಕ್ತಕೇಸರಿ,
ಶಾಂತಪ್ಪ, ಮ್ಯಾ[illegible], ಜಿ|| ಧಾರವಾಡ.

್ರೀ ಶಿವಕ್ಷೇತ್ರ ತೀರ್ಥಯಾತ್ರಾ

ಕ ಮಹಾಶಯರೇ!— ಕಾಶೀ ಮಹಾಕ್ಷೇತ್ರ
್ರಸ್ತಿತ್ತವನ್ನು ಈ ಒಳಗಾಗಿ ಯಾತ್ರಿಕೋರ್ವ
ರು ಅವಗಾಹನಕ್ಕೆ ತಂದಿದ್ದಾರಷ್ಟೆ? ಮಹಾ
ಕಾಶೀ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾ
ಗವತ್ಪಾದರ ಕೃಪಾಶೀರ್ವಾದಕ್ಕೆ ಪಾತ್ರನಾಗಿ
ನಡೆದು ಕಾಶಿಯಿಂದ ಹರಿದ್ವಾರಕ್ಕೆ ಪ್ರಯಾಣ
ಅಲ್ಲಿ ವಿದ್ಯಾಭ್ಯಾಸಕ್ಕಾಗಿ ವಾಸವಾಗಿರುವ
ವಾದ ಆನೆಗೋಡ ಪಟ್ಟಾಧ್ಯಕ್ಷ ಮಹಾ
ಗಳವರ ಸನ್ನಿಧಿಯಲ್ಲಿಯೇ ಇದ್ದು ಶ್ರೀಗಳವರ
ಿಂದ ಹರಿದ್ವಾರದಲ್ಲಿಯ ಅಂತ್ಯಕುಂಭದ ಸ್ನಾನ
ಕ ತೀರಿಸಿಕೊಂಡೆನು. ಹಾಗೂ ಬ್ರಹ್ಮಕುಂಡಾ
ರ್ಥಸ್ನಾನವಂ ಮಾಡಿದೆನು. ಅನಂತರ ಹೃಷೀ
ಪ್ರಯಾಣಿಸಿ ಈಶ್ವರದರ್ಶನ ಮಾಡಿಕೊಂಡು
ಗಂಗಾ ಸ್ನಾನವಂ ಪೂರೈಸಿಕೊಂಡು ಹೃಷಿಕೇ
ಶಗೆ ಅಭಿಷೇಕಾದಿಗಳನ್ನು ಮಾಡಿಸಿ ಪುನಃ ಹರಿ
ಕ್ಕೆ ಬಂದು ಕೆಲವು ದಿವಸಗಳ ವರಿಗೂ ಇದ್ದೆನು.
ಹರಿದ್ವಾರವು ಶ್ರೀ ಕೈಲಾಸವಾದ ಹಿಮಾಲ
ದ್ವಾರವೆಂದು ಅನ್ವರ್ಥವಾಗಿರುವದು. ಹಿಮಾಲ
ರುವ ಶ್ರೀ ಜಗದ್ಗುರು ಪೀಠ ಕೇದಾರೇಶ್ವರ
ಮಾಡಬೇಕೆಂದು ವಿಶೇಷ ಅಪೇಕ್ಷೆಯಿದ್ದರೂ
ಕಾಂತರದಿಂದ ಪುನಃ ದರ್ಶನಮಾಡಿಕೊಳ್ಳಬೇ
ಆನೆಗೋಡ ಶ್ರೀಗಳವರಿಗೆ ಅರಿಕೆ ಮಾಡಿಕೊಂ
ಶ್ರೀಗಳವರು ಕೇದಾರ ಯಾತ್ರೆಯನ್ನು ಚನ್ನಾ
ಮಾಡಿಕೊಂಡು ಬಂದರೆಂದು ಸದ್ಯಃ ಕೇಳಿದ್ದೇನೆ.
ಗಳು ಪರಮ ಜಿತೇಂದ್ರಿಯರೂ ಅಸಾಧಾರಣ
ವಿಗಳೂ ವ್ಯಾಕರಣ ವೇದಾಂತಾದಿ ಶಾಸ್ತ್ರಗಳಲ್ಲಿ
ರೂ ಆಗಿರುವರೆಂದು ಅಲ್ಲಿಯ ಗುರುಕುಲ, ಋಷಿ
ಕುಲಗಳ ಅಧಿಪತಿಗಳೂ ಅಧ್ಯಾಪಕರೂ ಸಹ
ತಿಳಿಸಿದರು. ಅವರೆ ನಮ್ಮ ಮಹೇಶ್ವರ ಮೂರ್ತಿ
ಅಲ್ಲಿ ವಾಸಮಾಡಿ ಶಾಸ್ತ್ರಾಧ್ಯಯನ ಮಾಡು
ವರೆಂದು ಅತ್ಯಂತ ಆನಂದಭರಿತನಾಗಿದ್ದು ಶ್ರೀ
ರ ಅಪ್ಪಣೆ ಪಡೆದುಕೊಂಡು ದಕ್ಷಿಣಕ್ಕೆ ತಿರುಗಿ
ದಾ ಸ್ನಾನವಂ ಮಾಡಿ ಓಂಕಾರೇಶ್ವರನೆಂಬ
ತಿರ್ಲಿಂಗದ ಅಭಿಷೇಕಾದಿಗಳನ್ನು ಮಾಡಿಕೊಂಡು
ದ ಮಧುರಾ ಗೋಕುಲವೃಂದಾವನಾದಿ ಸ್ಥಾನ
ದರ್ಶನ ಮಾಡಿಕೊಂಡು ನಾಶಿಕಕ್ಕೆ ಬಂದು ಗೋ
ವರೀ ಸ್ನಾನ ತ್ರ್ಯಂಬಕೇಶ್ವರ ಅಭಿಷೇಕ ಪೂಜಾ
ನ್ನು ಪೂರೈಸಿಕೊಂಡು ಅಲ್ಲಿ ಬೆಟ್ಟದ ಮೇಲಿರುವ
ಗಾತೀರ್ಥ ಸ್ನಾನವಂ ಸಹ ಮಾಡಿಕೊಂಡು ಮುಂ
ಿಗೆ ಬಂದು ಕೆಲವು ದಿವಸಗಳ ವರಿಗೆ ಇದ್ದೆನು.
ತರ ಸೊಲ್ಲಾಪುರ ಸಿದ್ಧರಾಮೇಶ್ವರ ದರ್ಶನಾಭಿ
ಕಾದಿ ಸೇವೆಯನ್ನು ಮಾಡಿಕೊಂಡು ಪಂಢರಾ
ದ ಕಲುಬುರ್ಗಿ ಕಲ್ಯಾಣ ಮೊದಲಾದ ಸ್ಥಾನಗಳ
ನ ಮಾಡಿಕೊಂಡು ಗುಂತಕಲ್ಲಿಗೆ ಬಂದು ಅಲ್ಲಿರುವ
ಗಿರಿರಾಜಸೂರ್ಯ ಸಿಂಹಾಸನಾಧೀಶ ಶ್ರೀ ೧೦೮
ದ್ಗುರು ನಾಗಲೋಟಿ ಭಿಕ್ಷಾವೃತ್ತಿ ಶಿವಾಚಾರ್ಯ
ತ್ಪಾದರ ದರ್ಶನಾಶೀರ್ವಾದಕ್ಕೆ ಪಾತ್ರನಾಗಿ
ಪಾದತೀರ್ಥ ಸೇವನೆಯಂ ಮಾಡಿ ಅಪ್ಪಣೆಯಂ
ು ಕಂಚಿ ಏಕಾಂಬರೇಶ್ವರ ಶ್ರೀ ಕಾಮಾಕ್ಷೀ
ರ ದರ್ಶನಂ ಮಾಡಿಕೊಂಡ. ಕೈಲಾಸನಾಥಸ್ವಾ
ಿಗೆ ಸಹಸ್ರ ಬಿಲ್ವಾರ್ಚನೆಯಿಂದ ಪೂಜಿಸಿ ವಿಷ್ಣು
ಕಂಚೀ ವರದರಾಜಸ್ವಾಮಿ ದರ್ಶನಮಾಡಿ ಚಂಗಲ
ಟಿಗೆ ಪ್ರಯಾಣಿಸಿ ಪಕ್ಷಿತೀರ್ಥಸ್ನಾನ ಭಕ್ತವತ್ಸಲ
ಿಯ ಅಭಿಷೇಕ ತ್ರಿಪುರಸುಂದರಮ್ಮನಿಗೆ ಕುಂ
ಮಾರ್ಚನೆಯಂ ಮಾಡಿಕೊಂಡು ಅಲ್ಲಿಂದ ಪರ್ವತದ
ಮೇಲುಭಾಗಕ್ಕೆ ಹೋದೆನು. ಅಲ್ಲಿ ಎರಡು ಬಿಳಿ ಪಕ್ಷಿ
ು ೧೨ ಘಂಟೆಗೆ ಸರಿಯಾಗಿ ಬಂದವು. ಆ ಪಕ್ಷಿಗ
ಒಬ್ಬ ಪೂಜಾರಿಯ ದ್ವಾರ ೭-೮ ರೂಪಾಯಿಗಳ
ಸಾರವಂ ಕೊಡಿಸಿದೆನು. ಆದರೆ ವೈಚಿತ್ರ್ಯವೇನಂ
ಆ ಅರ್ಚಕನು ಸ್ನಾನಮಾಡಿ ಆಹಾರ ಇಟ್ಟು
ಕೊಂಡು ಕುಳಿತುಕೊಳ್ಳುತ್ತಾನೆ. ೧೨ ಘಂಟೆಗೆ ಸರಿ
ಯಾಗಿ ಆ ಪಕ್ಷಿಗಳು ಬಂದು ಆಹಾರ ತಕ್ಕೊಂಡು
ಎಲ್ಲರಿಗೂ ದರ್ಶನವಂ ಕೊಟ್ಟು ಪ್ರತಿನಿತ್ಯದಲ್ಲಿಯೂ
ುವದೂ ಹೋಗುವುದೂ ನಡೆಯುತ್ತದೆ. ಅನೇಕ ಜನರು ಆ ಮಹಾಶಕ್ತಿಗಳನ್ನು ನೋಡಿ ಸಂತೋಷಿಸುತ್ತಿರುವರು. ಪುನಃ ಅಲ್ಲಿಂದ ಚಂಗಲಪೇಟೆಗೆ ಬಂದು ಅಲ್ಲಿಂದ ಚಿದಂಬರಕ್ಕೆ ಬಂದೆನು. ಅಲ್ಲಿ ನಟರಾಜಮೂರ್ತಿ ಸ್ವಾಮಿಯ ಅಭಿಷೇಕ ಶ್ರೀ ಶಿವಕಾಮ ಸುಂದರಮ್ಮನಿಗೆ ಕುಂಕುಮಾರ್ಚನೆಯಂ ಮಾಡಿಸಿ ೫೮ ಮಹಾಕ್ಷೇತ್ರಗಳ ತೀರ್ಥಸ್ನಾನವಂ ಮಾಡಿಕೊಂಡು ಶ್ರೀ ರಾಮೇಶ್ವರನಿಗೆ ಮಹಾಭಿಷೇಕ ಶ್ರೀ ಭಾಗೀರಥೀ (ಗಂಗಾ) ಉದಕದಿಂದ ಅಭಿಷೇಕವನ್ನು ಸ್ವಹಸ್ತದಿಂದಲೇ ಮಾಡಿದೆನು. ಅನಂತರ ಮಹಾ ನೈವೇದ್ಯವಂ ಅರ್ಪಣ ಮಾಡಿಸಿದೆನು. ಅಲ್ಲಿಂದ ಧನುಷ್ಕೋಟಿಗೆ ಪ್ರಯಾಣಿಸಿ ಸೇತುದರ್ಶನವಂ ಮಾಡಿ ರಾಮೇಶ್ವರಕ್ಕೆ ಪುನಃ ಬಂದು ರಾಮನಾಥಪುರದಿಂದ ಮೋಟಾರದಿಂದ ದೇವಿಪಟ್ಟಣಕ್ಕೆ ಹೋಗಿ ಅಲ್ಲಿ ಸಮುದ್ರಸ್ನಾನ ಪೂರೈಸಿಕೊಂಡು ಸಮೀಪದಲ್ಲಿರುವ ನವಗ್ರಹ, ಶ್ರೀರಾಮ ಚಂದ್ರಸೇನಾ ಚಕ್ರತೀರ್ಥ ಸೇತುಮೂಲ ಸ್ಥಾಪನಾದಿಗಳನ್ನು ನೋಡಿಕೊಂಡು ಮಧುರಾಕ್ಕೆ ಬಂದು ಶ್ರೀ ಸುಂದರೇಶ್ವರ ಮೀನಾಕ್ಷೀ ದೇವತಾ ದರ್ಶನಾದಿಗಳನ್ನು ಪೂರೈಸಿಕೊಂಡು ಶ್ರೀರಂಗಕ್ಕೆ ಹೋಗಿ ಶ್ರೀ ರಂಗನಾಥ ದೇವತಾ ದರ್ಶನವಂ ಮಾಡಿ ಅಲ್ಲಿಂದ ಜಂಬುಕೇಶ್ವರಕ್ಕೆ ಹೋಗಿ ಜಂಬುಕೇಶ್ವರನ ದರ್ಶನ ಅಭಿಷೇಕಾದಿಗಳಂ ಮಾಡಿಸಿಕೊಂಡು ಕುಂಭಕೋಣಕ್ಕೆ ಬಂದು ಕುಂಭೇಶ್ವರ ದೇವತಾದರ್ಶನ ಪೂಜಾದಿಗಳಂ ಪೂರೈಸಿಕೊಂಡು ಮದ್ರಾಸಿಗೆ ತಲ್ಪಿದೆನು.

ವಾಚಕರೇ,

“ ಶಿವಸ್ಥಾನಾನಿ ತೀರ್ಥಾನಿ ವಿವಿಧಾನಿ ಶಿವಾರ್ಚಕಃ |
ಶಿವಯಾತ್ರೋತ್ಸವಸಂಸಿಕ್ತಂಸೇವೇತಪೂಜಯಾಮುದಾ|

ಎಂಬ ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯ ಜಗದಾಚಾರ್ಯವರ್ಯ ಶ್ರೀ ೧೦೮ ರೇಣುಕ ಶಿವಾಚಾರ್ಯ ಭಗವದುಕ್ತಿಗನುಸಾರವಾಗಿ ಈ ನಾನು ಕಾಶೀ ಮೊದಲಾದ ಗುರುದೇವ ಯಾತ್ರೆಯನ್ನು ಶ್ರೀ ಮತ್ಪಂಚಾಚಾರ್ಯ ಭಗವತ್ಪಾದರ ಕೃಪಾಬಲದಿಂದ ಸಾಂಗವಾಗಿ ಪೂರೈಸಿಕೊಂಡು ಬೆಂಗಳೂರಲ್ಲಿ ಶ್ರೀಗಣಾರಾಧನಾದಿ ಸೇವೆಯನ್ನು ಹಾಗೂ ಅನೇಕ ಮಹಾಕಾರ್ಯಗಳನ್ನು ಶ್ರೀ ಕೃಪಾಬಲದಿಂದ ನೆರವೇರಿಸಬೇಕೆಂದು ಸಂಕಲ್ಪಿಸಿದ್ದೇನೆ. ನನ್ನ ಸಂಕಲ್ಪಸಿದ್ಧಿಗೆ ಶ್ರೀ ಜಗದಾಚಾರ್ಯರೇ ಮೂಲಕಾರಣರಾಗಿರುವರು.

ವಾಚಕಮಹಾಶಯರೇ, ನನ್ನ ಬಂಧುಗಳಾದ ಸರ್ವರೂ ತಮ್ಮ ಇಚ್ಛಾನುಗುಣವಾಗಿ ಶಿವಯಾತ್ರಾದಿ ದ್ವಾರಾ ದಿನನಿತ್ಯಕ್ಕೆ ಕಾಲಕ್ಷೇಪವನ್ನು ಮಾಡುತ್ತಾ ಶಿವಸಂಸ್ಕಾರಗಳನ್ನು ಧೃಢಪಡಿಸಿಕೊಳ್ಳುತ್ತ ಶ್ರೀಮದಾಚಾರ್ಯಾನುಗ್ರಹದಿಂ ಪಡೆಯಲ್ಪಟ್ಟ ಶಿವಜ್ಞಾನದಿಂ ಮುಕ್ತಿಯಂ ಪಡೆಯಲೆಂಬುವದೇ ನನ್ನ ಉದ್ದೇಶ.

ವೀರಶೈವ ಭಕ್ತಸಾಂಪ್ರದಾಯಕನಾದ ನನಗೆ ಯಾವ ಕ್ಷೇತ್ರಗಳಲ್ಲಿ ಪಕ್ಷಪಾತ ಮುಂತಾದ ದೇವರ ಅಭಿಷೇಕ ಪೂಜಾದರ್ಶನಸ್ಪರ್ಶನಾದಿಗಳಿಗೆ ಪ್ರತಿಬಂಧಕ ಮಾಡಲ್ಪಟ್ಟಿರುವದಿಲ್ಲ. [illegible]

ವಿಶೇಷ ಸಂಗತಿಗಳನ್ನು ಪುನಃ ಪ್ರಸಂಗವಶಾತ್ ವಿಸ್ತರಿಸುವೆನು.

ತಮ್ಮ
ವೀರಶೈವ ಧರ್ಮಧುರಂಧರ.
ಹಲ್ಯಾಳ ಸಾಹುಕಾರ ಗುರುಸಿದ್ಧಪ್ಪ ಶೆಟ್ಟರ..

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಹಮ್ಮಿಗಿ

ಈ ಗ್ರಾಮದಲ್ಲಿ ಶ್ರೀ ನಂದೀಶ್ವರದೇವಸ್ಥಾನವು ಶಿಥಿಲವಾಗಿದ್ದುದನ್ನು ಶ್ರೀ ರಾ|| ಸಿದ್ಧಲಿಂಗಯ್ಯನವರು ಶಿರಹಟ್ಟಿ, ರಾ|| ವಿರುಪಾಕ್ಷಗೌಡ್ರು ಪಾಟೀಲ, ಚನಬಸಪ್ಪನವರು ಗದಿಗೇರಿ, ಗುರುಭಕ್ತಕೇಸರಿ ಶಾಂತಪ್ಪನವರು ಕುಬಸದ, ವೀರಭದ್ರಪ್ಪನವರು ಯಲಿಗಾರ ವಗೈರೆ ಪ್ರಮುಖರ ಪ್ರಯತ್ನ ವಿಶೇಷದಿಂದ ಜೀರ್ಣೋದ್ಧಾರಗೊಳಿಸಿ ಇದೇ ಶ್ರಾವಣ ಶುಕ್ಲಪಕ್ಷ ಬಿದಿಗೆ ಶನಿವಾರ ತಲಕೇರಿ ಬೃಹನ್ಮಠಾಧ್ಯಕ್ಷ ಶ್ರೀ ಷಂ|| ಬ್ರಂ|| ಗಳಾದ ಚರವರ್ಯರ ಸಾನ್ನಿಧ್ಯದಲ್ಲಿ ಶ್ರೀ ವೇದಮೂರ್ತಿ ಮುಂಡವಾಡದ ಸಂಗನಬಸಯ್ಯನವರು ಹಾಗೂ ಗ್ರಾಮದ ಮಠಾಧಿಕಾರಿಗಳೂ ಮೊದಲಾದ ವೈದಿಕಮಂಡಳಿಯವರಿಂದ ವಿಧ್ಯುಕ್ತಪ್ರಕಾರ ಸಂಪ್ರೋಕ್ಷಣ ಶ್ರೀ ರುದ್ರಾಭಿಷೇಕ ಪ್ರಾಣಪ್ರತಿಷ್ಠೆ ಮೊದಲಾದ ವಿಧಿಗಳನ್ನು ಪೂರೈಸಿದರು. ನಂತರ ಗುಮ್ಮಗೋಳದ ಬಸಪ್ಪಾ ಎಂಬ ಭಕ್ತಮಾಹೇಶ್ವರ ವಟುವಿಗೆ ಶಿವದೀಕ್ಷಾ ಸಂಸ್ಕಾರವು ಧರ್ಮಾರ್ಥವಾಗಿ ಮಾಡಲ್ಪಟ್ಟಿತು. ಅನಂತರ ಸ್ಥಳಪರಸ್ಥಳಗಳಿಂದ ಬಂದಂಥ ಯಾವತ್ತೂ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯು ನಡೆಯಿತು.

ನಂತರ ಶ್ರಾವಣ ಶುಕ್ಲಪಕ್ಷ ೪ ಸೋಮವಾರ ಶ್ರೀ ನಂದೀಶ್ವರದೇವರ ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಮಹೋತ್ಸವವು ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಮೇಳದಿಂದೊಡಗೂಡಿ ಅನೇಕ ವಾದ್ಯವೈಭವಗಳೊಡನೆ ಅತ್ಯಂತವಿಜೃಂಭಣೆಯಿಂದ ನೆರವೇರಿತು.

ಸದರಿ ಉತ್ಸವದಕಾಲಕ್ಕೆ ವಿಲೇಜ ಮ್ಯಾಜಿಸ್ಟ್ರೇಟರಾದ ವಿರೂಪಾಕ್ಷಗೌಡರು ಯೋಗ್ಯಬಂದೋಬಸ್ತು ಇಟ್ಟಿದ್ದರು. ಉತ್ಸವವು ಸಾಯಂಕಾಲ ೭ ಘಂಟೆಗೆ ಪ್ರಾರಂಭವಾಗಿ ೧೨ ಘಂಟೆಗೆ ಸುರಕ್ಷಿತವಾಗಿ ಶ್ರೀ ದೇವಾಲಯಕ್ಕೆ ಬಂದುತಲ್ಪಿತು. ಅಲ್ಲಿ ನೆರೆದಂಥ ಯಾವತ್ತು ಜನರಿಗೆ ಗುರುಭಕ್ತಕೇಸರಿಯವರು ಸದ್ಯಃ ಮೈಸೂರುರಾಜಧಾನಿಯಲ್ಲಿ ಗುರುಕುಲತಿಲಕ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಪರಿಶ್ರಮದಿಂದ ಸ್ಥಾಪಿತವಾಗಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಿಂಟಿಂಗ್‌ಪ್ರೆಸ್ಸಿನ ಹಾಗೂ ಆಸ್ಥಾನವಿದ್ವಾನ್ ವಿರಸಿ ಶ್ರೀ ಗುರುಶಾಂತಶಾಸ್ತ್ರಿಗಳವರ ಸಂಪಾದಕತ್ವದಿಂದ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವ ಪಂಚಾಚಾರ್ಯಪ್ರಭಾ ಎಂಬ ವಾರಪತ್ರಿಕೆಯ ಉದ್ದೇಶಗಳನ್ನು ವಿಶದವಾಗಿ ಹೇಳಲು ಉತ್ಸವದಲ್ಲಿ ಭಾಗಿಗಳಾದ ಗುಮ್ಮಗೋಳದ ಶ್ರೀ ಗೋಣಿಸ್ವಾಮಿದೇವಸ್ಥಾನದ ಮ್ಯಾನೇಜರ ಕೊಟ್ರಬಸಯ್ಯನವರು ೫ ರೂಪಾಯಿಗಳನ್ನೂ ಹಾಗೂ ಅಲ್ಲಿಪುರದ ಕೋಟ್ರ್ಯಾಳ ಬಸಪ್ಪಾ ಇವರು ೫ ರೂಪಾಯಿಗಳನ್ನೂ ಶ್ರೀ ಜಗದಾಚಾರ್ಯರ ಪವಿತ್ರನಾಮದಿಂದ ಪ್ರಕಾಶಿಸುತ್ತಿರುವ ಪತ್ರಿಕೆಗೆ ಶುದ್ಧಾಂತಃಕರಣದಿಂದ ಕೊಟ್ಟರು.

ಅನಂತರ ಯಾವತ್ತೂ ಜನರು ಸಂತೋಷಭರಿತರಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲಸ್ತೋತ್ರ ಮಂಗಳಾದಿ ಶ್ರೀ ದೇವರಪ್ರಸಾದವಂ ಕೈಕೊಂಡು ಜಗದಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಮನೆಗೆ ತೆರಳಿದರು. ಸದರಿ ಉತ್ಸವದಲ್ಲಿ ಭಾಗಿಗಳಾದ ಯಾವತ್ತೂ ಜನರಿಗೆ ಮಹಾತ್ಮನಾದ ಶ್ರೀ ನಂದೀಶ್ವರನು ಸನ್ಮಂಗಲವನ್ನುಂಟುಮಾಡಲಿ.

ಪ್ರತ್ಯಕ್ಷದರ್ಶಿ,
ರಾಯಪ್ಪಾ, ಮುಂಡರಗಿ.

ತಾ|| 24-6-1927 ರಲ್ಲಿ ಕೂಡ್ಲಿಗಿ ಮೊಕ್ಕಾಮಿನಲ್ಲಿ
ಶ್ರೀ ಟಿ. ರಂಗನಾಥಂಮೊದಲಿಯಾರ್, ಮದ್ರಾಸು
ಶಾಸನಸಭೆಯ ಮಂತ್ರಿಗಳು ಇವರಿಗೆ

ಕೂಡ್ಲಿಗಿ ಯೂನಿಯನ್ ಬೋರ್ಡಿನವರೂ ಮತ್ತು ಪುರಜನರೂ ಸಮರ್ಪಿಸಿದ ಮಾನಪತ್ರವು

ಶ್ರೀಮಚ್ಚೆನ್ನಪುರೀ ರಾಜಧಾನಿಯ ಸಂಪದಭ್ಯುದಯಶಾಖೆಯ ಮಂತ್ರಿವರ್ಯರಾದ ಘನವನ್ನು ಹೊಂದಿದ ಶ್ರೀಯುತ ಅನ್ವಾಟ್ ರಂಗನಾಥಂಮೊದಲಿಯಾರ್, ಬಿ.ಎ. ಬಿ.ಎಲ್., ಎಂ. ಎಲ್.ಸಿ., ಇವರ ಸನ್ನಿಧಾನದಲ್ಲಿ—

ಅನಾತ್ಮಮಹಾಶಯರೇ,

ಸಾಕ್ಷಾದ್ದಿಗದಂತಭೂತರಾದ ಶ್ರೀಮತ್ಪಂಚಮ ಜಾರ್ಜ್ ಚಕ್ರವರ್ತಿಯವರ ಅಧಿಷ್ಠಿತವಾದ ಛತ್ರಛಾಯೆಯಲ್ಲಿನ ಕರ್ನಾಟಕಭೂಭಾಗದ ಒಂದಾನೊಂದು ಅನಾಮಧೇಯ ಮೂಲೆಯಲ್ಲಿರುವ ಈ ಕೂಡ್ಲಿಗಿ ಪಟ್ಟಣವು ತಮ್ಮ ಚಿತ್ತಾಕರ್ಷಣವನ್ನು ಮಾಡಿ ಇಂದು ತಮ್ಮ ಸಂದರ್ಶನಕ್ಕೆ ಪಾತ್ರವಾಗಿರುವುದು ನಮ್ಮ

ಸುದೈವವು. ಈ ಪ್ರದೇಶವು ಪುಸ್ತಕದಲ್ಲಿ ಸುಪ್ರಸಿದ್ಧವಲ್ಲದಿದ್ದರೂ ಪುರಾತನಕಾಲದಲ್ಲಿ ಕರ್ನಾಟಕನಾಡಿನ ವೀರಪುತ್ರರ ರಂಗಭೂಮಿಯಾಗಿದ್ದಿತು. ಮತ್ತು ಈ ಪ್ರದೇಶದಲ್ಲಿಯೇ ಟಿಪ್ಪುಸುಲ್ತಾನನು ಹಿಜರತ್ತಾನನೆಯನ್ನು ಮಾಡಿ ಸೀರನದುರ್ಗದಿಂದ ಕೋಟೆಯನ್ನು ಹಿಡಿದುಕೊಳ್ಳಲು ಸಾಹಸಪಟ್ಟು ಕಡೆಗೆ ಪರಾಜಿತನಾಗಿ ಹೋದನು. ಬಹುದೂರದ ಪ್ರಯಾಣದ ದೇಹಶ್ರಮವನ್ನೂ ಮಳೆಗಾಲದ ಅನನುಕೂಲಗಳನ್ನೂ ಲಕ್ಷಿಸದೇ ತಮ್ಮ ದಿಗಂತವಿಶ್ರುತವಾದ ಪ್ರಜಾಂಡ ಒತ್ತಾಯದಿಂದಾಗಲೆಂಬ ಮೋಹದಯೆಯಿಂದಲೇ ತಮ್ಮ ಸ್ವಾಮಿಗಳು ಇಲ್ಲಿಗೆ ಬಂದಿಳಿದಿರುವುದಾಗಿ ನಮಗೆ ಭಾಸವಾಗುತ್ತದೆ. ಅತ್ಯಾದರದಿಂದ ಇಂದು ತಮಗೆ ಸ್ವಾಗತವನ್ನು ನೀಡುವೆವು.

2. ರಾಜಾ ಸಾರ್ವಭೌಮ ಒಡೆಯರ ಪಾದಾರವಿಂದಸೇವಕರಾದ ರಾಜ್ಯಾಂಗಸೂತ್ರಧಾರರುಗಳು ಒಂದುಬಿಂದ ಬಳ್ಳಾರಿಯ ರಾಷ್ಟ್ರಭಾಗದ ಪ್ರಜೆಗಳ ನೋಟದಲ್ಲಿಯೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಶಾಸನಸಭೆಯಲ್ಲಿ ಈಗ 7 ವರ್ಷಗಳಿಂದಲೂ ಪ್ರಜಾಸಾಮಾನ್ಯರ ಕಷ್ಟನಿಷ್ಠುರಗಳನ್ನು ಸರ್ಕಾರಕ್ಕೆ ನಿವೇದಿಸಿ ಅಸಾಧಾರಣ ಪ್ರತಿಭೆಯಿಂದ ಹೋರಾಟ ಅನೇಕ ಪ್ರಜಾಸೌಕರ್ಯಗಳನ್ನು ಕಲ್ಪಿಸಿಕೊಟ್ಟುದಕ್ಕಾಗಿ ತಮಗೆ ಅತ್ಯಂತ ಕೃತಜ್ಞರಾಗಿರುತ್ತೇವೆ. ನಿಸ್ವಾರ್ಥತೆಯಿಂದಲೂ, ನಿರುಪಮಾತ್ಮತ್ಯಾಗಶೀಲತೆಯಿಂದಲೂ ಕೂಡಿದ ತಮ್ಮ ದೇಶಸೇವಾಧುರಂಧರತೆಗೆ ಪರಮಪ್ರೀತರಾಗಿ ಮಂತ್ರಿಪದವಿಯನ್ನು ಅನುಗ್ರಹಿಸಿರುವುದರಿಂದ ಬಳ್ಳಾರಿಯಜಿಲ್ಲೆಯ ಪ್ರಜೆಗಳ ಪುಣ್ಯವೃಕ್ಷವು ಫಲಿಸಿದಂತಾಯಿತು. ಈ ಮಹಾಸಭೆಯ ಅಧ್ಯಕ್ಷಸ್ಥಾನದಲ್ಲಿದ್ದು ಇತೋಽಪ್ಯತಿಶಯವಾದ ಕೀರ್ತಿಯನ್ನು ಸಂಪಾದಿಸುವಿರೆಂದು ಪೂರ್ಣವಾಗಿ ನಂಬುತ್ತೇವೆ.

3. ಸಚಿವಶಿರೋಮಣಿಗಳೇ? ಪ್ರಜೆಗಳಿಗಿರುವ ಕುಂದುಕೊರತೆಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡು ಅವುಗಳನ್ನು ಪರಿಶೀಲಿಸಿ ಅವುಗಳ ನಿವಾರಣೋಪಾಯಗಳನ್ನು ಕಲ್ಪಿಸುವ ಉತ್ಕಟೇಚ್ಛೆಯಿಂದಲೇ ತಮ್ಮ ದಿವ್ಯಸ್ವಾರಿಯು ಚಿತ್ತೈಸಿರುವುದರಿಂದ ಇಲ್ಲಿ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಅಹವಾಲುಗಳನ್ನು ಸನ್ನಿಧಾನದಲ್ಲಿ ಅರಿಕೆಮಾಡಿಕೊಳ್ಳದೆ ಇರಲಾರೆವು. ಅವು ಯಾವುವೆಂದರೆ—(1) ರೈಲ್ವೆಯನ್ನು ದಾವಣಗೆರೆವರೆಗೆ ಬದಾಯಿಸಿ ವ್ಯಾಪಾರಸೌಲಭ್ಯವನ್ನು ಹೆಚ್ಚಿಸುವುದು. (2) ಈ ಟವನಿನಲ್ಲಿ ಮಿಡಲ್ ಸ್ಕೂಲ್ ಸ್ಥಾಪನಮಾಡುವುದು. (3(ಫ್ಯಾಮಿನ್ ರೋಡುಗಳನ್ನು ರಿಪೇರಿಮಾಡಿಸುವುದು. (4) ಪಂಚಾಯತಿ ಫಾರೆಸ್ಟುಗಳಲ್ಲಿ ಮೇಯುವಕ್ಕೆ ಜಾನುವಾರುಗಳ ವಿಷಯವಾಗಿ ಇರತಕ್ಕ ಕಿರುಕುಳಕಾರಿಗಳಾದ ನಿರ್ಬಂಧಗಳನ್ನು ತಪ್ಪಿಸುವುದು. (5) ಈ ಊರಿನ ಹಿರೇಕೆರೆಗೆ ನೀರಿನ ಆಧಾರವನ್ನು ಹೆಚ್ಚಿಸುವುದು.

4. ಮಹೋದಯರೇ! ವ್ಯವಹಾರವಾಹನಸ್ಥಿತಿಯಲ್ಲಿಯೂ, ಆರ್ಥಿಕಪರಿಸ್ಥಿತಿಯಲ್ಲಿಯೂ, ಕೃಷಿಕಾರ್ಯಸೌಕರ್ಯಗಳಲ್ಲಿಯೂ, ಅರ್ಥಸಾಧಕ ಉದ್ಯೋಗಗಳಲ್ಲಿಯೂ ಬಹುದೂರ ಹಿಂದುಳಿದಿರುವ ಈ ಬಳ್ಳಾರಿಜಿಲ್ಲೆಯಲ್ಲಿ ತಾವು ಬಹುಕಾಲ ಜಿಲ್ಲಾಧಿಕಾರಿಯು ಪ್ರತಿನಿಧಿಯಾಗಿದ್ದು ಜನರ ಕುಂದುಕೊರತೆಗಳೆಲ್ಲವೂ ಪ್ರಜಾಬಂಧುವೆನಿಸಿರುವ ತಮಗೆ ಮನವರಿಕೆಯಾಗಿರುವುದರಿಂದ ಅವುಗಳೆಲ್ಲವನ್ನೂ ಇಲ್ಲಿ ವಿಶದೀಕರಿಸಿ ತಮ್ಮ ಅಮೋಘವಾದ ವೇಳೆಯನ್ನು ಅತಿಕ್ರಮಿಸಲಾರೆವು. ಪ್ರತಿವರ್ಷವೂ ಕ್ಷಾಮಡಾಮರಗಳುಪಟಳಗಳಿಂದ ಕಳೆಗುಂದಿ ಕಂಗೆಟ್ಟಿರುವ ಈ ಕರ್ನಾಟಕಭೂಭಾಗದಲ್ಲಿ ನಿರಾಶ್ರಿತರಾಗಿ ಪ್ರವಹಿಸುತ್ತಿರುವ ತುಂಗಭದ್ರಾನದಿಗೆ ಆಣೆಕಟ್ಟಿನಾಶ್ರಯವನ್ನು ಕೊಟ್ಟು ಅನೇಕಕಡೆಗಳಲ್ಲಿ ಅತ್ಯಾವಶ್ಯಕವಾಗಿರುವ ಕೆರೆತೊರೆ ತಟಾಕಾದಿಗಳನ್ನು ನಿರ್ಮಿಸಿ ಕ್ಷಾಮದ ಗರ್ವವನ್ನು ದಮನಮಾಡಿ, ಕೈಗಾರಿಕೆ ಕುಶಲಿಗಳಿಗೆ ನಿರೀಕ್ಷಿತವಾದ ಕರಾವಲಂಬನವನ್ನು ಕೊಡುವುದರಮೂಲಕ ನಿರ್ಗತಿಕರಿಗೆ ಜೀವನೋಪಾಯವನ್ನು ಕಲ್ಪಿಸಿ, ಪ್ರಜೆಗಳಮೇಲೆ ಹೇರಲ್ಪಟ್ಟಿರುವ ನಾನಾವಿಧ ಕಾರಭಾರವನ್ನು ತಗ್ಗಿಸಿ ಪ್ರಜೆಗಳ ಕ್ಷೇಮವನ್ನುದ್ಧರಿಸಿಕೊಂಡು ಪ್ರಭುಗಳ ಮೆಚ್ಚುಗೆಗೂ ಸರ್ಕಾರದವರ ಪ್ರೀತಿಗೂ ಪಾತ್ರರಾಗಿ ಇನ್ನೂ ಉನ್ನತಿಯಾದ ದೇಶಸೇವೆಯನ್ನು ಮಾಡಿ ಧನ್ಯಾಧಿ ಪ್ರಧಾನರಾಗಿ ಕರ್ನಾಟಕದ ಏಕೀಕರಣವಿಷಯದಲ್ಲಿ ಸಂಪೂರ್ಣ ಸಹಾಯಮಾಡಿ ಕರ್ನಾಟಕಮಾತೆಯ ಹಿತರತ್ನ ಸಾಲಿನಲ್ಲಿ ಪ್ರಥಮಗಣ್ಯರೆನಿಸಿ ವಿರಾಜಿಸಬೇಕೆಂದೂ, ತಾವು ಚಿರಕಾಲ ಸಕಲಸೌಖ್ಯಗಳನ್ನನುಭವಿಸುತ್ತಾ ಬಾಳೆಂದು ಆ ಜಗದ್ವಂದ್ಯ ಅನಾದ್ಯನಂತನಾದ ಭಗವಂತನನ್ನು ಹಿತಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಮಂಗಳ

ಸ್ವಸ್ತಿ। ಶ್ರೀಶಿವದಕ್ಷಕಾಂತಿಮುಖಕ್ಕೆ ಜಗತ್ಪತಿ ಲಕ್ಷ್ಮಿ ನಿಂ ಕರುಣೆ ಸಲ್ಲಿಸಿ ವಿಭವಂತರನ್ಗ ವಸುಂಧರಾತಳಾ। ಸತತಕೃಪೆಯಿಂದ ದೈತ್ಯಜನಪೀಡಿತ ನಿಂ ಧರಣೀಶನ ಭುವನನುತ ವಂಗಸಾಧನದಿ ಪೂರ್ತಿಯ ನಿತ್ಯಮುತ್ತಷ್ಟಂ ||

ಇತಿ ತಮ್ಮ ಶ್ರೇಯೋಭಿಲಾಷಿಗಳಾದ ಕೂಡ್ಲಿಗಿ ಪ್ರಜೆಗಳಪರವಾಗಿ—

ಲೇಖಕ ಟಿ. ಕೊಟ್ರಬಸಪ್ಪ.
ಎಂ. ಸಿದ್ಧವೀರಪ್ಪ. ರಿಸೆಪ್ಷನ್ ಕಮಿಟಿ ಛೇರ್ಮನ್.

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್‌ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಆಗಿದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ತಿಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಪ್ರಾರ್ಥಿಸುತ್ತೇವೆ.

ಸಂಪಾದಕರು.

ASIATIC GOVERNMENT SEC
LIFE ASSURANCE CO., LTD., MY
ಏಶಿಯಾಟಿಕ್ ಗವರ್ನಮೆಂಟು ಸೆಕ
ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥೆಯಲ್ಲಿರತಕ್ಕ ಜೀವವಿಮೆ ಸಂಪೂರ್ಣ ಸುಭದ್ರವಾದುದು.

ಆದ್ದರಿಂದ ಯಾವಾಗಲೂ "ಏಶ್ಯಾಟಿಕ ನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆ ಮತ್ತು ಇದರ ಪಾರ್ಟುಗಳು (ಸ್ಕೀಮು) ವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವ ವಿಮಾನ ಮೇಲೆಯೂ, ಪಾಲಿಸಿದಾರರಿಗೆ ಅವ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿ ಯಿಂಗ್ 31 ನೆಯ ಜುಲೈ 1927 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿ ರಿಗೆ ಬರೆಯಬಹುದು.

(1) ಮ|| ಪಿ. ರಾಜ್ಗೋಪಾಲ್,
, ಚೀಫ್ ಏಜಂಟ್, ಮೈಸೂ
(2) ಮ|| ಜಿ. ಎಲ್. ಆರಾಧ್ಯ,
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ
(3) ಹೈದರಾಬಾದ ಏಶ್ಯಾಟಿಕ್ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದ
ಸುಲ್ತಾನಬಜಾರ ರೋಡ್, ಮುಖ್ಯ ಏಜಂಟ
[10] ಮೈಸೂರು. *Asiatic Buildi*

ಡಾಕ್ಟರ್ ಜೇ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಬಂದುಹೋಯಿತು, ಸಾವಿರಾರು ಮಂದಿ ಇದನ್ನು ಉಪಯೋಗಿಸಿ, ಸಾವಿರಾರುಗಳ

ಯೋಗ್ಯತಾಪ ವನ್ನು ಕೊಟ್ಟಿ ರು. ಪ್ರಸಿದ್ಧ ಈ ನಶ್ಯದ ಯಿಂದ ಸ್ವಸ್ಥ ದ ವ್ಯಾಧಿಗಳು ಹವಂದರೆ—ಒಂಟಿತಲೆನೋ ತಲೆಯಲ್ಲಿನ ರೋಗ ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗ ಬಂದೇನಿಸ ಮುಂತಾದ ವ್ಯಾಧಿಗಳು, ಪರಿಹಾರವಾ ಗಿಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ನವ ಹೊಸ ಹುತ್ತವೆ ಮೂರುಪೆಟ್ಟಿನ ಸಾಧಾರಣ ನಶ್ಯದ ಸಂಗ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ ಬಿಗಳದಾಗಿ ಉಪಯೋಗಿಸುತ್ತಾರೆ. ಮಾದರಿಗೋ ಸ್ಟಾಂಪು ಕಳುಹಿಸಬಾರದೇಕು.

ಚಿಕ್ಕ ಡಬ್ಬಿಕ್ಕೆ ಕ್ರಯ ರೂ ೦-೪-೦. ವಿ.ಪಿ. ೦-೯-೦
ದೊಡ್ಡ ಡಬ್ಬಿಕ್ಕೆ ಕ್ರಯ ರೂ. ೩-೮-೦. ವಿ.ಪಿ. ೪-೦-೦
ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನು ಸ್ಪಷ್ಟವಾಗಿ ತಿಳಿಯಪಡಿಸಬೇಕು.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[12] ಪೋ. ಬಾ. ೫೧೦, ಮದರಾಸು.

ಶ್ರೀ ಮೈಸೂರು ನಾಗೇಂದ್ರಾಪುರ ಕೋಟೆಯಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶ್ರೀ ಗುರುಶಾ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

TERED NO. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃಪ್ರಸೀದಂತು. REGISTERED NO. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ.

ಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಆಗಸ್ಟ್ ೧೯೨೭ ಇಸವಿ [ಸಂಚಿಕೆ ೧೫.

ದ್ಗುರು ಪಂಚಾಚಾರ್ಯ ಭಜನಾ ಸಂಘ ಮಹಾಗಾಂವ.

ಹಾಬಂಧುಗಳಿಗೆ ತಿಳಿಸುವದೇನಂದರೆ— ಗಾರಜಿಲ್ಲಾ ಪೈಕಿ ಮಹಾಗಾಂವ ವೀರ ರ್ಗಾಧರ ಜ್ಯೋತಿಷ್ಯಪಾಠಶಾಲೆಯಲ್ಲಿ ಇದೇ ತಾ|| ೪ ಸೋಮವಾರದಲ್ಲು ಸಾಯಂಕಾಲ ೬ ಯದಲ್ಲಿ ಸಭೆಯು ಸೇರಿತ್ತು. ಶ್ರಾವಣ ಕಾರಣ ಸಮಸ್ತಭಕ್ತಮಾಹೇಶ್ವರರು ಇಲ್ಲಿ ಗ್ರಾಮದ ಸ್ತ್ರೀಪುರುಷರು ಸಹಿತ ಬಂದಿ ಮಹಾಸಭೆಯು ಅಧ್ಯಕ್ಷ ಸ್ಥಾನವನ್ನು ಈ ಯ ಅಧ್ಯಾಪಕರಾದ ಬ್ರಹ್ಮಶ್ರೀ ಸಿದ್ಧಾಂತಿ ಶಾಸ್ತ್ರಿಗಳು ಭಕ್ತರ ಪ್ರೇರಣೆಯ ಮೂಲಕ ಸ್ಥಾನವನ್ನು ಸ್ವೀಕರಿಸಿದರು. ಇದಕ್ಕೆ ಚಿಕ್ಕ ರು ಶ್ರೀಗಳು ಅನುಮೋದನ ಕೊಟ್ಟರು. ಈ ಟನ್ನಿಟ್ಟ ಉದ್ದೇಶವೇನಂದರೆ, ಧರ್ಮಪ್ರಸಾರ, ಶಾಲಾಕಾರ್ಯಕ್ರಮದ ಚಲಾವಣೆಯನ್ನು ಸುವ ಸಂಬಂಧವಾಗಿತ್ತು. ಧರ್ಮವಿಷಯಕ್ಕೆ . ಯಂ. ಬಾಚಾರ್ಯ ಶರ್ಮಾ ಮೋಘಲ ವಕರಣ ಶರ್ಮಾ ಮೊದಲಾದ ವಿದ್ಯಾರ್ಥಿಗಳು ಪ್ರಾಧಾನ್ಯದಬಗ್ಗೆ ಭಾಷಣಮಾಡಿದರು. ವಿದ್ಯಾ ರ್ ಭಾಷಣಗಳು ಮುಗಿದಮೇಲೆ ಶ್ರೀಮತಾ ಪಟ್ಟ ಷ್ಟ್ರಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ದ ಮಹಾಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂ ಇವರು ನಮ್ಮ ಧರ್ಮಕರ್ಮ ಸಂಯೋಗದಿಂದ ಗ್ರಾಮಕ್ಕೆ ದಯಮಾಡಿಸಿದ ಕಾರಣ ಸಭೆಯು ನದಾಗಿತ್ತು. ಸ್ವಾಮಿಗಳು ಪಾಠಶಾಲಾ ಕ್ರಮ, ಭಕ್ತಿ ಈ ವಿಷಯಗಳ ಮೇಲೆ ಎಂಟೆಯು ವರೆಗೆ ಸರ್ವ ಭಕ್ತ ಸ್ತ್ರೀಪುರುಷ ತಿಳಿಯುವ ಹಾಗೆ ತಮ್ಮ ಅಮೃತವಾಣಿಯಿಂದ ಖ್ಯಾನ ಮಾಡಿದರು. ಭಕ್ತಿ ವಿಷಯದಲ್ಲಿ ಒಳ್ಳೇ ಸ್ವಗುಣತ್ತ್ವವಹಾಗೆಯೇ ಸಮಸ್ತವಿದ್ಯಾರ್ಥಿಗಳಿಗೂ ಸ್ತ್ರೀಪುರುಷರಿಗೂ ಭಜನಾಸಂಘಮಾಡಲಿಕ್ಕೆ ಹೇಳಿ . ಅವರ ವಾಕ್ಯದಂತೆ ಇದೇ ಪಾಠಶಾಲೆಯಲ್ಲಿ ಭಜ ಸಂಘವು ಸ್ಥಾಪನಾ ಮಾಡಲ್ಪಟ್ಟಿತು. ಈಸಂಘಕ್ಕೆ ಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘ ರೇತಸ್ಥ ಪಾಠಶಾಲಾ ಮಹಾಗಾಂವ ಎಂದು ಇಟ್ಟು ಬೋರ್ಡು ಹಚ್ಚಿ ಶ್ರೀ ಪಂಚಾಚಾ ರ ಭಾವಪಟವನ್ನು ಸಿಂಹಾಸನದಲ್ಲಿರಿಸಿ ಪುಷ್ಪ ದಿಗಳನ್ನು ಅರ್ಪಿಸಿದನಂತರ ಭಜನೆಯು ನಡೆಯಿತು. ಕ್ಷರು ಕಾಯಾ ವಾಚಾ ಮನಃಪೂರ್ವಕವಾಗಿ ಇದರಂತೆ ಜಗದಾಚಾರ್ಯರ ಭಜನಾಪ್ರಗತಿಯನ್ನು ಪ್ರತಿಯೊಂದು ಗ್ರಾಮದಲ್ಲಿಯೂ ದಿನೇದಿನೇ ಭಕ್ತಿಪೂರ್ವಕವಾಗಿ ನಡೆಯಿಸಬೇಕೆಂದು ಸರ್ವ ವಿದ್ಯಾರ್ಥಿಗಳಿಗೂ ಭಕ್ತಮಾಹೇಶ್ವರರಿಗೂ ಬೋಧಮಾಡಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜನಮಾಡಲ್ಪಟ್ಟಿತು. ಎಸ್. ಎಫ್. ಸಂಗಯ್ಯನವರು ಸಭೆಯ ವ್ಯವಸ್ಥೆಯನ್ನು ಚನ್ನಾಗಿಮಾಡಿದ್ದಕ್ಕೆ ಸರ್ವರು ಅವರ ಆಭಾರವನ್ನು ಮನ್ನಿಸಿದರು.

ಲೇಖಕ
ಪಾಠಶಾಲಾ ವಿದ್ಯಾರ್ಥಿನಿಲಯ ಸೆಕ್ರೆಟರಿ
ಪಾಚಾರ್ಯ ಶರ್ಮಾ ಮಹಾಗಾಂವ.

ಶ್ರೀಮನ್ಮಹಾರಾಜರವರ ರಜತಮಹೋತ್ಸವದ ಪಂಚರತ್ನಂಗಳು.

ಕಂದಪದ್ಯ

ರಜತಮಹೋತ್ಸವಮೆಸಲಾ
ನಿಜಗುಣಮಣಿಭೂಷ ಕೃಷ್ಣನರಪತಿಸುರಭೂ
ಮಿಜಮನಸಸಂನಿಭ ಸ
ತ್ರಿಜಗಸೌಭಾಗ್ಯಮೆತ್ತೆ ಧಾತ್ರೀತಲದೊಳ್

ಭಾಮಿನೀಷಟ್ಪದಿ

ಪಂಚಭೂತಾತ್ಮಕಶರೀರಂ
ಪಂಚವದನಕಳಾವಿಲಾಸ ಸ
ಮುಂಚಿತಗುಣೋಪೇತಬಂಕೃಷ್ಣೇಂದ್ರನಂದೆಸೆಸೀ
ಪಂಚಪಂಚಶಿವತ್ಸರಂ ಸ
ವರ್ಣಿತನೆಯೊಳ್ಪಂಡಕ್ಷಿ ಸತ್ಸ ಪ್ರ
ಪಂಚಕಿದು ಮಾದರಿಯದೇಶಾಖ್ಯಯಮನಾಂತಿಕುದ್ಯೆ

ಕಂದಪದ್ಯ

ಕುಜನಕುಲಕುಮುಕುಠಾರಂ
ಸುಜನಮನೋವನವಸಂತಜನಪತಿಯ ಮಹಾ
ರಜತೋತ್ಸವಮಂ ಸಲೆಭೂ
ಭುಜಪಕ್ತಿವಿಶೇಷದಿಂದಮಾಳ್ಪರೆಭಸ್ವರಂ

ಸೋಮಮಹೇಶ್ವರನಚ್ಚುಭ
ನಾಮ.ನದಾಮರವಿನಮಿತಪಾದಪಯೋಜಂ
ಭೂಮಿಪವರಕೃಷ್ಣೇಂದ್ರನ
ಹೇಮಮಹೋತ್ಸವವನೊಳ್ಪಭಾಗ್ಯವಕುಡುಗೇ

ಶ್ರೀಮದ್ರಂಭಾಪುರಿ ಸ
ನ್ನಾಮಮಹಾವೀರಸಿಂಹಪೀಠಾಧೀಶಂ
ಸೋಮಮಹಾರೂಪರೇಣುಕ
ನಾಮಹಿಪತಿಕೃಷ್ಣರಾಜಗೀಯುಗೆಸುಖಮಂ

ಲೇಖಕ — ಶಿವಕಥಾಪಂಡಿತ ಶಿವರುದ್ರಶಾಸ್ತ್ರಿ,
ಗುಬ್ಬಿ.

ಚಿಕ್ಕಮಗಳೂರು ಶ್ರೀಮದ್ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಡೆದ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ.

ಶ್ರೀ ವೀರಶೈವ ಬಾಲರ |
ಕೋವಿದರೂಪಾಸ್ತ ಕಾರ್ಯಕಾರಂಭಿಸಿದೀ ||
ಶ್ರೀ ಪರಗುರುವಿಗುದಾರಸು |
ಭಾವಪತೋಲಿದ ನೃಪನಂ ಪೊರೆಯೆ ಭವಾನೀ ||೧||

ಶ್ರೀಮದ್ಯದುವಂಶೋದಧಿ |
ಸೋಮನ ಗುಣಧಾಮನ ನುತಸೀಮನ ಮುದದಿಂ ||
ಸೋಮಧರಾ ಧರ್ಮಾಂಗಿಯೆ ಪೊರೆ |
ಭೂಮಿಪಾಂದ್ರ ಶ್ರೀಕೃಷ್ಣನೃಪೇಂದ್ರನ ಸತತಂ ||೨||

ದಕ್ಷಗೆ ಸುಜನವಿಪಕ್ಷಗೆ |
ರಕ್ಷ ವಿಚಕ್ಷಗೆ ದೀರ್ಘಾಯುಷ್ಯವನಿತ್ತುಂ ||
ದಕ್ಷಕುಮಾರಿಯೆ ಪೊರೆಯಾ |
ದಕ್ಷೇಂದ್ರಾರೂಢವಂಶದ ನೃಪೇಂದ್ರಗನೀಂ ||೩||

ಮಹಿಷಾಸುರಮರ್ದಿನಿಯೇ |
ಯಹಿಭೂಷಣನರಸಿ ಚಾಮರಾಜೇಂದ್ರಜಗೀ ||
ಮಹಿಯಂ ಶತವರ್ಷಂಗಳು |
ಬಹುಮೋದದಲಾಳುವಂತೆ ಕರುಣಿಸುವರನಂ ||೪||

ಭದ್ರಗೆಕರುಣಾ ಸಮುದ್ರ |
ಗದ್ರೀಂದ್ರಾತ್ಮಜೆಯ ಪಾದಪದ್ಮನಿಜೇತಗೆ ||
ರುದ್ರಾಣೀ ಚಾಮುಂಡಿಯು |
ಸದ್ರತ್ನಾತ್ಮಜನನೀಯುಲೇಗಂಕ್ಷೆಪೆಯಿಂ ||೫||

ಜಯಸಿರಿಕೃಷ್ಣನೃಪೇಂದ್ರಾ |
ಜಯಜಯಜಿ.ಸಿ.ಎಸ್.ಐ.,ಜಿ.ಸಿ.ಬಿ.ಇ., ಬಿರುದಾಂಕಾ|
ಜಯಮಹಿಸೂರರಾಷ್ಟ್ರೇಂದ್ರಾ |
ಜಯಜಯಕಾತ್ಯಾಯನಿಪದಕಮಲ ಸುಭೃಂಗಾ ||೬||

ಮಂಗಲ ವಿಜಯಲಸತ್ರಂ |
ಮಂಗಲಮಯಸಿರಿ ಕೃಷ್ಣನೃಪಸುಧಾಂಶುವಿಗಾ ||
ಅಂಗಜ ಮದಹರ ಸುರವರ |
ಗಂಗಾಧರ ನರಸಿಸರ್ವಮಂಗಲೆ ಮುದದಿಂ ||೭||

ಸುಖಯುಳಿ ವೃಷ್ಟಿಯು ಕಾಲಕೆ |
ಧರೆಯೊಳ್ ಬೆಳೆ ಬೆಳೆದು ಸರ್ವಜನಗಳು ಮುದದಿಂ ||
ನೆರೆನಲಿಯುತೆ ಗಿರಿಜಾತೆಯು |
ಪರಮ ಸುಚರಣಾಂಬುಜವ ಸ್ಮರಿಸಲಿ ಸತತಂ ||೮||

ಪರಶಿವಕೃಷ್ಣನೃಪೇಂದ್ರನ |
ಮರುಪದವರ **ಸಿಲ್ವರ್ ಜೂಬಿಲಿಯುತ್ಸವದೊಳ್**
ಒರೆದೀಶ್ರೇಯಃಪ್ರಾರ್ಥನೆ |
ಗಿರಿಜೆಮುದಯದಿಂದ ಮೆರೆಯಲಿಳೆಯೊಳಗೆಂದುಂ ||೯||

ಶಾಲಾಶಿಕ್ಷಕನಾದೀ |
ಕೂಲಿಯುಸದ್ಭಕ್ತ ಎಲ್.ಸಿ. ಶಿವಲಿಂಗಸ್ವಂ
ಕಾಲಿಯ ದಯದಿಂಪೇಳ್ದ ನೃ
ಪಾಲಸುಗುಣಶೀಲ ಶ್ರೇಯಃಪ್ರಾರ್ಥನೆಯಂ ||೧೦||

ಸೂಚನೆಯು

ನಾವು ಪ್ರತಿವಾರವು ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸಿನ ಮಾಸ್ಟರರಿಗೆ ತಿಳುಹಿಸಬೇಕು. ಕೆಲವರು ನಾವು ವಿ. ಪಿ. ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವದಿಲ್ಲವೆಂದು ಬರೆಯುತ್ತಾರೆ ವಿ. ಪಿ. ತೆಗೆದುಕೊಂಡವರ ಹಣವು ನಮ್ಮ ಕೈ ಸೇರಬೇಕಾದರೆ ೨೦-೨೫ ದಿವಸಗಳು ತಡವಾಗುತ್ತದೆ. ಹಣವು ಕೈ ಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವದಾಗುತ್ತದೆ. ಮನಸ್ಸಿನಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ

ಸಂ—

ಪಂಚಾಚಾರ್ಯಪ್ರಭಾ

೧೯೨೭ನೇ ಆಗಸ್ಟ್ ತಾ| ೨೨ನೇ ಸೋಮವಾರ

ಲಿಂಗಧಾರಣವು.

ಇಷ್ಟಲಿಂಗವನ್ನು ಧಾರಣಮಾಡುತ್ತಲೂ, ನಾಮಹಸ್ತರೂಪವಾದ ಪೀಠದಲ್ಲಿ ಪೂಜಿಸುತ್ತಲೂ ಇರುವದೇ ವೀರಶೈವನಿಗೆ ಮುಖ್ಯಧರ್ಮವೆನಿಸುವದು. ಈ ಇಷ್ಟಲಿಂಗವನ್ನು ಸ್ತ್ರೀಪುರುಷರೀರ್ವರೂ ಧರಿಸಬೇಕೆಂಬ ಪ್ರಮಾಣಗಳು ಇರುವದರಿಂದ ರಜಸ್ಸೂತಕ ಜನನಸೂತಕ, ಪ್ರೇತಸೂತಕ, ಜಾತಿಸೂತಕ, ಉಚ್ಛಿಷ್ಟಸೂತಕಗಳೆಂಬ ಐದುಸೂತಕಗಳಲ್ಲಿ ಯಾವುದಾದರೊಂದು ಸೂತಕವು ಪ್ರಾಪ್ತವಾಗಿದ್ದರೂ ಶರೀರದಿಂದ ಲಿಂಗವನ್ನು ತೆಗೆಯಕೂಡದು, ಪೂಜೆಯನ್ನೂ ಬಿಡಕೂಡದು "ನಿತ್ಯಾಪ್ಯಾಂಶಿವಪೂಜನಂ" ಎಂದು ಅನಂತ ಶಿವಾಗಮಗಳು ಸಾರುತ್ತಿರುವವು. ಹಾಗಾದರೆ ಮನ್ವಾದಿಸ್ಮೃತಿಗಳಲ್ಲಿ ಸೂತಕಗಳುಂಟಾದಸಮಯದಲ್ಲಿ ದೇವತಾದರ್ಶನ, ದೇವತಾಸ್ಪರ್ಶನ, ದೇವತಾರಾಧನ ಮುಂತಾದ ಸತ್ಕರ್ಮಗಳನ್ನು ಮಾಡಕೂಡದೆಂದು ಹೇಳಲ್ಪಟ್ಟಿರುವುದು "ಸೂತಕಂನಾತ್ರವಿದ್ಯತೆ" ಲಿಂಗಾಂಗಿಯಾದ ಮಾನವನಿಗೆ ಸೂತಕಗಳು ಇಲ್ಲವೆಂದು ಶಿವಾಗಮಗಳು ಹೇಳುತ್ತವೆ. ಇಲ್ಲಿ ಸ್ಮೃತಿವಾಕ್ಯಗಳಿಗೂ, ಶಿವಾಗಮವಾಕ್ಯಗಳಿಗೂ ವಿರೋಧವು ಸಂಭವಿಸುವದರಿಂದ ಯಾವವಾಕ್ಯಗಳನ್ನು ಅನುಸರಿಸಬೇಕೆಂಬ ಸಂಶಯಗಳುಂಟಾಗುವವು. ಆದರೆ ಶಾಸ್ತ್ರದಲ್ಲಿ ಸಾಮಾನ್ಯ (ಉತ್ಸರ್ಗ) ಶಾಸ್ತ್ರವೆಂತಲೂ, ವಿಶೇಷ (ಅಪವಾದ) ಶಾಸ್ತ್ರವೆಂತಲೂ ಎರಡುವಿಧಗಳುಂಟು. ಇವೆರಡಕ್ಕೂ ಪರಸ್ಪರ ವಿರೋಧವುಂಟಾದರೆ ಸಾಮಾನ್ಯಶಾಸ್ತ್ರಕ್ಕಿಂತಲೂ ವಿಶೇಷಶಾಸ್ತ್ರವೇ ಪ್ರಬಲವೆಂದು ಶಾಸ್ತ್ರಕಾರರು ಅಂಗೀಕರಿಸಿರುವರು. ಹೇಗೆಂದರೆ—ವೇದವು ಒಂದು ಕಡೆಯಲ್ಲಿ ಹಿಂಸೆಯನ್ನು ಮಾಡಕೂಡದೆಂದು ಬೋಧಿಸುವುದು. ಅದೇ ವೇದವು ಮತ್ತೊಂದುಕಡೆಯಲ್ಲಿ ಸ್ವರ್ಗಾಪೇಕ್ಷೆಯಾದ ಪುರುಷನು ಹಿಂಸೆಯನ್ನು ಮಾಡಬಹುದೆಂತಲೂ ಬೋಧಿಸುವದು. ಇಲ್ಲಿ ಎರಡುವಾಕ್ಯಗಳಿಗೂ ಪರಸ್ಪರವಿರೋಧವು ಸಂಭವಿಸುವದರಿಂದ ವೈದಿಕ ಪಶುಹಿಂಸೆಯನ್ನು ಮಾಡಬೇಕೆಂಬ ವಿಶೇಷವಾಕ್ಯವು ಹಿಂಸೆಯನ್ನು ಮಾಡಬಾರದೆಂಬ ಸಾಮಾನ್ಯವಾಕ್ಯವನ್ನು ಹೇಗೆ ಬಾಧಿಸುವದೋ ಅದರಂತೆ ವೀರಶೈವ ಸಿದ್ಧಾಂತದಲ್ಲಿ ಸೂತಗಳುಂಟಾದರೂ ಲಿಂಗದಿಂದ ಅಗಲಿರಕೂಡದು. ಲಿಂಗಾರಾಧನವನ್ನು ಬಿಡಕೂಡದೆಂಬ ವಿಶೇಷವಾಕ್ಯಗಳು ಸೂತಕಗಳುಂಟಾದಕಾಲದಲ್ಲಿ ದೇವತಾಸ್ಪರ್ಶ, ದೇವತಾರಾಧನಾದಿಗಳಿಲ್ಲವೆಂಬ ಸಾಮಾನ್ಯವಾಕ್ಯಗಳನ್ನು ಬಾಧಿಸುವವು. ಇದರಿಂದ ಸಂಸ್ಕೃತವಾದ ಯಜ್ಞಸಂಬಂಧದ ಪಶುವಿನಹಿಂಸೆಗೆ ಪ್ರಾಬಲ್ಯವನ್ನು ಹೇಳುವಂತೆ "ಯಾವಜ್ಜೀವಮಹಂದತ್ತಂ ಇಷ್ಟಲಿಂಗಂಸಮರ್ಚಯೇ" ಮುಂತಾದ ಶಿವಾಗಮವಾಕ್ಯಗಳಿಗೆ ಅತ್ಯಂತಪ್ರಾಬಲ್ಯವನ್ನು ಹೇಳುವುದರಿಂದ ಮಧ್ಯದಲ್ಲಿ ಸಂಭವಿಸುತ್ತಿರುವ ಸೂತಕಗಳುಂಟಾದರೂ ಶಿವಲಿಂಗವನ್ನು ಶರೀರದಿಂದ ತೆಗೆಯದೆ ಆಯಾಯಕಾಲಗಳಲ್ಲಿ ಸ್ನಾನಾದಿಗಳಿಂದ ಪವಿತ್ರನಾಗಿ ತಾನು ವಾಸಮಾಡಿದ ಸ್ಥಳವನ್ನು ಶಿವಪಾದೋದಕದಿಂದ ಪರಿಶುದ್ಧಗೊಳಿಸಿ ಗಂಧಾಕ್ಷತೆಗಳಿಂದ ತನ್ನ ಇಷ್ಟಲಿಂಗವನ್ನು ಪೂಜಿಸುತ್ತಿರುವುದೇ ವೀರಶೈವನಿಗೆ ಮುಖ್ಯಧರ್ಮವಾಗಿದೆ. ಹಾಗಾದರೆ ಸೂತಕಗಳಿಂದ ಶರೀರವು ಅಪವಿತ್ರವಾಗಿರುವದು. ಇಂತಹ ಅಪವಿತ್ರತೆಯ ಕಾಲದಲ್ಲಿಯೂ ಲಿಂಗವನ್ನೂ ಲಿಂಗಪೂಜೆಯನ್ನೂ ಬಿಡಕೂಡದೆಂದು ವೀರಶೈವಸಿದ್ಧಾಂತಾನುಗುಣವಾಗಿ ಹೇಳುವುದಾದರೆ ಸೂತಕದಿಂದ ಶರೀರವು ಅಪವಿತ್ರವಾಗಿರುವಾಗ ಸೂತಕದ [illegible] ದೇವತಾರಾಧನೆಯೂ ಕೂಡದು ಎಂದು ಶಂಕೆ ಮಾಡಿದ್ದಾದರೆ ಅಶುಚಿಶರೀರದ ಸಂಬಂಧದಿಂದ ಲಿಂಗವು ಅಪವಿತ್ರವಾಗುವುದೆಂಬ ಅಜ್ಞಾನಿಗಳ [illegible] ಈ ಆಕ್ಷೇಪಗಳಿಗೆ ಸಂಕ್ಷೇಪವಾಗಿ ಹಿಂದೆ ಸಮಾಧಾನವು ಹೇಳಲ್ಪಟ್ಟಿರುವದು. ಮುಖ್ಯವಾಗಿ ಶೈವಸಿದ್ಧಾಂತಾನುಗುಣವಾಗಿ ಮುಕ್ತಿಗೋಸ್ಕರ ಲಿಂಗವನ್ನು ಧರಿಸಿದ ಪುರುಷನು ಯಾವಜ್ಜೀವ ಕರ್ತವ್ಯವೂ ನಿತ್ಯವೂ ಆದ ಲಿಂಗಧಾರಣ ಲಿಂಗಪೂಜಾದಿವಿಷಯದಲ್ಲಿ ತಾನು ವಹಿಸಿದ ದೀಕ್ಷಾಪ್ರಭಾವದಿಂದ ಲಿಂಗಪೂಜೆಯೆಂಬ ಮಹಾಯಜ್ಞವನ್ನು ಮಾಡುತ್ತಿರಲು ಮಧ್ಯದಲ್ಲಿ ಆಕಸ್ಮಾತಾ ಅಶೌಚಗಳು ಪ್ರಾಪ್ತವಾದರೂ ತಾನು ಸಂಕಲ್ಪಿಸಿ ಪ್ರಾರಂಭಿಸಿದ ಲಿಂಗಧಾರಣ ಲಿಂಗಪೂಜೆಗಳನ್ನು ಬಿಡದೆ ಈ ಮಹಾವ್ರತವನ್ನು ನಡೆಸುತ್ತಲಿರುವುದೆ ವೀರಶೈವನಿಗೆ ಪಂಚಸೂತಕಗಳಿಲ್ಲವೆಂಬ ವಚನಗಳ ಮುಖ್ಯಾರ್ಥವು.

ಗೋವಧೆಯು ವೀರಶೈವರೂ

ಗೋವಧೆಯನ್ನು ಮಾಡಬಹುದೆಂತಲೂ, ವೇದದಲ್ಲಿ ಗೋವಧೆಯು ಹೇಳಲ್ಪಟ್ಟಿದೆಯೆಂತಲೂ, ಚನ್ನಬಸವಸ್ವಾಮಿಯೆಂಬುವರು ಹೇಳುತ್ತಾರೆಂದು ಸಂಪದಭ್ಯುದಯದಲ್ಲಿ ಬರೆಯಲ್ಪಟ್ಟಿದೆ. ಚನ್ನಬಸವಸ್ವಾಮಿಯೆಂಬ ಹೆಸರಿಟ್ಟುಕೊಂಡಿರುವುದರಿಂದ ಇವರನ್ನು ಅನೇಕರು ವೀರಶೈವರೆಂದು ತಿಳಿದುಕೊಂಡಿರಬಹುದು. ಈ ಚನ್ನಬಸವಸ್ವಾಮಿಯೆಂಬ ಅಭಿಧಾನವನ್ನಿಟ್ಟುಕೊಂಡಿರುವ ಇವರು ಗೋವಧೆಯನ್ನು ಮಾಡಬಹುದು. ವೇದದಲ್ಲಿಯೂ ಗೋವಧೆಯು ಹೇಳಲ್ಪಟ್ಟಿರುವುದೆಂದು ಹೇಳುವದರಿಂದಲೇ ಇವರು ನಿಂದಿತವಾಗಿ ವೀರಶೈವರಲ್ಲವೆಂದು ಸ್ಪಷ್ಟವಾಗುತ್ತದೆ. ಅಪೇಯಪಾನವಾಗಲಿ, ಅಭಕ್ಷ್ಯಭಕ್ಷಣವಾಗಲಿ, ಅಗಮ್ಯಾಗಮನವಾಗಲಿ, ಗೋವಧೆಯಾಗಲಿ, ಪ್ರಾಣಿವಧೆಯಾಗಲಿ, ಬ್ರಾಹ್ಮಣವಧೆಯಾಗಲಿ ಲಿಂಗಾಂಗಿಯು ಸ್ವಪ್ನದಲ್ಲಿಯೂ ಸ್ಮರಿಸಕೂಡದೆಂದು ವೀರಶೈವಸಿದ್ಧಾಂತವು ಹೇಳುತ್ತಿರುವದು. ವೀರಶೈವನ ಶರೀರವು ಗೋವಿನಿಂದುಂಟಾದ ಕ್ಷೀರ, ದಧಿ, ಘೃತ, ಗೋಮಯ, ಗೋಮೂತ್ರ, ಗೋರೋಚನಗಳಿಂದಲೇ ಪವಿತ್ರಗೊಳಿಸಲ್ಪಡುವದು. ಇವುಗಳಿಂದಲೇ ಲಿಂಗಧಾರಣಯೋಗ್ಯತೆಯುಂಟಾಗಿ ಪೂಜಾಧಿಕಾರವನ್ನು ಹೊಂದುವನು. ಗೋಕ್ಷೀರಾದಿಗಳಿಂದಲೇ ಸಂಪೂರ್ಣಪ್ರಾಣಪೂರ್ವಕವಾಗಿ ಶಿವಲಿಂಗಾಭಿಷೇಕವನ್ನು ಮಾಡುವನು. ಮತ್ತು ವೀರಶೈವನು ಗೋವಿನಿಂದುಂಟಾದ ಭಸ್ಮವು ಮೋಕ್ಷದಾಯಕವೆಂದು ಸರ್ವಕಾಲದಲ್ಲಿಯೂ ಧರಿಸುವನು. ವೀರಶೈವರು ಗೋವನ್ನು ದೇವತಾಸ್ವರೂಪವೆಂದು ಪೂಜಿಸುತ್ತಾರೆ. ಗೋವನ್ನು ವಿಶೇಷಕಾರ್ಯಗಳಲ್ಲಿ ದಾನಮಾಡುತ್ತಾರೆ. ವೀರಶೈವಮತಸ್ಥರು ಪ್ರಾಣಿಹಿಂಸೆಯನ್ನು ತ್ರಿಕರಣದಿಂದಲೂ ಸ್ಮರಿಸಕೂಡದೆಂದು ಸಿದ್ಧಾಂತವಿರುವಲ್ಲಿ ಪವಿತ್ರವೂ, ದೇವತಾಸ್ವರೂಪವೂ, ಧರ್ಮದ ರೂಪವೂ, ಜಗತ್ಪೋಷಕವೂ ಆದ ಗೋವಿನವಧೆಯಲ್ಲಿ ವೀರಶೈವರು ಎಷ್ಟರಮಟ್ಟಿಗೆ ತಿಳಿದಿರಬಹುದೆಂದು ವಾಚಕರಿಗೆ ವೇದ್ಯವಾಗುವದು.

ಪ್ರಾಣಿವಧೆಯನ್ನು ಮಾಡುವವರಲ್ಲಿಯೂ, ಅದಕ್ಕೆ ಪ್ರೋತ್ಸಾಹಿಸುತ್ತಿರುವವರಲ್ಲಿಯೂ, ಸಂಭಾಷಣ, ಒಡನಾಟ ಸಂದರ್ಶನಾದಿಗಳ ಮಾಡಕೂಡದೆಂದು ವೀರಶೈವಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಲ್ಪಡುವುದರಿಂದ ಲಿಂಗಾಂಗಿಗಳಾದವರಲ್ಲಿ ಕೋಪವುಳ್ಳವರಲ್ಲಿಯೂ ಈ ವಿಷಯಪ್ರತಿಪಾದನವಿವೇಚನೆಯು ಬಳಕೆಯಲ್ಲಿರುತ್ತದೆ. ಪ್ರಕೃತದಲ್ಲಿ ಚನ್ನಬಸವಸ್ವಾಮಿಯೆಂದು ನಾಮಾನುಕರಣವನ್ನು ಮಾಡಿಕೊಂಡು ಪಾಪಹೇತುವಾದ ಗೋವಧೆಯಲ್ಲಿ ಪ್ರ ಯನ್ನುಂಟುಮಾಡುವ ಪ್ರರೋಚಕಗಳಾದ ವಾಕ್ಯಗಳನ್ನು ಹೇಳಿಕೊಂಡು ಜನಗಳಿಗೆ ಭ್ರಾಂತಿ ಟುಮಾಡುವ ಈತನನ್ನು ವೀರಶೈವನೆಂದು ಯಾ ಯಕೂಡದು. ಈತನ ಶಾಸ್ತ್ರವಿರುದ್ಧವಾದ ಮಾ ಲೇ ವೀರಶೈವನಲ್ಲವೆಂದು ಸರ್ವರಿಗೂ ಸ್ಪಷ್ಟವಾಗು ಈತನು ಇಟ್ಟುಕೊಂಡ ಚನ್ನಬಸವನೆಂಬ ನಾಮ ವೀರಶೈವಮತಕ್ಕೂ ಏನೂ ಸಂಬಂಧವಿಲ್ಲವು. ಲ್ಲಿ ಯಾರುಬೇಕಾದರೂ ಯಾವಹೆಸರನ್ನಾದರೂ ಕೊಳ್ಳಬಹುದು. ಅಷ್ಟುಮಾತ್ರದಿಂದ ವೈದಿ ಲಿಂಗಾಂಗಿಧರ್ಮಕ್ಕೆ ಸೇರಿದವನೆಂದು ಹೇಳಲು ವಿಲ್ಲವು. ವೀರಶೈವಮತಕ್ಕೂ, ಪ್ರಾಣಿವಧೆಗೂ ಸರ್ವಸದಷ್ಟು ಭೇದವಿರುವದು. "ವೇದಹಿಂಸಾ ಸಾ" ಎಂದು ವೇದೋಕ್ತವಾದ ಹಿಂಸೆಯು ದೋಷಕ್ಕೆ ಸೇರದೆ ಫಲದಾಯಕವಾಗಿದ್ದರೂ ಹಿಂಸೆಯನ್ನೂ ಸಹ ಮಾಡದೆ ತತ್ಸಾಧಕವಾದ ಕ ನ್ನೂ ಸಹ ಮಾಡದೆ ಕೇವಲ ಭಗವತ್ಪ್ರೀತಿಕ ಸತ್ಕರ್ಮಾಚರಣೆಯನ್ನು ಮಾತ್ರ ಮಾಡುವ ವೀರಶೈವರಲ್ಲಿ ಗೋವಧೆಯು ಕೇವಲ ಶಶಶೃಂಗದಂತೆ ಅತ್ಯಂತ ಸುತರಾಂ ಅಪ್ರಸಿದ್ಧವಾದುದರಿಂ ಚನ್ನಬಸವಸ್ವಾಮಿಯೆಂಬುವನನ್ನು ವೀರಶೈವ ಯಾರೂ ಭ್ರಮಿಸಕೂಡದು.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ರಜತಮಹೋ ಬನಸ ಕಾರಾಗೃಹದಲ್ಲಿರುವ ಅನೇಕರಿಗೆ ಬಿಡುಗ ಮಾಡಲ್ಪಟ್ಟಿತು.

ರಾಜಧಾನಿಯಲ್ಲಿ ರಜತೋತ್ಸವದ ಜ್ಞಾಪಕ ವಾಗಿ ಪೇಟೆಗಳ ಪಾರ್ಕಿನಲ್ಲಿ ಮ್ಯುನಿಸಿಪಾಲಿಟಿಯ ಅನೇಕ ವೃಕ್ಷಗಳನ್ನು ಊರುತ್ತಾರೆ.

ನಮ್ಮ ಶ್ರೀಮನ್ಮಹಾರಾಜರವರಿಂದ ಜ್ಯೂಬಿ ಮಹೋತ್ಸವದ ಜ್ಞಾಪಕಾರ್ಥವಾಗಿ ಅರಮನೆ ಅ ಗಳಿಗೆಲ್ಲಾ ಒಂದು ತಿಂಗಳ ವೇತನವು ಉಚಿತವ ಕೊಡಲ್ಪಟ್ಟಿತು.

ಪಂಡಿತ ಮೋತೀಲಾಲ್ ನೆಹರೂರವರು 8 ನೇ ತಾರೀಖಿನ ದಿವಸ ರಾಜಧಾನಿಗೆ ಆಗಮಿ ನೋಡಬೇಕಾದದ್ದನ್ನು ನೋಡಿ ಮಾರನೇ ದಿವಸ ಳೂರಿಗೆ ಪ್ರಯಾಣಮಾಡಿದರು.

ರಜತೋತ್ಸವದ ಸೂಚನಾರ್ಥವಾಗಿ ರಾಜಧ ಯಲ್ಲಿ ಪಶುಪಾಲಕಸಂಘದವರು ಪಿಂಜ್ರಾಪೋಲು ರಣದಲ್ಲಿ ಶ್ರೀಮದ್ಯುವರಾಜರವರ ಅಧ್ಯಕ್ಷತೆಯ ಸಭೆಸೇರಿ ಗಿಡಗಳನ್ನು ಹಾಕಿದರು.

ರಜತೋತ್ಸವದ ವಿಷಯದಲ್ಲಿ ಅನೇಕರು ನಮಗೆ ಲೇಖನಗಳನ್ನು ಕಳಿಸಿರುತ್ತಾರೆ. ಸ್ಥಳಸಂಕೋ ದಿಂದ ಪ್ರಕಟಿಸುವದಕ್ಕೆ ಅವಕಾಶವಾಗಲಿಲ್ಲವಾದ ರಣ ಲೇಖಕರು ಬೇಸರಗೊಳ್ಳಬಾರದೆಂದು ಇಚ್ಛಿ ತ್ತೇವೆ.

ಶ್ರೀಮನ್ಮಹಾರಾಜರವರ ಸಂತೋಷ ಸೂಚ ಕವಾಗಿ ಕಲ್ಕತ್ತಾ, ಮುಂಬಯಿ ಮುಂತಾದ ಭ ಹಿಂದದ ಅನೇಕ ಭಾಗಗಳಿಂದಲೂ ಅಂದರೆ ಮ ಕಾದ ಸಂಸ್ಥಾನ ಅನೇಕ ನಗರಗಳಿಂದಲೂ ರ ಮಹೋತ್ಸವದ ದಿವಸ ಅನೇಕ ತಂತಿ ವರ್ತಮಾನಗಳು ಸನ್ನಿಧಾನಕ್ಕೆ ಬಂದಿದ್ದವು. ಮದ್ದಗಿರಿ, ಸಿರಿ ಚಿಕ್ಕನಾಯಕನಹಳ್ಳಿ, ಹಾಸನ ಮುಂತಾದ ದೇಶ ಸ್ಥಾನಗಳಿಂದ ಅಂದಾಜು 500-600 ವರಿವಿಗೂ ಹೆ ವರ್ತಮಾನಗಳೂ ಸಹ ಬಂದಿದ್ದವು.

ಕಳೆದ ೯ ನೇ ತಾರೀಖಿನ ದಿವಸ ಬೆಂಗಳೂರು ನಗರದಲ್ಲಿ ಶ್ರೀಮನ್ಮಹಾರಾಜರವರ ಜ್ಞಾಪಕಾರ್ಥವಾ ರಾಜಭಕ್ತಿ ಸಂಘದ ಧ್ವಜಸಂಘದವರು ಪ್ರಣಾಮ ಸಹಿತವಾಗಿ ಅಲಂಕರಿಸಲ್ಪಟ್ಟ ಮುಖ್ಯಮುಖ್ಯ ಬೀದಿಗಳಲ್ಲಿ [illegible] ಮಾಡುತ್ತಾ ಹೊಸ ನೂತ ಚಿತ್ರ ಪಟ್ಟವಾದ ಪೀಠದ ಮೇಲೆ ಅಲಂಕರಿಸಲ್ಪಟ್ಟ ಶ್ರೀಮನ್ಮಹಾರಾಜರವರ ಭಾವಚಿತ್ರದ ದರ್ಶನವ

ವಂದನಾದಿಗಳನ್ನು ಮಾಡಿದರು. ಆ ದಿವಸ ದಲ್ಲಿ ವಿಶೇಷವಾದ ಮಹೋತ್ಸವಗಳು ನಡೆ

ಧಾನಿಯಲ್ಲಿ ಸುಪ್ರಸಿದ್ಧರೂ ವಯೋವೃದ್ಧರೂ ವೃದ್ಧರೂ ಲೋಕಹಿತೈಷಿಗಳೂ ಆದ ಮ|| ರಾ|| ಕೃಷ್ಣಯ್ಯನವರ 83 ವರ್ಷದ ವರ್ಧಂತಿಯು ನ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಡು ಟೌನ್‌ಹಾಲಿನಲ್ಲಿ ಸಭೆಸೇರುವುದು. ಮ|| ರಾ|| ಕೃಷ್ಣಯ್ಯನವರಿಗೆ ಸಭಿಕರಿಂದ ವಿಜ್ಞಾಪನಾ ತ್ರ ಕೊಡಲ್ಪಡುವುದು. ಸದರಿಯವರ ಲೋಕ ಧುರಂಧರತೆಯನ್ನು ಕೊಂಡಾಡುವರು. ಅರಮನೆ ಂಸದ ಸಂಗೀತ ಮುಂತಾದ ವಿನೋದವು ನಡೆ ವು.

ದೇ ತಿಂಗಳು 9 ನೇ ತಾರೀಖಿನ ದಿವಸ ಜಗನ್ಮೋ ಪ್ರಾಸಾದದಲ್ಲಿ ರಾಜಧಾನಿಯ ಹೈಸ್ಕೂಲು ವಿದ್ಯಾ ರ ಸಭೆಯು ನಡೆಯಿತು. ಶ್ರೀಮದ್ಯುವರಾಜರ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶ್ರೀ ಜಯ ರಾಜ ಒಡೆಯರವರೂ ದಯಮಾಡಿಸಿದ್ದರು. ರ್ ಸಾಹೇಬರವರೂ ಡಾ. ಸೀಲ್‌ರವರೂ ರಾ|| ಎಸ್. ಎಸ್. ಸುಬ್ಬರಾಯರವರೂ ಸರ್ ಪುಟ್ಟಣ್ಣಶೆಟ್ರು ಮುಂತಾದ ಪ್ರಮುಖರೂ ಸಿದ್ದರು. ವಿದ್ಯಾರ್ಥಿಗಳು ಶ್ರೀಮನ್ಮಹಾರಾಜ ಗೂ ಶ್ರೀಮದ್ಯುವರಾಜರವರಿಗೂ ವಿಜ್ಞಾಪನ ಕೆಯನ್ನೊಪ್ಪಿಸಿದರು. ಶ್ರೀಮದ್ಯುವರಾಜರವರು ರವಾದೊಂದು ಭಾಷಣ ಮಾಡಿದರು. ಸರ್ ಪುಟ್ಟಣ್ಣಶೆಟ್ರು ವಿದ್ಯಾರ್ಥಿಗಳಿಗೆ ಸದ್ಬೋಧರೂ ವಾದೊಂದು ಉಪನ್ಯಾಸವನ್ನು ಮಾಡಿದರು.

ವರ್ತಮಾನಸಂಗ್ರಹ.

ಲಸ್ಟೈನಿನಲ್ಲಿ ಭೂಕಂಪದಿಂದ ಅನೇಕ ಜನಗಳು ಹೊಂದಿರುವರು.

ಈ ತಿಂಗಳ ತಾ|| 6 ರಲ್ಲಿ ಜಪಾನದೇಶದಲ್ಲಿ ದೊಡ್ಡ ಕಂಪವಾಗಿ ಬಹಳ ಹಾನಿಯಾಗಿರುತ್ತದೆ.

ಹಿಂದುಸ್ಥಾನದ ಪೋಸ್ಟಲ್ ಸೇವಿಂಗ್ಸ್ ಬ್ಯಾಂಕುಗ ಒಟ್ಟು ೨೬ ಕೋಟಿ ೫೫ ಲಕ್ಷ ರೂಪಾಯಿಗಳಿ ವೆಯಂತೆ!

ಆಸ್ಟ್ರೇಲಿಯಸಮುದ್ರದಲ್ಲಿ ಒಬ್ಬ ಶಿಕಾರಿಮಾಡುವವ 22 ಅಡಿ ಉದ್ದವಾದ ಒಂದು ಹೆಬ್ಬಾವನ್ನು ಕೊಂದಿ ವನಂತೆ.

ಇಂಡಿಯಾದೇಶದಲ್ಲಿ ಪ್ರತಿವರ್ಷವೂ 45 ಲಕ್ಷ ದನ ನ್ನು ಕೊಂದು ಅವುಗಳ ಮಾಂಸವನ್ನು ಪರದೇಶಕ್ಕೆ ಸುವರು.

ಮದ್ರಾಸಿನ ಪ್ರಜೆಗಳೆಲ್ಲರೂ ಸೇರಿ ಅಲ್ಲಿರುವ ಮಂ ಗಳಲ್ಲಿ ನಮಗೆ ವಿಶ್ವಾಸವಿಲ್ಲವೆಂದು ನಿರ್ಧಾರ ಮಾಡಿ ಂಡಿದ್ದಾರಂತೆ.

ಇದೇ ತಿಂಗಳು ತಾ|| 12 ರಲ್ಲಿ ಕಲ್ಲಿಕೋಟೆಯಲ್ಲಿ ಳೆಯ ಏಟಿನಿಂದ ಒಂದು ಹಡಗು ಮುಳುಗಿಹೋ ದರಿಂದ ಅಪಾರವಾದ ನಷ್ಟವುಂಟಾಗಿದೆ.

ಕಲ್ಕತ್ತಾ ಮುಂಬೈಗಳಲ್ಲಿರುವ ಮೈಸೂರು ದೇಶೀ ರು ಶ್ರೀ ಮಹಾಪ್ರಭುಗಳವರ ರಜತೋತ್ಸವವನ್ನು ಶೇಷವಾಗಿ ವಿಜೃಂಭಣೆಯಿಂದ ನಡೆಸಿದರು.

ವಿಶ್ರಾಂತಿಸೌಖ್ಯವನ್ನು ಹೊಂದಿದ ಚೀಫ್ ಜಡ್ಜರಾದ ಮರ್‌ರವರಿಗೆ ಮೈಸೂರುಸಂಸ್ಥಾನದ ಮಂತ್ರಿವರ್ಯ ರು ಕಳೆದ ತಾ|| 17 ರಲ್ಲಿ ಆತಿಥ್ಯವನ್ನು ಮಾಡಿದರು.

ಬರೋಡಾ ಮಹಾರಾಜರವರು ಜಲಪ್ರಳಯದಿಂದ ನಷ್ಟಹೊಂದಿದ ಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಫ್ರಾನ್ಸ್ ದೇಶದಿಂದ ತಂತಿಯನ್ನು ಕೊಟ್ಟಿರುತ್ತಾರೆ

ಸಿಲೋನಿನಲ್ಲಿ ಒಂದು ಆನೆಯಹಲ್ಲಿನಲ್ಲಿ ಮುತ್ತು ಕ್ಕಿರುವುದಂತೆ. ಇದರಿಂದ ಆನೆಯಹಲ್ಲು, ಕುಂಭಸ್ಥಲಗ ಲ್ಲಿ ಮುತ್ತು ಇರುವುವೆಂಬ ಶಾಸ್ತ್ರವು ನಿಜವಾಯಿತು.

ಗುಜರಾತದಲ್ಲಿ ಮಳೆಯಿಂದ ಮನೆಮಠಗಳನ್ನೆಲ್ಲ ಕಳೆ ದುಕೊಂಡು ನಿರಾಶ್ರಿತರಾದವರ ಸಹಾಯಾರ್ಥವಾಗಿ ರವರಿಗೂ 8 ಲಕ್ಷ ರೂಪಾಯಿಗಳವರೆಗೂ ಫಂಡು ಡಿದೆ.

ಆತ್ಮಶಕ್ತಿ ಪತ್ರಿಕೆಯ ಸಂಪಾದಕರಾದ ಗೋಪಾಲ ಲಾಲ ಸೇನ್ಯಾಲ ಎಂಬವರು ರಾಜದ್ರೋಹದ ಬಗ್ಗೆ ಲೇಖನವನ್ನು ಬರೆದಿದ್ದರಿಂದ ೬ ತಿಂಗಳುಗಳ ಶಿಕ್ಷೆಗೆ ಗುರಿಮಾಡಲ್ಪಟ್ಟರು.

ಮುಂಬೈ ಸರ್ಕಾರದವರು ಗುಜರಾತದೇಶದಲ್ಲಿ ಹುಚ್ಚುಹೊಳೆಯಿಂದ ದರಿದ್ರರಾಗಿರುವ ಜನಗಳ ಸಹಾಯಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಂಜೂರು ಮಾಡಿದ್ದಾರೆ.

ಭಯ, ಆಶ್ಚರ್ಯ, ಶಾಂತಿ ಟೀ, ಮೊದಲಾದವುಗಳಿಂದ ಶರೀರದಲ್ಲುಂಟಾಗುವ ವ್ಯತ್ಯಾಸವನ್ನು ಕಂಡುಹಿಡಿಯುವದಕ್ಕಾಗಿ ಜರ್ಮನಿಯವರು ಒಂದು ನೂತನ ಯಂತ್ರವನ್ನು ತಯಾರುಮಾಡಿದ್ದಾರೆ.

ಹೈದರಾಬಾದ ಸಂಸ್ಥಾನಕ್ಕೆ ಸೇರಿದ ಒರಂಗಲ್ ಎಂಬ ಊರಲ್ಲಿ ಒಬ್ಬ ಹೆಂಗಸು ನಾಲ್ಕು ಮಕ್ಕಳನ್ನು ಹೆತ್ತಿರುವಳು. ಮಕ್ಕಳೆಲ್ಲವೂ ಹುಟ್ಟಿದ ಸ್ವಲ್ಪಹೊತ್ತಿನಲ್ಲಿಯೇ ಮೃತಿಹೊಂದಿದವೆಂದು ಕೇಳುತ್ತೇವೆ.

ಗುಜರಾಥ ದೇಶದಲ್ಲಿ ಮಳೆಯ ಅನಾಹುತಿಯಿಂದ ಒಟ್ಟು ೬೦ ಸಾವಿರ ಮನೆಗಳು ಬಿದ್ದುಹೋದವೂ ಒಂದು ಕೋಟಿ ರೂಪಾಯಿಗಳ ವರೆಗೆ ನಷ್ಟವಾಗಿರುವದೆಂದೂ ಅಲ್ಲಿಯ ಕಮೀಶನರ್ ಸಾಹೇಬರವರು ಪ್ರಸಿದ್ಧ ಮಾಡಿದ್ದಾರೆ

ಗ್ರೀಸ್ ದೇಶದ ಮಾಜಿ ಮಹಾರಾಜರವರು ಕೀರ್ತಿಯಿಂದ ಕೆಳಗೆ ಇಳಿಯುತ್ತಿರುವಾಗ ಒಬ್ಬ ತರುಣನು ಅವರನ್ನು ಗುಂಡಿನಿಂದ ಸುಡಲು ಯತ್ನ ಮಾಡಿದನು. ಕಾರ್ಯವು ಸಫಲವಾಗಲಿಲ್ಲ. ಅವನನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆ.

ಬಳ್ಳಾರಿ ಜಿಲ್ಲಾ ಹೊಸಪೇಟೆಯಲ್ಲಿ ಒಂದು ಆಕಳು ಎರಡು ಮುಖಗಳುಳ್ಳ ಒಂದು ಕರುವನ್ನು ಹಾಕಿರುವದಂತೆ! ಕರುವು ಕ್ಷಣಕಾಲ ಜೀವದಿಂದಿದ್ದು ಆ ಮೇಲೆ ಮೃತಿಯನ್ನು ಹೊಂದಿತೆಂದು ವೈದ್ಯ ಪಂಡಿತ ವೇ|| ಸಿದ್ಧಯ್ಯನವರು ತಿಳುಹಿಸುತ್ತಾರೆ.

ಇರಾಣದ ರಾಜಮನೆತನದಲ್ಲಿ ಜನಿಸಿ ಅತ್ಯಂತ ಸುಶಿಕ್ಷಿತಳೆನಿಸಿಕೊಂಡ ಪರವಿ ಎಂಬ ಮುಸಲಮಾನ ಸ್ತ್ರೀಯಳು ನಾಥುಲಕ್ಷ್ಮಣಸಂದರಿಗೆ ಮರುಳಾಗಿ ಅವರನ್ನು ಕೂಡಿಕೊಂಡು ಹಿಂದೂ ಧರ್ಮದ ಮಹತ್ವದ ಬಗ್ಗೆ ಎಷ್ಟೋ ಕವಿತೆಗಳನ್ನು ಮಾಡಿರುವಳಂತೆ!

ಮಿದನಾಪುರ ಎಂಬಲ್ಲಿ ಅವಿನಾಶಶೇಠಿ ಎಂಬವನ ಮನೆಗೆ ದರವಡೆಖೋರರು ಬರಲಾಗಿ ಅವನ ಹೆಂಡತಿಯು ಅತ್ಯಂತ ಧೈರ್ಯದಿಂದ ಖಡ್ಗವನ್ನು ತೆಗೆದುಕೊಂಡು ಅವರೊಡನೆ ಹೊಡೆದಾಡಲು ಪ್ರಾರಂಭಿಸಲಾಗಿ ದರವಡೆಖೋರರು ಅಂಜಿಓಡಿಹೋದರು.

ಡಾಕ್ಟರ್ ರವೀಂದ್ರನಾಥ ಠಾಗೋರರ ಭಗಿನಿಯರು ಕಾನಡಾ ಪ್ರಾಂತಾಂತರ್ಗತ ಟೋರೊಂಟೊ ಎಂಬಲ್ಲಿ ವ್ಯಾಖ್ಯಾನವನ್ನು ಮಾಡುವಾಗ್ಗೆ ಹಿಂದೂ ವಾಸಿಗಳು ಸ್ತ್ರೀಯರನ್ನು ಗುಲಾಮರಂತೆ ನಡೆಯಿಸಿಕೊಳ್ಳುತ್ತಿರುವರು. ಇದು ಕೇವಲ ಅನ್ಯಾಯವಾದದ್ದೆಂದು ಹೇಳಿದರಂತೆ!

ಕಲಕತ್ತಾಪಟ್ಟಣದಲ್ಲಿ ಕೋಟಾನಾಣ್ಯಗಳನ್ನು ಮಾಡುವ ಹೇತುವಿನಿಂದ ಕೆಲವರು ಒಂದು ಕಾರ್ಖಾನೆಯನ್ನು ಏರ್ಪಾಟು ಮಾಡಿಕೊಂಡಿದ್ದರು. ೨ ಲಕ್ಷ ಕೂಟಾ ತಿಬೇಟದೇಶದನಾಣ್ಯಗಳು ದೊರೆತಿರುವವಂತೆ! ಈ ಕಾರ್ಯದಲ್ಲಿ ಪ್ರವೃತ್ತರಾದ ೫ ಜನ ನೇಪಾಳಿಯವರನ್ನೂ ಒಬ್ಬ ಬಂಗಾಲಿಯನ್ನೂ ಹಿಡಿದಿರುತ್ತಾರೆ.

ಕಾನಸ್ಟಾಂಟ್ ನ್ಯೂಪಲ್ ಪಟ್ಟಣದಲ್ಲಿ ಜಾರಾ ಆಗಾ ಎಂಬ ಹೆಸರಿನ ಒಬ್ಬ ಮುದುಕನಿರುವನು. ಇವನು ತನ್ನ ೧೬೦ನೆಯ ವರ್ಷದ ವರ್ಧಂತಿಯನ್ನು ಮಾಡಿದನಂತೆ! ಇವನು ೧೦ ಸಾರೆ ಮದುವೆಯಾಗಿದ್ದಾನೆ. ಈಗಿರುವ ಅವನ ಹೆಂಡತಿಯು ಅವನಿಗಿಂತಲೂ ೯೦ ವರ್ಷ ಚಿಕ್ಕವಳಂತೆ! ಇವನು ಸದ್ಯ ಕಚೇರಿಯಲ್ಲಿ ಕಾರಕೂನನಾಗಿದ್ದಾನೆ. ಇಂದಿಗೂ ಅವನು ಉತ್ತಮ ರೀತಿಯಾಗಿ ಮೋಟಾರ್ ನಡೆಯಿಸುತ್ತಿರುವನಂತೆ! ಸದ್ಯ ಇವನಿಗೆ ೨೧ ಜನ ಮಕ್ಕಳು ಇರುವರಂತೆ! ಸೃಷ್ಟಿಯು ಅಗಾಧವಾದದ್ದು.

ಸ್ವೀಕಾರ.

ಶ್ರೀ ಷ|| ಬ್ರ|| ಕೊಣ್ಣೂರು ಬೃಹನ್ಮಠದ ಪಟ್ಟದಸ್ವಾಮಿಗಳವರು ಈ ಪತ್ರಿಕೆಯ ಪೋಷಣಕ್ಕಾಗಿ ಅತ್ಯಾದರದಿಂದ 25 ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಹಮ್ಮಿಗಿ ಗ್ರಾಮದಲ್ಲಿ ನಂದೀಶ್ವರನ ಪ್ರತಿಷ್ಠಾ ಸಮಯದಲ್ಲಿ ಪ್ರತಿಷ್ಠಾಮಾಡಿಸಿದವರ ಕಡೆಯಿಂದ ಗುರುಭಕ್ತಕೇಸರಿ ಶಾಂತಪ್ಪನವರು 10 ರೂಪಾಯಿಗಳನ್ನು ಕಳುಹಿಸಿದ್ದಾರೆ.

ನಾಗರಕಟ್ಟಿಗ್ರಾಮದ-ಮ|| ರಾ|| ಸಾಹುಕಾರ ವೀರಭದ್ರಪ್ಪನವರು ಪತ್ರಿಕೆಯ ಪೋಷಣಕ್ಕಾಗಿ 5 ರೂಪಾಯಿಗಳನ್ನು ಸಮರ್ಪಿಸಿದ್ದಾರೆ.

ಕಂಚೀಕೇರಿ ಗ್ರಾಮದ ಮ|| ರಾ|| ಶ್ಯಾನುಭೋಗರ ಚನ್ನಬಸಪ್ಪನವರ ತಮ್ಮಂದಿರು ಮೃತಪಟ್ಟದ್ದರಿಂದ ಅವರ ಆತ್ಮಶಾಂತ್ಯರ್ಥವಾಗಿ ವೇ|| ಗುರುಪಾದದೇವರ ಮಠದ ನೀಲಕಂಠಶಾಸ್ತ್ರಿಗಳು 5 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಹೊಳೆಆಲೂರು ಗ್ರಾಮದ ಮ|| ರಾ|| ಪೋಲೀಸ್ ಪಾಟೀಲ ಚಂದ್ರಶೇಖರಗೌಡರ ದೀಕ್ಷೆಯಲ್ಲಿ 5 ರೂಪಾಯಿಗಳನ್ನು, ಮ|| ರಾ|| ದರ್ಜಿ ಸಣ್ಣಬಸಪ್ಪನವರ ದೀಕ್ಷೆಯಲ್ಲಿ 2 ರೂಪಾಯಿಗಳನ್ನು, ಮ|| ರಾ|| ಕಲ್ಯಾದಿಗುಡಿಸಿದ್ದಪ್ಪನವರ ದೀಕ್ಷೆಯಲ್ಲಿ 2 ರೂಪಾಯಿಗಳನ್ನು, ಶ್ರೀಮತಿ ಯಾವಗಲ್ಲು ಅಪ್ಪಣ್ಣನವರ ದೀಕ್ಷೆಯಲ್ಲಿ 2 ರೂಪಾಯಿಗಳನ್ನು, ಮ|| ರಾ|| ಹೂಗಾರ ಲಿಂಗಪ್ಪನವರ ಪುತ್ರನ ಲಿಂಗಧಾರಣ ಕಾಲದಲ್ಲಿ 2 ರೂಪಾಯಿಗಳನ್ನು, ಶ್ರೀ ಹಾಲಕೊಪ್ಪ ಬೃಹನ್ಮಠದ ಪಟ್ಟದಸ್ವಾಮಿಗಳು, ಶ್ರೀ ನರೇಗಲ್ಲು ಬೃಹನ್ಮಠದ ಚರಮೂರ್ತಿ ಸ್ವಾಮಿಗಳು, ವೇ|| ಹೊಳೆ ಆಲೂರು ಭಿಕ್ಷಾವೃತ್ತಿ ಮಠದ ರೇವಣಯ್ಯನವರು ತೆಗೆಯಿಸಿ ಕಳುಹಿಸಿದ್ದಾರೆ.

ತೀರ್ಥಹಳ್ಳಿ ಭಂಡಾರದ ಗುರುಶಾಂತಪ್ಪನವರ ವರ್ಷಾಂತ್ಯದ ಸಮಾರಾಧನೆಯ ಸಮಯದಲ್ಲಿ ದಾಸನಗದ್ದೆ ವೇ|| ಕೊಟ್ರಯ್ಯನವರು 2 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಈ ಸಮಸ್ತ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ. ಸಂ.——

ಸ್ಕೂಲ್‌ಮಾಸ್ತರುಗಳಿಗೆ ವಿನಂತಿ

ಉಪಾಧ್ಯಾಯರುಗಳೇ ನಾನು ಕೆಲವುದಿವಸಗಳ ಹಿಂದೆ ಕೋಗಳಿಗ್ರಾಮಕ್ಕೆ ಶ್ರೀ ಜಗದ್ಗುರು ಕೇದಾರ ಮಹಾಸ್ವಾಮಿಗಳ ದರ್ಶನಾರ್ಥವಾಗಿ ಹೋಗಿದ್ದೆನು. ಆ ಕಾಲಕ್ಕೆ ಕೋಗಳಿ ಗರ್ಲ್ಸ್ ಸ್ಕೂಲನ್ನು ನೋಡಿ ಅತಿಶಯವಾದ ಸಂತೋಷವುಂಟಾಯಿತು. ಸದರಿ ಗರ್ಲ್ಸ್ ಸ್ಕೂಲ್ ಹೆಡ್ಮಾಸ್ತರ ಬಸಯ್ಯನವರು ಪಂಚಾಚಾರ್ಯ ಫಂಡು ಎಂಬ ಹೆಸರಿನಿಂದ ಫಂಡು ಸ್ಥಾಪನೆಮಾಡಿ ಆ ಸ್ಕೂಲಿನಲ್ಲಿರತಕ್ಕ ಬಾಲಿಕೆಯರಿಗೆಲ್ಲಾ ಆ ಹಣದಿಂದಲೆ ಕಸೂತಿ ವಗೈರೆ ಕಲಸಗಳಿಗೂ ಸಹಾಯಮಾಡುವುದಲ್ಲದೆ ಬಾಲಿಕೆಯರನ್ನು ಅತ್ಯಂತ ಗುರುಭಕ್ತಿಪರಾಯಣರನ್ನಾಗಿ ಮಾಡಿರುತ್ತಾರೆ. ಅವರು ಸ್ಥಾಪಿಸಿರುವ ಫಂಡಿಗೆ ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳು ಹಣ ಸಹಾಯಮಾಡಿರುತ್ತಾರೆ. ಹಾಗೂ ದೊಡ್ಡದೊಡ್ಡ ಪದವೀಧರರೂ ಹಣಸಹಾಯವನ್ನು ಮಾಡಿರುತ್ತಾರೆ.

ನೀವಾದರೂ ಸದರಿ ಹೆಡ್ಮಾಸ್ತರ್ ಬಸವಯ್ಯನವರಂತೆ ನಿಮ್ಮ ಬಾಲಿಕೆಯರನ್ನು ಗುರುಭಕ್ತಿಧುರಂಧರನ್ನಾಗಿ ಮಾಡಬೇಕು. ಯಾಕೆಂದರೆ ಮುಂದೆ ಅವರಿಂದ ಉತ್ಪನ್ನರಾದ ಮಕ್ಕಳುಗಳಿಗೆಲ್ಲಾ ಅವರೇ ಕಾರಣರಾಗುತ್ತಾರೆ. ಮೊದಲು ಬಾಲಿಕೆಯರನ್ನು ಗುರುಭಕ್ತಿಯಲ್ಲಿ ಆಸಕ್ತಿಪೂರ್ವಕರನ್ನಾಗಿ ಮಾಡಿದ್ದಾದರೆ ಮುಂದೆ ಅವರು ತಮ್ಮ ಮಕ್ಕಳುಗಳನ್ನೂ ಕೂಡ ಗುರುಭಕ್ತಿಯುಳ್ಳವರನ್ನಾಗಿ ಮಾಡುವದಲ್ಲದೆ ಸನ್ಮಾರ್ಗಿಗಳನ್ನಾಗಿ ಮಾಡುತ್ತಾರೆ. ಆದಪ್ರಯುಕ್ತ ಸದರಿ ಹೆಡ್ಮಾಸ್ತರ ಬಸವಯ್ಯನವರಂತೆ ನೀವುಗಳಾದರೂ ನಿಮ್ಮ ಸ್ಕೂಲಿನಲ್ಲಿರತಕ್ಕ ಬಾಲಿಕೆಯರನ್ನೆಲ್ಲಾ ಗುರುಭಕ್ತಿನಿರತರನ್ನಾಗಿ ಮಾಡಬೇಕೆಂದು ನನ್ನ ಸವಿನಯವಿನಂತಿ.

ಗುರುಪಾದದೇವರಮಠದ ಕೊಟ್ರಬಸಯ್ಯ
ಹರಸನಹಳ್ಳಿ.

ರಜತಮಹೋತ್ಸವ

ಸುಗ್ಗನಹಳ್ಳಿ ಕ್ಲೋಸ್‌ಪೇಟೆ ತಾ||

ನಮ್ಮನ್ನಾಳುವ ಮಹಾಸ್ವಾಮಿಯವರ ರಜತಮಹೋತ್ಸವದ ನಿಮಿತ್ತ ತಾ ೪-೬-1927 ರಲ್ಲಿ ಮಿಡ್ಲ್, ಪ್ರೈಮರಿ, ಬಾಲಕ ಮತ್ತು ಬಾಲಕಿಯರ ಪಾಠಶಾಲೆಗಳ ಉಪಾಧ್ಯಾಯರುಗಳೂ, ಎಡ್ವರ್ಡ್ ವಿದ್ಯಾರ್ಥಿಯರುಗಳೂ ಮತ್ತು ಗ್ರಾಮಾಧಿಕಾರಿಗಳಾದಿಯಾಗಿ ಪ್ರಮುಖಜನರೂ ಮಿಡ್ಲ್ ಸ್ಕೂಲಿನ ಆವರಣದಲ್ಲಿ ಮಹಾಸ್ವಾಮಿಗಳಿಗೆ ಸೇರಿದ್ದರು. ಪಾಠಶಾಲೆಗಳು ಮತ್ತು ದೇವಸ್ಥಾನಗಳು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದುವು. ಸರ್ಕಾರಿ ಕಾರ್ಯಕ್ರಮವನ್ನನುಸರಿಸಿ ಪ್ರಾತಃಕಾಲ 8 ಗಂಟೆಗೆ ದೇವಸ್ಥಾನಗಳಲ್ಲಿ ಅಭಿಷೇಕ ಅರ್ಚನಾದಿಗಳು ನೆರವೇರಿಸಲ್ಪಟ್ಟುವು. ಅನಂತರ ಶ್ರೀಮನ್ಮಹಾರಾಜರವರ ಭಾವಚಿತ್ರಕ್ಕೂ, ಮೈಸೂರು ಬಾವುಟಕ್ಕೂ ವಂದನೆಯನ್ನರ್ಪಿಸಿ ವಾದ್ಯಘೋಷಗಳಿಂದಲೂ ಸಂಗೀತಾದಿ ಭಜನಾಕೂಟಗಳಿಂದಲೂ ಕೂಡಿ ದಿವ್ಯಾಲಂಕೃತವಾದ ಭಾವಚಿತ್ರವನ್ನು ಉತ್ಸವಮಾಡುವ ವೇಳೆಗೆ ರಾಜಮರ್ಯಾದೆಯಾದ 21 ತೋಪುಗಳು ಹಾರಿಸಲ್ಪಟ್ಟವು. ಇದೇ ಸಮಯದಲ್ಲಿ ಜಾರ್ಜ್ ಗಾರ್ಡನ್ ಎಂಬ ಕೈತೋಟವನ್ನು ಮಿಡ್ಲ್ ಸ್ಕೂಲಿನ ಆವರಣದಲ್ಲಿ ಹೆಡ್‌ಮಾಸ್ಟರ್ ನೀಲಕಂಠಯ್ಯನವರು ತಮ್ಮ ಸಹಾಯೋಪಾಧ್ಯಾಯರುಗಳೊಡನೆ ಸ್ಥಾಪಿಸಿದರು. ನಂತರ ಉತ್ಸವವು ಮುಂದಾಗಲು ಮ|| ರಾ|| ಸಾಹುಕಾರ್ ಲಿಂಗಪ್ಪನವರು ತಮ್ಮ ದಿವಂಗತ ಧರ್ಮಪತ್ನಿ ಸಿದ್ಧಮ್ಮಣ್ಣಿಯವರ ಹೆಸರಿನಿಂದ ಕಟ್ಟಿಸಬೇಕೆಂದಿದ್ದ ಬಾಲಿಕಾಪಾಠಶಾಲೆಯ ಶಂಕುಸ್ಥಾಪನಾ ಮಹೋತ್ಸವವು ಮಹಾಸ್ವಾಮಿಯವರ ಭಾವಚಿತ್ರದ ಸನ್ನಿಧಿಯಲ್ಲಿ ರಜತಮಹೋತ್ಸವದ ಜ್ಞಾಪಕಾರ್ಥವಾಗಿ ಮ|| ರಾ|| ಮಾಜಿ ಪ|| ಚನ್ನಿಗಪ್ಪನವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತು. ಪಾಠಶಾಲೆಯ ಮೈದಾನದಲ್ಲಿ ಮ|| ರಾ|| ಸಾಹುಕಾರ್ ನಂಜುಂಡಪ್ಪನವರು ಮತ್ತು ವೀರಭದ್ರಪ್ಪನವರು ಸುತ್ತಮುತ್ತಣ ಹಳ್ಳಿಗಳ ಸಾವಿರಾರು ಬಡಜನಗಳಿಗೆ ಅನ್ನಸಂತರ್ಪಣೆ ನಡೆಸಿದರು. ಮ|| ರಾ|| ಸಾಹುಕಾರ್ ಲಿಂಗಪ್ಪನವರು ಮಾಜಿ ಪ|| ಚನ್ನಿಗಪ್ಪನವರು ಸುಮಾರು ನೂರು ಬಡಜನಗಳಿಗೆ ವಸ್ತ್ರದಾನಮಾಡಿದರು. ಅದೇರಾತ್ರಿ ಗ್ರಾಮದ ದೇವರ ಉತ್ಸವವು ವೈಭವದಿಂದ ನೆರವೇರಿಸಲ್ಪಟ್ಟಿತು. ಬಾಲಿಕಾ ಪಾಠಶಾಲೆಯಲ್ಲಿ ಮಹಾಸ್ವಾಮಿಯವರ ಭಾವಚಿತ್ರವು ಅಲಂಕರಿಸಿ ಭಜನಾಕೂಟ ಸಂಗೀತ ಇವುಗಳಿಂದ ಸಭೆಯು ನಡೆಯಿಸಲ್ಪಟ್ಟು ಶ್ರೀಯವರ ಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ,

ಎಸ್. ಎಲ್. ಮುದ್ದುಬಸವಯ್ಯ

ಶಿಕಾರಿಪುರ ತಾಲ್ಲೋಕಿನ ವರ್ತಮಾನ.

ಈ ಶಿಕಾರಿಪುರವು ಧಾರವಾಡ ಜಿಲ್ಲಾ ಸರಹದ್ದಿಗೆ ಸಮೀಪವಾಗಿದ್ದು ಧಾರವಾಡ ಜಿಲ್ಲೆಗೆ ಸೇರಿದ ಮಾಸೂರಿಗೆ ಶಿಕಾರಿಪುರದಿಂದ ಒಂದು ರೋಡು ಹಾಕಲ್ಪಟ್ಟಿದೆ. ಈ ರೋಡು ಸದ್ಯಕ್ಕೆ ಜನಜಾನುವಾರು ತಿರುಗಾಡಲು ಮಳೆಗಾಲದಲ್ಲಿ ಬಹಳ ಅನನುಕೂಲವಾಗಿ ತುಂಬಾ ತೊಂದರೆಯಾಗಿತ್ತು. ಇದನ್ನು ನೋಡಿ ನಮ್ಮ ತಾಲ್ಲೋಕಿನ ಅಮಲ್ದಾರರವರಾದ ಮ|| ರಾ|| ಪಿ. ಕೆ. ಶ್ರೀನಿವಾಸಲು ನಾಯಿಡುರವರು ತಮ್ಮ ಸರ್ಕಾರಿ ಉದ್ಯೋಗವೇ ಪರಿಪೂರ್ಣವಾದಾಗ್ಯೂ, ಪ್ರಜಾಸಾಮಾನ್ಯಕ್ಕೆ ಉಪಕಾರಮಾಡಬೇಕೆಂಬ ಉದ್ದೇಶದಿಂದ ಜನಗಳನ್ನು ಪ್ರೋತ್ಸಾಹಿಸಿ ರಸ್ತೆಗೆ ಕೆಲವು ಮೋರಿ ಸಣ್ಣನ್ನು ಹಾಕಿಸಿ, ದೇಹಶ್ರಮವನ್ನು ಲಕ್ಷ್ಯಕೊಡದೆ ಪ್ರತಿದಿವಸವೂ ಖುದ್ದಾಗಿ ಪರಾಮರ್ಶಿಸಿ, ರಸ್ತೆಯನ್ನು ಸರಿಪಡಿಸಿ ಜನ ಮತ್ತು ಜಾನುವಾರುಗಳು ಓಡಾಡುವದಕ್ಕೆ ತುಂಬಾ ಅನುಕೂಲಪಡಿಸಿಕೊಟ್ಟು ಮಹದುಪಕಾರವನ್ನು ಮಾಡಿರುತ್ತಾರೆ.

ಅಲ್ಲದೆ ಈ ಅಮಲ್ದಾರರವರು ಒಂದಾಗಿಬಿಡದೂ ಪರೋಪಕಾರ ಕಾರ್ಯಗಳಲ್ಲಿಯೇ ನಿರತರಾಗಿರುತ್ತಾರೆ. ಇವರು ಶಾಂತಸ್ವಭಾವದವರೂ, ನಿಗರ್ವಿಗಳೂ, ನಿಷ್ಪಕ್ಷಪಾತಿಗಳೂ ಆಗಿರುತ್ತಾರೆ. ಇದೇ ತಾಲ್ಲೋಕು ತೊಗರ್ಸಿ ಎಂಬ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿ ರಥೋತ್ಸವವು ಪ್ರತಿವರ್ಷವೂ ನಡೆಯುವುದು. ಆದರೆ ಅಲ್ಲಿಗೆ ಜಾತ್ರೆಯ ಕಾಲದಲ್ಲಿ 15-20 ಸಾವಿರ ಜನಗಳು ಸೇರುವದರಿಂದ ಕುಡಿಯುವದಕ್ಕೆ ನೀರಿನ ಬಹು ತೊಂದರೆಯು ಸಾಕಾದಷ್ಟು ನೀರಿನ ಅನುಕೂಲತೆ ಇಲ್ಲದಿರುವದರಿಂದ ಈ ವಿಷಯವನ್ನು ನಮ್ಮ ಅಮಲ್ದಾರರವರು ಖುದ್ದು ಪರಾಮರ್ಶಿಸಿ ಅನೇಕ ಗ್ರಾಮದ ಜನಗಳನ್ನು ಪ್ರೋತ್ಸಾಹಿಸಿ ಹಾಲಿ ಇರತಕ್ಕ ಹೊಂಡವನ್ನು ಕಾಮಗಾರಿ ಮಾಡಿಸಿ ಜನಗಳಿಗೆ ತಕ್ಕಷ್ಟು ನೀರಿನ ಸೌಕರ್ಯವನ್ನು ಒದಗಿಸಿರುತ್ತಾರೆ. ಈ ಕೆಲಸಕ್ಕೆ ಅನೇಕ ಗ್ರಾಮಗಳ ಮಹನೀಯರೂ ಸಹ ಕೆಲವರು ದ್ರವ್ಯದ ಮೂಲಕವೂ, ಕೆಲವರು ಸ್ವತಃ ಕಾಮಗಾರಿಕೆಗಳಿಗೆ ಸಹಾಯ ಮಾಡುವದರ ಮೂಲಕವೂ ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ತಾಲ್ಲೋಕಿಗೆ ಶ್ರೀ ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರು ದಯಮಾಡಿಸಿದ್ದಾಗ್ಗೆ ಅನೇಕ ಗ್ರಾಮಗಳಿಗೆ ನಮ್ಮ ಅಮಲ್ದಾರ್ರವರು ತಾವೇ ಖುದ್ದಾಗಿ ದಯಮಾಡಿಸಿ ಉತ್ಸವಗಳನ್ನು ನೆರವೇರಿಸಿ ಬರುತ್ತಿದ್ದುದರಿಂದ ನಮ್ಮ ಅಮಲ್ದಾರ್ರವರ ಗುರುಭಕ್ತಿಯು ಎಷ್ಟರಮಟ್ಟಿಗೆ ಇರುತ್ತದೆಂಬುದು ವ್ಯಕ್ತವಾಗುತ್ತದೆ.

ಮೇಲ್ಕಂಡ ತೊಗರ್ಸಿ ಹೊಂಡದ ಕಾಮಗಾರಿ ಬಗ್ಗೆ ಶ್ರೀ ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರಾದ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಅರವತ್ತು ರೂಪಾಯಿಗಳನ್ನು ತೊಗರ್ಸಿ ಮುಕ್ಕಾಮಿನಲ್ಲಿ ದಯಪಾಲಿಸಿರುತ್ತಾರೆ.

ಈ ಮೇಲ್ಕಂಡ ವಿಷಯಗಳಿಗೆಲ್ಲಾ ನಮ್ಮ ಅಮಲ್ದಾರರವರೇ ಕಾರಣರೆಂಬುವದನ್ನು ತಿಳಿಸಲು ನಮಗೆ ತುಂಬಾ ಆನಂದವಾಗುತ್ತದೆ

ನಿಷ್ಪಕ್ಷಪಾತಿ ಶಿಕಾರಿಪುರ

ವಿಷಾದ

ಇದೇ ತಿಂಗಳು ೧೧ ನೆಯ ತಾರೀಖಿನದಿವಸರಾತ್ರಿ ೧೨ ಗಂಟೆಯ ಸಮಯದಲ್ಲಿ ಕಂಬೇಕೆರೆ ಶಾನುಭೋಗರ ವೀರಪ್ಪನವರ ಮಗನಾದ ಚೆಂಚಪ್ಪನವರು ಶಿವೈಕ್ಯರಾದರೆಂದು ತಿಳಿಸಲು ಅತಿ ವಿಷಾದವಾಗುತ್ತದೆ. ಇವರು ಅತ್ಯಂತ ಗುರುಲಿಂಗಜಂಗಮ ಭಕ್ತಿನಿಷ್ಠರೂ ಶಿವಪೂಜಾಪರಾಯಣರೂ ಆಗಿದ್ದಲ್ಲದೆ ಎಷ್ಟೋ ಮಂದಿ ಬಡಬಗ್ಗರಿಗೆ ಅತ್ಯುಪಯುಕ್ತರಾಗಿದ್ದರು.

ಇವರು ತಮ್ಮ ಚಿಕ್ಕನ ಕೆಲಸದ ನಿಮಿತ್ತವಾಗಿ ಹರನಹಳ್ಳಿಗೆ ಬಂದು ಅಕಸ್ಮಾತ್ ಅಲ್ಲಿಯೇ ಕಾಯಿಲೆಯಿಂದ ಮಲಗಿ ೭ ದಿವಸಗಳಲ್ಲಿಯೇ ವಿಧಿವಶರಾದರು. ಇವರ ಕಳೇಬರವನ್ನು ವಿಶೇಷವಾಗಿ ಶೃಂಗರಿಸಿದ ವಿಮಾನದಲ್ಲಿ ಕೂಡಿಸಿ ಹರನಹಳ್ಳಿಯ ಬೀದಿಗಳಲ್ಲಿ ಮೆರವಣಿಗೆಯಿಂದ ಒಯ್ಯುವಾಗ ಈ ಪಟ್ಟಣದ ಆಬಾಲವೃದ್ಧರೆಲ್ಲರೂ ಕಣ್ಣೀರಿನಿಂದ ಕೂಡಿಕೊಂಡು ಮಾರ್ಗವು ಹಿಡಿಸದಂತೆ ಸಾಗಿತು. ಇಬ್ಬರು ಪಟ್ಟಾಧಿಕಾರಿಗಳು ವಿಮಾನದ ಮುಂದೆ ದಯಮಾಡಿಸುತ್ತಿದ್ದರು. ತಾಲ್ಲೋಕು ಬೋರ್ಡ್ ಪ್ರೆಸಿಡೆಂಟರವರು ಅವರ ಪಕ್ಕದಲ್ಲಿ ಸ್ವತಃ ಬಂಧುಗಳಂತಿದ್ದು ಸಮಾಧಾನಪಡಿಸುತ್ತ ನಡೆದಿದ್ದರು. ಈ ರೀತಿಯಾಗಿ ಉತ್ಸವವು ಸಮಾಧಿಯ ಹತ್ತಿರಕ್ಕೆ ಸೇರಲು ಸಾಯಂಕಾಲ ೫|| ಗಂಟೆಯ ಸಮಯವಾಯಿತು. ಅನಂತರ ಮೃತನ ಕಳೇಬರವನ್ನು ಸಮಾಧಿಸ್ಥವನ್ನು ಮಾಡಿ ಹೊಸಗುಂದ, ಕ್ಯಾರಕಟ್ಟೆ, ತೌಡೂರು ಮೊದಲಾದ ಗ್ರಾಮಗಳಿಂದ ಬಂದವರೆಲ್ಲಾ ಅತ್ಯಂತ ವ್ಯಾಕುಲದಿಂದ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಈ ಮೃತರಿಗೆ ಒಬ್ಬ ಮಗನೂ ಒಬ್ಬ ಹುಡುಗಿಯೂ [illegible] ಅಣ್ಣತಮ್ಮಂದಿರೂ ಇರುತ್ತಾರೆ. ಇವರಿಗೆ ಈ ದುಃಖವನ್ನು ಸಹಿಸುವದಂತೂ [illegible] ಈ ಮೃತನ ಅಣ್ಣಂದಿರಾದ ಕಂಬೇಕೆರೆ ಶಾನುಭೋಗ ವೀರಬಸಪ್ಪನವರು ತಮ್ಮ ತಮ್ಮನ ಜ್ಞಾಪಕಾರ್ಥವಾಗಿ ಪಂಚಾಚಾರ್ಯ ಪತ್ರಿಕೆಯ ಪ್ರೋತ್ಸಾಹಕ್ಕಾಗಿ ಕಳಿಸುವಂತೆ ಗುರುವಾದ ದೇವರಮನೆಯ ನೀಲಕಂಠಶಾಸ್ತ್ರಿಗಳ ಕೈಯಲ್ಲಿ ೫ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಇನ್ನು ಮೇಲೆಯಾದರೂ ಪರಮಾತ್ಮನು ಇವರ ಕುಟುಂಬದವರಿಗೆ ಸಮಾಧಾನವನ್ನೂ ಮೃತನ ಆತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ,
ಹರನಹಳ್ಳಿ ಶ್ರೀ ಶಿವಪ್ಪನವರು.

ಗದಗ.

ಇಲ್ಲಿ ಯಾರೋ ಒಬ್ಬ ಆಚಾರಿಗಳು ಬಂದ. ನವನ್ನು ಮಾಡಿದರು. ಈ ಆಚಾರಿಗಳು ಲಿಂಗಾ ಕಡೆಯಿಂದ ದುಡ್ಡು ಎತ್ತುವ ಆಶೆಯಿಂದ ಮಾತುಗಳನ್ನು ಕಲ್ಪಿಸಿಕೊಂಡು ಹೇಳುತ್ತಿದ್ದ ತಿಯೆಂದರೆ ಇದಕ್ಕೆ ಅನ್ನಬೇಕು. ಒಂದು ಲಿಂಗಾಯತರನ್ನು ಕಸಬರಿಗೆಗಿಂತಲೂ ಕ ತಿಳಿಯುತ್ತಾರೆ. ಇದಕ್ಕೆ ಜನವಾಸಿ, ಪರಳಿ ಮೊ ಪ್ರಕರಣಗಳೇ ಪ್ರಬಲಗಳಾದ ಸಾಕ್ಷಿಗಳಾಗಿವೆ ಗ ಏನಾದರೂ ಪ್ರಯೋಜನವಾಗುವ ಕಾಲದಲ್ಲಿ ರನ್ನು ಸ್ವರ್ಗಕ್ಕೆ ಒಯ್ಯುತ್ತಾರೆ. ಈ ಸಮಯ ಯಡೆ ಕೆಲವು ಮರುಳುಜನಗಳು ಆಹಾ! ಆಚಾ ಎಂಥವರು? ಇವರ ಸಮಾನರು ಯಾರೂ ಇಲ್ಲ, ಯೂ ನೋಡಿಲ್ಲವೆಂದು ಬಾಯ್ಬಿಡುತ್ತವೆ. ಕು ಪ್ರದಾಯದ ವೀರಶೈವರೇ—ಇಂಥವರ ಚಾಲಕ್ಕೆ ಮರುಳಾಗಬೇಡಿರಿ! ಎಚ್ಚರರಾಗಿರಿ!!

ಓರ್ವ ಶರಣ

ಕೊಲ್ಲಾಪುರ.

ಈ ಪಟ್ಟಣವು ವಿಶೇಷವಾಗಿ ವೀರಶೈವರಿಂದ ಕೂ ಇಲ್ಲಿ ಅಶಿಕ್ಷಿತರು ಹೆಚ್ಚು ಇರುತ್ತಾರೆ. ಅಂದ ಮಂತೂ ಇವರಲ್ಲಿ ಮನೆಮಾಡಿಕೊಂಡಿರು ಬ್ರಾಹ್ಮಣರೂ ಕಾವಿಕಫನಿಯನ್ನು ಹಾಕಿಕೊಂಡು ದರ ತೀರಿಸಿ. ಅವರು ಯಾರೆಷ್ಟು ಪದವನ್ನು ನಮ ರಿಸದೆ [illegible] ಹೇಳುತ್ತಾರೆ. ಅವರು ಹೇಳಿ ವರ್ತಿಸುತ್ತಾರ ಧರ್ಮಶಾಸ್ತ್ರದ ಸ್ವರೂಪವನ್ನ ಇವರು ನೋಡಲೇ ಅರಿಯರು. ಲೋಕಮಾನ್ಯ [illegible] ಮಲ್ಲಪ್ಪನವರು ಲಕ್ಷ್ಯಾ ರೂಪಾಯಿಗಳನ್ನು ಖರ್ಚುಮಾಡಿ ಧರ್ಮಗ್ರಂಥಗ [illegible] ಅವುಗಳಿಗೆ ಮರಾಠಿ ಟೀಕೆಯನ್ನು ಬರೆ ಪ್ರಿಂಟು ಮಾಡಿಸಿದರು. ಈ ಗ್ರಂಥಗಳ ಉಪಯೋ ವನ್ನು ಕನ್ನಡ ಪ್ರಾಂತದವರು ಮಾಡಿಕೊಂಡ ಹೊಂಚು ಜನರೇನೂ ಮಾಡಿಕೊಳ್ಳಲಿಲ್ಲ. ಅಲ್ಲ ಮುಚ್ಚಿಹೋಗಿದೆ. ಇತ್ತೀಚೆಗೆ ಇಲ್ಲಿಗೆ ಕೆ ಸನ್ಯಾಸಿಗಳು ಬಂದು ಬಂದು ಜನರಿಗೆ ಮತಸ್ಥಾ ಚಾರ್ಯರ ವಿಷಯದಲ್ಲಿ ದುರುಪದೇಶವನ್ನು ಲಿಕ್ಕೆ ಹತ್ತಿದ್ದಾರೆ. ಅವರ ದುರುಪದೇಶಕ್ಕೆ ತಿಳಿಯದ ಇವರು ಹೌದು ಹೌದು ಸ್ವಾಮಿ ಎ ತಲೆದೂಗುತ್ತಿದ್ದಾರೆ. ಈ ದೋಷವು ಇವರದ್ದ ಸನ್ಯಾಸಿಗಳದಾಗಿರುತ್ತದೆ. ಮೊನ್ನೆ ಮೊನ್ನೆ ಒಂ ಸಭೆಯನ್ನು ಮಾಡಿ ಏನೇನೋ ಹಾಡಿಕೊಂಡಿರುತ್ತಾ ಈ ಹಾಡಿನಿಂದ ಫಲವೇನಾಗುವದೋ ಮಾಡಿದವ ಗೊತ್ತು! ಕೇವಲ ವರ್ತಮಾನಗಳಲ್ಲಿ ಕೊಟ್ಟಮಾತ್ರ ಏನೂ ಕಾರ್ಯವಾಗುವಂತಿಲ್ಲ! ಈ ಕಾಲವು ಸುಧಾ ಸಿದ ಕಾಲವಾಗಿದೆ. ಕಪಟಸನ್ಯಾಸಿಗಳ ಕುಟಿಲತನ ಸ್ವರೂಪವು ಸರ್ವರಿಗೂ ತೋರುತ್ತ ೬-೮ ವರ್ಷ ಳಾದವು. ಆದ್ದರಿಂದ ಆ ಸನ್ಯಾಸಿಗಳು ಸುಧಾರಿ ವೀರಶೈವರ ಪ್ರಾಂತವನ್ನು ಬಿಟ್ಟು ಏನೂ ಅರಿಯ ವೀರಶೈವರಿದ್ದ ದೇಶಕ್ಕೆ ನುಗ್ಗುತ್ತಿದ್ದಾರೆ. ಆ ಪ್ರಾಂ ತದ ವೀರಶೈವರು ಸುಧಾರಿಸಿದ ಕೂಡಲೆ ಪುನಃ ಸನ್ಯಾಸಿಗಳಿಗೆ ಅಲ್ಲಿಯೂ ಯೋಗ್ಯಸಂಭಾವನೆಯು ದೊರಕುತ್ತದೆಂಬುದನ್ನು ಮರೆಯಬಾರದು. ಈ ಸನ್ಯಾಸಿಗಳ [illegible] ಕೊಲ್ಲಾಪುರದ ಒಂದೆರಡು ವ್ಯಕ್ತಿಗಳು ಮನಸ್ಸಿಗೆ ಬಂದಂತೆ ವರ್ತಿಸುವದು ಯೋಗ್ಯ ವಲ್ಲವೆಂದು ಧಾರಾಳವಾಗಿ ಹೇಳಬಹುದು. ಮೂ ಲ ಅಪ್ಪಾಸಾಹೇಬ ಮಲ್ಲಪ್ಪನವರು ಇದ್ದಾಗ್ಯೂ ಇಲ್ಲಿ ಯಾವ ಸನ್ಯಾಸಿಗಳ ಕುಟಿಲತನವೂ ನಡೆಯುತ್ತಿದ್ದಿಲ್ಲ ಇಲ್ಲಿರತಕ್ಕ ಸರ್ವ ವೀರಶೈವರು ಅಪ್ಪಾಸಾಹೇಬರವ ಆಜ್ಞಾಧಾರಿಗಳಾಗಿದ್ದರು. ಈಗ ತಲೆತಲೆಗೆ ಪಟ್ಟಣ ದ ಬಂದ ಏನೇನೋ ಮಾಡುತ್ತಾರೆ. ಇದರಿಂದ ಯಾವ ಪ್ರಯೋಜನವಿಲ್ಲವೆಂದೂ ಇಂಥವರಲ್ಲಿ ಪ್ರವೃತ್ತರಾದ ಗುರುಗಳು ಪಶ್ಚಾತ್ತಾಪಿಗಳಾಗಿ ಕೇಳುತ್ತೆಂದು ತಿಳಿ ರಂದೂ ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಹಿತಚಿಂತಕ

ರಂಭಾಪುರೀ ಜಗದ್ಗುರುಗಳ ಸಂಚಾರವು.

ದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರ ಸವಾರಿಯು ಅನವಟ್ಟಿ ಹೋ ಸಳ್ಳಿ ಗ್ರಾಮದವರ ವಿನ್ನಹವನ್ನು ಅಂಗೀಕ ಬಿರುದಾವಳಿಗಳೊಡನೆ ಚತುರಂಗಬಲ ಸ ಾಗಿ ಉತ್ಸವದಿಂದ ತಾ ೬-೮-೨೭ ಕ್ಕೆ ದಯ ಭಕ್ತಿಯಿಂದ ಮಾಡಿದ ಸೇವೆಯನ್ನು ಕೈಕೊಟ್ಟು ಸ್ವೀಕರಿಸಿ ಸರ್ವರಿಗೂ ಆಶೀರ್ವಾದ ವು ಅನವಟ್ಟಿಗೆ ತಾ. ೧೦-೮-೨೭ರ ಸಾ ಲಕ್ಕೆ ಚಿತ್ತೈಸಿತು. ಹೊಸಳ್ಳಿಗ್ರಾಮದವರು ಗದ್ಗುರುಗಳವರನ್ನು ತಮ್ಮ ಗ್ರಾಮಕ್ಕೆ ದಯ ಕೊಂಡು ಪಾದಪೂಜೆಯನ್ನು ಮಾಡಿ ಶಕ್ತ್ಯ ಕಾಣಿಕೆಯನ್ನು ಸಮರ್ಪಿಸಿ ಗುರುಕೃಪೆಗೆ ದಕಾರಣ ಇವರೇ ಧನ್ಯರು! ಇವರೇ ಮ ನವರ ಮೇಲ್ಪಂಕ್ತಿಯನ್ನು ಅನುಸರಿಸಿ ಸರ್ವ ಗುರುಕೃಪೆಗೆ ಪಾತ್ರರಾಗಲೆಂದು ಹಾರೈಸು

ಓರ್ವ ಗುರುಪುತ್ರ.

ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶಿವಕೀರ್ತನ.

ಕಥಾಶ್ರವಣಯೋಗ್ಯವಾದೀ ಶ್ರಾವಣಮಾಸದ ಗಳಲ್ಲಿ ಹುಬ್ಬಳ್ಳಿಯಲ್ಲಿ ಶ್ರೀಯುತ ಮುರಿಗೆಪ್ಪಾ ಶೆಟ್ರ ಇವರ ಮನೆಯಲ್ಲಿ ಶಿವಪುರಾಣವು ಗಂಜೀಗಟ್ಟಿ ಪಟ್ಟಾಧ್ಯಕ್ಷರಿಂದ ನಡೆಯು ಶ್ರೋತೃಸಮುದಾಯವು ಅತ್ಯಾನಂದವನ್ನು ತ್ತಿರುವದು. ಇಂತಹ ಸುಸಮಯದಲ್ಲಿ ತಾ|| ೨ ನೇ ಗುರುವಾರ, ದಿವಸ ಪುರಾಣ ಶ್ರವ ದು ಅಕಸ್ಮಾತ್ತಾಗಿ ಆಗಮಿಸಿದ ಮ|| ಶ್ರೀಕಂಠ ಹಿರೇಮಠ ಸಬಪತಿ ಇವರು ಶ್ರೋತೃವರ್ಗದ ಮೂಲಕವಾಗಿ ಶಿವಕೀರ್ತನವನ್ನು ಮಾಡಬಯ ಸಿ ಗುರುಭಕ್ತಿ ನಿರೂಪಣವನ್ನೇ ಪೀಠಿಕೆಯ ದ್ದೇಶವನ್ನಾಗಿ ಮಾಡಿ ಅಷ್ಟಾವರಣ ಷಟ್ಸ್ಥಲಸ್ವರೂಪಗಳನ್ನು ಸಂಕ್ಷೇಪವಾಗಿ ಸಿ, ಎಲ್ಲರಿಗೂ ಆನಂದವನ್ನುಂಟುಮಾಡಿದರು. ನಸೆ ಪುರಾಣ ಕೇಳಲಿಕ್ಕೆ ಆಲೂರ ಶ್ರೀಚರಮೂ ಸ್ವಾಮಿಗಳೂ ಹುಬ್ಬಳ್ಳಿಯ ಚರಮೂರ್ತಿಸ್ವಾಮಿ ಬಿನ್ನಿಹಟ್ಟಿ ಶ್ರೀ ಪಟ್ಟಾಧ್ಯಕ್ಷರೂ ಬಂದಿದ್ದು ತಸಿದ್ಧಾಂತ ಶ್ರವಣದಿಂದ ತಲೆದೂಗುತ್ತಿದ್ದರು. ತ್ತ ಹುಬ್ಬಳ್ಳಿಯ ಎಷ್ಟೋಜನ ಸದ್ಗೃಹಸ್ಥರೂ ಳಿಯರೂ ಬಂದಿದ್ದರು. ಈ ಪುಣ್ಯಸಮಯದಲ್ಲಿ ಪತ್ತರಿಗೂ ಪುರಾಣ ಕೀರ್ತನಶ್ರವಣದ ಸುಯೋ ಗ್ಯ ಒದಗಿಸಿಕೊಟ್ಟ ಶ್ರೀಯುತ ಮುರಿಗೆಪ್ಪನ ಕಮಡೊಳ್ಳಿ ಶೆಟ್ರ ಇವರಿಗೂ ಇವರ ಕುಟುಂ ಕ್ಕೆ ಪರಮಾತ್ಮನು ಚಿರಾಯುರಾರೋಗ್ಯ ಸೌಭಾಗ್ಯವನ್ನೀಯಲೆಂದು ಇಚ್ಛಿಸುವ.

ಓರ್ವ ಶ್ರೋತೃ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಮೈಸೂರು ಶ್ರೀಮನ್ಮಹಾರಾಜರವರ ಜ್ಯೂಬಿಲಿಮಹೋತ್ಸವ ಸಮಾರಂಭವು.

" ಸತ್ಯಮೇವೋದ್ಧರಾಮ್ಯಹಂ " ಎಂಬ ಬಿರು ದು ಧರಿಸಿ ಮಕ್ಕಳಂತೆ ಕಾಪಾಡಿ ಜಗದ್ವಿಖ್ಯಾತ ದ ಧರ್ಮಾವತಾರ ಶ್ರೀಮನ್ಮಹಾರಾಜಸಾಹೇಬ ಬಹದ್ದೂರರವರು ಧರ್ಮಸಿಂಹಾಸನವನ್ನಾರೋಹಣ ಮಾಡಿ ೨೫ ವರ್ಷಗಳಾದವು. ತದಾನಂದ ಸೂಚಕಗ ಳಾದ ಮಹೋತ್ಸವಗಳು " ಸಿಲ್ವರ್ ಜೂಬಿಲಿ " ಹೆಸ ರಿನಿಂದ ಮೈಸೂರು ಎಲ್ಲ ಪ್ರದೇಶಗಳಲ್ಲಿ ವೈಭವದಿಂದ ಜರುಗುವಂತೆ ಸೊರಬತಾಲೂಕು ಅನವಟ್ಟಿ ಮುಕ್ಕಾಮಿನಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರು ಮಹಾ ಸಂಸ್ಥಾನದಿಂದ ಉತ್ಸವವು ರಮ್ಯವಾಗಿ ಜರುಗಿಸಲ್ಪಟ್ಟಿತು.

ಮೊದಲು ಸ್ಕೂಲಿನಲ್ಲಿ ಭವ್ಯವಾಗಿ ರಚಿಸಿದ ಸಿಂಹಾಸನದಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನಿರಿಸಿ ವಿಧ್ಯುಕ್ತ ಪೂಜೆಯನ್ನು ಮಾಡಿ ಸರ್ವರೂ ಮಂಗಳಾರತಿಯನ್ನು ಮಾಡಿದರು. ಮಹಾಸಂಸ್ಥಾನದ ರಾಜ ಪಾಂಕಸ್ವಯ್ಯನವರು ಮಹಾರಾಜರವರ ಗುಣಕಥನವನ್ನು ಮಾಡಿ ನಮ್ಮ ಧರ್ಮಪ್ರಭುಗಳು ಇತೋಪ್ಯತಿಶಯವಾದ ಕೀರ್ತಿಯನ್ನು ಹೊಂದಿ ಐಶ್ವರ್ಯಾಭಿವೃದ್ಧಿಯಿಂದ ಚಿರಕಾಲ ಬಾಳಿ ನಮ್ಮುಗಳನ್ನು ಕಾಪಾಡಲೆಂದು ಭಾಷಣ ಮಾಡಿದರು. ಆ ವೇಳೆ ಕೋಟೀಶ್ವರ ದೇವಸ್ಥಾನದ ಧರ್ಮಕರ್ತೃಗಳಾದ ಮ|| ರಾ|| ರಾಮಣ್ಣನವರು [illegible] ಭಾಷಣವನ್ನೇ ವ್ಯಕ್ತೀಕರಿಸಿ ಹೇಳಿದರು. ಮಹೋತ್ಸವದ ನಿಮಿತ್ತವಾಗಿ ಶ್ರೀ ಜಗದ್ಗುರುಗಳವರ ಮುಕ್ಕಾಂ ಆಗಿರುವದರಿಂದ ನಮ್ಮಗಳ ಆನಂದಕ್ಕೆ ಪಾರವೇ ಇಲ್ಲವೆಂಬುದಾಗಿ ಆನಂದೋದ್ಗಾರವನ್ನು ಪ್ರಕಟಿಸಿದರು. ಆ ವೇಳೆ ಶ್ರೀಮನ್ಮಹಾರಾಜರವರ ಸುಂದರವಾದ ಭಾವಚಿತ್ರವನ್ನು ಸ್ವರ್ಣರಜತಾದ್ಯಾಭರಣಗಳಿಂದಲೂ ಪಟ್ಟೆ ಪೀತಾಂಬರಗಳಿಂದಲೂ ಅಲಂಕರಿಸಿರುವ ಉನ್ನತಸ್ಥಾನದಲ್ಲಿ ಆರೋಹಣ ಮಾಡಿಸಿ ಮಹಾಸಂಸ್ಥಾನದ ಚತುರಂಗಬಲ ಸಮೇತವಾಗಿ ಸಕಲ ಬಿರುದಾವಳಿಗಳೊಡನೆ ತಳಿರು ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕರಿಸಿದ ಬೀದಿಗಳಲ್ಲಿ ಅತ್ಯಂತ ವೈಭವದಿಂದ ಜರುಗಿತು. ಕೆಲವರು ಮಂಗಳಾರತಿಗಳನ್ನು ಮಾಡುತ್ತಿದ್ದರು. ಮತ್ತೆ ಕೆಲವರು ಆನಂದೋದ್ಗಾರಗಳಿಂದ ಜಯಜಯಕಾರಗಳನ್ನು ಮಾಡುತ್ತಿದ್ದರು. ಜಯಜಯ ಧ್ವನಿಗಳಿಂದಲೂ ನಾನಾತರದ ವಾದ್ಯಗಳಿಂದಲೂ ಪ್ರತಿಯೊಬ್ಬರ ಕಿವಿಗಳು ಗಡಚಿಕ್ಕಿದವು. ಹೀಗೆ ವೈಭವದಿಂದ ಜರುಗಿ ಸ್ವಸ್ಥಲಕ್ಕೆ ಬಂದಮೇಲೆ ಸರ್ವರೂ ಆನಂದದಿಂದ ಜಯಘೋಷ ಮಾಡಿದರು. ಆ ವೇಳೆ ಮಂಗಳಾರತಿಯಾಗಿ ಬಾಲಬಾಲಿಕೆಯರಿಗೂ ಮಿಠಾಯಿ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು. ಅದೇ ದಿವಸವೇ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಅನವಟ್ಟಿ ಹೋಬಳಿ ಹೊಸಳ್ಳಿ ಮುಕ್ಕಾಮಿನಲ್ಲಿ ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರವರ ಆಯುರಾರೋಗ್ಯಾಭಿವೃದ್ಧಿಗೋಸ್ಕರ ಹಾಗೂ ಯದುವಂಶವು ಆಚಂದ್ರಾರ್ಕವಾಗಿ ಪ್ರಕಾಶಮಾನವಾಗಿರುವದಕ್ಕೋಸ್ಕರ ತ್ರಿಕಾಲಗಳಲ್ಲಿಯೂ ಅನುಷ್ಠಾನಗಳನ್ನು ಮಾಡಿದರು. ಸಂಸ್ಥಾನದ ಆಸ್ಥಾನ ವಿದ್ವಾನ್ ವೇ|| ಧರ್ಮಭೂಷಣ ಹರೀಶ್ವರ ಶಾಸ್ತ್ರಿಗಳು ಪಾಠಶಾಲಾ ವಿದ್ಯಾರ್ಥಿಗಳೊಡನೆ ಶ್ರೀ ಜಗದ್ಗುರುಗಳವರ ಅಪ್ಪಣೆ ಪ್ರಕಾರ ಶ್ರೀಮನ್ಮಹಾರಾಜರವರಿಗೆ ಶ್ರೇಯೋಭಿವೃದ್ಧಿಗೋಸ್ಕರ ಪ್ರಾತಃಕಾಲದಲ್ಲಿ ಪಾರ್ವತಿ ಪರಮೇಶ್ವರರಿಗೆ ಶ್ರೀ ರುದ್ರಾಭಿಷೇಕವು, ಮಧ್ಯಾಹ್ನಕ್ಕೆ ಶ್ರೀ ವೀರಭದ್ರನಿಗೆ ಏಕಾದಶ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆಯಾಗಿ ಮಹಾಸಂತರ್ಪಣೆಯು ನಡಿಸಲ್ಪಟ್ಟಿತು. ಸಾಯಂಕಾಲಕ್ಕೆ ರುದ್ರಾಭಿಷೇಕವು ಮಾಡಲ್ಪಟ್ಟಿತು. ಆ ದಿವಸ ಸಾಯಂಕಾಲಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವು ಜರುಗಿಸಲ್ಪಟ್ಟಿತು. ಅಲ್ಲಿ ನೆರೆದ ಸಮಸ್ತರಿಗೂ ಶ್ರೀ ಜಗದ್ಗುರು ಸನ್ನಿಧಿಯವರು ಶ್ರೀ ಮಹಾರಾಜರವರ ಪವಿತ್ರ ಚರಿತ್ರೆಯನ್ನು ಸಂಕ್ಷೇಪವಾಗಿ ಅಪ್ಪಣೆ ಕೊಡಿಸಿ ಉತ್ತರೋತ್ತರ ಶ್ರೀಮನ್ಮಹಾರಾಜರವರ ಸಿಲ್ವರ್ ಜೂಬಿಲಿ ಮಹೋತ್ಸವಗಳು ಜರುಗಿ ಅಸ್ಮದಾದಿಗಳಿಗೆ ಪರಮಾನಂದವನ್ನುಂಟುಮಾಡಲೆಂದು ಆಶೀರ್ವದಿಸಿ ಜಯಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. " ಮೈಸೂರು ಶ್ರೀಮಹಾರಾಜಾಧಿರಾಜಾಯ ದೀರ್ಘಮಾಯುಃ "

ಶ್ರೀ ಜಗದ್ಗುರುಸಂಸ್ಥಾನದ
ಮುಕ್ಕಾಂ ಮಾಸೂರು ಮ್ಯಾನೇಜರ್.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಸೊರಬತಾಲ್ಲೂಕು ಅನವಟ್ಟಿಗ್ರಾಮದಲ್ಲಿ ಶ್ರೀ ಜಗದ್ಗುರುಗಳವರ ಆಂದೋಲಿಕೋತ್ಸವವು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ತೊಗರ್ಸಿ ಮೊಕ್ಕಾಮಿನಿಂದ ತಾ|| ೨೭-೭-೨೭ಕ್ಕೆ ಅನವಟ್ಟಿಗೆ ದಯಮಾಡಿಸುವದಾಗಿ ಪ್ರಸಿದ್ಧಮಾಡಿದ್ದು ತಿಳಿಯಿತು. ಅನವಟ್ಟಿ ಭಕ್ತಮಾಹೇಶ್ವರರು ೪ ದಿವಸ ಅವಧಿ ಬೇಕೆಂದು ಅರಿಕೆಮಾಡಿದ್ದರಿಂದ ತಾ|| ೩೧-೭-೨೭ ನೇ ರವಿವಾರ ಪ್ರೋಗ್ರಾಂ ನಿಶ್ಚಯಿಸಿದಪ್ರಕಾರ ಶ್ರೀ ಮಹಾಸನ್ನಿಧಿಯವರು ತೊಗರ್ಸಿಯಿಂದ ದಯಮಾಡಿಸುವದರೊಳಗಾಗಿಯೇ ಅನವಟ್ಟಿಗ್ರಾಮದ ಪ್ರಮುಖ ಭಕ್ತಮಾಹೇಶ್ವರರೂ, ಇತರಮತೀಯರೂ ಮತ್ತು ಪೋಲೀಸ್ ಇನ್ಸ್ಪೆಕ್ಟರ್ ಸಾಹೇಬರವರೂ ಪೋಲೀಸ್ ಸಿಬ್ಬಂದಿಯೊಡನೆ ನಿಯಮಿತಸ್ಥಳದಲ್ಲಿ ಕಾಯ್ದುಕೊಂಡಿದ್ದರು. ಸರ್ವರೂ ದರ್ಶನಹೊಂದಿ ಫಲಪುಷ್ಪಾದಿಗಳನ್ನು ಅರ್ಪಿಸಿ ಕುಶಲಪ್ರಶ್ನವಾಗಿ ಸಿದ್ಧಗೊಳಿಸಿದ ಪಲ್ಲಕ್ಕಿಯಲ್ಲಿ ಶ್ರೀ ಮಹಾ|| || ಸನ್ನಿಧಿಯವರು ಆರೋಹಣಮಾಡಿದನಂತರ ಸಕಲ ಬಿರುದಾವಳಿಗಳೊಡನೆ ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಸಾಲುಸಾಲಾಗಿಕಟ್ಟಿರುವ ನಾನಾತರದ ಪುಷ್ಪಮಾಲಿಕೆಗಳಿಂದಲೂ ಮಧ್ಯಮಧ್ಯದಲ್ಲಿ ಶೃಂಗಾರವಾಗಿ ರಚಿಸಿರುವ ಲತಾಮಂಟಪಗಳಿಂದಲೂ ಭವ್ಯವಾಗಿ ತೋರುವ ಶೃಂಗರಿಸಿದ ಬೀದಿಗಳಲ್ಲಿ ಪಂಡಿತರ ವೇದಘೋಷದಿಂದಲೂ ಭಕ್ತಮಾಹೇಶ್ವರರು ಮಧ್ಯೆಮಧ್ಯೇ ಉಚ್ಚರಿಸುವ ಜಯಜಯಘೋಷದಿಂದಲೂ, ಸುಮಂಗಲೆಯರು ಬೆಳಗುವ ಮಂಗಳಾರತಿಯಿಂದಲೂ ಉತ್ಸವವು ಭೋರ್ಗರೆಯುವ ವಾದ್ಯವೈಭವಗಳಿಂದ ಸಕಲಬೀದಿಗಳಲ್ಲಿ ಸಂಚರಿಸಿ ಶ್ರೀ ನಂದೀಶ್ವರನದೇವಾಲಯದಲ್ಲಿ ಅತಿಮನೋಹರವಾಗಿ ರಚಿಸಿರುವ ಮಂಟಪದಲ್ಲಿ ಬಾಜ್ವಲ್ಯಮಾನವಾಗಿ ಪ್ರಕಾಶಿಸುವ ಸಿಂಹಾಸನವನ್ನು ಶ್ರೀ ಜಗದ್ಗುರುಗಳವರು ಆರೋಹಣಮಾಡಿದ ಕೂಡಲೆ ಸರ್ವರೂ ಜಯಜಯಘೋಷದಿಂದ ಕರತಾಡನದೊಡನೆ ಆನಂದೋದ್ಗಾರವನ್ನು ಪ್ರಕಟಿಸಿದರು. ಅನಂತರ ಮ|| ರಾ|| ಅಸೆಂಬ್ಲಿ ಮೆಂಬರರೂ ಆಗರ್ಭ ಶ್ರೀಮಂತರೂ, ಈ ಪ್ರಾಂತದಲ್ಲಿ ಪೂರ್ಣಹೆಸರುವಾಸಿಗಳೂ ಗುರುಭಕ್ತಿಧುರೀಣರೂ ಆದ ಶ್ರೀಮಾನ್ ಮಡ್ಡಿಕೊಪ್ಪದ ದೇವಪ್ಪಬೆಮರವರು ಅನವಟ್ಟಿಯ ಹಾಗೂ ಪ್ರಾಂತದ ಯಾವತ್ತು ಭಕ್ತಮಾಹೇಶ್ವರರ ಪರವಾಗಿ ಶ್ರೀ ಜಗದ್ಗುರುಗಳವರಿಗೆ ಅಡ್ರೆಸ್ಸು ಒಪ್ಪಿಸಿದರು. ಅದರ ಸಾರಾಂಶ— ಶ್ರೀಮದಖಿಲಬ್ರಹ್ಮಾಂಡಪಾಲಕನಾದ ಪರಶಿವನ ಪಂಚಮುಖದಿಂದ ಉದಯಿಸಿದ ಶ್ರೀಮತ್ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ರೇಣುಕಶಿವಾಚಾರ್ಯ ಪರಂಪರಾಗತರಾದ ಭಗವತ್ಪಾದ ಶ್ರೀ ಜಗದ್ಗುರುಗಳವರ ಸವಾರಿಯು ಈ ಪ್ರಾಂತಕ್ಕೆ ಬಿಜಯಂಗೈಸಿ ನಮ್ಮಗಳಿಗೆ ದರ್ಶನಕೊಟ್ಟದ್ದರಿಂದ ನಾವುಗಳು ಪುನೀತರಾದೆವು. ಶ್ರೀ ರೇಣುಕಾಚಾರ್ಯಪರಾವತಾರಿಗಳಾದ ಶ್ರೀ ಜಗದ್ಗುರುಗಳವರು ಶ್ರಾವಣಮಾಸಕ್ಕೆ ಸರಿಯಾಗಿ ನಮ್ಮಗಳಿಗೆ ಆಶೀರ್ವಾದಕೊಡಲು ಚಿತ್ತೈಸಿರುವದು ನಮ್ಮಗಳ ಸುದೈವವು. ಶ್ರೀ ಜಗದ್ಗುರುಗಳಿಗೆ ತನುಮನಧನಗಳಿಂದ ಸೇವೆಯನ್ನು ಮಾಡಿ ಭಗವತ್ಪಾದರ ಕೃಪಾಶೀರ್ವಾದಕ್ಕೆ ಪಾತ್ರರಾಗತಕ್ಕದ್ದು ನಮ್ಮಗಳ ಕರ್ತವ್ಯವು. ಶ್ರೀ ಪೂಜ್ಯಪಾದ ಮಹಾ|| || ಸನ್ನಿಧಿಯವರು ನಮ್ಮಗಳಮೇಲೆ ಪೂರ್ಣ ಅಂತಃಕರಣವನ್ನಿಟ್ಟು ಶುಭಾಶೀರ್ವಾದಗಳಿಂದ ಕೃತಾರ್ಥರನ್ನಾಗಿಮಾಡಬೇಕೆಂದು ಶ್ರೀಪಾದಸನ್ನಿಧಿಯಲ್ಲಿ ಬಿನ್ನೈಸಿಕೊಂಡರು. ಶ್ರೀ ಜಗದ್ಗುರುಗಳವರು ಸರ್ವರಿಗೂ ಸಂತೋಷವಾಗುವಂತೆ ಕರ್ಣಾಟಕಭಾಷೆಯಿಂದ ಅಪ್ಪಣೆಯನ್ನು ದಯಪಾಲಿಸಿದರು. ಅದರಲ್ಲಿ " ಯಥಾಬಾಹ್ಯಂಭಸ್ಯ ಸ್ವರೂಪಜ್ಞಾನಂ ನ ವಿದ್ಯತೇ | ತಥಾ ಕಲ್ಪಕೋಟಿಶತೈರಪಿ ಗುರೂಪದೇಶಂ ವಿನಾ ತತ್ವಜ್ಞಾನಂ ನ ಜಾಯತೇ " || ಎಂಬುದಾಗಿ ಮತಸ್ಥಾಪನಾಚಾರ್ಯರಲ್ಲಿ ಅಸಾಧಾರಣಭಕ್ತಿಯೂ, ಪಂಕದಲ್ಲಿ ಐಕ್ಯಬುದ್ಧಿಯೂ, ಶ್ರೀ

ಗುರುಸ್ಥಾನದಲ್ಲಿ [illegible] ಪ್ರಯೋ[illegible] [illegible]ಗಳಲ್ಲಿ ವಿಶ್ವಾಸವನ್ನು ಸಂಪೂರ್ಣವಾಗಿ ಕುಂದಿಸು[illegible] ಸಮಾಧಿಸ್ಥರು ಗಂ[illegible] [illegible] [illegible] [illegible] ಸ್ಥಿ[illegible] [illegible] ಸ್ವ[illegible] ನಮಗೆ[illegible] [illegible] ದೇಗ[illegible] ಮಠ[illegible] [illegible] [illegible] [illegible] ಯಿಂದ [illegible] [illegible] ದಲ್ಲಿ [illegible] ಅಲ್ಲಿಗೆ [illegible] ತಸ್ಮಾತ್ ಸಮಯ [illegible] [illegible] ಮೈಸೂರು ಶ್ರೀ [illegible] ಚಾರ್ಯರ ಹಾಗು ಅವರ [illegible] ಶ್ರೀ[illegible] ಜಗದ್ಗುರು [illegible] [illegible] ಸೂಯೆ [illegible] ಮಾತ್ರ [illegible] [illegible] [illegible] ಗುರು[illegible] [illegible] [illegible] [illegible] ಶ್ರೀ[illegible] [illegible] || [illegible] ಪುರ[illegible] [illegible] [illegible] ಶ್ರೀ [illegible] [illegible] || [illegible] [illegible] ರಾಜಿವಾಂಕಿತ [illegible] ಕೀರ್ತ[illegible] [illegible] ವಾಗಿಯೂ ಸಕಲರಿಗೆ [illegible] ಜರಗಿ[illegible] ಕೀರ್ತ[illegible]ದಲ್ಲಿ [illegible] ವಾಗಿ [illegible] [illegible] ಜಗದ್ಗುರುಗಳ [illegible] ಪಂಚಾಚಾರ ಮಠದಲ್ಲಿ ವೈದಿಕ [illegible] ಕ್ಕೆ [illegible] ಆನಂದವಾಗು[illegible] [illegible] [illegible] [illegible] ಗಿ[illegible] [illegible] ಸಮಾರಂಭದಲ್ಲಿ ಶ್ರೀ ಜಗದ್ಗುರು [illegible] ವೇ|| ಪಂ [illegible] ಶ್ರೀ ಜಗದ [illegible] ಪುರಾಣ [illegible] [illegible] [illegible] ಪುರಾಣ[illegible] ಮಹಾ [illegible] ಶ್ರೀ[illegible] [illegible] [illegible] ಪಂಚಾಚಾರ [illegible] ಮುಕ್ತ [illegible] ಜಗದ್ಗುರು [illegible] [illegible] [illegible] ಶಾಂತತೆ [illegible] ಶ್ರೀ ಜಗದ್ಗುರು [illegible] ಧರ್ಮ [illegible] ಶ್ರೀಮನ್ಮಹಾರಾಜ [illegible] ಆನಂದೋದ್ಗಾರ [illegible] [illegible] ಧರ್ಮ[illegible] [illegible] [illegible] [illegible] [illegible] [illegible] [illegible] ಶ್ರೀ ಜಗದ್ಗುರು [illegible] [illegible] ಇಲ್ಲಿ [illegible] [illegible] ಶಿವಮೊಗ್ಗಾದಿಂದ ಮೋಟರ್ [illegible] [illegible]

ವೀರಶೈವ ಧರ್ಮಧುರಂಧರ ಪ್ರಶಸ್ತಿ ಪ್ರದಾನ

[illegible] ದ್ವಾರಾ [illegible] ಮಲ್ಲೂರು [illegible] ಶ್ರೀ [illegible] ಕಾಶೀ ಮಹಾಕ್ಷೇತ್ರ [illegible] [illegible] ಶಿವಲಿಂಗ [illegible] ದಿಂದ [illegible] ಪಂಕ್ತಿ [illegible] ಧುರಂಧರ [illegible] ಪ್ರದಾನ [illegible] ಅನಂತರ [illegible] ಕ್ಷೇತ್ರಯಾತ್ರೆಯ [illegible] ಪಾದ[illegible] ಮಾಡಿ [illegible] ಪ್ರಕಾ[illegible] ಆದರೆ ಈ ಬಿರುದು [illegible] [illegible] ದಾಕ್ಷಿಣ್ಯ [illegible] ಗೋಚರವಾಗುವದು [illegible] ಆನಂದದಸಂಗತಿಯೇ [illegible] [illegible] [illegible] [illegible] ಈ [illegible] ತಿಳಿಸಲು [illegible] [illegible] ಬಿರುದಿಂದಲಂಕೃತರಾದ [illegible] [illegible] [illegible] ದೀರ್ಘಾ[illegible] [illegible] ಮಾಡಿ [illegible] ಗೌರವವನ್ನು [illegible] [illegible] [illegible]

ಓರ್ವ ವೀರಶೈವ

ನೋಟೀಸು.

[illegible] ಕೊಟ್ಟೂರ [illegible] ದಲ್ಲಿ [illegible] [illegible] ದಾರಿಯ [illegible] [illegible] [illegible] [illegible] ಪಂಚರ [illegible] ೧೯೨೭ ತಾರೀಖು [illegible] ಹಾಕಲ್ಪಡುತ್ತ [illegible]

(1) [illegible] ರೂ 5[illegible] 0 [illegible] [illegible]

( ) [illegible] [illegible] [illegible] [illegible]

( ) [illegible] [illegible] 15 ದಿವಸ [illegible]

(4) ಈ [illegible] ದರ [illegible] [illegible] ಹಾಕಲ್ಪಡುತ್ತದೆ

(5) ಈ [illegible] ರಿಜಿಸ್ಟರು [illegible] [illegible]

ಸರ್ವೇನಂಬರ	ಎಕರೆ	ತರಂ	
51[illegible]	1—70	1—6—0	
513	1—06	1—7—0	[illegible]
511	0—4	0—[illegible]—0	

ಆದರಿಂದಲಿಗೆ [illegible] ಕೈಲಿ [illegible] ಅನುಕೂಲವಾ[illegible] [illegible]

ಕೊಟ್ಟೂರು, K. BA[illegible] GOWD
ತಾ / 27 ಪ್ರೆಸಿಡೆಂಟ್

ASIATIC GOVERNMENT SECU
LIFE ASSURANCE CO LTD MY
ಏಸಿಯಾಟಿಕ್ ಗವರ್ನಮೆಂಟು ಸೆ
ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ [illegible] [illegible] [illegible]
ಆದ್ದರಿಂದ ಯಾವಾಗಲೂ 'ಏಸ್ಯಾಟಿಕ್' ನಿಯಲ್ಲಿಯೇ [illegible]
[illegible] ದರ [illegible] ಕಡಿಮೆ [illegible] ಮತ್ತು [illegible] (ಸ್ಕೀಮು) [illegible]
[illegible] ಬಡ್ಡಿಯಿಲ್ಲದೆ ತಮ್ಮ [illegible] ಪಾಲಿಸಿದಾರರಿಗೆ [illegible]
[illegible] 31 ನೆಯ ಜುಲೈ 1927 ಕ್ಕೆ [illegible]
ವಿಶೇಷ ವಿಷಯಗಳಿಗೆ ಈ ಕಳಗೆ [illegible]
(1) ಮೆ|| ಬಿ. [illegible]
ಚೀಫ್ ಏಜಂಟ್ ಮೈಸೂ
(2) ಮ| [illegible] ಆರಾಧ್ಯ
ಚೀಫ್ ಏಜಂಟ್ ಹುಬ್ಬಳ್ಳಿ ಮತ್ತು [illegible]
(3) ಹೈದರಾಬಾದ್ [illegible] ಹೌಸ್
ಚೀಫ್ ಏಜಂಟ್ ಹೈದರಾಬಾದ್ (ದ
[illegible] ಮುಖ್ಯ ಏಜಂಟ್
[11] ಮೈಸೂರು [illegible]

[illegible] ಯವರ
ಸುಗಂಧ ನಸ್ಯದಪುಡಿ
[illegible] ಈ ಸುಗಂಧ [illegible] [illegible] [illegible] ಉಪಯೋಗಿ[illegible] [illegible]

(Registered Trade Mark)
ಯೋಗ್ಯತಾ[illegible] [illegible] [illegible] ಈ ನಸ್ಯದ [illegible] [illegible] ವ್ಯಾಧಿಗಳು [illegible] ತಲೆಯಲ್ಲಿನ [illegible] ಕಣ್ಣುಗಳಲ್ಲಿ ಉಂಟಾಗತಕ್ಕ [illegible] [illegible] [illegible] ಪರಿಹಾರ [illegible] ಮೇಲ್ಪಟ್ಟ [illegible] ವ್ಯಾಧಿಗ[illegible] [illegible] ಈ ಸುಗಂಧ ನಸ್ಯದಪುಡಿಯಲ್ಲಿ ಒಂದು [illegible] [illegible] ಪರಿಣಾಮವಾಗುವುದು [illegible] ಗೃಹದಲ್ಲಿ [illegible] ಉಪಯೋಗಿಸುತ್ತಾರೆ [illegible] ಪುಗಸಟ್ಟೆ [illegible]
[illegible] ಒಂದಕ್ಕೆ ಕ್ರಯ ರೂ [illegible] [illegible]
[illegible] ಒಂದಕ್ಕೆ [illegible] ರೂ [illegible]
ದಯಮಾಡಿ [illegible] ಹೆಸರನ್ನೂ ಅಡ್ರೆಸ್ಸನ್ನೂ [illegible]
ಗುರುಬಸವ ಅಂಡ್ ಕಂಪನಿ ಲಿಮಿಟೆ
[13] ಪ್ರೋ [illegible] ಮದರಾಸು.

ಈ [illegible] ಮೈಸೂರು ರಾಜಧಾನಿಯಲ್ಲಿರುವ ಪಂಚಾ[illegible] ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚು[illegible] ವೇ|| ಬ್ರಂ ಪಂಡಿತ [illegible] ರುದ್ರಾಂತಶಾಸ್ತ್ರಿ[illegible] [illegible]

GISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಂತ್ವಿಮಂ ಲೋಕಕಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ.

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೯ನೇ ಆಗಸ್ಟ್ ೧೯೨೭ ಇಸವಿ [ಸಂಚಿಕೆ ೧೬.

ಲ್ದೂರಲ್ಲಿ ನಡೆದ ಸಿಲ್ವರ್‌ಜ್ಯೂಬಿಲಿ ಮಹೋತ್ಸವವು

ದೇ ತಿಂಗಳ ೬ನೇ ಆಗಸ್ಟು ದಿವಸ ಶ್ರೀಮನ್ಮಹಾ ರವರ ಸಿಲ್ವರ್‌ಜ್ಯೂಬಿಲಿ ಮಹೋತ್ಸವವು ಅ ದಿಂದ ನೆರವೇರಿತು. ಇಲ್ಲಿನ ಪ್ರಾತಃಕಾಲ ದೇವಾ ಗಳಲ್ಲಿಯೂ ಮತ್ತು ಮಸೀದಿಗಳಲ್ಲಿಯೂ ದೇವರ ರ್ಥನೆಯು ಮಾಡಲ್ಪಟ್ಟಿತು. ಸ್ಕೂಲುಮಕ್ಕಳಿಗೆ ಆಟ ು ಮತ್ತು ಪಂದ್ಯಗಳು ಅತಿವಿತರಣೆಯಿಂದ ನಡೆಸಿ ವು. ಮಧ್ಯಾಹ್ನ 1 ಘಂಟೆಗೆ [illegible] ಬಾವುಟ ಗಳಿಂದಲೂ ಮತ್ತು ತಳಿರುತೋರಣಗಳಿಂದಲೂ ಅಲಂ ಟ್ಟಿದ್ದ ಪಾಠಶಾಲೆಯ ಹಾಲಿನಲ್ಲಿ ಪ್ರಜಾಪ್ರತಿನಿ ಯು ಮೆಂಬರಾದ ಮ|| ರಾ|| ಆಲ್ದೂರು ಬಸಪ್ಪ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಕಾರ್ಯಕ್ರ ಪ್ರಾರಂಭವಾದಕೂಡಲೆ ಡಿ|| ಬೋ|| ಮೆಂಬ ಮ||ರಾ|| ದೇವಪ್ಪಗೌಡರು ರಾಜಮನೆತನದವರ ರ್ಯಚರಿತ್ರೆಯಮೇಲೂ ಮತ್ತು ಈಗ ನಮ್ಮ ಮಹಾ ಪ್ರಭುಗಳ ಆಳ್ವಿಕೆಯಲ್ಲಿ ಪ್ರಜೆಗಳಿಗುಂಟಾಗಿರುವ ಸೌಲಭ್ಯಗಳಮೇಲೂ ಬಹಳ ಸ್ವಾರಸ್ಯವಾದ ಉಪ ಮಾಡಿದರು. ಆಮೇಲೆ ಮ|| ರಾ|| ಕಾಂಪೌಂಡರ್ ಪ್ಪನವರು ಈಗಿನಕಾಲದಲ್ಲಿ ಮಕ್ಕಳ ವಿದ್ಯಾಭ್ಯಾ ಎಷ್ಟು ಆವಶ್ಯಕವೆಂಬ ವಿಷಯದಲ್ಲಿ ಸಭಿಕರೆಲ್ಲ ಗಮನಾರ್ಹವಾಗುವಂತೆ ಹೇಳಿದರು. ಆಮೇಲೆ ಮ|| ಬಸಪ್ಪಶೆಟ್ಟರ ಹಸ್ತದಿಂದ [illegible] ಲ್ಲ ಬಹುಮಾನಗಳು ಹಂಚಲ್ಪಟ್ಟವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜರ ಗುಣಕಥನಮಾಡುವ ಸಂದರ್ಭದಲ್ಲಿ ಭರತಖಂಡದ ವು ಇತರ ನೇಟಿವ್‌ಸಂಸ್ಥಾನಗಳ ರಾಜರುಗಳಂತೆ ಮಹಾಪ್ರಭುಗಳು ಅಮೆರಿಕ ಇಂಗ್ಲೆಂಡು ಪ್ರಾನ್ಸು ಮೊದಲಾದ ಪಾಶ್ಚಿಮಾತ್ಯದೇಶಗಳಿಗೆ ರಾಜ್ಯಭೀತಿಯಿಂದ ಪ್ರಯಾಣಮಾಡದೆ ಸ್ವಂ ದೇಶದಿಂದ ಸರ್ವರಿಗಿಂತಲೂ ಹೆಚ್ಚಾಗಿ ರಾಜ್ಯ ಭಾರವಹಿಸುತ್ತಿರುವರು. ಈ ಮಹಾಪ್ರಭುಗಳ ರಾಜ್ಯವು ರಾಮರಾಜ್ಯದ ಸುದಿನವನ್ನು ಜ್ಞಾಪಕಕ್ಕೆ ತರುತ್ತಿರುವುದೆಂದೂ ಇಂಥ ಸುಖಪ್ರದವಾದ ರಾಜ್ಯ ವಾಸಮಾಡುವ ನಾವೇ ಧನ್ಯರೆಂದೂ ಅರ್ಥಗರ್ಭಿತವಾದ ಭಾಷಣಮಾಡಿದರು. ಆಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟ ಸಭೆಯು ಮುಕ್ತಾಯವಾಯಿತು. ಪುನಃ ಸಂಧ್ಯಾಕಾಲ ಘಂಟೆಗೆ ಮನೋಹರವಾಗಿ ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿ ಮಹಾರಾಜರವರ ಭಾವಚಿತ್ರವು ಇಡಲ್ಪಟ್ಟು ವಾದ್ಯಘೋಷದೊಡನೆ ಆಶಿಷ್ಟಜನರಿಂದ ಉತ್ಸವವು ನೆರವೇರಿಸಲ್ಪಟ್ಟಿತು. ಈ ಉತ್ಸವದಲ್ಲಿ ಹಿಂದೂಗಳೂ ಮತ್ತು ಮುಸಲ್ಮಾನರೂ ಏಕೀಭವಿಸಿ ತಮ್ಮ ತಮ್ಮ ಭಕ್ತಿಯನ್ನು ಪ್ರದರ್ಶಿಸಿದ ಪರಿ ಅತ್ಯಂತ ಆನಂದದಾಯಕವಾಗಿತ್ತು.

ಒಬ್ಬ ಪ್ರೇಕ್ಷಕ

ಬಾರ್ಸಿ.

ಇಲ್ಲಿ ಉತ್ತಮವಾದ ಮಳೆಯಾಗಿದ್ದು ಈಗ 15 ದಿವಸಗಳಿಂದ ಸ್ವಲ್ಪ [illegible] ಆದಾಗ್ಯೂ ಮೇಲಿಂದಮೇಲೆ ಮೋಡಗಳು ಕವಿಯೋಣದರಿಂದ ಮಳೆಯು ಕಟ್ಟಿ ಕಾಲರಾ ರೋಗವು ಪ್ರಾರಂಭವಾಗಿ ಪ್ರತಿ ದಿವಸ 7-8 ಜನಗಳು ಮರಣವನ್ನು ಹೊಂದುತ್ತಲಿದ್ದಾರೆ.

ಇಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ವೀರಶೈವ ಧರ್ಮದ ಪರವಾಗಿ ಎರಡು ಸ್ಥಾನಗಳಲ್ಲಿ ಪುರಾಣಗಳು ಪ್ರಾರಂಭವಾಗಿವೆ. ಶ್ರೀ ಗುರುಸೋಮ ರಾಜಲಿಂಗಸ್ವಾಮಿ ಪರಂಡಕರ್ ಇವರ ಮಠದಲ್ಲಿ ಸಿದ್ಧೇಶ್ವರ ಪುರಾಣ ಹಾಗೂ ಪರಮರಹಸ್ಯ ಈ ಗ್ರಂಥಗಳನ್ನು ವೇದಶಾಸ್ತ್ರವಿದ್ಯಾಲಯದವರು ಪ್ರಾರಂಭಿಸಿದ್ದಾರೆ. ಸೌ|| ಶ್ರೀ ರಾಣಿಬಾಯಿ ಬಿಜಾಪುರ ಸ್ಕೂಲ ಬೋರ್ಡ ಕೌನ್ಸಿಲರ್ ಸೌ|| ಶಿವಪುಜಾಬಾಯಿ [illegible] ಗಂ|| ವಾ|| ಶಿವಪ್ಪಾಜಿ ಮಠಪತಿ ಗಂ|| ಬ್ರ|| ಸಿದ್ಧಪ್ಪಾಜಿ ತವಕಿರ ಈ ಮೊದಲಾದ ಸುಶಿಕ್ಷಿತ ಸ್ತ್ರೀಯರು ಈ ಕಾರ್ಯವನ್ನು ತ್ರಿಕರಣಪೂರ್ವಕವಾಗಿ ಮಾಡುತ್ತಾ ಸ್ತ್ರೀ ಸಮಾಜದಲ್ಲಿ ಜಾಗೃತಿಯನ್ನು ಉಂಟುಮಾಡುತ್ತಿರುವರು. ಇದು ನಮಗೆ ಅತ್ಯಂತ ಹರ್ಷಕರವಾಗಿದೆ. ಮಠದಲ್ಲಿ ಪ್ರತಿದಿನ ಅನೇಕ ಸ್ತ್ರೀಯರು ಪುರಾಣ ಶ್ರವಣಕ್ಕಾಗಿ ಬರುತ್ತಾರೆ. ಸೌ|| ತಿ ಪಾರ್ವತಿಬಾಯಿ ಇಂಡಾಪುರ ಇವರು ವೀರಶೈವ ಧರ್ಮದ ವಿಷಯದಲ್ಲಿಯೂ ಆ ಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ವಿಷಯದಲ್ಲಿಯೂ ಪ್ರತಿಯೊಬ್ಬರ ಹೃದಯದಲ್ಲಿ ಭಕ್ತಿಯು ನೆಲೆಗೊಳ್ಳುವಂತೆ ಬೋಧನೆಮಾಡುತ್ತಾರೆ. ಇವರ ಭಾಷಣದಿಂದ ಇಲ್ಲಿಯ ವೀರಶೈವ ಸ್ತ್ರೀ ಸಮಾಜವು ಸುಧಾರಿಸುತ್ತಿದೆ.

ಮತ್ತು ಮಾರುತಿ ದೇವಾಲಯದಲ್ಲಿ ವೇ|| ಸಾತಾರಕರ ಗಂಗಾಧರಶಾಸ್ತ್ರಿಗಳು ಶೈವರತ್ನಾಕರ ಎಂಬ ಗ್ರಂಥವನ್ನು ಪ್ರಾರಂಭ ಮಾಡಿರುತ್ತಾರೆ. ಸದರಿ ಶಾಸ್ತ್ರಿಗಳವರು ತಮ್ಮ ಅಮೋಘವಾದ ವಾಣಿಯಿಂದ ವೀರಶೈವ ಮತತತ್ವಗಳನ್ನು ನಿಜವಾಗಿ ಬೋಧಿಸಿ ಸರ್ವ ವೀರಶೈವರನ್ನು ಸಂತೋಷಪಡಿಸುತ್ತಿರುವರು.

ಸೊಲ್ಲಾಪುರದಲ್ಲಿ ಕೆಲವು ಜನ ವೀರಶೈವರು ಜಾತಿ [illegible] ಒಂದು ಸಭೆಯನ್ನುಮಾಡಿ ಮತಸ್ಥಾಪಕಾಚಾರ್ಯರ ವಿಷಯದಲ್ಲಿ [illegible] ಇಲ್ಲಿಯ ವೀರಶೈವರು ಆ ಸಾಮುದಾಯಿಕದ ಸಭೆಯನ್ನು ತಿರಸ್ಕರಿಸಿದ್ದಾರೆ. ಸೊಲ್ಲಾಪುರದ ಒಂದೆರಡು ವ್ಯಕ್ತಿಗಳು ಸಮ್ಮತಿ ಕೊಡದೆ ನಿರರ್ಥಕವಾದ [illegible] ಮಾಡುತ್ತಾ ಇಲ್ಲದ ಗೊಂದಲವನ್ನು ಎಬ್ಬಿಸುವುದಕ್ಕಾಗಿ ಇಲ್ಲಿಯ ವೀರಶೈವರು ವ್ಯಸನಪಡುತ್ತಲಿದ್ದಾರೆ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಇವರು ಲಕ್ಷ ವೀರಶೈವಜನರಿಂದ ಕೂಡಿದ ಮಹಾರಾಷ್ಟ್ರದೇಶದಲ್ಲಿ ಸಂಚರಿಸದೆ ಕೇವಲ ಕರ್ನಾಟಕ ದೇಶದಲ್ಲಿ ಮಾತ್ರ ಸಂಚರಿಸುತ್ತಿರುವುದರಿಂದಲೂ ಮಹಾರಾಷ್ಟ್ರದೇಶದ ತಮ್ಮ ಶಿಷ್ಯರನ್ನು ಕೃಪಾದೃಷ್ಟಿಯಿಂದ ನೋಡದೆ ಇರುವುದರಿಂದಲೂ ಕೆಲವು [illegible] ದಾಂಭಿಕರು ನಾವೇ ದೊಡ್ಡ ಗುರುಗಳೆಂದು ಈ ಮಹಾರಾಷ್ಟ್ರದೇಶದ ಜನರನ್ನು ಮರುಳುಮಾಡಿ ಹಣವನ್ನು ಸೆಳೆಯುತ್ತಿರುವುದರಿಂದಲೂ ಇಲ್ಲಿರುವವರಿಗೆ ವೀರಶೈವಧರ್ಮದ ನಿಜಸ್ವರೂಪವು ತಿಳಿಯದೆ ಇರುವುದರಿಂದಲೂ ಬಹಳ ಹಿಂದೆ ಬಿದ್ದಿದ್ದಾರೆ. ಈ ವಿಷಯವನ್ನು ಶ್ರೀ ಜಗದ್ಗುರು ಪಂಚಾಚಾರ್ಯರು ಲಕ್ಷ್ಯಕ್ಕೆ ತಂದು ಮಹಾರಾಷ್ಟ್ರದೇಶದಲ್ಲಿ ತಮ್ಮ ಪಾದವಿನ್ಯಾಸವನ್ನು ಮಾಡಿ ಈ ದೇಶೀಯರನ್ನು ಯಾವ ಕಾಲಕ್ಕೆ ಪವಿತ್ರಗೊಳಿಸುವರೋ ಎಂದು ಹಗಲಿರುಳು ಪರಮಾತ್ಮನನ್ನು ಪ್ರಾರ್ಥಿಸುತ್ತಿದ್ದಾರೆ.

ಓರ್ವ ಸಮಾಜ ಹಿತಚಿಂತಕ ವಾರ್ತಿಕ

ಸ್ವಗೋತ್ರವಿವಾಹ ನಿಷೇಧ.

ಬೆಳಗಾಂವ ಡಿಸ್ಟ್ರಿಕ್ಟ ಸವದತ್ತಿಯಲ್ಲಿರುವ ಮಿ|| ಶರಂಬಿಮಠ ಬಿ. ಎ. ಎಲ್. ಎಲ್. ಬಿ. ಇವರು ತಾವು ಗುರುವಂಶ ಸಂಭೂತರಾಗಿ ಒಂದೇ ಗೋತ್ರಕ್ಕೆ ಸೇರಿದವರಾಗಿದ್ದು ತಮ್ಮ ಗೋತ್ರೋದ್ಭವವಾದ ಕನ್ಯೆಯನ್ನೇ ವಿವಾಹಮಾಡಿಕೊಳ್ಳಲು ಉದ್ಯುಕ್ತರಾಗಿರುತ್ತಾರೆ. ಇದು ಜಗತ್ತಿನ ಶಾಸ್ತ್ರವಿರುದ್ಧವಾದದು. ಈ ವಿಷಯದ ಮೇಲೆ ಸವದತ್ತಿಯ [illegible] ಒಂದು ಸಭೆಯನ್ನು ಕೂಡಿಸಿದ್ದಾರೆ. ಇದು ನಿಜವಿದ್ದ ಪಕ್ಷದಲ್ಲಿ ಈ ತರದ ಧರ್ಮಶಾಸ್ತ್ರಕ್ಕೆ ವಿರುದ್ಧವಾದ ಮಾರ್ಗದಲ್ಲಿ ಮಿ|| ಶರಂಬಿಮಠ ವಕೀಲರು ಪ್ರವೇಶಮಾಡದೆ ಸ್ವಗೋತ್ರದ ಕನ್ಯೆಯನ್ನು ವಿವಾಹವಾಗದೆ ಶಾಸ್ತ್ರಕ್ಕೂ ತಮ್ಮ ಮನೆತನಕ್ಕೂ ಮರ್ಯಾದೆಯನ್ನು ಉಳಿಸಬೇಕೆಂದು ನಾವು ಅತ್ಯಾದರದಿಂದ ಸೂಚಿಸುತ್ತೇವೆ.

ಸಂ—

ಪಂಚಾಚಾರ್ಯಪ್ರಭಾ

೧೯೩೭ನೇ ಆಗಸ್ಟ್ ೨೩ [illegible] ಸೋಮವಾರ

ಲಿಂಗಧಾರಣವು.

ವೀರಶೈವ ಸ್ತ್ರೀಪುರುಷರಿಗೆ ಶಿವಾಗಮಗಳು ವಿಧಿಸಿದ್ದಾದ ಈ ಲಿಂಗಪೂಜೆಯೇ ಶಿವಯಜ್ಞವಾಗಿರುವದರಿಂದ ಪ್ರತಿದಿನವೂ ಲಿಂಗಪೂಜಾರೂಪವಾದ ಈ ಮಹಾಯಜ್ಞವನ್ನು ಮಾಡುತ್ತಿರುವಲ್ಲಿ ಸ್ತ್ರೀಪುರುಷರೀರ್ವರೊಳಗೆ ಯಾರಿಗಾದರೂ ಅಕಸ್ಮಾತ್ತಾಗಿ ರಜಸ್ಸೂತಕ ಮುಂತಾದ ಪಂಚಸೂತಕಗಳಲ್ಲಿ ಯಾವುದಾದರೊಂದು ಸೂತಕವುಂಟಾದರೂ ದೇಹದಿಂದ ಲಿಂಗವನ್ನು ತೆಗೆಯದೆ ಲಿಂಗಪೂಜೆಯನ್ನು ಬಿಡದಿರುವುದೇ ವೀರಶೈವನಿಗೆ ಪಂಚಸೂತಕಗಳಿಲ್ಲವೆಂಬ ಸಿದ್ಧಾಂತವಚನಗಳಿಗೆ ಅರ್ಥಸಂಕೋಚವನ್ನು ಮಾಡಬೇಕಾಗುವುದಲ್ಲದೆ ಸರ್ವಭಾಗಗಳಲ್ಲಿಯೂ ಸೂತಕಗಳಿಲ್ಲವೆಂದು ಅರ್ಥಮಾಡುವುದಕ್ಕಾಗುವುದಿಲ್ಲ. ಕೆಲವು ದಿವಸಗಳವರೆಗೂ ನಡೆಯಬೇಕಾಗಿರುವ ಪೌಂಡರೀಕ ಮುಂತಾದ ದೀರ್ಘಯಾಗಗಳಲ್ಲಿ ದಂಪತಿಗಳು ಸಂಕಲ್ಪವನ್ನು ಮಾಡಿ ದೀಕ್ಷಾಬದ್ಧರಾಗಿ ಯಜ್ಞವನ್ನು ಪ್ರಾರಂಭಿಸುತ್ತಾರೆ. ಈ ಮಧ್ಯದಲ್ಲಿ ಪಂಚಸೂತಕಗಳಲ್ಲಿ ಯಾವುದಾದರೊಂದು ಸೂತಕವು ಬಂದೇ ಬರುವುದು. ಆದರೂ ದೀರ್ಘಯಜ್ಞಗಳನ್ನು ಮಾಡುವ ಸಂದರ್ಭಗಳಲ್ಲಿ ಆ ಸೂತಕಗಳುಂಟಾದರೂ ಆ ದಂಪತಿಗಳು ಮೊದಲ ದೀಕ್ಷಾಪ್ರಭಾವದಿಂದ ಪ್ರಾರಂಭಿಸಿದ ಯಜ್ಞಕಾರ್ಯವನ್ನು ನಿಲ್ಲಿಸದೆ ಯಜ್ಞವಿಧಿಯಾಯ ಮುಂದಣಕಾರ್ಯಗಳನ್ನೆಲ್ಲಾ ಸಂಪೂರ್ಣಮಾಡಲೇಬೇಕು. ಹಾಗಿಲ್ಲದೆ ಸೂತಕದೋಷದಿಂದ ಯಜ್ಞಕಾರ್ಯವನ್ನು ಮಧ್ಯದಲ್ಲಿ ನಿಲ್ಲಿಸಿದ್ದಾದರೆ ವಿಶೇಷವಾಗಿ ದ್ರವ್ಯವ್ಯಯವನ್ನು ಮಾಡಿ ಯಜ್ಞವನ್ನು ಮಾಡಿದಕ್ಕೆ ಫಲವೂ ಇಲ್ಲದೆ ಅದಕ್ಕೋಸ್ಕರ ಸಂಗ್ರಹಿಸಿದ ದ್ರವ್ಯವೂ ನಾಶವಾಗಿ ಕ್ರಮಕ್ಕೆ ತಕ್ಕ ಫಲವೂ ಇಲ್ಲದೆ ಪ್ರತ್ಯವಾಯಕ್ಕೆ ಭಾಗಿಯಾಗಬೇಕಾಗುವದು. ಆಗ ನೀರಲ್ಲಿ ಹೋಮಮಾಡಿದಂತೆ ನಿರರ್ಥಕವಾಗುವುದು. ಆದುದರಿಂದಲೇ ದೀರ್ಘಯಜ್ಞಗಳಲ್ಲಿ ವಿಘ್ನವುಂಟಾಗದೆ ಪ್ರಾರಂಭಿಸಿದ ಯಜ್ಞದಕಾರ್ಯವು ಸಂಪೂರ್ಣವಾಗಿ ಯಜ್ಞಕರ್ತನಿಗೆ ಫಲವುಂಟಾಗಬೇಕೆಂಬ ಉದಾತ್ತ ತತ್ವದಿಂದ ಪೌಂಡರೀಕಾದಿ ದೀರ್ಘಯಜ್ಞಗಳಲ್ಲಿ ರಜಸ್ಸೂತಕಾದಿದೋಷಗಳು ಋಷಿಗಳಿಂದ ತೆಗೆದುಹಾಕಲ್ಪಟ್ಟವೆ. ಅದರಂತೆಯೇ ವೀರಶೈವರು ಲಿಂಗಪೂಜೆಯೆಂಬ ಯಜ್ಞವನ್ನು ತಮ್ಮ ಶರೀರವಿರುವವರೆಗೂ ಪ್ರತಿದಿನವೂ ತಪ್ಪದೆ ಮಾಡುವೆನೆಂದು ದೃಢತರವಾದ ಸಂಕಲ್ಪವನ್ನು ಮಾಡಿ ದೀಕ್ಷಾಬದ್ಧರಾಗಿ [illegible] ಮಧ್ಯದಲ್ಲಿ ರಜಸ್ಸೂತಕಾದಿದೋಷಗಳುಂಟಾದರೂ ಲಿಂಗಪೂಜಾರೂಪವಾದ ಯಜ್ಞಕಾರ್ಯವನ್ನು ನಿಲ್ಲಿಸದೆ ಸ್ನಾನದಿಂದ ಪರಿಶುದ್ಧರಾಗಿ ಮುಂದಣಕಾರ್ಯವನ್ನು ಮಾಡುತ್ತಲೇ ಇದ್ದು ಮೋಕ್ಷರೂಪವಾದ ಮಹಾಫಲವನ್ನು ಹೊಂದಬೇಕಾದುದು ವೀರಶೈವರ ಆದ್ಯ ಕರ್ತವ್ಯವಾಗಿದೆ.

ಒಂದುವೇಳೆ ವೀರಶೈವ [illegible] ತಿಳಿಯದೆ ಇತರಜನರ ಸಂಬಂಧದಿಂದಾಗಲಿ ಇತರರ ಬೋಧನೆಯಿಂದಾಗಲಿ ಇತರರ ಸಹವಾಸದಿಂದಾಗಲಿ, ರಜಸ್ಸೂತಕಾದಿ ಪಂಚಸೂತಕಗಳುಂಟಾದ ಸಮಯದಲ್ಲಿ ಅಶುಚಿಯಾಗಿದ್ದೇನೆಂದು [illegible] ಪರಮಪವಿತ್ರವಾದ ಗೇಯವಾದ ಲಿಂಗವನ್ನು ತೆಗೆದುಹಾಕಿ ಪೂಜೆಯನ್ನು ಬಿಡುವುದಾದರೆ ಅಂಥವರಲ್ಲಿರುವ ಲಿಂಗಾಂಗಸಂಬಂಧ ನಾಶವಾಗಿ ಪಾಪವುಂಟಾಗುವದಲ್ಲದೆ ಲಿಂಗವನ್ನೇ ಅಗಲಿಸಿದ ಮಹಾದೋಷಕ್ಕೆ ಪಾತ್ರರಾಗಿ ಒಂದೆಮಾಡಿದ ಪೂಜಾಧ್ಯಾನಾದಿಗಳೆಲ್ಲವೂ ನಿಷ್ಫಲವಾಗಿ ಮೋಕ್ಷರೂಪವಾದ ಫಲಕ್ಕೆ ದೂರವಾಗಿ ನರಕಕ್ಕೆ ದಾಗುವರು. ಇದರಿಂದ ವೀರಶೈವಮತಾನುಯಾಯಿಯಾದ ಮಾನವನಿಗೆ ಲಿಂಗಧಾರಣ ಲಿಂಗಪೂಜಾದಿವಿಷಯದಲ್ಲಿ ಮಾತ್ರ ಸಾಮಾನ್ಯಶಾಸ್ತ್ರವೆನಿಸಿದ ಧರ್ಮಶಾಸ್ತ್ರಂಗಳಲ್ಲಿ ಹೇಳಿದ ಸೂತಕನಿಮಿತ್ತಗಳಾದ ಅಶೌಚನಿಯಮೋಲ್ಲಂಘನವನ್ನು ಮಾಡಿದರೂ ವಿಶೇಷಶಾಸ್ತ್ರವೆನಿಸಿದ ವೀರಶೈವಸಿದ್ಧಾಂತಾನುಗುಣವಾದ ನಿಯಮಗಳನ್ನು ಹಿಂಬಾಲಿಸಿದ್ದರಿಂದ ಲಿಂಗಾಂಗಿಯಾದ ಮಾನವನಿಗೆ ಸಾಮಾನ್ಯದೋಷಗಳನ್ನು ಹೇಳುವುದಕ್ಕಾಗುವುದಿಲ್ಲ. ಹಾಗಾದರೆ ವೀರಶೈವಮತವನ್ನು ಅವಲಂಬಿಸಿದ ಸ್ತ್ರೀಪುರುಷರಿಗೆ ಪಂಚಸೂತಕಗಳೇ ಇಲ್ಲವೆಂದು ಹೇಳಲ್ಪಟ್ಟ ಮೇಲೆ ರಜಸ್ವಲೆಯರಾದ ವೀರಶೈವಸ್ತ್ರೀಯರುಗಳು ಸ್ನಾನದಿಂದ ಶುದ್ಧರಾಗಿ ತಮ್ಮ ಲಿಂಗಪೂಜೆಯನ್ನು ಮಾಡಿಕೊಳ್ಳುವದಲ್ಲದೆ ಪಾಕಶಾಲೆಯನ್ನು ಪ್ರವೇಶಿಸಿ ಅಡಿಗೆಯನ್ನು ಮಾಡುವುದು ತಮ್ಮ ತಮ್ಮ ಪತಿಗಳ ಲಿಂಗಪೂಜೆಗೆ ಅಣಿಮಾಡುವದೂ, ಪತಿಸೇವೆಯನ್ನು ಮಾಡುವದೂ, ಅತಿಥಿಗಳಿಗೆ ಬಡಿಸುವುದೂ ಮುಂತಾದ ಇತರ ಗೃಹಕೃತ್ಯಗಳನ್ನೂ ಮಾಡಬಹುದಲ್ಲವೇ ಎಂದು ಆಕ್ಷೇಪಗಳುಂಟಾಗುತ್ತವೆ. ನಿತ್ಯಯಜ್ಞವೆನಿಸಿದ ತಾನು ಧರಿಸಿದ ಲಿಂಗದ ಪೂಜೆಗಳಿಗೆ ಮಾತ್ರ ಸೂತಕಗಳಿಲ್ಲವೇ ಹೊರತು ಮಿಕ್ಕ ಇತರ ಎಲ್ಲಾ ಕಾರ್ಯಗಳಿಗೂ ಧರ್ಮಶಾಸ್ತ್ರದಲ್ಲಿ ಹೇಳಿದ ಸೂತಕನಿಯಮಗಳು ಇದ್ದೇ ಇರುವವು. ಪೌಂಡರೀಕಾದಿ ದೀರ್ಘಯಾಗಗಳಿಗೆ ವಿಘ್ನವುಂಟಾಗಬಾರದೆಂದು ಸೂತಕಗಳನ್ನು ತೆಗೆದುಹಾಕಿರುವಂತೆ ಲಿಂಗಪೂಜೆಯೆಂಬ ಯಾವಜ್ಜೀವಕರ್ತವ್ಯವಾದ ಮಹಾಯಾಗಕ್ಕೆ ವಿಘ್ನವುಂಟಾಗದೆ ಸರ್ವರೂ ಫಲಭಾಗಿಗಳಾಗಿ ಮೋಕ್ಷಪದವನ್ನು ಹೊಂದಲೆಂಬ ಮಹೋಪಕಾರದಿಂದ ವೀರಶೈವಸಿದ್ಧಾಂತದಲ್ಲಿ ಸೂತಕಗಳು ತೆಗೆದುಹಾಕಲ್ಪಟ್ಟವೇ ಹೊರತು ಲೌಕಿಕವ್ಯವಹಾರಗಳ ಸೌಕರ್ಯಕ್ಕಾಗಿ ತೆಗೆದುಹಾಕಲ್ಪಟ್ಟಿಲ್ಲ.

ಹಿಂಸೆಯನ್ನು ಮಾಡಬಾರದೆಂಬ ವೇದವಾಕ್ಯವು ಯಜ್ಞಸಂಬಂಧದ ಪಶುವೊಂದನ್ನು ಹಿಂಸೆಮಾಡಬೇಕೆಂಬ ವಿಶೇಷವಿಷಯದಲ್ಲಿ ಮಾತ್ರ ಹಿಂದಾಗುವುದೇ ಹೊರತು ಉಳಿದ ಲೌಕಿಕಪಶುಗಳನ್ನು ಹಿಂಸಿಸುವುದನ್ನು ನಿಷೇಧಿಸಿಯೇ ನಿಷೇಧಿಸುವುದು. ಅದರಂತೆ ಸೂತಕವಿಧಾಯಕಗಳಾದ ಧರ್ಮಶಾಸ್ತ್ರನಿಯಮಗಳು ಲಿಂಗಪೂಜಾ ಲಿಂಗಧಾರಣಗಳೆರಡರಲ್ಲಿ ಮಾತ್ರ ಪ್ರವರ್ತಿಸುವುದಿಲ್ಲವೇ ಹೊರತು ಮಿಕ್ಕವುಗಳಲ್ಲಿ ವೇದಮತಾನುಯಾಯಿಗಳಾದ ವೀರಶೈವರಿಗೆ ಮಿಕ್ಕ ವೈದಿಕಮತಗಳಂತೆ ಸೂತಕನಿಯಮಗಳು ಇದ್ದೇ ಇರುವವು. ಹಾಗಿಲ್ಲದೆ ಹೋದರೆ ವೈದಿಕತ್ವಕ್ಕೆ ಭಂಗವುಂಟಾಗುವದು. ವರ್ಣಾಶ್ರಮಧರ್ಮವು ನಷ್ಟವಾಗುವುದು. ಧರ್ಮಶಾಸ್ತ್ರಾತಿಕ್ರಮಣ ದೋಷವುಂಟಾಗುವುದು. ಇದೇವಿಷಯವನ್ನು ಆಚಾರ್ಯವರ್ಯರು ಲಿಂಗಧಾರಣಚಂದ್ರಿಕೆಯೆಂಬ ತಮ್ಮ ಗ್ರಂಥದಲ್ಲಿ ದೃಷ್ಟಾಂತಪೂರ್ವಕ ಹೇಳಿರುವರು. ಚತುರ್ದಶಿ ಪೌರ್ಣಿಮೆ ಪ್ರತಿಪತ್ತು ಈ ದಿವಸಗಳು ಅನಧ್ಯಯನದಿವಸಗಳಾದುದರಿಂದ ಈ ದಿವಸಗಳಲ್ಲಿ ವೇದಮಂತ್ರಗಳನ್ನು ಉಚ್ಚರಿಸಕೂಡದೆಂದು ಮನುಸ್ಮೃತಿಯಲ್ಲಿ ನಿಷೇಧಿಸಲ್ಪಟ್ಟಿದ್ದರೂ ಅನಧ್ಯಯನಕಾಲದಲ್ಲೂ ಅವಶ್ಯ ಮಾಡಬೇಕಾದ ನಿತ್ಯನೈಮಿತ್ತಿಕಗಳಾದ ಸಂಧ್ಯಾವಂದನಾದಿ ವೇದಮಂತ್ರಗಳನ್ನೂ ಅನಧ್ಯಯನದಿವಸಗಳಲ್ಲಿಯೇ ಮಾಡಬೇಕಾದ ದರ್ಶಪೂರ್ಣಮಾಸೇಷ್ಟಿಯ ಮಂತ್ರಗಳನ್ನೂ, ವೈಶ್ವದೇವಪೂಜೆಯ ಮಂತ್ರಗಳನ್ನು ಅಂಥಹ ಅನಧ್ಯಯನದಿವಸಗಳಲ್ಲಿಯೂ ಉಚ್ಚರಿಸಬಹುದು. ಈ ಮಂತ್ರಗಳಿಗೆ ಅನಧ್ಯಯನದೋಷಗಳು ಇಲ್ಲವು. ಮಿಕ್ಕ ವೇದಮಂತ್ರಗಳಿಗೆ ಮಾತ್ರ ಅನಧ್ಯಯನದೋಷಗಳುಂಟು ಎಂದು ನಿರ್ಧರಿಸುವಂತೆ ನಿತ್ಯಸಂಕಲ್ಪಿತಗಳಾದ ಲಿಂಗಪೂಜೆ ಲಿಂಗಧಾರಣಗಳಿಗೆ ಮಾತ್ರ ಪಂಚಸೂತಕಗಳಿಲ್ಲವು. ಇತರ ಎಲ್ಲಾ ವ್ಯವಹಾರಾದಿಕಾರ್ಯಗಳಲ್ಲಿ ಯಥಾಪ್ರಕಾರ ಧರ್ಮಶಾಸ್ತ್ರದಲ್ಲಿ ಹೇಳಿದ ರೀತಿ ಪಂಚಸೂತಕಗಳುಂಟು ಎಂದು ಸ್ಪಷ್ಟವಾಗಿ ಆ ಲಿಂಗಧಾರಣಚಂದ್ರಿಕಾಕಾರರಿಂದ ಹೇಳಲ್ಪಟ್ಟಿರುವುದು.

ಇದೇ ಅಭಿಪ್ರಾಯವು ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಒಬ್ಬರಾದ ಪಂಡಿತಾರಾಧ್ಯ ವಂಶಾಂಬುಧಿಯಲ್ಲಿ ಜನಿಸಿದ ಶ್ರೀಪತಿಪಂಡಿತರಿಂದ ಬರೆಯಲ್ಪಟ್ಟಿದ್ದ ಬ್ರಹ್ಮಸೂತ್ರಭಾಷ್ಯ (ಶ್ರೀಕರಭಾಷ್ಯ) ದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಇಲ್ಲಿ ವಾಚಕರ ಅವಗಾಹನೆಗಾಗಿ, ಸಂಕ್ಷೇಪವಾಗಿ ಶ್ರೀಕರಭಾಷ್ಯದ ಕೆಲವು ಅಂಶಗಳನ್ನು ಮಾತ್ರ ತೋರಿಸುತ್ತೇವೆ.

“ಶಿವಲಿಂಗೈಕಪೂಜಾಪರಾಂ ಸ್ವೈಪಾಶ್ಚಾ
ಯುತೆ | ಪೌಂಡರೀಕೇ ರಜಸ್ಸ್ತ್ರೀಣಾಂ ನಾಗ್ನಿಹೋ
ಯಥಾತಥಾ ||

ಅರ್ಥ|| ಪೌಂಡರೀಕಯಾಗದಲ್ಲಿ ದಂಪತಿಗಳ
ಕ್ಷಾಬದ್ಧರಾಗಿ ಕುಳಿತುಕೊಂಡು ನಿತ್ಯವೂ ಯ
ದ್ಯವನ್ನು ನಡೆಸುತ್ತಿರುವಸಮಯದಲ್ಲಿ ದೀಕ್ಷೆಗೊ
ನ ಆ ಸ್ತ್ರೀಯಳು ಅಕಸ್ಮಾತ್ ರಜಸ್ವಲೆಯಾ
ರಜಸ್ವಲಾದೋಷದಿಂದ ಪ್ರತಿಬಂಧಕವುಂಟಾ
ಯಜ್ಞಕಾರ್ಯಕ್ಕೆ ಅನುಕೂಲವಾಗುವಂತೆಯೂ
ಸಂಕಲ್ಪಿತವಾದ ಅಗ್ನಿಹೋತ್ರಕಾರ್ಯವನ್ನು ನ
ತ್ತಿರುವಲ್ಲಿ ಸೂತಕಗಳುಂಟಾದರೂ ಅಗ್ನಿಹೋ
ಕಾರ್ಯವು ನಡೆಸಲ್ಪಡುತ್ತಲೇ ಇರುವಂತೆಯೂ
ಗುರುಗಳು ಮಾಂಸಪಿಂಡದ ಗುಣಗಳನ್ನು ತೊ
ಸಿ ದೇಹವನ್ನು ಮಂತ್ರಪಿಂಡವನ್ನಾಗಿ ಮಾಡಿ
ಲಿಂಗಪೂಜಾರೂಪವಾದ ದೀರ್ಘಯಾಗಕ್ಕೆ ಪ್ರಾ
ಮಾಡಿಸಿರುವಲ್ಲಿ ಮಧ್ಯೆ ಸೂತಕಗಳುಂಟಾದರೂ
ಪೂಜೆಯೆಂಬ ಯಜ್ಞವನ್ನು ಮಾಡುತ್ತಲೇ ಇರಬೇ
ಲಿಂಗಪೂಜೆಗೆ ಸೂತಕಗಳಿಲ್ಲವು ಎಂದು ಹೇಳಿ ಯ
ಭಾಗದಲ್ಲಿ ಸೂತಕಗಳುಂಟು, ಯಾವಭಾಗದಲ್ಲಿ ಸೂ
ಕಗಳಿಲ್ಲ ಎಂಬುವ ಸಂಶಯವನ್ನು ಪರಿಹರಿಸುವುದ
ಗಿ ಪರಮೇಶ್ವರನು ಪಾರ್ವತಿಗೆ ಉಪದೇಶಿಸಿದ ಶಿ
ಮವಾಕ್ಯವನ್ನು ಅದೇ ಶ್ರೀ ಭಗವತ್ಪಾದರು ಉದ
ರಿಸಿರುವರು.

“ಅಕರಸ್ತ್ರೀಯೋಗ್ಯಾಪಿ ಯಥಾಜಿಹ್ವಾ ಮ
ಶ್ವರಿ | ಮಂತ್ರೋಚ್ಚಾರಣಮಾತ್ರಸ್ಯ ಪೂತಾಭ
ಭೂತಲೆ || ತಥಾಸೂತಕಿನಶ್ಶೈವಾಃ ಪೂಜಾಮಾತ್ರ
ನಿರ್ಮಲಾಃ | ನಾನ್ಯಸ್ವಕಾರ್ಯಾನುಕೂಲಾಸ್ಸ್ಯುಃ
ವೇದಾನುಶಾಸನಂ ” ||

ಅರ್ಥ|| ಎಲ್ಲೈ ಅರ್ಧಾಂಗಿಯಾದ ಪಾರ್ವತಿ!
ಲೋಕದಲ್ಲಿ ಅನವರತ ನಾಲಿಗೆಯನ್ನು ನೀರಿನಿಂದ ಚ
ನ್ನಾಗಿ ತೊಳೆದುಕೊಂಡು ಪರಿಶುದ್ಧಗೊಳಿಸದಿದ್ದ
ರೂ ಆ ನಾಲಿಗೆಯು ಗುರೂಪದಿಷ್ಟವಾದ ಮಂತ್ರೋ
ಚ್ಚಾರಣೆಗೆ ಮಾತ್ರ ಪರಿಶುದ್ಧವಾಗಿರುವುದು. ನಾ
ಗೆಯು ಪರಿಶುದ್ಧವಾಗಿದೆಯೆಂದು ತಿಳಿದು ಆ ನಾ
ಯಲ್ಲಿ ಒಂದುಬೆರಳನ್ನು ಇರಿಸಿಕೊಂಡರೂ ಆ ಬೆ
ಪರಿಶುದ್ಧವಾಗುವುದಿಲ್ಲವು. ಅಪರಿಶುದ್ಧವೇ ಆಗುವು
ಆಕ್ಷಣದಲ್ಲಿಯೇ ಆ ಬೆರಳನ್ನು ನೀರಿನಿಂದತೊಳೆದು ಪ
ಶುದ್ಧಮಾಡಿಕೊಳ್ಳಬೇಕಾಗುವುದು. ಅದರಂತೆ ಲಿಂಗಾ
ಗಿಯಾದ ವೀರಶೈವನು ಗುರುವಿನಿಂದ ಕೊಡಲ್ಪ
ಲಿಂಗವನ್ನು ಧರಿಸುವುದಕ್ಕೂ ಲಿಂಗವನ್ನು ಪೂಜಿಸು
ದಕ್ಕೂ ಪಂಚಸೂತಕಗಳಿಲ್ಲವೇ ಹೊರತು ಅಡಿಗೆ, ಪ
ಚರ್ಯ, ಅತಿಥಿಪೂಜಾ ಮುಂತಾದ ಕೆಲಸಗಳನ್ನು ಮಾಡು
ವುದರಲ್ಲಿ ಶ್ರುತಿಗಳಲ್ಲಿಯೂ ಸ್ಮೃತಿಗಳಲ್ಲಿಯೂ ಹೇಳಿ
ಸೂತಕನಿಯಮಗಳುಂಟೇಉಂಟು ಇದು ವೇದಾಜ್ಞೆ
ಎಂದು ಶ್ರೀಕರಾಚಾರ್ಯರು ತಾವು ರಚಿಸಿದ ಬ್ರಹ್ಮಸೂ
ತ್ರಭಾಷ್ಯದಲ್ಲಿ ಯುಕ್ತಿಪ್ರಮಾಣಗಳೊಡನೆ ಪಂಚಸೂ
ತಕಗಳ ವಿಚಾರವನ್ನು ಸಂಪೂರ್ಣವಾಗಿ ಮಾಡಿದ್ದಾ

ಆದುದರಿಂದ “ಲಿಂಗಧಾರೀಸದಾಶುದ್ಧಃ ನಿಜಲಿ
ಗಂಮನೋಹರಂ ಅರ್ಚಯೇದ್ಗಂಧಪುಷ್ಪಾದ್ಯೈ
ಕರಪೀಠೇ ಸಮಾಹಿತಃ ” ಇತ್ಯಾದಿ ಅನಂತಶಿವಾಗಮ
ವಾಕ್ಯಗಳಿರುವುದರಿಂದ ವೀರಶೈವರಲ್ಲಿ ಬ್ರಹ್ಮಚಾರ್ಯಾ
ಸಕಲಾಶ್ರಮಾವಲಂಬಿಗಳು ಗುರುವಿನಿಂದ ಕೊಡಲ್ಪಟ್ಟ
ಶಿವಲಿಂಗದಿಂದಲೇ ಮುಕ್ತಿಯನ್ನು ಪಡೆಯಬೇಕಾಗಿರು
ವುದರಿಂದಲೂ ಶಿವಲಿಂಗದಿಂದಲೇ ಜ್ಯೋತಿರ್ಲಿಂಗಾ
ರಾಧಕರಾಗಬೇಕಾಗಿರುವುದರಿಂದಲೂ, ಈ ಲಿಂಗದಿಂ
ಲೇ ವೀರಶೈವನೆಂಬಭಿಧಾನವನ್ನು ಪಡೆಯಬೇಕಾಗಿರು
ವುದರಿಂದಲೂ, ಲಿಂಗಸಂಬಂಧಿಗಳಾದ ವ್ರತಗಳಿಗೆ ಲೋ
ಪವುಂಟಾಗದಂತೆ ಆ ಇಷ್ಟಲಿಂಗವನ್ನು ಪ್ರತಿಯೊ
ರೂ ಸಾವಧಾನದಿಂದ ಧರಿಸಿ ಲಿಂಗಾಂಗಸಾಮರಸ್ಯ
ಸಿದ್ಧಿಯನ್ನು ಪಡೆದು ಜೀವನ್ಮುಕ್ತಿಯನ್ನು ಪೊಂದಿ ತಮ್ಮ
ವೀರಶೈವನೆಂಬ ನಾಮವನ್ನು ಅನ್ವರ್ಥಪಡಿಸಿಕೊಳ್ಳ
ಕ್ಕದೇ ಲಿಂಗಧಾರಣದ ಮುಖ್ಯೋದ್ದೇಶವಾ
ರುವುದು

ರುಪಟ್ಟಣದಲ್ಲಿ ಮಹಾಪ್ರಭುಗಳ ಉತ್ಸವವು.

ಾಸಿಗೆ ಮುಖ್ಯಪಟ್ಟಣವೆನಿಸಿದ ಬೆಂಗಳೂರಲ್ಲಿ ಾಜರಾದ ಶ್ರೀಮನ್ಮಹಾರಾಜರವರ ಉತ್ಸ ಂದಣತಿಂಗಳು ೮ನೇ ತಾರೀಖಿನ ದಿವಸ ನಡೆ ಿದು. ಕೇಳುತ್ತೇವೆ. ಬೆಂಗಳೂರು ಪಟ್ಟಣಿ ಸಮಾಚಾರವನ್ನು ಕೇಳಿ ಸಂತೋಷಪರಾಗರ ್ಯರಾಗಿ ಈಗಿನಿಂದಲೂ ರಾಜಭಕ್ತಿಯಿಂದ ಮನೆಮಠಗಳನ್ನೆಲ್ಲ ಸುಣ್ಣಬಣ್ಣದಿಂದ ಅಲಂ ಿಡುತ್ತಲಿದ್ದಾರೆ. ಸ್ವಾರಿಯು ನಾಲ್ಕು ಗಳನ್ನು ಹೂಡಿದ ದಿವ್ಯರಥದಲ್ಲಿ ಬೆಂಗ ವ ರಾಜಮಂದಿರದಿಂದ ಪ್ರಯಾಣಬೆಳೆಸಿ ಟೆಯನ್ನು ಪ್ರವೇಶಿಸಿ ಹೊಸಮಾರ್ಕೆಟಿನ ಡೆಯಲ್ಲಿ ರಚಿಸಲ್ಪಡುವ ಮಂಟಪದಲ್ಲಿ ಮ್ಯು ಯವರಿಂದ ಒಪ್ಪಿಸಲ್ಪಡುವ ಅಭಿನಂದನ ನ್ನು ಸ್ವೀಕರಿಸಿ ಮೈಸೂರುರೋಡ್, ಅವೇ ್ಕಪೇಟೆ, ನಗರ್ತರ ಪೇಟೆಗಳಲ್ಲಿ ಪ್ರವೇಶಿಸಿ ಕಾರಿಗೆ ಸ್ವಾರಿಯು ಚಿತ್ತೈಸುವುದೆಂದು ವೆ. ಮಹಾಪ್ರಭುಗಳ ಉತ್ಸವವು ಬೆಂಗಳೂರು ಇದೇ ಪ್ರಥಮೋತ್ಸವವಾದುದರಿಂದ ಭವವನ್ನು ಹೇಳುವಂತೆ ಇಲ್ಲವು. ರಾಜಭಕ್ತಿ ಪ್ರೇಕ್ಷಕರಾಗಿ ಬಂದ ಜನಗಳ ವಾಸಕ್ಕೆ ಬೆಂಗ ಟ್ಟಣವು ಸಾಲುತ್ತದೆಯೋ ಇಲ್ಲವೋ ಎಂದು ಸವುಂಟಾಗುವುದು.

ಮ|| ರಾ|| ವೆಂಕಟಕೃಷ್ಣಯ್ಯನವರ ವರ್ಧಂತ್ಯುತ್ಸವವು.

ಸಾಗರ, ವೃದ್ಧಪಿತಾಮಹ ಮುಂತಾದ ಪ್ರ ಪಡೆದ ಮ|| ರಾ|| ವೆಂಕಟಕೃಷ್ಣಯ್ಯನ ನೇ ವರ್ಷದ ವರ್ಧಂತ್ಯುತ್ಸವವು ಇದೇ 22 ರಲ್ಲಿ ರಾಜಧಾನಿಯಲ್ಲಿ ರಂಗಾಚಾರ್ಲುರವರ ರಿಯಲ್ ಹಾಲಿನಲ್ಲಿ ಅತ್ಯಂತವಿಜೃಂಭಣೆಯಿಂದ ಟ್ಟಿತು. ರಾವ್ ಬಹದ್ದೂರ್ ಮ|| ರಾ|| ರಂಗ ಾರ್ಯರವರು ಅಗ್ರಾಸನವನ್ನು ವಹಿಸಿದ್ದರು. ದೊಡ್ಡ ಸರ್ಕಾರಿಯುದ್ಯೋಗಸ್ಥರೂ, ಕಾಲೇ ೊಫೆಸರ್ ರವರೂ, ವಿದ್ಯಾರ್ಥಿಗಳೂ, ಪುರಪ್ರಮು ಮಹಿಳೆಯರೂ, ಆಗಮಿಸಿದ್ದರು. ಸಭಾಸ್ಥಳದ ಗದಲ್ಲಿಯೂ ಹೊರಭಾಗದಲ್ಲಿಯೂ ಪ್ರೇಕ್ಷಕ ನಿಬಿಡೀಕೃತವಾಗಿದ್ದಿತು. ಅನೇಕ ವಿದ್ವಾಂಸರು ಹಾಶಯರ ಸ್ವಭಾವದ ಗುಣಾವಳಿಗಳನ್ನು ಪರ ಅನಂತರ ಪಟ್ಟಣಿಗರು ಮ||ರಾ|| ವೆಂಕಟಕೃಷ್ಣ ವರಿಂದ ವಿದ್ಯಾರ್ಥಿಗಳಿಗೂ, ಪ್ರಪಂಚಕ್ಕೂ, ಾದ ಉಂಟಾಗುತ್ತಿರುವ ಮಹೋಪಕಾರದ ವಿಷ ಾಗಿ ಒಂದು ಅಭಿನಂದನಪತ್ರಿಕೆಯನ್ನು ಒಪ್ಪಿಸಿದರು ಜಸ್ಟ್, ಸಿ ಮಹಾದೇವಯ್ಯನವರು, ಸರ್ ಕೆ. ಟ್ಟಣ್ಣಶೆಟ್ಟಿ ಮುಂತಾದ ವೀರಶೈವಪ್ರಮುಖರು ಕಳುಹಿಸಿದ್ದ ಸಂತೋಷಪತ್ರಿಕೆಗಳನ್ನು ಸಭೆಯ ಹೇಳಿದರು. ಸಂಗೀತಾದಿವಿನೋದಗಳು ನಡೆದವು.

ಮಹಾಶಯರು ಸ್ವಾರ್ಥತ್ಯಾಗಿಗಳಾಗಿದ್ದುದ ನ್ನು ಆಯುಷ್ಪರಿಮಿತಿಯನ್ನೆಲ್ಲ ದೇಶಸೇವೆಯ ಕಳೆದುದರಿಂದಲೂ ಸ್ವಮತಪರಮತಗಳೆಂಬ ಭಾವ ರಹಿತರಾಗಿರುವುದರಿಂದಲೂ ನಮ್ಮ ದೇಶವು ದ ಬಂದ ದೂರವಾಗಿ ಕಲಾಕೌಶಲ್ಯಗಳಲ್ಲಿ ಮುಂದು ವುದೊಂದೇ ಪರಮಧ್ಯೇಯವಾಗಿಟ್ಟುಕೊಂಡು ರಾತ್ರಿಗಳಲ್ಲಿಯೂ ವಿಶ್ರಾಂತಿಯಿಲ್ಲದೆ ದೇಶಸೇ ನ್ನು ಮಾಡುತ್ತಿರುವುದರಿಂದಲೂ ಈ ಮಹಾಶಯ ರ್ವಜನಾನುರಾಗಿಗಳಾಗಿರುತ್ತಾರೆ. ರಾಜಧಾನಿ ಅಪ್ರೇರಿತವಾಗಿನಡೆದ ವಿಶೇಷವಾದ ಗೌರವಗ ಲ್ಲೇ ಇವರ ಸುಗುಣಾತಿಶಯಗಳು ಲೋಕಕ್ಕೆ ಪ್ರ ವಾಗುತ್ತವೆ. ಈ ಮಹಾಶಯರಿಂದ ಲೋಕಕ್ಕೆ ಅನಂತ ಉಪಕಾರಗಳಾಗಬೇಕಾಗಿರುವುದರಿಂದ ಮಹಾಶಯರಿಗೆ ಇತೋಪ್ಯತಿಶಯವಾದ ಆಯು ಶ್ವರ್ಯ, ಆರೋಗ್ಯವನ್ನೂ ಕೊಟ್ಟು ಕಾಪಾಡಲೆಂದು ವಂತನನ್ನು ಬೇಡುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಮಹೋತ್ಸವದ ನಿಮಿತ್ತವಾಗಿ ಇದುವರೆವಿಗೂ 2 59.085—7—7 ರೂಪಾಯಿಗಳು ವಸೂಲಾಗಿರುತ್ತವೆಂದು ಕೇಳುತ್ತೇವೆ.

ಇದೇ ತಿಂಗಳು ತಾ|| 18 ರಲ್ಲಿ ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ ದಿವಾನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಮೈಸೂರು ಎಕನಾಮಿಕ್ ಕಾನ್‌ಫರೆನ್ಸ್ ನಡೆಯಿತು.

ಮ|| ರಾ|| ಟಿ. ಪರಮಶಿವಯ್ಯನವರನ್ನು ಸರ್ಕಾರದವರು ಸಬ್ ಜಡ್ಜ್ ಅಧಿಕಾರಿಗಳನ್ನಾಗಿ ನಿಯಮಿಸಿದರೆಂದು ಕೇಳುತ್ತೇವೆ. ಇದು ನಿಜವಾಗಿದ್ದಲ್ಲಿ ವೀರಶೈವರಿಗೆ ಇದೊಂದು ಸಂತೋಷಸೂಚಕವಾದ ವರ್ತಮಾನವಾಗಿದೆ.

ವಿಶ್ರಾಂತಿಸೌಖ್ಯವನ್ನನುಭವಿಸುತ್ತಿರುವ ಸರ್ಜನ್ ಡಾಕ್ಟರ್ ಬಿ. ಎನ್. ಸಂಜೀವನವರು ರಜತಮಹೋತ್ಸವಾರ್ಥವಾಗಿ ರಾಜಧಾನಿಗೆ ಬಂದು ಪುನಃ ಬೆಂಗಳೂರಿಗೆ ಮೋಟಾರಿನಲ್ಲಿ ಪ್ರಯಾಣಮಾಡುವಾಗ ದಾರಿಯಲ್ಲಿ ಪ್ರಮಾದದಿಂದ ಮೋಟಾರ್ ಬಿದ್ದುಹೋದುದರಿಂದ ಒಳಗಿದ್ದ ಡಾಕ್ಟರ್ ರವರಿಗೆ ಅಪಾಯವು ಸಂಭವಿಸಿತು. ಅಷ್ಟರೊಳಗಾಗಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ರವರ ಮೋಟಾರ್ ಅಲ್ಲಿಗೆ ಬಂದಿದ್ದರಿಂದ ಸದರಿಯವರು ತಮ್ಮ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಮದ್ದೂರಿನ ಆಸ್ಪತ್ರೆಗೆ ಬಿಟ್ಟರು. ಮ|| ರಾ|| ಸಂಜೀವನವರು ಅಲ್ಲಿ ಒಂದು ದಿವಸ ಚಿಕಿತ್ಸೆಯನ್ನು ಹೊಂದಿ ಮರುದಿವಸ ಬೆಂಗಳೂರು ಆಸ್ಪತ್ರೆಗೆ ಪ್ರಯಾಣಬೆಳೆಸಿದರು. ಈಗ ಗುಣಮುಖವಾಗಿದೆಯೆಂದು ಕೇಳುತ್ತೇವೆ.

ಚಾಮರಾಜನಗರದ ತಾಲ್ಲೂಕು ಮರಿಯಾಲಮಠದ ಶ್ರೀ|| ಮಹಾಂತಸ್ವಾಮಿಗಳು ತಮ್ಮ ಅಂದಾಜು 1500 ರೂಪಾಯಿಗಳನ್ನು ವೆಚ್ಚಮಾಡಿ ಸ್ಥಳದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಕಟ್ಟಿಸಿರುವರು. ಈ ಶಾಲೆಯ ಪ್ರಾರಂಭೋತ್ಸವವು ಕಳೆದ ಜೂನ್ ತಿಂಗಳಲ್ಲಿ ನಂಜನಗೂಡು ಸಬ್ ಡಿವಿಜನ್ ಮ|| ರಾ|| ರಾಮಚಂದ್ರರಾವ್ ಬಿ. ಎ. ಯವರಿಂದ ನೆರವೇರಿಸಲ್ಪಟ್ಟಿತು. ಈ ಉತ್ಸವಕ್ಕೆ ಅಮಲ್ದಾರ್ ರವರ ವಿದ್ಯಾಭ್ಯಾಸದ ರೇಂಜ್ ಇನಸ್ಪೆಕ್ಟರ್ ರವರು ಮುಂತಾದ ಸರ್ಕಾರಿಯುದ್ಯೋಗಿಗಳು ಮ|| ಬುದೇರು ಸಾ|| ವೀರಣ್ಣನವರು ಮುಂತಾದ ಪ್ರಮುಖರೂ ಆಗಮಿಸಿದ್ದರು. ಈ ಸ್ವಾಮಿಗಳು ಕೇವಲ ಶಾಂತರೂ ಪರೋಪಕಾರನಿರತರೂ ವಿದ್ಯಾವಂತರೂ ಆಗಿರುವುದರಿಂದ ತಮ್ಮ ಚಿಕ್ಕವಯಸ್ಸಿನಲ್ಲಿಯೇ ತಮ್ಮ ಮಠದ ನಾಸೋಕರರ ಜೊತೆಯಲ್ಲಿ ಸ್ವಂತ ವಿದ್ಯಾರ್ಜನೆಯನ್ನು ಮಾಡಿ ಇಂತಹ ವಿದ್ಯಾಭಿವೃದ್ಧಿ ಸಾಧಕವಾದ ಪುಣ್ಯಕಾರ್ಯವನ್ನು ಈಗ ಇಷ್ಟರಮಟ್ಟಿಗೆ ಮಾಡಿರುವುದನ್ನು ಸಮಾಲೋಚಿಸಿದರೆ ಮುಂದೆ ಇನ್ನೂ ಇವರಿಂದ ಅನಂತ ಧರ್ಮಕಾರ್ಯಗಳು ನಡೆಯುತ್ತವೆ ಎಂಬುವಕ್ಕೆ ಇದೇ ಪ್ರಥಮ ಸೂಚನೆಯಾಗಿದೆ.

ಕಳೆದ ತಿಂಗಳಲ್ಲಿ ಚನ್ನಪಟ್ಟಣದ ತಾಲೂಕಿನಲ್ಲಿ ಮಾಕಳಿಯೆಂಬ ಗ್ರಾಮದ ಪಟೇಲ್ ಚನ್ನವೀರೇಗೌಡರು ಮತ್ತು ಇವರ ಬಾವಮೈದ ಲಿಂಗಯ್ಯನೆಂಬವನೂ ಇವರಿಬ್ಬರೂ ದನಗಳನ್ನು ಮೇಯಿಸುವುದಕ್ಕೆ ನಾಯಿಗಳನ್ನು ಜೊತೆಯಲ್ಲಿಟ್ಟುಕೊಂಡು ಕಾಡಿಗೆ ಹೋಗಿರಲು ಒಂದು ಹುಲಿಯು ನಾಯಿಗಳ ಮೇಲೆ ಬಿದ್ದಿತು. ಲಿಂಗಯ್ಯನು ಸಮೀಪದಲ್ಲಿದ್ದ ಒಂದು ಗಿಡದ ಬುಡದಲ್ಲಿ ಕುಳಿತಿದ್ದು ಹುಲಿಯು ದನಗಳ ಮೇಲೆ ಬೀಳುವುದೆಂಬ ಶಂಕೆಯಿಂದ ಮೇಲಕ್ಕೆದ್ದನು. ಅಷ್ಟರಲ್ಲಿ ಹುಲಿಯು ಈತನ ಮೇಲೆ ಬೀಳುವುದಕ್ಕೆ ಪ್ರಾರಂಭಿಸಿತು. ಹುಲಿಗೂ ಈತನಿಗೂ ಯುದ್ಧವು ನಡೆದು ಈತನ ಕೈಯನ್ನು ಕಚ್ಚಿ ತಲೆಯ ಮೇಲೆ ಪರಚಿ ಅಪಾಯವನ್ನು ಮಾಡಿತು. ಲಿಂಗಯ್ಯನು ತಪ್ಪಿಸಿಕೊಂಡು ಹುಲಿಯನ್ನು ತಳ್ಳುತ್ತಿರುವಲ್ಲಿ ಚನ್ನವೀರೇಗೌಡನು ಮಚ್ಚುಗತ್ತಿಯಿಂದ ಹುಲಿಯ ಕಣ್ಣುಗಳನ್ನು ಕತ್ತರಿಸಿದನು. ಹುಲಿಯು ಮತ್ತೆ ಆರ್ಭಟಿಸುತ್ತಲಿರುವಾಗ ಇಬ್ಬರೂ ಸೇರಿ ಸಾಹಸದಿಂದ ಹುಲಿಯನ್ನು ಕೊಂದರು. ಸರ್ಕಾರದವರು ಈ ವರ್ತಮಾನವನ್ನು ತಿಳಿದು ಇವರಿಗೆ ಬಹುಮಾನವನ್ನು ಕೊಟ್ಟಿರುತ್ತಾರೆ. ಇವರ ಸ್ಥೈರ್ಯವು ಅಸಾಧಾರಣವಲ್ಲವೇ?

ವರ್ತಮಾನಸಂಗ್ರಹ.

ಪಂಡಿತ್ ಮೋತೀಲಾಲ್ ನೆಹರೂರವರು ಇಷ್ಟರೊಳಗಾಗಿ ಯೂರೋಪಕ್ಕೆ ಹೋಗುವವರಿದ್ದಾರೆ.

ಬಂಗಾಳದಲ್ಲಿ ಶ್ರೀ ಪದ್ಮನಿರಂಜನನಿಯೋಗಿಗಳಿಗೆ ರಾಜದ್ರೋಹದ ಆರೋಪದಿಂದ 8 ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿದೆ

ಬೆಳಗಾಂವ್ ಮ್ಯುನಿಸಿಪಾಲಿಟಿಯ 2 ನೇ ನಂಬರ್ ಶಾಲೆಯು ಬಿದ್ದುದರಿಂದ 30 ಜನ ವಿದ್ಯಾರ್ಥಿಗಳು ಮರಣಹೊಂದಿದರು.

ಚೀನಾದಲ್ಲಿ ದಿನೇದಿನೇ ಯುದ್ಧವು ಅಭಿವೃದ್ಧಿಯಾಗುತ್ತಲೇ ಇರುವುದು. ಅಂದಾಜು 7 ಸಾವಿರ ಜನಗಳವರೆಗೂ ಮರಣವನ್ನು ಹೊಂದಿರುತ್ತಾರೆ.

ಮದ್ರಾಸು ಕಾರ್ಪೊರೇಷನ್ನಿನ ಸ್ಕೂಲುಗಳಲ್ಲೆಲ್ಲಾ ಮಹಾತ್ಮಾಗಾಂಧಿಯವರ ಚಿತ್ರಪಟವನ್ನು ಕಟ್ಟಬಹುದೆಂದು ಸರ್ಕಾರದವರು ಅಂಗೀಕರಿಸಿರುವರು.

ಪುಣೆಯಲ್ಲಿ ಕಿರ್ಲೋಸ್ಕರ್ ತಿಲಕ ಮಂದಿರದಲ್ಲಿ ಒಂದು ದೊಡ್ಡ ಸಭೆಸೇರಿ ಗುಜರಾಥ ದೇಶೀಯರ ಸಹಾಯಾರ್ಥವಾಗಿ 36 ಸಾವಿರ ರೂಪಾಯಿಗಳು ವಾಗ್ದಾನಮಾಡಲ್ಪಟ್ಟವು

ಮುಂಬೈಪಟ್ಟಣದಲ್ಲಿ ಗವರ್ನರ್ ರವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಸೇರಿ ಜಲಪ್ರಳಯದಿಂದ ನಷ್ಟಕ್ಕೀಡಾದ ಜನಗಳ ಸಹಾಯಾರ್ಥವಾಗಿ ಈಗ ಮೂರುಲಕ್ಷದ ವರೆವಿಗೂ ದ್ರವ್ಯವು ಶೇಖರಿಸಲ್ಪಟ್ಟಿವೆ.

ಜಾಸಿಂ ಎಂಬಲ್ಲಿ ಹಿಂದೂದೇವಸ್ಥಾನಗಳೊಳಗೂ ಪದ್ಮತೀರ್ಥದೊಳಕ್ಕೂ ಗೋಮಾಂಸವನ್ನು ಹಾಕಿದರೆಂದು ಹಿಂದುಗಳಿಗೂ ಮಹಮ್ಮದೀಯರಿಗೂ ಕಲಹವುಂಟಾಗಿ ಅನೇಕರಿಗೆ ಪೆಟ್ಟು ಬಿದ್ದಿರುವುದಲ್ಲದೆ, ಒಬ್ಬ ಮಹಮ್ಮದೀಯನು ಮೃತನಾದನು.

ಗುಜರಾಥದಲ್ಲಿ ಜಲಪ್ರಳಯದಿಂದ ಅನಾಥರಾದ ಜನಗಳ ಸಹಾಯಕ್ಕಾಗಿ ಅನೇಕಕಡೆಯಿಂದ ದ್ರವ್ಯವು ಕೊಡಲ್ಪಡುತ್ತಿದೆಯಷ್ಟೇ! ವಿ. ಜೆ. ಪಟೇಲರು ತಮಗೆ ಬರುವ ವೇತನದಲ್ಲಿ ಮಿಕ್ಕಿರುವ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದಲ್ಲದೆ ಆ ಕಮಿಟಿಯ ಪರವಾಗಿ ತಾವೂ ಪ್ರಯತ್ನಮಾಡಲು ಒಪ್ಪಿರುವರು.

ಇದೇ ತಿಂಗಳ 21 ನೇ ತಾರೀಖಿನ ದಿವಸ ಧಾರವಾಡದಲ್ಲಿ ಕರ್ನಾಟಕಹೈಸ್ಕೂಲಿನ ವಿದ್ಯಾರ್ಥಿಗಳು ಪ್ರವಾಹದ ಅನಾಹುತದಿಂದ ಸಂಕಟಪಡುತ್ತಿದ್ದ ಪ್ರಜೆಗಳ ಸಹಾಯಕ್ಕಾಗಿ ಮನೆಮನೆಗಳಿಗೆ ಹೋಗಿ ದುಡ್ಡು ಬಟ್ಟೆಬರೆಗಳನ್ನು ಕೂಡಿಸುತ್ತಲಿದ್ದಾರೆ. ಈ ವಿದ್ಯಾರ್ಥಿಗಳ ದಯಾಗುಣವು ಸರ್ವರಿಗೂ ಮೇಲ್ಪಂಕ್ತಿಯಾಗಿದೆ.

ಇಂಗ್ಲಂಡಿನಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಸ್ತ್ರೀಯರಿಗೆ ಅವರು ಒಪ್ಪಿದ್ದರೂ ಒಪ್ಪದಿದ್ದರೂ ಯಾವಪುರುಷನಾದರೂ ಬಹಿರಂಗವಾಗಿ ಚುಂಬನಮಾಡಬಹುದು; ಅದು ಅಪರಾಧವಲ್ಲವೆಂದು ಹೇಳಿರುವರಂತೆ! 17 ನೇ ಶತಮಾನದಲ್ಲಿ ಬಹಿರಂಗವಾಗಿ ತನ್ನ ಸ್ತ್ರೀಯನ್ನು ಚುಂಬನ ಮಾಡಿದರೂ ಶಿಕ್ಷೆಮಾಡಲ್ಪಡುತ್ತಿದ್ದಿತಂತೆ. ಈಗ ಇದಕ್ಕೆ ವಿಪರೀತವಾಗಿ ತೀರ್ಮಾನವಾದದ್ದು ಕಾಲವೈಚಿತ್ರ್ಯವೇ ಸರಿ.

ಜಾಹೀರಾತ

ಪ್ರಿಂಟಿಂಗ್ ಪ್ರೆಸ್ಸಿನ ಯಾವತ್ತು ವ್ಯವಸ್ಥೆಯನ್ನು ಮಾಡಿಕೊಂಡುಹೋಗಲು ಸಮರ್ಥರಾದ ಒಬ್ಬ ಮ್ಯಾನೇಜರು ಬೇಕಾಗಿರುತ್ತದೆ ಇಂಗ್ಲೀಷ್ ಬಲ್ಲವರಿದ್ದು ಸಾತ್ವಿಕಸ್ವಭಾವದವರಾಗಿರಬೇಕು ಸಂಬಳವು ಅವರ ಯೋಗ್ಯತಾನುಸಾರ 25 ರಿಂದ 40 ರ ವರೆಗೆ ಕೊಡಲ್ಪಡುವುದು. ಅವರ ಯೋಗ್ಯತೆಯನ್ನು ನೋಡಿ ಮುಂದೆ ಹೆಚ್ಚಿಸಲಾಗುವುದು. ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಬೇಕು

ಪ್ರೊಪ್ರೈಟರ್
ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್,
ಮೈಸೂರು

ತಿಪಟೂರು ತಾಲ್ಲೂಕ್ ವಾಸುದೇವರಹಳ್ಳಿ ಯಲ್ಲಿ ನಡೆದ ರಜತೋತ್ಸವ

ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ರವರ ರಜತೋತ್ಸವವನ್ನು ತಾ 8-5-1937 ನೆ ಸೋಮವಾರ ತಿಪ್ಟೂರು ತಾಲ್ಲೂಕಿನ ವಾಸುದೇವರಹಳ್ಳಿ ಎಂಬ ಈ ಚಿಕ್ಕ ಗ್ರಾಮದಲ್ಲಿ ಗ್ರಾಮಸ್ಥರೆಲ್ಲರೂ ಬಹು ಸಂಭ್ರಮದಿಂದ ನಡೆಸಿ, ಬೆಳಗಿನ 8 ಘಂಟೆಗೆ ಬೀದಿಗಳನ್ನು ತಳಿರುತೋರಣಗಳಿಂದ ಶೃಂಗರಿಸಿ ಈ ಗ್ರಾಮದ ಶ್ರೀ ವೃಷಭೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ದಿವ್ಯಭದ್ರಾಸನವನ್ನು ಅಲಂಕರಿಸಿ ಶ್ರೀಮನ್ಮಹಾರಾಜರವರ ಭಾವಚಿತ್ರಪಟವನ್ನು ಪೀಠದಲ್ಲಿಟ್ಟ ಕೂಡಲೆ ಧ್ವಜಪಟಾದಿಗಳು ಎತ್ತಲ್ಪಟ್ಟವು. ಸದರಿ ವೃಷಭೇಶ್ವರಸ್ವಾಮಿಯವರಿಗೆ ಅಭಿಷೇಕಪೂಜಾದಿಗಳು ನಡೆಸಲ್ಪಟ್ಟು ತದನಂತರ ಭದ್ರಾಸನವನ್ನು ಅಲಂಕರಿಸಿದ್ದ ಶ್ರೀಮನ್ಮಹಾರಾಜರವರಿಗೂ ಷೋಡಶೋಪಚಾರಗಳಿಂದ ಪೂಜಾದಿಗಳು ನಡೆಸಲ್ಪಟ್ಟು ವಾದ್ಯಘೋಷದಿಂದ ಮೆರವಣಿಗೆಯು ಮಾಡಲ್ಪಟ್ಟಿತು. ತದನಂತರ ಸ್ವಾಗತಾಧ್ಯಕ್ಷರಾದ ಎನ್. ಮೊಟ್ಟಯ್ಯನವರು ಸ್ವಾಗತಪಾಠದಿಂದ ಜಯ ಕೃಷ್ಣರಾಜ ಒಡೆಯರ್ ಬಹದ್ದೂರವರಿಗೆ ಜೈ ಎಂದು ಉದ್ಘೋಷವನ್ನು ಮಾಡಿಸಿದ ಪ್ರತಿ ಸೂಚನೆಯಾಗಿ ಬಿ. ಪುಟ್ಟೇಗೌಡರವರಿಂದ ಪಠಿಸಲ್ಪಟ್ಟ (ಜಯತ್ಯಖಿಲ ರಾಜರಾಜನುಗುಣ ಎಂಬ ಸವಾಸಿಯನ್ನು ಸವಾಡಿಸುತ್ತ) ಎಂತಲೂ (ಮಂಗಳಂ ಶ್ರೀ ಕೃಷ್ಣರಾಜರಾಜೇಂದ್ರನಿಗೆ) ಎಂತಲೂ ಪಂಕ್ತಿಗಳನ್ನು ಹಾಡಿಸಿದರು. ಅನಂತರ ತಾಲ್ಲೂಕಿನಿಂದ ಕಳುಹಿಸಲ್ಪಟ್ಟಿದ್ದ ಪತ್ರಾವನ ಪತ್ರಿಕೆಯು ಓದಲ್ಪಟ್ಟಿತು. ಕೊನೆಯಲ್ಲಿ ಬಿ. ಪುಟ್ಟೇಗೌಡರು ಶ್ರೀಯುತರ ಸದ್ಗುಣಗಳನ್ನು ಸರ್ವ ಅಭಿಪ್ರಾಯದಂತೆ ಜಯಮಂಗಳವಾಗಲೆಂದು ಉಪನ್ಯಾಸ ಮಾಡಿದರು. ನಂತರ ಮಂಗಳಾರತಿಯು ಮಾಡಲ್ಪಟ್ಟು ಶ್ರೀಯುತರಿಗೆ ಫಲ ಪುಷ್ಪ ತಾಂಬೂಲಗಳನ್ನು ಪ್ರತಿಯೊಬ್ಬರೂ ಕೊಡುವಂತಾಗಿ ಒಪ್ಪಿಸುತ್ತ ಎಲ್ಲಾ ಉಪಯೋಗವ ಹಂಚಲ್ಪಟ್ಟು ಈ ದಿನವನ್ನು ಮಹಾಸಂತೋಷದ ದಿನವನ್ನಾಗಿ ಭಾವಿಸಿ ಎಲ್ಲರೂ ಪರಮತುಷ್ಟರಾಗಿದರು.

ಸಂಬಸ್ಮಾರಾಧ್ಯ.

ತುಮಕೂರಿ ಕೊಪ್ಪದ ಸ್ಕೂಲಿನಲ್ಲಿ ನಡೆದ ಸಿಲ್ವರ್ ಜ್ಯೂಬಿಲಿ ಮಹೋತ್ಸವ.

ಈ ಸಿಲ್ವರ್ ಜ್ಯೂಬಿಲಿ ಮಹೋತ್ಸವದ ಏರ್ಪಾಟುಗಳನ್ನು ಈ ಪಾಟೀಲ ಬಸಪ್ಪಗೌಡ್ರು, ಈ ಪಾಟೀಲ ಲಿಂಗನಗೌಡ್ರು, ಈ ಶಾನುಭೋಗ ಬಸವಗೌಡ್ರು, ಈ ಬಸವಣ್ಣನ ಗೌಡ್ರು, ಚಂದ್ರಶೇಖರ ಗುರು ಬಸವಗೌಡ್ರು, ಮೊಸಳೆಕೊಪ್ಪದ ಪಾಟೀಲ ಶಿವಪ್ಪಗೌಡ್ರು, ಈಶ್ವರಪ್ಪಗೌಡ್ರು, ರುದ್ರಪ್ಪಗೌಡ್ರು ಇವರೆಲ್ಲರೂ ಮುಂತಾದ ಜನಗಳು ದ್ರವ್ಯವನ್ನು ಸಹಾಯ ಮಾಡಿ ಈ ಕಾರ್ಯವನ್ನು ಅತಿಶ್ರದ್ಧೆಯಿಂದ ನೆರವೇರಿಸಿದರು. ಈ ಸ್ಕೂಲು ನಮ್ಮ ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ನಂತರವೇ ಅಂದರೆ 1912 ನೇ ಜನವರಿ ಗುರ್ರೆ ತಾರೀಖಿನಿಂದ ಪ್ರಾರಂಭವಾಗಿ 25 ವರ್ಷವಾಯಿತು. ಈ ಸ್ಕೂಲಿನ ಬಾಲಕರ ಸಂಖ್ಯೆ 40 ಇದ್ದು ಎಲ್ಲಾ ಬಾಲಕ ಬಾಲಕಿಯರು ಹಾಜರಿದ್ದರು. ಈ ಸ್ಕೂಲಿನ ಕೈತೋಟದಲ್ಲಿ ಈ ಸಿಲ್ವರ್ ಜೂಬಿಲಿ ಮಹೋತ್ಸವದ ಜ್ಞಾಪಕಾರ್ಥವಾಗಿ 5 ತೆಂಗಿನ ಗಿಡಗಳನ್ನು ಹುಡುಗರಲ್ಲಿ ಬದಿಸಿತು. ಈ ಸ್ಕೂಲಿನ ಮಧ್ಯಭಾಗದಲ್ಲಿ ಕೆಲವು ಪೇಪರುಗಳಿಂದಲೂ, ಹೂಗಿಡಗಳಿಂದಲೂ ಮನೋಹರವಾದ ಮಂಟಪವನ್ನು ರಚಿಸಿದ್ದರು. ಮುಂಭಾಗದಲ್ಲಿ ಚಪ್ಪರವನ್ನು ಹಾಕಿಸಿ, ರಾಜಬೀದಿಯವರೆಗೂ ಮಾವಿನತೋರಣ ಬಾಳೇಕಂಬ ಕಬ್ಬುಗಳಿಂದಲೂ ಹೂಗಿಡಗಳಿಂದಲೂ ಶೃಂಗಾರ ಮಾಡಿ ನಮ್ಮ ಮಹಾರಾಜರವರ ಪಟ್ಟವನ್ನು ಇಟ್ಟಿದ್ದರು. ನಂತರ ಮಧ್ಯಾಹ್ನ 12 ಘಂಟೆಗೆ ಮಹಾಜನಗಳು ಸಭೆಗೆ ದಯಮಾಡಿಸಿದರು. ಶ್ರೀಮನ್ಮಹಾರಾಜರವರ ಭಾವಚಿತ್ರಪಟವನ್ನು ಮಂಟಪದಲ್ಲಿ ಸ್ಥಾಪಿಸಿದರು. ಮಹಾರಾಜರವರು 25 ವರ್ಷ ಸುಖವಾಗಿ ನಮ್ಮೆಲ್ಲಾ ಪ್ರಜೆಗಳನ್ನು ಸಂತೋಷದಿಂದ ಆಳಿದುದರ ಜ್ಞಾಪಕಾರ್ಥ ಸಂತೋಷ ಸೂಚಕವಾದ 25 ಗುಂಡುಗಳು ಹಾರಿಸಲ್ಪಟ್ಟವು. ವಾದ್ಯಗಾರರು ವಾದ್ಯಗಳನ್ನು ಬಾರಿಸಿದರು. ನಂತರ ಬಾಲಕರಿಂದ ಡ್ರಿಲ್ ಮೂಲಕ ಶ್ರೀಮನ್ಮಹಾರಾಜರವರಿಗೂ ಕಂಠೀರವ ನರಸರಾಜರವರಿಗೂ ಯುವರಾಜರವರಿಗೂ ನಮ್ಮ ಮಹಾರಾಜರವರ ಬಾವುಟಕ್ಕೂ (ನಜರ್) ಸೆಲ್ಯೂಟ್ ಕೊಡಲ್ಪಟ್ಟಿತು. ನಂತರ ಬಹುಮಾನ ಗೊಂಡೆಗಳಿಂದ ಅಲಂಕರಿಸಲ್ಪಟ್ಟ ಪಾಲಿಕೆಯಲ್ಲಿ ಮಹಾರಾಜರವರ ಭಾವಚಿತ್ರವನ್ನು ಮೆರವಣಿಗೆ ಮಾಡಿಸಿ ಮಂಗಳ ವಾದ್ಯಗಳ ಸಮೇತವಾಗಿ ಮೈಸೂರು ಮಹಾರಾಜರಿಗೆ ಜೈ ಎಂದು ಜಯಘೋಷಗಳಿಂದ ಮಹಾರಾಜರವರ ಶ್ರೀ ಮುಖಾಗ್ಗಿಯನ್ನು ನೋಡುತ್ತ ಹಾರಿಸುತಿಗಳನ್ನು ಹಾರಿಸುತ್ತ ಶ್ರೀ ನಂದೀಶ್ವರದೇವಾಲಯಕ್ಕೆ ದಯಮಾಡಿಸಿ ಶ್ರೀ ದೇವರಿಗೆ ಗಂಧಾಕ್ಷತೆ ಪುಷ್ಪದೀಪಧೂಪಗಳಿಂದಲೂ ಕರ್ಪೂರ ಊದಿನಬತ್ತಿಗಳಿಂದ ಯಥಾಕ್ರಮವಾಗಿ ಪೂಜೆಯನ್ನು ಮಾಡಿ ನಮ್ಮ ಮಹಾರಾಜರವರಿಗೂ ರಾಜಕುಟುಂಬಕ್ಕೂ ಸರ್ವಪ್ರಜೆಗಳಿಗೂ ಜಗದೀಶನು ರಕ್ಷಿಸಲೆಂದು ಪ್ರಾರ್ಥನೆಮಾಡಿದರು. ಅಲ್ಲಿ ಹಾಡು ಗಾರಿಕೆ ತರುವಾಯ ಬಲು ವಾದ್ಯಗಳು ಜರುಗಿದವು. ನಂತರ ಮಹಾರಾಜರವರ ಉತ್ಸವವು ಗ್ರಾಮದ ಪ್ರಾರಂಭದವರೆಗೆ ಹೋಗಿ ಪುನಃ ಶ್ರೀ ನಂದೀಶ್ವರದೇವಾಲಯಕ್ಕೆ ದಯಮಾಡಿಸಿತು. ಅಲ್ಲಿ ಸರ್ವರು ಫಲಾಹಾರ ತಾಂಬೂಲಾದಿಗಳನ್ನು ಸ್ವೀಕರಿಸಿದರು. ನಂತರ ಪುನಃ ಸ್ಕೂಲಿನಲ್ಲಿ ತಯಾರಾಗಿದ್ದ ಮಂಟಪದಲ್ಲಿ ಉತ್ಸವದೊಡನೆ ಮಹಾರಾಜರವರ ಭಾವಚಿತ್ರವನ್ನು ಮೆರವಣಿಗೆ ಮಾಡಿಸಿದರು. ಇಲ್ಲಿಯ ಗೌ|| ಪ್ರೈಮರಿ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಕೆ. ಎಚ್. ರುದ್ರಗೌಡ್ರು ಮಹಾರಾಜರವರ ಬಾಲ್ಯಕಾಲದಿಂದಲೂ ಈವರೆಗಿನ ಅಂದರೆ ಮಹಾರಾಜರವರ ಪಟ್ಟಾಭಿಷೇಕ, ಇವರು ಚಿಕ್ಕವರಾಗಿದ್ದಾಗ ಮಹಾತ್ಮಶ್ರೀಯವರ ರಾಜ್ಯಭಾರ ನಂತರ ಇವರು ರಾಜ್ಯಕಾರಭಾರವನ್ನು ವಹಿಸಿ ಪ್ರಜೆಗಳಿಗೆ ಮಾಡಿದ ಉಪಕಾರ, ನಾವು ಹೇಗೆ ಮಹಾರಾಜರವರ ರಕ್ಷೆ ಭಕ್ತಿಯಿಂದ ನಡೆದುಕೊಳ್ಳಬೇಕೆಂಬ ಬಗ್ಗೆ ಚನ್ನಾಗಿ ಉಪನ್ಯಾಸಮಾಡಿದರು. ನಂತರ ಮ|| ಕರೆಹಳ್ಳಿ ಪಾಟೀಲ ಶಿವಪ್ಪನವರು ಇದೇ ವಿಷಯವನ್ನು ಕುರಿತು ಮಹಾರಾಜರವರು ಇನ್ನೂ ದೀರ್ಘಕಾಲವಿದ್ದು ಇಂತಹ ರಜತಮಹೋತ್ಸವದಂತೆ ದ್ವಿತೀಯ ಉತ್ಸವವನ್ನು ನಡೆಸಬೇಕೆಂದು ಭಾಷಣಮಾಡಿದರು. ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೆಸಿಡೆಂಟರ ಮೂಲಕ ಗೌ|| ಸ್ಕೂಲು ಪುಸ್ತಕಗಳೂ, ಚಿತ್ರದ ಸ್ಲೇಟ್ ಪುಸ್ತಕಗಳೂ, ಇಂಕ್ ಬಾಟಲ್ ಗಳೂ, ಪೆನ್ ಹೋಲ್ಡರುಗಳೂ, ಪೆನ್ಸಿಲ್ ಗಳೂ, ಬಟ್ಟೆ ಗಳೂ ಇನಾಮು ಕೊಟ್ಟ ನಂತರ ಸರ್ವರಿಗೂ ಮಿಠಾಯಿಗಳನ್ನು ಹಂಚಿದರು. ಕೊನೆಯಲ್ಲಿ ಮಂಗಳವಾಗುತ್ತಬಂಗದಿಂದ ಸೂರ್ಯನು ಪಶ್ಚಿಮ ದಿಕ್ಕಿಗೆ ಹೋಗುತ್ತ ಹೋಗುತ್ತ ತಿರುಗುತ್ತಿರಲು ಮಹಾರಾಜರವರ ಶ್ರೀ ಮುಖದಾಸ್ತವಿಹಾರ ಸಭೆಯು ವಿಸರ್ಜನೆಯಾಯಿತು.

ಒರ್ವ ಪ್ರೇಕ್ಷಕ

ದುಃಖಪ್ರದರ್ಶನವು

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಚಿಕ್ಕಜಂತಕಲ್ಲು ಎಂಬ ಗ್ರಾಮದ ಸದ್ಭಕ್ತಶಿಖಾಮಣಿಗಳಾದ ಜಾಲಿಯವರ ಮನೆತನದಲ್ಲಿ ಜನಿಸಿದ್ದ ಶ್ರೀಮಾನ್ ಜಾಲಿ ಸಣ್ಣಲಿಂಗಣ್ಣನವರೆಂಬ ಮಹೋದಯರು ಇದೇ ಪ್ರಮಾದಿನಾಮ ಸಂವತ್ಸರದ ಜ್ಯೇಷ್ಠ ಶುದ್ಧದಲ್ಲಿ ಭೌತಿಕಕಳೇಬರತ್ಯಾಗವನ್ನು ಮಾಡಿದ್ದಕ್ಕಾಗಿ ವಿಷಾದಪಡುತ್ತೇವೆ. ಇವರು ಸುಮಾರು 45 ವರ್ಷದ ವಯಸ್ಕರಾಗಿದ್ದರು. ಇವರು ವ್ಯಾಪಾರವನ್ನು ಚೆನ್ನಾಗಿ ವೃತ್ತಿಯನ್ನಾಗಿಟ್ಟುಕೊಂಡಿದ್ದರು. ಇದರ ಅನುಭವಗಳೂ ಇವರ ಸ್ವಭಾವವು ಗಾಂಭೀರ್ಯದಿಂದ ಯುಕ್ತವಾಗಿತ್ತು. ಗಾಂಭೀರ್ಯಕ್ಕೆ ತಕ್ಕ ಸಂಕೇತವಷ್ಟು ಇವರಲ್ಲಿ ವಾಸವಾಗಿತ್ತು. ನಮ್ಮ ಇವರಿಗೆ ಮತಧರ್ಮದ ಅಭಿಮಾನವು ವಿಶೇಷವಾಗಿಯೇ ಇತ್ತು. 40 ವರ್ಷಗಳ ಹಿಂದೆ ಹಿಮವತ್ಕೇದಾರ ಶ್ರೀಮಠಾಚಾರ್ಯ ಜಗದಾಚಾರ್ಯರು ಹೊಸಪೇಟೆ ಪಟ್ಟಣದಲ್ಲಿ ತಮ್ಮ ಮಠವನ್ನು ಪ್ರಾರಂಭಮಾಡಿದ ಸಮಯದಲ್ಲಿ ತನು, ಮನ, ಧನಗಳ ಸಹಾಯದಿಂದ ಆಚಾರ್ಯರಪಾದಸೇವೆಯಲ್ಲಿ ನಿರತರಾಗಿ ಶ್ರೀ ಕೃಪಾಪಾತ್ರರಾಗಿದ್ದರು, ಹಾಗೂ ಜನ್ಮವೆತ್ತಿದುದಕ್ಕೆ ಅನೇಕ ಧಾರ್ಮಿಕಕಾರ್ಯಗಳನ್ನು ಮಾಡಿದವರಾಗಿರುವರು. ಏಷಜಕರ, ಅವರ ಒಂದೆರಡುಸಂಗತಿಗಳನ್ನು ಇಡುತ್ತೇವೆ. ಇವರು ಹೊಸಪೇಟೆ ಬಜಾರದಲ್ಲಿ ಶ್ರೀ ನಂದೀಶ್ವರದೇವಾಲಯವನ್ನೊಂದು ಹೇಟೆ ಮಹಾಜನಗಳನ್ನು ಕೂಡಿಸಿ ನಿರ್ಮಿಸಿದರು. ಸದರಿ ದೇವಸ್ಥಾನದ ಕಲಶಸ್ಥಾಪನೆ ಉತ್ಸವವನ್ನು ಶ್ರೀ ಕೇದಾರಜಗದ್ಗುರು ನೀಲಕಂಠ ಶಿವಾಚಾರ್ಯಮಹಾಸನ್ನಿಧಿಯವರ ಅಧಿಪತ್ಯದಲ್ಲಿ ಜರುಗಿಸಿದ್ದರು. ಹಾಗೂ ಪ್ರತಿವರ್ಷವೂ ಸ್ತ್ರೀಪುರುಷ ಬಾಲಬಾಲಕಿಯರಿಗೆ ವೇ|| ಮೂರ್ತಿಗಳು ಮೊದಲಾದವರಿಂದ ವೀರಶೈವ ಧರ್ಮವನ್ನು ಬೋಧಮಾಡಿಸುತ್ತಿದ್ದರು. ಮತ್ತು ಶೈವಸಭೆಯೇ ಧರ್ಮೋನ್ನತಿಗೆ ಮೂಲವಾಗಿರುವದು. ವೀರಶೈವ ಧರ್ಮತತ್ವವನ್ನು ತಿಳಿದು ಆಚರಿಸಬೇಕಾದ ಅಶೇಷವೀರಶೈವರಿಗೆ ಪೂಜ್ಯರಾದ ಮಹೇಶ್ವರರೆಂದವರು ಮೊದಲು ವೈದಿಕವಿದ್ಯೆಯಲ್ಲಿ ಉತ್ತೀರ್ಣರಾಗಲಿ, ಅವರದ್ವಾರಾ ನಮ್ಮ ಮತವು ಸುಧಾರಿಸುವದೆಂದು ಸಂಕಲ್ಪಿಸಿ ಹೊಸಪೇಟೆಯ ವೀರಶೈವರಲ್ಲಿ 2-3 ಮನೆತನಗಳು ಇದ್ದಾಗ್ಯೂ ಪಾರ್ಟಿಗಳ ಅಭಿಮಾನವಂ ತೊರೆದು ಪ್ರಮುಖರಂ ಒಟ್ಟುಗೂಡಿಸಿಕೊಂಡು ಶ್ರೀ ಕಾಶೀಜಗದ್ಗುರುಗಳ ದಿವ್ಯಸನ್ನಿಧಿಯಲ್ಲಿ ಅನುಕೂಲವಾದಿ "ಸಂಸ್ಕೃತಪಾಠಶಾಲೆಯನ್ನು" ಸ್ಥಾಪಿಸಿದರು. ಸ್ವಾಮಿಗಳು ಮಹಾಸ್ವಾಮಿಗಳು ಇವರ ಐಕ್ಯವನ್ನು ಕಂಡು ವಿದ್ಯಾಭಿಮಾನವನ್ನು ನೋಡಿ ಶಾಲಾಧ್ಯಕ್ಷರ ಶಿಕ್ಷೆಯನ್ನು ಕೊಡಲೊಪ್ಪಿದರು. ಹೊಸಪೇಟೆ ಮಹಾಜನರು ವಿದ್ಯಾರ್ಥಿಗಳ ಭೋಜನವನ್ನು ಕೊಡಲೊಪ್ಪಿದರು. ಹಾಗೂ ಹೊಸಪೇಟೆ ಪ್ರಮುಖರೆಲ್ಲರು ದಹಣವನ್ನು ಶಾಲಾಫಂಡಿಗೆ ಕೊಡಲು ಸುರುಮಾಡಿದರು. ಅನೇಕರು ಚಂದಾರೂಪವಾಗಿ ಸಹಾಯ ಮಾಡುತ್ತಿದ್ದರು. ಹೀಗೆ ಸದರಿ ಮಹೋದಯರು ಸ್ವಕರದಸ್ತಗಳಿಂದಲೂ ಧನಸಹಾಯಾದಿಗಳಿಂ ಪ್ರಯತ್ನಿಸಿ ಕೊಂಡು ಸಂಸ್ಕೃತಪಾಠಶಾಲೆಯನ್ನು ನಡೆಸುತ್ತಿದ್ದರು. ಈ ಪಾಠಶಾಲೆಯು ವೇ|| ವಿಶ್ವನಾಥಶಾಸ್ತ್ರಿಗಳ ಅಧ್ಯಾಪಕತ್ವದಲ್ಲಿ ಈಗ ನಡೆಯುತ್ತಿರುವದು. ಹಾಗೂ ಇವರ ಮಿತ್ರಮಂಡಲಿಯವರು ಶಾಲಾವ್ಯವಸ್ಥೆಯನ್ನು ನೋಡುತ್ತಲಿರುವರು. ಇಷ್ಟೆಲ್ಲ ಕಷ್ಟಂದವೇ ಈ ಮಹಾನುಭಾವರು ವೀರಶೈವಮತದ ಧಾರ್ಮಿಕಕರ್ತವ್ಯಸಹಾಯವನ್ನು ಅಕಾಲದಲ್ಲಿ ನಿರ್ಧನರಾತಾ ದುಷ್ಟರೋಗಪೀಡಿತರಾಗಿ ಅನೇಕ ಅನೇಕರೀತಿಯಾಗಿ ಉಪಚರಿಸಿದಾಗ್ಯೂ ಗುಣವಾಗದೆ ಮರಣಹೊಂದಿದ್ದು ದುಃಖಾಸ್ಪದವಾಗಿದೆ. ಆದಾಗ್ಯೂ ಚಿರಸ್ಮರಣೀಯವಾದ ಆಗಲ್ಲಿರುವ ಧಾರ್ಮಿಕಗುಣಗಳನ್ನು ಸ್ಮರಿಸಿಕೊಂಡು ಸಮಾಧಾನಪಡಬೇಕಾಗಿರುವದು. ಇವರಿಗೆ ಅಂತ್ಯಕಾಲದಲ್ಲಿ 5 ವರ್ಷದ ಬಾಲ್ಯನಾದ ಬಾಲಕನಪೋಷಣೆಕ್ಕಾಗಿ ಅವರ ಧರ್ಮಪತ್ನಿಯವರೂ, ಇವರೀರ್ವರ ಪೋಷಣಕ್ಕಾಗಿ ಸಹೋದರರು ಬಾಂಧವರೂ ಅನೇಕರು ಇರುವರು. ಶ್ರೀಮದುತ್ಸವ ಹೋಗದಿಂದ ಪತಿಸುತ ಸಹೋದರರಿಗೆ ಅತಿಶಯ ದುಃಖವಾಗಿರುವದು. ಸಹಜವಾಗಿದೆ. ಶ್ರೀಮದ್ವಿಷ್ಣುಸ್ತವನು ಪತಿಸುತಾದಿಬಂಧುಗಳಿಗೆ ದುಃಖಶಮನವನ್ನು ಮಾಡಿ ಶ್ರೀಮಂತರ ಆತ್ಮಕ್ಕೆ ಶಾಂತಿಯನ್ನಿತ್ತು ಈ ಪುತ್ರನನ್ನು ಉದ್ಧರಿಸಲೆಂದು ಹಾರೈಸುತ್ತೇವೆ.

ಪುರಗಿರಿ ಚಿದ್ಘನಶಿವಾಚಾರ್ಯಸ್ವಾಮಿಗಳ್
ಕಾಶೀಕ್ಷೇತ್ರ.

ದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಭಾದೇವಿಯ ಶುಭೋದಯ

! ಮುದ್ದು ಪ್ರಭಾದೇವಿ! ಪರಮಪಾವನ ವೀರಶೈವಸಮಾಜಮಾತೆಯು ಪ್ರಥಮಪ್ರ ಧರ್ಮಸಾಮ್ರಾಜ್ಯ ಸಾರ್ವಭೌಮರೂ ದ್ಗುರು. ಪಂಚಾಚಾರ್ಯರ ಕೃಪಾಶೀರ್ವಾ ದ ಬಹುಕಾಲಕ್ಕೆ ಅಣಿಮುತ್ತಿನಂಥ ಕನ್ಯಾ ಉದ್ಭವಿಸಿದೆ. ಪ್ರಭಾ! ನೀನಿನ್ನು ಬಾಲೆ. ಉದಯದಿಂದ ಸಮಾಜಾಂಧಕಾರವು ಮೆಲ್ಲ ಹಿಂದೋಡುತ್ತಿದೆ. ನೀನು ಚಿಕ್ಕವಳಾದ ದ್ದು ಮುದ್ದಾಗಿ ನಲ್ನುಡಿಗಳನ್ನು ನುಡಿಯುತ್ತ ರ್ಮದ ಪ್ರೇಮದಮಾತುಗಳನ್ನು ಹೇಳುತ್ತ ಪೂರ್ಣಪ್ರಜ್ಞಾಶಾಲಿಗಳೂ, ವಿದ್ಯಾಧಿಕರೂ, ಜ್ಞಾನಿಗಳೂ ಹೇಳಿಕೊಡುವ ಸನ್ಮಾರ್ಗಬೋ ಧಕವಾದ ವಚನಪಂಕ್ತಿಗಳನ್ನೇ ನುಡಿದು ಬಿಸುತ್ತಿರುವೆ. ನೀನು ಸಾಹಿತ್ಯನಿಪುಣರೂ, ಹಿತಕಾಂಕ್ಷಿಗಳೂ ಆದ ವಿದ್ವಾಂಸರ ಆಶ್ರ ಬೆಳೆಯುತ್ತಿರುವೆ. ನಿನ್ನ ಧಾರ್ಮಿಕ, ನೈತಿಕ, ತ್ಮಿಕ, ಸಾಮಾಜಿಕ ಹಾಗೂ ರಾಜಕೀಯಗು ದಿನೇದಿನೇ ವೃದ್ಧಿಹೊಂದುತ್ತಿರುವುದನ್ನು , ಸಮಾಜಾಭಿಮಾನಿಗಳು ಸರ್ವತೋಮುಖ ಉಲ್ಲಾಸಹೊಂದುತ್ತಿರುವರು. ದೇವಿ ಪ್ರಭಾ! ನೋಡು! ನಿನ್ನ ಮೂರ್ತಿಯು ಚಿಕ್ಕದಾದರೂ ಲಕ್ಷಿಯು ತಪ್ಪಿಹೋಗುತ್ತಿದೆ. ನೀನು ಶುಭ್ರ ಸಮಾಜಶುಭಾಕಾರಿಣಿ. ನೀನಿನ್ನೂ ಸಾಲ್ತು ಮಗುವಾದರೂ ನಿನಗಿಂತಲೂ ಹಿರಿಯರಾದ ಯೋಗಿಗಳೊಂದಿಗೆ ಹೋರಾಡುವ ಗುಣವನ್ನು ಗಲೇ ತೋರಿಸುತ್ತಿರುವುದು ನಿನ್ನ ಸತ್ವವನ್ನು ಪಡಿಸುತ್ತದೆ. ಪತ್ರೆ! ಭೂಲೋಕದಲ್ಲಿ ಅವತರಿಸಿದ ಆತಂಕಗಳು ಬರುವುದು ನಿಜವಷ್ಟೆ? ಸೂರ್ಯೋ ದಯದಿಂದ ಜಗತ್ತೆಲ್ಲಾ ಶೋಭಾಯಮಾನವಾಗಿ ಬೆಳ ದಾದರೂ, ಕ್ಷುಲ್ಲಕವಾದ ಕಾರ್ಮುಗಿಲುಗಳು ಆ ಕಾಂತಿಯನ್ನು ಮುಚ್ಚಲು ಪ್ರಯತ್ನಪಟ್ಟು ಪ್ರಯ ಸ್ವವಾದವುಗಳಾಗುವುದಿಲ್ಲವೇ? ಆ ದಿನಮಣಿಯ ಕಾಶದಿಂದ ಸಜ್ಜನರು ಹರ್ಷಿತರಾಗುವರಾದರೂ ಟ, ಬಾವಲಿ ಮೊದಲಾದ ಕೀಟಪ್ರಾಣಿಗಳು ಅಸೂ ಯಿಂದ ಕುದಿಯುವುದಿಲ್ಲವೇ? ದೇವೀ! "ನಿಂದ್ಯೋ ಟಿಮಂಡುಪುಳುಗಳ್" ಎಂಬ ಮಹಾವಾಕ್ಯ ತ್ತಿ ಉತ್ಕರ್ಷಾಸಹಿಷ್ಣುಗಳ ಸಂಕುಚಿತಹೃದಯದಿಂದ ಬರುವ ಕಲುಷಿತವಾಕ್ಯಗಳಿಂದ ಎದೆಗುಂದಬೇಕಾ ರ್ಯಕ್ಕೆ ಚ್ಯುತಿಯಿಲ್ಲ. ಧರ್ಮಮಾರ್ಗಗಾಮಿನಿಯಾ ನಿನ್ನ ಈಗಿನಗುಣಗಳು ಇನ್ನು ಮುಂದೆಯೂ ದ್ಧಿಹೊಂದಲಿ. ಮತಾಭಿಮಾನಿಗಳ ಅಮೃತಹಸ್ತ ನಲಿದಾಡು. ಅಸೂಯಾಳುಗಳ ಅಪಸ್ವರದ ಅಸ ಪ್ರಸಂಗಗಳಿಗೆ ಕಿಂಚಿತ್ತಾದರೂ ಮನಗೊಡಬೇಡ. ಪವಿತ್ರಧ್ಯೇಯಸಾಧನೆಗಾಗಿಯೇ ಕಾರ್ಯಕ್ಷೇ ದಲ್ಲಿ ನಿಂತು ಕೆಲಸಮಾಡು. ಚಿರಕಾಲ ಬದುಕಿ ವೀರ ತೆಯಾಗು, ಪೂಜ್ಯಪಂಚಾಚಾರ್ಯರ ಆಶೀರ್ವಾದ ನಿನಗಿರಲಿ, ಸರ್ವೋತ್ತಮನಾದ ತ್ರಿನಯನಸ್ವಾಮಿ ನಿನಗೆ ನಿತ್ಯಮಂಗಳವನ್ನುಂಟುಮಾಡಲಿ.

ನಿನ್ನ ಅಭ್ಯುದಯೇಚ್ಛು
ಮುದಗೆರೆ ಟಿ. ಎಸ್. ಲಿಂಗಯ್ಯ, ಮೈಸೂರು.

ೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಮಹಾತ್ಮರ ಆಗಮನವು ನೂತನಪತ್ರಾಣಿಯ ಸುಧಾರಣೆಯು

ಜಿಲ್ಹಾ ವಿಜಾಪೂರ ಬದಾಮಿತಾಲೂಕ ಪೈಕಿ ಗೋನಕೊಪ್ಪವೆಂಬವೊಂದು ಸಣ್ಣಗ್ರಾಮವಿದ್ದು ಇಲ್ಲಿ ವೀರಶೈವರ ವಸತಿಯು ಸ್ವಲ್ಪವಿದ್ದರೂ ಎಲ್ಲರೂ ಗುರು ಲಿಂಗಜಂಗಮ ಸೇವಾಸಕ್ತರಿದ್ದು ಸದಾ ಸಂತೋಷ ದಿಂದ ಪ್ರಪಂಚವನ್ನು ಸಾಗಿಸುತ್ತಿರುವರು. ಇಲ್ಲಿ ಸಾ ಬಸಪ್ಪಾ ಸಂಗಪ್ಪಾ ಮಾಳವಾಡ ಎಂಬ ಒಬ್ಬ ರಿದ್ದು ಇವರ ಮನೆಯಲ್ಲಿ ಪ್ರತಿವರುಷ ಶ್ರಾವಣ ಕೂಡ್ಲೂರ ಬೃಹನ್ಮಠದ ಶ್ರೀ ಪೂಜ್ಯಪಾದರಾದ ಪಟ್ಟದಸ್ವಾಮಿಗಳ ಪಾದಪೂಜೆಯ ಸಮಾರಂಭವು ನಡೆಯುತ್ತಿದ್ದ ಪದ್ಧತಿಯಂತೆ ಈ ವರುಷವು ಸಾಗಿದ್ದು ಇದ್ದದಲ್ಲಿ ತಾ|| ೯-೮-೩೭ ಇಸ್ವಿ ದಿವಸ ಶ್ರೀ ಪೂಜ್ಯಪಾದರಾದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಗಚ್ಚಿನ ಹಿರೇಮಠ ತೊರಗಲ್ಲ ಇವರು ಅಕಸ್ಮಾತ್ತಾ ಇಲ್ಲಿಗೆ ದಯಮಾಡಿಸಿ ಎರಡುದಿವಸ ತಮ್ಮ ಶಿಷ್ಯನಾದ ನಮಸಪ್ಪಾ ಬಸಪ್ಪಾ ಪೋಟಿ ಇವರ ಮನೆಯಲ್ಲಿ ವೀರಶೈವ ಧರ್ಮದ ಶ್ರೇಷ್ಠತೆಯಬಗ್ಗೆ ಬಹಳ ಸರಸವಾದ ಶೈಲಿಯಿಂದ ಎಲ್ಲರಿಗೂ ತಿಳಿಯುವಂತೆ ಅನೇಕ ಯುಕ್ತಿಪ್ರಯುಕ್ತಿಗಳಿಂದ ಕೂಡಿದ ದೃಷ್ಟಾಂತಗಳಮೂಲಕ ಎಲ್ಲರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಬೋಧಿಸಿದರು. ನಂತರ ತಾ|| ೧೧-೮-೩೭ ಇಸ್ವಿ ದಿವಸ ಸದರಿ ಗೋನಕೊಪ್ಪದಲ್ಲಿ ಮಾರುತಿದೇವರ ಗುಡಿಯಲ್ಲಿ ಇಲ್ಲಿಯ ಪುರವಾಸಿಗಳು ಒಂದು ಸಭೆಗೂಡಿಸಿದರು. ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ಕೊಣ್ಣೂರು ಶ್ರೀ ಪಟ್ಟದಸ್ವಾಮಿಗಳು ಯೋಗ್ಯರಿದ್ದು ಅವರಿಂದ ಈ ಸಭೆಯಕಾರ್ಯವು ಚನ್ನಾಗಿ ಜರಗುವದೆಂದು ಇಲ್ಲಿಯ ಪೋಲೀಸ ಪಾಟೀಲ ಬಸನಗೌಡ್ರು, ಸೂಚಿಸಿದ ಪ್ರಕಾರ ಇಲ್ಲಿಯ ರಾಚಯ್ಯನವರು ಹಿರೇಮಠ ಇವರು ಸಭಿಕರವತಿಯಿಂದ ಅನುಮೋದನವನ್ನು ಕೊಟ್ಟರು. ನಂತರ ಸದರಿ ಸ್ವಾಮಿಗಳು ಅಧ್ಯಕ್ಷಸ್ಥಾನವನ್ನು ವಹಿಸಿ ಪ್ರಾಸ್ತಾವಿಕ ಭಾಷಣಮಾಡಿದನಂತರ ನಮ್ಮಲ್ಲಿಗೆ ದಯಮಾಡಿಸಿದ್ದ ಶ್ರೀ ತೊರಗಲ್ಲ ಗಚ್ಚಿನಹಿರೇಮಠದ ಸ್ವಾಮಿಗಳು ಮಾನವಪ್ರಾಣಿಯ ಕರ್ತವ್ಯಕರ್ಮ ಎಂಬ ವಿಷಯದಮೇಲೆ ಎರಡುತಾಸಿನವರೆಗೆ ಸಭಿಕರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಶ್ರುತಿ ಯುಕ್ತಿ ಅನುಭವದಿಂದಕೂಡಿದ ಭಾಷಣವನ್ನು ಮಾಡಿ ಆನಂದಗೊಳಿಸಿದರು. ಇವರು ಚಿಕ್ಕವಯಸ್ಸಿನವರೂ, ಶಾಂತಸ್ವಭಾವದವರೂ, ಸಮಾಜದ ಒಳ್ಳೇ ಅಭಿಮಾನಿಗಳೂ, ತಮ್ಮ ಆಯುಷ್ಯವನ್ನು ಸಮಾಜಸುಧಾರಣೆಗೆ ಖರ್ಚುಮಾಡುವವರೂ ಇದ್ದು ಇವರು ತಾವು ಹೋದಹೋದಲ್ಲಿ ಸುಧಾರಣಾಕಾರ್ಯವನ್ನು ನಡಿಸುತ್ತಾ ಇರುವರು. ಇಂಥಾ ಮಹನೀಯರಭಾಷಣವಾದನಂತರ ರಾಚಯ್ಯನವರು ಹಿರೇಮಠ ಇವರು ಅಧ್ಯಕ್ಷರ ಅಭಾರವನ್ನೂ ತೊರಗಲ್ಲ ಶ್ರೀಗಳ ಅಭಾರವನ್ನೂ ಮನ್ನಿಸಿ ಮಂಗಳವಾಡಿ ಎಲ್ಲರಿಗೂ ತಾಂಬೂಲವು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ನಮ್ಮಲ್ಲಿಗೆ ಮೇಲಿಂದಮೇಲೆ ಮಹಾತ್ಮರ ಆಗಮನವಾಗಿ ನಮಗಳ ಉದ್ಧಾರಮಾಡಬೇಕೆಂದು ಪಂಚಾಚಾರ್ಯ ಜಗದ್ಗುರುಗಳನ್ನು ಕುರಿತು ಪ್ರಾರ್ಥಿಸಿ ನನ್ನ ಲೇಖನವನ್ನು ಮುಗಿಸುತ್ತೇನೆ. ಬಸಪ್ಪಾ ಸಂಗಪ್ಪಾ ಮಾಳಕಡ್ಡಿ.

ಹೊಳೆ ಆಲೂರು.

ಜಿಲ್ಹಾ ಧಾರವಾಡ, ತಾಲೂಕು ರೋಣ ಪೈಕಿ ಹೊಳೆ ಆಲೂರೆಂಬ ಗ್ರಾಮದಲ್ಲಿ ಶ್ರಾವಣವದ್ಯ ೧, ಗುರುವಾರ ಈ ದಿವಸ ನಡೆದ ಶುಭಾರಂಭದ ಸಮಾಚಾರವೇನಂದರೆ. ವೇ|| ಷ|| ಬ್ರ|| ಶ್ರೀ ಚರಮೂರ್ತಿಸ್ವಾಮಿಗಳು ನರೇಗಲ್ಲ ಶ್ರೀ ಪಟ್ಟಾಧ್ಯಕ್ಷರು ಬೃಹನ್ಮಠ ಪಾಲೀಕೊಪ್ಪ ಇವರ ಗುರುತ್ವದಲ್ಲಿಯೂ, ಅಬ್ಬಿಗೇರಿ ಪಾಲೀಮಠದ ವೇ|| ರಾಚಯ್ಯನವರ ವೈದಿಕತ್ವದಲ್ಲಿಯೂ, ರಾ|| ಚಂದ್ರಶೇಖರಪ್ಪಾ ಪೋಲೀಸ ಪಾಟೀಲ ಮು|| ಹೊಳೆ ಆಲೂರ ಇವರ ಮನೆಯಲ್ಲಿ ರಾಚಯ್ಯಾ ಮಠಪಯ್ಯಾ ದೇವರು ಇನಾಮದಾರ ನಂದವಾಳಕರ ಮು|| ಕೊಲ್ಲಾಪುರ ಇವರ ಧರ್ಮಪತ್ನಿಯವರಿಗೂ ಹಾಗೂ ಮು||ರಾ|| ಗುರುಸಿದ್ದಪ್ಪಾ ಮೆಣಸಿಗಿ ಇವರಿಗೂ ಮತ್ತು ಸಣ್ಣಬಸಪ್ಪಾ ಪತ್ರಿ ಇವರ ಧರ್ಮಪತ್ನಿಯವರಿಗೂ ವ ಅಯ್ಯಪ್ಪಾ ಯಾವಗಲ್ಲ ಇವರಿಗೂ ಮೋಕ್ಷಮಾರ್ಗದ ಕಾರಕವಾಗಿಯೂ, ವೀರಶೈವರಿಗೆ ಸಂಬಂಧಿಸಿದ ಸಂಸ್ಕಾರಗಳಲ್ಲಿ ಅತ್ಯುತ್ಕೃಷ್ಟತರವಾಗಿಯೂ ಇರುವ ಶಿವದೀಕ್ಷಾಸಂಸ್ಕಾರವು ಸದರಿ ಶ್ರೀಗಳವರ ಕರದಿಂದ ಕೊಡಲ್ಪಟ್ಟ ಸಂಗತಿಯು ಅತ್ಯಂತ ಹೃದಯಂಗಮವಾಗಿಯೂ, ಸರ್ವ ಹಿರಿಯರ ಆಚಾರವೃದ್ಧಿಯಿಂದ ಅನುಸರಣೀಯವಾಗಿಯೂ ಇರುತ್ತೆ. ಈ ಕಲಿಕಾಲದಲ್ಲಿಯೇ ನವೀನ ಕಾಲದಲ್ಲಿ ನಮ್ಮ ವೀರಶೈವಮತಸಂಸ್ಥಾಪಕರಾದ ಜಗದ್ಗುರು ರೇಣುಕಾಚಾರ್ಯರು ಹಾಕಿಕೊಟ್ಟ ಧರ್ಮಸಿಂಹಾಸನಗಳಲ್ಲಿ ಬಿಂಗುಡಿದ ಧಾತುಗಳಂತೆ ಮೂಲಿಗುಂಪಾಗಿ ಗುರ್ತಿಸಲಿಕ್ಕೆ ಬಾರದಷ್ಟು ಹೀನಾವಸ್ಥೆಯಲ್ಲಿರುವವು. ಈ ಸಂಸ್ಕಾರಗಳ ಹೀನಸ್ಥಿತಿಗೆ ಧರ್ಮಗುರುಗಳಲ್ಲಿರುವ ಅಲಸತನವೋ, ತನ್ಮೂಲಕ ತಪ್ಪಿಷ್ಟರಲ್ಲಿರುವ ಅಜ್ಞಾನವೋ ನಿದಾನಗಳಾಗಿವೆ ಎಂದು ಬರೆದರೆ ತಪ್ಪಾಗಲಿಕ್ಕಿಲ್ಲ. ಕಾರಣ ಧರ್ಮಗುರುಗಳಾದ ಪಟ್ಟಚರಾಧಿಕಾರಿಗಳು ತಮ್ಮ ತಮ್ಮ ಶಿಷ್ಯಮಂಡಳಿಯವರಿಗೆ ತಮ್ಮ ಮತೀಯ ಸಂಸ್ಕಾರಗಳ ತತ್ವಂಗಳಂ ಬಲವಾಗಿ ಉಪದೇಶಿಸಿ ತತ್ಸಂಸ್ಕಾರ ಬೀಜಗಳನ್ನು ಭಕ್ತರ ಹೃತ್ಕ್ಷೇತ್ರದಲ್ಲಿ ಬಿತ್ತಿ ಅಂಕುರಗೊಳಿಸಿ ಮುಂದೆ ಫಲಕಾರಿಗಳಾಗುವಂತೆ ಯತ್ನಿಸಬೇಕು.

ಹಾಗಾಗದಿದ್ದರೆ ನಮ್ಮ ಆಚಾರಗಳು ಜನಾಕ್ಷನಾಸೆಯಿಂದ ಬೈಲಿಗೆ ಬರಲಾರವು. ಹ್ಯಾಗೇ ಆಗಲಿ ಮುಖ್ಯವಾಗಿ ವೀರಶೈವರಿಗೆ ದೀಕ್ಷಾ ಸಂಸ್ಕಾರವು ಹೆಚ್ಚು ಮಹತ್ವವುಳ್ಳದ್ದೂ, ಮೋಕ್ಷಫಲದಾಯಿನಿಯೂ ಆಗಿದೆ. ಯಾಕಂದರೆ "ದೀಕ್ಷಯಾ ಮಾರಮಿತಃ ಸಾಕ್ಷಾನ್ನಾತ್ರ ಯಾಲ್ಲಿಂಗಮುತ್ತಮಂ" ಈ ಪ್ರಕಾರವಾಗಿ "ಸಿದ್ಧಾಂತಶಿಖಾಮಣಿ" ಎಂಬ ರೇಣುಕಾಚಾರ್ಯೋಕ್ತ ಗ್ರಂಥದಲ್ಲಿ ಉಚಿತತರವಾದ ಪ್ರಮಾಣವಿರುವದಲ್ಲದೆ ವೇದೋಪನಿಷದಾಗಮಸ್ಮೃತ್ಯಾದಿಗಳಲ್ಲಿ ಅನೇಕಾನೇಕ ಪ್ರಮಾಣಗಳು ದೀಕ್ಷೆಯಿಲ್ಲದ ಮನುಷ್ಯನು ಪವಿತ್ರವಾದ ಲಿಂಗವನ್ನು ಧರಿಸಲಿಕ್ಕೆ ಯೋಗ್ಯನಾಗುವದಿಲ್ಲವೆಂಬ ವಿಷಯವನ್ನು ಘಂಟಾಘೋಷವಾಗಿ ಕೂಗುತ್ತಲಿವೆ. ಅಂದಮೇಲೆ ಮೋಕ್ಷಪ್ರಾಪ್ತ್ಯೈಕಕಾರಣೀಭೂತವಾದ ದೀಕ್ಷೆಯನ್ನು ಹೊಂದಿ ಧನ್ಯರಾಗತಕ್ಕದ್ದು.

ಈ ದೀಕ್ಷಾಕರ್ಮವನ್ನು ನೋಡಲಿಕ್ಕೆ ಊರೊಳಗಿನ ಸ್ತ್ರೀಪುರುಷರ ಸಮುದಾಯವು ವಿಪುಲವಾಗಿ ನೆರೆದಿತ್ತು. ಇದೇ ಸಮಯವನ್ನು ಸಾಧಿಸಿ ಶ್ರೀ|| ವೇ|| ಷ|| ಬ್ರ|| ಪಟ್ಟಾಧ್ಯಕ್ಷ, ಬೃಹನ್ಮಠ, ಪಾಲೀಕೊಪ್ಪ ಇವರು "ದೀಕ್ಷಾ" ಈ ವಿಷಯದಲ್ಲಿ ಸರ್ವ ಜನರಿಗೆ ಹೃದಯಂಗಮವಾಗುವಂತೆಯೂ, ಶಾಸ್ತ್ರಪ್ರಮಾಣವಾಗಿಯೂ, ಶ್ರೋತೃವರ್ಗದ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆಯೂ ವ್ಯಾಖ್ಯಾನಮಾಡಿದರು. ಈ ವ್ಯಾಖ್ಯಾನದ ಅಭಿಪ್ರಾಯವು ದೀಕ್ಷೆ ಇಲ್ಲದ ಮನುಷ್ಯನಿಗೆ ಮೋಕ್ಷವಿಲ್ಲವೆಂಬ ಅಭಿಪ್ರಾಯವನ್ನು ಚನ್ನಾಗಿ ಉಂಟುಮಾಡುವಂಥಾದ್ದಾಗಿಯೂ ತತ್ಪ್ರಕಾರವಾಗಿ ನಡೆಯಬೇಕೆಂಬ ದೃಢಸಂಕಲ್ಪಜನಕವಾಗಿಯೂ ಆಗಿತ್ತು.

ಮತ್ತೊಂದು ವಿಷಯವೇನಂದರೆ ಇದೇ ಊರಲ್ಲಿ ಶ್ರೀಯುತ|| ಧರ್ಮಬಂಧು ಕಲ್ಲಪ್ಪಾ ಅಣ್ಣಾ ಬೆಲ್ಲದ ಇವರು ತಮ್ಮ ಮನೆಯಲ್ಲಿ ವಾರ್ಷಿಕಪದ್ಧತಿಗನುಸರಿಸಿ ಈ ವರ್ಷವಾದರೂ ಸರ್ವರಿಗೂ ಪುರಾಣಶ್ರವಣ ಫಲ ದೊರೆಯಬೇಕೆಂಬ ಸದುದ್ದೇಶದಿಂದ ಶ್ರೀಮಜ್ಜಗದ್ಗುರು ರೇವಣಸಿದ್ಧೇಶ್ವರ ಪುರಾಣವನ್ನು ಅಬ್ಬಿಗೇರಿ ಪಾಲೀಮಠದ ವೇ|| ರಾಚಯ್ಯನವರಿಂದ ಹೇಳಿಸುತ್ತಲಿದ್ದಾರೆ. ಅಸದೃಶಮಹಿಮಾಶಾಲಿಗಳಾದ ಈ ಮಹನೀಯರ ಪುರಾಣಶ್ರವಣದಿಂದ ಏತದ್ಗ್ರಾಮವಾಸಿಗಳೆಲ್ಲರೂ ಪವಿತ್ರರಾದೆವೆಂದು ಸರ್ವಸಿದ್ಧರ ಮನಸ್ಕರಾಗಿ ಈ ಶ್ರಾವಣಮಾಸವನ್ನು ಬಹು ಸೊಗಸಿನಿಂದ ಕಳೆಯುತ್ತಿರುವರು. ಇದೇ ಪ್ರಕಾರವಾಗಿ ಪುಣ್ಯಪುರುಷರ ಧರ್ಮಬೋಧಕಗಳಾದ ಪುರಾಣ, ಕೀರ್ತನ, ಭಜನಾದಿಗಳನ್ನು ಸರ್ವ ಜನರು ತಮ್ಮ ತಮ್ಮ ಊರುಗಳಲ್ಲಿ ಜರುಗಿಸಿ ತದ್ದ್ವಾರಾ ಧರ್ಮೋಪದೇಶವಂ ಮಾಡಿ ಮುಳುಗಿದ್ದ ಧರ್ಮಸೂತ್ರವನ್ನು ಮೇಲಕ್ಕೆತ್ತಿ ತಕ್ಕಾಯಿಯಲ್ಲಿ ಯಾವಜ್ಜನರನ್ನು ರಕ್ಷಿಸುವ ಕರ್ತವ್ಯವು ಗುರುವರ್ಗದವರದಾಗಿದೆ. ಮೇಲೆ ಹೇಳಲ್ಪಟ್ಟ ದೀಕ್ಷಿತ ಜನರ ಅನುಕರಣವನ್ನು ಎಲ್ಲ ಜನರು ಮಾಡುವಂತೆಯೂ ಸದರೀ ಶ್ರೀಗಳಂತೆ ಸರ್ವಗುರುವರ್ಗದವರಲ್ಲಿ ವೈದಿಕ ಧರ್ಮವು ರೋಮಕೂಪಗಳಲ್ಲಿಯೂ ಕೂಡಾ ವ್ಯಾಪಿಸುವಂತೆಯೂ ಸದರೀ ಬಾಲೋಪದೇಶಕರಲ್ಲಿ ಉಪದೇಶ ಶಕ್ತಿಯು ಹೆಚ್ಚಾಗುವಂತೆಯೂ ಸರ್ವ ಜನರಲ್ಲಿ ಧರ್ಮಬುದ್ಧಿಯು ವೃದ್ಧಿಹೊಂದುವಂತೆಯೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ತಮ್ಮ ಅಮೃತಮಯಗಳಾದ ಕೃಪಾಕಟಾಕ್ಷಗಳನ್ನು ಸೂಸಲೆಂದು ಅನನ್ಯಭಾವದಿಂದ ಪ್ರಾರ್ಥಿಸಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ತಮ್ಮ ವೀರಶೈವಸಮಾಜ ಹಿತೈಷೀ
ರೇವಣಸಿದ್ಧಯ್ಯಾ ಭಿಕ್ಷಾವರ್ತಿಮಠ,
ಮು|| ಹೊಳೆ ಆಲೂರು.

ಕಲೆಯ ಕೋಲಾಹಲ.

ಕರ್ನಾಟಕ [illegible] ವಾಸ್ತುಶಿಲ್ಪ ಕಲಾ ಸಂಪತ್ತಿನಲ್ಲಿ [illegible] ಒಂದಾಗಿದೆ. ಆ ದಿನ [illegible] ವಾಗದಿದ್ದ [illegible] ಸ್ಪಷ್ಟವಾಗಿ ಈ ವಿಷಯದ [illegible] ತಿಳಿಯದೆ [illegible] ಅದರಲ್ಲಿ ಈ [illegible] ಸರ್ಕಾರದವರ [illegible] ಪ್ರೋತ್ಸಾಹದಿಂದಲೇ ರಾಜಧಾನಿಯಲ್ಲಿಯೇ [illegible] ಶಾಂತಿ [illegible] ವಿಗ್ರಹವ ತಯಾರಿಸಲು [illegible] ಅಧಿಕಾರಿಗಳಿಂದ ಶಿಲ್ಪಿಗೌರವವ ಮಾಡಲ್ಪಟ್ಟಿತು. [illegible] ದೇವಸ್ಥಾನಗಳನ್ನು ನೋಡಿದಾಗ [illegible] ಶಿಲ್ಪಕಲೆಯಲ್ಲಿ [illegible] ಊಹಿಸಲು [illegible] ಆದುದರಿಂದಲೇ [illegible] ವಾಸ್ತುಶಿಲ್ಪದಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನವು [illegible] ಶಿಲ್ಪಿಗೆ [illegible] ನಮ್ಮ ಕರ್ನಾಟಕ [illegible] ಉದರದಲ್ಲಿ [illegible] ಶಿಲ್ಪಿಗಳು [illegible] ಹುಟ್ಟಿಲ್ಲವೆಂಬ [illegible] ನಮಗೆ [illegible] ಆ ದಿನ [illegible] ಕಾವೇರಮ್ಮನವರ ವಿಗ್ರಹವನ್ನು ನೋಡಿದ [illegible] ಸ್ವಲ್ಪ [illegible] ಕಡಿಮೆಯಾಗುವದು. [illegible] ಆ ವಿಗ್ರಹವನ್ನು ಕಪ್ಪು ಶಿಲೆಯಿಂದ [illegible] ಇದನ್ನು ಕಟ್ಟೆಯ [illegible] ಭಾಗದಲ್ಲಿ [illegible] ಅಡಿಗಳ ಎತ್ತರದ [illegible] ಗುಡಿಯನ್ನು [illegible] ಸರ್ವರಿಗೂ ಕಾಣುವಂತೆ ಇಟ್ಟಿರುವರು. ವಿಗ್ರಹವು [illegible] ಪುರಾತನ ಕಟ್ಟಡಗಳಲ್ಲಿ [illegible] ಅಂಗಾಂಗ [illegible] ವಿಗ್ರಹಗಳನ್ನು [illegible] ಕಲೆಗಳಲ್ಲಿ [illegible] ನಾದ [illegible] ಈ ವಿಗ್ರಹವನ್ನು [illegible] ಶಾಸ್ತ್ರ [illegible] ಸಂಪ್ರದಾಯ [illegible] ಅನುಸರಿ [illegible] ಪೌರಾಣಿಕ [illegible] ವಿಗ್ರಹಗಳಲ್ಲಿ ಸುಂದರವಾದ [illegible] ಒಂದು [illegible] ಕೀರ್ತಿಯು [illegible] ದೇಶದಲ್ಲಿ [illegible] ಸಾವಿರ [illegible] ಹೇಳುವದು [illegible] ಆದರ [illegible] ಒಂದು ಸುಂದರವಾದ [illegible]

ವಿಗ್ರಹಗಳಲ್ಲಿ [illegible] ಅದರ ಅವಯವಗಳ [illegible] ನಮ್ಮ ಹೃದಯಗಳನ್ನು [illegible] ನಮ್ಮ ಅಕ್ಷಿಗಳಿಗೆ [illegible] ಈ ವಿಗ್ರಹದ [illegible] ದೈವವಾದ [illegible] ಸಪ್ಪಂದವಾದ [illegible] ಶಾಂತಿ [illegible] ಸುಂದರವಾದ [illegible] ವೈಗಟ್ಟ ತಮ್ಮ ಅಂಗಗಳಿಗೊಪ್ಪುವ ಒಡವೆ ಇತ್ಯಾದಿಗಳಿಲ್ಲದೇ ಪ್ರಾಚೀನ ಕಾಲದ ಈ ಅಂಗಾಂಗಗಳ ಸಿರಿ ಗಟ್ಟು ಸುಮಿರಾದ ಮನಸ್ಸನ್ನೇ ಆಕರ್ಷಿಸುವಂಥ ರತ್ನ ಕೆಲಸಗಳ ಜೊತೆಗೆ ದೈವಿಕವಾದ ತೇಜದ ಕಾಂತಿಯಿಂದ ವರ್ಣಿಸಲಸದಳವಾದ ಒಂದು ಆನಂದದಿಂದ ಚಿಂತಾರಹಿತವಾದ ಮುಗುಳುನಗೆಯಿಂದ ಗಾನಯುಕ್ತವಾದ ವೇಣುಗಾನದಿಂದ ಕೈಯಲ್ಲಿ ಹಿಡಿದಿರುವ ಅವ್ಯಕ್ತ ಕಳಶದಿಂದ ನೀರು ಬರುತ್ತಲಿರುವುದನ್ನು ನೋಡಿದರೆ ಶ್ರೀ ಕಾವೇರಿ ನದಿಯು ನಮ್ಮ ಎದೆ ಕಿರಿಯರ ಮೇಲೆ ಶಾಂತಿರಸವನ್ನು ಸೂಸುತ್ತಿರುವಂತೆ ಕಾಣುವದು.

ವಿಗ್ರಹವನ್ನು ಮಾತುಗಳಿಂದ ಎಷ್ಟು ಹೊಗಳಿದರೂ ಒಂದು ಸಲ ವಿಗ್ರಹವನ್ನು ಕಣ್ಣು ತುಂಬಾ ನೋಡಿದಷ್ಟರ ಆನಂದವು ನಮಗೆ ಉಂಟಾಗುವದಿಲ್ಲ. ನೋಡಿದಷ್ಟು ಸೌಂದರ್ಯವನ್ನು ಅದು ನಮ್ಮ ಮನಸ್ಸಿನಲ್ಲೇ ಪ್ರತಿರೂಪಗೊಂಡು ಅನಂತಸಂತೋಷವನ್ನು ಕೊಡುತ್ತದೆ. ಇಷ್ಟು ಪವಿತ್ರವಾದ ವಿಗ್ರಹವನ್ನು 2೦ ದಿವಸಗಳಲ್ಲಿಯೇ ಮಾಡಿರುವದು ಶಿಲ್ಪಿಗಳ ಚಾತುರ್ಯವನ್ನು ತೋರಿಸುತ್ತದೆ.

ಮಹಾತ್ಮಾ ಗಾಂಧಿಯವರು ತಾವು ಕೃಷ್ಣರಾಜಸಾಗರಕ್ಕೆ ದಯಮಾಡಿಸಿದ ಕಾಲದಲ್ಲಿ ಈ ವಿಗ್ರಹವನ್ನು ನೋಡಿ ತಮ್ಮ ಅಮೋಘವಾದ ಆನಂದವನ್ನು ಸೂಚಿಸಿದುದು ಅಲ್ಲಿಯ ಅಧಿಕಾರಿಗಳಿಂದ ತಿಳಿಯಬಂದಿತು. ನಮ್ಮ ಸರ್ಕಾರದವರು ಕರ್ನಾಟಕ ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ಕೊಟ್ಟು ಈ ವಿಗ್ರಹವನ್ನು ಮಾಡಿಸಿರುವದಾಗಿಯೇ ಮುಂದೆ ಇನ್ನೂ ಅನೇಕ ವಿಗ್ರಹಗಳನ್ನು ಮಾಡಿಸುವದರ ಮೂಲಕ ಕರ್ನಾಟಕ ವಾಸ್ತುಶಿಲ್ಪವನ್ನು ಅಭಿವೃದ್ಧಿಪಡಿಸುವರೆಂದು ನಂಬುತ್ತೇವೆ.

ಇಂಥ ಅಮೋಘವಾದ ವಿಗ್ರಹವನ್ನು ತಯಾರಿಸಲು ಅಪ್ಪಣೆಯಿತ್ತ ಶ್ರೀಮನ್ಮಹಾರಾಜರವರಿಗೂ, ಅವರ ದಿವಾನರವರಿಗೂ ತಯಾರಿಸಿದ ಶಿಲ್ಪಶಾಸ್ತ್ರವಿಶಾರದರಿಗೂ ಭಗವಂತನು ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸುವೆವು.

ಪ್ರತ್ಯಕ್ಷದರ್ಶಿ

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಪಂಚಾಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಪಂಚಾಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯಾನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಪ್ರಾರ್ಥಿಸುತ್ತೇವೆ. ಸಂಪಾದಕರು

ಡಾಕ್ಟರ್ ಪಿ. [illegible] ಯವರ
ಸುಗಂಧ ನಸ್ಯದಪುಡಿ
ಲೋಕಪ್ರಸಿದ್ಧವಾದ ಈ ಸುಗಂಧ ನ
ಯು ಕಂಡುಹಿಡಿಯಲ್ಪಟ್ಟು ಸಾವಿರಾರು
ಇದನ್ನು ಉಪಯೋಗಿಸಿ ಸಾವಿರಾ
ಯೋಗಿ
ವನ್ನು
ರು
ಈ ನಸ್ಯ
ಯಿಂದ ನ
ವ ವ್ಯಾಧಿ
ವನಂದರೆ
ಒಂಟಿತಲೆ
ತಲೆಯಲ್ಲಿನ

(Registered Trade Mark)

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವಾ
ದೋಷ ಮುಂತಾದ ವ್ಯಾಧಿಗಳು ಪರಿಹಾ
ವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿ
ನಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಕೊ
ಡುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ
ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿ
ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು.
ನ್ನ ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕು
ಔಷಧವಾಗಿ ಉಪಯೋಗಿಸುತ್ತಾರೆ. ಮಾದ
ಕ್ಕಾಗಿ ಸ್ವಲ್ಪ ಕಳುಹಿಸಲಾದೀತು
ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦
ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ. ಪಿ.
ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು
ಯಾಗಿ ತಿಳಿಯುವಂತೆ ಬರೆಯಿರಿ — ವಿಳಾಸ
ಗುರುಬಸವ ಅಂಡ್ ಕಂಪನಿ ಲಿಮಿ
[14] ಪೋ ಬಾ ೫೧೦ ಮದರಾಸು.

ASIATIC GOVERNMENT SECURI
LIFE ASSURANCE CO LTD MYSO
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂ
ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮಾ ಸಂಘಗ
ಮುಂದಾಗಿರುವುದು

ಆದ್ದರಿಂದ ಯಾವಾಗಲೂ 'ಏಶ್ಯಾಟಿಕ್'
ನಿಯಲ್ಲಿಯೇ ವಿಮೆಮಾಡಿರಿ

ಹೇಕಂದರೆ ಇದರ ದರಗಳು ಬಹಳ ಕಡಿಮೆಯಾ
ವಿ ಕ್ಕೂ ಇದರ ವಿರ್ಮಾಡುಗಳು (ಸ್ಕೀಮು) ಲಾ
ವಾದುವು

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ
ಜಮಾನಿನ ಮೇಲೆಯೂ ಸಾಲಗಾರರಿಗೆ ಅವರ
ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ದ
ಡಿಸೆಂಬರ್ 31 ನೆಯ ಇಸ್ವಿ 1927 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವ
ರಿಗೆ ಬರೆಯಬಹುದು

(1) ಮ|| ಡಿ ರಾಜ ರಾ
ಚೀಫ್ ಏಜೆಂಟ, ಮೈಸೂರು.
(2) ಮಿ|| [illegible] ಆರಾಧ್ಯ,
ಚೀಫ್ ಏಜೆಂಟ್ ಹುಬ್ಬಳ್ಳಿ ಮತ್ತು ಒಕ್ಕ
(3) ಹೈದರಾಬಾದ ಏಶ್ಯಾಟಿಕ ಹೌಸ್,
ಚೀಫ್ ಏಜೆಂಟ ಹೈದರಾಬಾದ್ (ದಕ್ಷಿ
ಸಿ. ಬಿ. ರಾಮಾರಾವ್ ಮುಖ್ಯ ಏಜೆಂಟ
[12] ಮೈಸೂರು *Asiatic Buildin*

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ಬ್ರಂ| ಪಂಡಿತ ಶಿವ ಗುರುಶಾಂತಶಾಸ್ತ್ರಿ ಯವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

TERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಸಂಕಾಶಾನನಸಂಕಟಾಃ ಶಿವಾಃ ಪಂಚಾಸ್ಯಪೀಠಾಲಯಾಃ ಪಂಚಬ್ರಹ್ಮಮುಖಾತ್ಮಕಾಃ ಪರಶಿವಶ್ರೀ[illegible]ಲಿಂಗೋದ್ಭವಾಃ ||
ಸಂಚಾರ್ಯ ಸಲ್ಲೀಲಯಾ || ಸಿದ್ಧಾಂತಾಂಕುರಮಾ
ದಧತ್ಸ್ವಹೃದಯೇ ಸಿಕ್ತಿಸ್ತ್ವಪಾರ್ಣಾಸಾದಿಕಂ | ಸ ಶ್ರೀ
ಮನ್ಮರುಳಾರ್ಯ ದೇಶಿಕವರಃ ಪಾಯಾದಪಾಯಾಜ್ಜ
ನಾನ್ ||೨||

ದ್ರಾಕ್ಷಾರಾಮ ಶಿವಾಭಿದಾನಕಲಿತಕ್ಷೇತ್ರಸ್ಥ ರಾ
ಮೇಶತಾ | ಜ್ಜನ್ಮಪ್ರಾಪ್ಯ ಸಮಸ್ತಸಂಯಮಿಗಣಂ
ಸಂಬೋಧ್ಯ ತತ್ವಂ ಪರಂ | ಯಶ್ಚಕ್ರೇ ನಿಜಧರ್ಮಪೀ
ಠರಚನಾಂ ಶೀತಾದ್ರಿಸಾನೌ ಮುದಾ | ಏಕೋರಾಮ
ಗುರೂತ್ತಮಃ ಸ ನಿಖಿಲಾಂಘ್ರಾಯಾದ್ಧರಾಮಸ್ತಹಂ ||

ಶ್ರೀಶೈಲಸ್ಥಿತಮಲ್ಲಿಕಾರ್ಜುನ ಮಹಾಲಿಂಗಾಜ್ಜ್ವಲ
ತ್ಪ್ರಾಪ್ಯ ಜನಿಂ|ಸಿದ್ಧಾಂತಂ ನಿಗಮಾಗಮಾದಿಗದಿತಂ ಯೋ
ಗೀಂದ್ರ ಸಂಸೇವಿತಂ| ಯೋಲೋಕೇ ಪ್ರಸಸಾರ ತಾಪ
ಸಗುರುಃ ಶ್ರೀಶೈಲಪೀಠಾಧಿಪಃ | ಸ ಶ್ರೀ ಪಂಡಿತ
ದೇಶಿಕೋಽವಿತನುತಾಂ ಸೌಖ್ಯಂ ಸದಾಭೂತಲೇ ||೪||

ಕಾಶೀಕ್ಷೇತ್ರ ವಿರಾಜಮಾನ ಭಗವದ್ವಿಶ್ವೇಶ ಗ
ರ್ಭೋದಯಂ | ಯಃ ಸಂಪ್ರಾಪ್ಯ ಮಹೀತಲೇ ಶಿವಮ
ಯಾಂ ಭಕ್ತಿಂ ತತಾನಾಮಲಾಂ || ಗರ್ಜದ್ದುರ್ಮತ
ವಾದಿವಾರಣಬಲಸತ್ಕಂಠೀರವಃ ಶ್ರೀಕರೋ|ವಿಶ್ವಾರಾಧ್ಯ
ಗುರೂತ್ತಮಃ ಸ ಜಗತೀಮವ್ಯಾದಪಾಯಾಚ್ಚಿರಂ||೫||

ಶ್ರೀಮದ್ದೇಶಿಕಪುಂಗವಾಃ ಶುಭಕರಾ ಭಾಸ್ವದ್ಗು
ಣಾಲಂಕೃತಾಃ | ಶಶ್ವತ್ಕೀರ್ತಿಪಯೋಜ ದಿವ್ಯಮಹಸಾ
ವ್ಯಾಪ್ತಾ ದಿಶಾಶಾಮುಖಾಃ || ಅಜ್ಞಾನಾಂಧತಮಃ
ಪರೀತಮನಸಾಂ ಸುಜ್ಞಾನಭಾನುಪ್ರಭಾಃ | ನಿತ್ಯಾನಿ
ತ್ಯವಿವೇಕರೂಪ್ಯಹೃದಯಂ ಕಾತ್ತತ್ಪೂತಾ ಜಗತಾ ||೬||

ಪಟ್ಟಾಧ್ಯಕ್ಷ ಬೃಹನ್ಮಠ ಪಾಲಿಕೊಪ್ಪ,
ಪಾಠಶಾಲಾ ಸೋಲಾಪೂರ.

ಸೂಚನೆಯು

ನಾವು ಪ್ರತಿವಾರವು ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸಿನ ಮಾಸ್ತರರಿಗೆ ತಿಳುಹಿಸಬೇಕು. ಕೆಲವರು ನಾವು ವಿ.ಪಿ. ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವದಿಲ್ಲವೆಂದು ಬರೆಯುತ್ತಾರೆ ವಿ.ಪಿ. ತೆಗೆದುಕೊಂಡವರ ಹಣವು ನಮ್ಮ ಕೈಸೇರಬೇಕಾದರೆ 20-25 ದಿವಸಗಳು ತಡವಾಗುತ್ತದೆ, ಹಣವು ಕೈಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವದಾಗುತ್ತದೆ. ಮನಸ್ಸಿನಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ.

ಸಂ—

ಪಂಚಾಚಾರ್ಯಪ್ರಭಾ

೧೯೩೭ನೇ ಸಪ್ಟಂಬರ್ ತಾ|| ೧೩ ನೇ ಸೋಮವಾರ

ಗುರು.

ಗುರುಭಕ್ತಿವಿಹೀನಸ್ಯ ಸಮಸ್ತಾ ನಿಷ್ಫಲಾಃ ಕ್ರಿಯಾಃ ।
ಅಸುಸ್ಥಿತಾಃ ಕಥಾ ಸ್ವೈರಿಣೀನ್ಯ ವ್ರತಪಕ್ಷವೇ ||

ಲೋಕದಲ್ಲಿ ವ್ಯಭಿಚಾರಿಣಿಯಾದ ಸ್ತ್ರೀಯಳು ಎಷ್ಟು ನಿಯಮೋಪವಾಸಾದಿ ವ್ರತಗಳನ್ನು ಆಚರಿಸುತ್ತಿದ್ದರೂ ಆ ವ್ರತಗಳೆಲ್ಲವೂ ಹೇಗೆ ನಿಷ್ಫಲಗಳಾಗುವವೋ ಅದರಂತೆ ಗುರುಭಕ್ತಿಯಿಲ್ಲದ ಮಾನವನು ಎಷ್ಟು ಪುಣ್ಯಕರ್ಮಗಳನ್ನು ಆಚರಿಸಿದರೂ ಅವುಗಳು ನಿಷ್ಫಲವಾಗುವವಲ್ಲದೆ ಫಲಕಾರಿಗಳಾಗುವುದಿಲ್ಲವೆಂದು ಪಾರಮೇಶ್ವರಾಗಮದಲ್ಲಿ ಹೇಳಲ್ಪಟ್ಟಿರುವುದರಿಂದ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಶ್ರೇಷ್ಠವಾದ ಮಾನವನು ಐಹಿಕಸುಖಕ್ಕೂ ಪರಲೋಕಸುಖಕ್ಕೂ ಸಾಧಕಗಳಾದ ಪುಣ್ಯಕರ್ಮಗಳನ್ನು ಗುರುಭಕ್ತಿಯೆಂಬ ಮೂಲಾಧಾರದಲ್ಲಿಯೇ ಆಚರಿಸುತ್ತಿರಬೇಕು. ಗುರುವಿಲ್ಲದೆ ಮಾಡಿದ ಸತ್ಕರ್ಮಗಳು ಫಲವನ್ನು ಕೊಡುವುದಿಲ್ಲವು. ಮನೆಯನ್ನು ಕಟ್ಟುವುದಕ್ಕೆ ಮೊದಲು ತಳಹದಿಯು ಬೇಕು. ತಳಹದಿಯು ಎಷ್ಟು ಭದ್ರವಾಗಿರುವುದೋ ಮೇಲೆ ಕಟ್ಟುವ ಮನೆಗಳೂ ಅಷ್ಟು ಭದ್ರವಾಗಿರುವುವಲ್ಲದೆ ವಾಸಕ್ಕೂ ಸೌಖ್ಯಕ್ಕೂ ಯೋಗ್ಯಗಳಾಗುತ್ತವೆ. ತಳಹದಿಯಿಲ್ಲದೆ ಮನೆಗಳನ್ನು ಕಟ್ಟುವುದಾದರೆ ಆ ಮನೆಗಳಿಂದ ಅನರ್ಥವಾಗುವುದಲ್ಲದೆ ಕಟ್ಟಿದ ಶ್ರಮಕ್ಕೂ ಫಲವಿಲ್ಲದಂತಾಗುವುದು. ಅದರಂತೆ ಮುಮುಕ್ಷುಗಳಾದ ಯಾವ ಮಾನವರು ಮೊದಲು ಗುರುಭಕ್ತಿಯೆಂಬ ತಳಹದಿಯನ್ನು ಹಾಕಿ ಮೇಲೆ ಸತ್ಕರ್ಮಾಚರಣೆಗಳೆಂಬ ಕಟ್ಟಡವನ್ನು ಕಟ್ಟುತ್ತಾರೆಯೋ ಅಂಥಹ ಮಾನವರೇ ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಇಹಪರ ಸೌಖ್ಯಾನುಭವವನ್ನು ಪಡೆಯುವರು. ಎಲೆಕ್ಟ್ರಿಕ್ ತಂತಿಗಳಲ್ಲಿ ಪವರ್ ಸರ್ವತ್ರ ವ್ಯಾಪಿಸಿದ್ದರೂ ಆ ಪವರು ಮನೆಗಳನ್ನು ಬೆಳಗುವುದಿಲ್ಲವು. ಆ ಪವರನ್ನು ತಂತಿಯ ಮೂಲಕ ಮನೆಯೊಳಗೆ ತೆಗೆದುಕೊಂಡು ಸ್ವಿಚ್ಚನ್ನು ಇರಿಸಿದರೆ ಪವರಿನ ಬೆಳಕು ಮನೆಯೊಳಗೆ ಬೀಳುವುದು. ಅಂಧಕಾರವು ತೊಲಗುವುದು. ಅದರಂತೆ ಭಗವಂತನು ಅಣುರೇಣು ತೃಣಕಾಷ್ಠ ಗುಲ್ಮಾದಿಗಳೆಲ್ಲೆಲ್ಲಾ ವ್ಯಾಪಿಸಿದ್ದರೂ ಅಂಥ ಆ ಭಗವಂತನ ಪ್ರಕಾಶವು ನಮ್ಮ ಗಳಮೇಲೆ ಬೀಳದಿರುವುದರಿಂದ ಅಂಗಸಂಬಂಧವಾದ ಮಾಯಾಂಧಕಾರವು ಶರೀರದಲ್ಲಿ ವ್ಯಾಪಿಸಿ ಲಿಂಗಸಂಬಂಧವಾದ ಚಿತ್ಪ್ರಕಾಶವನ್ನು ಮರೆಮಾಡಿರುವುದು. ಇಂಥಹ ಅಜ್ಞಾನಾಂಧಕಾರವನ್ನು ನಾಶಗೊಳಿಸಿ ಚಿದುಜ್ವಲನವು ನಮ್ಮ ಶರೀರಾಗಾರದಲ್ಲುಂಟಾಗಬೇಕಾದರೆ ಗುರುವನ್ನು ಪ್ರಧಮತಃ ಅವಲಂಬಿಸಬೇಕು. ತಂತಿಗಳಲ್ಲಿ ಪವರಿದ್ದರೂ ಸ್ವಿಚ್ಚಿಲ್ಲದಿದ್ದರೆ ಪ್ರಯೋಜನವಾಗದಂತೆ ಆಯಾಯ ಮತದ ಗುರುಗಳಿಲ್ಲದಿದ್ದರೆ ಆಯಾಯ ಮತೀಯರಿಗೆ ಉಪಾಸ್ಯನೆನಿಸಿದ ದೇವರು ಎಲ್ಲಾ ಕಡೆಯಲ್ಲಿದ್ದರೂ ಆ ದೇವರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲವು. ದೈವಸಾಕ್ಷಾತ್ಕಾರಕ್ಕೆ ಗುರುವೇ ಸಹಾಯಕನಾಗಿರುವನು. ಇದುದರಿಂದ ಸರ್ವಸಿದ್ಧಾಂತಕಾರರು

ಗುರುಶ್ಶಿವೋಗುರುರ್ಮಂತ್ರೋ ಗುರುರ್ಮಾತಾಗುರುಃಪಿತಾ | ಗುರುರ್ಭ್ರಾತಾಗುರುರ್ಬಂಧುರ್ಗುರುರ್ಮಿತ್ರಂಗುರುರ್ಧನಂ | ಗುರುರ್ಲೋಕೋಗುರುರ್ಮುಕ್ತಿರ್ಗುರುರ್ಭೋಗೋಗುರುಸ್ಸುಖಂ | ಗುರುರ್ವೇದೋಗುರುಶ್ಶಾಸ್ತ್ರಂ ಗುರುರ್ಯೋಗೋಗುರುಃಫಲಂ | ಗುರುರ್ಧ್ಯಾನಂಗುರುರ್ಧರ್ಮೋ ಗುರುರ್ದೈವಂಗುರುರ್ಮನುಃ | ಗುರುರ್ನೇತ್ರಂಗುರುರ್ವಕ್ತ್ರಂ ಗುರುರ್ಪ್ರಾಣೋಗುರುರ್ಮನಃ | ಗುರುಸ್ಸರ್ವಂಗುರುಸ್ಸತ್ಯಂ ಗುರುರೇವ ಪರಶ್ಶಿವಃ || ಎಂದು

ಗುರುವನ್ನು ಹೊಗಳಿರುವರು. ಇಂಥಹ ವ್ಯಾಪಕವಾದ ಪರಮಾತ್ಮ ಪ್ರಕಾಶವನ್ನು ಶಿಷ್ಯರಿಗುಂಟುಮಾಡುವುದರಿಂದ ಗುರುಗಳೇ ಭವರೋಗಿಗಳಿಗೆ ವೈದ್ಯಶ್ರೇಷ್ಠರಾಗಿದ್ದಾರೆ. ಗುರುಪೀಠಗಳೇ ಮುಖ್ಯ ವೈದ್ಯಾಲಯಗಳಾಗಿರುತ್ತವೆ. ಗುರುವಿನಪ್ಪಣೆಯಂತೆ ನಡೆಸಲ್ಪಡುವ ಕರ್ಮೋಪಾಸನೆಗಳೇ ಪಥ್ಯಾಚಾರಗಳಾಗಿರುತ್ತವೆ. ಗುರುವಿನುಪದೇಶವೇ ದಿವ್ಯೌಷಧವಾಗಿರುತ್ತದೆ. ಆದುದರಿಂದ ಭವರೋಗಪೀಡಿತರಾದ ಭಕ್ತರ ಚಿಕಿತ್ಸೆಗಾಗಿ ತ್ರಿಲೋಕನಾದಿಪತಿಯಾದ ಭಗವಂತನು ಆಯಾಯ ಮತಸ್ಥಾಪಕರಾದ ಆಚಾರ್ಯರನ್ನು ಆಯಾಯ ಮತಗಳಿಗೆ ವೈದ್ಯಶಿಖಾಮಣಿಗಳನ್ನಾಗಿ ನಿರ್ಮಿಸಿರುತ್ತಾನೆ. ಅಂಥಹ ಗುರುವೆಂಬ ವೈದ್ಯರಾಜನನ್ನು ಮರೆತು ದೀಪವನ್ನು ಹಣ್ಣೆಂದು ಭ್ರಮಿಸಿ ತಿನ್ನುವುದಕ್ಕೆ ಹಾರಿ ಸುಟ್ಟುಹೋಗುವ ಪತಂಗಗಳಂತೆ ತುಚ್ಛವಾದ ವಿಷಯಗಳೆಂಬ ವಿಷವನ್ನು ಸೇವಿಸುತ್ತ ಭವರೋಗದಿಂದ ಬಳಲುತ್ತ ಪುಣ್ಯವೆಂಬ ಒಡವೆಯಿಂದ ಪಡೆಯಲ್ಪಟ್ಟ ಈ ಮಾನವದೇಹವನ್ನು ವ್ಯರ್ಥಗೊಳಿಸಿ ದೇವರ ಸೇವೆಗೆ ವಿರೋಧವಾಗಿ ನಡೆಯುತ್ತೇವೆ.

ಭವಸಾಗರವನ್ನು ದಾಟುವುದಕ್ಕೆ ಮಾನವ ದೇಹವು ಒಂದು ತೆಪ್ಪದಂತೆ ಇರುವುದು. ಗುರುವೆಂಬುವನೇ ಒಬ್ಬ ನಾವಿಕನಂತೆ ಇರುವನು. ನಾವಿಕನ ಸಹಾಯವಿಲ್ಲದೆ ತೆಪ್ಪವಿದ್ದರೂ ಸಮುದ್ರವನ್ನು ದಾಟಲು ಶಕ್ಯವಿಲ್ಲವು. ಗುರುವನ್ನು ಬಿಟ್ಟು ಯಾವನು ಸ್ವತಂತ್ರನಾಗಿ ಭವಸಾಗರವನ್ನು ದಾಟಲಿಚ್ಛಿಸುವನೋ ಅವನು ನಾವಿಕನಿಲ್ಲದೆ ತೆರೆಗೆ ಕೊಚ್ಚಿಕೊಂಡು ತೆಪ್ಪಸಹಿತವಾಗಿ ಮುಳುಗಿಹೋಗುವಂತೆ ಭವಸಾಗರದ ಮಧ್ಯದಲ್ಲಿ ಸಂಸಾರವೆಂಬ ವೇಗಕ್ಕೆ ಸಿಕ್ಕಿ ನಿರಾಧಾರವಾಗುವನಲ್ಲದೆ ಪುಣ್ಯವೆಂಬ ದೊಡ್ಡ ಬೆಲೆಯನ್ನು ಕೊಟ್ಟು ತೆಗೆದುಕೊಂಡ ದೇಹವೆಂಬ ತೆಪ್ಪವು ಒಡೆದು ಇಂದಿನಿಂದ ಕ್ರಿಮಿಕೀಟಾದಿ ಅನಂತ ಜನ್ಮಗಳಲ್ಲಿ ಹೊಸ್ಸದಾದ ರೌಂದು ನೀಚಜನ್ಮವನ್ನು ಪಡೆದು ಮೀನುಗಳು ಸಿಕ್ಕ ಕ್ರಿಮಿಗಳಂತೆ ಸುತ್ತುತ್ತಲಿರುವನು. ಆದುದರಿಂದ ಬಹು ಪುಣ್ಯಸಾಧನಗಳಿಂದ ಕೂಡಿದ ಉತ್ತಮವಾದ ಮಾನವಜನ್ಮವನ್ನು ಶೀಘ್ರ ಸಾರ್ಥಕಗೊಳಿಸಬೇಕೆಂದು ಪರಮಕೃಪಾಳುಗಳಾದ ಆಯಾಯಮತದ ಪೂರ್ವಾಚಾರ್ಯರು ಅವತಾರವನ್ನು ಪಡೆದು ಒಂದೊಂದು ಮತವನ್ನು ಸ್ಥಾಪಿಸಿ ಆಯಾಯ ಮತಗಳಿಗೆ ಮುಕ್ತ್ಯುಪಾಯಗಳನ್ನು ತಿಳಿಸಿ ಬೋಧಿಸುತ್ತ ಆಯಾಯ ಮತಸ್ಥರ ಸೌಕರ್ಯಗಳಿಗಾಗಿ ಸಿದ್ಧಾಂತಗ್ರಂಥಗಳನ್ನು ರಚಿಸಿ ಮುಂದಿನ ಮುಮುಕ್ಷುಜನಗಳಿಗೆ ಒಂದೊಂದು ಮಾರ್ಗವನ್ನು ಕಲ್ಪಿಸಿರುತ್ತಾರೆ. ಇವುಗಳಿಗೇ ಮತಗಳೆನ್ನುವರು.

ಪ್ರತಿಯೊಬ್ಬ ಮತಸ್ಥನು ತನ್ನ ಮತವಾವುದು, ಆ ಮತದ ಸ್ವರೂಪವೆಂಥದು, ಇದರ ಉದ್ದೇಶವೇನು? ಇದನ್ನು ಸ್ಥಾಪಿಸಿದವರಾರು? ಅವರ ಮಹತ್ವಗುಣವೇನು? ಅವರ ಸಿದ್ಧಾಂತದ ಮಾರ್ಗವಾವುದು? ಆ ಮಾರ್ಗದಲ್ಲಿ ಪ್ರಯಾಣಮಾಡುವ ಬಗೆ ಹೇಗೆ? ಆಯಾಯ ಮತಸ್ಥರಾದವರು ಮತಾಚಾರ್ಯರ ಮಾರ್ಗದಲ್ಲಿ ನಡೆಯದಿದ್ದರೆ ಆಗುವ ಪರಿಣಾಮವೇನು? ನಡೆಯುವದರಿಂದ ಆಗುವ ಫಲವೇನು? ಎಂಬ ವಿಚಾರಗಳನ್ನು ಪ್ರತಿನಿತ್ಯದಲ್ಲೂ ಮಾಡುತ್ತ ಆಯಾಯ ಮತಗಳನ್ನು ಸ್ಥಾಪನಮಾಡಿದ ಮೂಲಗುರುಗಳಲ್ಲಿ ನಿರತಿಶಯವಾದ ಭಕ್ತಿಯನ್ನು ತೋರ್ಪಡಿಸುತ್ತ ಅವರಾಜ್ಞೆಯಂತೆ ನಡೆದು ಸಂಸಾರವೆಂಬ ಘೋರಾರಣ್ಯದಲ್ಲಿ ಸಂಚಾರದ ದಣಿಕೆಯಿಂದ ವಿಶ್ರಾಂತಿಸೌಖ್ಯವನ್ನು ಅನುಭವಿಸುತ್ತಿರುವುದೇ ಆಯಾಯಮತಸ್ಥರ ಕರ್ತವ್ಯಕರ್ಮವಾಗಿದೆ.

ಪ್ರಕೃತದಲ್ಲಿ ಶ್ರೀ ರೇಣುಕಾದಿ ಪಂಚಾಚಾರ್ಯರೇ ವೀರಶೈವಮತವನ್ನು ಸ್ಥಾಪಿಸಿ ಮುಕ್ತಿಗೋಸ್ಕರ ಅಷ್ಟಾವರಣ ಪಂಚಾಚಾರ, ಷಟ್‌ಸ್ಥಲ ಶಿವಭಕ್ತಿಗಳೆಂಬ ಯಾವ ಸಾಮಗ್ರಿಗಳನ್ನು ದಯಪಾಲಿಸಿರುತ್ತಾರೆಯೋ ಅಂಥಹ ಸಾಮಗ್ರಿಗಳನ್ನೆಲ್ಲ ವಿಪರೀತಗಳನ್ನಾಗಿ ಮಾಡಿ ಅಂಥಹ ಗುರುಗಳನ್ನೂ, ಗುರುಪೀಠಗಳನ್ನೂ ಮರೆತು, ತಂದೆಯ ಆಸ್ತಿಯಿಂದಲೇ ಜೀವಿಸುತ್ತಿದ್ದ ಮಕ್ಕಳು ತಂದೆಯನ್ನೇ ಮರೆತಂತೆ ಉಚ್ಛೃಂಖಲಮಾರ್ಗದಲ್ಲಿ ಹೊರಡುವುದಾದರೆ ಕಲಿಮಹಾರಾಜನ ಅಕೃತ್ಯ ಸಾಮರ್ಥ್ಯವೆಂದೇ ಹೇಳಬೇಕಾಗಿದೆ. ಬ್ರಹ್ಮಚಾರಿ ಮೊದಲುಗೊಂಡು ಆರಾಧನ ಪರಿಪಿಗೂ ಇರುವ ಲಿಂಗಾಂಗಿಗಳೆಲ್ಲರೂ ರೇಣುಕಾದಿ ಪಂಚಾಚಾರ್ಯರ ಸಂಬಂಧವನ್ನೇ ಹೇಳುತ್ತಾರೆ. ಅವರಿಂದ ಧರಿಸಲ್ಪಟ್ಟ ಶಿವಲಿಂಗವನ್ನೇ ಪೂಜಿಸುತ್ತಾರೆ. ಗುರೂಪದಿಷ್ಟವಾದ ಮಹಾಮಂತ್ರವನ್ನೇ ಜಪಿಸುತ್ತಾರೆ. ಅನ್ಯಮತದಲ್ಲಿ ಸನ್ಯಾಸವನ್ನು ಸ್ವೀಕರಿ ದೆ ಶಿಖಾಯಜ್ಞೋಪವೀತ ಸಂಧ್ಯಾವಂದನಾದಿ ಬಿಡುವಂತೆ ಯಾವುದನ್ನೂ ಬಿಡುವುದಿಲ್ಲವು. ಸ್ಯಾದಿ ಯಾವ ಆಶ್ರಮಗಳನ್ನು ಸ್ವೀಕರಿಸಿದ್ದರೂ ರಿಂದ ಕೊಡಲ್ಪಟ್ಟ ಲಿಂಗಯಜ್ಞೋಪವೀತಾ ಗಳ ನಿತ್ಯಧಾರಣೆಗಳಾಗಲಿ, ಗುರುಪದಿಷ್ಟವಾದ ಮಂತ್ರವಾಗಲಿ, ಭಸ್ಮರುದ್ರಾಕ್ಷ ಪಾದೋದಕ ಗಳ ಯಾವುದನ್ನೂ ಬಿಡಕೂಡದೆಂದು ಸಿದ್ಧಾಂತ ರುವುದಲ್ಲದೆ ಇವುಗಳಲ್ಲಿ ಯಾವುದನ್ನು ಬಿಟ್ಟರೂ ಪಾಪಿಯೆಂದು ಶಾಸ್ತ್ರವು ಹೇಳುವದರಿಂದ ಯಾವ ಯಾವ ಆಚಾರದಿಂದ ಸ್ಥಾಪಿತವಾಗಿದೆಯೋ ಆ ಪಂಚಪೀಠಗಳಲ್ಲಿರುವ ಮೂಲಾಚಾರ್ಯರ ವಿಷಯದಲ್ಲಿ ಬಹುಮಾನವನ್ನು ತೋರಿಸುತ್ತಿರುವುದೇ ಶಾಸ್ತ್ರರೂಢಿ ಲೋಕರೂಢಿಯೂ ಆಗಿರುವುದರಿಂದ ಗುರುಪೀಠ ದ ಮಹಾಚಾರ್ಯರನ್ನು ಸಕಲ ಆಶ್ರಮಾವಲ ಾದ ಲಿಂಗಾಂಗಿಗಳು "ಆಂದೋಳಿಕಾಯಾ ಮೋಪ್ಸಗಜೇ ವಾಪಿ ತುರಂಗಮೇ" ಎಂಬ ಶ್ರುತಿ ಪೋಕ್ತಿಯಂತೆ ಪಲ್ಲಕ್ಕಿಯಲ್ಲಾಗಲಿ, ಆನೆಯಮೇ ಕುದುರೆಯಮೇಲಾಗಲಿ ಅಧಿರೋಹಿಸಿ ವಿನಂದಿಗೆ ತಮ್ಮ ಸ್ಥಾನಕ್ಕೆ ಕರೆತಂದು ಉಚ್ಚಾಸ ಕುಳ್ಳಿರಿಸಿ ಷೋಡಶೋಪಚಾರದಿಂದ ಪೂಜಿಸಿ ಪಾದಗಳಿಂದ ಕೃತಕೃತ್ಯರಾಗಿ ತೀರ್ಥಪ್ರಸಾದಂಗಳಂ ಕೊಳ್ಳ ಅವರ ಉಪದೇಶಂಗಳಂ ಕೇಳ್ದು ಆಶೀರ್ವಾದ ಪಡೆವರು

ಯಥೇಂದ್ರ ವಸ್ಸ ಸಂಪರ್ಕಾತ್ ಲಿಂ ತ್ಯಜತಿ ಕಾಂಚನ
ತಥೈವ ಗುರು ಸಂಪರ್ಕಾತ್ ಪಾಪಂ ತ್ಯಜತಿ ಮಾನವ

ಎಂಬ ಈ ವಚನದಿಂದ ಚಿನ್ನವು ಪರಿಶುದ್ಧವಾ ನಂತೆ ಗುರುಸಂಬಂಧದಿಂದ ಪಾಪಗಳನ್ನು ಪರಿ ಕೊಂಡು ಪವಿತ್ರನಾಗುವುದೇ ಲಿಂಗಾಂಗಿಯಾದ ನನ ಪ ದಮಕರ್ತವ್ಯ

ಮಹಾಪ್ರಭುಗಳ ಅಪೂರ್ವೋತ್ಸವವ

ರಾಜಧಾನಿಯಾದ ಬೆಂಗಳೂರು ಪಟ್ಟಣ ದೇ ತಿಂಗಳು 7ನೇ ತಾರೀಖು ಬುಧವಾರದಿವಸ ಮಹಾಸ್ವಾಮಿಯವರ ಅಭೂತಪೂರ್ವವಾದ ಉತ್ಸ ನಡೆಯಿತು. ಆ ದಿವಸ ಸಾಯಂಕಾಲ ನಾಲ್ಕು ಘಂ ಮಹಾಪ್ರಭುಗಳು ದಿವ್ಯ ತುರಂಗಗಳನ್ನು ಹೂಡಿ ವಾದ ರಥದಲ್ಲಿ ಕುಳಿತು ಮಿತಪರಿವಾರದೊಡನೆ ಮನೆಯಿಂದ ರ್ಕ್ ಪಾರ್ಕಿಗೆ ಪ್ರಯಾಣಬೆಳೆಸಿ ಜನರು ಗಳೂ, ಉಪಮಂತ್ರಿಗಳೂ, ಮುಖರುಗಳೂ ಮುಂತಾದ ಮಹಾಜನಗಳು ಅಭಿನಂದನಾದಿ ಸತ್ಕಾರಗಳನ್ನು ಮಾಡಿ ಮ ಸಿಂಹಾಸನದಲ್ಲಿ ಕುಳ್ಳಿರಿಸಿ ಅಭಿನಂ ಸಿದರು. ಬಳಿಕ ಪ್ರಭುಗಳು ಕಾಲೋ ವಾದ ಸದುತ್ತರವನ್ನು ದಯಪಾಲಿಸಿ ಶ್ರೀಪಾ ಗಳಿಗೆ ಹಾರವನ್ನು ಸಮರ್ಪಿಸಿದರು. ಸಮಯೋಚಿತವಾದ ಉಡುಪುಗಳನ್ನು ಧರಿಸಿ ಶ್ರೀ ವರು ಪರಾಬರಣದ ಆನೆಯಮೇಲೆ ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ಅಂಬಾರಿಯಲ್ಲಿ ಕುಳಿತುಕೊ ಛತ್ರಚಾಮರಸಮೇತನಾಗಿ ದೊಡ್ಡ ಪೇಟೆವಾಗ ವಿಂದ ಭವ್ಯವಾಗಿ ರಚಿಸಲ್ಪಟ್ಟ ಸ್ವಾಮಿಯು ದಯಮಾಡಿಸಿ ಪ್ರಜೆಗಳ ಔತ್ಸುಕ್ಯಾದಿಗಳನ್ನು ಅರಳೇಪೇಟೆ ಚಿಕ್ಕ ಗಳಲ್ಲಿ ಅಲ್ಲಲ್ಲಿಗೆ ಪ್ರಜೆಗಳಿಂದ ಅರ್ಪಿಸಲ್ಪಡುತ್ತಿದ್ದ ಸಮರ್ಪಣಾದಿಗಳನ್ನು ಸ್ವೀಕರಿಸು ಪ್ರಜೆಗಳ ಸಂತೋಷಭರವನ್ನು ಮಂದಹಾಸಯುಕ್ತವಾದ ನೇತ್ರಾಂಚಲಗಳಿಂದ ನೋಡುತ್ತ ಭಾವ ಭರಿತವಾದ ವಿಷ್ಣುಶೈಲಿಯಿಂದ ಪ್ರಜಾವಾತ್ಸಲ್ಯ ಪ್ರಭುಗಳೆಂದೆ ಕುಳಿತಿರು ಸಲ್ಪಡುತ್ತಿರುವ ಅಲಂ ಸ್ಥಳಗಳ ದೀಪಾಂಕಗಳನ್ನು ಸೂಕ್ಷ್ಮದೃಷ್ಟಿಯಿಂ ನೋಡುತ್ತ ರಾಜಭವನಕ್ಕೆ ಮೈಸೂರುಬ್ಯಾಂಕಿ ದಲ್ಲಿ ಅಪೂರ್ವವಾದ ಮೆಟ್ಟಿಲೊಬ್ಬಣವನ್ನು ಅರಮನೆಗೆ ದಯಮಾಡಿಸಿತು.

ವರ್ತಮಾನಸಂಗ್ರಹ.

ದೇಶದಲ್ಲಿ ನದಿಯುಪ್ರವಾಹಕ್ಕೆ 1,00,000 ತುತ್ತಾದರೆಂದು ತಿಳಿಯುಬರುತ್ತದೆ.

ನ್ಯಾಸಿನಲ್ಲಿ ವಿಶ್ವವಿದ್ಯಾಲಯದಲ್ಲಿ ಈವರ್ಷ 1165 ದ್ಯಾರ್ಥಿಗಳು ಬಿ.ಎ. ಪ್ರಶಸ್ತಿಯನ್ನು ಪಡದಿ

ನ್ಯಾಸಿನಲ್ಲಿ ನೀಲಸಾಹೇಬನ ಪ್ರತಿಮೆಯನ್ನು ತೆಗೆಯಬೇಕೆಂದು ಗಣಪತಿ ಎಂಬವನು ಸತ್ಯಾಗ್ರಹ ಹೂಡಿದುದರಿಂದ ಹಿಡಿಯಲ್ಪಟ್ಟಿರುವನು.

ವರ್ಷ ಮದ್ರಾಸಿನಲ್ಲಿ ನೆರವೇರುವ ಕಾಂಗ್ರೆಸ್ಸಿಗೆ ಅಸ್ವಾರಿಯವರೇ ಅಧ್ಯಕ್ಷರಾಗಬೇಕೆಂದು ಸ್ವಾಗತಕಮಿಟಿಯವರು ನಿರ್ಧರಿಸಿರುವರು.

ನಗರೂರು ದಂಡಿಗೆಸೇರಿದ ಅಲಸೂರಲ್ಲಿ ೬ ವರ್ಷ ಹುಡುಗಿಯು ಚೇಳುಕಚ್ಚಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಟ್ಟಾಗ್ಯೂ ಗುಣವಾಗದೆ ವಿಧಿವಶಳಾದಳು.

ದ್ರಾಸ್ ಕಾಂಗ್ರೆಸ್ ಸ್ವಾಗತಮಂಡಲಕ್ಕೆ ಮಂತ್ರಿಗಳಾದ ಡಾ|| ಸುಬ್ರಾಯರು, ಮ|| ನಾಥಮೊದಲಿಯಾರ್‌ರವರೂ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು.

ಗಪುರದ ಸತ್ಯಾಗ್ರಹದಲ್ಲಿ ಬಲಾತ್ಕಾರದಿಂದ ಕ್ರಮವನ್ನು ನಡೆಯಿಸಿದ್ದ ಶ್ರೀಮತಿ ಚತುರ ಎಂಬ ಸ್ತ್ರೀಯಳಿಗೆ ಅಲ್ಲಿಯ ಮೆಜಿಸ್ಟ್ರೇಟರವರು ವರ್ಷ ಸಾದಾಶಿಕ್ಷೆಯನ್ನು ವಿಧಿಸಿದ್ದಾರೆ.

ಗಳೂರಲ್ಲಿ ಇದೇತಿಂಗಳು ತಾ|| ೧ರಲ್ಲಿ ಕಳಸ ಲ್ಲಿ ಮಹೋತ್ಸವಕ್ಕಾಗಿ ಚಪ್ಪರವನ್ನು ಹಾಕು ಲ್ಲಿ ಅಕಸ್ಮಾತ್ ಹಾಯುತಪ್ಪಿ ಮೂರುಜನಗಳು ಮೇಲಿಂದ ಬಿದ್ದು ಅಪಾಯಕ್ಕೀಡಾದರೆಂದು ವೆ.

ತ್ತಾಪಟ್ಟಣದಲ್ಲಿ ಸತೀಶಚಂದ್ರ ಎಂಬುವನು ಇವನಿಗೆ ಸಹಾಯಕಾರಿಗಳಾದ ಐದುಜನರು ಗಿ ಬಾಂಬುಗಳನ್ನು ತಯಾರಮಾಡುತ್ತಾರೋಪದಮೇಲೆ ಹಿಡಿಯಲ್ಪಟ್ಟು ವಿಚಾರಣೆಗೆ ಡಲ್ಪಟ್ಟಿದ್ದಾರೆ.

ಗತ ಕರ್ನಾಟಕದ ಕಾರ್ಯದರ್ಶಿಗಳಾದ ಮಾ ಕೌಶತಲ್ಲಿಯವರು ಹಿಂದೂ ಮುಸಲ್ಮಾನರಿಗೆ ನ್ನು ಮಾಡದೆಹೋದರೆ ಹಿಂದುಸ್ಥಾನದಲ್ಲಿ ವೀರ ವು ಪ್ರಾರಂಭವಾಗುವ ಭಯವಿರುವುದೆಂದು ಸ್ಸಿನವರಿಗೆ ತಿಳಿಸಿರುತ್ತಾರೆ.

ಂಡೂರುಸಂಸ್ಥಾನದ ಅಧಿಪತ್ಯವನ್ನು ವಹಿಸುವ ಬಡೋದೆಯ ನರಸಿಂಗರಾವ ಘೋರಪಡೆ ನರಿಗೆ ಇರುವುದರಿಂದ ಇವರೇ ಆ ಸಂಸ್ಥಾನಾ ಗಳಾಗಬಹುದೆಂದು ಪ್ರಬಲವಾದ ವದಂತಿಯು ಇನ್ನೂ ಯಾವದು ನಿಶ್ಚಯವಿಲ್ಲ.

ದೋಲಾಪಟ್ಟಣದಲ್ಲಿ ಒಬ್ಬ ಮಹಮ್ಮದ ಗೌಳಿ ನೆಯೊಳಗೆ ಒಂದು ಆಕಳು ಎರಡುತಲೆ, ಮೂರು ಗಳುಳ್ಳ ಕರುವನ್ನು ಹಾಕಿರುವುದೆಂದೂ ಈ ಕರು ನೋಡಲು ಸಾವಿರಾರುಜನ ಹಿಂದುಗಳು ಪ್ರತಿ ಹೋಗುತ್ತಿರುವರೆಂದೂ ಕೇಳುತ್ತೇವೆ.

ಗಂಬರೇ ಮೊದಲಾದ ಮತದ ಮೂಲಪುರುಷರ ಲ್ಲಿ ಯಾರೂ ಟೀಕಾತ್ಮಕಗಳಾದ ಲೇಖಗಳನ್ನು ಕೂಡದೆಂಬ ಕಾಯಿದೆಯನ್ನು ಮಾಡಿಸುವುದ ಮಿ|| ಶೌಕತಾಅಲ್ಲಿ ಮತ್ತು ಮಹಮ್ಮದಲ್ಲಿ ಇವರು ಸಿಮ್ಲಾಕ್ಕೆ ಪ್ರಯಾಣಮಾಡಿದ್ದಾರೆ

ರವಾಡ, ಬಿಜಾಪುರ ಮೊದಲಾದ ಪ್ರಾಂತ್ಯಗಳಲ್ಲಿ ಬರುವವರೆಗೂ ಬಿತ್ತಲಿಕ್ಕೆ ಸಾಕಾಗುವಷ್ಟು ಮಳೆ ಇಲ್ಲದಿರುವುದರಿಂದ ಪ್ರತಿದಿವಸ ಸಾವಿರಾರು ಜನರು ಉಪಜೀವನಕ್ಕಾಗಿ ಮಲನಾಡಿಗೆ ಪ್ರಯಾಣಮಾಡುತ್ತಿರುವುದಾಗಿ ತಿಳಿಯಬರುತ್ತದೆ.

ಪಂಜಾಬ್‌ಪ್ರಾಂತಕ್ಕೆ ಸೇರಿದ ಬರೇಲಿ ಎಂಬಲ್ಲಿ ಗಣೇಶೋತ್ಸವವನ್ನು ಹೊರಡಿಸಿರಲು ಮುಸಲ್ಮಾನರು ಕಲ್ಲುಗಳಿಂದ ಹಿಂದುಗಳಮೇಲೆ ಬಿದ್ದರು. ಉತ್ಸವವನ್ನು ನಿಲ್ಲಿಸಲು ಅಸಾಧ್ಯವಾದುದರಿಂದ ಪೋಲೀಸರು ಗುಂಡುಹಾಕಿ ಈ ಕಲಹವನ್ನು ಶಾಂತಿಗೊಳಿಸಿದರು.

ಬೆಳಗಾವಿಯ ಪೋಲೀಸ್ ಇಲಾಖೆಯಲ್ಲಿರುವ ಮಿ|| ರಂಗಾ ಡೆಪ್ಯೂಟಿಸೂಪರಿಂಟೆಂಡೆಂಟ್, ಮಿ|| ಚತ್ರರ್ ಹೋಂ ಇನಸ್ಪೆಕ್ಟರ್, ಮಿ|| ಹೋಳಿ ಸಬ್‌ಇನಸ್ಪೆಕ್ಟರ್ ಈ ಮೂರುಜನ ದೊಡ್ಡ ಅಧಿಕಾರಿಗಳಮೇಲೆ ಲಂಚವನ್ನು ತೆಗೆದುಕೊಳ್ಳುತ್ತಾರೆಂಬ ಆರೋಪವುಬಂದು ಸಧ್ಯಃ ಸಸ್ಪೆಂಡಮಾಡಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ.

ಸೋಲಾಪುರದಿಂದ ರಾಯಿಚೂರಿಗೆ ಹೋಗುವ ಪ್ಯಾಸೆಂಜರ್ ಗಾಡಿಯಲ್ಲಿ ಒಂದುಸಾಗವಾನಿಪೆಟ್ಟಿಗೆಯು ಸಿಕ್ಕಿತು. ಆ ಪೆಟ್ಟಿಗೆಯನ್ನು ಶೋಧಿಸುವಲ್ಲಿ ಒಬ್ಬ ಮುಸಲ್ಮಾನತರುಣನ ಶವವು ದೊರಕಿತು. ಸೋಲಾಪುರದ ಸ್ಟೇಷನ್ನಿನಲ್ಲಿಯೇ ಯಾವನೋ ಒಬ್ಬನು ಈ ಶವದಪೆಟ್ಟಿಗೆಯನ್ನಿಟ್ಟು ಪಲಾಯನಮಾಡಿದ್ದಾನೆಂದು ತಿಳಿಯಬರುತ್ತದೆ.

ಹೈದರಾಬಾದ ಪಟ್ಟಣದಲ್ಲಿ ಪ್ರಸಿದ್ಧನಾದ ಒಬ್ಬ ಹಿಂದು ವಕೀಲನು ತನ್ನ ಹೆಂಡತಿಗೆ ಸಂಸ್ಕೃತ ಭಾಷೆಯನ್ನು ಕಲಿಸುವುದಕ್ಕಾಗಿ ಒಬ್ಬ ಪಂಡಿತನನ್ನು ನೇಮಿಸಿದ್ದನು. ಈ ಪಂಡಿತನು ಸಂಸ್ಕೃತ ವಿದ್ಯೆಯಬದಲಾಗಿ ಮನ್ಮಥವಿದ್ಯೆಯನ್ನು ಕಲಿಸಿ ಅವಳನ್ನು ತೆಗೆದುಕೊಂಡು ಪಲಾಯನವಾದನಂತೆ. ಇದ್ದರೆ ಇಂಥವ ಶಿಕ್ಷಕರೇ ಇರಬೇಕು.

ಮುಂಬಯಿಪಟ್ಟಣಕ್ಕೆ ಒಬ್ಬ ಯೋಗಿಯು ಬಂದಿದ್ದು ತನ್ನ ಯೋಗಸಾಮರ್ಥ್ಯದಿಂದ ಪ್ರತಿಕ್ಷಣಕ್ಕೂ ದೇಹವನ್ನು ರೂಪಾಂತರಗೊಳಿಸುವನೆಂದೂ, ವೇಗದಿಂದಬರತಕ್ಕ ಮಳೆಯನ್ನು ತಟ್ಟನೆ ನಿಲ್ಲಿಸುವನೆಂದೂ, ಸಾವಿರಾರುಮೈಲುಗಳ ದೂರದಲ್ಲಿ ನಡೆದ ವಿಷಯಗಳನ್ನು ಕೂತಲ್ಲಿಯೇ ಹೇಳುತ್ತಿರುವನೆಂದೂ ತಿಳಿಯಬರುತ್ತದೆ. ಇದು ನಿಜವಾಗಿದ್ದಪಕ್ಷದಲ್ಲಿ ಈತನಿಗೆ ಯೋಗಸಿದ್ಧನೆಂದು ನಿಸ್ಸಂಶಯವಾಗಿ ಹೇಳಬಹುದು.

ಇದೇತಿಂಗಳು ತಾ|| 3ರಲ್ಲಿ ಬೆಂಗಳೂರು ದಂಡಿನಲ್ಲಿ ಒಂದು ಮನೆಯಲ್ಲಿ ಗಣೇಶನಮಂಗಳಾರತಿಗೋಸ್ಕರ ಸಂಗೀತವು ನಡೆಯುತ್ತಲಿದ್ದ ಸಮಯದಲ್ಲಿ ಬೆಳಕಿಗಾಗಿ ಇಟ್ಟಿದ್ದ ಪೆಟ್ರೋಲ್‌ದೀಪವು ಆಕಸ್ಮಿಕವಾಗಿ ಸಿಡಿದು ಪ್ರಸಿದ್ಧ ಸಂಗೀತಗಾರರಾದ ಪಿಟೀಲ್ ರಾಮಚಂದ್ರಯ್ಯ, ಕೃಷ್ಣಮಾಚಾರಿ, ಒಬ್ಬಹುಡುಗನು ಈ ಮೂವರು ಸುಡಲ್ಪಟ್ಟು ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಲ್ಪಟ್ಟರೂ ಗುಣವಾಗದೆ ಮರುದಿವಸವೇ ಪ್ರಾಣವನ್ನು ಬಿಟ್ಟರು.

ಹೋದತಿಂಗಳು 29ನೇ ತಾರೀಖಿನದಿವಸ ಸಿಮ್ಲಾ ಪಟ್ಟಣದಲ್ಲಿ ನೆರವೇರಿದ ಅಸೆಂಬ್ಲಿಯಲ್ಲಿ ವೈಸ್‌ರಾಯರವರು ಭಾಷಣವನ್ನು ಮಾಡುವಾಗ್ಗೆ ಹಿಂದುಸ್ಥಾನದೊಳಗೆ ಅಸಂಖ್ಯ ಜಾತಿಗಳಿರುವವೆಂದೂ ಪ್ರತಿಯೊಂದು ಜಾತಿಯವರು ತಮ್ಮತಮ್ಮೊಳಗೆ ಸೌಹಾರ್ದದಿಂದಿರದೆ ಅನೈಕ್ಯದಿಂದ ವರ್ತಿಸುತ್ತಿರುವರೆಂದೂ ಎಲ್ಲಿಯವರೆಗ ಹಿಂದುಗಳೆಲ್ಲರೂ ಜಾತಿದ್ವೇಷವನ್ನು ದೂರಮಾಡಿ ಐಕ್ಯರಾಗುವುದಿಲ್ಲವೋ ಅಲ್ಲಿಯವರೆಗೆ ಇವರಿಗೆ ಸ್ವರಾಜ್ಯವು ದೊರೆಯುವುದು ದುರ್ಲಭವೆಂದೂ ಹೇಳಿದರಂತೆ

ಸ್ವೀಕಾರ.

ಅಮ್ಮಿನಭಾವಿ ಹಿರೇಮಠದ ಪಟ್ಟದ ಮಹಾಸ್ವಾಮಿಗಳವರ ಮುಂದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಪುರಾಣಸಮಾಪ್ತಿಯ ಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ ೫ ರೂಪಾಯಿಗಳು ಹಣಗಳ ಹಿರೇಮಠದ ಪಟ್ಟದ ಸ್ವಾಮಿಗಳಿಂದ ತಲ್ಪಿರುತ್ತವೆ.

ಹಾರನಹಳ್ಳಿ ದಂಡೂರುಬಸಪ್ಪನವರ ಪುತ್ರರಾದ ಗುರುಬಸಪ್ಪನವರು ೨ ರೂಪಾಯಿಗಳನ್ನೂ, ನ್ಯಾಯಪತಿ ವಾಸಿ ದಾವಣಗೇರಿ ಮ||ರಾ|| ಚನ್ನಬಸಪ್ಪನವರ ಮಕ್ಕಳು ಶಿವಲಿಂಗಪ್ಪನವರು ೨ ರೂಪಾಯಿಗಳನ್ನೂ ಗುರ್ಜ ದಾನೋತ್ಸವಕಾಲದಲ್ಲಿ ತೆಗದು ವೇ|| ಕೂಡ್ಲಿಗಿಮಠದ ಸಂಜಪ್ಪಯ್ಯನವರದ್ವಾರಾ ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಭಂಡನ ಭಂಡಾಟ.

ಇದೇತಿಂಗಳು ಮೈಸೂರುಸ್ಟಾರಿನ 10ನೇ ತಾರೀಖಿನ ಸಂಚಿಕೆಯಲ್ಲಿ "ಕುಟಿಲಶೀಲದ ನಿಟಿಲವೃತ್ತರ" ಎಂಬ ಹೆಸರಿನಿಂದ ಬಿ. ಎಸ್. ವೀರಪ್ಪ ಇಲಕಲ್ಲ ಎಂಬ ಲೇಖಕನು ತನ್ನ ಮರ್ಯಾದೆಯನ್ನೂ ಎರಡನೆಯವರ ಮರ್ಯಾದೆಯನ್ನೂ ಸಹ ನೋಡದೆ ಪೂರ್ವಾಪರ ವಿಚಾರವನ್ನಾಡದೆ ನೀಚಶಬ್ದಗಳನ್ನು ಪಯೋಗಿಸಿ ಭಂಡತನದ ಒಂದುಲೇಖವನ್ನು ಪ್ರಕಟಿಸಿರುವುದರಿಂದ ಈತನಿಗೆ ಭಂಡನೆಂದು ಕರೆಯಬೇಕಾಗಿದೆ. ಈತನು ಸೊಲ್ಲಾಪುರದವರು ಮಾಡಿದ ಠರಾವುಗಳನ್ನು ಕಣ್ಣುಗಳಿಂದ ಮಾತ್ರನೋಡಿದ್ದಾನೆಯೇ ಹೊರತು ಮನಸ್ಸಿನಿಂದ ನೋಡಿಲ್ಲವೆನ್ನುವುದು ಈತನ ಬರವಣಿಗೆಯಿಂದಲೇ ಗೊತ್ತಾಗುತ್ತದೆ. ಸೊಲ್ಲಾಪುರದವರು ಮಾಡಿದ ಠರಾವುಗಳಲ್ಲಿ ಕೇವಲ ಪಕ್ಷಪಾತವು ತುಂಬಿರುತ್ತದೆಯೇ ಹೊರತು ನಿಷ್ಪಕ್ಷಪಾತತನವು ಎಷ್ಟೂ ಇಲ್ಲ. ಸೊಲ್ಲಾಪುರದವರು ಈ ತೆರದ ಠರಾವುಗಳನ್ನು ಸನ್ಯಾಸಿಗಳ ದುರ್ಬೋಧೆಯಿಂದ ಮಾಡಿರುವರೆಂದು ಇಡೀ ಜಗತ್ತೇ ಕೂಗಹತ್ತಿದೆ. ಈ ಯಥಾರ್ಥ ವಿಷಯವು ಜ್ಞಾನಾಂಧನಾದ ಈತನಿಗೆ ಹೇಗೆ ತಿಳಿದೀತು? ದೊಡ್ಡವರಿಗೆ ದುಷ್ಟಶಬ್ದಗಳನ್ನು ಪ್ರಯೋಗಮಾಡಿದ್ದೇ ಇವನಿಗೆ ಮಹಾನಂದವಾಗಿದೆ. ಸಮಾಜವು ಐಕ್ಯವಾಗುತ್ತಾ ನಡೆದ ಸಮಯದಲ್ಲಿ ಇವನಂಥವರೇ ಮನಸ್ಸಿಗೆ ಬಂದಂತೆ ಲೇಖಗಳನ್ನು ಬರೆದು ಪುನಃ ದ್ವೇಷಾಗ್ನಿಯನ್ನು ಪ್ರಜ್ವಲಿಸಲಿಕ್ಕೆ ಹತ್ತಿರುತ್ತಾರೆ. ಯಾರು ಏನು ಮಾಡಿದರೂ ಸುಮ್ಮನಿರಬೇಕಾಯಿತು. ಸುಮ್ಮನಿದ್ದರೆ ಇಂಥ ಭಂಡರಿಗೆ ಬಹು ಸಂತೋಷ! ಎಲೋ ಇಲಕಲ್ಲನೇ ನೀನು ಕಾಗೆ, ಕತ್ತೆ, ಇಂದಹ ಅಪಶಬ್ದಗಳಿಂದ ನಿನ್ನ ನಾಲಿಗೆಯನ್ನು ಅಲಂಕಾರವನ್ನಾಗಿ ಮಾಡಿಕೊಂಡಿರುವೆ. ಯಾವಾಗ್ಯೂ ಇಂಥ ಪವಿತ್ರವಾದಂಥ ವಸ್ತುಗಳಿಂದಲೇ ನೀನು ಭೂಷಿತನಾಗು. ಜಗತ್ತಿನಲ್ಲಿ ನಡೆದಿರುವ ವಿವಾದವು ಶಾಸ್ತ್ರೀಯವಾದದ್ದೆಂದು ನಿನಗೆ ಕಂಡು ಬಂದಿದ್ದರೆ ಇಂಥ ನೀಚಬರವಣಿಗೆಯನ್ನು ನೀನೆಂದೂ ಬರೆಯುತ್ತಿದ್ದಿಲ್ಲ. ನಿನ್ನಲ್ಲಿ ಧರ್ಮದ ಗಂಧವೇ ಇಲ್ಲವೆಂದು ನಿನ್ನ ಲೇಖದಿಂದಲೇ ವ್ಯಕ್ತವಾಗುತ್ತದೆ. "ನಿಟಿಲ ಉತ್ತರ" ಹೀಗೆಂದರೇನು? ಕುಟಿಲ ನಿಟಿಲ ಎಂಬ ಶಬ್ದಗಳ ಪ್ರಾಸಿನಮೇಲೆ ಹೋಗಿರುವೆಯಾ? ಅಜ್ಞರಿಗೆ ಪ್ರಾಸು ಪ್ರಾಧಾನ್ಯವಲ್ಲದೆ ಅರ್ಥವು ಪ್ರಾಧಾನ್ಯವಲ್ಲ. ಅಸ್ತು, ಈ ಲೇಖಕನು ಲೇಖಗಳನ್ನು ಬರೆಯಬೇಕಾದರೆ ಶಾಂತಿಯಿಂದಲೂ ಅರ್ಥಗೌರವದಿಂದಲೂ ಬರೆಯಬೇಕಲ್ಲದೆ ಮನಸ್ಸಿಗೆ ಬಂದಂತೆ ನೀಚಶಬ್ದಗಳನ್ನು ಪ್ರಯೋಗಿಸಿ ಭಂಡಲೇಖಗಳನ್ನು ಬರೆಯಬಾರದೆಂದು ಸೂಚಿಸುತ್ತೇನೆ. ಇರಲಿ, ಮೈಸೂರುಸ್ಟಾರ್ ಪತ್ರಿಕಾಕರ್ತರು ಇಂಥ ಕ್ಷುಲ್ಲಕಲೇಖಗಳನ್ನು ಎಲ್ಲಿಂದಾದರೂ ಹುಡಿಕಿ ಬಹು ಕಷ್ಟಪಟ್ಟು ಸಂಗ್ರಹಿಸಿ ಪ್ರಸಿದ್ಧಪಡಿಸುತ್ತಾರೆ. ಇವರು ಧರ್ಮಶಾಸ್ತ್ರವನ್ನು ತಾವು ಓದದೇ ಇರೋಣದರಿಂದ ಧರ್ಮಸಂಬಂಧಿಲೇಖಗಳನ್ನು ತಾವು ಸ್ವತಃ ಬರೆದು ಪ್ರಕಟಿಸಲು ಯೋಗ್ಯತೆ ಇಲ್ಲ. ಈ ತರದ ಲೇಖಗಳ ಯೋಗ್ಯತೆಯು ಇವರ ತಂದೆಯವರ ಕಾಲಕ್ಕೇ ಹೋಯಿತು. ಧರ್ಮಶಾಸ್ತ್ರದ ಬದಲಾಗಿ ಪ್ರತಿವಾರದಲ್ಲಿಯೂ ದೊಡ್ಡವರನಿಂದಾಶಾಸ್ತ್ರವನ್ನೇ ತಮ್ಮ ಪತ್ರಿಕೆಯಲ್ಲಿ ತುಂಬಿಸುತ್ತಾರೆ. ಈ ಮಹಾಶಯರ ಪತ್ರಿಕೆಯು ಒಂದು ವಾರವಾದರೂ ನಿಂದೆಯಿಲ್ಲದೆ ಶಾಂತರೀತಿಯಿಂದ ಹೊರಟಿರುವುದನ್ನು ನಾನಂತೂ ನೋಡಿಲ್ಲ. ಹೀಗೆ ಟೀಕೆ ಮಾಡೋಣದರಿಂದ ಈ ಪತ್ರಿಕಾಕರ್ತರಿಗೆ ಇಹಪರದಲ್ಲಿ ಯಾವ ಫಲವು ದೊರೆಯುವುದೋ ತಿಳಿಯದಾಗಿದೆ. ಫಲವು ದೊರೆಯುವ ಕಾಲವು ಬರುವದು. ಲೋಕದಲ್ಲಿ ಅನೇಕ ಪತ್ರಿಕೆಗಳು ಹೊರಡುತ್ತವೆ. ಈ ಮಹಾಶಯರಂತೆ ಯಾವ ಪತ್ರಿಕಾಕರ್ತರೂ ದೊಡ್ಡವರ ನಿಂದೆಯೇ ತಮ್ಮ ಮುಖ್ಯಕರ್ತವ್ಯವೆಂದು ಭಾವಿಸಿಲ್ಲ. ಹಾಗೆ ಭಾವಿಸುವುದು ಪತ್ರಿಕಾಕರ್ತರ ಕರ್ತವ್ಯವೂ ಅಲ್ಲ. ಈ ವಿಷಯವನ್ನು ಇವರು ಪೂರ್ಣ ಮನಸ್ಸಿಗೆ ತೆಗೆದುಕೊಂಡು ಇಂಥ ಲೇಖಗಳಿಗೆ ಅಪ್ರಿಯವನ್ನು ಕೊಡದೆ ಇರುವುದು ಲೇಸು।

ಎಸ್. ಬಿ. ಸಿದ್ಧಲಿಂಗಪ್ಪ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ [illegible] ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ವಾಚಕರು ಲಕ್ಷ್ಯದಲ್ಲಿಡತಕ್ಕದ್ದು. ಸಂ —

ಮುದ್ದು ಪ್ರಭಾದೇವಿಯ ಪ್ರಭಾವ.

ಇಗೋ ನೀನು ಹುಟ್ಟಿದೆ? ಎಂಥ ಕಲಿಯ ಕಾಲದ [illegible] ಆದರೂ ಸತ್ಯವನ್ನು ಪ್ರಕಟಿಸಬೇಕೆಂದೂ, ನಿಜವಾದ ಧರ್ಮವನ್ನು ಬೀರಬೇಕೆಂದೂ ಮೈಸೂರು ರಾಜಧಾನಿಯಲ್ಲಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭೆಯೆಂಬ ಬಾಲಕುವರಿಯು ಮುದ್ದು ಮಗುವಾಗಿರುವಾಗಲೇ ದಿನೇದಿನೇ ಬಾಲಚಂದ್ರನಂತೆ ಬೆಳೆದು ದಿನಕರನು ಜಗತ್ತಿನ ತುಂಬ ತನ್ನ ಕಿರಣಗಳನ್ನು ಹರಪಿ ಕತ್ತಲೆಯನ್ನು ಪರಿಹರಿಸುವಂತೆ ಈ ಕುವರಿಯು ಧರ್ಮದಲ್ಲಿದ್ದ ಅಜ್ಞಾನವೆಂಬ ಕಾರ್ಗತ್ತಲೆಯನ್ನು ಪರಿಹರಿಸಲಿಕ್ಕೆ ಉತ್ಸುಕಳಾಗಿರುವದನ್ನು ನೋಡಿ ಯಾವನು ಆನಂದಪಡಲಿಕ್ಕಿಲ್ಲ? ಅಹಾ! ಪ್ರಭೆಯೇ, ನೀನೇ ಧನ್ಯಳು! ನಿನ್ನ ಜನ್ಮವೇ ಸಫಲವು! ನಿನ್ನ ವಸತಿಯಲ್ಲಿ? ಕೇವಲ ರಾಜರಾಜಧಾನಿಯೆಂತಿದ್ದ ಶ್ರೀಮತ್ ಕೃಷ್ಣಭೂಪಾಲನ ರಾಜಧಾನಿಯಲ್ಲಿ. ಆಶ್ರಯವಾದರೂ ಸಣ್ಣದೇ? ದೊಡ್ಡ ಪಂಡಿತರನ್ನು ಜ್ಞಾನವಿದ್ವಾಂಸರನ್ನು ಹಿಡಿದಿರುವೆ/ ~~[illegible]~~ ನಿನ್ನ ಕೀರ್ತಿಯು ~~[illegible]~~ ದಶದಿಕ್ಕುಗಳನ್ನು ವ್ಯಾಪಿಸಿರುವದು//ಪ್ರಭೆಯೇ, ನಿನ್ನ ಜನ್ಮವೂ ನಿನ್ನ ಕರ್ತವ್ಯವೂ ಬಹಳ ಮಹತ್ವದ್ದಾಗಿರುವದು. ಯಾವ ಮತವು ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟು ಜಗತ್ತಿನಲ್ಲಿ ಶಕ್ತಿವಿಶಿಷ್ಟಾದ್ವೈತವೆಂಬ ಹೆಸರಿನಿಂದ ಮೆರೆಯುತ್ತಿರುವದೋ ಆ ಮತಸ್ಥಾಪನಾಚಾರ್ಯರಲ್ಲಿ ಸುದೃಢಭಕ್ತಿಯನ್ನು ಹುಟ್ಟಿಸುವದು, ಆ ಸ್ಥಾಪನಾಚಾರ್ಯರಿಂದ ನಿರ್ಮಿತಗಳಾದ [illegible] ಷಟ್‌ಸ್ಥಲ ಅಷ್ಟಾವರಣಾದಿಗಳಲ್ಲಿ ಕೇವಲ ನಿಜವಾದ ನಂಬಿಗೆಯನ್ನು ಹುಟ್ಟಿಸುವದು ಮತ್ತು ಸಮಸ್ತ ವೀರಶೈವರನ್ನು ಉದ್ಧರಿಸುವುದಕ್ಕೋಸ್ಕರ ಅನಾದಿಕಾಲದಿಂದ ಯಾವ ಗುರುವಂಶವು ಬಂದಿರುವದೋ ಅಂಥಾ ಗುರುವಂಶದಲ್ಲಿ ಅನನ್ಯಭಕ್ತಿಯನ್ನು ಹುಟ್ಟಿಸಿ ಮುಕ್ತಿಭಾಗಿಗಳನ್ನು ಮಾಡುವದು. ಈ ಕರ್ತವ್ಯಗಳನ್ನೆಲ್ಲ ಮಾಡುವುದಕ್ಕಾಗಿಯೇ ಅಲ್ಲವೇ ನೀನು ಅವತರಿಸಿದ್ದು? ಎಲೈ ಧರ್ಮಕುವರಿಯೇ ನೀನು ಇನ್ನೂ ಚಿಕ್ಕವಳು. ಕುಹಕರ ಮಾತಿಗೆ ಅಂಜಲು ಬೇಡ! ನಿನ್ನನ್ನು ರಕ್ಷಿಸಲಿಕ್ಕೆ ಶುದ್ಧ ಸಾಂಪ್ರದಾಯದ ಸಾವಿರಾರು ಜನ ವೀರಶೈವರು ಕಟಿಬದ್ಧರಾಗಿದ್ದಾರೆ. ಅದರಲ್ಲಿಯೂ ಕೇವಲ ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದವು ನಿನ್ನ ಮೇಲೆ ಸಂಪೂರ್ಣವಿರುವುದು. ಅಲ್ಲೊಬ್ಬ ಇಲ್ಲೊಬ್ಬ ಕುಹಕರು ನಿನ್ನ ಮಹತ್ವವನ್ನು ತಿಳಿಯದೆ ನಿಂದೆಮಾಡುವರು; ಆದಾಗ್ಯೂ, ಪ್ರಭೆಯೇ, ನೀನು ಅವರಮೇಲೆ ಸಿಟ್ಟಾಗಬೇಡ; ಅವರದು ಅದರಲ್ಲಿ ಏನೂ ತಪ್ಪಿಲ್ಲ; ಯಾಕಂದರೆ ಕಲಿಕೆಯ ಮಾತಿಗೆ ಧರ್ಮರಾಜನು ನುಡಿದಂತೆಯೂ, "ಗತಿಯಂತೆ ಮತಿ" ಎಂಬ ಗಾದೆಯ ಮಾತಿಗನುಸಾರವಾಗಿಯೂ ವ್ಯವಹಾರವು ನಡೆದೇ ಇದೆ. ಗೂಗೆಯೂ, ಚಕೋರನೂ, ನೈದಿಲೆಯೂ ದಿನಮಣಿಯನ್ನು ನಿಂದಿಸಿದರೂ ಇಡೀ ಜಗತ್ತೇ ಅವನನ್ನು ಹೊಗಳುತ್ತಿಲ್ಲವೇ? ಅದರಿಂದ ಅವನಿಗೆ ಬಂದ ಕುಂದಕವಾದರೂ ಯಾವದು? ಅದರಿಂದ ನಿಂದಕರ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ ನಿನ್ನ ನಿಜವಾದ ಧರ್ಮವನ್ನು ಹಿಡಿದು ನಡೆ! ಧರ್ಮಕ್ಕೆ ಚ್ಯುತಿಯಿಲ್ಲ. "ಯತೋ ಧರ್ಮಸ್ತತೋ ಜಯಃ" ಪ್ರಭಾದೇವಿಯೇ, ನಿನ್ನ ಮೂಲ ಉತ್ಪಾದಕರಿಗೂ ಸಂಪಾದಕರಿಗೂ ನಿನ್ನನ್ನು ಆಶ್ರಯಿಸಿದ ಯಾವತ್ತು ವೀರಶೈವ ಸಮಾಜಕ್ಕೂ ನಗೆ-ಯಾವತ್ತು ~~[illegible]~~ ನ್ನು ವಯವಾಳಿಸಿದ ~~[illegible]~~ ಗಳಿಗೂ- ನೀಲಕಂಠನು ನಿತ್ಯಸುಖವನ್ನುಂಟುಮಾಡಲಿ. ಇಷ್ಟೆಲ್ಲ ಆಶ್ರಯದಿಂದ ಮೆರೆವ ನೀನು ಚಿರಂಜೀವಿಯಾಗಿ ಬಾಳು! ಪ್ರಭಾ, ನನ್ನಂಥ ಅಜ್ಞನ ಹರಿಕೆಯಿಂದ ನಿನಗೆ ಆಗುವದಾದರೂ ಏನು? ಇಡೀ ವೀರಶೈವಸಮಾಜಕ್ಕೆ ಗುರುಸಾರ್ವಭೌಮರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದವು ನಿನ್ನ ಮೇಲೆ ಸಂಪೂರ್ಣವಿರಬೇಕೆಂದು ಪ್ರಾರ್ಥಿಸುತ್ತೇನೆ. ನಿನ್ನ (ಪ್ರಭಾದೇವಿಯ) ಬಾಂಧವ.

ಶ್ರೀ ಜಗದ್ಗುರು ಪಂಚಾಚಾರ್ಯರ್ಗೆ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘವು

[illegible] ಮುನ್ನವಡಗಳು ತಾ|| ಹೂಗೂರಿನ ಶ್ರೀ ಸೋಮೇಶ್ವರದೇವಸ್ಥಾನದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘವು [illegible] ಕರುಣದಿಂದ ಸ್ಥಾಪಿತವಾಗಿ ಇಂದಿನ ವರೆಗೂ ಹರುಷದಿಂದ ನಡೆಯುತ್ತಾ ಬಂದಿದೆ. ಶ್ರೀ ಜಗದ್ಗುರುಗಳ ಅನುಗ್ರಹದಿಂದ ಕಾರ್ಯಕ್ರಮಗಳು ನಿರ್ವಿಘ್ನದಿಂದ ನಡೆಯುತ್ತಿವೆ. ಪ್ರತಿಯೊಬ್ಬ ವೀರಶೈವನ ದೀಕ್ಷಾ, ಶಿಕ್ಷಾ, ಮೋಕ್ಷಾದಿ ಕಾರಣಕರ್ತೃತ್ವವನ್ನು ವಹಿಸಿರುವ ಶ್ರೀ ಜಗದ್ಗುರು ಪಂಚಾಚಾರ್ಯರೇ ನಮಗೆಲ್ಲ ಮೂಲಗುರುಗಳೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮಾನವನು ಈ ಅಪಾರವಾದ ಭವವೆಂಬ ಸಾಗರದಿಂದಾಚೆಗೆ ಪಾರಾಗಿ ಮುಕ್ತಿಯೆಂಬ ಸ್ಥಾನವನ್ನು ಸೇರಬೇಕಾದರೆ ಭಕ್ತಿಯೆಂಬುವದೇ ನಾವೆ (ದೋಣಿ) ಯಂತಿರುವುದರಿಂದ ಇಂಥಾ ಅಸಾಧಾರಣಭಕ್ತಿಯನ್ನು ಕೇವಲ ಶ್ರೀ ಜಗದ್ಗುರು ಪೂಜ್ಯಪಾದರಲ್ಲಿ ತೋರಿಸಬೇಕಾದುದೇ ಮುಖ್ಯವಾಗಿದೆ. "ಮುಕ್ತಿಮೂಲಂ ಗುರೋಃ ಕೃಪಾ" ಎಂಬಾಗಮೋಕ್ತಿಯಂತೆ ಗುರುಕೃಪೆಯಿಲ್ಲದೆ ಮೋಕ್ಷಮಾರ್ಗವು ದೊರೆಯಲಾರದೆಂದಿರುವುದರಿಂದ ಗುರುಕೃಪೆಯಿಂದಷ್ಟಾವರಣ ಷಟ್‌ಸ್ಥಲಗಳ ತತ್ವಗಳಂ ತಿಳಿದು ಮುಕ್ತಿಭಾಗಿಗಳಾಗಬೇಕಾಗಿದೆ. ಗುರುಕಾರ್ಯಪ್ರವೃತ್ತಿಯಿಲ್ಲದೆ ಗುರುಕೃಪೆಯಾಗಲಾರದು. ಗುರುನಾಮೋಚ್ಚಾರವನ್ನು ದಿನಕ್ಕೊಂದಾವರ್ತಿಯಾದರೂ ಮಾಡದಿರುವುದನುಚಿತವು. ವೀರಶೈವಬಂಧುಗಳೇ, ಸ್ವಕಾರ್ಯಾಸಕ್ತರಾಗಿ ದಿವಾರಾತ್ರಿಗಳ ಕಾಲಗಳನ್ನು ಕಳೆಯುವದಕ್ಕಿಂತಲೂ ಒಂದು ಗಂಟೆಯ ಕಾಲವನ್ನಾದರೂ ಗುರುನಾಮಸ್ಮರಣೆಯಲ್ಲಿ ಕಳೆಯುವದು ಯೋಗ್ಯವಾಗಿದೆ (ನಗುರೋರಧಿಕಂ) (ನಾಸ್ತಿ ತತ್ವಂ ಗುರೋಃ ಪರಂ) ಇತ್ಯಾದಿ ಶ್ಲೋಕಾಧಾರಗಳಿಂದ ಗುರುವಿಗಿಂತಧಿಕವಾದ ವಸ್ತುವಾವುದೂ ಇಲ್ಲವೆಂಬುದನ್ನು ಮರೆಯುವಂತಿಲ್ಲ. ಈಗೀಗ ಅನೇಕಜನರಿಂದಲೂ, ಧನದಾಶೆಗೂ ಕೆಲ ಪ್ರಜನರು ಕುಲೀನರಂತೆ ಕಲಿಯನ್ನಾಡಿಸುತ್ತ ದ್ವಿಸ್ವಭಾವವೃತ್ತಿಯನ್ನು ಕೈಕೊಂಡು ಚಂಚಲಚಿತ್ತರಾಗಿ ಮೋಕ್ಷಮಾರ್ಗವಿಮುಖರಾಗುತ್ತಿರುವುದನ್ನು ನೋಡಿದರೆ ಯಾವ ವೀರಶೈವನಿಗೂ ಖೇದವಾಗದಿರಲಾರದು. ಮನೋಭಾವವು ನಿಜವಾದ ಗುರುಸ್ಮರಣವಂ ತಿಳಿಸುತ್ತಿದ್ದರೂ ಬಹಿರಂಗದಲ್ಲಿ ಹಾಗೆ ಚಲಿಸದಿರುವುದನುಚಿತವೆಂದು ಪುನಃಪುನಃ ಹೇಳಬೇಕು [illegible]. ಇಂಥಾ ಚಪಲಚಿತ್ತರ ಅಜ್ಞತೆಯನ್ನು ಹೋಗಲಾಡಿಸುವದಕ್ಕೋಸ್ಕರವೇ ಸಾಕ್ಷಾತ್ ಶ್ರೀ ಜಗದ್ಗುರು ಪಂಚಾಚಾರ್ಯರ ಚಿತ್ತಪ್ರಭೆಯೋ ಪಂಚಾಚಾರ್ಯಪ್ರಭಾ ಎಂಬ ಹೆಸರಿನಿಂದ ಆವಿರ್ಭವಿಸಿದೆ. ವೀರಶೈವರ ಸನ್ನತಿಯಾಗಿರತಕ್ಕ ಪ್ರತಿಯೊಂದು ಗ್ರಾಮದಲ್ಲಿಯೂ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘಗಳನ್ನೇರ್ಪಡಿಸಿ ಅದರಿಂದ ಪ್ರತಿಸಾಯಂಕಾಲ ೬ ಘಂಟೆಯಿಂದ ೭ ಘಂಟೆಯವರೆಗೆ ೧ ಘಂಟೆಯ ಕಾಲವನ್ನಾದರೂ ಜಗನ್ನಾಚಾರ್ಯರ ನಾಮಸ್ಮರಣೆಯಲ್ಲಿ ಉಪಯೋಗಿಸುತ್ತ ವಾರಕ್ಕೊಂದಾವೃತ್ತಿ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಭೆಯನ್ನು ಪಠನಮಾಡಬೇಕೆಂದು. ಅದರಲ್ಲಿ ಬರುವ ಮಹಾಮಹಾ ವಿದ್ವಾಂಸರ ಲೇಖನಗಳನ್ನು ಪರಿಶೀಲಿಸುತ್ತಾ ಸ್ವಧರ್ಮತತ್ತ್ವಾರ್ಥಗಳನ್ನು ತಿಳಿದು ಅಧರ್ಮಪ್ರವೃತ್ತಿಯುಳ್ಳವರಿಗೆ ಬೋಧಿಸತಕ್ಕ ಸದ್ಧರ್ಮಕಾರ್ಯಾಸಕ್ತರಾಗುವುದೇ ಪ್ರತಿಯೊಬ್ಬ ಲಿಂಗಧಾರಿಯ ಕರ್ತವ್ಯವಾಗಿದೆ. ಪ್ರತಿಯೊಬ್ಬರೂ ಧರ್ಮತತ್ತ್ವವನ್ನು ತಿಳಿದು ಧರ್ಮಗುರುಗಳಲ್ಲಿ ಅಸಾಧಾರಣವಾದ ಪ್ರೀತಿಬುದ್ಧಿಯನ್ನಿಟ್ಟು [illegible] ಮುಕ್ತಿಭಾಗಿಗಳಾಗಬೇಕೆಂದೂ ಪ್ರತಿಯೊಂದು ಗ್ರಾಮದವರು ಆಚಾರ್ಯರ ಹೆಸರಿನಿಂದ ಭಜನಾಸಂಘಗಳನ್ನು ಸ್ಥಾಪಿಸಿ [illegible] ದರ ನಾಮಸಂಕೀರ್ತನದಿಂದ ತನ್ಮಯರಾಗಿ [illegible] ತ್ಯಗೊಳಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಕೆ. ವಿ. [illegible]

[illegible]

ಶ್ರೀ ಜಗದ್ಗುರು ಪಂಚಾಚಾರ್ಯರ್ಗೆ ಪ್ರ

ಪಂಚಾಚಾರ್ಯರ ಭಜನಾಸ
ಕೊಟ್ಟೂರು

ಇದೇ ಭಾದ್ರಪದ ಶು|| ಬಿದಿಗೆ ಸೋ ಕೊಟ್ಟೂರು ಕೆಂಭಾವಿಮಠದಲ್ಲಿ ಜಗತ್ಪೂಜ್ಯ ಜಗದ್ಗುರು ಪಂಚಾಚಾರ್ಯರ ಭಜನೆಯು ಆ ನ್ನು ಪ್ರತಿಸಂವತ್ಸರಕ್ಕಿಂತಲೂ ಈವರ್ಷ ಅತ್ಯಂ ಘನತೆಯಿಂದ ನಡೆಯಿಸಿದರು. ಈ ಊರ ಸರ್ವ ಹೇಶ್ವರರು ಗುರುಕಾರ್ಯವೇ ಮುಖ್ಯವೆಂದೂ ಜಗತ್ಪಾವನರ ಆರಾಧನೆಯಲ್ಲಿಯೇ ನಿರತರಾ ನೋಡಿ ನನ್ನ ಮನಸ್ಸು ಆನಂದಾಂಬುಧಿಯಲ್ಲಿ ದ್ದಿತು. ಅದೇದಿವಸ ಅತಿಮನೋಹರವಾಗಿಯೂ, ಪ್ರಫುಲ್ಲಮಾನವಾಗಿಯೂ ರಚಿಸಿರುವ ಸಿಂ ಮೇಲೆ ಜಗದ್ವಂದ್ಯರಾದ ಶ್ರೀ ಜಗದ್ಗುರು ಪ ರ್ಯರ ಭಾವಪಟವನ್ನು ಆರೋಹಣಮಾಡಿಸಿದ ನಂತರ ಜಯಜಯಘೋಷದೊಡನೆ ಕರತಾಡ ಮಾಡಿದರು. ಅನಂತರ ಉತ್ಸವವು ಕೆಂಭಾವಿಮ ಹೊರಟಿತು. ಭವ್ಯವಾಗಿ ಶೃಂಗರಿಸಿದ ರಾಜ ಕೆ. ಎಂ. ಗುರುಬಸವಶಾಸ್ತ್ರಿಗಳೇ ಮೊದಲಾದ ವೇದಘೋಷದಿಂದಲೂ, ಚಿಕ್ಕಮಹೇಶ್ವರರು ಗೆ ಉಚ್ಚರಿಸುವ ಜಯಜಯಘೋಷದಿಂದಲೂ, ಕವಿದ್ವಾನ್ ಚನ್ನಬಸವಶಾಸ್ತ್ರಿಗಳಿಂದ ತಯಾರಾ ನಾಸಂಘದವರ ಮಂಜುಳವಾದ ಭಜನೆಯಿ ಭೋರ್ಗರೆವ ವಾದ್ಯವೈಭವಗಳಿಂದಲೂ ಕೂಡಿ ಈ ಪುರವು ಭೂಕೈಲಾಸದಂತೆ ಒಪ್ಪುತ್ತಲಿದ್ದಿ ಉತ್ಸವದ ಮುಂದುಗಡೆ ಚದುರುಗೊಳ್ಳದ ಶ್ರೀ ಮೂರ್ತಿಸ್ವಾಮಿಗಳವರು ಸರ್ವಭಕ್ತರಿಗೆ ಪಂ ಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯ ಮುಕ್ತಿಭಾಗಿಗಳಾಗಬೇಕೆಂದು ಬೋಧಿಸು ದ್ದರು. ಈ ಉತ್ಸವವನ್ನು ನೋಡುವುದ ಸ್ತೋಮವು ತಂಡೋಪತಂಡವಾಗಿ ಬಂದು ಸಾಗಿದ್ದಿತು. ಈ ಉತ್ಸವವು ಶ್ರೀ ಕೊಟ್ಟೂರೇ ದೇವಸ್ಥಾನಕ್ಕೆ ಹೋಗಿ ಹಿಂತಿರುಗಿಬಂದು ಕೆಂಭಾವಿಮಠದಲ್ಲಿ ಮನೋಹರವಾಗಿ ರಚಿಸಿದ ಸಿಂಹಾಸನದಮೇಲೆ ಶ್ರೀ ಜಗದ್ಗುರು ಭಗವ ಭಾವಪಟವನ್ನು ಮೂರ್ತಿಗೊಳಿಸಿ ಭಜನೆಯನ್ನು ದನಂತರ ಫಲಪುಷ್ಪಾದಿಗಳನ್ನು ಕೊಟ್ಟು ಪಂ ರ್ಯರ ಜಯಘೋಷದೊಡನೆ ಮುಕ್ತಾಯವಾ ಈ ಗ್ರಾಮದಂತೆ ಎಲ್ಲಾ ಗ್ರಾಮಗಳಲ್ಲಿಯೂ ಜಗದ್ಗುರು ಪಂಚಾಚಾರ್ಯರ ಭಜನಾಸಂಘ ಏರ್ಪಡಿಸಿಕೊಂಡು, ಗುರುಗಳಲ್ಲಿ ಅಸಾ ವಾದ ಭಕ್ತಿಯನ್ನು ವಹಿಸಿ ಸರ್ವರು ಮುಕ್ತಿಭಾ ಗಬೇಕೆಂದು ಅನುರಾಗದಿಂದ ಕೋರುತ್ತೇನೆ.

ಪ್ರತ್ಯಕ್ಷದರ್ಶಿ,
ಕೊಟ್ರಬಸಯ್ಯ,
ಗುರುಪಾದದೇವರಮಠ, ಹರಪ

ತುಮಕೂರು.

[illegible] ಶ್ರೀ ಜಗದ್ಗುರು ಪಂಚಾಚಾರ್ಯ ಸುಂದರ [illegible] ಮೊದಲೇ ಪ್ರಸಿದ್ಧಪಡಿಸಿದಂತೆ [illegible] ದಿನದ ಈ ಸಮಾಮಂಡಳಿ ಕ್ರೆಟರಿಗಳಾದ ಮ|| ರಾ|| ಜಿ. ಕೆ. ಗುರುಸಂಗಾ [illegible] ಇವರ ಸ್ವಾಂಬಮಂದಿರದಲ್ಲಿ ಶ್ರೀಮ [illegible] ರ ಜಯಂತ್ಯುತ್ಸವವನ್ನು ಅತಿ ವಿಜೃಂಭಣೆ ನೆರವೇರಿಸಿದರು. ಹಾಗೆ ಈ ಮಹೋತ್ಸವದ ಕಾರ್ಯ [illegible] ಬಂದ. ಸುವರ್ಣಪದಕವನ್ನು ಮ ಇದನ್ನು ಮೈಸೂರು ವಿಶ್ವವಿದ್ಯಾಲಯದ ೧೯೩ [illegible] ವೈದಿಕ ವಿಷಯದಲ್ಲಿ [illegible] ನ್ನು ಪಡೆದು ಉತ್ತೀರ್ಣರಾಗುವವರಿಗೆ ಶ್ರೀ [illegible] ಚಾರ್ಯರ ಹೆಸರಿನಿಂದ ಕೊಡಬೇಕೆಂದು ನಿ [illegible] ಧರ್ಮಕಾರ್ಯದಲ್ಲಿ ಪ್ರವೃತ್ತರಾಗಿ [illegible] ಒಗಟೀಶನು ಮಂಗಳ ಮಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷ

ದಕ್ಷಿಣಕಾಶೀಕ್ಷೇತ್ರ ಪೂವಳ್ಳಿ (ಹೂಲಿ) ವಿಶ್ವನಾಥಸ್ವಾಮಿರಥೋತ್ಸವ

...ವರುಷ ಪದ್ಧತಿಯಂತೆ ಇಲ್ಲಿ ಶ್ರೀ ವಿಶ್ವನಾಥ ...ರಥೋತ್ಸವದ ಕಾರ್ಯವು ಪ್ರಾರಂಭವಾಗಿ ಆಷೇ...ಾ ಬ|| ೨ ಶುಕ್ರವಾರ ಧ್ವಜಾರೋಹಣ, ಗಣ...ಜಾ, ಅಂಕುರಾರ್ಪಣ, ರಥದ ಕಲಶಸ್ಥಾಪನೆ ...ಕಾರ್ಯಗಳು ಇಲ್ಲಿಯ ಬೃಹನ್ಮಠ ಧರ್ಮಾರ್ಥ ...ಲೆಯ ವಿದ್ಯಾರ್ಥಿಗಳಿಂದ ಜರುಗಿ ತಾ|| ... ೨೩ ರಲ್ಲಿ ಸ್ವಾಮಿಯ ಪಾಲಕೋತ್ಸವವು ...ತು. ಮತ್ತು ತಾ|| ೨೩ ರವಿವಾರ ಶ್ರೀ ವಿಶ್ವ...ರಾಮೇಶ್ವರ, ನೀಲಕಂಠೇಶ್ವರ, ಕಲ್ಮೇಶ್ವರ, ...ೀಶ್ವರ, ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ ...ಸಿದ್ಧೇಶ್ವರ, ಗವಿಸಿದ್ಧೇಶ್ವರ, ಶ್ರೀ ಸಿದ್ಧನಂಜೇ...ಅಂಧಕೇಶ್ವರ, ಸಿದ್ಧಲಿಂಗೇಶ್ವರ, ತಾರಕೇ...ಕೇಶ್ವರ, ಪಂಚಲಿಂಗೇಶ್ವರ, ಪ್ಯಾಟಿಬಸವೇ... ಶ್ರೀ ವೀರಭದ್ರೇಶ್ವರ, ತ್ರಿಕೂಟೇಶ್ವರ, ಶ್ರೀರುದ್ರ ... ಬನಶಂಕರಿ, ಅನ್ನಪೂರ್ಣಾ, ಮಲ್ಲಿಕಾರ್ಜುನ ...ಲಾದ ದೇವರಿಗೆ ಅಭಿಷೇಕವು ವಿಧಿಯುಕ್ತವಾಗಿ ... ಮರುದಿವಸ ಅಂದರೆ ತಾ|| ೨೪ನೇ ಚಂದ್ರ... ಜಂಗಮಾರಾಧನೆ ಅನ್ನಸಂತರ್ಪಣೆ ಕಾರ್ಯವು ... ಸಾಯಂಕಾಲದ ೫ ಘಂಟೆಸುಮಾರಕ್ಕೆ ತಳಿರು ...ರಣಗಳಿಂದಲಂಕರಿಸಿದ ಬೀದಿಯಲ್ಲಿ ಶ್ರೀ ಸ್ವಾಮಿ...ರಥೋತ್ಸವವು ಅಜೂಬಾಜು ಗ್ರಾಮಗಳಿಂದಾಗ...ದ ಸಹಸ್ರಭಕ್ತರ ಜಯಜಯಕಾರದೊಡನೆ ಪ್ರಾರಂಭ... ಪಂಚಾಚಾರ್ಯ ಭಜನಾಸಂಘದವರ ಮೇಳನ ... ಕರಡಿತಾಸೆ ಮೊದಲಾದ ವಾದ್ಯವೈಭವದೊ...ಮುಂದಕ್ಕೆ ಸಾಗಿ ಪುನಃ ೭ ಘಂಟೆ ಸುಮಾರಕ್ಕೆ ...ನಿಜಸ್ಥಾನಕ್ಕೆ ಸ್ವಾಮಿಯರಥವು ತಲುಪಿ ಅಲ್ಲಿ ...ಲದೊಡನೆ ರಥದಕಾರ್ಯವು ಸಮಾಪ್ತಿಯಾಯಿತು. ...ತೆ ಯಾವತ್ತರೂ ತಮ್ಮ ತಮ್ಮ ಗ್ರಾಮಗಳಿಗೆ ...ದರು. ಪ್ರತಿದಿವಸ ಶಿವಶರಣರಚರಿತ್ರೆಯ ಬಗೆಗ ...ಹುಳ್ಳಿ ವೇ|| ತಿಪ್ಪಯ್ಯಶಾಸ್ತ್ರಿಗಳ ಕೀರ್ತನವೂ ...ಕರಿಗೆ ಸ್ವಾಮಿಭಕ್ತಿಯನ್ನು ಹೆಚ್ಚಿಸಲಿಕ್ಕೆ ತಕ್ಕ...ಗಿತ್ತು. ಈ ಕಾರ್ಯವು ಪ್ರತಿವರುಷ ಪದ್ಧತಿ...ತೆ ಇಲ್ಲಿಯ ಶ್ರೀಯುತ ಶೆಟ್ಟೆಪ್ಪ ಮುನವಳ್ಳಿ ಇವರ ...ತ್ವದಿಂದ ಜರುಗಿ ನಿರ್ವಿಘ್ನದಿಂದ ಜರುಗಲಿಕ್ಕೆ ಸ್ವಾಮಿಯಕೃಪೆಯು ಪೂರ್ಣವಾಗಿರುವದೆಂದು ...ಹೇಳಬೇಕಾಗಿಲ್ಲ. ಈ ಚಾಲಕರಿಗೆ ಪರಮಾತ್ಮನು ...ದಾರೋಗ್ಯೈಶ್ವರ್ಯವನ್ನೀಯಲಿ

ಓರ್ವ ಸ್ವಾಮಿಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರ ಮಹೋತ್ಸವವು, ಯರೆಹಂಚಿನಾಳ.

...ಲ್ಲಿಯ ವೀರಶೈವ ತರುಣಸಂಘದವರು ೬|| ಒಡೆ...ವರ ಪ್ರೇರಣೆಯಿಂದ ಶ್ರಾವಣ ಬ|| ೭ ಗುರುವಾ...ವಪ ಸಪ್ತಕವನ್ನು ಪ್ರಾರಂಭಿಸಿ ಬ|| ೧೪ ಗುರುವಾ... ಸಪ್ತಕವನ್ನು ಸಮಾಪ್ತಿಮಾಡಿದರು. ಅನಂತರ ... ಗುರುಸಿದ್ಧನಂಜೇಶ್ವರ ಮಠೇಮಠದಿಂದ ಶ್ರೀಜಗ...ರು ಪಂಚಾಚಾರ್ಯರ ಭಾವಪಟಯುಕ್ತವಾದ ಅ...ಸ್ಲಕ್ಕಿ ಮಹೋತ್ಸವವು ಮುಂಜಾನೆ ೭ ಘಂಟೆಗೆ ...ರಟು ಬಿಲ್ವವೃಕ್ಷಕ್ಷೇತ್ರಕ್ಕೆ ೧೦ ಘಂಟೆಗೆ ಬಂದು ...ತು. ಅನಂತರ ಸ್ಥಳಪಸ್ಥಳಗಳಿಂದ ಬಂದಂಥ ಭ...ಮಾಹೇಶ್ವರರಿಗೆ ಅನ್ನಸಂತರ್ಪಣವು ರಾತ್ರಿ ೧೦ ...ಟೆಸುವರೆಗೆ ನಡೆಯಿತು. ಪುನಃ ಶುಕ್ರವಾರ ಮಾ...ಶ್ವರರಿಗೆ ಅನ್ನಸಂತರ್ಪಣವು ನಡೆಯಿತು. ಈ ಮ...ಕಾರ್ಯಕ್ಕೆ ಗೊಂಡಬಾಳದ ಭಜನಾಸಂಘದವರೂ ...ಪೂರ ವಾದ್ಯಸಂಘದವರೂ ಬಂದಿದ್ದರು. ಸಾ...ಂಕಾಲದ ೫ ಘಂಟೆಗೆ ಅಡ್ಡಪಲ್ಲಕ್ಕಿ ಮಹೋತ್ಸವವು ... ಜಗದ್ಗುರು ಪಂಚಾಚಾರ್ಯರ ಭಜನಾಮೇಳದಿಂ...ಟಿ ಅನೇಕ ವಾದ್ಯ ವೈಭವದಿಂದ ಪುರವನ್ನು ಸಮಾಪಿಸಿದೊಡನೆಯೇ ಯಾವತ್ತರೂ ನಾವುಮುಂದೆ ನಾವುಮುಂದೆಯೆಂದು ಬೀದಿಗೆ ಹಣ್ಣನ್ನು ಕೊಟ್ಟು ನಾಮಕರ್ಪೂರದಿಂದಯುಕ್ತವಾದ ತಾಟನ್ನು ಹಿಡಿದುಕೊಂಡು ನಿಂತುಕೊಳ್ಳುತ್ತಿದ್ದರು. ಇಲ್ಲಿಯವರ ಭಕ್ತಿಯನ್ನು ನೋಡಿ ಬಹಳ ಸಂತೋಷವಾಯಿತು. ಮಹೋತ್ಸವವು ಸುರಕ್ಷಿತವಾಗಿ ೯ ಘಂಟೆಗೆ ಮೇಟಿಯವರ ಮನೆಗೆ ಬಂದು ತಲ್ಪಿತು. ಅನಂತರ ರುದ್ರಯ್ಯನವರು ಹಿರೇಮಠ ಇವರು ಯಾವತ್ತು ಭಕ್ತಮಾಹೇಶ್ವರರಿಗೆ ಇದೇ ಪ್ರಕಾರವಾಗಿ ಪ್ರತಿವರ್ಷದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟಮಹೋತ್ಸವವನ್ನೂ ಜಗದಾಚಾರ್ಯರ ಜಯಂತಿ ಮಹೋತ್ಸವಗಳನ್ನೂ ಅವಶ್ಯ ಮಾಡತಕ್ಕದ್ದೆಂದು ಹೇಳಿದರು. ಅನಂತರ ಯಾವತ್ತು ಜನರು ಸಂತೋಷಭರಿತರಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲಸ್ತೋತ್ರವಂ ಪಾಡಿ ಜಗದ್ಗುರು ಪಂಚಾಚಾರ್ಯರ ಪ್ರಸಾದವಂ ಕೈಕೊಂಡು ಜಗದಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ, ಎಸ್. ಪತ್ತಾರ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಲಿಂಗವನ್ನು ಧಾರಣಮಾಡಿದ ಸಮಸ್ತ ವೀರಶೈವರಲ್ಲಿ ಸವಿನಯ ಸೂಚನೆ.

ಅಯ್ಯಾ ಮಹಾಶಯರೇ ನೀವುಗಳೆಲ್ಲರು ಪವಿತ್ರವಾದ ಮಠದಲ್ಲಿ ಉತ್ಪನ್ನರಾಗಿದ್ದು ಲಿಂಗವನ್ನು ಕೊಟ್ಟು ಮಂತ್ರವನ್ನು ಉಪದೇಶಮಾಡಿ ಮುಕ್ತಿಮಾರ್ಗವನ್ನು ನ್ನು ತೋರಿಸತಕ್ಕಂಥ ಗುರುವನ್ನು ಮರೆಯಬೇಡಿರಿ. ಗುರುಪದವು ಎಲ್ಲಕ್ಕೂ ಶ್ರೇಷ್ಠವಾದದ್ದಿರುತ್ತದೆ. ಈ ವಿಷಯದಲ್ಲಿ (ನಗುರೋರಧಿಕಂ ನಾಸ್ತಿ ತತ್ವಂ ಗುರೋಃ ಪರಂ) ಮುಂತಾದ ಶ್ರುತಿವಾಕ್ಯಗಳು ಸಂಪೂರ್ಣವಾಗಿ ಸಾರುತ್ತಿವೆ. ಈ ಮಾನವಜನ್ಮವು ಭೂಮಿಯಲ್ಲಿ ಉತ್ಪತ್ತಿಯಾದಾಕ್ಷಣವೇ ಸಂಸಾರವೆಂಬ ಸಮುದ್ರದಲ್ಲಿ ಮುಳುಗಿ ದಡವನ್ನು ಕಾಣದೆ ಒದ್ದಾಡುತ್ತಿರುವದನ್ನು ಕಂಡು ಅಂತಃಕರುಣೆಯುಳ್ಳ ಗುರುವು ಲಿಂಗವೆಂಬ ನಾವೆಯನ್ನು ತೆಗೆದುಕೊಂಡು ಮಂತ್ರವೆಂಬ ಹುಟ್ಟಿನೊಡನೆ ನಾವಿಕನಾಗಿ ನಮ್ಮೆಲ್ಲರನ್ನು ದಡೆಗೆ ಮುಟ್ಟಿಸುವದಕ್ಕೋಸ್ಕರವೇ ಈ ಜಗತ್ತಿನಲ್ಲಿ ಉದ್ಭವಿಸಿ ಜಗದ್ಗುರುವಾದವರೊಡನೆ ಪಂಚಮಹಾಪೀಠಗಳಲ್ಲಿ ವಾಸಮಾಡಿರುವದು ನಿಮ್ಮೆಲ್ಲರಿಗೆ ಗೊತ್ತಿಲ್ಲವೇ? ಅಂಥಾ ಮಹಾ ಗುರುಗಳನ್ನು ತಿರಸ್ಕರಿಸಿ ಅನ್ಯರಲ್ಲಿ ಪೂಜ್ಯಭಾವದಿಂದ ನಡೆದುಕೊಳ್ಳುವದನ್ನು ನೋಡಿದರೆ ಸತಿಯು ಪತಿಯನ್ನು ತಿರಸ್ಕರಿಸಿ ಅನ್ಯ ಪುರುಷನನ್ನು ಬಯಸಿದಂತಾಗುವದಿಲ್ಲವೇ? ಸತಿಯು ದುರ್ನಡತೆಯನ್ನು ನೋಡಿ ಪತಿಯು ಶಿಕ್ಷಿಸುವಂತೆ ನಿಮ್ಮನ್ನು ಶಿವನು ಶಿಕ್ಷಿಸಲಿಕ್ಕಿಲ್ಲವೇ? ನಮ್ಮ ಪಾಪವನ್ನು ದೂರಮಾಡಿ ಸುಜ್ಞಾನವನ್ನು ಬೋಧಮಾಡುವದಕ್ಕಾಗಿಯೇ ಭೂಮಧ್ಯದಲ್ಲಿ ಸಂಚರಿಸುವ ಶ್ರೀಮಜ್ಜಗದ್ಗುರುಗಳವರ ಅಭಿವೃದ್ಧಿಯನ್ನು ಕಂಡು ಕೆಲವು ಅಸೂಯಾಳುಗಳು ತಮ್ಮ ಕುಟಿಲ ಸ್ವಭಾವವನ್ನು ಜನರಿಗೆ ತೋರ್ಪಡಿಸದೆ ಅಸೂಯಾಭಾವದಿಂದ ಮತ್ಸರವನ್ನು ಬೆಳಸುತ್ತಿದ್ದಾರೆ. ಅಯ್ಯಾ ಬಂಧುಗಳೇ ಅಂಥಾ ವೇಷಧಾರಿಗಳ ಮಾತಿನಕಡೆಗೆ ಲಕ್ಷ್ಯಕೊಡದೆ ನಮ್ಮ ವೀರಶೈವ ಸಮಾಜಕ್ಕೆ ಪತಿಯ ಸ್ವರೂಪರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲಿ ಅಸಾಧಾರಣವಾದ ಪೂಜ್ಯಭಾವದಿಂದ ನಡೆದುಕೊಳ್ಳಿರಿ. ಸಮಾಜಬಾಂಧವರೇ, ಈಗ ಸದ್ಯದಲ್ಲಿ ವೇದವೇದಾಂಗಾದಿಗಳನ್ನು ಅಭ್ಯಾಸಮಾಡಿ ಉತ್ತೀರ್ಣರಾದ ಪಂಡಿತರು ಪಂಚಸಿಂಹಾಸನಗಳನ್ನು ಆರೋಹಣಮಾಡಿರುವದರಿಂದಲೂ ಜಗತ್ತಿನಲ್ಲಿ ಸಂಚಾರಮಾಡಿ ಭಕ್ತಮಾಹೇಶ್ವರರಿಗೆ ಉಪದೇಶಮಾಡುವದರಿಂದಲೂ ವೇಳ ಮಧ್ಯದಲ್ಲೆಲ್ಲಾ ಸಂಸ್ಕೃತಪಾಠಶಾಲೆಗಳಾಗಿರುವದರಿಂದಲೂ ನಮ್ಮ ಸಮಾಜವು ಉನ್ನತಸ್ಥಿತಿಯನ್ನು ಹೊಂದಲಿಕ್ಕೆ ಹತ್ತಿರುತ್ತದೆ. ಅದಪ್ರಯುಕ್ತ ಗಾಳಿಬಿಟ್ಟಕೈಲೆ ತೂರಿ ರಾಶಿಮಾಡಿಕೊಳ್ಳುವಂತೆ ನಮ್ಮೆಲ್ಲರಿಗೂ ಈಗ ಸುದೈವಕಾಲವು ಒದಗಿಬಂದಿರುತ್ತದೆ ಆದುದರಿಂದ ಭಕ್ತಮಾಹೇಶ್ವರರೇ, ಈ ತತ್ವವನ್ನರಿತು ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲಿ ನೈಜವಾದ ಭಕ್ತಿಯನ್ನಿಟ್ಟು ಗುರುಭಕ್ತಿಪರಾಯಣರಾಗಿ ಧನ್ಯರಾಗಬೇಕೆಂದು ಪ್ರಾರ್ಥಿಸುವ,

ಹಾಲಭಾವಿಯ ಶರ್ಮಾ ಪಂಚಾಚಾರ್ಯ ಭಜನಾ
ಸಂಘದ ಸೆಕ್ರೆಟರಿ, ಹುಡಾಗಾಂವ.

ಹಣದಮಹಿಮೆ

ಹಣರಾಯನೇ, ನಿನಗೆ ಮೊದಲು ವಂದಿಸುವೆನು. ನಿನ್ನ ಸೇವೆಯನ್ನು ಮಾಡಲು ಬದ್ಧಕಂಕಣನಾಗಿರುವ ನಾನೇ ಧನ್ಯನಲ್ಲವೇ? ಶಹಬಾಸ್! ಸಾರ್ಥಕವಾದ ಈ ನನ್ನ ಜನ್ಮವನ್ನು ಸುಜನರು ಪುರಸ್ಕರಿಸದೆ ತಿರಸ್ಕರಿಸಲಿ. ಅಸ್ತು! ಸ್ವಾಮಿಯೇ, ನಿನ್ನನ್ನು ಮನ್ನಣೆಮಾಡದ ಮಾನವನ ನಶ್ವರವಾದ ಜನ್ಮವನ್ನು ಸುಡಬೇಕಲ್ಲವೇ? ಪ್ರತಿತುತ್ತಿಗೂ ಭಿಕ್ಷೆಯನ್ನು ಬೇಡಿ ತಿರಿದುಂಬುವ ಬಡಪಾಪಿಯಾದಿಯಾಗಿ ಧನಚಕ್ರವರ್ತಿಗಳೆಂದೆನಿಸಿಕೊಂಡಿರುವ ಮಾನವರುಗಳೆಲ್ಲಾ ನಿನ್ನನ್ನು ಪಡೆದ ತ್ವರಿತದಿಂದ ಆಶ್ರಯಿಸಲು ಆತುರದಿಂದ ತವಕಪಡುತ್ತಿಲ್ಲವೇ? ಹಾಗಾದರೆ ನಿನ್ನ ಮಹಿಮೆ ಏನಿರಬಹುದು? ನಿನ್ನ ಅಪಾರವಾದ ಅದ್ಭುತಶಕ್ತಿಯನ್ನು ಅರಿತವನಾದ ನಾನು ತಿಳಿಯದ ಪಾಮರರಿಗೆ ಬಿಚ್ಚಿಹೇಳಲೇನು? ಆಗಲಿ; ಯೋಚಿಸಿನೋಡಿದರೆ ಈ ಧರಣಿಯಲ್ಲಿ ನಿನ್ನಿಂದ ಸಾಧ್ಯವಾಗದೇ ಇರುವ ಕಾರ್ಯವೇ ಇಲ್ಲವು. ಆದುದರಿಂದಲೇ ಬುದ್ಧಿವಂತನಾದವನು ವಿಚಾರಶೂನ್ಯನಾಗಿ ನಿನ್ನನ್ನು ಆರಾಧಿಸುತ್ತಲಿರುವನು. ನಿನ್ನ ಕರುಣಾಕಟಾಕ್ಷವಿದ್ದರೆ ತತ್ಕ್ಷಣದಲ್ಲಿ ಅಪರಮಿತಸ್ನೇಹಿತರು ಹಣವಂತನ ಬಳಿಗೆ ತ್ವರಿತದಿಂದ ಸಾಗುವರು. ದೂರನಾಗಿದ್ದ ಬಂಧುಗಳು ಕರೆಯದೇ ಬರುವರು. ಷಂಡನು ಪುರುಷನಾಗುವನು. ಪಾಮರನು ಪಂಡಿತನಾಗುವನು. ದೀಪದ ಬೆಳಕನ್ನು ಹಣ್ಣೆಂದು ಭ್ರಾಂತಿಗೊಂಡು ಕ್ರೀಡಿಸಲು ಪ್ರಯತ್ನಿಸುವ ಪತಂಗವು ಚ್ಯುತಿಯನ್ನೈದುವಂತೆ ಪಾಮರರಾದ ನರರು ನಿನ್ನ ಮಾಯೆಯೆಂಬ ಜ್ವಾಲೆಗೆ ಸಿಕ್ಕಿಬಿದ್ದು ಹೆಣವಾಗುವರು. ಅದಂತಿರಲಿ, ಹೇಯವಾದ ಪದಾರ್ಥಗಳಮೇಲೆ ನೊಣಗಳು ಹಾರಾಡುವಂತೆ ಎಲ್ಲರೂ ಹಣವುಳ್ಳವರನ್ನು ತೀವ್ರದಿಂದ ಸೇರುವರು. ವಿಷಯಾಭಿಲಾಷೆಗಳೆಂಬ ಮಾಯೆಗಳಿಗೆ ನೆಲೆಯಾಗಿರುವ ಈ ನೆಲದಲ್ಲಿ ನಿನ್ನ ಮಹಿಮೆಯಿಂದ ಅಪೂಜ್ಯನು ಪೂಜ್ಯನಾಗುವನು. ವಂದನಾರಹಿತನು ವಂದ್ಯನಾಗುವನು. ದುರ್ಗುಣಿಯು ಸುಗುಣಿಯಾಗುವನು. ಶತ್ರುವು ಮಿತ್ರನಾಗುವನು. ಕುರೂಪಿಯು ಸುರೂಪಿಯಾಗುವನು. ವೃದ್ಧನು ತರುಣನಾಗುವನು. ಸುಳ್ಳು ದಿಟವಾಗುವುದು. ದಿಟವು ಸುಳ್ಳಾಗುವುದು. ನ್ಯಾಯವು ಅನ್ಯಾಯವಾಗುವುದು. ಅನ್ಯಾಯವು ನ್ಯಾಯವಾಗುವುದು. ಆದರೆ ನಿನ್ನಿಂದ ದೂರೀಕರಿಸಲ್ಪಟ್ಟವನ ವಿಷಯದಲ್ಲಿ ಇವೆಲ್ಲವೂ ವ್ಯತಿರಿಕ್ತಾವಸ್ಥೆಯನ್ನು ಹೊಂದುವುವು. ಮಹಾತ್ಮ! ಇನ್ನೂ ನಿನ್ನ ಮಹಿಮೆಯನ್ನು ವಿಶದಪಡಿಸಲೇನು? ರಸಭರಿತವಾದ ಆಹಾರಾದಿಗಳಿಂದ ಮಾನವನ ಇಂದ್ರಿಯಗಳು ಪರಿಪಕ್ವವಾಗುವಂತೆ ಹಣರಾಯನಾದ ನಿನ್ನ ಕರುಣೆಯಿಂದ ಸಕಲಕಾರ್ಯಗಳೂ ಸಿದ್ಧಿಯನ್ನೈದುವವು ನಿನ್ನ ಪರಾಕ್ರಮ ಸುಗುಣಗಾಂಭೀರ್ಯಾದಿಗಳಿಂದಲ್ಲವೇ? ಹಲವು ಮೇಧಾವಿಗಳು ಈ ಮೇದಿನಿಯಲ್ಲಿ 'ರಾವ್ ಸಾಹೇಬ್' 'ಬಹದ್ದೂರ್' ನಾಮೇಬಕೇ ಮೊದಲಾಗಿ ಮೆರೆಯುವುದು ನಿನ್ನ ಉದಾತ್ತತೆಯ ಸಹಾಯದಿಂದಲ್ಲವೇ? ಕೆಲವರು 'ಓಟ' ಎಂಬ ಮಾಟವನೊಂದಿಯನ್ನೊಡ್ಡಿ ನೇರಾಗಿ ಲೆಜಿಸ್ಲೆಟಿವ್ ಕೌನ್ಸಿಲಿಗೂ, ರಿಪ್ರಸೆಂಟೆಟಿವ್ ಅಸೆಂಬ್ಲಿಗೂ, ತೀರ್ಥಯಾತ್ರೆ ಮಾಡಿ ನಾಟಕಶಾಲೆಯ ನೋಟಕನಂತೆ ಮಿಟುಗುಟ್ಟುವುದು ನಿನ್ನ ಮಹಿಮೆಯಿಂದಲ್ಲವೇ? ನಿನಗೆ ಜಯವಾಗಲಿ! ಪರಾಕ್!

ಸುಗುಣವಿರೋಧಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರುಗಳವರ ಸಂಚಾರವು ಪುರಾಣಸಮಾಪ್ತಿಯು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಆನವಟ್ಟಿ ಮುಕ್ಕಾಂ ಮಾಡಿರುವದು ಸರ್ವವಿಶ್ರುತವಷ್ಟೇ! ಶ್ರೀ ಮಹಾಸನ್ನಿಧಿಯವರು ಸಕಲಭಕ್ತಮಾಹೇಶ್ವರರಪ್ರಾರ್ಥನೆಯಂತೆ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಆಗಸ್ಟತಿಂಗಳ ೨೨ಕ್ಕೆ ಸೀರಳಗಿ ೨೩-೨೪ಕ್ಕೆ ಕೋಡಿಹಳ್ಳಿ ೨೫ಕ್ಕೆ ತಲ್ಲೂರು ಈ ಗ್ರಾಮಗಳಿಗೆ ಚತುರಂಗಬಲಸಮೇತರಾಗಿ ಸಕಲಬಿರುದಾವಳಿಗಳೊಡನೆ ದಯಮಾಡಿಸಿ ತ್ರಿಕಾಲಪೂಜೆಯಿಂದ ಸರ್ವರನ್ನೂ ಪವಿತ್ರಗೊಳಿಸಿ ಭಕ್ತಿಯಿಂದ ಅರ್ಪಿಸಿದ ಕಾಣಿಕೆಯನ್ನು ಸ್ವೀಕರಿಸಿ ತಾ|| ೨೬ನೆಯ ಸಾಯಂಕಾಲಕ್ಕೆ ಪುನಃ ಆನವಟ್ಟಿಗೆ ದಯಮಾಡಿಸಿದರು.

ಪ್ರತಿಗ್ರಾಮಗಳಲ್ಲಿಯೂ ಭಕ್ತಮಾಹೇಶ್ವರರು ಭಕ್ತಿಪೂರ್ವಕವಾಗಿ ಶ್ರೀಮಹಾ( ) ಸನ್ನಿಧಿಯವರ ಆಂದೋಲಿಕೋತ್ಸವವನ್ನು ಬಹುವೈಭವದಿಂದ ನೆರವೇರಿಸಿದರು. ಪೀಠಾಧಿಕಾರಿಗಳು ಈ ಪ್ರಾಂತಕ್ಕೆ ದಯಮಾಡಿಸದೆ ಬಹುದಿವಸಗಳಾಗಿದ್ದರಿಂದ ನಾಮುಂದೆ ತಾಮುಂದೆ ಎಂದು ಆಜುಬಾಜು ಗ್ರಾಮದ ಜನಗಳು ತಂಡೋಪತಂಡವಾಗಿ ಬಂದು ದರ್ಶನಾಶೀರ್ವಾದ ಪಡೆದು ನಮ್ಮ ಜನ್ಮವು ಸಫಲವಾಯಿತೆಂದು ಆನಂದೋದ್ಗಾರವನ್ನು ಪ್ರಕಟಿಸುತ್ತಿದ್ದರು. ತಾ|| ೩೧ಕ್ಕೆ ಶ್ರೀ ಜಗದ್ಗುರುಸನ್ನಿಧಿಯಲ್ಲಿ ಶ್ರಾವಣಮಾಸದಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಶ್ರೀ ಜಗದ್ಗುರು ರೇಣುಕವಿಜಯ ಪುರಾಣವು ಸಮಾಪ್ತಿಯಾಯಿತು. ಆ ದಿವಸ ಬೆಳಿಗ್ಗೆ ಶ್ರೀ ಜಗದ್ಗುರುಗಳವರ ಚರಣಕಮಲಕ್ಕೆ ಏಕಾದಶರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯಾಗಿ ಸಂತರ್ಪಣೆಯು ಮಹಾ ಸಂಭ್ರಮದಿಂದಲೇ ನಡೆಯಿಸಲ್ಪಟ್ಟಿತು. ಸಕಲ ಜನರು ಅನ್ನಸಂತರ್ಪಣೆಯಿಂದ ಸಂತೋಷಪಟ್ಟರು. ಮಧ್ಯಾಹ್ನ ನಾಲ್ಕು ಘಂಟೆಯ ಸಮಯಕ್ಕೆ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ರೇಣುಕವಿಜಯ ಪುರಾಣವನ್ನು ಮಂಡಿಸಿ ಶೃಂಗರಿಸಿದ ಸಕಲ ಬೀದಿಗಳಲ್ಲಿ ವಾದ್ಯವೈಭವದಿಂದ ಸಕಲ ಬಿರುದಾವಳಿಗಳೊಡನೆ ಉತ್ಸವವು ನೆರವೇರಿಸಲ್ಪಟ್ಟು ಸ್ವಸ್ಥಲಕ್ಕೆ (ಪುರಾಣಮಂಟಪಕ್ಕೆ) ಬಂದನಂತರ ಪುರಾಣಪ್ರವಚಕರಾದ ಆಸ್ಥಾನವಿದ್ವಾನ್ ವೇ|| ಪ|| ಪರಮೇಶ್ವರಶಾಸ್ತ್ರಿಗಳು ಶ್ರೀಜಗದ್ಗುರು ರೇಣುಕಾಚಾರ್ಯರು ಪ್ರಾದುರ್ಭವಿಸಿದ ಸೋಮನಾಥಲಿಂಗದಲ್ಲಿ ಐಕ್ಯರಾದವಿಷಯವನ್ನು ಹೇಳಿ ಸಮಾಪ್ತಿಸೂಚಕವಾದ ಮಂಗಲವನ್ನು ಮಾಡಿದರು. ಆನಂತರ ಸಿಂಹಾಸನಾರೂಢರಾದ ಶ್ರೀಮಹಾ( )ಸನ್ನಿಧಿಯವರು ಶ್ರೋತೃಜನಗಳಿಗೆ ಆನಂದವಾಗುವಂತೆ ಮತಸಿದ್ಧಾಂತ ಮತಾಚಾರ ವಿಷಯದಲ್ಲಿ ಅಪ್ಪಣೆಕೊಡಿಸಿದರು. ಅಲ್ಲಿಗೆ ಅನುಷ್ಠಾನಕ್ಕೆ ಸಮಯವಾದಕಾರಣ ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರ ಹಾಗೂ ಅವರ ರಾಜಕುಟುಂಬವರ್ಗದ ಶ್ರೇಯೋಭಿವೃದ್ಧಿಗಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಪುರಾಣದ ಆರಾಧನೆಗೆ ಅನೇಕಜನರು ಸೇರಿದ್ದರು. ಆನವಟ್ಟಿಯು ಆ ದಿವಸ ಸಾಕ್ಷಾತ್ ಭೂಕೈಲಾಸದಂತೆ ಒಪ್ಪುತ್ತಿತ್ತು. ಶ್ರಾವಣಮಾಸ ಶ್ರೀಜಗದ್ಗುರುಗಳವರ ಮುಕ್ಕಾಂ ಶ್ರೀ ರೇಣುಕಾಚಾರ್ಯರ ಪುರಾಣ ಒಂದೇ ಕಾಲದಲ್ಲಿ ಪ್ರಾಪ್ತವಾಗಿದ್ದುದರಿಂದ ಆನವಟ್ಟಿ ಭಕ್ತಮಾಹೇಶ್ವರರ ಪುಣ್ಯಕ್ಕೆ ಬೆಲೆಯೇ ಇಲ್ಲ. ಪ್ರತಿಗ್ರಾಮದ ಭಕ್ತಮಾಹೇಶ್ವರರು ಶ್ರೀಜಗದ್ಗುರುಗಳನ್ನು ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಪಾದಪೂಜೆಯನ್ನು ಬಹುಭಕ್ತಿಯಿಂದ ಮಾಡುತ್ತಿರುವರು. ಗುರುಭಕ್ತಿಧುರೀಣರಾದ ಸಕಲ ವೀರಶೈವಭಕ್ತಮಾಹೇಶ್ವರರ ಮೇಲ್ಪಂಕ್ತಿಯನ್ನು ಅನುಸರಿಸಿ ಗುರುಕೃಪೆಗೆ ಪಾತ್ರರಾಗಿ ಮುಕ್ತರಾಗತಕ್ಕದ್ದೆಂದು ಹಾರೈಸಿ ಈ ಲೇಖವನ್ನು ಮುಗಿಸುತ್ತೇನೆ.

ಗುರುಚರಣಸೇವಾ ಧುರಂಧರ.

ಉಪನಯನ

ಮೈಸೂರು. [illegible] ಬಸವನಾಗರವನ್ನು [illegible] ನೆರೆಗ್ರಾಮದಲ್ಲಿರುವ ವೇದಾರಲಿಂಗಪ್ಪ ಎಂಬುವರು ಸದರಿ ಶಿವನಕೆರೆಯಲ್ಲಿ ಇದೇ ಶ್ರಾವಣಬಹುಳದಲ್ಲಿ ಮೂವತ್ತು (30) ಮಾಹೇಶ್ವರರ ವಟುಗಳಿಗೆ ವಿಧ್ಯುಕ್ತವಾಗಿ ಉಪನಯನಸಂಸ್ಕಾರವನ್ನು ಮಾಡಿಸಿದರು. ಉಪನಯನವಾದನಂತರ ಅತ್ಯಂತಸುಸ್ವರದಿಂದ ಉತ್ಸವವನ್ನು ಮಾಡಿದರು. ೩೦೦ ಮಂದಿ ಭಕ್ತಮಾಹೇಶ್ವರರಿಗೆ ಮೃಷ್ಟಾನ್ನಭೋಜನವನ್ನು ಮಾಡಿಸಿ ಆಮೇಲೆ ಮಾಹೇಶ್ವರರಿಗೆ ಶಕ್ತ್ಯನುಸಾರ ದಕ್ಷಿಣೆಯನ್ನು ಕೊಟ್ಟರು. ಸದರಿ ಲಿಂಗಪ್ಪನವರು ವೇದಾರಕುಲೋತ್ಪನ್ನರಾದಾಗ್ಯೂ, ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಅತ್ಯಂತಭಕ್ತಿಯನ್ನು ಇಟ್ಟು ಕೆಲಸಮಾಡುತ್ತಲಿದ್ದಾರೆ. ಇತನಂತೆಯೇ ಸದ್ಗುರುಸಂತತಿಯಲ್ಲಿ ಅಸಾಧಾರಣವಾದ ಭಕ್ತಿಯನ್ನು ವಹಿಸಿ ಪುಣ್ಯದಾಯಕವಾದ ಕಾರ್ಯಗಳನ್ನು ಮಾಡಿ ಮೋಕ್ಷಭಾಗಿಗಳಾಗಬೇಕೆಂದು ಕೋರಿಕೆಯು. ಸದರಿ ವೇದಾರಲಿಂಗಪ್ಪನಿಗೆ ಆಯುರಾರೋಗ್ಯೈಶ್ವರ್ಯವನ್ನು ದಯಪಾಲಿಸಬೇಕೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ. ಕೊಟ್ರಬಸಪ್ಪ.

ಗುರುಪಾದದೇವರಮಠ, ಮರಸನಹಳ್ಳಿ

ಜಾಹೀರಾತು

ಪ್ರಿಂಟಿಂಗ್ ಪ್ರೆಸ್ಸಿನ ಆಡಳಿತ ವ್ಯವಸ್ಥೆಯನ್ನು ಮಾಡಿಕೊಂಡುಹೋಗಲು ಸಮರ್ಥರಾದ ಒಬ್ಬ ಮ್ಯಾನೇಜರು ಬೇಕಾಗಿರುತ್ತದೆ. ಇಂಗ್ಲೀಷ್ ಬಲ್ಲವರು ಸಾತ್ವಿಕಸ್ವಭಾವದವರಾಗಿರಬೇಕು. ಸಂಬಳವು ಅವರ ಯೋಗ್ಯತಾನುಸಾರ 25 ರಿಂದ 40 ರ ವರೆಗೆ ಕೊಡಲ್ಪಡುವದು. ಅವರ ಯೋಗ್ಯತೆಯನ್ನು ನೋಡಿ ಮುಂದೆ ಹೆಚ್ಚಿಸಬಹುದು. ಅಪ್ಲೈಮಾಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಬೇಕು.

ಪ್ರೊಪ್ರೈಟರ್
ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್,
ಮೈಸೂರು.

ನಿವೇದನವು

ವೀರಶೈವಮತದ ನಿಜತತ್ವಗಳನ್ನು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತಪರಮತದವರಿಗೆ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದ್ದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದ ಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಹಾರೈಸುತ್ತೇವೆ. ಸಂಪಾದಕರು.

ಡಾಕ್ಟರ್ ಜೇ. ಪಿ. ಯವರ
ಸುಗಂಧ ನಶ್ಯದಪುಡಿ
ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯ
ವು ಕಾಂತಿಯುಳ್ಳದ್ದು, ಸಾವಿರಾರು ಮಂದಿ
ಇದನ್ನು ಉಪಯೋಗಿಸಿ, ಸಾವಿರಾರುಗ


ಯೋಗ್ಯತಾಪ
ನ್ನು ಕೊಟ್ಟಿ
ರು. ಪ್ರಸಿದ್ಧ
ಈ ನಶ್ಯದ
ಯಿಂದ ಸ್ವಸ್ಥ
ವ ವ್ಯಾಧಿಗಳು
ವಸಂದರೆ:—
ಒಂಟಿತಲೆನೋ
ತಲೆಯಲ್ಲಿನ ರೋ
ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ
ಬಹುದೋಷ ಮುಂತಾದ ವ್ಯಾಧಿಗಳು ಪರಿಹಾರವಾ
ವನ್ನಲ್ಲದೆ ಇದರಿಂದ ಮೇಲ್ಕಂಡ ೧೬ ವ್ಯಾಧಿಗಳ
ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು
ಹುತ್ತದೆ. ಮಾರ್ಕೆಟ್ಟಿನ ಸಾಧಾರಣ ನಶ್ಯದ ಸಂ
ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ
ಮಿಶ್ರಮಾಡಿದರೆ ಅದೂ ಪರಿಮಳವಾಗುವುದು.
ನ್ನು ಅನೇಕ ಜನಗಳು ತಮ್ಮ ಗೃಹದಲ್ಲಿ ಕುಟುಂ
ಬಿಸಹ ಉಪಯೋಗಿಸುತ್ತಾರೆ. ಮಾದರಿ
ಪುಗಸಟ್ಟೆ ಕಳುಹಿಸಲಾಗುವುದು.
ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦. ವಿ.ಪಿ. ೦-೪
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೪
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ
ಸ್ಪಷ್ಟ ತಿಳಿಯುವಂತೆ ಬರೆಯಿರಿ.—ವಿಳಾಸ
ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[illegible] ಪೋ. ಬಾ. ೫೧೨, ಮದರಾಸು.

ASIATIC GOVERNMENT SECURIT
LIFE ASSURANCE CO. LTD., MYSOR
ಏಷಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಶ್ಶೂರೆನ್ಸ್ ಕಂಪನಿ, ಮೈಸೂರು,
ಮುಖ್ಯ ಕಾರ್ಯಾಲಯ
ಬೆಂಗಳೂರು.
[illegible] ಜೀವವಿಮೆ ಸಂಘಗಳಲ್ಲಿ
ಮೊದಲನೆಯದು.
ಇದು [illegible] "ಏಷ್ಯಾಟಿಕ್" ಕಂ
[illegible].
ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿ
ತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕ
ವಾಗಿರುವವು.
ಬ್ಯಾಂಕುಗಳಿಗೆ [illegible] ತಮ್ಮ ಸ್ವಂತ
ಹಾಕಿದ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ವ
ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.
ಬ್ಯಾಂಕುಗಳ ಚೀಟಿಯನ್ನು ಎತ್ತುವ ಮುಂದಿನ ತಾ
[illegible] 31 ನೇ ಜುಲೈ 1937 ಕ್ಕೆ ನಡೆಯುತ್ತದೆ
ಏಜೆನ್ಸಿ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವ
ರಿಗೆ ಬರೆಯಬಹುದು.
(1) ಮೆ. ಪಿ. [illegible],
ಚೀಫ್ ಏಜಂಟ್, ಮೈಸೂರು.
(2) ಮೆ|| ಹೆ. ಎಸ್. ಆರಾಧ್ಯ,
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ್ಯಾ
(3) ಹೈದರಾಬಾದ ಏಜನ್ಸಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಕ್ಷಿಣ)
ಸಯ್ಯಾಜಿರಾವ್ ರೋಡ್, ಮುಖ್ಯ ಏಜಂಟ್,
[14] ಮೈಸೂರು. *Asiatic Buildings*

☞ ಮೈಸೂರು ರಾಜಧಾನಿಯಲ್ಲಿರುವ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ಶ್ರೀಃ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಷ್ಟಪೀಠಾಧಿಪರ್ , ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ನವರಿಗೆ ೧ ರೂ. ೧೨ ಆಣೆ. ಬಿಡಿ ಪ್ರತಿ ೧ಕ್ಕೆ ೪ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಸೆಪ್ಟಂಬರ್ ೧೯೨೭ [ಸಂಚಿಕೆ ೧೯.

ನಮಃ ಶ್ರೀ ಗುರುಪಂಚಕಾಯ

ರಮೇಶ್ವರನ ಪಂಚಮುಖಗಳ ಬಣ್ಣಗಳು

ಪರಮೇಶ್ವರನು ಸದ್ಯೋಜಾತ, ವಾಮದೇವ, ಘೋರ, ತತ್ಪುರುಷ, ಈಶಾನಗಳೆಂಬ ಪಂಚಮುಖಗ ದ ಯುಕ್ತನಾಗಿರುವದು ಶಾಸ್ತ್ರಪ್ರಸಿದ್ಧವೂ, ಲೋ ಪ್ರಸಿದ್ಧವೂ ಆಗಿದೆಯಷ್ಟೆ! ಈ ಪಂಚಮುಖಗಳು ಅನು ವಾಗಿ ಹಸರು, ಕೆಂಪು, ಕಪ್ಪು, ಬಿಳಿ, ಹಳದಿ ಗಳಿಂದ ಯುಕ್ತವಾಗಿವೆ. "ಸದ್ಯೋಜಾತಂ ಹರಿ ರ್ಣಂ ವಾಮದೇವಂಚರಕ್ತಕಂ | ಅಘೋರಂ ಕೃಷ್ಣ ರ್ಣಂಚ ಪುರುಷಂ ಶ್ವೇತವರ್ಣಕಂ || "ಈಶಾನಂಪೀತ ರ್ಣಂ ಸ್ಯಾತ್" ಈ ಪ್ರಕಾರವಾಗಿ ಪಾಶುಪತತಂ ವು ಪರಮಾತ್ಮನ ಮುಖಗಳು ಇಂಥಿಂಥ ವರ್ಣ ಗಳು ಎಂದು ಸಾರುತ್ತದೆ. ಹಾಗೂ "ರೇಣುಕ ಸಿದ್ಧೇಶಂ ಸದ್ಯೋಜಾತಾತ್ಮಕಂ ವಿದುಃ ಮ ರುಳಾರ್ಯಸ್ಯ ರಕ್ತಾಭಂ ವಾಮದೇವಾತ್ಮಕಂ ಸ್ಮೃತಂ ಏಕೋರಾಮಸ್ಯ ಕೃಷ್ಣಾಭಂ ಮಘೋರವದನಾತ್ಮಕಂ | ಪಂಡಿತಾರ್ಯಸ್ಯ ಶುಭ್ರಾಭಂ ತತ್ಪುರುಷಮುಖಾತ್ಮಕಂ | ವಿಶ್ವಾರಾಧ್ಯಸ್ಯ ಸ್ವರ್ಣಾಭಂ ಈಶಾನವದನಾತ್ಮಕಂ || ಪ್ರಕಾರವಾಗಿ ಸುಪ್ರಭೇದಾಗಮದ ಪಂಚಾಚಾ ರ್ಯೋತ್ಪತ್ತಿಪ್ರಕರಣದಲ್ಲಿ ಸ್ಪಷ್ಟವಾಗಿ ಹೇ ಳಿದೆ. ಶ್ರೀಮತ್ಪಂಚಾಚಾರ್ಯರು ಪರಮೇಶ್ವರನ ಪಂಚಮುಖಗಳಿಂದವತರಿಸಿದ ಕಾರಣ ಆ ಆ ಮುಖಗಳ ಸಂಬಂಧವೇ ಇವರಿಗೆ ಇರುವದಾಗಿ ಧರ್ಮಗ್ರಂ ಥದಲ್ಲಿ ಹೇಳಲ್ಪಟ್ಟಿದೆ. ಈ ತತ್ವವನ್ನರಿಯದೆ ಕೆಲವ ರು ಪೃಥ್ವೀಮೊದಲಾದ ತತ್ವಗಳಿಂದ ಆಚಾರ್ಯರಿಗೆ ಬಣ್ಣಗಳನ್ನು ಕಲ್ಪಿಸುತ್ತಾರೆ. ಇದು ಶುದ್ಧ ತಪ್ಪಾದಮಾ ತಾಗಿರುತ್ತದೆ. ಯಾಕಂದರೆ ವಿಚಾರದೃಷ್ಟಿಯಿಂದ ನೋಡಿದರೆ ವಾಯು ಹಾಗೂ ಆಕಾಶತತ್ವಗಳಲ್ಲಿ ಬಣ್ಣ ವಿದ್ದಂತಿಲ್ಲ. ಅಲ್ಲದೆ ತತ್ವಗಳ ಬಣ್ಣಕ್ಕೂ ಹಾಗೂ ಮುಖಗಳ ಬಣ್ಣಕ್ಕೂ ಯಾವ ಸಂಬಂಧವೂ ಇಲ್ಲ. ತ್ವಗಳ ವರ್ಣಸಂಬಂಧಗಳನ್ನು ಮುಖಗಳಿಗೆ ಮಾಡು ವದೆಂದರೆ ಸರಿದೋರುವದಿಲ್ಲ. ಯಾಕಂದರೆ ಪೃಥ್ವಿ ಜಡವಾದರೆ ಸದ್ಯೋಜಾತಮುಖವೂ ಅದರಿಂದ ವತರಿಸಿದ ರೇಣುಕನೂ ಜಡರಾಗಬೇಕಾದೀತು? ಆ ಕಾಶವು ನಿರಾಕಾರವಾದರೆ ಈಶಾನ ಮುಖವೂ ಅದರಿಂ ದ ಅವತರಿಸಿದ ವಿಶ್ವಾರಾಧ್ಯನೂ ಆಕಾರಶೂನ್ಯರಾಗ ಬೇಕಾದೀತು? ಈ ವಿಚಾರಗಳಿಂದ ಪಂಚಭೂತಗಳ ಬ ಣ್ಣಕ್ಕೂ ಮುಖಗಳ ಬಣ್ಣಕ್ಕೂ ಸಂಬಂಧವನ್ನು ಕಲ್ಪಿ ಸುವದು ಅಸಮಂಜಸವಾದದ್ದೆಂದು ಹೇಳದೆ ಇರಲಾರೆವು.

ಗುರುವರ್ಗನಾಟಕಶಾಲಾ.

ಬಿಜಾಪುರ ಜಿಲ್ಲೆಗೆ ಸೇರಿದ ಹಿರೇಪಡಸಗಲಿ ಎಂಬ ಗ್ರಾಮದಲ್ಲಿ ಶ್ರೀ ಪುರಾಣಿಕ ಮಠದ 'ರೂಪಾಕ್ಷಶಾಸ್ತ್ರಿ ಗಳು' ಗುರುವರ್ಗದ ವಟುಗಳನ್ನು ವಿದ್ಯಾವಂತರನ್ನಾಗಿ ಮಾಡುವದಕ್ಕೋಸ್ಕರ ಒಂದು ನಾಟಕಶಾಲೆಯನ್ನು ಏರ್ಪಡಿಸಿರುತ್ತಾರೆ. ಇವರು ಕೈಕೊಂಡಿರುವ ಕಾರ್ಯವು ಮಹತ್ವದ್ದಿದ್ದಾಗ್ಯೂ ಜನರಿಂದ ಅದಕ್ಕೆ ಸಾಕಷ್ಟು ಪ್ರೋತ್ಸಾಹವಿಲ್ಲವೆಂದು ಕೇಳುತ್ತೇವೆ. ಈ ಪುಣ್ಯರೂಪ ಮಹಾಕಾರ್ಯಕ್ಕಾಗಿ ಪ್ರತಿಯೊಬ್ಬರು ಸದರಿ ನಾಟಕಶಾಲೆಯ ಅಭಿವೃದ್ಧಿಗೋಸ್ಕರ ಸಹಾಯಮಾಡಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇವೆ.

ಸಂತೋಷವಾರ್ತೆ.

ನರಸಿಂಹರಾಜಪುರದ ಸುಪ್ರಸಿದ್ಧ ಮನೆತನದ ಶ್ರೀಯುತ ಯಜಮಾನ್ ಶಾಂತಪ್ಪಶೆಟ್ಟರವರು ಪದ್ಧತಿಪ್ರಕಾರ ಸಿದ್ಧಗಣಪತಿ ಸೇವಾಕಾರ್ಯಗಳನ್ನು ಅತ್ಯಂತ ವೈಭವದಿಂದ ನಡೆಯಿಸಿದರು. ಈ ಶುಭಕಾರ್ಯಕ್ಕೆ ಆಹ್ವಾನಿತರಾಗಿ ದಯಮಾಡಿಸಿದ್ದ ಶ್ರೀ ಪಟ್ಟದಮೂರ್ತಿಸ್ವಾಮಿಗಳು, ಜಂಗಮರು, ಕವಿಗಳು, ಪಂಡಿತರು, ಶಾಸ್ತ್ರಿಗಳು ಮೊದಲಾದ ಸಮಸ್ತ ಮಾನನೀಯರುಗಳನ್ನು ವಿಚಕ್ಷಣತೆಯಿಂದ ಆದರಿಸಿದುದಲ್ಲದೆ ವಸ್ತ್ರಾದಿ ದಾನಧರ್ಮಗಳಿಂದ ತೃಪ್ತಿಪಡಿಸಿದರು.

ಈ ಶುಭಮುಹೂರ್ತಕ್ಕೆ ಸುಪ್ರಸಿದ್ಧ ಹಲ್ಲೂರು ಸಾಹುಕಾರ್ ವೀರಶೈವಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರವರೂ ಆಹ್ವಾನಿಸಿಕೊಂಡಿದ್ದರು. ಸದರೀ ಶೆಟ್ಟರು ಭರತಖಂಡದ ಸಮಸ್ತ ತೀರ್ಥಕ್ಷೇತ್ರಗಳನ್ನು ಸಂಚರಿಸಿ ಹಲವು ಸಾಧುವರ್ಯರ ದರ್ಶನಾಶೀರ್ವಾದಗಳಿಗೆ ಪಾತ್ರರಾಗಿ ಸಹಸ್ರಾರು ರೂಪಾಯಿಗಳ ದಾನಧರ್ಮಗಳನ್ನು ಕಾಶೀಮೊದಲಾದ ಸುಕ್ಷೇತ್ರಗಳಲ್ಲಿ ನಡೆಯಿಸಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನಾಧೀಶ್ವರರಾದ ಶ್ರೀ ೧೦೮ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಹಸ್ತದಿಂದ ವೀರಶೈವಧರ್ಮಧುರಂಧರ ಎಂಬ ಮಹತ್ವಾದ ಪ್ರಶಸ್ತಿಯನ್ನು ಹೊಂದಿ, ನಮ್ಮ ಸ್ವಾಮಿಗಳ ಮಹಾಪ್ರಭುಗಳಾದ ರಾಜರ್ಷಿವರ್ಯ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರವಡೆಯರ್ ಬಹದ್ದೂರ್ರವರ ಹಾಗೂ ಇವರ ಸೋದರರಾದ ಘನವಂತರಾದ ಯುವರಾಜರವರ ದರ್ಶನಸಂಭಾಷಣಾದಿಗಳಿಗೆ ಪಾತ್ರರಾಗಿ ಬಂದಿರುವುದು ಸರ್ವಶ್ರುತವಷ್ಟೆ. ಇಂತಹ ಪ್ರಸಿದ್ಧಪುರುಷರು ಈ ಸಂತೋಷಪ್ರದವೂ ಪವಿತ್ರತಮವೂ ಆದ ಕಾರ್ಯದಲ್ಲಿ ನೆರವಾದುದು ಈ ಕಾರ್ಯದ ಶೋಭೆಯನ್ನು ಮತ್ತಷ್ಟು ಹೆಚ್ಚಿಸಲಿಕ್ಕೆ ಕಾರಣವಾಯಿತು. ಇದಲ್ಲದೆ ಈ ಸಿದ್ಧಗಣಪತಿಯ ಮಹಾಮಂಗಲಕಾಲಕ್ಕೆ ತುಮಕೂರಿನ ಸುಪ್ರಸಿದ್ಧ ಕೀರ್ತನಕಾರರಾದ ವೇ|| ಚ. ಶಿವಮೂರ್ತಿಶಾಸ್ತ್ರಿಗಳು ಶ್ರೀಮಾನ್ ಶಾಂತಪ್ಪಶೆಟ್ಟರ ಆಹ್ವಾನದ ಮೇರೆಗೆ ಇಲ್ಲಿಗೆ ಆಗಮಿಸಿ ಇಂದ್ರಕೀಲವಿಜಯ, ಸಾವಿತ್ರೀಸತ್ಯವಾನ್, ಸುಭದ್ರಾಹರಣ, ಗಿರಿಜಾಕಲ್ಯಾಣ ಎಂಬ ಘನತರವೂ ಪ್ರಥಿತವೂ ಆದ ಕೀರ್ತನೆಗಳನ್ನು ಸರಸವಾಗಿ ಅನುವಾದಮಾಡಿ ಬ್ರಾಹ್ಮಣಾದಿ ಸಮಸ್ತ ವರ್ಣದವರಿಂದಲೂ ಸನ್ಮಾನಿತರಾದುದು ಸಂತೋಷಪ್ರದ ವಾರ್ತೆಯಾಗಿದೆ.

ಮಾನನೀಯರಾದ ಶ್ರೀಮಾನ್ ಶಾಂತಪ್ಪಶೆಟ್ಟರವರೂ, ಮ|| ರಾ|| ಶ್ರೀಕಂಠಪ್ಪಶೆಟ್ಟರೂ, ಮ|| ರಾ|| ಚಂದ್ರಪ್ಪಶೆಟ್ಟರೂ ಇವರ ಆಪ್ತಬಾಂಧವರಾದ ಆಗರ್ಭ ಶ್ರೀಮಂತ ಹಲ್ಲೂರು ಸಾಹುಕಾರ್ ವೀರಶೈವಧರ್ಮ ಧುರಂಧರ ಮರುಳಸಿದ್ಧಪ್ಪಶೆಟ್ಟರೂ ಈ ಸಿದ್ಧಗಣಪತಿ ಕಾರ್ಯವನ್ನು ಮಂಗಳಕರವಾಗಿ ನೆರವೇರಿಸಿ ಸ್ಥಳದ ಮತ್ತು ಪರಸ್ಥಳದ ಸಾವಿರಾರುಮಂದಿ ಅತಿಥಿಅಭ್ಯಾಗತರನ್ನು ತೃಪ್ತಿಪಡಿಸಿದುದು ಅತ್ಯಂತ ಶ್ಲಾಘನೀಯವಾದ ವಾರ್ತೆಯಾಗಿದೆ.

ಶ್ರೀ ಸಿದ್ಧಗಣಪತಿಯೂ ಶ್ರೀ ಜಗದ್ಗುರು ಪಂಚಾಚಾರ್ಯರೂ ದಯಾಘನರಾದ ಶಂಕರನೂ ಈ ಮಹೋದಯರಿಗೆ ಇತೋಪ್ಯತಿಶಯವಾದ ಅಭಿವೃದ್ಧಿಯನ್ನೀಯಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ, ನರಸಿಂಹರಾಜಪುರ.

ಶ್ರೀ ಗುರುಭ್ಯೋನಮಃ

ಚಿನವಾರಪ್ಪನ ಚೆಲ್ಲಾಟ.

ಸೊಲ್ಲಾಪುರದ ಆ. ಗಿ. ಚಿನವಾರ ಎಂಬೋರ್ವ ಗೃಹಸ್ಥನು "ಪಂಚಾಚಾರ್ಯಪ್ರಭೆಗೆ ಎಚ್ಚರಿಕೆ" ಎಂಬ ಹೆಸರಿನಿಂದ ಒಂದು ಚಿಕ್ಕಲೇಖನವನ್ನು ಬರೆದು ಲೋಕಮತಪತ್ರಿಕೆಯಲ್ಲಿ ಪ್ರಸಿದ್ಧಮಾಡಿದ್ದಾನೆ. ಅದರಲ್ಲಿ ಪ್ರಭೆಗೆ ಎಚ್ಚರಿಕೆ, ನಿನ್ನೀಚಿನ ಸಮಾಚಾರದಂತೆ ಸಮಾಚಾರವನ್ನು ತೆಗೆದುಕೊಳ್ಳಬಾರದೀತು? ಎಂದು ಬರೆದು ಔರಂಗಜೇಬನ ದವಲತ್ತು ತೋರಿಸಿ ಆಟಾಟ ಮಾಡಿರುತ್ತಾನೆ. ಚಿನವಾರಪ್ಪಾ—ಇಷ್ಟುದೂರ ಏಕೆ ಹೋಗಿರುವೆ? ಪಾಪ! ನೀನೇನು ಮಾಡುವಿ ನಿನ್ನ ಯೋಗ್ಯತೆಯಂತೆ ಬರೆದಿರುವಿ. ಇರಲಿ; ಈತರದ ಉನ್ಮಾಮತನದ ಬರವಣಿಗೆಯನ್ನು ಬರೆಯುವದು ಸರಿಯಲ್ಲ! ನಿನಗೆ ಸಮಾಜದಲ್ಲಿ ಐಕ್ಯವನ್ನುಂಟುಮಾಡಬೇಕೆಂಬ ಅಭಿಲಾಷೆಯಿದ್ದರೆ ನೀನೆಂದಿಗೂ ಹೀಗೆ ಬರೆಯುತ್ತಿದ್ದಿಲ್ಲ. ಸಮಾಜದಲ್ಲಿ ಗಲಭೆಯನ್ನೆಬ್ಬಿಸಬೇಕೆನ್ನುವದೇ ನಿನ್ನ ಉದ್ದೇಶವಿದ್ದಂತೆ ತೋರುತ್ತದೆ. ಹಿತಚಿಂತಕರಾಗಿ ಪಕ್ಷಾಂಧತೆಯ ಸ್ವಾರ್ಥದಮಬ್ಬು ತಲೆಗೇರಿರುವದೆಂದು ಬರೆದಿರುವೆ; ವಿಚಾರಮಾಡಿನೋಡಿದರೆ ಈ ಮಬ್ಬು ನಿನ್ನ ತಲೆಗೇರಿದಂತೆ ತೋರುತ್ತದೆ. ಅದ್ದರಿಂದಲೇ ಇಂಥ ಉನ್ಮಾಮತನದ ವಿಶೇಷಣಗಳನ್ನು ಉಪಯೋಗಿಸಿರುವಿ. ನಿನಗೆ ಸಮಾಜೈಕ್ಯದಲ್ಲಿ ನಿಜವಾದಕಳಕಳಿಯು ಇದ್ದುದಾದರೆ ಈತರದ ಬರವಣಿಗೆಯ ಮಾರ್ಗದಲ್ಲಿ ಪ್ರವೇಶಮಾಡಬೇಡ! ಸೌಮ್ಯದಿಂದ ವರ್ತಿಸು! ನೀನು ಜೋರುಮಾಡಿದರೆ ನಿನಗಿಂತಲೂ ಹತ್ತುಪಟ್ಟು ಜೋರುಮಾಡುವವರು ಇದ್ದಾರೆನ್ನುವದನ್ನು ಪೂರ್ಣ ಲಕ್ಷ್ಯದಲ್ಲಿಡು. ಈತರದ ಬರವಣಿಗೆಯಿಂದ ನಿನಗೆಬರುವ ಪ್ರಯೋಜನವಾದರೂ ಯಾವದು? ವ್ಯರ್ಥ ಕಂಠಶೋಷಣ! ಅದುದರಿಂದ ಇಂಥ ಗೊಂದಲಕ್ಕೆ ಪ್ರವೇಶಮಾಡದೆ ಶಾಂತವಾಗಿದ್ದು ಸಮಾಜಕಾರ್ಯದಲ್ಲಿ ತೊಡಗಿ ಧನ್ಯನಾಗು!

ಎಸ್. ಸಿದಪ್ಪ.

ಪಂಚಾಚಾರ್ಯಪ್ರಭಾ

೧೯೩೭ನೇ ಸೆಪ್ಟಂಬರ್ ತಾ|| ೧೯ ನೇ ಸೋಮವಾರ

ಗುರು.

ಗುರೋರಾಜ್ಞಾಂ ಸಮುಲ್ಲಂಘ್ಯೇತ ಸಿದ್ಧಿ ಶಾಪೋನುಪಾಮತಿಃ | ತದಾಜ್ಞಾಲಂಘನೇನಾಪಿ ಶಿವಾಜ್ಞಾಚ್ಛೇದಕೋಭವೇತ್ || ಯಾವನು ಗುರುವಿನ ಆಜ್ಞೆಯನ್ನು ಮೀರುವನೋ ಅವನು ಶಿವಾಜ್ಞೆಯನ್ನು ಮೀರುವನು ಎಂದು ವೀರಶೈವಸಿದ್ಧಾಂತದಲ್ಲಿ ಹೇಳಲ್ಪಟ್ಟಿರುವುದರಿಂದ ವೀರಶೈವಮತಾವಲಂಬಿಯಾದ ಪ್ರಾಣಿಯು ವೀರಶೈವ ಸಿದ್ಧಾಂತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಅಪ್ಪಣೆಗೆ ವ್ಯತಿರಿಕ್ತವಾಗಿ ನಡೆಯದೆ ಸಿದ್ಧಾಂತದಲ್ಲಿ ಹೇಳಿದ ನಿಯಮಗಳನ್ನಾಚರಿಸುತ್ತ ಗುರುವಿನ ಪ್ರೀತಿಯನ್ನು ಸಂಪಾದಿಸುವದ್ವಾರಾ ಭಗವಂತನಕೃಪೆಗೆ ಪಾತ್ರನಾಗಬೇಕಾಗಿದೆ. ಇಲ್ಲಿ ಗುರುವಿನ ಆಜ್ಞೆಗಳೆಂದರೆ ಶಿಷ್ಯರ ಅಜ್ಞಾನಾಂಧಕಾರವನ್ನು ತೊಲಗಿ ಜ್ಞಾನೋದಯಕ್ಕೆ ಸಾಧಕಗಳಾದ ಸಾಮಗ್ರಿಗಳೆಂದರ್ಥವು. ಅಂದರೆ ಗುರು, ಲಿಂಗ, ಚರ, ಭಸ್ಮ, ರುದ್ರಾಕ್ಷಿ, ಮಂತ್ರ ಪ್ರಸಾದ, ಪಾದೋದಕಗಳ ತತ್ತ್ವವಿಚಾರವು ಇವುಗಳೇ ಗುರುವಿನಿಂದ ಬಂದ ಸಾಮಗ್ರಿಗಳು. ಇವು ಯಾವನಲ್ಲಿರುವವೋ ಅವನೇ ವೀರಶೈವನು. ಈ ಸಾಮಗ್ರಿಗಳು ಎಲ್ಲಿರುವವೋ ಅವರಮೇಲೆ ಆಚಾರ್ಯರ ಅಧಿಕಾರವು ಇದ್ದೇ ಇರುವುದು. ಹಾಗಾದರೆ ಪ್ರತಿಯೊಂದು ಗ್ರಾಮದಲ್ಲಿರುವ ಲಿಂಗಾಂಗಿಗಳಿಗೆ ಮುಕ್ತಿಸಾಧಕವಾದ ಈ ಅಷ್ಟಾವರಣಗಳು ಆಯಾಯ ಗ್ರಾಮದಲ್ಲಿರುವ ಪಟ್ಟಚರಾಧಿಪತಿಗಳಿಂದಲೇ ಕೊಡಲ್ಪಡುತ್ತಿರುವುದು ರೂಢಿಯಲ್ಲಿರುವುದರಿಂದ ಆಯಾಯ ಗ್ರಾಮದ ಮಠಸ್ಥರುಗಳೇ ಅವರವರಿಗೆಲ್ಲ ಗುರುಗಳಾದರೇ ಹೊರತು ಮತಸ್ಥಾಪಕರಾದ ಆಚಾರ್ಯರ ಗುರುತ್ವವು ಎಲ್ಲಾ ಕಡೆಯಲ್ಲಿಯೂ ಹೇಗೆ ವ್ಯಾಪಿಸುವದೆಂದು ಆಕ್ಷೇಪವುಂಟಾಗುವದು. ಲೋಕದಲ್ಲಿ ಒಬ್ಬ ಮಹಾರಾಜನು ತನ್ನ ಪರಾಕ್ರಮದಿಂದ ರಾಜ್ಯವನ್ನು ಸ್ಥಾಪಿಸಿ ಆ ರಾಜ್ಯದ ಪ್ರಜೆಗಳೆಲ್ಲರೂ ಈತಿಬಾಧೆಗಳಿಲ್ಲದೆ ಸುಖವಾಗಿರುವಂತೆ ಪ್ರಜಾರಕ್ಷಣೆಗಾಗಿ ಅಲ್ಲಲ್ಲಿಯೇ ರಾಜಪ್ರತಿನಿಧಿಗಳಾದ ಶಾಸನಾಧಿಕಾರಿಗಳನ್ನು ನಿಯಮಿಸುತ್ತಾನೆ. ಅಧಿಕಾರಿಗಳೆಲ್ಲರೂ ಪ್ರಭುಗಳ ಮುದ್ರೆಯನ್ನು ಧರಿಸಿ ಪ್ರಜೆಗಳ ರಕ್ಷಣಶಿಕ್ಷಣಗಳನ್ನು ಮಾಡುತ್ತಾರೆ. ಇವುಗಳೆಲ್ಲವೂ ಪ್ರಭುವಿಗೆ ಸಂಬಂಧಪಟ್ಟವುಗಳೇ ಹೊರತು ಪ್ರಭುವಿನಕಡೆಯ ಅಧಿಕಾರಿಗಳಿಗೆ ಸಂಬಂಧಪಟ್ಟವುಗಳಲ್ಲವು. ಪ್ರಭುಮುದ್ರೆಯನ್ನು ಧರಿಸಿದ ಅಧಿಕಾರಿಗಳನ್ನು ಪ್ರಭುಗಳನ್ನಾಗಿಯೂ ಅಧಿಕಾರಿಗಳ ಶಾಸನಗಳನ್ನು ಸಾಕ್ಷಾತ್ ಪ್ರಭುಶಾಸನಗಳನ್ನಾಗಿಯೂ ತಿಳಿಯುತ್ತಿರುವುದೇ ಆಯಾಯ ಪ್ರಭುರಾಜ್ಯದಲ್ಲಿ ವಾಸವಾಗಿರುವ ಪ್ರಜೆಗಳಿಗೆ ಧರ್ಮವಾಗಿರುವುದಷ್ಟೆ? ಅದರಂತೆ ವೀರಶೈವ ಮತವೆಂಬ ರಾಜ್ಯವು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟು ಈ ಮತರಾಜ್ಯದಲ್ಲಿರುವ ಶಿಷ್ಯರುಗಳ ದಂಡನ ಖಂಡನಗಳಿಗಾಗಿ ಪ್ರಭುಸದೃಶರಾದ ಆಚಾರ್ಯರು ಪ್ರತಿಯೊಂದು ಗ್ರಾಮಗಳಲ್ಲಿಯೂ ಪ್ರತಿಯೊಂದು ಪಟ್ಟಣಗಳಲ್ಲಿಯೂ ನ್ಯಾಯಾಲಯಗಳೋಪಾದಿಯಲ್ಲಿ ಅನೇಕ ಮಠಗಳನ್ನು ನಿರ್ಮಿಸಿ ಒಬ್ಬೊಬ್ಬ ಪಟ್ಟಚರಾಧಿಪತಿಗಳನ್ನು ಸ್ಥಾಪಿಸಿ ಮತಾಚಾರ್ಯರು ತಮ್ಮ ತಮ್ಮ ಗುರುತ್ವಶಕ್ತಿಯ ಅಂಶಗಳನ್ನು ಅವರುಗಳಿಗೆ ವಹಿಸಿ ಆಯಾಯ ಭಾಗಗಳಲ್ಲಿರುವ ಶಿಷ್ಯವರ್ಗಕ್ಕೆ ಆಯಾಯ ಕಾಲದಲ್ಲಿ ಮಾಡಬೇಕಾದ ಪಾರಮಾರ್ಥಿಕಬೋಧೆಯನ್ನು ಮಾಡುವಂತೆ ಏರ್ಪಡಿಸಿರುತ್ತಾರೆ. ಈ ಗುರುವರ್ಗದ ಅಧಿಕಾರಿಗಳು ತಮ್ಮ ಮೂಲಗುರುಗಳ ಅಪ್ಪಣೆಯಂತೆ ಶಾಸ್ತ್ರಸಿದ್ಧಾಂತವನ್ನು ಅಭ್ಯಾಸಮಾಡಿ ಸದಾಚಾರಸಂಪನ್ನರಾಗಿ ಶಿಷ್ಯರಿಗೆ ಉಪದೇಶವನ್ನು ಮಾಡುತ್ತ ದಂಡನಖಂಡನಾದಿಗಳನ್ನು ವಹಿಸಿ ಶಿಷ್ಯರಿಂದ ಬರುಕಾಣಿಕೆಗಳನ್ನು ಸ್ವೀಕರಿಸುತ್ತ ನಿಯಮಿತವಾದ ಅಂಶವನ್ನು ಮೂಲಪೀಠಕ್ಕೆ ಒಪ್ಪಿಸುತ್ತಿರುವುದರಿಂದ ಸಾಕ್ಷಾತ್ ಮೂಲಗುರುವಿನ ಶಾಸನವನ್ನೇ ಪರಿಪಾಲಿಸಿದಂತಾಗುತ್ತದೆ. ಪ್ರಭುವು ಕಳುಹಿಸಿದ ಅಧಿಕಾರಿಯಿಂದ ನಡೆಸಿದ ಕಾರ್ಯಗಳೆಲ್ಲವೂ ಪ್ರಭುವಿನಿಂದಲೇ ನಡೆಸಲ್ಪಟ್ಟಂತೆ ಉಪಗುರುಗಳಿಂದ ನಡೆಸಲ್ಪಟ್ಟ ಲಿಂಗಧಾರಣಾದಿ ಕಾರ್ಯಗಳೆಲ್ಲವೂ ಮೂಲಗುರುಗಳಿಂದಲೇ ನಡೆಸಲ್ಪಟ್ಟಂತಾಯಿತು. ಆದುದರಿಂದ ಆಯಾಯ ಗ್ರಾಮದ ಗುರುಗಳೇ ಲಿಂಗಧಾರಣಾದಿಗಳನ್ನು ಮಾಡುವುದರಿಂದ ಪ್ರೇರಕಕರ್ತೃಗಳಾಗಿಯೂ ಮೂಲಾಚಾರ್ಯರೇ ಪ್ರೇರಕಕರ್ತೃಗಳಾಗಿಯೂ ಇರುವುದರಿಂದ [illegible] ಲಿಂಗಧಾರಣಾದಿ ಕರ್ಮಗಳೆಲ್ಲ ಮೂಲಾಚಾರ್ಯರಿಂದಲೇ ನಡೆಸಲ್ಪಟ್ಟಂತಾಗುವವು. [illegible] ಅಧಿಕಾರಿಗಳು ತಾವು ಮೂಲಗುರುವಿಲ್ಲದೆ [illegible] ಮಾಡುವುದಿಲ್ಲ. ಹಾಗೆ ಮಾಡಿದ ಶಾಸನಗಳೆಲ್ಲವೂ ಪ್ರಯೋಜನಕಾರಿಗಳಾಗುವುದಿಲ್ಲ. ಆದರೆ ಉಪಗುರುಗಳು ಶಿಷ್ಯರಿಗೆ [illegible] ವಸ್ತುಗಳನ್ನು ಮಾಡಿಸಿದರೂ ಮೂಲಗುರುಗಳು [illegible] ಪಂಚಕಲಶಗಳನ್ನು ಪ್ರತಿಷ್ಠಿಸಿ [illegible] ಅದರಲ್ಲಿ ಮೂಲಗುರುಗಳನ್ನು ಆವಾಹಿಸಿ ಗೋಪ್ಯಾದಿ [illegible] ಜಲದಿಂದ ಆರಾಧಿಸಿ [illegible] ಲಿಂಗಧಾರಣ ಮಂತ್ರೋಪದೇಶಗಳನ್ನು ಮಾಡುವುದರಿಂದ ಸಾಕ್ಷಾತ್ ಮೂಲಗುರುಗಳೇ ಲಿಂಗವನ್ನು ದಯಪಾಲಿಸಿದಂತಾಯಿತೇ ಹೊರತು ಸ್ವತಃ ಗುರುಗಳಿಂದ ಮಾಡಿದಂತಾಗಲಿಲ್ಲವು. ಮೂಲಗುರುಗಳ ಸಂಬಂಧವಿಲ್ಲದ್ದರೆ ಪಂಚಾಚಾರ್ಯ [illegible] ಲಿಂಗಧಾರಣಾದಿಗಳನ್ನು ಮಾಡಬೇಕಾಗಿತ್ತು. ವೀರಶೈವ ಪ್ರಪಂಚದಲ್ಲಿಯೇ ಹಾಗೆ ರೂಢಿಯೂ ಇಲ್ಲವು, ಶಾಸ್ತ್ರವೂ ಇಲ್ಲವು. ಆದುದರಿಂದ "ಯಸ್ಯ ದೇವೇ ಪರಾಭಕ್ತಿರ್ಯಥಾದೇವೇ ತಥಾಗುರೌ" ಎಂಬ ಯಾವ ಶಾಸ್ತ್ರದ ಸದ್ವಾಕ್ಯದಲ್ಲಿ ಹೇಳಿದ ಭಕ್ತಿಯು ಇರಬೇಕೆಂದು ಅದೇ ಭಕ್ತಿಯನ್ನು ಗುರುಗಳಲ್ಲಿಯೂ ಇಡಬೇಕೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿರುವಂತೆ ಭಕ್ತಿಯನ್ನಿಟ್ಟು [illegible] ತಪ್ಪದೆ ನಡೆಯುತ್ತಿರುವ ಪ್ರಜೆಗಳಿಗೆ ರಾಜಕಟಾಕ್ಷವುಂಟಾಗುವಂತೆ ಗುರುವಾಜ್ಞೆಯನ್ನೇ ಪರಿಪಾಲಿಸುವ ಭಕ್ತರಿಗೆ ಗುರುಕಟಾಕ್ಷವುಂಟಾಗುವದೆಂದು ಶಿವಾಗಮಗಳು ಸಾರುತ್ತಿರುವವು. ಈ ಪ್ರಕಾರವಾದ ನಿಷ್ಠೆಯಿಂದ ಆಚರಿಸಿ ಮುಕ್ತಿಭಾಗಿಗಳಾಗುವದೇ ಪ್ರತಿಯೊಬ್ಬರ ಕರ್ತವ್ಯವಾಗಿದೆ.

ವರ್ತಮಾನಸಂಗ್ರಹ.

ರಾಜಧಾನಿಯ ಮಹಾರಾಜಾಕಾಲೇಜಿನ ವಾರ್ಷಿಕೋತ್ಸವವು ಅಕ್ಟೋಬರ್ ತಾ. . ರಲ್ಲಿ ನೆರವೇರುವದೆಂದು ತಿಳಿದುಬರುತ್ತದೆ.

ಸಿಂಹಳದ್ವೀಪದಲ್ಲಿ ನಡೆಯುವ [illegible] ಉತ್ಸವಕ್ಕೆ ಸಂಸ್ಥಾನದವತಿಯಿಂದ ಮಹಮ್ಮದೀಯ [illegible] ಗಳು ಪ್ರಯಾಣಮಾಡಿದ್ದಾರೆ.

ಶ್ರೀ ಮಹಾಪ್ರಭುಗಳು ಇದೇ ತಿಂಗಳು ತಾ. 12ರಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. 21 ತೋಪುಗಳು ಹಾರಿಸಲ್ಪಟ್ಟವು.

ಶ್ರೀಮನ್ಮಹಾರಾಜಾಕಾಲೇಜಿನ ವಿದ್ಯಾರ್ಥಿಗಳು ನವರಾತ್ರ್ಯೋತ್ಸವಕಾಲದಲ್ಲಿ ಅನ್ನ [illegible] ನಾಟಕವಿಯ ಸ್ಮಾರಕೋತ್ಸವವನ್ನು ನಡೆಯಿಸುತ್ತಾರೆಂದು ಕೇಳುತ್ತೇವೆ.

ಕೋಲಾರದ ಉತ್ತರದಿಕ್ಕಿನ [illegible] ಸುತ್ತ ಸುತ್ತಿನಂಥದ ಮಲಸಮಾಸದೊಳಗೆ ಭಯಂಕರವಾದ [illegible] ಜನರು ಮರಣ ಹೊಂದಿದ್ದಾರೆ.

ಬಂಗಾಳದ ಜೈಲುಗಳಲ್ಲಿ 121೨ ಮುಸಲ್ಮಾನರೂ ೫೦16 ಹಿಂದೂ ಮತ್ತು ಕ್ರೈಸ್ತರೂ ಕೈದಿಗಳಾಗಿರುತ್ತಾರೆ. ಇವರಲ್ಲಿ ಹಿಂದುಮುಸಲ್ಮಾನರು ಸೇರಿ 42೦ ಹೆಂಗಸರು ಸಹ ಕೈದಿಗಳಾಗಿರುತ್ತಾರೆ.

ನೇಪಾಳ ಮಹಾರಾಜರವರು ತಮ್ಮ ರಾಜ್ಯದಲ್ಲಿ ಹಿಂದು ಮತದವರು ಮತ್ತೊಂದುಮತದವರನ್ನು ತೆಗೆದುಕೊಳ್ಳಕೂಡದೆಂದೂ ಪರಧರ್ಮದಬಗ್ಗೆ ಉಪದೇಶವನ್ನು ಮಾಡಕೂಡದೆಂದೂ ಅಪ್ಪಣೆಮಾಡಿದ್ದಾರೆ.

ಸೊಂಡೂರುಸಂಸ್ಥಾನದ ಅಧಿಕಾರದ ವಿಷಯ ಬರೋಡೆಯ ಘೋರಪಡೆಯವರ ಹೊರತು ಗಜೇ ಗಡ ಹಾಗೂ ದತ್ತವಾಡಸಂಸ್ಥಾನದ ಘೋ ಮನೆತನದವರೂ ಕೂಡ ಹಕ್ಕುದಾರರಿದ್ದಾರೆಂದು ಯುತ್ತದೆ.

ಜರ್ಮನಿಯಲ್ಲಿ ಒಬ್ಬ ವಿಮಾನಶಾಸ್ತ್ರಜ್ಞನು ನೂ ವಾದ ವಿಮಾನವನ್ನು ಮಾಡುವುದರಲ್ಲಿ ತೊಡಗಿ ಆ ವಿಮಾನವು ಭೂಮಿಯಿಂದ 50 ಮೈಲು ಮೇಲೆ ರುವುದಲ್ಲದೆ ಒಂದು ಘಂಟೆಗೆ 3600 ಮೈಲು ಹೋ ವುದೆಂದು ಅಭಿಪ್ರಾಯಪಟ್ಟಿರುತ್ತಾನೆ.

ಮುಂಬೈ ಇಲಾಖೆಯಲ್ಲಿ ಕಳೆದವರ್ಷ 1400 ಖಾನೆಗಳಿದ್ದವೆಂದೂ ಈ ವರ್ಷ 1522 ರಷ್ಟು ಹೆಚ್ಚಿ ಯೆಂದೂ ಎಲ್ಲಾ ಕಾರ್ಖಾನೆಗಳಲ್ಲಿಯೂ 382155 ಳಿಕಾರರು ಇರುತ್ತಾರೆಂದೂ ಇವರಲ್ಲಿ 81104 ಹೆಂ ರು 70[illegible] ಮಕ್ಕಳೂ ಇರುತ್ತಾರೆಂದೂ ಯುತ್ತದೆ.

[illegible] ತಿರುಮಕೂಡಲುನರಸೀಪುರದ ತಾಲೂ ಕಿಗೆ ಸೇರಿದ ಮೂಗೂರುಗ್ರಾಮದಲ್ಲಿ ಮೈಸೂರು ಸಿಕ್ಕ ವ್ಯವಸಾಯಗಾರರ ಮೊದಲನೆ ಸಮ್ಮೇಳ ಮೈಸೂರು ಬಿ|| ಮಿ|| ಡೆಪ್ಯುಟಿಕಮಿಷನರ್ ಸಾಹೇ ರವರ ಅಧ್ಯಕ್ಷತೆಯಲ್ಲಿ ಬಹಳ ಉತ್ಸುಕತೆಯಿಂದ ನೆರ ವೇರತಕ್ಕದ್ದಾಗಿದೆ.

ಬಿಹಾರಪ್ರಾಂತಕ್ಕೆ ಸೇರಿದ ಮಯೂರಭಂಜ ಸಂ ಸಂಸ್ಥಾನದಲ್ಲಿ ಭಾಮನಘಾಟದ ಹತ್ತಿರ ಇರು ಭೂಮಿಯು ನದಿಯಪ್ರವಾಹದಿಂದ ಕೊಚ್ಚಿ 11ನೇ ಶತಮಾನದ ತಾಮ್ರಶಾಸನಗಳೂ, 4ನೆಯ ಶತಮಾ ರೋಮನ್ ನಾಣ್ಯಗಳೂ ದೊರೆತಿರುವವಲ್ಲದೆ ಪುರಾ ಪಟ್ಟಣದ ಒಂದುಭಾಗವು ದೊರೆತಿದೆ.

[illegible] ಪಟ್ಟಣದಲ್ಲಿ [illegible] ಹೋಟಲಿನಲ್ಲಿ ಯಾ ಸೇವಕನು [illegible] ರಾಜನಯೋದ ನು ಹೇಳಿಕೊಂಡು ಒಂದು ಅಂಗಡಿಯಲ್ಲಿ 25000 ಬೆಲೆಯ ಆಭರಣಗಳನ್ನು ಅಪಹರಿಸಿ ಅಂಗಡಿ [illegible] ಹೋಟಲಿನ ದುಡ್ಡ [illegible] ದರೆ ಪರಾರಿಯಾಗಿದ್ದಾನೆಂದು ತಿಳಿದುಬರುತ್ತದೆ.

ಬರುವ ಅಕ್ಟೋಬರಿನಲ್ಲಿ ನೈರೋಬಿಯಲ್ಲಿ ನಡೆ ಬೇಕೆಂದಿರುವ ಈಸ್ಟ್ ಆಫ್ರಿಕದ ಇಂಡಿಯನ್ ನ್ಯಾ ಷನಲ್ ಕಾಂಗ್ರೆಸ್ಸಿನ ಅಧ್ಯಕ್ಷಪದವಿಯನ್ನು ವಹಿಸಬೇ ದೂ [illegible] ತಿಂಗಳು [illegible] ಈ ದೇಶದಲ್ಲಿಯೇ ರಬೇಕೆಂದೂ ಶ್ರೀಮತಿ ಸರೋಜಿನಿದೇವಿಯರನ್ನು [illegible] ಪ್ರಾರ್ಥಿಸಿಕೊಂಡಿರುವರೆಂದು ಕೇಳುತ್ತೇವೆ.

[illegible] ಲ್ಲಿ ಒಂದು ಗಿರಣಿಯಲ್ಲಿ ಕೆಲಸಮಾಡು ತ್ತಿದ್ದ ಹೆಂಗಸರನ್ನು ತೆಗೆದುಹಾಕಿದ್ದರಿಂದ ಆ ಹೆಂಗ [illegible] ತಾ|| ೧೮ ರಾತ್ರಿ ಗಿರಣಿಯ [illegible] ಅವನನ್ನು ಕಲ್ಲುಗಳಿಂದ ಹೊ ದರು. ಅವನು [illegible] ಆಸ್ಪತ್ರೆಯಲ್ಲಿ ಚಿಕಿತ್ಸೆಯ ನ್ನು ಹೊಂದುತ್ತಲಿದ್ದು ಗುಣವಾಗದೆ ಮರಣವನ್ನು ಹೊಂದಿದನು.

ರಾಜಧಾನಿಯಲ್ಲಿ ನಡೆಯುವ ದಸರಾಮಹೋತ್ಸ ಕಾಲದಲ್ಲಿ ಅಖಿಲಭಾರತ ವಸ್ತುಪ್ರದರ್ಶನವು ಏರ್ಪ ಡಿಸಲ್ಪಟ್ಟು ಇರುತ್ತದೆ. ಒಂದುತಿಂಗಳಿಂದಲೂ ದೇಶ ದೇಶಗಳಿಂದ ಚಿತ್ರವಿಚಿತ್ರಗಳಾದ ಸಾಮಾನುಗಳು ಬ ರುತ್ತಿವೆ. ಈ ಪ್ರದರ್ಶನವು ಕೆಲವುವರ್ಷಗಳಿಂ ನಿಲ್ಲಿಸಲ್ಪಟ್ಟಿದ್ದು ಈವರ್ಷ ಅತಿವೈಭವದಿಂದ ನೆರವೇರ ಕ್ಕದ್ದಾಗಿದೆ.

ಕೊಲ್ಲಾಪುರದಲ್ಲಿ ಶ್ರೀ ಗಣೇಶನ ಉತ್ಸವವು ನ ಡೆಯುವ ಸಮಯದಲ್ಲಿ ಹಿಂದುಗಳಿಗೂ ಮಹಮ್ಮದೀಯ ರಿಗೂ ಭಯಂಕರವಾದ ಕಲಹವುಂಟಾಗಿ 5-6 ಜ ಹಿಂದುಗಳೂ, [illegible] ಜನ ಮಹಮ್ಮದೀಯರೂ ಯಮ ನಿಗೆ [illegible] ಅನೇಕರು ಭಾರಿ ಹೊಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರು ರೆಂದು ಕೇಳುತ್ತೇವೆ.

ಹೈದರಾಬಾದ ಸಂಸ್ಥಾನಕ್ಕೆ ಸೇರಿದ ಘಾಟಕೇಸ [illegible] ಊರಲ್ಲಿ ಒಬ್ಬ ವ್ಯವಸಾಯಗಾರನು ಹೊ ಲ್ಲಿ ಜೋಳವನ್ನು ಬಿತ್ತಿದ್ದನು. ಜೋಳವು ಜನ್ಮಾ

...ಡೆಪಟ್ಟು ತೆನೆಗಳು ಚೆನ್ನಾಗಿ ಕಾಣಿಸಹತ್ತಿ ...ಾಲಕನು ಹೊಲಕ್ಕೆಹೋಗಿ ನೋಡುವಲ್ಲಿ ತೆ ...ನುತ್ತುಗಳೇ ಆಗಿದ್ದವಂತೆ! ಇದು ನಿಜವಾಗಿ ...ದಲ್ಲಿ ದೇವರು ಅಘಟಿತಘಟನ ಶಕ್ತಿಯುಳ್ಳವ ...ೇಳುವ ಶಾಸ್ತ್ರವಾಕ್ಯವು ಪ್ರತ್ಯಕ್ಷಾನುಭವಕ್ಕೆ ...ಬಾಗುವುದು.

...ವ 15ನೇ ತಾರೀಖಿನದಿವಸ ಬನಾರಸ್‌ಸಿಟಿಯ ...ವಸ್ಥನಮನೆಯಲ್ಲಿ ಕೆಲವು ಹುಡುಗರು ಕಣ್ಣು ...ತ ಆಟವನ್ನು ಆಡುತ್ತಿರುವಾಗ ಒಂದು ಹು... ಮನೆಯ ಒಂದುಮೂಲೆಯಲ್ಲಿದ್ದ ದೊಡ್ಡ ಪೆ...ಲ್ಲಿ ಅಡಗಿಕೊಂಡನು. ಬಹಳಹೊತ್ತಿನವರೆಗೆ ...ಬಾರದೆ ಹೋಗಲು ಆಗ ಮನೆಯವರು ಹುಡು...ಕಲು ಆ ಹುಡುಗನು ಪೆಟ್ಟಿಗೆಯಲ್ಲಿಯೇ ...ಡುವುದಕ್ಕೆ ಅವಕಾಶವಿಲ್ಲದೆ ಮೃತಪಟ್ಟಿದ್ದನಂತೆ. ...ಳುವ ಹುಡುಗರು ಇದರಿಂದ ಜಾಗ್ರತರಾಗಿರ

...ಗಪುರದಲ್ಲಿ ಹಿಂದುಗಳಿಗೂ ಮುಹಮ್ಮದೀಯರಿ... ಭಯಂಕರವಾದಯುದ್ಧವು ನಡೆಯಿತು. ಮುಹಮ್ಮ...ಂದಲೂ ಹಿಂದುಗಳಿಂದಲೂ ಪರಸ್ಪರವಾಗಿ ...ಮಾಡಲ್ಪಟ್ಟವು, ಮನೆಗಳು ಸುಡಲ್ಪಟ್ಟವು. ಗುಂ...ಿಂದ ಅಂದಾಜು 15 ಜನರು ಯಮಪುರಿಗೆ ಆತಿ...ದರು. ನೂರಾರುಜನರಿಗೆ ಅಪಾಯವುಂಟಾಗಿದೆ. ...ನದಿಂದ ಅಂಗಡಿಮುಂಗಟ್ಟುಗಳೂ, ಗಿರಣಿಗ...ತುಹೋಗಿವೆ. ಇಷ್ಟರಲ್ಲಿಯೇ ಸ್ಥಳಲಾಕೈಲುಗ...ನ್ಯವುಬಂದಿದ್ದರಿಂದ ಕಲಹವು ಶಾಂತವಾಗಿ...ದೆ.

...ಯಪುರಸಂಸ್ಥಾನದಲ್ಲಿ ಪೋಲೀಸರಿಗೂ ಪ್ರಜೆಗ... ಭಯಂಕರವಾದ ಕಲಹವುಂಟಾಗಿ ಪೋಲೀಸರ... ಪ್ರಜೆಗಳಮೇಲೆ ಗುಂಡುಹಾರಿಸಿ ಇಬ್ಬರನ್ನು ...ದರು. ಪ್ರಜೆಗಳಿಗೆ ಉಂಟಾದ ಈ ದುಃಖಸಮಾಚಾ... ಕೇಳಿ ರಾಣಿಯವರು ಪ್ರಜಾಶಾಂತಿಯಿಲ್ಲದೆ ...ದಕಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಉಪ...ತವನ್ನು ಆಚರಿಸಿದರು. ಅಷ್ಟರಲ್ಲಿಯೇ ರಾಣಿ...ರ ಪ್ರಜಾವಾತ್ಸಲ್ಯವನ್ನು ನೋಡಿ ಅಧಿಕಾರಿಗಳು ...ವಲ್ಲಿಯೇ ಕೆಲ ಪೋಲೀಸರನರಿಗೂ ಅಮಲ್ದಾರ...ಗೂ ಸಸ್ಪೆಂಡಮಾಡಿ ದಂಗೆಯಕಾರಣವನ್ನು ...ಶೋಧಿಸುವುದಕ್ಕಾಗಿ ಒಂದು ಕಮಿಟಿಯನ್ನು ...ಮಿಸುವಮಾಡಿದ್ದಾರೆ.

...ರ್‌ಪುರದಲ್ಲಿ ಆರ್ಯಸಮಾಜದ ಧರ್ಮಭಿಕ್ಷು ...ಪಂಡಿತನಿಗೂ ಮುಹಮ್ಮದೀಯಮತದ ಮುಬರಕ್ ...ಮಾದಾಬಾ ಎಂಬ ಪಂಡಿತನಿಗೂ ವೇದ ಮತ್ತು ...ಗಳ ವಿಷಯದಲ್ಲಿ ಶಾಸ್ತ್ರಾರ್ಥವು ನಡೆದಿದೆ. ...ಸಮಾಜದ ಪಂಡಿತನು ಕುರಾನು ದೇವವಾಣಿ...ೆಂದೂ, ಮುಹಮ್ಮದೀಯ ಪಂಡಿತನು ವೇದವು ...ವಾಣಿಯಲ್ಲವೆಂದೂ ಪರಸ್ಪರವಾಗಿ ವಾದಿಸುತ್ತಿ...ೆ. ಇವರೀರ್ವರಲ್ಲಿ ಯಾರು ಅಪಜಯವನ್ನು ...ಹುತ್ತಾರೆಯೋ ಅವರು ಜಯವನ್ನು ಹೊಂದಿದವರ...ನ್ನು ಸ್ವೀಕಾರಮಾಡಬೇಕೆಂದು ಪ್ರತಿಜ್ಞೆ ಮಾಡಿ...ೆ. ಜಯಲಕ್ಷ್ಮಿಯು ಯಾರಕೊರಳಲ್ಲಿ ಮಾಲಿ...ನ್ನು ಹಾಕುವಳೋ ಎಂದು ಬಹುಜನರು ನಿರೀ...ಕ್ಷಿಸುತ್ತಿದ್ದಾರೆ.

ಸ್ವೀಕಾರ.

...ಮತಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜ...ಪಡಿಸರು ವ||ರಾ|| ಹೊಮ್ಮರಡಿ ಸಂಗಪ್ಪನವ...ರಾ ಈ ಪತ್ರಿಕೆಯ ಪೋಷಣಕ್ಕಾಗಿ ೨ ರೂಪಾ...ಗಳನ್ನು ಕಳುಹಿಸಿದ್ದಾರೆ.

...೨ ವಿ|| ಹೊಸಕೋಟೆಯ ಮ||ರಾ|| ಕೆ. ವಜ್ರ...ನ್ನ ಈ ಪತ್ರಿಕೆಯಪೋಷಣಕ್ಕಾಗಿ ವೇ|| ಶ್ರೀಶೈ...ಶಾಸ್ತ್ರಿಗಳವರ ಪ್ರೋತ್ಸಾಹದಿಂದ ೨ ರೂಪಾ...ಗಳನ್ನು ಕಳುಹಿಸಿರುತ್ತಾರೆ.

...ಮತಿ ಗ್ರಾಮನಿವಾಸಿಗಳಾದ ಮ||ರಾ|| ಹೊಸ...ಶಿವಲಿಂಗಪ್ಪನವರೂ ಹಾಗೂ ಮ||ರಾ|| ಸೋಗಿ...ವೀರಪ್ಪನವರೂ ಶ್ರೀ ಬನಾಯಕಮೂರ್ತಿಯನ್ನು ಕಳುಹಿಸುವಕಾಲದಲ್ಲಿ ೧ ರೂ. ೧ ಆಣೆಯಂತೆ ತೆಗೆದು ಒಟ್ಟಿಗೆ ೨ ರೂ. ೨ ಆಣೆಗಳನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವರ್ಣವಿಚಾರವು

ಇದೇ ತಿಂಗಳ 17 ನೆಯ ತಾರೀಖಿನ ಸ್ವಾರ್ಥಪತ್ರಿಕೆಯಲ್ಲಿ ಬಿ. ಚನ್ನವೀರಪ್ಪ ಎಂಬವರು ವೀರಶೈವರಲ್ಲಿ ವರ್ಣಾಶ್ರಮಗಳುಂಟೇ? ಹಾಗಿದ್ದರೆ ಯಾರುಯಾರು ಯಾವಯಾವ ವರ್ಣಗಳಿಗೆ ಸೇರಿದವರೆನ್ನುವದನ್ನು ಪ್ರಕಾಶಪಡಿಸಬೇಕಾಗಿ ಪಂಚಾಚಾರ್ಯಪ್ರಭಾ ಪತ್ರಿಕೆಯ ಸಂಪಾದಕರನ್ನು ಕೇಳಿಕೊಂಡಿದ್ದಾರೆ. ಈ ವಿಷಯವನ್ನು ನಾನೇ ಪ್ರಕಾಶಪಡಿಸಬೇಕೆಂಬ ಕುತೂಹಲದಿಂದ ಈ ಲೇಖವನ್ನು ಬರೆದಿರುತ್ತೇನೆ. ಚನ್ನವೀರಪ್ಪನವರು ಅವಗಾಹನಕ್ಕೆ ತಂದುಕೊಳ್ಳಬೇಕು. ವೀರಶೈವಮತದಲ್ಲಿ ಚತುರ್ವರ್ಣಗಳುಂಟೆಂದು ಶಿವಾಗಮಗಳಲ್ಲಿಯೂ, ಪ್ರಾಚೀನ ಮತಗ್ರಂಥಗಳಲ್ಲಿಯೂ ಸಹಸ್ರಾರು ಪ್ರಮಾಣಗಳು ದೊರೆಯುತ್ತವೆ. ಇವುಗಳನ್ನು ಇವರು ಪೂರ್ಣ ಪರಾಮರ್ಶಿಸಬೇಕು. ಪಾರಮೇಶ್ವರಾಗಮದ 17ನೆಯ ಪಟಲವನ್ನು ನೋಡಿರಿ. ಅದರಲ್ಲಿ ಈ ವರ್ಣಾಶ್ರಮಗಳ ವಿಚಾರವು ಉತ್ತಮರೀತಿಯಿಂದ ಹೇಳಲ್ಪಟ್ಟಿದೆ. ಹಾಗೂ ವಿರಕ್ತಾಗ್ರೇಸರರಾದ ಚನ್ನವೃಷಭಸ್ವಾಮಿಗಳಿಂದ ಬರೆಯಲ್ಪಟ್ಟ ವೀರಶೈವೋತ್ಕರ್ಷಪ್ರದೀಪಿಕಾ ಎಂಬ ಗ್ರಂಥವನ್ನು ನೋಡಿರಿ. ಅದರಲ್ಲಿಯೂ ಕೂಡ ಈ ವಿಷಯವು ಚನ್ನಾಗಿವಿವರಿಸಲ್ಪಟ್ಟಿದೆ. ಈ ಗ್ರಂಥಗಳನ್ನು ಶ್ರೀ|| ವಾರದಮಲ್ಲಪ್ಪನವರು ಮುದ್ರಿಸಿದ್ದಾರೆ. ಹಾಗೂ ವೀರಶೈವಾಚಾರಕೌಸ್ತುಭ ಎಂಬ ಗ್ರಂಥದಲ್ಲಿ ಇಂಥ ಇಂಥ ವರ್ಣದವರು ಇಂಥ ಇಂಥ ಲಿಂಗಗಳನ್ನೇ ಧಾರಣಮಾಡಿಕೊಳ್ಳಬೇಕೆಂದು ಪ್ರತಿಪಾದಿಸಲ್ಪಟ್ಟಿದೆ. ಸಿದ್ಧಾಂತಶಿಖಾಮಣಿಯಲ್ಲಿಯೂ ಕೂಡ ಬ್ರಹ್ಮನಿರ್ಮಿತವರ್ಣಾಶ್ರಮಗಳಂತೆ ಶಿವನಿರ್ಮಿತವರ್ಣಾಶ್ರಮಗಳೂ ಸಹ ಇರುವವೆಂದು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಇದನ್ನು ನೋಡಿಕೊಳ್ಳಬೇಕು. ಸ್ಕಾಂದಪುರಾಣಾಂತರ್ಗತ ಶಂಕರಸಂಹಿತೆಯನ್ನು ನೋಡಿರಿ. ಅಲ್ಲದೆ ವೀರಶೈವಮತದಲ್ಲಿ ವರ್ಣಾಶ್ರಮಗಳುಂಟೆಂದು ಪರಮತೀಯರೊಡನೆ ಹೋರಾಡಿ ಅದನ್ನು ನೆಲೆಗೊಳಿಸಿ ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿ ಕೀರ್ತಿಕಾಯರಾದ ವೈ|| ವೀರಸಂಗಪ್ಪನವರು ಪ್ರಿಂಟ್‌ಮಾಡಿಸಿದ ಕರಿಸ್ವಾಂಪೆಂಟಿನ ಬುಕ್ಕುಗಳನ್ನು ಸಂಪೂರ್ಣವಾಗಿ ಓದಿನೋಡಿರಿ. ಇಲ್ಲವಾದರೆ ಇವರ ಮಕ್ಕಳೂ ಸ್ವಾರ್ಥಪತ್ರಿಕೆಯ ಸಂಪಾದಕರೂ ಆದ ಮ|| ವಿರೂಪಾಕ್ಷಪ್ಪನವರನ್ನು ವಿಚಾರಿಸಿರಿ. ಇವರೂ ಕೂಡ ತಮ್ಮ ತಂದೆಯವರಂತೆ ಅಸಾಧಾರಣ ವರ್ಣಾಶ್ರಮಾಭಿಮಾನಿಗಳೂ ಘನವಾದವಿದ್ವಾಂಸರೂ ಆಗಿದ್ದಾರೆ. ಹಾಗೂ ಲೋಕವಿಖ್ಯಾತರಾದ ಆಸ್ಥಾನ ಮಹಾವಿದ್ವಾನ್ ಪಂ|| ಪಿ. ಆರ್. ಕರಿಬಸವಶಾಸ್ತ್ರಿಗಳವರು ಈ ವರ್ಣಾಶ್ರಮವಿಚಾರದಲ್ಲಿ ಮುದುಕುದೊರೆ ಸಭೆಯಲ್ಲಿ ಅನೇಕಾನೇಕ ಭಾಷಣಗಳನ್ನು ಮಾಡಿದ್ದಾರೆ. ಆ ಸಭೆಯ ರಿಪೋರ್ಟುಗಳನ್ನು ನೋಡಿರಿ. ಬರೆಯುತ್ತಾಹೋದರೆ ಬೆಳೆಯುವದು. ಇಷ್ಟಕ್ಕೆ ವಿರಮಿಸುತ್ತೇನೆ. ನೀವು ನಾನು ಯಾವವರ್ಣಕ್ಕೆ ಸೇರಿದವನೆಂದು ಕೇಳಿರುತ್ತೀರಿ. ನಿಮ್ಮ ವರ್ಣವೇ ನಿಮಗೆ ಗೊತ್ತಿಲ್ಲದಮೇಲೆ ನಿಮ್ಮ ವರ್ಣವನ್ನು ಅನ್ಯರು ಹೇಗೆ ಹೇಳುವರೆನ್ನುವದನ್ನು ನೀವೇ ಆಲೋಚಿಸಬೇಕು. ವೀರಶೈವರಲ್ಲಿ ಯಾರುಯಾರು ಯಾವಯಾವ ವರ್ಣಗಳಿಗೆ ಸಂಬಂಧಪಟ್ಟಿರುವರೆನ್ನುವ ವಿಷಯವು ಆ ಆ ವಂಗಡದವರಿಗೇ ಗೊತ್ತು! ಈ ವಿಷಯದಲ್ಲಿ ಅವರವರ ಆತ್ಮದೇವತೆಯೇ ಬಲವಾದ ಸಾಕ್ಷಿಯಾಗಿದೆ. ಮ|| ಚನ್ನವೀರಪ್ಪನವರು ಮೇಲೆಹೇಳಿದ ಗ್ರಂಥಗಳನ್ನು ಆಮೂಲಾಗ್ರವಾಗಿ ನೋಡಿ ತಮ್ಮ ಸಂಶಯವನ್ನು ದೂರಮಾಡಿಕೊಳ್ಳುವರೆಂದು ಪೂರ್ಣ ನಂಬಿದ್ದೇನೆ.

ವೀರಶೈವಬ್ರಾಹ್ಮಣ ವಂಶೀಯಃ
ಚಂದ್ರಶೇಖರಶರ್ಮಾ.

ಶ್ರೀ ಗುರುಭ್ಯೋನಮಃ

೯ ಪ್ರಶ್ನೆಗಳ ಉತ್ತರವು.

ಶಿರಾಳಕೊಪ್ಪದ ಸಂಗಪ್ಪ ಸೊರಬಾಗಿ ಎಂಬ ಲೇಖಕನು ಈ ವಾರದ ಸ್ವಾರ್ಥಪತ್ರಿಕೆಯಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳಿಗೆ 9 ಪ್ರಶ್ನೆಗಳನ್ನು ಮಾಡಿದ್ದಾನೆ. ಇದನ್ನು ವಿಚಾರಮಾಡಿದ್ದಾದರೆ ಈ ಲೇಖಕನ ಅಭಿಪ್ರಾಯವು ಸಮಾಜದಲ್ಲಿ ಗೊಂದಲವನ್ನೆಬ್ಬಿಸಬೇಕೆನ್ನುವದೇ ಪೂರ್ಣವಾಗಿರುವಂತೆ ತೋರುತ್ತದೆ. ರಂಭಾಪುರೀ ಜಗದ್ಗುರುಗಳಿಗೆ ರಜಿಸ್ಟರಪತ್ರಮೂಲಕ ಈ ಪ್ರಶ್ನೆಗಳನ್ನು ಕೇಳಿದನಂತೆ! ಇಲ್ಲಿಯವರೆಗೂ ಅವರಿಂದ ಉತ್ತರವು ದೊರೆಯದಕಾರಣ ಪ್ರಸಿದ್ಧಮಾಡಿದನಂತೆ! ಪೀಠಾಧಿಪತಿಗಳು ಇಂಥವರ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತ ಕುಳಿತರೆ ಸರ್ವಕಸ್ಮೈ ಸ್ವಾಹಾಕಾರವೆ! ಆದ್ದರಿಂದ ಈ ಪ್ರಶ್ನಕರ್ತನಿಗೆ ನಾನೇ ಸರಿಯಾದ ಉತ್ತರಗಳನ್ನು ಕೊಡುತ್ತೇನೆ.

1-3-4 ನೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು "ಸನ್ಯಾಸಾಶ್ರಮವಿಮರ್ಶ ತತ್ವಸ್ಥಿರೀಕರಣ" ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿವೆ; ನೋಡಿಕೊಳ್ಳತಕ್ಕದ್ದು.

2ನೆಯ ಪ್ರಶ್ನೆಕ್ಕೆ ಉತ್ತರ. ರಂಭಾಪುರೀ ಜಗದ್ಗುರು ಪೀಠದಲ್ಲಿ ವಿರಕ್ತರು ಬಹುಕಾಲದಿಂದ ಪೂಜಕರಾಗಿದ್ದದು ಆ ಪ್ರಾಂತದಲ್ಲೆಲ್ಲ ಪ್ರಸಿದ್ಧವದೆ. ಇದು ಶಾಸ್ತ್ರಸಿದ್ಧವಿಷಯವಾಗಿದೆ. ವಿರಕ್ತರಲ್ಲಿ ಮಹಾತಪಸ್ವಿಗಳಾದ ಅನಾದಿ ತೋಂಟದ ಸಿದ್ಧಲಿಂಗೇಶ್ವರರು ಮರಿತೋಂಟದಾರ್ಯರು ಎರಡನೆಯ ಮುರಿಗಿಸ್ವಾಮಿಗಳೇ ಮೊದಲಾದವರು ಬಹುಭಕ್ತಿಯಿಂದ ಪೂರ್ವಾಚಾರ್ಯರನ್ನು ತಮ್ಮ ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ. ಈ ಮಹನೀಯರ ಮಾರ್ಗವನ್ನೇ ಅನುಸರಿಸಿ ಅನೇಕಜನ ವಿರಕ್ತರು ಪೀಠದಲ್ಲಿ ಪೂಜಕರಾಗಿದ್ದುದು ನಿರ್ವಿವಾದವು!

5 ನೆಯ ಪ್ರಶ್ನೆಕ್ಕೆ ಉತ್ತರ. ವೀರಶೈವರಲ್ಲಿ ಚತುರ್ವರ್ಣಗಳುಂಟು. ಈ ವಿಷಯವು ಪಾರಮೇಶ್ವರಾಗಮ ಸಿದ್ಧಾಂತಶಿಖಾಮಣಿ, ವೀರಶೈವಾಚಾರಕೌಸ್ತುಭ, ವೀರಶೈವ ಸದಾಚಾರಸಂಗ್ರಹ, ವೀರಶೈವೋತ್ಕರ್ಷಪ್ರದೀಪಿಕೆ, ಲಿಂಗಧಾರಣಚಂದ್ರಿಕಾ, ವೀರಶೈವ ಧರ್ಮಶಿರೋಮಣಿ, ಶ್ರೀಕರಭಾಷ್ಯಾದಿ ಗ್ರಂಥಗಳಲ್ಲಿ ಚನ್ನಾಗಿ ವಿವರಿಸಲ್ಪಟ್ಟಿದೆ; ನೋಡಿಕೊಳ್ಳಬೇಕು.

6 ನೆಯ ಪ್ರಶ್ನೆಕ್ಕೆ ಉತ್ತರ. ಪೀಠಗಳ ಅಧಿಕಾರಸ್ಥಾನದಿಂದ ವಿರಕ್ತರವಿಷಯದಲ್ಲಿ ಹೊರಟಿರುವ ಹುಕುಮು ಶಾಸ್ತ್ರೀಯವಾಗಿದ್ದು ಮಾನ್ಯವಾಗಿದೆ.

7 ನೆಯ ಪ್ರಶ್ನೆಕ್ಕೆ ಉತ್ತರ. ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಮಾಹೇಶ್ವರ ದೀಕ್ಷಾವಿಧಿ ದುರ್ವಾದ ದೂರೀಕರಣ (ಸಂಸ್ಕೃತ) ಸನ್ಯಾಸಾಶ್ರಮವಿಮರ್ಶ (ಸಂಸ್ಕೃತ) ಈ ಗ್ರಂಥಗಳನ್ನು ರಚಿಸಿದ್ದಾರೆ. ಈ ಗ್ರಂಥಗಳು ಶಾಸ್ತ್ರೀಯಗಳಾಗಿದ್ದು ಪರಮಮಾನ್ಯಗಳಾಗಿವೆ. ಈ ಪ್ರಶ್ನದಲ್ಲಿ ಪ್ರಶ್ನಕರ್ತನು ಪಂಡಿತರಿಗೆ ಏಕವಚನ ಪ್ರಯೋಗಮಾಡಿರುವದು ಈತನ ಔದ್ಧತ್ಯವನ್ನು ತೋರ್ಪಡಿಸುತ್ತದೆ.

8 ನೆಯ ಪ್ರಶ್ನೆಕ್ಕೆ ಉತ್ತರ. ಮತಸ್ಥಾಪನಾಚಾರ್ಯರು ಭಕ್ತನಾದ ಬಸವನ ಜಯಂತಿಯನ್ನು ಮಾಡಬೇಕೆಂದು ನುಡಿದಿರುವುದು ಶಾಸ್ತ್ರಾನಭಿಜ್ಞತನದ ಮಾತಾಗಿದೆ.

9 ನೆಯ ಪ್ರಶ್ನೆಕ್ಕೆ ಉತ್ತರ. ಜಗದ್ಗುರುಗಳಿಂದ ಸ್ಥಾಪಿಸಲ್ಪಡುವ ಕಾಲೇಜಿನಲ್ಲಿ ಭಕ್ತಮಾಹೇಶ್ವರರಿಬ್ಬರಿಗೂ ವಿದ್ಯಾಭ್ಯಾಸ ಭೋಜನಾದಿಗಳ ವ್ಯವಸ್ಥೆಯು ಸರಿಯಾಗಿ ಮಾಡಲ್ಪಡುವದು.

ಪ್ರಶ್ನಕರ್ತನೇ, ಈ ತರದ ಪ್ರಶ್ನೆಗಳಿಂದ ನಿನಗಾಗಲಿ ಸಮಾಜಕ್ಕಾಗಲಿ ಯಾವ ಪ್ರಯೋಜನವೂ ಇಲ್ಲ. ಸುಮ್ಮನೆ ಓದುವವರಿಗೆ ಮಾತ್ರ ವಿನೋದವೇ ಪ್ರಯೋಜನವು! ಇದನ್ನು ತಿಳಿದು ಸುಮ್ಮನಿರುವದು ಲೇಸು! ಪುನಃ ಸಮಾಜದಲ್ಲಿ ಕಲಹಾಗ್ನಿಯನ್ನು ಪ್ರಜ್ವಲಗೊಳಿಸಬೇಕೆಂಬ ಇಚ್ಛೆಯಿದ್ದರೆ ನಿನ್ನ ಮನಸ್ಸಿಗೆಬಂದಂತೆ ವರ್ತಿಸುವುದು.

S. V. Kubasad.

ಪತ್ರಪ್ರೇಷಕರಿಗೆ

ಬಾತ್ಮೀದಾರರು ಆಕ್ಷೇಪಾರ್ಹವಾದ [illegible] ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ—

ವೀರಶೈವ ಮಹಾಸಭೆ.

ವೀರಶೈವ ಮಹಾಸಭೆಯೆಂಬ ೧೦ ನೇ ವರ್ಷದ ಬಾಲಕನಿಗೆ ಇಂಡಿಯಾದೇಶದಲ್ಲಿ ಎಲ್ಲಿಯೂ ಸ್ಥಳದೊರೆಯದೆ ಬೆಂಗಳೂರಲ್ಲಿ ವೃದ್ಧಿಗೊಳ್ಳುವದಕ್ಕೆ ಸ್ಥಳ ದೊರಕಿರುವದು ಸಂತೋಷಜನಕವಾಗಿದೆ. ಮಹಾಸಭೆಯ ಕಾರ್ಯಕ್ರಮಗಳನ್ನೆಲ್ಲಾ ಗುಪ್ತರೀತಿಯಾಗಿ ಕೆಲವು ದೊಡ್ಡ ಮನುಷ್ಯರು ನಡಿಸುತ್ತಿರುವದಾಗಿ ತಿಳಿಯಬರುತ್ತೆ. ದೊಡ್ಡವರು ಚಿಕ್ಕವರು ಎಂಬ ಭಿನ್ನಭೇದವನ್ನು ಮಾಡದೆ ಸಾರ್ವಜನಿಕವಾಗಿ ಎಲ್ಲರೂ ಮೀಟಿಂಗ್ ಸೇರಿ ನಡಿಸುವದು ಒಳ್ಳೇದಾಗಿ ಕಾಣಿಸುತ್ತೆ. ಮುಂದೆ ನಡಿಸಬೇಕೆಂದಿರುವ ಸಾರ್ವಜನಿಕ ಮೀಟಿಂಗಿನಲ್ಲಿ ಯಾವ್ಯಾವ ರೀತಿಯಾಗಿ ಕಾರ್ಯಕ್ರಮ ನಡಿಸಬೇಕೆಂಬುದನ್ನು ಮೊದಲೇ ಕೆಲವರು ಯೋಚಿಸಿ ಈ ರೀತಿ ಮಾಡುತ್ತಿರಬಹುದು. ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರನ್ನು ಸ್ವಾಗತಕಮಿಟಿ ಪ್ರೆಸಿಡೆಂಟರಾಗುವದಕ್ಕೆ ಕೇಳುವದುಮಾತ್ರ ಹೋಗಿ ಒಪ್ಪಿಸಿರುವರಂತೆ. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಇಂಡಿಯಾದೇಶದ ವೀರಶೈವರಲ್ಲಿಯೂ, ರಾಜಾಧಿಕಾರಿಗಳಲ್ಲಿಯೂ ವಿಶೇಷಗೌರವವನ್ನು ಸಂಪಾದಿಸಿಕೊಂಡಿರುವದರಿಂದಲೂ ಕೆಲವು ವರ್ಷಗಳಿಂದಲೂ ಮಹಾಸಭೆ ನಿಂತುಹೋಗಿರುವದಕ್ಕೆ ಕಾರಣಭೂತವಾಗಿರುವ ಗುರುವರ್ಗ, ವಿರಕ್ತರ ದ್ವೇಷಾಗ್ನಿ ಜ್ವಾಲೆಯಲ್ಲಿ ಶಾಂತರೀತಿಯಿಂದ ಕಾರ್ಯನಿರ್ವಾಹಮಾಡುವದಕ್ಕೆ ಒಳ್ಳೇ ಸಮರ್ಥರಾಗಿರುವದರಿಂದಲೂ ಇವರನ್ನು ಮಹಾಸಭೆಗೆ ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸಿಕೊಳ್ಳುವದರಿಂದ ಮಹಾಸಭೆಯ ಕಾರ್ಯವು ಸಾಂಗವಾಗಿ ನಡೆಯುವುದು. 1927 ನೇ ಡಿಸೆಂಬರ್ 2[illegible] ರಿಂದ [illegible] ರವರೆಗೆ ಮದ್ರಾಸಿನಲ್ಲಿ ನ್ಯಾಷನಲ್ ಕಾಂಗ್ರೆಸ್ ನಡಿಯುವದರಿಂದ ಮಹಾಸಭೆಗೆ ಅನೇಕರು ಬರಲು ಅವಕಾಶವಿಲ್ಲದ ಪ್ರಯುಕ್ತ 1928 ನೇ ಏಪ್ರಿಲ್ ಆಖೈರು ಅಥವಾ ಮೇ ತಿಂಗಳ ಆದಿಯಲ್ಲಿ ಮಹಾಸಭೆಯನ್ನು ನಡಿಸಿದರೆ ಸರ್ವರಿಗೂ ಅನುಕೂಲವಾಗಬಹುದು.

ಬೆಂಗಳೂರಲ್ಲಿರುವ ವೀರಶೈವ ಮಹಾಜನರಲ್ಲಿ ಮ|| ಜಿ. ಪರಮಶಿವಯ್ಯನವರನ್ನು ಸ್ವಾಗತಕಮಿಟಿಗೆ ಅಧ್ಯಕ್ಷರನ್ನಾಗಿಯೂ, ಮ|| ಎಂ. ನಾಗಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ, ಮ|| ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರನ್ನೂ ಗೊಲ್ಲಹಳ್ಳಿ ರುದ್ರಪ್ಪನವರನ್ನೂ ಸೆಕ್ರೆಟರಿಗಳನ್ನಾಗಿಯೂ, ಮ|| ವೈ. ಚಿಕ್ಕವೀರಪ್ಪನವರನ್ನು ಕೋಶಾಧ್ಯಕ್ಷರನ್ನಾಗಿಯೂ ಮ|| ಜಿ. ಚನ್ನಪ್ಪನವರು, ಮ|| ವೈ. ಮಾದಪ್ಪನವರು, ಮ|| ಜಿ. ಸಿದ್ದವೀರಪ್ಪನವರು ಮುಂತಾದವರನ್ನು ಮೆಂಬರುಗಳನ್ನಾಗಿಯೂ ಆರಿಸಿಕೊಂಡು ಕಾರ್ಯಕ್ರಮ ನಡಿಸಿದರೆ ಸುಲಭವಾಗಿ ನಡೆಯಬಹುದು. ಸಮಾಜ ಹಿತಚಿಂತಕ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ನ್ಯಾಮತಿ.

ಈ ಗ್ರಾಮದ ಪಂಚಾಚಾರ್ಯ ಭಜನಾಸಂಘದವರು ಇಲ್ಲಿ ನಡೆದ ಶ್ರೀಮನ್ಮಹಾರಾಜರಾಜ ಶ್ರೀಕೃಷ್ಣ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಜಿ. ಬಿ. ಇ. ಯವರ ರಜತಮಹೋತ್ಸವದ ಕಾಲದಲ್ಲಿಯೂ, ಮತ್ತು ಇಲ್ಲಿಯ ಮಿಡ್ಲ್ ಸ್ಕೂಲಿಗೆ ವಿನಾಯಕನನ್ನು ತರುವ ಕಾಲದಲ್ಲಿಯೂ, ಮತ್ತು ಕಳುಹಿಸುವ ಕಾಲದಲ್ಲಿಯೂ, ಜಗದ್ಗುರುಗಳ ಭಜನಾಪ್ರಮೋದದಿಂದಲೂ ವಿಧವಿಧವಾದ ಪತಾಕುಗಳಿಂದಲೂ ಯಾವತ್ತೂ ಜನಗಳಿಗಾನಂದವುಂಟಾಗುವಂತೆ ಜಗದಾಚಾರ್ಯರ ನಾಮಸ್ಮರಣೆಯನ್ನು ಅತ್ಯಂತ ಅನುರಾಗದಿಂದ ತೋರಿಸಿದರಲ್ಲದೆ ತಮ್ಮ ಸಂಘಕ್ಕೆ ತಂದಿದ್ದ ವಿನಾಯಕನ ಸನ್ನಿಧಿಯಲ್ಲಿ ಪ್ರತಿನಿತ್ಯವೂ ಭಜನೆಯನ್ನು ಮಾಡಿ ಕಳುಹಿಸುವ ಕಾಲದಲ್ಲಿ ಮುಸಿ ಮದ್ದು ಮುಂತಾದ ದುಂದುಕಾರ್ಯಕ್ಕೆ ಪ್ರಯತ್ನಮಾಡದೆ ಕೇವಲ ಸದ್ವಿನಿಯೋಗಂಗಳಿಗೆ ತಮ್ಮ ತನುಮನಧನಂಗಳನ್ನು ಅರ್ಪಿಸಿರುತ್ತಾರೆ. ಈ ಮಂಗಲಕಾರ್ಯದ ಸಂತೋಷಾರ್ಥವಾಗಿ [illegible] ಭಜನಾಸಂಘದವರು ಪಂಚಾಚಾರ್ಯಪ್ರಭಾ ಪತ್ರಿಕೆಯ ಪ್ರೋತ್ಸಾಹಕ್ಕಾಗಿ ಎರಡು ರೂಪಾಯಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಇದೇ ಅಲ್ಲವೇ? ಗುರುಭಕ್ತಿ! ರಾಜಭಕ್ತಿ!! ದೈವಭಕ್ತಿಯು!!! ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವಂಚಕತನಕ್ಕೆ ರೇಣುಕನು ಒಪ್ಪುವನೇ?

ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಶ್ರೀ ಜಗದ್ಗುರುಗಳವರು ಈ ಪ್ರಾಂತದ ಭಕ್ತಾದಿಗಳ ಇಷ್ಟಾರ್ಥಗಳಿಗೆ [illegible] ಅಪೇಕ್ಷೆಪಟ್ಟು ಮುಕ್ಕಾಂಹಿಗೆ ದಯಮಾಡಿಸಿದ್ದರಿಂದ [illegible] ಸುಗಮವಾದದ್ದರಿಂದ ಸಾವಿರಗಳು ದರ್ಶನಾಪೇಕ್ಷಿಗಳಾದರೂ ದೊಂದಿ ಧನ್ಯರಾದೆವು. ಅನಂತರ ಸಮೀಪದಲ್ಲಿರುವ ಕೋಡಿಹಳ್ಳಿ ಗ್ರಾಮದ [illegible] ಸ್ವಾಮಿಗಳವರು ಶ್ರೀ ಜಗದ್ಗುರು ಸನ್ನಿಧಿಯವರು ಒಂದು ದಿನ್ನವನ್ನು ಕೈಕೊಂಡು ಭಕ್ತರ ಇಷ್ಟಾರ್ಥವನ್ನು ಪೂರೈಸುವದರಿಂದ ತಾ [illegible]-27 ನೇ ಸಾಯಂಕಾಲ ನಾಲ್ಕು ಘಂಟೆಗೆ ನೇರ್ಲಿಗೆಯಿಂದ ಸವಾರಿಯು ದಯಮಾಡಿಸಿ ಚಪರ, ತೋರಣ ಪತ್ರ, ಧ್ವಜಗಳಿಂದ ಅಲಂಕೃತವಾದ ಬೀದಿಯಲ್ಲಿ ಪಲ್ಲಕ್ಕಿಯುತ್ಸವದಿಂದ ಬಿಜಯಂಗೈಸಿದರು. ಆ ದಿವಸ ಬೆಳಗಿನಿಂದ ವಿಶೇಷವಾಗಿ ಮಳೆ ಸುರಿಯುತ್ತಾ ಇದ್ದು ಸವಾರಿಯು ಉತ್ಸವದಿಂದ ಬಿಜಯಂಗೈಸುವಸಮಯಕ್ಕೆ ಮೋಡವಿದ್ದ ಆಕಾಶವು ಸ್ಪಷ್ಟವಾಗಿ ಮಳೆನಿಂತು ಉತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಸಾಯಂಕಾಲ 6 ಗಂಟೆಗೆ ಸನ್ನಿಧಾನ ಶ್ರೀ [illegible] ಗಳವರು ಸಿಂಹಾಸನದಲ್ಲಿ ಮಂಡಿಸಿದರು. ಸಂಸ್ಥಾನದ ವೇ|| ಪರೀಕ್ಷಿತ ಶಾಸ್ತ್ರಿಗಳವರಿಂದ ರೇಣುಕವಿಜಯನಾಮಕ ಪುರಾಣಶ್ರವಣವಾಯಿತು. [illegible] ಪುರಾಣಶ್ರವಣದಿಂದ ಸಂತುಷ್ಟ [illegible] ಮಹಾನೀರಾಜನವನ್ನು ಸ್ವೀಕರಿಸಿದರು. [illegible] ಗಂಟೆಯವರೆಗೂ [illegible] ಗ್ರಾಮದ [illegible] ಮಂಡಲಿಯವರು ಕಾಣಿಕೆಯನ್ನು ಅರ್ಪಿಸುವುದರಲ್ಲಿ [illegible] ನಡೆದಿದ್ದರು. ಅಲ್ಲಿ ಒಬ್ಬನು ತನಗೆ ಯೋಗ್ಯತೆಯಿದ್ದರೂ ವಂಚಕತನವನ್ನು ತೋರಿಸಿದ್ದರಿಂದ ಮಹಿಮಾತಿಶಯವಿಷಯವು ಸನ್ನಿಧಿಯ ಚಿತ್ತಕ್ಕೆ ವೇದ್ಯವಾಗಿ ಆತನ ಕಾಣಿಕೆಯು ರೇಣುಕನಿಗೆ ಇಷ್ಟವಿಲ್ಲವೆಂದು ನೆರೆದಿರುವ ಜನಗಳೆಡೆಗೆ ಅನುಗ್ರಹವಿಶೇಷವಾಯಿತು. ಆಮೇಲೆ ಆ ಭಕ್ತನು ಕ್ಷಮಾ ಕೇಳದೆ ಅಹಂಕಾರದವನಾಗಿದ್ದನು. [illegible] ಹಾಗೆ ಮನೆಗೆ ಹೋದನು. ಆಗ್ಗೆ ಸಂಸ್ಥಾನದ [illegible]) ಆ ಮನುಷ್ಯನ ಮನೆ ಸಮೀಪದಲ್ಲಿ [illegible] ಆತನು ನೋಡಿ ತಾನು ಸನ್ನಿಧಿಗೆಯಿಂದ ಬಂದುದಾಗಿ [illegible] ಕಾಣಿಕೆಯನ್ನು ಗುರುಭಕ್ತಿಗಾದರೂ ಸೇವಾ ಅರ್ಪಿಸಬೇಕೆಂಬ ಭಾವನೆಯಿಂದ ಗುರುವನ್ನು ಪೂಜಿಸಿ ಅಕ್ಕಿ [illegible] ಜಗಳದಿಂದ [illegible] (ಅವನಿಗೆ) ಗುರುಭಕ್ತಿಗೆ [illegible] ಬರು [illegible] ಆಲೋಚನೆಯಿಂದಾಗಿ ನೋಡುತ್ತಿದ್ದ ರಾತ್ರಿಯನ್ನು ಕಳೆ ಕಾಲುಗಳ ದೂರದ್ವಾರಗಳು ಅದ ಸಮೀಪದಲ್ಲಿ ಒಂದು ತಿಪ್ಪೆಗುಂಡಿಯಲ್ಲಿಯೋಗಿ ಬಿದ್ದಿತು. ಅಕ್ಕಿಯನ್ನು ನೋಡಿದ್ದರಿಂದ ಆತನಮನೆಯ ಪೇಲಿಯ ಕಡೆ ಊಡುವದಲು ಅಲ್ಲಿದ್ದ ಕೋಳಿಗಳು ಆಯ್ದು ತಿಂದವು. ನಂತರ ಬಳೆಯು ಹೊರಟುಹೋಯಿತು. ಈ ರೀತಿಯಲ್ಲಿ ಗುರುವಿಗೆ ಅರ್ಪಿತವಿಲ್ಲದ್ದನ್ನು ಆ ಮೂಕಪ್ರಾಣಿಯು ಕೂಡಾ ಸ್ವೀಕರಿಸದೆ ತಿರಸ್ಕಾರಮಾಡಿದ್ದನ್ನು ಅಲ್ಲಿ ಕೂಡಿದ ಅನೇಕಜನರು ಕಂಡು ಆಶ್ಚರ್ಯಪಟ್ಟರು. ದುಷ್ಟನಿಗ್ರಹ ಶಿಷ್ಟಪರಿಪಾಲನೆಮಾಡಲು ಇದೊಂದು ಅಗಾಧವಾದ ರೇಣುಕರ ಮಹಿಮೆಯು ಪ್ರಭಾವವೆಂದೇ ಹೇಳಬೇಕಲ್ಲವೇ? ಗುರುವಿನಲ್ಲಿ ವಂಚಕತನವನ್ನು ತೋರಿಸುವವರ ಕರ್ಮವು ಇಷ್ಟೇ ಇರುವುದು. ಆದ್ದರಿಂದ ಗುರುವಿನಲ್ಲಿ ವಂಚಕತನವನ್ನು ತೋರಿಸದೆ ಸರಳಭಾವದಿಂದ ಗುರುಕೊಟ್ಟದ್ದನ್ನು [illegible] ನಾಗಿ ಅರ್ಪಿಸಿ ಮುಕ್ತರಾಗಬೇಕೆಂದು [illegible] ಯಿಂದ ಸೂಚಿಸಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಪ್ರತ್ಯಕ್ಷ

ವೀರಶೈವಸ್ಟೂಡೆಂಟ್ಸ್ ಲಾಡ್ಜ್, ಮದ

ದಕ್ಷಿಣಹಿಂದುಸ್ಥಾನದಲ್ಲಿ ಮದರಾಸು ನ್ನ ವಿದ್ಯಾಭ್ಯಾಸಕ್ಕೆ ಕೇಂದ್ರಸ್ಥಾನವಾ ಎಲ್ಲಾ ಪ್ರಾಂತ್ಯಗಳ ವೀರಶೈವ ವಿದ್ಯಾರ್ಥಿಗಳ ರ್ಜನೆಗಾಗಿ ಕಲಿಯುವ ಸ್ಥಳವಾಗಿಯೂ ಇ ನಿಯುಷ್ಟೆ. ಇಂತಹ ದೊಡ್ಡಪಟ್ಟಣದಲ್ಲಿ ಯಾ ಜೂಲಗಳೂ ವೀರಶೈವವಿದ್ಯಾರ್ಥಿಗಳಿಗೆ ಇಲ್ಲದಿ ದ ಅವರು ಶೋಚನೀಯವಾದ ಕುಂದುಕೊರತೆ ಳಗಾಗಿದ್ದರು. ಮೇಲಾಗಿ ಈ ಪ್ರಾಂತ್ಯ ಮ ತೊರೆಯ ಪ್ರಾಂತ್ಯಗಳಿಂದ ವೀರಶೈವ ಪ್ರಮು ಪಟ್ಟಣಕ್ಕೆ ಬರುತ್ತಿದ್ದರೂ ಈ ವಿಷಯವನ್ನು ಗಮನಕ್ಕೆ ಇದುವರೆಗೂ ತಂದಿರಲಿಲ್ಲ. ಆದರೆ ಸಾರೆ ವೀರಶೈವ ವಿದ್ಯಾರ್ಥಿಗಳಿಗೆ ಇದ್ದ ತೊಂ ತಕ್ಕಮಟ್ಟಿಗೆ ನಿವಾರಣೆಯಾಗಲು ಅರಸೀಕೆರೆ ಲಪ್ಪರು ಸಾಹುಕಾರ್ ಮರುಳಸಿದ್ಧಪ್ಪಶೆಟ್ಟರವ ಮನವು ಸಹಕಾರಿಯಾಯಿತು.

ಈ ಮಹಾಶಯರು ಕಾಶೀಪ್ರಯಾಗವೇ ಮೊ ದ ಕ್ಷೇತ್ರಗಳಿಗೆ ಯಾತ್ರಾರ್ಥಿಯಾಗಿ ಹೋಗಿ ಅಲ್ಲಿ ಧರ್ಮಕಾರ್ಯಗಳನ್ನು ಮಾಡಿ, "ಧರ್ಮ ಧರ" ಎಂಬ ಬಿರುದನ್ನು ಸ್ವೀಕರಿಸಿ ಸ್ವಸ್ಥಳಕ್ಕೆ ರುಗಿ ಸವಾಬದಲಾವಣೆಗೋಸ್ಕರ ಇಲ್ಲಿಗೆ ಬ ಇಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಭೋಜನಕ್ಕೆ ಅನುಕೂಲತೆಗಳಿಲ್ಲದಿರುವ ವಿಷಯವನ್ನು ಮ|| ಟ್ಟರು ತಮ್ಮ ಉದಾರವಾದ ಮನಸ್ಸಿಗೆ ತಂದು ವೀರಶೈವ ವಿದ್ಯಾರ್ಥಿಗಳನ್ನೆಲ್ಲಾ ಬರಮಾಡಿಕೆ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು. ಅ ಶಯರ ಸೂಚನೆಯಂತೆ ಇಲ್ಲಿ ಸಾಹುಕಾರ್ ಪ ವೀರಶೈವವಿದ್ಯಾರ್ಥಿಗಳು ಕಲೆತು, ಕಳೆದತಿಂಗಳು ಶೈವ ಸ್ಟೂಡೆಂಟ್ಸ್ ಲಾಡ್ಜ್" ಎಂಬ ಅಭಿಧಾ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು ಮ ಮರುಳಸಿದ್ದಪ್ಪಶೆಟ್ಟರವರು ಸದರಿ ವಿದ್ಯಾಲಯ ಕಾಗುವಷ್ಟು ಪಾತ್ರೆಗಳನ್ನು ಕೊಡಿಸಿಕೊಟ್ಟಿದ್ದ ದಾತೃತ್ವವನ್ನೂ, ವಿದ್ಯಾಭಿಮಾನವನ್ನೂ, ಸ ಭಿಮಾನವನ್ನೂ ವ್ಯಕ್ತಪಡಿಸುವದಾಗಿದೆ. ಈ ಪಟ್ಟಣದಲ್ಲಿ ಇಂತಹ ಸೌಕರ್ಯಕಲ್ಪನೆ ಮಾಡಿ ದ ಅವರು ವೀರಶೈವವಿದ್ಯಾರ್ಥಿಗಳೆಲ್ಲರ ಅಶ್ವೀಕ ಶೈವಸಮಾಜದ ಧನ್ಯವಾದಗಳಿಗೆ ಪಾತ್ರರ ಸ್ತೋತ್ರಾರ್ಹದ ವಾರ್ತೆಯಾಗಿದೆ.

ಈ ಧರ್ಮಕಾರ್ಯವು ನಿರಂತರವಾಗಿ ನಡೆ ಬುದ್ದೇಶದಿಂದಲೂ, ಸದರೀ ಧರ್ಮದ ಮೇಲ್ವಿ ಗಾಗಿಯೂ ಇಲ್ಲಿಯ ಮ|| ರಾ|| ಟಿ. ಎಂ. ರಾ ಶೆಟ್ಟರ ಪಾತ್ರಾರು ಮ|| ರಾ|| ಮುನಿಯಪ್ಪ ಬದ್ಧಕಂಕಣರಾಗಿ ನಿಂತು ವಿಚಾರಕಾಲದಲ್ಲಿ ಸದ ವೈಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಪ್ರತಿವ [illegible] ತೆರೆಯುವ ವೀರಶೈವ ರ್ಥಿಗಳಿಗೆ ಕೊಡುವುದಾಗಿ ವಾಗ್ದಾನಮಾಡಿ ನಾವೆಲ್ಲರೂ ಅವರಿಗೆ ಬಹು ಕೃತಜ್ಞತೆಯುಳ್ಳ ದ್ದೇವೆ ಮತ್ತು ಅವರು ಧರ್ಮಕರ್ತರ ಆಶಯ ಶಾಶ್ವತವಾಗಿ ನಡೆಸುತ್ತ ಬರುವರೆಂದು ನಂಬಿದ್ದೇ

ನಮ್ಮ ವೀರಶೈವಸಮಾಜದಲ್ಲಿ ರಾವ್‌ಬಹ ಗುಪ್ತ ಮೋಟಿದಪ್ಪನವರೂ, ಸಾಹುಕಾರ್ ಕಬ್ಬ ಸ್ಥಜನಪ್ಪನವರೇ ಮೊದಲಾದ ಸತ್ಪುರುಷರು ತನುಮನಧನಗಳನ್ನರ್ಪಿಸಿ ತನ್ಮೂಲಕ ಸಮಾಜದ ದಯನನ್ನು ತೋರಿ ಕೀರ್ತಿಶೇಷರಾಗಿಲ್ಲವೇ? ಸತ್ಪುರುಷರ ಮೇಲ್ಪಂಕ್ತಿಯನ್ನನುಸರಿಸಿ ಸಮಾ ವೃದ್ಧಿ ಪ್ರಯತ್ನಂಟುಮಾಡಿ ಪ್ರಚಂಡಸ್ವಾರ್ಥವಾದ ಯನ್ನು ಪಡೆಯಬೇಕೆಂದಿರುವ ಮ|| ರಾ|| ಪುಲ್ಲಪ್ಪ ರು ಸಿದ್ದಪ್ಪಶೆಟ್ಟರವರ ದೃಢಸಂಕಲ್ಪವನ್ನು ದೇವ ಗೂಡಿಸಲೆಂದು ನಾವು ಆವನನ್ನು ಪ್ರಾರ್ಥಿಸುತ್ತೇ

ಈ ಮಹಾಶಯರಿಗೂ ಇವರ ಬಂಧುವರ್ಗಕ್ಕ ಗಳಿಗೂ ಆಯುರಾರೋಗ್ಯೈಶ್ವರ್ಯವನ್ನು ಕಾಪಾಡಲಿ.

ಎಂ. ಎಸ್. ಸಿದ್ಧಲಿಂ

ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪಂಚಾಚಾರ್ಯರ ಅವತಾರವು

ಶೈವರೇ? ನಾವು ಯಾರು? ನಮ್ಮ ಮತಪ್ರ ವರ್ತಕರು ಮತಸ್ಥಾಪಕರಾರು? ಅವರ ಸಿದ್ಧಾಂತವೇನು? ಅವರ ಸ್ವರೂಪವೇನು? ಸಿದ್ಧಾಂತಕ್ಕೆ ನಾವು ಯಾವತರದ ಭಕ್ತಿಯನ್ನಿಡಬೇಕು? ಗೂಢವಾದ ವಿಷಯಗಳನ್ನು ಪ್ರತಿಯೊಬ್ಬರೂ ವಾಗಿ ತಿಳಿದುಕೊಳ್ಳಬೇಕು. ಈ ವಿಷಯಗಳನ್ನು ಯದೆ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಗದೆ ಅವರ ಧರ್ಮಶಾಸನಗಳನ್ನಾಚರಿಸದೆ ಕಾಂತಾದಿಗಳನ್ನರಿಸದೆ ಅವರ ನಾಮಸ್ಮರಣೆ ಮಾಡದೆ ನಮಗೆ ಇಹಪರ ಸುಖಪ್ರಾಪ್ತಿಯಾಗ ವು ಕೈಯೆತ್ತಿ ಹೇಳಬಹುದು. ಆದಿಯಲ್ಲಿ ಪರಶಿವ ನೋದಾರ್ಥವಾಗಿ ಬ್ರಹ್ಮನನ್ನು ನಿರ್ಮಿಸಿ ನೀನು ಸೃಷ್ಟಿಕಾರ್ಯದಲ್ಲಿ ತೊಡಗು ಎಂದಾ ನಾಗಿ ಬ್ರಹ್ಮನು—ಪರಬ್ರಹ್ಮನೇ ನನ್ನಿಂದ ಕಾರ್ಯವು ಸಾಧ್ಯವಿಲ್ಲವು. ನೀನು ಮೊದಲು ಜ್ಞಾನವನ್ನು ಮಾಡಿಕೊಡು. ತದನಂತರ ಸೃಷ್ಟಿಯನ್ನು ಮಾಡುತ್ತೇನೆಂದು ವಿಜ್ಞಾಪಿಸಿ ನು. ಆಗ ಜಗದೊಡೆಯನು ಬ್ರಹ್ಮನ ಬೇಡಿಕೆ ತನ್ನ ಸದ್ಯೋಜಾತ, ವಾಮದೇವ, ಅಘೋರ, ಷ, ಈಶಾನಗಳೆಂಬ ಪಂಚವಕ್ತ್ರಗಳಿಂದ ತನ್ನ ರಾದ ಹಾಗೂ ಮಸ್ತಕದಲ್ಲಿ ಲಿಂಗಸಹಿತರಾದ ಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವ ಎಂಬ ಪಂಚಾಚಾರ್ಯರನ್ನು ನಿರ್ಮಿಸಿ ಬ್ರಹ್ಮನಿ ಸುವ ಜ್ಞಾನವನ್ನು ಮಾಡಿಕೊಟ್ಟು ಆತನ ವನ್ನು ಪೂರ್ಣಮಾಡಿದನು.

ಪರಮಾತ್ಮನನ್ನು ಧ್ಯಾನಿಸುತ್ತ ಅಖಂಡ ಸೃಷ್ಟಿಯನ್ನುಮಾಡಿ ಅದರಲ್ಲಿ ೮೪ ಲಕ್ಷ ಗಳನ್ನು ಹುಟ್ಟಿಸಿ ಮಾನವಪ್ರಾಣಿಯಲ್ಲಿ ರ್ವರ್ಣಗಳನ್ನೂ, ಬ್ರಹ್ಮಚರ್ಯಾದ್ಯಾಶ್ರ ಗಳನ್ನು ಕಲ್ಪಿಸಿದನು ಇವರಿಗೆ ಪ್ರಾಕೃತರೆಂದೆನ್ನು ವೀರಶೈವಧರ್ಮದಲ್ಲಿಯಾದರೂ ಬ್ರಾಹ್ಮಣಾದಿ ಗಳೂ, ಬ್ರಹ್ಮಚರ್ಯಾದ್ಯಾಶ್ರಮಗಳೂ ಇರುವ ಇವರಿಗೆ ಅಪ್ರಾಕೃತರೆಂದೆನ್ನುವರು.

ಶಾನದಲ್ಲಿ ಪರಶಿವನು ರೇಣುಕಾದಿ ಪಂಚಾಚಾ ರ್ಯರನ್ನು ಕರೆದು ನೀವು ಭೂತಲದಲ್ಲಿ ಸೋಮನಾ ಲಿಂಗಗಳಿಂದುದ್ಭವಿಸಿ "ಏಕೇನ ಜನ್ಮನಾಮುಕ್ತಿಃ" ದೆ ಒಂದೇ ಜನ್ಮದಲ್ಲಿ ಮೋಕ್ಷಪ್ರಾಪ್ತಿಯಾಗು ವೀರಶೈವಧರ್ಮವನ್ನು ಸ್ಥಾಪಿಸಿರೆಂದು ಆಜ್ಞಾ ಅದರಂತೆ—

ರೇಣುಕರು ಕೃತಯುಗದೊಳಗೆ ಏಕಾಕ್ಷರ ಚಾರ್ಯರೆಂಬ ಅಭಿದಾನದಿಂದ ಕೊಲ್ಲಿಪಾಕಿ ಸೋ ಮೇಶ್ವರಲಿಂಗದಿಂದುದ್ಭವಿಸಿ ರಂಭಾಪುರಿ (ಬಾಳೆಹೊ ನ್ನೂರು)ಯಲ್ಲಿ ಧರ್ಮಪೀಠವನ್ನು ಸ್ಥಾಪಿಸಿ ವೀರಶೈವ ಮತವನ್ನು ಮಹರ್ಷಿಪುಂಗವರಿಗೂ, ರಾಜಾಧಿ ರಾಜರಿಗೂ ಬೋಧಿಸಿ ತಾವು ಜನಿಸಿದ ಸೋಮೇಶ್ವರ ಲಿಂಗದಲ್ಲಿಯೇ ಐಕ್ಯರಾದರು.

ದಾರುಕರು ತ್ರೇತಾಯುಗದೊಳಗೆ ದ್ವ್ಯಕ್ಷರ ಚಾರ್ಯರೆಂಬ ನಾಮದಿಂದ ಸಿದ್ಧೇಶ್ವರ (ಉಜ್ಜ ಯಿನಿ) ಲಿಂಗದಿಂದ ಸಂಜನಿತರಾಗಿ ಉಜ್ಜಯಿನೀ ಕ್ಷೇ ತ್ರದಲ್ಲಿ ತಮ್ಮ ಪೀಠವನ್ನೇರ್ಪಡಿಸಿ ಲಿಂಗೀಬ್ರಾಹ್ಮಣ ರನ್ನು ನೆಲೆಗೊಳಿಸಿ ಆ ಸಿದ್ಧೇಶ್ವರಲಿಂಗದಲ್ಲಿಯೇ ಐಕ್ಯರಾದರು.

ಘಂಟಾಕರ್ಣರು ಶ್ರೀ ಪರಮಾತ್ಮನ ವಾಸಸ್ಥಾನ ಮುಕ್ತಿಕ್ಷೇತ್ರವೆನಿಸಿದ ಹಿಮಾಲಯದಲ್ಲಿರ್ಪ ರಾಮನಾಥಲಿಂಗದಿಂದ ಜನಿಸಿ ಲಿಂಗಾಂಗಚಕ್ರದ ಗಳನ್ನು ಪ್ರಸಿದ್ಧಪಡಿಸಿ ತ್ರ್ಯಕ್ಷರ ಶಿವಾಚಾರ್ಯ ರೆನಿಸಿ ಕೇದಾರದಲ್ಲಿ ಮಹಾಪೀಠವನ್ನು ಶ್ರೀ ರಾಮನಾಥಲಿಂಗದಲ್ಲಿಯೇ ಅಡಗಿದರು.

ಧೇನುಕರ್ಣರು ಪ್ರಸಿದ್ಧಕ್ಷೇತ್ರವೆನಿಸಿರ್ಪ ಶ್ರೀಗಿರಿ ಮಲ್ಲಿಕಾರ್ಜುನಲಿಂಗದಿಂದ ಚತುರಕ್ಷರ ಶಿವಾಚಾರ್ಯ ರೆನಿಸಿದ ಉದಯರಾಗಿ ವೀರಶೈವಮತವ ಜಗತ್ಪ್ರಸಿದ್ಧಗೊಳಿಸಿ ಶ್ರೀಶೈಲದಲ್ಲಿಯೇ ಪೀಠ ಸ್ಥಾಪಿಸಿ ಮಲ್ಲಿಕಾರ್ಜುನಲಿಂಗದಲ್ಲಿಯೇ ಲಯ ರು.

ವಿಶ್ವಕರ್ಣರು ಕಾಶೀಕ್ಷೇತ್ರದಲ್ಲಿರುವ ಶ್ರೀ ವಿಶ್ವನಾಥಲಿಂಗದಿಂದ ಪಂಚಾಕ್ಷರಶಿವಾಚಾರ್ಯರೆಂಬ ನಾಮದಿಂದ ಅವತರಿಸಿ ಲಿಂಗಾದ್ಯಷ್ಟಾವರಣಗಳನ್ನೂ, ಪಂಚಾಚಾರಗಳನ್ನೂ, ಷಟ್‌ಸ್ಥಲಮಾರ್ಗವನ್ನೂ ಬೋಧಿಸಿ ಈ ಮತವನ್ನು ಪ್ರಜ್ವಲಗೊಳಿಸಿ ಲೋಕವಿಖ್ಯಾತರಾಗಿ ಕಾಶೀಕ್ಷೇತ್ರದಲ್ಲಿಯೇ ಪೀಠವನ್ನೇರ್ಪಡಿಸಿ ಶ್ರೀ ವಿಶ್ವನಾಥಲಿಂಗದಲ್ಲಿಯೇ ಐಕ್ಯರಾದರು.

ಈ ಆಚಾರ್ಯರು ಪುನಃ ತ್ರೇತಾಯುಗದಲ್ಲಿ ಅನುಕ್ರಮವಾಗಿ ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್ವಕ್ತ್ರ, ಪಂಚವಕ್ತ್ರ ಶಿವಾಚಾರ್ಯರೆಂಬ ನಾಮದಿಂದಲೂ ದ್ವಾಪರದಲ್ಲಿ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣ ಶಿವಾಚಾರ್ಯರೆಂಬ ನಾಮದಿಂದಲೂ ಕಲಿಯುಗದೊಳಗೆ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ ಶಿವಾಚಾರ್ಯರೆಂಬ ನಾಮದಿಂದಲೂ ಆಯಾಯ ಲಿಂಗಗಳಿಂದುದ್ಭವಿಸಿ ಈ ಮತವನ್ನು ಊರ್ಜಿತಸ್ಥಿತಿಗೆ ತಂದರು.

ಈ ಗುರುಪುಂಗವರು ಹಾಕಿಕೊಟ್ಟ ಮಾರ್ಗದಲ್ಲಿ ಅಷ್ಟಾವರಣಾದಿಗಳೇ ಮುಖ್ಯವಾಗಿರುತ್ತವೆ. ಅವುಗಳಲ್ಲಿ ಲಿಂಗನಂತೂ ಪ್ರಾಮುಖ್ಯವು. ಲಿಂಗವಿಲ್ಲದವನು ವೀರಶೈವನಾಗಲಾರನು. ಮುಕ್ತಿದಾಯಕವಾದ ಈ ಲಿಂಗವು ಗುರುವರ್ಗದವರಿಂದಲೇ ಅನುಗ್ರಹಿಸಲ್ಪಡತಕ್ಕದ್ದಾಗಿದೆ.

ಲಿಂಗವೆಂದರೆ ಪರಬ್ರಹ್ಮಮೂರ್ತಿ, "ಲಿಂಗಮಧ್ಯೇ ಜಗತ್ಸರ್ವಂ" ಎಂಬಂತೆ ಜಗವೆಲ್ಲವೂ ಲಿಂಗಮಯವಾಗಿದೆ. ಮುಕ್ತಿಪ್ರದಲಿಂಗವನ್ನು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರೂ ಇವರಂಶಜರಾದ ಗುರುವರ್ಗದವರೂ ಅನುಗ್ರಹಿಸುವರೆಂದು ಮೇಲೆಯೇ ವಿವರಿಸಲ್ಪಟ್ಟಿದೆ. ಮೋಕ್ಷದೊರೆಯತಕ್ಕಂಥ ಇಂಥ ವಸ್ತುವನ್ನೇ ದಾನಮಾಡಿದ ಜಗದ್ಗುರುಗಳಲ್ಲಿ ಭಕ್ತಿಯನ್ನಿಟ್ಟು ಮುಕ್ತಿಭಾಜನರಾಗಬೇಕೆಂದು ಧರ್ಮಶಾಸ್ತ್ರಗಳು ಕೂಗುವವೆಂಬುದು ಗೊತ್ತಿದ್ದಾಗ್ಯೂ ಅದನ್ನು ಲಕ್ಷ್ಯಕ್ಕೆ ತರದೆ ನಾವೇ ಜಗದ್ಗುರುಗಳೆಂದೂ, ಷಟ್‌ಸ್ಥಲಪ್ರಸನಾಚಾರ್ಯರೆಂದೂ ಕೆಲವರು ಗುಣುಗುಡುತ್ತಿರುವರು. ಅಲ್ಲದೆ ಪಂಚಾಚಾರ್ಯರಿಗಿಂತಲೂ ತಾವೇ ಶ್ರೇಷ್ಠರೆಂದು ಹೇಳುವರು. ಇವರಿಗೇನನ್ನಬೇಕು? ಇವರಿಗೆ ಸುಪ್ರಬೋಧಾಗಮಾದಿಗಳ ವಾಕ್ಯಗಳೇ ದರ್ಶನವಾದಂತೆ ತೋರುವದಿಲ್ಲ. ಇಂಥವರಿಗೆ ಯಾವಫಲವು ದೊರಕುವದೋ ಪರಮಾತ್ಮನೇ ಬಲ್ಲ.

ಮೋಕ್ಷವನ್ನು ದಯಪಾಲಿಸುವಂಥ ಲಿಂಗವನ್ನು ಕೊಟ್ಟ ಶ್ರೀ ರೇಣುಕಾದಿ ಪಂಚಾಚಾರ್ಯರೇ ಮೂಲಗುರುಗಳು. ಇವರಂಶೋದ್ಭವರಾದ ಗುರುವರ್ಗದವರೇ ಗುರುಗಳು, ಇವರೇ ಅಧಿಕರು, ಇವರಿಗಿಂತಧಿಕರಾರೂ ಇಲ್ಲವೆಂದು ನಾನಿರಾರುಗ್ರಂಥಗಳು ಸಾರುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರು ಲಕ್ಷ್ಯದಲ್ಲಿಟ್ಟು ವರ್ತಿಸಬೇಕು.

ನಾಚಕರೇ ಪೂರ್ವಕಾಲದಲ್ಲಿ ಪ್ರತಿಯೊಂದು ಸಿಂಹಾಸನಾಧಿಪತಿಗಳು ದೇಶಮಧ್ಯದಲ್ಲಿ ಸಂಚರಿಸಿ ಮತಕಟ್ಟುಗಳನ್ನು ಪ್ರತಿಗ್ರಾಮದೊಳು ಬೋಧಿಸಿ ಗುರುಕಾಣಿಕೆಯನ್ನು ತೆಗೆದುಕೊಂಡು ಭಕ್ತರನ್ನುದ್ಧರಿಸುತ್ತಿದ್ದರು. ಆದರೆ ಕೆಲವುಕಾಲದಲ್ಲಿ ಅವಿದ್ಯಾವಂತರನ್ನು ಪೀಠಗಳಿಗೆ ಅಧಿಕಾರಿಗಳನ್ನಾಗಿ ಮಾಡುತ್ತ ಸ್ವಾರ್ಥತೆಯನ್ನು ಬೆಳೆಯಿಸುತ್ತ ನಡೆದುದರಿಂದ ಧರ್ಮವು ಹೀನಸ್ಥಿತಿಗಿಳಿಯುತ್ತ ಸಮಾಜದಲ್ಲಿ ಅನೈಕ್ಯವು ಬೆಳೆಯುತ್ತಿತ್ತು. ಈಗಿನ ಪೀಠಾಚಾರ್ಯರು ತಪೋನಿಧಿಗಳೂ, ಧರ್ಮಶಾಸ್ತ್ರಕೋವಿದರೂ ಆಗಿರುವರು. ಈ ಜಗದಾಚಾರ್ಯರಿಂದಲೇ ಧರ್ಮೋದ್ಧಾರವಾಗಬೇಕಲ್ಲದೆ ಅನ್ಯರಿಂದ ಎಂದಿಗೂ ಆಗಲಾರದೆಂದು ಸಾರಿಸಾರಿ ಹೇಳಬಹುದು.

ಶ್ರೀ ಜಗದ್ಗುರು ಪಂಚಾಚಾರ್ಯರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವದೇನಂದರೆ—ತಾವುಗಳು ಗ್ರಾಮಗ್ರಾಮಕ್ಕೆ ದಯಮಾಡಿಸಿ ಧರ್ಮಶಾಸ್ತ್ರಗಳ ಬೋಧಾಮೃತವನ್ನು ಸರ್ವರಿಗೂ ಪಾನಮಾಡಿಸಿ ಸಮಾಜದಲ್ಲಿದ್ದ ಗೊಂದಲಗಳನ್ನು ನಾಶಮಾಡಿ ನಮ್ಮಗಳಿಗೆ ಸಕಲ ಸಂಪತ್ತುಗಳನ್ನು ಕೊಟ್ಟು ಇಹಪರದಲ್ಲಿಯ ಸುಖಮಾರ್ಗವನ್ನು ಅರುಹಿ ನಮ್ಮನ್ನು ಧನ್ಯರನ್ನಾಗಿಮಾಡಬೇಕೆಂದು ಅರಿಕೆಮಾಡಿಕೊಂಡು ಈ ಲೇಖನವನ್ನು ಮುಗಿಸುತ್ತೇನೆ.

N. S. PATIL.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುವರ್ಗಕ್ಕೆ ವಿದ್ಯಾವಶ್ಯಕತೆ.

ಗುರುವೆಂದರೆ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನುಂಟುಮಾಡುವವನು. ಗುರುಗಳು ಮಠಾಧಿಕಾರಿಗಳ ವಂಶಜರಾಗಿಯೂ, ವಿದ್ಯಾ, ನೀತಿ, ಸೌಜನ್ಯ, ಶಮದಮಾದಿಗಳ ಸಂಪತ್ತಿ, ಸತ್ಕುಲಪ್ರಸೂತಿ ಮೊದಲಾದ ಸದ್ಗುಣಗಳುಳ್ಳವರಾಗಿಯೂ ಇರಬೇಕು. ಮತ್ತು ದೇಶದ ಎಲ್ಲಕಡೆಯಲ್ಲೂ ಸಂಚರಿಸಿ ಶಿವಸರ್ವೋತ್ತಮತ್ವವನ್ನೂ, ವೀರಶೈವಮತದ ಔತ್ಕೃಷ್ಟ್ಯವನ್ನೂ, ಸದಾಚಾರವನ್ನೂ ಶಾಸ್ತ್ರಸಮ್ಮತವಾಗಿ ಶಿಷ್ಯರಲ್ಲಿ ಬೋಧಿಸಿ ಪ್ರತಿಷ್ಠಾಪಿಸತಕ್ಕವರಾಗಿಯೂ ಇರಬೇಕು.

ಈ ನವಸುಧಾರಣೆಯ ಕಾಲದಲ್ಲಿ ಪ್ರತಿಯೊಂದುಮತವು ಒಳ್ಳೇ ಊರ್ಜಿತಸ್ಥಿತಿಯಲ್ಲಿದ್ದು ನಮ್ಮಾ ವೀರಶೈವಮತವು ವೈದಿಕಮತಗಳಲ್ಲಿ ಅಗ್ರಗಣ್ಯವಾಗಿದ್ದರೂ ಅಧೋಗತಿಗೆ ಹೋಗುತ್ತಿರುವದನ್ನು ನೋಡಿದರೆ ಗುರುವರ್ಗದವರ ವಿದ್ಯಾವಿಹೀನತೆಯೇ ಮೂಲಕಾರಣವೆಂದು ಹೇಳಬೇಕಾಗಿದೆ. ಆದ್ದರಿಂದ ಅಂಥಹ ಅಜ್ಞಾನವನ್ನು ಕಳೆದುಕೊಳ್ಳಬೇಕಾದರೆ ಪ್ರತಿಯೊಂದು ಗುರುವರ್ಗದ ವ್ಯಕ್ತಿಯು ವೈದಿಕವಿದ್ಯೆಯ ಜ್ಞಾನವನ್ನು ಅವಶ್ಯವಾಗಿ ಸಂಪಾದಿಸಿಕೊಳ್ಳಲಿಕ್ಕೇ ಬೇಕು. ಗುರುವು ವಿದ್ಯಾವಂತನಾಗಿದ್ದರೇನೇ ಗುರುಪದಾರ್ಹನಾಗುವನಲ್ಲದೆ ನಾಮಮಾತ್ರಕ್ಕೆ ಗುರುವಾಗಲಾರರು. ಆದರೆ ಈಗಿನಕಾಲದವರು ನಾಮವೇಷಮಾತ್ರಕ್ಕೆ ಗುರುಗಳಾಗಿರುವರು. ಕಾಷಾಯರುದ್ರಾಕ್ಷಗಳನ್ನು ಧರಿಸಿದವರೇ ಗುರುಗಳು. ಬಸವಪುರಾಣವೇ ಇವರ ಸಿದ್ಧಾಂತವು! ಗುರುವಂಶೀಯರಾದ ಅನೇಕ ಪಟ್ಟಣರಾಧಿಕಾರಿಗಳು ವೈದಿಕವಿದ್ಯೆಯನ್ನು ಮೂಲೆಗೊತ್ತಿ ಲೋಕಾಪವಾದಕ್ಕೂ ಮತಧರ್ಮಕ್ಕೂ ಹೆದರದೆ ಸ್ವೇಚ್ಛಾವಿಹಾರಿಗಳಾಗಿಯೂ ವಿಷಯಲಂಪಟರಾಗಿಯೂ ಇರುವದನ್ನು ನೋಡಿದರೆ ಇದೊಂದು ನಮ್ಮ ವೀರಶೈವಮತಕ್ಕೆ ಅವಹೇಳನಾಸ್ಪದವಾಗಿದೆ. ಭಕ್ತರಿಗೆ ಜ್ಞಾನೋಪದೇಶವನ್ನು ಮಾಡಬೇಕಾದರೆ ತಾನು ಮೊದಲು ಜ್ಞಾನಿಯಾಗಿರಬೇಕು. ಮನುಷ್ಯನು ತಾನು ಧನಿಕನಾಗಿದ್ದರೆ ಯಾಚಕರಿಗೆ ಇಷ್ಟಾರ್ಥವನ್ನು ಕೊಟ್ಟು ಮಹಾದಾತೃವೆಂದು ಲೋಕದಲ್ಲಿ ಕೀರ್ತಿಶಾಲಿಯಾಗುವನು. ತಾನೇ ದರಿದ್ರನಾದರೆ ಹ್ಯಾಗೆ ದಾತೃವೆಂದು ಹೇಳಿಸಿಕೊಳ್ಳಲಾರನೋ ಹಾಗೆ ಗುರುವೆಂಬಾತನು ಕ್ರಿಯಾಜ್ಞಾನಬೋಧಕವಾದ ಶಾಸ್ತ್ರಸಿದ್ಧಾಂತವನ್ನು ಅಭ್ಯಾಸಮಾಡಿ ಕ್ರಿಯಾಜ್ಞಾನಗಳೆರಡರ ಸಿದ್ಧಿಯನ್ನು ಪಡೆದಿದ್ದರೆ ಗುರುವೆನಿಸಿಕೊಳ್ಳುವನೇ ಹೊರತು ಅಜ್ಞಾನಿಯಾದರೆ ಎಂದಿಗೂ ಗುರುವೆನಿಸಿಕೊಳ್ಳಲಾರನು. ದೀಪ ಪ್ರಕಾಶಕ್ಕೆ ಎಣ್ಣೆಯೂ ಬತ್ತಿಯೂ ಹೇಗೆ ಅವಶ್ಯಕವೋ ಹಾಗೆಯೇ ಜ್ಞಾನಪ್ರಕಾಶಕ್ಕೆ ಸಿದ್ಧಾಂತಸದಾಚಾರಗಳು ಸಹಕಾರಿಗಳಾಗಿರುವವು. ಆದಕಾರಣ ಗುರುವಂಶೋತ್ಪನ್ನರು ಮತಸಿದ್ಧಾಂತಾಚರಣೆಗಳಲ್ಲಿ ಚನ್ನಾಗಿ ಉತ್ತೀರ್ಣರಾಗಿ ಆ ಆಚರಣೆಗಳನ್ನು ನವಪಳಿಕೆಯಲ್ಲಿತಮ್ಮ ಶಿಷ್ಯರಲ್ಲಿ ಬೋಧಿಸುತ್ತ ಬಂದಿದ್ದರೆ ಮತಸುಧಾರಣೆಯಾಗುತ್ತಿತ್ತೆಂತಲೂ ಮತ್ತು ಸಕಲವರ್ಣಾಶ್ರಮಗಳು ನಿರ್ವಿಘ್ನವಾಗಿ ನಡೆಯುತ್ತಲಿದ್ದವೆಂತಲೂ ಘಂಟಾಘೋಷವಾಗಿ ಹೇಳಬಹುದು. ಆದರೆ ಈ ನವಸುಧಾರಣೆಯಕಾಲದ ಗುರುವರ್ಗದವರು ಮತತತ್ವಗಳಲ್ಲಿ ಉತ್ತೀರ್ಣರಾಗದೆ ಅಶಕ್ತರಾಗಿ ದುರ್ವ್ಯಸನದಿಂದ ಪ್ರಪಾಪ್ತವನ್ನಿಕ್ಕಿದ ಭಕ್ತನೇ ಶ್ರೇಷ್ಠನೆಂದು ಮೂಗಕುತ್ತಾ ಮಿಕ್ಕವರನ್ನು ವಂಚಿಸುತ್ತಾ ಬಂದಿದ್ದರಿಂದಲೇ ನಮ್ಮಾ ಶಕ್ತಿವಿಶಿಷ್ಟಾದ್ವೈತಮತದಲ್ಲಿ ತ್ರಿಮತಸ್ಥರಂತೆ ಚತುರ್ವರ್ಣಗಳು ಚತುರಾಶ್ರಮಗಳು ಪ್ರತಿಪಾದಿಸಲ್ಪಡುವ ಅಪರಿಮಿತ ಸಿದ್ಧಾಂತಗ್ರಂಥಗಳಿದ್ದಾಗ್ಯೂ ಕೂಡ ಯಾವ ಭೇದವಿಲ್ಲದಂತಾಗಿಹೋಗಿದೆ. ಮತ್ತು ಈ ನವಸುಧಾರಣೆಯ ಅನೇಕ ಭಕ್ತಮಾಹೇಶ್ವರರು ತಮ್ಮ ಮತದ ಕಟ್ಟಳೆಗಳಿಗೆ ಕಿಂಚಿತ್ತಾದರೂ ಲಕ್ಷ್ಯಕೊಡದೆ ನಿರ್ಭಯವಾಗಿ ಬ್ರಾಹ್ಮಣರ ಕಾಫಿಕ್ಲಬ್‌ಗಳಲ್ಲಿ ಟೀ ಕಾಫಿ ಮೊದಲಾದ ಫಲಾಹಾರಗಳನ್ನು ತಿಂದು ಸೋಡಾಲಿಮ್ಲೆಟ್ ಮೊದಲಾದವುಗಳನ್ನು ಕುಡಿದು ಧನ್ಯರೆನ್ನಿಸುತ್ತಿರುವರು. ಇವುಗಳನ್ನು ನೋಡಿದವರು ಮಾತ್ರ ತಮ್ಮತಮ್ಮ ತಲೆಗಳನ್ನು ಬಾಗಿಸಬೇಕಾಗಿದೆ. ಆಹಾ! ಇದೇ ಅಲ್ಲವೇ? ಗುರುವರ್ಗದವರ ಮತಸುಧಾರಣೆಯು

ರೀತಿಯು? ಈ ಹೀನಸ್ಥಿತಿಗೆಲ್ಲವನ್ನು ವಿಚಾರಿಸಿನೋಡಿದರೆ ಗುರುವರ್ಗದವರ ಯೋಗ್ಯತೆಯು ದಿನಕ್ರಮೇಣ ಕಡಿಮೆಯಾದ್ದರಿಂದಲೇ ಸಮಾಜವು ಈ ಸ್ಥಿತಿಗೆ ಬಂದಿರುವದೆಂದು ನಿರಾತಂಕವಾಗಿ ಹೇಳಬಹುದು. ಇನ್ನುಮುಂದೆಯಾದರೂ ಗುರುವರ್ಗದ ಮಹನೀಯರು ಎಚ್ಚತ್ತು ಧರ್ಮಶಾಸ್ತ್ರಪಾರಂಗತರಾಗಿ ಈ ಮಹೋದ್ಧಾರಕಾರ್ಯದಲ್ಲಿ ತೊಡಗುವರೆಂದು ಪೂರ್ಣ ನಂಬಿದ್ದೇನೆ. ಹಾಗೂ ಸಕಲ ವೀರಶೈವ ಮತಾಭಿಮಾನಿಗಳೂ ಸಹ, ಗುರುವರ್ಗದವರಕಡೆಗೆ ವಿಶೇಷ ಲಕ್ಷ್ಯಕೊಟ್ಟು ಇವರನ್ನು ವಿದ್ಯಾಪಾರಂಗತರನ್ನಾಗಿಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿ ಕೀರ್ತಿಭಾಜನರಾಗಬೇಕೆಂದು ನೆನದು ಈ ಲೇಖವನ್ನು ಮುಗಿಸುತ್ತೇನೆ.

ಶೀಲವಂತರ ರೇವಪ್ಪ, ಹೊಸಪೇಟೆ.

ಶ್ರೀ ಪಂಚಾಚಾರ್ಯೇಭ್ಯೋನಮಃ

ಮಲ್ಲಾಂಬಾ ಪುರಾಣಮಹೋತ್ಸವ.

ರೋಣ ತಾಲೂಕು ಬೆಳವಣಿಕಿಗ್ರಾಮದಲ್ಲಿ ಶ್ರಾವಣ ಶುದ್ಧ ಪ್ರತಿಪದೆಯದಿವಸ ಶ್ರೀ ಶಿವಶರಣೆ ಮಲ್ಲಮಾಂಬೆಯ ಪುರಾಣವನ್ನು ಶ್ರೀಮಂತ ಗವಿಗಪ್ಪ ಅಣ್ಣಾ ಶಿರೋಳ ಇವರು ಪ್ರಾರಂಭಮಾಡಿಸಿದರು. ಈ ಶಿವಶರಣೆಯ ಚರಿತ್ರವನ್ನು ಬೆಳವಣಿಕಿಗ್ರಾಮದ ಶ್ರೀ ಮೃತ್ಯುಂಜಯಶಾಸ್ತ್ರಿಗಳು ಹುರ್ಲಗೇರಿ ಬೃಹನ್ಮಠ ಇವರು ಹೇಳತಕ್ಕವರು ಮತ್ತು ಶ್ರೀ ಬಸಯ್ಯನವರು ನಲವಡಿ ಇವರು ಪದ್ಯವನ್ನು ಸಂಗೀತದೊಡನೆ ಓದತಕ್ಕವರು. ಕೇಳಲಿಕ್ಕೆ ದಿನಾಲು ೪೦೦-೫೦೦ ಜನರು ಕೂಡುತ್ತಿದ್ದರು. ಇದಲ್ಲದೆ ಎರಡನೇಗ್ರಾಮಗಳಿಂದ ಸದ್ಭಕ್ತರು ಮಹಾವಾಕ್ಯವನ್ನು ಕೇಳಲಿಕ್ಕೆ ತಂಡೋಪತಂಡವಾಗಿ ಬರುತ್ತಿದ್ದರು. ಆ ಸಮಯದಲ್ಲಿ ಪುರಾಣಮಂಟಪವನ್ನು ನೋಡಿದರೆ ಶಿವಸನ್ನಿಧಿಯಂತೆ ಕೇವಲ ಆನಂದಮಯವಾಗಿ ತೋರುತ್ತಿತ್ತು. ಶ್ರೀ ಶಾಸ್ತ್ರಿಗಳವರು ಸರ್ವರಮನಸ್ಸಿನಲ್ಲಿ ಬಿಂಬಿಸುವಂತೆ ಅತ್ಯುತ್ತಮ ರೀತಿಯಿಂದ ಬೋಧಮಾಡುತ್ತಿದ್ದರು. ಇದರಂತೆ ಈ ಪುರಾಣವು ಭಾದ್ರಪದ ಶು|| ಪಂಚಮಿಯವರೆಗೆ ಬಹು ವಿಜೃಂಭಣೆಯಿಂದ ಜರುಗಿತು. ಈ ಪುರಾಣಸಮಾಪ್ತಿಯಾಗುವದಿವಸ ಮುಂಜಾನೆ ಗ್ರಾಮದಲ್ಲಿ ಜನರು ತಮ್ಮ ತಮ್ಮ ಗೃಹಗಳನ್ನು ನಾನಾರಂಗವಲ್ಲಿಗಳಿಂದ ಶೃಂಗರಿಸಿದ್ದರು. ಮತ್ತು ದೇವಾಲಯಗಳಲ್ಲಿಯೂ, ಬೀದಿಬೀದಿಗಳಲ್ಲಿಯೂ ತಳಿರುತೋರಣಗಳನ್ನು ಕಟ್ಟಿ ಪುರವೆಲ್ಲ ಶೃಂಗಾರಮಯವಾಗಿತ್ತು. ಹತ್ತುಘಂಟೆಗೆ ಪಾದಪೂಜಾ ಮತ್ತು ಗಣಾರಾಧನೆ ನಡೆಯಿತು. ನಂತರ ಸಂಜೆ ೪ ಘಂಟೆಯವರೆಗೆ ಅನ್ನಸಂತರ್ಪಣೆ ನಡೆಯಿತು. ನಂತರ ಸಂಜೆಯ ೫ ಘಂಟೆಗೆ ಪುರಾಣದ ಮೆರವಣಿಗೆಯು ವೃಷಭದೊಡನೆ ಹೊರಟಿತು. ಪಂಚಾಚಾರ್ಯರ ಜಯಘೋಷದೊಡನೆ ಭಜನಾಮಾಡುತ್ತ ಆನಂದಮಯವಾಗಿ ಬಾಜಾಭಜಂತ್ರಿ ನಾನಾತರದ ವಾದ್ಯಗಳೊಡನೆ ಪುರದಲ್ಲಿ ಪುರಾಣಮೆರವಣಿಗೆಯನ್ನು ನಡೆಯಿಸಿ ಸರ್ವರೂ ಪುರಾಣಮಂಟಪಕ್ಕೆ ಬಂದು ಶ್ರೀ ಗೌರೀಪತಿಯು ಎಲ್ಲರಿಗೂ ಸುಖಕೊಡಲೆಂದು ಮಂಗಲವನ್ನಾಚರಿಸಿದರು. ಇವರಲ್ಲಿ ಪರಮಶೀಲರಾದ ಶ್ರೀಮಂತ ಶಿರಕಪ್ಪ ಅಣ್ಣಾ ಭತ್ತೆಪ್ಪೂರ ಇವರು ಈ ಪುರಾಣವನ್ನು ಕೇಳಿ ಭಕ್ತಿರಸಪೂರ್ಣರಾಗಿ ಒಂದುದಿವಸ ಗಣಾರಾಧನೆಯನ್ನು ಮಾಡಿಸಿದರು. ಅಲ್ಲದೆ ಯಾವತ್ತು ಗಣಸಮೂಹಕ್ಕೆ ಆನಂದವಾಗುವಂತೆ ಭಿಕ್ಷೆಯನ್ನಿತ್ತರು ಮತ್ತು ಶ್ರೀ ಶಾಸ್ತ್ರಿಗಳವರು ಹೇಳಿದ ಶಿವಕಥೆಯನ್ನು ಕೇಳಿ ಆನಂದಿತರಾಗಿ ವೀರನಗೌಡಾ ಪಾಟೀಲ ಬೆಳವಣಿಕಿ ಇವರು ಪತಿವ್ರತಾ ಮತ್ತು ಶಿವಭಕ್ತಿ ಇವುಗಳಮೇಲೆ ೨ ದಿವಸ ಕೂಡಿದ ಯಾವತ್ತು ಜನಸಮೂಹದ ಮನಸ್ಸಿನಲ್ಲಿ ಬಿಂಬಿಸುವಂತೆ ಭಾಷಣಮಾಡಿದರು. ಈ ಶ್ರಾವಣಮಾಸವು ನಮ್ಮ ಗ್ರಾಮದಲ್ಲಿ ಶಿವನಾಮಸಂಕೀರ್ತನದೊಡನೆ ಬಹು ಆನಂದದಿಂದ ನೆರವೇರಿತು. ಇದರಂತೆ ಸರ್ವರು ಯಾವಾಗಲೂ ಶಿವಭಕ್ತಿಯಲ್ಲಿ ಮನಸ್ಸನ್ನು ಕೊಡಲೆಂದು ಪರಮಾತ್ಮನನ್ನು ಬೇಡಿಕೊಳ್ಳುತ್ತೇನೆ.

ಪ್ರತ್ಯಕ್ಷದರ್ಶಿ
ಭೀಮಪ್ಪ ಬಾಳಪ್ಪ ಸನ್ನೂರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಉಜ್ಜಯಿನಿ.

ಈ ಗ್ರಾಮದಲ್ಲಿ ತಾ [illegible] ೭ನೇ ಸೋಮವಾರ ಲಾಗಾಯ್ತು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘವು ಸ್ಥಾಪಿತವಾಗಿ ಟಿಪ್ಪಯ ಚಕ್ರಪಾಣಿಕರಿಂದ ಭಜನೆಯು ನಡೆಯುತ್ತಿರುವದು. ಇದು ಜೆ. ಹೆಚ್. ಎಂ. ರಾತಪ್ಪಯ್ಯನವರ ಪ್ರಯತ್ನದಿಂದ ಜರುಗುವದು. ಇದರಿಂದ ಸಮಾಜಸುಧಾರಣೆಯಾಗುವದಲ್ಲದೆ, ಸಾಮಾನ್ಯರಾದ ಗಾರರಿಗೆಲ್ಲ ಆಟವಾಡುವದನ್ನು ಬಿಡಬೇಕಾಗಿ ಬಂತಾಗಿ ನಮ್ಮ ಸ್ವಜನರಿಗೂ ಸುಜ್ಞಾನ ಉಂಟಾಗುವದಾದಕಾರಣ ಇದರಂತೆ ಪ್ರತಿಯೊಂದು ಗ್ರಾಮದಲ್ಲಿರುವ ಶ್ರೀಮದ್ವೀರಶೈವ ಬಂಧುಗಳು ಶ್ರೀಜಗದ್ಗುರು ಪಂಚಾಚಾರ್ಯ ಭಜನಾಸಂಘಗಳನ್ನು ಏರ್ಪಡಿಸಿ ಸರ್ವರೂ ಸುಖಿಗಳಾಗಿ ಮುಕ್ತಿಭಾಜನರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಜೆ. ಹೆಚ್. ಎಂ. ರಾತಪ್ಪಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಪುರಾಣ ಸಮಾಪ್ತಿಯ ಮಂಗಲಮಹೋತ್ಸವವು, ಅಮ್ಮಿನಭಾವಿ.

ಧಾರವಾಡ ತಾ| ಅಮ್ಮಿನಭಾವಿ ಶ್ರೀ ಮ. [illegible] ಪಟ್ಟಾಧ್ಯಕ್ಷ ಶ್ರೀ ಶಾಂತಸ್ವಾಮಿಗಳ ಮಠದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಶ್ರಾವಣಾರಂಭದಿಂದ ಹಾನಗಲ್ ಮತ್ತು ಮಡಗಳಿ ಬೃಹನ್ಮಠದ ಶ್ರೀ ಸಂಗಮೇಶ್ವರಪಟ್ಟದ ಸ್ವಾಮಿಗಳ ಪಾದಪೂಜೆ, ರುದ್ರಾಭಿಷೇಕ, [illegible] ಪ್ರತಿನಿತ್ಯ [illegible] ಸಂಜೆಯ ವೇಳೆಗೆ [illegible] ನಮ್ಮ ಶ್ರೀ ಪಟ್ಟದ ಸ್ವಾಮಿಗಳಿಂದಲೇ ಚಿತ್ತಾಕರ್ಷಕವಾದ ಸಂಗೀತನಾದದೊಂದಿಗೆ ಉಚಿತ ಪಾರಮಾರ್ಥಿಕ ದೃಷ್ಟಾಂತಗಳ ಪ್ರಮಾಣ ಶ್ರೋತೃಗಳ ಹೃದಯಕ್ಷೇತ್ರದಲ್ಲಿ ಭಕ್ತಿಯ ಬೀಜವನಿಟ್ಟು ಮುಕ್ತಿಮಾರ್ಗದರ್ಶಕವಾದ ಶ್ರೀ ಜಗದ್ಗುರು [illegible] ಪುರಾಣಪ್ರವಚನವು ಅತ್ಯಂತ ಸ್ವಾರಸ್ಯವಾಗಿ ನಡೆಯುತ್ತಲಿತ್ತು. ಸ್ಥಳಪರಸ್ಥಳಗಳಿಂದ ವೀರಶೈವ, ಜೈನ, ಬ್ರಾಹ್ಮಣಾದಿ ಸರ್ವಧರ್ಮದ ಸ್ತ್ರೀಪುರುಷರೆಲ್ಲರೂ ಭಕ್ತಿಯಿಂದೊಡಗೂಡಿ ಶ್ರೀ ಸಂಗಮೇಶ್ವರ ಪಟ್ಟದಸ್ವಾಮಿಗಳ ಬೋಧಾಮೃತವನ್ನು ಪಾನಮಾಡಬೇಕೆಂದಿಷ್ಟು ಭವ್ಯವಾದ ಮಠದ ಗರ್ಭಗಾರವು ತುಂಬಿ ಕಿಕ್ಕಿರಿಯುವಂತೆ ಪ್ರತಿದಿನಗಳಲ್ಲಿಯೂ ಕೂಡುತ್ತಿದ್ದರು. ಭಾದ್ರಪದ ಶು|| ೫ ಗುರುವಾರ ಅನೇಕ ಮಹೋತ್ಸವಗಳಿಗೆ ಮೃಷ್ಟಾನ್ನ ಸಂತರ್ಪಣಾದಿಗಳಿಂದ ತೃಪ್ತಿಪಡಿಸಲ್ಪಟ್ಟು ಸಾಯಂಕಾಲ ಶ್ರೀ ಪಂಚಾಚಾರ್ಯ ಭಜನಾಘೋಷದಿಂದಲೂ ನಾದ ವೈಭವದಿಂದಲೂ ಬಡಬಡಿಸತಕ್ಕಗಳಲ್ಲಿ ಜಗದ್ಗುರು ಪಂಚಾಚಾರ್ಯರ ಪತಾಕೆಗಳ ಸ್ತುತಿಪಾಠಕರಿಂದ ಅತಿ ಪ್ರೇಕ್ಷಣೀಯವಾದ ಕಣ್ಮನಂಗಳಿಗಪಾರವಾದ ಆನಂದವನ್ನೀಯುತ್ತ ಸಕಲ ಬಿರುದಾವಳಿಸಮೇತ ಅತ್ಯಂತ ಸ್ವಚ್ಛ ಮಹೋತ್ಸವವು ಜರುಗಿತು. ಇದೇ ಶುಭಸಮಯದಲ್ಲಿ ಅಜ್ಞಾನವೆಂಬ ಕತ್ತಲೆಕೋಣೆಯೊಳಗೆ ಶಾಲಿಯಮುರದುಕೊಂಡಿರುವ ಅವಿದ್ಯಾ, ದಾರಿದ್ರ್ಯ, ಅನಾಚಾರಗಳೆಂಬ ಗುಂಗಾಡುಗಳ ಕಡಿತದಿಂದ ಬಹುದಿನಗಳಿಂದಲೂ ದುಃಖಿಸುತ್ತಿರುವ ನಮ್ಮ ವೀರಶೈವಸಮಾಜದ ಪುಣ್ಯಪರಿಪಾಕದಿಂದ ನಮ್ಮಗಳನ್ನು ಉದ್ಧರಿಸಲೋಸುಗ ಉದಯಿಸಿರುವ ಶ್ರೀ ಪಂಚಾಚಾರ್ಯಪ್ರಭೆಯು ಹೆಸರಿಂದ ಐದು ರೂಪಾಯಿಗಳು ಶ್ರೀ ಸಂಗಮೇಶ್ವರ ಪಟ್ಟದ ಸ್ವಾಮಿಗಳ ಸನ್ನಿಧಿಯಲ್ಲಿ ಅರ್ಪಿಸಲ್ಪಟ್ಟು ಶ್ರೀ ಪಂಚಾಚಾರ್ಯರ ಜಯಜಯಕಾರದೊಂದಿಗೆ ಪುರಾಣಮಹೋತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು.

ಗುರುಭಕ್ತ
ಮಲ್ಲೇಶಪ್ಪ ಹೊಸೂರ ಟಿ. ಎಲ್. ಟಿ. [illegible]

ಡಾಕ್ಟರ್ ಜೀ. ಪಿ. ಯವರ
ಸುಗಂಧ ನಸ್ಯದಪುಡಿ
ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯ ಯು ಕಳೆದ [illegible] ಸಾವಿರಾರು ಮ ಇದನ್ನು ಉಪಯೋಗಿಸಿ, ಸಾವಿರಾರು ಯೋಗ್ಯತಾ ಗಳನ್ನು ಕೊ ರು. ಪ್ರಸಿದ್ಧ ಈ ನಸ್ಯದ ಯಿಂದ ಸ್ವಸ್ಥ ವ ವ್ಯಾಧಿಗಳ ವವೆಂದರೆ:— ಒಂಟಿತಲೆನೋ ತಲೆಯಲ್ಲಿನ ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರ ವನ್ನಿಡಿ ಒಂದಕ್ಕೆ ಮೇಲ್ಪಟ್ಟ ೧೭ ವ್ಯಾಧಿಗ ಸ್ಪಷ್ಟಪಡಿಸಿ ಚಲಾವಣೆಯನ್ನೂ ಸಹ ಹೆಚ್ಚ ತ್ತದೆ. ಮೂಗುಪಟ್ಟಿನ ಸಾಧಾರಣ ನಸ್ಯದ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆ ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕು ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಪುಗಸಟ್ಟೆ ಕಳುಹಿಸಲಾರೆವು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸ ಮಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ
ಗುರುಬಸವ ಅಂಡ್ ಕಂಪನಿ ಲಿಮಿಟೆ
[17] ಪೋ. ಬಾ. ೫೧೦, ಮದರಾಸು.



ASIATIC GOVERNMENT SECUR
LIFE ASSURANCE CO., LTD., MYSO
ಏಷಿಯಾಟಿಕ್ ಗವರ್ನಮೆಂಟು ಸೆಕ್ಯೂ
ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರ
ಮುಖ್ಯ ಕಾರ್ಯಾಲಯ
ಬೆಂಗಳೂರು.
ನಮ್ಮ ಸಂಸ್ಥೆಯಲ್ಲಿರತಕ್ಕ ಜೀವವಿಮೆ ಸಂಘಗ ಮುಂದಾಳಾದುದು.
ಆದ್ದರಿಂದ ಯಾವಾಗಲೂ "ಏಷ್ಯಾಟಿಕ್" ಸಿಯಲ್ಲಿಯೇ ವಿಮೆಮಾಡಿರಿ.
ಏಕೆಂದರೆ ಇದರ ದರಗಳು ಬಹಳ ಕಡಿಮೆಯಾ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾ ದಾಯಕವು.
ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಬಾಂಡಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.
ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ [illegible] 31 ನೆಯ ಜುಲೈ 1927 ಕ್ಕೆ ನಡೆಯು
ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರ ರಿಗೆ ಬರೆಯಬಹುದು.
(1) ಮೆ|| ಡಿ. ರಾಜ್ಞರ್ಸ್,
ಚೀಫ್ ಏಜಂಟ್, ಮೈಸೂರು
(2) ಮೆ|| ಟಿ. ಎನ್. ಆರಾಧ್ಯ
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬ
(3) ಹೈದರಾಬಾದ ಎಜನ್ಸಿ ಹೌಸ್,
ಚೀಫ್ ಏಜಂಟ್, ಹೈದರಾಬಾದ (ದ
ನಮ್ಮ [illegible] ಮುಖ್ಯ ಏಜಂಟ
[15] ಮೈಸೂರು. *Asiatic Buildi*

ಇದು ಮೈಸೂರು ರಾಜಧಾನಿಯಲ್ಲಿರುವ ಪಂಚಾ ರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ ವೇ|| ಬ್ರ|| ಪಂಡಿತ ಶಿರ್ ಗುರುಶಾಂತಶಾ ರವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GIST… ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

VP 17 MYSO

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡ

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಸೆಪ್ಟಂಬರ್ ೧೯೨೭ [ಸಂಚಿಕೆ ೨೦.

ಶ್ರೀ ಪಂಚಾಚಾರ್ಯರ ಭಜನೆಯು, ವಿಶ್ವೇಶ್ವರನ ಉತ್ಸವವು.

ಗುಲಬುರ್ಗಾ ಜಿಲ್ಲಾ ಪೈಕಿ ಮಹಗಾಂವ ಜ್ಯೋ ಪಾಠಶಾಲೆಯಲ್ಲಿ ಶ್ರಾವಣ ಶು|| 4ರಲ್ಲಿ ಪಂಚಾಚಾ ಭಜನಾಸಂಘವು ಸ್ಥಾಪಿಸಲ್ಪಟ್ಟಿದ್ದು ಸರ್ವರಿಗೂ ತವಾಗಿದೆಯಷ್ಟೇ! ಇದೇ ಭಾದ್ರಪದ ಶುದ್ಧ 4 ರಲ್ಲಿ ಶ್ವರನನ್ನು ಸರ್ವ ವಿದ್ಯಾರ್ಥಿಗಳ ವೇದಘೋಷ ಡನೆಯೂ ಪಂಚಾಚಾರ್ಯರ ಜಯಘೋಷದೊಡ ೂ ಪಾಠಶಾಲೆಯಲ್ಲಿ ಸ್ಥಾಪಿಸಿದೆವು. ಷಟ್‌ಸ್ಥ ಹ್ಮಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ದಸ್ವಾಮಿಗಳವರು ಹಿರೇಮಠ ಚಿಕ್ಕಮಣ್ಣೂರು ರು ಅಧ್ಯಕ್ಷಸ್ಥಾನವನ್ನು ವಹಿಸಿ ವಿಶ್ವೇಶ್ವರನು ದಿವಸ ಭೂಲೋಕಕ್ಕೆ ಏಕೆ ಬಂದನು ಐದನೆಯ ವಸದಲ್ಲಿ ಅವನನ್ನು ಜಲದಲ್ಲಿ ಏನುಕಾರಣ ಮುಳುಗಿ ಸ್ತಾರೆ ಎಂಬುದನ್ನು ಸಮಸ್ತ ವಿದ್ಯಾರ್ಥಿಗಳಿಗೆ ತಿಳಿ ವಹಾಗೆ ಉಪದೇಶಮಾಡಬೇಕೆಂದು ಶ್ರೀಗಳವರು ಣೆಕೊಟ್ಟ ಪ್ರಕಾರ ಸಂಘದ ಸೆಕ್ರೆಟರಿ ಹಾಲಾರ್ಯ ರ್ ಇವರು ಸರಸವಾಗಿ ವಿಶ್ವೇಶ್ವರನಸಂಬಂಧವಾ ವ್ಯಾಖ್ಯಾನವನ್ನು ಮಾಡಿದರು. ಆಮೇಲೆ ಅಧ್ಯಕ್ಷರು ಶ್ವರನಿಗೆ ಅನಂತನಾಮಗಳು ಯಾವ ಉದ್ದೇಶ ಬಂದವು ಎಂಬ ವಿಷಯದಲ್ಲಿ ಸಂಸ್ಕೃತ ಗಣೇಶ ಣದ ಪ್ರಮಾಣಗಳಿಂದಲೂ ಲೌಕಿಕದೃಷ್ಟಿಯಿಂ ಸಮಸ್ತರಿಗೆ ತಿಳಿಯುವಹಾಗೆ ತಮ್ಮ ಅಮೃತವಾ ಂದ ಬೋಧಿಸಿದನಂತರ ಪಂಚಾಚಾರ್ಯರ ಜಯ ಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಐದನೇ ಸ ಶ್ರೀ ಪಂಚಾಚಾರ್ಯರ ಲಿಂಗೋದ್ಭವಪಟವ ವಿಶ್ವೇಶ್ವರಮೂರ್ತಿಯನ್ನೂ ಪಲ್ಲಕ್ಕಿಯಲ್ಲಿರಿಸಿ ಸ್ತ ವಿದ್ಯಾರ್ಥಿಗಳ ಭಜನೆಯು ಜಯಘೋಷ ಡನೆಯೂ ಭಕ್ತ ಸ್ತ್ರೀಪುರುಷರ ಸಮುದಾಯದಿಂದಲೂ ರದಲ್ಲಿ ಮೆರವಣಿಗೆಯು ಸಾಗಿ ವಿಶ್ವೇಶ್ವರ ರ್ತಿಯನ್ನು ಭಾವಿಗೆ ಸಾಗಗೊಳಿಸಿ ತಿರುಗಿ ಪಾಠಶಾ ಸಮಸ್ತರು ಬಿಜಯಂಗೈದನಂತರ ಪ್ರತಿಸೋಮ ಪಂಚಾಚಾರ್ಯರ ಭಜನೆಯು ಸ್ಥಿರವಾಗಿ ನಡೆಯಬೇ ಚಿಕ್ಕಮಣ್ಣೂರು ಶ್ರೀಗಳವರು ಹೇಳಿದ ಪ್ರಕಾರ ಸ್ತರು ಒಪ್ಪಿಗೆಯನ್ನಿತ್ತು, ಮಂಗಲಾಶೀರ್ವಾದ ಪಡೆದುಕೊಂಡು ತಮ್ಮ ತಮ್ಮ ಗೃಹಗಳಿಗೆ ತೆರಳಿ

ಹಾಲಾರ್ಯಶರ್ಮಾ ಜ್ಯೋತಿಷಪಾಠಶಾಲಾ,
ಮಹಗಾಂವ.

ಜಗದ್ಗುರು ಪಂಚಾಚಾರ್ಯರು ಸದಾ ರಕ್ಷಿಸಲಿ

ಅಪರಾಧ ಕಾಣಿಕಾ.

ಗುಲಬುರ್ಗಾಜಿಲ್ಲಾ ಪೈಕಿ ಭೂಸನೂರಿಗಿ ಶ್ರೀ ರೇ ಸಿದ್ಧೇಶ್ವರನ ಭಕ್ತನಾದ ಮುಚ್ಚಪ್ಪನು ಭಜನಾಸಂ ಗಣಾರಾಧನೆಯನ್ನು ಪ್ರತಿವರ್ಷದ ಪದ್ಧತಿಯ ಪ್ರಕಾರ ಈವರ್ಷ ಭಾದ್ರಪದ ಬ|| ಸೋಮವಾರ ೧ರಲ್ಲಿ ಭಕ್ತಿಯಿಂದ ಮಾಡಿ ಮಹಾಗಾಂವ ಜ್ಯೋತಿಷ ಪಾಠಶಾಲೆಯಲ್ಲಿರತಕ್ಕ ಶ್ರೀ ಷ|| ಬ್ರ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರಿಗೂ ಶ್ರೀ ಭೂಸನೂರಿ ಕಳ್ಳೀಮಠದ ಚರಮೂರ್ತಿಸ್ವಾಮಿಗಳಿಗೂ ಸಮಸ್ತ ವಿದ್ಯಾರ್ಥಿಗಳಿಗೂ ಆಮಂತ್ರಣಕೊಟ್ಟು ಇವರೆಲ್ಲರೂ ಹೋಗುವದರೊಳಗಾಗಿಯೇ ಕಲಬುರಗಿ ಗುರುಬಸವಮಠದ ವಿರಕ್ತರನ್ನು ಆ ದಿವಸ ಕರೆಯಿಸಿಕೊಂಡು ಪಾದಪೂಜಾ ಭೋಜನಾದಿ ಕಾರ್ಯಗಳನ್ನು ತೀರಿಸಿಕೊಂಡಿದ್ದನು. ಆ ಮೇಲೆ ಪಾಠಶಾಲಾ ವಿದ್ಯಾರ್ಥಿಗಳೊಡನೆ ಮೇಲೆ ಕಾಣಿಸಿದ ಉಭಯ ಮಹಾಸ್ವಾಮಿಗಳು ಹೋಗಿ ನೋಡಲಾಗಿ ಪಂಕ್ತಿ ಸಾಗಿದ್ದನ್ನು ಕಂಡು ಸ್ವಾಮಿಗಳವರು ಸಮಸ್ತ ಭಕ್ತಾದಿಗಳನ್ನು ಕರೆಯಿಸಲಾಗಿ ಆ ಗ್ರಾಮದ ಮುಖ್ಯರಾದ ಪೋಲೀಸ್‌ಪಾಟೀಲರು ಮಠಪತ್ತಿ ವೀರಶೆಟ್ಟೆಪ್ಪ ಮುಂತಾದವರು ಬಂದು ನಮ್ಮದು ತಪ್ಪಾಗಿರುವದು ಮಹಾಸ್ವಾಮಿ, ಇನ್ನು ಮೇಲೆ ಇಂಥಾ ಕಾರ್ಯವನ್ನು ಮಾಡುವದಿಲ್ಲವೆಂದು ಸಾಷ್ಟಾಂಗ ಹಾಕಿ ಆ ತಪ್ಪಿಗಾಗಿ ಎರಡು ರೂಪಾಯಿಗಳನ್ನು ತಪ್ಪುದಂಡ ಕೊಟ್ಟಿರುವದಲ್ಲದೆ ಇನ್ನು ಮೇಲೆ ವಿರಕ್ತರ ಅನುಕರಣವನ್ನೂ ಸಹ ಮಾಡುವದಿಲ್ಲವೆಂದು ಸಹಿನಿಸಿಕೊಟ್ಟಿರುತ್ತಾರೆ. ತದನಂತರ ಉಭಯ ಮಹಾಸ್ವಾಮಿಗಳು ಸಮಸ್ತ ವಿದ್ಯಾರ್ಥಿಗಳೊಡನೆ ಸ್ನಾನಶಿವಾರ್ಚನೆ ಪಾದಪೂಜಾಭೋಜನಾದಿ ಕಾರ್ಯಗಳನ್ನು ತೀರಿಸಿಕೊಂಡು ಸಮಸ್ತ ಭಕ್ತರಿಗೂ ಉಪದೇಶಪೂರ್ವಕವಾಗಿ ಆಶೀರ್ವಾದಮಾಡಿ ತಿರುಗಿ ಸಾಯಂಕಾಲಕ್ಕೆ ಮಹಗಾಂವ ಪಾಠಶಾಲೆಗೆ ದಯಮಾಡಿಸಿದರು. ಆ ತಪ್ಪುಕಾಣಿಕೆಯ ಎರಡು ರೂಪಾಯಿಗಳನ್ನು ಪಂಚಾಚಾರ್ಯಪ್ರಭೆಯ ಪೋಷಣಕ್ಕಾಗಿ ಕಳಿಸಿದ್ದೇವೆಂದು ತಿಳಿಸುವ,

ವೇ|| ಹಾಲಾರ್ಯಶರ್ಮಾ ಪಂಚಾಚಾರ್ಯ
ಭಜನಾಸಂಘ ಸೆಕ್ರೆಟರಿ, ಮಹಾಗಾಂವ.

ದನಗಳ ಪ್ರದರ್ಶನ.

ಮುದಿಯಾಗಿ ಕೆಲಸಕ್ಕೆ ಬಾರದ ದನಕರುಗಳನ್ನು ಕಾಪಾಡುವುದಲ್ಲದೆ ಪ್ರಾಣಿಗಳವಿಷಯದಲ್ಲಿ ದಯಾಬುದ್ಧಿಯನ್ನು ಜನಗಳಲ್ಲಿ ಅಭಿವೃದ್ಧಿಗೊಳಿಸುವುದನ್ನೇ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿರುವ ಮೈಸೂರು ಅಶಕ್ತಪ್ರಾಣಿಪೋಷಣಾ (ಪಿಂಜರಾಪೋಲ್) ಸಂಘದವರು ಕಳೆದ ಘೋರಯುದ್ಧಪ್ರಾರಂಭದಿಂದೀಚೆಗೆ ನಿಂತುಹೋಗಿದ್ದ ದನಗಳ ಪ್ರದರ್ಶನವನ್ನು ದಸರಾಮಹೋತ್ಸವಕಾಲದಲ್ಲಿ ಪ್ರಾರಂಭಿಸುತ್ತಾರೆ. ಪ್ರದರ್ಶನದಲ್ಲಿ ಬಹುಮಾನದ ತರಗತಿಗಳು ಅತ್ಯಂತ ಬಡಜನರಿಗೆ ಸೇರಿದ ರಾಸುಗಳಿಗೋಸ್ಕರ ಏರ್ಪಡಿಸಲ್ಪಟ್ಟಿವೆ. ಮತ್ತು ಆ ಜನರಿಗೆ ಪ್ರಾಣಿದಯಾವಿಷಯವಾಗಿ ಬೋಧಿಸಿ ಅವರ ಮೂಲಕ ಮೂಕಪ್ರಾಣಿಗಳನ್ನು ಅಭಿವೃದ್ಧಿಗೊಳಿಸತಕ್ಕ ಏರ್ಪಾಟು ಮಾಡಲ್ಪಟ್ಟಿರುತ್ತದೆ. ಆದರೆ ಸಂಘವು ಧನಾಭಾವದಿಂದ ಬಹಳ ದುರವಸ್ಥೆಯಲ್ಲಿದೆಯಾಗಿ ಈ ಮಹತ್ಕಾರ್ಯಕ್ಕೆ ಉದಾರಿಗಳಾದ ಸ್ತ್ರೀಪುರುಷರುಗಳು ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನವನ್ನು ಕೊಟ್ಟು ಬಡರೈತರನ್ನು ಉತ್ತೇಜನಗೊಳಿಸಲು ಸಹಾಯಮಾಡುವುದಾದರೆ ಅವರ ವಿಷಯದಲ್ಲಿ ಸಂಘವು ಅತ್ಯಂತ ಕೃತಜ್ಞತೆಯನ್ನು ವ್ಯಕ್ತಗೊಳಿಸುವುದು.

ಸೂಚಿಸಲ್ಪಡುವ ಬಹುಮಾನಗಳು ಈ ಕೆಳಗೆ ಕಂಡಂತೆ ಇರಬಹುದು,

20	ರೂ. ಬೆಲೆಬಾಳುವ	ಒಂದು ಬೆಳ್ಳಿ (cup) ಬಟ್ಟಲು
10	,, ,,	ಒಂದು ಬಳೆ
3-8-0	,,	ದೊಡ್ಡ ಮೆಡಲು
3	,, ,,	ಚಿಕ್ಕ ಮೆಡಲು

ನಮ್ಮ ವಾಚಕರಲ್ಲಿ ಯಾರಾದರೂ ಮೇಲ್ಕಂಡ ಬಹುಮಾನಗಳಲ್ಲಿ ಯಾವುದಾದರೊಂದನ್ನು ಮಾಡಿಸಿಕೊಡುವುದರಿಂದಾಗಲಿ ಅಥವ ಪ್ರದರ್ಶನದ ಇತರ ಕಾರ್ಯಕ್ರಮಗಳಿಗೆ ಧನರೂಪದಿಂದಾಗಲಿ ಸಹಾಯಮಾಡಲಿಚ್ಛೆಯುಳ್ಳವರು ಸಂಘದ ಸೆಕ್ರೆಟರಿಗಳಾದ ಮ|| ರಾ|| ಎಚ್. ಎಲ್. ದೇವರಾಜ ಅರ್ಸ್, ವಾಣಿವಿಲಾಸರೋಡ್ ಮೈಸೂರ್ ಇವರಿಗಾಗಲಿ ಮ|| ರಾ|| ನಾರಾಯಣ ಅಯ್ಯಂಗಾರ್ ವೆಟರನರಿ ಆಫೀಸರ್ ಮೈಸೂರು ಇವರಿಗಾಗಲಿ ತಿಳಿಸಬೇಕಾಗಿ ಕೋರುತ್ತೇವೆ.

ಗೌರವಕಾರ್ಯದರ್ಶಿಗಳು.

ಹಿಂದೀಪ್ರಚಾರಕ.

ಮದ್ರಾಸಿನಲ್ಲಿರುವ ದಕ್ಷಿಣಭಾರತ ಹಿಂದೀಪ್ರಚಾರಕಸಭೆಯ ವತಿಯಿಂದ "ಹಿಂದೀಪ್ರಚಾರಕ" ಎಂಬ ಒಂದು ಹಿಂದೀಭಾಷಾಮಯವಾದ ಮಾಸಪತ್ರಿಕೆಯು ಐದುವರ್ಷಗಳಿಂದಲೂ ಹೊರಡುತ್ತಿರುವುದು ಸರಿಯಷ್ಟೆ. ದೇವದೂತ ವಿದ್ಯಾರ್ಥಿಗಳೆಂಬುವರು ಈ ಪತ್ರಿಕೆಯ ಸಂಪಾದಕರಾಗಿರುವರು. ಈ ಪತ್ರಿಕೆಯ ಕೆಲವು ಸಂಚಿಕೆಗಳು ನಮ್ಮ ಕಡೆಗೆ ಬಂದಿರುತ್ತವೆ. ಈ ಪತ್ರಿಕೆಯ ಭಾಷಾಸರಣಿಯೂ, ಅರ್ಥಗೌರವವೂ ವಾಚಕರಮನಸ್ಸನ್ನು ಆಕರ್ಷಿಸುತ್ತಿರುವುದು. ಹಿಂದೀಭಾಷೆಯನ್ನೇ ರಾಷ್ಟ್ರೀಯಭಾಷೆಯನ್ನಾಗಿ ಮಾಡಬೇಕೆಂದು ಅನಂತವರ್ಷಗಳಿಂದಲೂ ಅನೇಕ ಪ್ರಮುಖರು ಅಲ್ಲಲ್ಲಿಯೇ ಸಭೆಗಳನ್ನು ಮಾಡುತ್ತಲಿರುವುದರಿಂದ ಈ ಮಾಸಪತ್ರಿಕೆಯು ಹಿಂದೀಭಾಷೇಚ್ಛುಗಳಿಗೆ ಸಂಪೂರ್ಣಸಹಾಯಕವಾಗಿರುವುದರಿಂದ ನಮ್ಮ ದಕ್ಷಿಣ ಭಾರತಭೂಮಿಯಲ್ಲಿರುವ ಪ್ರತಿಯೊಬ್ಬ ಹಿಂದೀಭಾಷಾಭಿಮಾನಿಯು ಈ ಪತ್ರಿಕೆಯನ್ನು ತರಿಸಿಕೊಂಡು ಹಿಂದೀಭಾಷಾಸೇವೆಯನ್ನು ಮಾಡುತ್ತಿರುವ ದೇವದೂತವಿದ್ಯಾರ್ಥಿಗಳ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಕೋರುತ್ತೇವೆ. ಸಂ.—

ವಾರ್ಷಿಕ ಚಂದಾ ೧—೮—೦.
ಹಿಂದೀಪ್ರಚಾರ ಪ್ರೆಸ್, ಟ್ರಿಪ್ಲಿಕೇನ್ ಮದ್ರಾಸ್.

ಶ್ರೀ ಸೂಚನೆ.

ನವರಾತ್ರಿಯ ಮಹೋತ್ಸವದ ನಿಮಿತ್ತವಾಗಿ ಮುಂದಣವಾರದ ಪತ್ರಿಕೆಯು ಹೊರಡುವದಿಲ್ಲವು. ಸಂ.—

ಪಂಚಾಚಾರ್ಯಪ್ರಭಾ

೧೯೨೭ ನೇ ಸೆಪ್ಟಂಬರ್ ತಾ|| ೨೬ ನೇ ಸೋಮವಾರ

ಗುರು.

ಲೋಕದಲ್ಲಿ ಪ್ರತಿಯೊಂದು ಮತಕ್ಕೆ ಸಂಸ್ಥಾಪನಾಚಾರ್ಯರಿರುವಂತೆ ವೇದಾಗಮಸಮ್ಮತವಾದ ವೀರಶೈವಮತಕ್ಕೆ ರೇಣುಕಾದಿ ಪಂಚಾಚಾರ್ಯರೇ ಸಂಸ್ಥಾಪನಾಚಾರ್ಯರಾಗಿರುವ್ರದರಿಂದ ಈ ಆಚಾರ್ಯರು [illegible] ಮತದ ಜಗದ್ಗುರುಗಳಾಗಿರುತ್ತಾರೆ. [illegible] ಗದಲ್ಲಿಯೂ ಒಂದೊಂದು ನಾಮದಿಂದ [illegible] ದಲ್ಲಿ ಒಂದೊಂದು ಲಿಂಗದಿಂದುದ್ಭವಿಸಿ [illegible] ಮಗಳನ್ನು ಮಾಡಿರುವುದಲ್ಲದೆ ವೇದವೇ[illegible] ಅಸ್ತಿತ್ವದರ್ಶನವನ್ನು [illegible] ಜಗತ್ಪ್ರಸಿದ್ಧರಾದ ಋಷಿಗಳಿಗೆ ತತ್ವೋಪದೇಶವನ್ನು ಮಾಡಿದ್ದಾರೆ. ಈ ಮೂಲಾಚಾರ್ಯರ ಕಾಲವಾದರೂ ವೇದಕಾಲದಂತೆ ಅತಿ ಪ್ರಾಚೀನವಾಗಿರುವುದು. ಈಗಲೂ ಆಯಾಯ ಮೂಲಾಚಾರ್ಯರ ಪೀಠಗಳಲ್ಲಿ ಮೂಲಾಚಾರ್ಯರ ಅನಂತರ 70-80 ನೇ ಪಟ್ಟಾಧಿಕಾರಿಗಳಿಗೆ ಅನೇಕ ರಾಜರುಗಳಿಂದ ಕೊಡಲ್ಪಟ್ಟ ಶಿಲಾಶಾಸನಗಳನ್ನೂ ಮತ್ತು ಆಚಾರ್ಯರ ಅಗಾಧವಾದ ಮಹಿಮಾಪ್ರದರ್ಶಕಗಳಾದ ಗ್ರಂಥಗಳ ಸಂದರ್ಭಗಳನ್ನೂ ಪರಿಶೀಲಿಸಿದರೆ ಅಂದಾಜು 2 ಸಾವಿರ ವರ್ಷಗಳ ಮುಂಚೆ ಮೂಲಾಚಾರ್ಯರ ಅನುಕ್ರಮವಾಗಿ ಬಂದ ಆಚಾರ್ಯಪೀಠಗಳು ಇದ್ದವೆಂದು ಸ್ಪಷ್ಟವಾಗುವಲ್ಲಿ ಇನ್ನು ಮೂಲಾಚಾರ್ಯರ ಕಾಲವು ಅದಕ್ಕಿಂತಲೂ ಎಷ್ಟೋ ವರ್ಷಗಳ ಮುಂಚೆಯೇ ಆಗಿರುವುದೆಂದು ಇದರಿಂದಲೇ ಸಿದ್ಧವಾಗುವುದು. ಮತ್ತು ಯಾವ ಋಷಿಯು ಸಮುದ್ರವನ್ನು ಪಾನಮಾಡಿದನೋ? ಯಾವನು ಸೂರ್ಯಚಂದ್ರರ ಗಮನವನ್ನು ತಡೆದ ವಿಂಧ್ಯಪರ್ವತವನ್ನು ಅದ್ದಗೆಡಹಿ ಜಗತ್ತಿಗೆ ಕಲ್ಯಾಣವನ್ನುಂಟುಮಾಡಿದನೋ? ಯಾವನು ವಾತಾಪಿ ಎಂಬ ದಾನವನನ್ನು ತನ್ನ ಕುಕ್ಷಿಯಲ್ಲಿ ಭಸ್ಮಮಾಡಿದನೋ? ಅಂತಹ ಅಗಸ್ತ್ಯಮಹರ್ಷಿಯು ಶ್ರೀ ರೇಣುಕಾಚಾರ್ಯರಿಗೆ ಶಿಷ್ಯನಾಗಿದ್ದನು.

ಪುರಾಣಪ್ರಸಿದ್ಧನಾದ ದಧೀಚಿಮಹರ್ಷಿಯು ದಾರುಕಾಚಾರ್ಯರಿಗೆ ಶಿಷ್ಯನಾಗಿದ್ದನು. ಹದಿನೆಂಟು ಪುರಾಣಗಳನ್ನೂ ವೈದಿಕಮತಗಳಿಗೆ ಆಧಾರವಾದ ಉತ್ತರಮೀಮಾಂಸೆಯನ್ನೂ ಬರೆದು ಲೋಕವಿಖ್ಯಾತನಾದ ವ್ಯಾಸಮಹರ್ಷಿಯು ಘಂಟಾಕರ್ಣಶಿವಾಚಾರ್ಯರಿಗೆ ಶಿಷ್ಯನಾಗಿದ್ದನು. ಯಮಪುರಿಯಲ್ಲಿ ನರಕಾನುಭವವನ್ನು ಮಾಡುತ್ತಿರುವವರನ್ನೆಲ್ಲ ಒಂದೇಕಾಲದಲ್ಲಿ ನರಕದಿಂದ ತಪ್ಪಿಸಿ ಉತ್ತಮಾವಸ್ಥೆಯನ್ನು ದಯಪಾಲಿಸಿದ ಸಾನಂದನೆಂಬ ಮಹರ್ಷಿಯು ಪಂಡಿತಾರಾಧ್ಯರಿಗೆ ಶಿಷ್ಯನಾಗಿದ್ದನು. ಇಂದ್ರನ ಐಶ್ವರ್ಯವನ್ನೆಲ್ಲ ಒಂದು ಕ್ಷಣಮಾತ್ರದಲ್ಲಿ ಸಮುದ್ರಪಾಲುಮಾಡಿ ದೇವತೆಗಳನ್ನೆಲ್ಲಾ ಭಿಕ್ಷಾರ್ಥಿಗಳನ್ನಾಗಿಮಾಡಿದ ದುರ್ವಾಸನೆಂಬ ಮಹರ್ಷಿಯು ವಿಶ್ವಾರಾಧ್ಯರಿಗೆ ಶಿಷ್ಯನಾಗಿದ್ದನು. ಹೀಗೆ ಪಂಚಾಚಾರ್ಯರು ಸಿದ್ಧಮಹರ್ಷಿಗಳಿಗೆ ಷಟ್‌ಸ್ಥಲ ತತ್ವೋಪದೇಶವಂ ಮಾಡಿದರೆಂದು ವೀರಮಾಹೇಶ್ವರತಂತ್ರ ಮುಂತಾದ ಅನೇಕ ಗ್ರಂಥಗಳಲ್ಲಿ ಹೇಳಿರುವುದಲ್ಲದೆ ಆಚಾರ್ಯರ ಆಯಾಯ ಕ್ಷೇತ್ರಂಗಳಲ್ಲಿ ಈಗಲೂ ಇದರಗುರುತುಗಳು ಸಹ ತೋರುವವು. ಇದರಿಂದ ಪೂರ್ವಕಾಲದಲ್ಲಿ ರೇಣುಕಾದಿ ಪಂಚಾಚಾರ್ಯರ ಮಹತ್ವವು ಎಷ್ಟರಮಟ್ಟಿಗೆ ಇತ್ತೆಂಬ ವಿಷಯ ವಾಚಕರಿಗೇನೇ ಗೊತ್ತಾಗುವದು. ಕಲಿಕಾಲಬಂದಮೇಲೆ ಈ ಪಂಚಾಚಾರ್ಯರ ಪೀಠಾರೋಹಣಮಾಡಿದವರಲ್ಲಿಯೂ ಮತಾವಲಂಬಿಗಳಾದ ಭಕ್ತರಲ್ಲಿಯೂ ಮಹತ್ವವು, ವಿದ್ಯೆಯು, ಆಚಾರವು ಕಡಿಮೆಯಾಗುತ್ತ ಬಂದುದರಿಂದ ತುಕ್ಕು ಹಿಡಿದ ಆಯುಧದಂತೆ ಈ ಮತವು ತೇಜೋಹೀನವಾಗುತ್ತಿದೆ. ಆದರೆ ಲೋಕದಲ್ಲಿ ವೃದ್ಧಿಹ್ರಾಸಗಳೆಂಬುವುಗಳು ಸ್ಥಿರಗಳಲ್ಲವು. ಜಗತ್ತನ್ನೇ ಬೆಳಗುವ ಆಕಾಶ ಸೂರ್ಯಚಂದ್ರಾದಿಗಳಿಗೆ ಅಸ್ತೋದಯಗಳು ತಪ್ಪಲಿಲ್ಲವು. ಒಂದೊಂದು ಕಾಲದಲ್ಲಿ ಯಾವಮತಗಳು ಅತ್ಯಂತ ಹೀನಾವಸ್ಥೆಯನ್ನು ಹೊಂದಿದ್ದವೋ ಅವೇ ಮತಗಳು ಒಂದೊಂದುಕಾಲದಲ್ಲಿ ಅತ್ಯಂತ ಅಭಿವೃದ್ಧಿಯನ್ನು ಹೊಂದಿರುವವು. ಹಾಗೆಯೇ ಯಾವಮತಗಳಿಗೆ ರಾಜಾಶ್ರಯವಿರುವದೋ ಆ ಮತಗಳು ಉತ್ತಮಸ್ಥಿತಿಯಲ್ಲಿರುವವು. ರಾಜಾಶ್ರಯವು ತಪ್ಪಿದಮೇಲೆ ಸ್ವಾತಂತ್ರ್ಯವಿಲ್ಲದಾಗಿ [illegible] ಚಾರಗಳು ಪ್ರಬಲಿಸಿ ಕಟ್ಟುಗಳು ಕಿತ್ತುಹೋಗಿ ಮತಗಳು ಹೀನಾವಸ್ಥೆಯನ್ನು ಹೊಂದುವದು ಸ್ವಾಭಾವಿಕವಾಗಿದೆ. ವೀರಶೈವಮತವಾದರೂ ಅನೇಕಕಾಲದಿಂದ ರಾಜಾಶ್ರಯವನ್ನು ಕಳೆದುಕೊಂಡಿತು. ಗುರುವರ್ಗದವರಾದರೂ ಮಹತ್ವಸಿದ್ಧಾಂತಾಚಾರಗಳಿಂದ ಶೂನ್ಯರಾದ್ದರಿಂದ ಹಲ್ಲುಮುರಿದ ಹಾವಿನಂತೆ ತೇಜೋಹೀನರಾದರು. ಮೂಲಪಂಚಾಚಾರ್ಯರ ಕಾಲದ [illegible] ಮಹತ್ವ, ವಿದ್ಯಾ, ಸದಾಚಾರ, ಭಕ್ತಿ [illegible] ಪದ್ಧತಿಗಳೇ ಲೋಪವಾಗಿದ್ದುದರಿಂದ [illegible] ವೀರಶೈವ ಮತಕ್ಕೆ ಗದ್ದುಗೆಯಾದ [illegible] ನಾಮಮಾತ್ರವಾಗಿ ಹೊಂದುತ್ತಿದ್ದನು. ಕೆಲವು [illegible] ಆಚಾರ ಯವ್ವ ತಪ್ಪಿದುದಲ್ಲದೆ ಮಹ[illegible] ಆಚಾರ್ಯರ ಆಶ್ರಯವೂ ತಪ್ಪಿತು. ಪವಿತ್ರಗಳಾದ ಆಚಾರ್ಯಪೀಠಗಳು ಅಜ್ಞಗುರುಗಳಿಂದ ಆಕ್ರಮಿಸಲ್ಪಟ್ಟವು. "ಯಥಾಗುರುಸ್ತಥಾ ಶಿಷ್ಯಃ" ಎಂಬಂತೆ ಶಿಷ್ಯಪ್ರಪಂಚವೆಲ್ಲಾ ಅಜ್ಞಗುರುಗಳ ಸಂಬಂಧದಿಂದ ಅಜ್ಞಾನಾಂಧಕಾರದಿಂದ ಆವೃತವಾಯಿತು. ಆಗ ಕ್ರಮತಪ್ಪಿದ ಸ್ವೇಚ್ಛಾಕಲ್ಪಿತ ಕೆಲ ಪುಸ್ತಕಗಳನ್ನು ಓದಿಕೊಂಡು ಅವರವರ ಮನಸ್ಸಿಗೆ ಏನು ತಿಳಿಯಿತೋ ಅದರಂತೆ ಅಶಾಸ್ತ್ರೀಯಗಳಾದ ನಡತೆಗಳ [illegible] ಸಂಘದಲ್ಲಿ ಬೀಳುತ್ತಬಂದುದರಿಂದ "ಗತಾನುಗತಿಕೋ ಲೋಕಃ" ಎಂಬ ನೀತ್ಯುಕ್ತಿಯಂತೆ ಅನೇಕರು ಒಬ್ಬರನ್ನು ನೋಡಿ ಒಬ್ಬರು ಅದೇ ಅಶಾಸ್ತ್ರೀಯವಾದ ನಡತೆಗಳನ್ನೇ ವ್ಯವಹಾರಕ್ಕೆ ತಂದಿರುತ್ತಾರೆ. ಇದು ವಿಸ್ತರಿಸದಂತೆ ಸಂಗ್ರಹಿಸುವೆ. ನಮ್ಮ ಭರತಖಂಡದ ಸಾರ್ವಭೌಮರ ಆಗಿನ ಸ್ವಾಧೀನಕಾಲದಲ್ಲಿ ಪ್ರತಿಯೊಂದು ಜನಾಂಗಕ್ಕೂ ಗ್ರಂಥಗಳ ಲಾಭವಾಗುವದಕ್ಕೆ ಓದುವದಕ್ಕೂ ತಕ್ಕ ಸೌಕರ್ಯಗಳು ಕಲ್ಪಿತಗಳಾದುದರಿಂದ ಪ್ರತಿಯೊಂದು ಜನಾಂಗವೂ ನೀರಲ್ಲಿ ಕಣ್ಣು ಬಿಟ್ಟಂತೆ ಅಲ್ಲಲ್ಲಿಯೇ ತತ್ವಶಾಸ್ತ್ರಾಂಗಗಳಾದ ತರ್ಕವ್ಯಾಕರಣಾದಿ ಶಾಸ್ತ್ರಗಳನ್ನು ಓದುತ್ತ ಅವರವರ ಮತಸಿದ್ಧಾಂತಗಳನ್ನು ತಿಳಿಯುತ್ತ ಬಂದುದಾಗಿಲ್ಲ ಬುದ್ಧಿ [illegible] ಅತ್ತ ಪರೋಪದಲ್ಲಿ ಅಶಾಸ್ತ್ರೀಯಗಳಾದ ಸ್ವೇಚ್ಛಾಚಾರಗಳೆಂಬ ಮದಗಜಗಳು ಪ್ರವೇಶಮಾಡಿ ಧ್ವಂಸನಮಾಡಿರುವುದೆಂದು ತಿಳುವಳಿಕೆಗೆ ಬರುತ್ತಿರುವದು. ಈ ಸಂದರ್ಭದಲ್ಲಿ ಸ್ವಯಂದ [illegible] ಶಾಸ್ತ್ರವನ್ನು ತವಾಗದ ನಡತೆಯಲ್ಲಿಯೇ ಇದ್ದು ಅದೇ ಅತ್ಯಂತವಾಗಿ ನ್ಯಾಯ ಎಂದು ಭ್ರಮಿಸಿರುವುದರಿಂದ ಶಾಸ್ತ್ರೀಯವಾದ ನಡವಳಿಕೆಯನ್ನೇನಾದರೂ ಯಾರಾದರೂ ಹೇಳಿದರೆ ತಮ್ಮ ಅಭಿಪ್ರಾಯಕ್ಕೆ ವಿರೋಧವಾದುದರಿಂದ ಬೆಂಕೆಯನ್ನು ನೋಡಿದ ಸಿಂಹದಂತೆ ಆರ್ಭಟಿಸುತ್ತಾರೆ. ಹೀಗೆ ಆರ್ಭಟಿಸುವರು ಸಿದ್ಧಾಂತಪ್ರಚಾರೇಚ್ಛೆಯುಳ್ಳವರು. ಕೋಪಿಸುವುದು ಸರಿಯಲ್ಲವು. ಅದು ಅವರ ತಪ್ಪೆಂದು ಹೇಳಬಾರದು. ಕಲಿಕಾಲದ ಅನುಭವದೋಷವಾಗಿದೆ. ಇಂಥವರನ್ನು ಸನ್ಮಾರ್ಗಕ್ಕೆ ತರುವ ಕಾರ್ಯ ಶಾಸ್ತ್ರೀಯ ಮಾರ್ಗದಿಂದ ಕ್ರಮವಾಗಿ ಮಾಡಬೇಕಲ್ಲದೆ ಬಲಾತ್ಕಾರವಾಗಿ ಮಾಡಿದರೆ ಸಾಫಲ್ಯವಾಗುವುದಕ್ಕೆ ಪ್ರಾರಂಭವಾಗುವುದು. ಮನುಷ್ಯನಿಗೆ ವಿವೇಕವು ಬಂದಹೊರತು ಸುಧಾರಿಸುತ್ತ ಹೋಗಲಾರನು. ತಿಳಿದವರು ಅವಿವೇಕಮಾರ್ಗದಲ್ಲಿ ಪ್ರವೇಶಿಸಲಾಗದು. ಇದೇ ಮನುಷ್ಯನ ಜೀವನದ ಸಫಲವಾಗಿದೆ. ಇನ್ನು ವಿವೇಕೋದಯದ ಒಂದೆರಡು ದಾರಿಗಳಲ್ಲಿ ದುಸ್ಸಮಾರ್ಗಗಳಿದ್ದರೆ ಅವುಗಳೆಲ್ಲವನ್ನು ಬಿಡಲಿಕ್ಕೆ ಸಾಧ್ಯವಿಲ್ಲ. ಕಟ್ಟಿದವುಗಳು ಒಂದೇದಿವಸ ನಿಲ್ಲಲಾರದು. ಇಂಥವರ ಆಲಿಸುವಿಕೆಗೆ ಮನಗೊಡದೆ ಅಧರ್ಮಕ್ಕೆ ಸಹ ಪ್ರವೇಶಿಸದೆ ಧರ್ಮಮಾರ್ಗವನ್ನು ಪ್ರಚಾರಗೊಳಿಸುತ್ತ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವತತ್ವವನ್ನು ಪಂಡಿತರ ರೂ ತಿಳಿದು ಸ್ಥಾಪಕರಾದ ಪಂಚಾಚಾರ್ಯರಲ್ಲಿ ಶಿಕ್ಷಣಭಕ್ತಿಯಿಂದ ನಡೆದು ಪ್ರಸಾದದಿಂದ ಅಸದಾಚಾರಗಳನ್ನೆಲ್ಲಾ ದೂರಮಾಡಿ ಗುರುಕ ದ್ವಾರಾ ಪರಮೇಶ್ವರನಸ್ಥಾನಕ್ಕೆ ಪಾತ್ರರಾಗತಕ್ಕ ಲಿಂಗಾಂಗಿಗಳ ಧರ್ಮರಹಸ್ಯವು.

ಒಳದೇಶದ ವೃತ್ತಾಂತಗಳ

ಮೈಸೂರು ಪ್ರಜಾಪ್ರತಿನಿಧಿಸಭೆಯು ಮು ತಿಂಗಳು 7 ನೇ ತಾರೀಖಿನಿಂದ ಮೈಸೂರು ಜಗನ ಹನ ಪ್ರಾಸಾದದಲ್ಲಿ ಉಪಕ್ರಮವಾಗುವದು.

ಮೈಸೂರು ಸರ್ಕಾರದವರು ನಂಜನಗೂಡು ತಾ ಕಿಗೆ ಸೇರಿದ ಬದನವಾಳುಗ್ರಾಮದಲ್ಲಿ ನೂಲುವ ಯೊಂದನ್ನು ಏರ್ಪಡಿಸುತ್ತಾರೆಂದು ತಿಳಿಯಬರು

ಸರ್ ಎಂ. ವಿಶ್ವೇಶ್ವರಯ್ಯನವರ ತಮ್ಮಂದಿ ಮ|| ರಾ|| ಎಂ. ರಾಮಚಂದ್ರರಾವ್ ಬಿ.ಎ. ಬಿ. ರವರನ್ನು ಬರುವ ಅಕ್ಟೋಬರ್ ತಾ|| 14ರಿಂದ ವರ್ಷದಮಟ್ಟಿಗೆ ಚೀಫ್‌ಕೋರ್ಟಿನ 4ನೆಯ ಜಡ್ಜಿ ರ ಸ್ಥಾನಕ್ಕೆ ಸರ್ಕಾರದವರು ನಿಯಮಿಸಿರುತ್ತಾರೆ.

ಈಸಾರೆ ರಾಜಧಾನಿಯಲ್ಲಿ ನಡೆಯುವ ಅಖಿ ರತೀಯ ವಸ್ತುಪ್ರದರ್ಶನವು ರೈಲ್ವೆ ಸ್ಟೇಷನ್ ಯಲ್ಲಿರುವ ಸವಾರ್‌ಲೈನ್ ಕಟ್ಟಡದಲ್ಲಿ [illegible] ದಿವಸ ಮಹಾರಾಜರಿಂದ ತೆರೆಯಲ್ಪಟ್ಟು ಹದಿನೈದು ದಿ ವರೆಗೆ ಪ್ರಜೆಗಳ ನೋಟಕ್ಕೆ ಇಡಲ್ಪಡುವದೆಂದು ತ್ತೇವೆ.

ದಸರಾ ಮಹೋತ್ಸವಕ್ಕಾಗಿ ಮೈಸೂರಿಗೆ ಬ ರೈಲ್ವೆ ಪ್ರಯಾಣಿಕರಿಗೆ ಕಳೆದ ತಾ|| 20 ರಿಂದ ಅಕ ಬರ್ ತಾ|| ೮ರ ವರೆಗೆ ಹೋಗಿಬರುವ ಟಿಕೆಟ್ಟು ಒಂದೇ ಛಾರ್ಜಿಗೆ ಕೊಡಲ್ಪಡುವವು. ಆ ಟಿಕೆಟ್ಟು ಅಕ್ಟೋಬರ್ ತಾ|| 15ರ ಮಧ್ಯರಾತ್ರಿಯವರೆಗೆ ವ ಉಪಯೋಗಕ್ಕೆ ಬರುವವು.

ಶ್ರೀ ಜಗದ್ಗುರು ರಂಭಾಪುರೀ ಮಹಾಸ್ವಾಮಿ ವರ ದಸರಾಮಹೋತ್ಸವವು ಈಸಾರೆ ನೊಳಂಬ ತಾ ಕು ಆಸವಟ್ಟಿಗ್ರಾಮದಲ್ಲಿ ನೆರವೇರುವದೆಂದೂ ಗ್ರಾಮವು ಶಿರಾಳಕೊಪ್ಪದಿಂದಲೂ, ಶಾನಗಲ್ಲಿ ಲೂ ೧೬ ಮೈಲು ಆಗುವದೆಂದೂ ಸರ್ವ ಗುರುಭ ಉತ್ಸವಕ್ಕೆ ಆಗಮಿಸಿ ಧನ್ಯರಾಗಬೇಕೆಂದೂ ಸಂ ನದ ಮ್ಯಾನೇಜರವರು ತಿಳುಹಿಸುತ್ತಾರೆ.

ನವರಾತ್ರಿಮಹೋತ್ಸವ ಪ್ರೋಗ್ರಾಂ

(ಪ್ರಭವನಾಮಸಂವತ್ಸರದ ಆಶ್ವಯುಜಶುದ್ಧ)
ಸೆಪ್ಟಂಬರ್ ಮತ್ತು ಅಕ್ಟೋಬರ್, 1927.

ಸೆಪ್ಟಂಬರ್ ತಾ|| 26 ನೇ ಸೋಮವಾರ-ಪ್ರಾ ಕಾಲ 3½ ಘಂಟೆಗೆ ಶ್ರೀಮನ್ಮಹಾರಾಜರವರು ಸಿಂ ಸನಾರೋಹಣವನ್ನು ಮಾಡುತ್ತಾರೆ. ದಿವಾನರಿಂದ ಬಾಸಾ ಭಾವಮೈದುಂದರಿಂದಲೂ, ಕೌನ್ಸಿಲರುಗ ದಲೂ, ಸರದಾರರುಗಳಿಂದಲೂ, ಮತ್ತು ಮುಖ್ಯ ಅರಸುಗಳಿಂದಲೂ ನಜರ್.- ಸಾಯಂಕಾಲ 6 ಘಂ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಯಮಾಡುವುದು. 7 ಘಂಟೆಗೆ ದರ್ಬಾರ್. ಸಿವಿಲ್ ಆ ಸರುಗಳಿಂದಲೂ ಮತ್ತು ಅರಸುಗಳು ಮುಂತಾದವ ದಲೂ ನಜರ್.

ತಾ|| 27 ನೇ ಮಂಗಳವಾರ- ಪ್ರಾತಃಕಾಲ 8 ಟೆಗೆ ಪಟ್ಟದಆನೆ ಮತ್ತು ಪಟ್ಟದಕುದುರೆ ಕೆರೆಬಳಿಗೆ ಯಮಾಡುವುದು.- ಸಾಯಂಕಾಲ 6 ಘಂಟೆಗೆ ಪ ಆನೆ ಮತ್ತು ಪಟ್ಟದಕುದುರೆ ಕೆರೆಬಳಿಗೆ ವಿಜಯಮಾಡು ವುದು. 7 ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸ ಳಿಂದಲೂ ಮತ್ತು ಪೋಲೀಸ್ ಆಫೀಸರುಗಳಿಂದ ನಜರ್.

ತಾ|| 28 ನೇ ಬುಧವಾರದಿಂದ ಅಕ್ಟೋಬರ್ 4ನೇ ಮಂಗಳವಾರದವರಿವಿಗೂ ಪ್ರತಿದಿನ ಪ್ರಾತಃ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಬಳಿಗೆ ವಿಜಯಮಾಡುವುದು.- ಸಾಯಂಕಾಲ 6 ಘಂ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಯಮಾಡುವುದು. 7 ಘಂಟೆಗೆ ದರ್ಬಾರ್.

...ಬರ್ ತಾ|| 5 ನೇ ಬುಧವಾರ ಪ್ರಾತಃಕಾಲ
...ಂಟೆಗೆ ಪಟ್ಟದ ಆನೆ ಪಟ್ಟದ ಕುದುರೆ ಮತ್ತು
...ಕರೆ ಬಳಿಗೆ ದೇವಿದು ಅರಮನೆಗೆ 9 ಘಂಟೆಗೆ
...ಬರುವದಾಗುವದು. ನಂತರ ಆಯುಧಗಳಾ
... ಪೂಜೆ. ಸಾಯಂಕಾಲಕ್ಕೆ 7 ಘಂಟೆಗೆ ದರ್ಬಾರ್
...ಪಿಯನ್ ಗೆಸ್ಟ್ಸ).

6 ನೇ ಗುರುವಾರ ಪ್ರಾತಃಕಾಲ 7 ಘಂಟೆಗೆ
...ಗಚಾರ್ಯಾದಿಗಳು ಬನ್ನೀಮಂಟಪಕ್ಕೆ ಬಿಜಯ
...ದು. ಅನಂತರ ಜಟ್ಟೀಕಾಳಗ. ಸಾಯಂಕಾ
...ಂಟೆಗೆ ಜಂಬೂಸವಾರಿ.

7 ನೇ ಶುಕ್ರವಾರ ಸಾಯಂಕಾಲ 7½ ಘಂ
...ರ್ಬಾರ್. ಪಟ್ಟಿ ದರ್ಬಾರುಗಳಲ್ಲಿ ನಜರನ್ನು
...ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀ
...ಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗ
... ನಜರ್.

8 ನೇ ಶುಕ್ರವಾರ ಸಾಯಂಕಾಲ 7½ ಘಂ
...ರ್ಬಾರ್.

ವರ್ತಮಾನಸಂಗ್ರಹ.

...ಜಾಫದೇಶದ ನಿರಾಶ್ರಿತಜನರ ಫಂಡಿಗೆ ಈ ವರೆ
...0000 ರೂಪಾಯಿಗಳ ವರೆಗೆ ಫಂಡು ಶೇಖರಿಸಿ
...ದು ಪ್ರಸಿದ್ಧವಾಗಿರುವದು.

...ರ್ಷ ಮದ್ರಾಸ್ ಪಟ್ಟಣದಲ್ಲಿ ನೆರವೇರುವ ರಾ
...ಮಮಹಾಸಭೆಯ ಖರ್ಚಿಗಾಗಿ 2 ಲಕ್ಷ ರೂಪಾ
... ಖರ್ಚಾಗಬಹುದೆಂದು ಅಂದಾಜು ಮಾಡಲ್ಪ

...ದರಾಬಾದಿನ ನಿಜಾಂಸಾಹೇಬರವರು ಅಜ
...ನ್ನಿಯ ಮಸೀದಿಗಳ ಜೀರ್ಣೋದ್ಧಾರಕ್ಕಾಗಿ
...00 ರೂಪಾಯಿಗಳನ್ನು ಕೊಡಲು ನಿಶ್ಚಯಿಸಿರು

...ಸಂಚವನ್ನೆಲ್ಲ ಸೈಕಲ್ಲಿನಮೇಲಿಂದ ಸುತ್ತಲು
...ಣಮಾಡಿದ ಆರುಜನ ಭಾರತೀಯರಲ್ಲಿ ಮೂರು
... 41000 ಮೈಲಿಗಳವರೆಗೆ ಸಂಚರಿಸಿ ಹಿಂದುಸ್ಥಾ
...ಮರಳಿಬಂದರು.

...ವಾಡದಲ್ಲಿ ಈಗ ಒಂಭತ್ತು ವರ್ಷಗಳಿಂದ ಹೊ
...ದ್ಧ ಕಾನಡಾಧುರೀಣ ಎಂಬ ಹೆಸರಿನ ಪತ್ರಿ
... ಈ ತಿಂಗಳು 27 ನೇ ತಾರೀಖಿನಿಂದ ಕರ್ನಾ
...ಧುರೀಣ ಎಂಬ ಹೆಸರಿನಿಂದ ಹೊರಡುವದೆಂದು
...ತ್ರಿಕೆಯ ಮ್ಯಾನೇಜರ್‌ರವರು ತಿಳುಹಿಸಿದ್ದಾರೆ.

...ಪಾಲಸಂಸ್ಥಾನದ ಬೇಗಂರವರು ಹಿಂದುಸ್ಥಾ
...ನಾಯಕರವರಿಗೆ ಹಿಂದೂಮಹಮ್ಮದೀಯರಲ್ಲಿ
...ನೇ ಪ್ರಜ್ವಲಿಸುತ್ತಿರುವ ದ್ವೇಷಾಗ್ನಿಯನ್ನು
...ಮಾಡಿ ಭರತಖಂಡಕ್ಕೆ ಕೂಡಲೆ ಸೌಖ್ಯವನ್ನು
...ಡಬೇಕೆಂಬ ಅಭಿಪ್ರಾಯಗರ್ಭಿತವಾದ ವಿಷಯ
ತಂತಿಯಮೂಲಕ ತಿಳುಹಿಸಿರುತ್ತಾರೆ.

...ಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಕೊಟ್ಟೂರು ಎಂಬ
...ಮದಲ್ಲಿ ಈ ತಿಂಗಳು 17 ನೇ ತಾರೀಖಿನ ದಿವಸ
...ಂಕರವಾದ ಮಳೆಯಾಗಿ 400-500 ಮನೆಗಳು
...ರುವವೆಂದೂ 10-12 ಸಾವಿರ ರೂಪಾಯಿಗಳವರೆಗೆ
...ವಾಗಿರುವದೆಂದೂ ಸದರಿ ಗ್ರಾಮದ ಮ|| ರಾ||
...ಟ್ಟರ ದೊಡ್ಡರುದ್ರಪ್ಪನವರು ತಿಳಿಸಿರುತ್ತಾರೆ.

...ಮೇರಿಕೆಯಲ್ಲಿ ಒಬ್ಬ ಶ್ರೀಮಂತನು ತನ್ನ ಮಗ
... ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿ
...ಗ್ಗೆ ಅಕಸ್ಮಾತ್ ಮೋಟಾರಿಗೆ ಅಪಾಯವು
...ಸಿ ಮಗಳಕಾಲಿಗೆ ಸ್ವಲ್ಪ ಗಾಯವಾದ್ದರಿಂದ
...ಳು ತನ್ನ ಸೌಂದರ್ಯಕ್ಕೆ ಚ್ಯುತಿಯು ಬಂದಿತೆಂದು
...ಮ ತಂದೆಯಮೇಲೆ 1,30000 ರೂಪಾಯಿಗಳಿಗೆ
...ರ್ಟಿನಲ್ಲಿ ದಾವೆಯನ್ನು ತಂದಿರುವಳಂತೆ.

...ಇಂಗ್ಲಂಡಿನಲ್ಲಿ ಬೋರ್ನಮೌತ್‌ನಿಂದ ಲಂಡನ್ನಿಗೆ
...ಗುತ್ತಿದ್ದ ಪೋಸ್ಟುಗಾಡಿಯಲ್ಲಿ ಅಂದಾಜು 8-10
...ದ ಸ್ಟರ್ಲಿಂಗು ಬೆಲೆಬಾಳುವ ನೋಟುಗಳು ಮಾ
...ಯವಾಗಿವೆಯಂತೆ. ನೋಟುಗಳಿರುವ ಚೀಲವನ್ನು
...ನೋಡುವಲ್ಲಿ ಚೂರುಕಾಗದಗಳೂ, ಕಸಕಡ್ಡಿಗಳೇ ತುಂಬಿದ್ದು ಚೀಲದ ಹೊರರೂಪಮಾತ್ರ ಮೊದಲಿನಂತೆಯೇ ಕಾಣುತ್ತಿದ್ದಿತಂತೆ! ಇದೇ ಅಲ್ಲವೇ ಚೋರಶಾಸ್ತ್ರದ ರಹಸ್ಯ.

ನಿಜಾಂರಾಜ್ಯಕ್ಕೆ ಸೇರಿದ ಪರಭಣಿಜಿಲ್ಲೆಯ ಪಾಂಚಾಲೆ ಎಂಬ ಗ್ರಾಮದಲ್ಲಿ ಒಬ್ಬ ಯೋಗಿಯು ಒಂದು ಗವಿಯಲ್ಲಿ ವಾಸಮಾಡಿಕೊಂಡು ಸದಾ ಶಿವಪೂಜೆಯಲ್ಲಿಯೇ ಕಾಲಕಳೆಯುತ್ತಿರುವನೆಂದೂ ಇವನ ಹತ್ತರ ಸರ್ಪಗಳು, ಮುಂಗಲಿಗಳು, ನವಿಲುಗಳು ತಮ್ಮ ತಮ್ಮಲ್ಲಿರತಕ್ಕ ದ್ವೇಷಭಾವಗಳನ್ನು ದೂರೀಕರಿಸಿ ಆನಂದದಿಂದ ಇರುತ್ತವೆಂದೂ ತಿಳಿದುಬರುತ್ತದೆ. ಇದೇ ಅಲ್ಲವೆ ಯೋಗದಮಹಿಮೆಯು.

ಲಂಡನ್‌ಪಟ್ಟಣದಲ್ಲಿ ಭರತಖಂಡದ ಮಾರ್ವಾಡಿಗಳೆಲ್ಲರೂ ಕೂಡಿ ಒಂದು ರಾಮದೇವರ ಮೂರ್ತಿಯನ್ನು ಸ್ಥಾಪನಮಾಡಿದ್ದಾರಲ್ಲದೆ ಒಂದು ಸಂಸ್ಕೃತಪುಸ್ತಕಾಲಯವನ್ನು ಸಹ ಸ್ಥಾಪಿಸಿ ಪಾಠಶಾಲೆಯನ್ನು ಏರ್ಪಡಿಸಿದ್ದಾರೆ. ಹಾಗೂ ಆ ಮಂದಿರದ ಒಂದು ಭಾಗದಲ್ಲಿ ಹಿಂದೂಜನರ ವಾಸಕ್ಕೂ ಭೋಜನಾದಿಗಳಿಗೂ ಯೋಗ್ಯ ವ್ಯವಸ್ಥೆಯನ್ನೂ ಸಹ ಮಾಡಿರುತ್ತಾರೆ. ಇದು ಸ್ತುತ್ಯವಾದ ಕಾರ್ಯವಾಗಿದೆ.

ಮತಸ್ಥಾಪಕರ ವಿಷಯದಲ್ಲಿ ಯಾವ ನಿಂದಾರೂಪವಾದ ಗ್ರಂಥಗಳನ್ನೂ ಉಪನ್ಯಾಸಗಳನ್ನೂ ಹಾಗೂ ಲೇಖಗಳನ್ನೂ ಬರೆಯಕೂಡದೆಂಬ ಬಗ್ಗೆ ಇಂಡಿಯಾ ಗವರ್ನಮೆಂಟಿನ ನ್ಯಾಯವಿಧಾಯಕಸಭೆಯಲ್ಲಿ ಚರ್ಚೆಯು ನಡೆಯುತ್ತಿದೆ. ಇದಕ್ಕೆ ಮುಸಲ್ಮಾನ ಧರ್ಮಸ್ಥಾಪಕನಾದ ಮಹಮ್ಮದಪೈಗಂಬರನ ವಿಷಯದಲ್ಲಿ ಟೀಕಾರೂಪವಾಗಿ ಬರೆದ ಗ್ರಂಥವೇ ಮೂಲಕಾರಣವಾಗಿದೆ. ಹಿಂದುಸ್ಥಾನದಲ್ಲಿ ಈ ಕಾನೂನನ್ನು ಜಾರಿಗೆ ತರುವದು ಅವಶ್ಯಕವಾಗಿದೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಕೋಣನ ಕುಣಿದಾಟ.

ಈ ತಿಂಗಳ 23 ನೆಯ ತಾರೀಖಿನ ಲೋಕಮತದಲ್ಲಿ ಪಿ. ವಿರೂಪಾಕ್ಷಪ್ಪ ಎಂಬ ಲೇಖಕನು ಆಪಿಯ ಕಲಕಲಾಟ ಎಂಬ ಲೇಖವನ್ನು ಬರೆದು ಮನಸ್ಸಿಗೆ ಕುಣಿದಾಡಿರುವದರಿಂದ ಈ ಲೇಖವನ್ನು "ಕೋಣನ ಕುಣಿದಾಟ" ಎಂಬ ಹೆಸರಿನಿಂದ ಬರೆಯುವಪ್ರಸಂಗವು ಬಂದಿತು. ಆ ಲೇಖಕನು ಸ್ವಾಮಿ ರಾಮಕೃಷ್ಣ ಪರಮಹಂಸರ ದೃಷ್ಟಾಂತವನ್ನು ಕೊಟ್ಟು ಆಚಾರಿಯವರಿಗೆ ಸಿದ್ಧಾಂತವಿರುವದೆಂದು ಬಡಬಡಿಸಿದ್ದಾನೆ. ಸ್ವಾಮಿ ರಾಮಕೃಷ್ಣ ಪರಮಹಂಸರ ಯೋಗ್ಯತೆ ಯಾವದು? ಅವರ ವೃತ್ತಿಯೆಂತಹದು? ಅವರ ಪೂರ್ವಜನ್ಮದ ವಿದ್ಯಾಸಂಸ್ಕಾರವೆಂತಹದು? ಎನ್ನುವದನ್ನು ಆಲೋಚನೆಮಾಡದೆ ಊರೂರಿಗೆ ದುಡ್ಡು ಎತ್ತಲಿಕ್ಕೆ ಹೋಗಿ ಹೊಟ್ಟೆಹೊರಕೊಳ್ಳುವ ಆಚಾರಿಯವರ ಪಕ್ಷವನ್ನು ಸಾಧಿಸಿರುವದು ತುಚ್ಛವಾದ ವಿಷಯವಾಗಿದೆ. ಇರಲಿ; ಬಸವನು ಜಗದ್ಗುರುವಂತೆ! ವೀರಶೈವರೆಲ್ಲ ಬಸವಸಾಂಪ್ರದಾಯಕರಂತೆ!! ಅಯ್ಯೋ ಮಂದಾ—ಬಸವನಕಾಲದಲ್ಲಿ ಲಿಂಗವನ್ನು ಕಟ್ಟಿಕೊಂಡ ನಿನ್ನ ವಂಶದವರಿಗೆಮಾತ್ರ ಬಸವನು ಗುರುವಾದಾನು. ನೀನು ಮಾತ್ರ ಬಸವಸಾಂಪ್ರದಾಯಕನಾಗಬಹುದು; ಶುದ್ಧಸಾಂಪ್ರದಾಯಕರಾದ ವೀರಶೈವರಿಗೆ ಈ ಸಂಬಂಧವನ್ನು ಹಚ್ಚಿ ಪಾಪವನ್ನು ಕಟ್ಟಿಕೊಳ್ಳುವಿಯಲ್ಲ? ಧಿಕ್ಕ! ಧಿಕ್ಕ! ಅಭಿಮಾನಪಿಶಾಚವು ನಿನ್ನನ್ನು ಬಲವತ್ತಾಗಿ ಆಕ್ರಮಿಸಿದೆ. ಇದು ಅಲ್ಪಮಂತ್ರಪ್ರಯೋಗದಿಂದ ಬಿಡುವದಲ್ಲವೆಂದು ಕಂಡುಬರುತ್ತದೆ. ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದವರು ಮತಸ್ಥಾಪನಾಚಾರ್ಯರಲ್ಲವೆಂದು ಬಡಬಡಿಸಿರುವಿ. ನೀನು ದೊಡ್ಡಪಂಡಿತನಿದ್ದಂತೆ ತೋರುತ್ತದೆ. ಸರ್ವರೂ ಶಾಸ್ತ್ರಾಭ್ಯಾಸವನ್ನು ನಿನ್ನಲ್ಲಿಯೇ ಮಾಡಬೇಕು. ಈ ಬಸವಕುಲದವನಿಗೆ ಶಾಸ್ತ್ರದ ತಾರತಮ್ಯವೇನು ಗೊತ್ತು? ಇತನಿಗೆ ಉಪದೇಶಮಾಡಿಯಾದರೂ ಏನುಪ್ರಯೋಜನವು? ಕೆಲಸಕ್ಕೆಬಾರದ ಇಂಥ ವ್ಯಕ್ತಿಗಳೇ ಮನಸ್ಸಿಗೆಬಂದಂತೆ ಬರೆದು ಸಮಾಜದಲ್ಲಿ ಗೊಂದಲವನ್ನೆಬ್ಬಿಸಿ ದೊಡ್ಡದೊಡ್ಡವರ ಮನಸ್ಸನ್ನು ಕೆಡಿಸಿಬಿಡುತ್ತಾರೆ. ಆದುದರಿಂದ ಇಂಥ ಲೇಖಕರು ಮೌನದಿಂದಿದ್ದು ಸಮಾಜಕ್ಕೆ ಉಪಕಾರವನ್ನು ಮಾಡುವರೆಂದು ನಂಬಿದ್ದೇನೆ.

ಎಸ್. ಎ. ಸಿದ್ಧಲಿಂಗಪ್ಪ.

ಪ್ರಕಟನೆ.

ನಮ್ಮ ಪ್ರೆಸ್ಸಿನ ವ್ಯವಸ್ಥೆಯನ್ನು ನೋಡಿಕೊಂಡು ಹೋಗಲಿಕ್ಕೆ ಮ್ಯಾನೇಜರರು ಬೇಕೆಂದು ಜಾಹಿರಾತುಕೊಟ್ಟ ಮೇರೆಗೆ 40-50 ಜನರು ಬರೆದುಕೊಂಡಿದ್ದಾರೆ. ಅವರಲ್ಲಿ 2-3 ಜನರುಮಾತ್ರ ಪ್ರಿಂಟಿಂಗ್‌ಪ್ರೆಸ್ಸಿನ ಅನುಭವವುಳ್ಳವರಾಗಿದ್ದಾರೆ. ನಮಗೆ ಪ್ರೆಸ್ಸಿನ ಅನುಭವವುಳ್ಳವರು ಬೇಕೇ ಹೊರತು ಅನನುಭವಿಗಳು ಬೇಕಾಗಿಲ್ಲವೆಂಬ ಅಂಶವನ್ನು ಅರ್ಜಿದಾರರು ತಿಳಿಯತಕ್ಕದ್ದು.

ಪ್ರೊಪ್ರೈಟರ್,
ಶ್ರೀ ಪಂಚಾಚಾರ್ಯ ಪ್ರಿಂಟಿಂಗ್‌ಪ್ರೆಸ್.

ಸ್ವೀಕಾರ.

ಶ್ರೀ ಜಗದ್ಗುರು ರೇಣುಕವಿಜಯ ಪುರಾಣಸಮಾಪ್ತಿಕಾಲದಲ್ಲಿ ಹಾವೇರಿ ಮ|| ರಾ|| ಎರೇಶೀಮೆ ರಾಚಪ್ಪನವರು 5 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಮೈಸೂರು ರಾಜಧಾನಿಯ ಹುಜೂರ್ ಪ್ರಧಾನದಲ್ಲಿರುವ ಮ|| ರಾ|| ಗುರಿಕಾರ್ ಬಸಲಿಂಗಪ್ಪನವರು ತಮ್ಮ ಪುತ್ರಿಯ ಪುತ್ರನ ಲಿಂಗಧಾರಣಸಮಯದಲ್ಲಿ 2 ರೂಪಾಯಿಗಳನ್ನು ತೆಗೆದು ಈ ಪತ್ರಿಕೆಯ ಪೋಷಣಕ್ಕಾಗಿ ಕಳುಹಿಸಿದ್ದಾರೆ.

ತಿಪಟೂರುವಾಸಿಗಳಾದ ಮ|| ರಾ|| ಬೇಗೂರು ಚಿಕ್ಕಚನ್ನಬಸಪ್ಪನವರು, ಕೋಟಪ್ಪನವರು ಇವರು ಈ ಪತ್ರಿಕೆಯ ಪೋಷಣಕ್ಕಾಗಿ ವೇ|| ರಾಣೆಬೆನ್ನೂರು ಮಳೆಮಠದ ಮಲ್ಲಿಕಾರ್ಜುನಯ್ಯನವರ ದ್ವಾರಾ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ನಿಜಾಮರಾಜ್ಯಕ್ಕೆ ಸೇರಿದ ಭೂಗನಗಿಗ್ರಾಮದ ಓರ್ವಭಕ್ತನು ಗುರುವರ್ಗದಸ್ವಾಮಿಗಳಿಗೆ ಬಿನ್ನಹಮಾಡಿದ್ದು ಇವರನ್ನು ಬಿಟ್ಟು ಬೇರೆ ವಿರಕ್ತರಿಂದ ಕಾರ್ಯವನ್ನು ನಡೆಯಿಸಿಕೊಂಡದ್ದರಿಂದ ಆ ತಪ್ಪಿಗಾಗಿ ದೈವದವರು 2 ರೂಪಾಯಿಗಳನ್ನು ಅಪರಾಧಕಾಣಿಕೆಯನ್ನಾಗಿ ತೆಗೆಯಿಸಿದ್ದರಿಂದ ಆ ರೂಪಾಯಿಗಳನ್ನು ವೇ|| ಹಾಲಾರ್ಯಶರ್ಮಾ ಮಹಾಗಾಂವ ಸಂಸ್ಕೃತಪಾಠಶಾಲಾ ಇವರು ಈ ಪತ್ರಿಕೆಯ ಪೋಷಣಕ್ಕಾಗಿ ಕಳುಹಿಸಿರುತ್ತಾರೆ.

ನ್ಯಾಮತಿಗ್ರಾಮವಾಸಿಗಳಾದ ಮ|| ರಾ|| ಹುರುಕಡ್ಲಿ ಸಣ್ಣವಿರುಪಣ್ಣನವರು, ಮ|| ರಾ|| ಹುರುಕಡ್ಲಿ ಜಂಬಪ್ಪನವರು, ಮ|| ರಾ|| ಮೋತಿಬೆನ್ನೂರು ಸಣ್ಣಬಸಪ್ಪನವರು, ಮ|| ರಾ|| ಹುರುಕಡ್ಲಿ ದೊಡ್ಡವಿರುಪಣ್ಣನವರು, ಮ|| ರಾ|| ದಾವಣಗೆರೆ ಚನ್ನಬಸವಪ್ಪನವರು ಈ ಮಹಾಶಯರು ವಿನಾಯಕಮೂರ್ತಿಯನ್ನು ಕಳುಹಿಸುವಕಾಲದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ಒಂದೊಂದು ರೂಪಾಯಿಯಂತೆ ಒಟ್ಟು 5 ರೂಪಾಯಿಗಳನ್ನು ಮ||ರಾ|| ಹೊಮ್ಮರಡಿ ಸಂಗಪ್ಪನವರದ್ವಾರಾ ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ಬನಹಟ್ಟಿ.

ಈ ಗ್ರಾಮದಲ್ಲಿ ಶ್ರಾವಣಮಾಸದಲ್ಲಿ ಶ್ರೀ ಮಠದ ಬಂಟಿ ಚರಮೂರ್ತಿಸ್ವಾಮಿಗಳವರಿಂದ ಶ್ರೀ ಸಿದ್ಧೇಶ್ವರಪುರಾಣವು ಒಳ್ಳೇವೈಭವದಿಂದ ನೆರವೇರಿತು. ಪ್ರತಿನಿತ್ಯ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಪುರಾಣದ ಆದಿಯಲ್ಲಿ ಗುರುಸ್ತೋತ್ರವನ್ನು ಮಾಡುತ್ತಿದ್ದರು. ಭಾದ್ರಪದ ಶುದ್ಧದಲ್ಲಿ ಪುರಾಣವು ಸಮಾಪ್ತಿಯಾಗಿ ಗಣಾರಾಧನೆಯು ನೆರವೇರಿಸಲ್ಪಟ್ಟಿತು. ವ್ಯವಸ್ಥಾಪಕಮಂಡಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸುಖವನ್ನೀಯಲೆಂದು ಪ್ರಾರ್ಥಿಸುವ,

ವೇ|| ವೀರಸಂಗಯ್ಯ, ಕೀರ್ತನಕಾರ.

ಪತ್ರವ್ಯವಹಾರ

ಚಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಗುರುವರ್ಗದವರ ಕರ್ತವ್ಯ

ಜಗತ್ತಿನಲ್ಲಿ ಎಷ್ಟೋಜನರು "ಪಿಂಡೇಪಿಂಡೇಮತಿರ್ಭಿನ್ನಾ" ಎಂಬ ಶಾಸ್ತ್ರೋಕ್ತಿಯಂತೆ ಅವರವರ ಬುದ್ಧಿಗೆ ಅನುಗುಣವಾಗಿ ಒಂದೊಂದು ವ್ಯಕ್ತಿಯ ಮೇಲೆ ದೋಷಾರೋಪಣೆ ಉಂಟಾಗುವಂತೆಯೂ, ಜಗದ್ಗುರುಗಳ ವಿಷಯದಲ್ಲಿ ಜನಗಳಿಗೆ ಮತ್ಸರಬುದ್ಧಿಯು ಪ್ರಸರಿಸುವಂತೆಯೂ ಲೇಖಗಳನ್ನು ಬರೆಯುತ್ತಾರೆ. ಇಂಥಾಲೇಖಗಳನ್ನು ಬರೆಯತಕ್ಕ ಮಹನೀಯರಿಗೆ ಸೌಮ್ಯಭಾವವನ್ನುಂಟುಮಾಡಲಿ ಎಂದು ಪರಮಾತ್ಮನನ್ನು ಅನನ್ಯಭಾವದಿಂದ ಬೇಡುತ್ತೇವೆ. ಅಯ್ಯಾ ಮತಬಂಧುಗಳೇ. ಈ ಮೇಲೆಕಾಣಿಸಿದ ಗುರುವರ್ಗದವರ ಕರ್ತವ್ಯ ಎಂಬ ಪಂಕ್ತಿಂಗಿನ ಲೇಖವು ಯಾವ ವ್ಯಕ್ತಿಯನ್ನೂ ತಿರಸ್ಕಾರಮಾಡುವದಲ್ಲ! ಮತ್ತ ಜರೆಯುವದೂ ಅಲ್ಲ! ನಮ್ಮ ಗುರುವರ್ಗದವರು ಯಾವ ಯಾವ ಕಾರ್ಯದಲ್ಲಿ ತೊಡಗಿದರೆ ನಮ್ಮ ಪುರಾತನ ಮತವು ಮುಂದಕ್ಕೆ ಬರುತ್ತದೆಯೆಂಬೀ ವಿಷಯಕ್ಕೆ ಬರೆದಿರುತ್ತದೆಯೆಂದು ಪ್ರತಿಯೊಬ್ಬರು ತಿಳಿಯತಕ್ಕದ್ದಾಗಿರುತ್ತದೆ. ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಅನುಯಾಯಿಗಳಾದ ಪಟ್ಟಚರಾಧಿಕಾರಿಗಳೂ, ಮತ್ತು ದೇಶಿಕರೂ, ಬ್ರಹ್ಮಚಾರಿಗಳೂ, ಗೃಹಸ್ಥರೂ ಈಗಿನಕಾಲದ ಪರಿಸ್ಥಿತಿಗನುಸರಿಸಿ ಸಂಸ್ಕೃತ ರಾಜಕೀಯವಿದ್ಯೆಗಳನ್ನು ಮೊದಲು ಸಂಪಾದನೆಮಾಡಿಕೊಂಡು ಸಮಾಜಕೆಲಸಮಾಡುವದು ಅತಿಶ್ರೇಷ್ಠವು. ಇದನ್ನೆಲ್ಲ ಬಿಟ್ಟು ನಮಗೆ ಯಾತಕ್ಕೆ ಬೇಕು ಸಮಾಜಕೆಲಸಮಾಡಿಕೊಳ್ಳುವವರು ಮಾಡಿಕೊಳ್ಳಲಿ ಎಂದು ಮಠದಲ್ಲೇ ಗುಣುಗುಟ್ಟುತ್ತಾ ಕೂಡ್ರುವದು ಈಗಿನಕಾಲವಲ್ಲ; ಇನ್ನು ಮೇಲೆ ಸುಷುಪ್ತಿಯೆಂಬ ಹಾಸಿಗೆಯನ್ನು ಬಿಡಿರಿ. ಗುರುವಿನಕರ್ತವ್ಯವನ್ನು ಸ್ಮರಿಸಿಕೊಳ್ಳಿರಿ, ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯನ್ನು ಇರಿಸಿರಿ, ಗುರುವರ್ಗದ ಏಳ್ಗೆಗಾಗಿ ಪಂ|| ವೇ|| ಕಾಶೀನಾಥಶಾಸ್ತ್ರಿಗಳು ತಮ್ಮ ಜನ್ಮಭೂಮಿಯನ್ನೂ, ಬಂಧುಗಳನ್ನೂ, ಮಾತಾಪಿತೃಗಳನ್ನೂ ತ್ಯಾಜ್ಯಮಾಡಿ ಬ್ರಹ್ಮಚರ್ಯವ್ರತನಿಷ್ಠರಾಗಿ ಶ್ರಮಪಡುತ್ತಿರುವುದು ತಮಗೆ ಗೊತ್ತಿಲ್ಲವೇ? ಮತಾಭಿವೃದ್ಧಿಯವಿಷಯದಲ್ಲಿ ಬದ್ಧಕಂಕಣರಾಗಿ ತಮ್ಮ ಜೀವದ ಹಂಗು ಇಲ್ಲದೇ ಹತ್ತುವರ್ಷಪರ್ಯಂತರವಾಗಿ ಶಾಸ್ತ್ರಾಧಾರದಿಂದ ಚರ್ಚೆಮಾಡಿ ಗುರುಸ್ಥಲದ ಮಾರ್ಗವನ್ನು ತೋರಿಸಿದರೂ ಕೂಡ ಈಗೀಗ ನಮ್ಮ ಗುರುವರ್ಗದ ಪಟ್ಟಚರಾಧಿಕಾರಿಗಳು ಹಾಸಿಗೆಯಿಂದ ಎದ್ದು ಕಣ್ಣುತೆರೆಯಲಿಕ್ಕೆ ಹತ್ತಿದ್ದಾರಷ್ಟೆ! ಇನ್ನೂ ಪೂರ್ತಿ ಜಾಗ್ರತೆಗೊಳಿಸುವದಕ್ಕೆ ಎಷ್ಟೋ ಶ್ರಮಪಟ್ಟು ಮೈಸೂರು ಧರ್ಮಪ್ರಭುಗಳಾದ ಶ್ರೀ ಮಹಾರಾಜರವರಿಂದ ಹುಕುಂ ಪಡೆದುಕೊಂಡು ರಾಜಧಾನಿಯಲ್ಲಿ ಆಸ್ಥಾನವಿದ್ವಾನ್ ವೇ|| ಶಿರ್ಶಿ ಗುರುಶಾಂತಶಾಸ್ತ್ರಿಗಳವರ ಸಂಪಾದಕತ್ವದೊಡನೆ ಪಂಚಾಚಾರ್ಯಪ್ರಭಾ ಎಂಬ ವಾರಪತ್ರಿಕೆಯನ್ನು ಹೊರಡಿಸಿರುವದು ಜಗತ್ಪ್ರಸಿದ್ಧವಿದೆ. (ಅಸ್ತು) ಈ ಮಹನೀಯರಿಂದಲೇ ಗುರುವರ್ಗದವರು ಮುಂದಕ್ಕೆ ಬಂದರೆಂದು ದರಬಟ್ಟ ಹಳ್ಳಿಯಜನರು ಸಹಿತ ಇವರ ಇತಿಹಾಸವನ್ನು ಸಂಪೂರ್ಣವಾಗಿ ಹೇಳುತ್ತಾರೆ. ಈ ಮಹನೀಯರ ಸತ್ಸಂಕಲ್ಪದಂತೆ ಪಟ್ಟಚರಾಧಿಕಾರಿಗಳು ತಮ್ಮ ತಮ್ಮ ಆಪ್ತಬಂಧುಗಳ ವಾತಾವರಣವನ್ನು ದೂರೀಕರಿಸಿ ಜಿತೇಂದ್ರಿಯರಾಗಿ ತಮ್ಮ ತಪೋನುಷ್ಠಾನಗಳನ್ನು ಬೆಳೆಯಿಸಿ ಶಾಂತಚಿತ್ತವುಳ್ಳವರಾಗಿ ಅವರವರ ಗೋತ್ರಸೂತ್ರಕ್ಕೆ ಅನುಸರಿಸಿದ ಗುರುಮುದ್ರೆಗಳನ್ನು ಧರಿಸಿ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ಇರತಕ್ಕ ಭಕ್ತಮಾಹೇಶ್ವರರಿಗೆ ವೀರಶೈವಮತವು ಯಾರಿಂದ ಯಾವ ಕಾಲಕ್ಕೆ ಸ್ಥಾಪನವಾಯಿತು, ಮೂಲಗುರುಗಳು ಯಾರು ಎಂಬ ವಿಷಯವನ್ನು ಉಪದೇಶಮಾಡುತ್ತ ಅಲ್ಲಲ್ಲಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಗತಿಯನ್ನೂ, ವಾಚನಮಂದಿರಗಳನ್ನೂ, ಸಂಸ್ಕೃತ ಜ್ಯೋತಿಷಪಾಠಶಾಲೆಗಳನ್ನು ಧರ್ಮದ ಸ್ಥಾಪನಮಾಡಿ ಅಲ್ಲಲ್ಲಿಗೆ ಸಫಲಮಾಡುತ್ತ ಉಪದೇಶಮಾಡಿದರೆ ನಮ್ಮ ಗುರುವರ್ಗದ ಪೂರ್ವಪದವಿಯು ಇನ್ನು ವೃದ್ಧಿಹೊಂದುತ್ತ ಹೋಗುತ್ತದೆ. ಈ ಕಾರ್ಯದಿಂದ ವಿಮುಖರಾದರೆ ಗುರುವರ್ಗವೇ ವೃದ್ಧಿಯಾಗುವದಿಲ್ಲವೆಂದು ಪ್ರತಿಯೊಬ್ಬಗುರುಸ್ಥಲದ ಪಟ್ಟಚರಾಧಿಕಾರಿಗಳೂ [illegible] ಸ್ವರೂ ಧಾರಾಳವಾಗಿ ತಿಳಿಯತಕ್ಕದ್ದಾಗಿರುತ್ತದೆ. ಈಗಿನಕಾಲದಲ್ಲಿ ಗುರುವರ್ಗದ ಪಟ್ಟಚರಾಧಿಕಾರಿಗಳನ್ನು ಹಿಂದಕ್ಕೆ ತರಬೇಕೆಂಬ ಉದ್ದೇಶದಿಂದ ಅನೇಕರು ಬಹಿಷ್ಕಾರದಂತೆ ಭಕ್ತರಕಿವಿಯಲ್ಲಿ ಗುರುವರ್ಗದವರ ಮೇಲೆ ಮತ್ಸರಬುದ್ಧಿ ಪರಿಣಾಮವಾಗುವಂತೆ ಜನಮಾಡಲಿಕ್ಕೆ ಹತ್ತಿದ್ದಾರೆ. ಇನ್ನಾದರೂ ಇಂಥವರಿಗೆ ಮರುಳಾಗಬೇಡಿರಿ. ನಿಮ್ಮ ನಿಮ್ಮ ಪ್ರವೃತ್ತಿವರ್ತನ, ಸಮಾಜಕಾರ್ಯ, ಅನ್ನದಾನ, ದಯಾದಾಕ್ಷಿಣ್ಯ, ಶಿವೋದ್ಧಾರ ಮುಂತಾದ ಗುಣಗಳನ್ನೇ ಮುಖ್ಯವಾಗಿಟ್ಟುಕೊಂಡು ಗುರುವರ್ಗವೆಂಬ ಸಮಾಜವನ್ನು ವೃದ್ಧಿಗೊಳಿಸಿದರೆ ನಮ್ಮ ಜಗದ್ಗುರುಗಳಾದ ಶ್ರೀ ಪಂಚಪೀಠಾಧೀಶ್ವರರ ಕೀರ್ತಿಲತೆಯು ಪುನಃ ಹಬ್ಬುತ್ತದೆ. ಇಂಥಾ ಗುರುವರ್ಗದ ಏಳ್ಗೆಯನ್ನು ಮಾಡುವ ಪಟ್ಟಚರಾಧಿಕಾರಿಗಳಿಗೂ, ಮಠಸ್ಥರಿಗೂ, ಗುರುಪುತ್ರರಾದ ಭಕ್ತರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಯಾವಾಗಲೂ ಜಯವನ್ನು ಕೊಟ್ಟು ಗುರುವರ್ಗದವರು ಸಮಾಜಕೆಲಸದಲ್ಲಿ ತೊಡಗಲಿ ಎಂದು ಆ ಜಗದ್ಗುರುಗಳನ್ನು ಪ್ರಾರ್ಥಿಸುತ್ತೇನೆ. "ಯತೋಧರ್ಮಸ್ತತೋಜಯಃ"

ಶ್ರೀ ರೇವಣಸಿದ್ಧ ಶಿವಾಚಾರ್ಯ,
ಹಿರೇಮಠ ಚಿಕ್ಕಮಣ್ಣೂರು.

ಶ್ರೀ ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇಣುಕವಿಜಯ ಪುರಾಣೋತ್ಸವವು.

ಕಳೆದ ಶ್ರಾವಣಮಾಸದಲ್ಲಿ ಹಾವೇರಿಯ ವೀರಶೈವ ಮಹಾಶಯರು ಕಲಿಯುಗದೊಳ್ಳೈಹಿಕಾಮುಷ್ಮಿಕ ಫಲಗಳನ್ನು ಸುಲಭವಾಗಿ ದೊರಕಿಸಿಕೊಳ್ಳಲು ಪುರಾಣಶ್ರವಣವೇ ಮೂಲಕಾರಣವಾಗಿದ್ದು ಅದರಲ್ಲಿಯೂ ವೀರಶೈವ ಕ್ರಿಯಾಜ್ಞಾನೋಪದೇಶಕ್ಕೆ ಮುಖ್ಯಾಧಿಕಾರಿಗಳಾದ ಜಗದ್ಗುರುಗಳವರ ಚರಿತ್ರಪ್ರಭಾವವನ್ನು ಕೇಳುವದು ಅತ್ಯಂತಪ್ರಯೋಜನವೆಂದು ಭಾವಿಸಿ ಯುಗಯುಗಂಗಳಲ್ಲಿಯೂ ವೇದಾಗಮಗಳಿಗೆ ಸಮ್ಮತವಾದ ವೀರಶೈವ ಮತವನ್ನು ಸ್ಥಾಪಿಸಿದ ಶ್ರೀ ಪಂಚಾಚಾರ್ಯ ಜಗದ್ಗುರುಗಳಲ್ಲಿ ಒಂದನೆಯವರಾದ ರೇಣುಕಶಿವಾಚಾರ್ಯ ಭಗವತ್ಪಾದರ ಚಿತ್ರವಿಚಿತ್ರ ಲೀಲಾಪ್ರಭಾವ ಬೋಧಕವಾದ ಶ್ರೀ ರೇಣುಕವಿಜಯವೆಂಬ ಸಂಸ್ಕೃತ ಪುರಾಣಶ್ರವಣದಲ್ಲಿ ಬಹ್ವಾದರವಾಗಿ ಪ್ರಸಿದ್ಧ ಬೋಧಕರಾದ ಸುಣ್ಣಕಲ್ಲಬಿದರಿ ಆರಾಧ್ಯಮಠದ ವೇ|| ಪಂ|| ಬಸವಲಿಂಗಶಾಸ್ತ್ರಿಗಳವರ ಮುಖದಿಂದ ಶ್ರೀ ಪುರಾಣವನ್ನು ಕೇಳಲು ಗ್ರಾಮದ ಮುಖ್ಯಮಠಗಳಲ್ಲೊಂದಾದ ಸಮುಖಿನ ಮಠದಲ್ಲಿ ಪ್ರಾರಂಭಮಾಡಿದರು. ಹೃದಯಾನಂದವನ್ನು ವ್ಯಕ್ತಗೊಳಿಸುವಂತೆ ಅಲಂಕರಿಸಲ್ಪಟ್ಟ ಬೋಧನಮಂಟಪದಲ್ಲಿ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಭಾವಚಿತ್ರಗಳಿಂದಲಂಕೃತವಾಗಿ ನವನವ ಸಂಗೀತ ಸಮ್ಮೇಳನದೊಂದಿಗೆ ಬಸವಲಿಂಗಶಾಸ್ತ್ರಿಗಳವರು ಶ್ರೋತೃಜನಕ್ಕಾನಂದವುಂಟಾಗುವಂತೆ ಪುರಾಣವನ್ನು ಬೋಧಿಸುತ್ತಿದ್ದರು. ಶ್ರೀ ಜಗದ್ಗುರುಗಳವರ ಪ್ರಭಾವಶ್ರವಣದಿಂ ಧನ್ಯರಾಗಬೇಕೆಂಬಿಚ್ಛೆಯಿಂದ ಸ್ತ್ರೀಪುರುಷರುಗಳು ನೀಕಿಗಿಸರಿಯಾಗಿ ತಂಡೋಪತಂಡವಾಗಿ ಆಗಮಿಸುತ್ತಿದ್ದರು. ಮಠದಲ್ಲಿ ಪರಸ್ಥಳದಿಂದಾಗಮಿಸಿದ ಭಕ್ತಮಾಹೇಶ್ವರ ಸಮುದಾಯಕ್ಕೆ ಭೋಜನವ್ಯವಸ್ಥೆಯು ಸರಿಯಾಗಿತ್ತು. ಅಲ್ಲದೆ ಶ್ರೀ ಪುರಾಣದ ಪ್ರತಿದಿನದ [illegible] ಸಮಾಪ್ತಿಸಮಯದಲ್ಲಿಯೂ ಮತ್ತು ಅಗಸ್ತ್ಯ [illegible] ಗೆ ಶಿವಷಟ್‌ಸ್ಥಲಬೋಧ, ಶ್ರೀ ಜಗದ್ಗುರು ರೇಣುಕರು ವಿಭೀಷಣನ ಇಷ್ಟಪ್ರಕಾರ ಮೂರುಕೋಟಿರೂಪವನ್ನು ಧರಿಸಿ ಒಂದೇದಿವಸ ಮೂರುಕೋಟಿ ಲಿಂಗಗಳನ್ನು ಸ್ಥಾಪನೆಮಾಡುವಿಕೆ ಮುಂತಾದ ವಿಶೇಷಪ್ರಸಂಗದಲ್ಲಿ

ಯೂ ಹಾವೇರಿಯ ಪ್ರಮುಖರಾದ ಮ||
ರಾಚಪ್ಪಣ್ಣಾ ಮತ್ತು ಶಿವಲಿಂಗಪ್ಪಣ್ಣಾ ಈ
ಮಹಾಶಯರ ಅನ್ನಸಂತರ್ಪಣ ಸಮಾರಂಭ
ಸ್ತುತ್ಯವಾಗಿದ್ದಿತು. ಈ ಮಹಾಕಾರ್ಯವು
ಆನಂದಭರದಿಂದ ಜರಗುತ್ತಿದ್ದು ಭಾದ್ರಪದ
ಶುಕ್ರವಾರಕ್ಕೆ ಸಮಾಪ್ತಿಯನ್ನು ಮಾಡು
ತ್ತಾಯಿತು. ಆ ಸಮಯಕ್ಕೆ ಪೌರರ ಪ್ರಾ
ಮೇರೆಗೆ ಲಕ್ಷ್ಮೇಶ್ವರದ ಬಾಳೇಹಳ್ಳಿಮಠದ
ವ್ಯಾಕರಣಪಂಡಿತರಾದ ಪಟ್ಟಾಧ್ಯಕ್ಷರು ಆಗ
ಪುರಪ್ರಮುಖರು ಶ್ರೀ ಸ್ವಾಮಿಗಳನ್ನು ಅನೇ
ವೈಭವಗಳಿಂದಲೂ ಶ್ರೀ ಜಗದಾಚಾರ್ಯರ
ಬೋಧಕವಾದ ಲಕ್ಕಾಪುರದ ಪಂಚಾಚಾ
ನಾಸಂಘದ ಗಾನವೈಭವದಿಂದಲೂ ಎದುರ
ಸಮುಖಿನ ಮಠಕ್ಕೆ ಕರೆತಂದರು. ಬಳಿಕ ಶ್ರೀ
ಗಳವರು ಪೀಠವನ್ನಲಂಕರಿಸಿ ಪ್ರಸಾದವಾಣಿ
ಡಕೊಡಿಸಿದನಂತರ ಸರ್ವಮಹಾಶಯರು ತಮ
ಸ್ಥಳಗಳಿಗೆ ಹೋದರು. ನಿಶ್ಚೈಸಿದಪ್ರಕಾರ ಪ
ಮಹಾಗಣಾರಾಧನೆಯು ಜರುಗಿತು. ಸ್ವಸ್ಥಲಸ
ಸಮುದಾಯವಲ್ಲದೆ ದುಷ್ಕಾಲದಿಂದ ಬಂದ
ನಿಗಿ ಸುಮಾರು ಭೋಜನಂಗೈದ ಜನಸಂಖ್ಯೆಯ
ಎರಡುವರೆಸಾವಿರದ ವರೆಗೆ ಇದ್ದಿತು. ಶ್ರೀ ಜ
ರೇಣುಕ ಶಿವಾಚಾರ್ಯರ ಕಟಾಕ್ಷದಿಂದ ಆ
ಕೊನೆಯವರೆಗೂ ಕೈಕೊಂಡಕಾರ್ಯವು ಬಹು
ಡೆಯಿಂದ ನೆರವೇರಿತು. ಶನಿವಾರದದಿವಸ ಚಿತ್ರ
ತಳಿರುತೋರಣಗಳಿಂದ ಪುರವು ನೋಡುವವರ
ನಗಳನ್ನು ಸೆಳೆಯುತ್ತಿತ್ತು. ಅನೇಕ ವಾದ್ಯಗಳ
ದವು. ಲಕ್ಕಾಪುರದ ಶ್ರೀ ಜಗದ್ಗುರು ಪಂಚಾ
ಭಜನಾಸಂಘದವರು ಹಾವೇರಿಯ ಶ್ರೀ ಜ
ಪಂಚಾಚಾರ್ಯರ ಭಜನಾಸಂಘದವರು ತಮ್ಮ
ಸನ್ನಾಹಗಳೊಡನೆ ಸಿದ್ಧರಾದರು. ಶ್ರೀ ಜಗ
ರ್ಯರ ಪರಾಕುಗಳನ್ನು ಉದ್ಘೋಷಿಸುವ ವಿ
ಗಳ ಸಂಖ್ಯೆಯು ಅಗಣಿತವಾಗಿತ್ತು. ಆಂದೋ
ಉತ್ಸವವು ಸಾಯಂಕಾಲ ೬ ಘಂಟೆಗೆ ಮ
ಹೊರಟಿತು. ಪುರಜನಗಳ ಗುರುಭಕ್ತಿವಿಲಾಸಕ್ಕೆ
ರಾಜನು ಸಂತೋಷದಿಂದ ಘಂಟೆಗೊಮ್ಮೆ ತೋ
ಸಿಗಳನ್ನು ಸುರಿಸುತ್ತಿದ್ದನು. ಸುಮಂಗಲೆಯರು
ಕರ [illegible] ಕಲಶಕನ್ನಡಿಗಳನ್ನು ತಳೆದು ತಮ್ಮ ತಮ್ಮ
ಮುಂದುಗಡೆ ಶ್ರೀ ಜಗದ್ಗುರು ರೇಣುಕಶಿವಾಚಾ
ಧ್ಯಾನವನ್ನು ಮಾಡುತ್ತ ಗುರುವಿನ ಆಂದೋಲಿಕ
ನನ್ನೇ ಎದುರುನೋಡುತ್ತಿದ್ದರು. ಭೇರಿ ಮು
[illegible] ವಾದ ಗಳರವದಿಂದಲೂ ಸಂಗೀತಕಲಾ
ಭಜನೆ [illegible] ಪರಾಕುಗಳಿಂದಲೂ, ಪ್ರತಿಯೊ
ಗೃಹದ ಮುಂದುಗಡೆ ನೀರಾಜನವನ್ನೆತ್ತಿ ಫಲಾ
ಹಗಳನ್ನಿಡುವವರ ಜಯಘೋಷದಿಂದಲೂ
ಪ್ರೇಕ್ಷಕರಿಗೆಲ್ಲ ಭಕ್ತ್ಯಂಕುರವನ್ನುಂಟುಮಾ
ಶ್ರೀ ಜಗದ್ಗುರುಗಳವರ ಪುರಾಣ ಮತ್ತು ಶ್ರೀ
ಗುರುವಿನ ಆಂದೋಲಿಕೋತ್ಸವವು ಪುರದ ಪ್ರತಿ
ಸ್ಥಳದ ಅತ್ಯುತ್ಸಾಹದಿಂದ ಜರಗಿ ರಾತ್ರಿ ಸುಮ
ಒಂದೂವರೆ ಘಂಟೆಗೆ ಸ್ವಸ್ಥಾನವನ್ನು ಸೇರಿತು. ಅನ
ಪ್ರಕೃತೋಚಿತವಾದ ಮಂಗಲಕಾರ್ಯವು ನಡೆದು
ಗ [illegible] ಶಾಸ್ತ್ರಿಗಳಿಂದಲೂ, ಬ್ರ|| ಶ್ರೀ||
ಶ್ರೀ ಸ್ವಾಮಿಗಳವರಿಂದಲೂ ಸಭಿಕರಿಗೆ ಸದುಪದೇ
ದಬಳಿಕ ಆಮಂತ್ರಿತರಾದ ಗುರುಭಕ್ತಮಹಾಶಯರಾ
ರಿಗೂ ಸಂಭಾವನೆಯು ಕೊಡಲ್ಪಟ್ಟು ವೀರಶೈವಧ
ಭಾಗ ಬೆಳಕನ್ನು ಹೆಚ್ಚಿಸುವದಕ್ಕೆ ಮೈಸೂರಲ್ಲಿ
ನಲ್ಪಟ್ಟಿರುವ ಪಂಚಾಚಾರ್ಯಪ್ರಭೆಗೆ ಕಾಣಿಕೆಯ
ಐದುರೂಪಾಯಿಗಳು ತೆಗೆಯಲ್ಪಟ್ಟು ಬಳಿಕ ಜಗ
ಪಂಚಾಚಾರ್ಯ ಜಯಘೋಷದೊಡನೆ ಕಾರ್ಯ
ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ,
ಚನಬಸಪ್ಪಾ ಶಾತೇನಹಳ್ಳಿ, ಸಾ|| ಹಾ

ಶಿವಕೀರ್ತನಮಹೋತ್ಸವವು

…ಂಪದಲ್ಲಿ ಪುರಾತನಕಾಲದಿಂದಲೂ ನಾರದಾ …ಗವತಾ ಕೀರ್ತನಗಳನ್ನು ನಡೆಯಿಸಿ ಭಾರತೀಯರ …ೀವನನ್ನಾಗಿ ಮಾಡುತ್ತಿದ್ದರೆಂಬುದು ಮಹಾಪು …ಂಪ ತಿಳಿದುಬರುತ್ತಿದ್ದರೂ ಮಧ್ಯಕಾಲದಲ್ಲಿ ಈ … ಕ್ಷೀಣದಶೆಗೆಬಂದಿದ್ದಿತು. ಈಗೀಗ ಹಿಂದೂ …ಸರ್ವಪ್ರಾಂತಗಳಲ್ಲಿ ಎಲ್ಲಾ ಜನಾಂಗದ ಮುಂದಾ …ಕೀರ್ತನಸಮ್ಮೇಳನಗಳನ್ನು ನಡೆಯಿಸಿ ಪುರಾತನ …ರ್ತನಶ್ರವಣಸಾಂಪ್ರದಾಯವನ್ನು ಪುನಃ ಪ್ರ …ತಂದದ್ದರಿಂದ ಅಲ್ಲಲ್ಲಿ ಪುಣ್ಯಕಾಲಗಳಲ್ಲಿ ಭಗವ …ನಗಳು ದಿನದಿನಕ್ಕೆ ಅಧಿಕವಾಗಿನಡೆಯುತ್ತಿರುವ …ನಾನಿ ತಾ|| ಯಮ್ಮಿಗನೂರುಗ್ರಾಮದ ಸಮಸ್ತ … ಆ ಗ್ರಾಮದ ಶ್ರೀ ನೀಲಕಂಠದೇವಸ್ಥಾನದಲ್ಲಿ …ಸಂವತ್ಸರದ ಶ್ರಾವಣಶುದ್ಧ ೧೦ ಮಿತಿಯಿಂದ …ಪದಶುದ್ಧ ೧೨ರ ವರೆವಿಗೂ ಶಿವಕೀರ್ತನಂಗಳನ್ನು …ಿದರು. ಕೀರ್ತನಭೂಷಣರಾದ ಬಳ್ಳಾರಿ ತಾ|| …ಮೋಳು ಬೆಂಚಿಮರದ ವೇ|| ವೀರಬಸವಶಾ …ಸರು ತಮ್ಮ ಮಂಜುಳಕಂಠದಿಂದ ಶಿವಶರಣರ ಚ …ನ್ನು ಕೀರ್ತನರೂಪವಾಗಿಬೋಧಿಸಿ ಸರ್ವಭಕ್ತರ …ಂದಶರಧಿಯಲ್ಲಿ ಮುಳುಗಿಸಿದ್ದಲ್ಲದೆ ಪುಣ್ಯಭಾಗಿ …ಗಿ ಮಾಡಿದರು. ಕೀರ್ತನಶ್ರವಣಾನಂದ ಪರವಶ …ಸ್ತರು ಶಾಸ್ತ್ರಿಗಳಿಗೆ ಮೂರುನೂರು ರೂಪಾಯಿಗ …ಅರ್ಪಿಸಿದರು. ಕೀರ್ತನ ಸಮಾಪ್ತಿಯ ದಿನವಾದ …ಪದ ಶು|| ೧೨ಗುರುವಾರದಲ್ಲಿ ಅದೇ ಗ್ರಾಮದ …ರಾ|| ನರಸಪ್ಪನವರು ಪರಮೋತ್ಸಾಹದಿಂದ ಮ …ಹಾರಾಧನೆಯನ್ನು ಮಾಡಿಸಿದರು. ಆರಾಧನಾ …ದಲ್ಲಿ ಸಾಯಂಕಾಲ ೬ ಘಂಟೆಯಿಂದ ರಾತ್ರಿ …ಘಂಟೆಯ ವರಿವಿಗೂ ಪುರವೀಧಿಗಳಲ್ಲೆಲ್ಲಾ ಮಂ …ದ್ಯಗಳೊಡನೆ ಶ್ರೀ ನೀಲಕಂಠೇಶ್ವರನ ಉತ್ಸವವು …ಹದಿಂದ ನಡೆಯಿಸಲ್ಪಟ್ಟಿತು. ಇಂಥ ಪುಣ್ಯಕಾರ್ಯ …ಗೆ ಪ್ರತಿಯೊಬ್ಬರು ಲಕ್ಷ್ಯಗೊಟ್ಟು ಪರಮಾತ್ಮನ …ಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

ಪುರಾಣಮಹೋತ್ಸವವು, ಮನಗೋಳಿ.

ಈ ಗ್ರಾಮದಲ್ಲಿ ಪ್ರತಿವರ್ಷ ನಡೆಯುವ ಪದ್ಧತಿ …ಂತೆ ಈ ವರ್ಷವಾದರೂ ಇಲ್ಲಿಯ ಹಿರೇಮಠದ ಪ …ಟ್ಟಕ್ಕೆ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಶ್ರೀ …ನಮಹರ್ಷಿ ಪ್ರಣೀತವಾದ ಪದ್ಮಪುರಾಣಾಂತ …ತ. ಶಿವಗೀತಾಪುರಾಣ ಪ್ರವಚನವು ಇದೇ ಶ್ರಾ …ಶುದ್ಧ ೫ ಮಂಗಳವಾರದಿಂದ ಪ್ರಾರಂಭವಾಗಿ ಉ …ಮರೀತಿಯಿಂದ ಸಾಗಿತು. ಹೇಳತಕ್ಕವರು ಪಂ|| … ವೀರಭದ್ರಶಾಸ್ತ್ರಿಗಳು ಮುನಗುಂದ. ಓದತಕ್ಕವರು …ಬಸಯ್ಯನವರು ಚಿಕ್ಕಪಟ ಸಾ|| ಸಾಲೊಟಗಿ. ಈ …ಯು ಮಹಾಶಯರು ತಮ್ಮ ಕರ್ತವ್ಯಕರ್ಮವನ್ನು …ಕ್ಷೆಯಿಂದ ನಡೆಯಿಸಿದರು. ಪಂಡಿತ ಶಾಸ್ತ್ರಿಗಳವರು …ನ ಪರಿಸ್ಥಿತಿಗನುಸಾರವಾಗಿ ಶ್ರೋತೃಜನರ ಹೃದ …ದಲ್ಲಿ ಪರಿಣಾಮವಾಗುವಂತೆ ಭಕ್ತಿ, ಜ್ಞಾನ, ವೀರ …ವತತ್ವಗಳನ್ನೂ, ಜಗದ್ಗುರು ಪಂಚಾಚಾರ್ಯರ ಮ …ತ್ವವನ್ನೂ ಉತ್ತಮರೀತಿಯಿಂದ ಪ್ರತಿಪಾದಿಸುತ್ತಿದ್ದ … ಪ್ರತಿದಿವಸ ಕೇಳುವದಕ್ಕೆ ಜನಸಮೂಹವು ನೆರೆಯು …ತ್ತು. ಭಾದ್ರಪದ ಶು|| ೮ ಭಾನುವಾರ ಗಣಾರಾಧ …ನು ಒಳ್ಳೇ ವೈಭವದಿಂದ ಸಾಗಿತು. ಶು|| ೯ ಸೋ …ವಾರ ಮುಂಜಾನೆಯಲ್ಲಿ ಅಂದರೆ ೮ ಘಂಟೆಯ ಸುಮ …ಕ್ಕೆ ಪುರಾಣ ಸಮಾಪ್ತಿಯನ್ನು ಮಾಡಿ ಪುರಾಣ …ನ್ನು ಪಲ್ಲಕ್ಕಿಯಲ್ಲಿ ಮೆರೆಗೊಳಿಸಿ ವಾದ್ಯವೈಭ …ವೊಡನೆ ತಳಿರುತೋರಣಗಳಿಂದ ಅಲಂಕೃತವಾದ ರಾ …ಬೀದಿಯಲ್ಲಿ ಪುರಾಣೋತ್ಸವವು ಸಮಸ್ತ ಬಿರುದಾವ …ಗಳಿಂದ ಸಾಗಿ ಮಠಕ್ಕೆ ೧೨ ಘಂಟೆಗೆ ತಲ್ಪಿತು. ಈ …ಮಹಾಕಾರ್ಯವನ್ನು ಪುರಸ್ಕರಿಸುವರಾದ ಶ್ರೀಮಂತ …ರಾಮನಗೌಡಾ ಪಾಟೀಲ ಇವರು. ಈ ಗ್ರಾಮದ …ಂತಳಿಯವರೊಡಗೂಡಿಕೊಂಡು ಭಕ್ತಿಪರಾಯಣ …ಸ್ವಾಮಿಗಳವರ ಸೇವೆಯನ್ನು ಮಾಡಿ ಪುಣ್ಯಕೀರ್ತಿ …ಭಾಗಿಗಳಾದರು. ಈ ಮಹಾಸ್ವಾಮಿಗಳವರು ಇದೇ …ರ್ಷ ದ್ವಾದಶ ಲಿಂಗಗಳ ಯಾತ್ರೆಯನ್ನು ಪೂರೈಸಿದರು.

ಮನಗೋಳಿ ಹಿರೇಮಠದ ಕಾರಭಾರಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಸದಾಚಾರ

“ಆಚಾರಃ ಪರಮೋಧರ್ಮಃ” ಎಂಬ ಉಕ್ತಿಯು ಅಖಿಲಮಾನವರ ಆಚಾರವಿಷಯಕ ಕರ್ತವ್ಯವನ್ನು ಬೋಧಿಸುವದು. ಸದಾಚಾರವೆಂದರೆ ಶಾಸ್ತ್ರವಿಹಿತ ಮತ್ತು ಲೋಕದರೂಢವಾದ ಉತ್ತಮ ನಡೆಯು. ಸದಾಚಾರವು ಮನೋನೈರ್ಮಲ್ಯಕ್ಕೂ, ತದ್ವಾರಾ ಐಹಿಕಾಮುಷ್ಮಿಕ ಸುಖಪ್ರಾಪ್ತಿಗೂ ಸದ್ಗತಿಗೂ ಸಾಧನವಾಗಿರುವದು. ಧರ್ಮಕ್ಕೂ ನೀತಿಗೂ ವಿರುದ್ಧಗಳಾದ ಅನಾಚರಣೆಗಳಿಂದ ಮನುಷ್ಯನು ಲೋಕನಿಂದೆಗೆ ಪಾತ್ರನಾಗಿ, ಕೊನೆಗೆ ಅಧೋಗತಿಗೀಡಾಗುವನು. ಆದ್ದರಿಂದ ಜಗತ್ತಿನಲ್ಲಿ ಯಾವತ್ತರೂ ಆಚಾರಬದ್ಧರಾಗಿರಲಿಕ್ಕೇ ಬೇಕು.

ನಮ್ಮ ಭರತಖಂಡದಲ್ಲಿ ಸ್ವಧರ್ಮಾಚಾರಗಳನ್ನತಿಕ್ರಮಿಸಿ ಪ್ರವರ್ತಿಸುವ ಜನರು ಹೆಚ್ಚಿದ್ದರಿಂದ ಎಲ್ಲೆಲ್ಲಿಯೂ ಅಸದಾಚಾರಗಳು ತಲೆಯೆತ್ತಿರುವವು. ಕುಲಗೋತ್ರವಿಚಾರವಿಲ್ಲದೆ ಒಬ್ಬರಮುಸರಿಯನ್ನೊಬ್ಬರಿಗೆ ಕುಡಿಸಿ ಆನಂದದಿಂದ ನಲಿದಾಡುವಂತೆ ಮಾಡುವ ಉಪಹಾರಗೃಹಗಳು (ಹೊಟಲಕಾಫಿಯಂಗಡಿಗಳು) ಅಸದಾಚಾರದ ಉತ್ಪತ್ತಿ ಭೂಮಿಯಾಗಿರುವವು. ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ, ಚಿಕ್ಕಪುಟ್ಟ ಹಳ್ಳಿಗಳಲ್ಲಿಯೂ ಅಪೇಯಪಾನಗಳನ್ನು ಪೇಯಗಳೆಂದೆನಿಸಿ ನಿರ್ಭಯದಿಂದ ಕುಡಿಯುವ ಪರಿಪಾಠವು ಮಾನ್ಯವಾಗಿ ಗಣಿಸಲ್ಪಡುತ್ತಿರುವದು. ಸದಾಚಾರಬಹಿರ್ಮುಖರಾದ ಆಧುನಿಕರ ನೂತನವಿಚಾರಗಳು ಸನಾತನಧರ್ಮಾಚಾರಗಳನ್ನು ಮೂಲೆಗೊತ್ತುತ್ತಿರುವವು. ಬಹಳ ಹೇಳುವದೇನು? ಉಡಿಗೆ ತೊಡಿಗೆ ಊಟಉಪಹಾರ ಮೊದಲಾದವುಗಳಲ್ಲಿಯೂ ಪೂರ್ವಾಚರಣೆಯ ಬದಲಾವಣೆಯಾಗಿರುವದು. ಸದ್ಧರ್ಮವೂ ಸದಾಚಾರವೂ ಭಾರತೀಯರ ಜೀವಾಳವು. ಆದ್ದರಿಂದಲೇ ಪೂರ್ವಾಚಾರ್ಯರು ಸ್ಮೃತ್ಯಾಗಮಗಳ ಮೂಲಕ ಸದಾಚಾರ ನಿಬಂಧನಗಳನ್ನುಪದೇಶಿಸಿರುವರು. ಸತ್ಯ, ಅಹಿಂಸಾ, ಅಸ್ತೇಯಾದಿ ಸದಾಚಾರಗಳು ನೀತಿಧರ್ಮತತ್ವದ ತಳಹದಿಯ ಮೇಲೆ ಸ್ಥಾಪಿಸಲ್ಪಟ್ಟು ಸರ್ವಮಾನವ ಸಾಮಾನ್ಯಗಳಾಗಿರುವವು. ಮತಧರ್ಮಸದಾಚಾರಗಳು ಆಯಾಯ ಮತಸ್ಥಾಪಕರಿಂದ ವಿಶಿಷ್ಟರೀತಿಯಲ್ಲಿ ವಿಧಿಸಲ್ಪಟ್ಟಿರುವದು, ಆಯಾಯ ಮತಾನುಯಾಯಿಗಳ ರೂಢವಾದ ಆಚರಣೆಯಿಂದ ತಿಳಿದುಬರುವದು. ಅದರಂತೆ ನಮ್ಮ ವೀರಶೈವ ಮತದಲ್ಲಿಯೂ, ಆಚಾರ ನಿರ್ಬಂಧವನ್ನು ನಮ್ಮ ಮತಸ್ಥಾಪಕರಾದ ಶ್ರೀಮತ್ಪಂಚಾಚಾರ್ಯರು ಮಾಡಿರುವರು, ಪರಮಾರ್ಥಪ್ರಕಾಶಿಗಳಾದ ನಮ್ಮ ವೀರಲಿಂಗಾಂಗಿಗಳ ಸದಾಚರಣೆಗಳು ಎಂತಹ ಔಚಿತ್ಯರೀತಿಯಲ್ಲಿ ಉಕ್ತಗಳಾಗಿರುವವೆಂಬುದು ಆಚಾರಜ್ಞರಿಗೆ ತಿಳಿದಸಂಗತಿಯಾಗಿರುವದು.

ಕ್ರಿಯಾಜ್ಞಾನದಿಂದ ಲಿಂಗಾಂಗಸಾಮರಸ್ಯರೂಪ ಮೋಕ್ಷವನ್ನು ಹೇಳುವ ವೀರಶೈವಧರ್ಮಶಾಸ್ತ್ರವಿಹಿತವಾದ ಪಂಚಾಚಾರಗಳಲ್ಲಿ ಶಿವ (ಲಿಂಗ) ಪೂಜೆಯು ನಮ್ಮ ವೀರಶೈವರ ನಿತ್ಯಾಚರಣೆಯಾಗಿರುವದು. ಈ ನಿತ್ಯಾಚರಣೆಯನ್ನು ಕಾಯ್ದುಕೊಳ್ಳಲಿಕ್ಕೆ ಎಲ್ಲರಲ್ಲಿಯೂ ಪವಿತ್ರವಾದ ನಡೆಯು ಬೇಕು ಪವಿತ್ರವಾದ ನಡೆಯೆಂದರೆ ತ್ರಿಕರಣಶುದ್ಧಿಯನ್ನು ಮಾಡುವ ಆಚರಣೆಯು! ಕಾಯಶೌಚಕ್ಕಾಗಿ ನಿತ್ಯಸ್ನಾನವೂ, ವಾಕ್‌ಶುಚಿಗಾಗಿ ಸತ್ಯವಾಣಿಯೂ, ಶಿವಸ್ತವಶಿವಮಂತ್ರಪುರಶ್ಚರಣೆಯೂ ಮನಸ್ಸಿನ ಪವಿತ್ರತೆಗಾಗಿ ಶಿವಧ್ಯಾನಶಿವಲಿಂಗನಿಷ್ಠೆ ಮೊದಲಾದವುಗಳೂ ಕಾರಣಗಳಾಗಿರುವವು. ಇದಕ್ಕಾಗಿಯೇ ಇಂತಹ ಆಚಾರನಿಬಂಧನಗಳು ಮಾಡಲ್ಪಟ್ಟಿರುವವು. ಈ ವಿಧವಾದ ಸದಾಚಾರವುಳ್ಳವನು ನಿಜವಾಗಿ ಶಿವಕೃಪೆಗೆ ಪಾತ್ರನಾಗಿ, ಐಹಿಕ ಸುಖೋಪಭೋಗಗಳನ್ನು ಹೊಂದಿ ಮುಕ್ತನಾಗುವನು.

ಇದಲ್ಲದೆ ನಮ್ಮ ಮತದಲ್ಲಿ ಅಷ್ಟಾವರಣನಿಷ್ಠೆ, ಷಟ್‌ಸ್ಥಲಾಚರಣೆಗಳು, ಮುಕ್ತಿಸಂಪಾದಕ ಸದಾಚಾರಗಳಾಗಿರುವವು. ಇಂಥಹ ಸದಾಚಾರಗಳನ್ನು ನಮ್ಮ ಮತಸ್ಥಾಪಕರಾದ ಪಂಚಾಚಾರ್ಯರು ಸ್ಥಾಪಿಸಿದ್ದರಿಂದಲೇ ಅವರಿಗೆ “ಆಚಾರ್ಯ” ರೆಂಬ ನಾಮವು ಶಿವಾಗಮಗಳಲ್ಲಿ ಪ್ರಸಿದ್ಧಿ[illegible]ವದು. “ಆಚಾರ್ಯವಾನ್ ಪುರುಷೋವೇದ” ಎಂಬದಾಗಿ ಆಚಾರ್ಯರಿಂದ ಸದಾಚಾರಗಳ ಉಪದೇಶವನ್ನು ಹೊಂದಿ, ಅದರಂತೆ ವರ್ತಿಸುವವನೇ ಶಿವತತ್ವವನ್ನರಿತು ಮುಕ್ತನಾಗುವನೆಂದು ಭಗವತೀಶ್ರುತಿಯು ಘಂಟಾಘೋಷಮಾಡುತ್ತಿರುವದು.

ಹೀಗಿದ್ದು ಇತ್ತೀಚೆಗೆ ನಮ್ಮ ವೀರಶೈವಮತದಲ್ಲಿ ದುರಾಚಾರದ ಪ್ರಾಬಲ್ಯವು ಹೆಚ್ಚಿ, ಆಚಾರ್ಯಭಕ್ತಿಯು ಕಡಿಮೆಯಾಗಿ ಸದಾಚಾರಗಳು ನಿರ್ನಾಮವಾಗುತ್ತಿರುವವು. ಪ್ರಯುಕ್ತ ನಾವೆಲ್ಲರೂ ಮೊದಲು ನಮ್ಮ ಮತವಾವುದು? ನಮ್ಮ ಮತಸ್ಥಾಪಕರಾರು? ಮತಧರ್ಮಾಚರಣೆಗಳಾವವು ಎಂಬದನ್ನು ತಿಳಿದು ಆ ಮೇಲೆ ಅದರಂತೆ ನಡೆಯುವದೇ ಸದಾಚಾರವೆನಿಸುವದು.

ನಮ್ಮ ವೀರಶೈವ ಮತದಲ್ಲಿ ಆಚಾರಬೋಧಕ ಗುರುವರ್ಗದ ಸದಾಚರಣೆಯು ಹೇಗಿರುವದೆಂಬದನ್ನು ಸ್ವಲ್ಪ ವಿಚಾರಿಸುವಾ:— ಗುರುವರ್ಗವೆಂದರೆ, ಪಟ್ಟದಸ್ವಾಮಿಗಳೂ, ಚರಮೂರ್ತಿಸ್ವಾಮಿಗಳೂ, ಪ್ರತ್ಯೇಕಗ್ರಾಮದ ಮಠಾಧಿಕಾರಿಗಳೂ, ಎಂದರ್ಥವು. ಇವರೇ ವೀರಶೈವರೆಲ್ಲರಿಗೆ ಲಿಂಗಧಾರಣ, ದೀಕ್ಷಾ ಶಿಕ್ಷಾಮೂಲಕವಾಗಿ ಮೋಕ್ಷಮಾರ್ಗದರ್ಶಕ ಸದಾಚಾರಗಳನ್ನು ಬೋಧಿಸುವ ಗುರುಗಳು ಇವರಲ್ಲಿ ಮಠಾಧಿಪತಿಗಳಿಗೆ “ಸತ್ಯಂವದ” “ಧರ್ಮಂಚರ” ಎಂಬ ಉಪದೇಶವಚನಗಳು ಪಂಚಾಚಾರ್ಯ ಸಾಕ್ಷಿಕವಾಗಿ ಮಾಡಲ್ಪಡುವ ಶಿವದೀಕ್ಷಾಕಾಲದಲ್ಲಿ ಉಪದೇಶ ಮಾಡಲ್ಪಡುತ್ತವೆ. ಹೀಗೆ ಗುರೂಪದೇಶವನ್ನು ಹೊಂದಿದ ಮಠಾಧಿಪತಿಗಳು ವೈದಿಕವಿದ್ಯೆಯನ್ನು ಕಲಿಯದಿರುವದರಿಂದ ಭಕ್ತರಿಗೆ ಧಾರ್ಮಿಕಸದಾಚಾರಗಳನ್ನು ಬೋಧಿಸಲು ಸಮರ್ಥರಾಗದೆ ತಾವುಕೂಡಾ ಅಸದಾಚಾರನಿರತರಾಗಿರುವರು. ಇವರಿಂದ ಮಾಡಲ್ಪಡುವ ಲಿಂಗಧಾರಣ ವಿವಾಹಾದಿ ಶುಭಕಾರ್ಯಗಳು ವಿಧಾನಪೂರ್ವಕ ಮಂತ್ರೋಕ್ತವಾಗಿ ಮಾಡಲ್ಪಡದೆ, ಎಷ್ಟೋ ಕಡೆಯಲ್ಲಿ “ಕೆಲವಂ ಬಲ್ಲವರಿಂದಕಲ್ತು” ಎಂಬ ಅಮಂತ್ರೋಚ್ಚಾರಣೆಯಿಂದಲೂ “ಶಿವಲೋಕದಿಂದಾಪರಮನಪ್ಪಣೆವಿಡಿದು” ಎಂಬುವ ದಿವ್ಯಮಂತ್ರದಿಂದಲೂ, ನೆರವೇರಿಸಲ್ಪಡುತ್ತಿರುವದನ್ನು ನಾವು ಕಣ್ಣಾರೆ ಕಾಣುತ್ತೇವೆ. ಶುಭಕಾರ್ಯಾಂಗಭೂತಗಳಾದ ಗಣಪತಿಪೂಜಾ, ನಾಂದಿ. ಅಂಕುರಾರ್ಪಣ, ಮಂಟಪದೇವತಾಪ್ರತಿಷ್ಠಾ. ಕಲಶಸ್ಥಾಪನಾದಿ ಸಮಂತ್ರಕವಿಧಾನಗಳು ಇವರಿಗೆ ಗೊತ್ತೇ ಇರುವದಿಲ್ಲ. ಆಗಮೋಕ್ತಪಂಚಕಲಶಸ್ಥಾಪನೆಯನ್ನರಿಯದೆ ಆರು ಕಲಶಗಳಿಗೆ ದಾರವನ್ನು ಸುತ್ತುತ್ತಿಸುವದು ಇವರ ಅಸದಾಚಾರದ ಹೆಗ್ಗುರುತಾಗಿರುವದು. ಆದ್ದರಿಂದ ಇನ್ನು ಮುಂದೆ ಮಠಸ್ಥರು ಎಚ್ಚರವಾಗಿ ವೈದಿಕವಿದ್ಯೆಯನ್ನು ಕಲಿತು ಸದಾಚಾರಿಗಳಾಗತಕ್ಕದ್ದು ಅವರ ಪವಿತ್ರ ಕರ್ತವ್ಯವಾಗಿರುವದು.

ನಮ್ಮ ವೀರಶೈವರ ಆಚಾರಪತಿಗಳಾದ ಪಟ್ಟಚರಮೂರ್ತಿಸ್ವಾಮಿಗಳು ಯಾವತ್ತರಿಗೂ ಸದಾಚಾರವನ್ನು ಬೋಧಿಸುವದು ತಮ್ಮ ಕರ್ತವ್ಯವಾಗಿದ್ದು ಅವರು ಹಾಗೆ ಮಾಡದಿರುವದು ಅವರ ಅಸದಾಚಾರದ್ಯೋತಕವಾಗಿರುವದೆಂಬುದನ್ನು ನಾವು ಖೇದದಿಂದ ಹೇಳಬೇಕಾಗಿದೆ. ತಾವು ಆಚರಿಸಿ ಭಕ್ತರಿಗೆ ಆಚಾರವನ್ನು ಬೋಧಿಸುವದೇ ಇವರ ಆಚಾರ್ಯತ್ವಕ್ಕೆ ಭೂಷಣವಾಗುವದು. ಗುರುಸ್ಥಲದವರಿಷ್ಠಾಧಿಕಾರಿಗಳಾದ ಈ ಮಹಾಸ್ವಾಮಿಗಳು ತಮ್ಮ ಸ್ಥಲವನ್ನರಿತು ನಿಃಸ್ವಾರ್ಥಬುದ್ಧಿಯಿಂದ ಧರ್ಮಜಾಗ್ರತೆಯನ್ನು ಮಾಡಿದಹೊರತು ಸಮಾಜದಲ್ಲಿ ಸದಾಚಾರವು ನೆಲೆಗೊಳ್ಳಲಾರದು. ಈಗ ಎಷ್ಟೋ ಜನರು ಹೀಗೆ ಪ್ರಶ್ನೆ ಮಾಡುತ್ತಾರೆ:—ಗುರುಸ್ಥಲದ ಪಟ್ಟಚರಮೂರ್ತಿಸ್ವಾಮಿಗಳು ಗುರುಪೀಠಾಧಿಷ್ಠಿತರಾಗಿ ಯಾರು ಏನು ಧರ್ಮಜಾಗ್ರತೆಯನ್ನು ಮಾಡಿರುವರೆಂದೂ ಮತ್ತು ಯಾರು ತಮ್ಮ ಸ್ವಾಸ್ತಿಯ ಸದುಪಯೋಗವನ್ನು ವೀರಶೈವ ಬಡವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ ಮಾಡಿ, ಸಮಾಜವನ್ನು ಸಕರಿಸಿ ಉದ್ಧಾರಮಾಡಿರುವರೆಂದೂ ಇದಲ್ಲದೆ ವೈದಿಕವಿದ್ಯಾಪ್ರಸಾರಕ್ಕಾಗಿ ಯಾರು ಎಲ್ಲೆಲ್ಲಿ ಪಾಠಶಾಲೆಗಳನ್ನೇರ್ಪಡಿಸಿರುವರೆಂದೂ, ಮತ್ತೂ ಸಮಾಜದೇಳ್ಗೆಯ ಹಿತೋದ್ದೇಶದಿಂದ ರಾಜಕೀಯವಿದ್ಯಾ (ಇಂಗ್ಲೀಷ) ರ್ಜನೆಯ ಸೌಕರ್ಯಕ್ಕಾಗಿ ವೀರಶೈವವಿದ್ಯಾರ್ಥಿಗಳಿಗೆ ಎಲ್ಲೆಲ್ಲಿ ಬೋರ್ಡಿಂಗುಗಳನ್ನು ಸ್ಥಾಪಿಸಿರುವರೆಂದೂ ಇವೇ

...ದ ಪಟ್ಟಚರಮೂರ್ತಿಸ್ವಾಮಿಗಳ ಕರ್ತವ್ಯಾಂ... ಗೆ ಪ್ರಶ್ನೆಮಾಡುತ್ತಿರುವರು. ಈ ಪ್ರಶ್ನೆಗಳಿಗೆ ಉತ್ತರವನ್ನು ಪಟ್ಟಚರಮೂರ್ತಿಸ್ವಾಮಿಗಳೇ ಆಲೋಚಿಸತಕ್ಕದ್ದು! ಇವರು ಹೀಗೆಮಾಡದೆ ಕೇವಲ ಸ್ವಾರ್ಥಪರಾಯಣರಾಗಿ, ಗದ್ದುಗೆಕಲ್ಲಿನಮಠವನ್ನು ಕಟ್ಟಿಕೊಳ್ಳುವದರಲ್ಲಿಯೂ, ನಮಗೆ ಅಷ್ಟುಶಿಷ್ಯರುಂಟು ಇಷ್ಟುಶಿಷ್ಯರುಂಟೆಂದು ತಮ್ಮ ಅಭಿಮಾನವನ್ನು ಕಾಯ್ದುಕೊಳ್ಳುವದರಲ್ಲಿ ಮಾತ್ರ ಹಾತೊರೆಯುತ್ತ, ಆಚಾರಬೋಧದಿಂದ ಶಿಷ್ಯರನ್ನು ಪುನೀತರನ್ನಾಗಿಮಾಡುವ ತಮ್ಮ ಸದಾಚಾರವನ್ನು ತೊರೆದು, ಗುರುಕಾಣಿಕೆಯನೆವದಿಂದ ಶಿಷ್ಯವಿತ್ತಾಪಹಾರವನ್ನು ಮಾಡುತ್ತಿರುವರು. ಮತ್ತು ತಮ್ಮ ಹತ್ತಿಹೊಂದಿದವರನ್ನು ಮಠದಲ್ಲಿಟ್ಟುಕೊಂಡು, ಅವರ ಉದರಪೋಷಣವಿಚಾರದಲ್ಲಿಯೇ ಶಿಷ್ಯಕೃತೆಯನ್ನು ಹೊಂದುವರು. ಇದಲ್ಲದೆ ಎಷ್ಟೋ ಪಟ್ಟಚರಮೂರ್ತಿಸ್ವಾಮಿಗಳು ಕಾಪಿನ ಮೊಮ್ಮಗನಾದ ಕಲಿಗಾಲವನ್ನು ಬಿಟ್ಟು ವಿಲಾಸಗಳನ್ನಿಟ್ಟು ಕತ್ತರಿಸಿ ಚಿತ್ರದಕಾಮಣ್ಣನಂತೆ ಮೆರೆಯುತ್ತಿರುವರು. ಶಿವೋದ್ಧಾರಕ್ಕಾಗಿ ನಿಜವಾದವಿರಕ್ತಿಯನ್ನು ಹೊಂದಿ ಅಷ್ಟಾವರಣಾಂತರ್ಗತ ಪರಮಪೂಜ್ಯ ಜಂಗಮಪದವಾಚ್ಯರಾದ ಈ ಪೂಜ್ಯರಾದರು ಇನ್ನು ಮೇಲಾದರೂ ತಮ್ಮ ಕರ್ತವ್ಯದ ಕಡೆಗೆ ಲಕ್ಷ್ಯಕೊಡುವದು ಇವರ ಸತ್ಯಸದಾಚಾರವೆನಿಸುವದು. ವೀರಶೈವಮತದ ಸ್ತ್ರೀಪುರುಷರೆಲ್ಲರಿಗೂ ದೀಕ್ಷಾವಿಧಿಯುಂಟು. ದೀಕ್ಷೆಯಿಲ್ಲದವನು ಮೋಕ್ಷವನ್ನು ಹೊಂದಲಾರನೆಂದು ಶಿವಾಗಮಗಳು ಸಾರುತ್ತಿರುವವು. ಇಂತು ಶಾಸ್ತ್ರವು ಹೀಗಿರುವಾಗ ಎಷ್ಟೋಜನರು ಅಜ್ಞಾನದಿಂದ ಆಚಾರಕ್ಕೆಬೆದರಿ ದೀಕ್ಷಾರಹಿತರಾಗಿರುವರು. ಆದ್ದರಿಂದ ಎಲ್ಲರೂ ಸ್ವಗೋತ್ರಸೂತ್ರಾನುಸಾರವಾಗಿ ಗುರುಗಳಿಂದ ದೀಕ್ಷೆಯನ್ನು ಹೊಂದಿ ಗುರೂಪದಿಷ್ಟ ಮಾರ್ಗದಿಂದಲೇ ನಡೆಯಬೇಕು. ಹಾಗೆಮಾಡದೆ ಯಾರಿಂದಲೋ ಏನೋ ಅನುಗ್ರಹತೆಗೆದುಕೊಂಡೆವೆಂದು ಅದರಂತೆ ವರ್ತಿಸುವದು ಅವ್ಯವಹಾರಮಾಡಿದಂತಾಗುವದಲ್ಲದೆ ಧರ್ಮವಿರುದ್ಧವಾದ ಆಚರಣೆಗಳಿಗೆ ಅವಕಾಶಕೊಟ್ಟಂತಾಗುವದು. ಆಚಾರವಿಷಯದಲ್ಲಿ ಮತ್ತೊಂದುವಿಚಾರಣೀಯವಾದ ಸಂಗತಿಯೇನಂದರೆ:—ಇನ್ನು ಮುಂದೆ ನಮ್ಮ ಗುರುಸ್ಥಲದವರು ತಮ್ಮ ಕರ್ತವ್ಯಕರ್ಮ ಸುಗುಣವಾಗಿ ಬಹು ಜಾಗ್ರತೆಯುಳ್ಳವರಾಗಬೇಕು. ಎಷ್ಟೋಕಡೆಯಲ್ಲಿ ನಮ್ಮ ಮಠಸ್ಥರು ದ್ರವ್ಯದಾಶೆಯಿಂದಲೂ, ಯಾವದಾದರೊಂದು ದೊಡ್ಡಆಸ್ತಿಯ ಉಪಭೋಗದ ಆಶೆಯಿಂದಲೂ, ತಮ್ಮ ಮಕ್ಕಳನ್ನು ಚಿಕ್ಕವರಿರುವಾಗಲೇ ವಿರಕ್ತರನ್ನಾಗಿ ಮಾಡುತ್ತಿರುವರು. ಹಾಗೆಮಾಡುವದು ಪರಮಅನ್ಯಾಯವು, ಧರ್ಮವಿರುದ್ಧವೂ ಆಗುವದಲ್ಲದೆ ಈತೆರವಾದ ಆಚರಣೆಯು ಯಾವ ಮತಧರ್ಮದ ನಡೆಯಲ್ಲಿಯೂ ಇರುವದಿಲ್ಲ, ಹಾಗೆ ಇದ್ದರೆ ಅದಕ್ಕೆ ಮತವೆಂದೂ, ಧರ್ಮಾಚರಣೆಯೆಂದೂ ಯಾರೂ ಅನ್ನಲಾರರು! ವೈರಾಗ್ಯದಿಂದಲೇ ವಿರಕ್ತನಾಗುವನು, ವೈರಾಗ್ಯವು ಸದಸದ್ವಿವೇಕೋದಯಾನಂತರದಲ್ಲುಂಟಾಗುವದು, ಸದಸದ್ವಿವೇಕವು ಶಾಸ್ತ್ರಜ್ಞಾನದಿಂದ ಲಭಿಸುವದು. ಶಾಸ್ತ್ರಜ್ಞಾನವಾಗುವದಕ್ಕೆ ಕಾಲಾವಧಿಯುಬೇಕು. ಶಾಸ್ತ್ರಜ್ಞಾನಸಂಪನ್ನನಾದವನು ಆತ್ಮಾನಾತ್ಮವಿವೇಚನದಿಂದಲೂ, ಸ್ವಾತ್ಮೋದ್ಧಾರದ ಹೇತುವಿನಿಂದಲೂ, ಲೋಕಕಲ್ಯಾಣದ ಚಿಂತನದಿಂದಲೂ, ಸಂತ್ಯಕ್ತವಿಷಯವಾಸನೆಯುಳ್ಳವನಾಗಿ ಲೋಕಪ್ರತಿಷ್ಠೆಯನ್ನು ಬಯಸದೆ ನಿರಭಿಮಾನದಿಂದ ವಿರಕ್ತಿಯನ್ನು ವಹಿಸಿ ಶಿವಯೋಗಮಗ್ನನಾಗಿ ಶಿವಾನಂದದಲ್ಲಿ ಲೋಲಾಡುವನು, ಸರ್ವಜಗತ್ತನ್ನು ಶಿವಸ್ವರೂಪದಲ್ಲಿ ಕಂಡು ಸರ್ವರಿಗೂ ತಲೆಬಾಗುವನು, ಆದರಪೂರ್ವಕವಾಗಿ ಜನರಿಂದ ಮಾಡಲ್ಪಡುವ ಮಾನಮರ್ಯಾದೆ ಅಭಿವಂದನಾದಿಗಳಿಗೆ ಹಿಗ್ಗದೆ ಶರಣಾಗತರಿಗೆ ಶಿವಶರಣೆಂದು ನಮಸ್ಕರಿಸುವನು. ಇದೇ ನಿಜವಾದವಿರಕ್ತಿಯ ಗುರುತು, ವಿರಕ್ತಿಯಲಕ್ಷಣವು ಹೀಗಿರುವಾಗ ಚಿಕ್ಕವಟುಗಳನ್ನು ವಿರಕ್ತರನ್ನಾಗಿಮಾಡುವದು ಶಾಸ್ತ್ರನೀತಿಬಲಾತ್ಕಾರವೆನಿಸುವದು. ಆದ್ದರಿಂದ ಧರ್ಮವನ್ನರಿಯದೆ ಅನ್ಯಾಯದ ಪರಮಾವಧಿಯಿಂದಲೂ, ದೊಡ್ಡಆಸ್ತಿಯ ಉಪಭೋಗದ ಲಾಲಸೆಯಿಂದಲೂ, ತಮ್ಮ ಚಿಕ್ಕವಟುಗಳನ್ನು ವಿರಕ್ತಮಠಕ್ಕೆನೀಡುವ ದುಷ್ಟಪದ್ಧತಿಯನ್ನು ನಮ್ಮ ಗುರುಸ್ಥಲದವರು ಸಾರ್ವತ್ರಿಕವಾಗಿ ತಡೆಯಬೇಕು. ಅಂದರೇನೇ ನಿಜವಾಗಿ ಧರ್ಮೋದ್ಧಾರವಾಗುವದಲ್ಲದೆ, ಪೂರ್ವದಲ್ಲಿ ಅನನ್ಯಾಗ್ರಹ ವಿಸ್ತಾರ! ಶಿವಾ! ವಾಯುದಿಂದ ಪಾಪಭೀತಿಯಿಲ್ಲದೆ ಸ್ವಾರ್ಥ [illegible] ಹೋರಾಡುತ್ತಿರುವವರ ಅಸದಾಚಾರಗಳನ್ನು ನಿಲ್ಲಿಸಿ ಸದಾಚಾರವನ್ನು ನೆಲೆಗೊಳಿಸಿದಂತಾಗುವದು.

ಸದಾಚಾರಪ್ರಿಯರಾದ ವೀರಶೈವ ಬಂಧುಗಳೇ! ದುರಾಚಾರಪ್ರಚುರವಾದೀ ಕಲಿಕಾಲದಲ್ಲಿ ಜಾಗ್ರತೆಯಿಂದ ನೀವು ನಿಮ್ಮ ಸದಾಚಾರಗಳನ್ನು ಕಾಯ್ದುಕೊಂಡು ಧರ್ಮರಕ್ಷಣೆಯನ್ನು ಮಾಡಿಕೊಳ್ಳಬಲ್ಲಿರೋ? ಹಾಗಿದ್ದರೆ ಧರ್ಮವಿರುದ್ಧವಾದನಡೆಗಳನ್ನು ಬಿಟ್ಟು ಸದಾಚಾರಸಂಪನ್ನರಾಗಿರಿ, ಒಣಹೇಯಬಂಧಗಳನ್ನು ಬಿಟ್ಟು ಧರ್ಮಸ್ಥಾಪಕರಾದ ಆಚಾರ್ಯವರ್ಯರಲ್ಲಿ ಸಾತಿಶಯವಾದ ಭಕ್ತಿಯನ್ನಿರಿಸಿರಿ. ಮತಸ್ಥಾಪಕರು ಮಾಡಿದ ಧರ್ಮನಿರ್ಬಂಧಗಳು ಎಂದೂ ಶಿಥಿಲವಾಗಲಾರವು. ಮತಸ್ಥಾಪಕರೇ ಮೋಕ್ಷಗುರುಗಳೆಂಬುದನ್ನು ಎಂದೂ ಮರೆಯಬೇಡಿರಿ! [illegible] ಅಂತಿಮ ಧ್ಯೇಯವು ಮೋಕ್ಷವಾಗಿರುವದು. ಅಂತಹ ಮೋಕ್ಷವ ಮೋಕ್ಷಗುರುಗಳಾದ ಮತಸ್ಥಾಪನಾಚಾರ್ಯರಿಂದಲೂ ತನ್ಮೂಲಕ ತತ್ಪಟ್ಟಾನುವರ್ತಿಗಳಾದ ಗುರುವರ್ಗದವರಿಂದಲೂ ದೊರೆಯುವದೆಂಬುದನ್ನು ಮೂರು ಅವಸ್ಥೆಗಳಲ್ಲಿಯೂ ಸ್ಮರಣಮಾಡಿಕೊಳ್ಳಿರಿ! ವೀರಶೈವರೆಲ್ಲರೂ ಮತಧರ್ಮ ಸದಾಚಾರಗಳನ್ನು ತಿಳಿದು ಪುನೀತರಾಗಬೇಕೆಂಬ ಸದುದ್ದೇಶವನ್ನೇ ತನ್ನ ಮುಖ್ಯಧ್ಯೇಯವನ್ನಾಗಿ ಮಾಡಿಕೊಂಡು, ಧರ್ಮೋಪದೇಶಿಸುವರಾಗಿ ಜಗದ್ಗುರುಗಳ ಆಜ್ಞೆಯನ್ನು ಶಿರಸ್ಸಿನಲ್ಲಿಧರಿಸಿದ "ಪಂಚಾಚಾರ್ಯಪ್ರಭೆಯು" ಶಿವಾಚಾರಗಳಿಗೆ ಮುಡಿಪವೆಂದೆನಿಸಿದ ಸೋಮವಾರ ದಿವಸ ನೂತನವಿಷಯಗಳಿಂದ ಸರ್ವಾಂಗಭೂಷಿತಳಾಗಿ ಧರ್ಮ, ನೀತಿ, ಸದಾಚಾರ, ಶಾಂತಿಗಳೆಂಬ ಮಹಫಲಗಳನ್ನು ತೆಗೆದುಕೊಂಡು, "ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ" "ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು" ಎಂಬ ದಿವ್ಯಮಂತ್ರಗಳನ್ನು ಜಪಿಸುತ್ತ ನಿಮ್ಮನ್ನಾಶೀರ್ವದಿಸುತ್ತಿರುವಳು. ಆ ಆಶೀರ್ವಾದಗಳ ಉಪದೇಶದ ಮುಖ್ಯತಾತ್ಪರ್ಯ ನಿಮ್ಮನ್ನು ಸದಾಚಾರಿಗಳನ್ನಾಗಿ ಮಾಡುವ ಸದ್ಭಾವನೆಯುಳ್ಳದ್ದಾಗಿರುವದು. ಪಂಚಾಚಾರ್ಯಪ್ರಭೆಯು ತಾನು ಉದಯಹೊಂದಿದಂದಿನಿಂದ ಏನೇನು ಉಪದೇಶಮಾಡಿರುವಳೆಂಬುದನ್ನು ಲಕ್ಷ್ಯದಲ್ಲಿಟ್ಟಿರುವಿರೋ? ಈ ವರೆಗೂ ನಿಮಗೆ ವೀರಶೈವ ಮತಸ್ವರೂಪ, ಲಿಂಗಧಾರಣ, ಗುರುಲಿಂಗ ಜಂಗಮ ಮೊದಲಾದ ವಿಚಾರಗಳು ಸಶಾಸ್ತ್ರವಾಗಿಯೂ ಯುಕ್ತಿಯುಕ್ತವಾಗಿಯೂ ಅನುಭವಸಿದ್ಧವಾಗಿಯೂ ಉಪದೇಶಿಸಲ್ಪಟ್ಟಿರುವವು. ಆ ಉಪದೇಶಗಳಂತೆ ನೀವು ನಿಮ್ಮ ಮತಧರ್ಮ ಸದಾಚಾರಗಳನ್ನು ಕಾಯ್ದುಕೊಂಡು ವರ್ತಿಸುವದೇ ನಿಮ್ಮ ಶಾಸ್ತ್ರವಿಹಿತ ಸದಾಚಾರವಾಗಿರುವದು.

ಪಂ|| ಶ್ರೀಕಂಠಶಾಸ್ತ್ರಿ ಅಮರಾಯ
ಬೃಹನ್ಮಠಾಧ್ಯಕ್ಷ "ಕರ್ನಾಟಕಕವಿಚಂದ್ರ"
ಸಬವದಿ.

ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ.

ಮಹಾಶಯರೇ, ಈ ತಿಂಗಳು 22ನೇ ತೇದಿ ಚೀಟಿಯನ್ನು ಎತ್ತಬೇಕೆಂದರೆ ಚೀಟಿಗಳು ತಕ್ಕಷ್ಟಾದರೂ ಮಾರಿಲ್ಲ, ಮತ್ತು ಮಾರಿದಚೀಟಿಗಳ ಹಣವಾದರೂ ಪೂರ್ತಿಯಾಗಿ ನಮ್ಮ ಕೈಸೇರಿಲ್ಲ. ಇದಲ್ಲದೆ ಅನೇಕರು ನಾವುಇದೆ ಒಂದೆರಡುತಿಂಗಳು ವೃದ್ಧಿಮಾಡಿದರೆ ಇನ್ನೂ ಚೀಟಿಗಳನ್ನು ವಿಶೇಷವಾಗಿ ಮಾರುತ್ತೇವೆಂದು ತಿಳಿಸಿರುವರು. ಆದ್ದರಿಂದ ರ್ಯಾಫಲ್ ಕಮಿಟಿಯವರು ಚೀಟಿ ಎತ್ತುವ ತೇದಿಯನ್ನು ಡಿಸೆಂಬರು ತಿಂಗಳ [illegible]ನೇ ತೇದಿಗೆ ವೃದ್ಧಿಮಾಡಿರುತ್ತಾರೆ

ಮಿತ್ರರೇ, ಇನ್ನಾದರೂ ಚೀಟಿಬುಕ್ಕುಗಳನ್ನು ಕಾಗದಗಳಲ್ಲಿಟ್ಟು ಮರೆಯದೆ ಮಕ್ಕಳ ವಿದ್ಯಾಭಿವೃದ್ಧಿಯ ಕಡೆಗೆ ಗಮನಕೊಟ್ಟು ಚೀಟಿಗಳನ್ನು ಮಾರಿ ಮಾರಿದ ಬುಕ್ಕು ಕೌಂಟರ್‌ಫೈಲು ರೂಪಾಯಿಗಳು ಸಹಿತ ಡಿಸೆಂಬರು 20ನೇ ತೇದಿವಳಗೆ ನಮ್ಮ ಕೈಸೇರುವಂತೆ ಕಳಿಸಬೇಕೆಂದು ವಿಜ್ಞಾಪನೆ.

H KARIBASAPPA,
Secretary

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ
ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯ
ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮ
ಇದನ್ನು ಉಪಯೋಗಿಸಿ, ಸಾವಿರಾರುಗ
ಯೋಗ್ಯತಾ
ಳನ್ನು ಕೊಟ್ಟ
ರು ಪ್ರಸಿದ್ಧ
ಈ ನಶ್ಯದ
ಯಿಂದ ಸ್ವಸ್ಥ
ವ ವ್ಯಾಧಿಗಳ
ವವಂದರೆ:—
ಒಂಟಿತಲೆನೋ
ತಲೆಯಲ್ಲಿನ ರೋ
ಳು, ಕಣ್ಣುಗಳ ಉಂಟಾಗತಕ್ಕ ಸರ್ವವ್ಯಾಧಿ
ಬುದ್ಧಿಭ್ರಮ ಮುಂತಾದ ವ್ಯಾಧಿಗಳು ಪರಿಹಾರವ
ವಲ್ಲದೆ ತಂದೆ ಮೇಲ್ಪಟ್ಟ ಈ ವ್ಯಾಧಿಗಳ
ಸ್ವಸ್ಥಮಾಡಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು
ಸುತ್ತದೆ. ಮಾರ್ಕೆಟ್ಟಿನ ಸಾಧಾರಣ ನಶ್ಯದ ಸು
ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ
ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು.
ನ್ನು ಅನೇಕ ಪ್ರಜೆಗಳು ತಮ್ಮ ಗೃಹದಲ್ಲಿ ಕುಟು
ಬೆಸ್ಕರಾಗಿ ಉಪಯೋಗಿಸುತ್ತಾರೆ. ಮಾದರಿ
ಪುಗಸಟ್ಟೆ ಕಳುಹಿಸಲಾದೀತು.
ಒಟ್ಟಿ ಒಂದಕ್ಕೆ ಕ್ರಯ ರೂ ೦-೪-೦. ವಿ.ಪಿ. ೦-೪
ಡಜ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ ೮
ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ
ಮಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ
ಗುರುಬಸವ ಅಂಡ್ ಕಂಪನಿ ಲಿಮಿಟೆ
[1] ಪೋ. ಬಾ. ೫೧೦, ಮದರಾಸು.

ASIATIC GOVERNMENT SECURIT
LIFE ASSURANCE CO, LTD, MYSO
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರು
ಮುಖ್ಯ ಕಾರ್ಯಾಲಯ
ಬೆಂಗಳೂರು.
ನಮ್ಮ ಹಿಂದೂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ
ಒಂದಾಗಿರುವುದು.
[illegible] "ಏಷ್ಯಾಟಿಕಾ" ಕಂ
ಪನಿಯಲ್ಲಿಯೇ ವಿಮೆಮಾಡಿರಿ
ಈ ಕಂಪನಿಯ ದರಗಳು ಬಹಳ ಕಡಿಮೆಯಾಗಿ
[illegible] ಪಾಲುಗಳು (ಬೋನಸು) ಲಾಭ
ವಾದುವ
ಬಾಂಡುದಾರರುಗಳು ಒಪ್ಪಿಯಿಲ್ಲದೆ ತಮ್ಮ ಸ್ವಂತ ಜ
ಮಾನ ಸೀಲವೂ, ಪಾಲಿಸಿದಾರರಿಗೆ ಅವರ ಸ್ವ
ಸ್ವತ್ತಿನ ಸೀಲವೂ ಸಾಲವನ್ನು ಕೊಡುತ್ತದೆ.
ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ತಾ
ರೀಖು ೧ನೇ ಜುಲೈ 1927 ಕ್ಕೆ ನಡೆಯುತ್ತದೆ
ವಿಶೇಷ ವಿವರಗಳಿಗೆ ಈ ಕೆಳಗ ನಮೂದಿಸಿರುವ
ರಿಗೆ ಬರೆಯಬೇಕು.
(1) ಮೆ. ಪಿ. ಶಾಸ್ತ್ರಿ,
ಚೀಫ್ ಏಜಂಟ್, ಮೈಸೂರು.
(2) ಮೆ. [illegible] ಆರಾಧ್ಯ,
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬಳ್ಳಾ
(3) ಹೈದರಾಬಾದ್ ಎಕಾನಮಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಕ್ಷಿ
ಣ) [illegible], ಮುಖ್ಯ ಏಜಂಟ್,
[16] ಮೈಸೂರು. *Asiatic Building*

ಇದು ಮೈಸೂರು ರಾಜಧಾನಿಯಲ್ಲಿರುವ ಪಂಚಾಚಾ
ರ್ಯ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ
ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂ
ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾತ್ಮಜನಿತರ್ ಪಂಚಾಖ್ಯಪೀಠಾಧಿಪರ್ | ಪಂಚಕ್ಲೇಶನಿವಾರಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಸಕಲಸತ್ತ್ವಾಂತಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸಾಲಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಅಕ್ಟೋಬರ್ ೧೯೨೭ [ಸಂಚಿಕೆ ೨೨.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಪಂಚಾಚಾರ್ಯಪ್ರಭಾ

ಪಂಚಾನನಾನನಸರೋದ್ಭೂತ ಪಂಚಾಚಾರ್ಯ ಮು
ನಾಂ | ಪ್ರಸೃತೈಷಾ ಜಗತೀಲೋಕೇ ಪಂಚಾಚಾ
ಪ್ರಭಾಪ್ಯಯಾ ||೧||
ಚಾರ್ಯಪ್ರಭಾದೇಪಿ ಪಂಚಾಚಾರ್ಯಪ್ರ
| ಪ್ರಸಂಶೋದ್ಧಾರಣಾರತೀ ಪ್ರಸಂಚೇಪ್ರ
ಧೇ ||೨||
ಸ್ಥಿತಮಹಾವಿದ್ಯಾಂ ಪಿಶೋಧೇನ ಪ್ರಕಾಶನೇ|
ಶತಾನಾಂಬ ವೀರಶೈವಾನಾಂ ಸರ್ವದಾ ||೩||
ಸತತ್ವ ಪ್ರಸೃತ್ವೇಷು ಸದಾಕಾರುಣ್ಯಂ ವಿಕಸ್ವತೀ|
ಚಾರ್ಯಪ್ರಭಾಲೋಕೇ ಜೀಯಾದಾಚಂದ್ರತಾ
||
ಸಾಯದಾತು ಧರ್ಮಸ್ಯ ಗ್ಲಾನಿರ್ಭವತಿ ಭಾರತ,
ಗಾಗತೇ ಶಾನಾ ಮನಸಾತೋ ಮಹೀತಲೇ ||೫|
ಲವ್ಯಾಸೋಕ್ತಿಮಾಲಂಬ್ಯ ಪ್ರಾದುರ್ಭೂತಾ
ಜಯೇತ್ | ಪಂಚಾನನಪ್ರತೀಕಾಶ ವಿದ್ವದ್ಗಣ
ತಾ ||೬||

~~ಲೇಖಕ~~
ಶ್ರೀ ಚಿದ್ಘನಶಿವಾಚಾರ್ಯ ~~ವ್ಯಾಕರಣವಿದ್ವಾಂ~~
~~ಶ್ರೀ ಚಿಕ್ಕನಾಡ್ವ ಗುರುಕುಲವಾಸೀ~~
~~ಶ್ರೀ ಕ್ಷೇತ್ರ ಕಾಶೀ~~

ಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಚಾಚಾರ್ಯ ಸ್ತೋತ್ರಪಂಚಕಂ

[illegible] ಚಾಚಾರ್ಯಾ ದಾ ನಿತ ಪೂತಾ
[illegible] ಶರ್ವಸತ್ತ್ವ ಚಿತ್ತಾಃ ||
[illegible]
[illegible] ||೧||
ಪ್ರಭಾಂತಃ ಲೋಕಸಂಪ್ರೀತವೇಷಾಃ |
ಪ್ರಮೋದಾಃ ಶರ್ವಸಂಯುಜ್ಯನೀರಾಃ ||
ನಿತಾಂತಾಃ ಸಂಬಸದಾ ಜ್ಞಾನಕೋಶಾ |
ಮುನೇರ್ಯಃ ಪಂಚಪೀಠಾಧಿನಾಥಾಃ ||೨||
ಘನನಾದಾ ನಿತ್ಯಮುಕ್ತಾ ಸುಶೀಲಾಃ |
ಸಕಲಲೋಲಾ ದರ್ಪರಾನೇಕಲೀಲಾಃ ||
ತಪಾಲಾಃ ಸರ್ವದಾಧಮಾಪಾಲಾ |
ಕತಿಮುನೇಯಃ ಪಂಚಪೀಠಾಧಿನಾಥಾಃ ||೩||
ವಿದಿತನಿಗಮವಾದಾ ಧ್ವಸ್ತಪೋತಪ್ರಚಾರಾ |
ದಲಿತಮದನಸಾರಾ ಜ್ಞಾನಸಂಪತ್ತಿಕಾರಾಃ ||
ರಿಪುಜನತತಿಘೋರಾ ಮಂತ್ರಸಂಧಾನಧೀರಾ |
ಮುನಿತತಿನಮನೀಯಾಃ ಪಂಚಪೀಠಾಧಿನಾಥಾಃ ||೪||
ಪ್ರಬಲಕುಮತಘೋರೋತ್ಪಾತಝುಂಝಾನಿಲಾರಾಃ |
ಸಕಲಿನನಯಾಂಭೋರಾಶಿ ಸಂಪೂರ್ಣಚಂದ್ರಾಃ ||
ಅಖಿಲಮದಾಚಾರಾಃ ಶ್ರೀಜಗದ್ದೀಪಿಕಾಭಾಃ |
ಭುವನತತಿನಮನೀಯಾಃ ಪಂಚಪೀಠಾಧಿನಾಥಾಃ ||೫||

ಲೇಖಕ—
ಸಂಗ್ರಾಧ್ಯಕ್ಷ, ಬೃಹನ್ಮಠ ಹೊಳಗಿ,
ನಾವದ ಶಾಸ್ತ್ರಶಾಲಾ, ಸೊಲ್ಲಾಪುರ.

ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರವಿಜಯಂ.

ಕಂದ

ಆವನನೊಲಿ ಚಂದಿರನಂ
ತೀವಿದಕಲೆಯ್ನೊದೆ ಹರ್ಷವಡೆವುದೊ ಧರಿತ್ರೀ ||
ದೇವಿಯರ ನಯನ ಕುಮುದವ |
ನೋವುಗೆಯಾ ಕೃಷ್ಣದೇವನೊಲಬಿಂಜಗನುಂ ||

ವೃತ್ತ

ನಿರುಪಮ ಕೃಷ್ಣರಾಜ ಸುಕರಾನ್ವಿತ ಲೋಕಹಿತೈಕ ಮಾನಸಾ| ಗುರುಚರಣಾಂಬುಜಾರ್ಚಕಸುದಾನವಿನಿರ್ಜಿತಕಲ್ಪಭೂಮಿಜಾ || ಸುರುಚಿರದೇವರಾಜ ಸದೃಶೀಕೃತ ವಿಕ್ರಮಲೋಕಸಂಸ್ತುತಾ | ದಟಿಯೊಳಗೆಲ್ಲಿಯಾಂತು ಪುರಮೈಸಿಯ ಸತ್ಯಪುರಂ ವಿರಾಜಿಸೈ ||

ಅವಾತಂ ವಿಜಯದಸ್ತುತಂ ನೃಪವರರು ಶ್ರೀಕೃಷ್ಣಪಂ ಶೋಭಿಸಂ | ದೇವಾಧೀಶವಿಭವಾಸಂದರಬಳಿ ಶ್ರೀ ಯಂ ಸದಾಪಡೆಗನಂ || ಆ ರಾಜಂಗೆ ಮೈಸೂರಪಕ್ಕೆ ಸಿರಿವಂ ರಾಜರ್ಷಿ ವಾಸಾದೊಳು | ದೇವಂ ಧಾನದಸ್ಥಪೃಗ್ನ್ಯ ನಿನಿಪಂ ಶ್ರೀಕೃಷ್ಣಭೂಪಾಲ್ವರಂ ||

ಕಂದ

ರಾಜಂ ಪ್ರಜೆಗಳ್ಗರಸು
ಮೂಜಗದೊಳ್ ಪೇಳ್ವುದತ್ತಿ ಮಾಸ್ಯನಸತ್ಯಂ ||
ರಾಜಪದಾದೋಷಿಸ್ವಸನಂ |
ಸೋಜಿಗಮೇಂ ಸ್ತೋತ್ರಗಯ್ವುದಿಲ್ಲಯಾರ್ ಕವಿಗಳ್ ||

ನರರಂ ಬಣ್ಣಿಪ ಕವಿಯುಂ |
ಕಿರಿಯಂ ತಾನೆಂದು ಪೇಳ್ವರೆಮ್ಮ ಕವೀಂದ್ರರ್ ||
ನರದೇಹದಿಂದಬಂದಿಹ |
ಹರಿಯಂ ಪೊಗಳ್ದೊಡೆ ದೋಷಮೆಂತಾಕವಿಗಂ ||

ಇಂದ್ರಾದಿದೇವತೆಗಳಂ |
ಪಂದ್ಯಮನಾ ಸೃಷ್ಟಿಗೆಯ್ದೊಡಂ ಫಲಮಿಲ್ಲಂ ||
ಸಾಂದ್ರಯಶಮೊಸಗೆಬರೆ ಕೃ |
ಷ್ಣೇಂದ್ರಂ ನಾಕೆಂದು ಪಡೆದನಿಪನಂಬೊಮ್ಮಂ ||

ವೃತ್ತ

ಗುಣಮಣಮಿಲ್ಲದಿರ್ಪನರನಂ ನೆರೆಬಣ್ಣಿಪರೆಮ್ಮ ಕಪ್ಪಿಗರ್ | ಗುಣಯುತನಪ್ಪವಂಬಳಿಸ ತಾನವರೇತಕೆ ಸುಮ್ಮನಿರ್ದಪರ್ || ಗುಣಮಣಿಹಾರನಂ ಪೊಗಳದಂದಿತನಂ ಪರಕೃಷ್ಣರಾಜನಂ | ತಣಿವರಮೆನ್ನ ನಾಲಿಗೆಯು ದೇತಕೆವೇಳ್ ಸ್ತುತಿಗಯ್ಯದಿಪ್ಪುದೈ ||

ಕಂದ

ಇಂದ್ರಿಯನಿಗ್ರಹಮಿಲ್ಲದೆ |
ಇಂದ್ರಾದಿಗಳೆಲ್ಲ ಕಟ್ಟಪೋದರು ಪೊಡವಿಂಳ್ ||
ಇಂದ್ರಿಯನಿಗ್ರಹದಿಂ ಕೃ |
ಷ್ಣೇಂದ್ರಾ ? ಫಲ ' ಪಡೆದುವಿಪ್ಪುಲಿಕೀರ್ತಿಯನೀಗಳ್ ||

ದೊರೆಗಳ್ ಬಹುಪತ್ನಿಯರಿಂ |
ಸಿರುತಂ ಕೊಡಿರ್ಪರೆಂದು ಪೇಳ್ವಜನಗಳ್ ||
ವರರಾಘವನಂ ನಿನ್ನಂ ,
ನಿರುಕಿಸಿ ತಾನೇಕಮಹಿಯರಾ ತಿರಿವಿಯಂ ||

ವರವೈರಾಗ್ಯದ ಜನಕಂ ,
ಸಿರಿಹಮಿವಿದ್ಯಾವಿವಾಸದಿಂ ನೀಂ ಪೋಲ್ವಂ ||
ಕರುಣಾರಸದೊಳ್ ಶೋಕಂ
ಗುರುತರಧರ್ಮಾಭಿಮಾನದಿಂ ಧರ್ಮೇಂದ್ರಂ ||

ಸತ್ಯಂ ಜಗದಾಧಾರಂ |
ನಿತ್ಯತ್ವವನೀವುದದುವೆ ಸತ್ಯಮೆ ಸತ್ಯಂ ||
ಸತ್ಯದ ನುರ್ಮಗನರಿತವ |
ಸತ್ಯಂ ನಿನ್ನನ್ನ ಸಾಸನೀ ಧಾರಿಣಿಯೊಳ್ ||

ಜಯಜಯ ಕೃಷ್ಣನರೇಂದ್ರಾ |
ಜಯಜಯ ಸದ್ವಿನಯ ದಾನಗುಣಯುತಚಂದ್ರಾ ||
ಜಯಜಯ ಸದ್ಗುಣಸಾಂದ್ರಾ ,
ಜಯಸಂಯುತನಾಗಿಬಾಳು ವರವೀರೇಂದ್ರಾ ||

ರಾಜಿತಪೂಜೆಯಿದಾದುದು
ಸೋಜಿಗಮೆಂ ಮುಂದೆ ಕನಕಪಟ್ಟಿರತ್ನದಗಳ್ ||
ರಾಜಿಸೊಳಾಗುವಯೋಗಂ |
ಮಾಜವೆ ತೋರತ್ತಿರಲ್ಕೆ ಕೃಷ್ಣೇಂದ್ರಂಗಂ ||

ಲೇಖಕ—
ಬಿ. ಶಿವಮೂರ್ತಿಶಾಸ್ತ್ರಿ, ಕೀರ್ತನಕಾರ್,
ತುಮಕೂರು.

ಪಂಚಾಚಾರ್ಯಪ್ರಭಾ

೧೯೨೭ ನೇ ಅಕ್ಟೋಬರ್ ತಾ|| ೧೦ನೇ ಸೋಮವಾರ

ನವರಾತ್ರಿಮಹೋತ್ಸವ

ಈ ಮಹೋತ್ಸವವು ನಮ್ಮ ಭರತಖಂಡದಲ್ಲಿ ಸುಪ್ರಸಿದ್ಧವಾದ ಹಬ್ಬವೆಂದು ಪರಿಗಣಿಸಲ್ಪಡುತ್ತಿರುವುದು. ಈ ಹಬ್ಬವನ್ನು ಒಂದೊಂದುದೇಶದಲ್ಲಿ ಒಂದೊಂದು ವಿಧವಾಗಿ ಆಚರಿಸುವರು. ಪ್ರತಿಯೊಂದು ಜನಾಂಗವೂ ಯಾವಯಾವ ವ್ಯಾಪಾರವನ್ನು ಮಾಡುತ್ತಿರುವುದೋ ಆಯಾಯ ವ್ಯಾಪಾರಸಾಧಕಗಳಾದ ಆಯುಧಸಾಮಗ್ರಿಗಳನ್ನು ಈ ನವರಾತ್ರ್ಯುತ್ಸವದಲ್ಲಿ ಅತಿ ಭಕ್ತಿಯಿಂದ ಪೂಜಿಸುವ ಪದ್ಧತಿಯು ಬಂದಿರುವುದು. ಕ್ಷತ್ರಿಯರು ಯುದ್ಧಸಾಧಕಗಳಾದ ಶಸ್ತ್ರಾಸ್ತ್ರಗಳನ್ನೂ ವಿದ್ಯಾರ್ಥಿಗಳೂ ವಿದ್ವಾಂಸರೂ ಶಾರದಾರೂಪವಾದ ಪುಸ್ತಕವನ್ನೂ ವ್ಯವಸಾಯಗಾರರು ವ್ಯವಸಾಯೋಪಕರಣಗಳನ್ನೂ ತಮ್ಮ ಜೀವಿಕೆಗೆ ಸಾಧಕಗಳಾದುದರಿಂದ ಬಹು ಭಕ್ತಿಯಿಂದ ಆರಾಧಿಸಿ ವಿಜಯದಶಮಿಯದಿವಸ ತಮ್ಮ ಕಾರ್ಯಾರಂಭವನ್ನು ಮಾಡುತ್ತಾರೆ. ಇದಲ್ಲದೆ ಚಿತ್ರ[illegible]ದಲ್ಲಿ ವಿಜಯದಶಮಿಯದಿವಸ ನೂತನಗಳಾದ ವಸ್ತ್ರಗಳನ್ನು ಧರಿಸಿಕೊಂಡು ದೇವರನ್ನಾಗಲಿ, ಗುರುಗಳನ್ನಾಗಲಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವಾದ್ಯವೈಭವಗಳೊಂದಿಗೆ ಬನ್ನಿಮರವಿದ್ದೆಡೆಗೆ ಹೋಗಿ ಪೂಜಿಸಿ ಬನ್ನಿಯ ಚಿಗುರನ್ನು ತೆಗೆದುಕೊಂಡು ಮರಳಿ ಉತ್ಸವದೊಂದಿಗೆ ದೇವರನ್ನಾಗಲಿ, ಗುರುಮಠವನ್ನಾಗಲಿ ಪ್ರವೇಶಿಸಿ " ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನೀ " ಎಂದು ಹೇಳುತ್ತ ತಮ್ಮ ತಮ್ಮ ಬಂಧುಮಿತ್ರಾದಿಗಳಿಗೆ ನಮಸ್ಕಾರ ಪ್ರತಿನಮಸ್ಕಾರಪೂರ್ವಕವಾಗಿ ಒಬ್ಬರಿಗೊಬ್ಬರು ಬನ್ನಿಯ ಚಿಗುರನ್ನು ಕೊಡುವುದುಂಟು. ಹೀಗೆ ಮಾಡುವುದರಿಂದ ಆವರ್ಷವೆಲ್ಲ ಅವರು ಮಾಡುವ ಕಾರ್ಯವೆಲ್ಲ ಕೈಗೂಡುವುದೆಂದು ದೃಢವಾದ ಒಂದು ನಂಬಿಕೆಯು ಪ್ರತಿಯೊಬ್ಬರಲ್ಲಿಯೂ ರೂಢಮೂಲವಾಗಿ ಬಿಟ್ಟಿದೆ. ಮೈಸೂರುರಾಜಧಾನಿಯಲ್ಲಿ ನವರಾತ್ರ್ಯುತ್ಸವದ ಸಂಭ್ರಮವಂತೂ ಹೇಳಲಶಕ್ಯವಾಗಿತ್ತು. ಕಳೆದತಿಂಗಳ 20ನೇ ತಾರೀಖು ಮೊದಲುಮಾಡಿಕೊಂಡು ಈ ತಿಂಗಳು 6ನೇ ತಾರೀಖಿನ ವರೆಗೂ ರಾಜಧಾನಿಯು ಎರಡನೇ ಸ್ವರ್ಗಲೋಕವೇ ಆಗಿತ್ತೆಂದರೂ ಅತಿಶಯೋಕ್ತಿಯೆನಿಸಲಾರದು. ಈ ದಿವಸಗಳಲ್ಲಿ ಪ್ರತಿಸಾಯಂಕಾಲಗಳಲ್ಲಿಯೂ ಪ್ರಭುಗಳವರು ದಿವ್ಯ ವಸ್ತ್ರಾಭರಣಾಲಂಕೃತರಾಗಿ ಕರ್ಣಾಟಕರಾಜ್ಯಲಕ್ಷ್ಮಿಯ ತಾಂಡವಸ್ಥಾನವೆನಿಸುವ ರತ್ನಖಚಿತವಾದ ಸಿಂಹಾಸನವನ್ನು ಆರೋಹಣಮಾಡುತ್ತಿದ್ದರು. ರಾಜಬಂಧುಗಳೂ ಸಚಿವೋಪಸಚಿವರುಗಳೂ ಪುರಪ್ರಮುಖರೂ ದೇಶಪ್ರಮುಖರೂ ಸೈನಿಕರೂ ಕ್ರಮವರಿತು ನಜರು[illegible]ಗಳನ್ನು ಮಾಡುತ್ತಿದ್ದರು. ಮತ್ತು ಸಭೆಯ ಮುಂದಣ ಅಂಗಣದಲ್ಲಿ ಕುಸ್ತಿ ಪಂಜಿನಾಟ ಬಿರುಸುಬಾಣವಂತಾದ ವಿಧವಿಧಗಳಾದ ವಿನೋದಗಳು ನಡೆಯುತ್ತಿದ್ದವು. ಅನೇಕದೇಶಗಳಿಂದ ಆಗಮಿಸಿದ್ದ ಪ್ರಸಿದ್ಧ ಸಂಗೀತ ವಿದ್ವಾಂಸರ ವಾದ್ಯಗಾರರ ಸಂಗೀತವೂ ವಾದ್ಯಗಳೂ ಆಗಾಗ್ಗೆ ನಡೆಯುತ್ತಲೇ ಇದ್ದವು. ಪ್ರತಿವರ್ಷವೂ ಇರುವುದಕ್ಕಿಂತಲೂ ವಿಶೇಷ ಚಮತ್ಕಾರವಾಗಿ ರಚಿಸಲ್ಪಟ್ಟಿರುವ ವಿದ್ಯುದ್ದೀಪಾವಳಿಗಳು ನೋಡುಗ ಪ್ರೇಕ್ಷಕರಿಗೆ ಅಪೂರ್ವವಾದ ಸಂತೋಷವನ್ನುಂಟುಮಾಡುತ್ತಿದ್ದಿತು. ಗುರುವಾರ ಪ್ರಾತಃಕಾಲ ಪದ್ಧತಿಪ್ರಕಾರವಾಗಿ ವಜ್ರಮುಷ್ಟಿಕಾಳಗ ಮುಂತಾದ ಕಾರ್ಯಗಳೆಲ್ಲ ನಡೆದನಂತರ ಮಹಾಪ್ರಭುಗಳು ಪಟ್ಟದ ಕುದುರೆಯನ್ನೇರಿ ಪಟ್ಟಾಯುಧವನ್ನಿಟ್ಟ ಚಿನ್ನದ ಪಲ್ಲಕ್ಕಿ ಮೊದಲಾದವುಗಳನ್ನು ಬನ್ನಿಮಂಟಪಕ್ಕೆ ಸಾಗಗೊಳಿಸಿದರು. ಅದೇದಿವಸ ಮಧ್ಯಾಹ್ನ 4 ಘಂಟೆಗೆ ನಾನಾವಿಧವಾದವಾದ್ಯಗಳು ಪ್ರಯಾಣಭೇರಿಯು ಮೊಳಗುತ್ತಿರಲು ಅನರ್ಘಗಳಾದ ಉಡುಪನ್ನು ಧರಿಸಿಕೊಂಡು ಆನೆಯಮೇಲಿಟ್ಟಿರುವ ಅಂಬಾರಿಯಲ್ಲಿ ಶ್ರೀಮದ್ಯುವರಾಜರೊಂದಿಗೆ ಮೂರ್ತಿಮಾಡಿದರು. ಪ್ರಯಾಣಸೂಚಕವಾದ 21 ತೋಪುಗಳು ಹಾರಿಸಲ್ಪಟ್ಟವು. ಹಸ್ತಿ ಅಶ್ವರಥ ಪದಾತಿರೂಪವಾದ ಸೈನ್ಯದೊಡನೆ ಸ್ವಾಮಿಯು ಸಕಲರಾಜಮರ್ಯಾದೆಗಳೊಂದಿಗೆ ದೊಡ್ಡಪೇಟೆಮಾರ್ಗವಾಗಿ ಪ್ರಯಾಣವೆಳಸಿದರು. ಅಲ್ಲಿಂದಲ್ಲಿಗೆ ಪ್ರಜೆಗಳಿಂದ ಒಪ್ಪಿಸಲ್ಪಡುತ್ತಿದ್ದ ಪುಷ್ಪಗುಚ್ಛಾದಿಗಳನ್ನು ಸಮೀಪದರು ಒಪ್ಪಿಸಿಕೊಳ್ಳುತ್ತಿದ್ದರು. ಉತ್ಸವವು ಬನ್ನಿಮಂಟಪಕ್ಕೆ ಬಿಜಯಮಾಡಿಸಿದನಂತರ ಶಮೀಪೂಜಾದಿ ವಿಧಾನಪೂರ್ವಕವಾದ [illegible] ನಡೆಯುತ್ತಿದ್ದ [illegible]ಗಳನ್ನು ಒಪ್ಪಿಸಿಕೊಂಡು ರಾತ್ರಿ 11 ಘಂಟೆಗೆ ಸ್ವಾಮಿಯು ಅರಮನೆಗೆ ದಯಮಾಡಿಸಿತು. ಆಗ ಸೂಚನಾರ್ಥವಾಗಿ 21 ತೋಪುಗಳು ಹಾರಿಸಲ್ಪಟ್ಟವು.

ಈ ವರ್ಷ ರಾಜಸಭೋದರ್ಬಾರಿನ [illegible]ಕ್ಕೆ ಹೋಗುವಾಗ ಪ್ರಿನ್ಸ್ [illegible]ವರೂ ಹಿಂತಿರುಗಿ ಬರುವಾಗ [illegible] ಸುಗ್ರಹಕ್ಕೆ ಪಾತ್ರರಾದ [illegible]ವರೂ ಅಂಬಾರಿಯ ಹಿಂಭಾಗದಲ್ಲಿ ಕುಳಿತಿದ್ದರು. ಈ ವರ್ಷ ನೂತನವಾಗಿ ಏರ್ಪಡಿಸಲ್ಪಟ್ಟ ಚಾರಿತ್ರಿಕ ಪ್ರದರ್ಶನವು ವಿಶೇಷವಾಗಿದ್ದುದರಿಂದ ಪ್ರತಿವರ್ಷಕ್ಕಿಂತಲೂ ಹೆಚ್ಚಾಗಿ ದೇಶವಿದೇಶಗಳಿಂದ ಲಕ್ಷಾವಧಿ ಪ್ರೇಕ್ಷಕರು ಬಂದಿದ್ದರಲ್ಲದೆ, ಮದ್ರಾಸು ಗವರ್ನರು ದಂಪತಿಗಳು ಅತಿಥಿಗಳಾಗಿ ಆಗಮಿಸಿದ್ದರು. ಮೈಸೂರು ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡಿರುವ ಸಾಕ್ಷಾದ್ಧರ್ಮವತಾರಿಗಳಾದ ಪ್ರಭುವರ್ಯರಿಗೂ, ಶ್ರೀಮದ್ಯುವರಾಜರವರಿಗೂ, ಬಾಲಪ್ರಭುಗಳಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರಿಗೂ, ಅವರ ಕುಟುಂಬದವರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರ ಇಷ್ಟೋಪ್ಸಿತಿಕರವಾದ ಸಕಲ ಸೌಭಾಗ್ಯವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಸ್ಮಾರಕವೇತನ

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರಾದ ಮ|| ಪಿ. ಮಹಾದೇವಯ್ಯನವರು ವಕೀಲರಾಗಿದ್ದ ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಮದ್ರಾಸ್ ಲಾ ಕಾಲೇಜಿನಲ್ಲಿ ವ್ಯಾಸಂಗಮಾಡಲು ಇಚ್ಛಿಸುವ ಮೈಸೂರು ಸೀಮೆಯ ಹತ್ತು ಜನ ವೀರಶೈವವಿದ್ಯಾರ್ಥಿಗಳಿಗೆ ವೇತನವನ್ನು ಕೊಡಬೇಕೆಂದು ನಿರ್ಧರಿಸಿರುತ್ತಾರೆ. ವಿದ್ಯಾರ್ಥಿಗಳು ಬಡವರಾಗಿಯೂ, ಯೋಗ್ಯರಾಗಿಯೂ ಉತ್ತಮರೀತಿಯಿಂದ ಅಭ್ಯಾಸಮಾಡುವವರಾಗಿಯೂ ಇರತಕ್ಕಬಗ್ಗೆ ತಕ್ಕ ಯೋಗ್ಯತಾಪತ್ರಗಳೊಡನೆ ಸದರಿ ಜಡ್ಜರವರಿಗೆ ಅರ್ಜಿಹಾಕಿಕೊಳ್ಳಬೇಕು. ಈ ಮಹೋದಯರು ವೀರಶೈವವಿದ್ಯಾರ್ಥಿಗಳು ವಿದ್ಯೆಯಲ್ಲಿ ಮುಂದವರಿಯಲೆಂಬ ಸದುದ್ದೇಶದಿಂದ ಏರ್ಪಡಿಸಿರುವ ಈ ಅಮೋಘವಾದ ಸ್ಮಾರಕವನ್ನು ನೋಡಿ [illegible] ಸಂತೋಷಪಡಬೇಕಾಗಿದೆ. ವಿದ್ಯಾರ್ಥಿಗಳು ಈ ಮಹೋದಯರಿಂದ ಸಹಾಯವನ್ನು ಪಡೆದು ಉತ್ತಮರೀತಿಯಿಂದ ಅಭ್ಯಾಸಮಾಡಿ ಇವರ ಪಿತೃಗಳ ಸ್ಮಾರಕವನ್ನು ಲೋಕದಲ್ಲಿ ಪ್ರಜ್ವಲಗೊಳಿಸುವಂತೆ ಮಾಡಿ ಕೃತಕೃತ್ಯರಾಗಬೇಕೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ.

ಮದರಾಸಿನಲ್ಲಿ ಸೇರುವ ರಾಷ್ಟ್ರೀಯಪ್ರದರ್ಶನಕ್ಕೆ
ದ್ರಾಸ್ ಗವರ್ನರವರು 500 ರೂಪಾಯಿಗಳನ್ನು ಕೊಟ್ಟ

ಕೊಡಗಿನ ವೀರರಾಜಪೇಟೆಯಲ್ಲಿ ಗಣೇಶೋತ್ಸ
ಹಿಂದೂ ಮುಸಲ್ಮಾನರಿಬ್ಬರೂ ಸೇರಿ ನೆರವೇರಿಸಿದರೆಂದು
ತ್ತೇವೆ. ಆನಂದದ ಸುದ್ದಿ.

ಸಂಯುಕ್ತಪ್ರದೇಶದ ನಾಯಕರಾದ ಜಗ್ಗಲಾಲ್ ಪಾಪಾ
ಕಾಲವಾದ್ದರಿಂದ ಅವರ ಸ್ಥಾನಕ್ಕೆ ಮುಸ್ತಫಾ ಖಾನ
ಎಂಬವರು ಬಂದಿರುತ್ತಾರೆ

ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳು ಗುಜರಾ
ಪ್ರವಾಹದಿಂದ ನಿರಾಶ್ರಿತರಾದ ಜನರ ಸಹಾಯಾರ್ಥವಾಗಿ
ಪೌಂಡುಗಳನ್ನು ಕಳುಹಿಸಿರುತ್ತಾರೆ

ಭೂಪಾಲಸ್ಥಾನದ ಬೇಗಂರವರು ಒಂದುಕೋಟಿ
ಯ ಬೆಲೆಬಾಳುವ ತಮ್ಮ ಆಸ್ತಿಯನ್ನೆಲ್ಲಾ ಹಿಂದೂಸ್ಥಾ
ಮುಸಲ್ಮಾನ ಧರ್ಮಪ್ರಚಾರಕ್ಕಾಗಿ ದಾನಮಾಡಿದ್ದಾರೆ

[illegible] ಚಾರ್ಲ್ಸ್ ಎಂಬ ಯುದ್ಧ
[illegible] ಹಿಂದೂಸ್ಥಾನದ ಸ್ವರ್ಗವನ್ನು
ವುದಕ್ಕೆ [illegible] ಕೊನೆಯವರಿಗೆ ಹಿಂದೂಸ್ಥಾ
[illegible] ವಾರ್ತೆಯಿದೆ

[illegible] ಗುಣಮಾಡುವುದಕ್ಕಾಗಿ
[illegible] ಹಾಸ್ಪಿಟಲ್‌ನಲ್ಲಿ ಪ್ರಯೋ
[illegible] ಅಲ್ಲಿಗೆಯೋಗಿ
[illegible] ಉತ್ತಮವಲ್ಲ [illegible]

ರಾಣಿಬೆನ್ನೂರಿನ ಬಾರ್ ಅಟ್ ಲಾ ಮಿ|| ವೆಂಕಣ್ಣನಾ
[illegible] ಮುತ್ತಿದವೆಂದು ಕೇಳಿ ವಿಷಾ
ತ್ತೇವೆ. ಇವರು [illegible]ದಲ್ಲಿ ಒಳ್ಳೇಹೆಸರನ್ನು
ವರು. ಇವರ ಆತ್ಮಕ್ಕೆ ಪರಮೇಶ್ವರನು ಶಾಂತಿಯನ್ನೀಯ

ಅಮೇರಿಕೆಯ ಚಿಕಾಗೋನಗರದಲ್ಲಿ ಟನ್ನಿ, ಡೆಮ್ಸೆ,
ಪ್ರಸಿದ್ಧ ಜಟ್ಟಿಗಳಿಗೆ ಮಲ್ಲಯುದ್ಧವು ನಡೆಯಲು ಆ
ನೋಡುವುದಕ್ಕೆ 1,50,000 ಪ್ರೇಕ್ಷಕರು ನೆರೆದಿದ್ದರಂತೆ
ಟಿಕೆಟ್ ಮಾರಾಟದಿಂದ 2,80,000 ಡಾಲರು ಉತ್ಪನ್ನವಾ
ಯುದ್ಧದಲ್ಲಿ ಟನ್ನಿಯೇ ಜಯಶಾಲಿಯಾದನು

ಅಗ್ನಿಕುಮಾರಸೇನನೆಂಬ 60 ವರ್ಷವಯಸ್ಸಿನ ಬಂಗಾಳಿ
ನನು 17 ಮೈಲುಗಳ ಅಗಲವಾದ ಇಂಗ್ಲಿಷ್ ಕಡಲ್ಗಾಲು
ನ್ನು ಈಜಿ ಜಯಿಸಬೇಕೆಂದು ಹೊರಟಿರುತ್ತಾನೆ
ನು ತನ್ನ ಶಕ್ತಿಪರೀಕ್ಷಾರ್ಥವಾಗಿ ಕಲ್ಕತ್ತೆಯಲ್ಲಿ 14 ಗಂ
ವರೆಗೆ ಗಂಗಾನದಿಯಲ್ಲಿ 11 ಮೈಲು 160 ಗಜಗಳದೂರ ಈ
ತ್ತಾನೆ

ಗಣೇಶಮಹಿಮೆಯ ವಿಷಯವಾಗಿ ಕಲ್ಕತ್ತಾದಿಂದ ಹೊಸ
[illegible] ಚಲನಚಿತ್ರಗಳ ಪ್ರಥಮಪ್ರದರ್ಶನವು ಈದಿವಸ
[illegible] ಶ್ರೀಮನ್ಮಹಾರಾಜರವರ ಪ್ರ
[illegible] ಚಾರ್ಲ್ಸ್ ಟಾಡ್‌ಹಂಟರವರ ಆ
[illegible] ಮೈಸೂರು ಮೆಜೆಸ್ಟಿಕ್ ಸಿನಿಮಾದಲ್ಲಿ ಪ್ರದರ್ಶಿ
ತವು

[illegible] ರಾಮಲೀಲಾ ಮೆರವಣಿಗೆಯು ನಡೆ
[illegible] ಮುಸಲ್ಮಾನರಿಗೆ ಭಯಂಕರವಾದ ಬಡಿದಾಟ
[illegible] 50 ಜನರಿಗೆ ಬಲವಾದ ಗಾಯವಾ
[illegible] ಕಲೆಕ್ಟರ್‌ಸಾಹೇಬರಿಗೂ ಕಲ್ಲಿನ
[illegible] ಸಹಾಯದಿಂದ ಈ ದಂಗೆಯನ್ನು ಶಾಂತ
ಪಡಿಸಲಾಯಿತು

[illegible] ಒಬ್ಬ ಮುಸಲ್ಮಾನನು ತನ್ನ ಹೆಂಡತಿಗೆ ಅ
ಮಾಡಲು ಮಾಂಸವನ್ನು ತಂದುಕೊಟ್ಟನು. ನಾಯಿಯು
ಮಾಂಸವನ್ನು ತಿಂದಿತು. ಆಕೆಯು ಗಂಡನು ಕೋಪಿಸುವನೆ
ಅಂಜಿಕೆಯಿಂದ ಮಲಮಗನನ್ನು ಕೊಂದು ಆ ಮಾಂಸವನ್ನು ಅ
ಮಾಡಿ ಬಡಿಸಿದಳು. ಈ ಕೃತ್ಯವು ಹೊರಬಿದ್ದು ಪೋಲೀಸರು ನ
ಹೆಂಗಸನ್ನು [illegible]ದ್ದಾರೆ.

ರಷ್ಯಾ ದೇಶದ ಬೋಲ್ಷೆವಿಕ್ ರಾಜ್ಯಸ್ಥಾಪನೆಯ ಹತ್ತನೆ
ವಾರ್ಷಿಕೋತ್ಸವಕ್ಕೆ ಹಿಂದೂಸ್ಥಾನದಲ್ಲಿ ಪ್ರಮುಖರಾದ ಮ
ಬಯಿ ಕ್ರಾನಿಕಲ್‌ನ ಮಿ|| ಬ್ರೆಲ್ವಿ, ಕಲ್ಕತ್ತೆಯ ಶ್ರೀರಾಮಾನಂದ
ಚಟರ್ಜಿ, ಮಿ|| ಸುಭಾಷ ಚಂದ್ರಬೋಸ್, ಮಿ|| ಸೇನಗು
ಮತ್ತು ಮದ್ರಾಸಿನ ಶ್ರೀ ಸಿಂಗರವೇಲೂ ಮೊದಲಾದವ
ಆಮಂತ್ರಣಪತ್ರಿಕೆಯನ್ನು ಕಳುಹಿಸಿರುತ್ತಾರೆ.

ರಂಗೀಲ್ ರಸೂಲ್ ಗ್ರಂಥಕರ್ತರಾದ ರಾಜಪಾಲರನ್ನು
[illegible] ಎಂಬ ಮುಸಲ್ಮಾನನು ಮೂರುಸಾರಿ ಚೂರಿಯಿಂದ
ಮ ಕೊಲ್ಲಲು ಪ್ರಯತ್ನಿಸಿದ್ದ ಅಪರಾಧಕ್ಕಾಗಿ ಅವನಿಗೆ
ವಿಟ್ಟು 7 ವರ್ಷಗಳ ಕಠಿಣಸಜಾ, ಮೂರುತಿಂಗಳು ಏಕಾ
ಕೋಣೆವಾಸ ಈ ಶಿಕ್ಷೆಯು ಮುಗಿದನಂತರ 5000 ರೂಪಾಯಿ
ಜಾಮೀನು ಜಾಮೀನು ಕೊಡದಿದ್ದರೆ 3 ವರ್ಷ ಸಾದಾ
ಅನುಭವಿಸಬೇಕೆಂದು ತೀರ್ಮಾನವಾಗಿದೆ

ಹಿಂದೂಸ್ಥಾನದಲ್ಲಿ ಜರ್ಮನಿಗಾಗಿಯೇ ಲಕ್ಷಾಂತರ ಗೋ
ಗಳು ಕೊಲ್ಲಲ್ಪಡುತ್ತಿರುವುವು. 1919 20 ರಲ್ಲಿ ಇಲ್ಲಿಂದ 1
ಕೋಟಿ 65 ಲಕ್ಷ ರೂಪಾಯಿ ಬೆಲೆಬಾಳುವ ಎಮ್ಮೆ ಆಕ

ರ್ಣವು ಪರದೇಶಕ್ಕೆ ಹೋಯಿತು; ಮತ್ತು ಇದೇವರ್ಷ ರೂಪಾಯಿ ಬೆಲೆಬಾಳುವ 210 ಸಾವಿರಮಣ ಧನಗಳ ವು ಬರ್ಮಾದೇಶಕ್ಕೆ ರಫ್ತಾಯಿತು. ಹಿಂದುಸ್ಥಾನ ಯುವ ಈ ಕ್ರೂರಕೃತ್ಯದಬಗ್ಗೆ ಜನವಂಶನು ಯಾವಾಗ ಯುವನೋ?

ಜಿಲ್ಲಾ ಮನ್ವಿನಡಪತಲಿತಾಲೂಕು ಬಸಿಕಲ್ಲುಗ್ರಾ ರಾ|| ಹೊಳಗುಂದಿ ವೀರಭದ್ರಗೌಡರೆಂಬವರು ತಾವು ವಾಗನ್ನು ಧರ್ಮಕಾರ್ಯವನ್ನು ಮಾಡಬೇಕೆಂಬ ಸದ್ಬು ದ ತಮ್ಮ ಆಸ್ತಿಯನ್ನೆಲ್ಲಾ ವಿಕ್ರಯಮಾಡಿ ಅದರಿಂದ ರೂಪಾಯಿಗಳನ್ನು ಶ್ರೀಮದುಜ್ಜಯನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಶ್ರೀ ಜಗದ್ಗುರು ಪಂಚಾ ಚಾರ್ಯ ಸಂಸ್ಕೃತಪಾಠಶಾಲಾ ಫಂಡಿಗೆ ಅರ್ಪಿಸಿದ್ದಾರೆಂ ಯನ್ನು ಮ||ರಾ|| ಚಿತ್ರವಾಡಿಗಿ ಶ್ರೀಮಂತ ಗುಗ್ಗರಿ ಪ್ಪನವರಮುಖದಿಂದ ತಿಳಿದು ಸಂತೋಷಿಸುತ್ತೇವೆ.

ಗಳೂರುನಗರದಲ್ಲಿ ಮ||ರಾ|| ತಿರುಮಲೆ ತಾತಾಚಾರ್ಯ ರವರ ಸಂಪಾದಕತ್ವದಿಂದ ಹೊರಡುತ್ತಿರುವ ವಿಶ್ವಕರ್ನಾ ಮೂರುವರ್ಷಗಳು ಕಳೆದು ನಾಲ್ಕನೆವರ್ಷವು ಪ್ರಾರಂಭ ದೆ ಈ ಪತ್ರಿಕೆಯು ನೈತಿಕ, ರಾಜಕೀಯ, ಧಾರ್ಮಿಕ, ಸಾರ್ವಜನಿಕವಾದ ತತ್ವಗಳನ್ನು ಪ್ರಕಟಿಸುತ್ತಿರುವುದು ಬ್ಬ ಕರ್ನಾಟಕಾಭಿಮಾನಿಗೂ ತಿಳಿದವಿಷಯವೇ ಆಗಿರ ಈ ಪತ್ರಿಕೆಯು ನಾಲ್ಕನೆಯವರ್ಷದ ಪ್ರಥಮಸಂಚಿಕೆಯು ಕಡೆಗೆ ಬಂದಿರುತ್ತದೆ. ಈ ಪತ್ರಿಕೆಯಸಂಪಾದಕರು ಉತ್ತ ಭಿಮಾನಿಗಳಾಗಿರೋದರಿಂದ ದೇಶಾಭಿಮಾನಿಗಳೆಲ್ಲರೂ ತ್ರಿಕೆಗೆ ಸಹಾಯಮಾಡುವರೆಂದು ಪೂರ್ಣನಂಬಿದ್ದೇವೆ

ಸ್ವೀಕಾರ.

ದಾವಣಗೇರಿಯ ಮ||ರಾ|| ಮಾಗಾನಹಳ್ಳಿ ಶ್ರೀ ತ ನಂಜುಂಡಪ್ಪನವರು ವ ರುದ್ರಪ್ಪನವರು ಈ ಭ್ರಾತೃಗಳು ಈ ಪತ್ರಿಕೆಯ ಪೋಷಣಕ್ಕಾಗಿ ನೂರು ರೂಪಾಯಿಗಳನ್ನು ಕಳುಹಿಸಿ ಆಶ್ರಯ ತರಾಗಿರುತ್ತಾರೆ. ಇವರು ಚಿಕ್ಕವಯಸ್ಸಿನವರಿ ಗ್ಯೂ ಇವರಲ್ಲಿರತಕ್ಕಂಥ ಗುರುಭಕ್ತಿ ವಿವೇಕಬುದ್ಧಿ ದ ಅಸದೃಶವಾಗಿವೆ. ಇವರಿಗೆ ಶ್ರೀ ಜಗದಾಚಾರ್ಯ ಸಕಲವಿಷಯದಲ್ಲಿ ಉತ್ತರೋತ್ತರಾಭಿವೃದ್ಧಿಯ ಟುಮಾಡಲೆಂದು ಹಾರೈಸುತ್ತೇವೆ.

ರವಾಡಜಿಲ್ಲಾ ಗದಗತಾಲೂಕು ಹಮ್ಮಿಗಿಗ್ರಾ ದ ಮ||ರಾ|| ಗುರುಭಕ್ತಕೇಸರಿ ಶಾಂತಪ್ಪ ವೀರಭ ಕಬಸದ ಇವರು ವಿಜಯದಶಮಿಯ ಕಮಿಯ ಣದ್ವಾರಾ ಈ ಪತ್ರಿಕೆಯ ಪೋಷಣಕ್ಕಾಗಿ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಚಿತ್ರದುರ್ಗ ಡಿ|| ಮೊಳಕಾಲ್ಮುರು ವಾಸಿಗಳಾದ ರಾ| ಅಸಿಸ್ಟೆಂಟ್ ಸರ್ಜನ್ ಎಂ. ಸಿ. ಸಂಜಪ್ಪನ ತಮ್ಮಗೃಹದಲ್ಲಿ ಸ್ಥಾಪಿಸಿದ ಶ್ರೀ ವರಸಿದ್ಧಿವಿನಾ ಕನ ಮಹೋತ್ಸವಕಾಲದಲ್ಲಿ ಈ ಪತ್ರಿಕೆಯ ಪೋ ಕ್ಕಾಗಿ ಎರಡುರೂಪಾಯಿಗಳನ್ನು ತೆಗೆಯಿಸಿ ಕಳು ರುತ್ತಾರೆ.

ಜಮಖಂಡಿಸಂಸ್ಥಾನಕ್ಕೆ ಸೇರಿದ ಕುಂದಗೋಳಕ ದಲ್ಲಿರುವ ಮ|| ರಾ|| ಹೆಬ್ಬಾಳು ಚನ್ನಪ್ಪನವರ ಸ್ಮಂದಿರಾದ ಗುರಪ್ಪನವರಿಗೆ ಪುತ್ರನುಜನಿಸಿದ ಸಂ ತೋಷಕ್ಕಾಗಿ ಈ ಪತ್ರಿಕೆಯ ಪೋಷಣಕ್ಕಾಗಿ ಎರಡು ಪಾಯಿಗಳನ್ನು ಕಳುಹಿಸಿರುತ್ತಾರೆ.

ಕೊಪ್ಪಳಜಿಲ್ಲಾ ಅಳವಂಡಿಗ್ರಾಮದಲ್ಲಿ ನೆರವೇರಿದ ಮಲ್ಲಮ್ಮಂಬೆಯ ಪುರಾಣಸಮಾಪ್ತಿಯ ಸಮ ದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ ಡುರೂಪಾಯಿಗಳು ವೇ|| ಬನ್ನಿಕೊಪ್ಪದ ಹಿರೇಮ ಠ ಶಿವಯ್ಯನವರಿಂದ ತಲ್ಪಿರುತ್ತವೆ.

ಶಿವಮೊಗ್ಗ ಡಿ|| ನ್ಯಾಮತಿಗ್ರಾಮದ ಮ||ರಾ|| ಮಹಲಿಂಗಪ್ಪ ಶಿವಲಿಂಗಪ್ಪನವರು ವಿನಾಯಕ ಚತುರ್ಥಿಯನ್ನು ಕಳುಹಿಸುವಕಾಲದಲ್ಲಿ ತೆಗೆಯಿಸಿದ ಒಂದುರೂಪಾಯಿಯನ್ನು ನ್ಯಾಮತಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಕಳುಹಿಸಿರುತ್ತಾರೆ.

ಅನಂತಪುರ ಡಿ|| ಕೊಂಡಕುಂದಿಗ್ರಾಮದ ವೀರ ರು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸ ಯ ಕಾಲದಲ್ಲಿ ಈ ಪತ್ರಿಕೆಯ ಪೋಷಣಕ್ಕೋ ದ 3 ರೂಪಾಯಿಗಳನ್ನು ತೆಗೆದು ವೇ|| ವಿಜಾಪುರದ ಯೋಗೀಶ್ವರವರ್ಮರವರ ದ್ವಾರಾ ಕಳುಹಿಸಿರು ತ್ತಾರೆ.

ಕೈಸೂರಿನ ಬಳಿ ಮಲ್ಲವೀರಪ್ಪನವರು ತಮ್ಮ ಪುತ್ರನ ವಿವಾಹಮಹೋತ್ಸವಕಾಲದಲ್ಲಿ ಪತ್ರಿಕಾಪೋಷಣಕ್ಕಾಗಿ ಒಂದುರೂಪಾಯಿಯನ್ನು ಕಳುಹಿಸಿದ್ದಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ. ಸಂ.—

ಚನ್ನಬಸವಪ್ಪನವರ ಚಾತುರ್ಯ

ಅಕ್ಟೋಬರ 1ನೇ ತಾರೀಖಿನ ಸ್ವಾರ್‌ಪತ್ರಿಕೆಯಲ್ಲಿ "ನಿಜಪಾಂಡಿತ್ಯ ಪ್ರದರ್ಶನ" ಎಂಬ ಹೆಡ್ಡಿಂಗಿನಿಂದ ಎಚ್. ಆರ್. ಚನ್ನಬಸಪ್ಪ ಎಂಬವರು ಭಂಡನ ಭಂಡಾಟ ಎಂಬ ಲೇಖವನ್ನು ಶೋಧಿಸಿ ಬಿ. ಎಸ್. ವೀರಪ್ಪನಜಾಲವನ್ನು ಎತ್ತಿಹಿಡಿದಿದ್ದಾರೆ. ಚನ್ನಬಸಪ್ಪನವರೇ, ನಿಮ್ಮ ವಿಚಾರವು ಬಹು ಹೊಗಳತಕ್ಕದ್ದಾಗಿದೆ. ನಿಮ್ಮ ವಿಚಾರದಮುಂದೆ ಬ್ರಹ್ಮನವಿಚಾರವನ್ನೂ ಕೂಡ ಸುಡಬೇಕು. ನೀವು ಆ ಲೇಖವನ್ನು ಬರೆಯುತ್ತ ಬರೆಯುತ್ತ ಎಸ್.ಬಿ. ಸಿದ್ಧಲಿಂಗಪ್ಪನವರಿಗೆ ಹುಟ್ಟಿದ ಹದಿಮೂರುದಿವಸದಲ್ಲಿ ಭಂಡ ಎಂದು ಇಟ್ಟಿರಬಹುದೆಂದು ತೋರುತ್ತದೆ" ಎಂದು ಬರೆದಿರುವಿರಿ. ಈರೀತಿ ನೀವು ಆಮಾರ್ಗವನ್ನು ಹಿಡಿದಮೇಲೆ ನಿಮಗೆ ಬ್ರಹ್ಮನೇ ಆದಿಯಲ್ಲಿ ಭಂಡನೆಂದು ಹೆಸರಿಟ್ಟಿರಬಹುದೆಂದು ಯಾಕೆ ಊಹಿಸಬಾರದು? ಪಂಚಾಚಾರ್ಯಪ್ರಭಾ ಪತ್ರಿಕೆಯು ನಿಂದ್ಯವಿಷಯದ ಪರಮಾವಧಿಯಾಗಿರುತ್ತದೆಂದು ಬರೆದಿರುವಿರಿ. ಇದು ವಿಚಾರಶೂನ್ಯವಾದ ಮಾತಾಗಿದೆ. ಸ್ವಾರಾಪತ್ರಿಕೆಯು ಐದಾರುವರ್ಷಗಳಿಂದ ಕೇವಲ ಗುರುಗಳ ನಿಂದಾಕಾರ್ಯದಲ್ಲಿಯೇ ತೊಡಗಿದೆ. ಆ ನಿಂದೆಯನ್ನು ನಿಜವಾದ ವೀರಶೈವನು ಎಂದಿಗೂ ಕಿವಿಯಿಂದ ಕೇಳಬಾರದು. ನಿಂದ್ಯಲೇಖಗಳನ್ನು ಬರೆಯುತಕ್ಕಂಥ ಪರಮನೀಚ ನಿಂದಕರ ಅಭಿಪ್ರಾಯವನ್ನು ಖಂಡಿಸಿ ಸದಭಿಪ್ರಾಯವನ್ನು ಬರೆದು ಕಳುಹಿಸುವವರ ಲೇಖಗಳನ್ನು ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದರೆ ನಿಂದ್ಯವಾಯಿತೇ? ಪಂಚಾಚಾರ್ಯಪ್ರಭೆಗೆ ಅನಾಚಾರಪ್ರಭಾ, ದುರಾಚಾರಪ್ರಭಾ ಎಂಬ ಪದವಿಗಳು ಬರಹತ್ತಿವೆಯೆಂದೂ ಇನ್ನೂ ಇಂಥ ಪದವಿಗಳು ಬರಬೇಕೆಂದೂ ನೀವು ಆತ್ಮಾನಂದದಿಂದ ಬರೆದಿರುವಿರಿ. ಚಿತ್ರಭಾನುವಿನಂಥ ಪ್ರಭೆಗೆ ಯಾರಾದರೂ ಕುಹಕರು ಉಗಿದರೆ ಅದಕ್ಕೆ ಕಲಂಕಬರುವದೇನು? ಪ್ರಭೆಯು ಯಾವಾಗಲೂ ಜಾಜ್ವಲ್ಯಮಾನ್ಯವಾಗಿದೆ. ಅನಾಚಾರಿಗಳು ಪ್ರಭಾದ್ರೋಹಿಗಳೂ ಆದರ ( )........ಜಗುತ್ತಾರೆ ಎನ್ನುವದನ್ನು ಪೂರ್ಣಭಾವಿಸಿರಿ. ಎಸ್. ಬಿ. ತೋಟಪ್ಪ.

ದುರ್ಮಾರ್ಗಿಶಿಖಾಮಣಿಯು.

ಸ್ವಾರ್‌ಪತ್ರಿಕೆಯ ಈ ತಿಂಗಳ 1ನೇ ತಾರೀಖಿನ ಸಂಚಿಕೆಯಲ್ಲಿ "ದುರ್ಮಾರ್ಗದರ್ಶಕರನ್ನು ತಿರಸ್ಕರಿಸುವವನು" ಎಂಬ ಸಂಕೇತದಿಂದ ಮೊದಲು 9 ಪ್ರಶ್ನೆಗಳನ್ನು ಮಾಡಿದವನೇ ಪುನಃ ಕಾಲುಕೆದರಿ ಏನೇನೋ ಹರಟೆಯಮಾತುಗಳನ್ನು ಬರೆದಿರುತ್ತಾನೆ. ಎಸ್. ವಿ. ಕಬಸದ ಇವರು ಬರೆದಿರತಕ್ಕಂಥ ಉತ್ತರಗಳ ವಿಮರ್ಶೆಯನ್ನು ಸಮಾಧಾನದಿಂದ ಮಾಡದೆ ಕೇವಲ ಉದ್ಧಟತನದಿಂದ ಮಾಡಿರುವುದನ್ನು ನೋಡಿದರೆ ಇವನು ದುರ್ಮಾರ್ಗಿಶಿಖಾಮಣಿಯಿರುವಂತೆ ಕಂಡುಬರುತ್ತದೆ. ಇವನು ಕೇವಲ ಸಮಾಜದಲ್ಲಿ ಗೊಂದಲವನ್ನೆಬ್ಬಿಸುವ ಉದ್ಯೋಗವನ್ನು ಕೈಕೊಂಡಿದ್ದಾನೆಯೇ ಹೊರತು, ಬೇರೊಂದಿಲ್ಲವೆಂದು ಇವನಬರವಣಿಗೆಯಿಂದಲೇ ವ್ಯಕ್ತವಾಗುತ್ತದೆ. ವಿರಕ್ತರು ಅಷ್ಟಾವರಣಾಂತರ್ಗತ ಜಂಗಮರಂತೆ! ಇದನ್ನು ತಾನು ಸಿದ್ಧಮಾಡಿಕೊಡುವನಂತೆ! ಕನ್ನಡವಾಕ್ಯದ ಅರ್ಥವನ್ನೂ ಕೂಡ ತಿಳಿಯಲು ಶಕ್ತಿಸಾಲದ ಇವನು ಶಾಸ್ತ್ರದವಿಷಯದಲ್ಲಿ ಹೋಗಿರುವುದನ್ನು ನೋಡಿದರೆ ಈತನಿಗೆ ಯಾವನೋಬಬ್ಬ ಆಸಾಮಧ್ಯೇಯ ವಿರಕ್ತನು ಇಷ್ಟು ಬೆಂಬಲವಾಗಿ ಕಾರ್ಯ ಮಾಡಿಸುವಂತೆ ತೋರುತ್ತದೆ. ಎಲೋ ದುರ್ಮಾರ್ಗಿಯೇ. ವಿರಕ್ತರು ಪೂಜಕರೆಂದು ರುಜುವಾತು ಮಾಡಲಿಕ್ಕೆ ಸಿದ್ಧನಿರುತ್ತೀಯಾ? ಎಂದು ಕೇಳಿರುವೆ. ವಿರಕ್ತರು ಪೂಜಕರೆಂದು ಧರ್ಮಗ್ರಂಥಗಳೇ ರುಜುಮಾಡಿಕೊಡುತ್ತವೆ. ನಿಜವಾದ ವಿರಕ್ತರು ಗುರುಸ್ಥಲದ ಮಾಹೇಶ್ವರರನ್ನು ಭಕ್ತಿಯಿಂದಕಾಣುತ್ತಾರೆ. ನಾಮಧಾರಿ ವಿರಕ್ತರುಮಾತ್ರ ಅವರನ್ನು ತಿರಸ್ಕರಿಸುತ್ತಾರೆ. ನೀನು ನಾಮಧಾರಿ ವಿರಕ್ತರ ಪಾತಕಗಳ ಜಾಲದಲ್ಲಿ ಎಷ್ಟು ಬಿದ್ದಾಡುವದು ನಿನಗೆ ತಕ್ಕುದಲ್ಲ. ಪಂಡಿತರು ಬರೆದಂಥ ಗ್ರಂಥಗಳನ್ನು ಸುಡಬೇಕೆಂದು ಬರೆದಿರುವಿ. ನೀನು ಹೇಳುವ ಗ್ರಂಥಗಳನ್ನು ಯಾವಕೂಪದಲ್ಲಿ ಹಾಕಿ ಹುಳಿಯಬೇಕು? ಗುರುಗಳು ಭಕ್ತನ ಜಯಂತಿಯನ್ನು ಮಾಡಬೇಕೆನ್ನುವದು ನಿನ್ನ ತಲೆತಿರುಕತನವನ್ನು ವ್ಯಕ್ತಗೊಳಿಸುತ್ತದೆ. ಕಾಲೇಜಿನ ವ್ಯವಸ್ಥಾವಿಷಯದಲ್ಲಿ ಎಷ್ಟು ರೂಪಾಯಿಗಳನ್ನು ಗ್ಯಾರಂಟಿಕೊಡುವಿಯೆಂದು ಬರೆದಿರುವಿ. ನೀನು ಎಷ್ಟು ಶ್ರೀಮಂತನಿರುವಿಯೆನ್ನುವುದನ್ನು ಮೊದಲು ಹೇಳು, ಆ ಮೇಲೆ ಗ್ಯಾರಂಟಿ ವಿಷಯವನ್ನು ಮಾತನಾಡೋಣ. ಪತ್ತರ ಒಂದು ಕಾಸು ಇಲ್ಲದಾಗ್ಯೂ ಈ ತರದ ಬರವಣಿಗೆಯನ್ನು ಬರೆಯುವುದು ಆಶ್ಚರ್ಯವೇ ಸರಿ! ನೀನು ವಿವೇಕಶಾಲಿಯಾದರೆ ಇಂಥ ಗಹನವಿಚಾರದಲ್ಲಿ ಅನ್ಯರ ಪ್ರೇರಣೆಯಿಂದ ಪ್ರವೇಶ ಮಾಡದಿರುವುದು ಉತ್ತಮ ಹಾಗೆ ಮಾಡದೆ ಇದೇ ಪ್ರಕಾರವಾದ ಅವಿಚಾರಪೂರಿತವಾದ ಲೇಖವನ್ನು ಬರೆಯುತ್ತಾ ಹೋದರೆ ನಿನ್ನಲೇಖಕ್ಕೆ ಬದಲಾಗಿ ನಾಲ್ಕುಪಟ್ಟು ಲೇಖಗಳು ಬರುವವೆನ್ನುವುದನ್ನು ಮಾತ್ರ ಮರೆಯಬೇಡ. ಸಮಾಜದಲ್ಲಿ ಗೊಂದಲವನ್ನೆಬ್ಬಿಸುವ ಲೇಖಗಳಿಗೆ ಸ್ವಾರ್‌ಪತ್ರಿಕೆಯು ಬಹುಕಾಲದಿಂದ ಟೊಂಕವನ್ನು ಕಟ್ಟಿಕೊಂಡು ಸಿದ್ಧವಾಗಿದೆ. ಆದರಲ್ಲಿ ಪಂಚಾಚಾರ್ಯಪ್ರಭಾಪತ್ರಿಕೆಯು ಹೊರಟಮೇಲಂತೂ ಅದರ ಕೂರತನಕ್ಕೆ ಬೆಲೆಯಿಲ್ಲದಾಗಿದೆ. ಆ ಪತ್ರಿಕೆಯಲ್ಲಿ ನೀನು ನಿನ್ನ ವಕ್ರಮಾರ್ಗವನ್ನೇ ಅನುಸರಿಸುವುದಕ್ಕೆ ಸಿದ್ಧನಾಗು. ಹಾಲಾಚಾರ್ಯಶರ್ಮಾ, ಮಹಾಗಾಂವ.

ಟಿನಿವಾರನ ಚೇಷ್ಟೆಯು ಮುಗಿಯಲಿಲ್ಲ.

ಬಿ. ಗಿ. ಟಿನಿವಾರನು ಸ್ವಾರ್‌ಪತ್ರಿಕೆಯಲ್ಲಿ ಎಸ್. ಸಿದ್ಧಪ್ಪನ ಪೆದ್ದತನವೆಂಬ ಲೇಖವನ್ನು ಬರೆದು, ಪುನಃ ಚೇಷ್ಟೆಗೆ ಪ್ರಾರಂಭಮಾಡಿದ್ದಾನೆ. ಈತನು ಚೇಷ್ಟೆಯನ್ನು ಬೆಳೆಸದೆ ಸುಮ್ಮನಿರುವುದು ಲೇಸೆಂದು ಸಿದ್ಧಪ್ಪನವರು ಬರೆದದ್ದಕ್ಕೆ ಸುಮ್ಮನಿರದೆ ಪುನಃ ಕಾಲುಕೆದರಿದ್ದಾನೆ. ತಾನು ಸಮಾಜದಲ್ಲಿ ಶಾಂತಿಯನ್ನು ನೆಲೆಗೊಳಿಸಬೇಕೆಂಬುದ್ದೇಶದಿಂದ ಪ್ರಭೆಗೆ ಎಚ್ಚರಿಕೆಯೆಂದು ಬರೆದನಂತೆ! ನೋಡಿದಿರಾ ಈತನ ಶಾಂತಿಗುಣವನ್ನು? ಯಾರಾದರೂ ಲೇಖಗಳನ್ನು ಬರೆದರೆ ಆ ಲೇಖಕರಿಗೆ ಎಚ್ಚರಿಕೆಯೆಂದು ಬರೆಯದೆ ಪ್ರಭೆಗೆ ಎಚ್ಚರಿಕೆಯೆಂದು ಬರೆಯಬೇಕಾದರೆ ಈ ಟಿನಿವಾರನು ಎಷ್ಟು ಧೂರ್ತನೆನ್ನುವುದು ಪ್ರತಿಯೊಬ್ಬನಿಗೂ ಒಡೆದು ಕಾಣುವಂತಿದೆ. ಪಂಕ್ತ್ಯಾಂಧಶೆಯತುಟ್ಟು ಎಂಬ ವಾಕ್ಯದ ಅರ್ಥವನ್ನು ಘನಪಂಡಿತನಂತೆ ಮಾಡಿರುವನು. ಈ ತೆರದ ಅರ್ಥವನ್ನು ಮಾಡುವ ಟಿನಿವಾರನಂಥ ವಿದ್ವಾಂಸರು ಕರ್ನಾಟಕರಾಜ್ಯದಲ್ಲಿ ಜನಿಸಿದಮೇಲೆ ಕರ್ನಾಟಕಮಾತೆಯ ಆನಂದಕ್ಕೆ ಬೆಲೆಯೇ? ಯಾರಾದರೂ ಲೇಖಗಳನ್ನು ಬರೆದರೆ ಸಂಪಾದಕರಮೇಲೆ ಬರೆಯುವದು ಈ ಲೇಖಕನಿಗೆ ಭೂಷಣವೇ? ತಾನು ಸಮಾಜಹಿತಚಿಂತಕನಾಗಿದ್ದರೆ ಉದ್ಧಟತನದಮಾತುಗಳನ್ನು ಲೇಖಗಳಲ್ಲಿ ಉಪಯೋಗಿಸಬಾರದು; ಪುನಃ ಈ ಲೇಖದ ಅಂತ್ಯದಲ್ಲಿ "ಜೋಕೆ" ಎಂದು ಹೆದರಿಸಿದ್ದಾನೆ. ನೋಡಿದಿರಾ ಈತನ ಹಿತಚಿಂತಕತನವನ್ನು? ಲೇಖಕನೇ, ನಿನ್ನ ಮನಸ್ಸು ನಿಜವಾಗಿ ಸಮಾಜಹಿತಚಿಂತನದಲ್ಲಿ ತೊಡಗಿದ್ದರೆ ಎಂದಾದರೂ ಇಂಥಶಬ್ದಗಳನ್ನು ಉಪಯೋಗಿಸಲಿಕ್ಕಾದೀತೇ? ಎನ್ನುವುದನ್ನು ನೀನೇ ವಿಚಾರಮಾಡಿ ನೋಡು. ನೀನು ಮೌನವನ್ನು ತಾಳುವದು ಉತ್ತಮವೆಂದು ಪುನಃ ಪುನಃ ಹೇಳುತ್ತೇನೆ. ಹಾಗೆ ಮಾಡದೆ ಇನ್ನೂ ಬರೆಯುವ ಚಟವು ನಿನ್ನಲ್ಲಿದ್ದರೆ ನಿನ್ನಲೇಖಕ್ಕೆ ಸ್ವಾರ್‌ಪತ್ರಿಕೆಯು ಇದ್ದೇಇದೆ. ಪ್ರಕವನ್ನು ಸಾಗಿಸು. ಸ್ವಾರ್‌ಪತ್ರಿಕೆಯೂ ಕೂಡ ಇಂಥ ಗೊಂದಲದ ಲೇಖಗಳು ಯಾವಾಗ್ಗೆ ಬರುವುವೋ ಅವುಗಳನ್ನು ಧರಿಸಿಕೊಂಡು ನಾನು ಯಾವಾಗ ಅಲಂಕೃತವಾಗುವೆನೋ ಎಂದು ಹಗಲಿರುಳು ದಾರಿಯನ್ನೇ ನೋಡುತ್ತಿರುತ್ತದೆ. ನೀನೇ ಆಗಲಿ, ನಿಮ್ಮಂಥವರೇ ಆಗಲಿ ಏಕೆ ಸುಮ್ಮನಿರುವಿರಿ? ಸಮಾಜಘಾತಕ ಲೇಖನಮಾಲೆಗಳಿಂದ ಸ್ವಾರಾಪತ್ರಿಕೆಯನ್ನು ಸರ್ವತೋಮುಖವಾಗಿ ಅಲಂಕರಿಸಿರಿ. ಎಚ್. ಚನ್ನಪ್ಪ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಚಂಡಪತನ

ಅಹಹಾ, ಸುಶೀಲಮಯಸ್ತೋಮದಿಂ ಇದೀಗ ಸ್ವರ್ಗಾಂ ತೆಯಾಗಿಹುದು! ನವಚೈತನ್ಯವನ್ನು ಧರಿಸಿಕೊಂಡು ಬಂದಿರುವವು. ಆ ಆ ಸಮಾಜಗಳು ಅಲ್ಲಲ್ಲಿ ನವಸುಧಾರಣಾ ವಾತಾವರಣದಿಂದ ನೂತನಪ್ರೇರಣೆಯನ್ನು ಪಡೆಯುತ್ತಿರುವವು, ಅಲ್ಲದೆ ಹಿಂದುಳಿದ್ದ [illegible] ಯಮಾರ್ಗದಂತೆಯೂ ಉಪದೇಶವಾಗ್ದಾನಗಳನ್ನಿತ್ತು, ಅಧರ್ಮಪ್ರವರ್ತನವನ್ನು ಬಡಿದೋಡಿಸಿ ಜನರನ್ನುದ್ಧರಿಸಿ ವಿಜಯಧರ್ಮಧ್ವಜವನ್ನು ಧರಿಸಿ ಪ್ರಕಾಶಮಾನರಾಗುವದೇ ಪ್ರತ್ಯೇಕ ಮನುಷ್ಯನಾವ ಧಾರ್ಮಿಕ ಕರ್ತವ್ಯವಾಗಿದೆ. ಒಟ್ಟಿನಮೇಲೆ ತಮ್ಮ ಆಚಾರದಿಂದ ಸ್ಥಾಪಿಸಲ್ಪಟ್ಟ ಮತಕ್ಕೆ ಯಾವತ್ಕಾಲದಿಂದಲೂ ಕಲಂಕವು ತಗಲದಂತೆ ಕಾಪಾಡಿಕೊಳ್ಳುವದೇ ಸಂತತ ಧರ್ಮಸೂತ್ರಾಧಿಕಾರಿಗಳ ಪ್ರಥಮಾಚಾರವು! ಅಲ್ಲದೆ ಈಗಿನ ಸುಧಾರಣಾಕಾಲಮಾನಕ್ಕನುಸಾರವಾಗಿ ಧರ್ಮಗುರುಗಳು, ವಿದ್ಯಾವಂತರೂ, ಕಾರ್ಯದಕ್ಷರೂ, ಪರಹಿತೈಷಿಗಳೂ, ಅಧರ್ಮಭೀರುಗಳೂ, ಗೌರವಶೀಲರೂ ಇರಬೇಕು. ಯಾವಾಗಲೂ ಯಾರ ಅಪಹಾಸ್ಯಕ್ಕೂ ಗುರಿಯಾಗದಂತೆ ಬಹು ಜಾಗರೂಕತೆಯಿಂದ ನಡೆದು ಮುಂದುವರಿಯುವ ಇಂಥ ಸೂಕ್ಷ್ಮ ಸಮಯದಲ್ಲಿ ನಮ್ಮ ಗುರುವರ್ಗದ ಕೆಲವು ಪೂಜ್ಯಮೂರ್ತಿಗಳು ನಾಚಿಕಸಾಮ್ರಾಜ್ಯಸುಖವನ್ನನುಭವಿಸಲಿಕ್ಕೆ ಹವಣಿಸಿದ್ದನ್ನು ನೋಡಿದರೆ ಯಾರಿಗೆ ವಿಷಾದವಾಗಲಿಕ್ಕಿಲ್ಲ? ಹೇಳಿರಿ? ಇವರ ಧೈರ್ಯದ ವಿಜಯಲಕ್ಷ್ಮಿಯು ಎಲ್ಲಿ? ಎಲ್ಲರೂ ಸೋಮಕಂಟಕಗಳನ್ನು ಕಿತ್ತುಹಾಕಿ ಮಹಾರಾಜಮಾರ್ಗವನ್ನು ಹಸನಗೊಳಿಸುತ್ತಿದ್ದರೆ ಈ ಮಹನೀಯರು ತಾವು ಉದಗ್ರಸದಾಚಾರಧರರಾದರೂ ಇಂತಹ ಕ್ಷುದ್ರಕೃತಿಗಳಿಂದ "ಸ್ಥೂಲಶಿಖರಶಿಲಾ ಶತನ್ಯಾಯೇನ" (ಗುಡ್ಡದ ತುದಿಯಿಂದ ಗುಂಡುಬಿದ್ದಂತೆ) ಪ್ರಚಂಡಪತನವನ್ನೈದುವದಲ್ಲದೆ ಸರ್ವರಿಗೂ ಅನಿಶ್ಚಿತ್ತೀತೆಂಬುದನ್ನು ಅಣುಮಾತ್ರವೂ ಮನಸ್ಸಿನಲ್ಲಿ ತರದೆ ವೀರಶೈವಸಮಾಜವೆಂಬ ಶಹರ್ [illegible] ವಾಲ್ಮೀಕನೆಡೆಯಿಂದ ಕೂಡಿದ ಮಾರ್ಗ) ದಂತಿರುವ ತಾವೇ ಈ ಕಲಂಕಕಂಟಕಿತರಾದರೆ ಮುಂದೇನುಗತಿ? ಇಂಥ ಅನರ್ಥಗಳನ್ನು ಲೆಕ್ಕಿಸದೆ ಮಾಸನುಧಾರಣೆಯ ಕೆಲವು ಯಜಮಾನರು ತರುಣ ಪಟ್ಟಚರಮೂರ್ತಿಗಳನ್ನೂ, ಅವರ ವಾರ್ಷಿಕ ದ್ರವ್ಯಾದಾಯವನ್ನೂ, ರೂಪಸಂಪತ್ತ್ಯಾದಿಗಳನ್ನೂ ಕಣ್ಣಿಟ್ಟುನೋಡಿ ಹಿಗ್ಗಿಹಿಗ್ಗಿ ಬಾಯಲ್ಲಿ ನೀರುತಂದು ಕೋಮಲಾಂಗಿಯರಾದ ತಮ್ಮ ಕನ್ಯಾಮಣಿಗಳನ್ನು ಅವರಿಗೆ ಕೊಡಲು ಮನವೊಲಿಸಿ ಬಹುಮಯಿಂದ ತಾವು ಅಲ್ಲಿಗೆ ಹೋಗಿಯಾಗಲಿ ಅವರನ್ನೇ ತಮ್ಮಲ್ಲಿಗೆ ಬರಮಾಡಿಕೊಂಡಾಗಲಿ ಬಣ್ಣದಬೀಸಣಿಗೆಯನ್ನು ಬೀಸಿ ತರುಣಾಧಿಕಾರಿಗಳ ಮನಸ್ಸನ್ನ ಸಹರಿಸಿ ಪ್ರಚಂಡಪತನಕ್ಕೆ ಗುರಿಮಾಡುವದನ್ನು ನೋಡಿದರೆ "ಹಾಯ್ ಹಾಯ್" ಶಿವಾಧವಾ ಯಾವನ ಕ್ಲುಪ್ತಹೃದಯವು ಕರಗಲಿಕ್ಕಿಲ್ಲ? ಮತ್ತು ಶಿಷ್ಟಜನಾಸಮ್ಮತವಾದ ಈ ಕಷ್ಟಕೃತಿಯಿಂದ ಉಭಯಕುಲ ಕಲಂಕಹೊಂದೀತೆಂಬುದನ್ನಿವರು ಲಕ್ಷ್ಯದಲ್ಲಿ ತರಲಿಕ್ಕಿಲ್ಲವೇ? ಧರ್ಮಕ್ಕೆ ಸಂಬಂಧಿಸಿದ ಆರೂಢವಾಕ್ಯದೋಷವನ್ನಾದರೂ ಇವರು (ಧಾವೀಬೀಗ ಬೀಗರು) ಮನಸ್ಸಿನಲ್ಲಿ ತರಬಾರದೇ? ಈ ಭಯಂಕರ ಆತ್ಮಪಾತಕವನ್ನು ಈ ಪ್ರಮುಖಮನುಷ್ಯರು ಮನಸಾ ಆಲೋಚಿಸಬೇಕು. ತಮ್ಮ ದೇವಕನ್ಯಾ ಯುಕ್ತಿಗೂ ವೈಶ್ಯಭಿಕ್ಷಾದಾನದಿಂದ ಇಹಪರಗಳಲ್ಲಿ ಸುಖವಿಲ್ಲ. ಆತ್ಮಹತ್ಯಾದೋಷವಂತೂ ನರಳುವಂತೆ ಯಾವಾಗಲೂ ಹಿಂಬಾಲಿಸುವದು. ಮತ್ತು ಇಂಥ ಪೂಜ್ಯರಿಂದ ಜನಿಸಿದ ಸಂತತಿಯಾದರೂ ಏನು ಪವಿತ್ರವಾದದ್ದು! ಅಂದಮೇಲೆ ಇವರ ಕನ್ಯಾಸಂತತಿಯು [illegible] ಕಲ್ಪವೃಕ್ಷದ [illegible] 1ನೇ ಕಾರಣ.— [illegible] ಕಾರಣ ನನು? ಸತ್ಕರಲಿಗ್ಗ.

ವೇದಾನುಸಾರವಾದ ವಿಚಾರವನ್ನಾಚರಿಸಿ ಕ್ಷುದ್ರ ಸಂತತಿಯುಕ್ತವಾಗಿ ಈ ಪ್ರಚಂಡಪತನವಂತೂ ಮೊದಲೇ ಹೀನ ಇನ್ನು ಮುಂದ [illegible] ಯುಕ್ತವಾದ [illegible] ಬಳಗದವರ ಕಾಳಜಿಯನ್ನು [illegible] ದಿಂದ ಬೇರೆ ಬರೆಯಲವಶ್ಯಕತೆಯಿಲ್ಲ. ಇಲ್ಲಿ [illegible] ಇವರೆಲ್ಲರಿಂದ ಸಮಾಜದವರಿಗೆ [illegible] ಬಳಗದವರಾದರೋ 'ಇವರು ದೊಡ್ಡವರಾಗಿ ದೇಶಸಂಚಾರ ಮಾಡಿ ಯಾವಾಗ ಬಂದಾರು? ಯಾವಾಗ ನಮಗೆ ಸಂತತಿಗಳನ್ನು ಮಾಡಿಸೀತು' ಎಂದು ಹವಣಿಸುತ್ತಿರುವರು. ನನಗಂತೂ ಈ ಪ್ರಾಪ್ತಿಯು ತೋರಲಿಲ್ಲ! ಪರಂತು ಇದು ವಿಶೇಷ ಹೀಗೆ ಮಾಡುವದಕ್ಕೆ ಬದಲಾಗಿ ಸಂತಾನಹೀನ ಮಠಾಧಿಕಾರಿಗಳು [illegible] ದೂರೀಕರಿಸಿ ಯೋಗ್ಯ, ವಿದ್ಯಾವಂತ, ಸುಶೀಲ, ವಿರಕ್ತಸಂಪನ್ನನಾದ ವಟುವನ್ನು ಶಿಷ್ಯನನ್ನಾಗಿ ಮಾಡಿಕೊಂಡು ಉತ್ತರಾಧಿಕಾರವನ್ನು ಕೊಡುವದು ಉಚಿತವು. ಹೀಗೆ ಮಾಡದೆ [illegible] ಆಧಿಕಾರಕ್ಕೊ [illegible] ೨ನೇ ಕಾರಣ — [illegible] ಅಥವಾ ಸಂಗತಿ [illegible] ದಾಗಲಿ [illegible] ಕ್ಕಿಂತಲೂ ಈ [illegible] ತಾರತಮ್ಯಕ್ಕೆ ಒಳಗಾಗಿ [illegible] ಈ ಎರಡೂ ಕೃತಿಗಳು ಸಂಪೂರ್ಣವಾಗಿ ಶಾಸ್ತ್ರವಿರುದ್ಧಗಳಲ್ಲದೇ ಲೌಕಿಕಕ್ಕೆ ಸಹ ವಿಶೇಷ ಬೇಸರಜನಕಗಳಾಗಿವೆ. ಈ ಅನಂಗಲ ನಡೆಯಿಂದ ಇನ್ನೊಂದು ಮಹಾಘಾತಕವೇನಂದರೆ, ಪ್ರೀಮಿಟ್ಟಗದ್ದುಗೆ ಪಂಚಪೀಠಾಚಾರ್ಯರೇ ಸಾರ್ವಭೌಮರು, ಪಟ್ಟಚರಾಧಿಕಾರಿಗಳೇ ಅವರ ಪ್ರಮುಖ ಸೇನಾನಾಯಕರು, ಸದರೀ ಸಾರ್ವಭೌಮರು ಅಧರ್ಮ ಪರಾಜಯಕ್ಕಾಗಿಯೂ, ಧರ್ಮವಿಜಯ ಪ್ರಾಪ್ತಿಗಾಗಿಯೂ, ಜಗತ್ತಿನಲ್ಲಿ ಸುಖಶಾಂತಿಗಳು ಬೇರೂರುವ ಸಲುವಾಗಿಯೂ, ಸದರಿ ಸೇನಾಧಿಪತಿಗಳನ್ನು ಬಲವಾಗಿ ನಿಯಮಿಸಿ ಧರ್ಮ [illegible] ವನ್ನು ಮಾಡುತ್ತ, ಕುಹಕಶತ್ರುಗಳನ್ನು [illegible] ಯುತ್ತ ಜಾಜ್ವಲ್ಯಮಾನಗಳಾದ ಪ್ರಭಾವ [illegible] ದಿಂದ ಜಗತ್ತನ್ನು ಬೆಳಗುತ್ತಿರುವರು. ಈ ಸಮ [illegible] (ರಾಜಭಕ್ತಿಯನ್ನು ಪ್ರಕಟಿಸಿ ಪ್ರಭುವಿನ ಕೃ [illegible] ಪಡೆಯಲನುಗುಣವಾದ ಸುಸಮಯದಲ್ಲಿ) ಈ [illegible] ಪತಿಗಳು ಮೈಮರೆದು ಹೋರಾಡಲಾರದೆ ಸುಖಕ್ಕೆ ಮೆಚ್ಚಿ, ಧರ್ಮಯುದ್ಧವನ್ನು ಬಿಟ್ಟು [illegible] ಪರಾಗಿ ಜಯಲಕ್ಷ್ಮಿಯನ್ನು ಹೊಂ [illegible] ಹಿಂದಕ್ಕೊಯ್ಯುವದು ಹೇಡಿತನರಾತ್ರ್ಯಿಗಳ [illegible] ವಲ್ಲದೆ ಬೇರೆಯಲ್ಲ! ತನ್ನ ಸ್ವಾಮಿಯ ಪರವೆಯಿಲ್ಲ [illegible] "ಕಾರ್ಯಸಾಧನೆ ಇಲ್ಲವೇ ಮರಣ" ವೆಂಬ [illegible] ಕರ್ತವ್ಯಕ್ಕೆ ತಿಲಾಂಜಲಿಯನ್ನು ನೀಡಿ, ವೀರತ್ವಕ್ಕೆ ಹೊಡೆದು ಮರ್ಯಾದೆಯನ್ನು ಮರೆಯಲ್ಲಿರಿಸಿ [illegible] ಸಿಂಹಗಳಾದ ಇಂಥ ಸೇನಾಪತಿಗಳಿಂದ [illegible] ಸಾರ್ವಭೌಮರಿಗೆ ಜಯವೆಲ್ಲಿ? ಗುರುವರ್ಗದ [illegible] ವಲ್ಲಿ? [illegible] ಹಿಂಬಾಲಿಗರಾದ [illegible] ಸ್ವಾರ್ಥವಂ ಬೋಧಿಸುತ್ತ ಕಹುಕದಾಳಿಯಿಂದ [illegible] ವದೇ ಈ ಸೇನಾಪಾಲಕರ ಕರ್ತವ್ಯವೆಂದು [illegible] ಇನ್ನು ಜಗದ್ಗುರುಗ [illegible] ನಕ್ಕಂತಿರುವರು. ನನ್ನ ಸ್ವಚ್ಛ [illegible] ಈ ಶಾಖೆಗಳ [illegible] ಗಳಿಂದ ಸರ್ವಜನತೆ [illegible] ಪ್ರಾಪ್ತಿಯಾಗುವ ಬಗೆ ಹೇಗೆ? ರಾಜನಿಯುಕ್ತ [illegible] ತಮ್ಮ ಕೆಲಸ (ಅಧಿಕಾರವನ್ನು) ಬಿಟ್ಟು ಸ್ವಾರ್ಥ ಪಗಾರತಿನ್ನ [illegible] ಸರ್ವಸಾಧಾರಣ ಜನರಂತೆ ವರ್ತಿಸಿದರೆ [illegible] ಸುಖಶಾಂತಿಗಳಿಗೆ ಗತಿಏನು? ಒಬ್ಬರಿಗೊಬ್ಬರು [illegible] ಪವಿತ್ರಪಾಣಿಗ್ರಹಣ [illegible] ಧರ್ಮದಾಗ್ರಹವು ಎಲ್ಲಿವಾಸಮಾಡಬೇಕು? [illegible] ಮುಂದಾಗುವಾಗ್ಗೆ ಇವರು ಜೀಗಾದರೆ "ನಗ [illegible] ಮುಂದೆ ಸೂಳೆಗೇನು" ಎಂಬ ಗಾದೆಯು ಸಾರ್ಥ [illegible] ಗುವುದಿಲ್ಲವೇ? ಇವರು ಈ ಎಲ್ಲ ವಿಚಾರಗಳನ್ನು [illegible] ಆಲೋಚಿಸಬೇಕೆಂದು ಹಾರೈಸುತ್ತೇವೆ. ಮತ್ತೊ [illegible] ಹೇಳತಕ್ಕದೇನಂದರೆ, ನಮ್ಮ ಗುರುವರ್ಗದ ಕೆಲವು [illegible] ಗಳು ತಮ್ಮ ಆಶ್ರಮಕ್ಕೂ, ಯೋಗ್ಯತೆಗೂ, ಅಧಿ [illegible] ತಕ್ಕ, ಅನುಕೂಲಕ ಸಮಸ್ತ ಗುರುವರ್ಗಕ್ಕೂ [illegible] ಕೆಲವು ಕುಕಾರ್ಯಗಳಿಗೆ ಆಸ್ಪದವನ್ನಿತ್ತಿರುವ [illegible] ಅವು ಯಾವುವೆಂದರೆ, ಸಾಧಾರಣ ಜನರಂತೆ ವೇಷ [illegible] ಪಣಾದಿಗಳ ರುಚಿಗೆ ಮರುಳಾಗಿ, ನಾಚಿಕೆಯಿಂದ [illegible] ಅದವಾ ಮತ್ತಾವರೀತಿಯಿಂದಲೋ ಕಾವಿಯನ್ನೇ [illegible] ಸುವದಿಲ್ಲ ಇನ್ನು ಕೆಲವು ಸುಧೀಮಣಿಗಳು [illegible] ಪ್ರಖ್ಯಾತರಾದ ಅನೇಕ ದೇಶಸಂಚಾರದಿಂದ ಬಹು [illegible] ರುಕು ಬುದ್ಧಿಯವರಾದ ರಾಜಮಾನ್ಯರಾದ ಶ್ರೀ [illegible] ಚಾಕುರಾಯರನ್ನು ತಮ್ಮ ದರ್ಬಾರದಲ್ಲಿ ಮುಖ್ಯ [illegible] ತ್ರಿಗಳನ್ನಾಗಿ ನಿಯಮಿಸಿದ್ದಾರೆ. ಅವರ ಪಂಕ್ತಿ [illegible] ರಾಗತರಾದ ಬೀಡಿ, ಸಿಗಾರೇಟ್, ಬತ್ತಿ ಮೊದಲ [illegible] ವರನ್ನೇ ಸೇವಕರನ್ನಾಗಿಟ್ಟುಕೊಂಡಿರುವರು. ಸಾ [illegible] ರಣ ಜನರಿಗ ನಹ ಮಾನಹಾನಿಯನ್ನೊದಗಿಸುವ [illegible] ಧಿಸರ ಸಹವಾಸದಲ್ಲಿ ಕಾಲಕ್ಷೇಪಮಾಡುವ [illegible] ಒಲಿಪು ಎಲ್ಲಿ? ಮಾನವೆಲ್ಲಿ? ಇನ್ನು [illegible] ವರು ಪರಸ್ತ್ರೀಲೋಲುಪರಾಗಿ ವಿಟಪುರುಷರಿಗಿಂತಲೂ ಹೆಚ್ಚಿನವರಾಗಿ ಮೆರೆಯುತ್ತಿರುವರು ಇನ್ನು [illegible] ಅನಾಚಾರವಿಚಾರಗಳ [illegible] ಜಾತಿಸನ್ಮಾಸೇವನಮಾಡುವ [illegible] ಅನೇಕಪ್ರಕಾರದ ರೋಗಗಳಿಗ ತವರುಮನೆಯಾಗಿ [illegible] ಚಹಾ, ಕಾಫಿ, ಕೋಕೋ ಮೊದಲಾದ ಅಪೇಯಪಾ [illegible] ಪಾನಗಳಿಗೆ ಸುಧೀಯರಾಗಿರುವರೆಂದು. ಕಠೋರವಾಕ್ಯ [illegible] ವನ್ನು ಬರೆಯಲಿಕ್ಕೆ ಅಧೀನಳಾದ ಈ ಲೇಖಿನೀಲಖಸಿಯ [illegible] ಅನುಮರ್ಶಳಾಗುತ್ತಾಳೆ.

ಅಯ್ಯಾ ಸಜ್ಜನರೇ, ಹೆಚ್ಚಿಗೆ ಬರೆಯುವದರಿಂದ [illegible] ಮತ್ತುರ ಸಾಧ್ಯವಿಲ್ಲ ಮುಖ್ಯವಾಗಿ ಈ ಲೇಖದ [illegible] ರಾಂಶವೇನಂದರೆ, ಕೆಲವರಲ್ಲಿ ವಿವಾಹದ ಉತ್ಕಟ [illegible] ಲೋಚನೆಯು ಕಂಡದ್ದರಿಂದಲೂ ಇತರ ನಿಷಿದ್ಧ [illegible] ಗಳು ಎಲ್ಲೆಲ್ಲಿಯೂ ಇರುವದರಿಂದಲೂ ಅವರು [illegible] ಬುದ್ಧಿಯನ್ನು ದೂರೀಕರಿಸಿ ಸದಾಚಾರಸಂಪನ್ನರಾ [illegible] ಲೆಂತಲೂ, ಮತ್ತು ಅಧಿಕಾರವನ್ನಿಡಯಬೇ ಕಾ

ಗಳನ್ನು ಕಂಡು ಅಂದರೆ " ಆದರೆ ದೀಜಕ್ಕೆ ಯಿಯನ್ನು ಮಿಡಿ ಇರುವಾಗಲೇ ನೋಡು" ವಾದವನ್ನ ಸುಸಿಸಿ ಅಧಿಕರಿಸಬೇಕೆಂಬಲೂ ವು. ಸರ್ವರಿಗೂ ಅಧಿಕಾರಿಗಳಾಗಿ, ಲೋಕ ಸುಖಶಾಂತಿಗಳ ಮಳೆಗರೆಸಿ ಸರ್ವರ ಪ್ರೀತಿಗೆ , ಜಗದುದ್ಧಾರಕರೆಂಬ ಪದಾಲಂಕೃತರಾಗಿ ಯಲ್ಲಿ ಸುಖಭಾಜನರಾಗುವರು. ಹಾಗೆ ಸುಗು ದ್ದರೆ ಸಮಾಜದಲ್ಲಿ ಅಧಿಕಾರಿ(ಅಧಿಕ+ಅರಿ ಷ್ಟ ಶತ್ರು)ಗಳೆಂದು ಗಣಿಸಲ್ಪಟ್ಟು ಜಗದಾ ವೆಗೆ ಪಾತ್ರರಾಗದೆ ಹೋಗಬೇಕಾಗುವದು. ಕಡೆಯ ನಿವೇದನವೇನಂದರೆ— ಈ ಲೇಖ ರೆಯಬೇಕಾದರೆ ಗುರುವರ್ಗದ ಅಪಕರ್ಷಕ್ಕಾ ವೆ ಓರ್ವವ್ಯಕ್ತಿಯ ನಿಂದಾಮೂಲಕವಾಗಲೀ ಈ ಪ್ರಕಾರದ ದೋಷಗಳು ಕಂಡುಬಂದದ್ದ ವುಗಳನ್ನು ಕಿತ್ತುಹಾಕಿ, ಸರ್ವರೂ ನಿಸ್ಪೃಹರಾಗಿ ಪಂಚಾಚಾರ್ಯಪ್ರಭೆಯ ಸಹಾಯದಿಂದ ಘೋರ ಮೂಢವನ್ನು ನಾಶಪಡಿಸಲೆಂಬ ಸದ್ಭಾವನೆ ರೆದಿರುವೆನಲ್ಲದೆ ಅನ್ಯಥಾ ಅಲ್ಲ. ಈ ವಿಷಯ ರೂ ಕೋಪವಾಹನರಾಗದೆ ಕ್ಷಮಿಸುವರೆಂದು ರಾಗಲೆಂದೂ, ಗುಣಗ್ರಾಹಿಗಳಾಗದೆ ಇರಬಾ , ಇಂಥ ಪ್ರಜಾಂಧಪತನರೂಪ ಪತ್ರ ಪಾತಕಕ್ಕೆ ಾಗಬಾರದೆಂದೂ, ಪ್ರಭಾದೇವಿಯು ಈ ವಿಷ ವನ್ನು ಮಗುವನ್ನು ಬೇಗನೆ ಎತ್ತಿಕೊಳ್ಳಲೆಂದೂ ಜಗದ್ಗುರು ಪಂಚಕವನ್ನು ಈ ಆಕಿಂಚನನು ನ ಪಂಚನಿಯಲ್ಲದೆ ಚಿಂತಿಸಿ ಈ ಲೇಖನಿಗೆ ವನ್ನೀಯುವೆನು.

ಪಟ್ಟಾಧ್ಯಕ್ಷ ಬ್ರಹ್ಮನ್ಮಠ ಪಾಲೀಕೊಪ್ಪ
ವಾಡದ ಪಾಠಶಾಲಾ ಸೋಲಾಪೂರ

ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದುಜ್ಜಯಿನೀ ಮಹಾಪೀಠದ ಜಗದ್ಗುರುಗಳವರ ಆಗಮನ.

ಶಾಶ್ವತ ಪರಮಾತ್ಮನ ಪಂಚಮುಖಗಳಿಂದ ಚಾರ್ಯರೆಂಬ ಐವರು ಜಗದಾಚಾರ್ಯರುದ್ಭವಿಸಿ ಯುಗಾಂತರಗಳಲ್ಲಿಯೂ ಸೋಮನಾಥಾದಿ ಲಿಂ ದವತರಿಸಿ ಶಕ್ತಿವಿಶಿಷ್ಟಾದ್ವೈತ ಮತವನ್ನು ಸ್ಥಾ ಪಕೊಲ್ಲೀದ್ಧಾರಕೊಲ್ಲೇಶ್ವರ ರಂಭಾಪುರಿ, ಉಜ್ಜ ಮೊದಲಾದ ಪಂಚಕ್ಷೇತ್ರಗಳಲ್ಲಿ ಪಂಚ ಸಿಂಹಾ ಸನಗಳನ್ನು ಸ್ಥಾಪಿಸಿರುವದು ಸರಿಯಷ್ಟೆ! ಇಂಥ ಮಹಾ ಚಾರ್ಯರಲೊಬ್ಬರಾದ ಶ್ರೀ ಮದುಜ್ಜಯಿನಿ ಮರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾ ಗಳವರ ಪೂಜ್ಯಪಾದ ಸ್ವಾರಿಯು ತಾ|| 21-9-27 ಹುವಿನಹಡಗಲಿ ತಾಲೂಕು ಬನ್ನಿಕಲ್ಲು ಮುಕ್ಕಾ ಂದ ಅಲ್ಲಿಯ ಯಾವದ್ಭಕ್ತರ ಕಪ್ಪಕಾಣಿಕೆಗಳನ್ನು ಕೊಂಡು ಆಶೀರ್ವಾದವನ್ನಿತ್ತು ಹೊಳಗುಂದಿಯ ಮಾರ್ಗವಾಗಿ ಹುವಿನಹಡಗಲಿಗೆ ದಯಮಾಡಿಸಿತು. ಮಧ್ಯದಲ್ಲಿ ಹೊಳಗುಂದಿ ಗ್ರಾಮದ ಯಾವದ್ಭಕ್ತಮಹಾ ಶ್ವರ ಮಂಡಳಿಯು ಶ್ರೀ ಜಗದ್ಗುರು ಪಂಚಾಚಾ ರ್ಯ ಭಜನಾಸಂಪದವರೂ ಸಹ ನಿಯಮಿತವೇಳೆಗೆ ರಿಯಲ್ಲಿ ಕಾದಿದ್ದು ಶ್ರೀ ಜಗದಾಚಾರ್ಯರ ದಿವ್ಯ ದರ್ಶನವಾದಕೂಡಲೇ ಸರ್ವರೂ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷದಿಂದಲೂ ಭಜನಾಸಂಘದವರ ಇಂಪಾದ ಮನ ಜಯಘೋಷದಿಂದಲೂ ಗುರುಸಾರ್ವಭೌಮ ನ್ನು ಸ್ವಾಗತಮಾಡಿ ಕುಶಲಪ್ರಶ್ನೆಯಾದನಂತರ ಸ ರ್ವರಿಗೂ ದರ್ಶನಾಶೀರ್ವಾದವನ್ನಿತ್ತು ಮಹಾಪಾದವು ಮಂದಿರಕ್ಕೆ ದಯಮಾಡಿಸಿತು.

ಶ್ರೀ ಜಗದಾಚಾರ್ಯರ ದರ್ಶನಾಶೀರ್ವಾದದಿಂದ ಮ್ಮಗಳಿಗೆ ಲಭಿಸಿದ ಹೆಚ್ಚಿನ ಸಮುತ್ಸವದ ಫಲವಾವುದೆಂ ರೆ ಮಹಾಸ್ವಾಮಿಯವರು ಇಲ್ಲಿಯ ಶಿಷ್ಯರ ಕ್ಷೇಮವಾ ರ್ತೆಗಳನ್ನು ವಿಚಾರಿಸಲಾಗಿ ಸಮಸ್ತಭಕ್ತರು ಪ್ಲೇಗಿನ ಭಯಂಕರಹಾವಳಿಯಿಂದ ಬಹು ಕಷ್ಟಕ್ಕೀಡಾಗಿದ್ದೇವೆಂದು ಬಿನ್ನೈಸಿಕೊಳ್ಳಲು ಮಹಾಸ್ವಾಮಿಯವರು ಬಹು ಕನಿಕರಪಟ್ಟು ಶ್ರೀ ಪಾದುಕಾ ಕೃಪೆಮಾಡುವನು; ಭಯಪಡಬೇಡಿರೆಂದು ಅಭಯವನ್ನೀಯಲು ಸರ್ವರಿಗೂ ಆದ ಆನಂದಕ್ಕೆ ಪಾರವೇ ಇಲ್ಲ. ಜಗದ್ಗುರುಗಳ ಆಜ್ಞೆಯಂತೆ ಪ್ಲೇಗು ಈವರೆಗೂ ಯಾರಿಗೂ ತಗಲಿಯೂ ಇಲ್ಲ ಕೇಸುಗಳೂ ಆಗಿಲ್ಲವೆಂದು ತಿಳಿಸಲು ಅತ್ಯಂತ ಆನಂದವೆನಿಸುತ್ತೆ. ಭಕ್ತರಕ್ಷಣೆಯು ಭಕ್ತೋದ್ಧಾರಕರೆಂಬ ಬಿರುದಾಂಕಿತರಾದ ಭಗವತ್ಪಾದರಮುಂದೆ ಆಗುವದೆಂತು? ತಪಃಪ್ರಭಾವಿಗಳ ಮಹಿಮೆಯೂ ಲೀಲೆಯೂ ಅಗಾಧವಾದದ್ದು! ಓರ್ವ ಪುರನಿವಾಸಿ.

ಸ್ವಪ್ರತಿಷ್ಠೆಯು ಸತ್ಪ್ರಮಾಣವಲ್ಲವೆಂಬ ಬಗ್ಗೆ ಎಚ್ಚರಿಕೆ.

ತಾ|| 15-9-27 ರ ಲೋಕಮತಪತ್ರಿಕೆಯಲ್ಲಿ ಆ. ಗ. ಜಂಗಮಾದನೆಂಬಾತನು ಪಂಚಾಚಾರ್ಯಪ್ರಭೆಗೆ ಎಚ್ಚರಿಕೆ ಎಂಬ ಶಿರೋಲೇಖನದಿಂದ ಓರ್ವ ಮಿತಭಾಷಕ ಎಂಬವರು ತನ್ನ ಸಭೆಗೆ ಅಸ್ಪೃಶ್ಯತೆಯ ಬಗ್ಗೆ ಬರೆದಿರುವರೆಂದೂ ಪಂಚಾಚಾರ್ಯಪ್ರಭಾ ಪತ್ರಿಕೆಯವರು ಇನ್ನು ಮುಂದೆ ಇಂಥ ಲೇಖಗಳನ್ನು ಪ್ರಕಟಿಸದೆ ಸಿದ್ಧೇಶ ಜನ್ಮಬಸವನ ಸಮಾಚಾರ ತೆಗೆದುಕೊಳ್ಳಬಾರದೆಂದೂ, ಅಪ್ರಾಸಂಗಿಕವಾಗಿ ಹರಟೆಯನ್ನು ಕೊಚ್ಚಿರುತ್ತಾನೆ. ಓ ಜಂಗಮಾದನೇ ಭಂಗಾರವನ್ನು ಬರೆಯುತ್ತಿರುವ ನಿನಗೆ ಧರ್ಮಶಾಸ್ತ್ರವನ್ನು ಬರೆಯುವ ಸತ್ವವೆಲ್ಲಿಯದಿತು? ಅಯ್ಯೋ ದಡ್ಡನೇ—ಧರ್ಮಗಂಧವನ್ನರಿಯದ ಯಾರೋ ಒಬ್ಬೊಬ್ಬರ ದುರ್ಬೋಧನೆಗೊಳಗಾಗಿ ಎಂಥ ಅಜ್ಞಾನಮಾರ್ಗವನ್ನು ಹಿಡಿದಿರುವಿಯಲ್ಲಾ!

ಶ್ರೀ ಜಗದ್ಗುರು ಪಂಚಾಚಾರ್ಯರು ಯುಗಯುಗಾಂತರಗಳಲ್ಲಿಯೂ ತಮ್ಮ ಅಗಾಧವಾದ ಮಹಿಮೆಯಿಂದ ವೇದಶಾಸ್ತ್ರ ಪುರಾಣಾದಿಸಂಗತವೂ ಆದ ಈ ಶಕ್ತಿವಿಶಿಷ್ಟಾದ್ವೈತವನ್ನು ಸ್ಥಾಪಿಸಿ ಈ ಮತದ ಪ್ರತಿಯೊಂದು ವರ್ಣಾಶ್ರಮಧರ್ಮದವರಿಗೆ ಧರ್ಮಬೋಧೆಯನ್ನು ಮಾಡಿ ಯಾವದ್ಭಕ್ತರ ವೀರಶೈವರನ್ನು ಪುನೀತರನ್ನಾಗಿ ಮಾಡುತ್ತಾ ಬಂದಿರುವದು ಶಾಸ್ತ್ರಸಮ್ಮತವೂ ಲೋಕಸಮ್ಮತವೂ ಆದದ್ದೇ ಅದೆಯಷ್ಟೆ! ಅದೇ ತತ್ವಕ್ಕನುಸರಿಸಿ ಶ್ರೀ ಜಗದ್ಗುರು ಪಂಚ ಆಚಾರ್ಯರಾದರೋ ತಮ್ಮ ಶಿಷ್ಯರಾದ ವೀರಶೈವಮತದ ಸಮಸ್ತವರ್ಣಾಶ್ರಮದವರಿಗೂ ತಮ್ಮ ತಮ್ಮ ವಿಚಾರಮೂಲಕ ಧರ್ಮಜಾಗ್ರತೆಗೊಳಿಸಿದ್ದು ಯಥಾರ್ಥ ನ್ಯಾಯಸಮ್ಮತವೂ ಗುರುಗಳ ಅಧಿಕಾರದಂತೆ ಮುಖ್ಯಕರ್ತವ್ಯವೂ ಆಗಿದೆ. ಈ ಧಾರ್ಮಿಕವಿಷಯವನ್ನು ಸಾರಾಸಾರ ವಿಚಾರಮಾಡದೆ ಧರ್ಮದ್ರೋಹವೂ ಸಮಾಜದ್ರೋಹವೂ ಆದ ಲೇಖನವನ್ನು ವರ್ತಮಾನಪತ್ರಿಕೆಗಳಲ್ಲಿ ಬರೆದು ಬರೆಯಿಸಿದ್ದು ಎಂಥ ಸಾತ್ವಿಕತ್ವವೇ? ನಿನ್ನ ಸ್ವಾರ್ಥತೆಯ ಹೋಗು ಪರಿಸಮಾಪ್ತಿಯಾಯಿತೆಂದು ಭಾವಿಸಿ. ವಿವಾ ಹೇಗೆ? ಇದೀಗ ಶಿಕ್ಷಣ ವೀರಶೈವಶ್ರೇಣಿಯಲ್ಲಿ ಗುರುಭಕ್ತಿಬಾಹ್ಯರಾದ ನಿಮ್ಮಂಥ ಒಬ್ಬೊಬ್ಬ ವ್ಯಕ್ತಿಗಳೇ ಮಾತ್ರ ಈ ತರದ ಕುತ್ಸಿತಭಾವದ ಲೇಖನವನ್ನು ಬರೆದದ್ದಾದರೆ ಇಡೀ ವೀರಶೈವಸಮಾಜವೇ ಅನುಮೋದನ ಕೊಟ್ಟಂತಾಗುತ್ತದೆಂದು ನಿಮ್ಮ ಕಲ್ಪನೆಯೇನಾದರೂ ಅದೆಯೋ ಹೇಗೆ? ಹಾಗೇನಾದರೂ ನಿಮ್ಮ ಕಲ್ಪನೆಯಿದ್ದಲ್ಲಿ ಒಂದು ಆಜ್ಞಾನಿಯಾದ ಕೋಳಿಯು ನಾನು ಕೂಗದೆ ಉದಯವಾಗುವದೇ ಇಲ್ಲವೆಂಬ ಹೆಮ್ಮೆಯಿಂದ ಕೂಗುವದನ್ನೇ ಪಟ್ಟಂತೆ ಹಾಸ್ಯಾಸ್ಪದವಾದ ಮಾತೇ ಸರಿ!

ಎಲೈ ಜಂಗಮಾದನೇ "ಇದೇನು ಪಂಚಾಚಾರ್ಯಪ್ರಭೆಯ ಸಂಪಾದಕರ ಕೃತಿಯೋ? ಅಥವಾ ಮತ್ಸರಬುದ್ಧಿಯ ಇಲ್ಲಿಯ ಒಬ್ಬೊಬ್ಬವ್ಯಕ್ತಿಗಳ ಕೃತಿಯೋ ತಿಳಿಯದು" ಎಂದು ಬರೆದಿರುವಿಯಲ್ಲಾ?

ಅಯ್ಯೋ ದಡ್ಡನೇ? ಚಾತ್ರಿದಾರರುಪಯನ ಅಧಿಕಾರ್ಯಕ್ಕೆ ಪತ್ರಿಕಾಕರ್ತರು ಜವಾಬ್ದಾರರಲ್ಲವೆಂಬುದನ್ನು ಕೇಳಲೂ ತಿಳಿಯತಕ್ಕದ್ದು ಎಂದು ಪ್ರತಿಯೊಬ್ಬ ಸಂಪಾದಕರು ಬರೆಯುತ್ತಿರುವುದನ್ನು ನೀನು ನೋಡಿಯೇ ಇಲ್ಲವೇ? ಅಥವಾ ನಿನ್ನ ಪಕ್ಷಾಂಧತೆಯು ದಿವಾಕರನ ತೇಜಸ್ಸನ್ನೆಲ್ಲಾ ಅಡಗಿಸಿದ್ದರಿಂದ ಆ ಕಾರ್ಯತ್ತಲೆಯಲ್ಲಿ ಕಾಣಸಲ್ಲಿಲ್ಲವೇ ಹೇಗೆ? ಧಾರ್ಮಿಕಸುಧಾರಣೆಗೆ ಜನ್ಮವೆತ್ತಿರುವ ಪಂಚಾಚಾರ್ಯಪ್ರಭೆಯಾದರೋ ತನ್ನ ಮುಖ್ಯಧ್ಯೇಯವಾದ ತಾತ್ವಿಕ, ಧಾರ್ಮಿಕ, ನೈತಿಕ, ವ್ಯಾವಹಾರಿಕ, ಲೌಕಿಕ ಮುಂತಾದ ಸಾಮಾಜಿಕಕಾರ್ಯದಲ್ಲೇ ತೊಡಗಿ ತನ್ನ ಉದ್ದೇಶ್ಯವನ್ನು ಅಹೋರಾತ್ರಿ ಅತ್ಯಂತ ಶ್ರಮದಿಂದಲೂ ದಕ್ಷತೆಯಿಂದಲೂ ನಡಿಸುತ್ತಿರುವದು ಸಮಸ್ತ ಪ್ರಜಾವರ್ಗಕ್ಕೆ ಗೋಚರವಾದದ್ದೇ ಇದೆ. ಹೀಗಿದ್ದು ವಿಚಾರಶೂನ್ಯನಾಗಿ ಪತ್ರಿಕಾಕರ್ತರಿಗೆ ದೋಷಾರೋಪಣೆಮಾಡುವದೆಂದರೆ ನಕ್ಷತ್ರವತಿಯನ್ನು ಯಾರಕವಿಗೇರಿದೆಯೆಂಬುದನ್ನು ಸುಜ್ಞರಾದ ವಾಚಕರೇ ಊಹಿಸಬೇಕು.

ಜಂಗಮಾದನ್ನಾ! ನಿನ್ನೀಕ ಜನ್ಮಬಸವನ ಸಮಾಚಾರ ತೆಗೆದುಕೊಳ್ಳಬಾರದೆಂದು ಎಚ್ಚರದಷ್ಟು ಬರೆದು ನಿನ್ನ ಮನಸ್ಸಿನ ಕಲ್ಮಷವನ್ನು ಸಾರ್ಥಕಪಡಿಸಿಕೊಂಡಿರುವೆಯಲ್ಲಾ! ಹೀಗೆ ನೀನು ಬರೆಯುವದು ದೌರ್ಜನ್ಯವಲ್ಲದೆ ಬೇರೊಂದಲ್ಲ!

ಇನ್ನು ನೀನು ಕುಹಕರ ಕುಯುಕ್ತಿಗಳಿಗೆ ಗಮನಕೊಡದೆ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿಯೂ ಶ್ರೀಮತ್ಪಂಚಾಚಾರ್ಯರ ಚಿತ್ಪ್ರಭೆಯೇ "ಪಂಚಾಚಾರ್ಯಪ್ರಭಾ" ಆಗಿ ಅವತರಿಸಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿಯೂ ಅಸಾಧಾರಣವಾದ ಭಕ್ತಿಯನ್ನಿಟ್ಟು ನಿನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳು, ಸುಮ್ಮನೆ ಉಪದ್ವ್ಯಾಪಗಳ ಸ್ಪರ್ಧಾವಾದಗೋಜಿಗೆ ಬಿದ್ದು ನೀಚ ಬರವಣಿಗೆಗಳ ವಿಷಯದಲ್ಲಿ ಮನಸ್ಸಿಡುವುದು ಒಳ್ಳೇದಲ್ಲ. ಅಂಥ ಲೇಖನಗಳಿಂದ (ಹೋರ ನಿಂದಿಸಲು ಹಂದ್ರಿಗೆ ಕುಂದೇನು ಎಂಬಂತೆ) ಯಾವಕುಂದುಕವೂ ಬರಲಾರದು. ಹರಮುನಿದರೂ ಗುರುಕಾಯ್ವನೆಂಬಂತೆ ಸದ್ಭಕ್ತರನ್ನು ಕಾಯಲು ಶ್ರೀ ಜಗದ್ಗುರು ಪಂಚಾಚಾರ್ಯರು ತಮ್ಮ ಜ್ಞಾನದೃಷ್ಟಿಯಿಂದ ನೋಡುತ್ತಲೇ ಇರುವರು. ಇಷ್ಟು ಹೇಳಿದಾಗ್ಯೂ ನಿನ್ನ ಸ್ವಪ್ರತಿಷ್ಠೆಯನ್ನೇ ಅನುಕರಣ ಮಾಡಿದರೆ ಸ್ವಪ್ರತಿಷ್ಠೆಯು ಸತ್ಪ್ರಮಾಣವಲ್ಲವೆಂಬ ಬಗ್ಗೆ ಎಚ್ಚರಿಕೆ.

ಯ. ಮ. ಪೀರಪ್ಪಯ್ಯ, ಹೊಳಗುಂದಿ.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಮಹನೀಯ ವಾಚಕರೇ,

ಶ್ರೀಮನ್ ಷ|| ಬ್ರ|| ಶಿವಶಂಕರ ಶಿವಾಚಾರ್ಯ ಸ್ವಾಮಿಗಳು ಶಿವಾಪುರ ಕೊಂಡಕುಂದಿ ಜಿ. ಅನಂತಪುರ ಇವರು ಕಾಶಿಗೆ ಹೋದ ಒಂದೇವರ್ಷದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳಾಗಿ ಈ ಕಠಿಣ ವೇದಾಂತ ಪ್ರಥಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಹಾಗೂ ಶ್ರೀ ಪುರಗಿರಿ ಚಿದ್ಘನ ಶರ್ಮ ಶಿವಾಚಾರ್ಯರು ವ್ಯಾಕರಣದಲ್ಲಿ ಇವರು ಈ ವರ್ಷ ಅಲಹಾಬಾದ ಯುನಿವರ್ಸಿಟಿ ಬನಾರಸಕ್ವೀನ್ಸ ಕಾಲೇಜದಲ್ಲಿ ನ್ಯಾಯವೈಶೇಷಿಕಮಧ್ಯಮಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ ಗುರುವರ್ಗದವರು ಈ ರೀತಿಯಾಗಿ ತಮ್ಮ ವಿದ್ಯಾಭ್ಯಾಸದಲ್ಲಿ ನಿರತರಾಗಿ ಆಯಾ ಶಾಸ್ತ್ರಗಳಲ್ಲಿ ಉತ್ತೀರ್ಣರಾಗುವದು ವೀರಶೈವಮತಕ್ಕೆ ಭೂಷಣವೇ ಸರಿ.

ತಮ್ಮ
ಎಸ್. ಎಮ್. ನಾಗಲಿಂಗಸ್ವಾಮಿ, ಬಳ್ಳಾ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ನಿಷ್ಪಕ್ಷಪಾತಿಯ ನಿಜತತ್ವಗಳು ಹೊರಡುವದಿಲ್ಲವೇ?

ವಾಚಕರೇ, ತಾ|| 27-8-27 ರ ಶನಿವಾರ ಮೈಸೂರ ಸ್ಟಾರ್ ಪತ್ರಿಕೆಯ 35 ನೇ ಸಂಚಿಕೆಯಲ್ಲಿ ನಿಷ್ಪಕ್ಷಪಾತಿಯೆಂಬುವನು ಶಿಕಾರಿಪುರದ ಪಟ್ಟಣದಿಂದ ಸಿದ್ದಪ್ಪಯ್ಯ ಮೊದಲಾದ 13 ಜನಗಳಿಗೆ ಎಂದು ಒಂದು ಲೇಖನವನ್ನು ಬರೆದಿರುತ್ತಾನೆ. ಅಂಥವರು ಪ್ರಶ್ನೆಗಳಿಗೆ ಶಾಸ್ತ್ರಾಧಾರದಿಂದ ಬರೆದ ಉತ್ತರವನ್ನು ನೋಡಿ ಹೊಟ್ಟೆಯಲ್ಲಿ ಮೆಣಸು ಅರೆದಂತಾಗಿ ಪರಪ್ರೇರಣೆಯಿಂದಲೋ ಅಥವಾ ಬುದ್ಧಿಭ್ರಾಂತಿಯಿಂದಲೋ ಏನೇನೋ ಬರೆದುಕೊಂಡು ತನ್ನ ಹೊಟ್ಟೆಯೊಳಗಿನ ಸಿಟ್ಟು ತೀರಿಸಿಕೊಂಡಿರುತ್ತಾನೆ. ಈ ನಿಷ್ಪಕ್ಷಪಾತಿಯಾಗಲಿ, ಅಥವಾ ಇವನ ಅನುಯಾಯಿಗಳಾಗಲಿ ಧರ್ಮಸಿದ್ಧಾಂತಕ್ಕನುಸರಿಸಿ ಗುರುಸ್ಥಲದ ಚರಪಟ್ಟಾಧಿಕಾರಿಗಳೇ ಅಷ್ಟಾವರಣಾಂತರ್ಗತ ಜಂಗಮರೆಂದು ಹೇಳದೇ ಇದ್ದರೆ ಗತ್ಯಂತರವೇ ಇಲ್ಲ. ವಿರಕ್ತರೆಂದು ಹೇಳುವರೆ ಧರ್ಮಸಿದ್ಧಾಂತರೀತ್ಯಾ ಗೋತ್ರಸೂತ್ರಾದಿಗಳನ್ನು ಹೇಳಿ ಗುರುಜಂಗಮರು ಅಭೇದಬುದ್ಧಿಯಿಂದ ಪರಸ್ಪರ ನಮಸ್ಕಾರ ಸಾಮರಸ್ಯಾದಿಗಳನ್ನು ಆಚರಿಸಬೇಕಾಗುತ್ತದೆ. ಜಂಗಮರಾಗಬೇಕೆಂದು ಹವಣಿಸುವ ವಿರಕ್ತರಿಗೆ ಗೋತ್ರಗಳಿಲ್ಲ, ಸೂತ್ರಗಳಿಲ್ಲ; ಮತ್ತು ಅಭೇದಬುದ್ಧಿಯಿಂದ ಗುರುಗಳಿಗೆ ನಮಸ್ಕಾರ ವಗೈರೆ ಮಾಡುವದಿಲ್ಲ. ಅಂದಮೇಲೆ ವಿರಕ್ತರು ಹೇಗೆ ತಾನೇ ಅಷ್ಟಾವರಣಾಂತರ್ಗತ ಜಂಗಮರಾಗುತ್ತಾರೆ? ಶ್ರೀ ಪಟ್ಟಚರಾಧಿಕಾರಿಗಳು ಗುರುಪರಂಪರಾಗತ ಗೋತ್ರಸೂತ್ರಾನುವರ್ತಿಗಳಾಗಿ ಪರಸ್ಪರ ಅಭೇದಬುದ್ಧಿಯಿಂದ ಆಚರಿಸುತ್ತಿರುವರು. ಇದು ಶಾಸ್ತ್ರದಲ್ಲಿಯೂ ಮತ್ತು ರೂಢಿಯಲ್ಲಿಯೂ ಪ್ರಸಿದ್ಧವಿರುತ್ತದೆ. ಇದೇ ವಿಷಯವನ್ನೇ ವಿದ್ವಾಂಸರಿಂದ ಅರಿತುಕೊಂಡು 13 ಜನರು ಉತ್ತರ ಕೊಟ್ಟಿರುವದರಿಂದ ಶಾಸ್ತ್ರಕ್ಕೂ ರೂಢಿಗೂ ವಿರೋಧವಾದುದಾಗಲಿಲ್ಲವೆಂದು ಚಿಕ್ಕಬಾಲಕನಿಗೂ ತಿಳಿಯುವಂತಿದೆ. ಈ ನಿಷ್ಪಕ್ಷಪಾತಿಯು ಶಾಸ್ತ್ರಕ್ಕೂ ರೂಢಿಗೂ ವಿರೋಧವಾಗಿ ಆಚರಿಸುತ್ತಿರುವದರಿಂದಲೂ ಮತ್ತು ಅಧಿಕಪ್ರಸಂಗವಾಗಿ ಲೇಖನವನ್ನು ಬರೆಯುತ್ತಿರುವದರಿಂದಲೂ ಈ ನಿಷ್ಪಕ್ಷಪಾತಿಯನ್ನು ಯಾವ ವರ್ಗಕ್ಕೆ ಸೇರಿಸಿ ಯಾವ ಬಹುಮಾನವನ್ನು ಕೊಡಬೇಕೋ ಎಂಬುವದನ್ನು ವಾಚಕರ ಪಾಲಿಗೆ ಅರ್ಪಿಸುವೆನು.

ನಿಷ್ಪಕ್ಷಪಾತಿಯು ಪ್ರಾಯಶಃ ಅನ್ಯಮತದವನಿರಬಹುದೆಂದು ಊಹಿಸಲವಕಾಶವಾಗುತ್ತದೆ. ಯಾಕೆಂದರೆ ತನ್ನ ಲೇಖದಲ್ಲಿ ನಿಮ್ಮ ಜಗದ್ಗುರುಗಳು, ನಿಮ್ಮ ಸ್ವಾಮಿಗಳು, ನಿಮ್ಮ ಹಿರಿಯರು ಎಂದು ಬರೆದಿದ್ದಾನೆ. ಪಕ್ಷಪಾತದ ಕೊಳಚೆಯಲ್ಲಿ ಬಿದ್ದು ಹೊರಳಾಡುವ ಪಕ್ಷಪಾತಿಯೇ! ನಿನ್ನ ಜಗದ್ಗುರುಗಳು ಯಾರು? ನಿನ್ನ ಹಿರಿಯರಾರು? ಅದನ್ನು ತಿಳಿಸಿದ್ದರೆ ಉತ್ತಮವಾಗುತ್ತಿತ್ತು. ಇನ್ನಾದರೂ ದಯವಿಟ್ಟು ತಿಳಿಸಿದಲ್ಲಿ ಸಮಾಜಕ್ಕೆ ಮಹದುಪಕಾರವನ್ನು ಮಾಡಿದಂತಾಗುವದಲ್ಲದೆ ನನ್ನ ಸಂಶಯವನ್ನು ಪರಿಹಾರಮಾಡಿದಂತಾಗುವದು. ನಿಷ್ಪಕ್ಷಪಾತಿಯೇ ಧರ್ಮಗ್ರಂಥಗಳು ನಮ್ಮ ಬಗಲೊಳಗಿನ ಕೂಸಲ್ಲ. ಶಾಸ್ತ್ರದಲ್ಲಿ ಹೇಳಿದಂತೆ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿರುವದರಿಂದ ಸಾರಾಸಾರವಿಚಾರಶೀಲರಾದ ಧರ್ಮಶಾಸ್ತ್ರಜ್ಞರಿಗೂ ನಿಷ್ಪಕ್ಷಪಾತಿಗಳಿಗೂ ಯಾವಾಗಲೂ ಮಾನ್ಯಗಳೇ ಇರುತ್ತವೆ. ಪಕ್ಷಾಂಧತೆಯಲ್ಲಿ ಕೊಳೆಯುತಕ್ಕ ಕೂಪಮಂಡೂಕರಿಗೆ ಸಿದ್ಧಾಂತವನ್ನು ಪ್ರತಿಪಾದಿಸುವ ಧರ್ಮಗ್ರಂಥಗಳು ಯಾವಾಗಲೂ ರುಚಿಸುವದಿಲ್ಲ. ಅಂಥ ಮಹನೀಯರು ನಿವಮಾತ್ರಕ್ಕೆ ವೀರಶೈವರು ಅನ್ನಿಸಿಕೊಳ್ಳುವದಕ್ಕಿಂತ ಆರ್ಯಸಮಾಜಕ್ಕಾಗಲಿ ಅಥವಾ ಕ್ರಿಶ್ಚಿಯನ್ ಮತಕ್ಕಾಗಲಿ ಸೇರುವದು ಒಳ್ಳೆಯದಾಗಿ ತೋರುತ್ತದೆ.

ನಿಷ್ಪಕ್ಷಪಾತಿಯೇ ಪ್ರಶ್ನೆಗಳಿಗೆ ಬರೆದ ಉತ್ತರಗಳು ಮತಸಿದ್ಧಾಂತಕ್ಕೆ ಸಮ್ಮತವಾಗಿರುವದರಿಂದ ಖಂಡಿಸಬಹುದೆಂದು ಯಾರೂ ಪ್ರಕಟಿಸಬಾರದು. ನಿನ್ನಲ್ಲಿ ಅಷ್ಟು ಬುದ್ಧಿಯೂ ಶಕ್ತಿಯೂ ಧೈರ್ಯವೂ ಇದ್ದಲ್ಲಿ ಖಂಡಿಸಿ ಏಕೆ ಪ್ರಕಟಮಾಡಬಾರದು? ಅಗ್ಗ ನಿಷ್ಪಕ್ಷಪಾತಿಯ ನಿಜತತ್ವಗಳು ಹೊರಬೀಳುವದಿಲ್ಲವೇ?

ಸತ್ಯವಾದಿ.

ಶ್ರೀ ಜಗದ್ಗುರು ಪಂಚಾಚಾರ್ಯ[illegible]

ಚಿನವಾರನೇ ಬಿಡು ಎಚ್ಚರಿಕೆ?

ಪಂಚಾಚಾರ್ಯ[illegible] ಯಾರು? ನಿನ್ನ ಯೋಗ[illegible] ನಿನ್ನ ರೆಕ್ಕೆಪುಕ್ಕವನ್ನು ತಿಳಿಸಬೇಕಾಗಿದೆ [illegible] ಯನ್ನು ಕೊಡುವರು. ಮಹಾಭಾರತದ [illegible] ಹಾಗೆ ನಿರಾಕುಲಪ್ರತ್ಯಕ್ಷ[illegible] ನೋ ಸಾಕ್ಷಾತ್ [illegible] ರೋ ಏನೋ ಎಂಬಂತೆ ಅಪ್ರಾಸಂಗಿಕವಾದ ಹರಟೆಯನ್ನು ಕೊಚ್ಚಿಕೊಂಡು "ಏಕಮೂರ್ತಿ" ಇತ್ಯಾದಿ ಸಂಸ್ಕೃತಶ್ಲೋಕದ ತಾತ್ಪರ್ಯದಂತೆ ಅದನ್ನು ಸಿಂದಗಿ ನೋಟಾಪುರದ ಸಭೆಯು ಅಂಥದು ಇಂಥದು ಎಂದು ಬರೆದುಕೊಂಡಿರುವಿ. ನೀನು ಬರೆದುಕೊಳ್ಳುವದು ಅಷ್ಟು ಉಚಿತವಾಗಲಾರದೆಂಬುವದು ನಿನಗೆ ತಿಳಿಯದು (ಆದರ್ಶ ಅಸ್ತಿರು, ಹೊಗಳತಕ್ಕದ್ದು ಸಮಂಜಸವಲ್ಲವೇ?) ಇಂತಿ. ಪಕ್ಷಾಂಧತೆಯ ಸ್ವಾರ್ಥದಮತ್ತು ತಲೆಗೇರಿದೆ ಇತ್ಯಾದಿ ನೀನು ಮಾತನಾಡುವ ಮಾತು ಯೋಗ್ಯವೋ? ಹಾಗಾದರೆ ನಿನಗಾದರೂ ಮತಾಚಾರ್ಯರ ವಿಷಯಾಂಧತೆಯು ಧನಮುಷ್ಟಿ ಮಸ್ತಕಾರೋಹಣವಾಗಿರುವದೆಂದು ನಾವು ಅನ್ನದಿದ್ದರೂ ಸಜ್ಜನರು ಅನ್ನಲಿಕ್ಕಿಲ್ಲವೇ? ನಿಮ್ಮ ಇಲಕಲ್ಲ ಮೊದಲಾದವರ ಲೇಖಗಳೂ, ನಿಮ್ಮ ಸಭಾ ರಿಪೋರ್ಟುಗಳೂ, ಮತಾಚಾರ್ಯರ (ಮತದ) ಮೂಲಕುಠಾರಪ್ರಾಯಗಳಾಗಿ ಪ್ರೈದಿಕತನವನ್ನು ಹಾನಿಗೊಳಿಸುವದಿಲ್ಲವೋ? ಸ್ವಲ್ಪ ಶಾಂತಚಿತ್ತದಿಂದ ವಿಚಾರಿಸಿ, ರಂಭಾಪುರೀಪೀಠದ ಅಧಿಕಾರವಾದಲಾಗಾಯಿತು ಮೈಸೂರ ಚಳವಳಿಯು ಇಲ್ಲೇ ಇಲ್ಲವೇ! ಸ್ವಮತಸಿದ್ಧಾಂತಪ್ರಚಾರಕೋತ್ಸುಕರ ಮೈಸೂರು ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಜಿ.ಬಿ.ಇ. ಧರ್ಮಪ್ರಭುಗಳ ಕೃಪಾಕಟಾಕ್ಷದಿಂದ ಮೈಸೂರು ರಾಜಧಾನಿಯಲ್ಲಿ ಈಗೀಗ ಉದಯಿಸುವ ಸೂರ್ಯನ ಛಾಯೆಯಂತೆ ಉದಯಿಸಿದ "ಪಂಚಾಚಾರ್ಯಪ್ರಭಾ" ಎಂಬ ಅಭಿಧಾನಾತ್ಮಕ ಪತ್ರಿಕೆಯು ಸ್ವಧರ್ಮವನ್ನು ಬೀರುತ್ತಿದ್ದರೆ ನಿನ್ನಂಥವರೇ ಮತ್ಸರ[illegible]ಲ್ಲಿ ಏನೇನೋ ಸಂಬಂಧವಿಲ್ಲದಂತೆ ಬರೆಯುವ[illegible] ಜನಗಳಿಗೆ ಪ್ರಾರಂಭವಾದರೆ ಇದಕ್ಕಿಲ್ಲ ಜೇನು[illegible] ಅಷ್ಟಕ್ಕೆ ತೆಗೆದುಕೊಳ್ಳಬೇಕು. ಮತ್ತು [illegible] ಸಮಾಚಾರಕರ್ತರಂತೆ ತೆಗೆದು[illegible] ಎಚ್ಚರಿಕೆ, ಎಂದು ಬರೆಯುವದು ಸತ್ಯವಾದ ಸಮಾಜದ ವೀರಶೈವರೇ. ಇಂದಿನವರಕ್ಕೂ ದ್ರೋಹಿಗಳಿಂದ ಸಮಾಜದಲ್ಲಿ ಬಹು ಗೊಂದಲವೇಳುತ್ತದೆ. ಆದುದರಿಂದ ಇಂದವರಿಗೆ ಬುದ್ಧಿಹೇಳಿ ಮಾರ್ಗಕ್ಕೆ ಹಚ್ಚಬೇಕು.

ಎಸ್. ಕೆ. ಹಿರೇಮಠ, ಮೈಜಾಂಸ್ಟೇಟ್.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನಿಜಾಮುಇಲಾಖಾ ಕೊಪ್ಪಳತಾಲೂಕು ಮೈಕಿ ಕಿನ್ನಾಳುಗ್ರಾಮದಲ್ಲಿ ಗೋವಧೆಯು ನಿಲ್ಲಿಸಲ್ಪಟ್ಟಿತು.

ಬಾಂಧವರೇ, ಈಗ ಕೆಲವು ದಿವಸಗಳಹಿಂದೆ ಕೆಲವು ಜನಗಳು ಕೂಡಿ ಗೋವಧೆಯನ್ನು ಮಾಡುವದೂ ಮತ್ತು ಅದರ ಮಾಂಸಚರ್ಮಗಳನ್ನು ಮಾರಾಟಮಾಡುವದಕ್ಕಾಗಿ ಅಂಗಡಿಯನ್ನು ಏರ್ಪಾಟುಮಾಡಿದ್ದರು. ಅದನ್ನು ಕಂಡು ಯಾವತ್ತು ರೈತಜನರು ಕೂಡಿಕೊಂಡು ಎಷ್ಟುಪರಿಯಿಂದ ಹೇಳಿದ ಕಾಲಕ್ಕೂ ಕೇಳದೆ, ತಮ್ಮ ವ್ಯವಹಾರವನ್ನು ಸಾಗಿಸಿದರು. ಇದರಿಂದ ರೈತಜನರು ಉದಾಸೀನವೃತ್ತಿಯುಳ್ಳವರಾಗಿ ಈ ವಧೆಯನ್ನು ಯಾವರೀತಿಯಿಂದಾದರೂ ನಿಲ್ಲಿಸಬೇಕೆಂದು ಇಲ್ಲಿಯ ಗ್ರಾಮಪ್ರಭುಗಳಾದ ಮಿಸ್ತರ್ ವಾಸುದೇವಾಚಾರ್ಯ ಪಟವಾರಿ ಮಿಸ್ಟರ್ ಫಕೀರಗೌಡರು ಕೊತವಾಲಿ ಪಾಟೀಲ ಮಿಸ್ಟರ್ ಶಂಕರರುದ್ರ ಮಾಲಿಪಾಟೀಲ ಈ ಮಹನೀಯರಿಗೆ ದೂರು ಹೇಳಿಕೊಳ್ಳಲಾಗಿ ಕರುಣಾನಿಧಿಗಳಾದ ಈ ಗ್ರಾಮಾಧಿಕಾರಿಗಳು ತಮ್ಮ ಈ ರೈತರು ಅರಿಕೆಮಾಡಿಕೊಳ್ಳುವದನ್ನು ಕೇಳಿ ನಗರೀ ಮಹಸೀಲ [illegible]ವನ್ನು ಮಾಡುವ ಆ ಜನರನ್ನು ಕ[illegible] [illegible]ದೇಶವನ್ನು ಮಾಡಿ, ಗೋವಧೆ[illegible] [illegible] ಇವರಂತೆ ಎಲ್ಲ ಗ್ರಾಮಪ್ರಭುಗಳು [illegible]ಲ್ಲಿ ನಡೆಯುತ್ತಿರುವ ಈ ದುಷ್ಟ[illegible] [illegible] ಗೋಸಮಾಜಕ್ಕೆ ವಗೆ ಪ್ರ[illegible] [illegible] ಕೋರುತ್ತೇನೆ.

ಕಾಟ್ರಪ್ಪ ಗುರಪ್ಪ ಅಕ್ಕಿ ಕಿ

[illegible] ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಪಂಡಿತಾರಾಧ್ಯರ ಶಿಷ್ಯ ಹೇಮರಡ್ಡಿ ಮಲ್ಲಮ್ಮಾಂಬೆಯ ಪುರಾ ಮಹೋತ್ಸವ, ಆಳವಂಡಿ.

[illegible] ಶಿವಭಕ್ತರಾದ ಹೇಮರಡ್ಡಿಮಲ್ಲಮ್ಮನ [illegible] ಪ್ರಕಾರ ಶ್ರಾವಣಮಾಸದಲ್ಲಿ [illegible] ಆದರೆ ಮಳೆ ಇಲ್ಲದೆ ಬಳಲುತ್ತಿರುವ ಬಂಧುಭಗಿ[illegible] [illegible] ಶ್ರೀ [illegible] ಜಗದ್ಗುರು || || ಶಿಷ್ಯರಾದ ಹೇಮ[illegible] [illegible] ಪುರಾಣವನ್ನು ಮಳೆಯಾದೀತೆಂಬ [illegible] ಪೂರ್ವಕ [illegible] ಪಟ್ಟಾಧ್ಯಕ್ಷರ ಶ್ರೀ ಸಿದ್ದೇಶ್ವರ (ಸ[illegible] ಸಿದ್ದೇಶ್ವರ) [illegible] ಪಟಾಂಗಣದಲ್ಲಿ ಶಕೆ ೧೮೪೯ ನೇ [illegible] ಗುರುವಾರ ಪ್ರಾರಂಭಿಸಿದರು ವೇ|| ಹು[illegible] [illegible] ಪುರಾಣವನ್ನು ಕೂಡಿದ[illegible] ಗಳ್ಳಿ [illegible] ಮನೋಹರವಾಗಿ ಓದಿದರು. ಪುರಾಣ[illegible] [illegible] ಲಿಂಗರಶಾಸ್ತ್ರಿಗಳು ವೇದಾಗಮ[illegible] [illegible] ಜನರ ಚಿತ್ತಕ್ಕೆ ರಂಜಕವಾಗುವಂತೆ ಪ್ರವಚನ[illegible] ದರು. ಈ ಪವಿತ್ರ ಚರಿತ್ರೆಯುಳ್ಳ ಪುರಾಣವನ್ನು [illegible] ಕಾಲಕ್ಕೆ [illegible] ವಾಸವಾಗಿರತಕ್ಕ ಗುರುವಾಂ[illegible] [illegible] ಇತ್ಯಾದ್ಯನೇಕ ನ[illegible] [illegible] ಆಮಾನುಷಕೃತ್ಯಗಳನ್ನು [illegible] ಜನರಿಗೆ ತೋರಿಸುತ್ತಿದ್ದರು. ಇಂಥ ಸದ್ಭಕ್ತೆಯಲ್ಲಿ [illegible] ಹೇಳಿ ಪ್ರಸು ಕೊಡದಿರುವನೇ? ಮಳೆಯ[illegible] [illegible] ಎತ್ತನೋಡಿದತ್ತ ಮಳೆಬೆಳೆಗಳಾನಂ[illegible] [illegible] ವಾಚಕರೇ ಆದ್ದರಿಂದಲೇ "ಹರನು [illegible] [illegible] ಪ್ರಸಿದ್ಧವಾಗಿದೆ.

[illegible] ಸೋಮವಾರ ಸುದಿನದಲ್ಲಿ ಪುರಾ[illegible] [illegible] ವಾಗ್ಮಿಗಳಾದ ಗುರುವರ್ಗದವರ[illegible] [illegible] ಜನಗಳಿಗೆ [illegible] [illegible] ಗುರುವರ್ಗದವರಿಗೆ ದಕ್ಷಿಣ[illegible] [illegible] ಚಾರ್ಯಪ್ರಭಾ" ಪತ್ರಿಕೆ[illegible] [illegible] ಪುರಾಣ ಸಂಘದ[illegible] [illegible] ಮಾಡಲಪ್ಪಿತು. ಪು[illegible] [illegible] ಅಂಬಲಿ ಕಟ್ಟಿಮನಿ ವೇ|| ಬ್ರ[illegible] [illegible] ಈ ಶ್ರೀಗಳವರು ಪು[illegible] [illegible] ದಯವನಾದರು. ಶ್ರೀ[illegible] [illegible] ಪಲ್ಲಕ್ಕಿಯಲ್ಲಿ ಅಂದೋಲ[illegible] [illegible] ಬರುವಾಗ ಶ್ರೀ ಮರುಳಸಿದ್ದೇ[illegible] [illegible] ಎಡಬಲದಲ್ಲಿ ಅಷ್ಟಗಿರಿ ಕ್ಷೇ[illegible] [illegible] ಮುಂದೆ "ನಗರೋಪಸ್ಥಿತಿ" [illegible] ಡೊಂಗರಗಳನ್ನು [illegible] [illegible] ಗೌಡಶಾನುಭೋಗರು, ಶೆ[illegible] [illegible] ಪ್ರಮುಖರು ಅಂತು ಬಹು[illegible] [illegible] **ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಜಯ** ಮಲ್ಲಮ್ಮಾಂಬಾಕೀ ಜಯ ಇತ್ಯಾದಿ ಜಯಘೋಷವನ್ನು ಮಾಡುತ್ತಿದ್ದರು. ಅಲ್ಲಲ್ಲಿಗೆ ಮಂಗಲಾಂಗನೆಯರು ಆರತಿಯನ್ನು ಬೆಳಗುತ್ತಲಿದ್ದರು. ವಾಜಾಬಜಂತ್ರಿ [illegible] ಬಾಣಬಿರುಸುಗಳ ಸಪ್ಪಳವು ಕಿವಿಗಳನ್ನು ಗಡಚಿಕ್ಕಿಸುತ್ತಿದ್ದವು. ಈ ಪ್ರಕಾರ ಉತ್ಸವವು ಬಹು ವಿಜೃಂಭಣೆಯಿಂದ ಕ್ಷೇತ್ರಕ್ಕೆ ಬಂದು ರಾತ್ರಿ ೧೦ ಘಂಟೆಸುಮಾರಿಗೆ ತಲ್ಪಿತು. ಆ ಮೇಲೆ ಶ್ರೀಗಳವರು ಸರ್ವಭಕ್ತಸಮೂಹಕ್ಕೆ ನಮ್ಮ ಧರ್ಮಸ್ಥಾಪನಾಚಾರ್ಯರಾದ ಶ್ರೀ ೧೦೦೮ ಜಗದ್ಗುರು **ರೇಣುಕಾದಿ ಪಂಚಾಚಾರ್ಯರ** ಮಹಿಮೆಗಳನ್ನು ಇದೇಪ್ರಕಾರ ನೆರವೇರಿಸಿ ಧರ್ಮಕಾರ್ಯದಲ್ಲಿ ಪ್ರವೃತ್ತರಾಗಿ ಗುರುಕೃಪೆಗೆ ಪಾತ್ರರಾಗಬೇಕೆಂದು ಅಪ್ಪಣೆಕೊಡಿಸಿದರು. ತರುವಾಯ ಬೂದಿ [illegible] ಸುಗಂಧವು ಲೇಪಿಸಲ್ಪಟ್ಟಿತು. ಸಮುದ್ಧಾರ (ಆಳವಂಡಿ) ಶ್ರೀಗಳವರು ಮಾಡಿದ **ಮಹತ್ತ** ಸಂಗತಿಗಳನ್ನು ವೇ|| ರಾ|| ರಾಚಪ್ಪಮಾಸ್ತರ್ ಹೀರಗಿಹಾಳ, ಈತನು ಸಭೆಯಲ್ಲಿ ಜಾಹೀರಪಡಿಸಿದನು. ಆ ನಂತರ ಸಭಿಕರು ನಮ್ಮ ಒಡೆಯರಾದ ಸಾಲರ್ ಜಂಗ್ ಎಂಬ ದೊರೆಗಳ ರಾಜ್ಯದಲ್ಲಿ ವಿದ್ಯಾಕಲಾಕೌಶಲ್ಯಾದಿಗಳಲ್ಲಿ ಹೆಚ್ಚಾಗಿ ಬೆಳೆಯಲಿ ಎಂಬ ಪರಮಾತ್ಮನನ್ನು ಧ್ಯಾನಿಸುತ್ತ ಆನಂದದಿಂದ ಪುರಾಣಸಭೆಯನ್ನು ಬರಖಾಸ್ತುಮಾಡಿ ಶ್ರೀಗಳವರಿಂದ ಆಶೀರ್ವಾದಗಳನ್ನು ಹೊಂದಿ ತಮ್ಮತಮ್ಮ ಗೃಹಗಳಿಗೆ ತೆರಳಿದರು. ಅದಿವಸ ಆಳವಂಡಿ ಗ್ರಾಮವು ಕೈಲಾಸವೆನ್ನುವಹಾಗೆ ಭಾಸವಾಗುತ್ತಿತ್ತು.

[illegible] ಮಲ್ಲಮ್ಮಾಂಬಾ ಪುರಾಣಸಂಘ ಆಳವಂಡಿ

ವ್ಯವಸ್ಥಾಪಕ —

ಸೇವಾಕಾಂಕ್ಷಿ ಲಿಂಗನಗೌಡ ಮಾ|| ಪಾ||

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಜಗದ್ಗುರು ಕೇದಾರಮಹಾಸ್ವಾಮಿಗಳವರ ಆಗಮನವು.

ಅನುವರ್ತ್ಯೇವಾತ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಟ್ಟಾಧ್ಯಕ್ಷ ನೀಲಕಂಠಲಿಂಗ ಶಿವಾಚಾರ್ಯ ಸ್ವಾಮಿಗಳವರ ಸವಾರಿಯು ಚೆಳಗೇರಿ ಮುಕ್ಕಾಮಿನಿಂದ ೯ 27 ಕ್ಕೆ ರಾಯಚೂರುಜಿಲ್ಹಾ ಕುಷ್ಟಗಿ ತಾಲೂಕು ಗ್ರಾಮಕ್ಕೆ ಪ್ರೋಗ್ರಾಂ ನಿರ್ಣಯಿಸಿದಪ್ರಕಾರ ನಮ್ಮ ರ ಬೃಹನ್ಮಠಾಧಿಕಾರಿಗಳಾದ ವೇ|| ಶಿವಸಂಗಪ್ಪಯ್ಯನವ ಮತ್ತು ಸದ್ಭಕ್ತರೊಡನೆಗೂಡಿ ಆಗಮನವನ್ನು ನಿರೀಕ್ಷಿಸು ವರೊಳಗಾಗಿ ಮಹಾಸ್ವಾಮಿಗಳವರ ಸವಾರಿಯು ಸಾ ಲದ 5 ಘಂಟೆಗೆ ಆಗಮಿಸಿದ್ದರಿಂದ ಯಾವತ್ತೂ ವೀರಶೈ ವವು ಅತ್ಯಾನಂದದೊಡನೆ ಫಲಪುಷ್ಪಾದಿಗಳನ್ನು ಸಮ ಅಪ್ಪೋತಿ ಶೃಂಗರಿಸಿದ ಮಂಗಲಕರವಾದ ಪುಷ್ಪಮ ಲಿಕೆಯಲ್ಲಿ ಶ್ರೀಗಳು ಆರೋಹಣಗೈದಾಕ್ಷಣವೆ ಸಕಲ ಮಹೋತ್ಸವಂಗೈಯುತ್ತ ಸಕಲಬಿರುದಾವಳಿಗಳೊಡನೆ ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲ್ಲಲ್ಲಿ ವ ಪುಷ್ಪಮಾಲಿಕೆಯ ಲತೆಗಳಿಂದಲೂ, ಸಾಲುಸಾಲಾಗಿ ಸುವ ದೀಪಸ್ತಂಭಗಳಿಂದಲೂ, ವೇದಸಂಪನ್ನರ ವೇದ ಘೋಷಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ ರ ಸಂಗೀತವಾದ್ಯಘೋಷ ರವದ ಮಂಜುಲಧ್ವನಿಯಿಂದ ಮಧ್ಯದಲ್ಲಿ ಉಚ್ಚರಿಸುವ ಜಯಘೋಷದಿಂದಲೂ, ರೆಯುವ ವಾದ್ಯಘೋಷದಿಂದಲೂ ಪುರಪ್ರವೇಶಮಂಗೈದು ನಿರ್ಮಿತವಾದ ಮಂಟಪದ್ವಾರ ಪ್ರವೇಶಿಸಿ ಜಾಜ್ವಲ್ಯ ದ ಸಿಂಹಾಸನವನ್ನು ಶ್ರೀ ಜಗದ್ಗುರುಗಳು ಆರೋಹಣ ವೊಡನೆ ಸರ್ವರು ಜಯಘೋಷಮಂಗೈದು ಆನಂದದ ನಂದೋದ್ಗಾರವಂ ಪ್ರಕಟಿಸಲು ವೇ|| ಆಸ್ಥಾನಪಂಡಿತ ಳ ಬೃಹಸ್ಪತಿಯ ಅಮರನಾಥಶಾಸ್ತ್ರಿಗಳವರು ವೀರಶೈ ತೀನತೆ, ವೈದಿಕತತ್ವ, ಶ್ರೀಮತ್ಪಂಚಾಚಾರ್ಯರ ಪ್ರಭಾವ ಮದಲ್ಲಿ ಉಪನ್ಯಾಸಮಾಡಿದರು ತರುವಾಯ ಶ್ರೀ ೧೦೮ ರುಗಳವರು ತಮ್ಮ ಅಮೋಘವಾಣಿಯಿಂದ ಸ್ವಾಧರ್ಮ ಸತ್ವವನ್ನು ವೀರಶೈವತಾತ್ವಿಕ ಬೋಧಾಮೃತದಿಂದ ತೃಪ್ತಿ ಸಿದರು ಅಷ್ಟಕ್ಕೆ ಶ್ರೀ ೧೦೮ ಭಗವತ್ಪಾದರ ಅನುಷ್ಠಾ ಕ್ಕೆ ಸಮಯವಾದಕಾರಣ ಶ್ರೀ ಜಗದ್ಗುರು ಪಂಚಾಚಾರ್ಯರ ಘೋಷದೊಡನೆ ಸಭೆಯು ಸಮಾಪ್ತಿಯಾಯಿತು ಪ್ರತ್ಯಹದಲ್ಲಿ ಶ್ರೀ ಭಗವತ್ಪಾದರ ಸಂದರ್ಶನಾರ್ಥವಾಗಿ ಬರುತ್ತಿರುವ ಭಕ್ತಸಮೂಹವು ಸನ್ನಿಧಿಯಲ್ಲಿ ನಡೆಯುವ ಸ್ವಮತಸಿದ್ಧಾಂತ ತತ್ವಗಳನ್ನು ತಿಳಿದು ಶ್ರೀ ೧೦೮ ಜಗದ್ಗುರುಗಳವರ ದರ್ಶನವಕ್ಕೆ ಪಾತ್ರರಾಗುವದಕ್ಕೋಸ್ಕರ ಭಜನಾಸಂಘ ಳು, ವಾದ್ಯವೈಭವಗಳಿಂದಲೂ ಬಂದು ಕಾಣಿಕೆಯನ್ನರ್ಪಿಸು ಗುತ್ತಿರುವರು ಮತ್ತು ನೈಜಾಂಇಲಾಖಾ ಸಂಸ್ಥಾನ ಪುರದ ವೇ|| ಶಂಕರಪ್ಪನವರು, ಮಠ ಹನಾಳದಾರ ಪ್ಪನವರು, ಪರುವನಗೌಡ, ಪೋಲೀಸಪಾಟೀಲ ವೀರಬಸ ಪ್ಪ ವ ಸಾಹುಕಾರ ಚಂದಪ್ಪನವರು ತಮ್ಮ ಗ್ರಾಮದ ಇವರೊಡನೆಗೂಡಿ ಅತಿವೈಭವದೊಡನೆ ಗುರುಸನ್ನಿಧಿಗೆಬಂದು ಕಾಣಿಕೆಯಂ ಅರ್ಪಿಸಿ ಇಲ್ಲಿ ನಡೆಯುವ ಸದುಪದೇಶವಂ ಗುರುಕೃಪೆಗೆ ಪಾತ್ರರಾಗಿರುವರು.

ಶಿವಲಿಂಗಯ್ಯಾ, ಹೆಡ್ಮಾಸ್ತರ್, ಪುರಗಿರಿ

ಸೂಚನೆಯು

ನಾವು ಪ್ರತಿವಾರವು ತಪ್ಪದೆ ಸರ್ವರಿಗೂ ಪತ್ರಿಕೆಗಳ ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯು ರ ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ರು ತಮ್ಮ ತಮ್ಮ ಪೋಸ್ಟಾಫೀಸಿನ ಮಾಸ್ತರರಿಗೆ ಹಿಸಬೇಕು. ಕೆಲವರು ನಾವು ವಿ.ಪಿ. ಯನ್ನು ದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವದಿಲ್ಲ ದು ಬರೆಯುತ್ತಾರೆ ವಿ.ಪಿ. ತೆಗೆದುಕೊಂಡವರ ಹಣ ನಮ್ಮ ಕೈಸೇರಬೇಕಾದರೆ 20-25 ದಿವಸಗಳು ತಡ ಗುತ್ತದೆ, ಹಣವು ಕೈಸೇರಿದಕೂಡಲೆ ಅವರಿಗೆ ತ್ರಿಕೆಗಳನ್ನು ಕಳುಹಿಸುವದಾಗುತ್ತದೆ. ಮನಸ್ಸಿ ಯಾವ ಸಂಶಯವನ್ನೂ ಮಾಡಕೂಡದಾಗಿ ರಿಕೆ.

ಸಂ—

ಶ್ರೀ ಗುರುಭ್ಯೋನಮಃ

ಚಳವಳಿಯಿಂದೇನು ಪ್ರಯೋಜನವು?

ಶಿರಾಳಕೊಪ್ಪದ ಟಿ. ಗುರುಶಾಂತಪ್ಪ ಎಂಬುವರು ಸೆಪ್ಟಂಬರ್ 24ನೇ ತಾರೀಖಿನ ಸ್ವಾರ್ ಸಂಚಿಕೆಯಲ್ಲಿ "ವೀರಶೈವಸಮಾಜಬಾಂಧವರೇ" ಎಂಬ ಶಿರೋನಾಮೆಯುಳ್ಳ ಒಂದು ಕುತ್ಸಿತವಾದ ಲೇಖನವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಕುಕಲ್ಪನೆಗಳೂ, ಊಹಾಪೋಹಗಳೂ, ಅಸೂಯೆಯೂ, ಪಕ್ಷಾಂಧತೆಯೂ, ಅವಿಚಾರದ ಶಿಕ್ಷಿತತ್ವವೂ ಕಂಡುಬರುವವಲ್ಲದೆ ನಿಜಾಂಶವು ಎಳ್ಳಷ್ಟೂ ತೋರುವದಿಲ್ಲ. ಶ್ರೀಮಜ್ಜಗದ್ಗುರು ರಂಭಾಪುರೀ ಸಿಂಹಾಸನಾಧೀಶ್ವರರ ಮೇಲೆ ನೀಚವಾದ ಆಕ್ಷೇಪಣೆಗಳನ್ನು ಹೊರಿಸಿ ಪಾಪವನ್ನು ಗಳಿಸಿಕೊಂಡಿರುವರು. ಪುಣ್ಯಭೂಮಿಯೆಂದು ಜಗದ್ವಿಖ್ಯಾತವಾದ ನಮ್ಮ ಭಾರತಭೂಮಿಯ ಜೀವಾಧಾರವಾದ ವೈದಿಕಧರ್ಮದಲ್ಲೊಂದಾದ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಶ್ರೀಮದ್ರೇಣುಕದಾರುಕಾದಿ ಪಂಚಾಚಾರ್ಯರು ಸ್ಥಾಪಿಸಿ ಮಾನವಪ್ರಾಣಿಗೆ ಮೋಕ್ಷೋಪಾಯವನ್ನು ತೋರಿಸಿ ಮಹದುಪಕಾರವನ್ನು ಮಾಡಿದ್ದಾರೆ. ಲೋಕಪ್ರಸಿದ್ಧರಾದ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಧರ್ಮಸಂಸ್ಥಾನವಾದ ರಂಭಾಪುರೀ ಪೀಠಾರೋಹಣಮಾಡಿರುವ ಮಹಾಸ್ವಾಮಿಯವರು ಅಷ್ಟಾವರಣದಲ್ಲೊಂದಾದ ಜಂಗಮವೆಂಬಾವರಣವನ್ನು ತಿರಸ್ಕರಿಸುವರೆಂದು ಇವರು ಬರೆದಿರುವರು; ಅನಾದಿಕಾಲದಿಂದಲೂ ಆಚಾರ್ಯರು ಪ್ರತಿಪಾದಿಸಿರುವ ಅಷ್ಟಾವರಣ ಪಂಚಾಚಾರ, ಷಟ್ಸ್ಥಲಗಳನ್ನು ತಿರಸ್ಕರಿಸುವದು ಸತ್ಯವೇ? ಎಂಬುದನ್ನು ವಾಚಕಮಹಾಶಯರೇ ಊಹಿಸಲಿ.

ಸದರಿ ಸ್ವಾಮಿಯವರಾದರೋ ನಮ್ಮ ವೀರಶೈವ ಸಮಾಜದಲ್ಲಿ ಸದ್ಯದಲ್ಲಿ ನೆಲೆಗೊಂಡಿರುವ ದ್ವೇಷಾಸೂಯೆಗಳನ್ನೂ, ವ್ಯಾಜ್ಯಗಳನ್ನೂ, ಅಶಾಂತಿಯನ್ನೂ ಮುರಿದು ಶಾಂತಿಯನ್ನೂ, ಧರ್ಮವನ್ನೂ ಪುನರುತ್ಥಾಪನಗೊಳಿಸಲು ಅವತರಿಸಿದ ಸಾಕ್ಷಾತ್ ಶ್ರೀ ರೇಣುಕರೆಂದೇ ಹೇಳಿದರೂ ಅತಿಶಯೋಕ್ತಿಯಾಗಲಾರದು. ಇವರು ಅನೇಕವರ್ಷಗಳಕಾಲ ಶ್ರೀ ಕಾಶೀಕ್ಷೇತ್ರದಲ್ಲಿದ್ದು ಶಾಸ್ತ್ರಾಭ್ಯಾಸ ಮಾಡಿರುವದರಿಂದ ಬಹು ಸೂಕ್ಷ್ಮಬುದ್ಧಿಯುಳ್ಳವರಾಗಿದ್ದಾರಲ್ಲದೆ, ದಯಾಸಾಗರರೂ ತಪೋಧನರೂ ದೇಶಾಭಿಮಾನಿಗಳೂ ಆಗಿರುತ್ತಾರೆ. ಇಡೀ ಜಗತ್ತಿನಲ್ಲಿಯೇ ಶಾಂತಿಯನ್ನೂ ಭ್ರಾತೃತ್ವವನ್ನೂ ನೆಲೆಗೊಳಿಸಬೇಕೆಂದು ಸತ್ಸಂಕಲ್ಪಮಾಡಿರುವ ವಿಭೂತಿಗಳೆನಿಸಿರುವ ಮಹಾತ್ಮಾ ಗಾಂಧಿ ಮಹರ್ಷಿ, ರವೀಂದ್ರನಾಥ ಟ್ಯಾಗೋರ್, ರೋಮೈನ್‌ರೋಲೆಂಡ, ಜಾರ್ಜಬರ್ನಾರ್ಡಶಾರವರಂಥ ಉದಾತ್ತವಿಚಾರವುಳ್ಳವರಾದ್ದರಿಂದ ಲೋಕಮಾನ್ಯರಾಗಿದ್ದಾರೆ. ಇದಕ್ಕೆ ಇವರು ಪೀಠಾರೋಹಣ ಮಾಡಿದಕಾಲದಲ್ಲಿ ಮಾಡಿದ ಭಾಷಣವೇ ಸಾಕ್ಷಿಯಾಗಿದೆ. ಕನ್ನಡ, ಸಂಸ್ಕೃತ, ಆಂಧ್ರ, ಹಿಂದೀ ಭಾಷೆಗಳಲ್ಲಿ ಅದ್ಭುತವಾದ ಪಾಂಡಿತ್ಯವುಳ್ಳವರಾಗಿದ್ದಾರೆ. ಇಂಥ ಮಾನನೀಯರಾದ ಗುರೂತ್ತಮರ ಮೇಲೆ ಆಕ್ಷೇಪಣೆಯನ್ನಿಕ್ಕುವದು ಜಗತ್ಸಾಕ್ಷಿಯಾದ ಸೂರ್ಯನನ್ನು ಗೂಗೆಯು ನಿಂದಿಸಿದಂತೆಯೇ ಸರಿ! ಇವರ ಪಾಂಡಿತ್ಯವನ್ನೂ ತೇಜಸ್ಸನ್ನೂ ಅಭ್ಯುದಯವನ್ನೂ ಸಹಿಸಲಾರದ ಕೆಲವು ವಿರಕ್ತರು ತತ್ರಾಪಿ ಹಾನಗಲ್ಲ ವಿರಕ್ತರು, ಟಿ. ಗುರುಶಾಂತಪ್ಪನವರಂಥ ಭಕ್ತರನ್ನು ಹುರಿದುಂಬಿಸಿ, ನಿಂದ್ಯಲೇಖಗಳನ್ನು ಬರೆಯಿಸುತ್ತಿರುವದು ಅವರ ಅಕ್ರಮದೃಷ್ಟಿಯಿಂದ ನೋಡಿದರೆ, ಕೇವಲ ಅನುಚಿತವಾದುದೂ ನಿಂದ್ಯವಾದುದೂ ಆಗಿದೆ. ಹಾರನಹಳ್ಳಿ, ಶಿಕಾರಿಪುರ, ಆನವಟ್ಟಿ ಗ್ರಾಮಗಳ ಸದ್ಭಕ್ತಮಾಹೇಶ್ವರರು ಸನ್ನಿಧಿಯು ಬಿಜಯಂಗೈಸಿದಕಾಲದಲ್ಲಿ ವಹಿಸಿರುವ ಶ್ರದ್ಧಾಭಕ್ತಿಗಳು ಅನುಪಮಗಳಾದವುಗಳೆಂದು ಲೋಕಪ್ರಸಿದ್ಧವಾಗಿದೆ. ನಿಜಸ್ಥಿತಿಯು ಹೀಗಿದ್ದರೂ ಸುಳ್ಳುಸಂಗತಿಗಳನ್ನು ಬರೆಯಿಸುವವರಿಗೇನೆನ್ನಬೇಕು? ಮಹಾಸ್ವಾಮಿಯವರು ಚಳವಳಿಯ ಯಾವಕೆಲಸಕ್ಕೂ ಕೈಹಾಕುವದಿಲ್ಲ. ಲಿಂಗಾನಂದ ತಪೋನಿಷ್ಠರಾದ ಭಗವತ್ಪಾದರಿಗೆ ಚಳವಳಿಯಲ್ಲಿ ಮನಸ್ಸೂ ಇಲ್ಲ ಕಾಲವೂ ಇಲ್ಲ. ಇಂಥ ಸುಳ್ಳು ಸಂಗತಿಯನ್ನು ಪ್ರಕಟಿಸುವದರಿಂದ ಅವರಿಗ ಯಾವ ಪುರುಷಾರ್ಥ ಸಾಧನೆಯಾಗುವದೋ ತಿಳಿಯದಾಗಿದೆ. ತಾವೇ ಅಷ್ಟಾವರಣಾಂತರ್ಗತ ಜಂಗಮಪದವಾಚ್ಯರೆಂತಲೂ, ಗುರುಸ್ಥಲದಮಾಹೇಶ್ವರರು ಗುರುಪದವಾಚ್ಯರೆಂತಲೂ ಹೇಳುತ್ತಿರುವರಷ್ಟೆ! ಜಂಗಮರಾದ ತಾವು, ಗುರುಗಳಾದ ಯಾವ ಮಾಹೇಶ್ವರರ ಸೇವೆಯನ್ನು ಮಾಡಿ ಕೃತಕೃತ್ಯರಾಗಿದ್ದಾರೆ? ಗುರುನಿಂದಕರು ಅಷ್ಟಾವರಣ ಬಾಹ್ಯರಲ್ಲವೇ? ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಚಳವಳಿಯೇ ಇದ್ದಿಲ್ಲವು; ಈ ಮಹಾನುಭಾವರಿಂದಲೇ ಚಳವಳಿಯು ಪ್ರಾರಂಭವಾಗಿ ಉಗ್ರಸ್ವರೂಪವನ್ನು ಹೊಂದಿದೆ. ಇವರ ಚರಿತ್ರೆಯನ್ನು ಬಲ್ಲ ಪ್ರತಿಯೊಬ್ಬರಿಗೂ ಇವರ ಸ್ವಭಾವವು ಗೊತ್ತಿರುತ್ತದೆ. ಇವರು ಶ್ರೀಪರ್ಣ ನಿಜಗುಣಶಿವಯೋಗಿಗಳ ಸದ್ಗ್ರಂಥಗಳಲ್ಲಿ ಅದ್ವಿತೀಯ ಪಂಡಿತರೆಂದು ಜನರಮುಂದೆ ಹೇಳುತ್ತಿರುವರು. ಆದರೆ ಇವರು ಶ್ರೀ ನಿಜಗುಣ ಶಿವಯೋಗಿಗಳವರ "ನಿಂದಿಸಿ ನುಡಿಯದಿರಾರನು" ಎಂಬ ಮೊದಲನೆಯಪದ್ಯದ ಅರ್ಥವನ್ನೇ ಗ್ರಹಿಸಿಕೊಂಡು ಅನುಷ್ಠಾನಕ್ಕೆ ತಂದಂತೆ ತೋರುವದಿಲ್ಲ.

ಇವರು ಮೊದಲು ಹುಬ್ಬಳ್ಳಿ ಸಿದ್ಧಾರೂಢರಲ್ಲಿ ಕೆಲವು ದಿವಸ ಹೋಗಿಬರುವ ರೂಢಿಯನ್ನಿಟ್ಟು ಶ್ರೀ ನಿಜಗುಣ ಶಿವಯೋಗಿಗಳ ಗ್ರಂಥಗಳ ಗೂಢಾರ್ಥವನ್ನು ತಿಳಿದುಕೊಂಡೆನೆಂದು ಹೇಳುತ್ತಿದ್ದು ಆ ಮೇಲೆ ಅವರ ಮೇಲೆಯೇ ಚಳವಳಿಯನ್ನೆಬ್ಬಿಸಿದರಂತೆ! ಅಲ್ಲಿ ಇವರ ಪ್ರಯತ್ನವು ನಿರರ್ಥಕವಾದುದರಿಂದ ತಮ್ಮ ವಿರಕ್ತವರ್ಗದಲ್ಲಿಯೇ ಅಭಿವೃದ್ಧಿಗೆಬಂದು ಖ್ಯಾತಿಯನ್ನು ಸಂಪಾದಿಸಿದವರನ್ನು ನೋಡಿ ಸಹಿಸದೆ, ಅವರಮೇಲೆಯೂ ವಿಷಪ್ರಾಯವಾದ ಚಳವಳಿಯನ್ನು ಜರುಗಿಸಿ ಭಗ್ನಮನೋರಥರಾದರು. ಈಗ ಗುರುವರ್ಗದವರಮೇಲೆ ತತ್ರಾಪಿ ಜಗದ್ಗುರು ಸಿಂಹಾಸನಾಧೀಶ್ವರರಮೇಲೆ ಸುಳ್ಳುದೋಷಗಳನ್ನು ಆಪಾದನೆಮಾಡಿಸುತ್ತಿರುವರು. ಇದೂ ಸಹ ಇವರ ಹಿಂದಿನ ಪ್ರಯತ್ನಗಳಂತೆ ವಿಫಲವಾಗಲು ಸಂಶಯವಿಲ್ಲ. ಇಟಲಿದೇಶದ ನೀರೋ ಎಂಬ ಚಕ್ರವರ್ತಿಯು ರೋಮ್ ಪಟ್ಟಣಕ್ಕೆ ಬೆಂಕಿಯನ್ನು ಹಚ್ಚಿ ಸಮೀಪದ ಗುಡ್ಡದಮೇಲೆ ಕುಳಿತುಕೊಂಡು ಉರಿಯುವ ಪಟ್ಟಣದ ಅಗ್ನಿಜ್ವಾಲೆಯ ಸೌಂದರ್ಯವನ್ನು ಕೊಳಲನ್ನೂದುತ್ತಾ ನೋಡಿ ನೋಡಿ ಆನಂದಪಡುತ್ತಿದ್ದನಂತೆ! ಎಂಬೀ ಚರಿತ್ರವು ಸ್ಮೃತಿಪಥಕ್ಕೆ ಬರುತ್ತದೆ.

ಸಮಾಜದಲ್ಲಿ ಕೋಲಾಹಲವನ್ನೆಬ್ಬಿಸುವದರಿಂದ ಇವರಿಗಾಗುವ ಆನಂದವೇನೋ ತಿಳಿಯದಾಗಿದೆ. ಶಾಸ್ತ್ರಸಿದ್ಧಾಂತಗಳಿಗೂ ನಿಜಸಂಗತಿಗಳಿಗೂ ಅಪಾರ್ಥಗಳನ್ನು ಕಲ್ಪಿಸುವ ಇವರಜಾಣ್ಮೆಗೆ ಎಣೆಯಿಲ್ಲ. ಇವರು ಆಗಲೇ ವಯೋವೃದ್ಧರಾಗಿದ್ದಾರೆ, ಜೀವಾತ್ಮನಿಗೆ ನರಜನ್ಮ ದೊರೆಯುವದು ದುರ್ಲಭ! ಅದರಲ್ಲೂ ಒಂದೇ ಜನ್ಮದಿಂದಲೇ ಮೋಕ್ಷದಾಯಕವಾದ ವೀರಶೈವನಾಗಿ ಹುಟ್ಟುವದು ಅತೀವದುರ್ಲಭವು! ಈ ಮತದಲ್ಲಿ ಮೋಕ್ಷಸಾಧಿಸಲು ತಕ್ಕ ಅನುಕೂಲಗಳು ಹೇರಳವಾಗಿವೆ. ನಮ್ಮ ವೀರಶೈವಧರ್ಮದಲ್ಲಿ ಜನ್ಮವೆತ್ತಿದ ವಿರಕ್ತಮಹಾಶಯರು ಎಂದರೆ, ತೋಂಟದ ಸಿದ್ಧಲಿಂಗಯತೀಶ್ವರರು, ಮರಿತೋಂಟದಾರ್ಯರು, ಸರ್ಪಭೂಷಣ ಶಿವಯೋಗಿಗಳು ಶಿವಪೂಜಾನಿಷ್ಠರಾಗಿಯೂ, ಗುರುಭಕ್ತಿಪರಾಯಣರಾಗಿಯೂ ಶಿವಸಾಯುಜ್ಯವನ್ನೈದಿದರು. ಈ ಮಹಾಪುರುಷರಂತೆ ಇವರೂ ಸಹ ತಪೋನಿಷ್ಠರಾಗಿ ಏಕೆ ಜನ್ಮಸಾರ್ಥಕ ಮಾಡಿಕೊಳ್ಳಬಾರದು? ಸದರಿ ಹಾನಗಲ್ಲರವರ ಸೂತ್ರದ ಗೊಂಬೆಯಂತಿರುವ ಆಡುವ ಮಕ್ಕಳಿಗೆ ಓನಾಮ ಕಲಿಸುವ ಸಾಲಿಮಾಸ್ತರ್‌ಜಿ. ಚನ್ನಮಲ್ಲಪ್ಪನವರು ಯಾವ ಧರ್ಮಶಾಸ್ತ್ರವನ್ನು ಬಲ್ಲವರು? ಇವರು ಬರೆದಿರುವ ಗ್ರಂಥವು ಹೇಗೆ ಪ್ರಮಾಣವಾಗಬಲ್ಲದು? ಸದಸದ್ವಿವೇಕಶಾಲಿಗಳಾದ ವೀರಶೈವ ಮಹನೀಯರೇ! ಇಲ್ಲದ ಉತ್ಪಾತಗಳನ್ನು ಕಲ್ಪಿಸುವವರ ಕಪಟೋಪಾಯಗಳಿಗೆ ಸಿಲ್ಕಿ ಅಪವಾದಕ್ಕೀಡಾಗಬೇಡಿರಿ! ಗುರುಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಿರಿ!!

ಸಜ್ಜನವಿಧೇಯ,
Rajasekharayya Hiremutt,
Yelehole.

ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಸೊರಬ ತಾಲೂಕು ತುಮರಿಕೊಪ್ಪದ ಗ|| ಪ್ರೈ|| ಬಾಯ್ಸ್ ಸ್ಕೂಲಿನಲ್ಲಿ ಜರುಗಿದ ಶ್ರೀ ಗಣಪತಿ ಮಹೋತ್ಸವ.

ಇದೇ ಪ್ರಮವನಾಮ ಸಂ|| ಭಾದ್ರಪದ ಶು| [illegible] (ತಾ|| 31 ೯ 7) ಬುಧವಾರ ಈ ದಿನ ಈ ಸ್ಕೂಲಿನ [illegible] 25 ವರ್ಷ [illegible] ನಡೆಸಿಕೊಂಡು ಬಂದಿರುವುದರಿಂದಲೂ [illegible] ಶ್ರೀ ಕೃಷ್ಣ [illegible] ವರ್ಷದ ಆಕ್ಟೋಬರ್ನಲ್ಲಿ ನಡೆದ [illegible] ಆನಂದೋತ್ಸವದ ಜ್ಞಾಪಕಾರ್ಥ [illegible] ಮಹೋತ್ಸವದ [illegible] ಸಹಾಯಮಾಡಿದ [illegible] ಈ ಮಹೋತ್ಸವದ ಕಾರ್ಯಕ್ಕೆ ಸಹಾಯವಾಗಿದ್ದರಿಂದಲೂ ಮತ್ತು ಈ [illegible] ವೇಟಿನಲ್ಲಿ [illegible] ವಿದ್ಯಾರ್ಥಿಗಳ ಸಹಾಯದಿಂದಲೂ [illegible] ವಿದ್ಯಾರ್ಥಿಗಳ ಪ್ರೋತ್ಸಾಹದಿಂದಲೂ ಇಲ್ಲಿಯ [illegible] ಬಾಯ್ಸ್ ಸ್ಕೂಲ್ [illegible] ಹಸ್ತದಿಂದ [illegible] ವಿನಾಯಕನ [illegible] ನಡೆಸಿ [illegible] ಮೆರವಣಿಗೆಯಲ್ಲಿ [illegible] ಶ್ರೀ ದೇವರ [illegible]

[illegible]

ಪಂಚಾಕ್ಷರ [illegible] ಶ್ರೀ ಜಗದ್ಗುರು [illegible] ಪಂಚಾಚಾರ್ಯ [illegible] ಪ್ರಭಾ [illegible] ಶ್ರೀ ಗಣಪತಿ [illegible] ಆನಂದದಿಂದ [illegible]

ಈ ದಿನ ಈ ಸ್ಕೂಲಿನಲ್ಲಿ ಒಂದು [illegible]

[illegible]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

[illegible] ಈ ಸುಗಂಧ [illegible] ಯೋಗ [illegible] ಈ ನಶ್ಯದ [illegible] ಯಿಂದ [illegible] ಒಂಟಿತಲೆ [illegible] ತಲೆಯಲ್ಲಿನ [illegible] ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾ [illegible] ವ್ಯಾಧಿಗಳು [illegible] ಸಾಧಾರಣ ನಶ್ಯದ [illegible] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆ [illegible] ನಿಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ [illegible]

[illegible] ಜೇ. ಬಿ. [illegible]

[illegible] ಕಂಪನಿ [illegible]

[illegible] SECUI [illegible] MYSO [illegible]

[illegible] ಶಿವಪ್ಪ [illegible]

ಮುದ್ರ[illegible] ಕಾರ್ಯಾಲಯ [illegible]ಂಗಳೂರು.

[illegible]

[illegible] ಸ್ವಾಮಿ [illegible]

Isrthc Buldu

[illegible] ಶ್ರೀ [illegible] ಗುರು [illegible] ಪ್ರಕಟಿಸಲ್ಪಟ್ಟಿತು

REGISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಸಂಚಾರಾನ್ವಿತಪಂಚಶತಪನಿಶರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಗಿರಿಶಶ್ರೀಪಂಚವಕ್ತ್ರೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ ೧೯ ಆಣೆ. ಬಿಡಿ ಪ್ರತಿ ೧ಕ್ಕೆ ೩ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಅಕ್ಟೋಬರ್ ೧೯೨೭ [ಸಂಚಿಕೆ ೨೩

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕರಮಹೋತ್ಸವ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿರಾಳಕೊಪ್ಪವು ವ್ಯಾಪಾರ ಮುಂತಾದ ವಿಷಯಗಳಲ್ಲಿ ಬಹಳ ಘನತೆಗೇರಿದ ಊರಾಗಿದೆ ಆದರೆ ನಮ್ಮ ಮತಸಂಬಂಧವಾದ ಚಳವಳಿಯು ಹುಟ್ಟಿದಾಗಿನಿಂದಲೂ ಅದರ ಗೌರವಕ್ಕೆ ಸ್ವಲ್ಪ ಹಾನಿಬಂದಂತಾಗಿದೆ.

ಇಲ್ಲಿಯವರು ಮೊದಲಿಂದಲೂ ಗುರುಭಕ್ತಿಯಲ್ಲಿ ಮೂಲನಿರತರು ಪದ್ಧತಿಯಮೇರಗ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶರ ದಸರಾಮಹೋತ್ಸವವು ನಮ್ಮ ಪ್ರಾಂತವಾದ ಆನವಟ್ಟಿಯಲ್ಲಿ ನಡೆದುದರಿಂದ ಇಲ್ಲಿಯ ಬಹುಜನಗಳು ಶ್ರೀ ಗುರುದರ್ಶನಮಹೋತ್ಸವದಲ್ಲಿ ಭಾಗಿಗಳಾಗಿದ್ದುದಲ್ಲದೆ ಊರಿನ ಪ್ರಮುಖರಾದ ಶ್ರೀಯುತ ಶಿವಯ್ಯನವರೇ ಮುಂತಾದವರು ಶ್ರೀ ಜಗದ್ಗುರು ರಂಭಾಪುರೀ ಸಿಂಹಾಸನಾಧೀಶರ ಭಾವಚಿತ್ರದ ಉತ್ಸವವನ್ನು ನೆರವೇರಿಸಬೇಕೆಂದು ಸಂಕಲ್ಪಿಸಿ ಊರನ್ನೆಲ್ಲಾ ತಳಿರುತೋರಣಗಳಿಂದಲಂಕೃತಗೊಳಿಸಿ ನಾನಾವಿಧವಾದ ವಾದ್ಯವೈಭವದೊಂದಿಗೆ ವೀರಶೈವಮತಸ್ಥಾಪನಾಚಾರ್ಯರಾದ ಜಗದ್ಗುರುಗಳ ಭಾವಚಿತ್ರವನ್ನು ಭಾವಾಲಿಗೆಗೆಂದಲಂಕೃತವಾದ ಪಲ್ಲಕ್ಕಿಯೊಳಗೆ ಮೂರ್ತಮಾಡಿ ಸಮಸ್ತ ಭಕ್ತಮಹಾಶಯರು ಜಯಧ್ವನಿಯನ್ನು ಮಾಡುತ್ತಾ ನಂದೀಶ್ವರ ದೇವಾಲಯದಿಂದ ವಿಜಯದಶಮಿ ದಿನ ರಾತ್ರಿ 7 ಘಂಟೆಗೆ ಉತ್ಸವವು ಹೊರಟು ಎಲ್ಲಾ ಕೇರಿಯಲ್ಲಿಯೂ ಹೋಗಿ ಬಹುಹೊತ್ತಿಗೆ ಸ್ವಸ್ಥಾನವನ್ನು ಸೇರಿದಬಳಿಕ ಪುರಜನಗಳೆ ಆಚಾರ್ಯಪ್ರಸಾದವನ್ನು ಪಡೆದು ಧನ್ಯಜೀವಿಗಳಾದರು.

ಶಿವ ಪ್ರೇಕ್ಷಕ

ಗೋವಧಾ ನಿರೋಧ

ನಮ್ಮ ಮೈಸೂರ ರಾಜ್ಯದಲ್ಲಿ ಗೋವುಗಳನ್ನು ವಧಿಸಲಾಗದೆಂಬ ವಿಷಯದಲ್ಲಿ ಅನೇಕ ವರ್ಷಗಳಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದು ಲೋಕೋ ಭಿನ್ನರುಚಿಃ ಎಂಬುಕ್ತಿಗನುಸಾರವಾಗಿ ಸಭೆಯಲ್ಲಿ ಏಕಾಭಿಪ್ರಾಯವುಂಟಾಗದೆ ದ್ವಿಪಕ್ಷವುಂಟಾಗಿದ್ದುದರಿಂದ ಸರಕಾರದವರು ಸಂದಿಗ್ಧವಾದ ಈ ವಿಷಯವನ್ನು ನಿರ್ಣಯ ಮಾಡುವದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿ ಇಟ್ಟಿದ್ದರು. ಕೇಳು ಮೈಸೂರು ದೇಶದ ಜನತೆಯು ಈ ವರ್ಷದ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಗೋವಧಾ ನಿರೋಧದ ಹುಕುಂ ಆಗುವದೆಂದು ಚಾತಕಪಕ್ಷಿಯು ಮೇಘವನ್ನು ನಿರೀಕ್ಷಿಸಿಕೊಂಡಿರುವಂತೆ ನಿರೀಕ್ಷಿಸಿಕೊಂಡಿದ್ದರು. ಆದರೂ ಮನಸ್ಸಿಗೆ ಸಮಾಧಾನವಿಲ್ಲದೆ ಶೀಘ್ರವಾಗಿ ಗೋವಧಾ ನಿರೋಧದ ಹುಕುಮನ್ನು ಕೇಳಿ ಆನಂದಪಡಬೇಕೆಂಬ ಅಭಿಲಾಷೆಯಿಂದ ಈ ಸಾರೆಯೂ ಅನೇಕರು ಈ ಪ್ರಶ್ನೆಯನ್ನು ಹಾಕಿದರು. ಇದಕ್ಕೆ ಸರ್ಕಾರದವರು ಕಮಿಟಿಯಿಂದ ತೀರ್ಮಾನವಾಗಿ ಬಂದಮೇಲೆ ಈ ವಿಷಯವು ನಿರ್ಣಯವಾಗಬಹುದೆಂದು ಅಪ್ಪಣೆ ಮಾಡಿದರು. ಇದರಿಂದ ಆಸ್ತಿಕ ಮಹಾಶಯರ ಕುತೂಹಲವು ಸಫಲಕ್ಕೆ ಬಾರದೆ ಇರುವುದರಿಂದ ಆಶೆಯು ನಿರಾಶೆಯಾಯಿತು. ಈ ಗೋವಧಾ ನಿರೋಧದ ಹುಕುಂ ಅನೇಕ ರಾಷ್ಟ್ರಗಳಲ್ಲಿ ಮಾಡಿರುವುದಲ್ಲದೆ ಹಿಂದೂ ಮಹಮ್ಮದೀಯ ರಾಷ್ಟ್ರಗಳಲ್ಲಿಯೂ ನಾಡ ಗೋವು ಪವಿತ್ರವಾದ ವಸ್ತು ಇದನ್ನು ವಧಿಸುವುದು ಉಚಿತವಲ್ಲವು ಎಂದು ತೀರ್ಮಾನ ಮಾಡಿದ್ದಾರೆ. ಗೋವನ್ನು ದೇವಸ್ವರೂಪವೆಂದು ತಿಳಿದು ಪೂಜಿಸುತ್ತಿರುವ ಭರತಖಂಡದಲ್ಲಿ ಇಂತಹ ಪವಿತ್ರವಾದ ಗೋವಧಾ ನಿರೋಧದ ನಿರ್ಣಯವು ಇನ್ನೂ ರೂಢಿಗೆ ಬರಲಿಲ್ಲವೆಂದರೆ ಭರತಖಂಡದ ಏಕದೇಶವೆನಿಸಿದ ಮೈಸೂರು ರಾಜ್ಯದಲ್ಲಿ ವಾಸವಾಗಿರುವ ಜನಗಳ ಬುದ್ಧಿಯ ವಿಚಾರ ಶಕ್ತಿಯನ್ನು ಏನೆಂದು ಹೇಳಬೇಕು?

ಆದರಲ್ಲೂ ನಮ್ಮ ಸ್ವಾಮಿಯವರ ಮಹಾಪ್ರಭುವರ್ಯರಾದರೂ ಗೋವು ಪವಿತ್ರವಾದ ದೇವತಾಸ್ವರೂಪವೆಂದು ಅಹೋರಾತ್ರಿಯಲ್ಲಿಯೂ ಗೋಮಾತೆಯನ್ನು ಧ್ಯಾನಿಸುತ್ತಿರುವರು. ಇಂತಹ ಆಸ್ತಿಕ ಚಕ್ರವರ್ತಿಗಳಾದ ಪ್ರಭುಗಳ ಮೇಲ್ಪಂಕ್ತಿಯನ್ನು ಪ್ರಭುಗಳ ಆಳಿಕೆಗೆ ಸಂಬಂಧಪಟ್ಟ ಪ್ರಜೆಗಳೆಲ್ಲರೂ ಏಕಮತದಿಂದ ಯಥಾ ರಾಜಾ ತಥಾ ಪ್ರಜಾಃ ರಾಜನ ಸದ್ಗುಣಗಳನ್ನು ಪ್ರಜೆಗಳು ಅನುಸರಿಸುವುದು ಪ್ರಜಾಧರ್ಮವಾಗಿರುವುದರಿಂದ ಇನ್ನು ಮೇಲಾದರೂ ಪ್ರಜೆಗಳಲ್ಲಿ ಬಹು ಕಾಲದಿಂದ ಬೇರೂರಿ ನಿಂತಿರುವ ಈ ವಿಷಯಕವಾದ ಭಿನ್ನಭಾವಗಳನ್ನು ದೂರಮಾಡಿ ಸರಕಾರದವರಿಂದ ನಿಯಮಿಸಲ್ಪಟ್ಟ ಕಮಿಟಿಯವರು ಸರ್ವಾನುಮತದಿಂದ ಗೋವಧಾ ನಿರೋಧ ರೂಪವಾದ ನಿರ್ಣಯವನ್ನು ಮಾಡುವುದಲ್ಲದೆ ಮುಂದಾಲೋಚನೆಯುಳ್ಳವರಾಗಿ ಅನೇಕ ವರ್ಷಗಳಿಂದ ಬಂದಿರುವ ಈ ದೀರ್ಘ ಸಮಸ್ಯೆಯನ್ನು ಪೂರ್ಣ ಮಾಡಿದರೆ ಆಸ್ತಿಕ ಪ್ರಜೆಗಳಿಗೆ ಸಂತೋಷವುಂಟಾಗುವುದು. ಆದುದರಿಂದ ಕಮಿಟಿಯವರೆಲ್ಲರೂ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ತ್ಯಜಿಸಿ ವಿಚಾರ ದೃಷ್ಟಿಯಿಂದಾಗಲಿ ಭರತಖಂಡದಲ್ಲಿ ವಾಸಮಾಡಿದ ಕೃತಜ್ಞತೆಯಿಂದಾಗಲಿ ಗೋವಧಾ ನಿರೋಧದ ರೂಪವಾದ ನಿರ್ಣಯದಲ್ಲಿಯೇ ಆಸಕ್ತ ಮನಸ್ಕರಾಗುವಂತೆ ಭಗವಂತನು ಪ್ರೇರಿಸಲೆಂದು ಹಾರೈಸುತ್ತೇವೆ.

ಶ್ರೀ ೧೦೮ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅನ್ನಸಂತರ್ಪಣ.

ದಾವಣಗೆರೆ ಟವನ್ ಹಿರೇಮಠದ ಪಟ್ಟಾಧ್ಯಕ್ಷ ಶಿವಾಚಾರ್ಯ ಶ್ರೀ ಮಹಾಲಿಂಗಸ್ವಾಮಿಗಳವರು ಸದರಿ ಟವನ್ ಹಳೇಪೇಟೆಯಲ್ಲಿರುವ ತಮ್ಮ ಶಾಖಾ ಮಠದಲ್ಲಿ ನಾಲ್ವತ್ತು ಐವತ್ತು ವರುಷಗಳಿಂದಲೂ ಪ್ರತಿವರ್ಷ ಶ್ರಾವಣಮಾಸ ಒಂದುತಿಂಗಳ ನಿತ್ಯವೂ ಭಕ್ತಮಾಹೇಶ್ವರರಿಗೆ ದಾಸೋಹವನ್ನು ನಡಸುತ್ತಿದ್ದು ಈಗ ಹತ್ತು ಹನ್ನೆರಡು ವರುಷಗಳ ಕೆಳಗೆ ಸದರಿ ಶ್ರೀಗಳವರು ಲಿಂಗೈಕ್ಯರಾದಾಗ್ಯೂ ಸದರಿ ಶ್ರೀಗಳವರ [illegible] ಗುರುವಾತ್ಸಲ್ಯಪರಿಪೂರ್ಣ ಧುರಂಧರ ವೇ|| ಮಹಾಲಿಂಗಪ್ಪಯ್ಯನವರು ಶ್ರೀಗಳವರು ನಡೆಸಿಕೊಂಡಿದ್ದ ಈ ಮಹತ್ಕಾರ್ಯವನ್ನು ನಿಲ್ಲಿಸದೆ ಶ್ರೀಗಳವರ ಅನುಜ್ಞೆಯನ್ನು ಶಿರಸಾವಹಿಸಿ ನಡೆಯಿಸುತ್ತಾ ಬಂದಿರುವದು ತುಂಬಾ ಸ್ತೋತ್ರಾರ್ಹವಾದ ವಿಷಯವಾಗಿದೆ. ಅಲ್ಲದೆ ಯಾವತ್ತು ಭಕ್ತಮಾಹೇಶ್ವರರು ಈ ವರ್ಷ ಮೊದಲಿಗಿಂತಲೂ ಹೆಚ್ಚಾಗಿ ಉತ್ಸಾಹಶಾಲಿಗಳಾಗಿ ತನುಮನಧನಗಳಿಂದ ಸಹಾಯಮಾಡಿ ಅತಿವೈಭವದಿಂದೀದಾಸೋಹವನ್ನು ನೆರವೇರಿಸಿದ ಸಂತೋಷಾರ್ಥವಾಗಿ ಸದರಿ ಮಹಾಲಿಂಗಪ್ಪಯ್ಯನವರು ಪಂಚಾಚಾರ್ಯ ಪ್ರಭಾಪತ್ರಿಕೆಯ ಪೋಷಣಕ್ಕಾಗಿ ಕಳುಹಿಸುವ (೫೦೦) ಐದು ರೂಪಾಯಿಗಳನ್ನೂ ಮತ್ತು ಸದರಿಯವರ ಪ್ರೋತ್ಸಾಹದಿಂದ ದಾವಣಗೆರೆ ಟೌನ್ ವಾ|| ಮ|| ರಾ|| ತೀಳವಳ್ಳಿ ನಾಗಪ್ಪನವರ ಮಗಳ ಹೆಸರುವೀಳ್ಯ ಕಾರ್ಯದಲ್ಲಿ ತೆಗೆದಿದ್ದ (೧೦೦) ವರಹ ಬಾಬ್ತು ದಾವಣಗೆರೆ ಟವನ್ ವಾ|| ಮಂಗಾನಹಳ್ಳಿ ಮುರಿಗಪ್ಪನವರಿಂದ (೧೦೦) ಒಮ್ಮೆ ಎರಡು ರೂಪಾಯಿಗಳು ಒಟ್ಟು (೭೦೦) ಏಳು ರೂಪಾಯಿಗಳನ್ನು ಸಂಪಾದಕರು ಆದರದಿಂದ ಸ್ವೀಕಾರಮಾಡಿಕೊಂಡು ಕೋರುತ್ತೇನೆ. ದಯಾಮಯನಾದ ಶ್ರೀ ಜಗದ್ಗುರು ರೇಣುಕರು ಯಾವತ್ತು ಭಕ್ತ ಮಾಹೇಶ್ವರರಿಗೆ ಇಂಥ ಸತ್ಕಾಲಕ್ಷೇಪವನ್ನು ನಿತ್ಯ ಮಾಡುವಂತೆ ಸಹಾಯ ಮಾಡುವ ಸದ್ಬುದ್ಧಿಯನ್ನಿತ್ತು ಸದರಿ ಮಹಾಲಿಂಗಪ್ಪಯ್ಯನವರಾದಿಯಾಗಿ ಸರ್ವರನ್ನೂ ಕೃತಾರ್ಥರನ್ನಾಗಿ ಮಾಡಲೆಂದು ಹಾರೈಸುತ್ತೇನೆ.

ತೀಳವಳ್ಳಿ ಶೆಟ್ರು ನಂಜುಂಡಪ್ಪ
ದಾವಣಗೆರೆ

ಸೂಚನೆಯು

ದಸರಾ ಮಹೋತ್ಸವ ನಿಮಿತ್ತವಾಗಿ ಉತ್ಸವದ ಸಂಬಂಧಗಳಾದ ಲೇಖನಗಳು ವಿಶೇಷವಾಗಿ ಬಂದಿರುವದರಿಂದ ಸ್ಥಳಾಭಾವದಿಂದ ಮುದ್ರಿಸಲಿಕ್ಕೆ ಅನುಕೂಲವಾಗಲಿಲ್ಲವೆಂಬ ವಿಷಯವನ್ನು ಲೇಖಕರು ತಿಳಿಯತಕ್ಕದ್ದು —ಸಂ

ಬೆಂಗಳೂರು ಸಿಟಿ ಪೇಟೆ ಎಂಪೈರ್ ಸ್ಟೋರ್ಸಿನ ವೀರಶೈವಮಹಾಜನಗಳು 27-9-1927 ನೇ ತಾರೀಖು ಮಧ್ಯಾಹ್ನ 4 ಗಂಟೆಯಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು, ಕೆ.ಟಿ.ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮಾಡಿದ

ತೀರ್ಮಾನಗಳು

ಸಭೆಯಲ್ಲಿ ಕೆಳಗಿನ ಎಲ್ಲಾ ದೊಡ್ಡಮನುಷ್ಯರೂ ಹಾಜರಿದ್ದರು

1 ಈ ದಿವಸ ಬೆಂಗಳೂರು ವೀರಶೈವಮಹಾಜನಗಳು ಸಭೆ ಸೇರಬೇಕೆಂಬದಾಗಿ ಪ್ರಕಟಿಸಿದ್ದ 20-9-27ನೇ ತಾರೀಖಿನ ನೋಟೀಸನ್ನು ಮ|| ರಾ|| ಎಂ ನಾಗಪ್ಪನವರು ಓದಿ ತಿಳಿಸಿದರು

ಬೆಂಗಳೂರಿನಲ್ಲಿ 1927ನೇ ಡಿಸೆಂಬರ್ ತಿಂಗಳಿನಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯನ್ನು ನಡೆಯಿಸುವ ಬಗ್ಗೆ ಬೇಕಾದ ಏರ್ಪಾಟುಗಳ ವಿಷಯವನ್ನು ಆಲೋಚಿಸುವುದೇ ಈ ಸಭೆಯ ಉದ್ದೇಶವೆಂಬದಾಗಿ ಅಧ್ಯಕ್ಷರು ತಿಳಿಸಿದರು

2 ಅಖಿಲಭಾರತ ವೀರಶೈವಮಹಾಸಭಾ [illegible] ಮಂಡಳಿಯ ಕಾರ್ಯನಿರ್ವಾಹಕ ಸಂಘದವರು ತಾ|| 29-8-27 ರಲ್ಲಿ ಸೇರಿ ಮಾಡಿದ ತೀರ್ಮಾನಗಳ ನಕಲನ್ನು ಸದರಿ ಮಂಡಳಿ ಸೆಕ್ರೆಟರಿಯವರು ಕಳುಹಿಸಿದ 14-9-27ನೇ ತಾರೀಖಿನ ಕಾಗದ ಓದಲಾಯಿತು. ಸದರಿ ಮಂಡಳಿಯವರು ಅಖಿಲಭಾರತ ವೀರಶೈವಮಹಾಸಭೆಯನ್ನು ಬೆಂಗಳೂರಿನಲ್ಲಿ ನಡೆಯಿಸುವ ಬಗ್ಗೆ ಉಪಕಾರಮನಸ್ಸಿನಿಂದ 1,000 ರೂಪಾಯಿಗಳು ಮಂಜೂರ್ ಮಾಡುವುದನ್ನು ಸ್ವೀಕರಿಸುವುದಲ್ಲದೆ ಈ ಮಂಡಳಿಯ ಔದಾರ್ಯತೆಗೆ ಬೆಂಗಳೂರು ವೀರಶೈವಮಹಾಜನಗಳ ವಂದನೆಯನ್ನು ಅರ್ಪಿಸತಕ್ಕದ್ದೆಂಬದಾಗಿ ತೀರ್ಮಾನಿಸಲ್ಪಟ್ಟಿತು.

3. 1927ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಅಖಿಲಭಾರತ ವೀರಶೈವಮಹಾಸಭೆಯನ್ನು ಬೆಂಗಳೂರಿನಲ್ಲಿ ಸೇರಿಸತಕ್ಕದ್ದೆಂದು ಮ|| ರಾ|| ಸಿದ್ದಬಸಪ್ಪಸೆಟ್ಟರು ಸೂಚಿಸಿದ್ದಕ್ಕೆ ಮ|| ರಾ|| ಪಿ ಎಂ ಬಸಪ್ಪನವರು ಅನುಮೋದಿಸಿದ್ದು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು

4 10ನೆಯ ಅಖಿಲಭಾರತ ವೀರಶೈವಮಹಾಸಭೆಯ ಕೋಶಾಧ್ಯಕ್ಷರ ಹೆಸರಿಗೆ ಮೈಸೂರುಬ್ಯಾಂಕಿನ ಬಳಿ ಲೆಕ್ಕಕ್ಕೆ 4000 ರೂಪಾಯಿಗಳನ್ನು ಜಮಾಕಟ್ಟತಕ್ಕದ್ದಾಗಿ [illegible] ಕಾರ್ಯನಿರ್ವಾಹಕ ಸಂಘದವರನ್ನು ನ್ಯಾಮಿಸತಕ್ಕದ್ದೆಂದು ಮ|| ರಾ|| ಎಂ ನಾಗಪ್ಪನವರು ಸೂಚಿಸಿದ್ದನ್ನು ಡ್ಯಾಕ್ಟರ್ ವೈ ವಿಶ್ವನಾಥಯ್ಯನವರು ಅನುಮೋದಿಸಿದರು ಸರ್ವಾನುಮತದಿಂದ ಒಪ್ಪಲ್ಪಟ್ಟಿತು

5. ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ ಪಿ ಪುಟ್ಟಣ್ಣಸೆಟ್ಟರು ಕೆ.ಟಿ.ಸಿ.ಐ.ಇ, ಯವರು ಸ್ವಾಗತಸಂಘದ ಪ್ರೆಸಿಡೆಂಟರಾಗಿರಬೇಕೆಂದು ಮ|| ರಾ|| ಜಿ ಪರಮಶಿವಯ್ಯನವರು ಸೂಚಿಸಿದ್ದನ್ನು ಡ್ಯಾಕ್ಟರ್ ವೈ. ವಿಶ್ವನಾಥಯ್ಯನವರು ಅನುಮೋದಿಸಿದರು. ಸರ್ವರೂ ಒಪ್ಪಿದರು

6. ಮ|| ರಾ|| ಪಿ ಎಂ ಬಸಪ್ಪನವರು ಸ್ವಾಗತಸಂಘದ ಉಪಾಧ್ಯಕ್ಷರಾಗಿರಬೇಕೆಂದು ಮ|| ರಾ|| ಎಂ ನಾಗಪ್ಪನವರು ಸೂಚಿಸಿದ್ದನ್ನು ಮ|| ರಾ|| ಟಿ ರಾಚಪ್ಪನವರು ಅನುಮೋದಿಸಿದರು ಎಲ್ಲರೂ ಒಪ್ಪಿದರು.

7. ಮ|| ರಾ|| ಗಳಾದ ಎಂ ನಾಗಪ್ಪನವರು ಮತ್ತು ಟಿ. ಸಂಗಪ್ಪನವರು ಕಾರ್ಯದರ್ಶಿಗಳಾಗಿರಬೇಕೆಂದು ಮ|| ರಾ|| ದೇವರ ಸಿದ್ದಬಸಪ್ಪಸೆಟ್ಟರು ಸೂಚಿಸಿದರು ಮ|| ರಾ|| ಜಿ ಸಿದ್ದವೀರಪ್ಪನವರು ಅನುಮೋದಿಸಿದರು ಎಲ್ಲರೂ ಒಪ್ಪಿದರು

. ಮ|| ರಾ|| ಎಸ್ ಶಿವಪ್ಪನವರು ಕೋಶಾಧ್ಯಕ್ಷರಾಗಿರಬೇಕೆಂದು ಮ|| ರಾ|| ಜಿ ಪರಮಶಿವಯ್ಯನವರು ಸೂಚಿಸಿದ್ದನ್ನು ಮ|| ರಾ|| ದೇವರ ಬುಜವಾರ್ ಪುಟ್ಟಪ್ಪನವರು ಅನುಮೋದಿಸಿದರು ಎಲ್ಲರೂ ಒಪ್ಪಿದರು

9 ಮಹಾಸಭಾ ಖರ್ಚಿಗೆ 10ರೂ ಗೆ ಕಡಿಮೆಯಿಲ್ಲದೆ ಸಹಾಯಮಾಡತಕ್ಕವರೆಲ್ಲರನ್ನೂ ಸ್ವಾಗತಸಂಘದ ಸದಸ್ಯರನ್ನಾಗಿ ಸೇರಿಸಿಕೊಳ್ಳಬೇಕೆಂತಲೂ ಮತ್ತು ಪ್ರತಿನಿಧಿಗಳಿಗೆ 5 ರೂಪಾಯಿ ಎಂತಲೂ, ಪ್ರೇಕ್ಷಕರಿಗೆ 2 ರೂಪಾಯಿಯೆಂತಲೂ ಫೀಯನ್ನು ಇಡಬೇಕೆಂದು ಮ|| ರಾ|| ಜಿ. ಪರಮಶಿವಯ್ಯನವರು ಸೂಚಿಸಿದರು ಮ|| ರಾ|| ಕೆ ಶಿವಪ್ಪನವರು ಅನುಮೋದಿಸಿದರು ಇದಕ್ಕೆ ಎಲ್ಲರೂ ಒಪ್ಪಿಗೆಯನ್ನಿತ್ತರು

10 ಈ ಕೆಳಗೆಕಂಡ ದೊಡ್ಡಮನುಷ್ಯರುಗಳು ಸ್ವಾಗತಸಂಘದ ಸದಸ್ಯರಾಗಿರಬೇಕೆಂತಲೂ ಅಲ್ಲದೆ ಇತರರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಧಿಕಾರವುಳ್ಳವರಾಗಿಯೂ ಇರಬೇಕೆಂದು ಮ|| ರಾ|| ಜಿ ರುದ್ರಪ್ಪನವರು ಸೂಚಿಸಿದರು ಮ|| ರಾ|| ಟಿ. ಎಸ್. ಚನ್ನಪ್ಪನವರು ಅನುಮೋದಿಸಿದರು ಎಲ್ಲರೂ ಒಪ್ಪಿದರು

ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ ಪಿ ಪುಟ್ಟಣ್ಣಸೆಟ್ಟರು ಕೆ ಟಿ ಸಿ ಐ ಇ ಯವರು
ಮ|| ರಾ|| ಗಳಾದ ಎಸ್ ಶಿವಪ್ಪನವರು
,, ಪಿ ಎಂ ಬಸಪ್ಪನವರು
ಮ|| ರಾ|| ಗಳಾದ ಎಂ ನಾಗಪ್ಪನವರು
ಟಿ ಸಂಗಪ್ಪನವರು
ಡಿ ಆರ್ ಚಿಕ್ಕಚನ್ನಂಜಪ್ಪಸೆಟ್ಟರು
[illegible]
ಜಿ ಪರಮಶಿವಯ್ಯನವರು
ಟಿ ರಾಚಪ್ಪನವರು
[illegible]
[illegible]
[illegible]
[illegible]
[illegible]
ಎಸ್ ಚನ್ನಬಸಪ್ಪನವರು
ಮು ಎಸ್ ಕಾಳಪ್ಪನವರು
ಜಿ ರುದ್ರಪ್ಪನವರು
ಕೆ ಶಿವಪ್ಪನವರು
ಮಂಡಿ ಎಸ್ ರುದ್ರಯ್ಯನವರು
ಸರಾಫ್ ಬಿ ಬಸಪ್ಪನವರು
ಕೆ [illegible] ನವರು
ಕೆ [illegible] ನವರು
ಬಿ ಎಸ್ ಬಿಜ್ಜಣ್ಣನವರು
[illegible] ನವರು
ನಾವಂದಸೆಟ್ಟರು
ದೇವಣ್ಣ ರುದ್ರಪ್ಪನವರು
ಪ್ರಂ|| ಅಂ|| ಗುರುಸಿದ್ದಪ್ಪನವರು
ಟಿ ಆರ್ ಶಿವಪ್ಪನವರು
ಎಸ್ ಬಸಟ್ಟಪ್ಪನವರು
ಬುಜವಾರ್ ವೀರಪ್ಪನವರು
ಜಿ ಕೆ [illegible]
ಎಸ್ [illegible] ನವರು
ಪಂಡಿತ ರೇವಣಾರಾಧ್ಯರು
ಜಿ ಸಿದ್ದವೀರಪ್ಪನವರು
[illegible] ಮುಮ್ಮಡಿ ವೀರಪ್ಪನವರು
ಕೆ ಎ [illegible] ಸೆಟ್ಟರು
ಸಿ ಸಿ [illegible] ಪ್ಪನವರು
[illegible] ನವರು
[illegible] ನವರು
[illegible] ಶಿವಪ್ಪನವರು
[illegible] ನವರು
ಜಿ ಶಿವಪ್ಪನವರು
[illegible] ಗಪ್ಪನವರು
[illegible] ಲಿಂಗಪ್ಪ ಮಲ್ಲಪ್ಪನವರು
ದೇವರ [illegible] ಸೆಟ್ಟರು
ದೇವರ [illegible] ಪುಟ್ಟಪ್ಪನವರು
[illegible] ನವರು
ಟಿ [illegible] ನವರು
ಬಿ [illegible] ನವರು
ಪಿ ಎಸ್ [illegible] ನವರು
ವಿ [illegible] ನವರು
ಬುಜವಾರ್ [illegible] ನವರು
ಕೆ [illegible] ನವರು
ಬಿ [illegible] ನವರು
ಎ [illegible] ನವರು
ಬಿ [illegible] ನವರು
ಉರಿಕೊಂಡ ಚನ್ನಬಸಪ್ಪನವರು
[illegible] ಬಸಪ್ಪನವರು
[illegible]
ಗುರುವಿನ [illegible]
ಶಿವನಾಗಪ್ಪ [illegible] ನವರು
[illegible] ನವರು
[illegible] ನವರು
[illegible]

11 ಮಹಾಸಭೆಯು ಕಾರ್ಯನಿರ್ವಾಹಕಸಂಘಕ್ಕೆ (Working Committee) ಎಕ್ಸ್ ಅಫಿಷಿಯೋ ಮೆಂಬರುಗಳಲ್ಲದೆ ಈ ಕೆಳಗೆಕಂಡ ದೊಡ್ಡಮನುಷ್ಯರುಗಳು ಮೆಂಬರುಗಳಾಗಿರತಕ್ಕದ್ದೆಂದು ಮ|| ರಾ|| ಪಿ ಎಂ ಬಸಪ್ಪನವರು ಸೂಚಿಸಿದ್ದನ್ನು ಮ|| ರಾ|| ನಾಗಪ್ಪನವರು ಅನುಮೋದಿಸಿದರು ಎಲ್ಲರೂ ಒಪ್ಪಿದರು

ಮ|| ರಾ|| ಗಳಾದ ದೇವರ ಸಿದ್ದಬಸಪ್ಪನವರು
,, ದೇವರ ಬುಜವಾರ್ ಪುಟ್ಟಪ್ಪನವರು
,, ಡ್ಯಾಕ್ಟರ್ ವೈ ವಿಶ್ವನಾಥಯ್ಯನವರು
,, ಕೆ ಶಿವಪ್ಪನವರು
,, ಸರಾಫ್ ಬಿ ಬಸಪ್ಪನವರು
,, ಟಿ ರಾಚಪ್ಪನವರು
,, [illegible] ರುದ್ರಪ್ಪನವರು
,, ಟಿ ಎಸ್ ಚನ್ನಪ್ಪನವರು
,, ನಾವಂದಸೆಟ್ಟರು
,, ಇ ಯಲ್ಲಪ್ಪಸೆಟ್ಟರು
,, ಮು ಎಸ್ ಕಾಳಪ್ಪನವರು
ಮ|| ರಾ|| ಗಳಾದ ಜಿ ಗಂಗಪ್ಪನವರು
,, ಬಾಣಾವಾರದ ಪುಟ್ಟಪ್ಪನವರು
,, ಶೆಟ್ಟರ ಗುರುಸಿದ್ದಪ್ಪನವರು
,, ಎಚ್ ಚನ್ನಪ್ಪನವರು
,, ಬುಜವಾರ್ ಮಾದಪ್ಪನವರು
,, ಜಿ. ಸಿದ್ದವೀರಪ್ಪನವರು
,, ಎಸ್ ಬಸಟ್ಟಪ್ಪನವರು
,, ಮಂಡಿ ಎಸ್. ರುದ್ರಯ್ಯನವರು
,, ಕೆ ನಂಜುಂಡಪ್ಪನವರು

ಈ ಕೆಳಗೆಕಂಡ ದೊಡ್ಡಮನುಷ್ಯರುಗಳು ಅವರ ಹೆಸ ಮುಂದೆ ಸೂಚಿಸಿರುವಷ್ಟು ಮೊಬಲಗನ್ನು ಚಂದಾ ಕೊ ವಾಗ್ದಾನಮಾಡಿರುತ್ತಾರೆ.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರು ಕೆ.ಟಿ.ಸಿ.ಐ.ಇ. ಯವರು ...	ರ 10
ಮ|| ರಾ|| ಗಳಾದ ಪಿ. ಎಂ. ಬಸಪ್ಪನವರು ..	50
,, ಡಿ. ಆರ್. ಚಿಕ್ಕಚನ್ನಂಜಪ್ಪಸೆಟ್ಟರು ..	100
,, ಇ. ಯಲ್ಲಪ್ಪಸೆಟ್ಟರು ..	100
,, ಜಿ. ಪರಮಶಿವಯ್ಯನವರು	50
,, ಟಿ. ರಾಚಪ್ಪನವರು ..	50
,, ಉರಿಕೊಂಡ ಚನ್ನಬಸಪ್ಪನವರು ..	25
,, ಡ್ಯಾಕ್ಟರ್ ವೈ. ವಿಶ್ವನಾಥಯ್ಯನವರು .	20
,, ಎಂ. ನಾಗಪ್ಪನವರು	50
,, ಎಸ್. ಚನ್ನಬಸಪ್ಪನವರು	25
,, ಮು. ಎಸ್. ಕಾಳಪ್ಪನವರು ...	30
,, ಜಿ. ರುದ್ರಪ್ಪನವರು ...	100
,, ಕೆ. ಶಿವಪ್ಪನವರು ...	50
,, ಮಂಡಿ ಎಸ್. ರುದ್ರಯ್ಯನವರು ...	50
,, ಸರಾಫ್ ಬಿ. ಬಸಪ್ಪನವರು ...	25
,, ಬಿ ಎಸ್. ಬಿಜ್ಜಣ್ಣನವರು	20
,, ನಾವಂದಸೆಟ್ಟರು ..	15
,, ದೇವಣ್ಣ ರುದ್ರಪ್ಪನವರು ...	30
,, ಪ್ರಂ|| ಅಂ|| ಗುರುಸಿದ್ದಪ್ಪನವರು ..	25
,, ಟಿ ಆರ್. ಶಿವಪ್ಪನವರು ...	25
,, ಎಸ್. ಬಸಟ್ಟಪ್ಪನವರು ..	25
,, ಬುಜವಾರ್ [illegible] ನವರು	25
,, ಜಿ. ಕೆ. ರುದ್ರಾರಾಧ್ಯರು ..	20
,, ಪಂಡಿತ ರೇವಣಾರಾಧ್ಯರು ..	50
,, ಜಿ. ಸಿದ್ದವೀರಪ್ಪನವರು .	10
,, ಟಿ. ಮುಮ್ಮಡಿವೀರಪ್ಪನವರು ...	10
,, ಕೆ. ಎಸ್. ತಿಮ್ಮಣ್ಣಸೆಟ್ಟರು ..	10
,, ಪಿ ವಿ ಚಿತ್ರಪ್ಪನವರು	10
,, ಎ. ಮಲ್ಲಪ್ಪ ಅಂಡ್ ಸನ್ಸ್ ರವರು ..	10
,, ಕಾಯಂಗಡಿ ಗುಬ್ಬಣ್ಣನವರು	15
,, ಎಂ. ಎಸ್. ಶಿವಪ್ಪನವರು ..	10
,, ನರಗುಂದಮಠದ ಸಿದ್ದಲಿಂಗಪ್ಪನವರು ..	10
,, ನವಲುಗುಂದದ ಕುಬಸದ ಲಿಂಗಪ್ಪ ಮಲ್ಲಪ್ಪನವರು .	10
,, ದೇವರ ಸಿದ್ದಬಸಪ್ಪಸೆಟ್ಟರು ...	10
,, ದೇವರ ಬುಜವಾರ್ ಪುಟ್ಟಪ್ಪನವರು .	10
,, ಕಲ್ಲೆಪ್ಪನವರು ...	15
,, ಟಿ. ಎಸ್. ಚನ್ನಪ್ಪನವರು ..	10

13. ಸಭೆಯು ಅಧ್ಯಕ್ಷರಿಗೆ ವಂದನೆಗಳು ಅರ್ಪಿಸಲ್ಪಟ್ಟ ನ- ಸಭೆಯು ಮುಕ್ತಾಯವಾಯಿತು.

(Sd) ಕೆ ಪಿ. ಪುಟ್ಟಣ್ಣಸೆಟ್ಟಿ,
ಪ್ರೆಸಿಡೆಂಟ್,
ಅಖಿಲಭಾರತ ವೀರಶೈವಮಹಾಸಭಾ ಸ್ವಾಗತಸಂ
ಬೆಂಗಳೂರು.

ಬಳ್ಳಾರಿಯಲ್ಲಿ ನಡೆದ ಶಿವಕಥಾಶ್ರವಣ

ಇಲ್ಲಿಯ ವೀರಶೈವ ಮಹಾಜನಗಳು ವರ್ಷಂಪ್ರ ನಡೆಸುತ್ತಿರುವ ನವರಾತ್ರಿ ಕಟ್ಟೆಯು ಪದ್ಧತಿಯಂ ತೆ ಈ ಸಲ ಪೇಟೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾ ದಲ್ಲಿ ಒಂಭತ್ತು ದಿನಗಳು ಶಿವಕೀರ್ತನ ಕವಿಕೋಕಿ ತ್ಯಾದಿ ಬಿರುದಾಂಕಿತರಾದ ಬ್ರ|| ಶ್ರೀ|| ದೊಡ್ಡ ಸ್ವಾಪುರದ ಶಿವದೇವಶಾಸ್ತ್ರಿಗಳ ಶಿವಕಥಾ ಕಾಲಕ್ಷೇ ಪವನ್ನು ವಿಜೃಂಭಣೆಯಿಂದ ಜರುಗಿಸಿದರು ಶಾಸ್ತ್ರಿ ಅ ಕೀರ್ತನವು ಸಂಗೀತ ಸಾಹಿತ್ಯಗಳಿಂದ ನವರಸಭ ರಿತವಾಗಿದ್ದಿತು. ಸುಭಾಷಿತ ಇವರ ಕೀರ್ತನವನ್ನು ಶ್ರೋತೃಮಂಡಲಿಯು ಸಾಂದ್ರವಾಗಿ ಕೂಡಿ ಕೃ ಪರಮ ಆನಂದವನ್ನು ಹೊಂದಿತು. ಕಡೆಯ ದಿ ಕೀರ್ತನಾಂತ್ಯದಲ್ಲಿ ಭಕ್ತಮಂಡಲಿಯವರು ಸಂತೋಷ ಪೂರ್ವಕವಾಗಿ ಶಾಸ್ತ್ರಿಗಳಿಗೆ ಗೌರವಾನುಗುಣವಾ ಸಂಭಾವನೆಯನ್ನು ಸಲ್ಲಿಸಿ ಸನ್ಮಾನಿಸಿದರು.

ಪ್ರತ್ಯಕ್ಷದರ್ಶಿ
ಕುಪ್ಪಗಲ್ಲು ಅಯ್ಯ

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಅನುಷ್ಠಾನಸಮಾಪ್ತಿಸಮಾರಂಭ

ಶ್ರೀ|| ಷ|| ಬ್ರ|| ಶಾಂತವೀರ ಪಟ್ಟದ ಮಹಾಸ್ವಾಮಿಗಳು ಕಟ್ಟೀಮನಿ ಅರಳೆಲೆ ಮಠ ವಿಜಾಪೂರ ಪ ಚಿಮ್ಮಲಗಿ ಇವರು ಇದೇ ಆಷಾಢ ಶುದ್ಧ ೧ ಗುರುವಾರ ಶುಭಮೂಹೂರ್ತದಲ್ಲಿ, ನಮ್ಮ ಕರ್ನಾಟಕದೊಳಗೆ ಪ್ರಸಿದ್ಧ ಕ್ಷೇತ್ರಸ್ಥಾನವೆನಿಸಿದ ಕೃಷ್ಣಾತೀರದಲ್ಲಿರುವ ಸೀತಿಮನಿಯ ಸ್ಟೇಶನ ಹತ್ತರದಲ್ಲಿರುವ ಘೋರಾರಣ್ಯದಲ್ಲಿ, ಅನುಷ್ಠಾನವನ್ನು ಪ್ರಾರಂಭಮಾಡಿ ನಿರ್ವಿಘ್ನತೆಯಿಂದ ಆಶ್ವೀಜ ಶುದ್ಧ ೧ ಸೋಮವಾರ ದಿವಸ ಸಮಾಪ್ತಿಗೊಳಿಸಿದರು. ಈ ಹೊತ್ತಿನ ದಿವಸವೇ ದೇವರು ಅವರ ತಪಃಪ್ರಭಾವಕ್ಕೆ ಮೆಚ್ಚಿದನೋ ಏನೋ ಅನ್ನುವ ಹಾಗೆ ಮೇಘರಾಜನು ಘನವಾದ ಮಳೆಯನ್ನು ಕರೆದನು. ಇಲ್ಲಿಯವರೆಗೆ ಮೇಘರಾಜನ ದರ್ಶನವಿಲ್ಲದೆ ಕಷ್ಟಪಡುತ್ತಿರುವ ಜನರು ಇಂದಿನದಿವಸ ಆನಂದತುಂದಿಲರಾದರು. ಅನುಷ್ಠಾನಸ್ಥಾನದಲ್ಲಿಯೂ, ಶ್ರೀಗಳವರ ಮುಖ್ಯಸ್ಥಾನವಾದ ಚಿಮ್ಮಲಗಿ ಅರಳೆಲೆ ಮಠದಲ್ಲಿಯೂ 'ಮಹಾಗಣಾರಾಧನೆಯು ನಡೆದಿತ್ತು. ಮೇಘರಾಜನ ಬಿರುಸಿನಾಟದಿಂದ ಜನರ ಊಟ ಉಡುಗರೆಯ ಕೆಲಸವು ಅಷ್ಟಕ್ಕೇ ನಿಂತುಹೋಯಿತು. ಇಷ್ಟು ದಿನಗಳವರೆಗೆ ಮಳೆಯ ದರ್ಶನವಿಲ್ಲದ ಜನಗಳು ಇಂದಿನ ಸುವೃಷ್ಟಿಯ ಆನಂದದಲ್ಲಿ ಮುಳುಗಿದ್ದರು. ಶ್ರೀಗಳವರ ಅನುಷ್ಠಾನದ ಉದ್ದೇಶವು ಈ ಮೇಘರಾಜನನ್ನು ಒಲಿಸಿಕೊಂಡದ್ದೇ ಇರಬಹುದು; ಅಂತಾಬಿಟ್ಟನೂ ಮುತ್ತಾಬ್ಬನು ಮತ್ತೊಂದು ಬಗೆಯಿಂದ ಹೀಗಾಗಿ ಜನಗಳಲ್ಲಿ ಭಕ್ತಿಯು ಉತ್ಪನ್ನಿಸಿ ಆನಂದ ಪರವಶರಾಗಿದ್ದರು. ಅಷ್ಟರಲ್ಲಿ ಸೂರ್ಯನು ಅಸ್ತಂಗತನಾದನು. ಆ ಮೇಲೆ ಶ್ರೀಗಳವರು ಅನುಷ್ಠಾನದಲ್ಲಿಯೇ ಗುರುಕುಲಾಶ್ರಮವನ್ನೂ ಮತ್ತು ಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ ಸಂಘವನ್ನು ಸ್ಥಾಪಿಸುವ ಉದ್ದೇಶವಾಗಿ ಧರ್ಮ ಸಂಬಂಧದ ಉಪದೇಶಪರ ಭಾಷಣ ಮಾಡಿದರು. ಇದರಿಂದ ಜನರ ಮನಸ್ಸಿನ ಮೇಲೆ ವಿಶೇಷ ಪರಿಣಾಮವಾಯಿತು. ಅನಂತರ ಇಲ್ಲಿಯ ವೇದಶಾಸ್ತ್ರರಾದ ಚಿತ್ರವಾಡಗಿ ಇವರು ಅನುಷ್ಠಾನದ ಮಹತ್ವ ಇದರ ಬಗ್ಗೆ ಜನರ ಮನಸ್ಸಿನ ಮೇಲೆ ಪರಿಣಾಮವಾಗುವ ಹಾಗೆ ಒಳ್ಳೆ ಆವೇಶದಿಂದ ಹೇಳಿದರು. ಅನಂತರ ಆಶೀರ್ವಚನಗಳಾಗಿ ಸಭೆಯು ವಿಸರ್ಜನೆಯಾಯಿತು. ಇನ್ನೊಂದು ಸಂಗತಿ ಏನೆಂದರೆ —ವಿಜಾಪೂರದಲ್ಲಿರುವ ಶ್ರೀಗಳವರ ಶಿಷ್ಯರಾದ ರಾಮಪ್ಪಾ ಮರೇಗುದ್ದಿ ಇವರು ಇಪ್ಪತ್ತೆಂಟು ವರ್ಷದ ಸಣ್ಣ ವಯಸ್ಸಿನವರು ವರ್ಷ ಒಂದಕ್ಕೆ ಅಜಮಾಸ ಐನೂರು ರೂಪಾಯಿ ದೊರಕುವ ನೌಕರಿಯಲ್ಲಿದ್ದವರು. ಹೆಂಡರು ಮಕ್ಕಳುಗಳಿಂದ ಪ್ರಾಪಂಚಿಕಸಂಪತ್ತಿನ ಸುಖದಲ್ಲಿ ಮುಳುಗಿದವರು. ಹೀಗಿದ್ದು ಅವರು ಏಕ ಕಾಲಕ್ಕೆ ಎಲ್ಲವನ್ನು ತೊರೆದು, ಸ್ವಾಮಿಗಳ ಅನುಜ್ಞೆಯನ್ನು ಪಡೆದು ಅದೇ ಸ್ಥಾನದಲ್ಲಿಯೇ ಶ್ರೀಗಳವರ ಸೇವೆಯನ್ನು ಮಾಡುತ್ತ ಅನುಷ್ಠಾನಗೈದರು. ಇಂಥ ಗುರುಸೇವೆಯನ್ನಾಚರಿಸುವ ಪರಮಭಕ್ತ ಶಿರೋಮಣಿ ವಿವರಣ ಸತ್ಯವ್ರತದ ಸಂಗತಿಯು ನಮ್ಮೆಲ್ಲರಿಗೆ ಅಭಿಮಾನದಾಯಕವಲ್ಲವೆ? ಈ ನಮ್ಮ ಕರ್ನಾಟಕದಲ್ಲಿ ಒಂದಿಲ್ಲೊಂದು ಕಡೆಗೆ ಇಂಥ ಪವಿತ್ರ ಕಾರ್ಯಗಳನ್ನು ಸಾಗಿಸುತ್ತಿದ್ದುದರಿಂದಲೇ ನಾವುಗಳೆಲ್ಲರೂ ಜಗತ್ತಿನಲ್ಲಿ ಸುಖದಿಂದ ಜೀವಿಸುತ್ತಿರುವೆವು. ಇಂಥ ಮಹತ್ವಶಾಲಿಗಳು ಪರರ ಕಷ್ಟನಿವಾರಣೆಗಾಗಿ ಹೆಣಗುತ್ತಿರುವಾಗ ನೀವುಗಳೆಲ್ಲರೂ ಧರ್ಮಕಾರ್ಯದ ಗಂಧವನ್ನರಿಯದೆ ಕುಂಭರಂತೆ ವರ್ತನಮಾಡುವದು ಬಹಳೇ ಆಶ್ಚರ್ಯದ ಮಾತಾಗಿದೆ. ಈ ರೀತಿಯಾಗಿರದೆ ನಮ್ಮ ಕೈಲಾದಮಟ್ಟಿಗಾದರೂ ಧರ್ಮಾಚರಣೆಗೆ ಒಳಪಟ್ಟು ಸಚ್ಛೀಲರಾಗಿ ಇಂಥ ಪವಿತ್ರ ಕಾರ್ಯಗಳಿಗೆ ತನುಮನಧನಗಳನ್ನು ಅರ್ಪಿಸುವ ಬುದ್ಧಿಯು ಹುಟ್ಟಬೇಕೆಂದೇ ಮನನೀಯರು ನಮ್ಮಗಳಿಗಾಗಿ ಇಂಥ ಕಾರ್ಯಗಳನ್ನು ನಡೆಯಿಸುತ್ತಿರುವರು. ಈ ಪ್ರಕಾರ ಪರರ ಹಿತಚಿಂತನಕ್ಕಾಗಿ ಹಗಲಿರುಳು ದೇಹದಂಡನೆ ಮಾಡಿ ಈ ಮಹತ್ಕಾರ್ಯವನ್ನು ವಹಿಸಿ ಪೂರ್ಣಮಾಡಿದ ನಮ್ಮ ಶ್ರೀಗಳವರಿಗೂ ಮತ್ತು ನಮ್ಮ ಮಿತ್ರಬಾಂಧವರಾದ ಶ್ರೀಮಂತ ರಾಮಪ್ಪನವರಿಗೂ ಆಯುರಾರೋಗ್ಯವನ್ನೂ ಸಂಪತ್ಸಮೃದ್ಧಿಯನ್ನೂ ಇಂಥ ಪವಿತ್ರ ಕಾರ್ಯಭಾರವನ್ನು ನಿರಂತರ ಜರುಗಿಸುವ ಶಕ್ತಿಯನ್ನೂ ದಯಪಾಲಿಸಲೆಂದು ಆ ದಯಾಘನರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸಿ, ಈ ಮಹಾವ್ರತವು ಈಶ್ವರನ ಕೃಪಾಬಲದಿಂದ ನಿರ್ವಿಘ್ನವಾಗಿ ಸಮಾಪ್ತವಾದದ್ದಕ್ಕಾಗಿ ಭಕ್ತಿಪುರಸ್ಸರದಿಂದ ಶ್ರೀ ಪಂಚಾಚಾರ್ಯಪ್ರಭೆಗೆ ಎರಡು ರೂಪಾಯಿಗಳನ್ನು ಕಾಣಿಕೆ ರೂಪದಿಂದ ಅರ್ಪಿಸಿದ್ದೇನೆಂದು ತಿಳಿಸುವ,

ಪ್ರತ್ಯಕ್ಷದರ್ಶಿ.

ವೀರಶೈವಮಹಾಶಯರಲ್ಲಿ ವಿಜ್ಞಾಪನೆ

ಮಹನೀಯರೇ? ಈ ಜಗತ್ತಿನಲ್ಲಿ ಅನೇಕಪ್ರಾಣಿಗಳನ್ನು ದೇವರು ಸೃಷ್ಟಿಸಿರುವನು. ಅವುಗಳೆಲ್ಲವೂ ಗುಂಪುಗುಂಪಾಗಿ ಬಾಳುತ್ತವೆಂದು ಹೇಳಲಿಕ್ಕೆ ಯಾವ ಸಂಶಯವೂ ಇಲ್ಲ. ಯಾಕೆಂದರೆ, ಅಡವಿಯಲ್ಲಿ ಸಂಚಾರಮಾಡತಕ್ಕ ವ್ಯಾಘ್ರಾದಿಗಳೂ ಇನ್ನೂ ಅನೇಕ ಪ್ರಾಣಿಗಳೂ ಗುಂಪಾಗಿರುವುದು ನಮಗೆ ಕಾಣುತ್ತವೆ. ಆ ಪ್ರಾಣಿಗಳೆಲ್ಲಾ ಒಕ್ಕಟ್ಟಾಗಿ ಕೆಲಸಮಾಡುತ್ತ ತಮ್ಮ ಗುಂಪಿನಲ್ಲಿರುವ ಪ್ರತಿಯೊಂದು ವ್ಯಕ್ತಿಗೂ ಒಳ್ಳೆಯದಾಗತಕ್ಕ ಏರ್ಪಾಡುಗಳನ್ನು ಮಾಡಿಕೊಂಡಿರುತ್ತವೆ. ಇವುಗಳ ಪ್ರತಿಯೊಂದು ಗುಂಪಿಗೂ ಒಂದೊಂದು ಅಧಿಪತಿಯುಂಟು. ಉಳಿದವುಗಳೆಲ್ಲ ಅಧಿಪತಿಯ ಅನುಜ್ಞೆಯಂತೆ ನಡೆಯುವವು. ಅವುಗಳಲ್ಲೂ ದೊಡ್ಡವರು ಚಿಕ್ಕವರು ಎಂಬ ತಾರತಮ್ಯವುಂಟು. ಎರಳೆ, ಆನೆ ಮೊದಲಾದ ಪ್ರಾಣಿಗಳು ಮೇಲ್ಕಂಡ ಅಂಶಗಳಿಗೆ ಉದಾಹರಣೆಗಳಾಗಿವೆ. ಹೀಗಿದ್ದು ತಿರ್ಯಗ್ಜಂತುಗಳು ಸಹ ತಮ್ಮ ತಮ್ಮ ಅಧಿಪತಿಯ ಅನುಜ್ಞೆಯಂತೆ ನಡೆಯುತ್ತಿರುವಲ್ಲಿ ಮನುಷ್ಯರು ಅಧಿಪತಿಗಳಿಲ್ಲದಿರುವದು ಯೋಗ್ಯವಲ್ಲವೆಂದು ಜಗದೀಶ್ವರನು ಮತಸ್ಥಾಪನಾಚಾರ್ಯರನ್ನು ಸೃಷ್ಟಿಸಿ ಮನುಷ್ಯರೆಲ್ಲರನ್ನು ಗುಂಪುಗುಂಪಾಗಿ ವಿಭಾಗಿಸಿ ಪ್ರತಿಯೊಂದು ಗುಂಪಿನವರಿಗೆ ಗುರುಗಳಾಗಿ ಅವರಿಗೆ ನೀತಿ ನೀತಿಮಾರ್ಗವನ್ನು ಬೋಧಿಸಿರೆಂದು ಹೇಳಿದ್ದರಿಂದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರೂ ಇನ್ನೂ ಅನೇಕ ಮತಸ್ಥಾಪಕರೂ ಉದ್ಭವಿಸಿ ಮತಸ್ಥಾಪನಮಾಡಿ ಲೋಕದಲ್ಲಿ ಪೂಜ್ಯತೆಯನ್ನು ಹೊಂದಿರುವರು. ಮತಸ್ಥಾಪಕರು ನೀತಿಯನ್ನು ಬೋಧಿಸದಿದ್ದರೆ ಒಬ್ಬರಮಾತನ್ನು ಮತ್ತೊಬ್ಬರು ಕೇಳದೆ ಲೋಕದಲ್ಲಿ ನೀಚಗುಣವೇ ಹೆಚ್ಚಾಗಿ ಇವರು ಒಳ್ಳೆಯವರು ಕೆಟ್ಟವರು ಇವರು ದೊಡ್ಡವರು ಚಿಕ್ಕವರು ಸ್ವಾಮಿಗಳು ರಾಜರು ಇವರು ಭೃತ್ಯರು ವಿದ್ವಾಂಸರು ಎಂಬ ಯಾವಭೇದವೂ ಇಲ್ಲದೆ ಅವ್ಯವಸ್ಥೆಯುಳ್ಳದಾಗಬೇಕಾಗಿದ್ದಿತು. ಲೋಕವೆಲ್ಲ ಅನಾಯಕತ್ವಕ್ಕೆ ಈಡಾಗಬಾರದೆಂದು ಮತಸ್ಥಾಪನಾಚಾರ್ಯರನ್ನು ಸೃಷ್ಟಿಸಿ ನೀತಿಯನ್ನು ಬೋಧಿಸಿದ ಆ ಪರಮಾತ್ಮನ ಉಪಕಾರವನ್ನು ಯಾರೂ ಗಣನೆಮಾಡುವಂತಿಲ್ಲವು. ಈ ನೀತಿಯನ್ನು ಸೂರ್ಯಚಂದ್ರರಿಗೆ ಹೋಲಿಸಬಹುದು! ಆ ನೀತಿಯನ್ನು ತಿಳಕೊಂಡವ ಪ್ರತಿಯೊಬ್ಬರೂ ತಿಳುವಳಿಕೆಯನ್ನು ಪಡೆದು ನಡೆದುಕೊಳ್ಳುತ್ತ ಈಶ್ವರನಪ್ರೀತಿಗೆ ಭಾಗಿಗಳಾಗುವುದು ಉತ್ತಮವು. ನೀತಿಯಲ್ಲಿ ಅಡಕವಾಗಿರುವಂಥ ದೇವಭಕ್ತಿ, ಗುರುಭಕ್ತಿ, ರಾಜಭಕ್ತಿ ಇನ್ನೂ ಅನೇಕ ಸುಗುಣಗಳೆಂಬ ರತ್ನಗಳನ್ನು ಪ್ರತಿಯೊಬ್ಬರೂ ಸಂಪಾದಿಸದ ಉನ್ಮತ್ತರಾಗಿ ಗುರುಗಳನ್ನು ನಿಂದಿಸುತ್ತ ನಮ್ಮ ಪಕ್ಷಕ್ಕೆ ನಾವೇ ಗುರುಗಳೆಂದು ಮೆರೆಯುವ ಧರ್ಮಭ್ರಷ್ಟರಿಗೆ ಯಾವವಿಶೇಷಣವನ್ನು ಕೊಡಬೇಕೆಂಬುವದನ್ನು ವಾಚಕರಿಗೆ ವಹಿಸುವೆನು. ಈ ಪಾಪಿಗಳೇ ನಮ್ಮ ಗುಂಪಿನವರೂ ವರ್ತಿಸಿದರೆ ಜಗದೀಶ್ವರನ ಕಟ್ಟಳೆಯು ನಾಶವಾಗಿ ಎಷ್ಟು ಕೆಡಕು ಸಂಭವಿಸುವದೆನ್ನುವದನ್ನು ಬೇರೆ ಹೇಳಬೇಕಾಗಿಲ್ಲ' ಮಹಾಶಯರೇ? ನಮ್ಮ ಜೀವನವೆಂಬ ಕ್ಷೇತ್ರದೊಳಗೆ ಒಳ್ಳೆಯ ಸುಗುಣಗಳೆಂಬ ಪೈರುಗಳನ್ನು ಹಚ್ಚಿಟ್ಟು ಬೆಳೆಯಿಸುತ್ತಿರುವಾಗ ದುಸ್ಸಂಗ ದುರಭ್ಯಾಸಗಳೆಂಬ ಕಳೆಗಳು ಬೆಳೆದು ಉದ್ದಿಷ್ಟವಾದ ಬೆಳಸನ್ನು ಧ್ವಂಸಮಾಡುವವು. ಆದ್ದರಿಂದ ನಮ್ಮ ಸಮಾಜದಲ್ಲಿ ಹುಟ್ಟಿರತಕ್ಕ ದುಷ್ಟವೃತ್ತಿಗಳನ್ನು ಸಂಪೂರ್ಣವಾಗಿ ಹೋಗಲಾಡಿಸದಹೊರತು ಏಕಮತ್ಯವೂ, ಶಾಂತತೆಯೂ ದೊರೆಯಲಾರವು. ಈ ವಿಷಯವನ್ನು ಮತಪ್ರಮುಖರು ವ್ಯವಸ್ಥೆಗೊಳಿಸಬೇಕು, ಹಾಗೆಯೇ ಬಿಟ್ಟರೆ ಪರಮತೀಯರ ನಿಂದೆಗೆ ಈಡಾಗಬೇಕಾಗುವುದು ಮತ್ತು ಅಲ್ಪಸ್ವಲ್ಪ ಸಜ್ಜನತೆಗಳುಂಟಾದಲ್ಲಿ ತಮ್ಮ ತಮ್ಮ ಪ್ರಾಂತಗಳಲ್ಲಿ ಸಮಾಧಾನರೀತಿಯಿಂದ ತೀರ್ಮಾನಿಸಿಕೊಳ್ಳುವುದು ಯೋಗ್ಯವು. ಅಯ್ಯಾ ನನ್ನ ವೀರಶೈವಬಂಧುಗಳೇ ಲೋಕಾಪವಾದವನ್ನು, ಪಾಪವನ್ನು ಗಳಿಸಿಕೊಳ್ಳದೆ ಸುಗುಣಗಳೆಂಬ ರತ್ನಗಳನ್ನು ಸಂಪಾದಿಸಿ ಜಗತ್ತಿನಲ್ಲಿ ಕೀರ್ತಿಭಾಗಿಗಳಾಗಬೇಕೆಂದು ಈ ನನ್ನ ಲೇಖವನ್ನು ಮುಗಿಸುತ್ತೇನೆ.

ಸಮಾಜಹಿತಚಿಂತಕ,
ಎಚ್. ಬಸವಂತಪ್ಪ ಸ್ಕೂಲ್ಮಾಸ್ಟರ್, ಗೊಂದಕೊಪ್ಪ
ತಾಲೂಕು ಸೊರಬ, ಜಿ|| ಶಿವಮೊಗ್ಗಾ.

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭಾ, ಬೆಂಗಳೂರು ಸಿಟಿ.

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭೆಯನ್ನು ಇದೇ ಡಿಸೆಂಬರ್ ಮಾಹೆಯಲ್ಲಿ ಬೆಂಗಳೂರಿನಲ್ಲಿ ನಡೆಯಿಸ ತಕ್ಕದ್ದೆಂದು ತಾ|| ೨೩-೯-೨೭ ರಲ್ಲಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಟಿ. ಸಿ. ಐ. ಇ, ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಬೆಂಗಳೂರು ವೀರಶೈವ ಮಹಾಜನಗಳ ಸಭೆಯಲ್ಲಿ ತೀರ್ಮಾನವಾಗಿ, ಸ್ವಾಗತಸಂಘ [ರಿಸೆಪ್ಷನ್ ಕಮಿಟಿ] ಮತ್ತು ಕಾರ್ಯನಿರ್ವಾಹಕಸಂಘ [ವರ್ಕಿಂಗ್ ಕಮಿಟಿ] ಇವುಗಳು ಏರ್ಪಡಿಸಲ್ಪಟ್ಟಿರುವುವು. ಸ್ವಾಗತಸಂಘ [ರಿಸೆಪ್ಷನ್ ಕಮಿಟಿ] ಕ್ಕೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ಚುನಾಯಿಸಲ್ಪಟ್ಟರು.

ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆ.ಟಿ.ಸಿ.ಐ.ಇ. ಯವರು [ಪ್ರೆಸಿಡೆಂಟರು]
ಮ|| ಪಿ. ಎಂ. ಬಸಪ್ಪನವರು [ವೈಸ್ ಪ್ರೆಸಿಡೆಂಟರು]
ಮ|| ರಾ|| ಎಂ. ನಾಗಪ್ಪನವರು
,, ಟಿ. ಸಂಜಪ್ಪನವರು ಸೆಕ್ರೆಟರಿಗಳು
ಮ|| ರಾ|| ಎಸ್. ಶಿವಪ್ಪನವರು [ಕೋಶಾಧ್ಯಕ್ಷರು]

ಮತ್ತು 65 ಜನ ದೊಡ್ಡಮನುಷ್ಯರು ಮೆಂಬರುಗಳಾಗಿರತಕ್ಕದ್ದಲ್ಲದೆ ಇತರರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಧಿಕಾರವುಳ್ಳವರಾಗಿರಬೇಕೆಂದಲೂ ಕಾರ್ಯನಿರ್ವಾಹಕ [ವರ್ಕಿಂಗ್ ಕಮಿಟಿ] ಸಂಘಕ್ಕೆ ಮೇಲ್ಕಂಡ ಸ್ವಾಗತಸಂಘದ [illegible] [ಎಕ್ಸ್ ಆಫಿಷಿಯೋ ಮೆಂಬರ್] ಮೆಂಬರುಗಳ ಜೊತೆಗೆ 20 ಜನ ದೊಡ್ಡಮನುಷ್ಯರು ಮೆಂಬರುಗಳಾಗಿ ಇರತಕ್ಕದ್ದೆಂದಲೂ ತೀರ್ಮಾನವಾಗಿ ಚುನಾಯಿಸಲ್ಪಟ್ಟರು.

ವೀರಶೈವಮಹಾಸಭಾ ಜನರಲ್ ಫಂಡಿನವರು ಈ ಮಹಾಸಭೆಯ ಖರ್ಚಿಗೋಸ್ಕರ ಮಂಜೂರಮಾಡಿರುವ ನಾಲ್ಕುಸಹಸ್ರ ರೂಪಾಯಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಗಿದೆ.

ಮಹಾಸಭಾ ಕಾರ್ಯಸಂಬಂಧವಾಗಿ ರಿಸೆಪ್ಷನ್ ಮತ್ತು ಕಾರ್ಯನಿರ್ವಾಹಕ ಕಮಿಟಿಯವರು ಈ ಕೆಳಗಿನ ವಿಷಯಗಳನ್ನು ಪ್ರಕಟಿಸತಕ್ಕದ್ದೆಂದು ತೀರ್ಮಾನಿಸಿರುತ್ತಾರೆ

ಮಹಾಸಭೆಯು ಡಿಸೆಂಬರ್ ಮಾಹೆ 28, 29, 30 ನೆಯ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವುದು.

ಮಹಾಸಭಾಕಾರ್ಯಕ್ಕೆ 10 ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡತಕ್ಕವರೆಲ್ಲರನ್ನೂ ಸ್ವಾಗತಸಂಘದ ಸದಸ್ಯರುಗಳನ್ನಾಗಿ ಸೇರಿಸಿಕೊಳ್ಳಲಾಗುವದು. ಪ್ರತಿನಿಧಿಗಳ 5 ರೂ ಸಂಕೆಯೂ, ಪ್ರೇಕ್ಷಕರಿಗೆ 2 ರೂ ಸಂಕೆಯೂ ಪ್ರವೇಶಧನವನ್ನು ನಿಷ್ಕರ್ಷಿಸಲಾಗಿದೆ.

ಭರತಖಂಡದ ಬೇರೆ ಬೇರೆ ಸ್ಥಳಗಳಲ್ಲಿರತಕ್ಕ ವೀರಶೈವ ಮಹಾಜನರು ತಮ್ಮ ತಮ್ಮ ಸ್ಥಳಗಳಲ್ಲಿ ದಯವಿಟ್ಟು ಸಭೆಸೇರಿ, ತಮ್ಮ ತಮ್ಮ ಪ್ರತಿನಿಧಿಗಳನ್ನು ಆರಿಸಿ, ಮಹಾಸಭೆಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ. ಈ ಪ್ರತಿನಿಧಿಗಳ ಹೆಸರು [ವಿಳಾಸ ಸಹಿತ] ಗಳನ್ನು ಇದೇ ನವಂಬರ್ ಮಾಹೆಯ ಅಂತ್ಯದೊಳಗಾಗಿ ಮಹಾಸಭೆಯ ಸೆಕ್ರೆಟರಿಗಳಿಗೆ ಟಪಾಲುಮೂಲಕ ತಿಳಿಸುವುದಲ್ಲದೆ, ಪ್ರತಿನಿಧಿಗಳ ಪ್ರವೇಶಧನ 5 ರೂ ಗಳನ್ನು ಡಿಸೆಂಬರ್ ಮಾಹೆಯ 10 ನೇ ತಾರೀಖಿನೊಳಗಾಗಿ ಕಳಿಸಿಕೊಡಬೇಕು.

ಮೇಲ್ಕಂಡ ಪ್ರತಿನಿಧಿಗಳ ಊಟದ, ವಾಸದ ಉಚಿತವಾಗಿ ಏರ್ಪಾಡು ಮಾಡಲ್ಪಡುವುದು. ಆದರೆ ಸಮೂಹದಲ್ಲಿ ಸೇರಲು ಇಷ್ಟವಿಲ್ಲದ ಪ್ರತಿನಿಧಿಗಳಿಗೆ ಕಾರ್ಯನಿರ್ವಾಹಕ ಸಂಘದವರು ಆಹಾರಪದಾರ್ಥಗಳನ್ನೂ, ವಸತಿಯನ್ನೂ ಒದಗಿಸುವರು. ಸಂಬಾರಕರು, ಪಾತ್ರೆ ಮೊದಲಾದ ಸೌಕರ್ಯಗಳನ್ನು ಅವರವರೇ ಏರ್ಪಡಿಸಿಕೊಳ್ಳಬೇಕಾಗುವುದು.

ಪ್ರೇಕ್ಷಕರು ತಮ್ಮ ತಮ್ಮ ಊಟದ ಮತ್ತು ವಾಸದ ಏರ್ಪಾಡುಗಳನ್ನು ತಾವೇ ಮಾಡಿಕೊಳ್ಳಬೇಕು

ಪ್ರತಿನಿಧಿಗಳಾಗಿಯಾಗಲೀ, ಪ್ರೇಕ್ಷಕರಾಗಿಯಾಗಲೀ ಮಹಾಸಭೆಗೆ ಬರಲಿಚ್ಛಿಸುವ ಮಹನೀಯರು ಡಿಸೆಂಬರ್ ತಾ|| 10 ರೊ ಗಾಗಿ ಸೆಕ್ರೆಟರಿಯವರಿಗೆ ಬರೆದಲ್ಲಿ ಅವರಿಗೆ ಟಿಕೆಟ್ ಉಚಿತವಾ ಕಳುಹಿಸಲ್ಪಡುತ್ತದೆ

ಪ್ರೇಕ್ಷಕರಾಗಿ ಬರತಕ್ಕ ವಿದ್ಯಾರ್ಥಿಗಳು ಒಂದು ರೂಪಾಯಿ ಮಾತ್ರ ಪ್ರವೇಶಧನವನ್ನು ಕೊಡಬೇಕು.

ಸ್ವಯಂಸೇವಕ [Volunteer] ರಾಗಿ ಬರತಕ್ಕವರು ಡಿಸೆಂಬರ್ ತಿಂಗಳ 1 ನೆಯ ತಾರೀಖಿನೊಳಗಾಗಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು ಇವರ ಚುನಾವಣೆಯು ಕಾರ್ಯನಿರ್ವಾಹಕ ಸಂಘದವರಿಂದ ಮಾಡಲ್ಪಡುವುದು ಸ್ವಯಂಸೇವಕರಾಗಿ ಚುನಾಯಿಸಲ್ಪಟ್ಟವರಿಗೆ ಅವಶ್ಯಕತೆಗಳು ಉಚಿತವಾಗಿ ಏರ್ಪಡಿಸಲ್ಪಡುವವು

ಭರತಖಂಡದ ಆಯಾಯಸ್ಥಳಗಳ ವೀರಶೈವ ಮಹಾಜನರು ತಮ್ಮ ತಮ್ಮ ಸ್ಥಳಗಳಲ್ಲಿ ಸಭೆಕೂಡಿ ವೀರಶೈವಮಹಾಸಭೆಯ ಅಧ್ಯಕ್ಷತೆಗೆ ಯಾರನ್ನು ಚುನಾಯಿಸಬೇಕೆಂಬುದನ್ನು ತಮ್ಮ ಅಭಿಪ್ರಾಯವನ್ನು ಸೆಕ್ರೆಟರಿಯವರಿಗೆ ನವಂಬರ್ ತಾ|| 10 ರ ಒಳಗಾಗಿ ತಿಳಿಸಬೇಕಾಗಿ ವಿನಂತಿ.

ವೀರಶೈವ ಮಹಾಸಭಾ ಆಫೀಸ್, (Sd) ಎಂ. ನಾಗಪ್ಪ,
ಚಿಕ್ಕಪೇಟೆ, ಬೆಂಗಳೂರು ಸಿಟಿ ಟಿ. ಸಂಜಪ್ಪ,
ತಾ|| 12—10—1927 ಸೆಕ್ರೆಟರಿಗಳು, ಸ್ವಾಗತಸಂಘ

ಪಂಚಾಚಾರ್ಯಪ್ರಭಾ

೧೯೨೭ನೇ ಅಕ್ಟೋಬರ್ ತಾ|| ೧೭ನೇ ಸೋಮವಾರ

ಗುರು

ಆಚಿನೋತಿ ಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ ।

ಅಂದರೆ ವೇದಶಾಸ್ತ್ರಗಳನ್ನೋದಿ ಅವುಗಳಲ್ಲಿ ಹೇಳಿದ ಆಚಾರನಿಯಮಗಳನ್ನೆಲ್ಲ ಶಿಷ್ಯರಿಗುಪದೇಶಿಸಿ ಜಗತ್ಕಲ್ಯಾಣಕ್ಕಾಗಿ ತಾನೂ ಶಾಸ್ತ್ರನಿಯಮಗಳನ್ನು ಆಚರಿಸುತ್ತಲಿರುವುದರಿಂದಲೇ ಆಚಾರ್ಯನೆಂದು ಕರೆಯಲ್ಪಡುವನು.

ವೇದಪವಾಗ್ರಾನಲಂಬಿಯಾದ ನಮ್ಮ ಭರತಖಂಡದಲ್ಲಿ ಮತಸ್ಥಾಪಕರಾದ ಪೂರ್ವಾಚಾರ್ಯರೆಲ್ಲರೂ ವೇದಶಾಸ್ತ್ರಗಳನ್ನು ಓದಿ ತತ್ವವನ್ನು ತಿಳಿದು, ಅದರಂತೆ ಆಚರಿಸಿ, ಶಿಷ್ಯರಿಗುಪದೇಶವನ್ನು ಮಾಡುತ್ತ ಅಸಾಧಾರಣವಾದ ಮಹಿಮೆಯನ್ನು ಪ್ರಕಾಶಪಡಿಸುತ್ತ ಬಂದಿದ್ದರಿಂದಲೇ ಪ್ರತಿಯೊಬ್ಬ ಪೂರ್ವಾಚಾರ್ಯರು ತಮ್ಮ ತಮ್ಮ ಸ್ಥೂಲಶರೀರಗಳನ್ನು ತ್ಯಜಿಸಿ, ಇಂದಿಗೆಷ್ಟೋ ಸಾವಿರಾರುವರ್ಷಗಳು ಆಗಿದ್ದರೂ ಅವರು ಸತ್ಸಂಕಲ್ಪದಿಂದ ಸ್ಥಾಪಿಸಿರುವ ಮತಗಳು, ಜಾಜ್ವಲ್ಯಮಾನಗಳಾಗಿ ಇದ್ದೇ ಇರುವವು. ಆದಾಗ್ಯೂ ಪೂರ್ವಾಚಾರ್ಯರ ಕೀರ್ತಿಲತಿಕೆಗಳು ಮೂರು ತ್ರಿಭುವನವನ್ನೆಲ್ಲಾ ಸುಂದರವಾದ ಶರಚ್ಚಂದ್ರಿಕೆಯಂತೆ ಬೆಳಗುತ್ತಲೇ ಹೋಗುವವು. ಒಂದೊಂದು ಕಾಲದಲ್ಲಿ ಅವರ ಮತಾನುಯಾಯಿಗಳ ದೌರ್ಬಲ್ಯದಿಂದಲೋ ಅಥವಾ ಗುರುಗಳ ಆಚಾರ ಭ್ರಷ್ಟತೆಯಿಂದಲೋ ಆಚಾರ್ಯಸಿಂಹಾಸನಾರೂಢರಾದ ಪೂರ್ವಾಚಾರ್ಯರ ಕೀರ್ತಿಲತೆಯು ಹಿಂದುಳಿದವಾಗಿ ಬೆಳೆಯುವುದಕ್ಕೆ ಪ್ರತಿಬಂಧಕವಾಗಿರುವದು. ಪಟ್ಟದ ಮಹಿಷ್ಠೆಗಳು ಒಂದೊಂದು ಕಾಲದಲ್ಲಿ ರೋಗದಿಂದ ಬಳಲುತ್ತಿರುವುದೂ, ಒಂದೊಂದು ಕಾಲದಲ್ಲಿ ಅಭಿವೃದ್ಧಿಯಾಗುತ್ತಿರುವುದೂ ಸ್ವಭಾವವಾಗಿರುವುದನ್ನು, ಪ್ರಕೃತದಲ್ಲಿ ವೀರಶೈವ ಮತಾನುಯಾಯಿಗಳ ದೋಷದಿಂದಲೂ ಪೀಠಾರೋಹಣಮಾಡಿದ ಗುರುಗಳ ಅನಾಚಾರಶೀಲತೆಯಿಂದಲೂ ವೀರಶೈವಸಿದ್ಧಾಂತಸ್ಥಾಪಕರಾದ ರೇಣುಕಾದಿಪಂಚಾಚಾರ್ಯರ ಮಹೋಜ್ವಲತೆಯು ಕೆಲಕಾಲದಿಂದೀಚೆಗೆ ನಿರಾಶ್ರಿತವಾದುದರಿಂದ ಕುಂದುವದಕ್ಕೆ ಪ್ರಾರಂಭವಾಗಿದ್ದು ಪ್ರಸಕ್ತ ಮೆಲ್ಲಮೆಲ್ಲನೆ ಹುಟ್ಟುವುದಕ್ಕೆ ಉಪಕ್ರಮವಾಗಿರುವದನ್ನು ನೋಡಿ ಯಾವ ಲಿಂಗಾಂಗಿಯಾದ ಮಾನವನಿಗೆ ಸಂತೋಷವುಂಟಾಗಲಿಕ್ಕಿಲ್ಲ?

ಯಾವ ಮತದಲ್ಲಿ ವಿದ್ಯೆಯೂ ಆಚಾರವೂ ಸಿದ್ಧಾಂತವೂ ಮಹಿಮೆಯೂ ನೆಲೆಗೊಂಡಿರುವುದೋ ಆ ಮತವು ಚಂದ್ರನ ದರ್ಶನದಿಂದ ಸಮುದ್ರವು ಹೆಚ್ಚುವಂತೆ ಹೆಚ್ಚುವುದು. ಯಾವ ಮತದಲ್ಲಿ ವಿದ್ಯಾ ಆಚಾರಾದಿಗಳಿಲ್ಲವೋ ಆ ಮತವು ಕ್ಷಯರೋಗಪೀಡಿತನಾದ ಮನುಷ್ಯನಂತೆ ಯಾವಾಗಲೂ ಹೀನಾವಸ್ಥೆಯನ್ನು ಅನುಭವಿಸುತ್ತಿರುವದು ಸ್ವಭಾವಸಿದ್ಧವಾಗಿದೆ. ರೇಣುಕಾದಿ ಪೂರ್ವಾಚಾರ್ಯರ ಕಾಲದಲ್ಲಿ ಗುರುಗಳು ಧಾರ್ಮಿಕರಾಗಿದ್ದುದರಿಂದ ಅವರ ಸಂಸರ್ಗದಲ್ಲಿದ್ದ ಶಿಷ್ಯರೂ ಧಾರ್ಮಿಕರಾಗಿಯೇ ಇರುತ್ತಿದ್ದರು. ಅರಮನೆಗುರುಮನೆಗಳಲ್ಲಿ ನಡೆಯುವಂತೆ ಪ್ರಜೆಗಳಲ್ಲಿಯೂ ನಡವಳಿಕೆಗಳು ಬರುವುದು ಲೋಕರೂಢಿಯಾಗಿದೆ. ಗುರುಗಳೂ ಪ್ರಭುಗಳೂ ಆಸ್ತಿಕರಾದರೆ ಪ್ರಜೆಗಳೂ ಶಿಷ್ಯರೂ ಸಹ ಆಸ್ತಿಕರೇ ಆಗುವರು. ಇವರು ಪಾಖಂಡಿಗಳಾದರೆ ಪ್ರಜೆಗಳೂ ಶಿಷ್ಯರೂ ಪಾಖಂಡಿಗಳೇ ಆಗುವರು. ದೊಡ್ಡವರಲ್ಲಿರುವ ಗುಣದೋಷಗಳು ಚಿಕ್ಕವರಲ್ಲಿಯೂ ಬರುವುದು ಪ್ರಾಯಶಃ ಸರ್ವರಿಗೂ ಅನುಭವದಲ್ಲಿಯೆ ಉಂಟು. ಇದಕ್ಕಾಗಿಯೇ “ಯಥಾರಾಜಾ ತಥಾಪ್ರಜಾಃ” “ಯಥಾಗುರುಸ್ತಥಾಶಿಷ್ಯಃ” ಎಂಬ ನೀತಿಯುಂಟಾಗಿರುವುದು. ಪೂರ್ವಕಾಲದಲ್ಲಿ ಆಚಾರ್ಯ ಭಗವತ್ಪಾದರು ಈಶ್ವರಾಜ್ಞೆಯಿಂದ ಲೋಕಹಿತಕ್ಕಾಗಿಯೇ ಅವತರಿಸಿ ಮುಕ್ತಿಯು ಮನುಷ್ಯಪ್ರಯತ್ನದಿಂದ ಸಾಧ್ಯವೆಂಬಂಶವನ್ನು ಸಕಲರಿಗೂ ತೋರ್ಪಡಿಸುವುದಕ್ಕಾಗಿ ಅಸಾಧಾರಣವಾದ ವೈದುಷ್ಯ ಸಚ್ಛೀಲ್ಯ ಮುಂತಾದ ಸದ್ಗುಣಗಳನ್ನಾಶ್ರಯಿಸಿ ಕೇವಲ ಶಿಷ್ಯರ ಆತ್ಮೋದ್ಧಾರವನ್ನೇ ತಮ್ಮ ಮುಖ್ಯಧ್ಯೇಯವನ್ನಾಗಿಟ್ಟುಕೊಂಡು ಅಲ್ಲಲ್ಲಿ ಸಂಚರಿಸುತ್ತಿದ್ದುದರಿಂದಲೇ ಶಿಷ್ಯವರ್ಗದಲ್ಲಿಯೂ ಗುರುಭಕ್ತಿ ದೈವಭಕ್ತಿ ಸದಾಚಾರ ಧಾರ್ಮಿಕಬುದ್ಧಿ ತತ್ವಜಿಜ್ಞಾಸೆ ಮುಂತಾದ ಮೋಕ್ಷಸಾಧಕಗಳಾದ ಸದ್ಗುಣಗಳು ತಾಂಡವಿಸುತ್ತಿದ್ದವು. ಮತಗಳು ಬೆಳಗಿದ ದರ್ಪಣದಂತೆ ಪ್ರಕಾಶಮಾನವಾಗಿದ್ದವು. ಕೆಲಕಾಲದಿಂದೀಚೆಗೆ ಅನಾದಿಗಳಾದ ಪೀಠಗಳು ಕ್ಷೀಣವಾಗಿ ಅನ್ನದಾನ ಮುಂತಾದ ವ್ಯಾವಹಾರಿಕ ಹೆಸರುಗಳನ್ನು ಇಟ್ಟುಕೊಳ್ಳುವಂತೆ ಆಚಾರ್ಯ ಎಂಬ ನಾಮಧೇಯಗಳಾದ ಗುರುಗಳ ಕೈಗೆ ಸಿಕ್ಕು ಕರಡಿಯ ಕೈಗೆ ಸಿಕ್ಕಿದಂತೆ ಬಹುಕಾಲದವರೆಗೂ ನರಳುತ್ತಿದ್ದುದರಿಂದ ಪ್ರಾಚೀನಗಳಾದ ಪೀಠಗಳ ಮಹತ್ವವು ನಿರ್ನಾಮವಾಯಿತು. ಆಚಾರ್ಯಪೀಠಗಳು ಅನ್ಯಮತಗಳಂತೆ ಈ ಮತದಲ್ಲಿಯೂ ಇವೆಯೋ ಇಲ್ಲವೋ ಎಂಬ ಸಂಶಯಕ್ಕಾಸ್ಪದವಾಯಿತು. ವೀರಶೈವ ಸಮಾಜವೆಂಬ ಸ್ತ್ರೀಯಳು ವಸ್ತುತಃ ಸರ್ವಾಂಗಸಂಪೂರ್ಣಳಾಗಿದ್ದರೂ ಆ ಜಗದ್ಗುರುಗಳ ಕರಾವಲಂಬನವಿಂದ ದಾರಿದ್ರ್ಯಾವಸ್ಥೆಯನ್ನು ಅನುಭವಿಸುತ್ತ ಅವಮಾನಪಡಿಸಿಕೊಳ್ಳುವಳು. ಲೋಕದಲ್ಲಿ ಸತಿಯು ಕುರೂಪಿಯಾಗಿದ್ದರೂ ಪತಿಯ ವೈಭವದಿಂದ ಮಾನ್ಯಳೆನಿಸುವಳು. ಇನ್ನು ಸತಿಪತಿಗಳೀರ್ವರೂ ಗುಣಾಢ್ಯರಾದರೆ ಹೇಳುವದೇನು? ಜಗನ್ಮಾನ್ಯವಾದ ವೀರಶೈವಸಿದ್ಧಾಂತಸ್ಥಾಪಕರಾದ ಮೂಲಾಚಾರ್ಯರ ಪೀಠಗಳು ಇತ್ತೀಚೆಗೆ ಸ್ವಜನಾಭಿಮಾನಿಗಳೂ ಶಾಸ್ತ್ರಗ್ರಂಥಾಭಿಜ್ಞರೂ ಆಗಿರದ ಗುರುಗಳ ಕೈವಶವಾದುದರಿಂದ ಶೂನ್ಯಪ್ರಾಯಗಳಾದವು. ಮತದಲ್ಲಿ ಅಜ್ಞಾನಾಂಧಕಾರವು ಎಲ್ಲೆಲ್ಲಿಯೂ ವ್ಯಾಪಿಸಿತು. ದುರಾಚಾರಗಳೆಂಬ ಗೂಬೆಗಳ ಸಂಚಾರಕ್ಕೆ ಅವಕಾಶವಾಯಿತು. ಅಪಸಿದ್ಧಾಂತಗಳೆಂಬ ಕಾರ್ಗತ್ತಲೆಯ ಹಾವಳಿಯು ಹೆಚ್ಚಿತು. “ಎಲ್ಲಿ ಗುರುತರ ಕಾಣ ಸ್ಥಳವನು ಒಡನೆ ಒಳ್ಳೆಯ ಗುರುವು ಎಸೆದರೇ ಎಲ್ಲರಿಗೆ ಎಲ್ಲಿಯ ಮುಕ್ತಿ ಸರ್ವಜ್ಞ” ಎಂಬ ಸರ್ವಜ್ಞನು ಹೇಳಿದ ವಚನದಂತೆ ಸಿದ್ಧಾಂತಸ್ಥಾಪನಾಚಾರ್ಯರ ಪವಿತ್ರಪೀಠಗಳು ಹಿಂದುಳಿದು ಅಲ್ಲಲ್ಲಿಯೇ ಅವರವರ ಇಚ್ಛಾನುಗುಣವಾಗಿ ಗುರುಗಳನ್ನು ಕಲ್ಪಿಸಿಕೊಂಡು ಕೇವಲ ಕಾಲ್ಪನಿಕಗಳಾದ ಬಹುಶಾಖಾಡಂಬರಗಳನ್ನು ಮಾಡುತ್ತ ಬಂದಿದ್ದರಿಂದ ವೀರಶೈವ ತತ್ವಾರ್ಥವು ಹುಸಿಯಾಗಿ ಕಂಡಕಂಡ ಪುಸ್ತಕಗಳನ್ನೋದಿ ಬಲ್ಲೆನು ಪೂರ್ವಜರಂತೆ ಮುಕ್ತಿಯನು ಪಡೆವೆನೆಂದು ಹೋಗುತ್ತಿರುವರು. ಹುಸಿಕ್ಕ ಒಪ್ಪಂತೆ ಹಸ್ತು ಕುಡಿಸ ಸಂಸ್ಥಾಪಕರ ಪೀಠಗಳಿದ್ದರೆ ಮುಕ್ತಿಸಾಮ್ರಾಜ್ಯಕ್ಕೆ ದೂರರಾದರು. ಸಾಧಾರಣವಾಗಿ ಒಂದು ಕಾಷಾಯವಸ್ತ್ರವನ್ನು ಧಾರಣಮಾಡಿದ್ದರೂ ಅವರೇ ನಮ್ಮ ಗುರುಗಳು ಅವರೇ ನಮ್ಮ ಜಂಗಮರು ಎನ್ನುವ ಸಮಯವುಂಟಾಯಿತು. ಶ್ರೇಷ್ಠವಾದ ಮಾಹೇಶ್ವರರ ವಂಶದಲ್ಲಿ ಹುಟ್ಟಿದವನಿಗೇನೇ ಜಂಗಮನೆಂಬ ನ್ಯಾಯವು ಶಾಸ್ತ್ರದಲ್ಲಿ ಹೇಳಿದ್ದರೂ ಅಂತಹ ಜಂಗಮನು ದಾಸ ಜೋಗಿ ಜಂಗಮನೆಂದು ದಾಸಜೋಗಿಗಳ ವರ್ಗದಲ್ಲಿ ಸೇರಿಸಲ್ಪಟ್ಟಿರುವುದನ್ನು ನೋಡಿ ಯಾರಿಗೆ ತಾನೇ ವಿಷಾದವುಂಟಾಗಲಾರದು? ಇದಕ್ಕೆಲ್ಲ ಆಚಾರ್ಯರು ನೇಮಿಸಿದ ಪೀಠಾಧಿಪತಿಗಳ ಗುಣದೋಷಗಳೇ ಕಾರಣವಲ್ಲದೆ ಬೇರೆ ಕಾರಣವಿಲ್ಲವು. ಶಿಷ್ಯರಾದರೂ ಆಡಿಸುವ ಕೂಸುಗಳಂತಿರುವುದರಿಂದ ಗುರುಗಳು ಸುಶಿಕ್ಷಿತರಾದರೆ ಶಿಷ್ಯರೂ ಸುಶಿಕ್ಷಿತರಾಗುವರು. ಬಹುಕಾಲದಿಂದ ಗುರುಪೀಠಗಳು ದುರ್ದಶೆಯನ್ನು ಅನುಭವಿಸುತ್ತಲಿದ್ದು ಈಗ ವೀರಶೈವರ ಭಾಗ್ಯೋದಯದಿಂದ ಸದಾಚಾರಿಗಳೂ ವೀರಶೈವಸಿದ್ಧಾಂತಕೋವಿದರೂ ಸ್ವಜನಾಭಿಮಾನಸಂಕಲಿತರೂ ಸ್ವಧರ್ಮಾಚಾರನಿರತರೂ ಆದ ವಿದ್ವಾಂಸರು ಪೀಠಗಳನ್ನು ಆರೋಹಿಸುತ್ತಿರುವುದರಿಂದ ಇನ್ನು ಮುಂದೆ ಪೂರ್ವಾಚಾರ್ಯರ ತತ್ವಾರ್ಥವು ಪ್ರಕಾಶಕ್ಕೆ ಬರುವುದಲ್ಲದೆ ಬಹುಕಾಲದಿಂದ ಬೇರೂರಿನಿಂತಿರುವ ದುರಾಚಾರಗಳಿಗೆ ಎಡೆಯಿಲ್ಲದೆ ತತ್ವಾರ್ಥವು ಜನಾಂಗದಲ್ಲಿ ಸ್ಥಿರಗೊಂಡು ವಿಷಮಾವಸ್ಥೆಗೆ ಬಂದಿರುವ ವೀರಶೈವಸಮಾಜದಲ್ಲಿ ಐಕ್ಯವು ಸಂಭವಿಸಿ, ಪೂರ್ವಾಚಾರ್ಯರ ಯಶಃಪ್ರಭಾವನ್ನು ಪುನಃ ಭೂಲೋಕದಲ್ಲಿ ಸ್ಥಿರಗೊಳಿಸಿ ವೀರಶೈವಮತವನ್ನವಲಂಬಿಸಿದ ಶಿಷ್ಯವರ್ಗಕ್ಕೆ ಜ್ಞಾನೋಪದೇಶವಂ ಮಾಡುತ್ತ ಸ್ವಾರ್ಥತ್ಯಾಗಿಗಳಾಗಿ ವೀರಶೈವ ಸಮಾಜೋದ್ಧಾರಕಾರ್ಯದಲ್ಲಿ ಕಟಿಬದ್ಧರಾಗಿ ವೀರಶೈವ ಪ್ರಪಂಚಕ್ಕೆಲ್ಲಾ ಭುಕ್ತಿಮುಕ್ತಿಗಳನ್ನು ದಯಪಾಲಿಸಿ ರೇಣುಕಾದಿ ಪಂಚಾಚಾರ್ಯರಂತೆ ತಾವೂ ದಿಗ್ವಿಜಯವನ್ನು ಹೊಂದಿ ಮೇಲೆಹೇಳಿದ “ಆಚಿನೋತಿ” ಎಂಬ ಸಿದ್ಧಾಂತಶ್ಲೋಕೋಕ್ತಿಯಂತೆ ಪೂರ್ವಾಚಾರ್ಯಾನುಕ್ರಮವಾಗಿ ಬಂದ ಆಚಾರ್ಯಶಬ್ದವನ್ನು ಅನ್ವರ್ಥಕಪಡಿಸಿ ಗುರುತ್ವದ ಕರ್ತವ್ಯಕರ್ಮವನ್ನು ಅಹೋರಾತ್ರಿಯಲ್ಲಿಯೂ ಸ್ಮರಿಸುತ್ತ ಭಕ್ತರನ್ನುದ್ಧರಿಸುತ್ತ “ನಗುರೋರಧಿಕಂ” ಎಂಬ ಶ್ರುತ್ಯರ್ಥವನ್ನು ಪ್ರತಿಯೊಬ್ಬ ವೀರಶೈವ ಪೀಠಾಚಾರ್ಯರೂ ಸಫಲಗೊಳಿಸುವರೆಂದು ವೀರಶೈವಸಮಾಜವು ಹಂಬಲಿಸುತ್ತಲಿರುವುದು.

ಒಳದೇಶದ ವೃತ್ತಾಂತಗಳು.

ನಿರುದ್ಯೋಗದ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರಿಸುವುದಕ್ಕಾಗಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ನಿರ್ಮಾಣವಾಗಿರುವದು.

ಪ್ರಥಮ ಸಚಿವರಾದ ಮಿ|| ಕೆ. ಚಾಂಡಿ, ಬಿ. ಎ., ಯವರಿಗೆ ಶ್ರೀಮನ್ಮಹಾರಾಜರವರು ಈ ಸಾರೆಯ ದಸರಾ ದರ್ಬಾರಿನಲ್ಲಿ “ರಾಜಸಭಾ ಭೂಷಣ” ಎಂಬ ಪ್ರಶಸ್ತಿಯನ್ನು ದಯಪಾಲಿಸಿರುತ್ತಾರೆ.

ಕಳೆದ 9 ನೆ ತಾರೀಖಿನ ದಿವಸ ಸಾಯಂಕಾಲ ರಾಜಧಾನಿಯ ಅರಮನೆ ಕಛೇರಿಯ ಮೈದಾನದಲ್ಲಿ ಚೀಫ್ ಸ್ಕೌಟರಾದ ಶ್ರೀಯುವರಾಜರವರು ತಮ್ಮ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರಿಗೆ ‘ಚೀಫ್ ಕಬ್’ ಎಂಬ ಪದವಿಯನ್ನು ದಯಪಾಲಿಸಿದರು.

ಮ|| ಗುಂಡೂರಾವ್ ಪಾಧ್ಯಾಯರವರು ಬೆಂಗಳೂರಲ್ಲಿ ಪ್ರಾಣಿದಯೆ ಎಂಬ ಹೆಸರಿನಿಂದ ಒಂದು ಮಾಸಪತ್ರಿಕೆಯನ್ನು ಈಗ ಎರಡು ತಿಂಗಳಿಂದ ಹೊರಡಿಸುತ್ತಿದ್ದಾರೆ. ಪ್ರಾಣಿದಯಾಪರವಾದ ಈ ಪತ್ರಿಕೆಗೆ ಸರ್ವರೂ ಪ್ರೋತ್ಸಾಹ ಕೊಡಬೇಕೆಂದು ಇಚ್ಛಿಸುತ್ತೇವೆ. ವಾರ್ಷಿಕ ಚಂದಾ 8 ಆಣೆಯನ್ನಿಟ್ಟಿದ್ದಾರೆ.

ಮೈಸೂರು ಅರಮನೆ ಮತ್ತು ತಾಲ್ಲೂಕು ಖಜಾನೆಗಳಲ್ಲಿ ದುರುಪಯೋಗವಾಗಿರುವ ಹಣದ ಸಂಬಂಧವಾದ ವಿವಾದವನ್ನು ವಿಚಾರಿಸಲು ಮೈಸೂರಿನಲ್ಲಿ ಒಂದು ಸ್ಪೆಷಲ್ ಕೋರ್ಟು ನಿರ್ಮಿಸಲ್ಪಟ್ಟು ಮ|| ರಾ|| ಟಿ. ಜಿ. ರಾಮಯ್ಯನವರನ್ನು ಫಸ್ಟ್ ಕ್ಲಾಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿರುತ್ತಾರೆ.

ಸರ್ ಹಾಜಿ ಇಸ್ಮಾಯಿಲ್ ಸೇಟರವರು ಶ್ರೀ ಮಹಾಪ್ರಭುಗಳ ರಜತೋತ್ಸವದ ಜ್ಞಾಪಕಾರ್ಥವಾಗಿ ವಾಗ್ದಾನ ಮಾಡಿದ ಪ್ರಕಾರ ಮೈಸೂರು ರಾಜಧಾನಿಯ ಕೃಷ್ಣರಾಜ ಆಸ್ಪತ್ರೆಯ ಅಂಗಣದಲ್ಲಿ ಸದರಿ ಸೇಟರವರ ಹೆಸರಿನಿಂದ ಕಟ್ಟಲ್ಪಡುತ್ತಿರುವ ಔಟ್ ಪೇಷೆಂಟ್ ವಾರ್ಡಿನ ಶಂಕುಸ್ಥಾಪನ ಮಹೋತ್ಸವ ಕಾರ್ಯವು ನಿನ್ನೆ ದಿವಸ ಪ್ರಾತಃಕಾಲ 7½ ಘಂಟೆಯಲ್ಲಿ ಮಹಾಪ್ರಭುಗಳ ಕರಕಮಲದಿಂದ ನೆರವೇರಿಸಲ್ಪಟ್ಟಿತು

ಶ್ರೀ ಶೃಂಗೇರಿ ಪೀಠದ ಮಹಾಸ್ವಾಮಿಗಳ ಸವಾರಿಯು ಕಳೆದ ತಿಂಗಳು 23ನೆಯ ತಾರೀಖಿನ ದಿವಸ ರಾಜಧಾನಿಗೆ ಚಿತ್ತೈಸಿ ಈ ತಿಂಗಳ 15 ನೆಯ ತಾರೀಖಿನವರೆಗೆ ಶ್ರೀಮನ್ಮಹಾಪ್ರಭುಗಳವರ ಆತಿಥ್ಯದಲ್ಲಿದ್ದು ಪ್ರಭುವರ್ಯರಿಂದ ಪೂಜಾದಿಗಳನ್ನು ಕೈಕೊಂಡು ಶನಿವಾರ ಮಧ್ಯಾಹ್ನ 4 ಘಂಟೆಯ ಸಮಯದಲ್ಲಿ ಶ್ರೀರಂಗಪಟ್ಟಣಕ್ಕೆ ಪ್ರಯಾಣ ಬೆಳೆಯಿಸಿದರೆಂದು ಕೇಳುತ್ತೇವೆ. ಶ್ರೀ ಸ್ವಾಮಿಗಳವರ ಪ್ರಯಾಣ ಸಮಯದಲ್ಲಿ ಮರ್ಯಾದಾರ್ಥವಾಗಿ 21 ಗುಂಡುಗಳು ಹಾರಿಸಲ್ಪಟ್ಟವು.

ಆಕ್ಟಿಂಗ್ ಮುನ್ಸೀಫರಾಗಿದ್ದ ತುಮಕೂರಿನ ಅಡ್ವೊಕೇಟ್ ಮ|| ರಾ|| ಜಿ. ರುದ್ರಪ್ಪ, ಎಂ. ಎ., ಎಲ್. ಎಲ್. ಬಿ., ಯವರು ಸಾಗರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಮೈಸೂರಿನಲ್ಲಿ ಅಡಿಷನಲ್ ಮುನ್ಸೀಫರಾಗಿದ್ದ ಮ|| ರಾ|| ಎಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್., ರವರು ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ದಾವಣಗೆರೆಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದ ಮ|| ರಾ|| ಟಿ. ಎಚ್. ಮಲ್ಲಪ್ಪ, ಬಿ. ಎ., ಎಲ್. ಎಲ್. ಬಿ., ಯವ

ಗ್ರೆಸ್ ಸೋಸೈಟಿಯ ಮುಖ್ಯಾಸೀನರಾಗಿಯೂ ನಿಯ ಸ್ಪಟ್ಟಿರುತ್ತಾರೆ.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ದಸರಾ ಮಹೋತ್ಸವವು ಸೊರಬ ತಾಲ್ಲೂಕು ಆನವಟ್ಟಿ ಗ್ರಾಮದಲ್ಲಿ ಅತ್ಯಂತ ವೈಭವದಿಂದ ನೆರವೇರಿದುದು ಕೇಳಿ ಸಂತೋಷಿಸುತ್ತೇವೆ. ಶ್ರೀ ಮದುಜ್ಜಯಿನೀ ಪೀಠದ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಬಳ್ಳಾರಿ ಡಿಸ್ಟ್ರಿಕ್ಟ ನಹಡಗಲಿಯಲ್ಲಿರುವುದಾಗಿಯೂ, ಶ್ರೀ ಜಗದ್ಗುರು ಕೇದಾರ ಸಂಸ್ಥಾನದ ಮಹಾಸ್ವಾಮಿಗಳವರಸವಾರಿ ರಾಯಚೂರು ಜಿಲ್ಲಾ ಕುಷ್ಟಗಿ ತಾಲ್ಲೂಕು ಪುರತಗೇರಿ ಗ್ರಾಮದಲ್ಲಿರುವುದಾಗಿಯೂ, ಇದೇ ಸಂಸ್ಥಾನದ ಚಿಕ್ಕ ಶ್ರೀಗಳವರ ಸವಾರಿಯು ಹುವ್ವಿನ ಹಡಗಲಿ ತಾಲೂಕು ಮಸಲವಾಡ ಗ್ರಾಮದಲ್ಲಿರುವುದಾಗಿಯೂ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಬ್ರಹ್ಮದೇಶದಲ್ಲಿ ಮಿ|| ಜ್ಯೂಪಾಂಟಾ ಎಂಬ ಪರೋಕ್ಷನು ಜೀವವಿಮೆ ಕಂಪನಿಯ ಏಜಂಟನೆಂದು ಜನರನ್ನು ಮೋಸಗೊಳಿಸಿದ್ದರಿಂದ ಅವನನ್ನು ಕೈದು ಮಾಡಿದ್ದಾರೆ.

ಕಾರವಾರದಲ್ಲಿರುವ ಖಾನ್ ಬಹದ್ದೂರ್ ದಾದಾಬಾಯಿ ರತನ್ ಜಿ. ಸೇಟ್ ಬಿಲ್ಲಾರಾ ಎಂಬುವರು ಜನರ ವೈದ್ಯಶಾಲೆಗೆ ೮೦೦೦೦ ರೂಪಾಯಿಗಳನ್ನು ಧರ್ಮ ಮಾಡಿದರು.

ಸೂರತದ ಮ್ಯುನಿಸಿಪಾಲಿಟಿಯವರು ಹತ್ತು ವರ್ಷ ವಯಸ್ಸಿನೊಳಗೆ ಇರುವ ಪಶುಗಳನ್ನು ಕೊಲ್ಲದಂತೆ ಒಂದು ನಿಬಂಧನ ಮಾಡಬೇಕೆಂದು ಎಲ್ಲಾ ಮುನಿಸಿಪಾಲಿಟಿಗಳನ್ನು ಕೇಳಿದ್ದಾರೆ.

ಅಗ್ರಾಪಟ್ಟಣದ ಸಮೀಪದಲ್ಲಿರುವ ಮಧುರ ಸ್ಟೇಷನ್ ಮಾಸ್ತರ ಮೌಲವಿ ಅವಿನಾಸುಲ್ಲಾ ಎಂಬುವರು ಮಲಗಿರುವ ಸಮಯದಲ್ಲಿ ಶತ್ರುಗಳಿಂದ ಗುಂಡು ಹೊಡೆದು ಕೊಲ್ಲಲ್ಪಟ್ಟರು.

ವಿಜಾಪುರ ಜಿಲ್ಲೆಗೆ ಸೇರಿದ ಸಾಲೋಟಗಿ ಎಂಬ ಚಿಕ್ಕ ಗ್ರಾಮವು ಪ್ರಾಚೀನ ಕಾಲದಲ್ಲಿ ಕರ್ಣಾಟಕ ರಾಜ್ಯದ ಮುಖ್ಯ ವಿದ್ಯಾಪೀಠವಾಗಿತ್ತೆಂದು ಅಲ್ಲಿರತಕ್ಕ ಶಿಲಾಲೇಖದಿಂದ ವೇದ್ಯವಾಗಿರುವುದೆಂದು ತಿಳಿಯಬರುತ್ತದೆ.

ಇದೇ ತಿಂಗಳು 6 ನೇ ತಾರೀಖಿನಲ್ಲಿ ರಾಮಲೀಲಾ ಸಮಯದಲ್ಲಿ ಜಬ್ಬಲಪುರದ ಕೆಲವು ಪ್ರದೇಶಗಳಲ್ಲಿ ಹಿಂದೂ ಮುಸಲ್ಮಾನರಿಗೆ ದಂಡಾದಂಡಿ ಯುದ್ಧವು ನಡೆದು 18 ಜನಗಳು ಗಾಯ ಒಡೆದು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಪೋಲಂಡಿನಲ್ಲಿ ಒಂದು ನಾಯಿಯು ಬೊಗಳುವಾಗ ಮನುಷ್ಯರು ಮಾತಾಡುವಂತೆ ಸ್ಪಷ್ಟವಾಗಿ ಕೇಳಿಸುತ್ತದೆ. ಅದನ್ನು ಪರೀಕ್ಷಿಸಲು ಫ್ರಾನ್ಸಿನಲ್ಲಿ 50 ಜನ ಪ್ರಾಣಿಶಾಸ್ತ್ರಜ್ಞರು ಸೇರಿದ್ದು ವಿಮಾನದಿಂದ ಅದನ್ನು ಫ್ರಾನ್ಸಿಗೆ ಒಯ್ಯುವರಂತೆ!

ಜಬ್ಬಲಪುರದಲ್ಲಿ ದಸರಾ ಮಹೋತ್ಸವದ ಮೆರವಣಿಗೆಯು ಶಾಂತಿಯಿಂದ ನೆರವೇರಿದ ಮೇಲೆ ಹಿಂದೂ ಮುಸಲ್ಮಾನರಲ್ಲಿ ಒಮ್ಮಿಂದೊಮ್ಮೆ ಭಯಂಕರವಾದ ಬಡಿದಾಟವಾಗಿ 35 ಜನರಿಗೆ ಬಲವಾದ ಗಾಯಗಳಾಗಿವೆ. ಅಂಗಡಿಗಳು ಮುಚ್ಚಲ್ಪಟ್ಟಿವೆ.

ಮದ್ರಾಸಿನಲ್ಲಿ ನೀಲಪ್ರತಿಮೆಯನ್ನು ತೆಗೆದು ಹಾಕುವ ವಿಷಯದಲ್ಲಿ ಸತ್ಯಾಗ್ರಹವನ್ನು ನಡೆಸುತ್ತಿರುವವರಲ್ಲಿ ಇದುವರೆಗೂ ೪೨ ಜನಗಳನ್ನು ಸೆರೆಹಿಡಿದಿರುತ್ತಾರೆ. ಈ ಸತ್ಯಾಗ್ರಹವು ಮದ್ರಾಸಿನಲ್ಲಿ ದಿನೆ ದಿನೆ ಅಭಿವೃದ್ಧಿಯನ್ನು ಹೊಂದುತ್ತಿರುವದು.

ಮುಂಬೈ ಮುನಿಸಿಪಾಲಿಟಿಯವರು ಮುಂಬೈ ಸರ್ಕಾರದವರ ಮೇಲೆ ಮಾಡಿದ ಕೇಸಿನ ಸಂಬಂಧಿ ಪ್ರಸಿದ್ಧಪತ್ರಿಕೆಯನ್ನು ವಿಚಾರವಿಲ್ಲದೆ ಪ್ರಸಿದ್ಧಪಡಿಸಿದ್ದಕ್ಕಾಗಿ ಮಿ|| ಇಬ್ರಾಹಿಮ ರಹಿಮತುಲ್ಲಾ ಇವರು ಹೈ ಕೋರ್ಟಿನವರನ್ನು ಕ್ಷಮೆ ಬೇಡಿದರು.

ಬಂಗಾಲದ ಯಶೋಹರ ಎಂಬ ಗ್ರಾಮದಲ್ಲಿ ಮೂರು ಮಂದಿ ಮುಸಲ್ಮಾನರು ಒಂದು ಗೂಳಿಯನ್ನು ಕೊಯ್ದು ತಿಂದು ಮರುದಿನವೇ ಸತ್ತರು. ಅಲ್ಲಿಯ ಮುಸಲ್ಮಾನರಿಗೆ ಸ್ವಪ್ನದಲ್ಲಿ ಗೂಳಿಯು ಬಂದು ತಿವಿದಂತೆ ಕಾಣುತ್ತಿದೆಯಂತೆ! ಇದೇ ಅಲ್ಲವೇ ಗೋಮಾಹಾತ್ಮ್ಯವು?

ಮೆಕ್ಸಿಕೋ ಸರ್ಕಾರದವರು ಡಿಲಾವೆಗಾ, ರಾಡ್ರಿಗ್ಸ್, ಗೋಮೇಜ ಎಂಬ ಮೂರು ಜನರನ್ನು ಹಿಡಿದು ಕಾಡಿಗೆ ತೆಗೆದುಕೊಂಡುಹೋಗಿ ಫಾಸಿಗೆ ಹಾಕಿದರು. ಇವರು ದರೋಡೆಖೋರರ ಗುಂಪಿಗೆ ದಳವಾಯಿಗಳಾಗಿದ್ದರಂತೆ! ಹೀಗೆ ಇನ್ನೂ ಎರಡು ಗುಂಪುಗಳಿರುವುದರಿಂದ ಸರ್ಕಾರದವರು ಹಿಡಿಯುವ ಪ್ರಯತ್ನದಲ್ಲಿದ್ದಾರೆ.

ಉನಾವ ಡಿಸ್ಟ್ರಿಕ್ಟಿಗೆ ಸೇರಿದ ಮೌರಾವನವೆಂಬ ಗ್ರಾಮದಲ್ಲಿ ನಡೆದ ಹಿಂದೂ ಮುಸಲ್ಮಾನರ ಬಡಿದಾಟದಲ್ಲಿ 13 ಜನ ಹಿಂದುಗಳ ಮೇಲೂ-17 ಜನ ಮುಸಲ್ಮಾನರ ಮೇಲೂ ಖಟ್ಲೆಯು ನಡೆದು 17 ಜನ ಮುಸಲ್ಮಾನರಿಗೆ 6 ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು. ಹಿಂದುಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು.

ಸಿಂಧ ಗುಜರಾಥ ಪ್ರಾಂತದಲ್ಲಿ ಓಧೋ ಎಂಬ ಹುಡುಗನ ಶುದ್ಧೀಕರಣದ ವಿಷಯದಲ್ಲಿ ನಡೆದ ದಂಗೆಯಲ್ಲಿ ಅಪರಾಧಿಗಳಾದ 22 ಜನ ಹಿಂದುಗಳಲ್ಲಿ 15 ಜನರು ನಿರ್ದೋಷಿಗಳೆಂದು ಬಿಡಲ್ಪಟ್ಟು ಒಬ್ಬ ಅಪರಾಧಿಗೆ 1,000 ದಂಡವೂ ಉಳಿದ 6 ಜನರಿಗೆ ಐದೈದು ನೂರು ರೂಪಾಯಿಗಳ ದಂಡವೂ ವಿಧಿಸಲ್ಪಟ್ಟಿತು.

ಕಾಶೀಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಹಿಂದೂ ವಿಶ್ವವಿದ್ಯಾಲಯದ ವಾರ್ಷಿಕ ವ್ಯಯವು 10 ಲಕ್ಷ ರೂಪಾಯಿಗಳ ವರೆಗಿದ್ದು ಸದ್ಯಃ ಈ ವಿಶ್ವವಿದ್ಯಾಲಯಕ್ಕೆ 15 ಲಕ್ಷ ರೂಪಾಯಿಗಳು ಸಾಲವಾಗಿರುವುದರಿಂದ ಆ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ದೀಪಾವಳಿಯ ವಿರಾಮ ಕಾಲದಲ್ಲಿ ಹಣವನ್ನು ಶೇಖರಿಸುವುದಕ್ಕೋಸ್ಕರ ದೇಶಮಧ್ಯದಲ್ಲಿ ಸಂಚರಿಸುವವರಿದ್ದಾರೆಂದು ತಿಳಿದುಬರುತ್ತದೆ.

ಗುಜರಾಥ ಪ್ರಾಂತದಲ್ಲಿಯ ಬಾರಡೋಲಿ ತಾಲ್ಲೂಕಿನಲ್ಲಿರುವ ಒಕ್ಕಲಿಗರು ೭ ನೇ ತಾರೀಖಿನ ದಿವಸ ಪುನಿ ಎಂಬಲ್ಲಿ ಸಭೆ ಮಾಡಿ ಸರ್ಕಾರಕ್ಕೆ ಭೂಗಂದಾಯವನ್ನು ಕೊಡಲಾಗದೆಂಬ ವಿಷಯದಲ್ಲಿ ಒಕ್ಕಟ್ಟಿನಿಂದ ಸತ್ಯಾಗ್ರಹವನ್ನು ನಡೆಯಿಸಬೇಕೆಂದು ನಿರ್ಧಾರವಮಾಡಿಕೊಂಡರು. ಈ ಸಭೆಯವರು ಗುಜರಾಥ ಪ್ರಾ. ಕ. ಕಮಿಟಿಯ ಅಧ್ಯಕ್ಷರಾದ ಮಿ|| ವಲ್ಲಭಭಾಯಿ ಪಟೇಲರನ್ನು ಈ ಚಳವಳಿಯಲ್ಲಿ ಪ್ರಧಾನಪಟ್ಟವನ್ನು ವಹಿಸಬೇಕೆಂದು ಕೇಳಿಕೊಂಡಿದ್ದಾರಂತೆ.

ಆಂಧ್ರದೇಶೀಯರು ಕೆಲವು ಪ್ರಾಂತಗಳನ್ನು ತಮ್ಮ ಆಂಧ್ರದೇಶಕ್ಕೆ ಸೇರಿಸಿಕೊಂಡಂತೆ ಬಳ್ಳಾರಿ ಪ್ರಾಂತವನ್ನು ಸಹ ಆಂಧ್ರದೇಶಕ್ಕೆ ಸೇರಿಸಿಕೊಳ್ಳಲು ವಿಶೇಷವಾಗಿ ಪ್ರಯತ್ನಿಸುತ್ತಲಿದ್ದಾರೆ. ಕರ್ಣಾಟಕ ಏಕೀಕರಣ ಸಭೆಯವರು ಅವರಪ್ರಯತ್ನವನ್ನು ಅನೇಕವಿಧವಾಗಿ ನಿರೋಧಿಸುತ್ತಲಿದ್ದಾರೆ. ಆದರೂ ಇವರು ಮಾಡುವ ಪ್ರಯತ್ನವು ಅವರಪ್ರಯತ್ನಕ್ಕೆ ಸರಿಹೋಗದಿರುವುದರಿಂದ ಇನ್ನೂ ಹೆಚ್ಚಾದ ಜಾಗರೂಕತೆಯೊಡನೆ ಏಕಮತ್ಯದಿಂದ ತಮ್ಮ ಪ್ರಾಂತವನ್ನು ಕಾಪಾಡಿಕೊಳ್ಳುವುದರಲ್ಲಿ ಬದ್ಧಾದರರಾಗಬೇಕಾಗಿ ನಮ್ಮಗಳ ಕೋರಿಕೆ.

ಕೊಲ್ಲಾಪುರದಲ್ಲಿ ನೆರವೇರಿದ ದಕ್ಷಿಣ ಮಹಾರಾಷ್ಟ್ರ ಜೈನಮಹಾಸಭೆಯ 29 ನೆಯ ಅಧಿವೇಶನದಲ್ಲಿ ಕೊಲ್ಲಾಪುರದ ಶ್ರೀಮನ್ ಮಹಾರಾಜರವರು "ಧರ್ಮದ ಹೆಸರಿನಿಂದ ಅಂಧಶ್ರದ್ಧೆಯುಳ್ಳ ಕೆಲಜನರು ಅಮಾನುಷ ರೀತಿಯ ಹಿಂಸೆಯನ್ನು ಮಾಡುತ್ತಿರುವರು. ಆದರೆ ನನ್ನ ಅಮಲ್ದಾರರ ಕಡೆಯಿಂದ ಅಂಧ ವಿಧಿಗಳಿಗೆ ಅಪ್ಪಣೆಯು ಸಿಗದ ಹಾಗೆ ಎಷ್ಟೋ ದಿವಸಗಳಿಂದ ಏರ್ಪಾಡು ಮಾಡಿರುವೆನೆಂಬ ಸಂಗತಿಯನ್ನು ನೀವು ಅರಿತವರಾಗಿರುವಿರಿ" ಎಂದು ಅಪ್ಪಣೆ ಕೊಡಿಸಿದರಂತೆ! ಈ ಮಹಾರಾಜರವರ ಮಾರ್ಗವನ್ನು ಹಿಂದುಸ್ಥಾನದ ಸಕಲ ಪ್ರಭುಗಳೂ ಅನುಸರಿಸಿ ಭಾರತಮಾತೆಯ ಮನಸ್ಸನ್ನು ಸಂತೋಷಗೊಳಿಸುವುದು ಉಚಿತವಲ್ಲವೇ!

ಮುಸಲ್ಮಾನರ ಅಹಮ್ಮದೀಯಾ ಪಂಥದ ಧರ್ಮಗುರುಗಳಾದ ಮಿರ್ಜಾ ಬಸರುದ್ದೀನ ಸಾಹೇಬರವರು "ಪೈಗಂಬರರ ಕಾಲದಲ್ಲಿ ಅನೇಕರು ಅವರನ್ನು ದೂಷಿಸಿದರೂ ಅವರು ಯಾರಿಗೂ ಮರಣಶಿಕ್ಷೆಯನ್ನು ವಿಧಿಸಲಿಲ್ಲವೆಂದೂ, ಮಸೀದಿಗಳ ಮುಂದೆ ಹಿಂದುಗಳು ವಾದ್ಯ ಬಾರಿಸಕೂಡದೆಂದು ಮುಹಮ್ಮದೀಯರು ಹೇಳುವುದು ಯೋಗ್ಯವಲ್ಲವೆಂದೂ, ಗೋವುಗಳನ್ನೂ ದನಗಳನ್ನೂ ಕೊಯ್ಯುವದನ್ನು ಮನೆಗಳಲ್ಲಿ ಹೊರತು ಹಿಂದುಗಳ ದೃಷ್ಟಿಗೆ ಬೀಳತಕ್ಕ ಇತರ ಸ್ಥಳಗಳಲ್ಲಿ ಮಾಡಕೂಡದೆಂದೂ ಮುಸಲ್ಮಾನ ಬಾಂಧವರಿಗೆ ಉಪದೇಶ ಮಾಡಿದ್ದಾರೆ. ಮುಸಲ್ಮಾನಬಾಂಧವರು ಮೇಲ್ಕಂಡ ಧರ್ಮಗುರುಗಳ ಉಪದೇಶದಂತೆ ವರ್ತಿಸಿ ಭರತಖಂಡಕ್ಕೆ ಕಲ್ಯಾಣವನ್ನುಂಟುಮಾಡುವುದು ಯೋಗ್ಯವಲ್ಲವೆ?

ಭೋಪಾಲ ಸಂಸ್ಥಾನವು ಕೇವಲ ಮುಹಮ್ಮದೀಯ ರಾಜ್ಯವಾಗಿದ್ದರೂ ಈ ಸಂಸ್ಥಾನದಲ್ಲಿ ಈ ವರ್ಷ ದಸರಾಮಹೋತ್ಸವವನ್ನು ಹಿಂದುಗಳು ಅತಿವಿಜೃಂಭಣೆಯಿಂದ ನಡೆಸಿದರು. ಈ ಉತ್ಸವಕ್ಕೆ ಅಂದಾಜು ೧೦ ಸಾವಿರದವರೆವಿಗೂ ಹಿಂದುಗಳು ಸೇರಿದ್ದರು. ಮುಹಮ್ಮದೀಯರು ಸಹ ಹಿಂದೂಗಳೊಡನೆ ಸ್ನೇಹಭಾವದಿಂದ ಸೇರಿಕೊಂಡಿದ್ದರು. ಭೋಪಾಲ ಸಂಸ್ಥಾನದ ನವಾಬ ಸಾಹೇಬರು ಈ ದಸರಾ ಮಹೋತ್ಸವಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟಿದ್ದರಲ್ಲದೆ ತಾವೂ ಕೂಡ ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವದ ಕೊನೆಯಲ್ಲಿ ನವಾಬಸಾಹೇಬರಿಗೆ ಹಿಂದುಗಳು ಒಂದು ಮಾನಪತ್ರವನ್ನು ಒಪ್ಪಿಸಿದರು. ಇದೊಂದು ಹಿಂದುಗಳಿಗೂ ಮುಹಮ್ಮದೀಯರಿಗೂ ಸಂತೋಷದ ಸಂಗತಿಯಾಗಿದೆ. ಹೀಗೆ ಎಲ್ಲಾ ಕಡೆಯಲ್ಲಿಯೂ ಹಿಂದುಗಳೂ ಮುಹಮ್ಮದೀಯರೂ ಪರಸ್ಪರ ವೈಷಮ್ಯಗಳನ್ನು ಬಿಟ್ಟು ಉಭಯರೂ ತಮ್ಮ ತಮ್ಮ ಸಹಾನುಭೂತಿಯನ್ನು ತೋರಿಸುತ್ತ ಬಂದರೆ ಭಾರತಮಾತೆಯು ಪರಿತೃಪ್ತಳಾಗಿ ಇತರರಿಗೆ ಅವಕಾಶವಿಲ್ಲದೆ ಭರತಖಂಡದಲ್ಲಿ ವಾಸವಾಗಿರುವವರೆಲ್ಲರೂ ಅಪ್ರತಿಹತವಾದ ಸೌಖ್ಯವನ್ನು ಹೊಂದುವರು. ಹಾಗಿಲ್ಲವಾದರೆ ರಂಧ್ರಾನ್ವೇಷಿಗಳಿಗೆ ಅವಕಾಶವುಂಟಾಗಿ ನಮ್ಮ ಸೌಖ್ಯಕ್ಕೆ ನಾವೇ ಕಂಟಕರಾಗಬೇಕಾಗುವುದಲ್ಲದೆ ಹೊರನಿಯವರು ಆದೇಶವಾಗಬೇಕಾಗುವುದು. ಇನ್ನಾದರೂ ಹಿಂದೂ ಮುಸಲ್ಮಾನರು ಭೋಪಾಳದಲ್ಲಿ ನಡೆದ ಉಭಯರ ಏಕೀಕರಣವನ್ನಾದರೂ ಮೇಲ್ಪಂಕ್ತಿಯನ್ನಾಗಿ ಮಾಡಿಕೊಳ್ಳುವುದು ಲೇಸು.

ಸ್ವೀಕಾರ.

ಧಾರವಾಡ ಜಿಲ್ಲಾ ಗದಗ ತಾಲೂಕು ಹಮ್ಮಿಗಿ ಗ್ರಾಮದ ವೇ|| ಶಿರಹಟ್ಟಿ ವೀರಯ್ಯನವರು ಶಮಾ ಸಮರ್ಪಣ ದ್ವಾರಾ ೫ ರೂಪಾಯಿಗಳನ್ನು ಕಳುಹಿಸಿದ್ದಾರೆ.

ದಾವಣಗೆರೆ ಹಿರೇಮಠದ ವೇ|| ಮಹಾಲಿಂಗಯ್ಯನವರು ೫ ರೂಪಾಯಿಗಳನ್ನೂ ಮ|| ರಾ|| ತಿಳುವಳ್ಳಿ ನಾಗಪ್ಪನವರು ೧ ರೂಪಾಯಿಯನ್ನೂ ಮ|| ರಾ|| ನಾಗಾನಹಳ್ಳಿ ಮುರಿಗೆಪ್ಪನವರು ೧ ರೂಪಾಯಿಯನ್ನೂ ಕಳುಹಿಸಿದ್ದಾರೆ.

ತಿಪಟೂರು ಗ್ರಾಮವಾಸಿಗಳಾದ ಮ|| ರಾ|| ಬೇಗೂರು ಚಿಕ್ಕಚನ್ನಬಸಪ್ಪನವರ ಮಗ ಗಂಗಪ್ಪನೆಂಬ ೧೦ ವರ್ಷದ ಬಾಲಕನು ಈ ಪತ್ರಿಕೆಯ ಪೋಷಣಕ್ಕಾಗಿ ೨ ರೂಪಾಯಿಗಳನ್ನು ಕಳುಹಿಸಿದ್ದಾನೆ. ಇಂಥ ಚಿಕ್ಕ ಬಾಲಕನು ಅಸಾಧಾರಣವಾದ ಗುರುಭಕ್ತಿಯಿಂದ ಸಹಾಯಮಾಡಿರುವದು ಅತ್ಯಂತ ಪ್ರಶಂಸನೀಯ ವಿಷಯವಾಗಿದೆ.

ನ್ಯಾಮತಿವಾಸಿ ಮ|| ಹೊಮ್ಮರಡಿ ರೇವಪ್ಪನವರ ಮಗ ಗುರುಲಿಂಗಪ್ಪನಿಗೆ ಮ|| ನ್ಯಾಮತಿ ಶೃಂಗೇರಿ ಶಂಕರಪ್ಪನವರ ಪುತ್ರಿಯ ನಿಶ್ಚಯಕಾರಣದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ ೨ ರೂಪಾಯಿಗಳು ಮ|| ಮಾಸ್ತಿ ಮುರಿಗೆಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಸುಖವನ್ನುಂಟುಮಾಡಲೆಂದು ಕೋರುತ್ತೇವೆ. ಸಂ.—

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮತೇ ಭಗವದೇಕೋರಾಮಾರಾಧ್ಯಮದ್ಗುರವೇನಮಃ

ದುರಾಚಾರಗಳ ಬಹಿಷ್ಕಾರ!

ಪ್ರಿಯವಾಚಕಬೃಂದ! ಈ ಮೊದಲೊಂದುಸಾರೆ ತಮ್ಮ ಮುಂದೆ ಸದಾಚಾರದಬಗ್ಗೆ ವಿವೇಚನಮಾಡಿದ್ದಾಗಿದೆ. ಈಗ ದೇಶದಲ್ಲಿ ಮತ್ತು ನಮ್ಮ ವೀರಶೈವ ಸಮಾಜದಲ್ಲಿ ನಡೆಯುತ್ತಿರುವ ಧರ್ಮರೀತಿ ವಿರುದ್ಧಗಳಾದ ಅತ್ಯಾಚಾರಗಳನ್ನು ಹೊರಪಡಿಸುವದೊಂದು ಕರ್ತವ್ಯವೆಂದು ಭಾವಿಸುತ್ತೇನೆ. ಯಾಕಂದರೆ, ಯಾವದೊಂದು ರಾಷ್ಟ್ರವು ಅಥವಾ ಸಮಾಜವು ಇಲ್ಲದೆ ಯಾವದೊಂದು ವ್ಯಕ್ತಿಯು ತನ್ನ ತಪ್ಪು ತನಗೆ ತಿಳಿದ ಹೊರತು ಅದನ್ನು ತಿದ್ದಿಕೊಳ್ಳುವದಾಗುವದಿಲ್ಲ, ಆದ್ದರಿಂದಲೇ ದೇಶಾಭ್ಯುದಯದ ಕುರಿತಾಗಿ ಹೋರಾಡುವ ಸಮಾಜಹಿತೈಷಿಗಳು ದೇಶದ ನೈತಿಕ ಧಾರ್ಮಿಕ ವಿಷಯಗಳನ್ನು ಕಂಡುಹಿಡಿದು, ಅದರ ತಿದ್ದುಪಾಟಿಗಾಗಿ ಆ ಆ ದೋಷಗಳನ್ನು ಬಹಿಷ್ಕರಿಸಿ, ಆಗಾಗ್ಗೆ ಯಥಾಶಕ್ತಿ ಪ್ರಯತ್ನಪಟ್ಟು ಲೋಕಸುಧಾರಣೆಯನ್ನು ಮಾಡುವದು ತಮ್ಮ ಪರಮಪವಿತ್ರ ಕರ್ತವ್ಯವೆಂದು ತಿಳಿಯುತ್ತಾರೆ ಅಷ್ಟೇ, ನಾನಾದರೂ ಈಗ ಲೋಕದುರಾಚಾರಗಳ ಚಿತ್ರವನ್ನು ತೆಗೆಯುವೆ!

ದುರಾಚಾರವೆಂದರೆ ಶಾಸ್ತ್ರ ಮತ್ತು ಲೋಕವಿರುದ್ಧವಾದ ಆಚರಣೆಯು ಅಥವಾ ದುಷ್ಪ್ರವರ್ತನವು. ಇಂತಹ ದುರಾಚಾರ ಪ್ರಚಾರವು ನಮ್ಮ ದೇಶದಲ್ಲಿ ಮತ್ತು ನಮ್ಮ ವೀರಶೈವಸಮಾಜದಲ್ಲಿ ಹೆಚ್ಚುತ್ತ ನಡೆದಿರುವದನ್ನು ನೋಡಿ, ನಾವೆಲ್ಲರೂ ಕಿಂಕರ್ತವ್ಯತಾಮೂಢರಾಗುವದಕ್ಕಿಂತಲೂ ಧಾರ್ಮಿಕ, ನೈತಿಕ ಹಾವಳಿಯಿಂದ ದುರಾಚಾರಮಾರ್ಗಗಾಮಿಗಳನ್ನು ಶಿಕ್ಷಿಸುವದು ಯೋಗ್ಯವಾಗಿರುವದು.

ಲೋಕರೂಢವಾದ ದುರಾಚಾರಗಳು.

1. ಭರತಖಂಡದಲ್ಲಿ ವೇದತಂತ್ರನುಸಾರವಲಂಬಿಗಳೆಲ್ಲರೂ ಆಸ್ತಿಕರು (ದೇವರಅಸ್ತಿತ್ವವನ್ನು ಒಪ್ಪತಕ್ಕವರು) ಪ್ರತಿಸ್ಪತ್ಯಾಗವಾದಿಗಳು ಇವರ ನೀತಿಧರ್ಮ ಲೌಕಿಕಾಚಾರದ ಕಾರ್ಯನಿಯಮಗಳು. ಸದ್ಯಕ್ಕೆ ಪ್ರಚಾರದಲ್ಲಿರುವ ಜಾತಿಭೇದವು, ಪೂರ್ವದಲ್ಲಿ ದೇಶಹಿತದ ಒಂದಾನೊಂದು ಅನಿವಾರ್ಯಕಾರಣವಾದುದರಿಂದಲೇ ಸ್ವಾಭಾವಿಕವಾಗಿರುವದೆಂಬುವದರಲ್ಲಿ ಇವರ ಪೂರ್ಣವಾದ ಸಮ್ಮತಿಯು. ಹೀಗಿದ್ದು ಇತ್ತೀಚಿಗೆ ನೂತನ ವಿಚಾರಪರ ಪ್ರಶ್ನತನಾದ ಜಾತಿಭೇದ ನಿರಾಕರಣವೆಂಬ ಪ್ರಶ್ನವನ್ನು ಹೊರಟಿ, ಅದನ್ನು ಪಾಶ್ಚಾತ್ಯಜನರು ಅಂಗೀಕರಿಸಿ, ಜಗತ್ತಿನ ಸನಾತನ ಧಾರ್ಮಿಕಸದಾಚಾರಣೆಯನ್ನು ಕೆಡಿಸುತ್ತಿರುವದು ಧಾರ್ಮಿಕದೃಷ್ಟಿಯಿಂದ ಮೊದಲನೆಯ ದುರಾಚಾರವಾಗಿರುವದು.

2. ಪೂರ್ವಸ್ಥಾಪಿತವಾದ ಕುಲಭೇದದಿಂದಲೂ, ಆರೋಗ್ಯದೃಷ್ಟಿಯಿಂದಲೂ ಅನರ್ಥಕಾರಿಗಳಾದ, ಹಿಂದೂದೇಶದಲ್ಲಿ ಎಂದೂ ಪ್ರಚಾರದಲ್ಲಿಲ್ಲದ ಚಹಾ, ಕಾಫೀ, ಸೋಡಾ, ಲಿಮ್ಲೇಟು ಮೊದಲಾದವುಗಳನ್ನು ಎಲ್ಲರೂ ಏಕತ್ರಸೇರಿ ಪಾನಮಾಡುವದೊಂದು ಒಡೆದು ಕಾಣುವಂಥ ದುರಾಚಾರವಲ್ಲವೇ?

3. ದೇಶದಾರಿದ್ರ್ಯವನ್ನು ತೊಲಗಿಸಿ ಸಂಪತ್ತನ್ನು ಹೆಚ್ಚಿಸುವದಕ್ಕಾಗಿ ದೇಶೀಸಕ್ಕರೆ. ದೇಶೀಬಟ್ಟೆ ಮೊದಲಾದ ಪವಿತ್ರವಸ್ತುಗಳನ್ನೇ ಉಪಯೋಗಿಸುವದು ಯೋಗ್ಯವಾಗಿದ್ದು, ಅವುಗಳನ್ನು ಬಿಟ್ಟು ಪರದೇಶೀಯ ವಸ್ತುಗಳನ್ನು ಪುರಸ್ಕರಿಸುತ್ತಿರುವದು ದೇಶಘಾತುಕವಾದ ದುಷ್ಟನಡತೆಯಾಗಿರುತ್ತದೆ

4. ಧನದಾಶೆಯಿಂದ ಮಾಡಲ್ಪಡುವ ಬಾಲವಿವಾಹ ವಿಷಮವಿವಾಹಗಳೂ ಮತ್ತು ತೆರವುತೆಗೆದುಕೊಂಡು ಮಕ್ಕಳನ್ನು ವಿಕ್ರಯಿಸುವ ದುರ್ವ್ಯಾಪಾರವೂ ಇವೆಲ್ಲವುಗಳು ನರಕದ್ವಾರವನ್ನು ತೋರಿಸುವ ದುರಾಚಾರಗಳಾಗಿರುವವು.

5. ನಮ್ಮ ದೇಶದಲ್ಲಿ ವಿಶೇಷವಾಗಿ ವಾಸವಾಗಿರುವ ಮುಸಲ್ಮಾನ ಮತ್ತು ಹಿಂದೂ ಧರ್ಮಾನುಯಾಯಿಗಳು ತಮ್ಮ ತಮ್ಮ ಪವಿತ್ರಧರ್ಮಗಳನ್ನು ತಾವು ಅವಲಂಬಿಸಿದ್ದು, ನಿಷ್ಕಾರಣವಾಗಿ ಅನ್ಯೋನ್ಯ ವೈಮನಸ್ಯವನ್ನು ಬೆಳೆಸಿಕೊಂಡು ನಿರರ್ಥಕವಾಗಿ ಜಗಳವಾಡಿ, ಕೊಲೆಗೀಡಾಗಿ ಅರ್ಥ ಪ್ರಾಣ ಮಾನಗಳನ್ನು ನಾಶಮಾಡಿಕೊಳ್ಳುತ್ತಿರುವದು ದೇಶ ಮತ್ತು ಆತ್ಮಘಾತುಕ ದುರಾಚರಣೆಯಾಗಿರುವದು.

6. ನಮ್ಮ ಪರಮಪವಿತ್ರವಾದೀ ಭಾರತಭೂಮಿಯು ಪ್ರತಿನಿತ್ಯ ಅನೇಕ ಗೋವು ಕುರಿ ಮೊದಲಾದ ಬಡಪ್ರಾಣಿಗಳ ರಕ್ತಬಿಂದುಗಳಿಂದ ತೋಯುತ್ತಿರುವದನ್ನು ಕಣ್ಣಾರೆ ನೋಡಿ ಸುಮ್ಮನಿರುವದೂ, ಮತ್ತು ಈಗ ಅಲ್ಲಲ್ಲಿ ಸ್ಥಾಪಿತವಾಗಿರುವ ಪ್ರಾಣಿದಯಾ ಪ್ರಚಾರಕಸಂಘಗಳು ಕೈಕೊಂಡಿರುವ ಸದುದ್ಯಮಕ್ಕೆ ಬೆಂಬಲವಾಗದಿರುವದೂ ನಮ್ಮ ಅಹಿಂಸಾಧರ್ಮದ ಅನಾದರಣವು ದುರಾಚಾರದ ಪುರಸ್ಕಾರವೂ ಆಗುವದು.

7. ಪ್ರಾಚೀನಕಾಲದಿಂದ ನಾವು ಉಪಯೋಗಿಸುತ್ತಿರುವ ದೇಶೀಯ ಪವಿತ್ರವಸ್ತುಗಳನ್ನು ಬಿಟ್ಟು, ವಾರಾಂಗನೆಯಂತೆ ಮೋಹಿಸಿ ಅರ್ಥನಾಶವನ್ನು ಮಾಡುತ್ತಿರುವ ಬಾಸ್ಸನ್‌ಸಕ್ಕರೆ, ಕಾಚಿನಪಾತ್ರ, ಗ್ಲಾಸು, ಗ್ಯಾಸಿನದೀಪ, ಕಪ್ಪು, ಟೀ, ಸಿಗರೇಟು, ಸ್ಟೈನಹೋಕ, ಪ್ಯಾನ್ಸಿ, ಮತ್ತು ಬಿಸುಗಾಡ ಹ್ಯಾಂಕರಚೀಫು, ಮಿನುಗುತ್ತಿರುವ ಪಿಯರ್ಸ್ ಸೋಪು, ಹಣವನ್ನು ಜಗ್ಗುವ ಇಟಾಲಿಯನ್ ಕ್ಯಾಪು, ಇವೇ ಮೊದಲಾದ ಗಣನಾತೀತಪದಾರ್ಥಗಳು ಹಿಂದುಸ್ಥಾನದ ರಕ್ತವನ್ನು ಹೀರುತ್ತಿದ್ದಾಗ್ಯೂ ಅವುಗಳನ್ನು ಪ್ರೀತಿಸುವದು ದೇಶದಾರಿದ್ರ್ಯವನ್ನು ತಂದುಕೊಳ್ಳುವ ದುರಾಚಾರವಾಗಿರುವದು

8. "ಮೇಡ ಇನ" ಎಂಬವರ ಅರ್ಥವನ್ನು ತಿಳಿಯದ ನಮ್ಮ ಅಶಿಕ್ಷಿತ ಮತ್ತು ಸುಶಿಕ್ಷಿತಸ್ತ್ರೀಯರು ಸ್ವಾಭಿಮಾನಶೂನ್ಯರಾಗಿ ಬಳೆ, ಬಾಚಣಿಕೆ, ಕತ್ತರಿ, ಸ್ಪೂನು (ಚಮಚೆ) ಮೊದಲಾದ ವಸ್ತುಗಳನ್ನು ಉಪಯೋಗಿಸುವದು ಅಂತಃಕರಣವಿರುವ ದುರಾಚಾರವಾಗಿರುವದು

9. ಕನ್ನಡದೇಶದಲ್ಲಿ ಕನ್ನಡತಾಯಿಯು ಹೊಟ್ಟೆಯಲ್ಲಿ ಹುಟ್ಟಿ, ಕನ್ನಡನುಡಿಯ ಸಂಸ್ಕಾರವುಳ್ಳ ರಕ್ತವೇ ತನ್ನ ಎಲ್ಲ ನಾಡಿಗಳಲ್ಲಿ ಹರಿಯುತ್ತಲಿದ್ದು, ಕನ್ನಡದ ಅಭಿಮಾನವಿಲ್ಲದೆ ಕನ್ನಡಮನಸ್ಸುಳ್ಳವುಗಳೂ ಕನ್ನಡ ಶಾಲೆಯು ಶಿಕ್ಷಕನು ಆದ—ಬನ್ನಿ ಸರ್! ಚೇರಿನ ಮೇಲೆ ಕೂತುಕೊಳ್ಳಿ! ಮಾರ್ನಿಂಗ್ ಟಾಯಮ್ಮಿಗೆ ನಿಮ್ಮ ಹುಡುಗನು ಸ್ಕೂಲಿಗೆ ಬರುವದಿಲ್ಲ? ಉತ್ತರ ಇಲ್ಲ ಸರ ಅವನು ಏಕೆ ಇದ್ದಾನೆ, ಮನೆಯಲ್ಲಿಯೇ ಸ್ಟಡೀ ಮಾಡುತ್ತಾನೆ. ಇದರಂತೆ ಪರಭಾಷೆಯ ಶಬ್ದಗಳನ್ನು ಉಪಯೋಗಿಸಿ, ಸ್ವಭಾಷೆಯ ಕೊಲೆಯನ್ನು ಮಾಡುತ್ತಿರುವದು ಕಿವಿಯಿಂದ ಕೇಳಲಾರದ ಪಾಪಾಚಾರವಾಗಿರುವದು.

ವೀರಶೈವರಲ್ಲಿ ರೂಢವಾದ ದುರಾಚರಣಗಳು.

10 ಶ್ರೀಮತ್ಪಂಚಾಚಾರ್ಯ ಸ್ಥಾಪಿತವಾದ ವೀರಶೈವಮತದಲ್ಲಿ ಕಲಿಕಾಲದಿಂದ ಕೆಲವು ದುರಾಚಾರಗಳು ಸೇರಿಕೊಂಡಿರುವವು. ಅವು ಯಾವವೆಂದರೆ —ವೀರಶೈವ ಧರ್ಮಾರ್ಥಕಾಮ ಮೋಕ್ಷಪ್ರತಿಪಾದಕ ಮತಗ್ರಂಥಗಳು ಮತಸ್ಥಾಪಕರೇ ಪರಮಗುರುಗಳೆಂದು ಘನಗರ್ಜನೆಯನ್ನು ಮಾಡುತ್ತಿರುವವು. ಮತ್ತು ಅದೇ ಅರ್ಥವನ್ನು ಧರ್ಮತತ್ವವೇತ್ತರಾದ ಪಂಡಿತರು ಎಲ್ಲರಿಗೂ ಉಪದೇಶಿಸುತ್ತಿರುವರು. ಹೀಗಿದ್ದು, ವೀರಶೈವಮತದ ಚತುರಾಶ್ರಮಿಗಳಲ್ಲಿ ಕೆಲವರು ಬದಿಕಂತೆ ಸ್ವೇಚ್ಛಾಚಾರಿಗಳಾಗಿರುವದು ಧರ್ಮವಿರುದ್ಧವಾದ ದುರಾಚಾರವಾಗಿದೆ.

11. ಅವ್ಯಾಕೃತಬ್ರಾಹ್ಮಣರೆಂದೆನಿಸಿದ ವೀರಶೈವರು, ತಮ್ಮ ವೈದಿಕಸದಾಚಾರಗಳನ್ನು ಮರೆತು, ಗುರುದತ್ತ ಲಿಂಗರೂಪ ಯಜ್ಞೋಪವೀತದ ಪರಿವೆಯಿಲ್ಲದೆ ಕ್ರಾಸಿನ ಬೈತಲೆಯಲ್ಲಿಮಾತ್ರ ಪಕ್ಷಸ್ಥರಾಗಿ, ಗುರುಧರ್ಮವನ್ನು ಧಿಕ್ಕರಿಸುತ್ತ, ಯಾವನೋ ಒಬ್ಬನ ವಚನಶಾಸ್ತ್ರದ ಗೂಢತತ್ವಗಳು ವೀರಶೈವಸಮಾಜವನ್ನು ವಿಸ್ತರಿಸುವ ಉದಾತ್ತ ಕಲ್ಪನೆಯಿಂದ ನಿರ್ಮಿತಗಳಾಗಿರುವವೆಂದೂ ಅವುಗಳನ್ನು ಸುಧಾರಿಸದಿದ್ದರೆ ರಾಜಕೀಯದೃಷ್ಟಿಯಿಂದ ವೀರಶೈವರು ಜಗತ್ತಿನಲ್ಲಿ ಹೇಳಹೆಸರಿಲ್ಲದವರಾಗುತ್ತಿದ್ದರೆಂದೂ ಆಲಾಪಿಸುತ್ತ, ವೀರಶೈವ ಆಗಮೋಕ್ತಧರ್ಮವೆಂಬ ಕಲ್ಪವೃಕ್ಷವನ್ನು ಆಮೂಲಾಗ್ರವಾಗಿ ಛೇದಿಸುವ ವಿಚಾರದಿಂದ ಕ್ರಿಶ್ಚಿಯನ್‌ಮತದ ಅನುಕರಣವನ್ನು ಮ ಡಿಸುವ ಧರ್ಮೋಪದೇಶವನ್ನು ಮಾಡಿ, ಎಲ್ಲರನ್ನು ದುರಾಚಾರಕ್ಕೆಳೆಯುತ್ತಿರುವರು. ಈ ವರೆಗೂ ನಮ್ಮ ಭರತಖಂಡದಲ್ಲಿರುವ ಬ್ರಾಹ್ಮಣ ಕ್ಷತ್ರಿಯಾದಿ ಮ ಸ್ವರೂಪಮಾತ್ರ ಇಂತಹ ಸ್ವಜಾತಿ ವಿಸ್ತಾರದ ವಿಚಾ ವನ್ನು ಮಾಡಲಿಲ್ಲ ಮತ್ತು ಹಾಗೆ ವರ್ತಿಸುವ ಜರೂರಿಯೂ ಅವರಲ್ಲಿಲ್ಲ, ಆದಾಗ್ಯೂ ಅವರು ಅಚ್ಚಳಿಯದೆ ಜ ಗೇಇದ್ದು, ಸ್ವಬುದ್ಧಿ ವಿದ್ಯಾಪ್ರಭಾವದಿಂದ ರಾಜಸನ್ಮಾನಿತರಾಗುತ್ತಲೇ ಇರುವರು. ಮತ್ತು ಶಂಕರ ರಾಮಾನುಜ ಮಧ್ವಾದಿ ಮತಸ್ಥಾಪಕರು ಸ್ವೇಷ್ಟಸಿದ್ಧಾಂತವನ್ನು ಮಾತ್ರ ವಿಸ್ತರಿಸಿ ಲೋಕದಲ್ಲಿ ಐಕ್ಯವನ್ನು ನೆಲೆಗೊಳಿಸಿದರೇ ಹೊರತು ಕುಲಗೆಡುವ ಅಥವಾ ಕೆ ಸುವ ವಿಚಾರವನ್ನು ಮಾಡಲಿಲ್ಲ ಆದ್ದರಿಂದ ಧರ್ಮಾಂತರಗೊಳಿಸುವ ವಿಚಾರಮಾಡುವದೂ ಧರ್ಮಾಂತ ಕಾರ್ಯದಲ್ಲಿ ತೊಡಗಿದವರಿಗೆ ಆಸ್ಪದಕೊಡುವದೂ ದುಷ್ಟಾಚರಣೆಯಾಗಿರುವದು.

12. ವೀರಶೈವರೆಲ್ಲರಿಗೂ ಗೋತ್ರಸೂತ್ರಗಳುಂಟು. ಆ ಆ ಗೋತ್ರೋತ್ಪನ್ನರಿಗೆ ಆ ಆ ಗೋತ್ರದ ಗುರುಗಳೇ ಮೋಕ್ಷಮಾರ್ಗದರ್ಶಕ ಮಹಾಮಂತ್ರಬೋಧಕರಾಗಿರುವರು. ಹೀಗಿದ್ದು ಸ್ವಗೋತ್ರಾನುಸಾರವಾಗಿ ಅನುಗ್ರಹವನ್ನು ಹೊಂದುವದು ಬಿಟ್ಟು, ಕೆಲವರು ಅನ್ಯದಿಕ್ಕಾಲಗಳಿಂದ ಯಾವದೋ ಒಂದು ಅವಿಹಿತ ಮಂತ್ರದ ಅಂದರೆ "ಕಲ್ಯಾಯನಮಃ ನೀಲ್ಯಾಯನಮಃ ಪ ವ್ಯಾಯನಮಃ ಎಕ್ಕ್ಯಾಯನಮಃ" ಎಂಬ ಹಾಗಿರುವ ಅಪಂಚಾಕ್ಷರಗಳ ಉಪದೇಶವನ್ನು ಹೊಂದುತ್ತಿರುವದು ಕಲಿಕಾಲದಿಂದ ರೂಢವಾದ ದುರಾಚಾರವಾಗಿರುವದು.

13. ಉಪನಯನ ಮೊದಲಾದ ಸಮಾರಂಭಗಳಲ್ಲಿ ಮದ್ಯ ನಾಚು ಮೊದಲಾದ ದುರಾಚಾರಗಳನ್ನು ಮಾಡುವದೂ, ವಿಧ್ಯುಕ್ತವಾಗಿ ವಿವಾಹಾದಿ ಕಾರ್ಯಗಳನ್ನು ಜರುಗಿಸದಿರುವದೂ, ಧರ್ಮಶಾಸ್ತ್ರವಿರುದ್ಧವಾಗಿ ಸ್ಥಾವರಪೂಜೆಯನ್ನು ಅಜ್ಞತಾಪ್ರಯುಕ್ತವಾದ ಮೂಢಭಕ್ತಿಯಿಂದ ಮಾಡುತ್ತಿರುವದೂ ಮತ್ತು ಯಲ್ಲಮ್ಮ ಕಾಳಮ್ಮ ಕರಿಯಮ್ಮ ಮೊದಲಾದ ದೇವಭಕ್ತರಾಗಿ, ಉದೋ ಉದೋ ಅನ್ನುವದೂ ಏಳುಕೋಟಿಗೇಳು ಕೋಟಿಗೋ ಎಂದು ಭಸ್ಮವನ್ನು ಬಿಟ್ಟು ಭಂಡಾರ ಧಾರಾಂಕಿತರಾಗಿ ನುಡಿಯುತ್ತಿರುವದೂ ಇವರ ಕುತ್ಸಿತಾಚಾರ ಸ್ಮಾರಕವಾಗಿರುವದು

14. ಶುಭಕಾರ್ಯಗಳಲ್ಲಿ ಮುಖ್ಯವಾಗಿ ಪಂಚಕಲಶಸ್ಥಾಪನಾದಿ ಆಗಮೋಕ್ತವಿಧಿಗಳು ಜರುಗಿಸಲ್ಪಡಬೇಕಾಗಿದ್ದು ಎಲ್ಲಿಯೂ ವಿಧಾನವಿಲ್ಲದ ಆರನೇ ಕಲಶವನ್ನು ಹೂಡುವದೊಂದು ನೂತನವಾದ ದುರಾಚಾರವು.

ಇವಲ್ಲದೆ ಇನ್ನೂ ನಾನಾವಿಧ ದುರಾಚರಣಗಳಿಂದ ನಮ್ಮ ದೇಶವು ಮತ್ತು ನಮ್ಮ ಸಮಾಜವು ದುರವಸ್ಥೆಯನ್ನು ಹೊಂದುತ್ತಿರುವದು. ದುರಾಚಾರ ಪ್ರವೃತ್ತರಾದ ಲೋಕವನ್ನು ಸದಾಚಾರ ಪ್ರವೃತ್ತಿಯುಳ್ಳದ್ದನ್ನಾಗಿ ಮಾಡುವದು ಪ್ರತ್ಯೇಕ ಸಮಾಜದ ಮುಂದಾಳುಗಳ ಕರ್ತವ್ಯವು. ಆದ್ದರಿಂದಲೇ ಕೆಲ ಕಾಲದಿಂದ ನಮ್ಮ ವೀರಶೈವ ಸಮಾಜದಲ್ಲಿ ನೆಲೆಗೊಂಡ ಆಗಮಧರ್ಮವಿರುದ್ಧಗಳಾದ ದುರಾಚಾರಗಳನ್ನು ನೋಡಿ ಅವುಗಳನ್ನು ದಮನಮಾಡುವದಕ್ಕಾಗಿ ಧರ್ಮಶಾಸ್ತ್ರದ ಶಾಸನಗಳನ್ನು ಬೈಲಿಗೆಳೆದು, ಆಗಮ ಧರ್ಮವನ್ನು ಕಾಪಾಡಲು ಆಗಮಧರ್ಮನಿರ್ಮಾತೃವಾದ ಪರಶಿವನ ಪಂಚಮುಖೋದ್ಭೂತರಾದ ಮತಸ್ಥಾಪನಾಚಾರ್ಯರಲ್ಲಿ ಯಾವದ್ವೀರಶೈವರ ಅನನ್ಯಭಕ್ತಿಯನ್ನು ಹುಟ್ಟಿಸಿಯೂ ಹುಟ್ಟಿಸುತ್ತಲೂ ಇರುವ ಶ್ರೇಯಸ್ಸು ನಮ್ಮ ಮತದಲ್ಲಿ ಧರ್ಮಾವತಾರಿಗಳಾದ ಓರ್ವ ಪಂಡಿತರಿಗೆ ಸಲ್ಲುವದು. ಅಂತಹ ಗುರುಭಕ್ತಿಸಂಪನ್ನರಾದ ಆಗಮ ಧರ್ಮಪಾಲಕರ ಸುಪ್ರಸಿದ್ಧ ನಾಮವನ್ನು ನಾನು ಇಲ್ಲಿ ಹೇಳುವದಕ್ಕಿಂತ ಮುಂಚಿತವಾಗಿಯೇ ತಮ್ಮ ಸ್ಮೃತಿಪಥದಲ್ಲಿ ಮೂರ್ತೀಭವಿಸಿ ನಿಂತಿರುವದಾಗಿ ನನ್ನ ವಿಶ್ವಾಸಪೂರ್ವಕವಾದ ಭಾವನೆಯಾಗಿದೆ.

ಲೋಕದಲ್ಲಿ ದುರ್ಜನರು ಸಜ್ಜನರನ್ನು ನಿಂದಿಸುವರು. ದುರಾಚಾರಿಗಳು ಸದಾಚಾರಿಗಳನ್ನು ದೂಷಿಸುವರು. ಅದರಂತೆ ಮೂಢರು ಕುಸಂಘದಲ್ಲಿ ಕಾಲಿಟ್ಟವರು ಸದ್ಗ್ರಂಥವನ್ನು ಹೀಯಾಳಿಸುವರು. ಜಗತ್ತಿನಲ್ಲಿ

ದಕ ಮತ್ತು ವೇದಸ್ಥಾಪಕ ಪಂಥಗಳು ಎಂದಿ ಇರುವವು. ಪಂಥವು ಯೋಗ್ಯವೇ ಇರಲಿ ಗ್ಯವೇ ಇರಲಿ ಮನುಷ್ಯನ ಸ್ಥಿತಿಯು ಮಾತ್ರ ಚಿತ್ರವಾದದ್ದೆಂದು ಹೇಳಬಹುದು. ಯಾವ ನು ತತ್ವತಃ ಯೋಗ್ಯ ಯೋಗ್ಯ ವಿಚಾರವನ್ನು ದೆ ಮೊದಲು ಯಾವದೊಂದು ಸಂಘದಲ್ಲಿ ಕಾಲಿ ಆ ಬಳಿಕ ಅದನ್ನೇ ಸರ್ವೋತ್ತಮವೆಂದು ಸಾ ಮತ್ತವನು. ಇದು ಲೋಕ ಸ್ವಭಾವವಾಗಿ ಈಗಿನ ಕಾಲದಲ್ಲಿ ಸನಾತನ ಧರ್ಮ ವಿರು ದ ಆರ್ಯಸಮಾಜ! ಕ್ರಿಶ್ಚಿಯನ್ ಮೊದಲಾದ ಳು ನಮ್ಮ ಪ್ರಾಚೀನ ವೇದಪಂಥವನ್ನು ಮೂ ತ್ತುತ್ತಿರುವವು. ಈ ಪಂಥಜಾಲದಲ್ಲಿ ಬಿದ್ದ ಜನರು ಆರ್ಯ ಧರ್ಮವನ್ನು ಹೀಯಾಳಿಸು ನೂತನ ಪಂಥಕ್ಕೆ ಮೋಹಿತರಾಗಿ ಆ ಪಂಥ ಯದಲ್ಲಿ ಅತ್ಯಂತ ಅಭಿಮಾನದಿಂದ ಹೋರಾ ರುವರು.

ತಹ ಧರ್ಮ ಚ್ಯುತಿಯ ಕಾಲದಲ್ಲಿ ನಮ್ಮ ವೀ ವು ಅನ್ಯಪಂಥಗಳ ಗಾಳಿಯು ತನಗೆ ಸೋಂಕ ಜಾಗ್ರತರಾಗಿರಬೇಕಾಗಿರುವದು. ಜಗತ್ತಿನಲ್ಲಿ ದ್ರ ತೆರೆಗಳಂತೆ ಎಷ್ಟೋ ಕುಪಂಥಗಳು ಹುಟ್ಟಿ ಗೆ ತಮ್ಮಿಂದ ತಾವೇ ನಾಶ ಹೊಂದುವವಲ್ಲದೆ ಸತ್ಯ ಧರ್ಮವೇ ಸ್ಥಾಪಿತವಾಗುವದು. ಅದರಂ ತೆ ವೀರಶೈವ ಮತದಲ್ಲಿಯೂ ನಮ್ಮ ಪೂರ್ವಾ ರಿಂದ ಸ್ಥಾಪಿತಗಳಾದ ಆಗಮೋಕ್ತ ಸಂಘದ ವಿಚಾರಗಳು ಧರ್ಮ ಕರ್ಮಗಳೂ ಕಾಲಪರಿ ಮಿಂದ ವ್ಯತ್ಯಸ್ತಗಳಾಗಿದ್ದರೂ, ಅಂತ್ಯದಲ್ಲಿ ಚಾರಗಳಡಗಿ ಸದಾಚಾರವು ನೆಲೆಗೊಳ್ಳುವದೇ ಸತ್ಯವು !!!

ಇತ್ತಿತ್ತಲಾಗಿ ಕೆಲವರು ಸ್ವಪ್ರತಿಷ್ಠೆಯನ್ನು ರುವದಕ್ಕೋಸ್ಕರ ಧರ್ಮದಾಂಭಿಕರಾಗಿ ಧ ಪ್ರಚಾರಕರ ವೇಷಗಳನ್ನು ತೆಗೆದುಕೊಂಡು ಸಮಾಜ ದಲ್ಲಿ ಸಲ್ಲದ ಗೊಂದಲವನ್ನೆಬ್ಬಿಸಿ ಸುತ್ತುತ್ತಿರುವರ ಮತಸ್ಥಾಪನಾಚಾರ್ಯರ ವೀರಪ್ರಶೋಭಿತವಾದ ಕಾರ್ಯಗಳನ್ನು ಕುರಿತು, ಅವಿವೇಕ ಪೂರ್ಣ ಯೂ, ಅಶಾಸ್ತ್ರೀಯವಾಗಿಯೂ, ಹಸೂ ಹುರ ಗಕಾಗಿಯೂ ಇರುವ ಕುತ್ಸಿತ ಪ್ರಶ್ನೆಗಳನ್ನು ಸುತ್ತಿರುವರು. ಇವರ ಪ್ರಶ್ನೆಗಳ ಸಮುದಾ ಯವು ಮತಸ್ಥಾಪನಾಚಾರ್ಯರಿಗಿಂತಲೂ ಸಾ ಕ್ಷೀಯರೆಂಬ ಇಷ್ಟಾರ್ಥವನ್ನು ವ್ಯಕ್ತಗೊಳಿಸುವ ಭಾವ ಸಂಕಲಿತವಾಗಿರುವದು. ಹೀಗೆ ಮಾಡಿದರೆ ಯೋಗ್ಯ ಮತ್ತು ಅಸಂಬದ್ಧವಾದ ಸ್ವಾಭೀಷ್ಟ ಸಿ ದ್ಧಿಯಾಗುವದೇ? ಎಂದೂ ಇಲ್ಲ. ಪ್ರಶ್ನೆ ಮಾಡಿಸುವವ ರೂ ವೀರಶೈವರೇ ! ವೀರಶೈವರೇ ನಾವೇ ವೀರ ಮತಸ್ಥಾಪಕರಿಗಿಂತಲೂ ಹೆಚ್ಚಿನವರೆಂದು. ಸಾ ವಾದರೆ ಇದೆಂತಹ ದುರಾಚಾರವೆಂದು ಬಹಿಷ್ಕ ಬೇಕು? ಶಿವ! ಶಿವ! ಕಲಿಕಾಲದ ಸಮಾಚಾರವೇ ನದು. ತಾವು ಎದೆಯಮೇಲೆ ಧರಿಸಿ ತ್ರಿಕಾ ಲದಲ್ಲಿಯೂ ಪೂಜಿಸುವ ಶಿವಲಿಂಗವು ಯಾರದು? ಯಾ ನುಗ್ರಹ ಮೂಲಕವಾಗಿ ಬಂದಿರುವದೆಂಬ ಸುವಿ ವು ಇವರಿಗಿದ್ದಲ್ಲಿ ಇವರಿಗಿಂತಹ ಪ್ರಶ್ನೆಗಳಿ ಕಾಶವೇ ಇರುತ್ತಿರಲಿಲ್ಲ. ಅಹಹ ! ಎಂತಹ ವಂಚನೆಯ ಚಾಳ್ಕೆಯಿದು? ಅಸುವೀಕಾಂಕ್ಷೆ ಗುರುಭಕ್ತಿ ಸಂಪನ್ನರಾದ ಘನ ಮಹಾರ್ಯ ಕೋಂಟಿಚಾರ್ಯ ಎಡೆಯೂರ ಸಿದ್ಧಲಿಂಗಯತಿ ಮಾದ ನಿಜವೈರಾಗ್ಯ ಶೀಲ ಶಿವಯೋಗಿಗಳಿಂದ ರ್ಯ ಸ್ತೋತ್ರಗಳು ಮಾಡಲ್ಪಟ್ಟಿದ್ದನ್ನು ನೋ ಷ್ಟಯಗೊಂಡು ವಾವ್ಯೂ ಅವರಂತೆ ಹಾಡು ಕಟ್ಟಿ ಚಾರ್ಯರನ್ನು ಕೊಂಡಾಡಿರುವನು ಇವರ ಯ-ಸ್ತುತಿ ಪರವಾದ ಹಾಡುಗಳನ್ನು ಕೇಳುತ್ತಿ ವ ಇಂಥವರು ಮೂಲಾಚಾರ್ಯ ವೀರಾಧಿಷ್ಠಿ ನ ಈಗಿನ ಮಹಾಚಾರ್ಯರಿಗೆ ಅಶಾಸ್ತ್ರೀಯ ಅ ಕ ಪೂರ್ಣವಾದ ಪ್ರಶ್ನೆ ಮಾಡಿಸುವದನ್ನು ನೋ ಸ್ತೋತ್ಕರ್ಷ ಸ್ವಾರ್ಥವಾಸ ಗರ್ಭಿತವಾದ ವಿಚಿ ಕೆಯೊಳಗಿನ ಬೂಟಾಟಿಕೆಯು ಯಾರಿಗೆ ಲಿಕ್ಕಿಲ್ಲ?

ಕಾಲವು ಹೋಯಿತು! ಯಾವಕಾಲದಲ್ಲಿ ಅಜ್ಞಾ ನ ಉಪಯೋಗವನ್ನು ಸ್ವಾರ್ಥದಲ್ಲಿ ಮಾಡಿಕೊಂಡು ಲೋಕ ಪ್ರತಿಷ್ಠೆಯನ್ನು ಪಡೆದರೋ ಅದಕ್ಕೆ ನೆಲೆಯಿಲ್ಲದಾಯಿತು. ಮತ್ತು ಯಾವ ಕಾಲದಲ್ಲಿ ಸ್ವಸರ್ವೋತ್ತಮತ್ವವನ್ನು ಸಿದ್ಧಪಡಿಸಿ ಹುಂಬನಂತೆ ಹಾರಾಡಿದರೋ ಅಂತಹ ಕಾಲವು ಲಯವಾಯಿತು. ಅಮಂತ್ರಾಕ್ಷರಗಳನ್ನುಪದೇಶಿಸಿ ಸಮಾಜವನ್ನೆಲ್ಲಾ ಶಿಷ್ಯಕೋಟಿಯಲ್ಲಿ ಗಣಿಸುತ್ತಿರುವ ಅಜ್ಞಾನ ದಶೆಯ ಕಾಲವು ನಷ್ಟವಾಯಿತು. ಜಗದ್ಗುರುತ್ವದ ಜಯಭೇರಿಯನ್ನು ಹೊಡಿಸಿಕೊಳ್ಳುವ ಕಾಲವು ಎತ್ತಲೋ ಪಲಾಯನ ಮಾಡಿತು ! ಇದೀಗ ನಷ್ಟವಾದ ಸನಾತನ ಆಗಮ ಧರ್ಮದ ಪುನಃ ಪ್ರತಿಷ್ಠಾಪನಾ ಸುಮುಹೂರ್ತ ಕಾಲವಿದು ! ಆಚಾರ್ಯ ಭಕ್ತಿಯನ್ನು ಹಬ್ಬಿಸುವ ಮತ್ತು ಎಷ್ಟೋ ದಿವಸಗಳಿಂದ ದುರಾಚಾರಿಗಳ ಬಲೆಯಲ್ಲಿ ಶಿಲ್ಕಿ ಬೆಂದು ಬೆಂಡಾಗಿ ಹಣ್ಣು ಹಣ್ಣಾಗಿರುವ ಶಿಷ್ಯ ವೃಂದವನ್ನುದ್ಧರಿಸುವ ಸುಕಾಲವಿದು! ಮತ್ತು ನಮ್ಮ ಮತವಾವುದು ! ಮತಸ್ಥಾಪಕರಾರು! ದೀಕ್ಷಾ ಶಿಕ್ಷಾ ಮೋಕ್ಷ ಗುರುಗಳಾರೆಂಬುದನ್ನು ವಿಚಾರಿಸಿ ತಿಳಿದು ಎಚ್ಚತ್ತಿರುವ ಅಜ್ಞಾನಾಂಧಕಾರ ನಿರ್ಮುಕ್ತವಾದ ಸುಪ್ರಭಾತಕಾಲವಿದ ! ಅಲ್ಲದೆ ಅಲ್ಲಲ್ಲಿಗೆ ಶಾಸ್ತ್ರಜ್ಞರನ್ನುಂಟುಮಾಡಿ ಕುತ್ಸಿತಧರ್ಮವನ್ನುಪದೇಶಿಸುವ ಕುಹಕರ ಕೋಲಾಹಲವನ್ನು ನಿಲ್ಲಿಸುವ ಪವಿತ್ರ ಕಾಲವಿದು! ಮತ್ತು ಜಗದ್ಗುರು ಪೀಠಾಚಾರ್ಯರು ಜಗದುದ್ಧಾರಾರ್ಥವಾಗಿ ಸಂಚರಿಸುತ್ತ, ಬಂದು, ಅಖಿಲ ವೀರಶೈವರಿಗೆ ತಮ್ಮ ದಿವ್ಯದರ್ಶನವನ್ನಿತ್ತು, ಅನುಗ್ರಹಿಸುವ ಆನಂದಮಯ ಕಾಲವಿದು !!! ಆದ್ದರಿಂದ ವೀರಶೈವರೆಲ್ಲರಿಗೂ ಇಂತಹ ಯೋಗ್ಯಕಾಲವು ಪ್ರಾಪ್ತವಾಗಿರುವದರಿಂದ ಯಾವತ್ತರೂ ಜಾಗ್ರತರಾಗಿ, ದುರಾಚಾರಗಳನ್ನು ತೊರೆದು ಆಚಾರಬೋಧಕರಾಗಿಯೂ, ಮೋಕ್ಷದಾಯಕರಾಗಿಯೂ, ಇರುವ ಮತಸ್ಥಾಪನಾಚಾರ್ಯ ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲಿ ಅಸೀಮಭಕ್ತಿಯುತರಾಗಿ ಧನ್ಯರಾಗುವಿರೆಂದು ವಿನಮ್ರನಾಗಿ ಅರ್ಥಿಸುವ,

ಪಂ|| ಶ್ರೀಕಂಠಶಾಸ್ತ್ರೀ ಅಮರಾರ್ಯ
ಬೃಹನ್ಮಠಾಧ್ಯಕ್ಷ ಸಬವಡಿ
ಕರ್ನಾಟಕ ಕವಿಚಂದ್ರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನಿಜಾಮ ಇಲಾಖಾ ಕೊಪ್ಪಳಜಿಲ್ಲೆಯ ಪ್ರಾಥಮಿಕಶಿಕ್ಷಕರ ಗೋಳು.

ನಮ್ಮನ್ನಾಳುವ ಮಹಾಪ್ರಭುಗಳಾದ **ಆಲೀಜಾ ನಾಬನವಾಬ ಸಾಲರ್‌ಜಂಗ್ ಬಹದ್ದೂರ್** ರವರು ಪ್ರಜೆಗಳ ಕ್ಷೇಮಲಾಭಗಳಿಗೋಸ್ಕರ ದಯಮಾಡಿಸಿದಕಾಲಕ್ಕೆ ವಿದ್ಯಾವಿಹೀನರಾದ ತಮ್ಮ ಪ್ರಜೆಗಳ ದುಃಸ್ಥಿತಿಯನ್ನು ನೋಡಿ ಕನಿಕರಪಟ್ಟವರಾಗಿ ಸನ 1925 ನೇ ಇಸವಿಯಲ್ಲಿ ಪ್ರಜೆಗಳ ಈ ದುಃಸ್ಥಿತಿಯನ್ನು ಹೋಗಲಾಡಿಸುವದಕ್ಕೋಸ್ಕರ ಪ್ರತಿಯೊಂದು ಮುಖ್ಯ ಮುಖ್ಯ ಗ್ರಾಮಗಳಲ್ಲಿ ವಿದ್ಯಾಶಾಲೆಯ ಸಸಿಯನ್ನು ಊರುವದಕ್ಕೆ ದಯಾಳು ಹೃದಯರಾದ ನಮ್ಮ ಮಹಾಪ್ರಭುಗಳವರು ಮಂಗಲಕರವಾದ ಹುಕುಮನ್ನು ದಯಪಾಲಿಸಿದರು. ಇದರಿಂದ ಯಾವತ್ತು ಪ್ರಜೆಗಳು ಸಂತೋಷಸಾಗರದಲ್ಲಿ ಮಗ್ನರಾಗಿ ಮಹಾಪ್ರಭುಗಳವರಿಗೆ ಈ ರಾಜ್ಯವು ಆಚಂದ್ರಾರ್ಕ ಸ್ಥಿರವಾಗಿರಲೆಂದು ಜಯಘೋಷವನ್ನು ಮಾಡಿದರು.

ಆದರೆ ಈ ವಿದ್ಯಾಶಾಲೆಯೆಂಬ ಸಸಿಯು ಕೆಲವು ಕೊರತೆಗಳಮೂಲಕ ಕಳೆಗುಂದುತ್ತಿದೆ.

ಮೊದಲನೆಯ ಕೊರತೆಯು ಶಿಕ್ಷಕರ ಕಡಿಮೆ ಪಗಾರವು.- ಅದು ಹೇಗೆನ್ನುವಿರೋ? ಶಿಕ್ಷಣದಂಥ ಪವಿತ್ರ ಕಾರ್ಯವು ಬೇರೆ ಯಾವದೂ ಇಲ್ಲೆಂಬದು ಎಲ್ಲರಿಗೂ ವಿದಿತವಾದ ವಿಷಯವೇ ಆದೆ. ಶಿಕ್ಷಣದ ತಳಹದಿಯು ಪ್ರಾಥಮಿಕ ಶಿಕ್ಷಣವಲ್ಲವೇ? ಯಾಕಂದರೆ, ಚಿಕ್ಕಂದಿನಲ್ಲಿ ದೊರೆತ ಸಂಸ್ಕಾರದ ಪರಿಣಾಮವು ಕೊನೆಯವರೆಗೂ ಉಳಿಯುವದು. "ಮೂರು ವರುಷದಬುದ್ಧಿ ನೂರು ವರುಷದವರೆಗೆ' ಎಂಬ ನಾಣ್ಣುಡಿಯ ಇಂಗಿತವಾದರೂ ಇದೇ! ಅಂದಮೇಲೆ ಆ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಿಕ್ಷಕರು ತೊಳಲಿಬಳಲುವ ಸ್ಥಿತಿಯಲ್ಲಿದ್ದರೆ ಅವರು ಯಾವತರದಿಂದ ಬಾಲಕರಿಗೆ ಶಿಕ್ಷಣವನ್ನು ಕೊಡಬೇಕು? ಅವರನ್ನು ಸಂತುಷ್ಟರನ್ನಾಗಿ ಇಡುವದು ಶಿಕ್ಷಣಖಾತೆಯವರ ಕರ್ತವ್ಯವು. ಶಿಕ್ಷಕರೇನೂ ಐಶ್ವರ್ಯದ ಏಳಿಗೆಯನ್ನು ಬಯಸುವದಿಲ್ಲ. ಕೇವಲ ಹೊಟ್ಟೆಬಟ್ಟೆಗಳಿಗಾದರೂ ಸಾಲುವಷ್ಟು ಸಂಬಳವನ್ನು ಕೊಟ್ಟರೆ ಅವರು ಸಂತುಷ್ಟರಾಗುವರು. ಈಗಿನ ಕಠಿಣಕಾಲದಲ್ಲಿ ಗಂಡಹೆಂಡಿಬ್ಬರ ಸಂಸಾರವು ಬಡತನದಿಂದ ಸುರಕ್ಷಿತವಾಗಿ ಸಾಗಬೇಕಾದರೆ ಕನಿಷ್ಟ 20 ರೂಪಾಯಿಗಳಾದರೂ ಸಾಲವು. ಬೇನೆಬೇಸರಿಕೆ ಅನುಕೂಲವಸ್ತುಗಳಿಗೆ 5 ರೂಪಾಯಿಗಳಾದರೂ ಬೇಡವೇ? ಅಂದಮೇಲೆ ಪ್ರಾಥಮಿಕಶಿಕ್ಷಕರ ಪ್ರಾರಂಭದ ಪಗಾರವು ಇಪ್ಪತ್ತೇ ರೂಪಾಯಿ; ಅವುಗಳಾದರೂ ಹಾಲಿ ಸಿಕ್ಕಾದವು. ಇವುಗಳನ್ನು ಬಾಜಾರಕ್ಕೆ ಗಾಡಿರೂಪಾಯಿಗಳನ್ನು ತರುವದಕ್ಕೋಸ್ಕರ ಹೋದರೆ, ಹದಿನೇಳೇ ರೂಪಾಯಿಗಳು ಶಿಕ್ಷಕರ ಕೈಸೇರುತ್ತವೆ. ಇವುಗಳನ್ನು ಅಂಗಡಿಕಾರರ ಕೈಯಲ್ಲಿ ಹಾಕಿ ಕೇವಲ ಬರಿಗೈಯಿಂದಲೇ ಕೈಗಳನ್ನು ಬೀಸುತ್ತ ಉದಾಸೀನವೃತ್ತಿಯಿಂದ ಮನೆಯಹಾದಿ ಹಿಡಿಯಬೇಕಾಗುತ್ತದೆ. ಇದೇ ಅಲ್ಲವೇ ಶಿಕ್ಷಕರ ಗೋಳು!

ಎರಡನೇ ಕೊರತೆಯು ಈ ವಿದ್ಯಾಶಾಲೆಯೆಂಬ ಸಸಿಯ ಪೋಷಣವು:— ಅದು ಹೇಗಂದರೆ, ಯಾವದಾದರೊಂದು ಸಸಿಯು ನಿರ್ವಿಘ್ನತೆಯಿಂದ ಅಭಿವೃದ್ಧಿಯನ್ನು ಹೊಂದುವದಕ್ಕೆ ಅದರ ಸುತ್ತಲೂ ಗೋಡೆ ಮೊದಲಾದವುಗಳನ್ನು ಕಟ್ಟಿ, ಕಾಲಕಾಲಕ್ಕೆ ನೀರೆರೆದು ಯಾವಪ್ರಕಾರ ಸಂರಕ್ಷಿಸಬೇಕಾಗುತ್ತದೆಯೋ ಹಾಗೆಯೇ ಈ ವಿದ್ಯಾಶಾಲೆಯೆಂಬ ಸಸಿಯ ಪೋಷಣಕ್ಕೆ ತಕ್ಕ ಪರೀಕ್ಷಕರು ಮತ್ತು ಅದಕ್ಕೆಬೇಕಾಗುವ ಇಮಾರತು ವ ಫರನೀಚರ್ಸ್ ಮೊದಲಾದ ಸಾಮಾನುಗಳ ಆವಶ್ಯಕತೆ ಇರುತ್ತದೆ. ಈ ಕೊರತೆಗಳ ಮೂಲಕವಾಗಿಯೇ ಕೋರಿಹುಳ ಹತ್ತಿದ ಬಳ್ಳಿಯಂತೆ ಈ ಸಸಿಯು ಶುಷ್ಕವಾಗುತ್ತಲಿದೆ. ಕಾರಣದಯಾಳುವಾದ ನಿಜಾಮ ಸರಕಾರವು ಈ ಸಸಿಯ ಪೋಷಣಕ್ಕೆ ಕೊರತೆಬಾರದಂತೆ ಕಾಪಾಡಿ ಶಿಕ್ಷಕರಿಗೆ ಕಡಿಮೆ ಪಗಾರದಿಂದ ಆಗುತ್ತಿರುವ ತೊಂದರೆಯನ್ನು ದೂರಮಾಡಿದರೆ ಇದು ನಿರ್ವಿಘ್ನದಿಂದ ಅಭಿವೃದ್ಧಿಯನ್ನು ಹೊಂದಿ, ಈ ವಿದ್ಯಾಶಾಲೆಯೆಂಬ ವೃಕ್ಷವು ಫಲಪುಷ್ಪಾದಿಗಳಿಂದಲಂಕೃತವಾಗಿ ನಮ್ಮನ್ನಾಳುವ ಮಹಾಪ್ರಭುಗಳವರಿಗೆ ಜಯಜಯಕಾರವನ್ನು ಮಾಡಲೆಂದು ಈಶ್ವರನನ್ನು ಕುರಿತು ಪ್ರಾರ್ಥಿಸುವ,

ಜಿ. ಎಸ್. ಇಟಗಿ. ಹೆಡಮಾಸ್ತರ್ ಕಿನ್ನಾಳು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪಂಚಾಚಾರ್ಯಪ್ರಭೆಗೆ ಶಮಿಾಸಮರ್ಪಣ

ಸಂಪಾದಕಮಹಾಶಯರೇ, **ಶ್ರೀ ಜಗದ್ಗುರು ಪಂಚಾಚಾರ್ಯರ** ಕೃಪಾವಿಶೇಷದಿಂದ ಪ್ರಾದುರ್ಭವಿಸಿ ತಮ್ಮ ಕರಕಮಲದಲ್ಲಿ ವಿಕಾಸವನ್ನು ಹೊಂದಿ ಅನೇಕ ವೀರಶೈವರ ಗೃಹಗಳಲ್ಲಿ ಬಾಲಲೀಲೆಯಿಂದ ನಲಿದಾಡುತ್ತ ತೊದಲ್ನುಡಿಗಳಿಂದ ಸದಾಚಾರ ಸನ್ಮಾರ್ಗಗಳನ್ನು ಸಶಾಸ್ತ್ರೀಯವಾಗಿ ಬೋಧಿಸುತ್ತ **ಜಗದಾಚಾರ್ಯರ** ಪವಿತ್ರನಾಮಸ್ಮರಣವು ಪ್ರತಿಯೊಬ್ಬರ ಹೃತ್ಪಟಲದಲ್ಲಿ ನೆಲೆಗೊಳ್ಳುವಂತೆ ಮಾಡಿ ಮಹೋಪಕಾರಿಯಾದ ಮುದ್ದು **ಪ್ರಭಾದೇವಿಯ** ಸದ್ಗುಣಗಳಿಗೆ ಸಂತುಷ್ಟನಾಗಿ ವಿಜಯದಶಮಿಯ ಶಮಿಯನ್ನೂ ಐದುರೂಪಾಯಿಗಳ ಕಾಣಿಕೆಯನ್ನೂ ಅರ್ಪಿಸಿದ್ದೇನೆ. **ಆಚಾರ್ಯವರ್ಯರು** ಸುಶೀಲೆಯಾದ ಬಾಲಿಕೆಗೂ ಮತ್ತು ಈ ಬಾಲಿಕೆಗೆ ಹಗಲಿರುಳು ಶಾಸ್ತ್ರಾಧ್ಯಯನವನ್ನು ಮಾಡಿಸುತ್ತಿರುವ ಉಭಯ **ಪಂಡಿತ ಮಹಾಶಯರಿಗೂ** ಹಾಗೆ ಮುದ್ದುಕುವರಿಯ ಪೋಷಣೆಯ ಬಗ್ಗೆ ಧನರೂಪದಿಂದ ಸಹಾಯಮಾಡಿರುವ ಮತ್ತು ಮಾಡುತ್ತಿರುವ ಇಲ್ಲದೆ ಮುಂದಾದರೂ ಮಾಡುವ ಅಶೇಷ ವೀರಶೈವಮಹಾಜನಗಳಿಗೂ ನಿತ್ಯಸುಖವನ್ನುಂಟುಮಾಡಿ ಸಮಾಜದಲ್ಲಿ ಶಾಂತತೆಯನ್ನು ನೆಲೆಗೊಳಿಸಿ ಬಾಲಿಕೆ ಚಿರಾಯುರಾರೋಗ್ಯವನ್ನೀಯಲೆಂದು ಸದಾ **ಶಂಕರನನ್ನು** ಸ್ಮರಿಸುತ್ತೇನೆ.

ಸಮಾಜಾಭಿಮಾನಿ
ವೀರಯ್ಯ ಶಿರಹಟ್ಟಿ ಹುಮಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವೀರಶೈವ ಭಜನಾಸಂಘ.

ಸೃಷ್ಟಿಸ್ಥಿತಿಲಯಾದಿಗಳಿಗೆ ಕಾರಣನಾದ ಪರಮಾತ್ಮನ ಪಂಚಮುಖಗಳಿಂದ ರೇಣುಕಾದಿ ಪಂಚಾಚಾರ್ಯರುದ್ಭವಿಸಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಲೋಕದಲ್ಲಿ ಸ್ಥಾಪಿಸಿ ಜೀವರಿಗೆ ಮೋಕ್ಷಮಾರ್ಗವನ್ನು ತೋರಿಸಿ ಜಗದುದ್ಧಾರವನ್ನು ಮಾಡಿರುವುದರಿಂದ ಇಂತಹ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯಿಂದ ಪವಿತ್ರಜೀವಿಗಳಾಗತಕ್ಕದು ಪ್ರತಿಯೊಬ್ಬನ ಕರ್ತವ್ಯಕರ್ಮವಾಗಿರುವುದು. ಇದೇ ತತ್ವವನ್ನು ಅರಿತ ಕೊಂಡಕುಂದಿ ಗ್ರಾಮದ ವೀರಶೈವರು ಜಗದ್ಗುರು ಲೀಲೆಗಳನ್ನು ಪ್ರತಿದಿವಸವೂ ಸ್ಮರಿಸುವುದಕ್ಕಾಗಿ ಇದೇ ಪ್ರಭವನಾಮಸಂವತ್ಸರದ ಆಷಾಢಶುದ್ಧ ಪಂಚಮಿಯಲ್ಲಿ ಈ ಗ್ರಾಮದಲ್ಲಿ ಒಂದು ಭಜನಾಸಂಘವನ್ನೇರ್ಪಡಿಸಿದರು. ಈ ಪ್ರಾಂತದಲ್ಲಿ 5-6 ವರ್ಷಗಳಿಂದಲೂ ಮಳೆಬೆಳೆಗಳಿಲ್ಲದೆ ಜನಗಳು ವ್ಯಸನಪಡುತ್ತಿದ್ದಲ್ಲಿ ಹುಣ್ಣಿನ ಮೇಲೆ ಹುಣ್ಣು ಹುಟ್ಟಿದಂತೆ ಇದರಮೇಲೆ ಮಾರಿಕಾ ಪ್ಲೇಗು ಮುಂತಾದ ದುಷ್ಟರೋಗಗಳಿಂದಲೂ ವಿಶೇಷವಾಗಿ ಕಷ್ಟಕ್ಕೆರಗಾಗಿದ್ದರು. ಇದಕ್ಕೆಲ್ಲ ಧೈರ್ಯಗುಂದದೆ ನಮ್ಮ ಕೊಂಡಕುಂದಿ ಗ್ರಾಮದ ವೀರಶೈವರೆಲ್ಲಾ ದೃಢತರವಾದ ಆಚಾರ್ಯಭಕ್ತಿಯಿಂದೊಡಗೂಡಿ ಹೊರ ಉಪದ್ರವಗಳೊಂದನ್ನೂ ಲಕ್ಷ್ಯಮಾಡದೆ ಕೇವಲ ದೇವನಾಮವನ್ನೂ ಆಚಾರ್ಯನಾಮವನ್ನೂ ಭಜನಾರೂಪದಿಂದ ಸ್ಮರಿಸುವುದಕ್ಕೆ ಪ್ರಾರಂಭಮಾಡಿದರು.

ಏರ್ಪಡಿಸಿದ ಭಜನಾಸಂಘವು ಬಾಲಚಂದ್ರನಂತೆ ದಿನೇದಿನೇ ಅಭಿವೃದ್ಧಿಯನ್ನು ಹೊಂದುವುದಕ್ಕೆ ಪ್ರಾರಂಭವಾಯಿತು ಜನಗಳಲ್ಲಿ ದಿನೇದಿನೇ ಶಿವಭಕ್ತಿಯೂ ಆಚಾರ್ಯಭಕ್ತಿಯೂ ಹೆಚ್ಚುವುದಕ್ಕೆ ಪ್ರಾರಂಭವಾಯಿತು ಹೀಗೆ ತಪ್ಪದೆ ಅನವರತವೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಮಾಡುತ್ತಿರುವಲ್ಲಿ ಇಲ್ಲಿಯ ಜನಗಳಭಕ್ತಿಗೆ ಈಶ್ವರನು ಮೆಚ್ಚಿ, ಅನೇಕದಿವಸಗಳಿಂದ ಜನಗಳನ್ನು ದುಃಖಕ್ಕೀಡುಮಾಡಿದ ಮಾರಿಕಾದಿ ಉಪದ್ರವಗಳೆಲ್ಲವೂ ನಷ್ಟವಾದವು. ಅಷ್ಟರೊಳಗಾಗಿ ಜಗತ್ತಿನ ಜೀವನಾಧಾರವಾಗಿದ್ದ ಮೇಘರಾಜನು ಪ್ರಸನ್ನನಾಗಿ ವಿಶೇಷವಾದ ಮಳೆಯನ್ನು ಸುರಿಸಿದನು "ಯಾದೃಶೀಭಾವನಾಯತ್ರಸಿದ್ಧಿರ್ಭವತಿತಾದೃಶೀ" ಯಾರ ಯಾರ ಭಾವನೆಯು ಎಂಥದ್ದೋ ಹಾಗೆಯೇ ಅವರವರಿಗೆ ದಯಾಸಮುದ್ರನಾದ ಪರಮಾತ್ಮನು ಫಲಗಳನ್ನು ಕೊಡುವನು, ಎಂಬ ಶಾಸ್ತ್ರಾಧಾರದಂತೆ ನಮ್ಮ ಕೊಂಡಕುಂದಿಗ್ರಾಮದವರು, ಎಡಬಲಗ್ರಾಮದವರು ಅನೇಕ ವರ್ಷಗಳಿಂದ ಭಜನಾಸಂಘವನ್ನೇರ್ಪಡಿಸಿಕೊಂಡು ಸಾಕ್ಷಾತ್ ಶಿವಾವತಾರಿಗಳಾದ ಜಗದ್ಗುರು ಪಂಚಾಚಾರ್ಯರ ನಾಮಾವಳಿಯನ್ನು ಹಗಲಿರುಳೂ ಕೊಂಡಾಡುತ್ತಿದ್ದುದರಿಂದ ಈಶ್ವರನು ಇವರಭಕ್ತಿಗೆ ಮೆಚ್ಚಿ, ಗ್ರಾಮದವರ ಇಷ್ಟದಂತೆ ರೋಗೋಪದ್ರವಗಳನ್ನು ಪರಿಹರಿಸಿ ಮಳೆಬೆಳೆಗಳನ್ನು ಅನುಗ್ರಹಿಸಿದನು ಇದರಿಂದ ಇಲ್ಲಿಯ ಸಕಲ ವೀರಶೈವ ಮಂಡಲಿಯವರು ಸಂತೋಷಸಾಗರದಲ್ಲಿ ಮಗ್ನರಾಗಿ ಇಂದು ನಾವು ಮಾಡಿದ ಭಜನೆಯು ಈಶ್ವರನಿಗೆ ಸ್ಮರಣವಾಯಿತು. ಈಶ್ವರನು ನಮ್ಮನ್ನು ಅನುಗ್ರಹಿಸಿದನು. ನಮ್ಮ ದಾರಿದ್ರ್ಯವು ದೂರವಾಯಿತು. ಆಚಾರ್ಯರ ಕೃಪಾಮೃತವು ನಮ್ಮಲ್ಲಿ ಬಿದ್ದಿತು ಧನ್ಯರಾದೆವು. ನಮ್ಮ ಸ್ಥಳವು ರೋಗೋಪದ್ರವ ಅನಾವೃಷ್ಟಿ ಮುಂತಾದ ಬಾಧೆಗಳಿಂದ ನರಳುತ್ತಿದ್ದಿತು. ಈಶ್ವರಸ್ವರೂಪಿಗಳಾದ ಪಂಚಾಚಾರ್ಯರು ಈ ಬಾಧೆಯನ್ನು ಪರಿಹರಿಸಿ ಸುಖಶಾಂತಿಯನ್ನುಂಟುಮಾಡಿದರು. ನಾವು ಏರ್ಪಡಿಸಿದ ಭಜನಾಸಂಘವು ಕಲ್ಪವೃಕ್ಷದಂತೆ ನಮ್ಮಗಳಿಗೆ ಬೇಡಿದ ಇಷ್ಟಾರ್ಥವನ್ನು ಕೊಟ್ಟಿತು ಎಂದು ಅಲ್ಲಿಯ ಭಜನಾಸಂಘದ ವೀರಶೈವ ಮಹಾಜನಗಳೆಲ್ಲರೂ ಇತರರೂ ಸೇರಿ, ಅನುಶಾಂತಿಯಾಗಬೇಕೆಂದು ಇದೇ ಅಶ್ವಿನಶುದ್ಧ ದಲ್ಲಿ ಭಕ್ತಿಯಿಂದ ಮಹೇಶ್ವರಾರಾಧನೆಯನ್ನು ನಡೆಸಿದ ಬಳಿಕ ಆ ದಿವಸ ತಳಿರುತೋರಣಧ್ವಜಪತಾಕಾದಿಗಳಿಂದಲಂಕೃತವಾದ ಗ್ರಾಮದಲ್ಲಿ ಸಕಾಲಕ್ಕೆ ಜಗದ್ಗುರು ಪಂಚಾಚಾರ್ಯರ ಉತ್ಸವವು ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಿಂದ ಹೊರಟಿತು. ಬೀದಿಬೀದಿಗಳೆಲ್ಲವೂ ಆಚಾರ್ಯರ ಜಯಧ್ವನಿಯಿಂದಲೂ ಭಜನಾಸಂಘದವರ ಸ್ತೋತ್ರಮಾಲಿಕೆಗಳಿಂದಲೂ ಭಕ್ತರ ಜಯಜಯಘೋಷಗಳಿಂದಲೂ ವಿಧವಿಧಗಳಾದ ವಾದ್ಯಗಳಿಂದಲೂ ಗ್ರಾಮವೆಲ್ಲವೂ ಆ ದಿವಸ ಕೈಲಾಸ ಲೋಕದಂತೆ ಒಪ್ಪುತ್ತಿದ್ದಿತು. ಉತ್ಸವವು ಸ್ವಸ್ಥಾನಕ್ಕೆ ಸೇರುವುದರೊಳಗಾಗಿ ರಾತ್ರಿ 10 ಗಂಟೆಯಾಯಿತು. ನಮ್ಮ ಗ್ರಾಮದಲ್ಲಿ ಈ ಪಂಚಾಚಾರ್ಯರ ಭಾವಚಿತ್ರದ ಅಪೂರ್ವೋತ್ಸವವು [illegible] ಕಾರ್ಯವಾಗಿ ನಮ್ಮ ಭಜನಾ ಸಂಘದಿಂದ [illegible] ಮನಃಪೋದ್ಧಾರಕ್ಕಾಗಿ ಪ್ರಕಟಿಸಲಾಗುತ್ತಿದೆ [illegible] ಚಾರ್ಯಪ್ರಭೆಗೆ 1 ರೂಪಾಯಿಗಳ ಕಾಣಿಕೆ [illegible] ನ್ನಿಟ್ಟರು. ಸೇವೆಗಾಗಿ ಒಂದಿಷ್ಟು [illegible] ರ್ಯರ ಪ್ರಸಾದವಂ ಸ್ವೀಕರಿಸಿ ತಮ್ಮ ತಮ್ಮ [illegible] ಳಿಗೆ ತೆರಳಿದರು.

ಎಸ್. ಎಂ. ಶಿವಯೋಗೀಶ್ವರಶಾಸ್ತ್ರೀ [illegible]

ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಸಪ್ತಕ.

ಮುಕ್ತಿದಾಯಕರಾದ ಶ್ರೀ ಪಂಚಾಚಾರ್ಯರು ತಂಬ್ರಹಳ್ಳಿ ಗ್ರಾಮದ ಭಕ್ತಮಹೇಶ್ವರರ ಹಿಂದಿನ ವರುಷಗಳ ನಷ್ಟ ಮಹಾಭಜನವನ್ನು ಅಂಗೀಕರಿಸಿ ತಂಬ್ರಹಳ್ಳಿ ಗ್ರಾಮವನ್ನು ಮಳೆಬೆಳೆಯಿಂದಲೂ ರೋಗಾದಿಗಳಿಲ್ಲದಂತೆಯೂ ಕಾಪಾಡಿಕೊಂಡು ಬಂದದ್ದರಿಂದ ಈ ಗ್ರಾಮದ ಧೈವದವರೆಲ್ಲಾ ಭಜನಾಸಂಘವನ್ನು ಸ್ಥಾಪಿಸಿ ಇದೇ ಭಾದ್ರಪದ ಬಹುಳ [illegible] ಸೋಮವಾರ ಉದಯ ೬ ಗಂಟೆಗೆ ಪಂಚಾಚಾರ್ಯರ ಭಜನೆಯನ್ನು ಅನೇಕ ವಾದ್ಯಗಳಿಂದಲೂ ಕರತಾಳಗಳಿಂದಲೂ ಜಯಘೋಷದಿಂದಲೂ ಒಂದು ವಾರ ಅಂದರೆ ೨೪ ತಾಸುಗಳುಳ್ಳ ಏಳು ದಿನಗಳು ಒಂದು ನಿಮಿಷವೂ ಬಿಡದಂತೆ ೨೪×೭=೧೬೮ ಗಂಟೆಯ ಕಾಲ [illegible] ರೆಗೆ ಮಹಾಭಕ್ತಿಯಿಂದಲೂ, ಮೋಕ್ಷಾಪೇಕ್ಷೆಯಿಂದಲೂ ಸಂಪೂರ್ಣ ಮಾಡಿದರು. ಈ ಭಜನೆಯ ಸಮಾರಂಭವನ್ನು ನೋಡಿ ಅನೇಕ ಜನರು ರೋಗಾದಿಗಳ [illegible] ರಣೆಗಾಗಿಯೂ ಮತ್ತು ಮಕ್ಕಳಿಲ್ಲದ [illegible] ಪುತ್ರೋತ್ಸವದ ಆಸೆಗಾಗಿಯೂ ಈ [illegible] ಕಣ್ಣು ತುಂಬಾ ನೋಡಿ ಕಿವಿ ತುಂಬಾ ಕೇಳಿ [illegible] ಗ್ರಾಮದವರೂ ನೆರೆಹಳ್ಳಿಯವರೂ ಸೇರುತ್ತಿದ್ದರು. [illegible] ಸಂದಣಿಯನ್ನುಂಟು ಮಾಡುವಂತೆ ಈ ಭಜನೆಯ ಕಡೆಯ ದಿನವಾದ ಅಶ್ವೀಜ ಶುದ್ಧ [illegible] ಸೋಮವಾರ ಉದಯದಲ್ಲಿ ಎಲ್ಲಾ ಜನರು ಈ ಭಜನೆಯ ಸಂಘಕ್ಕೆ ಕಾಯಿ ಕರ್ಪೂರದಿಂ ಪೂಜಿಸಿಕೊಂಡು ಪಂಚಾಚಾರ್ಯರ ಕೃಪೆಗೂ ಮತ್ತು ಫಲಾಪೇಕ್ಷೆಗೂ ಪಾತ್ರರಾದರು ಇದೇ ದಿನದ ಐದಾರು ಸಾವಿರ ಜನ ಭಕ್ತಮಹೇಶ್ವರರಿಗೂ ಬಡಬಗ್ಗರಿಗೂ ಅನ್ನಸಂತರ್ಪಣೆಯನ್ನು ಮಾಡಿ ಪಂಚಾಚಾರ್ಯರ ಕೃಪೆಗೆ ಪಾತ್ರರಾದ ತಂಬ್ರಹಳ್ಳಿ ಸಪ್ತಕ ಭಜನಾಸಂಘದವರೇ ಧನ್ಯರು! ಧನ್ಯರು!

ಲೇಖಕ—ಚಿ. ವೀರಸಂಗಸ್ವಯ್ಯ ಸ್ಕೂಲು ಮಾಸ್ತರ
ತಂಬ್ರಹಳ್ಳಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಇಲಾಖಾದಾರರ ವರ್ತನೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ, ತಾಲೋಕು [illegible] ಸ್ವರಮುಸಲಾಪುರದ ಹಿರೇ ಮಠದ ಮುರಿಗಿ ಕರಿಯಪ್ಪಯ್ಯನವರ ಮಗ ಬಸಯ್ಯ ಎಂಬಾತನು ಉಜ್ಜಯಿನೀ ಸಂಸ್ಥಾನದ ಮರುಳಸಿದ್ಧಸ್ವಾಮಿಗಳವರಿಂದ ಹರಪನಹಳ್ಳಿ ಮತ್ತು ಹಡಗಲಿ ತಾಲ್ಲೂಕುಗಳಲ್ಲಿ ಇಲಾಖಾಧಿಕಾರಿಯೆಂಬ ಆರ್ಡರ್ ಹೊಂದಿರುತ್ತೇನೆಂದು ಸ್ವಗ್ರಾಮದಲ್ಲಿ ಭಕ್ತಮಾಹೇಶ್ವರರಿಗೆ ಬಾಯಿಮಾತಿನಿಂದ [illegible] ಬಿಲ್ಲೆ ಪಟ್ಟೆ ಯಕೆ ತೋರಿಸುತ್ತ ಸ್ವೇಚ್ಛೆಯಿಂದ ಗಲಭೆಯನ್ನೆಬ್ಬಿಸಿರುವನು. ವಿವಾಹಾದಿ ಶುಭಕಾರ್ಯಗಳಲ್ಲಿ [illegible] ಪಂಚಾಚಾರ್ಯ ಪ್ರಿಂಟಿಂಗ ಪ್ರೆಸ್ಸಿಗೆ ರೂಪಾಯಿಗಳನ್ನು ಕಳುಹಿಸುವೆನೆಂದು ಧನಾರ್ಜನೆಯನ್ನು ಮಾಡಿ ಅಲ್ಲಿಗೆ ಕಳುಹಿಸದೆ ತನ್ನ ಉದರ ಪೋಷಣೆಯನ್ನು ಮಾಡುತ್ತಿರುವನು ಇಂಥ ಜನರಿಗೆ ಇಲಾಖಾಧಿಕಾರವನ್ನು ಕೊಡುವುದು ಕೇವಲ ಅನ್ಯಾಯವು! ಇದರಿಂದ ಗುರುಪೀಠಕ್ಕೆ ಬಹಳ ಅಗೌರವವಾಗುತ್ತದೆನ್ನುವದನ್ನು ಶ್ರೀಗಳವರು ಆಲೋಚಿಸತಕ್ಕದ್ದಾಗಿದೆ ಶ್ರೀಗಳವರು ಯಾರಿಗೂ ಆರ್ಡರನ್ನು ಕೊಡುವುದರಲ್ಲಿ ಉದಾಸೀನರಾಗಬಾರದೆಂದು ಕೋರುವ.

ಓರ್ವ ಸಮಾಜಹಿತಚಿಂತಕ

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

[illegible] ನವಾದ ಈ ಸುಗಂಧ ನಸ್ಯದ [illegible] ಪಟ್ಟು, ಸಾವಿರಾರು ಮಂದಿ [illegible] ಉಪಯೋಗಿಸಿ ಸಾವಿರಾರುಗಳ [illegible] ಯೋಗ್ಯತಾಪತ್ರ [illegible] ನ್ನು ಕೊಟ್ಟಿ [illegible] ರು ಪ್ರಸಿದ್ಧ [illegible] ಈ ನಸ್ಯದ [illegible] ಯಿಂದ ನೆಗಡಿ [illegible] ವ ವ್ಯಾಧಿಗಳು [illegible] ಮಮಂಡರೆ— [illegible] ಒಂಟಿತಲೆನೋ [illegible] ತಲೆಯಲ್ಲಿನ ರೋ [illegible]

[illegible] ಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ [illegible] ಮುಂತಾದ ವ್ಯಾಧಿಗಳು ಪರಿಹಾರವಾ [illegible] ವಲ್ಲದೆ ಕಣ್ಣಿಗೆ ಮೇಲ್ಪಟ್ಟ ೯೬ ವ್ಯಾಧಿಗಳ [illegible] ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು [illegible] ಮೂಗುಪಟ್ಟಿನ ಸಾಧಾರಣ ನಸ್ಯದ ಸು [illegible] ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯ [illegible] ಉಪಯೋಗಿಸಿದರೆ ಎಲ್ಲವೂ ಪರಿಮಳವಾಗುವುದು. [illegible] ಅನೇಕ ಜನಗಳು ತಮ್ಮ ಗೃಹದಲ್ಲಿ ಕಟ್ಟೋ [illegible] ಉಪಯೋಗಿಸುತ್ತಾರೆ. ಮಾದರಿ [illegible] ಕಳುಹಿಸಲಾಗುತ್ತದೆ.

ಒಂದು ಡಬ್ಬಿಗೆ ಕ್ರಯ ರೂ ೦-೪-೦. ವಿ.ಪಿ ೦-
[illegible] ಡಬ್ಬಿಗೆ ರೂ ೨-೮-೦. ವಿ.ಪಿ [illegible]
[illegible] ಹೆಸರನ್ನೂ, ಅಡ್ರೆಸ್ಸನ್ನೂ
[illegible] ಬರೆಯಿರಿ —ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆ
ಪೋ. ಬಾ. ೫೯೦ ಮದರಾಸು

[illegible] GOVERNMENT SECURIT
[illegible] ASSURANCE CO. LTD., MYSOR
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸರ್ಕಾರ ಸಂರಕ್ಷಿತ ಜೀವವಿಮೆ ಸಂಘಗಳ [illegible]

ಆದ್ದರಿಂದ ಯಾವಾಗಲೂ "ಏಷ್ಯಾಟಿಕ್" ಕ [illegible] ಸಿಯಲ್ಲಿಯೇ ವಿಮೆಮಾಡಿರಿ

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿ [illegible] ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭ [illegible] ವಾದುವು

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ [illegible] ಪೋಲಿಸಿಯೂ, ಪಾಲಿಸಿದಾರರಿಗೆ ಅವರ [illegible] ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ [illegible] ಯಿಂಗ್ 31 ನೆಯ ಜುಲೈ 1927 ಕ್ಕೆ ನಡೆಯುತ್ತ

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವ [illegible] ರಿಗೆ ಬರೆಯಬಹುದು

(1) ಮಿ. ಟಿ. [illegible]
ಚೀಫ್ ಏಜಂಟ್, ಮೈಸೂರು.
(2) ಸಿ. ಪಿ. ಎಸ್. ಆರಾಧ್ಯ,
ಚೀಫ್ ಏಜಂಟ್ ಹುಬ್ಬಳ್ಳಿ ಮತ್ತು ಬಳ್ಳಾ
(3) [illegible] ಪಾಷಾ,
ಚೀಫ್ ಏಜಂಟ್, ಹೈದರಾಬಾದ್ (ದಕ್
[illegible] ಮುಖ್ಯ ಏಜಂಟ್,
(4) ಮೈಸೂರು. *Asiatic Buildin*

ಇದು ಮೈಸೂರು ರಾಜಧಾನಿಯಲ್ಲಿರುವ ಶ್ರೀ ಪಂ [illegible] ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಕ [illegible] ಪಂಡಿತ ಶಿವ ಗುರು [illegible] ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಸಕರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಯುದೀಲೋಕನಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಂದದಾರರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೧ಕ್ಕೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ಅಕ್ಟೋಬರ್ ೧೯೨೭ [ಸಂಚಿಕೆ ೨೪.

ಶ್ರೀ ಗುರುಭ್ಯೋನಮಃ

ಜನಿಸಿದರೆ ಇಂಥ ಪುತ್ರರತ್ನವೇ ಜನಿಸಬೇಕು.

ವೇದಾಗಮೋಪನಿಷತ್ಸ್ಮೃತಿಪ್ರತಿಪಾದ್ಯವಾದ ವೀರಶೈವ ಮತವು ಕೆಲವು ಕಾಲಗಳಿಂದ ಧಾರ್ಮಿಕ ವಿಷಯದಲ್ಲಿ ಹಿಂದೆಬಿದ್ದಿರುವುದನ್ನು ಕಂಡು ಪರಮ ದಯಾಳುಗಳಾದ ರಾ|| ವೈ|| ವೀರಸಂಗಪ್ಪನವರು ಅನೇಕ ಧರ್ಮಗ್ರಂಥಗಳನ್ನು ಸಂಗ್ರಹಿಸಿ, ಶೋಧಿಸಿ ಸ್ವಂತ ದ್ರವ್ಯದಿಂದ ಮುದ್ರಿಸಿ ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿ ಕೀರ್ತಿಶಾಲಿಗಳಾಗಿ ಹೋದ ವಿಷಯವು ಪ್ರತಿಯೊಬ್ಬ ವೀರಶೈವನಿಗೂ ವೇದ್ಯವೇ ಆದೆ. ಸಿಂಹದ ಹೊಟ್ಟೆಯಲ್ಲಿ ಸಿಂಹದ ಮರಿಯು ಹುಟ್ಟುವಂತೆ ಆ ಮಹಾನುಭಾವರ ಉದರದಿಂದ ಈಗಿನ ಸ್ಟಾರ್ ಪತ್ರಿಕಾಸಂಪಾದಕರಾದ ರಾ|| ವಿರೂಪಾಕ್ಷಪ್ಪನವರು ಜನಿಸಿದ ವಿಷಯವು ಸರ್ವರಿಗೂ ವೇದ್ಯವಿರಬಹುದು. ತಂದೆಯು ದೇವಾಲಯವನ್ನು ಕಟ್ಟಿಸಿದರೆ ಮಗನು ಕಳಸವನ್ನಿಡಿಸುವನೆಂಬ ಗಾದೆಯ ಮಾತು ಈ ವಿರೂಪಾಕ್ಷಪ್ಪನವರಲ್ಲಿಯೇ ಸಾರ್ಥಕಗೊಳ್ಳುತ್ತದೆ. ಲೋಕಮಾನ್ಯರಾದ ವೀರಸಂಗಪ್ಪನವರಿಗೆ ಕೆಲಜನ ಪುತ್ರರಿರುವರಂತೆ! ಅವರೆಲ್ಲರಲ್ಲಿ ಈ ಪುತ್ರರು ರತ್ನದಂತೆ [illegible]ತ್ತಿರುವರಂತೆ! ವೈ. ವೀರಸಂಗಪ್ಪನವರು ವೀರಶೈವ ಮತವು ಬ್ರಾಹ್ಮಣ್ಯದಿಂದ ಯುಕ್ತವಾದದ್ದೆಂದು [illegible]ರಾತ್ರಿಯಲ್ಲಿಯೂ ಕೂಡ ಪರಮತೀಯರೊಡನೆ ಹೋರಾಡಿ ಈ ಮತದ ಉದಾತ್ತತತ್ವಗಳನ್ನು [illegible]ರ ಮುಂದಿಟ್ಟರು. ಮ|| ವಿರೂಪಾಕ್ಷಪ್ಪನವರಾದರೋ ಹಗಲೂ ಇರುಳೂ ಅನ್ನದೆ ಒಂದು ಕ್ಷಣಕಾಲವೂ ಕೂಡ ಅವಕಾಶವಿಲ್ಲದೆ ತಮ್ಮ ಅಗಾಧವಾದ [illegible] ಸ್ವಭಾವದಿಂದ ಧರ್ಮದ ತತ್ವಗಳನ್ನು ಪ್ರತಿಪಾದಿಸುತ್ತಿರುವರಂತೆ! ತಮ್ಮ ತಂದೆಯವರು ಎಷ್ಟೋ ಸಾವಿರ ರೂಪಾಯಿಗಳನ್ನು [illegible] ಧರ್ಮಗ್ರಂಥಗಳನ್ನು ಮುದ್ರಣಮಾಡಿಸುವ [illegible]ಗದಲ್ಲಿ ತತ್ಪರರಾಗಿರುವರಂತೆ! ಮಹೋದ್ಧಾ[illegible]ಯದಲ್ಲಿ ರಾ|| ವೀರಸಂಗಪ್ಪನವರು [illegible] ಕಡೆಯವರಾಗಿ [illegible] ಈ ಮಹಾನುಭಾವರಾದರೋ [illegible]ದಲ್ಲಿ ತಮ್ಮ ದ್ರವ್ಯವನ್ನು [illegible]ಕ್ಕಿಂತಲೂ [illegible]ಸುತ್ತಿರುವರಂತೆ! ಕೈ|| ವೈ. [illegible] ಶ್ರೀ ಜಗದ್ಗುರು ಪಂಚಾಚಾ[illegible] ಭಕ್ತರಾಗಿ ತಾವು ಮುದ್ರಣಮಾಡಿಸಿದ [illegible] ಗ್ರಂಥದ ಕಡೆಯಲ್ಲಿಯೂ ಆಚಾರ್ಯರ [illegible]ವನ್ನು ಮಾಡಿ ಆಚಾರ್ಯರ ಶಿಷ್ಯರಾಗಿದ್ದರು. ಈ ಮಹಾಶಯರಾದರೂ ಆಚಾ[illegible] ವಿಷಯದಲ್ಲಿ ನಿಸ್ಸೀಮಭಕ್ತಿಯುಳ್ಳವರಾಗಿರುವ [illegible], ಬಿದ್ದರಿ, ಮುಲಗಿಮಠ, ಕುಳಿತರೂ, [illegible] ಇವರ ನಾಲಿಗೆಯ ತುದಿಯಲ್ಲಿ ಆಚಾರ್ಯರ ನಾಮವು ನರ್ತನಮಾಡುತ್ತಿರುವುದಂತೆ! ಅಹಹ! ಏನು ಇವರ ಗುರುಭಕ್ತಿಯು? ಲೋಕದಲ್ಲಿ ಇಂಥ ಒಬ್ಬೊಬ್ಬ ಗುರುಭಕ್ತರಿದ್ದುದರಿಂದಲೇ ಬೇಗ ಮಂಗಳಗಳು ಆಗುತ್ತವೆ. ಮತಗ್ರಂಥಗಳನ್ನು ಪ್ರಿಂಟುಮಾಡಿಸುವುದರಲ್ಲಿಯೂ, ಮತಕ್ಕೋಸ್ಕರ ದ್ರವ್ಯವನ್ನು ನೀರಿನಂತೆ ಮಾಡುವುದರಲ್ಲಿಯೂ ಬ್ರಾಹ್ಮಣ್ಯವನ್ನು ಪ್ರತಿಪಾದಿಸುವುದರಲ್ಲಿಯೂ, ಗುರುಭಕ್ತಿಯಲ್ಲಿಯೂ ತಂದೆಯವರ ಮಾರ್ಗವನ್ನೇ ಹಿಡಿದು ಒಂದು ಎಳ್ಳಷ್ಟಾದರೂ ವಿರಾಮ ವರ್ತಿಸದ ಇವರೇ ನಿಜವಾದ ಪುತ್ರರಲ್ಲವೇ? ಇಂಥ ಪುತ್ರರನ್ನು ನಿರ್ಮಿಸಿದ ಆ ಬ್ರಹ್ಮನ ವರ್ಣನೆಯನ್ನು ಎಷ್ಟುಮಾಡಿದರೂ ಸ್ವಲ್ಪವೇ ಆದೆ. ಅಹಹ! ಇಂಥ ಪುತ್ರರತ್ನವನ್ನು ಪಡೆದಂಥ ಕೈ|| ವೈ. ವೀರಸಂಗಪ್ಪನವರ ಜನ್ಮವು ಸಾರ್ಥಕವು. ಭರತಖಂಡದಲ್ಲಿ ಇಂಥ ರತ್ನಗಳು ಉದಯವಾದರೆ ಆ ಭರತಮಾತೆಯ ಸೌಭಾಗ್ಯಕ್ಕೆ ಎಣೆಯೇ? ಅಹ! ಭರತಮಾತೆಯೇ, ಇಂಥ ರತ್ನಗಳನ್ನು ಧಾರಣಮಾಡಿದ ನೀನೇ ಧನ್ಯಳು ಧನ್ಯಳು! ಇಂಥ ರತ್ನಗಳು ಸಾವಿರಾರು ಜನಿಸಿದಲ್ಲಿ ಭರತಖಂಡವೂ ವೀರಶೈವಮತವೂ ಉದ್ಧಾರವಾಗುವುದರಲ್ಲಿ ಸಂದೇಹವೇನು? ಜನಿಸಿದರೆ ಇಂಥ ಪುತ್ರರತ್ನವೇ ಜನಿಸಬೇಕು! ಪ್ರತಿಯೊಬ್ಬರೂ ಇಂಥಹ ಪುತ್ರರತ್ನಗಳನ್ನೇ ಪಡೆದರೆ ತಮ್ಮ ಕುಲಕೋಟಿಯು ಉದ್ಧಾರವಾಗುವುದೆಂದು ಧಾರಾಳವಾಗಿ ಹೇಳಬಹುದು. ಈ ಮಹಾಶಯರು ಚಿರಜೀವಿಗಳಾಗಲಿ; ಚಿರಜೀವಿಗಳಾಗಲಿ

ಗುರುಭಕ್ತಕೇಸರಿ.
ತಾ|| ೨೦-೧೦-೨೭ ಹಮ್ಮಿಗಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘ ಸ್ಥಾಪನೆ.

ಗಟಿರಡ್ಡಿಹಾಳ [illegible] ಸ್ಟೇಟ್
ಹೈದರಾಬಾದ

ವೀರಶೈವರೇ, [illegible] ವರ್ಷಗಳ ಹಿಂದೆ ಈ ಗ್ರಾಮದಲ್ಲಿ [illegible] ಕಾಲಕ್ಕೆ [illegible] ಗುರುಸ್ಥಲದವರ ಪಾದೋದಕ ಪ್ರಸಾದಾದಿಗಳು [illegible] ಅಯೋಗ್ಯ [illegible] (ಕಣ [illegible]) [illegible] ಯೋಗ್ಯ [illegible] ಈ ವಸ್ತುಯು ಈಗ ಆಸ್ಪಕ್ಕೆ ಅಭಾವವಾಗಿ [illegible] ಇವನ ಮಾರ್ಗವನ್ನು [illegible] ಮಾಡಿ ಕೊಳ್ಳುತ್ತಿದ್ದನು. [illegible] ಗುರುನಿಂದಕರಾದವರಿಗೆ [illegible] ಬಂದ [illegible] ಇವರಿಗೆ ಇಂಥವರು ಬಹಳ [illegible] ಇಂಥ ನಿಂದಕರು ವರ್ತಮಾನ ಪತ್ರಗಳಲ್ಲಿಯೂ ಕೂಡ 'ಗುರುನಿಂದಕ' ಲೇಖನಗಳನ್ನು ಪ್ರಕಟಿಸಿ ಪತ್ರಿಕಾ[illegible] ಲಿಂಗಾಗಿಗಳೇ ಮರುಳಾಗಬೇಡಿರಿ ಪತ್ರಿಕಾಕರ್ತರೇ ಇಂಥವರ ಲೇಖನಗಳಿಗೆ ಆಶ್ರಯವನ್ನು ಕೊಡಬೇಡಿರಿ ಇವರಿಂದ ಅನೈಕ್ಯವು ಹುಟ್ಟಿ ಸಮಾಜವು ಅಧಃಪತನವನ್ನೈದುವದರಲ್ಲಿ ಸಂದೇಹವಿಲ್ಲ. "ಸಂಘೇಶಕ್ತಿಃ ಕಲೌಯುಗೇ" ಎಂಬಂತೆ ಕಲಿಯುಗದಲ್ಲಿ ಸಂಘಗಳ ಶಕ್ತಿಯೇ ಮುಖ್ಯವೆಂದು ಮನಗಂಡು ವೇ|| ವಿರೂಪಾಕ್ಷಯ್ಯ ಹಿರೇಮಠ ಸಾ|| ಜಾಲವಾದಿಗಿ ನೇ|| ಕೊಟ್ರಯ್ಯ ಮಾಸ್ತರ ಈ ಉಭಯರ ಪ್ರೋತ್ಸಾಹದಿಂದ ವೇ|| ಬಸಯ್ಯ [illegible] ಶ್ರೀಮಂತ ಶಾಂತಪ್ಪ ದಂಡಿನ ಮ|| ರಾ|| [illegible] ಸಂಗಪ್ಪ ಮ|| ರಾ|| ಲಿಂಗಪ್ಪ [illegible] ಇತ್ಯಾದಿ ಭಕ್ತಮಹೇಶ್ವರರು ಸಮ್ಮತರಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘವನ್ನು ಶಕೆ ೧೮೪೯ನೇ ಪ್ರಭವನಾಮ ಸಂ|| ಆಶ್ವಿಜ ಶು|| ೧ ಸೋಮವಾರ ಶುಭ ದಿನದಲ್ಲಿ ಸ್ಥಾಪಿಸಿದರು. ಅಳವಂಡಿಗೆ [illegible] ವೇ|| ಬ್ರ|| ಅಬ್ಬಿಗೇರಿ [illegible] ಪಟ್ಟದದೇವರಿಗೆ ಅಳವಂಡಿ ನೇ|| ಶ್ರೀ|| [illegible] ಸ್ವಾಮಿಗಳು ಆಶ್ವಿಜ ಶು|| ೯ ದಿವಸ [illegible] ಮಾಡಿಕೊಂಡು ಶ್ರೀ ಗಳವರು ಊರ ಸಮೀಪದಲ್ಲಿ ಬಂದನಂತರ ಜನರು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ಬೀದಿ ಬೀದಿಗಳಲ್ಲಿ [illegible] ಮಾಡುತ್ತ ಮಹಾಸ್ವಾಮಿಗಳನ್ನು [illegible] ಗೊಂಡು [illegible] ಮಾಡಿದ ಶ್ರೀಮಂತ ಶಿವಲಿಂಗಪ್ಪ [illegible] ಅವರ ಗೃಹದಲ್ಲಿ [illegible] ಶ್ರೀಗಳವರ ಪಾದಪೂಜೆಯಾದನಂತರ ಭಕ್ತಮಾಹೇಶ್ವರರ ಅನ್ನಸಂತರ್ಪಣೆಯಾಗಿ ಗುರುಸ್ಥಲದವರಿಗೆ ದಕ್ಷಿಣೆಯು ಸಮರ್ಪಿಸಲ್ಪಟ್ಟಿತು.

ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಮೆರವಣಿಗೆಯು [illegible] ರಾತ್ರಿ ೭ ಘಂಟೆಗೆ ಹೊರಟಿತು ಜನರು ಬೀದಿಬೀದಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಮಾಡುತ್ತಿದ್ದರು ಎಡಬಲದಲ್ಲಿ [illegible] ಹಿಡಿದಿದ್ದರು ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಜಯ, ಮೊದಲಾದ ಜಯಘೋಷಗಳನ್ನು [illegible] ಮೆರವಣಿಗೆಯು ಅಳವಂಡಿ ಸ್ವಾಮಿಗಳ ಹಿರೇ ಮಠಕ್ಕೆ ರಾತ್ರಿ ೮ ಘಂಟೆಗೆ ಬಂದನಂತರ [illegible] ಪಂಚಾಚಾರ್ಯರ ಅವತಾರದ ಕಾರಣವನ್ನೂ ಶ್ರೀ ಜಗದ್ಗುರು [illegible] ಚರಿತ್ರವನ್ನೂ ಸಪ್ರಮಾಣವಾಗಿ ಕೂಡಿದ ಜನಾಂಗಕ್ಕೆ ಮನಸ್ಸಾಗುವಂತೆ ವಿವರಿಸಿದರು. [illegible] ಪಂಚಾಚಾರ್ಯ ಪ್ರಭಾ ಪತ್ರಿಕಾ [illegible] ಎರಡು ರೂಪಾಯಿಗಳು ಭಜನಾ ಸಂಘದ [illegible] ಮತ್ತು [illegible] ವಿರೂಪಾಕ್ಷಯ್ಯನವರ ಕಡೆಯಿಂದ ತೆಗೆಯಲ್ಪಟ್ಟವು. ಇಂಥ ಪ್ರಕಾರದ ಭಜನಾಸಂಘಗಳನ್ನು ಪ್ರತಿಯೊಂದು ಗ್ರಾಮಗಳಲ್ಲಿ ಸ್ಥಾಪಿಸುವ ಶಕ್ತಿಯನ್ನು ಜಗದಾಚಾರ್ಯರು ಕೊಡಲೆಂದು ಪ್ರಾರ್ಥಿಸುತ್ತ ಸಭೆಯು ವಿಸರ್ಜಿಸಲ್ಪಟ್ಟಿತು.

[illegible] ಗ್ರಾಮಸ್ಥ
ಗದಿಗೆಪ್ಪಾ ಮಾಳೀಕೊಪ್ಪ.

ಸೂಚನೆಯು.

ನಾವು ಪ್ರತಿವಾರವೂ ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸಿನ ಪೋಸ್ಟಮಾಸ್ತರರಿಗೆ ತಿಳಿಸಬೇಕು. ಕೆಲವರು ನಾವು ವಿ.ಪಿ.ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವುದಿಲ್ಲವೆಂದು ಬರೆಯುತ್ತಾರೆ ವಿ.ಪಿ. ತೆಗೆದುಕೊಂಡವರ ಹಣವು ನಮ್ಮ ಕೈಸೇರಬೇಕಾದರೆ 20-25 ದಿವಸಗಳು ತಡವಾಗುತ್ತವೆ, ಹಣವು ಕೈಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವುದಾಗುತ್ತದೆ. ಮನಸ್ಸಿನಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ.

ಸಂ—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರುಗಳವರ ದಸರಾ ಮಹೋತ್ಸವವು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಗುರುಚರಣಸೇವಾಭಿಲಾಷಿಗಳಾದ ಭಕ್ತಮಹೇಶ್ವರರ ಪ್ರಾರ್ಥನೆಯಂತೆ ಅವರವರನ್ನು ಅಂಗೀಕರಿಸಿ ಜನವಟ್ಟಿ ಮುಕ್ಕಾಮಿನಿಂದ ತಾ|| 8-9-27ರ ಸಾಯಂಕಾಲಕ್ಕೆ [illegible], ತಾ|| 13-9-27ರ ಸಾಯಂಕಾಲಕ್ಕೆ ಕೋಡೀಹಳ್ಳಿ, ತಾ|| 15-9-27ರ ಸಾಯಂಕಾಲ ದಬ್ಬೆಕೊಪ್ಪ, ತಾ|| 19-9-27ರ ಸಾಯಂಕಾಲಕ್ಕೆ [illegible], ತಾ|| 21-9-27ರ ಸಾಯಂಕಾಲಕ್ಕೆ ಅಗಸನಹಳ್ಳಿ, ತಾ|| 23-9-27ರ ಸಾಯಂಕಾಲಕ್ಕೆ [illegible], ತಾ|| 24-9-27ರ ಸಾಯಂಕಾಲಕ್ಕೆ [illegible], ತಾ|| 25-9-27ರ ಸಾಯಂಕಾಲಕ್ಕೆ ಜನವಟ್ಟಿಗೆ ದಯಮಾಡಿಸಿದರು. ಪ್ರತಿಗ್ರಾಮಗಳಲ್ಲಿಯೂ ಚತುರಂಗಬಲಸಮೇತರಾಗಿ ಸಕಲ ಬಿರುದಾವಳಿಗಳೊಡನೆ ಆಂದೋಲಿಕೋತ್ಸವಗಳು ಬಹು ವಿಜೃಂಭಣೆಯಿಂದ ಜರುಗುತ್ತಿದ್ದವು. ಸ್ವಮತ ಪರಮತೀಯರೆಲ್ಲರು ಮಹಾ[ ]ಸನ್ನಿಧಿಯವರ ದರ್ಶನಕ್ಕೆ ಪ್ರತಿಮುಕ್ಕಾಮುಗಳಲ್ಲಿಯೂ ತಂಡೋಪತಂಡವಾಗಿ ಬರುತ್ತಿದ್ದರು. ತಾ|| 15-9-27 ರಲ್ಲಿ ಆದ ದಬ್ಬೆಕೊಪ್ಪದ ಮುಕ್ಕಾಮಿನಲ್ಲಿ ಸಂಸ್ಥಾನದ ಆಸ್ಥಾನ ವಿದ್ವಾನ್ ವೇ|| ಮರೀಸ್ವಾಮಿಶಾಸ್ತ್ರಿಗಳು ಸರ್ವರಿಗೂ ಸುಗಮವಾಗಿ ತಿಳಿಯುವಂತೆ [illegible]ದಮೇಲೆ ಭಾಷಣ ಮಾಡಿದರು. ಅನಂತರ ಶ್ರೀ ಮಹಾ[ ]ಸನ್ನಿಧಿಯವರು ಆಚಾರ, ವಿದ್ಯಾ ಇವುಗಳ ವಿಷಯಕ್ಕೆ [illegible] ಅಪ್ಪಣೆಕೊಡಿಸಿದರು. ಸರ್ವರೂ ಶಾಂತಚಿತ್ತರಾಗಿ ಕೇಳಿ ಧನ್ಯರಾದೆವೆಂದು ಶ್ರೀ ಮಹಾ[ ]ಸನ್ನಿಧಿಯನ್ನು ಕೊಂಡಾಡುತ್ತಿದ್ದರು. ಪ್ರತಿ ಗ್ರಾಮಗಳಲ್ಲಿ ಶ್ರೀ ಮಹಾ[ ]ಸನ್ನಿಧಿಯವರ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ ಕಾಣಿಕೆಯನ್ನು ಅರ್ಪಿಸಿ ಅತೀವಾನಂದ ಪಡೆಯುತ್ತಿದ್ದರು. ಇದಲ್ಲವೇ ಗುರುಭಕ್ತಿಯು! ಇದಲ್ಲವೇ ಶ್ರೇಷ್ಠವಾದ ಶಿಷ್ಯಾಚರಣೆಯು! ಧನ್ಯಧನ್ಯ ಗುರುಭಕ್ತರೇ ನೀವು ಧನ್ಯರು! ಈ ರೀತಿಯಾಗಿ ಶಿಷ್ಯಸಂದೋಹದಿಂದ ಪೂಜೆಗೊಂಡು ಭಗವತ್ಪಾದಂಗಳವರು ಜನವಟ್ಟಿಗೆ ದಯಮಾಡಿಸಿದನಂತರ 9 ದಿವಸಗಳ ವರೆಗೆ ಯಥಾಪ್ರಕಾರವಾಗಿ ಉತ್ಸವಗಳು ನಡೆದವು. ಪ್ರತಿದಿವಸ ಸಾಯಂಕಾಲಕ್ಕೆ ಭಗವತ್ಪಾದ ಶ್ರೀ ಜಗದ್ಗುರುಗಳವರು ಸಿಂಹಾಸನಾರೂಢರಾಗಿ ಸರ್ವರಿಗೂ ದರ್ಶನವನ್ನು ಕೊಡುತ್ತಿದ್ದರು. ಮಹಾ[ ]ಸನ್ನಿಧಿಯವರು ಸಿಂಹಾಸನಾರೋಹಣ ಸಮಯದಲ್ಲಿಯೂ ದರ್ಬಾರು ಬರಖಾಸ್ತಾಗಿ ಮುಕ್ಕಾಂ ಸ್ಥಳಕ್ಕೆ ದಯಮಾಡಿಸುವ ಸಮಯದಲ್ಲಿಯೂ ಸಂಸ್ಥಾನದ ಪದ್ಧತಿಯಂತೆ 21 ಗುಂಡುಗಳು ಹಾರಿಸಲ್ಪಡುತ್ತಿದ್ದವು. ಈ ರೀತಿಯಾಗಿ 9 ದಿವಸ ಉತ್ಸವಗಳು ನಡೆದು ವಿಜಯದಶಮಿಯ ದಿವಸ ಪ್ರಾತಃಕಾಲದಲ್ಲಿ ಶ್ರೀ ವೀರೇಶನಿಗೆ ಏಕಾದಶರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಯಾಗಿ ಮಧ್ಯಾಹ್ನ 2 ಗಂಟೆಗೆ ಚತುರಂಗಬಲಸಮೇತ ಸಕಲ ಬಿರುದಾವಳಿಗಳೊಡನೆ ಆಂದೋಲಿಕೋತ್ಸವವು ವೇದಘೋಷದಿಂದಲೂ, ಭಕ್ತಮಹೇಶ್ವರರು ಮಧ್ಯಮಧ್ಯದಲ್ಲಿ ಉಚ್ಚರಿಸುವ ಜಯಜಯಘೋಷದಿಂದಲೂ, ನ್ಯಾಮತಿ, [illegible] ಮೊದಲಾದ ಗ್ರಾಮಗಳಿಂದ ಬಂದ ಭಜನಾಮಂಡಳಿಯವರ ಸುಶ್ರಾವ್ಯವಾದ ಸ್ತುತಿಗಳಿಂದಲೂ, ಗ್ರಾಮದೇವತೆಯಾದ [illegible] ಸ್ಥಾನದ ಮುಂಭಾಗ ಮೈದಾನದಲ್ಲಿ ಪ್ರಕಾಶಿಸುವ ಶಮೀಮಂಟಪಕ್ಕೆ ಬಿಜಯಂಗೈದು, ಅಲ್ಲಿ ನಡೆಯತಕ್ಕ ಕಾರ್ಯಕ್ರಮಗಳನ್ನೆಲ್ಲ ಪೂರೈಸಿಕೊಂಡು, ಸರ್ವರಿಗೆ ಭಗವತ್ಪಾದ ಶ್ರೀ ಮಹಾ[ ]ಸನ್ನಿಧಿಯವರ ಹಸ್ತದಿಂದ ಬನ್ನಿಯನ್ನು ಕೊಡಿಸಿ ಸರ್ವರೂ ಆನಂದೋದ್ರೇಕವನ್ನು ಪ್ರಕಟಿಸಿದರು. ಅಲ್ಲಿಂದ ಉತ್ಸವವು ಸಾಯಂಕಾಲ 6 ಘಂಟೆಗೆ ಗ್ರಾಮದ ಮಧ್ಯದಲ್ಲಿ ಭವ್ಯವಾಗಿ ಶೃಂಗರಿಸಿದ ಮಂಟಪಕ್ಕೆ ಬಿಜಯಂಗೈದು ಜಯಘೋಷದೊಡನೆ ಶ್ರೀ ಜಗದ್ಗುರುಗಳವರು ಸಿಂಹಾಸನಾರೋಹಣಮಾಡಿದರು. ಆನಂದಸೂಚಕಗಳಾದ 21 ಗುಂಡುಗಳು ಹಾರಿಸಲ್ಪಟ್ಟವು. ದಸರಾಮಹೋತ್ಸವಕ್ಕೆ ಬೆಣ್ಣೆಹಳ್ಳಿ, ಶಾಂತಪುರ, [illegible], [illegible], [illegible], [illegible], [illegible] ರು ಮೊದಲಾದ ಗ್ರಾಮಗಳಿಂದ ಶ್ರೀ ಷ ಬ್ರ|| ಪಟ್ಟದ [illegible], [illegible] 10 ಸಾವಿರದವರೆಗೆ ಭಕ್ತಮಹೇಶ್ವರರು [illegible]. ಕೈಲಾಸದಲ್ಲಿ ಅಷ್ಟ ದಿಕ್ಪಾಲಕರ ಹಾಗೂ ಪ್ರಮಥರ ಮಧ್ಯದಲ್ಲಿ ವಿರಾಜಿಸುವ [illegible] ಸಿಂಹಾಸನಾರೂಢರಾದ ಶ್ರೀ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಸರಾಮಹೋತ್ಸವದ [illegible] ಶಿವಮೂರ್ತಿಶಾಸ್ತ್ರಿಗಳು [illegible] ಶ್ರೀ ಜಗದ್ಗುರು ರೇಣುಕ[illegible] '[illegible]' ಯನ್ನು ವ್ಯಾಖ್ಯಾನಕ್ಕೆ [illegible]. [illegible] ಶಿವಮೂರ್ತಿಶಾಸ್ತ್ರಿಗಳ ಕೀರ್ತನ [illegible] ಕವನವಂದಿಗಳನ್ನು ಪರಾಮರ್ಶಿಸಿ, [illegible] ಕೀರ್ತನಕೇಸರಿ "[illegible]" ಎಂಬ ಬಿರುದು ಸನದುಗಳನ್ನು ಬಂಗಾರದ ಪದಕದೊಡನೆ ಅನುಗ್ರಹಿಸಿದರು. ಶ್ರೀ ಮಹಾ[ ]ಸನ್ನಿಧಿಯವರು ತಮ್ಮ ಅಮೃತವಾಣಿಯಿಂದ ಸಮಾಜಕ್ಕೆ, [illegible] ಈ ವಿಷಯಗಳ ಮೇಲೆ ಗಂಭೀರವಾಣಿಯಿಂದ ಸ್ಪಷ್ಟವಾಗಿಯೂ ಸಯುಕ್ತಿಕವಾಗಿಯೂ ಅಪ್ಪಣೆಕೊಡಿಸುವ ಮೊದಲು "[illegible]" ಎಂಬ [illegible] ದನ್ನು [illegible] ಗಳಾದ ಶ್ರೀಮದ್ [illegible] ವರ್ಗಕ್ಕೂ ಆಯುರಾರೋಗ್ಯ [illegible] ಗಳನ್ನು [illegible], ಈ [illegible] ಆಶೀರ್ವದಿಸಿದರು. ಶ್ರೀ [illegible] ಶ್ರೀ ಮಹೇಶ್ವರರ [illegible] ಶಾಲೆಗೆ [illegible] ಭಕ್ತಿಯಿಂದ ಕಪ್ಪ ಕಾಣಿಕೆಗಳನ್ನು ಅರ್ಪಿಸಿದರು. ಉತ್ಸವದಲ್ಲಿ [illegible] ಗರಾಡಿಮಾಗದಂತೆ [illegible] ಸ್ವಯಂಸೇವಕರಾಗಿ [illegible]. [illegible] ಸಾಯಂಕಾಲಕ್ಕೆ [illegible] ನಡೆದು [illegible] ಶ್ರೀ [illegible] ವರು [illegible] ಸಂತರ್ಪಣೆ [illegible] ಪ್ರಸಾದವನ್ನು ಸ್ವೀಕರಿಸಿ ಧನ್ಯರಾದೇವೆಂದು ಹೇಳಿದರು. ಅಲ್ಲಿಗೆ ಶ್ರೀ ಮಹಾ[ ]ಸನ್ನಿಧಿಯವರ ಅಪ್ಪಣೆಯಂತೆ ಸಮಾರಾಧನೆ ಶ್ರೀ ಜಗದ್ಗುರು ಪಂಚಾಚಾರ್ಯರ ಹಾಗೂ ಶ್ರೀಮನ್ಮಹಾರಾಜರವರ ಜಯಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಉತ್ಸವಕ್ಕೆ ಬಂದಿದ್ದಕ್ಕೆ ವಿಶಿಷ್ಟ ಜನಗಳಿಗೂ ಸಂತರ್ಪಣವು ಮಹಾಪರಿಶುದ್ಧವಾಗಿ ನಡೆಯಿತು. ಮರುದಿವಸ ಪ್ರಾತಃಕಾಲ 9 ಘಂಟೆಗೆ ಶ್ರೀ ಜಗದ್ಗುರುಗಳವರು ಸಿಂಹಾಸನಾರೋಹಣಮಾಡಿದರು. ಸಂಸ್ಥಾನದ ಆಸ್ಥಾನವಿದ್ವಾನ್ ಧರ್ಮಭೂಷಣ ವೇ|| ಮರೀಸ್ವಾಮಿಶಾಸ್ತ್ರಿಗಳು ಶ್ರೀ ಮಹಾ[ ]ಸಂಸ್ಥಾನದ ಪೂರ್ವೇತಿಹಾಸವನ್ನು ಮಧ್ಯದಲ್ಲಿ ಉಪದ್ರವಕರು ತಂದೊಟ್ಟಿದ್ದ ಕಂಟಕವನ್ನು ಪರಿಹಾರಮಾಡಿ ಉತ್ತಮ ಗುರುಗಳನ್ನು ದಯಪಾಲಿಸಿ ಅಖಿಲಸೇವಕರಿಗೆ ಮಹಾನಂದವನ್ನುಂಟುಮಾಡಿದ ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಿ ಆಚಂದ್ರಾರ್ಕವಾಗಿ ಮೆರೆಯುವಂತೆ ಕಾಪಾಡಲಿ ಎಂದು ಪ್ರಾರ್ಥಿಸಿದರು. ಸಭೆಯವರು ಜಯಜಯಕಾರ ಮಾಡಿದರು. ಆಸ್ಥಾನವಿದ್ವಾನ್ ಪೌರಾಣಿಕ ಶಿರೋಮಣಿ ವೇ|| ಬಸವಲಿಂಗಶಾಸ್ತ್ರಿಗಳೂ "ಕೀರ್ತನಕೇಸರಿ" ಪ. ಶಿವಮೂರ್ತಿಶಾಸ್ತ್ರಿಗಳೂ ಆಚಾರ, ವಿದ್ಯಾ, ಸಮಾಜೈಕ್ಯ ಈ ವಿಷಯಗಳ ಮೇಲೆ ಸರ್ವರ ಮನಸ್ಸನ್ನು ಆಕರ್ಷಿಸುವಂತೆ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಆಬೂರು ಶೆಟ್ರು ಚನವೀರಪ್ಪನವರೂ ಶಿರಾಳಕೊಪ್ಪದ ಸಂಗೀತ ವಿದ್ವಾನ್ [illegible] ಗವಿಗಯ್ಯನವರ ಪುತ್ರ ವೇ|| ಷಣ್ಮುಖಯ್ಯನವರೂ ಧಾರ್ಮಿಕ ಮತ್ತು ನೈತಿಕವಿಷಯದಲ್ಲಿ [illegible] ನ ಮಾಡಿದರು. ಅನಂತರ ಭಗವತ್ಪಾದ ಜಗದ್ಗುರುಗಳವರು ಸಮಾಜದ ಅವನತಿಗೆ ಅನೈಕ್ಯ, ವೈದಿಕವಿದ್ಯಾಭಾವ, ಅನಾಚಾರ ಇವುಗಳೇ ಮೂಲಕಾರಣವಾಗಿವೆ. ಪ್ರವರಿಂದ ಪ್ರತಿಯೊಬ್ಬ ವೀರಶೈವನು ಪರಸ್ಪರ ಸೌಹಾರ್ದವುಳ್ಳವರಾಗಿದ್ದು ವೈದಿಕವಿದ್ಯೆಯನ್ನು ಪಡೆಯಲು ಆಚಾರದ ಪರಿಗಳನ್ನು ಬಿಡದೆ ನಡೆಯತಕ್ಕದ್ದೆಂದು ಸಂತೋಷದಿಂದ ಅಪ್ಪಣೆಕೊಡಿಸಿ ಸಭಿಕರನ್ನು ಆನಂದಪಡಿಸಿದರು. ಆ ಮೇಲೆ "ಕೀರ್ತನಕೇಸರಿ" ಪ. ಶಿವಮೂರ್ತಿಶಾಸ್ತ್ರಿಗಳ ಕೀರ್ತನವು ಬಹು ಸ್ವಾರಸ್ಯವಾಗಿ ಆಯಿತು. ಕೀರ್ತನಸಮಾಪ್ತಿಸೂಚಕವಾದ ಮಂಗಳಗಾನದಿಂದ ಜಯಜಯಕಾರದೊಡನೆ ಸಭೆಯು ಬರಖಾಸ್ತಾಯಿತು. ಮರುದಿವಸ ಸಕಲ ಭಕ್ತಮಹೇಶ್ವರರು ಶ್ರೀ ಮಹಾ[ ]ಸನ್ನಿಧಿಯ ಆಶೀರ್ವಾದ ಪಡೆದು ತಮ್ಮ ತಮ್ಮ ಗ್ರಾಮಗಳಿಗೆ ಪ್ರಯಾಣಿಸಿದರು. ಜನವಟ್ಟಿಯು ಚಿಕ್ಕದಾಗಿದ್ದು ಅಭೂತಪೂರ್ವವಾದ ಉತ್ಸವದಿಂದ ಸಾಕ್ಷಾತ್ ಭೂಕೈಲಾಸದಂತೆ ಒಪ್ಪುತ್ತಿತ್ತು. ಎಲ್ಲಿ ನೋಡಿದರೂ ಮಂಗಳವಾದ್ಯಗಳ ಧ್ವನಿಯೂ ಜಯಜಯಘೋಷವೂ ಕೇಳಬರುತ್ತಿತ್ತು. ಧನ್ಯ ಧನ್ಯ! ಉತ್ಸವವನ್ನು ನೋಡಿದವರೇ ಧನ್ಯರು! ಅವರ ಜನ್ಮವೇ ಸಫಲವು! ಇದೇರೀತಿಯಾಗಿ ಸರ್ವರೂ ಗುರುಸೇವೆಯನ್ನು ಮಾಡಿ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಂಡು ಕೃತಕೃತ್ಯರಾಗಲೆಂದು ಹಾರೈಸಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಉತ್ಸವಭಾಗಿ

ಶ್ರೀ ಗಣೇಶೋತ್ಸವ.

ಶಿವಮೊಗ್ಗಾ ಡಿ|| ತೀರ್ಥಹಳ್ಳಿ ತಾಲ್ಲೋಕು [illegible] ಬಾಂದ್ರ ಗ್ರಾಮದ ಮ|| ರಾ|| ಸಾಹುಕಾರ್ ರು[illegible] ಗೌಡರು ತಮ್ಮ ಸತ್ಸಂಕಲ್ಪದಿಂದ ಪ್ರಾರಂಭಿಸ[illegible] ಶ್ರೀ ಸಿದ್ಧಿವಿನಾಯಕನ ವ್ರತವನ್ನು ಕಳೆದ 15 ವ[illegible] ಗಳಿಂದಲೂ ಅವಿಚ್ಛಿನ್ನವಾಗಿ ನಡೆಯಿಸಿಕೊಂಡು ಬ[illegible] ರತ್ತಾರೆ. ಈ ವರ್ಷ ಭಾದ್ರಪದ ಶುದ್ಧ 4 ಬುಧವಾ[illegible] ದಿವಸ ಜರುಗುತ್ತಿರುವ ತಮ್ಮ ಭವ್ಯ ಮಂದಿರದಲ್ಲಿ [illegible] ವಾಗಿದ ಇಷ್ಟಮಿತ್ರಬಾಂಧವರನ್ನು ಬರಮಾಡಿಸಿಕೊಂ[illegible] ಡು ಅನ್ನಸಂತರ್ಪಣ ಫಲತಾಂಬೂಲ ವಸ್ತ್ರಾದಿಗಳಿ[illegible] ಸತ್ಕರಿಸಿದರು. ಮೇಲ್ಕಂಡ ಕಾರ್ಯದಲ್ಲಿ ಸಾಹುಕಾ[illegible] ರುದ್ರಪ್ಪಗೌಡರವರ ಆಮಂತ್ರಣಪ್ರಕಾರ ಘ[illegible] ಟ್ಟದ ಆರಾಧ್ಯಮಠದ ಶಿವಕೀರ್ತನಭೂಷಣ ಬ್ರ|| ಶ್ರೀ[illegible] ವೇ ಪ. ಪಂಚಾಕ್ಷರಾರಾಧ್ಯರವರು ದಯಮಾಡಿಸಿ[illegible] ರು. ಇವರು ಶ್ರೀ ವಿನಾಯಕನ ಸನ್ನಿಧಿಯಲ್ಲಿ ಪಾ[illegible] ತೀಪಲಾಯ, ಶಿವಕುಮಾರ, ತಿರುನೀಲಕಂಠ, ಶ್ರೀ[illegible] ಪ್ರಾವರ್ಷಯೋಗೀಶ್ವರ ಮಹಿಮಾ ಎಂಬ ಸತ್ಕಥೆಗ[illegible] ಶ್ರೋತೃಜನಗಳಲ್ಲಿ ಗುರುಭಕ್ತಿ ದೈವಭಕ್ತಿ ರಾಜಭ[illegible] ಗಳುಂಟಾಗುವಂತೆ ಬೋಧಿಸಿದರು. ಅನೇಕರು [illegible] ಆರಾಧ್ಯರವರ ಆಚಾರ ಧರ್ಮೋಪದೇಶಗಳನ್ನು ನೋ[illegible] ಕೇಳಿ ಸಂತೋಷಪೂರ್ಣರಾಗಿ ಇದೇ ರೀತಿ ಈ ಪ್ರಾ[illegible] ದಲ್ಲೆಲ್ಲಾ ಸಂಚರಿಸಿ ಜನಗಳನ್ನು ಧಾರ್ಮಿಕ ಶ್ರದ್ಧೆಯು[illegible] ಳ್ಳವರಾಗುವಂತೆ ಬೋಧಿಸುವ ಹಾಗೆ ಅಪೇಕ್ಷಿಸಿದ[illegible] ಈ ಶುಭಸಮಯದಲ್ಲಿ ಮ|| ರಾ|| ಕೊಲ್ಲೂರಪ್ಪಗೌ[illegible] ಮ|| ರಾ|| ಕಲ್ಯಾಣಪ್ಪಗೌಡರು ಯಜಮಾನರ ಜೇ[illegible] ಕುಮಾರರಾದ ಪುಟ್ಟಸ್ವಾಮಪ್ಪಗೌಡರು ಈ ಸತ್ಕಾ[illegible] ರ್ಯ ಸಮಾರಂಭದಲ್ಲಿ ಸಹಾಯಕರಾಗಿ ನಿಂತು ಶ್ರದ್ಧಾ[illegible] ಭಕ್ತಿಗಳಿಂದ ಅತಿಥಿಗಳನ್ನು ಆದರಿಸಿ ಅನೇಕರ ಶ್ಲಾ[illegible] ಘನೆಗೆ ಪಾತ್ರರಾದರು. ಮ|| ರಾ|| ಸಾಹುಕಾರ್ ರು[illegible] ದ್ರಪ್ಪಗೌಡರು ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆ[illegible] ಅಭಿವೃದ್ಧಿಗೋಸ್ಕರ 5 ರೂಪಾಯಿಗಳನ್ನು ಈ ಸ[illegible] ಮಯದಲ್ಲಿ ಭಕ್ತಿಪೂರ್ವಕವಾಗಿ ಕೊಟ್ಟು ಈ ಪ್ರಾಂತ[illegible] ಅನೇಕರು ಮಾರ್ಗದರ್ಶಿಗಳಾಗುವಂತೆ ಶ್ರೀವಿಘ್ನೇಶ್ವ[illegible] ರವ್ರತಮಹೋತ್ಸವವನ್ನು ಜರುಗಿಸಿದರೆಂದು ತಿಳಿಸ[illegible] ಬಹಳ ಹರ್ಷಿತನಾಗಿರುತ್ತೇನೆ. ಈ ಮಹಾಶಯರಿಗೂ ಹಾಗೂ ಅವರ ಕುಟುಂಬದ ಯಾವತ್ತರಿಗೂ ಜಗ[illegible] ದೀಶ್ವರನು ಆಯುರಾರೋಗ್ಯಗಳನ್ನು ಕೊಟ್ಟು ಕಾಪಾ[illegible] ಡಲೆಂದು ಪ್ರಾರ್ಥಿಸುವ,

ಓರ್ವ ಉತ್ಸವಭಾಗಿ

ಶ್ರೀ ೧೦೦೮ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು.

ವಿಜಾಪುರ ಜಿಲ್ಲಾ ಹುನಗುಂದ ತಾಲೂಕ. ಪೈಕಿ ನಾಗೂರು ಗ್ರಾಮಕ್ಕೆ ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ಪುರಗಿರಿ ಮುಕ್ಕಾಮಿನಿಂದ ತಾ|| ೧೦-೧೦-೨೭ ನೆಯ ಚಂದ್ರವಾರ ಪ್ರಾತಃಕಾಲದ ೮ ಘಂಟೆಗೆ ಪ್ರೋಗ್ರಾಮ ನಿಶ್ಚಯಿಸಿದ ಪ್ರಕಾರ ಶ್ರೀ ಮಹಾಸನ್ನಿಧಿಯವರು ಪುರಗಿರಿಯಿಂದ ದಯಮಾಡಿಸುವದರೊಳಗಾಗಿಯೇ ನಾಗೂರು ಗ್ರಾಮದ ಸಮಸ್ತ ಭಕ್ತಮಾಹೇಶ್ವರರೂ ಇತರ ಮತೀಯರೂ ಸಕಲ ಸನ್ಮಾನದೊಡನೆ ನಿಯಮಿತ ಸ್ಥಳದಲಿ ಕಾಯ್ದುಕೊಂಡಿದ್ದರು. ಸರ್ವರೂ ದರ್ಶನ ಹೊಂದಿ ಫಲಪುಷ್ಪಾದಿಗಳನ್ನು ಅರ್ಪಿಸಿ ಕುಶಲ ಪ್ರಶ್ನೆವಾಗಿ ಸಿದ್ಧಗೊಳಿಸಿದ ಪಲ್ಲಕ್ಕಿಯಲ್ಲಿ ಶ್ರೀ ಮಹಾ ಸನ್ನಿಧಿಯವರು ಆರೋಹಣ ಮಾಡಿದನಂತರ ಸಕಲ ಬಿರುದಾವಳಿಗಳೊಡನೆ ತಳಿರು ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಸಾಲು ಸಾಲಾಗಿ ಕಟ್ಟಿದ ನಾನಾ ತರದ ಪುಷ್ಪ ಮಾಲಿಕೆಗಳಿಂದಲೂ ಶೃಂಗಾರವಾಗಿ ರಚಿಸಿದ ಲತಾಮಂಟಪಗಳಿಂದಲೂ ಮಂಗಲವಾಗಿ ತೋರುವ ಶೃಂಗರಿಸಿದ ಬೀದಿಗಳಲ್ಲಿ ಪಂಡಿತರ ವೇದಘೋಷದಿಂದಲೂ ಭಕ್ತಮಾಹೇಶ್ವರರು ಮಧ್ಯ ಮಧ್ಯದಲ್ಲಿ ಉಚ್ಚರಿಸುವ ಜಯಜಯ ಘೋಷದಿಂದಲೂ ಸುಮಂಗಲೆಯರು ಬೆಳಗುವ ಮಂಗಲಾರತಿಯಿಂದಲೂ ಉತ್ಸವವು ಶೋಭಿಸುವ ವಾದ್ಯವೈಭವಗಳಿಂದ ಗ್ರಾಮದ ಸಕಲ ಪೇಟಿ ಬೀದಿಗಳಲ್ಲಿ ಸಂಚರಿಸಿ ದಿಗಂಬರ ಸ್ವಾಮಿಗಳ ಮಠದಲ್ಲಿ ಅತಿ ಮನೋಹರವಾಗಿ ರಚಿಸಿದ ಮಂಟಪದಲ್ಲಿ ಜಾಜ್ವಲ್ಯಮಾನವಾಗಿ ವಿರಾಜಿಸುವ ಸಿಂಹಾಸನವನ್ನು ಶ್ರೀ ಜಗದ್ಗುರುಗಳವರು ಆರೋಹಣ ಮಾಡಿದ ಕೂಡಲೆ ಸರ್ವರೂ ಜಯಜಯ ಘೋಷದಿಂದ ಕರತಾಡನದೊಡನೆ ಆನಂದೋದ್ಗಾರವನ್ನು ಪ್ರಕಟಿಸಿದರು. ಅನಂತರ ಶ್ರೀ ಮಹಾಸನ್ನಿಧಿಯವರು ಅಪ್ಪಣೆಕೊಡಿಸಿದ್ದೇನಂದರೆ ಅನುಷ್ಠಾನಕ್ಕೆ ಸಮಯವಾಗಿರುವದರಿಂದ ಸರ್ವ ಭಕ್ತಮಾಹೇಶ್ವರರು ಸಾಯಂಕಾಲದ ನಾಲ್ಕು ಘಂಟೆಗೆ ಶ್ರೀ ಸನ್ನಿಧಿಯಲ್ಲಿ ಜರಗುವ ಧಾರ್ಮಿಕೋಪನ್ಯಾಸಗಳನ್ನು ಕೇಳುವದಕ್ಕಾಗಿ ಯಾವತ್ತರೂ ಆಗಮಿಸಬೇಕು. ಈ ಅಪ್ಪಣೆಯ ಮೇರೆಗೆ ನಾಗೂರು ಗ್ರಾಮದ ಸಮಸ್ತ ಭಕ್ತಮಾಹೇಶ್ವರ ವೃಂದವೂ ಪರಮತೀಯರೂ ಮತ್ತು ಸಮೀಪದ ಯಾವತ್ತು ಗ್ರಾಮದ ಸರ್ವ ಭಕ್ತರೂ ಧಾರ್ಮಿಕ ವಿಷಯಗಳನ್ನು ತಿಳಿಯುವ ಲವಲವಿಕೆಯಿಂದ ಸಭಾಮಂಟಪದಲ್ಲಿ ಸರ್ವರೂ ತಂಡೋಪತಂಡವಾಗಿ ಕೂಡಿದ್ದರು. ಶ್ರೀ ಭಗವತ್ಪಾದರ ಅನುಷ್ಠಾನವು ಪೂರೈಸಿ ಸಿಂಹಾಸನಾರೂಢರಾದ ತರುವಾಯ ಆಸ್ಥಾನ ಪಂಡಿತ ಬನ್ನಿಗೋಳ ಬೃಹಸ್ಪತ್ಯಾಧ್ಯಕ್ಷ ಅಮರನಾಥ ಶಾಸ್ತ್ರಿಗಳು ವೀರಶೈವ ವೈದಿಕತ್ವ ಅಷ್ಟಾವರಣ ವಿಷಯವಾಗಿ ಸರಸವಾಗಿ ಭಾಷಣ ಮಾಡಿದರು. ಅನಂತರ ಶ್ರೀ ಜಗದ್ಗುರುಗಳವರು ಸರ್ವರಿಗೂ ಸಂತೋಷವಾಗುವಂತೆ ವೀರಶೈವ ಪ್ರಾಚೀನತ್ವ, ವೀರಶೈವರ ಕರ್ತವ್ಯ ಇವುಗಳ ಬಗ್ಗೆ ಗಂಭೀರವಾಗಿಯೂ, ಸ್ವಾರಸ್ಯವಾಗಿಯೂ ತಮ್ಮ ಅಸಾಧಾರಣವಾದ ಬೋಧಾಮೃತದಿಂದ ಸ್ವಮತ ಪರಮತೀಯರೆಲ್ಲರನ್ನೂ ತೃಪ್ತಿಗೊಳಿಸಿದರು. ಈ ಗ್ರಾಮದ ಭಕ್ತರ ಗುರುಭಕ್ತಿಗೆ ಮೆಚ್ಚಿ ಜಗದ್ಗುರುಗಳು ಅಪ್ಪಣೆ ಕೊಡಿಸಿದ್ದೇನಂದರೆ—ನೀವುಗಳು ಈ ನವೀನ ಸುಧಾರಣ ಕಾಲದಲ್ಲಿ ಅವಶ್ಯಕವಾದ ಪಂಚಾಚಾರ್ಯ ವಾಚನಾಲಯವೆಂಬದಾಗಿ ಒಂದು ವಾಚನಾಲಯವನ್ನೂ ಮತ್ತು ಭಕ್ತಿಮಾರ್ಗೋತ್ತೇಜಕವಾದ ಪಂಚಾಚಾರ್ಯರ ಭಜನಾ ಸಂಘ ಒಂದನ್ನು ಸ್ಥಾಪಿಸತಕ್ಕದ್ದು. ಈ ವಾಚನಾಲಯಕ್ಕೆ ಸ್ವಲ್ಪ ದಿನಗಳಲ್ಲಿ ಶ್ರೀ ಸನ್ನಿಧಿಯಿಂದ ದ್ರವ್ಯವು ಆಶೀರ್ವಾದ ರೂಪವಾಗಿ ಕೊಡಲ್ಪಡುತ್ತದೆ. ಈ ರೀತಿ ಮಹಾ ಸನ್ನಿಧಿಯವರು ಅಪ್ಪಣೆ ಕೊಡಿಸಿದ ಪ್ರಕಾರ ನಾಗೂರು ಪ್ರಮುಖ ಭಕ್ತರು ಸಾಷ್ಟಾಂಗ ಪೂರ್ವಕ ಒಪ್ಪಿಗೆಯನ್ನಿತ್ತರು. ತತ್ಸಮಯದಲ್ಲಿಯೇ ವೇದಮೂರ್ತಿ ಅನ್ನದಾನಯ್ಯನವರು ಅಸಿ|| ಮಾಸ್ತರ ಇವರು ಮತ್ತು ವೀರನಗೌಡ ಅಸಿ|| ಮಾಸ್ತರ ಇವರು ಒಂದೊಂದು ವರ್ತಮಾನ ಪತ್ರವನ್ನು 'ಸಂಘಕ್ಕೆ ಸಹಾಯ ಮಾಡುತ್ತೇವೆಂದು ಸಾಷ್ಟಾಂಗವನ್ನು ಹಾಕಿದರು. ಈ ಮಹೋತ್ಸವಕ್ಕೆ ಅಜೂಬಾಜೂ ಗ್ರಾಮಗಳಿಂದ ಮೂರು ನಾಲ್ಕು ಸಾವಿರದ ವರೆಗೆ ಜನರು ಕೂಡಿದ್ದರು. ಸಭಾ ಕಾರ್ಯವು ಪೂರೈಸಿದ ನಂತರ ಶ್ರೀ ಭಗವತ್ಪಾದರ ಅನುಷ್ಠಾನಕ್ಕೆ ಸಮಯವಾದ ಕಾರಣ ಸರ್ವರಿಗೂ ಆಶೀರ್ವಾದವು ಕೊಡಲ್ಪಟ್ಟಿತು. ಅನಂತರ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಮಾರನೆಯ ದಿನ ಪ್ರಾತಃಕಾಲದಲ್ಲಿ ಪುನಃ ಸಭೆಗೂಡಿ ಶ್ರೀ ಮಹಾಸನ್ನಿಧಿಯವರು ಭರತಖಂಡದ ಊರ್ಜಿತಾವಸ್ಥೆಗಾಗಿ ಐಕ್ಯ ವಿದ್ಯಾವಶ್ಯಕತೆ ಈ ವಿಷಯದಲ್ಲಿ ಅಮೋಘ ವಾಣಿಯಿಂದ ಅಪ್ಪಣೆ ಕೊಡಿಸಿದರು. ಮತ್ತು ಸಾಂಖ್ಯವಾಚಸ್ಪತಿ ವೇದಾಂತ ರತ್ನ ಔಂಧ ಪಟ್ಟಾಧಿಕಾರಿ ಚರಮೂರ್ತಿ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಅಸಾಧಾರಣ ಪಾಂಡಿತ್ಯ ಬಲದಿಂದ ಪಂಚಾಚಾರ್ಯರ 'ಪ್ರಭಾವ ಅಷ್ಟಾವರಣ ಮಹತ್ವ ಈ ವಿಷಯದಲ್ಲಿ ಸ್ವಾರಸ್ಯವಾಗಿ ಭಾಷಣ ಮಾಡಿದರು. ಅನಂತರ ಗ್ರಾಮದ 'ಸಮಸ್ತ' ಭಕ್ತಮಾಹೇಶ್ವರರು ಶಕ್ತ್ಯನುಸಾರವಾಗಿ' ಮಹಾ ಸನ್ನಿಧಿಗೆ ಗುರುಕಾಣಿಕೆಯನ್ನರ್ಪಿಸಿದರು. ಈ ರೀತಿ ಗುರುಕೃಪೆಗೆ ಪಾತ್ರರಾದ ಈ ಗ್ರಾಮದ ಭಕ್ತಮಾಹೇಶ್ವರರೇ ಧನ್ಯರು! ಇದರಂತೆ ಈ ಪ್ರಾಂತದ ವೀರಶೈವರು ಗುರುಭಕ್ತಿ ನಿಷ್ಠರಾಗಿ ಶ್ರೀ ಗುರುಕೃಪೆಗೆ ಪಾತ್ರರಾಗಲೆಂದು ಈ ಲೇಖವನ್ನು ವಿರಮಿಸುವೆನು.

ಸಮಾಚಾರಾಭಿಮಾನಿ—ಅಮರಗೌಡ ಪಾಟೀಲ
ನಾಗೂರು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ವೀರಭದ್ರದೇವಸ್ಥಾನವೂ ನವರಾತ್ರಿಯ ಪೂಜೆಯೂ.

ಗದಗ ತಾಲೂಕು ಪೈಕಿ ಪ್ರಸಿದ್ಧವಾದ ಕಪ್ಪತ್ತಗುಡ್ಡದ ಕಡೆಯಭಾಗದಲ್ಲಿ ತುಂಗಭದ್ರಾನದಿಯ ತೀರದೊಳಗೆ ಶಿಂಗಟಾಲೂರು ಶ್ರೀ ವೀರಭದ್ರದೇವಸ್ಥಾನವು ಬಿಲ್ವವೃಕ್ಷಗಳಿಂದಲೂ ವಿಶಾಲವಾದ ನೆರಳಿನಿಂದಲೂ ಉತ್ತಮವಾದ ಹವೆಯಿಂದಲೂ ಶೋಭಾಯಮಾನವಾಗಿರುವದು ಪ್ರಸಿದ್ಧವಿರುವದಷ್ಟೇ! ಸದರಿ ದೇವಸ್ಥಾನಕ್ಕೆ ಹಮ್ಮಿಗಿ, ಶಿಂಗಟಾಲೂರು, ನವಲಿ ಈ ಮೂರು ಗ್ರಾಮಗಳಿಂದ (೧೫) ಜನ ಪಂಚರಿದ್ದು ಮುಪ್ಪಿನಹಡಗಲಿ ಮು|| ರಾ|| ಕೋರಿ ಗುರುಶಾಂತಪ್ಪನವರು ಪಂಚ ಕಮಿಟಿಯ ಪ್ರೆಸಿಡೆಂಟರಾಗಿರುತ್ತಾರೆ. ಅಲ್ಲದೆ ಮೇಲ್ಕಂಡ ಮೂರು ಗ್ರಾಮಗಳಲ್ಲಿ ಈ ದೇವಸ್ಥಾನದ ಅರ್ಚಕರು ಇದ್ದು ತಿಂಗಳಿಗೊಬ್ಬೊಬ್ಬರಂತೆ ಪೂಜಾ ಮಾಡುತ್ತ ಬರುತ್ತಾರೆ. ಈ ವರುಷ ಅಶ್ವಿಜ ಮಾಸದಲ್ಲಿ ಅಪ್ಪಯ್ಯ ಹಮ್ಮಿಗಿ ಇವರಪೂಜೆಯು ಇದ್ದು ಪರವರ್ಷಕ್ಕಿಂತಲೂ ಮಿಗಿಲಾಗಿ ನವರಾತ್ರಿಯ ಪೂಜೆಯು ಪ್ರತಿದಿವಸ ಪಂಚಾಮೃತಾಭಿಷೇಕ ಬಿಲ್ವಾರ್ಚನ, ದೀಪೋತ್ಸವ ಗಣಾರಾಧನ ಈ ಪ್ರಕಾರ ೧೧ ದಿವಸಗಳ ವರಿವಿಗೂ ಸುರಕ್ಷಿತವಾಗಿ ನೆರವೇರಿತು. ಪ್ರತಿದಿವಸ ಅಭಿಷೇಕಕ್ಕೆ ಶಿಂಗಟಾಲೂರು ಹಿರೇಮಠದ ಶ್ರೀ ವೇ|| ಗುಂಡಯ್ಯನವರು ಪುರೋಹಿತರಾಗಿದ್ದು ತಪ್ಪದೆ ಬಂದು ಶ್ರೀ ದೇವತಾ ಕಾರ್ಯವನ್ನು ಸಾಂಗಗೊಳಿಸಿದರು. ಸದರಿ ಪೂಜೋತ್ಸವಾದಿಗಳಿಗೆ ಹಮ್ಮಿಗಿ, ಬನರಹಳ್ಳಿ, ಹಿರೇಹಡಗಲಿ ಮೊದಲಾದ ಗ್ರಾಮಗಳ ಸುಶಿಕ್ಷಿತಜನರು ಸಂಪೂರ್ಣ ಸಹಾಯವನ್ನಿತ್ತರು. ಇದಕ್ಕೆಲ್ಲ ಅಪ್ಪಯ್ಯ ಪೂಜಾರ ಇವರ ಪ್ರಯತ್ನವು ವಿಶೇಷವಾಗಿತ್ತು. ಮುಂದಾದರು ಪ್ರತಿವರುಷ ತಪ್ಪದೆ ಪ್ರತಿ ಒಬ್ಬ ಅರ್ಚಕನು ಇದರಂತೆ ಸದ್ಭಕ್ತರ ಸಹಾಯವನ್ನು ಹೊಂದಿ ಶ್ರೀ ದೇವತಾಕಾರ್ಯವನ್ನು ನಡೆಯಿಸುತ್ತ ಹೋಗತಕ್ಕದ್ದು ಶ್ರೇಯಸ್ಕರವಾಗಿದೆ. ಸದರಿ ದೇವಸ್ಥಾನದ ಪಂಚಜನರು ಶ್ರೀ ದೇವರ ಉತ್ಸವಮೂರ್ತಿಯನ್ನು ಮಾಡಿಸಲಿಕ್ಕೆ ೫೦-೬೦ ನೂರು ತೊಲೆ ಬೆಳ್ಳಿಯನ್ನು ಕೊಟ್ಟು ಅಜಮಾಸು ಈಗ ೧೦-೧೨ ವರುಷ ಆಗಬಹುದು. ಉತ್ಸವಮೂರ್ತಿಯು ಈಗ ತಯಾರ ಆಗಿರುತ್ತದೆಂದು ಕೇಳುತ್ತೇನೆ. ಹೀಗಿದ್ದು ಉತ್ಸವಮೂರ್ತಿಯನ್ನು ತಂದು ಪ್ರತಿಷ್ಠೆ ಮಾಡಿಸದೆ ಇದುವರೆಗೂ ಮೌನವೃತ್ತಿಯನ್ನು ಧಾರಣಮಾಡಿರುವದು ಪಂಚಜನರಿಗೆ ಕೇವಲ ಲಾಂಛನಾಸ್ಪದವಾದ ಸಂಗತಿಯಾಗಿದೆ; ಇನ್ನಾದರೂ ಮೂರು ಗ್ರಾಮಗಳ ಪಂಚರೂ ಹಾಗೂ ಪ್ರೆಸಿಡೆಂಟರೂ ಇತ್ತಕಡೆ ಗಮನಕೊಟ್ಟು ಯಶೋಭಾಗಿಗಳಾಗತಕ್ಕದ್ದು.

ಪಂಚಕಮಿಟಿಯವರಿಂದ ಶೀಘ್ರದಲ್ಲಿ ಈ ಕಾರ್ಯವು ನೆರವೇರದೆ ಇದ್ದ ಪಕ್ಷಕ್ಕೆ ಇತರ ಗ್ರಾಮಗಳಲ್ಲಿರತಕ್ಕ ಶ್ರೀ ದೇವರ ಭಕ್ತಾದಿಗಳಾದರೂ ಇದರ ಯೋಗ್ಯ ವ್ಯವಸ್ಥೆಯನ್ನು ಮಾಡಿ ಕೀರ್ತಿಶಾಲಿಗಳಾಗಬೇಕೆಂದು ನನ್ನ ವಿನಂತಿ ಇದೆ.

ಈಗ ೪-೫ ವರುಷಗಳ ಕೆಳಗೆ ಈ ದೇವಸ್ಥಾನಕ್ಕೆ ಉಜ್ಜಯಿನೀ ಪೀಠಾಧೀಶ್ವರರೂ ಪರಮ ತಪಸ್ವಿಗಳೂ ಆದ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಬಿಜಯಂಗೈಸಿ ಮೂರು ದಿವಸ ಅನುಷ್ಠಾನಂಗೈದು ಸಂತೋಷಚಿತ್ತರಾಗಿ ಈ ಸ್ಥಾನದಲ್ಲಿ ಮಹಾಸಂಸ್ಥಾನದ ವತಿಯಿಂದ ಒಂದು ಗುರುಕುಲವನ್ನು ಸ್ಥಾಪಿಸುವ ವ್ಯವಸ್ಥೆಯನ್ನು ಕ್ಷಿಪ್ರದಲ್ಲಿಯೇ ಮಾಡಿಸುವದಾಗುತ್ತದೆಂದು ಆಶೀರ್ವಾದವನ್ನಿತ್ತು ದಯಮಾಡಿಸಿದ್ದರು. ಸದ್ಯಃ ಜಗದ್ಗುರುಗಳವರ ಸವಾರಿಯು ಹಾಗೂ ಕೇದಾರಪೀಠದ ಶ್ರೀ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯೂ ಈ ದೇವಸ್ಥಾನದ ಸಮೀಪ ಸರಹದ್ದಿನಲ್ಲಿ ಅಂದರೆ ಹೂವಿನಹಡಗಲಿ ತಾಲೂಕಿನಲ್ಲಿ ಸಂಚರಿಸುತ್ತಿದ್ದು ಹಿಂದಕ್ಕೆ ಅಭಯಪ್ರದಾನಮಾಡಿದ ಮಹಾಕಾರ್ಯವನ್ನು ದಿವ್ಯಚಿತ್ತಕ್ಕೆ ತಂದು, ಇನ್ನಾದರೂ ಗುರುಕುಲವನ್ನು ಸ್ಥಾಪಿಸಿ ಗುರುವರ್ಗದವರ ಉನ್ನತಿಯನ್ನೂ ದೇವಸ್ಥಾನದ ಶೋಭೆಯನ್ನೂ ಹೆಚ್ಚಿಸಿ, ಮಹಾಪೀಠಕ್ಕೆ ಕೀರ್ತಿಯನ್ನು ತಂದುಕೊಳ್ಳಬೇಕೆಂದು ಉಭಯ ಜಗದ್ಗುರುಗಳವರ ದಿವ್ಯಸನ್ನಿಧಿಯನ್ನು ಕುರಿತು ಪ್ರಾರ್ಥಿಸುತ್ತೇನೆ.

ಕೊಟ್ರಬಸಪ್ಪ ಮೈಸಕ್ಕ,, ಹಮ್ಮಿಗಿ.

"ಶ್ರೀ ಸಂಗಮೇಶ್ವರಪೂಜಾ"

ಹರಿಹರದ ತುಂಗಭದ್ರಾನದಿ ತಟಾಕದಲ್ಲಿ ನೆಲೆಸಿರುವ ಶ್ರೀ ಸಂಗಮೇಶ್ವರ ದೇವರಿಗೆ ಇದೇ ವರ್ಷದ ಕಾರ್ತಿಕ ಶುದ್ಧ ಪ್ರತಿಪದ ಲಾಗಾಯತು ಮಾರ್ಗಶಿರ ಶುದ್ಧ ೧೫ರ ವರೆಗೆ ವಿಧ್ಯುಕ್ತ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಗಣಾರಾಧನೆ, ಸಾಯಂಕಾಲ ದೀಪೋತ್ಸವ ಮಹಾಸೇವೆಯನ್ನು ಪದ್ಧತಿಪ್ರಕಾರ ಆಸ್ತಿಕಮಹಾಶಯರ ಪ್ರೋತ್ಸಾಹದಿಂದ ನೆರವೇರಿಸಲು ಏರ್ಪಡಿಸಿದೆ.

ಮಹಾದೇವರಾವ್ ಗುಜ್ಜರ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಾಯಶ್ಚಿತ್ತವು.

ಇದೇ ತಿಂಗಳು ತಾ|| 13-10-27 ನೆಯ ದಿವಸ ಶ್ರೀ ಷ|| ಬ್ರ|| ಪಟ್ಟದ ಸ್ವಾಮಿಗಳು ಬೃಹನ್ಮಠ ಹೊಟಗಿ ಈ ಮಠನೀಯರು ವೀರಪ್ಪ ತಂದೆ ಗುರಪ್ಪ ಪಾಟೀಲ ಮು|| ಮೋರಾಮಣಿ ಇತನು ತಿಳಿಯದೆ ಭವಿಜನರ ಜಲಪಾನ ಮಾಡಿದ ಕಾರಣ ಮೋರಾಮಣಿಗ್ರಾಮದ ಸರ್ವಜನರು ಬಹಿಷ್ಕಾರವಿಟ್ಟು ೪-೫ ತಿಂಗಳು ಆಗಿತ್ತು. ಸದರಿ ವೀರಪ್ಪನನ್ನು ಸದರಿ ಸ್ವಾಮಿಗಳು ಶುದ್ಧಗೊಳಿಸಿ ಪರಮೋಪಕಾರವನ್ನು ಮಾಡಿದರು. ಸದರಿಯವನು ಅಶುದ್ಧವಾದದ್ದಕ್ಕೆ ತತ್ಪ್ರಾಯಶ್ಚಿತ್ತಕ್ಕಾಗಿ ೨ ರೂಪಾಯಿಗಳು ಆಚಾರ್ಯಪ್ರಭೆಗೆ ದಂಡರೂಪವಾಗಿ ತೆಗೆಯಿಸಿ ಕಳುಹಿಸಲ್ಪಟ್ಟವು. ಈ ಸ್ವಾಮಿಗಳು ನಮ್ಮ ಗ್ರಾಮಕ್ಕೆ ದಯಮಾಡಿಸಿದ ಮೇಲೆ ಜನರನ್ನು ತಮ್ಮ ಉಪದೇಶಬಲದಿಂದ ಸದಾಚಾರಿಗಳನ್ನಾಗಿ ಮಾಡಿದ್ದಾರೆ. ಇದೇ ವಿಷಯವನ್ನು ಸಮಯಬಂದಾಗ್ಗೆ ತಿಳಿಸಲಿಚ್ಛಿಸುವ,

ಕೃಷ್ಣಪ್ಪಗೌಡ ಕೊಟಾಣಿ. ಮು|| ಹೊಟಗಿ.

ಪಂಚಾಚಾರ್ಯಪ್ರಭಾ

೧೯೨೭ನೇ ಅಕ್ಟೋಬರ್ ತಾ|| ೨೪ನೇ ಸೋಮವಾರ

ಗುರು

[illegible]

ಗುರುವು ಸಾಧಕಾಸ್ತ್ರ ಪುರಾಣಾದಿಗಳ [illegible] ಮಾಡಲ್ಪಟ್ಟಿದ್ದರಿಂದ ಲಿಂಗಸ್ವರೂಪನೆನಿಸಿದ್ದಾನೆ. [illegible] ಗುರುವನ್ನ [illegible] ಗುರುಪಟ್ಟಾಧಿಕಾರವನ್ನು [illegible] ಕಲಿತು [illegible] ಧಾರಿಗಳೆಂಬ ಅಂತಹ ತ್ಯಾಗಿ [illegible] ನಲೆಕಲೆಗಳನ್ನು ತಿಳಿದು [illegible] ಲಿಂಗಪೂಜಾದಿಗಳಲ್ಲಿಯೇ ನಿರತನಾಗಬೇಕು. ಅಂತಹ ಗುರುವಿನಲ್ಲಿ ಜ್ಞಾನೋಪದೇಶವನ್ನು ಪಡೆಯುವದರಿಂದ ಶಿಷ್ಯರ ಅಜ್ಞಾನಾಂಧಕಾರವು ನಷ್ಟವಾಗುವುದು. ಇದಕ್ಕೋಸ್ಕರವಾಗಿಯೇ ವೀರಶೈವ ಮತಕ್ಕಾಧಾರರಾದ ಶ್ರೀ ರೇಣುಕಾದಿ ಪಂಚಾಚಾರ್ಯರು ಶಿಷ್ಯರ ಉದ್ಧಾರಕ್ಕಾಗಿ ಪ್ರತಿಯೊಂದು ಗ್ರಾಮಗಳಲ್ಲಿಯೂ ಗುರುಮಠಗಳನ್ನು ಕಟ್ಟಿಸಿ ತಮ್ಮ ಪ್ರತಿನಿಧಿಗಳನ್ನಿರಿಸಿ [illegible] ನೆಲೆಗೊಳಿಸಿರುತ್ತಾರೆ. ಲೋಕದಲ್ಲಿ [illegible] ನಾಶಕ್ಕಾಗಿ [illegible] ವುದಿಲ್ಲವೆ. ಅಲ್ಲಿಗೆ ಯೋಗ್ಯರಾದ ಗುರು ಪ್ರತಿನಿಧಿಗಳನ್ನು [illegible] ಆ ಪ್ರತಿನಿಧಿಗಳೇ [illegible] ಪ್ರಕಾರ [illegible] ಅಂತಹ ಗುರುಪಟ್ಟಾಧಿಕಾರಿಯೂ [illegible] ಮಠಾಚಾರ್ಯರ ಪ್ರತಿನಿಧಿಗಳೆನಿಸಿದ [illegible] ಮುದ್ರೆಗಳನ್ನು ಧರಿಸಿಕೊಂಡು [illegible] ದರೆ ಅಂತಹ ಗುರುಗಳಿಗೆ [illegible] ಗಳೆಂದೇ ಹೇಳಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಪ್ರತಿಯೊಂದು ನಗರದಲ್ಲಿಯೂ [illegible] ಉದ್ಧಾರಕ್ಕಾಗಿ ಬಂದಿರುವ ಶಾಖಾಮಠಗಳು [illegible] ಅದನ್ನು ಪ್ರತಿಯೊಂದು ಮನೆಯಲ್ಲಿಯೂ [illegible] ದೀಕ್ಷಾದಿ ಸಂಸ್ಕಾರಗಳನ್ನು ಮಾಡಿ ಧಾರ್ಮಿಕೋಪದೇಶಗಳನ್ನು ಮಾಡುವದಕ್ಕೋಸ್ಕರ [illegible] ಗಳು ಇದ್ದೇ ಇರುವರು. ಇವನ್ನೆಲ್ಲ ನೋಡಿದರೆ [illegible] ಗುರುವೆನಿಸುವರು. [illegible] ತೋರುವದು ಇತ್ತೀಚೆಗೆ ಭಕ್ತರಿಂದ [illegible] ಮುಖ್ಯ ಧ್ಯೇಯವಾಗಿದ್ದರೂ ಅನೇಕ [illegible] ಗಳು ನಾವು ಏಕೆ ಈ ಪಟ್ಟಾಧಿಕಾರವನ್ನು ವಹಿಸಿದೀವೆ? ನಮ್ಮ ಕರ್ತವ್ಯವೇನು? ನಮ್ಮ ಆಚರಣೆ [illegible] ದು? ನಮಗೂ ಶಿಷ್ಯರಿಗೂ ಇರುವ ಸಂಬಂಧವೇನು? ಎಲ್ಲರಂತೆ ನಾವುಗಳೂ ಇರದೆ ಈ ಪಟ್ಟವನ್ನು ಕಟ್ಟಿಕೊಂಡಿರುವ ಉದ್ದೇಶವೇನು? ಇವೇ ಮುಂತಾದ ಯೋಚನೆಗಳೊಂದನ್ನೂ ಮಾಡದೆ ಸಾಧಾರಣವಾಗಿ ಲೌಕಿಕ ಪುರುಷರಂತೆ [illegible] ಬಂಧುಬಾಂಧವರೆಂಬ ಅಭಿಮಾನದಿಂದ [illegible] ಒಳಪಟ್ಟವರಾಗಿ ಸಂಸಾರಿಗಳಂತೆ ಕೇವಲ ಪ್ರಪಂಚಾಸಕ್ತರಾಗಿಯೇ ಇರುವ [illegible] ಉಳ್ಳವರಾಗಿರುವರು. ಈ ಶ್ರೇಷ್ಠವಾದ ಪಟ್ಟಾಧಿಕಾರವನ್ನು ವಹಿಸಿದ ಮೇಲೆ ಆ ಸ್ಥಾನಕ್ಕೆ ಯೋಗ್ಯವಾದ ಕರ್ತವ್ಯಗಳನ್ನು ನಡೆಸದಿದ್ದರೆ ಅವರ ಪಟ್ಟದಿಂದ ಪ್ರಯೋಜನವೇನು?

[illegible] ಕ್ಕಾಗಿ [illegible] ಗುರುವಿನವರೆಗೆ [illegible] ಧರ್ಮಗಳಲ್ಲಿರುವರನ್ನು ಗುರುಗಳೆಂದು ತಿಳಿದರೆ ಅಂತಹ ಗುರುವಿನಿಂದ ಶಿಷ್ಯರಿಗೆ [illegible] ಆಗಲಾರದು. ಕೆಲ ಕೆಲವು [illegible] ಅಧಿಕಾರಿಗಳಾಗಿ ಬಂದವರಿಂದ ಭಕ್ತರಿಗೆ ಧಾರ್ಮಿಕೋಪದೇಶಗಳಿಲ್ಲದೆ [illegible] ದೇವರಿಗೆ ಶರಣು [illegible] ತತ್ವವಿದುರರಾಗಿದ್ದಾರೆ. [illegible] ಲಿಂಗ ಪೂಜೆಯನ್ನು [illegible] ಒಂದೇ ಒಂದು [illegible] ಮಾಡುವರು. [illegible] ಲಿಂಗಪೂಜೆ [illegible] ಧಾರ್ಮಿಕ [illegible] ದೀಕ್ಷಾ [illegible] ಗುರುಗಳೆಂಬುವರಿಗೆ [illegible] ಗುತ್ತಿದ್ದಾರೆ. ತಿಳಿದವರನ್ನು ಕರೆಯಿಸಿ [illegible] ಸಹಾಯವೂ ಆಗುವದಿಲ್ಲ. ತಾವೂ ನಡೆಸುವಂತಿಲ್ಲವು. ಶಿರಸ್ಸು ಚೆನ್ನಾಗಿದ್ದರೆ ಸರ್ವಾಂಗಗಳೂ ಚೆನ್ನಾಗಿರುವವು. ಶಿರಃಸ್ಥಾನಸ್ಥರಾದ ಗುರುಗಳು ಚೆನ್ನಾಗಿದ್ದರೆ ಶಿಷ್ಯರೂ ಸಹ ಒಳ್ಳೆ ಸ್ಥಿತಿಗೆ ಬರುವರು. ಗುರುಗಳೆನಿಸಿದ ಪಟ್ಟಚರಾಧಿಪತಿಗಳು ಹೀಗಾದ ಮೇಲೆ ವೀರಶೈವ ಮತದ ಧರ್ಮ ಕರ್ಮಗಳು ಸುಧಾರಿಸುವ ಬಗೆ ಹೇಗೆ? ಇದಕ್ಕೋಸ್ಕರ ಆಯಾಯ ಗ್ರಾಮದಲ್ಲಿರುವ ವಂಶಾನುಕ್ರಮವಾಗಿ ಬಂದ ಗುರುಪಟ್ಟಾಧಿಕಾರಿಗಳು ಮುಂದೆ ತಮ್ಮ ಸ್ಥಾನಕ್ಕೆ ಬರುವ ವಟುಗಳಿಗಾದರೂ ನಿಯಮಾದ ಶಿಕ್ಷಣವನ್ನು ಕೊಟ್ಟು ತಿಳಿದಮಟ್ಟಿಗೂ ತಮ್ಮ ಕರ್ತವ್ಯ, ಮರೆಯಬಾರದೆ ವೀರಶೈವ ಸಿದ್ಧಾಂತವನ್ನು ತಿಳಿದು ನಡೆಸುವಿಕೆಗಳಲ್ಲಿ ಶುದ್ಧರಾಗಿ ಶಿಷ್ಯರಿಗೆ ಧಾರ್ಮಿಕ ನೈತಿಕ ತಾತ್ವಿಕ ಬೋಧವನ್ನು ಮಾಡುತ್ತ ತಾವು ವೈರಾಗ್ಯವನ್ನವಲಂಬಿಸಿ ಷಟಸ್ಥಲ ಪ್ರಾಪ್ತಿ ಎಂಬ ನಾಮವನ್ನು ಸಾರ್ಥಕಪಡಿಸಿ ತಾವು ಧನ್ಯರಾಗುವುದಲ್ಲದೆ ಶಿಷ್ಯರನ್ನೂ ಸಹ ಕೃತಕೃತ್ಯರನ್ನಾಗಿ ಮಾಡುತ್ತ " ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ " ಎಂಬ ಮುಂಡಕೋಪನಿಷತ್ತಿನ ವಾಕ್ಯವನ್ನು ಪರಿಪಾಲನ ಮಾಡುವರೆಂದು ಗುರು ಸಂತತೀಯರಾದ ಪಟ್ಟಚರಾಧಿಪತಿಗಳನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ರಾವುಬಹದ್ದೂರ್ ಸೀತಾಂಬರ ರಾಮನಾಥರೆಡ್ಡಿಯಾರ್ ಎಂಬವರು ರಂಗೂನ್ ವಿಶ್ವವಿದ್ಯಾಲಯಕ್ಕೆ ೨ ಲಕ್ಷ ರೂಪಾಯಿಗಳನ್ನು ದಾನಮಾಡಿರುವರು. ಸ್ತುತ್ಯ!

ಅಮೃತಸರದಲ್ಲಿ ಪಠಾಣಕೋಟ ರೈಲ್ವೆ ಮಾರ್ಗದಲ್ಲಿ ರೈಲು ಬಂಡಿಯೂ ಒಂದು ಮೋಟಾರಿಗೆ ತಾಕುಬಿದ್ದು ಮೋಟಾರಿನಲ್ಲಿ ಕುಳಿತಿದ್ದ ೧೯ ಜನಗಳು ವಿಧಿವಶರಾದರು.

ಒಬ್ಬ ಮಹಮ್ಮದೀಯನು ಅಮೃತಸರದಲ್ಲಿ ಸ್ಥಾಪಿಸಲ್ಪಟ್ಟಿರುವ ವಿಕ್ಟೋರಿಯಾ ಮಹಾರಾಣಿಯವರ ಶಿಲಾವಿಗ್ರಹಕ್ಕೆ ಸಾದರಕ್ಕಾ ಪ್ರಯೋಗ ಮಾಡಿದ್ದಕ್ಕಾಗಿ ಅವನನ್ನು ಸೆರೆ ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಿದ್ದಾರೆ.

ಕಾನ್ಪುರದಲ್ಲಿ ಪ್ರಸಿದ್ಧರಾದ ಕೆಲವು ಹಿಂದೂ ಮುಖಂಡರಿಗೆ "ನೀವು ಹೀಗೆ ಹಿಂದೂಸಂಘಟನೆ ಮಾಡುತ್ತಾಹೋದರೆ ನಿಮ್ಮನ್ನು ಕೊಂದುಬಿಡುತ್ತೇವೆ" ಎಂದು ಯಾರೋ ದುರಾತ್ಮರು ಭಯೋತ್ಪಾದಕ ಪತ್ರಗಳನ್ನು ಬರೆದಿರುವರಂತೆ.

ಕರಾಚಿಯಲ್ಲಿ ಮಹಮ್ಮದ ಶಿರಾಣ ಎಂಬ ಒಬ್ಬ ಗಾಡಿಯವನು ಹಿಂದೂ ಬಾಲಕರಿಬ್ಬರನ್ನು ಪ್ರೋತ್ಸಾಹಿಸಿ ಕರೆದುಕೊಂಡು ಹೋಗಿ [illegible] ಉಪಯೋಗದಲ್ಲಿ ತಾರಿಸಿದುದರಿಂದ ಅವನ ಮೇಲೆ ಕೇಸು ನಡೆದು ೧ ವರ್ಷ ಕಠಿಣ ಶಿಕ್ಷೆಯನ್ನು ಹೊಂದಿದನು.

ಕಳೆದ ಶುಕ್ರವಾರ ಪ್ರಾತಃಕಾಲ ಶ್ರೀಮನ್ಮಹಾರಾಜರವರು ಶ್ರೀಯುವರಾಜರೊಡನೆ ರಾಜಧಾನಿಯಲ್ಲಿ ನಡೆದ ಸರ್ವವಸ್ತುಪ್ರದರ್ಶನಶಾಲೆಗೆ ದಯಮಾಡಿಸಿ ಶ್ರೇಷ್ಠವಾದ ವಸ್ತುಗಳನ್ನು ಪ್ರದರ್ಶನಮಾಡಿದ್ದವರಿಗೆ ಬಹುಮಾನಗಳನ್ನೂ ಯೋಗ್ಯತಾಪತ್ರಿಕೆಗಳನ್ನೂ ದಯಪಾಲಿಸಿದರು.

ಶ್ರೀ ಸಿಂಗಾರವೇಲುಚೆಟ್ಟಿಯಾರ್ ಎಂಬವರು ಮಿಸ್ ಮೇಯೋ ಎಂಬವಳ ಮದರ್ ಇಂಡಿಯಾ ಎಂಬ ಪುಸ್ತಕವನ್ನು ಬಹಳವಾಗಿ ಶ್ಲಾಘಿಸಿ ಆಕೆಯು ಈ ಪುಸ್ತಕವನ್ನು ಬರೆದು ಹಿಂದೂಸ್ಥಾನಕ್ಕೆ ಮಹದುಪಕಾರವನ್ನು ಮಾಡಿರುವಳೆಂದು ಹೇಳಿದರಂತೆ! ಇವರಲ್ಲವೇ ನಿಜವಾದ ಭಾರತಮಾತೆಯ ಪುತ್ರರು!

ಕಾನ್ಪೂರದಲ್ಲಿ ಹಿಂದೂಗಳೂ ಮುಸಲ್ಮಾನರೂ ಪರಸ್ಪರ ಸ್ನೇಹವನ್ನು ಬೆಳಸಿದ್ದಾರೆಂಬ ವಿಷಯವು ಯಾರಿಗೆ ತಾನೇ ಸಂತೋಷವನ್ನುಂಟುಮಾಡದು? ಕಳೆದ ದಸರಾ ಮಹೋತ್ಸವದಲ್ಲಿ ಮುಸಲ್ಮಾನರು ತಮ್ಮ ತಮ್ಮ ಮನೆಗಳ ಮುಂಭಾಗಗಳಲ್ಲಿ ದೀಪೋತ್ಸವನ್ನು ಮಾಡಿ ಹಿಂದುಗಳನ್ನು ಗೌರವಿಸಿದರಂತೆ!

[illegible] ಚಾರ್ಲೆಟ್ ಡೆವನಾಪೋರ್ಟ್ ಎಂಬ ನೂರು ಮೂರು ವರ್ಷ ಪ್ರಾಯದ ವೃದ್ಧಳೊಬ್ಬಳು ಸೌಂದ

[illegible]ಕ್ಕಾಗಿ ನಿಂತಿದ್ದಾಳೆ. ಇವಳು ಅನೇಕ ವರ್ಷಗಳ [illegible] ದಿಂದ ಅಮೇರಿಕೆಗೆ ಹೋದಳು. ಇಷ್ಟು [illegible]ಗಿದ್ದರೂ ತರುಣಿಯಂತೆ ತೋರುವಳು. [illegible] ಗಂಡನ ವಯಸ್ಸು ಈಗಿನ ವಯಸ್ಸಿನ ಅರ್ಧ [illegible]ದೆ. ಈ ವರನಿಗೆ ಸುದೃಢಕಾಯನಾದ ವ[illegible]ನೆಂದು ಪತ್ರಿಕೆಯವರಂತೆ.

[illegible]ಷ್ಟ್ರೇಲಿಯಲ್ಲಿ ಗವಳಿಗನ ಬಳಿಯಲ್ಲಿ ಹೋಗುತ್ತಿ[illegible] ಒಬ್ಬ ವೀರ ವ್ಯಾಪಾರಿಯನ್ನು ಯಾರೋ ಕೊಲೆ [illegible] ಕೊಂದು, ಬಾಕಿ ಆತನ ಸಮೀಪದಲ್ಲಿದ್ದ [illegible]ಯಂಗಳು ಕುರುಡ ಹುಡುಗಿಯನ್ನು ಕೈಯಲ್ಲಿ [illegible]ಕ್ಕದ ಹಳ್ಳಿಯನ್ನು ಆಸ್ಪತ್ರೆಗೆ ಸೇರಿಸಿ[illegible] ತಪಾಸು ಮಾಡುತ್ತಲಿದ್ದಾರೆ.

[illegible]ನದಲ್ಲಿ ಪೂರ್ವ ಕಾಲದಲ್ಲಿ ಮೂರ್ತಿ[illegible] ಇದ್ದಿಲ್ಲವೆಂತಲೂ ಬುದ್ಧನ ಕಾಲದಿಂದ ಬಂ[illegible] ಬುದ್ಧನಾದವನು ಗ್ರೀಕರಿಂದ ಮೂರ್ತಿ[illegible]ಯನ್ನು ಅನುಕರಣ ಮಾಡಿದನೆಂತಲೂ ಹಿಂದೂ[illegible]ನದಲ್ಲಿಯೂ ಚೀನಾದಲ್ಲಿಯೂ ಇರುವ ಮೂರ್ತಿ[illegible] ಗ್ರೀಕಮೂರ್ತಿಗಳನ್ನು ಹೋಲುತ್ತವೆಂತಲೂ [illegible] ಸಂಶೋಧಕನೊಬ್ಬನು ಹೇಳುತ್ತಾನೆ.

ಹೈದರಾಬಾದಿನ ನಿಜಾಮರ ಗುರುಗಳಾದ ಸಾಧು [illegible]ದ್ ಹಮೀದ ಅಲಿಡ್ರ್ಯಸ್ ಸಾಹೇಬರು ಕಳೆದ ಸೋಮವಾರ ತಮ್ಮ 130 ನೇ ವಯಸ್ಸಿನಲ್ಲಿ ಪರಲೋಕವಾಸಿಗಳಾದರು. ಇವರ ಜೊತೆಯಲ್ಲಿ ನಿಜಾಮ ಸಾಹೇಬರೂ ಅನೇಕ ಹಿಂದೂ ಮುಸಲ್ಮಾನ ದೊಡ್ಡ ಮನುಷ್ಯರೂ ಸ್ಮಶಾನಕ್ಕೆ ಹೋಗಿದ್ದರು. ಇವರು ಮಹಾತಪಸ್ವಿಗಳೆಂದು ನಿಜಾಮರಾಜ್ಯದಲ್ಲೆಲ್ಲಾ ಪ್ರಖ್ಯಾತರಾಗಿದ್ದರು.

ಅಲಹಾಬಾದಿನಲ್ಲಿ [illegible] ಕಂಪನಿಯ ಮ್ಯಾನೇಜರ್‌ರಾಗಿರುವ ಮಿ|| ಪ್ಲಾಟ್ ಎಂಬ ಯೂರೋಪಿಯನ್ ಗೃಹಸ್ಥರು ಕಳೆದ ನವರಾತ್ರಿ ದಿವಸ ಹಿಂದೂಧರ್ಮವನ್ನು ಸ್ವೀಕಾರ ಮಾಡಿದರು. ಇವರು ಹಿಂದೂ ಧರ್ಮ ಪ್ರಕಾರ [illegible] ನಂತ [illegible]ವನ್ನು ಮಾಡಿಕೊಂಡಿದ್ದಲ್ಲದೆ ಮೊದಲಿನ [illegible]ನನ್ನು ಬಿಟ್ಟು ಭಾರತೀಯರ ಉಡುಪನ್ನು ಉಪಯೋಗಿಸುತ್ತಾರೆಂದು ಕೇಳುತ್ತೇವೆ.

18[illegible]1 ರಲ್ಲಿ ಹಿಂದುಸ್ಥಾನದಲ್ಲಿ 100 ಜನರಲ್ಲಿ 71 ರು ಹಿಂದುಗಳಿದ್ದರು. ಆದರೆ 1931 ನೆಯ ಜನಸಂಖ್ಯೆಯಲ್ಲಿ ಈ ಸಂಖ್ಯೆಯು 61 ಕ್ಕೆ ಇಳಿದಿರುವುದು. [illegible]ಬಾಬು ಮತ್ತು ಬಂಗಾಳ ಪ್ರಾಂತಗಳ ಸ್ಥಿತಿಯು [illegible] ಶೋಚನೀಯವಾಗಿರುವುದು. ಹೀಗೆ ಹಿಂದು ಸಂಖ್ಯೆಯು ಕಡಿಮೆಯಾಗುತ್ತಾ ನಡೆದರೆ 108 [illegible]ಗಳಲ್ಲಿ ಪಂಜಾಬಿನಲ್ಲಿ ಮತ್ತು 120 ವರ್ಷಗಳಲ್ಲಿ [illegible]ಗಾಳದಲ್ಲಿ ಒಬ್ಬ ಹಿಂದುವೂ ಉಳಿಯುವುದಿಲ್ಲ.

[illegible]ಂದುಸ್ಥಾನದಲ್ಲಿ [illegible] ವರ್ಷಗಳ ಹಿಂದೆ 27 ಕೋಟಿ [illegible]ಗಳಿದ್ದರೆಂದು ಗೊತ್ತಾಗುತ್ತದೆ ಈಗ ಕೇವಲ [illegible] ಟಿ ಉಳಿದಿರುವರು. [illegible] ಅಸ್ಪೃಶ್ಯ[illegible] ವೃಗಳು [illegible] ಹಿಂದೂಧರ್ಮ[illegible] ಕಾರಣ[illegible] ಸ್ವಾರ್ಥ[illegible] ಈ ಭಾರತ[illegible] ಈ ಪ್ರಕಾರ ನಡೆಯುತ್ತ[illegible] ಸ್ವಾತಂತ್ರ್ಯ[illegible] ಹಿಂದುಗಳ [illegible] ಪಡಿಸಲಿಕ್ಕಿಲ್ಲ.

ಕಳೆದ 11 ತಾರೀಖಿನ ದಿವಸ ಇಂಗ್ಲೆಂಡಿನಲ್ಲಿ [illegible] ಹಿಂದು ಗೃಹಸ್ಥನನ್ನು ಒಬ್ಬ ಮುಸಲ್ಮಾನನು [illegible] ಕೊಲೆಮಾಡಿದನು. [illegible] ದಿವಸ ಹಿಂದುಗಳು [illegible] ದೇಹವನ್ನು [illegible] ಒಂದು [illegible] ಹೋದಾಗ [illegible] ಸಿದ [illegible] ಹಾಕಿ [illegible] ತೆ ಹೊಡೆದರು.

ಮೈಸೂರು [illegible] (Convocation) ಸಮಯ [illegible] ಗುರುವಾರ ಪ್ರಾತಃಕಾಲ ರಾಜಧಾನಿಯ [illegible] ಸ್ಥಾನದಲ್ಲಿ ನೆರವೇರುವುದು. ಈ ಸಮಯದಲ್ಲಿ ಪಟ್ಟಾಂಗಿತರಾದ ವಿದ್ಯಾರ್ಥಿಗಳಿಗೆ ಪದವಿ

ದಾನ ಮಾಡುವುದಕ್ಕಾಗಿ ರಸಾಯನಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿ ಲೋಕವಿಖ್ಯಾತರಾದ ಸರ್ ಜಗದೀಶಚಂದ್ರ ಬೋಸರವರು ಶ್ರೀಮನ್ ಮಹಾರಾಜರವರಿಂದ ಆಹ್ವಾನಿಸಲ್ಪಟ್ಟಿರುತ್ತಾರೆ.

ಅಮೇರಿಕೆಯ ಯಂತ್ರಶಾಸ್ತ್ರಜ್ಞರು ನ್ಯೂಯಾರ್ಕ್ ವಿದ್ಯುತ್ತಿನ ಕಂಪನಿಯೊಂದರಲ್ಲಿ ಕೃತ್ರಿಮ ಮನುಷ್ಯರನ್ನು ನಿರ್ಮಿಸಿರುವರಂತೆ! ಇವರು ಬಾಗಿಲು ತೆರೆಯುವುದು, ಜನರಿಗೆ ಹೇಳುವುದು, ಕಸಗುಡಿಸುವುದು ಮೊದಲಾದ ಕೆಲಸಗಳನ್ನು ಮಾಡುತ್ತಾರೆ. ಇವುಗಳ ಸು [illegible] ಯಂತ್ರದಲ್ಲಿ ನಿಂತು [illegible] ನೋಡಿಕೊಳ್ಳುತ್ತಾರಂತೆ! ಹೀಗೆಯೇ ವಿಜ್ಞಾನಶಾಸ್ತ್ರವು ಪ್ರವೃದ್ಧವಾಗುತ್ತಾ ಹೋದರೆ ಸೃಷ್ಟಿಕರ್ತನಾದ ಬ್ರಹ್ಮನಿಗೆ ರಜಾ ಸಿಗುವ ಕಾಲವು ಬಂದರೂ ಬರಬಹುದು.

ಒಂದು ವರ್ಷದಲ್ಲಿ 1500 [illegible] ಹೊಸ [illegible] ಮೋಟಾರುಗಳನ್ನು ಇಂಡಿಯಾದೇಶದಲ್ಲಿ ಮಾರಬೇಕಾಗಿ ಇಂಗ್ಲಿಷ್ ಮೋಟಾರು ಕಂಪನಿಯವರು ನಿರ್ಧರಿಸಿದ್ದಾರೆ. ಒಂದು ಕಾಲದಲ್ಲಿ ಕುಶಲವಿದ್ಯೆಗಳ ತವರುಮನೆಯಾಗಿ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ದೇಶಗಳಿಗೆ ಬೆಲೆಯುಳ್ಳ ಭೋಗ್ಯವಸ್ತುಗಳನ್ನು ಕಳುಹಿಸಿ ಪ್ರಪಂಚಕ್ಕೆ ಆದರ್ಶಪ್ರಾಯವಾಗಿದ್ದ ಭಾರತವರ್ಷವು ಈಗ ಪಾಶ್ಚಾತ್ಯ ಕೈಗಾರಿಕೆಗಳ ಮಾರಾಟದ ಕ್ಷೇತ್ರವಾಗಿ ಪರಿಣಮಿಸಿಹೋಗಿದೆ. ಇದು ಅತ್ಯಂತ ಶೋಚನೀಯವಾದ ವಿಷಯವೇ ಸರಿ.

ಮಿಸ್ ರುತ್ ಎಲ್ಡರ್ ಎಂಬ ಪಾಶ್ಚಾತ್ಯ ಯುವತಿಯು ವಿಮಾನದ ಮೇಲೆ ಪ್ರಪಂಚವನ್ನೆಲ್ಲಾ ಸುತ್ತಬೇಕೆಂದು ನಿರ್ಧರಿಸಿ ಅಮೇರಿಕೆಯಿಂದ ಹೊರಟು 2000 ಮೈಲು ದೂರ ಪ್ರಯಾಣಮಾಡಿದಳು. ಇಂಗ್ಲೆಂಡು ಇನ್ನೂ 600 ಮೈಲು ದೂರವಿರುವಾಗ ಆಕೆ ವಿಮಾನವು ಸುಟ್ಟುಹೋಯಿತು. ಆಗ ಸಮುದ್ರದಲ್ಲಿದ್ದ ಹಡಗು ಬಂದು ಆಕೆಯನ್ನು ರಕ್ಷಿಸಿತು. ಆಕೆಯು ಪ್ರಯಾಣದ ಕಥೆಯನ್ನು ತಿಳಿಸಬೇಕೆಂದು ಅಮೇರಿಕಾ ಪತ್ರಿಕೆಗಳು ಕೇಳಿದ್ದಕ್ಕೆ ಆಕೆಯು ಒಂದೂವರೆ ಲಕ್ಷ ಡಾಲರುಗಳನ್ನು ಕೊಟ್ಟರೆ ತನ್ನ ಸಾಹಸಕಾರ್ಯವನ್ನು ಹೇಳುವುದಾಗಿ ತಿಳಿಸಿದಳಂತೆ!

[illegible] ತಾಲೂಕಿಗೆ ಸೇರಿದ ಕಟ್ಟೇರಿ ಎಂಬ ಗ್ರಾಮದಲ್ಲಿ ಒಬ್ಬ ಸ್ತ್ರೀಯು ತನ್ನ [illegible] ಸತ್ತ ರಾತ್ರಿಯಲ್ಲಿ [illegible] ಧರ್ಮಿಯಲ್ಲಿ [illegible]. ಇದು ಹೇಗೋ ಸರಕಾರಕ್ಕೆ ತಿಳಿದು ಆಪಾದಿತ [illegible] ಪೋಲೀಸ್ [illegible] ಸ್ಥಾನವನ್ನು [illegible] ರವ [illegible] ದಲ್ಲಿ [illegible]. ಜನಗಳ್ಳರ ಅಕ್ಷರ [illegible] ರು ಈಗ [illegible] ರ ಬದಲು ಸರಕಾರ [illegible] ದಲ್ಲಿ [illegible] ನೆಯಾಗುತ್ತಲಿವೆ. [illegible] ಹುಟ್ಟಿ [illegible] ಧರ್ಮದಲ್ಲಿ [illegible] ದೇವರು [illegible] ಬಂದಿದೆ.

[illegible] ಜಗದ್ಗುರು ಪಂಚಾಚಾರ್ಯರ [illegible]

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಘ ಹೊಳೆ ಆಲೂರು.

ಧಾರವಾಡ ಜಿಲ್ಲಾ ರೋಣ ತಾಲೂಕು [illegible] ಹೊಳೆ ಆಲೂರು ಗ್ರಾಮದ ವೇ| ರೇವಣಯ್ಯನವರು ಭಕ್ತಿಪೂರ್ವಕ [illegible] ಇವರ ಮನೆಯಲ್ಲಿ [illegible] ದಿವಸ [illegible] ನಿಮಿತ್ತ [illegible] ಪೂಜೆಯಾದನಂತರ ಸಭೆ [illegible]ದಲ್ಲಿ ಒಂದು ಧಾರ್ಮಿಕ [illegible] ನೆರವೇರಿಸಲ್ಪಟ್ಟಿತು. ಈ ಸಭೆಗೆ [illegible] ಸರ್ವರ ಅಧ್ಯಕ್ಷತೆ [illegible] ಬ್ರಹ್ಮ [illegible] ಪಟ್ಟದ ಶ್ರೀ ಸಂಗಮೇಶ್ವರಸ್ವಾಮಿಗಳವರು. ಮಹಿಮ[illegible] ಸ್ವಾಮಿಗಳವರು ಧರ್ಮ[illegible], ಗುರು[illegible]ಭಕ್ತಿ, ಆಚಾರ್ಯರ ಉತ್ಪತ್ತಿ ಹಾಗೂ ಮಹಿಮಾ ಈ ವಿಷಯಗಳ ಮೇಲೆ ಉಪನ್ಯಾಸವನ್ನು ಮಾಡಿ ತಮ್ಮ ಅಮೃತೋಪಮವಾದ ವಾಣಿಯಿಂದ ಶ್ರೋತೃವರ್ಗವನ್ನು ಸಂತೋಷಪಡಿಸಿದರು. ಅಮೇಲೆ ಸ್ವಾಮಿಗಳವರು ಈ ಗ್ರಾಮದಲ್ಲಿ "ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಘ" ವೆಂಬ ಹೆಸರಿನಿಂದ ಒಂದು ಸಂಘವನ್ನು ಆವಶ್ಯವಾಗಿ ಸ್ಥಾಪಿಸಬೇಕೆಂದು ಬೋಧಿಸಲಾಗಿ, ಸರ್ವರೂ ಅತ್ಯಾನಂದದಿಂದ ಒಪ್ಪಿಗೆಯನ್ನು ಕೊಟ್ಟರು. ಮ|| ರಾ|| ಗುರುಸಿದ್ಧ ಜೀರಗಿಯವರು ಇವರನ್ನು ಈ ಸಂಘದ ಸೆಕ್ರೆಟರಿಗಳನ್ನಾಗಿ ನಿಯಮಿಸುವುದರಲ್ಲಿ ಬಂದಿತು. ಅನಂತರ ಸಿಂಹಾಸನದಲ್ಲಿ ಅಲಂಕರಿಸಲ್ಪಟ್ಟ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಕ್ಕೆ ವಿಧ್ಯುಕ್ತವಾಗಿ ಪೂಜೆಯು ಮಾಡಲ್ಪಟ್ಟಿತು. ಮಂಗಳಾರತಿಯನಂತರ ಸರ್ವರೂ ಶ್ರೀ ಸ್ವಾಮಿಗಳವರ ಆಶೀರ್ವಾದವನ್ನು ಪಡೆದುಕೊಂಡು ಶ್ರೀಮತ್ಪಂಚಾಚಾರ್ಯರ ಜಯಜಯಕಾರದೊಡನೆ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಇದರಂತೆ ಸಮಸ್ತ ಗ್ರಾಮಗಳ ವೀರಶೈವರು ತಮ್ಮ ತಮ್ಮ ಗ್ರಾಮಗಳಲ್ಲಿ ಶ್ರೀಮತ್ಪಂಚಾಚಾರ್ಯ ಸೇವಾಸಂಘಗಳನ್ನು ಸ್ಥಾಪನೆ ಮಾಡಿ ಧನ್ಯರಾಗಬೇಕೆಂದು ಕೋರುತ್ತೇನೆ.

ವಿ|| ಸ|| ಹಿ|| ಬಸಯ್ಯ,
ಇಂಗ್ಲಿಷ್ ಸ್ಕೂಲ್ ಮಾಸ್ಟರ್.

ಸ್ವೀಕಾರ

ತೀರ್ಥಹಳ್ಳಿ ತಾಲೂಕು ಭಾಂಡ್ಯಗ್ರಾಮದ ಮ|| ರಾ|| ಶ್ರೀಮಂತ ರುದ್ರಪ್ಪಗೌಡರು ತಮ್ಮ ಮನೆಯಲ್ಲಿ ಪ್ರತಿಷ್ಠಿಸಿದ ವಿನಾಯಕನ ಸಮಾರಾಧನೆಯಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ಐದು ರೂಪಾಯಿಗಳನ್ನು ತೆಗೆದು ವೇ|| ಹುಣಸಗಟ್ಟದ ಆರಾಧ್ಯಮಠದ ನಂಜುಂಡಾರಾಧ್ಯರ ದ್ವಾರಾ ಕಳುಹಿಸಿರುತ್ತಾರೆ.

ಸೋಲಾಪುರ ಜಿಲ್ಲೆಗೆ ಸೇರಿದ ಪೋಶಾಪುರಿಯಲ್ಲಿ ಒಬ್ಬ ವೀರಶೈವನ ಪ್ರಾಯಶ್ಚಿತ್ತ ಸಮಯದಲ್ಲಿ ಶ್ರೀ ಹೊಟಗಿ ಪಟ್ಟದಸ್ವಾಮಿಗಳು ಎರಡು ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಶ್ರೀ ಜಿಮ್ಮಲಗಿ ಅರಳೇಮಠದ ಪಟ್ಟದಸ್ವಾಮಿಗಳವರ ಅನುಷ್ಠಾನ ಸಮಾಪ್ತಿ ಸಮಯದಲ್ಲಿ ತೆಗೆಯಿಸಿದ ಎರಡು ರೂಪಾಯಿಗಳು ವೇ|| ಅಮ್ಮಿನಗಡ ಮಠ ಮಹಾಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ತಾಲೂಕಿಗೆ ಸೇರಿದ ಗಟ್ಟರಡ್ಡಿಹಾಳ ಗ್ರಾಮದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಉತ್ಸವಕಾಲದಲ್ಲಿ ಭಜನಾಸಂಘದವರಿಂದ ತೆಗೆದ ಎರಡು ರೂಪಾಯಿಗಳೂ, ವೇ|| ವಿರೂಪಾಕ್ಷಯ್ಯನವರಿಂದ ತೆಗೆಯಿಸಿದ ಒಂದು ರೂಪಾಯಿಯೂ ಮ|| ರಾ|| ಶಾಂತಪ್ಪ [illegible] ಇವರ ದ್ವಾರಾ ಬಂದಿರುತ್ತವೆ.

ತಿಪಟೂರು ವಾಸಿಗಳಾದ ಮ|| ರಾ|| ಬೇಗೂರು ಚಿಕ್ಕಚನ್ನಬಸವಪ್ಪನವರು ತಮ್ಮ ಪುತ್ರಿಯಾದ [illegible] ವಿವಾಹ [illegible] ವಿಜಯದಶಮಿಯ [illegible] ದ್ವಾರಾ ಎರಡು ರೂಪಾಯಿಗಳನ್ನು ಕಳುಹಿಸಿದ್ದಾರೆ. ಈ ರೂಪಾಯಿಗಳು ವೇ|| [illegible] ಮರೀಮಠದ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತವೆ.

ಮುಂಡರಗಿ ತಾಲೂಕು [illegible] ಮ|| ರಾ|| ಶ್ರೀಮಂತ ಶಾಂತವೀರಪ್ಪನವರು, ಮ|| ರಾ|| ಹಳ್ಳಿಕೇರಿ(?) [illegible] ಬಸಪ್ಪನವರು, ಮ|| ರಾ|| ಗದಗಿನ [illegible]ನವರು, ಮ|| ರಾ|| ಗದಗಿನ [illegible]ಪ್ಪನವರು, ಈ [illegible] ಸಮರ್ಪಣ [illegible] ಪೋಷಣಕ್ಕಾಗಿ ಹತ್ತು ರೂಪಾಯಿಗಳನ್ನು ಕಳುಹಿಸಿದ್ದಾರೆ. ಈ ರೂಪಾಯಿಗಳು ವೇ|| [illegible]ಹಳ್ಳಿ ಗುರುಪಾದದೇವರ ಮಠದ ಕೊಟ್ರಬಸವಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಶುಭವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯಾಯ ನಮಃ

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಮಂಡಲಿ, ತುಮಕೂರು.

(ಕಳೆದ ಸಂ ೨)

ಶ್ರೀ ಜಗದ್ಗುರು ರೇಣುಕಪಂಚಕಂ

ಸೋಮಸೋಮಧಾರಿಣಂ ಸುಕಾಮಕಾಮ್ಯಕಾರಿ
ಣಂ ಧಾಮಧಾಮಪೂರಿಣಂ ಕುಕಾಮವರ್ಜಿತಾರಿ
ಣಂ ಭೀಮಭೀಮರೂಪಿಣಂ ಶಿವಾಗಮಸ್ವರೂಪಿಣಂ
ರಾಜರಾಜಪೂಜಿತಂ ಭಜಾಮಿರೇಣುಕಂ ಗುರುಂ ||೧||
ಕ್ಲೇಶಮೂಲಶೋಷಣಂ ಪ್ರಕಾಶಮಾನಭೂಷಣಂ,
ಕಾಂಚಿಸ್ವರ್ಣಪೋಷಣಂ ವಿಶಾಲವೇಷಭೂಷಣಂ
ರಾಜರಾಜಪೂಜಿತಂ ಭಜಾಮಿರೇಣುಕಂಗುರುಂ ||೨||
ಸೋಮನಾಥಸಂಭವಂ ವಿಬುದ್ಧ ಕುಂಭಸಂಭವಂ
ಸಂಪ್ರಸಕ್ತಶಾಂಭವಂ ವಿಭಿದ್ಧ ಸಿಕ್ತಶಾಂಭವಂ
ಶಾಂತಿದಾಂತಿಸಂಭವಂ ಪರೀತಸರ್ವವೈಭವಂ ರಾಜ
ರಾಜಪೂಜಿತಂ ಭಜಾಮಿರೇಣುಕಂ ಗುರುಂ ||೩||
ಚೋಳಭೂಪಸೇವಿತಂ ಸುಚಾರುನೇತ್ರಶೋಭಿತಂ
ಶಂಕರಾರ್ಯಶಿಕ್ಷಿತಂ ಕಳಂಕರೂಪಮೂರ್ತಿಕಂ
ವಿಶ್ವವಾದಿವಂದಿತಂ ತ್ರಿವಿಕ್ರಮಾದಿನಂದಿತಂ ರಾಜ
ರಾಜಪೂಜಿತಂ ಭಜಾಮಿರೇಣುಕಂಗುರುಂ ||೪|| ವೇದ
ಶಾಸ್ತ್ರಬೋಧಕಂ ತ್ರಿವೇದಬಾಹ್ಯಕಾರಕಂ, ಷಟ್ಸ್ಥಲಪ್ರ
ಬೋಧಕಂ ಷಡಧ್ವರೂಪದರ್ಶಕಂ | ವೀರಶೈವತತ್ವಧಾ
ರಕಂ "ವಿಶ್ವಪಿಂಡಪಾಲಕಂ" | ರಾಜರಾಜಪೂಜಿ
ತಂ ಭಜಾಮಿರೇಣುಕಂಗುರುಂ ||೫|| ಕಾಶೀನಾಥಕವಿ
ಪ್ರೋಕ್ತಂ ರೇಣುಕಾಚಾರ್ಯ ಪಂಚಕಂ| ಯಃಪಠೇತ್ಸ
ಯಾಭಕ್ತ್ಯಾ ಸಯಾತಿ ಜ್ಯೋತಿರಾಸ್ಪದಂ ||೬||

ಯಾವ ಜಗದಾಚಾರ್ಯರು ಪರಶಿವನ ಅಂಶೀಭೂತರಾಗಿ ಅವತರಿಸಿ ಪರಮಪವಿತ್ರವಾದ ವೀರಶೈವಮತ ಸಿದ್ಧಾಂತವನ್ನು ಸುಪ್ರಸಿದ್ಧ ಅಗಸ್ತ್ಯಾದಿ ಮಹರ್ಷಿಗಳಿಗೆ ಬೋಧಿಸಿ ಷಟ್ಸ್ಥಲ ಆಚಾರ್ಯವರಣ ಪಂಚಾಚಾರಂಗಳನ್ನು ಹರಡಿ ಧರ್ಮರಕ್ಷಣೆಯ ಬಗ್ಗೆ ಬೃಹತ್ಸೂತ್ರಭಾಷ್ಯವಂ ಬರೆದು ರಂಭಾಪುರಿಯಲ್ಲಿ (ಬಾಳೆಹೊನ್ನೂರು) ವೀರಸಿಂಹಾಸನ ಜಗದ್ಗುರು ಪೀಠವಂ ಪ್ರತಿಷ್ಠಿಸಿ ಶಾಶ್ವತ ಸನಾತನರಾಗಿರುವರೋ ಅಂತಹ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರ ಕೀರ್ತಿಪಂಚಕವನ್ನು ನವರಾತ್ರಿ ಮಹೋತ್ಸವದ ನಿಮಿತ್ತವಾಗಿ ಈ ಸಂಘದವರು ಪ್ರಸಿದ್ಧಿಸುತ್ತಾರೆ. ಇದರಂತೆಯೇ ಜಗದ್ಗುರು ಪಂಚಾಚಾರ್ಯರವರ ಮಹಿಮಾತಿಶಯಗಳು ಈ ಸಂಘದವರಿಂದ ಪ್ರಕಟಿಸಲ್ಪಡುತ್ತವೆ. ಆಚಾರ್ಯವರಣ ಸಂಪನ್ನರಾದ ಜಗದ್ಗುರು ಭಕ್ತರಾದ ಚತುರಾಶ್ರಮದವರು ಈ ಸಂಘಕ್ಕೆ ಸದಸ್ಯರಾಗಿ ಪ್ರೋತ್ಸಾಹಿಸಲು ಮತ್ತು ನಿಜಗುರುಭಕ್ತರಾಗಿ ಧರ್ಮಪ್ರಸಾರಗೊಳಿಸಲು ಸಹಾಯಕರಾಗಲು ಮತ್ತು ಎಲ್ಲಾ ಪ್ರಾಂತಗಳಲ್ಲೂ ಶ್ರೀ ಪಂಚಾಚಾರ್ಯ ಭಜನಾ ಸಂಘಗಳನ್ನೂ, ಸೇವಾಮಂಡಲಿಗಳನ್ನೂ, ಸ್ಥಾಪಿಸಲು ಈ ಮಂಡಲಿಯವರು ಬೇಡುತ್ತಾರೆ.

ಜಿ. ಕೆ. ಗುರುಸಂಗಾರ್ಯ,
ಕಾರ್ಯದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ ಸ್ಥಾಪನವು.

ಗುಲ್ಬುರ್ಗಾ ಜಿಲ್ಲೆಗೆ ಸೇರಿದ ಕಲ್ಯಾಣಪಟ್ಟಣಕ್ಕೆ ಚಿಕ್ಕಮಣ್ಣೂರು ಹಿರೇಮಠದ ಶ್ರೀ ಪಟ್ಟದ ಸ್ವಾಮಿಗಳವರು ಆಗಮಿಸಿ ಹುಲಿಕಂಭೆಕಟ್ಟೆ ಮಠದಲ್ಲಿ ವಾಸವಾಗಿದ್ದರು. ಈ ಗುರುವರ್ಗದ ಮಠವು ಅತ್ಯಂತ ಪ್ರಾಚೀನವಾಗಿದ್ದು ಸದ್ಯಃ ಈ ಮಠದಲ್ಲಿ ಚೋಳಭೂಪಾಲ ಬಿಜ್ಜಲಭೂಪಾಲರೇ ಮೊದಲಾದವರು ಕೊಟ್ಟ ದಾನ ಶಾಸನಗಳು ದೊರಕಲಾಗಿವೆ. ಇಂಥ ಸುಪ್ರಸಿದ್ಧ ಮಠದಲ್ಲಿ ಈ ಪಟ್ಟಣದ ಸಮಸ್ತ ವೀರಶೈವರು ಕೂಡಿ ಧಾರ್ಮಿಕಸಭೆಯನ್ನು ನೆರವೇರಿಸಿದರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಚಿಕ್ಕಮಣ್ಣೂರು ಶ್ರೀಗಳವರೇ ವಹಿಸಬೇಕೆಂದು ಸರ್ವರೂ ಅಭಿಪ್ರಾಯಪಟ್ಟ ಪ್ರಕಾರ ಸೀರಬಿ ಹೇಗಲಾಪುರದ ವೇ|| ಹಾಲಾರಾಧ್ಯ ಶರ್ಮರವರು ಸದರಿ ಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ವಹಿಸುವದನ್ನು ಸೂಚಿಸುತ್ತಿರಲು [illegible] ಮಹದೇವಯ್ಯನವರು ಅನುಮೋದಿಸಿದರು. ಶ್ರೀ ಸ್ವಾಮಿಗಳವರು ಪಂಚಾಚಾರ್ಯರ ಜಯಘೋಷದೊಡನೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಆ ಮೇಲೆ ನಾರಾ ಡ. ಶರ್ಮರವರು ಅಸ್ಪೃಶ್ಯರ ಹಾಗೂ [illegible] ಈ ವಿಷಯಗಳ ಮೇಲೆ ನವನವವಾದ ಭಾಷಣ ಮಾಡಿದರು. ಇದೇ ಗ್ರಾಮದ ವೇ|| ಸಿದ್ಧಾಂತಿ ಚನ್ನಬಸವಶಾಸ್ತ್ರಿಗಳು ವೀರಶೈವರಿಗೆ ವಿದ್ಯಾವಶ್ಯಕತೆಯ ವಿಷಯವನ್ನು ಮನೋಹರವಾಗಿ ತಿಳಿಸಿದರು. ಅನಂತರ ಅಧ್ಯಕ್ಷರು ವೇದಾಂತವಿಷಯವನ್ನು ಸ್ವೀಕರಿಸಿ ಸರ್ವರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಬೋಧಿಸಿದರು. ಮರುದಿವಸ ದೀಕ್ಷಾ ವಿಷಯದಲ್ಲಿ ವ್ಯಾಖ್ಯಾನವನ್ನು ಕೊಟ್ಟರು. ಇಲ್ಲಿಯ ಸಮಸ್ತ ವೀರಶೈವರೂ ಈ ಧಾರ್ಮಿಕೋಪನ್ಯಾಸವನ್ನು ಕೇಳಿ ಅತ್ಯಂತ ಸಂತೋಷಪಟ್ಟರು. ಶ್ರೀ ಸ್ವಾಮಿಗಳವರು ಜಗದ್ಗುರು ಪಂಚಾಚಾರ್ಯರ ಮಹತ್ವಗಳನ್ನು ಸರ್ವರಿಗೂ ಬೋಧಿಸಿ ಈ ಪಟ್ಟಣದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘವೊಂದನ್ನು ಸದರಿ ಹುಲಿಕಂಭಮಠದಲ್ಲಿ ಸ್ಥಾಪಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನು ಅಲಂಕರಿಸಿದರು. ಈ ಸಮಯದಲ್ಲಿ ವೇ|| ಶಂಕರಗುಡಿ ಗುರುಪಾದಯ್ಯನವರ ಸಂಗೀತ ನಾಟಕಮಂಡಳಿಯವರು ಹಾರ್ಮೋನಿಯಂ ತಬಲಾ ಮುಂತಾದ ವಾದ್ಯಗಳಿಂದ ಅತ್ಯಂತ ಮನೋಹರವಾಗಿ ಆಚಾರ್ಯರ ಭಜನೆಯನ್ನು ಮಾಡಿದರು. ಈ ಸಂಘದ ವ್ಯವಸ್ಥೆಗೋಸ್ಕರ ಸೆಕ್ರೆಟರಿಗಳನ್ನು ನಿಯಮಿಸಿದರು. ಈ ಪಟ್ಟಣದಲ್ಲಿರತಕ್ಕ ಸಮಸ್ತ ವೀರಶೈವರ ಉದ್ಧಾರಕ್ಕಾಗಿ ಸ್ಥಾಪಿಸಲ್ಪಟ್ಟ ಈ ಸಂಘದ ಉದಯದಲ್ಲಿ ಸರ್ವರೂ ಅತ್ಯಂತ ಸಂತೋಷಪಟ್ಟು ಆಶೀರ್ವಾದವನ್ನು ಪಡೆದುಕೊಂಡು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡುತ್ತಾ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಸದ್ಯ ಗುರುವರ್ಗದ ಪಟ್ಟದಾಧಿಕಾರಿ ಸ್ವಾಮಿಗಳು ಚಿಕ್ಕಮಣ್ಣೂರು ಸ್ವಾಮಿಗಳ ಪರಂತೆ ಅಲ್ಲಲ್ಲಿ ಸಂಚರಿಸಿ ಜನರಿಗೆ ಆಚಾರ್ಯರ ಮಹತ್ವವನ್ನು ಬೋಧಿಸಿ ಆಚಾರ್ಯರ ಭಜನಾಸಂಘಗಳನ್ನೇ ಸ್ಥಾಪಿಸಿ ಸಮಾಜವನ್ನು ಉದ್ಧರಿಸುವರೆಂದು ನಂಬಿರುವ,

ಶಿವಲಿಂಗಪ್ಪಾ ಗಣಾಚಾರಿ ಕಟ್ಟಿಮನಿ,
ಪಂಚಾಚಾರ್ಯ ಭಜನಾಸಂಘದ ಸೆಕ್ರೆಟರಿ.
ಕಲ್ಯಾಣ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಜಗಟೂರು ಶ್ರೀ ವಿಜಯದಶಮಿ ಮಹೋತ್ಸವ.

ಸೊರಬ ತಾಲ್ಲೂಕು ಜಗಟೂರು ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವರಿಗೆ ಆಶ್ವಿಜ ಶು ೧ ಸೋಮವಾರ ಮೊದಲುಗೊಂಡು ನವಮಿ ದಶಮಿ ತಿಥಿಗಳಲ್ಲಿ ಶ್ರೀ ದೇವರಿಗೆ ಪ್ರಾತಃಕಾಲ ರುದ್ರಾಭಿಷೇಕ ಅಲಂಕಾರ ಪೂಜಾ ವಿನಿಯೋಗಗಳು ನಡೆದು ಸಾಯಂಕಾಲ ಉತ್ಸವ ಮೂರ್ತಿಯ ಉತ್ಸವವನ್ನು [illegible] ಕೊಡನೆ ಆ ಗ್ರಾಮದ ಹಿರೇಮಠದ ವೇ|| ಬಸವರಾಜ ಶಾಸ್ತ್ರಿಗಳವರು ಸಿ. ಎಂ. ರುದ್ರಗೌಡ ಚನ್ನವೀರಪ್ಪಾಜಿ ಒಡೆಯರವರು ಶಿಲೇದಾರ ಪಂಚಾಯತಿ [illegible]ಗಳಾದ ಗುರುಬಸಪ್ಪ ಗೌಡರು ದೊಡ್ಡ [illegible] ಗೌಡರು ಇವರೇ ಮುಂತಾದ ಗ್ರಾಮಸ್ಥರು ಸಹಕರಿಸಿ ಅತಿ ವೈಭವದಿಂದ ಜರುಗಿಸಿದರು. ಆ ಸಮಯದಲ್ಲಿ ಅಂಬಿಗರ ಮತಸ್ಥರು ಶ್ರೀ ಸ್ವಾಮಿ ಭಕ್ತಿಯನ್ನು ತೋರ್ಪಡಿಸಿಕೊಳ್ಳುವ ಉದ್ದೇಶದಿಂದ [illegible]ಗಳನ್ನು ಬಾರಿಸಿದರು. ಗುರುವಾರ ಶ್ರೀ ದೇವರ ಉತ್ಸವವು ಬನ್ನಿಯಮಂಟಪಕ್ಕೆ ದಯಮಾಡಿ [illegible] ಮಾಡಲು ಪದ್ಧತಿಯಂತೆ ಶ್ರೀಗಳವರಿಂದ [illegible] ಕ್ಷತ್ರಿಯ ಅಂಬುಬಾಣಗಳನ್ನು ದಶದಿಕ್ಕಿಗೂ [illegible] ಶ್ರೀಗಳವರ ಮತ್ತು ಶ್ರೀ ದೇವರ ದರ್ಶನಾಶೀರ್ವಾ ದವ ಪಡೆದು ಪ್ರಸಾದವನ್ನು ಸ್ವೀಕರಿಸಿ ಪು ದೇವಾಲಯಕ್ಕೆ ದಯಮಾಡಿಸಿದರು. ಇದರಂತೆ ಮುಂ ಬರುವ ಯುಗಾದಿಯಲ್ಲಿ ಶ್ರೀ ದೇವರ ರಥೋತ್ಸವ ನ್ನು ಜರುಗಿಸುವುದೆಂದು ಪ್ರಾರ್ಥಿಸುತ್ತೇನೆ.

ಸೊರಬ ತಾಲ್ಲೂಕು ಜಡೆಕೋಟೆಯಲ್ಲಿ ತಾ|| 3-10- ನೇ ಸೋಮವಾರ ಅಲ್ಲಿಯ ಹೆಡ್ಮಾಸ್ಟರ್ ಬಿ. ಎ ರಾಮಚಂದ್ರಯ್ಯನವರು ಬಾಲಕರಿಂದ ಶಾರದಾ ಪೂಜಾ ಮಹೋತ್ಸವವನ್ನು ಜರುಗಿಸಿದರು.

ಸೊರಬ ತಾಲ್ಲೂಕು ಹೆಮನಿ ಕೊಪ್ಪದ ಶ್ರೀ ಚ ಮ. ಪಂಚಾಚಾರ್ಯ ವಾಚನಾಲಯದಲ್ಲಿ ಅಲ್ಲಿಯ ಹೆಡ್ಮಾಸ್ಟರ ಸಿ. ಎಸ್. ರುದ್ರಗೌಡರಿಂದ ತಯಾರಿಸಲ್ಪಟ್ಟ ಶಾರದಾ ಭಾವಚಿತ್ರವನ್ನಿಟ್ಟು ಶಾರದಾ ಮಹೋತ್ಸವವನ್ನು ಬಿ. ಸಂಗಾರಪ್ಪ ಕೆ. ಎಲ್. [illegible] ಪ್ರಸಿಡೆಂಟ ಇವರು ನೆರವೇರಿಸಿದರು.

ಓರ್ವ ಈಶಭಕ್ತ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವೀರಶೈವ ಹಿತಚಿಂತಕ ಸಭಾ ಆಸವಟ್ಟಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸನ್ನಿಧಾನದಲ್ಲಿ ವಿಜಯದಶಮಿ ಮಹೋತ್ಸವದ ನಿಮಿತ್ತವಾಗಿ ನಾನಾ ಭಾಗಗಳಿಂದ ಸಾವಿರಾರು ವೀರಶೈವರು ಆಗಮಿಸಿದ್ದರು. ಆ ಸಮಯದಲ್ಲಿ ನೆರೆದಿದ್ದ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಆಸವಟ್ಟಿಯಲ್ಲಿ ತಾರೀಖು 7-10-27 ನೆಯ ಶುಕ್ರವಾರ ಹಗಲು 3 ಘಂಟೆಗೆ "ವೀರಶೈವ ಮತದ ಶ್ರೇಯೋಭಿವೃದ್ಧಿಗಾಗಿ "ವೀರಶೈವ ಹಿತಚಿಂತಕ ಸಭಾ" ಎಂಬ ಹೆಸರಿನಿಂದ ಒಂದು ಸಭೆಯು ಸೇರಿತು. ಸಭೆಗೆ ಉತ್ಸವಕ್ಕೆ ಬಂದ ಜನಗಳೆಲ್ಲ ಸೇರಿದರು.

ಅಧ್ಯಕ್ಷರ ಚುನಾವಣೆ—ಈ ದಿವಸದ ಸಭೆಗೆ ಘನ ವಿದ್ವಾಂಸರೂ ಪೌರಾಣಿಕ ಶಿರೋಮಣಿಗಳೂ ಆದ [illegible] ಬಿಲ್ಲೇಹಳ್ಳಿ ಮಠದ ಶ್ರೀ ಪಟ್ಟದ ಸ್ವಾಮಿಗಳವರು ಅಧ್ಯಕ್ಷರಾಗಬೇಕೆಂಬುದಾಗಿ ಕೀರ್ತನ ಕೇಸರಿ ಕಾಂತೂರು ಬಿ. ಶಿವಮೂರ್ತಿ ಶಾಸ್ತ್ರಿಗಳು ತುಮಕೂರು. ಇವರು ಸೂಚಿಸಿದರು. ವೇ|| ಸಿದ್ಧಾಂತ ಎಸ್. ಎಂ. ಗುರುಬಸವ ಶಾಸ್ತ್ರಿಗಳು ತಿಬಟೂರು ಇವರು ಅನುಮೋದಿಸಿದರು. ಸಭೆಯವರು ಇದಕ್ಕೆ [illegible] ಕೂಡಲು ಸರ್ವರ ಕರತಾಡನ ಮೊಳಗಿ [illegible] ಸ್ಥಾನವನ್ನು ಅಲಂಕರಿಸಿದರು. [illegible] ಗುರುಸ್ತುತಿಯಾದನಂತರ ಅಧ್ಯಕ್ಷರ ಅಪ್ಪಣೆ ಪಡೆದು ವೀರಶೈವ ಮತದ ಪ್ರಾಚೀನತ್ವ ಮತ್ತು [illegible] ಸದಾಚಾರ ವಿದ್ಯಾ ಐಕ್ಯ ಈ ವಿಷಯಗಳ ಮೇಲೆ [illegible] ಎಂ. ಎಸ್. ಆರಾಧ್ಯ [illegible] ಶಿವಮೂರ್ತಿ ಶಾಸ್ತ್ರಿಗಳು [illegible] ವೇ|| ಷ|| ಷ|| ಆರಾಧ್ಯ [illegible] ಬಸವಲಿಂಗ ಶಾಸ್ತ್ರಿಗಳು ಹಾಲೀಕೊಪ್ಪದ [illegible] ಶ್ರೀ [illegible] ಪಟ್ಟಾಧಿಕಾರಿಗಳು [illegible] ಶಾಲಿಗಳ ಭಾಷಣವು [illegible] ಸಮಯೋಚಿತವಾಗಿ [illegible] ಆನಂದಕರವಾಗಿಯೂ ಆದವು. [illegible] ಅಧ್ಯಕ್ಷರ ಭಾಷಣವಾದ ನಂತರ ಈ [illegible] ಸರ್ವಾನುಮತದಿಂದ [illegible]

[illegible] ವಾದ ವೀರಶೈವ ಮ [illegible] ಒದಗುತ್ತದೆ. ಇದಕ್ಕೆ [illegible] ನಿಂದನೆಗಳ [illegible] ಇಂಥ ಸಮಯವನ್ನು [illegible] ದೀನವಾದ ಸಿದ್ಧಿ [illegible] ಸಮಾಜಕ್ಕೆ ಕೇಡು ಬರು [illegible] ದೌರ್ಬಲ್ಯಕ್ಕೆ [illegible] ಅದುದರಿಂದ ಭರತಖಂಡದಲ್ಲಿರುವ ಪ್ರ [illegible] ಸರ್ವ ಪ್ರಕಾರದಿಂ

ಜದ ಐಕ್ಯಾಭಿವೃದ್ಧಿಯನ್ನು ಬಯಸಬೇಕೆಂ ದು ಅಭಿಪ್ರಾಯಪಡುತ್ತದೆ. ಸೂಚಕ ಕೇಸರಿ ಕವಿರತ್ನ ಬಿ. ಶಿವಮೂರ್ತಿ ಶಾಸ್ತ್ರಿ ಮೋದಕರು ಷ|| ಬ್ರ|| ಪಾಲೀಕೊಪ್ಪದ ಸ್ವಾಮಿಗಳವರು

ದ್ಧಾರಕನ್ನಾಗಿಯೇ ಅವತರಿಸಿ ಬಂದ ರಂಭಾ ಪುರಿ ಸಿಂಹಾಸನಾಧಿಪತಿಗಳಾದ ಧರ್ಮ ಪರಿ ಶಾಂತಸ್ವರೂಪಿಗಳೂ ಲೋಕೋದ್ಧಾರ ಎನು ಸರ್ವ ಮತೀಯರಿಂದ ಹೊಗಳಿಸಿ ಕೊಳ್ಳುತ್ತಿರುವ ಭಗವತ್ಪಾದ ಶ್ರೀ ಜಗದ್ಗುರು ವೀರರಾಜೇಂದ್ರ ಶಿವಾಚಾರ್ಯ ಮಹಾಸ್ವಾ ಸಮಾಜೋದ್ಧಾರಕ್ಕಾಗಿ ಸಂಚಾರ ಹೊರಟಿರ ಸ್ಸಂದೆನಿಸಿಕೊಳ್ಳುವ ಕೆಲವರು ಶಿಕಾರಿಪುರ ಸುತ್ತ ನಾಗರ ಮೊದಲಾದೆಡೆಗಳಲ್ಲಿ ಬಂದು ಕೆಲ ಂಗ ನಾನಾ ಬಗೆಯಾಗಿ ದುರ್ಬೋಧ ಮಾಡಿ ನ್ನು ಧಿಗೆ ಕಾಣಿಕೆ ಕೊಡದಂತೆ ತಡೆದಿರುವ ರವರ ಮಾಯಾ ಜಾಲಕ್ಕೆ ಒಳಪಟ್ಟ ಕೆಲವು ರು ವಿಚಾರರಹಿತರಾಗಿ ಗುರುದ್ರೋಹಕ್ಕೆ ಗುರಿ ಯಾಗಿರುವುದನ್ನು ಕೇಳಿ ಈ ಸಭೆಯು ತನ್ನ ಅಸ ಮಾಧಾನವನ್ನು ತೋರಿಸುತ್ತದೆ. ಇನ್ನು ಮೇಲಾದ ಜನರು ಪ್ರೇರ್ಯ ಪ್ರೇರಕರಿರ್ವರೂ ಈ ಕುತ್ಸಿತ ಮಾರ್ಗಕ್ಕೆ ಕೊಳ್ಳಿಯನ್ನಿಟ್ಟು ಸಮಾಜ ಕಾರಣರಾಗಬಾರದೆಂದು ಈ ಸಭೆಯು ಎಚ್ಚ ರಿಸ ಸೂಚಿಸುತ್ತದೆ. ಸೂ|| ಶಿಕಾರಿಪುರದ ಸಿದ್ಧ ನವರು ಅನು|| ವೇ|| ಚ|| ವಿ|| ವೃಷಭ ಲಿಂಗ ಗಳು

|| ವಾಸಿ ಯಜಮಾನ ವೀರಸಂಗಪ್ಪನವರು ಕ್ಕೆ ಹಲವು ವಿಧಗಳಿಂದ ಉಪಕಾರ ಮಾಡಿ ತರಾಗಿರುವರು. ಈ ಮಹಾಶಯರು ಮಾಡಿದ ಯಲ್ಲಿ ಮೈಸೂರು ಸ್ಟಾರ್ ಪತ್ರಿಕಾ ರವು ಒಂದಾಗಿದೆ. ಕೈ|| ವೀರಸಂಗಪ್ಪನವರ ಈ ಪತ್ರಿಕೆಗೆ ವೈ|| ವಿರೂಪಾಕ್ಷಯ್ಯನವರು ಕರಾಗಿ ಕೆಲವು ಕಾಲ ಉತ್ತಮ ರೀತಿಯಿಂದ ಸೇವೆಯನ್ನು ಮಾಡಿ ಇತ್ತೀಚಿಗೆ ಪತ್ರಿಕಾ ಧರ್ಮವನ್ನು ಮಾರಿ ವೀರಶೈವರಲ್ಲಿರುವ ಐಕ ಬ ವೃಕ್ಷಕ್ಕೆ ಸೀಳಿರೆಯುವ ಬೆಣೆಯಲ್ಲಿ ಪ್ರಾಪ್ತ ಮುಂತಾದ ತಮ್ಮ ಮನಸ್ಸಿಗೆ ಬಂದವರ ಲೇಖನಗ ನಾಜ ಘಾತಕಗಳಾಗಿದ್ದರೂ ಅವುಗಳನ್ನು ಯಲ್ಲಿ ಪ್ರಕಟಿಸಿ ಮತ್ತೊಂದು ಕಡೆಯಿಂದ ರೂಪಾಗಿ ಬರತಕ್ಕ ಲೇಖನಗಳನ್ನು ತಿರಸ್ಕರಿ ಗಳ ಪಂಕ್ತಿಯಲ್ಲಿ ಗಣಿಸುವುದರಿಂದ ಸಮಾಜ ತ್ಯದಕ್ಕೆ ಸ್ಟಾರ್ ಪತ್ರಿಕಾ ಕರ್ತರೇ ಕಾರಣ ದಾರರಾಗಿ ಹೇಳಬಹುದು. ಇವರ ಸತ್ಕಾಂ ನ್ನು ಈ ಸಭೆಯು ವಿರೋಧಿಸುತ್ತದೆ. ಅಲ್ಲದೆ ನಾಯಕರಾದ ಕೈ|| ವೀರಸಂಗಪ್ಪನವರಂತೆ ಇವ ರು ಸಾಧು ಮಾರ್ಗದಿಂದ ನಡದು ತಂದೆಯವ ಕೀರ್ತಿಯನ್ನು ಸಂಪಾದಿಸಬೇಕೆಂದು ಈ ಸೂಚಿಸುತ್ತದೆ. ಸೂಚಕರು ಶಾಂತಪುರ ಷ|| ಬ್ರ|| ಪಟ್ಟದ ಸ್ವಾಮಿಗಳವರು ಅನುಮೋ ಮಹೇಶ್ವರಿಂದ ನಾಯಕರಾದ ರಾಜೋಟಪ್ಪನ

ವರಾ ಪ್ರವೃತ್ತ ವಿಶಿಷ್ಟಾದ್ವೈತ ಮತೀಯರು ತಮ್ಮ ಮತಸ್ಥಾಪನಾಚಾರ್ಯರ ಜಯಂತಿಗ ಆಚರಿಸುತ್ತಿರುವುದರಿಂದ ತಮ್ಮ ಮತದ ಸನಾತ ನ್ನೂ ಪವಿತ್ರತೆಯನ್ನೂ ಕಾಪಾಡಿಕೊಂ ಬರುವರು. ಹಾಗೆಯೇ ಶಕ್ತಿ ವಿಶಿಷ್ಟಾದ್ವೈತ ಯಾದ ವೀರಶೈವರು ನಮ್ಮ ಮತಸ್ಥಾಪನಾ ರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಂತಿಗಳನ್ನು ಈಗ ನಡೆಸುತ್ತಿರುವದಕ್ಕಿಂತಲೂ ಗಿ ಮತ್ತು ಸಾರ್ವತ್ರಿಕವಾಗಿ ಆಚರಿಸಿ ಮತದ ತನವನ್ನು ಕಾಪಾಡಿಕೊಳ್ಳಬೇಕೆಂದು ಈ ಸಭೆಯು ನ್ನು ಮತಬಾಂಧವರನ್ನು ಪ್ರಾರ್ಥಿಸುತ್ತದೆ. ಸೂ|| ಂಗಲಿ ಒಂಟದ ಮಠದ ಶ್ರೀ ಷ|| ಚರಮೂರ್ತಿ ಗಳವರು ಅ|| ಸುರಕೇಶ್ವರದ ನಾಯಕರ್ ರ ರಾಜೋಟಪ್ಪನವರು.

ಇತ್ತೀಚಿಗೆ ವೃತ್ತ ಪತ್ರಿಕೆಗಳಲ್ಲಿಯೂ ಪುಸ್ತ ಕೆಗಳಲ್ಲಿಯೂ, ಅಸಮಂಜಸಗಳಾದ ಪ್ರಶ್ನೋತ್ತರಗಳೂ ಲೇಖನಗಳೂ ಹೊರಡುತ್ತಿರುವವು. ಇದರಿಂದ ಸಮಾಜಕ್ಕೆ ಅನರ್ಥವೇ ಹೊರತು ಬೇರೆ ಪ್ರಯೋಜನವಿಲ್ಲ. ದ್ವೇಷದಿಂದ ಕಾರ್ಯ ಸಾಧನವು ಎಂದಿಗೂ ಆಗುವದಿಲ್ಲ. ಪ್ರೇಮದಿಂದ ಪ್ರೇಮವು ಪ್ರತಿಫಲಿಸುತ್ತದೆ. ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಯಾರೂ ಮರೆಯತಕ್ಕದ್ದಲ್ಲ. ಜಗದ್ಗುರು ಪಂಚಾಚಾರ್ಯರ ಗೋತ್ರ ಸೂತ್ರಾನುವರ್ತಿಯಾದ ಪ್ರತಿಯೊಬ್ಬ ವೀರಶೈವನು ಕುತ್ಸಿತ ಮಾರ್ಗದಲ್ಲಿ ಕಾಲಿಡದೆ ಸಮಾಜದ ಹಿತವನ್ನು ಬಯಸಬೇಕೆಂದು ಈ ಸಭೆಯು ಆಶಿಸುತ್ತದೆ ಸೂ|| ಪಂ|| ವೃಷಭಲಿಂಗ ಶಾಸ್ತ್ರಿಗಳು.

ಅ|| ಸಿದ್ಧಾಂತಿ ಎನ್. ಎಸ್. ಗುರುಬಸವ ಶಾಸ್ತ್ರಿಗಳು ಈ ಮೇಲ್ಕಂಡ ಠರಾವುಗಳನ್ನು ಸಮಾಜದವರ ಅವಗಾಹನೆಗಾಗಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುವದಕ್ಕೆ ಅಕ್ಕಿ ಆಲೂರು ಶೆಟ್ಟರ ಚನ್ನವೀರಪ್ಪನವರಿಗೆ ಅಧಿಕಾರವನ್ನು ಕೊಟ್ಟಿರುತ್ತದೆ.

ಕಾರ್ಯದರ್ಶಿ
ಚನ್ನವೀರಪ್ಪ ಶೆಟ್ಟರ ಆಲೂರು

ಶ್ರೀ ಗುರುಭ್ಯೋನಮಃ

ಆಗಮ ವಾಙ್ಮಯ ಪ್ರಚಾರ

ಶ್ರೀ ಶಂಭುಲಿಂಗ ಸ್ವಾಮಿಗಳು ಹಿರೇಮಠ ವಿಜಾಪುರ.

ಕರ್ನಾಟಕ ಸಂಸ್ಕೃತಿಯನ್ನು ಹೆಚ್ಚಿಸುವದು ನವ ಕರ್ನಾಟಕದ ಉದ್ದೇಶವಷ್ಟೇ. ಈ ಸಂಸ್ಕೃತಿಯ ಕಾರ್ಯದಲ್ಲಿ ಆಗಮ ವಾಙ್ಮಯವು ಮಹತ್ತರ ಭಾಗವನ್ನು ತೆಗೆದುಕೊಂಡಿದೆ. ವೀರಶೈವ ಧರ್ಮವು ಈ ಸಂಸ್ಕೃತಿಯ ಉಜ್ವಲ ಸ್ವರೂಪ ಇರುತ್ತದೆ. ಈ ವಾಙ್ಮಯ ಪ್ರಚಾರಕ್ಕೋಸ್ಕರ ತಮಿಳ ನಾಡಿನಲ್ಲಿ ಎಂಥ ಪ್ರಯತ್ನಗಳು ನಡಿದಿರುವವೆಂಬುದನ್ನು ತಿಳಿಸುವದೇ ಈ ಲೇಖದ ಉದ್ದೇಶವು.

ಆಗಮಗಳು ೨೮ ಇದ್ದು, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ವಿದ್ಯಾ, ಯೋಗ, ಚರ್ಯಾ, ಕ್ರಿಯೆಗಳೆಂಬ ನಾಲ್ಕು ಪಾದಗಳು ಒಪ್ಪುತ್ತಿರುವವು. ಆ ಆಗಮಗಳು ವಿರಳಪ್ರಚಾರಗಳೂ ಅತಿ ಗೂಢವಾದ ಅರ್ಥವುಳ್ಳವುಗಳೂ ಆಗಿರುವದರಿಂದ ಅವುಗಳಿಂದಲೇ ಅರ್ಥ ಪರಿಜ್ಞಾನವು ನಮ್ಮಂಥವರಿಗೆ ಉಂಟಾಗುವದು ಶಕ್ಯವಿಲ್ಲ. ಇದನ್ನು ತಿಳಿದವರಾದ ಪರೋಪಕಾರ ಧುರಂಧರರೂ ಅನಿಮಿತ್ತ ಬಂಧುಗಳೂ ಆದ ಕೆಲ ಮಹಾತ್ಮರಿಂದ ಆ ಆಗಮಗಳಿಗೆ ಸುಸ್ಪಷ್ಟಾರ್ಥ ಪ್ರತಿಪಾದಕಗಳಾದ ಹಲವು ವೃತ್ತಿಗಳು ಬರೆಯಲ್ಪಟ್ಟಿವೆ. ಹಾಗೂ ಆಗಮಗಳಲ್ಲಿಯ ವಿದ್ಯಾಪಾದದ ಅರ್ಥವನ್ನು ಅರಿಯಬೇಕೆಂಬ ಬಯಕೆಯುಳ್ಳವರ ಸಲುವಾಗಿ ಪ್ರಾಚೀನ ಆಚಾರ್ಯರು ಶಿವಾಗಮಗಳಲ್ಲಿಯ ತತ್ವಾರ್ಥಗಳನ್ನೆಲ್ಲ ಸುಲಭವಾದ ಸರಣಿಯಿಂದ ಕಾರಿಕಾ ರೂಪವಾಗಿ ಬರೆದು ಪ್ರಕರಣಾಷ್ಟಕ ಎಂಬ ಹೆಸರಿನಿಂದ ಪ್ರಚುರಗೊಳಿಸಿರುವರು. ಅದುವೇ ಈಗಲೂ ಅಷ್ಟಪ್ರಕರಣವು ಎಂಬುದಾಗಿ ಸುಪ್ರಸಿದ್ಧ ಅಭಿಧಾನವಾದ ಧ್ಯೇಯದಿಂದ ಪ್ರಸಿದ್ಧವಾಗಿರುವದು. ಆ ಪ್ರಕರಣಗಳು ಯಾವವೆಂದರೆ—ತತ್ವ ಪ್ರಕಾಶಿಕೆ, ತತ್ವ ಸಂಗ್ರಹ, ತತ್ವತ್ರಯ, ಭೋಗ ಕಾರಿಕಾ, ನಾದ ಕಾರಿಕಾ, ಮೋಕ್ಷ ಕಾರಿಕಾ, ಪರಮೋಕ್ಷ, ನಿರಾಸಕಾರಿಕಾ, ರತ್ನತ್ರಯ ಎಂದಿವುವವು. ಇವುಗಳ ವ್ಯಾಖ್ಯಾನ ಸಹಿತವಾಗಿ ಶಿವಸಿದ್ಧಾಂತ; ತತ್ವಾರ್ಥ ಪ್ರತಿಪಾದಕಗಳಾಗುತ್ತಿದ್ದರೂ ಈ ಸಮಯಾಂತರವು ಕಲಿಕಾಲ ಕಾಲುಷ್ಯದಿಂದಲೂ ಅಧಿಕಾರಿಗಳ (ಮುಮುಕ್ಷುಗಳ) ಅಶ್ರದ್ಧೆಯಿಂದಲೂ ಅಲ್ಲಲ್ಲಿ ತಾಡಿನ ಓಲೆಗಳಲ್ಲಿಯೇ ಸ್ವಸ್ಥವಾಗಿ ಮಲಗಿ ನಿದ್ರೆ ಮಾಡುತ್ತಿದ್ದವು. ಅವುಗಳಲ್ಲಿಯೂ ಕೆಲ ಕೆಲವು ತಾಡಿಓಲೆಗಳ ಜೀರ್ಣಾವಸ್ಥೆಯ ಮೂಲಕ ನಾಮಾವಶೇಷವನ್ನು ಹೊಂದಲಾರಂಭಿಸಿದ್ದವು. ಸರ್ವಜ್ಞನಾದ ಶಿವನು ಮರೆಯುವನ್ನೇ! ಮದ್ರಾಸ ಇಲಾಖೆಗೆ ಒಳಪಟ್ಟ ದೇವಕಾಲ ಪುರ ನಿವಾಸಿಯೂ, ಶಿವ ಭಕ್ತ್ಯಾಧೀನನೂ, ಶಿವಾಲಯ ಜೀರ್ಣೋದ್ಧಾರ, ಶಿವಲಿಂಗ ಪ್ರತಿಷ್ಠೆ ಮುಂತಾದ ಸತ್ಕಾರ್ಯಧುರಂಧರನೂ ವೈಶ್ಯ ಕುಲಲಲಾಮನೂ ಆದ ಪುಣ್ಯಾತ್ಮನು ಶಿವಾಲಯ ಜೀರ್ಣೋದ್ಧಾರಗಳೂ, ಲಿಂಗ ಪ್ರತಿಷ್ಠಾದಿ ಕರ್ಮಗಳಿಗೂ ಶಿವಾಗಮಗಳೇ ಸಾಧನಗಳು ಎಂಬುದನ್ನು ತಿಳಿದು ಅವುಗಳನ್ನು ಮುದ್ರಣಗೊಳಿಸಿ ಪ್ರಕಟಪಡಿಸುವದೇ ಫಲವಲ್ಲವೆ. ಹೀಗೆಂದು ಮನಸ್ಸಿನಲ್ಲಿ ನಿಶ್ಚಯಿಸಿದವನಾಗಿ ಆ ಬಗ್ಗೆ ದ್ರವ್ಯದ ಸಹಾಯವನ್ನು ವ್ಯವಸ್ಥೆಗೊಳಿಸಿ "ಶಿವಾಗಮ ಸಿದ್ಧಾಂತ ಪರಿಪಾಲನ ಸಂಘ" ಎಂಬ ಹೆಸರಿನದೊಂದು ಸಂಸ್ಥೆಯನ್ನು ಏರ್ಪಾಡು ಮಾಡಿ ಶಾಸ್ತ್ರಜ್ಞಾನ ಸಂಪನ್ನರಾದ ಪಂಡಿತರನ್ನು ಆ ಸಂಘದ ಕಾರ್ಯದರ್ಶಿಗಳನ್ನಾಗಿ ನೇಮಿಸಿ ಆ ಸಂಘದ ಮೂಲಕವಾಗಿಯೇ ಶೈವ ಸಂಬಂಧವಾದ ಕಾರ್ಯಗಳನ್ನು ನೆರವೇರಿಸಲು ತೊಡಗಿದನು.

ಆ ಸಂಘದಿಂದ ಮೊಟ್ಟ ಮೊದಲು ಶ್ರೀ ಮದಪ್ಪಯ್ಯ ದೀಕ್ಷಿತಕೃತ ಶಿವಾರ್ಚನಾ ಚಂದ್ರಿಕೆಯು ಮುದ್ರಣಗೊಳಿಸಿತು. ಆ ಬಳಿಕ ಅಷ್ಟಪ್ರಕರಣಗಳಲ್ಲಿ ತತ್ವಪ್ರಕಾಶಿಕಾ ತತ್ವಸಂಗ್ರಹ ತತ್ವತ್ರಯ ನಿರ್ಣಯ ಎಂಬ ಮೂರು ಪ್ರಕರಣಗಳು ಅಘೋರ ಶಿವಾಚಾರ್ಯ ಕೃತ ವ್ಯಾಖ್ಯಾನದೊಡನೆ (ಕ್ರಿ. ಶ. ೧೯೨೩ ರಲ್ಲಿ) ಪ್ರಕಾಶಗೊಳಿಸಲ್ಪಟ್ಟವು. ತರುವಾಯ (ಕ್ರಿ. ಶ. ೧೯೨೪ ರಲ್ಲಿ) ಶ್ರೀಮತಂಗ ಪಾರಮೇಶ್ವರಾಗಮದ ವಿದ್ಯಾಪಾದವು ಮುದ್ರಿತವಾದುದಲ್ಲದೆ, ರತ್ನತ್ರಯ ಭೋಗಕಾರಿಕಾ ನಾದಕಾರಿಕಾ ಮೋಕ್ಷಕಾರಿಕಾ ಪರಮೋಕ್ಷನಿರಾಸಕಾರಿಕಾ ಎಂಬ ಐದು ಪ್ರಕರಣಗಳೂ ಅಘೋರಶಿವಾಚಾರ್ಯ, ಭಟ್ಟರಾಮಕಂಠ ಎಂಬವರುಗಳಿಂದ ಬರೆಯಲ್ಪಟ್ಟ ಉತ್ಕೃಷ್ಟ ವ್ಯಾಖ್ಯಾನಸಹಿತಗಳಾಗಿ (ಕ್ರಿ. ಶ. ೧೯೨೫ ರಲ್ಲಿ) ಅಚ್ಚಾದವು. ಈ ಮಧ್ಯದಲ್ಲಿ ಶಂಭು ಪೂಜಾ ವಿಧಿ, ಶೈವ ಭೂಷಣ ಎಂಬ ಗ್ರಂಥಗಳೂ ಮುದ್ರಿತಗಳಾಗಿವೆ. ಮತ್ತು ಸೂರ್ಯಭಟ್ಟ ವಿರಚಿತ ಶೈವ ಸಿದ್ಧಾಂತ ಪರಿಭಾಷಾ ಎಂಬ ಗ್ರಂಥವು (ಕ್ರಿ. ಶ. ೧೯೨೬ ರಲ್ಲಿ) ಅಚ್ಚಾಗಿದೆ. ಇದು ವೇದಾಂತ ಪರಿಭಾಷೆಯಂತೆ ಇರುತ್ತದೆ.

ಈ ಸಂಘದವರು ಇನ್ನು ಮುಂದೆ ಭಟ್ಟ ರಾಮಕಂಠ ಕೃತ ವೃತ್ತಿ ಸಹಿತವಾದ ಮತಂಗ ಪಾರಮೇಶ್ವರಾಗಮ ವಿದ್ಯಾಪಾದವನ್ನು ಸಮಗ್ರ ಕಿರಣಾಗಮವನ್ನೂ ವೃತ್ತಿ ಹಾಗೂ ದೀಪಿಕೆ ಇವುಗಳಿಂದ ಕೂಡಿದ ಮೃಗೇಂದ್ರ ವಿದ್ಯಾಪಾದವನ್ನೂ, ಪ್ರಭಾ ವ್ಯಾಖ್ಯಾ ಸಹಿತವಾದ ಕ್ರಿಯಾಕ್ರಮ ದ್ಯೋತಿಕಾ ಎಂಬ ಅಘೋರ ಶಿವಾಚಾರ್ಯ ಪ್ರಣೀತ ಗ್ರಂಥವನ್ನೂ ಲಿಂಗಾಧ್ವರಿ ಕೃತ ಭಾಷ್ಯಸಹಿತವಾದ ಶಿವಸಹಸ್ರ ನಾಮಾವಳಿ ಎಂಬವೇ ಮುಂತಾದ ಗ್ರಂಥರತ್ನಗಳನ್ನೂ ಬೇಗನೇ ಮುದ್ರಣ ಮಾಡಿಸುವವರಿದ್ದಾರೆ.

ಈಗ ಆಗಲೇ ಅಚ್ಚಾಗಿರುವ ಮೇಲೆ ಕಾಣಿಸಿದ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳ ಬಗ್ಗೆ ವಿವರಿಸಿ ಬರೆಯುವದು ವೃತ್ತಪತ್ರಿಕೆಯಲ್ಲಿ ಶಕ್ಯವಿಲ್ಲವಾದ್ದರಿಂದ ಸದ್ಯಕ್ಕೆ ನಾವು ಆ ಗೋಜಿಗೆ ಹೋಗುವದಿಲ್ಲ. ಈ ಮೇಲೆ ಕಾಣಿಸಿದ ಮುದ್ರಿತ ಪುಸ್ತಕಗಳಿಗೆ ಒದವಿದ ಮೂಲಪ್ರತಿಗಳು ಮದ್ರಾಸ ಇಲಾಖೆಗೆ ಸೇರಿದ ಕವಿಲೂರಗ್ರಹಾರ ನಿವಾಸಿಗಳಾದ ಶಿವ ಶ್ರೀಕಲ್ಯಾಣ ಶಿವಾಚಾರ್ಯರು ಎಂಬವರಲ್ಲಿ ಕೆಲವು ಸಿಕ್ಕಿರುತ್ತವೆ. ಮತ್ತು ಮಾಯೂರಪುರದಲ್ಲಿ ವಿರಾಜಮಾನವಾದ ಶಿವಾಗಮ ಪಾಠಶಾಲೆಯ ಅಧ್ಯಕ್ಷರಾದ ಶಿವ ಶ್ರೀ ವೈದ್ಯನಾಥ ಶಿವಾಚಾರ್ಯರಿಂದಲೂ ಮತ್ತು ಕುಮಾರ ಶಿವಾಚಾರ್ಯರಿಂದಲೂ ದೊರಕಿವೆ ಎಂಬುದಾಗಿ ಆಯಾ ಗ್ರಂಥದ ಪೀಠಿಕೆಯಲ್ಲಿ ಪ್ರಕಾಶಕರು ಹೇಳಿದ್ದಾರೆ.

ಇದುವರೆಗೂ ಮುದ್ರಣವಾಗದಿರುವ ಶೈವಾಗಮ ವಾಙ್ಮಯವು ಇನ್ನೂ ಬಹಳವಾಗಿ ಉಳಿದಿದೆ. ಶಿವಾಗಮಗಳನ್ನೂ ಅವುಗಳಿಗೆ ಪ್ರಾಚೀನಾಚಾರ್ಯರು ಬರೆದಿರುವ ವ್ಯಾಖ್ಯಾನಗಳನ್ನೂ ಅಲ್ಲಲ್ಲಿ ಹುಡುಕಿ ತಂದು ಅವುಗಳನ್ನು ಸಂಪಾದಿಸಿ ಮುದ್ರಣಗೊಳಿಸುವ ಯತ್ನವನ್ನು ಕೈಕೊಂಡ ಶೈವಾಗಮ ಪರಿಪಾಲನ ಸಂಘದ ಉತ್ಪಾದಕರೂ ಚಾಲಕರೂ ಆದ, ಮೇಲೆ ಕಾಣಿಸಿದ ಆ ಮಹನೀಯರಿಗೆ ನಾವು ಅನೇಕ ಧನ್ಯವಾದಗಳನ್ನು ಸಮರ್ಪಿಸದಿರಲಾರೆವು.

ಮೇಲಿನ ಸಂಗತಿಯನ್ನೇ ಉದಾಹರಣೆಯನ್ನಾಗಿಟ್ಟುಕೊಂಡು ಆ ತರದ ಶಿವಸಿದ್ಧಾಂತ ಗ್ರಂಥಗಳನ್ನು ಸಂಪಾದಿಸಿ ಮುದ್ರಣಮಾಡಿಸಲು ನಮ್ಮ ಕರ್ನಾಟಕದ ವೀರಶೈವ ಮಹಾಶಯರಾದರೂ ಪ್ರಯತ್ನ ಮಾಡುವರೆಂದು ಆಶಿಸುತ್ತೇನೆ.

ಉಭಯ ಜಗದ್ಗುರುಗಳವರ ವಿಜಯ ದಶಮಿಯ ಮಹೋತ್ಸವವು, ಮಹಾಸ್ವರಮುಸಲಾಡ.

ಶ್ರೀಮದುಜ್ಜಯನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮತ್ತು ಶಿಷ್ಯರೂಪವಾದ ಶ್ರೀಶೈಲ ಸಿಂಹಾಸನಾಧೀಶ್ವರ ಜಗದ್ಗುರು [illegible] ಗ ಶಿವಾಚಾರ್ಯ ಮಹಾಸ್ವಾಮಿಗಳವರ ದಸರಾ ಮಹೋತ್ಸವವು [illegible] ಗ್ರಾಮದಲ್ಲಿ [illegible] ಘನೆಯಿಂದ ನೆರವೇರಿತು. ಗ್ರಾಮದ ಯಾವತ್ತು [illegible] ಗಳು ರಾಜಾಸ್ತಂಭಗಳಿಂದಲೂ ತೋರಣಗಳಿಂದಲೂ [illegible] ಪತಾಕೆಗಳಿಂದಲೂ [illegible] ಶ್ರೀ ಜಗದ್ಗುರುಗಳವರ ಸುವರ್ಣಸುಖಾಸನದ [illegible] ಕೋತ್ಸವವನ್ನು ನೋಡುವುದಕ್ಕೋಸ್ಕರ [illegible] ಗಳಿಂದ ಅನೇಕ ಜನರು ಆಗಮಿಸಿದ್ದರು. [illegible] ಉತ್ಸವದ ಗಂಭೀರವಾದ [illegible] ರಂದದ [illegible] ಮಂಗಳವಾದ ಕೋಲಾಹಲ [illegible] ವಾದ ದರ್ಬಾರಿನ [illegible] ಸ್ವಾಮಿಗಳವರ [illegible] ವರಕೆ [illegible] ಪ್ರಾರ್ಥನೆ [illegible] ಜಗದ್ಗುರುಗಳವರು [illegible] ವನ್ನು ಮಾಡಿದರು. [illegible] ವರ [illegible] ಶಿವಾನುಭವ [illegible] ಉಪದೇಶವನ್ನು [illegible] ಗಾನಸಮಾರಾಧನೆಯಾಯಿತು. [illegible] ಪಾಂಡಿತ್ಯಕ್ಕೆ [illegible] ಜಗದ್ಗುರುಗಳವರು [illegible] ಆಶೀರ್ವಾದಿಸಿದರು. [illegible] ಧುರೀಣರಾದ ಈ ಗ್ರಾಮದ [illegible] ರಾ|| ಶಾಂತವೀರಪ್ಪನವರೂ ಮ|| ರಾ|| [illegible] ಕೊಟ್ರಬಸಪ್ಪನವರೂ ಮ|| ರಾ|| [illegible] ಸವರೂ ಮ|| ರಾ|| ಗದಗಿನ ಮಲ್ಲಪ್ಪನವರೂ ಗುರುಕಾರ್ಯವನ್ನು ಅತ್ಯಂತ ಭಕ್ತಿಯಿಂದ ನೆರವೇರಿಸಿದರು. [illegible] ಮಹಾಶಯರು [illegible] ಜಗದ್ಗುರುಗಳವರು [illegible] ಗುರುಭಕ್ತಿಧುರೀಣರಾದ ಈ [illegible] ಶ್ರೀ ಜಗದ್ಗುರು [illegible] ಗ್ರಹತ್ಯಾದಿಗಳನ್ನು ಅನುಗ್ರಹಿಸಿರುವ ಈ ಗುರುಭಕ್ತರನ್ನು [illegible] ಶ್ರೀ [illegible] ವೇ [illegible] ಗುರುಪಾದೋದಕವರಪ ಪರಮಸತ್ಯ

ಶ್ರೀ ಜಗದ್ಗುರು [illegible]

ವಿಶಾಖಪುರದ ಪಿಠಾಚೆಯು.

ಈ [illegible] ಮು ಬಳಗ ಪ್ರಸಾದ [illegible] ನಮ್ಮ [illegible] ನೇತ್ರ [illegible] ಮಠ [illegible] ನಿಮ್ಮ [illegible] ಜಗದ್ಗುರುಗಳವರು [illegible] ಗುರು [illegible] ಭೂಮಿಯನ್ನು [illegible] ಗಳನ್ನು ನೆಡೆಯುವ [illegible] ಈ ಪ್ರತ್ಯಕ್ಷ [illegible] ಮಹಾಚಾರ್ಯರಲ್ಲಿ [illegible] ಇಲ್ಲವೇ! ಈ ಸಂದರ್ಭದಲ್ಲಿ ಮಾತ್ರ [illegible] ಧರಿಸುವ

ಬಿತ್ತು [illegible] ಸ್ವರ್ಗಗಳನ್ನು [illegible] ಮಠದಲ್ಲಿಯೂ [illegible] ಭಕ್ತರು [illegible] ಪ್ರಸಾದ [illegible] ವನ್ನು [illegible] ಸ್ವಾಮಿಗಳವರ [illegible] ಶ್ರೀ ಗುರು [illegible] ಮಹಾಚಾರ್ಯರ [illegible] ಹೇಗೆ [illegible] ನಮ್ಮ [illegible] ಗುರುಪಾದ [illegible]

ಗುರುಭಕ್ತ [illegible] ಸಿದ್ದಪ್ಪ

[illegible]

ಕಂಡುಹಿಡಿದ ಸಿದ್ಧೌಷಧ.

[illegible]

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

[illegible]

ಸಂಜೀವನೌಷಧ

[illegible]

ಪತ್ರೋಲ್ ಮುದ್ದುವಿಜಯನು

ಜೀವನಾಧಾರ ಡಿಪೋ, ಮೈಸೂರ್

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯ ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂ ಇದನ್ನು ಉಪಯೋಗಿಸಿ ಸಾವಿರಾರು

ಯೋಗ್ಯತಾ ಳನ್ನು ಕೊಟ್ಟಿ ರು. ಪ್ರಸಿದ್ಧ ಈ ನಶ್ಯದ ಯಿಂದ ಸ್ವಸ್ಥ ವ ವ್ಯಾಧಿಗಳು ಸವಾದರೆ ಒಂಟಿತಲೆನೋ ತಲೆಯಲ್ಲಿನ ಕೊ ವು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ ಬಿಡದೇ ಮುಂತಾದ ವ್ಯಾಧಿಗಳು ಪರಿಹಾರವ ವಲ್ಲದೆ ಇಂದ್ರಿಯಕ್ಕೆ ಮೇಲ್ಪಟ್ಟ ಈ ವ್ಯಾಧಿಗಳ ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚ ಡುತ್ತದೆ. ಮೂರುಪಟ್ಟಿನ ಸಾಧಾರಣ ನಶ್ಯದ ಸ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ ಮಿಶ್ರಮಾಡಿದರೆ ಎಲ್ಲವೂ ಕಲಮುಳವಾಗುವುದು. ಸ್ಟ್ ಆಫೀಸ ಪ್ರಭುಗಳು ತಮ್ಮ ಗೃಹದಲ್ಲಿ ಕೆಲ ಔಷಧವಾಗಿ ಉಪಯೋಗಿಸುತ್ತಾರೆ. ಮಾಡಲಿ ಪ್ಪಗನಟ್ಟಿ ಕಳುಹಿಸಲಾದೀತು.

ಚಿಕ್ಕ ಬಂದಕ್ಕೆ ಕ್ರಯ ರೂ ೦ ೪ ೦. ವಿ.ಪಿ ೦

ದೊಡ್ಡ ಬಂದಕ್ಕೆ ಕ್ರಯ ರೂ. ೨-೮-೦ ವಿ.ಪಿ ೨

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಯಾಗಿ ತಿಳಿಸುವಂತೆ ಬರೆಯಿರಿ — ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ

[20] ಪೋ. ಬಾ ೫೧೦, ಮದರಾಸು

ASIATIC GOVERNMENT SECURIT
LIFE ASSURANCE CO LTD, MYSOR

ಏಸಿಯಾಟಿಕ್ ಗವರ್ನಮೆಂಟು ಸೆಕ್ಯೂರಿ ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ

ಬೆಂಗಳೂರು.

ನಮ್ಮ ಸಂಸ್ಥೆಯಲ್ಲಿರತಕ್ಕ ಜೀವವಿಮ ಸಂಘಗಳ್ಲ ಮುಂದಾಳಾದುದು.

ಆದ್ದರಿಂದ ಯಾವಾಗಲೂ 'ಏಷ್ಯಾಟಿಕ್' ಕಂ ನಿಯಲ್ಲಿಯೇ ವಿಮೆಮಾಡಿರಿ

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕ ವಾದುವು.

ಪಾಲುದಾರರಿಗೆ ಒಡ್ಡಿಯಿಲ್ಲದೆ ತಮ್ಮ ಸ್ವಂತ ಪಾಲಿಸಿಯ ಮೇಲೆಯೂ ಪಾಲಿಸಿದಾರರಿಗೆ ಅವರ ಸ್ವ ಸ್ಥಿತಿ ನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬೋನಸ್ ಚೀಟಿಯನ್ನು ಎತ್ತುವ ಮುಂದಿನ ತಾ ೩೦ನೇ ಜೂನ್ 1927 ಕ್ಕೆ ನಡೆಯುತ್ತದೆ

[illegible] ಗಳಿಗೆ [illegible] ಸಮಾಲೋಚಿಸಬೇಕು

(1 [illegible] ರಾಸ್ತೆ

[illegible] ಮೈಸೂರು

(2 [illegible]

[illegible] ಹುಬ್ಬಳ್ಳಿ ಮತ್ತು ಬಳ್ಳಾರಿ

(3) [illegible] ಹೌಸ್,

[illegible] ಹೈದರಾಬಾದ್ (ದಖನ್)

[illegible] ಮುಖ್ಯ ಏಜೆಂಟ್

[18] ಮೈಸೂರು. *Asiatic Buildi g*

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷರೀರಾದಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಅಕ್ಟೋಬರ್ ೧೯೨೭ [ಸಂಚಿಕೆ ೨೫.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳಿಂದ
ಸ್ಥಾಪಿಸಲ್ಪಟ್ಟ,

ೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯ ಸಂಸ್ಥಾನ ಉಷಾಮಠ.

ತಾರೀಖು ೧೦ ೧೦-೧೯೨೭ನೇ ದಿವಸ ಈ ಮಹಾ ಲಯಕ್ಕೆ ಇಲ್ಲಿಯ ವಿದ್ಯಾಖಾತೆಯ ಅಸಿ|| ಇನ ರ ಡಿ ಇನಸ್ಪೆಕ್ಟರ ಸಬ್ ಡೆಪ್ಯೂಟಿ ಇನಸ್ಪೆಕ್ಟರ ರು ಆಗಮಿಸಿ ಮೇಲ್ಕಂಡ ಶ್ರೀ ಗಳವರಿಂದ ಸ್ಥಾಪಿ ಟ್ಟ ಶ್ರೀ ಜಗದ್ಗುರು ನೀಲಕಂಠ ಮಿಡಲ್ ಸ್ಕೂಲ್ ಸಂಸ್ಕೃತ ಸನಾತನಧರ್ಮಮಹಾವಿದ್ಯಾಲಯ, ರು ವಿದ್ಯಾಲಯಗಳನ್ನು ಪರೀಕ್ಷಿಸಿ ಅಲ್ಲಿಯ ಉ ಪಾಧ್ಯಾಯರ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಉಟಿಗೆ ತಿಗೆ ಇವುಗಳನ್ನು ನೋಡಿ ಬಹು ಆನಂದಪಟ್ಟರು ತ್ತು ಆ ದಿವಸ ಶ್ರೀ ಕೇದಾರನಾಥ ಸನಾತನಧರ್ಮ ಹಾ ವಿದ್ಯಾಲಯದಲ್ಲಿ ತಮ್ಮ ಅಮೂಲ್ಯವಾದ ವೇಳೆ ನ್ನು ಖರ್ಚುಮಾಡಿ ವಿದ್ಯಾರ್ಥಿಸಮಯವಾಗಿ ಪಾಠಪ್ರ ಚಿಸಿದರು. ಮತ್ತು ಸದರಿಯವರು ಗಢವಾಲ ಜಿಲ್ಲೆ ಲ್ಲಿ ಬಡವಿದ್ಯಾರ್ಥಿಗಳ ವಿಷಯವಾಗಿ ಶ್ರೀ ಜಗದ್ಗು ರುಗಳವರು ಅತುಲವಾದ ಸಹಾಯಮಾಡಿದ್ದನ್ನು ನೋಡಿ ಆನಂದಪಟ್ಟು ಶ್ರೀ ಜಗದ್ಗುರುಗಳವರ ಜಯ ಕಾರವನ್ನು ಮಾಡಿದರು

ತಮ್ಮ ವಿಧೇಯ
ಶ್ರೀ ಕೇದಾರನಾಥ ಮಹಾವಿದ್ಯಾಲಯ,
ಹೆಡ್ಮಾಸ್ತರ.

ಶ್ರೀ ಗುರುಭ್ಯೋನಮಃ

ಬಡಬಡಿಕೆ.

ತಾ ೧ ೧೦ ೨೭ನೆಯ ಸ್ಟಾರ್ ಪತ್ರಿಕೆಯಲ್ಲಿ ಪ್ರ ಕಟವಾದ 'ನಿಜಪಾಂಡಿತ್ಯಪ್ರದರ್ಶನ' ವೆಂಬ ಲೇಖ ಲೇಖಕರು ಸ್ಟಾರ್‌ಪತ್ರಿಕೆಗೆ ಒಂದು ವರ್ಷವಾದುದ ಕ್ಕೆ ಚಿರಾಯುವೆಂದೂ ಪಂಚಾಚಾರ್ಯಪ್ರಭೆಯು ಗೆ ನಾಲ್ಕೈದು ತಿಂಗಳುಗಳಾದುದರಿಂದ ಬಾ ಲ ಸ್ವಲ್ಪದ್ದೆಂದೂ ಇತ್ಯಾದಿಯಾಗಿ ಏನೇನೋ ಬರೆ ಕೊಂಡಿರುತ್ತಾರೆ ಪಂಚಾಚಾರ್ಯಪ್ರಭೆಯ ಮೇಲೆ ದ ಟೀಕಾತ್ಮಕ ಲೇಖನಗಳು ಬಂದರೂ ಸ್ಟಾರ್‌ಪತ್ರಿ ಕೆಯು ಅವುಗಳನ್ನು ಆತ್ಮಾನಂದದಿಂದ ತನ್ನ ಯಲ್ಲಿ ಪ್ರಸಿದ್ಧಪಡಿಸುತ್ತಾರೆ ಈ ಸ್ಟಾರ್ ಪ ತ್ರಿಕೆಗೆ ಮತಸ್ಥಾಪನಾಚಾರ್ಯರ ಮೇಲೆಯೂ ಪಂಚಾಚಾರ್ಯಪ್ರಭಾ ಪತ್ರಿಕೆಯ ಮೇಲೆ ಟೀಕಾತ್ಮಕವಾದ ಲೇಖನಗಳು ಬಂದರೆ ಆ ದಿವಸ ಆನಂದಕ್ಕೆ ಬೆಲೆಯೇ ಇಲ್ಲ ಪುತ್ರೋತ್ಸವವಾ ಷ್ಟು ಆನಂದವಾಗಲಿಕ್ಕಿಲ್ಲ ಪಂಚಾಚಾರ್ಯ ಪತ್ರಿಕೆಯ ವಿಷಯದಲ್ಲಿ ಇವರಿಗಿರುವ ಅಸೂಯಾಬುದ್ಧಿಯು ಅಪರಿಮಿತವಾಗಿರುವುದೆಂದು ಇಡೀ ಜಗತ್ತಿಗೆಲ್ಲ ಗೊತ್ತಾಗಿಹೋಗಿದೆ ಕೆಲಸಕ್ಕೆ ಬಾರದ ಕಾಗಕ್ಕನ ಕಣಿಗಳನ್ನು ಯಾರಾದರೂ ಬರೆದು ಕಳುಹಿಸಿದರೆ ಅವುಗಳಿಗೆ ಬೇಕಾದಷ್ಟು ಸ್ಥಾನವು ದೊರೆಯುತ್ತದೆ. ಆದರೆ ಸತ್ಯಕ್ಕನಾಗಿಯೂ, ಸಕಲ ಜನಾನಂದಕರವಾಗಿಯೂ ಇರುವ ವಿಷಯಗಳನ್ನು ಯಾರಾದರೂ ಕಳುಹಿಸಿಕೊಟ್ಟರೆ ಅವು ಇವರ ದೃಷ್ಟಿಗೆ ಬೀಳುವಂತೆ ತೋರುವುದಿಲ್ಲ ಇದು ನಾಲ್ಕು ಕಣ್ಣುಗಳ ಪ್ರಭಾವವಾಗಿರುವಂತೆ ತೋರುತ್ತದೆ. ಸ್ಟಾರ್‌ಪತ್ರಿಕೆಯು ಈಗ ನಾಲ್ಕೈದು ವರ್ಷಗಳಿಂದ ಗುರುನಿಂದಾತ್ಮಕಗಳಾದ ಲೇಖನಗಳನ್ನು ಪ್ರಸಿದ್ಧಪಡಿಸಿ ಜಗತ್ತಿನಲ್ಲಿ ಅನೇಕ ಕಲಹಗಳನ್ನು ಉತ್ಪನ್ನ ಮಾಡಿರುತ್ತದೆ ಎಲೈ ಸ್ಟಾರ್ ಪತ್ರಿಕೆಯೇ ನೀನು ಗುರು ನಿಂದಾತ್ಮಕವಾದ ಮಾರ್ಗದಲ್ಲಿ ಕಾಲಿಡಬೇಡ ಸನ್ಮಾರ್ಗದಲ್ಲಿ ಕಾಲಿಡು ಎಂದು ಎಷ್ಟೋ ಜನರು ಬೋಧಿಸಿದರೂ ಮಾರ್ಗಕ್ಕೆ ಬರದೆ ತನ್ನ ವಕ್ರ ಸ್ವಭಾವವನ್ನು ಹೆಚ್ಚು ಮಾಡುತ್ತಲಿದೆ. "ಕಲಿತದ್ದನ್ನು ಬಿಡೆ ಕಳ್ಳಮುಂಡೆ ಅಂದರೆ ನಡುಮಂತರ ಬಿಟ್ಟು ಹುಡಿಮಣ್ಣು ಹೊಯ್ಸಿಕೊಳ್ಳಲೆ ಎಂಬ ಗಾದೆಯಂತೆ ಈ ಸ್ಟಾರ್ ಪತ್ರಿಕೆಯ ಸ್ಥಿತಿಯಾಗಿದೆ. ಈ ಪತ್ರಿಕೆಗೆ ಸದ್ವಿಷಯಗಳು ಕಡಿಮೆಯಾಗಿ ಬರುತ್ತಿರುವುದರಿಂದ ಇದು ಕೇವಲ ದುರ್ವಿಷಯ ಭರಿತವಾಗಿದೆ ಎಂದು ಧಾರಾಳವಾಗಿ ಹೇಳಬಹುದಾಗಿದೆ ಸತ್ಯಕ್ಕೆ ಜಯವು ತಪ್ಪದು! ಅಸತ್ಯಕ್ಕೆ ಅಪಜಯವು ಸಿದ್ಧವು. ಸತ್ಯಕ್ಕೆ ತಿರಸ್ಕಾರವನ್ನೂ ಅಸತ್ಯಕ್ಕೆ ಪುರಸ್ಕಾರವನ್ನೂ ಗುರುನಿಂದಾತ್ಮಕ ಪಾಪರೂಪಿಗಳಾದ ಲೇಖನಗಳಿಗೆ ಆಶ್ರಯವನ್ನೂ ಕೊಟ್ಟಿರುವ ಸ್ಟಾರ್ ಪತ್ರಿಕೆಯು "ಪಾಪೀಚಿರಾಯುಃ" ಎಂಬ ಗಾದಾವಾಕ್ಯದಂತೆ ಚಿರಕಾಲವಾಗಿ ಬಾಳಲಿ. ಆದರೆ ಸತ್ಯಕ್ಕೆ ಪುರಸ್ಕಾರವನ್ನೂ ಅಸತ್ಯಕ್ಕೆ ತಿರಸ್ಕಾರವನ್ನೂ ಗುರುಸ್ತೋತ್ರಾತ್ಮಕಗಳಾದ ಪುಣ್ಯಲೇಖನಗಳಿಗೆ ಆಶ್ರಯವನ್ನೂ ಕೊಟ್ಟಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯು ಅಲ್ಪ ವಯಸ್ಸಿನದಾದಾಗ್ಯೂ ಯಶೋಭಾಗಿಯಾಗಿ ಜಗತ್ತಿನಲ್ಲಿ ಮೆರೆಯಲಿ! ಯತೋಧರ್ಮಸ್ತತೋಜಯಃ!

ಸಾಗರ— ವೀ|| ಗುರುಪುತ್ರ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವ್ಯಭಿಚಾರಿಣಿಯ ವಯ್ಯಾರ.

ಸ್ಟಾರ್ ಪತ್ರಿಕೆಯ 29 ನೆಯ ತಾರೀಖಿನ ಸಂಚಿಕೆಯಲ್ಲಿ "ಪಂಚಾಚಾರ್ಯ ಪ್ರಭೆಯು ಶಾಂತಚಿತ್ತಳಾಗಿ ಬಾಳಲಿ" ಎಂಬ ಹೆಡ್ಡಿಂಗಿನಿಂದ ಕೆ ಗೆ ಶಿ ಕತ್ತೂರ ಎಂಬ ಹೆಸರಿನಿಂದ ಒಂದು ಲೇಖನವು ಪ್ರಸಿದ್ಧವಾಗಿರುವುದು ಈ ಲೇಖನವನ್ನು ಬರೆದವರು ಪುರುಷನಿರಬಹುದೋ ಸ್ತ್ರೀಯಾಗಿರಬಹುದೋ ಅಥವಾ ನಪುಂಸಕನಿರಬಹುದೋ? ಎಂದು ಪ್ರತಿಯೊಬ್ಬರಿಗೂ ಸಂಶಯವು ಉತ್ಪನ್ನವಾಗುತ್ತದೆ ನನಗಂತೂ ಈ ಲೇಖಕರು ಪುರುಷರಾಗದೆ ವ್ಯಭಿಚಾರಿಣಿಯಾದ ಸ್ತ್ರೀಯಾಗಲಿ ಅಥವಾ ನಪುಂಸಕನಾಗಲಿ ಇರಬಹುದೆಂದು ತೋರುತ್ತದೆ ಯಾಕೆಂದರೆ ಆ ಲೇಖನದಲ್ಲಿ ತಾಳ ಗೆಜ್ಜೆ ಬುಗುಡಿ ಕುಣಿತ ವಯ್ಯಾರ ಇವೇ ಮೊದಲಾದ ವೇಶ್ಯಾಸ್ತ್ರೀ ಸ್ವಭಾವಪ್ರಯೋಗಗಳಾದ ಶಬ್ದಗಳಿಂದ ತುಂಬಿರುವ ವಯ್ಯಾರದ ವಾಕ್ಯಗಳೇ ತುಂಬಿರುವುದರಿಂದ ಇವಳನ್ನು ಮೇಲೆ ಬರೆದ ಹೆಸರಿನಿಂದ ಕರೆಯಬೇಕಾಗಿದೆ ಇವಳು ತನ್ನ ಲೇಖನದಲ್ಲಿ ಬರೆದಂತೆ ತನ್ನ ಯೌವನಕಾಲದಲ್ಲಿ ಎಷ್ಟು ಗೆಜ್ಜೆಗಳನ್ನು ಕಟ್ಟಿಕೊಂಡು ಕುಣಿದಿರುವಳೊ? ಎಷ್ಟು ತಾಳಗಳನ್ನು ಕೈಯಲ್ಲಿ ಧರಿಸಿರುವಳೊ? ಎಷ್ಟು ಜನರ ತನುಮನಧನಗಳನ್ನು ಸೂರೆಗೊಂಡಿರುವಳೊ? ಎಷ್ಟು ಜನರನ್ನು ತನ್ನ ಮಾಯಾಜಾಲದಿಂದ ಬಿಗಿದಿರುವಳೊ? ಎಷ್ಟು ಜನ ಕುರುಪಿರ ಡೊಳ್ಳುಗಳ ಗತ್ತಿನಲ್ಲಿ ಕುಣಿದಿರುವಳೊ? ಬುದ್ಧಿಯನ್ನು ಹೇಳುವ ಎಷ್ಟು ಜನ ಸತ್ಪುರುಷರ ಮೈಮೇಲೆ ಹಾರಿಬಿದ್ದಿರುವಳೊ? ಯಾರುಯಾರಿಗೆ ಜಾಲವನ್ನು ಹಾಕಿ ಮಂಜನೋಡಿರುವಳೊ? ಇವಳಿಗೆ ಎಷ್ಟು ಮಂದಿ ಗಂಡಂದಿರೂ, ಪಿತಾಮಹರೂ ಹಿರಿಯರೂ ಆಗಿರುವರೋ? ಯಾರುಯಾರಿಗೆ ಎಷ್ಟು ಕಾರಾಸ್ತಿಗಡಿಯನ್ನು ಮಾಡಿ ಉಗುಳಿಸಿಕೊಂಡಿರುವಳೋ? ಎಷ್ಟು ವನ್ನು ಕುಶಲವಾದ ನಾಟಕವ್ಯಂಜವವೇ ಆಲೋಚಿಸಬೇಕಾಗಿದೆ, ಈ ಹುಚ್ಚುಮುಂಡೆಯು ತನ್ನ ನೈಜಸ್ವಭಾವವನ್ನೆಲ್ಲಾ ಪಂಚಾಚಾರ್ಯಪ್ರಭಾ ಪತ್ರಿಕೆಯ ವಿಷಯದಲ್ಲಿ ಆರೋಪಿಸಿರುವುದು ಇವಳ ಪಾಮರಸ್ವಭಾವದ ವ್ಯಕ್ತಿಯಾಗಿದೆ ಇಂಥವಳ ಸ್ವಭಾವಕ್ಕೆ ಪ್ರೋತ್ಸಾಹಕೊಡುವ ಮಹಾಶಯರ ಸ್ವಭಾವವು ಯಾವರೀತಿ ಇರುವುದೆನ್ನುವುದು ಸರ್ವರಿಗೂ ತಿಳಿಯುವಂತೆಯೇ ಇದೆ ಎಲೈ ವ್ಯಭಿಚಾರಿಣಿಯೇ ನಿನ್ನ ಸ್ವಭಾವವನ್ನೇ ಸರ್ವರಲ್ಲಿಯೂ ಯೋಜಿಸುವುದು ನಿನಗೆ ಧರ್ಮವಲ್ಲ ಇನ್ನು ಮೇಲಾದರೂ ನೀನು ಕುಮಾರ್ಗವನ್ನು ಬಿಟ್ಟು ಸುಮಾರ್ಗವನ್ನು ಹಿಡಿದು ವರ್ತಿಸಿದರೆ ನಿನಗೆ ಕಲ್ಯಾಣವಾದೀತು ಗುರುದೇವನು ಮೆಚ್ಚುವನು ಇದುವರಿಂದ ಇಂಥ ಅಕ್ರಮಕ್ಕೆ ನೀನು ಹೋಗದೆ ಶಾಂತಚಿತ್ತದಿಂದ ಕೂಡಿ ವರ್ತಿಸೆಂದು ನಿನ್ನ ಮೇಲಿನ ಅಭಿಮಾನವಿಶೇಷದಿಂದ ಸದ್ಬೋಧವನ್ನು ಮಾಡಿ ಈ ಲೇಖನವನ್ನು ವಿರಮಿಸುತ್ತೇನೆ

ಪಂಚಾಚಾರ್ಯ ಪ್ರಭಾಭಿಮಾನಿ
ಚಂದ್ರಶೇಖರವರ್ಮ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅಸದ್ವರ್ತನ.

ಮೈಸೂರು ಸ್ಟಾರಿನ 27ನೆಯ ತಾರೀಖಿನ ಸಂಚಿಕೆಯಲ್ಲಿ ನಂಗಪ್ಪ ವೀರಶೆಟ್ಟಿ ಸಾ|| ಮಹಾಗಾಂವ್ ಎಂಬುವರು 'ಪಂಚಾಚಾರ್ಯಪ್ರಭೆಯಲ್ಲಿನ ಸುಳ್ಳು ಹೆಸರಿನ ಲೇಖ' ಎಂಬ ಹೆಡ್ಡಿಂಗಿನಿಂದ ನಾನು ಪಂಚಾಚಾರ್ಯಪ್ರಭೆಯಲ್ಲಿ ಮಹಾಗಾಂವ್ ಎಂಬ ಹೆಸರಿನಿಂದ ಸುಳ್ಳು ಬರೆಯುತ್ತೇನೆಂದೂ ನಾನು ಮಹಾಗಾಂವದಲ್ಲಿ ಇಲ್ಲೇ ಇಲ್ಲವೆಂದೂ ಬರೆದಿರುತ್ತಾನೆ ಹೀಗೆ ಬರೆಯುವ ಈ ಲೇಖಕನು ಮಹಾಗಾಂವ್ ಗ್ರಾಮದವನಲ್ಲವೆಂದು ತೋರುತ್ತದೆ ನಾನು ಎಷ್ಟೋ ದಿವಸಗಳವರೆಗೆ ಮಹಾಗಾಂವ್ ಪಾಠಶಾಲೆಯಲ್ಲಿದ್ದೆನು ಆ ಪಾಠಶಾಲೆಯ ಶಾಸ್ತ್ರಿಗಳು ಕೇವಲ ವಿರಕ್ತಪಕ್ಷದವರಾದ್ದರಿಂದ ನನಗೂ ಅವರಿಗೂ ಕೂಡಿಬರಲಿಲ್ಲವಾದ್ದರಿಂದ ಈ ಹದಿನೈದು ಇಪ್ಪತ್ತು ದಿವಸಗಳ ಕೆಳಗೆ ನಾನು ನನ್ನ ಜನ್ಮಸ್ಥಾನಕ್ಕೆ ಹೋಗಿರುತ್ತೇನೆ ನಾನು ಎಲ್ಲಿಯವರೆಗೆ ಮಹಾಗಾಂವದಲ್ಲಿದ್ದೆನೋ ಅಲ್ಲಿಯವರೆಗೆ ಮಹಾಗಾಂವದ ಹೆಸರಿನಿಂದ ಲೇಖನಗಳನ್ನು ಪ್ರಭೆಗೆ ಕಳುಹಿಸುತ್ತಿದ್ದೆನು ಲೇಖಕನು ಈ ಯಥಾರ್ಥವಿಷಯವನ್ನು ತೋರ್ಪಡಿಸದಿರುವುದು ಆತನಿಗೆ ಕಳಂಕವೇ ಸರಿ!

ಪಾಲಾಚಾರ್ಯನಾಗ ಮೋಟಗಿಮಠ
ನೀರಲಗಿ

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವ ಮತವಿಚಾರಮೀಮಾಂಸಾ.

ಲೇಖಕ

ಶ್ರೀ ಕಾಶೀಕ್ಷೇತ್ರ ನಿವಾಸಿಗಳಾದ ಶ್ರೀ ಪಿಠಾ[illegible]ದ್ಯ ಗುರುಕುಲವಾಸಿ ವ್ಯಾಕರಣರತ್ನಂ ಶ್ರೀ ಪ್ರಭು[illegible] ಶಿವಾಚಾರ್ಯರು

ಈ ಪ್ರಪಂಚದಲ್ಲಿರುವ ನಾನಾ ಕುಲ, ಪಟ, ಮಠ, ಮಂದಿರ, ರಥ, ವಿಮಾನ, ಪಟ್ಟಣಾದಿಗಳೆಲ್ಲ ಒಬ್ಬ ಕರ್ತೃವಿನ ಅಪೇಕ್ಷೆಯುಳ್ಳವು. ಹೇಗೆ ಅನುಭವಕ್ಕೆ ಬರುವುದು ದೃಷ್ಟವಾಗಿದೆಯೋ ಹಾಗೆಯೇ ಭೂಮಿ, ಜಲ, ಅನಲ, ಪವನ, ಗಗನ, ಸೂರ್ಯ, ಚಂದ್ರ, ತಾರಾ, ಮಾನವ, ಪಶು, ಪಕ್ಷಿ, ಗಿರಿ, ನದೀ ಮೊದಲಾದವುಗಳಿಂದ ವ್ಯಾಪ್ತವಾಗಿರುವ ವಿಶ್ವವೂ ಒಬ್ಬ ಕರ್ತೃವನ್ನು ಹೊಂದಿದೆ ಎಂದು ಅನುಮಾನದಿಂದ ಸಿದ್ಧವಾಗುವುದು. ಆತನನ್ನು ಅಘಟಿತಘಟನಾ ಸರ್ವಶಕ್ತಿಶಾಲಿ ಪರಶಿವನೆಂದು ಈಶ್ವರನೆಂದು ಭಾರತೀಯರು ನಿಸ್ಸಂಕೋಚದಿಂದ ಹೇಳುವರು. ಇನ್ನು 'ನ್ಯಾಯಾವತಾರಾಭ್ಯಾಂ ದೇವ ಏಕಃ' 'ಯಃ ಸರ್ವಜ್ಞಃ ಸರ್ವವಿತ್' ಎಂಬ ವಿವಿಧ ಶ್ರುತಿವಾಕ್ಯಗಳು ಇದನ್ನೇ ಸಾರುತ್ತಿರುವುದಲ್ಲದೆ ಸ್ಮೃತಿ ಪುರಾಣಾದಿಗಳೂ ಉದ್ಘೋಷಿಸುವುವು. ಮತ್ತು ವಿಶೇಷವಾದ ಮಹಮ್ಮದೀಯ, ಆಂಗ್ಲೇಯ ಮುಂತಾದವರು ಇದೇ ಈಶ್ವರನನ್ನೇ ಬೇರೆ ಬೇರೆ ನಾಮಗಳಿಂದ ಕರೆಯುವರು. ಇದರಿಂದ ಈಶ್ವರನ ಅಸ್ತಿತ್ವವು ದೇಶ ವಿದೇಶೀಯರೆಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ ಎಂದು ಸಿದ್ಧವಾಯಿತು. ಈ ಮಹಾ ಶಕ್ತನಾದ ಈಶ್ವರನನ್ನು ಮನಮುಟ್ಟಿ ನಮಸ್ಕರಿಸಿ ಆತನ ನಾಮವನ್ನು ಧ್ಯಾನಿಸುವುದಲ್ಲದೆ ಆತನ ಆಕೃತಿಯನ್ನೂ ಪ್ರತಿಷ್ಠಿಸುವುದು ಸಹಜವಾಗಿದೆ. ಇದೇ ಉಪಕೃತರ ಸ್ವಭಾವಕ್ಕೆ ಪ್ರಮಾಣವೆನಿಸುವುದು. ಹಾಗಿಲ್ಲದೆ ಹೋದರೆ ಆತನಿಗೆ ಕೃತಘ್ನರಾಗಿ ಜೀವರುಗಳು ನರಕ ಯಾತನೆಯನ್ನು ಅನುಭವಿಸುವ ಪ್ರಸಂಗವುಂಟಾಗುವುದು. ಆದುದರಿಂದಲೇ ಪೂರ್ವಕಾಲದಿಂದಲೂ ನಮ್ಮ ಭಾರತೀಯ ಮಹಾಪುರುಷರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಈಶ್ವರ ಪೂಜಾಧ್ಯಾನಾದಿಗಳನ್ನು ಆಚರಿಸುತ್ತ ಬಂದಿರುವರು. ನಾವೂ ಅದೇ ಮಾರ್ಗವನ್ನು ಅವಲಂಬಿಸಿರುತ್ತೇವೆ. ಇನ್ನು ಭಾರತೀಯರೆಂದರೆ ಕೆಲ ಐತಿಹಾಸಿಕ ವಿಚಾರಗಳು ಸ್ಮರಣಕ್ಕೆ ಬರುತ್ತವೆ. ಶೈವ ಶಿವಾಗಮಗಳಲ್ಲಿ ಭರತ ಎಂಬ ಶಬ್ದವು ನಟನಪ್ರಿಯನಾದ ಶಿವನ ಒಂದು ನಾಮವಾಗಿದೆ. ಭರತಖಂಡವೆಂದರೆ ಶಿವನ ವಾಸಸ್ಥಾನವೆಂದು ಅರ್ಥವಾಗುವುದು. ಭರತವಾಸಿಗಳೆಲ್ಲರೂ ಭಾರತೀಯರು (ಶೈವರು) ಎಂದು ಸಹಜಾರ್ಥವಾಗುವುದು. ಈ ವಿಷಯದಲ್ಲಿ ಶೈವ ಶಿಖಾಮಣಿಗಳಾದ ಹರದತ್ತ ಶಿವಾಚಾರ್ಯರು "ಚತುರ್ವೇದ ತಾತ್ಪರ್ಯ ಸಂಗ್ರಹ" ವೆಂಬ ಗ್ರಂಥದಲ್ಲಿರುವ "ಶ್ರುಯತಾ ಶಿಕ್ಷಯಿತ್ರೈವ ಮುಖತಸ್ತು [illegible] ಭರತಂ ನಟನಾದಿಯೋಗಾತ್ ಪ್ರತೀಕ್ಷೇ ಕೀರ್ತಿ [illegible] ಸಾಧಾರಣ್ಯೇನ ಭರ್ಗೋ ನನರ್ತ್ತ[illegible]" ಎಂಬ ಶ್ಲೋಕದಿಂದ ತಾಂಡವ ಸ್ವರೂಪಿಯಾದ ಶಿವನೇ ಭರತನೆಂದು ಹೇಳಿಕೊಳ್ಳುವನೆಂದು ತೋರಿಸಿರುವರು. ಇದಲ್ಲದೆ ಶಿವನು ತಾಂಡವ ಲೀಲೆಯನ್ನಾಚರಿಸಿರುವುದನ್ನು ಪ್ರಬಲ ಪ್ರಮಾಣಗಳಿಂದ "ನೃತ್ತಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ ಉದ್ಧರ್ತುಕಾಮಃ ಸನಕಾದಿಸಿದ್ಧಾನ್ ಏತದ್ವಿಮರ್ಶೇ ಶಿವಸೂತ್ರಜಾಲಂ" ಎಂದು ನಂದಿಕೇಶ್ವರ ವಿರಚಿತ ಕಾಶಿಕಾಗ್ರಂಥದಲ್ಲಿ ಶಿವನಿಗೆ ನಟರಾಜ (ಭರತ) ಎಂಬ ಹೆಸರನ್ನು ಸ್ಪಷ್ಟಮಾಡಿ ತೋರಿಸಿರುವರು. ಹೀಗೆ ಭರತನೆನಿಸಿದ ಶಿವನು "ಅ ಇ ಉಣ್" ಇತ್ಯಾದಿ ಚತುರ್ದಶ ಸೂತ್ರಗಳನ್ನು ಢಕ್ಕನಾದರೂಪದಿಂದ ಹೊರಹೊಮ್ಮಿಸಿದನೆಂತಲೂ ಇದಾದ ಮೇಲೆ "ಅಕಾರೋ ಬ್ರಹ್ಮರೂಪಃ ಸ್ಯಾನ್ನಿರ್ಗುಣಃ ಸರ್ವವಸ್ತುಷು ಚಿತ್ಕಲಾಮಿಂ ಸಮಾಶ್ರಿತ್ಯ ಜಗದ್ರೂಪ ಉಣೀಶ್ವರಃ" ಇತ್ಯಾದಿರೀತ್ಯಾ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಾನುಸಾರವಾಗಿ ಕಾಶಿಕಾವ್ಯಾಖ್ಯಾನ ಗ್ರಂಥವ

[illegible] ಒಂದು [illegible] ಸೂಪ್ರಗ [illegible] ಹೋರ [illegible] ಆಸ್ವಾದ್ಯಾಯನಗಳನ್ನು [illegible] ಜಗತ್ತಿಗೆ [illegible] ವೀರಶೈವ [illegible] ವಿಷಯ [illegible]

[illegible]

ಓಂ ನಮಃ ಶ್ರೀ ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಕೇದಾರ ಮಹಾಸ್ವಾಮಿಗಳ ಆಗಮನವೂ ಭಕ್ತರ ಉತ್ಸಾಹವೂ

ಐಹೊಳೆ

ವಿಜಾಪುರ ಜಿಲ್ಲಾ ಹುನಗುಂದ ತಾಲ್ಲೂಕು ಐಹೊಳೆ ಎಂಬ ಗ್ರಾಮಕ್ಕೆ ಶ್ರೀಮದ್ವೀರಶೈವ ಮಹಾ ಮಠ ಸ್ಥಾಪನಾಚಾರ್ಯರಾದ [illegible] ಕೇದಾರ ಪೀಠದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು [illegible] ದಕ್ಷಿಣ ಪ್ರಾಂತ್ಯ [illegible] ಐಹೊಳೆ ಗ್ರಾಮಕ್ಕೆ ತಾರೀಖು [illegible] ದಿವಸ ಚಿತ್ತೈಸಿದರು. [illegible] ಸಮಸ್ತ [illegible] ವಾದ್ಯಗಳಿಂದಲೂ [illegible] ಪಂಚಾಚಾರ್ಯರ ಜಯ [illegible] ಸಹಿತರಾದ ಮಹಾ [illegible] ಪತಾಕೆಗಳಿಂದಲೂ [illegible] ನಂದಿಕೋಲುಗಳಿಂದಲೂ ಪ್ರೇಕ್ಷಕರ ಕಣ್ಣಿಗೆ ಹಬ್ಬವನ್ನೀಯುವ [illegible] ಗ್ರಾಮಪ್ರವೇಶ ಮಾಡಿಸಿದರು. ತದನಂತರ ಮಹಾಸ್ವಾಮಿಗಳವರು [illegible] ಬಾಗಲಕೋಟೆ [illegible] ಸ್ವಾಮಿಗಳ ಮಠದಲ್ಲಿ ಮಹಾಸ್ವಾಮಿಗಳಿಗಾಗಿ ಶೃಂಗರಿಸಿದ ಸಿಂಹಾಸನವನ್ನು ಮಹಾ ಸಡಗರದಿಂದ ಆರೋಹಣ ಮಾಡಿದ ಕೂಡಲೇ ಸಮಸ್ತ ಭಕ್ತಮಂಡಳಿಯವರು ತಮ್ಮ ಕರ ತಾಡನದಿಂದಲೂ ಪಂಚಾಚಾರ್ಯರ ಜಯಘೋಷದಿಂದಲೂ ತಮ್ಮಲ್ಲಿಯ ಅಸಾಧಾರಣವಾದ ಭಕ್ತಿಯನ್ನು ವ್ಯಕ್ತಗೊಳಿಸಿದರು. ತದನಂತರ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಮಠಸ್ಥಲ ಬೃಹನ್ಮಠದ ಶ್ರೀ [illegible] ಶಿವಾಚಾರ್ಯ ಪಟ್ಟದ ಸ್ವಾಮಿಗಳು ಹಿರೇಮಠ ಚಿಕ್ಕ ಮಣ್ಣೂರು ಇವರು ಸಮಸ್ತ ಭಕ್ತಮಂಡಳಿಗೆ ಗೋಚರಿಸುವಂತೆ "ಭಕ್ತಿ" ಈ ವಿಷಯವಾಗಿ ಭಾಷಣವನ್ನು ಮಾಡಿದರು. ಇವರ [illegible] ಭಾಷಣವನ್ನು ಕೇಳಿ [illegible] ತಮ್ಮ [illegible] ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಮಹಾಸ್ವಾಮಿಗಳ [illegible] ತಮ್ಮ ತಮ್ಮ ಗೃಹಗಳಿಗೆ ಪಂಚಾಚಾರ್ಯರ ಜಯಘೋಷ ಮಾಡುತ್ತ ತೆರಳಿದರು. ಸದರಿ ಗ್ರಾಮದಂತೆ [illegible] ಗ್ರಾಮದ [illegible] ಪಂಚಾಚಾರ್ಯರ ಆಗಮನವನ್ನು ಬಯಸಿ ಅವರ [illegible] ಫಲಕ್ಕೆ ಪಾತ್ರರಾಗುವರೆಂದು ನಂಬಿರುವ

ರಾಮಸ್ವಾಮಪ್ಪ ಲಿಂಗಪ್ಪ ನಾಯಕ ದೇಸಾಯಿ
ಐಹೊಳೆ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನ

ಶ್ರೀ ೧೦೦೮ ಜಗದ್ಗುರು ರೇಣುಕ ಶಿವಾಚಾರ್ಯಾಷ್ಟಕಂ

ಯಃ ಶ್ರೀಮತ್ಕದಲೀಪುರೀಪರಿಲಸತ್ಪ್ರೋ
ಕಾಪಿಸಃ ಯೋಗೀಂದ್ರೈರ್ಯತಿಸದ್ಗುಣಾ
ಸಚ್ಚಿತ್ಸುಖಸ್ವಕಾಶ್ರಯಃ || ಸ್ವಾತ್ಮಾರಾಮ
ತಿಷ್ಠತ ಉದಾರಃ ಸರ್ವಶಕ್ತ್ಯನ್ವಿತ | ಸ್ತಂ
ಸತತಂ ಜಗದ್ಗುರುವರಂ ಶ್ರೀರೇಣುಕಾದೀಶ್ವ

ಯಂ ಶೈವಾಗಮಗೀತಕೀರ್ತಿಮತುಲ ಸಿದ್ಧಾ
ನಾಥಾವಹಃ ಮಾಯಾಸಾಗರಮುತ್ತರೀತು
ಮೋಪತ್ರಸ್ಯಕಾಯಾತರಾಃ || ಅತ್ಯಾಯಂ
ಸರ್ವರ್ಭಕ್ತಿಮತ್ವಾನಾವಿಕಂ ಚಕ್ರೀರೇ | ತಂ
ಸತತಂ ಜಗದ್ಗುರುವರಂ ಶ್ರೀ ರೇಣುಕಾಧೀಶ್ವರಂ

ಯೇನಾಗಸ್ತ್ಯಮಹರ್ಷಯೇ ಶ್ರುತಿಮತಂ
ಯುಸಪ್ರಾಪಣಂ¹ ಸರ್ವಜ್ಞೇನ ವಿಶುದ್ಧಪಂಥ್ಯಗಿ
ಕೀರ್ತೋಚ್ಛಿತಾಂ ಬೋಧಯೇ || ಷಟ್ತ್ರಿಂಶದ್ವರತತ್ತ್ವ
ಮುಪದಿಷ್ಟಂ ವೀರಶೈವಂ ಮತಂ | ತಂ ವಂದೇ
ಜಗದ್ಗುರುವರಂ ಶ್ರೀ ರೇಣುಕಾಧೀಶ್ವರಂ

ಯಸ್ಮೈ ಸ್ವಂ¹ ಯುಗಸದ್ವ್ರತಾನಧಿ
ವರ್ಗತ್ರಯರೂಪಾಯ ಸಾ | ಲಂಕೇ ಶೋ*
ತ್ರಿಕೋಟಿ ವಿಮಲಿಂಗಸ್ಥಾಪನಾಯಾತ್ತಮು
ಜ್ಞಾತ್ವಾತ್ಮಾನ ಮುಮುಕ್ಷುತಾಗ್ರ್ಯ ಜನುಷಾಕಾ
ಪದೌ ದಕ್ಷಿಣಾಂ¹ ತಂ ವಂದೇ ಸತತಂ ಜಗದ್ಗು
ಶ್ರೀ ರೇಣುಕಾಧೀಶ್ವರಂ

¹ ಸ್ವಂ ನಾಮ ಆತ್ಮಾನಮಿತ್ಯರ್ಥಃ

* ಲಂಕೇಶೋ ನಾಮ ವಿಭೀಷಣ ಇತ್ಯರ್ಥಃ

ಯಸ್ಮಾತ್ಪ್ರಾಕ್ತರ್ಕ ಮಹಾಗುರುರ್ಥಪದಂ
ಯಮೀಶಂಕರಃ ಪ್ರಾಪದ್ಧೀತಶಿಷ್ಯಭಕ್ತಿರಮಿತ
ಚಂದ್ರವರೌಲೀಶ್ವರಂ || ವಿಘ್ನೋದ್ಧಾರಕಮರ್ಕ
ಮಣಿಕೇಚೋದಿವ್ಯಮರ್ಕಾದಿವ ತಂ ವಂದೇ
ಜಗದ್ಗುರುವರಂ ಶ್ರೀ ರೇಣುಕಾದೀಶ್ವರಂ

ಯಸ್ಯಾರಾಧ್ಯಶಾಮುಸನ್ನಮನಸಾ ಪಾದ
ಒಂ ಸಂತತಂ¹ ಪುಣ್ಯಾಂ ಪುಣ್ಯವತಾಮುದೂರ
ಮಹದ್ಶೈಶ್ವರ್ಯಜನ್ಯಸ್ಥಲಂ || ಆದ್ಯಾ ಅಸ್
ಬವೇದನುಪಮಾ ಕೈವಲ್ಯಲಕ್ಷ್ಮೀಃ ಸ್ಥಿರಾ| ತಂ
ಸತತಂ ಜಗದ್ಗುರುವರಂ ಶ್ರೀ ರೇಣುಕಾದೀಶ್ವರಂ

ಯಸ್ಮಿನ್ ಪೌರುಷಬಾಹಿ ಸಂಯಮಧನೇ ಜ್ಞಾ
ಬೀರ್ಯೋದ್ವ್ಯತ್ಸ್ಥಲೇ | ಆತ್ಮಾನಂದಮನೇ ತೃಣೀ
ಜ್ಞಾ ಲೀ ಗುಣೋತ್ಕಂಠಿತಾ || ಅಶ್ರಾಂತಂ
ವಿರಕ್ತಿರ್ವಸಿತಾ ಸಾನಂದಸಂಕಾಶ್ರಿತಾ | ತಂ
ಸತತಂ ಜಗದ್ಗುರುವರಂ ಶ್ರೀ ರೇಣುಕಾದೀಶ್ವರಂ

ಯೋಃ ಸೋಮೇಶ್ವರಲಿಂಗಸಂಭವ, ಸುದಾ
ದಸ ದಸ, ಸ್ವಯೋ ದಿವ್ಯಜ್ಞಾನನಿಧಿಸ್ತ
ಸುಶಿವನ [illegible]ಕೈರ್ಬೋಧಿತಾತ್ಮಾನ ಸುಧನ ||
ನ ಸಿಂಗಮುಸಾಪ್ತಾ[illegible] ಸದಯಂಪಾಮು
ತಸ್ಯ ತಂ ಸ್ತಂ ವಂದೇ ಸತತಂ ಜಗದ್ಗುರು
ಶ್ರೀ ರೇಣುಕಾದೀಶ್ವರಂ

ಅನುದಿನಂ ಪ. ಇದಂ ಸ್ತವನಂ ಪಠೇನ್ಸಪಿ
ಗಣಿಸಂಗಮನಾದರಾತ್ ಸ ಸಕಲಾ ಉಪಸ
ಸಂಪದ ಸ್ವದಮುಕ್ತಿಪದಂ ಸುಖಮಾಪ್ನುಯಾ

ಇತಿ ಶ್ರೀ ವೇ, ಬ್ರ|| ಪಂಡಿತ ವಿಶ್ವೇಶ್ವರ
ಕಾವ್ಯತೀರ್ಥ ಸಾಹಿತ್ಯರತ್ನ ಪದವೀಪ್ರಸ್ತಿ
ವಿರಚಿತಂ ಜಗದ್ಗುರು ರೇಣುಕಶಿವಾಚಾ
ರ್ಯಾಷ್ಟಕಂ ಸಂಪೂರ್ಣಂ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪಂಡಿತರ ನಿಜಸ್ವರೂಪ.

ಪಂಚಾಚಾರ್ಯಪ್ರಭಾ ಪ್ರವರ್ತಕರೂ ವೀರಶೈವ ಧರ್ಮ ಪುನರುಜ್ಜೀವಕರೂ ಆದ ವೇ|| ಬ್ರ|| ಶ್ರೀ ಕಾಶೀನಾಥ ಶಾಸ್ತ್ರಿಗಳವರು ಸ್ವಾರ್ಥತ್ಯಾಗಿಗಳೂ ಶಮದಮಾದಿ ಗುಣಸಂಪನ್ನರೂ ಧರ್ಮಸೂತ್ರಗಳನ್ನು ಆಮೂಲಾಗ್ರವಾಗಿ ಗ್ರಹಿಸಿದವರೂ ಆಗಿರುವರು. ಇಂಥ ಮಹನೀಯರ ವಿಷಯದಲ್ಲಿ ದುರ್ಭಾವಪ್ರಯೋಗಪೂರಿತವೂ, ವ್ಯಕ್ತಿದ್ವೇಷಾತ್ಮಕವೂ ಆದ ಲೇಖನಗಳನ್ನು ಕೆಲವರು ಬರೆಯುತ್ತಿರುವರು. ಇದನ್ನು ನೋಡಿದರೆ ನಮ್ಮ ಮತದ ದೌರ್ಭಾಗ್ಯವು ಇನ್ನೂ ನಾಶವಾಗಿಲ್ಲವೆಂದು ತೋರುತ್ತದೆ. ಈ ಧರ್ಮಸುಧಾರಕರು ಕೈಕೊಂಡಿರುವ ಕಾರ್ಯವಾದರೋ ಘನವಾದುದು! ಹಗಲಿರುಳು ಅವಿಶ್ರಾಂತ ಶ್ರಮವನ್ನು ವಹಿಸಿ ಧರ್ಮಗ್ರಂಥಗಳನ್ನು ಶೋಧಿಸಿ ನಮ್ಮ ಸನಾತನ ಧರ್ಮದ ಮೂಲತತ್ವಗಳನ್ನು ಪ್ರಕಾಶಕ್ಕೆ ತರುತ್ತಿರುವರು. ನಮ್ಮ ಮತವಾವುದು? ನಾವು ಆಚರಿಸತಕ್ಕ ಕ್ರಮಗಳಾವುವು? ಯಾವ ರೀತಿಯಲ್ಲಿ ವರ್ತಿಸುವುದರಿಂದ ನಮಗೆ ಇಹಪರ ಲೋಕಗಳಲ್ಲಿ ಸೌಖ್ಯವು ದೊರೆಯುತ್ತದೆ ಎಂಬಿವೇ ಮೊದಲಾದ ಅಂಶಗಳನ್ನು ಪಂಡಿತ ಪಾಮರರಿಗೆಲ್ಲ ಗೊತ್ತಾಗುವಂತೆ ಮಾಡುವ ಕಾರ್ಯದಲ್ಲಿ ತೊಡಗಿರುವರು. ಪರಮಪೂಜ್ಯರೂ ಲೋಕೈಕವಂದ್ಯರೂ ಮತಸ್ಥಾಪಕರೂ ಆದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಮಹಿಮೆಗಳನ್ನೂ, ಆ ಭಗವತ್ಪಾದರಲ್ಲಿ ಚತುರಾಶ್ರಮದವರು ನಡೆದುಕೊಳ್ಳಬೇಕಾದ ಕ್ರಮಗಳನ್ನೂ ತಿಳಿಸುತ್ತಿರುವರು. ಮತಧರ್ಮರಹಸ್ಯವನ್ನರಿಯದೆ ಕೇವಲ ಅಜ್ಞಾನಾಂಧಕಾರದಲ್ಲಿ ಮುಳುಗಿದ್ದ ವೀರಶೈವ ಪ್ರಪಂಚವನ್ನು ಧರ್ಮಶಾಸ್ತ್ರವೆಂಬ ದಿನಮಣಿಯಿಂದ ಪ್ರಕಾಶಪಡಿಸಲಿಕ್ಕೆ ತೊಡಗಿರುವರು. ಆಶ್ರಮ, ವರ್ಣ, ಪಂಚಾಚಾರ, ಷಟ್‌ಸ್ಥಲ ಮೊದಲಾದ ಧರ್ಮದ ನಿಜತ್ವವು ಗೊತ್ತಿಲ್ಲದೆ ಮನಸ್ಸಿಗೆ ಬಂದಂತೆ ವರ್ತಿಸುತ್ತ ಅನ್ಯಸಮಾಜದವರು ನಮ್ಮನ್ನು ನೋಡಿ ನಗುತ್ತಿದ್ದರು. ಅನ್ಯರು ಸರ್ವೋತ್ತಮವಾದ ಧರ್ಮಸೂತ್ರಗಳಿಂದೊಡಗೂಡಿದ ನಮ್ಮ ಸಮಾಜವನ್ನು ಚತುರ್ವರ್ಣಗಳಲ್ಲಿ ಒಂದಾದ ಶೂದ್ರಸ್ಥಾನಕ್ಕೆ ಸೇರಿಸುವುದಕ್ಕೂ ಹಿಂದುಮುಂದೆ ನೋಡುವಂತಿರಲಿಲ್ಲ. ಮತಸ್ಥಾಪಕರ ಗುರುತೇ ಇಲ್ಲದೆ ಸಿಕ್ಕಿದವರೆಲ್ಲ ಮನಬಂದಂತೆ ಧರ್ಮಗಳನ್ನು ಬೋಧಿಸುತ್ತಾ ಅನಾಯಕಪ್ರಪಂಚವಾಗಿದ್ದಿತು. ಆಬಾಲವೃದ್ಧರಾದಿಯಾಗಿ ಯಾರಿಗೂ ಮತದ ಧರ್ಮಗುರುಗಳಾರು? ಅವರಲ್ಲಿ ನಾವು ಹೇಗೆ ಭಕ್ತಿಯುತರಾಗಿರಬೇಕು? ಎಂಬಿವೇ ಮೊದಲಾದ ಸಂಗತಿಗಳೂ ಸಹ ತಿಳಿದಿರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಧರ್ಮನೀತ ಕಾಲದಂಥ ಮತಭ್ರಷ್ಟಕಾಲವನ್ನು ತಿಳಿದು, "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ | ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ||" ಎಂಬ ಜಗದೀಶ್ವರನ ಉಕ್ತಿಯಂತೆ ಆ ಜಗನ್ನಿಯಂತೃವೂ ಧರ್ಮಶಾಸನ ಪ್ರೇರಕನೂ ಆದ ಆ ಪರಮೇಶ್ವರನೇ ಈ ಧರ್ಮಸುಧಾರಕರನ್ನು ಭೂಲೋಕಕ್ಕೆ ಕಳುಹಿಸಿರುವನೆಂದು ತಿಳಿಯಬಹುದಾಗಿದೆ. ಪ್ರತಿಫಲಾಪೇಕ್ಷೆಯಿಲ್ಲದೆ ವೈದಿಕಧರ್ಮಪ್ರಸಾರಣವೇ ಮೂಲ ಧ್ಯೇಯವನ್ನಾಗಿಟ್ಟುಕೊಂಡು ಅಹರ್ನಿಶಿ ಶ್ರಮಪಡುತ್ತಿರುವ ಸ್ವಾರ್ಥತ್ಯಾಗಿಗಳೂ ಪಾಂಡಿತ್ಯಕ್ಕೆ ಸನ್ನಿಧಾನಿಗಳೂ ಆದ ಈ ಧರ್ಮಸುಧಾರಕರ ವಿಷಯದಲ್ಲಿ ಯಾರು ತಾನೇ ಪೂಜ್ಯಬುದ್ಧಿಯನ್ನು ತಾಳಿಸಲಿಕ್ಕಿಲ್ಲ? ಯಾರು ತಾನೇ ಇವರಿಗೆ ಸಕಲಸನ್ಮಂಗಳವನ್ನುಂಟುಮಾಡಲೆಂದು ಶ್ರೀ ಚಂದ್ರಮೌಳಿಯನ್ನು ಪ್ರಾರ್ಥಿಸಲಿಕ್ಕಿಲ್ಲ? ಒಟ್ಟಿನಲ್ಲಿ ವೀರಶೈವ ಪ್ರಪಂಚವೇ ಇವರಿಗೆ ಋಣಿಯಾಗಿರುವ ವಿಷಯದಲ್ಲಿ ಸಂದೇಹವಿಲ್ಲ. ಸರ್ವಸಂಗ ಪರಿತ್ಯಾಗಿಗಳಾದ ಅರಣ್ಯದಲ್ಲಿ ವಾಸಮಾಡುತ್ತಿದ್ದ ಮಹರ್ಷಿಗಳು ಯಾರ ದಾಕ್ಷಿಣ್ಯಕ್ಕೊಳಗಾಗದೆ ಧರ್ಮಗ್ರಂಥಗಳನ್ನು ಬರೆಯಲಿಲ್ಲ. ಪವಿತ್ರ ಧ್ಯಾನೈಕಪರರಾಗಿದ್ದು ಅವರ ಶಾಸನಗಳನ್ನೇ ಗೃಹಸ್ಥರಿಗೆ ತಿಳುಹಿಸಿ ಧನ್ಯರಾಗಿರುವರು. ಇವರಂತೆಯೇ ಈ ಧರ್ಮಸುಧಾರಕರಾದರೂ ಯಾವ ಪಕ್ಷಗಳ ಆವೇಶದಿಂದಾಗಲಿ ಮತ್ಸರದ ಕಾರಣದಿಂದಾಗಲಿ ಮನಬಂದಂತೆ ಧರ್ಮವನ್ನು ಬೋಧಿಸುವರೆಂದು ಸರ್ವಥಾ ತಿಳಿಯಲಾಗದು. ಈ ಮಹಾತ್ಮರು ಯಾರ ಹಂಗಿಗೂ ಒಳಗಾಗತಕ್ಕವರಾಗಿಲ್ಲವು, ಮನೆಮಠಗಳನ್ನು ತೊರೆದು ಸಮಾಜಸೇವೆಯೇ ಈಶ್ವರಸೇವೆಯೆಂದು ತಿಳಿದು ತ್ರಿಕರಣಶುದ್ಧಿಯಿಂದ ಆಚರಿಸುತ್ತಿರುವರು. ರಾಜಕೀಯ ಧರ್ಮಗಳಲ್ಲುಂಟಾದ ವ್ಯತ್ಯಾಸವನ್ನು ನೋಡಿ ಮಹಾತ್ಮಾ ಗಾಂಧಿಯವರು ಸ್ವಾರ್ಥತ್ಯಾಗಿಗಳಾಗಿ ಸಕಲ ಸ್ವಜನರ ಕ್ಷೇಮಚಿಂತನವೇ ತಮ್ಮ ಸೌಖ್ಯವೆಂದು ಭಾವಿಸಿ ಹೇಗೆ ಲೋಕಮಾನ್ಯರಾಗಿರುವರೋ ಅದರಂತೆಯೇ ಈ ಧರ್ಮಸುಧಾರಕರು ಮಲಿನಾವಸ್ಥೆಯನ್ನು ಹೊಂದುತ್ತಿದ್ದ ವೈದಿಕಧರ್ಮವನ್ನುದ್ಧರಿಸುವುದರಲ್ಲಿ ಲೋಕಮಾನ್ಯರಾಗಿರುವರು. ಇಂತಹ ವಿಭೂತಿಗಳು ಜನಿಸುವುದು ಸಮಾಜದ ಪುಣ್ಯದಿಂದಲೇ ಹೊರತು ಬೇರೆಯಲ್ಲ! ಇಂಥವರ ವಿಷಯದಲ್ಲಿ ಕೆಲವುಜನರು ಅಜ್ಞತೆಯಿಂದಲೋ ಅಥವಾ ಮತ್ಸರದ ಕಾರಣದಿಂದಲೋ ನಿಂದಾಸ್ಪದವಾದ ಲೇಖನಗಳನ್ನು ಬರೆಯುವುದನ್ನು ನೋಡಿದರೆ ದುರ್ಭಾಗ್ಯವಾನಿಯಾದ ಯಾವನಿಗೆ ತಾನೇ ವ್ಯಸನವಾಗಲಿಕ್ಕಿಲ್ಲ? ಕಲಿಕಾಲಸ್ವಭಾವವೇ ಹೀಗಿರಬಹುದೇ? ಇಲ್ಲ, ಇಲ್ಲ ಕಲಿಕಾಲವು ಎಂದಿಗೂ ಕೆಟ್ಟದಲ್ಲ. ನೈಜವಾದ ಧರ್ಮಸೂತ್ರಗಳನ್ನು ತಿಳುಹಿಸಿ ಜನರನ್ನು ಎಚ್ಚರಗೊಳಿಸತಕ್ಕದ್ದಾಗಿರುತ್ತದೆ.

ಇನ್ನು ಮುಂದಾದರೂ ಸಮಾಜದ ಪ್ರತಿಯೊಬ್ಬರೂ ಧರ್ಮಸುಧಾರಕರ ವಿಷಯದಲ್ಲಿ ತಮಗಿದ್ದ ಅಜ್ಞತೆಯನ್ನು ತೊರೆದು ಧರ್ಮೋಜ್ಜೀವನಕ್ಕಾಗಿಯೇ ಮೈಸೂರು ರಾಜಧಾನಿಯಲ್ಲಿ ಅವತರಿಸಿ ಆಸ್ಥಾನವಿದ್ವಾಂಸರೂ ಧರ್ಮಸುಧಾರಕರೂ ಆದ ಪಂಡಿತೋತ್ತಮರ ಸಂಪಾದಕತ್ವದಿಂದ ವೃದ್ಧಿಯನ್ನು ಹೊಂದುತ್ತಿರುವ "ಪಂಚಾಚಾರ್ಯಪ್ರಭಾ" ವೃತ್ತಪತ್ರವನ್ನು ತರಿಸಿ ಓದಿಕೊಂಡು ವೀರಶೈವ ಧರ್ಮಗಳನ್ನು ತಿಳಿದುಕೊಂಡು ಅದರಂತೆ ಆಚರಿಸುವುದರ ಮೂಲಕ ಧನ್ಯಜೀವಿಗಳಾಗುವ ಸುಯೋಗವನ್ನುಂಟುಮಾಡಿಕೊಳ್ಳಬೇಕೆಂದೂ ಲೋಕಸೇವಾ ಜನಸೇವೆಯನ್ನು ಮಾಡುತ್ತಿರುವ ಧರ್ಮಸ್ವರೂಪರಾದ ಪಂಡಿತೋತ್ತಮರಿಗೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಧರ್ಮ ಗುರುಕಿಂಕರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಕುಂದಗೋಳ.

ಇಲ್ಲಿಯ ವೀರಶೈವ ಬಾಂಧವರು 'ಶ್ರೀ ಗಂಗಾಧರೇಶ್ವರ' ದೇವರ ರಥವನ್ನು ಕಟ್ಟಿರುವರು. ರಥವನ್ನು ಕಟ್ಟಿ ಈಗ ಅಜಮಾಸು ಮೂರ ವರ್ಷಗಳಾದವು. ರಥವನ್ನು ಕಟ್ಟಿದ ವರ್ಷವೇ ಎಳೆಯಬೇಕೆನ್ನುತ್ತಿದ್ದರು. ಆದರೆ ಊರಲ್ಲಿ ನೀರಿನ ಕೊರತೆಯಿದ್ದ ಕಾರಣ ನೀರು ಬಂದನಂತರ ಎಳೆಯಬೇಕೆಂದರು. ಮಾರನೇ ವರ್ಷ ಕೆರೆ ಹೊಂಡಗಳೆಲ್ಲವು ತುಂಬಿದ್ದವು. ಆದರೂ ರಥವನ್ನು ಎಳೆಯಲಿಲ್ಲ. ರಥವನ್ನು ಎಳೆಯುತ್ತೇವೆಂದು ಎರಡುಸಾರೆ ವರ್ಗಣಿಯನ್ನು ವಸೂಲು ಮಾಡಿದರು. ಇದನ್ನು ಕಟ್ಟಲಿಕ್ಕೆ ಬಹು ಹಣವು ವೆಚ್ಚವಾಗಿರುವುದು. ಈ ರಥವು ಇನ್ನು ಸ್ವಲ್ಪ ದಿವಸಗಳಲ್ಲಿ ಕೊಳೆತು ವ್ಯರ್ಥ ಕೆಟ್ಟುಹೋಗುವದು. ಇನ್ನು ಮೇಲಾದರೂ ಈ ಕಾರ್ಯದ ಕಡೆಗೆ ಸ್ವಲ್ಪ ಲಕ್ಷ್ಯಗೊಟ್ಟು ರಥವನ್ನು ಎಳೆಯುತ್ತಾರೆಂದು ಹಾರೈಸುವ

ಧರ್ಮದೇವರಭಕ್ತ.

ಪಾಟೀಲರ ಪಟಾಟೋಪ.

ಸ್ಪಾರ್ತಾ ಪತ್ರಿಕೆಯಲ್ಲಿ ಬಿ. ಎಸ್. ಪಾಟೀಲರವರು ಎಸ್. ಜಿ. ಸಿದ್ಧಲಿಂಗಪ್ಪನವರ ಲೇಖನವನ್ನು ವಿಮರ್ಶೆ ಮಾಡಿ ಒಂದು ಲೇಖನವನ್ನು ಬರೆದಿರುತ್ತಾರೆ. ಇವರು ಕೊಟ್ಟಿರುವ ಗಾದೆಯು ಮಾತ್ರ ಇವರು ಬರೆದಿರುವ ವಾಕ್ಯ ರಚನೆಯೂ, ವಿಷಯವಿವೇಚನವೂ ಪ್ರತಿಯೊಬ್ಬರನ್ನು ದಂಗು ಪಡಿಸುವಂತಿವೆ. ಆ ಲೇಖನದಲ್ಲಿ ಪಾಟೀಲರು ಎಷ್ಟು ಬುದ್ಧಿಯನ್ನು ಖರ್ಚು ಮಾಡಿರುವರೋ? ಈ ಪಟೇಲರ ಬುದ್ಧಿಯ ಮುಂದೆ ಲೋಕಪ್ರಸಿದ್ಧನಾದ ಎಡಿಸನ್ನನ ಬುದ್ಧಿಯನ್ನು ಸುಡಬೇಕು. ಬಸವನು ಗುರುವಿನ ಗುರುವಂತೆ ಎಂದು ಹಿಗ್ಗಿ ಹಿಗ್ಗಿ ಬರೆದಿರುವರು. ಬಸವನು ಗುರುವಾಗಿದ್ದ ಗುರುಗಳೇ ಬೇರೆ. ಈ ವಿಷಯವು ಸರಿಯಾಗಿ ಬಸವ ಪುರಾಣವನ್ನು ಓದಿದವರಿಗೆ ವ್ಯಕ್ತವಾಗುತ್ತದೆ. ಪಾಟೀಲರು ಅಂಥ ಗುರುಗಳ ಶಿಷ್ಯರಾಗಿದ್ದಂತೆ ತೋರುತ್ತದೆ. ಸಂತೋಷವು! ಪರಮ ಸಂತೋಷವು! ಬಸವ ನಾಮಧರರು ಶುದ್ಧ ಸಾಂಪ್ರದಾಯಕರಾದ ವೀರಶೈವರಲ್ಲಿ ಸಾವಿರಾರು ಜನರಿದ್ದಾರೆ. ಈ ಪಾಟೀಲರು ಸರ್ವರೂ ಕಲ್ಯಾಣದ ಬಸವನ ನಾಮವನ್ನೇ ಇಟ್ಟುಕೊಂಡಿರುವರೆಂದು ಊಹಿಸಿದಂತೆ ತೋರುತ್ತದೆ. ಮುಗ್ಧಪ್ರಸನ್ನರೇ, ಬಸವ ನಾಮವು ಬಹುಕಾಲದಿಂದ ಕನ್ನಡದಲ್ಲಿ ನಂದೀಶ್ವರನ ನಾಮವಾಗಿರುತ್ತದೆ. ಆ ನಾಮವನ್ನೇ ಮಾದರಸನು ತನ್ನ ಮಗನಿಗೆ ಇಟ್ಟನು. ಹೀಗಿದ್ದು ನೀವು ಏನೇನೋ ತಿಳಿದುಕೊಂಡಂತೆ ತೋರುತ್ತದೆ. ಈ ತಿಳುವಳಿಕೆಯು ಕೇವಲ ತಪ್ಪಾದದ್ದು. ಬರೇ ಶುದ್ಧ ಸಾಂಪ್ರದಾಯ, ಶುದ್ಧ ಸಾಂಪ್ರದಾಯ ಎಂದು ಒದಬಡಿಸಬೇಡಿರೆಂದು ಈ ಪಾಟೀಲರು ಬರೆದಿರುವರು, ಇದರ ಮೇಲಿಂದ ಇವರು ತಾವು ಶುದ್ಧ ಸಾಂಪ್ರದಾಯದವರಲ್ಲವೆಂದು ಹೇಳಿದಂತಾಗಲಿಲ್ಲವೇ? "ಇದು ಸನಾತನ ಯುಗವಲ್ಲ, ಕ್ರಾಂತಿಯ ಯುಗವಿದು" ಎಂದು ಪಾಟೀಲರು ಘೋಷಿಸಿರುವರು. ಮುಂದೆ "ಬೇರೊಂದು ಧರ್ಮದವರು ಸೇರದ ಯಾವ ಧರ್ಮವನ್ನಾದರೂ ಜಗತ್ತಿನಲ್ಲಿ ತೋರಿಸಬಲ್ಲಿರಾ' ಎಂದು ಅಂದಿರುವರು. ಇವರ ವಾಕ್ಯದ ಮೇಲಿಂದ ವಿಚಾರಿಸುತ್ತಿರಲಿಕ್ಕಾಗಿ ಇವರು ಬೇರೆ ಯಾವುದೋ ಒಂದು ಧರ್ಮದವರಿದ್ದು ಯಾವುದೋ ಒಂದು ಧರ್ಮಕ್ಕೆ ಸೇರಬಯಸುವರೆಂದು ತೋರುತ್ತದೆ. ಇಂಥವರು ಹಾಗೆ ಅನ್ನುವುದು ಯೋಗ್ಯವಾಗಿಯೇ ಇದೆ. ಲೇಖನದ ಮಧ್ಯ ಮಧ್ಯದಲ್ಲಿ ಇಂಗ್ಲಿಷ್ ವಾಕ್ಯಗಳನ್ನು ಉಪಯೋಗಿಸಿದ ಆಂಗ್ಲಭಾಷಾ ವಿಶಾರದರಾದ ಈ ಪಾಟೀಲರು. ಪುರುಷೋತ್ತಮದಾಸ ಠಾಕೂರದಾಸ ಎಂಬುವರು "ಧರ್ಮೋಪದೇಶಕರನ್ನೇ ಭಾರತಖಂಡದಿಂದ ಅಟ್ಟಬೇಕು. ಅವರ ಕುಂಠವನ್ನು ಚಂಡಾಡಬೇಕು.' ಎಂದು ಬರೆದಿರುವರಂತೆ! ಆ ವಾಕ್ಯವು ಈ ಪಾಟೀಲರಿಗೆ ಮಹಾ ಪ್ರಮಾಣವಾಗಿದ್ದಂತೆ ತೋರುತ್ತದೆ. ಮೇಲ್ಕಂಡವರು ಇಂಥ ವಾಕ್ಯಗಳನ್ನು ಅಧರ್ಮೋಪದೇಶಕರಲ್ಲಿ ಉಪಯೋಗಿಸಿರಬಹುದೇ ಹೊರತು ಧರ್ಮೋಪದೇಶಕರಲ್ಲಿ ಉಪಯೋಗಿಸಿರಲಾರರು. ಅಧರ್ಮೋಪದೇಶಕರಿಗೆ ಈ ತೆರದ ಮಾತುಗಳನ್ನು ಅವರು ಉಪಯೋಗಿಸಿದ್ದಲ್ಲಿ ಅವರಿಗೆ ಬುದ್ಧಿವಂತರೆನ್ನಬಹುದು. ಧರ್ಮೋಪದೇಶಕರಿಗೆ ಈ ಪಾಟೀಲರ ಅಭಿಪ್ರಾಯದಂತೆ ಉಪಯೋಗಿಸಿದ್ದಲ್ಲಿ ಅವರಿಗೆ ಯಾವ ಪದವಿಯನ್ನು ಕೊಡಬೇಕೆನ್ನುವುದನ್ನು ವಾಚಕರೇ ಊಹಿಸಬಹುದು. ಧರ್ಮದ ನಿಜಸ್ವರೂಪವನ್ನು ತಿಳಿಯದ ಈ ಪಾಟೀಲರು ಯಾವ ವರ್ತನದವರಿರಬಹುದೆಂಬ ವಿಷಯವು ವಾಚಕರಿಗೆ ವೇದ್ಯವಾಗದೆ ಇರಲಾರದು. ಪಾಟೀಲರ ಬುದ್ಧಿ ಪಟುತ್ವಕ್ಕೆ ಪರಿಯಿಲ್ಲ ಅಂದಮೇಲೆ ಇವರ ಪಟಾಟೋಪಕ್ಕೆ ಪರಿಯೇ?

ಜಿ. ಬಸಪ್ಪ.

ಪಂಚಾಚಾರ್ಯಪ್ರಭಾ

೧೯೨೭ ನೇ ಅಕ್ಟೋಬರ್ ತಾ|| ೩೧ನೇ ಸೋಮವಾರ

ಗುರು

"ಮುಕ್ತಿಮೂಲಂ ಗುರೋಃ ಕೃಪಾ' ಎಂಬ ಗುರುಗೀತಾ ವಾಕ್ಯದಂತೆ ಮುಕ್ತಿಯು ದೊರೆಯಬೇಕಾದರೆ ಮುಖ್ಯವಾಗಿ ಗುರುಕೃಪೆಯೇ ಬೇಕಾಗುತ್ತದೆ. ಗುರುಕೃಪೆಯಿಲ್ಲದೆ ಮುಕ್ತಿಯು ಯಾವಕಾಲಕ್ಕೂ ಕೂಡ ಸಾಧ್ಯವಿಲ್ಲವೆನ್ನುವುದು ಪ್ರತಿಯೊಂದು ಮತದವರ ಸಿದ್ಧಾಂತವಿರುತ್ತದೆ. ಮನುಷ್ಯಜನ್ಮವನ್ನು ಧಾರಣ ಮಾಡಿದ ಮೇಲೆ ಪ್ರತಿಯೊಬ್ಬರೂ ಮುಕ್ತಿಯ ಮಾರ್ಗವನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಳ್ಳುವುದು ಅವರ ಆದ್ಯಕರ್ತವ್ಯವಾಗಿರುವುದು. ಅನಿತ್ಯಗಳಾದ ಧನಕನಕವಸ್ತು ವಾಹನಾದಿಗಳ ಸುಖವನ್ನು ಬಯಸದೆ ನಿತ್ಯಸುಖಸ್ವರೂಪವಾದ ಮೋಕ್ಷವನ್ನು ಬಯಸುವುದೇ ಸಜ್ಜನರ ಲಕ್ಷಣವಾಗಿದೆ. ಈ ಕಾಲದಲ್ಲಿ ಜನರು ನಿತ್ಯಸುಖಸ್ವರೂಪವಾದ ಮೋಕ್ಷದ ಕಡೆಗೆ ಲಕ್ಷ್ಯವನ್ನೀಯದೆ ಕೇವಲ ಅನಿತ್ಯಸುಖರೂಪಿಗಳಾದ ಪರಿಮಿತವಾದ ವಿಷಯಗಳಲ್ಲಿ ಲಕ್ಷ್ಯವನ್ನಿಟ್ಟು ದುಃಖಕ್ಕೀಡಾಗುತ್ತಿರುವುದನ್ನು ನೋಡಿದರೆ ವಿಷಾದವೆನಿಸುತ್ತದೆ. ಆದುದರಿಂದ ಪ್ರತಿಯೊಬ್ಬರೂ ನಿತ್ಯಾನಿತ್ಯ ವಿಚಾರವನ್ನು ಮಾಡಿ ನಿತ್ಯಸುಖವನ್ನು ಹೊಂದುವ ಮಾರ್ಗವನ್ನೇ ಹಿಡಿದು ವರ್ತಿಸುವುದು ಶ್ರೇಯಸ್ಕರವಾಗಿದೆ. ಮೋಕ್ಷಾಪೇಕ್ಷಿಗಳು ಗುರುಸೇವೆಯಲ್ಲಿ ತತ್ಪರರಾಗಿ ಬ್ರಹ್ಮವಿದ್ಯೆಯನ್ನು ಸಂಪಾದಿಸಬೇಕು. ಅಮೂಲ್ಯವಾದ ಆ ಬ್ರಹ್ಮವಿದ್ಯೆಯು ಲಭಿಸಬೇಕಾದರೆ ಗುರುಸೇವೆಯೇ ಮೂಲಕಾರಣವಾಗಿದೆ. ಆದುದರಿಂದಲೇ ಶ್ರುತಿಯು "ದ್ವಾದಶವರ್ಷ ಶುಶ್ರೂಷಾ ಪೂರ್ವಕಂ ಬ್ರಹ್ಮಚರ್ಯಂ ನಿರ್ವರ್ತ್ಯ" ಎಂದು ಸಾರುತ್ತದೆ. ಈ ಶ್ರುತಿತತ್ವವನ್ನೇ ಅವಲಂಬಿಸಿ ಪೂರ್ವಕಾಲದಲ್ಲಿ ಸಮಸ್ತರೂ ಗುರುಸೇವೆಯನ್ನು ಮಾಡಿ ಧನ್ಯಜೀವಿಗಳಾಗುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಆ ಗುರುಸೇವೆಗೆ ಜನರು ಬಹಿಷ್ಕಾರವನ್ನೇ ಹಾಕಿಬಿಟ್ಟಿದ್ದಾರೆ. ಅದರಲ್ಲೂ ಅನ್ಯಸಮಾಜಗಳಲ್ಲಿ ಅಲ್ಪಸ್ವಲ್ಪಮಟ್ಟಿಗಾದರೂ ಗುರುಭಕ್ತಿಯು ಹೇಗೋ ನಿಂತಿರುತ್ತದೆ. ಆದರೆ ವೀರಶೈವಸಮಾಜದಲ್ಲಿ ಗುರುಭಕ್ತಿಯೆನ್ನುವುದು ಬೇರುಸಹಿತವಾಗಿಯೇ ಕಿತ್ತುಹೋಗಿರುವದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಸಮಾಜದಲ್ಲಿರತಕ್ಕ ಜನರಿಗೆ ನಾವು ಯಾರು? ನಮ್ಮ ಮತವಾವುದು? ನಮ್ಮ ಮತದ ಸಿದ್ಧಾಂತವೇನು? ಮತಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಗ್ರಂಥಗಳಾವುವು? ನಮ್ಮ ಗೋತ್ರಸೂತ್ರ ಆಚಾರಗಳಾವುವು? ನಮ್ಮ ಮತದ ನಿತ್ಯನೈಮಿತ್ತಿಕ ಕರ್ಮಗಳಾವುವು? ವಿಧಿನಿಷೇಧಗಳಾವುವು? ಈ ಪವಿತ್ರ ಮತವು ಯಾರಿಂದ ಸ್ಥಾಪಿಸಲ್ಪಟ್ಟಿತು? ಆ ಮಹನೀಯರು ಯಾರು? ಅವರ ಪೀಠಗಳು ಯಾವಸ್ಥಳಗಳಲ್ಲಿವೆ? ಆ ಮಹಿಮರು ಭೂಲೋಕದಲ್ಲಿ ಯಾವರೀತಿಯಿಂದ ಅವತರಿಸಿದರು? ಇವರು ಯಾವಯಾವ ಲೀಲೆಗಳನ್ನು ಮಾಡಿದರು? ಇವೇ ಮೊದಲಾದ ವಿಷಯಗಳ ಗಂಧವೇ ಸೋಂಕಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಮತದ ಕೆಲವು ಮಹಾಶಯರು ಧರ್ಮಶಾಸ್ತ್ರಾನುಸಾರವಾಗಿ ಗುರುಗಳಲ್ಲಿ ಭಕ್ತಿಯನ್ನಿಡದೆ ಅಥವಾ ಉದಾಸೀನವೃತ್ತಿಯಿಂದಾದರೂ ಇರದೆ ಗುರುಗಳನ್ನೇ ಮನಸ್ಸಿಗೆ ಬಂದಂತೆ ಹೀಯಾಳಿಸಲಿಕ್ಕೆ ಹತ್ತಿರುವುದನ್ನು ನೋಡಿದರೆ ಯಾರಿಗೆ ತಾನೇ ಆಶ್ಚರ್ಯವೆನಿಸಲಿಕ್ಕಿಲ್ಲ? ಗುರು ತಿರಸ್ಕಾರರೂಪವಾದ ಮಾರ್ಗದಲ್ಲಿ ವರ್ತಿಸುವುದು ತಮಗೆ ಸರ್ವಥಾ ಭೂಷಣವಲ್ಲವೆಂದು ಈ ಮಹಾಶಯರು ತಿಳಿದು ಅದರಂತೆ ವರ್ತಿಸುವುದು ಭೂಷಣವಾಗಿದೆ. ವೀರಶೈವಮತಸ್ಥಾಪನಾಚಾರ್ಯರ ಯೋಗ್ಯತೆಯು ಇವರಿಗೆ ಗೊತ್ತಿಲ್ಲದಿರುವುದರಿಂದಲೇ ಹಾಗೆ ಆಚರಿಸುವಂತೆ ತೋರುತ್ತದೆ. ಈ ಮತಾಚಾರ್ಯರ ಯೋಗ್ಯತೆಯು ಘನವಾದದ್ದಿರುತ್ತದೆ. ಉಳಿದ ಮತಾಚಾರ್ಯರು ಜನನೀ ಜನಕರ ಗರ್ಭದಿಂದವತರಿಸಿದ್ದರೆ ಈ ಮತಾಚಾರ್ಯರು ಸಾಕ್ಷಾಲ್ಲಿಂಗಮೂರ್ತಿಯ ಗರ್ಭದಿಂದವತರಿಸಿರುವರು. ಉಳಿದ ಮತಾಚಾರ್ಯರು ಸರ್ವಸಾಧಾರಣರಾದ ಜನರಿಗೆ ಉಪದೇಶವನ್ನು ಮಾಡಿದ್ದರೆ ಈ ಮತಾಚಾರ್ಯರು ಲೋಕಪ್ರಸಿದ್ಧರಾದ ಅಗಸ್ತ್ಯ, ದಧೀಚಿ, ದೂರ್ವಾಸ, ವ್ಯಾಸ, ಸಾನಂದಾದಿ ಮಹರ್ಷಿಪುಂಗವರಿಗೆ ಉಪದೇಶಿಸಿರುವರು. ಇವರು ಮಾಡಿರುವ ಲೀಲೆಗಳಂತೂ ಅತ್ಯದ್ಭುತಗಳಾಗಿವೆ. ಈ ವಿಷಯವು ಆರಾಧ್ಯ ಚರಿತ್ರವೆಂಬ ಸಂಸ್ಕೃತಗ್ರಂಥದಲ್ಲಿಯೂ ಪಂಚಾಚಾರ್ಯ ಪುರಾಣ, ಚತುರಾಚಾರ್ಯ ಪುರಾಣಗಳೆಂಬ ಕನ್ನಡ ಗ್ರಂಥಗಳಲ್ಲಿಯೂ ವಿಶದವಾಗಿ ವರ್ಣಿಸಲ್ಪಟ್ಟಿವೆ. ಅಲ್ಲದೆ ಇಪ್ಪತ್ತೆಂಟು ಶಿವಾಗಮಗಳಂತೂ ಇವರ ಸರ್ವ ವಿಷಯಗಳನ್ನು ನಾನಾ ರೀತಿಯಾಗಿ ಕೊಂಡಾಡಿರುತ್ತವೆ. ಲೋಕ ವಿಖ್ಯಾತರಾದ ಶ್ರೀ ಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರ ಲಿಂಗವು ಪ್ರಾಪ್ತವಾಗಬೇಕಾದರೂ, ಜಗದ್ವಿಖ್ಯಾತನಾದ ವಿಭೀಷಣ ಚಕ್ರವರ್ತಿಯ ಮನೋರಥವು ಪೂರ್ತಿಯಾಗಬೇಕಾದರೂ, ಶ್ರೀ ರೇಣುಕರೇ ಕಾರಣೀಭೂತರಾಗಲಿಲ್ಲವೇ? ಅಷ್ಟಾದಶ ಮಹಾಪುರಾಣಗಳನ್ನು ಬರೆದ ವ್ಯಾಸ ಮಹರ್ಷಿಗೆ ಶಿವದೀಕ್ಷಾಸಂಪನ್ನತೆಯಾಗಬೇಕಾದರೆ ಶ್ರೀ ಘಂಟಾಕರ್ಣ ಶಿವಾಚಾರ್ಯರೇ ಕಾರಣೀಭೂತರಾಗಲಿಲ್ಲವೇ? ಇಂಥ ಇಂಥ ಜಗನ್ಮಾನ್ಯರಾದ ಯತಿಪುಂಗವರೂ ಚಕ್ರವರ್ತಿಗಳೂ ಈ ಮತಾಚಾರ್ಯರ ಅನುಗ್ರಹವನ್ನು ಪಡೆದು ಧನ್ಯರಾಗಿರುವಾಗ ಅವರಿಂದ ಸ್ಥಾಪಿಸಲ್ಪಟ್ಟ ಮತದಲ್ಲಿಯೇ ಜನಿಸಿರುವ ನಾವುಗಳು ಸದಾ ಅವರ ಧ್ಯಾನದಲ್ಲಿ ತತ್ಪರರಾಗಿ ಅವರ ಅನುಗ್ರಹವನ್ನು ಸಂಪಾದಿಸಿಕೊಳ್ಳುವುದು ಅತ್ಯಂತ ಭೂಷಣವಲ್ಲವೇ? ಈ ಅಗಾಧವಾದಂಥ ಆಚಾರ್ಯರ ಸಂಬಂಧಿ ಯಾವತ್ತೂ ವಿಷಯಗಳನ್ನು ಪೂರ್ಣವಾಗಿ ಆಲೋಚಿಸಿ ಆ ಮಹನೀಯರಲ್ಲಿ ಸ್ಥಿರವಾದ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕೆಂದೂ, "ಮುಕ್ತಿಮೂಲಂ ಗುರೋಃ ಕೃಪಾ" ಎಂಬ ಗುರುಗೀತಾ ವಾಕ್ಯವನ್ನು ಸಾರ್ಥಕವನ್ನಾಗಿ ಮಾಡಬೇಕೆಂದೂ ಹಾರೈಸುತ್ತೇವೆ

ಒಳದೇಶದ ವೃತ್ತಾಂತಗಳು.

ಕಳೆದ ಸೋಮವಾರ 2 ಗಂಟೆಯಲ್ಲಿ ಆಕಾಶಯಾನಗಳು ಬಳ್ಳಾರಿಯಿಂದ ಹೊರಟು, ಅದೇ ಸಾಯಂಕಾಲ 5 ಗಂಟೆಗೆ ಬೆಂಗಳೂರನ್ನು ತಲುಪಿ ಅಲ್ಲಿಯೇ ಇರುತ್ತವೆ.

ನ್ಯಾಯವಿಧಾಯಕಸಭೆಯ ಮೀಟಿಂಗು ಡಿಸಂಬರ್ ತಾ|| 5 ನೆ ಸೋಮವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸು ಸಭಾಮಂದಿರದಲ್ಲಿ ಪ್ರಾರಂಭವಾಗುತ್ತದೆ.

ಕಪಿನಿ ಮತ್ತು ಭದ್ರಾನದಿಗಳಿಗೆ ಅಣೆಯನ್ನು ಕಟ್ಟಿ ಕೃಷ್ಣರಾಜಸಾಗರದಂತೆ ಎರಡು ಭಾರೀ ಜಲಾಶಯಗಳನ್ನು ನಿರ್ಮಿಸುವುದಾಗಿ ಮೈಸೂರು ಸರ್ಕಾರದವರು ಯೋಚಿಸುತ್ತಾರೆ.

ಸರ್ ಎಂ. ವಿಶ್ವೇಶ್ವರಯ್ಯನವರು ಓಗಲೆವಾಡಿಯಲ್ಲಿರುವ ಗಾಜಿನ ಕಾರ್ಖಾನೆಗೆ ಹೋಗಿ ಅಲ್ಲಿ ನಡೆದಿರತಕ್ಕಂಥ ಯಾವತ್ತೂ ಕಾರ್ಯಕ್ರಮಗಳನ್ನು ನೋಡಿ ಸಂತುಷ್ಟಚಿತ್ತರಾದರೆಂದು ತಿಳಿಯಬರುತ್ತದೆ.

ಮೈಸೂರು ಡಿ|| ಬೋರ್ಡ್ ಮೀಟಿಂಗಿನಲ್ಲಿ ಮೇಲುಕೋಟೆ ಮತ್ತು ಅದರ ಸುತ್ತಲೂ ಇರುವ ಊರುಗಳಲ್ಲಿ ಕೈರಾಟೆಯ ಕೈಗಾರಿಕೆ ಕೆಲಸವನ್ನು ಅಭಿವೃದ್ಧಿಪಡಿಸುವುದಕ್ಕಾಗಿ 500 ರೂ. ಗಳ ಗ್ರಾಂಟನ್ನು ಕೊಟ್ಟಿರುವರು.

ಹೋದವರ್ಷದಂತೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಈ ವರ್ಷದ ಡಿಸಂಬರಿನಲ್ಲೂ ಒಂದು ಸಕಲ ಕಲಾವಸ್ತು ಪ್ರದರ್ಶನವನ್ನು ನಡೆಯಿಸುವರೆಂದು ಕೇಳುತ್ತೇವೆ; ಮತ್ತು ಅವರು ಏರ್ಪಡಿಸಿರುವ ಲಾಟರಿಗೆ ಈಗಾಗಲೇ 30,000 ರೂಪಾಯಿಗಳವರೆಗೆ ವಸೂಲಾಗಿರುವುದಾಗಿ ತಿಳಿಯಬರುತ್ತದೆ

ಬರುವ ನವಂಬರ್ ತಾ|| 7 ರಲ್ಲಿ ಬೊಂಬಾಯಿ ಗವರ್ನರ್ ದಂಪತಿಗಳು ನಮ್ಮ ಸೀಮೆಗೆ ಬಂದು, ಗೆರಸೊಪ್ಪ ಜಲಪಾತ, ಭದ್ರಾವತಿ ಕಬ್ಬಿಣದ ಕಾರ್ಖಾನೆ ಇವುಗಳನ್ನು ನೋಡಿಕೊಂಡು ರಾಜಧಾನಿಗೆ ಬಂದು, ಕನ್ನಂಬಾಡಿ, ಶ್ರೀರಂಗಪಟ್ಟಣ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಸ್ವಸ್ಥಾನಕ್ಕೆ ತೆರಳುವವರಿದ್ದಾರೆ.

ರಾಜಧಾನಿಯ ಪ್ರಸಿದ್ಧ ವ್ಯಾಪಾರಿಗಳಾದ ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು ಕಳುಹಿಸಿರುವ 1928 ನೆಯ ಇಸವಿಯ ಮೂರು ತರಹದ ಸಚಿತ್ರ ಕ್ಯಾಲೆಂಡರುಗಳನ್ನು ಅತ್ಯಾನಂದದಿಂದ ಸ್ವೀಕರಿಸಿರುತ್ತೇವೆ. ಇವುಗಳಲ್ಲಿ ರವಿವರ್ಮ ಕಂಪನಿಯಲ್ಲಿ ತಯಾರಾದ ಪಂಚಮುಖ ಪರಮೇಶ್ವರನ ಚಿತ್ರವು ಬಹಳ ಮನೋಹರವಾಗಿರುವುದು. ಬೇಕಾದವರು 5 ಆಣೆಗಳನ್ನು ಕಳುಹಿಸಿ ಈ ಮೂರೂ ತರಹದ ಕ್ಯಾಲೆಂಡರುಗಳನ್ನು ಪಡೆಯಬಹುದು.

ಮ|| ರಾ|| ದಾವಣಗೆರೆ ವಾಸಿಗಳಾದ ಶ್ರೀಮಂತ ಮಾಗಾನಹಳ್ಳಿ ನಂಜುಂಡಪ್ಪನವರ ಧರ್ಮಪತ್ನಿಯವರಾದ ಸೌ|| ಚಂದ್ರಮ್ಮನವರು ಶಿವೈಕ್ಯರಾದ ವಿಷಯವನ್ನು ಕೇಳಿ ಅತ್ಯಂತ ವಿಷಾದಿಸುತ್ತೇವೆ. ಈ ಪತಿವ್ರತಾಶಿರೋಮಣಿಯ ಗುಣಗಳು ಅತಿ ಮಹತ್ವಪೂರ್ಣವುಗಳಾಗಿದ್ದವು. ಅವುಗಳನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ. ಮ|| ರಾ|| ನಂಜುಂಡಪ್ಪನವರು ದುಃಖಭಾಗಿಗಳಾಗಿರುವಂತೆ ನಾವೂ ಕೂಡ ದುಃಖಭಾಗಿಗಳಾಗಿದ್ದೇವೆ. ಪರಶಿವನು ಈ ಪತಿವ್ರತೆಯ ಆತ್ಮಕ್ಕೆ ಶಾಂತಿಯನ್ನೀಯಲಿ.

ಈ ತಿಂಗಳ ತಾ|| 13 ನೆಯ ಗುರುವಾರ ಸಾಯಂಕಾಲ ಮೈಸೂರು ವಿಶ್ವವಿದ್ಯಾನಿಲಯದ ಸಂಘದವರು ವಿಶ್ವವಿದ್ಯಾಲಯದ ರಜಿಸ್ಟ್ರಾರರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ಮಹಾಕವಿ, ಕವಿಚಕ್ರವರ್ತಿ ರನ್ನನ ಸ್ಮಾರಕೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಸಮಾರಂಭಕ್ಕೆ ಅನೇಕ ಸರ್ಕಾರೀ ಅಧಿಕಾರಿಗಳೂ, ಸ್ಥಳಪರಸ್ಥಳಗಳ ದೊಡ್ಡ ಮನುಷ್ಯರುಗಳೂ, ವಿದ್ವಾಂಸರುಗಳೂ ಕಾಲೇಜಿನ ವಿದ್ಯಾರ್ಥಿಗಳೂ ಲೆಕ್ಚರ್‌ಹಾಲ್ ಕಿಕ್ಕಿರಿಯುವಂತೆ ಸೇರಿದ್ದರು. ಕೆಲವರ ಪದ್ಯಪಠನ ಮತ್ತು ಭಾಷಣಗಳಾದ ನಂತರ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಂದ ಸಂಗ್ರಹಿಸಲ್ಪಟ್ಟಿದ್ದ ರನ್ನನ ಗದಾಯುದ್ಧ ನಾಟಕವನ್ನು ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿ ಪ್ರೇಕ್ಷಕರಿಗೆ ಮಹದಾನಂದವನ್ನುಂಟುಮಾಡಿದರು. ಈ ಮಹಾಸಮಾರಂಭವನ್ನು ಉತ್ಸಾಹದಿಂದ ಪ್ರಾರಂಭಿಸಿ ನಿರ್ವಿಘ್ನತೆಯಿಂದ ಪೂರೈಸಿದ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರೂ, ಅವರ ಛಾಯಾನುವರ್ತಿಗಳಾದ ಶ್ರೀಮಾನ್ ಎಸ್.ವಿ. ರಂಗಣ್ಣ, ಎಂ.ಎ., ಯವರೂ ಸಕಲ ಕರ್ನಾಟಕರ ಧನ್ಯವಾದಕ್ಕೂ ಕೃತಜ್ಞತೆಗೂ ಪಾತ್ರರಾಗಿರುತ್ತಾರೆಂದು ಹೇಳಿ ಪ್ರೇಕ್ಷಕರೆಲ್ಲರೂ ಪ್ರಚಂಡವಾದ ಕರತಾಡನಗಳಿಂದ ತಮಗಾದ ಆನಂದವನ್ನು ಪ್ರದರ್ಶಿಸಿದರು.

ವರ್ತಮಾನಸಂಗ್ರಹ.

ಜಪಾನಿನಲ್ಲಿ ಜ್ವಾಲಾಮುಖಿಯು ಎದ್ದು ಎಪ್ಪತ್ತು ಮೈಲುಗಳವರೆಗೆ ಸರ್ವವೂ ಸುಟ್ಟು ಭಸ್ಮವಾಗಿ ಬೂದಿಯು ಹಾರುತ್ತಿದೆಯಂತೆ!

ರಾಹೋರಿಪಟ್ಟಣದಲ್ಲಿ ಮೇ ತಿಂಗಳಲ್ಲಿ ನಡೆದ ಖೂನಿ ಕೇಸಿನಲ್ಲಿ ಇಬ್ಬರು ಮುಸಲ್ಮಾನರಿಗೆ ಮರಣಶಿಕ್ಷೆಯು ವಿಧಿಸಲ್ಪಟ್ಟಿತು

ಪೇಶಾವರ ಪಟ್ಟಣದಲ್ಲಿ ಒಂದು ಮನೆಗೆ ಬೆಂಕಿಹತ್ತಿ ಅಗ್ನಿಜ್ವಾಲೆಯು ತೀವ್ರವಾಗಿ ಬೆಳೆಯುತ್ತಾ ನಡೆದು ಒಂದು ಸಾವಿರ ಮನೆಗಳು ಸುಟ್ಟು ಬೂದಿಯಾದವು.

ಮದರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಮುಂದಿನ 20 ವರ್ಷದ ಒಳಗಾಗಿ ಮದ್ಯಪಾನವನ್ನು ನಿಲ್ಲಿಸಬೇಕೆಂಬ ಠರಾವು ಬಹುಮತದಿಂದ ಅನುಮೋದಿಸಲ್ಪಟ್ಟಿತು.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಜನರಲ್ ನೀಲನ ಪ್ರತಿಮೆಯನ್ನು ಸ್ಥಳಾಂತರಮಾಡಬೇಕೆಂದು ತಂದಿದ್ದ ಠರಾವು ಬಹುಮತದಿಂದ ಸೋತುಹೋಯಿತು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ತರಗತಿಯಲ್ಲಿ ಅಭ್ಯಾಸಮಾಡುತ್ತಿದ್ದ ಕಂಠಯ್ಯನೆಂಬ ವಿದ್ಯಾರ್ಥಿಯು ಅಫೀಮು ಸೇವನೆಯಿಂದ ಮೃತಪಟ್ಟನಂತೆ!

ಬುಂದಿರಾಜ್ಯದಲ್ಲಿ ಮಹಾರಾಜರವರು ತಮ್ಮ ದಿವಾನರನ್ನೂ ಇತರ ದೊಡ್ಡ ಅಧಿಕಾರಿಗಳನ್ನೂ ಲಂಚವನ್ನು ತೆಗೆದುಕೊಂಡರೆಂಬ ಆರೋಪದಮೇಲೆ ಕೆಲಸದಿಂದ ವಜಾಮಾಡಿರುತ್ತಾರೆ.

ಲಾಹೋರ್ ಪಟ್ಟಣದಲ್ಲಿ ನಾನಕ್‌ಚಂದ್ ಎಂಬವನನ್ನು ಒಬ್ಬ ಮುಸಲ್ಮಾನನು ಚಾಕುವಿನಿಂದ ಇರಿದು ಕೊಂದುಹಾಕಿ ಪರಾರಿಯಾದನು. ಫ್ರೋಜಾ ಎಂಬ ಹೆಸರಿನ ಮುಸಲ್ಮಾನನ ಮೇಲೆ ಅನುಮಾನವಿರುವದಂತೆ!

ಸ್ವಾಮಿಶ್ರದ್ಧಾನಂದರವರನ್ನು ಕೊಲೆಮಾಡಿದ ಅಬ್ದುಲ್ ರಶೀದನ ಅಪೀಲು ಪ್ರಿವಿ ಕೌನ್ಸಿಲ್‌ನಲ್ಲಿ ಈ ತಿಂಗಳು ಹದಿನೆಂಟರಲ್ಲಿ ಚರ್ಚೆಯಾಗಿ ಕೆಳ ಕೋರ್ಟಿನವರ ತೀರ್ಮಾನದಂತೆಯೇ ಇವನಿಗೆ ಫಾಶೀ ಶಿಕ್ಷೆಯು ವಿಧಿಸಲ್ಪಟ್ಟಿತೆಂದು ತಿಳಿಯಬರುತ್ತದೆ.

ಮಲಬಾರ ದಂಗೆಯಲ್ಲಿ ಮುಖ್ಯಾಪರಾಧಿಯಾದ ಮೊಯುದ್ದೀನ್ ಕುನಿ ಎಂಬವನು ಏಳುವರ್ಷಗಳವರೆಗೆ ಗುಪ್ತವಾಗಿ ಸಂಚರಿಸುತ್ತಿದ್ದನು. ಈ ಅಪರಾಧಿಯು ಮೊನ್ನೆ ಮೊನ್ನೆ ಸಿಕಂದರಾಬಾದದಲ್ಲಿ ಹಿಡಿಯಲ್ಪಟ್ಟು ಕಾಲಿಕತದಲ್ಲಿ ಮರಣಶಿಕ್ಷೆಯನ್ನನುಭವಿಸಿದನು.

ಮಿಸ್ ಮೇಯೋ ಎಂಬ ಸ್ತ್ರೀಯಳು ಬರೆದ ಪುಸ್ತಕದ ವಿಷಯದಲ್ಲಿ ಪಾಶ್ಚಿಮಾತ್ಯರ ಚಿತ್ತವೂ ಕೂಡ ಕಲುಷಿತವಾಗಹತ್ತಿದೆ. ಈ ಪುಸ್ತಕದ ಪ್ರತೀಕಾರಕ್ಕೋಸ್ಕರ ಮಿ|| ಆಂಡ್ರೂಜರವರು ವಿದೇಶದ ಪತ್ರಿಕಗಳಲ್ಲಿ ಲೇಖಗಳನ್ನು ಬರೆಯಲುಪಕ್ರಮಿಸಿದ್ದಾರೆ.

ಅಫ್ಘಾನಿಸ್ಥಾನದ ಅಮೀರರವರು ಬರುವ ಡಿಸೆಂಬರ್ 12 ನೆಯ ತಾ|| ದಿವಸ ಕಾಬೂಲಿನಿಂದ ಹೊರಟು ಹಿಂದುಸ್ಥಾನದಮಾರ್ಗವಾಗಿ ಕರಾಚಿಗೆ ಬಂದು ಅಲ್ಲಿಂದ ಹಡಗು ಹತ್ತಿ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಅಂಗೋರಾ, ಜರ್ಮನ್ ದೇಶಗಳಲ್ಲಿ ಸಂಚರಿಸುವವರಿದ್ದಾರೆ.

ಬೊಂಬಾಯಿ ಅಧಿಪತ್ಯದಲ್ಲಿ ಐದುವರ್ಷ ವಯಸ್ಸಿನೊಳಗೆ 74,000 ವಿವಾಹಿತ ಬಾಲಕರಿರುವರಂತೆ! ಇವರಲ್ಲಿ 3,574 ಜನ ವಿಧವೆಯರೂ ಒಂದು ವರ್ಷ ಪ್ರಾಯದ 2,000 ದಂಪತಿಗಳೂ ಇರುವರಂತೆ! ಐದು ವರ್ಷದ ಮೇಲೆ ಹತ್ತು ವರ್ಷದ ಒಳಗೆ ಮೂರುವರೆ ಲಕ್ಷ ದಂಪತಿಗಳಿರುವರಂತೆ!

ಸ್ವಾಮಿ ಸತ್ಯಾನಂದರವರನ್ನು ಚೂರಿಯಿಂದ ತಿವಿದ ಅಬ್ದುಲ್ ಅಜೀಜನಿಗೆ ಹದಿನಾಲ್ಕು ವರ್ಷಗಳವರೆಗೆ ಕಠಿಣಶಿಕ್ಷೆಯೂ ಮೂರುತಿಂಗಳುಗಳವರೆಗೆ ಕತ್ತಲಕೋಣೆಯ ವಾಸವೂ ಈ ಶಿಕ್ಷೆಯು ಮುಗಿದನಂತರ 50,000 ರೂಪಾಯಿಗಳ ಜಾಮೀನೂ, ಜಾಮೀನುಕೊಡದಿದ್ದರೆ ಮೂರು ವರ್ಷಗಳ ಸಾದಾ ಶಿಕ್ಷೆಯೂ ವಿಧಿಸಲ್ಪಟ್ಟಿತು.

ಬಹುಜನಗಳು ತನ್ನನ್ನು ವಿವಾಹವಾಗಲು ಇಚ್ಛಿಸಿದಕಾರಣ ಸಾರ್‌ಡಿನೀಯಾದೇಶದ ತರುಣಿಯೊಬ್ಬಳು ಒಂದು ಲಾಟರಿಯನ್ನೇರ್ಪಡಿಸಿದಳು. ಸಾವಿರಾರು ಯುವಕರು ಟಿಕೇಟುಗಳನ್ನು ಕೊಂಡುಕೊಂಡರು. ಲಾಟರಿಯಲ್ಲಿ ಮೊದಲನೆಯ ನಂಬರನ್ನು ಪಡೆದ ಯುವಕನನ್ನು ಆ ಕುಮಾರಿಯು ವರಿಸಿದಳು. ವಿಚಿತ್ರವಿವಾಹವಿದು!

ಹೈದರಾಬಾದಿನಲ್ಲಿ ಹೊಸದಾಗಿ ನಿಯಮಿಸಲ್ಪಟ್ಟ ಇಂಗ್ಲಿಷ ಅಧಿಕಾರಿಗಳು ರಾಜಭಾಷೆಯಾದ ಉರ್ದು ಭಾಷೆಯನ್ನು ತಿರಸ್ಕರಿಸಿ ಆಂಗ್ಲಭಾಷೆಯನ್ನು ಪ್ರತಿಷ್ಠಿಸುತ್ತಿರುವರು. "ರಹಬರಿಡೆಕ್ಕನ್" ಎಂಬ ಸ್ಥಳೀಯ ವರ್ತಮಾನಪತ್ರಿಕೆಯು ಇವರ ಈ ವರ್ತನವನ್ನು ಪ್ರತಿಭಟಿಸಿ ಎಲ್ಲಾ ಅಧಿಕಾರಿಗಳೂ ಉರ್ದುಭಾಷೆಯನ್ನೇ ಕಲಿಯಬೇಕೆಂದು ಉಪದೇಶಿಸಿರುವುದು.

ಮುಂಬೈ ಪಟ್ಟಣದ ಪೋಲೀಸ್ ಖಾತೆಯಲ್ಲಿ ಸಬ್‌ಇನ್ಸ್‌ಪೆಕ್ಟರ ಸ್ಥಾನಕ್ಕೆ ಉಮೇದುವಾರರಾಗತಕ್ಕವರು ನವಂಬರ್ 7 ನೆಯ ತಾರೀಖಿನ ಒಳಗಾಗಿ ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್ ಮುಂಬೈ ಈ ಅಡ್ರೆಸ್ಸಿನ ಮೇಲೆ ಅರ್ಜಿ ಮಾಡಿಕೊಳ್ಳಬೇಕು. ಉಮೇದುವಾರರು ನಾಸಿಕದಲ್ಲಿರುವ ಪೋಲೀಸ್ ಟ್ರೇನಿಂಗ ಸ್ಕೂಲಿನಲ್ಲಿ ಒಂದುವರೆ ವರ್ಷ ಶಿಕ್ಷಣವನ್ನು ಪಡೆಯಬೇಕಾಗುತ್ತದೆ.

ಇಜಡೋರ್ ಡಂಕನ್ ಎಂಬ ನರ್ತಕಿಯೊಬ್ಬಳು ಮೋಟಾರಿನಲ್ಲಿ ವಿಹರಿಸುತ್ತಿರುವಾಗ ಆಕೆಯ ಕೊರಳು ಪಟ್ಟಿಯು (Neck tie) ಉದ್ದವಾಗಿದ್ದು ಗಾಳಿಯಲ್ಲಿ ಹಾರಾಡುತ್ತಾ ಮೋಟಾರಿನ ಚಕ್ರಕ್ಕೆ ಸುತ್ತಿಕೊಂಡು ಆಕೆಯ ಕೊರಳನ್ನು ಬಿಗಿ, ಮೋಟಾರಿನಿಂದ ಕೆಳಕ್ಕುರುಳಿಸಿ ಕೊಂದುಬಿಟ್ಟಿತು. ಪಾಶ್ಚಾತ್ಯ ನಾಗರೀಕತೆಯನ್ನನುಕರಿಸುತ್ತಿರುವ ನಮ್ಮ ಯುವಕ ಯುವತಿಯರಿಗಿದೊಂದು ಎಚ್ಚರಿಕೆಯಾಗಿದೆ.

ಹಿಂದುಸ್ಥಾನದಲ್ಲಿ ಉಂಟಾಗುತ್ತಿರುವ ಹಿಂದೂ ಮಹಮ್ಮದೀಯರ ಕಲಹಗಳನ್ನು ತಪ್ಪಿಸಿ ಶಾಂತತೆಯನ್ನೂ ಜಾತಿಜಾತಿಗಳಲ್ಲಿ ಏಕಮತ್ಯವನ್ನೂ ಉಂಟುಮಾಡುವುದಕ್ಕೆ ಬೇಕಾದ ಸಲಹೆಗಳನ್ನು ಚರ್ಚಿಸಿ ತೀರ್ಮಾನಿಸುವುದಕ್ಕಾಗಿ ವೈಸರಾಯರವರು ಮುಂದಿನ ತಿಂಗಳ 5 ನೆ ತಾರೀಖಿನ ದಿವಸ ದೆಹಲಿ ನಗರದಲ್ಲಿ ಒಂದು ಸಭೆಯನ್ನು ಸೇರಿಸುವರು. ಈ ಸಭೆಗೆ ಮಹಾತ್ಮಾ ಗಾಂಧಿ, ಲಾಲಾಲಜಪತರಾಯ್, ಡಾ|| ಮುಂಜೇ, ಪಂಡಿತ ಮಾಳವೀಯ ಮೊದಲಾದ ರಾಷ್ಟ್ರೀಯ ಮುಖಂಡರುಗಳು ಆಹ್ವಾನಿಸಲ್ಪಟ್ಟಿರುವರು,

ಸಿಲ್ ಕೋಟ್ ಎಂಬಲ್ಲಿ ಮೂವರು ಸಹೋದರರು ಆಕಸ್ಮಿಕವಾಗಿ ಬಂದ ಒಬ್ಬ ಧನಿಕವರ್ತಕನನ್ನು ತಮ್ಮ ಮನೆಯಲ್ಲಿರಿಸಿಕೊಂಡಿದ್ದು ಆ ರಾತ್ರಿಯಲ್ಲಿ ಆತನನ್ನು ಕೊಲ್ಲಬೇಕೆಂದು ಇಬ್ಬರುಸಹೋದರರು ಮನೆಯ ಹಿತ್ತಲಿನಲ್ಲಿ ಗುಂಡಿಯನ್ನು ತೋಡಿ ಒಳಹೊಕ್ಕು ನಿದ್ರಿಸುತ್ತಿದ್ದ ತಮ್ಮ ಸಹೋದರನನ್ನೇ ವರ್ತಕನೆಂದು ಭ್ರಮಿಸಿ ಕೊಂದು ಆತನ ಚೀಲವನ್ನು ಹುಡುಕುವಲ್ಲಿ ಒಂದುರೂಪಾಯಿ ಮಾತ್ರ ಸಿಕ್ಕಿತು. ಆಗ ಭ್ರಾಂತಿಗೊಂಡು ಮುಖವನ್ನು ನೋಡಿ ತಾವು ಮಾಡಿದ ಘೋರಕೃತ್ಯಕ್ಕೆ ಗೋಳಿಡುತ್ತಿರುವಷ್ಟರಲ್ಲಿಯೇ ಪೋಲೀಸರು ಬಂದರು. ಇದೆಲ್ಲವನ್ನು ನೋಡುತ್ತಾ ಹತ್ತಿರಿದ್ದ ಮರದ ಮೇಲೆ ಅಡಗಿಕೊಂಡಿದ್ದ ವರ್ತಕನು ಕೆಳಗಿಳಿದು ನಡೆದ ಸಂಗತಿಯನ್ನೆಲ್ಲಾ ಪೋಲೀಸರಿಗೆ ತಿಳುಹಿಸಿದನು. ಸಹೋದರರು ಕೈದುಮಾಡಲ್ಪಟ್ಟು ಅಲಹಾಬಾದಿಗೆ ತರಲ್ಪಟ್ಟಿದ್ದಾರೆ.

ನಿವೇದನವು.

ವೀರಶೈವಮತದ ನಿಜತತ್ವಗಳು ವೃತ್ತಪತ್ರಿಕೆಯ ದ್ವಾರಾ ಈ ಲೋಕದಲ್ಲಿ ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದಲೂ ಹಾಗೂ ಪ್ರಾಚೀನಗ್ರಂಥಗಳನ್ನು ಮುದ್ರಿಸಿ ಸ್ವಮತ ಪರಮತದವರಿಗ ಈ ಮತದ ಉದಾತ್ತತತ್ವಗಳನ್ನು ತೋರ್ಪಡಿಸಬೇಕೆಂಬ ಉದ್ದೇಶದಿಂದಲೂ ನಾಗಸೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಮೈಸೂರು ರಾಜಧಾನಿಯಲ್ಲಿ ಆಚಾರ್ಯರ ಹೆಸರಿನಿಂದ ಪ್ರಿಂಟಿಂಗ್‌ಪ್ರೆಸ್ಸನ್ನು ಸ್ಥಾಪಿಸಿ ತನ್ಮೂಲಕ "ಪಂಚಾಚಾರ್ಯಪ್ರಭಾ" ಎಂಬೀ ವೃತ್ತಪತ್ರಿಕೆಯು ಹೊರಡುವುದಕ್ಕೆ ಸಕಲ ಏರ್ಪಾಟುಗಳನ್ನು ಮಾಡಿರುವುದು ವೇದ್ಯವೇ ಅದೆ ಈ ಪತ್ರಿಕೆಯನ್ನು ಅತ್ಯಂತೋರ್ಜಿತಾವಸ್ಥೆಗೆ ತರಬೇಕೆಂದು ಸದರಿ ಪಂಡಿತರು ಸತ್ಸಂಕಲ್ಪವನ್ನು ಮಾಡಿದಾರೆ. ಆದ್ದರಿಂದ ಆಚಾರ್ಯಾಭಿಮಾನಿಗಳಾದ ಪ್ರತಿಯೊಬ್ಬರು ತಮ್ಮ ತಮ್ಮ ಗ್ರಾಮದಲ್ಲಿ ನಡೆಯುವ ದೀಕ್ಷಾ, ಲಿಂಗಧಾರಣ, ವಿವಾಹಾದಿ ಶುಭಕಾರ್ಯಗಳಲ್ಲಿ ಅವರವರ ಶಕ್ತ್ಯನುಸಾರವಾಗಿ ಈ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯಸಹಾಯವನ್ನು ಮಾಡಿ ಮನಿಯಾರ್ಡರದ್ವಾರಾ ಇಲ್ಲಿಗೆ ಕಳುಹಿಸಬೇಕೆಂದೂ ಈ ಕಾರ್ಯದಕಡೆಗೆ ಪ್ರತಿಯೊಬ್ಬರೂ ಪೂರ್ಣ ಗಮನಕೊಡಬೇಕೆಂದೂ ಹಾರೈಸುತ್ತೇವೆ.

ಸಂಪಾದಕರು.

ಅಖಿಲಭಾರತೀಯ ವೀರಶೈವ ಮಹಾಸಭೆ.

ಓ! ವೀರಶೈವ ಮಹಾಸಭೆಯೆಂಬ ಮಹಾಮಹಿಮನೇ! ನೀನು ಅವತರಿಸಿ ಇಂದಿಗೆ ಸುಮಾರು ೨೫ ವರ್ಷಗಳಾದಾಗ್ಯೂ ಸರ್ವರಿಗೂ ಇದುವರೆವಿಗೂ ನಿರಾತಂಕವಾಗಿ ೮ ಸಾರಿ ಮಾತ್ರ ನಿನ್ನ ದರ್ಶನಭಾಷಣಗಳಿಗೆ ಅವಕಾಶವನ್ನಿತ್ತು ಪುನೀತರನ್ನಾಗಿ ಮಾಡಿದೆ. ಆದರೆ ೯ನೆಯ ಸಾರಿ ಬೀದರಿನಲ್ಲಿ ನಿನ್ನನ್ನು ಕಾಣಲು ಬಂದಾಗ್ಯೆ ನಿನಗಾಗಲೇ ಬಲವಾದ ವ್ಯಾಧಿಯು ಪ್ರಾಪ್ತವಾಗಿ ಇಂದಿನವರೆವಿಗೂ ನಿನ್ನನ್ನು ಬಹು ಸಂಕಟಕ್ಕೊಳಗುಮಾಡಿತು. ಅಂತಹ ಸಂಕಟಗಳಿಂದ ಪಾರಾಗಿ ವಿಶ್ರಾಂತಿಯನ್ನು ಹೊಂದಿ ಮುಂದಿನ ಡಿಶಂಬರ್ ತಿಂಗಳಲ್ಲಿ ಬೆಂಗಳೂರಲ್ಲಿ ಸರ್ವರಿಗೂ ನಿನ್ನ ದರ್ಶನವನ್ನು ಕೊಡುವುದಾಗಿ ಈಗಲೇ ನಿನ್ನ ಅಮೃತವಾಣಿಯಿಂದ ಅಪ್ಪಣೆಕೊಡಿಸಿದ್ದಕ್ಕಾಗಿ ನಿನಗೆ ಅನಂತ ವಂದನಗಳನ್ನು ಸಮಾಜದ ಪರವಾಗಿ ನಾನು ಅರ್ಪಿಸುತ್ತೇನೆ. ನಿನ್ನ ಇಷ್ಟಾನುಸಾರ ದರ್ಶನಭಾಷಣಗಳಿಗೆ ಕೇವಲ ನಿಷ್ಪಕ್ಷಪಾತಿಗಳೂ, ದಯಾರ್ದ್ರಹೃದಯರೂ, ಕಾರ್ಯದಕ್ಷರೂ, ವಿಚಾರಪರರೂ, ಮತ್ತು ಅನುಭವಶಾಲಿಗಳೂ ಆದ ಮೆ|| ಶಿವಮೊಗ್ಗಾ ಡಿಸ್ಟ್ರಿಕ್ಟ್ ಮತ್ತು ಶೆಷನ್ಸ್ ಜಡ್ಜಿಯವರಾದ ಮ|| ಪಿ. ಮಹದೇವಯ್ಯ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಿಂದ ಅವಕಾಶ ದೊರಕಿಸಿಕೊಟ್ಟು ಧನ್ಯರನ್ನಾಗಿ ಮಾಡುತ್ತೀಯೆಂದು ಸಂಪೂರ್ಣ ನಂಬಿದ್ದೇನೆ.

ಮಹಾಸಭಾ ಹಿತಚಿಂತಕ,
ಸಂಗಪ್ಪ ರೇವಪ್ಪ ಹೊಮ್ಮರಡಿ, ನ್ಯಾಮತಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪಾಟೀಲರ ಪಾಂಡಿತ್ಯ

ತಾರೀಖು ೨೨-೧೦-೨೭ ನೇ ಸ್ವಾರ ಪತ್ರಿಕೆಯಲ್ಲಿ 'ಹಾಡಿದ್ದೇ ಹಾಡೋಕಿಸಬಾಯಿದಾಸ' ಎಂಬ ತಲೆಬರಹವನ್ನಿಟ್ಟು, ಗ್ರಾಮಸಿಂಹದಂತೆ ಗಾನಮಾಡಿದ, ಎಲೈ ಪಿ. ಎಸ್. ಪಾಟೀಲರೇ! ಕಾವ್ಯತೀರ್ಥರ ತಮ್ಮಟದಲ್ಲಿ ಎಸ್. ಬಿ. ಸಿದ್ದಲಿಂಗಪ್ಪನವರಂಥಾ ದಿವ್ಯರತ್ನಗಳು ತಯಾರಾಗಿ ಇಷ್ಟು ತೀವ್ರವೇ ಹೊರಬೀಳುತ್ತವೆಂಬುವದು ಯಾರಿಗೂ ಗೊತ್ತಿದ್ದಿಲ್ಲ, ಬಲಾ ಏನು ರತ್ನಗಳಿವು! ಇಂಥಾ ರತ್ನಗಳು ಇನ್ನು ಸ್ವಲ್ಪು ಹೊರಬಿದ್ದಲ್ಲಿ ಪಂಚಾಚಾರ್ಯ ಪ್ರಭೆಯನ್ನು ನುಂಗಿ ನೀರು ಕುಡಿಯುವದರಲ್ಲಿ ಸಂದೇಹವಿಲ್ಲವೆಂದು, ಮನಬಂದಂತೆ ಬರೆದ ನೀವು ಮಾತ್ರ ಯಾವ ತಮ್ಮಟದಿಂದ ಹೊರಬಿದ್ದಿರುವಿರೆನ್ನುವದನ್ನು ಶೀಘ್ರ ತಿಳುಹಿಸಿರಿ ಕಾವ್ಯತೀರ್ಥರನ್ನು ಹಳಿದ ಎಲೈ ಪಾಟೀಲರೇ, ಈ ಮಹನೀಯ ಕಾವ್ಯತೀರ್ಥರು ಉದಯವಾದುದರಿಂದಲೇ ನಿಮ್ಮ ತಿರಸ್ಕಾರ ಹಾಗೂ, ನಿಮ್ಮಂಥವರಿಗೆ ಗುಮ್ಮನೆನಿಸಿದ್ದ ಬಸವನ ಹುಳುಕು ಹೊರಬಿದ್ದಿದೆ. ಇದ್ದುದನ್ನು ತಿಳಿಸುವವರ ಕೂಡ ಗುದ್ದ್ಯಾಟಕ್ಕೆ ಸಿದ್ಧವಾದಂತೆ ನಿಮ್ಮ ಕುಲಘಾತಕ ಗುರುವಿನ ನಿಮ್ಮ ಸನ್ಯಾಸಿಗಳ ಕುಹಕ ಬುದ್ಧಿಗಳನ್ನು ಹೊರಗೆಡವಿದ ಮಹಿಮನನ್ನು ನಿಂದಿಸಿದ ಪಾಟೀಲರೇ ಶಾಂತಚಿತ್ತರಾಗಿ ಲೇಖನವನ್ನು ಬರೆಯಿರಿ, ಇಲ್ಲವಾದರೆ, ನಿಮ್ಮ ಕರ್ಮವನ್ನು ನೀವೇ ಅನುಭವಿಸಬೇಕಾಗುತ್ತದೆ. ಮನಬಂದಂತೆ ಸಂಪಾದಕರನ್ನು ನಿಂದಿಸಿರುವಿರಿ. ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದೆಂದು ಪ್ರತಿ ಸಂಚಿಕೆಯಲ್ಲೂ ಪತ್ರಿಕಾಕರ್ತರು ಪ್ರಕಟಿಸುವದನ್ನು ನಿಮ್ಮ ಚರ್ಮನೇತ್ರಗಳು ನೋಡಿದಂತೆ ಕಾಣುವದಿಲ್ಲ. ಗೂಗೆಯಲ್ಲಿ ರವಿಯ ಕಾಂತಿಜ್ಞಾನವು ಎಲ್ಲಿಯದು? ಅಸ್ತು! ಸ್ವಾರ ಪತ್ರಿಕಾಕರ್ತರಿಗಾದರೂ "ಯಾಜಕೋ ಯಾಜಕಂ ವ್ಯಾಖ್ಯಾನವದ್ಗುರಾಯತೆ" ಎಂಬಂತೆ, ಈ ಎರಡನೆಯ ಪತ್ರಿಕೆಯು ಉದ್ಭವಿಸಿದುದಕ್ಕೆ ಅಸೂಯೆಯಿಂದ ಇಂಥಾ ಲೇಖಗಳನ್ನು ಪ್ರಯಾಸಪಟ್ಟು ಹಾಕುವಂತೆ ತೋರುತ್ತದೆ. ಸ್ವಾರಸಂಪಾದಕರೇ ಇಂಥಾ ಲೇಖಗಳಿಗೆ ಸ್ಥಾನವನ್ನು ಕೊಡಬಾರದೆಂದು ತಿಳುಹಿಸುತ್ತೇನೆ.

ಸಮಾಜ ಹಿತೈಷಿ—ಬಾರ್ಶಿ

ಪತ್ರವ್ಯವಹಾರ

ವಾರ್ತೆದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪರಾಧೀನತೆಯ ಗೋಳು

ವಾಚಕರೇ, ನಮ್ಮ ವೀರಶೈವಮತವನ್ನು ಶ್ರೀಮತ್ಪಂಚಾಚಾರ್ಯರು ಸ್ಥಾಪಿಸಿ ಪಾಲನ ಮಾಡುವದಕ್ಕೋಸ್ಕರ ಗೋತ್ರಪೀಠಗಳನ್ನು ಪರ್ಯಟಿಸುವಂತೆ ಸ್ಥಾಪನ ಕಾಲದಲ್ಲಿ ಪ್ರಮಾಣ ಮಾಡಿ ಅದರಂತೆ ಆಚರಣೆಯಲ್ಲಿ ತಂದದ್ದು ಮತ್ತೊಬ್ಬ ಸ್ಥಾನಾಪನ್ನರು ಕಲಿತುಕೊಳ್ಳುವಂತಿದ್ದರೂ ಈಗ ನೋಡಲಾಗಿ ಆಲೋಚನೆಯಲ್ಲಿ ಆ ಪ್ರಮಾಣ ಇದೆಯೋ ಹೊರತು ಆಚರಣೆಯಲ್ಲಿ ತಿಲಾಂಶವಾದರೂ ಇಲ್ಲವಾಗಿದೆ. ಇದು ನಮ್ಮ ದುರದೃಷ್ಟವೋ? ಅಥವಾ ಮಠಾಚಾರ್ಯರ ದುರದೃಷ್ಟವೋ? ಅಯ್ಯೋ! ಪರಶಿವಾವತಾರಿಗಳಾದ ಮಠಾಚಾರ್ಯರಿಗೆ ದುರದೃಷ್ಟವೆತ್ತಣದು? ನಮಗಳದೇ ಸರಿ! ಅವರು ನಮ್ಮಗಳ ಉದ್ಧಾರಕ್ಕಾಗಿ ಕ್ರಮವಹಿಸಿ ಮಾಡಿ ಕೊಟ್ಟ ದರ್ಶನಸೋಪಾನಗಳನ್ನು ಸರಿಯಾಗಿಟ್ಟುಕೊಳ್ಳದೆ ಮನಬಂದಂತೆ ವರ್ತಿಸಲು ಉದ್ಯುಕ್ತರಾಗಿರುತ್ತೇವೆ. ಇದಕ್ಕೆ ಪಟ್ಟಚರಾಧಿಕಾರಿಗಳು ಪರಾಧೀನರಾಗಿರುವದೇ ಮೊದಲನೆಯ ಕಾರಣವಾಗಿದೆ.

ಹೇಗೆಂದರೆ ಯಾರ ಅನ್ನವನ್ನು ತಿನ್ನುತ್ತೇವೆಯೋ ಅವರ ಅಧೀನದಲ್ಲಿರುವದು ಸ್ವಾಭಾವಿಕವು ಎಲ್ಲರಿಗೂ ಗೊತ್ತೇ ಇದೆ. ಚಿಕ್ಕ ಚಿಕ್ಕ ಮಕ್ಕಳಿಗೆ ಅಧಿಕಾರ ಮಾಡಿ ಪಟ್ಟಕಟ್ಟಿ ತಂದೆತಾಯಿಗಳು, ಮಠದ ಸರ್ವೋತ್ತಮರಾಗಿ ಮಠಗಳಲ್ಲೇ ವಾಸವಾಗಿರುವದರಿಂದ ಮಠಕ್ಕೆ ಸಂಬಂಧಪಟ್ಟ ಇನಾಮು, ವಗೈರೆ ಆಸ್ತಿಗಳನ್ನು ತಮ್ಮ ಅನುಭವದಿಂದ ವಹಿವಾಟು ನಡೆಸಿ, ಅಧಿಕಾರಿಗಳನ್ನು ಬಿಟ್ಟು ಹುಟ್ಟಿದ ಮಕ್ಕಳಿಗೆಲ್ಲಾ ಮನೆ ಹಾಗೂ ಆಸ್ತಿಗಳೆಲ್ಲವನ್ನೂ ಭಾಗಮಾಡಿ ಕೊಡುವರು. ಮಠದಲ್ಲಿಯೇ ಇವರಿಗೆ ಅನ್ನವಸ್ತ್ರ ಹಾಕಿ, ಸಮಾಜ ಸೇವೆಯನ್ನಾದರೂ ಮಾಡಿಸುವರೇನು? ಇಲ್ಲ, ಮನ್ನಣೆಮಾಡಿ ಕೂಡ್ರಿಸುವರೇನು? ಇಲ್ಲ! ನಿಮ್ಮ ಮಠದ ಆಸ್ತಿ ಸಾಲದು. ನೀವು ಬೇರೆ ಮೇಲೆ ಹೋಗಿ ಹಣವನ್ನಾಗಲಿ ಕಾಳನ್ನಾಗಲಿ ತಂದು ಹಾಕಬೇಕೆಂದು ಒತ್ತಾಗಿ ಉಪದೇಶಿಸುವರು. ಈಗ ಹಣದಿಂದಲೇ ಜಗತ್ತು ಅದೊಂದಿಲ್ಲದ ಮೇಲೆ ಕೇಳುವವರೇ ಇಲ್ಲವು. ಅವರು ಬೇಕಷ್ಟು ಈ ಪರಾಧೀನತೆಯೇ ಬೇಡವೆಂದರೆ ಜೀವಿಸುವದೇ ಕಷ್ಟ! ಏಕೆಂದರೆ ಅವರಿಗೆ ಪಾವನವಾದ ಶಿಕ್ಷಣವೂ ಇಲ್ಲ, ತಿನ್ನಲಿಕ್ಕೆ ಅನ್ನವೂ ಇಲ್ಲ. ಇವಿಲ್ಲದ ಮೇಲೆ ಸಮಾಜದವರಂತೂ ಇವರನ್ನು ಕಂಡರೆ ಬಹಳೇ ದೂರ ಇದ್ದಾರೆ. ಮೇಲೆ ಸ್ವಾತಂತ್ರ್ಯವಿಲ್ಲದುದು ಪರಾಧೀನತೆಯು ಬಂದೇ ಬಂತು. ಅಂದ ಮೇಲೆ "ಶರೀರ ಮಾದ್ಯಂಖಲು ಧರ್ಮಸಾಧನಂ" ಎನ್ನುವಂತೆ ಇವರ ಶರೀರಕ್ಕೆ ಸ್ವಾತಂತ್ರ್ಯವಿಲ್ಲದ ಮೇಲೆ ಇವರು ಮಾಡುವದೇನು? ಅಯ್ಯೋ ನಮ್ಮ ತಿಳಿಯದ ಪಟ್ಟಚರಾಧಿಕಾರಿಗಳೇ, ನಿಮ್ಮನ್ನು ಈ ರೀತಿ ಮಾಡಿ ಹುಟ್ಟಿಸಿದ ಬಂಧುಗಳ ಕಣ್ಣಿಗೆ ಸೇವಕ ಮಾಡುವಿರಿ? ಪಟ್ಟಚರಾಧಿಕಾರಿಗಳೆಂಬ ಸ್ವಾಮಿಗಳಿಗೆ ಹಾನಿಕರಗಳಾದ ಸ್ವರುಗಳಂತಿರುವ ಪ್ರೇಮದ ಮಮತೆಯದೇ ಇಷ್ಟು ದಿನಗಳಿಂದ ನೀವು ಸ್ವಲ್ಪವೂ ಕೆಲಸ ಮಾಡದೆ ಸುಮ್ಮನೆ ತಿಂದು ಹಾಳು ಮಾಡಲೋಸುಗ ಗುರುಸ್ವರೂಪರಾದ ಪಟ್ಟಚರಾಧಿಕಾರಿಗಳನ್ನು ಮನೆಯೋಗದಲ್ಲಿ ಗೀಡುಮಾಡುವಂತೆ ಮಾಡಿ ಅವರನ್ನು ಈ ಲೋಕದಲ್ಲಿ ಅಪಕೀರ್ತಿಗೆ ಗುರಿಮಾಡಿದ್ದಲ್ಲದೆ ಅವರು ಹಿಂದೆ ಸಂಪಾದಿಸಿದ ಕೀರ್ತಿಯನ್ನು ಹಾಗೂ ಆಸ್ತಿಗಳನ್ನೂ ಸ್ವಲ್ಪವಾದರೂ ಉಳಿಸದೆ ತಿಂದು ಹಾಳುಮಾಡಿಬಿಟ್ಟಿರಿ. ಗುರುಮೂರ್ತಿಗಳಿಗೆ ನಿಲ್ಲಲೂ ನೆಲ ಸ್ಥಾನವಿಲ್ಲದ ಹಾಗೆ ಬಳಿನ ಮಕ್ಕಳಿಗೆ ಮನೆಯನ್ನೂ ನೆಲ ಹಂಚಿಕೊಟ್ಟಿರುವಿರಿ. ಅವರು ಅಧಿಕಾರ ಹೊಂದದೆ ಹಾಗೇನಾದರೂ ಇದ್ದರೆ ಎಲ್ಲರಂತೆ ಅವರಿಗೇನಾದರೂ ಸ್ವಲ್ಪ ಬರುತ್ತಿತ್ತೋ ಏನೋ?

ಪೂಜ್ಯಪಾದರಾದ ಶ್ರೀಜಗದ್ಗುರುಗಳು ಬುಧಜನ ಸಭೆಯಲ್ಲಿ ಇದನ್ನೆಲ್ಲಾ ಆಲೋಚಿಸಿ ಇನ್ನೋ! ಪಟ್ಟದ ಚರಾಧಿಕಾರಿಗಳೇ, ಅಧೀನದ ಪದಾರ್ಥಗಳನ್ನು ತಿನ್ನಬೇಡಿರಿ. ಸ್ವಂತವಾಗಿ ಸಾತ್ವಿಕ ಗುಣವುಳ್ಳ ಅನ್ನವನ್ನು ಸಂಪಾದಿಸಿ ತಿನ್ನಿರಿ. ಕೇವಲ ಹೊಡೆಯುವ ಬಡಿಯುವದರಿಂದ ಮಾಡಲ್ಲವೆಂದು ಲೋಕೋದ್ಧಾರಕ್ಕೆ ಶಿವಜ್ಞಾನವಾದ ಉಪದೇಶವನ್ನು ತಮ್ಮ ಅಮೃತ ವಾಣಿಯಿಂದ ಆಶೀರ್ವಾದ ಪೂರ್ವಕವಾಗಿ ಅಪ್ಪಣೆ ಕೊಡಿಸಿದರು. ಈ ಲೇಖನದ ಸಾರವೆಲ್ಲಾ ಇದೊಂದರಲ್ಲಿಯೇ ಇದೆ. ಹೆಚ್ಚು ಬರೆಯುವದೇನು? ಎಲೈ ಪುಣ್ಯಾತ್ಮರಿರಾ ಇನ್ನಾದರೂ ಅವರ ಮಠ ಆಸ್ತಿಗಳನ್ನು ಅವರಿಗೊಪ್ಪಿಸಿ ಸ್ವತಂತ್ರವಾಗಿರುವಂತೆ ಮಾಡಿ ನಿಮ್ಮ ಸಂಸಾರದವರೆಲ್ಲರೂ ದೂರದಲ್ಲಿದ್ದು ಎಲ್ಲಾ ಜನರಂತೆ ನೀವೂ ನಿಮ್ಮ ಕಾರ್ಯ ನಡೆಸಿಕೊಂಡರೆ ಗುರುವಿನ ಕರುಣೆಯಾದೀತೇ ಹೊರತು ಇಲ್ಲದಿದ್ದರೆ ಎಂದಿಗೂ ಆಗುವದಿಲ್ಲ "ಹರಮುನಿದರೆ ಗುರುಕಾಯ್ವನು" ಎನ್ನುವ ಗಾದೆಯ ಮಾತನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ.

ಈ ಲೇಖನವನ್ನು ನೋಡಿದರೆ ಕೆಲವರಿಗೆ ಕೋಪ ಬರುವದು. ಏಕೆಂದರೆ, ಇನಾಮು ಮುಂತಾದವುಗಳನ್ನು ತಿಂದು ರುಚಿಕಲಿತಿರುವವರು. ಅದನ್ನು ಈಗ ಬಿಡಬೇಕೆಂದರೆ ಆಗದು. ಮಹನೀಯರಾ ಕೋಪಿಸಿಕೊಳ್ಳದೆ ಶಾಂತರಾಗಿ ವಿಚಾರಿಸಿ, ಸಮಾಜೋದ್ಧಾರದ ಕಡೆಗೆ ತಮ್ಮ ದೃಷ್ಟಿಯನ್ನು ನಿಲಿಸಬೇಕು. ಈಗ ಎಲ್ಲಾ ಸಮಾಜದವರೂ ಅಭಿವೃದ್ಧಿ ಹೊಂದುತ್ತಿದ್ದಾರೆ. ಈಗಿನ ಸ್ಥಿತಿಯಲ್ಲಿ ನಾವುಗಳು ಸುಮ್ಮನೆ ಕೂಡುವ ಕಾಲವಾಗಿರುವದಿಲ್ಲ. ನಮ್ಮ ಸಮಾಜದಲ್ಲಿ ಎಷ್ಟು ಕುಂದುಗಳಿದ್ದರೂ ಇದೊಂದರಿಂದಲೇ ಶಾಂತವಾಗುವುದೆಂದು ಖಾತ್ರಿ ಹೇಳುವೆನು.

ಪಟ್ಟಚರಾಧಿಕಾರಿಗಳು ಸ್ವತಂತ್ರರಾಗದೆ ಇವರ ಪಾಪ ಮಾಡಿಸುವ ಕೆಲಸಗಳನ್ನು ನೋಡದೆ ಸಂಸಾರ ಬಂಧನದಲ್ಲಿ ಬಿದ್ದು ಮನಬಂದಂತೆ ವರ್ತಿಸುತ್ತ ಕಾಲಕಳೆಯುತ್ತಿರುವರು. ಇದರಿಂದಲೇ ಮತದ ಏಳಿಗೆಯೂ ನಿಂತು ಹೋಯಿತು. ಅದು ಹೇಗೆಂದರೆ. ಇದರ ಒಳ್ಳೆ ತಿಳಿದ ಮಹನೀಯರು ತಮ್ಮ ಬಾಲ್ಯದ ಸ್ಥಿತಿಯಲ್ಲಿರುವ ಮನಸ್ಸಿಗೆ ಬೋಧವನ್ನು ಮಾಡದಲ್ಲದೆ ತಮ್ಮ ಸ್ವಾರ್ಥದ ಸಲುವಾಗಿ ಪ್ರಯತ್ನಪಟ್ಟು ಸದಾಯುವನ್ನು ನೆನಪಿಸಿದರೆ ಅಧಿಕಾರಿಗಳು ಸ್ವತಂತ್ರವಾಗಿ ಜೀವಿಸುವಂತೆ ಕಷ್ಟಪಟ್ಟು ಇಷ್ಟಕ್ಕೆ ಅವಕಾಶವನ್ನು ಮಾಡಿ ತಂದೆತಾಯಿಗಳನ್ನು ಅವರ ಗೋಜಿಗೆ ಹೋಗದೆ ದೂರವಾಗುವಂತೆ ಮಾಡಿದರೆ ಇದರಲ್ಲಿ ಕೀರ್ತಿಯೂ ಪರದಲ್ಲಿ ಸೌಖ್ಯವೂ ಉಂಟಾಗುವುದಲ್ಲವೆ? ಇದನ್ನು ಬಿಟ್ಟು ಸುಮ್ಮನೆ ಮಾತನಾಡಿದರೆ ಬರುವದೇನು? ದೂರವಾಗಿ ಇದರ ಈ ಜಗತ್ತಿನಲ್ಲಿ ಪಾಪಾತ್ಮ ಪಿತೃವಾತ್ಸಲ್ಯವು ತಪ್ಪುವದು ಕಷ್ಟ! ಕುಟುಂಬದಲ್ಲಿಯೇ ಇದ್ದು ಅವರ ಕೈಯಲ್ಲಿಯ ಅನ್ನವನ್ನು ತಿಂದಮೇಲೆ ಹೇಳುವದೇನು? ಅವರ ಅಪ್ಪಣೆಯನ್ನು ಅವಗಣಿಸಲು ಬಂದೀತೇ? ಆದ್ದರಿಂದ ಗುರುಸ್ವರೂಪಿಗಳಾದ ಪಟ್ಟಚರಾಧಿಕಾರಿ ಮಹಾಸ್ವಾಮಿಗಳೇ, ಇನ್ನು ಕೋಪವಿದ್ದರೂ ಆದಷ್ಟು ಬೇಗನೆ ನಿಮ್ಮ ಕಾರ್ಯವನ್ನು ನಡೆಸಿದರೆ ಪರದ ಶ್ರೀ ಗುರುವಾಕ್ಯ ಬಂದಿದ್ದರೆ ಸಾಕು! ಪೂಜ್ಯಪಾದರು ಅಪ್ಪಣೆಕೊಡಿಸಿರುವ ಶಿವಜ್ಞಾನದ ಮಾತನ್ನು ಮೀರಿ ಅದರಿಂದಾದ ಫಲವನ್ನುಂಡರೆ ಅವರ ಅಪ್ಪಣೆಯನ್ನೇ ತಪ್ಪುವದು. ನಂತರ ನಮ್ಮ ಕಾರ್ಯಗಳನ್ನು ನಾವು ಮಾಡುತ್ತಾ ಹೋದರೆ ಗುರುಗಳು ತಾವಾಗಿಯೇ ಅಹಂಕಾರ ಮರೆಸಿ ನಮ್ಮನ್ನುದ್ಧರಿಸುವರು. ನನ್ನ ಅಭಿಪ್ರಾಯ ದೂಷಣವು ನಿಕ್ಷೇಪಿಸುವದು. ನಾವೆ ಮುಂದೆ ಬರುವ ತರುಣರುಗಳಿಗೆ ಬ್ರಹ್ಮಚರ್ಯ, ವಿದ್ಯಾ ಎಂಬ ಶಿಕ್ಷಣವೇ ಮೊದಲನೆಯವುಗಳಾಗಿವೆ. ಕಾರಣ, ಈಗ ನಾವುಗಳು ಇನ್ನೆಂದರೂ ಅದಷ್ಟು ಜಾಗ್ರತೆಯಾಗಿ ನಾಳಿನ ಮುಂದಿನ ಕೆಲಸಕ್ಕೆ ತೊಡಗೋಣವಾಗಿ ಈ ಲೇಖನವನ್ನು ವಿರಮಿಸುತ್ತೇನೆ. ಕೂಡಲೇ ಜೋಡಿಸುವಿಕೆಯಲ್ಲಿ ತಪ್ಪನ್ನೆಣಿಸದೆ ಸಾರಾಂಶವನ್ನು ತಿಳಿಯಬೇಕಾಗಿ ಗುರುಗಳಲ್ಲಿಯೂ ಸಮಾನಾಧಿಕಾರಿಗಳಲ್ಲಿಯೂ ಬೇಡಿಕೊಂಡು ನಮಸ್ಕಾರ ಮಾಡಿರುವ,

ಪಟ್ಟಾಧ್ಯಕ್ಷ ತ್ರಿಲೋಚನಶಿವಾಚಾರ್ಯ

ಸಿದ್ದಾಪುರ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ಕೇದಾರ ಮಹಾಸ್ವಾಮಿಗಳವರ ಅಡ್ಡಪಾಲಕಿ ಮಹೋತ್ಸವ

ಕೆಲೂರು

ಶ್ರೀಮದ್ವೀರಶೈವ ಮಹಾ ಮತಸ್ಥಾಪನಾಚಾರ್ಯರಾದ ಶ್ರೀ ಗಂಟಲ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಪುಣಗಿರಿಯಿಂದ ಪ್ರೋಗ್ರಾಮ ನಿಶ್ಚಯಿಸಿದ ಪ್ರಕಾರ ಹುನಗುಂದ ತಾಲ್ಲೂಕು ವಿಜಾಪೂರ ಜಿಲ್ಲಾ ಪೈಕಿ ಕೆಲೂರು ಎಂಬ ಗ್ರಾಮಕ್ಕೆ ದಯಮಾಡಿಸಿತು. ಆ ಗ್ರಾಮದ ಪ್ರಮುಖರಾದ ಶ್ರೀ ಹಿರೇಮಠದ ಪಟ್ಟದ ಸ್ವಾಮಿಗಳು ರಾ|| ರಾ|| ಶ್ರೀ ಸರ್ ನಾಡಗೌಡ್ರ ಮುಂಟಪ್ಪ ದೇಸಾಯರು ಮೊದಲಾದ ಗುರುಭಕ್ತರು ಉತ್ಸವಕ್ಕೆ ಸಿಬ್ಬಂದಿ ವಾದ್ಯ ವೃಂದಗಳನ್ನು ಸಿದ್ಧಮಾಡಿಕೊಂಡರು. ಅಷ್ಟರಲ್ಲಿಯೇ ಮಹಾ ಸವಾರಿಯು ದಯಮಾಡಿಸಿತು. ಕೂಡಲೆ ತಾ|| ೧೩-೧೦-೩೭ ನೇ ದಿವಸ ಸಕಲ ಬಿರುದಾವಳಿಗಳೊಡಗೂಡಿ ಅಡ್ಡಪಾಲಕಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು. ಆ ದಿವಸ ಗ್ರಾಮವು ತಳಿರುತೋರಣಗಳಿಂದಲೂ ರಂಗವಲ್ಲ್ಯಾದಿಗಳಿಂದಲೂ ಶೃಂಗರಿಸಲ್ಪಟ್ಟು, ನೋಡುವವರ ಕಣ್ಣಿಗೆ ಕೈಲಾಸವೋ ಏನೋ ಎನ್ನುವಂತೆ ಭಾಸಮಾನವಾಗುತ್ತಿತ್ತು. ಅಲ್ಲದೆ ಅನೇಕ ಹಳ್ಳಿಯ ಜನರು ಶ್ರೀ ಪಂಚಾಚಾರ್ಯರ ಭಜನಾ ಸಂಘಗಳನ್ನು ತೆಗೆದುಕೊಂಡು ಒಳ್ಳೆ ಭಕ್ತಿಯಿಂದ ಬಂದಿದ್ದರು. ವೈದಿಕರ ವೇದಘೋಷದಿಂದಲೂ, ಛತ್ರ ಚಾಮರ ಜಯಜಯಕಾರದಿಂದಲೂ ಕೂಡಿದ ಮಹಾಸ್ವಾಮಿಗಳವರ ಪಾಲಕಿಯನ್ನು ಅಲ್ಲಲ್ಲಿಗೆ ನಿಲ್ಲಿಸಿ ಭಕ್ತ ಸ್ತ್ರೀ ಪುರುಷರು ಫಲ ಕರ್ಪೂರ ಆರತಿಗಳನ್ನು ಮಾಡುತ್ತಿದ್ದರು. ಕೆಲೂರು ಸುತ್ತಮುತ್ತಲಿನ ಹಳ್ಳಿಯ ವೀರಶೈವರು ಗುರುಭಕ್ತಿಯಿಂದ ಸಂಪೂರ್ಣ ನೆರೆದರೆಂದು ಬರೆದರೆ ಅತಿಶಯೋಕ್ತಿಯಾಗಲಾರದು. ಅಲ್ಲಿಂದ ಮಹಾಸ್ವಾಮಿಗಳವರ ಸವಾರಿಯು ಪುರಾಣ ಮಠಕ್ಕೆ ಬರಲು ಎಷ್ಟು ಇಲ್ಲದೆ ಬಂದ ಸಂತೋಷಕ್ಕೆ ಗೌರ್ನಮೆಂಟ ಪೋಲೀಸರು ಗುಂಡು ಹಾರಿಸಿದರು. ಆ ಮೇಲೆ ಮಹಾಸ್ವಾಮಿಗಳು ಶ್ರೀ ಮಠದಲ್ಲಿ ಚನ್ನಾಗಿ ಸಿಂಗರಿಸಿದ ಸಿಂಹಾಸನವನ್ನು ಆರೋಹಣ ಮಾಡಿದ ಕೂಡಲೇ ಸಮಸ್ತ ಭಕ್ತ ಮಹಾಶಯರು ಶ್ರೀ ಪಂಚಾಚಾರ್ಯರ ಜಯಜಯಕಾರ ಮಾಡಿದರು. ಆ ಮೇಲೆ ಸನ್ನಿಧಿಯಲ್ಲಿರುವ ಶ್ರೀ ಸಕಲ ಪ್ರತಿಷ್ಠಿಗಳಾದ ಪಂಡಿತ ಬಂದ ಹಿರೇಮಠದ ಶಾಂತ ತೀರ್ಥ ಪಟ್ಟದ ಸ್ವಾಮಿಗಳು "ಗುರುಭಕ್ತಿ, ವೀರಶೈವ ಮತಸ್ಥಾಪನೆ, ಯಾರಿಂದ ಮಾಡಲ್ಪಟ್ಟಿತು" ಎಂಬ ವಿಷಯದಲ್ಲಿ ಅನೇಕ ಶಾಸ್ತ್ರಾಧಾರಗಳನ್ನು ಕೊಟ್ಟು ಪಂಡಿತ ಪಾಮರರು ಒಪ್ಪುವ ಹಾಗೆ ಭವ್ಯ ಭಾಷಣ ಮಾಡಿದರು. ಅಷ್ಟು ಹೊತ್ತಿಗೆ ಮಹಾಸ್ವಾಮಿಗಳ ಅನುಷ್ಠಾನಕ್ಕೆ ಸಮಯವಾದದರಿಂದ ಸರ್ವರು ಮಹಾಸ್ವಾಮಿಗಳವರಿಗೆ ಮಂಗಳಾರತಿ ಮಾಡಿ ಕಾಣಿಕೆಗಳನ್ನು ಅರ್ಪಿಸಿ ಪಾದೋದಕವನ್ನು ತೆಗೆದುಕೊಂಡು ತಮ್ಮ ತಮ್ಮ ಮನೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮವನ್ನು ಸ್ಮರಿಸುತ್ತ ಸಿಂಹಾಸನಾಧಿಪತಿಗಳ ಕೀರ್ತಿಯನ್ನು ಕೊಂಡಾಡುತ್ತ ತೆರಳಿದರು. ಈ ಪೀಠಾಚಾರ್ಯರಂತೆ ಪ್ರತಿಯೊಂದು ಪೀಠದವರು ಸಂಚಾರದಲ್ಲಿದ್ದು ಗುರುಭಕ್ತರ ಮನೆಗಳನ್ನು ಶೋಧಿಸುತ್ತ ಉದ್ಧಾರ ಮಾಡಿದರೆ ನಮ್ಮ ಸಮಾಜವು ಮುಂದಕ್ಕೆ ಬರುತ್ತದೆಂದು ತಿಳಿಸಲಿಕ್ಕೆ ಏನೂ ಸಂಶಯವಿಲ್ಲ.

ಸರ್ ನಾಡಗೌಡರ ಮುಂಟಪ್ಪ ದೇಸಾಯಿ

ಕೆಲೂರು

ಕನ್ನಡಿಗರ ಒಗ್ಗೂಡಿಕೆ.

ವು ವಿಷಯಗಳಲ್ಲಿ ಕನ್ನಡನಾಡು ಹಿಂದುಳಿದಿದೆ. ಪ್ರಿನ್ಸ್ ವೈಭವದಿಂದ ಮೆರೆದು ದಕ್ಷಿಣ ಹಿಂದು ದಲ್ಲೆಲ್ಲಾ ತನ್ನ ಸಂಸ್ಕೃತಿಯನ್ನು ಚೆಲ್ಲಿದ್ದ ಟಕ ರಾಷ್ಟ್ರವು ಈಗ ಛಿನ್ನ ಭಿನ್ನವಾಗಿದೆ. ಉಜ್ವಲ ದೇಶಾಭಿಮಾನವು, ಮರಾಠರ ಅತು ಸ್ವಾತಂತ್ರ್ಯವು, ಗೂರ್ಜರರ ಅಪಾರವಾದ ವಾಣಿ ಸತ್ವವು, ತಮಿಳರ ಸಾಹಿತ್ಯ ಪ್ರಿಯತೆಯೂ, ರ ಧೀರತೆಯೂ ಕನ್ನಡಿಗರಲ್ಲಿ ಕನಸಿನಲ್ಲಿಯೂ ರುವುದಿಲ್ಲ. ಇತರ ನಾಡುಗಳು ಸಜೀವವಾಗಿರು ದಕ್ಕೆ ಅಲ್ಲಿ ನಡೆಯುತ್ತಿರುವ ಬಹು ಮುಖ್ಯ ಚಳವಳಿಗಳೇ ನಿದರ್ಶನಗಳು. ರಾಜಕೀಯ ವಿಚಾ ವ ಕನ್ನಡಿಗರು ಬದಿಗೊತ್ತಿರುವರು. ಕನ್ನಡ ಯ ತಲೆಯಂತಿರುವ ಮೈಸೂರನ್ನು ಬಿಟ್ಟರೆ, ಕನ್ನ ದ ಇತರ ಭಾಗಗಳು ರಾಜಕೀಯ ವಿಭೇದಗಳ ಮತ್ತು ಪರಭಾಷೆಗಳ ಉಪಟಳಕ್ಕೂ ಸಿಕ್ಕಿ ನಲು ಗಿ ತಮ್ಮ ಸಂಸ್ಕೃತಿಯನ್ನೇ ಹಾಳುಮಾಡಿ ವುದರಲ್ಲಿವೆ. ಇನ್ನು ಕೆಲವು ಕಾಲ ಹೀಗೆಯೇ ರೆ ಮೈಸೂರು ಹೊರತು ಕನ್ನಡ ನಾಡಿನ ಬೇರೆ ಗಳೇ ಇಲ್ಲವೆಂದಾಗುವುದು. ಒಂದು ಕಡೆ ತೆಲ ರು, ಮತ್ತೊಂದು ಕಡೆ ಮರಾಠರೂ, ಬೇರೊಂದು ತಮಿಳರೂ, ಇನ್ನೊಂದು ಕಡೆ ಕೇರಳರೂ, ಕರ್ನಾ ದ ಭಾಗಗಳನ್ನು ಕಬಳಿಸುತ್ತಿರುವರು. ಅಂತೂ ತಲೆ ನಿಂತು ಕೈಕಾಲಿಲ್ಲದಂತಾಗುವುದು.

ಂತಹ ದುರ್ದಶೆಗೆ ಕಾರಣವೇನು ? ಇದಕ್ಕೆ ರ್ನಾಟಕವು ಒಡೆಯಲ್ಪಟ್ಟು, ಬೇರೆ ಬೇರೆ ದೊರೆತ ನ ಅಧಿಕಾರಾಂತರಗಳಿಗೆ ಸಿಲುಕಿ, ಒಂದೇ ರೀತಿಯ ಗತಿ ಮಾರ್ಗವನ್ನು ಅವಲಂಬಿಸಲು ಆಗದಿರುವುದೇ ರಣವು. ವಂಗವಿಭಜನೆಯ ಕಾಲದಲ್ಲಿ ಬಂಗಾಳಿಗ ಅದ್ಭುತ ಚಳವಳಿಯನ್ನು ನಡೆಯಿಸಿ ದೇಶ ಹಿತಕಾ ಗೆ ಮುಖ್ಯವಾದ ಏಕೀಕರಣವನ್ನು ಸ್ಥಾಪಿಸಿಕೊಂ ಭಾರತ ಪ್ರಭುತ್ವದವರು ಅವರ ಇಷ್ಟದಂತೆ ೇ ನಡೆಯಬೇಕಾಯಿತು. ಅಂತಹ ಎದೆಯ ಕೆಚ್ಚು ಡಿಗರಲ್ಲಿದೆಯೇ ? ಇನ್ನಾದರೂ ಬರುವುದೇ ? ಈ ಶ್ನೆಗಳನ್ನು ದೇಶಾಭಿಮಾನಿಯಾದ ಪ್ರತಿಯೊಬ್ಬ ಡಿಗನೂ ಕೇಳದಿರನು.

ಮೈಸೂರಿನ ಕನ್ನಡಿಗರು ತಮ್ಮ ದಯಾಳು ಸರ್ಕಾ ೇ ಎಲ್ಲವನ್ನೂ ತಮಗೆ ಮಾಡಿ ಕೊಡುವುದೆಂದು ನ್ನಿಸುವರು. ಹಾಗೆಯೇ ಇತರ ಭಾಗಗಳ ಕನ್ನ ರೂ ಎದ್ದಿದ್ದರೆ ಕರ್ನಾಟಕದ ದುರವಸ್ಥೆಯು ತೀಯವಾಗುತ್ತಿದ್ದಿತು. ಧರ್ಮ ಕರ್ಮ ಸಂಯೋ ಂದ ಧಾರವಾಡ ಪ್ರಾಂತ್ಯದ ಕನ್ನಡ ಬಂಧುಗಳು ರಿದು ತಮ್ಮ ಶೋಚನೀಯ ಅವಸ್ಥೆಯನ್ನು ಡಿದರು. ಇಡೀ ಕರ್ನಾಟಕವೇ ಲುಪ್ತವಾಗುತ್ತಿ ರ ಸ್ಥಿತಿಯನ್ನು ಕಂಡು ಸಹಿಸಲಾರದವರಾದರು. ನಾ ! ನೋಡಿ. ಅವರ ದೇಶಾಭಿಮಾನವನ್ನು ? ರ್ನಾಟಕ ಸಂಸ್ಕೃತಿಯ ಉಜ್ಜೀವನಕ್ಕೆ ಅನೇಕ ಯುಕರು ನಡುಕಟ್ಟಿ ನಿಂತಿರುವರು. ಅವರಿಗೆ ಶತ ಧನ್ಯವಾದಗಳು.

ಕರ್ನಾಟಕ ಶ್ರೇಯೋಭಿಲಾಷಿಗಳು ಬಳ್ಳಾರಿಯಲ್ಲಿ ಕಸಭೆಗಳನ್ನು ನಡೆಯಿಸಿದರು; ಕನ್ನಡ ಸಂಸ್ಕೃತಿಗ ವಿರುವ ಗಂಡಾಂತರಗಳನ್ನು ಗೊತ್ತು ಹಚ್ಚಿದರು. ಂದೆ ನಡೆಯಬೇಕಾದ ಚಳವಳಿಯ ರೀತಿಯನ್ನು ರ್ಮಿಸಿದರು. ಅಲ್ಲಿ ನಡೆದ ಕೀರ್ತನ ಸಭೆಗೆ ಮೈಸೂ ರಾದ ಶ್ರೀಮಾನ್ ರಾಜಕವಿಭೂಷಣ ಲಿಂಗರಾ ಸರರವರು ಅಧ್ಯಕ್ಷರಾಗಿದ್ದರೂ, ಇತರ ಪ್ರದೇ ಕನ್ನಡಿಗರು ಶ್ರೀಮಾನ್ ಅರಸರವರನ್ನು ತಮ್ಮ ರವೇ ತಿಳಿದು ಅವರ ಪ್ರತಿಭೆಗೆ ತಕ್ಕ ಮರ್ಯಾದೆ ನ್ನು ಮಾಡಿದುದೂ, ಕನ್ನಡಿಗರಲ್ಲಿ ರಾಷ್ಟ್ರ ಭಾವ ಯು ಮೂಡುತ್ತಿವೆಯೆಂಬುದನ್ನು ತಿಳಿಸುವುದು. ಈ ಗೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ಮುಂದೆ ಂದು ತಮ್ಮ ಪ್ರಾಂತ್ಯದಲ್ಲಿ ಕನ್ನಡ ಸಾಹಿತ್ಯ ಪರಿಷ ತ್ತನ್ನು ನಡೆಯಿಸಿ, ಇಡೀ ಕರ್ನಾಟಕದಿಂದ ಬಂದಿದ್ದ ಪ್ರತಿನಿಧಿಗಳನ್ನೆಲ್ಲಾ ಗೌರವಿಸಿದರು. ಪರಿಷತ್ತಿನ ಅಧ್ಯಕ್ಷರ ಭಾಷಣವು ಸದ್ವಿಚಾರಯುಕ್ತವಾದ ಸೂಕ್ತಿಗಳಿಂದವಾಗಿದ್ದು, ಕನ್ನಡ ನಾಡಿನ ಏಳ್ಗೆಗೆ ಬೇಕಾದ ಉಪಯುಕ್ತ ಸಲಹೆಗಳನ್ನೊಳಗೊಂಡಿದ್ದಿತು. ಇದೆಲ್ಲವೂ ಅಭಿನಂದನೀಯ ಸಂಗತಿಯು. ಕನ್ನಡಿಗರ ಒಗ್ಗೂಡಿಕೆಯ ಕೆಲಸವು ಕಷ್ಟಸಾಧ್ಯವಾದುದು. ರಾಜಕೀಯ ವಿಷಯಕಗಳಾದ ತೊಂದರೆಗಳು ನಮ್ಮಲ್ಲಿ ಬಗೆ ಹರಿಯುವ ಹಾಗಿಲ್ಲ. ಆರ್ಥಿಕ, ಸಾಹಿತ್ಯ, ವಿದ್ಯಾ ವಿಷಯಗಳಲ್ಲಿ ಮಾತ್ರ ನಮ್ಮವರಲ್ಲಿ ನಾವುಗಳೆ ಹುರುಪಿನಿಂದ ಕೆಲಸ ಮಾಡಿ ಕರ್ನಾಟಕ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾಗಿದೆ. ಜನ ಸಾಮಾನ್ಯದಲ್ಲಿ ವಿದ್ಯೆಯು ಹರಡಿದ ಹೊರತು ದೇಶವು ಏಳಿಗೆಯ ಸೋಪಾನವನ್ನು ಹತ್ತುವುದು ಅಸಾಧ್ಯವು. ಕನ್ನಡದಲ್ಲಿ ಹಲವು ವಿಷಯಗಳನ್ನೊಳಗೊಂಡ ಸುಲಭ ಶೈಲಿಯ ಗ್ರಂಥಗಳು ತೀರ ಸ್ವಲ್ಪ, ಯಾಕೆ ! ಇಲ್ಲವೆಂದೇ ಹೇಳಬಹುದು. ವಿದ್ಯಾಪ್ರಚಾರಕ್ಕೆ ಗ್ರಂಥಾಭಿವೃದ್ಧಿಯು ಅತ್ಯಾವಶ್ಯಕವಾಗಿದೆ. ಸಾಹಿತ್ಯ ಪರಿಷತ್ತಿನವರು ಇತರ ಭಾಷೆಗಳ ಉದ್ಗ್ರಂಥಗಳನ್ನು ಕನ್ನಡಿಸುವುದರಿಂದಲೂ, ಹೊಸ ರೀತಿಯಲ್ಲಿ ಕನ್ನಡ ಭಾಷೆಯಲ್ಲಿ ಉತ್ತಮ ಗ್ರಂಥಗಳನ್ನು ಬರೆಯುವರಿಗೆ ಪ್ರೋತ್ಸಾಹ ಕೊಡುವುದರಿಂದಲೂ, ಈ ಕೆಲಸವನ್ನು ಮಾಡಬಹುದು.

ಕರ್ನಾಟಕ ಏಕೀಕರಣಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಯೂ ಮತ್ತೊಂದು ತಳಹದಿಯಾಗಿರುವುದು. ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುವು. ಕೆಲವರು ಈಗ್ಗಾಗಲೇ ಸ್ಥಾಪಿಸಲ್ಪಟ್ಟಿರುವ ಮೈಸೂರು ವಿಶ್ವವಿದ್ಯಾಲಯವೇ ಇಡೀ ಕರ್ನಾಟಕ ವಿಶ್ವವಿದ್ಯಾಲಯವಾಗಬೇಕೆಂದು ಬಯಸುವರು. ಕೆಲವರು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವೊಂದನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಬೇಕೆನ್ನುವರು. ಒಂದೂವರೆ ಕೋಟಿ ಪ್ರಜಾಸಂಖ್ಯೆಯುಳ್ಳ ಕನ್ನಡ ನಾಡಿನಲ್ಲಿ ಒಂದಲ್ಲ ಹತ್ತು ವಿಶ್ವವಿದ್ಯಾಲಯಗಳಿದ್ದರೂ ಕಡಿಮೆಯೇ ಸರಿ ! ಜನರಲ್ಲಿ ವಿದ್ಯಾಕಾಂಕ್ಷೆಯು ಹೆಚ್ಚಿದ ಹಾಗೆಲ್ಲಾ ಅನೇಕ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶವು ದೊರೆಯುವುದು. ಸದ್ಯಕ್ಕೆ ಕನ್ನಡಿಗರು ಮೈಸೂರು ವಿಶ್ವವಿದ್ಯಾಲಯವನ್ನೇ ಇಡೀ ಕರ್ನಾಟಕ ವಿದ್ಯಾಲಯವೆಂದು ಭಾವಿಸಿ ಜನ ಸಾಮಾನ್ಯದಲ್ಲಿ ವಿದ್ಯಾ ವಿಕಾಸವನ್ನುಂಟುಮಾಡಿ, ಕಾಲಕ್ರಮೇಣ ಉತ್ತರ ಕರ್ನಾಟಕಕ್ಕೆ ಮತ್ತೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಬಹುದು. ಯಾವ ವಿಧದಲ್ಲಾದರೂ, ಕರ್ನಾಟಕ ಸಂಸ್ಕೃತಿಯನ್ನುಳಿಸಿ ಕೊಂಡರೆ ಈಗಿಲ್ಲದಿದ್ದರೆ ಮುಂದೆಯಾದರೂ ಕರ್ನಾಟಕ ಏಕೀಕರಣವು ಸಾಧ್ಯವಾಗುವುದು.

ಜಿ. ಸಿ. ಶಂಕರಪ್ಪ ಮಹಾರಾಜಾ ಕಾಲೇಜ
ಮೈಸೂರು.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು
ಆಸನಪಟ್ಟಿಯಲ್ಲಾದ ವಿಜಯದಶಮೀ ಮಹೋತ್ಸವ
ಸಮಯದಲ್ಲಿ ಶ್ರೀಮದಭಿನವರೇಣುಕಭಗವ
ತ್ಪಾದ ಜಗದ್ಗುರು ಶಿವಾನಂದರಾ
ಜೇಂದ್ರ ಶಿವಾಚಾರ್ಯ ಮಹಾ
ಸ್ವಾಮಿಗಳವರ ದಿವ್ಯಸನ್ನಿ
ಧಿಯಲ್ಲಿ ಭಕ್ತಿಯಿಂದ
ಒಪ್ಪಿಸಿದ

“ಮಣಿಮಾಲಿಕಾ”

ಶ್ರೀಮದ್ರಂಭಾಪತ್ತನ |
ಧಾಮಕವಿಖ್ಯಾತಕಮಲ ರಾಜಿತಹಂಸಂ ||
ಸೋಮೇಶಲಿಂಗ ಜನ್ಮಂ,
ಪ್ರೇಮಂ ಮಿಗೆ ಪೊರೆಯುಗೆಮ್ಮ ನಾಮುನಿಹಂಸಂ ||೧||
ಗೋರಕ್ಷ ಮುಖ್ಯಧೂರ್ತರ |
ಸಾರಮಬಾವಂ ಸಮಂತು ಶಿಕ್ಷಿಸಿಧರೆಯಂ ||
ಪೋರುತ ಕೃಪೆಯಿಂ ಪೊರೆವನೊ |
ಧೀರಂ ಶ್ರೀ ರೇಣುಕಾರ್ಯನೋವುಗೆ ನಮ್ಮಂ ||೨||
ಚೋಳೇಂದ್ರ ಮುಖ್ಯನೃಪರಿಂ |
ದೋಳ್ನುತಿ ಪಾದಪೂಜೆಗೊಂಡಾಮಹಿಮಂ ||
ಕಾಳಿನಿವಾರಕನಮಗಂ |
ಭಾಳಾಂಬಕನೊಲ್ದಗೆಮ್ಮ ನಾಮುನಿವಂದ್ಯಂ ||೩||
ವಿಜಯೇಂದ್ರಚೋಳನುಮ್ಮರ |
ಭಜಿಸುತೆ ಶ್ರೀರೇಣುಕಾರ್ಯ ಗುರುವಂನಲಿವಿಂ ||
ಅಜಹರಿಹರಶಿವಪದಮಂ |
ಸುಜನರ್ ತಾವ್ ಪಡೆದರಲ್ತೆ ಪೊದಳೊಳ್ನಿಸದಂ ||೪||
ರಾವಣನನುಜ ವಿಭೀಷಣ |
ನಾವಸದಯನಗ್ರ ಕರಗಿ ಭಕ್ತಿಯೊಳಾಗಂ
ಕೋವಿದನುತ ಕೋಟಿತ್ರಯ |
ಭಾವಜರಿಪುಲಿಂಗವಾಂತನವನು ಸ್ಥಿರದಿಂ ||೫||
ನೋಡಿದನೆತ್ತನೋ ಸುಕೃತಿ ನಿನ್ನಯಮೂರ್ತಿಯ
ನೀಧರಿತ್ರಿಯೊಳ್ | ಪಾಡಿದನೆತ್ತನೋ ಸುಕೃತಿ ನಿನ್ನಯ
ನಾಮಮನಾಂತು ಚಿತ್ತದೊಳ್ || ಮಾಡಿದಶಿಷ್ಯನೇ
ಸುಕೃತಿ ನಿನ್ನಯನೇಯಮನುತ್ತಮರ್ಕಳೊಳ್ | ಬೇಡುವೆ
ನಾಂ ಭವತ್ಚರಣಭಕ್ತಿಯನಾವಗಮೊಲ್ದು ರೇಣುಕಾ ||
ಗಣಿಸದ ಮಾನ್ಯರಿಲ್ಲ ಮನದೀಯ ಪದದ್ವಯಮಂ
ನಿರಂತರಂ | ತಣಿಯದ ಭಕ್ತರಿಲ್ಲ ತವಬೋಧಸುಧಾತ
ಟಿನೀ ಪ್ರವಾಹದಿಂ || ಮಣಿಯದವಾದಿಯಿಲ್ಲ ತವ ಮೂ
ರ್ತಿಯನೀಕ್ಷಿಸಿದಾಕ್ಷಣಾರ್ಧದೊಳ್ | ಫಣಿಪತಿಭೂ
ಷಣಭಜಕರೇವಣಸಿದ್ಧಮಹಾಮುನೀಶ್ವರಾ ||೭||
ಗುರುವರನು ಘನರೇಣುಕಾರ್ಯನು |
ಧರೆಯೊಳಗ ದರ್ಶನವನು ಪಡೆದನ |
ಅರಿಸಿದನು ನಿಜಶಿಷ್ಯನನು ವರ ರುದ್ರಮುನಿಪನನು ||
ಮೆರೆವ ರಂಭಾಪುರಿಯ ಪಾವನ
ತರದ ಪೀಠಮನೊಂದು ಬಾರಿನ |
ಇರುತಿಹುದು ಪರವೀರಶೈವಮದಂದಿನಿಂ ಜಗದೊಳ್ ||೮||
ವೀರಸಿಂಹಾಸನದಿ ಮೆರೆದರು |
ವಾರಕರುಶಾಖೋಪಶಾಖೆನಿಸಿದ ||
ಧೀರಗುರುವರರಮಲ ಚರಿತರು ವಿಪುಲಗುಣಗಣರು ||
ಭೂರಿವೈರಾಗ್ಯದೊಳು ಬೆರೆದರು,
ಘೋರಭವಮಾಲೆಯನೆ ತುಳಿದರು |
ಪಾರಮಾರ್ಥವಿಚಾರಸುಖಸಂಪೂರ್ಣರೆನಿಸಿದರು ||೯||
ಶಿವನಮುಖದಿಂದೊಗೆದ ಗುರುವರ |
ಶಿವಸುತನ ರೇಣುಕನ ಪೀಠದಿ |
ಭುವನವಿನುತಾಭಿನವ ರೇಣುಕನಿಂದು ಮೆರೆದಿಹನು ||
ಶಿವನೊಲ್ಲಾಸದಿನಸು ವಿಬುಧರ |
ನಿವಹದಿಂ ಮಾನಿತನು ನೋಡಿದೊ |
ಶಿವನೆ “ಶಿವರಾಜೇಂದ್ರದೇಶಿಕ” ನೆನಿಸಿಯೆ ಶಿವನು ||೧೦||
ಆಸನಪಟ್ಟಿಯೊಳಿಂದು ನೆರೆದರು |
ಮಾನನಿಧಿ ಶಿವರಾಜಸೇವನ,
ಭೂನುತನ ದರ್ಶನದಿಲಾಭಕ ಭಕ್ತಸಂಕುಲವು ||
ಏನನೆಂಬೆನು ನೋಡಲೀಪುರ
‘ ಆಸನಪಟ್ಟಿ ’’ ಯಿದಲ್ಲವಿದುವರ |
‘ಜ್ಞಾನಪಟ್ಟಿ’’ ಯೆನಿಸ್ಪಮಹಿಯಿಂ ಶೋಭಿಸುತ್ತಿಹುದು ||೧೧||
ಪರಮಪಾವನ ಮಹತರಾಯರ |
ಶರಧಿವರ್ಧಕ ಕೃಷ್ಣರಾಜೇ |
ಶ್ವರಗೆ ಮಂಗಳಮಕ್ಕೆ ‘ಪಂಚಾಚಾರ್ಯ’ ಗುರುವರ ||
ನಿರುಪಮರ ಮುನಿಮುಖ್ಯಪಂಪ್ಸರ |
ಧರೆಯೊಳೆಸೆವರ ಸತ್ಯಯುಕ್ತರ |
ಕರುಣೆಯಿಂ ಕೂಡಿದರ ವಿಖ್ಯಾತಿಪದಬಲದಿಂದೆ ||೧೨||

ಕೀರ್ತನಕೇಸರಿ ಕವಿವತ್ಸ ಮ. ಶಿವಮೂರ್ತಿಶಾಸ್ತ್ರೀ.
ತುಮಕೂರು.

೧೦ ನೆಯ ಅಖಿಲ ಭಾರತ ವೀರಶೈವ ಮಹಾಸಭೆ, ಬೆಂಗಳೂರು.

ಈ ಕೆಳಗೆ ನಮೂದಿಸಿರುವವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸುವದಕ್ಕೆ ಯೋಗ್ಯ ಕಂಡರೆ ನಿಯಾಮಕ ಮಾಡಬಹುದು

(1) ' ವೀರಶೈವ ಧರ್ಮಗ್ರಂಥಾಲಯ "

ಸದರಿ ಗ್ರಂಥಾಲಯವು ಉತ್ತಮ ರೀತಿಯಿಂದ ಇಂಡಿಯಾ ದೇಶದಲ್ಲಿ ಯಾವ ಪಟ್ಟಣದಲ್ಲಿಯೂ ಇಲ್ಲದಿರುವ ಪ್ರಯುಕ್ತ ಸದ್ಯಕ್ಕೆ ಬೆಂಗಳೂರು ಧಾರವಾಡ, ಬೊಂಬಾಯಿ ಮದ್ರಾಸ್, ಹೈದರಾಬಾದ ಕಾಶಿ, ಈ ಪಟ್ಟಣಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿ ಈಗ ಪ್ರಿಂಟಾಗಿರುವ ಮತ ಗ್ರಂಥಗಳನ್ನೆಲ್ಲಾ ಆಯಾಯ ಸ್ಥಳಗಳಲ್ಲಿ ಕ್ರೋಡೀಕರಿಸಿಟ್ಟು ಉತ್ತರೋತ್ತರ ದೊರಕುವ ಗ್ರಂಥಗಳನ್ನೆಲ್ಲಾ ಶೇಖರಿಸುವದಕ್ಕೆ ಏರ್ಪಾಡು ಮಾಡುವುದರಿಂದ ಆಯಾಯ ಪ್ರಾಂತ್ಯದ ವೀರಶೈವರಿಗೆ ಅನುಕೂಲವಾಗುವದಲ್ಲದೆ ಮತದ ಉತ್ಕೃಷ್ಟತೆಯನ್ನು ತೋರ್ಪಡಿಸಿದಂತಾಗುವುದು.

(೭) ' ವೀರಶೈವ ಬ್ಯಾಂಕು

ವೀರಶೈವರು ವ್ಯಾಪಾರ ಕೈಗಾರಿಕೆ ವ್ಯವಸಾಯಗಳಲ್ಲಿ ಮುಂದುವರಿಯಬೇಕಾದರೆ ಅವರುಗಳ ಸೌಕರ್ಯಕ್ಕಾಗಿ ಒಂದು ಬ್ಯಾಂಕು ಅತ್ಯವಶ್ಯಕವಾಗಿ ಬೇಕಾಗುತ್ತದೆ ನಮ್ಮವರಲ್ಲಿ ಕಲವರು ಶ್ರೀಮಂತರಾಗಿಯೂ ವ್ಯಾಪಾರದಲ್ಲಿ ನಿಪುಣರಾಗಿಯೂ ಇರುವರು ಮತ್ತೆ ಕಲವರು ವ್ಯಾಪಾರದಲ್ಲಿ ಬುದ್ಧಿಶಾಲಿಗಳಾಗಿದ್ದಾಗ್ಯೂ ಪ್ರೋತ್ಸಾಹ ಕೊಡುವವರಿಲ್ಲದೆ ಹಿಂದುಳಿದಿರುವರು ಪ್ರಪಂಚದಲ್ಲಿ ದರಿದ್ರನೇ ದೊಡ್ಡಪಾಪಿ ಎಂಬ ಗಾದೆಯಂತೆ ಜೀವನಮಾನ ಕಾಲದಲ್ಲಿ ತನ್ನ ಮೇಧಾಶಕ್ತಿಯ ಸಾಮರ್ಥ್ಯದಿಂದ ವಿಶೇಷವಾಗಿ ದ್ರವ್ಯವನ್ನು ಆರ್ಜಿಸಿ ಅದನ್ನು ಸದುಪಯೋಗ ಮಾಡುವದರಿಂದ ಇಹಪರದಲ್ಲಿಯೂ ಕೀರ್ತಿ ಲಭಿಸುವದು ಮೈಸೂರು ಬ್ಯಾಂಕಿನಿಂದ ಅನೇಕರಿಗೆ ಎಷ್ಟು ಪ್ರಯೋಜನವಾಗುತ್ತಿದೆ ಎಂಬ ವಿಷಯವು ಸರ್ವರಿಗೂ ತಿಳಿದ ಅಂಶವಾಗಿದೆ ಸದರಿ ಬ್ಯಾಂಕಿನಲ್ಲಿ ಉತ್ತಮೋತ್ತಮರೀತಿಯಿಂದ ಅಭಿವೃದ್ಧಿಗೆ ತಂದಿರುವ ರಾಜಕೀಯ ಸಾಮಾಜಿಕ ಮೊದಲಾದವುಗಳಲ್ಲಿ ಪೂರ್ಣಾನುಭವಿಗಳಾದ ದಿವಾನ್ ಬಹದ್ದೂರ್ ಸರ್ ಕೆ ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಮಹಾಸಭಾ ಪರವಾಗಿ ವೀರಶೈವ ಬ್ಯಾಂಕನ್ನು ಸ್ಥಾಪಿಸುವದರಿಂದ ವೀರಶೈವರ ಅಭಿವೃದ್ಧಿಗೆ ಮುಖ್ಯ ಆಧಾರಭೂತವಾಗುತ್ತದೆ ಇದರ ಸ್ಥಾಪನೆಯಿಂದ ಅನೇಕ ವೀರಶೈವ ವಿದ್ಯಾವಂತ ಯುವಕರಿಗೆ ನೌಕರಿ ಕಲ್ಪಿಸಿ ಕೊಟ್ಟಂತೆ ಆಗುತ್ತದೆ ದೇಶದಲ್ಲಿ ಬ್ಯಾಂಕುಗಳು ಹೆಚ್ಚಿದ ಹಾಗೆಲ್ಲಾ ದೇಶಾಭಿವೃದ್ಧಿಯಾಯಿತೆಂದು ಹೇಳುವದರಲ್ಲಿ ಸಂದೇಹವಿಲ್ಲ

(3) ಅಡ್ವೈಜರಿ ಕಮಿಟಿ (ಸನ್ಮಾರ್ಗ ಬೋಧಕ ಸಂಘ)

ವಿದ್ಯಾರ್ಥಿಗಳು ವಿದ್ಯಾರ್ಜನೆಯ ಕಾಲದಲ್ಲಿ ಅವರವರ ಮೇಧಾಶಕ್ತಿಗೆ ತಕ್ಕಂತೆ ಇಂಥಾ ಮಾರ್ಗದಲ್ಲಿಯೇ ಪ್ರವೇಶಿಸುವುದು ಒಳ್ಳೆಯದೆಂದು ಅಡ್ವೈಸ್ ಮಾಡತಕ್ಕ ಕಮಿಟಿಯೇ ಇಲ್ಲ ಇದ್ದರು ಒಂದು ಮಾರ್ಗವನ್ನು ಅವಲಂಬಿಸಿದ್ದನ್ನೇ ಕೆಲವರು ಹಿಂಬಾಲಿಸಿ ಮನೋಭಗ್ನರಾಗಿ ಕುಳಿತಿರುವದನ್ನು ನೋಡುತ್ತಿರುವದಾಗಿದೆ ತಮಗೆ ವಿದ್ಯಾರ್ಜನೆಯ ಕಾಲದಲ್ಲಿ ಸರಿಯಾಗಿ ಅಡ್ವೈಸ್ ಕೊಡುವವರೇ ಇಲ್ಲದಿಲ್ಲವೆಂದು ವ್ಯಥೆಪಡುವರು ತಮಗೆ ಸರ್ಕಾರದಲ್ಲಿ ದೊಡ್ಡ ನೌಕರಿ ಸಿಕ್ಕುತ್ತವೆ ಎಂಬ ಬಯಕೆಯಿಂದ ದೊಡ್ಡ ಪರೀಕ್ಷೆಗಳನ್ನು ಮಾಡಿಕೊಂಡಾಗ್ಯೂ ನೌಕರಿ ದೊರೆಯದೆ ಕೆಲವರ ಶಿಫಾರಸ್ಸಿಗೋಸ್ಕರ ಅನೇಕಾವರ್ತಿ ಅಲೆದಾಡುತ್ತಿರುವರು ಇದರ ನಿವಾರಣೆಗೋಸ್ಕರ ಅಡ್ವೈಜರಿಕಮಿಟಿಯು ಏರ್ಪಾಡಿನಿಂದ ಅದರ ಸೆಕ್ರೆಟರಿಯು ಸರ್ಕಾರಿಯ ಎಲ್ಲಾ ಡಿಪಾರ್ಟ್‌ಮೆಂಟುಗಳ ಎಸ್ಟಾಬ್ಲಿಷ್‌ಮೆಂಟ್ ತಖ್ತೆಯನ್ನು ಪ್ರತಿ ವರ್ಷವೂ ತರಿಸಿಕೊಳ್ಳುತ್ತಾ ಇದ್ದು ವಿದ್ಯಾರ್ಥಿಯ ಮೇಧಾಶಕ್ತಿಗೆ ತಕ್ಕಂತೆ ವಿದ್ಯಾರ್ಜನೆ ಮಾಡಲು ಅವಕಾಶ ಕೊಟ್ಟು ಆಯಾಯ ಸರ್ಕಾರಿ ಡಿಪಾರ್ಟ್‌ಮೆಂಟಿಗೆ ಶಿಫಾರಸ್ ಮಾಡುವುದರಿಂದ ಉಪಯುಕ್ತವಾಗಿ ಪ್ರಯೋಜನವುಂಟಾಗಿ ವಿದ್ಯಾರ್ಥಿಗಳು ದುರಾಚಾರ ದುರ್ಮಾರ್ಗದಲ್ಲಿ ವರ್ತಿಸುವದಕ್ಕೆ ಅವಕಾಶವಿರುವದಿಲ್ಲ ದೊಡ್ಡ ನೌಕರಿಗಳ ನಾಮಿನೇಷನ್ ಬಗ್ಗೆ ಕಮಿಟಿಯವರು ಶಿಫಾರಸ್ ಮಾಡಲು ಅನುಕೂಲವಿರುತ್ತದೆ ಸರ್ಕಾರಿ ನೌಕರಿಯಲ್ಲಿ ಮುಂದುವರಿಯಲು ಇಚ್ಛಿಸದ ವಿದ್ಯಾರ್ಥಿಗಳಿಗೆ ಕೈಗಾರಿಕಾ ವ್ಯಾಪಾರ ವ್ಯವಸಾಯಗಳಲ್ಲಿ ಅವರವರ ಮೇಧಾಶಕ್ತಿಗೆ ತಕ್ಕಂತೆ ಉತ್ತಮ ರೀತಿಯ ಅಡ್ವೈಸ್ ಕೊಡಲು ಅವಕಾಶವಿರುತ್ತದೆ ದೊಡ್ಡ ಅಧಿಕಾರಿಗಳು ಶ್ರೀಮಂತರು ದೊಡ್ಡ ವ್ಯಾಪಾರಿಕರು ಬಾರಿ ಜಮೀನುದಾರರ ಬುದ್ಧಿ ವಿಶಾರದರು ಈ ಕಮಿಟಿಗೆ ಮೆಂಬರುಗಳಾಗಿರತಕ್ಕದ್ದು

(4) ವೀರಶೈವ ಉಪನ್ಯಾಸಕರು

ಮಿಷನರಿ ಪಾದ್ರಿಗಳಂತೆ ಮಹಾಸಭೆಯ ಪ್ರಾಂತಿಕ ಸಭೆಗಳಿಂದ ಆಗುವ ಪ್ರಯೋಜನ, ಮತದ ಸನಾತನ ಆಚಾರ ವಿಚಾರ, ಕೈಗಾರಿಕ, ವ್ಯಾಪಾರ ವ್ಯವಸಾಯ ಮೊದಲಾದ ವಿಷಯಗಳಲ್ಲಿ ಒಂದೊಂದು ಪ್ರಾಂತಕ್ಕೆ ಒಬ್ಬೊಬ್ಬ ಉಪನ್ಯಾಸಕರನ್ನು ನೇಮಕ ಮಾಡುವದರಿಂದ ಜನರಿಗೆ ಉತ್ತೇಜನ ಒದಗಿ ಉನ್ನತಿ ಹೊಂದಲು ಕಾರಣವಾಗುತ್ತದೆ

(5) ಮತಸಿದ್ಧಾಂತವನ್ನು ರಾಜಕೀಯ ಭಾಷೆ ಇತರ ಭಾಷೆಗಳಲ್ಲಿ ಪ್ರಕಟಿಸುವದು. ವೀರಶೈವ ಮತ ಸ್ವರೂಪವು ಪರದೇಶದವರಿಗೂ ಮತ್ತು ಮತಸ್ಥರಿಗೆ ಸ್ಪಷ್ಟವಾಗಿ ತಿಳಿಯುವ ರೀತಿ ಒಂದೊಂದು ಶಾಸ್ತ್ರದಲ್ಲಿ ನಿಪುಣರಾಗಿರುವ ಸಂಸ್ಕೃತ ವಿದ್ವಾಂಸರಿಂದಲೂ ಇಂಗ್ಲೀಷ್ ಭಾಷಾಭಿಜ್ಞರಿಂದಲೂ ಆರಿಸಿದವರುಗಳಿಂದ ಮಾಡಿದ ಒಂದು ಕಮಿಟಿಯನ್ನು ಮಾಡಿ ಅದರ ಮೂಲಕ ಪ್ರಕಟಿಸುವದು ಉತ್ತಮವಾಗಿ ಕಾಣಿಸುತ್ತದೆ ಈಗ ಅವರವರ ಬುದ್ಧಿಗನುಸಾರವಾಗಿ ವೀರಶೈವ ಮತ ಸಿದ್ಧಾಂತ ಅಥವಾ ಸ್ವರೂಪ ಬರೆಯುವದಕ್ಕೆ ಒಬ್ಬೊಬ್ಬರೇ ಪ್ರವೇಶಿಸುವದರಿಂದ ಮತ ಸ್ವರೂಪವು ವಿಕಲ್ಪವಾಗಿರುತ್ತದೆ

(6) ಇಂಡಿಯಾ ಕಾಯಿದೆ ಕೌನ್ಸಿಲ್ ಸ್ಟೇಟ್ ಕೌನ್ಸಿಲ್, ಬೊಂಬಾಯಿ ಮದ್ರಾಸ್ ಹೈದರಾಬಾದ್, ಮೈಸೂರು ಕಾಯಿದೆ ಕೌನ್ಸಿಲ್‌ಗಳಿಗೆ ವೀರಶೈವ ಪ್ರತಿನಿಧಿಯೊಬ್ಬರನ್ನು ಆರಿಸಿ ಕೂಡುವ ಅಧಿಕಾರವನ್ನು ಆಯಾಯ ಪ್ರಾಂತ್ಯದ ಸಂಸ್ಥೆಯವರಿಗೆ ದಯಪಾಲಿಸುವಂತೆ ಆಯಾಯ ಗೌರ್ನಮೆಂಟಿನವರನ್ನು ಪ್ರಾರ್ಥಿಸಿಕೊಳ್ಳುವದು.

(7) ಕಾರಾಗೃಹದಲ್ಲಿ (ಜೈಲಿನಲ್ಲಿ) ವೀರಶೈವ ವ್ಯಕ್ತಿಗಳ ಶರೀರದಿಂದ ಲಿಂಗವಿಯೋಗ ಮಾಡದಂತೆಯೂ, ವೀರಶೈವರಿಂದಲೇ ಪಾಕಾದಿಗಳನ್ನು ಮಾಡಿಸಿ ಇಡುವಂತೆಯೂ, ಇಂಡಿಯಾ ಗೌರ್ನಮೆಂಟಿನವರನ್ನೂ ನೇಟಿವ್ ಗೌರ್ನಮೆಂಟಿನವರನ್ನೂ ಪ್ರಾರ್ಥಿಸಿಕೊಳ್ಳುವದು.

(8) ಮದ್ರಾಸಿಗೆ ವೀರಶೈವ ವಿದ್ಯಾರ್ಥಿಗಳು ಬಿ ಎಲ್ ವಗೈರೆ ಪರೀಕ್ಷೆಗಳ ಅಭ್ಯಾಸಕ್ಕಾಗಿ ಏಕೆಂಪವಾಗಿ ಹೋಗುತ್ತಿರುವದರಿಂದಲೂ ಅಲ್ಲಿ ಸರಿಯಾದ ಹಾಸ್ಟೆಲ್ ಇಲ್ಲದಿರುವದರಿಂದಲೂ ಒಂದು ವೀರಶೈವ ಹಾಸ್ಟೆಲ್ ಏರ್ಪಡಿಸುವದು

(9) ವೀರಶೈವ ಮತಕ್ಕೆ ಮಹದುಪಕಾರವಾಗಿರುವ ಮಹನೀಯರ ಛಾಯಾಚಿತ್ರ (ಫೋಟೋ) ಯುಕ್ತವಾದ ಸಂಕ್ಷಿಪ್ತ ಚರಿತ್ರೆಯನ್ನು ಪ್ರಕಟಿಸುವದು ಇದರಿಂದ ಇತರರಿಗೂ, ಮಹದುಪಕಾರ ಮಾಡುವದಕ್ಕೆ ಪ್ರೋತ್ಸಾಹ ಕೊಟ್ಟಂತೆಯೂ, ಮಹದುಪಕಾರ ಮಾಡಿದವರಿಗೆ ಕೃತಜ್ಞತೆ ತೋರಿಸಿದಂತೆಯೂ ಆಗುವದಲ್ಲದೆ ವೀರಶೈವ ಸಮಾಜದ ಹೆಚ್ಚು ಅಭಿವೃದ್ಧಿಯಾಗಲು ಕಾರಣಭೂತವಾಗುತ್ತೆ.

ಎನ್ ಬಿ —ಮೇಲ್ಕಂಡ ವಿಷಯಗಳನ್ನು ಸ್ಥಳ ಸಂಕೋಚದಿಂದ ಸಂಕ್ಷೇಪವಾಗಿ ವಿವರಿಸಿರುತ್ತೆ

ಜಿ ಕೆ ರುದ್ರಪ್ಪ

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಷ್ಟು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಸಿಸ್ಸಿ ಬಂಟಿತಲೆನೋವು ತಲೆಯಲ್ಲಿನ ರೋಗಗಳು ಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗು ನೆಗಡಿ ಶೀತ ವ್ಯಾಧಿಗಳನ್ನು ಸ್ವಸ್ಥಪಡಿಸುವ ಸಾಮರ್ಥ್ಯವನ್ನು ಸಹ ಹೊಂದಿರುತ್ತದೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಪರಿಮಳವಾಗುವುದು. ಇದನ್ನು ಅನೇಕ ಪ್ರಜೆಗಳು ತಮ್ಮ ಗೃಹದಲ್ಲಿ ಕಟುಂಬದವರ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುತ್ತೆ.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ ಪಿ ೦ ೬ ೦ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ಅಂಚೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಸುವಂತೆ ಬರೆಯಿರಿ —ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[72] ಪೋ ಬಾ ೫೧೦ ಮದರಾಸು

ASIATIC GOVERNMENT SECURITY LIFE ASSURANCE CO LTD, MYSORE

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಶೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮೊದಲನೆಯದು.

ಆದ್ದರಿಂದ ಯಾವಾಗಲೂ 'ಏಷ್ಯಾಟಿಕ್' ಕಂಪನಿಯಲ್ಲಿಯೇ ವಿಮೆಮಾಡಿರಿ

ಹೇಗೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ ಮತ್ತು ಇದರ ನಿಬಂಧನೆಗಳು (ರೂಲ್ಸು) ಲಾಭಕರವಾದುವು

ಪಾಲಿಸಿದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಬಾಬಿನ ಮೇಲೆಯೂ ಪಾಲಿಸಿದಾರರಿಗೆ ಅವರ ಸ್ಥಿರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ

ಲಾಟರಿ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಡಿಸೆಂಬರ್ 1938 ಕ್ಕೆ ನಡೆಯುತ್ತದೆ

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು.

(1) ಡಿ ವಿ ರಾಮರಾವ್ ಚೀಫ್ ಏಜೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್ ಸಯ್ಯಾಜಿರಾವ್
ರೋಡ್, ಮೈಸೂರು
(2) ಎಂ. ಎಸ್. ಭರಾದ
ಚೀಫ್ ಏಜೆಂಟ್ ಹುಬ್ಬಳ್ಳಿ ಮತ್ತು ಬಳ್ಳಾರಿ
(3) ಹೈದರಾಬಾದ್ ಏಜೆನ್ಸಿ ಹೌಸ್,
ಚೀಫ್ ಏಜೆಂಟ್ ಹೈದರಾಬಾದ್ (ದಕ್ಷಿಣ)

[20]

ಇದು ಮೈಸೂರು ನಗರ ಚಾಮರಾಜ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲಟ್ಟಿತು.

EGISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃಪ್ರಸೀದಂತು REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಮಿಹಿರರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ನೇ ನವಂಬರ್ ೧೯೨೭ [ಸಂಚಿಕೆ ೨೬.

ಸರ್. ಜೆ. ಸಿ. ಬೋಸ್‌ರವರ ಹಿತೋಪದೇಶವು.

ಮೈಸೂರ ವಿಶ್ವವಿದ್ಯಾನಿಲಯದ ಕಾನ್ವೋಕೇ …ಸ್ಥೆಯು ಕಳೆದ ತಾ|| ೩ನೆಯ ಗುರುವಾರ ಪ್ರಾತಃ …೧೧ ಘಂಟೆಗೆ ಪದ್ಧತಿಯಂತೆ ಜಗನ್ಮಾನ್ಯರಾದ ಪ್ರಾ… …ಭಾಂಗಣದಲ್ಲಿ ಪ್ರೋ ಛಾನ್ಸಲರರಾದ ನಮ್ಮ …ಯುವರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. …ಎಂ ಎ, ಮುಂತಾದ ಪರೀಕ್ಷೆಗಳಲ್ಲಿ ಉತ್ತೀ… …ರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನೂ ಬಹು …ನಪದಕಗಳನ್ನೂ ಶ್ರೀಯುವರಾಜರವರು ದಯೆ… …ದ ನಂತರ ಸಸ್ಯಚೈತನ್ಯಶಾಸ್ತ್ರದಲ್ಲಿ ಅದ್ವಿತೀಯ …ಡಿತರಾಗಿ ಸುಪ್ರಸಿದ್ಧರಾದ ವಿಜ್ಞಾನಶಾಸ್ತ್ರಕೋವಿದ …ದ ಲೋಕದಲ್ಲೆಲ್ಲ ವಿಖ್ಯಾತರಾಗಿರುವ ಸರ್ ಜಗ …ಶಚಂದ್ರ ಬೋಸ್‌ರವರು ವಿದ್ಯಾರ್ಥಿಗಳಿಗೆ ಹಿತ …ಧಕವಾದ ಉಪನ್ಯಾಸವನ್ನು ಮಾಡಿದರು. ಲೋಕ …ಲ್ಲಿ ಪ್ರಾಣಿಗಳಿಗಿರುವಂತೆ ಸಸ್ಯಗಳಿಗೂ ಸಹ ಪ್ರಾಣ …ಡಿಯ ಚಲನೆಯೂ ಸುಖದುಃಖಾನುಭವವೂ ತನ್ನ …ೋಧಿಗಳನ್ನು ನಿರೋಧಿಸುವ ಶಕ್ತಿಯೂ ಇರುವು …ದು ಇವರು ತಾವೇ ಕಂಡುಹಿಡಿದಿರತಕ್ಕ ನೂತನ …ತ್ರಗಳ ಸಹಾಯದಿಂದ ಜಗತ್ತಿಗೆಲ್ಲ ತೋರ್ಪಡಿಸಿ …ೀಯರಾದ ಸುಪ್ರಸಿದ್ಧ ವೈಜ್ಞಾನಿಕರೆಲ್ಲರಿಂದಲೂ …ಸೆಯನ್ನು ಪಡೆದಿರುತ್ತಾರೆ. ಇವರು ಹೊಸ …ಗಿ ಕಂಡುಹಿಡಿದಿರುವ ವಿಜ್ಞಾನತತ್ತ್ವವೇನೆಂದರೆ — …ದು ವೃಕ್ಷವನ್ನು ಅನೇಕ ಪ್ರಾಣಿಗಳನ್ನೊಳಗೊಂಡ …ದು ರಾಜ್ಯಕ್ಕೆ ಹೋಲಿಸಬಹುದು. ಆ ರಾಜ್ಯದ …ಂಗಗಳೆಲ್ಲ ತಮ್ಮತಮ್ಮ ಭಾಗಕ್ಕೆ ಬಂದ ಕಾರ್ಯಗ …ನ್ನು ಒಗ್ಗಟ್ಟಿನಿಂದ ಮಾಡುತ್ತಬಂದರೆ ಅಖಿಲಜನಾಂ …ಕ್ಕ ಸೌಖ್ಯವುಂಟಾಗುವದು. ಹಾಗಿರದೆ ಒಳಗ …ಯೋ ಸೌಹಾರ್ದವಿಲ್ಲದಿದ್ದರೆ ದೇಶಕ್ಕೇ ನಾಶವುಂ …ಗುವುದು. ವೃಕ್ಷವು ಪೂರ್ಣವಾಗಿ ಬೆಳೆಯಬೇ …ದರೆ ತನಗೆ ಬೇಕಾಗುವ ಪೋಷಕಸಾಮಗ್ರಿಗಳನ್ನು …ಸ ಸುತ್ತ ತನ್ನ ಬಾಹ್ಯಕಗಳ ಅಪಾಯವನ್ನು ತರತಕ್ಕ …ಲ್ಲ ಪ್ರತಿಭಟಿಸಲು ತಕ್ಕ ಶಕ್ತಿಯನ್ನು [illegible] …ತನ್ನ ಸ್ವಂತಭೂಮಿಯಲ್ಲಿಯೇ ರೂಢಮೂಲವಾ …ವುದೇ ಕಾರಣವಾಗಿದೆ. ಹೊರಗಡೆಯಿಂದ ಅನಾ …ತಗಳು ಎಷ್ಟು ಬಂದರೂ ಅವುಗಳನ್ನು ನಿರೋಧಿ …ಹೊಸಹೊಸ ಶಕ್ತಿಗಳು ವೃಕ್ಷದಲ್ಲಿ ಹುಟ್ಟುತ್ತವೆ. …ತ ಪರ್ವವನ್ನು ಸಹಿಸಿ ವೃಕ್ಷವು ಸಹ ತನ್ನ ಸ್ಥಿತಿ …ಕಾಪಾಡಿಸಿಕೊಳ್ಳುವುದು. ಇದರಂತೆ ಮನು …ನು ಸಹ ವಿದೇಶಪದ್ಧತಿಗಳನ್ನನುಸರಿಸದೆ ತನ್ನ …ದಲ್ಲಿ ಒದಗಬಹುದಾದ ಶಕ್ತಿಯನ್ನೆಲ್ಲ ಪಡೆದು …ಪ್ರಜ್ಞಾಶಕ್ತಿಯಿಂದಲೂ ತನ್ನ ನಡತೆಗಳನ್ನು ಸನ್ನಿ …ಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದರಿಂದಲೂ …ಜೀವನವನ್ನು ಉನ್ನತಸ್ಥಿತಿಗೆ ತರಬಹುದು. ಹೀ …ೀ ಪ್ರಾಣಿಗಳಿಗೂ ಸಸ್ಯಗಳಿಗೂ ಜೀವನಾಸದ …ಂದು ಅಂಶಗಳಲ್ಲಿಯೂ ಸಾಮರಸ್ಯವೂ ಐಕ್ಯವೂ ಇರುವುದೆಂಬುದನ್ನು ಡಾ ಬೋಸ್‌ರವರು ತಮ್ಮ ನೂತನ ಯಂತ್ರಸಾಮಗ್ರಿಗಳ ಮೂಲಕ ನಿದರ್ಶನಪೂರ್ವಕವಾಗಿ ತೋರಿಸಿ ಪ್ರಪಂಚಕ್ಕೇ ವಿಸ್ಮಯವನ್ನೂ ಸತ್ಕೀರ್ತಿಯನ್ನೂ ಉಂಟುಮಾಡಿರುತ್ತಾರೆ. ಈ ರೀತಿಯಾಗಿ ಪ್ರಾಣಿ [illegible] ಸಸ್ಯಗಳಲ್ಲಿರುವ ನಿಯಮಗಳನ್ನು ಅರಿತುಕೊಳ್ಳುವುದರಿಂದ ಕೃಷಿಯ ಅಭಿವೃದ್ಧಿಗೂ ಪ್ರಯೋಜನವುಂಟಾಗುವುದು. ಅಲ್ಲದೆ ವಿಷವಾದಿಗಳ ಪ್ರಯೋಗಗಳಿಂದ ಪ್ರಾಣಿಗಳಲ್ಲಿಯೂ ಸಸ್ಯಗಳಲ್ಲಿಯೂ ಒಂದೇ ವಿಧವಾದ ಪರಿಣಾಮವುಂಟಾಗುವುದೆಂದು ಇವರು ಸ್ಪಷ್ಟಪಡಿಸಿರುತ್ತಾರೆ. ಇದಕ್ಕಾಗಿ ಪ್ರಾಣಿಗಳ ಮತ್ತು ಸಸ್ಯಗಳ ಜೀವನಚಲನವನ್ನು ವಿಶದ ಸೂಕ್ಷ್ಮರೀತಿಯಿಂದ ಕಂಡುಹಿಡಿದ ಮೂಲಸ್ಥಿತಿಯಲ್ಲಿದ್ದ ಹೃದಯವನ್ನು [illegible] ಯಾವ ಯಾವ ಗಿಡಗಳನ್ನು ಉಪಯೋಗಿಸಬಹುದೆಂಬುದನ್ನು ನಿಷ್ಕರ್ಷಿಸಲು ಮತ್ತೊಂದು ಸಾಧನಯಂತ್ರವನ್ನು ಕಂಡುಹಿಡಿದಿರುತ್ತಾರೆ.

ನಮ್ಮ ಸಂಸ್ಥಾನವು ಇತರ ದೇಶೀಯರಾಜ್ಯಗಳಿಗೆಲ್ಲ ಮಾದರಿಯಾಗಿರುವುದೆಂತಲೂ ಇದಕ್ಕೆ ಈ ಸಂಸ್ಥಾನದಲ್ಲಿ ಮಂತ್ರಿಗಳಾದವರು ಪ್ರಜೆಗಳ ಸರ್ವತೋಮುಖವಾಗಿ ಅಭಿವೃದ್ಧಿಯನ್ನೇ ತಮ್ಮ ಧ್ಯೇಯವನ್ನಾಗಿಟ್ಟುಕೊಂಡು ಅದನ್ನೇ ಸಾಧಿಸುತ್ತಬಂದಿರುವುದೇ ಕಾರಣವೆಂತಲೂ ನಮ್ಮ ಸಂಸ್ಥಾನದಲ್ಲಿ ರಾಜ್ಯತಂತ್ರವಿಶಾರದರೆಂದು ಪ್ರಸಿದ್ಧರಾದ ಕೆಲವರು ತಮ್ಮ ಅಗಾಧವಾದ ಪ್ರತಿಭೆಯನ್ನು ಉಪಯೋಗಿಸಲು ತುಂಬಾ ಅವಕಾಶವಿದ್ದಿತೆಂತಲೂ, ಇದರಿಂದ ಸರ್ ಕೆ. ಶೇಷಾದ್ರಿಅಯ್ಯರವರು ಮೈಸೂರಿನ ಸಂಪತ್ತನ್ನು ಅಭಿವೃದ್ಧಿಪಡಿಸಲು ಇಲ್ಲಿ ಸ್ವಭಾವಸಿದ್ಧವಾಗಿ ಅಡಗಿದ್ದ ಸಾಧನಗಳನ್ನು ತಮ್ಮ ಊಹಾಶಕ್ತಿಯಿಂದ ಕಂಡುಹಿಡಿದು, ಅದುವರೆಗೂ ವ್ಯರ್ಥವಾಗುತ್ತಿದ್ದ ಕಾವೇರಿಯ ಜಲಪಾತದಿಂದ ವಿದ್ಯುಚ್ಛಕ್ತಿಯ ನಿರ್ಮಾಣವನ್ನೂ, ವ್ಯವಸಾಯಕ್ಕೆ ಬೇಕಾದ ನೀರಾವರಿಯ ಅಗಾಧವಾದ ಉದ್ಯಮಗಳನ್ನೂ ಮಾಡಿ ಕೀರ್ತಿಶಾಲಿಗಳಾದರು. ಅಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಿಂದ ನಮ್ಮ ದೇಶಕ್ಕೆ ಆಗುತ್ತಿರುವ ಪ್ರಯೋಜನಕ್ಕೆ ಸರ್ ಎಂ ವಿಶ್ವೇಶ್ವರಯ್ಯನವರೇ ಕಾರಣರೆಂದು ಹೇಳಿ ಹೀಗೆಯೇ ನಮ್ಮ ಭರತಖಂಡವು ಪೂರ್ವದಲ್ಲಿಯೂ ಸಹ ಕೇವಲ ಜ್ಞಾನಶಾಸ್ತ್ರವೊಂದರ ಅಭ್ಯಾಸ ಮತ್ತು ಪಾಂಡಿತ್ಯಗಳಲ್ಲಿಯೇ ತೃಪ್ತಿಯನ್ನು ಪಡೆಯದೆ ವಿಜ್ಞಾನಶಾಸ್ತ್ರಗಳಲ್ಲಿಯೂ ಹೇಗೆ ಸುಪ್ರಸಿದ್ಧವಾಗಿದ್ದಿತೆಂದರೆ ನಮ್ಮ ಹಿರಿಯರು ಸತ್ಯವನ್ನು ಕಂಡುಹಿಡಿಯುವ ವಿಷಯದಲ್ಲಿ ಜಾತಿಮತಗಳ ಸಂಕೋಚವೃತ್ತಿಯಿಲ್ಲದೆ ನಿರ್ಭಯವಾದ ವಿಚಾರಗಳನ್ನು ಹೇಗೆ ನಡೆಸುತ್ತಿದ್ದರೆಂದೂ, ವಿಜ್ಞಾನಶಾಸ್ತ್ರವೂ ರಾಜನೀತಿಶಾಸ್ತ್ರವೂ ಪಾಶ್ಚಾತ್ಯರಸಂಸರ್ಗದಿಂದ ನಮ್ಮ ದೇಶಕ್ಕೆ ಬಂದು ಇಲ್ಲಿ ಪ್ರಚಾರಕ್ಕೆ ಬಂದವೆಂದು ಹೇಳುವ ಮಾತು ಮಿಥ್ಯಾಲಾಪವೆಂದೂ ಈ ಸಂಬಂಧದಲ್ಲಿ ಪುರಾತನರಾದ ಹಿಂದೂಗಳಲ್ಲಿ ಪ್ರಸಿದ್ಧವಾಗಿದ್ದ ವಿಜ್ಞಾನಶಾಸ್ತ್ರಗಳ ವಿಷಯದಲ್ಲಿ ಗ್ರಂಥವನ್ನು ಬರೆದಿರುವ ನಮ್ಮ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರರವರಾದ ಡಾ ಸೀಲರವರೂ ಮತ್ತು ಇದುವರೆಗೂ ಅಜ್ಞಾತವಾಗಿ ಮರೆಯಾಗಿದ್ದು ಶಿಥಿಲಾವಸ್ಥೆಯಲ್ಲಿದ್ದ ಚಾಣಕ್ಯನ ಅರ್ಥಶಾಸ್ತ್ರವನ್ನು ತಮ್ಮ ಅನವಧಿಕವಾದ ಶ್ರಮದಿಂದಲೂ ಔತ್ಸುಕ್ಯಪೂರಿತವಾದ ಪಾಂಡಿತ್ಯದಿಂದಲೂ ಶುದ್ಧಪಡಿಸಿ ಎಲ್ಲರಿಗೂ ಸುಲಭಸಾಧ್ಯವಾಗುವಂತೆ ಅಚ್ಚುಹಾಕಿಸಿ ಅದಕ್ಕೆ ಆಂಗ್ಲೇಯ ಭಾಷೆಯಲ್ಲಿ ಪರಿವರ್ತನವನ್ನೂ ಸಹ ಮಾಡಿ ಹಿರಿಯರಾದ ನಮ್ಮ ಪೂರ್ವಿಕರ ಜ್ಞಾನವಿಜ್ಞಾನಶಾಸ್ತ್ರಗಳ ವಿಷಯದಲ್ಲಿ ನಮಗಿದ್ದ ಅಜ್ಞಾನವೆಂಬ ತೆರೆಯನ್ನು ತೆಗೆದ ಅರ್ಥಶಾಸ್ತ್ರವಿಶಾರದರಾದ ಡಾ ಆರ್ ಶ್ಯಾಮಶಾಸ್ತ್ರಿಗಳೂ ಮಹದುಪಕಾರವನ್ನು ಮಾಡಿರುವುದರಿಂದ ಇವರ ವಿಷಯದಲ್ಲಿ ನಮ್ಮ ಮೈಸೂರ ದೇಶವೇ ಅಧಿಕವಾಗಿ ಆನಂದಪಡಬೇಕಾಗಿದೆಯೆಂದು ಡಾ. ಬೋಸ್‌ರವರು ಹೇಳಿದರು. ಅಲ್ಲದೆ ಈ ವಿಧವಾದ ನಮ್ಮ ಪೂರ್ವಿಕರ ವಿದ್ಯಾಸಂಪತ್ತುಗಳನ್ನು ಹೇಡಿತನದಿಂದಾಗಲಿ, ಅನಾದರಣೆಯಿಂದಾಗಲಿ ಮೂಲೆಗೊತ್ತರಿಸದೆ ಸಕಲಪ್ರಾಣಿವರ್ಗದ ದುಃಖಸಂತಾಪಗಳನ್ನು ಪರಿಹರಿಸಲು ಸಂತತವೂ ಪ್ರಯತ್ನ ಮಾಡುತ್ತಿರಬೇಕೆಂತಲೂ ಜನಗಳೆಲ್ಲರೂ ಸುಖಿಗಳಾದ ಹೊರತು ನಮಗೆ ನಿಜವಾದ ಸುಖವು ದೊರೆಯುವುದಿಲ್ಲವೆಂತಲೂ ಇತರರ ಸುಖದುಃಖಗಳು ತಮ್ಮವುಗಳೆಂದೇ ತಿಳಿದು ತತ್ಪ್ರಾಪ್ತಿ ಪರಿಹಾರ ಕರ್ಮಗಳಲ್ಲಿ ಆಸಕ್ತರಾಗಿ ಸಹಾಯಮಾಡಲು ಪ್ರತಿಯೊಬ್ಬರೂ ನಿಜವಾದ ಕ್ಷತ್ರಿಯರಾಗಿರಬೇಕೆಂದು ವಿದ್ಯಾರ್ಥಿಗಳಿಗೆ ನೀತಿವಾಕ್ಯಗಳನ್ನು ಉಪನ್ಯಾಸಕರು ಹೇಳಿದರು. ಇವರ ಹಿತವಾಕ್ಯಗಳು ಪ್ರೋತ್ಸಾಹಗಳು ಮನಸ್ಸಿಗೆ [illegible] ಅವರ ತ್ರಿಕರಣಗಳಿಂದಲೂ ತೋರ್ಪಡುವದಾದರೆ ನಮ್ಮ ದೇಶದಲ್ಲಿ ಜಾತಿಮತಗಳ ಪರಸ್ಪರ ದ್ವೇಷವೆಂಬ ರೋಗದ ಬಾಧೆಯಿಲ್ಲದೆ ಎಲ್ಲರೂ ಭಾರತಮಾತೆಯ ಪುತ್ರರೆಂಬ ಭಾವನೆಯು ನೆಲೆಗೊಂಡು ಕ್ರಮೇಣ ನಮ್ಮ ದೇಶದ ಪ್ರಜಾವರ್ಗಕ್ಕೆಲ್ಲ ನಿರರ್ಗಳವಾದ ಸುಖಶಾಂತಿಗಳು ದೊರೆಯುವುದರಲ್ಲಿ ಲೇಶವೂ ಸಂಶಯವಿಲ್ಲ. ಇಂತಹ ಮಹಾ ಸಭೆಯಲ್ಲಿ ಮುಂದೆ ರಾಜಕೀಯ ಕಾರ್ಯಗಳಲ್ಲಿ ಭಾಗಿಗಳಾಗುವ ವಿದ್ಯಾರ್ಥಿಗಳಿಗೆ ಹಿತಬೋಧವನ್ನು ಮಾಡಲು ಡಾ ಜೆ ಸಿ ಬೋಸ್‌ರವರನ್ನು ಆಹ್ವಾನಿಸಿದ್ದುದರಿಂದ ಛಾನ್ಸಲರರವರಾದ ನಮ್ಮ ಶ್ರೀಮನ್ಮಹಾರಾಜರವರಿಗೆ ನಾವುಗಳು ಕೃತಜ್ಞರಾಗಿರಬೇಕಾಗಿದೆ.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವಮತ ಮೀಮಾಂಸಾ

[ಲೇಖಕ:]
ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ವಿಶ್ವಾರಾಧ್ಯ ಗುರುಕುಲವಾಸೀ ವ್ಯಾಕರಣರತ್ನ
ಪಂ|| ಶ್ರೀ ಪುರಗಿರಿ ಚನ್ನನಶಿವಾಚಾರ್ಯಃ

[ಹಿಂದಿನಿಂದ ಮುಂದೆ ಸಾಗಿದುದು.]

ಇನ್ನು ಭರತನೆಂಬ ರಾಜನ ಹೆಸರಿನಿಂದ ಭರತಖಂಡವೆಂಬ ಹೆಸರು ಬಂದಿರಬೇಕೆಂದು ಕೆಲವರು ಹೇಳುವರು. ಆದರೆ ಭರತ ಎಂಬ ಈಶ್ವರನಾಮವನ್ನೇ ಆ ರಾಜನಿಗೆ ಇಟ್ಟಿರಬಹುದೆಂದು ರೂಢಿಯಮೇಲಿಂದ ಊಹಿಸಲೂಬಹುದು. "ರಾಜಾ ಪ್ರತ್ಯಕ್ಷದೇವತಾ" ಎಂಬ ಉಕ್ತಿಗನುಸಾರವಾಗಿ ರಾಜನಿಗೆ (ಭರತ) ದೇವನೆಂದು ಕರೆಯುವದೂ ಸಂಗತವಾಗಿ ತೋರುವದು. ವಸ್ತುತಃ ಭರತಖಂಡಕ್ಕೆ ಶಿವಸ್ಥಾನವೆಂಬರ್ಥವೇ ನಮ್ಮ ಅಭಿಮತವಾಗಿದೆ. ಓರ್ವ ಐತಿಹಾಸಿಕರಾದ ಮಿ. ಮಲ್ಲಿಕಾರ್ಜುನಪ್ಪ ಕಲ್ಯಾಣಶೆಟ್ಟಿ ಬಿ. ಎ., ಕರ್ಮಲಾ ಎಂಬವರು ಹೀಗೆಯೇ ಬಾಗಲಕೋಟಿ ವೀರಶೈವ ಮಹಾಸಭೆಯಲ್ಲಿ ವ್ಯಾಖ್ಯಾನ ಮಾಡಿರುವರೆಂದು ಸದರಿ ರಿಪೋರ್ಟಿನಿಂದಲೂ ತಿಳಿದುಬರುವದು. ಮುಖ್ಯವಾಗಿ ಭಾರತೀಯರೆಂದರೆ ವೀರಶೈವರಿದ್ದು ಸದ್ಯಃ ಸ್ಥಿತಿಯಲ್ಲಿ ಹೊಂದಿರುವದು ನಮ್ಮ ಉತ್ಸಾಹ ಉದ್ಯೋಗವಿಮುಖತೆಯನ್ನು ವ್ಯಕ್ತಪಡಿಸುತ್ತಲಿದೆ. 'ಉತ್ತಿಷ್ಠತ, ಜಾಗ್ರತ ಪ್ರಾಪ್ಯವರಾನ್ನಿಬೋಧತ; ಎಂಬಶ್ರುತಿಯನ್ನು ಸ್ಮರಿಸಿರಿ.

ಭಾರತೀಯರೇ— ಭರತಖಂಡದಲ್ಲಿರುವ ಆಸ್ತಿಕಮತಗಳೆಲ್ಲಕ್ಕೂ ಪರಮಾಪ್ತ ಪ್ರಣೀತಗಳಾದ ವೇದಾಗಮಸ್ಮೃತಿಪುರಾಣೇತಿಹಾಸಗಳೇ ಪರಮ ಪ್ರಮಾಣೀಭೂತಗಳಾಗಿವೆ. ಇನ್ನು "ಭಿನ್ನ ರುಚಿರ್ಹಿಲೋಕಃ" ಎಂಬಾರ್ಯೋಕ್ತಿಗನುಸಾರವಾಗಿ ವಿಚಿತ್ರವಾಗಿರುವ ಪ್ರಪಂಚಕ್ಕೆಲ್ಲ ಭರತನಾದ ಪರಮಾತ್ಮನೇ ಅನೇಕ ಪ್ರವೇಶಗಳಲ್ಲಿ ಶಿವ, ವಿಷ್ಣು, ಸೂರ್ಯ, ಶಕ್ತಿ, ಗಣಪತಿ, ಮುಂತಾದ ಅನೇಕ ರೂಪಗಳನ್ನು ಧರಿಸಿ, ವಂದಿಸಲ್ಪಡಲೂ ಪೂಜಿಸಲ್ಪಡಲೂ ಕಾರಣನಾಗಿರುತ್ತಾನೆ. ವಸ್ತುತಃ ವಿಚಾರಿಸಿದಲ್ಲಿ ಆ ಪರಶಿವಬ್ರಹ್ಮವೇ ಸರ್ವರೂಪಿಯಾಗಿರುತ್ತದೆ. "ಅಂಭಸ್ಯಪಾರೇ ಭುವನಸ್ಯಮಧ್ಯೇ ನಾಕಸ್ಯಪೃಷ್ಠೇ ಮಹತೋ ಮಹೀಯಾನ್. ಶುಕ್ರೇಣಜ್ಯೋತೀಗ್ಂಷಿ | ಸಮನುಪ್ರವಿಷ್ಟಃ ಪ್ರಜಾಪತಿಶ್ಚರತಿ ಗರ್ಭೆ ಅನ್ತಃ" ಎಂಬ ಮಹಾನಾರಾಯಣೋಪನಿಷದರ್ಥವು" ಯೋರುದ್ರೋ ಅಗ್ನೌ ....ತಸ್ಮೈ ರುದ್ರಾಯನಮೋ ಅಸ್ತು " ಇತ್ಯಾದಿ ಸಹಸ್ರ ಶ್ರುತ್ಯಭಿಪ್ರಾಯಾನುಗುಣವಾಗಿ ಪಂಡಿತಾರಾಧ್ಯ ಶೈವಭಾಷ್ಯದಲ್ಲಿ ಶಿವಪರವಾಗಿ ನಿರ್ಣಯಿಸಲ್ಪಟ್ಟಿರುವದು. ಸಮುದ್ರದಲ್ಲಿಯೂ ಲೋಕಮಧ್ಯದಲ್ಲಿಯೂ ಸ್ವರ್ಗೋರ್ಧ್ವಭಾಗದಲ್ಲಿಯೂ ಆಕಾಶಾದಿಗಳಿಗಿಂತಲೂ ಶಿವನು ಮಹಾನ್ ಎಂದು ಹೇಳಿಸಿಕೊಳ್ಳಲ್ಪಡುವನು. ತೇಜೋಮಯನಾದ ಈ ಶಿವನು ಅಂತರ್ಯಾಮಿಯಾಗಿದ್ದು ಸ್ವತೇಜಸ್ಸಿನಿಂದ ಸೂರ್ಯಾದಿ ತೇಜಸ್ಸುಗಳನ್ನು ಪ್ರಕಾಶಗೊಳಿಸುವನು. ಮತ್ತು ಸೂರ್ಯ, ಚಂದ್ರ, ಅಗ್ನಿಗಳು ಪರಮಾತ್ಮನ ನೇತ್ರಗಳಾಗಿರುತ್ತವೆಂಬುವುದು ಶ್ರುತಿಯಿಂದ ಪ್ರತಿಪಾದಿಸಲ್ಪಡುವುದಲ್ಲದೆ ಲೋಕದಲ್ಲಿಯೂ ಪ್ರಸಿದ್ಧವಾಗಿರುವುದು. ಹಾಗೂ "ತಮೇವಭಾಂತಂ..........ತನಾತ್ಮ ವಿದೋವಿದುಃ" ಇತ್ಯಾದಿ ಅನಂತ ಶ್ರುತಿಗಳಿಂದ ಶಿವನೇ ಎಲ್ಲೆಲ್ಲಿಯೂ ವ್ಯಾಪ್ತನಾಗಿರುವನಲ್ಲದೆ ಪ್ರಪಂಚವೆಲ್ಲವೂ ಅವನನ್ನೇ ಹಿಂಬಾಲಿಸುವದೆಂತಲೂ ಉಕ್ತವಾಗುವದು. ಚತುರ್ಮುಖಬ್ರಹ್ಮನು ಇಂತಹ ಶಿವನ ಗರ್ಭದಲ್ಲಿಯೇ ಸಂಚರಿಸುವನು. ಅರ್ಥಾತ್ ಸಕಲ ಜೀವರಾಶಿಗೆ ಕಾರಣೀಭೂತನಾದ ಚತುರ್ಮುಖಬ್ರಹ್ಮನನ್ನೇ ಈಶ್ವರನು ತನ್ನ ಗರ್ಭದಲ್ಲಿರಿಸಿಕೊಂಡ. ಬಳಿಕ ಬ್ರಹ್ಮನಿರ್ಮಿತ ಸಕಲ ಪ್ರಪಂಚವು ಅವನಲ್ಲಿ ಕೈಮುತಿಕ ನ್ಯಾಯದಿಂದ ಶ್ರುತ್ಯರ್ಥವು ಸಮಂಜಸವಾಗಿ ಸಿದ್ಧವಾದಂತಾಯಿತು. ಇದಲ್ಲದೆ ಅನ್ಯತ್ರ "ಸರ್ವಾನನ ಶಿರೋಗ್ರೀವಃ ....ಸರ್ವಗತಃ ಶಿವಃ" "ಬ್ರಾಂಡೋಽಯಂ ಪ್ರತ್ಯಂಡೋಽಯಂ" "ಲಿಂಗಂ ಬ್ರಹ್ಮ ಸನಾತನಂ" ಇತ್ಯಾದಿ ಶ್ರುತಿಗಳು ಶಿವನನ್ನು ಮೂಲಪುರುಷನೆಂದು ಹೊಗಳುತ್ತಲಿವೆ. ಹಾಗೂ "ಪರಾತ್ಪರತರಂ ಬ್ರಹ್ಮ ತತ್ಪರಾತ್ಪರತರೋ ಹರಃ । ಯತ್ಪರಾತ್ಪರತರೋ ಈಶ ಸ್ತಸ್ಮೈನಮಃ ಶಿವಸಂಕಲ್ಪಮಸ್ತು" ಎಂಬ ಶ್ರುತಿಯು ಬ್ರಹ್ಮಾದಿ ಮೂಲವಸ್ತುಕ್ಕೆ ಶಿವನನ್ನೇ ಅಧಿಷ್ಠಾತ್ರನನ್ನಾಗಿ ವರ್ಣಿಸುತ್ತಲಿದೆ. ಇತಿ ದಿವಾದಿಕ್ರಂ.

ಆದರೆ ಯಾವ ಪುರುಷನಿಗೆ ಶಿವನೇ ಅಧಿಕನಾಗಿ ತೋರುವನೋ ಆ ಪುರುಷನು ಶಿವನನ್ನೇ ಪೂಜಿಸುವನು. ಯಾವನಿಗೆ ವಿಷ್ಣುವೇ ಅಧಿಕನಾಗಿ ತೋರುವನೋ ಅವನು ವಿಷ್ಣುವನ್ನಾರಾಧಿಸುವನು. ಯಾವನು ಅಗ್ನಿಯನ್ನೇ ಅಧಿಕನೆಂದು ತಿಳಿಯುವನೋ ಅವನು ಅಗ್ನಿಯನ್ನು ಪೂಜಿಸುವನು. ಯಾವನಿಗೆ ಸೂರ್ಯನೇ ಮಿಗಿಲೆಂದು ತೋರುವನೋ ಅವನು ಸೂರ್ಯನನ್ನೇ ವಂದಿಸುವನು. ಯಾವನಿಗೆ ಶಕ್ತಿಯೇ ಅಧಿಕವೆಂದು ತೋರುವುದೋ ಅವನು ಶಕ್ತಿಯನ್ನೇ ಆರಾಧಿಸುವನು. ಯಾವನು ಗಣಪತಿಯನ್ನೇ ಶ್ರೇಷ್ಠನೆಂದು ತಿಳಿದಿರುವನೋ ಅವನು ಗಣಪತಿಯನ್ನು ಅರ್ಚಿಸುವನು. ಈ ರೀತಿಯಾಗಿ ಯಾರು ವಿಷ್ಣುವನ್ನು ಶಿವನ ಪತ್ನಿಯು ಸ್ತ್ರೀಪುರುಷರೂಪಗಳಾದ ವಿಷ್ಣುಶಕ್ತಿಯನ್ನು ಶಿವನ ನಯನ ಪುತ್ರಾದಿಗಳನ್ನು ಅರ್ಚಿಸುವರು. ಹೀಗೆ ಪ್ರಪಂಚದಲ್ಲೆಲ್ಲ ನಾನಾ ರೀತಿಯಾಗಿ ದೇವತಾರ್ಚನೆಯನ್ನು ಪಿತೃ ಪಿತಾಮಹ ಪ್ರಪಿತಾಮಹ ಆಚಾರ್ಯ ಮಹಾಚಾರ್ಯ ಪರಂಪರೆಯಾಗಿ ನಡೆಸುತ್ತ ಬಂದಿರುವರು. ನಿರುಪಷ್ಟ ? ಆದರೆ ಪ್ರತ್ಯೇಕ ಮತೀಯರಿಗೂ ಅಯಾಯ ಮೂಲ ಮತಪ್ರವರ್ತಕ ಪುರುಷರು ವಂದ್ಯರೇ ಆಗಿರುವರು. ಯಾಕಂದರೆ ನಾವೆಲ್ಲರೂ ಅವರನ್ನು ಪೂರ್ವರಾವತಾರಿಗಳೆಂದು ಭಾವಿಸುವದಿಲ್ಲವೆ ? ಅಸ್ತು ! ಹಿಂದೆ ಹೇಳಿದ ನಿಗಮಾಗಮ ಪುರಾಣಾದಿಗಳು ಶೈವಮುನಿಗಳ ಕಾಲದಿಂದ ಪ್ರಬಲಪ್ರಮಾಣಗಳಾಗಿ ಪ್ರಜ್ವಲಿಸಿದವು. ಯಾಕಂದರೆ ಬಹುತ್ವಜ್ಞ ಯೋಗಿಗಳು ಸ್ವತಂತ್ರವಾಗಿ ದರ್ಶನವನ್ನು ಬರೆದಿರುವರು. ಆ ದರ್ಶನಗಳಿಗೆ ಕಾಪಿಲ, ಕಾಣಾದ ದರ್ಶನಗಳೆಂದು ಅನ್ನುವರು. ಆ ಕಾಲದಲ್ಲಿಯೇ ಪರಾಶರಪುತ್ರನಾದ ಪಾರಾಶರ ಮುನಿಯು ಪುರಾಣಗಳನ್ನು ರಚಿಸಿರುವನು. ಈ ಪುರಾಣಗಳು ಶೈವ, ಶಾಕ್ತ, ವೈಷ್ಣವಾದಿ ಸರ್ವದಾರ್ಶನಿಕರಿಗೂ ಮಾನ್ಯಗಳಾಗಿರುವವು. ಆ ಸಮಯದಲ್ಲಿಯೇ ಈ ಮುನಿಗೆ ವೇದವ್ಯಾಸನೆಂದು ಸರ್ವರೂ ಕರೆಯುತ್ತಿದ್ದರು. ಈ ಮುನಿಯ ಸಾಮರ್ಥ್ಯವೂ ಸಾಧನವೂ ಪ್ರಬಲವಾದದ್ದಾಗಿದೆ. ಒಂದು ಸಮಯದಲ್ಲಿ ಶಿವನ ಮಾಯಾಜಾಲಕ್ಕೆ ಸಿಲುಕಿ ಈ ಮುನಿಯು ಗರ್ವಿಷ್ಠನಾಗಿ ನಾನೇ ಅಧಿಕನೆಂದು ತಿಳಿದು ಸ್ವೇಚ್ಛೆಯಿಂದ ವಿಷ್ಣುವೇ ಅಧಿಕನೆಂದು ವಿಶ್ವೇಶ್ವರ ರಾಜಧಾನಿಯಾದ (ಶಿವಪುರೀ) ಕಾಶಿಯಲ್ಲಿ ಜ್ಞಾನವಾಪಿಯುತ್ತರ ಕೈಯೆತ್ತಿ ನುಡಿದದ್ದರಿಂದ ಹಸ್ತಸ್ತಂಭನವಾಯಿತು. ಆ ಕೂಡಲೆ ಮುನಿಯು ಜಾಗರೂಕನಾಗಿ ಶಿವಗಣಾಗ್ರಗಣ್ಯನಾದ ನಂದೀಶ್ವರನ ಕೃಪಾಪಾತ್ರನಾಗಿ ತಪ್ಪಿಗೆ ಒಪ್ಪಿಕೊಂಡು ವಿಷ್ಣುವು ಶಿವನ ಶಕ್ತಿರೂಪನಾಗಿರುತ್ತಾನೆ ಆ ಆದಿಶಕ್ತಿಪತಿಯಾದ ವಿಶ್ವೇಶ್ವರನಿಗೂ ಅವನ ಶಕ್ತಿಗೂ ಭೇದವನ್ನು ಕಲ್ಪಿಸಿ ನುಡಿಯುವದು ಅನ್ಯಾಯವೆಂದುತಿಳಿದು ಆನಂತರ ಶಿವಾಪತಿಯಾದಶಂಕರನೇ ಸರ್ವೋತ್ತಮನೆಂದು ಶೈವ, ಸ್ಕಾಂದ, ಲೈಂಗ್ಯಾದಿ ಪುರಾಣಗಳನ್ನು ಬರೆದು ಸಾಂಬನ ಕೃಪೆಗೆ ಪಾತ್ರ ದನು. ಆಗ್ಯ ಶಿವಭಕ್ತಿಯು ನೆಲೆಗೊಂಡು ಶಿವ ಗ್ರೇಸರನಾದ ಘಂಟಾಕರ್ಣಗಣೇಶ್ವರನಿಂದ ವೀರ ದೀಕ್ಷಾದ್ವಾರಾ ಶಿವತತ್ವಜ್ಞಾನವಂ ಪಡೆದು ಬ್ರ ಸೂತ್ರಗಳನ್ನು ವಿರಚಿಸಿ ಅಶೇಷ ಜಗತ್ತಿಗೆ ಬ್ರಹ್ಮ ಜ್ಞಾನವು ಅವಶ್ಯವೆಂದು ತೋರಿಸಿಕೊಟ್ಟನು. ಮಹಾನುಭಾವರಾದ ವ್ಯಾಸಯೋಗಿಗಳು ಎಂಥ ಕ್ಷಪಾತಿಗಳೂ ಪರಮೇಶ್ವರಭಕ್ತರೂ ಎಂಬುವುದು ಅವರು ಬರೆದಿರುವ ಸ್ಕಾಂದಾದಿ ಪುರಾಣಗಳ ನೋಡಿದ ಪಂಡಿತರು ವ್ಯಾಸರು ಸರ್ವದಾ ವಂದ್ಯ ರೆಂದು ತಿಳಿಯುವರು. ಯಾಕಂದರೆ ಲೋಕ ಯಾರಾದರೊಬ್ಬರು ಅಭಿಮಾನಶಾಲಿಗಳು ಅನೇಕಶ ಗಳನ್ನು ಮಾಡುತ್ತಿದ್ದರೂ ಅವುಗಳನ್ನು ಒಳ್ಳೆಯ ವೆಂದು ಸಾಧಿಸುತ್ತ ಹೋಗುವರು. ಹೀಗಿದ್ದು ವ್ಯಾ ಮಹಾನುಭಾವನು ತನಗಾದ ಯಾವತ್ತು ವಿದ್ಯ ವನ್ನು ಸ್ವವಿರಚಿತ ಪುರಾಣಗಳಲ್ಲಿಯೇ ಬರೆದು ಪ್ರ ಪಡಿಸಿ ಈಶ್ವರನ ಆಧಿಕ್ಯವನ್ನು ನಿರಭಿಮಾನದಿ ತೋರಿಸಿರುವದು. ಸಾಧಾರಣವಾದ ಸಂಗತಿಯ ಹೀಗಿದ್ದು ಕೆಲವು ಮೂರ್ಖರು ಹಿಂದುಮುಂದು ಯದೆ ಸಹಸಾ ಆ ವಿಶ್ವವಂದ್ಯ ಯೋಗೀಶ್ವರ ನಿಂದಿಸುವರು. ಅಂಥ ಪಾಪಾತ್ಮರು ನರಕಯಾತನೆ ನ್ನು ಭೋಗಿಸುವದು ಸತ್ಯವಾಗಿದೆ. ಅಸ್ತು! ಇ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂ ಸಾ ವೇದಾಂತಗಳೆಂಬ ಷಡ್ದರ್ಶನಗಳಿಗೇನೇ ಕ ಪತಂಜಲಿ, ಗೌತಮ, ಕಣಾದ, ಜೈಮಿನಿ, ವ್ಯಾಸ ಮಹಾಮುನಿಗಳೇ ಕ್ರಮಶಃ ಸೂತ್ರಗಳನ್ನು ರಚಿಸಿರುವ ಆ ಸೂತ್ರಗಳ ಮೇಲೆ ಭಾಷ್ಯ-ವೃತ್ತಿ, ಟೀಕಾ ಳಾಗಿ ಅನೇಕಾನೇಕ ಗ್ರಂಥಗಳು ಇರುವವು [ಈ ಸರ್ವ ದರ್ಶನಗಳು ವೈದಿಕಗಳಾಗಿ ವೇದಗಳ ಪ್ರಜ್ವಲಗೊಳಿಸಿದವು.] ಇನ್ನು ವೇದಾಗಮ ನ ಗಳಾದ ವೀರಶೈವ, ಶಾಕ್ತ, ವೈಷ್ಣವ. ಸೌರ, ಗಾ ಪತ, ಕಾಪಾಲಿಕಗಳೆಂಬ ಷಡ್ದರ್ಶನಗಳು (ಷಣ್ಮ ವೆಂದು) ಪ್ರಸಿದ್ಧಗಳಾಗಿವೆ. ಈ ಸರ್ವ ಮತೀಯ ವೇದಾಂತ ಸೂತ್ರಗಳಮೇಲೆ ಸ್ವ ಮತ ಸಿದ್ಧಾಂ ನುಸಾರವಾಗಿ ಭಾಷ್ಯಾದಿಗಳನ್ನು ಬರೆದು ತತ್ವಸ್ಮಿತ ಲಂಬಿಗಳಿಗೆ ವಂದ್ಯರಾಗಿರುವರು. ಆದರೆ (ಭಕ್ತ ವೀರರಾಗಿ) ಶಿವಲಿಂಗವಂ ದೇಹದಲ್ಲಿ ಧರಿಸಿ "ವಿ ಷ ರೂಪತಃ ಶಿವನನ್ನು ಆರಾಧಿಸತಕ್ಕವರೇ ವೀ ಶೈವರಾಗಿರುವರು. ಭರತಖಂಡದಲ್ಲಿ ಮೊದಲನೆ ಮತವೇ ವೀರಶೈವಮತವೆಂದು ಸಿದ್ಧವಾಗುವ ಇರಲಿ. ಈ ಮತಕ್ಕೆ ಐವರು ಆಚಾರ್ಯರಿರುವರು. ಇವ ಋಗಾದಿ ವೇದಗಳ ಭಾಷ್ಯವನ್ನು ಬರೆದಿರುವರೆ ಈಗಿರುವ ಶ್ರೀಮತ್ಪಂಚಾಚಾರ್ಯ ಸಾಂಪ್ರದಾಯ ಶ್ರೀಕರಭಾಷ್ಯಾದಿ ಗ್ರಂಥಗಳಲ್ಲಿ ಉಲ್ಲೇಖವಿ ಹಾಗೂ ಪಾಶುಪತಾದಿ ಶಿವಾಗಮಗಳಲ್ಲಿಯೂ ಪ ಶಿವಾಚಾರ್ಯರೇ ನಿಗಮಾಗಮ ಪ್ರವರ್ತಕರೆಂ ಉಲ್ಲೇಖವಿದೆ. ಪ್ರಸಂಗವಶಾತ್ ವಿಸ್ತರಿಸುವೆವು

ಜಗದೀಶ್ವರನಾದ ಪಂಚಮುಖ ಪರಮೇಶ್ವರ ಸೃಷ್ಟ್ಯಾದಿಯಲ್ಲಿ ವಿಧಿ ಹರಿಗಳಿಂದ ಪ್ರಾರ್ಥಿಸಲ್ಪಟ್ಟ ನಾಗಿ ಅವ್ಯಾಕೃತ ವೀರಶೈವಸೃಷ್ಟಿಯನ್ನು ಮಾ ಡ್ಜಿ ಸದ್ಯೋಜಾತಾದಿ ಪಂಚವದನಗಳಿಂದ ರೇವ ರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪ ತಾರಾಧ್ಯ, ವಿಶ್ವಾರಾಧ್ಯರೆಂಬ ಪಂಚಶಿವಾಚಾರ್ಯ ರನ್ನೂ, ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಐದು ಜನ ಗೋತ್ರಪುರುಷರನ್ನೂ ಪಂಚ ಗಣಾಧೀಶ್ವರರ ದ್ವಾರಾ ಪುರಾರಿ ಮುರಾರಿ ಕಾಶ ಸ್ಮರಾರಿ ವೇದಾರಿಗಳೆಂಬ ವೀರಶೈವ ಶೈವರನ್ನೂ ನಿರ್ಮಿಸಿದನು. ಅಂದಿನಿಂದಲೂ ಈ ವ ಶೈವಾಚಾರ್ಯರ ಮತವು ಲೋಕದಲ್ಲಿ ಪರಂಪರೆಯಾ ಬೇರೂರಿತು. ಆನಂತರ ಬ್ರಹ್ಮಾದಿಗಳು ಭೂಮ ಸಾಮಗ್ರಿಗಳಿಂದ ವ್ಯಾಕೃತಸೃಷ್ಟಿಯನ್ನು ವಿರ

ವರು. ಇಂತಪ್ಪ ಸದಾಶಿವನ ಮುಖಪದ್ಮಗಳಿಂದುದಯಿಸಿದವರೇ ಬ್ರಾಹ್ಮಣರೆಂದು ಹೇಳಿಸಿಕೊಳ್ಳುವರು. ಈ ವಿಷಯದಲ್ಲಿ ಸ್ವಯಂಭುಸೂಕ್ತದ "ಬ್ರಾಹ್ಮಣೋಸ್ಯ ಮುಖಮಾಸೀತ್" ಎಂಬ ಮಂತ್ರಕ್ಕೆ ಶೈವಭಾಷ್ಯಕಾರರಾದ ಪಂಡಿತಾರಾಧ್ಯರು "ಅಸ್ಯ ಶಿವಸ್ಯ ಬ್ರಾಹ್ಮಣಃ| ಮುಖಮಾಸೀತ್| ಮುಖಸ್ಥಾನೀಯೋಽಭವತ್ ಜಾತ ಇತ್ಯರ್ಥಃ; ಅಂದರೆ ಬ್ರಾಹ್ಮಣರು ಬ್ರಹ್ಮಮುಖದಿಂದ ಜನಿಸಿರುವರೆಂದೂ ಶಿವನ ಪಂಚವದನಗಳಿಂದ ಜನಿಸಿದ ವೀರಶೈವಾಚಾರ್ಯರು ಬ್ರಾಹ್ಮಣರೆಂದೂ ಸ್ಪಷ್ಟವಾಗಿ ಬರೆದಿರುವರು. ಆದುದರಿಂದಲೇ ಯೋಗರೂಢವಾಗಿ ಪಂಕಜಾದಿ ಶಬ್ದಗಳಂತೆ ಪಂಚಶಿವಾಚಾರ್ಯರ ಸಾಂಪ್ರದಾಯಿಕರಿಗೆ ಮಾಹೇಶ್ವರರೆಂಬ ನಾಮವು ಅನಾದಿಕಾಲದಿಂದಲೂ ಬಂದಿರುವುದು. ಇನ್ನು ಮಹೇಶ್ವರ, ಬ್ರಹ್ಮ, ಈಶ್ವರ ಇತ್ಯಾದಿ ಶಬ್ದಗಳು ಪರ್ಯಾಯವಾಚಕಗಳು. ಅರ್ಥಾತ್ ಕೆಲವರು ಬ್ರಾಹ್ಮಣರೆನ್ನುವರು, ಮತ್ತೆ ಕೆಲವರು ಮಾಹೇಶ್ವರರೆನ್ನುವರು, ಹೀಗೆ ರೂಢಿಯಿರುವದು ಕಾಶ್ಮೀರಾದಿ ದೇಶಗಳಲ್ಲಿಯೂ ಕರ್ಣಾಟಕ ದೇಶೀಯರಂತೆ ಶ್ರೀಮನ್ಮಹಾ ಮಾಹೇಶ್ವರಾಚಾರ್ಯ ಇತ್ಯಾದಿ ರೀತ್ಯಾ ಅಭಿನವಗುಪ್ತ ಮೊದಲಾದವರು ತಮ್ಮ ನಾಮೋಲ್ಲೇಖವನ್ನು ಮಾಡಿಕೊಂಡಿರುವರು. ಪ್ರಾಯಃ ಮಹೇಶ್ವರನನ್ನೇ ಮುಖ್ಯವಾಗಿ ಮನ್ನಿಸತಕ್ಕವರು ಮಾಹೇಶ್ವರರೆಂತಲೂ ಹೇಳಬಹುದು. ಈ ಮಾಹೇಶ್ವರ ಅಥವಾ ಬ್ರಾಹ್ಮಣ ಶಬ್ದಗಳು ವೇದಗಳಲ್ಲಿಯೂ ಆಗಮಗಳಲ್ಲಿಯೂ ಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ಮೇಲೆ ತೋರಿಸಿದ ಮಂತ್ರದ ಅನುಸಾರವಾಗಿ ಅನೇಕ ಸಾರೆ ಹೇಳಲ್ಪಟ್ಟಿರುವವು. ಪ್ರಸಂಗವಶಾತ್ ವಿಸ್ತರಿಸುವೆವು. ಅಸ್ಮತ್ಕಶಿಖಾಮಣಿಗಳೇ ಹೀಗಿದ್ದು "ಬ್ರಾಹ್ಮಣೋಸ್ಯ ಮುಖಮಾಸೀತ್" ಮುಂತಾದ ಮಂತ್ರಗಳು ಕೃತ್ರಿಮಗಳೆಂದು "ಮೂಲೇಕುಠಾರಃ" ಎಂಬಂತೆ ಕೆಲವರು ವೇದಕ್ಕೆ ಆಘಾತವು ತರುವರು. ಅವರ ತಿಳುವಳಿಕೆಯು ಕಡಿಮೆಯಾಗಿರುವದೆಂದು ಸ್ಪಷ್ಟವಾಗಿ ಹೇಳಬಹುದು. ಯಾಕಂದರೆ ಪಾಶ್ಚಾತ್ಯರಿಗೂ ಈ ಪುರುಷಸೂಕ್ತಮಂತ್ರಗಳೇ ಪ್ರಮಾಣೀಭೂತಗಳಾಗಿ [illegible]ವೃದೆಂದ ಬಳಿಕ ನೂತನ ಸಾಮಾಜಿಕ ವಿದ್ಯಾಸ್ವೈರವನ್ನು ಹೊಂದಿ ಸ್ವಾರ್ಥವನ್ನು ತಿಳಿಯದೆ ಈ ಮಂತ್ರವು ಪ್ರಕ್ಷಿಪ್ತಮಂತ್ರವು; ಬ್ರಹ್ಮನಮುಖದಿಂದ ಜನಿಸುವದೆಂಬುವುದು ಅಸಂಭವವು ಎಂದು ವಿತಂಡವಾದವನ್ನು ಮಾಡುವವನು ಪಾಶ್ಚಾತ್ಯರಿಂದಲೂ ಪರಾಸ್ತನಾಗುವನು. ಇನ್ನು ಆ ಪಂಚ ಮಾಹೇಶ್ವರಾಚಾರ್ಯರೇ ಸಾಕಾರವಾದ ಈ ಸೃಷ್ಟಿಯ ಆದಿಯಲ್ಲಿ ಈಶ್ವರನ ಪಂಚ ವದನಗಳಿಂದ ಆವಿರ್ಭವಿಸಿ ಭರತಖಂಡದಲ್ಲಿ ಪ್ರಸಿದ್ಧಂಗಳಾದ ಕೊಲ್ಲೀಪಾಕಿ ಸೋಮೇಶ್ವರಾದಿ ದಿವ್ಯ ಲಿಂಗಗಳಿಂದ ಪ್ರಕಾಶರಾಗಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೆಂಬ ಕ್ರಿಯಾಜ್ಞಾನಾತ್ಮಕ ವೇದಾಗಮೋಭಯವೇದಾಂತಪ್ರಸಿದ್ಧ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವೆಂಬ ವೀರಶೈವ ದರ್ಶನವನ್ನು ವೇದಭಾಷ್ಯ, ಸೂತ್ರಭಾಷ್ಯ, ಉಪನಿಷದ್ಭಾಷ್ಯಾದಿ ಗ್ರಂಥಗಳಿಂ ವಿಸ್ತರಿಸಿ ಸೇತು ಮೊದಲುಮಾಡಿ ಹಿಮಾಚಲಪರ್ಯಂತವಾಗಿಯೂ ವೀರಶೈವ ಮತಸ್ಥಾಪನಾಕಾರ್ಯವನ್ನು ಜಗದಾಚಾರ್ಯರೆಂದು ನಿಗಮಾಗಮ ಪುರಾಣೇತಿಹಾಸಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುವರು. ಇನ್ನು ಮುಖದಿಂದ ಜನಿಸುವ್ವದು ಹೇಗೆಂದು ಕುತರ್ಕವಾದಗಳನ್ನು ಮಾಡುತ್ತ ತಳಮಳಗೊಳ್ಳುತ್ತಿರುವ ಆಧುನಿಕ ಅನೇಕ ವಿದ್ಯಾನಿಪುಣರು, ಲಿಂಗಗಳಿಂದ ಶಿವಾಚಾರ್ಯರು ಹ್ಯಾಗೆ ಪ್ರಾದುರ್ಭವಿಸುವರೆಂದು ಆಕ್ಷೇಪಿಸಬಹುದು. ಆದರೆ ಎಲ್ಲೈ ವಿದ್ಯಾಧಿಕರೇ ಪುರುಷಸೂಕ್ತ ಮಂತ್ರಗಳೇ ತಮಗೆ ಕೃತ್ರಿಮವಾಗಿ ತೋರಿದ [illegible]ಕ ತಾವು ವೇದಬಾಹ್ಯರಾಗುವುದಿಲ್ಲವೇ? ಇಂತಹ [illegible]ಕರಾದ ನಿಮಗೆ ವೈದಿಕರ ರಹಸ್ಯವನ್ನು ಹೇಳಲು ನಿಷ್ಪ್ರಯೋಜನವಾಗುವುದು. ಆದರೂ ಶ್ರೀಮತ್ಪಂಚಾಚಾರ್ಯಸ್ಥಾಪಿತ ಪಂಚಾಚಾರಗಳೊಂದಾದ ಗುರು[illegible] ವಿರೋಧಿಸಿರುವುದರಿಂದ ತಕ್ಕ ಸಮಾಧಾನವನ್ನು [illegible]ಹೇಳಬೇಕಾಗುವುದು. ಹಿಂದೆ ಹೇಳಿದ ಷಡ್ದರ್ಶನ[illegible] ಆಗಮಶಾಸ್ತ್ರಗಳಲ್ಲವೇ? ಅವುಗಳಲ್ಲಿ ಯೋಗದರ್ಶನ[illegible] ಅನಿರ್ವಚನೀಯವಾಗಿರುವುದು. ಆ ಯೋಗದರ್ಶನ[illegible] ಭಗವಾನ್ ಪತಂಜಲಿಯು "ತತೋಣಿಮಾದಿಪ್ರಾದುರ್ಭಾವಃ ಕಾಯಸಂಪತ್ತದ್ಧರ್ಮಾನಭಿಘಾತಶ್ಚ" ಇತ್ಯಾದಿ ಸೂತ್ರಗಳಿಂದ ಯೋಗಿಯಲ್ಲಿ ಅಣಿಮಾದ್ಯಷ್ಟೈಶ್ವರ್ಯಗಳ ಮಹಿಮೆಯನ್ನು ವಿಭೂತಿಪಾದದಲ್ಲಿ ತೋರಿಸಿರುವನು. ಆ ಸೂತ್ರಗಳಿಗೆ ಭೋಜದೇವ ಸೂರಿಯು "ಯಥಾ ಪರಮಾಣುತ್ವಂ ಪ್ರಾಪ್ಯೋ ವಜ್ರಾದೀನಾಮಪ್ಯಂತಃ ಪ್ರವಿಶತಿ" ಎಂದು ಭೋಜವೃತ್ತಿಯಲ್ಲಿ ಪರಮಾಣುಸಿದ್ಧಿಯನ್ನು ಪಡೆದ ಯೋಗಿಯು ಸೂಕ್ಷ್ಮರೂಪದಿಂದ ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು ಎಂದು ವಿಸ್ತಾರವಾಗಿ ತೋರಿಸಿರುವನು. ಹಾಗೂ ಆ ಸಿದ್ಧಿಗಳು ಮೋಕ್ಷಕ್ಕೆ ಸಾಧನೀಭೂತಗಳು; ಮತ್ತು ಅವುಗಳಿಗೆ ವಿಸ್ಮಿತನಾಗದೆ "ನಚ ಪುನರಾವರ್ತತ" ಇತ್ಯಾದಿ ಶ್ರುತ್ಯುಕ್ತಸಮಾಧಿರೂಪ ಮುಕ್ತಿಯನ್ನು ಪಡೆಯಿರಿ ಎಂಬುದಾಗಿ ಯೋಗಾಚಾರ್ಯರು ಬೋಧಿಸಿರುವರು. ಇನ್ನು ಯೌಗಿಕಮಹಿಮೆಯನ್ನು ನೈಯಾಯಿಕರೂ ಸಹ ವರ್ಣಿಸಿರುವರು. ಮತ್ತು ನ್ಯಾಯಸಿದ್ಧಾಂತಮುಕ್ತಾವಲಿಯ ಪ್ರತ್ಯಕ್ಷನಿರೂಪಣಾವಸರದಲ್ಲಿ ಮ|| ಮ|| ವಿಶ್ವನಾಥಪಂಚಾನನರು ಅಲೌಕಿಕ ತ್ರಿವಿಧಸನ್ನಿಕರ್ಷದಲ್ಲಿ ಯೋಗಜವೆಂಬ ಸನ್ನಿಕರ್ಷವನ್ನು ಎರಡು ವಿಧವಾಗಿ ಸ್ವೀಕರಿಸಿರುವರು. ಹಾಗೂ ಈಶ್ವರಾದಿಗಳಿಗೆ ಯುಕ್ತಯೋಗಿಯೆಂತಲೂ ಮತ್ತೊಬ್ಬನಿಗೆ ಯುಂಜಾನಯೋಗಿಯೆಂತಲೂ ಪ್ರಯೋಗಿಸಿರುವರು. ಈ ಯೋಗಿಗಳ ಪ್ರತ್ಯಕ್ಷವು ಲೌಕಿಕಮಾನವಾದ್ಯಪೇಕ್ಷಯಾ ವಿಲಕ್ಷಣವು. ಇವರಿಗೆ ಪರಮಾಣು ಮೊದಲಾದ ಸೂಕ್ಷ್ಮಪದಾರ್ಥಗಳೂ ಸಹ ಕಾಣಿಸಿಕೊಳ್ಳುವವು. ಆದರೆ ಯೋಗಶಾಸ್ತ್ರದಿಂದಲೂ ತರ್ಕಶಾಸ್ತ್ರದಿಂದಲೂ ಸಿದ್ಧವಾದ ಯೋಗಿಗಳ ಮಹಿಮೆಯು ವಿಶ್ವವಿಲಕ್ಷಣವು. ಹಾಗೂ ಸಿದ್ಧಾಂತಶಿಖಾಮಣಿ ಮೊದಲಾದ ಗ್ರಂಥಗಳಲ್ಲಿ ಉಲ್ಲಿಖಿತವಾದ ಶ್ರೀ ರೇಣುಕಾಚಾರ್ಯರು ಲಿಂಗದಿಂದ ಪ್ರಾದುರ್ಭವಿಸಿದಸಂಗತಿಯು ಜಗತ್ಪ್ರಸಿದ್ಧವಾಗಿರುವುದು. ಹಾಗೂ ಅದೇ ಗ್ರಂಥದಲ್ಲಿ "ಅಣಿಮಾದಿಕಮೈಶ್ವರ್ಯಂ ಯೇಷಾಂ ಸಿದ್ಧೇರಪ್ಯೋಽಮಂ , ಬ್ರಹ್ಮಾದಯಃ ಸುರಾ ಯೇಷಾ ಮಾಜ್ಞಾಲಂಘನಭೀರವಃ||" ಅಂದರೆ ಯಾವ ಪ್ರಮಥರಾದ ರೇಣುಕಾದಿ ಮಹಾನುಭಾವರ ಸಿದ್ಧಿಗೆ ಅಣಿಮಾದಿ ಸಿದ್ಧಿಗಳು ತುಚ್ಛವಾದವುಗಳು. ಬ್ರಹ್ಮಾದಿ ದೇವತೆಗಳೂ ಸಹ ಪ್ರಮಥರ ಆಜ್ಞೋಲ್ಲಂಘನ ವಿಷಯದಲ್ಲಿ ಭಯಪಡುವರೆಂದು ಶಿವಯೋಗಿ ಶಿವಾಚಾರ್ಯರು ಬರೆದಿರುವರು. ಶ್ರೀ ರೇಣುಕರು ವಿಭೀಷಣಾದಿ ಶಿವಭಕ್ತಶಿಖಾಮಣಿಗಳ ಪ್ರಾರ್ಥನಾನುಸಾರವಾಗಿ ತ್ರಿಕೋಟಿ ಶಿವಲಿಂಗಗಳ ಪ್ರತಿಷ್ಠಾಪನೆಯನ್ನು ತಮ್ಮ ವಿರಾಡ್ರೂಪದಿಂದ ಮಾಡಿಸಿ ತೋರಿಸಿರುವದಿಲ್ಲವೇ? ಹೀಗೆಯೇ ಶ್ರೀ ಚತುರಾಚಾರ್ಯಮಹಾನುಭಾವರ ಮಹಿಮೆಗಳು ಇರುವವು. ಪ್ರತ್ಯೇಕವಾಗಿ ಅವರವರ ಪುರಾಣ ಚರಿತ್ರಾದಿ ಗ್ರಂಥಗಳನ್ನು ಅವಲೋಕಿಸಿರಿ. ಸಾರಾಂಶವೇನಂದರೆ— ಪ್ರಮಥರು ಕೇವಲ ಶಿವಸ್ವರೂಪರಾಗಿ ಇರುವುದರಿಂದ ಅವರ ಚರಿತ್ರವನ್ನು ಮಾನವಕೋಟಿಗೆ ಸೇರಿಸುವುದು ಶುದ್ಧ ತಪ್ಪಾಗಿರುವದರಿಂದ ತಮ್ಮ ಕಲುಷಿತಬುದ್ಧಿಯನ್ನು ದೂರೀಕರಿಸಿ ಸುಜ್ಞರಾಗಬೇಕೆನ್ನುವದೇ ನಮ್ಮ ಮುಖ್ಯೋದ್ದೇಶವು. ಹೀಗೆ ನಿಗಮಾಗಮಾನುಶಾಸನವು.

ವಾಚಕರೇ— ಇಂಥ ಪರಮಪವಿತ್ರ ವೈದಿಕಪ್ರಮುಖಸಾರ್ವಭೌಮರಾದ ಪಂಚಾಚಾರ್ಯರಿಂದಲೂ ವೀರಾದಿ ಗೋತ್ರಪುರುಷರಿಂದಲೂ ಪುರಾರಿ ಮುಂತಾದ ಬುಧಜನ ಭಕ್ತಪುಂಗವರಿಂದಲೂ ವಿಸ್ತೃತವಾದ ವೀರಶೈವಮತವು ಸದ್ಯಃಸ್ಥಿತಿಯಲ್ಲಿ ವೈದಿಕಾಚಾರವಿಚಾರಗಳಿಂದ ವ್ಯತ್ಯಾಸವನ್ನು ಹೊಂದಿರುವುದು. ಇನ್ನು ಈ ಧಾರ್ಮಿಕರಾಜ್ಯದಲ್ಲಿ ತಮ್ಮ ತಮ್ಮ ಧರ್ಮಸುಧಾರಣೆಯನ್ನು ಮಾಡಿಕೊಳ್ಳಲು ಸರ್ವರಿಗೂ ಹಕ್ಕುಬಾಧ್ಯತೆಯುಂಟು. ಆದುದರಿಂದ ವೈದಿಕವಿದ್ಯಾವಿಶಾರದರೂ ರಾಜಕೀಯವಿದ್ಯಾವಿಶಾರದರೂ ಐಕ್ಯರಾಗಿ ಶ್ರೀಮತ್ಪಂಚಾಚಾರ್ಯ ಜಗದಾಚಾರ್ಯರಿಂ ಸ್ಥಾಪಿಸಲ್ಪಟ್ಟ ಸನಾತನಾಚಾರಪದ್ಧತಿಯನ್ನು ನಡವಳಿಕೆಯಲ್ಲಿ ತಂದುಕೊಂಡು ಧಾರ್ಮಿಕ ಮತ್ತು ರಾಜಕೀಯ ಮಹಿಮಶಕ್ತಿನ ವೃದ್ಧಿಯನ್ನು ಸಂಗ್ರಹಿಸುತ್ತ ಇಹಪರಸುಖಗಳನ್ನು ಪಡೆಯಲು ಪ್ರಯತ್ನಿಸುವದು ಸರ್ವರ ಆದ್ಯಕರ್ತವ್ಯವಾಗಿದೆ. (ಇತಿ ವೀರಶೈವಮತ ಪ್ರಶಂಸಾ.)

ಶ್ರೀಮತ್ಪಂಚಾಚಾರ್ಯೇಭ್ಯೋನಮಃ

ವೀರಶೈವ ಮತದಲ್ಲೊಂದು ಕಳಂಕ

ಮತಬಾಂಧವರೇ,

ಪ್ರತಿಯೊಬ್ಬ ವ್ಯಕ್ತಿಯೂ ಸ್ವಮತೋದ್ಧಾರಕ್ಕಾಗಿ ಸತತ ಪ್ರಯತ್ನ ಮಾಡುವದು ಅವನ ಆದ್ಯಕರ್ತವ್ಯವಾಗಿರುತ್ತದೆ. ಒಂದು ಸಮಾಜವು ಮುಂದುವರಿದಿದೆ ಎಂದರೆ ಜನಬಾಹುಳ್ಯತೆಯಿಂದ ಪರಿಗಣಿಸಲಾಗದು. ಅದು ವಿದ್ಯೆ ನಾಗರಿಕತೆ ಆಚಾರ ವ್ಯವಹಾರಗಳಲ್ಲಿ ಪರಿಪಕ್ವವನ್ನು ಹೊಂದಬೇಕು. ನಮ್ಮ ವೀರಶೈವ ಮತವಾದರೋ ಅತ್ಯುತ್ಕೃಷ್ಟವಾದುದೆಂದು ವೇದಾಗಮಗಳಲ್ಲಿ ಪ್ರತಿಪಾದಿತವಾಗಿದೆ. ಇಂಥಾ ಮತವು ಇತ್ತೀಚೆಗೆ ಅವನತಿಯನ್ನು ಹೊಂದುತ್ತಾ ಪರಮತೀಯರ ಅವಹೇಳನಕ್ಕೆ ಆಸ್ಪದವಾಗಿರುವುದೆಂಬುದು ಮನಗೊಂಡು ಹೇಳಬೇಕಾದ ಸಂಗತಿಯೇ ಸರಿ. ಈ ಮತದ ಪುರೋಭಿವೃದ್ಧಿಗಾಗಿ ಅನೇಕ ಮಹನೀಯರು ತವಕ ಪಡುತ್ತಿರುವರು. ಆದರೂ ಹಳ್ಳಿಗಾಡುಗಳ ಸ್ಥಿತಿಯು ಶೋಚನೀಯವಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರಿಂದ ನಿಯಮಿಸಲ್ಪಟ್ಟ ಗುರುಗಳು ಅವಿದ್ಯಾವಂತರಾಗಿರುವದೇ ನಮ್ಮ ಮತದ ಹೀನಸ್ಥಿತಿಗೆ ಮುಖ್ಯಕಾರಣವು. ಅವರುಗಳು ಮತಶಾಸ್ತ್ರವೇತ್ತರಾಗಿ ಆಚಾರ ನಿಷ್ಠರಾಗಿ ಶಿಷ್ಯಮಂಡಲಿಗೆ ಸದುಪದೇಶಾಮೃತವನ್ನು ಪಾನಮಾಡಿಸುತ್ತಾ ಇದ್ದಿದ್ದರೆ ನಮ್ಮ ಹೀನಸ್ಥಿತಿಗೆ ಅವಕಾಶವೇ ಇರುತ್ತಿರಲಿಲ್ಲವು. ಇನ್ನು ಮುಂದೆಯಾದರೂ ಮಠಾಧಿಕಾರಿಗಳನ್ನಾಗಿ ಮಾಡಬೇಕಾಗಿರುವ ವಟುಗಳಿಗೆ ಬಾಲ್ಯದಲ್ಲಿಯೇ ಮಾತೃಭಾಷೆಯಾದ ಸಂಸ್ಕೃತದಲ್ಲಿ ಪೂರ್ಣ ಪಾಂಡಿತ್ಯವನ್ನುಂಟು ಮಾಡಿಸಿ ಜ್ಯೋತಿಷ ವೇದಾಧ್ಯಯನದಲ್ಲಿ ನಿಷ್ಣಾತರನ್ನಾಗಿ ಮಾಡಿದಲ್ಲಿ ಸಮಾಜ ಲಕ್ಷ್ಮಿಯು ಅತ್ಯಲ್ಪ ಕಾಲದಲ್ಲೇ ಅಂಗ ಸೌಷ್ಠವವನ್ನು ಹೊಂದಿ ವಿಕಸಿತವದನೆಯಾಗಿ ಬೆಳೆಯುವಳು. ಇತ್ತೀಚೆಗೆ ಪ್ರತಿಗ್ರಾಮಗಳಲ್ಲಿಯೂ ಅನಾಮಧೇಯರನೇಕರು ಭಸ್ಮರುದ್ರಾಕ್ಷಿ ಕಾವೀಕಾಟಿಗಳಿಂದ ಅಲಂಕೃತರಾಗಿ ಪರಾನ್ನಭಕ್ಷಕರಾಗಿ ವರ್ತಿಸುತ್ತಾ ನಮ್ಮ ಜನ್ಮವೈರಿಗಳ ಹಾಸ್ಯಕ್ಕೆ ಗುರಿಯಾಗುತ್ತಿರುವರು. ನಿರಕ್ಷರಕುಕ್ಷಿಗಳಾದ ಈ ವೇಷಧಾರಿಗಳಿಗೆ ಇದೇ ಒಂದು ಜೀವನೋಪಾಯವಾಗಿರುವುದು. ಇವರ ಪ್ರತಾಪವು ಮಾತ್ರ ಗ್ರಾಮಗಳಲ್ಲಿ ವಿವಾಹಾದಿ ಶುಭಕಾರ್ಯಗಳಲ್ಲಿ ಸುವರ್ಣದಕ್ಷಿಣಾ ಸ್ವೀಕಾರದಲ್ಲಿಯೂ ತಮಗೆ ಎಲ್ಲಾ ಕಾರ್ಯಗಳಲ್ಲಿಯೂ ಪೂಜ್ಯ ಸ್ಥಾನವು ದೊರೆಯಬೇಕೆನ್ನುವುದರಲ್ಲಿಯೂ ಪರ್ಯವಸಾನವನ್ನು ಹೊಂದುತ್ತಲಿದೆಯೇ ಹೊರತು ಅನ್ಯಥಾ. ಇಂಥಾ ಆಶ್ರಮರಹಿತರಾದ ನಾಮಧಾರಿಗಳಿಂದ ಮಠಾಧಿಕಾರಿಗಳಿಗೆ ಅಗೌರವವೂ ಮತಕ್ಕೆ ಕಳಂಕವೂ ಅಲ್ಲದೆ ಇತರರಿಗೆ ಹಾಸ್ಯಾಸ್ಪದವೂ ಆಗಿದೆ. ಇಷ್ಟು ಮೇಲಾದರೂ ಮಠಾಧಿಕಾರಿಗಳೂ ಸ್ವಕೀಯ ಮತಾಭಿಮಾನಿಗಳೂ ಇವರ ದುರಭಿಮಾನವನ್ನು ಮುರಿದು ಮತಪ್ರಾಬಲ್ಯಕ್ಕೆ ಮಾರ್ಗವನ್ನು ಹುಡುಕುವುದರಲ್ಲಿ ಮುಂದುವರಿಯಬೇಕಾದುದು ಅತ್ಯವಸರವೂ ಅಗತ್ಯವೂ ಆಗಿರುತ್ತದೆ. ಹೀಗಾದ ಹೊರತು ನಮ್ಮ ಮತಕ್ಕೆ ಅವನತಿಯು ತಪ್ಪಲಾರದು. ಈ ವೇಷಧಾರಿಗಳೇ ನಿಮ್ಮ ಆಡಂಬರದ ಆಟಗಳು ಇನ್ನು ಸಾಗಲಾರವು. ಬಡಿವಾರ ಬಯಲಾಟಗಳನ್ನು ಬಿಟ್ಟು ಮತಾಭಿವೃದ್ಧಿ ಕಾಂಕ್ಷಿಗಳಾಗಿ ಯಾವುದಾದರೊಂದು ಯೋಗ್ಯವೃತ್ತಿಯಿಂದ ಜೀವನ ಪಥವನ್ನು ಮುಂದುವರಿಸಬೇಕಲ್ಲದೆ ಈ ರೀತಿಯಾದ ವೇಷದಿಂದ ಮಠದಲ್ಲಿ ನಿಂತು ಮತಪತನ ಹೇತುಗಳಾಗಿ ಪರಿಣಮಿಸಿದಲ್ಲಿ ಗೌರವವು ದೊರೆಯಲಾರದೆಂದು ನನ್ನ ಆಗ್ರಹಪೂರ್ವಕವಿನಂತಿ ಇದೆ.

ವರಕೂಡು ಎಂ. ಮಹಾದೇವಪ್ಪ
ಮೈಸೂರು

ಪಂಚಾಚಾರ್ಯಪ್ರಭಾ

೧೯೨೭ ನೇ ನವಂಬರ್ ತಾ|| ೭ನೇ ಸೋಮವಾರ

ಗುರು

ನಮ್ಮ ಭರತಭೂಮಿಯಲ್ಲಿ ವಾಸಮಾಡಿದ ಆಸ್ತಿಕ ಮಹಾಶಯರ ಬಂಧವಿಮೋಚನಕ್ಕೆ ನಿಗಮಾಗಮಾದಿಗಳೇ ಸಾಧನಗ್ರಂಥಗಳಾಗಿವೆ. ಈ ವೇದಾಗಮಾದಿ ಗ್ರಂಥಗಳು ಸುಖದುಃಖಗಳ ಸ್ವಭಾವವನ್ನು ಸ್ಪಷ್ಟವಾಗಿ ಪ್ರತಿಪಾದಿಸುವವು. ನನಗೆಂದಿಗೂ ದುಃಖವುಂಟಾಗಬಾರದು, ಸುಖವೇ ಉಂಟಾಗಲಿ ಎಂಬಾಶಯವುಳ್ಳವನಾಗಿರುವುದೇ ಮನುಷ್ಯನ ಸ್ವಭಾವವಾಗಿರುವುದು. ಹೀಗೆ ತಾನು ದುಃಖವನ್ನು ದುಃಖಸಾಧನವಾದ ಕರ್ಮವನ್ನೂ ಅಪೇಕ್ಷಿಸದಿದ್ದರೂ ಹಿಂದಣ ಕರ್ಮಲೇಪದ ಪರಿಪಾಕಾವಸ್ಥೆಗನುಸಾರವಾಗಿ ತನ್ನ ಜೀವನವೆಂಬ ಸಮುದ್ರದಲ್ಲಿ ಕಾಲಾನುಸಾರವಾಗಿ ಅನೇಕ ವಿಧಗಳಾದ ದುಃಖಗಳೆಂಬ ತರಂಗಗಳು ಹುಟ್ಟಿ ಮನುಷ್ಯನ ಏಳಿಗೆಯನ್ನೇ ಹಿಮ್ಮೆಟ್ಟಿಸುವವು. ಈ ತರಂಗಗಳಿಗೆ ಸಿಕ್ಕಿದ ಮನುಷ್ಯನು ಎಷ್ಟು ಬುದ್ಧಿಶಕ್ತಿಯುಳ್ಳವನಾಗಿದ್ದರೂ ನಿರ್ವೀರ್ಯನಾಗಿ ದಗಲಿಸುತ್ತ ಪಾಡುಪಡುತ್ತಿರುವನು. ಹೀಗೆ ಕಷ್ಟಪಡುತ್ತಿರುವ ಮನುಷ್ಯರ ಉದ್ಧಾರಕ್ಕೋಸ್ಕರವಾಗಿ ಪರಮಾತ್ಮನಾದ ಜಗದೀಶನು ಅವರವರ ಇಚ್ಛಾನುಸಾರವಾಗಿ ಸಂಸಾರೋದ್ಧಾರಕರಾದ ಗುರುಗಳನ್ನೂ ಅವರವರ ಇಚ್ಛಾನುಸಾರಗಳಾದ ಅನಂತ ಶಾಸ್ತ್ರಗಳನ್ನೂ ಏರ್ಪಡಿಸಿದ್ದಾನೆ. ಈ ಜಗತ್ತಿನಲ್ಲಿ ಅನಾದಿಕಾಲದಿಂದ ಯಾರು ಯಾವ ಮತಧರ್ಮಗಳನ್ನು ಅವಲಂಬಿಸಿರುತ್ತಾರೆಯೋ ಅವರಾಯ ಮತಧರ್ಮಗಳನ್ನು ಅನುಸರಿಸುತ್ತ ಮತಧರ್ಮಸ್ಥಾಪಕರಾದ ಗುರುಗಳಿಂದ ಧರ್ಮದೀಕ್ಷೆಯನ್ನು ಪಡೆದು ಪಾಪಮಾರ್ಗದಿಂದ ಹಿಂದಿರುಗಿ ಪುಣ್ಯಮಾರ್ಗದಲ್ಲಿ ಪ್ರಯಾಣಮಾಡುತ್ತಿರುವರೋ ಮಾನವ ಕೋಟಿ ಪ್ರವಿಷ್ಟರು. ಮಿಕ್ಕವರು 'ಮನುಷ್ಯರೂಪೇಣ ಮೃಗಾಶ್ಚರಂತಿ' ಎಂಬ ನೀತಿಗನುಗುಣವಾಗಿ ಮನುಷ್ಯರೂಪದಿಂದ ಸಂಚರಿಸುವ ಮೃಗಗಳೆನಿಸುವರು. ಲೋಕದಲ್ಲಿ ಅನಂತ ಮತಗಳು, ಅನಂತ ಶಾಸ್ತ್ರಗಳು ಅನಂತ ಅನುಷ್ಠಾನಗಳು ಇರುತ್ತವೆ. ಅವುಗಳೆಲ್ಲವೂ ಒಂದು ಮತೀಯರಿಂದಾಗಲಿ ಒಬ್ಬ ಮಾನವನಿಂದಾಗಲಿ ಅನುಷ್ಠಿಸಲು ಸಾಧ್ಯವಿಲ್ಲವು. ಆದುದರಿಂದ ತನ್ನ ವಂಶಾನುಕ್ರಮವಾಗಿ ಯಾವ ಧರ್ಮವನ್ನು ಯಾವ ಗುರುವನ್ನು ಆಶ್ರಯಮಾಡಿರುವನೋ ಆ ಧರ್ಮವನ್ನೂ ಆ ಧರ್ಮಸಂಸ್ಥಾಪಕರಾದ ಧರ್ಮಗುರುಗಳನ್ನೂ ಆಶ್ರಯಿಸಿ ದುರ್ಲಭವಾದ ಮಾನವಜನ್ಮದ ಫಲವನ್ನು ಪಡೆಯಬೇಕಾಗಿದೆ. ಪ್ರಪಂಚದಲ್ಲಿ ತನ್ನ ಪಿತೃ ಪಿತಾಮಹಾದಿಗಳಿಂದ ಯಾವ ಮತಧರ್ಮಾನುಷ್ಠಾನಗಳು ಜನರಿಗೆ ಬಂದಿರುವವೋ ಅಂತಹ ಧರ್ಮಾಚರಣೆಗಳು ಎಷ್ಟು ಕಷ್ಟಕರಗಳಾಗಿದ್ದರೂ ಪರಂಪರೆಯಿಂದ ಅಭ್ಯಾಸದಲ್ಲಿ ಬಂದಿರುವುದರಿಂದ ಅವುಗಳು ಸುಲಭಗಳಾಗಿಯೇ ಇರುತ್ತವೆ. ಯಾವ ಧರ್ಮಾಚರಣೆಗಳು ತನ್ನ ವಂಶಾನುಕ್ರಮವಾಗಿ ಬಂದಿರುವುದಿಲ್ಲವೋ ಅಂತಹ ಧರ್ಮಾನುಷ್ಠಾನಗಳು ಅತಿ ಸುಲಭಗಳಾಗಿದ್ದರೂ ಕಷ್ಟಗಳಾಗಿಯೇ ತೋರುವವು. ಒಂದು ಮನೆಯಲ್ಲಿರುವವರೆಲ್ಲರೂ ಯಾವಾಗಲೂ ವ್ಯವಸಾಯ ಮಾಡುತ್ತಲಿದ್ದರೆ ಆ ಮನೆಯ ಮಕ್ಕಳುಮರಿಗಳೆಲ್ಲರೂ ತಾವಾಗಿಯೇ ವ್ಯವಸಾಯದಲ್ಲಿ ಉದ್ಯುಕ್ತರಾಗುತ್ತಾರೆ. ಹೀಗೆ ತನ್ನ ವಂಶಾನುಕ್ರಮವಾಗಿ ಬಂದ ಆಚರಣೆಗಳನ್ನು ಬಿಟ್ಟು ಮಧ್ಯದಲ್ಲಿ ಹೊಸದಾದ ಆಚರಣೆಗಳಿಗೆ ಕೈಹಾಕಿದರೆ ಹಿಂದಣ ಆಚರಣೆಗಳೂ [illegible] ನೂತನಾಚರಣೆಗಳೂ ಸ್ವಾಧೀನಕ್ಕೆ ಬಾರದೆ ತ್ರಿಶಂಕು ಸ್ವರ್ಗದಂತೆ ಉಭಯಭ್ರಷ್ಟತೆಯನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ವಂಶಾನುಕ್ರಮವಾಗಿ ಯಾರು ಯಾವ ಮತವನ್ನು ಆಶ್ರಯಮಾಡಿದ್ದಾರೆಯೋ ಅವರು ಅದೇ ಮತವನ್ನೂ ಅದೇ ಧರ್ಮಾನುಷ್ಠಾನವನ್ನೂ ಅದೇ ಧರ್ಮಸಂಸ್ಥಾಪಕನಾದ ಗುರುವನ್ನೂ ಆಶ್ರಯಿಸಿ ಜಗದೀಶನ ಪ್ರೀತಿಗೆ ಪಾತ್ರರಾಗುವುದು ಪ್ರತಿಯೊಬ್ಬ ಮತೀಯನ ಕರ್ತವ್ಯಕರ್ಮವಾಗಿದೆ. ಇದೇ ಅರ್ಥವು "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದರೆ ಪರಧರ್ಮದಲ್ಲಿ ಪ್ರವೇಶಮಾಡಿ ಜಯಪಡುವುದಕ್ಕಿಂತಲೂ ತನ್ನ ಸಂಪ್ರದಾಯಕ ಮಾರ್ಗದಿಂದ ಧರ್ಮದಲ್ಲಿಯೇ ಮರಣವನ್ನು ಹೊಂದುವುದು ಒಳ್ಳೇದು, ಎಂದು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದು. ಭಗವತ್ಸ್ವರೂಪನಾದ ಜಗದೀಶನ ಪ್ರೀತಿಯನ್ನು ಸಂಪಾದಿಸುವುದೇ ಸಕಲ ಮತಗಳ ಉದ್ದೇಶವಾಗಿರುವದರಿಂದ [illegible]. ಮತಸಿದ್ಧಾಂತಸ್ಥಾಪಕರಾದ ಆಚಾರ್ಯರುಗಳೇ ಮೋಕ್ಷಮಾರ್ಗವನ್ನು ಉಪದೇಶಿಸುವರು. [illegible] ಪ್ರವೇಶವಿಲ್ಲದೆ ಇನ್ನಾವ ಐಹಿಕ [illegible] ಮೋಕ್ಷಮಾರ್ಗದ ಹೊರತು [illegible] ಲೌಕಿಕ ಮಾರ್ಗಗಳು ಸಕಲ ಮಾನವರಿಗೆಲ್ಲ ಒಂದೇ [illegible]. ಮೋಕ್ಷಮಾರ್ಗಗಳು ಮಾತ್ರ [illegible] ಅವರವರ ಪೃಥಕ್ತರವಾಗಿ [illegible] ಪರಂಪರೆಗಳೇ ಕಾರಣಗಳಾಗಿವೆ. ಲೋಕದಲ್ಲಿ ಒಂದು ಗ್ರಾಮವನ್ನು ಪ್ರವೇಶಮಾಡ[illegible] ಅನಂತ ಮಾರ್ಗಗಳುಂಟು. ಅವರವರ ಅಭ್ಯಾಸಕ್ಕನುಸರಿಸಿ [illegible] ಮಾರ್ಗದಲ್ಲಿ ಪ್ರವೇಶಮಾಡಿದರೂ ಅದೇ ಗ್ರಾಮವನ್ನು ಪ್ರವೇಶಮಾಡುವನಲ್ಲದೆ ಬೇರೆ [illegible] ಯಾವ ಮಾರ್ಗವನ್ನು [illegible] ಯಾವ ನದಿಗಳಾದರೂ [illegible] ಪ್ರವೇಶಮಾಡಬೇಕಲ್ಲದೆ ಬೇರೆ [illegible]. ಅದರಂತೆ ಈ ಪ್ರಪಂಚದಲ್ಲಿ ಮುಕ್ತಿ [illegible] ಸುಖಾವಲವನ್ನು ಹೊಂದುವುದಕ್ಕೆ [illegible] ಅನಂತಮಾರ್ಗಗಳಿವೆ. [illegible] ಯಾವ ಮತದಲ್ಲಿ ಜನಿಸಿ [illegible] ಆ ಮತಸ್ಥಾಪಕರಾದ ಗುರುಗಳಿಂದ ಅನುಗ್ರಹಿಸಲ್ಪಟ್ಟು ಮೋಕ್ಷಮಾರ್ಗವನ್ನು ತನ್ನದೆ ಅನುಷ್ಠಿಸುತ್ತ [illegible] ಮತಧರ್ಮಗಳನ್ನು ಅನುಸರಿಸಿದ್ದರೆ ಆ ಧರ್ಮಗಳಲ್ಲಿ [illegible] ಅದರ ಬುದ್ಧಿಯು [illegible] ಇತರ ಮತೀಯರನ್ನು ತನ್ನ ಧರ್ಮದಲ್ಲಿ [illegible] ಅನುಮಾನವನ್ನು ಪಡೆಸದೆ [illegible] ರಾಜಕೀಯ, ನೈತಿಕ, ಸಾಮಾಜಿಕ, ಲೌಕಿಕ [illegible] ಮತಗಳಲ್ಲಿಯೂ ಪರಸ್ಪರ ಸೌಹಾರ್ದವನ್ನು [illegible] ಇದರಲ್ಲಿ ಅವರವರ [illegible] ಬಾಗುವುದಲ್ಲದೆ ಜನಾಂಗ [illegible] ಒಡಂಬಡಿಕೆಯಿಂದ [illegible] ದೋಷವು [illegible] ಸಂದೇಹವಿಲ್ಲವು. ಆದುದರಿಂದ ಮನುಷ್ಯನು [illegible] ಆಗಲಿ, ಹಿಂದುಗಳೇ ಆಗಲಿ ಹಿಂದುಗಳಲ್ಲಿ [illegible] ಯಾವುದೇ ಆಗಲಿ ಸ್ವಧರ್ಮಾಭಿಮಾನದ [illegible] ಕಾರಣವಾದ ಆಧುನಿಕ ಶುದ್ಧೀಕರಣಕ್ಕೆ [illegible] ಅನಾವಶ್ಯಕವಾಗಿ ಬಂದ ತನ್ನ ತನ್ನ ಮತಧರ್ಮಗಳನ್ನೂ ತನ್ನ ತನ್ನ ಮತಸ್ಥಾಪಕರಾದ ಮೋಕ್ಷಗುರುಗಳನ್ನೂ ಆಶ್ರಯಿಸಿ [illegible] ರಾಜಕೀಯ, ನೈತಿಕಾದಿ ಲೌಕಿಕವ್ಯವಹಾರಗಳಲ್ಲಿ ಪರಸ್ಪರ ಸೌಹಾರ್ದದಿಂದ ಇರುವುದೇ ದೇಶದ ಸ[illegible] ಉತ್ತರೋತ್ತರ ಅಭಿವೃದ್ಧಿಗೆ ಕಾರಣವು.

ಪ್ರಕೃತದಲ್ಲಿ ನಮ್ಮ ವೀರಶೈವಧರ್ಮವೆಂಬುವುದು ವೇದಾಗಮ ಸಮ್ಮತಗಳಾದ ಹಿಂದೂ ಧರ್ಮಗಳಲ್ಲಿ ಒಂದು ಪವಿತ್ರಧರ್ಮವಾಗಿರುವುದು. ಈ ಧರ್ಮದಲ್ಲಿರುವವರಿಗೆ ಜಗತ್ಕಾರಣನಾದ ಭಗವಂತನಲ್ಲಿ ಸಮರಸವಾಗುವುದೇ ಮುಕ್ತಿ ಫಲವಾಗಿರುವುದು. ಭಾರತಭೂಮಿಯಲ್ಲಿರುವ ಸಮಸ್ತ ಮತಗಳಿಗೆ ಸ್ಥಾಪಕ ಗುರುಗಳಿರುವಂತೆ ಈ ವೀರಶೈವಮತಕ್ಕೆ ರೇಣುಕಾದಿ ಪಂಚಾಚಾರ್ಯರೇ ಮುಖ್ಯ ಗುರುಗಳಾಗಿರುತ್ತಾರೆ. ಈ ಮತದ ಧರ್ಮಕರ್ಮಗಳೆಲ್ಲವೂ ಈ ಆಚಾರ್ಯ ಪುಂಗವರಿಂದಲೇ ಅನುಗ್ರಹಿಸಲ್ಪಟ್ಟಿರುವವು. ಆದ ದರಿಂದ ಪ್ರತಿಯೊಬ್ಬ ಮತೀಯರೂ ಮುಕ್ತಿಸಾಧಕಗಳಾದ ತಮ್ಮ ತಮ್ಮ ಮತಧರ್ಮಗಳನ್ನು ಸ್ಥಾಪಿಸಿದ ಗುರುಗಳಲ್ಲಿ ಅಸಾಧಾರಣವಾದ ಭಕ್ತಿಯನ್ನು ತೋರಿಸುತ್ತ ಸ್ವಧರ್ಮದಲ್ಲಿ ನಿರತರಾಗಿರಬೇಕು. ವೀರಶೈವರಾದವರು ತಮ್ಮ ಮತಸ್ಥಾಪಕರಾದ ಶ್ರೀಪಂಚಾಚಾರ್ಯರಲ್ಲಿ ನಿರತಿಶಯವಾದ ಭಕ್ತಿಯನ್ನಿಟ್ಟು ಗುರುಗಳಿಂದ ಬಂದ [illegible] ಆಚರಣೆಗಳ ಧರ್ಮರಹಸ್ಯವನ್ನು ಗುರುಮುಖದಿಂದಲೇ ತಿಳಿದು ಅನುಷ್ಠಿಸುತ್ತ ಅನ್ಯಧರ್ಮಗಳಲ್ಲಿ ಸಮಾನುಭೂತಿಯನ್ನು ತೋರಿಸುತ್ತ ಶ್ರೀಜಗದ್ಗುರು ಪಂಚಾಚಾರ್ಯರ ಅನುಗ್ರಹದ್ವಾರಾ ಈಶ್ವರಸಾಕ್ಷಾತ್ಕಾರವನ್ನು ಹೊಂದುವುದೇ ಪ್ರತಿಯೊಬ್ಬ ಲಿಂಗಾಂಗಿಯ ಸ್ವಧರ್ಮವಾಗಿದೆ.

ವರ್ತಮಾನಸಂಗ್ರಹ.

ಬೆಂಗಳೂರಿನ ಆರ್ಯ ಸಮಾಜದವರು ಕ್ರೈಸ್ತನಾಗಿದ್ದ ಒಬ್ಬ ಹುಡುಗನನ್ನು ಶುದ್ಧಿ ಮಾಡಿ ಹಿಂದೂ ಮತಕ್ಕೆ ಸೇರಿಸಿಕೊಂಡರು.

ಪರಸ್ಪರ ಸಹಾಯ ಸಂಘಗಳಿಗೆ ರಾಟೆಗಳನ್ನು ಕೊಡುವುದಕ್ಕಾಗಿ ನಮ್ಮ ಸರ್ಕಾರದ ಕೈಗಾರಿಕೆ ಇಲಾಖೆಯವರು ಇದುವರೆಗೆ 1800 ನೂಲುವ ಕೈರಾಟೆಗಳನ್ನು ತಯಾರಿಸಿರುವರು.

ಕಳೆದ ತಾ|| 23 ನೇ ಭಾನುವಾರ ಶ್ರೀಮದ್ಯುವರಾಜರವರಿಗೆ ಪುತ್ರಿಕಾ ಜನನೋತ್ಸವವಾಯಿತೆಂದು ತಿಳಿಸಲು ಸಂತೋಷಿಸುತ್ತೇವೆ. ರಾಜಶಿಶು ಬಾಣಂತಿಯರು ಸೌಖ್ಯದಿಂದಿರುವರೆಂದು ಕೇಳುತ್ತೇವೆ.

ನಮ್ಮ ದಿವಾನ್ ಸಾಹೇಬರು ಬರುವ ತಾ|| 9 ನೆಯ ಬುಧವಾರ ಬೆಂಗಳೂರಿನಿಂದ ಹೊರಟು ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ನವಾನಗರ ಸಂಸ್ಥಾನದ ರಾಜಧಾನಿಯಾದ ಜಾಂ ನಗರಕ್ಕೆ ಹೋಗಿ ಮಹಾರಾಜಾ ಜಾಂ ಸಾಹೇಬರವರೊಡನೆ ಮಾತನಾಡಿಕೊಂಡು ತಾ|| 21 ಕ್ಕೆ ಬೆಂಗಳೂರಿಗೆ ದಯಮಾಡಿಸುವರೆಂದು ತಿಳಿಯಬರುತ್ತದೆ

ಅರಮನೆ ಖಜಾನೆಯ ತಪಾಸಣೆಯ ಸಂಬಂಧವಾಗಿ 1926 ನೆಯ ಸಪ್ಟಂಬರು 3 ನೆಯ ತಾರೀಖಿನಲ್ಲಿ ಸಂಬಳಗಳೂ ವಿದ್ಯಾವೇತನಗಳೂ ಬಟವಾಡೆಯಾಗುವಾಗ 1300 ರೂಪಾಯಿಗಳೂ, ಕಳೆದ ಏಪ್ರಿಲ್ 2 ನೆಯ ತಾರೀಖಿನ ಬಟವಾಡೆಯಲ್ಲಿ 1407-12-0 ರೂಪಾಯಿಗಳೂ ವ್ಯತ್ಯಸ್ತವಾಗಿರುವುದು ಲೆಕ್ಕಗಳ ಶೋಧನೆಯಿಂದ ಕಂಡು ಹಿಡಿಯಲ್ಪಟ್ಟು ಅಪರಾಧಿಗಳನ್ನು ವಿಚಾರಣೆಗೆ ಗುರಿಮಾಡಿರುತ್ತಾರೆ.

ಒರಿಸ್ಸಾದಲ್ಲಿ ವೈತರಣೀ ನದಿಯ ಪ್ರವಾಹದಿಂದ 70,000 ಮನೆಗಳು ಕೊಚ್ಚಿಹೋಗಿವೆ 30,000 ಸಂಸಾರಿಗಳು ಮನೆ ಮಠಗಳಿಲ್ಲದೆ ಕಷ್ಟಪಡುತ್ತಿರುವರು.

ಅಮೇರಿಕೆಯ ರಸಾಯನ ಶಾಸ್ತ್ರಜ್ಞರು ಕಸವಾಗಿ ಬಿಸಾಡುವ ಜೋಳದ ಕಡ್ಡಿಗಳಿಂದ ರೇಷ್ಮೆ ಬಟ್ಟೆಯಂತೆ ಗಟ್ಟಿಯಾದ ಬಟ್ಟೆಗಳನ್ನು ತಯಾರಿಸುತ್ತಿರುವರು.

ಆಂಧ್ರದೇಶದ ಸೀತಾನಗರದ ಗೌತಮೀ ಆಶ್ರಮದಿಂದ ಹತ್ತು ಮಂದಿ ಸ್ತ್ರೀಯರು ನೀಲವಿಗ್ರಹದ ಸತ್ಯಾಗ್ರಹಕ್ಕಾಗಿ ಹೊರಟಿರುವರು. 70 ವರ್ಷ ವಯಸ್ಸಿನ ಲಕ್ಷ್ಮೀ ನರಸಮ್ಮನವರು ಈ ದಳದ ನಾಯಕಿಯರಾಗಿರುವರು.

ಅಮೇರಿಕಾ ದೇಶದ ವೈಮಾನಿಕರು 200 ಮೈಲುಗಳವರೆಗೂ ಬೆಳಕು ಬೀರುವ ಒಂದು ದೊಡ್ಡ ದೀಪವನ್ನು ವಿದ್ಯುಚ್ಛಕ್ತಿಯಿಂದ ತಯಾರು ಮಾಡಿರುತ್ತಾರೆ. ಈ ದೀಪದಲ್ಲಿ 138 ಕೋಟಿ ಮೇಣಬತ್ತಿ ದೀಪದ ಕಾಂತಿಯು ಇರುವುದಂತೆ!

ಹೈದರಾಬಾದ ಸಂಸ್ಥಾನದ ಅಬ್ದುಲ್ಲನೆಂಬ ಮುಸಲ್ಮಾನನು ಪೂನಾ ಪಟ್ಟಣದ [illegible] ಬಾಲಕನನ್ನು [illegible] ಕೊಲ್ಲಲು ಪ್ರಯತ್ನಿಸಿ ಚೂರಿಯಿಂದ ಭಯಂಕರವಾದ ಗಾಯಗಳನ್ನು ಮಾಡಿದ್ದಾನೆ. ಅಬ್ದುಲನು ಕೈದಿನಲ್ಲಿಡಲ್ಪಟ್ಟಿರುತ್ತಾನೆ.

ನವನಾಗರೀಕತೆಗೆ ಕೇಂದ್ರಸ್ಥಾನವೆನಿಸಿದ [illegible] ನಗರದಲ್ಲಿ ಕಳೆದ ಆಗಸ್ಟ್ ತಿಂಗಳೊಂದರಲ್ಲಿಯೇ ಸುಮಾರು 2000 ಮಂದಿ ಸ್ತ್ರೀಯರು ತಮ್ಮ ಗಂಡಂದಿರಿಂದ ಬಿಡುಗಡೆ ಹೊಂದಲು ಅರ್ಜಿ ಹಾಕಿರುವರಂತೆ! ಇದನ್ನೇ ಪಾಶ್ಚಾತ್ಯ ನವನಾಗರೀಕತೆಯ [illegible] ಸುಧಾರಣೆಯು ?

ಹಿಂದುಸ್ತಾನವು ನಾನಾ ಧರ್ಮದ ನಾನಾ ಜನಾಂಗಗಳಿಂದ ಕೂಡಿರುವ ದೇಶವಾಗಿರುವುದರಿಂದ ಇದಕ್ಕೆ ಸ್ವರಾಜ್ಯವನ್ನು ಕೊಟ್ಟರೆ ದೇಶವೆಲ್ಲಾ ಅಂತರಿಕಸಂಗ್ರಾಮದಿಂದ ಭಿನ್ನಭಿನ್ನವಾಗಿ ಒಡೆದು ಹೋಗುವದೆಂದೂ ಆದ್ದರಿಂದ ಬ್ರಿಟಿಷ ಚಕ್ರಾಧಿಪತ್ಯದ ಗದೆಯು ಯಾವಾಗಲೂ ಹಿಂದುಸ್ತಾನದ ತಲೆಯ ಮೇಲೆ ತಿರುಗುತ್ತಿರಬೇಕೆಂದೂ ನಾಗಪೂರದ ಗವರ್ನರಾಗಿದ್ದ ಸರ್ ಕಾಡಾಕ್ ಸಾಹೇಬರವರು ಹೇಳುತ್ತಾರೆ.

ಈ ತಿಂಗಳು 2 ನೆ ತಾರೀಖಿನ ದಿವಸ ಸರ್ ಜಗದೀಶ ಚಂದ್ರಬೋಸರವರು ಸಕುಟುಂಬಿಗಳಾಗಿ ರಾಜಧಾನಿಗೆ ಆಗಮಿಸಿ ಅದೇ ದಿವಸ ಪ್ರೇಕ್ಷಣೀಯವಾದ ಕನ್ನಂಬಾಡಿ ಜಲಾಶಯ ಮೊದಲಾದವನ್ನು ಪರಾಂಬರಿಸಿ ಸಾಯಂಕಾಲದಲ್ಲಿ ಅರಮನೆಯೊಳಗೆ ಅರಸುಮಕ್ಕಳಿಗೆ ಉಪಯುಕ್ತವಾದ ಒಂದು ಸಂಕ್ಷಿಪ್ತ ಭಾಷಣವನ್ನು ಮಾಡಿದರು. ಮರು ದಿವಸ ಪ್ರಾತಃಕಾಲ ಸರ್ ಬೋಸರವರು 9 ಗಂಟೆಗೆ ವಿದ್ಯುತ್ತೇಜಗಳನ್ನು ಕಟ್ಟಿದ ಭವ್ಯವಾದ ರಥದಲ್ಲಿ ವಿಶ್ವವಿದ್ಯಾಲಯದ ಪ್ರೊಚಾನ್ಸಲರವರಾದ ಶ್ರೀ ಯುವರಾಜರೊಂದಿಗೆ ಕುಳಿತುಕೊಂಡು ಜಗನ್ಮೋಹನ ಪ್ರಾಸಾದದ ಸಭಾಂಗಣವನ್ನು ಪ್ರವೇಶಿಸಿದರು. ಶ್ರೀ ಯುವರಾಜರವರ ಅಧ್ಯಕ್ಷತೆಯಲ್ಲಿ ಪಟ್ಟಪ್ರಧಾನ ಮಹೋತ್ಸವವು ಸಂಪೂರ್ಣತೆಯನ್ನೈದಿದ ಬಳಿಕ ಸರ್ ಬೋಸರವರು ನೂತನ ಭೂಷಿತರಾದ ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾದ ಸದ್ಬೋಧೆಯನ್ನು ಮಾಡಿದರು. ಸಾಯಂಕಾಲಾವಸರದಲ್ಲಿ ಚಾಮುಂಡಿ ಜಂಟಾನ ಎಂಬ ಸ್ಥಳದಲ್ಲಿ ಶ್ರೀ ಮಹಾಪ್ರಭುಗಳಿಂದ ಏರ್ಪಡಿಸಲ್ಪಟ್ಟಿದ್ದ ಅಲ್ಪಾಹಾರ ರೂಪವಾದ ಆತಿಥ್ಯವಂ ಸ್ವೀಕರಿಸಿ ಟವನ್ ಹಾಲಿಗೆ ಆಗಮಿಸಿ ಕಾಲೋಚಿತವಾದ ಉಪನ್ಯಾಸವನ್ನು ಸಹ ಮಾಡಿದರು. ಅದೇ ದಿವಸವೇ ಸ್ವಸ್ಥಾನಕ್ಕೆ ಪ್ರಯಾಣವನ್ನು ಬೆಳಸಿದರು.

ಸ್ವೀಕಾರ.

ಕೊಪ್ಪಳಜಿಲ್ಲಾ ಎಲಬುರ್ಗಾ ತಾಲೂಕು ಸಿದ್ನೆಕೊಪ ಗ್ರಾಮದ ಮ||ರಾ|| ಮಲ್ಲಪ್ಪ ಹನುಮನಾಳ ಇವರಿಗೆ ಮೊಮ್ಮಗನು ಜನಿಸಿದ ಸಂತೋಷಕ್ಕಾಗಿ ಸದರಿಯವರು ಈ ಪತ್ರಿಕೆಯ ಪೋಷಣಕ್ಕಾಗಿ ೪ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಗದಗತಾಲೂಕು ಬೆಟಗೇರಿಯಲ್ಲಿರುವ ಮ|| ನಿಂಬನಗೌಡರ ಶಿವನಗೌಡರು ತಮ್ಮ ಪುತ್ರಿಯಾದ ಗಂಗಾಬಾಯಿಯನ್ನು ರೋಣ ತಾಲೂಕು ಸೂಡಿ ಗ್ರಾಮದ ಮ|| ಬಿದರೂರು ಮರಿತಮ್ಮಪ್ಪನವರ ಪುತ್ರನಾದ ಗುರುಬಸವಪ್ಪನವರಿಗೆ ಕೊಟ್ಟು ನಿಶ್ಚಯಮಾಡಿದ ಕಾರ್ಯದಲ್ಲಿ ಕನ್ಯಾಸಂಬಂಧಿಗಳು ೧ ರೂಪಾಯಿಯನ್ನೂ ವರನ ಸಂಬಂಧಿಗಳು ೬ ರೂಪಾಯಿಗಳನ್ನೂ ಕಳುಹಿಸಿರುತ್ತಾರೆ. ಒಟ್ಟು ಈ ೭ ರೂಪಾಯಿಗಳು ಬೆಟಗೇರಿ ನಿವಾಸಿಗಳಾದ ಮ|| ಹಿರೇಮನಿ ನೀಲಪ್ಪಗೌಡರವರಿಂದ ನಮಗೆ ಬಂದು ತಲ್ಪಿರುತ್ತವೆ.

ರಾಣೆಬೆನ್ನೂರು ತಾಲೂಕು ತುಮ್ಮಿನಕಟ್ಟಿಗ್ರಾಮದ ಮ|| ಹಂಪಳ್ಳಿ ಬಸೆಟ್ಟೆಪ್ಪನವರ ಪ್ರಸ್ತದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ ೨ ರೂಪಾಯಿಗಳು ಮ|| ನ್ಯಾಮತಿ ಕೋಪಳ್ಳಿಮಠದ ಸಂಜಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ

ಹಿರೇಕೆರೆ ತಾ|| ಬ್ಯಾಲೇನಹಳ್ಳಿಗ್ರಾಮದ ಮ|| ಪರಮೇಶ್ವರಪ್ಪಗೌಡರು ವಿಜಯದಶಮಿಯಲ್ಲಿ ನೆರವೇರಿಸಿದ ಉತ್ಸವಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗದುಕಳುಹಿಸಿದ ೭ ರೂಪಾಯಿಗಳು ಮ|| ಸಾಸಲುಮಠದ ಸಿದ್ಧಾಂತಿ ಗುರುಬಸವಶಾಸ್ತ್ರಿಗಳಿಂದ ತಲ್ಪಿರುತ್ತವೆ.

ವಿಜಾಪುರ ಜಿ|| ಬಾದಾಮಿ ತಾಲ್ಲೂಕು ಗೋವಿನಕೊಪ್ಪದಲ್ಲಿರುವ ಮ|| ಸಂಗನಬಸಪ್ಪ ಪಾಕವಾಡರವರು ಅಶ್ವೀಜ ಬ|| 30 ರಲ್ಲಿ ನೆರವೇರಿಸಿದ ಮಹಾಲಕ್ಷ್ಮೀ ಪೂಜಾ ಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ 1 ರೂಪಾಯಿಯನ್ನು ಕಳುಹಿಸಿದ್ದಾರೆ.

ಧಾರವಾಡ ಜಿ|| ಬಂಕಾಪುರ ಗ್ರಾಮದ ಮ|| ಬಸವಣ್ಣೆಪ್ಪ ಕೊತ್ತಂಬರಿ ಮ|| ಚನ್ನಪ್ಪನಾರಾಯಣಪುರ ಮ|| ಭೀಮಣ್ಣ ಆರಲೀಕಟ್ಟಿ ಈ ಮಹಾಶಯರು ಲಕ್ಷ್ಮೀ ಪೂಜಾ ಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ಒಂದೊಂದುರೂಪಾಯಿಯನ್ನು ತೆಗೆದು ಕಳುಹಿಸಿದ್ದಾರೆ. ಈ ರೂಪಾಯಿಗಳು ಮ|| ಮಹದೇವಪ್ಪ ಕುಂಬಾರ ಇವರಿಂದ ನಮಗೆ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳವನ್ನುಂಟುಮಾಡಲೆಂದು ಕೋರುತ್ತೇವೆ.

ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯರ ಸನ್ನಿಧಿಯಲ್ಲಿ ಪ್ರಾರ್ಥನೆ.

ನಿಜಾಂ ಇಲಾಖೆಗೆ ಸೇರಿದ ಕಲ್ಯಾಣ ಗ್ರಾಮದ ಮರಪತ್ತಿ ಮಡಿವಾಳಯ್ಯ ಮೊದಲಾದವರು ಕೂಡಿ ಧನದಾಶೆಯಿಂದ ಹಡಪದ (ಕ್ಷೌರಿಕರಿಗೆ) ವರಿಗೆ ಲಿಂಗಧಾರಣ ಮಾಡಿ ಅವರೊಡನೆ ಸಹಪಂಕ್ತಿಯನ್ನು ಮಾಡಿರುವರು. ಇಷ್ಟಕ್ಕೇ ತಮ್ಮ ಧರ್ಮವಿರುದ್ಧವಾದ ಪ್ರವೃತ್ತಿಯನ್ನು ಸಾಕುಮಾಡದೆ ಗ್ರಾಮಾಂತರಗಳಲ್ಲಿಯೂ ಕ್ಷೌರಿಕರಿಗೆ ಲಿಂಗಧಾರಣ ಮಾಡಿ ಹಣ ಸಂಪಾದಿಸುವ ಉದ್ಯೋಗವನ್ನು ನಡೆಸುತ್ತಿರುತ್ತಾರೆ. ಇವರು ಮಾಡಿದ ಕಾರ್ಯವನ್ನು ಅದೇ ಕಲ್ಯಾಣ ಗ್ರಾಮದ ದೈವದವರು ನಿಷೇಧಿಸಿದ್ದಲ್ಲದೆ ತಿರಸ್ಕಾರ ಪತ್ರಿಕೆಯನ್ನು ಹೊರಡಿಸಿರುತ್ತಾರೆ. ಆದರೇನು? ಅವರ ಕೆಲಸವು ಯಥಾಪ್ರಕಾರವಾಗಿ ನಡೆದೇ ಇದೆ. ಇಂತಹ ಸ್ವೇಚ್ಛಾಚಾರಿಗಳಿಗೆ ಸನ್ನಿಧಿಯಿಂದ ಯೋಗ್ಯ ಹುಕುಮನ್ನು ಹೊರಡಿಸಿ ಯೋಗ್ಯ ಬಂದೋಬಸ್ತು ವಿಧಿಸುವದು ತಕ್ಕದ್ದಾಗಿದೆ. ಇಲ್ಲವಾದರೆ ಮತದಲ್ಲಿ ಅನಾಯಕತ್ವವುಂಟಾಗಿ ಗಲಿಭೆ ಏಳುವದು. ಪ್ರಯುಕ್ತ ಆಚಾರ್ಯರು ಬೇಗನೆ ಇತ್ತ ಗಮನಿಸಬೇಕೆಂದು ಪ್ರಾರ್ಥನೆ.

ಸನ್ನಿಧಿಯ ಸೇವಕ.
ರುದ್ರಾರಾಧ್ಯಶಾಸ್ತ್ರಿ ಪಾಠಶಾಲಾ ಮಹಾಗಾಂವ

ಮಹಾಸಭೆಯ ಅಧ್ಯಕ್ಷರು ಎಂಥವರಿರಬೇಕು?

ಬರುವ ಡಿಶಂಬರ್ ತಿಂಗಳಲ್ಲಿ ವೀರಶೈವ ಮಹಾಸಭೆಯು ಮೈಸೂರು ಉಪರಾಜಧಾನಿಯೆಂದೆನಿಸಿರುವ ಬೆಂಗಳೂರು ಪಟ್ಟಣದಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿರುವದು. ಈ ನಮ್ಮ ವೀರಶೈವ ಮಹಾಸಭೆಯೆಂಬ ಕಲ್ಪಲತೆಯು ಬಂದೇ ನಿಷ್ಪಕ್ಷಪಾತಿಗಳೆಂಬ ಉತ್ತಮ ವೃಕ್ಷವನ್ನು ಆಶ್ರಯಮಾಡಿದ್ದರಿಂದ ಅದ ಈತಿಬಾಧೆಗಳೂ ತಗುಲದೆ ಅನೇಕ ವರ್ಷಗಳ ವರೆಗೂ ಬೆಳೆಯುತ್ತಲಿದ್ದು ಮಧ್ಯದಲ್ಲಿ ಚಳವಳಿಯೆಂಬ ಭಯಂಕರವಾದ ಬಿಸಿಲಿನ ಹಟನಿಂದ ಸನ್ಮಾರ್ಗಪ್ರದವಾದ ಈ ಸಭೆಯೆಂಬ ಕಲ್ಪಲತೆಯು ಬೆಳೆಯದೆ ಕುಂದುವದಕ್ಕೆ ಪ್ರಾರಂಭವಾಗಿರುವುದು ವಿಷಾದಾಸ್ಪದವಾಗಿದೆ. ನಮ್ಮ ಬೆಂಗಳೂರು ಪಟ್ಟಣವಾಸಿಗಳಾದ ವೀರಶೈವ ಮಹಾಶಯರು ಇದಕ್ಕೆ ಉಂಟಾಗಿರುವ ಕುಂದುಕೊರತೆಗಳೆಲ್ಲವೂ ನಷ್ಟವಾಗಿ ನಮ್ಮ ಮಹಾಸಭಾ ಎಂಬೀ ದಿವ್ಯಲತೆಯು ಚನ್ನಾಗಿ ಬಲಿತು ಸತ್ಫಲಗಳನ್ನು ಕೊಡಲೆಂಬ ಸದುದ್ದೇಶದಿಂದ ತಮ್ಮ ಪಟ್ಟಣಕ್ಕೆ ಬರಮಾಡಿಕೊಂಡಿರುವದು ಅತ್ಯಂತ ಶ್ಲಾಘನೀಯವೇ ಸರಿ. ಆದರೆ ಈ ಸಭಾನಾಯಕತೆಯಾದರೂ ನಿಷ್ಪಕ್ಷಪಾತಿಗಳೂ ಸ್ವಧರ್ಮವನ್ನು ನಡೆಸುವರೂ ಉದಾತ್ತತತ್ವಪೂರ್ಣರೂ ಪ್ರಸಿದ್ಧರೂ ಶಾಂತರೂ ಸ್ವರಾಜ್ಯೈಕ್ಯಾಪೇಕ್ಷೆಯುಳ್ಳವರೂ ವಾಗ್ಮಿಗಳೂ ಆದ ಮಹಾಶಯರಿಗೆ ಒಪ್ಪುವದಲ್ಲದೆ ಇತರರಾರಿಗೂ ಒಪ್ಪುವದಿಲ್ಲವು. ಏಕೆಂದರೆ ಒಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿ ನ್ಯೂನಾತಿರೇಕಗಳಿಲ್ಲದೆ ಸರ್ವಸಮಂಜಸವಾಗಿ ನಿರ್ವಾಹಮಾಡುವದೇ ಪ್ರಯಾಸವಾಗಿರುವಾಗ ಇನ್ನು ವೀರಶೈವ ಮಹಾಸಭಾಧ್ಯಕ್ಷತೆಯನ್ನು ವಹಿಸಿ ಕೀರ್ತಿಯನ್ನು ಪಡೆಯುವದೆಂದರೆ ಸಾಧಾರಣ ವಿಷಯವಲ್ಲವು. ಇಂತಹ ಕಷ್ಟತರಗಳಾದ ಸಮಸ್ಯೆಗಳು ಒಂದೊದಗಿದರೂ ಅರಿಗೂ ಕ್ಲೇಶವಿಲ್ಲದಂತೆ ಸಮುದ್ರದ ಗಾಂಭೀರ್ಯ ಸ್ವಭಾವವುಳ್ಳವರಾಗಬೇಕಾಗುವದು. ಪ್ರಕೃತದಲ್ಲಿ ವಿಚಾರಮಾಡಿ ಶೋಧಿಸಿದಲ್ಲಿ ಇಂತಹ ಸರ್ವಗುಣಯುಕ್ತರಾದವರೆಂದರೆ ಮ|| ರಾ|| ಚನ್ನಪ್ಪ ಹುಲುಕೋಟಿ ಬಿ.ಎ., ಎಲ್ಎಲ್.ಬಿ., ಧಾರವಾಡ ಇವರೂ ಹಾಗೂ ರಾವ್‌ಬಹದ್ದೂರ ಕಂಬಳಿ ವಕೀಲರೂ ಸಮರ್ಥರಾಗಿದ್ದಾರೆ. ಈ ಉಭಯರೂ ಪ್ರಸಿದ್ಧರಿರುತ್ತಾರೆ. ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಮೆಂಬರರಾಗಿರುತ್ತಾರೆ. ಇಂಥವರ ಅಧ್ಯಕ್ಷತೆಯಿಂದ ಸಭೆಗೆ ವಿಶೇಷವಾದ ಶೋಭೆಯುಂಟಾಗಬಹುದೆಂದು ನಿಸ್ಸಂದೇಹವಾಗಿ ಹೇಳಬಹುದು. ಸ್ವಾಗತ ಮಂಡಲದವರು ಇತ್ತ ಗಮನಿಸಬೇಕಾಗಿ ಕೋರಿಕೆ.

ತಾ|| 2-11-27 ಎ. ಚನ್ನಪ್ಪ ಬೆಟಗೇರಿ.

ವೀರಶೈವರಲ್ಲಿ ವಿನಂತಿ

ವೀರಶೈವ ಪ್ರಿಯ ವಾಚಕರೇ— ತಮ್ಮ ಸಮ್ಮುಖದಲ್ಲಿ ಈ ಬಾಲಕನು ಬಂದೆರಡು ವಾಕ್ಯಗಳನ್ನು ತಿಳಿಸಿಕೊಳ್ಳುವನು. ಈ ಜಗತ್ತಿನಲ್ಲಿ ವಿವೇಕಶೂನ್ಯವಾದ ಮನುಷ್ಯವರ್ಗದಲ್ಲಿ ಅನೇಕರು ನಾನು ಹೆಚ್ಚು ತಾನು ಹೆಚ್ಚೆಂದು ನರ್ತಿಸುವದು ಸರ್ವಶ್ರುತವಷ್ಟೇ? ಇನ್ನು ಕೆಲವರು ತಮ್ಮಲ್ಲಿ ಲೇಖನಶಕ್ತಿಯಿಲ್ಲದಿದ್ದರೂ ಎರಡನೆಯವರಿಂದ ಬರೆಯಿಸಿ ತಮ್ಮ ಹೆಸರನ್ನಿಟ್ಟು, ಯೇನ ಕೇನ ಪ್ರಕಾರೇಣ ಪ್ರಸಿದ್ಧಃ ಪುರುಷೋಭವೇತ್ || ಎಂಬಂತೆ ವೃತ್ತಪತ್ರಿಕೆಗಳಿಗೆ ಕೊಟ್ಟು ಪ್ರಸಿದ್ಧಿಸುವರು. ಇನ್ನು ಕೆಲವರು ದ್ರವ್ಯದ ಆಶೆಗಾಗಿ ಪರರ ಬಾಲವನ್ನು ಬಡಿಸುವರು. ಇನ್ನೂ ಅನೇಕರು ನಾನಾಪ್ರಕಾರವಾಗಿ ಆಚರಿಸುವರು. ತಾವು ಯಾರು ತಮ್ಮ ಮತವಾವುದು? ಮತಾಚಾರ್ಯರಾರು? ಆಚಾರ್ಯರಿಂದ ಯಾವ ಯಾವ ಕಟ್ಟಪ್ಪಣೆಗಳು ಆಜ್ಞಾಪಿಸಲ್ಪಟ್ಟಿರುವವು? ಇವೇ ಮೊದಲಾದವುಗಳನ್ನು ವಿಚಾರಿಸದೆ ಮನಬಂದಂತೆ ಆಚರಿಸುವದರಿಂದ ಕೇವಲ, ಮನುಷ್ಯರೂಪೇಣ ಮೃಗಾಶ್ಚರಂತಿ || ಎನ್ನುವ ವಾಕ್ಯವನ್ನು ಸಾರ್ಥಕಪಡಿಸುತ್ತಾರೆ. ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸರ್ವ ಯುಗಗಳಲ್ಲಿಯೂ ಬೇರೆಬೇರೆ ನಾಮಗಳಿಂದ ಪರಶಿವನಾಜ್ಞಾನುಸಾರವಾಗಿ ಭೂಕೈಲಾಸಗಳೆಂದೆನಿಸಿದ ರಂಭಾಪುರೀ, ಉಜ್ಜಯಿನೀ, ಕೇದಾರ, ಶ್ರೀಶೈಲ, ವಾರಣಾಸೀ (ಕಾಶೀ) ಎಂಬ ಕ್ಷೇತ್ರಗಳಲ್ಲಿ ಪಂಚಪೀಠಗಳನ್ನು ಸ್ಥಾಪಿಸಿ ವೇದಸಮ್ಮತವಾದ ವೀರಶೈವಮತವಂ ಸ್ಥಾಪನಮಾಡಿ ದೇವಮಂದಿರವಂ ಪ್ರವೇಶಿಸಲಿಕ್ಕೆ ಹೇಗೆ ಸೋಪಾನಗಳಾವಶ್ಯವೆಯೋ ಹಾಗೆಯೇ ವೀರಶೈವಜನಾಂಗವು ಶಿವಮಂದಿರವನ್ನು ಅನಾಯಾಸವಾಗಿ ಹೊಂದಲಿಕ್ಕೆ ಅಷ್ಟಾವರಣಗಳೆಂಬ ಅಷ್ಟ ಸೋಪಾನಗಳನ್ನು ನಿರ್ಮಿಸಿರುವರು.

ಮಹನೀಯರೇ— ಆಚಾರ್ಯರಿಂದ ಸ್ಥಾಪಿಸಲ್ಪಟ್ಟ ಆಚಾರಗಳನ್ನು ಸರಿಯಾಗಿ ಆಚರಿಸುವದೇ ನಮ್ಮ ಕರ್ತವ್ಯವಾಗಿದೆ. ಆಚರಿಸದಿದ್ದರೆ ಗುರುವಾಕ್ಯಕ್ಕೆ ವಿಘ್ನ ಒದಂತಾಗುವದಿಲ್ಲವೇ? ಅನಾಮಧೇಯನಾದ ಯಾವನೊಬ್ಬ ಮನುಷ್ಯನನ್ನು ತಿರಸ್ಕರಿಸಿದರೂ ಆ ಮನುಷ್ಯನು ಕೋಪಿಸುವನು. ಅಂದಮೇಲೆ ಕರ್ತುಮಕರ್ತುಮನ್ಯಥಾ ಕರ್ತುಂ ಶಕ್ತರಾದ ಗುರುವರ್ಯರನ್ನು ನಿಂದಿಸುವದರಿಂದ ಗುರುಗಳ ಕೋಪಕ್ಕೆ ಆಹುತಿಯಾಗಬೇಕಾದೀತು! ಹರೇಕ್ರುದ್ಧೇ ಗುರುಸ್ತ್ರಾತಾ ಗುರೌಕ್ರುದ್ಧೇ ನಕಶ್ಚನ | ಎಂಬಂತೆ ಹರಮುನಿದರೂ ಗುರುವು ರಕ್ಷಿಸುವನು. ಗುರುವು ಮುನಿದರೆ ಕಾಪಾಡುವವರಿಲ್ಲದೆ ಹಾಳಾಗಿ ಹೋಗುವನು. ರಕ್ಷಕರಹಿತರಾಗಿ ಗೋಳಾಡಬೇಕಾಗುತ್ತದೆ. ಅಂಗೈಯುಣ್ಣಿಗೆ ಕನ್ನಡಿ ಏಕೆ? ಎಂಬ ಗಾದೆಗನುಸಾರವಾಗಿ ಈ ವಿಷಯವೆಲ್ಲ ಸರ್ವರಿಗೂ ತಿಳಿದೇ ಇರುವದರಿಂದ ನಾನು ಹೆಚ್ಚು ಬರೆಯಬಾರೆನು. ಆದುದರಿಂದ ಶ್ರೀಮಜ್ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಸೂತ್ರವನ್ನು ಅವಲಂಬಿಸಿದ ತಾವುಗಳು ಗುರುಪುಂಗವರಾದ ಆಚಾರ್ಯರ ನಿಂದಾಮಾರ್ಗದಲ್ಲಿ ಕಾಲಿಡದೆ ಅವರ ಆಜ್ಞಾನುಸಾರವಾಗಿ ಆಚರಿಸಿ, ಆ ಮಹನೀಯರ ಕೃಪೆಗೆ ಪಾತ್ರರಾಗಬೇಕೆಂದು ಕಳಕಳಿಯಿಂದ ತಮ್ಮೆಲ್ಲರಿಗೆ ತಿಳಿಸುತ್ತೇನೆ.

ಪಟ್ಟಾಧ್ಯಕ್ಷ ಬೃಹನ್ಮಠ ಸೂಗೂರು.

ಶ್ರೀ ಜಗದ್ಗುರು ಪಂಚಾಚಾರ್ಯ [illegible]

ವೀರಶೈವರ ಪ್ರಥಮ ಕರ್ತವ್ಯ

ವೇದಾಗಮ ಶ್ರುತಿಪ್ರತಿಪಾದಿತವಾದ [illegible] ಮತವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ [illegible] ಸಂಸ್ಥಾಪನವನ್ನು ಸ್ಥಾಪಿಸಿ [illegible] ಗಿ ರಂಭಾಪುರಿ [illegible] ಶ್ರೀ [illegible] ದಾರಕ ಕಾಶೀ ಕ್ಷೇತ್ರಗಳಲ್ಲಿ [illegible] ನ್ನು ತಮ್ಮಂಗಳವಾಗಿ [illegible] ಚಾರ್ಯ ಮಠಗಳನ್ನು [illegible] ಗುರುಪೀಠಗಳನ್ನು [illegible] ಪಂಚಾಚಾರ್ಯ [illegible] ಗಳನ್ನು [illegible] ದಿಂದ [illegible] ಹೊಂದಿ [illegible] ಪ್ರತ್ಯೇಕ [illegible] ಮುಖ್ಯವಾಗಿ [illegible] ಸ್ವರೂಪವನ್ನು [illegible] ಸುದಾರ್ಶಿ [illegible] ಗಳಲ್ಲಿ ಪಂಚಾಚಾರ್ಯರು [illegible] ಕ್ರಮದಿಂದ [illegible] ದಿಂದ [illegible] ಸ್ವೀಕರಿಸಿ [illegible] ಡು ಎಷ್ಟು ವ್ಯಸನದಿಂದ [illegible] ಗುರುಪೀಠ [illegible] ಸಂಚರಿಸು [illegible] ಗಳವರ [illegible] ಸೇವೆಗೆ [illegible] ಪ್ರಥಮ [illegible] ವಾಗಿದೆ [illegible] ಕರ್ತವ್ಯವಾಗಿ [illegible] ಶ್ರೀ ಜಗದ್ಗುರು [illegible] ಶ್ರೀ ಪಂಡಿತ ಕಾಶೀನಾಥ [illegible] ಶ್ರೀ ಕಾಶೀನಾಥ [illegible] ಅತಿಶಯೋಕ್ತಿಯಾಗಲಾರದು [illegible] ಶ್ರೀ|| ಪಂಡಿತ [illegible] ಸ್ತ [illegible]

[illegible] ಗಳ ಪ್ರಥಮ [illegible] ಪ್ರತ್ಯಕ್ಷ [illegible] ಪ್ರಥಮ [illegible]

ಈ ಸಮಾಜವೆಲ್ಲಾ ಮುಸುಕಿಕೊಂಡಿರುವ [illegible] ಶ್ರೀ ಜಗ [illegible] ಮಹನೀಯರ ಸದ [illegible] ಪಂಚಾಚಾರ್ಯ ಪ್ರಭಾ ಎಂದು [illegible] ಪತ್ರಿಕೆಯಲ್ಲಿ ಪ್ರಸುಸ [illegible] ಪ್ರಭಾಮಂಡಲ [illegible] ತಮ್ಮ [illegible] ಚಿತ್ರಕಾಸೇವೇ [illegible]

[illegible] ಮಹಾಪಾತಕ [illegible] ಸ್ಮರಣೆಯಿಂದ [illegible] ಪತ್ರಿಕಾ [illegible] ಶ್ರೀ [illegible]

[illegible] ಶ್ರೀ ಕಾಶೀನಾಥ [illegible] ಶ್ರೀ ಜಗದ್ಗುರು [illegible] ಸಕಲ [illegible]

ಸೇವೆಯಿಂದಲೂ ಕೃತಕೃತ್ಯರಾಗಿ ಧರ್ಮೋದ್ಧಾರಕ್ಕಾಗಿ ಸಂಚಾರಗೊಂಡಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರನ್ನು ತಮ್ಮ ತಮ್ಮ ಪ್ರಾಂತಗಳಿಗೆ ಬರಮಾಡಿಕೊಂಡು ಪವಿತ್ರ ಚರಣ ಸೇವೆಯಿಂದ ಸಮಾಜ ಸೇವೆಗೂ ಆತ್ಮೋದ್ಧಾರಕ್ಕೂ ನೆರವಾಗಲು ಬೇಡುತ್ತೇನೆ. ಇತಿಶಿವಂ

ಶ್ರೀ ಪಂಡಿತ ಕಾಶೀನಾಥ ಮಹಾಶಯರಿಗೆ ಜೈ

ಶ್ರೀಗುರು ಚರಣ ಸೇವಕ
ಜಿ. ಕೆ. ಗುರುಸಿಂಗಾರ್ಯ—ವಕೀಲ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ

ಶ್ರೀ ಜಗದ್ಗುರು ರೇಣುಕಾಚಾರ್ಯಾಷ್ಟಕಂ

|| ಮಲ್ಲಿಕಾಮಾಲಾ ವೃತ್ತಂ||

ಕೊಲ್ಲಿಪಾಕಿಪುರಾದಿನಾಯಕ ಸೋಮನಾಥಸಮುದ್ಭವಂ । ಪಾದಪಂಕಜಪೂಜಕಾಮರ [illegible] ಪಾಪಹಂ || ಶ್ರೀಮಹೇಂದ್ರಪಯೋಜಸಂಭವ ದೇವಸಂಘಸಮರ್ಚಿತಂ । ನೌಮಿರೇವಣಸಿದ್ಧದೇಶಿಕ ಶೇ[illegible]ರಂ [illegible]ಕರಂ ||

[illegible]ವಣಪೂರ್ವವಕ್ತ್ರಸಮುದ್ಭವಂ ಜಿತಸದ್ಭವಂ । [illegible] ಪಾವಕಂ ಸುರಪೂಜಿತಾಂಘ್ರಿಸರೋರುಹಂ ಘೋರಸಂಸೃತಿಬೀಜ[illegible] ಮೃಡಸನ್ನಿಭಂ ನೌಮಿರೇವಣಸಿದ್ಧ ದೇಶಿಕಶೇಖರಂ [illegible]ಹಿಮೋತ್ಕರಂ ||

ಶಂಭುಮುಕ್ತನಿಕಾಯಪಾಲನ ಸಂಯುತಂ ಯತಿಸಂವೃತಂ [illegible] ಕೀರ್ತಿಸಮನ್ವಿತಂ || ಜೃಂಭದಷ್ಟಮಹಾಂಗಯೋಗಗರಿಷ್ಠವಿಶಾಲಗಣಾವೃತಂ । ನೌಮಿರೇವಣಸಿದ್ಧದೇಶಿಕಶೇಖರಂ ಕರುಣಾಕರಂ ||

[illegible]ರಾದಿಮುನೀಂದ್ರಶಾಂಭವ ಶಾಸ್ತ್ರಬೋಧಕತತ್ಪರಂ [illegible]ಪತಿಪಾರಪೂಜಿತ ಪಾದಪಂಕಜಭಾಸುರಂ || [illegible] ಮಹೇಶ [illegible] ಭಾಸ್ಕರಂ ನೌಮಿರೇವಣಸಿದ್ಧದೇಶಿಕಶೇಖರಂ ನತಶಂಕರಂ ||

[illegible]ಷ್ಟದ ಪುಷ್ಪ[illegible] ಮುಕ್ತಿಸಾಮ್ರಾಜ್ಯವಿಲೋಕನಸಾಧನ [illegible] ಸಮುಷ್ಯ[illegible] || [illegible] ವಿದೂರ[illegible] ವೀರವಿಶಾಲ[illegible] । ನೌಮಿರೇವಣಸಿದ್ಧದೇಶಿಕಶೇಖರಂ ಮುಮುಕ್ಷು[illegible] ||

[illegible]ವತಾರ ವಿಮಾನ ಮಂಡಲಿ [illegible] ಶ್ರೀಶಿವಾಕ್ಷಿ [illegible] || ಶುದ್ಧ[illegible] ವಿದಗ್ಧಕಾಯ[illegible] । ನೌಮಿರೇವಣಸಿದ್ಧದೇಶಿಕ ಶೇಖರಂ [illegible]ಕರಂ ||

[illegible] ಶೌರಿಕಂಪನನಾಶಕಂ [illegible] ಪಾದಪಂಕಜ[illegible] । ಚಕ್ರವರ್ತಿ[illegible] ನೌಮಿರೇವಣಸಿದ್ಧದೇಶಿಕಶೇಖರಂ [illegible] ||

ವೇದ[illegible] ಸಾಗರ [illegible] ಸಂತತಿ [illegible] ದೂರ[illegible] ನೌಮಿರೇವಣಸಿದ್ಧ ದೇಶಿಕಶೇಖರಂ [illegible] ||

[illegible] ದೇಶಿಕ ಶೇಖರಾಷ್ಟಕಮಿಷ್ಟದಂ [illegible] ಕಪ್ಪಣ್ಣಾರ್ಯವಿನಿರ್ಮಿತಂ [illegible] ಭಕ್ತಿ[illegible] ಸತತಂ [illegible] ಶಂಕರ [illegible] ತಾ—

ಲೇಖಕ —ಸಿದ್ಧಾಂತಿ ಆರ್. ಕಪ್ಪಣ್ಣಶಾಸ್ತ್ರಿ
ನೆಲಮಂಗಲ

ದಾನಶೂರ ಕರ್ಣ

—ನಾಟಕದ ವಿಮರ್ಶೆ—

ಮೈಸೂರು ರಾಜಧಾನಿಯಲ್ಲಿ ಶ್ರೀ ಚಾಮುಂಡೇಶ್ವರೀ ಕಂಪನಿಯವರು ಅನೇಕ ವರ್ಷಗಳಿಂದಲೂ ಅನೇಕ ನಾಟಕಗಳನ್ನು ಅಭಿನಯಿಸುತ್ತಿರುವುದು ನಿಜವಷ್ಟೆ. ಇವರು ಅಭಿನಯಿಸುವ ನಾಟಕಗಳೆಲ್ಲವೂ ಇತಿಹಾಸಪ್ರಸಿದ್ಧಗಳಾಗಿಯೂ ನೀತಿಬೋಧಕಗಳಾಗಿಯೂ ಪ್ರೇಕ್ಷಕರ ಚಿತ್ತಾಕರ್ಷಕಗಳಾಗಿಯೂ ಇರುವುವು. ಈ ಕಂಪನಿಯವರು ಪ್ರಾಯಶಃ ನಾಟಕದಲ್ಲಿ ಹೇಳಿದ ಮನುಷ್ಯರ ಜೀವನ ಚರಿತ್ರವನ್ನು ಪ್ರೇಕ್ಷಕರ ಮನಸ್ಸಿಗೆ ಹಿಡಿಸುವಂತೆ ಅಭಿನಯಿಸುತ್ತಾರೆ. ಲೋಕದಲ್ಲಿ ಕೆಲವರು ನಾಟಕಮರ್ಯಾದೆಯನ್ನೆಲ್ಲಾ ಬಿಟ್ಟು ಪ್ರೇಕ್ಷಕರ ಮನಸ್ಸನ್ನು ಸಂತೋಷಗೊಳಿಸಿ ದ್ರವ್ಯವನ್ನು ಆಕರ್ಷಿಸುವುದೊಂದನ್ನೇ ಧ್ಯೇಯವನ್ನಾಗಿಟ್ಟುಕೊಂಡಿದ್ದಾರೆ. ನಾಟಕಗಳ ಇದು ಮುಖ್ಯೋದ್ದೇಶವಲ್ಲವು. ಆಯಾಯ ಕಥಾನಾಯಕರ ಸ್ವಭಾವವನ್ನು ರಂಗಭೂಮಿಯಲ್ಲಿ ತೋರಿಸುವುದರಿಂದ ಪ್ರೇಕ್ಷಕರಿಗೆ ಕಥಾನಾಯಕರ ಗುಣದೋಷಗಳ ಸ್ಮಾರಕವೇ ಮುಖ್ಯ ಪ್ರಯೋಜನವು. ಈ ಕಂಪನಿಯವರು ಕಥಾನಾಯಕರ ಸ್ವಭಾವವನ್ನು ಅತಿಕ್ರಮಿಸದಂತೆಯೂ ತಮ್ಮ ತಮ್ಮ ಪಾತ್ರಗಳನ್ನು ಸ್ವಲ್ಪವೂ ನ್ಯೂನತೆಯಿಲ್ಲದಂತೆಯೂ ನಾಟಕವನ್ನು ಅಭಿನಯಿಸಿ ಅಲ್ಲದೆ ನಾಟ್ಯಶಾಸ್ತ್ರದ ನಿಖಿಲಕಲೆಗಳನ್ನು ತಿಳಿದ ಅನುಭವಶಾಲಿಗಳಾಗಿದ್ದಾರೆ.

ಈ ಕಂಪನಿಯವರು ಈಗ ದಾನಶೂರಕರ್ಣ ಎಂಬ ನೂತನವಾದ ನಾಟಕವನ್ನು ಅಭಿನಯಿಸುತ್ತಲಿದ್ದಾರೆ. ಈ ನಾಟಕವು ಪ್ರೇಕ್ಷಕರಿಂದ ಎಷ್ಟೋಸಾರಿ ನೋಡಲ್ಪಡುತ್ತಿದ್ದರೂ ಪುನಃ ಪುನಃ ಇನ್ನೂ ನೋಡಬೇಕೆಂಬ ಅಭಿಲಾಷೆಯನ್ನು ಹೆಚ್ಚಿಸುತ್ತಿರುವುದು.

ಶೃಂಗಾರಾದಿ ನವರಸಗಳೊಳಗೆ ಯಾವ ಸಮಯದಲ್ಲಿ ಯಾವರಸವು ಉದ್ಬೋಧವಾಗಬೇಕೋ ಆ ಸಮಯದಲ್ಲಿ ರಸಾವಿರ್ಭಾವವು ಪಾತ್ರಗಳಿಂದ ಪ್ರಕಾಶಿಸಲ್ಪಡುತ್ತಿರುವುದು. ಭೀಮಸೇನನ ಪಾತ್ರವನ್ನು ವಹಿಸುವವರು ಭೀಮನ ಸ್ವಭಾವವನ್ನೇ ಅನುಕರಿಸುವರು. ಕೃಷ್ಣನ ಪಾತ್ರವನ್ನು ವಹಿಸುವವರು ಕೃಷ್ಣನ ಸ್ವಭಾವವನ್ನೇ ಅನುಸರಿಸುತ್ತಿರುವರು. ಕರ್ಣನ ಪಾತ್ರವನ್ನು ವಹಿಸುವವರು ಕರ್ಣನೇ ಪ್ರತ್ಯಕ್ಷನಾಗಿರುವಂತೆ ಅಭಿನಯಿಸುವರು. ಈ ನಟ ಕೌಶಲ್ಯಾದಿಗಳು ಇವರಲ್ಲಿ ಮೂರ್ತಿಭವಿಸಿದವೋ ಎನ್ನುವಂತೆ ಪ್ರೇಕ್ಷಕರಿಗೆ ತದಾತ್ಮಬುದ್ಧಿಯು ಆಗುತ್ತಲಿರುವುದು. ಇದರಂತೆ ಎಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಲೋಪವಿಲ್ಲದಂತೆ ಅಭಿನಯಿಸುತ್ತಿರುವರು. ಮತ್ತು ಯಾವ ಪಾತ್ರಗಳು ಯಾವ ಕಾಲದಲ್ಲಿ ಯಾವ ಉಡುಪುಗಳನ್ನು ಧರಿಸಬೇಕೋ ಅವರು ವಾಸಮಾಡುವ ಸ್ಥಾನಗಳು ಹೇಗಿರಬೇಕೋ ಹಾಗೆಲ್ಲಾ ಬಹಳ ಚನ್ನಾಗಿ ಏರ್ಪಡಿಸಿಕೊಂಡಿರುವರು. ಕೌರವ ಪಾಂಡವ ಕೃಷ್ಣ ಕರ್ಣಾದಿಗಳ ಸ್ಮಾರಕವೆ ಪ್ರತಿಯೊಬ್ಬ ಪಂಡಿತಪಾಮರರಿಗೆಲ್ಲ ಆಗುತ್ತಿರುವುದು. ನಾಟಕವನ್ನು ಹೀಗೆ ಶಾಸ್ತ್ರೀಯವಾಗಿ ಅಭಿನಯಿಸುವುದರಿಂದ ಲೋಕಕ್ಕೆ ಪ್ರಯೋಜನವಾಗುವುದಲ್ಲದೆ ಅಭಿನೇತೃಗಳಿಗೂ ಗೌರವವುಂಟಾಗುವುದು.

ಈ ನಾಟಕವನ್ನು ಶಾರದಾ ವಿಲಾಸ ಹೈಸ್ಕೂಲಿನ ಹೆಡ್ ಮಾಸ್ಟರ್ ಮ|| ರಾಮಸ್ವಾಮಿ ಎಂ ಎ ಯವರು ರಚಿಸಿರುತ್ತಾರೆ. ಇವರು ಇದೇ ಮೊದಲು ನಾಟಕವನ್ನು ರಚಿಸಿದ್ದರೂ ನಾಟಕದ ಶೈಲಿಯನ್ನು ನೋಡಿದರೆ ಅನೇಕ ನಾಟಕಗಳನ್ನು ರಚಿಸಿದ ಪರಿಪಾಕಾವಸ್ಥೆಯಿಂದ ಈ ನಾಟಕವು ಇಷ್ಟು ಮುದ್ದಾಗಿರಬಹುದೆಂದು ಊಹಿಸಲು ಅವಕಾಶವಾಗಿದೆಯಲ್ಲದೆ ಕಾಲೋಚಿತವಾದ ಸಂದರ್ಭ ಅರ್ಥಗಾಂಭೀರ್ಯ ವಾಕ್ಯರಚನೆ ರಸಭಾವ ಮುಂತಾದ ನಾಟಕಾಂಗಸಾಮಗ್ರಿಗಳಿಂದ ಪರಿಪೂರ್ಣವಾಗಿದೆ. ಮತ್ತು ಈ ನಾಟಕವು ಯೋಗ್ಯವಾದ ಕಂಪನಿಯನ್ನಾಶ್ರಯ ಮಾಡಿರುವುದರಿಂದ ಸುವರ್ಣಕ್ಕೆ ಪರಿಮಳವುಂಟಾದಂತೆ ಅತ್ಯಂತ ಶ್ಲಾಘ್ಯವೆನಿಸಿಕೊಂಡಿತು. ನಾಟಕಕರ್ತರಿಗೂ ಕೀರ್ತಿಯುಂಟಾಯಿತು. ಶ್ರಮವೂ ಸಫಲವಾಯಿತು. ನಾಟಕ ಮಂಡಲಿಯವರು ಕಳೆದ ತಿಂಗಳು 23 ನೆ ಭಾನುವಾರ ಇದೇ ನಾಟಕವನ್ನು ಅಭಿನಯಿಸಿ ನಾಟಕದಲ್ಲಿ ಬಂದ ಉತ್ಪತ್ತಿಯೊಳಗೆ 300 ರೂಪಾಯಿಗಳನ್ನು ನೂತನಾಂಬರಗಳೊಂದಿಗೆ ಸದರಿ ನಾಟಕ ಕರ್ತರಾದ ರಾಮಸ್ವಾಮಿಯವರಿಗೆ ಸಮರ್ಪಣ ಮಾಡಿ ತಮ್ಮ ಕೃತಜ್ಞತೆಯನ್ನು ತೋರಿಸಿಕೊಂಡಿರುತ್ತಾರೆ. ಮ|| ರಾಮಸ್ವಾಮಿಯವರು ಇನ್ನೂ ಇದರಂತೆ ಲಾಕ್ಷಣಿಕಗಳಾದ ಅನೇಕ ನಾಟಕಗಳನ್ನು ರಚಿಸಿ ಕಂಪನಿಗಳಿಗೆ ಕೊಡುತ್ತ ಜಗತ್ತಿಗೆ ದೃಶ್ಯಕಾವ್ಯದಿಂದುಂಟಾಗುವ ಪ್ರಯೋಜನಗಳನ್ನು ಸಾಧಿಸಿಕೊಟ್ಟು ಯಶೋಭಾಗಿಗಳಾಗುವರೆಂದು ಕೋರುತ್ತೇವೆ.

ಸಂ—

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ದೀಪಾವಳಿ ಮಹೋತ್ಸವವು

ಕೊಂಡಕುಂದಿ

192/ನೆಯ ಅಕ್ಟೋಬರ್ 25ನೆಯ ತಾರೀಖಿನ ಸರಿಯಾದ ಪ್ರಭವನಾಮ ಸಂ|| ರದ ಆಶ್ವಯುಜ ಬ|| 30 ರಲ್ಲು ಮಂಗಳವಾರ ಸಾಯಂಕಾಲ 9 15 ನಿಮಿಷಕ್ಕೆ ಸಲ್ಲುವ ವೃಷಭಲಗ್ನದಲ್ಲಿ ಕೊಂಡಕುಂದಿ ಗ್ರಾಮದಲ್ಲಿ ದೀಪಾವಳಿ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಗ್ರಾಮದಲ್ಲಿ ಪ್ರತಿಯೊಂದು ಅಂಗಡಿಗಳು ನಾನಾ ವಿಧವಾದ ಎಣ್ಣೆಗಳಿಂದಲೂ ಚಿತ್ರವಿಚಿತ್ರವಾದ ಕಾಗದಗಳಿಂದ ರಚಿಸಲ್ಪಟ್ಟ ಹಾರಗಳಿಂದಲೂ ಕಮಲಗಳಿಂದಲೂ ಶೋಭಾಯಮಾನವಾಗಿದ್ದವಲ್ಲದೆ ನಾನಾ ವಿಧಗಳಾದ ಥಳಥಳಾಯಮಾನವಾದ ಅಂಬರಗಳ ಕಾಂತಿಯಿಂದಲೂ ಜ್ಯೋತಿಃಪ್ರಕಾಶದಿಂದಲೂ ರಮ್ಯವಾಗಿದ್ದವಲ್ಲದೆ ಪ್ರತಿಯೊಂದು ಅಂಗಡಿಯಲ್ಲಿಯೂ ಶ್ರೀಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದವೆಂಬ ಲಕ್ಷ್ಮಿಯು ಇಷ್ಟಾರ್ಥಸಿದ್ಧಿಯನ್ನು ಕೊಟ್ಟು ರಕ್ಷಿಸುವುದಕ್ಕೋಸ್ಕರವಾಗಿ ಬಂದು ಕುಳಿತಿರುವಳೋ ಏನೋ ಎನ್ನುವಂತೆ ಬಜಾರವು ನೋಡಿದವರೆಲ್ಲರಿಗೂ ಅತಿ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಪ್ರತಿಯೊಂದು ಅಂಗಡಿಯಲ್ಲಿಯೂ ಲಕ್ಷ್ಮೀಪೂಜೆಯನ್ನು ಅರ್ಘ್ಯಪಾದ್ಯಾಚಮನಗಳಿಂದಲೂ ಮಧುಪರ್ಕ ಮುಂತಾದ ಪಂಚಾಮೃತದಿಂದಲೂ ಅಷ್ಟವಿಧಾರ್ಚನೆಯಿಂದಲೂ ವಿಧ್ಯುಕ್ತ ಪ್ರಕಾರವಾಗಿ ವೇದಾಧ್ಯಯನಂ ಮಾಡುತ್ತ ವೀರಶೈವಬ್ರಾಹ್ಮಣ ಧರ್ಮಸ್ಥಾಪಕರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಅನುಮೋದದಿಂದ ಯಸ್ ಯಂ ಶಿವಯೋಗಿ ಪ್ರಪ ಶಾಸ್ತ್ರಿಗಳವರಿಂದ ಮಹಾಲಕ್ಷ್ಮೀಪೂಜೆಯು ನೆರವೇರಿಸಲ್ಪಟ್ಟಿತು. ಸಮಸ್ತ ಪಕ್ಷಮಾಹೇಶ್ವರರು ಅತಿ ಸಂತೋಷಭರಿತರಾಗಿದ್ದರು. ಆಚಾರ್ಯಭಕ್ತಿಯುತರಾದ ಕಲ್ಲುಮಠದ ಮೂಕಯ್ಯನವರು, ದೇವಡಿ ದಾಸಪ್ಪನವರು, ಒಡೆಯ್ಯನವರು, ನಾಗಯ್ಯನವರು, ಹೊಸೂರುಮಠದ ವೀರಯ್ಯನವರು, ಶ್ರೀಮಂತ ಬಸ್ಸಂ ಹನುಮಪ್ಪನವರು ಅಂಜನಪ್ಪನವರು, ಶ್ರೀಮಂತ ಶಂಕ್ರಪ್ಪನವರು, ಬೋವಿ ರಾಮಪ್ಪನವರು, ಆದಿ ನಮನ್ಯಾಸಪ್ಪನವರು, ಜೀರ ಜನುಮಪ್ಪ ಎರ್ರಿಪ್ಪನವರು ಇವರೇ ಮುಂತಾದ ಶ್ರೀಮಂತ ಗುರುಭಕ್ತರು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಆಶೀರ್ವಾದವೆಂಬ ಮಹಾಲಕ್ಷ್ಮಿಯು ನಮ್ಮಗಳಲ್ಲಿ ಸಂಪೂರ್ಣವಾಗಿ ಇರಲಿ. ಲಕ್ಷ್ಮೀಕಟಾಕ್ಷವು ನಮ್ಮ ಸಮಸ್ತ ಕಾರ್ಯಗಳನ್ನು ಸಫಲವಾಡಲಿ. ಜಗದಾಚಾರ್ಯರ ಆಶೀರ್ವಾದವೆಂಬ ಕಲ್ಪವೃಕ್ಷವು ನಮಗೆ ಇಷ್ಟಾರ್ಥಸಿದ್ಧಿಯನ್ನುಂಟುಮಾಡಲಿ. ನಮ್ಮ ಸರ್ವ ವ್ಯವಹಾರಾದಿ ಕಾರ್ಯಗಳು ಜಯವಾಗಲೆಂದು ಜಗದ್ಗುರುಗಳ ಹೆಸರಿನಮೇಲೆ ಪ್ರಖ್ಯಾತಿಯನ್ನು ಪಡೆದಿರುವ ಈ ಪಂಚಾಚಾರ್ಯ ಪ್ರಭೆಗೆ ೫ ರೂಪಾಯಿಗಳನ್ನು ಕಾಣಿಕೆಯನ್ನಾಗಿ ಅರ್ಪಿಸಿ ಆಚಾರ್ಯರ ನಾಮವನ್ನು ಪಠಿಸುತ್ತ ಪ್ರಭೆಗೆ ಜಗತ್ತಿನಲ್ಲಿ ಜಯವಾಗಲಿ ಆಚಾರ್ಯರ ಕೃಪಾಶೀರ್ವಾದವು ನಮಗೆ ಜಯವನ್ನುಂಟುಮಾಡಲೆಂದು ಪ್ರಾರ್ಥಿಸಿದರು. ಅನಂತರ ಸಮಸ್ತ ಮಾಹೇಶ್ವರರಿಗೂ ತಾಂಬೂಲ ದಕ್ಷಿಣಾದಿಗಳನ್ನು ಅರ್ಪಿಸಿದರು. ಸರ್ವರೂ ಕೂಡಿ ಗುರುಧ್ಯಾನವನ್ನು ಮಾಡುತ್ತ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ವಾಚಕಮಹಾಶಯರೇ— ಗುರುಭಕ್ತಿನಿರತರಾದ ತಾವುಗಳು ಇದೇಪ್ರಕಾರವಾಗಿ ದೀಪಾವಳಿ ಮಹೋತ್ಸವವನ್ನು ನೆರವೇರಿಸಿದ್ದಗೋಸ್ಕರ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ನಾಮಾಂಕಿತವನ್ನು ಪಡೆದಿರುವ ಈ ಪ್ರಭೆಗೆ ಭಕ್ತಿಪೂರ್ವಕ ಶಕ್ತ್ಯನುಸಾರವಾಗಿ ಕಾಣಿಕೆಯನ್ನು ಕೊಟ್ಟು ಜಗದ್ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಸಮಸ್ತ ಮಿತ್ರಮಂಡಳಿಯವರನ್ನು ಕುರಿತು ವಿನಂತಿಯು.

ಲೇಖಕ

ಯ— ಯಂ ಸದಾಶಿವಯ್ಯನವರು

ಸ್ಕೂಲಮಾಸ್ಟರ, ಕೊಂಡಕುಂದಿ.

ಸೂಚನೆಯು.

ನಾವು ಪ್ರತಿವಾರವು ತಪ್ಪದೆ ಸರ್ವರಿಗೂ ಪತ್ರಿಕೆಗಳನ್ನು ಕಳುಹಿಸುತ್ತೇವೆ. ಆದಾಗ್ಯೂ ಕೆಲವರು ನಮಗೆ ಸರಿಯಾಗಿ ಪತ್ರಿಕೆಗಳು ಮುಟ್ಟುವದಿಲ್ಲವೆಂದು ಬರೆಯುತ್ತಾರೆ. ಯಾರಿಗೆ ಪತ್ರಿಕೆಗಳು ಮುಟ್ಟುವದಿಲ್ಲವೋ ಅವರು ತಮ್ಮ ತಮ್ಮ ಪೋಸ್ಟಾಫೀಸ ಮಾಸ್ಟರರಿಗೆ ತಿಳುಹಿಸಬೇಕು. ಕೆಲವರು ನಾವು ವಿ.ಪಿ. ಯನ್ನು ತೆಗೆದುಕೊಂಡಿದ್ದೇವೆ ನಮಗೆ ಪತ್ರಿಕೆಯು ಬರುವುದಿಲ್ಲವೆಂದು ಬರೆಯುತ್ತಾರೆ. ವಿ.ಪಿ. ತೆಗೆದುಕೊಂಡವರ ಹಣವು ನಮ್ಮ ಕೈಸೇರಬೇಕಾದರೆ 20-25 ದಿವಸಗಳು ತಡವಾಗುತ್ತದೆ. ಹಣವು ಕೈಸೇರಿದಕೂಡಲೆ ಅವರಿಗೆ ಪತ್ರಿಕೆಗಳನ್ನು ಕಳುಹಿಸುವುದಾಗುತ್ತದೆ. ಮನಸ್ಸಿನಲ್ಲಿ ಯಾವ ಸಂಕೋಚವನ್ನೂ ಮಾಡಕೂಡದಾಗಿ ಕೋರಿಕೆ.

ಸಂ—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವಿಭವ ಸಂವತ್ಸರದ ಅಧಿಕಮಾಸದ ನಿರ್ಣಯವು

ಶಾಸ್ತ್ರಜ್ಞರೇ, ಬರತಕ್ಕ ವಿಭವ ಸಂವತ್ಸರದಲ್ಲಿ ದೃಗ್ಗಣಿತ ಪ್ರಕಾರವಾಗಿ ಶ್ರಾವಣಮಾಸವು ಅಧಿಕಮಾಸವಾಗುತ್ತೆ. ಸೂರ್ಯ ಸಿದ್ಧಾಂತ ಗಣಿತ ಪ್ರಕಾರವಾಗಿ ಗುಣಿಸಲ್ಪಟ್ಟಿರುವ ದೈವಜ್ಞ ದರ್ಪಣವೆಂಬ ಗ್ರಂಥದಲ್ಲಿ ಪ್ರಚುರಿಸಿರುವ ಅಧಿಕಮಾಸಗಳ ಪಟ್ಟಿಯಲ್ಲಿಯೂ ಶಕ 1850 ನೆಯ ಶಕೆಯಲ್ಲಿ ಶ್ರಾವಣಮಾಸವೇ ಅಧಿಕಮಾಸವೆಂದು ಬರೆಯಲ್ಪಟ್ಟಿದೆ. ಕೆಲವರು ಸಿದ್ಧಾಂತ ಶಾಸ್ತ್ರಜ್ಞರು ಮದ್ರಾಸ್ ಗೋದಾವರಿ ಮುಂತಾದ ಗ್ರಾಮಗಳವರಿಂದ ಪ್ರಕಟಿಸಲ್ಪಟ್ಟ ಈ ಪ್ರಭವನಾಮ ಸಂವತ್ಸರದ ಪಂಚಾಂಗದಲ್ಲಿ ಮುಖಪತ್ರದೊಳಗೆ ವಿಭವ ಸಂವತ್ಸರದಲ್ಲಿ ಭಾದ್ರಪದ ಮಾಸಾಧಿಕವಾಗುತ್ತದೆಂದು ಜಾಹೀರ ಪಡಿಸಿರುವರು. ದೃಗ್ಗಣಿತ ಪ್ರಕಾರವಾಗಿ 1928 ನೆ ಸಂವತ್ಸರದ ಜುಲೈ 15ನೆಯ ತಾರೀಖು ಅನಲಾಗಿ ವಿಭವ ಸಂವತ್ಸರದ ಆಷಾಢ ಬ|| 13 ಭಾನುವಾರದಲ್ಲಿ ಸೂರ್ಯೋದಯಾದಿ 47-32 ಕ್ಕೆ ಕರ್ಕ ಸಂಕ್ರಾಂತಿಯೂ 1928 ನೇ ಆಗಸ್ಟ್ 16 ನೇ ತಾರೀಖು ಅನಲಾಗಿ ವಿಭವ ಸಂವತ್ಸರದ ನಿಜ ಶ್ರಾವಣ ಶುದ್ಧ 1. ಗುರುವಾರ ಸೂರ್ಯೋದಯಾದಿ ಘ. 8.18 ಕ್ಕೆ ಸಿಂಹ ಸಂಕ್ರಾಂತಿಯೂ ಆಗುತ್ತೆ. ಸೌರಮಾನದಿಂದ ದೃಗ್ಗಣಿತವು ಮಾಡಿದಾಗ ಸಂಕ್ರಾಂತಿಗಳಾಗಲಿ ಮಾಸಗಳಾಗಲಿ ತಿಥಿಗಳಾಗಲಿ ಇಷ್ಟು ವ್ಯತ್ಯಾಸವಾಗಲಿಕ್ಕೆ ಕಾರಣವಿಲ್ಲವು. ಇದು ಅಲ್ಲದೆ ಶಾಸ್ತ್ರಜ್ಞರಾದ ಸಿದ್ಧಾಂತಿಗಳು ಈ ಪ್ರಭವನಾಮ ಸಂವತ್ಸರದ ಪಂಚಾಂಗದಲ್ಲಿ ಪ್ರಕಟಿಸಲ್ಪಟ್ಟಿರುವ ಸಂಕ್ರಾಂತಿಗಳನ್ನೂ ತಿಥಿಗಳನ್ನೂ ನೋಡಿದರೂ ಶೋಧಿಸಿದರೂ ಕೂಡ ವಿಭವ ಸಂವತ್ಸರದಲ್ಲಿ ಭಾದ್ರಪದ ಮಾಸವು ಅಧಿಕವಾಗಲು ಅವಕಾಶವಿಲ್ಲವು ಮತ್ತು ವಿಭವನಾಮ ಸಂವತ್ಸರದ ಫಲವು ಅತ್ಯಂತ ಶುಭಕರವಾಗಿಯೂ ಜನರುಗಳಿಗೆ ಅತಿ ಸುಖದಾಯಕವಾಗಿಯೂ ವೃಷ್ಟಿ ಫಲಾದಿಗಳು ಅಧಿಕವಾಗಿಯೂ ರೋಗಾದಿ ಪೀಡಾರಹಿತವಾಗಿಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದದಿಂ ಸರ್ವ ಪೀಡಾದಿ ದುರ್ಭಿಕ್ಷ್ಯ ರಹಿತವಾದ ಕಲ್ಪವೃಕ್ಷ ಪ್ರಾಯವಾದ ವಿಭವ ಸಂವತ್ಸರದಲ್ಲಿ ಶ್ರಾವಣಾಧಿಕವೇ ಶುಭ ಫಲಕ್ಕೆ ಕಾರಣವಲ್ಲದೆ ಭಾದ್ರಪದಾಧಿಕವು ಅಶುಭವಾಗಿರುವುದು. ಕೆಲವು ತೆಲುಗು ಪಂಚಾಂಗಗಳಲ್ಲಿ ಭಾದ್ರಪದ ಮಾಸಾಧಿಕವೆಂದು ಭವಿಷ್ಯವನ್ನು ಬರೆದಿರುವರು. ಅದು ಪರಪಾಟಿನಿಂದ ಪ್ರಚುರವಾಗಿರುತ್ತದೆ ಎಂದು ಸಂದೇಹವಾಗುತ್ತದೆ. ಪರಪಾಟು ಅಲ್ಲದಿದ್ದರೆ ನಿಶ್ಚಯವಾಗಿ ಅವರ ಗಣಿತವು ಭಾದ್ರಪದಾಧಿಕವೆಂದ ಬಳಿಕ ಅಧಿಕಮಾಸವನ್ನು ಹಿಡಿದು ತಕ್ಕ ಉಪಪಾದನೆಗಳಿಂದ ಶಾಸ್ತ್ರಾಧಾರಗಳಾದ ಉತ್ತರವನ್ನೀಯ್ಯಬೇಕೆಂದು ಸಿದ್ಧಾಂತ ಶಾಸ್ತ್ರಜ್ಞರಿಗೆ ವಿನಂತಿಯು. ಈ ವಿಷಯದಲ್ಲಿ ವಿದ್ವಾಂಸರು ಈಗಿನಿಂದಲೇ ಶ್ರದ್ಧೆ ವಹಿಸಬೇಕೆಂದು ಕೋರುತ್ತೇನೆ

ಎಸ್. ಎಂ. ಶಿವಯೋಗೀಶ್ವರ ಶಾಸ್ತ್ರೀ
ಕೊಂಡಕುಂದಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸಂತೋಷದಲ್ಲಿ ಸಂತೋಷ

ಮಹಾಶಯರೇ ? ದೀಪಾವಳಿಯ ಹಬ್ಬದಲ್ಲಿ ಇಡೀ ನಮ್ಮ ಹಿಂದೂದೇಶದ ಸರ್ವ ಹಿಂದುಗಳೂ ತಮ್ಮ ತಮ್ಮ ಮನೆ ಅಂಗಡಿ ಕಂಪನಿಗಳ ಯಾವತ್ತೂ ಲೆಕ್ಕಗಳನ್ನೆಲ್ಲಾ ತಯಾರ್ಮಾಡಿಕೊಂಡು ಲಾಭ ಉಕ್ಸಾನುಗಳನ್ನು ಕಂಡು ಹಿಡಿದುಕೊಂಡು ತಮ್ಮ ಸಂತೋಷದ ಸಲುವಾಗಿ ಅನೇಕ ದಾನಧರ್ಮ ಪರೋಪಕಾರಾದಿಗಳನ್ನು ಮಾಡುವ ಸಾಂಪ್ರದಾಯವು ಬಹು ಕಾಲದಿಂದಲೂ ಬಂದಿರುತ್ತದೆ. ಅದರಂತೆ ನ್ಯಾಮತಿ ಟೌನ ವರ್ತಕರುಗಳಾದ ನಾವೆಲ್ಲರೂ ಸರ್ವರಿಗೂ ಫಲ ತಾಂಬೂಲಾದಿಗಳನ್ನು ಕೊಟ್ಟು ಸಂತೋಷದಲ್ಲಿರುವ ಸಮಯದಲ್ಲಿ ನಮ್ಮ ಸಹೋದರರಾದ [illegible] ರು, ಗುಂಡಾಭಕ್ತರು, ಮಡಿವಾಳರು, ವಾಲ್ಮೀಕಿ ನಂದಕರು, ಮಹಮ್ಮದೀಯರು ಎಲ್ಲರೂ ಸಂಸ್ಕೃತ ಅನುರಾಗದಿಂದ ಶ್ರೀ ಬಸವಣ್ಣಗಳನ್ನು ಅತ್ಯಂತ ಭಕ್ತಿಯಿಂದ ಪೂಜಿಸಿ ರತ್ನ ಖಚಿತವಾದ ಆಭರಣಾದಿಗಳಿಂದ ಶೃಂಗರಿಸಿಕೊಂಡು ಊರಲ್ಲೆಲ್ಲಾ ಉತ್ಸವವನ್ನು ಮಾಡುವ ಕಾಲದಲ್ಲಿ ನಾವು ಬಸವಣ್ಣಗಳನ್ನು ಉತ್ಸವಕ್ಕೆ ತಂದ ಸಮಯದಾ ಸ್ವಾಮೀಜಿಯವರನ್ನು ಕುರಿತು ನೀವು [illegible] ಗಳನ್ನೂ ಬಸವಣ್ಣಗಳನ್ನೂ [illegible] ಮಾಡು [illegible] ಎಂದು [illegible] ಮಾಡುವುದಕ್ಕೆ ಆ ಸ್ವಾಮೀಜಿಯು ನಮ್ಮ ಮತ ಗ್ರಂಥವಾದ [illegible] ಯಾವ ಭಾಗದಲ್ಲಿಯೂ ಈ ಬಗನಾ [illegible] ಗೋವನ್ನು ಕೊಲ್ಲಬೇಕೆಂದಾಗಲಿ ತಿನ್ನಬೇಕೆಂದಾಗಲಿ ಹೇಳಿರುವದಿಲ್ಲ. ಮತ್ತು ನಮ್ಮ ಮಹಾಮತಸ್ಥಾಪಕರಾದ ಮಹಮ್ಮದ ಪೈಗಂಬರರವರು ಲೋಕ ಕಲ್ಯಾಣಕ್ಕಾಗಿ ಭಗವಂತನಿಂದ [illegible] ಗೋವಧೆಯನ್ನು ಹಿಂಸೆ ಮಾಡುವುದೂ ಕೂಡ ಮಹಾ ಪಾತಕವೆಂದು ತಮ್ಮ ಅನ್ಯತಮಾಣಿಯಿಂದ [illegible] ಎಂದು ಸ್ಪಷ್ಟವಾದ ಕನ್ನ [illegible] ವಾಣಿಯಿಂದ ತಿಳಿಸಿದ್ದನ್ನು [illegible] ಈ ಉತ್ಸವಕ್ಕೆ ನೆರೆದ ಸಾವಿರಾರು ಜನಗಳು [illegible] ಕಾಲದಲ್ಲಿಯೇ ತಾವು ತಂದ ಬಾಳೆಗಳನ್ನು [illegible] ಈ ಮಹಾತ್ಮರುಗಳಂತೆ ನಮ್ಮ [illegible] ಸಹೋದರರು ಗೋವಧೆಯನ್ನು [illegible] ಈ ಬಗ್ಗೆ [illegible] ಗೋವಧೆಯನ್ನು [illegible] ಮಾಡಿದೆವು.

[illegible] ಸಂಗಪ್ಪ ರೇವಪ್ಪ
[illegible] ನ್ಯಾಮತಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ದಸರಾ ಮಹೋತ್ಸವವು

[illegible] ತಾಲ್ಲೂಕು [illegible] ಗ್ರಾಮದಲ್ಲಿ [illegible] ದಸರಾ ದಿವಸ ಶ್ರೀ ಜಗದ್ಗುರು [illegible] ಸಿಂಹಾಸನದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರ ಮಹೋತ್ಸವವು ಮ|| ಪರಮೇಶ್ವರಪ್ಪ ಗೌಡರು ಮ|| ಸಿದ್ದೇಗೌಡರು ಮ|| ಭೀಮರಾಯರು ಮುಂತಾದ ಭಕ್ತ ಸಮಾಜದ ನೇತೃತ್ವದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಉತ್ಸವದ ಕಾಲಕ್ಕೆ ಪ್ರತಿಯೊಬ್ಬರು ತಮ್ಮ ತಮ್ಮ ಮನೆಯ ಮುಂದೆ ಹಣ್ಣುಕಾಯಿಗಳನ್ನು ಇಟ್ಟು ಪೂಜಿಸಿ ಜಗದ್ಗುರು ಪ್ರಸಾದವನ್ನು ಪಡೆಯುತ್ತಿದ್ದರು. ಈ ರೀತಿಯಾಗಿ ಉತ್ಸವವು ಶಮೀವೃಕ್ಷದ ಬಳಿಗೆ ಹೋಗಿ ರಾತ್ರಿ 8 ಗಂಟೆಯ ಸಮಯಕ್ಕೆ ಬಂದು ತಲ್ಪಿತು. ಈ ಉತ್ಸವಕ್ಕೆ ಮ|| [illegible] ತಿಪ್ಪನ [illegible] ಮ|| ದೊಡ್ಡಮನೆ ಮಹಾದೇವಪ್ಪನವರು ಆಗಮಿಸಿದ್ದರು. ಅಕ್ಕಪಕ್ಕದ ಗ್ರಾಮದ ಸಾವಿರಾರು ಜನರು ನೆರೆದಿದ್ದರು. ಸರ್ವರೂ ಅತ್ಯಂತ ಭಕ್ತಿಯಿಂದ ಜಗದ್ಗುರು ಸೇವೆಯನ್ನು ಮಾಡಿ ಕೃತಕೃತ್ಯರಾದರೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ. ಇದರಂತೆ ಪ್ರತಿಯೊಂದು ಗ್ರಾಮದ ವೀರಶೈವರು ಶ್ರೀ ಜಗದ್ಗುರುಗಳವರ ಭಾವಚಿತ್ರ ಮಹೋತ್ಸವವನ್ನು ಮಾಡಿ ಧನ್ಯರಾಗಬೇಕೆಂದು ಹಾರೈಸುತ್ತೇನೆ. ಈ ಉತ್ಸವ ಸಮಯದಲ್ಲಿ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಪೋಷಣಾರ್ಥವಾಗಿ ಮ|| ಪರಮೇಶ್ವರಪ್ಪ ಗೌಡರವರು 2 ರೂಪಾಯಿಗಳನ್ನು ಅರ್ಪಿಸಿದರು. ಇವರಿಗೆ ಶ್ರೀ ಜಗದ್ಗುರುವಾದ ರೇಣುಕರು ಮಂಗಳವನ್ನೀಯಲೆಂದು ಆ ಗುರು ಚಕ್ರವರ್ತಿಯನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ
ಸಿದ್ದೇಗೌಡ

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—[illegible] ಒಂಟಿಕಲೆ ನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಇಂತಹ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂಗುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಪ್ರತಿದಿನವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾಗದು

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೬-೦.
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸುಲಭವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[23]   ಪೋ. ಬಾ. ೫೧೦.. ಮದರಾಸು

ASIATIC GOVERNMENT SECURITY LIFE ASSURANCE CO., LTD.; MYSORE

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಆದ್ದರಿಂದ ಯಾವಾಗಲೂ "ಏಷ್ಯಾಟಿಕ್" ಕಂಪನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ ಮತ್ತು ಇದರ ಬೋನಸುಗಳು (ಸ್ಕೀಮು) ಲಾಭಕರವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಜಾಮೀನಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯುತ್ತದೆ.

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯುವುದು.

(1) ಮೆ|| ಪಿ. ರಾಮಸ್ವಾಮಿ, ಚೀಫ್ ಏಜೆಂಟ್,
ಏಷಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್ ರೋಡ್, ಮೈಸೂರು.
(2) ಮೆ|| ಪಿ. ಎಸ್. ಆರಾಧ್ಯ,
ಚೀಫ್ ಏಜೆಂಟ್. ಹುಬ್ಬಳ್ಳಿ ಮತ್ತು ಬಳ್ಳಾರಿ.
(3) ಹೈದರಾಬಾದ್ ಎಕಾನಮಿ ಹೌಸ್,
ಚೀಫ್ ಏಜೆಂಟ್. ಹೈದರಾಬಾದ್ (ದಖ್ಖನ್)
[21]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಜನಸ್ತ್ವಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ ನೇ ನವಂಬರ್ ೧೯೨೭ [ಸಂಚಿಕೆ ೨೭.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರುಗಳವರ ಆಂದೋಲಿಕೋತ್ಸವವು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಗುರುಚರಣ ಸೇವಾಭಿಲಾಷಿಗಳಾದ ಜಡೇ ಪ್ರಾಂತದ ಭಕ್ತಮಾಹೇಶ್ವರರ ಪ್ರಾರ್ಥನೆಯಂತೆ ವಿನ್ನಹವನ್ನು ಅಂಗೀಕರಿಸಿ ಆನವಟ್ಟಿ ಮೊಕ್ಕಾಮಿನಿಂದ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾ॥ 2-11-27 ನೇ ಬುಧವಾರ ಹಗಲು 2 ಘಂಟೆಗೆ ಚತುರಂಗ ಬಲಸಮೇತ ತುಮರಿಕೊಪ್ಪಕ್ಕೆ ದಯಮಾಡಿಸುವದರೊಳಗಾಗಿ ಈ ಪ್ರಾಂತದ ಭಕ್ತಮಾಹೇಶ್ವರರು ಶ್ರೀ ಮಹಾ ಸನ್ನಿಧಿಯವರ ಆಗಮನವನ್ನು ಪ್ರತೀಕ್ಷಿಸುತ್ತ ನೇಮಿಸಿದ ಸ್ಥಳದಲ್ಲಿ ಇಷ್ಟ ಶಪಾಲವೊತನೆ ಕಾದುಕೊಂಡಿದ್ದರು. ಜಡೇ ಹೋಬಳಿ ದಫೇದಾರ ಸಾಹೇಬರು ಹಾಜರಿದ್ದರು. ಮಹಾ ಸನ್ನಿಧಿಯವರು ಸಕಲರಿಗೂ ದರ್ಶನವನಿತ್ತು ಕುಶಲ ಪ್ರಶ್ನೆ ಮಾಡಿದನಂತರ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಮಹೂರ್ತ ಮಾಡಲು ಸರ್ವರೂ ಜಯಘೋಷದಿಂದ ಕರತಾಡನ ಮಾಡಿದರು. ಸಕಲ ಬಿರುದಾವಳಿಗಳೊಡನೆ ಉತ್ಸವವು ಕದಳಿತೋರಣಗಳಿಂದಲೂ, ಧ್ವಜಸ್ತಂಭಗಳಿಂದಲೂ, ಅಲಂಕರಿಸಿದ ಬೀದಿಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಅನಂತರ ಶ್ರೀ ಮಹಾ ಸನ್ನಿಧಿಯವರು ಗ್ರಾಮದ ಪ್ರಮುಖ ಜಮೀನ್ದಾರರಾದ ಮ॥ ರಾ॥ ಪಾಲ್ದಾರ್ ಪಾಟೀಲ ಹಾಲಪ್ಪ ಗೌಡರ ಮನೆಯ ಮುಂಭಾಗದ ಭವ್ಯವಾದ ಪಟಾಂಗಣದಲ್ಲಿ ಚಿತ್ರವಿಚಿತ್ರವಾಗಿ ರಚಿಸಿದ್ದ ಮಂಟಪದಲ್ಲಿ ದೇದೀಪ್ಯಮಾನವಾಗಿ ತೋರುವ ಸಿಂಹಾಸನವನ್ನು ಆರೋಹಣಮಾಡಲು ಸರ್ವರೂ ಜಯಜಯ ಘೋಷದೊಡನೆ ಆನಂದೋದ್ಗಾರವನ್ನು ಪ್ರಕಟಿಸಿದರು. ಉತ್ಸವಕ್ಕೆ ಬಂದ ಸಾವಿರಾರು ಜನರಿಗೆ ಆಸ್ಥಾನ ವಿದ್ವಾನ್ ಪಂಡಿತ ಸಂಸ್ಕೃತ ಶಾಸ್ತ್ರಿಗಳವರು ವೀರಶೈವ ಮತ ಪ್ರಾಚೀನತೆಯ ವಿಷಯವನ್ನು ಸಪ್ರಮಾಣವಾಗಿ ಸರ್ವರಿಗೂ ತಿಳಿಯುವಂತೆ ಪ್ರತಿಪಾದಿಸಿದರು. ಅನಂತರ ಶ್ರೀ ಮಹಾ ಸನ್ನಿಧಿಯವರು ಅಷ್ಟಾವರಣ, ಆಚಾರ, ವಿದ್ಯಾಭ್ಯಾಸಗಳ ವಿಷಯಕ್ಕೆ ಸರಸವಾಗಿ ಸರ್ವರಿಗೂ ಸಂತೋಷವಾಗುವಂತೆ ಸಪ್ರಮಾಣವಾಗಿಯೂ, ಸಯುಕ್ತಿಕವಾಗಿಯೂ, ಅಪ್ಪಣೆ ಕೊಡಿಸಿದರು. "ಮಹಾ ಸಂಸ್ಥಾನದವರು ನಮ್ಮ ಪ್ರಾಂತ್ಯಕ್ಕೆ ದಯಮಾಡಿಸದೆ ಇದ್ದುದರಿಂದಲೂ ಮತ್ತು ಈವರೆಗೂ ಯಾರೂ ಸರಿಯಾದ ಧರ್ಮದ ತಿಳುವಳಿಕೆಯನ್ನು ಮಾಡಿಕೊಡದೆ ಇದ್ದುದರಿಂದಲೂ, ನಾವು ಯಾರು? ನಮ್ಮ ಮತ ಯಾವುದು? ನಮ್ಮ ಕರ್ತವ್ಯವಾವುದು! ಎಂದು ತಿಳಿದುಕೊಳ್ಳಲು ಶಕ್ತಿಸಾಲದೆ ಪರಮತದವರ ಅವಹೇಳನೆಗೆ ಗುರಿಯಾಗಿದ್ದೆವು. ಶ್ರೀ ಮಹಾ ಸಂಸ್ಥಾನದವರು ಅಪ್ಪಣೆ ಕೊಡಿಸಿದ ವಿಷಯವನ್ನು ತಕ್ಕಮಟ್ಟಿಗೆ ಅರಿತುಕೊಂಡು ನಮ್ಮ ಸ್ವರೂಪವೂ, ನಮ್ಮ ಧರ್ಮವೂ ನಮ್ಮ ಕರ್ತವ್ಯವೂ, ತಿಳಿದಂತಾಯಿತು. ಸದ್ಗುರುವಿನ ಸದುಪದೇಶದಿಂದ ಸರ್ವರೂ ಸದ್ಗತಿಯನ್ನು ಹೊಂದುತ್ತಾರೆಂದು ಹೇಳುವ ಮಾತು ನಿಜವಿದೆ. ಶ್ರೀ ಮಹಾ ಸನ್ನಿಧಿಯವರಾದರೂ ನಮ್ಮಗಳ ಪ್ರಾರ್ಥನೆಯಂತೆ ನಮ್ಮ ಪ್ರಾಂತ್ಯಕ್ಕೆ ದಯಮಾಡಿಸಿದ್ದು ನಮ್ಮ ಸುದೈವವೇ ಸರಿ. ನಾವು ಧನ್ಯರಾದೆವು. ನಮ್ಮ ಜನ್ಮವು ಸಫಲವಾಯಿತು. ನಮ್ಮ ಕುಲಕೋಟಿಯು ಉದ್ಧಾರವಾಯಿತು" ಎಂಬುದಾಗಿ ಈ ಪ್ರಾಂತದ ಮಹಾಜನಗಳ ಪರವಿಯಿಂದ ಜಡೇ ವಿರಕ್ತ ಮಠದಲ್ಲಿರುವ ವೇ॥ ಚನ್ನವೀರಸ್ವಾಮಿಗಳವರು ಭಾಷಣ ಮಾಡಿದರು. ಅಲ್ಲಿಗೆ ಶ್ರೀ ಮಹಾ ಸನ್ನಿಧಿಯವರ ಅನುಜ್ಞಾನುಸಾರ ಸಭಾಸದರಿಂದ ಧರ್ಮ ಪ್ರಭುಗಳಾದ ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿಗಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಘೋಷದೊಡನೆ ಸಭೆಯು ಬರಕಾಸ್ತಾಯಿತು. ಶ್ರೀ ಮಹಾ ಸನ್ನಿಧಿಯವರು ಆನವಟ್ಟಿಯಿಂದ ತುಮರಿಕೊಪ್ಪಕ್ಕೆ ದಯಮಾಡಿಸುವ ಮಧ್ಯಮಾರ್ಗದಲ್ಲಿ ಬುಕ್ಕಾಪಟ್ಟಣ, ಮೂಡಿಕೊಪ್ಪ ಗ್ರಾಮದ ಸಕಲ ಮತೀಯರೂ ತಮ್ಮ ತಮ್ಮ ಗ್ರಾಮಗಳನ್ನು ಶೃಂಗರಿಸಿಕೊಂಡು ಕಾದುಕೊಂಡಿದ್ದರು. ಸವಾರಿಯು ದಯಮಾಡಿಸಿದೊಡನೆಯೇ ಸಿದ್ಧಗೊಳಿಸಿದ್ದ ಸಿಂಹಾಸನದಲ್ಲಿ ಬಿಜಯಂಗೈದು ಸರ್ವರಿಗೂ ದರ್ಶನಾಶೀರ್ವಾದಗಳನ್ನು ದಯಪಾಲಿಸಿತು. ಭಕ್ತಿಪೂರ್ವಕವಾಗಿ ಮಾಡಿದ ಸೇವೆಯನ್ನು ಅಂಗೀಕರಿಸಿ ಫಲಾಶೀರ್ವಾದದಿಂದ ಸರ್ವರನ್ನು ಪವಿತ್ರಗೊಳಿಸಿದ್ದಕ್ಕಾಗಿ ಭಕ್ತರಿಗಾದ ಆನಂದವನ್ನು ವರ್ಣಿಸಲು ಅಸದಳವಾಗಿದೆ. ಇದಲ್ಲವೇ ಗುರುಭಕ್ತಿ! ಇದಲ್ಲವೇ ವೀರಶೈವರ ಕರ್ತವ್ಯವು! ಧನ್ಯ ಧನ್ಯ ಗುರುಭಕ್ತರೇ, ನೀವೇ ಧನ್ಯರು. ಇದೇ ರೀತಿಯಾಗಿ ಪೀಠಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಸೇವೆಯನ್ನು ಮಾಡಿ ಕಾಣಿಕೆಯನ್ನು ಅರ್ಪಿಸಿ ಇಹಲೋಕಸ್ಥಿತಿಕಯವಾದ ಸುಖ ಸಂಪತ್ತುಗಳನ್ನು ಪಡೆದು ಗುರುವಿನ ಕೃಪಾಶೀರ್ವಾದಗಳಿಗೆ ಪಾತ್ರರಾಗಿ ಮುಕ್ತಿಯನ್ನು ಪಡೆಯತಕ್ಕದ್ದು. ಶ್ರೀ ಮಹಾ ಸನ್ನಿಧಿಯವರ ದರ್ಶನಾಶೀರ್ವಾದವನ್ನು ಪಡೆಯಲು ಈ ಪ್ರಾಂತದ ವೀರಶೈವರು ಮತ್ತು ಇತರರು ಪ್ರತಿದಿನವೂ ತಂಡೋಪತಂಡವಾಗಿ ಬರುತ್ತಿರುವರು. ಮ॥ ರಾ॥ ಪಾಟೀಲ ಹಾಲಪ್ಪಗೌಡರು ಪ್ರತಿ ದಿವಸ ಸಕಲ ಜನರಿಗೂ ಅನ್ನ ಸಂತರ್ಪಣೆಯನ್ನು ಮಾಡುತ್ತಿರುವ ವಿಷಯವನ್ನು ಪ್ರಕಟಪಡಿಸಲು ತುಂಬಾ ಸಂತೋಷವಾಗುತ್ತದೆ. ಸಂಸ್ಥಾನವು ಇವರ ಗೃಹದಲ್ಲಿಯೇ ಮೊಕ್ಕಾಂ ಇರುವುದರಿಂದ ವಿಶಿಷ್ಟ ಖರ್ಚನ್ನು ತಾವೇ ವಹಿಸಿರುವರು. ಈ ಪುಣ್ಯಪುರುಷರಿಗೆ ಭಗವತ್ಪಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಉತ್ತರೋತ್ತರ ಅಭಿವೃದ್ಧಿಯನ್ನುಂಟುಮಾಡಲೆಂದು ಆ ಗುರು ಸಾರ್ವಭೌಮರನ್ನು ಪ್ರಾರ್ಥಿಸುತ್ತೇನೆ.

ಓರ್ವ ಗುರುಭಕ್ತ.

ದುಃಖವಾರ್ತೆ.

ನಿಜಾಮರಾಜ್ಯಕ್ಕೆ ಸೇರಿದ ಗುಲ್ಬರ್ಗಾ ಪಟ್ಟಣದಲ್ಲಿ ಸುಪ್ರಸಿದ್ಧ ಗುರುವರ್ಗ ಮಠಾಧಿಕಾರಿಗಳಾದ ಶ್ರೀ ಷಟಸ್ಥಲಬ್ರಹ್ಮಿ ಶ್ರೀ ಮಠದ ಪಟ್ಟದ ಸ್ವಾಮಿಗಳವರು ಇದೇ ಕಾರ್ತೀಕಶುದ್ಧ ಅಷ್ಟಮಿ ಬುಧವಾರದ ದಿವಸ ಪ್ರಾತಃಕಾಲ 8 ಘಂಟೆ ಸಮಯಕ್ಕೆ ಶಿವಾಧೀನರಾದರು. ಇವರು ಒಳ್ಳೇ ಸಾತ್ತ್ವಿಕ ಸ್ವಭಾವದವರಾಗಿ ನ್ನರಲ್ಲದೆ ಶಿವಪೂಜಾ ಪರಾಯಣರಾಗಿದ್ದರು. ಅವಸಾನಕಾಲದಲ್ಲಿ ಇವರಿಗೆ 80 ವರ್ಷಗಳಾಗಿದ್ದವು. ಸದ್ಯಃ ಗುಲ್ಬರ್ಗಾದಲ್ಲಿರುವ ಅನಂತ ಗುರುವರ್ಗದ ಮಠಗಳ ಪೈಕಿ ಇವರೊಬ್ಬರೇ ಅಧಿಕಾರಿಗಳಾಗಿದ್ದರು.

ಈಗ್ಗೆ ಈ ಪಟ್ಟಣದಲ್ಲಿ ಯಾರೂ ಅಧಿಕಾರಿಗಳಿಲ್ಲದಂತಾಗಿದೆ. ಇಂಥ ಮಹನೀಯರು ಕೈಲಾಸವಾಸಿಗಳಾದದ್ದು ಗುರುವರ್ಗಕ್ಕೆ ಒಂದು ಹಾನಿಯೇ ಸರಿ.

ಓರ್ವ ಗುರುಭಕ್ತ, ಗುಲ್ಬರ್ಗಾ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ಮುಷ್ಟ್ರಿಕ್ಷಪರಾಭವ	೬ ಆಣೆ
ಗೋತ್ರಸೂತ್ರಪಟ ೨ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ	೬ ಆಣೆ
ಬಸವಭ್ರಾಂತಿ ದಿವಾಕರ	೧೦ ಆಣೆ
ಬಸವಾದಿ ನಿಜತತ್ವದರ್ಪಣ ೨ನೆಯ ಆವೃತ್ತಿ	೪ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೨ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೪ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	೧॥ ಆಣೆ
ಉಪನ್ಯಾಸ ಸಂಗ್ರಹ	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಸಯ್ಯಾಜಿರಾವ್ ರೋಡ್, ಮೈಸೂರು.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವಮತ ಮೀಮಾಂಸಾ.

(ದೀಪಿಕಾ)

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ವಿಶ್ವಾರಾಧ್ಯ ಗುರುಕುಲವಾಸೀ ವ್ಯಾಕರಣರತ್ನಂ
ಪಂ|| ಶ್ರೀ ಪುರಗಿರಿ ಚಿದ್ಘನಶಿವಾಚಾರ್ಯಃ

[ಹಿಂದಿನಿಂದ ಮುಂದೆ ಸಾಗಿದುದು]

ವೈದಿಕಪದ್ಧತಿ ಪ್ರಕಾರವಾಗಿ ಪುತ್ರರ ಜನನವು ಜರುಗಿದ ಬಳಿಕ ವಧುವು ರಜಸ್ವಲೆಯಾದನಂತರ ಶಾಸ್ತ್ರೀಯಮಾರ್ಗಾನುಸಾರವಾಗಿ ಗರ್ಭಾಧಾನವಂ ಮಾಡಿಸಿ ಗರ್ಭದ ತೃತೀಯ ಅಥವಾ ಚತುರ್ಥ ಮಾಸದಲ್ಲಿ ಪುಂಸವನ ವಿಧಿಯನ್ನೂ ಚತುರ್ಥ ಅಥವಾ ಷಷ್ಠ ಮಾಸದಲ್ಲಿ ಸೀಮಂತೋನ್ನಯನವನ್ನೂ ಆಯಾ ವಿಧಿಪ್ರಕಾರವಾಗಿ ನಡೆಯಿಸಿ ಅಷ್ಟಮ ಮಾಸದಲ್ಲಿ ಶ್ರೀಶೈಲಾದಿ ಶಿಲಾ ನಿರ್ಮಿತವಾದ ಶಿವಲಿಂಗಕ್ಕೆ ಪಂಚಾಮೃತ ಶ್ರೀರುದ್ರ ನಮಕಾದ್ಯಭಿಷೇಕವಂ ಮಾಡಿಸಿ ಶಿಲ್ಪದೋಷವಂ ಕಳೆದು ಯಥಾವಿಧಿಯಾಗಿ ಸಂಸ್ಕರಿಸಿ ಶಯನಾವಸ್ಥೆಯಲ್ಲಿರಿಸಿ ಶಿಶುವು ಜನಿಸಿದ ಬಳಿಕ ಪುನಃ ಸಂಸ್ಕರಿಸಿ ಪ್ರಾಣಪ್ರತಿಷ್ಠಾಪನೆಯಂ ಮಾಡಿ ಮಠಾಧಿಕಾರಿಗಳಾದ ಮಾಹೇಶ್ವರ ಮೂರ್ತಿಗಳಿಂದ ಶಿಶುವಿಗೆ ಆ ಲಿಂಗವನ್ನು ಧಾರಣ ಮಾಡಿಸಿ ಜನನದಿಂದುಂಟಾದ ಆಶೌಚದಿವಸಗಳು ಮುಗಿದ ಬಳಿಕ ೧೨ನೇ ದಿವಸ ನಾಮಕರಣವನ್ನು ಮಾಡಿಸಬೇಕು. ಇನ್ನು ಕೆಲವರು ವೀರಶೈವ ಮತದಲ್ಲಿ ಸೂತಕಗಳು ಇಲ್ಲವೆಂದೂ ಕೆಲವರು ಉಂಟೆಂದೂ ಹೇಳುತ್ತಿರುವರು. ಈ ವಿಷಯವನ್ನು ಇಲ್ಲಿ ಸಿದ್ಧಾಂತ ರೀತ್ಯಾ ವಿಚಾರಮಾಡುತ್ತೇವೆ. ಶ್ರೀಮತ್ಪಂಚಾಚಾರ್ಯ ಸಾಂಪ್ರದಾಯಿಕರಾದ ಶ್ರೀಕರಭಾಷ್ಯಕಾರರು ಭಾಷ್ಯಗ್ರಂಥದಲ್ಲಿ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಪ್ರಥಮಸೂತ್ರದ ಮೇಲೆ 'ಬ್ರಹ್ಮ' ಪದಕ್ಕೆ ಲಿಂಗವೇ ಅರ್ಥವೆಂದು ಪ್ರತಿಪಾದಿಸಿ ಲಿಂಗಾಂಗಿಯಾದ [illegible]ನಿಗೆ ಬ್ರಹ್ಮಜಿಜ್ಞಾಸಾಧಿಕಾರತ್ವವನ್ನು ಸೂಚಿಸಿ "ಶೈವಂ ದೇವಾರ್ಚನಂ ಯಸ್ಯ ಯಸ್ಯ ಚಾಗ್ನಿ ಪರಿಗ್ರಹಃ | ಬ್ರಹ್ಮಚಾರಿಯತೀನಾಂಚ ಶರೀರೇ ನಾಸ್ತಿ ಸೂತಕಂ | ಲಿಂಗಾರ್ಚನರತಾ ನಾರೀ ಸೂತಕೇ ವಾ ರಜಸ್ವಲಾ | ರವಿರಗ್ನಿರ್ಯಥಾ ವಾಯುಃ ಕೋಟಿ ಕೋಟಿ ಗುಣೋಜ್ವಲಾ ||" ಯಾರು ಶಿವಲಿಂಗಪೂಜಕರೋ ಯಾರು ಅಗ್ನಿಹೋತ್ರಿಗಳೋ ಯಾರು ಬ್ರಹ್ಮಚಾರಿಗಳೋ ಯಾರು ಯತಿಗಳೋ ಅವರ ಶರೀರದಲ್ಲಿ ಯಾವ ಸೂತಕಗಳೂ ಇರುವದಿಲ್ಲ. ಇನ್ನು ಶಿವಲಿಂಗ ಪೂಜಾರತಳಾದ ಸ್ತ್ರೀಯಳು ರಜಸ್ವಲೆಯಾಗಿರಲಿ ಇನ್ನಾವುದಾದರೂ ಸೂತಕಗಳಿಂದ ಕೂಡಿರಲಿ ಎಲ್ಲೆಲ್ಲಿಯೂ ವ್ಯಾಪಿಸಿರುವ ರವಿ, ಅಗ್ನಿ, ವಾಯುಗಳು ಹ್ಯಾಗೆ ಪವಿತ್ರವಾಗಿರುವವೋ ಅವುಗಳಿಗಿಂತ ಕೋಟಿ ಪಾಲು ಪವಿತ್ರಳಾಗಿರುವಳು. ಅರ್ಥಾತ್ ರಜಸ್ವಲಾದಿ ಕಾಲದಲ್ಲಿಯೂ ನಿತ್ಯಲಿಂಗಾರ್ಚನೆಯನ್ನು ಬಿಡದಲೆ ಸ್ನಾನಾದಿಗಳಂ ಆಚರಿಸುತ್ತಾ ಶುದ್ಧಾತ್ಮಳಾಗಿ ಲಿಂಗಾರ್ಚನವಂ ಮಾಡಬೇಕು. ಎಂದು ಪ್ರಸಂಗವಶಾತ್ ಸಿದ್ಧಾಂತಶಿಖಾಮಣಿ ಪರಾಶರ ಸ್ಮೃತಿಪ್ರಮಾಣಗಳಿಂದುದಾಹರಿಸಿ ಬಳಿಕ "ನನು ಶೈವಾನಾಂ ಪಂಚಸೂತಕಾಭಾವೇ | ವರ್ಣಚತುಷ್ಟಯಾತೀತ ಪ್ರಸಂಗಃ | ತತ್ಕೃತ ಪಾಕಸ್ಪರ್ಶಪರಿಗ್ರಹಪ್ರಸಕ್ತಿಶ್ಚ ತತ್ಸೂತಿಗೃಹೇ ಶೈವಜಾಸ್ತ್ರೀಕೃತ ಪೂಜಾಧಾರಣಸೂತಕನಿಷೇಧಶಾಸ್ತ್ರವಿರೋಧಪ್ರಸಂಗಾತ್ | ವೈದಿಕಾನಾಂ ಲಿಂಗಧಾರಣಮನರ್ಹಮಿತಿಚೇನ್ನೇತಿ" ಅಂದರೆ ಲಿಂಗಧಾರಿಗಳಿಗೆ ಪಂಚಸೂತಕಗಳಿಲ್ಲವೆನ್ನುವುದಾದರೆ ಬ್ರಾಹ್ಮಣಾದಿ ನಾಲ್ಕು ವರ್ಣಗಳನ್ನು ಅತಿಕ್ರಮಿಸಿದಂತಾಗುವುದು. ಮತ್ತು ಸೂತಕಿಯಾದ ಸ್ತ್ರೀಯಳಿಂದ ಮಾಡಲ್ಪಟ್ಟ ಪಾಕವನ್ನು ಮುಟ್ಟಬೇಕಾಗುವುದು. ಹಾಗೆ ಪಾಕಾದಿಗಳನ್ನು ಸ್ವೀಕರಿಸುವ ಪಕ್ಷದಲ್ಲಿ ಲಿಂಗಪೂಜಾಧಾರಣಗಳಲ್ಲಿ ಮಾತ್ರ ಸೂತಕಗಳಿಲ್ಲವೆಂದು ಹೇಳಲ್ಪಟ್ಟ ಶಿವಾಗಮಾದಿಗಳಿಗೆ ವಿರೋಧಪ್ರಸಂಗವು ಬರುವುದು. ಇದರಿಂದ ವೈದಿಕರಿಗೆ ಲಿಂಗಧಾರಣವೇ ಅರ್ಹವಲ್ಲವೆಂದು ಆಕ್ಷೇಪಿಸಿ ಪೂರ್ವದಲ್ಲಿ ಸೂತಕವಿಲ್ಲವೆಂದು ಹೇಳಿದ ಸಿದ್ಧಾಂತಶಿಖಾಮಣ್ಯಾದಿ ಪ್ರಮಾಣಗಳ ರಹಸ್ಯಾರ್ಥವು ಸ್ಪಷ್ಟಗೊಳಿಸಲ್ಪಟ್ಟಿರುವದು. ಸ್ವೇಷ್ಟಲಿಂಗೈಕಪೂಜಾಯಾಂ ನೈವಾಶೌಚಂ ವಿಧೀಯತೇ | ಪೌಂಡರೀಕೇ ರಜಸ್ವಿನೀನಾಂ ಸ್ನಾನಮುಕ್ತಂ ಯಥಾತಥಾ" ಅತಃ ಸ್ಪರ್ಶಾಯೋಗ್ಯಾಪಿ ಯಥಾಜಿಹ್ವಾ ಮಹೇಶ್ವರಿ | ಮಂತ್ರೋಚ್ಚಾರಣಮಾತ್ರಸ್ಯ ಪೂತಾಭವತಿ ಭೂತಲೇ ತಥಾ ಸೂತಕಿನಃ ಶೈವಾಃ ಪೂಜಾಮಾತ್ರನಿಸರ್ಗಭಾಃ ನಾನ್ಯಸ್ಪರ್ಶಾನುಕೂಲಾಃಸ್ಯುರಿತಿ ವೇದಾನುಶಾಸನಮಿತಿ ಸಿದ್ಧಾಂತಾಗಮಾದಿಷು ಶಿವಪೂಜಾಮಾತ್ರ ಯೋಗ್ಯತಾ ಪ್ರಕಾಶಿತಾ || ಪೌಂಡರೀಕಯಾಗದಲ್ಲಿ ಯಜಮಾನನ ಸ್ತ್ರೀಯಳು ರಜಸ್ವಲೆಯಾದರೂ ಮತ್ತು ಅಗ್ನಿಹೋತ್ರಿಯ ಪತ್ನಿಯು ರಜಸ್ವಲೆಯಾದ ಪಕ್ಷದಲ್ಲಿ ಆಶೌಚಾಭಾವವು ವಿಧಿಸಲ್ಪಟ್ಟಿರುವುದೋ ಅದರಂತೆ ತನ್ನ ಇಷ್ಟಲಿಂಗಪೂಜೆಯಲ್ಲಿ ಮಾತ್ರ ಆಶೌಚಾಭಾವವು ವಿಧಿಸಲ್ಪಟ್ಟಿರುವದು. ಎಲೈ ಪಾರ್ವತಿಯೇ ಇನ್ನು ಸ್ಪರ್ಶಕ್ಕೆ ನಾಲಿಗೆಯು ಯೋಗ್ಯವಾಗದಿದ್ದಾಗ್ಯೂ ಮಂತ್ರೋಚ್ಚಾರಣಮಾತ್ರಕ್ಕೆ ಪವಿತ್ರವೇ ಆಗುವದು. ಹಾಗೆ ಸೂತಕಿಯಾದ ಶೈವರು ಶಿವಲಿಂಗಪೂಜೆಗೆ ಮಾತ್ರ ಅರ್ಹರು. ಅನ್ಯಸ್ಪರ್ಶಕ್ಕೆ ಅನುಕೂಲರಾಗಲಾರರು. ಇದು ವೇದಾನುಶಾಸನವೆಂದು ತಿಳಿ; ಎಂಬುದಾಗಿ ಸಿದ್ಧಾಂತಾಗಮಾದಿಗಳ ದ್ವಾರಾ ಶಿವಪೂಜಾಮಾತ್ರಕ್ಕೆ ಯೋಗ್ಯತೆಯು ಇರುವದೆಂದು ಶ್ರೀಕರಭಾಷ್ಯದಲ್ಲಿ ಸ್ಪಷ್ಟಪಡಿಸುತ್ತದೆ. ಹಾಗೂ ಲಿಂಗಧಾರಣಚಂದ್ರಿಕೆಯಲ್ಲಿ ನಂದಿಕೇಶ್ವರ ಶಿವಾಚಾರ್ಯರು [illegible] ಗಂಡೂಷಾದಿಗಳಿಂದ ಪವಿತ್ರಗೊಳಿಸಲ್ಪಟ್ಟರೂ ಮಂತ್ರೋಚ್ಚಾರಣಾದಿಯಲ್ಲಿ ಪವಿತ್ರ [illegible] ಮುಖವು ಪವಿತ್ರವೆಂದು ಭಾವಿಸಿ ಅನ್ನದ ಕವಳದ ಮೇಲೆ ಉಗುಳುವ ವಿಷಯದಲ್ಲಿ ಹ್ಯಾಗೆ ಆ ಮುಖವು ಅಪವಿತ್ರವೆಂದು ಹೇಳಿಸಿಕೊಳ್ಳುವದೋ ಹಾಗೆ ಸೂತಕಿಯಾದ ಸ್ತ್ರೀಯರು ಶ್ರೀಮದಾಚಾರ್ಯರಿಂದ ನಿತ್ಯದಲ್ಲಿಯೂ ಲಿಂಗಾರ್ಚನೆಯು ಬಿಡಕೂಡದು ಎಂದು ಆಜ್ಞಾಪಿಸಿ ಲಿಂಗವು ಕೊಡಲ್ಪಟ್ಟದ್ದರಿಂದ ಸೂತಕವುಳ್ಳ ಸ್ತ್ರೀಯರಾದರೂ ಸ್ನಾನದಿಂದ ಪವಿತ್ರಳಾಗಿ ಶಿವಲಿಂಗವನ್ನು ಶರೀರದಿಂದ ಅಗಲಿಸದೆ ಲಿಂಗಾರ್ಚನೆಯನ್ನು ಮಾಡಬೇಕು. ಇದರಿಂದ ಲಿಂಗಪೂಜೆಗೆ ಪವಿತ್ರಳೆ ಇತರ ಪಾಕಾದಿ ಕಾರ್ಯಗಳನ್ನು ಮಾಡುವುದರಲ್ಲಿ ಅಧಿಕಾರಿಣಿಯೆನಿಸುವದಿಲ್ಲ. ಇದೇ ಅಭಿಪ್ರಾಯವು ಅತಿಸ್ಪಷ್ಟವಾಗಿ ಶ್ರೀಕರಭಾಷ್ಯದಿಂದ ಅಲ್ಲಲ್ಲಿಯೇ ಪ್ರತಿಪಾದಿಸಲ್ಪಟ್ಟಿರುತ್ತದೆ. ಆದ್ದರಿಂದ ಈ ಶಿವಾಚಾರ್ಯರ ಅಭಿಪ್ರಾಯವನ್ನು ಸುಜ್ಞರು ವಿಚಾರಿಸಿದರೆ ನಿಜವಾದ ಅರ್ಥವು ಯಾವುದೋ ಅದುವೇ ವೀರಶೈವರ ಸೂತಕ ನಿರ್ಣಯವು. ಹೀಗಿದ್ದು ಶ್ರೀಮತ್ಪಂಚಾಚಾರ್ಯರ ತತ್ವವನ್ನು ತಿಳಿಯದೆ ಹಲಕೆಲವರು ಪೂರ್ವಾಪರ ವಾಕ್ಯಗಳನ್ನು ವಿಚಾರಿಸದೆ ಸ್ವೇಚ್ಛೆಯಿಂದ ವರ್ತಿಸುವರು. ಅಂತಹ ಆಚರಣೆಗೆ ಶಿವನು ಕ್ರುದ್ಧನಾಗುವನು. ಆದಬಳಿಕ ಶಿವಾಗಮಗಳ ಪದ್ಧತಿಯಂತೆ ಆಚರಿಸಿ ಶಿವಕೃಪೆಗೆ ಪಾತ್ರರಾಗುವದೇ ವೀರಶೈವರಿಗೆ ಭೂಷಣವಾಗಿದೆ. ಇಲ್ಲಿಗೆ ಸಂಕ್ಷೇಪ್ತವಾದ ಸೂತಕ ವಿಚಾರವು ಸಮಾಪ್ತವಾದುದು.

ಇನ್ನು ೬ನೇ ಅಥವಾ ೮ನೇ ತಿಂಗಳಲ್ಲಿ ಯಾಗಲಿ ಅಥವಾ ಶಿಶುವಿಗೆ ದಂತಗಳುದಯಿಸಿದಬಳಿಕಾಗಲಿ ಯಥಾವಿಧಿಯಾಗಿ ಕರ್ಣವೇಧಸಂಸ್ಕಾರ, ಅನ್ನಪ್ರಾಶನಾದಿಗಳನ್ನು ಮಾಡಿಸಬೇಕು. ಇನ್ನು ಕೆಲವು ಶಾಸ್ತ್ರಕಾರರು ಅನ್ನಪ್ರಾಶನಕ್ಕಿಂತಲೂ ಪೂರ್ವದಲ್ಲಿ ಚತುರ್ಥ ಮಾಸದಲ್ಲಿ 'ಉಪನಿಷ್ಕ್ರಮಣ' ವನ್ನು ಹೇಳುವರು. ಇನ್ನು ಶಿಶುವಿಗೆ ಮೂರನೇ ವರ್ಷದಲ್ಲಿ ಚೌಲಕರ್ಮವನ್ನು ಯಥಾವಿಧಿಯಾಚರಿಸಬೇಕು. ಅಂದರೆ ಮುಂಡನದಲ್ಲಿ ತಮ್ಮ ತಮ್ಮ ಕುಲಧರ್ಮಪದ್ಧತಿ ಪ್ರಕಾರ ಏಕಶಿಖೆ, ತ್ರಿಶಿಖೆ, ಪಂಚಶಿಖೆ ಮುಂಭಾಗದಲ್ಲಿ ಕೂಡಾ ಇಡಿಸಬೇಕು. ಬಳಿಕ ಶಿಶುವಿಗೆ ಐದು ವರ್ಷವಾದನಂತರ ಶುಭಮುಹೂರ್ತದಲ್ಲಿ ವೈದಿಕವಿಧಿಪ್ರಕಾರ ವಿದ್ಯಾರಂಭವಂ ಮಾಡಿಸಬೇಕು. ಮಾತಾಪಿತೃಗಳೇ ಪ್ರಥಮಶಿಕ್ಷಕರಾಗಿರುವದರಿಂದ ಬಾಲಕನಿಗೆ ಆಯಾ ಸಂಸ್ಕಾರಗಳನ್ನು ಮಾಡಿಸುತ್ತ ವಚನ ಗಮನಾಗಮನಾದಿ ವ್ಯವಹಾರಗಳನ್ನು ಕಲಿಸುತ್ತ ಲಾಲನಪಾಲನಗಳನ್ನು ಮಾಡಬೇಕು. ಇದರಿಂದ ೮ ವರ್ಷದ ವರೆಗೂ ಮಾತಾಪಿತೃಗಳ ಭಾರವು ಬಾಲಕರ ಮೇಲೆ ಅಧಿಕವಾಗಿರುವದರಿಂದ ಬಾಲಕರಿಗೆ ಉತ್ತಮ ಶಿಕ್ಷಣವನ್ನು ಕೊಡಬೇಕು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯ ಪೀಠಾಧೀಶ್ವರ ಸನ್ನಿಧಾನದಲ್ಲಿಯಾಗಲಿ ತತ್ಸಾಂಪ್ರದಾಯಿಕ ಸ್ಥಿರಚರಪಟ್ಟಾ ಕ್ಷ ಸ್ವಾಮಿಗಳವರ ಸನ್ನಿಧಿಯಲ್ಲಾಗಲಿ; ಬಾಲ ಉಪನಯನ ಮಾಹೇಶ್ವರ ದೀಕ್ಷಾ ಸಂಸ್ಕಾ ಸ್ಕಾರ ಕರೆದೊಯ್ಯಬೇಕು. ಆದರೆ ಕೆಲವರು ದೀಕ್ಷಾ ಯದಲ್ಲಿ ವೀರಮಾಹೇಶ್ವರರಿಗೆ ಶಿಖೆಯು ಇರಬೇಕೆ ಲೂ ಕೆಲವರು ಶಿಖಾ ಇಡಕೂಡದೆಂತಲೂ ಶಾಸ್ತ್ರೀ ವಾದ ಶಿಖಾಧಾರಣಪದ್ಧತಿಯಲ್ಲಿ ಕೆಲವರಿಗೆ ಸಂಶಯ ಬರಬಹುದು. ಈ ಸಂಶಯನಿವೃತ್ತಿಗಾಗಿ ಪ್ರಸಂಗಾ ನುಸಾರವಾಗಿ ಶಿಖಾನಿರ್ಣಯವನ್ನು ಪ್ರತಿಪಾದಿಸುವೆ

ಚೌಲಕರ್ಮದಲ್ಲಿ ಬೋಧಾಯನಾಪಸ್ತಂಭಾಶ್ವಲಾ ನಪಾರಸ್ಕರಾದಿ ಮಹರ್ಷಿಗಳು ಬಾಲಕನಿಗೆ ಒಂದೇ ಶಿ ಯನ್ನಾಗಲಿ ಅಥವಾ ಮೂರು ಐದು ಅಥವಾ ಅ ಕುಲಧರ್ಮಪ್ರಕಾರವಾಗಿ ಝುಲುಪಿಯನ್ನು ಇಡಿ ಬೇಕು. ಎಂದು ಹೇಳುವರು.(ಬೋ॥ ಗೃಂ ೨-೪-೧೭|೧ ಇನ್ನು 'ಯಥಾಮಂಗಲಂ ಕೇಶವೇಶಾನ್ ಕಾರಯೇತ್' (ಆಶ್ವ|| ಗೃಂ|| ೧-೧೭|೧೭) ಅಂದರೆ ಮಂಗಲವಾಗು ವಂತೆ ಕೇಶಗಳನ್ನಿಡಿಸಬೇಕು. "ಯಥಾಮಂಗಲ ಕೇಶಕೇಶಕರಣಂ" (ಪಾರ|| ಗೃಂ|| ೨|೧|೨೧) ಅಂ ದರೆ ಮಂಗಳವಾಗಿ ಕೇಶಗಳನ್ನಿಡಿಸಬೇಕು. ಇತ್ಯಾ ಸೂತ್ರಗಳಿಂದ ಶಿಖಾಧಾರಣದ ಅವಶ್ಯಕತೆಯು ಹೇ ಳ್ಪಟ್ಟಿರುವುದು. "ತಾಸಾಂ ಮಧ್ಯಶಿಖಾವರ್ಜಮುಪ ಯನೇ ವಪನಂಕಾರ್ಯಂ ಇತಿಶ್ರುತಿಃ" ಅಂದರೆ ಪೂ ರ್ವದಲ್ಲಿ (ಚೌಲಕರ್ಮದಲ್ಲಿ) ಬಿಡಿಸಿದ ಯಾವತ್ತು ಕೇ ಗಳನ್ನು ಶಿಖೆಯನ್ನು ಮಾತ್ರಬಿಟ್ಟು ಉಪನಯನಕಾಲದ ವಪನಮಾಡಿಸಬೇಕು. ಮತ್ತು "ಸದಾಬದ್ಧಶಿಖೇನ [illegible] ಭೃಗುಸ್ಮೃತೌ ಅಂದರೆ "ಯಾವಾಗಲೂ ಶಿಖೆಯನ್ನು ಧರಿಸಿಯೇ ಇರಬೇಕು ಎಂದು ಸದಾಶಬ್ದದಿ ನಿತ್ಯತ್ವಪ್ರತೀತಿಯಾಗುವದರಿಂದ ನಿತ್ಯವಾ ವುಗಳನ್ನಾಚರಿಸದಿದ್ದರೆ ಪ್ರತ್ಯವಾಯ(ಪಾಪ) ಬರುವ ಪ್ರಸಂಗವಿರುತ್ತದೆ ಶಿಖಾಂ ಛಿಂದಂತಿಯೇ ಮೋಹಾದ್ವೇ ಷಾದಜ್ಞಾನತೋಪಿವಾ| ತಪ್ತಕೃಚ್ಛ್ರೇಣ ಶುದ್ಧ್ಯಂ ತ್ರಯೋವರ್ಣಾ ದ್ವಿಜಾತಯಃ" ಅಂದರೆ ಯಾವ ಮೋಹದಿಂದಾಗಲಿ ದ್ವೇಷದಿಂದಾಗಲಿ ಅಜ್ಞಾನದಿಂದಾ ಗಲಿ ಶಿಖೆಯನ್ನು ಕತ್ತರಿಸಿದರೆ ಅಂತಹ ದ್ವಿಜರು ತಪ್ತ ಕೃಚ್ಛ್ರವ್ರತದಿಂದ ಶುದ್ಧರಾಗುವರು ಎಂದು ಶಿಖಾ ಛೇದನವಾದರೆ ಪ್ರಾಯಶ್ಚಿತ್ತವನ್ನು ಹಾರೀತನು ಹೇ ರುವನು " ವಿಶಿಖೋ...ಯತ್ಕರೋತಿನತತ್ಕೃತಂ " ಶಿಖೆಯಿಲ್ಲದೆ ಯಾವ ಕರ್ಮವನ್ನು ಆಚರಿಸಿದರೂ ಅದು ಕರ್ಮವೆಂದು ಹೇಳಿಸಿಕೊಳ್ಳಲಾರದು. ಎಂದು ಹಾರೀ ನು ಶಿಖೆಯಿಲ್ಲದೇ ಮಾಡಿದವನ ಕರ್ಮಕ್ಕೆ ವೈಫಲ್ ವನ್ನು ಹೇಳುವದರಿಂದ ಶಿಖೆಯು ಸರ್ವ ಕರ್ಮಗಳಿಗೂ ಅಂಗವೆಂದು ಸಿದ್ಧವಾಯಿತು.

ಇದೂ ಅಲ್ಲದೆ ಶ್ರೀಮತ್ಪಂಚಾಚಾರ್ಯ ಸಾಂಪ್ರದಾಯಿ ಕರಾದ ಶ್ರೀ ಕರಭಾಷ್ಯಕಾರರು ಶ್ರೀಮದೇಕೋರಾ ಮ ಜಗದ್ಗುರುಗಳ ಮಂಗಲ ಕೋಟಿಯಲ್ಲಿ "...ಶ್ರೀ ಮದ್ವಂದ್ಯ ಶಿಖೋಪವೀತವಿಲಸತ್ಕಂಥಾಜಿನಾಲಂಕೃತಃ" ಎಂದು ಶಿಖಾಧಾರಣವನ್ನು ಹೇಳಿರುವರು. ಹಾಗೆ ಮುಖೇ ಮಂತ್ರೋ ಹೃದಿಧ್ಯಾನಂ ಮಸ್ತಕೇ ಲಿಂಗಧಾರ ಣಂ ಶಿಖಾರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣಲಕ್ಷಣ ಎಂದು ಗೌತಮಸ್ಮೃತಿ ಪ್ರಮಾಣಗಳಿಂದ ಲಿಂಗಧಾರಣ ಚಂದ್ರಿಕೆಯಲ್ಲಿ ಲಿಂಗಧಾರಿ ಬ್ರಾಹ್ಮಣನಿಗೆ ಶಿಖಾಯು ಕ್ತತ್ವವನ್ನು ಬೋಧಿಸಿರುವರು. "ಶಿಖಾಸೂತ್ರ ಜಟಾ ಭಸ್ಮ ಶಿವಲಾಂಛನಲಾಂಛಿತಃ" ಎಂದು ಶಿಖಾಧಾರಣ ವನ್ನು ಪಾಶುಪತಶ್ರುತಿಯು ಬೋಧಿಸುವದು. ವೀರಶೈ ವಧರ್ಮ ಶಿರೋಮಣಿಯಲ್ಲಿ ಲಿಂಗಾರ್ಚನಾ ವಿಧಿಯಲ್ಲಿ "ಪ್ರಕ್ಷಾಲ್ಯ ಚರಣೌ ಹಸ್ತೌ ......ಸುಸಂಯುತ ಶಿಖಾ ಡಕಃ ಎಂಬುದಾಗಿ ಗ್ರಂಥಕಾರರು ಶಿಖಾಯುಕ್ತತೆಯನ್ನು ತೋರಿಸಿರುವರು. ಕ್ರಿಯಾಸಾರದಲ್ಲಿ "ಶಿಖಾಯಾಮೇಕಂ" "ಏಕಾದಶವಕ್ತ್ರಂವಾಶಿಖಾಯಾಂ" ನೀಲಕಂಠ ಶಿವಾಚಾರ್ಯರು ಶಿಖಾವಶ್ಯಕತೆಯನ್ನು ತೋರಿಸಿರುವರು ಸಿದ್ಧಾಂತ ಶಿಖಾಮಣಿಯಲ್ಲಿ "ಶಿಖಾಯಾಮೇಕಮೇಕಾಸ್ಯಂ" ಎಂದು ಶ್ರೀ ಜಗದ್ಗುರು ರೇಣುಕಾರಾಧ್ಯ ಶಿವಾಚಾರ್ಯರು ಶಿಖಾವಶ್ಯಕತೆಯನ್ನು ಬೋಧಿಸಿರುವರು. ಇನ್ನು ವಟುಕರ್ಮ ಪದ್ಧತಿಯ ದೀಕ್ಷಾಪ್ರಕರಣದಲ್ಲಿ "ಯಜ್ಞೋಪವೀತ........ ಅಸೌ" ಇತ್ಯುತ್ತರತಃ ಕೇಶಾನ್ ವಾಪಯಿತ್ವಾ, ಅಪಉಪಸ್ಪೃಶ್ಯ ತಾನ್ ಕೇಶಾನ್ ಶಕೃತಾ ಪಿಂಡೇನ ನಿಧಾಯ ಎಂಬ

ಗಿ ಉತ್ತರಭಾಗದ ದಕ್ಷಿಣಭಾಗದ ಕೇಶಗಳನ್ನು ತೆಗೆದು ಮಧ್ಯದಲ್ಲಿ ಶಿಖೆಯನ್ನು ಬಿಡಬೇಕು. ಇತ್ಯಾದಿಯಾಗಿ ಹೇಳಿತ್ತು " ಬದ್ಧಶಿಖಿಂಕುರ್ಯಾತ್ ಮೌಂಜೀಹೋತ್ರಿಕೋಕ್ತ ಶುಭೇಮುಹೂರ್ತೇ ಪ್ರಸವಿಶಾಪಮಾಸ್ಥೀಯ ತಸ್ಮಿನ್ ಸಮ್ಯಗೀಪ್ಸಿತೇ" ಯಜಮಾನನು ಬದ್ಧ ಶಿಖೆಯುಳ್ಳ ಕುಮಾರನನ್ನು ಚನ್ನಾಗಿ ನೋಡಬೇಕು. ಎಂಬದಾಗಿ ಶಿವಾಧಾರಣವನ್ನು ಸ್ಪಷ್ಟವಾಗಿ ಮೈಸೂರು ಸೋಲಾಪುರ ಧಾರವಾಡ ಮೊದಲಾದ ಸ್ಥಾನಗಳಲ್ಲಿ ಮುದ್ರಿತಗಳಾದ ಗ್ರಂಥಗಳಲ್ಲಿ ಹೇಳಿರುವರು. ಹಾಗೂ ಸಹಸ್ರಾರು ಪ್ರಮಾಣಗಳು ಇರುವವು. ಪಾರಮೇಶ್ವರಾಗಮದಲ್ಲಿ " ಬ್ರಾಹ್ಮಣಾ ವೀರಶೈವಸ್ಯ ಶಿವಾಯಜ್ಞೋಪವೀತಿನಃ " ಎಂಬದಾಗಿ ವೀರಶೈವ ಬ್ರಾಹ್ಮಣರಿಗೆ ಶಿವಾಧಾರಣ ಯುಕ್ತತೆಯನ್ನು ಶಿವನು ಅಪ್ಪಣೆ ಕೊಡಿಸಿರುವನು. ಹೀಗೆ ಶಿವಾಧಾರಣವು ವೇದಾಗಮ ಧರ್ಮಶಾಸ್ತ್ರಗಳಿಂದ ವೈದಿಕ ಬ್ರಾಹ್ಮಣರಿಗೆ ಸಿದ್ಧವಾಯಿತು. ಇಂದಬಳಿಕ ಕೆಲವರಿಗೆ ಒಂದ ಸಂಶಯವು ದೂರಾಗಿ ಬ್ರಾಹ್ಮಣ್ಯಕ್ಕೆ ಮುಖ್ಯವಾದ ಶಿವಾಧಾರಣೆಯು ಮಾಹೇಶ್ವರರಿಗೆ ಅತ್ಯವಶ್ಯಕವೆಂದು ಸಿದ್ಧಾಂತಗೊಳಿಸಲ್ಪಟ್ಟಿತೆಂಬಲ್ಲಿಗೆ ಸಂಕ್ಷಿಪ್ತ ಶಿವಾಧಾರಣನಿಯಮವು ಸಂಪೂರ್ಣವಾದುದು.

ಇನ್ನು ವೀರಮಾಹೇಶ್ವರಾಚಾರ್ಯರು ಪೂರ್ವೋಕ್ತ ವೈದಿಕಪದ್ಧತಿಗನುಸಾರವಾಗಿ ಸಕಲ ಸಂಸ್ಕಾರಗಳನ್ನು ಹೊಂದಿ ಶಿವಾಧಾರಣ ಸಂಯುಕ್ತರಾದ ಮಾಹೇಶ್ವರ ವಟುಗಳನ್ನು ಶಾಸ್ತ್ರೀಯವಾಗಿ ಮಾಹೇಶ್ವರ ದೀಕ್ಷೆಯಿಂದ ಸಂಸ್ಕರಿಸಬೇಕು. ಆದರೆ ಮಾಹೇಶ್ವರರ ಪೂರ್ವ ಕಾಲದಿಂದ ಶ್ರೀಮತ್ಪಂಚಾಚಾರ್ಯರು ಪಿಸಿದ ಧರ್ಮನಿಬಂಧಗಳು ಸದ್ಯಃ ಶಿಥಿಲಗಳಾಗಿರುವವು. ಏಕೆಂದರೆ ಮಠ ಮಹಾಮಠ ಮಹಾಪೀಠಗಳಲ್ಲಿ ಗುರು ಕುಲಗಳನ್ನು ಏರ್ಪಡಿಸಿದ್ದರು. ಆದ ಸದ್ಯಃ ಅಂತಹ ಪವಿತ್ರಸ್ಥಾನಗಳಲ್ಲಿ ವಿದ್ಯಾವಿಹೀನರಾದ ಅಣ್ಣ ತಮ್ಮಂದಿರುಗಳು ಸೇರಿರುವರು. ಅಂದಬಳಿಕ ಈಗಿನ ಕಾಲದಲ್ಲಿ (ಅಯ್ಯಾಚಾರ) ಉಪನಯನ ಆಗುವದಷ್ಟೇ ತಡ! ಮಾಹೇಶ್ವರ ವಟುಗಳಿಗೆ ಆ ದಿವಸ ಧರಿಸಿದ ಕಾಷಾಯ ಕಮಂಡಲು ದಂಡ ಮೊದಲಾದ ಶಿವಚಿಹ್ನೆಗಳನ್ನು ಮಾತಾಪಿತೃಗಳು ಕೂಡಲೇ ಬಿಡಿಸಿ ಅವೈದಿಕ ವೇಷಗಳನ್ನು ಧರಿಸಿ ಸಂಸ್ಕಾರವನ್ನು ಮಾಡಿದ ಆಚಾರ್ಯರನ್ನು ಸಿಂಹವೋ ಹುಲಿಯೋ ಎಂಬ ಭಾವನೆಯನ್ನು ವಟುಗಳಲ್ಲಿ ಹುಟ್ಟಿಸಿ ಶ್ರೀಮದಾಚಾರ್ಯರು ಇರುವ ದಿಕ್ಕಿಗೇನೆ ಬಹಿಷ್ಕಾರವನ್ನು ಹಾಕಿಸಿಬಿಟ್ಟಿರುವರು. ಇನ್ನು ಈಗಿನ ನಮ್ಮ ಆಚಾರ್ಯರಾದರೂ ವೈದಿಕ ವಿದ್ಯಾವಿಶಾರದರಾಗಿ ಸಶಾಸ್ತ್ರೀಯವಾಗಿ ಸಂಸ್ಕರಿಸಿ ಸಂಸ್ಕಾರದಿಂದ ವಟುಗಳನ್ನು ಆಕರ್ಷಿಸಿ ತಮ್ಮ ಆಂಸರನ್ನಾಗಿಟ್ಟುಕೊಂಡು ವೇದಾಧ್ಯಯನ ಮಾಡಿಸಬೇಕು. ಮತ್ತು ಮಾಹೇಶ್ವರರ ನಿತ್ಯಪೂಜಾಕ್ರಮಗಳನ್ನು ಬೋಧಿಸಬೇಕು. ಇತ್ಯಾದಿ ವಟುಗಳ ಐಹಿಕ ಪಾರಮಾರ್ಥಿಕ ಭವಿತವ್ಯತೆಯ ಕಡೆಗೆ ದೃಷ್ಟಿಯನ್ನು ಹಾಕುವದೊತ್ತಟ್ಟಿಗಿರಲಿ, ಮತ್ತೊಂದು ದಿವಸ ವಟುವು ಹತ್ತಿರಿದ್ದರೆ ಮತ್ತೇನಾದರೂ ಕೇಳಿದರೆ ತಕ್ಕ ಕ್ರಮವನ್ನು ಹೇಳುವ ಪ್ರಸಂಗವು ಬಂದೀತು ಎಂದು ಶೀಘ್ರವಾಗಿ ಸ್ಥಲಾಂತರ ಮಾಡುವರು. ಹೀಗಾದ ಬಳಿಕ ಮಾಹೇಶ್ವರ ಬ್ರಹ್ಮಚಾರಿಗಳು ವೈದಿಕ ವಿದ್ಯಾಜನೆಗಳಲ್ಲಿ ಹ್ಯಾಗೆ ನಿಪುಣರಾಗಬೇಕು? ಇನ್ನು ವೀರಶೈವ ಕೀರ್ತಿಯನ್ನು ಎಷ್ಟರಮಟ್ಟಿಗೆ ಉದ್ಧರಿಸಬೇಕು? ಇದಕ್ಕೆಲ್ಲ ಅವಿದ್ಯೆಯೇ ಮೂಲಕಾರಣವಾಗಿದೆ. ಆದರೆ ಈ ಅವಿದ್ಯಾ ನಿವಾರಣಾರ್ಥವಾಗಿ ಗುರುಕುಲಗಳ ಅವಶ್ಯಕತೆಯು ಮುಖ್ಯವಾಗಿರಬೇಕು ಈ ವಿಷಯವಾಗಿ ಪ್ರಮುಖರೂ ಮಾಹೇಶ್ವರರೂ ವಿದ್ಯಾನಿ ರಾಜಕೀಯ ವಿದ್ಯಾಧುರೀಣರೂ ಶ್ರೀ ಜಗದ್ಗುರು ಪಂಚಾಚಾರ್ಯರೂ ಅವಶ್ಯವಾಗಿ ಗಮನಿಸ ಇಲ್ಲವಾದರೆ ಮಠವು ಅತ್ಯಂತ ಗ್ಲಾನಿಯನ್ನು ಹೊಂದುವದು. ಎಂಬಲ್ಲಿಗೆ ಗುರುಕುಲಾವಶ್ಯಕತೆಯು ಸ್ಪಷ್ಟವಾದುದು.

(ಮುಂದೆ ಬರುವುದು)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಚಾಚಾರ್ಯ ಪ್ರಭೆಯ ಶಾಂತಿ ಪ್ರಭಾವ.

ಪ್ರಭೆಯೇ ಸಾಕ್ಷಾತ್ ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ಸ್ವರೂಪಿಯಾದ ನೀನು ಎಂಥ ಶಾಂತಿಯನ್ನು ಪಡೆಸಿರುವಿ? ಯಾರು ನಿನ್ನನ್ನು ಸ್ತೋತ್ರಮಾಡಿದರೂ ಯಾರು ನಿನ್ನನ್ನು ಕುಬುದ್ಧಿಯಿಂದ ನಿಂದಿಸಿದರೂ ಸಮಾನ ದೃಷ್ಟಿಯಿಂದ ಶಾಂತತೆಯನ್ನೇ ತೋರುವೆಯಲ್ಲಾ! ಮಂದಮತಿಗಳ ಮಲಿನ ವೃತ್ತಿಯ ಮದಾಂಧಕಾರತೆಯನ್ನು ಹೋಗಲಾಡಿಸುವುದಕ್ಕಾಗಿ ವಿದ್ಯುತ್ಪ್ರಕಾಶವನ್ನೇ ಧಾರಣಮಾಡಿರುವೆಯಲ್ಲವೆ? ಇದರಿಂದಲೇ ಕುಹಕರು ತಮ್ಮ ಕುಟಿಲ ವೃತ್ತಿಯನ್ನು ಬಿಟ್ಟು ಇಷ್ಟು ಸ್ವಲ್ಪ ದಿವಸಗಳಲ್ಲಿಯೇ ನಿನ್ನ ದಾಸಾನು ದಾಸರಾಗುವರು. ಆಗ ನೀನು ಅವರಿಗೆ ಸದ್ಬೋಧಾಮೃತವನ್ನು ಪಾನಮಾಡಿಸುವೆಯಂತೆ. ಈಗ ಅವರವರ ದುರ್ಬುದ್ಧಿ ಪ್ರಲಾಪಗಳಿಗೆ ಸಮಾಧಾನೋಕ್ತಿಗಳನ್ನು ಬೋಧಿಸುತ್ತ ಕುಳಿತರೆ ನಿನ್ನ ರಾಷ್ಟ್ರೋದ್ಧಾರ ಸಮಾಜೋದ್ಧಾರ ಧರ್ಮೋತ್ತೇಜಕ ಮುಂತಾದ ಮಹಾಕಾರ್ಯಗಳೇ ನಿಂತು ಹೋಗುವವು. ದುರ್ಮಾರ್ಗಿಗಳನ್ನು ಸನ್ಮಾರ್ಗಕ್ಕೆ ಹಚ್ಚುವ ಕಾರ್ಯವನ್ನು ಈ ಶಾಂತಿಯೆಂಬ ದಿವ್ಯತೇಜಸ್ಸಿನಿಂದಲೇ (ಸ್ವಕರ್ತವ್ಯವನ್ನು) ಸಾಗಿಸು. ಇದರಿಂದ ನಿನಗೆ ಚ್ಯುತಿ ಬರಲಾರದು. ಯಾಕೆಂದರೆ " ಕ್ಷಮಾಖಡ್ಗಂ ಕರೇಯಸ್ಯ ದುರ್ಜನಃ ಕಿಂಕರಿಷ್ಯತಿ | ಅತೃಣೇಪತಿತೋವಹ್ನಿಃ ಸ್ವಯಮೇವೋಪಶಾಮ್ಯತಿ || ಈ ಪ್ರಕಾರವಾಗಿ ನೀನು ಕ್ಷಮೆಯೆಂಬ ಖಡ್ಗವನ್ನು ಧರಿಸು. ಜಗತ್ಕಂಟಕರಾದ ಜನರೀ ವಿಚಾರದ ಅವಿವೇಕಿಗಳಿಗೆ ಅಮೃತವಿದು ಪಾನಮಾಡೆಂದು ಹೇಳಿದರೆ, ಅವಗುಣಬೋಧಕರ ಆಜ್ಞೆಯಂತೆ ಕುಣಿಯುತ್ತಿರುವ ಅಜ್ಞಾನಿಗಳ ಕಣ್ಣಿಗೆ ವಿಷಪ್ರಾಯವಾಗಿ ತೋರುವುದರಲ್ಲಿ ಆಶ್ಚರ್ಯವೇನು? ಇಂಥವರನ್ನು ಸದ್ಬೋಧದಿಂದಲೂ ಸದುತ್ತರದ ಲೇಖನಗಳಿಂದಲೂ ಎಚ್ಚರಿಸಿ ಹಾದಿಗೆ ತರಬೇಕೆಂದರೆ ಈ ಯುಗವನ್ನೇ ಕಳೆಯಬೇಕಾಗುವದು ನೀನು ಯಾವ ಭಗವತ್ಪಾದರಾದ ಶ್ರೀ ಜಗದ್ಗುರು ಪಂಚಾಚಾರ್ಯರ ದಿವ್ಯ ತೇಜಸ್ಸೇ ಮೂರ್ತಿ ಮತ್ತಾಗಿ ಜನಿಸಿರುವೆಯಾದ್ದರಿಂದ ಆ ಕೋಟಿ ಭಾನುಪ್ರಕಾಶ ಸ್ವರೂಪಿಗಳು ಇಂಥ ಕ್ಷುದ್ರವೃತ್ತಿಯ ನರಪಶುಗಳ ದುರ್ಗುಣಗಳನ್ನು ದೂರಮಾಡಿ ಪತಿತೋದ್ಧಾರಕರೆಂಬ ಬಿರುದನ್ನು ಕಾಯ್ದುಕೊಳ್ಳಲಿಕ್ಕಿಲ್ಲೇನು? ತಮ್ಮಿಂದಲೇ ಸ್ಥಾಪಿಸಲ್ಪಟ್ಟ ಶ್ರೀಮದ್ವೀರಶೈವ ಮತಕ್ಕೊದಗಿದ ದುರವಸ್ಥೆಯನ್ನು ಹೋಗಲಾಡಿಸುವದಕ್ಕಾಗಿಯೇ ಶ್ರೀಜಗದ್ಗುರು ರೇಣುಕ ಶಿವಾಚಾರ್ಯರು ರಂಭಾಪುರೀ ಪೀಠಾರೋಹಣ ಮಾಡಿರುವರು. ಶ್ರೀಜಗದ್ಗುರು ದಾರುಕ ಶಿವಾಚಾರ್ಯರೇ ಉಜ್ಜಯಿನೀ ಸದ್ಧರ್ಮಸಿಂಹಾಸನದಲ್ಲಿ ವಿರಾಜಿಸುತ್ತಿರುವರು. ಶ್ರೀಜಗದ್ಗುರು ಏಕೋರಾಮ ಶಿವಾಚಾರ್ಯರು ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾರೋಹಣ ಮಾಡಿ ಜಗತ್ಪಾವನಗೈಯುವದಕ್ಕಾಗಿ ಸದ್ಯಃ ನಿನ್ನ ಕರ್ನಾಟಕದಲ್ಲಿಯೇ ಸಂಚರಿಸುತ್ತಿರುವರು, ಅಖಿಲಲೋಕೋದ್ಧಾರಕರಾದ ಆಚಾರ್ಯರು ಕರ್ನಾಟಕವನ್ನು ಕೈಬಿಡುವರೇ? ತಾಳು ತಾಳು ಶಾಂತಿಯನ್ನು ತಾಳಿದಷ್ಟು ಬಾಳುವಿ' ಇದರಿಂದಲೇ (ನಿನ್ನ ಶಾಂತಮುದ್ರೆಯಿಂದ ಪ್ರಕಾಶಿಸುವ ಧಾರ್ಮಿಕ ನೀತಿಯಿಂದ) ದುರಾಚಾರ ಪ್ರವೀಣರು ಸದಾಚಾರಿಗಳಾಗುವರು. ಇದಕ್ಕೆ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಭಾವವೆಂದೇ ಹೇಳುವೆನು. ಅಲ್ಪಮತಿಯಾದ ಬಾಲಕನ ತೊದಲ್ನುಡಿಗಳೇನೆಂದು ಉಪೇಕ್ಷಿಸದೆ ಪರಿಗ್ರಹಿಸಿ ನನ್ನನ್ನೂ ಜಗತ್ತನ್ನೂ ಅನುಗ್ರಹಿಸು

ಶಾಂತಿಃ! ಶಾಂತಿಃ!! ಶಾಂತಿಃ!!!

ಪಂಚಾಕ್ಷರಾರ್ಯ ಬೃಹನ್ಮಠ ಶಿರೋಳ

ಅನ್ನಸಂತರ್ಪಣ ಹರಪನಹಳ್ಳಿ

ಶ್ರೀಮದುಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನವಾದ ಕೂಡಲೆ ಈ ಊರ ಶೆಟ್ಟಿಪ್ಪನವರ ಸಿದ್ಧಲಿಂಗಪ್ಪನವರು ಜಗತ್ಪಾವನರ ಅಡಿದಾವರೆಯಲ್ಲಿ 100 ರೂಪಾಯಿಗಳನ್ನು ಬಸ್ನಹ ಗಾಣಿಕೆಯಾಗಿ ಒಪ್ಪಿಕೊಂಡು ಜಗದ್ಗುರುಗಳನ್ನು ಅತ್ಯಂತ ವೈಭವದಿಂದ ಸಕಲ ಬಿರುದಾವಳಿಗಳೊಡನೆ ತಮ್ಮ ಗೃಹಕ್ಕೆ ಬಿಜಮಾಡಿಸಿಕೊಂಡು ಬಂದ ಮೇಲೆ ಜಗದ್ವಂದ್ಯರಪಾದಕಮಲಗಳನ್ನು ಅತ್ಯಂತ ಭಕ್ತಿಯಿಂದ ಪೂಜಿಸಿದರು. ಆನಂತರ ಗುರುಸೇವೆಯಲ್ಲಿ ತತ್ಪರರಾದ ಪಕ್ಕವಠ್ಯರು ಸಾವಿರಾರು ಭಕ್ತಮಾಹೇಶ್ವರರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಿದರು. ಮ|| ರಾ|| ಸಿದ್ಧಲಿಂಗಪ್ಪನವರು ಕೇವಲ ಬಡವರಾದಾಗ್ಯೂ ಈ ಮಹಾಕಾರ್ಯವನ್ನು ನಡೆಯಿಸಿದ್ದಕ್ಕಾಗಿ ಜಗದ್ಗುರು ಪಂಚಾಚಾರ್ಯರು ಈ ಮಹೋದಯರಿಗೆ ಸರ್ವದಾ ಮಂಗಳವನ್ನು ಕೊಡಲೆಂದು ಜಗದ್ರಕ್ಷಕನನ್ನು ಪ್ರಾರ್ಥಿಸುತ್ತೇನೆ

ಚವರಗೊಳ್ಳದ ಚರಮೂರ್ತಿ ಸ್ವಾಮಿಗಳು
ಕಂಭಾವಿ ಮಠ, ಕೊಟ್ಟೂರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.
ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ಜಗದ್ಗುರು ಸಿದ್ಧಲಿಂಗರಾಜದೇಶಿಕೇಂದ್ರ
ಶಿವಾಚಾರ್ಯ ಮಹಾಸ್ವಾಮಿಗಳವರ
ಮಹೋತ್ಸವ

ಹರಪನಹಳ್ಳಿ

ಇದೇ ಆಶ್ವಿಜ ಬಹುಳ ಅಷ್ಟಮಿ ಮಂಗಳವಾರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ರಾಜಧಾನಿಯಾದ ಹರಪುರಿಗೆ ದಯಮಾಡಿಸಿದ ಕೂಡಲೇ, ಈ ಪುರಪ್ರಮುಖರಾದ ತೆಗ್ಗಿನ ಮಠದ ಚನ್ನವೀರಪ್ಪಯ್ಯನವರು, ಗುರುಪಾದ ದೇವರ ಮಠದ ನೀಲಕಂಠಶಾಸ್ತ್ರಿಗಳು, ಶ್ರೀಮಂತ ಪಾಟೀಲ ಬೆಟ್ಟನ ಗೌಡರವರು ಈ ಪುರದ ಭಕ್ತಾದಿಗಳೊಡನೆ ಕೂಡಿಕೊಂಡು ಭವ್ಯವಾಗಿ ಶೃಂಗರಿಸಿದ ರಾಜ ಬೀದಿಗಳಲ್ಲಿ ಜಗತ್ಪಾವನರ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಡೆಯಿಸಿದರು.

ಈ ಉತ್ಸವವು ಗುರುಪಾದದೇವರ ಮಠದ ವೇ|| ನೀಲಕಂಠ ಶಾಸ್ತ್ರಿಗಳ ವೇದಘೋಷದಿಂದಲೂ, ಗಂಧರ್ವ ಕುಲತಿಲಕ ಪದವೀಧರರಾದ ಹರಿಯಮ್ಮನಳ್ಳಿ, ಗುರುಸ್ವಾಮಿ ಮಠದ ಮರಿ ಕೊಟ್ರಪ್ಪಯ್ಯನವರ ಮಂಜುಳವಾದ ಗಾನದಿಂದಲೂ, ಸಕಲ ಬಿರುದಾವಳಿಗಳಿಂದಲೂ ಭೋರ್ಗರೆವ ವಾದ್ಯ ವೈಭವಗಳಿಂದಲೂ ಪಂಚಾಚಾರ್ಯರ ಜಯ ಜಯ ಘೋಷದಿಂದಲೂ, ಸುಮಂಗಲೆಯರು ಬೆಳಗುವ ಕಲಶ ಕನ್ನಡಿಗಳಿಂದ ಕೂಡಿದ್ದರಿಂದ ಈ ಪುರವು ಭೂಕೈಲಾಸದಂತೆ ಒಪ್ಪುತ್ತಲಿದ್ದಿತು.

ಶ್ರೀ ಜಗದ್ಗುರುಗಳವರು ಅತ್ಯುನ್ನತವಾಗಿ ರಚಿಸಿದ್ದ ಪೀಠಾರೋಹಣವನ್ನು ಮಾಡಿದನಂತರ, ಶಿಷ್ಯರ ಅಜ್ಞಾನಾಂಧಕಾರವನ್ನು ತೊಲಗಿಸುವಲ್ಲಿ ಸೂರ್ಯಪ್ರಾಯರಾಗಿಯೂ, ಸ್ವಸ್ವರೂಪಜ್ಞಾನವನ್ನು ಅನುಗ್ರಹಿಸುವಲ್ಲಿ ಕೇವಲ ಕಲ್ಪವೃಕ್ಷ ಸಮಾನರೂ ಆದುದರಿಂದ, ಆಗಮಿಸಿದ ಶಿಷ್ಯಮಂಡಲಿಗೆ ಗುರು ಶಿಷ್ಯರ ತಾರತಮ್ಯವನ್ನು ಕುರಿತು ಸುಮಾರು ಎರಡು ಘಂಟೆಗಳವರೆವಿಗೂ ಬೋಧಿಸಿದರು. ಸರ್ವರು ಶ್ರೀಜಗದ್ಗುರುಗಳ ಬೋಧಾಮೃತವನ್ನು ಪಾನಮಾಡಿ ಪಂಚಾಚಾರ್ಯರ ಭಜನೆಯೊಡನೆ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಈ ಜಗದ್ರಕ್ಷಕರಾದ ಶ್ರೀಜಗದ್ಗುರುಗಳು ಈ ಪುರಪ್ರವೇಶ ಮಾಡಿದಮೇಲೆ ಅತ್ಯುಗ್ರವಾಗಿ ಇದ್ದ ಪ್ಲೇಗು ರೋಗವು ದೇಶಗೆಟ್ಟು ಓಡಿತು. ಪುರವು ಸರ್ವವಿಧದಲ್ಲಿಯೂ ಶಾಂತಮಯವಾಗಿರುತ್ತದೆ.

ಪಾಟೀಲ ಬೆಟ್ಟನಗೌಡರವರು ಗುರುಕಾರ್ಯವೇ ಮುಖ್ಯವೆಂದೆಣಿಸಿ ತಮ್ಮ ಗೃಹಕೃತ್ಯವನ್ನೆಲ್ಲಾ ತೊರೆದು ಗುರು ಸೇವೆಯಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗಿರುತ್ತಾರೆ.

ಪುರನಿವಾಸಿ ಶಾಂತವೀರಯ್ಯ
ಗುರುಪಾದದೇವರಮಠ, ಹರಪನಹಳ್ಳಿ.

ಪಂಚಾಚಾರ್ಯಪ್ರಭಾ

೧೯೩೫ ನೇ ನವಂಬರ್ ತಾ|| ೧೮ನೇ ಸೋಮವಾರ

ಗುರು

ಯಾವ ಮಾನವನು ವಿಷಮವಾದ ಸಂಸಾರದುಃಖದಿಂದ ಬಿಡುಗಡೆಯನ್ನು ಹೊಂದಿ ಮುಕ್ತಿಯೆಂಬ ವಿಶ್ರಾಂತಿ ಸ್ಥಾನವನ್ನು ಹೊಂದಬಯಸುವನೋ ಅಂಥ ಮುಮುಕ್ಷುವಾದ ಪುರುಷನು ಗುರುವಿನ ಬಳಿಯನ್ನು ಸೇರಬೇಕು. ಗುರುವಿನ ಸೇವೆಯನ್ನು ಮಾಡಬೇಕು. ಗುರುವಿನ ಕಟಾಕ್ಷಕ್ಕೆ ಪಾತ್ರನಾಗಬೇಕು. ಗುರುವಿನುಪದೇಶವಿಲ್ಲದೆ ಬಹು ಜನ್ಮಗಳಿಂದ ಜೀವನನ್ನು ದುಃಖಕ್ಕೀಡುಮಾಡಿದ ಬಂಧವು ಬಿಡುಗಡೆಯನ್ನು ಹೊಂದಲಾರದು. ಗುರುವೇ ಮುಕ್ತಿಗೆ ಮೂಲಕಾರಣವಾಗಿರುವುದರಿಂದ ಪ್ರತಿಯೊಬ್ಬ ಹಿಂದಣ ಋಷಿಗಳು "ಕೃಪಾಲ್ಯಕಲ್ಪತರವೇ ಕಲ್ಯಾಣಗುರವೇ ನಮಃ" ಎಂದು ನಾನಾವಿಧವಾಗಿ ಗ್ರಂಥಾದಿಯಲ್ಲಿಯೂ ಗ್ರಂಥಮಧ್ಯದಲ್ಲಿಯೂ ಗ್ರಂಥಾಂತ್ಯದಲ್ಲಿಯೂ ಗುರುಸ್ತೋತ್ರ ಮಾಡುವ ಸಂಪ್ರದಾಯವಿರುತ್ತದೆ ನಮ್ಮ ಭರತಖಂಡದಲ್ಲಿರುವ ವೇದಾನುಯಾಯಿಗಳಾದ ಸಕಲ ಮತದವರೂ ಕಾಮಕ್ರೋಧಾದಿಗಳೆಂಬ ತೀವ್ರವಾದ ಅಂತಶ್ಶತ್ರುಗಳನ್ನು ಗುರುವಿನ ಉಪದೇಶದಿಂದ ಉಂಟಾಗುವ ಶಮದಮಾದಿಗಳೆಂಬ ತೀಕ್ಷ್ಣಗಳಾದ ಆಯುಧಸಾಮಗ್ರಿಗಳಿಂದ ಹಿಮ್ಮೆಟ್ಟಿಸಿ ಮುಕ್ತಿರೂಪವಾದ ಶಾಂತಿರಾಜ್ಯದಲ್ಲಿ ಸೌಖ್ಯದಿಂದ ವಾಸಮಾಡಲಿ; ಎಂಬುದ್ದೇಶದಿಂದ ಸೃಷ್ಟಿಸ್ಥಿತ್ಯಾದಿ ಕರ್ತೃವೂ ಪರಮದಯಾಳುವೂ ಆನಂದಘನನೂ ಆದ ಶ್ರೀ ಭಗವಂತನು ಪ್ರತಿಯೊಂದು ಮತದಲ್ಲಿಯೂ ತನ್ನ ಸಂಪೂರ್ಣವಾದ ಅಂಶಗಳಿಂದೊಡಗೂಡಿದ ಒಬ್ಬೊಬ್ಬ ಗುರುಗಳನ್ನು ನಿರ್ಮಿಸಿರುತ್ತಾನೆ. ಆದುದರಿಂದಲೇ ನಮ್ಮ ಭಾರತಭೂಮಿಯಲ್ಲಿರುವ ಪ್ರತಿಯೊಂದು ಮತದ ಮೂಲಗುರುಗಳು ಸ್ವಾಭಾವಿಕವಾಗಿ ಮಹಿಮೆ, ಪಾಂಡಿತ್ಯ, ವೈರಾಗ್ಯ, ದೈವಭಕ್ತಿ, ಶಮಾದಿ ಗುಣಪೂರ್ಣತೆ, ವಾಕ್ಪಟುತ್ವ ಮುಂತಾದ ಅಸಾಧಾರಣಗಳಾದ ಲೋಕವಿಲಕ್ಷಣಗುಣಗಳಿಂದ ಕೂಡಿದ್ದರೆಂಬುವುದಕ್ಕೆ ಅವರವರ ಇತಿಹಾಸಗಳೂ, ಸ್ಥಲಪುರಾಣಗಳೂ, ಈಗಲೂ ಬೆಳಗುತ್ತಿರುವ ಅವರವರು ಸ್ಥಾಪಿಸಿದ ಮತಗಳೂ, ಸಾಕ್ಷಿಗಳಾಗಿವೆ. ಎಲ್ಲಾ ಮತಗಳಿಗೂ ಒಬ್ಬೊಬ್ಬ ಮೂಲಗುರುಗಳಿರುವಂತೆ ವೇದಾಗಮಸಮ್ಮತವಾದ ವೀರಶೈವಮತಕ್ಕೆ ರೇಣುಕಾದಿ ಪಂಚಾಚಾರ್ಯರೇ ಮೂಲಗುರುಗಳಾಗಿರುತ್ತಾರೆ. ಆಯಾಯ ಮೂಲಗುರುಗಳು ಹಾಕಿದ ಮಾರ್ಗದಲ್ಲಿಯೇ ಆಯಾಯ ಮತೀಯರು ನಡೆಯಬೇಕೆಂಬ ನಿಬಂಧನೆಯು ಇರುವುದರಿಂದ ವೀರಶೈವನೆನಿಸಿಕೊಳ್ಳುವ ಪ್ರತಿಯೊಬ್ಬನೂ ಮೂಲ ಪಂಚಾಚಾರ್ಯರಿಂದ ಭೂಲೋಕದಲ್ಲಿ ಸ್ಥಾಪಿಸಲ್ಪಟ್ಟ ಮಾರ್ಗದಲ್ಲಿಯೇ ಪ್ರಯಾಣಮಾಡಿ ಗಮ್ಯವಾದ ಶಿವಸ್ಥಾನವನ್ನು ಹೊಂದಬೇಕಾಗಿರುವುದು. ಮೂಲಗುರುವನ್ನೂ ಗುರುವಿನಿಂದ ಹಾಕಲ್ಪಟ್ಟ ಮಾರ್ಗವನ್ನೂ ತ್ಯಜಿಸಿದವನು ತಂದೆಯನ್ನೂ ತಂದೆಯು ತೋರಿಸಿದ ಸನ್ಮಾರ್ಗವನ್ನೂ ತ್ಯಜಿಸಿದ ಕುಪುತ್ರನಂತೆ ಅಪಕೀರ್ತಿಭಾಗಿಯಾಗುವನು. ಪಂಚಾಚಾರ್ಯರಿಂದ ಶಿವದೀಕ್ಷಾಪೂರ್ವಕವಾಗಿ ಕೊಡಲ್ಪಟ್ಟ ಆಚಾರವೆಂಬ ಮೂಲಧನವು ಯಾರಬಳಿಯಲ್ಲಿರುವುದೋ ಅಂಥ ವೀರಶೈವರೆನಿಸಿದ ಮಹಾಶಯರೆಲ್ಲರೂ ಆ ಧನವನ್ನು ಅನುಗ್ರಹಿಸಿದ ಆಚಾರ್ಯ ಭಗವತ್ಪಾದರನ್ನು ಅವಸ್ಥಾತ್ರಯದಲ್ಲೂ ಧ್ಯಾನಿಸುತ್ತಲೂ ಸ್ಮರಿಸುತ್ತಲೂ ಸ್ತುತಿಸುತ್ತಲೂ ಇದ್ದು ತಮ್ಮ ಕೃತಜ್ಞತೆಯನ್ನು ತೋರಿಸಬೇಕಾಗಿದೆ. ಹಾಗಿಲ್ಲದಿದ್ದರೆ ತಂದೆಯ ಹಣವನ್ನು ಪಡೆದು ತಂದೆಯನ್ನೇ ಧಿಕ್ಕರಿಸಿದ ಮಹಾಪಾಪಿಯಂತೆ ಘೋರವಾದ ನರಕವನ್ನು ಹೊಂದುವನು. ಲೋಕದಲ್ಲಿ ಪ್ರತಿಯೊಬ್ಬ ಮತಾಚಾರ್ಯರು ತಾವು ಯೋನಿಜರಾಗ್ಯೂ ತಮ್ಮ ತಪಃಪ್ರಭಾವದಿಂದ ಅನನ್ಯವಾದ ಕೀರ್ತಿಯನ್ನು ಪಡೆದು ತಮ್ಮ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುತ್ತಾರೆ. ಈ ವೀರಶೈವಮತ ಸ್ಥಾಪಕರಾದ ಪಂಚಾಚಾರ್ಯರಾದರೂ ಅಂಥ ಮಾನವಶರೀರ ಸಂಬಂಧವಿಲ್ಲದೆ ಕಾಶಿ ಕೇದಾರ ಮುಂತಾದ ಜ್ಯೋತಿರ್ಲಿಂಗಗಳಿಂದ ತಮ್ಮ ತಮ್ಮ ದಿವ್ಯಶರೀರಗಳಿಂದಲೇ ಉದಯಿಸಿ ಜಂಗಮಾಕಾರವನ್ನು ಹೊಂದಿ ವೀರಶೈವಮತವನ್ನು ಸ್ಥಾಪಿಸಿದರೆಂದು ಶಿವಾಗಮಗಳು ಉದ್ಘೋಷಿಸುತ್ತಿರುವುವಲ್ಲದೆ ಆಯಾಯ ಕ್ಷೇತ್ರಗಳಲ್ಲಿರುವ ಆಚಾರ್ಯಪೀಠಗಳೂ ನಿದರ್ಶನಗಳಾಗಿರುತ್ತವೆ.

ಮತ್ತು ಆಗಮಗಳೆಂದರೆ ಭಾರತೀಯರಿಗೆ ವೇದದಂತೆ ಪ್ರಮಾಣಗ್ರಂಥಗಳಾಗಿವೆ. ಅದರಲ್ಲೂ ವೀರಶೈವರು ವೇದಕ್ಕಿಂತಲೂ ಶಿವಾಗಮಗಳಿಗೇನೇ ವಿಶೇಷ ಪ್ರಾಮಾಣ್ಯವನ್ನು ಅಂಗೀಕರಿಸಿರುತ್ತಾರೆ. ವೀರಶೈವರಿಗೆ ಪರಮಶ್ರೇಯಗಳಾದ ಅಷ್ಟಾವರಣಗಳು ವೇದದಲ್ಲಿ ವಿರಳ ವಿರಳವಾಗಿ ಹೇಳಲ್ಪಟ್ಟಿದ್ದರೂ ಶಿವಾಗಮಗಳಲ್ಲಿ ಮಾತ್ರ ಪಂಚಾಚಾರ್ಯರ ಉತ್ಪತ್ತಿಯೊಂದಿಗೆ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವವು. ಆದುದರಿಂದ ಕಾಮಿಕಾದಿ ವಾತೂಲಾಂತವಾದ ಶಿವಾಗಮಗಳ ಮೇಲೆಯೇ ವೀರಶೈವ ಸಿದ್ಧಾಂತವು ಸ್ಥಾಪಿಸಲ್ಪಟ್ಟಿರುವುದು. ಲೋಕದಲ್ಲಿ ಶಾಸ್ತ್ರಕ್ಕೆ ಆಪ್ತವಾಕ್ಯವೆಂದು ಅನಂತಮಹರ್ಷಿಗಳೂ ಶಾಸ್ತ್ರಕಾರರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಆಪ್ತನಾದವನು ಏನಾದರೂ ಒಂದು ಮಾತನ್ನು ಹೇಳಿದ್ದಾದರೆ ಆ ವಚನವನ್ನು ನಂಬಲೇಬೇಕಾಗಿದೆ. ಆಪ್ತವಾಕ್ಯವೆನಿಸಿದ ಆಗಮಕ್ಕೆ ಪ್ರಾಮಾಣ್ಯವನ್ನು ಹೇಳದೆ ಕಣ್ಣಿಗೆ ಕಾಣುವುದೊಂದನ್ನೇ ನಿಶ್ಚಯವೆಂದು ನಂಬುವುದಾದರೆ ಕೇವಲ ಪ್ರತ್ಯಕ್ಷಪ್ರಮಾಣವನ್ನು ಮಾತ್ರ ಒಪ್ಪುವ ಚಾರ್ವಾಕಪಂಥವನ್ನು ಅನುಸರಿಸಬೇಕಾಗುವದು. ಆಗ ತಮ್ಮ ತಮ್ಮ ತಂದೆತಾಯಿಗಳನ್ನು ಗುರ್ತಿಸುವುದೇ ಕಷ್ಟವಾಗಿ ಪರಿಣಮಿಸುವುದು. ಮತ್ತು ಪ್ರತಿಯೊಂದು ಮತಾಚಾರ್ಯರು ಅಘಟಿತಘಟನ ಸಾಮರ್ಥ್ಯವುಳ್ಳವರೂ ಲೀಲಾವಿಭೂತಿಯುಳ್ಳವರೂ ಆಗಿರುವುದರಿಂದ ಒಂದೊಂದು ಸಮಯದಲ್ಲಿ ಬಾಲಕರಂತೆಯೂ ಒಂದೊಂದು ಸಮಯದಲ್ಲಿ ಉನ್ಮತ್ತರಂತೆಯೂ ಲೀಲಾವಿನೋದಗಳನ್ನು ಮಾಡುತ್ತಿರುವುದು ಸ್ವಭಾವವಾಗಿರುವುದರಿಂದ ಶ್ರೀ ಜಗದ್ಗುರುಪಂಚಾಚಾರ್ಯರು ಜಗತ್ಕಲ್ಯಾಣಕ್ಕಾಗಿ ಒಂದೊಂದು ಸಮಯದಲ್ಲಿ ತಮ್ಮ ಸ್ವೇಚ್ಛೆಯಾದ ಪಂಚಮುದ್ರಾನ್ವಿತ ಜಂಗಮಾಕಾರದ ಗುರುತ್ವದ ಚಿಹ್ನೆಯನ್ನು ಆಚ್ಛಾದಿಸಿ ಅನಂತ ಲೀಲೆಗಳನ್ನು ತೋರಿಸಿರುತ್ತಾರೆ. ಕೆಲವು ಸಮಯದಲ್ಲಿ ನಿಜಾಕೃತಿಯಿಂದಲೇ ಮಹಿಮೆಗಳನ್ನು ತೋರ್ಪಡಿಸಿರುತ್ತಾರೆ. ಈ ಮಹಾತ್ಮರಾದ ಪಂಚಾಚಾರ್ಯರಲ್ಲಿ ಈಶ್ವರನ ಮೊದಲನೆಯದಾದ ಸದ್ಯೋಜಾತ ಮುಖದಲ್ಲಿ ಆವಿರ್ಭವಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರೆಂಬುವರು ಒಂದು ಕಾಲದಲ್ಲಿ ಕಾಂಚೀಪಟ್ಟಣದಲ್ಲಿ ತಮ್ಮ ಗುರುತ್ವದ ಆಕೃತಿಯನ್ನು ಆಚ್ಛಾದಿಸಿ ಛಿಂದಿ ಬಟ್ಟೆಯನ್ನು ಹೊದ್ದುಕೊಂಡು ಹುಚ್ಚರಂತೆ ಮನಸ್ಸಿಗೆ ಬಂದಂತೆ ಮಾತನಾಡಿಕೊಳ್ಳುತ್ತಲೂ ಬಾಲಕನಂತೆ ತಿರುಗುತ್ತಲೂ ಇರುವ ಇವರ ಸ್ಥಿತಿಯನ್ನು ನೋಡಿ ಕೆಲ ಮೂರ್ಖರು ಈ ಮಹಾತ್ಮರಿಗೆ ಅನೇಕವಿಧವಾದ ಹಿಂಸೆಯನ್ನು ಮಾಡುತ್ತ ಒಂದು ದಿವಸ ವರದರಾಜಸ್ವಾಮಿಯ ದೇವಾಲಯದೊಳಗೆ ನೂಕಲಾಗಿ ಆ ಕ್ಷಣದಲ್ಲಿಯೇ ವರದರಾಜಸ್ವಾಮಿಯ ತಲೆಯು ಅಲ್ಲಾಡುವುದಕ್ಕೆ ಉಪಕ್ರಮವಾಯಿತು. ಈ ಸಮಾಚಾರವು ಅಲ್ಲಿಯ ಮಹಾರಾಜನಿಗೆ ತಿಳಿದು ರಾಜ್ಯಕ್ಕೆ ಏನು ಹಾನಿಯಾಗುವುದೋ? ಎಂದು ಹವನ ಹೋಮಾದಿ ಅನೇಕ ಶಾಂತಿಕರ್ಮಗಳನ್ನು ಮಾಡಿಸಿದನು. ಕಂಪನವು ನಿಲ್ಲಲಿಲ್ಲವು. ಆಗ ಈ ಮಹಾತ್ಮರಾದ ರೇಣುಕರು ವರದರಾಜಸ್ವಾಮಿಯ ತಲೆಯ ಮೇಲೆ ತಮ್ಮ ಅಮೃತಹಸ್ತವನ್ನು ಇಟ್ಟಮಾತ್ರದಿಂದಲೇ ಕಂಪನವು ನಿಂತುಹೋಯಿತು. ಆಗ ಆತನ ಅಸಾಧಾರಣವಾದ ಗುರುತ್ವವು ಪ್ರಕಾಶವಾಯಿತು. ಇದರಂತೆ ಇನ್ನೊಂದು ಸಮಯದಲ್ಲಿ ನಿಜಾಕಾರದಿಂದಲೇ ಲಂಕಾಧಿಪತಿಯಾದ ವಿಭೀಷಣನ ಬಳಿಗೆ ಹೋಗಿ ಆತನ ಅಭೀಷ್ಟವನ್ನು ಕೇಳಿ ಭಕ್ತವತ್ಸಲನಾದ ರೇಣುಕಗಣಾಧೀಶ್ವರನು ರೆಪ್ಪೆಹೊಯ್ಯುವುದರೊಳಗಾಗಿ ತಾನೊಬ್ಬನೇ ಮೂರುಕೋಟಿ ಗುರುಗಳ ರೂಪವನ್ನು ಧಾರಣಮಾಡಿ ವಿಭೀಷಣನ ಸಂಕಲ್ಪದಂತೆ ಒಂದೇ ಘಳಿಗೆಯೊಳಗೆ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ, ವಿಭೀಷಣನಿಗೆ ಶಿವಸಿದ್ಧಾಂತೋಪದೇಶವನ್ನು ಮಾಡಿದರು. ಇದರಂತೆ ಪಂಚಾಚಾರ್ಯರು ಅಲ್ಲಲ್ಲಿಯೇ ಅನಂತಮಹಿಮೆಗಳನ್ನು ಮಾಡಿರುವುದಲ್ಲದೆ ಋಷಿಸಾರ್ವಭೌಮರೆಂದು ತ್ರಿಲೋಕದಲ್ಲಿಯೂ ಪ್ರಸಿದ್ಧಿ ಪಡೆದ ಅಗಸ್ತ್ಯಾದಿ ಮಹರ್ಷಿಗಳಿಗೆ ವೀರಶೈವಸಿದ್ಧಾಂತೋಪದೇಶವನ್ನು ಮಾಡಿ ಗ್ರಂಥರೂಪದಿಂದ ಮೋಕ್ಷಸಾಧನವಾದ ಅಷ್ಟಾವರಣಗಳ ಸ್ವರೂಪವನ್ನು ಪ್ರತಿಪಾದಿಸಿ ಲಿಂಗಾಂಗಸಾಮರಸ್ಯ ಬೋಧಕವಾದ ಮಹಾವಿದ್ಯೆಯನ್ನು ಭಾಷ್ಯಾದಿಗಳ ಮೂಲಕ ರಚಿಸಿ ಪ್ರಾಣಿಗಳನ್ನು ದೀಕ್ಷಾ ಶಿಕ್ಷಾದಿಗಳಿಂದ ಪರಿಶುದ್ಧಗೊಳಿಸಿ ಉತ್ತರೋತ್ತರ ವೀರಶೈವಮತಸ್ಥರಿಗೆ ಮೋಕ್ಷೋಪದೇಶವನ್ನು ಮಾಡುವುದಕ್ಕಾಗಿ ತಮ್ಮ ತಮ್ಮ ಮೂಲಪೀಠಗಳಲ್ಲಿ ಗುರುಪಟ್ಟವನ್ನು ನೆಲೆಗೊಳಿಸಿ ಪುನಃ ಆಯಾಯ ಲಿಂಗಗಳಲ್ಲಿಯೇ ಐಕ್ಯಗೊಂಡಿರುವರು. ಆದುದರಿಂದ ಭೂಲೋಕದಲ್ಲಿ ಶ್ರೀ ಮೂಲಪಂಚಾಚಾರ್ಯರಿಂದ ಕೊಡಲ್ಪಟ್ಟ ಶಿವಲಿಂಗವು ಯಾರ ಕಂಠದಲ್ಲಿರುವುದೋ, ಅವರೆಲ್ಲರೂ ಮೂಲಪಂಚಾಚಾರ್ಯರಲ್ಲಿಯೂ ಅವರ ಅನುಯಾಯಿಗಳಲ್ಲಿಯೂ ಗುರುಭಕ್ತಿಯನ್ನು ಇರಿಸಿ ಕೃತಜ್ಞತೆಯನ್ನು ತೋರಿಸುವುದಲ್ಲದೆ ಭುಕ್ತಿಮುಕ್ತಿಗಳಿಗೆ ಭಾಗಿಗಳಾಗಿ ವೀರಶೈವಸಿದ್ಧಾಂತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ತ್ರಿಕಾಲದಲ್ಲಿಯೂ ಮಾಡುತ್ತ ಗುರುಭಕ್ತರೆನಿಸಿಕೊಂಡು ಬಾಳಬೇಕು. ಹಾಗಿಲ್ಲದಿದ್ದರೆ 'ಹರೇಕ್ರುದ್ಧೇ ಗುರುಸ್ತ್ರಾತಾ ಗುರೌಕ್ರುದ್ಧೇ ನಕಶ್ಚನ" ಎಂಬ ವಾಕ್ಯದಂತೆ ರಕ್ಷಕರಿಲ್ಲದೆ ಪದಚ್ಯುತರಾಗಬೇಕಾಗುವದು.

ರಾಜಕವಿಭೂಷಣ, ಎಚ್. ಲಿಂಗರಾಜ ಅರಸರವರ ಭಾಷಣ.

"ಮಹಾಶಯರೇ, ನಮ್ಮ ಮಹಮ್ಮದೀಯಸಹೋದರರಾದ ಮೌಲಾನಾ ನಜರುದ್ದೀನ್ ಕಮರುದ್ದೀನ್ ಸಾಹೇಬರವರು ಗೋರಕ್ಷಣೆಯ ಮತ್ತು ಗೋವಧಾನಿರೋಧದ ಅವಶ್ಯಕತೆಯ ವಿಷಯವಾಗಿ ಮಾಡಿದ ಭಾಷಣವನ್ನು ಕೇಳಿ. ನನ್ನಂತೆ ತಮ್ಮಗಳಿಗೂ ಬಹ ಸಂತೋಷವಾಗಿರಬಹುದೆಂದು ತಿಳಿಯುತ್ತೇನೆ. ಮಹಮ್ಮದೀಯ ಮತಪ್ರಕಾರವಾಗಿ ಗೋವಧೆಯನ್ನು ಮಾಡುವುದು ಧರ್ಮವೆಂದು ಸಾಮಾನ್ಯ ಜನರು ತಿ ದಿರುವ ಅಂಶವು ತಪ್ಪೆಂಬುದು ವಯೋವೃದ್ಧರಾದ ಈ ಮಹಾಶಯರ ಲೌಕಿಕಾನುಭವ ಮತ್ತು ಮಹಮ್ಮದೀಯ ಶಾಸ್ತ್ರಪರಿಜ್ಞಾನ ಜನ್ಯವಾದ ಭಾಷಣದಿಂ ವ್ಯಕ್ತವಾಗುವುದು.

ನಮ್ಮಲ್ಲಿ ಅಹಿಂಸೆಯು ಪರಮಧರ್ಮವೆಂದು ಹೇ ವಂತೆ ಮಹಮ್ಮದೀಯ ಮತದಲ್ಲೂ ದಯಾಸೂಚ ವಾದ ರಹಂ, ಫಸಲ್ ಎಂಬ ಶಬ್ದಗಳಿಗೆ ಪೈಗಂಬರ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಬಲಿದಾನದಲ್ಲಿ ಮಾಂಸವನ್ನೂ ರಕ್ತವನ್ನೂ ಬಯಸುವದಿಲ್ಲ ದೂ ಭಕ್ತನ ಮನಃಶುದ್ಧಿಯನ್ನೇ ಅಪೇಕ್ಷಿಸುತ್ತೇನೆ ದೂ ವ್ಯವಸಾಯಕ್ಕೆ ಉಪಯೋಗವಾಗುವ 'ಮತು ಹಾಲು ಕೊಡುವ ಪ್ರಾಣಿಗಳನ್ನು ಕೊಲ್ಲಬಾರದೆಂದು ಖುರಾನಿನಲ್ಲಿ ದೇವರೇ ಹೇಳಿದ್ದಾನೆಂದು ನಮ್ಮ ಮ ಶ್ರೀ ಸಾಹೇಬರವರು ತೋರಿಸಿಕೊಟ್ಟು ಸಾಮಾನ್ಯ ಜನತೆಗೆ ಬೋಧೆಯನ್ನುಂಟುಮಾಡಿರುವುದು ಹು ಸ್ತುತ್ಯವಾಗಿದೆ.

ಖುರಾನಿನ ನಿಜವಾದ ತತ್ವವನ್ನು ತಿಳಿದ ೧೦ ಮಂದಿ ಮೌಲ್ವಿಗಳನ್ನು ಸೇರಿಸಿ ಅಫ್ಘಾನಿಸ್ಥಾನ ಅಮೀರರು ಗೋವಧಾ ನಿರೋಧದ ವಿಷಯವಾಗಿ ಸಮ ತಿಯನ್ನು ಕೇಳಿದ್ದಾರೆ. ಅವರೆಲ್ಲರೂ ಐಕ್ಯಕಂಠದ ಗೋವಧೆಯನ್ನು ಮಾಡಕೂಡದೆಂದು ಖುರಾ ಆಧಾರದಿಂದ ಸಿದ್ಧಮಾಡಿ ತೋರಿಸಿದರೆಂಬ ವಿಷಯ ಗೋವು ಪವಿತ್ರಪ್ರಾಣಿಯೆಂದು ಭಾವಿಸಿರುವ ನಮ್ಮ ಳಿಗೆಲ್ಲ ಬಹಳ ಸಂತೋಷವನ್ನುಂಟುಮಾಡತಕ್ಕದ್ದಾಗಿ

ನಮ್ಮ ಭಾರತ ವರ್ಷದಲ್ಲಿ ಶೇಕಡ ೯೦ ಜನ ಕೃಷಿಯಿಂದ ಜೀವಿಸುವವರಾಗಿದ್ದಾರೆ. ಕೃಷಿಪ್ರಧ ವಾದ ನಮ್ಮ ದೇಶದಲ್ಲಿ ಗೋವಧಾ ನಿರೋಧವೂ ಗೋ ರಕ್ಷಣೆಯೂ ಧಾರ್ಮಿಕದೃಷ್ಟಿಯಿಂದ ಮಾತ್ರವೇ ದೆ ಆರ್ಥಿಕ ದೃಷ್ಟಿಯಿಂದಲೂ ಅತ್ಯವಶ್ಯಕವಾಗಿ ಈಗ್ಗೆ ಸುಮಾರು ೫೦ ವರ್ಷಗಳ ಹಿಂದೆ ನಮ್ಮ ನುಸ್ಥಾನದಲ್ಲಿ ೩೭ ಕೋಟಿ ಗೋವುಗಳಿದ್ದವು. ೧೮ ಕೋಟಿ ಗೋವುಗಳು ಮಾತ್ರ ಉಳಿದಿವೆಯ ಇದು ಬಹಳ ವ್ಯಸನಕರವಾದ ವಿಷಯವಲ್ಲವೆ? ಈ

ಷ್ಟೆಯೂ ಹೀಗೆ ಕಡಿಮೆಯಾಗುತ್ತಾ ಹೋದರೆ ಮುಂದಿನ ಪರಿಣಾಮವೇನಾಗಬಹುದೆಂಬುದನ್ನು ಹಿಂದುಗಳೂ ಮಹಮ್ಮದೀಯರೂ ಅವಶ್ಯಕವಾಗಿ ಪರ್ಯಾಲೋಚಿಸಬೇಕು. ಈ ಆರ್ಥಿಕ ಹಾನಿಯು ಹಿಂದುಸ್ಥಾನವೆಂಬ ಹಡಗಿನಲ್ಲಿರುವ ಹಿಂದುಗಳಿಗೂ ಮಹಮ್ಮದೀಯರಿಗೂ ಅನ್ವಯಿಸುವುದಾಗಿದೆ. ಆದುದರಿಂದ ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಸಹೋದರಭಾವದಿಂದಲೂ ಏಕಮತ್ಯದಿಂದಲೂ ಕಲೆತು ಈ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು.

ಇಲ್ಲಿ ಒಂದು ವಿಷಯವನ್ನು ನಾನು ತಮ್ಮಗಳಲ್ಲಿ ಹೇಳುವುದಕ್ಕೆ ಬಹಳ ಸಂತೋಷಪಡುತ್ತೇನೆ. ಅದೇನೆಂದರೆ:— ನಮ್ಮ ಮೈಸೂರು ಸಂಸ್ಥಾನವು ರಾಜಕೀಯ ವಿಷಯಗಳಲ್ಲಿ ಮಾತ್ರ ಮಾದರಿಯ ಸಂಸ್ಥಾನವೆನಿಸಿರುವುದಿಲ್ಲ; ಮಹಾಸ್ವಾಮಿಯವರ ಪುಣ್ಯಪ್ರಭಾವದಿಂದಲೂ ವಿವೇಕಪೂರ್ಣವಾದ ರಾಜ್ಯಭಾರಕ್ರಮದಿಂದಲೂ ಹಿಂದೂ ಮಹಮ್ಮದೀಯರ ಐಕಮತ್ಯದಿಂದಲೂ ಇದು ಮಾದರಿಯ ಸಂಸ್ಥಾನವಾಗಿರುವುದು ತಮ್ಮಗಳಿಗೆಲ್ಲ ಗೊತ್ತಿರುವ ವಿಷಯವೇ ಆಗಿದೆ. ಈಗ್ಗೆ ಕೆಲವು ಕಾಲದಿಂದ ನಮ್ಮ ಮೈಸೂರು ರಾಜ್ಯದಲ್ಲಿ ಗೋವಧಾನಿರೋಧದ ಕಾನೂನಾಗುವ ವಿಷಯದಲ್ಲಿ ಚರ್ಚೆ ನಡೆಯುತ್ತಿದೆಯಷ್ಟೆ? ನಮ್ಮ ಮಹಾಸ್ವಾಮಿಯವರಾದರೋ ಮಹಾದೈವಭಕ್ತರೂ ಜೀವಕಾರುಣ್ಯವುಳ್ಳ ಧರ್ಮಮೂರ್ತಿಗಳೂ ಆಗಿರುತ್ತಾರೆಂಬ ವಿಷಯವನ್ನು ಯಾರು ಯಾರಿಗೂ ಹೇಳಬೇಕಾದುದಿಲ್ಲ. ಮಹಾಸ್ವಾಮಿಯವರಿಗೆ ಜೀವಕಾರುಣ್ಯವು ಎಷ್ಟರಮಟ್ಟಿಗಿದೆಯೆಂಬುದು ರಜತಮಹೋತ್ಸವಸಮಯದಲ್ಲಿ ಅವರು ಅಪ್ಪಣೆ ಕೊಡಿಸಿದ ಭಾಷಣದಲ್ಲಿಯ ಒಂದು ವಾಕ್ಯದಿಂದ ಸ್ಪಷ್ಟವಾಗುವುದು. ಮಹಾಸ್ವಾಮಿಯವರ ಆ ಭಾವವನ್ನರಿತು ಪ್ರಜೆಗಳೆಲ್ಲರೂ ಗೋವಧಾನಿರೋಧದ ಕಾನೂನಿನ ವಿಷಯದಲ್ಲಿ ಎಷ್ಟರಮಟ್ಟಿಗೆ ಏಕಮತ್ಯವನ್ನು ಸಾರ್ಥಕಗೊಳಿಸುವರೆಂಬುದನ್ನು ನಿರೀಕ್ಷಿಸುತ್ತ ನನ್ನ ಭಾಷಣವನ್ನು ಪೂರ್ಣಮಾಡುತ್ತೇನೆ.''

ಒಳದೇಶದ ವೃತ್ತಾಂತಗಳು.

ನಮ್ಮ ದಿವಾನ್ ಸಾಹೇಬರವರು ನವಾನಗರದಿಂದ ಹಿಂದಿರುಗಿ ಬರುವವರೆಗೂ ಮಿ|| ಚಾಂಡಿಯವರು ದಿವಾನ್‌ರಾಗಿ ಬದಲಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ರಾ|| ಕೆ. ಸಿದ್ಧರಾಮಪ್ಪನವರು ತುಮಕೂರಿಗೂ ಮ|| ರಾ|| ಜ್ಯೋತಿಸಿಂಗ್‌ರವರು ಮೈಸೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ ವಾರದಿಂದ ರಾಜಧಾನಿಯಲ್ಲಿ ನಿತ್ಯವೂ ಸಂಧ್ಯಾ ಸಮಯದಲ್ಲಿ ಮಳೆಯು ಸುರಿಯುತ್ತಲಿರುವುದು. ಹವೆಯು ತಂಪಾಗಿದೆ. ಇನ್ನೂ ಮೋಡಮಾಡುತ್ತಾ ಮಳೆಬರುವ ಸೂಚನೆಗಳು ತೋರುತ್ತಲಿರುವುವು.

ಮ|| ರಾ|| ಎನ್. ಎಸ್. ಸುಬ್ಬರಾಯರಿಗೆ ಬದಲಾಗಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾದ ಮಿ|| ಪನ್ಯಾರ್ಥ್‌ರವರು ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಈ ಸಾರೆ ಮೈಸೂರು ವಿಶ್ವವಿದ್ಯಾಲಯದ ಎಂ.ಎ. ತರಗತಿಯಲ್ಲಿ ೧೪ ಜನ, ಬಿ.ಎ. ಕಲಾಭಾಗದಲ್ಲಿ ೮೩, ಟಿ.ಯಲ್ಲಿ ೨೬, ಬಿ.ಎ. ವಿಜ್ಞಾನಭಾಗದಲ್ಲಿ ೬೩, ಎಸ್.ಸಿ.ಯಲ್ಲಿ ೪೦, ಬಿ.ಇ.ಯಲ್ಲಿ ೨೬. ಒಟ್ಟು ೨೫೨ ರು ತೇರ್ಗಡೆ ಹೊಂದಿರುತ್ತಾರೆ.

ಈ ತಿಂಗಳು 4ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ನಾಗಮಂಗಲಕ್ಕೆ ದಯಮಾಡಿಸಿ ಪ್ರಜೆಗಳ ಸುಖಗಳನ್ನೂ, ಮಳೆಬೆಳೆಗಳ ಸ್ಥಿತಿಯನ್ನೂ ವಿಚಾರಿಸಿ ಜನಗಳಿಗೆ ಹಿತೋಪದೇಶಮಾಡಿ ದಯಮಾಡಿಸಿದ ವಾಗಿ ತಿಳಿಯಬರುತ್ತದೆ.

ತನ್ನ ಅಜಾಗರೂಕತೆಯಿಂದ ಬಸ್ಸು [illegible] ಗೆ ಕಾರಣನಾದನೆಂಬ ಅಪರಾಧದ ಮೇಲೆ ಚೆನ್ನಬಸವಿಗ ಕೋಲಾರದ ಚಿನ್ನದಗಣಿಯ ಮ್ಯಾಜಿಸ್ಟ್ರೇಟರವರಾದ ಮ|| ಬಾಳರಾಜೆ ಅರಸಿನವರು 6 [illegible] ಕಠಿಣ ಶಿಕ್ಷೆಯನ್ನು ವಿಧಿಸಿದರು.

ಸರ್ ಜಗದೀಶಚಂದ್ರ ಬೋಸ್‌ರವರು ಈ ತಿಂಗಳು 4 ಮತ್ತು 5 ನೆಯ ತಾರೀಖುಗಳಲ್ಲಿ ಬೆಂಗಳೂರು ಸೆಂಟ ಜಿಯೋಟ್ ಹೈಸ್ಕೂಲಿನಲ್ಲಿ ಉಪನ್ಯಾಸಗಳನ್ನು ಮಾಡಿದರು. 6ನೆಯ ತಾರೀಖಿನ ದಿವಸ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಪುರನಿವಾಸಿಗಳು ಸರ್ ಜಗದೀಶಚಂದ್ರರವರಿಗೆ ಒಂದು ಮಾನಪತ್ರವನ್ನರ್ಪಿಸಿದರು.

ಬೆಂಗಳೂರು ಪೌರಸಭೆಯ ಅಧ್ಯಕ್ಷಸ್ಥಾನಕ್ಕೆ ಮಿ|| ಅಬ್ಬಾಸ್‌ಖಾನ್ ಸಾಹೇಬರವರೂ, ಮ|| ರಾ|| ಬಿ. ಕೆ. ಗರುಡಾಚಾರ್ಯರೂ ಉಮೇದುವಾರರಾಗಿ ನಿಂತಿರುವರು. ಚುನಾವಣೆಯು ಪೋಟಾಪೋಟಿಯು ಒಳ್ಳೆಯ ಜೋರಿನಿಂದ ನಡೆಯುತ್ತಿರುವುದು. ಇವರಿಬ್ಬರಲ್ಲಿ ಯಾರಿಗೆ ವಿಜಯಲಕ್ಷ್ಮಿಯು ಮಾಲಿಕೆಯನ್ನು ಹಾಕುವಳೋ? ಎಂದು ಅನೇಕರು ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಕಳೆದ ತಾ|| 5ನೆಯ ಶನಿವಾರ ಶ್ರೀಮದ್ಯುವರಾಜರವರ ತೃತೀಯಪುತ್ರಿಕಾಜನನದ ನಿಮಿತ್ತವಾಗಿ ಅರಮನೆಯಲ್ಲಿ ದರ್ಬಾರು ನಡೆಯಿತು. ಜಾತಕರ್ಮೋತ್ಸವಾದಿಗಳು ಯಥಾಶಾಸ್ತ್ರವಾಗಿ ನೆರವೇರಿದನಂತರ ವೈದಿಕರಿಂದ ಆಶೀರ್ವಾದಗಳು ಮಾಡಲ್ಪಟ್ಟವು. ಆದಿವಸ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೋತ್ಸವಾದಿಗಳು ನೆರವೇರಿದವು. ಕಳೆದ ಗುರುವಾರ ನಾಮಕರಣ ಮಹೋತ್ಸವವೂ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟಿತು.

ರಾಜಕವಿಭೂಷಣ, ರಾಜಬಂಧು ಶ್ರೀಯುತ ಎಚ್. ಲಿಂಗರಾಜ ಅರಸಿನವರ ಸಭಾನಾಯಕತ್ವದಲ್ಲಿ ಈ ತಿಂಗಳು 2 ನೆಯ ತಾರೀಖಿನದಿವಸ ರಾಜಧಾನಿಯ ಟೌನ್‌ಹಾಲಿನಲ್ಲಿ ಒಂದು ಸಭೆಯು ಜರುಗಿತು. ಈ ಸಭೆಗೆ ಅನೇಕ ಹಿಂದುಗಳೂ ಮಹಮ್ಮದೀಯರೂ ಆಹೂತರಾಗಿದ್ದರು. ಸತಾರಾಪಟ್ಟಣವಾಸಿಗಳಾದ ಮೌಲಾನಾ ನಜಮುದ್ದೀನ್ ಕಮರುದ್ದೀನ್ ಸಾಹೇಬರವರು ತಮ್ಮ ಖುರಾನಿನ ಆಧಾರದಿಂದ ಗೋವಧಾನಿರೋಧದ ವಿಷಯವಾಗಿಯೂ, ಅಜ್ಞಾನದಿಂದುಂಟಾದ ಹಿಂದೂ ಮಹಮ್ಮದೀಯರ ಅನೈಕ್ಯವಿಷಯವಾಗಿಯೂ ಸಯುಕ್ತಿಕವಾದೊಂದು ಗಂಭೀರಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷರು ಕಾಲೋಚಿತವಾಗಿ ಒಂದು ಸ್ವಾರಸ್ಯವಾದ ಭಾಷಣವನ್ನು ಸಹ ಮಾಡಿದರು. ಈ ಭಾಷಣವು ಪತ್ರಿಕೆಯ ಬೇರೆಕಡೆ ಕೊಡಲ್ಪಟ್ಟಿದೆ.

ಬೆಂಗಳೂರು ಪಟ್ಟಣದ ಟೌನ್‌ಹಾಲಿನಲ್ಲಿ ಕಳೆದ ಅಕ್ಟೋಬರ್ 28-29 ರಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಗೋವಧಾನಿರೋಧವಿಷಯಕವಾದ ಒಂದು ಸಭೆಯು ನಡೆಯಿತು. ಕೆಲವು ಹಿಂದು ಮತ್ತು ಮಹಮ್ಮದೀಯ ದೊಡ್ಡಮನುಷ್ಯರುಗಳು ಲಿಖಿತಮೂಲಕವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಹಿಂದುಗಳಲ್ಲಿ ಅನೇಕರು ಏಕಕಂಠದಿಂದ ಗೋವಧೆಯು ನಿಲ್ಲಿಸಲ್ಪಡಬೇಕೆಂದೂ, ಮಹಮ್ಮದೀಯರಲ್ಲಿ ಕೆಲವರು ಗೋವಧೆಯು ಕುರಾನಿನಲ್ಲಿ ಹೇಳಲ್ಪಟ್ಟಿದೆಯೆಂದೂ, ಇನ್ನು ಕೆಲಮಹಮ್ಮದೀಯರು ಗೋಹತ್ಯವಾಗಲಿ ಗೋಮಾಂಸಭಕ್ಷಣವಾಗಲಿ ಕುರಾನಿನಲ್ಲಿ ಎಲ್ಲಿಯೂ ಹೇಳಿಲ್ಲವೆಂದೂ ಸೂಚಿಸಿರುತ್ತಾರೆ. ಮತ್ತು ಡಾ|| ಬಿ. ನರಸಿಂಹಯ್ಯಂಗಾರ್ ಬಿ.ಎ., ಪಿ. ಎಚ್. ಡಿ ಯವರು ಆರ್ಥಿಕದೃಷ್ಟಿಯಿಂದ ಗೋವಧೆಯು ಅತ್ಯವಶ್ಯಕವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಬೊಂಬಾಯಿಯಾಧಿಪತ್ಯದ ಗೌವರ್ನರ್ ಸಾಹೇಬರವರಾದ ಸರ್ ಲೆಸ್ಲಿ ವಿಲ್ಸನ್‌ರವರು ಮಿತಪರಿವಾರದೊಡನೆ ಕಳೆದ ಮಂಗಳವಾರ ಬೆಳಗಿನ 11½ ಘಂಟೆಗೆ ಅರಸೀಕೆರೆಯ ಮಾರ್ಗವಾಗಿ ರಾಜಧಾನಿಗೆ ದಯಮಾಡಿಸಿದರು. ಶ್ರೀಮದ್ಯುವರಾಜರವರು ಅರಮನೆಯ ಅಧಿಕಾರಿಗಳೊಡನೆಯೂ ಪೌರಸಭಾಧ್ಯಕ್ಷರೊಡನೆಯೂ ರೈಲ್ವೆಸ್ಟೇಷನ್ನಿನಲ್ಲಿ ನಿರೀಕ್ಷಿಸಿಕೊಂಡಿದ್ದು ಗವರ್ನರ್ ದಂಪತಿಗಳಿಗೆ ಸುಸ್ವಾಗತವನ್ನು ಬಯಸಿ ಸ್ವಲ್ಪಕಾಲ ಕುಶಲಪ್ರಶ್ನೆಗಳಾದನಂತರ ಪೌರಸಭಾಧ್ಯಕ್ಷರು ಗೌರ್ನರ್ ದಂಪತಿಗಳಿಗೆ ಪುಷ್ಪಮಾಲಿಕಾಗುಚ್ಛಗಳನ್ನರ್ಪಿಸಿದರು. ತರುವಾಯ ಗೌರ್ನರ್ ದಂಪತಿಗಳು ಶ್ರೀಮದ್ಯುವರಾಜರೊಂದಿಗೆ ಮೋಟಾರಿನಲ್ಲಿ ಕುಳಿತು ಗೌರ್ನಮೆಂಟ್‌ಹೌಸಿಗೆ ಚಿತ್ತೈಸಿದರು. ಅನಂತರ ಗವರ್ನರ್‌ರವರು ಕನ್ನಂಬಾಡಿ, ಶ್ರೀರಂಗಪಟ್ಟಣ, ಅರಮನೆ, ಚಾಮುಂಡಿಬೆಟ್ಟ ಇತ್ಯಾದಿ ಪ್ರೇಕ್ಷಣೀಯಸ್ಥಳಗಳನ್ನು ಪರಾಮರ್ಶಿಸಿ ಶ್ರೀಮನ್ಮಹಾರಾಜರವರಿಂದ ಸತ್ಕರಿಸಲ್ಪಟ್ಟು ಕಳೆದ ಗುರುವಾರ ಪುನಃ ಅರಸೀಕೆರೆಯ ಮಾರ್ಗವಾಗಿ ಬೊಂಬಾಯಿಗೆ ತೆರಳಿದರು.

ಸ್ವೀಕಾರ.

ನಿಜಾಮ್ ರಾಜ್ಯಕ್ಕೆ ಸೇರಿದ ಗುಲ್ಬರ್ಗಾ ಪಟ್ಟಣದಲ್ಲಿ ಕಳ್ಳಿಮಠದ ಷಟ್‌ಸ್ಥಲಬ್ರಹ್ಮ ಶ್ರೀ ಪಟ್ಟದಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 4 ರೂಪಾಯಿಗಳನ್ನು ಶ್ರೀ ಸೀರಯ್ಯಸ್ವಾಮಿ ಕಳ್ಳಿಮಠ ಇವರು ಕಳುಹಿಸಿಕೊಟ್ಟಿರುತ್ತಾರೆ.

ರಾಣೆಬೆನ್ನೂರು ಗ್ರಾಮದ ಮ|| ರಾ|| ಪರಮೂರ್ತಿ ಸಂಗಪ್ಪನವರ ಪುತ್ರ ಸಿದ್ಧಪ್ಪನವರಿಗೆ ನ್ಯಾಮತಿವಾಸಿಗಳಾದ ಯಲಬುರ್ಗಿ ಮ|| ರಾ|| ಬಸವಣ್ಣಪ್ಪನವರ ಪುತ್ರಿ ಚಿ|| ಸೌ|| ಚನ್ನವೀರಮ್ಮನನ್ನು ನಿಶ್ಚಯಿಸಿದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ ಎರಡುರೂಪಾಯಿಗಳು ವೇ|| ಕೋಹಳ್ಳಿಮಠದ ಸಂಜಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಮ|| ಗಂಡಿ ಅನ್ನದಾನಪ್ಪನವರಿಗೆ ಮ|| ರಾ|| ಪತ್ರಿವೀರಸಂಗಪ್ಪನವರ ಮೊಮ್ಮಗಳು ಕಾತ್ಯಾಯನೀದೇವಿಯನ್ನು ಕೊಡಲು ನಿಶ್ಚಯಿಸಿದ ಕಾಲದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆದು ಕಳುಹಿಸಿದ 2 ರೂಪಾಯಿಗಳು ಮ|| ರಾ|| ಶ್ರೀಮಂತ ಗುಗ್ರಿ ಹುಚ್ಚಪ್ಪನವರದ್ವಾರಾ ಬಂದು ತಲ್ಪಿರುತ್ತವೆ.

ಕೊಂಡಕುಂದಿಗ್ರಾಮದ ವೀರಪ್ಪನವರು ದೀಪಾವಳಿ ಸಮಯದಲ್ಲಿ ನಡೆಯಿಸಿದ ಮಹಾಲಕ್ಷ್ಮೀಪೂಜಾಕಾಲದಲ್ಲಿ ತೆಗೆಯಿಸಿದ 5 ರೂಪಾಯಿಗಳು ವೇ|| ಎಸ್. ಎಂ. ಶಿವಯೋಗೀಶ್ವರಶಾಸ್ತ್ರಿಗಳದ್ವಾರಾ ಬಂದು ತಲ್ಪಿರುತ್ತವೆ.

ಹರಪನಹಳ್ಳಿ ಗ್ರಾಮದ ಮ|| ರಾ|| ಪೆದ್ದಪ್ಪನವರ ಸಿದ್ಧಲಿಂಗಪ್ಪನವರು ಶ್ರೀಮದುಜ್ಜಯನೀ ಜಗದ್ಗುರುಗಳವರಿಗೆ ಬಿನ್ನಹಮಾಡಿದ ಸಮಯದಲ್ಲಿ ಈ ಪತ್ರಿಕೆಯ ಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿಯು ವೇ|| ಗುರುಪಾದದೇವರಮಠದ ಕೊಟ್ರುಬಸವಯ್ಯನವರದ್ವಾರಾ ಬಂದು ತಲ್ಪಿರುತ್ತದೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮುಣಸಿಗಿ ಗ್ರಾಮದ ಮ|| ರಾ|| ಮುಲ್ಲಾಪತ್ತಿ ಮಾಗುಂಡಪ್ಪಾ ತುಪ್ಪದ ಇವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 4 ರೂಪಾಯಿಗಳು ವೇ|| ನಾಗಯ್ಯನವರು ಸಾಲಿಮಠ ಇವರ ದ್ವಾರಾ ಬಂದು ತಲ್ಪಿರುತ್ತವೆ.

ರೋಣತಾಲೂಕಿಗೆ ಸೇರಿದ ಹೊಳೆ ಆಲೂರುಗ್ರಾಮದಲ್ಲಿ ನೆರವೇರಿದ ಮಹಾಲಕ್ಷ್ಮೀಪೂಜಾಸಮಯದಲ್ಲಿ ನಡೆಯಿಸಿದ ವೇ|| ನಾಗಭೂಷಣಶಾಸ್ತ್ರಿಗಳ ಪರಕೀರ್ತನದಲ್ಲಿ ತೆಗೆಯಿಸಿದ 4 ರೂಪಾಯಿಗಳು ವೇ|| ಶಿವಣಯ್ಯನವರು ಭಿಕ್ಷಾವೃತ್ತಿ ಹಿರೇಮಠ ಇವರದ್ವಾರಾ ಬಂದು ತಲ್ಪಿರುತ್ತವೆ.

ದಾವಣಗೆರೆಯ ವೇ|| ತಿರಕಪ್ಪನವರ ಮಠದ ಗುರುಬಸವಯ್ಯನವರ ಮಕ್ಕಳು ವೀರಯ್ಯನವರ ಹಿರೇವಿಳ್ಯಪ್ರಸ್ತದಲ್ಲಿ ವರನಕಡೆಯಿಂದ 2 ರೂಪಾಯಿಗಳನ್ನೂ ಮತ್ತು ದಾವಣಗೆರೆ ಮಣಕೂರು ಮಠದ ಶೆಟ್ರು ಬಸಯ್ಯನವರ ಮಗಳು ಶರಣ್ಣಮ್ಮನ ಹಿರೇವಿಳ್ಯಕಾರ್ಯದಲ್ಲಿ ವಧುವಿನ ಕಡೆಯಿಂದ 1 ರೂಪಾಯಿಯನ್ನೂ ತೆಗೆಯಿಸಿ ವೇ|| ಮಲೆಬೆನ್ನೂರು ಮಠದ ಹಾಲಸಿದ್ಧಯ್ಯನವರದ್ವಾರಾ ಕಳುಹಿಸಿರುತ್ತಾರೆ.

ಈ ಮಹಾಶಯರುಗಳಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನುಂಟು ಮಾಡಲೆಂದು ಹಾರೈಸುತ್ತೇವೆ. ಸಂ.—

ಪ್ರಯಾಗದಲ್ಲಿ ಪೊಲೀಸರು ಎರಡುಸ್ಥಾನಗಳನ್ನು ಶೋಧನಮಾಡುತ್ತಿರುವಲ್ಲಿ ಮದ್ದು ಗುಂಡುಗಳೂ ಮತ್ತು ಸರ್ಕಾರಿಪುಸ್ತಕಗಳೂ ದೊರಕಿದುವು. ಈ ವಿಷಯದಲ್ಲಿ ಇಬ್ಬರು ಬಂಗಾಲೀ ತರುಣರನ್ನು ಸೆರೆಹಿಡಿದಿದ್ದಾರೆ.

ಬೆಂಗಳೂರಲ್ಲಿ ನೆರೆಯುವ ೧೦ ನೇ ಅಖಿಲ ವೀರಶೈವ ಮಹಾ ಸಭೆಯ ಚಾಲಕರಿಗೆ ನಮ್ಮ ಸವಿನಯಸೂಚನೆಯು

ಬೆಳಗಾಂವ ಡಿಸ್ಟ್ರಿಕ್ಟಿಗೆ ಸೇರಿದ ಶಿವಾಪುರದ ವೀರಶೈವರು ಸಭೆ ಸೇರಿ ನಿರ್ಧರಿಸಿ ತಿಳುಹಿಸಿದ ವಿಷಯಗಳು

ಇದೇ ಡಿಸೆಂಬರ್ ತಿಂಗಳ ಅಖೈರಿನಲ್ಲಿ ನೆರೆಯುವ ಅಖಿಲ ವೀರಶೈವ ಮಹಾಸಭೆಯ ಪೂರ್ಣಸಿದ್ಧಿಯನ್ನ ಮೈಸೂರು ಪ್ರಾಂತದವರು ಕೈಕೊಂಡದ್ದು ಕೇಳಿ ಪರಮಾನಂದವಾಗುತ್ತದೆ

ಹಿಂದೆನೆರೆದ ಮಹಾಸಭೆಗಳಿಗೂ ಈ ವರ್ತ್ತ್ಸೇಯ ಮಹಾಸಭೆಗೂ ಸರಿಹೆಚ್ಚಿನ ಈ ಸಭೆಯು ಅತಿಮಹತ್ವದ್ದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಮಹತ್ವವಾದ ಈ ಅಖಿಲ ಭಾರತೀಯ ವೀರಶೈವ ಮಹಾಸಭೆಯನ್ನು ಧರ್ಮರಾಜ್ಯವಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ ಮೈಸೂರ ಇವರ ಕೃಪಾಛತ್ರದ ಕೆಳಗಿರುವ ಬೆಂಗಳೂರಿನ ಪುಣ್ಯಭೂಮಿಯಲ್ಲಿ ನೆರೆಯುವದೆಂದರೆ ನಮ್ಮೀ ವೀರಶೈವ ಸಮಾಜದ ಸುದೈವವೇ ಸರಿ.

ಅದರ ಮಹಾಸಭೆಯಲ್ಲಿ ಹಿಂದಿನ ಸಭೆಗಳಂತೆ ಅನೇಕ ಠರಾವುಗಳನ್ನು ಪಾಸುಮಾಡಿ ಅವು ಹಾಗೇ ಉಳಿಯುವಂತೆ ಮಾಡದೆ ಸದ್ಯ ಮಾಡಬೇಕಾದ ಕಾರ್ಯದ ಅವಶ್ಯಕತೆಯು ಮುಖ್ಯವಾದ ಠರಾವುಗಳನ್ನಷ್ಟೇ ಪಾಸಮಾಡಿ ಅವುಗಳು ತೀವ್ರ ಅಮಲಿನಲ್ಲಿ ಬರುವಂತೆ ಪ್ರಯತ್ನ ಮಾಡುವದು ಈ ಸಭೆಯ ಆದ್ಯ ಕರ್ತವ್ಯವಾಗಿರುವದೆಂದೂ ಇಂಥ ಕಾರ್ಯಗಳ ಬಗ್ಗೆ ಕೆಲವು ಸೂಚನೆಗಳನ್ನು ಮಹಾಸಭೆಯ ಚಾಲಕರ ಮುಂದೆ ಇಡಬೇಕಾದದ್ದು ನಮ್ಮ ಕರ್ತವ್ಯ ಉಂಟಾಗಿ ತಮ್ಮ ಮುಂದೆ ಇಟ್ಟಿರುವೆವು ಇತ್ತಕಡೆ ಮಹಾಸಭೆ ಚಾಲಕರು ಗಮನವಿಡುವರೆಂದು ನೆನೆಸಂಬುವೆವು

೧. ಈ ಸಾರ ಸಭೆಯ ಅಧ್ಯಕ್ಷಸ್ಥಾನವನ್ನು ಮುಂಬಯಿ ಪ್ರಾಂತದ ವೀರಶೈವ ಪ್ರಮುಖರೊಬ್ಬರಿಗೆ ಒಪ್ಪಿಸಬೇಕೆಂದು ನಮ್ಮ ಮೊದಲನೆಯ ಸೂಚನೆಯು.

೨. ಮಹಾಸಭೆಯವರು ಕರ್ನಾಟಕದ ಏಕೀಕರಣ ಬಗ್ಗೆ ಬೇಕಾಗುವ ಸಹಕಾರಿತ್ವವನ್ನು ಸಂಪಾದಿಸಿ ಶೀಘ್ರ ಏಕೀಕರಣವನ್ನು ನೆರವೇರಿಸುವದು ಮತ್ತು ಕರ್ನಾಟಕದ ಇತಿಹಾಸವನ್ನು ಸಂಶೋಧಿಸಿ ಪ್ರಕಟಪಡಿಸುವದೂ ಮುಖ್ಯವಿದೆ.

(ಅ) ಈ ಕಾರ್ಯವು ನೆರವೇರಬೇಕಾದರೆ ಕರ್ನಾಟಕದಲ್ಲಿ ಸರ್ವತ್ರವ್ಯಾಪಿಸಿದ್ದು ಅತ್ಯಲ್ಪಶಕ್ತಿ ತನದನೆಯಾದ ನಮ್ಮ ವೀರಶೈವ ಸಮಾಜವನ್ನು ಮೊದಲು ಐಕ್ಯಮಾಡುವ ಉಪಾಯವನ್ನು ತೀವ್ರ ಕೈಕೊಳ್ಳುವದು

(ಬ) ಈ ಮತದಲ್ಲಿ ಉಂಟಾಗುವ ಅನೈಕ್ಯತೆಗೆ ಮುಖ್ಯದಾಯಕವಾದ ಗುರುವರ್ಗ ಮತ್ತು ವಿರಕ್ತವರ್ಗದವರ ನಡುವೆ ಬಂದ ಧಾರ್ಮಿಕ ವ್ಯಾಜ್ಯವನ್ನು ಧರ್ಮಶಾಸ್ತ್ರಾನುಸಾರವಾಗಿ ತೀರಿಸುವಂಥ ಉಪಾಯವನ್ನು ಮೊದಲು ಕೈಕೊಳ್ಳಬೇಕು.

ಕರ್ನಾಟಕದ ಇತಿಹಾಸ ಸಂಶೋಧನೆಗೆ ಬೇಕಾಗುವ ಸಹಾಯವು

(ಕ) ಕರ್ನಾಟಕದ ಇತಿಹಾಸವನ್ನು ತಯಾರಿಸಲಿಕ್ಕೆ ಒಂದು ಐತಿಹಾಸಿಕ ಶಿಷ್ಟಮಂಡಲವನ್ನು ನಿಯಮಿಸಬೇಕಲ್ಲದೆ ನಮ್ಮ ಈ ಕಾರ್ಯದಲ್ಲಿ ತೊಡಗಿ ಅದನ್ನು ಕೈಕೊಂಡಿರುವ ಶಿವಾಪುರದ ವಾಸವಾದ ಕರ್ತರಾದ ರಾ|| ಸಾ|| ವೆ|| ಗ|| ಪಾಟೀಲ ಶಿವಾಪುರ ಇವರ ಮತ್ತು ಇವರಿಗೆ ಸಹಾಯಕರಾಗಿದ್ದು ಅನೇಕ ಕಡೆಗೆ ಸಂಚರಿಸಿ ಕಷ್ಟಪಟ್ಟು ನಾನಾ ಶಿಲಾಶಾಸನಗಳನ್ನೂ ಅನೇಕ ತಾಮ್ರಪಟಗಳನ್ನು ಮತ್ತು ಹಳೇ ಉಲ್ಲೇಖಗಳನ್ನೂ ಪ್ರತಿ ಓದಿ ಅವುಗಳನ್ನು ಸಂಗ್ರಹಿಸಿ ಅವುಗಳಾಧಾರದಿಂದ ನಿವ್ವಳ ಸಪ್ತಂಬರ ತಿಂಗಳಲ್ಲಿ ಶಿವಾನುಭವ ೭ ನೇ ಸಂಚಿಕೆಯಲ್ಲಿ ೬೫ ನೇ ಪುಟ ದಿಂದ ೭೦ ನೇ ಪುಟದವರೆಗೆ" ಹಾಲಿಸಂಚವಣ್ಣಿಗ ಮರೆವ್ವ,,ಎಂಬ ಅಗ್ರಲೇಖನದೊಂದಿಗೆ ವೀರಶೈವ ಪ್ರಾಚೀನತೆಯನ್ನು ಆಳಕೊಂಡು ಪ್ರಸಿದ್ಧಪಡಿಸಿದ ಗೇಣುರ ಗುಂಪಿನ ಶ್ರೀಯುತ ಚನ್ನಮಲ್ಲಪ್ಪನವರು ಹುನಗುಂದ ಇವರುಗಳ ಪರಿಶ್ರಮಕ್ಕೂ ಹಾಗೂ ಕೆಲವು ದಿವಸಗಳ ಹಿಂದೆ ತಾಳಪತ್ರದ ಅನೇಕ ಹಳೇ ಗ್ರಂಥಗಳನ್ನು ಸಂಗ್ರಹಿಸಿ ಪ್ರಸಿದ್ಧಪಡಿಸಿದ ದಾವಣಗೆರೆಯ ಶಿವಾಸಿ ಮಠದ ಶ್ರೀ ಶಾಂತವೀರಾಚಾರ್ಯರ ಪರಿಶ್ರಮಕ್ಕೂ ತಕ್ಕ ಫಲವನ್ನು ಮಹಾ ಸಭೆಯವರು ಕಲ್ಪಿಸಿಕೊಡಬೇಕಲ್ಲದೆ ಮೇಲ್ಕಂಡ ಮಹನೀಯರು ಕೈಕೊಂಡಿರುವ ಮಹತ್ವವಾದ ಮುಂದಿನ ಕಾರ್ಯಕ್ಕೆ ಬೇಕಾಗುವ ಸಹಾಯವನ್ನು ಮಹಾ ಸಭೆಯವರು ಒದಗಿಸಿಕೊಡುವಂತೆ ವ್ಯವಸ್ಥೆ ಮಾಡಿ ಇಂಥವರಿಂದ ಕೂಡಿದ ಮೇಲಿನ ಇತಿಹಾಸಮಂಡಲ ವೊಂದನ್ನು ಸ್ಥಾಪಿಸಬೇಕು.

(ಡ) ಇತಿಹಾಸ ಮಂಡಲದವರು ಈಗ್ಗೆ ಸ್ಥಾಪಿಸಿದ ಧಾರವಾಡ ಇತಿಹಾಸ ಮಂಡಲದವರ ಸಹಾಯವನ್ನು ಪಡೆದುಕೊಳ್ಳುವಂತೆಯೂ, ಈ ಕಾರ್ಯದಲ್ಲಿ ಧಾರವಾಡ ಮಂಡಲದವರು ನೆರವು ಕೊಡುವಂತೆಯೂ ಸಭೆಯವತಿಯಿಂದ ಅವರಿಗೆ ಸಹಾಯವನ್ನಿತ್ತು ಸೂಚನೆಯನ್ನು ತಿಳಿಸಬೇಕು.

(೩) ನಮ್ಮ ಕನ್ನಡ ಪ್ರಾಂತ್ಯದಲ್ಲಿ ಉತ್ತರ ಭಾಗದಲ್ಲಿ ಒಂದು ದಕ್ಷಿಣ ಭಾಗದಲ್ಲಿ ಒಂದು ಹೀಗೆ ಎರಡು ಆರ್ಟ್ಸ್ ಕಾಲೇಜುಗಳನ್ನು ಸ್ಥಾಪಿಸುವದು ಅವಶ್ಯವಾದ್ದದೆ

(೪) ಈ ಕಾರ್ಯದ ಭಾರವನ್ನು ಶ್ರೀ ಶಿವಸೂಗಿ ಮಠದ ಮಠ ಮತ್ತು ಧಾರವಾಡ ಮುರುಘಾಮಠದ ಮಠ ಮತ್ತು ಇನ್ನು ಅನೇಕ ಮಠಗಳ ಸಹಾಯದಿಂದ ಶಾಸ್ತ್ರೀಯವಾದ್ದು ವಿದ್ಯಾಭ್ಯಾಸ ಮಾಡಿರುವ ಸದರಿ ಪ್ರತಿಷ್ಠಿತರೂ ಮಠಾಧಿಕಾರಿಗಳೂ ಇನ್ನುಳಿದ ಪಟ್ಟಚರ ಮೊದಲಾದವರು ತಮ್ಮ ತಮ್ಮ ತನು ಮನ ಧನಸಹಾಯದಿಂದ ವಹಿಸಿ ಮುಂದಿನ ಮಾರ್ಗವನ್ನು ವಿಚಾರಿಸಬೇಕಲ್ಲದೆ ಹಿಂದಿನ ಸಂಸ್ಥೆ ಬೇರೆ ಮಾರ್ಗದಿಂದ ಈ ಕಾರ್ಯವನ್ನು ಮಾಡಹೋದರೆ ಆ ಕಾರ್ಯವು ಸಾಧ್ಯವಾಗುವದೋ? ಎಂಬ ವಿಚಾರವನ್ನು ಮಹಾಸಭೆಯಲ್ಲಿ ನಿರ್ಧರಿಸಿ ಈ ಕಾರ್ಯದ ಮುಂದಿನ ಮಾಡಬೇಕು.

(೫) ಮೇಲಿನ ಆರ್ಟ್ಸ್ ಕಾಲೇಜುಗಳಂತೆ ಸಂಸ್ಕೃತ ಕಾಲೇಜು ಒಂದನ್ನು ಸದ್ಯಃ ನಮ್ಮೀ ಕರ್ನಾಟಕ ಪ್ರಾಂತದ ಕೇಂದ್ರಸ್ಥಾನದಲ್ಲಿ ಸ್ಥಾಪಿಸುವ ಯೋಜನೆಯನ್ನು ಸಿದ್ಧಪಡಿಸಬೇಕು.

(೬) ಈ ಕಾರ್ಯದ ಭಾರವನ್ನು ಈ ಮತಸ್ಥಾಪನಾಚಾರ್ಯರಾದ ಜಗದ್ಗುರು ಪಂಚಾಚಾರ್ಯರ ಇವರ ಪೀಠಾಧಿಪತಿಗಳಾದ ಗುರುವರ್ಗದವರು ವಹಿಸಿಕೊಳ್ಳುವದು ಅವರಿಗೆ ಭೂಷಣವೇ ಎಂದು ಮಹಾ ಸಭೆಯವರು ನಿರ್ಧರಿಸಬೇಕು.

(೭) ನಮ್ಮೀ ವೀರಶೈವ ಮತವು ವೇದಸಮ್ಮತವಲ್ಲವೆಂದು ಒಬ್ಬರಾದಿ ಈ ಮತದ ಮೇಲೆ ಅನೇಕ ಗಂಡಾಂತರಗಳನ್ನು ತಂದು ನಮ್ಮೀ ಸಮಾಜದ ಧರ್ಮಹಾನಿಗೆ ಪಾತ್ರರಾದ ಸನಾತನದವರ ಮತವನ್ನು ಖಂಡಿಸಿ ವೀರಶೈವ ಮತದ ಪ್ರಾಚೀನತೆಯನ್ನೂ ವೇದಸಮ್ಮತವಾದ ಮತವೆಂಬುದನ್ನೂ ಸಿದ್ಧಪಡಿಸಿ ಇಂಥ ಒಂದು ಗ್ರಂಥವನ್ನು ತೀವ್ರವಾಗಿ ಯಾವತ್ತೂ ಭಾಷೆಗಳಲ್ಲಿ ಪ್ರಕಟಿಸಿ ಪ್ರಸಿದ್ಧಗೊಳಿಸಬೇಕು.

(೮) ಇಂಥ ಗ್ರಂಥಪ್ರಕಟನೆಯ ಸಹಾಯಕ್ಕ ಮೇಲ್ಕಂಡ ಶಿಲಾಶಾಸನಗಳೂ ತಾಮ್ರಶಾಸನಗಳೂ ಹಳೇ ಗ್ರಂಥಗಳ ಸಂಗ್ರಹವೂ ಅವಶ್ಯಕವಾಗಿ ಬೇಕೆಂಬುದನ್ನು ಮಹಾಸಭೆಯವರು ನೆರೆಯುವ ಸಭೆಯಲ್ಲಿ ಚರ್ಚಿಸಿ ಎಲ್ಲರಿಗೂ ತಿಳಿಸಿ ಈ ಕಾರ್ಯದಲ್ಲಿ ವೀರಶೈವರು ಪ್ರಯತ್ನಪಟ್ಟು ಸಹಾಯ ಮಾಡುವಂತೆ ಬೋಧಿಸಬೇಕು.

(೧) ಡೆಕ್ಕನ ಮಾರ್ಗದಿಂದ ಹೋಗುವ ಸ್ಕಾಲರ್ಶಿಪ್ ಮಾತ್ರ ವಿದ್ಯಾರ್ಥಿಗಳಿಗೆ ಕೊಡುವ ವೇತನವನ್ನು ಯಾವತ್ತೂ ಖಂಡಿಸದೆ ಕಡಿಮೆ ಮಾಡಿ ಔದ್ಯೋಗಿಕ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವದನ್ನು ನಿರ್ಧರಿಸುವಂತೆ ಕೈ|| ಸಿರಸಂಗಿ ಫಂಡ್ ಟ್ರಸ್ಟಿ ಜನರಿಗೂ ಇನ್ನುಳಿದ ಫಂಡ್ ಕಮಿಟಿಯವರಿಗೂ ಮಹಾ ಸಭೆಯವರು ಸೂಚಿಸಬೇಕು.

(೨) ಒಬ್ಬರನಿಂದೆಯನ್ನು ಇನ್ನೊಬ್ಬರು ಮಾಡಿಯೂ ಮಾಡುತ್ತಲೂ ಬರೆಯುವ ಲೇಖಗಳಿಗೆ ಆಶ್ರಯ ಕೊಟ್ಟು ಸಮಾಜದಲ್ಲಿ ಗದ್ದಲವೆಬ್ಬಿಸುವ ಕೆಲವು ಪತ್ರಕಾರರಿಗೆ ಮಹಾಸಭೆಯವತಿಯಿಂದಾ ಬುದ್ಧಿ ಕಲಿಸಬೇಕು ಇಲ್ಲವೇ ಅಂಥ ಪತ್ರಗಳನ್ನು ಬಹಿಷ್ಕರಿಸುವಂತೆ ನಿರ್ಧರಿಸುವದನ್ನು ಮರೆಯ ಬಾರದು.

ಶಿವಾಪುರ ಸಭಾಧ್ಯಕ್ಷ
ತಾ|| 30-10 27 ಶ್ರೀಯುತ ಶಿವಪ್ಪ ಸಿದ್ದಪ್ಪ ಭಾವಿ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಗುರುಪುತ್ರರು

ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ ವೇದಸಮ್ಮತವಾದ ವೀರಶೈವ ಮತೋದ್ಧಾರಾರ್ಥವಾಗಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು ಬ್ರಹನ್ಮಠ ನಾಗನೂರು ಇವರು ಗುರ್ವಾಜ್ಞಾನುಸಾರವಾಗಿ ಭೂಲೋಕದಲ್ಲಿ ಅವತರಿಸಿ ಗುರುಪುತ್ರರೆನಿಸಿಕೊಂಡಿದ್ದಾರೆ ಮೊದಮೊದಲು ನಮ್ಮ ಗುರುವರ್ಗದ ಮಹನೀಯರು, ವಿದ್ವಾಂಸರು ನಮ್ಮ ವೃತ್ತಿಗೆ ಬೀಳಬೇಕಾದರೆ ಬಹುಕಷ್ಟವಾಗಿತ್ತು ಗುರುವರ್ಗದ ಪಟ್ಟಚರಾಧಿಕಾರಿಗಳನ್ನು ತೀವ್ರ ಯಾವಸೂತ್ರದವರು? ತಮ್ಮ ಗೋತ್ರವಾವದು? ಯಾವ ಆಚಾರ್ಯರ ಸಿಂಹಾಸನಕ್ಕೆ ಸೇರಿದವರೆಂದು ವಿಚಾರಮಾಡಿದರೆ, ಪುನಃ ಅದೇ ಮಹನೀಯರೇ ಹೇಗೆಂದರೇನು? ಎಂದು ವಿಚಾರಿಸುತ್ತಿದ್ದರು. ಆ ಪಟ್ಟಚರಾಧಿಕಾರಿಗಳು ಶಿಷ್ಯರ ಮನೆಗೆ ಹೋದರೆ ಕೇವಲ ಧನಾಪಹರಣಕ್ಕೆ ಹೋಗುತ್ತಿದ್ದರೆಂದು ತಿಳಿಯಲು ಬಹು ಕಷ್ಟವಾಗಿದೆ, ಶಿವಶಿವಾ" ಎಂಥಾ ಅಂಧಕಾರವಿದು? ಮತ್ತು ಕೆಲಕೆಲವು ಬುದ್ಧಿಗಳು ಜನಿಸಿ ಗುರುಮಹನೀಯರನ್ನು ಜಾಲವಲ್ಲೆಳೆದು ಆ ಮಹತ್ಪೂಜ್ಯವಾದ ಶಿಷ್ಯವೃಂದವನ್ನು ತಮ್ಮ ಬಲೆಯಲ್ಲಿ ಹಾಕಿಕೊಂಡು ಯಥೇಷ್ಟದನವಂ ಸೆಳೆದು ಧರ್ಮವಂಶಕ್ಕೆ ಅಕ್ರಮವನ್ನು ಬೋಧಿಸುತ್ತ ತಮ್ಮ ಪ್ರತಿಷ್ಠೆಯನ್ನು ಬೆಳಸಿ ಗುರುವರ್ಗದವರಿಗಿಂತಲೂ ನಾವೇ ಹೆಚ್ಚೆಂದು ಮನಬಂದಂತೆ ಕುಣಿದಾಡುತ್ತ, ಕೆಲವರ ಸಂತತಿಗೆ ಧನವಂ ಕೊಟ್ಟು ತಾವು ಹೇಳಿದಂತೆ ಕೇಳುವ ಹಾಗೆ ಮಾಡಿಕೊಂಡು ಅವರಲ್ಲಿ ಮಂಕು ಬೂದಿಯಂ ಚೆಲ್ಲಿದರು, ಅವರೊಳಿ ಕೇಳುವವರೇನು? ಮುಂದಮತಿ ಜನವು ಅವರು ಹೇಳಿದಂತೆ ಕುಣಿಯಲಿಕ್ಕೆ ಹತ್ತಿತು ಅನಂತರ ಮರ್ಕಟಸ್ಯ ಸುರಾಪಾನಂ ತಸ್ಯ ವೃಶ್ಚಿಕದಂಶನಂ| ತನ್ಮಧ್ಯೇಭೂತ ಸಂಚಾರೋ ಯದ್ವಾತದ್ವಾ ಭವಿಷ್ಯತಿ ||೧|| ಎಂಬಂತೆ ಅವರ ಸಹಾಯದಿಂದ ಈ ಕುಬುದ್ಧಿಗಳು ಕುಣಿದಾಡುತ್ತಿದ್ದರು ಅಯ್ಯೋ ಶಿವಶಿವಾ, ಎಂಥಾ ನೀಚಕೃತ್ಯವಿದು? ಇದನ್ನು ಜಗದ್ರಕ್ಷಕನು ತಿಳಿದೇ ಈ ಶಾಸ್ತ್ರಿಗಳನ್ನು ನೇಮಿಸಿದ್ದಾನೆ | ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ | ತದಾತದಾವತಾರೋಯಂ ಮದೀಯಸ್ಯ ಭವೇತ್ತದಾ || ೨ || ಎಂಬ ವ್ಯಾಸೋಕ್ತಿಗನುಸರಿಸಿ ಈ ಮಹನೀಯರು ಅವತರಿಸಿದ್ದು ಲೋಕಹಿತಾರ್ಥವಾಗಿಯೇ ಹೊರತು ಬೇರೊಂದಿಲ್ಲ ಈ ಶಾಸ್ತ್ರಿಗಳು ಸದರಿ ಕುಬುದ್ಧಿಗಳ ಬಲವಂ ತಗ್ಗಿಸಿ ಇದೇ ನಮ್ಮ ವೀರಶೈವ ಮತಕ್ಕೆ ಗುರುಮೂರ್ತಿಗಳು ಮತ್ತು ಮತಾಚಾರ್ಯರು ಯಾರು? ಎಷ್ಟು ಜನರು ಅವರವರ ನಾಮಗಳೇನು? ಎಲ್ಲೆಲ್ಲಿಂದ ಜನಿಸಿದರು ಸೂತ್ರವೆಂದರೇನು? ಗೋತ್ರವೆಂದರೇನು, ಇವೇ ಮೊದಲಾದ ಸಮಸ್ತ ವಿಷಯಗಳನ್ನು ಗ್ರಾಮಗ್ರಾಮಕ್ಕೆ ತೆರಳಿ ತಮ್ಮ ದೇಹದಂಡನೆಯಂ ಮಾಡಿ ಎಷ್ಟು ಕಷ್ಟ ಬಂದರೂ ಸಹಿಸಿ ಸರ್ವರಿಗೂ ತಿಳಿಯುವಂತೆ ಬೋಧಿಸಿ ಸದ್ಯಃ ವೀರಶೈವ ಜನಾಂಗವನ್ನು ಸನ್ಮಾರ್ಗಕ್ಕೆ ಹಚ್ಚಿದ್ದಾರೆ ಇಂಥಾ ಮಹತ್ತಾದ ಅಭಿಮಾನಿಗಳಾದ ಶಾಸ್ತ್ರಿಗಳನ್ನು ನಿಂದಿಸುವವರು ನಿಶ್ಚಯವಾಗಿ ವೈತರಣಿಯನ್ನೇ ಸೇರುತ್ತಾರೆ 'ಚಿಲ್ಲರನಿಂದಿಸಲು, ಚಂದ್ರನಿಗೆ ಕುಂದೇನು ಎಂಬಂತೆ ಕಲ್ಲಿಗಪ್ಪಿತ ಶ್ವಾ ಜಲ್ಪತಿ ಎಂಬಂತೆ,, ಜಲ್ಪ ಧಾತುವನ್ನು ಸಿದ್ಧಿಗೊಳಿಸಬಾರಲ್ಲರೇ? ಈಗ ನಮ್ಮ ಪಟ್ಟಚರಾಧಿಕಾರಿಗಳು ಗ್ರಾಮಕ್ಕೆ ತೆರಳಿ ಸದ್ಬೋಧೆಯಂ ಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯರೇ ಮತಸ್ಥಾಪಕರು ಅವರ ಅಧೀನರಾದವರೇ ಗುರುವರ್ಗದ ಪಟ್ಟಚರಾಧಿಕಾರಿಗಳು, ಇವರು ಮಂಕುಬೂದಿ ಚೆಲ್ಲುವರೆಂದು ತಿಳಿಸುತ್ತಿರುವರು, ಇದು ಯಾರ ಪ್ರಭಾವವು ಆ ಗುರು ಪುತ್ರರದಲ್ಲವೇ? ಸದ್ಯಃ ಎಷ್ಟೋ ಗುರುವರ್ಗ ಮಹನೀಯರು ಕಾಶೀ ವಗೈರೆ ಸ್ಥಾನಗಳಿಗೆ ತೆರಳಿ ವಿದ್ಯೆಯನ್ನು ಸಂಪಾದಿಸುತ್ತಿರುವದು ಯಾರಮಹಿಮೆಯು? ಗುರುವಿನಾಜ್ಞಾನುಸಾರವಾಗಿ ಅವತರಿಸಿ ಗುರುವಿನ ಅಪ್ಪಣೆಯ ಮೇರೆಗೆ ಸ್ವಕರ್ತವ್ಯವಂ ಜರುಗಿಸಿದ ಇವರೇ ನಿಜವಾದ ಗುರುಪುತ್ರರಲ್ಲವೇ? ಸತ್ಯಂ' ಈ ನಮ್ಮ ಗುರು ಪುತ್ರರನ್ನು ಚಿರಾಯುಗಳನ್ನಾಗಿ ಮಾಡಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಪಯೋಜಗಳಿಗೆ ಈ ಅಕಿಂಚನನು ನಿಷ್ಕಲಂಕಚಿತ್ತನಾಗಿ ಸಾಷ್ಟಾಂಗ ಪ್ರಣಿಪಾತವನರ್ಪಿಸುತ್ತಾನೆ

ಸತ್ಯಪ್ರೇಮಿ
ಅಮರಾರ್ಯಶರ್ಮಾ ||

ಸತ್ಕಾರ್ಯ

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕಿಗೆ ಸೇರಿದ ಮುನುವನಕಲ್ಲಹಳ್ಳಿ ಗ್ರಾಮದ ಫಾರೆಸ್ಟ್ ಪಂಚಾಯತಿ ಪ್ರೆಸಿಡೆಂಟರಾದ ಮ|| ರಾ|| ಸಿದ್ದನಗೌಡರು ಮುನುವನಕಲ್ಲ ಹಳ್ಳಿ, ಕೆಂಚಮ್ಮನ ಹಳ್ಳಿ, ಕೊಂಗನಹೊಸೂರು, ನಂದಿಬೇವೂರುಗ್ರಾಮಕ್ಕೆ ಸೇರಿದ ಸಕಲ ಗ್ರಾಮಗಳಲ್ಲಿ ಚಂದಾ ವಸೂಲ್ ಮಾಡಿ ತಮ್ಮ ಪಂಚಾಯತಿ ಹಣದಿಂದಲೂ ಮತ್ತು ತಮ್ಮ ಸ್ವಂತ ಖರ್ಚಿನಿಂದಲೂ ಒಟ್ಟು 350 ರೂಪಾಯಿಗಳನ್ನು ಖರ್ಚುಮಾಡಿ ತಮ್ಮ ಆಡಳಿತಕ್ಕೆ ಒಳಪಟ್ಟ ಕಾಡಿನಲ್ಲಿದ್ದ ಒಂದು ದೊಡ್ಡ ಹಳ್ಳಕ್ಕೆ ಏರಿಯನ್ನು ಹಾಕಿಸಿ ಕಟ್ಟೆಯನ್ನು ಕಟ್ಟಿಸುತ್ತಾರೆ. ಈ ಕಾಡಿನಲ್ಲಿ ಇದುವರೆಗೂ ಒಂದೂ ಜಲವಸತಿಯಿಲ್ಲದೆ ಮೇಯುವುದಕ್ಕೆ ಹೋದ ದನಕರುಗಳಿಗೂ, ಇತರ ಜನಗಳಿಗೂ ಬಹಳ ತೊಂದರೆಯಾಗುತ್ತಿದ್ದುದನ್ನು ಈ ಮಹನೀಯರು ನೋಡಿ ಕನಿಕರಪಟ್ಟು ಈ ಮಹತ್ಕಾರ್ಯವನ್ನು ಮಾಡಿ ಯಶೋಭಾಗಿಗಳಾಗುತ್ತಾರೆ. ಪರೋಪಕಾರನಿರತರಾದ ಮ|| ಸಿದ್ದನಗೌಡರು ತಾವು ಕಟ್ಟಿಸಿದ ಕಟ್ಟೆಗೆ ಕಲ್ಲುಕಟ್ಟಡವನ್ನು ಕಟ್ಟಿಸಿ ಅದನ್ನು ಶಾಶ್ವತಗೊಳಿಸಬೇಕೆಂದೂ ಬಳ್ಳಾರಿ ಜಿಲ್ಲಾ ಫಾರೆಸ್ಟ್ ಇಲಾಖೆಯು ಇತರ ಯಾವತ್ತೂ ಮಹನೀಯರುಗಳು ತಮ್ಮ ತಮ್ಮ ರಿಜರ್ವಿನಲ್ಲಿ ನೀರಿನ ವಸತಿಗಳನ್ನೇರ್ಪಡಿಸಿ ತಾವೂ ಕೂಡ ಯಶೋಭಾಗಿಗಳಾಗಬೇಕೆಂದೂ ಹಾರೈಸುವ,

ಭೂತಪ್ಪನವರ ಬಸಪ್ಪ, ಕೆಂಚಮ್ಮನಹಳ್ಳಿ.

ಅಖಿಲಭಾರತ ವೀರಶೈವ ಮಹಾಸಭೆ, ಬೆಂಗಳೂರು.

ಈ ಮಹಾಸಭೆಗೆ ಅಧ್ಯಕ್ಷಸ್ಥಾನವನ್ನು ಹೈದರಾಬಾದಿನಲ್ಲಿರುವ ಶ್ರೀಮಂತ ಹೈಕೋರ್ಟ್ ವಕೀಲ ಭಾವುರಾವ ಇವರಿಗೆ ವಹಿಸಿಕೊಡುವದರಿಂದ ಹೈದರಾಬಾದ ಸಂಸ್ಥಾನವೂ ಮೈಸೂರು ಮತ್ತು ಇತರ ಪ್ರಾಂತ್ಯಗಳೂ ಒಂದಾಗುವದಕ್ಕೆ ಕಾರಣವಾಗುತ್ತೆ. ಹೈದರಾಬಾದ ಸಂಸ್ಥಾನದಿಂದ ಯಾವ ಮಹಾಸಭೆಗೂ ಅಧ್ಯಕ್ಷರನ್ನು ಚುನಾಯಿಸಿರುವದಿಲ್ಲ. ಪರಳಿ ವ್ಯಾಜ್ಯದಲ್ಲಿ ವಿಶೇಷ ಶ್ರಮವಹಿಸಿ ದ್ರವ್ಯ ವ್ಯಯಮಾಡಿ ಕೀರ್ತಿವಂತರಾಗಿಯೂ, ದಕ್ಷರಾಗಿಯೂ, ಶಾಂತಸ್ವಭಾವದವರಾಗಿಯೂ, ಕನ್ನಡ, ಇಂಗ್ಲೀಷ, ಸಾಧಾರಣ ಸಂಸ್ಕೃತಗಳ ಪರಿಚಯವುಳ್ಳವರಾಗಿಯೂ ಇರುವರು ಇವರು ಇಂಗ್ಲಂಡಿಗೆ ಹೋಗಿ ಬ್ಯಾರಿಸ್ಟರ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ವಕೀಲತ್ವವನ್ನು ಮಾಡುತ್ತಿರುವರು. ಇವರನ್ನೇ ಅಧ್ಯಕ್ಷರನ್ನಾಗಿ ಆರಿಸುವದರಿಂದ ನಿಶ್ಚಿತವಾಗಿ ಮಹಾಸಭೆಯು ನಡೆಯುವದು.

ಸಮಾಜಬಂಧು.

ವೀರಶೈವ ಮಹಾಸಭೆ.

ಬರುವ ಡಿಸೆಂಬರ ತಿಂಗಳಲ್ಲಿ ಬೆಂಗಳೂರಲ್ಲಿ ಜರುಗುವ ವೀರಶೈವಮಹಾಸಭೆಗೆ ಕೇವಲ ನಿಷ್ಪಕ್ಷಪಾತಿಗಳೂ ಕಾರ್ಯದಕ್ಷರೂ, ಕಾಯಿದೆ ಧುರೀಣರೂ, ಶಾಂತಪರರೂ, ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೂ, ಬೊಂಬಾಯಿ ಕಾಯಿದೆ ಕೌನ್ಸಿಲ್ ಡೆ|| ಪ್ರೆಸಿಡೆಂಟರೂ, ಕರ್ನಾಟಕ ಮುಂದಾಳುವೂ, ಮುಂಬಯಿ [illegible] ಭಾವಿಮಂತ್ರಿಗಳೂ ಆದ ರಾ|| ಬ|| ಸಿದ್ದಲಿಂಗಪ್ಪ ಕಂಬಳಿ (ಬಿ. ಎ. ಎಲ್. ಎಲ್. ಬಿ.) ಪ್ರಸಿದ್ಧ ವಕೀಲ ಹುಬ್ಬಳ್ಳಿ, ಇವರನ್ನು ಅಧ್ಯಕ್ಷರನ್ನಾಗಿ ಆರಿಸಬೇಕೆಂದು ವೀರಶೈವ ಮಹಾಸಭಾ ಚಾಲಕರಲ್ಲಿ ನನ್ನದೊಂದು ವಿನಂತಿ.

ವೀರಶೈವ ಮಹಾಸಭಾ ಹಿತಚಿಂತಕ
ಶಂಕರಗೌಡ. ರಾಮನಗೌಡ. ಪಾಟೀಲ,
ಸಂವಸಿ.

ಮಹಾಸಭಾ ಚಾಲಕರಲ್ಲೊಂದು ವಿಜ್ಞಾಪನೆ.

ವೀರಶೈವ ಮತೋನ್ನತಿಗೆ ಪ್ರಾಣಸಂಜೀವಿನಿಯಂತಿರುವ ಮಹಾಸಭೆಯು ದೀರ್ಘಕಾಲದಿಂದಲೂ ನಿಂತುಹೋಗಿದ್ದು ಈಗ ಬೆಂಗಳೂರು ನಾಗರೀಕ ವೀರಶೈವ ಮುಖಂಡರ ಅಭಿಮಾನೋತ್ಸಾಹಗಳಿಂದ ಸರ್ವಾಂಗ ಸುಂದರವಾಗಿ ನಡೆಯಲು ತಕ್ಕ ಸಾಹಸೋದ್ಯಮಗಳು ಜರುಗಿ ನಡೆಯುತ್ತಿರುವದು ಆನಂದದಾಯಕ ಸಂಗತಿಯಾಗಿದೆ. ಈ ಸಭಾ ಕಾಲವು ಸಮೀಪಿಸುತ್ತಾ ಬಂದಿತು. ಭರತಖಂಡದ ನಾನಾ ಭಾಗಗಳಿಂದಲೂ ಸುಪ್ರಸಿದ್ಧ ವೀರಶೈವ ಪಂಡಿತರೂ, ವಾಗ್ಮಿಗಳೂ, ಕೀರ್ತನಕಾರರೂ, ವ್ಯವಹಾರ ನಿಪುಣರೂ, ಅಧಿಕಾರಿ ಜನಗಳೂ ದಯಮಾಡಿಸುವರು. ಇಂಥಾ ಸುಸಮಯವನ್ನು ಕೇವಲ ಮಂಟಪಾಲಂಕಾರಾದಿ ಬಾಹ್ಯಾಡಂಬರಗಳಲ್ಲಿ ಪರ್ಯವಸಾನಗೊಳಿಸದೆ ಮತವು ರಾಜಕೀಯ, ಧಾರ್ಮಿಕ, ನೈತಿಕ, ಮತ್ತು ಸಾಂಪತ್ತಿಕ ದೃಷ್ಟಿಯಿಂದ ಪೂರ್ಣ ವೃದ್ಧಿಗೊಳ್ಳಲು ಯೋಗ್ಯ ವ್ಯವಸ್ಥೆಯನ್ನು ಮಾಡಲು ಉಚಿತಾವಕಾಶವನ್ನು ದೊರಕಿಸಬೇಕು. ಅಲ್ಲದೆ ಮುಖ್ಯವಾದ ವಿಷಯವೆಂದರೆ:- ಹಳ್ಳಿಗಾಡಿನ ವೀರಶೈವರ ಪರಿಸ್ಥಿತಿಯು ಶೋಚನೀಯವಾಗಿರುತ್ತದೆ. ಸುಶಿಕ್ಷಿತ ವೀರಶೈವ ಮಹನೀಯರುಗಳು ಹಳ್ಳಿಗಾಡಿನ ಸಮಾಜ ಬಾಂಧವರ ಅಜ್ಞಾನ ಅನಾಚಾರ ಮಾಲಿನ್ಯಗಳನ್ನು ದೂರಮಾಡುವ ಪವಿತ್ರ ಕಾರ್ಯಗಳನ್ನು ಕೈಕೊಳ್ಳದ ಹೊರತು ಶುದ್ಧ ವೈದಿಕ ಮತ್ತು ಅಪ್ರಾಕೃತವಾದ ನಮ್ಮ ಮತಕ್ಕೊಂದು ಗಾಂಭವೇ ಸರಿ! ಅಂದಿನವರೆಗೂ ನಾವು ಇತರ ಗಣ್ಯಮತೀಯರಲ್ಲಿ ಗೌರವಸ್ಥಾನವನ್ನು ಹೊಂದಲಾರೆವು. ಮಹಾಸಭಾಸಂಧಿಯಲ್ಲಿ ಈ ವಿಷಯಕ್ಕೆ ಗಮನಕೊಟ್ಟು ನಿವಾರಣೋಪಾಯವನ್ನು ಕಲ್ಪಿಸಿದ ಹೊರತು ಮಹಾಸಭಾ ಪವಿತ್ರೋದ್ದೇಶಗಳು ಸಾರ್ಥಕಗೊಳ್ಳಲಾರವೆಂಬುದು ನಿಶ್ಚಿತ ವಿಷಯವು. ಈಗ ನಡೆಯಲಿಕ್ಕಿರುವ ಸಭೆಗೆ ಎಷ್ಟು ಮಂದಿ ಹಳ್ಳಿಯವರು ಬರುತ್ತಾರೆ. ದಸರಾ ಕರಗದ ಉತ್ಸವಗಳಿಗಿಂತಲೂ ಇದು ನಮಗೆ ಇನ್ನೂ ಹೆಚ್ಚಿನ ಮಹೋತ್ಸವವಲ್ಲವೇ? ಆದರೆ ಇದು ಹಳ್ಳಿಯ ಸಹೋದರರಿಗೆ ತಿಳಿದಿಲ್ಲ. ಅವರ ಮೌಢ್ಯವೇ ಮುಖ್ಯ ಕಾರಣ. ಅವರ ಮೌಢ್ಯವು ದೂರವಾಗಿ ಸ್ವಮತಾಭಿಮಾನವು ನೆಲೆಗೊಳ್ಳಬೇಕಾದರೆ ವಿದ್ಯಾಭ್ಯಾಸವೇ ಪರಮೌಷಧವು. ಹಳ್ಳಿಗಾಡಿನ ವೀರಶೈವ ಬಾಂಧವರಲ್ಲಿ ಏಕಮತ್ಯವಿಲ್ಲದೆ ಪರಮತೀಯರ ಕಿಂಕರರಂತೆ ವರ್ತಿಸುತ್ತಿರುವರು. ತಾವು ವೀರಶೈವರಾದರೂ ಶ್ರಾವಣಮಾಸದಲ್ಲಿ ನಾಮಗಳನ್ನು ಹಾಕಿ ವೆಂಕಟರಮಣಾಯನಮಃ ಎಂಬುದಾಗಿ ಭಿಕ್ಷೆ ಮಾಡುವರು. ಅಲ್ಲದೆ ಶಿವಕ್ಷೇತ್ರಗಳನ್ನು ಬಿಟ್ಟು ತಿರುಪತಿ ಮೊದಲಾದ ಸ್ಥಳಗಳಿಗೆ ಯಾತ್ರೆ ಹೋಗಿ ಮುಡಿಯನ್ನೊಪ್ಪಿಸುವರು. ಶಿವಶಿವಾ! ಏನು ದುರವಸ್ಥೆಯು! ಮಡಿಮೈಲಿಗೆಗಳ ವಿವೇಚನೆಯೇ ಇಲ್ಲವೆ' ಶೂದ್ರರಂತೆ ಪರಿಗಣಿಸಲ್ಪಡುತ್ತಿದ್ದಾರೆ. ವಿವಾಹಾದಿ ಶುಭಕಾರ್ಯಗಳಲ್ಲಿ ನಮ್ಮ ಸಹೋದರಿಯರು, ಎದ್ದು ಬಾರೋ ಕೃಷ್ಣ ಮುದ್ದುಮುಖದ ಸ್ವಾಮಿ, ಎಂದೂ, ಆರತಿಯೆತ್ತಿರೆ ನಮ್ಮ ರಂಗನಾಥನಿಗೆ, ಎಂದೂ, ರಂಗಕೃಷ್ಣರ ನಾಮಗಳನ್ನೇ ಹಾಡುವರು ಗೌರೀಶಂಕರರ ಪ್ರವೇಶವೇ ಇಲ್ಲ. ಶಿವಪೂಜಾ ವಿಧಾನವಾದರೂ ಒಂದು ಕಟ್ಟಳೆಯಿಲ್ಲ. ದೀಕ್ಷೆಯು ಪ್ರತಿಯೊಬ್ಬ ವೀರಶೈವನಿಗೆ ಅತ್ಯಾವಶ್ಯಕವಾದರೂ ಆಚರಣೆಯಲ್ಲಿಲ್ಲ. ಇಂಥ ಕುಂದುಕೊರತೆಗಳನ್ನೆಲ್ಲಾ ಹೋಗಲಾಡಿಸಲು ತಕ್ಕ ಉಪಾಯಗಳೆಂದರೆ ಪ್ರಾಂತ್ಯಕ್ಕೊಬ್ಬ ಕೀರ್ತನಕಾರರನ್ನು ನೇಮಿಸಿ ತದ್ವಾರಾ ಮತಾಚಾರ ಏಕಮತ್ಯಗಳನ್ನು ಬೋಧಿಸುವದು, ಆಯಾ ಪ್ರಾಂತದ ಮಠಾಧಿಕಾರಿಗಳು ವರ್ಷಕ್ಕೊಮ್ಮೆಯಾದರೂ ತಮ್ಮ ತಮ್ಮ ಪ್ರಾಂತ್ಯದಲ್ಲಿ ಸಂಚರಿಸಿ ಭಕ್ತಾದಿಗಳ ಅಂತಃಕಲಹಗಳನ್ನು ದೂರೀಕರಿಸಿ ದೀಕ್ಷಾದಿ ವೀರಶೈವ ಕ್ರಿಯೆಗಳನ್ನು ಆಚರಿಸಲು ತಕ್ಕ ಮಾರ್ಗವನ್ನು ಬೋಧಿಸಲು ಪ್ರಾರ್ಥಿಸಲ್ಪಡಬೇಕು. ಪ್ರತಿಯೊಬ್ಬ ವೀರಶೈವ ಬಾಲಕನೂ ಕಡ್ಡಾಯವಾಗಿ ಪ್ರೈಮರಿ ವಿದ್ಯಾಭ್ಯಾಸವನ್ನಾದರೂ ಮಾಡುವಂತೆ ತೀರ್ಮಾನಿಸಬೇಕು. ಪಂಡಿತರು ವೀರಶೈವರ ಅನುಕೂಲಕ್ಕೆ ತಕ್ಕ ಒಂದು ಹಾಡಿನ ಪುಸ್ತಕವನ್ನು ಬರೆದು ಸಮಾಜದಲ್ಲಿ ಪ್ರಚಾರಪಡಿಸಬೇಕು. ವಿವಾಹಾದಿ ಶುಭಕಾರ್ಯಗಳನ್ನು ನಡೆಯಿಸತಕ್ಕ ಸಾಮರ್ಥ್ಯವುಳ್ಳ ಪುರೋಹಿತರನ್ನು ಒದಗಿಸಲು ಒಂದು ವೈದಿಕ ಪಾಠಶಾಲೆಯನ್ನು ಸ್ಥಾಪಿಸಿ ೨ ವರ್ಷಗಳಲ್ಲಿ ತಯಾರಿಸಬೇಕು. ಸದ್ಯಕ್ಕೆ ಮೈಸೂರು ಪ್ರಾಂತ್ಯದಲ್ಲಿ ಶ್ರೀ ಮುನಿಸಮಾರನಹಳ್ಳಿ ಸ್ವಾಮಿಯವರನ್ನು ಪ್ರಾರ್ಥಿಸಬೇಕು. ಇಷ್ಟು ಮಾಡಿದರೆ ಸಮಾಜವೃದ್ಧಿಯೂ ಮಹಾಸಭಾ ಕಾರ್ಯಗಳು ಸಾರ್ಥಕವಾಗುವವು. ಜಗದೀಶನು ಕರುಣೆಗೈಯಲಿ.

ಮುದುಗೆರೆ ಓ. ಎನ್. ಲಿಂಗಪ್ಪ
ಮೈಸೂರು.

ವೀರಶೈವ ಮಹಾಸಭೆ

ಬೆಂಗಳೂರಿನಲ್ಲಿ ನಡೆಯುವ ವೀರಶೈವ ಮಹಾ ಸಭೆಗೆ ಹೈದರಾಬಾದಿನಲ್ಲಿರುವ ಶ್ರೀಮಂತ ಭಾವುರಾವ ಹೈಕೋರ್ಟ್ ವಕೀಲ ಇವರನ್ನು ಅಧ್ಯಕ್ಷರನ್ನಾಗಿ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವದರಿಂದ ಸಮಾಜವು ಐಕ್ಯೋನ್ನತಿಗೆ ಬರುವುದರಲ್ಲಿ ಸಂದೇಹವಿಲ್ಲ ಹೈದರಾಬಾದ್ ಪ್ರಾಂತ್ಯದಲ್ಲಿ ಮಹಾ ಸಭೆಯು ಯಾವಾಗ್ಯೂ ನಡೆಯದಿರುವುದರಿಂದಲೂ ಆ ಪ್ರಾಂತ್ಯದವರನ್ನು ಅಧ್ಯಕ್ಷಸ್ಥಾನಕ್ಕೆ ಬರಮಾಡಿಕೊಳ್ಳುವುದರಿಂದ ಎಲ್ಲಾ ಪ್ರಾಂತ್ಯದ ವೀರಶೈವರ ಸಮಾಗಮನಗಳಿಗೆ ಅವಕಾಶವಾಗುತ್ತೆ. ಇವರು ನಿಷ್ಪಕ್ಷಪಾತಿಗಳೂ ಧರ್ಮಿಷ್ಠರೂ ಶಾಂತರೂ ಆಚಾರಶೀಲರೂ ದಕ್ಷರೂ ನಿಗರ್ವಿಗಳೂ ಶ್ರೀಮಂತರೂ ಆಗಿಯುವರು. ಮಹಾ ಸಭಾ ಚಾಲಕರು ಇವರಿಗೆ ಅಧ್ಯಕ್ಷಸ್ಥಾನವನ್ನು ಕೊಡುವುದು ಉಚಿತವಾಗಿರುತ್ತದೆ.

ಮಹಾಸಭಾಭಿಮಾನಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ದೀಪಾವಳಿ ಮಹಾಲಕ್ಷ್ಮೀ ಪೂಜಾ ಸಮಾರಂಭೋತ್ಸವವು

ಧಾರವಾಡ ಜಿಲ್ಲಾ ರೋಣತಾಲ್ಲೂಕ ಸೈಕಿ ಹೊಳೆಆಲೂರ ಗ್ರಾಮದಲ್ಲಿ ಇದೇ ಅಶ್ವೀಜ ಬಹುಳ ಮಂಗಳವಾರದ ದಿವಸ ವರ್ತಕಮಂಡಲಿಯವರು ತಮ್ಮ ತಮ್ಮ ಅಂಗಡಿಗಳನ್ನು ನಾರಣಿಕಾಂಣಿಗಳಿಂದಲೂ ತಳಿರುತೋರಣಗಳಿಂದಲೂ ರಂಬಾಸ್ತಂಭಗಳಿಂದಲೂ ಶೃಂಗರಿಸಿ ಸಾಯಂಕಾಲಕ್ಕೆ ಸಾಲುಸಾಲಾಗಿ ಹಚ್ಚಿರುವ ದೀಪಾವಳಿಗಳಿಂದ ಶೋಭಾಯಮಾನವಾಗಿ ಮಾಡಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಅಂಗಡಿಗಳಲ್ಲಿ ಶ್ರೀ ಮಹಾಲಕ್ಷ್ಮಿ ಮೂರ್ತಿಯನ್ನು ಸ್ಥಾಪನಮಾಡಿ ಗುರುವರ್ಗದ ಮಠಾಧಿಕಾರಿಗಳಿಂದ ವಿಧಾನೋಕ್ತ ಪೂಜೆಯನ್ನು ಮಾಡಿಸಿ ಗಣಾಧೀಶ್ವರರನ್ನು ಅನ್ನ ಸಂತರ್ಪಣ, ಭೂರಿದಕ್ಷಿಣಾದಿಗಳಿಂದ ಸತ್ಕರಿಸಿದರು ಮರುದಿವಸ ಕಾರ್ತಿಕ ಶುದ್ಧ ಪಾಡ್ಯ ಬುಧವಾರ ಶ್ರೀ ಸರಸ್ವತಿದೇವಿಯ ಪೂಜೆಯನ್ನು ನಹ ನಡೆಯಿಸಿದರು ಆದೇ ದಿವಸ ಸಾಯಂಕಾಲಕ್ಕೆ ಪಂಚಾಚಾರ್ಯ ಸಂಘದ ಸೆಕ್ರೆಟರಿಗಳಾದ ಗದಿಗೆಪ್ಪಾ ಬೀರನೂರು ||ಮ|| ಮರಿತಮ್ಮಪ್ಪಾ ಕೋಳೇರಿ ಗಂಗಯ್ಯಾ ಮಠಪತಿ ಮಲ್ಲೇಶಪ್ಪ ಗಾಣಿಗರ ಮೊದಲಾದ ಅನೇಕ ಮಹಾಶಯರಿಂದೊಡಗೂಡಿದ ಸಭೆಯಲ್ಲಿ ನಡೆಸಲ್ಪಟ್ಟ ಮ|| ರಾ|| ನಾಗಭೂಷಣಶಾಸ್ತ್ರಿಗಳು ನೆರೆಗಲ್ಲು ಇವರ ಭದ್ರಾಯು ಚರಿತ್ರವಿಷಯವಾಗಿಯೂ ಗುರುವಾರ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹಿಮೆಯ ವಿಷಯವಾಗಿಯೂ ಶುಕ್ರವಾರ ಶ್ರೀ ವೀರಭದ್ರದೇವರು ಹನುಮಂತನಿಗೆ ಲಿಂಗಧಾರಣೆ ಮಾಡಿದ ವಿಷಯವಾಗಿಯೂ ಕೀರ್ತನ ಮಾಡಿದರು. ಮೂರುದಿವಸಗಳವರಿವಿಗೂ ಉತ್ಸವಸಮಾರಂಭವು ಬಹು ವಿಜೃಂಭಣೆಯಿಂದ ನಡೆಯಿತು ಪಂಚಾಚಾರ್ಯ ಸೇವಾ ಸಂಘದ ಸೆಕ್ರೆಟರಿಯವರು ಸದರಿ ಕೀರ್ತನಕಾರರ ಮೂಲಕ ೪ ರೂಪಾಯಿಗಳನ್ನು ಪ್ರಭೆಯ ಸಂರಕ್ಷಣಕ್ಕಾಗಿ ಕಳಿಸಿರುತ್ತಾರೆ. ಮಹಾಗುರುಗಳಾದ ಶ್ರೀಜಗದಾಚಾರ್ಯರು ಸದಾ ಸೌಖ್ಯವನ್ನುಂಟುಮಾಡಲೆಂದು ಹಾರೈಸುತ್ತೇನೆ.

ರೇವಣಸಿದ್ದಯ್ಯ ಭಿಕ್ಷಾವರ್ತಿ ಹಿರೇಮಠ,
ಹೊಳೆ ಆಲೂರು.

ವರ್ತಮಾನಸಂಗ್ರಹ.

ತುರ್ಕಿಸ್ಥಾನದಲ್ಲಿ ಆದ ಜನಗಣತಿಯಿಂದ ಆ ದೇಶದ ಜನಸಂಖ್ಯೆಯು 1,4000000 ವೆಂದು ಗೊತ್ತಾಗುತ್ತದೆ

ಚಾಲಾಕಿನ ಮಹಂದರನ್ನು [illegible] ಕರೀಂಭಕ್ಷನಿಗೆ [illegible] ಟ್ಟಿತು

[illegible] ಪ್ರವಾಹ ಕಷ್ಟ ನಿವಾರಣಾ ನಿಧಿಗಾಗಿ ಇಂಡಿಯಾ ಚಕ್ರವರ್ತಿಯವರು 500 ರೂಪಾಯಿಗಳನ್ನು ದಯಪಾಲಿಸಿರುವರು

[illegible] ಕೌನ್ಸಿಲು [illegible] ಉಮೇದುವಾರರಾಗಿ ನಿಲ್ಲಬಹುದೆಂದು ಸಂಯುಕ್ತ ಪ್ರಾಂತದ ಕೌನ್ಸಿಲ್ಲಿನವರು ಮಂಜೂರ್ ಮಾಡಿದಾರೆ.

ಗ್ರೀಸ್ ಸರ್ಕಾರದವರು ತಮ್ಮ ದೇಶದಲ್ಲಿ [illegible] ಸಂಬಂಧವಾದ ಭೇದಭಾವವನ್ನು ದೂರಮಾಡುವದಕ್ಕಾಗಿ ವಿಶೇಷವಾದ ಪ್ರಯತ್ನವನ್ನು ಮಾಡುತ್ತಾರೆ

ಡಾಕ್ಟರ್ ರವೀಂದ್ರನಾಥ ಟಾಗೂರವರು ತಮ್ಮ ವಿದೇಶಪರ್ಯಟನವನ್ನು ಮುಗಿಸಿಕೊಂಡು ಕಳೆದ ಅಕ್ಟೋಬರ್ 27 ನೆಯ ತಾರೀಖಿನ ದಿವಸ ಕಲ್ಕತ್ತೆಗೆ ಬಂದು ಸೇರಿದರು

ಬಂಗಾಳದ ಗೌರ್ನರವರ [illegible] ವೃತ್ತಪತ್ರಿಕಾಕರ್ತರನ್ನು [illegible] ತ್ರ ಇನ್ನು ಪ್ರಕಾರವಾಗಿಲ್ಲ

ಮದ್ರಾಸ್ ಪ್ರಾಂತಕ್ಕೆ [illegible] ತ್ಸ್ಯಾಹಾರಗಳಿಲ್ಲದೆ [illegible] ಬಡತನದಿಂದ ಕಷ್ಟದಿಂದ [illegible] ದೆ.

ಕಳೆದ 7 ನೆಯ ತಾರೀಖು [illegible] ನಲ್ಲಿ ವಿದ್ಯಾಭ್ಯಾಸದ [illegible] ಸೇರಿದ್ದು ಹೈದರಾಬಾದಿನ ಉಸ್ಮಾನಿಯಾ [illegible] ಹಾಗೆ ಒಂದು [illegible] ಇನ್ನು ಮೂರು ಸ್ಥಳಗಳಲ್ಲಿ [illegible] ಗಳನ್ನು ಸ್ಥಾಪಿಸಬೇಕೆಂದು [illegible]

ಪೂರ್ವಸಮುದ್ರತೀರದಲ್ಲಿ ಭಯಂಕರವಾದ [illegible] ಗಾಳಿಯು ಬೀಸಿ ಅನೇಕ [illegible] ದೊಡ್ಡ ಕಟ್ಟಡಗಳೂ, ಟೆಲಿಗ್ರಾಫ್ ಸ್ತಂಭಗಳೂ [illegible] ಹೋಗಿ ಬಹಳ ನಷ್ಟವಾಗಿರುವುದು. ನೆಲ್ಲೂರಿನಲ್ಲಿಯೇ ಹೆಚ್ಚು ಅನಾಹುತವಾಗಿರುವುದು. ನೂರಾರು ಜನಗಳೂ ದನಕರುಗಳೂ ಮೃತಪಟ್ಟಿರುವುದಾಗಿ ತಿಳಿಯಬರುತ್ತದೆ

ರಷ್ಯಾದೇಶದ ಸೋವಿಯಟ್ ಸರ್ಕಾರದ [illegible] ವಾರ್ಷಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ಏರ್ಪಾಡಾಗಿರುವುದು. ಪರದೇಶಗಳಿಂದ 2 ಸಾವಿರ ಪ್ರತಿನಿಧಿಗಳು ಹೋಗುವರಂತೆ! ಹಿಂದುಸ್ಥಾನದಿಂದ ಪಂ|| ಮೋತೀಲಾಲನೆಹರೂರವರು, ಅವರ ಮಗ ಜವಹರಲಾಲನೆಹರು, ಮದ್ರಾಸಿನ ಸಿಂಗಾರವೇಲುಚೆಟ್ಟಿ ಮೊದಲಾದವರು ಈ ಮಹೋತ್ಸವಕ್ಕೆ ಹೋಗುವವರಾಗಿ ವದಂತಿಯಿದೆ.

ಮಧುರೆಯ ಮೀನಾಕ್ಷೀದೇವಸ್ಥಾನದಲ್ಲಿ ದೀಪಾವಳಿ ಹಬ್ಬದ ದಿವಸ ಎಲ್ಲಾ ವಿಗ್ರಹಗಳಿಗೂ ಖಾದಿಯ ಉಡುಪನ್ನೇ ಧರಿಸಿದ್ದರು. ಇನ್ನುಮುಂದೆ ಶುದ್ಧವಾದ ಸ್ವದೇಶೀ ರೇಷ್ಮೆಯ ಬಟ್ಟೆಯು ದೊರೆಯುವವರೆಗೂ ಕೇವಲ ಖಾದಿಯನ್ನೇ ಉಪಯೋಗಿಸುವುದಾಗಿ ದೇವಸ್ಥಾನದ ಕಾರ್ಯದರ್ಶಿಗಳು ಹೇಳಿದರಂತೆ ಹಿಂದುಸ್ಥಾನದ ಇತರ ದೇವಸ್ಥಾನದ ಕಾರ್ಯದರ್ಶಿಗಳು ಇದನ್ನು ಅನುಸರಿಸುವುದು ಉತ್ತಮವಲ್ಲವೆ?

ಪಿಸಕೋವಿಚ್ ಎಂಬ ಹೆಸರಿನ ಆಸ್ಟ್ರಿಯಾದೇಶದ ದಂತವೈದ್ಯನು ಬಲೇರಿಯಾ ದ್ವೀಪದಲ್ಲಿ ಇರುತ್ತಿರಲು ಇವನು [illegible] ಮನುಷ್ಯನ ಬರುವೆಂಬ ಭೀತಿಯಿಂದ ಅಲ್ಲಿಯವರು. ಇವನ ಗಮನಕ್ಕೆ ಪ್ರತಿಬಂಧಕವನ್ನು ಮಾಡಿ ಶೋಧಿಸುವಲ್ಲಿ ಇವನ ಹತ್ತಿರ ನೋಟುಗಳಿಂದ ತುಂಬಿದ ಪೂರಾ ಪೆಟ್ಟಿಗೆಗಳು, ಒಡವೆಯಲ್ಲಿ ಹುದುಗಿಸಿಟ್ಟ ವಿಶೇಷವಾದ ಚಿನ್ನವೂ [illegible] ಪ್ರಯೋಗಿಸಲ್ಪಡುವ ಪಿಚಕಾರಿಯು ವಿಷವೂ ಸಿಕ್ಕಿ ಹೊರಬಿತ್ತಂತೆ

ಕಳೆದ ತಿಂಗಳ 26 ನೆಯ ತಾರೀಖಿನ ದಿವಸ [illegible] ಏಕಸೀರ್ ಕಾಲುವೆ [illegible] ಮಹೋತ್ಸವವನ್ನು ನೆರವೇರಿಸಿದರು [illegible] ಅನೇಕ ಭಾಗವು ನೀರಿಲ್ಲದೆ ಮರುಭೂಮಿಯಾಗಿತ್ತು. ಈ ಕಾಲುವೆಯಿಂದ ಆ ಭಾಗ [illegible] ನೀರನ್ನು ಹಾಯಿಸಿ [illegible] ಬೆಳೆಯುವಂತೆ ಮಾಡುವರು. ಈ ಕಾಲುವೆಯು [illegible] ಮೈಲುಗಳ ದೂರ ಏಕಸೀರ್ [illegible] ಭಾಗಗಳಲ್ಲಿ ಹರಿಯುವುದು

ಹಿಂದೂಮತವನ್ನು [illegible] ಮಹತ್ತ್ವವನ್ನು ನಿಲಿ [illegible] ಕಲ್ಕತ್ತೆಯಲ್ಲಿ ಸೇರಿದ ಸಭಿಕ [illegible] ಹಿಂದುಗಳು [illegible] ಮುಂಬಾಗದಲ್ಲಿ [illegible] ಮುಂತಾದ ಮೆರವಣಿಗೆಗಳನ್ನು ತೆಗೆದುಕೊಂಡು ಹೋಗುವುದೆಂದೂ [illegible] ಮುಂಬಾಗ ದಲ್ಲಿ [illegible] ಉತ್ಸವಗಳನ್ನು ನಿಧಾನ ಮಾಡಿ [illegible] ಹಿಂದುಗಳಿಗೆ [illegible] ಗಳಲ್ಲಿ [illegible] ತೆಗೆದುಕೊಂಡು ಹೋಗ [illegible] ತೆಗೆದುಕೊಂಡು [illegible] ತಾರೆ

[illegible]

ಕಂದು ಬಿಡಿಸಿದ ಸಿದ್ಧೌಷಧ.

[illegible]

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

[illegible] ಅನುಭವಸಿದ್ಧ ಅನೇಕ [illegible] ಅಜೀರ್ಣ ಹೊಟ್ಟೆ ಉಬ್ಬರ [illegible] ಮುಂತಾದ [illegible] ಕಣ್ಣು ಮತ್ತು [illegible] ನಾಯಿಕೆಮ್ಮಲಿಗೆ [illegible] ಮುಂತಾದ ವಿಷಜಂತುಗಳ ಕಡಿತಕ್ಕೆ [illegible] ಗುಣಪಡಿಸಿರುವುದರಿಂದ [illegible] ಉಪಯೋಗಿಸುತ್ತಿದ್ದರೆ [illegible] ಈ ಜೀವನಾಧಾರವೆಂಬ

ಸಂಜೀವನೌಷಧ

[illegible] ಪ್ರತಿಮನೆಯಲ್ಲಿ ಅಥವಾ ಪ್ರತಿಯೊಬ್ಬನ ಜೇಬಿನಲ್ಲಿ [illegible] ಅನುಭವಸ್ಥನಾದ ಡಾಕ್ಟರೊಬ್ಬನು ಹತ್ತಿರವಿದ್ದಂತೆ [illegible] ಡಾಕ್ಟರಿಗೆ ಕೊಡಬೇಕಾದ ಫೀಜುಗಳನ್ನೂ ಈ ಜೀವನಾಧಾರ [illegible] ಡಾಕ್ಟರಿಗೆ ಕೊಡಬೇಕಾಗಿಲ್ಲ [illegible] ದೊಡ್ಡ ಸೀಸೆ ಒಂದಕ್ಕೆ [illegible] ಟಪಾಲು ಖರ್ಚು ಪ್ರತ್ಯೇಕ [illegible]

ಬಿಸಲವಾಡಿ ತಾ ೨೪-೬-೨೭

[illegible] ಜೀವನಾಧಾರ ಬಾಟ್ಲುಗಳನ್ನು [illegible] ನಾವು ಉಪಯೋಗಿಸುತ್ತಲೂ ಅನೇಕರಿಗೆ ಕೊಡುತ್ತಲೂ [illegible] ಅನೇಕ ರೋಗಗಳು [illegible] ಆದುದರಿಂದ ನಾನು ಶಾಸ್ತ್ರೀಯಾಗಿ [illegible] ಅನುಭವದಲ್ಲಿ [illegible] ಗುಣವಾಗುತ್ತೆ [illegible] ಅನೇಕರಿಗೆ ಹೊಟ್ಟೆನೋವು [illegible] ಅನೇಕ ಮಕ್ಕಳುಗಳ [illegible] ಬಾಯಿಗಳು [illegible] ಗುಣವಾಗಿರುತ್ತೆ

2 ಪಟೇಲ್ ಮುದ್ದು ಬಸವಯ್ಯ

ಜೀವನಾಧಾರ ಡಿಪ್ಪೋ, ಹುಬ್ಬಳ್ಳಿ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಪುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿತ್ತ ಒಂಟಿತಲೆನೋವು ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಬಿಳಿದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಹೊಗೆಸೊಪ್ಪಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-[illegible]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. [illegible]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[24] ಪೋ. ಬಾ. ೨೧೦. ಮದರಾಸು

ASIATIC GOVERNMENT SECURITY
LIFE ASSURANCE CO LTD MYSORE
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್‌ಅಸ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಆದ್ದರಿಂದ ಯಾವಾಗಲೂ 'ಏಷ್ಯಾಟಿಕ್" ಕಂಪ ನಿಯಲ್ಲಿಯೇ ವಿಮೆಮಾಡಿರಿ

ಏಕಂದರೆ ಇದರ ದರಗಳು ಬಹಳ ಕಡಿಮೆಯವಾಗಿ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭ ವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದ ತಮ್ಮ ಸ್ವಂತ ಪಾ ಲಿಸಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತೇವೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾ ಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯುತ್ತದೆ

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವ ರಿಗೆ ಬರೆಯಬಹುದು

(1) ಎಂ. ವಿ ರಾಘವೇಂದ್ರ, ಚೀಫ್ ಏಜಂಟ್,
ಏಷಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್
ರೋಡ್, ಮೈಸೂರು
(2) ಮೆ|| ಬಿ. ಎಸ್. ಆರಾಧ್ಯ
ಚೀಫ್ ಏಜಂಟ್ ಹುಬ್ಬಳ್ಳಿ ಮತ್ತು ಬಳ್ಳಾರಿ
(3) ಹೈದರಾಬಾದ್ [illegible] ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಖ)
[12]

ಮೈಸೂರು, ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾ ವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಶಿ ಗುರುಶಾ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಶಿವತ್ವಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ ನೇ ನವಂಬರ್ ೧೯೨೭ [ಸಂಚಿಕೆ ೨೮.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಠಸ್ಥಾಪನೆ.

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಕಣ್ಣೆಬಾಳು ಗ್ರಾಮವು ತುಗರಿನದಿ ದಂಡೆಯಲ್ಲಿ ನೂರಾರು ಬಿಲ್ವ ವೃಕ್ಷಗಳಿಂದಲೂ ವಿಧವಿಧವಾದ ಪುಷ್ಪಗಳಿಂದಲೂ ಬಾಳೆ ಮತ್ತು ತೆಂಗಿನ ತೋಟಗಳಿಂದಲೂ ಭಕ್ತಮಾಹೇಶ್ವರರಿಂದಲೂ ಒಪ್ಪುತ್ತಿರುವುದು. ಈ ಗ್ರಾಮದಲ್ಲಿ ಭಕ್ತರಿಗೆ ಬೇಕಾದ ಗುರುಭಕ್ತಿ ಲಿಂಗನಿಷ್ಠೆ ಮೊದಲಾದ ವೀರಶೈವ ತತ್ವಗಳನ್ನು ಬೋಧಿಸಿ ಪುನೀತರನ್ನಾಗಿ ಮಾಡುವಂಥ ಮಠಾಧಿಕಾರಿಗಳು ಯಾರೂ ಇಲ್ಲದುದರಿಂದ ಈ ಕೊರತೆಯಿಂದ ವ್ಯಸನಪಡುತ್ತಿರುವ ಭಕ್ತರ ಪುಣ್ಯಬಲದಿಂದ ವೇ|| ಮಲ್ಲಪ್ಪಯ್ಯನವರನ್ನು ನಮ್ಮ ಗ್ರಾಮಕ್ಕೆ ಮಠಾಧಿಕಾರಿಗಳನ್ನಾಗಿ ನೇಮಿಸಿಕೊಂಡರೆ ನಮ್ಮ ಗ್ರಾಮದ ವೀರಶೈವ ಜನಾಂಗವು ಅಭಿವೃದ್ಧಿಗೆ ಬರುವುದಕ್ಕೆ ಸಂದೇಹವಿಲ್ಲೆಂದು ತಿಳಿದು ಸದರಿ ಮಲ್ಲಪ್ಪಯ್ಯನವರನ್ನು ನಮ್ಮ ಗ್ರಾಮಕ್ಕೆ ಮಠಾಧಿಕಾರಿಗಳನ್ನಾಗಿ ನೇಮಿಸಿ ಭಕ್ತರಾದ ನಮ್ಮನ್ನು ಉದ್ಧಾರ ಮಾಡಬೇಕೆಂದು ಶ್ರೀ ಜಗದ್ಗುರು ಕೇದಾರ ಪೀಠದ ಪಟ್ಟಾಧ್ಯಕ್ಷ ಚಿದ್ಘನ ಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಮಹಜರ್ ಮೂಲಕ ಬಿನ್ನಹ ಮಾಡಿಕೊಳ್ಳಲು ಶ್ರೀಗಳವರು ನಮ್ಮ ಬಿನ್ನಹವನ್ನು ಅಂಗೀಕರಿಸಿ ಮಠಾಧಿಪತಿಗಳನ್ನಾಗಿ ಆಶೀರ್ವದಿಸಿದರು. ಇದೇ ವಿಷಯವನ್ನು ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪಾದಾರವಿಂದಗಳಿಗೆ ಬಿನ್ನಹ ಮಾಡಿಕೊಳ್ಳಲು ಅವರೂ ಸಹ ಬೃಹನ್ಮಠವೆಂಬ ಬಿರುದನ್ನು ದಯಪಾಲಿಸಿದರು.

ಕಾರ್ತಿಕ ಶುದ್ಧ ನವಮಿ ಗುರುವಾರ ಸಾಯಂಕಾಲ ೬ ಘಂಟೆಗೆ ಉಜ್ಜಯಿನೀ ಪೀಠದ ಶ್ರೀ ಮರುಳಸಿದ್ಧ ಸ್ವಾಮಿಗಳವರು ಕಣ್ಣೆಬಾಳಿಗೆ ಉತ್ಸವದೊಡನೆ ದಯಮಾಡಿಸಿದರು. ಉತ್ಸವವು ಮುಗಿದನಂತರ ಲಿಂಗಮುದ್ರಾ ಸ್ಥಾಪನಾಕಾರ್ಯವನ್ನು ವಿಧ್ಯುಕ್ತವಾಗಿ ಶ್ರೀಗಳವರ ಆಜ್ಞೆ ಪ್ರಕಾರ ಪಡುಗೋಳದ ಶ್ರೀ ಚರಮೂರ್ತಿ ಸ್ವಾಮಿಗಳವರು ನೆರವೇರಿಸಿದರು ಈ ಸ್ಥಾಪನಾ ಕಾರ್ಯಕ್ಕಾಗಿ ಒಡಬಲ ಗ್ರಾಮದ ಮಠಾಧಿಕಾರಿಗಳು ಭಕ್ತಮಾಹೇಶ್ವರರೂ ಬಂದಿದ್ದರು. ಇವರಿಗೆಲ್ಲಾ ತಾಂಬೂಲ ಉಡುಪು ಮೊದಲಾದವುಗಳನ್ನು ಮಠಾಧಿಕಾರಿಗಳಾದ ಕೆ. ಮಲ್ಲಪ್ಪಯ್ಯನವರಿಂದ ಕೊಡಲ್ಪಟ್ಟವು. ವೇ|| ಕೆ. ಮಲ್ಲಪ್ಪಯ್ಯನವರು ಮುದ್ರಾ ಗ್ರಾಮದ ವೀರಶೈವ ವಿದ್ಯಾರ್ಥಿಗೆ ಐದುನೂರು ಪ್ರತಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದರು. ಇಂಥ ಉತ್ಕೃಷ್ಟ ಕಾರ್ಯಗಳು ನಡೆಯುವದನ್ನು ನೋಡಿದರೆ ನಮ್ಮ ವೀರಶೈವ ಮತವು ಬೆಳೆಯಲು ಪಂಚಾಚಾರ್ಯರ ಕೃಪೆಯು ಇದೆಯೆಂಬುವದಕ್ಕೆ ಏನೂ ಅಡ್ಡಿಯಿಲ್ಲ ಮಠಸ್ಥಾಪನೆಯ ಕಾಲಕ್ಕೆ ಪಂಚಾಚಾರ್ಯಪ್ರಭೆಯ ಪೋಷಣಾಕ್ಕಾಗಿ 2 ರೂಪಾಯಿ ಕಳುಹಿಸುವುದಾಗಿ ವೇ|| ಕೆ. ಮಲ್ಲಪ್ಪಯ್ಯನವರು ವಾಗ್ದಾನ ಮಾಡಿರುತ್ತಾರೆ ಮರುದಿವಸ ಈ ಗ್ರಾಮದ ಮತ್ತು ನೆರೆ ಗ್ರಾಮದ ಸಾವಿರಾರು ಮಂದಿ ಭಕ್ತಮಾಹೇಶ್ವರರನ್ನು ಮೃಷ್ಟಾನ್ನ ಭೋಜನ ದಕ್ಷಿಣೆ ಉಡುಪು ಮುಂತಾದವುಗಳಿಂದ ತೃಪ್ತಿಗೊಳಿಸಲಾಯಿತು.

ಮಠಸ್ಥಾಪನೆಯ ಕಾರ್ಯದರ್ಶಿಗಳು,

ಕುಪ್ಪನದ ಬಸಪ್ಪ, ಬಿ. ಪತ್ರಿಬಸವನಗೌಡ, ಕೆ. ಕೊಟ್ರಬಸಪ್ಪ. ಗುಗ್ರಿಕೊಟ್ರಬಸಪ್ಪ ಕೋಡಿಹಳ್ಳಿ ಕೊಟ್ರಬಸಪ್ಪ, ಕೆ ಶಿವಸಂಗಪ್ಪ, ಜಿ. ಚನ್ನಬಸವನಗೌಡ, ರುದ್ರಣ್ಣನವರ ಕೊಟ್ರಪ್ಪ ಮಿಸೆ ರೆಡ್ಡಿ ಬಸವನಗೌಡ, ಕೊಟ್ಟೂರು ಕುಪ್ಪದ ಕೊಟ್ರಪ್ಪ. ಮುಂತಾದವರು

ಕುಪ್ಪನದಬಸಪ್ಪ, ಕಣ್ಣೆಬಾಳು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಧರ್ಮಸುಧಾರಕಸಭಾ ಹುಮನಾಬಾದ.

ಸಮಾಜಬಂಧುಗಳೇ, ಗುಲಬುರ್ಗಾ ಜಿಲ್ಲಾ ಪ್ರಸಿದ್ಧ ಹುಮನಾಬಾದ ಎಂಬ ಪಟ್ಟಣಕ್ಕೆ ಷಟ್‌ಸ್ಥಲ ಬ್ರಹ್ಮಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಆಗಮಿಸಿ ಸುಪ್ರಸಿದ್ಧವಾದ ಹಿರೇಮಠದಲ್ಲಿ ವಾಸವಾಗಿದ್ದರು. ಮಹಾಸ್ವಾಮಿಗಳು ದಯಮಾಡಿಸಿದಾಕ್ಷಣವೇ ಸಮಸ್ತ ಭಕ್ತಮಾಹೇಶ್ವರರು ದರ್ಶನಾಶೀರ್ವಾದವನ್ನು ಪಡೆದುಕೊಂಡು ಹೋದರು. ಮರುದಿವಸ ತಾ|| ೧೯-೧೧-೨೭ ನೇ ದಿವಸ ಹಿರೇಮಠದಲ್ಲಿ ವೀರಶೈವ ಧರ್ಮಸುಧಾರಕ ಸಭೆಯು ನಡೆಯಿತು ಸಭೆಯ ಅಧ್ಯಕ್ಷಸ್ಥಾನವನ್ನು ಚಿಕ್ಕಮಣ್ಣೂರು ಶ್ರೀಗಳವರು ವಹಿಸಿದ್ದರು. ಇಲ್ಲಿಯ ಪ್ರಮುಖರಾದ ವೇ|| ಕರಿಬಸವಯ್ಯ ಶಾಲಾಮಾಸ್ತರ, ವೇ|| ಶಿವಯ್ಯನವರು ಮಠಪತಿ, ರಾ|| ರಾ|| ಶ್ರೀ ಮಡಿವಾಳಪ್ಪ ಮಾಲೀಪಾಟೀಲ ವಕೀಲ ರಾ|| ಭೀಮರಾವ ಪೊಲೀಸ್ ಪಾಟೀಲ ವಕೀಲ, ರಾ|| ಸಂಗಪ್ಪನವರು ಮೋಟಾರ್ ಮ್ಯಾನೇಜರ್ ಮೊದಲಾದ ಭಕ್ತಮಾಹೇಶ್ವರರು ಬಂದಿದ್ದರು. ಇದೂ ಅಲ್ಲದೆ ಪರಮತದ ಪ್ರಮುಖರೂ ಬಂದಿದ್ದರು. ರಾ|| ಸಂಗಪ್ಪನವರು ಮ್ಯಾನೇಜರ್ ಮೊದಲಾದವರ ವ್ಯಾಖ್ಯಾನಗಳು ಆದವು. ಆಮೇಲೆ ಅಧ್ಯಕ್ಷರಾದ ಮಹಾಸ್ವಾಮಿಗಳು ವೀರಶೈವಮತದ ವಿಷಯವಾಗಿಯೂ ಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಮಹತ್ವದ ವಿಷಯವಾಗಿಯೂ ಸರಸವಾಗಿ ವ್ಯಾಖ್ಯಾನ ಮಾಡಿದನಂತರ ಅನೇಕರು ತಮಗುಂಟಾದ ಸಂಶಯವನ್ನು ಶ್ರೀಗಳವರಲ್ಲಿ ಪ್ರಶ್ನೆಮಾಡಿ ನಿವಾರಣೆ ಮಾಡಿಕೊಂಡರು. ಇವರ ಶಾಸ್ತ್ರೀಯವಾದ ಭಾಷಣವನ್ನು ಕೇಳಿ ಪರಮತೀಯರೂ ಸಂತೋಷಪಟ್ಟರು. ಈಗಿನ ಕಾಲದಲ್ಲಿ ಚಿಕ್ಕಮಣ್ಣೂರು ಪಟ್ಟದ ಸ್ವಾಮಿಗಳವರಂತೆ ನಮ್ಮ ಗುರುವರ್ಗದ ಸಮಸ್ತ ಪಟ್ಟಾಧಿಕಾರಿಗಳೂ ವಿದ್ವಾಂಸರಾಗಿ ಬ್ರಹ್ಮಚರ್ಯಾದಿ ಗುಣಗಳನ್ನಾರ್ಜಿಸಿ ಸಮಾಜಕಾರ್ಯದಲ್ಲಿ ತೊಡಗಿ ಎಲ್ಲೆಲ್ಲಿ ಸಂಚರಿಸಿ ಭಕ್ತರಿಗುಪದೇಶಮಾಡುತ್ತ ಹೋದರೆ ನಮ್ಮ ವೀರಶೈವ ಸಮಾಜವು ಮುಂದೆ ಬರಲು ಏನೂ ಸಂಶಯವಿಲ್ಲ ಈ ನಿಜಾಮ ಇಲಾಖಾದಲ್ಲಿ ಮತಸ್ಥಾಪಕರಾದ ಶ್ರೀ ಪಂಚಾಚಾರ್ಯರ ವಿಷಯಗಳು ಪರಿಚಯವಿಲ್ಲವು. ಈ ಪ್ರಾಂತಕ್ಕೆ ಜಗದಾಚಾರ್ಯರ ಆಗಮನವಾಗಬೇಕೆಂದು ಸರ್ವರೂ ಅಪೇಕ್ಷೆಮಾಡುತ್ತಾರೆಂದು ತಿಳುಹಿಸಲು ಏನೂ ಸಂಶಯವಿಲ್ಲ ಈ ಪ್ರಾಂತಕ್ಕೆ ಬೇಗನೆ ಆಚಾರ್ಯರು ಆಗಮನಮಾಡಿ ಶಿಷ್ಯರನ್ನು ಉದ್ಧಾರಮಾಡಬೇಕೆಂದು ಪ್ರಾರ್ಥಿಸುತ್ತೇವೆ

ಸಿದ್ಧರಾಮಯ್ಯ ಭಂಗಿ, ಸರ್ವಭಾಸ್,
ಹುಮನಾಬಾದ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ಮಹಸ್ಸ್ವರೂಪ ಪರಾಭವ	೬ ಆಣೆ
ಗೋತ್ರಸೂತ್ರಪಟ ೨ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ಕನ್ನಡಟೀಕಸಹ ೨ನೆಯ ಆವೃತ್ತಿ	೬ ಆಣೆ
ಬಸವಧ್ವಾಂತ ದಿವಾಕರ	೧೦ ಆಣೆ
ಬಸವಾದಿ ಸಜಾತ್ಯದರ್ಶನ ೩ನೆಯ ಆವೃತ್ತಿ	೪ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ ೨ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೨ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	೧|| ಆಣೆ
ಉಪನ್ಯಾಸ ಸಂಗ್ರಹ	೧ ರೂ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್
ಸಯ್ಯಾಜಿರಾವ್ ರೋಡ್ ಮೈಸೂರು

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವಮತ ಮೀಮಾಂಸಾ.

(ಲೇಖಕರು)

ಶ್ರೀ, ಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಂಗಮಾರಾಧ್ಯ
ಗುರುಕುಲವಾಸೀ ವ್ಯಾಕರಣರತ್ನಂ ವೇ||
ಶ್ರೀ ಪುರಗಿರಿ ಚಿಕ್ಕಬಸವಾಚಾರ್ಯಃ

[ಹಿಂದಿನ ಮುಂದೆ ಸಾಗಿದುದು]

ಶ್ರೀಮದಾಚಾರ್ಯಪಾದರಿಂದ ಶಿವದೀಕ್ಷೆಯ (ಉಪನಯನವ)ನ್ನು ಪಡೆದು ಶ್ರೀಮದಾಚಾರ್ಯರ ಸಾನ್ನಿಧ್ಯದಲ್ಲಿ ಸ್ನಾನಸಂಧ್ಯಾರ್ಚನ ಮಂತ್ರಸ್ನಾನಾದಿಗಳ ವಿಧಾನವನ್ನು ಚೆನ್ನಾಗಿ ತಿಳಿದು ಅಷ್ಟಾವರಣ ಸಂಪನ್ನನೂ ಪಂಚಾಚಾರ ಪರಾಯಣನೂ ಶ್ರೀಗುರುಭಕ್ತಿಯುತನೂ ಆಗಿ ವೇದವೇದಾಂಗ ಉಪಾಂಗ ವೇದಾಂತ ಶಾಸ್ತ್ರಗಳನ್ನು ಅಧ್ಯಯನ ಮಾಡಿ ವೇದಾಂತ (ಶಕ್ತಿವಿಶಿಷ್ಟಾದ್ವೈತ) ಶಾಸ್ತ್ರದಲ್ಲಿ ಅಧಿಕಾರಿಯೆನಿಸಿ ಶ್ರೀ ಜಗದ್ಗುರು ರೇವಣಸಿದ್ಧಶಿವಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ಬೋಧಿಸಿದ ಪಿಂಡಾದಿ ಜ್ಞಾನಶೂನ್ಯಾಂತವಾಗಿ ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಗಳೆಂಬ ಷಟ್ಸ್ಥಲಗಳೇ ಮುಖ್ಯವಾಗಿ ನೂರೊಂದು ಸ್ಥಲ ರೂಪವಾಗಿರುವ ಅಂಗವೆಂಬ ಜೀವನಸಂಬಂಧಗಳಾದ ಆ ಸ್ಥಲಭೇದಗಳನ್ನೂ ಲಿಂಗವೆಂಬ ಶಿವತತ್ವದ ಆ ಸ್ಥಲಭೇದಗಳನ್ನೂ ಚೆನ್ನಾಗಿ ತಿಳಿದು ಭಕ್ತಿಪೂರ್ವಕವಾಗಿ ಅನುಷ್ಠಿಸುತ್ತಿರಬೇಕು. ಈ ತರದ ಲಕ್ಷಣ ಸಂಪನ್ನನಾದವನೇ ವೇದಾಂತಕ್ಕೆ ಅಧಿಕಾರಿಯಾಗುವನು. ಇಂತಪ್ಪ ಮಾಹೇಶ್ವರರು ಪ್ರಥಮವಾಕ್ಯದಲ್ಲಿಯೇ ಇರಲಿ ದ್ವಿತೀಯವಾಕ್ಯದಲ್ಲಿಯೇ ಇರಲಿ 'ಸ್ವಜಾತಿವಿಹಿತಂ ಕರ್ಮ ಕುರ್ವಂತಃ ಪೂಜಯಂತಿಯೇ ಭಕ್ತ್ಯಾ ಶ್ರೀಕಂಠಮೀಶಾನಂ ತೇವೈ ಮಾಹೇಶ್ವರಾಸ್ಮೃತಾಃ|| ಎಂದು ಶ್ರೀ ಭಾಷ್ಯಕಾರರು ಅಪ್ಪಣೆ ಕೊಡಿಸಿದಂತೆ ಮಾಹೇಶ್ವರರಿಗೆ ವಿಹಿತವಾದ ಅಧ್ಯಯನ ಅಧ್ಯಾಪನ ಯಜನ ಯಾಜನಾದಿ ಷಟ್ಕರ್ಮಗಳನ್ನು ಮಾಡುತ್ತಲೇ ಭಕ್ತಿಯಿಂದ ಶ್ರೀಕಂಠನನ್ನು ಯಾವಾಗಲೂ ಪೂಜಿಸುವರೋ ಅವರೇ ಮಾಹೇಶ್ವರರಾಗುವರೆಂಬ ಮೇಲೆ ತ್ರೈವರ್ಣಿಕತೆಯು ಮಾಹೇಶ್ವರರಿಗೆ ಹೇಳಲ್ಪಟ್ಟಂತಾಯಿತು. ಇನ್ನು "ಜನನ ಶಿವನಿಯೂ ದೀಕ್ಷಾ ..." ಎಂದು ಶಿವಪಿತನ ಸನ್ನಿಧಾನದಲ್ಲಿ ದೀಕ್ಷೆಯು ಅವಶ್ಯವೆಂದು ಹೇಳುವದರಿಂದ ಉಪನಯನಕಾಲದಲ್ಲಿ ಲಿಂಗಧಾರಣೆಯ ಸಹಿತ ಶ್ರೀ ಗುರುವು ಮುಕ್ತಿಗೆ ಸಾಧನಗಳಾದ ಯಾವ ಆಚಾರಗಳನ್ನು ಕಲ್ಪಿಸಿಕೊಟ್ಟಿರುವನೋ ಅಂತಹ ವೈದಿಕಾಚಾರಗಳನ್ನು ಪರಿಪಾಲಿಸಬೇಕಾಗುವವರಿಗೆ ನಡೆಯಬೇಕೆಂದು ಸಿದ್ಧವಾಯಿತು. ಮತ್ತು ಕೇವಲ ದೀಕ್ಷೆಯಿಂದಲೇ (ಕರ್ಮದಿಂದಲೇ) ಮೋಕ್ಷವು ಲಭಿಸುವದೆಂದೂ ಅಥವಾ ಜ್ಞಾನಾದಿ ವೇದಾಂತವಿಚಾರದಿಂದೇನು ಪ್ರಯೋಜನವೆಂದು ಶಂಕೆ ಬರುವದು. ಅದಕ್ಕುತ್ತರವೇ ಭಾಷ್ಯಕಾರರು ಸಮಾಧಾನದಿಂದ ಎಲ್ಲವನ್ನು ತೋರಿದ್ದರೂ ಶಾಸ್ತ್ರವಿಧಿಯನುಸರಿಸಿಯೂ ಪರಮೇಶ್ವರಾಜ್ಞೆಯನ್ನು ಪರಿಪಾಲಿಸಬೇಕಾದವರಿಗೆ ಆವಶ್ಯಕವಾಗಿರುವದರಿಂದ "ಆಪ್ರೋಕ್ತಶಾಸ್ತ್ರಕೇಃ ಕಾಲಃ ಸಯೋವ್ವೇದಾಂತಚಿಂತನಾ' ಹೊಲಗುವವರಿಗೂ ಮರಣವಾಗುವವರಿಗೂ ಮಾಹೇಶ್ವರನು ವೇದಾಂತವಿಚಾರದಲ್ಲಿ ಕಾಲವನ್ನು ಕಳೆಯಬೇಕೆಂದು ಹೇಳುವದರಿಂದ ವೇದಾಂತಶಾಸ್ತ್ರದ ಆವಶ್ಯಕತೆಯೂ ಬೇಕಾಯಿತು. ಅದ್ದರಿಂದ ಶ್ರೀ ಜಗದಾಚಾರ್ಯ ರೇಣುಕ ಭಗವತ್ಪಾದರು "ಶೀಲ ಸಂಪಾದನೆ" ಎಂಬ ಸ್ಥಲದಿಂದ ಉಭಯತ್ವಾ ಸಾಪೇಕ್ಷತೆಯನ್ನು ಅಪ್ಪಣೆ ಕೊಡಿಸಿದರು. ವೇದಾಂತ ವಿಚಾರವನ್ನು ಬಿಟ್ಟರೆ ಲಿಂಗಾಂಗ ಜ್ಞಾನವು ದೃಢವಾಗದೆ ಹೋದೀತು. ಮತ್ತು ಕಾಮಕ್ರೋಧಾದಿಗಳು ಪುನಃ ಅಂತಃಕರಣದಲ್ಲಿ ಪ್ರವೇಶವಾದಾವು. ಹಾಗಾಗದೆ ಶಿವಸಂಸ್ಕಾರವು ದೃಢವಾಗಿರಲೆಂಬುದ್ದೇಶದಿಂದ ಜಗದಾಚಾರ್ಯರು ಉಪನಿಷದಾದಿ ಶಾಸ್ತ್ರಚಿಂತನೆಯನ್ನು ಬೋಧಿಸಿರುವರು ಇನ್ನು ಕೆಲವರು ಕ್ರಿಯೆಯೇ ಮೋಕ್ಷಕ್ಕೆ ಸಾಧನವೆಂಬುವರು. ಮತ್ತೆ ಕೆಲವರು ಜ್ಞಾನದಿಂದಲೇ ಮುಕ್ತಿಯು ಲಭಿಸುವದೆಂದು ಹೇಳುವರು. ಆದರೆ ಶ್ರೀ ಜಗದ್ಗುರು ಪಂಚಾಚಾರ್ಯರ ಶಾಸ್ತ್ರದಲ್ಲಿ ಉಭಯಾವಶ್ಯಕತೆಯು ಇರುವದು. ಶ್ರೀ ಜಗದಾಚಾರ್ಯರು ಬೋಧಿಸಿದ್ದೇನೆಂದರೆ ಜ್ಞಾನವು ಸಿದ್ಧವಾದಾಗ್ಯೂ ಮಾಹೇಶ್ವರರಿಗೆ ಕರ್ಮವು ಬೇಕು. ಇನ್ನು ಕರ್ಮವೆಂದರೆ ಸ್ವರ್ಗ ಮುಂತಾದ ನಶ್ವರ ಸುಖಗಳನ್ನು ಕೊಡತಕ್ಕ ಯಜ್ಞಾದಿಗಳಲ್ಲವು! ನಿಷ್ಕಾಮನೆಯುಳ್ಳ ಮುಕ್ತಿಪ್ರದವಾದ ಲಿಂಗಾರ್ಚನಾದಿಗಳೇ ಕರ್ಮವು. ಈ ಲಿಂಗಾರ್ಚನಾದಿ ಸತ್ಕರ್ಮಗಳು ಮರಣಪರ್ಯಂತರವೂ ಗ್ರಾಹ್ಯಗಳಾಗಿರುವವು ಏಕೆಂದರೆ ಆಚಾರವೇ ಸರ್ವರಿಗೂ ಅಲಂಕಾರಪ್ರಾಯವಾಗಿರುವದು. ಆಚಾರಹೀನನು ಲೋಕದಲ್ಲಿ ನಿಂದ್ಯನಾಗುವನು. ಅದ್ದರಿಂದ ಜ್ಞಾನಕರ್ಮಗಳೆರಡೂ ಕುರುಡ ಕುಂಟರಂತೆ ಇರುವವು. ಆದರೆ ಕುರುಡನು ಮಾರ್ಗವನ್ನು ಅರಿಯನು. ಕುಂಟನು ಕಣ್ಣಿದ್ದರೂ ಕಾಲಿಲ್ಲದ್ದರಿಂದ ಮುಂದಕ್ಕೆ ಹೋಗಲು ಶಕ್ತನೇ ಇಲ್ಲ. ಇಬ್ಬರೂ ಕೂಡಿದರೆ ನಡೆಯನ್ನು ಸಾಗಿಸುವರು. ಹಾಗೆ ಜ್ಞಾನ ಕರ್ಮಗಳೆರಡೂ ಪರಸ್ಪರಸಾಪೇಕ್ಷಗಳಾಗಿರುವದರಿಂದ ಲಿಂಗಧಾರಿಯಾದ ನೀನು ಶಿವಾಜ್ಞಾಪಾಲನಾರ್ಥವಾಗಿ ಶಿವಾರ್ಚನ ಮೊದಲಾದ ಕರ್ಮವನ್ನು ಆಚರಿಸುತ್ತ ವೇದಾಂತಚಿಂತನೆಯನ್ನು ಮಾಡುತ್ತಿರಬೇಕೆಂಬಲ್ಲಿಗೆ ಜ್ಞಾನಕರ್ಮಗಳೆರಡರ ಆವಶ್ಯಕತೆಯು ಸಂಪೂರ್ಣವಾದುದು.

(ಮುಂದೆ ಸಾಗುವುದು)

ಶ್ರೀ ಚರಪಟ್ಟಾಧಿಕಾರ ಮಹೋತ್ಸವವು

ಧಾರವಾಡ ಜಿಲ್ಲಾ ಸಂಸ್ಥಾನ ಸವಣೂರಿನಲ್ಲಿ ಶ್ರೀ ಗಿರಿ ಜಗದ್ಗುರು ರಂಭಾಪುರಿ ಪೀಠಸ್ಥಾನ ಶಾಖಾಮಠವಾದ ಚರಂತೀ ಮಠವು ಅನಾದಿಯಾಗಿ ನಮ್ಮ ನವಾಬ ಸಂಸ್ಥಾನ ಸರಕಾರದ ಪ್ರೋತ್ಸಾಹಗೊಳಪಟ್ಟು ಇಲ್ಲಿಯ ವೀರಶೈವ ಮಠಗಳಲ್ಲಿ ಪ್ರಧಾನ ಸ್ಥಾನೀಯವಾದ ಒಂದು ಮಠವಾಗಿರುತ್ತದೆ. ಈ ಮಠದ ಸ್ವಾಮಿಗಳು ಶಿವಾರ್ಪಿತರಾಗಿ ಬಹಳ ದಿನಗಳಾಗಿದ್ದವು. ಆದರೂ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರ ಕೃಪಾಕಟಾಕ್ಷದಿಂದ ಸುಯೋಗ್ಯ ದೊರೆತು ನವಮಠದ ವೇ|| ಸಂಗಪ್ಪಯ್ಯನವರ ಪುತ್ರರಾದ ಶಾಂತವೀರಸ್ವಾಮಿ ಎಂಬುವರು ವಿದ್ಯಾಚಾರಾದಿ ಸದ್ಗುಣಸಂಪನ್ನರೂ, ಶಾಂತಚಿತ್ತರೂ ಏಕಾಂತರೂ ಇದ್ದು ಸರ್ವಜನರ ಆದರಕ್ಕೆ ಪಾತ್ರರಾಗುತ್ತಿರುವದರಿಂದ ಅವರಿಗೆ ಈ ಚರಂತೀಮಠದ ಚರಪಟ್ಟಾಧಿಕಾರವು ಆಗಬೇಕೆಂಬುವದು ಇಲ್ಲಿಯ ವೀರಶೈವರೆಲ್ಲರ ಅಪೇಕ್ಷೆಯಿದ್ದುದರಿಂದ ಈ ಮಹಾಕಾರ್ಯಕ್ಕೆ ಇದೇ ಪ್ರಭವನಾಮ ಸಂವತ್ಸರದ ಕಾರ್ತೀಕ ಮಾಸ ಶುಕ್ಲಪಕ್ಷ ೧೧ ಸೋಮವಾರ ಮುಹೂರ್ತವನ್ನು ನಿಶ್ಚಯಿಸಿ, ಬೇಕಾದ ಸಾಮಗ್ರಿಗಳೂ ಕೂಡಿಸಲ್ಪಟ್ಟಿದ್ದವು ಈ ಕಾರ್ಯಕ್ಕೆ ಆಮಂತ್ರಣವನ್ನು ಕೊಟ್ಟಂತೆ ಸ|| ಬ್ರ|| ಹೊಳೆಹೊನ್ನೂರು ಪುರಾಣ ಮಠದ ಶ್ರೀ ಪಟ್ಟದಸ್ವಾಮಿಗಳೂ, ಹಿರೇಬೆಂಡಿಗೇರಿ ಕಂಬಾಳೀ ಮಠದ ಸ|| ಬ್ರ|| ಶ್ರೀ ಪಟ್ಟದ ಸ್ವಾಮಿಗಳೂ, ವೇ|| ಮೂ|| ಸೂಣಕಲ್ಲ ಐದು ಆರಾಧ್ಯ ಮಠದ ಬಸವಲಿಂಗ ಶಾಸ್ತ್ರಿಗಳೂ ಆಗಮಿಸಿದ್ದರು. ಮಠದಲ್ಲಿ ಸಂಸ್ಕಾರ ಮಂಟಪವು ಅಲಂಕೃತವಾಗಿದ್ದಿತು. ಈ ಸವಣೂರ ಗ್ರಾಮದ ಮುಖಂಡರಾದ ವೇ|| ಗದಿಗೆಯ್ಯನವರು, ಶಂಭಿನಮಠದ, ವೇ|| ರುದ್ರಯ್ಯನವರು ಕಾಸುಯೋಗಿಗಳ ಗುರುಗಳು ವೇ|| ಗದಿಗೆಯ್ಯನವರು, ಸಾಲೀಮಠದ, ವೇ| ಸಿದ್ಧಾಮಯ್ಯನವರು, ಅಗಡೀಮಠ, ವೇ| ಶಂಕರಯ್ಯನವರು, ಮಾಜಿಮಾಸ್ತರ ವಗ್ಗರೆ ಮರಡಯ್ಯನವರು, ಮ|| ರಾ| ರಾ| ಚನ್ನಬಸಪ್ಪನವರು ಹಾವೇರಿ ಮ| ಬಸಪ್ಪಣ್ಣಾ ಅಂತಪುರಕೋಟಿ ಗೋಳಪ್ಪಣ್ಣಾ ಮಂಡಲೇಕಟ್ಟಿ, ಬಸವಣ್ಣೆಪ್ಪಣ್ಣಾ ಗುಡಿಗೇರಿ, ದುಂಡಪ್ಪಣ್ಣಾ ಹೊಸಮನಿ ಗದಿಗೆಪ್ಪಣ್ಣಾ ದಾಗ, ವೀರಬಸಪ್ಪಣ್ಣಾ ಶಿಗ್ಗಾವಿ, ಬಸಪ್ಪಣ್ಣಾ ಕಬನೂರು, ವೀರಪ್ಪಣ್ಣಾ ಹೊಂಡದಕಟ್ಟಿ ದ್ಯಾಮಪ್ಪ ಅಣ್ಣಾ ಕುಲಕರ್ಣಿ, ನಿಂಗಪ್ಪ ಅಣ್ಣಾ ಕುಲಕರ್ಣಿ, ಹನುಮನಪ್ಪಣ್ಣಾ ಮಿರ್ಜಿ, ಚೆನ್ನಬಸಪ್ಪಣ್ಣಾ ಮಿರ್ಜಿ, ವಿರೂಪಾಕ್ಷಪ್ಪಣ್ಣಾ ಅಂಕಲಕೋಟಿ, ಬಸವಲಿಂಗಪ್ಪಣ್ಣಾ ಗುಡಿಗೇರಿ, ಬಸಪ್ಪಣ್ಣಾ ಮುದುಕೇಕರಿ, ನಿಂಗಪ್ಪ ಅಣ್ಣಾ ಮಿರಾಜಿಗಾರ, ದಾನಪ್ಪಣ್ಣಾ ಬಾಲೀಕಾಯಿ, ಶಿವಬಸಪ್ಪಣ್ಣಾ ಹವಸ ಮುಂತಾದ ಮಹಾಶಯರು ಅತ್ಯುತ್ಸುಕತೆಯಿಂದ ಸೇವೆಯನ್ನು ಕೈಕೊಂಡಿದ್ದರು. ವೇದಘೋಷದಿಂದಲೂ, ಸಕಲ ವಾದ್ಯಘೋಷದಿಂದಲೂ, ಗುರುಭಕ್ತಿತತ್ಪರ ಮಹಾಸಂಘದಿಂದಲೂ ಆ ಕಾಲದ ವೈಭವವನ್ನು ವರ್ಣಿಸಲು ಅಸಾಧ್ಯವಿದ್ದಿತು. ವೇ|| ಮೂ|| ಬಸವಲಿಂಗ ಶಾಸ್ತ್ರಿಗಳಿಂದ ಕಾರ್ಯವು ಆರಂಭಿಸಲ್ಪಟ್ಟು ಮುಹೂರ್ತಕ್ಕೆ ಸರಿಯಾಗಿ ಶ್ರೀ ಶಾಂತವೀರಸ್ವಾಮಿಯೆಂಬುವರಿಗೆ ಚರಪಟ್ಟಾಧಿಕಾರವು ವಿಧ್ಯುಕ್ತವಾಗಿ ನಡೆದು, ಶ್ರೀ ಶಾಂತವೀರ ಶಿವಾಚಾರ್ಯ ಎಂಬ ನಾಮವು ಕೊಡಲ್ಪಟ್ಟಿತು. ಬಳಿಕ ಸ್ಥಲಪರಸ್ಥಲದ ಸುಮಾರು ಒಂದೂವರೆ ಸಾವಿರ ಜನದವರೆಗೆ ಅನ್ನಸಂತರ್ಪಣೆಯು ನಡೆಯಿತು. ನಮ್ಮ ಸಂಸ್ಥಾನ ಸರಕಾರದವರು ದಯವಿಟ್ಟು ಅಪ್ಪಣೆಯನ್ನು ದಯಪಾಲಿಸಿದ್ದರಿಂದ ಸಾಯಂಕಾಲಕ್ಕೆ ಶ್ರೀ ಶಾಂತವೀರ ಶಿವಾಚಾರ್ಯರ ಅಂದೋಲಿಕಾರೋಹಣವು ಹೊರಟಿತು. ಸಕಲ ವಾದ್ಯಗಳು ಬೋರ್ಗರೆಯುತ್ತಿದ್ದವು. ಭಜನೆಯವರ ಮಂಗಳಧ್ವನಿಯಿಂದಲೂ, ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದಲೂ ಉತ್ಸವವು ಈ ಸಂಸ್ಥಾನದ ಎಲ್ಲ ಪೇಟೆಗಳಲ್ಲಿಯೂ ನಡೆದು ಮಠಕ್ಕೆ ಬಂದಿತು. ಬಳಿಕ ಶೃಂಗರಿಸಿದ ಪೀಠದಲ್ಲಿ ಶ್ರೀ ಸ್ವಾಮಿಗಳವರು ಕುಳಿತುಕೊಂಡನಂತರ ಸಮಸ್ತ ಭಕ್ತಮಾಹೇಶ್ವರರೂ ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು. ಅನಂತರ ವೇ|| ಮಾಜಿ ಮಾಸ್ತರ ಶಂಕರಯ್ಯನವರು ಈ ಚರಪಟ್ಟಾಧಿಕಾರವು ವಿಧ್ಯುಕ್ತವಾಗಿ ನೆರವೇರಿದ ಬಗ್ಗೆ ಉಲ್ಲಾಸವೃತ್ತಿಯಿಂದ ತಮ್ಮ ಆನಂದವನ್ನು ಸಂಭಾಷಣೆಗಳಿಂದ ವ್ಯಕ್ತಗೊಳಿಸಿದ ಬಳಿಕ ಸ|| ಬ್ರ|| ಹೊಳೆಹೊನ್ನೂರು ಪುರಾಣಮಠದ ಶ್ರೀ ಪಟ್ಟಾಧಿಕಾರಿಗಳೂ, ವೇ|| ಮೂ|| ಬಸವಲಿಂಗಶಾಸ್ತ್ರಿಗಳೂ ತಮ್ಮ ಮಂಜುಳವಾಣಿಯಿಂದ ಸರ್ವ ಆಬಾಲವೃದ್ಧರಿಗೂ ಹೃದಯಂಗಮವಾಗುವಂತೆ ಧರ್ಮೋಪದೇಶವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು. ಈ ಮಹೋತ್ಸವದ ಆನಂದದಲ್ಲಿ ಶ್ರೀ ಶಾಂತವೀರಸ್ವಾಮಿಗಳು ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆಯ ಪ್ರೋತ್ಸಾಹಕ್ಕಾಗಿ ೫ ರೂಪಾಯಿಗಳನ್ನು ತಮ್ಮ ಅಮೃತ ಹಸ್ತದಿಂದ ದಯಪಾಲಿಸಿದರು. ಅನಂತರ ಕೆಲವು ದಿನ ಧರ್ಮೋದ್ಧಾರಕ್ಕೆ ಪೂರ್ಣ ಅವಕಾಶವನ್ನು ಕೊಟ್ಟಿಂದ ಶ್ರೀ ಬ್ರಿಟಿಶ ಪ್ರಭುಗಳವರ ಮತ್ತು ನಮ್ಮ ಸಂಸ್ಥಾನ ಸರಕಾರದ ದೊರೆಗಳವರ ಮಹೋಪಕಾರದ ಜಯಜಯಕಾರವಾಗಿ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದಿಂದ ಸಭೆಯು ಪರಿಸಮಾಪ್ತಿಯಾಯಿತು.

ಚನ್ನಬಸಪ್ಪಾ ಹಾವೇರಿ ಶಿವಪುರ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಗುರುವರ್ಗಧರ್ಮಸುಧಾರಕ ಪಾಠಶಾಲೆಯ ವಾರ್ಷಿಕಸಮಾರಂಭ.

ಬಳ್ಳಾರಿ ಡಿ| ಹಿರೇಹಡಗಲಿಯಲ್ಲಿ ಈ ವೈದಿಕಪಾಠಶಾಲಾ ಸ್ಥಾಪನವಾಗಿ (ತಾರೀಖು 6-11-1927ಕ್ಕೆ) ಐದುವರುಷ ಸಮಾಪ್ತಿಯಾಯಿತು. ದ್ವಿತೀಯ ವರ್ಷಾರಂಭದ ದಿವಸ ಪ್ರಾತಃಕಾಲದಲ್ಲಿ ವಿದ್ಯಾರ್ಥಿಗಳ ನಿತ್ಯಕರ್ಮಾನುಷ್ಠಾನ ಶಿವಪೂಜೆಗಳಾದನಂತರ ಪಾಠಶಾಲಾಧ್ಯಾಪಕರಾದ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳವರು ವಿದ್ಯಾರ್ಥಿಗಳಿಂದ ಮನೋಹರವಾಗಿ ರಚಿಸಲ್ಪಟ್ಟ ಮಂಟಪದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನಿರಿಸಿ ಪದ್ಧತಿ ಪ್ರಕಾರ ಪೂಜಾ ನೈವೇದ್ಯ ಮಂಗಳಾರತಿಗಳನ್ನಾಚರಿಸಿದರು. ಬಳಿಕ ಪುರಪ್ರಮುಖರಾದ ಸಕಲ ಭಕ್ತಮಾಹೇಶ್ವರಾದಿ ಸಜ್ಜನರು ಸಂಮಿಳಿತರಾಗಲು ಸದರಿ ಶಾಸ್ತ್ರಿಗಳು ಪಾಠಶಾಲೆಯ ವಾರ್ಷಿಕ ರಿಪೋರ್ಟನ್ನು ಶ್ರುತಪಡಿಸಿದರು. ಸಭಿಕರೆಲ್ಲಾ ಆನಂದಪಟ್ಟು ಪಾಠಶಾಲಾಭಿವೃದ್ಧಿಯು ಸಮಾನವಾಗಿ ಸರ್ವರೂ ಐಕಮತ್ಯದಿಂದ ಸಾಧಿಸಬೇಕೆಂತಲೂ ಗುರುವರ್ಗದ ಬಾಲಕರು ತ್ವರೆಯಿಂದ ವಿದ್ಯಾವಂತರಾಗಿ ಸಮಾಜಸುಧಾರಕರಾಗಲೆಂತಲೂ ಪರಮಾತ್ಮನಂ ಧ್ಯಾನಿಸಿ ಜಯಜಯಕಾರದೊಡನೆ ಸಭಾ ಮುಕ್ತಾಯವಾಯಿತು.

ಬಾಗಳಿ ಕೊಟ್ರಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಹಾನಗಲ್ಲ ವಿರಕ್ತರಪುರಾಣವು ಎಂದು ಮುಗಿಯುವುದು?

ಮೇಲ್ಕಂಡ ವಿರಕ್ತರು ಪೂರ್ವದಲ್ಲಿ ನಿಜವಾದ ವೈರಾಗ್ಯ ಚಕ್ರವರ್ತಿಗಳಂತೆ ಜನರ ಮುಂದೆ ನಟಿಸಿ ಬೇಕಾದಷ್ಟು ದ್ರವ್ಯವನ್ನು ಸಂಗ್ರಹಿಸಿ ಶಿವಯೋಗ ಮಂದಿರವೆಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಿ ಆದಿಯಲ್ಲಿ ಕೆಲವರಿಂದ ಸ್ವೈ. ಸ್ವೈ. ಅನಿಸಿಕೊಂಡರು. ಆದಿಯಲ್ಲಿ ಇವರು ಗುರು ವರ್ಗದವರೇ ದೊಡ್ಡವರು; ಅವರೇ ಪೂಜ್ಯರು; ಅವರಿಂದಲೇ ವೀರಶೈವ ಮತದ ಉದ್ಧಾರವು; ಎಂದು ಪ್ರತಿಗ್ರಾಮಗಳಲ್ಲಿಯೂ ಬೋಧಿಸುತ್ತಿದ್ದರು. ಹೀಗಿದ್ದ ಸದರಿ ವಿರಕ್ತರ ಸ್ಥಿತಿಯು ಈಗೀಗ ವಿಲಕ್ಷಣವಾಗಿ ಹೋಗಿದೆ. ಪೂರ್ವದಲ್ಲಿ ಇವರು ಯಾವ ಗುರು ಸಾರ್ವಭೌಮರ ವಿಷಯದಲ್ಲಿ ಅತ್ಯಂತ ಪೂಜ್ಯ ಬುದ್ಧಿಯನ್ನು ತೋರಿಸುತ್ತಿದ್ದರೋ ಅಂಥವ ಗುರು ಸಾರ್ವಭೌಮರಿಗೆ ಕಾಣಿಕೆಯನ್ನು ಕೊಡಬೇಡಿರಿ, ಇವರನ್ನು ಮನ್ನಿಸಬೇಡಿರೆಂದು ವಿಪರೀತವಾಗಿ ಬೋಧಿಸುತ್ತಲಿರುವ ವಿಷಯವು ಜಗತ್ತಿಗೆಲ್ಲ ವೇದ್ಯವಾಗಿದೆ. ಶ್ರೀರಾಚಾರ್ಯರು ಯಾವ ಪ್ರಾಂತದಲ್ಲಿ ಸಂಚರಿಸುತ್ತಾರೆಯೋ ಆ ಪ್ರಾಂತಕ್ಕೆ ಇವರು ಮುದ್ದಾಂ ಹೋಗಿ ಆಚಾರ್ಯರ ವಿಷಯದಲ್ಲಿ ದುರ್ಬೋಧನವನ್ನು ಮಾಡುವ ಬಲವಾದ ಕಾರ್ಯವನ್ನು ಕೈಕೊಂಡಿದ್ದಾರೆ. ಇಷ್ಟು ದಿವಸ ಶ್ರೀರಂಭಾಪುರೀ ಜಗದ್ಗುರುಗಳು ಸಂಚಾರ ಮಾಡತಕ್ಕ ಶಿವಮೊಗ್ಗಾ ಪ್ರಾಂತದಲ್ಲಿ ತಮ್ಮ ದುರ್ಬೋಧರೂಪವಾದ ಕಾರ್ಯವನ್ನು ನಡೆಯಿಸಿದರು. ಆ ಪ್ರಾಂತದ ಅನೇಕ ಜನ ಸದ್ಭಕ್ತ ಮಾಹೇಶ್ವರರು ನೀವು ಈ ರೀತಿ ಜಗದ್ಗುರುಗಳವರ ವಿಷಯದಲ್ಲಿ ದುರ್ಬೋಧ ಮಾಡುವುದು ಕೇವಲ ತಪ್ಪಾದದ್ದೆಂದು ಸರಿಯಾದ ಬುದ್ಧಿವಾದವನ್ನು ಹೇಳಿ ಕಳುಹಿಸಿದರು. ಆ ಪ್ರಾಂತ್ಯದಲ್ಲಿ ಇವರ ಬೇಳೆಯು ಏನೂ ಬೇಯಲಿಲ್ಲ. ಆದ ಮರಿಂದ ಇವರು ಬಹಳ ಆಲೋಚನಕ್ಕೊಳಗಾಗಿ ಮುಂದೆ ಇನ್ನೇನು ಮಾಡಬೇಕೆಂದು ಯೋಚಿಸಿ ಸದ್ಯಃ ವಿಜಾಪೂರ ಜಿಲ್ಲೆಯಲ್ಲಿ ಸಂಚಾರಮಾಡುತ್ತಿರುವ ಶ್ರೀ ಕೇದಾರ ಜಗದ್ಗುರುಗಳವರ ವಿಷಯದಲ್ಲಿ ಪುನಃ ತಮ್ಮ ದುರ್ಬೋಧ ರೂಪವಾದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಅಸತ್ಯಕ್ಕೆ ಎಂದೂ ಜಯವಾಗಲಾರದೆಂಬ ಹಿರಿಯರ ಮಾತಿನಂತೆ ಇವರ ಸ್ಥಿತಿಯು ಅಲ್ಲಿಯೂ ಆಗಹತ್ತಿದೆ. ಇವರು ಹೀಗೆ ದುರ್ಬೋಧ ಮಾಡುವುದರಿಂದ ತಮಗೆ ಅಗೌರವವನ್ನು ತಂದುಕೊ ತ್ತಾರೆಯೋ ಹೊರತು ಬೇರೊಂದಿಲ್ಲ. ಇವರ ದುರ್ಬೋಧವು ಗುರು ಚಕ್ರವರ್ತಿಗಳ ವಿಷಯದಲ್ಲಿ ಪ್ರಯೋಜನವಾಗಲಾರದು. ಈ ವಿಷಯವನ್ನು ಸದರಿ ವಿರಕ್ತರು ತಮ್ಮ ಮನಸ್ಸಿನಲ್ಲಿ ತಂದುಕೊಂಡು ಮ ಸನ್ಮಾರ್ಗದಿಂದ ವರ್ತಿಸುವುದು ಇವರಿಗೆ ಭೂಷಣವಾಗಿದೆ. ಗುರುಗಳ ವಿಷಯದಲ್ಲಿ ದುರ್ರೀತಿಯಾಗಿ ದುರ್ಬೋಧಮಾಡಿದರೆ ಜನರು ಏನೆಂದಾರು? ಪರಮಾತ್ಮನು ನಮ್ಮ ಮೇಲೆ ಕೃಪೆಯನ್ನು ಮಾಡುವನೇ? ಈ ಆಲೋಚನೆಯನ್ನಾದರೂ ಇವರು ಮಾಡಬೇಕು. ಇನ್ನು ಇಷ್ಟಕ್ಕೆ ತಮ್ಮ ವರ್ತನವನ್ನು ಸುಧಾರಿಸಿಕೊಳ್ಳುವದು ಲೇಸು. ಹಾಗೆ ಮಾಡದೆ ಹೋದದ್ದಾದರೆ ತಾವು ಮಾಡಿದ ಕಾರ್ಯಕ್ಕೆ ತಕ್ಕಂತೆ ಫಲವನ್ನು ಅನುಭವಿಸುವರೆಂದು ಹೇಳಿ ಈ ಲೇಖನವನ್ನು ವಿರಮಿಸುತ್ತೇನೆ.

ಎಸ್. ನಣ್ಣಾಮೋಟಪ್ಪ, ಹೊಳಗುಂದಿ.

ಗುರುಭಕ್ತಿನಿಷ್ಠಾ ಉತ್ಸವ.

ರು ತಾಲ್ಲೂಕು ಮತಿಗಟ್ಟ ಗ್ರಾಮದ ವೀರ ಂಡಲಿಯವರ ಹಾಲುಮತದ ಭಕ್ತಾದಿಗಳೂ 10-27ನೆಯ ದಿವಸ ರಾತ್ರಿ 8 ಘಂಟೆಗೆ ಗುರು ತ್ತರರಾಗಿ ಶ್ರೀ ಜಗದ್ಗುರು ರೇಣುಕಚಾ ರ್ತಿಗಳಾದ ಶ್ರೀ ಸಕ್ಕರಾಯಪಟ್ಟಣದ ಬಾ ಯವರ ಶಿಲಾಮಠದ ಪಟ್ಟಾಧ್ಯಕ್ಷ ಶಿವ ಸ್ವಾಮಿಗಳವರನ್ನು ಇವರ ಪೂರ್ವಾಶ್ರಮದ ವಾದ ಈ ಮತಿಗಟ್ಟ ಗ್ರಾಮದಲ್ಲಿ ತಾ|| 12-5-27 ರಲ್ಲಿ ಇವರಿಗೆ ಪಟ್ಟಾಭಿಷೇಕವಾದ ಸಂತೋಷಾತಿಶಯಕ್ಕಾಗಿ ತಳಿರುತೋರಣಾದಿ ರಂಭಾಸ್ತಂಭಗಳಿಂದ ಗ್ರಾಮಾಲಂಕಾರವಾಡಿ ಸದರಿ ಪೂಜ್ಯಪಾದರನ್ನು ಸಾಧಾರವಾದ ಪ್ರೋತ್ಸಾಹದಿಂದ ದಯಮಾಡಿಸಿಕೊಂಡು ಬಂದು ಪಲ್ಲಕ್ಕಿಮಹೋತ್ಸವವನ್ನು ಛತ್ರಿ ಚಾಮರಾದಿ ವೈಭವದಿಂದಲೂ ವಾದ್ಯವೈಭವಾದಿ ಭಜಂತ್ರಿರವದೊಡನೆ ಗ್ರಾಮದ ಮುಖ್ಯಬೀದಿಗಳಲ್ಲಿ ಮಹೋತ್ಸವವನ್ನು ಹೊರಡಿಸಿ ಮಠದ ಶಿಷ್ಯರಾದ ವೇ|| ಬಸವಾರಾಧ್ಯರ ಗೃಹಕ್ಕೆ ವಿಜಯಂಗೈಸೋಣವಾಗಿ ಸೇರಿದ ಭಕ್ತಾದಿಗಳಿಗೆಲ್ಲಾ ಶ್ರೀ ಪೂಜ್ಯಪಾದರು ಆಶೀರ್ವಚನಗಳಿಂದ ಗುರುಭಕ್ತಿಯನ್ನು ಪ್ರಜ್ವಲಿಸಿ ದರ್ಶನಾಶೀರ್ವಾದದಿಂದ ಭಕ್ತಾದಿಗಳನ್ನು ಕೃತಾರ್ಥರನ್ನಾಗಿ ಮಾಡಿ ಶಿವಪೂಜಾಮಹೋತ್ಸವಕ್ಕೆ ದಯಮಾಡಿಸಿದರು. ಶ್ರೀ ಸ್ವಾಮಿಗಳವರ ಸನ್ನಿಧಾನದಲ್ಲಿ ಭಕ್ತಮಾಹೇಶ್ವರರನೇಕರಿಗೆ ಗಣಾರಾಧನೆ (ಸಂತರ್ಪಣೆ)ಯು, ಪಾದಪೂಜಾಸಂಭ್ರಮವು ನಡೆಯಿತು. ಆ ದಿನ ಬೆಳಗಿನ ಝಾವ ಶುಭಮುಹೂರ್ತದಲ್ಲಿ ಸದರಿ ವೇ|| ಬಸವಾರಾಧ್ಯರು ತಮ್ಮ ನೂತನ ಬಮಾಸಿಗೆ 300 ತೆಂಗಿನ ಸಸಿಗಳನ್ನು ಹಾಕಿಸಿದರು. ಶ್ರೀ ಗುರುಗಳವರ ಸ್ವಾರಿಯನ್ನೂ ಅನೇಕ ಭಕ್ತಮಹೇಶ್ವರರನ್ನೂ ದಯಮಾಡಿಸಿಕೊಂಡು ಹೋಗಿ ಅಲ್ಲಿಯೂ ದಾಸ, ದಕ್ಷಿಣೆ, ಫಲ ತಾಂಬೂಲಾದಿಗಳಿಂದ ಸತ್ಕರಿಸಿದರು. ಈ ಶುಭಸಮಯದಲ್ಲಿ ಈ ನೂತನ ತೆಂಗಿನ ಸಸಿಗಳನ್ನು ನಾಟಿಸಿದ ಶ್ರೇಯಸ್ಸಾಧನೆಗಾಗಿ ಶ್ರೀಜಗದ್ಗುರು ಪಂಚಾಚಾರ್ಯರ ಮಹತ್ವಾದಿಗಳನ್ನು ಪ್ರಜ್ವಲಿಸುವದರಲ್ಲಿಯೂ ವೀರಶೈವ ಸಮಾಜೋದ್ಧರಣೆಯಲ್ಲಿಯೂ ಮುಂದುವರಿದು ಮೈಸೂರು ರಾಜಧಾನಿಯಲ್ಲಿ ಪ್ರಸಿದ್ಧ ಪಂಡಿತೋತ್ತಮರಿಂದ ಪ್ರಚುರವಾಗುತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕಾ ಪೋಷಣೆಗಾಗಿ 2 ರೂಪಾಯಿಗಳನ್ನು ಕಾಣಿಕಾ ರೂಪವಾಗಿ ತೆಗೆದು ಕಳುಹಿಸಬೇಕೆಂದು ಶ್ರೀ ಪೂಜ್ಯಪಾದರು ಅಪ್ಪಣೆಕೊಡಿಸಿದ್ದಕ್ಕೆ ಕಾರ್ಯಕರ್ತರು ಭಕ್ತಿಪೂರ್ವಕವಾಗಿ 2 ರೂಪಾಯಿಗಳನ್ನು ಫಲತಾಂಬೂಲ ಸಹಿತ ಒಪ್ಪಿಸಿದರು. ಇವರಂತೆ ಸಮಸ್ತಮಹಾಜನರು ತಮ್ಮ ತಮ್ಮ ಶುಭಕಾರ್ಯಾರಂಭಗಳಲ್ಲಿ ನೂತನಗೃಹ, ನೂತನ ಭೂಸ್ಥಿತಿ, ನೂತನ ಸಸಿ ನಾಟುವಿಕೆ ವಗೈರೆ ಸ್ಥಿರಸಂಪಾದನಾ ಸಮಯಗಳಲ್ಲಿ ಜಗದಾಚಾರ್ಯರ ನಾಮಸ್ಮರಣೆಯಿಂದ ಅವರ ಮಹಿಮೆಯನ್ನು ಪ್ರಕಾಶಪಡಿಸಿ ಸಮಾಜ ಜಾಗ್ರತಾವಸ್ಥೆ ಪಡಿಸುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಸ್ಥಿರಜೀವನಕ್ಕೆ ಕಾಣಿಕೆ ತೆಗೆಯುವದರ ಮೂಲಕ ಚಂದಾದಾರರಾಗತಕ್ಕದ್ದು ಸರ್ವಶ್ರೇಯಸ್ಕರವಾದದ್ದಾಗಿರುತ್ತೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವ ಧರ್ಮೋನ್ನತಿಯ ಪುನರ್ಜೀವನ

ಮಾನವ ಪ್ರಾಣಿಗಳಿಗೂ ಸಕಲ ಜೀವಜಂತುಗಳಿಗೂ ಸುಖ ದುಃಖಗಳು ಮೇಲಿಂದಮೇಲೆ ಒದಗುತ್ತವೆ. ಅದರಂತೆ ಸಕಲ ಧರ್ಮಗಳಿಗೆ ಉನ್ನತಿ-ಅವನತಿಗಳು ಎಡೆಬಿಡದೆ ಒದಗುವವು. ಕಲಿರಾಜನ ಪ್ರಭಾವದಿಂದಲೋ ಪೂರ್ವದ ಅವಿದ್ಯಾವಂತರಾದ ಮಠದ ಗುರುಗಳಿಂದಲೋ ಪರಮ ಪವಿತ್ರವಾದ ಮತ್ತು ಎಲ್ಲ ಮತಗಳಲ್ಲಿ ಅಗ್ರಸ್ಥಾನವನ್ನು ಹೊಂದಿದ ಈ ನಮ್ಮ ಸನಾತನ ವೀರಶೈವ ಧರ್ಮವು ಅವಿದ್ಯಾ ಪ್ರಭಾವದಿಂದ ಅಜ್ಞಾನಾಂಧಕಾರದಲ್ಲಿ ಮುಳುಗಿ ಅವನತಿಗೆ ಈಡಾಗಿತ್ತು. ಈ ಧರ್ಮದ ಕಟ್ಟುಗಳು ಹರಿದುಹೋಗಿವೆ ಅಶಾಸ್ತ್ರೀಯವಾದ ಹಾವಳಿಗಳು ಈ ಧರ್ಮದಲ್ಲಿ ನೆಲೆಗೊಂಡಿವೆ ಧರ್ಮದ ಉನ್ನತಿ ಅವನತಿಗಳು ಧರ್ಮದಗುರುಗಳನ್ನೇ ಅವಲಂಬಿಸಿರುತ್ತವೆ ಆದ್ದರಿಂದ ಗುರುವರ್ಗದವರು ವಿದ್ಯಾಹೀನರಾದ್ದರಿಂದ ಧರ್ಮಶಾಸ್ತ್ರವನ್ನು ತಿಳಿಯಲಾರದೆ ಹಾಗೂ ಹೀಗೂ ಜೀವಿಸುತ್ತ ಬಂದರು ಈ ಗುರುವರ್ಗದ ಎಷ್ಟೋ ಜನರಿಗೆ ತಮ್ಮ ಗೋತ್ರ ಸೂತ್ರಗಳು ತಮಗೆ ತಿಳಿಯದೆ ಹೋಗಿದ್ದವು ಇಂಥ ಗುರುಗಳು ಶಿಷ್ಯರಿಗೆ ಧರ್ಮಬೋಧಮಾಡುವದೆಂತು? "ಯಥಾ ಗುರುಸ್ತಥಾ ಶಿಷ್ಯಃ"ಎಂಬಂತೆ ಗುರುಗಳೇ ದುರ್ರೀತಿಯವರಾದಮೇಲೆ ಶಿಷ್ಯರ ಪಾಡೇನು? ಗುರುವರ್ಗದವರು ತಮಗೆ ತಿಳಿವಷ್ಟುಮಟ್ಟಿಗ ಬೋಧ ಮಾಡದೆ ತಮ್ಮ ಉದರ ಪೋಷಣಾಕಾಗಿ ಅವರ ಹಣವನ್ನು ಕೇಳು ಹತ್ತಿದರು ಇದಲ್ಲದೆ ಧರ್ಮಬೋಧಮಾಡಿ ದಕ್ಷಿಣಾರೂಪವಾಗಿ ಹಣವನ್ನು ತೆಗೆದುಕೊಳ್ಳುವದರ ಬದಲಾಗಿ ಯಾಚಕವೃತ್ತಿಯನ್ನು ಕೈಕೊಂಡರು ಗುರುವಿಗೆ ಗುಟಕೆ ನೀರು ಶಿಷ್ಯನಿಗೆ ಮಣಗು ನೀರು ಎಂಬಂತೆ ಶಿಷ್ಯರು ಅನಾಚಾರಪ್ರವೃತ್ತರಾಗಿ ಧರ್ಮದ ಕಟ್ಟುಗಳನ್ನು ಕಿತ್ತಿ ಹಾಕಿ ಧರ್ಮಭ್ರಷ್ಟರಾಗಿದ್ದಾರೆ ಅನ್ಯಧರ್ಮದ ಅನುಕರಣವಾಡಿದ್ದಾರೆ. ಮಾಂಸ, ತಂಬಾಕ, ಬ್ರ್ಯಾಂಡಿ ಮುಂತಾದ ಸೇವನೆಗಳ ಚಟುಗಳನ್ನು ಕೀಳುಜಾತಿಯವರಂತೆ ಮಾಡ ಹತ್ತಿದ್ದಾರೆ ಇವಲ್ಲದೆ ಇನ್ನೂ ಅನೇಕ ದುಷ್ಟಚಟಗಳು ಧರ್ಮಕ್ಕೆ ಕಳಂಕ ತರುವಂಥವುಗಳಾಗಿವೆ ಕುರುಡರೊಳಗೆ ಮೆಳ್ಳ ಶ್ರೇಷ್ಠನೆಂಬಂತೆ ಅಲ್ಪಸ್ವಲ್ಪ ಸುಧಾರಿಸಿದಂಥ ನಾಮಧಾರಿಗಳಾದ ವಿರಕ್ತರು ತಮ್ಮ ವಿರತಿಭಾವವನ್ನು ಬಿಟ್ಟು ಈ ಸಂಸಾರವೆಂಬ ಮೋಹಜಾಲದಲ್ಲಿ ಶಿಲ್ಕಿ ಶ್ರೇಷ್ಠತ್ವನ್ನು ಸಿಕೊಳ್ಳಬೇಕೆಂಬ ಪಿಶಾಚಿಯು ಬೆನ್ನುಹತ್ತಿ ಮಠಮಾನ್ಯಗಳನ್ನೂ ವೈಭವ ಸಂಪತ್ತುಗಳನ್ನೂ ಭಕ್ತರ ವಿತ್ತಾಪಹರಣದಿಂದ ಮಾಡಿಕೊಂಡು ವೈಭವವು ಕೂಡುವಂಥ ಸಂಸಾರಿಕರು ಮಾಡುವಂಥ ವ್ಯವಹಾರವನ್ನು ಮಾಡುತ್ತ ತಮ್ಮ ಗುರುಗಳನ್ನು ಮರೆತು ಅವರಲ್ಲಿ ಪೂಜ್ಯಬುದ್ಧಿಯನ್ನಿಡದೆ ತಾವೇ ಜಗದ್ಗುರುಗಳೆಂದೂ ಧರ್ಮಾಧಿಪತಿಗಳೆಂದೂ ಆನೆ ಅಂಬಾರಿ ಪಲ್ಲಕ್ಕಿ ಮುಂತಾದವುಗಳಲ್ಲಿ ಮೆರೆಯಹತ್ತಿದರು ಮತಸ್ಥಾಪನಾಚಾರ್ಯರೇ ಮಠದ ಗುರುಗಳೆಂಬುದು ಬುದ್ಧ ಶಂಕರಾಚಾರ್ಯ ಮಧ್ವಾಚಾರ್ಯ ಮುಂತಾದ ಆಯಾಯ ಮತಗಳ ಸ್ಥಾಪನಾಚಾರ್ಯರ ನಿದರ್ಶನದಿಂದ ಗೊತ್ತಾಗುತ್ತದೆ ಅಂದಮೇಲೆ ವಿರಕ್ತರು ಗುರುಗಳು ಎಂಬುದು ಪ್ರತಿಯೊಬ್ಬನಿಗೂ ಸ್ಪಷ್ಟವಾಗಿ ತಿಳಿಯಬರುತ್ತದೆ. ಅಂದಮೇಲೆ ಈ ನಾಮಧಾರಿ ವಿರಕ್ತರು ಯಾವ ಮಠದಲ್ಲಿ ಜನಿಸಿರುವರೋ ಆ ಮಠದ ಗುರುಗಳಿಗೆ ಶಿಷ್ಯರಾಗುತ್ತಾರೆ. ಗುರುವಿಲ್ಲದ ಮಠವಿಲ್ಲ ಹಿರಿಯರಿಲ್ಲದ ಮನೆಯಿಲ್ಲ ಎಂಬ ನಾಣ್ಣುಡಿಯು ಮೇರೆಗೆ ಪ್ರತಿಯೊಂದು ಮಠಕ್ಕೆ ಗುರುಗಳಿದ್ದಾರೆ. ಪ್ರತಿಯೊಂದು ಮಠದವರು ತಮ್ಮ ಗುರುಗಳಲ್ಲಿ ಅಸದೃಶವಾದ ಭಕ್ತಿಯನ್ನಿಟ್ಟು ಪೂಜಿಸುತ್ತಾರೆ. ಆದರೆ ಈ ನಾಮಧಾರಿಗಳಾದ ವಿರಕ್ತರು ತಾವೂ ತಮ್ಮ ಗುರುಗಳಲ್ಲಿ ಭಕ್ತಿಯನ್ನಿಡದೆ ಭಕ್ತರಲ್ಲಿಯೂ ಕೂಡ ಗುರುಭಕ್ತಿಯನ್ನು ಕಿತ್ತಿಹಾಕಿದ್ದಾರೆ. ಇವರು ವಕ್ಕರ ಕಡೆಯಿಂದ ಶುಭಕಾರ್ಯಗಳಲ್ಲಿ ಪಂಚಕಲಶದ ಬದಲಾಗಿ ಷಟ್ಸ್ಥಲಕಲಶಗಳನ್ನು ಹೂಡಿಸುತ್ತಾರೆ. ಇದು ಕೇವಲ ಅಶಾಸ್ತ್ರೀಯವಾದದ್ದು! ಗುರುಗಳಿಂದ ಅನುಗ್ರಹಿಸಲ್ಪಟ್ಟ ಅಷ್ಟಾವರಣಗಳುಳ್ಳ ಸಕಲ ಆಶ್ರಮಧಾರಿಗಳು ಇನ್ನಾದರೂ ಗುರುಗಳಲ್ಲಿ ಭಕ್ತಿಯನ್ನಿಟ್ಟು ಮಹಿಮಾಶಾಲಿಗಳ ನಿಂದೆಗೆ ಕಾರಣೀಭೂತರಾಗದೆ ಧರ್ಮದ ಐಕ್ಯವನ್ನು ಬಯಸುವರೆಂದು ಪೂರ್ಣ ನಂಬಿದ್ದೇನೆ. ಈಗ ನಮ್ಮ ಧರ್ಮದ ಸುಯೋಗದಿಂದಲೋ ತನ್ನ ಪಂಚಮುಖಗಳಿಂದ ಹುಟ್ಟಿದ ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಈ ನಮ್ಮ ವೀರಶೈವ ಧರ್ಮವು ಅವನತಿಗೆ ಈಡಾದುದನ್ನು ನೋಡಿ ಸಹಿಸದೆ ಶಿವನು ಇದರ ಕಡೆಗೆ ಲಕ್ಷ್ಯಕೊಟ್ಟುದರಿಂದಲೋ ಈ ಶ್ರೇಷ್ಠ ಮಠಕ್ಕೆ ಗುರುಗಳಾದ ಶ್ರೀ ಬಾಳೇಹಳ್ಳಿ, ಸಿದ್ಧಾಸನಾಧಿಪತಿಗಳನ್ನು ಉಜ್ಜಯಿನೀ ಮಹಾಸ್ವಾಮಿಗಳನ್ನೂ, ಕೇದಾರದ ಪೀಠಾಧಿಪತಿಗಳನ್ನೂ, ಕಾಶೀ ಸಿಂಹಾಸನಾರೂಢರನ್ನೂ ದೊರಕಿಸಿಕೊಟ್ಟಿದ್ದಾನೆ. ಈ ಗುರುಪೀಠಾಧಿಪತಿಗಳು ವಿದ್ಯಾವಂತರೂ ಧರ್ಮಶಾಸ್ತ್ರದಲ್ಲಿ ಪಾರಂಗತರೂ ಮತ್ತು ತಮ್ಮ ಧರ್ಮದ ಉನ್ನತಿಯಾಗಬೇಕೆಂಬ ಮಹತ್ವಾಕಾಂಕ್ಷಿಗಳೂ ತಪೋನಿಷ್ಠರೂ ಆಗಿದ್ದಾರೆ ಇವರ ಸುಗುಣಗಳನ್ನು ನನ್ನಂಥ ಪಾಮರನು ವರ್ಣಿಸುವದು ಅಸಾಧ್ಯವು! ಈ ಮಹಾಚಾರ್ಯರ ಕೃಪಾದೃಷ್ಟಿಯು ಧರ್ಮದ ಮೇಲೆ ಪೂರ್ಣವಿದ್ದುದರಿಂದ ಈ ವೀರಶೈವ ಧರ್ಮವು ಒಂದೊಂದು ಹೆಜ್ಜೆಯನ್ನು ಮುಂದಿಡುತ್ತ ಸಕಲ ಕಾರ್ಯಗಳಲ್ಲಿ ಜಯಹೊಂದುತ್ತ ನಡೆದದೆ. ಧರ್ಮಬೋಧ ಮಾಡುವುದಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರ ಚಿತ್ಕಳೆಯೇ ಪಂಚಾಚಾರ್ಯಪ್ರಭಾ ಎಂಬ ನಾಮದಿಂದ ಜನಿಸಿ ಸತ್ಕಾರ್ಯದಲ್ಲಿ ತೊಡಗಿದೆ. ಈ ಪಂಚಾಚಾರ್ಯಪ್ರಭಾ ಎಂಬ ವೃತ್ತಪತ್ರವು ಪಂಡಿತ [illegible] ಶಾಂತಶಾಸ್ತ್ರಿಗಳ ಕರಕಮಲದಿಂದ ಪ್ರಕಟವಾಗಿದೆ.

ಇದಲ್ಲದೆ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು ಬ್ರಹ್ಮಚರ್ಯದಿಂದ ಹಗಲಿರುಳು ಮತೋದ್ಧಾರದ ಕೆಲಸದಲ್ಲಿ ತೊಡಗಿದ್ದಾರೆ. ಇವರು ಪಂಚಾಚಾರ್ಯರ ಸೇವೆಯನ್ನು ಮಾಡುತ್ತ ಧರ್ಮದ ಉನ್ನತಿಗಾಗಿ ತಮ್ಮ ಆಯುಷ್ಯವನ್ನು ವಿನಿಯೋಗಮಾಡುತ್ತಿರುವರು. ಇವರು ಪಂಚಾಚಾರ್ಯರಿಗೆ ಬಲಗೈಯಂತೆ ಇದ್ದಾರೆ. ಈಗ ಸದ್ಯಕ್ಕೆ ಹಾಲಕೊಪ್ಪದ ಪಟ್ಟಾಧ್ಯಕ್ಷರೂ, ಚಿಕ್ಕಮಗ್ಗಾವಿ ಪಟ್ಟದ ಸ್ವಾಮಿಗಳೂ ಇನ್ನೂ ಅನೇಕ ಪಟ್ಟದರೂ ತೀರ್ಥಗಳೂ ಶಾಸ್ತ್ರಿಗಳೂ ಇದೇ ನೂತನ ಪ್ರಚಾರಕರು ಧರ್ಮದ ಉನ್ನತಿಗಾಗಿಯೂ ಗುರುಭಕ್ತಿಯನ್ನು ಹುಟ್ಟಿಸುವುದಕ್ಕಾಗಿಯೂ ಧರ್ಮೋಪದೇಶವನ್ನು ಉಪನ್ಯಾಸರೂಪವಾಗಿಯೂ ಕೀರ್ತನರೂಪವಾಗಿಯೂ ಮಾಡುತ್ತಿದ್ದಾರೆ. ಇಂಥ ಅನೇಕ ಪ್ರಚಾರಕರುಗಳು ಈಗೀಗ ಒದಗುತ್ತಿದ್ದಾರೆ ಅಂದಮೇಲೆ ಇನ್ನು ಧರ್ಮೋನ್ನತಿಯಾಗುವುದೆಂದು ಧಾರಾಳವಾಗಿ ಹೇಳಬಹುದು! ಯಾವತ್ತೂ ವೀರಶೈವ ಸದ್ಧರ್ಮಾವಲಂಬಿಗಳೇ ಕಾಯಾ ವಾಚಾ ಮನಸಾದಿಗಳಿಂದ ಗುರುಗಳ ಸೇವೆ ಮಾಡಿ ಅವರಲ್ಲಿ ವಿಶ್ವಾಸವಿಟ್ಟು ಧರ್ಮಪ್ರೇಮಿಗಳಾಗಿ ಗುರುದ್ರೋಹಿಗಳ ಬೋಧನೆಗೆ ಮರುಳಾಗಿ ಗುರುನಿಂದಾಸ್ಪದ ಲೇಖಗಳಿಗೆ ಮನಗೊಡದೆ ಅವರ ಕೃಪೆಗೆ ಪಾತ್ರರಾಗಿ [illegible] ಎಂಬ ಉಕ್ತಿಯನ್ನು ಜನ್ಮಕ್ಕಾಗಿ ನೆನಸಲ್ಲಿಡಿರಿ. ಈಗಿನ ಸುಧಾರಣಾ ಕಾಲದಲ್ಲಿ ಎಷ್ಟೋ ವೀರಶೈವ ಮುಖಂಡರುಗಳು ತಮ್ಮ ತಮ್ಮ ಗ್ರಾಮಗಳಲ್ಲಿ ಪಂಚಾಚಾರ್ಯ ಸೇವಾ ಸಂಘಗಳನ್ನು ಪಂಚಾಚಾರ್ಯ ಭಜನಾಸಂಘಗಳನ್ನು ಸ್ಥಾಪಿಸಿ ಧರ್ಮಕಾರ್ಯದಲ್ಲಿ ತೊಡಗಿ ಧನ್ಯರಾಗಿದ್ದಾರೆ. ಅವರಂತೆ ನೀವೂ ಧನ್ಯರಾಗಬೇಕು. ಈಗಿನ ನೂತನ ಸುಧಾರಕರುಗಳು ಸುಡಿಯಂತೆ ನಡೆಯನ್ನು ಶ್ರೀ ಜಗದ್ಗುರುಗಳು ಪರಿಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

[illegible] ಸ್ವಾಮಿ
ಮನಸ್ಸೂರ ಮೋಳೆಜಲೂರ

ಪಂಚಾಚಾರ್ಯಪ್ರಭಾ

೧೯೨೭ನೇ ನವಂಬರ್ ತಾ|| ೨೮ನೇ ಸೋಮವಾರ

ಗುರು

ಶ್ರೀ ಜಗದ್ಗುರು ಪಂಚಾಚಾರ್ಯರು ಈಶ್ವರಾಜ್ಞೆಯಿಂ ಲಿಂಗಮುಖದಿಂದ ಭೂಮಿಗವತರಿಸಿ ಅನಂತ ಋಷಿಗಳಿಗೂ ಅನಂತ ಮಹಾ ಮಹಿಮರಿಗೂ ಶಿವಮೋಕ್ಷಸಾಧಕವಾದ [illegible] ವನ್ನು ಉಪದೇಶಿಸಿ ಅಲ್ಲಲ್ಲಿಯೇ ಅನೇಕ ಮಹಿಮೆಗಳನ್ನು ತೋರಿಸಿ ಭೂಮಂಡಲದಲ್ಲಿ ಸೂರ್ಯಚಂದ್ರರಿರುವವರೆಗೂ ಸ್ಥಿರವಾದ ಕೀರ್ತಿಯನ್ನು ಸ್ಥಾಪಿಸಿ ಪುನಃ ಶಿವಲೋಕವನ್ನು ಹೊಂದಿದರೆಂಬುವುದು ಶಾಸ್ತ್ರದಿಂದಲೂ ಇತಿಹಾಸದಿಂದಲೂ ಪ್ರಸಿದ್ಧವಾಗಿರುವುದಷ್ಟೆ. ಈ ಆಚಾರ್ಯರುಗಳು ಮಾಡಿದ ಮಹಿಮಾತಿಶಯಗಳನ್ನು ಸಹಸ್ರಮುಖಗಳುಳ್ಳ ಆದಿಶೇಷನಿಂದಲೂ ಗಣಿಸಲಶಕ್ಯವಾದುದು. ಹೀಗಿರಲು ಉಳಿದ ಮಾನವರಿಂದ ವರ್ಣಿಸಲು ಸಾಧ್ಯವೆ? ಇಂತಹ ಮಹಿಮಾತಿಶಯವುಳ್ಳ ಐದು ಆಚಾರ್ಯರಲ್ಲಿ ಮೊದಲನೆಯವರಾದ ಜಗದ್ಗುರು ರೇಣುಕಾಚಾರ್ಯರ ಅದ್ಭುತವಾದ ಪ್ರಭಾವವನ್ನು ಸ್ವದೇಶ ವಾಚಕರಿಗೆ ತಿಳಿಸಿ ಅನಂತರ ಉಳಿದ ಆಚಾರ್ಯರ ಮಹಿಮೆಯನ್ನು ತಿಳಿಸಲ್ಪಡುವುದು.

ಹಿಂದೆ ಒಂದಾನೊಂದು ಸಮಯದಲ್ಲಿ [illegible] ಮನಾದ ನಯನನೆಂಬ ಮಹಾರಾಜನು ಮರ್ತ್ಯಲೋಕದಲ್ಲಿ ಯಾಗವನ್ನು ನೂರು ಯಜ್ಞಗಳನ್ನು ಮಾಡುತ್ತಾ ಹೋಗಿ ಅಂಧಕನಿಗೆ ಸ್ವರ್ಗಾಧಿಪತ್ಯವು ಬರುವುದೆಂಬ ಶಾಸ್ತ್ರನಿಯಮವಿರುವುದರಿಂದ ಧ್ಯಾನಾಸಕ್ತನಿಂದ ಯಾಗ ನಿಶ್ಚಯ ವಿಲ್ಲದೆ ಹರು [illegible] ಗಳನ್ನು ಸಂಪೂರ್ಣಗೊಳಿಸಲು ಈ ಯಜ್ಞಭಾವದಿಂದ ಆ [illegible] ಚಕ್ರವರ್ತಿಗೆ ಸ್ವರ್ಗಪ್ರವೇಶವಾಯಿತು. ಅಲ್ಲಿ ನೂರು ಯಜ್ಞಗಳನ್ನು ಮಾಡಿ ಬಂದವನನ್ನು ಇಂದ್ರಪದವಿಯ [illegible] ಮಾಡಿ [illegible] ಇಂದ್ರನ [illegible] ಹಿಸಬೇಕೆಂಬ ಈಶ್ವರಾಜ್ಞೆಯಿರುವದರಿಂದ ಆಗಸ್ತ್ಯ [illegible] ಸಪ್ತರ್ಷಿಗಳು [illegible] ಶಕ್ತಿಯನ್ನು ಹೊತ್ತುಕೊಂಡು ಹೋಗುತ್ತಿರಲು ಈ [illegible] ಅಹಂಕಾರದಿಂದ [illegible] ಇಲ್ಲವೆಂ ಬ [illegible] ಸತ್ಯ [illegible] ದ [illegible] ನನ್ನು ಸಹಿಸದೆ [illegible] ಋಷಿಗಳು [illegible] ಮು ಸರ್ಪನಾಗು (ಹಾವಾಗು) [illegible] ಜ್ಞೆಯನ್ನು ಮಾಡುವುದ [illegible] ಋಷಿಗಳಲ್ಲಿ [illegible] ದ್ದುದರಿಂದ ಇತರ ಋಷಿಗಳ ಜೊತೆಯಲ್ಲಿ [illegible] ಪಟ್ಟ [illegible] ಎಲ್ಲ ಋಷಿಗಳ [illegible] ನನ್ನು [illegible] ದಿಂದ [illegible] ಮಾಡಿದ [illegible] ಕ್ಷೇತ್ರಗಳ [illegible] ದ. [illegible] ([illegible]) [illegible] ಯೋಗ [illegible] ಸರ್ವ [illegible] ಗಳ [illegible] ವಾಗ [illegible] ಇದಕ್ಕೆ [illegible] ಸನಾದ [illegible] ದಲ್ಲಿ ಸೂರ್ಯಚಂದ್ರರ [illegible] ಯನ್ನು [illegible] ದನ್ನು [illegible] ಅಗಸ್ತ್ಯ ಮಹರ್ಷಿಯು [illegible] ಮತ್ತು ಆದೇ ಅಗಸ್ತ್ಯ [illegible] ಕೃತಯುಗದಲ್ಲಿ [illegible] ದಲ್ಲಿ [illegible] ಗ್ರಂಥ [illegible] ಆದೇ ಅಗಸ್ತ್ಯ [illegible] ದಿಂದ [illegible] ಕುಡಿದು [illegible] ವಿಂಧ್ಯ [illegible] ಮಾಡಿ [illegible] ಸ್ತ್ಯಮಹರ್ಷಿ [illegible] ಸ್ಥಾಪಿಸಿ [illegible] ಕೈಲಾಸ [illegible] ದಿಂದ [illegible] ಶಂಕರ [illegible] ಲಿಂಗ [illegible] ಅವತೀರ್ಣರಾದರು [illegible] ಸಂಕಲ್ಪ [illegible] ಮಾಡಿ [illegible] ವೀರಶೈವ [illegible] ಧರ್ಮ [illegible] ದಿಂದ [illegible] ದ ಮಹಾತ್ಮರಿಗೆ [illegible] ಎನ್ನುವ [illegible] ನಿಂದ [illegible] ಅವತರಿಸಿರುವ [illegible] ಶ್ರೀ [illegible] ಬಳಿಯಲ್ಲಿರುವ [illegible] ಗೋಲಕ್ಷೇಶ್ವರನೆಂಬುದನ್ನು ತಿಳಿದಿರುವೆವಷ್ಟೆ. [illegible] ದಿಂದ [illegible] ಸಂಗ್ರಾಮ [illegible] ಈ ರೂಪವನ್ನು ಧರಿಸಿ ಬಂದಿರುವುದು [illegible] ಮಹಾ [illegible] ಮುಕ್ತಿಗೆ ಸಾಕ್ಷಾತ್ಕಾರಕನಾದ [illegible] ವಾದ ಶಿವ ಶೈವಯೋಗಮಾರ್ಗವನ್ನು ಮಾಡಿ [illegible] ಶಿಷ್ಯರಿಗೆ [illegible] ಅಗಸ್ತ್ಯ ಮಹರ್ಷಿಯು ಸಾತಿಶಯವಾದ [illegible] ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯನಿಗೆ ವೀರಶೈವ ಸಿದ್ಧಾಂತವನ್ನು ಉಪದೇಶಮಾಡಿದರು. ಆ ಉಪದೇಶದ ಪೂರ್ವೋತ್ತರ [illegible] ಶಿವಯೋಗಿ [illegible] ಅಗಸ್ತ್ಯನಿಗೆ [illegible] ಸಿದ್ಧಾಂತ [illegible] ಈ ಗ್ರಂಥವು [illegible] ದಲ್ಲಿಯೂ [illegible] ಯಲ್ಲಿಯೂ ಪ್ರಸಿದ್ಧ ವಾಗಿದೆ. ಈ ಗ್ರಂಥವನ್ನು ಉದಾಹರಣೆಗಾಗಿ ಶ್ರೀಕರ ಭಾಷ್ಯ, ಕ್ರಿಯಾಸಾರ, ಲಿಂಗಧಾರಣಾಚಂದ್ರಿಕ, ಧರ್ಮನಿರ್ಣಯ ಮೊದಲಾದ ಸಕಲ ಗ್ರಂಥಗಳಲ್ಲಿಯೂ ಉಪಾದಾನ ಮಾಡಿದ್ದರಿಂದ ಈ ಗ್ರಂಥವು ಅತಿ ಪ್ರಾಚೀನ ಗ್ರಂಥವಾದ ದೆಂದಾಗುತ್ತದೆ. ಇದಲ್ಲದೆ ಪಂಡಿತ [illegible] ಅನೇಕ ಮುನಿಪುಂಗವರುಗಳಿಂದ ರಚಿತವಾದ ಗ್ರಂಥಗಳಿಂದ ಸ್ಪಷ್ಟವಾಗುವುದು. ಇದನ್ನೆಲ್ಲಾ ಕ್ರಮವಾಗಿ ಮುಂದೆ ತಿಳಿಸುವೆವು. ವೀರಶೈವ ಸಿದ್ಧಾಂತ (ಷಟ್ಸ್ಥಲಶಾಸ್ತ್ರ) ವನ್ನು ಈ ಭೂಲೋಕದಲ್ಲಿ ಪ್ರಖ್ಯಾತರಾದ ರೇಣುಕಾದಿ ಪಂಚಾಚಾರ್ಯರೇ ಸ್ಥಾಪಿಸಿದ ಪ್ರಯುಕ್ತ ಆದುದರಿಂದ ವೀರಶೈವ ಮತದ ಸಕಲ ಮತಾವಲಂಬಿಗಳಿಗೆ ಪಂಚಾಚಾರ್ಯರೇ ಪ್ರಥಮ ಗುರುಗಳಾಗಿರುತ್ತಾರೆ. ಇದರಿಂದ ವೀರಶೈವಮತವೆಂಬ ಸಾಮ್ರಾಜ್ಯಕ್ಕೆ ಪಂಚಾಚಾರ್ಯರೇ ಗುರುಸಾರ್ವಭೌಮರಲ್ಲದೆ ಇತರರಲ್ಲ. ಜಗದ್ಗುರು [illegible] ನಿಸರ್ಗಕ್ಕೆ ನೀರದಾಕಾಶದಲ್ಲಿ [illegible] ಆರೋಪಿಸುವಂತೆ ಕೇವಲ ಮನಸೋ ಬಂದಂತೆ ಹೋರಾಡು ವಂದಿಗರು ಕಾಲ್ಪನಿಕರಾಗಿಯೂ [illegible] ಇದರಿಂದ ಅಂತಹ ಮೂಲಾಚಾರ್ಯ [illegible] ರಿಂದ ಬಂದ ಮೂಲಪೀಠಗಳ ವಿಷಯದಲ್ಲಿ ಮನಬಂದ ದುರಾಲಾಪಗಳನ್ನು ಮಾಡದೆ “ಗುರು [illegible] ಎಂಬ ಉಕ್ತಿಯಿಂದ ತಮ್ಮ ತಂದೆ [illegible] ಗುರುಭಕ್ತಿಯನ್ನಿಟ್ಟು [illegible] ನಡೆಯುತ್ತ ಮುಕ್ತಿಭಾಗಿಗಳಾ [illegible]

ಹತ್ತನೆಯ ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು.

[illegible] ಅಖಿಲ ಭಾರತ ವೀರಶೈವ ಮಹಾಸಭೆಯು ನಡೆಯಬೇಕೆಂದು ನಿಶ್ಚಯವಾದುದರಿಂದ ಬೆಂಗಳೂರು ನಗರದವರು [illegible] ಸಭೆಗೆ ಬೇಕಾದ ಸನ್ನಾಹಗಳನ್ನು ಬಹು ಸಂಭ್ರಮದಿಂದ ಒದಗಿಸುತ್ತಿರುವರು. ಇದೇ ತಿಂಗಳು ಕಡೆಯ [illegible] ತಾರೀಖು [illegible] ದಿವಸ ರಾವ ಬಹದ್ದೂರ ಗುಬ್ಬಿ [illegible] ನಗರದಲ್ಲಿ [illegible] ಅಧ್ಯಕ್ಷತೆಯಲ್ಲಿ ಸ್ವಾಗತ [illegible] ಸಭೆಯು ಉಪಾಧ್ಯಕ್ಷರಾದ ರಾವ ಬಹದ್ದೂರ ಕಂಟಿಯವರಿಗೆ ಈ ವೀರಶೈವ ಮಹಾಸಭಾದ ಕಾರ್ಯವನ್ನು ವಹಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಿದರು. ಸ್ವಾಗತಮಂಡಲಿಯವರ [illegible] ಕಾರ್ಯಕುಶಲರಾಗಿರುವದರಿಂದ ಮಹಾಸಭಾಧ್ಯಕ್ಷತೆಯ [illegible] ಯೋಗ್ಯವರನ್ನೇ ಆರಿಸಿದುದಕ್ಕಾಗಿ ಸ್ವಾಗತಮಂಡಲಿಯವರಿಗೆ ವಂದನೆಗಳನ್ನು [illegible] ಈ ಕಂಟಿಯವರು ವಿನಯ [illegible] ಸಂತ ಗುಣಗಳಿಗೆ ಸ್ಥಾನಭೂತರಾಗಿರುವುದಲ್ಲದೆ ರಾಜಕೀಯಗಳಾದ ಅನಂತ ಗೌರವಗಳನ್ನು ಪಡೆದಿರುವರು. ಈ ಮಹಾಶಯರು ಪ್ರಕೃತದಲ್ಲಿ ಮುಂಬಯಿ ಪ್ರಾಂತದ ಅಖಿಲ ವೀರಶೈವ ಲೌಕಿಕ ಸಮುದಾಯದಲ್ಲಿ ಮೊದಲಿಗರೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಇವರು ಇಷ್ಟು ರಾಜಕೀಯಗಳಾದ ಪದವಿಗಳನ್ನು ಪಡೆದು ಪ್ರಸಿದ್ಧರಾಗಿರುವುದಲ್ಲದೆ ಶಾಂತರೂ [illegible] ಗುಣಗ್ರಾಹಿಗಳೂ ಧಾರ್ಮಿಕರೂ ಆಚಾರವಂತರೂ ಪರಧರ್ಮ ಸಹಿಷ್ಣುಗಳೂ ಆಗಿರುವುದರಿಂದ ಇಂದುವರೆಗೆ ವೀರಶೈವ ಸ [illegible] ವಾದ ಕ್ಷೇಮವನ್ನು ವಹಿಸಿದ್ದು ಮುಂದೆಯೂ ಸಭೆಯನ್ನು ನಡೆಸಬಲ್ಲವರೆಂಬ ಭರವಸೆಗೆ ಅತ್ಯಂತ ಯೋಗ್ಯರಾಗಿರುವರು. [illegible] ಪ್ರಪಂಚದಲ್ಲಿ ಯಾವನಾದರೂ ಎಷ್ಟು ದೊಡ್ಡಮನುಷ್ಯನಾಗಲಿ ಶ್ರೀಮಂತನಾಗಲಿ ಪ್ರಸಿದ್ಧನಾಗಲಿ [illegible] ಆಗಿದ್ದರೂ ಅವನು ಆ ಗೃಹಸ್ಥನ [illegible] ಕಡಿಮೆಯಿಲ್ಲದೆ ಗೌರವದಿಂದ ನಡೆದುಕೊಳ್ಳಬೇಕಾಗುತ್ತದೆ. ಹಾಗಿಲ್ಲವಿದ್ದರೆ ಗುಣಗಳಲ್ಲವೂ ನಿಷ್ಫಲವಾಗಿ ದೋಷಗಳೇ ತೋರುವವು. ಇವೆಲ್ಲಾ ಹಾಗಿರಲಿ [illegible] ಈ ಮಹಾ

ನಡುವೆ ಅಖಿಲ ವೀರಶೈವರಿಗೂ ಸಂಬಂಧಪಟ್ಟಿರುವುದರಿಂದಲೂ ಕೆಲವು ಕಾಲದಿಂದ ಜನಾಂಗದಲ್ಲಿ ಒಡಕುಗಳು ತಲೆದೋರಿರುವುದರಿಂದಲೂ ಇಪ್ಪಗಳಲ್ಲಿ ಬ್ಬಾ ಅಧ್ಯಕ್ಷರಾಗುವದು ಯಾರಿಗೂ ಯಾವ ವಿವಾದ ಪಕ್ಷಪಾತವಿಲ್ಲದ ಸರ್ವಜನಸಮ್ಮತವಾದ ಹಿತಬೋಧೆಯನ್ನು ಮಾಡಿಕೊಂಡು ಮಹಾ ಸಭಾಕಾರ್ಯವನ್ನು ನಿರ್ವಹಿಸು ಮಹೋತ್ಸವಗಳಾಗಬೇಕಾದರೆ ಸಭಾಧ್ಯಕ್ಷತೆಯನ್ನು ವಹಿಸಿದ ಯಜಮಾನನ ಸಹನಾ ಬುದ್ಧಿಕೌಶಲ್ಯಾದಿಗಳೇ ಆವಶ್ಯಕಗಳಾಗಿರುವವು. ಬೆಂಗಳೂರು ಸ್ವಾಗತ ಮಂಡಲಿಯವರು ಈ ಪೂರ್ವಾಪರಗಳನ್ನೆಲ್ಲಾ ಆಲೋಚಿಸಿ ಯಾವ ಲೋಪವೂ ಇಲ್ಲದಂತೆ ಸರ್ವಸಮ್ಮತವಾಗಿ ಮಹಾಸಭಾ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯವುಳ್ಳವರನ್ನೇ ಆರಿಸುತ್ತಾರೆ. ಸ್ವಾಗತಮಂಡಲಿಯವರ ಪ್ರಾರ್ಥನೆಯಂತೆ ರಾವಬಹದ್ದೂರ್ ಕಂಬಳಿಯವರು ಈ ಲೋಕವಂದ್ಯವಾದ ಅಧ್ಯಕ್ಷತೆಯನ್ನು ವಹಿಸಿದ ಶುಭಸೂಚನೆಯನ್ನು ಕೇಳಬೇಕೆಂದು ಅಖಿಲ ವೀರಶೈವರೂ ಎದುರು ನೋಡುತ್ತಿರುವರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದ ಪೌರ ಸಭಾಧ್ಯಕ್ಷರ ಚುನಾವಣೆಯು ಈ ತಿಂಗಳು 25 ಕ್ಕೆ ನಡೆಯುವುದು.

ಶ್ರೀಮದ್ಯುವರಾಜರವರ ತೃತೀಯ ಪುತ್ರಿಕಾ ರತ್ನಕ್ಕೆ ಶ್ರೀ ಜಯಚಾಮುಂಡಮ್ಮಣ್ಣಿಯವರೆಂದು ನಾಮಕರಣವನ್ನು ಮಾಡಿರುತ್ತಾರೆ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ತೃತೀಯ ಪರಿಷತ್ತು ಮುಂದಿನ ಜನವರಿ ತಾ|| 4, 5 6 ರಲ್ಲಿ ಬೆಂಗಳೂರಲ್ಲಿ ನೆರವೇರುವುದಾಗಿ ತಿಳಿಯಬರುತ್ತದೆ.

ಬೆಂಗಳೂರಿನಲ್ಲಿ ವೆಂಕಟದಾಸಪ್ಪನೆಂಬುವನು 61 ತೊಲ ಗಾಂಜಾವನ್ನು ಇಟ್ಟುಕೊಂಡಿದ್ದನೆಂದು ಚಾರ್ಜ್ ಮಾಡಲ್ಪಟ್ಟಿದ್ದು ಆತನಿಗೆ ಒಂದು ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ರಾಜಧಾನಿಯ ಟೌನ್ ಹಾಲಿನ ಹತ್ತಿರ ಮರಾಮತ್ತಿನ ಸ್ಥಳದಲ್ಲಿ ಜೇಬನ್ನು ಕತ್ತರಿಸಿ ಕಳವು ಮಾಡಿದ ನಸ್ರುದಾ ದಾವುದ ಎಂಬುವನಿಗೆ ಸಿಟಿ ಮ್ಯಾಜಿಸ್ಟ್ರೇಟರು ಮೂರು ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದರು.

ಗೋಲಾರದ ಚಿನ್ನದ ಗಣಿಗಳಿಂದ ಕಳೆದ ವರ್ಷ 481 607 782 ಔನ್ಸ್ ಚಿನ್ನವು ತೆಗೆಯಲ್ಪಟ್ಟಿತು. ಕಂಪನಿಯವರಿಗೆ 21 684 769 ರೂಪಾಯಿಗಳ ಲಾಭವೂ, ಮೈಸೂರು ಸರ್ಕಾರಕ್ಕೆ 11 89 899 ರೂಪಾಯಿಗಳ ರಾಜಾದಾಯವೂ ಬಂದಿರುತ್ತದೆ.

ಯಡತೊರೆ ತಾಲ್ಲೂಕು ಸಾಲಿಗ್ರಾಮದ ಹತ್ತಿರ ಒಂದು ಹಳ್ಳಿಯಲ್ಲಿ ಚಿಕ್ಕಮ್ಮನೆಂಬವಳು ತನ್ನ ಬಾಲಕನನ್ನು ಕನ್ನೆಗೆ ದೂಡಿ ಕೊಂದ ಮೊಕದ್ದಮೆಯಲ್ಲಿ ಅಪರಾಧಿಯು ತಾನು ಮಾಡಿದ ಅಪರಾಧವನ್ನು ಒಪ್ಪಿಕೊಂಡದ್ದರಿಂದ ಅವಳಿಗೆ ಸೆಷನ್ ಜಡ್ಜರವರು ಆರು ತಿಂಗಳು ಕಠಿಣ ಕಾರಾಗೃಹ ವಾಸವನ್ನು ವಿಧಿಸಿದರು.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎಂ ಎ ನಾಗೆ ಅಯ್ಯನ್ನೇ ಪಾರ್ಟ ಮಾಡಿರುವುದರಿಂದ ಯೂನಿವರ್ಸಿಟಿಯ ರಿಜಿಸ್ಟ್ರಾರ್ ಮ|| ಬಿ ಎಂ ಶ್ರೀಕಂಠ ನವರನ್ನು ಗೌರವ ಕನ್ನಡ ಪಂಡಿತರನ್ನಾಗಿಯೂ ಗಳೂರು ಸೆಂಟ್ರಲ್ ಕಾಲೇಜಿನಲ್ಲಿರುವ ಮ|| ಎ ಸ್ವಾಮಿಯ್ಯನವರನ್ನು ಕನ್ನಡ ಪಂಡಿತರನ್ನಾಗಿಯೂ ಮಿಸಿದ್ದಾರೆ.

ಶ್ರೀಮನ್ಮಹಾರಾಜರವರ ರಜತೋತ್ಸವದ ಜ್ಞಾಪಕಾರ್ಥವಾಗಿ ಮೈಸೂರು ಯೂನಿವರ್ಸಿಟಿಯ ರಿಟೈರ್ಡ್ ಸ್ಟ್ರಾರರಾದ ಮ|| ರಾ|| ವಿ ಸುಬ್ರಹ್ಮಣ್ಯ ರ್ ಎ ಯವರು 1800 ರೂಪಾಯಿಗಳನ್ನೂ ವ ಕನ್ನಡ ಪಂಡಿತರಾದ ಮ|| ಎಂ ಶ್ರೀ ನವರು 1000 ರೂಪಾಯಿಗಳನ್ನೂ ಮೈಸೂರು ಯೂನಿವರ್ಸಿಟಿಗೆ ದಾನ ಮಾಡಿರುತ್ತಾರೆ.

ನಿವೃತ್ತ ಸಚಿವರಾದ ಮ|| 'ಮುಷೀರ್-ಉಲ್ ಉಲ್ಕ್, ನಿಜಾರ್ ಹಂಜಾಹುಸೇನ್ ಸಾಹೇಬರವರು ಅಸ್ವಸ್ಥರಾಗಿ ಎರಡು ವಾರಗಳಿಂದ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ದಿವಾನರೇ ಮೊದಲಾದ ಬಂಧು ಮಿತ್ರಮಂಡಲಿಯವರು ಅವರನ್ನು ಕಂಡು ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಾರೆ. ಜಗದೀಶನು ಇವರಿಗೆ ಜಾಗ್ರತೆ ಆರೋಗ್ಯವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ರವರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ|| ರಾ| ಎಚ್ ಬಸವರಾಜ ಅರಸಿನವರು ಕಳೆದ ಬುಧವಾರ ರಾಜಧಾನಿಯಲ್ಲಿರುವ ಸ್ವಗೃಹದಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜಿಡವಿಜಕ್ಕಿಯುದ್ಯೋಗದಿಂದ ನಿವೃತ್ತರಾಗಿರುವ ಮ|| ರಾ|| ದೊಡ್ಡರಾಜ ಅರಸಿನವರ ಏಕಮಾತ್ರ ಪುತ್ರರೂ ತರುಣರೂ ಆಗಿದ್ದರು. ಮೃತರ ಆತ್ಮಕ್ಕೆ ಶಾಂತಿಯೂ, ಇವರ ಕುಟುಂಬಕ್ಕೆ ದುಃಖಶಮನವೂ ಉಂಟಾಗಲೆಂದು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ಅಮೇರಿಕದಲ್ಲಿ ಜೂಜಿನ ಕುದುರೆಗಳಿಗೆ ಕನ್ನಡಕ (ಸುಲೋಚನ) ಗಳನ್ನು ಉಪಯೋಗಿಸುತ್ತಾರೆ.

ಬರೋಡಾ ಸಂಸ್ಥಾನದಲ್ಲಿ ವಿವಾಹವಾಗುವ ವಧೂವರರ ವಯಸ್ಸು 14 ಮತ್ತು 18 ಕ್ಕೆ ಕಡಿಮೆಯಾಗಿರಕೂಡದೆಂದು ವಿಧಿಸುತ್ತಾರೆ.

ರಷ್ಯಾದೇಶದಲ್ಲಿ ಹೆಂಗಸರೂ ಸೈನ್ಯದಲ್ಲಿ ಸೇರಿ ಕೆಲಸಮಾಡುತ್ತಿರುವರು. ಸದ್ಯಃ 72 ಜನ ಮಹಿಳೆಯರು ಸೈನ್ಯದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಾಗಿರುತ್ತಾರೆ.

ಡಿಲ್ಲಿಯಲ್ಲಿ ಕೆಲ ಮುಸಲ್ಮಾನರು ಹಿಂದೂಸ್ತ್ರೀಯರ ವಿಷಯವಾಗಿ ಕೆಲವು ಅವಮಾನಕರಗಳಾದ ಮಾತುಗಳನ್ನಾಡಿದುದರಿಂದ ಹಿಂದೂ ಮುಸಲ್ಮಾನರಿಗೆ ಹೋರಾಟವಾಗಿ 150 ಜನ ಹಿಂದುಗಳನ್ನು ಬ್ಬಿದುಮಾಡಿರುತ್ತಾರೆ.

ದಾರವಾಡ ಜಿಲ್ಲಾ ಗುಡಿಗೇರಿ ತಾಲೂಕಿನಲ್ಲಿ ವಿಶಾಖಾ ಮಳೆಯು ವಿಶೇಷವಾಗಿ ಸುರಿದು ಸುಮಾರು 318 ಹಳ್ಳಿಗಳಲ್ಲಿ ಬಹಳ ನಷ್ಟವಾಗಿ ಅನೇಕ ಜನರು ನಿರಾಶ್ರಿತರಾಗಿರುತ್ತಾರೆಂದು ಒಬ್ಬ ಪತ್ರವ್ಯವಹಾರಕರು ತಿಳಿಸುತ್ತಾರೆ.

ಬಂಗಾಳದ ಒಂದು ಗ್ರಾಮದಲ್ಲಿ ಆಸ್ತಿಯ ಸಂಬಂಧವಾಗಿ ಜಗಳವುಂಟಾಗಿ ಆತನೊಬ್ಬ ಮಹಮ್ಮದೀಯನ ಒಂದು ಮನೆಯವರನ್ನೆಲ್ಲಾ ಕೆಲವರಾತತಾಯಿಗಳು ಕೊಲೆ ಮಾಡಿದರು. ಸೆಷನ್ ಜಡ್ಜರವರು ಅಪರಾಧಿಗಳನ್ನೆಲ್ಲಾ ಫಾಶಿಗೆ ಗುರಿಮಾಡಿರುತ್ತಾರೆ.

ಕೋಆಪರೇಟಿವ್ ನ್ಯಾವಿಗೇಷನ್ ಕಂಪನಿಗೆ ಸೇರಿದ ತುಕಾರಾಮ್ ಎಂಬ ಹಡಗು ಬೊಂಬಾಯಿಗೆ ಪಶ್ಚಿಮ ದಿಕ್ಕಿನ ಸಮುದ್ರಮಧ್ಯದಲ್ಲಿ ಬಿರುಗಾಳಿ ಮತ್ತು ಅಲೆಗಳಿಗೆ ಸಿಕ್ಕಿ ಜಲಸಮಾಧಿಯನ್ನೈದಿತು. ಅದರಲ್ಲಿದ್ದ 140 ಜನರಲ್ಲಿ / ಜನರು ಮಾತ್ರ ಬದುಕಿರುವರಂತೆ!

ಪಂಡಿತ ಮೋತೀಲಾಲರವರು ರಷ್ಯಾ ಸೋವಿಯಟ್ ಸರ್ಕಾರದ ಅತಿಥಿಗಳಾಗಿ ಮಾಸ್ಕೋಪಟ್ಟಣಕ್ಕೆ ದಯಮಾಡಿದರು. ಇವರು ಅಲ್ಲಿ ನಡೆಯುವ ಸೋವಿಯಟ್ ಸರ್ಕಾರದ ಹತ್ತನೆಯ ವಾರ್ಷಿಕೋತ್ಸವಕ್ಕೆ ಭಾರತೀಯ ಸ್ವರಾಜ್ಯ ಪ್ರತಿನಿಧಿಗಳಾಗಿ ದಯಮಾಡಿಸಿರುವರು.

ವೇಸಿಲಾ ಸ್ಟ್ಯಾಟ್ಮನ್ ಎಂಬವರು ವ್ರಿಟನಾಯಿಸೂದ್ರ ಸಭೆಯಲ್ಲಿ ಲೋಕದಲ್ಲಿ ಘೋರಯುದ್ಧವು 1928ನೆಯ ಮೇ ತಿಂಗಳ ಅಂತ್ಯದಲ್ಲಿ ಪ್ರಾರಂಭವಾಗಿ 1936ನೆಯ ಸಪ್ಟಂಬರ್ ಮಧ್ಯಭಾಗದವರೆಗೂ ನಡೆಯುವದೆಂದೂ, ಈ ಯುದ್ಧದಲ್ಲಿ ರಷ್ಯಾದೇಶವು ನಿರ್ಮೂಲವಾಗಿ ಆಂಗ್ಲದೇಶಕ್ಕೆ ಜಯಪ್ರದವಾಗುವದೆಂದೂ ಹೇಳುತ್ತಾರೆ!

ಮಹಾತ್ಮಾ ಗಾಂಧಿಯವರು ತಮ್ಮ ದೆಹಲಿಯ ರಾಜಕೀಯ ಪ್ರವಾಸವನ್ನು ಮುಗಿಸಿಕೊಂಡು ತಾ|| 13ಕ್ಕೆ ಸಿಂಹಳದ್ವೀಪದ ಕೊಲಂಬೋ ಪಟ್ಟಣವನ್ನು ಸೇರಿದರು. ಅಲ್ಲಿಯ ಮುನಿಸಿಪಾಲಿಟಿಯವರೂ ಪುರಜನರೂ ಅತ್ಯುತ್ಸಾಹದಿಂದ ಮಹಾತ್ಮರಿಗೆ ಸ್ವಾಗತವನ್ನಿತ್ತು ಖಾದಿನಿಧಿಗೆ ವಿಶೇಷ ಧನವನ್ನು ಕೊಡುವವರಾಗುತ್ತಿರುವದಾಗಿ ತಿಳಿಯಬರುತ್ತದೆ.

ಲಂಡನ್ನಿನ ಸ್ವತಂತ್ರ ಲೇಬರ್ ಪಕ್ಷದ ಕಾರ್ಯದರ್ಶಿಗಳಾದ ಫೆನ್ನರ್ ಬ್ರಾಕ್ವೇಯವರು ಹಿಂದೂದೇಶೀಯರು ಏಕಕಂಠರಾಗಿ ರಾಯಲ್ ಕಮಿಷನನ್ನು ನಿಷೇಧಿಸಿದ್ದರ ಪರಿಣಾಮವು ಒಳ್ಳೆಯದಾಗಿದೆಯೆಂದೂ ಮುಂದವನ್ನೇಯರು ನಿಷೇಧಪ್ರದರ್ಶನ ಮಾಡಬೇಕೆಂದೂ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀನಿವಾಸಯ್ಯಂಗಾರರಿಗೆ ತಂತಿಕೊಟ್ಟಿದ್ದಾರೆ.

ಕಳೆದ 11 ನೆಯ ತಾರೀಖಿನ ದಿವಸ ಬೊಂಬಾಯಿ ನಗರದಲ್ಲಿ ಸಾರ್ವಜನಿಕಸಭೆ ಸೇರಿ ಸಾರ್ವಭೌಮ ಸರ್ಕಾರದವರು ಹಿಂದುಸ್ಥಾನಕ್ಕೆ ಕಳುಹಿಸಿಕೊಟ್ಟಿರುವ ರಾಯಲ್ ಕಮಿಷನ್ನಿಗೆ ಬಹಿಷ್ಕಾರ ಹಾಕಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು. ಮಿ|| ಜಯಕರ್, ಮಿ|| ಜಿನ್ನಾ ಪ್ರಭೃತಿಗಳು ವೈಸರಾಯರವರ ಮೋಹದ ಮಾತಿಗೆ ಯಾರೂ ಮರುಳಾಗಬಾರದೆಂದು ಎಚ್ಚರಿಸಿದರು.

ಹೈದರಾಬಾದಿನಲ್ಲಿ ನಲವತ್ತು ವರ್ಷಕ್ಕೆ ಮೀರಿದ ಒಬ್ಬ ಗೃಹಸ್ಥನು 11 ವರ್ಷದ ಒಬ್ಬ ಹುಡುಗಿಯನ್ನು ಆಕೆಯ ಪಾಲಕರಿಗೆ ವಿಶೇಷ ಧನವನ್ನು ಕೊಟ್ಟು ಮದುವೆಯಾಗಲು ಪ್ರಯತ್ನಿಸಿದ್ದನು. ಈ ಮಧ್ಯೆ ವಧುವಿನ ಅಜ್ಜಿಯು ಕೋರ್ಟಿನಲ್ಲಿ ಪ್ರತಿಬಂಧಕ ಮಾಡಿಸಿ ನಡೆಯುತ್ತಿದ್ದ ಮದುವೆಯನ್ನು ಅರ್ಧಕ್ಕೆ ನಿಲ್ಲಿಸಿ ಆ ಹುಡುಗಿಯನ್ನು ಆ ಮರಣಾಂತ ದುಃಖದಿಂದ ತಪ್ಪಿಸಿದಳು.

ಬೊಂಬಾಯಿನ ಬ್ಯಾಕಬೆ ಸಂಬಂಧದ ಕೇಸಿನಲ್ಲಿ ಡೆವಲಪ್ಮೆಂಟ್ ಶಾಖೆಯಲ್ಲಿ ಸೂಪರ್ವೈಜರಾಗಿದ್ದ ಜೋಸಫ್ ಬ್ರೂಕ್ ಎಂಬ ಐರೋಪ್ಯನು ತನ್ನ ಹೇಳಿಕೆಯಲ್ಲಿ ತಾನು ಕಂಟ್ರಾಕ್ಟರಿಂದ ಲಂಚ ತೆಗೆದುಕೊಂಡದ್ದುಂಟೆಂದೂ ಮೇಲ್ಪಟ್ಟ ಅಧಿಕಾರಿಗಳಲ್ಲಿಯೂ ಲಂಚವನ್ನು ತೆಗೆದುಕೊಳ್ಳುವುದು ವಾಡಿಕೆಯಾಗಿದ್ದುದರಿಂದ ತಾನು ಲಂಚ ತೆಗೆದುಕೊಳ್ಳುವುದನ್ನು ಕೆಟ್ಟುದೆಂದು ಭಾವಿಸಲಿಲ್ಲವೆಂದೂ ಹೇಳಿರುವನಂತೆ!

ಕರಾಚಿಯಲ್ಲಿ ಮಿಸೆಸ್ ಫಾದರ್ ಎಂಬ ಸ್ತ್ರೀವೈದ್ಯಳ ಮನೆಯನ್ನು ಯಾರನೋ ಒಬ್ಬ ದುರಾತ್ಮನು ಮನೆಯಲ್ಲಿ ತನ್ನ ಹೆಂಡತಿಯು ಪ್ರಸವವೇದನೆಯಿಂದ ಸಂಕಟಪಡುತ್ತಿರುವಳೆಂಬ ನೆಪದಿಂದ ಪ್ರವೇಶಿಸಿ ಬಲಾತ್ಕಾರದಿಂದ ಆಕೆಯಲ್ಲಿ ಅತ್ಯಾಚಾರ ನಡೆಯಿಸಲುದ್ಯುಕ್ತನಾದನು. ಅಷ್ಟರಲ್ಲಿಯೇ ಆಕೆಯು ಗಟ್ಟಿಯಿಂದ ಕೂಗಿಕೊಳ್ಳಲು ನಾಗರಿಕವೇಷಧಾರಿಯಾದ ಆ ದುರ್ಜನನು ಮೋಟಾರನ್ನು ಹತ್ತಿ ಪಲಾಯನಸೂಕ್ತವನ್ನು ಪಠಿಸಿದನು.

ಕಲ್ಕತ್ತೆಯ ಸ್ವರಾಜ್ಯಪಾರ್ಟಿಯ ಮುಂದಾಳುಗಳಾದ ಮಿ|| ಸೇನಗುಪ್ತರವರನ್ನೂ ಮತ್ತು ಬಂಗಾಲೀ ಪತ್ರಿಕಾಕರ್ತರಾದ ಮಿ|| ಸೇನರವರನ್ನೂ ಬಂಗಾಲಾ ಗವರ್ನರ್ ಸಾಹೇಬರವರು ರಾಯಲ್ ಕಮಿಷನ್ನಿನ ವಿಷಯವಾಗಿ ತಮ್ಮ ಅನುಮತಿಯನ್ನು ಕೊಡುವುದಕ್ಕಾಗಿ ಬರಬೇಕೆಂದು ಆಹ್ವಾನಿಸಿದ್ದರು. ಆದರೆ ಇವರು ಈ ವಿಷಯದಲ್ಲಿ ತಮ್ಮ ಅಭಿಮತವು ಸಂಪೂರ್ಣ ವಿರುದ್ಧವಿರುವುದರಿಂದ ತಾವು ಬರುವುದಕ್ಕಾಗುವುದಿಲ್ಲವೆಂದು ಉತ್ತರಕೊಟ್ಟಿದ್ದಾರೆ.

Hindusthan Co operative Insurance
Society Ltd
Estd 1907 Head Office Calcutta
ASST ORGANIZER FOR MYSORE STATE AND COORG
B S RAMASWAMI IYENGAR B A
ಹಿಂದೂಸ್ಥಾನ್ ಕೋಆಪರೇಟಿವ್ ಇನ್ಷೂರೆನ್ಸ್
ಸೊಸೈಟಿ ಲಿಮಿಟೆಡ
ಸ್ಥಾಪಿತವರ್ಷ 1907 ಮುಖ್ಯ ಕಾರ್ಯಾಲಯ ಕಲ್ಕತ್ತಾ
ಅತ್ಯುತ್ತಮವಾದ ಜೀವವಿಮೆ ಸಂಸ್ಥೆ.
ಗೌರವಸ್ಥರಾದ ಏಜಂಟರುಗಳು ಮೈಸೂರು ಮತ್ತು ಕೊಡಗು ಸೀಮೆಗಳ ಎಲ್ಲಾ ಭಾಗಗಳಲ್ಲಿಯೂ ಬೇಕಾಗಿದೆ
ಹೆಚ್ಚು ವಿವರಗಳಿಗೆ ಕೆಳಗಿನ ವಿಳಾಸದವರಿಗೆ ಬರೆಯಿರಿ
ಬಿ ಎಸ್ ರಾಮಸ್ವಾಮಿ ಅಯ್ಯಂಗಾರ್, ಬಿ ಎ
ಮೈಸೂರು ಮತ್ತು ಕೊಡಗು ಸೀಮೆಗಳ ಏಜನ್ಸಿ
ಆರ್ಗನೈಜರ್ ಸಯಾಜಿರಾವ್ ರೋಡ್ [illegible]

ಶ್ರೀ ಗುರುಲಿಂಗಜಂಗಮೇಭ್ಯೋ ನಮಃ

ಪತ್ರಿಕಾಕರ್ತರ ಕರ್ತವ್ಯ

ಯಾವುದಾದರೊಂದು ಸಮಾಜವಾಗಲಿ ದೇಶವಾಗಲಿ ರಾಷ್ಟ್ರವಾಗಲಿ ಉನ್ನತಸ್ಥಿತಿಗೆ ಬರಬೇಕಾದರೆ ಆಯಾ ಸಮಾಜ ಹಾಗು ಧರ್ಮ ಮತ್ತು ರಾಷ್ಟ್ರದೊಳಗಿನ ಅವ್ಯವಹಾರ ಅಸಿದ್ಧಾಂತ ಅನೈಕ್ಯ ಇವೇ ಮೊದಲಾದ ದುಷ್ಟ ಪದ್ಧತಿಗಳು ನಾಮಾವಶೇಷವಾಗಿ ಸಿದ್ಧಾಂತಾಚಾರವು ಪ್ರಚಾರದಲ್ಲಿ ಬರಬೇಕಾದದ್ದು ಮುಖ್ಯ ಕರ್ತವ್ಯವಾಗಿದೆ. ಅಜ್ಞಾನಾಂಧಕಾರದಲ್ಲಿ ಮುಳುಗಿದ ಸಮಾಜವಾಗಲಿ ರಾಷ್ಟ್ರವಾಗಲಿ ಜಾಗ್ರತಗೊಳ್ಳಬೇಕಾದರೆ ಸದುಪದೇಶಕರಿಗಿಂತಲೂ ವಾರ್ತಾ ಪತ್ರಿಕೆಗಳ ಆವಶ್ಯಕತೆಯೇ ಮೂಲಕಾರಣವೆಂದು ಸಮಾಜ ಸೇವಕರೂ ಧರ್ಮೋದ್ಧಾರಕರೂ, ರಾಷ್ಟ್ರಭಕ್ತರೇ ಮೊದಲಾದ ಪ್ರಮುಖರೂ ಕಂಡುಹಿಡಿದಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಇದೇ ತತ್ವವನ್ನು ಅನುಸರಿಸಿ ಪ್ರತಿಯೊಂದರಲ್ಲಿಯು ಹಿಂದುಳಿದ ನಮ್ಮ ಕನ್ನಡಿಗರು ಮತ್ತು ವೀರಶೈವ ಸಮಾಜದವರು ಕರ್ನಾಟಕ ಭಾಷೆಯಲ್ಲಿ ಕೆಲಕೆಲವು ವರ್ತಮಾನ ಪತ್ರಿಕೆಗಳನ್ನು ಹೊರಡಿಸಲುದ್ಯುಕ್ತರಾದರು, ಇದು ಸ್ತುತ್ಯವು. ಇತರ ಪರರಾಷ್ಟ್ರಗಳಲ್ಲಿ ವೃತ್ತಪತ್ರಿಕೆಗಳ ಮಹತ್ವವು ಮತ್ತು ಅಭಿರುಚಿಯು ಇದ್ದಷ್ಟು ನಮ್ಮ ಕನ್ನಡಿಗರಲ್ಲಿ ನೂರರಲ್ಲೊಂದು ಪಾಲು ಸಹ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಕರ್ನಾಟಕದಲ್ಲಿ ಇರತಕ್ಕ ಜನಸಂಖ್ಯೆಯನುಮಾನದಿಂದ ವಿಚಾರ ಮಾಡಿ ನೋಡುತ್ತಿರಲಿಕ್ಕೆ ವರ್ತಮಾನಪತ್ರಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡತಕ್ಕ ಚಂದಾದಾರರಿರುವದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಇದಕ್ಕೆಲ್ಲಾ ಪತ್ರಕಾರರು ತಮ್ಮ ಕರ್ತವ್ಯಕ್ಕನುಸರಿಸಿ ನಿಷ್ಪಕ್ಷಪಾತ ಬುದ್ಧಿಯಿಂದ ವರ್ತಿಸದೆ ನಿಷ್ಕಾರಣವಾಗಿ ಒಬ್ಬರ ಮೇಲೊಬ್ಬರು ಟೀಕಾಸ್ತ್ರ ಪ್ರಯೋಗಗಳನ್ನು ಮಾಡುವುದೇ ಮೂಲಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು.

ಇನ್ನು ನಮ್ಮ ವೀರಶೈವರ ಜನಸಂಖ್ಯೆಯು ಸುಮಾರು ಮುವ್ವತ್ತೈದು ಲಕ್ಷವಿದ್ದು, ವೀರಶೈವರ ವಾರಪತ್ರಿಕೆಗಳು ಹತ್ತೆಂಟು ಮಾತ್ರ ಇರಬಹುದು. ಒಂದು ಪತ್ರಿಕೆಗಾದರೂ ಮೂರುಸಾವಿರಕ್ಕಿಂತ ಹೆಚ್ಚು ಚಂದಾದಾರರಿದ್ದಂತೆ ಕಂಡು ಬರುವದಿಲ್ಲ. ಲೋಕಮಾನ್ಯರಾದ ಶ್ರೀ ನಾ. ವೈ. ವೀರಸಂಗಪ್ಪನವರ ಕರಕಮಲದಲ್ಲಿ ಪ್ರಾದುರ್ಭವಿಸಿ ಒಂದು ಮೂರಾಂಶ ಶತಮಾನಕ್ಕಿಂತಲೂ ಹೆಚ್ಚು ಸಂವತ್ಸರ ನಲಿದಾಡುತ್ತಲಿರುವ ಮೈಸೂರು ಸ್ಟಾರ್ ಪತ್ರಿಕೆಗೆ, ಸಹ ಎರಡು ಸಾವಿರಕ್ಕಿಂತ ಹೆಚ್ಚು ಚಂದಾದಾರರಿಲ್ಲವೆಂದು ತೋರುತ್ತದೆ. ಒಂದಮೇಲೆ ಪತ್ರಿಕಾ ಕರ್ತನು ಮನಃಪೂರ್ವಕ ತಮ್ಮ ಕರ್ತವ್ಯವನ್ನು ಸ್ಮರಿಸುವದಿಲ್ಲವೆಂದು ಯಾಕೆ ಹೇಳಬಾರದು.

ಈಗಿನ ಪತ್ರಿಕಾ ಕರ್ತರು ಪಕ್ಷಪಾತದ ಕೋಟೆಯಲ್ಲಿ ಬಿದ್ದು ಯಾವನಾದರೊಬ್ಬ ವ್ಯಕ್ತಿಯು ಅವ್ಯವಹಾರ ರೀತಿಯಿಂದ ಒಂದು ಅಸಿದ್ಧಾಂತವನ್ನಾಗಲಿ ಅಥವಾ ಅಶಾಸ್ತ್ರೀಯವಾಗಿ ಬಂದ ಸ್ವಪ್ರತಿಷ್ಠೆಯ ಪ್ರಭಾವವನ್ನಾಗಲಿ ಪ್ರಜ್ವಲಗೊಳಿಸಲು ಧನಸಹಾಯವನ್ನಿತ್ತರೆ ಸಾಕು; ದ್ರವ್ಯದ ಆಶೆಯಿಂದ ಎಂಥ ಸಮಾಜಘಾತಕವಾದ ಲೇಖನಗಳು ಬಂದರೂ ಹಿಂದೆ ಮುಂದೆ ಸಹ ವಿಚಾರ ಮಾಡದೆ ಪ್ರಚಾರ ಮಾಡುತ್ತಲಿರುವರು. ಸಮಾಜದ ಘಾತಕವೂ ಧರ್ಮದ್ರೋಹವೂ ಗುರುನಿಂದೆಯೂ ಯಾವ ಪತ್ರಿಕೆಯಲ್ಲಿ ತುಂಬಿ ತುಳುಕುತ್ತಿರುವುದೋ ಅಂಥಾ ಪತ್ರಿಕೆಯಿಂದ ನಮ್ಮ ಸಮಾಜಕ್ಕೆ ಏನೊಂದೂ ಪ್ರಯೋಜನವಾಗದೆ ಮತ್ತಷ್ಟು ಅನಾಯಕತ್ವ, ಅನೈಕ್ಯ, ಅನಾಚಾರ, ಅನುಮಾನ, ಅಶಾಸ್ತ್ರ, ದುರ್ವಾದ, ಇವೇ ಮೊದಲಾದ ನಾನಾತರದ ದುಷ್ಟಪದ್ಧತಿಗಳು ಅಂಟಿಕೊಳ್ಳುವವು. ಇಂಥಾ ಪತ್ರಿಕೆಗಳನ್ನು ಬಹಿಷ್ಕರಿಸುವದೂ, ಅಥವಾ ಪುರಸ್ಕರಿಸುವದೂ ಆಯಾ ಸಮಾಜದವರ ಕರ್ತವ್ಯವಾಗಿದೆ.

ಶ್ರೀ ನಾ. ವೀರಸಂಗಪ್ಪನವರು ಜೀವಂತವಿದ್ದಾಗ್ಗೆ ಯಾವ ಪ್ರಕಾರ ಮತವನ್ನು ಹಾಗು ಮತಾಚಾರ್ಯರ ಸಿದ್ಧಾಂತವನ್ನು ತಮ್ಮ ತನು, ಮನ, ಧನವನ್ನು ಸೂರೆಗೈದು ಪುನರುಜ್ಜೀವನಗೊಳಿಸಿದರೋ ಅಂಥಾ ಪತ್ರಿಕಾ ಕರ್ತರು, ಹಾಗು ಆಗಿನ ಕಾಲದ ಸ್ಟಾರ್ ಪತ್ರಿಕೆಯಂಥಾ (ಪತ್ರವು) ಇವತ್ತಿನವರೆಗೂ ನಮ್ಮ ಸಮಾಜದಲ್ಲಿ ಜನಿಸಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಸದ್ಯಃ ನಮ್ಮ ಸಮಾಜದಲ್ಲಿ ಪ್ರಚಾರವಾಗುತಕ್ಕ ಹತ್ತೆಂಟು ಪತ್ರಿಕೆಗಳು ಸ್ವಮತ ಸಿದ್ಧಾಂತ ಮಾರ್ಗವನ್ನನುಸರಿಸಲಿಲ್ಲ. ಅದರಲ್ಲಿಯೇ ಒಂದೆರಡು ಪತ್ರಿಕೆಗಳು ಮಾತ್ರ ಪ್ರಾಚೀನಾಚಾರ ಸಿದ್ಧಾಂತವನ್ನು ಮತಾಚಾರ್ಯರನ್ನು ಮೂಲೋತ್ಪಾಟನ ಮಾಡುವ ಕಾರ್ಯದಲ್ಲಿ ಮಾತ್ರ ಕಟಿಬದ್ಧರಾಗಿ ನಿಂತಿರುವವು. ಇದು ಅತ್ಯಂತ ದುಃಖದಾಯಕವಾದ ಸಂಗತಿಯಾಗಿದೆ. ಇದರಿಂದ ಈ ನಮ್ಮ ಧರ್ಮಕ್ಕೆ ಪರಧರ್ಮದವರಿಂದ ನಾನಾತರದ ಕುಂದು ಕೊರತೆಗಳು ಬಂದು ಬಟ್ಟುತ್ತಲಿರುವವು. ಅಯ್ಯೋ ದುರ್ದೈವ ಸಮಾಜವೇ, ಇವತ್ತಿನ ವರೆಗೆ, ಜಗನ್ಮಾನ್ಯರಾದ ಶ್ರೀ ವೀರಸಂಗಪ್ಪನವರು ನಿನ್ನನ್ನು ಕೈಬಿಟ್ಟು ಅಗಲಿದರೆ ಪ್ರಾಚಾರ್ಯರ ಸಿದ್ಧಾಂತಾನುಸಾರ ನೀನು ವೈದಿಕ ಶಾಸ್ತ್ರೀಯ ಧರ್ಮವೆಂದು ಜಗತ್ತಿಗೆಲ್ಲ ಜಯಘೋಷಿಯನ್ನು ಹೊಡೆಯುತ್ತಿದ್ದೆಯಲ್ಲಾ ಅನ್ಯಾಯವಿಲ್ಲ ಇದಲಿ. ಯಾವ ಸಮಾಜದಲ್ಲಿಯೇ ಆಗಲಿ ಸ್ವಮತಸಿದ್ಧಾಂತವನ್ನು ಪ್ರಚಾರಗೊಳಿಸತಕ್ಕ ವರ್ತಮಾನಪತ್ರಗಳಾಗಲಿ ಮಾಸಿಕ ತ್ರೈಮಾಸಿಕಗಳಾಗಲಿ ಇರತಕ್ಕದ್ದು ಆಯಾ ಧರ್ಮಕ್ಕೆ ಶ್ರೇಯಸ್ಕರವಾದ ಸಂಗತಿಯಾಗಿದೆ. ಇದೇ ತತ್ವವನ್ನನುಸರಿಸಿ ಪ್ರಾಚೀನಾಚಾರ್ಯರ ಸಿದ್ಧಾಂತಾಚಾರವನ್ನು ಹಿಂದಿನ ಕಾಲದ ಹಾಗೆ ಈ ಮತಾಚಾರ್ಯರನ್ನು ಮುಂದಿಟ್ಟು ಕೊಂಡು ಈ ಮತದ ಗೌರವವನ್ನು ಕಾಯೇನ ಕಾಂಕ್ಷೆಯಿಂದ ಸಾಧಕನಿಗಳಾದ ಗುರುಭಕ್ತರು ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು ಮತಾಚಾರ್ಯರ ಸಾರ್ಥಕವಾದ ವಾರ ಪತ್ರಿಕೆಯನ್ನು ಹೊರಡಿಸಲು ಇದು ಕ್ಷಿಪ್ರವಾಗಿ ಈಗ ೨-೩ ತಿಂಗಳಾಯಿತು. ಇಷ್ಟು ಅಲ್ಪಕಾಲದಲ್ಲಿಯೇ ಈ ಪತ್ರಿಕೆಗೆ ಎರಡು ಸಾವಿರಕ್ಕಿಂತ ಹೆಚ್ಚು ಜನರು ಚಂದಾದಾರರಾಗಿದ್ದಾರೆಂದು ತೋರುತ್ತದೆ. ಇದಕ್ಕೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯು ಹಾಗು ವೈದಿಕ ಧರ್ಮಾಭಿಮಾನಿಗಳೂ ಗುರುಭಕ್ತಿಶಾಲಿಗಳೂ ಆದ ಸದ್ಗೃಹಸ್ಥರ ಸಹಾಯ ಸಹಾನುಭೂತಿಗಳೇ ಮೂಲ ಕಾರಣವೆಂದು ಹೇಳಬಹುದು.

ಈ ಪತ್ರಿಕೆಯು ಹೊರಟು ೩ ೪ ತಿಂಗಳುಗಳವರೆಗೆ ತನ್ನ ಕರ್ತವ್ಯಕ್ಕನುಸರಿಸಿ ಸನ್ಮಾರ್ಗದಲ್ಲಿ ವರ್ತಿಸಿದಾಗ್ಯೂ ನಿಷ್ಕಾರಣವಾಗಿ ದುರಾಗ್ರಹಿಗಳು ಕಾಲು ಕೆದರಿ ಜಗಳ ತೆಗೆಯಲು ಟೀಕಾತ್ಮಕಗಳಾದ ಲೇಖಗಳನ್ನು ಒಂದು ಇತರ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಅದಕ್ಕೆ ಕೂಡಲೇ ಪ್ರತಿ ಪತ್ರಿಕಾ ಕರ್ತರು ನಿರ್ಭೀತಿಯಿಂದ ಸ್ವಲ್ಪ ಕೂಡಲು ಪ್ರಾರಂಭಿಸಿದರು. ಈಗಂತೂ ಪ್ರತಿವಾರದಲ್ಲಿಯೂ ಪಂಚಾಚಾರ್ಯ ಪ್ರಭೆಯ ಮೇಲಿನ ಟೀಕಾತ್ಮಕಗಳಾದ ಲೇಖಗಳು ಸ್ಟಾರ್ ಪತ್ರಿಕೆಯಲ್ಲಿಯೂ ಸ್ಟಾರ್ ಪತ್ರಿಕೆಯ ಲೇಖಗಳು ಬಂದದ್ದು ಪಂಚಾಚಾರ್ಯ ಪ್ರಭೆಯಲ್ಲಿಯೂ ಪ್ರತಿಯೊಬ್ಬರಿಗೂ ಸ್ಪಷ್ಟ ಒಡೆದು ಕಾಣುತ್ತದೆ. ಈ ರೀತಿ ಮಾಡತಕ್ಕದ್ದು ಪತ್ರಿಕಾಕರ್ತರಿಗೆ ಶ್ರೇಯಸ್ಕರವಲ್ಲ. ಒಬ್ಬರಲ್ಲೊಬ್ಬರು ಸಹಕರತ್ವವನ್ನು ಬಿಟ್ಟು ತಮ್ಮ ತಮ್ಮ ಕರ್ತವ್ಯ ಕರ್ಮದಲ್ಲಿ ತೊಡಗತಕ್ಕದ್ದು ಧರ್ಮವು. ಕಾರಣ ನಮ್ಮ ಸಮಾಜದಲ್ಲಿರತಕ್ಕ ಸ್ಟಾರ್ ಪತ್ರಿಕೆಯೇ ಮೊದಲುಗೊಂಡು ಪಂಚಾಚಾರ್ಯ ಪ್ರಭಾ ಪತ್ರಿಕೆಯೇ ಕಡೆಯಾದ ಪ್ರತಿಯೊಂದು ಪತ್ರಿಕಾ ಕರ್ತರಿಗೂ ನನ್ನ ವಿನಯ ಸೂಚನೆಯೇನಂದರೆ, ನೀವು ನಿಮ್ಮ ನಿಮ್ಮ ಸಂಪ್ರದಾಯ ಧರ್ಮಕ್ಕನುಸರಿಸಿ ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಪರಿಪೂರಿತ ಹೃದಯವುಳ್ಳವರಾಗಿ ಸಮಾಜದಲ್ಲಿ ಸುಖಶಾಂತಿಯನ್ನು ನೆಲೆಗೊಳಿಸುವದೇ ಮುಖ್ಯ ಧ್ಯೇಯವೆಂದೆಣಿಸಿ ಶ್ರೀ ನಾ. ವೈ. ವೀರಸಂಗಪ್ಪನವರಂತೆ ಕೀರ್ತಿಕಾಯರಾಗಬೇಕೆಂತಲೂ ಅಂಥಾ ಸದ್ಬುದ್ಧಿಯನ್ನು ಜಗದೀಶನು ನಿಮಗೆ ಕೊಡಬೇಕೆಂತಲೂ ಪ್ರಾರ್ಥಿಸಿ ಈ ಲೇಖವನ್ನು ಮುಗಿಸುತ್ತೇನೆ.

ಗುರುಭಕ್ತಕೇಸರಿ, ಹಂಪಿಗಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಗುರುವರ್ಗದ ಪಟ್ಟಚರಾಧಿಕಾರಿಗಳ ಕರ್ತವ್ಯ.

ಸಮಾಜಬಂಧುಗಳೇ ಪರಮಾತ್ಮನ ಆಜ್ಞಾನುಸಾರವಾಗಿ ಶ್ರೀ ೧೦೮ ಜಗದ್ಗುರು ಪಂಚಾಚಾರ್ಯರು ಲಿಂಗಗಳಿಂದುದ್ಭವಿಸಿ ನಾಸ್ತಿಕ ಮತಗಳನ್ನು ಖಂಡಿಸಿ ಪರಮ ಶಿವಶೈವಮತವನ್ನು ಸ್ಥಾಪನಮಾಡಿ ಹೋದದ್ದು ಶಾಸ್ತ್ರದಲ್ಲಿ ಸಂಪೂರ್ಣವಾಗಿ ಹೇಳುವ ಸಂಗತಿಯು ಬಾಲವೃದ್ಧರಿಗೆಲ್ಲ ಗೊತ್ತಿರುವದೇ ಸರಿ! ಇದೂ ಅಲ್ಲದೆ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟು ಬಿಭೀಷಣನ ಅಪೇಕ್ಷೆಯಂತೆ ಏಕಕಾಲದಲ್ಲಿಯೇ ಮೂರುಕೋಟಿ ಲಿಂಗಗಳನ್ನು ಸ್ಥಾಪನ ಮಾಡಿ ಅಗಸ್ತ್ಯ ಮೊದಲಾದ ಮುನಿಪುಂಗವರಿಗೆ ಶಿವದೀಕ್ಷಾ ಸಂಸ್ಕಾರವನ್ನು ಕೊಟ್ಟು ಅವರೆಲ್ಲರ ಅಪೇಕ್ಷೆಯನ್ನು ಪೂರ್ತಿಗೊಳಿಸಿ ಮೋಕ್ಷಮಾರ್ಗವನ್ನು ತೋರಿಸಿದ ಮಹಿಮರು ಇವರೇ ಅಲ್ಲವೇ? ಇಂಥ ಮಹಾ ಮಹಿಮರಿಂದ ಸ್ಥಾಪಿಸಲ್ಪಟ್ಟ ನಮ್ಮ ವೀರಶೈವಮತವು ಕಲಿಕಾಲದ ಪ್ರಭಾವದಿಂದಲೋ ಮತ್ತಾವ ಕಾರಣದಿಂದಲೋ ಇತ್ತೀಚೆಗೆ ಎಷ್ಟೋ ಹೀನಸ್ಥಿತಿಗೆ ಕಾರಣವಾಗಿ ಛಿದ್ರವಾಗಲಿಕ್ಕೆ ಹತ್ತಿರುವ ಸಂಗತಿಯನ್ನು ನೋಡಿದರೆ ಪ್ರತಿಯೊಬ್ಬ ಗುರುಪುತ್ರನಿಗೂ ವಿಷಾದವನ್ನುಂಟುಮಾಡಲು ಕಾರಣವಾಗುತ್ತದೆ. ಇಂಥ ನಮ್ಮ ಸನಾತನ ಮತವನ್ನು ಊರ್ಜಿತಸ್ಥಿತಿಗೆ ತರುವದಕ್ಕೆ ಗುರುವರ್ಗದ ಪಟ್ಟಚರಾಧಿಕಾರಿಗಳು ದ್ವಿತೀಯ ಆಚಾರ್ಯರೇ ಆಗಿ ಸಮಾಜಕೆಲಸದ ಕಳಕಳಿಯಿಂದ ಅಲ್ಲಲ್ಲಿಗೆ ಸಭೆಗಳನ್ನು ಮಾಡಿ ಉಪದೇಶ ಮಾಡಿದ್ದಾದರೆ ನಮ್ಮ ಧರ್ಮವು ಮುಂದಕ್ಕೆ ಬರಲು ಏನೂ ಸಂಶಯವಿಲ್ಲ. ಈ ಕಾರ್ಯದಲ್ಲಿ ನಮ್ಮ ಅಧಿಕಾರಿಗಳು ನಿರುತ್ಸಾಹಿಗಳಾಗಿ ಮಠದಲ್ಲೇ ಸುಮ್ಮನೆ ಕುಳಿತರೆ ಎಂದೂ ವೃದ್ಧಿಯಾಗುವದಿಲ್ಲವೆಂದು ಹೇಳಬಹುದು. ಈಗ ೧೦ ೧೫ ವರ್ಷಗಳ ಕೆಳಗೆ ಎಷ್ಟೋ ಜನರಿಗೆ ಪಂಚಾಚಾರ್ಯರ ಮಹತ್ವ ಅವರವರ ಸಿಂಹಾಸನ ಗೋತ್ರ ಸೂತ್ರಗಳೇ ಗೊತ್ತಿದ್ದಿಲ್ಲ. ಬೇರೆ ಕೆಲಕೆಲವರು ನಾವೇ ಧರ್ಮದ ಗುರುಗಳೆಂದು ಮಠದಲ್ಲಿ ಆಕ್ರಮಣ ಮಾಡಿಕೊಂಡಿದ್ದರು. ಈ ಅಶಾಸ್ತ್ರೀಯವಾದ ಸಂಗತಿಯನ್ನು ನೋಡಿ ವೇ|| ಪಂ|| ಕಾಶೀನಾಥಶಾಸ್ತ್ರಿಗಳು ಎಷ್ಟೋ ಶ್ರಮವಹಿಸಿ ಶಾಸ್ತ್ರೀಯವಾದ ಮಾರ್ಗವನ್ನು ತೋರಿಸಿದಕ್ಕೆ ಸರ್ವರಿಗೆ ಈ ಮತದ ಸ್ವರೂಪವು ಗೋಚರವಾಗುವದಕ್ಕೆ ಅವಕಾಶವಾಯಿತು. ಇವರಿಂದಲೇ ಪಂಚಾಚಾರ್ಯರ ನಾಮವು ಜಗತ್ತಿನಲ್ಲಿ ಹಬ್ಬುತ್ತ ಬಂದಿತೆಂದು ಪ್ರತಿಯೊಬ್ಬರೂ ಹೇಳುತ್ತಾರೆ. ಇವರಂತೆ ನಮ್ಮ ಅಧಿಕಾರಿಗಳು ಶಾಸ್ತ್ರಮಾರ್ಗದಿಂದೊಡಗೂಡಿ ಆಚಾರ್ಯರ ಮಹತ್ವವನ್ನು ಅಲ್ಲಲ್ಲಿಗೆ ಸಂಚರಿಸಿ ಯಾರನ್ನೂ ನಿಂದೆಮಾಡದೆ ಧರ್ಮೋಪದೇಶ ಮಾಡಿದರೆ ಸರ್ವರೂ ಶಿರಸಾವಹಿಸಿ ಏಕಮನಸ್ಸಿನಿಂದ ಕೇಳಿ ಅವರಂತೆ ನಡೆಯುತ್ತಾರೆ. ಅನ್ಯಸಮಾಜದಲ್ಲಿ ಎಷ್ಟೋ ಜನರು ಉಪದೇಶದ ಸಲುವಾಗಿ ಮುನಿವರರು ಬಿಟ್ಟು ನಿಂತಿರುತ್ತಾರೆ. ಅದರಿಂದಲೇ ಹಿಂದುಳಿದ ಸಮಾಜದವರು ಎಷ್ಟೋ ಮುಂದಕ್ಕೆ ಬರುತ್ತಲಿದ್ದಾರೆ. ಅದರಿಂದ ಪಟ್ಟಚರಾಧಿಕಾರಿಗಳೇ, ಇತರರನ್ನಾದರೂ ನೋಡಿ ಇನ್ನಾದರೂ ಮಠಮಾನ್ಯ ಅಷ್ಟಬಂಧುಗಳ ಅಭಿಮಾನವನ್ನು ತ್ಯಜಿಸಿ ಸಮಾಜಕೆಲಸವನ್ನು ಕೈಕೊಳ್ಳಿರಿ. ನಿಮಗೆ ಕೀರ್ತಿ ಬರುವದಲ್ಲದೆ ನಮ್ಮ ಗುರುವರ್ಗವೂ ಶಿಷ್ಯವರ್ಗವೂ ಮುಂದುವರಿಯುವದು. ನೀವು ಈ ಮಾರ್ಗಕ್ಕೆ ತಿಲಾಂಜಲಿಕೊಟ್ಟ ಕಾರಣ ಕೆಲಕೆಲವರು ಈ ಸಮಾಜಕೆಲಸದಲ್ಲಿ ತೊಡಗಿ ಎಷ್ಟೋ ಮುಂದಕ್ಕೆ ಬಂದಿರುವರು. ನೀವು ಕೇವಲ ಪಂಡಿತರಾಗಿ ಕಾಶಿಯಲ್ಲಿ ೧೦ ೧೫ ವರ್ಷ ಅಭ್ಯಾಸಮಾಡಿ ಗೌರ್ನಮೆಂಟ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪಂಡಿತರೆಂಬ ಪದವಿಯನ್ನು ಪಡೆದುಕೊಂಡು ಸುಮ್ಮನೆ ಮಠದಲ್ಲೇ ಕುಳಿತರೆ ಏನೂ ಪ್ರಯೋಜನವಿಲ್ಲ. ನಿಮ್ಮ ನಿಮ್ಮ ತಾಲೂಕಿನ ಜನರಿಗಾದರೂ ಉಪದೇಶಮಾಡುತ್ತ ನಡೆಯಿರಿ. ನಿಮ್ಮನ್ನು ನೋಡಿ ಇತರ ತಾಲೂಕಿನಲ್ಲಿರತಕ್ಕ ಅಧಿಕಾರಿಗಳೂ ಅವರೂ ಹೀಗೆ ಮಾಡುತ್ತಾ ನಡೆಯುತ್ತಾರೆ. ಒಂದು ವರುಷದಲ್ಲೇ ನಮ್ಮ ಮತವು ಎಷ್ಟೋ ಸುಧಾರಿಸಲಿ

ಸೂ ಸಂಶಯವಿಲ್ಲ. ನೀವು ಗುರುವರ್ಗದಲ್ಲಿ ಜನಿ ವಾಗಲೂ ಆಚಾರ್ಯರ ನಾಮಕರಣದಿಂದಲೇ ಆ ಗುಡುಗಳ ಬಗ್ಗೆ ಉಪದೇಶಮಾಡಿದರೆ ನಿಮಗೆ ಏನೂ ಅಸ್ಸುವದಿಲ್ಲ. ಸರ್ವರೂ ಕರಾಗುತ್ತಾರೆ. ನಮ್ಮ ವೀರಶೈವ ಧರ್ಮಕ್ಕೆ ನೀವು ಅಧಿಕಾರಿಗಳಿದ್ದು ನಮ್ಮನ ಮದದಲ್ಲಿ ಕೂಡ್ರು ನೋಡಿದರ ಏನು ತರಹದ ಕಂದು ಎಂದು ಪದೇಶಿಸಗಿದೆ ಇನ್ನಾದರೂ ಗುರುಗಳ ವಿಷಯ ಜಾಗ್ರತವುಳ್ಳವರಾಗಿ ಸರ್ವಭಕ್ತಸ್ತ್ರೀ ಪುರುಷರಿಗ ಧರ್ಮದ ನಿಜವಾದ ಮಾರ್ಗವನ್ನು ಉಪದೇಶ ತೋರಿಸಿ ಕೀರ್ತಿಭಾಗಿಗಳಾಗಬೇಕೆಂದು ಬೇಡಿ ತ್ತೇನೆ. ಇಂಥ ಗುರುಕಾರ್ಯ ಸಮಾಜಕೆಲಸ ಕ್ಕೆ ಪಟ್ಟಾಧಿಕಾರಿಗಳನ್ನು ಶ್ರೀ ಜಗದ್ಗುರು ಚಾರ್ಯರು ಸದಾ ಎಚ್ಚರಿಸಲೆಂದು ಆ ಮಹಿಮ ಕೊಂಡಾಡಿ ಈ ಲೇಖನವನ್ನು ಮುಗಿಸುತ್ತೇನೆ.

ಕೆ. ಯಂ. ಬಸವರಾಜಶರ್ಮಾ.

ಧರ್ಮಾರ್ಥ ಮಾಹೇಶ್ವರ ದೀಕ್ಷಾ ಸಮಾರಂಭ.

ಕ್ಕಾರಿ ಜಿ|| ಹರಪನಹಳ್ಳಿ ತಾ|| ಹಿರೇಕೋಳಚಿ ವಲ್ಲಿ ಸಾಹುಕಾರ ಮ್ಯ|| ರಾ|| ಪತ್ರಿ ಮಹಂತ ವರ ಸುಪುತ್ರರಾದ ಶಿದ್ಧರಾಮಪ್ಪನವರು ಪ್ರಾಂಚ ನುವರ್ತಿಗಳಾದ ಮಾಹೇಶ್ವರ ವಟುಗಳಿಗೆ ಶಿವ ಷೆ ಮಾಡಿಸಿ ಧನ್ಯರಾಗಬೇಕೆಂಬ ಸತ್ಸಂಕಲ್ಪ ರಾಗಿ ಈ ಕಾರ್ಯನಿರ್ವಾಹಕ್ಕೋಸ್ಕರ ಮಾಸಿ ಪುರವರ್ಗ ಮಠದ ಶ್ರೀ|| ಷ|| ಬ್ರ|| ಪಟ್ಟಾಧಿ ಗಳವರನ್ನೂ ಹಿರೇಹಡಗಲಿ ಪುರಾಣಿಕಮಠದ ಮಾಪಾಕ್ಷಿಶಾಸ್ತ್ರಿಗಳನ್ನೂ ಹಾಗೂ ಮಾಸಿಹಳ್ಳಿ ದ ಶಿವರುದ್ರೇಗೌಡರೂ ಚನ್ನಮಣ ಮಹಂತಯ್ಯ ಮುಸಲಾಪುರದ ವೇ|| ಕೊಟ್ರಬಸಪ್ಪನವರು ವ ಗ್ರಾಮಗಳ ಇಷ್ಟಮಿತ್ರ ಬಂ ಗಳನ್ನು ಬರಮಾಡಿಕೊಂಡು ಈ ಪ್ರಭವನಾಮ ದ ಕಾರ್ತಿಕ ಶುದ್ಧ ೧೩ ಚಂದ್ರವಾರ ಮಂದಿರದಲ್ಲಿ ನವಲಿ ಶಾಸ್ತ್ರಿಗಳವರ ಪೌರೋಹಿ ದಲೂ ಆ ಗ್ರಾಮದ ಮರಡ ವೀರಯ್ಯನವರೇ ದ ವೈದಿಕಮಂಡಳಿಯಿಂದಲೂ ವಿಧ್ಯುಕ್ತ ಗಳಾದ ಪುಣ್ಯಾಹಾದಿ ಪೂರ್ವಕರ್ಮಗಳೆಲ್ಲವೂ ನಂತರ ಪಂಚಸೂತ್ರಗಳಿಗ ಸರಿಯಾದ ಸ್ಥಲ ವಟುಗಳಿಗೆ ಶಿವದೀಕ್ಷಾಸಂಸ್ಕಾರವು ಕ ಸಮಾರಂಭದಿಂದ ನೆರವೇರಿಸಲ್ಪಟ್ಟಿತು. ಸದರಿ ಸಿದ್ಧರಾಮಪ್ಪನವರು ಚಿಕ್ಕವಯಸ್ಸಿನವರಾಗಿದ್ದ "ಧರ್ಮಕೀರ್ತಿದ್ವಯಂಸ್ಥಿರಂ" ಎಂಬ ವಾಕ್ಯವ ನರಿತು ಈ ಧರ್ಮಕಾರ್ಯಕ್ಕೆ ದಂಪತಿಯುಕ್ತ ತ್ರಿಕರಣಶುದ್ಧವಾದ ಭಕ್ತಿಯಿಂದಲೂ ಆನಂದ ದಿಂದ ಸಾಂಗೋಪಾಂಗವಾಗಿ ನೆರವೇರಿಸಿದರು. ವ ನಾಯ ಜೂರುದ್ರಗಣಾರಾಧನೆಯನ್ನು ದಕ್ಷಿಣೆಯಿಂದ ತೃಪ್ತಿಗೊಳಿಸಿ ಸಾಯಂಕಾಲ ವೇಗೆ ಹಿರೇಹಡಗಲಿ ಶ್ರೀ ಗುರುವರ್ಗಧರ್ಮ ರ ಪಾಠಶಾಲಾ ವಿದ್ಯಾರ್ಥಿಗಳ ಸಂಗೀತ ಸಾ ಗಳಿಂದಲೂ ಭಾಷಣಗಳಿಂದಲೂ ಸರ್ವರ ಮನಾ ನೋಳಿಸಲ್ಪಟ್ಟು ರಾತ್ರಿ ೧೦ ಗಂಟೆಯಿಂದ ಶ್ರೀ ಕಾರಿಗಳವರ ಆಂದೋಳನೋತ್ಸವವು ಅನೇಕ ವಗಳೊಡನೆ ಜರುಗಿಸಲ್ಪಟ್ಟಿತು.

ರನೆಯದಿವಸ ಸಿದ್ಧರಾಮಪ್ಪನವರು ಗುರುಕಾಣಿ ದಕ್ಷಿಣಾದೆಗಳನ್ನು ಅವರವರ ಯೋಗ್ಯ ರವಾಗಿ ಅರ್ಪಣಮಾಡುತ್ತಾ ಘನಾನೀಪಾರ್ ಮೆರು ತಮ್ಮ ಸಂಕಲ್ಪವಂ ಪೂರ್ಣಗೊಳಿಸಿ ಗಳಾದರು. ಮತ್ತು ಪಾಟೀಲ ಶಿವರುದ್ರ ಮಹಂತಪ್ಪನವರ ಪ್ರೋತ್ಸಾಹದ ಮೇ ನ ಸಮಾಜೋದ್ಧಾರಕ್ಕಾಗಿ ಉದಯಿಸು ಪಂಚಾಚಾರ್ಯಪ್ರಭಾ ಪತ್ರಿಕೆಯ ಪೂ ಭಕ್ತಿಯಿಂದ ೫ ರೂಪಾಯಿಗಳನ್ನು ದರು. ಆದರೆ ಜಗತ್ತಿನಲ್ಲಿ ಪರಮಾತ್ಮನು ನ ದೇಹ, ಬುದ್ಧಿ, ಶಕ್ತಿ ಧನಧಾನ್ಯಕನಕವಸ್ತ್ರ ದಯಪಾಲಿಸಿದ್ದಾನೆ. ಪರಂತು ಈ ವಸ್ತುಗಳನ್ನು ಉಪಯೋಗಿಸಿಕೊಳ್ಳುವದು ಮನುಷ್ಯನ ಸ್ವತಂತ್ರತೆಗುಂಟು. ಇವುಗಳನ್ನು ಸತ್ಕಾರ್ಯಗಳಲ್ಲಿ ಉಪಯೋಗಿಸಿದರೆ ಸತ್ಫಲಗಳುಂಟಾಗುತ್ತವೆ. ದುಷ್ಕಾರ್ಯಗಳಲ್ಲಿ ಉಪಯೋಗಿಸಲಾಗಿದರೆ ದುಷ್ಫಲಗಳನ್ನೇ ಕೂಡುತ್ತವೆ ಇತ್ಯಾದಿ ವಿವರಗಳನ್ನು ಪ್ರತಿಯೊಬ್ಬ ಮನುಷ್ಯನು ಚೆನ್ನಾಗಿ ಪರ್ಯಾಲೋಚಿಸಿದರೆ ಇಂತಹ ಸತ್ಕಾರ್ಯಗಳಿಗೆ ಮನಸ್ಸುಕೊಟ್ಟು ಉತ್ತರೋತ್ತರ ಸುಖಕ್ಕೂ ಮುಕ್ತಿಗೂ ಭಾಗಿಗಳಾಗುವುದೇ ಮಾನವರ ಪರಮ ಧರ್ಮವಾಗಿದೆ.

ಪಾಟೀಲ ಗಿರೇಗೌಡ.

ಶಿವಯೋಗಮಂದಿರದ ಸ್ವರೂಪವು

ವಿಜಾಪುರ ಜಿಲ್ಲೆಯಲ್ಲಿ ಶಿವಯೋಗಮಂದಿರವೆಂಬ ಸಂಸ್ಥೆಯಿರುವದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಈ ಸಂಸ್ಥೆಯ ಉದ್ದೇಶಗಳು ವೀರಶೈವ ಸಮಾಜವನ್ನು ಹಾಹಾ ಎನ್ನುವುದರೊಳಗಾಗಿ ಉನ್ನತಿಯ ಶಿಖರಕ್ಕೇರಿಸತಕ್ಕಂಥವುಗಳಿರುತ್ತವೆ. ಆದರೆ ಕೃತಿಗಳಾದರೋ ಅತ್ಯಂತ ಚಮತ್ಕಾರವುಳ್ಳವುಗಳಾಗಿರುತ್ತವೆ. ಇವರ ಕೃತಿಗಳನ್ನು ಬರೆಯುತ್ತಿದರೆ ಭಾರತದಷ್ಟು ಗ್ರಂಥವು ತುಂಬಿ ಇನ್ನೂ ಹೆಚ್ಚಾಗುತ್ತಿದ್ದರೂ ಮಂದಿರದ ವಿಷಯಕ್ಕೆ ಅಲ್ಪಸ್ವಲ್ಪ ಗೊತ್ತಿದ್ದ ಪಂಡಿತ ಗುರುಸಿದ್ಧಶಾಸ್ತ್ರಿಗಳವರು ತಮಗ ಸಿಕ್ಕಿದ ತುಸು ಮಾಹಿತಿಯಮೇಲಿಂದಲೇ "ಶಿವಯೋಗ ಮಂದಿರದ ಸಮಾಚಾರವೇನು!" ಎಂಬ ತೀರ ಸಣ್ಣ ಪುಸ್ತಕವನ್ನು ಬರೆದಿರುವರು. ಇಷ್ಟರಿಂದಲೇ ಮಂದಿರದ ಹುಳುಕು ಪೂರ್ಣವಾಗಿ ಹೊರಬಿದ್ದಿಲ್ಲ. ಇವರ ಚಾಣಕ್ಯತನದ ಕೃತಿಗಳು ಸಾವಿರಾರಿದ್ದರೂ, ಒಂದು ಅಗುಳು ಹಿಚುಕಿದರೆ ಇಡೀ ಪಾತ್ರೆಯೊಳಗಿನ ಅನ್ನದ ಗುಣವೇ ಗೊತ್ತಾಗುವಂತೆ ನಾವು ನಮ್ಮ ಪಂಚಾಚಾರ್ಯಪ್ರಭಾ ಪತ್ರಿಕೆಯ ವಾಚಕರಿಗೆ ಒಂದೇ ಒಂದು ಉದಾಹರಣೆಯನ್ನು ಕೊಡುವೆವು. ಇದರಿಂದ ಪ್ರಭೆಯ ವಾಚಕವರ್ಗಕ್ಕೆ ಬಹಳ ಬೇಡ! ತುಸುವಾದರೂ ಶಿವಯೋಗಮಂದಿರದ ಚಮತ್ಕೃತಿಗಳ ಕಲ್ಪನೆಯಾಗಬಹುದಾಗಿದೆ.

ಬಾದಾಮಿಯಲ್ಲಿ ಕಲ್ಯಾಣಶೆಟ್ಟಿ ಗುರುಪಾದಪ್ಪನವರೆಂಬ ಸದ್ಗೃಹಸ್ಥರಿರುವರು. ಇವರು ಶಿವಯೋಗ ಮಂದಿರವು ಸ್ಥಾಪನವಾದಂದಿನಿಂದ ಅನೇಕ ವರ್ಷಗಳವರೆಗೆ ಮಂದಿರದ ಉನ್ನತಿಗಾಗಿ ಅಹೋರಾತ್ರಿ ದುಡಿದವರು: ಮಂದಿರಕ್ಕೆ ಹೋಗುವ ಪ್ರವಾಸಿಗಳೆಲ್ಲರೂ ಬಾದಾಮಿಯ ಮೇಲಿಂದಲೇ ಹೋಗಬೇಕಾಗುವ್ರದರಿಂದ ಗುರುಪಾದಪ್ಪನವರು ಅವರ ಅನ್ನೋದಕ ಮೊದಲಾದ ಅತಿಥಿಸತ್ಕಾರಗಳನ್ನೆಲ್ಲ ತಮ್ಮ ಸ್ವಂತ ಖರ್ಚಿನಿಂದಲೇ ಮಾಡಿದವರು. ಶಿವಯೋಗ ಮಂದಿರದ ಕೆಲಸವೆಂದರೆ ಇವರಿಗೆ ತಮ್ಮ ವ್ಯಾಪಾರೋದ್ಯೋಗಗಳ ಪರಿವೆಯೇ ಉಳಿಯುತ್ತಿದ್ದಿಲ್ಲ. ಹೀಗೆ ಒಂದಲ್ಲ ಎರಡಲ್ಲ ಅನೇಕ ವಿಧವಾಗಿ ಶಿವಯೋಗ ಮಂದಿರದ ಶ್ರೇಯೋಭಿವೃದ್ಧಿಗಾಗಿ ಆ ಸಜ್ಜನರು ಅವಿಶ್ರಾಂತಶ್ರಮ ವಹಿಸಿ ದುಡಿದಿದ್ದರೂ ಈ ಶಿವಯೋಗ ಮಂದಿರದ ಮಹಾತ್ಮರು ಈಗ ಮಕ್ಕಳಿಲ್ಲದಿರುವ ಗುರುಪಾದಪ್ಪನವರ ಹೊಲ ಮನೆಗಳನ್ನೆಲ್ಲಾ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದಿರುವರು. ಕಬ್ಬು ಸವಿಯೆಂದು ಬೇರು ಸಹಿತ ತಿನ್ನುವ ಇವರ ಜಾಣತನವೇ ನಿಜವಾದ ಜಾಣತನ!

ಮೊದಲು ಶಿವಯೋಗ ಮಂದಿರದವರು ಬಾದಾಮಿಯಲ್ಲಿ ಗುರುಪಾದಪ್ಪನವರ ಮನೆಯ ಹಿತ್ತಲಕ್ಕೆ ಹೊಂದಿರುವ ಸ್ಥಳವನ್ನು ಖರೀದಿಗೆ ತೆಗೆದುಕೊಂಡರು. ಮುಂದೆ ಕ್ರಮೇಣ ಆ ಜೈಲಿಗೆ ಹೊಂದಿರುವ ಗುರುಪಾದಪ್ಪನವರ ಅಂಗಡಿಯನ್ನು ಉಪಾಯದಿಂದ ತೆಗೆದುಕೊಂಡು ತಮ್ಮ ವಹಿವಾಟು ಮಾಡಿಕೊಂಡರು ವಹವಾ!

ಮುಗ್ಧಸ್ವಭಾವದವರಾದ ಗುರುಪಾದಪ್ಪನವರು ಇವರ ಸ್ವಭಾವವನ್ನೆಲ್ಲಾ ನೋಡಿ ಹಾನಗಲ್ಲವರಿಗೆ ರಜಿಸ್ಟರ ಮಾಡಿ ಪತ್ರ ಬರೆದರು. ಮಂದಿರದ ವ್ಯವಸ್ಥಾಪಕರಿಗೆ ಧಾರವಾಡದ ವಿಜಯಪತ್ರದಲ್ಲಿ ನೋಟೀಸು ಕೊಟ್ಟರು. ಆದರೇನು? ಎಲ್ಲವೂ ವ್ಯರ್ಥ; ಒಂದಕ್ಕೂ ಉತ್ತರವಿಲ್ಲ.

ಈ ಎಲ್ಲ ಸಂಗತಿಯು ಮೊನ್ನೆ ನಾನು ಶಿವಯೋಗ ಮಂದಿರಕ್ಕೆ ಹೋದಾಗ್ಗೆ ಗೊತ್ತಾಯಿತು. ಸೂಕ್ಷ್ಮರೀತಿಯಿಂದ ಅಲ್ಲಿಯ ಸ್ಥಿತಿಗತಿಗಳನ್ನು ನೋಡಲಾಗಿ ನನಗೆ ಇಂಥ ಇನ್ನೂ ಅನೇಕ ಹುಳುಕುಗಳು ಕಂಡು ಬಂದವು. ವಾಚಕರಿಗೆ ಶಿವಯೋಗ ಮಂದಿರದ ನಿಜವಾದ ಸಮಾಚಾರವು ಅಲ್ಪವಾದರೂ ತಿಳಿಯಲೆಂದು ಸಮೂನೆಗಾಗಿ ಈಗ ಇದೊಂದೇ ಉದಾಹರಣೆಯನ್ನು ಕೊಟ್ಟಿರುವೆನು. ಇನ್ನು ಮುಂದೆ ಮೇಲಿಂದಮೇಲೆ ಮಂದಿರಕ್ಕೆ ಹೋಗಿ ಅಲ್ಲಿಯ ಸಂಗತಿಗಳನ್ನು ಇದಕ್ಕೂ ಹೆಚ್ಚಾಗಿ ತಿಳಿದುಕೊಂಡು ನಮ್ಮ ವಾಚಕರಿಗೆ ಈ ಪತ್ರಿಕೆಯ ಮೂಲಕ ತಿಳಿಸುತ್ತಾ ಹೋಗುವೆನು. ಏಕೆಂದರೆ ದೂರದಗುಡ್ಡ ಕಣ್ಣಿಗೆ ನುಣ್ಣಗೆ ಗೆರಿಬಂತೆ ಅನೇಕ ಅಂಧ ಶ್ರದ್ಧೆಯುಳ್ಳವರು ಇವರ ಜಾಲದಲ್ಲಿ ಸಿಲುಕಿದ್ದು, ಗುರುಪಾದಪ್ಪನವರಂತೆ ಬಳಲಬಾರದೆನ್ನುವದೇ ನನ್ನೀ ಲೇಖನದ ಉದ್ದೇಶವಾಗಿದೆ. ಹೀಗೆ ಮಾಡೋಣದರಿಂದ ಶಿವಯೋಗ ಮಂದಿರದವರಿಗೆ ಯಾವ ಪ್ರಯೋಜನವು ದೊರೆಯುವುದೋ ತಿಳಿಯದಾಗಿದೆ. ತಾವು ಸನ್ಯಾಸಿಗಳಾಗಿದ್ದು ತಮ್ಮ ಆಶ್ರಮ ಧರ್ಮಕ್ಕನುಸಾರವಾಗಿ ವರ್ತಿಸುವುದು ಇವರಿಗೆ ಶ್ರೇಯಸ್ಕರವು! ಇಲ್ಲವಾದರೆ ಈ ಲೋಕದಲ್ಲಿ ಜನರ ಹಾಸ್ಯಕ್ಕೂ ಪರಲೋಕದಲ್ಲಿ ಶಿವನ ಕೋಪಕ್ಕೂ ಕಾರಣರಾಗುವರೆಂದು ಬೇರೆ ಹೇಳಬೇಕಾಗಿಲ್ಲ! ಯತೋಧರ್ಮಸ್ತತೋಜಯಃ!

ಒಬ್ಬ ಸಮಾಜ ಸೇವಕ.

ಶ್ರೀ ಜಗದ್ಗುರು ಪಂಚಾಚಾರ್ಯೋಭ್ಯೋನಮಃ

ವಿಷಾದ.

ಇದೇ ತಿಂಗಳು ೭ನೇ ತಾರೀಖು ಸೋಮವಾರ ರಾತ್ರೆ ೯೧| ಘಂಟೆ ಸಮಯದಲ್ಲಿ ದಾವಣಗೆರೆ ತಾಲ್ಲೋಕು ಪೈಕಿ ಆವರಗೆರೆ ಮಠದ ಶ್ರೈ|| ವೇ|| ಚನ್ನಪ್ಪಯ್ಯನವರ ಧರ್ಮಪತ್ನಿಯವರಾದ ಚಂದಮ್ಮನವರು ಶಿವೈಕ್ಯರಾದರೆಂದು ತಿಳಿಸಲು ಅತಿ ವಿಷಾದವಾಗುತ್ತದೆ. ಇವರು ದಾವಣಗೆರೆ ತಾಲ್ಲೋಕು ಮಾಯಕೊಂಡ ಸಮ್ಮತ್ತು ಬೊಮ್ಮೇನಹಳ್ಳಿಯಲ್ಲಿರುವ ಪಡೇರಹಳ್ಳಿ ಮಠದ ಸದ್ವಂಶದಲ್ಲಿ ಜನಿಸಿ ವಿವೇಕಿಗಳಾದ ಮಾತಾಪಿತೃಗಳ ಶಿಕ್ಷಣದಲ್ಲಿ ಬೆಳೆದು ಸದ್ವಿವೇಕಸಂಪನ್ನರಾಗಿದ್ದು ದಾವಣಗೆರೆ ತಾಲ್ಲೋಕು ಪೈಕಿ ಆವರಗೆರೆ ಮಹಾಕ್ಷೇತ್ರ ಚರವರೇಣ್ಯ ಶ್ರೀ ಸಿದ್ಧಲಿಂಗಶಿವಾಚಾರ್ಯರ ವಾಸಾಗ್ರಜರೀರ್ವರಲ್ಲಿ ಕಿರಿಯರಾದ ವೇ|| ಚನ್ನಪ್ಪಯ್ಯನವರಿಗೆ ಧರ್ಮಪತ್ನಿಯಾಗಿ ಪತಿವಾಕ್ಯಪರಿಪಾಲನೆಯಲ್ಲಿಯೂ ಅತ್ತೆಮಾವಂದಿರ ಶುಶ್ರೂಷೆಯಲ್ಲಿಯೂ ಆಸಕ್ತಿಯುಳ್ಳವರಾಗಿದ್ದು ಒಂದೆರಡು ವರುಷಗಳಲ್ಲಿಯೇ ಪತಿವಿಯೋಗವನ್ನು ಹೊಂದಿದಾಗ್ಯೂ ಹೆದರದೆ ಅತ್ತೆಮಾವಂದಿರ ಆಜ್ಞಾಧಾರಕರಾಗಿ ಪತಿಪಾದಧ್ಯಾನದಲ್ಲಿ ಮನವಿಟ್ಟು ಮನೆಗೆಲಸದಲ್ಲಿ ತೊಡಗಿ ತನ್ನವರು ಅನ್ಯರು ಎಂಬ ಭೇದವನ್ನಿಡದೆ ಮನ್ನಣೆಯಿಂದ ಕಂಡು ಪರೋಪಕಾರಗಳನ್ನು ಮಾಡುತ್ತಾ ಗುರು ಲಿಂಗ ಜಂಗಮ ಭಕ್ತಿತತ್ಪರರೂ ವ್ರತನಿಷ್ಠರೂ ಆಗಿ ತಮ್ಮ ಅರವತ್ತು ವರುಷಗಳು ಮೇಲ್ಪಟ್ಟ ವಯಸ್ಸಿನಲ್ಲಿ ಶಿವೈಕ್ಯ ಹೊಂದಿದರು. ಈ ವೃದ್ಧಪತಿವ್ರತೆಯ ಗುಣಕಥನವನ್ನು ವರ್ಣಿಸುವದಗಣಿತವಾಗಿದೆ. ಆಹಾ! ಇವರಲ್ಲವೇ ನಮ್ಮ ಪವಿತ್ರಭಾರತಭೂಮಿಯ ಸಾಧ್ವೀಮಣಿಯರ ನಿಜಸ್ವರೂಪವು? ಇಂಥವರಿಂದಲ್ಲವೇ ಜಗತ್ಪವಿತ್ರತೆಯು? ಶರಣಾಂಶೀಭೂತರು ಪೂರ್ವಕಾಲದಲ್ಲಿದ್ದರೆಂಬ ಇತಿಹಾಸಗಳ ಸೂತ್ರದಂತೆ ಈಗಲೂ ಉಂಟೆಂಬ ದೃಷ್ಟಾಂತರವು ಇದಲ್ಲವೆ? ಈ ಪುಣ್ಯಾಂಗನೆಯ ಅಮೃತಹಸ್ತದಿಂ ಪರಿಪಾಲನೆಯಾಗುವ ಸಮಸ್ತಕುಟುಂಬದವರಿಗೂ ಈ ಮಹಾತಾಯಿಯನ್ನಗಲಿದ ಸಂತಾಪವು ಅತಿಶಯವಾಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲವು. ಈ ಮೃತಳ ಕಿರಿಯಮಗನಾದ ವೇ|| ಚನ್ನಬಸಪ್ಪಯ್ಯನವರು ತಮ್ಮ ತಾಯಿಯ ಜ್ಞಾಪಕಾರ್ಥವಾಗಿ ಶ್ರೀ ಮತ್ಪಂಚಾಚಾರ್ಯಪತ್ರಿಕೆಯ ಪೋಷಣೆಗಾಗಿ ಎರಡು ರೂಪಾಯಿಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸಿರುತ್ತಾರೆ. ಇನ್ನು ಮುಂದೆ ಶ್ರೀಮತ್ಪಂಚಾಚಾರ್ಯರು ಇವರ ಕುಟುಂಬದವರಿಗೆ ಸಮಾಧಾನವನ್ನೂ ಮೃತಳ ಆತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇನೆ.

ವೇ|| ಮಂಡ್ಲಿಮಠದ ವೀರಸಂಗಪ್ಪಯ್ಯ.
ದಾವಣಗೆರೆ.

ಶ್ರೀ ಜಗದ್ಗುರು ಪಂಚಾಚಾರ್ಯ [illegible]
ಶ್ರೀ ಶಾರದಾಮಹೋತ್ಸವ [illegible]

ಪ್ರತಿ ವರ್ಷದಂತೆ ಈ ವರ್ಷವೂ ಕಳೆದ ಆಶ್ವೀಜ ಶುದ್ಧ ಷಷ್ಠಿಯಿಂದ ದಶಮಿಯವರೆಗೂ ಶ್ರೀ ಕ್ಷೇತ್ರ ಕಂಠೆಹಿರೇಮಠದಲ್ಲಿ ಶ್ರೀ ಶಾರದಾ ಮಹೋತ್ಸವವು ಅತಿವೈಭವದಿಂದ ನಡೆಯಿತು. ಶಾಸ್ತ್ರೋಕ್ತವಾದ ಶ್ರೀ ಶಾರದಾ ಪೂಜೆಯು ಒಂಬತ್ತು ದಿನಪರ್ಯಂತರ ಮಾಹೇಶ್ವರ ಸಂತರ್ಪಣವೂ ನಡೆಯಿಸಲ್ಪಟ್ಟಿತು. ನವಮಿಯ ದಿವಸ ಗುರುವಾರ ಶಾರದಾದೇವಿಯ ಮಂಟಪದ ಮುಂಭಾಗದಲ್ಲಿ ಸುಂದರತರವಾದ ಮಂಟಪದಲ್ಲಿ ಶ್ರೀ ಜಗದ್ಗುರುಗಳ [illegible] ಪಟಗಳನ್ನು ಸ್ಥಾಪಿಸಲ್ಪಟ್ಟು ವಿಜಯೋತ್ಸವ ಪೂಜಾದಿಗಳೆಲ್ಲವೂ ಸಾಂಗವಾಗಿ ನಡೆಯಿಸಲ್ಪಟ್ಟವು. ಸಾಯಂಕಾಲ ನಿಖಿಲಭಕ್ತಮಾಹೇಶ್ವರರೊಂದಿಗೆ [illegible] ಬನ್ನಿ ಮಂಟಪಕ್ಕೆ ಹೋಗಿ ಬಂದ ಬಳಿಕ ಶ್ರೀ [illegible] ಗವತ್ಪಾದರಿಗೂ ಶ್ರೀ ಶಾರದಾದೇವಿಗೂ [illegible] ಮಾಡಿ ವಾದ್ಯಘೋಷದೊಂದಿಗೂ ಶ್ರೀ ಜಗದ್ಗುರು ಜಗತ್ಪಾದರ ಜಯಘೋಷದಿಂದಲೂ ಶ್ರೀ ಶಾರದಾದೇವಿಯ ಮತ್ತು ಜಗದ್ಗುರುಗಳ ಪಾದುಕೆಗಳ ನಗರ ಸಂಚಾರ ಮಾಡಲ್ಪಟ್ಟವು. ಈ ಕಾರ್ಯದ [illegible] ಶ್ರೀ ಮ|| ಬ್ರ|| [illegible] ಕಂಠೆಮಠದ ಪರಮೂರ್ತಿಗಳು [illegible] ದ್ದರು. ಈ ಸ್ವಾಮಿಗಳು ಸದ್ಗುಣಿಗಳೂ ಪಂಡಿತರೂ ಆಚಾರ್ಯಭಕ್ತಿಯುಳ್ಳವರೂ ಆಗಿರುವುದರಿಂದ ಆಗಿಂದಾಗ್ಗೆ ಇಂಥ ಕಾರ್ಯಗಳನ್ನು ಮಾಡುತ್ತಲೇ ಇರುವರು. ಈ ಉತ್ಸವದಲ್ಲಿ ಆ ಮಠದ ವಿದ್ಯಾರ್ಥಿಗಳಿಗೂ [illegible] ಉದ್ಯೋಗಸ್ಥರಿಗೂ ಶ್ರೀ ಸ್ವಾಮಿಗಳು ಮ|| ದತ್ತೋಪಂತಜೋಶಿ ಇವರ ಕೈಯಿಂದ ಫಲಾಹಾರ [illegible] ಯನ್ನೂ ಸಹ ಮಾಡಿಸಿದ್ದರು.

ಬಾಪು ನೀಲಕಂಠ ಕುಲಕರ್ಣಿ
ಮುಕ್ತ್ಯಾಂಬಪುರಿ

ಸ್ವೀಕಾರ.

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಕಡ್ಲಬಾಳು ಗ್ರಾಮದ [illegible] ಅಧಿಕಾರಿಗಳಾದ ವೇ|| ಮಲ್ಲಪ್ಪಯ್ಯನವರು ತಮ್ಮ ಗ್ರಾಮದಲ್ಲಿ [illegible] ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ರೂಪಾಯಿಗಳನ್ನು ಕಳುಹಿಸಿರುತ್ತಾರೆ

ದಾವಣಗೆರೆ ತಾಲೂಕು ಆವರಗೆರೆ ಮಠದ ಚನ್ನಬಸಪ್ಪಯ್ಯನವರು ತಮ್ಮ ತಾಯಿಯವರು ಶಿವಾಧೀನರಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು [illegible] ಮಠದ ವೇ|| ವೀರಸಂಗಯ್ಯನವರ ದ್ವಾರಾ ತಲ್ಪಿರುತ್ತವೆ

ತರೀಕೆರೆ ಹಿರೇಮಠ? ಪಂಚಾಚಾರ್ಯ [illegible] ರಿಂದ ಬಂದ ಸಂಭಾವನೆಯಲ್ಲಿ ಮ|| ಯಜಮಾನ್ ಕಲ್ಯಾಣಪ್ಪನವರ ಮಗ ಪುಟ್ಟಬಸಪ್ಪನವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ ೨ ರೂಪಾಯಿಗಳು, ಇದೇ [illegible] ಚಿಕ್ಕಬಾಲಿಕೆಯರು ದೀಪಾವಳಿ ಕಾಲದಲ್ಲಿ ಶಿವಸ್ತೋತ್ರವಾಡುತ್ತ [illegible] ಮಾಡಿದಾಗ ಬಂದ 1 ರೂಪಾಯಿಯೂ ಒಟ್ಟು 6 ರೂಪಾಯಿಗಳು ತರೀಕೆರೆ ಹಿರೇಮಠದ ವೇ|| ಕಲ್ಲಿನಾಥದೀಕ್ಷಿತರ ದ್ವಾರಾ ತಲ್ಪಿರುತ್ತವೆ

ಸಿದ್ಧಾಪುರದ ಸಿದ್ಧಲಿಂಗಯ್ಯನವರು ಮದೆಹಾಳು ಮಠ [illegible] ಲಗ್ನದಲ್ಲಿ ತೆಗೆಯಿಸಿದ ೩ ರೂಪಾಯಿಗಳೂ ಅನಂತಪುರದ [illegible] ಸಿವಾರ್ಣಯ್ಯನವರು ಲಿಂಗಧಾರಣ ಸಮಯದಲ್ಲಿ ತೆಗೆಯಿಸಿದ 1 ರೂಪಾಯಿಯೂ ಆ ಸಿದ್ಧಾಪುರದ ಹಿರೇಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಹರಪನಹಳ್ಳಿ ತಾಲೂಕು ಹಿರೇಕೋಳತಿ? ಗ್ರಾಮದ ಸಾಹುಕಾರ ಹತ್ತಿ ಸಿದ್ಧರಾಮಪ್ಪನವರು ತಮ್ಮ ಮನೆಯಲ್ಲಿ ನೆರವೇರಿಸಿದ ಮಾಹೇಶ್ವರದೀಕ್ಷಾ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳನ್ನು ಕಳುಹಿಸಿರುತ್ತಾರೆ

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಸುಮಂಗಳವನ್ನೀಯಲೆಂದು ಹಾರೈಸುತ್ತೇವೆ   ಸಂ

ಸೂಚನೆಯು

[illegible] ಪತ್ರಿಕೆಗೆ [illegible] ಬರೆಯುವ [illegible] ವನ್ನು [illegible] ದಿನಗಳು [illegible] ಪತ್ರಿಕೆಯು [illegible] ದವರ [illegible] ವಿಷಯಗಳು [illegible] ವಾಗುತ್ತಿದೆ [illegible] ಪತ್ರಗಳನ್ನು ಕಳುಹಿಸುವುದಾಗುತ್ತದೆ. ಮನಸ್ಸಿನಲ್ಲಿ [illegible] ಸಂಶಯವನ್ನು ಮಾಡಿಕೊಂಡಾಗಿ ಹೋರಿಕೆ

ಪತ್ರವ್ಯವಹಾರಕರು ಕಾಗದ ಒಂದೇ ಕಡೆಯಲ್ಲಿ ಸ್ಫುಟವಾಗಿಯೂ ಸಂಕ್ಷಿಪ್ತವಾಗಿಯೂ ಲೇಖನಗಳನ್ನು ಬರೆದು ಕಳುಹಿಸಬೇಕು. ಎಂದಾದರೂ ನಮ್ಮೊಡನೆ ಪತ್ರವ್ಯವಹಾರ ನಡೆಸುವಾಗ ಅವರ ಹೆಸರಿನ ಹಿಂಭಾಗದಲ್ಲಿ [illegible] ನಂಬರನ್ನು ತಪ್ಪದೆ ತಿಳುಹಿಸಬೇಕು. ಈ ನಿಯಮಗಳಿಗೆ ವ್ಯತಿರಿಕ್ತವಾಗಿ ಬಂದ ಪತ್ರಗಳಿಗೆ [illegible] ಕೊಡಲಾಗುವದಿಲ್ಲ   ಸಂ

ಆಶ್ಚರ್ಯ!   ಅಮೇರಿಕಾಖಂಡದ   ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರನೊಬ್ಬನು
ಕಂಡುಹಿಡಿದ ದಿವ್ಯೌಷಧ.

ಸರ್ವರೋಗ ನಿವಾರಣವಾದ ಈ ಜೀವನೌಷಧವನ್ನು ಕಂಡುಹಿಡಿಯುವುದಕ್ಕಾಗಿ ಅಮೇರಿಕಾಖಂಡದ ಡಾಕ್ಟರನೊಬ್ಬನು ಅನೇಕ ವರ್ಷಗಳು ಪರೀಕ್ಷೆಗಳನ್ನೂ ಪರಿಶೋಧನೆಗಳನ್ನೂ ಮಾಡಿ ಬಹು ಧನವ್ಯಯ ಮಾಡಿಕೊಂಡು ಕೊನೆಯಲ್ಲಿ

ಎಲಿಕ್ಜಿರ್ ಆಫ್ ಲೈಫ್
ಅಥವಾ
ಜೀವನಾಧಾರ

ಎಂಬ ಔಷಧವನ್ನು ಕಂಡುಹಿಡಿದನು. ಅನುಪಾನಭೇದದಿಂದ ಅನೇಕ ರೋಗಗಳನ್ನು [illegible] ಅಗ್ನಿಮಾಂದ್ಯ ಅಜೀರ್ಣ ಹೊಟ್ಟೆ [illegible] ಭಾರವಾಗಿರುವುದು ಅತಿಸಾರ ವಾಂತಿ ಭೇದಿ ಅಥವಾ ಕಾಲರಾ [illegible] ನೆಗಡಿ ಮಲೇರಿಯಾ ಜ್ವರ ಇತರ ವಿವಿಧವಾದ ಜ್ವರಗಳು ಮಾನಸಿಕ ದೌರ್ಬಲ್ಯ ಕಣ್ಣು ಮತ್ತು ಕಿವಿ ನೋವುಗಳಿಗೆ ಮಲಬದ್ಧತೆ [illegible] ಕ್ಷಯವ್ಯಾಧಿಗಳಿಗೆ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ [illegible] ಹಾವು ಚೇಳು [illegible] ಮುಂತಾದ ವಿಷಜಂತುಗಳ ಕಡಿತಕ್ಕೆ ಬಾಲಗ್ರಹ ಇವೇ ಮುಂತಾದ ರೋಗಗಳನ್ನು ಗುಣಪಡಿಸುತ್ತದೆ ಇದನ್ನು [illegible] ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿಮನೆಯಲ್ಲಿ ಅಥವಾ ಪ್ರತಿಯೊಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರೊಬ್ಬನು ಹತ್ತಿರವಿದ್ದಂತೆಯೇ. [illegible] ಕೊಡಬೇಕಾದ ಫೀಜುಗಳನ್ನು ಈ ಜೀವನಾಧಾರ [illegible] ಡಾಕ್ಟರಿಗೆ ಕೊಡಬೇಕಾದ್ದಿಲ್ಲ. ಸಣ್ಣ ಸೀಸೆ ಒಂದಕ್ಕೆ ೦-೧೨-೦ ದೊಡ್ಡ ಸೀಸೆ ಒಂದಕ್ಕೆ ೧-೮ ಟಪಾಲು ಖರ್ಚು ಪ್ರತ್ಯೇಕ [illegible]

[illegible] ತಾ|| ೨೪-೯-೭

ನಿಮ್ಮ ಕಂಪನಿಯಿಂದ ತಾವು ನಾಲ್ಕು [illegible] ಜೀವನಾಧಾರ ಬಾಟಲಿಗಳನ್ನು [illegible] ಅನೇಕ ರೋಗಗಳು [illegible] ಅನುಭವದಿಂದ [illegible] ಅನೇಕರಿಗೆ [illegible] ಕಾಲರಾ [illegible] ಅನೇಕ ಮಕ್ಕಳಿಗಳ [illegible] ಬಾಧವಾದ [illegible]

3   ಪಟೇಲ್ ಮುದ್ದು [illegible]

ಜೀವನಾಧಾರ ಡಿಪೋ, ಹುಬ್ಬಳ್ಳಿ

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗ ಇದನ್ನು ಉಪಯೋಗಿಸಿ, ಸಾವಿರಾರುಗಳ ಯೋಗ್ಯತಾಪತ್ರ ಗಳನ್ನು ಕೊಟ್ಟಿರು ರು. ಪ್ರಸಿದ್ಧವಾ ಈ ನಶ್ಯದ ಪ್ರ ಯಿಂದ ಸ್ವಸ್ಥವಾಗ ವ ವ್ಯಾಧಿಗಳು ಯಾ ವವೆಂದರೆ—ಪಿನ ಒಂಟಿತಲೆನೋವು ತಲೆಯಲ್ಲಿನ ರೋಗ ವು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳ ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗು ವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾ ಡುತ್ತದೆ ಮೂಗುಬಿಟ್ಟಿನ ಸಾಧಾರಣ ನಶ್ಯದ ಸಂಗ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇ ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ ಔಷಧವಾಗಿ ಉಪಯೋಗಿಸುತ್ತಾರೆ. ಮಾದರೀ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ.ಪಿ. ೦ ೯
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೮

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸ್ಪ ಯಾಗಿ ತಿಳಿಯುವಂತೆ ಬರೆಯಿರಿ —ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[25]   ಪೋ. ಬಾ ೫೧೦ ಮದರಾಸು

ASIATIC GOVERNMENT SECURIT
LIFE ASSURANCE CO LTD MYSORE
ಏಶಿಯಾಟಿಕ್ ಗವರ್ನಮೆಂಟು ಸೆಕ್ಯುರಿ
ಲೈಫ್‌ಅಸ್ಸೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು

ಆದ್ದರಿಂದ ಯಾವಾಗಲೂ 'ಏಶ್ಯಾಟಿಕ್' ಕಂಪ ನಿಯಲ್ಲಿಯೇ ವಿಮೇಮಾಡಿರಿ

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕ ವಾದುವು

ಜಾಮೀನುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಜಾ ಮೀನಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾ ಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯುತ್ತ

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವ ರಿಗೆ ಬರೆಯಬಹುದು

(1) ಮ|| ಟಿ ರಾಜಣ್ಣ, ಚೀಫ್ ಏಜಂಟ್,
ಏಶಿಯಾಟಿಕ್ ಬಿಲ್ಡಿಂಗ್ಸ್ ಸಯ್ಯಾಜಿರಾವ್
ರೋಡ್, ಮೈಸೂರು
(2) ಮ|| [illegible] ಆರಾಧ್ಯ
ಚೀಫ್ ಏಜಂಟು ಹುಬ್ಬಳ್ಳಿ ಮತ್ತು ಬಳ್ಳಾರಿ
(3) ಹೈದರಾಬಾದ್ ಏಶಾಟಿಕ್ ಹೌಸ್,
ಚೀಫ್ ಏಜಂಟ್ ಹೈದರಾಬಾದ್ (ದಖನ್)
[23]

[illegible] ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರ|| ಪಂಡಿತ [illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

RFGISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ ೮ ಆಣೆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ ನೇ ನವಂಬರ್ ೧೯೨೭ [ಸಂಚಿಕೆ ೨೯.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವರಲ್ಲಿ ವಿನಂತಿ

ಲಿಂಗಾಂಗಿಗಳೇ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಾಂಪ್ರದಾಯಕರೇ ಗುರುವರ್ಗದವರು ಈ ಪೂಜ್ಯಪಾದರು ಪಂಚಾಚಾರ್ಯರ ಸಾಕ್ಷೀಭೂತವಾಗಿ ನಿಜಸುಖಕ್ಕೆ ಹೇತುವಾದ ಪರಬ್ರಹ್ಮಮೂರ್ತಿ (ಲಿಂಗ)ಯನ್ನು ಬ್ರಹ್ಮಚರ್ಯಾಶ್ರಮಿಗಳಿಗೆ ಕೊಟ್ಟು ಮೋಕ್ಷಮಾರ್ಗಿಗಳನ್ನಾಗಿ ಮಾಡಿ ಕೀರ್ತಿಶೇಷರಾಗಿರುವರೆಂಬುದು ವಾಚಕರಿಗೆ ವೇದ್ಯವಾದ ವಿಷಯವಾಗಿದೆ. ಶಿವಾಗಮ ಶಾಸ್ತ್ರಜ್ಞಾನವು ಸ್ಫೋರಿಂತವಿರುವದರಿಂದಲೋ, ಮದಾಂಧತೆಯಿಂದಲೋ ತಮ್ಮ ಅಜ್ಞಾನವನ್ನು ಹೊರಗೆಡಹುವ ಪರದ್ವೇಷದಿಂದಲೋ ಪಾಪಮಯ ಬುದ್ಧಿಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಹಲಕಲವು ಅಜ್ಞಾನಿಗಳು ಪ್ರಮಥಗಣ ವಂಶಾನುಕ್ರಮವಾಗಿ ಬಂದ ಗುರುಸ್ಥಲದವರನ್ನೇ ದೂಷಿಸ ಹತ್ತಿದ್ದಾರೆಂಬುದು ವೃತ್ತಪತ್ರಿಕೆ ಹಸ್ತಪತ್ರಿಕೆಗಳಿಂದಲೂ ಈಗಿನ ಅನಾಮಧೇಯರಾದಪಿ ಪಂಡಿತರಿಂದ ಪ್ರಸಾರವಾದ ಹಲಕೆಲವು ಗ್ರಂಥಗಳಿಂದಲೂ ಗೋಚರವಾಗುವದು. ಇಂಥ ಕೃತ್ಯಗಳಿಂದ ಸಮಾಜದಲ್ಲಿ ಅನಾಯಕತ್ವವು ಹೆಚ್ಚಿ ಸ್ಪರ್ಧೆವಾದ ಗಲಭೆಯಾಗುವದಲ್ಲದೆ ಇದರಿಂದ ಯಾವ ಸುಖವಿಲ್ಲೆಂದು ಸಾರಿಸಾರಿ ಹೇಳಬಹುದು. ಆದ್ದರಿಂದ ಗುರುದೂಷಣೆಗೆ ಪಾತ್ರವಾದ ವೃತ್ತಪತ್ರಿಕೆ ಹಸ್ತಪತ್ರಗಳು ಹಾಗೂ ಗುರುನಿಂದಕ ಗ್ರಂಥಗಳ ಮತ್ತು ಗುರುದ್ರೋಹಿ ಜನರ ಕೃತಿಗಳನ್ನು ನಿಷೇಧಿಸುತ್ತೇನೆ. ನಾವು ವಾಯುವಿರಕ್ತರ ಜಗವಳಿಯಲ್ಲಿ ಸ್ವಾರ್ಥತೆಗೋಸ್ಕರ ಗುರುವರ್ಗದವರು ಸೇರಿ ಗುರುಶ್ರೇಯಸ್ಸಿಗೆ ಕಳಂಕವನ್ನು ತರುತ್ತಲಿದ್ದಾರೆ. ಇದು ಬಹಳ ಖೇದದಾಯಕವಾಗಿದೆ. ಇಂಥ ಗುರುವರ್ಗದವರ ವರ್ತನವನ್ನು ಕೂಡ ವಿರೋಧಿಸುತ್ತೇನೆ. ಗುರುವರ್ಗಾದಿ ಲಿಂಗಾಂಗಿಗಳೇ 'ನಗುರೋರಧಿಕಂ' ಎಂದು ಶ್ರುತಿಗಳು ಹೇಳುವದು. ಆದ ಪ್ರಯುಕ್ತ ಗುರುನಿಂದೆಯನ್ನು ತ್ಯಜಿಸಿ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿ ಇಟ್ಟು ಧನ್ಯರಾಗಬೇಕೆಂದು ಕೋರುತ್ತೇನೆ.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ
ಸೆಕ್ರೆಟರಿ
ಕೊಟ್ರಯ್ಯ ಹಿರೇಮಠ ಪಟಿರದ್ದಿಹಾಳ

ಸಹಸ್ರ ಬಿಲ್ವಾರ್ಚನೆಯು

ಬಳ್ಳಾರಿ ತಾಲ್ಲೂಕು ಕುರುಗೋಡು ಪೂಲ ಮಠದ ಶಿ. ವೇ. ಬಸಯ್ಯನವರು ಸದರಿ ಗ್ರಾಮದ ವೀರಶೈವ ಮಂಡಲಿಗರಿಗೆ ಈ ಬಿಲ್ವಾರ್ಚನಾ ಪ್ರಧಾನವನ್ನಾಗಿ ಬೋಧಿಸಿ ನಾಡಗೌಡ ಪಾಟೀಲ್ ಮರಿಗೌಡರು ತಂಗಿನಮಲ್ಲೀಶಪ್ಪನವರು ಈ ಉಭಯರ ಸಹಾಯಸಂಪತ್ತಿನಿಂದಲೂ ವೇ|| ಹಿರೇಮಠದ ಕುಮಾರಯ್ಯನವರು, ವೇ|| ನೀಲಮ್ಮನಮಠದ ಬಸವಯ್ಯನವರಿಂದಲೂ ಆಶ್ವಿಜ ಶುಕ್ಲ ಪಕ್ಷ ಪಡಿಗೆ ಸೋಮವಾರ ಮೊದಲುಗೊಂಡು ವಿಜಯದಶಮಿ ವರೆಗೂ ದೊಡ್ಡಬಸವೇಶ್ವರ ದೇವಾಲಯದಲ್ಲಿ ಬಸವೇಶ್ವರನಿಗೂ ಶಿವಲಿಂಗಮೂರ್ತಿಗೂ ಪದ್ಧತಿಪ್ರಕಾರ ವೇದೋಕ್ತ ಮಂತ್ರಗಳಿಂದ ರುದ್ರಾಭಿಷೇಕವನ್ನು ಪೂರೈಸಿ ಸಹಸ್ರ ಬಿಲ್ವಾರ್ಚನೆಯನ್ನು ನಡೆಯಿಸಿ ದಶಮಿಯ ದಿನ ಪ್ರದೋಷಕಾಲ 5 ಘಂಟೆಗೆ ಸರಿಯಾಗಿ ಆಂದೋಲನದಲ್ಲಿ ಶ್ರೀ ಪಾರ್ವತೀ ಪರಮೇಶ್ವರ ನಂದೀಶ್ವರ ಮೂರ್ತಿಗಳನ್ನು ಮುಹೂರ್ತಮಾಡಿಸಿ ಅತ್ಯಂತ ವೈಭವದಿಂದ ಉತ್ಸವವು ಹೊರಟು 6 ಘಂಟೆಗೆ ಸರಿಯಾಗಿ ಶಮೀವೃಕ್ಷವನ್ನು ಮುಟ್ಟಿತು. ಶಮೀಪೂಜಾದಿಗಳು ನಡೆದು ರಾತ್ರಿ ೮ ಘಂಟೆಗೆ ಸರಿಯಾಗಿ ದೇವಾಲಯವನ್ನು ತಲ್ಪಿತು. ಆ ಬಳಿಕ ಗ್ರಾಮದ ಸಮಸ್ತ ಭಕ್ತಾದಿಗಳು ವೀರಮಾಹೇಶ್ವರರ ಆಶೀರ್ವಚನವಿಶೇಷದಿಂದ ಕೊಡಲ್ಪಟ್ಟ ಶಮೀಪತ್ರಗಳನ್ನು ಸ್ವೀಕರಿಸಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ದಾನಧರ್ಮಗಳನ್ನು ಮಾಡಿದರು. ಈ ಬಿಲ್ವಾರ್ಚನಾ ಸತ್ಕಾರ್ಯಕ್ಕೆ ಧನಸಹಾಯವನ್ನು ಮಾಡಿದ ಭಕ್ತಾದಿಗಳಿಗೂ ಕಾರ್ಯದರ್ಶಿಗಳಿಗೂ ಶ್ರೀ ಭಗವಂತನು ಆಯುರಾರೋಗ್ಯ ವೈಭವಗಳನ್ನಿತ್ತು ಕಾಪಾಡಲಿ

ಪ್ರತ್ಯಕ್ಷದರ್ಶಿ.

ಶ್ರೀ ಹೂಲಿ (ಪೂವಳ್ಳಿ) ಪಂಚಾಂಗದ ಭವಿಷ್ಯವು ಸರಿಯಾಯಿತು.

ವಾಚಕರೇ 'ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ' ಎಂಬ ಋಷಿಗಳ ವಾಕ್ಯವು ಸತ್ಯವೆಂಬುವದು ಹೂಲಿ ಪಂಚಾಂಗದಿಂದ ತಿಳಿದುಬಂದಿದೆ—ಈ ಪಂಚಾಂಗದಲ್ಲಿ ಪ್ರತಿ ವರುಷದಲ್ಲಿ ಗುರು ಶುಕ್ರರ ಅಸ್ತೋದಯ ಕಾಲವೂ ಚಂದ್ರಸೂರ್ಯಗ್ರಹಣಗಳ ಗತಿಯೂ ಸರಿಯಾಗಿಯೇ ಇರುವದಲ್ಲದೆ ಕೆಲವು ಪಂಚಾಂಗಗಳಲ್ಲಿ ಹಾಗಿಲ್ಲ. ಈ ಶಕೆ ೧೮೪೯ ನೇ ಪ್ರಭವಸಂವತ್ಸರದ ಫಲಶ್ರುತಿಯಂತೆ ಮುಂಗಾರಿ ಮಳೆಗಳು ನಮ್ಮಿಂದ ದಕ್ಷಿಣ ಪಶ್ಚಿಮ ಪ್ರಾಂತಕ್ಕೆ ಹೆಚ್ಚಾಗಿ ಆಗಿ ಮುಂಗಾರಿ ಪೀಕಿಗೆ ಹುಳಗಳ ಬಾಧೆಯೆಂದು ಪ್ರಕಟಿಸಿದಂತೆ ಈ ವರುಷ ಮಿಡಚಿಗಳ ಬಾಧೆಯು ಬಹಳ ಕಡೆಗೆ ಆಯಿತು. ಮುಂದೆ ಮಳೆ—ಮಳೆ ಎಂದು ಬೊಬ್ಬಾಟವೇಳಲು ಈ ಪಂಚಾಂಗದಲ್ಲಿ ಪ್ರಕಟಿಸಿದಂತೆ ಉತ್ತರಾ ಹಸ್ತಾ ಮಳೆಗಳು ಆಗಿ ಹಿಂಗಾರಿ ಬಿತ್ತಲಿಕ್ಕೆ ಅನುಕೂಲವಾಯಿತು. ಇವೆಲ್ಲವನ್ನು ನಾವು ಅನುಭವಿಸುವಷ್ಟರಲ್ಲಿ ಚಿತ್ತಾ ಸ್ವಾತಿ ಮಳೆಗಳು ಆಗದೆ ಮತ್ತೆ ಮೊದಲಿನಕ್ಕಿಂತಲೂ ಹೆಚ್ಚಿಗೆ ಮಳೆ—ಮಳೆ—ಮಳೆ ಎಂದು ಜನರು ಆಕಾಶವನ್ನೇ ನೋಡುತ್ತಿದ್ದರು. ಕೆಲವರು ಇನ್ನು ಸ್ವಾತಿಮಳೆ ಹೋದ ಮೇಲೆ 'ಯಾತರಮಳೆ' ಎಂದೂ ಇನ್ನು ಮೇಲೆ ಮಳೆ ಆಗುವದಿಲ್ಲ ಈ ವರುಷ ದೊಡ್ಡ ದುಷ್ಕಾಳವೇ ಸರಿಯೆಂದು ಭೀತಿಗೊಂಡರು. ಆದರೂ ನನಗೆ ಧೈರ್ಯವು ಇತ್ತು. ಮುಂದೆ ಕಾರ್ತಿಕಮಾಸದ ಈ ಪಂಚಾಂಗದ ಫಲಶ್ರುತಿಯಂತೆ 'ವಿಶಾಖಾ ಮಳೆಯು' ಆಗಿ ದಕ್ಷಿಣಪ್ರಾಂತದಲ್ಲಿ ಮುಂಗಾರಿ ಪೀಕಿಗೆ ಲುಕ್ಸಾನವನ್ನೂ ಉತ್ತರಕಡೆ ಓರಿಸಾ ವಗೈರೆ ಪ್ರಾಂತಗಳಲ್ಲಿ ವಿಶೇಷ ಪ್ರವಾಹದಿಂದ ಜನರಿಗೆ ನಷ್ಟವನ್ನೂ ಮಾಡಿತೆಂದೂ ಈ ನಷ್ಟಕ್ಕಾಗಿ ಜನರ ಸಹಾಯಕ್ಕೆ ಇಂಡಿಯಾ ಸರಕಾರದವರು ಕೆಲವು ಹಣವನ್ನು ಕೊಟ್ಟಿರುವರೆಂದೂ ವರ್ತಮಾನಪತ್ರಗಳಿಂದ ತಿಳಿದುಬಂದಿತು. ಇದೆಲ್ಲವನ್ನು ನೋಡಿದರೆ "ಹೂಲಿ ಪಂಚಾಂಗಕರ್ತರ" ಸೂಕ್ಷ್ಮಗಣಿತದ ಕ್ರಮದ ಫಲವು ಜ್ಯೋತಿಷ್ಯಕ್ಕೆ ಭೂಷಣವೇ ಸರಿ!

ಓರ್ವ ಸತ್ಯವಾದಿ,
ಮು. ಯರಗಟ್ಟಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೬ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ದುಷ್ಪ್ರಶ್ನಪರಾಭವ	೭ ಆಣೆ
ಗೋತ್ರಸೂತ್ರಪಟ ೨ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಟೀಕಾಸಹ ೨ನೆಯ ಆವೃತ್ತಿ	೭ ಆಣೆ
ಬಸವಭ್ರಾಂತ ದಿವಾಕರ	೧೦ ಆಣೆ
ಬಸವಾದಿ ನಿಜತತ್ವದರ್ಪಣ ೨ನೆಯ ಆವೃತ್ತಿ	೪ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ ೨ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೬ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	೧|| ಆಣೆ
ಉಪನ್ಯಾಸ ಸಂಗ್ರಹ	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಸಯ್ಯಾಜಿರಾವ್ ರೋಡ್ ಮೈಸೂರು

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವಮತ ಮೀಮಾಂಸಾ.

(ಲೇಖಕರು)

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ವಿಶ್ವಾರಾಧ್ಯ
ಗುರುಕುಲವಾಸೀ ವ್ಯಾಕರಣರತ್ನಂ ಮ||
ಶ್ರೀ ಹುರಗಿಲಿ ಚಿಪ್ಪನಶಿವಾಚಾರ್ಯಃ

[ಹಿಂದಿನಿಂದ ಮುಂದೆ ಸಾಗಿದುದು]

ಆದರೆ ಸದ್ರೂಪ ಚಿದ್ರೂಪವಾದ ಬ್ರಹ್ಮಸ್ವರೂಪವನ್ನು ನಿರೂಪಿಸುವುದಕೋಸ್ಕರವಾಗಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ನಿರೂಪಿಸುತ್ತೇವೆ. ಶಕ್ತ್ಯಾ ವಿಶಿಷ್ಟಃ ಶಕ್ತಿವಿಶಿಷ್ಟಃ ಶಕ್ತಿವಿಶಿಷ್ಟಶ್ಚ ಶಕ್ತಿವಿಶಿಷ್ಟಶ್ಚ, ಶಕ್ತಿವಿಶಿಷ್ಟೌ ಸದ್ವೈತಂ. ಅದ್ವೈತಂ, ತಯೋರದ್ವೈತಂ, ಶಕ್ತಿವಿಶಿಷ್ಟಾದ್ವೈತಂ | ಎಂದು ವಿಗ್ರಹವು. ಸೂಕ್ಷ್ಮ ಚಿದಚಿತ್ಸಶಕ್ತಿವಿಶಿಷ್ಟನಾದವನು ಶಿವನು. ಸ್ಥೂಲ ಚಿದಚಿತ್ಸಶಕ್ತಿವಿಶಿಷ್ಟನಾದವನು ಜೀವನು. ಈ ವಿಧ ಶಕ್ತಿವಿಶಿಷ್ಟರಾದ ಶಿವಜೀವರ ಐಕ್ಯಕ್ಕೆ ಶಕ್ತಿವಿಶಿಷ್ಟಾದ್ವೈತವೆನ್ನುವರು. ಪರಶಿವಬ್ರಹ್ಮವು ತನ್ನ ಶಕ್ತಿಯ ಪರಿಣಾಮವಶದಿಂದ ಅನಾದಿ ಮಲಸಂಬಂಧವನ್ನು ಹೊಂದಿ ಶರೀರತ್ರಯಾವಚ್ಛಿನ್ನವಾಗಿ ಸ್ವರೂಪಗೋಪನದಿಂದ ಜೀವಭಾವವನ್ನು ಹೊಂದಿತು. (ಕಾರ್ಯರೂಪದಿಂದ ಪರಿಣಮಿಸಿತು.) ಪುನಃ ಸ್ವಶಕ್ತಿಯ ವಿಕಾಸದಿಂದಲೇ ಮಲತ್ರಯಗಳನ್ನು ನೀಗಿಸಿಕೊಂಡು ನಿಜಸ್ವರೂಪವನ್ನು ಪಡೆದು ಸ್ವಸ್ವರೂಪಾನಂದ ರಸನಿರ್ಭರದಿಂದ ಶಿವನು ತಾನೇ ಆಗುವನು. ಇದೇ ಶಕ್ತಿವಿಶಿಷ್ಟಾದ್ವೈತಸ್ವರೂಪವು. ಶಂಕಾ—ದ್ವಾಸುಪರ್ಣಾ . . ಭಿನ್ನಾತಕ್ತಿ "ದ್ವೇ ಬ್ರಹ್ಮಣೀ ವೇದಿತವ್ಯೇ" ಇತ್ಯಾದಿ ಶ್ರುತಿಗಳು ಜೀವಬ್ರಹ್ಮರಿಗೆ ಭೇದವನ್ನು ಹೇಳುವವು. "ಏಕಮೇವಾದ್ವಿತೀಯಂ" "ಏಕಏವ ರುದ್ರೋ" "ಶಿವಮದ್ವೈತಮ್" ಇತ್ಯಾದಿ ಶ್ರುತಿಗಳು ಜೀವಬ್ರಹ್ಮೈಕ್ಯವನ್ನು ಹೇಳುವವು. ಹೀಗೆ ಪರಸ್ಪರ ಶ್ರುತಿವಾಕ್ಯಗಳಿಗೆ ವಿರೋಧ ಬಂದು ಎರಡು ಪ್ರಕಾರವಾದ ಶ್ರುತಿಗಳಿಗೂ ಅಸಾಮಂಜಸ್ಯವು ಪ್ರಾಪ್ತವಾಗುವದೆಂದು ಪೂರ್ವಪಕ್ಷದ ಆಶಯವು. ಸಿದ್ಧಾಂತಿಯ ಉತ್ತರ—ಸೂಕ್ಷ್ಮ ಸ್ಥೂಲಚಿದಚಿತ್ಪ್ರಪಂಚಾಕಾರ ಶಕ್ತಿವಿಶಿಷ್ಟರ ಭೇದವನ್ನು ಹೇಳುವದರಿಂದಲೂ ವಿಶೇಷಣ ವಿಶೇಷ್ಯಭಾವವನ್ನು ತೋರಿಸಿ ದ್ವೈತವನ್ನು ಹೇಳುವದರಿಂದಲೂ ಶ್ರೀಮತ್ಪಂಚಾಚಾರ್ಯ ಭಗವತ್ಪಾದರ ಶಕ್ತಿವಿಶಿಷ್ಟಾದ್ವೈತಮತದಲ್ಲಿ ಭೇದಾಭೇದವೆರಡೂ ಅಂಗೀಕರಿಸಲ್ಪಡುವದರಿಂದ ಪರಸ್ಪರ ವಿರೋಧವುಳ್ಳ ಶ್ರುತಿವಾಕ್ಯಗಳಿಗೆ ಸಹಜವಾದ ಸಾಮಂಜಸ್ಯವುಂಟು.

ಆದರೆ ಪರಶಿವ ಪರಬ್ರಹ್ಮವೆಂಬ ಪರಮಾತ್ಮನಿಗೆ ಶ್ರೀಮತ್ಪಂಚಾಚಾರ್ಯಪಾದರು ಮುಖ್ಯವಾಗಿ ಶಕ್ತಿವೈಶಿಷ್ಟ್ಯವನ್ನು ಹೇಳುವರು. ಶ್ರೀ ರೇವಣಾರಾಧ್ಯ ಶಿವಾಚಾರ್ಯಪಾದರು ಶ್ರೀಮದಗಸ್ತ್ಯರಿಗೆ ಬೋಧಿಸಿದ್ದೇನೆಂದರೆ, "ಅತ್ರ ಶಕ್ತಿ ವಿಕಾಸೇನ ಶಿವೋ ವಿಶ್ವಾತ್ಮನಾಸ್ಥಿತಃ ಕುಟೀಭಾವಾದ್ಯಥಾಭಾತಿ ಪಟಃ ಸ್ವಸ್ಯ ಪ್ರಸಾರಣಾತ್" ಒಂದಾನೊಂದು ಪಟವು ತನ್ನಲ್ಲಿರತಕ್ಕ ಪ್ರಸರಣಶಕ್ತಿಯಿಂದ ಕುಟೀಭಾವ (ಡೇರಾ ರೂಪ)ವನ್ನು ಹ್ಯಾಗೆ ಹೊಂದುವದೋ ಹಾಗೆ ಪರಶಿವಬ್ರಹ್ಮವು ತನ್ನಲ್ಲಿ ಅವಿನಾಭಾವದಿಂದಿರತಕ್ಕ ಚಿಚ್ಛಕ್ತಿಯ ವಿಕಾಸದಿಂದ ವಿಶ್ವಾತ್ಮನಾಗಿ ಪರಿಣಮಿಸಿರುವದು. ಇದರಿಂದ ಪರಬ್ರಹ್ಮವು ಶಕ್ತಿವಿಶಿಷ್ಟವಾಗುವದರಿಂದಲೇ ವಿಶ್ವವು ಪ್ರಕಾಶವಾಗಿದೆಯೆಂದು ಸಿದ್ಧವಾಯಿತು. ಹಾಗೂ "ಉಪಾಸನಾಯಾಮಾ" "ಶಿವ ಏವ ಮುಷ್ಯ..... ಉಪರತ ಉಪರೇಷು" "ಮಾಯಿನಂ ತು ಮಹೇಶ್ವರಮ್" ಇತ್ಯಾದಿ ಸಹಸ್ರಾರು ಶ್ರುತಿಗಳು ಶ್ರೀ ಜಗದಾಚಾರ್ಯರ ವಾಗನುಕರಣ ಮಾಡುತ್ತಿರುವವು. ಆದುದರಿಂದ ಶಿವನನ್ನು ಬಿಟ್ಟು ಶಕ್ತಿಯು ಇಲ್ಲ ಶಕ್ತಿಯನ್ನು ಬಿಟ್ಟು ಶಿವನಿರುವದಿಲ್ಲ. ಪುಷ್ಪಕ್ಕೂ ಗಂಧಕ್ಕೂ, ವಾಯುವಿಗೂ ಆಕಾಶಕ್ಕೂ ನಿತ್ಯ ಸಂಬಂಧವಿರುವಂತೆ ಪರಶಿವಬ್ರಹ್ಮಕ್ಕೂ ಶಕ್ತಿಗೂ ನಿತ್ಯಸಂಬಂಧವಿರುವದು. ಆ ಪರಶಿವಬ್ರಹ್ಮವು ಶಕ್ತಿಯಿಂದ ಯುಕ್ತವಾದರೆ ಆ ಬ್ರಹ್ಮಕ್ಕೆ ಸೃಷ್ಟ್ಯಾದಿ ಕೃತ್ಯದಲ್ಲಿ ಸಾಮರ್ಥ್ಯವುಂಟಾಗುವದು. ಎಂಬುದಾಗಿ "ನಶಿವೇನ ವಿನಾಶಕ್ತಿರ್ನಶಕ್ತಿರಹಿತಃ ಶಿವಃ | ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ || ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ" ಎಂದು ಹೇಳುವ ಅಭಿಯುಕ್ತರೂ ಶ್ರೀಮದಾಚಾರ್ಯರ ವಾಕ್ಯವನ್ನು ಅನುಸರಿಸುವರು. ಇನ್ನು ಆ ಪರಶಿವಬ್ರಹ್ಮದಲ್ಲಿರುವ ಶಕ್ತಿಯು ಬ್ರಹ್ಮವು ಹೇಗೆ ನಿತ್ಯವೂ ವಿಭುವೂ ಆಗಿದೆಯೋ ಹಾಗೆ ಅದರ ಇಚ್ಛಾ ಜ್ಞಾನಕ್ರಿಯಾತ್ಮಕವಾದ ಶಕ್ತಿಯೂ ಕೂಡ ನಿತ್ಯವಾಗಿರುವದು. ಈ ಶಕ್ತಿಯನ್ನು ಮಹಾಮಾಯೆಯೆಂದೂ ಹೇಳುವರು. ಆದರೆ ಇದನ್ನು ಕೆಲವಾಚಾರ್ಯರು ಮಿಥ್ಯಾರೂಪವೆಂದು ಹೇಳುವಂತೆ ಪಂಚಾಚಾರ್ಯರ ಸಿದ್ಧಾಂತದಲ್ಲಿ ಹೇಳಲ್ಪಡುತ್ತಿಲ್ಲವು. ಏಕೆಂದರೆ ನಿತ್ಯಗತಧರ್ಮವು ನಿತ್ಯವೇ ಆಗುವದರಿಂದ ಮಿಥ್ಯಾಭೂತವಾದದ್ದೆಂದು ಹೇಳಲು ಬರುವದಿಲ್ಲ; ಅತ ಏವ "ಧರ್ಮರೂಪಾ ಪರಾಶಕ್ತಿಃ ಧರ್ಮಿರೂಪಃ ಪರಃ ಶಿವಃ | ತಸ್ಮಾನ್ನಾಸ್ತ್ಯೇವ ರೂಪತ್ವಾತ್ ಪರಾಶಕ್ತಿಃ ಪರಾತ್ಮನಃ | ಸರ್ವದಾ ತತ್ಸ್ವರೂಪೇಣ ಭಾತಿ ಭಾನೋರಿವಪ್ರಭಾ | ತಾದಾತ್ಮ್ಯಮನಯೋರ್ನಿತ್ಯಂ ವಹ್ನಿ ಧರ್ಮಿ ಸ್ವಭಾವತಃ ಸ್ವತಂತ್ರರೂಪೇಣ ಶಿವಃ ಸಚ್ಚಿತ್ಸುಖಾತ್ಮಕಃ ಶಕ್ತಿಸ್ತು ಪಾರತಂತ್ರ್ಯೇಣ ವಿಶ್ವೋಪಾದಾನಮಿಷ್ಯತೇ" ಎಂದು ಪರಶಿವಬ್ರಹ್ಮಕ್ಕೂ ಶಕ್ತಿಗೂ ಧರ್ಮಧರ್ಮಿ ಭಾವವನ್ನು ಬೋಧಿಸಿರುವರು. ಹಾಗೂ ಸೂರ್ಯನಲ್ಲಿರುವ ಪ್ರಭೆಗೂ ಸೂರ್ಯನಿಗೂ ಹೇಗೆ ತಾದಾತ್ಮ್ಯವಿದೆಯೋ ಹಾಗೆ ಬ್ರಹ್ಮಕ್ಕೂ ಶಕ್ತಿಗೂ ತಾದಾತ್ಮ್ಯವು ಇರುವುದು. ಆದರೆ ಸಚ್ಚಿತ್ಸುಖಾತ್ಮಕನಾದ ಶಿವನು ಸ್ವತಂತ್ರವಾಗಿ ವಿಶ್ವಕ್ಕೆ ಉಪಾದಾನನು. ಶಕ್ತಿಯು ಪಾರತಂತ್ರ್ಯದಿಂದ ಉಪಾದಾನವು ಆಗಿದೆಯೆಂದು ಹೇಳಿರುವರು. ಹಾಗೂ ಪರಶಿವಬ್ರಹ್ಮವೆಂಬ ಭಗವಾನ್ ಕುಲಾಲನು (ಕುಂಬಾರನು) ಸ್ವತಾದಾತ್ಮ್ಯವನ್ನುಳ್ಳದಾದ (ಮಹಾಮಾಯಾ) ಶಕ್ತಿಯೆಂಬ ಮೃತ್ಪಿಂಡವನ್ನು ತೆಗೆದುಕೊಂಡು ಮಾಯೆಯೆಂಬ ಚಕ್ರಭ್ರಮಣದಿಂದ ಪ್ರಕೃತಿಯೆಂಬ ದಂಡದಿಂದ ಬ್ರಹ್ಮಾಂಡವೆಂಬ ಭಾಂಡ(ಕೊಡ)ವನ್ನು ನಿರ್ಮಿಸಿರುವನು ಎಂಬುದಾಗಿ ಅಭಿಯುಕ್ತರಾದ ಮಾಹೇಶ್ವರರು ಅಪ್ಪಣೆಕೊಡಿಸಿರುವರು. ಇದರಿಂದ ಶಿವಶಕ್ತಿಯರಿಬ್ಬರೂ ನಿತ್ಯರು, ಹಾಗೂ ಅವರಿಂದುತ್ಪನ್ನವಾದ ವಿಶ್ವವೂ ಸತ್ಯವು ಎಂದು ಸಿದ್ಧವಾಯಿತು. ಆದ್ದರಿಂದಲೇ "ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ" ಅಸದ್ವಸ್ತುವಿನಿಂದ ಸದ್ವಸ್ತುವು ಹುಟ್ಟುವದಿಲ್ಲ, ಸದ್ವಸ್ತುವಿನಿಂದ ಅಸದ್ವಸ್ತುವು ಹುಟ್ಟುವದಿಲ್ಲ. ಅಥವಾ "ಸತಃ ಸದುಪಜಾಯತೇ ಇತಿ ರಾದ್ಧಾಂತಃ" ಸತ್ಯವೂ ನಿತ್ಯವೂ ಆದ ಪರಶಿವಬ್ರಹ್ಮದಿಂದ ಸತ್ಯವಾದ ವಿಶ್ವವು ಜನಿಸುವದೆಂದು ಸಿದ್ಧಾಂತವು. ಇದರಿಂದ ಕೆಲವರು ಜಗತ್ತು ಮಿಥ್ಯಾ, ಅಸತ್ಯ ಎಂದು ಬ್ರಹ್ಮದ ಅಧ್ಯಾಸವನ್ನು ಹೇಳುವವರ ಮತವು ನಮಗೆ (ಶ್ರೀಮತ್ಪಂಚಾಚಾರ್ಯರಿಗೆ) ಅಂಗೀಕೃತವಾಗುವದಿಲ್ಲ. ಆದರೆ ಒಂದಾನೊಂದು ಕೂರ್ಮ (ಆಮೆಯು) ತನ್ನಲ್ಲಿ ಸಂಕೋಚಮಾಡಿಕೊಂಡ ಕೈಕಾಲುಗಳನ್ನು ಚಾಚಲು ಹೊರಗೆ ಕೈಕಾಲುಗಳು ಕಾಣಿಸಿಕೊಳ್ಳುವವು. ಪುನಃ ಸಂಕೋಚಮಾಡಿಕೊಳ್ಳಲು ಹೊರಗೆ ತೋರುವದಿಲ್ಲವು. ಇದರಿಂದ ಆಮೆಗೆ ಹಸ್ತಾದಿಗಳು ಇಲ್ಲೆಂದು ಹೇಳುವದಕ್ಕಾಗುವದೇ? ಹಾಗೆ ಪರಶಿವಬ್ರಹ್ಮದ ಶಕ್ತಿಯ ವಿಕಾಸದಿಂದ ವಿಶ್ವವು ಕಾಣಿಸಿಕೊಳ್ಳುವದು. ಸಂಕೋಚದಶೆಯಲ್ಲಿ ಸ್ವಸ್ವರೂಪದಲ್ಲಿ ಅಡಗಿಕೊಳ್ಳುವದು. ಹಾಗೂ "ಯಥೋರ್ಣನಾಭಿಃ ಸೃಜತೇ ಗೃಹ್ಣತೇ" ಎಂದು ಭಗವತೀ ಶ್ರುತಿಯು ಹೇಳುವದೇನೆಂದರೆ, ಒಂದಾನೊಂದು ಜೇಡರಹುಳುವು ತನ್ನಲ್ಲಿರುವ ಸೂಕ್ಷ್ಮತಂತುಗಳನ್ನು ಪ್ರಸಾರಗೊಳಿಸಿ ವಿಸ್ತಾರವಾದ ತಂತುಜಾಲದಲ್ಲಿ ಸಂಚರಿಸುತ್ತ ತನಗೆ ಸಾಕಾದಕೂಡಲೇ ತನ್ನ ತಂತುಗಳನ್ನು ತಾನು ಸಂಕೋಚಮಾಡಿಕೊಳ್ಳುವದು. ಅದರಂತೆ "ಬಹುಸ್ಯಾಂ ಪ್ರಜಾಯೇಯಂ" "ಸೋಽಂತರಾದಂತರಂ ಪ್ರಾಪತ" ಇತ್ಯಾದಿ ಶ್ರುತ್ಯುಕ್ತ ಪ್ರಕಾರವಾಗಿ ಸರ್ವಜ್ಞತ್ವಾದಿ ಶಕ್ತಿವಿಶಿಷ್ಟವಾದ ಪರಶಿವಬ್ರಹ್ಮವು ಜೀವಭಾವವನ್ನು ಹೊಂದಲು ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವರೂಪ ಸೂಕ್ಷ್ಮ ಶಕ್ತಿಗಳು ಸಂಕೋಚವುಳ್ಳವುಗಳಾಗಲು ಜೀವನು ಬದ್ಧನಾಗುವನು. ಅಂದರೆ ಅವನ ಅಪ್ರತಿಹತವೂ ಸ್ವಾತಂತ್ರ್ಯರೂಪವೂ ಆದ ಇಚ್ಛಾಶಕ್ತಿಯು ಸಂಕುಚಿತವಾಗಿ ನಾನು ಪೂರ್ಣನಲ್ಲವು ಎಂಬ ಆಣವಮಲದ ಕಾರ್ಯವ್ಯವಹಾರವನ್ನುಂಟುಮಾಡುವದು. ಜ್ಞಾನಶಕ್ತಿಯು ಸಂಕುಚಿತವಾಗಿ ಸರ್ವಜ್ಞತೆಗೆ ಬದಲಾಗಿ ಕಿಂಚಿಜ್ಞತೆಯನ್ನು ಹೊಂದುವದರಿಂದ ನಾನು ತಿಳಿಯುವದಿಲ್ಲವೆಂಬ ಮಾಯಾಮಲದ ಕಾರ್ಯವ್ಯವಹಾರವನ್ನುಂಟುಮಾಡುವದು ಹೀಗೆಯೇ ಕ್ರಿಯಾಶಕ್ತಿಯು ಸಂಕುಚಿತವಾಗಿ ಸರ್ವ ಕರ್ತೃತ್ವಕ್ಕೆ ಬದಲಾಗಿ ಕಿಂಚಿತ್ಕರ್ತೃತ್ವವನ್ನು ಹೊಂದುವದರಿಂದ ನಾನು ಸುಖವುಳ್ಳವನು ದುಃಖವುಳ್ಳವನು ಎಂಬ ಕಾರ್ಮಿಕಮಲದ ವ್ಯವಹಾರವನ್ನುಂಟುಮಾಡುವದು. ಆದರೆ ಆ ಪರಶಿವಬ್ರಹ್ಮವು ಮಹಾಮಾಯಾವೃತವಾಗಲು ಈ ಸರ್ವಜ್ಞತ್ವಾದಿ ಶಕ್ತಿಗಳೇ ಕಾಲ ಕಲಾ ನಿಯತಿ ರಾಗ ಅವಿದ್ಯಾರೂಪವಾಗಿ ಪರಿಣಮಿಸಿ ಪುರುಷನನ್ನು ಬಂಧಿಸಿ ಪಶುವನ್ನಾಗಿಮಾಡಿ ಪಂಚ ಕಂಚುಕದಿಂದ ಆವರಿಸುವವು.

ಮುಂದೆ ಸಾಗುವುದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅತ್ಯಾನಂದವಾರ್ತೆ, ಗುಲಬರ್ಗಾ.

ಅತ್ಯಂತ ಮಹಿಮಾಶಾಲಿಗಳೂ ಅಷ್ಟಾವರಣನಿಷ್ಠಾಪರರೂ ದ್ವಿತೀಯವೃಷಭಾವತಾರಿಗಳೂ ಆದ ಶ್ರೀ ಶರಣಬಸವೇಶ್ವರ ಇವರ ಸಂಸ್ಥಾನದ ಗಾದಿಮಾಲಕರಾದ ಶ್ರೀಮಂತ ಮಹಾರಾಜ ದೊಡ್ಡಪ್ಪ ಉರ್ಫ್ ಶರಣಬಸಪ್ಪ ಅಪ್ಪ ಇವರಿಗೆ ತಾ|| ೨೧-೧೧-೨೭ ನೆಯ ಇಸ್ವಿ ಸೋಮವಾರದಿವಸ ಪುತ್ರೋತ್ಸವವಾದಕಾರಣ ಸದರಿ ಸಂಸ್ಥಾನದ ಲವಾಜಿಮ ಸಹಿತ ನೌಬತ್ತು ಭಾಜಾ ಬ್ಯಾಂಡವಾದ್ಯದೊಡನೆ ಸದರಿ ಮಂದಿರದಲ್ಲಿ ಸರ್ವಪ್ರಮುಖಪಂಚರು ಪುರವಾಸಿಗಳು ಮಂಗಳಾರತಿಯನ್ನು ಮಾಡಿ ಮಾಹೇಶ್ವರರಿಗೆ ದಕ್ಷಿಣೆಯನ್ನೂ ಭಕ್ತಜನರಿಗೆ ತಾಂಬೂಲ ಸಕ್ಕರೆಯನ್ನೂ ಹಂಚಿ ಮಹಾನಂದದ ವಿಷಯವಾಗಿ ವ್ಯಾಖ್ಯಾನಗಳು ಮಾಡಲ್ಪಟ್ಟು ಸದರಿ ವಾದ್ಯದೊಡನೆ ಪ್ರಮುಖಜನರು ಪಟ್ಟಣದ ಬೀದಿ ಬೀದಿಗಳಲ್ಲಿ ಆನಂದೋತ್ಸವವನ್ನು ಅತಿವಿಜೃಂಭಣೆಯಿಂದ ಜರುಗಿಸಿದರು

ಓರ್ವ ಪ್ರತ್ಯಕ್ಷದರ್ಶಿ.

ಗೋರಕ್ಷಣ ಪ್ರಬಂಧದ ಸ್ಪರ್ಧೆಗೆ ಬಹುಮಾನ.

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನು ಕಾನೂನಿನ ಮೂಲಕ ನಿಲ್ಲಿಸುವ ಆವಶ್ಯಕತೆಯನ್ನು ಕುರಿತು ಆರ್ಥಿಕ, ಧಾರ್ಮಿಕ ಮತ್ತು ನೈತಿಕ ದೃಷ್ಟಿಯಿಂದ ಉತ್ತಮವಾಗಿ ಬರೆಯಲ್ಪಡುವ ಪ್ರಬಂಧಕ್ಕೆ 25 ರೂಪಾಯಿಗಳನ್ನು ಪಾರಿತೋಷಕಪತ್ರದೊಂದಿಗೆ ಬಹುಮಾನವಾಗಿ ಕೊಡಲಾಗುತ್ತೆ.

1. ಪ್ರಬಂಧವು ಪೂಲ್ಸ್‌ಕೇಪ ಸೈಜಿನ ಕಾಗದದಲ್ಲಿ 25 ಪುಟಗಳಿಗೆ ಕಡಿಮೆ ಇರಕೂಡದು.

2. ಪ್ರಬಂಧವನ್ನು ಕನ್ನಡ ಅಥವಾ ಇಂಗ್ಲೀಷಿನಲ್ಲಿ ಬರೆಯಬಹುದು.

3. ಪ್ರಬಂಧವನ್ನು ಹಿಂದು, ಮುಸಲ್ಮಾನ ಕ್ರೈಸ್ತ ಮೊದಲಾದ ಯಾವ ಜಾತಿಯವರಾದರೂ ಬರೆಯಬಹುದಲ್ಲದೆ ಸ್ತ್ರೀಯರೂ ಸಹ ಬರೆಯಬಹುದು.

4. ಪ್ರಬಂಧಗಳಲ್ಲಿ ಉತ್ತಮವಾದುದನ್ನು ಗೊತ್ತುಮಾಡುವ ಅಧಿಕಾರವು ಸಂಘದವರಿಗೆ ಇದೆ.

5. ಬಹುಮಾನವನ್ನು ಪಡೆದ ಪ್ರಬಂಧವನ್ನು ಪ್ರಿಂಟುಮಾಡಿಸಿ ಪ್ರಕಟಿಸುವುದೇ ಮೊದಲಾದ ಅಧಿಕಾರವು ಸಂಘದವರಿಗೆ ಇದೆ.

6. ಪ್ರಬಂಧವನ್ನು 1928 ನೆ ಜನವರಿ 15 ನೆ ತಾರೀಖಿನ ಒಳಗಾಗಿಯೇ ನಮಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ವಿಷಯಗಳನ್ನು ಪತ್ರವ್ಯವಹಾರದ ಮೂಲಕ ತಿಳಿಯಬಹುದು

ಪ್ರಾಣಿದಯಾಜ್ಞಾನಪ್ರಸಾರಕ ಸಂಘ, ದಾವಣಗೆರೆ
ಕೆ. ಎ. ಶ್ರೀನಿವಾಸಶೆಟ್ಟರು
ಗಾ|| ಕಾರ್ಯದರ್ಶಿಗಳು

ಓಂ

ಮೋಕ್ಷದ ಸ್ವರೂಪ.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಎಳ್ಳಷ್ಟಾದರೂ ದುಃಖವನ್ನು ಅಪೇಕ್ಷಿಸದೆ ಸುಖವನ್ನೇ ಅಪೇಕ್ಷಿಸುತ್ತಾನೆ. ಅದರಲ್ಲೂ ಅವನಿಂದ ಅಪೇಕ್ಷಿಸಲ್ಪಡತಕ್ಕ ಸುಖವು ದುಃಖಮಿಶ್ರವಲ್ಲದ್ದಾಗಿಯೂ ಮತ್ತು ಶಾಶ್ವತವಾಗಿಯೂ ಇರುತ್ತದೆ. ಇಂಥಾ ಸುಖವು ಈ ಪ್ರಪಂಚದಲ್ಲಿ ಎಲ್ಲಿಯೂ ಸಿಗುವುದಿಲ್ಲವಾದ್ದರಿಂದ ದುಃಖಮಿಶ್ರವಾಗಿಯೂ, ಅಶಾಶ್ವತವಾಗಿಯೂ ಇರುವ ವಿಷಯಸುಖಗಳನ್ನೇ ನಾವು ಇಚ್ಛಿಸಿ ಅನುಭವಿಸುತ್ತಿದ್ದೇವೆ. ಆದ್ದರಿಂದ ಈ ದುಃಖಮಿಶ್ರವಿಲ್ಲದೆ ಶಾಶ್ವತವಾಗಿರತಕ್ಕ ಸುಖವು ಮೋಕ್ಷವನ್ನು ಹೊಂದುವುದರಿಂದ ಮಾತ್ರವೇ ಲಭ್ಯವಾಗುತ್ತದೆ. ಆದರೆ ಅನೇಕ ಮತೀಯರು ಈ ಮೋಕ್ಷದ ಸ್ವರೂಪವನ್ನು ಬೇರೆ ಬೇರೆ ವಿಧವಾಗಿ ಹೇಳುವದರಿಂದಲೂ, ಇನ್ನು ಕೆಲವರು ಮೋಕ್ಷವು ಹಿಂದೆ ಇದ್ದ ಮಹಾತ್ಮರುಗಳಿಗೆ ಸಾಧ್ಯವಾಗುತ್ತಿತ್ತೇ ಹೊರತು ಈ ಕಲಿಯುಗದಲ್ಲಿ ನಮ್ಮಗಳಿಗೆ ಸಾಧ್ಯವೇ ಇಲ್ಲವೆಂಬದಾಗಿ ಹೇಳುವದರಿಂದಲೂ ಅನೇಕರಿಗೆ ಮೋಕ್ಷದಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. ಆದರೆ ಮೋಕ್ಷದ ಸ್ವರೂಪವನ್ನೂ ಮತ್ತು ಅದನ್ನು ಹೊಂದುವದು ಎಲ್ಲರಿಗೂ ಸುಲಭಸಾಧ್ಯವೆಂಬ ವಿಷಯವನ್ನೂ ತಿಳಿದವರಿಗೆ ಅದರಲ್ಲಿ ಪ್ರವೃತ್ತಿಯುಂಟಾಗದೆ ಇರಲಾರದು. ಆದ್ದರಿಂದ ನಾವು ಮೊದಲು ಮೋಕ್ಷದ ಸ್ವರೂಪವನ್ನು ವಿಚಾರಮಾಡಿ, ಅನಂತರ ಮೋಕ್ಷವು ಸುಲಭಸಾಧ್ಯವೇ ಅಥವಾ ಕಷ್ಟಸಾಧ್ಯವೇ ಎಂಬ ವಿಷಯವನ್ನು ವಿಚಾರಮಾಡತಕ್ಕದ್ದು ಅತ್ಯವಶ್ಯಕವಾಗಿರುತ್ತದೆ.

ಮೋಕ್ಷ ಎಂಬ ಶಬ್ದಕ್ಕೆ ಬಿಡುಗಡೆ ಎಂಬದಾಗಿ ಅರ್ಥ. ಯಾವದರಿಂದ ಬಿಡುಗಡೆ ಅಂದರೆ ಸಂಸಾರದಿಂದ ಬಿಡುಗಡೆ. ಈಗ ಸಂಸಾರ ಎಂಬ ಶಬ್ದಕ್ಕೆ "ಸಂಸರತೀತಿ ಸಂಸಾರಃ" ಅಂದರೆ ಸುತ್ತುವದು ಎಂಬದಾಗಿ ಅರ್ಥವಾಗುತ್ತದೆ. ಯಾವದರಲ್ಲಿ ಸುತ್ತುವದು? ಅಂದರೆ ದುಃಖವೆಂಬ ಚಕ್ರದಲ್ಲಿ ಸುತ್ತುವದು. ಆದಕಾರಣ ದುಃಖವೆಂಬ ಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುತ್ತಿರುವದರಿಂದ ಬಿಡುಗಡೆಯನ್ನು ಹೊಂದಿ ಶಾಶ್ವತವಾದ ಸುಖ ಅಂದರೆ ಆನಂದವನ್ನು ಪಡೆಯುವುದಕ್ಕೆ ಮೋಕ್ಷವೆಂದು ಸಿದ್ಧವಾಯಿತು. ಈಗ ನಾವು ದುಃಖವೆಂಬ ಚಕ್ರವು ಯಾವದು? ಅದರಲ್ಲಿ ನಾವು ಹೇಗೆ ಸಿಕ್ಕಿಕೊಂಡು ಸುತ್ತುತ್ತಿದ್ದೇವೆ? ಎಂಬುದನ್ನು ವಿಚಾರಮಾಡತಕ್ಕದ್ದಾಗಿದೆ. ಈಗ ಪ್ರತಿಯೊಬ್ಬ ಮನುಷ್ಯನು ತಾನು ಹುಟ್ಟುವಕಾಲದಲ್ಲಿ ಕಂಬಚ್ಚಿನಲ್ಲಿ ತಂತಿಯು ಎಳೆಯಲ್ಪಡುವಂತೆ ತಾಯಿಯ ಗರ್ಭದಿಂದ ಈಚೆಗೆ ಬರುವಾಗ ಅಸಾಧಾರಣವಾದ ದುಃಖವನ್ನು ಹೊಂದುತ್ತಾನೆ. ಇದಕ್ಕೆ ಉದಾಹರಣೆ ಏನಂದರೆ ಯಾರಾದರೂ ತಪ್ಪನ್ನು ಮಾಡಿದ ತಮ್ಮ ಮಕ್ಕಳನ್ನು ಬೆದರಿಸುವಾಗ "ನಿನಗೆ ಹುಟ್ಟಿದದಿವಸವನ್ನು ಕಾಣಿಸುತ್ತೇನೆ" ಎಂಬದಾಗಿ ಹೇಳುವದು ಸಾಮಾನ್ಯವಾಗಿ ಎಲ್ಲರಲ್ಲಿಯೂ ವಾಡಿಕೆಯಾಗಿದೆ. ಇದರಿಂದ ಹುಟ್ಟುವ ಕಾಲದಲ್ಲಿ ನೀನು ಅಸಾಧಾರಣವಾದ ದುಃಖವನ್ನು ಪಟ್ಟಿದ್ದೀಯೆ. ಅದಕ್ಕೆ ಸಮಾನವಾದ ದುಃಖವನ್ನು ಉಂಟುಮಾಡುವ ಶಿಕ್ಷೆಯನ್ನು ನಿನಗೆ ಮಾಡುತ್ತೇನೆ. ಅಂದರೆ ನಿನಗೆ ಅಸಾಧಾರಣವಾದ ಶಿಕ್ಷೆಯನ್ನು ಮಾಡುತ್ತೇನೆ. ಎಂಬದಾಗಿ ಹೇಳುವವನ ಅಭಿಪ್ರಾಯವಿರುವದೆಂದು ಸ್ಪಷ್ಟವಾಗುತ್ತದೆ. ಮನುಷ್ಯನು ತಾನು ಹುಟ್ಟಿದ ಮೇಲೆ "ಜಾತಸ್ಯಮರಣಂ ಧ್ರುವಂ" ಎಂಬಂತೆ ಮರಣವಾಗುವದು ಖಂಡಿತವಾದ್ದರಿಂದ ಇವನಿಗೆ ಮರಣವಾಗುವ ಕಾಲದಲ್ಲಿಯೂ ಅಸಾಧಾರಣವಾದ ದುಃಖವು ಉಂಟಾಗುತ್ತದೆ. ಏತಕ್ಕೆಂದರೆ ರೋಗಿಗಳಿರತಕ್ಕವರಲ್ಲಿ ಯಾರಿಗಾದರೂ ವಿಶೇಷವಾದ ವ್ಯಾಧಿಯಾದರೆ ಅವರು ಇತರರಿಗೆ "ನನಗೆ ಮರಣಸಂಕಟವಾಗಿದೆ" ಎಂಬದಾಗಿ ಹೇಳುವದು ವಾಡಿಕೆಯಾಗಿದೆ. ಇದರಿಂದ ಮರಣಕಾಲದಲ್ಲಿ ಉಂಟಾಗತಕ್ಕ ಸಂಕಟವು ಅಂದರೆ ದುಃಖವು ಅಸಾಧಾರಣವಾದದ್ದೆಂದು ಅಂದರೆ ಮರಣಕಾಲದಲ್ಲಿ ಉಂಟಾಗತಕ್ಕ ದುಃಖಕ್ಕಿಂತಲೂ ಹೆಚ್ಚಾದ ದುಃಖವಿಲ್ಲವೆಂದು ಸ್ಪಷ್ಟವಾಗುತ್ತದೆ.

ಈಗ ಪ್ರತಿಯೊಬ್ಬ ಮನುಷ್ಯನು ತನ್ನ ಜನನ ಮತ್ತು ಮರಣಕಾಲಗಳಲ್ಲಿ ಅತ್ಯಂತ ದುಃಖವನ್ನು ಹೊಂದುತ್ತಾನೆಂಬ ವಿಷಯದಲ್ಲಿ ಯಾರಿಗೂ ಸಂಶಯವಿರುವುದಿಲ್ಲ. ಮನುಷ್ಯನಿಗೆ ಈ ಎರಡು ವಿಧವಾದ ದುಃಖಗಳಲ್ಲದೆ "ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ" ಎಂಬ ಮೂರುವಿಧವಾದ ದುಃಖಗಳು ಜನನವಾದಂದಿನಿಂದ ಮರಣವಾಗುವ ಪರ್ಯಂತವಾಗಿರುತ್ತವೆ. ಏತಕ್ಕೆಂದರೆ ಪ್ರತಿಯೊಬ್ಬ ಮನುಷ್ಯನಿಗೂ ಒಳಗಡೆ ಮನಸ್ಸಿನಲ್ಲಿ ಯಾವಾಗಲೂ ಏನಾದರೂ ಒಂದು ವಿಷಯದಲ್ಲಿ ಚಿಂತೆ ಅಂದರೆ ದುಃಖವು ಮತ್ತು ಹೊರಗಡೆ ದೇಹದಲ್ಲಿ ಯಾವಾಗ್ಯೂ ಏನಾದರೂ ಒಂದು ವಿಧವಾದ ರೋಗವು ಇದ್ದೇ ಇರುತ್ತದೆ. ಈ ವಿಧವಾಗಿ ತನ್ನ ಒಳಗೂ ಮತ್ತು ಹೊರಗೂ ಇರತಕ್ಕ ದುಃಖಕ್ಕೆ "ಆಧ್ಯಾತ್ಮಿಕ ದುಃಖ"ವೆಂಬದಾಗಿ ಹೆಸರು. ಅಲ್ಲದೆ ತನಗಿಂತಲೂ ಅನ್ಯವಾಗಿರತಕ್ಕ ಪ್ರಾಣಿಗಳಿಂದ ಅಂದರೆ ಸರ್ಪಗಳು, ಚೇಳುಗಳು, ಹುಲಿ ಮುಂತಾದ ದುಷ್ಟಮೃಗಗಳು, ಕಳ್ಳರು, ಶತ್ರುಗಳು, ದುಷ್ಟರು ಇವರೇ ಮೊದಲಾದವರಿಂದ ತನಗೆ ಆಗಾಗ್ಗೆ ದುಃಖವು ಉಂಟಾಗುತ್ತದೆ. ಇದಕ್ಕೆ "ಆಧಿಭೌತಿಕ ದುಃಖ"ವೆಂದು ಹೆಸರು. ತನ್ನ ಪ್ರಾರಬ್ಧಕರ್ಮಾನುಸಾರ ಈಶ್ವರಾಜ್ಞೆಯಿಂದ ತನಗೆ ಸಿಡಿಲು, ಪ್ರವಾಹ, ಬೆಂಕಿ, ಬಿರುಗಾಳಿ ಮೊದಲಾದವುಗಳಿಂದ ಉಂಟಾಗತಕ್ಕ ದುಃಖಕ್ಕೆ "ಆಧಿದೈವಿಕ ದುಃಖ"ವೆಂದು ಹೆಸರು. ಆದ್ದರಿಂದ ಹುಟ್ಟುವಾಗ ದುಃಖ, ಮರಣವಾಗುವಾಗ ದುಃಖ, ಹುಟ್ಟಿದಂದಿನಿಂದ ಮರಣವಾಗುವವರೆಗೆ ಮೇಲ್ಕಂಡಂತೆ ಮೂರುವಿಧವಾದ ದುಃಖಗಳಲ್ಲಿ ಒಂದು ಅಥವಾ ಇನ್ನೊಂದು ದುಃಖವನ್ನು ಪ್ರತಿಯೊಬ್ಬ ಮನುಷ್ಯನೂ ಅನುಭವಿಸುತ್ತಿರುವುದರಿಂದ ಈ ಜನನ, ಮರಣ, ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಎಂಬ ಐದು ವಿಧವಾದ ದುಃಖಗಳುಳ್ಳ ಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುತ್ತಿದ್ದಾನೆ ಎಂಬುದು ಸ್ಪಷ್ಟವಾಯಿತು.

ಮೇಲ್ಕಂಡ ಅನೇಕ ವಿಧವಾದ ದುಃಖಗಳಲ್ಲಿ ಯಾವದುಃಖದ ಸಂಬಂಧವೂ ಇಲ್ಲದೆ ಶಾಶ್ವತವಾಗಿರತಕ್ಕ ಸುಖವು ಪರಶಿವನೊಬ್ಬನಲ್ಲಿಯೇ ಇರುತ್ತದೆ. ಆದ್ದರಿಂದ ಯಾರು ಪರಶಿವನ ಪದವಿಯನ್ನು ಪಡೆಯುತ್ತಾರೋ ಅವರು ಸಂಸಾರಚಕ್ರದಿಂದ ಬಿಡುಗಡೆ ಹೊಂದಿ ಪರಮಾನಂದವನ್ನು ಹೊಂದುತ್ತಾರೆಂಬುದು ಸಿದ್ಧವಾಯಿತು. ಅಂದರೆ ಪರಶಿವನ ಪದವಿಯನ್ನು ಪಡೆಯುವದಕ್ಕೆ ಮೋಕ್ಷವೆಂದು ಹೆಸರು. ಈಗ ಇಂಥ ಪರಶಿವನ ಪದವಿಯನ್ನು ಪಡೆಯುವದು ಸಾಧ್ಯವೋ ಅಥವಾ ಅಸಾಧ್ಯವೋ ಎಂಬುದನ್ನು ವಿಚಾರಮಾಡತಕ್ಕದ್ದಾಗಿದೆ. ಈ ಲೋಕದಲ್ಲಿ ಯಾರು ತಮ್ಮ ತಂದೆಯಲ್ಲಿ ನಿಜವಾದ ಭಕ್ತಿ ಅಂದರೆ ಪ್ರೀತಿಯನ್ನಿಟ್ಟು ಅವನ ಆಜ್ಞಾನುಸಾರ ನಡೆಯುವರೋ ಅಂಥವರಿಗೆ ತಮ್ಮ ತಂದೆಯ ಆಸ್ತಿಯು ಸಿಕ್ಕುವದು ಎಷ್ಟು ಸುಲಭವೋ ಅದರಂತೆ ಈ ಲೋಕದಲ್ಲಿರತಕ್ಕ ಸರ್ವಪ್ರಾಣಿಗಳಿಗೂ ತಂದೆಯಾಗಿರತಕ್ಕ ಪರಶಿವನಲ್ಲಿ ಯಾರು ನಿಜವಾದ ಭಕ್ತಿಯನ್ನಿಟ್ಟು ಅವನು ಶಾಸ್ತ್ರರೂಪದಿಂದ ಮಾಡಿರತಕ್ಕ ಆಜ್ಞೆಗಳಿಗೆ ಅನುಸಾರವಾಗಿ ನಡೆಯುವರೋ ಅವರಿಗೆ ಪರಶಿವನ ಪದವಿಯೂ ಅಷ್ಟು ಸುಲಭವಾಗಿ ಸಿಗುತ್ತದೆ. ಈಗ ನಮ್ಮಗಳಿಗೆ ನಮ್ಮ ತಂದೆತಾಯಿಗಳಲ್ಲಿ ಪ್ರೀತಿಯು ಹುಟ್ಟುವದಕ್ಕೆ ಕಾರಣವೇನೆಂದರೆ ಅವರುಗಳು ನಾವು ಹುಟ್ಟಿದಂದಿನಿಂದ ನಮಗೆ ಬುದ್ಧಿ ಬರುವವರೆಗೆ ನಮಗೋಸ್ಕರ ಅನೇಕವಿಧವಾದ ತೊಂದರೆಗಳನ್ನು ತೆಗೆದುಕೊಂಡು ನಮ್ಮನ್ನು ಕಾಪಾಡಿರುವದರಿಂದ ಅವರಲ್ಲಿ ನಮಗಿರತಕ್ಕ ಕೃತಜ್ಞತೆಯೇ ಭಕ್ತಿರೂಪವಾಗಿ ಪರಿಣಮಿಸುತ್ತದೆ. ಪರಶಿವನು ನಮ್ಮ ತಂದೆತಾಯಿಗಳನ್ನೂ ಮತ್ತು ಜಗತ್ತನ್ನೂ ಕಾಪಾಡತಕ್ಕವನು. ನಮ್ಮ ತಂದೆತಾಯಿಗಳು ನಮ್ಮನ್ನು ಕಾಪಾಡುವುದಕ್ಕಾಗದೆ ಇರತಕ್ಕ ಕಾಲಗಳಲ್ಲಿ ನಮ್ಮನ್ನು ಕಾಪಾಡಿದವನು ಹಿಂದೆ ಅನೇಕ ಜನ್ಮಗಳಲ್ಲಿ ನಮ್ಮನ್ನು ಕಾಪಾಡಿದವನು, ಮುಂದೆಯೂ ಕಾಪಾಡತಕ್ಕವನು, ನಮಗಿಂತಲೂ ನಿಕೃಷ್ಟವಾಗಿರತಕ್ಕವರ ದೃಷ್ಟಿಯಿಂದ ನಮ್ಮನ್ನು ಉತ್ತಮಸ್ಥಿತಿಯಲ್ಲಿಟ್ಟಿರತಕ್ಕವನು, ಇದನ್ನೆಲ್ಲವನ್ನೂ ನಾವು ಯೋಚಿಸಿದರೆ ಪರಶಿವನಲ್ಲಿ ನಮಗೆ ಅಸಾಧಾರಣವಾದ ಕೃತಜ್ಞತೆಯು ಉಂಟಾಗಿ ಅದೇ ಕೃತಜ್ಞತೆಯು ಅಂದರೆ ಪುನಃ ಪುನಃ ಪರಶಿವನಿಂದ ನಮಗಾಗಿರತಕ್ಕ ಉಪಕಾರಗಳನ್ನು ಸ್ಮರಿಸುವಿಕೆಯು ಅವನಲ್ಲಿ ನಿಜವಾದ ಭಕ್ತಿರೂಪವಾಗಿ ಪರಿಣಮಿಸುತ್ತದೆ. ಭಕ್ತಿಯೆಂದರೆ ಪ್ರೀತಿ ವಿಶೇಷ; ಪತಿಪುತ್ರಾದಿಗಳಲ್ಲಿ ಇಡತಕ್ಕ ಪ್ರೀತಿಗೆ ಅನುರಾಗವೆಂದು ಹೆಸರು; ತನ್ನ ಮಿತ್ರರಲ್ಲಿಡತಕ್ಕ ಪ್ರೀತಿಗೆ ಮೈತ್ರಿಯೆಂದು ಹೆಸರು. ತನ್ನ ಸೇವಕರಲ್ಲಿಡತಕ್ಕ ಪ್ರೀತಿಗೆ ಕೃಪಾ ಎಂದು ಹೆಸರು. ಗುರುಹಿರಿಯರು ಮತ್ತು ದೈವದಲ್ಲಿ ಮಹತ್ವಬುದ್ಧಿಯೊಡನೆ ಇಡತಕ್ಕ ಪ್ರೀತಿಗೆ ಭಕ್ತಿಯೆಂದು ಹೆಸರು.

ಈಶ್ವರನ ಮುಖದಿಂದ ಹೇಳಲ್ಪಟ್ಟಿರತಕ್ಕ ಶಾಸ್ತ್ರವು ಸಮುದ್ರಪ್ರಾಯವಾಗಿರುವದರಿಂದ ಅವನ ಆಜ್ಞೆಗಳನ್ನು ತಿಳಿದುಕೊಳ್ಳುವದಾಗಲಿ ಅಥವಾ ಅದರಂತೆ ನಡೆಯುವದಾಗಲಿ ಸಾಧ್ಯವೇ ಎಂಬದಾಗಿ ಯೋಚಿಸಬೇಕಾಗಿಲ್ಲ. ಏತಕ್ಕೆಂದರೆ ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ | ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ || ಎಂಬಂತೆ ಈಶ್ವರನು ಶಾಸ್ತ್ರರೂಪದಿಂದ ಪರರಿಗೆ ಉಪಕಾರವನ್ನು ಮಾಡತಕ್ಕದ್ದು ಪುಣ್ಯವೆಂತಲೂ ಮತ್ತು ಹಿಂಸೆಯನ್ನು ಮಾಡತಕ್ಕದ್ದು ಪಾಪವೆಂತಲೂ ಹೇಳಿದ್ದಾನೆಯೇ ಹೊರತು ಇದಕ್ಕಿಂತಲೂ ಹೆಚ್ಚಾಗಿ ಇನ್ನೇನೂ ಹೇಳಿಲ್ಲ. ಆದ್ದರಿಂದ ಯಾವನು ತನ್ನ ಕೈಲಾದಷ್ಟಿಗೂ ಪರರಿಗೆ ಉಪಕಾರವನ್ನು ಮಾಡುತ್ತಾನೋ ಮತ್ತು ಯಾವಾಗಲೂ ಯಾರಿಗೂ ಯಾವ ವಿಧವಾಗಿಯೂ ತನ್ನಿಂದ ತೊಂದರೆಯಾಗದಂತೆ ನೋಡಿಕೊಳ್ಳುತ್ತಾನೋ ಅವನೇ ಪರಶಿವನ ಆಜ್ಞೆಯಂತೆ ನಡೆಯುವವನಾಗುತ್ತಾನೆ. ಆದಕಾರಣ ಮೇಲ್ಕಂಡಂತೆ ಯಾರು ಪರಶಿವನಿಂದ ತಾವು ಹೊಂದಿರತಕ್ಕ ಉಪಕಾರಗಳನ್ನು ಸದಾ ಸ್ಮರಿಸುತ್ತ ತಮ್ಮ ಶಕ್ತ್ಯಾನುಸಾರವಾಗಿ ಇತರರಿಗೆ ಸಹಾಯವನ್ನು ಮಾಡುತ್ತ ಮತ್ತು ತಮ್ಮಿಂದ ಇತರರಿಗೆ ತೊಂದರೆಯುಂಟಾಗದಂತೆ ನೋಡಿಕೊಳ್ಳುತ್ತ ಇರುವರೋ ಅವರೇ ಪರಶಿವನಲ್ಲಿ ನಿಜವಾದ ಭಕ್ತಿಯುಳ್ಳವರೂ ಮತ್ತು ಅವನ ಆಜ್ಞಾನುಸಾರ ನಡೆದವರೂ ಆಗಿ ಪರಶಿವನ ಕೃಪೆಯಿಂದ ಅವನ ಪದವಿಯನ್ನು ಬಹು ಸುಲಭವಾಗಿ ಹೊಂದುತ್ತಾರೆ. ಚಕ್ರವರ್ತಿಯು ತನ್ನ ಪದವಿಯನ್ನು ಇತರರಾರಿಗಾದರೂ ಕೊಟ್ಟ ಪಕ್ಷದಲ್ಲಿ ತನಗೆ ಆ ಪದವಿಯು ಇಲ್ಲದೇ ಇರುವದಲ್ಲದೆ ಇನ್ನಾರಿಗೂ ಆ ಪದವಿಯನ್ನು ಕೊಡಲು ಸಾಧ್ಯವಿಲ್ಲ. ಇದರಂತೆ ಪರಶಿವನ ಪದವಿಯು ಇದೆ ಎಂಬದಾಗಿ ಭಾವಿಸಕೂಡದು. ಏತಕ್ಕೆಂದರೆ ಸಮುದ್ರವು ತಾನು ಇದ್ದಹಾಗೆ ಇದ್ದುಕೊಂಡು ತನ್ನಲ್ಲಿ ಸೇರತಕ್ಕ ಪ್ರತಿಯೊಂದು ನದಿಯನ್ನೂ ತನ್ನಂತೆಯೇ ಹ್ಯಾಗೆ ಮಾಡಿಕೊಳ್ಳುತ್ತದೋ ಅದರಂತೆ ಪರಶಿವನು ತಾನು ಇರುವ ಹಾಗೆ ಇದ್ದು ತನ್ನಲ್ಲಿ ತನ್ನ ಭಕ್ತರನ್ನು ಸೇರಿಸಿಕೊಂಡು ತನ್ನಂತೆಯೇ ಮಾಡಿಕೊಳ್ಳುತ್ತಾನೆ. ಆದ್ದರಿಂದ ಸರ್ವರೂ ಅಶಾಶ್ವತವೂ ಮತ್ತು ದುಃಖರೂಪವೂ ಆದ ಹೆಂಡತಿ, ಮಕ್ಕಳು ಮತ್ತು ಐಶ್ವರ್ಯದಲ್ಲಿ ಹೆಚ್ಚಾದ ಪ್ರೀತಿಯನ್ನಿಡದೆ ದುಃಖರಹಿತನೂ ಆನಂದಸ್ವರೂಪನೂ ಮತ್ತು ಶಾಶ್ವತನೂ ಆದ ಪರಶಿವನಲ್ಲಿ ನಿಜವಾದ ಪ್ರೀತಿ ಅಂದರೆ ಭಕ್ತಿಯನ್ನಿಟ್ಟು ತಾವು ಇರುವವರೆಗೆ ಪರರಿಗೆ ಹಿತವನ್ನೇ ಮಾಡುತ್ತಾ ಕೊನೆಗೆ ಪರಶಿವನ ಸ್ವರೂಪವಾದ ಮೋಕ್ಷವನ್ನು ಪಡೆಯಲೆಂದು ಇಚ್ಛಿಸುತ್ತೇನೆ.

ಎಂ. ಎಸ್. ನಾಗಣ್ಣ, ಛೀಫ್ ಆರ್ಗನೈಸರ್
ಆಲ್-ಇಂಡಿಯಾ ಮ್ಯೂಚ್ಯುಯಲ್
ಏಡ್ ಅಂಡ್ ಪ್ರೂಫ್ ಹೌಸಿಸ್
ಅಸೋಸಿಯೇಷನ್ ಲಿಮಿಟೆಡ್ ಮೈಸೂರು.

ಭಜನಾಸಂಘ ತುಮರಿಕೊಪ್ಪ.

ಇಲ್ಲಿಯ ಸ್ಕೂಲ್ ಹೆಡ್ಮಾಸ್ಟರಾದ ಸಿ. ಎಚ್. ರುದ್ರಗೌಡರು ತಮ್ಮ ಸ್ಕೂಲಿನ ವಿದ್ಯಾರ್ಥಿಗಳಿಗೆ ಪಂಚಾಚಾರ್ಯ ಮಂಗಲಸ್ತೋತ್ರಾವಳಿಗಳನ್ನು ಅಭ್ಯಾಸಮಾಡಿಸಿ ತಾರೀಖು 13-11-27 ನೇ ಭಾನುವಾರ ಶ್ರೀ ರಂಭಾಪುರಿ ಜಗದ್ಗುರುಗಳನ್ನು ಅತಿ ವೈಭವದಿಂದಲೂ ಆನಂದದಿಂದಲೂ ಭಜನೋತ್ಸವವನ್ನು ಮಾಡುತ್ತ ಸನ್ನಿಧಿಯವರನ್ನು ಜಡೆಪೇಟೆಗೆ ಬಿಜಯಂಗೈಸಿದರು.

ಸೆಕ್ರೆಟರಿ.

ಪಂಚಾಚಾರ್ಯಪ್ರಭಾ

೧೯೨೭ನೇ ನವಂಬರ್ ತಾ|| ೨೧ನೇ ಸೋಮವಾರ

ಗುರು

ಕಳೆದ ವಾರದ ಸಂಚಿಕೆಯಲ್ಲಿ ಗುರುವಿನ ಮಹತ್ವವನ್ನು ಪ್ರತಿಪಾದಿಸುವಾಗ್ಗೆ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಲೋಕಪ್ರಸಿದ್ಧರಾದ ಮಹರ್ಷಿಗಳಿಗೂ ಚಕ್ರವರ್ತಿಗಳಿಗೂ ಶಿವ ತತ್ವೋಪದೇಶವಂ ಮಾಡಿ ಅವರನ್ನು ಕೃತಕೃತ್ಯರನ್ನಾಗಿ ಮಾಡಿದರೆಂದು ತಿಳುಹಿಸಿ ಜಗದ್ವಿಖ್ಯಾತನಾದ ಅಗಸ್ತ್ಯ ಮಹರ್ಷಿಗೆ ವೀರಶೈವ ಸಿದ್ಧಾಂತವನ್ನು ಬೋಧ ಮಾಡಿದ ವಿಷಯವನ್ನು ಸಂಕ್ಷೇಪವಾಗಿ ತಿಳುಹಿಸಿರುವದು ವಾಚಕರ ಸ್ಮೃತಿಪಥದಲ್ಲಿರಬಹುದು ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಶಿವ ಸಿದ್ಧಾಂತವನ್ನು ಬೋಧಿಸಿ ಅವನನ್ನು ವೀರಶೈವ ಸಿದ್ಧಾಂತದಲ್ಲಿ ನಿಷ್ಣಾತನನ್ನಾಗಿ ಮಾಡಿದರೆಂಬ ವಿಷಯವು ಸಿದ್ಧಾಂತ ಶಿಖಾಮಣಿಯಿಂದ ವೇದ್ಯವಾಗುತ್ತಿದೆ. ಅಗಸ್ತ್ಯ ಮಹರ್ಷಿಯು ಈ ಆಚಾರ್ಯರಿಂದ ಸಿದ್ಧಾಂತ ಜ್ಞಾನವನ್ನು ಸಂಪಾದಿಸಿಕೊಂಡ ಮೇಲೆ ಬ್ರಹ್ಮ ಸೂತ್ರಗಳಿಗೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪರವಾಗಿ ವೃತ್ತಿಯನ್ನು ಬರೆದಿದ್ದಾನೆನ್ನುವುದು ಸುಪ್ರಸಿದ್ಧವೇ ಅದೆ ಈ ವಿಷಯವನ್ನು ಶ್ರೀ ಕರ ಭಾಷ್ಯವನ್ನು ಬರೆದ ಶ್ರೀಪತಿ ಪಂಡಿತರು ತಮ್ಮ ಭಾಷ್ಯದ ಆದಿಯಲ್ಲಿ 'ಅಗಸ್ತ್ಯಮುನಿಚಂದ್ರೇಣ ಕೃತ[illegible] ಕೀಲಂ[illegible] ಸೂತ್ರವೃತ್ತಿಂ ಸಮಾಲೋಕ್ಯ ಕೃತಂಭಾಷ್ಯಂ [illegible] ಕರಂ || ಈ ಪ್ರಕಾರವಾಗಿ ಅಗಸ್ತ್ಯ ಮಹರ್ಷಿಯಿಂದ ಬರೆಯಲ್ಪಟ್ಟ ಬ್ರಹ್ಮ ಸೂತ್ರ ವೃತ್ತಿಯನ್ನೇ ಆಧಾರವಾಗಿಟ್ಟುಕೊಂಡು ನಾನು ಈ ಬ್ರಹ್ಮ ಸೂತ್ರ ಭಾಷ್ಯವನ್ನು ಬರೆದಿರುತ್ತೇನೆಂದು ಉಲ್ಲೇಖಿಸಿದ್ದಾನೆ, ಆಗಸ್ತ್ಯನಿಂದ ಬರೆಯಲ್ಪಟ್ಟ ಈ ಗ್ರಂಥವು ಸದ್ಯಃ ಕುಂಭಕೋಣದಲ್ಲಿ ಮುದ್ರಿತವಾಗಿದೆ ಮುನಿ ಚಕ್ರವರ್ತಿ ಮುನಿಚಂದ್ರ ಇತ್ಯಾದಿ ಮಹಾ ಬಿರುದುಗಳನ್ನು ಪಡೆದು ಲೋಕ ಪ್ರಸಿದ್ಧನಾದ ಅಗಸ್ತ್ಯ ಮಹರ್ಷಿಯು ಈ ಸಿದ್ಧಾಂತವನ್ನವಲಂಬಿಸಿ ಈ ಸಿದ್ಧಾಂತ ವಿಷಯದಲ್ಲಿ ಗ್ರಂಥಗಳನ್ನು ರಚಿಸಬೇಕಾದರೆ ಇದರ ಮಹತ್ವವು ಎಷ್ಟಿರಬಹುದೆನ್ನುವದನ್ನು ಬೇರೆ ಹೇಳಬೇಕಾದ್ದಿಲ್ಲ. ಶ್ರೀ ರೇಣುಕರು ಈ ಮುನಿಪುಂಗವನನ್ನು ತಮ್ಮ ಆಪ್ತಶಿಷ್ಯನನ್ನಾಗಿ ಮಾಡಿಕೊಂಡು ಮುಂದೆ ಲೋಕ ಚಕ್ರವರ್ತಿಯೆನಿಸಿದ ವಿಭೀಷಣನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುವದಕ್ಕೋಸ್ಕರ ಲಂಕೆಗೆ ದಯಮಾಡಿಸಿದರು ಪೂರ್ವದಲ್ಲಿ ರಾಮರಾವಣರಿಗೆ ಯುದ್ಧವು ನಡೆದು ರಾಮನಿಂದ ರಾವಣನು ಮರಣವನ್ನು ಹೊಂದಿದ ವಿಷಯವು ಸರ್ವರಿಗೂ ವೇದ್ಯವೇ ಇದೆಯಷ್ಟೆ! ರಾವಣನು ಮಹಾ ಶಿವಭಕ್ತನು ಇವನಂಥ ಶಿವಭಕ್ತರು ಈ ವರೆಗೆ ಭೂಮಂಡಲದಲ್ಲಿ ಯಾರೂ ಜನಿಸಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇವನು [illegible] ಸಂಪೂರ್ಣನಾದಾಗ್ಯೂ ಮಹಾವಿದ್ವಾಂಸನಾಗಿದ್ದ. ಇವನು ಶಿವಭಕ್ತಿ ಪರವಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾನಲ್ಲದೆ ವೈದ್ಯ ಶಾಸ್ತ್ರದಲ್ಲಿಯೂ ಕೂಡ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ, ರಾವಣನು ತಾನು ಶಿವಭಕ್ತಾಗ್ರಗಣ್ಯನೂ, ಮಹಾವಿದ್ವಾಂಸನೂ ಆದಾಗ್ಯೂ [illegible] ದುರ್ವಿಲಾಸಕ್ಕೊಳಗಾಗಿ ಸೀತಾಪಹರಣ ರೂಪವಾದ ದುಷ್ಕಾರ್ಯವನ್ನು ಮಾಡಿದ್ದರಿಂದ ಹೀನವಾದ ಅಪಕೀರ್ತಿಯನ್ನು ಹೊಂದಿದವನು ಇವನು ಪರಮಶಿವಭಕ್ತನಾದುದರಿಂದ ತನ್ನ ಜೀವಿತಕಾಲದಲ್ಲಿ ಒಂಭತ್ತುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ಶಿವನ ಕೃಪೆಗೆ ಪಾತ್ರನಾಗಬೇಕೆಂದು ಪೂರ್ವದಲ್ಲಿ ಸಂಕಲ್ಪಮಾಡಿದ್ದನು ದುರ್ವರ್ತನೆಯಿಂದ ಮಧ್ಯದಲ್ಲಿಯೇ ಅಕಾಲಮೃತ್ಯುವಿನ ಬಾಯಿಗೆ ತುತ್ತಾಗಬೇಕಾಗಿ ಇವನ ಸಂಕಲ್ಪವು ಪೂರ್ತಿಯಾಗಲಿಲ್ಲ ಇವನು ಮರಣವಾಗುವವರೆಗೆ ಆರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ್ದನು ಇವನ ಸಂಕಲ್ಪಕ್ಕನುಸಾರವಾಗಿ ಮೂರುಕೋಟಿ ಶಿವಲಿಂಗಗಳು ಸ್ಥಾಪಿಸಲ್ಪಡದೆ ಹಾಗೆಯೇ ಉಳಿದವು ತಾನು ಪ್ರಾಣವನ್ನು ಬಿಡುವ ಸಮಯದಲ್ಲಿ ಈ ವಿಷಯವನ್ನಾಲೋಚಿಸಿ ತನ್ನ ತಮ್ಮನಾದ ವಿಭೀಷಣನನ್ನು ಕರೆದು ಎಲೋ, ತಮ್ಮನಾದ ವಿಭೀಷಣನೇ ಈಗ ನಾನು ಪರಲೋಕಗಮನವನ್ನು ಮಾಡುತ್ತೇನೆ [illegible] ನನ್ನ ವಂಶದಲ್ಲಿ ನೀನೊಬ್ಬನೇ ಉಳಿದಿರುವೆ ನನ್ನ ಮನಸ್ಸಿನ ಸಂಕಲ್ಪವನ್ನು ನೆರವೇರಿಸುವದು ನಿನ್ನ ಪ್ರಧಾನ ಕರ್ತವ್ಯವಾಗಿದೆ ಆದುದರಿಂದ ನನ್ನ ಸಂಕಲ್ಪವನ್ನು ನೆರವೇರಿಸಬೇಕೆಂದು ಹೇಳಿಕೊಳ್ಳಲು ಆಗ ವಿಭೀಷಣನು ಆನಂದದಿಂದ ಮೂರುಕೋಟಿ ಶಿವಲಿಂಗಸ್ಥಾಪನಾರೂಪವಾದ ಅವನ ಸಂಕಲ್ಪವನ್ನು ನಡಸುವೆನು [illegible] ವಚನವನ್ನಿತ್ತನು. ವಿಭೀಷಣನಿಂದ ವಚನವನ್ನು ಪಡೆದುಕೊಂಡು ರಾವಣನು ಮೃತಿಯನ್ನು ಹೊಂದಿದನು. ಆ ಮೇಲೆ ವಿಭೀಷಣನು ತಮ್ಮ ಅಣ್ಣನ ಹೆಸರಿನಿಂದ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸುವದಕ್ಕೋಸ್ಕರ ಶಿಲ್ಪಶಾಸ್ತ್ರಜ್ಞರಿಂದ ಶಾಸ್ತ್ರಾನುಸಾರವಾಗಿ ಮೂರು ಕೋಟಿ ಶಿವಲಿಂಗಗಳನ್ನು ನಿರ್ಮಿಸಿದನು. ಶಾಸ್ತ್ರಪ್ರಕಾರವಾಗಿ ಒಂದೊಂದು ಶಿವಲಿಂಗವನ್ನು ಸ್ಥಾಪನ ಮಾಡುವದಕ್ಕೋಸ್ಕರ ಒಬ್ಬೊಬ್ಬ ಗುರು [illegible] ಈ ಕಾಲದಲ್ಲಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವದಕ್ಕೋಸ್ಕರ ಮೂರು ಕೋಟಿ [illegible] ಬೇಕಾಗುವದೆಂಬುವದನ್ನು ಆಲೋಚಿಸಿ [illegible] ಗಳನ್ನು ಶೋಧಿಸಲು [illegible] ಎಲ್ಲಾ [illegible] ಏಕಕಾಲದಲ್ಲಿ ದೊರೆಯದ [illegible] ಸಂಕಲ್ಪ [illegible] ಕಾಲವು [illegible] ಹೋಯಿತು ವಿಭೀಷಣನು [illegible] ಕೊಟ್ಟ ವಚನದ ಪ್ರಕಾರವಾಗಿ [illegible] ಕಾರ್ಯವು [illegible] ನೆರವೇರಲಿಲ್ಲವು. [illegible] ಚಿಂತೆ [illegible] ಈಶ್ವರನನ್ನೇ ಹಗಲೂ ಇರುಳೂ [illegible] ಭಕ್ತಿಭಾವ [illegible] ಕೆಲವು ದಿನಗಳಲ್ಲಿಯೇ [illegible] ಪುತ್ರನಾದ ರೇಣುಕಾಚಾರ್ಯರಿಂದ ನಿನ್ನ ಮನೋಭೀಷ್ಟವು ಪೂರ್ತಿಯಾಗುವದೆಂದು ಸ್ವಪ್ನದಲ್ಲಿ [illegible] ವಿಭೀಷಣನು ಆನಂದದಿಂದ ಶ್ರೀ ರೇಣುಕಾಚಾರ್ಯರ ಆಗಮನವನ್ನೇ ನಿರೀಕ್ಷಿಸುತ್ತಿರಲು ಒಂದಾನೊಂದು ದಿವಸ ಶ್ರೀ ರೇಣುಕರು ಆಕಾಶಮಾರ್ಗವಾಗಿ ಲಂಕೆಗೆ ಆಗಮಿಸಿದರು. ವಿಭೀಷಣನು ತನ್ನ ಸಂಕಲ್ಪವನ್ನು ನೆರವೇರಿಸುವದಕ್ಕೋಸ್ಕರ ಕೈಲಾಸದಿಂದ ಸಾಕ್ಷಾತ್ ಶಿವನೇ ಆಗಮಿಸಿರುವನೆಂದು ಭಾವಿಸಿ ಶ್ರೀ ಜಗದ್ಗುರುವನ್ನು ಅನೇಕ ರೀತಿಯಾಗಿ ಉಪಚರಿಸಿ ತನ್ನ ಸಂಕಲ್ಪವನ್ನು ವಿಜ್ಞಾಪಿಸಿಕೊಂಡನು ಆಗ ಶ್ರೀ ರೇಣುಕರು ಇವನ ಭಕ್ತಿಗೆ ಮೆಚ್ಚಿ ನಿನ್ನ ಮನೋಭೀಷ್ಟವನ್ನು ಪೂರ್ತಿಗೊಳಿಸುತ್ತೇನೆಂದು ಅಭಯ ವಚನವನ್ನಿತ್ತು ಮೂರು ಕೋಟಿ ಶಿವಲಿಂಗಗಳನ್ನು ತರಿಸಿ ತಾವು ವಿರಾಡ್ರೂಪವನ್ನು ಧಾರಣಮಾಡಿ ಪ್ರತಿಯೊಂದು ಶಿವಲಿಂಗದ ಮುಂದೆ ತಾವು ಮೂರುಕೋಟಿ [illegible] ಮೂರುಕೋಟಿ ಶಿವಲಿಂಗ ಸ್ಥಾಪನಾ ರೂಪವಾದ ಸಂಕಲ್ಪವನ್ನು ನೆರವೇರಿಸಿ ವಿಭೀಷಣನನ್ನು ಕೃತಾರ್ಥನನ್ನಾಗಿ ಮಾಡಿ ಅವನಿಗೆ ಶಿವಸಿದ್ಧಾಂತವನ್ನು ಬೋಧಿಸಿ ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಒಂದೆ [illegible] ಲೀಲೆಗಳನ್ನು ಮಾಡಿ [illegible] ತೋರಿಸಿ [illegible] ಪಡೆದ ಶ್ರೀ ರೇಣುಕಾದಿ ಪಂಚಾಚಾರ್ಯರ ನಾಮಸ್ಮರಣವು [illegible] ಅತ್ಯಂತ ಶ್ರೇಯಸ್ಕರವಾಗಿದ್ದು ಈ ಕಾಲದಲ್ಲಿ [illegible] ನೋಡಿದರೆ ಇದು ಕಲಿಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ. ಪ್ರತಿಯೊಬ್ಬರೂ ಈ ಗುರುಚಕ್ರವರ್ತಿಗಳ ಅಸಾಧಾರಣವಾದ ಲೀಲೆಗಳನ್ನು [illegible] ತಿಳಿದು ಅವರ ನಾಮಸ್ಮರಣವನ್ನು ಸದಾ ಮಾಡುತ್ತ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಾಶಿಯ ಮಹಾರಾಜರವರು ಮೈಸೂರಿಗೆ ದಯಮಾಡಿಸುವರೆಂದು ತಿಳಿಯಬರುತ್ತದೆ.

ಭಾವನಗರಕ್ಕೆ ಹೋಗಿದ್ದ ನಮ್ಮ ದಿವಾನ್ ಸಾಹೇಬರವರು ಕಳೆದ ೨೦ನೆಯ ತಾರೀಖಿನ ಪ್ರಾತಃಕಾಲ ಬೆಂಗಳೂರಿಗೆ ದಯಮಾಡಿಸಿದರು.

ಕಪುರ್ಥಲಾ ಮಹಾರಾಜರವರು ತಮ್ಮ ಆಳ್ವಿಕೆಯ ಸುವರ್ಣೋತ್ಸವಕ್ಕೆ ನಮ್ಮ ಶ್ರೀಮನ್ಮಹಾರಾಜರವರನ್ನು ಆಹ್ವಾನಿಸಿರುವರೆಂದು ತಿಳಿಯಬರುತ್ತದೆ

ಶ್ರೀಮದ್ಯುವರಾಜರವರು ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿ ಕಳೆದವಾರದಿಂದಲೂ ಅಲ್ಲಿಯೇ ಇದ್ದಾರೆ ಇವರು ಮುಂದಿನ ತಿಂಗಳಿನಲ್ಲಿ ನೆರವೇರುವ ಕಪುರ್ಥಲಾ ಮಹಾರಾಜರವರ ಸುವರ್ಣೋತ್ಸವಕ್ಕೆ ದಯಮಾಡಿಸುವರೆಂದು ಕೇಳುತ್ತೇವೆ

ಶ್ರೀಮನ್ಮಹಾರಾಜರವರು ಕಳೆದ ತಾ|| ೧೯ನೆಯ ಶನಿವಾರ ರಾಜಧಾನಿಯಿಂದ ಮೋಟಾರಿನಲ್ಲಿ ನೀಲಗಿರಿಗೆ ದಯಮಾಡಿಸಿದರು ಅವರು ಅಲ್ಲಿಂದ ಉಡುಪಿಗೆ ದಯಮಾಡಿಸಿ ಅಲ್ಲಿ ನಡೆಯುವ ಪರ್ಯಾಯೋತ್ಸವಗಳನ್ನು ಸಂದರ್ಶಿಸಿಕೊಂಡು ಬರುತ್ತಾರೆಂದು ಕೇಳುತ್ತೇವೆ

ಅರಮನೆ ಖಜಾನೆಯ ವಿವಾದದಲ್ಲಿ ಛಾರ್ಜ್ ಮಾಡಲ್ಪಟ್ಟಿದ್ದ ಅಪರಾಧಿಗಳಾದ ಶಿರಸ್ತೇದಾರ್ ಸುಬ್ಬಣ್ಣ, ವಂಶಾವಳಿ ರಾಮಯ್ಯ, ಸರಾಫ್ ಲಕ್ಷ್ಮೀನಾರಾಯಣಶೆಟ್ಟಿ ಇವರು ಮೂವರ ಮೇಲೂ ಹೊಸದಾಗೊಂದು ಛಾರ್ಜ್ ಆಪಾದಿಸಲ್ಪಟ್ಟು ವಿಚಾರಣೆಯು ನಡೆಯುತ್ತಿರವುದು

ಮೈಸೂರು ಸರಕಾರದವರು ಸಂಸ್ಥಾನದ ಕೂಲಿಕಾರರ ಕಷ್ಟನಷ್ಟಗಳನ್ನು ವಿಚಾರಿಸಿ ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡುವದಕ್ಕೋಸ್ಕರ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಾಧಿಪತಿಗಳಾದ ರಾಜತಂತ್ರಪ್ರವೀಣ ಡಾಕ್ಟರ್ ಸರ್ ಬ್ರಜೇಂದ್ರನಾಥ ಶೀಲರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಿದ್ದಾರೆ

ಬೆಂಗಳೂರು ಪೌರಸಭಾಧ್ಯಕ್ಷರ ಚುನಾವಣೆಯು ಮೊನ್ನೆ ಶನಿವಾರ ನಡೆದು ಮಿ|| ಅಬ್ಬಾಸ್ ಖಾನ್ ರವರು ಹೆಚ್ಚು ಓಟುಗಳನ್ನು ಪಡೆದು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಈ ಚುನಾವಣೆಯು ಕಳೆದ ಎರಡುವಾರಗಳಿಂದ ಬೆಂಗಳೂರುಪಟ್ಟಣದಲ್ಲಿ ಬಹಳ ಕೋಲಾಹಲವನ್ನುಂಟುಮಾಡಿತ್ತು. ಜನಾನುರಾಗಿಗಳಾದ ಮಿ|| [illegible]ರವರು ಅಮೂಲ್ಯವಾದ ತಮ್ಮ ಅಧಿಕಾರವನ್ನು ಸತ್ಕಾರ್ಯಗಳಲ್ಲಿ ಪ್ರಯೋಗಿಸಿ ಇತೋಪ್ಯತಿಶಯವಾದ ಕೀರ್ತಿಸನ್ಮಾನಗಳನ್ನು ಪಡೆಯಲೆಂದು ಹಾರೈಸುತ್ತೇವೆ

ಯಡತೊರೆ ತಾಲ್ಲೂಕು ಹರದನಹಳ್ಳಿಯ ನಿವಾಸಿಗಳಾದ ಮ|| ವೀರರಾಜೇಅರಸರವರು ಸಪತ್ನೀಕರಾಗಿ ಅರಕಲಗೂಡು ತಾ|| ರಾಮನಾಥಪುರಕ್ಕೆ ದೇವರ ಸೇವೆಗಾಗಿ ಹೋಗಿದ್ದು ಕಾವೇರೀ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಅರಸರವರ ಪತ್ನಿಯವರು ಕಾಲು ಜಾರಿ ಬಿದ್ದು ಪ್ರವಾಹದಲ್ಲಿ ಕೊಚ್ಚಿಕೊಂಡುಹೋಗುವದನ್ನು ಅರಸರವರು ಕಂಡು ಕೂಡಲೆ ನೀರಿನಲ್ಲಿ ಧುಮುಕಿ ಹೆಂಡತಿಯನ್ನು ಬದುಕಿಸುವ ಪ್ರಯತ್ನದಲ್ಲಿ ತಾವೂ ಕೊಚ್ಚಿಕೊಂಡುಹೋಗಿ ದಂಪತಿಗಳೀರ್ವರೂ ಮೃತರಾದರೆಂಬ ಶೋಚನೀಯವಾರ್ತೆಯು ಬಂದಿದೆ

ಕಂಗೇರಿ ಬಳಿಯ ನಿವಾಸಿಯೊಬ್ಬನು [illegible] ರವರಿಗೆ [illegible] ರೂಪಾಯಿಗಳನ್ನು ಮನಿಯಾರ್ಡರ್ ಮಾಡುವದಕ್ಕೋಸ್ಕರ ಬೆಂಗಳೂರು ಚಿಕ್ಕಪೇಟೆ ಪೋಸ್ಟಾಫೀಸಿಗೆ ಬಂದು ತನಗೆ ಬರಹ ಬಾರದಿದ್ದುದರಿಂದ ಅಲ್ಲಿಯೇ ತಿರುಗಾಡುತ್ತಿದ್ದ ಒಬ್ಬ ಜಿ ರಾಮ[illegible] ಮನಿಯಾರ್ಡರ್ ಫಾರಂ [illegible] ಹೇಳಿ ಅವನಿಂದ ಬರೆಯಿಸಿ ಹಣವನ್ನು [illegible] ಕೊಟ್ಟು ರಶೀತಿ ಪಡೆದುಕೊಂಡನು. [illegible] ದಿನಗಳ ನಂತರ [illegible] ಕಡೆಗೆ [illegible] ವಿಚಾರಿಸುವಲ್ಲಿ [illegible]

ಯಾರ್ಡರ್ ಫಾರಂ ಬರೆದ ರಾಮಚಂದ್ರರಾಯನು ತನ್ನ ಹೆಸರಿಗೆ ಫಾರಂ ಬರೆದು ಹಣವನ್ನು ತೆಗೆದುಕೊಂಡಿದ್ದನು. ಪೋಲೀಸಿನವರು ಈತನನ್ನು ಖೈದು ಮಾಡಿರುತ್ತಾರೆ. ಇವನಿಗೆ ಇದಕ್ಕೆ ಮೊದಲು ಎರಡು ಸಲ ಜೈಲಾಗಿತ್ತೆಂದು ತಿಳಿಯಬಂದಿದೆ

ಕಳೆದ 19-20ನೆಯ ತಾರೀಖು ಗಳಲ್ಲಿ ಬೆಂಗಳೂರುನಗರದಲ್ಲಿ ನೆರವೇರಿದ ಈಜುವ ಸ್ಪರ್ಧೆಯಲ್ಲಿ ಯುವತಿಯರಲ್ಲಿ ಶ್ರೀಮತಿ ಅಚ್ಚಮ್ಮ, ಸಾವಿತ್ರಮ್ಮ, ಶಿಟ್ಟಮ್ಮ ಎಂಬವರಿಗೂ, ಬಾಲಿಕೆಯರಲ್ಲಿ ಶ್ರೀಮತಿ ಕಾಂತಮ್ಮ, ಸಾವಿತ್ರಮ್ಮ, ಸುಭದ್ರಮ್ಮ ಇವರಿಗೂ, ಯುವಕರಲ್ಲಿ ಮಹಾರಾಜಾ ಕಾಲೇಜಿನ ಮಿ|| ಸೈಯದ್ ಈಸ್, ಮಿ|| ಎಂ ಎಲ್. ಗೌಡ, ಮಿ|| ಬಿ ಟಿ. ತಿಮ್ಮೇಗೌಡ ಇವರಿಗೂ ಬೆಂಗಳೂರಿನ ಮಿ|| ಚಂದ್ರಶೇಖರ, ಮಿ|| ನಾರಾಯಣ, ಇವರಿಗೂ, ಬಾಲಕರಲ್ಲಿ ಮ|| ಶ್ರೀನಿವಾಸ ಅಯ್ಯಂಗಾರ್ ನಂಜುಂಡರಾವ್ ಇವರಿಗೂ ಬಹುಮಾನಗಳು ದೊರೆಕಿವೆ. ಅರ್ಧಮೈಲು ಈಜುವದರಲ್ಲಿ ಮಿ|| ಕನಕಾ ಚಟ್ಟಿಯವರು ಮೊದಲನೆಯ ಬಹುಮಾನವನ್ನು ಪಡೆದರು ತೃತೀಯ ಸಚಿವರಾದ ಶ್ರೀ ಬಾಲಸುಂದರಂ ಅಯ್ಯರ್‌ರವರು ಗೆದ್ದವರಿಗೆ ಬಹುಮಾನವನ್ನು ಹಂಚಿದರು. ನಮ್ಮ ಸಂಸ್ಥಾನದಲ್ಲಿ ಸ್ತ್ರೀಯರು ಇಂತಹ ಸ್ಪರ್ಧೆಗ ಸೇರಿದ್ದುದು ಇದೇ ಮೊದಲು'

ವರ್ತಮಾನಸಂಗ್ರಹ.

ಕರ್ನಾಟಕ ಏಕೀಕರಣದ ಪರಿಷತ್ತು ಮುಂದಿನ ಜನವರಿ ತಿಂಗಳಲ್ಲಿ ಬಾಗಲಕೋಟೆಯಲ್ಲಿ ನೆರವೇರಬೇಕೆಂಬದಾಗಿ ವಿಚಾರವು ನಡೆದಿದೆ.

ಪಂಜಾಬ ಪ್ರಾಂತಕ್ಕೆ ಸೇರಿದ ಪಾನಿಪತ್ ಎಂಬಲ್ಲಿ ಗೇಂದಿಬಾಯಿ ಎಂಬ ಜೈನ ಸ್ತ್ರೀಯು 40 ದಿವಸಗಳ ಉಪವಾಸ ವ್ರತವನ್ನಾಚರಿಸಿದಳಂತೆ!

ಅಲಾಹಾಬಾದ ಪಟ್ಟಣದಲ್ಲಿ ಅಂಗಡಿಗಳಿಗೆ ಬೆಂಕಿ ಬಿದ್ದು ಎಪ್ಪತ್ತು ಅಂಗಡಿಗಳು ಸುಟ್ಟು ಹೋದವು 50,000 ರೂಪಾಯಿಗಳವರೆಗೆ ನಷ್ಟವಾಗಿದೆ

ಹಿಂದುಸ್ಥಾನದ ಅಖಿಲ ವರ್ತಮಾನ ಪತ್ರಕಾರರ ಸಭೆಯು ಈ ವರ್ಷ ಮದ್ರಾಸ ಪಟ್ಟಣದಲ್ಲಿ ನಡೆಯುವ ಕಾಂಗ್ರೆಸ ಸಮಯದಲ್ಲಿ ಕೂಡತಕ್ಕದ್ದಿದೆ

ಅಮೇರಿಕೆಯವರು ಈಗ ನೂತನವಾಗಿ ನೀರಿನಲ್ಲಿ ಮುಳುಗಿ ಹೋಗುವ ದೊಡ್ಡ ಹಡಗನ್ನು ರಚಿಸಿದ್ದಾರೆ ಇಷ್ಟು ದೊಡ್ಡ ಹಡಗವು ಜಗತ್ತಿನಲ್ಲಿ ಎಲ್ಲಿಯೂ ಇಲ್ಲವಂತೆ'

ಫ್ರಾನ್ಸ ಮತ್ತು ಯೂಗೋಸ್ಲಾವ್ ರಾಷ್ಟ್ರಗಳಿಗ ಸಂಧಿಯು ನಡೆದು ಸಂಧಿಪತ್ರದಲ್ಲಿ ರುಜುಗಳು ಮಾಡಲ್ಪಟ್ಟಿವೆ ಇದರಿಂದ ಇಟಲಿ ರಾಷ್ಟ್ರಕ್ಕೆ ಅಸಂತೋಷವುಂಟಾಗಿದೆ.

ಕೋಲರಾ (ರಾವಲ ಪಿಂಡಿ) ರೈಲ್ವೆ ಸ್ಟೇಷನ್ನಿನ ಹತ್ತಿರ ಒಬ್ಬ ಅಂಗಡಿಕಾರನನ್ನು ಕೊಲೆಮಾಡಿದ ಆರೋಪದ ಮೇಲೆ ನೂರು ಜನ ಮುಸಲ್ಮಾನರನ್ನು ಸೆರೆ ಹಿಡಿದಿದ್ದಾರೆ.

ಕಚ್ಛಿನ ಮಹಾರಾಜರವರು ಕಾಶಿಯ ಹಿಂದೂ ವಿದ್ಯಾಪೀಠಕ್ಕೆ 1 ಲಕ್ಷ ರೂಪಾಯಿಗಳನ್ನು ದಾನಮಾಡಿರುತ್ತಾರೆ ಇದಕ್ಕೆ ಮೊದಲೊಂದು ಸಾರೆ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು

ನೇಪಾಳ ದೇಶದ ಮುಖ್ಯ ಮಂತ್ರಿಗಳು ಡಿಸೆಂಬರ್ ೨೮ ನೆಯ ತಾರೀಖಿಗ ಕಲ್ಕತ್ತಾ ಪಟ್ಟಣಕ್ಕೆ ಬರುವವರಿದ್ದಾರ ಹಿಂದುಸ್ಥಾನದಲ್ಲಿ ಅವರು 15 ದಿವಸಗಳವರೆಗ ಸಂಚಾರವನ್ನಿಟ್ಟುಕೊಂಡಿದ್ದಾರ

ಸೊಂಡೂರಿನ ಗತಿಸಿದ ರಾಜರವರ ಮಗಳಾದ ಸುಶೀಲಾಬಾಯಿಯನ್ನೇ ಪಟ್ಟಾಧಿಕಾರಿಣಿಯನ್ನಾಗಿ ಮಾಡಬೇಕೆಂದು ಬಳ್ಳಾರಿಯ ಪ್ರಮುಖರು ತೀರ್ಮಾನಿಸಿ ಮದ್ರಾಸ ಸರ್ಕಾರಕ್ಕೆ ತಿಳುಹಿಸಿರುತ್ತಾರ

ಬಾಗಲಕೋಟೆಯ ಪ್ರಸಿದ್ಧ ಶ್ರೀಮಂತರಾದ ಬಾಳಕೃಷ್ಣದಾಸ ಎಂಬವರು ವಿಜಾಪೂರ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದುಷ್ಕಾಲ ನಿವಾರಣ ಸಭೆಗೆ 10,000 ರೂಪಾಯಿಗಳನ್ನು ಕೊಟ್ಟಿದ್ದಾರೆ ಸ್ತುತ್ಯವಾದ ಕಾರ್ಯವು

ಪೂರ್ವ ಆಫ್ರಿಕೆಯ ಕೆನಿಯಾ ಪ್ರಾಂತದಲ್ಲಿ ಸಾವಿರಾರು ವರ್ಷದ ಒಂದು ಪ್ರಾಚೀನಪಟ್ಟಣವು ದೊರೆಕಿದೆ ಆ ಪಟ್ಟಣದ ರಚನೆಯನ್ನು ನೋಡಿದರೆ ಆಗಿನ ಕಾಲದ ಜನರು ಚನ್ನಾಗಿ ಸುಧಾರಿಸಿದವರಾಗಿದ್ದರೆಂದು ತಿಳಿಯಬರುತ್ತದೆ

ಬೊಂಬಾಯಿ ನಗರದಲ್ಲಿ ವೇಶ್ಯಾ ಸ್ತ್ರೀಯರ ನೀಚವೃತ್ತಿಗಳನ್ನು ನಿರ್ಮೂಲ ಮಾಡುವುದಕ್ಕೋಸ್ಕರ ದೊಡ್ಡ ಚಳವಳಿಯು ನಡೆಯುತ್ತಿರುವುದು. ಆ ನಗರದಲ್ಲಿ ಸುಮಾರು 900 ಮನೆಗಳಲ್ಲಿ 10 000 ಹೆಂಗಸರು ನೀಚವೃತ್ತಿಯಿಂದ ಜೀವಿಸುತ್ತಿರುವುದಾಗಿ ತಿಳಿಯಬಂದಿದೆ.

ಗುರುದತ್ತ ಸಿಂಗ ಎಂಬವನನ್ನು ಕೊಂದ ಆರೋಪದ ಮೇಲೆ 5 ಜನ ಮುಸಲ್ಮಾನರನ್ನು ಸೆರೆ ಹಿಡಿದು ಲಾಹೋರ ಸೆಷನ್ ಕೋರ್ಟಿನಲ್ಲಿ ವಿಚಾರ ನಡೆದು. ಪಂಚಾಯತರ ಮಧ್ಯದಲ್ಲಿ ಭಿನ್ನಾಭಿಪ್ರಾಯವುಂಟಾಗಲು ಜಡ್ಜರು ಆರೋಪಿಗಳನ್ನು ಬಂಧಮುಕ್ತರನ್ನಾಗಿ ಮಾಡಿದರು

ರಾಯಲ್ ಕಮೀಷನ್ನಿನ ವಿಚಾರವಾಗಿ ಸ್ಟೇಟ್ ಸೆಕ್ರೆಟರಿಯವರೊಡನೆ ಮಾತನಾಡುವುದಕ್ಕೋಸ್ಕರ ಮೈಸ್ನಾಯರವರು ಲಂಡನ್ನಿಗೆ ದಯಮಾಡಿಸುತ್ತಾರೆಂದೂ ಇವರು ಹಿಂದಿರುಗಿ ಬರುವವರೆಗೆ ಬೊಂಬಾಯಿ ಗವರ್ನರವರು ವೈಸರಾಯರ ಕೆಲಸವನ್ನು ನೋಡುವರೆಂದೂ ವರ್ತಮಾನವಿದೆ.

ಹೈದರಾಬಾದಿನಲ್ಲಿ ಪ್ಲೇಗ ರೋಗವನ್ನು ನಿಲ್ಲಿಸುವದಕ್ಕೆ ನಿಜಾಂ ಸರ್ಕಾರದವರು ಒಂದು ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿರುತ್ತಾರೆ ಊರಹೊರಗ ತಗಡಿನ ಒಂದು ಸಾವಿರ ಗುಡಿಸಲುಗಳನ್ನೂ, ಇನಾಕ್ಯುಲೇಷನ್ ಮಾಡುವುದಕ್ಕೆ ಏಳುಜನ ಡಾಕ್ಟರರನ್ನೂ ನಿಯಮಿಸಿರುತ್ತಾರೆ.

ಬೆಳಗಾಂ ಜಿಲ್ಲೆಯು ಸಂಪೂರ್ಣ ಕರ್ನಾಟಕ ರಾಜ್ಯವಾಗಿದ್ದು ಈಚೀಚಿಗ ಅಲ್ಲಿ ಬಲಾತ್ಕಾರದಿಂದ ಮರಾಠಿಯ ಸಮಾವೇಶವಾಗ ತಗಲಿದೆ ಬೆಳಗಾಂ ಮತ್ತು ಚಿಕ್ಕೋಡಿ ಕೋರ್ಟುಗಳಲ್ಲಿ ಮರಾಠಿಯು ಕನ್ನಡ ಭಾಷೆಯಂತೆ ಕೋರ್ಟ ಭಾಷೆಯಾಗಿರಬೇಕೆಂದು ಬೊಂಬಾಯಿ ಹೈಕೋರ್ಟಿನವರು ನಿಯಮಿಸಿರುತ್ತಾರ

ಬರುವ ಡಿಸೆಂಬರ್ ತಿಂಗಳಲ್ಲಿ ನೆರವೇರುವ ಕಾಂಗ್ರೆಸ್ಸಿನ ಮಂಟಪವನ್ನು ಮಳೆಯ ಭಯದಿಂದ ಪ್ರತಿ ವರ್ಷದಂತೆ ಕೇವಲ ಖಾದಿ ಬಟ್ಟೆಯಿಂದ ಕಟ್ಟದೆ 20,000 ಜನರು ಕುಳಿತುಕೊಳ್ಳುವಷ್ಟು ವಿಶಾಲವಾದ ಒಂದು ದೊಡ್ಡ ಚಪ್ಪರವನ್ನು ಕಟ್ಟಿಸುವರೆಂದು ತಿಳಿಯಬರುತ್ತದೆ ಸದಸ್ಯರು ಇಳಿದುಕೊಳ್ಳುವುದಕ್ಕೆ 100 ಗುಡಿಸಲುಗಳನ್ನು ಹಾಕಿಸಿರುವರು.

ಕಳೆದ ವರ್ಷ ಗ್ರೇಟ್ ಬ್ರಿಟನ್ನಿನಿಂದ ಸುಮಾರು 300,000,000 ಗ್ಯಾಲನ್ ಹಾಲನ್ನು ಪರದೇಶಕ್ಕೆ ಮಾರಿದರಂತೆ! ವಿಸ್ತೀರ್ಣದಲ್ಲಿಯೂ ಜನ ಸಂಖ್ಯೆಯಲ್ಲಿ ಅದಕ್ಕಿಂತಲೂ ಎಷ್ಟೋ ಸಾರೆ ದೊಡ್ಡದಾದ ಮತ್ತು ಅಹಿಂಸಾ ಪರಮೋಧರ್ಮಃ ಎಂಬ ವೇದಗಳಿಗೂ ಗೋಪೂಜಕರಿಗೂ, ವಸತಿಯಾದ ನಮ್ಮ ಹಿಂದುಸ್ಥಾನವು ಕೃತ್ರಿಮ ಹಾಲಿನ ಪುಡಿಯನ್ನು ಉಪಯೋಗಿಸುವ ದುರ್ಗತಿಗೀಡಾಗಿದೆ

ಧಾರವಾಡ ಮುನಸಿಪಾಲಿಟಿಯ ಹೊಸ ಚುನಾವಣೆಯು ಬರುವ 30ನೆಯ ತಾರೀಖಿನದಿವಸ ನಡೆಯುವುದು. ಹಿಂದುಗಳಲ್ಲಿ 18, ಮುಸಲ್ಮಾನರಲ್ಲಿ 6 ಮತ್ತು ಅಸ್ಪೃಶ್ಯರಲ್ಲಿ 1, ಈ ರೀತಿ 25 ಜನರು ಆರಿಸಲ್ಪಡುತ್ತಾರೆ. ಇಷ್ಟು ಸ್ಥಳಗಳಿಗ 48 ಜನ ಹಿಂದುಗಳೂ 14 ಜನ ಮುಸಲ್ಮಾನರೂ ಒಬ್ಬರು ಅಸ್ಪೃಶ್ಯರ ಪರವಾಗಿಯೂ ಉಮೇದವಾರರಾಗಿ ನಿಂತಿರುತ್ತಾರೆ ಇವರಲ್ಲಿ ಕಲವರು ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆರಿಸಿ ಬರಬೇಕೆಂದು ಅರ್ಜಿಗಳನ್ನು ಕೊಟ್ಟಿರುತ್ತಾರೆ ಸದಸರಾಗುವುದಕ್ಕೆ ಇಷ್ಟು ಜನರು ಉಮೇದುವಾರರಾಗಿ ಮುಂದೆ ಬಂದುದು ಧಾರವಾಡ ಪೌರಸಭೆಯ ಇತಿಹಾಸದಲ್ಲಿ ಇದೇ ಮೊದಲನೆಯ ಸಾರೆಯೆಂದು ಕೇಳುತ್ತೇವೆ

ನವಾನಗರದ ಜಾಮ ಸಾಹೇಬರು ತಮ್ಮ ಪೂರ್ವಜರ ಒಂದು ಅಶ್ವಾರೂಢ ಪ್ರತಿಮೆಯನ್ನು ತಯಾರಿಸಲು ಅಮೇರಿಕೆಯಿಂದ ಒಬ್ಬ ಪ್ರಸಿದ್ಧ ಶಿಲ್ಪಕಾರನನ್ನು ಕರೆಯಿಸಿದ್ದರು. ಆ ಶಿಲ್ಪಕಾರನು ನವಾನಗರಕ್ಕೆ ಎರಡು ತಿಂಗಳ ಕಾಲವಿದ್ದು ಪ್ಯಾರಿಸ್ಸಿಗೆ ಹೋಗಿ ಪ್ರತಿಮೆಯ ಕೆಲಸವನ್ನು ಪ್ರಾರಂಭಿಸಿದನು. ಆದರೆ ತಾನು ಹಿಂದುಸ್ಥಾನದಲ್ಲಿ ಯಾವ ಕುದುರೆಯನ್ನು ನೋಡಿ ಪ್ರತಿಮೆಯನ್ನು ತಯಾರಿಸಬೇಕೆಂದಿದ್ದನೋ ಆ ಕುದುರೆಯು ಪ್ಯಾರಿಸ್ಸಿನಲ್ಲಿ ದೊರೆಯದೆ ಚಿಂತಿಸುತ್ತಿರಲು ಜಾಮ ಸಾಹೇಬರು ಕೂಡಲೆ ಅಶ್ವಿನೀ ಕುಮಾರ ಎಂಬ ಹೆಸರಿನ ಕುದುರೆಯನ್ನು ಪ್ಯಾರಿಸ್ಸಿಗೆ ಕಳುಹಿಸಿಕೊಟ್ಟರು. ಶಿಲ್ಪಕಾರನು ಆ ಕುದುರೆಯ ಪ್ರತಿಮೆಯನ್ನು ತಯಾರಿಸಿ ಅದನ್ನು ಅಶ್ವಿನೀ ಕುಮಾರನ ಮುಂದೆ ತಂದಿರಿಸಲು ಪ್ರತಿಮೆಯು ತನಗೆ ಒಪ್ಪಿಗೆಯಾಗಿದೆ ಎಂದು ಹೇಳುತ್ತದೆಯೋ ಎನ್ನುವಂತೆ ಆ ಕುದುರೆಯು ಪ್ರತಿಮೆಯ ಮೂಗಿಗೆ ತನ್ನ ಮೂಗನ್ನು ತಿಕ್ಕಿತಂತೆ!

ಜಪಾನ ದೇಶದ ಟೋಕಿಯೋ ನಗರದಲ್ಲಿ ಮ್ಯುನಿಸಿಪಲ ಮೆಂಬರುಗಳ ಚುನಾವಣೆಯ ಕಾಲದಲ್ಲಿ ಒಬ್ಬ ಓಟರಿಗೆ ಖಾಯಿಲೆಯಾಗಿದ್ದುದರಿಂದ ಚುನಾವಣೆಯ ಸ್ಥಳಕ್ಕೆ ಹೋಗಲಿಲ್ಲ ಆತನ ಹೆಂಡತಿಯು ಚುನಾವಣೆಯ ಹಕ್ಕನ್ನು ಕಳೆದುಕೊಳ್ಳಲು ಇಷ್ಟವಿಲ್ಲದೆ ತಾನೇ ತನ್ನ ಗಂಡನ ಬದಲು ಓಟ್ ಮಾಡುವುದಾಗಿ ಚುನಾವಣೆಯ ಅಧಿಕಾರಿಗೆ ತಿಳಿಸಿದಳು ಆತನು ಇದಕ್ಕೆ ಒಪ್ಪದಿದ್ದುದರಿಂದ ಆಕೆಯು ಇಂಥಾ ನಿರ್ಬಂಧವು ಕೇವಲ ಅನ್ಯಾಯವೆಂತಲೂ ಓಟನ್ನು ಕೊಡುವ ಅಧಿಕಾರವು ಹೆಂಡತಿಗೂ ಇರಬೇಕೆಂತಲೂ ಒಂದು ಅರ್ಜಿಯನ್ನು ಬರೆದುಕೊಂಡು ಹೋಗಿ ಮೋಟಾರು ಗಾಡಿಯನ್ನು ಹತ್ತುತ್ತಿದ್ದ ಅಲ್ಲಿಯ ಚಕ್ರವರ್ತಿಯವರಿಗೆ ಕೊಡಲು ಯತ್ನಿಸಿದಳು ಪೋಲೀಸರು ಆಕೆಯನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವರು. ನಮ್ಮ ದೇಶದಲ್ಲಿ ಓಟು ಕೊಡುವ ಹಕ್ಕನ್ನು ಪಡೆದಿರುವ ಪುರುಷರಲ್ಲಿ ಅನೇಕರು ಅದನ್ನು ಆಚರಣೆಯಲ್ಲಿಯೇ ಇಟ್ಟುಕೊಂಡಿಲ್ಲ ಜಪಾನರಿಗೂ ನಮಗೂ ಇರುವ ವ್ಯತ್ಯಾಸವು ಇಷ್ಟೆ!

ಸ್ವೀಕಾರ

ದಾವಣಗೆರೆ ಮ|| ರಾ|| ಮಾಗಾನಹಳ್ಳಿ ಮಹಲಿಂಗಪ್ಪನವರ ಪುತ್ರ ರಾಜಶೇಖರಪ್ಪನವರಿಗೆ ಡಿಟ್ಟೊ ಗ್ರಾಮವಾಸಿಗಳಾದ ಮ|| ರಾ|| ಬಂಕಾಪುರದ ಕೊಟ್ರಪ್ಪನವರ ಪುತ್ರಿ ಚಿ|| ಸೌ|| ಹಂಪಮ್ಮನನ್ನು ನಿಶ್ಚಯಮಾಡಿದ ಹಸುರುವೀಳ್ಯದ ಕಾರ್ಯದಲ್ಲಿ ಪ್ರಭಾ ಪೋಷಣಕ್ಕಾಗಿ ವೇ|| ದಾವಣಗೆರೆ ಹಿರೇಮಠದ ಮಹಲಿಂಗಯ್ಯನವರು ವರನಕಡೆಯಿಂದ 2 ರೂಪಾಯಿಗಳನ್ನು ವಧುವಿನಕಡೆಯಿಂದ 1 ರೂಪಾಯಿಯನ್ನು ತೆಗೆಯಿಸಿದ 3 ರೂಪಾಯಿಗಳು ದಾವಣಗೆರೆಯಲ್ಲಿರುವ ಸಂದಿಗಾವಿ ಬೇಕಿನಕೊಂಡದ ಮಠದ ಹಾಲಯ್ಯನವರ ದ್ವಾರಾ ತಲ್ಪಿರುತ್ತವೆ

ಕಡೂರು ತಾಲ್ಲೂಕು ಮತಿಘಟ್ಟ ಗ್ರಾಮದ ವೇ|| ಮಠದ ಬಸವಾರಾಧ್ಯರು ಶ್ರೀ ಸಕ್ಕರಾಯಪಟ್ಟಣದ ಹಾಲಸ್ವಾಮಿಯವರ ಶಿಲಾಮಠದ ಪಟ್ಟಾಧ್ಯಕ್ಷ ಶಿವಮೂರ್ತಿಸ್ವಾಮಿಗಳ ಉತ್ಸವಕಾಲದಲ್ಲಿ ತಮ್ಮ ಜಮೀನಿಗೆ ನೂತನವಾಗಿ ತೆಂಗಿನಸಸಿಗಳನ್ನು ಹಾಕಿಸಿದ ಜ್ಞಾಪಕಾರ್ಥವಾಗಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಹಿರೇಮಠದ ವೇ|| ಆರ್ ಸಿ ಆರಾಧ್ಯಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ತಿಪಟೂರು ನಿವಾಸಿಗಳಾದ ವೇ|| ಅಪ್ಪಿ ಹೊಳಲ ಮಠದ ಎ ಎಂ ಶಿವಲಿಂಗಾರಾಧ್ಯರ ಪುತ್ರೋತ್ಸವದ ಕಾಲದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ವೇ|| ರಾಣೆಬೆನ್ನೂರು ಮಳೆಮಠದ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತವೆ.

ಹೋ|| ಆಲೂರಿನ ಮ|| ಗೌಡರ ಗವಿಗಪ್ಪಾ ಎರಿನೂರು ಲಿಂಗಪ್ಪಾ ಗೋಣಿ ಗಂಗಯ್ಯಾ ಮಠಪತಿ, ಮಲ್ಲೇಶಪ್ಪಾ ಗಾಣಿಗೇರ ಈ ಮಹಾಶಯರುಗಳು ದೀಪಾವಳಿ ಮಹಾಲಕ್ಷ್ಮೀ ಪೂಜಾಕಾಲದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗಯಿಸಿದ 4 ರೂಪಾಯಿಗಳು ವೇ|| ಶಿಕ್ಷಾವರ್ತಿ ಹಿರೇಮಠದ ರೇವಣಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಈ ಮಹಾಶಯರುಗಳಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರ ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸಂ —

ಶ್ರೀ ೧೦೮ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ನಿಜಧರ್ಮ ನಿದರ್ಶನ.

ವಾಚಕಮಹಾಶಯರೇ ಮೊದಲು ಪರಶಿವನ ಪಂಚಮುಖೋದ್ಭೂತರಾದ ಪಂಚಪೀಠಾಧೀಶರು ಪರಮಾತ್ಮನ ಪ್ರೇರಣೆಯಂತೆ ಕೊಲ್ಲಿಪಾಕಿ ಕಾಶಿ ಶ್ರೀಶೈಲ ಮುಂತಾದ ಕ್ಷೇತ್ರಗಳ ಸೋಮೇಶಲಿಂಗ ಮೊದಲಾದವುಗಳಿಂದ ಭೂಲೋಕದೊಳು ಅವತಾರವಂ ಗೈದು ಭಕ್ತರು ಉದ್ಧಾರಗೈಯುವುದೂ ಶಿವಭಕ್ತಿಯಂ ನೆಲೆಗೊಳಿಸುವದೂ ತಮ್ಮ ಕರ್ತವ್ಯವೆಂದು ತಿಳಿದ ಧರ್ಮಬೋಧಕಾರ್ಯದಲ್ಲಿ ತೊಡಗಿದರು. ಅದರ ಒಂದು ಊರಿಗೆ ಹೋಗಲಿಕ್ಕೆ ಅನೇಕ ಮಾರ್ಗಗಳಿರುವಂತೆ ಪರಮಾತ್ಮನನ್ನು ಕಾಣಲಿಕ್ಕೆ ಅನೇಕ ಮಾರ್ಗಗಳುಂಟು. ಯಾವ ಭೂಮಿಯ ಮೇಲಿನ ಜಲವು ಸಾಗರದೊಳು [illegible] ಸಾಗರದೊಳೈಕ್ಯವಾಗುವಂತೆ ಯಾವತ್ತು ಮನುಷ್ಯಪ್ರಾಣಿಯು ಈಶಾಜ್ಞೆಯಂತೆ ಕಣ್ಣಿಗೆ ತೋರಿ [illegible] ಮುಕ್ತಿಯಂ ಪಡೆದು [illegible]ಶ್ವರವಾಗದೆ ಇರುವ ಪರಲೋಕವನ್ನು ಹೊಂದಿ ಪರಮಾತ್ಮನಲ್ಲಿ ಐಕ್ಯವಾಗಬೇಕಾದರೆ ಈಶಭಕ್ತಿಯೇ ಮುಖ್ಯ ಕಾರಣವಾದುದು. ಅಂಥ ಜಗದೀಶನನ್ನು ಮೇಲೆ ಹೇಳಿದ ಅನೇಕ ಬಗೆಯಿಂದ ಕಾಣಬಹುದು ಎಂದು ಅನೇಕರು ಸ್ಥಾಪಿಸಿದರು. ಆದರೆ ಶ್ರೀ ಜಗದ್ಗುರು ಪಂಚಾಚಾರ್ಯರು ಅದರಲ್ಲಿಯೂ ಅತ್ಯಂತ ಸುಲಭದ ಮಾರ್ಗದಿಂದ ಪರಲೋಕವನ್ನು ಕಾಣಲಿಕ್ಕೆ ಕರ್ಮಜ್ಞಾನಗಳ [illegible] ಪ್ರಾಧಾನ ಪಿಸಿದ ಈ ಶಕ್ತಿವಿಶಿಷ್ಟಾದ್ವೈತ ಮತವನ್ನು ಸ್ಥಾಪಿಸಿದರು. ಮುಂದೆ [illegible] ಪ್ರತಿಯೊಂದು ಯುಗದಲ್ಲಿ ಶ್ರೀ ಪಂಚಾಚಾರ್ಯರು ಅವೇ ಲಿಂಗಗಳಿಂದ ಬೇರೆ ಬೇರೆ ನಾಮಗಳಿಂದ ಉದ್ಭವರಾಗಿ ಧರ್ಮಸಾಮ್ರಾಜ್ಯವನ್ನು ಬೆಳೆಯಿಸಿದರು. ಅಂತಹ ಮಹಾಜಗದ್ಗುರುಗಳಿಂದ ಸ್ಥಾಪಿತವಾದ ಈ ಮತವನ್ನು ಈಗಿನ ಎಷ್ಟೋ ಜನರು ಅನೇಕ ಬಗೆಯಿಂದ ಭಾವಿಸಿ ಅಡ್ಡಹಾದಿಗೆ ಬಿದ್ದಿದ್ದಾರೆ. ಇದರಿಂದ ಅವರಿಗೆ [illegible] ಗದೆ ಕಷ್ಟಮಾತ್ರ ಎಂದೆಂದಿಗೂ ತಪ್ಪಲಾರದು. ಅದ್ದರಿಂದ ಆ ಗುರುಸಾರ್ವಭೌಮರವರನ್ನು ಹಗಲಿರುಳು [illegible]ನಿಸಿ 'ಮುಕ್ತಿಮೂಲಂ ಗುರೋಃ ಕೃಪಾ' ಎಂಬಂತೆ ಗುರುಕೃಪೆಗೆ ಪಾತ್ರರಾಗಿ ಮುಕ್ತಿಯಂ ಪಡೆದು [illegible]ಯಾಗಿರುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿರುತ್ತದೆ. ಇದನ್ನು ತಿಳಿಯದೆ ಕೆಲವರು ಮತ್ತ[illegible]ಗಳಂತೆ ಮನಸ್ಸಿನಲ್ಲಿ ದುಷ್ಟಕಲ್ಪನೆಯ ಸಾಮ್ರಾಜ್ಯವನ್ನು ಕಲ್ಪಿಸಿಕೊಂಡು ಕೇವಲ ದುಷ್ಟಬುದ್ಧಿಯಿಂದಲೋ ಅಥವಾ ಅನ್ಯರ ಪ್ರೇರಣೆಯಿಂದಲೋ ಕೇವಲ ನೀಚಾತ್ಮ ವಚನಗಳಿಂದ ಕೂಡಿದ ಲೇಖಗಳನ್ನು ಬರೆಯುತ್ತಾರೆ. ಅವರಿಗೆ ತಾವು ಬರೆಯುವಾಗ [illegible] ವ್ಯಾಪ್ತವಾಗಿ ಎದೆಯ ಮೇಲೆ ಧರಿಸಿರುವ ಇಷ್ಟಲಿಂಗದ ನೆನಪಾದರೂ ಇರುವದೋ ಇಲ್ಲೋ ತಿಳಿಯದು. ಹಾಗೇಕೆ? ಆ ಅರಿವು ಇದ್ದರೆ ಈ [illegible] ವೇಗ ಬಂತು? ನನ್ನ ಮತವಾವುದು? ಮತದ [illegible]ನಾಚಾರ್ಯರು ಯಾರು? ಗುರುಗಳು ಯಾರು? ನಿಯಮಗಳಾವವು? ಎಂಬುದನ್ನು ಸ್ವಲ್ಪವಾದರೂ ವಿಚಾರ ಮಾಡುತ್ತಿದ್ದಿತ್ತು. ಆಗಲಿ ಏನುಮಾಡುವದು! ಕಾಲಗತಿಯ ವೈಚಿತ್ರ್ಯ! [illegible] ಚಂಡಾಲನಿಗಿಂತಲೂ ನೀತಿತಪ್ಪಿ ನಡೆಯುವವನು ಚಂಡಾಲರಲ್ಲಿ ಶಿರೋಮಣಿಯೆಂದು ಹೇಳಬಹುದು. ಅದ್ದರಿಂದ ಮತಬಾಂಧವರೇ ಅಲ್ಲಸಲ್ಲದ ಪ್ರಶ್ನೆಗಳನ್ನು ಮಾಡಿ ನಮ್ಮ ಮತಸ್ಥಾಪನಾಚಾರ್ಯರ ಕೀರ್ತಿಯನ್ನು ನಾವೇ ಕಾಯದಿದ್ದರೆ ಉಳಿದ ಮತಸ್ಥರು ನಮ್ಮೀ ಪರಿಸ್ಥಿತಿಯನ್ನು ನೋಡಿ ನಗಲಾರರೇ? ಇದನ್ನು ನೋಡಿ ಕುಟಿಲ ಪ್ರಶ್ನೆಗಳನ್ನು ಹಾಕುವ ಕುಹಕರು ಅನೇಕರಿರುವರು. ಆದರೆ ಇಂಥಾ ಕುಟಿಲ ಪ್ರಶ್ನೆಗಳನ್ನು [illegible] ನಿಜಧರ್ಮವನ್ನು ತೋರಬೇಕಾದರೆ ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮೆಯಿಂದಲೂ ಅವರ [illegible] ವಾತ್ಸಲ್ಯದಿಂದಲೂ [illegible] ಚಿತ್ಪ್ರಕಾಶವೇ ಆದ 'ಪ್ರಭಾ' ಎಂಬ ನಿಜಧರ್ಮ ಪುನರುದ್ಧಾರವಾದ ಪತ್ರವು ಹೊರಟಿದೆ. [illegible] ಪಾಲಕರಾದ ಪಂಡಿತ ಮಹಾನುಭಾವರು ಕೇವಲ [illegible] ತಮ್ಮ ಕರ್ತವ್ಯವೆಂದು ತಿಳಿದು ಅಹೋರಾತ್ರಿ ಶ್ರೀ ಜಗದಾಚಾರ್ಯರಲ್ಲಿ ಅನನ್ಯ ಭಕ್ತಿಯುಕ್ತರಾಗಿ ಪತ್ರವನ್ನು ಮುಂದಕ್ಕೆ [illegible]. ಈ ಪತ್ರದ ಧರ್ಮ [illegible] [illegible]

[illegible]

ಜಂಗಮಸೇವಕ

[illegible] ಶಿವಯೋಗಿಗಳ [illegible]

ಅಂತರ

ಶ್ರೀ ಜಗದ್ಗುರು ಪಂಚಾಚಾರ್ಯ [illegible]

ಸೊರಬ ತಾಲೂಕು ಜಡಗ್ರಾಮಕ್ಕೆ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳವರ ಆಗಮನವು.

[illegible] ಯಲ್ಲಿ ಒಂದು ಗ್ರಾಮವಾದ [illegible] ಮಾಡಿದ್ದರು. [illegible] 1[illegible] [illegible] ದರಿಯ [illegible] [illegible] ಸ್ಥಾನದ [illegible] ತುಂಬಾ ಸಂತೋಷವಾಗುತ್ತದೆ. [illegible] ಶಿವಪ್ಪ [illegible] ಸುಮಾರು 300 ರ [illegible] ಪೂರ್ವಕ [illegible] ಅತ್ಯಂತ ಸ್ತುತ್ಯವಾದದ್ದಾಗಿರುತ್ತದೆ.

ತುಮರಿಕೊಪ್ಪದ ಮುಕ್ಕಾಮಿನಲ್ಲಿರುವಾಗ್ಗೆ ಒಂದಾನೊಂದ ದಿನ ಇಲ್ಲಿಯ ಪ್ರಮುಖರಾದ ಮ|| ಜಡಪಾಟೀಲ [illegible] ಮ|| ಸಾಲಿಗಿ ಪಾಟೀಲ ವಿರುಪಾಕ್ಷಪ್ಪಗೌಡರೂ ಮೇ| ಗುಡ್ಡಿಹಳ್ಳಿ ಮುರದ [illegible] ನವರೂ ಮ|| ಕಮರೂರ ಮ|| ಶಿವಲಿಂಗಪ್ಪನವರೂ ಮೊದಲಾದ ವೀರಶೈವ ಪ್ರಮುಖರು ಗುರುಗಳಲ್ಲಿಗೆ ಹೋಗಿ ನಮ್ಮ ಜಡಗ್ರಾಮಕ್ಕೆ ಸನ್ನಿಧಿಯು ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡ ಮೇರೆ ತಾ| 13-11-1927 ನೇ ಭಾನುವಾರ ಜಡಗ್ರಾಮಕ್ಕೆ ಸ್ವಾಮಿಯು ದಯಮಾಡಿಸುವದಾಗಿ ಪ್ರೋಗ್ರಾಂ ನಿಶ್ಚಯಿಸಿತು. ಅದರಂತೆ ಗುರುಸೇವಾ ತತ್ಪರರಾದ ಭಕ್ತರು ಗುರುಗಳ ಆಗಮನೋತ್ಸವಕ್ಕ ಬೇಕಾದ [illegible] [illegible] ಈ ವಿಷಯದಲ್ಲಿ ಮ| [illegible] [illegible] ಇವರು ಅತ್ಯಂತ ಹುರುಪಿನಿಂದ ಕೆಲಸಮಾಡಿದರೆಂಬ ವಿಷಯವು ಅತ್ಯಂತ ಸಂತೋಷಜನಕವಾದದ್ದಾಗಿದೆ. ಈ ಕಾರ್ಯಕ್ಕೆ ವಿಘ್ನ ಕಾರಕರಾದ ಕೆಲವು [illegible] ಅಧಿಕಾರಿಗಳಾಗಿ [illegible] ಕೂಡಿಕೊಂಡಿದ್ದರು. ಈ ಸಮಾಚಾರವನ್ನು ಅರಿದು [illegible] ನಾರ [illegible] ತಕ್ಕ ಸಿಬ್ಬಂದಿಯೊಡನೆ [illegible] 1 ಗಂಟೆಗೆ ಜಡಗ್ರಾಮಕ್ಕೆ ಆಗಮಿಸಿದರು.

ಅದರ [illegible] ದಿವಸ [illegible] ದಿಂದ ಪ್ರಾರಂಭ [illegible] ಗಂಟೆಯ ವರೆಗೆ ಬಿಡುವಿಲ್ಲದೆ [illegible] ಆಗಿನ ಸ್ಥಿತಿಯನ್ನು [illegible] ಕುಹಕರ ಪೌರುಷವನ್ನು [illegible] ಎಂಬಂತೆಯೂ [illegible] ಮಾಡುವ ಕಾರ್ಯಗಳನ್ನು [illegible] ಕುತ್ಸಾಹದಿಂದ ಎಂಬಂತೆಯೂ ಗುರುಸೇವಾ [illegible] ಪಾದಿಯಲ್ಲೂ ಬಂದ [illegible] ಎಂಬಂತೆ ಯೂ [illegible]

[illegible] ಶಿಲಾಸ್ತಂಭಗಳಿಂದ [illegible] ಸಾಕ್ಷಾತ್ ಶಿವಪುರ [illegible] ಸ್ವಾಮಿಗಳವರು [illegible] 1 ಗಂಟೆ [illegible] ತುಮರಿಕೊಪ್ಪದ [illegible] ಆಶೀರ್ವದಿಸಿ ಅಲ್ಲಿಂದ ಮೇನಾದಲ್ಲಿ [illegible] ದಲ್ಲಿ [illegible] ಹಗಟೂರು, [illegible] ಶೃಂಗರಿಸಲ್ಪಟ್ಟ [illegible] ದಯಮಾಡಿಸುವಾಗ ಅಲ್ಲಿಯ ಭಕ್ತಾದಿಗ [illegible] ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತ [illegible] ಧರ್ಮಬೋಧ ಮಾಡುತ್ತಲೂ [illegible] ಗಂಟೆಗೆ ಜಡಗ್ರಾಮವನ್ನು [illegible] ಪ್ರದೇಶದಲ್ಲಿ ಮೊದಲೇ ರಚಿಸಲ್ಪಟ್ಟಿದ್ದ [illegible] ದಲ್ಲಿ [illegible] ಇದ್ದರು. ಆಗ ವೀರಶೈವ [illegible] ಮ|| ರಾ|| ಜಮೀನ್ದಾರ ಸಾಹುಗಳ [illegible] ಸನವರೂ ಶೇಕದಾರರೇ ಮೊದಲಾದ ಮಹನೀಯರು [illegible] ಶೃಂಗರಿಸಲ್ಪಟ್ಟ ಆನೆ ಕುದುರೆ ಅಲಂಕ[illegible] ಮಂಗಲವಾದ್ಯಗಳಿಂದ ಹೋಗಿ [illegible] ಜಗದ್ಗುರುಗಳವರನ್ನು ಎದುರುಗೊಂಡರು. [illegible] ಸರ್ವರಿಗೂ ಆಶೀರ್ವದಿಸಿ ಸರ್ವರ [illegible] ಕಿರೀಟಧಾರಣವನ್ನು ಮಾಡಿ ಆನೆಯ [illegible] ಮಾಡಿದರು. ತತ್ಕಾಲದಲ್ಲಿ ವೈದಿಕರ [illegible] ಪಠನಾಸಂಪನ್ನರ [illegible] ಮಾಡುವ ಪಂಚಾಚಾರ್ಯ ಸ್ತೋತ್ರ [illegible] ಮಂಗಲವಾದ್ಯಗಳು [illegible] ಛತ್ರ ಚಾಮರ ಧ್ವಜಪತಾಕಾ [illegible] ಹಿಡಿಯಲ್ಪಟ್ಟು ಉತ್ಸವವು [illegible] ಹೊರಟಿತು. ಪ್ರೇಕ್ಷಕ ಜನರು ಸುಮಾರು 4000-5000 ಕ್ಕೆ ಕಮ್ಮಿ ಇಲ್ಲದಂತೆ ನೆರೆದಿದ್ದರು. ಆ ಕಾಲದಲ್ಲಿ ಇಲ್ಲಿಯ ಪೋಲೀಸ್ ಸ್ಟೇಷನ್ ದಫೇದಾರ [illegible] ಗೋಪಾಲರಾಯರವರು ಸಿಬ್ಬಂದಿ ಸಹಿತ [illegible] ಕೋಲಾಹಲಕ್ಕೆ ಆಸ್ಪದವಿಲ್ಲದಂತೆ ನೋಡಿಕೊಂಡಿದ್ದರು. ಸ್ವಾಮಿಗಳವರ ಉತ್ಸವವು ಬರುತ್ತಿರುವಾಗ್ಗೆ ಮಧ್ಯದಲ್ಲಿ ಫಲಪುಷ್ಪಾದಿಗಳನ್ನು ಅರ್ಪಿಸುತ್ತಿರುವ ಭಕ್ತಾದಿಗಳಿಗೆ ಆಶೀರ್ವದಿಸುತ್ತಾ ಗುರುಗಳವರು ಆನಂದಭರಿತರಾಗಿದ್ದರು. ಹೀಗೆ ಉತ್ಸವವು ಎಲ್ಲಾ [illegible] ನಿಯಮಿತ ಸ್ಥಳವಾದ [illegible] ಮುಂಭಾಗದಲ್ಲಿ ರಚಿಸಲ್ಪಟ್ಟ ಮಂಟಪಕ್ಕೆ ಬಂದ ಅಂದೋಲಿಕೆಯು ಇಳಿಸಲ್ಪಟ್ಟಿತು. ಒಡನೆಯೇ ಜಗದ್ಗುರುಗಳವರು ಪಲ್ಲಕ್ಕಿಯಿಂದಿಳಿದು ಆ ಮಂಟಪದಲ್ಲಿ ರಚಿಸಲ್ಪಟ್ಟ ಸಿಂಹಾಸನಾರೋಹಣವನ್ನು ಮಾಡಿದರು.

ಆಗ ಸರ್ವರೂ ಜಯಜಯಕಾರವನ್ನು ಮಾಡಿ ಉಚಿತ ಸ್ಥಳಗಳಲ್ಲಿ ಕುಳಿತುಕೊಂಡರು.

ತರುವಾಯ ವೇ|| ಆಸ್ಥಾನ ವಿದ್ವಾನ್ ಪರಮೇಶ್ವರ [illegible]ಗಳವರು ವೀರಶೈವ ಮತದ ಉತ್ಪತ್ತಿ ವಿಷಯದಲ್ಲೂ ಜಗದ್ಗುರುಗಳೆಂಬ ಹೆಸರು ಯಾರಿಗೆ ಸಲ್ಲುತ್ತದೆಂಬ ವಿಷಯದಲ್ಲಿಯೂ ಪಂಚಾಚಾರ್ಯರ ಉತ್ಪತ್ತಿ ವಿಷಯದಲ್ಲೂ ಉಚಿತವರಿತು ಯೋಗ್ಯವಾದ ಭಾಷಣಮಾಡಿದರು. ತರುವಾಯ ಗುರುಗಳವರು ಅರ್ಥಗಾಂಭೀರ್ಯ [illegible] ಕೂಡಿದ ತಮ್ಮ ಅಮೃತವಾಣಿಯಿಂದ ಸರ್ವಮತಗಳ ಮೂಲಪುರುಷರ ವಿಚಾರವನ್ನೂ ಮತತತ್ವಗಳ ವಿಚಾರವನ್ನೂ ಅಪ್ಪಣೆಕೊಡಿಸಿ [illegible] ನಮ್ಮ ಆಗಮನದ ಬಗೆಯಿಂದ ಇಷ್ಟು ಮುತುವರ್ಜಿಯಿಂದ ಕೆಲಸಮಾಡಿದ್ದಕ್ಕಾಗಿ ಆ ಬೇಣು

ಪಂಚಾ ಸಂತೋಷಪೂರ್ವಕವಾಗಿ ಆಶೀರ್ವಾದಿ ಸ್ತ್ವ ಎಂದು ಆಶೀರ್ವದಿಸಿದ್ದಲ್ಲದೆ ಪಂಚಾ ವೃದ್ಧಿಯು ನಿಮ್ಮಲ್ಲಿ ಉಂಟಾಗಲಿಕ್ಕೆ ಈ ದೇಶ ದ ಧರ್ಮಜ್ಞರಾದ ಶ್ರೀ ಕೃಷ್ಣರಾಜೇಂದ್ರ ರೇ ಮೂಲಕಾರಣರಾಗಿದ್ದಾರೆ. ಆದ್ದರಿಂದ ಜ್ಞರಾದ ನಮ್ಮ ಮಹಾರಾಜರವರಿಗೆ ರೇಣುಕನು ದಾ ಆಯುರಾರೋಗ್ಯವನ್ನುಂಟುಮಾಡಿ ಸದಾ ಪಾಲಿಯನ್ನಾಗಿ ಮಾಡಲೆಂದು ಹರಸಿದರು. ತರು ಸರ್ವಜನಗಳೂ ಶ್ರೀಕೃಷ್ಣರಾಜಕೀ ಜೈ, ಎಂ ಜಯಜಯಕಾರವನ್ನು ಮಾಡಿದರು ಮತ್ತು ರದು ವೀರಶೈವ ಒಕ್ಕಲರನ್ನು ಕುರಿತು ನೀವು ಕಾಣಿಕೆಯ ವಿಷಯದಲ್ಲಿ ಸ್ವಾಮಿಗಳು ಏನು ಕೇಳುವರೋ ಎಂದು ತಿಳಿದಿರಬಹುದು. ಅಂಥಾ ವಿಧವಾದ ಸಂಕೋಚವನ್ನೂ ಹಿಡಿದುಕೊಳ್ಳದೆ ಶಕ್ತ್ಯನುಸಾರ ಕಾಣಿಕೆಯನ್ನರ್ಪಿಸುವುದಲ್ಲದೆ ದಲ್ಲಿ ಮುಕ್ಕಾಂ ಇರುವ ವರೆವಿಗೂ ಭಕ್ತಿ ಂದ ಸೇವೆಯನ್ನು ಮಾಡಿ ಗುರುಕೃಪೆಗೆ ಪಾತ್ರರಾ ರೆಂದು ಅಪ್ಪಣೆಕೊಡಿಸಿದರು. ತರುವಾಯ ಟಿ ಗೌ|| ಪ್ರೈ|| ಸ್ಕೂಲ್ ಹೆಡಮಾಸ್ಟರಾದ ರಾಮಚಂದ್ರಯ್ಯನವರ ಏಕಮತ್ಯವೆಂಬ ದಲ್ಲಿ ಸ್ವಾರಸ್ಯವಾದ ಭಾಷಣಮಾಡಿದನಂತರ ಯು ವಿಸರ್ಜಿಸಲ್ಪಟ್ಟಿತು

ಕೆ ಸಿದ್ಧಲಿಂಗಾರ್ಯ, ಅ|| ಮಾ||
ಒಡೆಪೇಟೆ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ೧೦೮ ಕೇದಾರ ಜಗದ್ಗುರುಗಳ ಆಂದೋಲಿಕೋತ್ಸವವು.

ಮು ಇಲಾಖಾ ರಾಯಚೂರ ಜಿಲ್ಲಾ ಕುಷ್ಟಗಿ ತಾಲೂಕ ಪೈಕಿ ಕಡೂರಕ್ಕೆ ತಾ|| 1.11.27ಕ್ಕೆ ಯಿಂದ ಪ್ರೋಗ್ರಾಮ್ ನಿಶ್ಚಯಿಸಿದ ಪ್ರಕಾರ ೦೮ ಜಗದ್ಗುರು ಪಟ್ಟಾಧ್ಯಕ್ಷ ನೀಲಕಂಠಲಿಂಗ ಚಾರ್ಯ ಮಹಾಸ್ವಾಮಿಗಳವರ ಸವಾರಿಯು ಯಂಕಾಲಕ್ಕೆ ದಯಮಾಡಿಸುವದರೊಳಗಾಗಿ ಗ್ರಾಮದ ಬೃಹನ್ಮಠಾಧ್ಯಕ್ಷ ವೇ|| ಶಿವಸಂಗಪ್ಪ ವರ ಬಸವನಗೌಡ ಮಾಲೀ ಪಾಟೀಲ ಮತ್ತು ಂಗಗೌಡ ಪೋಲೀಸ ಪಾಟೀಲ ಸಿದ್ಧರಾಮನಗೌಡ ಟೀಲ ಈ ಪ್ರಮುಖರು ಯಾವತ್ತು ವೀರಶೈವ ವೀರ ವೇತರ ಗುರುಭಕ್ತರಿಂದೊಡಗೂಡಿ ಮೊದಲೇ ನಿಶ್ಚ ದ್ದ ಮಂಟಪದ ಬಳಿಯಲ್ಲಿ ನಿರೀಕ್ಷಿಸುತ್ತಿರುವಷ್ಟ ಜಗದ್ಗುರುಗಳವರ ಆಗಮನವಾಗಲು ಆ ಕ್ಷಣವೇ ವಾಗ ಕರತಾಡದೊಡನೆ ಶ್ರೀಮಜ್ಜಗದ್ಗುರು ಪಂ ಚಾರ್ಯಮಹಾರಾಜಕೀ ಜೈ ಎಂಬ ಆನಂದೋ ದ್ಗಾರವಂ ಗೈದು ಸಾಷ್ಟಾಂಗಪ್ರಣಾಮಪೂರ್ವಕ ಫಲ ದಿಗಳನ್ನರ್ಪಿಸಿ ಶೃಂಗರಿಸಿದ ಸುವರ್ಣಮಯವಾ ದ ಆಂದೋಲಿಕೆಯಲ್ಲಿ ಮಂಡಿಸುವದಕ್ಕೋಸ್ಕರ ಶ್ರೀಗ ರನ್ನು ಪ್ರಾರ್ಥನೆಯಂ ಗೈಯಲು ಭಕ್ತಾಪೇಕ್ಷ ಕಾರ ಶ್ರೀಗಳವರು ಆಂದೋಲಿಕೆಯನ್ನು ಆರೋ ಣಮಾಡಿ ಜಾಜ್ವಲ್ಯಮಾನವಾಗಿ ಕಂಗೊಳಿಸುವ ದಿರಿಂದ ಸಕಲ ರಾಜಬಿರುದಾವಳಿಗಳೊಂದಿಗೆ ವೇಶವಂ ಗೈಯಲು ಅಲ್ಲಲ್ಲಿಗೆ ಸುದಣಿಸಿ ನಿಂದಿ ಬಾಲಕ ಬಾಲಿಕೆಯರು ತಂಡತಂಡವಾಗಿ ಒಂದು ಸ್ತುತಿಯ ಘೋಷವನ್ನು ಮಾಡುತ್ತಿರಲು ಹರವಾಗಿ ಶೃಂಗರಿಸಿದ್ದ ನಂದಿ ದೇವಾಲಯವ ಜಗದ್ಗುರುಗಳವರು ಸಿಂಹಾಸನವನ್ನು ಆರೋ ಗೈಯಲು ಯಾವತ್ತರು ಕರತಾಡನದೊಂದಿ ದವಂ ಪ್ರಕಟಿಸಿದರು. ಆ ಮೇಲೆ ಶ್ರೀಗಳ ತರೋಪವಾಣಿಯಿಂದ ಆಚಾರ ಮತ್ತು ಧರ್ಮ ಯದಲ್ಲಿ ಸುಬೋಧವಂ ಗೈದು ಎಲ್ಲಾ ಮತಾ ಬಿಗಳನ್ನು ಸಂತೋಷಗೊಳಿಸಿ ಪ್ರಾಂಗೃಹಂಗ ಟಿಯ ಮಾರ್ಗವಾಗಿರುವ ಒಗ್ಗೆ ಆಸಕ್ತಿಯನ್ನಿತ್ತು ಸಾಭಿಮಾನವಂ ಪ್ರಕಟಿಸಿ ಅಹಿಂಸಾ ಪರಮೋ ಎಂಬ ಆರ್ಯೋಕ್ತಿಯನ್ನು ಬೋಧವಾಗುವಂತೆ ರಾದ ಭಕ್ತರಂ ಸಂತೋಷಗೊಳಿಸಿದರು. ಆ ಮೇಲೆ ನಮ್ಮ ಗ್ರಾಮದ ಸಮೀಪದಲ್ಲಿರುವ ಶ್ರೀ ಘನಮಠೇಶ್ವರ ಯತಿಗಳ ವಾಸಸ್ಥಾನವಾದ ಗದ್ದುಗೆ ಬಿಲ್ವ ವೃಕ್ಷಗಳಂ ಕಂಡು, ಅಲ್ಲಿಯೇ ಶಿವಾರ್ಚನೆಯನ್ನು ಮಾಡಲು ಅಪೇಕ್ಷಿಸಿದ್ದರಿಂದ ಗುರುಗಳಾಜ್ಞೆಗನುಸರಿಸಿ ಭಕ್ತನನೊಬ್ಬ ಆಸ್ಥಾನವಂ ಪರಿಶುದ್ಧಗೊಳಿಸ ಅಲ್ಲಿಯೇ ಮಹಾಗಣಾರಾಧನೆಯನ್ನು ನೆರವೇರಿಸಲು, ಶ್ರೀಗಳವರು ಆ ಗಣಸಮೂಹದೊಡನೆ ಅನೇಕ ಗ್ರಾಮದ ಭಕ್ತರೊಡಗೂಡಿ ಸಮಾರಾಧನೆಯಂ ನೆರವೇರಿಸಿದರು. ಯಾವತ್ತೂ ಭಕ್ತರು ಗುರುಕಾಣಿಕೆಯನ್ನು ಅರ್ಪಿಸಿ ಆಶೀರ್ವಾದವಂ ಪಡೆದರು. ಮರುದಿವಸ ಪ್ರಾತಃಕಾಲಕ್ಕೆ ಕುಷ್ಟಗಿ ತಾಲೂಕ ಪೈಕಿ ದೋಟೀಹಾಳ ಗ್ರಾಮಕ್ಕೆ ಅತಿ ಸಂಭ್ರಮದೊಡನೆ ವಿಜಯಂಗೈದರು. ನಮ್ಮ ಗ್ರಾಮದ ಪುಣ್ಯವೆಷ್ಟೆಂದು ಬಣ್ಣಿಸೋಣ! ಶ್ರೀ ಹಿಮವತ್ಕೇದಾರದಲ್ಲಿರುವ ಕೇದಾರನಾಥಲಿಂಗದಿಂದುದ್ಭವಿಸಿದ ಏಕೋರಾಮಸಿಂಹಾಸನಾಧೀಶ್ವರರ ದರ್ಶನವೆಲ್ಲಿ? ನಮ್ಮ ಗ್ರಾಮವೆಲ್ಲಿ? ನಮ್ಮ ಪೂರ್ವಾರ್ಜಿತ ಪುಣ್ಯವೆಂದೇ ಗ್ರಹಿಸತಕ್ಕದ್ದು

ಗುರುಭಕ್ತ
ಗುರುಸಂಗಗೌಡ ಪಾಟೀಲ ಕಡೂರ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಗುರುಭಕ್ತಿ.

ಶ್ರೀ ಪರಮೇಶ್ವರನ ಪಂಚಮುಖಗಳಿಂದುದಯಿಸಿದ ರೇಣುಕ ದಾರುಕಾದಿ ಪ್ರಮಥ ಪುಂಗವರು ಭೂಲೋಕದಲ್ಲಿ ಕೊಲ್ಲಿಪಾಕಿ ಸೋಮೇಶ ಮೊದಲಾದ ಲಿಂಗಗಳಿಂದ ಉದ್ಭವಿಸಿ ವೀರಶೈವ ಧರ್ಮವನ್ನು ಸ್ಥಾಪನೆ ಮಾಡಿದ ವಿಷಯವು ಆಗಮಾದಿಗಳಲ್ಲಿ ಘಂಟಾಘೋಷವಾಗಿ ಪ್ರತಿಪಾದಿಸಲ್ಪಟ್ಟಿರುವುದು. ವೈದಿಕ ಧರ್ಮೋದ್ಧಾರಕ್ಕೆ ಜನ್ಮಸ್ಥಾನವಾದ ಈ ಭರತಖಂಡದಲ್ಲಿ ವೇದಾಗಮಾದಿಗಳು ಈಶ್ವರನ ವಾಕ್ಯವೆಂಬದಾಗಿ ನಂಬಲ್ಪಟ್ಟು ಅದರಂತೆ ಆಚರಣೆಯಲ್ಲಿರುವುದು ಸರ್ವರಿಗೂ ವೇದ್ಯವಾದ ವಿಷಯವೇ ಆಗಿರುತ್ತದೆ. ಪ್ರಪಂಚದ ಯಾವ ಭಾಗಗಳಲ್ಲಿಯಾದರೂ ಕೂಡ ಮತಸ್ಥಾಪನಾಚಾರ್ಯರಿಗೆ ಅಗ್ರಸ್ಥಾನವನ್ನು ಅಂಗೀಕರಿಸಿರುವರು. ಉದಾಹರಣೆಯಾಗಿ ಕ್ರೈಸ್ತರಲ್ಲಿ ಏಸುಕ್ರಿಸ್ತನು ಪರಮಗುರುವೆಂದೂ ಮಹಮ್ಮದೀಯರಲ್ಲಿ ಮಹಮ್ಮದನೇ ಪರಮಗುರುವೆಂದೂ ಬೌದ್ಧರು ಬುದ್ಧನೇ ಪರಮಗುರುವೆಂದೂ ತ್ರಿಮತಸ್ಥ ಬ್ರಾಹ್ಮಣರು ಶಂಕರಾಚಾರ್ಯ ಮಧ್ವಾಚಾರ್ಯ ರಾಮಾನುಜಾಚಾರ್ಯ ಇವರುಗಳೇ ಪರಮಗುರುಗಳೆಂದೂ ಭಾವಿಸಿರುವರು. ಅದರಂತೆಯೇ ವೀರಶೈವ ಮತಸ್ಥಾಪಕರೂ ಶಿವಾಂಶೀಭೂತರಾದ ಶ್ರೀ ರೇಣುಕಾದಿ ಪಂಚಾಚಾರ್ಯರು ಪರಮಗುರುಗಳೆಂಬುದು ಎಂಥ ಪಾಮರರಿಗಾದರೂ ತಿಳಿಯತಕ್ಕದ್ದಾಗಿರುತ್ತದೆ. ಆ ಭಗವದಾಚಾರ್ಯರು ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಮೊದಲಾದ ಮುಕ್ತಿಸಾಧನ ಮಾರ್ಗಗಳನ್ನು ಕಲ್ಪಿಸಿ ಮೋಕ್ಷಸಾಧನೆಗೆ ತಕ್ಕ ಮಾರ್ಗವನ್ನು ತೋರಿಸಿಕೊಟ್ಟಿರುವರು. 'ಆಚಿನೋತಿಹಿ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ || ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಕೀರ್ತ್ಯತೇ' ಎಂಬ ಶಾಸ್ತ್ರಾನುಸಾರವಾಗಿ ಧರ್ಮಶಾಸ್ತ್ರವನ್ನು ಬೋಧಿಸಿ ಅದರಂತೆ ತಾವೂ ಆಚರಿಸಿ ಪ್ರಪಂಚದಲ್ಲಿ ಆಚಾರ್ಯನಾಮವನ್ನು ಅನ್ವರ್ಥಮಾಡಿರುವರು. ಆ ಮಹಾಚಾರ್ಯರ ಧರ್ಮಪೀಠಗಳು ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ವ್ಯಾಪಿಸಿರುವದು ದಿಗಂತವಿಶ್ರಾಂತವಾದ ಸಂಗತಿಯಾಗಿದೆ. ಆ ಧರ್ಮಪೀಠಗಳಲ್ಲಿ ತಮ್ಮಂತೆಯೇ ಯೋಗ್ಯರಾದ ಪ್ರಮಥರನ್ನು ನಿಯಮಿಸಿ ದಿವ್ಯದೇಹದಿಂದಲೇ ಶಿವಲೋಕವನ್ನು ಹೊಂದಿ ಲಿಂಗೈಕ್ಯರಾಗಿರುವರು. ಅಂದಿನಿಂದಲೂ ಆ ಧರ್ಮಪೀಠಗಳಿಗೆ ಯೋಗ್ಯ ಮೂರ್ತಿಗಳು ದೊರತು ಧರ್ಮವನ್ನು ಉದ್ಧಾರಮಾಡುತ್ತಲೇ ಬಂದಿರುವರು. ಕಾಲವಶದಿಂದ ಪೀಠಗಳಿಗೆ ವಿದ್ಯಾ, ವಂಶ ಮಹಾತ್ಮ್ಯ ಈ ಮೂರರಲ್ಲಿಯೂ ಸಮವಾದ ಯೋಗ್ಯತೆಯನ್ನು ಪಡೆಯದ ಮೂರ್ತಿಗಳು ಸೇರಿದುದರಿಂದ ಸ್ವಲ್ಪ ಮಲಿನಾವಸ್ಥೆಯನ್ನು ಹೊಂದಿತ್ತು. ಯಾವುದನ್ನು ಸಹಿಸಿದರೂ ಕೂಡ ಧರ್ಮದ್ರೋಹವಾಗುವುದನ್ನು ನೋಡಿ ಪರಮೇಶ್ವರನು ಸಹಿಸುವದಿಲ್ಲವೆಂದು ತೋರುತ್ತದೆ. ಏಕೆಂದರೆ ವೀರಶೈವಧರ್ಮದ ಯಥಾರ್ಥತತ್ವವನ್ನು ಬೋಧಿಸುವ ಪಂಡಿತೋತ್ತಮರುಗಳನ್ನು ದೂರಿಗೆ ಗೋಚರವಾಗ ಹತ್ತಿರುವರು. ಅಲ್ಲದೆ ಮೂಲಾಚಾರ್ಯರಂತೆಯೇ ಮಹಾಮಹಿಮೆಗಳನ್ನು ಪಡೆದ ಧರ್ಮಮೂರ್ತಿಗಳು ಪಂಚಸಿಂಹಾಸನಗಳನ್ನು ಅಲಂಕರಿಸಿರುವರು. ಇದೆಲ್ಲ ಅನುಕೂಲತೆಯನ್ನು ಕಲ್ಪಿಸಿ ಕೊಟ್ಟಿರುವ ಆ ದಯಾಘನನಾದ ಶಂಕರನನ್ನು ಎಷ್ಟು ಸ್ತೋತ್ರ ಮಾಡಿದರೂ ತೀರದಾಗಿರುತ್ತದೆ. ವೀರಶೈವ ಸಾಮ್ರಾಜ್ಯದ ಅಧ್ಯಕರ್ತೃಗಳು ಈ ಪೀಠದ ಗುರುಸರ್ವೋತ್ತಮರಿಂದಲೇ ಆಗಬೇಕಾಗಿರುವವು. ಚತುರಾಶ್ರಮದವರೂ ಕೂಡ ಗುರುಬೋಧಾಮೃತಪಾನದಿಂದ ಪಾಪಾದಿಯಿಂದ ಬಿಡುಗಡೆ ಹೊಂದಿ ಮೋಕ್ಷಸಾಮ್ರಾಜ್ಯವನ್ನು ಅನುಭವಿಸಬೇಕಾಗಿರುವುದು! ಈ ವಿಚಾರವು ವೇದಾಗಮೋಪನಿಷದಾದಿಗಳಲ್ಲಿ ಕರತಲಾಮಲಕವಾಗಿ ವಿವರಿಸಲ್ಪಟ್ಟಿರುವುದು. ಯತಿ ಪುಂಗವರಾದ ನಿಜಗುಣಾರ್ಯರು 'ಶ್ರೀ ಗುರುವಚನೋಪದೇಶವನಾಲಿಸಿದಾಗಳೆಮಡು ನರರಿಗೆ ಮುಕುತಿ ಎಂಬದಾಗಿ ಬೋಧಿಸಿರುವರು. ಶ್ರೀ ಪರಮಾತ್ಮನೂ ಕೂಡ 'ನಗುರೋರಧಿಕಂ ನಗುರೋರಧಿಕಂ ಎಂದು ಶ್ರುತಿಯಲ್ಲಿ ಸಾರಿರುವನು. ಹೀಗಿರುವಾಗ ಪಾಮರರಾದ ನಾವು ಆ ಗುರುಸಾರ್ವಭೌಮರ ಮಹಿಮೆಯನ್ನು ವರ್ಣಿಸುವುದು ಅಸಾಧ್ಯವೇ. ಸರಿ. ಕಲ್ಪವೃಕ್ಷದಂತೆ ಬೇಡಿದಿಷ್ಟಾರ್ಥವನ್ನು ಕೈಗೂಡಿಸತಕ್ಕವರಾಗಿರುವರು. ಸಮಾಜದ ಪುಣ್ಯಪರಿಪಾಕದಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ದೇಶಮಧ್ಯದಲ್ಲಿ ಸಂಚರಿಸಿ ಶಿಷ್ಯೋದ್ಧಾರ ಕಾರ್ಯವನ್ನು ನೆರವೇರಿಸುತ್ತಿರುವರು. ಕೆಲವರು ಅಜ್ಞಾನದಿಂದಲೋ ಅಥವಾ ಪರಪ್ರೇರಣೆಯಿಂದಲೋ ಪರಮಗುರುಗಳ ವಿಷಯದಲ್ಲಿ ಉದಾಸೀನರಾಗಿರುವುದು ವಿಹಿತವಾಗಿರುವುದಿಲ್ಲ. ಧರ್ಮಗುರುಗಳ ಸೇವೆಯನ್ನು ತ್ರಿಕರಣಪೂರ್ವಕವಾಗಿ ಸಕಲ ವೈದಿಕಮತದವರು ಮಾಡುತ್ತಿದ್ದಾರೆ. ಅದರಂತೆಯೇ ನಾವೂ ಕೂಡ ಜಗದಾಚಾರ್ಯರ ಸೇವೆಯನ್ನು ನೆರವೇರಿಸಬೇಕೆಂಬುದನ್ನು ಬೇರೆ ಹೇಳಬೇಕಾಗಿರುವುದಿಲ್ಲ. ಸಮಸ್ತ ನದಿಗಳು ಸಮುದ್ರವನ್ನು ಸೇರುವಂತೆ ಸಕಲಾಶ್ರಮದವರೂ ಶ್ರೀ ಗುರುಬೋಧೆಯಿಂದಲೇ ಧನ್ಯರಾಗಬೇಕಾಗಿರುತ್ತದೆ. ನಾವು ಎಷ್ಟೇ ಮಹಿಮಾಶಾಲಿಗಳಾಗಿ ಲೋಕ ವಿಖ್ಯಾತರಾದರೂ ಆ ಗುರು ಬೋಧೆಯಿಂದಲೇ ಮೊದಲು ಅನ್ಯಥಾ ಇಲ್ಲವೆಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಾಗಿರುತ್ತದೆ. 'ಕ್ರಮತಪ್ಪಿ ನಡೆಯುವುದರಿಂದತಿಕಷ್ಟಮುಂಟೆ' ಎಂಬಂತೆ ಯಾರೂ ಧರ್ಮಮಾರ್ಗವನ್ನು ಮೀರಿ ನಡೆಯಬಾರದು. ಕೆಲವರು ವೃತ್ತ ಪತ್ರಿಕೆಗಳಲ್ಲಿ ಮನಬಂದಂತೆ ಪ್ರಶ್ನೆಗಳನ್ನು ಕೇಳುವರು. ಧರ್ಮವನ್ನು ತಿಳಿದುಕೊಳ್ಳತಕ್ಕವರು ಧರ್ಮಗುರುಗಳನ್ನಾಶ್ರಯಿಸಿ ಅವರಿಂದ ಧರ್ಮ ಸೂತ್ರಗಳನ್ನು ತಿಳಿದುಕೊಂಡು ಅದರಂತೆ ಆಚರಿಸುವುದು ನ್ಯಾಯವಾಗಿದೆ. ಅದನ್ನು ಬಿಟ್ಟು ಪತ್ರಿಕೆಗಳ ಮೂಲಕ ಪ್ರಶ್ನೆಗಳನ್ನು ಕೇಳುವುದು ಯಾರಿಗೂ ಭೂಷಣವಲ್ಲವು. ಜಗದೀಶನು ಯಾರು ಭೂಷಿಸಲಿ ಯಾರು ದೂಷಿಸಲಿ ಯಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ ಸರ್ವರಿಗೂ ಹಿತವನ್ನೇ ಹೇಗೆ ಚಿಂತಿಸುವನೋ ಅಂತೆಯೇ ಆ ಪರಶಿವಾಂಶೀಭೂತರಾದ ಜಗದಾಚಾರ್ಯರು ಎಲ್ಲರನ್ನು ಏಕರೀತಿಯಿಂದಲೇ ಕಂಡು ಅವರ ಅಜ್ಞತೆಯನ್ನು ಸದುಪಾಯದಿಂದ ಹೋಗಲಾಡಿಸುತ್ತಿದ್ದಾರೆ. ಇನ್ನಾದರೂ ಸಮಾಜಬಾಂಧವರು ಇವರು ನಮ್ಮ ಮತದ ಮೂಲಗುರುಗಳು. ಇವರನ್ನು ಆಶ್ರಯಿಸುವುದರಿಂದ ನಮ್ಮ [illegible] ಹೀಗೆ ಸೌಖ್ಯವುಂಟಾಗುತ್ತದೆ ಎಂಬುದನ್ನು ನಿರ್ಮತ್ಸರಮನಸ್ಸಿನಿಂದ ಆಲೋಚಿಸಿ ವಕ್ರಮಾರ್ಗವನ್ನು ತ್ಯಜಿಸಿ ಸರಳಮಾರ್ಗವನ್ನು ಅನುಸರಿಸುವುದರ ಮೂಲಕ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗುವರೆಂದು ಹಾರೈಸುತ್ತೇನೆ

ಗುರುಕಿಂಕರ
ಟ್ರೈನಿಂಗ್ ಕಾಲೇಜ್ ಮೈಸೂರು
ಎಸ್ ಎಂ ಬಸವಯ್ಯ
ಕಂಬಾಳಮಠ ಹಿಂಟಗಿರಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಜಗದ್ಗುರುಗಳಲ್ಲಿ ಪ್ರಾರ್ಥನೆ.

ಶ್ರೀ ಜಗದ್ಗುರು [illegible] ... ೩೧ ... ಶಾಸ್ತ್ರೀ ... ಪಂಚಾಚಾರ್ಯಪ್ರಭಾ ಪತ್ರಿಕೆಯ ... ಕಲ್ಯಾಣದ ಮಠ ... ಮಡಿವಾಳಯ್ಯ ... ಪಂಚಾಚಾರ್ಯಪ್ರಭಾ [illegible] ... ಪತ್ರಿಕೆಯನ್ನು ... ಈ ಕಾರ್ಯ ... ಪೀಠಾಧಿಪತಿಗಳು ... ಪಾತ್ರರಾಗುತ್ತೀರಿ ... ಮತ್ತು ಗುರುಸ್ಥಲದ ... ಈ ಪತ್ರಿಕೆಯನ್ನು ... ಅನೇಕ ... ತೆಗೆದುಕೊಂಡು ... ಅನೇಕ ದೋಷಗಳನ್ನಿಟ್ಟು ... [illegible]

ಮಡಿವಾಳಯ್ಯ ನವರು

[illegible]

ಶ್ರೀ ಕಪ್ಪೂರು ಗದ್ದುಗೆ ಮಠದ ಮರುಳ ಸಿದ್ಧಸ್ವಾಮಿ ವಾರ್ಷಿಕ ಕೃತ್ತಿಕೋತ್ಸವ.

ಸ್ವಸ್ತಿಶ್ರೀ ವಿಜಯಾಭ್ಯುದಯ ... ಶಾಲಿವಾಹನಶಕ ... ಪ್ರವರ್ತಮಾನಕ್ಕೆ ... ಪ್ರಭವನಾಮ ಸಂವತ್ಸರದ ... ಬುಧವಾರ (ತಾ|| 7 12 27) ... ಗುರುವಾರ (8 12 27) ... ಶ್ರೀ ಸ್ವಾಮಿಯ ... ಮರುಳಸಿದ್ಧಾಚಾರ್ಯ ... ಮಹಾಮಂಗಳ ... ಕಪ್ಪೂರು ಗದ್ದುಗೆ ಮಠದಲ್ಲಿ ... ಶ್ರೀಗುರು ಮರುಳ ಸಿದ್ಧಾಚಾರ್ಯ ಮಹಾಸ್ವಾಮಿಯ ... ಪಾತ್ರರಾಗತಕ್ಕದ್ದೆಂದು ... ಕೋರುವೆ

ಶ್ರೀ ಕಪ್ಪೂರು ಗದ್ದುಗೆ ಮಠ ತಾ|| ತಿಪ್ಪನಾಯ್ಕನಹಳ್ಳಿ ಡಿ|| ತುಮಕೂರು	ಶ್ರೀ ಕಪ್ಪೂರು ಗದ್ದುಗೆ ಮಠದ ವೀರಪ್ಪ ದೇವರು

ತಿಪಟೂರು ... ರೈಲ್ವೆ ಸ್ಟೇಷನ್ನುಗಳಲ್ಲಿ ಮೋಟಾರ ಸರ್ವಿಸ್ ಇರುತ್ತೆ

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು

ಶ್ರೀ ಜಗದ್ಗುರು ... ಮಹಾ ಸಂಸ್ಥಾನದ ... ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ... ವೀರಶೈವ ... ವೇ|| ಪಂ|| ... ಶಾಸ್ತ್ರಿಗಳವರು ಅತ್ಯಂತ ಪ್ರಯಾಸದಿಂದ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು ವೀರಶೈವ ಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ಕೊಂಡು ಓದಿಕೊಳ್ಳಬೇಕು

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1 8-0
ಈಶಾವಾಸ್ಯೋಪನಿಷತ್ (ಶಾಂಕರವ್ಯಾಖ್ಯಾ)	1 0-0

ವಿಳಾಸ — ವೇ|| ಚನ್ನಯ್ಯ ಹೊಸಪುರ,
ಪೋಸ್ಟು ಹರಿಹರ ಡಿ|| ಚಿತ್ರದುರ್ಗ.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ಶ್ರೀ ವೀರಭದ್ರದೇವರ ವಚನ ಶಾಸ್ತ್ರವೆಂಬ ಒಡವಿನ ಪುಸ್ತಕವು.

... ಮನನೀಯವಾದ ... ದೇವತೋತ್ಸವಗಳಲ್ಲಿಯೂ ... ರಥೋತ್ಸವ ಕಾಲಗಳಲ್ಲಿ ... ಸ್ತೋತ್ರಗಳನ್ನು ... ಪಠನಕ್ಕೆ ... ಸಾಧ್ಯವಾದ ಒಂದು ಪುಸ್ತಕವ ... ಈ ಗ್ರಂಥದ ... ಮುದ್ರಣ ಮಾಡಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ... ಸಂಬಂಧವಾದ ವಚನಗಳು, ... ಅವತಾರಗಳು, ... ಶರಭಾವತಾರ, ... ಲಿಂಗಧಾರಣ ... ಪತಿವ್ರತಾ ಸ್ತ್ರೀಯರ ... ಇಷ್ಟಲಿಂಗ ... ಅನೇಕ ... ದೇವತಾ ಪತಾಕುಗಳು ... ಮತ್ತು ನಮ್ಮಲ್ಲಿ ... ಜಗದ್ಗುರುಗಳವರು ಮತ್ತು ಶ್ರೀ ... ಜಗದ್ಗುರುಗಳವರು ಒಂದರಲ್ಲೇ ... ಸುಂದರವಾದ ಫೋಟೋಗಳು ... ಪ್ರತಿ ಪೋಟೋ ಒಂದಕ್ಕೆ ... ಪುಸ್ತಕದ ಬೆಲೆ ... ವೀರಶೈವ ಮತಗ್ರಂಥಗಳು ... ಪುಸ್ತಕಗಳೂ ನಮ್ಮ ದೊರೆಯುತ್ತವೆ ... ಬರೆಯಿರಿ

ವಿಳಾಸ — ... ಪ್ರೋ ... ಜಿಲ್ಲಾ ಬಳ್ಳಾರಿ

[illegible] ಅನೇಕ ... ಪ್ರಖ್ಯಾತ

... ಡಾಕ್ಟರರೊಬ್ಬನು

ಕಂಡುಹಿಡಿದ ಸಿದ್ಧೌಷಧ.

... ಸಂಜೀವನೌಷಧವನ್ನು ಕಂಡು ... ಡಾಕ್ಟರನೊಬ್ಬನು ... ಕೊನೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

... ಅನೇಕ ... ಅಜೀರ್ಣ ... ಅಥವಾ ... ಅಥವಾ ... ವಿವಿಧ ... ಕೆಮ್ಮು ಮತ್ತು ... ಉಪಯೋಗಿಸುತ್ತಿ ... ಈ ಜೀವನಾಧಾರವೆಂಬ

ಸಂಜೀವನೌಷಧ

... ಈ ಜೀವನಾಧಾರ ... ಒಂದಕ್ಕೆ ... ಒಂದಕ್ಕೆ ... ಬೇಕಾದವರು ...

[illegible]

[illegible]

ಪತ್ರವ್ಯವಹಾರ ...

ಜೀವನಾಧಾರ ದಿಸ್ಪೆನ್ಸರಿ, ...

ASIATIC GOVERNMENT SECURI
LIFE ASSURANCE CO, LTD, MYSO

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂ
ಲೈಫ್‌ಅಸ್ಯೂರೆನ್ಸ್ ಕಂಪನಿ, ಮೈಸೂ

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘ
ಮುಂದಾಳಾದುದು.

ಆದ್ದರಿಂದ ಯಾವಾಗಲೂ "ಏಷ್ಯಾಟಿಕ್'
ನಿಯಲ್ಲಿಯೇ ವಿಮೆ ಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯ
ಮತ್ತು ಇದರ ಏರ್ಪಾಡುಗಳು (ಸ್ಕೀಮು)
ವಾದುವು

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ
ಮಿಯಮಿನ ಮೇಲೆಯೂ, ಪಾಲಿಸಿದಾರರಿಗೆ ಅವರ
ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ
ಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯು

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿ
ರಿಗೆ ಬರೆಯಬಹುದು

(1) ಮ|| ಡಿ ರಾಜಣ್ಣ, ಜೀಫ್ ಏಜೆಂಟ್,
ಏಸಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾ
ರೋಡ್, ಮೈಸ

(2) ಮ|| ಜಿ. ಎಸ್. ಆರಾಧ್ಯ
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು

(3) ಹೈದರಾಬಾದ್ ಎಕಾನಮಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದ

[24]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯ
ಯು ಕಂಡುಹಿಡಿಯಲ್ಪಟ್ಟು, ಸಾವಿರಾರು
ಇದನ್ನು ಉಪಯೋಗಿಸಿ, ಸಾವಿರಾರುಗ
ಯೋಗ್ಯತಾ
ಳನ್ನು ಕೊಟ್ಟಿ
ರು. ಪ್ರಸಿದ್ಧ
ಈ ನಶ್ಯದ
ಯಿಂದ ಸ್ವಸ್ಥ
ವ ವ್ಯಾಧಿಗಳು
ಪವೆಂದರೆ:—
ಒಂಟಿಕಲೆನೋ
ತಲೆಯಲ್ಲಿನ ರೋ

ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ
ಜಲದೋಷ ಮುಂತಾದ ವ್ಯಾಧಿಗಳು ಪರಿಹಾರ
ವಲ್ಲದೆ ಕಂಠಕ್ಕ ಮೇಲ್ಪಟ್ಟ ಸಕಲ ವ್ಯಾಧಿಗ
ನ್ನ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ
ಡುತ್ತದೆ ಮಾರುಬೆಟ್ಟಿನ ಸಾಧಾರಣ ನಶ್ಯದ
ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆ
ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು
ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ
ಔಷದವಾಗಿ ಉಪಯೋಗಿಸುತ್ತಾರೆ. ಮಾದ
ಪುಗಸಟ್ಟೆ ಕಳುಹಿಸಲಾದೀತು.

ಒಟ್ಟು ಒಂದಕ್ಕೆ ಕ್ರಯ ರೂ ೦-೪-೦. ವಿ.ಪಿ
ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ ಪಿ

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ
ವಾಗಿ ತಿಳಿಯುವಂತೆ ಬರೆಯಿರಿ —ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆ

[5] ಪೋ ಬಾ ೫೧೦, ಮದರಾಸು

ಶ್ರೀಪಾದ್ ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅ
ವೇ|| ಬ್ರಂ|| ಪಂಡಿತ ಶಿವ ಗುರು
ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದು

8 DEC 27

303 MYSORE

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ISTERED No. M. 2260

ಪಂಚಾಚಾರ್ಯಪ್ರಭಾ

ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕ

[illegible]

[illegible]

ಸಂಪಾದಕರು—ಆಸ್ಥಾನ ವಿದ್ವಾನ್ ಸ|| ಶಿರಸಿ ಗುರುಶಾಂತಶಾಸ್ತ್ರಿಗಳು.

ರಿಗೆ ೧ ರೂ. ೧೧ ಆಣೆ — ಬಿಡಿ ಪ್ರತಿ ೧ಕ್ಕೆ ೬ ಪೈ. — ಪರಸ್ಥಳದವರಿಗೆ ೨ ರೂ. ೮ ಆಣೆ.

ಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ ನೇ ಡಿಸೆಂಬರ್ ೧೯೨೭ [ಸಂಚಿಕೆ ೩೦.

ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಭಾ ಪ್ರಭಾವ.

ಸದ್ಗುಣಪೂರಿತ ಮುದ್ದು ಪ್ರಭೆಯೇ, ನೀನು ಸದ್ಗು ನಾಮದಿಂದ ಮೆರೆಯುತ್ತಿರುವದು ಸರಿಯಷ್ಟೆ! ಸಭ್ಯಾಧ್ಯಕ್ಷ ಹುಟ್ಟಿಗೆ ಪಾರದ ಪಾಂತಶಾಲಾ ಸೋ ಪುರ ಇವರಲ್ಲಿ ನಿನ್ನ ದರ್ಶನವನ್ನು ತೆಗೆದುಕೊಂಡೆ ನಿನ್ನ ದರ್ಶನವಾದ ಕೂಡಲೆ ನನ್ನ ಅಜ್ಞಾನಾಂಧಕಾರವು ಅಡಗಿ ಸುಜ್ಞಾನಾಮೃತಸಾಗರದಲ್ಲಿ ದ್ದೇನೆ. ನೀನು ಬಾಲ್ಯದಿಂದ ಕೂಡಿದ್ದರೂ ಮಹನೀಯರ ಸಮಾನದಲ್ಲಿರುವಿಯಲ್ಲವೇ? ಮಯು ಈಗಲೇ ದಿಬ್ಬಗಳನ್ನು ವ್ಯಾಪಿಸಿ ಪ್ರಕಾಶಕ್ಕೆ ತಪ್ಪಿದೆ. ಸೂರ್ಯನು ದಿವಸದಲ್ಲಿ ಚಂದ್ರನು ರಾತ್ರಿಯಲ್ಲಿಯೂ ಪ್ರಕಾಶಿತರಾಗಿ ನೀನು ಮಾತ್ರ ಹಗಲೂ ಇರುಳೂ ಪ್ರಕಾಶಿಸುವಿ ನೀನು ಯಾವಾಗಲೂ ಸಮಾಜ ಸುಧಾರಣೆ ಸದಲ್ಲಿಯೂ ಹಾಗೂ ಗುರುಸೇವೆಯಲ್ಲಿಯೂ ದ್ದು, ಕುಮತ ಕುಪಂಡಿತ ದ್ರುಮಗಳಿಗೆ ಕುಠಾ ಯವಾಗಿಯೂ, ಸತ್ಪಂಡಿತಮಂಡಲಕ್ಕೆ ಮಂಡ ನವಾಗಿಯೂ ವೀರಶೈವ ಸಮಾಂಗಕ್ಕೆ ಸನ್ಮಾ ರ್ಗಿಯಾಗಿಯೂ ಇರುವದು ಕೇವಲ ಶ್ರೀಮಜ್ಜ ರು ಪಂಚಾಚಾರ್ಯರ ಪ್ರಭಾವವೇ ಸರಿ! ನೀನು ತಕ್ಕ ಪಂಚಾಚಾರ್ಯ ಪ್ರಭಾನಾಮವು ಸಾರ್ಥ ವು! ಪರಂತು ಪ್ರಭೆಯೇ, ನಿನ್ನ ಪ್ರಭಾವವನ್ನು ಸಹಿಸದ ಕೆಲ ಜನರು ತಮ್ಮ ದುರ್ಗುಣಗಳ ಕಲ್ಲುತ್ತವಾದು ಜಲ್ಪಿಸುತ್ತಿರುವರು. ಆದಾಗ್ಯೂ, ಅವರನ್ನು ಸನ್ಮಾರ್ಗಕ್ಕೆ ತರುವ ಪ್ರಯತ್ನದಲ್ಲಿ ಇಲ್ಲವೇ? ಸ್ತುತ್ಯ! ಸ್ತುತ್ಯ!

ನಿನ್ನ ದರ್ಶನವಾದರೆ ಶ್ರೀ ಜಗದ್ಗುರು ಚಾರ್ಯರ ದರ್ಶನವಾದಂತೆಯೇ ಸರಿ! ನಿನ್ನ ನ್ನು ನಿತ್ಯದಲ್ಲಿಯೂ ತೆಗೆದುಕೊಳ್ಳುವವರಂತೂ ಧನ್ಯಾತ್ಮರು! ನಿನ್ನ ಉತ್ಪತ್ತಿಗೆ ಕಾರಣೀಭೂ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳಿಗೆ ಇದೀ ಋಣಿಯಾಗಿದೆ. ನೀನಿರುವ ಪರ್ಯಂತರ ನಶ್ವರ ಆಗಿದೆ! ಕಾವ್ಯತೀರ್ಥರು ಮತ್ತು ಆಸ್ಥಾ ರೂ ಚಿರಾಯುಗಳಾಗಿ ಬಾಳಲೆಂಬುದಾಗಿ ವಿಸಲೆಂದು ಈ ಅಕಿಂಚನ ಪಂಚಾಕ್ಷರಿಯು ಕಿಂ ಎಡೆಬಿಡದೆ ಆಚಾರ್ಯಚರಣಕ ಭಜಿಸುತ್ತಾನೆ.

ಪ್ರಭೆಯ ಕಿಂಕರ, ಪಂಚಾಕ್ಷರ ಗವಾಯಿ
ಗಂಧಾರ ಮೊಕ್ಕಾಂ ಪಂಢರಪುರ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುದ್ರೋಹಿಗಳ ಆರ್ಭಟವು ಇನ್ನೂ ತಗ್ಗಲಿಲ್ಲವು.

ಈ ತಿಂಗಳಿನ 3 ನೆಯ ತಾರೀಖಿನ ಸ್ವರಾಜ್ಯಪತ್ರಿಕೆಯಲ್ಲಿ "ಶ್ರೀಮದ್ಬಸವಾದಿ ಪ್ರಮಥರ ನಿತ್ಯ ನಿಂದಕರಾದ ಪೀಠಾಚಾರ್ಯರಿಗೂ ಮತ್ತು ಇವರ ಅನುಯಾಯಿಗಳಿಗೂ ಇನ್ನು ಮೇಲಾದರೂ ಜ್ಞಾನೋದಯವಾಗುವದೇ?" ಎಂಬ ಹೆಡ್ಡಿಂಗಿನಿಂದ ಯಾರೋ ಒಬ್ಬ ಗುರುದ್ರೋಹಿಯು ತನ್ನ ಹೆಸರು ಇಲ್ಲದ ಅತ್ಯಂತ ದುರೋಕ್ತಿಗಳಿಂದ ಕೂಡಿದ ಒಂದು ಅಮಂಗಲ ಲೇಖವನ್ನು ಪ್ರಕಟಿಸಿದ್ದಾನೆ. ಈ ಲೇಖವು ಹೆಸರಿಲ್ಲದೆ ಪ್ರಕಟವಾಗಿರುವದರಿಂದ ಇದು ಯಾರ ಕೃತಿಯಿರಬಹುದೋ ಏನೋ ತಿಳಿಯದಾಗಿದೆ. ಪ್ರತಿಯೊಂದು ಪೀಠದವರೂ ಕೂಡ ಚಿತ್ರಕಲ್ಲದುರ್ಗದ ಮುರಿಗಿಮಠಕ್ಕೆ ಪತ್ರವನ್ನು ಬರೆದುಕೊಂಡಿರುವರೆಂದೂ, ಆ ಪತ್ರಗಳು ಮುರಿಗೇಮಠದಲ್ಲಿ ಅನೇಕವಾಗಿರುವವೆಂದೂ, ಅದರಲ್ಲಿ ರಂಭಾಪುರೀ ಪೀಠದವರು ಬರೆದುಕೊಂಡ ಒಂದು ಪತ್ರವನ್ನು ಇದರಲ್ಲಿ ಕಾಣಿಸಿರುವೆನೆಂದೂ ಬರೆದು "ಪೀಠಾಚಾರ್ಯರು ವಿರಕ್ತಗುರುಗಳನ್ನು ಮರೆಹೊಕ್ಕು ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಬಸವಾದಿ ಪ್ರಮಥರ ಸ್ಮರಣೆಯಿಂದ ಮುಕ್ತಿಮಾರ್ಗವನ್ನು ಕೈಕೊಳ್ಳಬೇಕು' ಎಂದು ಬರೆದಿರುವದನ್ನು ನೋಡಿದರೆ ಯಾವ ನಿಜವಾದ ವೀರಶೈವನಿಗೆ ತಾನೇ ವ್ಯಸನವೆನಿಸಲಿಕ್ಕಿಲ್ಲ? ವಿಷ್ಣುರಾದ ವಿರಕ್ತರನ್ನು ಗುರುಗಳೆಂದು ಭಾವಿಸಬೇಕಂತೆ! ಭಕ್ತನಾದ ಬಸವನನ್ನು ಸ್ಮರಿಸಿ ಮುಕ್ತಿಯನ್ನು ಹೊಂದಬೇಕಂತೆ! ಈ ರೀತಿಯಾಗಿ ಧರ್ಮಶಾಸ್ತ್ರದ ಹದ್ದನ್ನು ಮೀರಿ ಬರೆಯಬೇಕಾದರೆ ಈ ಲೇಖಕನು ಎಂಥ ವಿಚಾರಶೂನ್ಯನಿದ್ದಬಹುದೆಂಬುದು ಪ್ರತಿಯೊಬ್ಬರಿಗೂ ತಿಳಿಯದೆ ಇರಲಾರದು. ಇದು ಕಲಿಕಾಲದ ಪ್ರಭಾವವಲ್ಲದೆ ಬೇರೊಂದಲ್ಲ! ಇಂಥ ಅಧರ್ಮಿಗಳಿಂದಲೇ ಕಲಿರಾಜನು ತನ್ನ ನಾಮವನ್ನು ಸಾರ್ಥಕ ಮಾಡಿಕೊಂಡಿರುವನು. 'ರಂಭಾಪುರೀ ಪೀಠದ ಮುತ್ತಿನಗದ್ದಿಗೆ ಪಟ್ಟದವರು' ಎಂದು ಉಲ್ಲೇಖಿಸಿ ಇವರು ಈ ರೀತಿಯಾಗಿ ಮುರಿಗೇಮಠಕ್ಕೆ ಪತ್ರವನ್ನು ಬರೆದುಕೊಂಡಿರುವರೆಂದು ಈ ಲೇಖಕನು ಪತ್ರದನ್ನು ಉದಾಹರಿಸಿದ್ದಾನೆ. ರಂಭಾಪುರೀಪೀಠದಲ್ಲಿ ಈ ಹೆಸರಿನ ಅಧಿಕಾರಿಗಳು ಯಾವ ಕಾಲದಲ್ಲಿಯೂ ಆಗಿಯೇ ಇಲ್ಲ. ಮುಂದೆ ಆಗುವರೋ ಏನೋ ತಿಳಿಯದಾಗಿದೆ. ಹೀಗೆ ಜನರನ್ನು ಭ್ರಾಂತಿಗೊಳಿಸುವದಕ್ಕೋಸ್ಕರ ಕಲ್ಪನಾತ್ಮಕವಾದ ಅಸತ್ಯ ಲೇಖಗಳನ್ನು ಬರೆದು ಪ್ರಸಿದ್ಧಪಡಿಸುವವರ ಬಗ್ಗೆ ಸರಕಾರದವರು ಯಾವ ಶಾಸನವನ್ನು ಮಾಡುವರೋ ತಿಳಿಯದಾಗಿದೆ. ರಂಭಾಪುರೀ ಜಗದ್ಗುರುಗಳವರಾದರೂ ಈ ರೀತಿಯಾಗಿ ಅಸತ್ಯವನ್ನು ಬರೆದು ತಮ್ಮ ಪೀಠದ ಗೌರವವನ್ನು ಕಳೆಯುತ್ತಿರುವ ಇಂಥ ಗುರುದ್ರೋಹಿಗಳ ತಕ್ಕ ಬಂದೋಬಸ್ತು ಮಾಡುವ ಕಾರ್ಯವನ್ನು ಕೈಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ. ಇಂಥವರು ಹೀಗೆ ಅಸತ್ಯಬರವಣಿಗೆಗಳನ್ನು ಕಲ್ಪಿಸುತ್ತಿರುವರು. ವೀರಶೈವರು ವಿರಕ್ತರು ದಕ್ಷಿಣೆ ಬಸವಪತ್ರಗಳನ್ನು ಬರೆದಿರುವರೆಂದು ಅವರೂ ಸಹ ಹೀಗೆ ಪತ್ರಗಳನ್ನು ಕಲ್ಪಿಸಿ ಪ್ರಸಿದ್ಧಪಡಿಸುವರು. ಶ್ರೀ ಜಗದ್ಗುರು ರಂಭಾಪುರೀಪೀಠವು ನಾಲ್ಕು ಯುಗಗಳಿಂದ ಬಂದಿರುವದೆಂದು ಆಗಮಗಳು ಘಂಟಾಘೋಷವಾಗಿ ಸಾರುತ್ತವೆ. ಮುರಿಗೇಮಠವು ಮಡಿಕೆರಿ ನಾಯಕನ ಕಾಲದಲ್ಲಿ ಉತ್ಪನ್ನವಾಗಿರುವದು ಲೋಕಪ್ರಸಿದ್ಧವೇ ಅದೆ. ಅಲ್ಲದೆ ಮುರಿಗೇ ಮಠಕ್ಕೆ ಅಧಿಕಾರಿಗಳಾದ 2 ನೆಯ ಮುರಗೀ ಸ್ವಾಮಿಗಳೆಂಬ ಮಹಾ ತಪಸ್ವಿಗಳು ಹಾಲಾಸ್ಯನಾಥ ಪುರಾಣವನ್ನು ಬರೆಯುವ ಕಾಲಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರನ್ನು ಎಷ್ಟು ಕೊಂಡಾಡಿರುವರೆಂಬುದನ್ನು ಈ ಲೇಖಕನು ತಿಳಿದುಕೊಂಡು ಶುದ್ಧ ಹೃದಯನಾಗಬೇಕಾಗಿತ್ತು. ಪೂರ್ವಾಪರ ವಿಚಾರಮಾಡದೆ ಧರ್ಮಶಾಸ್ತ್ರದ ಸ್ವರೂಪವನ್ನು ಸಹ ತಿಳಿಯದೆ ಹೀಗೆ ಮನಸ್ಸಿಗೆ ಬಂದಂತೆ ಕೂಗಾಡಿ ಬರೆಯುವದು ಅಧರ್ಮಪ್ರವೃತ್ತಿಯಾಗಿದೆ. ವಿಷ್ಣುರಾದ ಚತುರಾಶ್ರಮಗಳಲ್ಲಿ ಬಂದಾದ ಸನ್ಯಾಸಾಶ್ರಮ ಈ ಮಠಕ್ಕೆ ಮತಸ್ಥಾಪನಾಚಾರ್ಯರು ಪತ್ರಿಕೆಯನ್ನು ಬರೆದುಕೊಂಡಿರುವರೆಂದು ಈ ಲೇಖಕನು ಬರೆದಿರುವದನ್ನು ನೋಡಿದರೆ ಯಾರಿಗೆ ನಗೆಯು ಬರಲಿಕ್ಕಿಲ್ಲ? ಸ್ವರಾಜ್ಯ ಪತ್ರಿಕಾಕರ್ತರು ಈಗ ನಾಲ್ಕು ವಾರಗಳಿಂದ ಇಂಥ ಕೆಟ್ಟ ಬರವಣಿಗೆಗಳಿಗೆ ಆಶ್ರಯವನ್ನು ಕೊಟ್ಟಿದ್ದಿಲ್ಲ. ಇದರಿಂದ ಸಮಾಜವು ತಣ್ಣಗಾಗಿತ್ತು. ಪುನಃ ಗೊಂದಲವನ್ನೆಬ್ಬಿಸಿದರು. ಇವರ ಮನಸ್ಸಿನ ಉದ್ದೇಶವೇನಿದೆಯೋ ತಿಳಿಯದಾಗಿದೆ. ಗುರುನಿಂದಾ ಲೇಖಗಳನ್ನು ಪ್ರಸಿದ್ಧಪಡಿಸುವದರಲ್ಲಿಯೇ ಇವರು ತಮ್ಮ ಜೀವಿತಕಾಲವನ್ನು ಕಳೆಯುವರೋ ಏನೋ ತಿಳಿಯದಾಗಿದೆ. ಸ್ವರಾಜ್ಯ ಪತ್ರಿಕೆಯಲ್ಲಿ ಗುರುದ್ರೋಹಾತ್ಮಕ ಲೇಖಗಳು ಬಂದರೆ ಅವುಗಳ ಖಂಡನಕ್ಕೆ ಪಂಚಾಚಾರ್ಯಪ್ರಭಾ ಪತ್ರಿಕೆಯು ಅವಶ್ಯವಾಗಿ ಅವಕಾಶವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತಕೇಸರಿ, ಹುಬ್ಬಳ್ಳಿ

|| ಓಂ ||

ವೀರಶೈವಮತ ಮತ್ತು ಸಂಸ್ಕೃತಕಾಲೇಜು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಸುಖವನ್ನು ಅಪೇಕ್ಷಿಸಿಯೇ ತನ್ನ ವಿವಿಧವಾದ ಕಾರ್ಯಗಳನ್ನು ಮಾಡುತ್ತಾನೆ. ಅದರಲ್ಲಿಯೂ ಆ ಸುಖ ಅಪೇಕ್ಷಿತವಾದ ಸುಖವು ಶಾಶ್ವತವಾದದ್ದಾಗಿಯೂ ದುಃಖರಹಿತವಾದದ್ದಾಗಿಯೂ ಇರತಕ್ಕದ್ದೆ. ಇಂಥಾ ಸುಖವು ಪರಶಿವ [illegible] ಇರುವದರಿಂದ ಈ ಲೋಕದಲ್ಲಿ ಜನ ಸರು ಮೊದಲುಗೊಂಡು ಚಕ್ರವರ್ತಿಗಳವರೆಗೂ ಮನುಷ್ಯರು ಅನುಭವಿಸತಕ್ಕ ಸುಖವು ಕ್ಷಣಿಕವಾಗಿಯೂ ದುಃಖಮಿಶ್ರವಾಗಿಯೂ ಇರುತ್ತದೆ. ಆದದರಿಂದ ಕಳೆದ ವಾರದ ಇದೇ ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಮೋಕ್ಷದ ಸ್ವರೂಪ ಎಂಬ ಲೇಖನದಲ್ಲಿ ಮಾನವಪ್ರಾಣಿಗಳು ಜನನ, ಮರಣ, ಆಧ್ಯಾತ್ಮಿಕ ಆಧಿಭೌತಿಕ ಮತ್ತು ಆಧಿದೈವಿಕ ಎಂಬ ಮೂರು ವಿಧವಾದ ವ್ಯಾಧಿಗಳುಳ್ಳ ಸಂಸಾರವೆಂಬ ಚಕ್ರದಿಂದ ಬಿಡುಗಡೆಯನ್ನು ಹೊಂದಿ ದುಃಖರಹಿತನಾಗಿಯೂ, ಶಾಶ್ವತನಾಗಿಯೂ ಪರಮಾನಂದಸ್ವರೂಪನಾಗಿಯೂ ಇರುವ ಪರಶಿವನ ಸಾಯುಜ್ಯ ಪದವಿಯನ್ನು ಪಡೆಯುವದಕ್ಕೆ ಮೋಕ್ಷವೆಂತಲೂ, ಈ ಲೋಕದಲ್ಲಿ ಯಾರು ತಮ್ಮ ತಂದೆಯಲ್ಲಿ ನಿಜವಾದ ಭಕ್ತಿಯನ್ನು ಇಟ್ಟು ಆತನ ಆಜ್ಞಾನುಸಾರ ನಡೆಯುವರೋ ಅಂಥವರಿಗೆ ತಮ್ಮ ತಂದೆಯ ಆಸ್ತಿಯು ಸಿಗುವದು ಹೇಗೆ ಸುಲಭವೋ ಅದರಂತೆ ಈ ಲೋಕದಲ್ಲಿರತಕ್ಕ ಸರ್ವಪ್ರಾಣಿಗಳಿಗೂ ತಂದೆಯಾಗಿರತಕ್ಕ ಪರಶಿವನಲ್ಲಿ ಯಾರು ನಿಜವಾದ ಭಕ್ತಿಯನ್ನಿಟ್ಟು ಆತನು ಶಾಸ್ತ್ರದ ಮೂಲಕವಾಗಿ (ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ || ಎಂಬಂತೆ ಪ್ರತಿಯೊಬ್ಬನು ತನ್ನ ಕೈಲಾದ ಮಟ್ಟಿಗೆ ಇತರರಿಗೆ ಯಾವ ವಿಧವಾಗಿಯಾದರೂ ಸಹಾಯ ಮಾಡತಕ್ಕದ್ದೆಂತಲೂ ತನ್ನಿಂದ ಯಾರಿಗೂ ಯಾವಾಗಲೂ ಯಾವ ವಿಧವಾಗಿಯೂ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದೆಂತಲೂ) ಹೇಳಿರತಕ್ಕ ಆಜ್ಞೆಗಳನುಸಾರವಾಗಿ ನಡೆಯುವರೋ ಅವರಿಗೆ ಪರಶಿವನ ಸಾಯುಜ್ಯವು ಸುಲಭವಾಗಿ ಸಿಗುವದೆಂತಲೂ ಹೇಳಿರುತ್ತದೆ. ಪ್ರತಿಯೊಬ್ಬನಿಗೂ ದುಃಖದಲ್ಲಿ ದ್ವೇಷವು, ಸುಖದಲ್ಲಿ ಅಪೇಕ್ಷೆಯೂ ಇರುವದರಿಂದಲೂ, ದುಃಖರಹಿತವೂ ಮತ್ತು ಪರಮಾನಂದಸ್ವರೂಪವೂ ಆದ (ಸೃಷ್ಟಿಕರ್ತ ಬ್ರಹ್ಮನೇ ಆದಿಯಾದವರ ಪದಗಳಿಗಿಂತ ಶ್ರೇಷ್ಠವಾಗಿರುವ) ಪರಶಿವನ ಪದವಿಯು ಮೇಲ್ಕಂಡಂತೆ ಅತ್ಯಂತ ಸುಲಭವಾಗಿ ಸಿಗುವ ಹಾಗಿರುವದರಿಂದಲೂ, ಮೋಕ್ಷದ ಸ್ವರೂಪವನ್ನು ಮತ್ತು ಅದರ ಸಾಧನವನ್ನು ಶ್ರದ್ಧೆಯಿಂದ ತಿಳಿದುಕೊಂಡವರಲ್ಲಿ ಯಾರಿಗೂ ಮೋಕ್ಷದಲ್ಲಿ ಪ್ರವೃತ್ತಿಯುಂಟಾಗದೇ ಇರಲಾರದು. ಆದರೆ ಕೆಲವರಿಗೆ ಮೇಲ್ಕಂಡ ವಿಷಯವು ತಿಳಿದರೂ ತಾವು ಹಿಂದೆ ಜನ್ಮಜನ್ಮಗಳಲ್ಲಿ ಮಾಡಿರತಕ್ಕ ಅನೇಕ ವಿಧವಾದ ಪಾಪಕರ್ಮಗಳ ದೋಷದಿಂದ ವಿಷಕ್ರಿಮಿನ್ಯಾಯದಂತೆ ತಾವು ನಿಜವಾಗಿ ದುಃಖವನ್ನನುಭವಿಸುತ್ತಿದ್ದರೂ ಆ ದುಃಖವೇ ಅವರಿಗೆ ಸುಖವಾಗಿ ತೋರಿ ಮೋಕ್ಷದಲ್ಲಿ ಎಂದಿಗೂ ಪ್ರವೃತ್ತಿಯುಂಟಾಗುವುದಿಲ್ಲ.

ಮೇಲೆ ಹೇಳಿದಂತೆ ಪರಶಿವನಲ್ಲಿ ನಿಜವಾದ ಭಕ್ತಿಯನ್ನಿಟ್ಟು (ಅಂದರೆ ನಶ್ವರವಾದ ಈ ಲೋಕ ಅಥವಾ ಪರಲೋಕ ಸಂಬಂಧವಾದ ವಿಷಯಗಳಲ್ಲಿ ಪ್ರೀತಿ ಇಡದೆ ಪರಶಿವನನ್ನು ಹೊಂದುವದನ್ನೇ ಮುಖ್ಯವಾಗಿಟ್ಟುಕೊಂಡು) ಆತನ ಆಜ್ಞಾ ಪ್ರಕಾರ ನಡೆಯತಕ್ಕದ್ದು ತನ್ನ ಕರ್ತವ್ಯವೆಂದು ತಿಳಿದು ಸತ್ಕರ್ಮಗಳನ್ನು (ಅಂದರೆ ಪರರಿಗೆ ಹಿತವಾಗುವ ಕಾರ್ಯಗಳನ್ನು) ಮಾಡುವದರಿಂದ ಪರಶಿವನ ಕೃಪೆಯು ಪ್ರಾಪ್ತವಾಗಿ ಮೋಕ್ಷವು ಸಿಗುವದೆಂಬುವದು ಸಿದ್ಧವಾಯಿತು. ಆದರೆ ಪರಶಿವನನ್ನು ಹೊಂದುವದಕ್ಕೆ ಇಷ್ಟಪಡುವವರು ಆತನ ನಿಜವಾದ ಸ್ವರೂಪ, ತಮ್ಮ ನಿಜವಾದ ಸ್ವರೂಪ ಮತ್ತು ತಮ್ಮ ಜನನ ಮರಣಾದಿ ದುಃಖಗಳಿಗೆ ಸಾಧಕವಾಗಿ ಎದುರಿಗೆ ತೋರುತ್ತಿರುವ ಪ್ರಪಂಚದ ಸ್ವರೂಪ ಇವುಗಳನ್ನೂ, ಪರಶಿವನ ಪದವಿಯನ್ನು ತಾವು ಹೊಂದುವ ಉಪಾಯವನ್ನೂ ತಿಳಿಯಲು ವಿಶೇಷ ರೀತಿ ಸಹಾಯ [illegible] ಕರಾಗಿರು ತ್ತದೆ [illegible] ಶಿವನ [illegible] (ಅಂದರೆ [illegible]) ಮತ್ತು [illegible] ಪಟಿರು [illegible] ಆದ [illegible] ಮತದ [illegible] ಗ್ರಂಥದಲ್ಲಿ [illegible] ಆಯಾ [illegible] ತಗ [illegible] ಗುರುಗಳ [illegible] ಆದ್ಯಂತ ಮತದ [illegible] ಪ್ರತಿ ಸ್ತುತಿಗೆ ಅದನ್ನು ಆಯಾ ಮತೀಯರಿಗೆ ಬೋಧಿಸತಕ್ಕ [illegible] ಮತದ ಗುರುಗಳು ರತ್ತಾರೆ. ಪ್ರತಿ [illegible] ಮತದ ಸಿದ್ಧಾಂತವು ಆಯಾ ಮತೀಯರನ್ನು [illegible] ಸಂಸ್ಕಾರದಿಂದ ಹೊಗಿಸುವನ್ನು [illegible] ಅವರ ಉಂಟುಮಾಡುವ [illegible] ಉಂಟು ಆದರೆ ತ್ಯವ ಆದುದರಿಂದ [illegible] ಮತೀಯರಿಗೆ ಆಗಲಿ ಆಯಾ ಮತದಿಂದ ಆಗತಕ್ಕ ಪ್ರಯೋಜನವು ಆಯಾ ಮತದ ಗುರುಗಳಿಂದಲೇ ಆಗತಕ್ಕದ್ದು [illegible] ಸತ್ಯವಾಯಿತು. ಸಾಧ್ಯಗಳು [illegible] ಲೌಕಿಕ ವಿಷಯಗಳು [illegible] ದರಿಂದ ಮೇಲ್ಕಂಡ ಪರಮಾರ್ಥ ವಿಷಯವು [illegible] ಕಲ್ಪಿಸಲ್ಪಟ್ಟಿದ್ದರಿಂದ ಅದರ ಸಂಸ್ಕಾರವು ಸ್ಪಷ್ಟವೇ ಹೋಗುವ ಕಾರಣ ಅಂದರೆ [illegible] ಲೌಕಿಕ ಸಂಸ್ಕಾರವು ತಪ್ಪಿ ಪರಮಾರ್ಥ ಸಂಸ್ಕಾರವು [illegible] ಗುರುಗಳು [illegible] ಗುರು [illegible] ಪ್ರತಿಯೊಂದು ಮತದ [illegible] ತಮ್ಮ ತಮ್ಮ ಸ್ಥಳಗಳಲ್ಲಿ ಮಠಗಳನ್ನು ಕಟ್ಟಿ [illegible] ಪ್ರಸಿದ್ಧರಾದ ಗುರುಗಳನ್ನು ಸದಾ ಇಟ್ಟಿರುವ ಹಾಗೆ [illegible] ಅವರಿಂದ ಪ್ರತಿದಿನ [illegible] ಕೃತಾರ್ಥರಾಗುತ್ತಿದ್ದರು.

ಈಗ ಮತಗಳಲ್ಲಿ ಒಂದಾದ [illegible] ವೇದಾಗಮಗಳಿಗೆ ಅನುಸಾರವಾಗಿಯೂ ಏಕಮೇವ ವೀರಶೈವಮತವು ರೇಣುಕಾದಿ ಪಂಚಾಚಾರ್ಯರುಗಳಿಂದ ಸ್ಥಾಪಿಸಲ್ಪಟ್ಟು ಅನೇಕ ಮಹಾತ್ಮರುಗಳಿಂದ [illegible] ಹಲವು ಶತಮಾನಗಳಿಂದೀಚೆಗೆ ಈ ಮತದ ತತ್ವವನ್ನು ಈ ಜನಾಂಗದವರಿಗೆ ಬೋಧಿಸತಕ್ಕ ಪಂಡಿತರ ಮತ್ತು ಗುರುಗಳ ಬಹಳ ಕಡಿಮೆಯಾಗಿರುವುದರಿಂದ ಈ ಮತದ ಪ್ರಯೋಜನವನ್ನು ಈ ಮತೀಯರೆಲ್ಲರೂ ಹೊಂದುವುದಕ್ಕೆ ಅವಕಾಶವಿಲ್ಲದಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆ. ಏತಸ್ಮಾತ್ ವರೆ ಈ ಮತಗ್ರಂಥಗಳು ಮತ್ತು ಇವುಗಳಿಗೆ ಆಧಾರಭೂತವಾದ ವೇದಾಗಮೋಪನಿಷತ್ತುಗಳು ಸಂಸ್ಕೃತ ಭಾಷೆಯಲ್ಲಿರುವುದರಿಂದ ಸಂಸ್ಕೃತ ವಿದ್ಯಾಪಾಂಡಿತ್ಯವಿಲ್ಲದವರು ಮತತತ್ವವನ್ನು ತಿಳಿಯುವುದಕ್ಕಾಗಲಿ ಅಥವಾ ಅದನ್ನು ಇತರರಿಗೆ ಬೋಧಿಸುವುದಕ್ಕಾಗಲಿ ಸಾಧ್ಯವಿಲ್ಲ. ಇಷ್ಟೇ ಅಲ್ಲದೆ ಈ ಮತದಲ್ಲಿ ಗುರುಗಳು ಮತ್ತು ಜಂಗಮರು ಎನ್ನಿಸಿಕೊಂಡಿರುವವರು "ಗುರವೋ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ । ದುರ್ಲಭಂ ಮನ್ಯೇ ಶಿಷ್ಯಹೃತ್ತಾಪಹಾರಕಂ ।" ಮತ್ತು "ಉಪಾಸಪ್ರಭೃತಗ್ರಂಥಾ [illegible] ಅಯೋಗ್ಯೋಪಿ ಮಹಾತ್ಮ್ಯಂ [illegible] ಗತಃ ||" ಎಂಬಂತೆ ಯಾವ ಗುರುವಿನಿಂದ [illegible] ಪ್ರಯೋಜನವನ್ನು ಹೊಂದಬೇಕೆಂಬ [illegible] ಪಲ ವಾಪದಾನಿಗಳಾಗದೆ ತಾವು [illegible] ಯೂ, ಮತತತ್ವವನ್ನು [illegible] ಭಕ್ತಿಜ್ಞಾನ ವೈರಾಗ್ಯಸಂಪನ್ನರಾಗಿಯೂ [illegible] ತಮ್ಮ ಭಕ್ತರುಗಳು ತಮ್ಮ [illegible] ಧರ್ಮಗಳಲ್ಲಿ ನಿರತರಾಗಿಯೂ, [illegible] ಗಿಯೂ ಆಗಿ, ಈ ಮತದ ಮುಖ್ಯ [illegible] ಸರ್ವೋತ್ಕೃಷ್ಟವಾದ ಪರಶಿವನ ಪದವಿಯನ್ನು [illegible] ವಂತೆ ಮಾಡಲು ಆಗಲಾರದು.

ಈ ವಿಷಯಗಳನ್ನು ತಿಳಿದು ಈಗ ಶ್ರೀ ಪಂಚಾಚಾರ್ಯ ಪೀಠವನ್ನಲಂಕರಿಸಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವೆನಿಸಿದ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ತಮ್ಮ ಷಷ್ಟ್ಯಬ್ದ [illegible] ಮಹೋತ್ಸವಕಾಲದಲ್ಲಿ ಈ ವೀರಶೈವಮತದಲ್ಲಿ ಈಗಿರತಕ್ಕ ಮೇಲ್ಕಂಡ ಕೊರತೆಗಳನ್ನು ನಿವಾರಿಸುವುದಕ್ಕಾಗಿ ಈ ಜನಾಂಗದ ಮುಖ್ಯ [illegible] ಪ್ರಯತ್ನಪಟ್ಟು, ವೀರಶೈವರಿಗಾಗಿ ಒಂದು ಸಂಸ್ಕೃತಕಾಲೇಜನ್ನು ಸ್ಥಾಪಿಸುವ ಹಾಗೆ ಅಪ್ಪಣೆ ಕೊಡಿಸಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ರೀತಿಯಾಗಿ ವೀರಶೈವರಿಗೋಸ್ಕರ ಸ್ಥಾಪಿಸಲ್ಪಡುವ ಸಂಸ್ಕೃತ ಕಾಲೇಜಿನಲ್ಲಿ ಮುಖ್ಯವಾಗಿ ಇನ್ನು ಮುಂದೆ ಮಠಾಧಿಪತಿಗಳಾಗುವ ವಟುಗಳಿಗೆ ಸಂಸ್ಕೃತವನ್ನು ಬಾಲ್ಯದಿಂದ ಆಗಾಯಿತು ಪ್ರೌಢರಾದವರೆಗೂ ಅಭ್ಯಾಸಮಾಡಿಸಿ ಅವರನ್ನು ವೇದವೇದಾಂಗಗಳಲ್ಲಿ ಪಾರಂಗತರನ್ನಾಗಿ ಮಾಡಿ, ಅವರುಗಳಿಗೋಸ್ಕರ ಕಟ್ಟಿಸಲ್ಪಡುವ ಆಶ್ರಮದಲ್ಲಿ ಅವರುಗಳಿಗೆ ಬಾಲ್ಯದಿಂದಲೇ ಸದಾಚಾರ, ಬ್ರಹ್ಮಚರ್ಯ, ಯೋಗಾಭ್ಯಾಸ, ಈಶ್ವರಭಕ್ತಿ ಉಂಟಾಗುವ ಹಾಗೆ ಏರ್ಪಾಡು ಮಾಡಿ, ಪ್ರತಿಯೊಬ್ಬರೂ ನಿಜವಾದ ಗುರುಗಳು ಮತ್ತು ಜಂಗಮರು ಆಗುವ ಹಾಗೆ ಮಾಡಬೇಕೆಂದು ಮಹಾಸ್ವಾಮಿಗಳವರು ಇರುವರಲ್ಲದೆ ಇಂತಹ [illegible] ಈ ಜನಾಂಗವು ವಿಶೇಷವಾಗಿ ಎಲ್ಲೆಲ್ಲಿ ಇರುತ್ತದೋ ಆಯಾ ಸ್ಥಳದಲ್ಲಿ ಒಂದೊಂದು ಸಂಸ್ಕೃತ ಪಾಠಶಾಲೆಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಆಶ್ರಮವನ್ನು ಏರ್ಪಡಿಸಬೇಕೆಂಬದಾಗಿಯೂ, ಇಂಗ್ಲೀಷು ವಿದ್ಯೆಯನ್ನು ಓದಿ ಪ್ರೌಢವಿದ್ಯಾಭ್ಯಾಸವನ್ನು ಮಾಡತಕ್ಕವರಿಗೆ ಸಹಾಯಮಾಡುವುದಕ್ಕಾಗಿ ಒಂದು ಫಂಡನ್ನು ಏರ್ಪಡಿಸಬೇಕೆಂಬದಾಗಿಯೂ ಇರುತ್ತಾರೆ.

ಮಹಾಸ್ವಾಮಿಗಳವರ ಮೇಲ್ಕಂಡ ಅಮೋಘವಾದ ಉದ್ದೇಶವನ್ನು ತಿಳಿದು ಮೈಸೂರು ಕಂಪನೀಗಳ ಕಾಯಿದೆ ಪ್ರಕಾರ ಮೈಸೂರು ಗೌರ್ನಮೆಂಟಿನಲ್ಲಿ ರಿಜಿಸ್ಟರಾಗಿ ಮೈಸೂರುಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ "ಆಲ್ ಇಂಡಿಯಾ **ಮ್ಯೂಚ್ಯುಯಲ್ ಏಡ್ ಅಂಡ್ ಪ್ರೂಫ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್**" ಎಂಬ ಸಂಘದವರು [illegible] ಪ್ರಸಿದ್ಧ ಪತ್ರಿಕೆಯಲ್ಲಿ ಕಂಡ ಮೂರ ದನಗಳಶಾಲೆ ಮತ್ತು ಗೋರಕ್ಷಣಶಾಲೆ (ಪಿಂಜರಾಪೋಲ್) ಇವುಗಳ ಸ್ಥಾಪನೆಗೋಸ್ಕರ ಮಾಡಿರತಕ್ಕ ನೂತನವಾದ ಏರ್ಪಾಡಿನಲ್ಲಿ ವೀರಶೈವ ಮತೀಯರಿಗೋಸ್ಕರ ಪ್ರತ್ಯೇಕವಾಗಿ ಎರಡು [illegible] ರೂಪಾಯಿನ ಪ್ರಕಾರ ಒಂದು ಲಕ್ಷ ಪಾಲುಗಳನ್ನು ಕೊಡುವದಕ್ಕೆ ಒಪ್ಪಿರುತ್ತಾರೆ. ಇಂಡಿಯಾ ದೇಶದಲ್ಲಿ ಅನೇಕ ಲಕ್ಷ ವೀರಶೈವ ಮತೀಯರು ಇರುವುದರಿಂದ ಇವರಲ್ಲಿ ಪ್ರತಿಯೊಬ್ಬರು 50 ರೂಪಾಯಿಯನ್ನು ಒಟ್ಟಾಗಿಯೇ ಆಗಲಿ ಅಥವಾ ತಿಂಗಳು ಒಂದಕ್ಕೆ ಒಂದು ರೂಪಾಯಿ ಪ್ರಕಾರ 50 ತಿಂಗಳುಗಳ ಕಂತುಗಳ ಪ್ರಕಾರವಾಗಿಯೇ ಆಗಲಿ ಪಾವತಿ ಮಾಡಿ ಒಂದು ಪಾಲನ್ನು ತೆಗೆದುಕೊಳ್ಳಲು ಅನುಕೂಲವುಳ್ಳವರು ಒಂದು ಲಕ್ಷಕ್ಕಿಂತ ಕಡಿಮೆಯಿಲ್ಲದೆ ಇರುತ್ತಾರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಆದ್ದರಿಂದ ಪಾಲು ಒಂದಕ್ಕೆ 50 ರೂಪಾಯಿ ಪ್ರಕಾರ ಒಂದು ಲಕ್ಷ ವೀರಶೈವರುಗಳಿಂದ ವಸೂಲಾಗುವ 50,00,000 (ಐವತ್ತು ಲಕ್ಷ) ರೂಪಾಯಿಗಳನ್ನು ಸಂಘದವರು [illegible] ಮತ್ತು [illegible] ಗೌರ್ನಮೆಂಟಿನಲ್ಲಿ ಇಟ್ಟು ಇದರಮೇಲೆ ಪ್ರತಿ ವರ್ಷ ಗೌರ್ನಮೆಂಟಿನಿಂದ ಬರತಕ್ಕ ಸುಮಾರು 300000 (ಮೂರು ಲಕ್ಷ) ರೂಪಾಯಿ ಬಡ್ಡಿಯಲ್ಲಿ ಅರ್ಧ ಅಂದರೆ 150000 (ಒಂದೂವರೆ ಲಕ್ಷ) [illegible] ಮೇಲ್ಕಂಡಂತೆ ಶ್ರೀ ಜಗದ್ಗುರುಗಳವರ [illegible] ಸಂಸ್ಕೃತಕಾಲೇಜು ಪಾಠಶಾಲೆ [illegible] ಅವರುಗಳಿಗೋಸ್ಕರ ಉಪಯೋಗಿಸಿ [illegible] ವೀರಶೈವರಲ್ಲಿ ಇಂಗ್ಲೀಷು ವಿದ್ಯೆಯನ್ನು [illegible] ಮಾಡತಕ್ಕವರಿಗೆ ಸಹಾ [illegible] ಇವುಗಳೇ ಮೊದಲಾದ ವೀರಶೈವ ಜನಾಂಗದ [illegible] ಉಪಯೋಗಿಸಲ್ಪಡುವುದು.

ಮೇಲ್ಕಂಡಂತೆ ಮೂರು ಲಕ್ಷ ರೂಪಾಯಿ [illegible] ಸಂಸ್ಕೃತ ಕಾಲೇಜು ಮತ್ತು ಅದರ ಪಠ್ಯಸಂಸ್ಥಾ

ಗಳಿಗೋಸ್ಕರ ಉಪಯೋಗಿಸಲ್ಪಡುವ ಒಂದುವರೆ ಲಕ್ಷ ರೂಪಾಯಿಗಳು ವಜಾ ಹೋಗುತ್ತ ಉಳಿಯುವ ಒಂದುವರೆ ಲಕ್ಷ ರೂಪಾಯಿಗಳ ಪೈಕಿ ಇದರೊಡನೆ ಕಳುಹಿಸಿರುವ ಸಂಘದ ಪ್ರಸಿದ್ಧ ಪತ್ರಿಕೆಯ ಎರಡನೇ ಪುಟದಲ್ಲಿ ಕಂಡ ಮೇರೆ ಒಂದು ಲಕ್ಷವು ಐದುಸಾವಿರ ರೂಪಾಯಿಗಳನ್ನು ಪ್ರತಿವರ್ಷವು ಡ್ರಾಯಿಂಗಿನಲ್ಲಿ (ಅಂದರೆ ಚೀಟಿ ಎತ್ತುವುದರಲ್ಲಿ) ನಿರ್ಧರಿಸಲ್ಪಡುವ ಮೇರೆ ವೀರಶೈವರಲ್ಲಿ ಬಾಂಡುಹೋಲ್ಡರಾಗಿರುವವರ ಪೈಕಿ **154** ಜನಗಳಿಗೆ **500** ರೂ ಲಾಗಾಯತು **10,000** ರೂ ವರೆಗೆ ಬಡ್ಡಿಯಾಗಲಿ ಅಥವಾ ಆಧಾರವಾಗಲಿ ಇಲ್ಲದೆ ಸಾಲಗಳು ಕೊಡಲ್ಪಟ್ಟು ಸದರಿ ಪ್ರಸಿದ್ಧ ಪತ್ರಿಕೆಯ ಐದನೇ ಪುಟದಲ್ಲಿ ಕಂಡ ಮೇರೆ 1000 ಕ್ಕೆ ತಿಂಗಳ ಒಂದಕ್ಕೆ 5 ರೂ ಪ್ರಕಾರ 200 ತಿಂಗಳ ಕಂತುಗಳಾಗಿ ವಾಪಸ್ಸು ತೆಗೆದುಕೊಳ್ಳಲ್ಪಡುತ್ತವೆ. ಒಂದುಸಾರಿ ಸಾಲವನ್ನು ಪಡೆದವರ ಹೆಸರನ್ನು ಇನ್ನೊಂದುಸಾರಿ ಡ್ರಾಯಿಂಗಿನಲ್ಲಿ (ಚೀಟಿ ಎತ್ತುವದರಲ್ಲಿ) ಸೇರಿಸುವದಿಲ್ಲವಾದ್ದರಿಂದ ಪ್ರತಿಯೊಬ್ಬರಿಗೂ ಒಂದುವರ್ಷ ಅಥವಾ ಮತ್ತೊಂದುವರ್ಷ ಸಾಲವು ದೊರಕೇ ದೊರೆಯುವದು. ಸಂಘದ ಪ್ರಸಿದ್ಧ ಪತ್ರಿಕೆಯ ಮೂರನೇ ಪುಟದಲ್ಲಿ ಕಂಡ ಮೇರೆ ಡ್ರಾಯಿಂಗ್ (ಚೀಟಿ ಎತ್ತುವದನ್ನು) ನಡಿಸುವದಕ್ಕೆ ಒಂದು ಲಕ್ಷ ಜನಗಳು ಸೇರುವವರೆಗೂ ನಿರೀಕ್ಷಿಸಬೇಕಾಗದೆ ಕನಿಷ್ಠಪಕ್ಷ ಒಂದು ಸಾವಿರ ಜನಗಳು ಸೇರಿದ ಕೂಡಲೆ ಡ್ರಾಯಿಂಗು ನಡಿಸಿ ಸಾಲಗಳು ಕೊಡಲ್ಪಡುವದರಿಂದ ಮೊದಲನೇ ಡ್ರಾಯಿಂಗು ಮುಂದಿನ ತಿಂಗಳು 31 ನೇ ತಾರೀಖಿನ ದಿವಸ ನಡಿಸಲ್ಪಡುವದು. ಪ್ರಸಿದ್ಧಪತ್ರಿಕೆಯ ಆರನೇ ಪುಟದಲ್ಲಿ 'ಜನಾಂಗದ ಪ್ರಾತಿನಿಧ್ಯ' ಎಂಬ ಹೆಡ್ಡಿಂಗಿನ ಕೆಳಗಡೆ ಕಂಡಿರುವಂತೆ ವೀರಶೈವಮತೀಯರಲ್ಲಿ ಕನಿಷ್ಠಪಕ್ಷ ಎರಡು ಸಾವಿರ ಜನಗಳು ಸೇರಿದ ಕೂಡಲೆ ಸಂಸ್ಕೃತಕಾಲೇಜು ಸ್ಥಾಪಿಸಲ್ಪಡುವದು. ಆದ್ದರಿಂದ ವೀರಶೈವಮತದ ಅಭ್ಯುದಯದಲ್ಲಿ ಇಚ್ಛೆಯುಳ್ಳ ಪ್ರತಿಯೊಬ್ಬನು ಇದರೊಡನೆ ಕಳುಹಿಸಿರುವ ಸಂಘದ ಪ್ರಸಿದ್ಧಪತ್ರಿಕೆಯ ಕೊನೆಯಲ್ಲಿರುವ ನಮೂನೆಯಂತೆ ಕನಿಷ್ಠಪಕ್ಷ ಒಂದು ಬಾಂಡಿಗಾದರು ದರಖಾಸ್ತನ್ನು ಪ್ರವೇಶದ ಫೀ ಮತ್ತು ಬಾಂಡಿನ ಬೆಲೆಯೊಡನೆ ಮೈಸೂರಿನಲ್ಲಿರುವ ಸಂಘದ ಹೆಡ್ಡಾಫೀಸಿನ ಸಕ್ರೆಟರಿಯವರ ಹೆಸರಿಗೆ ಕಳುಹಿಸತಕ್ಕದ್ದು. ಪ್ರಸಿದ್ಧಪತ್ರಿಕೆಯಲ್ಲಿ ಕಂಡಮೇರೆ ಪ್ರತಿಯೊಂದು ಬಾಂಡಿಗೂ ದರಖಾಸ್ತಿನೊಡನೆ ಪ್ರವೇಶದ ಫೀ ಮತ್ತು ಬಾಂಡಿನ ಬೆಲೆಗೋಸ್ಕರ ಎರಡೂವರೆ ರೂಪಾಯಿಗಳನ್ನು ಕಳುಹಿಸಬೇಕಾಗಿದ್ದರೂ ವೀರಶೈವಮತದ ಅಭ್ಯುದಯಕ್ಕೋಸ್ಕರವೇ ಹುಟ್ಟಿರುವ ಈ ಪಂಚಾಚಾರ್ಯಪ್ರಭಾ ಪತ್ರಿಕೆಯ ಲಭವಾನಿಗಳಾದ ಅಂದರೆ ಸದರಿ ಪತ್ರಿಕೆಯ ಚಂದಾದಾರರಿಗೆ ಮಾತ್ರ ಪ್ರವೇಶದ ಫೀಯಲ್ಲಿ ಅರ್ಧ ಅಂದರೆ ಒಂದು ರೂಪಾಯನ್ನು ಮಾಫಿಮಾಡಿರುವದ್ದರಿಂದ ಈ ಪತ್ರಿಕೆಯ ಈಗಿನ ಮತ್ತು ಈ ತಿಂಗಳ ಆಖೈರುವರೆಗೆ ಆಗುವ ಚಂದಾದಾರರು ದರಖಾಸ್ತಿನೊಡನೆ ಬಾಂಡು ಒಂದಕ್ಕೆ ಒಂದುವರೆ ರೂಪಾಯಿಗಳನ್ನು ಮಾತ್ರ ಕಳುಹಿಸತಕ್ಕದ್ದು. ಈ ತಿಂಗಳು ಆಖೈರಿನ ಒಳಗಾಗಿ ಸೇರತಕ್ಕ ಬಾಂಡುಹೋಲ್ಡರುಗಳ ಹೆಸರುಗಳು ಮಾತ್ರ ಮುಂದಿನ ತಿಂಗಳಲ್ಲಿ ನಡೆಯುವ ಡ್ರಾಯಿಂಗಿನಲ್ಲಿ ಸೇರಿಸಲ್ಪಡುವವರಿಂದ ತಕ್ಷಣವೆ ತಮ್ಮ ತಮ್ಮ ದರಖಾಸ್ತುಗಳನ್ನು ಮೊಬಲಗಿನೊಡನೆ ಕಳುಹಿಸಿ ಲೌಕಿಕ ಮತ್ತು ಪಾರಮಾರ್ಥಿಕವಾದ ಪ್ರಯೋಜನಗಳನ್ನು ಪಡೆಯತಕ್ಕದ್ದು. ಇಷ್ಟೇ ಅಲ್ಲದೆ ಸಂಘದ ಪ್ರಸಿದ್ಧ ಪತ್ರಿಕೆಯ ಆರನೇ ಪುಟದಲ್ಲಿ ಕಂಡ ಮೇರೆ ಬಾಂಡುಹೋಲ್ಡರುಗಳು ಮೇಲ್ಕಂಡ ಧರ್ಮ ಮತ್ತು ಸಾಲ ಈ ಪ್ರಯೋಜನಗಳಲ್ಲದೆ ಸಂಘದ ನಿವ್ವಳ ನಫೆಯಲ್ಲಿ ಅರ್ಧವನ್ನು ಹೊಂದುತ್ತಾರೆ. ಮೇಲ್ಕಂಡ ವಿಷಯದಲ್ಲಾಗಲಿ ಅಥವಾ ಪ್ರಸಿದ್ಧ ಪತ್ರಿಕೆಯಲ್ಲಿರತಕ್ಕ ವಿಷಯಗಳಲ್ಲಾಗಲಿ ಏನಾದರೂ ಸಂಶಯ ಬಂದ ಪಕ್ಷದಲ್ಲಿ ಈ ಕೆಳಗಿನ ಅಡ್ರೆಸ್ಸಿಗೆ ಬರೆಯತಕ್ಕದ್ದು.

1 12 1927

ಆಲ್ ಇಂಡಿಯಾ ಅಸೋಸಿಯೇಷನ್ ಬಿಲ್ಡಿಂಗ್ಸ್, ಮೈಸೂರು } ಎಂ ಎಲ್ ನಾಗಪ್ಪ ಚೀಫ್ ಆರ್ಗನೈಜರ್

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವೀರಶೈವಮತ ಮೀಮಾಂಸಾ.

(ಲೇಖಕಃ)

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ವಿಶ್ವಾರಾಧ್ಯ
ಗುರುಕುಲವಾಸೀ ವಾ ಕವಿರತ್ನಂ ಪಂ|
ಶ್ರೀ ಪುರಗಿರಿ ಚಿದ್ಘನಶಿವಾಚಾರ್ಯಃ

[ಹಿಂದಿನಿಂದ ಮುಂದೆ ಸಾಗಿದುದು]

ಈ ಸ್ಥೂಲ ಜಡಜಡ್ಯೂಪಶಕ್ತಿವಿಶಿಷ್ಟನಾದ ಜೀವನು 'ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ' ಎಂಬ ಭಗವದುಕ್ತಿಯಂತೆ ಅನೇಕ ಜನ್ಮಾರ್ಜಿತ ಶಿವಪೂಜಾದಿ ಸತ್ಕರ್ಮವಶಾತ್ ವಿಪಕ್ವಮಲವಾಸನೆಯುಳ್ಳವನಾಗಿ ಶ್ರೀಗುರು ಕೃಪಾವಶಾತ್ ವೀರಶೈವಮತದಲ್ಲಿ ಜನ್ಮವೆತ್ತಿ ಶ್ರೀಮದಾಚಾರ್ಯರಲ್ಲಿ ಭಕ್ತಿಯುಳ್ಳವನಾಗಿ ಶಿವಲಿಂಗವನ್ನು ಪಡೆಯಲಪೇಕ್ಷೆಯುಳ್ಳವನಾಗಲು ತಾದೃಶ ಕಿಂಚಿಜ್ಞತ್ವಾದಿ ಶಕ್ತಿಗಳು ಪರಿಪಕ್ವವಾಗಿ ಭಕ್ತಿರೂಪದಿಂದ ಪರಿಣಮಿಸುವವು. ಆ ಕಾಲದಲ್ಲಿ ಈ ಜೀವನು ಅಂಗಪದವಾಚ್ಯನಾಗುವನು. ಅರ್ಥಾತ್ ಶಿವಸಂಸ್ಕಾರಗಳನ್ನು ಪಡೆದನಂತರ "ಅಂ ಪರಮಾತ್ಮಾನಂ ಗಚ್ಛತೀತಿ ಅಂಗಃ" ಅಂದರೆ ಪರಬ್ರಹ್ಮಸ್ವರೂಪವನ್ನು ಹೊಂದುವವನಿಗೆ ಅಂಗನೆಂಬ ಹೆಸರು ಸಾರ್ಥಕವಾಗುವದು. ಅತ ಏವ 'ತನುತ್ರಯಗತಾನಾದಿ ಮಲತ್ರಯಮಪಾಸ್ಯ ಗುರುಃ | ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್" ಅಂದರೆ ಶ್ರೀಮದಾಚಾರ್ಯರು ಕುಂಭಮಂಟಪ ಪಂಚಕಲಶಸ್ಥಾಪನಪೂರ್ವಕ ಶಿವಕಲಾ ವಿನ್ಯಾಸರೂಪ ಶಿವಲಿಂಗಧಾರಣಾತ್ಮಕವಾದ ಕ್ರಿಯಾದೀಕ್ಷೆಯಿಂದ ಪ್ರಕೃತ್ಯಾದಿ ಪೃಥಿವ್ಯಂತವಾದ ಸ್ಥೂಲಶರೀರಗತವಾದ ಕಾರ್ಮಿಕ ಮಲವನ್ನು ಕಳೆದುಕೊಳ್ಳಲು ಅಂದರೆ ಶ್ರೀಮದಾಚಾರ್ಯರಿಂದುಪದೇಶಿಸಲ್ಪಟ್ಟ ಇಷ್ಟಲಿಂಗಧಾರಣದಿಂದ (ಸಂಬಂಧದಿಂದ) ಪ್ರಕೃತ್ಯಾದಿ ಪೃಥಿವ್ಯಂತಗಳಾದ (೨೪) ತತ್ವಗಳು ಶುದ್ಧಗೊಳ್ಳಲು (ತನಗೆ ವಶವರ್ತಿಗಳಾಗಲು) ಕಾರ್ಮಿಕಮಲವು ತನಗೆ ಕಾರಣವಾದ ಕ್ರಿಯಾಶಕ್ತಿರೂಪವಾಗುವದು. ಶ್ರೀಮದಾಚಾರ್ಯರು ಮಹಾಮಂತ್ರೋಪದೇಶರೂಪವಾದ ದೀಕ್ಷೆಯಿಂದ ಮಾಯಾದಿ ವಿದ್ಯಾಂತವಾದ ಪಂಚಕಂಚುಕರೂಪ ಸೂಕ್ಷ್ಮಾಂಗಗತವಾದ ಮಾಯೀಯ ಮಲವನ್ನು ಕಳೆದುಕೊಳ್ಳಲು (ಅಂದರೆ ಶ್ರೀಮದಾಚಾರ್ಯರಿಂದುಪದೇಶಿಸಲ್ಪಟ್ಟ ಪ್ರಾಣಲಿಂಗಯೋಗದಿಂದ ಮಾಯಾದಿ ವಿದ್ಯಾಂತವಾದ ಆರು ತತ್ವಗಳು ಶುದ್ಧಿಗೊಳ್ಳಲು ತನಗೆ ವಶಗೊಳ್ಳಲು) ಮಾಯೀಯ ಮಲವು ತನಗೆ ಕಾರಣವಾದ ಜ್ಞಾನಶಕ್ತಿರೂಪವಾಗುವದು. ಹಸ್ತಮಸ್ತಕಸಂಯೋಗರೂಪ ವೇಧಾದೀಕ್ಷೆಯಿಂದ ಕಾರಣಶರೀರವಾದ ಆಣವಮಲವನ್ನು ಶುದ್ಧಗೊಳಿಸಲು (ಅಂದರೆ ಶ್ರೀಮದಾಚಾರ್ಯರಿಂದುಪದೇಶಿಸಲ್ಪಟ್ಟ ಸರ್ವತ್ರಪೂರ್ಣವಾಗಿರುವ ಸದ್ರೂಪವಾದ ಇಚ್ಛಾಶಕ್ತಿಯಿಂದ ಯುಕ್ತವಾದ ಭಾವಲಿಂಗದಿಂದ ಶುದ್ಧವಾಗಲು) ತನಗೆ ಕಾರಣವಾದ ಇಚ್ಛಾಶಕ್ತಿರೂಪವನ್ನು ಹೊಂದುವದು. ಇದೇ ಶುದ್ಧಚೈತನ್ಯರೂಪಿಯಾದ ಬ್ರಹ್ಮಸ್ವರೂಪವಾದ ಮುಕ್ತಿಯು. ಅಥವಾ ಲಿಂಗಾಂಗಸಾಮರಸ್ಯವು ಎಂಬದಾಗಿ ಶ್ರೀಮದಾಚಾರ್ಯಪಂಚಕದಿಂದ ಪ್ರತಿಪಾದಿಸಲ್ಪಟ್ಟಿರುವದು. ಇನ್ನು ಹೊಟ್ಟುದೊಳೆ ತೊಳೆಗಳಿಂ ಬಿಡಲ್ಪಟ್ಟ ಧಾನ್ಯ (ಭತ್ತ) ದ ಬೀಜವು ಹ್ಯಾಗೆ ಅಂಕುರವನ್ನು ಪಡೆಯಲಾರದೋ ಹಾಗೆ ತ್ರಿಮಲಗಳಿಂ ಬಿಡಲ್ಪಟ್ಟ ಜೀವನು ಪುನಃ ಸಂಸಾರಾಂಕುರವನ್ನು ಹೊಂದಲಾರನು. ಅರ್ಥಾತ್ ಶುದ್ಧ ಶಿವಪರಬ್ರಹ್ಮಸ್ವರೂಪವನ್ನೇ ಪಡೆಯುವನು. ಅವರ ಶ್ರೀಮದಾಚಾರ್ಯಾನುಗ್ರಹದಿಂದ ಶಿವಲಿಂಗವಂ ಪಡೆದು (ಶಿವಸ್ವರೂಪವನ್ನು ಹೊಂದಿ) ಪ್ರಾರಬ್ಧವಿರುವವರೆಗೂ ಶಿವಾಗಮ ಶಿವಸೂತ್ರ ಬ್ರಹ್ಮಸೂತ್ರಾದಿ ವೇದಾಂತಚಿಂತನೆಯನ್ನು ಯಾವಾಗಲೂ ಮಾಡುತ್ತ ವೀರಶೈವಮತದ ನಿತ್ಯನೈಮಿತ್ತಿಕ ಕ್ರಿಯೆಗಳನ್ನಾಚರಿಸುತ್ತ ಕ್ರಿಯಾಜ್ಞಾನಸಾಮರಸ್ಯದಿಂ ಶ್ರೀ ಜಗದಾಚಾರ್ಯ ರೇಣುಕ ಶಿವಾಚಾರ್ಯರಿಂದುಪದೇಶಿಸಲ್ಪಟ್ಟ ಷಟ್‌ಸ್ಥಲಾಚರಣೆಯನ್ನು ನಡೆಯಿಸುತ್ತ ಇಷ್ಟಪ್ರಾಣಭಾವಲಿಂಗಗಳುಪಾಸನೆಯನ್ನು ಶ್ರೀಮದಾಚಾರ್ಯರ ಅಪ್ಪಣೆಯಮೇರೆಗೆ ಕ್ರಮವರಿತು ಮಾಡುತ್ತ 'ಮಾನಸಃ ಶಿವಯೋಗೇನ ಶಿವೋಭವತಿ ನಿಶ್ಚಯತಃ' ಎಂಬ ಶಿವೋಕ್ತಿಗನುಸಾರವಾಗಿ ಕೀಟಭ್ರಮರ ನ್ಯಾಯದಂತೆ ಶಿವಸ್ವರೂಪವನ್ನು ಉಪಾಸಕನು ನಿಶ್ಚಯವಾಗಿ ಪಡೆಯುವನು. ಇದುವೇ ಶ್ರೀಮತ್ಪಂಚಾಚಾರ್ಯರಿಂದ ಪ್ರತಿಪಾದಿಸಲ್ಪಟ್ಟ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಸಂಕ್ಷಿಪ್ತಪ್ರದರ್ಶನವು. ಇದಕ್ಕೆ ಲಿಂಗಾಂಗಸಾಮರಸ್ಯವೆಂತಲೂ ಹೇಳುತ್ತಾರೆ. ಲಿಂಗಾಂಗಸಾಮರಸ್ಯವು ಪುನಃ ಪ್ರತ್ಯೇಕವಾಗಿ ವಿಸ್ತರಿಸಲ್ಪಡುವದು. ಪಮ್ಯುತ್ತ ಪೂರ್ವೋಕ್ತ ಸೂಕ್ಷ್ಮಸ್ಥೂಲ ಶಕ್ತಿಗಳಿಂದ ಭೇದಯುಕ್ತವಾದ ಶಿವಜೀವರ ಐಕ್ಯವೇ ಶಕ್ತಿವಿಶಿಷ್ಟಾದ್ವೈತವು. ಅದರ ಪರಶಿವಬ್ರಹ್ಮವೇ ತ್ರಿಕಾಲದಲ್ಲಿ ಆಧಾರಕ್ಕೆ ವಿಷಯವಾದ್ದರಿಂದ ತಾನೇ ಪ್ರಪಂಚರೂಪವಾಗಿ ಪರಿಣಮಿಸಿ "ಯಥೋರ್ಣನಾಭಿಃ ಸೃಜತೇ ಗೃಹ್ಣತೇ" ಎಂಬದಾಗಿ ಷಟ್‌ತ್ರಿಂಶತ್ ತತ್ವರೂಪವಾಗಿ ಪರಿಣಮಿಸಿ ಅಗ್ನಿಯಲ್ಲಿ ಸ್ಫುಲಿಂಗಗಳು ಉದಯಿಸಿ ಲೀನವಾಗುವಂತೆ ತನ್ನಂಶೀಭೂತರಾದ ಜೀವರನೇಕರನ್ನು ನಿರ್ಮಿಸಿ ಪುನಃ ತನ್ನಲ್ಲಿ ಲಯಗೊಳಿಸಿಕೊಳ್ಳುವನು. ಅತ ಏವ ಸೃಷ್ಟಿಸ್ಥಿತಿ ಲಯ ತಿರೋಧಾನ ಅನುಗ್ರಹಗಳೆಂಬ ಪಂಚಕೃತಿಗಳು ಪರಶಿವನಿಗೆ ಶ್ರೀಮದಾಚಾರ್ಯರಿಂದ ಸ್ವೀಕರಿಸಲ್ಪಡುವವು. ಇನ್ನು ಷಟ್ತ್ರಿಂಶತ್ತತ್ವಗಳ ಸ್ವರೂಪವು ಪುನಃ ವಿಚಾರಿಸಲ್ಪಡುವದು. ಅವುಗಳ ಜ್ಞಾನವು ಮುಕ್ತಿಗೆ ಕಾರಣವಾಗಿರುವದು. ಇನ್ನು ಈ ಸಿದ್ಧಾಂತಕ್ಕೆ ಶಿವಾದ್ವೈತವೆಂತಲೂ ವಿಶೇಷಾದ್ವೈತವೆಂತಲೂ ಪರ್ಯಾಯನಾಮಗಳುಂಟು. ಶಕ್ತಿವಿಶಿಷ್ಟಾದ್ವೈತ ಎಂಬಲ್ಲಿ ತೋರಿಸಿದ ಅರ್ಥವೂ ವ್ಯುತ್ಪತ್ತಿಯೂ ಶಿವಾದ್ವೈತವೆಂಬಲ್ಲಿ ಸಿದ್ಧಿಸುವದು. ವಿಶೇಷಾದ್ವೈತವೆಂಬಲ್ಲಿ "ವಿಶ್ಚ ಶೇಷಶ್ಚ ವಿಶೇಷೌ, ತಯೋರದ್ವೈತಂ, ವಿಶೇಷಾದ್ವೈತಂ" ವಿಃ— ಅಂದರೆ ಪರಮಾತ್ಮನು ಶೇಷಃ— ಅಂದರೆ ಜೀವಾತ್ಮನು ಇವರೀರ್ವರ— ಅದ್ವೈತಂ— ಅಂದರೆ ಏಕೀಭಾವವು "ಪಕ್ಷಿ ಕ್ಷಿತಿವ್ಯೋಮ್ನಿ ಚಾಶೇ ಪರಮಾತ್ಮನಿ ಸಾಕ್ಷಿಣಿ' ಇತಿಕೋಶಬಲಾತ್ ಪರಮಾತ್ಮವಾಚಕವಾಗುವದು. 'ವಾತ್ಯುತ್ಪಾದಯತೀತಿ ವಿಃ' ಎಂಬ ಉತ್ಪತ್ತಿಬಲದಿಂದಲೂ ಜಗತ್ಕಾರಣವಾದ ಬ್ರಹ್ಮವು ಗ್ರಹಿಸಲ್ಪಡುವದು "ಯಥಾಗ್ನೇರ್ವಿಸ್ಫುಲಿಂಗಾಃ" ಇತ್ಯಾದಿ ಶ್ರುತಿ ಶಾಸ್ತ್ರಬಲಾತ್ ಶೇಷಶಬ್ದದಿಂದ ಜೀವನು ಗ್ರಹಿಸಲ್ಪಡುವನು. "ಯ ಪಾಶವ್ಯಃ ಸಂದಿವಮಾನಾಃ" ಇತ್ಯಾದಿ ಶ್ರುತ್ಯುಕ್ತರೀತಿಯಾಗಿ ಏಕಾದಶವಾದ ಉಕ್ತಶಕ್ತಿವಿಶಿಷ್ಟ ಜೀವಾತ್ಮ ಪರಮಾತ್ಮರ ಸಾಮರಸ್ಯವು ಬೋಧಿಸಲ್ಪಡುವದು. ಇನ್ನು ವೇದಾಂತಗಳರಡು ಸ್ವರ್ಣಕಟಕ, ಅಹಿಕುಂಡಲ ನ್ಯಾಯದಂತೆ ನಮ್ಮ ಮತದಲ್ಲಿ ಪಾರಮಾರ್ಥಿಕಗಳಾಗಿರುವವು.

ಇನ್ನು ಕೆಲವರು 'ತಸ್ಮಾದ್ಭಯಂ ಸ್ವಾಭಾವಿಕ ಸರ್ವಶ್ರುತಿ ಸಮನ್ವಯೋದಾರಿತ ವಿಶೇಷಾದ್ವೈತವಾದಿನ ಇತಿರಾದ್ಧಾಂತಃ' ಎಂಬ ಶ್ರೀಪತಿ ಶಿವಾಚಾರ್ಯರ ಉಕ್ತಿಯು ಪೂರ್ವಾಪರವಾದ ನಮ್ಮ ಅಭಿಪ್ರಾಯವನ್ನೇ ಪ್ರಬಲಗೊಳಿಸುತ್ತಿದ್ದರೂ ಶಕ್ತಿವಿಶಿಷ್ಟಾದ್ವೈತವು ಶ್ರೀಕರಭಾಷ್ಯಕಾರರಿಗೆ ಅಭಿಮತವಿಲ್ಲೆಂದು ಹೇಳುತ್ತಿರುವರು. ಶ್ರೀಪಂಡಿತರ ಅಭಿಪ್ರಾಯವನ್ನು ತಿಳಿಯದೆ ಆಭಾಸವನ್ನು ಟೀಕಿಸುವವರ ಬುದ್ಧಿಯು ವಿಚಾರಶೂನ್ಯವಾಗಿರುವದೆಂಬುವದನ್ನು ವಿದ್ವಾಂಸರೇ ಊಹಿಸಲವಕಾಶವಿದೆ. ವಾಚಕರೇ ಇಂತಹ ನಿಗಮಾಗಮಸಾರಭೂತವಾದ ವೀರಶೈವಸಿದ್ಧಾಂತವನ್ನು ಶ್ರೀಮದಾಚಾರ್ಯರು ಸ್ಥಾಪಿಸಿ ತನ್ಮೂಲಕ ಅಶೇಷಪ್ರಪಂಚಕ್ಕೆ ಮುಕ್ತಿಯನ್ನು ತೋರಿಸಿ ಅನೂಚಾನವಾಗಿ ತಮ್ಮ ಸಂಪ್ರದಾಯವನ್ನು ನೆಲೆಗೊಳಿಸಿರುವರಷ್ಟೇ? ಹೀಗಿದ್ದು ಕೆಲವರು ಪರಮಪವಿತ್ರವಾದ ಮತಾಚಾರ್ಯರ ಸಿದ್ಧಾಂತವನ್ನು ತಿಳಿಯದೆ ಮತಾಚಾರ್ಯರಿಂದಲೇ ದೂರಾಗಿ ನಿಂತು ಅನ್ಯಾಚಾರ್ಯರ ಸಿದ್ಧಾಂತಕ್ಕೆ ಮೋಹಿತರಾಗಿ ಪುನಃ ಭವಬಂಧನಕ್ಕೆ ಈಡಾಗಿ ಪರಧರ್ಮಾಶ್ರಯಜನ್ಯ ಪಾಪದಿಂದ ಬಳಲುತ್ತ ಚಲಿಸದಿರುತ್ತಿರುವರು. ಮಹಾಶಯರೇ, ಇಂಥ ಸುಸಮಯದಲ್ಲಿಯಾದರೂ 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಉಕ್ತಿಗನುಸಾರವಾಗಿ ಸ್ವಸಿದ್ಧಾಂತದಲ್ಲಿಯೂ ಸ್ವಸಿದ್ಧಾಂತದ ಸ್ಥಾಪನಾಚಾರ್ಯರಲ್ಲಿಯೂ ಭಕ್ತಿಶ್ರದ್ಧೆಗಳನ್ನು ವಹಿಸಿ ವೀರಶೈವಮತವೆಂಬ ಮಂದಿರವನ್ನು ಪವಿತ್ರವಾಗಿರಿಸಿ ಪ್ರಸನ್ನಗೊಳಿಸುವದು ವೀರಶೈವಮತದಲ್ಲಿ ಜನ್ಮವೆತ್ತಿದ ಸರ್ವರಿಗೂ ಮುಖ್ಯವಾಗಿದೆ.

ಇತಿ ವೀರಶೈವಮತಮೀಮಾಂಸಾ ಸಂಪೂರ್ಣಾ.

ಪಂಚಾಚಾರ್ಯಪ್ರಭಾ

೧೯೨೭ ನೇ ಡಿಸಂಬರ್ ತಾ|| ೫ ನೇ ಸೋಮವಾರ

ಗುರು

ವೀರಶೈವಮತವನ್ನು ಸ್ಥಾಪನಮಾಡಿದ ಆಚಾರ್ಯರು ಐವರಿರುವರು ಲೋಕಪ್ರಸಿದ್ಧವೇ ಆಗಿದೆ. ಆದುದರಿಂದ ಇವರಿಗೆ ಪಂಚಾಚಾರ್ಯರೆಂಬ ನಾಮವು ಶಾಸ್ತ್ರದಲ್ಲಿಯೂ ಲೋಕದಲ್ಲಿಯೂ ಪ್ರಸಿದ್ಧವಾಗಿರುವದು. ಈ ಆಚಾರ್ಯರ ಕಾಲವು ಸರ್ವಮತದ ಆಚಾರ್ಯರಂತೆ ಇತ್ತೀಚಿನದಾಗಿರುವದಿಲ್ಲ. ಬಹು ಪ್ರಾಚೀನವಾಗಿರುತ್ತದೆ. ಈ ಆಚಾರ್ಯರು ನಾಲ್ಕು ಯುಗಗಳಲ್ಲಿಯೂ ಒಂದೊಂದು ನಾಮದಿಂದವತರಿಸಿ ಈ ಮತವನ್ನು ಸ್ಥಾಪಿಸಿರುವ ವಿಷಯವು ಶಿವಾಗಮಗಳಲ್ಲಿಯೂ ಘಂಟಾಘೋಷವಾಗಿದೆ. "ಏಕಾಕ್ಷರೋ ದ್ವ್ಯಕ್ಷರಶ್ಚ ತ್ರ್ಯಕ್ಷರಶ್ಚತುರಕ್ಷರಃ । ಪಂಚಾಕ್ಷರಃ ಕೃತಯುಗೇ ಪಂಚನಾಮಾನಿ ಪಾರ್ವತಿ ॥ ಏಕವಕ್ತ್ರೋ ದ್ವಿವಕ್ತ್ರಶ್ಚ ತ್ರಿವಕ್ತ್ರಶ್ಚತುರಾನನಃ । ಪಂಚವಕ್ತ್ರಸ್ತ್ರೇತಾಯಾಂ ಪಂಚನಾಮಾನಿ ಪಾರ್ವತಿ ॥ ರೇಣುಕೋ ದಾರುಕಶ್ಚೈವ ಘಂಟಾಕರ್ಣಶ್ಚ ಧೇನುಕಃ । ವಿಶ್ವಕರ್ಣೇತಿ ನಾಮಾನಿ ದ್ವಾಪರೇ ಮುನಿಸತ್ತಮೇ ॥ ರೇವಣೋ ಮರುಳಶ್ಚೈವೈಕೋರಾಮಃ ಪಂಡಿತಸ್ತಥಾ । ವಿಶ್ವಾರಾಧ್ಯೇತಿ ನಾಮಾನಿ ಕಲೌ ಪರ್ವತನಂದಿನಿ ॥" "ಶ್ರೀಮದ್ರೇವಣಸಿದ್ಧಸ್ಯ ಕೊಲ್ಲಿಪಾಕಿ ಪುರೋತ್ತಮೇ । ಸೋಮೇಶಲಿಂಗಾಜ್ಜನನಮಾವಾಸಃ ಕದಲೀಪುರೇ ॥ ತಥಾ ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ । ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ ॥ ದ್ರಾಕ್ಷಾರಾಮಾಖ್ಯಸತ್ಕ್ಷೇತ್ರೇ ರಾಮನಾಥಾಖ್ಯಲಿಂಗತಃ । ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ॥ ಕಾಶ್ಯಾಂ ವಿಶ್ವೇಶ್ವರಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ । ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ [illegible] ಪಾರ್ವತಿ ಸಾದರಂ ॥ ಕೃತಾದ್ಯುಗಚತುಷ್ಕೇಷು ಪಂಚಾಚಾರ್ಯಾ ಯಥಾಕ್ರಮಂ । ಲಿಂಗಮುಖೋದ್ಭೂತಾ ಲೋಕಸಂಸ್ಥಿತಿಕಾರಿಣಃ" ಎಂಬ ಸುಪ್ರಭೇದಾಗಮ, ಸ್ವಯಂಭುವಾಗಮ ಪ್ರಮಾಣಗಳಿಗನುಸಾರವಾಗಿ ಶ್ರೀಮತ್ಪಂಚಾಚಾರ್ಯರು ಕೃತಯುಗದಲ್ಲಿ ಏಕಾಕ್ಷರ ಶಿವಾಚಾರ್ಯ, ದ್ವ್ಯಕ್ಷರ ಶಿವಾಚಾರ್ಯ, ತ್ರ್ಯಕ್ಷರ ಶಿವಾಚಾರ್ಯ, ಚತುರಕ್ಷರ ಶಿವಾಚಾರ್ಯ, ಪಂಚಾಕ್ಷರ ಶಿವಾಚಾರ್ಯ ಎಂಬ ಹೆಸರುಗಳನ್ನು ಧರಿಸಿ ಅವತರಿಸಿದರೆಂದೂ, ತ್ರೇತಾಯುಗದಲ್ಲಿ ಏಕವಕ್ತ್ರ ಶಿವಾಚಾರ್ಯ, ದ್ವಿವಕ್ತ್ರ ಶಿವಾಚಾರ್ಯ, ತ್ರಿವಕ್ತ್ರ ಶಿವಾಚಾರ್ಯ, ಚತುರ್ವಕ್ತ್ರ ಶಿವಾಚಾರ್ಯ, ಪಂಚವಕ್ತ್ರ ಶಿವಾಚಾರ್ಯರೆಂಬ ಹೆಸರುಗಳನ್ನು ಧರಿಸಿಕೊಂಡು ಅವತರಿಸಿದರೆಂದೂ, ದ್ವಾಪರಯುಗದಲ್ಲಿ ರೇಣುಕ ಶಿವಾಚಾರ್ಯ, ದಾರುಕ ಶಿವಾಚಾರ್ಯ, ಘಂಟಾಕರ್ಣ ಶಿವಾಚಾರ್ಯ, ಧೇನುಕಕರ್ಣ ಶಿವಾಚಾರ್ಯ, ವಿಶ್ವಕರ್ಣ ಶಿವಾಚಾರ್ಯರೆಂಬ ಹೆಸರುಗಳನ್ನು ಧರಿಸಿ ಅವತರಿಸಿದರೆಂದೂ, ಕಲಿಯುಗದಲ್ಲಿ ರೇವಣಸಿದ್ಧ ಶಿವಾಚಾರ್ಯ, ಮರುಳಸಿದ್ಧ ಶಿವಾಚಾರ್ಯ, ಏಕೋರಾಮ ಶಿವಾಚಾರ್ಯ, ಪಂಡಿತಾರಾಧ್ಯ ಶಿವಾಚಾರ್ಯ, ವಿಶ್ವಾರಾಧ್ಯ ಶಿವಾಚಾರ್ಯರೆಂಬ ಹೆಸರುಗಳನ್ನು ಧರಿಸಿಕೊಂಡು ಅವತರಿಸಿದರೆಂದೂ, ಈ ನಾಲ್ಕು ಯುಗಗಳಲ್ಲಿ ಕೊಲ್ಲಿಪಾಕಿ ಸೋಮನಾಥ, ವಟಕ್ಷೇತ್ರ ಸಿದ್ಧೇಶ್ವರ, ಕೇದಾರಕ್ಷೇತ್ರದ ರಾಮನಾಥ, ಶ್ರೀಶೈಲ ಮಲ್ಲಿಕಾರ್ಜುನ, ಕಾಶೀ ವಿಶ್ವನಾಥ ಲಿಂಗಗಳಿಂದ ಅವತರಿಸಿದರೆಂದೂ ನಾಲ್ಕೂ ಈ ಮತದ ಪರಿಪಾಲನೆಗೋಸ್ಕರ ರಂಭಾಪುರೀ, ಉಜ್ಜಯಿನೀ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿದರೆಂದೂ ಶಿವಾಗಮಗಳು ಉದ್ಘೋಷಿಸುವವು. ಇದರ ಮೇಲಿಂದ ನೋಡುತ್ತಿರಲಿಕ್ಕಾಗಿ ಈ ಭಗವತ್ಪಾದರ ಕಾಲನಿರ್ಣಯವೂ ಇವರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ಕಾಲಮಾನವೂ ಇಷ್ಟೇ ಇವೆಯೆಂದು ನಿರ್ಣಯಮಾಡಲು ಯಾರಿಗೂ ಸಾಧ್ಯವಿಲ್ಲೆಂದು ಧಾರಾಳವಾಗಿ ಹೇಳಬಹುದು. ಈ ಮತದ ಪ್ರಾಚೀನತ್ವವು ಈ ರೀತಿಯಾಗಿ ಗಣನಾತೀತವಾದಾಗ್ಯೂ ಕೆಲವರು ಈ ಮತವು ಆಧುನಿಕವೆಂದು ಹೇಳುತ್ತಿರುವರು. ಪುರಾಣಾನ್ವಯವಾಗಿದೆ ಅಲ್ಲದೆ ಈ ಮತದಲ್ಲಿರುವ ಗುರುಭಕ್ತಿಶೂನ್ಯರಾದ ಕೆಲ ಜನರು ಈ ಮತದ ಪ್ರಾಚೀನತೆಯಿಂದಾಗಲಿ ಇವರ ಪ್ರಾಚೀನ ಬುದ್ಧಿಯಿಂದಾಗಲಿ ಧರ್ಮಾಂಗಗಳನ್ನು ತಿಳಿಯದವರು. ಸ್ವಮತದ ಹಾಗೂ ಸ್ವಮತಾಚಾರ್ಯರ ಅಭಿಮಾನವಿಲ್ಲದೆ ಬರಿ ನುಡಿಯುವರು. ಈ ದುಷ್ಕಾರಣದಿಂದ ಇಂಥ ಪವಿತ್ರ ಮತಪ್ರವರ್ತಕರಾದ ಈ ಪಂಚಮಹಾಚಾರ್ಯರ ಇಂಥ ಉನ್ನತ ಅವರ ಸತ್ಕೀರ್ತಿಗಾಗಿರುವದು ಕಲಿಮಹಾರಾಜನ ಪ್ರಭಾವವೆಂದೇ ಹೇಳಬೇಕಾಗಿದೆ. "[illegible] ಮತಿಯಿಲ್ಲ 'ಸತತ ಹೋಗುವುದು'" ಎಂಬ ಪ್ರಾಚೀನರ ವಾಕ್ಯವನ್ನು ಸ್ಮರಿಸಿ ಪರ್ಯಾಯಕಾಲವನ್ನೇ ಎದುರು ನೋಡಬೇಕಾಗಿದೆ. ಆ ಕಾಲಕ್ಕೆ ಬುದ್ಧಿಶೂನ್ಯರಿಗೆ ಪರಮಾತ್ಮನು ಧರ್ಮಬುದ್ಧಿಯನ್ನು ಕೊಟ್ಟು ಈ ಮತವನ್ನು ಅತ್ಯಂತೋಜ್ಜ್ವಲವನ್ನಾಗ ಮಾಡಲೆಂದು ಸದಾ ಅವನನ್ನು ಸ್ಮರಿಸುತ್ತೇನೆ.

ವಿವಾಹ.

ವರ್ತಮಾನದಲ್ಲಿರುವ ಶೈವಮತಗಳಿಗೆ ಮುಖ್ಯಗಳಾದ ಷೋಡಶ ಸಂಸ್ಕಾರಗಳಲ್ಲಿ ವಿವಾಹ ಸಂಸ್ಕಾರವು ಮುಖ್ಯವಾಗಿರುವದು. ಪ್ರತಿಯೊಬ್ಬರಿಗೂ ವೇದ್ಯವಾದ ವಿಷಯವಾಗಿದೆ. ಈ ವಿವಾಹದ ಕ್ರಮವು ಶಿವಾಗಮಗಳಲ್ಲಿಯೂ, ಪ್ರಾಚೀನ ಮತಗ್ರಂಥಗಳಲ್ಲಿಯೂ, ಶಾಸ್ತ್ರಗ್ರಂಥಗಳಲ್ಲಿಯೂ ಬಹು ವಿಶದವಾಗಿ ವಿವರಿಸಲ್ಪಟ್ಟಿರುವದು. ಈಗಿನ ಕಾಲದಲ್ಲಿ ಅನೇಕ ಜನರು ಮತಗ್ರಂಥಗಳ ಸ್ವರೂಪವನ್ನು ತಿಳಿಯದೆ ಈ ಸಂಸ್ಕಾರವನ್ನು ನಾನಾ ಬಗೆಯಾಗಿ ನಡೆಯಿಸುತ್ತಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಸ್ವಾರ್ಥಪರವಾದಿಗಳಲ್ಲಿ ವಿವಾಹಾದಿ ಸಂಸ್ಕಾರಗಳು ಸೃಷ್ಟಿ ಮೊದಲಾಗಿ ಶಾಸ್ತ್ರಾನುಸಾರವಾಗಿ ನಡೆಯಿಸಲ್ಪಡುತ್ತಿ[illegible] ಬಹುಮಟ್ಟಿಗೆ ಲೋಪವಾಗುತ್ತಿರುತ್ತದೆ. ಕನ್ಯಾದಾನ ಪ್ರತಿಗ್ರಹಣದಲ್ಲಿ ಗೋತ್ರ ಸೂತ್ರ ಶಾಖೆಗಳ ವಿಚಾರವು ಮೊದಲನೆಯದಾಗಿರುತ್ತದೆ. [illegible] ಕೆಲವರು ಮಾತ್ರ ಈ ಗೋತ್ರ [illegible] ವಿಚಾರವನ್ನು ಮಾಡಿ ಶರೀರಸಂಬಂಧ [illegible] ಮಾಡುವರು. ಅನೇಕ ಜನರು [illegible] ಮಾಡದೆ ಮನೆಯ ದೇವರು, [illegible] ಬಾಗಿಲು ಸ್ವಗೋತ್ರವಾದಾಗ್ಯೂ ಶರೀರಸಂಬಂಧ ಮಾಡಲು [illegible] ಆ ಆಚಾರಕಾರ್ಯ [illegible] ಸ್ವಗೋತ್ರಾ[illegible] ವಿವಾಹವಾ[illegible] ಸ್ವಗೋತ್ರ [illegible] ಎಂದರೆ [illegible] ತನ್ನ ಗೋತ್ರವನ್ನು ಬಿಟ್ಟು ಬೇರೆ ಗೋತ್ರಗಳಲ್ಲಿಯೇ ಶರೀರಸಂಬಂಧವನ್ನು ಮಾಡಬೇಕೆಂದರ್ಥ, ಒಂದೇ ಗೋತ್ರದಲ್ಲಿ ಶರೀರಸಂಬಂಧವನ್ನು ಮಾಡಿದರೆ ರೌರವ ನರಕವನ್ನು ಹೊಂದುವರೆಂದು ಶಿವಾಗಮಗಳು ಪಂಚಾಚಾರ್ಯರಾಗಿ ಸಾರುತ್ತಿವೆ. ಈ ವಿಷಯವನ್ನು ವೀರಶೈವಮತಾನುಯಾಯಿಗಳು ತಮ್ಮ ಮನಸ್ಸಿನಲ್ಲಿ ತಂದುಕೊಂಡು ಶಾಸ್ತ್ರಾನುಸಾರವಾಗಿ ವರ್ತಿಸಿ ಶಿವನ ಕೃಪೆಗೆ ಪಾತ್ರರಾಗುವದು ಅವರ ಪ್ರಥಮ ಕರ್ತವ್ಯವಾಗಿದೆ. ನಮ್ಮ ಕೆಲವರು ಕನ್ಯಾದಾನ ಪ್ರತಿಗ್ರಹಣವಿಷಯದಲ್ಲಿ ತಮ್ಮ ಮನಸ್ಸಿನಲ್ಲಿ ಏನೇನೋ ವಿಪರೀತ ಭಾವನೆಗಳನ್ನು ಮಾಡಿಕೊಂಡು ತಮ್ಮ ತಮ್ಮ ಬಂಧುಗಳಲ್ಲಿಯೇ ವೈವಾಹ್ಯವನ್ನು ಕಟ್ಟಿಕೊಳ್ಳುವರು. ಶಾಸ್ತ್ರಪದ್ಧತಿಯನ್ನು ತಿಳಿಯದಿರುವದೇ ಇದಕ್ಕೆ ಮೂಲ ಕಾರಣವಾಗಿದೆ. ಅಶಾಸ್ತ್ರೀಯ ಪದ್ಧತಿಗಳನ್ನು ದೂರ ಮಾಡಿ ಶಾಸ್ತ್ರೀಯ ಪದ್ಧತಿಗಳನ್ನು ಸಮಾಜದಲ್ಲಿ ನೆಲೆಗೊಳಿಸಬೇಕೆಂಬುದ್ದೇಶದಿಂದ ಒಂದು ಸ್ವತಂತ್ರವಾದ ಪುಸ್ತಕವನ್ನು ಬರೆದು ಪ್ರಕಟಿಸಬೇಕೆಂದು ಯೋಚಿಸಿದ್ದೇವೆ. ಇದರಿಂದ ಸರ್ವರೂ ಶಾಸ್ತ್ರೀಯ ಪದ್ಧತಿಗಳನ್ನು ತಿಳಿದುಕೊಳ್ಳುವದಕ್ಕೆ ಬಹಳ ಅನುಕೂಲವಾಗುವದು. ಸಮಸ್ತ ವೀರಶೈವರೂ ತಮಗೆ ಮುಖ್ಯಗಳಾದ ಷೋಡಶ ಸಂಸ್ಕಾರಗಳನ್ನು ಶಾಸ್ತ್ರಾನುಸಾರವಾಗಿ ನಡೆಯಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಶ್ರೀ ಪಂಚಾಚಾರ್ಯ ಸಂಸ್ಕೃತ ಕಾಲೇಜು

ಮೈಸೂರು ರಾಜಧಾನಿಯಲ್ಲಿ ವಾಸವಾಗಿರುವ ವೀರಶೈವರಲ್ಲಿ ಗಣ್ಯರೂ, ಮೈಸೂರು ರಾಜ್ಯದಲ್ಲಿಯೂ ಇತರ ದೇಶಗಳಲ್ಲಿಯೂ ಸುಪ್ರಸಿದ್ಧರೂ, ಪರಮ ಮತಾಭಿಮಾನಿಗಳೂ, ಪಾರಮಾರ್ಥ ವಿಚಾರವಿಶಾರದರೂ, ಧರ್ಮಕಾರ್ಯಲೋಲುಪರೂ, ಗುರುಭಕ್ತರೂ ಆದ ಮ|| ರಾ|| ಎಂ. ಎಲ್. ನಾಗಣ್ಣನವರು ಸದ್ಯಃ "ಆಲ್ ಇಂಡಿಯಾ ಮ್ಯೂಚ್ಯುಯಲ್ ಎಡ್ ಅಂಡ್ ಫ್ರೀ ಹೌಸ್ ಅಸೋಸಿಯೇಷನ್" ಎಂಬ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದ ಉದ್ದೇಶವು ಧರ್ಮದೃಷ್ಟಿಯಿಂದ ಅತಿ ಮಹತ್ವವುಳ್ಳದ್ದೆಂದರೆ ಅತಿಶಯೋಕ್ತಿಯಾಗಲಾರದು. ಈ ಸಂಘಕ್ಕೆ ಕೂಡಿದ ಧನರಾಶಿಯು ಎಂದಿಗೂ ಚ್ಯುತಿಯಾಗಬಾರದೆಂಬ ಸದುದ್ದೇಶದಿಂದ ಆ ಹಣವನ್ನು ಗೌರ್ನಮೆಂಟಿನವರಲ್ಲಿಟ್ಟು ಅದರಿಂದ ಬರುವ ಬಡ್ಡಿಯಿಂದ ಅನಾಥರಿಗೂ ಅಂಗಹೀನರಾದವರಿಗೂ ಧರ್ಮಾರ್ಥ ವೈದ್ಯಶಾಲೆ ಅನ್ನಸತ್ರಗಳನ್ನೂ, ಗೋರಕ್ಷಣಶಾಲೆಗಳನ್ನೂ, ವಿದ್ಯಾಲಯಗಳನ್ನೂ ಸ್ಥಾಪಿಸಿ ಸರ್ವರಿಗೂ ಇಹಪರ ಸುಖಗಳನ್ನುಂಟುಮಾಡಬೇಕೆನ್ನುವದೇ, ಈ ಸಂಘ ಸ್ಥಾಪಕರ ಮುಖ್ಯೋದ್ದೇಶವಾಗಿದೆ. ಈ ಸಂಘದ ಧಾರ್ಮಿಕೋದ್ದೇಶಗಳು ಕೆಲವು ಇದ್ದರೂ ಮುಖ್ಯವಾಗಿ; ಸಂಘಸ್ಥಾಪಕರು ವೀರಶೈವರಾಗಿರುವ ಕಾರಣ ವೀರಶೈವರಲ್ಲಿ ಅತ್ಯಂತ ಕೊರತೆಯಾಗಿರುವ ಸಂಸ್ಕೃತ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮತಸ್ಥಾಪನಾಚಾರ್ಯರ ಹೆಸರಿನ ಮೇಲೆ ಒಂದು ಸಂಸ್ಕೃತ ಕಾಲೇಜನ್ನೂ ಮತ್ತು ಒಂದು ಆಶ್ರಮವನ್ನೂ ಮೈಸೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಅಥವಾ ಮೈಸೂರುರಾಜ್ಯಕ್ಕೂ ಬ್ರಿಟಿಷ್ ರಾಜ್ಯಕ್ಕೂ ಮಧ್ಯವಾಗಿರುವ ಹರಿಹರದ ತುಂಗಭದ್ರಾನದಿಯ ತೀರದಲ್ಲಾಗಲಿ ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಈ ಉದ್ದೇಶವು ಅತ್ಯಂತ ಮಹತ್ವವಾದುದೆಂದು ಬೇರೆ ಹೇಳಬೇಕಾಗಿಲ್ಲ. ಇವರು ಕೈಕೊಂಡಿರುವ ಕಾರ್ಯಕ್ಕೆ ಪ್ರೋತ್ಸಾಹಿಸುವದು, ಪ್ರತಿಯೊಬ್ಬ ವೀರಶೈವರ ಕರ್ತವ್ಯವಾಗಿದೆ. ಈ ಸಂಘದ ಯಾವತ್ತೂ ವಿಷಯಗಳನ್ನು ವಿವರವಾಗಿ ತಿಳುಹಿಸುವ ಒಂದು ಚಿಕ್ಕ ಪುಸ್ತಕವು ನಮ್ಮ ಪತ್ರಿಕೆಯೊಡನೆ ಈ ವಾರ ಹಂಚಲ್ಪಟ್ಟಿರುತ್ತದೆ. ಆ ಪುಸ್ತಕವನ್ನು ಸಂಪೂರ್ಣವಾಗಿ ಓದಿನೋಡಿದಲ್ಲಿ ಸರ್ವವೂ ವೇದ್ಯವಾಗುತ್ತದೆ. ಅಲ್ಲದೆ ಈ ವಿಷಯದಮೇಲೆಯೇ ಮ|| ರಾ|| ನಾಗಣ್ಣನವರು ಈ ವಾರದ ಪತ್ರಿಕೆಯಲ್ಲಿಯೇ "ವೀರಶೈವಮತ ಮತ್ತು ಸಂಸ್ಕೃತ ಕಾಲೇಜು" ಎಂಬ ಲೇಖನವನ್ನು ಬರೆದಿರುತ್ತಾರೆ. ವಾಚಕರು ಓದಿನೋಡಿಕೊಳ್ಳಬೇಕು. ಇವರ ಈ ಸತ್ಕಾರ್ಯಕ್ಕೋಸ್ಕರ ರಂಭಾಪುರೀ ಶ್ರೀ ಜಗದ್ಗುರುಗಳು ಒಂದು ಸಾವಿರ ರೂಪಾಯಿಗಳ ಷೇರುಗಳನ್ನು ತೆಗೆದುಕೊಂಡಿದ್ದಾರೆ. ವೇ|| ಪಂ|| ಕಾಶೀನಾಥಶಾಸ್ತ್ರಿಗಳೂ ಸಹ ಈ ಕಾರ್ಯಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಈ ಸಂಘದ ಶ್ಲಾಘ್ಯವಾದ ಏರ್ಪಾಡನ್ನು ನೋಡಿ ಸ್ವಮತ ಮತ್ತು ಪರಮತದ ದೊಡ್ಡಮನುಷ್ಯರಲ್ಲಿ ಅನೇಕರು ಈಗಾಗಲೇ ನೂರಾರು ಷೇರು ಮತ್ತು ಬಾಂಡುಗಳನ್ನು ತೆಗೆದುಕೊಂಡು ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಅಲ್ಲದೆ ಸಂಘದ ಶಾಖೆಗಳು ಇಂಡಿಯಾ ದೇಶದ ಅನೇಕ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟು ಅದರ ಕಾರ್ಯವು ವಿಶೇಷವಾಗಿ ಅಭಿವೃದ್ಧಿಸ್ಥಿತಿಯಲ್ಲಿ ಇರುತ್ತದೆ. ಆದ್ದರಿಂದ ಸರ್ವರೂ ಈ ಮಹತ್ವದ ಕಾರ್ಯದ ಕಡೆಗೆ ದೃಷ್ಟಿಯನ್ನಿಟ್ಟು ಸಂಘದ ನಿಯಮಾನುಸಾರವಾಗಿ ಬಾಂಡುದಾರರಾಗಿ ಈ ಕಾರ್ಯದ ಪುರೋಭಿವೃದ್ಧಿಯನ್ನು ಬಯಸಬೇಕಾಗಿ ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ನಿನ್ನೆ ದಿವಸ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿದರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಈ ತಿಂಗಳು 13 ನೆಯ ತಾರೀಖಿನಲ್ಲಿ ನಡೆಯುವುದು.

ಚೀಫ್ ಕೋರ್ಟಿನಲ್ಲಿ ಈಗಿರುವ ನಾಲ್ಕು ಜನ ನ್ಯಾಯಾಧೀಶರಿಗೆ ಕೆಲಸವು ಹೆಚ್ಚಾಗಿರುವುದರಿಂದ ಮತ್ತೊಬ್ಬ ನ್ಯಾಯಾಧೀಶರನ್ನು ನಿಯಮಿಸುತ್ತಾರೆಂದು ಕೇಳುತ್ತೇವೆ.

ದೇಶೀಯ ಸಂಸ್ಥಾನದ ಪ್ರಭುಗಳಿಗೂ ಸಾರ್ವಭೌಮ ಸರ್ಕಾರಕ್ಕೂ ಇರುವ ಸಂಬಂಧವನ್ನು ಪರಿಶೀಲಿಸಿ ದೇಶೀಯ ಸಂಸ್ಥಾನಗಳ ಭವಿಷ್ಯವನ್ನು ನಿಶ್ಚಯಿಸುವದಕ್ಕಾಗಿ ವೈಸ್‌ರಾಯರವರು ಒಂದು ಸಮಿತಿಯನ್ನು ಏರ್ಪಡಿಸಿರುತ್ತಾರೆ.

ಶಿವಮೊಗ್ಗೆಯಲ್ಲಿ ಮಹಮ್ಮದ್ ಮುನೀರ್ ಎಂಬುವನು ಒಂಟಿಯಾಗಿ ಮೇಕೆಗಳನ್ನು ಮೇಯಿಸುತ್ತಿದ್ದ ಚೌಡಮ್ಮನೆಂಬ 13 ವರ್ಷದ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದನೆಂಬ ಅಪರಾಧಕ್ಕಾಗಿ ಅಸಿಸ್ಟೆಂಟ್ ಸೆಷನ್ಸ್ ಜಡ್ಜರವರು ಅಪರಾಧಿಗೆ 6 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಮೈಸೂರಿನಲ್ಲಿರುವ ಕ್ಷಯರೋಗದ ಆಸ್ಪತ್ರೆಯನ್ನು ಪರಿಶೀಲಿಸಿ ಈ ರೋಗನಿವಾರಣಕ್ಕಾಗಿ ಮುಂದೆ ಯಾವ ಏರ್ಪಾಡುಗಳನ್ನು ಮಾಡಬಹುದೆಂಬುದನ್ನು ಸೂಚಿಸಲು ಮದ್ರಾಸಿನ ಟ್ಯೂಬರ್‌ಕ್ಯುಲೋಸಿಸ್ ಆಸ್ಪತ್ರೆಯ ಡಾಕ್ಟರಾಗಿದ್ದ ಡಾ|| ಕೆ. ಎಸ್. ಚಂದ್ರಶೇಖರಯ್ಯನವರನ್ನು ನಮ್ಮ ಸರ್ಕಾರದವರು ನಿಯಮಿಸಿರುತ್ತಾರೆ.

ಕನ್ನಡಗ್ರಂಥರಚನೆಗೂ ಪ್ರಕಟನೆಗೂ ಪ್ರೋತ್ಸಾಹಕೊಡುವ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದವರು 2 ಸಾವಿರ ರೂಪಾಯಿಗಳನ್ನು ತೆಗೆದಿಟ್ಟಿರುವರು. ಅದರಲ್ಲಿ ಇಂಡಿಯಾ ತತ್ವಶಾಸ್ತ್ರ, ಸಂಸ್ಕೃತ ಭಾಷೆಯ ಇತಿಹಾಸ, ಮಹಮ್ಮದೀಯ ನಾಗರೀಕತೆ, ಅರ್ಥಶಾಸ್ತ್ರ, ವನಸ್ಪತಿಶಾಸ್ತ್ರ ಈ ವಿಷಯಗಳಲ್ಲಿ ಬರೆಯಲ್ಪಡುವ ಗ್ರಂಥಗಳಲ್ಲಿ ಉತ್ಕೃಷ್ಟವಾದ ಎರಡು ಗ್ರಂಥಗಳಿಗೆ 500 ರೂಪಾಯಿಗಳ ಬಹುಮಾನಗಳೂ, ಉಳಿದ ಹಣವು ಕನ್ನಡ ಕೈಪಿಡಿಗೂ ಇತರ ಗ್ರಂಥಕರ್ತರ ಪ್ರೋತ್ಸಾಹಕ್ಕೂ ಉಪಯೋಗಿಸಲ್ಪಡುವದೆಂದು ಡಾ|| ಸೀಲರವರು ಸೆನೇಟ್ ಸಭೆಯಲ್ಲಿ ಅಪ್ಪಣೆ ಕೊಡಿಸಿರುವರು.

ವರ್ತಮಾನಸಂಗ್ರಹ.

ದೆಹಲಿನಗರದಲ್ಲಿ ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ವಿಮಾನ ಕ್ಲಬ್ ಸ್ಥಾಪನೆಯು ಅತಿ ವೈಭವದಿಂದ ನೆರವೇರಿತು.

ಮುಂಬೈ ಎಲೆಕ್ಟ್ರಿಕ್ ಕಂಪನಿಯವರಿಗೆ ಕಳೆದ ಅಕ್ಟೋಬರ್ ತಿಂಗಳೊಂದರಲ್ಲಿ 8,25,791 ರೂಪಾಯಿಗಳು ಉತ್ಪತ್ತಿಯಾಗಿರುವದು.

ಮಲಬಾರದ ದಂಡೆಯಿಂದ ಭಾವನಗರಕ್ಕೆ ಸಾಮಾನುಗಳನ್ನು ತುಂಬಿಕೊಂಡು ಹೋಗುವ ನಾಲ್ಕು ದೋಣಿಗಳು ಬಿರುಗಾಳಿಯಿಂದ ಮುಳುಗಿಹೋದವು.

ಈ ತಿಂಗಳು ಅಂತ್ಯದಲ್ಲಿ ಸೇರುವ ಕಾಂಗ್ರೆಸ್ಸಿಗೆ ಸಂಬಂಧಪಟ್ಟಂತೆ ಒಂದು ಅಖಿಲಭಾರತ ಸಂಗೀತ ಸಮ್ಮೇಲನವು ಮದ್ರಾಸಿನಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ವೈಸರಾಯರವರು ಪಾಟನಾ ನಗರಕ್ಕೆ ಹೋದ ಸಮಯದಲ್ಲಿ ಇವರನ್ನು ಸತ್ಕರಿಸುವದಕ್ಕಾಗಿ ಆ ಸಂಸ್ಥಾನದವರು 25,55,000 ರೂಪಾಯಿಗಳನ್ನು ಖರ್ಚು ಮಾಡಿದರಂತೆ !

ಬಂಗಾಲ ಪ್ರಾಂತದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷಸ್ಥಾನವನ್ನು ಮಿ. ಬಾಬು ಸುಭಾಷ ಚಂದ್ರ ಬೋಸರವರೇ ವಹಿಸಬೇಕೆಂದು ಸರ್ವಾನುಮತದಿಂದ ಠರಾವಾಯಿತು.

ಸಾಂಗಲೀ ಸಂಸ್ಥಾನಾಧಿಪತಿಗಳಿಗೂ ಮತ್ತು ಮೋರಸಂಸ್ಥಾನಾಧಿಪತಿಗಳಿಗೂ ಅನುಕ್ರಮವಾಗಿ 11, ಹಾಗೂ 9 ತೋಪುಗಳ ಸಲಾಮಿನ ಮರ್ಯಾದೆಯು ದೊರಕಿರುತ್ತದೆ

ಚಿಕಾಗೊ (ಅಮೇರಿಕಾ) ಪಟ್ಟಣದಲ್ಲಿ 48 ಭಾಷೆಗಳಲ್ಲಿ ಮಾತನಾಡುತ್ತಾರೆ. ಅಲ್ಲಿಯ ಆಸ್ಪತ್ರೆಗಳಲ್ಲಿ ನೋಟೀಸ್ ಹಾಕಬೇಕಾದರೆ 48 ಭಾಷೆಗಳಲ್ಲಿಯೂ ಬರೆದು ಹಾಕುತ್ತಾರಂತೆ !

ವೈಸ್ರಾಯರವರು ತಮ್ಮ ಕಾರ್ಯಕಾರಿ ಮಂಡಲದ ಉಪಾಧ್ಯಕ್ಷಸ್ಥಾನಕ್ಕೆ ಸರ್ ಬಿ. ಎಲ್. ಮಿತ್ರ ಎಂಬ ಹಿಂದೂ ಗೃಹಸ್ಥರನ್ನು ನೇಮಿಸಿಕೊಂಡಿರುವುದು ಸಂತೋಷದ ಸಂಗತಿಯಾಗಿದೆ.

ಭರತಪುರ ಸಂಸ್ಥಾನದ ಆಡಳಿತವು ಅವ್ಯವಸ್ಥಿತವಾಗಿರುವುದರಿಂದ ಅದನ್ನು ವಿಚಾರಿಸಿ ಸರಿಪಡಿಸಲು ಒಂದು ಸಮಿತಿಯು ಕಳುಹಿಸಲ್ಪಡುವದೆಂದು ವೈಸ್ರಾಯರವರು ಅಲ್ಲಿಯ ಮಹಾರಾಜರಿಗೆ ತಿಳುಹಿಸಿರುವರು.

ಮದ್ರಾಸಿನಲ್ಲಿ ನೆರವೇರುವ ರಾಷ್ಟ್ರೀಯ ಮಹಾಸಭೆಗೆ ಜೈನಾದೇಶದಲ್ಲಿ ಒಳ್ಳೆಯ ಕೀರ್ತಿಯನ್ನು ಹೊಂದಿರುವ ಶ್ರೀಮತಿ ಸನ್ಯತ್ಸೇನ್ ಎಂಬವರು ಕಾಂಗ್ರೆಸ್ಸಿನವರ ಆಮಂತ್ರಣ ಪ್ರಕಾರ ಆಗಮಿಸುವವರಿದ್ದಾರೆಂದು ತಿಳಿಯಬರುತ್ತದೆ.

ನ್ಯೂಯಾರ್ಕ್ ಪಟ್ಟಣದ ಒಂದು ಹೋಟಲಿನ ಯಜಮಾನನಾದ ಮಿ|| ರೇಮಂಡ್ ಒರ್ಟೇಗ್ ಎಂಬವನು ಮೊದಲನೆಯ ಸಲ ಅಟ್ಲಾಂಟಿಕ್ ಸಾಗರವನ್ನು ಹಾರಿದ ಕರ್ನಲ್ ಲಿಂಡಬರ್ಗ್ ಎಂಬವನಿಗೆ 5000 ಪೌಂಡುಗಳ ಬಹುಮಾನವನ್ನು ಕೊಟ್ಟನು.

ಲಾಹೋರಿನ " ದಿ ಜಮೀನ್‌ದಾರ್ " ಎಂಬ ಪತ್ರಿಕೆಯಲ್ಲಿ " ಕೌನ್ಸ್ಯಾಕ್ರೈಸ್ಟ್ಸ್ " ಎಂಬ ಲೇಖನವನ್ನು ಬರೆದಿದ್ದರಿಂದ ಆ ಪತ್ರಿಕೆಯನ್ನು ರದ್ದುಮಾಡಿ ಆ ಆಫೀಸನ್ನೆಲ್ಲಾ ಶೋಧಿಸಿ ಕಾಗದ ಪತ್ರಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡು ಹೋದರು.

ಪೌರ್ವಾತ್ಯರ ಐತಿಹಾಸಿಕ ಮತ್ತು ಧಾರ್ಮಿಕ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯಿಂದ ಜರ್ಮನ್‌ದೇಶದ ಬರ್ಲಿನ್ ಪಟ್ಟಣದ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಡಾಕ್ಟರ್ ಹೆಲಮುತ್ ವಾನ್‌ಗ್ಲಾಸೆನಫ್ ಎಂಬವರು ಸಿಂಹಳದ್ವೀಪಕ್ಕೆ ಬಂದಿರುವರು.

ಸೋಲಾಪುರ ಜಿಲ್ಲೆಯ ಲೋಕಲ್ ಬೋರ್ಡಿನಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಗೊಂದಲವುಂಟಾಗಿ ಯಾವ ಕೆಲಸವೂ ಸರಿಯಾಗಿ ನಡೆಯದಿದ್ದುದರಿಂದ ಆ ಬೋರ್ಡನ್ನು ಮೂರು ವರ್ಷಗಳ ಕಾಲ ಸಸ್ಪೆಂಡ್ ಮಾಡಿರುವುದಾಗಿ ಮುಂಬಾಯಿ ಗೌರ್ನಮೆಂಟಿನವರು ಪ್ರಕಟಿಸಿರುತ್ತಾರೆ.

ಭೂಪಾಲಸಂಸ್ಥಾನದಲ್ಲಿ ಮದ್ಯಪಾನ ನಿರೋಧದ ಕಾನೂನಿದ್ದರೂ ಜನರು ಕಳ್ಳತನದಿಂದ ಮದ್ಯವನ್ನು ತಯಾರಿಸುವದೂ ಮತ್ತು ಬ್ರಿಟಿಷ್ ಸರಹದ್ದಿನಿಂದ ತಂದು ಕುಡಿಯುವದೂ ಹೆಚ್ಚಿದುದರಿಂದ ಈ ಕಾನೂನಿನಿಂದ ಸರಕಾರಕ್ಕೆ ನಷ್ಟವೇ ಹೊರತು ಜನರಿಗೇನೂ ಉಪಕಾರವಾಗಲಿಲ್ಲವೆಂದು ಆ ನಿಷೇಧದ ಕಾನೂನನ್ನು ತೆಗೆದುಹಾಕಿರುತ್ತಾರೆ. ಇದು ಅತ್ಯಂತ ಅನ್ಯಾಯವು !

ಇಂಡಿಯಾ ಸರ್ಕಾರದವರು ಚೀನಾ ಮೊದಲಾದ ಪ್ರಾಂತಗಳಿಂದ ಹಿಂದುಸ್ಥಾನಕ್ಕೆ ಅಪಾಯವಿಲ್ಲದಂತೆ ನೋಡಿಕೊಳ್ಳುವದಕ್ಕಾಗಿ ಹಿಂದುಸ್ಥಾನದ ವಾಯವ್ಯದ ಗಡಿಯಲ್ಲಿಟ್ಟಿರುವಂತೆಯೇ ಈಶಾನ್ಯದ ಗಡಿಯಲ್ಲಿಯೂ ಒಂದು ದೊಡ್ಡ ಸೈನ್ಯವನ್ನಿಡುವರೆಂದೂ ಅದಕ್ಕಾಗಿ ಅಸ್ಸಾಮಿನ ಕೆಲವು ಜಿಲ್ಲೆಗಳನ್ನು ಬಂಗಾಲಕ್ಕೆ ಸೇರಿಸಿ ಉಳಿದ ಭಾಗವನ್ನು ಸೇನಾಪ್ರಾಂತವನ್ನಾಗಿ ಮಾಡುವರೆಂದೂ ತಿಳಿಯಬರುತ್ತದೆ.

ಗದಗ ಪಟ್ಟಣದಲ್ಲಿ ಕಳೆದ ತಿಂಗಳು 28 ನೆಯ ತಾರೀಖಿನ ದಿವಸ ನಡೆದ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ವೇ|| ಹಿರೇಮಠದ ಚನ್ನವೀರಯ್ಯನವರು, ವೇ|| ಗುಡ್ಡಮಠದ ಸಂಗಯ್ಯನವರು, ಮ|| ರಾ|| ತೆಂಗಿನಕಾಯಿ ಗುರಪ್ಪನವರು, ಮ|| ರಾ|| ರೊಟ್ಟಿ ಸೋಮಪ್ಪನವರು, ಮ|| ರಾ|| ಕೋಟಿ ವಕೀಲರು, ಮ|| ರಾ|| ತಡದ ಗೂಳಪ್ಪನವರೇ ಮೊದಲಾದ 11 ಜನ ವೀರಶೈವರು ಆರಿಸಿ ಬಂದುದಕ್ಕಾಗಿ ಸಂತೋಷಿಸುತ್ತೇವೆ.

ಜಮಖಂಡಿ ಸಂಸ್ಥಾನದಲ್ಲೊಂದು ಇಂಗ್ಲಿಷ್ ಕಾಲೇಜು ಸ್ಥಾಪನೆಯಾಗುವದಕ್ಕೆ ಅಪ್ಪಣೆಕೊಡಬೇಕೆಂದು ಸಂಸ್ಥಾನದ ದಿವಾನರವರು ಮುಂಬಾಯಿ ವಿಶ್ವವಿದ್ಯಾಲಯಕ್ಕೆ ಅರ್ಜಿಹಾಕಿಕೊಂಡಿರುತ್ತಾರೆ. ಈ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣವು ಕೊಡಲ್ಪಡುವದೆಂದೂ ಈ ಕಾಲೇಜಿಗಾಗಿ ಬ್ರಿಟಿಷ ಸರಕಾರದಿಂದ ಯಾವವಿಧವಾದ ಸಹಾಯವನ್ನು ಅಪೇಕ್ಷಿಸುವದಿಲ್ಲವೆಂದೂ ತಿಳಿಸಿರುತ್ತಾರೆ.

ಮಹಾರಾಷ್ಟ್ರ ಪೇಣ ಎಂಬಲ್ಲಿ ಒಬ್ಬನಿಗೆ ಹಾವು ಕಡಿದು ಪ್ರಾಣೋತ್ಕ್ರಮಣಾವಸ್ಥೆಯಲ್ಲಿರುವಾಗ ಮಾಂತ್ರಿಕರೊಬ್ಬರು ಮಂತ್ರೋಚ್ಚಾರಣ ಮಾಡುತ್ತ ಆ ಮನುಷ್ಯನ ಮೇಲೆ ನೀರನ್ನು ಚೆಲ್ಲಲು ಅವನಿಗೆ ಕೂಡಲೆ ಸರ್ಪದ ಆವೇಶವುಂಟಾಗಿ ತಾನು ಮಾದಿಗಜಾತಿಯ ಸರ್ಪವೆಂದೂ ತಾನು ಬಿಟ್ಟು ಹೋಗುವೆನೆಂದೂ ಕೂಗಿತಂತೆ ! ಸ್ವಲ್ಪ ಹೊತ್ತಿನಲ್ಲಿಯೇ ಆ ಮನುಷ್ಯನು ಗುಣಹೊಂದಿ ನಡೆದುಕೊಂಡು ಹೋದನಂತೆ ! ಇದಲ್ಲವೇ ಮಂತ್ರದ ಪ್ರಭಾವವು ?

ನ್ಯೂಯಾರ್ಕ್ ಪಟ್ಟಣದಲ್ಲಿ ಒಬ್ಬ ಮನುಷ್ಯನು ಯಾವುದೋ ರೋಗದಿಂದ 6 ವರ್ಷಗಳ ಹಿಂದೆ ಕಿವುಡನಾದನು. ಅಂದಿನಿಂದ ಆತನು ತನ್ನ ಕೈಯಿಂದಲೇ ಇನ್ನೊಬ್ಬರ ಮಾತಿನ ಅರ್ಥವನ್ನು ತಿಳಿದುಕೊಳ್ಳುವಂತೆ ಅಭ್ಯಾಸಮಾಡಿರುವನು. ಮಾತನಾಡುವಾಗ್ಗೆ ತುಟಿಯ ಮೇಲೆ ತನ್ನ ಬೆರಳುಗಳನ್ನಿಟ್ಟು ಅಲ್ಲಿ ಹುಟ್ಟುವ ಚಲನೆಯಿಂದ ಮಾತಿನ ಅರ್ಥವನ್ನು ಅರಿತುಕೊಳ್ಳುವನು. ಹೀಗೆ ತಂತಿಯಿಲ್ಲದ ಯಂತ್ರದ ಮೂಲಕ ಆಗುವ ಸಂಗೀತವನ್ನು ಸಹ ಬೆರಳುಗಳ ಸಹಾಯದಿಂದಲೇ ಕೇಳಿ ನಲಿದಾಡುವನಂತೆ!

ಪಾಟ್ನಾ ನಗರದ 15 ವರ್ಷ ಪ್ರಾಯದ ತರುಣಿಯೊಬ್ಬಳು ತನ್ನ ಗಂಡನು ಸತ್ತು ಅವನ ಶವವನ್ನು ದಹನ ಮಾಡುತ್ತಿರುವಾಗ ಚಿತೆಯಮೇಲೆ ಹೋಗಿ ತಾನೂ ಕುಳಿತುಕೊಂಡಳು. ಅಷ್ಟರಲ್ಲಿಯೇ ಪೋಲೀಸರು ಬಂದು ಆಕೆಯನ್ನು ಹೊರಗೆ ತೆಗೆದರು. ಈ ಮಧ್ಯೆ ಆಕೆಯು ಗಂಗಾನದಿಗೆ ಹಾರಿ ಪ್ರಾಣತ್ಯಾಗ ಮಾಡಲು ಪ್ರಯತ್ನಿಸಿದಳು. ಅದನ್ನು ತಡೆದು ಪೋಲೀಸರು ಆಕೆಯನ್ನು ಜೈಲಿನಲ್ಲಿಟ್ಟರು. ಎರಡು ದಿವಸಗಳನಂತರ ಆಕೆಯು ಸತ್ತುಹೋದಳು. ಪೋಲೀಸರು ಆಕೆಯ ಸಂಬಂಧಿಗಳನ್ನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರಿಸಿದ ಆರೋಪದಮೇಲೆ ಖೈದು ಮಾಡಿದ್ದಾರೆ.

ಸ್ವೀಕಾರ

ಯಡಕೊರೆ ಜವಳಿ ಅಂಗಡಿ ಮ|| ರಾ|| ಬಳಿಸಿದ್ದ ವೀರಶೆಟ್ಟರ ಭಾವಮೈದುನ ಮ|| ರಾ|| ಎಚ್. ಸಿದ್ದಲಿಂಗಪ್ಪನವರಿಗೆ ನಗೂನಹಳ್ಳಿಯಲ್ಲಿರುವ ಮ|| ರಾ|| ಕಾಡಪ್ಪನವರ ಪುತ್ರಿ ಚಿ|| ಸೌ|| ವೀರಮ್ಮನನ್ನು ಕೊಟ್ಟು ನಗೂನಹಳ್ಳಿಯಲ್ಲಿ ತಾ|| 20-11-27 ನೇ ದಿವಸ ನಡೆಯಿಸಿದ ವಿವಾಹ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ 3 ರೂಪಾಯಿಗಳನ್ನೂ ವಧುವಿನ ಕಡೆಯಿಂದ 2 ರೂಪಾಯಿಗಳನ್ನೂ ತೆಗೆಯಿಸಿ ಕಳುಹಿಸಿದ್ದಾರೆ. ಈ 5 ರೂಪಾಯಿಗಳು ಯಡಕೊರೆ ಮ|| ರಾ|| ಒಳಚಿಕ್ಕಯಡಿಯೂರ ಶೆಟ್ಟರ ದ್ವಾರಾ ತಲ್ಪಿರುತ್ತವೆ.

ಧಾರವಾಡದ ಮ|| ರಾ|| ಬಸವಪ್ಪಶೆಟ್ಟರು ಯಾಲಕ್ಕಿ ಇವರ ಮನೆಯಲ್ಲಿ ಕಾರ್ತೀಕ ಶುದ್ಧ ತ್ರಯೋದಶಿ ದಿವಸ ಶ್ರೀ ವೀರಭದ್ರದೇವರ ಸ್ಥಾಪನಾ ರುದ್ರಾಭಿಷೇಕದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ ಎರಡು ರೂಪಾಯಿಗಳು ಶ್ರೀ ಸತ್ತಿಗೇರಿ ಬೃಹನ್ಮಠದ ಪಟ್ಟದ ಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಕಳೆದ ತಿಂಗಳ 28 ನೆ ತಾರೀಖಿನಲ್ಲಿ ನಡೆದ ಗದಗಬೆಟಗೇರಿ ಮುನಿಸಿಪಾಲಿಟಿಯ ಎಲೆಕ್ಷನ್ನಿನಲ್ಲಿ ವೇ|| ಸಂಗಯ್ಯನವರು ತೋಟಯ್ಯನವರು ಗುಡ್ಡಮಠ ಹಾಗೂ ಮ|| ರಾ|| ಗೂಳಪ್ಪನವರು ತಡಸದ ಇವರು ಮೆಂಬರರಾಗಿ ಬಂದ ಸಂತೋಷಾರ್ಥವಾಗಿ ವೇ|| ಸಂಗಯ್ಯನವರು 10 ರೂಪಾಯಿಗಳನ್ನೂ ಮ|| ರಾ|| ಗೂಳಪ್ಪನವರು ೨ ರೂಪಾಯಿಗಳನ್ನು ಪ್ರಭಾಪೋಷಣಕ್ಕಾಗಿ ಕಳುಹಿಸಿರುತ್ತಾರೆ. ಈ ರೂಪಾಯಿಗಳು ಮ|| ರಾ|| ಸಿದ್ದನಗೌಡರು ಲಿಂಗದಾಳ ಇವರ ದ್ವಾರಾ ನಮಗೆ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರುಗಳಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ......

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭಾ, ಬೆಂಗಳೂರು ಸಿಟಿ.

1927 ನೇ ನವೆಂಬರು ತಾ|| 15 ರಲ್ಲಿ ವೀರಶೈವ ಮಹಾಸಭೆಯ ಸ್ವಾಗತಸಂಘದವರು, ಬೆಂಗಳೂರು ಸಿಟಿ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ನಡೆಯಿಸಿದ ನಡವಳಿಕೆಗಳು

60 ಮಂದಿ ಸ್ವಾಗತ ಸಂಘದ ಮೆಂಬರುಗಳು ಹಾಜರಿದ್ದರು.

1. ಮಹಾಸಭೆಯ ಅಧ್ಯಕ್ಷತೆಗೆ ಚುನಾಯಿಸಬಹುದಾದ ದೊಡ್ಡ ಮನುಷ್ಯರುಗಳ ಹೆಸರನ್ನು ಸೂಚಿಸಿ ಬೇರೆ ಬೇರೆ ಸ್ಥಳಗಳಿಂದ ಮಹಾಸಭೆಯ ಆಫೀಸಿಗೆ ಬಂದಿದ್ದ ಕಾಗದಗಳನ್ನು ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ಸಭೆಯ ಮುಂದಿಟ್ಟರು.

ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಡೆಪ್ಯುಟಿ ಪ್ರೆಸಿಡೆಂಟರಾದ ಹುಬ್ಬಳ್ಳಿಯ ರಾವ್ ಬಹದ್ದೂರ್ ಎಸ್. ಟಿ ಕಂಬಳಿ, ಬಿ. ಎ. ಎಲ್ ಎಲ್ ಬಿ ಎಂ. ಎಲ್ ಸಿ.—ಇವರನ್ನು ಈ ಸಾರೆಯ ವೀರಶೈವ ಮಹಾಸಭೆಗೆ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಕಂಟ್ರ್ಯಾಕ್ಟರ್ ಮ|| ರಾ|| ಟಿ. ರಾಚಪ್ಪನವರು ಸೂಚಿಸಿದರು.

ದೇಶದಶೆಟ್ಟರು ಮ|| ರಾ|| ಸಿದ್ದಬಸವಶೆಟ್ಟರು ಅನುಮೋದಿಸಿದರು. ಈ ವಿಷಯವನ್ನು ಪುಷ್ಟೀಕರಿಸಿ ಸಭಾಧ್ಯಕ್ಷರು ಮಾತನಾಡಿದರು.

ರಾವ್ ಬಹದ್ದೂರ್ ಎಸ್. ಟಿ. ಕಂಬಳಿ, ಬಿ ಎ. ಎಲ್ ಎಲ್ ಬಿ ಎಂ ಎಲ್. ಸಿ. ಡೆಪ್ಯುಟಿ ಪ್ರೆಸಿಡೆಂಟ್, ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್ ಹುಬ್ಬಳ್ಳಿ ಇವರನ್ನು ಬೆಂಗಳೂರಿನ 10 ನೆಯ ಅಖಿಲಭಾರತ ವೀರಶೈವ ಮಹಾಸಭೆಗೆ ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದೆಂಬ ನಿರ್ಧಾರವು ಸರ್ವಾನುಮತದಿಂದ ಅಂಗೀಕೃತವಾಯಿತು.

1. ಈ ಮುಂದೆ ಕಾಣಿಸುವ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸುವುದಕ್ಕೋಸ್ಕರ ಠರಾವುಗಳಾಗಿ ಇಡಬಹುದೆಂದು ನಿರ್ಧಾರವಾಯಿತು.

ವಿದ್ಯಾವಿಷಯಕ.—

2 ಸ್ತ್ರೀ ಪುರುಷರಿಬ್ಬರಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವುದು ಮತ್ತು ಪ್ರೌಢ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ.

2 ವೀರಶೈವರಲ್ಲಿ ಕನ್ನಡ, ಇಂಗ್ಲೀಷು, ಸಂಸ್ಕೃತ ಮತ್ತು ವೈದಿಕ ವಿದ್ಯಾಭ್ಯಾಸಕ್ಕೆ ಉತ್ತೇಜನ.

3 ವಿದೇಶದಲ್ಲಿ ಪ್ರೌಢವಿದ್ಯಾಭ್ಯಾಸ ಮಾಡತಕ್ಕವರಿಗೆ ಪ್ರೋತ್ಸಾಹ

4 ಮಹಾಸಭೆಯವರಿಂದ ವೀರಶೈವ ಮತಸಂಬಂಧವಾದ ಪ್ರಾಚೀನ ಮತ್ತು ಆಧುನಿಕ ಗ್ರಂಥಗಳ ಒಂದು ಮುಖ್ಯ ಪುಸ್ತಕ ಭಂಡಾರದ ಸ್ಥಾಪನೆ

5 ಪ್ರತಿ ಪ್ರಾಂತದಲ್ಲಿ ಒಂದೊಂದು ವೀರಶೈವ ವಿದ್ಯಾವರ್ಧಕ ಮುಖ್ಯ ಧನನಿಧಿಯನ್ನೂ ಆ ಮುಖ್ಯ ಧನನಿಧಿಯ ಅಧೀನದಲ್ಲಿ ಆಯಾ ಪ್ರಾಂತದ ಜಿಲ್ಲೆಗಳಲ್ಲಿ ಶಾಖಾಧನನಿಧಿಗಳನ್ನೂ ಸ್ಥಾಪಿಸುವ ಏರ್ಪಾಡು.

6 ಕರ್ನಾಟಕ ಪ್ರಾಂತಕ್ಕೆ ಒಂದು ವಿಶ್ವವಿದ್ಯಾಲಯ.

ಸಾಮಾಜಿಕ.—

7 ಬಾಲ್ಯ ವಿವಾಹ ನಿರೋಧ.

8 ಬಾಲವಿತಂತು ವಿವಾಹವನ್ನು ರೂಢಿಗೆ ತರುವುದು.

9 ಒಳಪಂಗಡಗಳ ವ್ಯತ್ಯಾಸವನ್ನು ಮರೆತು ಸಮಾಜದ ಐಕ್ಯವನ್ನು ಹೆಚ್ಚಿಸುವುದು.

ಸಾಂಪತ್ತಿಕ.—

10 ವೀರಶೈವ ಸಮಾಜದ ಗಣ್ಯತೆಗೂ ಮತ್ತು ಜನಸಂಖ್ಯೆಗೂ ತಕ್ಕಂತೆ ನಮ್ಮಲ್ಲಿ ವಿದ್ಯಾವಂತರಾದ ತರುಣರಿಗೆ ಸರ್ಕಾರಿ ಹುದ್ದೆಗಳು ದೊರೆಯುವಂತೆ ಆಯಾ ಸರ್ಕಾರದವರನ್ನು ಪ್ರಾರ್ಥಿಸುವುದು.

11 ವೀರಶೈವರಲ್ಲಿ ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಸಾಯ ಇವುಗಳ ಅಭಿವೃದ್ಧಿಗೆ ತಕ್ಕ ಏರ್ಪಾಡು.

12 ಗೋವಧಾನಿರೋಧದ ಮತ್ತು ರಾಸುಗಳ ತಳಿಗತಿಯನ್ನು ಉತ್ತಮಗೊಳಿಸುವುದು. ಪ್ರಾಣಿಬಲಿಯನ್ನು ನಿಷೇಧಿಸುವುದು.

ಸಾಮಾನ್ಯ.—

13 ಇನ್ನು ಮುಂದೆ ವೀರಶೈವ ಮಹಾಸಭೆಯು ಪ್ರತಿವರ್ಷವೂ ತಪ್ಪದೆ ನಡೆಯುವ ಬಗ್ಗೆ ಮಾಡಬೇಕಾದ ಏರ್ಪಾಡು. ಮತ್ತು ಚಿರಸ್ಥಾಯಿ ಫಂಡಿನ ಉತ್ಪತ್ತಿಯ ವಿನಿಯೋಗಕ್ರಮ.

14 ಈಗಿರುವ ವೀರಶೈವರ ಪತ್ರಿಕೆಗಳಿಗೆ ತಕ್ಕ ಪ್ರೋತ್ಸಾಹ ಮತ್ತು ಅಖಿಲ ವೀರಶೈವ ಜನಾಂಗದ ಉನ್ನತಿಗಾಗಿ ಒಂದು ದಿನಪತ್ರಿಕೆಯ ಆವಶ್ಯಕತೆ.

ಕೆ. ಪಿ. ಪುಟ್ಟಣ್ಣಶೆಟ್ಟರು

ವೀರಶೈವರ ಶುದ್ಧೀಕರಣವೂ ವಿರೂಪಾಕ್ಷ ಒಡೆಯರೂ.

ಶುದ್ಧಿಸಂಘಟನೆಯು ಈಗಿನ ವಾತಾವರಣದಲ್ಲಿ ಮಹತ್ವದ ಪ್ರಶ್ನೆಯಾಗಿದೆ. ಹಿಂದೂಮತವು [illegible] ಕ್ಷೀಣಿಸಿ ಬಂದಿರುವದಕ್ಕೆ ಇದೂ ಒಂದು ಪ್ರಬಲ ಕಾರಣವಿದೆ. ಕಾಲವಿದ್ದಂತೆ ಹೇಗಾದರೂ ಆಗಲಿ, ಸನಾತನಧರ್ಮದ ರಕ್ಷಣೆ ಕಟ್ಟಿದ ವಾದ ಆ ಸಮಾಜಕ್ಕೆ ನವ ಸದ್ಭಾವನೆಯನ್ನು ತೋರಿಸಿ ಒಂದಿನ ಸಂಗತಿಯನ್ನು [illegible]

ಹಿಂದೂಮತಾಂತರ್ಗತವಾದ ವೀರಶೈವಮತದಲ್ಲಿಯೂ ಹಿಂದಿನಿಂದಲೂ ಶಾಸ್ತ್ರಶುದ್ಧಮಾರ್ಗವಾಗಿ ಶುದ್ಧಿಕಾರ್ಯವು ನಡೆಯುತ್ತಿದೆಯೆಂದು ಇತಿಹಾಸವು ಹೇಳುವದು. ವೀರಶೈವಮತಗ್ರಂಥಗಳೂ ಸಹ ಇದಕ್ಕೆ ಒಡಂಬಟ್ಟಿರುವವು.

ವೀರಶೈವಮತವನ್ನು ಲಿಂಗದೇಹಿಗಳನ್ನಾಗಿ ಮಾಡುವ ಈ [illegible] ಪದ್ಧತಿಯು ಹಿಂದಿನ ಕಾಲದಿಂದ ಈವರೆಗೆ ತಪ್ಪದೆ ನಡೆದಿರುವಂತೆ ಕಾಣುತ್ತದೆ. ಈ ಆಕ್ರಮ ಪ್ರವರ್ತನದಿಂದಲೇ ಲಿಂಗಾಯತರಲ್ಲಿ ಅಂತಃಕಲಹವು ಹೆಚ್ಚಿತು. ಕಾಲಾಂತರದಲ್ಲಿ ಅಸಂಖ್ಯಾತವಾದುದರಿಂದ ಅನಾಯಕತ್ವವೂ ಕಣ್ಣಿಗೆ ಬೀಳುವ ಬಹುನಾಯಕತ್ವವೂ ಆಗಿ ಸಮಾಜವು ದುರ್ಬಲವಾಯಿತು. ಇಷ್ಟಕ್ಕೆಲ್ಲಾ ಶುದ್ಧಿಕಾರ್ಯದ ಅಕ್ರಮ ನಡವಳಿಕೆಯನ್ನು ಮಾಡಿದುದೇ ಕಾರಣವೆಂದು ಈ ಮತದ ರಹಸ್ಯವನ್ನು ಬಲ್ಲ ಹಿರಿಯರು ಹೇಳುವರು.

ವೀರಶೈವ ಮತಸ್ಥಾಪಕರು ಶ್ರೀ ರೇಣುಕಾದಿ ಪಂಚಾಚಾರ್ಯರೆಂದೂ ಲಿಂಗಧಾರಣ ಶಿವದೀಕ್ಷಾದಿ ಸಂಸ್ಕಾರಗಳಿಗೆ ಇವರೇ ಬಾಧ್ಯರೆಂದೂ ಶಾಸ್ತ್ರಗಳು ಬೋಧಿಸುವಂತೆ [illegible] ಅಲಿಂಗಿಯಾದವನಿಗೆ ಲಿಂಗಧಾರಣವನ್ನು ಮಾಡಬೇಕಾದರೆ ಶ್ರೀ ಪಂಚಾಚಾರ್ಯರ ಅನುಮತಿಯೂ ಸಹಾಯವೂ ಇಲ್ಲದೆ ಆಗಲಾರದು. ಎಂಬುದೇ ಶುದ್ಧಿಕಾರ್ಯದ ಕ್ರಮಾಚರಣೆಯು.

ಇತ್ತೀಚೆಗೆ ಅಲಿಂಗಿಗಳನ್ನು ಲಿಂಗದೇಹಿಗಳನ್ನಾಗಿ ಮಾಡುವುದರಲ್ಲಿ ಚೌಡಯ್ಯದಾನಪುರದವರಾದ ಪಟ್ಟಾಧಿಕಾರಿಗಳು ಮುಂದೆ ಬರುತ್ತಿರುವರು. ಇದು ನಮಗೆ ಅತ್ಯಂತ ಮಹತ್ವದ ಸಂಗತಿಯಾಗಿದೆ.

ವಿರೂಪಾಕ್ಷ ಒಡೆಯರು ವಿದ್ವಾಂಸರೂ, "ವೇದತೀರ್ಥ" ಮೊದಲಾದ ಪ್ರಶಸ್ತಿಗಳನ್ನು ಹೊಂದಿದವರೂ, ಒಳ್ಳೆ ಧೈರ್ಯಸ್ಥೈರ್ಯಾದಿ ಗುಣಗಳುಳ್ಳವರೂ ಆಗಿರುವರೆಂದು ಅವರ ಪರಿಚಯದವರಿಂದ ತಿಳಿದುಬರುತ್ತದೆ. ಇಂತಹ ಘನ ವಿದ್ವಾಂಸರ ಇರುವಿಕೆಯು ವೀರಶೈವ ಸಮಾಜಕ್ಕೆ ಭೂಷಣಾಸ್ಪದವಾದುದೇ ಸರಿ!

ಇವರು ಮೊನ್ನೆ ತಾನೇ ಮಿಸ್ ಆಯರಿನ್ ಎಂಬ ಕ್ರೈಸ್ತಯುವತಿಗೆ ಲಿಂಗಧಾರಣವನ್ನು ಮಾಡಿದರೆಂದೂ ಆಕೆಯನ್ನು ಹಾವೇರಿಯಲ್ಲಿರುವ ಪಿ|| ಬಸವಯ್ಯ [illegible] ಎಂಬುವರು ಮದುವೆಯಾದರೆಂದೂ ಲೋಕಮತ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಪತ್ರಿಕಾವಾಚಕರೆಲ್ಲರೂ ತಿಳಿದೇ ಇರುವರು. ಈ ವಿಷಯವನ್ನು ಚರ್ಚಿಸುವುದೇ ಈ ಲೇಖನದ ಮುಖ್ಯೋದ್ದೇಶವು.

ತಾ|| ೧೬-೧೧ ೧೯೨೭ ನೇ [illegible] ಲೋಕಮತ ಪತ್ರಿಕೆಯಲ್ಲಿ ವೇ|| ಕಾವ್ಯತೀರ್ಥ [illegible] ಗುರುಮೂರ್ತಿಶಾಸ್ತ್ರಿಗಳು "ನನ್ನ ಡಾಯರಿಯೊಳಗಿನ ಕೆಲವು ಟಿಪ್ಪಣಿಗಳು" ಎಂಬ ಲೇಖನದಲ್ಲಿ ಹಲವು ಸ್ವಾರಸ್ಯವಾದ ವಿಷಯಗಳನ್ನು ಚರ್ಚಿಸುತ್ತಾ ಒಂದೆಡೆಯಲ್ಲಿ ವೀರಶೈವರ ಶುದ್ಧಿಕಾರ್ಯದ ವಿಷಯದಲ್ಲಿ ವಿವೇಚಿಸಿ ಮಿಸ್ ಆಯರಿನ್ ಎಂಬ ಕ್ರೈಸ್ತ ತರುಣಿಯು ಚೌಡಯ್ಯದಾನಪುರದ ಪಟ್ಟದದೇವರಿಂದ ಲಿಂಗಧಾರಣೆ ಮಾಡಿಸಿಕೊಂಡು ಶಾಂತವ್ವನಾದ ವಿಷಯದಲ್ಲಿ ತಮ್ಮಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇವರ ಈ ಅಭಿಪ್ರಾಯವು ನ್ಯಾಯಸಮ್ಮತವೂ ಅವಲೋಕನೀಯವೂ ಆದುದರಿಂದ ಅದರ ಮುಖ್ಯಾಂಶವನ್ನು ಹೇಳಿ ನಾನಾದರೂ ನನ್ನ ಅಭಿಪ್ರಾಯವನ್ನು ಸಮಾಜಬಾಂಧವರಲ್ಲಿ ಬಿನ್ನವಿಸುವೆನು.

"ಈ ವಿಷಯವು ಹಿಂದೂ ಸಂಘಟನೆಯ ಈ ಕಾಲದಲ್ಲಿ ಅತ್ಯಂತ ಮಹತ್ವವುಳ್ಳದ್ದಾಗಿದ್ದರೂ ಧಾರ್ಮಿಕದೃಷ್ಟಿಯಿಂದ ಮಾತ್ರ ಬಹಳ ಭ್ರಾಂತಿಯನ್ನುಂಟುಮಾಡುವದೆಂದು ಹೇಳಬಹುದು. ಏಕೆಂದರೆ ಈಗ ಪ್ರತಿಯೊಂದು ಜಾತಿಯವರೂ ಎಲ್ಲೆಡೆಯಲ್ಲಿಯೂ ಸಂಘಟನೆಯ ಶಬ್ದವನ್ನು ಬಹಳ ಜೋರಿನಿಂದ ನಡೆಯಿಸಿರುತ್ತಾರೆ. ಆದರೆ ಇದನ್ನು ವಿಧಾಯಕಮಾರ್ಗದಿಂದ ನಡೆಯಿಸದೆ ವಿಘಾತಕಮಾರ್ಗದಿಂದ ನಡೆಯಿಸುವುದೇ ಹೆಚ್ಚಾಗಿ ಕಂಡುಬರುತ್ತದೆ. ಇದರಿಂದ ಧರ್ಮೋದ್ಧಾರವಾಗುವುದರ ಬದಲು ವಿಶೇಷ ಧರ್ಮಘಾತವೇ ಉಂಟಾಗುತ್ತದೆ. ಮಾಂಸಾಹಾರಿಗಳಾದ ಜನರನ್ನು ಏಕಕಾಲಕ್ಕೆ ಪಂಕ್ತಿಪಾವನಮಾಡುವುದು ಶಾಸ್ತ್ರಕ್ಕೂ ಸಾಂಪ್ರದಾಯಕ್ಕೂ ಕೂಡ ವಿಘಾತಕವಲ್ಲವೇ? ಇನ್ನಾಗಿ ಈ ಶುದ್ಧಿತತ್ವವು ಧರ್ಮದ ಜ್ಞಾನ, ಪ್ರೀತಿ, ವಿಶ್ವಾಸ, ಸದಾಚಾರಾದಿಗಳ ಮೇಲೆ ಅವಲಂಬನೆಯಾಗಿರಬೇಕಲ್ಲದೆ ತರುಣ ತರುಣಿಯರ ಮೋಹಾಟಗಳ ಮೇಲೆ ಸರ್ವದಾ ಇರಕೂಡದು. ಏಕೆಂದರೆ ಆ ಮೋಹವು ಕ್ಷಣಿಕವಾಗಿರುವುದರಿಂದ ಅದರ ಅವಲಂಬನೆಯಿಂದ ಸ್ವೀಕರಿಸಿದ ಧರ್ಮಪ್ರೀತಿಯಾದರೂ ಕ್ಷಣಿಕವಾದದ್ದೆಂದು ಯಾರು ತಾನೇ ಹೇಳಲಿಕ್ಕಿಲ್ಲ? ಮತ್ತು ಇಂತಹ ಕಾರ್ಯಗಳನ್ನು ಸಮಾಜಕ್ಕೆ ಮುಖ್ಯಗುರುಗಳಾದ ಪಂಚಪೀಠಾಚಾರ್ಯರಲ್ಲಿ ಚರ್ಚಿಸದೆ ಮಹಾಸಭೆಯಲ್ಲಿ ಈ ಬಗ್ಗೆ ಆಗುವ ಠರಾವುಗಳ ಕಡೆಗೆ ಲಕ್ಷಿಸದೆ ಬೇಕುಬೇಕಾದವರು ತಮಗೆ ಮನಬಂದಂತೆ (ಕೆಲವರು ಪಂಕ್ತಿಭೋಜನದಿಂದಲೂ, ಬೇರೆ ಕೆಲವರು ಪಂಕ್ತಿಭೋಜನವಿಲ್ಲದೆಯೂ) ಆಗಂತುಕರಿಗೆ ಅಶಾಸ್ತ್ರೀಯವಾಗಿ ಲಿಂಗಧಾರಣೆಯನ್ನು ಮಾಡುವುದು ವಿಧಾಯಕವೋ ವಿಘಾತಕವೋ ಎಂಬುದನ್ನು ವಾಚಕರೇ ಊಹಿಸಲಿ. ಶ್ರೀ ಪಂಚಾಚಾರ್ಯರಾದರೂ ಈ ವಿಷಯದಲ್ಲಿ ಇನ್ನು ಮೇಲಾದರೂ ತಮ್ಮ ಉದಾಸೀನತೆಯನ್ನು ದೂರೀಕರಿಸಿ ಈ ಬಗ್ಗೆ ಇರುವ ತಮ್ಮ ನಿಶ್ಚಿತವಾದ ಅಭಿಪ್ರಾಯವನ್ನು ಸ್ಪಷ್ಟವಾಗಿ ಜಾಹೀರಪಡಿಸಬೇಕು ಇಲ್ಲವಾದರೆ ತಮ್ಮ ಸಮಾಜದಲ್ಲಿ ಜರುಗುವ ಈ ನವಚರಿತೆಯ ಫಲವನ್ನು ತಮ್ಮ ಹೊರತು ಅನುಭವಿಸುವವರು ಯಾರೂ ಇಲ್ಲವೆಂಬುದನ್ನು ಮನದಣಿಯ ವಿಚಾರಿಸಲಿ."

ವೇ|| ಗುರುಮೂರ್ತಿಶಾಸ್ತ್ರಿಗಳು "ಕಾವ್ಯತೀರ್ಥ" ಇವರು ತಮ್ಮ ಸೂಕ್ಷ್ಮಮತಿಯಿಂದ ಸಯುಕ್ತಿಕವಾಗಿ ಚರ್ಚಿಸಿರುವ ಮೇಲ್ಕಂಡ ಸಂಗತಿಯನ್ನು ಓದಿ ವಿವೇಕಿಯಾದ ಯಾವನು ತಾನೇ ಹರ್ಷಿಸನು?

ವಿರೂಪಾಕ್ಷ ಒಡೆಯರು ಚೌಡಯ್ಯದಾನಪುರದ ಪಟ್ಟದಸ್ವಾಮಿಗಳು. ಇವರಾದರೂ ಪಂಚಾಚಾರ್ಯರಿಗೆ ಎಲ್ಲ ವಿಧದಲ್ಲಿಯೂ ಅಧೀನರೆಂಬುದನ್ನು ಒಪ್ಪಲೇಬೇಕು ವೇ|| ಗುರುಮೂರ್ತಿಶಾಸ್ತ್ರಿಗಳು ಅಭಿಪ್ರಾಯಪಟ್ಟಂತೆ ಸಮಾಜಕ್ಕೂ ತಮಗೂ ಮುಖ್ಯ ಗುರುಗಳಾದ ಪಂಚಾಚಾರ್ಯರಲ್ಲಿ ಈ ಸಂಗತಿಯನ್ನು ಚರ್ಚಿಸಬೇಕಾಗಿತ್ತು. ಅಲ್ಲದೆ ಸಮಾಜಪ್ರಮುಖರ ಹಾಗೂ ಪತ್ರಿಕಾಕರ್ತರ ಅವಗಾಹನೆಗೆ ತಂದು ಈ ವಿಷಯದಲ್ಲಿ ಅವರ ಅಭಿಪ್ರಾಯಗಳನ್ನು ತಿಳಿಯಬೇಕಾಗಿತ್ತು. ಇದನ್ನು ಮಹಾಸಭೆಯ ಮುಂದಿಡಬೇಕಾಗಿತ್ತು. ಇದಾವುದನ್ನೂ ಯೋಚಿಸದೆ ಒಡೆಯರವರು ಕಾರ್ಯನಿರ್ವಾಹ ಮಾಡಿರುವುದನ್ನು ನೋಡಿದರೆ ವಿಚಾರಪರನಾದ ಯಾವ ವೀರಶೈವನಿಗೆ ತಾನೇ ಆಶ್ಚರ್ಯವಾಗಲಾರದು?

ಈ ಸ್ವಾಮಿಗಳ ಹಾಗೆಯೇ ಇತರ ಪಟ್ಟ ಚರಾಧಿಕಾರಿಗಳೂ ಸಹ ಮದ್ಯಮಾಂಸ ಭಕ್ಷಕರಿಗೆ ಸ್ವೇಚ್ಛೆಯಾಗಿಯೂ ಅಶಾಸ್ತ್ರೀಯವಾಗಿಯೂ ಲಿಂಗಧಾರಣ ಮಾಡಿಸಿ ಪೂರ್ವದ ಲಿಂಗಧಾರಿಗಳಲ್ಲಿ ಶರೀರಸಂಬಂಧವನ್ನು ಬೆಳೆಯಿಸುವಂತೆ ಮಾಡಿಸುತ್ತ ಬಂದರೆ ಆಗ ಈ ಸಮಾಜದ ಗತಿಯು ಏನಾಗುವದು? ಗೌರವವೂ ಪವಿತ್ರವೂ ಆದ ಶೈವಾಚರಣೆಯೂ ಯಾವ ಗುಡ್ಡವನ್ನು ಸೇರುವದು? ಮಾಂಸಭಕ್ಷಕಳಾದ ಈ ಕ್ರೈಸ್ತ ತರುಣಿಗೆ ಪಟ್ಟದ ದೇವರು ಲಿಂಗವನ್ನು ಕಟ್ಟಿ ಸಹಭೋಜನವನ್ನು ಮಾಡಿರಬಹುದು! ಆಹಾ! ಎಂಥ ಕೃತ್ಯವಿದು! ಆಶ್ಚರ್ಯವದು! ಕಲಿಕಾಲದ ಪ್ರಭಾವವನ್ನು ನೋಡಿರಿ! ಸದ್ವರ್ಗದಲ್ಲಿ ಜನ್ಮವೆತ್ತಿದ ಇವರಿಗೆ ಈ ಕೃತ್ಯವು ಎಂದೂ ಸರಿಯಾದದ್ದಲ್ಲ! ಹಾಹಾ! ಅನ್ಯರೇನು ಮಾತು ಸದು? ಆರ್ಯಸಮಾಜದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಆ ಮತೀಯರೊಡನೆ ಒಡನಾಡಿದ ಸಂಸ್ಕಾರದ ಫಲವಾಗಿದೆ. ವೇ|| ಕಾವ್ಯತೀರ್ಥ ಗುರುಮೂರ್ತಿಶಾಸ್ತ್ರಿಗಳು ಅಭಿಪ್ರಾಯಪಟ್ಟಂತೆ ಈ ಪಟ್ಟಾಧಿಕಾರಿಗಳು ಅಶಾಸ್ತ್ರಮಾರ್ಗವನ್ನು ತ್ಯಜಿಸಿ ವಿಧಾಯಕಮಾರ್ಗದಲ್ಲಿ ನಡೆದು ವೀರಶೈವ ಮತಕ್ಕೆ ಮಹೋಪಕಾರವಂ ಮಾಡಬೇಕೆಂದು ವಿನಯದಿಂದ ಪ್ರಾರ್ಥಿಸಲಾಗುವದು.

ಶ್ರೀ ಜಗದ್ಗುರು ಪಂಚಾಚಾರ್ಯರಾದರೂ ಇಂತಹ ವಿಷಯದ ಕಡೆಗೆ ಸಂಪೂರ್ಣ ಲಕ್ಷ್ಯಕೊಟ್ಟು ಅಕ್ರಮಾಚರಣೆ ಅಶಾಸ್ತ್ರೀಯ ಪದ್ಧತಿಗಳನ್ನು ತಪ್ಪಿಸಿ ಸಮಾಜದ ಸತ್ತ್ವವನ್ನು ಕಾಪಾಡಬೇಕೆಂದು ಭಕ್ತಿಪೂರ್ವಕವಾಗಿ ಈ ಮೂಲಕ ಅರಿಕೆ ಮಾಡಿದೆ.

ಕೀರ್ತನಕೇಸರಿ ಕವಿರತ್ನ
ಬಿ. ಶಿವಮೂರ್ತಿಶಾಸ್ತ್ರಿಗಳು, ತುಮಕೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಮಠ ಮತ್ತು ಮಠಾಧಿಕಾರ.

ಮಠದ ಉತ್ಪತ್ತಿಗೆ ಆದರ ಧರ್ಮ ಕರ್ತವ್ಯಾಚರಣೆಗಳು ..ನವಾಗದೆ ಇರುವದೇ ಮುಖ್ಯಸಾಧನವು. ಅಂಥ ..ಸವು ಉಂಟಾಗಬಾರದೆಂಬುದಕ್ಕಾಗಿಯೇ ನಮ್ಮ ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾದಿ ಪಂಚಾಚಾರ್ಯರು ಇತರ ಮತದವರಾರೂ ಮಾಡದಿರುವ ..ಶಸ್ತವಾದ ಏರ್ಪಾಟುಗಳನ್ನು ಮಾಡಿರುವರು. ..ವೆಂದರೆ, ದೀಕ್ಷಾ ಶಿಕ್ಷಾಧಿಕಾರವನ್ನು ವಹಿ..ರುವ ಮುಖ್ಯ ಪೀಠಾಚಾರ್ಯರ ಅಧಿಕಾರ ..ನಗಳೂ, ಅವುಗಳ ಶಾಖೋಪಶಾಖೆಗಳ ಮಠಗಳೂ ..ದ ಎಲ್ಲಾ ಕಡೆಯಲ್ಲಿಯೂ (ಆ ಸೇತು ಹಿಮಾಚಲ ..ರ್ಯಂತರ) ಇರುವಂತೆ ಸ್ಥಾಪಿಸಿರುವರು. ಈ ಮಠ..ಳು ನಮ್ಮ ಮತೀಯರ ಭವರೋಗಕ್ಕೆ ಚಿಕಿತ್ಸೆಯನ್ನು ಮಾಡುವ ವೈದ್ಯಶಾಲೆಗಳಾಗಿಯೂ, ದುರಾಚಾರ ..ಷ್ಟ ಧರ್ಮಾದಿಗಳನ್ನು ಮೆಟ್ಟಿ ತುಳಿದು ಸದ್ಧರ್ಮಸ್ಥಾಪನಾರ್ಥವಾಗಿ ಶಿಕ್ಷಾರಕ್ಷಣೆಗಳನ್ನು ಮಾಡುವ ..ನ್ಯಾಯಮಂದಿರಗಳಾಗಿಯೂ, ಸ್ವಮತೀಯರಿಗೆ ಸದ್ಬೋಧೆಯನ್ನಿತ್ತು ಪುನೀತರನ್ನಾಗಿ ಮಾಡುವ ..ಪಾಠಶಾಲೆಗಳಾಗಿಯೂ, ಇರುವಂತೆ ಮಾಡಬೇ..ಬುವದೇ ಇವುಗಳನ್ನು ಸಂಸ್ಥಾಪಿಸಿದ ನಮ್ಮ ಪೂ..ಚಾರ್ಯರ ಮುಖ್ಯೋದ್ದೇಶವಾಗಿತ್ತು. ಆದರೆ ..ದ್ದೇಶವು ಎಷ್ಟರಮಟ್ಟಿಗೆ ನೆರವೇರುತ್ತಿರುವದನ್ನು ..ಮಠಗಳ ಸ್ಥಿತಿಯನ್ನು ಕಣ್ಣಾರೆ ಕಂಡಿರುವ .. ಸಮಾಜಬಾಂಧವರಿಗೆ ಇಲ್ಲಿ ವಿಸ್ತರಿಸಿ ಹೇಳದಂತೆ ..ಸಿ ಹೇಳಬೇಕಾದದ್ದೇನೂ ಅವಶ್ಯಕವಿಲ್ಲ. ಉದ್ದೇ..ಕಾರವಾಗಿ ಅವುಗಳ ಸ್ಥಿತಿಯು ಸರಿಯಾಗಿ ಇದ್ದ..ವರೆ ಮತದ ಧಾರ್ಮಿಕಸ್ಥಿತಿಯು ಇಷ್ಟು ಶಿಥಿಲ..ತ್ತಿದ್ದಿಲ್ಲ. ಆದ್ದರಿಂದ ಈ ಶೈಥಿಲ್ಯವನ್ನು ..ಗಲಾಡಿಸಬೇಕಾದರೆ ಆ ಧಾರ್ಮಿಕಸೂತ್ರವನ್ನು ..ಸ್ಸಿ ಹಿಡಿದುಕೊಂಡಿರುವ ಈ ಮಠಗಳ ಮಠಾಧಿ..ಗಳು ಕರ್ತವ್ಯದಕ್ಷರಾಗಬೇಕು. ಮಠಾಧಿಕಾರಿ..ಳು ತಾವು ಮಾಡಬೇಕಾದ ಸದಾಚಾರ ಬೋಧೆ, ..ರಾಚಾರ ಖಂಡನ, ಮತತತ್ತ್ವೋಪದೇಶ ಮೊದಲಾದ ..ರ್ಯ ಕರ್ತವ್ಯಕರ್ಮಗಳನ್ನು ಮಾಡದೆ ಇದ್ದರೂ, ..ಳ ಕಪ್ಪಕಾಣಿಕೆಗಳನ್ನು ಮಾತ್ರ ಎತ್ತುವ ವಿಷಯದಲ್ಲಿ ಜಾಗರೂಕರಾಗಿರುವದನ್ನು ನೋಡಿ ಅತ್ಯಂತ ವಿಷಾದಕರವಾಗುತ್ತದೆ. ತಮ್ಮಲ್ಲಿರುವ ನ್ಯೂನತೆಯನ್ನು ತಾವೇ ತಿಳಿದುಕೊಂಡು ಅವರ ತಿದ್ದುಪಾಟುಮಾಡುವ ಉಪಾಯವನ್ನು ಗೊತ್ತುಮಾಡಿಕೊಂಡು ನಡೆದದ್ದಾದರೆ ಶಿಷ್ಯವೃಂದವು ಉದ್ಧಾರವಾಗುವದರಲ್ಲಿ ಏನೂ ಸಂಶಯವಿಲ್ಲೆಂದು ಸಾರಿ ಹೇಳಬಹುದು. ಆದರೆ ದಾರಿತಪ್ಪಿದ ಗಂಡನನ್ನು ಸದ್ಗುಣಸಂಪನ್ನೆಯಾದ ಗೃಹಿಣಿಯು ತಿದ್ದಿಕೊಳ್ಳಲು ಯತ್ನಿಸುವಂತಹ ಅವಸ್ಥೆಯನ್ನು ನಾವು ತಂದುಕೊಳ್ಳಬಾರದೆಂದೇ ನನ್ನ ಬಿನ್ನವಿಕೆಯು. ಇಂಥಹ ಅವಸ್ಥೆಯು ಸಂಭವಿಸಬಾರದೆಂಬ ಅಭಿಪ್ರಾಯದಿಂದ ಮುಂದೆ ಸಿಂಹಾಸನಾಧಿಕಾರಿಗಳನ್ನು ಮಾಡುವ ವಿಷಯದಲ್ಲಿ ಈ ಕೆಳಗೆ ನನ್ನ ಅಲ್ಪಬುದ್ಧಿಗೆ ತಿಳಿದಷ್ಟು ಬರೆದಿರುವೆನು; ಹಂಸಕ್ಷೀರ ನ್ಯಾಯದಂತೆ ಗ್ರಹಿಸಬೇಕೆಂದು ಸವಿನಯಪೂರ್ವಕ ಸೂಚಿಸುವೆನು. ಯಾವತ್ತೂ ಮಠಗಳು ಪಂಚಾಚಾರ್ಯರ ಪೀಠಗಳಿಗೆ ಅಧೀನಗಳೇ ಆಗಿರುವವು. ಮುಂದೆ ಮಠಕ್ಕೆ ಬರತಕ್ಕ ಸಿಂಹಾಸನಾಧಿಕಾರಿಗಳ ವಿಷಯದಲ್ಲಿ ಪಟುವಿನ ಯೋಗ್ಯತೆ ಮೊದಲಾದವುಗಳನ್ನು ಸ್ಥಳೀಯರಾಗಲಿ ಅಥವಾ ಪೂರ್ವಾಧಿಕಾರಿಗಳೇ ಆಗಲಿ ಸಂಸ್ಥಾನಗಳಿಗೆ ತಿಳುಹಿಸಿ ಅಲ್ಲಿಂದ ಅನುಮೋದನವನ್ನು ಪಡೆದನಂತರವೇ ಪಟ್ಟಾಧಿಕಾರ ಮೊದಲಾದವುಗಳನ್ನು ಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ವಂಶಪರಂಪರೆಯಾಗಿ ಪಾತ್ರರಾಗಬೇಕೆಂದು ಹಾರೈಸುವೆನು. ಇದು ಸರ್ವರ ಶ್ರೇಯಸ್ಸಿಗೆ ಅತ್ಯಂತ ಸಾಧಕವಾದ ವಿಷಯವಾದುದರಿಂದ ಯಾವತ್ತು ಸಮಾಜಬಾಂಧವರು ಪರ್ಯಾಲೋಚಿಸಿ ಸಿಂಹಾಸನಾಧೀಶ್ವರರ ಅನುಮತಿಯನ್ನು ಪಡೆಯುವ ನಿಬಂಧನೆಗೆ ಒಳಗಾಗುವ ವ್ಯವಹಾರವನ್ನು ತಂದುಕೊಂಡು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿ ಕೃತಕೃತ್ಯರಾಗಬೇಕೆಂದು ಹೇಳಿ ನನ್ನ ಲೇಖನವನ್ನು ವಿರಮಿಸುತ್ತೇನೆ.

ಶ್ರೀ ಷ|| ಬ್ರ|| ಗಿರಿಸಾಗರ ಪಟ್ಟದ
ಮುಕ್ತಿನಾಥಸ್ವಾಮಿಗಳು,
ಶ್ರೀಮದ್ವೀರಶೈವಸಂಸ್ಕೃತಪಾಠಶಾಲಾ, ಹೊಸಪೇಟೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ರಾಜನಿಷ್ಠಾ ಪ್ರಶಂಸೆ.

ಮೋಕ್ಷಸಾಮ್ರಾಜ್ಯಕ್ಕೆ ಮತಸ್ಥಾಪನಾಚಾರ್ಯರು ಹೇಗೆ ಮುಖ್ಯರೋ ತದ್ವತ್ ಪ್ರಜಾಸಾಮ್ರಾಜ್ಯಕ್ಕೆ ಅರಸರು ಮುಖ್ಯರಾಗಿದ್ದಾರೆ. ಧರ್ಮಸ್ಥಾಪನಾಚಾರ್ಯರಲ್ಲಿ ಎಷ್ಟು ಶ್ರದ್ಧೆಯನ್ನಿಡಬೇಕೋ ಅಷ್ಟೊಂದು ಶ್ರದ್ಧೆಯನ್ನು ರಾಜನಲ್ಲಿಯಾದರೂ ಇಡಬೇಕಾಗುತ್ತದೆ. ಆದ್ದರಿಂದಲೇ "ರಾಜಾ ಪ್ರತ್ಯಕ್ಷದೇವತಾ" ಎಂಬ ಪ್ರಮಾಣವು ಪ್ರಸಿದ್ಧವಾಗಿದೆ. ಗುರುವಿನಲ್ಲಿ ಭಕ್ತಿಯನ್ನಿಡುವದಕ್ಕೆ ಗುರುನಿಷ್ಠೆಯೆಂದೂ ರಾಜನಲ್ಲಿ ಭಕ್ತಿಯನ್ನಿಡುವದಕ್ಕೆ ರಾಜನಿಷ್ಠೆಯೆಂದೂ ಅನ್ನುತ್ತಾರೆ. ಗುರುವಿನಲ್ಲಿ ವಿಶ್ವಾಸವನ್ನಿಡದಿದ್ದರೆ ಮಾನವಪ್ರಾಣಿಗೆ ಮೋಕ್ಷಸಾಮ್ರಾಜ್ಯವು ಹೇಗೆ ದೊರೆಯಲಾರದೋ ತದ್ವತ್ ರಾಜನಲ್ಲಿ ವಿಶ್ವಾಸವನ್ನಿಡದಿದ್ದರೆ ಮಾನವನು ಇಹದಲ್ಲಿ ಮನ್ನಣೆಯನ್ನು ಪಡೆಯಲಾರನೆಂದು ನಿಃಸಂದೇಹವಾಗಿ ಹೇಳಬಹುದು. ಮೊನ್ನೆ ಮೊನ್ನೆ ಅಳವಂಡಿ (ಜಿಲ್ಲಾ ಕೊಪ್ಪಳ) ಸರಕಾರೀ ಸ್ಕೂಲಿನಲ್ಲಿ ರಾಜನಿಷ್ಠೆಯಿಂದ ನಡೆದ ಒಂದು ವೃತ್ತಾಂತವನ್ನು ಪಂಚಾಚಾರ್ಯಪ್ರಭಾ ವಾಚಕರೆದುರಿಗೆ ಇಡುವೆನು.

ನಮ್ಮ ಸೊರೀಫ್ ಅಲೀಜನಾಬ ನವಾಬ ಸಾಲರ್ ಜಂಗಾ ಬಹದ್ದೂರ್ ದಕ್ಷಿಣ ಹೈದರಾಬಾದ ಈ ಪ್ರಭುಗಳವರು ತಮ್ಮ ಪ್ರಜೆಗಳು ವಿದ್ಯಾಬುದ್ಧಿ ಕಲಾಕೌಶಲ್ಯಾದಿಗಳಲ್ಲಿ ಜಾಣರಾಗಲೆಂದು ಪ್ರತಿಯೊಂದು ಗ್ರಾಮಗಳಲ್ಲಿಯೂ ಶಾಲೆಗಳನ್ನೇರ್ಪಡಿಸಿ ಕೀರ್ತಿಶಾಲಿಗಳಾಗಿರುವರು. ಸರ್ವರಿಗೂ ಶ್ರುತವಿದೆ. ಈ ನಮ್ಮ ಪ್ರಭುಗಳವರು ೫-೬ ತಿಂಗಳ ಪೂರ್ವದಲ್ಲಿ ಇಂಗ್ಲಂಡಾದಿ ಪ್ರಸಿದ್ಧ ರಾಷ್ಟ್ರಗಳ ಪ್ರವಾಸಕ್ಕೆ ದಯಮಾಡಿಸಿದ್ದರು. ಪರದೇಶಗಳ ಸಂಚಾರವನ್ನು ತೀರಿಸಿಕೊಂಡು ಕ್ಷೇಮದಿಂದ ಎಂದು ಸ್ವದೇಶಕ್ಕೆ ಆಗಮಿಸುವರೋ ಎಂಬ ಯೋಚನೆಯಲ್ಲಿ ಎಲ್ಲಾ ಪ್ರಜೆಗಳು ತಾಯಿಯನ್ನು ಕಳಕೊಂಡ ಕರುವಿನಂತೆ ಚಿಂತಿಸುತ್ತಿದ್ದರು. ಮಹಾರಾಜರವರು ಸುಖವಾಗಿ ತಮ್ಮ ಪ್ರವಾಸವನ್ನು ಪೂರೈಸಿಕೊಂಡು ಜಲಮಾರ್ಗದಿಂದ ಇದೇ ನವಂಬರ್ ತಾ|| ೨೫ನೇ ಶುಕ್ರವಾರ ಭರತಖಂಡಕ್ಕೆ ತಲ್ಪುವರೆಂಬ ಸಮಾಚಾರವನ್ನು ಕೇಳಿ ಯಾರಿಗೆ ಆನಂದವಾಗಲಿಕ್ಕಿಲ್ಲ?

ಕ್ರಿ. ಶ. ೧೯೨೭ನೇ ನವಂಬರ್ ತಾರೀಖು ೨೫ನೇ ಶುಕ್ರವಾರದ ದಿವಸ ಸ್ಕೂಲ ಸೂಟಿಯಿದ್ದರೂ ಆ ದಿವಸ ಅಳವಂಡಿ ಗ್ರಾಮದ ವಿದ್ಯಾರ್ಥಿಗಳು ಸಾರಣಿಗೆ ತಳಿರು ತೋರಣಗಳಿಂದಲೂ ನೀತಿಯ ವಾಕ್ಯಗಳಿಂದಲೂ ಅರಸರ ಭಾವಚಿತ್ರದಿಂದಲೂ ಶೋಭಿಸುವ ಸರಕಾರೀ ಶಾಲೆಯಲ್ಲಿ ನೆರೆದಿದ್ದರು. ಸಭೆಯಲ್ಲಿ ಶಿಕ್ಷಕರೂ ಗ್ರಾಮಪ್ರಮುಖರೂ ಬಂದಿದ್ದರು. ವಿರಾಜಮಾನವಾದ ಸಿಂಹಾಸನದ ಮೇಲೆ ನಮ್ಮ ಪ್ರಭುಗಳಾದ ಸೊರೀಫ ಅಲೀಜನಾಬ ಸಾಲರ್‌ಜಂಗ್ ಬಹದ್ದೂರ್‌ರವರ ಭಾವಚಿತ್ರವನ್ನು ಮಂಡಿಸಿ ಪುಷ್ಪಗುಚ್ಛಾದಿಗಳಿಂದ ಅಲಂಕರಿಸಿ ಪ್ರಭುಗಳು ಸುಕ್ಷೇಮದಿಂದ ಸ್ವದೇಶಕ್ಕೆ ಈ ದಿವಸವೇ ತಲ್ಪುವರೆಂಬ ಆನಂದೋದ್ಗಾರಗಳನ್ನು ಹೊರಡಿಸುತ್ತ ಭಾರತದೇವಿಯನ್ನು ಅನನ್ಯಭಾವದಿಂದ ಪ್ರಾರ್ಥಿಸಿ ರಾಷ್ಟ್ರಗೀತೆಯನ್ನು ಹಾಡಿ ಸಾಲರ್‌ಜಂಗ ಬಹದ್ದೂರ್ ಕೀ ಜೈ! ಈ ತೆರದ ಜಯಘೋಷ ಮಾಡಿದರು. ಅನಂತರ ಹೆ|| ಮಾ|| ಮಿ|| ರಾಮಚಂದ್ರರಾವ್ ಇವರು ಪ್ರಭುಗಳವರ ದೃಷ್ಟಾಂತದೊಡನೆ ರಾಜನಿಷ್ಠೆಯ ವಿಷಯಕ್ಕೆ ಸರ್ವವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಮಹಾಪ್ರಭುಗಳಿಗೆ ಈ ಸುದ್ದಿಯನ್ನು ತಿಳಿಸಬೇಕೆಂದು ವಿದ್ಯಾರ್ಥಿಗಳು ಸೂಚನೆಯನ್ನು ತಂದರು. ಸರ್ವರೂ ಅನುಮೋದಿಸಿದರು. ಆದ್ದರಿಂದ ಮುಂಬಯಿಗೆ ವಾಯರ ಮಾಡುವ ಅಧಿಕಾರವು ಅ|| ಮಾ|| ನೀಲನಗೌಡ ಪಾಟೀಲ ಇವರ ಕಡೆಗೆ ಕೊಡಲ್ಪಟ್ಟಿತು. ಸಭೆಯು ರಾಜನಿಷ್ಠೆಯಿಂದ ತುಂಬಿತುಳುಕುತ್ತಿತ್ತು. ಇದೇ ಅಲ್ಲವೇ "ರಾಜನಿಷ್ಠಾ ಪ್ರಶಂಸೆ" ಯು? ಪ್ರಭುಗಳವರಿಗೆ ದೇವರು ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸಿ ನನ್ನ ಲೇಖಕ್ಕೆ ವಿರಾಮವನ್ನೀಯುತ್ತೇನೆ.

ರಾಜನಿಷ್ಠಾಭಿಮಾನಿ,
ಶಿವಯ್ಯಾ ಹಿರೇಮಠ ಸ್ಕೂಲಮಾಸ್ಟರ
ಅಳವಂಡಿ.

ವೀರಶೈವ ಅನಾಥಾಲಯ, ಮೈಸೂರು.

ಇದರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ರಾಜಧಾನಿಯ ಎಂಟು ಜನ ಮಾನ್ಯ ಗೃಹಸ್ಥರಾಗಿದ್ದಾರೆ. ವೈದ್ಯಶಾಖೆಯ ವಿರಾಮವೇತನಿಗಳಾದ ಡಾ|| ಟಿ. ಎಸ್. ಸಿದ್ಧಪ್ಪನವರು ಪ್ರಧಾನ ನಾಯಕರಾಗಿದ್ದಾರೆ. ಇವರು ಸಮಾಜಸೇವಾ ಕಾರ್ಯಕ್ಷೇತ್ರದಲ್ಲಿ ಉತ್ಸಾಹದಿಂದ ಕಾರ್ಯಮಾಡುತ್ತಿರುವ ಗೂಢಚರಿತ್ರರೂ, ಗುಪ್ತ ಕೀರ್ತಿಗಳೂ, ಆಗಿರುತ್ತಾರೆ. ಸ್ನೇಹಪರರೂ, ಇಂಗಿತಜ್ಞರೂ,ನಗೆಮೊಗದ ನಿದಾನಗುಣಿಗಳೂ, ಆದ ಮ್ಯಾನೇಜರ್ ಶ್ರೀ ಪುಟ್ಟಬಸಪ್ಪನವರು ಹಗಲಿರುಳೂ ವಿದ್ಯಾರ್ಥಿಗಳ ಕಷ್ಟಸುಖಗಳನ್ನು ವಿಚಾರಿಸುತ್ತಾ ಆಸಕ್ತಿಯಿಂದ ಕೆಲಸ ಮಾಡುತ್ತಿರುವರು. ಶ್ರೀಮತಿ ವೀರಮ್ಮಯ್ಯನವರು ಈ ಆಲಯದ ಸ್ಥಾಪಕರು. ಸ್ಥಳೀಯ ಹಾಗೂ ಪರಸ್ಥಳೀಯ ಉದಾರ ಹೃದಯರನೇಕರು ಧನಧಾನ್ಯರೂಪವಾಗಿ ಸಹಾಯ ಮಾಡುತ್ತಿದ್ದಾರೆ. ಆಲಯದಲ್ಲಿ 40 ಜನ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲರೂ ವಿದ್ಯಾಸಕ್ತರೂ ಆಚಾರಶೀಲರೂ ಆಗಿರುತ್ತಾರೆ. ಇಲ್ಲೊಂದು ಪುಟ್ಟಪುಸ್ತಕ ಭಂಡಾರವು ಚರ್ಚಾಸಂಘವೂ ಇವೆ. ಪಂಚಾಚಾರ್ಯಪ್ರಭಾ, ಮೈಸೂರು ಸ್ಟಾರ, ಜೈನ ಪಾಕ್ಷಿಕಪತ್ರಿಕೆ ವಿಶ್ವಬಂಧು, ಇವು ಉಚಿತವಾಗಿ ಬರುತ್ತಿರುವವು. ಆಯಾಯ ಪತ್ರಸಂಪಾದಕರಿಗೆ ಆಲಯದ ವಿದ್ಯಾರ್ಥಿಗಳು ಕೃತಜ್ಞರಾಗಿರುತ್ತಾರೆ. ಆಲಯದ ಸ್ಥಿತಿಯು ಭವ್ಯವಾಗಿರುವದು. ಜಗದೀಶನಾದ ತ್ರಿನಯನ ಸ್ವಾಮಿಯು ಈ ಮತಾಭಿಮಾನಿಗಳಿಗೂ ಧರ್ಮಾಭಿಮಾನಿಗಳಿಗೂ ಮಂಗಳವನ್ನುಂಟುಮಾಡಲಿ.

ಗುಣಗಾನಪ್ರಿಯ.

ಮುರುಗಮ್ಮನ ಜಾತ್ರೆ, ಕೊಡದೂರು.

ಗುಲ್ಬುರ್ಗಾ ಜಿಲ್ಹಾ [illegible] ತಾಲ್ಲೂಕು ಕೊಡದೂರು ಎಂಬ ಗ್ರಾಮದಲ್ಲಿ ಮುರುಗಮ್ಮನ ಜಾತ್ರೆಯಾಗುವುದು ಈ ಪ್ರಾಂತ್ಯದಲ್ಲೆಲ್ಲಾ ಪ್ರಸಿದ್ಧವಿರುವುದು. ಈ ಜಾತ್ರೆಗೆ ನಾನಾ ಜಾತಿಯ ಜನರು [illegible] ಸೇರುತ್ತಾರಲ್ಲದೆ ಉತ್ತಮ ಜಾತಿಯವರೂ ಸೇರುವರಿಲ್ಲ. ಬಹುಕಾಲದಿಂದ ಈ ಜಾತ್ರೆಯ ಸಮಯದಲ್ಲಿ ದೇವತೆಗಳಿಗೆ ಪ್ರಾಣಿಗಳ ಬಲಿಯನ್ನು ಕೊಡುತ್ತಾ ಬಂದಿರುತ್ತಾರೆ. ಈ ಗ್ರಾಮದಲ್ಲಿರತಕ್ಕ ಲಿಂಗಾಯತರು ಪ್ರಾಣಿಗಳ ಬಲಿಯನ್ನು ಕೊಡತಕ್ಕ ಜನರಿಗೆ 'ನೀವು ಹೀಗೆ ಪ್ರಾಣಿಗಳನ್ನು ಹಿಂಸಿಸುವುದು ಯೋಗ್ಯವಲ್ಲ' ವೆಂದು ಬೇಕಾದಷ್ಟು ಬೋಧಿಸಿದಾಗ್ಯೂ ಆ ಜನರು ತಮ್ಮ ಪ್ರವೃತ್ತಿಯನ್ನು ಇಂದಿನವರೆಗೂ ಬಿಡಲೊಲ್ಲರು. ಇದು ಕಲಿಕಾಲದ ಪ್ರಭಾವವಾಗಿದೆ. ನಮ್ಮ ಪ್ರಾಂತದಲ್ಲಿರುವ ಗುಣಮಾತ್ರಲ್ಲವಿರುವರು. ನಮ್ಮ ಗ್ರಾಮಕ್ಕೆ ಭಿಕ್ಷೆಗೋಸ್ಕರ ಬಂದಾಗ್ಗೆ ಇಲ್ಲಿರುವರು ತಮಗೆ ಭಿಕ್ಷೆಯನ್ನು ಕೊಡಲಿಲ್ಲವೆಂಬ ಸಿಟ್ಟಿನಮೇಲೆ ಇಲ್ಲಿಯ ಲಿಂಗಾಯತರ ಮೇಲೆ ಇವರು ಪ್ರಾಣಿಹಿಂಸೆಗೆ ಪ್ರೋತ್ಸಾಹ ಕೊಡುತ್ತಾರೆಂದು ಇಲ್ಲದ್ದೊಂದು ಅಪವಾದವನ್ನು ಹೊರಿಸಿ ಜನರಿಂದ ಹೇಳುತ್ತಿರುವರಲ್ಲದೆ ಸರ್ಕಾರದಲ್ಲಿಯೂ ಕೂಡ ಬೇರೆರೀತಿಯಾಗಿ ತಪ್ಪನ್ನು ಹೊರಿಸಿ ತಿಳಿದ್ಯುತ್ತಾರೆ. ಈ ಪತ್ರಿಕೆ ಮುಖಾಂತರ ಪ್ರಕಾಶದಲ್ಲಿ ಇಡುವ ಈ ರೀತಿಯಾಗಿ ಮಾಡುತ್ತಿರುವರು. ಆಶ್ಚರ್ಯದ ಸಂಗತಿಯಾಗಿದೆ. [illegible] "ಮಹಾ ಶಿವರಾತ್ರಿ, [illegible] ನವರಾತ್ರಿ" ಹಾಗೂ "[illegible]" ಎಂಬ ಗಾದೆಯ ಪ್ರಕಾರವಾಗಿ ವರ್ತಿಸುವುದು ಅನಾದಿಯಾದ ಧರ್ಮವಾಗಿದೆ. ಇಂಥ ಅಮೂಲ್ಯವಾದ ಸ್ವಧರ್ಮವನ್ನು ದೂರೀಕರಿಸಿ, ಪರಧರ್ಮಕ್ಕೋಸ್ಕರ ಇವರು ನಾನಾರೀತಿಯಾಗಿ ಲೌಕಿಕರಂತೆ ವರ್ತಿಸುತ್ತಿರುವುದೂ ಹಾಗೂ ಎಲ್ಲಾ ಕಡೆಗಳಲ್ಲಿ ನಾಟಕಗಳನ್ನು ಮಾಡಿ ಜನಗಳಿಗೆ ತೊಂದರೆಕೊಡುವುದೂ ಅನ್ಯಾಯವೆನಿಸದೆ ಬಿಡದು. ಆದ್ದರಿಂದ ಸರಿಯಾದ ವಿಚಾರ ಮಾಡಿ ಇಂಥ ಕಾರ್ಯಗಳಲ್ಲಿ ಮನಸ್ಸನ್ನು ಕೊಡದೆ ಯಾವಾಗಲೂ ತಮ್ಮ ಸ್ವಧರ್ಮದ ಪ್ರಕಾರವಾಗಿ ವರ್ತಿಸಿ ಸರ್ವರ ಪ್ರೇಮಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ

ಕೊಡದೂರು,
23-2-1337 ಫಸಲಿ.

ಸಂಗಪ್ಪ ಪೋಲೀಸ್ ಪಾಟೀಲ್
ವೀರಶೆಟ್ಟಿ ಮಾಲೀ ಪಾಟೀಲ್
ಅಪ್ಪಾಸಾಹೇಬ ಕುಲಕರ್ಣಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಶೈವರಲ್ಲಿ ವಿನಂತಿ.

ಯಲಿಯೂರು ವೀರಶೈವ ಮಹಾಸಭಾ.

ತುಮಕೂರು ಜಿ|| ಕುಣಿಗಲ್ ತಾಲ್ಲೂಕು ಯಲಿಯೂರಿನಲ್ಲಿರುವ ವೀರಶೈವ ಮಹಾಜನರು, ಮ|| ರಾ|| ಶ್ರೀ ಟಿ ಹೆಚ್ ಚನ್ನವೀರಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 29 11 1927 ರಲ್ಲು ಸಭೆಸೇರಿ ಬೆಂಗಳೂರಿನಲ್ಲಿ ಡಿಸೆಂಬರ್ ತಾ|| 2 ರಿಂದ 30 ರಲ್ಲಿ ನಡೆಯುವ ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭೆಗೆ ಈ ಊರಿನ ಬಿ. ಸಂಜುಂಡಶೆಟ್ಟರ ಮಕ್ಕಳಾದ ವೈ ಯಸ್. ರುದ್ರಪ್ಪಶೆಟ್ಟಿಯವರನ್ನು ನಮ್ಮ ಕಡೆಯಿಂದ ಪ್ರತಿನಿಧಿಯನ್ನಾಗಿ ಚುನಾಯಿಸಿರುತ್ತೇವೆ. ಆದುಕಾರಣ ಸೋಲ್ಲಾಪುರ ಯಲಿಯೂರಿನವರಂತೆಯೇ ಸರ್ವ ಸ್ಥಳಗಳಲ್ಲಿ ಇರುವ ವೀರಶೈವ ಮಹಾಜನರು ಮನಸ್ಸಿಟ್ಟು ಸಭೆಸೇರಿ ನಿಮ್ಮ ನಿಮ್ಮ ಪ್ರತಿನಿಧಿಗಳನ್ನು ಬೆಂಗಳೂರಿನ ಮಹಾಸಭೆಗೆ ಕಳುಹಿಸಿಕೊಟ್ಟಲ್ಲಿ ನಮ್ಮ ವೀರಶೈವಮತವು ಏಳಿಗೆಹೊಂದುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಮತದ ಅಭಿಮಾನವಿಟ್ಟು ಮಹಾಸಭಾ ಸೆಕ್ರೆಟರಿಯವರಾದ ಮ|| ರಾ|| ಶ್ರೀ ಎಂ ನಾಗಪ್ಪನವರಿಗೂ ಮತ್ತು ಮ|| ರಾ|| ಶ್ರೀ ಟಿ ಸಂಜಪ್ಪನವರಿಗೂ ಲಿಖಿತ ಮೂಲಕ ನಿಮ್ಮ ನಿಮ್ಮ ಪ್ರತಿನಿಧಿಗಳನ್ನು ಜಾಗ್ರತೆ ತಿಳಿಸಿರಿ. ಓಟು [illegible] ಇರುವುದರಿಂದ [illegible]ದಲ್ಲಿ ಇರುವ ಸಮಸ್ತ ವೀರಶೈವರೂ ಈ ಸುಸಮಯವನ್ನು ಕಳೆದುಕೊಳ್ಳಲಾರರೆಂದು ನಮ್ರತೆಯಿಂದ ಬೇಡುವ

ಚಂದಾದಾರ

ಮೇಲ್ಕಂಡ ಯಲಿಯೂರಿನ ಸಭೆಯವರು ನನ್ನನ್ನು ಬೆಂಗಳೂರಿನಲ್ಲಿ ನಡೆಯುವ ಮಹಾಸಭೆಗೆ ಪ್ರತಿನಿಧಿಯಾಗಿ ಚುನಾಯಿಸಿ ನನ್ನ ಇಷ್ಟಾರ್ಥವನ್ನು ನೆರವೇರಿಸಿದ್ದಕ್ಕಾಗಿ ಆ ಸಭೆ [illegible]ಯನ್ನು ವಹಿಸಿದ್ದ ಮ|| ರಾ|| ಶ್ರೀ ಟಿ ಹೆಚ್ ಚನ್ನವೀರಶೆಟ್ಟರಿಗೂ, ಸಭೆಯ ಮೊದಲನೆಯವರಾದ ಮ|| ಬಿ ಸಂಜುಂಡಶೆಟ್ಟರಿಗೂ, ಜವಳಿಅಂಗಡಿ ವೈ ಲಿಂಗಪ್ಪಶೆಟ್ಟರಿಗೂ ಸಿ ಸಂಜುಂಡಶೆಟ್ಟರಿಗೂ ವೈ ಅಡವಿಶೆಟ್ಟರು ಮುಂತಾದವರಿಗೂ, ಮ|| ರಾ|| ಶ್ರೀ ಮಹಾಜನರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನನ್ನು ಮುಂದೆಯೂ ಕೂಡ ವೀರಶೈವ ಮಹಾಸಭಾ ನಡೆಯುವ ಪ್ರಕಾರ ನನ್ನ ಸಾಧ್ಯವಾದಷ್ಟು [illegible] ಸಂತೋಷದಿಂದ ಶ್ರೀ [illegible] ಸ್ವೀಕರಿಸುತ್ತೇನೆ. [illegible] ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಪ್ರಾರ್ಥಿಸುವ

ಸಮಾಜಸೇವಕ,

ಯಲಿಯೂರು ವೈ. ಎಸ್. ರುದ್ರಪ್ಪಶೆಟ್ಟಿ

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು

ಶ್ರೀ ಜಗದ್ಗುರು ಉಜ್ಜಯಿನೀ ಮಹಾ ಸಂಸ್ಥಾನದ ಆಸ್ಥಾನ ವಿದ್ವಾಂಸರಾದ ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರಾದ, ವೀರಶೈವ ಪಂಡಿತಾಗ್ರಗಣ್ಯರಾದ, ಬ್ರಹ್ಮಶ್ರೀ ವಿದ್ವಾನ್ ವೇ|| ಪರ್ವತಸ್ಥ ಬಸವಲಿಂಗ ಶಂಕರ ಶಾಸ್ತ್ರಿಗಳವರು ಅತಿ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ಓದುವವರೇ ಮಹಾಜನರೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವ ಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷದ್ (ಶಾಂಕರವ್ಯಾಖ್ಯಾ)	1-0-0

ವಿಳಾಸ:— ವೇ|| ಪರ್ವತಯ್ಯ ಹಿರೇಮಠ,
ಪೋಸ್ಟು ಹರಿಹರ ಡಿ|| ಚಿತ್ರದುರ್ಗ.

ಅತ್ಯದ್ಭುತ ಆಯುರ್ವೇದೀಯ ಅದ್ಭುತ!!

ಪ್ರಸಿದ್ಧ ಡಾಕ್ಟರರೊಬ್ಬರು

ಕಂಡುಹಿಡಿದ ಸಿದ್ಧೌಷಧ.

ನರಾರೋಗ್ಯ ನಿವಾರಕವಾದ ಸಂಜೀವನೌಷಧವನ್ನು ಕಂಡುಹಿಡಿಯುವದಕ್ಕಾಗಿ ಅಮೇರಿಕಾ ದೇಶದ ಡಾಕ್ಟರರೊಬ್ಬರು ಅನೇಕ ವರ್ಷ ಕಾಲ ಪರಿಶೋಧನೆಗಳನ್ನು ಮಾಡಿ ಬಹು ಧನವ್ಯಯ ಮಾಡಿಕೊಂಡು ಕೊನೆಯಲ್ಲಿ,

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಕಂಡುಹಿಡಿದು ಅನುಭವದಿಂದ ಅನೇಕ ರೋಗಗಳನ್ನು ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ಎದೆ ಭಾರವಾಗಿರುವುದು ಅತಿಸಾರ, ವಾಂತಿ ಭೇದಿ ಅಥವಾ ಕಾಲರಾ [illegible] ಮಲೇರಿಯಾ ಜ್ವರ, ಇತರ ವಿಷಮ ಜ್ವರಗಳು ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವುಗಳಿಗೆ ಮಲಬದ್ಧತೆ, ನಾಯಿಕೆಮ್ಮಲಿಗೆ, ಸ್ತ್ರೀಯರ ದಿನಗಳಿಗೆ, ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ ಇನ್‌ಫ್ಲುಯೆಂಜಾ ವಿಗೆ, ಹಾವು ಚೇಳು ಕಣಜ ಮುಂತಾದ ವಿಷಜಂತುಗಳ ಕಡಿತಕ್ಕೆ ಬಾಲಗ್ರಹ ಇವೇ ಮುಂತಾದವುಗಳನ್ನು ಗುಣಪಡಿಸಿರುತ್ತಾರೆ. ಇದನ್ನು ಅಲ್ಪ ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವರೋಗವೂ ಅಂಟುವುದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿಮನೆಯಲ್ಲಿ ಅಥವಾ ಪ್ರತಿಯೊಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರೊಬ್ಬನು ಹತ್ತಿರವಿದ್ದಂತೆಯೇ. ಡಾಕ್ಟರಿಗೆ ಕೊಡಬೇಕಾದ ಫೀಜುಗಳನ್ನು ಈ 'ಜೀವನಾಧಾರ'' ವೆಂಬ ಡಾಕ್ಟರಿಗೆ ಕೊಡಬೇಕಾಗಿಲ್ಲ. ಸಣ್ಣಸೀಸೆ ಒಂದಕ್ಕೆ ೦-೧೨-೦. ದೊಡ್ಡಸೀಸೆ ಒಂದಕ್ಕೆ ೧-೮-೦ ಟಪಾಲು ಚಾರ್ಜು ವಗೈರೆ ಅಲಾಯಿದಾ ಬೀಳುವುದು

[illegible] ತಾ|| ೨೪ ೪-೨೭

'ನಿಮ್ಮ ಕಂಪನಿಯಿಂದ ನಾನು ನಾಲ್ಕು ತಿಂಗಳಿಂದಲೂ ಸಹ ಕಲವಾರು ಜೀವನಾಧಾರ ಬಾಟ್ಲಿಗಳನ್ನು ವರ್ಷೋವರ್ಷ ತರಿಸುತ್ತಲೂ ನಾನು ಉಪಯೋಗಿಸುತ್ತಲೂ ಅನೇಕರಿಗೆ ಕೊಡುತ್ತಲೂ ಇರುತ್ತೇನೆ. ನೀವು ಬರೆದಂತೆ ಅನೇಕ ರೋಗಗಳು ಗುಣವಾಗುತ್ತವೆ. ನನ್ನ ಸ್ವಂತ ಅನುಭವದಿಂದ ನಾನು ಖಾತ್ರಿಯಾಗಿ ಹೇಳಬಲ್ಲೆನು. ನನ್ನ ಸ್ವಂತ ಅನುಭವದಲ್ಲಿ ಇದುವರೆಗೆ ಪ್ಲೇಗು ಮುಂತಾದ [illegible] ಪ್ರಸಂಗಗಳಿಗೆ ಗುಣವಾಗುತ್ತ ನೂರಾರು ಜನಕ್ಕೆ [illegible] ಅನೇಕರಿಗೆ ಹೊಟ್ಟೆನೋವು ಎದೆನೋವು ಕಾಲರಾ ಇವುಗಳ ಅನೇಕ ಮಕ್ಕಳುಗಳ [illegible] ವಗೈರೆ ಬಾಯಿಲೆಗಳೂ [illegible] ಬಾಯಿಲೆಗಳೂ ಸಹ ಖಾತ್ರಿಯಾಗಿ ಗುಣವಾಗಿರುತ್ತವೆ

ಪಟೇಲ್ ಮುದ್ದು ಬಸವಯ್ಯ

ಜೀವನಾಧಾರ ಡಿಪೋ, ಹುಬ್ಬಳ್ಳಿ.

ASIATIC GOVERNMENT SECURITY
LIFE ASSURANCE CO. LTD, MYSORE

ಏಸಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್‌ಅಶ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಅದ್ದರಿಂದ ಯಾವಾಗಲೂ "ಏಸ್ಯಾಟಿಕ್" ಕಂಪನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕರವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಜವಾಬಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯುತ್ತದೆ.

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು.

(1) ಮ|| ಡಿ. ರಾಜ್ಗರ್ಸ್, ಚೀಫ್ ಏಜಂಟ್,
ಏಸಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್ ರೋಡ್, ಮೈಸೂರು.
(2) ಮ|| ವಿ. ಎಸ್. ಆರಾಧ್ಯ
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬಳ್ಳಾರಿ.
(3) ಹೈದರಾಬಾದ್ ಏಜೆನ್ಸಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಕ್ಷಿಣ)

[25]

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ನಿವಾರಿಸಿ [illegible]ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಚಿಟಿಕೆಯ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[27] ಪೋ. ಬಾ. ೫೧೦, ಮದರಾಸು

ಇದು ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಶಾಂತ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು. TERED No. M. 2266

ಪಂಚಾಚಾರ್ಯ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ [illegible] ಪ್ರದು.

ಪಂಚಾಸ್ಯಾನನ[illegible]ತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಬ್ರಹ್ಮೈ[illegible] ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾ ಪಾಲಿ[illegible] ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೇ ಡಿಶಂಬರ್ ೧೯೨೭ [ಸಂಚಿಕೆ ೩೧.

NEW FORD
THE SIGNS OF THE TIMES
Buy a FORD *and Bank the Balance*
EASILY PURCHASED
EASY TO DRIVE
EASY TO RUN
ARRANGED FOR PURCHASE OF ANY MODELS IF DESIRED BY EASY TERMS
GENUINE FORD PARTS
FOR SALE HERE
FORD SUB DEALERS.
FOR HASSAN KADUR, MYSORE DISTRICTS

For particulars apply to,
A. J. RAM & SONS,
SAYAJI RAO ROAD, MYSORE.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಕೋಡಿಕೊಪ್ಪಕ್ಕೆ ಶ್ರೀಜಗದ್ಗುರುಗಳವರ ಆಗಮನ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಬದಹೋಬಳಿಗೆ ಪ್ರವಾಸದಲ್ಲಿ ಮೊದಲನೆಯವರಾದ ಕೋಡಿಕೊಪ್ಪದ ಗಂಡಿಪಟೇಲ ಶ್ರೀಮಾನ್ ಶಿವಪ್ಪಗೌಡರ [illegible]ಥನೆಯಂತೆ ಬಿನ್ನಹವನ್ನು ಅಂಗೀಕರಿಸಿ [illegible] ದ ತಾ|| 23-11-27 ನೆಯ ಬುಧವಾರ ಮಧ್ಯಾಹ್ನ ೪ ಘಂಟೆಗೆ ದಯಮಾಡಿಸುವದರೊಳಗೆ ಗ್ರಾಮದ ಹೊರಗಣ ಭವ್ಯವಾದ ಅಂ[illegible]ದಲ್ಲಿ ಚಪ್ಪರವನ್ನು ಹಾಕಿ ಅಲಂಕರಿಸಿಕೊಂಡು ಶಿವಪ್ಪಗೌಡರೇ ಮೊದಲಾದ ಪ್ರಮುಖರು ಪುಸ್ತಕಪಾಲರೊಡನೆ ಹಾಜರಿದ್ದು [illegible] ಕುಶಲಪ್ರಶ್ನಾನಂತರ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಮಹಾ ಸನ್ನಿಧಿಯವರು ಮುಖಾರೂಢರಾಗಲು ಸರ್ವರೂ ಕರತಾಡನ [illegible] ಸಕಲ ಬಿರುದಾವಳಿಗಳೊಡನೆ ಉತ್ಸವವು [illegible] ದಿಂದ ಗ್ರಾಮದ ಎಲ್ಲಾ ಬೀದಿಗಳಲ್ಲಿ ನಡೆದು ಮ|| ರಾ|| ಶಿವಪ್ಪಗೌಡರ ಗೃಹದ ಪಟಾಂಗಣದಲ್ಲಿ ಮನೋಹರವಾಗಿ ಶೃಂಗ[illegible] ಮಂಟಪದಲ್ಲಿ ವಿರಾಜಿಸುವ ಸಿಂಹಾಸನವನ್ನು ಶ್ರೀ ಮಹಾ [illegible]ಯವರು ಆರೋಹಣ ಮಾಡಿದಕೂಡಲೇ ಸರ್ವರೂ ಸಂತೋ[illegible] ಜಯಜಯ ಘೋಷವಾದುದಲ್ಲದೆ ಕರತಾಡನವಾಯಿತು. [illegible] ಸಂಸ್ಥಾನದ ಆಸ್ಥಾನ ವಿದ್ವಾನ್ ವೇ|| ಶಿರಸಿ ಶಾಸ್ತ್ರಿ [illegible] ಸಕಲರಿಗೂ ಸುಗಮವಾಗಿ ತಿಳಿಯುವಂತೆ ವಿದ್ವತ್ ಮತ್ತು [illegible] ಶೈಲಿ ಭಾಷಣಮಾಡಿದರು. ಮಹಾ ಸನ್ನಿಧಿಯ [illegible] ಚಾರ ವಿಚಾರ ಮತ್ತು ಏಕ ದೇವರ ವಿಷಯಕ್ಕೆ ಸಂಪ್ರ[illegible]ಗಿ ಯುಕ್ತಿಕವಾಗಿ ಲೌಕಿಕೋದಾಹರಣೆಗಳಿಂದ ಸರ್ವ ಸಮಂಜಸವಾಗುವಂತೆ ಗಂಭೀರವಾಗಿ ಅಪ್ಪಣೆಕೊಡಿ[illegible] ಉತ್ಸವಕ್ಕೆ ಬಂದು ಸಾವಿರಾರು ಜನರು ನೆರೆದಿದ್ದರು. ಶ್ರೀ ಮಹಾ ಸನ್ನಿಧಿಯವರು ಅಪ್ಪಣೆಕೊಡಿಸಿದ ವಿಷಯವನ್ನು ಕೇಳಿ ಈ ಹಿಂದೆ ಸ್ವಾಮಿಗಳೆಂದು ಹೆಸರು ಹೇಳಿಕೊಂಡು ಈ ಪ್ರಾಂತದಲ್ಲಿ ಸಂಚಾರ ಮಾಡುತ್ತಿದ್ದವರಲ್ಲಿ ಒಬ್ಬರೂ ಒಂದು ಸಮಯದಲ್ಲಿಯೂ ನಮ್ಮಗಳನ್ನು ಸೇರಿ ನಮ್ಮ ಧರ್ಮದ ನಿಜಸ್ಥಿತಿಯನ್ನು ಹೇಳಲಿಲ್ಲ. ಧರ್ಮದ ನಿಜಸ್ಥಿತಿಯು ತಿಳಿಯದೆ ಇರೋಣದರಿಂದ ಧರ್ಮದ ಬಂಧಾಯವೆದ್ದು ತಲೆತಲೆಗೆ ಅಧಿಕಾರಿಗಳಾಗಲಿಕ್ಕೆ ಮುಖ್ಯಕಾರಣವಾಗಿರುತ್ತದೆ. ಶ್ರೀ ಮಹಾ ಸನ್ನಿಧಿಯು ಸಮಸ್ತ ವೀರಶೈವ ಬಾಲವೃದ್ಧರಿಗಾ ಶೀರ್ವಾದವನ್ನನುಗ್ರಹಿಸಬೇಕೆಂಬ ಚಿತ್ತೋಲ್ಲಾಸದಿಂದ ಬದ್ದಮಾಹೇಶ್ವರರ ಪ್ರಾರ್ಥನೆಯಂತೆ ತಮ್ಮ ಪರಿವಾರ ಸಮೇತ ಸಣ್ಣ ಸಣ್ಣ ಗ್ರಾಮಗಳಿಗೆ ದಯಮಾಡಿಸಿ ನಮ್ಮಗಳಿಗೆ ದರ್ಶನವನ್ನು ಕೊಟ್ಟು ಸದುಪದೇಶ ಮಾಡುತ್ತಿರುವದರಿಂದ ನಾವೇ ಧನ್ಯರು! ನಾವೇ ಮುಕ್ತರು! ಎಂದು ಸರ್ವರೂ ಶ್ರೀ ಮಹಾಸನ್ನಿಧಿಯನ್ನು ಕೊಂಡಾಡುತ್ತಿದ್ದರು. ಉತ್ಸವಕ್ಕೆ ಬಂದಿದ್ದ ಎಲ್ಲಾ ಜನರಿಗೆ ಶಿವಪ್ಪಗೌಡರು ಅನ್ನದಾನವನ್ನು ಮಾಡಿದ್ದಲ್ಲದೆ ಸಂಸ್ಥಾನವೇ ತಮ್ಮ ಮನೆಯಲ್ಲಿ ಮುಕ್ಕಾಂ ಇರುವದರಿಂದ ಮಹಾ ಸಂಸ್ಥಾನದ ಸಿಬ್ಬಂದಿಯ ವಿಶಿಷ್ಟ ಪಿರ್ಜನ್ನು ಅವರೇ ವಹಿಸಿಕೊಂಡಿರುವರು. ದಣಿಕರಿಗೆ ದಾತೃತ್ವ ಬುದ್ಧಿಯು ಹುಟ್ಟುವದು ದುರ್ಲಭವು. ಅಂಥ ಬುದ್ಧಿಯು ನಮ್ಮ ಶಿವಪ್ಪಗೌಡರಿಗೆ ಹುಟ್ಟಿದ್ದು ಶಂಕರನ ಕೃಪೆಯಿಂದಲೇ ಹೇಳಬೇಕು. ಇದೇ ಬುದ್ಧಿಯು ಇವರ ವಂಶಪರಂಪರವಾಗಿದ್ದು ಈ ತರದ ಗುರುಭಕ್ತಿಯು ಇವರಲ್ಲಿ ಸಂಪೂರ್ಣ ನೆಲೆಗೊಂಡಿದ್ದರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪುತ್ರಪೌತ್ರ ಕಲತ್ರಾದಿ ಅಭಿವೃದ್ಧಿಯನ್ನು ಅತೋಪ್ಯತಿಶಯವಾಗಿ ಉಂಟುಮಾಡಲಿ ಎಂದು ಹಾರೈಸಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಉತ್ಸವಭಾಗಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘಸ್ಥಾಪನ.

ಕಲಘಟಗಿ ತಾಲೂಕ ಹಿರೇಹೊನ್ನಿಹಳ್ಳಿಯಲ್ಲಿ ತಾ|| 26—10—27 ನೆಯ (ದೀಪಾವಳೀ ಪಾಡ್ಯದ) ದಿವಸ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘವು ನಮ್ಮ ಶಾಲೆಯ ಹೆಡ್‌ಮಾಸ್ತರರಾದ ಮ|| ಕಟ್ಟಿ ಚನ್ನಮಲ್ಲಪ್ಪನವರ ಉತ್ತೇಜನದಿಂದ ಸ್ಥಾಪನವಾಯಿತು. ಪ್ರತಿದಿವಸ ಪಂಚಾಚಾರ್ಯರ ಭಾವಚಿತ್ರದ ಪೂಜೆಯೂ, ಸ್ತೋತ್ರ ತ್ರಿಪದಿಯ [illegible] ಯಿಂದ ಸಾಗುತ್ತಿರುವದು ಮತ್ತು ಪಂಚಾಚಾರ್ಯಪ್ರಭೆಯ ಸಮ್ಮೋದಾಮೃತವನ್ನು ಪಾನಮಾಡಿ ಆತ್ಮಾನಂದಪಡುತ್ತಿರುವೆವು. ಇದೇ ಪ್ರಕಾರ ಪ್ರತಿಯೊಂದು ಗ್ರಾಮದಲ್ಲಿಯೂ ಪಂಚಾಚಾರ್ಯ ಭಜನಾಸಂಘವನ್ನು ಸಕಲರೂ ಮಾಡಿಕೊಂಡು ಗುರುಕೃಪೆಗೆ ಪಾತ್ರರಾಗುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ.

ವೇ|| ಬಸವಲಿಂಗಾರ್ಯ ಚಿಕ್ಕಮಠ
ಹಿರೇಹೊನ್ನಿಹಳ್ಳಿ. ಗೌರವಕಾರ್ಯದರ್ಶಿ,
ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ನೂತನ ವೈದ್ಯಾಲಯ

ಮ|| ರಾ|| ಬಿ. ಎಸ್. ಅಂಗಡಿ ಹಿರೇಮಠ [illegible] ಇವರು ಪಠಣದಲ್ಲಿದ್ದು ವೈದ್ಯಶಿಕ್ಷಣವನ್ನು ಹೊಂದಿ ನಮ್ಮ ಗ್ರಾಮಕ್ಕೆ ಬಂದು ಇದೇ ಕಾರ್ತಿಕ ಶು|| ಪ್ರತಿಪತ್ತಿನ ದಿವಸ ಕೆಳಗೆ ಕಂಡ ಪ್ರಕಾರ ಶ್ರೀ ಜಗದಾಚಾರ್ಯರ ಹೆಸರಿನಿಂದ ಒಂದು ವೈದ್ಯಾಲಯವನ್ನು ಸ್ಥಾಪಿಸಿರುತ್ತಾರೆ. ಆ ದಿವಸ ನಡೆದ ಪೂಜಾ ಸಮಾರಂಭದ ಕಾಲಕ್ಕೆ ಎರಡು ರೂಪಾಯಿಗಳನ್ನು ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣೆಗಾಗಿ ಕಾಣಿಕಾ ರೂಪವಾಗಿ ಕೊಟ್ಟಿರುತ್ತಾರೆ. ಇವರು ವೈದ್ಯಶಾಸ್ತ್ರದಲ್ಲಿ ಸಂಪೂರ್ಣ ಪರಿಣತರಾಗಿದ್ದು ಇವರಲ್ಲಿ ದಿವ್ಯೌಷಧಗಳಿದ್ದು ಇವರ [illegible] ಯಾದರೂ ಜನ್ಯಾಗಿರುತ್ತದೆ. ರೋಗಪೀಡಿತ ಚತುರ್ವರ್ಗಗಳನ್ನು ಕ್ಷಿಪ್ರದಲ್ಲಿಯೇ ಕಳೆದುಕೊಳ್ಳಬೇಕೆಂದು ಬೋಧಿಸುವ ಆಯುರ್ವೇದೋಕ್ತಿಯಂತೆ ರೋಗೋಪದ್ರವಗಳಿಂದ ನರಳುತ್ತಿರುವ ಜನರು ಇತ್ತಕಡೆಗೆ ಗಮನಕೊಡಬೇಕೆಂದು ಸೂಚಿಸುತ್ತೇವೆ.—ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಾಸಾದಿಕ ಔಷಧಾಲಯ, ಮುಕ್ಕಾಂ ಜ್ಯಾಲವಾಡಿಗಿ, ತಾಲ್ಲೂಕು ಶಿರಹಟ್ಟಿ, ಸಾಂಗಲಿ ಸ್ಟೇಟ

ಬಸವನಗೌಡ ಪಾಟೀಲ, ಜ್ಯಾಲವಾಡಿಗಿ.

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭಾ, ಬೆಂಗಳೂರು.

ಅಖಿಲಭಾರತ ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ 1927 ನೆಯ ಡಿಶಂಬರ್ 28-29-30 ನೆಯ ತಾರೀಖುಗಳಲ್ಲಿ ನಡೆಯುತ್ತೆ. ಸಭಾಪ್ರವೇಶಕ್ಕೆ ಡೆಲಿಗೇಟುಗಳ ಫೀ ೩ 0-0, ಪ್ರೇಕ್ಷಕರ ಫೀ 2-0-0, ಪರಸ್ಥಳಗಳಿಂದ ದಯಮಾಡಿಸತಕ್ಕ ಡೆಲಿಗೇಟುಗಳಿಗೆ ಊಟಕ್ಕೂ, ವಾಸಕ್ಕೂ ಉಚಿತವಾಗಿ ಏರ್ಪಾಡುಮಾಡಲ್ಪಡುತ್ತೆ. ಸಮೂಹದಲ್ಲಿ ಸೇರಲು ಇಷ್ಟವಿಲ್ಲದ ಪ್ರತಿನಿಧಿಗಳು ಪರಿಚಾರಕರು, ವಾಕ್ರಿ ಮೊದಲಾದ ಸೌಕರ್ಯಗಳನ್ನು ಅವರವರೇ ಏರ್ಪಡಿಸಿಕೊಳ್ಳಬೇಕು. ಇಂಥವರು ಮುಂಚಿತವಾಗಿ ಸೆಕ್ರೆಟರಿಗಳಿಗೆ ಬರೆದು ತಿಳಿಸಿದಲ್ಲಿ ಆಹಾರಪದಾರ್ಥಗಳನ್ನೂ, ವಸತಿಯನ್ನೂ ಒದಗಿಸುವರು.

ಇದುವರಿಗೆ ರಿಸೆಪ್ಷನ್ ಕಮಿಟಿಯ ಸೆಕ್ರೆಟರಿಯವರಿಗೆ ಪ್ರವೇಶಧನ ರವಾನಿಸಿರುವ, ಮುಂದೆ ರವಾನಿಸುವ ಪ್ರತಿನಿಧಿಗಳು ಮತ್ತು ಪ್ರೇಕ್ಷಕರಿಗೆ ಸಭಾಪ್ರವೇಶದ ಟಿಕೆಟುಗಳನ್ನು ನವಿಸುವರು. ಬೆಂಗಳೂರಿಗೆ ದಯಮಾಡಿಸಿದ ಕಾಲದಲ್ಲಿ ಕಾಪತಿ ಕೊಡಲಾಗುವುದು.

ತಮ್ಮ ವಿಧೇಯ,
M. Nagappa
Secretary

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುಶಿಷ್ಯ ಸಂವಾದ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥

ಶ್ರೀಮತ್ಪಂಚಾಚಾರ್ಯಾನುಯಾಯಿಯಾದ ಒಂದು ಪ್ರಸಿದ್ಧವಾದ ಪುರದಲ್ಲಿ ಪದ್ಧತಿಪ್ರಕಾರ ಕಾರ್ತಿಕಶುದ್ಧ ೧೧ ಸೋಮವಾರ ಇಲ್ಲಿಯ ಪಟ್ಟದ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಭಕ್ತಮಾಹೇಶ್ವರರು ದೀಪಾರಾಧನೆಯನ್ನು ವಿಜೃಂಭಣೆಯಿಂದ ಜರುಗಿಸಿದರು. ಅನೇಕ ಭಕ್ತಮಾಹೇಶ್ವರ ಸಮೂಹವು ಮಠದ ಆವರಣದಲ್ಲಿ ನಿಬಿಡವಾಗಿ ತುಂಬಿದ್ದಿತು. ಈ ಸಮಯದಲ್ಲಿ ವೀರಶೈವ ಮತಪ್ರಚಾರವನ್ನೂ, ಅದರ ಆಧಿಕ್ಯವನ್ನೂ ತಿಳಿಯಬಿಚ್ಛಿಸುವ ಭಕ್ತಸಮುದಾಯದ ಪ್ರೇರಣೆಯ ಪ್ರಕಾರ ಒಬ್ಬಾನೊಬ್ಬ ಶಿಷ್ಯನು ಗುರುಗಳಿಗೆ ನಮಸ್ಕಾರವನ್ನು ಮಾಡಿ ಬಿನ್ನವಿಸುವ ಕ್ರಮವೆಂತೆಂದೊಡೆ,

ಶಿಷ್ಯ—ಭೋ ಗುರುವರ್ಯರೇ, ನಾನೂ ಈ ಭಕ್ತಸಮುದಾಯವೂ ವೀರಶೈವ ಮತವಿಚಾರವನ್ನು ಸಂಕ್ಷಿಪ್ತವಾಗಿ ಗುರುಮುಖೇನ ತಿಳಿಯಬಿಚ್ಛಿಸುವೆವು. ಆದ್ದರಿಂದ ತಾವು ಅನುಗ್ರಹಿಸಿ ಕೃತಾರ್ಥರನ್ನಾಗಿ ಮಾಡಬೇಕೆಂದು ಬೇಡುತ್ತೇನೆ.

ಗುರು—ಅಯ್ಯಾ, ಭಕ್ತಶಿರೋಮಣಿಯೇ! ಸಂಕ್ಷಿಪ್ತವಾಗಿ ವೀರಶೈವಮತಸಿದ್ಧಾಂತವನ್ನು ಬೋಧ ಮೂಲಕ ಪ್ರಚಾರಪಡಿಸಿ ಶಿಷ್ಯರ ಅಜ್ಞಾನವನ್ನು ಹೋಗಲಾಡಿಸುವುದೇ ನಮ್ಮ ಮುಖ್ಯ ಕರ್ತವ್ಯವಾದ್ದರಿಂದ ನೀನಾಗಿ ಕೇಳುತ್ತಿರುವ ವಿಷಯವನ್ನು ಆದರದಿಂದ ಹೇಳುವೆವು. ಶಂಕೆಯಿಲ್ಲದೆ ಕೇಳುವವನಾಗು.

ಶಿಷ್ಯ—ಗುರುಗಳೇ, ಧನ್ಯನಾದೆನು. ಈ ಪ್ರಸಿದ್ಧವಾದ ವೀರಶೈವಮತವು ಯಾರಿಂದ ಸ್ಥಾಪಿಸಲ್ಪಟ್ಟಿತು? ಇದಕ್ಕೆ ಮೂಲಗುರುಗಳಾರು?

ಗುರು—ಜಗದಾದಿಯಲ್ಲಿ ಪರಮೇಶ್ವರನು ಬ್ರಹ್ಮನಿಗೆ ಸೃಷ್ಟಿಕ್ರಮವನ್ನು ತೋರಿಸುವದಕ್ಕೋಸ್ಕರ ತನ್ನ ಮುಖಗಳಿಂದ [illegible]ಚಗಣಾಧೀಶ್ವರರನ್ನು ಸೃಷ್ಟಿಸಿದನು. ಇವರು, ಕೊಲ್ಲಿಪಾಕಿ, ಉಜ್ಜಯಿನಿ, ಕಾಶಿ, ಶ್ರೀಶೈಲ, ಹಿಮವತ್ಕೇದಾರ ಸ್ಥಾನಗಳಲ್ಲಿ ಪ್ರಸಿದ್ಧಗಳಾದ ಸೋಮನಾಥಲಿಂಗ, ಸಿದ್ಧೇಶ್ವರಲಿಂಗ, ವಿಶ್ವನಾಥಲಿಂಗ, ಮಲ್ಲಿಕಾರ್ಜುನಲಿಂಗ, ರಾಮನಾಥಲಿಂಗ ಇವುಗಳಿಂದ ಉದ್ಭವಿಸಿ ಭೂಲೋಕದಲ್ಲಿ ವೀರಶೈವಮತವನ್ನು ಸ್ಥಾಪಿಸಿದರು.

ಅನಂತರ ತಾವು ಸ್ಥಾಪಿಸಿದ ಮತವು ಬಿಲವಾಗದಂತೆ ಒಂದೊಂದು ಯುಗದಲ್ಲಿಯೂ ನಾಮನಾಂತರಗಳಿಂದ ಲಿಂಗಮುಖದಿಂದವತರಿಸಿ ತಮ್ಮ ಮಹಿಮಾತಿಶಯಗಳನ್ನು ಪ್ರಪಂಚಕ್ಕೆ ಬೀರುತ್ತ ಈ ಮತದ ಮಹತ್ವತತ್ವಗಳನ್ನು ಚನ್ನಾಗಿ ಪ್ರಚಾರಪಡಿಸಿ ಅವುಗಳ ಸಿದ್ಧಾಂತವನ್ನು ಬೋಧಿಸುವವರ ಮೂಲಕ ಅಭಿವೃದ್ಧಿಗೊಳಿಸಿದರು. ಆದುದರಿಂದ ವೀರಶೈವಮತಕ್ಕೆ ಇವರೇ ಮೂಲಗುರುಗಳಾಗಿದ್ದಾರೆ. (ಮೇಲ್ಕಂಡವಿಷಯವು ವೇ|| ಪಂ|| ಕಾಶೀನಾಥ ಶಾಸ್ತ್ರಿಗಳವರಿಂದ ಪ್ರಚುರಪಡಿಸಲ್ಪಟ್ಟಿರುವ ಗೋತ್ರಸೂತ್ರ ಪಟದಲ್ಲಿ ವಿವರವಾಗಿದೆ. ಪ್ರತಿಯೊಬ್ಬರೂ ಅವಶ್ಯವಾಗಿ ತರಿಸಿ ನೋಡಬೇಕು.)

ಶಿಷ್ಯ—ಗುರುಗಳೇ, ಈ ಪವಿತ್ರವಾದ ವೀರಶೈವಮತಸಿದ್ಧಾಂತವು ಆ ಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಬಗೆ ಹೇಗೆಂಬುದನ್ನು ವಿವರಿಸಬೇಕಾಗಿ ಬೇಡುವೆನು.

ಗುರು—ಇದನ್ನೂ ಸಂಕ್ಷಿಪ್ತವಾಗಿ ತಿಳಿಸುವೆನು ಆಲಿಸು. ಪರಶಿವಾಜ್ಞಾ ಪ್ರಕಾರ ಕೊಲ್ಲಿಪಾಕಿಯ ಸೋಮನಾಥಲಿಂಗದಿಂದುದಯಿಸಿದ ರೇಣುಕಗಣಾಧೀಶ್ವರರು ಎಲ್ಲಾ ಕಡೆಗಳಲ್ಲಿಯೂ ಸಂಚರಿಸಿ ಪರಿಪಕ್ವಾಂತಃಕರಣರಾದ ಮೋಕ್ಷಾಧಿಕಾರಿಗಳಿಗೆ ಶಿವದೀಕ್ಷೆಯನ್ನಿತ್ತು ಜ್ಞಾನೋಪದೇಶವಂ ಮಾಡುತ್ತಾ ದಕ್ಷಿಣದಿಕ್ಕಿನಲ್ಲಿರುವ ಮಲಯಾಚಲದಲ್ಲಿ ತಪಸ್ಸನ್ನಾಚರಿಸುತ್ತಿದ್ದ ಮಹಾಮಹಿಮನಾದ ಅಗಸ್ತ್ಯಋಷಿಯಂ ಕಂಡು, ಅವನಿಂದ ನುತಿಸಲ್ಪಟ್ಟು, ವೀರಶೈವಸಿದ್ಧಾಂತವನ್ನು ತಿಳಿಯಲಪೇಕ್ಷಿಸುತ್ತಿರುವ ಆ ಮುನಿಯ ಭಕ್ತಿಭಾವಕ್ಕೆ ಪ್ರಸನ್ನರಾಗಿ ಕಾಮಿಕಾದಿ ವಾತುಲಾಂತವಾದ ೨೮ ಶಿವಾಗಮಗಳ ಸಾರವನ್ನೂ ಲಿಂಗಾಂಗಸಾಮರಸ್ಯವನ್ನೂ ಪಿಂಡಾದಿ ಜ್ಞಾನಶೂನ್ಯಾಂತವಾದ ೧೦೧ ಸ್ಥಲಗಳನ್ನೂ ಚನ್ನಾಗಿ ಬೋಧಿಸಿದರು. (ಸಿದ್ಧಾಂತಶಿಖಾಮಣಿಯೆಂಬ ಗ್ರಂಥವು ರೇಣುಕಾಗಸ್ತ್ಯ ಸಂವಾದರೂಪವಾಗಿ ಚನ್ನಾಗಿ ಬೋಧಿಸುತ್ತದೆ) ಈ ಮಹಿಮರು ಸ್ಥಾಪಿಸಿದ ಸಿದ್ಧಾಂತವನ್ನು ನಮ್ಮಲ್ಲಿ ಚತುರಾಶ್ರಮದವರೂ ಅನುಸರಿಸಿ ನಡೆದುಕೊಂಡೇ ಬಂದಿರುವರು. ಹಾಗೆ ಇದಕ್ಕೇನಾದರೂ ವಿರೋಧವಾಗಿ (ಸ್ವಪ್ರತಿಷ್ಠೆಯಿಂದ) ನಡೆದಲ್ಲಿ ಅಂಥವನು ಗುರುದ್ರೋಹಿಯೆನಿಸಿಕೊಳ್ಳುವದಲ್ಲದೆ ಮುಕ್ತಿಗೆ ದೂರಾಗಿ ಘೋರವಾದ ಯಾತನೆಯನ್ನನುಭವಿಸಬೇಕಾಗುವದು.

ಶಿಷ್ಯ—ಈ ಮಹಿಮಾಶಾಲಿಗಳು ತಾವು ಸ್ಥಾಪಿಸಿದ ಈ ಮತದ ರಕ್ಷಣೆಗಾಗಿ ಯಾವ ಯಾವ ಪ್ರಯತ್ನಗಳನ್ನು ಮಾಡಿದರು?

ಗುರು—ತಾವು ಸ್ಥಾಪಿಸಿದ ಮತವು ಬಿಲವಾಗದಂತೆ ಅಲ್ಲಲ್ಲಿ ಅಂದರೆ ಪ್ರತಿಯೊಂದು (ವೀರಶೈವ ಜನಾಂಗವು ಹೆಚ್ಚಾಗಿರುವ) ಗ್ರಾಮದಲ್ಲಿಯೂ ತಮ್ಮ ಶಾಖಾಮಠಗಳನ್ನೇರ್ಪಡಿಸಿ, ಅಲ್ಲಿಗೆ ತಮ್ಮ ಪ್ರತಿನಿಧಿಯಾಗಿ [illegible] ಪಟ್ಟಾಧಿಕಾರಗಳನ್ನು ನೆರವೇರಿಸಿ, ಆಯಾ ಪ್ರಾಂತದಲ್ಲಿಯ ಶಿಷ್ಯರಿಗೆ ಈ ಮತದ ಮುಕ್ತಿಸೋಪಾನದಂತಿರುವ ಅನುಷ್ಠಾನಗಳ, ಪಂಚಾಚಾರ ಮುಂತಾದವುಗಳಲ್ಲಿ ಜ್ಞಾನವುಂಟಾಗುವಂತೆ ಬೋಧಿಸಿ ಪ್ರಚಾರಪಡಿಸಬೇಕೆಂದು ಏರ್ಪಾಟು ಮಾಡಿದರು.

ಶಿಷ್ಯ—ಹಾಗಾದರೆ ಮಠಾಧಿಕಾರಿಗಳು ಪ್ರಚಾರ ಕಾರ್ಯವನ್ನು ಹಿಂದಿನ ಸಮಯಕಾಲದಲ್ಲಿ ಮಾಡಲು ತಾವು ವಿದ್ಯಾವಂತರಾಗಿ ಇರಬೇಕಲ್ಲವೆ?

ಗುರು—ಹೌದು, ಮಠಾಧಿಕಾರವನ್ನು ವಹಿಸುವವನು "ಗುರುಶ್ಚ ಗುಣವಾನ್ ಪ್ರಾಜ್ಞಃ ಪರಮಾನಂದಭಾಸ್ವರಃ, ತತ್ವವಿಚ್ಛಿವಯೋಗೀ ಚ ಮುಕ್ತಿದೋಽಸ್ತು ಚಾಪರಃ ।" ಎಂಬ ಪ್ರಮಾಣಾನುಸಾರವಾಗಿ ಸದ್ಗುಣಶಾಲಿಯೂ, ಪಂಡಿತನೂ, ಶಿಷ್ಯರಿಗೆ ಮುಕ್ತಿಸಾಧನವನ್ನುಂಟುಮಾಡುವವನೂ, ಮತತತ್ವವನ್ನು ಬಲ್ಲವನೂ ಅರಿಷಡ್ವರ್ಗ, ಅಷ್ಟಮದಗಳನ್ನು ತುಳಿದವನೂ, ಸಕಲವಿದ್ಯಾಪಾರಂಗತನೂ ಆಗಿರಬೇಕು. [ಸಶೇಷ]

ಬಸವಲಿಂಗಸ್ವಾಮಿಗಳು ಬಾಳಿಕಂಥಾಮಠ,
ಮುಧುವನಹಳ್ಳಿ.

ಶ್ರೀ ಗುರುಭ್ಯೋ ನಮಃ.

ಪಂಚಾಚಾರ್ಯಪ್ರಭೆಗೆ ಕಾಣಿಕಾಸಮರ್ಪಣ.

ಸಂಪಾದಕ ಮಹಾಶಯರೇ, ನಾನು ಸಂಕಲ್ಪಪೂರ್ವಕ ಇದೇ ಕಾರ್ತಿಕ ಬ|| ೧೧ ಸೋಮವಾರ ನಮ್ಮ ಗ್ರಾಮದ ಶ್ರೀ ಗೋಣಿಸ್ವಾಮಿ ದೇವಸ್ಥಾನದಲ್ಲಿ ಗಣಾರಾಧನೆಯನ್ನು ಮಾಡಿದ್ದು ಹಮ್ಮಿಗಿ ಗುಮ್ಮಗೋಳ ಎರಡೂ ಗ್ರಾಮದ ಭಕ್ತಮಾಹೇಶ್ವರರಿಗೆ ಊಟಕ್ಕೆ ಹೇಳಿದ್ದೆನು. ಆ ಕಾಲಕ್ಕೆ ಭೋಜನಾರಂಭದಲ್ಲಿ ಸಂಕಲ್ಪಾನಂತರ ಸಮಸ್ತ ಭಕ್ತಮಾಹೇಶ್ವರರು "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷವನ್ನು ಮಾಡಲು ಭೋಜನಾನಂತರ ನಾನು ಯಾವತ್ತು ವೀರಶೈವ ಸಮುದಾಯವನ್ನು ಕುರಿತು ಪಂಚಾಚಾರ್ಯರೆಂದರೆ ಯಾರು? ಇವರ ಉತ್ಪತ್ತಿ ಹೇಗೆ? ಇವರನ್ನು ಕುರಿತು ನೀವು ಜಯಘೋಷವನ್ನು ಮಾಡಲು ಕಾರಣವೇನು? ಎಂದು ಪ್ರಶ್ನೆಮಾಡಲು ಜನಸಮುದಾಯದಲ್ಲಿದ್ದ ಮ|| ರಾ|| ಗುರುಭಕ್ತಕೇಸರಿ ಹಮ್ಮಿಗಿ ಇವರು ಅಬಾಲವೃದ್ಧರೂ ಕೂಡ ತಲೆದೂಗುವಂತೆ ಸೂಕ್ಷ್ಮರೀತಿಯಲ್ಲಿ ಹೇಳಿದ್ದೇನೆಂದರೆ, ಜಗದಾದಿಯಲ್ಲಿ ಶ್ರೀ ಪರಮೇಶ್ವರನ ಪಂಚಮುಖಗಳಿಂದ ಜನಿಸಿದ ಪಂಚಗಣಾಧೀಶ್ವರರು ಪ್ರತಿಯುಗಗಳಲ್ಲಿಯೂ ಸೋಮನಾಥಾದಿ ಲಿಂಗಗಳಿಂದ ಪ್ರತ್ಯೇಕ ನಾಮಗಳಿಂದ ಅವತರಿಸಿ ಷಟ್ಸ್ಥಲಾಷ್ಟಾವರಣ ಪಂಚಾಚಾರಗಳಿಂದ ಯುಕ್ತವಾದ ಈ ವೀರಶೈವಮತವನ್ನು ಭೂಮಂಡಲದಲ್ಲಿ ಸ್ಥಾಪಿಸಿದರು. ಮತ್ತು ಯುಗಯುಗಾಂತರಗಳಲ್ಲಿ ದೇವದಾನವ ಮನುಮುನಿಗಳಿಗೆಲ್ಲ ವೀರಶೈವಸಿದ್ಧಾಂತೋಪದೇಶವನ್ನು ಮಾಡಿದರು. ಇವರೇ ನಮ್ಮ ಮತಸ್ಥಾಪಕರು. ವರ್ಣಾಶ್ರಮಬದ್ಧವಾದ ವೀರಶೈವಮತಾವಲಂಬಿಗಳಾದ ಪ್ರತಿಯೊಬ್ಬ ಲಿಂಗಧಾರಿಯ ಮೇಲೆಯೂ ಇವರ ಗುರುತ್ವಾಧಿಕಾರವಿರುವದರಿಂದ ಇವರೇ ಜಗದ್ಗುರುಗಳೆಂದು ಧರ್ಮಶಾಸ್ತ್ರಗಳು ಪಂಟಾಘೋಷವಾಗಿ ಸಾರುತ್ತಿವೆ ಎಂಬ ವಿಷಯವನ್ನು ಬಹು ಸ್ವಾರಸ್ಯವಾಗಿ ಹೇಳಿದರು. ಅನಂತರ ನಾನು ಪಂಚಾಚಾರ್ಯರ ಹೆಸರನ್ನು ಇದುವರೆಗೂ ಕೇಳಿದ್ದಿಲ್ಲ. ಈಗ ಮಾತ್ರ ರೂಢಿಯಲ್ಲಿ ಬಂದಂತೆ ಕಾಣುತ್ತದೆಂದು ಪ್ರಶ್ನೆಮಾಡಿದೆನು. ಅದಕ್ಕೆ ಪುನಃ ಗುರುಭಕ್ತಕೇಸರಿಯವರು ಈವರೆಗೂ ಅವಿದ್ಯೆಯ ಪ್ರಭಾವದಿಂದ ನಾವು ಮೊದಲ್ಗೊಂಡು ನಮ್ಮ ಸಮಾಜದಲ್ಲಿ ಎಷ್ಟೋ ಜನರು ಧರ್ಮಗುರುಗಳಾರೆಂಬುದನ್ನು ಅರಿಯದವರಾಗಿದ್ದು ದೇಶದೇಶಾಂತರಗಳಲ್ಲಿ ಸಂಚರಿಸುವ ಕಾಷಾಯಧಾರಿಗಳಾದ ವೇಷಧಾರಿಗಳನ್ನು ಗುರುಗಳೆಂದು ಭ್ರಮಿಸಿದ್ದೆವು. ಆದರೆ ಈಗ ಆ ತಪ್ಪು ತಿಳುವಳಿಕೆಯು ನಮ್ಮೆಲ್ಲರ ಸುದೈವದಿಂದ ಜನಿಸಿದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಸದ್ಬೋಧೆಯಿಂದ ದೂರಾಯಿತೆಂತಲೂ ಈ ಪಂಡಿತವರ್ಯರು ತಮ್ಮ ಮಾನಪ್ರಾಣಗಳನ್ನು ತೊರೆದು ಸುಖದುಃಖಗಳಿಗೆ ಸಿಲುಕಿದೆ ಹಗಲು ಇರುಳು ಎನ್ನದೆ ಸತತ ಈಗ ಎಂಟು ಹತ್ತು ವರ್ಷಗಳಿಂದ ಅವಿಶ್ರಾಂತ ಶ್ರಮಪಟ್ಟು ಗ್ರಾಮಗ್ರಾಮಾಂತರಗಳಲ್ಲಿರತಕ್ಕ ಪ್ರತಿಯೊಬ್ಬ ಲಿಂಗಧಾರಿಯ ಹೃತ್ಪಟಲದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯು ನೆಲೆಗೊಳ್ಳುವಂತೆ ಮಾಡಿರುವುದಲ್ಲದೆ ಸದರಿ ಜಗದಾಚಾರ್ಯರ ಸಿದ್ಧಾಂತವು ಸಾರ್ವತ್ರಿಕ ಪ್ರಚಾರದಲ್ಲಿ ಬರಬೇಕೆಂಬ ಸದುದ್ದೇಶದಿಂದ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಇವರಿಂದ ಮಂಗಳಕರವಾದ ಮಕುಟವನ್ನು ಪಡೆದು ಮೈಸೂರು ರಾಜಧಾನಿಯಲ್ಲಿಯೇ ಆ ಪರಮ ಜಗದ್ಗುರುಗಳ ಹೆಸರಿನಿಂದ ಒಂದು ದೊಡ್ಡ ಪ್ರಿಂಟಿಂಗ್ ಕಾರ್ಯಾಲಯವನ್ನು ಸ್ಥಾಪಿಸಿ ಸದರಿ ಆಚಾರ್ಯವರ್ಯರ ಹೆಸರಿನಿಂದ ಒಂದು ವಾರಪತ್ರಿಕೆಯನ್ನು ಸಹ ಹೊರಡಿಸಲುದ್ಯುಕ್ತರಾಗಿದ್ದಾರೆ. ಇವರು ಕೈಕೊಂಡ ಸ್ತುತ್ಯವಾದ ಕಾರ್ಯಕ್ಕೆ ಶ್ರೀ ಪೀಠಾಚಾರ್ಯರೇ ಮೊದಲ್ಗೊಂಡು ಅನೇಕ ಭಕ್ತಮಾಹೇಶ್ವರರು ಧನಸಹಾಯವನ್ನಿತ್ತಿರುವರೆಂದು ಹೇಳಿದರು. ಕೂಡಲೆ ನನಗೆ ಬಹಳ ಸಂತೋಷವಾಗಿ ನಾನು ವಾಲ್ಮೀಕಜಾತಿಯವನಾದಾಗ್ಯೂ ನಮ್ಮ ಮತದವರು ವೀರಶೈವಮತಕ್ಕೆ ಅಂಕಿತರಾಗಿ ಹಿಂದಿನಿಂದಲೂ ನಡೆಯುತ್ತ ಬಂದಿರುವದರಿಂದ ನಾನು ಈ ಶುಭಸಮಯದಲ್ಲಿ ಕೈಲಾಸಪಟ್ಟಿಗೆ ಕಾಣಿಕೆಯನ್ನು ಸಲ್ಲಿಸುವದು ಉಚಿತವೆಂದೂಹಿಸಿ ಐದು ರೂಪಾಯಿ ಕಾಣಿಕೆಯನ್ನು ತಮ್ಮ ಸನ್ನಿಧಿಗೆ ಕಳುಹಿಸಿರುತ್ತೇನೆ ಸ್ವೀಕರಿಸಬೇಕು. ಮತ್ತು ನನ್ನಂತೆ ಈ ವೀರಶೈವಮತಕ್ಕೆ ಅಂಕಿತರಾಗಿ ನಡೆಯುವ ವಾಲ್ಮೀಕ, ಹಾಲುಮತ, ಅಂಬಿಗ ಮೊದಲಾದ ಮತಬಾಂಧವರು ತಮ್ಮ ತಮ್ಮ ಕೈಲಾಸಪಟ್ಟಿಗೆ ಸಹಾಯಮಾಡಿ ಗುರುವಿನಗುರು ಪರಮಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಸಕ್ರಪ್ಪ ಹೊನ್ನೂರು ಗುಮ್ಮಗೋಳ
ಡಿ|| ಧಾರವಾಡ.

ಶ್ರೀ ಪಂಚಾಚಾರ್ಯೇಭ್ಯೋ ನಮಃ.

ಗುರುವರ್ಗದ ವಿದ್ವಾಂಸರು.

ಈಶ್ವರನ ಸದ್ಯೋಜಾತಾದಿ ಪಂಚಮುಖಗಳಿಂದ ಜನಿಸಿದ ರೇಣುಕ, ದಾರುಕ, ಘಂಟಾಕರ್ಣ, ಗಜಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರುಗಳಿಗೇನೆ ಒಂದೊಂದು ಯುಗದಲ್ಲಿ ಒಂದೊಂದು ಹೆಸರು ಬಂದಿರುವದು. ಅದು ಹೇಗಂದರೆ? ಈ ಕಲಿಯುಗದಲ್ಲಿ ಸದ್ಯೋಜಾತ ಮುಖೋತ್ಪನ್ನರಾದ ಶ್ರೀರಂಭಾಪುರೀ ಮಹಾಸ್ವಾಮಿಗಳಿಗೆ ರೇವಣಾರಾಧ್ಯರೆಂತಲೂ, ವಾಮದೇವ ಮುಖೋತ್ಪನ್ನರಾದ ಶ್ರೀಮದುಜ್ಜಯಿನೀ ಮಹಾಸ್ವಾಮಿಗಳಿಗೆ ಮರುಳಾರಾಧ್ಯರೆಂತಲೂ, ಅಘೋರಮುಖೋತ್ಪನ್ನರಾದ ಶ್ರೀಕೇದಾರ ಮಹಾಸ್ವಾಮಿಗಳಿಗೆ

ಏಕೋರಾಮಾರಾಧ್ಯರೆಂತಲೂ, ತತ್ಪುರುಷ ಮುಖೋದ್ಭವರಾದ ಶ್ರೀಶೈಲ ಮಹಾಸ್ವಾಮಿಗಳಿಗೆ ಪಂಡಿತಾರಾಧ್ಯರೆಂತಲೂ, ಈಶಾನ ಮುಖೋದ್ಭವರಾದ ಶ್ರೀಕಾಶೀ ಮಹಾಸ್ವಾಮಿಗಳಿಗೆ ವಿಶ್ವಾರಾಧ್ಯರೆಂತಲೂ ಆಗಮಗಳು ಸಾರುತ್ತಿರುವವು. ಇವರುಗಳಿಗೇ (೧) ಗುರುಗಳೆಂತಲು, (೨) ಆಚಾರ್ಯರೆಂತಲು, (೩) ದೇಶಿಕರೆಂತಲು, (೪) ಆರಾಧ್ಯರೆಂತಲು ನಾಲ್ಕು ಪ್ರಕಾರ ಪರ್ಯಾಯ ನಾಮಗಳುಂಟು. ಇವುಗಳಲ್ಲಿ ಒಂದನೇದು ಗುರುಗಳೆಂದರೇನು? ಈ ವಿಷಯವನ್ನು ತಿಳಿಯುವದವಶ್ಯಕವಾಗಿದೆ.

ಗುಕಾರವು ಪ್ರಕೃತಿಗುಣಗಳಿಂದ ಬಿಡಲ್ಪಟ್ಟದ್ದು. ರುಕಾರವು ಅಶುದ್ಧವಾದ ಮಾಯಾರೂಪದಿಂದ ರಹಿತವಾದದ್ದು. ಪ್ರಕೃತಿಗುಣಗಳಿಂದ ಬಿಡಲ್ಪಟ್ಟದ್ದಾಗಿಯು ಮಾಯಾರೂಪದಿಂದ ರಹಿತವಾಗಿಯು ಇರುವ ಜ್ಯೋತಿರ್ಮಯವಾದ ಪರಬ್ರಹ್ಮವಸ್ತುವನ್ನು ಬೋಧಿಸುವ ಈ ಐದುಮಂದಿ ಗುರುಗಳಿಗೂ ಆಚಾರ್ಯ ಎಂಬ ಶಬ್ದವು ಬಂದಿರುವದು. ಅದು ಹೇಗಂದರೆ, ಶ್ಲೋ|| ಆಚಿನೋತಿಹ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ । ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಚೋಚ್ಯತೇ || (ಸಿ-ಶಿ) ಅಂದರೆ, ವೀರಶೈವಗ್ರಂಥಗಳಲ್ಲಿರುವ ಗೋಪ್ಯಗಳಾದ ಅರ್ಥಗಳನ್ನು ಪ್ರಕಟಿಸುವವರಾಗಿಯೂ ಶಿಷ್ಯರನ್ನು ವೀರಶೈವಾಚಾರಗಳಲ್ಲಿ ನಿಯಮಿಸುವವರಾಗಿಯೂ ತಾವೂ ಆಚಾರದಲ್ಲಿ ಪರಿಪೂರ್ಣನಿರತರಾಗಿಯೂ ಇರುವ ಗುರುಗಳೇ ಆಚಾರ್ಯ ಶಬ್ದಕ್ಕೆ ಲಕ್ಷ್ಯರಾಗಿರುವರು. ಇನ್ನು ದೇಶಿಕರೆಂದರೆ, ಜ್ಞಾನಾನ್ಮೋಕ್ಷಂ ದಿಶತಿ ಯಸ್ಸದೇಶಿಕ ಇತಿಸ್ಮೃತಃ (ಕಾ—ಆ) ಅಂದರೆ ತಮ್ಮ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡಿ ಮೋಕ್ಷವನ್ನು ಕೊಡಲು ಸಮರ್ಥರಾದ ಗುರುಗಳಿಗೆ ದೇಶಿಕರೆಂದು ಹೇಳುವರು. ಈ ದೇಶಿಕ ಶಬ್ದವು ಅನ್ಯರಲ್ಲಿ ವ್ಯವಹರಿಸಲಾಗದು. ಇದಕ್ಕೆ ಪರಮಾತ್ಮನು ಕಿಂಚಿತ್ತಾದರು ಅವಕಾಶಕೊಟ್ಟಿರುವದಿಲ್ಲ. ಮತ್ತು ಈ ಗುರುಗಳಿಗೆ ಆರಾಧ್ಯರೆಂತಲೂ ಹೇಳುತ್ತಾರೆ. ಅದು ಹೇಗಂದರೆ, (ಆರಾಧಿತುಂ ಯೋಗ್ಯಾಃ ಆರಾಧ್ಯಾಃ) ಅಂದರೆ ಸರ್ವರಿಂದಲೂ ಪೂಜಿಸಿಕೊಳ್ಳಲ್ಪಡುವುದರಿಂದ ಆರಾಧ್ಯರೆಂದು ಹೇಳಿಸಿಕೊಳ್ಳಲ್ಪಡುವರು. ಈ ಆರಾಧ್ಯಶಬ್ದವು ಪಂಚಾಚಾರ್ಯರಲ್ಲಿಯೇ ವ್ಯವಹರಿಸುವದು. ಮೇಲೆ ಹೇಳಿದ ಈ ನಾಲ್ಕು ಪರ್ಯಾಯನಾಮಗಳು ವೇದಾಗಮೋಪನಿಷದಾದಿಗಳಲ್ಲಿಯೂ ಹೇಳಲ್ಪಟ್ಟಿರುತ್ತವೆ.

ಇನ್ನೊಂದು ವಿಷಯ—ಶ್ರೀಮತ್ ಶಕ್ತಿವಿಶಿಷ್ಟಾದ್ವೈತಮತವು ಕಳೆಗುಂದುವದಕ್ಕೆ ಕಾರಣಗಳು ಯಾವವೆಂದರೆ, ವಿರಕ್ತರು ಭೂಮಿ, ದ್ರವ್ಯ, ಪಶು ಮೊದಲಾದ ಸ್ವತ್ತುಗಳ ಮೇಲಣ ಆಶೆಯಿಂದಲೇ ಮಠಾಧಿಪತ್ಯವನ್ನು ಮಾಡುತ್ತಾ ಆಶ್ರಮಧರ್ಮಗಳನ್ನು ಬಿಟ್ಟು ಇತರಾಶ್ರಮಿಗಳು ಮಾಡುವ ಭೂಮಿ ವ್ಯಾಪಾರಸಂಬಂಧಕಾರ್ಯಗಳಲ್ಲಿಯೇ ಹೆಚ್ಚು ಗಮನ ಕೊಡುತ್ತ ಇದರಲ್ಲಿಯೇ ಕಾಲವನ್ನು ಕಳೆಯುತ್ತಾ ತಮ್ಮ ಆಶ್ರಮಧರ್ಮಕ್ಕೆ ಯೋಗ್ಯವಾದ ಪರಮಾತ್ಮನ ಸಂಬಂಧವಾಗಿರುವ ತಪಸ್ಸು, ಕರ್ಮ, ಜಪ, ಧ್ಯಾನ, ಜ್ಞಾನ, ಇವುಗಳನ್ನು ದೂರಮಾಡಿ ಸದಾ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಷಡ್ರಿಪುಗಳಿಂ ಪೀಡಿತರಾಗಿ ಕುಚಿತರಾದವ್ಯಸನಗಳಿಂ ಒಡನೆನಿಸಿ ಸನ್ಯ ವ್ಯಸನಂಗಳಿಗೆ [illegible]ಕರಂತೆ ಗುರಿಯಾಗಿ ಉದರಭರಣವನ್ನೇ ಮಹಾವ್ರತವೆಂದು ಹಿಡಿದು ಇತರ ಸತ್ಕ್ರಿಯೆಗಳನ್ನು ದೂರೀಕರಿಸಿ ಪತಿವಿಹೀನರಾದ ಸ್ತ್ರೀಯರಿಗೆ ಉಪದೇಶವನ್ನು ಮಾಡುತ್ತಾ ತತ್ಸಂಭಾಷಣ ತದ್ವಿನೋದಾನಂದ [illegible] ಸ್ವಭಾವರಾಗಿ ಬಾಹ್ಯಕ್ರಿಯಾರೂಪ ಇಷ್ಟಲಿಂಗ ಪೂಜೆ ಸತ್ಕಥಾಶ್ರವಣವನ್ನು ಮಾಡದೆ ಅಂತರಂಗ ಮಾರ್ಗದ ಗುರುತನ್ನೇ ತಿಳಿಯದೆ ವಿದ್ಯಾವಿಹೀನರಾದುದರಲ್ಲಿ ಏನು ರಹಸ್ಯ. ಇದು ಮುಖ್ಯಗುರುವಿನ ಗುಟ್ಟು. ಎಂದು ಒಣಟಾಳಿಕೆಯ ವಾಗ್ಬ್ರಹ್ಮದ ಮಾತುಗಳನ್ನು ಮಾತ್ರ ಕಲಿತು ಪರೋಪದೇಶ ನಿರತರಾಗಿ ಮಾಯಾಕಲಿತ ಪ್ರಪಂಚಗಳಲ್ಲಿ ಸಂತೃಪ್ತರಾಗಿ ವರ್ತಿಸುವ ಪಕ್ಷದಲ್ಲಿ ಎಂತಹ ಸದ್ಭಕ್ತಿಯುತರಾದವರಿಗೂ ನಿರಾಶೆಯೋ ಅವಿಶ್ವಾಸ ಉಂಟಾಗುವದು.

ಈ ಮೇಲೆ ಹೇಳಿದ ನಮ್ಮ ಗುರುಗಳಾದ ಶ್ರೀಮತ್ ಪಂಚಾಚಾರ್ಯರು ಸೂರ್ಯನಿಗಿಂತಲು ಹೆಚ್ಚು ಪ್ರಕಾಶಮಾನರಾಗಿ ಜಗತ್ತಿನಲ್ಲಿರುವ ಅನಾಚಾರಗಳಿಂದ ವರ್ತಿಸುವ ಶಿಷ್ಯರ ಅಜ್ಞಾನಾಂಧಕಾರವನ್ನು ನಾಶಮಾಡುತ್ತಾ ಇದ್ದಾರೆ. ಇವರೇ ಯುಗಯುಗಾಂತರದಿಂದ ಬಂದ ಮುಖ್ಯಗುರುಗಳು. ಇವರು ದೊಡ್ಡದೊಡ್ಡ ಸ್ಥಾನಗಳಲ್ಲಿರುವ ಸಂಸ್ಕೃತಪಾಠಶಾಲೆಗಳಿಗೂ ಇಂಗ್ಲೀಷು ಶಾಲೆಗಳಿಗೂ ಪ್ರವಾಸವನ್ನು ಮಾಡುತ್ತಾ ಅಲ್ಲಲ್ಲಿ ಸಂಸ್ಕೃತಾಭ್ಯಾಸಕರನ್ನು ವರ್ಧಿಸುತ್ತ ಆ ಸ್ಥಾನಗಳಲ್ಲಿರುವ ಸದ್ಭಕ್ತರುಗಳಿಂ ಸಂಸ್ಕೃತಾಭ್ಯಾಸ ಮಾಡಲಿಕ್ಕೆ ಬಡ ವಟುಗಳಿಗೆ ಅನ್ನವನ್ನು ಬಡವಿದ್ಯಾರ್ಥಿಗಳಿಗೆ ಉಡುಪುಗಳನ್ನು ಕೊಡಿಸಿ ಸಂಸ್ಕೃತಾಭ್ಯಾಸವನ್ನು ಮಾಡಿಸುತ್ತಿರುವರು.

ನಮ್ಮ ಮುಖ್ಯಗುರುಗಳಾದ ಶ್ರೀ ಪಂಚಾಚಾರ್ಯರು ಶಿಷ್ಯರಿಗೆ ಯಜನಯಾಜನಾದಿ ಷಟ್ಕರ್ಮಗಳನ್ನು ಬೋಧಿಸುತ್ತಾ ವೀರಶೈವತತ್ವಗಳಲ್ಲಿ ಶಿಷ್ಯರನ್ನು ನಿರತರನ್ನಾಗಿ ಮಾಡುತ್ತಾ ಸಂಸ್ಕೃತದಲ್ಲಿರುವ ವೇದಾಗಮೋಪನಿಷದಾದಿಗಳನ್ನು ಕನ್ನಡಭಾಷೆಯಲ್ಲಿ ಸರ್ವರಿಗೂ ತಿಳಿಯುವ ಹಾಗೆ ಮಾಡುವದಕ್ಕೆ ಪ್ರಯತ್ನಪಡುತ್ತಿರುವರು. ಇವೇ ಮೊದಲಾದ ಕಾರಣಗಳಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ಸಮಾಜವನ್ನುದ್ಧರಿಸುತ್ತಿರುವದನ್ನು ನೋಡಿ ಯಾರಿಗೆ ಸಂತೋಷವಾಗಲಿಕ್ಕಿಲ್ಲ. ಈ ಮಹನೀಯರಿಂದಲೇ ಸಮಾಜವು ಉದ್ಧಾರವಾಗಬೇಕಾಗಿದೆ.

ಸಿ. ಯಂ. ಕೊಟ್ರಯ್ಯನವರು, ಬಳ್ಳಾರಿ.

ಪ್ರಭಾದೇವಿಯ ಚಂದಾದಾರರೇ ಈ ಕಡೆ ಗಮನಿಸಿರಿ.

ಕುಹಕಶಾಸ್ತ್ರಿಗಳ ಕುಚೇಷ್ಟೆ

ಅಯ್ಯಾ ವಾಚಕವೃಂದವೇ, ಈ ಪ್ರಭಾದೇವಿಯು ಉದ್ಭವಿಸಿದ ಇತ್ತೀಚೆಗೆ ಕೆಲವುಜನ ಶಾಸ್ತ್ರಿಗಳು ಪ್ರಭಾದೇವಿಯಂತೆ ಉದ್ಭವಿಸಿ ಪ್ರಭೆಯು ಸದ್ಬೋಧೆಯನ್ನು ಮಾಡುತ್ತಾ ಹೊರಟರೆ ಇವರು ದುರ್ಬೋಧೆಯನ್ನು ಮಾಡುತ್ತ ಹೊರಟಿರುವರು. ಇವರು ತಾವು ಹೋದ ಹೋದ ಸ್ಥಳಗಳಲ್ಲೆಲ್ಲಾ ಯಾರೋ ಒಬ್ಬ ದೊಡ್ಡಮನುಷ್ಯರಂತೆ ನಟಿಸಿ ಅಲ್ಲಿ ತಮ್ಮ ಒಂದೆರಡು ವಾಕ್ಯಗಳನ್ನು ಹೊರಡಿಸಿ ಈ ಜನಗಳು ಬುದ್ಧಿವಂತರೋ ಅಥವಾ ದಡ್ಡರೋ ಎಂಬುದನ್ನು ತಿಳಿದುಕೊಂಡು ಪ್ರಸಂಗವಶಾತ್ ಪಂಚಾಚಾರ್ಯಪ್ರಭೆಯ ಹೆಸರನ್ನೆತ್ತಿ ಆ ಪತ್ರಿಕೆಯನ್ನು ತರಿಸಬೇಡಿರಿ. ಆ ಪತ್ರಿಕೆಯು ಶಾಸ್ತ್ರವಿರುದ್ಧ ವಿಷಯಗಳನ್ನು ತಿಳಿಸುತ್ತದೆ. ಅದನ್ನು ಓದುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದಾಗಿ ಬಾಯಿಗೆ ಬಂದ ಹಾಗೆ ಹರಟುತ್ತಾ ಹೊರಟಿರುತ್ತಾರೆ. ನೋಡಿದಿರಾ? ಇಂಥಾ ಕುಹಕಶಾಸ್ತ್ರಿಗಳು ನಮ್ಮ ವೀರಶೈವಮತದಲ್ಲಿ ಹುಟ್ಟಿ ನಮ್ಮ ಮತದ ಜನ್ಮಶತ್ರುಗಳಂತೆ ಇವರೂ ಕೂಡ ಶತ್ರುಗಳಾಗಿರುತ್ತಾರೆ. ಅಯ್ಯಾ ವಾಚಕಮಹಾಶಯರೇ ಈ ಪ್ರಭಾದೇವಿಯು ಉದ್ಭವಿಸಿದಮೇಲೆ ನಮ್ಮ ಮತವಿಚಾರವು ಗೊತ್ತಿಲ್ಲದ ಎಷ್ಟೋ ಜನಗಳಿಗೆ ಎಷ್ಟೋ ವಿಷಯಗಳನ್ನು ಬೋಧಿಸಿದ್ದಲ್ಲದೆ ಇತರ ಮತಸ್ಥರ ವಿಷಯಗಳನ್ನೂ ಕೂಡ ಹೋಲಿಕೆಯ ರೂಪವಾಗಿ ತಿಳಿಸಿರುವ ವಿಷಯವು ತಮ್ಮಗಳಿಗೆ ತಿಳಿದೇ ಇರುವದು. ಇರಲಿ. ಈ ಶಾಸ್ತ್ರಿಗಳು ತಾವು ಪಂಚಾಚಾರ್ಯರ ಶಿಷ್ಯರಾಗಿಯೂ, ಅವರ ಗೋತ್ರಸೂತ್ರಗಳನ್ನು ಹೇಳುವವರಾಗಿಯೂ ಇದ್ದು ಅಂಥ ಜಗದಾಚಾರ್ಯರ ನಾಮೋಚ್ಚಾರಣೆಯನ್ನು ಮಾಡುತ್ತಾ ವೇದಶಾಸ್ತ್ರಪುರಾಣೇತಿಹಾಸಗಳ ನಿಜತತ್ವವನ್ನು ಬೀರುತ್ತಾ, ಹೊರಟಿರುವ ಇಂಥಾ ಜಗಜ್ಜನನಿಯನ್ನು ದೂಷಿಸುತ್ತಾ ಹೊರಟಿರುವರಲ್ಲಾ, ಅಹಹ ಇವರು ನಿಜವಾದ ಶಾಸ್ತ್ರಿಗಳೇ? ಅಥವ ನಾಮಧಾರಿಗಳೇ? ವಾಚಕ ಮಹಶಯರೇ ಊಹಿಸಿರಿ. ಮಹಶಯರೇ ಇಂಥ ಕುಹಕ ಶಾಸ್ತ್ರಿಗಳ ವಾಗ್ಜಾಲಕ್ಕೆ ಮರುಳಾಗಬೇಡಿ. ಅಯ್ಯಾ ಶಾಸ್ತ್ರಿಗಳೇ ನೀವು ನಿಜಧರ್ಮ ಶಾಸ್ತ್ರವನ್ನು ಬಲ್ಲ ಶಾಸ್ತ್ರಿಗಳಾಗಿದ್ದಲ್ಲಿ ಇನ್ನು ಮುಂದೆ ಇಂಥ ದುರ್ಬೋಧೆಯನ್ನು ಮಾಡದೆ ಈ ಪ್ರಭಾದೇವಿಯಂತೆ ಸದ್ಬೋಧೆಯಂ ಮಾಡುತ್ತಾ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿ ಮುಕ್ತಿಸಾಧಕರಾಗುತ್ತೀರೆಂದು ನಂಬುತ್ತೇನೆ.

ಕೆ. ಕೊಟ್ರಪ್ಪ ಸ್ಕೂಲುಮಾಸ್ತರ,
ಕಡೂರು ಹೊಳಲ್ಕೆರೆ ತಾಲ್ಲೂಕ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀ ಜಗದ್ಗುರು ಪಂಚಾಚಾರ್ಯರ ಸನ್ನಿಧಿಯಲ್ಲಿ ಪ್ರಾರ್ಥನೆ.

ನಿಜಾಂ ಇಲಾಖೆಗೆ ಸೇರಿದ ಧನ್ನೂರ ಎಂಬ ಗ್ರಾಮದಲ್ಲಿ ಒಬ್ಬ ಚಲವಾದಿಯು ಬಂದಿರುವನು. ಆತನು ಸೋಲಾಪುರ ಪ್ರಾಂತದಲ್ಲಿ ಒಂದು ಗುರುಸ್ಥಳದ ಮಠದಲ್ಲಿ ಇರುತ್ತೇನೆಂದು ಹೇಳುತ್ತಾನೆ. ಇವನಲ್ಲಿ ವಚನಶಾಸ್ತ್ರಗಳು ಬಹಳವುಂಟು. ಇವನು ಎಲ್ಲಾ ಮಹೇಶ್ವರಭಕ್ತರೊಡನೆ ಸಂಪರ್ಕ ಪ್ರಕಾಶನಗಳನ್ನು ಮಾಡಲೆಳಸಿ 'ವಚನಶಾಸ್ತ್ರದಲ್ಲಿನ ಐಕ್ಯವನ್ನು ಎಲ್ಲರಿಗೂ ತೋರಿಸುತ್ತಾ ಇದ್ದಾನೆ. ಇದಕ್ಕೆ ನಮ್ಮ ಪ್ರಾಂತದಲ್ಲಿ ಮೂಢಭಕ್ತಿ ಯುದ್ರೇಕದಿಂದ ಅನೇಕರು ಆತನ ವಶವಾಗುವರೆಂದು ತೋರುತ್ತೆ. ಯಾಕೆಂದರೆ ಇಲ್ಲಿಯವರು ವಚನಶಾಸ್ತ್ರದ ವಿನಹ ಯಾವ ಶಾಸ್ತ್ರದ ಗಂಧವನ್ನು ಅರಿತವರಲ್ಲ. ಸದರಿ ಗ್ರಾಮದಲ್ಲಿ ಹಿಪ್ಪಳಗಾಮಿ ಸಿದ್ಧಯ್ಯನವರ ಮನೆಯ ಬಳಿಯಲ್ಲಿ ಒಂದು ಕೋಣೆಯೊಳಗೆ ಕುಟುಂಬಸಹಿತನಾಗಿ ವಾಸಮಾಡಿಕೊಂಡಿದ್ದಾನೆ. ಆಯಾಯ ಗ್ರಾಮಗಳಿಗೆ ಹೋಗಿ ನಿಮ್ಮ ಲಿಂಗಗಳನ್ನು ಕೊಡಿರಿ ಇತರ ಮತೀಯರಿಗೆ ಕಟ್ಟುತ್ತೇನೆ ಎಂದು ಹೇಳುತ್ತಾನೆ. ನಿರ್ಲಕ್ಷ್ಯದಿಂದ ಸಂಚಾರಮಾಡುತ್ತಿದ್ದಾನೆ. ಈ ಚಲವಾದಿಯು ತಾನು ಅಂತ್ಯಜನಾಗಿದ್ದು ಈ ಪ್ರಕಾರವಾದ ಅನ್ಯಾಯ ಕಾರ್ಯದಲ್ಲಿ ತೊಡಗಿರುವದರಿಂದ ಆಚಾರ್ಯರು ಕೂಡಲೆ ಈತನ ವಿಷಯದಲ್ಲಿ ಯೋಗ್ಯ ಹುಕುಮನ್ನು ದಯಪಾಲಿಸಿ ಇವನಿಗೆ ತಕ್ಕ ಬಂದೋಬಸ್ತನ್ನು ಮಾಡಬೇಕಾಗಿ ಪ್ರಾರ್ಥನೆ. ನಮ್ಮ ಪ್ರಾಂತವು ಎಲ್ಲಾ ಪ್ರಾಂತಕ್ಕಿಂತಲೂ ವಿದ್ಯೆಯಲ್ಲಿಯೂ ನಾಗರೀಕತೆಯಲ್ಲಿಯೂ ಹಿಂದುಳಿದದ್ದಾಗಿದೆ. ಇವರಿಗೆ ಯಾರಾದರೂ ಲಾಂಛನಧಾರಿಗಳಾಗಿ ಬಂದು ಒಂದೆರಡು ವಚನಶಾಸ್ತ್ರಗಳನ್ನು ಹೇಳಿದರೆ ಅವರು ಅಜ್ಞಾತ ಕುಲಗೋತ್ರದವರಾಗಿದ್ದರೂ ಅವರೇ ಘನಪಂಡಿತರೆಂದೂ ಅವರೇ ಸ್ವಾಮಿಗಳೆಂದೂ ತಿಳಿಯುತ್ತಾರೆ. ಇತಿ ಸಾಷ್ಟಾಂಗನಮಸ್ಕಾರಃ.

ಸನ್ನಿಧಿಯ ಸೇವಕ, ಹಾಲಹಳ್ಳಿ ಮಠದ
ಚನ್ನಬಸವಸ್ವಾಮೀ ಪಟ್ಟಾಧಿಕಾರಿ

[ಈ ಚಲವಾದಿಯು ವೀರಶೈವರಲ್ಲಿ ಒಡನಾಡುತ್ತ ವಿಧಿನಿಷೇಧಗಳಿಗೆ ಒಳಪಡದ ಕೆಲ ಶುಷ್ಕವಚನಗಳನ್ನು ಹೇಳಿಕೊಂಡು ಮೂಢರಿಗೆ ದುರ್ಬೋಧೆಯನ್ನು ಮಾಡಿ ಪರಿಶುದ್ಧವಾದ ವೀರಶೈವಮತಕ್ಕೆ ಕಳಂಕವನ್ನು ತರಲಿಚ್ಛಿಸುತ್ತಾನೆ. ಈ ಚಲವಾದಿಯು ತಾನು ಅಂತ್ಯಜನಾಗಿದ್ದರೂ ಇಂತಹ ಘೋರವಾದ ಕಾರ್ಯದಲ್ಲಿ ತೊಡಗಿರುವುದನ್ನು ನೋಡಿದರೆ ಕಲಿಕಾಲದ ಪ್ರಭಾವವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಮದ್ಯಪಾನೀ ಮಾಂಸಭಕ್ಷೀ ಚಾನ್ಯದೇವಸ್ಯಪೂಜಕಃ ಅಲಿಂಗ್ಯಪಿ ಚ ತತ್ಸಂಗೀ ಪಂಚೈತೇಪತಿತಸ್ಮೃತಾಃ || ಎಂಬಂತೆ ಈತನು ಇವುಗಳಲ್ಲಿ ಸೇರಿದವನಾಗಿರುತ್ತಾನೆ. ಭವಿಯೊಡನೆ ಸಂಭಾಷಣ ಸ್ಪರ್ಶನಾದಿಗಳು ಲಿಂಗಧಾರಿಗೆ ಕೂಡದೆಂದು ಶಾಸ್ತ್ರವು ಹೇಳುವಾಗ ಇನ್ನು ಅಂತ್ಯಜನಾಗಿರುವ ಈ ಚಲವಾದಿಗೂ ಲಿಂಗಾಂಗಿಗಳಿಗೂ ಏನು ಸಂಬಂಧ? ಆದುದರಿಂದ ಪ್ರತಿಯೊಬ್ಬ ಲಿಂಗಾಂಗಿಯೂ ಅಂತಹ ಚಲವಾದಿಯಿಂದ ವಚನಶಾಸ್ತ್ರವನ್ನು ಕೇಳುವುದಾಗಲಿ ಆತನಲ್ಲಿ ವ್ಯವಹರಿಸುವುದಾಗಲಿ ಆತನ ಸ್ಪರ್ಶಾದಿಗಳನ್ನು ಮಾಡುವುದಾಗಲಿ ಲಿಂಗಾಂಗಿಧರ್ಮಕ್ಕೆ ವಿರುದ್ಧವಾದುದೆಂದು ತಿಳಿಯತಕ್ಕದ್ದು.—ಸಂ.]

ಪಂಚಾಚಾರ್ಯ ಪ್ರಭಾ

೧೯೨೭ ನೇ ಡಿಸೆಂಬರ ತಾ|| ೧೨ ನೇ ಸೋಮವಾರ

ಗುರು

ಚರಾಚರಾತ್ಮಕವಾದೀ ಪ್ರಪಂಚದಲ್ಲಿ ಯಾವ ಮಹಾತ್ಮರು ವೇದಾಗಮೋಪನಿಷತ್ತುಗಳ ಆಧಾರಾಂಗಳಿಂದ ಮತಗಳನ್ನು ಸ್ಥಾಪಿಸಿರುತ್ತಾರೆಯೋ, ಆ ಮಹಾತ್ಮರನ್ನೇ ಮತಾಚಾರ್ಯರೆಂದು ಕರೆಯುತ್ತಾರೆ. ಯಾರು ವೇದಾಗಮೋಪನಿಷತ್ತುಗಳ ಆಧಾರವಿಲ್ಲದೆ ಕೇವಲ ಯುಕ್ತಿಯಿಂದ ಮತಗಳನ್ನು ಸ್ಥಾಪಿಸಿರುತ್ತಾರೆಯೋ ಅವರಿಗೆ ಮತಾಚಾರ್ಯರೆಂದು ಕರೆಯುವ ರೂಢಿಯಿಲ್ಲವು. ಇದಕ್ಕೆ ಶಂಕರಾಚಾರ್ಯ, ಪಂಚಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ ಮುಂತಾದ ವೈದಿಕ ಮತಸ್ಥಾಪಕರೇ ಉದಾಹರಣೆಯಾಗಿರುತ್ತಾರೆ. ನಮ್ಮ ಭರತಖಂಡದಲ್ಲಿ ಅನೇಕರು ನಿಗಮಾಗಮ ಪ್ರಮಾಣಗಳಿಂದ ಮತಸಿದ್ಧಾಂತಗಳನ್ನು ಸ್ಥಾಪಿಸಿರುವರು. ಕೆಲವರು ಕೇವಲ ಯುಕ್ತಿಯಿಂದಲೇ ಮತಸಿದ್ಧಾಂತಗಳನ್ನು ಸ್ಥಾಪಿಸಿರುವರು. ವೇದಾಗಮಗಳು ಭಗವಂತನಿಂದ ಪ್ರಣೀತಗಳಾದುದರಿಂದ ಇವುಗಳ ಆಧಾರದ ಮೇಲೆ ರಚಿಸಿರುವ ಮತಗಳು ಆಸ್ತಿಕಮತಗಳೆಂತಲೂ ಮಿಕ್ಕ ಮತಗಳು ನಿರಾಧಾರವಾಗಿ ಕೇವಲ ಯುಕ್ತಿಗಳಿಂದ ಸ್ಥಾಪಿಸಲ್ಪಟ್ಟಿರುವುದರಿಂದ ನಾಸ್ತಿಕ ಮತಗಳೆಂತಲೂ ಹೇಳಲ್ಪಡುವವು. ನಾಸ್ತಿಕಮತಗಳು ಕೇವಲ ಕಾಲ್ಪನಿಕಗಳಾದುದರಿಂದಲೂ ಭಗವಂತನನ್ನು ಅಂಗೀಕರಿಸದಿರುವುದರಿಂದಲೂ ಆತ್ಮರನ್ನು ಉದ್ಧರಿಸತಕ್ಕ ಮತಗಳಲ್ಲವು. ವೇದಾಗಮಾಧಾರದಿಂದ ಹುಟ್ಟಿದ ಮತಗಳಾದರೂ ಭಗವಂತನನ್ನೇ ಪ್ರತಿಪಾದಿಸುವುದರಿಂದ ಆತ್ಮೋದ್ಧಾರ ಸಾಧಕಗಳಾಗಿರುತ್ತವೆ. ಚಾರ್ವಾಕ ಲೋಕಾಯತಿಕಾದಿ ಮತಗಳೇ ನಾಸ್ತಿಕಮತಗಳು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದವುಗಳೇ ಆಸ್ತಿಕಮತಗಳು. ನಾಸ್ತಿಕಮತಗಳು "ದೇಹವೇ ಆತ್ಮನು. ಸುಖವೇ ಸ್ವರ್ಗವು. ದುಃಖವೇ ನರಕವು. ಎಂದು ಪ್ರತಿಪಾದಿಸುವವು. ಮತ್ತು "ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ | ತಸ್ಮಾತ್ಸರ್ವಪ್ರಯತ್ನೇನ ಋಣಂ ಕೃತ್ವಾಘೃತಂಪಿಬೇತ್" ದೇಹವೇ ಆತ್ಮನಾದುದರಿಂದ ದೇಹವು ಸುಟ್ಟುಹೋದ ಬಳಿಕ ಪುನಃ ಹುಟ್ಟುವುದಿಲ್ಲವು. ಆದುದರಿಂದ ಸಾಲವನ್ನಾದರೂ ಮಾಡಿ ತುಪ್ಪವನ್ನುಂಡು ಸುಖಪಡಬೇಕು. ಅಡಿಕೆಯನ್ನೂ ಸುಣ್ಣವನ್ನೂ ಕೂಡಿಸಿದರೆ ಹೊಸದಾದ ಒಂದು ಕೆಂಪು ಹುಟ್ಟುವಂತೆಯೂ, ಸಗಣಿಯಲ್ಲಿ ಹುಳಗಳು ಹುಟ್ಟುವಂತೆಯೂ ಜಡವಾದ ಪೃಥಿವ್ಯಾದಿ ಪಂಚಭೂತಗಳ ಸಂಯೋಗದಿಂದ ಒಂದು ವಿಲಕ್ಷಣವಾದ ಚೇತನವು ಹುಟ್ಟುವದು. ಇದೇ ಜೀವವು. ಘಟಾದಿಗಳಂತೆ ಕಣ್ಣಿಗೆ ಗೋಚರವಾಗದಿರುವುದರಿಂದ ಬ್ರಹ್ಮರೂಪವಾದ ವಸ್ತುವೂ ಇರುವುದೆಂದು ಹೇಳುವುದಕ್ಕಾಗುವುದಿಲ್ಲವು. ಆದುದರಿಂದ ಶರೀರಕ್ಕಿಂತಲೂ ಬೇರೆಯಾದ ಜೀವಾತ್ಮನಾಗಲಿ ಪರಮಾತ್ಮನಾಗಲಿ ಇಲ್ಲವೆಂದು ಪ್ರತಿಪಾದಿಸುತ್ತವೆ. ಆಸ್ತಿಕಮತಗಳಾದರೋ "ಆತ್ಮರು ದೇಹವಿಲಕ್ಷಣರು, ದೇಹವು ಜಡವು, ಆತ್ಮನು ಚೇತನನು. ಈ ಆತ್ಮನು ಜೀವಾತ್ಮನೆಂದೂ, ಪರಮಾತ್ಮನೆಂದೂ ಎರಡು ವಿಧವು. ಪರಮಾತ್ಮನು ವ್ಯಾಪಕನು, ಜೀವಾತ್ಮನು ವ್ಯಾಪ್ಯನು. ಪರಮಾತ್ಮನ ಸಾಕ್ಷಾತ್ಕಾರವಾದರೆ ಜೀವಾತ್ಮನು ಉದ್ಧೃತನಾಗುವನು. ಪ್ರಪಂಚವು ಪರಮಾತ್ಮನಿಂದ ಸೃಷ್ಟವಾದುದು. ವಿಷಯ ಸುಖದುಃಖಗಳೆಲ್ಲವೂ ಕ್ಷಣಿಕಗಳು" ಎಂದು ಪ್ರತಿಪಾದಿಸುತ್ತವೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಮತವಾದರೋ ವೇದಾಗಮಾವಲಂಬನವನ್ನು ಮಾಡಿದ ಮತಗಳಲ್ಲಿ ಸೇರಿದ ಸನಾತನ ಮತವಾಗಿರುವುದು. ಪವಿತ್ರವಾದೀ ವೀರಶೈವಮತವನ್ನು ಅವಲಂಬಿಸಿದವರಿಗೆ ದುಃಖ ನಿವೃತ್ತಿಯಾಗಿ ಶಿವೈಕ್ಯರೂಪವಾದ ಪರಮಾನಂದವೇ ಮುಖ್ಯ ಪ್ರಯೋಜನವಾಗಿರುವುದು. "ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ | ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ" ಎಂಬ ಶ್ರುತಿಪ್ರಮಾಣದಂತೆ ಲಿಂಗರೂಪವಾದ ಶಿವೋಪಾಸನೆಯಿಲ್ಲದೆ ದುಃಖದಿಂದ ಬಿಡುಗಡೆಯನ್ನು ಹೊಂದುವದಿಲ್ಲವು. ಇಂತಹ ವೇದಾಗಮಸಮ್ಮತವಾದ ಈ ವೀರಶೈವಮತವನ್ನು ಸ್ಥಾಪಿಸಿದ ಶ್ರೀ ಪಂಚಾಚಾರ್ಯರು ಇತರ ವೈದಿಕಮತಸ್ಥಾಪಕರಂತೆ ಬ್ರಹ್ಮಜ್ಞಾನಪ್ರಾಪ್ತರು ಎಂದು ಹೇಳಿದರೆ ಸಾಗುವದಿಲ್ಲವು. ಇತರ ವೈದಿಕಮತಾಚಾರ್ಯರು ಮಾತಾಪಿತೃಗಳಿಂದ ಜನ್ಮವನ್ನು ಪಡೆದು ಬಾಲ್ಯಾದ್ಯವಸ್ಥೆಗಳನ್ನು ಪಡೆಯುತ್ತ ಗುರುಕುಲವಾಸವನ್ನು ಮಾಡಿ ಪರಿಪಕ್ವಾಂತಃಕರಣರಾಗಿ ಪರಿಣತರಾದ ತಪಸ್ಸನ್ನಾಚರಿಸಿ ಅಗಾಧವಾದ ಮಹಿಮೆಗಾಕರರಾಗಿ ಸ್ವಸಾಮರ್ಥ್ಯದಿಂದ ಮತಗಳನ್ನು ಸ್ಥಾಪಿಸಿ ಆಚಾರ್ಯಪದವಾಚ್ಯರಾದರು. ಈ ರೇಣುಕಾದಿ ಪಂಚಾಚಾರ್ಯರಾದರೋ ಶಿವನ ಸದ್ಯೋಜಾತಾದಿ ಮುಖಗಳಿಂದ ಹುಟ್ಟಿ ಶಿವಸನ್ನಿಧಿಯಲ್ಲಿ ಸದಾ ವಾಸವಾಗಿರುವ ಪ್ರಮಥಪುಂಗವರೆನಿಸಿ ಪ್ರತಿಯೊಂದು ಯುಗದ ಆದಿಯಲ್ಲಿಯೂ ಭಗವಂತನ ಆಜ್ಞೆಯನ್ನು ಪಡೆದು ಶಿವಸನ್ನಿಧಿಯಲ್ಲಿ ಯಾವ ಆಕೃತಿಯೂ ಯಾವ ಬಾಂಧವವೂ ಇದ್ದಿತೋ ಅದೇ ಬಾಂಧವಾಕೃತಿಗಳಿಂದ ಭೂಮಿಗವತರಿಸಿ ಮಾರ್ಕಂಡೇಯನ ರಕ್ಷಣೆಗಾಗಿ ಲಿಂಗದಿಂದುದ್ಭವಿಸಿದ ಪರಮಾತ್ಮನಂತೆಯೂ, ಪ್ರಹ್ಲಾದನ ರಕ್ಷಣೆಗಾಗಿ ಕಂಬದಿಂದುದ್ಭವಿಸಿದ ನೃಸಿಂಹಮೂರ್ತಿಯಂತೆಯೂ, ಸನಾತನವಾದ ವೀರಶೈವಮತ ರಕ್ಷಣಾರ್ಥವಾಗಿ ಒಂದೊಂದು ಯುಗದ ಆದಿಯಲ್ಲಿ ಒಂದೊಂದು ನಾಮದಿಂದ ಪುರಾಣಪ್ರಸಿದ್ಧಗಳಾದ ಸೋಮೇಶಾದಿ ಪಂಚಲಿಂಗಗಳಿಂದ ಕಾಣಿಸಿಕೊಂಡು ಲೀಲಾಕಲ್ಪಿತ ವಿಗ್ರಹವುಳ್ಳವರಾಗಿ ಅಲ್ಲಲ್ಲಿಯೇ ಸಂಚರಿಸುತ್ತ ಅನೇಕ ಮಹಿಮೆಗಳನ್ನು ಪ್ರಕಾಶಪಡಿಸುತ್ತ ಸೂತ್ರೋಪನಿಷದಾದಿಗಳಿಗೆ ವೀರಶೈವಮತಪರಗಳಾದ ಭಾಷ್ಯಗಳನ್ನು ರಚಿಸಿ ಕಾಶೀ ಕೇದಾರ ಮುಂತಾದ ಪುರಾಣಪ್ರಸಿದ್ಧಕ್ಷೇತ್ರಗಳಲ್ಲಿ ಪೀಠಗಳನ್ನು ಸ್ಥಾಪಿಸಿದರೆಂಬುವುದಕ್ಕೆ ಶಿವಾಗಮಗಳೇ ಪ್ರಮಾಣಗಳಾಗಿವೆ. ಈ ಪ್ರಮಾಣಗಳನ್ನು ಹಿಂದಣ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ತೋರಿಸಿದ್ದೇವೆ. ಇದರಿಂದ ಪ್ರಪಂಚದಲ್ಲಿರುವ ಸಕಲ ವೈದಿಕಮತಗಳಿಂತಲೂ ಈ ವೀರಶೈವಮತವು ಸೃಷ್ಟ್ಯಾದಿಯಿಂದಲೂ ಇದ್ದಿತೆಂದು ಹೇಳುವುದರಿಂದ ಅತ್ಯಂತ ಸನಾತನಮತವೆಂದು ಸಿದ್ಧವಾಗುವದು. ಇದೂ ಅಲ್ಲದೆ ಅದ್ಯಾಪಿ ಬೆಳಗುತ್ತಿರುವ ಪಂಚಾಚಾರ್ಯರ ಪೀಠಗಳೆಂದೆನಿಸುವ ಕಾಶೀ, ಶ್ರೀಶೈಲ, ಕೇದಾರ ಮುಂತಾದ ಸ್ಥಳಗಳಲ್ಲಿ ಎರಡು ಸಾವಿರ ವರ್ಷಗಳ ಕಾಲವನ್ನು ತೋರಿಸುತ್ತಿರುವ ಜನಮೇಜಯ ಮಹಾರಾಜರಿಂದ ಕೊಡಲ್ಪಟ್ಟ ಭೂದಾನತಾಮ್ರಾದಿ ಶಾಸನಗಳು ಈ ಮತದ ಸನಾತನತ್ವದ್ಯೋತಕಗಳಾಗಿರುವವು. ಈ ಶಿಲಾಶಾಸನಗಳ ವಿವರವನ್ನು ವಾಚಕರಿಗೆ ಕಾಲವರಿತು ತಿಳಿಸುತ್ತೇವೆ. ಆದುದರಿಂದ ವೀರಶೈವನಿಂದ ಅನವರತವೂ ಅನುಷ್ಠಿಸಲ್ಪಡತಕ್ಕ ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ಭಸ್ಮ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ಗುರುತುಗಳು ಯಾವ ವೀರಶೈವರಲ್ಲಿರುವವೋ ಅವರೆಲ್ಲರೂ ಮತಸ್ಥಾಪಕರಾದ ಶ್ರೀ ಪಂಚಾಚಾರ್ಯರ ಶಿಷ್ಯಕೋಟಿಯಲ್ಲಿಯೇ ಸೇರುತ್ತಾರೆ. ಮುಕ್ತಿಸಾಧಕಗಳಾದ ಈ ಎಂಟು ಆವರಣಗಳು ಪಂಚಾಚಾರ್ಯರಿಂದಲೇ ಅನುಗ್ರಹಿಸಲ್ಪಟ್ಟಿರುವುದರಿಂದ ಅಷ್ಟಾವರಣಗಳುಳ್ಳ ಸಾಮಾನ್ಯವೀರಶೈವನೇ ಆಗಲಿ, ವಿಶೇಷವೀರಶೈವನೇ ಆಗಲಿ, ನಿರಾಭಾರಿ ವೀರಶೈವನೇ ಆಗಲಿ ಎಲ್ಲರೂ ಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಇತರಾಸಾಧಾರಣವಾದ ಗುರುತ್ವವನ್ನು ಅಂಗೀಕಾರ ಮಾಡಲೇಬೇಕಾಗುವುದು. ಈ ಪಂಚಾಚಾರ್ಯರಲ್ಲಿ ಮತಸ್ಥಾಪನಾ ಪ್ರಯುಕ್ತವಾದ ಜಗದ್ಗುರುತ್ವವನ್ನು ಒಪ್ಪದೆ ಇರುವವರು ನಾಮಧಾರಿ ವೀರಶೈವರೇ ಹೊರತು ಅನ್ವರ್ಥವೀರಶೈವರೆನಿಸಲಾರರು. ಪ್ರತಿಯೊಬ್ಬ ವೀರಶೈವನೂ ಆಚಾರ್ಯರಿಂದಲೇ ತ್ರಿವಿಧ ದೀಕ್ಷೆಯನ್ನೂ ತ್ರಿವಿಧಲಿಂಗಧಾರಣವನ್ನೂ ಪಡೆಯಬೇಕು. ಇವುಗಳನ್ನು ಹೊಂದದ ವೀರಶೈವನು ಪ್ರಪಂಚದಲ್ಲಿ ಇಲ್ಲವೇ ಇಲ್ಲ. ಮತ್ತು ಪ್ರತಿಯೊಬ್ಬನೂ ಶ್ರೀ ಪಂಚಾಚಾರ್ಯರ ಗೋತ್ರಸೂತ್ರಗಳನ್ನೇ ಹೇಳಬೇಕು. ಪ್ರತಿಯೊಬ್ಬನೂ ಆಚಾರ್ಯರಿಂದುಪದೇಶಿಸಲ್ಪಟ್ಟ ಮಹಾ ಪಂಚಾಕ್ಷರಿಯನ್ನು ಪ್ರಾಣಾಂತದವರೆವಿಗೂ ಜಪಿಸುತ್ತಲೇ ಇರಬೇಕು. ಮತ್ತು ಪ್ರತಿಯೊಂದು ಆಶ್ರಮಸಂಸ್ಕಾರ ಸಮಯದಲ್ಲಿಯೂ ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲಿಯೂ ಪಂಚಕಲಶಗಳನ್ನು ವಿಧ್ಯುಕ್ತವಾಗಿ ಸ್ಥಾಪಿಸಿ ಮತಸ್ಥಾಪಕರಾದ ಶ್ರೀ ಪಂಚಾಚಾರ್ಯರನ್ನು ಋತ್ವಿಕ್ಕುಗಳ ದ್ವಾರಾ ಕಲಶಗಳಲ್ಲಿ ಆವಾಹಿಸಿ ಪೂಜಿಸಿ ಕಲಶೋದಕವನ್ನು ಆಚಾರ್ಯಪ್ರಸಾದವೆಂದು ಪ್ರೋಕ್ಷಿಸಿಕೊಳ್ಳಬೇಕು. ಹೀಗೆ ಪಂಚಾಚಾರ್ಯರ ಸಂಬಂಧವು ಆಕಾಶದಂತೆ ಎಲ್ಲೆಲ್ಲಿಯೂ ವ್ಯಾಪಿಸಿರುವಲ್ಲಿ ಇಂತಹ ಆಚಾರ್ಯಭಗವತ್ಪಾದರಲ್ಲಿ ಆವ ಸಂಶಯವನ್ನು ಮಾಡಿಕೊಳ್ಳದೆ, ಪ್ರಮಾದದಿಂದೊದಗಿದ ಅಶಾಸ್ತ್ರೀಯಾಚರಣೆಗಳನ್ನು ದೂರಮಾಡಿ ನಿಖಿಲ ವೀರಶೈವರಿಗೆ ಮಂಗಲಸೂತ್ರವಂತಿರುವ ಲಿಂಗವನ್ನನುಗ್ರಹಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯನ್ನಿರಿಸಿ ಕೃತಕೃತ್ಯರಾಗುವುದು ಪ್ರತಿಯೊಬ್ಬ ಲಿಂಗಾಂಗಿಯ ಪರಮಧರ್ಮವಾಗಿರುವದು.

ಒಳದೇಶದ ವೃತ್ತಾಂತಗಳು.

ನಮ್ಮ ದಿವಾನರವರು ಈ ತಿಂಗಳು ತಾ|| 15ರಿಂದ 25ರ ವರೆಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಸಂಚಾರವನ್ನಿಟ್ಟುಕೊಂಡಿದ್ದಾರೆ.

ಡಾ|| ಅನಿಬೆಸಂಟ್‌ರವರು ಕಳೆದ 24ನೇ ತಾರೀಖು ಭಾನುವಾರ ಬೆಂಗಳೂರಿಗೆ ದಯಮಾಡಿಸಿ ಕೆಲವು ಉಪನ್ಯಾಸಗಳನ್ನು ಮಾಡಿದರು

ರಾಜಕುಮಾರ್ ಸಿ. ದೇಶರಾಜೇಅರಸಿನವರು ಬೆಂಗಳೂರಿನ ದೇಶೀಯ ವಿದ್ಯಾಶಾಲೆಯ ರಸಾಯನಶಾಸ್ತ್ರ ಸಲಕರಣೆಗಳಿಗಾಗಿ ಬಹಳ ಉದಾರಮನಸ್ಸಿನಿಂದ 500 ರೂಪಾಯಿಗಳನ್ನು ದಾನಮಾಡಿರುತ್ತಾರೆ.

ಕಳೆದ ನವರಾತ್ರಿಯ ಜಂಬೂಸವಾರಿಯ ಕಾಲದಲ್ಲಿ 5 ಅಡಿ ಎತ್ತರ ಮರಗಾಲನ್ನು ಕಟ್ಟಿಕೊಂಡು ಅರಮನೆಯಿಂದ ಬನ್ನಿ ಮಂಟಪದ ವರೆವಿಗೂ ನಡೆದ ವೀರಯ್ಯನೆಂಬವನಿಗೆ ಶ್ರೀಮನ್ಮಹಾರಾಜರವರು 100 ರೂಪಾಯಿಗಳನ್ನೂ ಒಂದು ಪೇಟವನ್ನೂ ದಯಪಾಲಿಸಿದರು.

ನಮ್ಮ ಸರ್ಕಾರದವರು ಬೆಂಗಳೂರಿನ ಸಾರ್ವಜನಿಕ ಆರೋಗ್ಯಸಂಸ್ಥೆಗೆ ಸೇರಿದಹಾಗೆ ಮಂಜಿನಗಡ್ಡೆಯನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಿ ಸರ್ಕಾರದ ಎಲ್ಲಾ ಕಛೇರಿಗಳವರೂ ಮಂಜುಗಡ್ಡೆಯನ್ನು ಅಲ್ಲಿಂದಲೇ ತರಿಸಿಕೊಳ್ಳಬೇಕೆಂದು ಅಪ್ಪಣೆಮಾಡಿರುವರು

ಚಾಮರಾಜನಗರದ ತಾ|| ಹಂಪ್ರಹಳ್ಳಿ ಗ್ರಾಮದ ಶ್ರೀ ಗಣಪತಿಯೋಗೀಶ್ವರರು ಶ್ರೀ ಪ್ರಸನ್ನ ಮಹಾಗಣಪತಿಯ ರಥವನ್ನು ಮಾಡಿಸುವ ಉದ್ದೇಶದಿಂದ ಮೈಸೂರು ಡೆ|| ಕಮಿಷನರವರ ಸಹಾನುಭೂತಿಯಿಂದ ಅಲ್ಲಲ್ಲಿ ಈ ಕಾರ್ಯದ ಸಹಾಯಕ್ಕಾಗಿ ಮೌನವ್ರತಧಾರಣಮಾಡಿ ಸಂಚರಿಸುವರಿಂದ ಸರ್ವರೂ ಇವರಿಗೆ ಸಹಾಯಮಾಡಬೇಕಾಗಿ ಕೋರಿದೆ. ಇವರಲ್ಲಿರುವ ಚಂದಾವಸೂಲಿ ಪೆಟ್ಟಿಗೆಗೆ ಮೊಹರಾಯಿಸೀಲು ಮಾಡಲ್ಪಟ್ಟಿದೆ.

ಶ್ರೀ ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಗಿ ಮಾರ್ಗಶೀರ್ಷ ಶುದ್ಧ ಸಪ್ತಮಿ ಗುರುವಾರಕ್ಕೆ 2 ವರ್ಷಗಳಾದುದರಿಂದ ಮಹಾಸ್ವಾಮಿಗಳವರ ಪಟ್ಟಾಭಿಷೇಕಸ್ಮಾರಕವಾದ ವರ್ಧಂತ್ಯುತ್ಸವವು ಕಳೆದ 1 ನೆಯ ತಾರೀಖಿನ ಗುರುವಾರದ ದಿವಸ ಬಣೇ ಹೋಬಳಿ ಕೋಡಿಕೊಪ್ಪದ ಗ್ರಾಮದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತೆಂದು ಕೇಳಿ ಸಂತೋಷಿಸುತ್ತೇವೆ.

ಬೆಂಗಳೂರು ಸಿಟಿ ಹೊಸತರಗುಪೇಟೆಯಲ್ಲಿರುವ ಶ್ರೀ ರಾಜರಾಜೇಶ್ವರೀ (ದೊಡ್ಡಮ್ಮ ಚಿಕ್ಕಮ್ಮ) ದೇವಸ್ಥಾನದಲ್ಲಿ ಕಳೆದ ನವೆಂಬರ್ ತಾರೀಖು 28-29ರಲ್ಲಿ ಪ್ರತಿವರ್ಷದಂತೆ ನಡೆಯುತ್ತಿದ್ದ ಪ್ರಾಣಿಬಲಿಯನ್ನು ನಿಲ್ಲಿಸಿ ಕೇವಲ ಸಾತ್ವಿಕರೀತಿಯಿಂದ ನಡೆಯಬೇಕೆಂದು ಸರ್ವಜನಸಮ್ಮತಿಯಿಂದ ಜಾತ್ರೆಯು ಪಳ್ಳಿಕಾರ್

ಮಠಸ್ಥರಿಂದ ಉಪಕ್ರಮಿಸಲ್ಪಟ್ಟು ಅಗ್ನಿಕುಂಡಕ್ಕೆ ಮಾತ್ರ ಒಂದು ಬಲಿಯನ್ನು ಕೊಡಬೇಕೆಂದು ನಿಶ್ಚೈಸಿರುವಾಗ್ಗೆ ಬೆಂಗಳೂರು ಸಿಟಿ ಪ್ರಾಣಿದಯಾಸಂಘದವರು ಅಲ್ಲಿಗೆ ಹೋಗಿ ಒಂದು ಬಲಿಯನ್ನು ಕೊಟ್ಟರೂ ಪ್ರಾಣಿಹತ್ಯಾದೋಷವು ಬರುವದೆಂದು ಜನಗಳಿಗೆ ಉಪನ್ಯಾಸಗಳಮೂಲಕ ಬೋಧಿಸಿ ಶ್ರೀದೇವಿಗೆ ಕೂಷ್ಮಾಂಡ ಬಲಿಯನ್ನರ್ಪಿಸಿ ಶ್ರೀಮನ್ ಮಹಾರಾಜರವರ ಮತ್ತು ಮಹಾತ್ಮಾ ಗಾಂಧಿಯವರ ಜಯಘೋಷದೊಡನೆ ಮಂಗಳಾರತಿಯನ್ನರ್ಪಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಕಳೆದ ಮಂಗಳವಾರ ಪ್ರಾತಃಕಾಲ ಅರಸೀಕೆರೆಯಿಂದ ರಾಜಧಾನಿಗೆ ಬರುತ್ತಿದ್ದ ರೈಲುಗಾಡಿಯು ಅಕ್ಕಿಹೆಬ್ಬಾಳು ಸ್ಟೇಷನ್ನಿಗೆ 6 ಮೈಲು ದೂರದಲ್ಲಿರುವಾಗ ಪ್ರಯಾಣಿಕರಗಾಡಿಯ ಒಂದು ಬಾಗಿಲಿನ ಬಳಿಯಲ್ಲಿ ನಿಂತಿದ್ದ 8-9 ವರ್ಷದ ಒಂದು ಹುಡುಗಿಯು ಆಕಸ್ಮಾತಾ ಕೆಳಗೆ ಬಿದ್ದುಬಿಟ್ಟಿತು. ಕೂಡಲೇ ಆ ಹುಡುಗಿಯ ಬಂಧುಗಳು ಹಾಹಾಕಾರವನ್ನು ಮಾಡಲಿಕ್ಕೆ ಪ್ರಾರಂಭಿಸಿದರೆಂದೂ ಅಷ್ಟರಲ್ಲಿ ಗಾಡಿಯು ಅಕ್ಕಿಹೆಬ್ಬಾಳುಸ್ಟೇಷನ್ನಿಗೆ ಬಂದುಬಿಟ್ಟಿತೆಂದೂ ಆಮೇಲೆ ಇಂಜಿನ್ ಗಾಡಿಯೊಂದನ್ನೇ ಹಿಂದಕ್ಕೆ ತೆಗೆದುಕೊಂಡುಹೋಗಿ ನಿಶ್ಚೇಷ್ಟಿತಳಾಗಿದ್ದ ಆ ಹುಡುಗಿಯನ್ನು ಸ್ಟೇಷನ್ನಿಗೆ ತಂದರೆಂದೂ ಅಷ್ಟುಹೊತ್ತಿಗೆ ಬೊಂಬಾಯಿ ಸ್ಕೌಟು ಜಂಬೂರಿಗೆ ಹೊರಟಿದ್ದ ಮೈಸೂರು ಸ್ಕೌಟುಗಳೂ ಮತ್ತು ಸ್ಟೇಷರ್ಮಾಸ್ಟರರೂ ಬಹಳ ಮುತುವರ್ಜಿಯಿಂದ ಆ ಹುಡುಗಿಗೆ ಶೈತ್ಯೋಪಚಾರಗಳನ್ನು ಮಾಡಿ ಸಮೀಪದಲ್ಲಿದ್ದ ಆಸ್ಪತ್ರೆಗೆ ಸಾಗಿಸಿದರೆಂದೂ ಕೇಳುತ್ತೇವೆ.

ವರ್ತಮಾನಸಂಗ್ರಹ.

ಬೊಂಬಾಯಿಯಲ್ಲಿ ನೆರವೇರುವ ಸ್ಕೌಟ್ ಜಂಬೂರಿಗೆ ಕರ್ನಾಟಕದಿಂದ 600 ಜನ ವಿದ್ಯಾರ್ಥಿಗಳು ಹೋಗಿರುತ್ತಾರೆ.

ಜಳಗಾಂವದಹತ್ತರ ಭಾಡಳಿ ಎಂಬ ಗ್ರಾಮದಲ್ಲಿ ಹಿಂದೂಮುಸಲ್ಮಾನರಿಗೆ ಬಡದಾಟವಾಗಿ ೨ ಜನಗಳಿಗೆ ಬಲವಾದ ಗಾಯಗಳಾಗಿವೆ.

ಲಾಹೋರಿನ ಜೈಲಿನಲ್ಲಿ ದೇವೀದಯಾಳ ಎಂಬವನನ್ನು ಕೊಂದ ಮುಸ್ತಕಭಕ್ಷ ಎಂಬ ದುರಾತ್ಮನಿಗೆ ಫಾಶೀಶಿಕ್ಷೆಯು ವಿಧಿಸಲ್ಪಟ್ಟಿತು.

ಪ್ಯಾರಿಸ್ ಪಟ್ಟಣದಲ್ಲಿದ್ದ ವಿಸಾಕೌಂಟ ಈಶೀ ಎಂಬ ಜಪಾನದೇಶದ ರಾಯಭಾರಿಯು ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟನು.

ಜರ್ಮನಿಯಲ್ಲಿ ಕಣ್ಣಿಗೆ ಕಾಣದಿರುವ ಒಂದು ಬೆಳಕನ್ನು ಕಂಡುಹಿಡಿದಿರುತ್ತಾರೆ. ಇದರಿಂದ ಫೋರ್ಜರಿ ಮೊದಲಾದವುಗಳನ್ನು ಸುಲಭವಾಗಿ ಕಂಡುಹಿಡಿಯಬಹುದಂತೆ !

ಪ್ರಿನ್ಸ್ ಆಫ್ ವೇಲ್ಸರವರು ಬೇಟೆಯಾಡುತ್ತಿರುವಾಗ ಕುದುರೆಯ ಮೇಲಿಂದ ಆಕಸ್ಮಾತಾಗಿ ಬಿದ್ದರೆಂದೂ, ವಿಶೇಷ ಅಪಾಯವೇನೂ ಆಗಲಿಲ್ಲವೆಂದೂ ತಿಳಿಯಬರುತ್ತದೆ.

ನಾಗಪೂರ ಸತ್ಯಾಗ್ರಹದ ಮುಂದಾಳುಗಳಾಗಿದ್ದು ಸರೆಮನೆಯಲ್ಲಿಡಲ್ಪಟ್ಟಿರುವ ಜನರಲ ಅವಾರಿಯವರು ಕಳೆದ 16 ದಿವಸಗಳಿಂದ ಅನ್ನಪಾನಾದಿಗಳನ್ನು ತೊರೆದಿರುವದಾಗಿ ತಿಳಿಯಬರುತ್ತದೆ.

ಹೈದರಾಬಾದಕ್ಕೆ 40 ಮೈಲು ದೂರದಲ್ಲಿರುವ ಮೋಸುಕೇರ್ ಎಂಬ ಗ್ರಾಮದಲ್ಲಿ ಕಲ್ಲಿನಪಟ್ಟಿಗೆಯಲ್ಲಿ ಹೂಳಿದ ಎರಡು ಹೆಣಗಳು ಸಿಕ್ಕಿರುತ್ತವೆ. ಅವು ಈಗ ಏಳುಸಾವಿರ ವರ್ಷಗಳ ಪೂರ್ವದಲ್ಲಿ ಹೂಳಲ್ಪಟ್ಟಿರಬೇಕೆಂದು ಭೌತಿಕಶಾಸ್ತ್ರಜ್ಞರು ನಿಶ್ಚೈಸಿರುತ್ತಾರ

ಬೊಂಬಾಯಿಯ ಸಿಂಧಿಯಾ ನ್ಯಾವಿಗೇಶನ್ ಕಂಪನಿಯವರು ಇಂಗ್ಲೆಂಡಿನಲ್ಲಿ ಒಂದು ಹೊಸ ಹಡಗವನ್ನು ತಯಾರುಮಾಡಿಸಿದರು. ಈ ಹಡಗದ ಜಲಸಂಚಾರಪ್ರಾರಂಭೋತ್ಸವವನ್ನು ಇಂಗ್ಲೆಂಡಿನಲ್ಲಿ ಪಂಡಿತ ಮೋತೀಲಾಲನೆಹರುರವರು ಮಾಡಿ ಅದಕ್ಕೆ "ಜಲದೂತ" ಎಂದು ನಾಮಕರಣಮಾಡಿದರು.

ಕಳೆದತಿಂಗಳು 30 ನೆಯ ತಾರೀಖಿನದಿವಸ ನಡೆದ ಧಾರವಾಡ ಮುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯಲ್ಲಿ ಮಿ|| ಚನ್ನಪ್ಪ ಹುಲಕೋಟಿ ಗೌರ್ನಮೆಂಟ ವಕೀಲ, ರಾವಬಹದ್ದೂರ ಬಿ. ಎಲ್. ಪಾಟೀಲರೇ ಮೊದಲಾದ 5 ಜನ ವೀರಶೈವರು ಸದಸ್ಯರಾಗಿ ಚುನಾಯಿಸಲ್ಪಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಜರ್ಮನಿಯಲ್ಲಿ ಈ ತಿಂಗಳ ಮೊದಲನೆಯ ತಾರೀಖಿನಿಂದ ಟೆಲಿಫೋಟೋಗ್ರಫಿಯನ್ನು ಹಾಕಿರುವರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಬರೆದ ಕಾಗದಗಳನ್ನು ಫೋಟೋದಲ್ಲಿ ನೋಡಬಹುದು. ಅಂದರೆ ನಾವು ಕಾಗದದಲ್ಲಿ ಯಾವ ವಿಷಯವನ್ನು ಬರೆದುಕೊಡುತ್ತೇವೆಯೋ ಅದರ ನಕ್ಷೆಯನ್ನೇ ವಿಳಾಸದಾರರಿಗೆ ತಂತಿಯ ಮೂಲಕ ತಲುಪುವಂತೆ ಏರ್ಪಡಿಸಿರುತ್ತಾರೆ.

ಲಾಹೋರಿನಲ್ಲಿ ಮಿ|| ಲಾಲಾ ಲಜಪತರಾಯರ ಮನೆಯೊಳಗೆ ಒಬ್ಬ ಮುಸಲ್ಮಾನನು ಉಡುಪಿಬ್ರಾಹ್ಮಣರ ವೇಷವನ್ನು ಧರಿಸಿಕೊಂಡು ಹೊಕ್ಕನು. ಆ ಸಮಯದಲ್ಲಿ ಲಾಲಾಜಿಯವರು ಈ ಮುಸಲ್ಮಾನನನ್ನು ಪ್ರಶ್ನೆಮಾಡಲಾಗಿ ಅವನಿಗೆ ಉತ್ತರವನ್ನು ಹೇಳಲು ಬಾರದೆ ಇದ್ದ ಕಾರಣ ಇವನು ವೇಷಧಾರಿಯೆಂದೂ, ಕ್ರೂರ ಕೃತ್ಯಕ್ಕಾಗಿ ಬಂದಿರುವನೆಂದೂ ತಿಳಿದು, ಅವನನ್ನು ಹೊರಗೆಹಾಕಿಸಿದರು.

ದೆಹಲೀನಗರದ ಜುಮ್ಮಾಮಸೀದಿಯಲ್ಲಿ ಕಳೆದ ಶನಿವಾರ ಪ್ರಾರ್ಥನೆಗಳು ನಡೆದಮೇಲೆ, ಅಬ್ದುಲ್ ರಶೀದನ ಶವದ ಮೆರವಣಿಗೆಯನ್ನು ಮಾಡಿದವರ ವರ್ತನವನ್ನು ಖಂಡಿಸಿ ಠರಾವುಗಳನ್ನು ಮಾಡಿದರು. ಘಾಯಹೊಂದಿದವರ ಸಹಾಯಾರ್ಥವಾಗಿ 300 ರೂಪಾಯಿಗಳನ್ನು ಶೇಖರಿಸಿದರು. ಆ ದಿವಸದ ಪ್ರಮುಖ ಭಾಷಣಕರ್ತೃಗಳಾದ ಮಹಮ್ಮದ್ ಅಲಿಯವರು ಹೆಚ್ಚು ದ್ರವ್ಯವನ್ನು ಕೊಡಬೇಕೆಂದು ಕೇಳಿಕೊಂಡಿರುವರು.

ಲಾಹೋರ ಪಟ್ಟಣದಲ್ಲಿ ಮಿಶ್ರಮಾಡಲ್ಪಟ್ಟ ನಾನಾತರದ ತುಪ್ಪವನ್ನು ವರ್ತಕರು ಒಳ್ಳೆಯ ತುಪ್ಪವೆಂದು ವಿಕರಿಮಾಡುತ್ತಿದ್ದರು. ಮ್ಯುನಿಸಿಪಲ್ ಕೌನ್ಸಿಲರುಗಳು ಅದನ್ನು ತಪ್ಪಿಸುವದಕ್ಕಾಗಿ ತುಪ್ಪವನ್ನು ಮಾರುವವರೆಲ್ಲಾ ಮ್ಯುನಿಸಿಪಲ್ ಹೆಲ್ತ್ ಆಫೀಸರಿಗೆ ಅರ್ಜಿಯನ್ನು ಕೊಟ್ಟು ಅವರಿಂದ ಲೈಸೆನ್ಸ್ ಪಡೆಯಬೇಕೆಂದು ಏಕವಾಕ್ಯತೆಯಿಂದ ಒಪ್ಪಿಕೊಂಡಿರುತ್ತಾರೆ. ಇತರ ಮ್ಯುನಿಸಿಪಾಲಿಟಿಯ ಕೌನ್ಸಿಲರುಗಳೂ ಈ ವಿಷಯಕ್ಕೆ ನಿಗಾಕೊಡುವದು ಉತ್ತಮವಲ್ಲವೇ ?

ಅಮೃತಸರದಲ್ಲಿರುವ ಖಾಲ್ಸಾ ಕಾಲೇಜಿನ ಒಬ್ಬ ಪ್ರೊಫೆಸರರಾದ ಸರ್ದಾರ್ ಚನನಸಿಂಗ ಎಂಬುವರು ಐ. ಸಿ. ಎಸ್. ಪರೀಕ್ಷೆಗೆ ಕೂಡ್ರಲಿಕ್ಕೆ ತಮಗೆ ಅವಕಾಶವನ್ನು ಕೊಡಬೇಕೆಂದು ತಮ್ಮ ಸರ್ಟಿಫಿಕೇಟಿನೊಳಗಿನ ಹುಟ್ಟಿದ ತಾರೀಖನ್ನು ಬದಲಾಯಿಸಿ ಅಪ್ಲಿಕೇಷನ್ ಕೊಟ್ಟದ್ದಕ್ಕಾಗಿ ಸದರಿ ಪ್ರೊಫೆಸರರ ಮೇಲೆ ಖಟ್ಲೆಯು ನಡೆದು 6ತಿಂಗಳ ಕಠಿಣಶಿಕ್ಷೆಯೂ, ಹಾಗೂ 500 ರೂಪಾಯಿಗಳ ದಂಡವೂ ವಿಧಿಸಲ್ಪಟ್ಟಿತು. ಇದು ವಿದ್ಯಾರ್ಥಿಗಳ ಜಾಗ್ರತಿಗೆ ಒಂದು ಉದಾಹರಣೆಯಾಗಿದೆ.

ಮಹಾತ್ಮಾ ಗಾಂಧಿಯವರು ಸಿಂಹಳದ್ವೀಪದ ಪ್ರವಾಸವನ್ನು ಮುಗಿಸಿಕೊಂಡು ಕಳೆದ ತಿಂಗಳು 26 ರಲ್ಲಿ ಜಾಫ್ನಾದ್ವೀಪಕ್ಕೆ ಹೋದರು. ಮಹಾತ್ಮರಿಗೆ ಸಿಂಹಳದ್ವೀಪದ ಎಲ್ಲಾ ಪಂಗಡದವರೂ ಉತ್ಸಾಹದಿಂದ ಸ್ವಾಗತವನ್ನಿತ್ತರು. ಅಲ್ಲಿಯ ಸರ್ಕಾರದವರು ಮಹಾತ್ಮರಿಗಾಗಿ ಪ್ರತ್ಯೇಕವಾಗಿ ರೈಲಿನಲ್ಲಿ ಒಂದು ಗಾಡಿಯನ್ನು ಬಿಟ್ಟುಕೊಟ್ಟು ಅವರ ಪ್ರಯಾಣಕ್ಕೆ ಅನುಕೂಲಪಡಿಸಿಕೊಟ್ಟಿದ್ದರು. ಖಾದಿನಿಧಿಗೆ ಒಂದು ಲಕ್ಷ ರೂಪಾಯಿಗಳು ಸೇರಿದವು. ಮಹಾತ್ಮರು ತಾ|| 26 ರಲ್ಲಿ ಜಾಫ್ನಾದ್ವೀಪದಿಂದ ಒರಿಸ್ಸಾ ಪ್ರಾಂತಕ್ಕೆ ದಯಮಾಡಿಸಿದರು.

ಸ್ವೀಕಾರ

ವಿಜಾಪೂರ ಜಿಲ್ಲಾ ಬಾಗೇವಾಡಿ ತಾಲೂಕು ಪೈಕಿ ನಿಡಗುಂದಿಗ್ರಾಮದ ರುದ್ರಸ್ವಾಮಿ ಮಠದಲ್ಲಿ ಕಾರ್ತಿಕೋತ್ಸವವೂ ಶ್ರೀಗಳವರ ಅನುಷ್ಠಾನ ಸಮಾಪ್ತಿಯ ಸಮಾರಂಭವೂ ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ರುದ್ರಸ್ವಾಮಿಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಹಿರೇಕೆರೂರಿನ ಮುಖ್ಯಸ್ಥರಾದ ಮಟ್ಟೆಪ್ಪ, ಶೆಟ್ರು ಇವರು ಶಿವಾಧೀನರಾದ ಸಮಯದಲ್ಲಿ ಇವರ ಧರ್ಮಪತ್ನಿ ನೀಲಮ್ಮನವರು ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಮ|| ಶಂಕರಪ್ಪ, ಕೊಟ್ರಪ್ಪ ಐರಾಣಿ, ಮುಪ್ಪಯ್ಯ, ಮುರಿಗಯ್ಯ ಹಿರೇಮಠ ದಲಾಲದುಕಾನ ರಾಣೇಬೆನ್ನೂರು ಇವರ ದ್ವಾರಾ ತಲ್ಪಿರುತ್ತವೆ.

ಇನವಟ್ಟಿ ಹೋಬಳಿ ಕೋಡಿಹಳ್ಳಿ ಪಟೇಲ ಮ|| ವೀರಪ್ಪಗೌಡರ ಮಗ ಪುಟ್ಟಪ್ಪಗೌಡರಿಗೆ ಜಡೇ ಹೋಬಳಿ ಕೋಡಿಕೊಪ್ಪದ ಗಿಂಡಿ ಪಟೇಲ ಮ|| ಶಿವಪ್ಪಗೌಡರ ಪುತ್ರಿ ಚಿ|| ಸೌ|| ರುದ್ರಮ್ಮಾಜಿಯನ್ನು ಕೊಟ್ಟು ನಡೆಯಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾ ಪೋಷಣಕ್ಕಾಗಿ ವರನಕಡೆಯಿಂದ 4 ರೂಪಾಯಿಗಳನ್ನೂ ವಧುವಿನಕಡೆಯಿಂದ 2 ರೂಪಾಯಿಗಳನ್ನೂ, ಜಡೇ ಹೋಬಳಿ ಆರೆತೆಲಗಟ್ಟಿ ಮ|| ಶಿವಪ್ಪಗೌಡರ ಮಗ ವೀರಬಸಪ್ಪಗೌಡರಿಗೆ ಕೋಡಿಕೊಪ್ಪದ ಗಿಂಡಿ ಪಟೇಲ ಮ|| ಹೊಳಿಯಪ್ಪಗೌಡರ ಪುತ್ರಿ ಚಿ|| ಸೌ|| ಗೌರಮ್ಮಾಜಿಯನ್ನು ಕೊಟ್ಟು ನಡೆಯಿಸಿದ ವಿವಾಹಮಹೋತ್ಸವದಲ್ಲಿ ವರನಕಡೆಯಿಂದ 2 ರೂಪಾಯಿಗಳನ್ನೂ ವಧುವಿನಕಡೆಯಿಂದ 2 ರೂಪಾಯಿಗಳನ್ನೂ ಜಡೆ ಹೋಬಳಿ ಬೀಗಲಿ ಮ|| ರಾ|| ಲಿಂಗಪ್ಪಗೌಡರ ಮಗ ರಾಮನಗೌಡರಿಗೆ ಹಾನಗಲ ತಾಲೂಕು ಕ್ಯಾಸನೂರು ಪೋಲೀಸ್ ಪಾಟೀಲ್ ರುದ್ರಪ್ಪಗೌಡರ ಪುತ್ರಿ ಚಿ|| ಸೌ|| ರುದ್ರಮ್ಮಾಜಿಯನ್ನು ಕೊಟ್ಟು ನಡೆಯಿಸಿದ ವಿವಾಹಮಹೋತ್ಸವದಲ್ಲಿ ವರನಕಡೆಯಿಂದ 2 ರೂಪಾಯಿಗಳನ್ನೂ ವಧುವಿನಕಡೆಯಿಂದ 1 ರೂಪಾಯಿಯನ್ನೂ ತೆಗೆಯಿಸಿ ಕಳುಹಿಸಿರುತ್ತಾರೆ. ಮೇಲ್ಕಂಡ 13 ರೂಪಾಯಿಗಳು ಕೋಡಿಕೊಪ್ಪದ ಗಿಂಡಿ ಪಟೇಲ್ ಮ|| ರಾ|| ಶಿವಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಸಂಸ್ಥಾನ ಸವಣೂರಿನಲ್ಲಿರುವ ಚರಂತಿಮಠದ ಚರಪಟ್ಟಾಧಿಕಾರ ಮಹೋತ್ಸವಕಾಲದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 5 ರೂಪಾಯಿಗಳು ಸದರಿ ಮಠದ ಶ್ರೀ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಉಜ್ಜಯಿನೀ ಗ್ರಾಮದ ಮ|| ರಾ|| ಗಡ್ಡೆ ಸಿದ್ಧಲಿಂಗಪ್ಪನವರಿಗೆ ಪುತ್ರೋತ್ಸವವಾದ ಸಂತೋಷಾರ್ಥವಾಗಿ ಲಿಂಗಧಾರಣ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿ ವೇ|| ಬಿ. ಯಂ ಗುರುಸಿದ್ಧಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಸಾಂಗಲಿ ಸಂಸ್ಥಾನದ ಶಿರಹಟ್ಟಿ ತಾಲೂಕ ಪೈಕಿ ಬ್ಯಾಲವಾಡಿಗಿ ಗ್ರಾಮದ ಮ|| ರಾ|| ಬಿ. ಎಸ್. ಅಂಗಡಿ, ವೈದ್ಯ ಹಿರೇಸರ್ತಿ ಇವರು "ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಾಸಾದಿಕ ಔಷಧಾಲಯ" ಎಂಬ ಹೆಸರಿನಿಂದ ಒಂದು ವೈದ್ಯಶಾಲೆಯನ್ನು ಸ್ಥಾಪಿಸಿದ ಜ್ಞಾಪಕಾರ್ಥವಾಗಿ ಪ್ರಭಾ ಪೋಷಣಕ್ಕಾಗಿ ಕಾಣಿಕಾರೂಪವಾಗಿ ತೆಗೆಯಿಸಿದ 2 ರೂಪಾಯಿಗಳು ಮ|| ಬಸವನಗೌಡ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಗದಗ ತಾಲೂಕು ಪೈಕಿ ಗುಮ್ಮಗೋಳದ ವಾಲ್ಮೀಕಜಾತಿಗೆ ಸೇರಿದ ಮ|| ರಾ|| ನಕ್ರಪ್ಪ ಹೊನ್ನೂರು ಇವರು ತಾವು ನಡೆಯಿಸಿದ ಮಾಹೇಶ್ವರಾರಾಧನೆಯ ಕಾಲಕ್ಕೆ ಗುರುಭಕ್ತಿಕೇಸರಿ ಮಮ್ಮಿಗಿ ಇವರ ಸದ್ಬೋಧೆಯ ಪ್ರಕಾರ ಪ್ರಭೆಗೆ ಕಾಣಿಕಾರೂಪವಾಗಿ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಸಾಂಗಲಿ ಸಂಸ್ಥಾನದ ಶಿರಹಟ್ಟಿ ತಾಲೂಕು ಪೈಕಿ ಮದರಹಳ್ಳಿಯಲ್ಲಿರುವ ಹಾಲುಮತದ ಗುರುಗಳಾದ ವೇ|| ಫಕೀರಯ್ಯ ಅಮೋಗಿ ಇವರು ಮಮ್ಮಿಗಿ ಪಾಟೀಲ ಮ|| ರಾ|| ವಿರೂಪಾಕ್ಷಗೌಡರ ಪ್ರೋತ್ಸಾಹದಿಂದ ತಮ್ಮ ಕುಲಾಚಾರದವರಿಂದ ಬಂದ ಅಪರಾಧ ಕಾಣಿಕೆಯ ಪೈಕಿ 3 ರೂಪಾಯಿಗಳನ್ನು ಪ್ರಭೆಗೆ ಕಾಣಿಕಾರೂಪವಾಗಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರುಗಳಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ. ಸಂ.——

ಶ್ರೀಗುರು ರೇವಣಾರಾಧ್ಯೋವಿಜಯತೆ.

ವೀರಶೈವಮಹಾಸಭೆ

ನೈಜಾಮ ಸ್ಟೇಟ್ ಮಸ್ಕಿಯ ವೀರಶೈವರ ಜಾಹೀರ ಸಭೆಯು ಇದೇ ತಾ|| 24 ರಲ್ಲಿ ಶ್ರೀಮಂತ ರಾಜಾ ಪರಮೇಶ್ವರರಾವ್ ಬಹದ್ದೂರ, ಸಂಸ್ಥಾನ ಮೆದಿಕಿನಾಳ ಇವರ ಅಧ್ಯಕ್ಷತೆಯ ಕೆಳಗೆ ಮಸ್ಕಿಯ ಖ್ಯಾತಸೆಟ್ಟಿ ವೀರಭದ್ರಪ್ಪನವರ ನಿಲಯದಲ್ಲಿ ನೆರೆದಿದ್ದು ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು.

ಈ ಡಿಸಂಬರ ತಿಂಗಳಲ್ಲಿ ಬೆಂಗಳೂರಲ್ಲಿ ನೆರೆಯುವ ಅಖಿಲಭಾರತ ವೀರಶೈವಮಹಾಸಭೆಗೆ ಮುಂಬಯಿಯ ಪ್ರಸಿದ್ಧ ವಕೀಲರೂ ಬೊಂಬಾಯಿ ನ್ಯಾಯವಿಧಾಯಕಸಭೆಯ ಉಪಾಧ್ಯಕ್ಷರೂ ಆದ ರಾವಬಹದ್ದೂರ ಎಸ್. ಟಿ. ಕಂಬಳಿ, ಬಿ.ಎ.,ಎಲ್‌ಎಲ್.ಬಿ.,ಯವರನ್ನು ಮಹಾಸಭಾಧ್ಯಕ್ಷರನ್ನಾಗಿ ಆರಿಸಿದುದಕ್ಕಾಗಿ ತುಂಬಾ ಸಂತೋಷಪಟ್ಟು ಸ್ವಾಗತಸಂಘದವರನ್ನು ನಾವು ಅಭಿನಂದಿಸುತ್ತೇವೆ.

ಮುಂದೆ ಕಂಡ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸತಕ್ಕವುಗಳನ್ನಾಗಿ ಇಡಬೇಕೆಂದು ಈ ಸಭೆಯು ಸೂಚಿಸುತ್ತದೆ—

1. ಗುರುವರ್ಗ ವಿರಕ್ತವರ್ಗದವರಿಗೆ ನಡೆದಿರುವ ಅಂತಃಕಲಹವನ್ನು ಶಾಸ್ತ್ರಾರ್ಥವಾಗಿ ನಿರ್ಧರಿಸಿ ಶಾಂತಗೊಳಿಸುವದು ಮಹಾಸಭೆಯವರಿಗೆ ಮುಖ್ಯ ಕೆಲಸವಾಗಿದೆ. ಇಲ್ಲವಾದರೆ ಸಮಾಜದಲ್ಲಿ ಗೊಂದಲವೆದ್ದು ಸಮಾಜಸುಧಾರಣೆಯ ಕಾರ್ಯಗಳಿಗೆಲ್ಲ ಪ್ರತಿಬಂಧಕವಾಗುವದು.

2. ದೊಡ್ಡ ದೊಡ್ಡ ಕ್ಷೇತ್ರಸ್ಥಾನ ಶಿವಾಲಯಗಳಲ್ಲಿ ವೀರಶೈವರ ಪ್ರವೇಶಕ್ಕೆ ನಿರ್ಬಂಧಪಡಿಸುವ ಅಲಿಂಗಿಬ್ರಾಹ್ಮಣರು ತಾವು ಸ್ವದೇಶ ಭಕ್ತರು, ಸ್ವದೇಶ ಹಿತಚಿಂತನವನ್ನು ಬಯಸುವವರೆಂದು ಹೇಳಿ ರಾಷ್ಟ್ರೀಯಮಹಾಸಭೆಯಲ್ಲಿ ಸಮಾವೇಶರಾಗಿದ್ದು ರಾಷ್ಟ್ರೀಯ ಬಂಧುಗಳನ್ನೇ ದೂಷಿಸುತ್ತಿರುವರು. ಇವರ ವಿಷಯವಾಗಿ ಮಹಾಸಭೆಯವತಿಯಿಂದ ಕಾಂಗ್ರೆಸ್ ಮಹಾಸಭೆಗೆ ಸೂಚಿಸುವದು.

3. ಆಯಾ ಇಲಾಖೆಯ (ಮೈಸೂರು, ನಿಜಾಮ, ಬೊಂಬಾಯಿ, ಮದ್ರಾಸು) ಪ್ರಾಂತಗಳಲ್ಲಿ ಫಂಡನ್ನು ಕೂಡಿಸಿ ಅಲ್ಲಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ ಆ ಸಂಸ್ಥೆಯ ವತಿಯಿಂದ ಪ್ರತಿಯೊಂದು ಪ್ರಾಂತಗಳಲ್ಲಿ ಸಂಸ್ಕೃತ ಇಂಗ್ಲೀಷು ಪಾಠಶಾಲೆಗಳನ್ನು ಸ್ಥಾಪಿಸುವದು. ಮತ್ತು ಮಹಾಸಭೆಯಲ್ಲಿ ಪಾಸಾದ ವಿಷಯಗಳನ್ನು ಅಮಲಿನಲ್ಲಿ ತರುವದಕ್ಕಾಗಿ ಬೋಧಕರನ್ನು ಆಯಾ ಸಂಸ್ಥೆಯ ವತಿಯಿಂದಲೆ ಆಯಾ ಪ್ರಾಂತಕ್ಕೆ ನೇಮಿಸುವದು.
   2. ಈ ಶಾಖಾಸಂಸ್ಥೆಯ ಪಾಠಶಾಲೆಗಳು ಆಯಾ ಇಲಾಖೆಯ ಸಂಸ್ಕೃತ ಕಾಲೇಜಿಗೆ ಒಳಪಟ್ಟವುಗಳಾಗಿರಬೇಕು.
   3. ಇವುಗಳ ವ್ಯವಸ್ಥೆಯನ್ನು ಗುರುವಿರಕ್ತರ ಕಡೆಗೆ ಒಪ್ಪಿಸುವದು.
   4. ಆಯಾ ಪ್ರಾಂತದ ಹಣವನ್ನು ಆ ಪ್ರಾಂತಗಳಲ್ಲಿಯೇ ವಿನಿಯೋಗಿಸುವದು.
   5. ಆಯಾ ಇಲಾಖೆಯ ಸಂಸ್ಕೃತಕಾಲೇಜುಗಳ ಕೆಳಗೆ ಏರ್ಪಟ್ಟಿರುವ ಶಾಖಾ ಸಂಸ್ಥೆಗಳ ಪಾಠಶಾಲೆಗಳ ವಾರ್ಷಿಕ ರಿಪೋರ್ಟುಗಳನ್ನು ಪ್ರತಿವರ್ಷ ನಡೆಯುವ ಮಹಾಸಭೆಯಲ್ಲಿ ಹಾಜರಮಾಡಲ್ಪಡಬೇಕು. ಅವುಗಳ ಸುಧಾರಣೆಯ [illegible] ಮಹಾಸಭೆಯವರು ಮಾಡುವದು.

4. ವೀರಶೈವ ಧರ್ಮಗ್ರಂಥಗಳ ಭಾಂಡಾಗಾರವನ್ನು ಸ್ಥಾಪಿಸುವದು. ತನ್ಮೂಲಕ ವೀರಶೈವ ಧರ್ಮಪ್ರಸಾರಮಾಡುವದು.

5. ವೀರಶೈವರ ಒಳಪಂಗಡಗಳ ಏಕೀಕರಣ.

6. ಕನ್ಯಾಶುಲ್ಕ ನಿಷೇಧ.

7. ಪ್ರಾಣಿಹಿಂಸೆಯ (ಮುಖ್ಯವಾಗಿ ಗೋವಧೆಯ) ನಿಷೇಧ.

8. ಮೈಸೂರು ಸಂಸ್ಕೃತಕಾಲೇಜಿನಲ್ಲಿ ವೀರಶೈವರ ಪ್ರವೇಶ ವಿಷಯಕ್ಕಾಗಿ ಮಹಾರಾಜರನ್ನು ಪ್ರಾರ್ಥಿಸಿಕೊಳ್ಳುವದು.

9. ಇದರಲ್ಲಿ ಮುಖ್ಯವಾಗಿ ಮೇಲೆ ಬರೆದ ನಾಲ್ಕು ಕಲಂಗಳ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸಿ ಪಾಸುಮಾಡಿ ತೀವ್ರ ಅಮಲಿನಲ್ಲಿ ತರುವದು ಅತ್ಯವಶ್ಯಕವಿರುವದು.

10. ಗೋಸಂರಕ್ಷಣೆ ಮಾಡುವದು. ತನ್ಮೂಲಕ ಪಾವನಗೋಮಯದಿಂದ ಪಂಚ ವಿಭೂತಿಗಳನ್ನು ತಯಾರಿಸುವದು. ಪಂಚಸೂತ್ರ ಲಿಂಗಗಳನ್ನು ತಯಾರಿಸುವ ಕಾರಖಾನೆಯನ್ನೇರ್ಪಡಿಸುವದು.

ಸೂಚನೆ ತಂದವರು.—ಗುರುಶಾಂತಾರ್ಯ ಹಿರೇಮಠ ನೀರಲಕೆರಿ ಮಸ್ಕಿ.

ಅನುಮೋದಕರು.—ಸಿದ್ದರಾಮಪ್ಪಾ ಖ್ಯಾತಸೆಟ್ಟಿ, ಬಸಪ್ಪಾ ಮಿಟ್ಟೀಮನಿ, ರಾಚಪ್ಪಾ ಗಿರ್ನಿ, ವಿರೂಪಾಕ್ಷಪ್ಪಾ ಮಾಲೀಗಿ, ಕಂಥೆಪ್ಪಾ ಬಂಗಾರಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪಂಚಾಚಾರ್ಯಪ್ರಭೆಗೆ ಸಹಸ್ರ ಜಯಜಯಕಾರ

ಪ್ರಭೆಯೇ, ನಿನ್ನ ಜಗನ್ಮೋಹನ ಪ್ರಭಾವದಿಂದ ಜಗತ್ತು ಬೆಳಗುವದು. ಜಗತ್ತಿಗೆ ಪ್ರಕಾಶವು ತೋರಿತು. ಗುರುವಂಶಸಂಜಾತರಾದ ವೀರಶೈವ [illegible] ವೃದ್ಧರೂ ತಮ್ಮ ತಮ್ಮ ಕಾರ್ಯಗಳನ್ನು ಮರೆ ಮರೆತ್ತರಾದರು. ಮತ್ತೆ ನೋಡಿದತ್ತ ನಿನ್ನ ಬೆಳಕು ಬೀರಿತು! ಇದೀಗ ಸುಪ್ರಭಾತವು!! ಕರುಣಾಕರ ದೇವಿ, ನಿನ್ನ ಪ್ರಕಾಶದ ಮುಂದೆ ಇತರ ಪ್ರಕಾಶಗಳು ಮಿಂಚಿನ ಹುಳುಗಳಿಗೆ ಸಮಾನಗಳು. ಇಂಥ ಮಹಾಪ್ರಕಾಶಕ್ಕೆ ಮತ್ಸರಿಗಳೂ ಪಾಷಂಡಿಗಳೂ ಆದ ಗೂಬೆಗಳು ಕಣ್ಣು ಮುಚ್ಚಿಕೊಂಡರೆ ನಿನಗೆ ಬಂದ ಕುಂದೇನು! ನೀನು ಉಪಾಸಕರಿಗೆ ಚಿಂತಿಸಿದ್ದನ್ನು ಕೊಡುವ ಚಿಂತಾಮಣಿಯಂತೆ ಇರುವಿ. ಅನಾದಿಸಂಸಿದ್ಧವಾದ [illegible] ಭಕ್ತಿಭರದಿಂದ ನಿನ್ನನ್ನು ಬಾಳಿಸುವೆಂದು [illegible]. ಇದಾದರೂ ತಪ್ಪಲ್ಲ. ಶಿವಾಗಮಬೋಧಕಗಳಿಗೆ ಮಾರ್ಗವಾದ ನಿಯಮಗಳನ್ನು ಕಲ್ಪಿಸುವರು. ಉಪಾಸಕರ ಭಾವನೆಯೇ ನಿನ್ನ ಲೀಲೆಯಾಗಿದೆ. ಸತ್ಯವಾಗಿ ನೀನು ಸರ್ವೋಚ್ಚಪ್ರಕಾಶಮೂರ್ತಿಯು. ಜಗದಾದಿಯಲ್ಲಿಯೇ ನಿನ್ನ ಪವಿತ್ರಜನ್ಮವಾಗಿದೆ. ಜಗದಾಚಾರ್ಯರ ಕಾಲದಿಂದ ನಿನ್ನ ಕಾಲವಾದ್ದರಿಂದ ನೀನು ಅತಿವೃದ್ಧೆಯೇ ಸರಿ. ಆದರೂ [illegible] ಅತಿಬಾಲ್ಯಾವಸ್ಥೆಯಲ್ಲಿ ಜಗತ್ತಿಗೆ ನೀನು ಸದ್ಯಃ ಪ್ರಸನ್ನಳಾಗಿ ಬಾಲಿಕೆಯಂತೆ ತೋರಿದರೂ ನಿನ್ನ ವಚನಗಳು ಮಾತ್ರ ವೇದಾಗಮೋಪನಿಷತ್ತತ್ತ್ವಪ್ರತಿಪಾದಕಗಳಾದ್ದರಿಂದ ಅತ್ಯಂತ ವೃದ್ಧಗಳೇ ಆಗಿರುತ್ತವೆ. ವಿಚಾರಮಾಡಲು ವ್ಯವಹಾರದಲ್ಲಿ ವೃದ್ಧರಿಗೆ ವೃದ್ಧವಚನಗಳೂ ಬಾಲಕರಿಗೆ ಬಾಲವಚನಗಳೂ ಇರುವದು ಸರ್ವರ ಅನುಭವಕ್ಕೆ ಬಂದದ್ದೇ ಇದೆ. ನಿನ್ನ ಸ್ಥಿತಿಯು ಮಾತ್ರ ಹಾಗಿಲ್ಲ. ವಯಸ್ಸಿನ ಚಿಕ್ಕವಳೆಂದು ಕಾಣಬಂದರೂ ವೇದಾಗಮೋಪನಿಷದ್ವಚನಗಳಿಂದ ಹಳೆಯ ಮಾತುಗಳನ್ನೇ ಬಹು ಸರಸವಾಗಿ ಆಡಿ ಅನೇಕ ಹಿಮಾಚಲದವರೆಗಿರುವ ಸದಸದ್ವಿಚಾರಶೀಲರಾದ ಸನ್ಯಾಸಿಮುನಿಗಳಿಗೂ ಆನಂದವನ್ನುಂಟುಮಾಡುತ್ತಿರುವ ಸೃಷ್ಟಿಯೊಳಗೆ ನಿನ್ನ ಚಿತ್ರವಿಚಿತ್ರ ಲೀಲಾವಿಹಾರವು ಗುರೂಪಾಸಕರಲ್ಲದವರಿಗೆ ಹೇಗೆ ತಿಳಿಯಬರುವದು ? ಮಹಾದೇವಿ, ಈಗ ಪರಿಪೂರ್ಣವಾಗಿ ಜಗತ್ತು ಬೆಳಗಿತು. ಶ್ರೀ ಜಗದ್ಗುರು ಪಂಚಾಚಾರ್ಯ ಭಕ್ತರೆಂಬ ಪಕ್ಷಿಗಳು ಕಲಕಲ ಧ್ವನಿಯನ್ನು ಮಾಡುತ್ತಿರುವವು. ಗುರುಪುತ್ರರ ಹೃದಯಗಳೆಂಬ ಕುಸುಮಗಳು ಅರಳಿದವು. ಗೋತ್ರಸೂತ್ರಾದಿ ವಿಚಾರಪೂರ್ವಕ ಸದ್ಗುರೂಪಾಸನಾತ್ಮಕ ಮಂದಮಾರುತವು ಬೀಸುತ್ತಿತ್ತು. ಎಲ್ಲಿ ನೋಡಿದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷಪೂರ್ವಕ ಜಯಶಂಖಕಹಳಾವಾದ್ಯಗಳು ಘೋರ್ಗರೆಯುತ್ತಿರುವವು. ಸತ್ ಗುರುಸ್ವಾಮಿಯೆಂಬ ಮೂಡಲಕೆಂಪು ಒಡೆಯಿತು. ಇದೇ ಲಿಂಗಪೂಜಾಧ್ಯಾನಾನುಷ್ಠಾನಯೋಗ್ಯಕಾಲವಾದ ಸತ್ಯಸುಪ್ರಭಾತವು! ಪ್ರಭಾದೇವಿ, ಆನಂದ! ಆನಂದ! ಸದಾನಂದ!! ಧರ್ಮಜಾಗರವನ್ನು ಪಸರಿಸುವವರೆಂಬ ಬಾಲಕರು ಎಚ್ಚತ್ತು ನಿನ್ನ ಸದ್ಬೋಧಾಮೃತಪಾನವನ್ನು ಮಾಡಲು ಕೈಕಾಲುಗಳನ್ನಾಡಿಸುತ್ತ ನಿನ್ನನ್ನೇ ಹುಡುಕುತ್ತಿದರು. ದೇವಿ, ಮೂವತ್ತೈದು ಲಕ್ಷ ವೀರಶೈವರೆಂಬ ಬಾಲಕರನ್ನು ಮೈಗೆ ಎತ್ತಿ ಸದ್ಬೋಧಾಮೃತಪಾನವನ್ನು ಮಾಡಿಸುವಿಯಲ್ಲ! ಈ ನಿನ್ನ ಪ್ರಭಾವವು ಜಗತ್ತಿಗೆ ಮಹಾ ಸಂತೋಷಕರವಿರುವದು. ಶಿಷ್ಟದುಷ್ಟರಲ್ಲಿ ಸಮನಾಗಿ ಕರುಣಾಮೃತರಸವರ್ಷಿಣಿಯಾದ ನಿನ್ನನ್ನು ಕಂಡ ನಾವೇ ಧನ್ಯರು! ಧನ್ಯರು! ಜನನಮರಣವನ್ನು ಜಯಿಸಿದ ದಿಗ್ವ್ಯಾಪನಶೀಲಳಾದ ನಿನ್ನನ್ನು ಚಿರಕಾಲ ಬಾಳೆಂದು ಹರಸುವದು ಉಪಚಾರಿಕವೇ ಸರಿ. ಆದರೆ ಮಾತೃವಿಯೋಗದಿಂದ ಚಿರಕಾಲ ದುಃಖಾಂಬುಧಿಯಲ್ಲಿ ಮುಳುಗಿ [illegible] ತನ ಬೃಹದ್ರೋದನವನ್ನು ಮಾಡುತ್ತಿದ್ದ ಅನೇಕ ಹಿಮಾಚಲದವರೆಗಿರುವ ವೀರಶೈವ ಬಾಲಕರಿಗೆಲ್ಲ ಕಳಕಳಿಯಿಂದ ಮಾತೆಯನ್ನು ಹುಡುಕಿ ತಂದು ತೋರಿಸಿ ಸದ್ಬೋಧಾಮೃತವನ್ನು ಪಾನಮಾಡಿಸಿ ಶಾಂತತೆಯಿಂದ ಬಾಳುವಂತೆ ವ್ಯವಸ್ಥೆಗೈದ ಮಹೋಪಕಾರಿಗಳಾದ ವೇ|| ಸಂ| ಶಾಸ್ತ್ರತೀರ್ಥ ನಾಗನೂರು ಬೃಹನ್ಮಠಾಧ್ಯಕ್ಷ ಕಾಶೀನಾಥಶಾಸ್ತ್ರಿಗಳು ಚಿರಕಾಲ ಬಾಳಲೆಂದು ಹರಸುತ್ತೇನೆ. ಇಂಥ ಮಾತೆಯನ್ನು ದೇಶದೇಶಗಳಿಂದ ಅನೇಕ ವಿಷಯಂಗಳೆಂಬ ಆಭರಣಂಗಳಿಂ ಸಂಗ್ರಹಿಸಿ ಕಾಲಕಾಲಕ್ಕೆ ಸಿಂಗರಿಸುತ್ತ ಬಾಲಕರ ಪ್ರತಿ ಕೋಣೆಗಳಿಗೂ ಮಹಾತ್ಮೆಯಿಂದ ಕಳುಹಿಸಿ ಜನರಿಗೆ ಸದ್ಬೋಧಸ್ತನ್ಯವನ್ನುಣಿಸುವ ಮಹೋಪಕಾರಿಗಳಾದ ವೇ|| ಸಂ|| ಆಸ್ಥಾನವಿದ್ವಾನ್ ಶ್ರೀ ಗುರುಶಾಂತಶಾಸ್ತ್ರಿಗಳು ಚಿರಕಾಲ ಬಾಳಲೆಂದು ಹರಸುತ್ತೇನೆ. ಈ ಮಾತೆಯ ಸುಸ್ವಾದುಸದ್ಬೋಧಸ್ತನ್ಯಪಾನದಿಂದ ಕುಟಿಲರ ಮೋಸವೆಂಬ ಬಾಲಗ್ರಹರೋಗಕ್ಕೆ ತುತ್ತಾಗದೆ ವೀರಶೈವ ಬಾಲಕರು ಬೇಗನೆ ಬೆಳೆದು ಬುದ್ಧಿವಂತರಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ಭಕ್ತರೆನಿಸಿಕೊಂಡು ಚಿರಕಾಲ ಬಾಳಲೆಂದು ಹರಸುತ್ತೇನೆ. ಕಿಂಚಿನ್ಮಾತ್ರವಾಗಿ ಅನ್ನವನ್ನು ಮುಟ್ಟಿ ಲೇಪಿಸಿದ ಮಾತ್ರಕ್ಕೆ ಮೃದಂಗವು ಕಿವಿಗಿಂಪಾಗುವಂತೆ ಮಧುರಧ್ವನಿಯನ್ನು ಮಾಡುತ್ತದೆಂದಮೇಲೆ ಪೂರ್ಣವಾಗಿ ಅನ್ನವನ್ನು ತಿಂದವರಲ್ಲಿ ಮಧುರಧ್ವನಿಯು ಹುಟ್ಟಲಾರದೆ? ದೇವಿ, ನಿನ್ನ ಸದ್ಬೋಧಸ್ತನ್ಯವನ್ನು ಪಾನಮಾಡಿದವರು ಎಂಥ ದುಷ್ಟರಾದರೂ ಸನ್ಮಾರ್ಗದಲ್ಲಿ ಮಧುರಧ್ವನಿಗೈಯುತ್ತ ಶ್ರೀಜಗದ್ಗುರು ಪಂಚಾಚಾರ್ಯರ ಅಧೀನರಾಗಿ ಸಂಚರಿಸದೆ ಇರಲಾರರು. ಆದ್ದರಿಂದ ಉಪಾಸಕಬಾಲಕರ ಮೇಲೆಯೂ ಶಾಂತದೃಷ್ಟಿಯು ಹೆಚ್ಚಾಗಿರಲೆಂದೂ, ಬೇಸರಗೊಳ್ಳದೆ ವೀರಶೈವ ಸತ್ಯ ಧರ್ಮ ಬೋಧಕಳಾದ ನಿನ್ನ ಕೀರ್ತಿಯು ಜಗತ್ತಿನಲ್ಲಿ ಸರ್ವತ್ರ ಜಯವನ್ನು ಪಡೆದು ಪ್ರಕಾಶಿಸಲೆಂದೂ ಪ್ರಾರ್ಥಿಸಿ ತ್ರಿಕಾಲ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡಿ ಈ ಲೇಖನವನ್ನು ಸಮಾಪ್ತಿಗೊಳಿಸುತ್ತೇನೆ.

ವಿರೂಪಾಕ್ಷಶರ್ಮಾ, ಆರಾಧ್ಯಮಠ
ಗುಡ್ಡದ ಬೇವಿನಹಳ್ಳಿ

ಶ್ರೀಪುಷ್ಪತುರಾರಾಧ್ಯಾಯ ನಮಃ

ಆರಾಧ್ಯಬ್ರಾಹ್ಮಣರ ಪ್ರಾಂತಿಕಸಭೆ ಶ್ರೀ ಕೆಂಡಗಣ್ಣಸ್ವಾಮಿಗಳವರ ಗದ್ದುಗೆ

ಹುಣಸೂರು ತಾಲೂಕಿಗೆ ಸೇರಿದ ಶ್ರೀ ಕೆಂಡಗಣ್ಣಸ್ವಾಮಿಗಳವರ ಗದ್ದುಗೆಯಲ್ಲಿ ಇದೇ ಮಾಹೆ 2 ನೇ ತಾರೀಖಿನಲ್ಲಿ ಈ ಮೊದಲೇ ನಿರ್ಧರಿಸಿರುವಂತೆ ಆರಾಧ್ಯಬ್ರಾಹ್ಮಣರ ಪ್ರಾಂತಿಕಸಭೆಯು ನಂಜನಗೂಡಿನ ಲಾಯರ್ ವೇ|| ಬಿ. ನಂಜುಂಡಾರಾಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿಸಲ್ಪಟ್ಟಿತು. ಆರಾಧ್ಯರಲ್ಲಿ ಪ್ರಧಾನರಾದ [illegible] ವೇ|| ಜೆ. ಮಲ್ಲಾರಾಧ್ಯರು, ರಾಮಸ್ವಾಮಿಯವರು, ಚಿಕ್ಕಹಳ್ಳಿ ಆರ್. ಕುಮಾರಾರಾಧ್ಯರು, ಕನ್ನಹಳ್ಳಿ ಕೆ. ಸಿ. ರೇವಣ್ಣಾರಾಧ್ಯರು, ಬಿಳ್ಳಾಪುರದ ನಂಜುಂಡಾರಾಧ್ಯರು, ಹೊಂಡ್ರಬಾಳು ರುದ್ರಾರಾಧ್ಯರು, ವಡ್ಡರಗುಡಿ ಎ. ಬಸವಾರಾಧ್ಯರು, ದಳ್ಳಾಳು ಮೂ. ಮಲ್ಲಾರಾಧ್ಯರು, ಸೇರಳೆ ಮಠದ ಶಿವಲಿಂಗಾರಾಧ್ಯರು ಮತ್ತು ಬೇಚನಹಳ್ಳಿ ರೇವಣಾರಾಧ್ಯರು ಮೊದಲಾಗಿ 150 ರ ವರೆಗೆ ಪ್ರತಿನಿಧಿಗಳು ನೆರೆದಿದ್ದರು.

...ಹ್ನಾಹ್ನ್ಯಾತ್ಪರ 3 ಘಂಟೆಗೆ ಸಭೆಯು ಪ್ರಾರಂಭವಾ...ತು. ಪಂಡಿತ ಕೆ. ಸಿ. ನಂಜುಂಡಾರಾಧ್ಯರಿಂದ ...ಂಗಳಶ್ಲೋಕವು ಹೇಳಲ್ಪಟ್ಟಿತು. ಸ್ವಾಗತಮಂಡ...ಯ ಅಧ್ಯಕ್ಷರಾದ ಮ್ಯಾಟಿಕ್ ಸೊಸೈಟಿಯ ಚೀಫ್ ...ಂಟರಾದ ಬಿ. ಯಸ್. ಆರಾಧ್ಯರ ಭಾಷಣವು ಶ್ಲಾ...ಘನೀಯವಾದ ವಿಷಯಗಳಿಂದ ತುಂಬಿದ್ದಿತು. ಪ್ರತಿನಿ... ದೂರಸ್ಥಳಗಳಿಂದ ಮಾರ್ಗಾಯಾಸವನ್ನು ಲೆಕ್ಕಿ... ...ಪ್ರತಾಭಿಮಾನದ ಕಡೆ ಲಕ್ಷ್ಯವನ್ನಿಟ್ಟು ಮಯ...ಸಿದ್ದುದಕ್ಕಾಗಿ ವಂದಿಸಲ್ಪಟ್ಟಿತು.

ಈ ಸ್ಥಳವು ಪೂರ್ವದಲ್ಲಿ ನಿಬಿಡವಾದ ಅರಣ್ಯವಾ...ು. ಅಲ್ಲಿಗೆ ಕೂಷ್ಮಾಂಡ ಪಂಡಿತಾರಾಧ್ಯರ ವಂಶ...ಪ್ರಸಿದ್ಧರಾದ ವಡ್ಡಗುಡಿ ಗುರುಲಿಂಗಾರಾಧ್ಯರ ...ಧರ್ಮಪತ್ನಿ ಪಾರ್ವತಾಂಬೆಯವರ ಗರ್ಭಾಂಬುಧಿ...ಲ್ಲಿ ಜನಿಸಿ ಅಂಡೂಗೆರೆ ವಿಶ್ವಾರಾಧ್ಯರಲ್ಲಿ ವಿದ್ಯಾ...ಸಮಾಡಿ ಕೇವಲ ಬಾಲ್ಯದಲ್ಲಿಯೇ ವಿರಕ್ತಿಭಾವವ... ಹೊಂದಿ, ಕಪಿಲಾನದೀ ತೀರದಲ್ಲಿ ಸರ್ಪಭೂಷ...ರಾಧ್ಯರು 'ಯಾ, ಕೆಂಡಗಣ್ಣಸ್ವಾಮಿಗಳವರು ತಪ...ಶ್ಚರಿಸುತ್ತಿದ್ದರು. ಆಗ ಇವರಲ್ಲಿ ಮಹತ್ವ... ಬಹುಜನರು ಇವರ ದರ್ಶನಕ್ಕೆ ಬರಲಾರಂಭಿಸಿ...ರು. ಈ ಸ್ವಾಮಿಗಳವರು ಹುಲಿಯ ಮೇಲೆ ಕುಳಿತು ...ಚರಿಸುತ್ತಿದ್ದರೆಂತಲೂ ಮತ್ತು ಒಂದು ದಿವಸ ...ಕ್ಕಾಗಿ ಕೆಲವು ಜನರು ಒಬ್ಬ ಮನುಷ್ಯನನ್ನು ...ಸಿ ಆತನ ಮೇಲೆ ವಸ್ತ್ರವನ್ನು ಮುಚ್ಚಿ ಸ್ವಾಮಿ ...ನು ಸತ್ತುಹೋಗಿದ್ದಾನೆ ಬದುಕಿಸಿ" ಎಂದು ... ಸ್ವಾಮಿಗಳವರು "ಅಪ್ಪಾ ಸತ್ತುಹೋಗಿ...ಮುಂದಣ ಕೆಲಸ ಮಾಡಿ" ಎಂದು ಹೇಳಿದರಂ... ಆತನು ನಿಜವಾಗಿಯೂ ಸತ್ತುಹೋಗಿದ್ದನೆಂ... ಆಗ ಜನರೆಲ್ಲಾ ಹೆದರಿ ಮಹಾಭಕ್ತಿಯುಳ್ಳವ...ದಂತಲೂ ವದಂತಿಯಿದೆ. ಇವರು ಲೀಲೆಯಿಂದ ... ವಸಪಾಟಿಗಳಾದ ಅಂಡೂಗೆರೆ ಸಕಲೇಶ್ವರ ...ಗಳ ಮೂಲಕ ಸಮಾಧಿಯನ್ನು ಮಾಡಿಸಿ ಅದ...ಲ್ಲಿ ಬಿಲ್ವಪತ್ರೆ ವಿಭೂತಿಗಳನ್ನು ತುಂಬಿಸಿ ಹನ್ನೆರಡು ...ಗಳ ವರೆಗೆ ನಿಜಸಮಾಧಿಯಲ್ಲಿದ್ದು ಬೈಲಾಗುವ...ದು ಹೇಳಿ ಸಮಾಧಿಯನ್ನು ಪ್ರವೇಶಿಸಿದರು. ಅದರ... ಜನರು ಅವಿಜ್ಞತೆಯಿಂದ ಪರೀಕ್ಷೆಮಾಡಲು ...ರವಾಸು ಪ್ರಮಾಣದವರೆಗೂ ಅಗೆದು ನೋಡು... ವಿಭೂತಿ ರುದ್ರಾಕ್ಷಿಗಳೇ ಕಂಡುಬಂದವು. ಹಾ... ಗದ್ದುಗೆಯ ಮೇಲ್ಗಡೆ ಲಿಂಗೋದ್ಭವವಾಗಿ ಅಲ್ಲಿ ...ದ್ಭುತವಾ ಬಳಲಿನಂತೆ ಬೇರುಬಿಟ್ಟಿದ್ದಿತು. ಇದ...ನ್ನು ನೋಡಿ ಆ ಪಾತಕಿಗಳು ಹೆದರಿ ರಕ್ಷಣೆಯನ್ನು ಕಾರಿ...ಬಿಟ್ಟರು. ಇದನ್ನು ಆ ಪ್ರಾಂತದ ಜನರು ನೋಡಿ ... ರಾತ್ರಿಕಾಲದಲ್ಲಿ ಯಾರೂ ಆ ಸ್ಥಳದಲ್ಲಿ ನಿಲ್ಲು...ದಿಲ್ಲ. ಇವರ ಮಹತ್ವ ದಿಗಂತ ವಿಶ್ರಾಂತವನ್ನು ...ದಿತು.

ನಮ್ಮ ಮಹಾಪ್ರಭುಗಳವರು ಇವರ ಮಹತ್ವವನ್ನು ...ಮೋ ಏನೋ ಪ್ರತ್ಯಕ್ಷವಾಗಿ ಪರಾಂಬರಿಸಿ ಆ...ಯಲ್ಲಿ ಭಕ್ತಿಯುಳ್ಳವರಾಗಿ ಅಲ್ಲಿ ಆಶ್ರಮವನ್ನು ...ಟಿಸಿರುವರು. ಪ್ರಭುಗಳವರ ಸವಾರಿಯು ವರ್ಷ...ವೆ ಚಿತ್ತೈಸೋಣದರಿಂದ ಅಲ್ಲಿಯ ಮಹತ್ವ ಅಧಿಕ...ಗುತ್ತಾ ಬರುತ್ತಿದೆ. ಇದನ್ನು ಪ್ರಭುಗಳವರು ಮು... ಸ್ರಮವನ್ನಾಗಿ (ಕ್ಯಾಂಪ್) ಮಾಡಿಕೊಂಡಿರುವ... ಲ್ಲಿರುವ ಬಂಗಲೆಗಳೂ ಮನೋಹರವಾದ ವರ್ಣ...ನಗಳೂ, ಉದ್ಯಾನವನಗಳೂ, ಗಂಗಾಭವಾನಿಯೆಂಬ ...ಕಟ್ಟಿರುವ ಸೇತುವೆಯೂ, ನದಿಯಿಂದ ನಲ್ಲಿಗಳ... ನೀರನ್ನೊದಗಿಸುವ ಯಂತ್ರವನ್ನಿಡಿಸಿರುವ ...ವೇ ಮೊದಲಾದುವುಗಳು ನೋಟಕರ ಮನಸ್ಸ...ಕರ್ಷಿಸುವವು. ಇಂಥಾ ಪ್ರಖ್ಯಾತವಾದ ಈ ಆಶ್ರ...ಲ್ಲಿ ನಡೆಯುವ ಈ ಸಭೆಯು ಅತ್ಯಂತ ಪ್ರಾಶಸ್ತ್ಯ... ಹೊಂದಿರುವದು. ಇಲ್ಲಿ ಪ್ರಸಿದ್ಧವಾದ ರತ್ನ...ಜೋಡಿಸಿರುವುದು. ...ಜವೇ ಮೊದಲಾದ ವಿಷ... ಯಗಳಿಂದ ಸ್ವಾಗತಮಂಡಲಿಯ ಅಧ್ಯಕ್ಷರ ...ಣವು ಮನೋಹರವಾಗಿದ್ದಿತು. ಅನಂತರ ಕನ್ನಡ... ರೇವಣಾರಾಧ್ಯರು ವಿದ್ಯಾರ್ಥಿ ನಿಲಯಕ್ಕೋಸ್ಕ...ದ್ರವ್ಯವನ್ನು ಶೇಖರಿಸಲು ಪರಸ್ಥಳಕ್ಕೆ ಪಂಚಾಚಾ...ಹೋಗಿದ್ದಾಗ ತಮಗೆ ಆದ ತೊಂದರೆಯನ್ನು ...ಕೂ ಅನುಭವಪೂರ್ವಕವಾದ ವಿಷಯಗಳಿಂದ ಕೂಡಿ ...ಣವನ್ನು ಮಾಡಿದರು. ಚಿನ್ನಹಳ್ಳಿ ಆರ್. ಕುಮಾರಾರಾಧ್ಯರು ಅದೇ ವಿವಾದವನ್ನು ಪುಷ್ಟೀಕರಿಸಿ ಮಾತನಾಡಿದ್ದಲ್ಲದೆ, ಈ ಗದ್ದುಗೆಗಾಗಿ ಅವರು ಬಹು ದಿವಸಗಳಿಂದಲೂ ಗಂಗಾಭವಾನಿಗೆ ಸೇತುವೆಯನ್ನು ಕಟ್ಟಿಸಲೂ ಇನ್ನೊಂದು ಧರ್ಮಶಾಲೆಯನ್ನು ಕಟ್ಟಿಸಲೂ ಶ್ರೀ ಮಹಾಪ್ರಭುಗಳವರಿಗೂ, ಗೌರ್ನಮೆಂಟಿಗೂ ಅರಿಕೆಮಾಡಿಕೊಂಡು ಅದಕ್ಕಾಗಿ ಕೊಟ್ಟಿರುವ ಹುಕುಂಗಳನ್ನೂ ಈ ಸ್ಥಳವಿದ್ಯಮಾನಗಳನ್ನೂ ಸಹ ವಿವರಿಸಿ ಭಾಷಣ ಮಾಡಿದರು. ಬ್ರ|| ಶ್ರೀ|| ಪಂಡಿತ ಕೆ. ಸಿ. ನಂಜುಂಡಾರಾಧ್ಯರು ಅಷ್ಟಾವರಣ ಪಂಚಾಚಾರ ಷಟ್ಸ್ಥಲ ಲಿಂಗಾಂಗಸಾಮರಸ್ಯದ ವಿಚಾರವನ್ನು ಕುರಿತು ಮಹತ್ತರವಾದ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವು ತತ್ಕಾಲೋಚಿತವಾಗಿದ್ದಿತ್ತು. ನಮ್ಮ ಮಹಾಪ್ರಭುಗಳಾದ ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ಈ ಪುಣ್ಯಸ್ಥಳದಲ್ಲಿ ಇಷ್ಟು ಅನುಕೂಲವನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ, ಈ ಸಂಘದ ಪಕ್ಷವಾಗಿಯೂ ಸ್ವಂತಪಕ್ಷವಾಗಿಯೂ ವಂದನೆಯನ್ನು ಸಮರ್ಪಿಸುವುದಲ್ಲದೆ ಮಹಾಪ್ರಭುಗಳವರಿಗೆ ಚಿರಋಣಿಗಳಾಗಿದ್ದೇವೆ.

ನಮ್ಮ ಮತದಲ್ಲಿ ಪೂರ್ವದಿಂದಲೂ ಮಹಾ ವಿದ್ವಾಂಸರಾಗಿಯೂ ಅಘಟನಾಘಟನ ಸಾಮರ್ಥ್ಯಪೂರ್ಣರಾಗಿಯೂ, ರಾಜಾಸ್ಥಾನಗಳಲ್ಲಿ ಮಂತ್ರಿಗಳಾಗಿಯೂ, ಕರಣಿಕರಾಗಿಯೂ ಆಸ್ಥಾನ ಪಂಡಿತರಾಗಿಯೂ ಸಂಸ್ಕೃತ, ಆಂಧ್ರ, ಕರ್ನಾಟಕಾದಿ ಭಾಷೆಗಳಲ್ಲಿಯೂ ವೇದಾಗಮೋಪನಿಷತ್ತುಗಳಲ್ಲಿಯೂ ಮಹಾಘನ ವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿರುವುದನ್ನು ಯಾರು ತಾನೆ ಕಾಣರು. ಅಂಥಾ ಮಹಾ ಮಹಾ ವಿದ್ವಾಂಸರ ವಂಶದಲ್ಲಿ ಜನಿಸಿ ಈ ವಿಧವಾದ ಹೀನಸ್ಥಿತಿಯಲ್ಲಿರುವುದನ್ನು ನೋಡಿ ಯಾರು ತಾನೆ ವ್ಯಸನಪಡದಿರುವರು. ಕೇವಲ ಅಧಃಪತನದಲ್ಲಿರುವ ನಾವುಗಳು ನಮಗಿರುವ ಅನಿವಾರ್ಯಾದಿಗಳಿಂದ ಮುಂದುವರಿಯಬೇಕಾದರೆ ನಾವು ಮುಂದೆ ಯಾವ ರೀತಿಮಾಡಿದರೆ ಪೂರ್ವಜರಂತೆ ಘನ ವಿದ್ವಾಂಸರಾಗಿ ಬಾಳಬಹುದೋ ಎಂಬವೇ ಮೊದಲಾದ ವಿಷಗಿಯ ವಿಚಾರವನ್ನು ಕುರಿತು ಸ್ವಾರಸ್ಯವಾಗಿ ಸಭಾಧ್ಯಕ್ಷರಾದ ಆಯುಧ ಪ|| ಸಿ. ನಂಜುಂಡಾರಾಧ್ಯರು ಭಾಷಣಮಾಡಿದರು. ಅನಂತರ ಕೆಲವು ರೆಜಲ್ಯೂಷನ್ ಮಾಡಲ್ಪಟ್ಟವು. ಶ್ರೀ ಕೆಂಡಗಣ್ಣಸ್ವಾಮಿಯವರ, ಮತ್ತು ಮಹದೇಶ್ವರಸ್ವಾಮಿಯವರ ಮಂಗಳಾರತಿಯಾಗುವುದರೊಡನೆ ಸ್ವಾಗತಮಂಡಲಿಯ ಅಧ್ಯಕ್ಷರಾದ ಬಿ. ಎಸ್. ಆರಾಧ್ಯರಿಂದ ನಾವು ಪ್ರಾರ್ಥನೆಮಾಡಿಕೊಂಡಿದ್ದಂತೆ ಬೆಲೆಯುಳ್ಳ ಬೆಳ್ಳಿಯ ಬರಡ. ತಟ್ಟೆಗಳು ಸ್ವಾಮಿಯವರ ಪೂಜಾಕಾಲದಲ್ಲಿ ವಿನಿಯೋಗಿಸಲು ಸಮರ್ಪಿಸಲ್ಪಟ್ಟವು. ಪ್ರೆಸಿಡೆಂಟರಿಗೆ ಹಾರ, ತುರಾಯಿ, ಸಭಿಕರಿಗೆ ಗಂಧ, ಪುಷ್ಪ, ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ಅನಂತರ ಶ್ರೀಮನ್ಮಹಾರಾಜರವರಿಗೂ, ರಾಜಕುಟುಂಬದವರಿಗೂ ಸಹ ಶ್ರೇಯಃಪ್ರಾರ್ಥನೆಯನ್ನು ಮಾಡುವುದರ ಮೂಲಕ ಸಭೆಯು ಭರಖಾಸ್ತಾಯಿತು.

ಪ್ರೇಕ್ಷಕ.

ಶ್ರೀಮಜ್ಜಗದ್ಗುರು ದಾರುಕಾಚಾರ್ಯ ಪ್ರಸೀದ.

ಕಾರ್ತಿಕೋತ್ಸವವೂ ಉದಯದ ಅನುಷ್ಠಾನಸಮಾರಂಭವೂ.

ವಿಜಾಪುರ ಜಿ|| ತಾ|| ಬಾಗೇವಾಡಿ ಪೈಕಿ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆಗಿರುವ ನಿಡಗುಂದಿ ರುದ್ರಸ್ವಾಮಿ ಮಠದ ಕಾರ್ತಿಕೋತ್ಸವವು ಪದ್ಧತಿಯಂತೆ ಈ ವರ್ಷವಾದರೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ನದರಿ ಮಠದಶ್ರೀಗಳು ಕಾರ್ತಿಕಮಾಸದ ಅಂತ್ಯದವರೆಗೆ ಅನುಷ್ಠಾನವನ್ನು ಮಾಡಿದರು. ಅನುಷ್ಠಾನ ಸಮಾಪ್ತಿ ಸಮಾರಂಭದ ಗಣಾರಾಧನೆಯು ಮಾರ್ಗಶಿರ ಶು|| ೧. ಸೋಮವಾರ ದಿವಸ ಮಾಡಿಸಲ್ಪಟ್ಟಿತು. ೫೦೦ ಜನ ಮಾಹೇಶ್ವರರಿಗೆ ಅನ್ನಸಂತರ್ಪಣೆ ಜರುಗಿಸಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ಪಲ್ಲಕ್ಕಿಯಲ್ಲಿ ಕರ್ತೃಗಳ ಭಾವಚಿತ್ರವನ್ನೂ ಶ್ರೀ ರುದ್ರಪುಸ್ತಕವನ್ನೂ ಮಹೂರ್ತಗೊಳಿಸಿ ವಾದ್ಯವೈಭವಗಳೊಡನೆ ತಳಿರು ತೋರಣಗಳಿಂದಲಂಕೃತವಾದ ರಾಜವೀಧಿಯಲ್ಲಿ ಸಮಸ್ತಬಿರುದಾವಳಿಗಳಿಂದ ಉತ್ಸವವು ನೆರವೇರಿಸಲ್ಪಟ್ಟಿತು. ಆಮೇಲೆ ಶ್ರೀಗಳವರ ಅಧ್ಯಕ್ಷತೆಯ ಕೆಳಗೆ ಧಾರ್ಮಿಕ ಸಭೆಯು ಸೇರಿತು. ಇಲ್ಲಿಯ ರುದ್ರಯ್ಯ ಚರಂತಿಮಠ ಇವರು ಪತಿವ್ರತಾ ಈ ವಿಷಯದಮೇಲೆ ವ್ಯಾಖ್ಯಾನ ಕೊಟ್ಟರು. ಆ ಮೇಲೆ ಸಂಗನ ಬಸಪ್ಪಾ ನಾಸಿ ಇವರು ಗುರುಭಕ್ತಿ ಈ ವಿಷಯದ ಮೇಲೆ ಭಾಷಣಮಾಡಿದರು. ಸಾರಾಂಶವೇನಂದರೆ, ನಾಸ್ತಿತತ್ವಂಗುರೋಃಪರಂ ಎಂಬ ವೇದವಾಕ್ಯವನ್ನು ಹೇಳಿ ಅತ್ಯಂತ ಭಕ್ತಿಯುಕ್ತರಾಗಿ ಜಗದ್ಗುರು ಪಂಚಾಚಾರ್ಯರೇ ಮೂಲ ಗುರುಗಳು. ಅವರೇ ಮೋಕ್ಷದಾಯಕರು. ಅವರನ್ನು ಬಿಟ್ಟು ಸದ್ಗತಿಯು ನಮಗೆ ಇಲ್ಲ. ನಾಮಧಾರಿ ಗುರುಗಳ ಕಡೆಗೆ ಲಕ್ಷ್ಯಕೊಡದೆ ಗುರುಭಕ್ತಿತತ್ಪರರಾಗಬೇಕು. ಮತ್ತು ನದರಿ ಶ್ರೀಗಳು ಜಗದ್ಗುರು ದಾರುಕಾಚಾರ್ಯರನ್ನು ಸ್ಮರಿಸಿ ಭಕ್ತೋದ್ಧಾರದ ಸಲುವಾಗಿ ಅಹೋರಾತ್ರಿಗಳಲ್ಲಿ ಕಷ್ಟಪಟ್ಟು ರಾತ್ರಿ ಎಂಬುವದನ್ನು ಹಗಲು ಮಾಡಿ ಮೂರುತಾಸು ರಾತ್ರಿ ಇರುವದರೊಳಗಾಗಿ ಎದ್ದು ಉದಯ ಪೂಜಾವಮಾಡಿದ್ದು ನಮ್ಮ ಉದ್ಧಾರವಲ್ಲವೇ ? ಮತ್ತು ಊರಲ್ಲಿ ನೀರು ಇಲ್ಲದೆ ಕಷ್ಟಪಡುತ್ತಿರುವ ಜನಗಳ ಗೋಳಾಟವನ್ನು ನೋಡಲಾರದೆ ಅದೇ ಕಾರ್ತಿಕದಲ್ಲಿ ಮೇಘರಾಜನು ಘನವಾದ ಮಳೆಯನ್ನು ಕರೆದನು. ಇಲ್ಲಿಯ ಜನರು ನೀರಿಲ್ಲದೆ ಬಳಲುತ್ತಿದ್ದರು. ಇದೆಲ್ಲಾ ಶ್ರೀಗಳವರ ಉದಯದ ಅನುಷ್ಠಾನದ ಬಲವಲ್ಲವೇ ? ಎಂದು ತಮ್ಮ ತಮ್ಮೊಳಗೆ ಉದ್ಗರಿಸುತ್ತಿದ್ದರು. ಆ ಮೇಲೆ ಸಂಗಯ್ಯ ಪತ್ರಿ ಇವರು ಧರ್ಮ ವಿಷಯದ ಮೇಲೂ ವಿರೂಪಾಕ್ಷಪ್ಪಾ ಅಣ್ಣಾಶೆಟ್ರು, ಭೀಮಪ್ಪಾ ಮಿಣಜಗಿ, ದುಂಡಪ್ಪಾ ರೇವಡಿ, ಈರಯ್ಯಾ ಉತ್ನಾಳಮಠದ ಇವರೇ ಮೊದಲಾದ ಪ್ರಮುಖ ಸದ್ಗೃಹಸ್ಥರ ಭಾಷಣಗಳಾದವು. ಆ ಮೇಲೆ ಇಲ್ಲಿಯ ಬೃಹನ್ಮಠಾಧ್ಯಕ್ಷ ಪಟ್ಟದ ರುದ್ರ ಮಹಾಸ್ವಾಮಿಗಳು "ಶಿವಲಿಂಗಂತ್ರಿಸಂಧ್ಯಮಭ್ಯರ್ಚಯೇತ್" ಎಂಬ ವಾಕ್ಯವನ್ನನುಸರಿಸಿ ಒಳ್ಳೇ ಯುಕ್ತಿಯುಕ್ತವಾಗಿ ತಮ್ಮ ಅಮೃತಮಯ ವಾಣಿಯಿಂದ ಸಭಿಕರಿಗೆ ತಿಳಿಯುವಂತೆ ಬ್ರಾಹ್ಮೀ ಮುಹೂರ್ತಲಿಂಗ ಪೂಜಾ ಮಹತ್ವವನ್ನು ಬೋಧಿಸಿದರು. ಆ ಮೇಲೆ ಪದ್ಧತಿ ಪ್ರಕಾರ ಶ್ರೀಗಳವರಿಗೆ ಕಾಣಿಕೆಯನ್ನು ಒಪ್ಪಿಸಿ ಕಾರ್ತಿಕ ಇಳಿಸಿದ್ದಲ್ಲದೆ ಮೈಸೂರು ರಾಜಧಾನಿಯಲ್ಲಿ ಪ್ರಸಿದ್ಧ ಪಂಡಿತೋತ್ತಮರಿಂದ ಪ್ರಚುರವಾಗತಕ್ಕ ಪಂಚಾಚಾರ್ಯಪ್ರಭಾ ಪತ್ರಿಕಾ ಪೋಷಣೆಗಾಗಿ ೬ ರೂಪಾಯಿಗಳನ್ನು ಕಾಣಿಕಾರೂಪವಾಗಿ ತೆಗೆದು ಕಳುಹಿಸಬೇಕೆಂದು ಶ್ರೀ ಪೂಜ್ಯವಾದರು ಅಪ್ಪಣೆಕೊಡಿಸಿದರು. ಅದಕ್ಕೆ ಕಾರ್ಯದರ್ಶಿಗಳಾದ ವಿರೂಪಾಕ್ಷಪ್ಪ ಅಣ್ಣಾಶೆಟ್ರು ಸಂಗನಬಸಪ್ಪಾ ಅಣ್ಣಾ ನಾಸಿ ಸಂಗಯ್ಯನವರು ಪತ್ರಿ ಭೀಮಪ್ಪಾ ಅಣ್ಣಾ ಮಿಣಜಗಿ ಇವರು ಅನುಮೋದಿಸಿದರು. ಆ ಪ್ರಕಾರ ಸಂಗಯ್ಯನವರು ಪತ್ರಿ ಇವರ ಕಡೆಗೆ ಫಲತಾಂಬೂಲದೊಡನೆ ೬ ರೂಪಾಯಿಗಳು ಕೊಡಲ್ಪಟ್ಟವು. ಆ ಮೇಲೆ ಅಧ್ಯಕ್ಷರವರು ಎಲ್ಲರೂ ಮಾಡಿದ ಉಪನ್ಯಾಸದ ಸಾರಾಂಶವನ್ನು ಪುನಃ ಪುಷ್ಟೀಕರಿಸಿ ಇದೇ ಪ್ರಕಾರ ಕಾರ್ತಿಕೋತ್ಸವವನ್ನು ಉದಯದ ಅನುಷ್ಠಾನವನ್ನು ನಿರಂತರ ನಡಿಸಲೆಂದು ಜಗದ್ಗುರುಗಳಿಗೆ ಮಂಗಳಾರತಿ ಮಾಡಿ ಇದೇ ಪ್ರಕಾರ ಇಂಥ ಸದ್ಬುದ್ಧಿಯನ್ನು ದಯಪಾಲಿಸಲೆಂಬದಾಗಿ ಜಗದ್ಗುರು ಪಂಚಾಚಾರ್ಯರನ್ನು ಬೇಡುತ್ತೇವೆ.

ಪ್ರತ್ಯಕ್ಷದರ್ಶಿ.

ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ, ಬಳ್ಳಾರಿ.

ಮಹಾಶಯರೇ, ರ್ಯಾಫಲ್ ಎತ್ತಲು ಕ್ರಿಸ್ತಮಸ್ ಕಾಂಗ್ರೆಸ್, ಮತ್ತು ವೀರಶೈವ ಮಹಾಸಭೆಯ ಸಮಯವಾದ್ದರಿಂದ ಅಧಿಕಾರಿಗಳಿಗೂ, ಮುಖ್ಯಸ್ಥರಿಗೂ ಅನಾನುಕೂಲವಾಗುವಕಾರಣ ಈ ತಿಂಗಳು ೨೬ನೇ ತೇದಿ ರ್ಯಾಫಲ್ ಕಮಿಟಿಯವರಿಂದ ಡಿಸೆಂಬರು ೧೮ನೇ ತೇದಿ ಆದಿವಾರವೇ ರ್ಯಾಫಲ್ ಚೀಟಿಗಳನ್ನು ಎತ್ತಲು ತೀರ್ಮಾನಿಸಲ್ಪಟ್ಟಿರುತ್ತದೆ. ಆದಕಾರಣ ೪ನೇ ತಾರೀಖನ್ನನುಸರಿಸಿ ತಾವು ಮಾರಿದ ಚೀಟಿಗಳ ಹಣವನ್ನು ಕೌಂಟರ್‌ಫೈಲುಗಳನ್ನು ಡಿಸೆಂಬರು ೧೫ನೇ ತೇದಿಗೆ ನಮ್ಮ ಕೈಸೇರುವಂತೆ ಕಳುಹಿಸಬೇಕು. ಮತ್ತು ಮಾರದೆ ಉಳಿದ ರ್ಯಾಫಲ್ ಟಿಕೆಟ್ಟುಗಳನ್ನು ವಾಪಸು ಕಳುಹಿಸಬೇಕೆಂದು ಸೂಚನೆ

ಬಳ್ಳಾರಿ,
28-11-27.

H. Karibasappa.
Secretary.

ದುಃಖವಾರ್ತೆ.

ಧಾರವಾಡ ಜಿಲ್ಲಾ ಹಿರೇಕೇರೂರಿನ ಪ್ರಮುಖರಾದ ಮ|| ರಾ|| ಮಲ್ಲಪ್ಪ ಶೆಟ್ರು ಇವರು ಕಳೆದ ೭ನೆಯ ತಾರೀಖಿನ ದಿವಸ ಶಿವಾಧೀನರಾದರು. ಸದರಿ ಶೆಟ್ರವರು ಗುರುಲಿಂಗಜಂಗಮಪ್ರೇಮಿಗಳೂ, ಸದಾಚಾರಸಂಪನ್ನರೂ, ಸುಶೀಲರೂ ಆಗಿದ್ದು ಸರ್ವರ ಪ್ರೇಮಕ್ಕೆ ಪಾತ್ರರಾಗಿದ್ದರು. ಸದರಿ ಶೆಟ್ರವರ ಧರ್ಮಪತ್ನಿಯವರಾದ ಪತಿವ್ರತಾಶಿರೋಮಣಿ ನೀಲಮ್ಮನವರು ತಮ್ಮ ಪತಿಯ ಆತ್ಮಶಾಂತ್ಯರ್ಥವಾಗಿ ಶ್ರೀ ಜಗದಾಚಾರ್ಯರ ಹೆಸರಿನಿಂದ 2 ರೂಪಾಯಿಗಳನ್ನು ತೆಗೆದು ಪ್ರಭಾ ಪೋಷಣಕ್ಕಾಗಿ ಕಳುಹಿಸಿದರು. ಪತಿವಿಯೋಗದಿಂದ ಸದರಿ ನೀಲಮ್ಮನವರಿಗೆ ವಿಶೇಷವಾದ ದುಃಖವು ಉಂಟಾಗಿದ್ದರೂ ಆ ದುಃಖವನ್ನು ದೂರಮಾಡಿ ಪರಮಾತ್ಮನ ಧ್ಯಾನವನ್ನು ತ್ರಿಕಾಲದಲ್ಲಿಯೂ ಮಾಡುತ್ತ ಪುಣ್ಯಜೀವಿಗಳಾಗಬೇಕೆಂದು ಹಾರೈಸುತ್ತೇವೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಓರ್ವ ವೀರಶೈವ

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು

ಶ್ರೀ ಜಗದ್ಗುರು ಉಜ್ಜಯಿನೀ ಮಹಾ ಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕ ವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರ ಶಾಸ್ತ್ರಿಗಳವರು ಅತ್ಯಂತ ಪ್ರಯಾಸಪಟ್ಟು ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂಬುದು ಅತಿಶಯೋಕ್ತಿಯಾಗಲಾರದು. ವೀರಶೈವ ಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ ಡಿ|| ಚಿತ್ರದುರ್ಗ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಣೀತವು

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟೆ ಮಹತ್ವ ಪ್ರಕಾಶ	೬ ಆಣೆ
ಗುರ್ವಷ್ಟಕಸ್ತವ ೩ನೆಯ ಆವೃತ್ತಿ	೧ ಆಣೆ
ಶಿವ ನಾಮ ವಿಮರ್ಶೆ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಶಿವ ಶಾಸ್ತ್ರದ ವಿಮರ್ಶ ತಪ್ತಸ್ವೀಕರಣ ೩ನೆಯ ಆವೃತ್ತಿ	೬ ಆಣೆ
ಬಸವಭಾಷ್ಯದ ಪೀಠಿಕೆ	೧೦ ಆಣೆ
ಬಸವಾದಿ ನವರತ್ನ ದರ್ಪಣ ೩ನೆಯ ಆವೃತ್ತಿ	೪ ಆಣೆ
ಪಂಚವಿಂಶತಿ ಪದ್ಯಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೪ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	೧|| ಆಣೆ
ಉಪದೇಶ ಸಂಗ್ರಹ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂಪಾಯಿಗೆ ೨ ಆಣೆಯಂತೆ ಕಮೀಷನ್ ಕೊಡುವದಾಗುತ್ತದೆ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಸಯ್ಯಾಜಿರಾವ್ ರೋಡ್, ಮೈಸೂರು

ಅತಿ ಪ್ರಖ್ಯಾತ ಅಮೇರಿಕಾ ಖಂಡದ ಅತ್ಯದ್ಭುತ

ಪ್ರಸಿದ್ಧ ಡಾಕ್ಟರನೊಬ್ಬನು

ಕಂಡುಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಕವಾದ ಸಂಜೀವನೌಷಧವನ್ನು ಕಂಡುಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಡಾಕ್ಟರನೊಬ್ಬನು ಅನೇಕ ವರ್ಷಗಳು ಪರಿಶೋಧನೆಗಳಮೇಲೆ ಪರಿಶೋಧನೆಗಳನ್ನು ಮಾಡಿ ಬಹು ದಣಿದು ಮಾಡಿಕೊಂಡು ಕೊನೆಯಲ್ಲಿ,

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಕಂಡುಹಿಡಿದನು. ಅನುಪಾನಭೇದದಿಂದ ಅನೇಕ ರೋಗಗಳನ್ನು ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವುದು ಅತಿಸಾರ ವಾಂತಿ, ಭೇದಿ ಅಥವಾ ಕಾಲರಾ [illegible], ಸೆಳೆ ಮಲೇರಿಯಾ ಜ್ವರ ಇತರ ವಿವಿಧವಾದ ಜ್ವರಗಳು ಮಾನಸಿಕ ದೌರ್ಬಲ್ಯ ಕಣ್ಣು ಮತ್ತು ಕಿವಿ ರೋಗಗಳಿಗೆ ಮಲಬದ್ಧತೆ, ನಾಯಿಕೆಮ್ಮಲಿಗೆ, ಸ್ತ್ರೀವ್ಯಾಧಿಗಳಿಗೆ, ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ ಇನ್‌ಫ್ಲುಯೆಂಜಾ ವಿಗೆ, ವಾತ ಬೇನೆ, ಕಜ್ಜಿ ಮುಂತಾದ ವಿಷಜಂತುಗಳ ಕಡಿತಕ್ಕೆ ಬಾಲಗ್ರಹ ಇವೇ ಮುಂತಾದುವುಗಳನ್ನು ಗುಣಪಡಿಸುತ್ತದೆ. ಇದನ್ನು ಅಲ್ಪ ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತ ಬಂದರೆ ಯಾವರೋಗವೂ ಅಂಟುವುದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿಮನೆಯಲ್ಲಿ ಅಥವಾ ಪ್ರತಿಯೊಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತಿರವಿದ್ದಂತೆಯೇ. ಡಾಕ್ಟರಿಗೆ ಕೊಡಬೇಕಾದ ಫೀಜುಗಳನ್ನೂ ಈ 'ಜೀವನಾಧಾರ' ವೆಂಬ ಡಾಕ್ಟರಿಗೆ ಕೊಡಬೇಕಾದ್ದಿಲ್ಲ. ಸಣ್ಣಸೀಸೆ ಒಂದಕ್ಕೆ ೦-೧೨-೦, ದೊಡ್ಡಸೀಸೆ ಒಂದಕ್ಕೆ ೧-೮-೦ ಟಪಾಲು ಚಾರ್ಜು ವಗೈರೆ ಅಬಾಯಿದಾ ಬೀಳುವದು

ಬಿಸನಾಳ, ತಾ|| ೨೪-೪-೨೭

"ನಿಮ್ಮ ಕಂಪನಿಯಿಂದ ನಾನು ಕಳೆದ ಕೆಲವರ್ಷಗಳಿಂದಲೂ ನೂರಾರು ಜೀವನಾಧಾರ ಬಾಟ್ಲಿಗಳನ್ನು ವರ್ಷವರ್ಷ ತರಿಸುತ್ತಲೂ ನಾನು ಉಪಯೋಗಿಸುತ್ತಲೂ ಅನೇಕರಿಗೆ ಕೊಡುತ್ತಲೂ ಬರುತ್ತೇನೆ. ಕಾಟವಾಗದಂತೆ ಅನೇಕ ರೋಗಗಳು ಗುಣವಾಗುತ್ತವೆಂದು ನನ್ನ ಬುದ್ಧಿ ಅನುಭವದಿಂದ ನಾನು ಖಾತ್ರಿಯಾಗಿ ಹೇಳಬಲ್ಲೆನು. ನನ್ನ ಸ್ವಂತ ಅನುಭವದಲ್ಲಿ ಇದುವರೆಗೆ ಪ್ಲೇಗು ಸುಮಾರು ೩೦ಕ್ಕೆ ೧೫ ಕೇಸುಗಳಿಗೆ ಗುಣವಾಗುತ್ತ ನೂರಾರು ಜನಕ್ಕೆ ಜ್ವರವು, ಅನೇಕರಿಗೆ ಹೊಟ್ಟೆನೋವು, ತಲೆನೋವು, ಕಾಲರಾ ಇವುಗಳೂ, ಅನೇಕ ಮಕ್ಕಳುಗಳ ಎಲ್ಲ ವಗೈರೆ ಬಾಧೆಗಳೂ, ವಾಯುಸಂಬಂಧವಾದ ಬಾಯಿಲೆಗಳೂ ಸಹ ಖಾತ್ರಿಯಾಗಿ ಗುಣವಾಗಿರುತ್ತ."

6 ಪಟ್ಟೇಲ್ ಮುದ್ದುಬಸಪ್ಪ.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ASIATIC GOVERNMENT SECURITY LIFE ASSURANCE CO., LTD., MYSORE.

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಆದ್ದರಿಂದ ಯಾವಾಗಲೂ "ಏಷ್ಯಾಟಿಕ್" ಕಂಪನಿಯಲ್ಲಿಯೇ ವಿಮೇಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿಯೂ ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕರವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಬಾ ಮಾನಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿರ ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಜನವರಿ 1928 ಕ್ಕ ನಡೆಯುತ್ತದೆ.

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು.

(1) ಮ|| ಡಿ. [illegible], ಚೀಫ್ ಏಜಂಟ್,
ಏಸಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್
ರೋಡ್, ಮೈಸೂರು.
(2) ಮ|| ಪಿ. ಎಸ್. ಆರಾಧ್ಯ
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬಳ್ಳಾರಿ
(3) ಹೈದರಾಬಾದ ಏಜೆನ್ಸಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಕ್ಷಿಣ)

[26]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಷ್ಟು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವೆಂದರೆ.—ಪೀನಸ ಒಂಟೆತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಶಿರಸ್ಸಿಗೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂಗುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾದೀತು.

ಒಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[28] ಪೋ. ಬಾ. ೫೧೦, ಮದರಾಸು

☞ ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ ನೇ ಡಿಸೆಂಬರ್ ೧೯೨೭ [ಸಂಚಿಕೆ ೩೨.

NEW FORD

THE SIGNS OF THE TIMES

Buy a **FORD** *and Bank the Balance*

EASILY PURCHASED
EASY TO DRIVE
EASY TO RUN

ARRANGED FOR PURCHASE OF ANY MODELS IF DESIRED BY EASY TERMS

GENUINE **FORD** PARTS

FOR SALE HERE

FORD SUB DEALERS.
FOR HASSAN KADUR. MYSORE DISTRICTS.

For particulars apply to,

A. J. RAM & SONS.,
SAYAJI RAO ROAD, MYSORE.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ...	೧ ಆಣೆ
ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಸ್ಕೃತ ದೀಕ್ಷಾವಿಧಿ	೧೨ ಆಣೆ
ತಿ ಮುಷ್ಟ್ರಕ್ಷಪರಾಭವ	೬ ಆಣೆ
ಸೂತ್ರಪಟ ೨ನೆಯ ಆವೃತ್ತಿ	೧ ಆಣೆ
ದ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ದ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ ..	೬ ಆಣೆ
ಂತ ದಿವಾಕರ	೧೦ ಆಣೆ
ಜತತ್ವದರ್ಪಣ ೨ನೆಯ ಆವೃತ್ತಿ	೪ ಆಣೆ
ಪ್ರಶ್ನಪ್ರಕಾರ ೨ನೆಯ ಆವೃತ್ತಿ	೧ ಆಣೆ
ಚಾರನಿಧಿ	೪ ಆಣೆ
ಚಾರ್ಯರ ಮಂಗಲಸ್ತೋತ್ರಾವಳಿ ೪ನೆಯ ಆವೃತ್ತಿ ..	೧ ಆಣೆ
ವಪೂಜಾವಿಧಿ	೧|| ಆಣೆ
ಸಂಗ್ರಹ	೧ ರೂ.
ಕಾಚಾರ್ಯಶತಕಂ	೨ ಆಣೆ

ಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳು ಸುವದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಸಯ್ಯಾಜಿರಾವ್ ರೋಡ್, ಮೈಸೂರು.

ಶ್ರೀ ರೇಣುಕಾಚಾರ್ಯಶತಕಂ

ಈ ಗ್ರಂಥವನ್ನು ಬನ್ನಿಕೊಪ್ಪ ಬೃಹನ್ಮಠಾಧ್ಯಕ್ಷರಾದ ವೇ|| ಅಮರನಾಥಶಾಸ್ತ್ರಿಗಳವರು ಕನ್ನಡದಲ್ಲಿ ಪದ್ಯರೂಪವಾಗಿ ಅತಿ ಸರಳಭಾಷೆಯಿಂದ ಬಹು ಮನೋಹರವಾದ ಶೈಲಿಯಲ್ಲಿ ರಚಿಸಿದ್ದಾರೆ. ಇದರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾಡಿದ ಅನಂತಲೀಲೆಗಳ ವರ್ಣನವೂ, ಶ್ರೀ ಜಗದ್ಗುರು ಪಂಚಾಚಾರ್ಯರ ಅವತಾರಕ್ರಮವೂ, ಅಷ್ಟಾವರಣಗಳ ಸ್ವರೂಪವೂ, ಸುವಿರಕ್ತ ದುರ್ವಿರಕ್ತ ಪದ್ಧತಿಯೂ ಹೃದಯಾಹ್ಲಾದಕರವಾಗಿ ವರ್ಣಿಸಲ್ಪಟ್ಟಿವೆ. ಈ ಗ್ರಂಥವನ್ನು ತರಿಸಿ ಸಂಪೂರ್ಣವಾಗಿ ಓದಿನೋಡಿದಲ್ಲಿ ಈ ಗ್ರಂಥದ ಯೋಗ್ಯತೆಯು ವಾಚಕರಿಗೆ ತಿಳಿಯಬರುವದು. ಇದರಲ್ಲಿ ೧೦೮ ಪದ್ಯಗಳಿವೆ. ಅತ್ಯಂತ ಸುಂದರವಾಗಿ ಮುದ್ರಿತವಾಗಿವೆ. ಸರ್ವರೂ ತರಿಸಬೇಕೆಂಬುದ್ದೇಶದಿಂದ ಇದರ ಬೆಲೆಯನ್ನು ೨ ಆಣೆ ಮಾತ್ರ ಇಟ್ಟಿದೆ. ಒಂದೊಂದು ಪುಸ್ತಕವನ್ನು ತರಿಸುವವರು ೨|| ಆಣೆಯ ಸ್ಟಾಂಪುಗಳನ್ನು ಪೋಸ್ಟು ದ್ವಾರಾ ಕಳುಹಿಸಬೇಕು. ಹೆಚ್ಚು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು. ವಿ. ಪಿ. ಛಾರ್ಜು ಪ್ರತ್ಯೇಕ ಬೀಳುವದು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು

ಶ್ರೀ ಜಗದ್ಗುರು ಉಜ್ಜಯಿನೀ ಮಹಾ ಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕ ವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರ ಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವ ಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ ಡಿ|| ಚಿತ್ರದುರ್ಗ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವಿರಕ್ತರ ಕುಚೇಷ್ಟೆ.

ಈ ತಿಂಗಳ 3ನೆಯ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಶ್ರೀ ಜಗದ್ಗುರು ರಂಭಾಪುರೀ ಪೀಠದವರು ಮುರಗೀಮಠಕ್ಕೆ ಪೂರ್ವದಲ್ಲಿ ಪತ್ರವನ್ನು ಬರೆದುಕೊಂಡಿದ್ದಾರೆಂದು ಪ್ರಸಿದ್ಧವಾಗಿದ್ದ ಲೇಖಕ್ಕೆ ನನೇ ತಾರೀಖಿನ ಪ್ರಭಾಪತ್ರಿಕೆಯಲ್ಲಿ ನಾನು ಬರೆದಿರುವ ಉತ್ತರವನ್ನು ವಾಚಕರೆಲ್ಲರೂ ನೋಡಿರಬಹುದು. ಪುನಃ ಸ್ಟಾರ್‌ಪತ್ರಿಕೆಯ 17ನೇ ತಾರೀಖಿನ ಸಂಚಿಕೆಯಲ್ಲಿ "ಓರ್ವ ಗುರುಪುತ್ರ" ನೆಂಬ ಹೆಸರಿನಿಂದ ಯಾವನೋ ಒಬ್ಬ ಲೇಖಕನು ಮುರಗೀಮಠಕ್ಕೆ ಉಜ್ಜಯಿನೀ ಪೀಠದವರು ಮತ್ತು ಶ್ರೀಶೈಲಪೀಠದವರು ಈ ಪ್ರಕಾರವಾಗಿ ಪತ್ರಗಳನ್ನು ಬರೆದುಕೊಂಡಿದ್ದಾರೆಂದೂ ಇವುಗಳನ್ನು ಮುರಗೀಮಠದ ವಿರಕ್ತರ ಅಪ್ಪಣೆಯಮೇರೆಗೆ ಪ್ರಸಿದ್ಧಮಾಡಿದ್ದೇನೆಂದೂ, ನೂತನವಾಗಿ ನಿರ್ಮಿಸಿದ ಕೃತ್ರಿಮ ಪತ್ರಗಳನ್ನು ಪ್ರಸಿದ್ಧಪಡಿಸಿದ್ದಾನೆ. ಮುರಗೀಮಠದ ವಿರಕ್ತರು ತಾವು ಪೀಠಾಚಾರ್ಯರಿಗಿಂತಲೂ ದೊಡ್ಡವರೆನಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಏನೇನೋ ಚಾಣಕ್ಯತಂತ್ರವನ್ನು ಮಾಡುತ್ತಿದ್ದಾರೆ. ಇವರು ಮಾಡುವ ಚಾಣಕ್ಯ ತಂತ್ರವು ಈಗಿನಕಾಲದಲ್ಲಿ ನಡೆಯುವದಿಲ್ಲವೆಂದು ಇವರು ಸಂಪೂರ್ಣವಾಗಿ ತಿಳಿಯತಕ್ಕದ್ದು. ಜಗದ್ಗುರುಪೀಠಗಳಲ್ಲಿ ಇವರು ಈ ಪ್ರಕಾರವಾಗಿ ಭಕ್ತಿಶೂನ್ಯತೆಯನ್ನು ತೋರಿಸುವದರಿಂದ ಸಮಾಜದಲ್ಲಿ ಗೊಂದಲಕ್ಕೆ ಕಾರಣವೇ ಹೊರತು ಬೇರೊಂದಿಲ್ಲ. ಮತಸ್ಥಾಪನಾಚಾರ್ಯರ ವಿಷಯದಲ್ಲಿ ವಿರಕ್ತರು ಈ ಪ್ರಕಾರವಾಗಿ ಕುಚೇಷ್ಟೆಯನ್ನು ಎಬ್ಬಿಸುವದು ಉತ್ತಮವಲ್ಲವೆಂದು ಭಾವಿಸಬೇಕು. ಅಸಂಬದ್ಧಪ್ರಲಾಪಗಳಿಂದ ಕೂಡಿದ ಇಂಥಲೇಖಗಳನ್ನು ಪ್ರಕಟಿಸುತ್ತಾ ಹೋದರೆ ಯಾವ ನಿಜವಾದ ವೀರಶೈವನಿಗೆ ವ್ಯಸನವೆನಿಸಲಿಕ್ಕಿಲ್ಲ? ಪೂರ್ವದಲ್ಲಿ ಎಷ್ಟೋಜನ ವಿರಕ್ತರು ಭಿಕ್ಷೆಯನ್ನೆತ್ತಲಿಕ್ಕೆ ಹೋಗುವಾಗ ಆ ಪ್ರಾಂತದಲ್ಲಿ ಪ್ರಮುಖರಾದ ಭಕ್ತರಿಗೆ ಬಿನ್ನಹಪತ್ರಿಕೆಯನ್ನು ಬರೆದುಕೊಂಡಿರುವರೆಂಬುದೂ ಈಗ್ಯೂ ಆ ಪತ್ರಗಳು ಕೆಲಕೆಲ ಭಕ್ತರ ಮನೆಯಲ್ಲಿರುವವೆಂದೂ ಕೇಳಿಕೆಯಲ್ಲಿದೆ. ನಾನು ಅದನ್ನು ಪ್ರಯತ್ನಮಾಡಿ ಆ ಪತ್ರಗಳನ್ನು ಸಂಗ್ರಹಿಸಿ ಮುದ್ರಣಮಾಡಿಸಬೇಕೆಂದು ಇಚ್ಛಿಸಿದ್ದೇನೆ. ಸಮಾಜದಲ್ಲಿ ಗೊಂದಲವೇಳಬಾರದೆಂದು ಗುರುಭಕ್ತರು ಎಷ್ಟು ತಡೆದಾಗ್ಯೂ ವಿರಕ್ತರು ಕಾಲು ಕೆದರಿ ಗೊಂದಲವನ್ನೆಬ್ಬಿಸಲಿಕ್ಕೆ ಪ್ರಾರಂಭಮಾಡಿದ್ದಾರೆ. ಅದಕ್ಕೆ ಯಾರೇನು ಮಾಡುವರು? ಇನ್ನಾದರೂ ಇವರು ಬುದ್ಧಿಗಲಿತು ತಮ್ಮ ವಿರಕ್ತಿಯ ಧರ್ಮಕ್ಕನುಸರಿಸಿ ಯಾವ ಗೊಂದಲಕ್ಕೂ ಹೋಗದೆ ಮೌನದಿಂದಿರುವದು ಉತ್ತಮ' "ನಗುರೋರಧಿಕಂ !! ನಗುರೋರಧಿಕಂ !!"

ಗುರುಭಕ್ತಕೇಸರಿ, ಹಮ್ಮಿಗಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಸೊರಬ ತಾಲೂಕು ಜಡೇಹೋಬಳಿ ಕೋಡೀ ಕೊಪ್ಪದಲ್ಲಿ ಶ್ರೀ ಜಗದ್ಗುರುಗಳವರ ದ್ವಿತೀಯ ವರ್ಧಂತ್ಯುತ್ಸವವು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಪೀಠಾರೋಹಣಮಾಡಿ ಮಾರ್ಗಶಿರ ಶು|| ೭ ಗುರುವಾರಕ್ಕೆ ಎರಡುವರ್ಷಗಳಾದವು. ಆ ದಿವಸ ಬೆಳಿಗ್ಗೆ ಶ್ರೀ ವೀರೇಶನಿಗೆ ಏಕಾದಶ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಶ್ರೀಜಗದ್ಗುರು ಮಹಾಸನ್ನಿಧಿಯ ಪಾದಪೂಜೆಯು ನಡೆದು ಸಕಲ ಭಕ್ತಮಾಹೇಶ್ವರರಿಗೂ ಅನ್ನಸಂತರ್ಪಣೆಯಾಗಿ ಮಧ್ಯಾಹ್ನ ಮೂರುಘಂಟೆಗೆ ಸರಿಯಾಗಿ ಶ್ರೀ ಭಗವತ್ಪಾದ ಜಗದ್ಗುರು ಮಹಾಸನ್ನಿಧಿಯ ಕಿರೀಟಧಾರಣೆಯ ಆಂದೋಳಿಕೋತ್ಸವವು ಚತುರಂಗಬಲ ಸಮೇತವಾಗಿ ಸಕಲ ಬಿರುದಾವಳಿಗಳೊಡನೆ ವೈಭವದಿಂದ ಹೊರಟಿತು. ವೈದಿಕರ ವೇದಘೋಷದಿಂದಲೂ ಭಕ್ತಮಾಹೇಶ್ವರರು ಮಧ್ಯ ಮಧ್ಯದಲ್ಲಿ ಉಚ್ಚರಿಸುವ ಪರಾಕುಗಳಿಂದಲೂ ಹಾಗೂ ಜಯಜಯಘೋಷದಿಂದಲೂ ಮನೋಹರಗಳಾದ ಮಂಗಲವಾದ್ಯಗಳಿಂದಲೂ ನೋಡತಕ್ಕವರಿಗೆ ಅತ್ಯಾನಂದವನ್ನುಂಟುಮಾಡುವಂತಿತ್ತು. ಈ ಪ್ರಕಾರ ಮಹೋತ್ಸವವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕರಿಸಿದ ಬೀದಿಯಲ್ಲಿ ಸಂಚರಿಸಿ ಮೊದಲೇ ಶೃಂಗರಿಸಿದ ಮಂಟಪದಲ್ಲಿ ದೇದೀಪ್ಯಮಾನವಾಗಿ ತೋರುವ ಸಿಂಹಾಸನವನ್ನು ಶ್ರೀ ಮಹಾಸನ್ನಿಧಿಯವರು ಆರೋಹಣಮಾಡಿದ ಕೂಡಲೇ ಸರ್ವರೂ ಜಯಜಯಕಾರದಿಂದ ಕರತಾಡನ ಮಾಡಿದರು. ಆ ಸಮಯದಲ್ಲಿ ಆನಂದಸೂಚಕಗಳಾದ ಇಪ್ಪತ್ತೊಂದು ಗುಂಡುಗಳು ಹಾರಿಸಲ್ಪಟ್ಟವು. ಆದಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲವಾಗಿ ಆಸ್ಥಾನವಿದ್ವಾನ್ ವೇ|| ಮರಿಸ್ವಾಮಿಶಾಸ್ತ್ರಿಗಳು ಪೀಠದ ಪೂರ್ವೇತಿಹಾಸವನ್ನು, ಶ್ರೀ ಭಗವತ್ಪಾದ ಜಗದ್ಗುರು ರೇಣುಕ ಶಿವಾಚಾರ್ಯರು ಸೋಮನಾಥಲಿಂಗದಿಂದ ಅವತರಿಸಿ ಹದಿನಾಲ್ಕುನೂರುವರ್ಷಗಳವರೆಗೂ ಇದ್ದು ವೀರಶೈವ ಮತವನ್ನು ಸ್ಥಾಪಿಸಿ ಅನಂತಲೀಲೆಗಳನ್ನು ಮಾಡಿದ ಚರಿತ್ರವನ್ನು ಸಾದ್ಯಂತವಾಗಿ ತಿಳಿಸಿ ಈ ಪೀಠದ ಉತ್ತರಾಧಿಕಾರದ ವಿಚಾರದಲ್ಲಿ ಉಪದ್ವ್ಯಾಪಿಗಳು ಅನೇಕ ವಿಘ್ನಗಳನ್ನು ತಂದು ತಮ್ಮ ಮನೋಭಾವನೆಯನ್ನು ಪ್ರಕಟಪಡಿಸಿಕೊಳ್ಳಬೇಕೆಂದು ನಾಲ್ಕು ವರ್ಷಗಳವರೆಗೂ ಪ್ರಯತ್ನಿಸಿದರು. "ಸತ್ಯಮೇವಜಯತೇ" ಎಂಬ ವಂಕ್ತಿ ಕೊನೆಗೆ ಸತ್ಯವತ್ತಕ್ಕೇ ಜಯಲಕ್ಷ್ಮಿಯು ಪ್ರಸನ್ನಳಾದಳೆಂಬದು ಸರ್ವರಿಗೂ ವಿದಿತವೇ ಇರುವದು. ಸೂರ್ಯನು ತನ್ನ ಮಹಿಮೆಯನ್ನು ಆಕರ್ಷಣ ಮಾಡಿಕೊಳ್ಳುವಂತೆ ಶ್ರೀ ಭಗವತ್ಪಾದ ಜಗದ್ಗುರು ರೇಣುಕ ಶಿವಾಚಾರ್ಯರು ತಮ್ಮ ಅಲೌಕಿಕವಾದ ಮೂರ್ತಿಯನ್ನೇ ಆಕರ್ಷಣಮಾಡಿದ್ದರಿಂದ 4 ವರ್ಷ ಅವಿಚ್ಛಿನ್ನವಾಗಿ ಅಹೋರಾತ್ರಿ ಶ್ರದ್ಧೆಯನ್ನು ವಹಿಸಿ ಕಾಪಾಡಿದ ಗುರುಪೀಠಾಭಿಮಾನಿಗಳ ಕುದಿಯುವ ರಕ್ತವು ಶಾಂತಿಯನ್ನು ಹೊಂದಿದ ಪವಿತ್ರದಿವಸವಿದು.

ಈ ದಿವಸವು ಇಡೀ ಭರತಖಂಡದಲ್ಲಿರತಕ್ಕ ವೀರಶೈವ ಆಬಾಲವೃದ್ಧರಿಗೆ ಆನಂದವನ್ನುಂಟುಮಾಡತಕ್ಕದ್ದಾಗಿದೆ. ಈ ತರಹ ಆನಂದಕ್ಕೆಲ್ಲ ಧರ್ಮಮೂರ್ತಿಯಾದ "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದನ್ನು ಧರಿಸಿ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುವ ಮೈಸೂರು ಶ್ರೀಮನ್ಮಹಾರಾಜಾಸಾಹೇಬಬಹದ್ದೂರರವರೇ ಕಾರಣೀಭೂತರಾಗಿರುವದರಿಂದ ಅವರಿಗೂ ಅವರ ಕುಟುಂಬವರ್ಗಕ್ಕೂ ಆಯುರಾರೋಗ್ಯಭಾಗ್ಯಾದಿಗಳುಂಟಾಗಿ ಯದುವಂಶವು ಆಚಂದ್ರಾರ್ಕವಾಗಿ ಜಗತ್ತಿನಲ್ಲಿ ಪ್ರಕಾಶವಾಗಿರಲೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರನ್ನು ಪ್ರಾರ್ಥಿಸುತ್ತೇನೆಂದು ಒಳ್ಳೇ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ತರುವಾಯ ಜಡೆ ಹೈ|| ಮಾಸ್ಟರ್ ಬಿ. ಎಸ್. ರಾಮಚಂದ್ರಯ್ಯ ಇವರು ಐಕ್ಯ, ಕನ್ಯಾಶುಲ್ಕನಿಷೇಧ; ಜಡೆ ಆ|| ಮಾಸ್ಟರ್ ಕೆ. ಸಿದ್ಧಲಿಂಗಾರ್ಯ ಇವರು ವಿದ್ಯಾ, ತುಮರಿಕೊಪ್ಪದ ಪಾಳ್ದಾರ್ ಪಟೀಲ್ ವೀರಪ್ಪಗೌಡರು ಕನ್ಯಾಶುಲ್ಕನಿಷೇಧ, ತುಮರಿಕೊಪ್ಪದ ಮಾಸ್ಟರ್ ರುದ್ರಪ್ಪಗೌಡರು ವಾಚನಾಲಯದ ಅವಶ್ಯಕತಾ. ಆಬಲೂರು ಶೆಟ್ಟರ ಚನವೀರಪ್ಪನವರು ಧರ್ಮಸುಧಾರಣೆ, ಈ ರೀತಿಯಾಗಿ ಸರ್ವರೂ ಆಯಾಯ ವಿಷಯಗಳನ್ನು ಸಪ್ರಮಾಣವಾಗಿ ಸಯುಕ್ತಿಕವಾಗಿ ಪ್ರತಿಪಾದಿಸಿದರು. ಅನಂತರ ಶ್ರೀ ಪೂಜ್ಯವಾದ ಜಗದ್ಗುರುಗಳವರು ಎಲ್ಲ ವಿಷಯಗಳನ್ನು ಕ್ರೋಡೀಕರಿಸಿ ಸರ್ವರಿಗೂ ಸಮಂಜಸವಾಗುವಂತೆ ಭೌತಿಕೋದಾಹರಣೆಗಳಿಂದ ಅಪ್ಪಣೆಕೊಡಿಸಿ ಸಕಲ ಮಾನವಪ್ರಾಣಿಯೂ ಸಕಲ ಸಂಪತ್ಸಮೃದ್ಧಿಯಿಂದ ಬಾಳಲಿ ಎಂಬದಾಗಿ ಆಶೀರ್ವದಿಸಿದರು. ಅನಂತರ ಮಹಾಸಂಸ್ಥಾನದ ಪಿಟೀಲ್ ಎಚ್. ಎಂ. ರಾಘವಾಂಕಯ್ಯನವರು ಮಂಜುಳವಾದ ಗಾನದಿಂದ ಕೀರ್ತನಮಾಡಿದರು. ಉತ್ಸವಕ್ಕೆ ಆಬಲೂರು, ಬಿಕ್ಕಾಪುರ ಮೊದಲಾದ ಗ್ರಾಮಗಳಿಂದಲೂ ಮತ್ತು ಜಡೆಹೋಬಳಿ ಎಲ್ಲ ಗ್ರಾಮಗಳಿಂದಲೂ 6-7 ಸಾವಿರ ಜನಗಳು ಸೇರಿದ್ದರು. ಆ ದಿವಸದಲ್ಲಿ ಜರುಗಿದ ಆಂದೋಳೋತ್ಸವವನ್ನು ಕಣ್ಣಿಟ್ಟು ನೋಡಿದ ಜನಗಳು ತಮ್ಮ ಧನ್ಯತೆಯನ್ನು ಕೊಂಡಾಡುತ್ತಿದ್ದರು. ಅಲ್ಲಿಗೆ ರಾತ್ರಿ 11 ಘಂಟೆಯಾದ ಕಾರಣ ಶ್ರೀ ಮಹಾಸನ್ನಿಧಿಯು ಅಸ್ಥಾನಕ್ಕೆ ದಯಮಾಡಿಸಿದರು. ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗಕ್ಕೂ ಶ್ರೇಯಸ್ಸಾಗಲೆಂದು ಧ್ಯಾನವನ್ನು ಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಉತ್ಸವಕ್ಕೆ ಬಂದಿದ್ದ ಎಲ್ಲ ಜನಗಳಿಗೂ ಭೋಜನದ ವ್ಯವಸ್ಥೆಯನ್ನು ಗುರುಚರಣಸೇವಾಧುರೀಣರಾದ ರಾ|| ಶಿವಪ್ಪಗೌಡರೇ ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿದ್ದರೆಂದು ತಿಳಿಸಲು ಪರಮಸಂತೋಷವಾಗುತ್ತದೆ. ಧನ್ಯ! ಧನ್ಯ!! ಶಿವಪ್ಪಗೌಡರೇ ನೀವೇ ಧನ್ಯರು! ಶ್ರೀ ಮಹಾಸಂಸ್ಥಾನವನ್ನು ನಿಮ್ಮ ಗೃಹದಲ್ಲಿ ಮೊಕ್ಕಾಂ ಮಾಡಿಸಿಕೊಂಡು ಗುರುಸೇವೆಯಲ್ಲಿ ತತ್ಪರರಾಗಿದ್ದಕ್ಕಾಗಿ ನಿಮ್ಮ ಜನ್ಮವು ಸಫಲವಾಯಿತು. ನಿಮ್ಮ ಕುಲಕೋಟಿಯು ಉದ್ಧಾರವಾಯಿತು. ಗುರುಕೃಪೆಯಿಂದ ಇತೋಪ್ಯತಿಶಯವಾದ ಸಂಪತ್ಸಮೃದ್ಧಿಯಿಂದಲೂ ಪುತ್ರಪೌತ್ರಾದ್ಯಭಿವೃದ್ಧಿಯಿಂದಲೂ ಜಗತ್ತಿನಲ್ಲಿ ಚಿರಕಾಲ ಬಾಳಿ ಕೀರ್ತಿವಂತರಾಗಲೆಂದು ಹಾರೈಸಿ ಈ ಲೇಖನವನ್ನು ಮುಗಿಸುತ್ತೇನೆ. "ತವಾಮುಕ್ತಿರ್ನಸಂದೇಹೋ ಯದಾತುಷ್ಟಃ ಸ್ವಯಂ ಗುರುಃ"

ಓರ್ವ ಉತ್ಸವಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಶರಣಬಸವೇಶ್ವರ ಪುರಾಣ ಮಹೋತ್ಸವ.

ನೈಜಾಂ ಇಲಾಖಾ ಕೊಪ್ಪಳ ತಾಲೂಕು ಪೈಕಿ ಕಸಬಾ ಕವಲೂರು ಗ್ರಾಮಕ್ಕೆ ಒಳಪಟ್ಟ ಗುಡಿಗೇರಿಯ. ಗ್ರಾಮವು ತನ್ನ ನಾಮಕ್ಕೆ ತಕ್ಕಂತೆ ನಂದೀಶ್ವರ, ಮಾರುತಿ, ದೇವಿ ಇವೇ ಮೊದಲಾದ ದೇವಾಲಯಗಳಿಂದಲೂ, ಗುರುಭಕ್ತಮಾಹೇಶ್ವರರ ತಂತಿಣಿಯಿಂದಲೂ, ಜಲಮಧ್ಯದಲ್ಲಿ ಹೊಳೆಯುವ ದ್ವೀಪದಂತೆ ಕವಲೂರು ಪ್ರಸಿದ್ಧ ಶ್ರೀಮಂತ ಮ|| ರಾ|| ವಿರೂಪಾಕ್ಷಗೌಡ, ಸಿದ್ಧನಗೌಡ ಇವರೇ ಮೊದಲಾದವರ ವತನದ ಭೂಮಿಗಳಿಂದಲೂ, ವ್ಯಾಪಕವಾಗಿ ಶೋಭಿಸುತ್ತ ನೋಟಕರ ಮನಕ್ಕೆ ಉತ್ಸಾಹವನ್ನು ಕೊಡುವದರಲ್ಲಿ ಯೋಗ್ಯವೆನಿಸಿರುವದು. ಇಂಥ ಗ್ರಾಮದಲ್ಲಿ ಆಪ್ತಾವರ್ಣಸಂಪನ್ನಃ ಪಂಚಾಚಾರಪರಾಯಣಃ । ವೈದಿಕಂ ಕರ್ಮಕುರ್ವೀತ ಬ್ರಾಹ್ಮಣ್ಯೈಕಫಲಸಾಧನಂ ||೧|| ಅಕ್ರೋಧೋ ಗುರುಶುಶ್ರೂಷಾ ಶೌಚಮಾಹಾರಲಾಘವಂ । ಅಪ್ರಮಾದಶ್ಚ ಸಂಜ್ಞೈತೇ ನಿಯಮಾಶ್ಚ ಪ್ರಕೀರ್ತಿತಾಃ ||೨|| ಎಂದು ಸಾರುವ ಶಿವಾಗಮೋಕ್ತಿಗಳಂತೆ ಅನಂತ ಮಹಿಮಾಶಾಲಿಗಳೂ, ದ್ವಿತೀಯ ವೃಷಭಾವತಾರಿಗಳೂ, ಜಗದಾಚಾರ್ಯರ ನಿಷ್ಠಾತತ್ಪರರೂ, ಆಗ ಭೂತಲದಲ್ಲಿ ಮೆರೆದು ಪರಮಾತ್ಮನಲ್ಲಿ ಬೆರೆದ ಕಲಬುರ್ಗಿಯ ಶರಣಬಸವೇಶ್ವರ ಗುರುಭಕ್ತಾಗ್ರಗಣ್ಯರ ಪುರಾಣವು 15-20 ವರ್ಷಗಳ ಲಾಗಾಯಿತು ಮೇಲೆ ತೋರಿಸಿದ ವತನದಾರರಿಂದಲೂ, ಇತಿಹಾಸಪ್ರಸಿದ್ಧರಾದ ಹಮ್ಮಿಗಿ ಶ್ರೀಮಂತ ದೇಸಾಯಿಯವರ ವಂಶಜರಾದ ಮ|| ರಾ|| ರಾಚಪ್ಪ ಬಹದ್ದೂರ ದೇಸಾಯಿ ಇವರೇ ಮೊದಲಾದ ಭಕ್ತಮಂಡಳಿಯ ಸಹಾಯದಿಂದಲೂ, ಸದರಿ ಗ್ರಾಮದವರ ಕೈಂಕರ್ಯಾದಿ ಭಕ್ತಿಪ್ರಭಾವದಿಂದಲೂ, ನಿರಾತಂಕವಾಗಿ ಪ್ರತಿವರ್ಷ ನೆರವೇರುತ್ತ ಬಂದಿರುವದು ಸರ್ವರಿಗೆ ತಿಳಿದ ವಿಷಯವಾಗಿದೆ. ಈ ವರ್ಷವಾದರೂ ತತ್ಪುರಾಣವು ಶ್ರೀ ನಂದೀಶ್ವರ ದೇವಾಲಯದಲ್ಲಿ ಆಶ್ವಿಜ ಬ|| ೭ ದಿವಸ ಆರಂಭವಾಗಿ ವೇ|| ಕವೀಂದ್ರ ಅಮರನಾಥಶಾಸ್ತ್ರಿಗಳು, ಬೃಹಸ್ಪತಿ ಬನ್ನಿಕೊಪ್ಪ ಇವರ ನಿಗಮಾಗಮ ಪುರಾಣಗರ್ಭಿತವಾಕ್ಯರಚನಾ ಗಾಂಭೀರ್ಯಪ್ರಯೋಗದ ಬೋಧನೆಯಿಂದಲೂ, ಕಲಾಕೌಶಲ್ಯಧುರೀಣರಾದ ರಾ|| ಫಕೀರಪ್ಪ ಪಾರದ ಕವಲೂರು ಇವರ ಓದುವಿಕೆಯಿಂದಲೂ, ರಾ|| ವೆಂಕಪ್ಪ ಆಡೂರು, ರಾ|| ರಾಯಪ್ಪ ಉಟಗನೂರು, ರಾ|| ಸಂಗನಗೌಡ ಮತ್ತು ರಾಯನಗೌಡ ಪರಮಗೌಡರ ಇವರೇ ಮೊದಲಾದವರ ಆದರಾತಿಥ್ಯದಿಂದಲೂ, ನಡೆದು ಇದೇ ಮಾರ್ಗಶಿರ ಶು|| ೧೧ ಸೋಮವಾರದ ದಿವಸ ಸಮಾಪ್ತಿಯಾಯಿತು. ಆಹೊತ್ತಿನ ದಿವಸ ಕವಲೂರ. ಸಂಸ್ಕೃತಪಾಠಶಾಲಾಧ್ಯಾಪಕರಾದ ವಂಟಿಮುರಿದ ಪಂ|| ಚನ್ನಬಸವಶಾಸ್ತ್ರಿ, ಇವರೂ, ಹಾಗೂ ವಿದ್ಯಾರ್ಥಿಗಳೂ, ಸಮಸ್ತ ಮಾಹೇಶ್ವರರೂ ಆಗಮಿಸಿದ್ದರು. ಅವರೆಲ್ಲರಿಗೆ ವ್ಯವಸ್ಥಾಪಕಮಂಡಳಿಯವರಿಂದ ಸಂತೃಪ್ತಿಯಾಗಿ ದಕ್ಷಿಣಾ. ತಾಂಬೂಲಾದಿಗಳು ಸಮರ್ಪಿಸಲ್ಪಟ್ಟವು. ಉತ್ಸವಕ್ಕಾಗಿ ಕವಲೂರು, ಘಟ್ಟಿರಡ್ಡಿಹಾಳ, ಹಳ್ಳಿಕೇರಿ, ಬನ್ನಿಕೊಪ್ಪ ಮೊದಲಾದ ಗ್ರಾಮಗಳಿಂದ ಬಂದಿದ್ದ ಸದ್ಭಕ್ತಮಹಾಶಯರ ತೃಪ್ತಿಯಾದ ಬಳಿಕ ಪುರಾಣೋತ್ಸವವು ರಾತ್ರಿ 12 ಘಂಟೆಗೆ ಪ್ರಾರಂಭವಾಗಿ ಶ್ವೇತಚ್ಛತ್ರ ಮಕರತೋರಣಾದಿ ಬಿರುದಾವಳಿಗಳಿಂದಲೂ, ಅನೇಕ ವಾದ್ಯಗಳಿಂದಲೂ, ಪಾಠಶಾಲಾ ವಿದ್ಯಾರ್ಥಿಗಳ ಜಯಘೋಷದಿಂದಲೂ, ಸದರಿ ಗ್ರಾಮಗಳ ಭಜನಾಸಂಘದವರ ಶಿವಭಜನೆಯಿಂದಲೂ, ಶ್ರೀ ಜಗದ್ಗುರು ಪಂಚಾಚಾರ್ಯರ ಜಯ ಮತ್ತು ಭಜನೆಗಳಿಂದಲೂ, ಒಳ್ಳೇ ವಿಜೃಂಭಣೆಯಿಂದಾಗಿ, ಆ ಗ್ರಾಮದ ಬಿಲ್ವಮಂಟಪಕ್ಕೆ ತಲುಪಿ ಮಹಾನೀರಾಜನವಾಗಿ, ಪುನಃ ಶ್ರೀ ನಂದೀಶ್ವರದೇವಾಲಯಕ್ಕೆ ಬರುವದರೊಳಗಾಗಿಯೇ ಸೂರ್ಯನಾರಾಯಣನು ಶಿವಶರಣರ ಮಂಗಲೋತ್ಸವವನ್ನು ನೋಡಿ ತೃಪ್ತಿಹೊಂದುವ ಆಸೆಯುಳ್ಳವನಾಗಿ ತನ್ನ ಸಹಸ್ರಕಿರಣಗಳಿಂದ ಪ್ರಕಾಶಮಾನನಾದನು. ಅನಂತರ ವೇ|| ಶಾಸ್ತ್ರಿಗಳು ತಮ್ಮ ಶೀಘ್ರಕವಿತಾಬಲದಿಂದ ಫಲಶ್ರುತಿಯ ವಿಷಯವನ್ನು ಚೆನ್ನಾಗಿ ಬೋಧಿಸಲು ಪುರಾಣದ ಕಾರ್ಯದರ್ಶಿಗಳಾದ ವಿ|| ರಾ|| ಫಕೀರಯ್ಯನವರು ಪೋಲೀಸ ಕವಲೂರ. ಇವರು ಕವೀಂದ್ರ ಅಮರನಾಥಶಾಸ್ತ್ರಿಗಳ ಕವಿತಾಚಾತುರ್ಯವನ್ನೂ, ಶಾಸ್ತ್ರಿಗಳಲ್ಲಿ ಇರತಕ್ಕ ಸದ್ಗುಣಗಳ ಸೌಂದರ್ಯವನ್ನೂ ವರ್ಣಿಸಿ. ಪುಷ್ಪಹಾರವನ್ನೂ ಯೋಗ್ಯ ಸಂಭಾವನೆಯನ್ನೂ ಶಾಸ್ತ್ರಿಗಳಿಗೆ ಸಮರ್ಪಿಸಿದ್ದಲ್ಲದೆ ವೀರಶೈವಧರ್ಮದ ಉದಾತ್ತತತ್ವಗಳನ್ನು ಪ್ರಕಾಶಪಡಿಸಲು ಚಿಜ್ಜ್ಯೋತಿಸ್ವರೂಪವನ್ನು ಧ ಸಿರುವ "ಪಂಚಾಚಾರ್ಯಪ್ರಭಾ" ದೇವಿಗೆ ಭ ಯಿಂದ 3 ರೂಪಾಯಿಗಳನ್ನು ತೆಗೆದಿಟ್ಟರು. ಆ ಮೇ ಸರ್ವರು ಮಂಗಲವನ್ನು ಮಾಡಿ ಉತ್ಸವಕಾರ್ಯವನ್ನು ಪೂರೈಸಿದರು. ಸದರಿ ಗ್ರಾಮಗಳ ಭಕ್ತರು ಉತ್ಸ ಭಾಗಿಗಳಾದವೆಂದೂ, "ಮೂರ್ತಿಯು ಸಣ್ಣದಿದ್ದರೂ ಕೀರ್ತಿಯು ದೊಡ್ಡದಿರುವದೆಂದೂ" ಮಾತಾಡುತ್ತ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು.

ಓರ್ವ ಉತ್ಸವಭಾಗಿ,
ವೆಂಕಪ್ಪ ಪೂಜಾರಿ, ಕವಲೂ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತ

ಶ್ರೀ ಕೇದಾರನಾಥದ್ವಾರಬಂಧನ ಪೂಜೋತ್ಸವವು.

ಶ್ರೀ ಜಗದ್ಗುರು ಪಂಚಾಚಾರ್ಯರು ಪರಮ ಕಧರ್ಮಗಳನ್ನೊಳಗೊಂಡ ವೀರಶೈವಮತವನ್ನು ತುಹಿನಾಚಲಪರ್ಯಂತವಾಗಿ ಸ್ಥಾಪಿಸಿ ಭರತಖ ಸುಪ್ರಸಿದ್ಧ ಪಂಚಭಾಗಗಳಲ್ಲಿ ಪಂಚಪೀಠಗಳನ್ನು ಸ್ಥಾ ಸಿರುವದು ಆಗಮಾದಿಗಳಲ್ಲಿ ಶಾಸ್ತ್ರರೀತ್ಯಾ ಪ್ರಸಿ

ದ್ದಂತೆ ಪ್ರತ್ಯಕ್ಷವಾಗಿ ಕಾಶೀ, ಶ್ರೀಶೈಲ, ಕೇದಾರ, ಉಜ್ಜಯಿನೀ, ಬಾಳೆಹಳ್ಳಿ ಕ್ಷೇತ್ರಗಳಲ್ಲಿ ಸ್ವಕೀಯ ದಿವ್ಯತೇಜಃ ಪ್ರಭಾವದಿಂದ ರಾರಾಜಿಸುತ್ತಿರುವದು ಸರ್ವವಿಶ್ರುತವಿರುವದಷ್ಟೇ! ಆ ಪಂಚಪೀಠಗಳಲ್ಲೊಂದಾದ ಜಗದ್ಗುರು ಏಕೋರಾಮಾರಾಧ್ಯರ ಕೇದಾರ ಪೀಠದ ಅಧೀನವಾಗಿ ೨೨ ದಿವ್ಯ ಕ್ಷೇತ್ರಗಳಿದ್ದು ಪೂಜಾದಿ ಕಾರ್ಯವು ಮಹಾಸಂಸ್ಥಾನದ ವತಿಯಿಂದಲೇ ನಡೆಯುತ್ತಿರುವದು ಲೋಕಪ್ರಸಿದ್ಧವೇ ಅದೆ. ಮೂಲ ಜ್ಯೋತಿರ್ಲಿಂಗವಾದ ಕೇದಾರನಾಥನ ಪೂಜೆಯು ಆರು ತಿಂಗಳವರೆಗೂ ನಡೆಯುತ್ತಾ ಅನಂತರ ಕಾರ್ತಿಕಾರಂಭದಲ್ಲಿ ಬರ್ಫವು ಬಿದ್ದು ದೇವಾಲಯವೇ ಮುಚ್ಚಿಹೋಗುತ್ತಿರುವದು. ಆದಕಾರಣ ಕಾರ್ತಿಕ ಶು|| ೧ ಲ್ಲಿ ಪೂಜಾರಿಗಳು ಬಾಗಿಲಮುಚ್ಚಿ ಉಖಾಮಠಕ್ಕೆ ಸೇರಿದವರು ಪುನಃ ವೈಶಾಖಮಾಸಕ್ಕೆ ಪೂಜಾದಿ ಸಂಭ್ರಮದೊಡನೆ ಬಾಗಿಲತೆರೆಯುವರು. ಅಲ್ಲಿಯವರೆಗೆ ಆ ಜ್ಯೋತಿರ್ಲಿಂಗವನ್ನು ಪ್ರತಿನಿತ್ಯ ದೇವತೆಗಳು ಪೂಜಿಸುತ್ತಿರುವರೆಂಬುವದೇ ನಿಶ್ಚಯವು! ಅದೇನೆಂದರೆ, ವೈಶಾಖಮಾಸದ ಬೇಸಿಗೆಯಲ್ಲಿ ಬರ್ಫವು ಕರಗಿ ದೇವಾಲಯದಲ್ಲಿ ಬೀಳಿದ ಬರ್ಫವನ್ನು ತೆಗೆದು ಪುನಃ ಬಾಗಿಲು ತೆರೆಯುವಾಗ್ಯೆ ತತ್ಕಾಲದಲ್ಲಿ ಪೂಜೆಮಾಡಿದಂತಿರುವ ಲಕ್ಷಣವು ಕಣ್ಣಾರೆ ನೋಡಿದ ಮನುಷ್ಯನನ್ನು ಭಕ್ತಿರಸದಲ್ಲಿ ಮುಳುಗಿಸಿ ಆಶ್ಚರ್ಯಗೊಳಿಸುವಂಥ ಪ್ರಜ್ವಲಿಸುವ ದೀಪಗಳೂ ಘಮಘಮಿಸುತ್ತಿರುವ ಸುವಾಸನೆಯ ಧೂಪವೂ ನೂತನ ಪುಷ್ಪಮಾಲೆಗಳೂ ಪತ್ರಿಪುಷ್ಪ ತಾಂಬೂಲಾದಿ ಉಪಚಾರ ಸಾಮಗ್ರಿಗಳೂ ದೇವತೆಗಳು ಪೂಜಿಸುತ್ತಿರುವರೆಂಬುವದಕ್ಕೆ ಪ್ರತ್ಯಕ್ಷ ಪ್ರಮಾಣಗಳಾಗಿವೆ. ಏತನ್ಮಾಹಾತ್ಮ್ಯ ವಿಶಿಷ್ಟ ಭೂಕೈಲಾಸವೆನಿಸಿದ ಕೇದಾರೇಶ್ವರಪ್ರಾಂತದಲ್ಲಿ ಪ್ರತಿವರ್ಷಕ್ಕಿಂತಲೂ ಈ ವರ್ಷ ವಿಶೇಷವೃಷ್ಟಿಯಾದ್ದರಿಂದ ಶೀತಾತಿಶಯವಾಗಿ ಬರ್ಫವು ಸುರಿಯಲಾರಂಭಿಸಿರುವದು. ಸದರಿ ಕೇದಾರೇಶನ ಮಹಾಪ್ರಾಂತದಲ್ಲಿ ಸನಾತನ ಪದ್ಧತಿಯಂತೆ ಈ ವರ್ಷ ಕಾರ್ತಿಕ ಶು|| ೧ ಬುಧವಾರದಲ್ಲಿ ಅತಿ ಸಂಭ್ರಮದೊಡನೆ ಸಾಂಗವಾಗಿ ಮಹಾಪೂಜೆಯು ಜಗದ್ಗುರು ಸಂಸ್ಥಾನದಿಂದ ಈ ವರ್ಷ ನಿಯಮಿಸಿದ ಜಯಲಿಂಗ ಪೂಜಾರಿಯಿಂದ ಪೂರೈಸಿ ಕವಾಟಬಂಧನವಾದನಂತರ ಕೇದಾರನಾಥನ ಉತ್ಸವಮೂರ್ತಿಯನ್ನು ಸಮಸ್ತ ವಾದ್ಯ ಸಂಭ್ರಮದೊಡನೆ ಪುಷ್ಪವಿಮಾನದಲ್ಲಿ ಮೂರ್ತಗೊಳಿಸಲು ಸರ್ವರೂ ಭಕ್ತಿಯಿಂದ ಕೇದಾರನಾಥಮಹಾರಾಜಕೀ ಜೈ, ಎಂದು ಜಯಘೋಷವನ್ನು ಮಾಡಿದರು. ತತ್ಕಾಲದಲ್ಲಿ ಬರ್ಫವು ಸತತ ಸುರಿಯುತ್ತಿದ್ದುದರಿಂದ ದೇವಾಲಯವು ಮನುಷ್ಯನ ಕಂಠಪ್ರಮಾಣ ಮುಚ್ಚಿಹೋಗಿತ್ತು. ಆಗ ಅಲ್ಲಿ ಕೂಡಿದ ಸರ್ವಭಕ್ತರಿಗೆ ತಳಭಾಗದಲ್ಲಿ ತಂಪಾದ ಬರ್ಫವನ್ನು ತುಳಿಯುವದರಿಂದಲೂ, ಮೇಲೆ ಪುಷ್ಪವೃಷ್ಟಿಯಂತೆ ಬರ್ಫವು ಬೀಳುತ್ತಿರುವದರಿಂದಲೂ ಶೀತಬಾಧೆಯು ಅತಿಶಯವಾಯಿತಾದರೂ ಉತ್ಸವದ ಸಂಭ್ರಮದಲ್ಲಿ ತಮಗುಂಟಾದ ನಿಶ್ಚಲಭಕ್ತಿಯ ಆನಂದದೊಡನೆ ಉಖಾಮಠದ ಮಾರ್ಗವಾಗಿ ಚಲಿಸುತ್ತಿದ್ದರು. ಮಾರ್ಗಮಧ್ಯದಲ್ಲಿರುವ ಗ್ರಾಮದವರೆಲ್ಲರೂ ತಮ್ಮ ತಮ್ಮ ಗ್ರಾಮಗಳನ್ನು ನಾನಾತೋರಣಗಳಿಂದಲಂಕರಿಸಿ ಆನಂದದಿಂದ ಪವಿತ್ರ ಸೇವಕರಾಗಿ ಉತ್ಸವಮೂರ್ತಿಗೆ ಫಲತಾಂಬೂಲಾದಿಗಳನ್ನರ್ಪಿಸಿ ಕರ್ಪೂರಮಂಗಳಾರತಿಯನ್ನು ಮಾಡುತ್ತಾ ಗಾನದೊಡನೆ ಕೇದಾರನಾಥನ ವಿಷಯಕ್ಕೆ ಸ್ಥಿರವಾದ ಅಸಾಧಾರಣವಾದ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಉತ್ಸವಮೂರ್ತಿಯು ದಯಮಾಡಿ ಬರಲಾಗಿ ಮಹಾಸಂಸ್ಥಾನ ಇನ್ಸ್ಪೆಕ್ಟರು ಇನ್ಸ್ಪೆಕ್ಟರು ಧರ್ಮಾರ್ಥ ವೈದ್ಯಾಲಯದವರು ಸಮಸ್ತ ವಾದ್ಯಸಂಭ್ರಮದೊಡನೆ ಸಂಸ್ಥಾನ ಶಾಲಾ ವಿದ್ಯಾರ್ಥಿಗಳ ಸಂಗೀತ ಭಜನಾನಂದ ಪಂಡಿತಮಂಡಲಿಯ ವೇದಘೋಷಪುರಸ್ಸರ ಉತ್ಸವಮೂರ್ತಿಯನ್ನಿದಿರ್ಗೊಂಡು ಫಲತಾಂಬೂಲಾದಿಗಳನ್ನರ್ಪಿಸಿ ಕರ್ಪೂರಮಂಗಳಾರತಿಯನ್ನಿತ್ತು ಉತ್ಸವಮೂರ್ತಿಯನ್ನು ಉನ್ನತಾಸನದಲ್ಲಿ ಮೂರ್ತಗೊಳಿಸಿದರು. ತರುವಾಯ ಪಾಠಶಾಲಾಧ್ಯಾಪಕರಿಂದ ಕೇದಾರಕ್ಷೇತ್ರಪ್ರಭಾವ ವಿಷಯವಾಗಿ ಜನಗಳಿಗತ್ಯಾನಂದವಾಗುವಂತೆ ತಮ್ಮ ಅಸ್ಖಲಿತ ವಾಣಿಯಿಂದ ದೇಶಭಾಷೆಯಲ್ಲಿ ವ್ಯಾಖ್ಯಾನಮಾಡಿದರು. ಅನಂತರ ಸರ್ವರ ಅನುಷ್ಠಾನಕ್ಕೆ ಸಮಯವಾದ ಕಾರಣ ಸರ್ವರೂ ತಮ್ಮ ತಮ್ಮ ಗೃಹಕ್ಕೆ ತೆರಳಿದರು.

ಶ್ರೀ ಜಗದ್ಗುರುಸಂಸ್ಥಾನದ [illegible],
ಪಂಡಿತ ಅಂಬಾದತ್ತ.

ಪಂಚಾಚಾರ್ಯ ಕರ್ನಾಟಕ ಗ್ರಂಥಮಾಲಾ, ತುಮಕೂರು.

ಈ ಪ್ರಪಂಚದ ಯಾವುದೊಂದು ಜನಾಂಗವು ಸುಧಾರಿಸಬೇಕಾದರೂ ಮೊದಲು ಆ ಜನರ ಸಾಹಿತ್ಯವು ಉರ್ಜಿತಾವಸ್ಥೆಗೆ ಬರಬೇಕಾಗುವದು. ಸಾಹಿತ್ಯವು ಜನಜೀವನದ ಜೀವಾಳವೆಂದೂ, ದೇಶಾಭಿವೃದ್ಧಿಗೆ ಮೂಲಾಧಾರವೆಂದೂ ಅಭಿಜ್ಞರು ಹೇಳುವರು. ಅದುದರಿಂದಲೇ ಏಳಿಗೆಯನ್ನು ಅಪೇಕ್ಷಿಸುವ ಪ್ರತಿಯೊಂದು ಜನಾಂಗವೂ ತನ್ನ ಸಾಹಿತ್ಯಭಂಡಾರವನ್ನು ಸರ್ವಾಂಗ ಸುಂದರವಾಗಿರುವಂತೆ ವರ್ಧಿಸಿಕೊಳ್ಳುವುದು.

ವೀರಶೈವ ಕವಿಗಳೂ, ಪಂಡಿತರೂ ಸಾಹಿತ್ಯಪ್ರಪಂಚದಲ್ಲಿ ಹಿಂದಿನಕಾಲದಿಂದಲೂ ವಿಖ್ಯಾತರಾಗಿರುವರು. ಸಂಸ್ಕೃತ, ಕರ್ನಾಟಕ, ದ್ರಾವಿಡ ಮತ್ತು ಆಂಧ್ರಭಾಷೆಗಳಲ್ಲಿ ವೀರಶೈವಕವಿಗಳು ಮಾಡಿರುವ ಭಾಷಾಸೇವೆಯನ್ನು ತಿಳಿವಳಿಕೆಯುಳ್ಳ ಯಾರೂ ಕೊಂಡಾಡದಿರರು.

ಕರ್ನಾಟಕ ಭಾಷೆಯಲ್ಲಂತೂ ವೀರಶೈವಗ್ರಂಥ ಭಂಡಾರವು ವಿಪುಲವಾಗಿರುವದು. ಹೀಗಿದ್ದರೂ ಈ ಅಪರಿಮಿತ ಗ್ರಂಥರಾಶಿಗಳೆಲ್ಲಾ ತಾಳೆಯೋಲೆಯಲ್ಲಿಯೇ ಇರುವುವಲ್ಲದೆ ದಿನೇದಿನೇ ನಶಿಸಿ ಹಾಳಾಗುತ್ತಲೂ ಇರುವುವು.

ಈಗಿನಂತಹ ನವನಾಗರಿಕ ಕಾಲದಲ್ಲಿಯೂ ಅಮೂಲ್ಯವಾದ ಕಾವ್ಯರತ್ನಗಳನ್ನು ಪ್ರಕಟಿಸದಿರುವುದು ಭಾಷೆಗೂ, ಸಮಾಜಕ್ಕೂ ಮಹತ್ತರವಾದ ನಷ್ಟವೆಂಬುದನ್ನು ಯಾವ ವಿವೇಕಿಯೂ ಒಪ್ಪದಿರನು.

ವೀರಶೈವ ಸಮಾಜದಲ್ಲಿ ಹೆಸರಾದ ಕೈ|| ರಾವಬಹದ್ದೂರ ವಾರದಮಲ್ಲಪ್ಪನವರು, ಕೈ|| ಯಜಮಾನ್ ವೀರಸಂಗಪ್ಪನವರು, ಕೈ|| ಆಸ್ಥಾನವಿದ್ವಾನ್ ಎಸ್. ಆರ್. ಕರಿಬಸವಶಾಸ್ತ್ರಿಗಳು, ಕೈ|| ಯಂ. ಬಸವಲಿಂಗ ಶಾಸ್ತ್ರಿಗಳು, ಕೈ|| ನಂ. ಶಿವಪ್ಪಶಾಸ್ತ್ರಿಗಳು ಮೊದಲಾದ ಮಹಾಶಯರು ತಮ್ಮ ತಮ್ಮ ಶಕ್ತಿಮೀರಿ ಗ್ರಂಥಪ್ರಚಾರಮಾಡಿ ಯಶಃಕಾಯದಿಂದ ಶೋಭಿಸುತ್ತಿರುವರು.

ಮೈಸೂರು ಆಸ್ಥಾನಮಹಾವಿದ್ವಾನ್ ಕರ್ನಾಟಕ ಭಾಷಾರತ್ನ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳು, ಹೊಸಮಠದ ಚರಮೂರ್ತಿ ಶ್ರೀ ಬಸವಲಿಂಗಸ್ವಾಮಿಗಳು, 'ಶಿವಾನುಭವ', 'ನವಕರ್ನಾಟಕ' ಪತ್ರಿಕೆಗಳ ಸಂಪಾದಕರಾದ ಶ್ರೀಯುತ ರಾವ್‌ಸಾಹೇಬ ಫ. ಗು. ಹಳಕಟ್ಟಿ, ಬಿ.ಎ., ಎಲ್‌.ಎಲ್‌.ಬಿ., ಯವರು ಮೊದಲಾದ ಮಹನೀಯರು ಮಾಡಿಯೂ ಮಾಡುತ್ತಲೂ ಇರುವ ಭಾಷಾಸೇವೆಯನ್ನು ಕೊಂಡಾಡದವರೊಬ್ಬರಾದರೂ ಇಲ್ಲ.

ಮೇಲೆ ಉದಹರಿಸಿದಂತೆ ಹಲವುಮಂದಿ ಪುಣ್ಯಾತ್ಮರು ವೀರಶೈವ ಗ್ರಂಥಪ್ರಸಾರಕ್ಕೆ ಸಾಹಸಮಾಡಿರುವುದು ಅಭಿನಂದನೀಯವೇ ಸರಿ. ಆದರೆ ಇಷ್ಟಕ್ಕೇ ನಾವು ತೃಪ್ತರಾಗಿ ಕುಳಿತುಕೊಳ್ಳುವಹಾಗಿಲ್ಲ.

ವೀರಶೈವ ಸಾಹಿತ್ಯಪ್ರಚಾರಕ್ಕಾಗಿ ಇನ್ನೂ ಹಲವು ಮಂದಿ ಪಂಡಿತರು ಬಹುಕಾಲ ಶ್ರಮಪಡಬೇಕಾಗಿದೆ. ಗ್ರಂಥಪ್ರಚಾರವು ಸುಲಭಸಾಧ್ಯವಾದುದೂ, ಬೇಗಬೇಗ ಮುಗಿಯುವುದೂ ಅಹುದೆಂದು ಯಾರೂ ಭಾವಿಸಲಾಗದು. ಇದರ ಕಷ್ಟಕಾರ್ಯದಲ್ಲಿ ತೊಡಗಿದವನಿಗೆ ಮಾತ್ರ ಅನುಭವಕ್ಕೆ ಬರುವುದು.

ಪ್ರಕೃತದಲ್ಲಿ ಆಗಬೇಕಾದ ವೀರಶೈವ ಸಾಹಿತ್ಯಸೇವೆಯನ್ನೆಲ್ಲಾ ಯಾವುದಾದರೊಂದು ವ್ಯಕ್ತಿಯು ಮಾಡುವೆನೆಂದು ಸಂಕಲ್ಪಿಸುವುದೂ ಆಗದ ಮಾತಾಗಿದೆ. ಏತಕ್ಕೆಂದರೆ ಕಾರ್ಯವು ಅಗಾಧವಾದುದು. ವ್ಯಕ್ತಿಮಾತ್ರದ ಶಕ್ತಿಯೂ ಆಯುಸ್ಸೂ ಅಲ್ಪವಾದುದು. ಇಷ್ಟಾದಮಾತ್ರಕ್ಕೆ ಯಾವನಾದರೊಬ್ಬ ಸಾಹಿತ್ಯ ಹಾಗೂ ಸಮಾಜಪ್ರೇಮವುಳ್ಳ ಪುರುಷನು ಸ್ಥೈರ್ಯದಿಂದಲೂ ಧೈರ್ಯದಿಂದಲೂ ಲೋಕಸೇವೆಗೆ ಮುಂದಡಿಯಿಡುವುದನ್ನು ಆತ್ಮಾವಲಂಬನೆಯ ಘನತೆಯನ್ನರಿತ ಯಾರೂ ಅಲ್ಲಗಳೆಯಲಾರರು.

ನಾನಾದರೂ ಮೇಲ್ಕಂಡ ದೃಷ್ಟಿಯಿಂದ ಅಂತರಾತ್ಮನಿಂದ ಪ್ರೇರೇಪಿಸಲ್ಪಟ್ಟವನಾಗಿ "ಪಂಚಾಚಾರ್ಯ ಕರ್ನಾಟಕ ಗ್ರಂಥಮಾಲಾ" ಎಂಬ ಹೆಸರಿನಿಂದ ಕೆಲವು ಗ್ರಂಥಗಳನ್ನು ಪ್ರಕಟಿಸಲು ಈ ಕಾರ್ಯಕ್ಕೆ ಪ್ರಯತ್ನಿಸಿರುವೆನು.

ಈ ಗ್ರಂಥಮಾಲೆಯಲ್ಲಿ ಪುರಾತನವಾದ ಕಾವ್ಯಗಳೂ, ಪುರಾಣಗಳೂ, ಹಾಡುಗಬ್ಬಗಳೂ ಮೊದಲಾದವುಗಳು ಪ್ರಕಟಿಸಲ್ಪಡುವುವು. ಇದಲ್ಲದೆ ವೀರಶೈವ ಧರ್ಮಗ್ರಂಥಗಳ ಪ್ರಕಟನೆಗೆ ಈ ಗ್ರಂಥಮಾಲೆಯು ಬಹುವಾಗಿ ಯತ್ನಿಸುವುದು. ವೀರಶೈವಮತೈಕ್ಯದೃಷ್ಟಿಯಲ್ಲದೆ ಅಖಂಡ ಕರ್ನಾಟಕ ಸಾಹಿತ್ಯದೃಷ್ಟಿಯಿಂದಲೂ, ಕಾವ್ಯ, ನಾಟಕ, ಕಾದಂಬರಿ, ಜೀವನಚರಿತೆ, ಕರ್ನಾಟಕಗ್ರಂಥಗಳ ವಿಮರ್ಶೆ, ಇತಿಹಾಸ, ನವೀನವಾದ ಕವಿತೆಗಳು ಮೊದಲಾದ ಎಲ್ಲಬಗೆಯ ಸಾಹಿತ್ಯ ಗ್ರಂಥಪ್ರಕಟನೆಯನ್ನೂ ನಡೆಸಲಾಗುವುದು.

ಇಂತು ಕಾರ್ಯಪ್ರವರ್ತಕ
'ಕೀರ್ತನಕೇಸರಿ' 'ಕವಿರತ್ನ' ಬಿ. ಶಿವಮೂರ್ತಿಶಾಸ್ತ್ರಿ
ತುಮಕೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ ಸ್ಥಾಪನೆ.

ಬಳ್ಳಾರಿ ಜಿ|| ಆಲೂರು ತಾಲ್ಲೂಕು ಗೂಳ್ಯ.

ಈ ಗ್ರಾಮದ ವೀರಶೈವರು "ಸಂಘೇಶಕ್ತಿಃ ಕಲೌಯುಗೇ" ಎಂಬಂತೆ ಕಲಿಯುಗದಲ್ಲಿ ಸಂಘಗಳ ಶಕ್ತಿಯೇ ಮುಖ್ಯವೆಂಬುದಾಗಿ ತಿಳಿದು ಇದೇ ಗ್ರಾಮದ ಮಠದ ವೇ|| ಕೊಟ್ಟೂರಸ್ವಾಮಿಗಳು, ವೇ|| ರಾಯಚೂರು ಮಠದ ದೊಡ್ಡಬಸವಯ್ಯನವರು, ಮ|| ರಾ|| ಕಾಮನಹಾಳು ಫಕೀರಯ್ಯನವರು ಮ|| ರಾ|| ಚಿಪ್ಪಬಸವಪ್ಪನವರು, ಮ|| ರಾ|| ಪುಳ್ಳೇಗಡ್ಡೆ ರುದ್ರಪ್ಪನವರು ಇವರುಗಳ ಪ್ರೋತ್ಸಾಹದಿಂದ ಪ್ರಭವನಾಮಸಂವತ್ಸರದ ಆಶ್ವಿಜ ಶು|| ೧೫ (ತಾ|| 10-10.27) ಸೋಮವಾರ ಒಂದು ಸಭೆಯನ್ನು ಮಾಡಿ ಮ|| ರಾ|| ಗೌಡರ ಶಿವಬಸವನಗೌಡ್ರು, ಮ|| ರಾ|| ಪಾಟೀಲ್ ಕಲ್ಲನಗೌಡ್ರು ಇವರನ್ನು ಈ ಭಜನಾಸಂಘಕ್ಕೆ ಅಧ್ಯಕ್ಷರನ್ನಾಗಿ ನಿಯಮಿಸಿದರು. ಈ ಆಗಾಯಿತು ಮುಂದೆ ಪ್ರತಿಸೋಮವಾರ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಸಾಯಂಕಾಲ 6 ಘಂಟೆಯಿಂದ 9 ಘಂಟೆಯವರೆಗೂ ನಡೆಯಿಸುವಂತೆ ನಿರ್ಧರಿಸಿ ಶ್ರೀ ಈಶ್ವರದೇವಾಲಯದಲ್ಲಿ ಮಂಟಪವನ್ನು ರಚಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟವನ್ನು ಮೂರ್ತಗೊಳಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮ|| ರಾ|| ಪಿಟೀಲು ವೀರಯ್ಯನವರು, ಮ|| ರಾ|| ಜವಳಿನಾಗಯ್ಯನವರು, ಮ|| ರಾ|| ಹೇರೂರು ಲಿಂಗನಗೌಡ್ರು, ರಾ|| ಹೊಳಲುಗುಂದಿ ಪಟ್ಟದ ಚನ್ನವೀರಪ್ಪನವರು ಇವರ ಸಂಗೀತದಿಂದಲೂ ಮತ್ತು ವೇದಘೋಷದಿಂದಲೂ ಸ್ತುತಿಪಾಠಕರಿಂದಲೂ ಮಂಗಲವಾದ್ಯಗಳೊಡನೆ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಅತಿ ವಿಜೃಂಭಣೆಯಿಂದ ನಡೆಯಿಸಿ ಅನಂತರ ಸರ್ವರೂ ಗುರುಪ್ರಸಾದವನ್ನು ಸ್ವೀಕರಿಸಿ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಶ್ರೀ ಜಗದಾಚಾರ್ಯರ ಕೃಪಾಕಟಾಕ್ಷದಿಂದ ಇದುವರೆವಿಗೂ ಈ ಸಂಘವು ಏಕಮುಖದಿಂದ ನಡೆಯುವದಾಯಿತು. ಮುಂದೆ ಈ ಸಂಘಕ್ಕೆ ಕುಂದುಕೊರತೆಗಳು ಬಾರದಂತೆ ಇದೇ ರೀತಿ ಏಕಮುಖದಿಂದ ನಡೆಯುವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಭಜನಾಸಂಘದವರಿಗೆ ಆಶೀರ್ವದಿಸಬೇಕೆಂದಾಗಿ ಪ್ರಾರ್ಥಿಸುತ್ತೇನೆ. ವಾಚಕಮಹಾಶಯರೇ! ಈ ಗ್ರಾಮದಲ್ಲಿ ಈ ಭಜನಾಸಂಘವನ್ನು ಸ್ಥಾಪನೆಮಾಡುವದಕ್ಕೆ ಹದಿನೈದು ದಿವಸಗಳ ಮುಂಚೆ ಸ್ವಲ್ಪ ಕಾಲರಾ ಗಲಾಟೆಯಿಂದ ಎರಡು ಮೂರು ಜನಗಳು ಮರಣವನ್ನೈದಿದರು. ಇದೇ ಕಾರಣದಿಂದ ಶ್ರೀಜಗದಾಚಾರ್ಯರ ಭಜನಾಸಂಘವನ್ನು ಸ್ಥಾಪನೆ ಮಾಡಿದ ತಕ್ಷಣವೇ ಕಾಲರಾ ಗಲಾಟೆ ಕಡಿಮೆಯಾಗಿರುತ್ತದೆ. ನಂಬಿದವರಿಗೆ ಇಂಬುಲಿಂಗವೆಂಬ ಸಿದ್ಧಾಂತವಾಕ್ಯವು ಎಂದಿಗೂ ಸುಳ್ಳಾಗಲಾರದು. ಆದ್ದರಿಂದ ವೀರಶೈವಮಹಾಶಯರೆಲ್ಲರೂ ತಮ್ಮ ತಮ್ಮ ಗ್ರಾಮಗಳಲ್ಲಿ ಶ್ರೀ ಜಗದಾಚಾರ್ಯರ ಭಜನಾಸಂಘಗಳನ್ನು ಸ್ಥಾಪಿಸುತ್ತಾ ಗುರುಭಕ್ತಿಯಲ್ಲಿ ನಿರತರಾಗುವರೆಂದು ಹಾರೈಸುತ್ತೇನೆ

ಓರ್ವ ಸಮಾಜಹಿತಚಿಂತಕ.

ಪಂಚಾಚಾರ್ಯ ಪ್ರಭಾ

೧೯೨೭ ನೇ ಡಿಶಂಬರ್ ತಾ|| ೧೯ ನೇ ಸೋಮವಾರ

ಮಹಾಸಭೆ.

ಬೆಂಗಳೂರು ನಗರದಲ್ಲಿ ಈ ತಿಂಗಳು ತಾರೀಖು 28-29-30 ರಲ್ಲಿ ಅಖಿಲಭಾರತ ವೀರಶೈವಮಹಾಸಭೆಯು ನಡೆಯುವಂತೆ ನಿರ್ಧರಿಸಲ್ಪಟ್ಟಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆಯಷ್ಟೆ! ಸತ್ಕಾರಕಸಂಘದವರು ಮುಂಚೆ ನ್ಯಾಯವಿಧಾಯಕಸಭಾ ಉಪಾಧ್ಯಕ್ಷರಾಗಿಯೂ ಪ್ರಸಿದ್ಧ ವಕೀಲರಾಗಿಯೂ ಇರುವ ರಾವಬಹದ್ದೂರ್ ಕೆಂಬಳಿ, ಬಿ.ಎ., ಎಲ್.ಎಲ್.ಬಿ., ಇವರನ್ನು ಮಹಾಸಭಾಧ್ಯಕ್ಷರನ್ನಾಗಿ ಪ್ರಾರ್ಥಿಸಿದುದಾ ಮ|| ಕೆಂಬಳಿಯವರು. ಅಧ್ಯಕ್ಷಪದವಿಯನ್ನು ವಹಿಸಲು ತಮ್ಮ ಸಹಾನುಭೂತಿಯನ್ನು ತೋರಿಸಿದುದು ಅಖಿಲ ವೀರಶೈವರಿಗೂ ಸಂತೋಷಪ್ರದವಾದ ಸಂಗತಿಯಾಗಿರುವುದು.

ಆದರೆ ಅಖಿಲಭಾರತ ವೀರಶೈವ ಮಹಾಸಭೆಯೆಂಬ ಮಹಾರಥವು ಪ್ರತಿವರ್ಷವೂ ತಪ್ಪದೆ ಸಾಗುತ್ತಲಿದ್ದು, ಕೆಲವು ವರ್ಷಗಳಿಂದ ಗುರುವರ್ಗ, ವಿರಕ್ತವರ್ಗಗಳೆಂಬ ಎರಡು ದೊಡ್ಡ ಗಾಲಿಗಳು ಅಡ್ಡವಾಗಿ ಒಡೆದುದರಿಂದ ರಥವು ಮುಂದಕ್ಕೆ ಸಾಗದೆ ಬೀರೂರಿನಲ್ಲಿಯೇ ನಿಂತಿದ್ದಿತು. ಮೈಸೂರು ರಾಜಧಾನಿಯವರು ಈ ನಿಂತಿರುವ ರಥವನ್ನು ತಮ್ಮ ಸ್ಥಳಕ್ಕೆ ಎಳೆಯಬೇಕೆಂದು ಬಹಳ ಸಾಹಸಪಟ್ಟರೂ ರಥವು ಒಂದು ಹೆಜ್ಜೆಯೂ ಮುಂದಕ್ಕೆ ಸಾಗಲಿಲ್ಲವು. ಇತ್ತೀಚೆಗೆ ಹುಬ್ಬಳ್ಳಿಯ ವೀರಶೈವಮಹಾಜನಗಳು ತಮ್ಮ ಸ್ಥಳಕ್ಕೆ ಎಳೆಯಬೇಕೆಂದು ಅನುಸಾಹಸವನ್ನು ಮಾಡಿದರೂ ಚಲಿಸದೆ ಅವರನ್ನೂ ಸಹ ಭಗ್ನಮನೋರಥರನ್ನಾಗಿ ಮಾಡಿತು. ಪುನಃ ಈ ಮಹಾಸಭೆಯೆಂಬ ರಥವು ಬೆಂಗಳೂರು ಮಹಾಜನಗಳ ಸಹಾಯವನ್ನೇ ಅಪೇಕ್ಷಿಸಬೇಕಾಯಿತು. ಇವರು ಪೂರ್ವದಲ್ಲಿ ಇದೇ ಮಹಾಸಭೆಯೆಂಬ ರಥವನ್ನು ನಿರ್ವಿಘ್ನವಾಗಿ ಸಾಗಿಸಿ ಅನುಭವಶಾಲಿಗಳಾದುದರಿಂದ ಯಾವ ತೊಂದರೆಗಳಿಗೂ ಸಿಕ್ಕದಂತೆ ಸರ್ವಜನ ಸಮ್ಮತವಾಗಿ ಸಾಗಿಸುವುದರಲ್ಲಿ ಸಮರ್ಥರಾಗಿರುವುದರಿಂದ ಮಹಾಸಭೆಯೆಂಬ ರಥೋತ್ಸವವು ಬಹು ಸುಲಭವಾಗಿ ನಡೆಯುವುದರಲ್ಲಿ ಯಾವ ಸಂಶಯವೂ ಇಲ್ಲವು.

ಮತ್ತು ಅಖಿಲ ಲೌಕಿಕ ವೀರಶೈವಮಹೋದಯರಲ್ಲಿ ಪ್ರಧಾನಭೂತರೂ ಸ್ವಮತ ಪರಮತಗಳಲ್ಲಿ ಮಾನನೀಯರೂ, ನೀತಿವಿಶಾರದರೂ, ಕಾರ್ಯಕುಶಲರೂ ಸುಪ್ರಸಿದ್ಧರೂ ಆದ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಈ ಮಹಾಸಭೆಯ ಸತ್ಕಾರಕಸಂಘದ ಅಧ್ಯಕ್ಷರಾಗಿರುವುದರಿಂದಲೂ, ಮತ್ತು ಇವರಂತೆಯೇ ಸಭಾಧ್ಯಕ್ಷರಾಗುವವರೂ ಕೂಡ ಶಾಂತರೂ ಸರ್ವಜನಾನುರಾಗಿಗಳೂ, ಕಾರ್ಯಕರಣಸಮರ್ಥರೂ ನೀತಿಜ್ಞರೂ ಆಗಿರುವುದರಿಂದಲೂ ಈ ಸಭಾಕಾರ್ಯವು ಹಿಂದೆ ಯಾವಾಗಲೂ ನಡೆಯದಷ್ಟು ಅತ್ಯಂತ ವೈಭವದಿಂದ ನಡೆಯುವುದರಲ್ಲಿ ಆವ ಸಂಶಯವೂ ಇಲ್ಲವು. ಈ ಉಭಯಮಹೋದಯರೂ ಈ ಸಭಾಕಾರ್ಯನಿರ್ವಾಹದಲ್ಲಿ ಕೃತದೀಕ್ಷೆಯುಳ್ಳವರಾದುದರಿಂದ "ಮಹಾಜನೋಯೇನಗತಸ್ಸಪಂಥಾಃ" ಎಂಬ ಪೂರ್ವಜರ ವಾಕ್ಯಾನುಸಾರವಾಗಿ ಬೆಂಗಳೂರು ನಗರವಾಸಿಗಳಾದ ಸಕಲ ವೀರಶೈವ ಮಹಾಜನಗಳು ಈ ಪ್ರಧಾನಪುರುಷರನ್ನೇ ಹಿಂಬಾಲಿಸುತ್ತ ತಮ್ಮ ತಮ್ಮ ಸ್ವಂತ ಕಾರ್ಯಗಳನ್ನೆಲ್ಲಾ ಬಿಟ್ಟು ಈಗಿನಿಂದಲೇ ನಾನು ಮುಂದು ತಾನು ಮುಂದು ಎಂದು ಔತ್ಸುಕ್ಯದಿಂದ ಕಾರ್ಯಾಸಕ್ತರಾಗಿರುವುದು ಬೆಂಗಳೂರಿನವರಿಗೆ ಭೂಷಣಾಸ್ಪದವೇ ಆಗಿದೆ.

ಲೋಕದಲ್ಲಿ ಒಂದು ಪ್ರಾಂತಿಕಸಭೆಯನ್ನು ನ್ಯೂನಾತಿರೇಕಗಳಿಲ್ಲದೆ ನಿರ್ವಹಿಸುವುದೇ ಕಷ್ಟವಾಗಿರುವದು. ಇನ್ನು ಅಖಿಲಭಾರತ ವೀರಶೈವಮಹಾಸಭೆಯನ್ನು ನಿರ್ವಹಿಸುವದು ಎಷ್ಟೋ ಕಷ್ಟತರವಾದ ವಿಷಯವಾಗಿರುವುದಲ್ಲದೆ ಪರಸ್ಪರ ಐಕ್ಯವೂ, ಸಹಾನುಭೂತಿಯೂ ತಕ್ಕ ಸಲಕರಣೆಗಳೂ ಬೇಕಾಗುವುವು. ಇವೆಲ್ಲವೂ ಇದ್ದರೂ ಮಧ್ಯದಲ್ಲಿ ವಿಘ್ನಗಳು ಹುಟ್ಟುವದು ಲೋಕರೂಢಿಯಾಗಿರುವದು. ಯಾವ ವಿಘ್ನಗಳುಂಟಾದರೂ ಉಪಾಯಾಂತರದಿಂದ ತಪ್ಪಿಸಿ ಪ್ರಾರಂಭಿಸಿದ ಕಾರ್ಯವನ್ನು ಸಂಪೂರ್ಣಗೊಳಿಸುವುದೇ ಉತ್ತಮಪುರುಷರ ಲಕ್ಷಣವೆನಿಸುವದು. ಪ್ರಕೃತದಲ್ಲಿ ಬೆಂಗಳೂರು ನಗರದ ವೀರಶೈವರು ಇಂಥ ದೊಡ್ಡ ಕಾರ್ಯವನ್ನು ಕೈಕೊಂಡು ಯಾರಿಗೂ ವೈಮನಸ್ಸು ಉಂಟಾಗದಂತೆ ಈ ಮಹಾಕಾರ್ಯವನ್ನು ಸಂಪೂರ್ಣಗೊಳಿಸುವರೆಂಬ ವಿಷಯದಲ್ಲಿ ಇವರು ಅತ್ಯುತ್ಸುಕತೆಯಿಂದ ನಡೆಸುತ್ತಿರುವ ಪ್ರಯತ್ನಗಳೇ ಸಾಕ್ಷಿಗಳಾಗಿವೆ.

ಈ ಸಾರಿ ನೆರವೇರುವ ಮಹಾಸಭೆಗೆ ಮುಂಬೈ ಮದ್ರಾಸ್ ಮೊದಲಾದ ಅನೇಕ ಭಾಗದ ಲೌಕಿಕಾಧಿಕಾರಿಗಳೂ, ದೊಡ್ಡ ದೊಡ್ಡ ವರ್ತಕರೂ, ಪ್ರಶಸ್ತಿಧರರೂ, ವಿದ್ಯಾರ್ಥಿಗಳೂ, ವೈದಿಕರೂ, ಶಾಸ್ತ್ರಿವರ್ಗದವರೂ, ಸ್ವಾಮಿಗಳೂ ಮೊದಲಾದ ಅನೇಕ ವೀರಶೈವ ಮಹಾಜನಗಳು ಅಸಂಖ್ಯಾತರಾಗಿ ಆಗಮಿಸುವರೆಂದು ಊಹಿಸುತ್ತೇವೆ. ಬೆಂಗಳೂರು ವೀರಶೈವಮಹಾಜನಗಳು ಇವರಿಗಾಗಿ ಸ್ವಲ್ಪವೂ ನ್ಯೂನತೆಗಳಿಲ್ಲದೆ ಅವರವರ ಆಚಾರವ್ಯವಹಾರಗಳಿಗನುಸಾರವಾಗಿ ವಸತ್ಯಾದಿಗಳನ್ನು ಕಲ್ಪಿಸಿಕೊಡಲು ತಕ್ಕ ಏರ್ಪಾಡುಗಳನ್ನು ಮಾಡಿದ್ದಾರೆಂದು ಕೇಳಿ ಪರಮಸಂತೋಷಪಟ್ಟವರಾಗಿದ್ದೇವೆ ಮತ್ತು ಈ ಮಹಾಸಭೆಯು ಲಾಲಬಾಗದಲ್ಲಿ ನಡೆಯಿಸಲ್ಪಡುವುದರಿಂದ ಪ್ರೇಕ್ಷಕರಿಗೆ ಯಾವ ಸ್ಥಲಸಂಕೋಚವೂ ಉಂಟಾಗುವುದಿಲ್ಲವು. ಮತ್ತು ಬಂದ ಜನಗಳ ಮನಸ್ಸನ್ನು ಒಲಿಸುವಂತೆ ಸಭಾಸ್ಥಾನದ ಸಮೀಪದಲ್ಲಿ ಅನೇಕ ಶಾಲೆಗಳನ್ನೂ ಅನೇಕ ಛತ್ರಗಳನ್ನೂ ಏಡಿಸಿಕೊಂಡಿದ್ದಾರೆಂದೂ ಕೇಳುತ್ತೇವೆ. ಪ್ರಾರಂಭಿಸಿದ ಮಹಾಸಭಾಕಾರ್ಯವು ಯಾವ ವಿಘ್ನಗಳಿಲ್ಲದೆ ಸಮಾಪ್ತಿಯಾಗಿ ಸಭಾಪ್ರವರ್ತಕರಿಗೂ ಸಭಾಧ್ಯಕ್ಷರಿಗೂ ಶಾಶ್ವತವಾದ ಯಶಸ್ಸುಂಟಾಗಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದವಾರ ಉರಿಗದ ಚಾಂಪಿಯನ್ ರೀಫ್ ಗಣಿಯೊಂದರಲ್ಲಿ ಅಕಸ್ಮಾತಾಗಿ ಒಂದು ಕಲ್ಲು ಒಡೆದು ಒಬ್ಬನು ಕೂಡಲೇ ಮೃತಪಟ್ಟನು. ಇನ್ನಿಬ್ಬರು ಆಸ್ಪತ್ರೆಗೆ ಸಾಗಿಸಲ್ಪಡುವಾಗ ದಾರಿಯಲ್ಲೇ ಸತ್ತುಹೋದರು.

ಶ್ರೀಮನ್ಮಹಾರಾಜರವರು ನಿನ್ನಿನ ದಿವಸ ಮಿತ ಪರಿವಾರದೊಡನೆ ಕೊಳ್ಳೇಗಾಲ ತಾಲೂಕಿನಲ್ಲಿರುವ ಮಹದೇಶ್ವರಸ್ವಾಮಿಯ ಬೆಟ್ಟಕ್ಕೆ ಶ್ರೀ ಸ್ವಾಮಿಯ ಸೇವಾರ್ಥವಾಗಿ ದಯಮಾಡಿಸಿದರೆಂದು ಕೇಳುತ್ತೇವೆ.

ಕಳೆದವಾರ ಶ್ರೀಮನ್ಮಹಾರಾಜರವರು ಕಾನಕಾನಹಳ್ಳಿ ತಾಲೂಕಿಗೆ ಸೇರಿದ ಕಬ್ಬಾಳದುರ್ಗವೆಂಬ ಇತಿಹಾಸಪ್ರಸಿದ್ಧ ಸ್ಥಳಕ್ಕೆ ದಯಮಾಡಿಸಿದ್ದು ಅಲ್ಲಿಯ ಸೃಷ್ಟಿವೈಚಿತ್ರ್ಯವನ್ನೂ ದುರ್ಗದಮೇಲಿರುವ ಪುರಾತನ ಕಟ್ಟಡಗಳನ್ನೂ ಪರಾಮರ್ಶಿಸಿಕೊಂಡು ದಯಮಾಡಿಸಿದರು.

ಕಳೆದ ಮಂಗಳವಾರ ನಡೆದ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯಲ್ಲಿ ರಾಜಧಾನಿಯ ವೀರಶೈವರಲ್ಲಿ ಪ್ರಸಿದ್ಧರಾದ ಮ|| ರಾ|| ಎಂ. ಪಿ. ಭೋಗಯ್ಯ, ಬಿ.ಎ., ಬಿ.ಎಲ್., ರವರೂ ಮ|| ರಾ|| ಪಿ. ಎಸ್. ಸಂಗಪ್ಪನವರೂ ಆರಿಸಿಬಂದುದಕ್ಕಾಗಿ ಸಂತೋಷಿಸುತ್ತೇವೆ.

ಕಳೆದ ಶುಕ್ರವಾರ ಕಾಶಿಯ ಮಹಾರಾಜರವರು ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ವಸಂತಮಹಲಿನಲ್ಲಿ ಇಳಿದುಕೊಂಡಿರುವರು. ಇವರು ಇಲ್ಲಿ ಕನ್ನಂಬಾಡಿ, ಶಿವನಸಮುದ್ರ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರಾಮರ್ಶಿಸಿಕೊಂಡು ಸ್ವದೇಶಕ್ಕೆ ತೆರಳುವರೆಂದು ತಿಳಿಯಬರುತ್ತದೆ.

ಜನಾಂಗಸಂಯೋಜನದ ಅಂಗವಾದ ಇಂಟರ್‌ನ್ಯಾಷನಲ್ ಬ್ಯೂರೋ ಎಂಬ ಕಮಿಟಿಯ ಅಧ್ಯಕ್ಷರಾದ ಡೆನ್ಮಾರ್ಕಿನ ಡಾಕ್ಟರ್ ಮಾಡ್ಸೇನರವರೂ, ಉಪಾಸಿಸ ಡಾಕ್ಟರ್ ಪೀಗಾರವರೂ ರಾಜಧಾನಿಗೆ ಬಂದಿದ್ದು ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಟೌನ್‌ಹಾಲಿನಲ್ಲಿ ಪ್ರಜಾರೋಗ್ಯವನ್ನು ಕುರಿತು ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ರಾಜಧಾನಿಯ ಶ್ರೀ ಚಾಮುಂಡೇಶ್ವರೀ ಕರ್ಣಾಟಕ ನಾಟಕಮಂಡಳಿಯವರು "ಭಕ್ತ ತುಕಾರಾಂ" ಎಂಬ ನೂತನ ನಾಟಕವನ್ನು ಕಳೆದವಾರದಿಂದ ರಾಜಧಾನಿಯಲ್ಲಿ ಅಭಿನಯಿಸುತ್ತಿರುವರು. ಈ ನಾಟಕವು ಕೇವಲ ಭಕ್ತಿರಸಪ್ರಧಾನವಾಗಿದ್ದು ಪ್ರೇಕ್ಷಕರಿಗೆ ಅತ್ಯಾನಂದವನ್ನುಂಟುಮಾಡುತ್ತಿರುವದೆಂದು ಕೇಳುತ್ತೇವೆ. ಈ ನಾಟಕಮಂಡಳಿಯವರು ಯಾವಾಗಲೂ ನೀತಿಬೋಧಕಗಳಾದ ನಾಟಕಗಳನ್ನೇ ಅಭಿನಯಿಸಿ ಜನರಲ್ಲಿ ಧರ್ಮಜಾಗ್ರತಿಯನ್ನುಂಟುಮಾಡುತ್ತಿರುವದರಿಂದ ಈ ಮಂಡಲಿಯು ಇತೋಪ್ಯತಿಶಯವಾದ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುತ್ತೇವೆ.

ಈಸಾರಿ ಬೆಂಗಳೂರಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಭದ್ರಾವತಿಯ ಕಾರ್ಖಾನೆಯಲ್ಲಿ ಹೊಸ ಕೆಲಸಗಳನ್ನು ಆರಂಭಮಾಡುವದಕ್ಕೋಸ್ಕರ 10,50,000 ರೂಪಾಯಿಗಳನ್ನೂ, ರಾಜಧಾನಿಯಲ್ಲಿ ಕಟ್ಟಲ್ಪಡುತ್ತಿರುವ ನ್ಯೂಗೆಸ್ಟ್ಸ್ ಮ್ಯಾನ್ಷನ್ ಕಟ್ಟಡದ ಕೆಲಸವನ್ನು ಪೂರ್ತಿಮಾಡುವದಕ್ಕೋಸ್ಕರ 1 ಲಕ್ಷ ರೂಪಾಯಿಗಳನ್ನೂ, ಡಾ|| ಲೆಸ್ಲಿ ಕೋಲ್ಮನ್ ರವರನ್ನು ಕಾನಡಾ ದೇಶದಿಂದ ಮೈಸೂರಿಗೆ ಕರೆಯಿಸಿಕೊಳ್ಳುವದಕ್ಕೋಸ್ಕರ ಆವರ ಪ್ರಯಾಣದ ಖರ್ಚಿಗೆ 10,800 ರೂಪಾಯಿಗಳನ್ನೂ, ರಾಜಧಾನಿಯ ನ್ಯೂಮ್ಯಾರ್ಕೆಟ್ಟಿನ ಸುತ್ತಲೂ ಇರುವ ಉದ್ಯಾನಗಳ ಪಾಲನೆಗಾಗಿ ಸಾಲಿಯಾನಾ 10,200 ರೂಪಾಯಿಗಳನ್ನೂ ಮಂಜೂರು ಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಕಲ್ಕತ್ತಾ ಪಟ್ಟಣದಲ್ಲಿ 7ನೆಯ ತಾರೀಖಿನ ದಿವಸ ಉತ್ತರಭಾಗದ ಹೊಸಬಾಜಾರದಲ್ಲಿ ಬೆಂಕಿಯು ಹತ್ತಿ 18 ಜನರು ಮೃತರಾದರು.

ಡಮಡಮದಲ್ಲಿ ಸ್ಥಾಪಿಸಲ್ಪಟ್ಟಿರುವ ವಿಮಾನಗೃಹಕ್ಕಾಗಿ ಹಿಂದುಸ್ಥಾನ ಸರ್ಕಾರದವರು 3 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ.

ಬರುವ ಜನವರಿ 1ನೆಯ ತಾರೀಖಿನಿಂದ ಹಿಂದೂ ಪತ್ರದ ಸಂಪಾದಕತ್ವವನ್ನು ಮಿ|| ಎ. ರಂಗಸ್ವಾಮಿ ಅಯ್ಯಂಗಾರ್ ರವರು ವಹಿಸುವವರಿದ್ದಾರೆಂದು ತಿಳಿಯಬರುತ್ತದೆ.

ಇಟಲೀದೇಶದ ಭೂಸಂಶೋಧಕರು ಹಿಮಾಲಯದಲ್ಲಿ ಮಹತ್ವದ ವಸ್ತುಗಳು ಯಾವಯಾವ ದೊರೆಯುವವೆಂದು ಶೋಧಿಸುವದಕ್ಕೋಸ್ಕರ ಅಲ್ಲಿಗೆ ಆಗಮಿಸುವವರಿದ್ದಾರೆ.

ಅಮೇರಿಕೆಯ ಪೂರ್ವತೀರದಲ್ಲಿರುವ ಕ್ಯಾಲಿಫೋರ್ನಿಯಾ ಸಂಸ್ಥಾನದ ತೋಟಗಳಲ್ಲಿ ಹಾವಾಸುಕಳ್ಳಿಯನ್ನು ಬೆಳೆದು ಅದರ ಹಣ್ಣನ್ನು ಪಾಕದಲ್ಲಿಟ್ಟು ಫಲಾಹಾರರೂಪವಾಗಿ ತಿನ್ನುತ್ತಾರೆ.

ಬರೋಡಾ ಸರ್ಕಾರದವರು ಪ್ರವಾಹದಿಂದ ನಿರಾಶ್ರಿತರಾದ ಪ್ರಜೆಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಬಡ್ಡಿಯಿಲ್ಲದೆ 25 ಲಕ್ಷ ರೂಪಾಯಿಗಳ ಸಾಲವನ್ನು ಕೊಡಬೇಕೆಂದು ನಿರ್ಧರಿಸಿರುವರು.

ಶ್ರೀಯುತ ವಿ. ಜೆ. ಪಟೇಲರಿಂದ ಸ್ಥಾಪಿಸಲ್ಪಟ್ಟ ಗುಜರಾಥ ದೇಶದ ಪ್ರವಾಹಕಷ್ಟನಿವಾರಣಸಂಘದವರು 1,12,000 ರೂಪಾಯಿಗಳನ್ನು ಶೇಖರಿಸಿರುತ್ತಾರೆ. ಅದರಲ್ಲಿ 5000 ರೂಪಾಯಿಗಳನ್ನು ಒರಿಸ್ಸಾ ದೇಶದ ಕಷ್ಟನಿವಾರಣೆಗಾಗಿ ಹಂಚಿದ್ದಾರೆ.

ಮದ್ರಾಸಪಟ್ಟಣದಲ್ಲಿ ನೆರವೇರುವ ಕಾಂಗ್ರೆಸ್ಸಿಗೆ ಬರತಕ್ಕ ಹಿಂದುಗಳ ಸ್ನಾನಸಂಧ್ಯಾವಂದನಾದಿಗಳಿಗೆ ಒಂದು ದೇವಮಂದಿರವನ್ನೂ, ಮುಸಲ್ಮಾನರಿಗಾಗಿ ಒಂದು ಮಸೀದಿಯನ್ನೂ ರಚಿಸಬೇಕೆಂದು ಸ್ವಾಗತಮಂಡಲದವರು ನಿಶ್ಚಯಿಸಿದ್ದಾರೆ.

ಲಾಹೋರಿನಲ್ಲಿ ಒಬ್ಬ ಮಹಮ್ಮದೀಯನು ಒಬ್ಬ ಗೌಳಿಗನನ್ನು ಚೂರಿಯಿಂದ ತಿವಿದು ಗಾಯಪಡಿಸಿದನು. ಆಗಾಗ್ಗೆ ಇಂಥ ಘೋರಕೃತ್ಯಗಳಾಗುತ್ತವೆಂದು ಪೇ ಮ್ಯಾಜಿಸ್ಟ್ರೇಟರವರು ಅಪರಾಧಿಗೆ 7 ವರ್ಷಗಳ ಕಠಿಣಶಿಕ್ಷೆ ಮತ್ತು 150 ರೂಪಾಯಿಗಳ ದಂಡವನ್ನು ವಿಧಿಸಿದರು.

ತುರ್ಕಿ ರಾಷ್ಟ್ರವನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ತಮ್ಮ ತನುಮನೋಧನಗಳನ್ನೆಲ್ಲಾ ಸೂರೆಗೈದ ಗಾಝಿಮುಸ್ತಫಾ ಕೆಮಾಲ್ ಪಾಷಾರವರು ಇಂದಿನವರೆಗೆ ತಾವು ಗಳಿಸಿಟ್ಟಿರುವ ಆಸ್ತಿಯನ್ನೆಲ್ಲಾ ರಾಷ್ಟ್ರಕ್ಕೆ ಸೇರಿಸಿಕೊಳ್ಳಬೇಕೆಂದು ಅಲ್ಲಿಯ ಪಾರ್ಲಿಮೆಂಟಿಗೆ ಒಪ್ಪಿಸಿರುತ್ತಾರೆ.

ಸರ್ ಜಗದೀಶಚಂದ್ರಬೋಸ್‌ರವರು ಕಲ್ಕತ್ತೆಯ ಒಂದು ಮಹಾಸಭೆಯಲ್ಲಿ ಸತ್ತವರನ್ನು ಬದುಕಿಸುವ ಮೂಲಿಕೆಯೊಂದನ್ನು ಪ್ರದರ್ಶಿಸಿ, ಸತ್ತುಹೋಗಿದ್ದ ಒಂದು ಕಪ್ಪೆಯನ್ನು ಆ ಮೂಲಿಕೆಯ ಸಹಾಯದಿಂದ ಬದುಕಿಸಿದರಂತೆ! ಇವರಿಗೆ ದ್ವಿತೀಯ ಬ್ರಹ್ಮನೆಂದು ಹೇಳುವುದರಲ್ಲಿ ಸಂದೇಹವೇನು?

ಹಿಂದುಸ್ಥಾನದೊಳಗಿರತಕ್ಕ ಕ್ರೈಸ್ತ ಧರ್ಮಗಳ ಕಾರ್ಯಕ್ಕಾಗಿ ಹಿಂದುಸ್ಥಾನದ ಖಜಾನೆಯಿಂದ ಪ್ರತಿವರ್ಷ ಎಷ್ಟು ದ್ರವ್ಯವು ಖರ್ಚಾಗುತ್ತದೆಂದು ಪಾರ್ಲಿಮೆಂಟಿನವರನ್ನು ಒಬ್ಬ ಮೆಂಬರು ಪ್ರಶ್ನೆಮಾಡಿದ್ದಕ್ಕಾಗಿ 41 ಲಕ್ಷ ರೂಪಾಯಿಗಳು ಖರ್ಚಾಗುವವೆಂದು ಉತ್ತರವು ದೊರೆಯಿತಂತೆ! ಆಶ್ಚರ್ಯ!

ಅಖಿಲ ಹಿಂದುಸ್ಥಾನ ಪೋಸ್ಟಮಾಸ್ತರ ಮತ್ತು ಕೆಳಗಿನ ತರಗತಿಯ ಪೋಸ್ಟ ನೌಕರರ 5 ನೆಯ ಅಧಿವೇಶನವು ಮುಂಬಯಿಯಲ್ಲಿ ಶ್ರೀ| ಎ. ರಂಗಸ್ವಾಮಿ ಅಯ್ಯಂಗಾರ್ ಇವರ ಅಧ್ಯಕ್ಷತೆಯಲ್ಲಿ ಜನವರಿ ತಿಂಗಳ ತಾ|| 14, 15, 16 ರಲ್ಲಿ ಸೇರುವದು. ಎಲ್ಲ ಭಾಗದ ಪ್ರತಿನಿಧಿಗಳು ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಆಂಧ್ರದೇಶದ ಪ್ರತಿಯೊಬ್ಬ ವಿದ್ಯಾರ್ಥಿಯೂ ಖಾದಿಯನ್ನೇ ಧರಿಸಬೇಕೆಂದೂ, ಪ್ರತಿಯೊಂದು ಗ್ರಾಮದಲ್ಲಿಯೂ ದೇಶೀಯ ವೈದ್ಯಶಾಲೆಗಳನ್ನು ಸ್ಥಾಪಿಸಬೇಕೆಂದೂ, ಪ್ರತಿ ತಾಲೂಕಿನಲ್ಲಿಯೂ ದನಕರುಗಳ ಅಭಿವೃದ್ಧಿಗೆ ತಕ್ಕ ಏರ್ಪಾಡು ಮಾಡಬೇಕೆಂದೂ ಆಂಧ್ರವಿದ್ಯಾರ್ಥಿಗಳ ಪರಿಷತ್ತಿನವರು ನಿರ್ಧರಿಸಿರುವರು.

ಮದ್ರಾಸಿನಲ್ಲಿ ಸೇರುವ ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ಈ ತಿಂಗಳು 26 ನೆಯ ತಾರೀಖಿನಿಂದ ಪ್ರಾರಂಭಿಸಲ್ಪಡುವದು. ಪ್ರತಿನಿಧಿಗಳಿಗೆ 5 ರೂಪಾಯಿಗಳ ಪ್ರವೇಶಧನವನ್ನೂ, ಪ್ರೇಕ್ಷಕರಿಗೆ 20 ಮತ್ತು 15 ರೂಪಾಯಿಗಳ ಎರಡುವಿಧವಾದ ಪ್ರವೇಶಧನವನ್ನೂ ಇಟ್ಟಿರುವರು. ಸ್ತ್ರೀಯರಿಗೆ ಪ್ರವೇಶಧನವು ಕಡಿಮೆಮಾಡಲ್ಪಟ್ಟಿರುವದು.

ಸೈಮನ್ ರಾಜಕೀಯ ಸಮಿತಿಯು ಮೊಂಬಾಯಿಗೆ ಬಂದಿಳಿದ ದಿವಸ ಪಟ್ಟಣದಲ್ಲೆಲ್ಲಾ ಅಸಮಾಧಾನಪ್ರದರ್ಶನಮಾಡಬೇಕೆಂದೂ, ಪಟ್ಟಣದ ಎಲ್ಲಾ ಕಾರ್ಯಾಲಯಗಳೂ ಆ ದಿವಸ ಬಂದುಮಾಡಲ್ಪಡಬೇಕೆಂದೂ, ಮ್ಯುನಿಸಿಪಾಲಿಟಿಯ ನೌಕರರೂ ಕೂಡ ತಮ್ಮ ಕಾರ್ಯಗಳನ್ನು ನಿಲ್ಲಿಸಬೇಕೆಂದೂ ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ನಿರ್ಧರಿಸಿರುತ್ತಾರೆ.

ಬ್ರಹ್ಮದೇಶದ ಕಾಂಗ್ರೆಸ್ ಕಮಿಟಿಯವರು ಬ್ರಹ್ಮದೇಶವು ಬ್ರಿಟಿಷ್ ಇಂಡಿಯಾದಿಂದ ಪ್ರತ್ಯೇಕವಾಗಬಾರದೆಂದೂ, ಹಿಂದುಗಳೂ ಬ್ರಹ್ಮದೇಶವಾಸಿಗಳೂ ಐಕಮತ್ಯದಿಂದಿರಬೇಕೆಂದೂ, ಸಾರ್ವಭೌಮ ಸರ್ಕಾರದವರು ಹೊಸದೊಂದು ಪೂರ್ವೋತ್ತರ ಪ್ರಾಂತವನ್ನು [illegible] ಹಿಂದೂ ಬರ್ಮಾಯರಿಗಿರತಕ್ಕ ಸಂಬಂಧವನ್ನು ತಪ್ಪಿಸುವದು ಅನ್ಯಾಯವೆಂದೂ ನಿರ್ಧರಿಸಿರುವರು.

[illegible] ಜೋಲಿ ಜಿಲ್ಲೆಗೆ ಸೇರಿದ ಬಟ[illegible]ಂಬ ಗ್ರಾಮದ ಪ್ರಸಿದ್ಧ ಶ್ರೀಮಂತನಾದ ಗಂಗಾಚರಣದಾಸ[illegible]ತನ ಮನೆಗೆ ಕಳ್ಳರು ಪ್ರವೇಶಿಸಿ ಆತನನ್ನು [illegible] ಆತನ ಮಸ್ತಕವನ್ನು ಆ ಗ್ರಾಮದ ಕಾಳಿಕಾ[illegible] ಮಂದಿರದಲ್ಲಿ ಚೆಲ್ಲಿ ಆತನ ಸಂಪತ್ತನ್ನೆಲ್ಲಾ [illegible]ಕೊಂಡು ಹೋಗಿರುವರಂತೆ! ಈ ವಿಷಯದಲ್ಲಿ ಒಬ್ಬ ಮುಸಲ್ಮಾನನನ್ನು ಹಿಡಿದು ವಿಚಾರಣೆಗೆ [illegible]ಮಾಡಿದ್ದಾರೆ.

ಲಂಡನ್ ಪಟ್ಟಣದ ಆಕ್ಸ್‌ಫರ್ಡ್ ರೋಡಿನ ಲೆಯಿ[illegible] ಬ್ರದರ್ಸ್‌ರವರ ಅಂಗಡಿಯ ಮೇಲಂತಸ್ತಿನ ಅಂ[illegible]ಗೆ ಕಳ್ಳರು ನುಗ್ಗಿ ಅಲ್ಲಿಂದ ಕೆಳಗಿನ ಅಂತಸ್ತಿನಲ್ಲಿರುವ ಅಂಗಡಿಗೆ ಮೊಳಗೆಯನ್ನು ತೂತುಕೊರೆದು ಇಳಿದು ಕಬ್ಬಿಣದ ಪೆಟ್ಟಿಗೆಯ ಹಿಂಭಾಗವನ್ನು ವಿದ್ಯುಚ್ಛಕ್ತಿಯಿಂದ ಸುಟ್ಟು ಅದರಲ್ಲಿದ್ದ ಸುಮಾರು 1,30,000 ರೂಪಾಯಿಗಳ ಬೆಲೆಬಾಳುವ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿರುವರು.

ಸ್ವಾಮಿ ಶ್ರದ್ಧಾನಂದರ ಮಕ್ಕಳು ಪ್ರೊ|| ಇಂದ್ರರವರು ದೆಹಲಿಯಿಂದ ಹೊರಡುವ "ಅರ್ಜುನ" ಎಂಬ ತಮ್ಮ ಪತ್ರಿಕೆಯಲ್ಲಿ ಜಾತಿದ್ವೇಷಾತ್ಮಕವಾದ ಲೇಖವನ್ನು ಬರೆದರೆಂದು ಖಟ್ಲೆ ನಡೆದಿದ್ದು ಕಳೆದ ತಾ|| 13 ರಲ್ಲಿ ಇವರಿಗೆ 3½ ವರ್ಷ ಸಕ್ರಮ ಕಾರಾಗೃಹವಾಸವು ಮತ್ತು 1500 ರೂಪಾಯಿಗಳ ದಂಡವೂ, ಉಪಸಂಪಾದಕರಾದ ಶ್ರೀ ಸತ್ಯಕಾಮರಿಗೆ 1½ ವರ್ಷ ಕಾರಾಗೃಹವಾಸವು ಮತ್ತು 750 ರೂಪಾಯಿಗಳ ದಂಡವೂ ವಿಧಿಸಲ್ಪಟ್ಟಿವೆ. ಪ್ರೊ|| ಇಂದ್ರರವರು ಅಪೀಲು ಮಾಡಲಿರುವರೆಂದು ತಿಳಿಯಬರುತ್ತದೆ.

ಸ್ವೀಕಾರ

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ವೇ|| ನಂದಗುಡಿಮಠದ ರುದ್ರಯ್ಯನವರ ಅಣ್ಣನವರಿಗೆ ಪುತ್ರೋತ್ಸವವಾದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಕಳುಹಿಸಿದ 2 ರೂಪಾಯಿಗಳು ವೇ|| ಎಸ್. ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ತಾಲೂಕು ಕವಲೂರಲ್ಲಿ ನೆರವೇರಿದ ಪುರಾಣಸಮಾಪ್ತಿಯ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ 3 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ. ಈ ರೂಪಾಯಿಗಳು ಮ|| ರಾ|| ವೆಂಕಪ್ಪಪೂಜಾರ, ಕವಲೂರು ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಹಾನಗಲ್ಲಿನಲ್ಲಿ ಸ್ಥಾಪಿತವಾದ "ಆಲೂರು ಗ್ರೂಪಶೇತಕೀ ಸಹಕಾರಿಸಂಘ" ಕ್ಕೆ ವೇ|| ಮಳೆಯಯ್ಯನವರು ಮಠದ ಇವರನ್ನು ಸೆಕ್ರೆಟರಿಯವರನ್ನಾಗಿ ನೇಮಿಸಿಕೊಂಡ ಸಂತೋಷಾರ್ಥವಾಗಿ ಸದರಿಯವರು ಪ್ರಭಾ ಪೋಷಣಕ್ಕಾಗಿ ಒಂದುರೂಪಾಯಿಯನ್ನು ಕಳುಹಿಸಿರುತ್ತಾರೆ.

ಗದಗ ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಮೆಂಬರರಾಗಿ ಆರಿಸಿ ಬಂದ ಸಂತೋಷಾರ್ಥವಾಗಿ ಮ|| ರಾ|| ಕೊಟ್ರಪ್ಪ ಶಾಂತಪ್ಪ ಹುಬ್ಬಳ್ಳಿ ಇವರು ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನೂ, ಮ|| ರಾ|| ಸೂಡಂದಪ್ಪ ಚನ್ನಬಸಪ್ಪ ಕುಬಸದ ಇವರು 2 ರೂಪಾಯಿಗಳನ್ನೂ ಕಳುಹಿಸಿದ್ದಾರೆ. ಈ ರೂಪಾಯಿಗಳು ಮ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಉತ್ತಂಗಿ ಗ್ರಾಮದ ಮ|| ರಾ|| ಶಾನುಭೋಗರ ಮಲ್ಲಪ್ಪನವರು ತಾ|| 11-12-27 ರಲ್ಲಿ ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತ್ಯರ್ಥವಾಗಿ ಅವರ ಬಂಧುಗಳು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂಪಾಯಿಗಳು ಹೊಳಗುಂದಿಗ್ರಾಮದ ಮ|| ರಾ|| ಶಾನುಭೋಗರ ಶಿದ್ಧಲಿಂಗಪ್ಪನವರು, ಮ|| ರಾ|| ಹಲಗಪ್ಪನವರ ದೊಡ್ಡಹಾಲಪ್ಪನವರು, ಇವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಯದುನೃಪವಿಜಯದ ವಿಮರ್ಶೆ.

ರಾಜಕವಿಭೂಷಣ ಹೆಚ್. ಲಿಂಗರಾಜಅರಸರವರು ಶ್ರೀಮನ್ಮಹಾರಾಜರವರ ವಂಶದ ಮೂಲಪುರುಷರಾದ ಯದುಮಹಾರಾಜರವರ ವಿಷಯವಾಗಿ ಯದುನೃಪವಿಜಯವೆಂಬ ಒಂದು ಕನ್ನಡ ಕಾವ್ಯವನ್ನು ರಚಿಸಿರುತ್ತಾರೆ. ಈ ಕಾವ್ಯದ ಸರಣಿಯು ಅತಿ ಮಧುರವಾಗಿಯೂ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆಯೂ ಇರುತ್ತದೆ. ಈ ಕಾವ್ಯವನ್ನು ಓದಿದವರು ರಾಜಭಕ್ತಿಯುತರಾಗುವದಲ್ಲದೆ ರಾಜನೀತಿಯುತರೂ ಆಗುವರು. ಈ ಗ್ರಂಥವು ಸರಳವಾದ ಶೈಲಿಯಲ್ಲಿ ಬರೆಯಲ್ಪಟ್ಟು ರಾಜನೀತಿಪ್ರದವಾಗಿರುವದರಿಂದ ಈ ಗ್ರಂಥವನ್ನು ಮೈಸೂರು ಗೌರ್ನಮೆಂಟಿನವರು ಹೈಸ್ಕೂಲಿನ ಐದನೆ ತರಗತಿ (V Form) ಗೆ ಪಠ್ಯಪುಸ್ತಕವನ್ನಾಗಿ ನಿಯಮಿಸಿರುತ್ತಾರೆ ಮತ್ತು ಈ ಕಾವ್ಯದಲ್ಲಿ ಗ್ರಂಥಕರ್ತರು ಮೈಸೂರು ಸಂಸ್ಥಾನಕ್ಕೆ ಜಂಗಮರಿಂದುಂಟಾದ ಸಹಾಯವನ್ನು ಪ್ರಭುವಂಶದವರಿಗೆ ಒಡೆಯರೆಂಬ ಅಭಿದಾನವುಂಟಾಗಲು ಕಾರಣವನ್ನು ಸಹ ಸ್ಪಷ್ಟವಾಗಿ ಉಲ್ಲೇಖಿಸಿರುವರು. ಆದುದರಿಂದ ಅಖಿಲ ವೀರಶೈವರೂ ಅವಶ್ಯವಾಗಿ ಈ ಗ್ರಂಥವನ್ನು ತರಿಸಿಕೊಂಡು ಓದಿ ವೀರಶೈವರಿಗೂ ಸಂಸ್ಥಾನಕ್ಕೂ ಇರುವ ಸಂಬಂಧವನ್ನು ತಿಳಿದುಕೊಳ್ಳಬೇಕಾಗಿ ಕೋರುತ್ತೇವೆ.

ಈ ಗ್ರಂಥದ ಬೆಲೆ 0—3—0
ಡಿಟೇಲ್ಡ್ ನೋಟ್ಸು 0—8—0
ಪೋಸ್ಟ ಚಾರ್ಜ ಬೇರೆ

ಗ್ರಂಥವು ದೊರೆಯುವ ಸ್ಥಳ.—
ಮೆ|| ಸೆಟ್ಟೆಪ್ಪ ಶಿದ್ದಪ್ಪ ಜನರಲ್‌ಮರ್ಚಂಟ್ಸ್,
ಕೃಷ್ಣರಾಜಮೊಹಲ್ಲಾ, ಮೈಸೂರು.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು.

ಈ ಮೇಲ್ಕಂಡ ಜಗದ್ಗುರುಗಳವರು ಧರ್ಮಪೀಠವನ್ನಾರೋಹಣಮಾಡಿ ಅಂದಾಜು 20 ವರ್ಷಗಳಾಗುತ್ತಾ ಬಂದವು. ಪೂರ್ವದಲ್ಲಿ ಈ ಉಜ್ಜಯಿನೀ ಪೀಠವು ಅಷ್ಟು ಪ್ರಸಿದ್ಧಿಗೆ ಬಂದಿದ್ದಿಲ್ಲ. ಈ ಮಹನೀಯರಿಂದ ಈ ಪೀಠವು ಭರತಖಂಡದಲ್ಲೆಲ್ಲಾ ಅಸಾಧಾರಣವಾದ ಕೀರ್ತಿಯನ್ನು ಹೊಂದಿರುವದೆನ್ನುವದನ್ನು ಬೇರೆ ಹೇಳಬೇಕಾಗಿಲ್ಲ. ಈ ಮಹನೀಯರಿಂದಲೇ ಇನ್ನುಳಿದ ನಾಲ್ಕು ಪೀಠಗಳೂ ಕೂಡ ಅತ್ಯಂತ ಊರ್ಜಿತಾವಸ್ಥೆಗೆ ಬಂದವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಷ್ಟಕ್ಕೊಳಗಾಗಿದ್ದ ಶ್ರೀ ಜಗದ್ಗುರು ಕೇದಾರಪೀಠವನ್ನೂ, ಶ್ರೀ ಜಗದ್ಗುರು ರಂಭಾಪುರೀ ಪೀಠವನ್ನೂ ಈ ಮಹನೀಯರೇ ಉದ್ಧಾರಮಾಡಿದರಲ್ಲವೇ? ಇದು ಲೋಕಕ್ಕೆಲ್ಲಾ ತಿಳಿದ ವಿಷಯವಾಗಿದೆ. ಹಾಗೂ ಈ ಮಹನೀಯರು ಈ ಮತದಲ್ಲಿ ಅನೇಕರು ರಾಜಕೀಯ ವಿದ್ಯಾಪ್ರವೀಣರಾಗಬೇಕೆಂಬ ಸದುದ್ದೇಶದಿಂದ ಬಳ್ಳಾರಿ ಪ್ರಾಂತದಲ್ಲಿ ಲಕ್ಷಾಂತರ ರೂಪಾಯಿಗಳ ಫಂಡು ಕೂಡಿಸಿ "ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘ" ಎಂಬ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿದರು. ಈ ಫಂಡಿನ ಸಹಾಯದಿಂದ ಸದ್ಯಃ ಎಷ್ಟೋ ಜನರು ವಿದ್ಯಾಭ್ಯಾಸಮಾಡುತ್ತಿರುವರು. ಸದ್ಯಃ ಸಂಸ್ಕೃತವಿದ್ಯಾಭ್ಯಾಸಕ್ಕೋಸ್ಕರ 50-60 ಸಾವಿರ ರೂಪಾಯಿಗಳ ಫಂಡನ್ನು ಕೂಡಿಸಿರುವರಲ್ಲದೆ ಇನ್ನೂ ಕೂಡಿಸುವದರಲ್ಲಿದ್ದಾರೆ. ಲೋಕದಲ್ಲೆಲ್ಲಾ ಸಂಚರಿಸಿ ಪ್ರತಿಯೊಂದು ಗ್ರಾಮದಲ್ಲಿಯ ವೀರಶೈವ ಶಿಷ್ಯಮಂಡಲಿಗೆ ಧರ್ಮತತ್ವವನ್ನು ಬೋಧಿಸುತ್ತ ಸಮಸ್ತರನ್ನು ಉದ್ಧರಿಸುತ್ತಿದ್ದಾರೆ. ಈ ಮಹಾತ್ಮರ ದರ್ಶನವನ್ನು ತೆಗೆದುಕೊಂಡ ಪ್ರತಿಯೊಬ್ಬರೂ ಇವರನ್ನು ದ್ವಿತೀಯ ಬಸವನೆಂದೇ ಹೇಳುವರಲ್ಲದೆ ಬೇರೆಯಾಗಿ ಎಂದೂ ಹೇಳಲಾರರು. ಈ ಮಹನೀಯರ ದರ್ಶನ ಪೂಜನದಿಂದಲೇ ಸರ್ವರೂ ಮುಕ್ತರಾಗಬೇಕಾಗಿದೆ. "ನಗುರೋರಧಿಕಂ" ಎಂಬ ಶ್ರುತ್ಯರ್ಥವು ಈ ಮಹನೀಯರಲ್ಲಿಯೇ ಸಾರ್ಥಕವಾಗುವದು. ಪ್ರತಿಯೊಬ್ಬರೂ ಮತಸ್ಥಾಪನಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕೆಂದು ಕೋರುತ್ತೇವೆ.

ಸಿದ್ಧನಗೌಡ. ಫಾರೆಸ್ಟ ಪಂಚಾಯಿತಿ ಪ್ರೆಸಿಡೆಂಟ್,
ಕಲ್ಲಹಳ್ಳಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಪಂಚಾಚಾರ್ಯಪ್ರಭಾ
ಪ್ರಶಂಸಾನಿರೂಪಣಂ.

ಪಂಚವದನನೊಲುಮೆಯಿಂದಲಿ ,
ಸಂಚಿತಬಹುಸುಕೃತರೂಪ ಫಲಮೆನಿಪುದಿದೊಲ್ ।
ಪಂಚಾಚಾರ್ಯಪ್ರಭೆ ಪರ ,
ಪಂಚಾಕ್ಷರಮಂತ್ರದಂತೆ ಸಂಪದನೀವೋ ||

ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದಲೂ, ಧರ್ಮಸುಧಾರಕರೂ, ಅತೀವ ಶಾಸ್ತ್ರಾಭಿಜ್ಞರೂ ಆದ ಉಭಯ ಪಂಡಿತೋತ್ತಮರುಗಳ ಉತ್ಕಟೇಚ್ಛೆಯಿಂದಲೂ ಸಮಾಜಬಾಂಧವರ ಉದಾರಾಶ್ರಯದಿಂದಲೂ ಕರ್ಣಾಟಕಭಾಷಾ ಮಾತೃವಾಗಿಯೂ, ಸಕಲ ಕಲಾ ನಿಪುಣಾಶ್ರಯವಾಗಿಯೂ (ರಾಜರ್ಷಿಯೆನಿಸಿಕೊಂಡಿರುವ ಶ್ರೀ ಕೃಷ್ಣರಾಜ ಮಹಾಪ್ರಭುಗಳ ರಾಜಸ್ಥಾನವಾಗಿಯೂ) ಇರುವ ಮೈಸೂರು ಪಟ್ಟಣದಲ್ಲಿ ಪ್ರಭೆಯೇ ನೀನು ಜನ್ಮವೆತ್ತಿರುವಿಯಷ್ಟೇ! ನೀನು ಉದಿಸಿದ ಅಲ್ಪಕಾಲದಲ್ಲಿಯೇ ಸಮಾಜವೆಲ್ಲಾ ಜಾಗ್ರತಗೊಂಡಂತಾಗಿರುತ್ತೆ. ನಿನ್ನ ದರ್ಶನದಿಂದ ಅಜ್ಞರು ಸುಜ್ಞರಾಗಿಯೂ, ಭೀರುಗಳು ಧೀರರಾಗಿಯೂ, ದುಷ್ಟರು ಶಿಷ್ಟರಾಗಿಯೂ, ನಿಂದಕರು ಭಜಕರಾಗಿಯೂ, ಪಾಮರರು ಪಂಡಿತರಾಗಿಯೂ, ಕುಮತಿಗಳು ಸುಮತಿಗಳಾಗಿಯೂ, ದುರ್ಗುಣಿಗಳು ಸುಗುಣಿಗಳಾಗಿಯೂ ಮಾರ್ಪಡುತ್ತಿರುವುದನ್ನು ನೋಡಿದರೆ ಸಮಾಜದ ಕಲ್ಪಭೂರುಹವೇ ಜನಿಸಿರುವುದೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ನೀನು ಕೈಗೊಂಡಿರುವ ಕಾರ್ಯವು ಸ್ತುತ್ಯವೂ, ಭೂಷಣವೂ, ಲೋಕಹಿತವೂ ಎಂಬುದನ್ನು ಸಮಸ್ತ ಮಹನೀಯರೂ ಒಪ್ಪಿರುವರು. ಅಂದ ಮೇಲೆ ನಾನು ಹೇಳುವುದಾದರೂ ಏನಿದೆ? ನಿನ್ನ ಛಾಯೆಯಲ್ಲಿ ಒಡ್ಡಂಕಣರಾಗಿರುವ ವೇದಮೂರ್ತಿಗಳಾದ ಉಭಯ ಪಂಡಿತಾಗ್ರಣಿಗಳಿಗೂ, ಸಮಸ್ತ ಗುರುಭಕ್ತರಿಗೂ ಶ್ರೀ ಸದಾಶಿವನು ಸರ್ವಸಂಪದಗಳನ್ನು ಉಂಟುಮಾಡಲೆಂದು ಬೇಡುತ್ತೇನೆ. ಸಮಾಜದಲ್ಲಿಂತಾಗಿದ್ದ ದುರಭಿಮಾನಪೂರಿತವಾದ ಕುತರ್ಕಜಾಲವೆಂಬ ಅಂಧಕಾರವು ಕಡಿಮೆಯಾಗುತ್ತಾ ಬಂದಿರುತ್ತದೆ. "ಯಾದೃಶಂ ಕರ್ಮ ತಾದೃಶಂ ಫಲಂ" ಎಂಬಂತೆ ಅವರವರ ಭಾವನೆಗೆ ತಕ್ಕ ಫಲವನ್ನು ಹೊಂದುತ್ತಿರುವರು. ಕೆಲವು ಅಜ್ಞಜನರು ಗುರುನಿಂದಾರೂಪವಾದ ಪಾಪವನ್ನು ಮಾಡಿ ನರಕಭಾಗಿಗಳಾಗುತ್ತಿರುವರು. ಶ್ರೀ ಸಾನಂದಗಣೇಶ್ವರನೆಂಬ ಪ್ರಮಥಪುಂಗವನ ದರ್ಶನಮಾತ್ರದಿಂದ ಪಾಪಿಜೀವಿಗಳು ತಮ್ಮ ಪಾಪವಿಮುಕ್ತಿಯಿಂದ ಪುನೀತರಾಗಿ ನರಕಯಾತನೆಯು ತಪ್ಪಿ ಹೇಗೆ ಶ್ರೀ ಪರಮೇಶ್ವರನ ಕೃಪಾಕಟಾಕ್ಷಕ್ಕೆ ಪಾತ್ರರಾದರೋ ಹಾಗೆಯೇ ನಿನ್ನ ದರ್ಶನದಿಂದಲೂ ಅಜ್ಞಾನವೆಂಬ ಪಾಶದಿಂದ ವಿಮುಕ್ತರಾಗಿ ಗುರುಮಹಾತ್ಮ್ಯವನ್ನರಿತು ಆ ಪೂಜ್ಯಪಾದರಲ್ಲಿ ಭಕ್ತಿಯಿಂದ ವರ್ತಿಸಿ ಧನ್ಯಜೀವಿಗಳಾಗುತ್ತಿರುವರು. ನಿಗ್ರಹಾನುಗ್ರಹ ಸಮರ್ಥರಾದ ಶ್ರೀ ಜಗದಾಚಾರ್ಯರ ಮಹಿಮೆಯು ದಶದಿಕ್ಕುಗಳಲ್ಲಿಯೂ ಹಬ್ಬುವುದಕ್ಕೆ ನೀನು ಮುಖ್ಯ ಸಹಾಯವಾಗಿರುತ್ತೀಯೆ. ನಿನ್ನ ವಿಷಯದಲ್ಲಿ ಅಸೂಯೆಯುಳ್ಳವರ ಅಂತರಾತ್ಮನೂ ಕೂಡ ನಿನ್ನನ್ನು ಹೊಗಳದೆ ಇಲ್ಲವು. ಇಷ್ಟು ದಿನ ಹುಟ್ಟಿದ ಯೋಗ್ಯತೆಯನ್ನು ಪಡೆದ ನೀನು ನಿನ್ನ ಅನಂತ ಪ್ರಭಾವಗಳಿಂದಲೂ, ವಿದ್ಯಾಚಾತುರ್ಯದಿಂದಲೂ ನಿನ್ನಂಥ ನಿಜತತ್ವಬೋಧಕರ ಅವತಾರದಿಂದಲೂ ಸಮಾಜದಲ್ಲಿ ಅಸಿದ್ಧಾಂತಗಳು ತಲೆದೋರಿದರೂ ಹೊರಡದು ಬೇರೆಯಿಲ್ಲ. ಮನೆಯ ಯಜಮಾನನು ದಕ್ಷನಾದರೆ ಮನೆಯವರೆಲ್ಲರೂ ಸನ್ಮಾರ್ಗದಲ್ಲಿಯೇ ನಡೆಯುತ್ತಾರೆ. ಸಮಾಜದ ಧರ್ಮಪ್ರವರ್ತಕರಾದ ಗುರುವರ್ಗದವರ ಸ್ಥಿತಿಯು ಶೋಚನೀಯವಾಗಿರುವುದು. ವೈದಿಕವಿದ್ಯಾಸ್ವರೂಪವೇ ಅನೇಕರಿಗೆ ತಿಳಿಯದಾಗಿರುವುದು. ಇನ್ನು ಧರ್ಮಸ್ವರೂಪವು ಅವರಿಗೆ ಹೇಗೆ ಗೊತ್ತಾಗಬೇಕು? ನಿನ್ನ ಅವಲೋಕನದಿಂದ ಈ ಲೋಕಗಳೆಲ್ಲವೂ ನೀಗಿ ಉತ್ಕೃಷ್ಟಧರ್ಮವು ಆಚರಣೆಗೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ. ಯಾರು ನಮ್ಮ ಗುರುಗಳು, ಯಾರು ನಮ್ಮ ದೀಕ್ಷಾ, ಶಿಕ್ಷಾ, ಮೋಕ್ಷಗಳಿಗೆ ಕರ್ತರು, ಯಾರಿಂದ ಈ ಮತವು ಸ್ಥಾಪನೆಯಾಯಿತು. ಯಾರನ್ನು ತ್ರಿಕರಣಪೂರ್ವಕ ಸೇವಿಸುವುದರಿಂದ ಸದ್ಗತಿ ದೊರೆಯುತ್ತೆ ಎಂಬ ಇವೇ ಮೊದಲಾದ ವಿಷಯಗಳನ್ನು ಮನದಟ್ಟಿಗೆ ಸರಿಯಾಗಿ ಮನನಮಾಡಿಸು. ಗುರುವರ್ಗದವರು ಕೈಗೊಳ್ಳಬೇಕಾದ ಕರ್ತವ್ಯಗಳನ್ನು ಸ್ಪಷ್ಟಪಡಿಸು. ಶಿಷ್ಯೋದ್ಧಾರವೇ ಮೂಲಮಂತ್ರವೆಂಬುದು ಗುರುವರ್ಗದವರಿಗೆ ಗೊತ್ತಾಗುವಂತೆ ಜಯಭೇರಿಯನ್ನು ಹೊಡಿಸು.

ಪ್ರಭಾದೇವಿ ನೀನು ಮಾಡತಕ್ಕ ಕೆಲಸಗಳು ಅನೇಕವಾಗಿರುವವು. ಸಮಾಜದಲ್ಲಿ ದುರ್ವಾದವೆಂಬ ಗಾಢಾಂಧಕಾರವು ಮುಸುಕಿಕೊಂಡಿದೆ. ಇಂಥ ವಿಷಮ ಸಮಯದಲ್ಲಿ ನೀನು ಅವತರಿಸಿದ್ದೀಯೆ, "ಗಜಾನಾಂ ಪಂಕಮಗ್ನಾನಾಂ ಗಜಾ ಏವ ಧುರಂಧರಾಃ" ಎಂಬಂತೆ ಶ್ರೀ ಜಗದ್ಗುರುಗಳ ಕೃಪಾವಿಶೇಷದಿಂದ ಜನಿಸಿರುವ ನೀನು ಈ ಅಂಧಕಾರವನ್ನು ಹೋಗಲಾಡಿಸಲು ಶಕ್ತಳೇ ಹೊರತು ಅನ್ಯರಿಂದ ಸಾಧ್ಯವಾದೀತೇ? ಬಹುದಿನಗಳಿಂದ ಅಡಗಿಕೊಂಡಿರುವ ಮೂಢಸಾಂಪ್ರದಾಯಗಳನ್ನು ತೊಲಗಿಸಬೇಕಾಗಿದೆ. ನಿನ್ನ ಹಿತೋಪದೇಶದಿಂದ ಸಮಾಜವು ಎಚ್ಚೆತ್ತುಕೊಳ್ಳುತ್ತಿದೆ ಎಂಬುದರ ಉಪಸಂದರ್ಶನಾರ್ಥವಾಗಿ ಎಲ್ಲೆಲ್ಲಿಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘಗಳು ಸ್ಥಾಪನೆಯಾಗುತ್ತಿರುವವು. ಕೀರ್ತನಕಾರರು ಆ ಭಗವತ್ಪಾದರ ಲೀಲೆಗಳನ್ನು ಹಾಡಿ ಹರಸುತ್ತಾ ದೇಶಮಧ್ಯದಲ್ಲಿ ಸಂಚರಿಸುತ್ತಾ ರಂಜಿಸುವರು. ಮತ್ತೆ ಕೆಲವರು ಪಾಶ್ಚಾತ್ಯ ವಿದ್ಯಾಸಂಪನ್ನರಾದ ಜನಗಳನ್ನು ಧರ್ಮಮಾರ್ಗಕ್ಕೆ ತಿರುಗಿಸುತ್ತ ನಡೆದಿರುವರು. ಇದೆಲ್ಲವೂ ನಿನ್ನ ಅದ್ಭುತ ಮಹಿಮೆಯ ಪ್ರಭಾವವೇ ಸರಿ. ಸ್ವಮತ ಪರಮತೀಯರೆಲ್ಲರೂ ನಿನ್ನ ಗುಣಕಥನವನ್ನು ಮಾಡುತ್ತಿರುವರು. ಇಷ್ಟು ಮಟ್ಟಿನ ಯೋಗ್ಯತೆಯನ್ನು ಹೊಂದಲು ಸಹಾಯಕರಾಗಿರುವ ಸರ್ವರಿಗೂ ಅನವರತ ಇಷ್ಟವನ್ನು ಪ್ರದಾನಮಾಡುತ್ತಾ ಲೋಕದಲ್ಲಿ ಪ್ರಕಾಶಿಸುತ್ತ ಚಿರಂಜೀವಿಯಾಗಿ ಬಾಳೆಂಬುದೇ ನನ್ನ ಅಭ್ಯರ್ಥನ.

ಜಯಮಸ್ತು ಪತಿತಪಾವನಂ
ಜಯಮಸ್ತು ಮಹೇಶಪಾದಪಂಕಜರಸಿಕಂ
ಜಯಮಸ್ತು ವಿಬುಧಪ್ರಿಯಕಂ
ಜಯಮಸ್ತು ಸ್ವಧರ್ಮಲೋಕಜನಹಿತ ಪ್ರಭೆಗಂ ||

ಪ್ರಭಾಭಿಮಾನಿ
ಎಸ್ ಎಂ ಬಸವಯ್ಯ,
ಕಂಬಾಳಮಠ, ಶಿಂಗಟಗೆರೆ.

ಟ್ರೈನಿಂಗ್ ಕಾಲೇಜ್
ಮೈಸೂರು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೀರಶೈವಸಮಾಜ ಜಾಗ್ರತಿ.

ವೀರಶೈವಮತವನ್ನು ಸ್ಥಾಪಿಸಿದ ಪಂಚಾಚಾರ್ಯರು ಐವರಿರುವರೆಂದು ಜಗತ್ಪ್ರಸಿದ್ಧವಾಗಿ ಇದೆ. ಅದುದರಿಂದಲೇ ಇವರಿಗೆ ಪಂಚಾಚಾರ್ಯರೆಂಬ ನಾಮವು ಶಾಸ್ತ್ರದಲ್ಲಿಯೂ ಲೋಕದಲ್ಲಿಯೂ ಪ್ರಸಿದ್ಧವಾಗಿರುವದು. ಈ ಪಂಚಾಚಾರ್ಯರು ಯುಗಯುಗಾಂತರಗಳಲ್ಲಿ ಬೇರೆಬೇರೆ ನಾಮಗಳನ್ನು ಧರಿಸಿಕೊಂಡು ಅವತರಿಸಿರುವರು. ಶಾಸ್ತ್ರಸಮ್ಮತವಾದ ಮತವಾಗಿದೆ. ಇಂಥಾ ಸುತ್ಯವಾದ ಮತದಲ್ಲಿ ಜನಿಸಿದ ವ್ಯಕ್ತಿಯೊಬ್ಬನಿಗೂ, ಇಹದಲ್ಲಿ ಸುಖವನ್ನೂ ಪರದಲ್ಲಿ ನಿಜಸೌಖ್ಯವನ್ನೂ ಇತ್ತು ಆ ಜಗದ್ಗುರುಗಳಾದ ಜಗದಾಚಾರ್ಯರು ರಕ್ಷಿಸುವರು. ಇಂತಹ ಶ್ರೇಷ್ಠವಾದ ಮಾರ್ಗದರ್ಶಿಗಳು ಜಗತ್ತಿನಲ್ಲಿ ಅವತರಿಸಿ ನಮ್ಮ ಭವರೋಗಗಳನ್ನು ಹೋಗಲಾಡಿಸುವ ಆ ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಪದ್ಮಗಳಲ್ಲಿ ಪ್ರತಿಯೊಬ್ಬ ವೀರಶೈವನೂ ತ್ರಿಕರಣಪೂರ್ವಕವಾಗಿ ಭಕ್ತಿಯುಳ್ಳವನಾಗಿರುವದೇ ನಮ್ಮ ವೀರಶೈವ ಸಮಾಜದ ಧರ್ಮವಾಗಿರುವದು, ಆದರೆ ಜಗದಾದಿಯಿಂದ ಇಂದಿನವರೆಗೂ ಈ ಜಗದಾಚಾರ್ಯರು ಪ್ರಕಾಶಮಾನರಾಗಿದ್ದರೂ ಸಹ ನಮ್ಮ ವೀರಶೈವ ಸಮಾಜ ಬಂಧುಗಳಲ್ಲಿ ಕೆಲವರು ಆಚಾರ್ಯರಲ್ಲಿ ಭಕ್ತಿಶೂನ್ಯರಾಗಿರುವದರಲ್ಲಿಯೇ ಜಗದಾಚಾರ್ಯರ ಕೃಪಾಬಲದಿಂದಲೇ ಮರೆಯೆಂಬ ಸರಿ ಹರಿದು ಈಗ ನಮ್ಮ ಸಮಾಜದ ಸಲ ಕಣ್ಣೆರೆದಿರುವದು ಕಂಡು ಬರುತ್ತದೆ. ಇದೆಲ್ಲ ಯಾರ ಪ್ರಭಾವವು? ಆ ಜಗದಾಚಾರ್ಯರ ಪ್ರಭಾವವಲ್ಲವೇ? ಈ ನಮ್ಮ ಸಮಾಜದ ಅಂಧಕಾರವನ್ನು ಹೋಗಲಾಡಿಸಿ ಜ್ಞಾನಪ್ರದವಾದ ಅಮೃತವನ್ನು ಪಾನಮಾಡಿಸಿದ ದಾತರು ಆ ಜಗದಾಚಾರ್ಯರಾದ ಪಂಚಾಚಾರ್ಯರಲ್ಲದೆ ಮತ್ತಾರಿರುವರು? ಮತ್ತು ಪವಿತ್ರವಾದ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮವನ್ನು ಧರಿಸಿದ ಪ್ರಭೆಯು ಹುಟ್ಟಿ ಸ್ವಲ್ಪ ದಿವಸಗಳಾಗಿದ್ದರೂ ಈ ಪ್ರಭೆಯು ಕೀರ್ತಿಯು ದಿಗಂತವನ್ನು ವ್ಯಾಪಿಸಿರುವದು. ಅಹಹ! ಪ್ರಭೆಯೇ! ನೀನು ಹುಟ್ಟಿದ್ದು ಸಾರ್ಥಕವಾಯಿತು. ನೀನು ಹುಟ್ಟಿದಂದಿನಿಂದ ನಿನ್ನ ಸಮಾಜಬಂಧುಗಳು ನಿನ್ನನ್ನು ಹಾರೈಸುತ್ತಿರುವರು. ಸ್ತುತ್ಯವಾದದ್ದು. ನಮ್ಮ ಈ ಸಮಾಜವು ಇಲ್ಲಿಯವರೆಗೆ ಬಹಳ ಹೀನಸ್ಥಿತಿಯಲ್ಲಿದ್ದಿತು. ಅದರಲ್ಲಿಯೂ ಶ್ರೇಷ್ಠವರ್ಗದವರಾದ ಗುರುವರ್ಗದವರಲ್ಲಿ ಕೆಲವರಿಗೆ ತಮ್ಮ ಗೋತ್ರಸೂತ್ರ ಶಾಖಾಪ್ರವರ ಮುಂತಾದ ಸಂಗತಿಗಳು ಗೊತ್ತೇ ಇದ್ದಿಲ್ಲ. ಇಂಥಾ ಪವಿತ್ರಸ್ವಾರ್ಥ ಕಾರ್ಯವನ್ನು ಕೈಕೊಂಡು ನಮಗೆ ಸದ್ಬೋಧಾಮೃತವನ್ನು ಪಾನಮಾಡಿಸಿದ ಪ್ರಭೆಯೇ! ನಿನ್ನ ಉಪಕಾರವನ್ನು ಎಷ್ಟೆಂತ ಸ್ಮರಿಸಲಿ! ನಿನ್ನ ಉಪಕಾರಕ್ಕೆ ಸಮಾಜವೇ ಋಣಿಯಾಗಿರುವದು. ಜ್ಞಾನಪ್ರಭೆಯಾದ ನಿನ್ನನ್ನು ವೀರಶೈವಸಮುದಾಯಕ್ಕೆ ದರ್ಶನವನ್ನು ಮಾಡಿಸಿ ನಿನ್ನ ಬೋಧಾಮೃತವನ್ನು ಪಾನಮಾಡಿಸಲಿಕ್ಕೆ ಹಸಿವು ತೃಷೆಗಳಿಲ್ಲದೆ ಅಹೋರಾತ್ರಿ ಕಳಕಳಿಯಿಂದ ಹೋರಾಡುತ್ತಿರುವ ವೇ|| ಸಂ|| ಕಾಶೀನಾಥಶಾಸ್ತ್ರಿಗಳವರೇ ಧನ್ಯರು! ಧನ್ಯರು!! ಈ ಮಹನೀಯರಿಗೆ ಆಯುರಾರೋಗ್ಯ ಸುಖಸಂಪದಗಳನ್ನು ಆಶೀರ್ವದಿಸಿ ರಕ್ಷಿಸಲೆಂದು ಆ ಜಗದ್ಗುರುಗಳಾದ ಪಂಚಾಚಾರ್ಯರನ್ನು ಅನನ್ಯಭಾವದಿಂದ ಪ್ರಾರ್ಥಿಸುವ,

ಬ್ರ|| ಶ್ರೀ|| ಸಿದ್ಧಾಂತಿ ನಾಗಭೂಷಣಶಾಸ್ತ್ರೀ,
ಜೋಗೂರು ಹಿರೇಮಠ ಮುಕ್ಕಾಂ ಗದಗ.

ಶ್ರೀ ಕಾಶೀಕ್ಷೇತ್ರ ಮಾಹಾತ್ಮ್ಯದ ಮೇಲೆ ಗಂಭೀರ ವ್ಯಾಖ್ಯಾನವು.

ಶ್ರೀ ಕ್ಷೇತ್ರಕಾಶೀ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿ ಶ್ರೀ ವ್ಯಾಕರಣರತ್ನ ಪಂ|| ಶ್ರೀ ಶಿರಗಿರಿ ಚೆನ್ನಬಸವಾಚಾರ್ಯರು ಪನಮಸಾಗರದಿಂದ ಕುಷ್ಟಗಿಗೆ ದಯಮಾಡಿಸಿದರು, ಅಲ್ಲಿಯ ಯಳಮೇಲಿ ಕುಷ್ಟಗಿ ಬೃಹನ್ಮಠಾಧಿಕಾರಿಗಳಾದ ವೇ|| ರಾಚೋಟಿಪ್ಪಯ್ಯನವರು ಸಂಗಯ್ಯನವರು, ಮುದಗ್ದಿ ಮಠಾಧ್ಯಕ್ಷ ಕಂಬಳಪ್ಪಯ್ಯನವರು ಪಟ್ಟಕಂಧಿ ಮಠಾಧ್ಯಕ್ಷ ಶಿವಬಸಯ್ಯನವರು ಪಗಡದಿನ್ನಿ ವೇ|| ಚಂದ್ರಶೇಖರಶಾಸ್ತ್ರಿಗಳ ಶಿಷ್ಯಗಳೂ ಸಕಲ ಭಕ್ತಾದಿಗಳಂ ಕೂಡಿಕೊಂಡು ಶ್ರೀಗಳವರ ದರ್ಶನಾಶೀರ್ವಾದವಂ ಹೊಂದಿ "ಕಾಶೀ ಮಾಹಾತ್ಮ್ಯ"ವಂ ಬೋಧಿಸಬೇಕೆಂದು ಬೇಡಿಕೊಳ್ಳಲಾಗಿ ಶಿವಾಚಾರ್ಯರು "ಕಾಶೀಖಂಡ"ದಲ್ಲಿ ಬರತಕ್ಕ ವ್ಯಾಸಯೋಗೀಶ್ವರರ ವಾಕ್ಯಗಳನ್ನುದಾಹರಿಸಿ ಗಂಗಾಸ್ನಾನದಿಂದಾಗತಕ್ಕ ಫಲ, ಕಾಶಿಯಲ್ಲಿ ಶಿವಲಿಂಗಪ್ರತಿಷ್ಠೆಯನ್ನು ಮಾಡಿಸಿದರೆ ಆಗತಕ್ಕ ಫಲ, ವಿಶ್ವೇಶ್ವರಮಹಿಮಾ, ವಿಶ್ವಾರಾಧ್ಯರ ಮಾಹಾತ್ಮ್ಯ, ಹಾಗೂ ವಿಶ್ವಾರಾಧ್ಯ ಪೀಠದಲ್ಲಿರುವ ಎರಡುಸಾವಿರ ವರ್ಷದ ರಾಜ ಮಹಾರಾಜರಿಂದ ಕೊಡಲ್ಪಟ್ಟ ಸನದು ಶಾಸನಾದಿಗಳ ಅಭಿಪ್ರಾಯವನ್ನೂ ಮತ್ತು ಹುಮಾಯು ಅಕಬರ್, ಅವರಂಗಜೇಬ ಮೊದಲಾದ ಮುಸಲ್ಮಾನ ಬಾದಶಹರು ಶ್ರೀಮಲ್ಲಿಕಾರ್ಜುನ ಶಿವಯೋಗಿ ಜಂಗಮ ಸಾರ್ವಭೌಮರಿಗೆ ಗೌರವಿಸಿ 'ಜಂಗಮವಾಡೀ' "ಜಂಗಮಪುರ" ಮುಂತಾದವುಗಳನ್ನು ಉಂಬಳಿಯಾಗಿ ಹಾಕಿಸಿಕೊಟ್ಟ ವೃತ್ತಾಂತವನ್ನೂ ಕಾಶೀ ಪೀಠಾಚಾರ್ಯರ ಅನಂತಾನಂತ ಮಹಿಮೆಗಳನ್ನೂ ಆಯಾಯ ಕಾಲ ನಿರ್ದೇಶಪೂರ್ವಕ ತೋರಿಸಿ "ಕಾಶ್ಯಾಂ ಮರಣಾನ್ಮುಕ್ತಿಃ" ಕಾಶೀ ಮರಣದಿಂದ ಮುಕ್ತಿ ದೊರೆಯುವದು ಎಂಬಿವೇ ಮೊದಲಾದ ವಾಕ್ಯಾರ್ಥಗಳನ್ನು ತಿಳಿಸಿ ಕಾಶೀಕ್ಷೇತ್ರಯಾತ್ರೆಯಿಂದಾಗತಕ್ಕ ಫಲಾತಿಶಯವನ್ನು ಬೋಧಿಸಲು ಸರ್ವರೂ ಕಾಶೀಮಾಹಾತ್ಮ್ಯಮಂ ಕೇಳಿ ಸಂತುಷ್ಟಚಿತ್ತರಾಗಿ ಕಾಶೀ ವಿಶ್ವನಾಥನಲ್ಲಿ ಅನಿತರ ಸಾಧಾರಣಭಕ್ತಿಮಂತರಾಗಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಜಯಕಾರವನ್ನು ಮಾಡಿದರು

ಪರ್ವತಗೌಡ ಮುದೇನೂರ.

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭಾ, ಬೆಂಗಳೂರು.

ಬೇರೆ ಬೇರೆ ಸ್ಥಳಗಳಿಂದ ಮಹಾಸಭೆಗೆ ಬರತಕ್ಕ ಪ್ರತಿನಿಧಿಗಳು ಈ ಒಳಗಾಗಿ ಮಹಾಸಭಾ ಆಫೀಸಿಗೆ ತಮ್ಮ ಹೆಸರನ್ನು ತಿಳಿಸದೆ ಇದ್ದ ಪಕ್ಷದಲ್ಲಿ ತಾ|| 22 ರ ವರೆಗೂ ಮಹಾಸಭಾ ಆಫೀಸಿಗೆ ತಿಳಿಸಬಹುದು. ಹೀಗೆ ತಿಳಿಸುವುದರಿಂದ ಪ್ರತಿನಿಧಿಗಳಿಗೆ ವಸತಿಯನ್ನೇರ್ಪಡಿಸಲು ಅನುಕೂಲವಾಗುವುದು. ಹಾಗೆ ತಾ|| 22 ರ ಒಳಗೆ ತಿಳಿಸಲು ಸಾಧ್ಯವಿಲ್ಲದಿದ್ದಲ್ಲಿ, ಮಹಾಸಭೆಗಾಗಿ ಇಲ್ಲಿಗೆ ಬಂದಾಗಲೇ ಪ್ರವೇಶಧನವನ್ನು ಪಾವತೀ ಮಾಡಿ ಪ್ರತಿನಿಧಿ ಯಾ ಪ್ರೇಕ್ಷಕರ ಟಿಕೆಟನ್ನು ಪಡೆಯಬಹುದು.

ತಮ್ಮ ವಿಧೇಯ,
M. Nagappa,
Secretary.

ಹತ್ತನೆಯ ಅಖಿಲಭಾರತೀಯ ವೀರಶೈವ ಮಹಾಸಭಾಚಾಲಕರಲ್ಲಿ ವಿಜ್ಞಾಪನೆಗಳು.

ಮಹಾಶಯರೇ, ಈ ಸಾರೆ ನೆರೆಯಲಿಕ್ಕಿರುವ ಮಹಾಸಭೆಯಲ್ಲಿ ಹಲವು ಉಪಯುಕ್ತ ವಿಷಯಗಳ ಚರ್ಚಿಸಲು ನಿರ್ಧರಿಸಿರುವಿರಷ್ಟೆ. ಇವುಗಳ ಜೊತೆಗೆ ಅತ್ಯಂತೋಪಯುಕ್ತವಾದ ಮತ್ತೆರಡು ವಿಷಯಗಳ ನಿರ್ಧರಿಸುವುದು ಅತ್ಯವಶ್ಯಕವೂ ಉಪಯುಕ್ತವೂ ಆದುದೆಂದು ಕಂಡುಬರುತ್ತದೆ. ಅವು ಯಾವುವೆಂದರೆ:—

1. ಮೈಸೂರು ಸಂಸ್ಥಾನದ ಚರಿತ್ರೆ ಮತ್ತು ಹಿಂದೂದೇಶದ ಚರಿತ್ರೆಗಳಲ್ಲಿ "ಲಿಂಗವಂತ ಅಥವಾ ವೀರಶೈವಮತವು ಕಲ್ಯಾಣಪಟ್ಟಣದಲ್ಲಿ ಬಿಜ್ಜಳರಾಜನ ಮಂತ್ರಿಯಾಗಿದ್ದ ಬಸವಣ್ಣನಿಂದ ಕ್ರಿ. ಶ. 12ನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿತು. ಇವರು ವೇದವನ್ನು ಒಪ್ಪುವುದಿಲ್ಲ' ಇತ್ಯಾದಿ ಅಸಂಬದ್ಧವಾಗಿ ಬರೆದಿರುವರು. ವೀರಶೈವಮತವು ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟಿದ್ದು ವೇದಾಗಮ ಪ್ರತಿಪಾದಿತವಾಗಿದ್ದರೂ ಮೇಲ್ಕಂಡ ಚರಿತ್ರಕಾರರು ವಿಚಾರವಿಲ್ಲದೆ ಇಂದಿನ ಪ್ರಜೆಗಳೆನಿಸಿದ ಮಕ್ಕಳು ಓದತಕ್ಕ ಪುಸ್ತಕಗಳಲ್ಲಿ ಈ ರೀತಿ ಬರೆದಿರುವದು ಅಸಹನೀಯವೂ ಅಸಮಂಜಸವೂ ಆಗಿರುವುದು; ಅಲ್ಲದೆ ವೀರಶೈವಮತಕ್ಕೇ ಅವಮಾನಕರವಾದುದರಿಂದ ಮಹಾಸಭೆಯವರು ಈ ಬಗ್ಗೆ ತಕ್ಕ ವಿಚಾರಮಾಡಿ ಆಯಾ ಸರ್ಕಾರಗಳಿಗೆ ತಿಳಿಸಿ ಇದನ್ನು ಯುಕ್ತರೀತಿಯಿಂದ ತಿದ್ದಿಸಬೇಕಾಗಿ ವಿನಂತಿ ಮಾಡಿಕೊಳ್ಳುವುದು.

2. ಪುರಾಣಿಸಿದ ತ್ರಿಮತಸ್ಥ ವೈದಿಕಮತೀಯರು ಆಚರಿಸುವಂತೆ ನಾವೂ ನಮ್ಮ ಮತಸ್ಥಾಪಕರ ಜಯಂತಿಯನ್ನು ಆಚರಿಸುವುದು ಧರ್ಮವೂ ಅವಶ್ಯವೂ ಆಗಿದೆ. ಅದರಂತೆ ನಮ್ಮ ಸಮಾಜದಲ್ಲಿ ಹುಟ್ಟಿ ಸಾಹಿತ್ಯಪ್ರಪಂಚದಲ್ಲಿ ವಿಖ್ಯಾತರಾಗಿರುವ ಹರಿಹರದೇವ, ರಾಘವಾಂಕಪಂಡಿತ, ನಿಜಗುಣ ಶಿವಯೋಗಿ, ಷಡಕ್ಷರಿ ಮುಂತಾದ ವಿಖ್ಯಾತಮಹಾಕವಿಪುಂಗವರ ಪುಣ್ಯತಿಥಿಗಳನ್ನು ಆಚರಿಸುವಂತೆ ಮಹಾಸಭೆಯಲ್ಲಿ ನಿರ್ಧರಿಸಬೇಕೆಂದು ಪ್ರಾರ್ಥನೆ.

ಮೇಲ್ಕಂಡ ವಿಷಯಗಳೆರಡೂ ಅತ್ಯಂತ ಮಹತ್ತರವಾದುದರಿಂದ ಮಹಾಸಭೆಯು ಈ ಕಡೆಗೆ ಸಂಪೂರ್ಣ ಲಕ್ಷ್ಯವನ್ನು ಕೊಡಬೇಕಾಗಿ ವಿನಂತಿ.

ಸಮಾಜಹಿತಚಿಂತಕ,
ಟಿ. ಎಸ್. ಆರ್. ಆರಾಧ್ಯ, ಮೈಸೂರು.

ಶ್ರೀ ಕುಪ್ಪೂರುಗದ್ದುಗೆಯ ಮರುಳಸಿದ್ಧೇಶ್ವರ ಮಹಾಸ್ವಾಮಿಯವರ

ವಾರ್ಷಿಕಕೃತ್ತಿಕಾಮಹೋತ್ಸವ.

ಈ ಪ್ರಭವ ಸಂ|| ಮಾರ್ಗಶಿರ ಶುದ್ಧ ಪೂರ್ಣಿಮಾ ಸೋಮವಾರ ಪ್ರಾತಃಕಾಲ ಶ್ರೀಗುರು ಮರುಳಸಿದ್ಧೇಶ್ವರ ಮಹಾಸ್ವಾಮಿಯವರ ರಥೋತ್ಸವವು ನಡೆದ ಬಳಿಕ ಸಾಯಂಕಾಲ ಗುಪ್ಪಿ ಸುಪ್ರಸಿದ್ಧ ಕೀರ್ತನಕಾರರಾದ ವೇ|| ಶಿವರುದ್ರಶಾಸ್ತ್ರಿಗಳವರು ಶ್ರೀಗುರು ಕುಪ್ಪೂರುಗದ್ದುಗೆ ಮರುಳಸಿದ್ಧೇಶ್ವರ ಮಹಾಸ್ವಾಮಿಯವರ ಸತ್ಕಥಾಮೃತವನ್ನು ಶಿವಕೀರ್ತನಾರೂಪವಾಗಿ ಪಾನಮಾಡಿಸಿ ಆಗಮಿಸಿದ್ದ ೮-೧೦ ಸಾವಿರ ಮಹಾಜನಗಳಿಗೆ ಮನಾನಂದವಂ ಗೊಳಿಸಿದರು. ರಾತ್ರಿ ೧ ಘಂಟೆಯಿಂದ ಶ್ರೀಗುರು ಮರುಳಸಿದ್ಧೇಶ್ವರ ಮಹಾಸ್ವಾಮಿಯವರ ಪುಷ್ಪರಥಾರೋಹಣೋತ್ಸವವು ಪದ್ಧತಿಯಂತೆ ನಡೆಯಿಸಲ್ಪಟ್ಟಿತು.

ವೇ|| ಸಿದ್ಧಾಂತಿ ರುದ್ರಪ್ಪಶಾಸ್ತ್ರಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶಾಸ್ತ್ರೋಕ್ತ ಕನ್ಯಾದಾನವು.

ಧರ್ಮಶಾಸ್ತ್ರದಲ್ಲಿ ಹೇಳಿದಂತೆ ಷೋಡಶ ಮಹಾದಾನಗಳಲ್ಲಿ ಕನ್ಯಾದಾನವು ಒಂದಾಗಿದ್ದು ಉಭಯ ಕುಲವನ್ನು ಪವಿತ್ರಗೊಳಿಸತಕ್ಕದಾಗಿರುತ್ತದೆ. ಈ ಕನ್ಯಾದಾನದಿಂದ ಕನ್ಯಾ ಮಾತಾಪಿತೃಗಳಿಗೆ ಸದ್ಗತಿಯಾಗುತ್ತದೆಂದು ಒಡೆದು ಹೇಳುವ ಕಾರಣವಿಲ್ಲ. ಒಂದು ಕಾಲದಲ್ಲಿ ಕನ್ಯಾದಾನವು ಶ್ರೇಷ್ಠವಾದ ದಾನವೆಂದು ಭಾವಿಸಿ ವರನನ್ನೇ ತಮ್ಮ ಮನೆಗೆ ಕರೆಸಿಕೊಂಡು ಸರ್ವಾಲಂಕಾರಭೂಷಿತಳಾದ ತಮ್ಮ ಮಗಳನ್ನು ಮಾತಾಪಿತೃಗಳು ಲಗ್ನಮಾಡಿಕೊಡತಕ್ಕ ಸಾಂಪ್ರದಾಯವಿದ್ದಿತು. ಉತ್ತರದೇಶದಲ್ಲಿ ವರದಕ್ಷಿಣೆಯು ಹೆಚ್ಚಿದಂತೆ ಈ ದಕ್ಷಿಣಪ್ರಾಂತದಲ್ಲಿ ಅದರಲ್ಲಿಯೂ ನಮ್ಮ ಮಲಪಗೌಡರಲ್ಲಿ ಕನ್ಯಾದಕ್ಷಿಣೆಯು ಹೆಚ್ಚಿದ್ದರಿಂದ ಬಡಬಗ್ಗರು ಲಗ್ನವನ್ನು ಕಾಣುವದೇ ದುರ್ಲಭವಾಗಿದೆ. ಸಾವಿರ, ಹದಿನೈದುನೂರು ರೂಪಾಯಿಗಳ ವರೆಗೂ ತೆರವು ತೆಗೆದುಕೊಳ್ಳುವ ವಾಡಿಕೆಯು ಮಲಪಗೌಡರಲ್ಲಿ ಹೆಚ್ಚಿರುತ್ತದೆ. ಈ ರೀತಿ ಗೊತ್ತುಮಾಡಿದ ಕನ್ಯೆಯನ್ನು ಮತ್ತೊಬ್ಬನು ಐದುನೂರು ರೂಪಾಯಿಗಳನ್ನು ಹೆಚ್ಚಿಸಿ ನಿಶ್ಚಯಿಸಿಕೊಂಡು ಹೋಗುವನು. ಒಬ್ಬನಿಗೆ ವಾಗ್ದತ್ತವಾದ ಕನ್ಯೆಯನ್ನು ಮತ್ತೊಬ್ಬನಿಗೆ ಕೊಡಲಿಕ್ಕೆ ಅದು ಹೇಗೆ ಮನಸ್ಸಾಗುತ್ತದೆಯೋ? ಸಾವಿರ, ಎರಡು ಸಾವಿರ ರೂಪಾಯಿ ತೆರವು ತೆಗೆದುಕೊಂಡು ವರನ ಮನೆಗೆ ನೂರಾರು ಜನ ಬೀಗರನ್ನು ಕಟ್ಟಿಕೊಂಡು ಹೋಗಿ ಶ್ರೀಮತ್ಪಂಚಾಚಾರ್ಯರ ಸಾಕ್ಷಿಯಾಗಿ "ಕನ್ಯಾಂ ಕನಕಸಂಪನ್ನಾಂ" ಎಂದು ಮುಖದಿಂದುಚ್ಚರಿಸುವನು. ಅದೆಂಥ ಕನ್ಯಾದಾನವೋ ಪರಮಾತ್ಮನೇ ಬಲ್ಲ! ಧಿಕ್ಕಾರ! ಧಿಕ್ಕಾರ!! ಕನ್ಯಾಶುಲ್ಕವನ್ನು ತೆಗೆದುಕೊಂಡು ಕನ್ಯಾದಾನ ಮಂತ್ರವನ್ನುಚ್ಚರಿಸುವವನ ಜನ್ಮಕ್ಕೆ ಧಿಕ್ಕಾರ!!! ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ದನಗಳಂತೆ ಮಾರಿಕೊಂಡು ಉಪಜೀವಿಸತಕ್ಕವನ ವೃತ್ತಿಗೆ ಧಿಕ್ಕಾರವಿರಲಿ. ಕೋಡೀಕೊಪ್ಪದ ರಾ|| ಶಿವಪ್ಪಗೌಡರು ಬಡೇರ್ಯೋಬಳಿಗೆ ಪ್ರಮುಖರಿದ್ದು ಈ ಅನಾಚಾರಪದ್ಧತಿಯನ್ನು ದೂರಮಾಡುವದಕ್ಕಾಗಿ ಪ್ರಯತ್ನವನ್ನು ಮಾಡುತ್ತಿರುವರು. ತಮ್ಮ ಮಕ್ಕಳನ್ನು ಶಾಸ್ತ್ರೋಕ್ತವಾಗಿ ಕನ್ಯಾದಾನ ಮಾಡಿ ಇಹಪರಸೌಖ್ಯವನ್ನು ಅನುಭವಿಸಿ ಸರ್ವರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆಂದು ಸತ್ಸಂಕಲ್ಪವನ್ನು ಮಾಡಿಕೊಂಡಿರುವಾಗಲೇ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವಪ್ಪಗೌಡರ ಪ್ರಾರ್ಥನೆಯಂತೆ ವಿನ್ನಪವನ್ನು ಅಂಗೀಕರಿಸಿ ದಯಮಾಡಿಸಲು ಶ್ರೀ ಮಹಾಸನ್ನಿಧಿಯಲ್ಲಿ ಇದೇ ಮಾರ್ಗಶಿರ ಶು|| ೪ ಸೋಮವಾರ ದಿವಿ ಕುಂಭಲಗ್ನದ ಶುಭಾಂಶದಲ್ಲಿ ವಿವಾಹಾಂಗಭೂತಗಳಾದ ಕಾರ್ಯಗಳನ್ನು ಪ್ರಥಮ ದಿವಸವೇ ನೆರವೇರಿಸಿ ಪಂಚಕಲಶಸ್ಥಾಪನಾ ಪೂರ್ವಕವಾಗಿ ತಮ್ಮ ಜ್ಯೇಷ್ಠಪುತ್ರಿ ಕುಂ|| ರುದ್ರಮ್ಮಾಜಿಯನ್ನು ಕೋಡೀಹಳ್ಳಿ ಪಟೇಲ ವೀರಪ್ಪಗೌಡರ ಮಗ ಪುಟ್ಟಪ್ಪಗೌಡರಿಗೆ ಮತ್ತು ತಮ್ಮ ಅಣ್ಣಂದಿರಾದ ಹೊಳಿಯಪ್ಪಗೌಡರ ಮಗಳು ಗೌರಮ್ಮಾಜಿಯನ್ನು ಅರಕೆಲಗಡ್ಡಿ ವಾಸಿ ತುಮರಿಕೊಪ್ಪದ ಶಿವಪ್ಪಗೌಡರ ಮಗ ವೀರಬಸಪ್ಪಗೌಡರಿಗೆ ಕೊಟ್ಟು ಕನ್ಯಾದಾನಮಾಡಿದರು. ಅಲ್ಲದೆ ಹಾನಗಲ್ಲ ತಾಲೂಕು ಕ್ಯಾಸನೂರು ಪಟೇಲ ರುದ್ರಪ್ಪಗೌಡರ ಮಗಳ ಲಗ್ನವನ್ನು ಕೂಡ ಧರ್ಮಾರ್ಥವಾಗಿ ಮಾಡಿದರು. ಧನ್ಯ! ಧನ್ಯ!! ಶಿವಪ್ಪಗೌಡರೇ ಧನ್ಯರು. ಅವರ ಜನ್ಮವೇ ಸಾರ್ಥಕವು. ಶ್ರೀ ಜಗದ್ಗುರು ಸನ್ನಿಧಿಯಲ್ಲಿ ಮಂಗಳಕಾರ್ಯವನ್ನು ಮಾಡಿ ಇತರರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದಕ್ಕಾಗಿ ಶ್ರೀ ರೇಣುಕನು ಇವರಿಗೆ ಉತ್ತರೋತ್ತರ ಕಲ್ಯಾಣವನ್ನುಂಟುಮಾಡಲೆಂದು ಹಾರೈಸುತ್ತೇವೆ. ಇದರಂತೆ ಸರ್ವರೂ ಕನ್ಯಾಶುಲ್ಕವನ್ನು ನಿಷೇಧಿಸಿ ಐಕ್ಯದಿಂದ ಕನ್ಯಾದಾನಮಾಡಿ ಶ್ರೀ|| ಕೃಪೆಗೆ ಪಾತ್ರರಾಗಬೇಕು.

ಓರ್ವ ಧರ್ಮಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಆದಿರೆಟ್ಟರ ನಡವಳಿಕೆ.

ಅಯ್ಯಾ ಬಂಧುಗಳೇ, ಜಗತ್ತಿನೊಳಗಿರುವ ಅನೇಕ ವೈದಿಕ ಮತಗಳಲ್ಲಿ ವೀರಶೈವ ಮತವು ಒಂದಾಗಿದೆಯಷ್ಟೇ? ಈ ವೀರಶೈವಮತದಲ್ಲಿ ಅನೇಕ ಪಂಗಡಗಳುಂಟು. ಆ ಪಂಗಡಗಳಲ್ಲಿ ಆದಿರೆಟ್ಟರೆಂಬುವರದೊಂದು ಪಂಗಡವಿದೆ. ಈ ಆದಿರೆಟ್ಟರೆಂಬುವರಿಗೆ ಯಾವ ಕಾರಣದಿಂದಲೋ "ದೀವಟರು" ಎಂಬುವ ನಾಮವು ಬಂದಿದೆ. ಈ ದೀವಟರೆಂಬುವರಲ್ಲಿ ಎಷ್ಟೋ ಜನರು ನಾವ್ಯಾರು? ನಮ್ಮ ಕರ್ತವ್ಯವಾವುದು? ನಮ್ಮಗಳಿಗೆ ಮೋಕ್ಷವನ್ನುಂಟುಮಾಡಿಕೊಡುವ ಗುರುಗಳಾರು? ಎಂಬುದನ್ನು ವಿಚಾರಿಸದೆ, ಕೇವಲ ಮೌಢ್ಯಯುಕ್ತರಾಗಿ, ಮರುಗವ್ವ, ದ್ಯಾಮವ್ವ, ಕರಿಯವ್ವ, ಹನುಮಂತ ನರುವ ಮುಂತಾದವುಗಳ ಎದುರಿಗೆ ದೀವಟಿಗೆಗಳನ್ನು ಹಿಡಿಯುತ್ತಿರುವರು. ಶಹಾಪಿ, ನಿಜಾಮು ಪ್ರಾಂತದ ಕೊಪ್ಪಳ ಎಲಬುರ್ಗಾ ತಾಲೂಕುಗಳೊಳಪಟ್ಟ ಗ್ರಾಮಗಳಲ್ಲಿರುವ ದೀವಟರಂತೂ ಈ ವಿಷಯದಲ್ಲಿ (ದೀವಟಿಗೆಯನ್ನು ಹಿಡಿಯುವದರಲ್ಲಿ) ಬಳ್ಳೇ ಹೆಸರಾಗಿದ್ದಾರೆ. ಈ ಎರಡು ತಾಲೂಕುಗಳಲ್ಲಿರುವ ಎಷ್ಟೋ ಜನ ದೀವಟರು ಧಾರವಾಡ ಜಿಲ್ಲೆಯೊಳಗೆ ಕಸ್ಕಿಯನ್ನು ತೆಗೆಯಲಿಕ್ಕೆ ಹೋದಾಗ್ಗೆ ಅಲ್ಲಿಯ ಇತರ ಜನಗಳು ಇವರಿಗೆ—"ನೀವು ದೀವಟರು, ಮರುಗವ್ವ ಮೊದಲಾದವರ ಎದುರಿಗೆ ದೀವಟಿಗೆಗಳನ್ನು ಹಿಡಿಯುತ್ತಿರುವಿರಿ; ಇಂಥ ಅನಾಚಾರಗಳನ್ನು ಮಾಡುವ ನೀವು ವೀರಶೈವರೊಳಗಿನವರಲ್ಲ. ನಿಮಗೂ ನಮಗೂ ಬಾಂಧವ್ಯವೇ ಬರುವಂತೆ ಇಲ್ಲ" ಇವೇ ಮುಂತಾದ ಬಿರುಸು ಮಾತುಗಳನ್ನಾಡಿ ಅವಮಾನಮಾಡಿ, ಇವರನ್ನು ಹಿಂದಕ್ಕೆ ಕಳುಹಿಸ್ವಾರೆ. ಈ ಸಂಗತಿಯು ಇಲ್ಲಿಯ ಈ ಮತದ ಬಹು ಜನರಿಗೆ ಅನುಭವಕ್ಕೆ ಬಂದಿದೆ. ಆದರೂ ಅವರು ತಮ್ಮ ದುರಾಚಾರಗಳನ್ನು ಬಿಡದೆ, ದಿನೇ ದಿನೇ ಹೆಚ್ಚಾಗಿ ಅಧಃಪಾತವನ್ನು ಹೊಂದುತ್ತ ನಡೆದಿರುವರು. ಅಯ್ಯೋ! ಇವರ ಅನಾಚಾರಕ್ಕೆ ಧಿಕ್ಕಾರ! ಧಿಕ್ಕಾರ! ಧಿಕ್ಕಾರ! ಎಲೈ ಆದಿರೆಟ್ಟರೆಂಬುವ ಬಂಧುಗಳೇ, ಇನ್ನಾದರೂ ಕಣ್ತೆರೆಯಿರಿ. ಈ ದುರಾಚಾರಗಳನ್ನು ದೂರೀಕರಿಸಿ ಆದಿರೆಟ್ಟರೆಂತಲೇ ನಿಮ್ಮ ನಾಮವನ್ನು ಪ್ರಸಿದ್ಧಿಗೆ ತನ್ನಿರಿ. ಶ್ರೀಮತ್ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ಪ್ರತಿ ಯುಗದಲ್ಲಿಯೂ ನಾಮಭೇದದಿಂದ ಶ್ರೀಸೋಮೇಶ್ವರಾದಿ ಲಿಂಗಗಳಿಂದ ಅವತರಿಸಿದ ಭಗವತ್ಪಾದರಾದ ಶ್ರೀ ೧೦೮ ಜಗದ್ಗುರು ರೇಣುಕಾದಿ ಪಂಚಾಚಾರ್ಯರೇ ನಮಗೆ ಗುರುಗಳೆಂದು ತಿಳಿದು, ಆ ಭಗವತ್ಪಾದರಲ್ಲಿಯೂ, ತತ್ಪೀಠಾನುವರ್ತಿಗಳಾದ ಚರ-ಚರಪಟ್ಟಾಧಿಕಾರಿಗಳಲ್ಲಿಯೂ, ಮಠಸ್ಥರಾದ ಮಾಹೇಶ್ವರರಲ್ಲಿಯೂ ಬಹು ಭಕ್ತಿಯನ್ನಿಟ್ಟು, ಅವರ ಸೇವೆಯನ್ನು ಚನ್ನಾಗಿ ಮಾಡಿ ಅವರ ಕೃಪೆಗೆ ಪಾತ್ರರಾಗಿ, ವೀರಶೈವರೆಂಬ ನಾಮವನ್ನು ಸಾರ್ಥಕಪಡಿಸಿ, ಮುಕ್ತಿಯನ್ನು ಪಡೆಯಿರಿ. ಶಿವಂಭೂಯಾತ್.

ಹನುಮಂತಗೌಡಾ ಅಯ್ಯನಗೌಡಾ,
ಕೊತಬಾಳೀ ಪಾಟೀಲ, ಕಾಟ್ರಹಳ್ಳಿ.

ಶ್ರೀಗುರುಭ್ಯೋನಮಃ.

ಪ್ರಭಾಪತ್ರಿಕೆಯ ಪಾಠಕನ ಪ್ರಲಾಪ.

ಕಳೆದ ವಾರದ ಸ್ಟಾರ್ ಪತ್ರಿಕೆಯಲ್ಲಿ "ಪ್ರಭಾವಗರ್ದವರ ಪರೋಪದೇಶ ಪಾಂಡಿತ್ಯವು" ಎಂಬ ಶಿರೋಲೇಖದಿಂದ "ಪ್ರಭಾ ಪತ್ರಿಕೆಯ ಪಾಠಕ" ಎಂಬ ಸಂಜ್ಞೆಯನ್ನಿಟ್ಟುಕೊಂಡು ಯಾರೋ ಒಬ್ಬರು ಒಂದು ಲೇಖವನ್ನು ಬರೆದು ಆ ಲೇಖದಲ್ಲಿ ಪ್ರಭಾ ಪತ್ರಿಕೆಯನ್ನೂ, ಸಂಪಾದಕರನ್ನೂ, ಹಾಗೂ ರಂಭಾಪುರೀ ಜಗದ್ಗುರುಗಳವರನ್ನೂ ಟೀಕಿಸಿರುತ್ತಾರೆ. ಸ್ಟಾರ್ ಪತ್ರಿಕೆಯು ಬಹು ದಿವಸಗಳಿಂದ ಸಮಾಜ ಸೇವೆಯನ್ನು ಮಾಡುತ್ತಿರುವದೆಂದೂ, ಸಮಾಜದಲ್ಲಿ ಒಗ್ಗಟ್ಟನ್ನು ಬೆಳೆಸುತ್ತಿರುವದೆಂದೂ ಪ್ರಭಾ ಪತ್ರಿಕೆಯು ಮಾತ್ರ ಸಮಾಜದಲ್ಲಿ ಒಡಕನ್ನು ಹುಟ್ಟಿಸುತ್ತಿರುವದೆಂದೂ ಜಂಗಮರನ್ನು ದೂಷಿಸುತ್ತಿರುವದೆಂದೂ ಬರೆದಿರುವದನ್ನು ನೋಡಿದರೆ ಈ ಲೇಖಕರು ಎಂಥ ಜ್ಞಾನಾಂಧರಿರುವರೆನ್ನುವದು ಪ್ರತಿಯೊಬ್ಬರಿಗೂ ಗೋಚರವಾಗದೆ ಇರಲಾರದು. ಕೈ|| ವೈ. ವೀರಸಂಗಪ್ಪನವರು ಇದ್ದ ಕಾಲದಲ್ಲಿ ಸ್ಟಾರ್ ಪತ್ರಿಕೆಯು ಸರ್ವರ ಆದರಣೆಗೆ ಪಾತ್ರವಾಗಿದ್ದಿತು. ಅವರು ಗತಿಸಿದಮೇಲೆ ಅವರ ಮಕ್ಕಳಾದ ಮ|| ರಾ|| ವಿರೂಪಾಕ್ಷಪ್ಪನವರು ಸಂಪಾದಕತ್ವವನ್ನು ವಹಿಸಿದಂದಿನಿಂದ ಆ ಪತ್ರಿಕೆಯ ಸ್ಥಿತಿಯೇ ಬದಲಾವಣೆಯನ್ನು ಹೊಂದಿರುವುದು ಸರ್ವರಿಗೂ ಗೊತ್ತೇ ಇದೆ. ಕೈ|| ವೈ. ವೀರಸಂಗಪ್ಪನವರು ಧರ್ಮಶಾಸ್ತ್ರವನ್ನರಿತವರಾದುದರಿಂದ ಸ್ವತಃ ಧರ್ಮಸಂಬಂಧಿ ಲೇಖಗಳನ್ನು ಬರೆದು ಧರ್ಮಜಾಗ್ರತೆಯನ್ನುಂಟುಮಾಡುತ್ತಿದ್ದರು. ವಿರೂಪಾಕ್ಷಪ್ಪನವರು ಧರ್ಮಶಾಸ್ತ್ರದ ಗಂಧವನ್ನೇ ಅರಿಯರು. ಧರ್ಮದ ವಿಷಯದಲ್ಲಿ ಇವರು ಸ್ವತಃ ಬರೆದ ಒಂದಾದರೂ ಲೇಖಗಳನ್ನು ಯಾರೂ ನೋಡಿಲ್ಲ ಮತ್ತು ಕೇಳಿಲ್ಲ. ಹೀಗಿದ್ದು ಈ ಲೇಖಕರು ಇದಕ್ಕೆ ವಿಪರೀತವಾಗಿ ಬರೆದಿರುವದನ್ನು ನೋಡಿದರೆ ಪ್ರತಿಯೊಬ್ಬರೂ ನಗುವಂತಿದೆ. ಹೀಗೆ ಬರೆದಿರುವದು ಈ ಲೇಖಕರ ದುರಭಿಮಾನವಲ್ಲದೆ ಬೇರೊಂದಲ್ಲ. ವಿರಕ್ತರ ಪ್ರೇರಣೆಯಿಂದ ಸ್ಟಾರ್ ಪತ್ರಿಕೆಯಲ್ಲಿ ಯಾವಾಗಲೂ ಗುರುದ್ರೋಹದ ವಿಷಯಗಳೇ ತುಂಬಿ ತುಳುಕುತ್ತವೆ. ಈ ಲೇಖಗಳು ಈ ಲೇಖಕನ ದೃಷ್ಟಿಗೆ ಹೇಗೆ ಬಿದ್ದಾವು? ಗುರುದ್ರೋಹಮಯವಾದ ಸ್ಟಾರ್ ಪತ್ರಿಕೆಯನ್ನು ಯಾರೂ ತರಿಸಕೂಡದೆಂದು ಆನವಟ್ಟಿ ಸಭೆಯಲ್ಲಿ ಠರಾವು ಮಾಡಿದ್ದಕ್ಕೆ ಈ ಲೇಖಕನು ಸಾರಾಸಾರ ವಿಚಾರಶೂನ್ಯನಾಗಿ ಏನೇನೋ ಬರೆದಿರುವದನ್ನು ನೋಡಿದರೆ ಈತನ ಎದೆಗಾರಿಕೆಯನ್ನು ಬಣ್ಣಿಸುವದೇ ಅಸಾಧ್ಯವಾಗಿದೆ. ಈತನ ಬರವಣಿಗೆಯೋ ಮೊಗಲಾಯಿ ದರ್ಬಾರದ ಬರವಣಿಗೆಯು. ಶಭಾಷಾ! ಲೇಖಕನೇ ಶಭಾಷಾ!! ಮುಂದೆ ಹೋಗಿ ಈಗಿನ ಬಾಳೇಹಳ್ಳಿ ಜಗದ್ಗುರುಗಳವರು ತಮ್ಮ ತಮ್ಮನವರನ್ನೇ ಏಜಂಟರನ್ನಾಗಿ ಮಾಡಿಕೊಂಡಿದ್ದಾರೆಂದು ಅವರಮೇಲೆ ಟೀಕಾಮಾಡಿದ್ದಾನೆ. ಅತಿಭಕ್ತಿಯಿಂದಲೂ, ದಕ್ಷತೆಯಿಂದಲೂ ಪೀಠಾಭಿವೃದ್ಧಿಯಬಗ್ಗೆ ಕಾರ್ಯಗಳನ್ನು ಮಾಡುವವರು. ಅಣ್ಣನಾದರೇನು: ತಮ್ಮನಾದರೇನು; ಎರಡನೆಯವನಾದರೇನು? ಯಾರನ್ನಾದರೂ ನಿಯಮಿಸಿಕೊಳ್ಳಬಹುದು. ಇಷ್ಟಕ್ಕೇನೆ ದೋಷಾರೋಪಣೆಯನ್ನು ಮಾಡಿ ಟೀಕಿಸಿರುವದು ಮೊಂಡತನದ ಲಕ್ಷಣವಾಗಿದೆ. ಹೆಂಡರು ಮಕ್ಕಳಿಂದ ಕೂಡಿದ ಗೃಹಸ್ಥರನ್ನು ಕೆಲವರು ತಮ್ಮ ಮಠದಲ್ಲಿಟ್ಟುಕೊಂಡಂತೆ ಈ ಜಗದ್ಗುರುಗಳೇನೂ ಹಾಗೆ ಇಟ್ಟುಕೊಂಡಿಲ್ಲ. ಅಂದಮೇಲೆ ಈ ಲೇಖಕನು ವೃಥಾ ಟೀಕಿಸಿರುವದು ಅನ್ಯಾಯವಲ್ಲವೇ? ಮುಂದೆ ವಿವಾಹದ ವಿಷಯವನ್ನೆತ್ತಿಕೊಂಡು ಪ್ರಭಾ ಸಂಪಾದಕರ ಮೇಲೆ ಏನೇನೋ ಹುಚ್ಚಾಬಟ್ಟೆ ಬರೆದಿದ್ದಾನೆ. ಸಂಪಾದಕರ ಬೀಗರಾದ ಹಾನಗಲ್ಲ ಆರಳೆ ಮಠದವರೂ, ಅವರ ಬೀಗರಾದ ಲಕ್ಷ್ಮೇಶ್ವರದ ಗದ್ದಿದೇವರ ಮಠದವರೂ ಒಂದೇ ಗೋತ್ರದವರಿದ್ದು ವಿವಾಹವನ್ನು ಮಾಡಿಕೊಂಡಿದ್ದಾರೆಂದೂ, ಆ ವಿವಾಹಕಾರ್ಯದಲ್ಲಿ ಇವರೇ ಪುರೋಹಿತರಾಗಿದ್ದರೆಂದೂ, ಇಂಥ ಶಾಸ್ತ್ರವಿರುದ್ಧ ವಿವಾಹವನ್ನು ಹೇಗೆ ಮಾಡಿದರೋ ತಿಳಿಯದೆಂದೂ ಬರೆದಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಲೋಕದಲ್ಲಿರತಕ್ಕ ಪ್ರತಿಯೊಬ್ಬ ಗುರುಸ್ಥಳದ ಮಠದವರು ನಾವು ಇಂಥಇಂಥ ಗೋತ್ರದವರೇ ಇರುತ್ತೇವೆಂದು ಸರ್ವರೂ ಈ ಲೇಖಕನಲ್ಲಿ ಕೈಫಿಯತ್ತು ಬರೆದುಕೊಟ್ಟಂತೆ ಕಾಣುತ್ತದೆ. ಭರತಖಂಡದಲ್ಲಿರತಕ್ಕ ಸಮಸ್ತ ಗುರುವರ್ಗ ಮಠಗಳ ಇತಿಹಾಸವು ಈತನಲ್ಲಿಯೇ ದೊರೆಯಬಹುದು. ಯಾವದನ್ನೂ ಆಲೋಚಿಸದೆ ಗುರುವರ್ಗಕಂಟಕರಾದ ಯಾರೋ ಒಬ್ಬ ವಿರಕ್ತರ ಪ್ರೇರಣೆಯಿಂದ ಈ ಲೇಖಕನು ಹೀಗೆ ಬರೆದಿರಬಹುದೆಂದು ಊಹಿಸಬೇಕಾಗುತ್ತದೆ. ಈ ಪ್ರಕಾರವಾಗಿ ಕೆಲಸಕ್ಕೆ ಬಾರದ ಮಾತುಗಳನ್ನು ಸಮಯೋಗಿಸಿ ಬರೆಯುವದು ಈ ಲೇಖಕನಿಗೆ ಎಷ್ಟು ಭೂಷಣಾಸ್ಪದವೆನ್ನುವದನ್ನು ತಿಳಿದುಕೊಳ್ಳಬೇಕು. ನಾಲ್ಕಾರು ವರ್ಷಗಳಿಂದ ಗುರುದ್ರೋಹದ ಲೇಖಗಳನ್ನು ಪ್ರಕಟಿಸಿ ಪ್ರಕಟಿಸಿ ಸಮಾಜದಲ್ಲಿ ವೈರಾಗ್ನಿಯನ್ನು ಪ್ರಜ್ವಲಿಗೊಳಿಸುವ ಸ್ಟಾರ್ ಪತ್ರಿಕೆಯ ವರ್ತನವು ಯೋಗ್ಯವಾದುದೋ? ಅಥವಾ ಗುರುದ್ರೋಹದ ಲೇಖಗಳನ್ನು ಖಂಡಿಸಿ ನಿಜವಾದ ಧರ್ಮಶಾಸ್ತ್ರದ ಸ್ವರೂಪವನ್ನು ಸರ್ವರಿಗೂ ತಿಳುಹಿಸಿ ನಿದ್ರಿಸುವ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಲು ಅವತರಿಸುತ್ತಿರುವ ಪ್ರಭಾಪತ್ರಿಕೆಯ ವರ್ತನವು ಯೋಗ್ಯವಾದುದೋ? ಎಂಬುವ ವಿಷಯವು ಲೋಕಕ್ಕೆಲ್ಲಾ ತಿಳಿದುಹೋಗಿದೆ. ಗುರುನಿಂದಕರನ್ನು ಸನ್ಮಾರ್ಗಕ್ಕೆ ತಂದು ಪ್ರಾಚೀನ ಧರ್ಮತತ್ವ ಬೀಜಗಳನ್ನು ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಬಿತ್ತುವ ಪ್ರಭೆಯು ಚಿರಕಾಲ ಬಾಳಿ ವೀರಶೈವ ಮತವನ್ನುದ್ಧರಿಸಲೆಂದು. ಹಾರೈಸಿ ಈ ಲೇಖನವನ್ನು ಮುಗಿಸುತ್ತೇನೆ.

S. Sannatotappa.

ಅತ್ಯದ್ಭುತ ಅಮೇರಿಕಾ ದೇಶದ ಅದ್ಭುತ

ಪ್ರಸಿದ್ಧ ಡಾಕ್ಟರರಿಂದ

ಕಂಡುಹಿಡಿದ ಸಿದ್ಧೌಷಧ.

ಸರ್ವರೋಗ ನಿವಾರಕವಾದ ಸಂಜೀವನೌಷಧವನ್ನು ಕಂಡುಹಿಡಿಯುವದಕ್ಕಾಗಿ ಅಮೇರಿಕಾ ದೇಶದ ಡಾಕ್ಟರನೊಬ್ಬನು ಅನೇಕ ವರ್ಷಗಳು ಪರಿಶೋಧನಗಳಮೇಲೆ ಪರಿಶೋಧನೆಗಳನ್ನು ಮಾಡಿ ಬಹು ದಿವಸ ಮಾಡಿಕೊಂಡು ಕೊನೆಯಲ್ಲಿ

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಕಂಡುಹಿಡಿದು ಅನುಭವಪೂರ್ವಕದಿಂದ ಅನೇಕ ರೋಗಗಳನ್ನು ಬಂದವರೆ ಗುಣಮಾಡಿದ್ದಾರೆ. ಅಜೀರ್ಣ, ಹೊಟ್ಟೆ ಅಥವಾ ಪಚನ ಭಾರವಾಗಿರುವುದು ಅತಿಸಾರ ವಾಂತಿ ಭೇದಿ ಅಥವಾ ಕಾಲರಾ ತಲೆನೋವು ನೆಗಡಿ ಮಲೇರಿಯಾ ಜ್ವರ ಇತರ ವಿವಿಧವಾದ ಜ್ವರಗಳು ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವುಗಳಿಗೆ ಮಲಬದ್ಧತೆ, ನಾಯಿಕೆಮ್ಮಲಿಗೆ, ಸ್ತ್ರೀವ್ಯಾಧಿಗಳಿಗೆ ಎಳೆಬಗೆಯ ಚಾಂಚಲ್ಯದ ರೋಗಗಳಿಗೆ ಇವು ಮುಂತಾದವುಗಳಿಗೆ, ಹಾವು, ಚೇಳು ಕಚ್ಚಿ ಮುಂತಾದ ವಿಷಜಂತುಗಳ ಕಡಿತಕ್ಕೆ, ಬಾಲಗ್ರಹ ಇವೇ ಮುಂತಾದವುಗಳನ್ನೂ ಗುಣಪಡಿಸುತ್ತದೆ ಇದನ್ನು ಅಲ್ಪಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿಮನೆಯಲ್ಲಿ ಅಥವಾ ಪ್ರತಿಯೊಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರರೊಬ್ಬನು ಹತ್ತಿರವಿದ್ದಂತೆಯೇ ಡಾಕ್ಟರಿಗೆ ಕೊಡಬೇಕಾದ ಫೀಜುಗಳನ್ನೂ ಈ 'ಜೀವನಾಧಾರ'' ವೆಂಬ ಡಾಕ್ಟರಿಗೆ ಕೊಡಬೇಕಾದ್ದಿಲ್ಲ. ಸಣ್ಣಸೀಸೆ ಒಂದಕ್ಕೆ ೦ ೧೨-೦, ದೊಡ್ಡಸೀಸೆ ಒಂದಕ್ಕೆ ೧ ೮ ೦ ಟಪಾಲು ಛಾರ್ಜ ವಗೈರೆ ಅಲ್ಲಾಯಿದಾ ಬೀಳುತ್ತದೆ

ಬಿಸಲವಾಡಿ ತಾ|| ೨೮ ೯ ೨೭

'ನಿಮ್ಮ ಕಂಪನಿಯಿಂದ ನಾನು ನಾಲ್ಕೈದು ವರ್ಷಗಳಿಂದಲೂ ನೂರಾರು ಜೀವನಾಧಾರ ಬಾಟ್ಲಿಗಳನ್ನು ವರ್ಷೇವರ್ಷೇ ತರಿಸುತ್ತಲೂ ನಾನು ಉಪಯೋಗಿಸುತ್ತಲೂ ಅನೇಕರಿಗೆ ಕೊಡುತ್ತಲೂ ಇರುತ್ತೇನೆ ಕ್ಯಾಟಲಾಗದಂತೆ ಅನೇಕ ರೋಗಗಳು ಗುಣವಾಗುತ್ತೆಂದು ನನ್ನ ಬಹಳ ಅನುಭವದಿಂದ ನಾನು ಖಾತ್ರಿಯಾಗಿ ಹೇಳಬಲ್ಲೆನು ನನ್ನ ಸ್ವಂತ ಅನುಭವದಲ್ಲಿ ಇದುವರೆಗೆ ಪ್ಲೇಗು ಸುಮಾರು ೩೦ಕ್ಕೆ ೧೫ ಜನಂಗಳಿಗೆ ಗುಣವಾಗುತ್ತೆ. ನೂರಾರು ಜನಕ್ಕೆ ಜ್ವರವೂ ಅನೇಕರಿಗೆ ಹೊಟ್ಟೆನೋವೂ, ತಲೆನೋವೂ ಕಾಲರಾ ಇವುಗಳೂ, ಅನೇಕ ಮಕ್ಕಳುಗಳ ಎಳವು ವಗೈರೆ ವಾಯುಲಿಗೂ ವಾಯುಸಂಬಂಧವಾದ ಕಾಯಿಲೆಗಳೂ ಸಹ ಖಾತ್ರಿಯಾಗಿ ಗುಣವಾಗಿರುತ್ತೆ.''

7 ಪಟೇಲ್ ಮುದ್ದುಬಸಪ್ಪ.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ASIATIC GOVERNMENT SECURITY LIFE ASSURANCE CO., LTD., MYSORE.

ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ ಮುಂದಾಳಾದುದು.

ಆದ್ದರಿಂದ ಯಾವಾಗಲೂ "ಏಶ್ಯಾಟಿಕ್" ಕಂಪನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾಗಿವೆ. ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾಭಕರವಾದುವು.

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ ಜಾಮೀನಿನ ಮೇಲೆಯೂ, ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ.

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ ಡ್ರಾಯಿಂಗ್ 31 ನೆಯ ಜನವರಿ 1928 ಕ್ಕೆ ನಡೆಯುತ್ತದೆ.

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು.

(1) ಮ|| ಬಿ. ರಾಚ್ಚರ್ಸ್, ಚೀಫ್ ಏಜಂಟ್,
ಏಸಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್
ರೋಡ್, ಮೈಸೂರು.

(2) ಮ|| ಪಿ. ಎಸ್. ಆರಾಧ್ಯ
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬಳ್ಳಾರಿ.

(3) ಹೈದರಾಬಾದ್ ಎಕಾನಮಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಕ್ಷಿಣ)

[27]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ನೆಗಡಿ ಒಂಟಿತಲೆನೋವು ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಬುಮೋಶ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚಿಸುತ್ತದೆ. ಮೂಕುಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೬-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ ೩ ಜ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[29] ಪೋ. ಬಾ. ೫೧೦, ಮದರಾಸು

☞ ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾ ವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಕ್ಷರೀರಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀನಾಜಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪಟುಜನಸ್ತ್ವಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಸ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೪ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ.

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಡಿಶಂಬರ್ ೧೯೨೭ [ಸಂಚಿಕೆ ೩೩.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುಪೀಠನಿಂದಕನಿಗೆ ಮಹತ್ವದ ಬೋಧೆ.

ಈ ತಿಂಗಳ 21 ನೇ ತಾ|| ಸ್ಟಾರ್ ಪತ್ರಿಕೆಯಲ್ಲಿ "ನಿಜದ ಗುರುಭಕ್ತಕೇಸರಿ' ಎಂಬ ಸಂಕೇತನಾಮದಿಂದ ಒಬ್ಬಾತನು ಲೇಖಕನು "ದುರ್ಮಾರ್ಗವನ್ನು ಬಿಟ್ಟು, ಗುರುಕೃಪೆಗೆ ಪಾತ್ರರಾಗಬೇಕು' ಎಂಬ ಹೆಡ್ಡಿಂಗಿನಿಂದ ಒಂದು ಲೇಖವನ್ನು ಬರೆದು ಇಲ್ಲದ ಸಲ್ಲದ ಪರಟೆಯನ್ನು ಕೊಚ್ಚಿಕೊಂಡಿರುತ್ತಾನೆ. ಗುರುಭಕ್ತಕೇಸರಿಯವರು ಸ್ಟಾರ್ ಪತ್ರಿಕೆಯಲ್ಲಿ ಹೊರಡಿಸಿದ ಗುರುದ್ರೋಹಾತ್ಮಕಗಳಾದ ಲೇಖಗಳನ್ನು ಖಂಡಿಸುವದಕ್ಕೋಸ್ಕರ ಮೈಸೂರಿನಲ್ಲಿಯೇ ಇರುವರು. ಇದಕ್ಕೆ ವಿನಾಶವೇತಕ್ಕೆ? ಈ ಸಂಗತಿ ಬಂದರೆ ವಿನಾಶದಿಂದಾದರೂ ಬರಬಹುದು. ಈಗ ಎರಡು ವಾರದ ಕೆಳಗೆ ಈ ಲೇಖಕನು ಮುರಗೀಮಠಕ್ಕೆ ಶ್ರೀ ಜಗದ್ಗುರು ರಂಭಾಪುರೀ ಪೀಠದವರು ಪತ್ರವನ್ನು ಬರೆದುಕೊಂಡರೆಂದು ಕುಚಲ್ಲನಾತ್ಮಕವಾದ ಪತ್ರವನ್ನು ಪ್ರಸಿದ್ಧಪಡಿಸಿದ್ದಕ್ಕಾಗಿ ಅದಕ್ಕೆ ಖಂಡನವನ್ನು ಬರೆಯುವದಾಗಿತ್ತು. ಆದರೆ ನೋಡಿ ಈ ಲೇಖಕನ ಹೊಟ್ಟೆಯೊಳಗೆ ಕಾರ ತುಂಬಿದಂತಾಗಿ ಏನೇನೋ ಹುಚ್ಚು ಹಿಡಿದು ಬರೆದಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ವಿರಕ್ತರು ಪೀಠಾಚಾರ್ಯರ ಶಿಷ್ಯರಲ್ಲವಂತೆ! ಇವರು ಮತಸ್ಥಾಪನಾಚಾರ್ಯರಿಗೆ ಶಿಷ್ಯರಾಗದೆ ಅನ್ಯಾಚಾರ್ಯರಿಗೆ ಶಿಷ್ಯರಾಗುವರೋ ಏನೋ! ತಿಳಿಯದಾಗಿದೆ. ಮತಸ್ಥಾಪನಾಚಾರ್ಯರಿಗೆ ಶಿಷ್ಯರಲ್ಲವೆಂದು ಹೇಳುವವರು ಎಂಥ ವರ್ಮಗಳಿಂದಿರಬಹುದೆಂಬುದನ್ನು ಪ್ರತಿಯೊಂದು ವ್ಯಕ್ತಿಯು ಮತದವರಿಗೆ ತಿಳಿಯದೆ ಇರಲಾರದು. ಕಲ್ಪಿತ ಪತ್ರಗಳನ್ನು ಬರೆದು ಪ್ರಸಿದ್ಧಪಡಿಸುವವರಿಗೆ ಶ್ರೀ ರಂಭಾಪುರೀ ಜಗದ್ಗುರುಗಳು ಯೋಗ್ಯ ಬಂದೋಬಸ್ತು ಮಾಡಬೇಕೆಂದು ಬರೆದದ್ದಕ್ಕೆ ಈ ಲೇಖಕನು ಅವಶ್ಯವಾಗಿ ಮಾಡಿಯೇ ತೀರಬೇಕು; ಇವರ ಬಂದೋಬಸ್ತನ್ನು ನೋಡೋಣವೆಂದು ತನ್ನ ಲೇಖನದಲ್ಲಿ ತನ್ನ ಮುಖವಾಣಿ ಅಂದುಕೊಂಡಿದ್ದಾನೆ. ಎಲೋ ಲೇಖಕನೇ ಬಂದೋಬಸ್ತು ಮಾಡುವದೇನೂ ದೊಡ್ಡ ಕಾರ್ಯವಲ್ಲವೆಂದು ತಿಳಿ. 1876 ನೆಯ ಇಸವಿಯಲ್ಲಿ ಶ್ರೀ ಜಗದ್ಗುರು ರಂಭಾಪುರೀ ಪೀಠಾಧಿಕಾರಿಗಳಾದ ಶ್ರೀ ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳವರು ಮುರಗೀ ಮಠದ ಚರಂತಿ ಹಿರಿಯರು ಮುಂತಾದವರ ಮೇಲೆ ಚಿತ್ರದುರ್ಗದ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾವಾ ತಂದು ಬಂದೋಬಸ್ತು ಮಾಡಿಸಿರುವದನ್ನು ನೀನು ನೋಡಿಲ್ಲವೋ? ನೋಡದೆ ಇದ್ದರೆ 1876ನೆ ಇಸವಿ ನವಂಬರ್ ತಾ|| ೫ ರಲ್ಲಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರೂ ಹಾಗೂ 1877ನೆಯ ಇಸವಿ ಮೇ ತಿಂಗಳ ೩ನೆಯ ತಾರೀಖಿನಲ್ಲಿ ಚಿತ್ರದುರ್ಗ ಡಿ|| ಕಮಿಷನರವರಾದ ಆರ್ಮ್‌ಸ್ಟ್ರಾಂಗ್ ಸಾಹೇಬರವರೂ ಬರೆದಿರುವ ಜಡ್ಜ್‌ಮೆಂಟುಗಳನ್ನು ನೋಡಿ ತಿಳಿಯಿಂದ ವರ್ತಿಸು. ಈ ಜಡ್ಜ್‌ಮೆಂಟ್ ಬರೆಯುವಾಗ್ಗೆ ಮ್ಯಾಜಿಸ್ಟ್ರೇಟರವರು **"ಪ್ರತಿವಾದಿಗಳಿಂದ ಹಾಜರ್ಮಾಡಲ್ಪಟ್ಟ ೨ನೇ ನಂಬರ್ ದಸ್ತೈವೇಜೂ ಬಾಕಿ ದಸ್ತೈವೇಜುಗಳೂ ನಿಜವೆಂದು ವಾದಿಯರ ಏಜಂಟ್ ಒಪ್ಪಲಿಲ್ಲ. ಅದನ್ನು ರುಜುವಾತುಮಾಡಿಕೊಡತಕ್ಕಬಗ್ಗೆ ಪ್ರತಿವಾದಿಯು ಸಾಕ್ಷಿಗಳನ್ನು ಕರೆಯಲಿಲ್ಲ. ಆದ್ದರಿಂದ ನಾನು ಇವುಗಳನ್ನು ನಂಬುವದಿಲ್ಲ. ಪ್ರತಿವಾದಿಗಳು ವಾದಿಯರಿಗೆ ಖರ್ಚು ೫೦ ರೂಪಾಯಿಗಳು ಮತ್ತು ಈ ಸೊಬಲಿಗಿಗೆ ಖರ್ಚು ದಾವಾಪ್ರಕಾರ ಕೊಡಬೇಕೆಂದು ಹುಕುಂ ಮಾಡಲ್ಪಟ್ಟಿರುತ್ತೆ."** ಎಂದು ಸ್ಪಷ್ಟವಾಗಿ ಬರೆದಿರುವರು. ಇದರಮೇಲೆ ಪ್ರತಿವಾದಿಗಳಾದ ಮುರಗೀಮಠದ ವಿರಕ್ತರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಲಾಗಿ ಡಿ|| ಕಮಿಷನರ್ ಸಾಹೇಬರವರು **"೧೪ನೇ ನಂಬರ್ ಅಪೀಲ್ ಮೊಕದ್ದಮೆಯಲ್ಲಿ ವಾದಿಯ ಕಾರಣಗಳನ್ನು ಕುರಿತು ಡ್ಯಾಮೇಜ್ ಬಾಬತು ೫೦ ರೂಪಾಯಿಗಳಿಗೆ ಬದಲಾಗಿ ೧೦೦ ರೂಪಾಯಿಗಳಿಗೆ ಕೆಳಕೋರ್ಟಿನವರು ಡಿಕ್ರಿ ಕೊಟ್ಟದ್ದರೆ ಬಹಳ ಒಳ್ಳೆಯದಾಗಿತ್ತು. ಈ ಸಂಗತಿಗಳ ವಿಷಯದಲ್ಲಿ ಚೆನ್ನಾಗಿ ಆಲೋಚಿಸಲಾಗಿ ನನಗೆ ಕೆಳಕೋರ್ಟಿನವರ ಡಿಕ್ರಿಯಲ್ಲಿ ಏನೊಂದೂ ವ್ಯತ್ಯಾಸವನ್ನು ಕಂಡುಹಿಡಿಯಲು ಕಾರಣಗಳಿಲ್ಲ. ಆದ್ದರಿಂದ ಆ ಡಿಕ್ರಿಯೇ ದೃಢೀಕರಿಸಲ್ಪಟ್ಟದೆ."** ಎಂದು ಜಡ್ಜ್‌ಮೆಂಟ್ ಬರೆದಿದ್ದಾರೆ. ಈ ನ್ಯಾಯದ ಸಮಯದಲ್ಲಿ ಮುರಗೀಮಠದವರು ಹಾಜರ ಮಾಡಿದ ಒಂದೂ ದಸ್ತೈವಜನ್ನು ನಂಬುವದಿಲ್ಲವೆಂದು ಖುದ್ದು ನ್ಯಾಯಾಧೀಶರೇ ಬರೆದಮೇಲೆ ಈ ಲೇಖಕನು ಆಕಾಶದವರೆಗೆ ಜಿಗಿದಾಡಿರುವದು ಎಷ್ಟು ಮಂದತನವೆನ್ನುವದನ್ನು ವಾಚಕರೇ ಊಹಿಸಬೇಕಾಗಿದೆ. ಹಾಗೂ 1908ನೆಯ ಇಸವಿಯಲ್ಲಿ ಈಗಿರುವ ಮುರಗೀಮಠದ ವಿರಕ್ತರು ನಮ್ಮ ಮಠಕ್ಕೆ ಅಡ್ಡಪಲ್ಲಕ್ಕಿಯನ್ನೂ ಪಂಚಕಳಸವನ್ನೂ ಗವರ್ನಮೆಂಟಿನವರು ಕೊಡಬೇಕೆಂದೂ ಈಬಗ್ಗೆ ನಮ್ಮ ಮಠದಲ್ಲಿ ಅನೇಕಾನೇಕ ದಖಲೆಗಳಿರುವವೆಂದೂ ಅರ್ಜಿಹಾಕಿಕೊಂಡಾಗ್ಗೆ ಮೈಸೂರು ಗವರ್ನಮೆಂಟಿನವರು ಈಗ ತೋರಿಸುವ ನಿಮ್ಮ ರಿಕಾರ್ಡುಗಳು ಪೂರ್ವದಲ್ಲಿ ನಮ್ಮ ಗವರ್ನಮೆಂಟಿನ ಅಧಿಕಾರಿಗಳು ಮುರಗೀ ಮಠಕ್ಕೆ ಬಂದ ಸಮಯದಲ್ಲಿ ಇದ್ದಿಲ್ಲವೆಂದು ಜಡ್ಜ್‌ಮೆಂಟ್ ಬರೆದಿದ್ದಾರೆ. ಮುರಗೀ ಮಠದವರ ದಸ್ತೈವಜುಗಳ ವಿಷಯದಲ್ಲಿ ಖುದ್ದು ಸರ್ಕಾರದವರೇ ನಂಬುವದಿಲ್ಲವೆಂದು ಅಭಿಪ್ರಾಯಪಟ್ಟಿರುವಾಗ ಈ ಲೇಖಕನು ಪ್ರಸಿದ್ಧಪಡಿಸಿರುವ ವಿಷಯವು ಕೃತ್ರಿಮವಿರುವದೋ, ಅಕೃತ್ರಿಮವಿರುವದೋ ಎನ್ನುವದನ್ನು ಕುಶಲಮತಿಗಳಾದ ವಾಚಕರೇ ನಿರ್ಣಯಿಸಬೇಕಾಗಿದೆ. ಈ ಪೂರ್ವದ ರಿಕಾರ್ಡುಗಳನ್ನೇ ಮುಖ್ಯಾಧಾರವಾಗಿಟ್ಟುಕೊಂಡು ಈಗಿನ ಜಗದ್ಗುರುಗಳವರು ಧರ್ಮಪೀಠದ್ರೋಹಿಗಳಾದ ಇಂಥ ಲೇಖಕರಿಗೆ ಯೋಗ್ಯ ಬಂದೋಬಸ್ತನ್ನು ಮಾಡದೆ ಇರಲಾರರೆಂದು ಪೂರ್ಣ ನಂಬಿದ್ದೇನೆ. ರಂಭಾಪುರೀ ಪೀಠವು ಐದಾರು ನೂರುವರ್ಷಗಳ ಈಚಿನದಿರಬಹುದೆಂದು ಈ ಲೇಖಕನು ಬರೆದಿದ್ದಾನೆ. ಹೀಗೆ ಬರೆದಿರುವದನ್ನು ನೋಡಿದರೆ ಈ ಲೇಖಕನು ಗುರುಪೀಠಕ್ಕೆ ಕೇವಲ ಶತ್ರುವಾಗಿದ್ದಾನೆಂದು ಪ್ರತಿಯೊಬ್ಬರಿಗೂ ತಿಳಿಯುವಂತಿದೆ. ರಂಭಾಪುರೀ ಪೀಠದಲ್ಲಿ ಹನುಮಂತನ ಚಿನ್ಹದಿಂದ ಕೂಡಿದ ಒಂದು ಅತಿ ಪ್ರಾಚೀನವಾದ ಶಿಲಾಲೇಖವಿರುತ್ತದೆ. ಈ ಶಿಲಾಲೇಖವು ರಾಮಚಂದ್ರನ ಕಾಲದ್ದಿರಬಹುದೆಂದು ಅನೇಕ ಭೌತಿಕಶಾಸ್ತ್ರಜ್ಞರು ತರ್ಕಿಸುತ್ತಾರೆ. ಹಾಗೂ ಈಗ ಒಂದು ವರ್ಷದ ಪೂರ್ವದಲ್ಲಿ ಮೈಸೂರು ಗೌರ್ನಮೆಂಟಿನ ಓರಿಯಂಟಲ್ ಲೈಬ್ರರಿಯವರು ಪ್ರಾಚೀನಬಾಳೆಯಲ್ಲಿರತಕ್ಕ ಒಂದು ತಾಮ್ರಶಾಸನವನ್ನು ಈ ಪೀಠದಿಂದ ತಮ್ಮಲ್ಲಿಗೆ ತೆಗೆದುಕೊಂಡು ಬಂದು ಈ ಶಾಸನವು ೧೩೦೦ ವರ್ಷಗಳ ಪೂರ್ವದ್ದೆಂದು ಅಭಿಪ್ರಾಯಪಟ್ಟಿರುತ್ತಾರೆ. ಇನ್ನೂ ಈ ಶಾಸನವು ಗವರ್ನಮೆಂಟ್ ಲೈಬ್ರರಿಯ ಸ್ವಾಧೀನದಲ್ಲಿಯೇ ಇದೆ. ಬೇಕಾದವರು ತಿಳಿದುಕೊಳ್ಳಬಹುದು. ಹಾಗೂ ಬಾಳೆಹೊನ್ನೂರು ಮಠಕ್ಕೆ ಮೈಸೂರು ಸರ್ಕಾರದವರು ಬಿರುದಾವಳಿಗೋಸ್ಕರ 1926ನೇ ಮಾರ್ಚಿ ತಿಂಗಳಲ್ಲಿ ಆರ್ಡರು ಮಾಡುವಾಗ್ಗೆ **"ಈ ಮಠದ ಪ್ರಾಚೀನತೆ ಮತ್ತು ಪ್ರಾಮುಖ್ಯತೆ ಇವುಗಳ ಮೇಲೆ ದೃಷ್ಟಿಯಿಟ್ಟು ಮುರಿಗಿಮಠಕ್ಕೆ ಕೊಟ್ಟಿರುವ ಬಿರುದಾವಳಿಗಳ ಜೊತೆಗೆ ಶ್ರೀ ವ್ಯಾಸರಾಯ ಮತ್ತು ಉತ್ತರಾದಿ ಮಠಗಳಿಗೆ ಕೊಟ್ಟಿರುವ ೭ ಬಿರುದುಗಳನ್ನು (ಅಂದರೆ ೧ ನೌಬತ್ತು, ೨ ಭರ್ಜರಿ ಛತ್ರಿ, ೩ ಆನೇಮೇಲೆ ನಗಾರಿ, ೪ ಒಂಟೇಮೇಲೆ ನಗಾರಿ, ೫ ಹಸರುಛತ್ರಿ, ೬ ಸುರೇಪಾನ, ೭ ಒಂಟೇಮೇಲೆ ನಿಶಾನಿ)** ಕೊಟ್ಟಿರುವದೆಂದು ಹೇಳಿದ್ದಾರೆ. ಮೇಲ್ಕಂಡ ಹೊಸದಾದ ೭ ಬಿರುದುಗಳನ್ನು ಮುರುಗಿ ಮಠಕ್ಕೆ ಕೊಡದೆ ಈ ಪೀಠಕ್ಕೆ ಗವರ್ನಮೆಂಟಿನವರು ಕೊಡಬೇಕಾದರೆ ಈ ಪೀಠದ ಪ್ರಾಚೀನತೆ ಮತ್ತು ಶ್ರೇಷ್ಠತೆಗಳೇ ಮೂಲಕಾರಣವಲ್ಲವೇ? ಇದನ್ನೆಲ್ಲವನ್ನೂ ಪೂರ್ವಾಪರ ವಿಚಾರ ಮಾಡದೆ ಮನಸ್ಸಿಗೆ ಬಂದಂತೆ ಬರೆದಿರುವದನ್ನು ನೋಡಿದರೆ ಗುರುದ್ರೋಹವಲ್ಲದೆ ಬೇರೊಂದಿಲ್ಲವೆಂದು ಚಿಕ್ಕಮಕ್ಕಳಿಗೂ ತಿಳಿಯುವಂತಿದೆ. ಈ ಪೀಠದ ವಿಷಯವನ್ನು ಹಂಟರ್ ಮೊದಲಾದ ಇತಿಹಾಸಕಾರರು ಯಾರೂ ಬರೆದಿಲ್ಲವಂತೆ! ಆದ್ದರಿಂದ ಇದು ಇತ್ತೀಚಿನದಂತೆ! ಅಹಾ! ಈ ಲೇಖಕನ ಬುದ್ಧಿಯು ಎಷ್ಟು ಸೂಕ್ಷ್ಮವಿರಬಹುದು? ಇಂಗ್ಲೀಷಿನವರು ಬರೆದ ಚರಿತ್ರೆಗಳು ಈತನಿಗೆ ಬಹು ಮಾನ್ಯವಾದಂತೆ ತೋರುತ್ತವೆ. ಗ್ಯಾಥರ್ ಸಾಹೇಬರೆಂಬ ಪ್ರಸಿದ್ಧ ಮೇಧಾವಿಗಳು ಚನ್ನಬಸವಣ್ಣನ ಉತ್ಪತ್ತಿಯ ವಿಷಯವನ್ನು ಇಂಗ್ಲೀಷ್ ಭಾಷೆಯಲ್ಲಿ ಬಹು ಚನ್ನಾಗಿ ವಿವರಿಸಿದ್ದಾರೆ. ಈ ಸಾಹೇಬರು ಬರೆದಿರುವ ಪುಸ್ತಕವನ್ನು ಈ ಲೇಖಕನು ತರಿಸಿಕೊಂಡು ಪೂಜಿಸಲಿ. ಅಲ್ಲದೆ ಅನೇಕಜನ ಯುರೋಪಿಯನ್ನರು ವೀರಶೈವರು ಸ್ವತಂತ್ರರಿರುವರೆಂದು ತಮ್ಮ ಗ್ರಂಥಗಳಲ್ಲಿಯೂ ಗೆಜೆಟ್ಟಗಳಲ್ಲಿಯೂ ಉಲ್ಲೇಖಿಸಿದ್ದಾರೆ. ಅವರ ಅಭಿಪ್ರಾಯವನ್ನೇ ಈ ಲೇಖಕನು ಸ್ವೀಕರಿಸಿ ತಾನು ಸ್ವತಂತ್ರನಾಗಿ ಲೋಕದಲ್ಲಿ ಮೆರೆಯಲಿ. ಪಂಚಪೀಠಗಳ ನಾಮವು ಶಿವಾಗಮಗಳಲ್ಲಿ ಹೇಳಿರುವಂತೆ ವಿರಕ್ತಮಠಗಳ ನಾಮವು ಯಾವ ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವದಂತೆ! ಈ ಲೇಖಕನು ಎಷ್ಟು ಶಿವಾಗಮಗಳನ್ನು ತಿರುವಿಹಾಕಿರುವನೋ ನನಗಂತೂ ತಿಳಿಯದಾಗಿದೆ. ಗುಳೇದಗುಡ್ಡದ ವಿರಕ್ತರ ಕಾಲದಲ್ಲಿ ಈ ಶಿವಾಗಮಗಳು ಉತ್ಪನ್ನವಾಗಿವೆಯೆಂದು ಈ ಲೇಖಕನು ತಿಳಿದಂತೆ ತೋರುವದಿಲ್ಲ, ಇರಲಿ— ಎರಡನೆಯ ಮುರಗೀ ಸ್ವಾಮಿಗಳೂ, ಮರಿತೋಂಟದಾರ್ಯರೂ, ಹಾಗೂ ಅನಾದಿ ತೋಂಟದ ಸಿದ್ಧಲಿಂಗೇಶ್ವರರೇ ಮೊದಲಾದವರೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರನ್ನು ಗುರುಭಾವನೆಯಿಂದ ನಾನಾಬಗೆಯಾಗಿ ಕೊಂಡಾಡಿದ್ದಾರೆಂದು ಬರೆದಿದ್ದಕ್ಕೆ ಈ ಲೇಖಕನು ರಂಭಾಪುರೀಪೀಠದ ಈಗಿನ ಸ್ವಾಮಿಗಳವರು ಮೈಸೂರು ಮಹಾರಾಜರವರನ್ನು ಕೊಂಡಾಡಿಲ್ಲವೇನು? ಅದರಂತೆ ಪೂರ್ವದ ವಿರಕ್ತರು ರೇಣುಕಾದಿಗಳನ್ನು ಕೊಂಡಾಡಿರಬಹುದೆಂದು ಬರೆದಿದ್ದಾನೆ. ಅಹಾ! ಏನು ದೃಷ್ಟಾಂತವಿದು? ಈ ದೃಷ್ಟಾಂತವನ್ನು ಎಷ್ಟು ದಿವಸ ತಪಸ್ಸು ಮಾಡಿ ಶೋಧಿಸಿರಬಹುದು? ಲೇಖಕನೇ, ರಂಭಾಪುರೀ ಜಗದ್ಗುರುಗಳು ಶ್ರೀಮನ್ಮಹಾರಾಜರವರನ್ನು ಕೊಂಡಾಡಬೇಕಾದರೆ ನೀವು ನಮ್ಮ ಗುರುಗಳೆಂದು ಕೊಂಡಾಡಿರುವರೇನು? ಇಷ್ಟು ತಿಳಿಯಲಿಲ್ಲವೇ? ಪೂರ್ವದ ವಿರಕ್ತರು ರೇಣುಕಾದಿ ಪಂಚಾಚಾರ್ಯರನ್ನು ನೀವೇ ಗುರುಗಳು, ನೀವೇ ಜಗದ್ಗುರುಗಳು, ಎಂದು ಕೊಂಡಾಡಿರುವರು. ಇನ್ನಾದರೂ ಈ ವಿಷಯವನ್ನು ಶಾಂತಮನಸ್ಸಿನಿಂದ ಈ

(೩ನೇ ಪುಟವನ್ನು ನೋಡಿರಿ)

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯ ಪ್ರಸೀದ ವೀರಶೈವಮಹಾಸಭೆಯೂ ಸಮಾಜ ಸುಧಾರಣೆಯೂ.

ಪುಣ್ಯಭೂಮಿಯೆಂದು ಜಗತ್ಪ್ರಖ್ಯಾತವಾದ ಭರತಖಂಡದ ದಕ್ಷಿಣಭಾಗದ ಕರ್ನಾಟಕಾಂಧ್ರ ದೇಶಗಳಲ್ಲಿ ವೀರಶೈವಮತವು ಬಹುಮಟ್ಟಿಗೆ ವ್ಯಾಪಿಸಲ್ಪಟ್ಟಿದೆ. ಈ ಮತವು ಶ್ರೀಮದ್ವೇದವೇದಾಂತ ಸಿದ್ಧಾಂತ ಪುರಾಣಾಗಮೇತಿಹಾಸ ಪ್ರತಿಪಾದ್ಯವಾಗಿದೆ. ಶ್ರೀ ಜಗದ್ಗುರು ರೇಣುಕ ದಾರುಕಾದಿ ಪಂಚಾಚಾರ್ಯರು. ಚತುರ್ಯುಗಗಳಲ್ಲಿ ಲಿಂಗೋದ್ಭವರಾಗಿ ಈ ಪವಿತ್ರ ಧರ್ಮವನ್ನು ಜಗತ್ತಿನಲ್ಲಿ ಪ್ರತಿಷ್ಠಾಪನಗೊಳಿಸಿ ರಂಭಾಪುರೀ, ಉಜ್ಜಯಿನೀ, ಶ್ರೀಶೈಲ, ಕಾಶಿ, ಕೇದಾರಕ್ಷೇತ್ರ ಗಳಲ್ಲಿ ಇವರ ರಕ್ಷಾ, ಶಿಕ್ಷಾ, ಮೋಕ್ಷಾದಿಗಳಿಗೋಸ್ಕರ ಗುರುಪೀಠಗಳನ್ನು ಸ್ಥಾಪಿಸಿ ಪುನಃ ಲಿಂಗೈಕ್ಯರಾಗಿರುವರು. ಶ್ರೀ ನಂದೀಶ್ವರ, ಭೃಂಗಿ, ವೀರ, ವೃಷಭ, ಸ್ಕಂದ, ಕೈಲಾಸ ಮೊದಲಾದ ದೇವರ್ಕಳೂ, ಸನಂದ, ಅಗಸ್ತ್ಯ, ಪೂರ್ಣಾನಂದ, ಭೃಗು, ಉಪಮನ್ಯು, ಕಣಾದ, ದಧೀಚಿ ಮುಂತಾದ ಮಹರ್ಷಿಗಳೂ ವೀರಶೈವರೆಂದು ನಮ್ಮ ಕವಿಪುಂಗವರು ವರ್ಣಿಸಿರುವರು. ಡಾ। ಧೀರೇಂದ್ರನಾಥಪಾಲ್ ಎಂಬೊಬ್ಬ ಬಂಗಾಳದೇಶದ ಘನ ವಿದ್ವಾಂಸರು ಸಮಸ್ತ ದೇವದಾನವರೂ, ಮಹರ್ಷಿಗಳೂ ಶಿವಲಿಂಗೋಪಾಸಕರಾಗಿದ್ದರೆಂದು ತಾವು ರಚಿಸಿರುವ ಶಿವ ಮತ್ತು ಶಕ್ತಿ ಎಂಬ ಗ್ರಂಥದಲ್ಲಿ ಉಲ್ಲೇಖಿಸಿ ನಮ್ಮ ಕವಿಶ್ರೇಷ್ಠರ ಅರ್ಥವನ್ನೇ ಪುಷ್ಟೀಕರಿಸಿರುವರು. ಅದರಿಂದ ವೀರಶೈವಮತವು ಸರ್ವೋತ್ಕೃಷ್ಟವಾದುದೆಂಬಂಶವು ನಿರ್ವಿವಾದವು. ವೀರಶೈವ ಸಮಾಜವನ್ನು ಅತ್ಯಂತ ಶ್ರೇಷ್ಠತಾವಸ್ಥೆಗೆ ತರಬೇಕೆಂಬ ಸಮುದ್ದೇಶದಿಂದ ನಮ್ಮ ಧಾರವಾಡ ಪ್ರಾಂತ್ಯದ ಉತ್ಸಾಹಶಾಲಿಗಳಾದ ಬಾಂಧವರು ಅಖಿಲಭಾರತೀಯ ವೀರಶೈವಮಹಾಸಭೆಯನ್ನು ಮೊದಲು ರೂಢಿಯಲ್ಲಿ ತಂದರು. ಇಂದಿಗೆ ಒಂಭತ್ತು ವೀರಶೈವಮಹಾಸಭೆಗಳಾಗಿ ಹೋಗಿರುವುವು. ಕಾರಣಾಂತರಗಳಿಂದ ಸುಮಾರು ಎಂಟುವರ್ಷಗಳಿಂದಲೂ ವೀರಶೈವಮಹಾಸಭೆಯು ನಡೆಯದೆ ನಮ್ಮೆಲ್ಲರಿಗೆ ತಕ್ಕ ಸಾಧನಗಳನ್ನು ಕಲ್ಪಿಸಲು ಪ್ರತಿಕೂಲವಾದ್ದರಿಂದ ಬೆಂಗಳೂರು ಪಟ್ಟಣದ ವೀರಶೈವ ಮಹನೀಯರು ಈ ವರ್ಷ ಮಹಾಸಭೆಯನ್ನು ತಮ್ಮ ಪಟ್ಟಣದಲ್ಲಿ ಜರುಗಿಸಿ ಸಮಾಜದ ರಾಜಕೀಯ, ಧಾರ್ಮಿಕ, ನೈತಿಕ ಪ್ರಗತಿಯು ಕುಂಠಿತವಾಗದಂತೆ ತಕ್ಕ ಆಲೋಚನೆಗಳನ್ನು ಮಾಡಿ ಆನುಷ್ಠಾನದಲ್ಲಿ ತರಬೇಕೆಂದು ಸತ್ಸಂಕಲ್ಪಮಾಡಿರುವರು. ನಮ್ಮ ಸಮಾಜದಲ್ಲಿ ಏಕಮತ್ಯವನ್ನು ಬೆಳೆಯಿಸಬೇಕೆಂಬುದೊಂದು ಅವರ ಆಶಯವಾಗಿದೆ. ಇದು ಅತ್ಯಾವಶ್ಯಕವಾದದ್ದೆಂಬುದನ್ನು ಒತ್ತಾಯದಿಂದ ಹೇಳಬೇಕಾಗಿದೆ. ನಮ್ಮ ಸಮಾಜವು ಸುಮಾರು 36 ಲಕ್ಷ ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಆದರೆ ನಮ್ಮಲ್ಲಿ ಸಾಂಘಿಕಶಕ್ತಿಯು ಇಲ್ಲದಾಗಿದೆ. ಸಾಂಘಿಕಶಕ್ತಿಯನ್ನು ನೆಲೆಗೊಳಿಸಿ ವೃದ್ಧಿಗೊಳಿಸುವುದರಿಂದ ಎಂಥಾ ಅಸಾಧ್ಯಕಾರ್ಯವಾದರೂ ಸುಸಾಧ್ಯವಾಗುವುದು. ಸಾಂಘಿಕಶಕ್ತಿಯ ಮಹತ್ವವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಭರತಖಂಡದಲ್ಲಿ ಜೊರೋಸ್ಟ್ರಿಯನ್ ಧರ್ಮದ ಪಾರ್ಸೀಜನರು ಒಂದೇ ಲಕ್ಷ ಜನಗಳಿದ್ದಾರೆ. ಆದಾಗ್ಯೂ ವಿದ್ಯಾ, ವಾಣಿಜ್ಯ, ಕೈಗಾರಿಕೆ, ನಾಗರೀಕತೆಗಳಲ್ಲಿ ನಮ್ಮ ದೇಶಕ್ಕೆ ಮೇಲ್ಪಂಕ್ತಿಯಾಗಿದ್ದಾರೆ. ಪಾರ್ಸೀಜನರ ಪೈಕಿ ಇಂದಿಗೆ ಮೂವರು ಪಾರ್ಲಿಮೆಂಟಿನಲ್ಲಿ ಮೆಂಬರುಗಳಾಗಿ ಹೋಗಿರುವರು. ಇಂಗ್ಲೆಂಡಿನಲ್ಲಿ ನಾಲ್ಕು ಕೋಟಿ ಪ್ರಜೆಗಳಿರುವರು. ನಮ್ಮ ದೇಶದಲ್ಲಿ 33 ಕೋಟಿ ಪ್ರಜೆಗಳಿದ್ದರೂ ಆಂಗ್ಲೀಯರಂತೆ ಸಾಂಘಿಕಶಕ್ತಿ ಇಲ್ಲದಿರುವುದರಿಂದ ಅವರ ಕೈಕೆಳಗೆ ಹುಳುಗಳಂತೆ ಪರದಾಡುತ್ತಿರುವೆವು. ಸ್ವಿಟ್ಜರ್ಲೆಂಡು ದೇಶವು ಗುಡ್ಡಗಾಡಿನಲ್ಲಿರುವ ಚಿಕ್ಕ ರಾಷ್ಟ್ರವಾದರೂ ತಮ್ಮ ದೇಶದಲ್ಲಿ ಐಕ್ಯವನ್ನು ಬೆಳೆಯಿಸಿ ತಮ್ಮ ಪ್ರಭುತ್ವವು ಜಗತ್ತಿಗೇನೇ ಆದರ್ಶಪ್ರಾಯವಾಗಿರುವಂತೆ ಮಾಡಿಕೊಂಡಿದ್ದಾರೆ. ಆದ್ದರಿಂದ ನಮ್ಮ ಸಮಾಜದಲ್ಲಿ ಐಕಮತ್ಯವೂ ಭ್ರಾತೃತ್ವವೂ ವೃದ್ಧಿಯಾಗುವಂತೆ ನಮ್ಮ ಸಮಾಜಬಾಂಧವರು ಪ್ರಯತ್ನಿಸುವದು ಆದ್ಯಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಆನವಟ್ಟಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ದಸರಾಸಮಾರಂಭದನಂತರ ಭಕ್ತಮಹಾಶಯರು, ವೀರಶೈವ ಹಿತಚಿಂತಕಸಭಾ ಎಂಬ ಸಭೆಯನ್ನು ಕೂಡಿಸಿ ಪಾಸ್ ಮಾಡಿರುವ ಠರಾವುಗಳು ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅವು ನಿಷ್ಪಕ್ಷಪಾತವಾಗಿ ಸಮಾಜದೇಳಿಗೆಗೆ ಕಾರಣಭೂತವಾಗಿರುವದರಿಂದ ಅವುಗಳನ್ನು ಪ್ರತಿಯೊಂದು ಲಿಂಗಾಂಗಿ ವ್ಯಕ್ತಿಯೂ ದೃಷ್ಟಿಯಲ್ಲಿಡುವಂತೆ ಒತ್ತಾಯಮಾಡುವವಾದರೆ ಐಕಮತ್ಯವೂ ಸುಶಾಂತಿಯೂ ನೆಲೆಗೊಳ್ಳುವದರಲ್ಲಿ ಸಂಶಯವಿಲ್ಲವು.

ಆದ್ದರಿಂದ ಸಮಾಜವನ್ನು ಕ್ರಮಪಡಿಸಿ ಸುಸ್ಥಿತಿಗೆ (Organisation) ತರುವದು ಅತ್ಯಾವಶ್ಯಕವಾಗಿದೆ. "Be thou of one mind, be than all of one thought, for in the days of yore, the gods being of one mind, were enabled to receive oblations. That the gods can be worshipped by men is because they are of one mind." ನೀವು ಒಮ್ಮನಸ್ಸಿನವರಾಗಿಯೂ, ಒಂದೇ ಆಲೋಚನೆಯುಳ್ಳವರಾಗಿಯೂ ಇರುವವರಾಗಿರಿ. ಪೂರ್ವದಲ್ಲಿ ದೇವತೆಗಳು ಒಮ್ಮನಸ್ಸಿನವರಾದುದರಿಂದಲೇ ಜನರ ಆಹುತಿ ವಂದನೆಗಳನ್ನು ಸ್ವೀಕರಿಸಲು ಶಕ್ತರಾದರು. ದೇವತೆಗಳು ಒಮ್ಮನಸ್ಸಿನವರಾಗಿರುವದರಿಂದಲೇ ಮನುಷ್ಯರಿಂದ ಪೂಜಿಸಿಕೊಳ್ಳಲು ಯೋಗ್ಯತೆಯುಳ್ಳವರಾದರು. ಎಂಬುದೇ ಮೇಲ್ಕಂಡ ಅಥರ್ವವೇದಸಂಹಿತೆಯ ಒಂದು ಪದ್ಯದ ಸಾರಾಂಶವಾಗಿದೆ. ಒಮ್ಮನಸ್ಸುಳ್ಳವರಾಗಿರುವದೇ ಸಂಘಶಕ್ತಿಯ ಗುಟ್ಟು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆತ್ಮೀಯಬಲವನ್ನು ನಿರರ್ಥಕವಾಗಿ ನಷ್ಟವಾದದಲ್ಲಿ ಕಳೆಯದೆ ತನ್ನ ಹಾಗೂ ತನ್ನ ಸಮಾಜದ ಪುರೋಭಿವೃದ್ಧಿಗೆ ಉಪಯೋಗಿಸುವದಾದರೆ ಅದ್ಭುತವಾದ ಪ್ರತಿಫಲವನ್ನು ಹೊಂದಬಹುದು. ಚೀನಾದೇಶವು ಅಖಂಡವಾದ ರಾಜ್ಯವಾದಾಗ್ಯೂ ಅಂತಃಕಲಹ ಅನೈಕಮತ್ಯದಿಂದ ದೌರ್ಬಲ್ಯದಶೆಯನ್ನು ಹೊಂದಿರುವದರಿಂದ ಜಪಾನ್ ದೇಶದವರಂತೆ ಮುಂದುವರಿಯದೆ ಇನ್ನೂ ಶೋಚನೀಯವಾದ ದುಃಸ್ಥಿತಿಯಲ್ಲಿರುವದು. ಜಗತ್ತಿನ ಚರಿತ್ರದಲ್ಲಿ ಚಿಕ್ಕರಾಷ್ಟ್ರಗಳು ದೊಡ್ಡದೇಶಗಳನ್ನು ಜಯಿಸಿ ಆಳುತ್ತಿದ್ದುದು ಕಂಡುಬರುತ್ತದೆ. ದೊಡ್ಡ ದೇಶಗಳಲ್ಲಿ ಐಕಮತ್ಯವನ್ನು ಸಾಧಿಸುವದು ಕಷ್ಟ. ಸಣ್ಣ ರಾಷ್ಟ್ರಗಳು ತಮ್ಮ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ಅಸಾಧಾರಣಕಾರ್ಯಗಳನ್ನೆಸಗುತ್ತಿರುವದು ಸಹಜವಾಗಿಯೇ ಇದೆ. ಆದ್ದರಿಂದ ನಮ್ಮ ಸಮಾಜಬಾಂಧವರು ಐಕಮತ್ಯವನ್ನು ವೃದ್ಧಿಪಡಿಸಲು ಯತ್ನಿಸಲೆಂದು ಹಾರೈಸುತ್ತೇನೆ.

ಶುದ್ಧೀಕರಣ:— ಶುದ್ಧೀಕರಣವು ಸದ್ಯಸ್ಥಿತಿಯಲ್ಲಿ ನಮ್ಮ ವೀರಶೈವರಿಗೆ ಅನಾವಶ್ಯಕವೂ ಅನುಪಯುಕ್ತವೂ ಆಗಿರುವದೆಂದು ಧಾರಾಳವಾಗಿ ಹೇಳಬಹುದು. ಆಂಗ್ಲೇಯರು ತಮ್ಮ ಪ್ರಭುತ್ವವನ್ನು ನೆಲೆಗೊಳಿಸಿದ ಮೇಲೆ ನಮ್ಮ ದೇಶದಲ್ಲಿ ಅನೇಕ ಕ್ರಾಂತಿಗಳಾಗ ಹತ್ತಿದವು. ಆಗ ರಾಜಾರಾಮ ಮೋಹನರಾಯರೆಂಬೊಬ್ಬ ದೇಶಾಭಿಮಾನಿಗಳು ಜನಿಸಿದರು. ಇವರು ನಮ್ಮ ದೇಶವು [illegible] ಕ್ರೈಸ್ತಮಯವಾಗುವುದಕ್ಕೆ ಹಿಂದೂಸ್ಥಾನದಲ್ಲಿ ರೂಢಮೂಲವಾಗಿರುವ ಅನೈಕಮತ್ಯವೂ ಸಾಮಾಜಿಕ ದೋಷಗಳೂ ಕಾರಣವೆಂದು ಸಮಾಜಸುಧಾರಣೆಯ ಕಾರ್ಯವನ್ನು ಕೈಕೊಂಡರು. ಅಕ್ಬರ್ ಬಾದಶಹರು ಹಿಂದೂ, ಮಹಮ್ಮದೀಯ, ಕ್ರೈಸ್ತರಿಗೆ ಅನುಗುಣವಾಗಿ ಐಕಮತ್ಯಕ್ಕೆ ಸಾಧಕವಾದ ಒಂದು ಹೊಸಮತವನ್ನು ಕಲ್ಪಿಸಬೇಕೆಂದು ಆಶಿಸಿದ್ದರು. ಆದರೆ ಅವರ ಮನೋರಥವು ಸಿದ್ಧಿಯಾಗಲಿಲ್ಲ. ರಾಜಾರಾಮ ಮೋಹನರಾಯರು ಅಕ್ಬರ್ ಬಾದಶಹರ ಆಶೆಯಂತೆ ಉಪನಿಷತ್ತು, ಖುರಾನ್, ಬೈಬಲ್‌ಗಳ ಮುಖ್ಯಾಂಶವನ್ನು ತೆಗೆದು ಬ್ರಹ್ಮಸಮಾಜವೆಂಬುದೊಂದು ಹೊಸಮತವನ್ನು ಸ್ಥಾಪಿಸಿದರು. ಅನಂತರ ದಯಾನಂದಸರಸ್ವತಿಯೆಂಬೊಬ್ಬರು ಆರ್ಯಸಮಾಜವೆಂಬ ನೂತನ ಸಂಘವನ್ನು ರಚಿಸಿದರು. ಇವರೀರ್ವರೂ ಜಗತ್ತಿನ ಯಾವ ಭಾಗದಲ್ಲಿಯೂ ಇಲ್ಲದಿರುವ ಜಾತಿಯಿಂದ ನಮ್ಮ ಭರತಖಂಡಕ್ಕೆ ಮಹದನರ್ಥವುಂಟಾಗಿದೆಯೆಂದು ಭಾವಿಸಿ ಇದನ್ನು ಮೂಲೋತ್ಪಾಟನ ಮಾಡಬೇಕೆಂದು ಕಟಿಬದ್ಧರಾದರು. ಒಂದುಕಡೆ ರಾಜಾರಾಮ ಮೋಹನರಾಯ್, ಕೇಶವಚಂದ್ರಸೇನರೂ ಮತ್ತೊಂದುಕಡೆ ದಯಾನಂದರೂ ಶುದ್ಧೀಕ್ರಮವನ್ನು ಜೋರಿನಿಂದ ನಡೆಸಿದರು. ಆರ್ಯಸಮಾಜದವರ ಶುದ್ಧೀಕರಣವು ಈಗ ಉತ್ತರಹಿಂದುಸ್ಥಾನದಲ್ಲಿ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿರುವುದು. ಇದರೇನು? ಜಾತಿಯು ಹಿಂದುಸ್ಥಾನದಿಂದ ಹೋಗಲಿಲ್ಲ. ಬ್ರಹ್ಮಸಮಾಜ ಆರ್ಯಸಮಾಜಗಳು ಹೊಸ ಜಾತಿಗಳಾಗಿ ಪರಿಣಮಿಸಿ ಪೂರ್ವದ ಜಾತಿಕೋಟಿಗಳಲ್ಲಿ ಮಿಳಿತವಾದವು. ಜಾತಿಯು ಜಗತ್ತಿಗೆ ಹಾನಿಕರವಾಗಿರಲಿ ಅಥವಾ ಶ್ರೇಯಸ್ಕರವಾಗಿರಲಿ ಹಿಂದುಸ್ಥಾನದಲ್ಲಿ ರೂಢಮೂಲವಾಗಿದೆ. ಇದನ್ನು ನಾಶಮಾಡುವುದು ಎಂಥಹ ಪುರುಷಸಿಂಹರಿಂದಲೂ ಅಸಾಧ್ಯವಾಗಿದೆ. ಗ್ರೀಸ್‌ದೇಶದ ಕಥೆಯಲ್ಲಿ ಒಂಭತ್ತು ತಲೆಯುಳ್ಳ ಹೈಡ್ರಾ ಎಂಬ ಭೀಕರ ಸರ್ಪವಿತ್ತಂತೆ! ಅದನ್ನು ಕೊಲ್ಲಬೇಕೆಂದು ಒಂದು ತಲೆಯನ್ನು ಕಡಿದರೆ ಹತ್ತುತಲೆಗಳು ಹುಟ್ಟುತ್ತಿದ್ದವಂತೆ! ತದ್ವತ್ ನಮ್ಮ ದೇಶದಲ್ಲಿ ಜಾತಿಯನ್ನು ನಾಶಮಾಡಲು ಯತ್ನಿಸುವವರು ಆರ್ಯಸಮಾಜದವರಂತೆ ಹೊಸಜಾತಿಯನ್ನು ಕಲ್ಪಿಸುವರು. ಆರ್ಯಸಮಾಜದವರ ಶುದ್ಧೀಪ್ರವಾಹದ ಸೆಳವನ್ನು ನೋಡಿ ನಮ್ಮ ವೀರಶೈವರಲ್ಲಿ ಕೆಲವರು ಅವರಂತೆ ಶುದ್ಧಿಕ್ರಮವನ್ನೇರ್ಪಡಿಸಬೇಕೆಂದು ತವಕಪಡುತ್ತಿರುವರು. ಸೆಳವಿನ ಜೊತೆಯಲ್ಲಿ ಕೊಚ್ಚಿಕೊಂಡು ಹೋಗುವುದು ಬುದ್ಧಿವಂತರ ಲಕ್ಷಣವಲ್ಲವು.

(Rudyard Kipling) ರಡ್ಯರ್ಡ್ ಕಿಪ್ಲಿಂಗ್ ಎಂಬ ಪ್ರಸಿದ್ಧ ಆಂಗ್ಲ ಕವಿಗಳು "If" ಎಂಬ ತಮ್ಮ ಕವಿತೆಯಲ್ಲಿ ವಿವೇಕಿಗಳ ಲಕ್ಷಣವನ್ನು ಹೇಳಿದ್ದಾರೆ. ದೇಶದಲ್ಲಿ ಕ್ರಾಂತಿಯುಂಟಾಗಿ ಹೊಸ ವಾತಾವರಣವು ಉತ್ಪನ್ನವಾಗಿ ಜನರನ್ನು ಭಯಭ್ರಾಂತರನ್ನಾಗಿ ಮಾಡುವ ಸಮಯದಲ್ಲಿ ವಿಚಾರಪರರಾಗಿ ಶಾಂತಚಿತ್ತರಾಗಿ ಸತ್ಪಥವನ್ನು ತ್ಯಜಿಸಬಾರದೆಂದು ಅಭಿಪ್ರಾಯಪಟ್ಟಿರುವರು. ಹದಿನೇಳನೆಯಶತಮಾನದಲ್ಲಿ ಫ್ರಾನ್ಸಿನಲ್ಲಿ ರಾಜಕೀಯಕ್ರಾಂತಿ (French Revolution) ಯಾದಾಗ ರಾಜಮನೆತನಗಳನ್ನೂ ಗುರುಮನೆತನಗಳನ್ನೂ ಶ್ರೀಮಂತರನ್ನೂ ಧ್ವಂಸಮಾಡಿ ತಗ್ಗುದಿನ್ನೆಗಳನ್ನು ಸಮಮಾಡಬೇಕೆಂದು ಪ್ರಯತ್ನಿಸಿದರು. ಇವರ ಕಿಡಿಗಳು ಇಡೀ ಯೂರೋಪುಖಂಡಕ್ಕೇ ಬಿದ್ದು ಅನೇಕ ಅನಾಹುತಗಳಾದವು. ಇಂಗ್ಲೆಂಡಿನಲ್ಲಿ ಪಿಟ್, ಫಾಕ್ಸ್ ಎಂಬ ರಾಜತಂತ್ರಪ್ರವೀಣರೂ ಸಹ ಇವರ ತತ್ವಕ್ಕೆ ಕಿವಿಗೊಟ್ಟಿದ್ದರು. ಆದ್ದರಿಂದ ಇಂಗ್ಲೆಂಡಿನಲ್ಲಿಯೂ ಆ ವಿಧವಾದ ಕ್ರಾಂತಿಯಾಗುವ ಸಂಭವವಿತ್ತು. ಆಗ ದೂರದರ್ಶಿಗಳೂ, ಲೋಕೈಕವಾಗ್ಮಿಗಳೂ, ಭರತಖಂಡಕ್ಕೆ ಅನಿಮಿತ್ತಬಾಂಧವರು ಆದ ಎಡ್ಮಂಡ್‌ಬರ್ಕ್ (Edmuud Burke) ರವರು ಫ್ರೆಂಚ್ ಕ್ರಾಂತಿಯ ಮೇಲೆ ವಿಚಾರಗಳು (Reflections on the French Revolution) ಎಂಬ ಅಮೋಘವಾದ ಗ್ರಂಥವನ್ನು ಬರೆದು ತಮ್ಮ ದೇಶಕ್ಕೆ ಸಂಭವಿಸಬಹುದಾಗಿದ್ದ ಅನಿರ್ವಚನೀಯ ಕಷ್ಟಗಳನ್ನು ದೂರಮಾಡಿ ತಮ್ಮ ದೇಶಬಾಂಧವರ ಆಚಂದ್ರಾರ್ಕವಾದ ಕೃತಜ್ಞತೆಗೆ ಪಾತ್ರರಾಗಿರುವರು. ಅದರಂತೆ ನಮ್ಮ ಸಮಾಜಬಾಂಧವರು ವಿಘಾತಮಾರ್ಗದಿಂದ ಶುದ್ಧೀಕರಣ ಮಾಡುವವರನ್ನು ಖಂಡಿಸಿ ಅನಾಯಕತ್ವವೂ ಬಹುನಾಯಕತ್ವವೂ ಬೆಳೆಯದಂತೆ ಸುವ್ಯವಸ್ಥೆಯನ್ನು ಮಾಡಿ ಸಮಾಜವು ಪವಿತ್ರವಾಗಿರುವಂತೆ ಮಾಡುವುದು ಅತ್ಯವಶ್ಯವಾಗಿದೆ.

ಈಗ ಬೆಂಗಳೂರು ಪಟ್ಟಣದಲ್ಲಿ ರಾಜತಂತ್ರವಿಶಾರದರೂ ಅನುತ್ತಮಪದವೀಪ್ರತಿಷ್ಠಿತರೂ, ಧರ್ಮಾಭಿಮಾನಿಗಳೂ, ಗುರುಭಕ್ತಿಪರಾಯಣರೂ ಆದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರ ಚಾಲಕತ್ವದಿಂದಲೂ, ಬೊಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ವೈಸ್ ಪ್ರೆಸಿಡೆಂಟರಾದ

ರಾವ್ ಬಹದ್ದೂರ್ ಸಿದ್ದಪ್ಪ ತೋಟಪ್ಪ ಕಂಬಳಿ ಇವರ ಯಾಜಮಾನ್ಯದಿಂದಲೂ ನಡೆಯುವ ವೀರಶೈವ ಮಹಾಸಭೆಯಲ್ಲಿ ವೀರಶೈವರ ಪುರೋಭಿವೃದ್ಧಿಗೆ ಚಿರಸ್ಥಾಯಿಗಳಾಗಿರುವ ಅನೇಕ ಸುಧಾರಣೆಗಳು ಮಾಡಲ್ಪಡುವವೆಂದು ನಮ್ಮ ನಿರೀಕ್ಷಣೆಯಿದೆ. ವೀರಶೈವ ಬಾಂಧವರೇ! ದೀರ್ಘಜಡನಿದ್ರೆಯಿಂದ ಮೇಲಕ್ಕೇಳಿರಿ. ನೀವು ಹೃದಯಪೂರ್ವಕ ಸಮಾಜೋನ್ನತಿಯಾಗಬೇಕೆಂಬ ಕಳಕಳಿಯಿದ್ದರೆ ಸರ್ವತೋಮುಖವಾದ ವಿಘ್ನಗಳನ್ನೂ ನೀವು ದೂರಮಾಡಬಲ್ಲಿರಿ. ಇಂಗ್ಲಂಡಿನಲ್ಲಿ ಒಂದು ಸಾಮಾನ್ಯ ಬಡಮನೆತನದಲ್ಲಿ ಒಬ್ಬನು ಹುಟ್ಟಿ ಬಹು ಉಡಾಳನಾಗಿ ಬೆಳೆದನು. ವಿದ್ಯೆಯಂತೂ ಅವನ ತಲೆಗೆ ಹತ್ತಲಿಲ್ಲ, ಕೇವಲ ಧೂರ್ತನಾಗಿದ್ದನು. ಅವನ ತಂದೆ ತಾಯಿಗಳು ಅವನ ಕಾಟತಪ್ಪಿದರೆ ಸಾಕೆಂದು ಈಸ್ಟ್ ಇಂಡಿಯಾ ಕಂಪನಿಯವರಲ್ಲಿ ಒಂದು ಸಣ್ಣಗುಮಾಸ್ತೆಯ ಕೆಲಸವನ್ನು ಕೊಡಿಸಿ ಅವನ ಗತಿಯು ಏನಾದರೂ ಆಗಲೆಂದು ಹಿಂದೂದೇಶಕ್ಕೆ ಕಳುಹಿಸಿದರು. ಅವನು ಆ ಕೆಲಸದಲ್ಲಿ ಸಿಗಿದವನಲ್ಲನಾದ್ದರಿಂದ ಜುಗುಪ್ಸೆ ಬಂದು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಎರಡುಸಲ ಗುಂಡಿನಿಂದ ಹೊಡೆದುಕೊಂಡನು. ಆದರೂ ಅವನ ಪ್ರಾಣ ಹೋಗಲಿಲ್ಲ. ಅವನು ಜಗದೀಶ್ವರನು ತನ್ನಿಂದ ಮಹತ್ತರವಾದ ಕಾರ್ಯವನ್ನು ಮಾಡಿಸುವದಕ್ಕೋಸ್ಕರವೇ ತನ್ನ ಜೀವವನ್ನು ಉಳಿಸಿರುವನೆಂದು ಭಾವಿಸಿ ತನ್ನ ಆತ್ಮಶಕ್ತಿಯಲ್ಲಿ ನಿಜವಾದ ನಂಬಿಗೆಯುಳ್ಳವನಾದನು. ಇವನೇ ಪ್ರಸಿದ್ಧನಾದ ಹಿಂದೂದೇಶದಲ್ಲಿ ಬ್ರಿಟಿಷ್ ರಾಜ್ಯಸ್ಥಾಪಕರಲ್ಲಿ ಮೊದಲನೆಯವನಾದ ಲಾರ್ಡ್ ಕ್ಲೈವನು. ಫ್ರಾನ್ಸ್ ದೇಶದಲ್ಲಿ ಕುರಿಕಾಯುವ ಹುಡುಗಿ ಜೋನ್ ಆಫ್ ಆರ್ಕ್ ಎಂಬುವಳು ಇಂಗ್ಲೀಷಿನವರಿಂದ ತನ್ನ ದೇಶಕ್ಕಾಗುತ್ತಿರುವ ಅನ್ಯಾಯತೆವನ್ನು ನೆನಿಸಿ ಕಣ್ಣೀರು ತಂದು ತಾನೂ ದೇಶಸೇವೆ ಮಾಡಬೇಕೆಂದು ಕುರಿಕಾಯುವುದನ್ನು ಬಿಟ್ಟು ರಣರಂಗಕ್ಕೆ ಹೋದಳು. ಯುದ್ಧಶಾಸ್ತ್ರದಲ್ಲಿ ಪಾರಂಗತರಾದ ಇಂಗ್ಲಂಡಿನ ವೀರಭಟರೊಡನೆ ಮುಂದಾಳಾಗಿ ನಿಂತು ಯುದ್ಧಮಾಡಿ ತನ್ನ ದೇಶದ ಗೌರವವನ್ನು ಕಾಪಾಡಿದಳು. ಅಪ್ರಯೋಜಕನಾಗಿದ್ದ ಉಡಾಳ ಹುಡುಗನೂ, ಕುರಿಕಾಯುವ ಹುಡುಗಿಯೂ ತಮ್ಮ ಶಕ್ತಿಯನ್ನು ತಾವು ನಂಬಿದ್ದರಿಂದ ಅಸಾಧಾರಣ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಗಳಾದರು. ನಿಜವಾಗಿಯೂ ಧೀಮಂತರೂ, ಶ್ರೀಮಂತರೂ, ಶ್ರೇಷ್ಠಧರ್ಮಾವಲಂಬಿಗಳೂ ಆದ ವೀರಶೈವರು ಅದ್ಭುತಕಾರ್ಯವನ್ನು ಮಾಡುವ ಶಕ್ತಿಯು ತಮ್ಮಲ್ಲಡಗಿದೆ ಎಂದು ನಿಸ್ಸಂಶಯವಾಗಿ ತಿಳಿಯುವವರಾಗಲಿ. ಆ ನಂಬಿಗೆಯೇ ಅವರನ್ನೂ ಅವರ ಸಮಾಜವನ್ನೂ ಉದ್ಧರಿಸಲು ಸಾಧಕವಾಗುವದು. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ನಮ್ಮ ಆರ್ಯೋಕ್ತಿಯನ್ನು ಮರೆಯಬೇಡಿರಿ. ಶಿವನು ನಿಮ್ಮ ಸದುದ್ಯಮಕ್ಕೆ ವಿಜಯಕಿರೀಟವನ್ನನುಗ್ರಹಿಸುವನು. ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ!! ಶಿವಂ ಭೂಯಾತ್ !!!

ಸಜ್ಜನವಿಧೇಯ,
ಜಿಗಳಿ. ಹಿರೇಮಠದ ಮಹಾದೇವಯ್ಯ,
19-12-27. ಜಿಗಳಿ ತಾಲ್ಲೂಕ, ಹರಿಹರ.

ಮಹಾಸಭೆಗೆ ಸೂಚನೆ.

1. ಮಹಾಸಭೆಗೆ ಶ್ರೀಯುತರಾದ ರಾ|| ಬ|| ಎಸ್. ಟಿ. ಕಂಬಳಿ, ಬಿ.ಎ., ಎಲ್ ಎಲ್.ಬಿ., ಎಂ. ಎಲ್. ಸಿ. ಯವರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು ಕೆಲವು ಪತ್ರಿಕೆಯವರಿಗೆ ಅಸಮಾಧಾನವಂತೆ! ಇವನ್ನು ಹೇಗಾದರೂ ಬದಲಾಯಿಸಬೇಕೆಂದು ಕೆಲವರು ಬೆಂಗಳೂರಿಗೂ ಬಂದಿದ್ದರಂತೆ! ಆದರೆ ಈ ಸಮಯ ವಾತಾವರಣದಲ್ಲಿ ಯಾವ ಪಕ್ಷಕ್ಕೂ ಸೇರದ ಸಮರ್ಥರಾದ ಶ್ರೀಯುತ ಕಂಬಳಿಯವರೇ ಸರ್ವಸಭೆಯಲ್ಲೂ ಈ ಸ್ಥಾನಮಾನಕ್ಕೆ ದಕ್ಷರೆಂದೂ ಇವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ಶಾಂತಿಯಿಂದ ನೆರವೇರುವುದೆಂದೂ ಪೂರ್ಣ ಭರವಸೆ ಇರುತ್ತದೆ. ಆದುದರಿಂದ ಸ್ವಾಗತಸಂಘದವರು ದೀರ್ಘಾಲೋಚನೆಯಿಂದ ನಿರ್ಧರಿಸಿರುವುದನ್ನೇ ಕಾಯಮಾಯಿಸುವರೆಂದು ಕೋರುತ್ತೇನೆ.

2. ಸಭಾಮಂಡಪದಲ್ಲಿ ಕರ್ನಾಟಕ ಏಕೀಕರಣ ವಿಷಯದಲ್ಲೂ ಮತ್ತು ಶಿರಸಂಗೀ ಫಂಡಿನಿಂದ ಎಲ್ಲಾ ಪ್ರಾಂತ್ಯದ ವೀರಶೈವ ವಿದ್ಯಾರ್ಥಿಗಳಿಗೂ ವೇತನಗಳು ದೊರೆಯುವಂತೆ ಠರಾವು ಆಗಿ ಕಾರ್ಯವು ನಡೆಯಬೇಕಾದದ್ದು ಅತ್ಯವಶ್ಯವಿರುತ್ತದೆ. ಸ್ವಾಗತಸಂಘದವರು ಈ ಎರಡು ವಿಷಯಗಳನ್ನು ಸಮಾಲೋಚನೆಗೆ ತರುವರೆಂದು ಸೂಚಿಸುತ್ತೇನೆ.

3. ಇನ್ನು ಲೋಕಮತದಲ್ಲಿ ಸೂಚಿಸಿರುವ ಶುದ್ಧಿ ಚಳವಳಿ, ಮತ್ತು ಬಹಿಷ್ಕಾರ ಚಳವಳಿ ವಿಷಯಗಳಿಗೆ ಪ್ರವೇಶಮಾಡಬಾರದು. ಹಿಂದೆ ಹುಬ್ಬಳ್ಳಿಯಲ್ಲಿ ನಡೆಯಬೇಕಾಗಿದ್ದ ಮಹಾಸಭೆಯು "ಶುದ್ಧಿಪ್ರಸಂಗ" ದಿಂದಲೇ ನಿಂತುಹೋಯಿತೆಂದು ನಮ್ಮ ಮನೋದೇವತೆಯು ಕೇಳಿಕೆಯಲ್ಲುಂಟು. ಇದರಿಂದ ಧರ್ಮಕಟ್ಟಳೆಯು ಸಡಿಲವಾಗಿ ಸಮಾಜಕ್ಕೆ ಪರಮತದವರ ವಿರೋಧವು ಸಂಘಟಿಸಿ ಸಮಾಜಕ್ಕೆ ವಿಘಾತಪರಿಣಾಮವು ಉಂಟಾಗುವುದು. ಸಾಲದುದಕ್ಕೆ ಇದು ಅಲ್ಪಸಮಾಜವಲ್ಲ! ಈ ಗೊಂದಲಗಳಿಗೆ ಮಹಾಸಭೆಯವರು ಸುತರಾಂ ಅವಕಾಶ ಕೊಡದೆ ಶಾಂತಿಯಿಂದ ಸಭಾಕಾರ್ಯವನ್ನು ಸಾಂಗಗೊಳಿಸಿ ಶಾಶ್ವತ ಕೀರ್ತಿಯನ್ನು ಪಡೆಯಲೆಂದು ನನ್ನ ಕೋರಿಕೆ.

ಸಮಾಜಸೇವಕ,
ಬಸಪ್ಪ, ತುಮಕೂರು.

ಸನಾತನಾಚಾರಬೋಧ.

ಶ್ರೀ ಜಗದ್ಗುರು ಸಿದ್ಧಾರಾಧ್ಯ ಗುರುಕುಲವಾಸಿ ವ್ಯಾಕರಣರತ್ನ ಪಂಡಿತ ಶ್ರೀ ಪುರಗಿರಿ ಪಂಡಿತ ಚನ್ನಬಸವಾಚಾರ್ಯ ಮಹಾನುಭಾವರು ರಾಯಚೂರು ಜಿಲ್ಲಾ ಕುಷ್ಟಗಿ ತಾಲೂಕು ಹನಮಸಾಗರಕ್ಕೆ ತಾ|| ೨೫-೧೧-೨೭ ರಲ್ಲಿ ಆಗಮಿಸಿದರು. ಈ ಗ್ರಾಮದ ಮಠಾಧಿಕಾರಿಗಳಾದ ವೇ|| ಜಯದೇವಯ್ಯ ಮೊದಲಾದವರು ಶಿವಾಚಾರ್ಯರ ಸದ್ಬೋಧವಾಗಬೇಕೆಂದು ಪ್ರಾರ್ಥಿಸಿಕೊಳ್ಳಲಾಗಿ ಸದರಿ ಮಠದಲ್ಲಿಯೇ "ವೀರಶೈವಮತ ಪ್ರಶಂಸಾ" ಹಾಗೂ "ವೀರಶೈವ ಸನಾತನಾಚಾರ ಪದ್ಧತಿ" ಈ ಬಗ್ಗೆ ೨೬-೧೧-೨೭ ಪ್ರಾತಃಕಾಲ ೭ ಘಂಟೆಯಿಂದ ೧೦ ಘಂಟೆಯವರೆಗೂ ನಿಗಮಾಗಮಾದಿ ಭಗವದುಕ್ತಿಪ್ರಮಾಣಾನುಸಾರವಾಗಿ ಸರಳಗನ್ನಡ ನುಡಿಯಿಂದ ಗಂಭೀರವಾಗಿ ಸಮ್ಮಿಲಿತರಾದ ವೀರಶೈವ ಭಕ್ತಮಾಹೇಶ್ವರ ಸ್ತ್ರೀಪುರುಷ ಅಬಾಲವೃದ್ಧರಿಗೆ ಬೋಧಿಸಿದರು. ವಿದ್ವಾಂಸರ ವೈದುಷ್ಯ ವಾಕ್ಚಾತುರ್ಯಕ್ಕೆ ಆನಂದದಿಂದ ತುಂಬಿದವರಾಗಿ ತಲೆದೂಗುತ್ತಿದ್ದರು. ಮತ್ತು ಸಭೆಗೆ ತಂಡೋಪತಂಡವಾಗಿ ಹಿಂದುಗಳು ಬಂದಿದ್ದರಿಂದ ಸರ್ವ ಹಿಂದುಗಳೂ ಹೇಗೆ ಮುಸಲ್ಮಾನರಿಗೆ ಗಡ್ಡವು ಅವಶ್ಯಕವೋ ಹಾಗೆ ಶಿಖಾಧಾರಣವನ್ನು ಮಾಡಿಯೇ ತೀರಬೇಕು, ಎಂದು ಸಪ್ರಮಾಣವಾಗಿ ಬೋಧಿಸಿದ್ದರಿಂದ ಸಮಸ್ತಮತದವರು ಶಿಖಾಧಾರಣವನ್ನು ಮಾಡಿಯೇ ತೀರುವೆವೆಂದು ಪ್ರತಿಜ್ಞೆಯಂ ಮಾಡಿದರು. ಶ್ರೀಮದಾಚಾರ್ಯರ ಬೋಧವು ಅಕೃತ್ರಿಮವಾದದ್ದರಿಂದ ಹಿಂದುಮಾತ್ರಕ್ಕೇನೇ ಫಲದಾಯಕವಾಯಿತೆಂದು ತಿಳಿಸುವ,

ತಮ್ಮ
ವೇ|| ಶಿವಲಿಂಗಾರ್ಯ ಹಿರೇಮಠ,
ಕಣಕೊಪ್ಪ, ಸ್ವಬಾಂಸ್ಟೇಟ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಗುರುಬೋಧಾಮೃತ.

ವಾಚಕರೇ, ಜಗನ್ನಿಯಾಮಕನಾದ ಪರಶಿವನ ಆಜ್ಞಾನುಸಾರವಾಗಿ ಬ್ರಹ್ಮನು ೮೪ ಲಕ್ಷ ಜೀವರಾಶಿಗಳನ್ನು ಸೃಷ್ಟಿಸಿದ್ದಾನೆ. ಇವುಗಳಲ್ಲಿ ಮನುಷ್ಯನಿಗೂ ಇತರ ಜೀವರಾಶಿಗಳಿಗೂ ಕೈ, ಕಾಲು, ಕಣ್ಣು, ಮೂಗು ಇತ್ಯಾದಿ ಅವಯವಗಳಿದ್ದರೂ ಮನುಷ್ಯನೇ ಪ್ರಾಧಾನ್ಯನಾಗಿದ್ದಾನೆ ಯಾಕೆಂದರೆ, ಮನುಷ್ಯೇತರ ಜೀವರಾಶಿಗಳು ಜ್ಞಾನವಿಲ್ಲದ ಮೂಕಪ್ರಾಣಿಗಳಾಗಿರುತ್ತವೆ. ಆದರೆ ಮನುಷ್ಯನು ಹಾಗಿಲ್ಲ ಕೇವಲ ಪರಂಜ್ಯೋತಿರೂಪವುಳ್ಳ "ಜ್ಞಾನ" ವೆಂಬ ಸದ್ವಸ್ತುವಿನಿಂದ ಕೂಡಿಕೊಂಡಿದ್ದಾನೆ. ಜ್ಞಾನವಿಲ್ಲದೆ ಮೋಕ್ಷವು ದೊರೆಯುವದಿಲ್ಲ. ಜ್ಞಾನವು ಮಾನವೇತರ ಪ್ರಾಣಿಗಳಲ್ಲಿರುವದಿಲ್ಲ. ಮನುಜೇತರ ಜೀವರಾಶಿಗಳು ಮೋಕ್ಷವೆಂಬ ಶಿಖರವನ್ನೇರುವದಕ್ಕೆ ಮನುಷ್ಯನಾಗಿಯೇ ಜನಿಸಬೇಕಾಗುತ್ತದೆ. ಮನುಷ್ಯನಾಗಿ ಜನಿಸುವದು ಭಾಗ್ಯೋದಯವಲ್ಲವೇ? ಶ್ರೇಷ್ಠತರವಾದ ಮಾನವವರ್ಗದಲ್ಲಿ ಹುಟ್ಟಿ ಬೆಳೆದು, ಮತ್ತು ಜ್ಞಾನವೆಂಬ ಸದ್ವಸ್ತುವಿನಿಂದ ಕೂಡಿಕೊಂಡು ಮೋಕ್ಷವನ್ನು ಪಡೆಯದಿರುವದು ಪರಮಪಾತಕವೆಂದು ಎನಿಸಲ್ಪಟ್ಟಿದೆ. ಮನುಷ್ಯನಿಗೆ ಮೋಕ್ಷವನ್ನು ಅನುಗ್ರಹಿಸುವ ಉದ್ದೇಶದಿಂದ ಸಕಲನೂ, ನಿಷ್ಕಲನೂ, ನಿರಾಕಾರನೂ ಆದ ಪರಬ್ರಹ್ಮನು ಪಂಚಮೂರ್ತಿಗಳಾಗಿ ಅವತರಿಸಿದ್ದಾನೆ. ಆ ಮೂರ್ತಿಗಳಿಗೆ ಜಗದ್ಗುರುಗಳೆಂದೂ ಜಂಗಮರೆಂದೂ ಅನ್ವರ್ಥಕನಾಮಗಳು ಇರುತ್ತವೆ. ಈ ಜಗದ್ಗುರುಗಳು ಸೋಮನಾಥಾದಿ ಲಿಂಗಗಳಿಂದುದ್ಭವಿಸಿ ಶ್ರೀ ರೇಣುಕಾದಿ ಪಂಚಾಚಾರ್ಯರೆಂಬ ಅಭಿಧಾನದಿಂದ ಭೂಲೋಕದಲ್ಲಿ ವೀರಶೈವಮತವನ್ನು ಸ್ಥಾಪಿಸಿರುವರೆಂದು ಆಗಮೋಪನಿಷತ್ತುಗಳು ಘಂಟಾಘೋಷವಾಗಿ ಸಾರುತ್ತಿರುವವಲ್ಲದೆ ಆ ಮಹನೀಯರು ಸ್ಥಾಪಿಸಿದ ಪೀಠಗಳು ಈಗಲೂ ನೇತ್ರಗಳಿಗೆ ಪರಮಾನಂದಗೊಳಿಸುತ್ತಿರುವವು. ಈ ಪೀಠಗಳ ಶಾಖಾಮಠಗಳಲ್ಲಿ ಶ್ರೀ ಪಟ್ಟಾಧಿಕಾರಿಗಳು, ಶ್ರೀ ಚರಮೂರ್ತಿಗಳು ಎಂಬ ನಾಮಗಳಿಂದ ಪ್ರಸಿದ್ಧರಾಗಿರುವದು ವಾಚಕರಿಗೆ ವೇದ್ಯವಾದ ವಿಷಯವಾಗಿದೆ. ಈ ಪೂಜ್ಯರಿಂದಲೇ ವೀರಶೈವರು ಅಂದರೆ ಲಿಂಗಬ್ರಾಹ್ಮಣಾದಿ ಚತುರಾಶ್ರಮಿಗಳು ಲಿಂಗದೀಕ್ಷಾದಿ ಸಾಧನಗಳಿಂದ ಮೋಕ್ಷವನ್ನು ಪಡೆಯುತ್ತಾರೆಯೇ ಹೊರತು ಅನ್ಯಮಾರ್ಗಗಳಿಂದ ಮೋಕ್ಷವನ್ನು ಹೊಂದಲಾರರೆಂದು ಶ್ರುತಿಯುಕ್ತಿ ಹೇಳುತ್ತವೆ. ಪೂರ್ವದಲ್ಲಿ ಶಿವಸಾಯುಜ್ಯವನ್ನು ಪಡೆದ ವಿಖ್ಯಾತರಾದ ಸತ್ಯೇಂದ್ರಚೋಳ, ಅಗಸ್ತ್ಯ, ವಿಭೀಷಣ, ಮರಿತೋಂಟದಾರ್ಯ, ರಾಜಶೇಖರ, ಮಂತ್ರಲಕ್, ಕಲುಬುರ್ಗಿ ಶರಣಬಸವೇಶ್ವರ, ಕೊಟ್ಟೂರುಬಸವೇಶ್ವರ, ಹೇಮರಡ್ಡಿ ಮಲ್ಲಮ್ಮ ಇತ್ಯಾದಿ ಶರಣರ ನಾಮಗಳು ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿರುವವು. ಈ ಮಹಾತ್ಮರಾದವರೂ ಶ್ರೀ ಜಗದ್ಗುರು ಪಂಚಾಚಾರ್ಯರಂಶದವರಿಂದಲೇ ಗುರುಬೋಧವನ್ನು ತೆಗೆದುಕೊಂಡಿರುವರು. ಗುರುಬೋಧವನ್ನು ತೆಗೆದುಕೊಳ್ಳದಿದ್ದರೆ ಸದ್ಗತಿಯೇ ದೊರೆಯಲಾರದು. ಆದ್ದರಿಂದಲೇ "ವಿನಿರ್ದೇಶನ ನಿಜಬೋಧೆಯೊಂದಿಲ್ಲದಿರೆ ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿರುವುದು" ಇತ್ಯಾದ್ಯನೇಕಾಧಾರಗಳು ಗುರುಬೋಧೆಯ ಶ್ರೇಷ್ಠತ್ವವನ್ನು ವರ್ಣಿಸುವವು. ಗುರುಕೃಪಾಶೀರ್ವಾದವಾಗದೆ ಅನ್ಯಮಾರ್ಗದಲ್ಲಿ ಸೇರಿದ್ದಾದರೆ ಕೇವಲ ಕ[illegible]ದಿಂದ ದೊರೆತಂಥ ಮಾನವಜನ್ಮವು ವ್ಯರ್ಥವಾಗಿ ನರಕಯಾತನೆಯನ್ನು ಅನುಭವಿಸುವದರಲ್ಲಿ ಸಂದೇಹವಿಲ್ಲ. ಆದರೆ ಸಂಸಾರಚಕ್ರದಲ್ಲಿ ಹೊರಳಾಡುವಂಥ ಮಾನವರನ್ನು ಎತ್ತಿ ಹಿಡಿಯುವ ಗುರುವರ್ಗದವರನ್ನು ಮರೆತು, ಸ್ವಾರ್ಥತೆಯನ್ನು ಬೆಳೆಯಿಸುವ ನಾಮಧಾರಿಸನ್ಯಾಸಿಗಳ ಮಾಯಾಜಾಲದ ಮಾತುಗಳಿಗೆ ಹಲಕೆಲವರು ಮರುಳಾಗಿ ಭವಬಂಧನದಲ್ಲಿ ಬೀಳುವ ಪ್ರಯತ್ನದಲ್ಲಿರುವ ಸಂಗತಿಯು ಶೋಚನೀಯವಾಗಿದೆ. ಗುರುನಿಂದಕರೇ ಕೇಳಿರಿ! "ಗುರುವನರಿಯದೆ ಗುರುವ ಕೇಳದೆ | ಗುರುವಿಗೆರಗದೆ ಗುರುವ ಸ್ಮರಿಸದೆ | ಗುರುವಿನಿಂದಲಿ ಅನುವಿಲ್ಲದೆ ಸಾರ್ಥಕವೆಂತು ||" ಮತ್ತು 'ಅರುಹನೆಂಬುದನು ಅರಿಯದೆ | ಮೂರು ಗುಣಗಳ ಮೀರಿಲ್ಲದೆ | ಅರುಮದಗಳ ಬಿಟ್ಟು ಮೆಲ್ಲನೆ ಆತ್ಮತತ್ವವನೂ || ಧೀರಗುರುವಿನ ಮುಖದಿ ಕೇಳದೆ | ದೊರೆಯದು ಮುಕ್ತಿಯು ನರಗೆ | ವೀರ ಕೇಳೈ ಪಾರ್ಥನೆಂದನು ಕೃಷ್ಣ ನಸುನಗುತಾ ||' ಇತ್ಯಾದ್ಯನೇಕ ದೃಷ್ಟಾಂತಗಳಿಂದ ಸದ್ಗುರುವಿನ ಮಹತ್ವವನ್ನು ಶ್ರೀ ಕೃಷ್ಣನು ಪಾರ್ಥನಿಗೆ ಬೋಧಿಸಿದ್ದಾನೆ. "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬಂತೆ ಸ್ವಧರ್ಮವನ್ನು ಬಹಿಷ್ಕರಿಸಿ ಪರಧರ್ಮದಭಯವಿಲ್ಲದೆ ಬೋಧಿಸುವಂಥ ನಾಮಧಾರಿ ಸನ್ಯಾಸಿಗಳ ಬೋಧದಮಾತಿಗೆ ಕಿವಿಗೊಡದೆ ಮೇಲಿನ ಸದ್ವಾಕ್ಯಗಳನ್ನು ಕೇಳಿ, ನೋಡಿ, ಓದಿ ಧನ್ಯರಾಗಿ ಗುರುಪ್ರೀತಿಗೆ ಪಾತ್ರರಾಗಿ ಇಹದಲ್ಲಿ ಆಯುರಾರೋಗ್ಯ-ಧನ-ಧಾನ್ಯ-ಕನಕಾದಿ ಸಂಪತ್ತುಗಳನ್ನೂ ಪರದಲ್ಲಿ ಮೋಕ್ಷವನ್ನೂ ಪಡೆಯಿರಿ. ಪರಮಾತ್ಮನ ಕೃಪಾಶೀರ್ವಾದದಿಂದ ವೇದವ್ಯಾಸರು ಅಷ್ಟಾದಶ ಪುರಾಣಗಳನ್ನು ವಿರಚಿಸಿ ಕೀರ್ತಿವಂತರಾದಂತೆ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದದಿಂದವತರಿಸಿ ಜಿತೇಂದ್ರಿಯರಾಗಿ ಮಠಮಾನ್ಯಗಳನ್ನು ತೊರೆದು, ಧರ್ಮಸುಧಾರಕರೆಂಬಭಿಧಾನವನ್ನು ತಾಳಿದ ಲೋಕಮಾನ್ಯ ವೇ|| ಕಾಶೀನಾಥಶಾಸ್ತ್ರಿಗಳು ವೇ|| ಆಸ್ಥಾನ ವಿದ್ವಾನ್ ಶ್ರೀ ಶಿರಸಿ ಗುರುಶಾಂತಶಾಸ್ತ್ರಿಗಳು ಈ ಉಭಯ ಪಂಡಿತರು "ಪಂಚಾಚಾರ್ಯಪ್ರಭಾ" ವಾರಪತ್ರಿಕೆಯನ್ನು ಹೊರಡಿಸಿ ಕೀರ್ತಿಶಾಲಿಗಳಾಗಿರುವದು ವೀರಶೈವರಾದ ನಮ್ಮಗಳ ಭಾಗ್ಯೋದಯವೆಂದು ಭಾವಿಸಬೇಕಾಗಿದೆ. ಅಷ್ಟಾದಶ ಪುರಾಣಗಳಲ್ಲಿರುವ ವಿಷಯಗಳು ಎಷ್ಟು ಗೌರವಗಳನ್ನು ಪಡೆದಂಥವಿರುವವೋ ಅದಕ್ಕೂ ಒಂದು ವಿಶೇಷ ಗೌರವಗಳನ್ನು ಪಡೆದಂಥ ವಾರಪತ್ರಿಕೆಯೆಂದು ಹೇಳಬಹುದು. ಯಾಕೆಂದರೆ, ಪರಮಂದು ಪ್ರಭಾಪತ್ರಿಕೆಯಲ್ಲಿ ವೇದಾಗಮೋಪನಿಷತ್ತು ಪುರಾಣಾದಿಗಳಾಧಾರಗಳೇ ತುಂಬಿತುಳುಕುತ್ತಿರುವವು. ಶ್ರೀ ಜಗದ್ಗುರು ಪಂಚಾಚಾರ್ಯರ ಅಘಟಿತಘಟನಾ ಕಾರ್ಯಕರ್ತೃತ್ವ ಶಕ್ತಿಯನ್ನು ತೋರಿಸುತ್ತಿರುವದು ಅಂದಮೇಲೆ ಪ್ರಭೆಯನ್ನು ತರಿಸದೆ ಪ್ರಭಾಮಹತ್ವವನ್ನರಿಯದೆ ಪ್ರಭಾದರ್ಶನವಾಗದೆ ಇರುವದು ಕೇವಲ ಅಭಾಗ್ಯದವರೆಂದು ಹೇಳಬಹುದು' ಆದ್ದರಿಂದ "ಪಂಚಾಚಾರ್ಯಪ್ರಭಾ" ಪತ್ರಿಕೆಯನ್ನು ತರಿಸಿ ಮಹತ್ವವನ್ನು ತಿಳಿದು ಶ್ರೀ ೧೦೮ ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಧನ್ಯಜೀವಿಗಳಾಗಬೇಕೆಂದು ಅತಿ ಬಾಲಕನ ಈ 'ಗುರುಬೋಧಾಮೃತ'ದ ಈ ಲೇಖನವನ್ನು ಏಕಚಿತ್ತದಿಂದ ಓದಿ ಧನ್ಯರೂ, ಮಾನ್ಯರೂ ಆಗಬೇಕೆಂದು ವಿನಯದಿಂದ ಮತ್ತೊಮ್ಮೆ ತಮ್ಮಗಳಿಗೆ ಕೋರಿಕೊಳ್ಳುತ್ತೇನೆ.

ಶಿವಮೂ. ಹಿರೇಮಠ,
ಸ್ಟೇಷನ್‌ಮಾಸ್ಟರ್, ಆಳವಂಡಿ.

ಪಂಚಾಚಾರ್ಯ ಪ್ರಭಾ

೧೯೨೮ ನೇ ಡಿಸಂಬರ ತಾ|| ೨೪ ನೇ ಸೋಮವಾರ

ಗುರು

ಶ್ರೀ ಜಗದ್ಗುರು ರೇಣುಕಾಚಾರ್ಯರು ಕಲಿಯುಗಾದಿಯಲ್ಲಿ [illegible] ಗುರುವಾಗಿಯೂ [illegible] ನಗರ [illegible] ಇರುವಂತೆ [illegible] ಶಿವಲಿಂಗ [illegible] ಲ್ಲಿಯೇ [illegible] ಶಿವತತ್ವ [illegible] ತಮ್ಮ [illegible] ಗಳಾದ [illegible] ತೋರಿಸಿ [illegible] ರಾದ [illegible] ದುಷ್ಟರ [illegible] [illegible] ದಲ್ಲಿ [illegible] ಪ್ರಪಂಚದಲ್ಲಿ [illegible] ಸಂಕಲ್ಪ [illegible] [illegible] ಶ್ರೀ [illegible] ದಿನದ [illegible] ಸಂದರ್ಭ [illegible] ಪದದಲ್ಲಿ [illegible] [illegible] ವಾದದಿಂದ [illegible] ಸ್ಥಾನ [illegible] ದಲ್ಲಿ [illegible] ಗಳನ್ನು [illegible] ತಿಳಿಸಿ [illegible] ಇಲ್ಲಿ [illegible] ದಿವಸ [illegible] ಸ್ವಾತ್ಮಸ್ವರೂಪ [illegible] ಇಲ್ಲಿ [illegible] ಅವರ [illegible] ಗಳಲ್ಲಿ [illegible] ವರು [illegible] ಪದದಿಂದ ಎಂದು [illegible] ಯಲ್ಲಿ ತಮ್ಮ [illegible] ರಾದ [illegible] ಇಲ್ಲಿ [illegible] ಗಳನ್ನು [illegible] ದಿಂದ [illegible] ಇಲ್ಲಿ [illegible] ಸ್ಥಾಪನೆ [illegible] ವಾಗಿ [illegible] ದಲ್ಲಿ [illegible] ಎಂದು [illegible] ದಿಂದ [illegible] ಗಳನ್ನು [illegible] ದಿಂದ [illegible]

[illegible] ಲ್ಲಿ [illegible] ಗದೆ [illegible] ಆದರ [illegible] ಬಹುದೂರದಿಂದ [illegible] ಅಂಗಾಂಗಗಳ [illegible] ಹಿತವಾಗಿರು [illegible] ಹೋಗೆಂದು ಹೇಳಿ [illegible] ದಿಂದ [illegible] ಮೂರ್ಧ್ನಿ [illegible] ಧ್ಯಾನಸ್ಥ [illegible] ಪಕ್ಷಿ [illegible] ತಮ್ಮ [illegible] ನೀಡಿದನು [illegible] ಯಲ್ಲಿ [illegible] ಅಪ್ಪಣೆ [illegible] ಎರಡು [illegible] ಎರಡು ಬಂದರೆ [illegible] ಮುಂದು [illegible] ದಿಂದ [illegible] ಮಹಾ [illegible] ಶ್ರೀ [illegible] ದಾಶ [illegible] ಸಾಧಿ [illegible] [illegible] ಕಾಲ [illegible] ಆಗ [illegible] ವರು [illegible] ಸಿದ್ಧ [illegible] ಯುಗ್ಮ [illegible] ಗುಂಡು [illegible] ಮಹಾ [illegible] ಗುಂಡು [illegible] ಸ್ಥಾನ [illegible] ದಿಂದ [illegible] ವರ [illegible] ಸಮರ್ಥ [illegible] ಪ್ರಭಾವ [illegible] ಪದಾರ್ಥ [illegible] ದಿಂದ [illegible] ರಾಜ್ಯ [illegible] ಎಂದು [illegible] ಬಂದ [illegible] [illegible]

[illegible] ಹೊಂದಿರುವನು [illegible] ಇವುಗಳಿಂದ [illegible] ಪಕಾರವುಂಟು ಎಂದು ಸಮಾಧಾನ ಹೇಳಿ ತಪಸ್ಸಿನ [illegible] ಆಯುಧಗಳನ್ನು ಮಾಡಿಕೊಟ್ಟನು. ಅವುಗಳಲ್ಲಿ ಚಂದ್ರಾಯುಧವನ್ನು [illegible] ಉಜ್ಜಯಿನೀ ನಗರಾಧಿಪತಿಯಾದ ವಿಕ್ರಮಾರ್ಕನಿಗೆ ಅನುಗ್ರಹಿಸಿದನು. ಶ್ರೀ ಪಂಚಾಚಾರ್ಯರಲ್ಲಿ ಮೊದಲಿನವರಾದ ರೇಣುಕರು ಈ ರೀತಿಯಾಗಿ ಅನಂತ ಲೀಲೆಗಳನ್ನು ಮಾಡಿ ಪ್ರಪಂಚವನ್ನುದ್ಧರಿಸಿದರು. ಈ ರೀತಿಯಾಗಿ ಅನಂತರ [illegible] ಗುರುತ್ವವನ್ನು ವಹಿಸಿ ಪ್ರಪಂಚದಲ್ಲಿ ಶಿವಸಿದ್ಧಾಂತವನ್ನು ಪ್ರಸರಿಸಿದ ರೇಣುಕಾದಿ ಶ್ರೀ ಪಂಚಾಚಾರ್ಯರನ್ನು [illegible] ಸಿಂಹಾಸನಾಧೀಶ್ವರರೆಂದು ಶಿವಾಗಮಗಳು ಹೇಳುತ್ತಿರುವದರಿಂದಲೂ ಇಂಥಹ ಪೀಠಗಳು ಅವ್ಯಾಪಿ ಇರುವುದರಿಂದಲೂ ಇಂಥವ [illegible] ಆಚಾರ್ಯರಲ್ಲಿ [illegible] ಇಂಥಹ ಆಚಾರ್ಯರನ್ನು ಯಾರ ಅವಮಾನಗೊಳಿಸುವರೋ ಅಂಥವರು ಆಚಾರ್ಯಾವಮಾನೇನ ಶ್ರೇಯುಃ [illegible] ಎಂಬ ಸಿದ್ಧಾಂತಶಿಖಾಮಣಿಯ ವಚನದಿಂದ ಶ್ರೇಯ [illegible] ವಂಚಿತರಾಗುವರು.

ವರ್ತಮಾನಸಂಗ್ರಹ.

ರಾಜಧಾನಿಯ ಪ್ರೌಢ [illegible] ದ ಮ|| [illegible] 1928 ನೆಯ ಇಸವಿಯ ಕ್ಯಾಲೆಂಡರನ್ನು ಈ ವಾರ [illegible] ಮೊದಲ [illegible]

ಬಿಜಾಪುರದ ಜೋರಾಪುರಪೇಟೆಯ [illegible] ಶ್ರೀ ಶಂಭುಲಿಂಗನವರಿಗೆ [illegible] ಒಳ್ಳೇ ವೈಭವದಿಂದ ನಡೆಯಿತೆಂಬ [illegible] ಕೇಳಿ ಸಂತೋಷಿಸುತ್ತೇವೆ.

ಗದಗಿನಲ್ಲಿ ದನಗಳ ಆಸ್ಪತ್ರೆಯನ್ನು ಕಟ್ಟಿಸುವದಕ್ಕೋಸ್ಕರ ಮ|| ರಾ|| ಲಕ್ಷ್ಮಣರೆಡ್ಡಿ ಎಂಬವರು ೪೦೦೦ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು. ಶ್ರೀಯುತ ರೆಡ್ಡಿಯವರಲ್ಲಿ [illegible] ಶ್ಲಾಘನೀಯವಾದದ್ದು.

ಶಾ|| ಕಂದಗಲ್ ಪರ್ವತಶಾಸ್ತ್ರಿಗಳವರು ಶಿವೈಕ್ಯರಾದರೆಂದು ಕೇಳಿ ವಿಷಾದಿಸುತ್ತೇವೆ. ಇವರು [illegible] ಮಾಡುವದರಲ್ಲಿ ಒಬ್ಬ ಧುರೀಣರಾಗಿಯೂ [illegible] ಪ್ರೋತ್ಸಾಹಕರಾಗಿಯೂ ಇದ್ದರು. ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಬಂಧುಗಳಿಗೆ ದುಃಖ [illegible] ಶ್ರೀ ಜಗದ್ಗುರು ಪಂಚಾಚಾರ್ಯರು ಮಾಡಲೆಂದು ಹಾರೈಸುತ್ತೇವೆ.

ಕಳೆದ ಬುಧವಾರ ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ಮೋಟಾರು [illegible] ಗಾಡಿಯು [illegible] ಹಾಯ್ದು ಹೋಗುತ್ತಿದ್ದ [illegible] ಗಾಡಿಯ [illegible] ಹಾಯ್ದು [illegible] ಕೂಡಲೇ [illegible] ಅಪಾಯವಾ [illegible] ಗಳನ್ನು ತಿಳಿಸುವುದಕ್ಕೆ [illegible]

ಸಂಸ್ಥಾನ [illegible] ದಿವಾನರಾದ ಸರ [illegible] ಅವರ [illegible] ದಿಂದ [illegible] ಎಂದು [illegible] ಪರಿಶೀಲಿಸುವ [illegible] ದಲ್ಲಿ [illegible] ಸತ್ಕಾರ [illegible] ಎಂದು [illegible]

ಸ್ವೀಕಾರ

[illegible] ದಲ್ಲಿ [illegible] ಗಳು [illegible]

[illegible] ರೂಪಾಯಿಗಳು ಚಿಕ್ಕಮಗಳೂರು ಮ|| [illegible] ರುದ್ರಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಕಡ್ಲಬಾಳು [illegible]ಪದ ವೇ|| ಮಲ್ಲಪ್ಪಯ್ಯನವರು ತಮ್ಮ ಮನೆಯಲ್ಲಿ [illegible]ಸಿದ ಮಾಹೇಶ್ವರದೀಕ್ಷಾ ಸಮಾರಂಭದಲ್ಲಿ [illegible] ಪೋಷಣಕ್ಕಾಗಿ ೭ ರೂಪಾಯಿಗಳನ್ನು ತೆಗೆ[illegible] ಕಳುಹಿಸಿರುತ್ತಾರೆ.

[illegible] ಹೊಸಕೋಟೆ ತಾಲೂಕು ಎತ್ತಿಗಡ ಗ್ರಾಮದ [illegible]ರುಮಠಾಧ್ಯಕ್ಷರಾದ ವೇ|| ದೊಡ್ಡ ರಾಮಾ[illegible] ಪ್ರಭಾಭ್ಯುದಯಕ್ಕಾಗಿ ತೆಗೆಯಿಸಿ[illegible] ೨ ರೂಪಾಯಿಗಳು ಮ|| ಎತ್ತಿಗಡ ಗ್ರಾಮ[illegible]ಪ್ಪನವರ ಮಗ ಮ|| ಸಂಗಪ್ಪನವರ ದ್ವಾರಾ [illegible]ತ್ತವೆ.

[illegible]ವಾಗಳಾದ ಮ|| ಹೇಗೂರು ಚಿಕ್ಕಚನ್ನ[illegible]ನವರ ಪುತ್ರರಾದ ಮ|| ತೋಟಪ್ಪನವರ ಪುತ್ರ[illegible] ಲಿಂಗಧಾರಣ ಸಮಯದಲ್ಲಿ [illegible] ಪೋಷಣಕ್ಕಾಗಿ [illegible] ೨ ರೂಪಾಯಿಗಳು ವೇ|| ರಾಣೆಬೆನ್ನೂರು [illegible] ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿ[illegible].

[illegible] ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು [illegible] ಸತ್ಯವ ಂಗಲವನ್ನೀಯಲೆಂದು [illegible].

ಸಂ —

VEERASHAIVA MAHASABHA

The Reception Committee, All India Veerasaiva Mahasabha, Bangalore, have issued the following Communique —

A public meeting of the Veerashaiva Mahajans of Bangalore City was held on the 6th June 1927 and they decided to organize the All India Veerashaiva Mahasabha at Bangalore in December 1927. This was duly announced in all the Kannada newspapers of Mysore and Bombay Presidency and in some English papers. Application was made to the Chirasthayi Fund for monetary help in accordance with their published notice. This help was granted in September 1927 under the rules governing that fund. A Reception Committee was formed at a public meeting held on the 22nd September 1927. On the [illegible]th October 1927 the Executive Committee invited for their own information the opinions of the Veerashaiva public as to the candidates eligible for the Presidentship of the Mahasabha in the following terms —

ಕರ್ನಾಟಕದ ಆಯಾಸ್ಥಳಗಳ ವೀರಶೈವ ಮಹಾಜನರು ತಮ್ಮ ತಮ್ಮ ಸ್ಥಳಗಳಲ್ಲಿ ಸಭೆಗೂಡಿ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಯಾರನ್ನು [illegible] ಬಗ್ಗೆ ತಮ್ಮ ಅಭಿಪ್ರಾಯವನ್ನು ಸೆಕ್ರೆಟರಿಯವರಿಗೆ [illegible] ತಾ|| [illegible] ರ ಒಳಗಾಗಿ ತಿಳಿಸಬೇಕೆಂ[illegible]

A few opinions were received. This was considered at a meeting of the Reception Committee held on the 15th November 1927. Rao Bahadur S T Kambli was unanimously chosen by the Reception Committee. This was immediately announced in the papers.

An agitation has been quite recently started in Dharwar objecting to the Presidentship of Rao Bahadur Kambli and recommending Rao [illegible] Halkatti instead. It is learnt Mr Halkatti has since issued a letter approving of Mr Kambli's election and appealing to the members of the community to unite and work in co-operation to make the Mahasabha a success. A later development of the agitation is that the Reception Committee did not obtain the sanction of the Dharwar Standing Committee to the holding of the Mahasabha at Bangalore and to the selection of the President and that therefore the convening of the Mahasabha was unconstitutional and irregular. In this connection the following particulars are submitted for the information of Veerashaiva public.

3 It is interesting to note the several shifting phases of this agitation. Not a whisper of dissent was heard until a letter was received from Mr C C Hulkoti of Dharwar on the 12th December 1927 questioning the propriety of electing Mr Kambli notwithstanding that Mr Halkatti had secured a larger number of votes. To this it may be answered that the Reception Committee did not invite the Veerashaiva public to record their votes for the election of a President. They wished to know the names of the candidates who were prominently in the eyes of the public. Certain names were received and they selected the gentleman whom they considered best fitted to preside over the Mahasabha at the present critical juncture. No reflection was intended against the other gentlemen who are doubtless fully competent for the position. It was the undoubted right and privilege of the Reception Committee to choose a Chairman as was done on previous similar occasions. The Reception Committee possessed an inherent right to exercise its unfettered discretion in this respect and does not admit that this right can be questioned by any body on any ground whatsoever. A certain number of protest Telegrams have been received after the receipt of Mr Hulkoti's letter and a much larger number in favour of Mr Kambli. Nothing was further from the intentions of the Reception Committee than to flout public opinion as alleged.

4 As regards the objection raised by the Standing Committee which reached Sir K P Puttanna Chetty only on the 19th December the Reception Committee would at once say that they are precluded from accepting the authority or the jurisdiction of the Standing Committee in this matter. They were acting under the auspices of the Donors Committee of the All India Veerashaiva Conference Endowment Fund an autonomous and independent institution registered under the Mysore Societies Regulation.

5 The Dharwar Committee appears to have been formed in the year 1908 at Bagalkot. It apparently ceased to function long ago as judged by its activities and its influence in the holding of annual conferences. It is well known that it has not helped to convoke even a single Mahasabha during the past 8 years. Nor did it exert its influence to avert the failure to hold the Conference at Hubli only 12 miles distant from Dharwar its Headquarters. It is rather too late in the day to bring in the Standing Committee to support a suggestion made in the first instance on quite a different ground. That this should be done just before the date of the opening of the Mahasabha seems wholly disheartening. If the Standing Committee really wanted to help the Mahasabha one would think that its duty lay in helping the convocation of the Mahasabha rather than in bringing forward groundless objections of a seemingly technical kind at the last hour to embarrass the people who have come forward to shoulder the responsibility of convening it. It should be noted that several previous Mahasabhas have been held without any reference to the Standing Committee and so a convention has been formed. It is a healthy convention. Let the Mahasabha flourish without the trammels of any such Committee.

6 The question of the Chirasthayi Fund has been incidentally raised to confuse the issue. The Fund is controlled by the Donors themselves. There is a Committee of Donors administering the Fund with rules and regulations duly published. The exact relations of this Fund to future Mahasabhas will have to be discussed and determined at the forthcoming Conference or separately as the case may be. The Reception Committee does not feel called upon to reply to the criticisms of the Standing Committee regarding this Fund.

7 The Chairman of the Standing Committee wrote to the Reception Committee so recently as the 5th December 1927 asking the latter to take over the surplus funds in the hands of the former and to issue some free tickets. He said nothing then about the objections since urged. If the objections were valid it is a question why this offer and this request were made. It seems plainly inconsistent with the claim now made. All this shows that the Chairman of the Standing Committee had no objection to the holding of the Mahasabha at Bangalore or to the election of Mr Kambli as its President but only wanted to transfer his funds to the Reception Committee.

8 It is confidently hoped that this simple straightforward and unvarnished explanation will be taken in the spirit in which it is offered. The Bangalore Veerashaivas wish to give a helping hand to resuscitate the Mahasabha and why they should be harassed in this manner by friends at Dharwar seems not quite easy to understand. Let the Veerashaiva public all over the country be the judges and cooperate with the Reception Committee in doing the right thing on the opening day of the Mahasabha.

BANGALORE
22ND DEC 1927

K P PUTTANNA CHETTY
CHAIRMAN RECEPTION COMT

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೀರಶೈವಮತವು.

ಚರಾಚರಾತ್ಮಕವಾದ ಪ್ರಪಂಚದಲ್ಲಿ ಮನುಷ್ಯಜನ್ಮವೇ ಶ್ರೇಷ್ಠವಾದದ್ದು. ದೇವರು ಸಕಲ ಪದಾರ್ಥಗಳನ್ನು ಮನುಷ್ಯನ ಪ್ರಯೋಜನಕ್ಕಾಗಿ ಸೃಷ್ಟಿಸಿದನೇ ಹೊರತು ಪದಾರ್ಥಗಳಿಗಾಗಿ ಮನುಷ್ಯನನ್ನು ಸೃಷ್ಟಿಸಲಿಲ್ಲವು. ಮನುಷ್ಯನನ್ನು ಹೊರತು ಯಾವ ಪದಾರ್ಥವನ್ನು ಸೃಷ್ಟಿಸಿದಾಗ್ಯೂ ಅದೆಲ್ಲಾ ನಿಷ್ಪ್ರಯೋಜನವಾಗುತ್ತಿತ್ತು. ಇಂತಹ ಪದಾರ್ಥಗಳನ್ನೆಲ್ಲಾ ಅನುಭವಿಸಿ ಸಂತೋಷಪಡುವ ಯೋಗ್ಯತೆಯು ಮನುಷ್ಯನಿಗಲ್ಲದೆ ಬೇರೆ ಯಾವ ಪ್ರಾಣಿಗೂ ಇಲ್ಲ. ಮನುಷ್ಯನಿಂದ ಪಡೆಯಲ್ಪಡುವ ವಸ್ತುಗಳಲ್ಲಿ ಒಳ್ಳೆಯದು ಕೆಟ್ಟದ್ದು ಎಂದು ಎರಡುವಿಧ. ಇವು ಎರಡನ್ನೂ ವಿಚಾರಮಾಡುವ ಯೋಗ್ಯತೆಯನ್ನು ಹಾಗೂ ಎರಡರ ಸ್ವರೂಪವನ್ನು ನಿಶ್ಚಯಿಸಿ ಕೆಟ್ಟದ್ದನ್ನು ನಿರಾಕರಿಸಿ, ಒಳ್ಳೆಯದನ್ನು ಪರಿಗ್ರಹಿಸುವ ಗುಣವನ್ನು ದೇವರು ಮನುಷ್ಯನಿಗೆ ಕರುಣಿಸಿದ್ದಾನೆಯಲ್ಲದೆ ಇನ್ಯಾವ ಪ್ರಾಣಿಗೂ ಕರುಣಿಸಿರುವದಿಲ್ಲ. ಈ ಗುಣಕ್ಕೆ ವಿವೇಕವೆನ್ನುವರು. ಇದೇ ಮನುಷ್ಯಜಾತಿಗೆ ಮುಖ್ಯಲಕ್ಷಣವು. ವಿವೇಕವಿಲ್ಲದ ಮನುಷ್ಯನಿಗೂ, ಪಶುಗಳಿಗೂ ಭೇದವಿಲ್ಲೆಂಬುವದು ಸ್ಪಷ್ಟವು. ಆದುದರಿಂದ ಮನುಷ್ಯನಾದವನು ಕೆಟ್ಟದ್ದನ್ನು ನಿರಾಕರಿಸಿ ಒಳ್ಳೆಯದನ್ನೇ ಪರಿಗ್ರಹಿಸಬೇಕು. ಮನುಷ್ಯನಿಗೆ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳುಂಟು. 'ಧರ್ಮ'ವೆಂದರೆ ಪುಣ್ಯ ಪಾಪ ವಿಧಿ. 'ಅರ್ಥ'ವೆಂದರೆ, ದ್ರವ್ಯಧಾನ್ಯ ವಸ್ತ್ರಾಭರಣ ಮುಂತಾದವುಗಳು. 'ಕಾಮ'ವೆಂದರೆ, ಇಚ್ಛೆಯು. 'ಮೋಕ್ಷ'ವೆಂದರೆ ಜನನಮರಣಗಳು ತಪ್ಪಿ ನಿತ್ಯಾನಂದಪ್ರಾಪ್ತಿ. ಅರ್ಥ ಕಾಮಂಗಳನ್ನು ಬಯಸುವವರೇ ಬಹಳ ಆದರೆ ಮೋಕ್ಷವನ್ನು ಬಯಸುವವರು ಬಹಳ ವಿರಳ. ಭಕ್ತಿ, ಜ್ಞಾನ, ವೈರಾಗ್ಯಗಳೇ ಮೋಕ್ಷಸಾಧನಗಳು. ಮನುಷ್ಯರಲ್ಲಿ ಆಸ್ತಿಕರು, ನಾಸ್ತಿಕರು ಎಂದು ಎರಡು ವಿಧ. ದೇವರೂ ಪರಲೋಕವೂ ಉಂಟೆಂದು ಹೇಳುವವರು ಆಸ್ತಿಕರು. ದೇವರಿಲ್ಲ ಪರಲೋಕವಿಲ್ಲವೆಂದು ತಿಳಿದು ಮನಬಂದಂತೆ ನಡೆಯುವವರು ನಾಸ್ತಿಕರು. ಆಸ್ತಿಕರಲ್ಲಿ ಆರ್ಯರೆಂತಲೂ, ಅನಾರ್ಯರೆಂತಲೂ ಎರಡು ವಿಧ. ಶ್ರುತಿ, ಸ್ಮೃತಿ, ಪುರಾಣಾಗಮೋಪನಿಷತ್ ಮೊದಲಾದವುಗಳನ್ನು ನಂಬುವವರು ಆರ್ಯರು. ಅವುಗಳನ್ನು ನಂಬದವರೇ ಅನಾರ್ಯರು. ಆರ್ಯರು ಭರತಖಂಡ ಮೊದಲಾದ ಎಲ್ಲಾ ಭೂಭಾಗಗಳಲ್ಲಿಯೂ ಇದ್ದಾರೆ. ಅವರು ದೇವರಿಗೆ ಬೇರೆ ಬೇರೆ ಹೆಸರಿಟ್ಟುಕೊಂಡು ಬೇರೆ ಬೇರೆ ರೀತಿಯಿಂದ ಆರಾಧಿಸುತ್ತಾರೆ. ಆರ್ಯರಲ್ಲಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸ, ಉತ್ತರಮೀಮಾಂಸೆ ಎಂಬ ಷಡ್ದರ್ಶನಗಳು, ಶೈವ, ವೈಷ್ಣವ, ಶಾಕ್ತ, ಗಾಣಪತ, ಸೌರ, ಕಾಪಾಲಿಕ ಎಂಬ ಷಣ್ಮತಗಳೂ ಪ್ರಸಿದ್ಧವಾಗಿವೆ. ಈ ಮತಗಳು ಉಪಾಸ್ಯದೇವತಾಭೇದಗಳಿಂದುಂಟಾದವು. ಸಾಂಖ್ಯ ಮೊದಲಾದ ದರ್ಶನಗಳಲ್ಲಿ ಭೇದವು ಕಾಣುವದಿಲ್ಲ. ಉತ್ತರಮೀಮಾಂಸೆಯಲ್ಲಿ ಮಾತ್ರ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ಭೇದಗಳುಂಟಾದವು. ಶೈವದಲ್ಲಿ, ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂದು ನಾಲ್ಕುವಿಧ. ಶಿವಲಿಂಗವಂ ಕಂಡಾಗ ಪ್ರದಕ್ಷಿಣೆ ನಮಸ್ಕಾರಗಳು ಮಾಡುವವರೇ ಸಾಮಾನ್ಯಶೈವರು. ಸೂರ್ಯ, ಗಣಪತಿ, ವಿಷ್ಣು, ಪಾರ್ವತಿ ಇವರೊಡನೆ ಶಿವನನ್ನು ಆರಾಧಿಸುವವರು ಮಿಶ್ರಶೈವರು. ಗುರುಮುಖದಿಂದ ಶಿವಲಿಂಗವಂ ಪಡೆದು ಕರಸ್ಥಲದಲ್ಲಾಗಲಿ, ಪಾಠಪೀಠದಲ್ಲಾಗಲಿ ಇಟ್ಟು ಪೂಜಿಸುತ್ತಾ ಲಿಂಗಲೋಪಾದಿಗಳಲ್ಲಿ ಪ್ರಾಯಶ್ಚಿತ್ತದಿಂದ ಶುದ್ಧರಾಗುವರೇ ಶುದ್ಧಶೈವರು. ಶಿವದೀಕ್ಷಾಪೂರ್ವಕವಾಗಿ ಗುರುವಿನಿಂದ ಇಷ್ಟಲಿಂಗವಂ ಪಡೆದು, ಶಿರಸ್ಸು, ಕಂಠ, ಎದೆ, ಹಸ್ತ, ಉದರ ಕಕ್ಷ ಎಂಬ ಆರು ಸ್ಥಾನಗಳೊಳಗೆ ಒಂದು ಸ್ಥಾನದಲ್ಲಿ ಎಡೆಬಿಡದೆ ಧರಿಸಿ ತ್ರಿಕಾಲದಲ್ಲಾಗಲಿ, ದ್ವಿಕಾಲದಲ್ಲಾಗಲಿ, ಭಕ್ತಿಯಿಂದ ಶಿವಾರ್ಚನೆಯಂ ಮಾಡುತ್ತ ಲಿಂಗಲೋಪವಾದಲ್ಲಿ ಪ್ರಾಣತ್ಯಾಗವ್ರತವುಳ್ಳವರೇ "ವೀರಶೈವರು" ವೀರಶೈವರೇ ಶಕ್ತಿವಿಶಿಷ್ಟಾದ್ವೈತಿಗಳು. ವೀರಶೈವರಿಗೆ ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಎಂಬ ಅಷ್ಟಾವರಣಗಳು, ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರ ಎಂಬ ಪಂಚಾಚಾರಗಳೂ ಮುಖ್ಯವಾಗಿರಬೇಕು. ವೀರಶೈವನಾದವನು ನಡೆಯುವಲ್ಲಿ, ನಿಂತಿರುವಲ್ಲಿ, ನಿದ್ರಿಸುವಲ್ಲಿ, ಎಚ್ಚರವಿರುವಲ್ಲಿ, ಶುಚಿಯಾಗಿರುವಲ್ಲಿ, ಅಶುಚಿಯಾಗಿರುವಲ್ಲಿ, ಇಷ್ಟಲಿಂಗವನ್ನು ಯಾವಾಗಲೂ ಧರಿಸಿರಬೇಕು. ವೀರಶೈವಮತಕ್ಕೆ ಶಿವಾಗಮಗಳೂ, ಉತ್ತರಮೀಮಾಂಸೆಯೂ ಮುಖ್ಯಾಧಾರಗಳು. ವೇದ ಪುರಾಣಾದಿಗಳು ಸಹಾಯಕಗಳಾಗಿವೆ. ದೇವತೆಗಳು, ಋಷಿಗಳಲ್ಲಿ ಅನೇಕರು ಲಿಂಗವನ್ನು ಧರಿಸಿರುವರೆಂದು ಪ್ರಮಾಣಗಳುಂಟು. ವೀರಶೈವರು ಅಪ್ರಾಕೃತರೆಂತಲೂ ಅಲಿಂಗಿಗಳು ಪ್ರಾಕೃತರೆಂತಲೂ ಹೇಳಲ್ಪಡುತ್ತಾರೆ. ವೀರಶೈವಮತಕ್ಕೆ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬುವರೇ ಪಂಚಾಚಾರ್ಯರು. ವಿಷ್ಣ್ವಾದಿ ದೇವತೆಗಳೊಳಗೆ ಶ್ರೇಷ್ಠನೆನಿಸಿದ ಶಿವನೊಬ್ಬನೇ ದೇವರು. ಶೈವರೊಳಗೆ ಸ್ಥಾವರಲಿಂಗಾರಾಧಕರಿಗಿಂತಲೂ, ಇಷ್ಟಲಿಂಗಾರಾಧಕರು ಶ್ರೇಷ್ಠರೆನಿಸಿಕೊಳ್ಳುವರು. ಲಿಂಗಧಾರಕರು ಶಿವನನ್ನು ಹೊರತು ಬೇರೆ ದೇವತೆಗಳನ್ನು ಎಂದಿಗೂ ಆರಾಧಿಸಬಾರದು. ಸ್ಥಾವರ ಲಿಂಗಾರಾಧಕರಿಗಿಂತಲೂ ಇಷ್ಟಲಿಂಗಾರಾಧಕರು ಶ್ರೇಷ್ಠರೆಂಬುವದಕ್ಕೆ ಕಾರಣವೇನೆಂದರೆ, ಸ್ಥಾವರ ಲಿಂಗಾರಾಧಕನು ಪೂಜಾಕಾಲದಲ್ಲಿ ಮಾತ್ರ ಸ್ನಾನವನ್ನು ಮಾಡಿ ಮಡಿಯನ್ನುಟ್ಟು ಶಿವಸನ್ನಿಧಿಯಲ್ಲಿರುವ ತನಕ ಭಯಭಕ್ತಿಯುಕ್ತನಾಗಿರುತ್ತಾನೆ. ಅವನಿಗೆ ಶಿವಸನ್ನಿಧಿಯು ತಪ್ಪಿದಾಗ ವಾಚಕ, ಕಾಯಕ, ಮಾನಸಿಕವೆಂಬ ಪಾಪಗಳನ್ನು ಮಾಡುವ ವಿಷಯದಲ್ಲಿ ಅವಕಾಶವುಂಟಾಗುವದು. ಲಿಂಗವನ್ನು ಧರಿಸುವವನು ನಾನು ಸದಾ ಶಿವಸನ್ನಿಧಿಯಲ್ಲಿಯೇ ಇದ್ದೇನೆಂದು ಭಾವಿಸಿ, ಯಾವ ಪಾಪವನ್ನು ಮಾಡದೆ ತ್ರಿಕಾಲದಲ್ಲಿಯೂ ಶಿವಸ್ಮರಣ, ಶಿವನಾಮಕೀರ್ತನ, ಶಿವಕಥಾಶ್ರವಣ, ಶಿವಸೇವನ, ಶಿವಾರ್ಚನ, ಶಿವವಂದನ, ಶಿವಕೈಂಕರ್ಯ, ಶಿವಸಖ್ಯ, ಆತ್ಮಾರ್ಪಣವೆಂಬ ನವವಿಧ ಭಕ್ತಿಯುಳ್ಳವನಾಗಿರಬೇಕೆಂಬುವದೇ ಲಿಂಗಧಾರಣೆಯ ಉದ್ದೇಶವು.

"ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋಹರಂ ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ||" ಎಂದು ಅಗಸ್ತ್ಯಮಹರ್ಷಿಗೆ ಶ್ರೀ ರೇಣುಕಾಚಾರ್ಯರು ಉಪದೇಶಿಸಿರುವರು. 'ವೀ' ಶಬ್ದಕ್ಕೆ ಶಿವಜೀವೈಕ್ಯಬೋಧಕವಾದ ವಿದ್ಯೆ. 'ರ' ಶಬ್ದಕ್ಕೆ ರಮಿಸುವವರು. ಯಾರು ಲಿಂಗಾಂಗಸಾಮರಸ್ಯರೂಪವಾದ ಶಿವಜೀವೈಕ್ಯವಂ ಪ್ರತಿಪಾದಿಸುವ ಶಿವಾಗಮ ವಿದ್ಯೆಯಲ್ಲಿ ಪರಾಯಣರಾಗಿರುವರೋ ಅವರೇ ವೀರಶೈವರೆನ್ನಲ್ಪಡುವರು. ವೀರಶೈವಮತಸ್ಥನು ಅಂಗದ ಮೇಲೆ ಲಿಂಗವನ್ನು ಯಾವಾಗಲೂ ಧರಿಸಿ ಆಯಾಯ ಕಾಲಗಳಲ್ಲಿ ಪೂಜಿಸಿ ಶಿವಪ್ರಸಾದವನ್ನು ಸ್ವೀಕರಿಸಬೇಕು.

"ಶಿವಾರ್ಚನಾತಿಕ್ರಮಣಂ ಮಹಾದೋಷಸ್ಯ ಕಾರಣಂ" ಎಂತಲೂ, "ಅನರ್ಚ್ಯ ಶಿವಂ ಶಂಭೋರ್ಭುಂಕ್ತೇ ಖಾದತಿ ಪಾತಿ ಯಃ ಶ್ವಮಾಂಸಮಸ್ಥಿ ಮೂತ್ರಂಚ ಭುಕ್ತ್ವಾ ಖಾದತಿ ಪಾತಿ ಸಃ" ಎಂತಲೂ ಪ್ರಮಾಣವಿರುವದರಿಂದ ಶಿವಪೂಜೆಯನ್ನು ಮಾಡದಿದ್ದರೆ ಮಹಾಪಾಪವು ಸಂಭವಿಸುವದು. ಶಿವಾರ್ಚನೆಯನ್ನು ಮಾಡದೆ ಉಂಡ ಅನ್ನವು ನಾಯಿಮಾಂಸಕ್ಕೂ, ತಿಂದ ಭಕ್ಷ್ಯವು ನಾಯಿ ಮೂಳೆಗೂ, ಕುಡಿದ ನೀರು ನಾಯಿ ಮೂತ್ರಕ್ಕೂ ಸಮಾನವೆಂಬುದೇ ಪ್ರಮಾಣವಚನಗಳ ಅರ್ಥವು.

ಸರ್ವಂ ಲಿಂಗಾಂಕಿತಂ ಶ್ರೇಷ್ಠಮನ್ಯಜ್ಜಂಡಾಲವದ್ಭವೇತ್ ಎಂಬ ಪ್ರಮಾಣವಚನದಂತೆ ವೀರಶೈವನಾದವನು ತಾನು ಲಿಂಗಧಾರಣವುಳ್ಳವನಾಗಿರಬೇಕು. ಪತ್ರಿ, ಪುಷ್ಪ, ಫಲ, ವಸ್ತ್ರ ಮುಂತಾದವುಗಳನ್ನು ಲಿಂಗಾರ್ಪಣವನ್ನಾಗಿ ಮಾಡಿಕೊಳ್ಳಬೇಕು. ವಾಸಿಸುವ ಮನೆಗೂ ಗೋವು ಮುಂತಾದವುಗಳಿಗೂ ಲಿಂಗಮುದ್ರೆಯನ್ನು ಹಾಕಬೇಕು. ಉಪಯೋಗಿಸುವ ಸಕಲ ಪದಾರ್ಥಗಳಿಗೂ ಲಿಂಗಮುದ್ರಾಂಕಿತವಾಗಿದ್ದರೆ ಶ್ರೇಷ್ಠ. ಹಾಗಿಲ್ಲದಿದ್ದರೆ ಚಾಂಡಾಲನಿಗೆ ಸಮಾನವೆಂದು ಭಾವಿಸಬೇಕು. ವೀರಶೈವಮತದಲ್ಲಿ ಹುಟ್ಟಿದಾಗ್ಯೂ ಅಂಗದಲ್ಲಿ ಲಿಂಗವನ್ನು ಧರಿಸದವರು—ಮದ್ಯಪಾನೀ ಮಾಂಸಭಕ್ಷೀ ಚಾನ್ಯದೇವಸ್ಯ ಪೂಜಕಃ । ಅಲಿಂಗ್ಯಪಿ ಜಡತ್ವಂಗೀ ಪಂಚೈತೇ ಭವಿನಃ ಸ್ಮೃತಾಃ || ಎಂಬ ಭವಿಗಳ ಸಮೂಹದಲ್ಲಿ ಸೇರುವರು.

ಅಲ್ಪಕ್ರಿಯಾ ಬಹುಫಲಂ ವೀರಶೈವಂ ಮಹೇಶ್ವರಿ ಇತರೇಷಾಂತು ಶೈವಾನಾಂ ಫಲಮಲ್ಪಂ ಬಹುಕ್ರಿಯಾ || ಎಂದರೆ ವೀರಶೈವನಿಗೆ ಕರ್ಮವು ಸ್ವಲ್ಪ, ಫಲವು ಬಹಳ. ಇತರ ಶೈವರಿಗೆ ಕರ್ಮವು ಬಹಳ. ಫಲವು ಸ್ವಲ್ಪ ಎಂದರ್ಥ. ವೀರಶೈವಮತದಲ್ಲಿ ಹುಟ್ಟಿ ನಿತ್ಯವೂ ಗುರುಸೇವೆ, ಸ್ನಾನ, ಲಿಂಗಪೂಜನ, ಜಂಗಮಾರಾಧನ, ಪಾದೋದಕ ಪ್ರಸಾದ ಸ್ವೀಕರಣ, ಭಸ್ಮರುದ್ರಾಕ್ಷಧಾರಣ, ಪಂಚಾಕ್ಷರೀ ಮಂತ್ರಜಪ ಇವುಗಳನ್ನು ತಪ್ಪದೆ ಆಚರಿಸತಕ್ಕದ್ದು. ಅಷ್ಟಾವರಣ ಪಂಚಾಚಾರಗಳಿಂದ ಕೂಡಿದ ವೀರಶೈವರು ಜ್ಞಾನಸಾಧಕಗಳಾದ ವೈದಿಕಕರ್ಮಗಳನ್ನು ಆಚರಿಸಬೇಕು. ಗುರುಸೇವಾಕ್ರಮ, ಲಿಂಗಧಾರಣವಿಧಿ, ಜಂಗಮಲಕ್ಷಣ, ಜಂಗಮಾರಾಧನಕ್ರಮ, ಪಾದೋದಕ ಪ್ರಸಾದ ಸ್ವೀಕಾರ ವಿಧಾನ, ಭಸ್ಮಕಲ್ಪ, ಭಸ್ಮಧಾರಣಕ್ರಮ, ರುದ್ರಾಕ್ಷಲಕ್ಷಣ ರುದ್ರಾಕ್ಷಧಾರಣಕ್ರಮ, ಪಂಚಾಕ್ಷರೀ ನ್ಯಾಸ, ಪಂಚಾಕ್ಷರೀ ಜಪಕ್ರಮ, ನಿತ್ಯ ನೈಮಿತ್ತಿಕ ಕರ್ಮ, ಗರ್ಭಾದಾನಾದಿ ಸಂಸ್ಕಾರ ವಿಧಾನ ಮೊದಲಾದವುಗಳು ಶ್ರುತಿ, ಸ್ಮೃತಿ ಪುರಾಣಾಗಮೋಪನಿಷತ್ತುಗಳಲ್ಲಿ ವಿಶದೀಕರಿಸಲ್ಪಟ್ಟಿರುವದರಿಂದ ವೀರಶೈವ ಮತವು ಶಕ್ತಿವಿಶಿಷ್ಟಾದ್ವೈತವೆಂದು ನೀಲಕಂಠಭಾಷ್ಯದಲ್ಲಿ ಸಿದ್ಧಾಂತಮಾಡಿರುವದರಿಂದಲೂ ವೀರಶೈವಮತಾಚಾರ್ಯ ಪರಂಪರೆಯವರಾದ ನಾವು ವೇದಾಗಮಾದಿ ಪ್ರಮಾಣಗಳನ್ನು ಚನ್ನಾಗಿ ಅಭ್ಯಾಸಮಾಡಿ ಅವುಗಳ ಅರ್ಥವನ್ನು ಗುರುಮುಖದಿಂದ ತಿಳಿದು ಆಚರಿಸುತ್ತಾ ಶಿಷ್ಯರಿಗೆ ಬೋಧಿಸುತ್ತಾ ಬಂದದ್ದಾದರೆ ನಾವು ಶಿವಮತಕ್ಕೆ ಗೌರವವನ್ನು ತಂದು ಶಿವಕಾರುಣ್ಯಕ್ಕೆ ಪಾತ್ರರಾಗುವೆವಲ್ಲದೆ, ಶಿಷ್ಯರನ್ನು ಸಂಸಾರಸಾಗರದಿಂದ ದಾಂಟಿಸಲು ಸಮರ್ಥರಾಗಬಲ್ಲೆವು. ಈ ಕಾಲದಲ್ಲಿ ವೀರಶೈವಮತದ ಆಚಾರ್ಯಪರಂಪರೆಯವರಾದ ನಾವು ಅಜ್ಞಾನದಿಂದಲೂ, ಆಲಸತೆಯಿಂದಲೂ ಶಾಸ್ತ್ರಾಭ್ಯಾಸವಂ ಮಾಡದೆ ವೀರಶೈವಸಿದ್ಧಾಂತಸ್ವರೂಪವಂ ತಿಳಿಯದೆ, ಉದರಪೋಷಣೆಯಲ್ಲಿ ನಿರತರಾಗಿರುವದರಿಂದ ಶಿಷ್ಯಮಂಡಲಿಯವರು ಸ್ವೇಚ್ಛಾಚಾರ ಪ್ರವರ್ತನೆಯಂ ಮಾಡುವದಕ್ಕೆ ಆಸ್ಪದವಾಯಿತು. ವೀರಶೈವಮತಕ್ಕೆ ಬಸವಪುರಾಣವೇ ಸಿದ್ಧಾಂತವಾಗಿ ಪರಮತಸ್ಥರು ಹಾಸ್ಯಮಾಡುವಂತಾಯಿತು. ಇನ್ನಾದರೂ ಗುರುಸ್ಥಲ ಮಾಹೇಶ್ವರರಾದ ನಾವು ಎಚ್ಚತ್ತು ಶಾಸ್ತ್ರಸಿದ್ಧಾಂತಗಳಲ್ಲಿ ಪಾಂಡಿತ್ಯವಂ ಪಡೆಯುವದಕ್ಕೆ ತಕ್ಕ ಪ್ರಯತ್ನವಂ ಮಾಡದಿದ್ದರೆ ಅತ್ಯಲ್ಪಕಾಲದಲ್ಲಿಯೇ ಈ ವೀರಶೈವಮತವು ಎಲ್ಲಾ ಮತಗಳಿಗಿಂತಲೂ ಕೀಳಾಗಿ ಹೋಗುವದರಲ್ಲಿ ಏನೂ ಸಂಶಯವಿಲ್ಲೆಂದು ತಿಳಿಯತಕ್ಕದ್ದು. ಆದಕಾರಣ ಯಾವತ್ತೂ ವೀರಶೈವ ಗುರುವಂಶೀಯರಿಗೆ ಎಚ್ಚರಿಕೆಯನ್ನು ದಯಪಾಲಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಕುರಿತು ಅನನ್ಯಭಾವದಿಂದ ಪ್ರಾರ್ಥಿಸಿ ನನ್ನ ಲೇಖಕ್ಕೆ ವಿರಾಮವನ್ನು ಕೊಡುವೆನು.

ಶ್ರೀ|| ಷ|| ಬ್ರ|| ಯಲಬುರ್ಗಿ ದರಮುರಡಿ
ಹಿರೇಮಠದ ಪಟ್ಟದ ವೃಷಭಲಿಂಗಸ್ವಾಮಿಗಳು,
ಶ್ರೀಮದ್ವೀರಶೈವ ಸಂಸ್ಕೃತಪಾಠಶಾಲಾ,
ಹೊಸಪೇಟೆ.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಶ್ರೀ ಕೇದಾರೇಶ್ವರನ ವಾರ್ಷಿಕೋತ್ಸವವು.

ವಾಚಕರೇ ಶ್ರೀ ವೇದವ್ಯಾಸಪ್ರಣೀತ ಸ್ಕಾಂದಪುರಾಣಾಂತರ್ಗತ ಕೇದಾರಖಂಡ ಪುರಾಣದಲ್ಲಿ ಶ್ರೀ ಕೇದಾರೇಶ್ವರ ಮಧ್ಯಮೇಶ್ವರ, ತುಂಗನಾಥ, ರುದ್ರನಾಥ ಕಲ್ಪೇಶ್ವರರೆಂಬ ಪಂಚ ಕೇದಾರೇಶ್ವರರ ಪೂಜೆಯು ಆರುತಿಂಗಳು ಮಾನವರಿಂದಲೂ, ಆರುತಿಂಗಳು ದೇವತೆಗಳಿಂದಲೂ ನೆರವೇರಿಸಲ್ಪಡುವದೆಂದು ಸುಪ್ರಸಿದ್ಧವಾಗಿದೆಯಷ್ಟೇ? ಆದರಂತೆ ಈ ಸಂವತ್ಸರದ ಕಾರ್ತೀಕ ಶುಕ್ಲ ಪ್ರತಿಪದದಲ್ಲಿ ಮಾನವಾರ್ಚ

ಮಹಾಪೂಜೆಯು ಸಮಾಪ್ತಿಗೊಳಿಸಿ ಮಂಗಲವು ಕೊಂಡು. ಆಯಾಯ ಕೇದಾರೇಶ್ವರ ಪಂಚಮೂ ಗಳನ್ನು ಆಯಾಯ ಮಠಕ್ಕೆ ಸಾಗಿಸಿದರು. ಅದರಲ್ಲಿ ಕೇದಾರೇಶ್ವರ ಮಧ್ಯಮೇಶ್ವರ ಮೂರ್ತಿಗಳನ್ನು ಕಾಸಸ್ಥಾನ (ಉಖಾಮಠ)ಕ್ಕೆ ಸಾಗಿಸಿಕೊಂಡು ದರು. ಅಗ್ಗೆ ಶ್ರೀ ಕೇದಾರನಾಥ ಸನಾತನಧರ್ಮ ಶಾ ವಿದ್ಯಾಲಯದ ಸಂಸ್ಕೃತ ವಿದ್ಯಾರ್ಥಿಗಳೂ ಧ್ಯಾಪಕರೂ ಶ್ರೀ ಜಗದ್ಗುರು ನೀಲಕಂಠಲಿಂಗ ಹೈಸ್ಕೂಲಿನ ವಿದ್ಯಾರ್ಥಿಗಳೂ ಸ್ವಯಂಸೇವಕ ಪವನವು ಭಜನಾಸಂಘದವರೂ ಇಂಗ್ಲೀಷ ಲಿನ ವಿದ್ಯಾರ್ಥಿಗಳೂ ಓಖೀಮಠದ ಸಮೀಪದಲ್ಲಿ) ಆಯಾಯ ಮೂರ್ತಿಗಳು ಎದುರುಗೊಂಡು ದ ರಥದಲ್ಲಿ ಮೂರ್ತಿಗಳು ಮಂಡಿಸಿ ಜಯಘೋ ಷ ಮಾಡಿದರು. ಬಳಿಕ ಮಹೋತ್ಸವವು ವೈದಿಕರ ವೇದಘೋಷದಿಂದಲೂ ವಿದ್ಯಾರ್ಥಿಗಳ ಜಯಘೋಷ ದಿಂದಲೂ ಸಕಲತರದ ವಿಜಯವಾದ್ಯಗಳಿಂದಲೂ ವೈಭ ವದ ಸಾಗಿ ಸಂಸ್ಥಾನಮಠಕ್ಕೆ ಬಿಜಯಂಗೈಸಿತು. ಬಳಿಕ ಜಯಘೋಷಪೂರ್ವಕ ರಥದಿಂದ ಶ್ರೀ ಮೂರ್ತಿಗಳು ಅಂದೋಲಿಕೆಯಲ್ಲಿ ಸಾಗಿಸಿಕೊಂಡು ದಲ್ಲಿದ್ದ ರಜತಸಿಂಹಾಸನದಮೇಲೆ ಮೂರ್ತಿಗೊಳಿ ಸಿದರು. ಅನಂತರ ಪಂಡಿತರ ಸಭೆಯು ನಡೆದು ಧಾರ್ಮಿ ಕ ವ್ಯಾಖ್ಯಾನಗಳು ಜರುಗಿದವು. ಆ ಮೇಲೆ ಮಹಾ ಸಂಸ್ಥಾನದ ಮ್ಯಾನೇಜರರಾದ ರಿಟಾಯರ್ಡ್ ಡೆಪ್ಯುಟಿ ಕಲೆಕ್ಟರ್ ಪಾಟೀಲ ವಿಶ್ವೇಶ್ವರಪ್ರಸಾದರವರು ಕೆಳಗ ಿನ ಪ್ರಕಾರ ರಿಪೋರ್ಟನ್ನು ಓದಿ ಹೇಳಿದರು.

ಈ ವರ್ಷ ಯಾತ್ರಾಕಾಲದಲ್ಲಿ ಸಂಸ್ಥಾನವತಿಯಿಂ ದ ಮೂರು ಆಯುರ್ವೇದ ಔಷಧಶಾಲೆಗಳಿಂದ ಹತ್ತು ಸಾವಿರ ಯಾತ್ರಿಕರು ಔಷಧವನ್ನು ಸ್ವೀಕರಿಸಿ ಗುಣಹೊಂದಿದರು ಸಂಸ್ಥಾನದ ಅನ್ನಛತ್ರಗಳಲ್ಲಿ ಏಳು ಸಾವಿರ ಜನರು ಸಂತೃಪ್ತರಾಗಿರುವರು. ಇತ್ಯಾದಿ ವಾರ್ಷಿಕರಿಪೋರ್ಟ ಓದಿದನಂತರ ಸರ್ವಸಭಿಕರು ಶ್ರೀ ಜಗದ್ಗುರುಗಳವರ ನೈಸರ್ಗಿಕವಾದ ಧಾರ್ಮಿಕ ಕೃತಿ ಯನ್ನು ಕೊಂಡಾಡಿ ತಮಗುಂಟಾದ ಆನಂದಕ್ಕಾಗಿ ಶ್ರೀ ಜಗದಾಚಾರ್ಯ ಭಗವತ್ಪಾದರ ಜಯಘೋಷ ಪೂರ್ವಕ ಅಭಿನಂದನಮಾಡಿದರು. ಬಳಿಕ ಸಂಸ್ಥಾನದ ಮ್ಯಾನೇಜರರು ವೈದಿಕಮಂಡಲಿಗೆ ತಕ್ಕ ಮರ್ಯಾದೆ ಯು ಮಾಡಿಸಲಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ದಲೇ ಸರ್ವ ಪಂಡಿತರಿಗೂ ಇತರ ಮಹಾಜನರಿ ಗೂ ಅನಾಥರಿಗೂ ಮಹಾಸಂಸ್ಥಾನದ ವತಿಯಿಂದ ಅನ್ನಸಂತರ್ಪಣೆಯು ನಡೆಯಿಸಲ್ಪಟ್ಟಿತೆಂದು ಆನಂದಪೂ ರ್ವಕ ತಿಳಿಸುವ,

ತಮ್ಮ
ಶ್ರೀ ಜಗದ್ಗುರು ಸಂಸ್ಥಾನ ಉಖಾಮಠ
ಏಜಂಟ್, ಅಂಬಾದತ್ತ ಶರ್ಮಾ.

ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭೆ, ಬೆಂಗಳೂರು.

ಲಾಲ್‌ಬಾಗಿನಲ್ಲಿ ಈ ತಿಂಗಳು 28, 29, ಮತ್ತು 30 ನೇ ತಾರೀಖುಗಳಲ್ಲಿ ನಡೆಯುವ ಮೇಲ್ಕಂಡ ಮಹಾಸಭೆಯ ಪ್ರಾರಂಭೋತ್ಸವಕ್ಕೂ ಮತ್ತು ಮುಂದಿನ ದಿನಗಳಲ್ಲಿ ನಡೆಯಬೇಕಾದ ಕಾರ್ಯಕಲಾಪಗಳಿಗೂ ಬೇಕಾದ ಕೆಲಸಗಳು ಬಹಳ ಮೆಹನತ್ತಿನಿಂದಲೂ ಉತ್ಸಾಹದಿಂದಲೂ ನಡೆಯುತ್ತಿರುವವು.

ಸಭೆಗೆ ದಯಮಾಡಿಸತಕ್ಕ ಸದಸ್ಯರ ಮತ್ತು ಪ್ರತಿನಿಧಿಗಳ ವಸತಿಗೂ ಭೋಜನಕ್ಕೂ ತಕ್ಕ ಏರ್ಪಾಡುಗಳು ಬಹಳ ವ್ಯವಸ್ಥೆಯಿಂದ ತೃಪ್ತಿಕರವಾಗಿ ಬೆಂಗಳೂರು ಕೋಟೆಯಲ್ಲಿ ನಡೆಯುತ್ತಿರುವವು. ಈಗಾಗಲೇ ನಾನಾ ಪ್ರಾಂತ್ಯಗಳಿಂದ ವೀರಶೈವ ಮಹಾಶಯರು ಸ್ವಾಗತಸಂಘದ ಸದಸ್ಯರಾಗಿಯೂ ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ಇರಲು ತಮ್ಮ ಅಭಿಪ್ರಾಯವನ್ನು ಸೂಚಿಸಿ, ಹಣಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಇದುವರೆಗೂ ಈ ರೀತಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿ ಪ್ರಯೋಜನ ಹೊಂದಲು ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡಿಸಿಕೊಳ್ಳದೆ ಇರತಕ್ಕ ವೀರಶೈವಮಹನೀಯರು ಏಳುವರ್ಷಗಳಿಂದ ನಡೆಯದೆ ನಿಂತಿದ್ದ ಮಹಾಸಭೆಯು ಈಗ ನಡೆಯುವದರಿಂದ ದಯವಿಟ್ಟು ಪ್ರತಿನಿಧಿಗಳಾಗಿಯಾಗಲೀ, ಅಥವಾ ಪ್ರೇಕ್ಷಕರಾಗಿಯಾಗಲೀ ಸಭೆಗೆ ದಯಮಾಡಿಸಿ, ಸಭೆಯಿಂದಾಗುವ ಪ್ರಯೋಜನಗಳನ್ನು ಹೊಂದಿ, ಸಭೆಯು ಸುಗಳಿತವಾಗಿ ನಡೆಯಲು ಸಹಾಯಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ. ಪ್ರೇಕ್ಷಕರ ಅನುಕೂಲಕ್ಕಾಗಿ ಸಭಾ ಆವರಣದಲ್ಲಿ ಎಲ್ಲಾ ವಿಧವಾದ ಅನುಕೂಲಗಳು ಏರ್ಪಡಿಸಲ್ಪಟ್ಟಿರುತ್ತವೆ

ಬೆಂಗಳೂರು—— ಇಲ್ಲಿಯ ಸಮಶೀತೋಷ್ಣವಾದ ಹವೆಯುಗುಣಕ್ಕೂ ಸಮೀಪದಲ್ಲಿರತಕ್ಕ ಪ್ರೇಕ್ಷಣೀಯ ಸ್ಥಳಗಳಿಗೂ, ಟಾಟಾರಿಸರ್ಚ ಇನ್ಸ್ಟಿಟ್ಯೂಟ್, ಶಿವನಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆ, ಕೃಷ್ಣರಾಜಸಾಗರ, ನಂದೀಬೆಟ್ಟ, ಮತ್ತು ಕೋಲಾರದ ಚಿನ್ನದ ಗಣಿ ಪ್ರೇಕ್ಷಣೀಯ ಸ್ಥಳಗಳಲ್ಲಿ ಮುಖ್ಯವಾದವುಗಳಾಗಿ ಪ್ರತಿಯೊಬ್ಬ ಪ್ರೇಕ್ಷಕನನ್ನೂ ಆಕರ್ಷಿಸತಕ್ಕವುಗಳಾಗಿವೆ

M. Nagappa,
Secretary.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಶೈವರಲ್ಲಿ ವಿನಂತಿ.

ಮಹಾಶಯರೇ, ನಮ್ಮ ವೀರಶೈವಮತವು ಈಗಿರುವದಕ್ಕಿಂತಲೂ ಇನ್ನೂ ಹೆಚ್ಚಾಗಿ ಮುಂದುವರಿಸಬೇಕೆಂಬ ಅಭಿಪ್ರಾಯದಿಂದ ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳವರು ಪಂಚಾಚಾರ್ಯಪ್ರಭಾ ಎಂಬೀ ಪತ್ರಿಕೆಯನ್ನು ಹೊರಡಿಸಿರುವದು ಸಮಸ್ತ ವೀರಶೈವರಿಗೂ ತಿಳಿದವಿಷಯವಾಗಿರುತ್ತದೆ. ಈ ಪ್ರಭಾಪತ್ರಿಕೆಯಲ್ಲಿ ಇರುವ ವಿಷಯಗಳನ್ನು ವೀರಶೈವರಾದವರು ಚನ್ನಾಗಿ ತಿಳಿದುಕೊಂಡು ಅದರಂತೆ ನಡೆದಲ್ಲಿ ಮೋಕ್ಷವು ಹಿಂಬಾಲಿಸಿಯೇ ಇರುವವರಲ್ಲಿ ಯಾವ ಸಂದೇಹವೂ ಇರುವದಿಲ್ಲ. ನಮ್ಮ ನಗರಿಗೋಸ್ಕರವಾಗಿ ಬಹಳ ಶ್ರಮಪಟ್ಟು ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಅನವಟ್ಟಿ ಕೋಡಿಕೊಪ್ಪ, ಜಡೆಹೋಬಳಿ, ಇನ್ನೂ ಮೊದಲಾದ ಪ್ರಾಂತಗಳಲ್ಲಿ ಸಂಚಾರಮಾಡಿ, ಆಯಾಯ ಸ್ಥಳಗಳಲ್ಲಿ ಸಭೆಸೇರಿಸಿ ಆಚಾರ, ವಿದ್ಯಾ ಮತ್ತು ಐಕ್ಯ ಇವೇಮೊದಲಾದ ಅನೇಕ ವಿಷಯಗಳನ್ನು ಲೌಕಿಕೋದಾಹರಣೆಗಳಿಂದ ಸರ್ವರಿಗೂ ಅಪ್ಪಣೆಕೊಡಿಸಿದ ವಿಷಯವನ್ನು ನೋಡಿದರೆ ಸರ್ವವೀರಶೈವರು ಶ್ರೀ ಪಂಚಾಚಾರ್ಯರ ಶಿಷ್ಯಕೋಟಿಯಲ್ಲಿ ಸೇರಲು, ಯಾವ ಅಭ್ಯಂತರವೂ ಇರುವದಿಲ್ಲ. ಇಂಥಾ ಜಗದ್ಗುರುಗಳನ್ನು ಅನೇಕರು ದೂಷಿಸಿ ಗುರುದ್ರೋಹಕ್ಕೆ ಪಾತ್ರರಾಗುತ್ತಾರೆಯೇ ಹೊರತು ಮತ್ತಾವ ಪ್ರಯೋಜನವೂ ಆಗಲಾರದು. ತಾ|| 16ನೇ ಪ್ರಭಾಪತ್ರಿಕೆಯ ಎರಡನೇ ಪುಟದಲ್ಲಿ ವಾಲ್ಮೀಕಿಜಾತಿಯವರಾದ ಮ|| ರಾ|| ಸತ್ಯಪ್ಪ ಹೊಸೂರು, ಗುಮ್ಮಗೋಳ ಗದಗ ತಾಲೂಕ ಇವರು ಪಂಚಾಚಾರ್ಯಪ್ರಭೆಗೆ ಕಾಣಿಕಾ ಸಮರ್ಪಣ ಮಾಡಿದ ವಿಷಯವನ್ನು ನೋಡಿದರೆ, ತಿಳಿಯುತ್ತದೆ ಇಂಥವರೆಲ್ಲಾ ಶ್ರೀ ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿ ಶಿಷ್ಯರಾದಮೇಲೆ ವೀರಶೈವರೆಂದು ಅನಿಸಿಕೊಂಡು ಗುರು ಲಿಂಗ, ಜಂಗಮ ಪ್ರಸಾದ, ಪಾದೋದಕ, ಭಸ್ಮ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ಗುರ್ತುಗಳನ್ನು ಪಡೆಕೊಂಡ ನಾವುಗಳು ಪಂಚಾಚಾರ್ಯರಿಗೆ ಶಿಷ್ಯರಾಗಿ ಆ ಜಗದ್ಗುರುಗಳನ್ನು ನಿಂದೆ ಮಾಡುವದು ಯಾವ ಧರ್ಮಕ್ಕೆ ಸೇರಿದೆಯೋ ತಿಳಿಯದು! ಹೀಗೆ ದೂಷಿಸುವವರು ಪ್ರಪಂಚದಲ್ಲಿ ಮನುಷ್ಯಜನ್ಮವನ್ನು ಎಂದೂ ಹೊಂದಲಾರರು ಮತ್ತು ಇಹಪರಗಳಲ್ಲಿಯೂ ಸೌಖ್ಯವನ್ನು ಹೊಂದಲಾರರು! ಈ ಪ್ರಭಾದೇವಿಯು ಉದ್ಭವಿಸಿದ ಮೇಲೆ ನಮ್ಮ ಮತದನಿಜಾರವು ಗೊತ್ತಿಲ್ಲದ ಎಷ್ಟೋಜನಗಳಿಗೆ ಎಷ್ಟೋ ವಿಷಯಗಳನ್ನು ಬೋಧಿಸಿದ್ದಲ್ಲದೆ ಇತರಮತಗಳ ವಿಷಯಗಳನ್ನು ಕೂಡ ಹೋಲಿಕೆಯರೂಪದಿಂದ ತಿಳುಹಿಸಿರುವ ವಿಷಯವು ನಮ್ಮಗಳಿಗೆ ತಿಳಿದೇ ಇರುವದು ಆದ್ದರಿಂದ ಪ್ರತಿಯೊಬ್ಬವೀರಶೈವನೂ ಕೂಡ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿ ಮುಕ್ತಿಸಾಧಕರಾಗುತ್ತೀರೆಂದು ನಂಬಿರುತ್ತೇನೆ

ಅಲ್ಲದೆ ಈ ಪತ್ರಿಕೆಯಲ್ಲಿ ನಮ್ಮ ಮತದ ಎಷ್ಟೋ ವಿಷಯಗಳಿರುವದರಿಂದ ಪ್ರತಿಯೊಬ್ಬ ಚಂದಾದಾರನೂ ಕೂಡ ತಮ್ಮ ವಂಶಪರಂಪರೆಯಾಗಿ ತರಿಸಬೇಕಾಗಿಯೂ, ತಮ್ಮ ಕೈಲಾದಮಟ್ಟಿಗೂ ಪ್ರಭೆಗೆ ಸಹಾಯಮಾಡಬೇಕಾಗಿಯೂ, ಸರ್ವ ವೀರಶೈವರಲ್ಲಿ ವಿನಯದಿಂದ ವಿನಂತಿಮಾಡಿಕೊಳ್ಳುತ್ತೇನೆ

ವೈ. ಎನ್ ರುದ್ರಪ್ಪಶೆಟ್ಟಿ, ಮಂಡಿ ಮತ್ತು
ಕ್ಲಾತ್ ಮರ್ಚಂಟ್, ಯಲಿಯೂರು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ದುಃಖವಾರ್ತೆ.

“ಜಾತಸ್ಯಮರಣಂಧ್ರುವಂ” ಎಂಬ ಆರ್ಯೋಕ್ತಿಯಂತೆ ಈ ಪ್ರಪಂಚದಲ್ಲಿರುವ, ಸಮಸ್ತ ಮೃಗಪಕ್ಷಿಕ್ರಿಮಿಕೀಟಾದಿ ಮನುಷ್ಯಪ್ರಾಣಿಗಳು ಹುಟ್ಟಿದಮೇಲೆ ಸಾಯುವುದೇ ನಿಶ್ಚಯವೆಂದು ಪ್ರತಿಯೊಬ್ಬರೂ ತಿಳಿದಿದ್ದರೂ ನಾನು ಯಾರು? ನನ್ನ ಜೀವಿತದ ಇಂಗಿತವೇನು? ಈ ಭಾರತಮಾತೆಯ ಪುಣ್ಯಗರ್ಭಾಂಬುಧಿಯಲ್ಲುದಿಸಿದ ನನ್ನ ಮುಖ್ಯಕರ್ತವ್ಯಗಳೇನು? ಎಂಬೀ ಮುಕ್ತಿಸಾಧಕಗಳಾದ ಯಾವ ವಿಚಾರಗಳನ್ನೂ ಮಾಡದೆ ಲೌಕಿಕದ ದುರ್ವ್ಯಾಪಾರಾದಿಗಳಲ್ಲಿಯೇ ಮುಳುಗಿ ತಮ್ಮ ಜೀವಿತಕಾಲವನ್ನೆಲ್ಲಾ ವ್ಯರ್ಥಮಾಡಿ ಇಹಪರಗಳೆರಡರಲ್ಲೂ ಸುಖವನ್ನು ಕನಸಿನಸಮಾನ ಮಾಡಿಕೊಳ್ಳುತ್ತಿರುವುದು ಖೇದದ ಸಂಗತಿಯಾಗಿದೆ. ಇಂಥಾ ಅಶಾಶ್ವತವೂ ಕ್ಷಣಿಕವೂ ಆದ ವಿಷಯಲಂಪಟಗಳಿಗೆ ಈಡಾಗಬಾರದೆಂದೇ ಪ್ರಾಚೀನ ಗ್ರಂಥಕಾರರು “ಅನಿತ್ಯಾನಿ ಶರೀರಾಣಿ, ವಿಭವೋ ನೈವ ಶಾಶ್ವತಃ| ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ” ಮೃತ್ಯುವು ಸಮೀಪಿಸುವುದರಿಂದ ಧರ್ಮಸಂಪಾದನೆಯ ಮುಖ್ಯ ಕರ್ತವ್ಯವನ್ನು ಕೈಕೊಳ್ಳಿರಿ ಎಂದು ಸಾರಿಸಾರಿ ಹೇಳಿದ್ದರೂ ಲಕ್ಷ್ಯ ನೆಡೆ ಮಾಯಾಜಾಲದಲ್ಲಿ ಸಿಲುಕಿಕೊಳ್ಳುವುದೆಂದರೆ ಮಾನವಕೋಟಿಯ ದುರ್ದೈವವೇ ಸರಿ! ಆದಾಗ್ಯೂ ಅಕಸ್ಮಾತ್ ಅಲ್ಲಲ್ಲಿ ಪರೋಪಕಾರ ಧುರೀಣರಾದ ಪೂಜ್ಯವಿಭೂತಿಗಳು ಜನ್ಮವೆತ್ತಿ ತಮ್ಮ ಅಸಾಧಾರಣ ಕರ್ತೃತ್ವದಿಂದ ಹಿಂದಿನ ಸಚ್ಚರಿತ್ರ ಸ್ಮರಣವನ್ನು ಮಾಡಿಕೊಡುತ್ತಲಿರುವುದು ಆನಂದದ ಸಂಗತಿಯೇ ಸರಿ! ಇಂಥಾ ಮಹನೀಯರೆಂಬೀಮಾಲಿಕೆಯ ಮಣಿಗಳಲ್ಲೊಬ್ಬರಾದ ಬಳ್ಳಾರಿಜಿಲ್ಲಾ ಹುವ್ವಿನಹಡಗಲಿ ತಾಲೂಕು ಉತ್ತಂಗಿ ಗ್ರಾಮದ ಶಾನುಭೋಗ ಮಲ್ಲಪ್ಪನವರು ವೀರಶೈವರಿದ್ದು ಧರ್ಮಕಾರ್ಯ ಸಮಾಜಕಾರ್ಯಧುರಂಧರರೂ ಗುರುಲಿಂಗ ಜಂಗಮ ಸೇವಾತತ್ಪರರೂ, ಪರೋಪಕಾರ ಧುರೀಣರೂ, ಅನಾಥರಿಗೆ ಅನ್ನದಾತೃಗಳೂ ಆಗಿದ್ದರು. ಪ್ರವಾಸಿಕರಿಗೆ ಒಂದು ಭಾವಿಯನ್ನು ತೆಗಿಯಿಸಿ ಮಹೋಪಕಾರ ಮಾಡಿದರು. ಇಂಥಾ ಅನೇಕ ಧರ್ಮಕಾರ್ಯಗಳನ್ನು ಮಾಡಿದ ಸತ್ಪುರುಷರು ತಮ್ಮ ೬೦ನೆಯ ವಯಸ್ಸಿನಲ್ಲಿ ಗುರುಧ್ಯಾನತತ್ಪರರಾಗಿ ತಮ್ಮ ಭೌತಿಕ ಶರೀರವನ್ನು ತ್ಯಜಿಸಿದುದಕ್ಕಾಗಿ ಸಮಾಜಕ್ಕೆ ಮಹದನರ್ಥವಾದಂತಾಯಿತು ಆದಾಗ್ಯೂ ಸತ್ಪುರುಷರ ಕಾಯವು ಅಳಿದರೂ ಕೀರ್ತಿಯು ಅಳಿಯಲಾರದು. ಶ್ರೀ ಜಗದ್ಗುರು ದಾರುಕೇಶರು ಮೃತರ ಆತ್ಮಕ್ಕೆ ಮೋಕ್ಷಪದವನ್ನೂ ಮೃತರ ಬಂಧುಗಳಿಗೆ ಮನಶ್ಶಾಂತಿಯನ್ನೂ ದಯಪಾಲಿಸಲೆಂದು ಆ ದಯಾಘನನನ್ನು ಅನನ್ಯಭಾವದಿಂದ ಪ್ರಾರ್ಥಿಸುವ

ಓರ್ವ ದುಃಖಭಾಗಿ.

ದುಃಖವಾರ್ತೆ

ಚಿಕ್ಕಮಗಳೂರು ತಾಲೂಕು ಅಲ್ದೂರಿನಲ್ಲಿ ಪ್ರಸಿದ್ಧ ಕಾಫಿಪ್ಲಾಂಟರಾಗಿದ್ದ ಗತಿಸಿದ ಮ|| ಮಲ್ಲಪ್ಪಶೆಟ್ಟರವರ ಪತ್ನಿಯವರಾದ ಶ್ರೀಮತೀ ಗೌರಮ್ಮನವರು ತಮಗೆ ಕೆಲವು ದಿವಸಗಳಿಂದ ಸಂಭವಿಸಿದ್ದ ವ್ಯಾಧಿಯಿಂದ ಈ ತಿಂಗಳು ತಾ|| 17ನೇ ಶನಿವಾರ ಸಾಯಂಕಾಲ 5 ಘಂಟೆಯಲ್ಲಿ ಶಿವಾಧೀನರಾದರು. ಮರುದಿನ ಇವರ ಸಮಾಧಿಕ್ರಿಯೆಗಳೆಲ್ಲವೂ ಸಾಂಗವಾಗಿ ನಡೆಯಿಸಲ್ಪಟ್ಟವು. ಇವರು ಆಚಾರಶೀಲರಾಗಿಯೂ ಪತಿಭಕ್ತಿಪರಾಯಣರಾಗಿಯೂ ಭೂತದಯಾ ಪಶ್ಚಾತ್ತಾಪವುಳ್ಳವರಾಗಿಯೂ ಆಧುನಿಕಸ್ತ್ರೀಪ್ರಪಂಚಕ್ಕೆ ಮಾರ್ಗದರ್ಶಕರಾಗಿಯೂ ಇದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವರ ಸಂಸ್ಕಾರಸಮಯದಲ್ಲಿ ಮೃತರ ಆತ್ಮಶಾಂತ್ಯರ್ಥವಾಗಿ ಅಲ್ದೂರು ಮ|| ಬಿ. ಪುಟ್ಟಣ್ಣಶೆಟ್ಟರವರು 5 ರೂಪಾಯಿಗಳನ್ನು ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಕೊಟ್ಟರು. ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ಮೃತರಿಗೆ ಸದ್ಗತಿಯುಂಟಾಗಲೆಂದು ಕೋರುತ್ತೇನೆ.

ಓರ್ವ ವೀರಪ್ಪ.

ಪ್ರೇಮಿಕರು [illegible] ಆ ಪೂರ್ವದ ವಿರಕ್ತರ [illegible] ಈಗಿನ ವಿರಕ್ತರನ್ನು [illegible] ಗುರುಭಕ್ತಿಯುಳ್ಳವರನ್ನಾಗಿ ಮಾಡಲಿ. [illegible] ಈ ಪ್ರೇಮಿಕರು ೧೮೯ [illegible] ಉಜ್ಜಯಿನೀ ಪೀಠದ ಶ್ರೀ [illegible] ಶಿವಾಚಾರ್ಯ ಮಹಾಸ್ವಾಮಿಗಳವರು [illegible] ವಿರಕ್ತರಿಂದ ಉಪದೇಶವನ್ನು ಹೊಂದಿ [illegible] ನೋಡಿದರೆ [illegible] ಮಾಡುವವರು ವರ್ಣಿಸಲಶಕ್ಯವಾಗಿದೆ. ಪೂರ್ವದಲ್ಲಿ ಅನೇಕ [illegible] ವಿರಕ್ತರು ಗುರುಪೀಠಗಳಲ್ಲಿ ಅತ್ಯಂತ ಭಕ್ತಿಯಿಂದ ಸೇವೆಮಾಡುವವರಾಗಿಯೂ ಪೀಠಗಳಿಗೆ [illegible] ಚಕ್ರಾದಿಗಳನ್ನು ಸಮರ್ಪಿಸುವವರಾಗಿಯೂ ಪೀಠಗಳಲ್ಲಿ [illegible] ಮಾಡಿಕೊಂಡಿದ್ದರು. ಈ ಮಠಾಧಿಪರ [illegible] ಮಹಿಮಾತಿ[illegible] ಪ್ರಮಾಣಾದಿಗಳನ್ನು ಕೊಡುವದಕ್ಕೆ [illegible] ನೋಡಿದರೆ [illegible] ಹೇಳಬೇಕಾಗಿದೆ. [illegible] ಗುರುವಿಸ್ಮೃತರ [illegible] ಪ್ರಕಟಿಸುವ [illegible] ನಮ್ಮ [illegible] ಆ [illegible] ಕನನ್ನು [illegible] ಪೀಠಾಧಿಪರ [illegible] ವರಕ್ಕೆ [illegible] ಪ್ರಾರ್ಥಿಸಿ [illegible] ಗುರುಸಂಗಾ[illegible] ವಿರಕ್ತರ [illegible] ಸಮುಚ್ಚಯವು [illegible] ಮಾಡಿಕೊಳ್ಳುವವರು [illegible]

ಗುರು [illegible]

ಶ್ರೀ ಗುರು[illegible]

ಅಸಹನಬುದ್ಧಿಯ ಪ್ರಭಾವ.

[illegible] ಪತ್ರಿಕೆಯಲ್ಲಿ “ಶ್ರೀ [illegible] ಗವ[illegible] ಕೃಪಾಕಟಾಕ್ಷ [illegible] ಸಂಕೇತದ ಹೆಸರಿನಿಂದ [illegible] ಪಂಡಿತ [illegible] ವಿಷಯದಲ್ಲಿ ಅಸಹನಬುದ್ಧಿ [illegible] ಒಂದು [illegible] ಬರದು [illegible] ಇದರಲ್ಲಿ [illegible] ಗ್ರಹಿಸಬೇಕಾದ [illegible] ವಿದ್ವಾಂಸ[illegible] ಅದರ [illegible] ಗುಣದ [illegible] ವದು. ಒಂದು ಬರದು [illegible] ದೃಷ್ಟಾಂತವನ್ನು [illegible] ಕೊಟ್ಟಿರುವರು. ಈ [illegible] ದೃಷ್ಟಾಂತಗಳು [illegible] ಉತ್ತಮವಾ[illegible] ಸಂಬಂಧಿಸ[illegible] ಪಂಡಿತರಿಗೆ ಮಾತ್ರ [illegible] “ಅತ್ಯಂತ [illegible] ಈ ರೀತಿಯಾದ [illegible] ಇರುವದರಿಂದ [illegible] ಮಾಡಿರುವದು [illegible] ಸಿದ್ಧವಾಗಿರುವದು. ಇದರಲ್ಲೇನು [illegible] ವೈದಿಕಮತತತ್ವವನ್ನು [illegible] ಈ ಪವಿತ್ರವಾದ ಮತಕ್ಕೆ ಅತ್ಯಂತ ಕಳಂಕವನ್ನು ತಂದಿರುವವರ [illegible] ಈ ಮತಕ್ಕೆ [illegible] ಧರ್ಮಶಾಸ್ತ್ರದ [illegible] ಪ್ರಚಾರ[illegible] ಈ ಲೇಖಕರಿಗೆ [illegible] ತೋರುತ್ತದೆ. [illegible] ಪೂರ್ವಾಚಾರ್ಯರ [illegible] ಸಿದ್ಧಾಂತವನ್ನು [illegible] ತಮ್ಮ [illegible] ತೋರಗೊಡುತ್ತಿರುವರು. [illegible] ಪ್ರಕಟಿಸುತ್ತಿರುವರು. [illegible] ಈ ಲೇಖಕರು [illegible] ಕಾರ್ಯದಲ್ಲಿ [illegible] ದಲ್ಲಿ [illegible] ತಮ್ಮ ಮಾರ್ಗದಲ್ಲಿಯೇ

ಸನ್ಮಾರ್ಗವನ್ನು [illegible] ಇವರು ಧರ್ಮಶಾಸ್ತ್ರ[illegible]ಗಳಾಗಿದ್ದರೆ ಈಗ ಲೋಕದಲ್ಲಿ ನಡೆಯುವ ಶಾಸ್ತ್ರ[illegible] ವಿಚಾರಗಳನ್ನು ಎಂದೂ ತಿರಸ್ಕರಿಸುವದಿಲ್ಲ. ಅವಕ್ಕೆ ವಿರುದ್ಧವಿದ್ದರೆ ತಿರಸ್ಕರಿಸುವರು! ಧರ್ಮಶಾಸ್ತ್ರದ ಮಾರ್ಗದಂತೆ ಅನುಸ[illegible] ಪಾರ್ಶ್ವಸುಕ್ಷೇಮ

ಎಸ್. ಸಿದ್ದಪ್ಪ

NEW FORD
THE SIGNS OF THE TIMES
Buy a FORD and Bank the Balance
EASILY PURCHASED
EASY TO DRIVE
EASY TO RUN
ARRANGED FOR PURCHASE OF ANY MODELS IF DESIRED BY EASY TERMS
GENUINE FORD PARTS
FOR SALE HERE
FORD SUB DEALERS,
FOR HASSAN KADUR MYSORE DISTRICTS
For particulars apply to 3
A. J. RAM & SONS.
SAYAJI RAO ROAD MYSORE

ಆಶ್ಚರ್ಯ! [illegible] ಅತ್ಯದ್ಭುತ!!
ಪ್ರಸಿದ್ಧ ಡಾಕ್ಟರನೊಬ್ಬನು
ಕಂಡುಹಿಡಿದ ಸಿದ್ಧೌಷಧ.

[illegible] ಸಂಜೀವನೌಷಧವನ್ನು ಕಂಡು [illegible] ಡಾಕ್ಟರನೊಬ್ಬನು [illegible] ಪರೀಕ್ಷೆಗಳನ್ನು [illegible]

ಎಲಿಕ್ಸಿರ್ ಆಫ್ ಲೈಫ್
ಅಥವಾ
ಜೀವನಾಧಾರ

[illegible] ಜೀವನಾಧಾರವೆಂಬ

ಸಂಜೀವನೌಷಧ

ಒಂದು [illegible] ಅಥವಾ [illegible] ಜೀವನಾಧಾರ [illegible] ಒಂದಕ್ಕೆ ೧ ರೂ ೦ [illegible] ದೊಡ್ಡ [illegible] ಒಂದಕ್ಕೆ ೧ ರೂ ೦ [illegible]

[illegible]

[illegible] ಜೀವನಾಧಾರ [illegible]

[illegible]

ಜೀವನಾಧಾರ ಡಿಪೋ, [illegible]

ASIATIC GOVERNMENT SECURI
LIFE ASSURANCE CO., LTD., MYSO
ಏಶಿಯಾಟಿಕ್ ಗವರ್ನಮೆಂಟು ಸೆಕ್ಯೂರಿ
ಲೈಫ್ ಅಶ್ಯೂರೆನ್ಸ್ ಕಂಪನಿ, ಮೈಸೂರು,

ಮುಖ್ಯ ಕಾರ್ಯಾಲಯ
ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳ [illegible] ಮುಂದಾಳಾದುದು.

ಆದ್ದರಿಂದ ಯಾವಾಗಲೂ “ಏಷ್ಯಾಟಿಕ್” [illegible] ನಿಯಲ್ಲಿಯೇ ವಿಮೆಮಾಡಿರಿ.

ಏಕೆಂದರೆ ಇದರ ದರಗಳು ಬಹಳ ಕಡಿಮೆಯಾ[illegible] ಮತ್ತು ಇದರ ಏರ್ಪಾಡುಗಳು (ಸ್ಕೀಮು) ಲಾ[illegible] ವಾದುವು.

ಪಾಲಿಸಿದಾರರಿಗೆ ಬಡ್ಡಿಯಿಲ್ಲದೆ ತಮ್ಮ ಸ್ವಂತ [illegible] ಮಾನಿನ ಮೇಲೆಯೂ, ಪಾಲಿಸಿದಾರರಿಗೆ ಅವರ [illegible] ಸ್ವತ್ತಿನ ಮೇಲೆಯೂ ಸಾಲವನ್ನು ಕೊಡುತ್ತದೆ

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ [illegible] ಯಿಂಗಾ 31 ನೆಯ ಜನವರಿ 1928 ಕ್ಕೆ ನಡೆಯುತ್ತ[illegible]

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿರುವ[illegible] ರಿಗೆ ಬರೆಯಬಹುದು.

(1) ಮ|| ಡಿ ರಾಜಣ್ಣ, ಚೀಫ್ ಏಜಂಟ್,
ಏಸಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್
ರೋಡ್, ಮೈಸೂರು

(2) ಮ|| ಪಿ. ಎಲ್. ಥೆರಾಡ್ಸ್
ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು ಬಳ್ಳಾ[illegible]

(3) ಹೈದರಾಬಾದ್ ಏಕಾನಿಮಿ ಹೌಸ್,
ಚೀಫ್ ಏಜಂಟ್, ಹೈದರಾಬಾದ್ (ದಖ್ಖನ್)

[28]

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ಪಷ್ಟವಾಗುವ ವ್ಯಾಧಿಗಳು ಯಾವುವೆಂದರೆ—ಸಿತಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ [illegible] ವ್ಯಾಧಿಗಳನ್ನು ನಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂಗುಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪ್ಯಾಕೆಟ್ಟು ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ ೦ ೪ ೦, ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦, ವಿ.ಪಿ. ೪ ಆಣೆ.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ಏಜಂಟ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[30] ಪೋ. ಬಾ. ೫೧೦, ಮದರಾಸು

ಈ ಪತ್ರಿಕೆಯು ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.